ಜೀವನ ಸಿದ್ಧಾಂತ

[illegible]



[illegible]

ಶ್ರೀ ಜ. ಚ. ನಿ.

ಪ್ರಕಾಶಕರು :

[illegible]

ಜೀವನ ಸಿದ್ಧಾಂತ

[ಭಕ್ತ ಸಂಪುಟ]



ಸೂರ್ಯಸಿಂಹಾಸನಾಧೀಶ್ವರ

ಶ್ರೀ ಜ. ಚ. ನಿ.

ಪ್ರಕಾಶಕರು :

ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ

ನಂ. ೪೯, ಹೆ. ಬ. ಸಮಾಜ ರಸ್ತೆ

ಬೆಂಗಳೂರು-೪

ಆಶ್ರಯದಾತರು :

ಶ್ರೀ ಭ್ರಮರಾಂಬಾ ಬಳಗ, ಅಕ್ಕಿಪೇಟೆ

ಬೆಂಗಳೂರು–೧

ಮೊದಲ ಮುದ್ರಣ : ೧೫೦೦

ಬೆಲೆ : ೧೦–೫೦

ಮುದ್ರಣ :

ಶ್ರೀ ಸತ್ಯನಾರಾಯಣ ಪ್ರೆಸ್

ಅರಳೆಪೇಟೆ : : ಬೆಂಗಳೂರು–೨



ಬೆಳ್ಳಿಯ ಹಬ್ಬಕ್ಕೆ

ಕಿರುಗಾಣಿಕೆ :

ಅಭಿನವ ಪಂಡಿತಾಚಾರ್ಯರೂ ಕನ್ನಡ ಸಾಹಿತ್ಯ ಸಿಂಹಾಸನಾಧೀಶ್ವರರೂ
ಕನ್ನಡ ಕವಿಗುರುವರ್ಯರೂ ಆದ
ಶ್ರೀ ಗಿರಿರಾಜ ಮಣಿಖಚಿತ ಕನಕ ಸೂರ್ಯಸಿಂಹಾಸನಾಧೀಶ್ವರ
ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಜ. ಪ. ಚನ್ನಬಸವರಾಜ
ದೇಶಿಕೇಂದ್ರ ಮಹಾಸನ್ನಿಧಿಯ
ತಳಿರಡಿಯಲ್ಲಿ
ಬೆಳ್ಳಿಯ ಹಬ್ಬದ ಸವಿ ನೆನಹಿಗಾಗಿ
ಭ್ರಮರಾಂಬಾ ಬಳಗವು ಶ್ರದ್ಧೆಯಿಂದ ಸಮರ್ಪಿಸಿದ
ಕೃತಿರೂಪದ
ಕಿರುಗಾಣಿಕೆ !

ಉಪೋದ್ಘಾತ

"ಸರ್ವೇಷಾಂ ಶೈವ ತಂತ್ರಾಣಾಂ ಉತ್ತರತ್ವಾನ್ನಿರುತ್ತರಂ ।
ನಾಮ್ನಾ ಪ್ರತೀಯತೇ ಲೋಕೇ ಯತ್ 'ಸಿದ್ಧಾಂತ
ಶಿಖಾಮಣಿಃ' ॥"

ಸತ್ಯವಾಗಿ 'ಸಿದ್ಧಾಂತ ಶಿಖಾಮಣಿ'ಯ ಹಿರಿಮೆಯನ್ನು ಹೊಗಳಲ. ಮಾತಿಗೆ ಅಳವಲ್ಲ ; ಮಾತಿಗೆ ಹೊಳವಿಲ್ಲ. ಏಕೆಂದರೆ ಅದು ಸಿದ್ಧಾಂತ ಕೃತಿ; ಶಿಖಾಮಣಿ ದ್ಯುತಿ. ಅದನ್ನು ಬೆಳಗಿದ ಕವಿ ಶಿವಯೋಗಿ ಶಿವಾಚಾರ್ಯ. ಅಷ್ಟೇಅಲ್ಲ; ಆತ ಶಿವಾನುಭಾವಿ; ಮಹಾ ಮೇಧಾವಿ. ಮೇಲಾಗಿ ಆಗಮಗಳ ಸಾರವನ್ನೆಲ್ಲ ಸಂಗ್ರಹಿಸಿದ್ದಾನೆ. ಪುರಾಣಗಳ ಪರಿಚಯವನ್ನು ಮಾಡಿಕೊಂಡಿದ್ದಾನೆ. ವೇದಗಳಿಗೆ ಅವಿರೋಧವಾಗಿ, ವಿಶಿಷ್ಟಾಚಾರ ಸಿದ್ಧಿಗಾಗಿ, ವಿವೇಕಿಗಳ ಪ್ರಮೋದಕ್ಕಾಗಿ, ಸಕಲಾರ್ಥಪ್ರಕಾಶಕ್ಕಾಗಿ, ಸರ್ವರ ಸರ್ವಸ್ವವಾಗಿ ಕೃತಿಯನ್ನು ರಚಿಸಿದ್ದಾನೆ. ಶಿವಯೋಗಿ ಶಿವಾಚಾರ್ಯನಿಗೆ ಷಟ್‌ಸ್ಥಲಾನುಭವದಲ್ಲಿ ಸಂಪೂರ್ಣ ಅಧಿಕಾರವಿದೆ; ಅದನ್ನು ಅಚ್ಚಳಿಯದೆ ಉಳಿಸುವ ಹೃದಯ ಹಂಬಲವಿದೆ. ಅದರ ಫಲವೇ ಈ ಕೃತಿ.

ಅದು ಶೈವ ತಂತ್ರಗಳಿಗೆಲ್ಲ ಶ್ರೇಷ್ಠ ; ಶೈವ ಸಿದ್ಧಾಂತಗಳಿಗೆಲ್ಲ ಉತ್ಕೃಷ್ಟ. ಶಿವಾಗಮಗಳ ಸರ್ವರಹಸ್ಯವೂ ಸಿದ್ಧಾಂತ ಶಿಖಾಮಣಿಯಲ್ಲಿದೆ. ಶಿವಾದ್ವೈತ ಜ್ಞಾನವನ್ನು ಸಾಟುತ್ತದೆ. ಶಿವಾನುಭವವನ್ನು ಸೂರೆಗೊಳಿಸುತ್ತದೆ. ಶಿವಭಾವ ಪ್ರಸಾದವನ್ನು ಅನುಗ್ರಹಿಸುತ್ತದೆ. ವೇದಾಗಮಜ್ಞರಿಂದ ಆದರಣೀಯವಾಗಿದೆ.

ಅದು ಸಂಸ್ಕೃತದಲ್ಲಿದ್ದರೂ ಸರಳವಾಗಿದೆ; ಸುಂದರವಾಗಿದೆ. ಸಂವಾದ ಸಾಹಿತ್ಯವಾಗಿದೆ. ಸಿದ್ಧಪುರುಷರಿಬ್ಬರ ಸಂವಾದವಾಗಿದೆ. ಶ್ರೀ ರೇಣುಕ ಸಿದ್ಧರು ಪ್ರತಿಪಾದಿಸಿದ ಸಿದ್ಧಾಂತವಾಗಿದೆ. ಪ್ರತಿಪಾದನೆ ಪರಿಣಾಮಕಾರಿಯಾಗಿದೆ. ಶಿವಯೋಗಿ ಶಿವಾಚಾರ್ಯನ ಶೈಲಿ ಕಮನೀಯವಾಗಿದೆ; ಕಳಾ

ಪೂರ್ಣವಾಗಿದೆ. ಪರಿವಿಡಿದು ನಿರೂಪಿತವಾದ ನೂರೊಂದು ನೆಲೆಗಳ ಚೆಲುವ ನಿಲುವನ್ನು ಹೊತ್ತಗೆಯ ಉದ್ದಕ್ಕೂ ನಿಟ್ಟಿಸಬಹುದಾಗಿದೆ.

ಅದು ಷಟ್‌ಸ್ಥಲ ಸಿದ್ಧಾಂತದ ಸುಂದರ ಮಂದಿರ. ಜೀವನಾಕಾಶದ ಚೆನ್ನಿಗ ಚಂದಿರ. ಮಹಾದೇವಾನುಭವದ ಮಹಾಗಂಗೆ.

ಸಿದ್ಧಾಂತ ಶಿಖಾಮಣಿಯ ಅಭ್ಯಾಸ ಅದೊಂದು ತಪಸ್ಸು. ಅದರ ಭಾವ ಪ್ರಸಾದವನ್ನು ಅಳವಡಿಸಿಕೊಂಡರೆ ಬಾಳಿಗೆ ಒದಗುವುದು ಒಂದು ಓಜಸ್ಸು; ಒಂದು ಶ್ರೇಯಸ್ಸು. ಅದು ದಿನದಿನಕ್ಕೆ ಹೊಸದಾಗಿ ತೋರುತ್ತದೆ. ಓದುತ್ತ ಹೋದಂತೆ ಹೊಸ ಹೊಸ ಭಾವಗಳು ಹೊರಹೊಮ್ಮುತ್ತವೆ. ನಾವು ಹೊಸಬರಾಗುತ್ತೇವೆ. ಹೊಸ ಹೊಸ ಕ್ಷೇತ್ರದಲ್ಲಿ ಹೆಜ್ಜೆ ಹಾಕ್ಕುತ್ತೇವೆ. ಅದರ ಪ್ರತಿಶ್ಲೋಕದ ಪ್ರತಿಪದದಲ್ಲಿಯೂ ಪ್ರತಿಭೆಯಿದೆ; ಪರಮ ರಹಸ್ಯವಿದೆ. ಆ ಪ್ರತಿಭೆ ಆ ಪರಮ ರಹಸ್ಯ ಪ್ರಾಜ್ಞರಿಗೆ ಪ್ರತ್ಯಕ್ಷ ಪ್ರತೀತವಾಗುತ್ತದೆ. ಪ್ರತಿ ಶ್ಲೋಕದಲ್ಲಿಯೂ ಶಿವಕವಿ ಶಿವಯೋಗಿ ಶಿವಾಚಾರ್ಯನ ಪ್ರತಿಭೆಯನ್ನು ಸಂದರ್ಶಿಸುತ್ತೇವೆ. ಮಾತು ಮಾತಿನಲ್ಲಿ ಮಾಧುರ್ಯವನ್ನು ಸವಿಯುತ್ತೇವೆ; ಸೌಂದರ್ಯವನ್ನು ಕಾಣುತ್ತೇವೆ. ಮೈ ಮನಗಳನ್ನು ಮರೆಯುತ್ತೇವೆ. ಕವಿಯ ಭಾವ ಔನ್ನತ್ಯವನ್ನು ಕಂಡು ಬೆರಗಾಗುತ್ತೇವೆ. ಆತನ ಮನದ ಘನೋದ್ದೇಶವನ್ನು ಕಂಡು, ಗಂಭೀರತೆಯನ್ನು ಕಂಡು ಹೆಮ್ಮೆ ತಾಳುತ್ತೇವೆ. ಮೊದಲಿನ ಮಂಗಲ ಶ್ಲೋಕದಲ್ಲಿಯೇ ಕವಿಯ ವಿಶಾಲವಾದ ವಿಶಿಷ್ಟವಾದ ವಿಶ್ವವಂದ್ಯವಾದ ಸ್ವಾನುಭೂತಿಯ ಮಹತಿಯನ್ನು ಮನಗಾಣುತ್ತೇವೆ. ಶಿವಯೋಗಿ ಶಿವಾಚಾರ್ಯನ ಸರ್ವಜ್ಞತೆಯನ್ನು ಷಟ್‌ಸ್ಥಲಾಭಿಜ್ಞತೆಯನ್ನು ಸವಿದುಣ್ಣುತ್ತೇವೆ. ಆತನದು ದಿವ್ಯದೃಷ್ಟಿ; ಭವ್ಯಸೃಷ್ಟಿ. ಆತನು ಆತ್ಮಜ್ಞಾನಿ; ಅವಿರಳಧ್ಯಾನಿ. ಆತನು ಸ್ವಾನುಭವಸಿದ್ಧ; ಸರ್ವಾರ್ಥ ಪ್ರಬುದ್ಧ. ಜೀವನ ದರ್ಶನವನ್ನು ನಿರೂಪಿಸುವ ನಿಟ್ಟಿನಲ್ಲಿ ಈ ಕೃತಿಗೆ ಸಾಟಿ ಯಾವ ಗ್ರಂಥ ಬೇರೊಂದಿಲ್ಲ. ಸಮಗ್ರ ಷಟ್‌ಸ್ಥಲ ಸಿದ್ಧಾಂತ ಪ್ರತಿಪಾದನೆಯಲ್ಲಿ ಇದೇ ಪ್ರತಿಭಾನ್ವಿತ ಕೃತಿ. ಇದಕ್ಕಿದೆ ಪ್ರಥಮ ಕೀರ್ತಿ. ಪರಿಪೂರ್ಣ ಮಹತಿ. ಇದರಿಂದ ಹೊರಹೊಮ್ಮಿದೆ ಸರ್ವೋತ್ತಮ ಸಂಸ್ಕೃತಿ.

"ಮಣಿಶ್ಚಿಂತಾಮಣಿರ್ದಿವ್ಯಃ ಕಿಮನ್ಯೈರ್ಗ್ರಂಥಕೋಟಿಭಿಃ
ಯಃಸ್ವಯಂ ಶ್ರೀರೇಣುಕಸ್ಯ ಮುಖಾಮೃತಾದ್ವಿನಿರ್ಗತಃ|"
ಜಯ ಸಿದ್ಧಾಂತ ಶಿಖಾಮಣಿ, ಜಯ ಸುಧಾವಾಣಿ!
ಜೀವನಾಂಧಕಾರವನಿರದೆ ಕಳೆವ ಕಿರಣ ಶ್ರೇಣಿ!

ಸಿದ್ಧಾಂತ ಶಿಖಾಮಣಿಯು ಜೀವನ ದರ್ಶನವಾದ ಷಟ್‌ಸ್ಥಲ ಸಿದ್ಧಾಂತವನ್ನು ಏಕೋತ್ತರ ಶತಸ್ಥಲ ಅಂದರೆ ನೂರೊಂದು ನೆಲೆಗಳನ್ನು ಸಮಗ್ರವಾಗಿ ಸುಂದರವಾಗಿ ಶಿವವಾಗಿ ನಿರೂಪಿಸಿ ವಿವರಿಸಿ ನವಮನ್ವಂತರವನ್ನು ನಿರ್ಮಿಸಿದೆ. ಮಾನವ ಜೀವನದ ಇಳಿನಡೆಯನ್ನು ಏರುನಡೆಯನ್ನಾಗಿಸಿದೆ. ಅಳುಮೊಗವನ್ನು ನಗೆಮೊಗವನ್ನಾಗಿಸಿದೆ; ಕಂಗೊಳಿಸುವ ಕಳೆಯ ಬರಿಸಿದೆ. ಭದ್ರತೆಯ ಬೆಳಸಿದೆ. ರೌದ್ರತೆಯನಳಿಸಿದೆ.

ಶಿವಕವಿ ಶಿವಯೋಗಿ ಶಿವಾಚಾರ್ಯರಿಗೆ ಕಾವ್ಯರೂಪಕಳಾಲಿಂಗದರ್ಶನವಾಗಿದೆ. ಆ ಕಳಾಲಿಂಗಕ್ಕೆ ಕವಿಯ ಸ್ವಾನುಭೂತಿಯೆಂಬ ಜ್ಯೋತಿಯ ಪ್ರಭಾವವು ಬೆರತಿದೆ. ಆ ಪ್ರಭಾವಲಯಕ್ಕೆ ಹಿನ್ನೆಲೆಯಾಗಿ ಭಕ್ತಿಭಾವವೆಂಬ ಉನ್ಮನದ ಉಷಾದೇವಿಯ ಉದಯವಿದೆ. ಅವಳ ಬೆಂಬಳಿಯಲ್ಲಿ ಸಂವಿತ್ಸೂರ್ಯನ ಪ್ರಾದುರ್ಭಾವವಾಗಿದೆ. ನೂರೊಂದು ನೆಲೆಗಳೆಂಬ ಹೊಂಗಿರಣಗಳು ಹರಡಿವೆ. ಸಿದ್ಧಾಂತವೆಂಬ ಶಾಶ್ವತಪ್ರಕಾಶ ವಿಕಾಸವಾಗಿ ಪ್ರಸರಿಸಿದೆ. ಆ ಬೆಳಗಿನಲ್ಲಿ ಸುಂದರ ಬಂಧುರ ಛಂದಗಳು ವೈದಾಳಿ ಅರಳಿ ಹೂವಾಗಿವೆ. ಮಕರಂದದಿಂದ ತುಂಬಿವೆ. ನರುಗಂಪ ಸೂಸಿವೆ. ಅನುಭವಾಪೇಕ್ಷಿಗಳೆಂಬ ಷಟ್‌ಸ್ಥಲ ಜಿಜ್ಞಾಸುಗಳೆಂಬ ದುಂಬಿಗಳನ್ನು ಆಕರ್ಷಿಸುತ್ತವೆ. ನೆಲಬಾನ್ಗಳ, ಆತ್ಮ-ಪರಮಾತ್ಮರ ಸಿರಿಸೊಗಗಳನ್ನು ಕೈಗೂಡಿಸುತ್ತವೆ, ಮೈಗೂಡಿಸುತ್ತವೆ.

ಸರ್ವದರ್ಶನಸಾರ ಸಿದ್ಧಾಂತ ಶಿಖಾಮಣಿ. ಸರ್ವಸಿದ್ಧಾಂತ. ಸರ್ವಸ್ವ ಸಿದ್ಧಾಂತ ಶಿಖಾಮಣಿ. ಶಿವಯೋಗಿ ಶಿವಾಚಾರ್ಯನ ಅನುಭವವಾಣಿ; ಮಂತ್ರಮಯವಾಣಿ. ಸರ್ವದರ್ಶನಗಳ ಅನುಭವವನ್ನು ಪಡೆದ ಶಿವಯೋಗಿ ಶಿವಾಚಾರ್ಯನಿಗೆ ಸದ್ವಂಶದ ಹಿನ್ನೆಲೆಯಿದೆ. ಶಿವಾನುಭಾವಿಗಳ ಸ್ವಾತ್ಮೀಯ ಸಂಬಂಧವಿದೆ. ಶಿವಾಚಾರ, ಶಿವಜ್ಞಾನ, ಶಿವಭಕ್ತಿ, ಶಿವಸಿದ್ಧಾಂತಗಳ ಸ್ವಯಾರ್ಜಿತ ಸಂಪತ್ತಿಯಿದೆ.

ಆತನದು ಸುಧಾವಾಣಿ. ಅದಕ್ಕೆ ಆತನು ಸೋಮಸ್ವರೂಪನು. ಆತನದು ಅಚ್ಚಳಿಯದ ಹುಣ್ಣಿಮೆಯ ಬೆಳದಿಂಗಳು. ಅದು ಆತನ ಸುಧಾವಾಣಿಯೆಂಬ ಕನ್ನೈದಿಲೆಯ ಮೇಲೆ ಕಂಗೊಳಿಸುತ್ತಿದೆ. ನುಡಿಗೆ ಮಾತ್ರವಲ್ಲ, ಆತನ ಚೆನ್ನನಡೆಗೂ ಒಂದು ಮೆರುಗನ್ನು ತಂದಿದೆ. ಶಿವಾನುಭವವೆಂಬುದೊಂದು ಸಾಗರ. ಶಿವಯೋಗಿ ಶಿವಾಚಾರ್ಯನು ಅದರೊಳಗೆ ಉದಯಿಸಿದ ಸುಧಾಕರ.

ಭಕ್ತಿ ಜ್ಞಾನಾನುಭವಗಳ ಶ್ರೀಗಿರಿ ಶಿವಯೋಗಿ ಶಿವಾಚಾರ್ಯ; ಗೌರೀಶಂಕರ ಶಿಖರ ಶ್ರೀ ಶಿವಯೋಗಿ ಶಿವಾಚಾರ್ಯ. ಆ ಉನ್ನತ ಶಿಖರವೊಳಗೆ ಸಂಭವಿಸಿದೆ ಸಿದ್ಧಾಂತ ಶಿಖಾಮಣಿ.

ಸಿದ್ಧಾಂತ ಶಿಖಾಮಣಿ ಒಂದು ಷಟ್‌ಸ್ಥಲ ಜ್ಯೋತಿಮಂಡಲ. ಆ ಮಂಡಲದ ಜ್ಯೋತಿ ಶಿವಯೋಗಿ ಶಿವಾಚಾರ್ಯ. ದಿವ್ಯದೇಶಿಕವರ್ಯ. ಅವನೊಬ್ಬ ನಿಗಮಾಗಮಗಳ ನಿರ್ಮಳ ಬೆಳಕಿನಿಂದ ಬಾಳಿದಾತ; ಬೆಳಗಿದಾತ. ಬೆಳಕನ್ನು ಜಗಕ್ಕೆ ನೀಡಿದಾತ. ತನ್ನ ಚಿದಾನಂದ ಪರಾಕಾಶದಲ್ಲಿ ವಿಹರಿಸಿದಾತ. ಶಿವಾನುಭವ ಪ್ರಭಾವ ಸಮನ್ವಿತ. ಆತನ ಜ್ಯೋತಿರ್ವಾಣಿ ಸಿದ್ಧಾಂತ ಶಿಖಾಮಣಿ. ಇದು ಆಗಮಿಕ ಸತ್ಯ ಶ್ರೇಣಿಯಾದಂತೆ ಆಧ್ಯಾತ್ಮಿಕ ಸತ್ಯತರಣಿಯೂ ಆಗಿದೆ. ದಾರ್ಶನಿಕ ದಿವ್ಯಮಣಿಯೂ ಆಗಿದೆ.

ಸಿದ್ಧಾಂತ ಶಿಖಾಮಣಿಯು ಶಿವಯೋಗಿ ಶಿವಾಚಾರ್ಯನ ಜೀವಮಣಿ ಜೀವಂತ ಸಂಜೀವಿನಿ. 'ಮಣಿರಣುರಪಿ ಭೂಷಣಾಯ ಪುಂಸಾಂ ನ ತು ಪೃಥುಲಾಪಿ ಶಿಲಾ ವಿಲಾಸಹೇತುಃ' ರನ್ನ ಚಿಕ್ಕದಾದರೂ ಚೆನ್ನ. ಕಲ್ಲು ದೊಡ್ಡದಾದರೂ ಚೆನ್ನಲ್ಲ. ಅಂತೆಯೇ ಈ ಕೃತಿಮಣಿ ಗಾತ್ರದಲ್ಲಿ ಚಿಕ್ಕದಾದರೂ ಪಾತ್ರತೆಯಲ್ಲಿ ಪರಮ ಪರಿಣಾಮಕಾರಿಯಾಗಿದೆ. ಇದು ಆತನ ಜೀವನ ಶಕ್ತಿಯಾಗಿಯೇ ಸಂಜನಿಸಿದೆ. ಆತನ ಹೃದಯ ಹಿಮಾಲಯದ ಭಕ್ತಿಯ ಹೆದ್ದೊರೆಯಾಗಿ ಹರಿದಿದೆ. ಪಿಂಡಾಂಡದಲ್ಲಿ ಉದಯಿಸಿ ಬ್ರಹ್ಮಾಂಡದಲ್ಲಿ ಬೆಳ್ಳನೇ ಬೆಳಗಿದೆ. ವ್ಯಕ್ತಿತ್ವವನ್ನು ವಿಶ್ವದಾದ್ಯಂತ ಹರಡುವ ಮಣಿಹದಲ್ಲಿದೆ. ಕವಿಯ ಜೀವನವೇ ಒಂದು ಋತದರ್ಶನವಾಗಿದ್ದಂತೆ ಆತನ ಈ ವಾಣಿಯೂ ಈ ಮಣಿಯೂ ಒಂದು ಭುವನದರ್ಶನವಾಗಿದೆ. 'ಅನುಗ್ರಹಾಯ ಲೋಕಾನಾಮಭ್ಯಧಾತ್ ಸುಧಿಯಾಂ ವರಃ'

ಎಂತಹ ವಿಶಾಲ ಮನೋಭಾವ ? ಏನು ವಿಶಿಷ್ಟ ಸ್ವಾನುಭಾವ ? ಇದನ್ನು ರಚಿಸಿದ ಶಿವಯೋಗಿ ಶಿವಾಚಾರ್ಯನು ಕುಶಲರಲ್ಲಿ ಕುಶಲ. ಕವಿಗಳಿಗೆ ಕವಿ. ಸಂಧ್ಯಾನಿಗಳಲ್ಲಿ ಶ್ರೇಷ್ಠ ಸಂಧ್ಯಾನಿ. ಅಂಥವನ ಆ ಅನುಭವವು ವಾಗ್ರೂಪ ಧರಿಸಿ ಈ ಹೊತ್ತಗೆಯ ರೂಪಾಗಿ ಹೊರ ಹೊಮ್ಮಿದೆ. ದಿವ್ಯವಾಣಿಯಾಗಿ ಕಾವ್ಯವಾಣಿಯಾಗಿ ಹೊರಹೊಮ್ಮಿದೆ. ತಂತ್ರವಾಣಿಯಲ್ಲಿ ಮಂತ್ರವಾಣಿಯಾಗಿ ಹೊರಹೊಮ್ಮಿದೆ.

ಶಿವಯೋಗಿ ಶಿವಾಚಾರ್ಯನ ಶಿಖಾರತ್ನ(ಮಣಿ) ಶ್ರೀ ರೇಣುಕ ಜಗದ್ಗುರು. ಶಿವಯೋಗಿ ಶಿವಾಚಾರ್ಯನ ಶಿಖಾಚಕ್ರದ ಚಿತ್ಕಳೆ ಶ್ರೀ ರೇಣುಕ ಶಿವಾಚಾರ್ಯ. ಶಿಖಾಚಕ್ರದ ಹಿನ್ನೆಲೆಯು ಅಣುಚಕ್ರವೆಂದು ಹೆಸರಾಂತಿದೆ. ಅಣುಚಕ್ರವೆಂದರೂ ಒಂದೆ! ರೇಣು ಚಕ್ರವೆಂದರೂ ಒಂದೆ! ಅಣು-ರೇಣು ಶಬ್ದಗಳಲ್ಲಿ ವ್ಯತ್ಯಾಸವಿಲ್ಲ. ಆ ಅಣುಚಕ್ರದಿಂದ ಬಂದ ಚಿತ್ಕಳೆಯೇ ಶ್ರೀ ರೇಣುಕ ಗುರುವರ್ಯ. ಆತನ ಆ ಅಗಾಧವಾದ ಬೋಧಾಮೃತವು ಶಿವಯೋಗಿ ಶಿವಾಚಾರ್ಯನ ಪಶ್ಚಿಮ ಚಕ್ರವೆಂಬ ತಿಳಿಗೊಳಕ್ಕೆ ಬಂದು ತುಂಬಿ ಅಲ್ಲಿ ನಿಲ್ಲಲಾರದೆ 'ಸಿದ್ಧಾಂತ ಶಿಖಾಮಣಿ' ರೂಪಾಗಿ ಹೊರಹೊಮ್ಮಿದೆ. ಆ ಪಶ್ಚಿಮ ಚಕ್ರ ಅದೊಂದು ಹಿರಿದಾದ ಹೇಮಾದ್ರಿ. ಅದು ಸ್ವಾನುಭವದ ಉಗಮ ಸ್ಥಾನ. ಅಲ್ಲಿಂದ ಉದಯಿಸಿ ಬಂದಿದೆ ಈ 'ಸಿದ್ಧಾಂತವೆಂಬ ಶಿಖಾಮಣಿ'. ಇದುವೇ ಜೀವನಸಿದ್ಧಾಂತದ ಚಿಂತಾರತ್ನ.

ಇನ್ನು ಆ ಶಿವಯೋಗಿ ಶಿವಾಚಾರ್ಯನ ಹೃದಯವೆ ಕುಂಭ ಅಥವಾ ಕಲಶ. ಆ ಹೃತ್ಕುಂಭ ಸಂಭವನೇ ಶುದ್ಧ ಜೀವನಾದ ಅಗಸ್ತ್ಯ. ಪ್ರಾಪಂಚಿಕತೆಯಿಂದ ಆಹತವಾಗದ ಅನಾಹತ ಚಕ್ರೋದ್ಭವನು ಅಗಸ್ತ್ಯನು. ಆಧಾರ ಸ್ವಾಧಿಷ್ಠಾನ, ಮಣಿಪೂರಕಗಳಲ್ಲಿ ತಮೋರಜಸ್ಸತ್ವಗಳ ಸ್ಪೃಕ್ಕಿರುತ್ತದೆ. ಅನಾಹತದಲ್ಲಿ ಅವುಗಳ ಸ್ಪರ್ಶವಿರುವುದಿಲ್ಲ—ನಿವೃತ್ತಿಪರನಿಗೆ! ಅಗಸ್ತ್ಯನು ಅಂತಿದ್ದನು. ಅಂತಹ ಆಗಸ್ತ್ಯನಿಗೆ ಸಂಶಯ ನಿವೃತ್ತಿಗಾಗಿ ಷಟ್‌ಸ್ಥಲ ಧರ್ಮವನ್ನು ಸಂಬೋಧಿಸಿದನು ಶ್ರೀರೇಣುಕ ಜಗದ್ಗುರು. ಅವರು ನಿರುಪಮ ಶ್ರೀಗುರು; ಅಗಸ್ತ್ಯ ಅವರ ನಿಜಶಿಷ್ಯ. ವ್ಯಷ್ಟಿಸಮಷ್ಟಿ ಪರಮೇಷ್ಠಿ ಈ ತ್ರಿವಿಧ ಗತ ಷಡಂಗಗಳ ಸ್ವರೂಪ ವಿವರಣೆಯೇ ಅವರು ಬೋಧಿಸಿದ ಬೋಧೆ.

ರ್ಮ. ಲೋಕೋಪಕಾರನಿರತರಾಗಿರೆಂದು ಸರ್ವತ್ರಸಮದರ್ಶಿಗಳಾಗಿರೆಂದು ಸಾರುತ್ತದೆ ಷಟ್‌ಸ್ಥಲಧರ್ಮ. ಶಿವಜ್ಞಾನದಲ್ಲಿ ಶಿವಾಚಾರದಲ್ಲಿ ಶಿವವ್ರತದಲ್ಲಿ ಶಿವಧರ್ಮದಲ್ಲಿ ಶ್ರದ್ಧೆ ನಿಷ್ಠೆ ಆಸಕ್ತಿ ಅನುರಕ್ತಿ ಇರಲೆಂದು ಇಮ್ಮಡಿಯಾಗಲೆಂದು ಬೋಧಿಸುವುದೇ ಇದರಿಂಗಿತ.

ಷಟ್‌ಸ್ಥಲಸಿದ್ಧಾಂತದಲ್ಲಿ ಎಲ್ಲ ಧರ್ಮಗಳ ಎಲ್ಲ ಯೋಗಗಳ ಸಮನ್ವಯುವಿದೆ. ಎಲ್ಲ ಕ್ರಿಯೆ, ಎಲ್ಲ ಜ್ಞಾನಗಳ ಸಮನ್ವಯುವಿದೆ. ಎಲ್ಲ ಭಕ್ತಿ ಎಲ್ಲ ಶಕ್ತಿಗಳ,-ಎಲ್ಲಹಸ್ತ ಎಲ್ಲ ಮುಖಗಳ ಸಮನ್ವಯುವಿದೆ. ಸಿದ್ಧಾಂತಶಿಖಾಮಣಿಯು ಷಟ್‌ಸ್ಥಲ ಸಿದ್ಧಾಂತನಿರೂಪಣೆಯಲ್ಲಿ ಎಲ್ಲ ಸಮನ್ವಯಕಾರ್ಯವನ್ನು ಸಮಾಪ್ತಗೊಳಿಸಿದೆ. ಇಚ್ಛಾ, ಜ್ಞಾನ, ಕ್ರಿಯೆಗಳ ಸಮನ್ವಯುವೂ ಈ ಕೃತಿಯು ವೈಶಿಷ್ಟ್ಯವಾಗಿದೆ. ತನ್ನ ನೂರೊಂದು ನೆಲೆಗಳಲ್ಲಿ ನೂರೊಂದು ವೇದಗಳನ್ನು ತುಂಬಿದೆ. ಇನ್ನೂರು ಹದಿನಾರು ಸಕೀಲಗಳು ಇನ್ನೂರು ಭುವನಗಳನ್ನು ಬೋಧಿಸುವಂತೆ ಈ ಕೃತಿಯು ತನ್ನ ಒಂದೊಂದು ಸ್ಥಲದಿಂದ ಒಂದೊಂದು ವೇದ(ಜ್ಞಾನ)ವನ್ನೇ ಪ್ರತಿಷ್ಠಾಪಿಸುತ್ತದೆ. ಎಂಬತ್ತೆಂಟುಕೋಟಿ ಪದಗಳನ್ನೊಳಗೊಂಡ ಪ್ರಣವದಂತಿದೆ ಈಕೃತಿ.

ಈ ಕೃತಿ ಸಿದ್ಧಾಂತಸಾಗರ; ಬೃಹತ್ಸಾಗರ. ಇದರೊಡಲು ಅದೊಂದು ಅಕ್ಷಯುಪಾತ್ರೆ; ಅಮೃತಪಾತ್ರೆ. ಈ ಮಹಾಸಾಗರವನ್ನು ಶೋಧಿಸಿದಷ್ಟೂ ಅನರ್ಘ್ಯವಸ್ತುಗಳು ಸಿಕ್ಕುತ್ತವೆ; ಅಪೂರ್ವ ಧರ್ಮಗಳು ಗೋಚರಿಸುತ್ತವೆ. ಇದರೊಳಗೆ ಇಳಿದಷ್ಟೂ ಆಳವಿದೆ; ಸಾಗಿದಷ್ಟೂ ಅಗಲವಿದೆ. ಇದನ್ನು ಅಧ್ಯಯನ ಮಾಡಿದಷ್ಟೂ ಮಾಡಬೇಕೆನಿಸುತ್ತದೆ. ಇಷ್ಟಾದರೂ ಇದರ ಬಗೆಗೆ ಅರಿತಿರುವುದು ಅತ್ಯಲ್ಪವೆಂದೇ ಹೇಳಬೇಕು. ಇದರ ಅಧ್ಯಯನಕ್ಕೆ ಆರಂಭಿಸಿ ಹನ್ನೆರಡು ಹದಿನೆಯ್ದು ವರುಷಗಳಾದರೂ ಇದರ ವಿಷಯುದಲ್ಲಿ ವಿಚಾರದಲ್ಲಿ ಇನ್ನೂ ಬಾಲ್ಯದೆಸೆಯಲ್ಲಿಯೇ ಇದ್ದಾಗಿದೆ. ಸಾವಿರಾರು ವರುಷಗಳಿಂದ ಷಟ್‌ಸ್ಥಲ ಸಾಹಿತ್ಯಕ್ಕೆ ವೀರಶೈವಧರ್ಮವಾಙ್ಮಯಕ್ಕೆ ದೋಹದವನ್ನೀಯುತ್ತಬಂದಿದೆ ಈ ಮಹಾಸಾಗರ. ಜಿಜ್ಞಾಸುಗಳಿಗೆ ಮುಮುಕ್ಷುಗಳಿಗೆ ಜ್ಞಾನಕ್ರಿಯೆಗಳ ಅಕ್ಷಯ ಪಾತ್ರೆಯನ್ನಿತ್ತಿದೆ ಈ ಬೃಹತ್ಸಾಗರ. ಇದರ ಪಾದೋದಕ ಪ್ರಸಾದ (ಜಲಾನ್ನ)ಗಳಿಲ್ಲದೆ ಧರ್ಮಿಯ ಜೀವನವೇ ಇಲ್ಲ. ಈ ಸಾಗರೋದಕ ಸ್ವಾದೂದಕ. ಈ ಅಕ್ಷಯುಪಾತ್ರೆಯ ಆಹಾರ ಸತ್ವಾಹಾರ.

ಈ ಆಹಾರೋದಕಗಳು ಈ ಸಾಗರದ ಮೇಲುಭಾಗದವು ಮಾತ್ರ. ಇದರ ಆಳದಲ್ಲಿ ತತ್ತಳದಲ್ಲಿ ಅನರ್ಘ್ಯ ರತ್ನಭಂಡಾರವೇ ಇದೆ; ಅಪಾರವಾಗಿದೆ. ಅದರ ಆಳಕ್ಕೆ ಇಳಿದಷ್ಟು ಇಳಿದವರ ಆಳವಿದ್ದಷ್ಟು ಲಭ್ಯವಾಗುತ್ತದೆ; ಲಕ್ಷ್ಯವಿತ್ತಷ್ಟು ಲಭ್ಯವಾಗುತ್ತದೆ. ಲಭಿಸಿದಷ್ಟು ಅನುಭವ ಅಗಲವಾಗುತ್ತದೆ. ಆನಂದ ಅಧಿಕವಾಗುತ್ತದೆ. ಮರಳಿ ಮರಳಿ ಅಧ್ಯಯನದ ಆಸೆ ಅಂಕುರಿಸುತ್ತದೆ.

ಅಂಕುರದ ಫಲವೇ ಈ "ಜೀವನ ಸಿದ್ಧಾಂತ." ಜೀವ ಜಿಜ್ಞಾಸೆಯಿಂದ ಆರಂಭವಾಗುವುದೇ ಜೀವನ ಸಿದ್ಧಾಂತ. "ಅಥಾತೋ ಬ್ರಹ್ಮಜಿಜ್ಞಾಸಃ" ಎಂದು ಕೇವಲಾದ್ವೈತವು ಹೇಳಿದರೆ, "ಅಥಾತೋಜೀವ (ಪಿಂಡ) ಜಿಜ್ಞಾಸಃ" ಎಂದು ಶಿವಾದ್ವೈತ ಹೇಳುತ್ತದೆ. ಷಟ್‌ಸ್ಥಲಾಂತರ್ಗತ ಭಕ್ತಸ್ಥಲವು 'ಪಿಂಡ' ಸ್ಥಲದಿಂದ ಪ್ರಾರಂಭವಾಗುವುದೇ ಇದಕ್ಕೆ ಸತ್ಯಸಾಕ್ಷಿ!

ಮುನ್ನುಡಿ

ಪಾರ್ಶ್ವಸ್ಥಂ ತಿಮಿರಂ ಹಂತಿ ಪ್ರದೀಪೋ ಮಣಿನಿರ್ಮಿತಃ
ಸರ್ವಗಾಮಿ ತಮೋಹಂತಿ ಬೋಧದೀಪೋ ನಿರಂಕುಶಃ ।

—**ಸಿದ್ಧಾಂತ ಶಿಖಾಮಣಿ**

[ರತ್ನರಚಿತ ದೀಪವು ಹತ್ತಿರದ ಕತ್ತಲೆಯನ್ನು ಕಳೆಯುತ್ತದೆ. ಯಾವ ಅಡೆತಡೆಯಿಲ್ಲದ ಸರ್ವ ಸ್ವತಂತ್ರವಾದ ಬೋಧಜ್ಞಾನ ಮತ್ತು ಉಪದೇಶ—ದೀಪವು ಎಲ್ಲೆಲ್ಲಿಯೂ ಹರಡಿದ ತಮುವನ್ನು ಹೊಡೆಯುತ್ತದೆ.]

ಸಾಹಿತ್ಯ ಲೋಕದಲ್ಲಿರುವ ರತ್ನರಚಿತ ದೀಪಗಳು ಹಲವು. ಬೋಧ ದೀಪಗಳು ಕೆಲವೇ ಕೆಲವು. ಅಂಥದೊಂದು ಅಪೂರ್ವ ಪ್ರಭೆ ಶ್ರೀ ಶ್ರೀ **'ಜಚನಿ'** ಯವರು. ಈ ನಂದಾದೀಪದಿಂದ ತಮ್ಮ ಹಣತೆಗಳಿಗೆ ಬೆಳಕು ಅಂಟಿಸಿಕೊಂಡಿರುವವರು ಈ ನಾಡಿನಲ್ಲಿ ಸಹಸ್ರ ಸಹಸ್ರ ಜನ. ಬರೆಯುವವರ ದೃಷ್ಟಿಯಲ್ಲಂತೂ **'ಜ.ಚ.ನಿ'** ಗೌರವ ಆದರಗಳಿಗೆ ಪಾತ್ರರಾಗಿರುವ ಹಿರಿಯ ಜೀವ. ಅಂಥ ಮಹಾನುಭಾವರ ಮೇರುಕೃತಿ 'ಜೀವನ ಸಿದ್ಧಾಂತ.'

'ಬೋಧಿಸುವ ಬೆಡಗು ಗುರುವಿನದು.' ನನ್ನಂಥವರು ಆ ಬೋಧೆಗೆ ಕಿವಿಕೊಡುವವರು ಮಾತ್ರ. ಯಾವ ದೃಷ್ಟಿಯಿಂದ ನೋಡಿದರೂ 'ಜೀವನ ಸಿದ್ಧಾಂತ' ಶ್ರೇಷ್ಠವಾದೊಂದು ಗುರುಕೃತಿ.

ಇಂಥದೊಂದು ಕೃತಿಯನ್ನು ಕಾಲದ ವ್ಯೋಮಕ್ಕೆ ತಾನು ಹಾರಿಬಿಡುತ್ತಿರುವೆನೆಂದು ಕನ್ನಡ ನುಡಿ ಹೆಮ್ಮೆ ಪಡುವುದು ಸ್ವಾಭಾವಿಕ.

ಶ್ರೀ ಶ್ರೀಶೈಲ ಜಗದ್ಗುರು ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸನ್ನಿಧಿಯವರು ನಿಡುಮಾಮಿಡಿ ಸಂಸ್ಥಾನ ಅವರಿಂದ ಆಜ್ಞಪ್ತರಾಗಿ ಭ್ರಮರಾಂಬಾ ಬಳಗದವರು, ಈ ಹೆಬ್ಬೊತ್ತಗೆಗೆ ಮುನ್ನುಡಿಯೊಂದನ್ನು ಬರೆದು ಕೊಡಿ ಎಂದು ಕೇಳಿದ್ದಾರೆ. ಇದು ಹಿರಿಯರು ಮಾಡಬೇಕಾದ ಕೆಲಸ ಎಂದು

ಬಳಗದವರಿಗೆ ಮನಗಾಣಿಸಿಕೊಡಲು ಯತ್ನಿಸಿ ನಾನು ವಿಫಲನಾಗಿದ್ದೇನೆ. **ಕಳೆದ ಎರಡು ದಶಕಗಳ ಅವಧಿಯಲ್ಲಿ ತಮ್ಮ ವಿಚಾರಧಾರೆಯಿಂದ, ಒಂದರ ಅನಂತರ ಒಂದಾಗಿ ಪ್ರಕಟವಾದ ಕೃತಿರತ್ನಗಳಿಂದ, ಕನ್ನಡ ಜನಕೋಟಿಯನ್ನು ಮುಗ್ಧಗೊಳಿಸಿರುವ ಮಾಂತ್ರಿಕರು ಶ್ರೀ 'ಜಚನಿ'.** ಅವರ ಕೃತಿಗಳಿಗೆ ಮುನ್ನುಡಿ ಅನಗತ್ಯ ಎಂಬುದು ನನ್ನ ಖಚಿತಾಭಿಪ್ರಾಯ. 'ಜೀವನ ಸಿದ್ಧಾಂತ'ಕ್ಕೆ ನಾಡು ಸಲ್ಲಿಸಲಿರುವ ಮನ್ನಣೆಗೆ ನಾನು ಸಾಕ್ಷಿಯಾಗ ಬಲ್ಲೆನೇ ಹೊರತು, ಆ ಸಮಾರಂಭದಲ್ಲಿ ನಾನೂ ಮೆರೆಯಲು ಯತ್ನಿಸುವುದು ಕ್ಷಮ್ಯವೆನಿಸದು.

ಆ ಕಾರಣದಿಂದ, ಇಲ್ಲಿನ ನಾಲ್ಕಕ್ಷರ ಏನಿದ್ದರೂ ಅದು ಪ್ರಶಂಸೆಯ ಭಾವಪುಷ್ಪ ಮಾತ್ರ ಆಗಬಲ್ಲುದು.

> "ಮಣಿಯನೆಣಿಸಿ ದಿನವ ಕಳೆಯಲು ಬೇಡ, ಕಣಿಯ ಪೂಜಿಸಿ ದಿನವ ಕಳೆಯಲು ಬೇಡ, ಕ್ಷಣವಾದರೂ ನಿಜದ ನೆನಹೇ ಸಾಕು. ಕ್ಷಣ ದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು."

— ಎಂಬ ಪ್ರಭುದೇವ ವಾಣಿಗೆ ಮಾರುಹೋದವರಲ್ಲಿ ನಾನು ಒಬ್ಬ.

ಶ್ರೀ ಜ.ಚ.ನಿ. ಅವರ ಕೃತಿಗಳನ್ನು ಓದಿದಾಗಲೆಲ್ಲ ಆ ವಾಣಿ ಮತ್ತೆ ಮತ್ತೆ ಮೊಳಗಿದಂತೆ ನನಗೆ ಭಾಸವಾಗಿದೆ.

ಎಂಟು ನೂರು ವರ್ಷ ಹಳೆಯದಾದ ಕನ್ನಡದ ವಿಶಿಷ್ಟ ಇಂಪು ಕಂಪು ಈ ಶತಮಾನದಲ್ಲಿ ಶ್ರೀ ಜ.ಚ.ನಿ. ಅವರ ಕೃತಿಗಳಲ್ಲಿ ಪುನಃ ಮೈದೋರಿವೆ. ಇಲ್ಲಿ ಕತ್ತುರಿ ಕನ್ನಡ ಬೋಧದೀಪದ ಎಣ್ಣೆಯಾಗಿದೆ, ಬತ್ತಿಯಾಗಿದೆ. ಶ್ರೀ ಶ್ರೀಯವರಿಗೆ ಸಿದ್ಧಿಸಿರುವ ಅಪೂರ್ವ ಪದಲಾಲಿತ್ಯ, ಉದಾತ್ತ ವಿಚಾರಗಳ ಮಂದಿರದಲ್ಲಿ ಮೈಮರೆತು ಸೇವೆ ಸಲ್ಲಿಸಿದೆ.

ಪ್ರಸ್ತುತ ಕೃತಿಯ ವಿಶೇಷವೆಂದರೆ ನದಿಯ ಉಗಮದತ್ತ ಶ್ರೀ 'ಜಚನಿ' ಅವರು ಕೈಕೊಂಡಿರುವ ಪಯಣ. ಇಲ್ಲಿ ಪೂರ್ವದ ನೆಲೆಯಲ್ಲಿ ನಿಂತು ಸಮ್ಯಕ್ ದೃಷ್ಟಿಯಿಂದ ಜೀವನ ಸಿದ್ಧಾಂತವನ್ನು ಶ್ರೀ ಶ್ರೀ ಗಳವರು ರೂಪಿಸಿ ದ್ದಾರೆ. ಆ ನಿರೂಪಣೆಯೇ ಆರು ಸಂಪುಟಗಳ ಮಹೋನ್ನತ ಕೃತಿ.

ವೀರಶೈವ ಧರ್ಮ ಸಂಸ್ಥಾಪನಾಚಾರ್ಯರಲ್ಲಿ ಒಬ್ಬರಾದ ಶ್ರೀ ರೇಣುಕಾಚಾರ್ಯರ ಗೀತೆ 'ಸಿದ್ಧಾಂತ ಶಿಖಾಮಣಿ' ಸಂಸ್ಕೃತದ ಆಕೃತಿಯನ್ನು ಕನ್ನಡಿಗರಿಗೆ ಗದ್ಯರೂಪದಲ್ಲಿ 'ಮಣಿಕಾಂತಿ'ಯನ್ನಾಗಿ, ದಾರ್ಶನಿಕ ಕಾವ್ಯರೂಪದಲ್ಲಿ 'ಮಣಿಮುಕುರ'ವನ್ನಾಗಿ, ವಚನರೂಪದಲ್ಲಿ 'ಮಣಿವಚನಗಳ'ನ್ನಾಗಿ ಕೊಟ್ಟು ಮಹೋಪಕಾರ ಮಾಡಿರುವ ಶ್ರೀ ಜ.ಚ.ನಿ. **ಸನ್ನಿಧಿಯವರ ಅದ್ಭುತವಾದ ಸಿದ್ಧಾಂತ ಪ್ರಜ್ಞೆ, ಅನುಭವದ ಅಮೃತ ಇಲ್ಲಿ ಜೀವನ ಸಿದ್ಧಾಂತವಾಗಿದೆ.** ಆಧುನಿಕ ಮಠಾಧೀಶರಲ್ಲಿ ವಂದ್ಯರಾಗಿರುವ ಆಚಾರ್ಯರೊಬ್ಬರ ಮೇಲೆ ಶ್ರೀ ರೇಣುಕ ಗೀತೆಯು ಬೀರಿರುವ ಪ್ರಭಾವ ಇಲ್ಲಿ ಪರಿಣಾಮಗೊಂಡು ಅಸಾಧಾರಣ ಸಾಹಿತ್ಯ ಕೃತಿಯಾಗಿ ಒಡಮೂಡಿದೆ. ಇಂಥ ಕೃತಿಯ ಸೃಷ್ಟಿಯಿಂದ ಕನ್ನಡದ ಧಾರ್ಮಿಕ ವಾಙ್ಮಯದ ಸೌಧಕ್ಕೊಂದು-ಆಧಾರಸ್ತಂಭವಾಗಿದ್ದಾರೆ ಶ್ರೀ 'ಜ.ಚ.ನಿ.' ಅವರು.

> ಒಂದು ಒಳ ಜಗತ್ತು, ಇನ್ನೊಂದು ಹೊರ ಜಗತ್ತು. ಬ್ರಹ್ಮಾಂಡ ಪಿಂಡಾಂಡದಲ್ಲಿದೆ. ಒಂದು ಬೀಜದಂತೆ ಸೂಕ್ಷ್ಮ, ಇನ್ನೊಂದು ವೃಕ್ಷದಂತೆ ವಿಸ್ತಾರ. ಒಂದು ವ್ಯಷ್ಟಿ ಜಗತ್, ಇನ್ನೊಂದು ಸಮಷ್ಟಿ ಜಗತ್. ಅಷ್ಟಾಂಗ ಸಹಿತವಾದುದು ಪಿಂಡಾಂಡ. ಅಷ್ಟತನುಯುಕ್ತವಾದುದು ಬ್ರಹ್ಮಾಂಡ.

—ಇದು ಶ್ರೀ 'ಜ.ಚ.ನಿ.' ನುಡಿ. ಅತ್ಯಂತ ಗಹನವಾದುದನ್ನು ಬಲು ಸುಲಭವಾಗಿ ತಿಳಿಯ ಹೇಳುವ ಈ ರೀತಿ ಅದೆಷ್ಟು ಶ್ರೇಷ್ಠ !

> ಮತಕ್ಕೆ ಕುಲಕ್ಕೆ ಕೆಲಕ್ಕೆ ಶುದ್ಧವಾಗಿ ನಡೆಯಬಹುದು ; ಮನಕ್ಕೆ ಶುದ್ಧವಾಗಿ ನಡೆಯುವುದು ಕಷ್ಟ.

—ಚಿರಂಜೀವಿಯಾದ ಸೂತ್ರವಾಕ್ಯಕ್ಕೆ ಪದಗಳ ಕಾಣ್ಕೆಯನ್ನು ನೀಡಿದೆ ಕನ್ನಡ.

ಭಾಷಾಪ್ರಿಯರಿಗೆ, ಬಂಗಾರದ ಗಣಿ ಈ ಕೃತಿ. ಧಾರ್ಮಿಕ ಚಿಂತನೆ ಮಂಥನಗಳನ್ನು ಬಯಸುವವರಿಗೆ ಉದಾತ್ತವಿಚಾರಗಳ ಕಡಲು. ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಎಷ್ಟು ಅಗೆದರೂ ಮುಗಿಯದ ನಿಕ್ಷೇಪ.

'ಬರೆವ–ಬರೆದಿಡುವ ಕೆಲಸ ಅದು ಹೊಂಗೆಲಸ, ಶಿಲಾಶಾಸನ' ಎಂದು ಶ್ರೀ ಶ್ರೀಯುವರು ಒಂದೆಡೆ ನುಡಿದಿದ್ದಾರೆ.

ಎಲ್ಲ ಬರೆಹಗಾರರ ಕಾಯಕಕ್ಕೂ ಅನ್ವಯಿಸುವ ಮಾತು ಇದಲ್ಲ. ಶ್ರೀ 'ಜ.ಚ.ನಿ.' ಅವರ ಕೃತಿಗಳ ಮಟ್ಟಿಗೆ ಮಾತ್ರ ಅದು ಸದಾ ಕಾಲವೂ ಸತ್ಯ.

ನಾಡಿನ ಹೆಸರಾಂತ ಧರ್ಮ ಪೀಠದ ಅಧಿಪತಿ ಶ್ರೀ ನಿಡುಮಾಮಿಡಿ ಶ್ರೀಶೈಲ ಜಗದ್ಗುರು ಚನ್ನಬಸವರಾಜದೇಶಿಕೇಂದ್ರ ಶಿವಾಚಾರ್ಯರು—ಶ್ರೀ 'ಜ.ಚ.ನಿ.' ಅವರು 'ಜೀವನ ಸಿದ್ಧಾಂತ' ಸಂಪುಟಗಳನ್ನೆಲ್ಲ ಬೇಗನೆ ಬರೆದು ಮುಗಿಸುವಂತಾಗಲಿ, ಇನ್ನೂ ಕೃತಿರತ್ನಗಳನೇಕ ಅವರಿಂದ ಸೃಷ್ಟಿಯಾಗಲಿ —ಎಂಬುದು ನನ್ನ ಹೃತ್ಪೂರ್ವಕ ಹಾರೈಕೆ.

ನಿರಂಜನ

ವಿಜಯದಶಮಿ
ಬೆಂಗಳೂರು

ನಾಲ್ಕು ಮಾತು

ಶ್ರೀ ಶ್ರೀಗಳವರಾದ 'ಜ.ಚ.ನಿ.' ಸನ್ನಿಧಿಯವರು (ಶ್ರೀನಿಡುಮಾಮಿಡಿ ಶ್ರೀಶೈಲ ಸಂಸ್ಥಾನದ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಚನ್ನಬಸವ ರಾಜ ದೇಶಿಕೇಂದ್ರ ಶಿವಾಚಾರ್ಯರು) ತಾವು ಇದೀಗ ರಚಿಸಿರುವ 'ಜೀವನ ಸಿದ್ಧಾಂತ' ಎಂಬ ಹೆಬ್ಬೊತ್ತಗೆಯ ಬಗೆಗೆ ಸಾಹಿತ್ಯ ದೃಷ್ಟಿಯಿಂದ ನಾಲ್ಕು ಅಭಿಪ್ರಾಯದ ಮಾತುಗಳನ್ನು ಬರೆದುಕೊಡಬೇಕೆಂದು ಅಪ್ಪಣೆಮಾಡಿ, ನನ್ನ ವಿಷಯದಲ್ಲಿ ಎಂದಿನಿಂದಲೂ ತೋರುತ್ತ ಬಂದಿರುವ ನಿರ್ವ್ಯಾಜವಾದ ಅಭಿ ಮಾನವನ್ನು ವ್ಯಕ್ತಪಡಿಸಿದ್ದಾರೆ; ನನ್ನನ್ನು ಅನುಗ್ರಹಿಸಿದ್ದಾರೆ. ಅವರ ಆಕ್ಕರೆಯ ಅಪ್ಪಣೆಯನ್ನು ಪಾಲಿಸುವ ಸಲುವಾಗಿ ಈ ನಾಲ್ಕು ಮಾತುಗಳನ್ನು ನಾನು ಬರೆಯುತ್ತಿರುವೆನೇ ಹೊರತು, ಅವರ ಈ 'ಗುರು-ಕೃತಿ'ಯನ್ನು ಕುರಿತು ಅಭಿಪ್ರಾಯ ಹೇಳುವ ಮಾತು ಒತ್ತಟ್ಟಿಗಿರಲಿ, ಅದನ್ನು ಪರಿಚಯಿಸಿ ಕೊಡುವನಿತರ ಅಧಿಕಾರ ಲವಲೇಶವೂ ನನ್ನಲ್ಲಿಲ್ಲ. ಒಂದು ಮಾತನ್ನು ಮಾತ್ರ ತುಂಬ ಅಭಿಮಾನದಿಂದ ಮೊದಲೇ ಹೇಳಿಬಿಡಬಹುದು : ಶ್ರೀಗಳ ವರ ಗದ್ಯಶೈಲಿಗೆ ನಾನು ಎಂದಿನಿಂದಲೂ ಮಾರುಹೋಗಿದ್ದೇನೆ. ಎಂತಹ ಗಹನವಾದ ಆಧ್ಯಾತ್ಮಿಕ ವಿಚಾರಗಳನ್ನೂ ಮಂದಮತಿಗಳು ಕೂಡ ಸುಲಭ ವಾಗಿ ಅರಿಯುವಂತೆ ತಿಳಿಮಾತಿನಲ್ಲಿ ತಿಳಿಸುವ ಗಮಕವಿಲಾಸದ ಅವರ ಗದ್ಯ ಶೈಲಿ 'ಜೀವನಸಿದ್ಧಾಂತ'ದಲ್ಲಿ ತನ್ನ ಮೋಹಕವಾದ ಮಣಿಹವನ್ನು ಎಣೆಯಿ ಲ್ಲದ ರೀತಿಯಲ್ಲಿ ಎಸಗಿದೆ.

ವೀರಶೈವಧರ್ಮ ಬಹುಪುರಾತನವಾದುದು ಎಂಬಲ್ಲಿ ಸಂದೇಹ ವಿಲ್ಲ. ಅದರ ಪ್ರಪ್ರಥಮ ಪ್ರವರ್ತಕರು, ಪಂಚಾಚಾರ್ಯರು ಎಂದು ಪ್ರಕೀರ್ತಿತರಾದ ಐವರು ಶಿವಾಚಾರ್ಯ ಪ್ರವರರಲ್ಲಿ ಒಬ್ಬರಾದ—ಆದ್ಯರಾದ-ಶ್ರೀರೇಣುಕರು ಎಂದು ಒಂದು ಪಂಥದ ನಿಲುವು. ಅವರು ಪ್ರವರ್ತಿಸಿದ ದರ್ಶನವೆ ಶಕ್ತಿವಿಶಿಷ್ಟವಾದ ಶಿವಾದ್ವೈತವೆಂದು ಪ್ರಸಿದ್ಧವಾಗಿರುವುದು. **ಈ** ದರ್ಶನ ಸಿದ್ಧಾಂತದ ಸೋಪಾನ ಪಂಕ್ತಿಯೆ ಏಕೋತ್ತರಶತ ಸ್ಥಲಾಂತರ್ಗತ ವಾದ ಷಟ್‌ಸ್ಥಲ. ಭರತಖಂಡದಲ್ಲಿ ವೈದಿಕಧರ್ಮಗಳು ಮೊತ್ತಮೊದಲು


ಗ್ರಂಥರೂಪವನ್ನು ಪಡೆದುದು ಸಂಸ್ಕೃತದಲ್ಲಿ; ವೇದೋಪನಿಷತ್ತುಗಳು ಹಾಗೂ ಶೈವಾಗಮ ಪುರಾಣಗಳು—ಇವುಗಳನ್ನು ಅವಲಂಬಿಸಿ ಅವತರಿಸಿದ ಶ್ರೀ ರೇಣುಕ ಪ್ರಣೀತವಾದ ಷಟ್‌ಸ್ಥಲ ಸಿದ್ಧಾಂತವು ಕೂಡ ಮೊಮ್ಮೊದಲು ಗ್ರಂಥರೂಪವನ್ನು ಪಡೆದುದು ಸಂಸ್ಕೃತದಲ್ಲಿಯೆ ಎಂದು ತಿಳಿದರೆ ತಪ್ಪಾಗದು, **ಆ ಪ್ರಪ್ರಥಮ ಗ್ರಂಥವೆಂದರೆ, ಶ್ರೀ ಶಿವಯೋಗಿ ಶಿವಚಾರ್ಯ ವಿರಚಿತ 'ಸಿದ್ಧಾಂತ ಶಿಖಾಮಣಿ.'** ಇದರಲ್ಲಿ ಪ್ರತಿಪಾದಿತವಾಗಿರುವ ಷಟ್‌ಸ್ಥಲ ಸಿದ್ಧಾಂತವು ಅಲ್ಲಮ ಬಸವಾದಿ ಶಿವಶರಣರ ಕನ್ನಡ ವಚನಗಳಲ್ಲಿ ರೂಪಾಂತರ ಗೊಂಡಿದೆ. ಧಾರ್ಮಿಕ ಪ್ರಗತಿಯಲ್ಲಿ ಇದೊಂದು ಸಹಜವಾದ ಬೆಳೆವಣಿಗೆ. ದ್ವೈತಮತ ಸಿದ್ಧಾಂತವು ದಾಸಕೂಟದವರ ಕನ್ನಡ ರಚನೆಗಳಲ್ಲಿಯೂ, ವಿಶಿಷ್ಟಾದ್ವೈತ ಮತ ಸಿದ್ಧಾಂತವು ಆಳ್ವಾರುಗಳ ತಮಿಳು ಪ್ರಬಂಧಗಳಲ್ಲಿಯೂ ಪ್ರಚಾರಗೊಂಡು ಜನಮನವನ್ನು ಮುಟ್ಟಿರುವುದು ಪ್ರಸಿದ್ಧ ಸಂಗತಿ. ಅಂತೆಯೇ ವೀರಶೈವದ ಷಟ್‌ಸ್ಥಲ ಸಿದ್ಧಾಂತದ ವಿಷಯದಲ್ಲಿಯೂ ಹಾಗಾಗಿರು ವುದು ಸಂಭವನೀಯ. ಆದರೆ, ಶರಣರ ವಚನಗಳಲ್ಲಿ ಪ್ರತಿಪಾದಿತವಾಗಿ ರುವ ಷಟ್‌ಸ್ಥಲ ವಿಚಾರಗಳಿಗೆ 'ಸಿದ್ಧಾಂತಶಿಖಾಮಣಿ' ಆಕರಗ್ರಂಥವೆ ಅಲ್ಲವೆ, ಅದು ವಚನಸಾಹಿತ್ಯಕ್ಕಿಂತ ಎಷ್ಟು ಪೂರ್ವದ್ದು—ಇವೇ ಮುಂತಾದ ವಿಚಾರಗಳ ಜಿಜ್ಞಾಸೆ ನನ್ನ ತಿಳಿವಳಿಕೆಗೆ ಮೀರಿದ್ದು; ದಕ್ಷ ಸಂಶೋಧಕರು ಮಾಡಬೇಕಾದ ಕಾರ್ಯ. ಅಂಥ ಸಂಶೋಧನೆ ಶ್ರೀ ಶ್ರೀಗಳವರಂತಹ ಸಮರ್ಥರು ಈಗಾಗಲೇ ತಕ್ಕಮಟ್ಟಿಗೆ ಮಾಡಿದ್ದರೂ, ಇನ್ನೂ ಖಚಿತವಾಗಿ ನಡೆಯಬೇಕಾ ಗಿದೆ ಎಂದು ನನ್ನ ಗ್ರಹಿಕೆ. ಇದಂತಿರಲಿ. ಷಟ್‌ಸ್ಥಲಧರ್ಮವು ಶರಣರ ವಚನ ವಾಹಿನಿಯ ಮೂಲಕ ಕನ್ನಡ ನಾಡಿನಲ್ಲೆಲ್ಲಾ ಹರಿದಿದ್ದರೂ, 'ಸಿದ್ಧಾಂತ ಶಿಖಾಮಣಿ'ಯ ಪರಿಚಯವು ಸಹಜವಾಗಿಯೆ ಕನ್ನಡಿಗರಿಗೆ ಆಗಿರಲಿಲ್ಲ. ಆ ಕಾರ್ಯವನ್ನು ಶ್ರೀ ಶ್ರಿಗಳವರಾದ 'ಜ. ಚ.ನಿ.' ಯವರು 'ಮಣಿಕಾಂತಿ' ಯಿಂದ ಪ್ರಾರಂಭಿಸಿ, ತಮ್ಮ 'ಮಣಿಮುಕುರ'ದಲ್ಲಿ—ಕನ್ನಡ ನಲ್‌ನುಡಿ ಗನ್ನಡಿಯಲ್ಲಿ 'ಶಿಖಾಮಣಿ'ಯ ಸ್ವರೂಪವನ್ನು ನಿಚ್ಚಳವಾಗಿ ಪಡಿಮೂಡಿಸಿ ದರು ಇದೀಗ 'ತಮ್ಮ ಜೀವನಸಿದ್ಧಾಂತ'ದಲ್ಲಿ ಶ್ರೀಗಳವರು 'ಶಿಖಾಮಣಿಯ ಶಿವಾದ್ವೈತವನ್ನು ವೇದ, ಉಪನಿಷತ್ತು, ಭಗವದ್ಗೀತೆ, ಶಿವಶರಣರ ವಚನಗಳು—ಇವೇ ಮುಂತಾದ ದಾರ್ಶನಿಕ ಗ್ರಂಥಗಳಲ್ಲಿ ಮಂಡಿತವಾದ ತತ್ತ್ವ

ವಿಚಾರಗಳೊಂದಿಗೆ ಸಮೀಕರಿಸುವಲ್ಲಿ ಸಮೀಕರಿಸಿ, ತುಲನೆ ಮಾಡುವಲ್ಲಿ ತುಲನೆಮಾಡಿ, ಆ ಸಿದ್ಧಾಂತವನ್ನು ಸ್ವಮತೀಯ ಸಾಧಕರಿಗೆ ಮಾತ್ರವಲ್ಲದೆ ತತ್ತ್ವಜಿಜ್ಞಾಸೆಯಲ್ಲಿ ಆಸಕ್ತಿಯುಳ್ಳವರೆಲ್ಲರಿಗೂ ಸೊಗಸುವಂತೆ ಸವಿವರವಾಗಿ, ಸೋದಾಹರಣವಾಗಿ, ಮೆಟ್ಟಿಲುಮೆಟ್ಟಿಲಾಗಿ ಪ್ರಸ್ಥಾಪಿಸುತ್ತ ಸಾಗಿದ್ದಾರೆ. ಮೊತ್ತದಲ್ಲಿ, "ಪರಮತಗಳ ಮಾತು ಬಂದಾಗ, ಪರಮತಗಳೊಡನೆ ಸ್ವಮತ ವನ್ನು ಒರೆಹಚ್ಚುವಾಗ ತಳೆದ ಸಮಧೋರಣೆ, ತಳೆದ ಸೌಮ್ಯವಾಣಿ, ತೋರಿದ ವಿಚಕ್ಷಣೆ ಜಾಣ್ಮೆ ಎಂಥವರೂ ಎದೆಯಾರ ಮೆಚ್ಚತಕ್ಕವು. ಕಿಡಿನುಡಿಯ ಸುಳಿವಿಲ್ಲ. ಕೆಡೆನುಡಿವ ಸಂಕಲ್ಪವಿಲ್ಲ....ಸ್ವದರ್ಶನೋ-ನ್ನತಿಗೈಪ ಭರದಲ್ಲಿ ಉಬ್ಬಿ ಕೊಬ್ಬಿ ಷಡ್ದರ್ಶನಗಳ ಮೇಲೆ ಸಿಕ್ಕಹಾಗೆ ಸಣ್ಣ ಶಬ್ದಗಳನ್ನು ಬಳಸದಿರುವ ಸಹೃದಯತೆ ಈ ಕೃತಿಗೆ ಮೀಸಲಾಗಿದೆ." (ಮಣಿ, ಮುಕುರಂ, ಪೀಠಿಕೆ ; ಪುಟ 22)—ಎಂದು ಶ್ರೀ ಶ್ರೀಗಳವರು 'ಸಿದ್ಧಾಂತ ಶಿಖಾಮಣಿ'ಯ ಬಗೆಗೆ ಆಡಿರುವ ನಲ್ಮಾತುಗಳನ್ನೆ ಈ 'ಜೀವನಸಿದ್ಧಾಂತ'ದ ಬಗೆಗೂ ನಾವು ಸಂತೋಷದಿಂದ ಹೇಳಬಹುದಾಗಿದೆ. ಶ್ರೀಶ್ರೀಗಳವರ ಅನುಭವ ಸಂಪತ್ತಿನ ಚಿಲುಮೆ ಅವರ ಜ್ಞಾನಸಂಪತ್ತಿನ ಹೊಂಬಿಸಿಲಿನಲ್ಲಿ ನಾಟ್ಯವಾಡುವ ಸೊಬಗನ್ನು ನಾವೀ ಕೃತಿಯಲ್ಲಿ ಕಾಣಬಹುದು. ಷಟ್ ಸ್ಥಲ ದರ್ಶನದೊಂದಿಗೆ ಜೀವನ ದರ್ಶನವನ್ನೂ ಸಮನ್ವಯಗೊಳಿಸುವ ಚಿಂತನ-ಮಂಥನ ಕ್ರಿಯೆ ನಡೆದು, 'ಜೀವನಸಿದ್ಧಾಂತ' ನವನೀತವು ತೇಲಿ ನಿಂತಿದೆ ಈ ಕೃತಿಯಲ್ಲಿ. ಅಲ್ಲದೆ, ಸರ್ವಮತೀಯರಿಗೂ ಉಪಾದೇಯಗ ಳಾದ ಎನಿತೆನಿತೋ ಸೂಕ್ತಿಗಳೂ ವಿಚಾರಧಾರೆಗಳೂ ಗ್ರಂಥದುದ್ದಕ್ಕೂ ಹಾಸು ಹೊಕ್ಕಾಗಿ ನೆಯ್ದುಕೊಂಡು ಅದರ ಕಳೆಯೇರಿಸಿವೆ ; ಅದರ ಬೆಲೆ ಯೇರಿಸಿವೆ. ಈ ಕಾರಣಗಳಿಂದಾಗಿ, ಪರಸಮಯಿಗಳಾದ ಕನ್ನಡಿಗರೂ ಕೂಡ ಯಾವ ಮನೋವಿಕಲ್ಪಕ್ಕೂ ಪಕ್ಕಾಗದೆ ಈ ಉತ್ತಮೋತ್ತಮ ಕೃತಿ ಯನ್ನು ಓದಿ, ತಮ್ಮ ತಮ್ಮ ನೆಲೆಯಲ್ಲಿಯೇ ಇದ್ದುಕೊಂಡು ಪ್ರಯೋಜನ ಪಡೆಯಬಹುದಾಗಿದೆ. ಎಂದಮೇಲೆ, ವೀರಶೈವ ಬಂಧುಗಳು ಈ ಕೃತಿಯನ್ನು ಅಗತ್ಯ ಓದಬೇಕೆಂದು ಹೇಳುವುದೇ ಅನಾವಶ್ಯಕ. 'ಸಿದ್ಧಾಂತಶಿಖಾಮಣಿ'ಯ ಸಾರಸರ್ವಸ್ವವನ್ನು ಬಂಧುರವಾಗಿ ಬಿತ್ತರಿಸುವ ಈ ಗ್ರಂಥವನ್ನು ತತ್ತ್ವ ಜಿಜ್ಞಾಸುಗಳಂತೂ ಅತ್ಯಗತ್ಯವಾಗಿ ವಾಚನಮಾಡಲೇಬೇಕು.

೨೦-೮-೧೯೬೬,
ಬೆಂಗಳೂರು.

ಎಂ. ವಿ. ಸೀತಾರಾಮಯ್ಯ

ಬಳಗದ ಚೇತನಮೂರ್ತಿಗಳು !



ಶ್ರೀ ಕರಿಬಸಪ್ಪನವರು



ಶ್ರೀಮತಿ ಗು. ಶಂಕರಮ್ಮನವರು

ಭ್ರಮರಾಂಬ ಬಳಗದ ಭಗಿನಿಯರು



ಶ್ರೀಮತಿ ಚೆನ್ನಬಸಮ್ಮ



ಶ್ರೀಮತಿ ಪಾರ್ವತಮ್ಮ



ಶ್ರೀಮತಿ ಪುಟ್ಟಮಲ್ಲಮ್ಮ



ಶ್ರೀಮತಿ ಪಾರ್ವತಮ್ಮ



ಶ್ರೀಮತಿ ಲಿಂಗಮ್ಮ



ಶ್ರೀಮತಿ ಪುಟ್ಟಮ್ಮ

ಮುನ್ಮಾತು

೧

೧೯೬೩. ಗಿರಿಯಪುರ. ಶಿವಾದ್ವೈತ ಪ್ರಚಾರ ಕೇಂದ್ರವು 'ಶಿವಾದ್ವೈತ ದರ್ಶನ' ಎಂಬ ಹೆಸರಿನ ನಮ್ಮ ದಾರ್ಶನಿಕ ಉದ್ಗ್ರಂಥದ ಉದ್ಘಾಟನೋತ್ಸವವನ್ನು ನೆರವೇರಿಸಿತು. ಉದ್ಘಾಟನೆಯನ್ನು ನೆರವೇರಿಸಲು ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯುದಿಂದ ಶ್ರೀ ಎಸ್. ಎಂ. ಅಂಗಡಿ, ಬಿ.ಎ;ಬಿ.ಟಿ ಅವರು ಮತ್ತು ಶ್ರೀವೃಷಭೇಂದ್ರಸ್ವಾಮಿ ಇವರಿಬ್ಬರು ಬಂದಿದ್ದರು. ಕೃತಿಯನ್ನು ಮೆಚ್ಚಿ ಹೃದಯು ಹೆಚ್ಚಿ ಇಬ್ಬರೂ ಮಾತಾಡಿದರು. "ಶಿವಾದ್ವೈತ ದರ್ಶನ' ಅದೊಂದು ಚೆಲುವಾದ ಚಿತ್ರರಸಪೂರ್ಣ ಓಗರ. ಅದನ್ನು ನೋಡಿದಷ್ಟೂ ನೋಡಬೇಕೆನಿಸುತ್ತದೆ ; ಉಂಡಷ್ಟೂ ಉಣಬೇಕೆನಿಸುತ್ತದೆ. ಆದರೆ ಹಸಿದ ಹೊಟ್ಟೆಗೆ ಮುನ್ನೂರು ಪುಟದ ಮಧುರ ಓಗರ ಎಷ್ಟೂ ಸಾಲದು ಹಸಿದೊಡಲ್ಕು ತುಂಬದು. ಇಂತಹವು ಇನ್ನು ಹತ್ತು ಸಂಪುಟಗಳು ಬೇಕು—ಎಂದು ಈ ಕಳಾಕೃತಿಯೇ ಬಯಸ ಹಚ್ಚಿದೆ. ಈ ಬಯಕೆಯನ್ನು ಅಲ್ಲ-ಹೆಬ್ಬಯಕೆಯನ್ನು ಕೃತಿಕರ್ತರಲ್ಲಿ ಮತ್ತೆ ಮತ್ತೆ ನಿವೇದಿಸಿಕೊಳ್ಳುತ್ತೇವೆ—ಒದಗಿಸಬೇಕೆಂದು !" ಅದಕ್ಕೆ ನಾವು ಹೇಳಿದೆವು : ಬಯಕೆ ಬಯಲಿನಂತಹದು. ಅದರ ಬಿತ್ತರವನ್ನು ಬಳಸಿ ನಿಲ್ಲಲು ನಮ್ಮೊಬ್ಬರಿಂದಾಗದ ಮಾತು, ನೀಗದ ಕೆಲಸ–ಎಂದು ! ಇದಕೆ ಅವರು ತೃಪ್ತರಾಗದೆ ಗಿರಿಯುಪುರದ ಶ್ರೀ ಮಹಾಸನ್ನಿಧಿಯಲ್ಲಿ ಬಿನ್ನವಿಸಿಕೊಂಡರು. ಪೂಜ್ಯ ಮಹಾಸನ್ನಿಧಿಯವರು ಅಮೃತಪಾಣಿಯಿಂದ ಅಪ್ಪಣೆಯನ್ನು ಮಾಡದಿದ್ದರೂ ಭಾವಪೂರ್ಣ ಆ ಪರಾವಾಣಿಯಿಂದ ಆಣತಿಯ ನಿತ್ತಂತೆ ಅವಲೋಕಿಸಿದರು. ಅವರ ಆ ನಿರ್ಮಳ ಭಾವದ ನಿರೀಕ್ಷಣೆ ನಿರರ್ಥವಾಗಬಾರದೆಂದು ಬಗೆದು ನೋಡೋಣ ಎಂದೆವು. ಆಗ ಶ್ರೀ ಮಹಾಸನ್ನಿಧಿಯವರು ತಮ್ಮ ದಿವ್ಯವಾಣಿಯಿಂದ ಹತ್ತಿಲ್ಲದಿದ್ದರೆ ಹೋಗಲಿ ಸ್ಥಲಕ್ಕೊಂದರಂತೆ

ಆರು ಸಂಪುಟಗಳನ್ನು ಕೊಡಬಹುದೆಂದು ಹೇಳಿ ಹರಿಸಿದರು. ಅವರ ಆ ಹಸಾದ ಹರಕೆಯ ಫಲವೇ ಈ 'ಜೀವನಸಿದ್ಧಾಂತ' ! ಈ ಭಕ್ತಸಂಪುಟ!!

೨

ಅವರ ಕೃಪೆಯ ಬಲದಿಂದ ಮುಂದೆ ಆರೇ ತಿಂಗಳಲ್ಲಿ ಪುಸ್ತಿಕೆ ಪೂರೈಸಿತು. ೧೯೬೫ರಲ್ಲಿ ಅಚ್ಚಿನ ಮನೆ ಸೇರಿತು. ಇದೂ ಒಂದು ಪವಾಡ. ಏನೆಂದರೆ ಸುಮಾರು ಒಂಬತ್ತುನೂರು ಪುಟದ ಪುಸ್ತಿಕೆಯ ಸೇವೆ ಸಣ್ಣದಲ್ಲ. ಹೇಗೆ ನಿತ್ತರಿಸುವುದೆಂದು ಯೋಚಿಸುತ್ತಿರುವಾಗ ಬೆಂಗಳೂರಿನ ಅಕ್ಕಿಪೇಟೆಯ ಭ್ರಮರಾಂಬಾ ಬಳಗವು ಒಂದೇ ಸ್ಥೈರ್ಯದಿಂದ ಒಂದೇ ಶ್ರದ್ಧೆಯಿಂದ ಸೇವೆ ಸಲ್ಲಿಸಲು ಮುಂದೆ ಬಂದಿತು. ಇದನ್ನು ನೋಡಿ ಕೇಳಿ ನಮಗೆ ಅಚ್ಚರಿಯಾಯಿತು. ಬಳಗ ಚಿಕ್ಕದು. ಆರ್ಥಿಕ ಬಲಸಾಲದು. ಆದರೂ ಅದಾವ ಧೈರ್ಯದಿಂದ ಈ ಬೃಹತ್ ಸೇವೆಗೆ ಬದ್ಧಕಂಕಣವಾಯಿತೆಂದು ! ಬಳಗದ ನಿಷ್ಠೆ ಅಂತಹದು! ಸಾಹಿತ್ಯ ಸೇವೆಯ ಛಲ ಅಂತಹದು ! ಅವರ ಆ ಉದಾರ ಹೃದಯದ ವಾಗ್ದಾನವನ್ನು ಸಾಂಗವಾಗಿ ಸಾಗಿಸಿಯೇ ತೀರಿದರು-ಎಂದು ಹೇಳುತ್ತಿದೆ ಈ ಸುಂದರಾಕೃತಿಯ ಹೆಬ್ಬೊತ್ತಗೆ !

ಬಳಗದ ಸೇವೆ ಇದೊಂದೇ ಅಲ್ಲ; ಇಂದಿನದು ಮಾತ್ರವಲ್ಲ. ಹಿಂದಿನಿಂದ ಹಲವಾರು ಕೃತಿಗಳನ್ನು ಅಚ್ಚುಹಾಕಿಸಿ ಕನ್ನಡ ಸಾಹಿತ್ಯ ಸೇವೆಯನ್ನು ಸಲ್ಲಿಸುತ್ತ ಬಂದಿದೆ. ಅಭಯವಾಣಿ (ಭಾಗ-೧), ವಚನವಲ್ಲರಿ (ಭಾಗ-೨), ಕಾರುಣ್ಯ ಕಿರಣ (ಪತ್ರಸಾಹಿತ್ಯ), ನಿವೇದನ (ಕವನಸಂಗ್ರಹ), ಸಾರಾಯ ಸಂಪಚ್ಚತುಷ್ಟಯ (ಸಂವಾದ ಸಾಹಿತ್ಯ), ಇವನ್ನೆಲ್ಲ ಭ್ರಮರಾಂಬಾ ಬಳಗ ಬೆಳಕಿಗೆ ತಂದಿದೆ. ಅಂತೆಯೇ ತನ್ನ ಬಾಳಿಗೂ ಬೆಳಕನ್ನು ತಂದುಕೊಂಡಿದೆ. ಬಳಗ ಚಿಕ್ಕದಾದರೂ ಬದುಕು ಚಿಕ್ಕದಲ್ಲ; ಅದರ ಹೆಸರು ಚಿಕ್ಕದಲ್ಲ. ಇಂತಹ ಉತ್ತಮ ಉದ್ದೇಶವನ್ನಿಟ್ಟುಕೊಂಡು ಬಳಗ ತನ್ನ ಧ್ಯೇಯದತ್ತ ಸಾಗುತ್ತಿದೆ. ಉದಾರವಾದ ಹೃದಯದಿಂದ ಉದಾತ್ತವಾದ ಸಾಹಿತ್ಯ ಸೇವೆಯಿಂದ ಕನ್ನಡ ನಾಡಿಗೆ ಆದರ್ಶವಾಗಿ ಬೆಳಗುತ್ತಿದೆ; ಬಹುದಿನ ಬಾಳಿ ಬೆಳಗಲಿ ಎಂದು ಬಗೆದುಂಬಿ ಹರಸೋಣವಾಗಿದೆ.

೩

'ಜೀವನಸಿದ್ಧಾಂತ'ಕ್ಕೆ ನಾಲ್ಕು ಮಾತುಗಳನ್ನು ಬರೆದು ಮನದುಂಬಿ ಮಾತಾಡಿದ ಶ್ರೀಎಂ.ವಿ. ಸೀತಾರಾಮಯ್ಯನವರು ಎಂ. ಎ, ಅವರು ಎಲೆಮರೆ ಹಣ್ಣಿನಂತಿದ್ದು ಸಾಹಿತ್ಯ ಸೇವೆಯಲ್ಲಿ ನಿರತರಾಗಿದ್ದಾರೆ. ನಿಜಕ್ಕೂ ಇವರ ನಿಲುವು ನೀಳಾದುದು ; ಇವರ ಸೌಜನ್ಯ ನಿರತಿಶಯವಾದುದು. ಇವರ ಸಾಹಿತ್ಯ ಸೌಂದರ್ಯವನ್ನು ಗದ್ಯಶೈಲಿಯ ಗಾಂಭೀರ್ಯವನ್ನು ನಾವು ಮನಸಾರೆ ಮೆಚ್ಚಿಕೊಂಡಿದ್ದೇವೆ. ಇದರಿಂದಾಗಿ ಇವರಿಗೆ ನಾವು ಆಗಾಗ ತೊಂದರೆಯನ್ನು ತಂದೊಡ್ಡಿದ್ದೇವೆ. ಒಡ್ಡಿದ ತೊಂದರೆಯನ್ನು ತಾವರೆಯ ಹೂವಿನಂತೆ ಸ್ವೀಕರಿಸಿ ನಲಿಯುತ್ತ ಕೆಲಸ ಮಾಡಿಕೊಟ್ಟಿದ್ದಾರೆ. 'ಕಾರುಣ್ಯ ಕಿರಣ'ಕ್ಕೆ ಬರೆದ ಮುನ್ನುಡಿ ಮತ್ತು ಇದಕ್ಕೆ ಬರೆದ 'ನಾಲ್ಕು ಮಾತು'ಗಳೇ ಸಾಕು–ಇವರ ನಿಲವಿನ ನೀಳ್ತನದ ನಿದರ್ಶನಕ್ಕೆ !

"ವೀರಶೈವ ಧರ್ಮ ಬಹು ಪುರಾತನವಾದುದು ಎಂಬಲ್ಲಿ ಸಂದೇಹವಿಲ್ಲ. ಅದರ ಪ್ರಪ್ರಥಮ ಪ್ರವರ್ತಕರು ಪಂಚಾಚಾರ್ಯರು.........ಪ್ರಪ್ರಥಮ ಗ್ರಂಥವೆಂದರೆ ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತ 'ಸಿದ್ಧಾಂತ ಶಿಖಾಮಣಿ.' ಇದರಲ್ಲಿ ಪ್ರತಿಪಾದಿತವಾಗಿರುವ ಷಟ್‌ಸ್ಥಲ ಸಿದ್ಧಾಂತವು ಅಲ್ಲಮ ಬಸವಾದಿ ಶಿವಶರಣರ ಕನ್ನಡ ವಚನಗಳಲ್ಲಿ ರೂಪಾಂತರಗೊಂಡಿದೆ. ಧಾರ್ಮಿಕ ಪ್ರಗತಿಯಲ್ಲಿ ಇದೊಂದು ಸಹಜವಾದ ಬೆಳವಣಿಗೆ." ಇವರ ಈ ನಾಲ್ಕು ಮಾತುಗಳು ಉಲ್ಲೇಖನಾರ್ಹವಾಗಿವೆ.

ಇವರು ಮುಂದುವರಿದು ಇದೊಂದು ವಿಚಾರವನ್ನು ಮುಂದಿರಿಸಿದ್ದಾರೆ. "ಶರಣರ ವಚನಗಳಲ್ಲಿ ಪ್ರತಿಪಾದಿತವಾಗಿರುವ ಷಟ್‌ಸ್ಥಲ ವಿಚಾರಗಳಿಗೆ 'ಸಿದ್ಧಾಂತ ಶಿಖಾಮಣಿ' ಆಕರ ಗ್ರಂಥವೆ ಅಲ್ಲವೆ, ಅದು ವಚನ ಸಾಹಿತ್ಯಕ್ಕಿಂತ ಎಷ್ಟು ಪೂರ್ವದ್ದು ?...."

ಈ ಕೃತಿ ವಚನಗಳಿಗೆ ಆಕರ ಗ್ರಂಥವಾಗಿದೆಯೆಂಬುದನ್ನು "ಮಣಿ ಮುಕುರಂ" ಗ್ರಂಥದ ಮುನ್ನುಡಿಯಲ್ಲಿ ವಿಸ್ತಾರವಾಗಿ ತೋರುಸಿದ್ದೇವೆ. ಆದರೂ ಈ ಎರಡು ಕೇಳಿಕೆಗಳಿಗೆ ಒಂದೇ ಉತ್ತರವನ್ನು ಬಸವಣ್ಣನವರ ಈ ವಚನದಿಂದ ಕೊಡಬಯಸುತ್ತೇವೆ.

"ನೀನೊಲಿಯಿತ್ತೇ ಪುಣ್ಯ ; ನೀನೊಲ್ಲದುದೇ ಪಾಪ ಕಂಡಯ್ಯ.
ಸಕಲ ಜಗದೊಳಗೆ ಅನುಸ್ಯೂತನಾಗಿಪ್ಪೆಯಯ್ಯ.
ನೀನೊಲಿದವನೇ ನಿಮ್ಮನರಿವನು.
'ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ ।
ಯಥೈವಾಂಕುರತೋ ಬೀಜಂ ಬೀಜತೋ ವಾ ಯಥಾಂಕುರಃ ॥'

—ಸಿದ್ಧಾಂತ ಶಿಖಾಮಣಿ

ಇಂತೆಂಬುದಾಗಿ ನೀನೊಲಿದವನೇ, ಧನ್ಯ, ಜಗಕ್ಕೆ ಪಾವನ ; ಕೂಡಲ ಸಂಗಮದೇವ."

ಈ ವಚನದಲ್ಲಿ ಉದ್ಧರಿಸಿದ ಶ್ಲೋಕ 'ಸಿದ್ಧಾಂತ ಶಿಖಾಮಣಿ'ಯ ಪರಿಚ್ಛೇದ ಒಂಬತ್ತು, ಶ್ಲೋಕ–ಹನ್ನೊಂದು ಆಗಿದೆ. ಈ ವಚನವನ್ನು ಶ್ರೀ ಚ. ಸುಂದರೇಶನ್, ಎಂ. ಎ; ಅವರಿಂದ ಪರಿಶೋಧಿಸಿ ಸಂಗ್ರಹಿಸಿದ "ಸಂಸ್ಕೃತ ಪ್ರಮಾಣವುಳ್ಳ ಬಸವಣ್ಣನವರ ವಚನಗಳು" ಪು. ೨೯. ಎಂಬ ಹಸ್ತ ಪುಸ್ತಿಕೆಯಿಂದ ಎತ್ತಿ ಉದ್ಧರಿಸಿಲಾಗಿದೆ. ಇದರಿಂದ 'ಸಿದ್ಧಾಂತ ಶಿಖಾಮಣಿ'ಯು ಶಿವಶರಣರ ವಚನಗಳಿಗೆ ಆಕರವಾಗಿದೆಯೆಂದು ಆದಿಕೃತಿಯಾಗಿದೆಯೆಂದು ನಿರ್ದಿಷ್ಟವಾಗಿ ನಿರ್ಧರವಾಗುತ್ತದೆ. ಎಷ್ಟು ಪೂರ್ವದ್ದು ಎಂಬ ಮಾತಿಗೆ ಉತ್ತರಿಸುವುದಾದರೆ ನಮ್ಮ ದೃಷ್ಟಿಯಲ್ಲಿ ಸುಮಾರು ನಾಲ್ಕು ನೂರು ವರುಷಗಳಿಗೆ ಹಿಂದಿನದೆಂದು ತಿಳಿಯುತ್ತದೆ. ಇದಕ್ಕೆ ಹದಿನಾಲ್ಕು ಉಪಪತ್ತಿಗಳಿವೆ. ಹಿಂದೆ ಹಲವಾರನ್ನು ಕೊಟ್ಟಿದ್ದೇವೆ. ಮುಂದೆ ಪ್ರಸಂಗಾನುಸಾರ ಕೊಡಲಿದ್ದೇವೆ. ಈ ಸಂಪುಟದಲ್ಲಿಯೂ ಅಲ್ಲಲ್ಲಿ ಎತ್ತಿ ತೋರಿದ್ದೇವೆ.

೪

'ನಿರಂಜನ' ಎಂಬ ಕಾವ್ಯನಾಮದಲ್ಲಿ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಹೆಚ್ಚು ಹೆಸರು ಪಡೆದ ಶ್ರೀ ಕುಳಕುಂದ ಶಿವರಾಯರು ಬಳಗದ ಬೇಡಿಕೆಯನ್ನು ಬಗೆಗೆ ತಂದು ಭಾವಪೂರ್ಣವಾದ ಮುನ್ನುಡಿಯನ್ನು ಬರೆದು ಕೊಟ್ಟುದನ್ನು ಮರೆಯುವಂತಿಲ್ಲ. ಇವರ ಬಾಳು ಬದುಕು ಹಸನಾಗದೆಂದು ಹಿರಿದಾಗಲೆಂದು ಹೃದಯಾಳಿ ಹರಸೋಣವಾಗಿದೆ.

'ನಾಲ್ಕು ಮಾತು'ಗಳನ್ನು ಬರೆದ ಎಂ. ವಿ. ಸೀತಾರಾಮಯ್ಯನವರನ್ನೂ ಸಹ ಮತ್ತೊಮ್ಮೆ ನೆನೆದು ಇವರಿಗೂ ಮಂಗಳವನ್ನಾಶಿಸೋಣವಾಗಿದೆ.

"ಜೀವನ ಸಿದ್ಧಾಂತ"ದ ಸೇವೆ ಬೃಹತ್ತಾಗಿದೆ. ಇದು ಪ್ರಥಮ ಸಂಪುಟ. ಇದರಂತೆ ಮುಂದಿನ ಅಯ್ದು ಸಂಪುಟಗಳು ಬರಲಿವೆ. ಇದಕ್ಕಿಂತಲೂ ಹೆಚ್ಚು ಹೆಚ್ಚಾಗಿ ಜೀವನದ ಹತ್ತಿರಕ್ಕೆ ಬಂದು ಬರೆವ ದೃಷ್ಟಿಯನ್ನಿಟ್ಟುಕೊಳ್ಳಲಾಗಿದೆ. ಅವು ಬೇಗ ಬೇಗ ಹೊರಬರುವಂತೆ ಮಾಡುವ ಕೆಲಸ ಅಥವಾ ಉದಾರ ಕೊಡುಗೆ ಓದುಗರಿಗೆ ಸೇರಿದೆ.

ಶ್ರೀ ಜ. ಚ. ನಿ.

ಬಳಗದ ಬಿನ್ನಹ

ಬಡ ಬಳಗವಾದರೂ ಭಾಗ್ಯಶಾಲಿ. ನುಡಿ ಸೇವೆ ಒದಗಿ ಬರುವುದೊಂದು ಭಾಗ್ಯವೆಂದೆ ಭ್ರಮರಾಂಬಾ ಬಳಗದ ದೃಢಭಾವನೆ. ನಡೆ ನುಡಿಗೆ ಪ್ರೇರಕವಾದಂತೆ ನುಡಿಯೂ ನಡೆಗೆ ಪ್ರೇರಕವಾಗಬಲ್ಲುದು, ಆಗುತ್ತದೆ. ಅದರಲ್ಲಿಯೂ ಪ್ರಬೋಧ ಸಾಹಿತ್ಯ ಜೀವನ ಪ್ರೇರಕವೂ ಪ್ರಾಕಾಶಕವೂ ಆಗುವುದೆಂದು ಬೇರೆ ಹೇಳಬೇಕಾದುದಿಲ್ಲ. ಇದನರಿತು ಈ ಬೃಹತ್ಕೃತಿಯ ಸೇವೆಗೆ ಸಂದು ಬಳಗ ಧನ್ಯವಾಗಿದೆ.

'ಜೀವನ ಸಿದ್ಧಾಂತ' ದಿಟಕ್ಕೂ ನವವಿಚಾರಧಾರೆಯಿಂದ ಕೂಡಿದೆ. ಷಟ್‌ಸ್ಥಲದ ಮೇಲೆ ಅದರಲ್ಲಿಯೂ ಈ ಭಕ್ತಸಂಪುಟ ಭಕ್ತಿಯ ಮೇಲೆ ಭಕ್ತನ ಮೇಲೆ ಒಂದು ಹೊಸಬೆಳಕನ್ನು ಬೀರುತ್ತಿದೆ. ಷಟ್‌ಸ್ಥಲ ಕೇವಲ ಆಕಾಶ ಪುರಾಣವಲ್ಲ, ಬಾಳನ್ನು ಹೊಂದಿರುವ ಬಳಕೆಗೆ ಅಂದುವ ಆಚಾರ ವಿಚಾರಗಳಿಂದ ಪರಿಪ್ಲುತವಾದ ಸುಂದರ ಸಿದ್ಧಾಂತ ಎಂದು ಸಾಹಿತ್ಯ ಕ್ಷೇತ್ರದಲ್ಲಿ ಶಾಶ್ವತವಾದ ಹೆಸರನ್ನು ಪಡೆದ ಸೂರ್ಯಸಿಂಹಾಸನಾಧೀಶ್ವರ ಶ್ರೀ ಜ.ಚ.ನಿ. ಸನ್ನಿಧಿಯವರು ಈ ಕೃತಿಯ ಮೂಲಕ ಪ್ರಬೋಧಿಸಿದ್ದಾರೆ. ಇಂತಹ ಅಮೋಘ ಕೃತಿಯ ಸೇವೆಯ ಲಾಭ ಬಳಗಕ್ಕೆ ದೊರೆತುದೊಂದು ಭಾಗ್ಯವೇ ಸರಿ. ಅದರಲ್ಲಿಯೂ ಶ್ರೀ ಮಹಾಸನ್ನಿಧಿಯ ಬೆಳ್ಳಿಯ ಹಬ್ಬದ ಶುಭಸಮಯದಲ್ಲಿ ಅದರ ಸವಿ ನೆನಹಿಗಾಗಿ ಈ ಮೇರು ಕೃತಿಯನ್ನು ಪ್ರಕಟಿಸುವ ಪುಣ್ಯ ಒದಗಿ ಬಂದುದಕ್ಕೆ ಬಳಗ ಸಂತಸಗಡಲಲ್ಲಿ ತಾನಾಗಿ ತೇಲುತಿದೆ. ಜತಗೆ ನಮ್ಮ ಬೇಡಿಕೆಯನ್ನು ಕಡೆಗೆಣಿಸದೆ ಶ್ರೇಷ್ಠ ಸಾಹಿತಿಗಳಿಬ್ಬರು ಮುನ್ನುಡಿ ಮತ್ತು ನಲ್ನುಡಿಗಳನ್ನು ಬರೆದುಕೊಟ್ಟು ಶ್ರೀ ಮಹಾಸನ್ನಿಧಿಯ ಸೇವೆಯೊಡನೆ ಬಳಗವನ್ನು ಹೃದಯಾರೆ ಹರಸಿದ್ದನ್ನು ಬಳಗ ಅದೆಂದಿಗೂ ಮರೆಯುವಂತಿಲ್ಲ.

"ಜೀವನ ಸಿದ್ಧಾಂತ" ಒಟ್ಟಾಗಿ ಆರು ಸಂಪುಟವಾಗಿ ಬರುತ್ತದೆ. ಷಟ್‌ಸ್ಥಲ ಸಿದ್ಧಾಂತಕ್ಕೆ ಇದೊಂದು ಅಪೂರ್ವವಾದ ಕೊಡುಗೆ; ಅಂತೆಯೇ ಕನ್ನಡ ಸಾಹಿತ್ಯಕ್ಕೂ ವಿಚಾರಾತ್ಮಕವಾಙ್ಮಯಕ್ಕೂ ಅಪೂರ್ವವಾದ ಕೊಡುಗೆ. ಒಂಬತ್ತು ನೂರು ಪುಟದ ಈ ಪ್ರಥಮ ಸಂಪುಟವನ್ನು ಪ್ರಕಟಿಸುವ ಸೇವೆ ಭ್ರಮರಾಂಬಾ ಬಳಗಕ್ಕೆ ಸಂಪ್ರಾಪ್ತವಾದುದನ್ನು ಮತ್ತೊಮ್ಮೆ ಮನಸಾರೆ ನೆನೆದು ಈ ಸೇವೆಗೆ ಅಪ್ಪಣೆಯನ್ನಿತ್ತ ದಿವ್ಯ ಸನ್ನಿಧಿಗೆ ಬಗೆದುಂಬಿ ಪೊಡ ಮಟ್ಟು ಈ ಹೆಬ್ಬೊತ್ತಗೆಯನ್ನು ಸಹೃದಯರಾದ ಓದುಗರ ಕರಮನಭಾವ ಗಳಿಗೆ ಕೊಡುವ ಕೃತಕೃತ್ಯತೆಯನ್ನು ಅದೆಂದಿಗೂ ಬಳಗ ಮರೆಯದಿರುತ್ತದೆ.

—**ಭ್ರಮರಾಂಬಾ, ಬಳಗ**
ಅಕ್ಕಿಪೇಟೆ, ಬೆಂಗಳೂರು.

ಪರಿವಿಡಿ

(ಉತ್ತರ ಭಾಗ)

ಅನುಬಂಧ

ಜೀವನ ಸಿದ್ಧಾಂತ

ಭಕ್ತ ಸಂಪುಟ

ಜೀವನ ಸಿದ್ಧಾಂತ

ಭಕ್ತ ಸಂಪುಟ

ಮೊದಲು ಮಾತು

ಸಿದ್ಧಾಂತ ಶಿಖಾಮಣಿ ಶ್ರೀ ರೇಣುಕ ಗೀತೆ. ಅಗಸ್ತ್ಯ ಮುನಿಗೆ ಅನುಗ್ರಹಿಸಿದ ತತ್ತ್ವಮಣಿ. ಮರವೆಯ ಹರಿಸುವ ಮರುಜೀವಣಿ. ಶಿವಯೋಗಿ ಶಿವಾಚಾರ್ಯರ ಕಾವ್ಯಮಯ ತತ್ತ್ವವಾಣಿ, ಜೀವನ ಸಿದ್ಧಾಂತ ಖಣಿ. ಶಿವಾನುಭವದ ಸುಧಾವಾಣಿ. ಇದು ವೇದಸಂಮತ ; ಮಹಾತಂತ್ರ ; ಶಿವಸಿದ್ಧಾಂತ.

ಇಲ್ಲಿ ಕಾಯಕರಣಕ್ಕೆ ಬೇಕಾಗುವ ಸತ್ಕ್ರಿಯಾಯೋಗವಿದೆ. ಮನ-ಬುದ್ಧಿಗಳಿಗೆ ಬೇಕಾಗುವ ಶಾಂತಿ ಸುಜ್ಞಾನಗಳಿವೆ. ಹಮ್ಮನು ಹಳಚುವ ಭಕ್ತಿಯಿದೆ. ಭಾವವನು ಬೆಳೆಸುವ ಅನುಭಾವವಿದೆ. ಅಚ್ಚಳಿಯದ ಆನಂದವನೀವ ನೆಲವೀಡು ಇದಾಗಿದೆ. ಆತ್ಮನ ಉನ್ನತಿಗೆ ಬೇಕಾಗುವ ಉಜ್ವಲ ಜ್ಯೋತಿಯು ಇದಾಗಿದೆ. ಸರ್ವಸಮನ್ವಯದ ಸೌಧವೂ ಇದೇ ಆಗಿದೆ.

ಆ ಮಹಾ ಸೌಧವನ್ನೇರಲು ಸೋಪಾನ ಅಗತ್ಯ. ಆ ಸೋಪಾನಗಳು ಆರಕ್ಕೆ ಕಮ್ಮಿಯಿಲ್ಲ; ಹೆಚ್ಚಿಲ್ಲ. ಅಷ್ಟಿಲ್ಲದೆ ಏರಲು ಹೇಗೆಸಾಧ್ಯ ? ಷಟ್‌ಸ್ಥಲ ಸಾಧಕನಿಗೆ ಅದು ವೇದ್ಯ. ಒಂದೊಂದು ಸೋಪಾನದಲ್ಲಿಯೂ ಸಾಧಕನು ಒಂದೊಂದು ನಲ್ವೆಸರಿಗೆ ನೆಲೆಯಾಗಿ ಕೊನೆಯಲ್ಲಿ ಸೌಧವನೇರಿ ಸಮರಸ ಸುಧೆಯ ಹೀರಿ ಅಮರನಾಗುತ್ತಾನೆ. ಆನಂದಪರವಶನಾಗುತ್ತಾನೆ.

ಜೀವನದ ಒಂದೊಂದು ಮಣಿಹ (ಕಾರ್ಯ)ವೂ ಒಂದೊಂದು ಸೌಧ. ಆ ಮಣಿಹದ ಸಿದ್ಧಿಯೇ ಸೌಧ. ಆ ಸಿದ್ಧಿಸೌಧವನ್ನು ಸೇರುವಷ್ಟರಲ್ಲಿ ಕ್ರಿಯಾಜ್ಞಾನಗಳ ರೂಪದಲ್ಲಿ ಆರು ನೆಲೆಗಳನ್ನು ಸಂಧಿಸಬೇಕಾಗುತ್ತದೆ; ಪ್ರತಿ ಜೀವಿಯೂ ಸಂಧಿಸಬೇಕಾಗುತ್ತದೆ. ಆ ಆರು ನೆಲೆಗಳೇ ಷಟ್‌ಸ್ಥಲ. ಅವೇ ಜೀವನ ಸಿದ್ಧಾಂತ.

ಇದು ಕರ್ತಾರನ ಕಮ್ಮಟ. ಕರ್ಮಯೋಗಿಯ ತರಂಗಿಣಿ ತಟ. ಷಟ್‌ಸ್ಥಲ ಬ್ರಹ್ಮಿಯ ಸಹಜಮಾಟ. ಪ್ರತಿ ಜೀವಿಯ ಜೀವನವೆ ಷಟ್‌ಸ್ಥಲ ಮಯ. ಪ್ರತಿ ಜೀವಿಯು ನಿರಂತರ ಒಂದಿಲ್ಲೊಂದು ಕಾರ್ಯತತ್ಪರನಾಗಿರುತ್ತಾನೆ. ಕೆಲಸ ಮೊದಲ್ಗೊಂಡು ಕೆಲಸ ಕೊನೆಗೊಳ್ಳುವಲ್ಲಿಗೆ ಆರು ಹಂತಗಳು ಏರ್ಪಡುತ್ತವೆ. ಮೊದಲು ಬಯಸಿ ಮಾಡುವುದು, ಪಡೆವುದು, ಪಡೆದುದನ್ನು ಭೋಗಿಸುವದು, ಭೋಗಿಸಿದುದನ್ನು ಜೀರ್ಣಿಸಿಕೊಂಡು ಪ್ರಾಣವಾಗಿಸಿಕೊಳ್ಳುವುದು; ಅಥವಾ ಭೋಗ್ಯವಸ್ತು ಬಾಹ್ಯದ್ದಾಗಿದ್ದರೆ ಅದರಲ್ಲಿ ಪ್ರಾಣವನ್ನಿಟ್ಟುಕೊಂಡಿರುವುದು, ಅದರಲ್ಲಿ ಅಥವಾ ಅದಕ್ಕೆ ಶರಣಾಗಿರುವುದು, ಅದರೊಡಗೂಡುವುದು—ಈ ಆರು ಭಾವಪರಂಪರೆ, ಈ ಅವಸ್ಥಾಪರಂಪರೆ ; ಇವುಗಳ ಪರಿಧಿ (ಗಡಿ)ಯನ್ನು ಮೀರಿರುವುದು ಮಾನವನಿಗೆ ಸಾಧ್ಯವಿಲ್ಲ. ಈ ಆರು ಅವಸ್ಥಾ ಪರಂಪರೆಗೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ-ಎಂದು ಹೆಸರು. ಇವು ಅಂಗಕ್ಕೂ ಉಂಟು, ಲಿಂಗಕ್ಕೂ ಉಂಟು. ಅಂಗ ಷಟ್‌ಸ್ಥಲವು ನಿರಾಮಯ ಷಟ್‌ಸ್ಥಲ ; ಲಿಂಗಷಟ್‌ಸ್ಥಲವು ನಿರವಯ ಷಟ್‌ಸ್ಥಲ. ಇನ್ನು ಮಲಸಹಿತನಾದ ಸಾಮಾನ್ಯ ಜೀವಿಯ ಪ್ರಾಕೃತಿಕ ಷಟ್‌ಸ್ಥಲವು ಆಮಯ ಷಟ್‌ಸ್ಥಲವೆನಿಸುತ್ತದೆ. ಇಲ್ಲಿಲ್ಲ ಶಿವಸುಖ. ಇದು ಇಳಿಮುಖ. ಇದರ ಕೊನೆಯಲ್ಲಿ ಉಂಟು ಅಪಾರ ದುಃಖ. ಈ ಬೌದ್ಧಿಕ ಜೀವಿಗೆ ದೇವ ಭಾವವಿಲ್ಲವಾಗಿ ಈತನಿಗೆ ನಿರಾಮಯ ನಿರವಯ ಷಟ್‌ಸ್ಥಳಗಳಿಲ್ಲ. ಕಾರಣ ಅಶುದ್ಧ ಜೀವಿಯ ಪ್ರಾಕೃತಿಕ ಷಟ್‌ಸ್ಥಲವನ್ನು ಬಿಟ್ಟು ಶುದ್ಧ ಜೀವಿಯ ಪಾರಮಾರ್ಥಿಕ ಷಟ್‌ಸ್ಥಲ ಸಾರ ಸಿದ್ಧಾಂತವನ್ನು ನಿರೂಪಿಸುವುದೇ ಸಿದ್ಧಾಂತ ಶಿಖಾಮಣಿಯ ಉದ್ದೇಶ. ಇದರಲ್ಲಿ ಈ ಪಾರಮಾರ್ಥಿಕ ಷಟ್‌ಸ್ಥಲದಲ್ಲಿ ಪರಿಶುದ್ಧ ಪ್ರಪಂಚ-ಪರಮಾರ್ಥಗಳೆರಡೂ ಹಾಸು ಹೊಕ್ಕಾಗಿರುತ್ತವೆ.

ಸಿದ್ಧಾಂತ ಎಂದರೆ ತತ್ತ್ವ ಅಥವಾ ನಿರ್ಣಯ. ನಿರ್ಣಯಕ್ಕೆ ಬಂದ ವಿಷಯ ಸಿದ್ಧಾಂತವೆನಿಸುತ್ತದೆ. ವೇದಾಂತ ಜ್ಞಾನದ ಕೊನೆಯಾದರೆ ಸಿದ್ಧಾಂತ ಅನುಭವದ ಕೊನೆ. ವೇದಾಂತ ಸಾಧನ; ಸಿದ್ಧಾಂತ ಸಿದ್ಧಿ.

ಅನುಭವವಿಲ್ಲದ ಜ್ಞಾನ ನಿಷ್ಫಲ, ಅಪೂರ್ಣ. ಜ್ಞಾನ ಒಂದು ಮಂದಿರ; ಅನುಭಾವ ಆ ಮಂದಿರದೊಳಗಿನ ಮಂಗಳಮಯ ದೇವಮೂರ್ತಿ.

ಅಂತಹ ಅನುಭವವನ್ನು ನಿರೂಪಿಸುವುದೇ ಸಿದ್ಧಾಂತ. ಸಿದ್ಧಾಂತ ಒಂದು ಫಲ. ಬೇರೆ ಬೇರೆ ಸಿದ್ಧಾಂತಗಳಿರಬಹುದು, ಇವೆ. ಅವುಗಳಲ್ಲಿ ಏಕೋತ್ತರ ಶತಸ್ಥಲ ಶ್ರೇಷ್ಠ ಫಲ. ಈ ಖಚಿತ ಕಾರಣದಿಂದ ಇದು ಸಿದ್ಧಾಂತ ಶಿಖಾಮಣಿ; ಇದು ಸಿದ್ಧಾಂತ ಶಿರೋರತ್ನ. ೧೦೧—ಈ ನೂರೊಂದರಲ್ಲಿ ಉಪಕ್ರಮೋಪಸಂಹಾರಗಳು ಒಂದೇ ಆಗಿವೆ. ಮಧ್ಯ ಬಿಂದುವಾದ ಶೂನ್ಯ ಸಂಪಾದನವೇ ಉಪಕ್ರಮದ ಉಪಸಂಹಾರದ ಸಹಜ ಸಿದ್ಧಾಂತವಾಗಿದೆ; ಖಚಿತ ಕಾರಣವಾಗಿದೆ. ಮೊದಲಿನ ಒಂದು ಅಂಗ; ಮೂರನೆಯ ಒಂದು ಲಿಂಗ. ಮೊದಲಿನ ಅಂಗನು ಕೊನೆಯ ಲಿಂಗರೂಪ ಒಂದರಲ್ಲಿ ಸಮರಸವಾದಲ್ಲಿ ಮಧ್ಯಗತ ಶೂನ್ಯರೂಪ ಮಹಾಲಿಂಗವಾಗುತ್ತಾನೆ. ನೂರೊಂದರಲ್ಲಿ ಜೀವನದ ಸಾದ್ಯಂತ ಸಾಮರಸ್ಯವಿದೆ. ಅಗಲಿ ಕೂಡುವ ಶಿವಯೋಗವಿದೆ.

ನಮ್ಮ ಜೀವನದ ಆಳವನ್ನು ಅಗಲವನ್ನು ನಾವು ತಿಳಿಯದವರಾಗಿದ್ದೇವೆ. ನಮ್ಮ ಒಳಬಾಳಿನ ಬಂಡವಾಳವನ್ನು ಬೆಳಸಿಕೊಳ್ಳದೆ ಕಡು ಬಡವರಾಗಿದ್ದೇವೆ. ನಮ್ಮ ಬಾಳಿಗೆ ಸತ್ಯ ಸಂಸ್ಕಾರವಿಲ್ಲದೆ ತತ್ತ್ವಶಿಕ್ಷಣವಿಲ್ಲದೆ ಅಸಂಸ್ಕಾರಿಗಳಾಗಿದ್ದೇವೆ. ಅಶಿಕ್ಷಿತರಾಗಿದ್ದೇವೆ. ಬಾಹ್ಯ ಜಾಗತಿಕ ಜೀವನದ ಹಂಬಲಲ್ಲಿ ನಮ್ಮ ಅಸ್ತಿತ್ವವೇನು ಎಂಬುದನ್ನೇ ಮರೆತಿದ್ದೇವೆ. ನಮ್ಮ ಮೂಲಸ್ಥಳ ಯಾವುದು? ಅದೆಲ್ಲಿದೆ? ಅದಕ್ಕೆ ಹೋಗುವ ಹೊಲಬು ಯಾವುದು? ಈ ಜಗತ್ತು ಈ ದೇಹ ಸಂಪತ್ತು ಅದಕ್ಕೆ ಹೇಗೆ ಸಾಧನವಾಗಿವೆ? ವಿಶ್ವ ವಿವಿಧವಾಗಿ ಕಂಡರೂ ವಾಸ್ತವವಾಗಿ ವಿವಿಧವೆ? ದೇವರು ಹಲವರೆ? ಇತ್ಯಾದಿ ವಿಷಯಗಳ ವಿಚಾರದಿಂದ ವಿಮುಖರಾಗಿದ್ದೇವೆ. ಈ ದಂದುಗದಲ್ಲಿ ದಿಕ್ಕುಗಾಣದಿರುವ ಸಾಧಕರಿಗೆ ದಿಕ್ಕನ್ನು ತೋರಿಸುತ್ತದೆ ಷಟ್‌ಸ್ಥಲ ಸಿದ್ಧಾಂತವನ್ನು ಪ್ರಸ್ಥಾಪಿಸಿದ ಸಿದ್ಧಾಂತ ಶಿಖಾಮಣಿ.

ಬರೀ ಭೌತಿಕದಲ್ಲಿ ಬಿದ್ದು ಬಳಲಿದವರಿಗೆ ಈ ಕೃತಿಯು ನೆಮ್ಮದಿಯನ್ನೂ ಸುಖ ಸ್ಫೂರ್ತಿಯನ್ನೂ ಉಂಟು ಮಾಡುತ್ತದೆ; ಸಾಧನೆಯಲ್ಲಿ ಸೋತವರಿಗೆ ಗೆಲವನ್ನು ನಲಿವನ್ನು ನೀಡುತ್ತದೆ. ನಮ್ಮ ಜೀವನ ನಿಜಕ್ಕೂ ಅರ್ಥಹೀನವಾದುದಲ್ಲ; ವ್ಯರ್ಥವಾದುದಲ್ಲ. ನಮ್ಮ ಜೀವನವೇ ಆ ದೇವನ ಸ್ವರೂಪವಾಗಿದೆಯೆಂಬುದನ್ನು ಕರತಲಾಮಲಕವನ್ನಾಗಿಸುತ್ತದೆ ಈ ಕೃತಿಯು. ನಾವು ಹೊತ್ತಿರುವ ತನುವಿನಲ್ಲಿ ಮನದಲ್ಲಿ ಬುದ್ಧಿಯಲ್ಲಿ ಭಾವದಲ್ಲಿ ಆತ್ಮನಲ್ಲಿ

ಶ್ರೀಮಂತಿಕೆಯನ್ನು ಬರಿಸುತ್ತದೆ. ಕೇವಲ ತರ್ಕದ ಮೇಲೆ ನಿಂತ ಜ್ಞಾನ ಮುಗ್ಗರಿಸುತ್ತದೆ. ತೋರುವ ಜಗತ್ತು ಸುಳ್ಳೆನ್ನುವ ಜ್ಞಾನಕ್ಕೆ ಜಗತ್ತಿನಲ್ಲಿ ಸ್ಥಾನವಿಲ್ಲ. ಅನುಭವವಿಲ್ಲದ ಅರಿವು ಅಮಳತೆಯನ್ನು ಅಖಂಡತೆಯನ್ನು ತಾರದು; ಎಂದು ಹೇಳಿ ಬಾಳಿನಲ್ಲಿ ಒಂದು ಹೊಸ ಬೆಳಕನ್ನು ಒಂದು ಹೊಸ ಸಿದ್ಧಾಂತವನ್ನು ಬೀರಿ ಬಿತ್ತರಿಸಿದೆ ಈ ಸಿದ್ಧಾಂತ ಶಿಖಾಮಣಿಯ ಸತ್ಯಲಾವಾಣಿ. ತ್ಯಾಗ-ಯೋಗಗಳಿಲ್ಲದೆ ಬರೀ ಭೋಗದಲ್ಲಿ ಬಿದ್ದು ಬಡಕಲಾದ ಮೈಗೂಡಿನಲ್ಲಿ ತ್ಯಾಗ-ಯೋಗಗಳ ಚೈತನ್ಯವನ್ನು ತುಂಬುತ್ತದೆ ಈ ಸಿದ್ಧಾಂತ ಕೃತಿ. ರಕ್ತ ಜೀವನದಲ್ಲಿ ಭಕ್ತಿಯನ್ನು, ನಿಶ್ಯಕ್ತ ಜೀವನದಲ್ಲಿ ನಿಜಶಕ್ತಿಯನ್ನು, ನಿಷ್ಕ್ರಿಯ ಜೀವನದಲ್ಲಿ ಸತ್ಕ್ರಿಯೆಯನ್ನು, ಅಜ್ಞ ಜೀವನದಲ್ಲಿ ಸುಜ್ಞತೆಯನ್ನು ಸ್ವಾನುಭೂತಿಯನ್ನು ಅನುಗ್ರಹಿಸುತ್ತದೆ ಈ ಸಿದ್ಧಾಂತ ಶಿಖಾಮಣಿ.

ದೇಹೇಂದ್ರಿಯಗಳು ಮನಪ್ರಾಣಗಳು ಭಾವಜೀವಗಳು ನಲುಗಬಾರದು, ನೋಯಬಾರದು, ಮಲೆಯಬಾರದು, ಮಲಿನವಾಗಬಾರದು. ಮೌಲ್ಯವುಳ್ಳವುಗಳಾಗಬೇಕು ; ಮೆರಗುಳ್ಳವುಗಳಾಗಬೇಕು. ಆಚಾರ-ವಿಚಾರವುಳ್ಳವುಗಳೂ ಶ್ರದ್ಧೆ ನಿಷ್ಠೆ ಅವಧಾನ ಅನುಭವ ಆನಂದ ಅವಿರಳತೆಯುಳ್ಳವುಗಳೂ ಅಧ್ಯಾತ್ಮಿಕ ಘನತೆಯುಳ್ಳವುಗಳೂ ಆಗಿರಬೇಕೆಂಬುದೇ ಈ ಕೃತಿಯ ಕಲಾದೃಷ್ಟಿ. ಸಕಲೇಂದ್ರಿಯ ಪಟುತ್ವ ಬರಬೇಕು ; ಆತ್ಮ ಸತ್ವ ಅಳವಡಬೇಕು ; ಅಂತಃಕರಣಗಳಲ್ಲಿ ಮಹಂತತೆ ಮೂಡಬೇಕು- ಎಂಬುದೇ ಷಟ್‌ಸ್ಥಲ ಸಿದ್ಧಾಂತ ತತ್ತ್ವ ; ಸತ್ಯ ಸತ್ವ. ಷಡಂಗಗಳಲ್ಲಿಯೂ ಷಡ್ಲಿಂಗ (ದೃಕ್ಕ್ರಿಯಾ ಚೈತನ್ಯ)ಗಳ ಸಂಪೂರ್ಣ ಲೀಲಾವಿಲಾಸ ಸಮನಿಸಬೇಕೆಂಬುದೇ ಷಟ್‌ಸ್ಥಲದ ಧ್ಯೇಯ. ಜಡಕರ್ಮ ಜೀವನವು ಕಳಚಿ-ಮೂಢ ಜೀವನವು ಹಳಚಿ ಜೀವಕಳಾ ಜೀವನವು ಒಡಮೂಡಬೇಕು; ಕುಶಲ ಕ್ರಿಯಾಕಲಾಪಗಳ ನಂದನವನವಾಗಬೇಕು. ಸಮ್ಯಜ್ಞಾನ ಜ್ಯೋತಿರ್ಮಂಡಲವಾಗಬೇಕು—ಎಂಬುದೇ ಷಟ್‌ಸ್ಥಲ ರಹಸ್ಯ.

ವೈಯಕ್ತಿಕ ಒಳ್ಳೆಯ ಜೀವನವನ್ನೂ ಸಾಮಾಜಿಕ ಸರ್ವೋತ್ತಮ ಜೀವನವನ್ನೂ ರೂಢಿಸುತ್ತದೆ ಷಟ್‌ಸ್ಥಲ ಸಿದ್ಧಾಂತ. ಜೀವನದಲ್ಲಿ ನಿವೃತ್ತಿ, ಶಾಂತಿ, ಅನುಭೂತಿ, ಸಮರತಿಗಳನ್ನು ಬಿತ್ತಿ ಬೆಳೆಯುವುದೇ ಷಟ್‌ಸ್ಥಲ ಸಿದ್ಧಾಂತದ ಜೀವಾಳ. ಶಾರೀರಕ ಮಾನಸಿಕ ಬೌದ್ಧಿಕ ಆಧ್ಯಾತ್ಮಿಕ ಶಕ್ತಿ ಸಾಮಾರ್ಥ್ಯಗಳ ಸಮನ್ವಯವೇ ಷಟ್‌ಸ್ಥಲ

ಸಿದ್ಧಾಂತದ ಸಾರ ಸರ್ವಸ್ವ. ಮಾತಾಡಿದಂತೆ ಮಾಡಗಲಿಸುವುದು. ಮಾಡುವುದನ್ನು ವಿಶಾಲ-ವಿಶುದ್ಧ ಮನೋಭಾವದಿಂದ ಮಾಡಿಸುವುದು. ಮಾಡುವುದನ್ನು ವಿಚಾರ ಮುಖದಲ್ಲಿ ಆಲೋಚಿಸುವಂತೆ, ಅನುಭವ ರೂಪದಲ್ಲಿ ಗ್ರಹಿಕೆ ಮಾಡುವಂತೆ ಏರ್ಪಡಿಸುವುದೇ ಇದರ ಗುರಿ. ಪ್ರಕೃತಿಯನ್ನು ಪ್ರವೃತ್ತಿ ಮುಖದಲ್ಲಿ ಬಳಸದೆ ನಿವೃತ್ತಿ ಮುಖದಲ್ಲಿ ಹಿತಮಿತವಾಗಿ ಬಳಸಿ ಬೆಳಸುವ ಪ್ರಗತಿಯನ್ನು ಬೋಧಿಸುತ್ತದೆ; ಸುಗತಿಯನ್ನು ಸಾಧಿಸ ಹೇಳುತ್ತದೆ. ಅನ್ನ ಪುಣ್ಯಗಳನ್ನು ಪ್ರಸಾದವನ್ನಾಗಿ ಪರಿಗ್ರಹಿಸಲು ಪ್ರಬೋಧಿಸುತ್ತದೆ. ಪ್ರಾಣ ವನ್ನು ಪ್ರಭಾವಿತ ಲಿಂಗವನ್ನಾಗಿಸುತ್ತದೆ. ಆಶೆ ಅತೃಪ್ತಿ ಹಂಬಲ ಹೋರಾಟ ಗಳನ್ನು ತಡೆಯಬೇಕೆಂದು, ಅವುಗಳಿಗಿಂತ ಬೇರೆ ಪಾಪವಿಲ್ಲೆಂದು ಪ್ರತಿಪಾದಿ ಸುತ್ತದೆ. ಉಳಿದೆಲ್ಲ ಸಾಮರ್ಥ್ಯಗಳಿಗಿಂತ ಆಧ್ಯಾತ್ಮ ಸಾಮರ್ಥ್ಯ ಅತ್ಯಧಿಕ ವೆಂದು ಅದೇ ಶರಣ್ಯವೆಂದು ಸಮರ್ಥಿಸುತ್ತದೆ. ಮಾನವನ ಹುಟ್ಟಿನ ಹುಲುತನ ವನ್ನು ಬದುಕಿನ ಬೀಳುತನವನ್ನು ಸಾವಿನ ನೋವನ್ನು ವಿರಸ ವಿಷಮತೆಗಳನ್ನು ಕಳೆದು ಬಾಳಿಗೊಂದು ಅಪೂರ್ವ ಕಲೆಯನ್ನು ಅನುಪಮ ನೆಲೆಯನ್ನು ಉಂಟು ಮಾಡುತ್ತದೆ. ತೊಟ್ಟು ಬಂದ ತನುವನ್ನು ತತ್ತ್ವದ ಭಾಂಡವನ್ನಾಗಿ, ಮೆಟ್ಟಿ ನಿಂದ ಜಗವನ್ನು ಸತ್ಯ ಸೌಖ್ಯದ ಭಾಜನವನ್ನಾಗಿ ಮಾಡಿಕೊಳ್ಳುವುದೇ ಷಟ್ ಸ್ಥಲ ಸಾಧನೆಯ ಫಲ. ಜೀವನದ ಜಟಿಲತೆಯನ್ನೆಲ್ಲ ಕಳೆದು ಜೀವನದಲ್ಲಿ ವಾಸ್ತವತೆಯನ್ನು ರೂಪಿಸುವುದೇ ಅದರ ಉದ್ಯಮ. ಈ ಉದ್ಯಮಕ್ಕೆ ಉತ್ತೇ ಜಕಗಳಾದ ಪ್ರೀತಿಯ ಪ್ರತೀಕವಾದ ಭಕ್ತಿಯನ್ನು, ತೃಪ್ತಿಯ ಪ್ರತೀಕವಾದ ದೃಕ್ಕ್ರಿಯಾತ್ಮಕ ಧರ್ಮವನ್ನು ಅದು ಪ್ರಾಮುಖ್ಯವಾಗಿ ಪೋಷಿಸಿಕೊಂಡು ಬಂದಿದೆ; ಬರುತ್ತದೆ. ಇವೆರಡರಿಂದ ಆತ್ಮ ಪ್ರಕಾಶವನ್ನು ಪ್ರಸನ್ನತೆಯನ್ನು ಪ್ರವರ್ಧಿಸುತ್ತದೆ.

ಮಾನವ ಜೀವನದ ಮೇಲೆ ಧಾಳಿ ಮಾಡಿರುವ-ಮಾಡುವ ಸ್ವಾರ್ಥ, ಅಶ್ರದ್ಧೆ, ಅಕ್ರಿಯೆ, ಅಜ್ಞಾನ, ಅನನುಭವ, ಅನವಧಾನಗಳನ್ನೂ ಅರಿಷಡ್ವರ್ಗ ಗಳನ್ನೂ ಷಡೂರ್ಮಿಗಳನ್ನೂ ಸದೆ ಬಡಿಯುವುದೇ ಷಟ್‌ಸ್ಥಲದ ಉದ್ದೇಶ. ಎಲ್ಲ ಪಾವನಾಚಾರ ವಿಚಾರಗಳಿಂದ ಬಾಳು-ಬದುಕುಗಳ ಬೆಲೆಯನ್ನು ಹೆಚ್ಚಿಸು ವುದೇ ಷಟ್‌ಸ್ಥಲದ ಸತ್ಯ ಸಾಧನೆ. ಜೀವನದ ಸಾಫಲ್ಯ ಮತ್ತು ವೈಶಾಲ್ಯ ಗಳನ್ನು ಮಾನವನ ಮುಂದಿರಿಸಿ ಸಾಧಕನ ಹಸ್ತಗತವಾಗಿಸುವುದೇ ಅದರ

ತಪಸ್ಸು. ಆತ್ಮಾನುಭೂತಿಯೇ ಬಾಳಿನ ತಳಹದಿ. ಆತ್ಮಾನಂದವೇ ಬಾಳ್ಗುಡಿಯ ಗೋಪುರ. ಆತ್ಮನಂತೆ ಸರ್ವಜೀವಿಗಳನ್ನು ಕಾಣುವ ದೃಷ್ಟಿಯೇ ಆ ದೇವಾಲಯದೊಳಗಿರುವ ದೇವಮೂರ್ತಿ. ಇದುವೇ ಷಟ್‌ಸ್ಥಲ ಹೃದಯ.

ಬಾಳಿನ ಬೆನ್ನು ಬಿದ್ದ ಅನಿಮಿತ್ತ ಶತ್ರುಗಳೆಂದರೆ ಅರಿಷಡ್ವರ್ಗಗಳು. ಇವು ಲೌಕಿಕವಾಗಿ ಪ್ರಾಪಂಚಿಕವಾಗಿ ಶತ್ರುಗಳೆನಿಸುತ್ತವೆ. ಇವೇ ಪಾರಮಾರ್ಥಿಕವಾಗಿ ಮಿತ್ರರೆನಿಸುತ್ತವೆ. ಷಟ್‌ಸ್ಥಲ ಸಾಧನೆಯಲ್ಲಿ ಇವನ್ನು ಕ್ರಮವಾಗಿ ಬಳಸಿಕೊಂಡರೆ ಇವುಗಳಿಂದ ಬೇರಿಲ್ಲ ಅನಿಮಿತ್ತ ಮಿತ್ರರು. ಆ ಅನಿವಾರ್ಯ ಶತ್ರುಗಳನ್ನು ಅನಿವಾರ್ಯ ಮಿತ್ರರನ್ನಾಗಿ ಮಾಡಬಲ್ಲ ಉತ್ತಮ ಉಪಾಯವೆಂದರೆ ಷಟ್‌ಸ್ಥಲ ಸಾಧನೆ.

ಕೇವಲ ಲೌಕಿಕ ಸಾಗರದಲ್ಲಿ ಮಾನವರು ಬಿದ್ದರೆ ಷಡೂರ್ಮಿಗಳ ಹೊಡೆತ ತಪ್ಪಿದ್ದಲ್ಲ. ಷಡೂರ್ಮಿಗಳ ಉಬ್ಬರವೇ ಬಾಳನ್ನು ಹಾಳು ಮಾಡುವ ಬಲವನ್ನು ಹೋಳು ಮಾಡುವ ತರಂಗಮಾಲೆ! ದೇಹ ಧರ್ಮಗಳಾದ ಜನನ ಮರಣಗಳೆರಡು, ಪ್ರಾಣ ಧರ್ಮಗಳಾದ ಹಸಿವು-ನೀರಡಿಕೆಗಳೆರಡು, ಮನೋಧರ್ಮಗಳಾದ ಶೋಕ-ಮೋಹಗಳೆರಡು ಸೇರಿ ಷಡೂರ್ಮಿಗಳೆನಿಸಿವೆ. ಇವುಗಳಿಂದ ಜೀವನಾಂಬುಧಿ ಚಲಿತವಾಗಿದೆ. ಅರಿಷಡ್ವರ್ಗಗಳಿದ್ದಲ್ಲಿ ಇವು ಇದ್ದೇ ಇರುತ್ತವೆ. ಇವುಗಳ ಸೆಳವಿಗೆ ಮಾನವನು ಬಿದ್ದೇ ಬೀಳುತ್ತಾನೆ. ಬಿದ್ದು ಕೈಕಾಲು ಸೋಲುತ್ತಾನೆ. ಇವು ಆಗಮಾಪಾಯಿಗಳಾಗಿವೆ. ಇವುಗಳ ಸೆಳತಕ್ಕೆ ಹೊಡೆತಕ್ಕೆ ಸಿಕ್ಕವನು ದುಃಖಿಯಾಗುತ್ತಾನೆ; ದುಷ್ಕರ್ಮಿಯಾಗುತ್ತಾನೆ. ಇವನ್ನು ಜಯಿಸಬೇಕಾದರೆ ಚೈತನ್ಯ ಧರ್ಮಗಳಾದ ಸರ್ವಜ್ಞತ್ವಾದಿಗಳನ್ನು ಸಂಪಾದಿಸಬೇಕಾದರೆ ಷಟ್‌ಸ್ಥಲಕ್ಕೆ ಶರಣು ಹೋಗದೆ ಗತ್ಯಂತರವಿಲ್ಲ.

ಅಗೋಚರವಾದ ಆ ಮಹಾ ಚೈತನ್ಯವು ಗೋಚರವಾಗುವುದು ಅಂದರೆ ಸರ್ವಸ್ವತಂತ್ರಾದಿ ವಿಶಾಲ ವಿಶಿಷ್ಟ ಗುಣಗಳು ಸಂಪ್ರಾಪ್ತವಾಗುವುದು ಈ ಷಟ್‌ಸ್ಥಲ ಸಾಧನೆಯಿಂದ! ಇಂತಹ ಈ ಷಟ್‌ಸ್ಥಳ ಸಾಧನೆಗೆ ಸಾಗಿ ಬರುವುದು ಈ ಶರೀರದಿಂದ! ಈ ಶರೀರವು ಅಸ್ತಿತ್ವವನ್ನು ಸಂಪಾದಿಸಿರುವುದು ಈ ಜಗತ್ತಿನಿಂದ! ಆತ್ಮವು ತನ್ನ ಈ ಅಂಗದಲ್ಲಿ ಈ ಜಗರಂಗದಲ್ಲಿ ಮಂಗಳವಾಗಿ, ಮಹೋನ್ನತವಾದ ಬೆಳಕನ್ನು ಭಾಗ್ಯವನ್ನು ಬೀರುವುದಾಗಿ—ಸಂಚರಿಸುವ ಆರು ಹೆಜ್ಜೆಗಳೇ ಆರು ಸ್ಥಲಗಳು. ಪೃಥ್ವ್ಯಂಗ ಜಲಾಂಗಾದಿಗಳನ್ನು ಕ್ರಮ

ವಾಗಿ ನಿಷ್ಕಾಮಾದಿಗಳಿಂದ ಮುಟ್ಟಿ ಮೆಟ್ಟಿ ಮುಂದುವರಿಯುತ್ತದೆ ಷಟ್‌ಸ್ಥಲ ಧರ್ಮ. ಸಮಷ್ಟಿ ಷಡಂಗಗಳನ್ನೇ ಆಗಲಿ, ವ್ಯಷ್ಟಿ ಷಡಂಗಗಳನ್ನೇ ಆಗಲಿ, ಇತ್ತ ಬಿಡದೆ, ಅತ್ತ ಹಿಡಿಯದೆ, ಅತ್ತ ಬಿಡದೆ, ಮುನ್ನಡೆವುದೇ ಷಟ್‌ಸ್ಥಲ ಮರ್ಮ. ಈ ದಿಸೆಯಲ್ಲಿ ನೂರೊಂದು ಹೆಜ್ಜೆಗಳನ್ನು ಬಾಳಿನಾದ್ಯಂತ ಹಾಕ ಬೇಕಾಗುತ್ತದೆ. ಹೆಜ್ಜೆ ಹಾಕಿ ಸಾಗಿದರೂ ಬೇರೆಡೆಗೆ ಎಲ್ಲಿಗೂ ಹೋಗುವಂತಿಲ್ಲ. ಬಲೆಗೆ ಬೀಳದಂತೆ ಸರ್ವಜ್ಞತ್ವ ಸರ್ವಸ್ವತಂತ್ರತ್ವಾದಿ ಸ್ವಗುಣಗಳ ನೆಲೆಯಲ್ಲಿರು ವುದನ್ನು ಹೋಗುಟ್ಟುಕೊಳ್ಳುವಂತಿಲ್ಲ. ಇದೇ ಪಾರಮಾರ್ಥದ ಹುರುಳು.

ಈ ದಿಕ್ಕಿನಲ್ಲಿ ಸಾಗಿರುವ ಸಾಗುವ ಷಟ್‌ಸ್ಥಲ ಧರ್ಮಿಗೆ ಶರೀರ ಒಂದು ಬಲೆಯಲ್ಲ. ಸಂಸಾರ ಒಂದು ಭ್ರಮೆಯಲ್ಲ. ಈ ಲೋಕ ನರಕವಲ್ಲ. ಇವೆಲ್ಲವೂ ಆತ್ಮನ ಅಭಿವೃದ್ಧಿಗೆ ಅಖಂಡ ಸಿದ್ಧಿಗೆ ಸಹಾಯಕವಾಗಿವೆ. ಸಂಪೂರ್ಣತೆಗೆ ಪೂರಕವಾಗಿವೆ. ಹೊರಹೊಮ್ಮಿ-ಎಲೆ ಹೂಗಳು ಹಣ್ಣಾಗಲು, ಹಣ್ಣಾಗಿ ಬಿತ್ತಾಗಲು ಸಹಾಯಕ ಮತ್ತು ಪೂರಕವಾಗುವಂತೆ ಆಗುತ್ತವೆ. ಬೀಜದಲ್ಲಿ ಯಾವುದಿಲ್ಲ? ವೃಕ್ಷದ ಅಂಗಾಂಗಗಳನ್ನೆಲ್ಲ ಅದು ಒಳಗೊಂಡಿದೆ. ಐಕ್ಯನ ಶಕ್ತಿ ಅಂತಹದು; ಬೀಜದಂತಹದು. ಬೀಜ ಭೂಜಮಯವಾಗಿದೆ. ಭೂಜ ಬೀಜ ಮಯವಾಗಿದೆ. ಇವೆರಡಕ್ಕೂ ಭಿನ್ನಾಭಿನ್ನ ಸ್ವರೂಪವಿದೆ. ಅಂತೆಯೇ ಅಂಗಲಿಂಗ ಗಳಿಗೂ ಜಗ - ಜೀವಿಗಳಿಗೂ ಭಿನ್ನಾಭಿನ್ನ ಸ್ವರೂಪವಿದೆ. ಭವಶಿವಗಳಿಗೆ ಭಿನ್ನ ಭಾವವಿಲ್ಲ. ಭಿನ್ನವಾದಂತೆ ತೋರಿದರೂ ಅಭಿನ್ನಭಾವವಿದೆ. ಹೀಗೆ ಸರ್ವ ವನ್ನು ಶಿವಮಯವಾಗಿ ಭಾವಿಸುವ ಷಟ್‌ಸ್ಥಲ ಧರ್ಮಿಯು ಜೀವನವನ್ನು ಪಾಪಮಯವೆಂದು ಜಗತ್ತನ್ನು ಮಿಥ್ಯವೆಂದು ಪರಿಗಣಿಸುವದಿಲ್ಲ. ಹೀಗೆ ಪರಿಗಣಿಸುವುದೇ ಮಹಾಪಾಪವೆಂದು ಮಹಾಪರಾಧವೆಂದು ಭಾವಿಸುತ್ತಾನೆ.

ಇಂತಹ ಷಟ್‌ಸ್ಥಲದಲ್ಲಿ ಪ್ರಥಮವಾದ ಭಕ್ತಪಾತ್ರ ಬಹಳ ಬಿತ್ತರ ವಾದುದು. ವಿಶ್ವ ಮೈತ್ರಿಯೇ ಅದರ ಚರಮ ಸೀಮೆ. ಸಕಲ ಜೀವಾತ್ಮರ ಶುಭ್ರಸ್ನೇಹವೇ ಅದರ ಸರ್ವಸ್ವ. ಸಣ್ಣಾಗುವ ಸರ್ವಜೀವರ ಕರುಣೆಯೇ ಅದರ ಆಸಕ್ತಿ; ಅದಕ್ಕಿರುವ ಸತ್ಯ ಶಕ್ತಿ. ಪರಮಾರ್ಥದ ಬಾಗಿಲನ್ನು ಮುಚ್ಚಿದ ಪಿಂಡಾಂಡದಲ್ಲಿ ಬ್ರಹ್ಮಾಂಡದಲ್ಲಿ ಆ ಬಾಗಿಲನ್ನು ತೆರೆಯುವುದೇ ಭಕ್ತಿಯ ಹೊಲಬು. ಜೀವಲೋಕದಲ್ಲಿ ದೇವಲೋಕವನ್ನು, ಮರ್ತ್ಯಲೋಕದಲ್ಲಿ ಅಮರ್ತ್ಯ ಲೋಕವನ್ನು, ಸೃಜಿಸುವುದೇ ಭಕ್ತಿಯ ಶಕ್ತಿ. ಹೃದಯ ಕಲಶದಲ್ಲಿ ಮಧುರ

ಮಧುವನ್ನು ತುಂಬುವುದೇ ಭಕ್ತಿಯ ಕಾರ್ಯ. ತ್ಯಾಗ-ಭೋಗ-ಯೋಗಗಳ ಸಮನ್ವಯವನ್ನು ಸಾಧಿಸುವುದೇ ತ್ರಿವಿಧ ಭಕ್ತಿಯ ತಿರುಳು.

ಪರಮ ಪತಿಯಾದ ಲಿಂಗ ಚೈತನ್ಯದ ಮಾಮನೆಗೆ ಅಂಗ ಸತಿಯು ತೆರಳುವ ಕಾಲದಲ್ಲಿ ಪಡೆದ ಹಿರಿದಾದ ಬಳುವಳಿ ಈ ಬಾಳು ಬದುಕು. ಇದನ್ನು ಶ್ರದ್ಧೆಯಿಂದ ಸಂರಕ್ಷಿಸಬೇಕು. ಉಪೇಕ್ಷಿಸದೆ ಉಪಯೋಗಿಸಬೇಕು. ಉಪಯುಕ್ತವಾಗಿಸಬೇಕು. ಹಿತಮಿತವಾಗಿ ಬಳಸಬೇಕು. ವಿಹಿತವಾದುದಕ್ಕೆ ವಿನಿಯೋಗಿಸಬೇಕು, ಎಂಬೀ ಪಾಠವನ್ನು ಕಲಿಸುತ್ತದೆ ಷಟ್ ಸ್ಥಲ ಶಾಸ್ತ್ರ. ಮಾನವ ಜೀವನ ಅಮೋಘವಾದುದು; ಅತ್ಯಂತ ಪಾವನವಾದುದು. ಅಂತಹ ಜೀವನದಲ್ಲಿ ಸಂಯಮ ಸೌಂದರ್ಯವನ್ನು ತಂದು ತುಂಬುತ್ತದೆ ಷಟ್ ಸ್ಥಲ ಮಾರ್ಗ. ಸ್ವಾವಲಂಬನದ ಸುಧೆಯ ಕೊಡುತ್ತದೆ ಷಟ್ ಸ್ಥಲ ಸ್ವರ್ಗ. ದೀನತೆಯ ಕಳೆದು ದಿವ್ಯತೆಯ ಬೆಳೆದು ದೇದೀಪ್ಯತೆಯನ್ನು ಒದಗಿಸುತ್ತದೆ ಷಟ್ ಸ್ಥಲ ವರ್ಗ.

ಭಕ್ತಿಯ ಶಕ್ತಿ ಬೃಹತ್ತಾದುದು. ಇನ್ನಾವುದಕ್ಕೂ ಒಲಿಯದ ಶಿವನು ಭಕ್ತಿಗೆ ಒಲಿಯುತ್ತಾನೆ. ಅಗಮ್ಯನು ಗಮ್ಯನಾಗುತ್ತಾನೆ. ಅಗೋಚರನು ಗೋಚರನಾಗುತ್ತಾನೆ. ಸ್ನೇಹಕ್ಕೆ ಶರಣಾಗದ ಶಕ್ತರಾರು ? ವಿಶ್ವನಾಥನನ್ನೇ ಸಾಧಿಸುವ ವಿಶುದ್ಧ ಪ್ರೇಮ-ವಿಶಾಲ ಪ್ರೇಮ ವಿಶ್ವವನ್ನು ಸಾಧಿಸಲಾರದೆ ?

ಆತ್ಮ ಸಂಪತ್ತಿನ ಸಮೃದ್ಧಿಗಾಗಿ ಷಟ್ ಸ್ಥಲಗಳಲ್ಲಿ ಮಾನವನು ವ್ಯವಸಾಯವನ್ನು ಕೈಗೊಳ್ಳಬೇಕು. ಒಂದು ಸ್ಥಲದ ಕೃಷಿ ಸಾಲದು. ಆರು ಸ್ಥಲಗಳ ವ್ಯವಸಾಯ ಸಾಗಬೇಕು. ಆ ಆರು ನೆಲೆಗಳು ಒಂದಕ್ಕೊಂದು ಸಂಬಂಧಿಸಿವೆ. ಒಂದರಲ್ಲಾದ ಲಾಭವು ಇನ್ನೊಂದರಲ್ಲಿ ಇಮ್ಮಡಿಗೊಳ್ಳುತ್ತದೆ. ಒಂದರಲ್ಲಿ ಹೂವಾದರೆ ಇನ್ನೊಂದರಲ್ಲಿ ಮಿಡಿಯಾಗುತ್ತದೆ. ಮತ್ತೊಂದರಲ್ಲಿ ಕಾಯಾಗುತ್ತದೆ. ಮಗುದೊಂದರಲ್ಲಿ ಪಕ್ವಫಲವಾಗುತ್ತದೆ. ಪಂಚಮ ಸ್ಥಲದಲ್ಲಿ ಸಮರ್ಪಣವಾಗುತ್ತದೆ. ಕೊನೆಯಲ್ಲಿ ಸಮರಸ ರೂಪದಲ್ಲಿ ಸಂಪೂರ್ಣಗೊಳ್ಳುತ್ತದೆ. ಜೀವನ ವಿಫಲವಾಗದೆ ಸಫಲವಾಗುತ್ತದೆ. ಅಶಕ್ತವಾಗದೆ ಸಶಕ್ತವಾಗುತ್ತದೆ.

ಒಂದಾರಾಗಿ ಆರೊಂದಾಗುವುದೇ ಷಟ್ ಸ್ಥಲ ಲೀಲೆ. ಇದುವೇ ಶಿವಾದ್ವೈತ ವಿದ್ಯಾಕಲೆ. ಸದಸತ್ತಾಗಿ ಚರಾಚರವಾಗಿ ವ್ಯಕ್ತಾವ್ಯಕ್ತವಾಗಿ ತೋರಿಸುವುದೇ ಅದರ ಅಖಂಡಾದ್ವೈತ ಲಕ್ಷಣ. ಒಂದಹದು, ಇನ್ನೊಂದಲ್ಲವೆಂದರೆ ಅದರ ಅಖಂಡತ್ವಕ್ಕೆ ಹಾನಿ.

ಮರದ ಬುಡದಂತಿರುವ ಮೈಯನ್ನು ಸದ್ರೂಪಗೊಳಿಸುವುದು ಭಕ್ತಾಂಗ ಕಾರ್ಯ. ಮರದ ರೆಂಬೆಗಳಂತಿರುವ ಇಂದ್ರಿಯಗಳೆಲ್ಲಕ್ಕೆ ಕೇಂದ್ರ ಮೆದುಳು. ಅಲ್ಲಿ ಇರುವ ಚೈತನ್ಯ ಕಳೆಯೇ ಮಾಹೇಶ್ವರ. ಆತನು ತನ್ನ ವಶದಲ್ಲಿರುವ ಇಂದ್ರಿಯಗಳಿಗೆಲ್ಲ ಚಿದ್ರೂಪವನ್ನುಂಟು ಮಾಡುವನು. ಆ ಮಹೇಶ್ವರನೇ ಮಹಾರಾಜನು. ಆತನು ಸ್ವತಃ ಕೇಳನು, ನೋಡನು; ಮುಟ್ಟನು, ಮೂಸನು; ರುಚಿಸನು. ಆತನಿಗೆ ಮನವೆಂಬ ಮಂತ್ರಿಯ ನೆರವು ಬೇಕು. ಆ ಮನವನ್ನು ಪ್ರಸನ್ನ (ಆನಂದ)ಗೊಳಿಸಿ ನಿಶ್ಚಲವಾಗಿರಿಸುವುದೇ ಪ್ರಸಾದಿಯ ಬದುಕು. ಆ ಮನಕ್ಕೆ ಪ್ರಾಣವೇ ಚೈತನ್ಯ; ಚಾಲಕ. ಆ ಪ್ರಾಣವನ್ನು ಲಿಂಗವಾಗಿಸಿ ನಿತ್ಯವೆಂದೆನಿಸುವುದೇ ಪ್ರಾಣಲಿಂಗಿಯ ಪ್ರಯತ್ನ. ಇವುಗಳಿಂದಾದ ಅನುಭವವನ್ನು ಅಳವಡಿಸಿಕೊಂಡು ಆನಂದಿಸುವ ಅಹಮಿಸುವ ಮತಿ ಬೇಕು. ಆ ಮತಿಯು ಅಹಂಕಾರವನ್ನು ಅಣಗಿಸಿ ಪ್ರಸಾದ ಲಿಂಗಕ್ಕೆ ಶರಣು ಹೋಗುವುದೇ ಶರಣಾಂಗ ಕಾರ್ಯ; ಅದೇ ಪರಿಪೂರ್ಣ ಕಾರ್ಯ. ಅಲ್ಲಿಂದಾಚೆ ತನ್ನದು ತನ್ನವರು ತಾನು ಎಂಬುದೇನೂ ಉಳಿಯದೆ ತದ್ರೂಪವಾಗಿರವುದೇ ಅಂಗಲಿಂಗ ಸಾಮರಸ್ವರೂಪಾಖಂಡತೆ ! ಅದೇ ಐಕ್ಯಾಂಗ! ಅದೇ ಸರ್ವಾಂಗ! ಅದೇ ಮಹಾಲಿಂಗ! ಆ ಹೆಗ್ಗುರುಹಿನಲ್ಲಿ ಏನೆಲ್ಲವೂ ಉಂಟು. ಯಾವ ಕೊರತೆಯಿಲ್ಲದ ಕ್ರಿಯಾಜ್ಞಾನಾನುಭವಗಳುಂಟು.

ಜೀವನದಲ್ಲಿ ದೈವೀಕ್ರಿಯೆ, ದೈವೀಪ್ರಜ್ಞೆ, ದೈವೀ ಅನುಭವ ಆನಂದಗಳನ್ನು ಪಡೆಯುವುದೇ ಜೀವನಾದರ್ಶ; ಜೀವನ ಸಾರ್ಥಕ್ಯ. ಅದುವೇ ಜೀವನದ ಸಾಕಲ್ಯ. ಅವನ್ನು ಪಡೆಯಬೇಕಾದರೆ ಇಹಪರಗಳೆರಡನ್ನು ಸಾಧಿಸ ಹೇಳುವ ಷಟ್‌ಸ್ಥಲಕ್ಕೆ ಶರಣು ಬರಬೇಕು. ಕ್ರಿಯೆ ಜ್ಞಾನಾನುಭವಗಳನ್ನು ಗಳಿಸದ ಜೀವನ ಜೀವನವಲ್ಲ. ಈ ಮೂರು ಮಾನವನಿಗೆ ಮುಖ್ಯ. ಇವುಗಳಿಂದ ಮಾನವ ಜೀವನವನ್ನು ಪರಿಪೂರ್ಣಗೊಳಿಸುತ್ತದೆ ಷಟ್‌ಸ್ಥಲ. ದೈವೀಗುಣಗಳಿಗೆ ಇಂಬು ಈಯಬಲ್ಲುದು. ದಿವ್ಯ ಜೀವನದತ್ತ ಮನಸ್ಸನ್ನು ತಿರುಗಿಸಬಲ್ಲುದು. ಪ್ರಸನ್ನ ಜೀವಿಯನ್ನಾಗಿಸಬಲ್ಲುದು. ಸ್ಥಲಸ್ಥಲದಲ್ಲಿ ಒದಗುವ ಸತ್ಕ್ರಿಯೆಗಳ ಸಮ್ಯಜ್ಞಾನಗಳ ಘಟನೆಗಳಿಂದ ಜೀವನಾದರ್ಶ ಪುಷ್ಪ ಅರಳುತ್ತದೆ. ಶೀಲ ಸಂಪಾದನೆಯಿಂದ ಶುದ್ಧ ಜೀವನವನ್ನು ರೂಪಿಸುವುದರಲ್ಲಿ ಷಟ್‌ಸ್ಥಲವು ತನ್ನದೇ ಆದ ಪ್ರಭಾವವನ್ನು ಬೀರುತ್ತದೆ; ಪ್ರೋತ್ಸಾಹವನ್ನು

ತರುತ್ತದೆ. ಜೀವನದಲ್ಲಿ ಅಚ್ಚಳಿಯದ ಆಧ್ಯಾತ್ಮಿಕದ ಹೊಂಬೆಳಕನ್ನು ತೋರುತ್ತದೆ. ಶರೀರಕ್ಕೆ ಸದ್ರೂಪ ಶಕ್ತಿಯನ್ನು, ಚಿತ್ತಕ್ಕೆ ಚಿರಶಾಂತಿಯನ್ನು, ಪ್ರಾಣಕ್ಕೆ ಪರಮ ಚಿತ್ಕಳೆಯನ್ನು, ಭಾವಕ್ಕೆ ತೀರದ ತೃಪ್ತಿಯನ್ನು ನೀಡುತ್ತದೆ. ಅಂಗ ಆತ್ಮಗಳೆರಡಕ್ಕೂ ಆರೋಗ್ಯವನ್ನು ಒದಗಿಸುತ್ತದೆ; ಸೌಭಾಗ್ಯವನ್ನು ಸಮನಿಸುತ್ತದೆ. ಪಿಂಡಾಂಡದ ಪ್ರತಿಯೊಂದು ಅಂಗವನ್ನು ಪ್ರತಿಯೊಂದು ಅಂಶವನ್ನು ಪವಿತ್ರವಾಗಿರಿಸುತ್ತದೆ. ಪ್ರಗತಿ ಪಂಥದಲ್ಲಿ ಚರಿಸುವಂತೆಸಗುತ್ತದೆ. ಕ್ಷುದ್ರಕಾಂಕ್ಷೆ, ಕ್ಷುದ್ರಕೋಪ, ಕ್ಷುದ್ರ ಮನಸ್ತಾಪ, ಕ್ಷುದ್ರಸ್ನೇಹ, ಕ್ಷುದ್ರ ಮೋಹ, ಕ್ಷುದ್ರ ಮದಮತ್ಸರಗಳನ್ನು ನಿವಾರಿಸುತ್ತದೆ. ಸತ್ಯ ಸಂಕಲ್ಪ, ಸೌಹಾರ್ದ್ರಭಾವ, ಸಹಕಾರ ಮನೋಭಾವ, ಸಮರಸಭಾವ, ಸಹಾನುಭೂತಿ, ಸರಳ ರೀತಿಗಳನ್ನು ಮೈಗೂಡಿಸುತ್ತದೆ.

ನಾಶಿಕ, ಜಿಹ್ವೆ, ನೇತ್ರ, ತ್ವಕ್, ಶ್ರೋತ್ರ, ಮನಸ್ಸುಗಳು ಪ್ರಸನ್ನವಾಗುತ್ತವೆ. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ-ಚಕ್ರಗಳು ಪ್ರಸನ್ನವಾಗುತ್ತವೆ. ಷಡ್ಲಿಂಗಗಳ (ಚೈತನ್ಯಗಳ) ಅನುಗ್ರಹ ಅಳವಡುತ್ತದೆ. ಎಷ್ಟು ಎತ್ತರ ಇದರ ನಿಲವು ? ಎನಿತು ಬಿತ್ತರ ಇದರ ಒಲವು ? ಅದೆನಿತು ಚಿತ್ತಾಕರ್ಷಕ ಇದರ ಚೆಲುವು-ಇದರ ನಲಿವು ? ಆಂತರಿಕ ಆ ಪರಾಕಾಶಕ್ಕೆ ಎಟಕುತ್ತದೆ. ಪಿಂಡಾಂಡವನ್ನೆಲ್ಲ ಬಳಸುತ್ತದೆ. ಕೇಡಿಲ್ಲದ ಚೆಲುವು-ನಲಿವುಗಳ ಬರಿಸುತ್ತದೆ; ಇರಿಸುತ್ತದೆ.

ಮಾನವನ ಅಪೂರ್ಣ ಜೀವನವನ್ನು ಪರಿಪೂರ್ಣತೆಗೆ ಎಟಕಿಸುತ್ತದೆ. ಆಧ್ಯಾತ್ಮ ಸಂಪತ್ತಿನ ಸಮೃದ್ಧಿಗೆ ನಿಲುಕಿಸುತ್ತದೆ. ಷಟ್‌ಸ್ಥಲ ಧರ್ಮಿಯಲ್ಲಿ ಆ ಶಕ್ತಿಯಿರುತ್ತದೆ; ಆ ಭಕ್ತಿಯೂ ಇರುತ್ತದೆ. ಆ ದೃಕ್ಕವೂ ಇರುತ್ತದೆ; ಆ ಕ್ರಿಯೆಯೂ ಇರುತ್ತದೆ. ಆ ಪರಿಪೂರ್ಣತೆಯ ಗುರಿಗೆ ಆ ಸಮೃದ್ಧಿಯ ಸಿದ್ಧಿಗೆ ನಿಲುಕಲು ಷಟ್‌ಸ್ಥಲ ಧರ್ಮಿಯು ಹತ್ತಿರದ ಯಾತ್ರಿಕ. ಉಳಿದವರಂತೆ ದೂರದ ಯಾತ್ರಿಕನಲ್ಲ. ಅಲ್ಲದೆ ಆ ಹೆದ್ದಾರಿಯಲ್ಲಿ ಹೆಜ್ಜೆ ಹಾಕಿ ಮುನ್ನಡೆದಿರುತ್ತಾನೆ. ಮತ್ತೊಂದು ಕಂಟಕವಿರುವುದಿಲ್ಲ. ಹೊತ್ತುಗಳೆವ ಪ್ರಸಂಗವಿರುವುದಿಲ್ಲ; ಕಡಿದಾದ ಹಾದಿಯುಲ್ಲ. ಹಂತ ಹಂತಗಳುಳ್ಳ ಹಾದಿ. ಎಲ್ಲ ಶಕ್ತಿಗಳು ಎಲ್ಲ ವಸ್ತುಗಳು ಎಲ್ಲಿ ವಿಲೀನವಾಗಿ ಸಮರಸಗೊಳ್ಳುವುವೋ ಮರಳಿ ಅದರಿಂದಲೇ ಉದಯವಾಗಿ ವಿಕಾಸಗೊಳ್ಳುವವೋ ಅದು ಪರಿಪೂರ್ಣ ವಸ್ತು ; ಅದು ಏಕೈಕ ವಸ್ತು. ಅದು

ಮಹಾಲಿಂಗ. ಅದು ಮಹಾ ಸಚ್ಚಿದಾನಂದ. ಅದು ನಿತ್ಯ ಪರಿಪೂರ್ಣಾ ಖಂಡ. ಅದು ಮೂಲ ಮಹಾ ಸ್ಥಲ. ಅದು ಕೊರತೆಯಿಲ್ಲದ ಬಯಲು. ಸೀಮೆಯಿಲ್ಲದ ಹೆಬ್ಬಯಲು. ಅದಕ್ಕಿಲ್ಲ ಪರಿಚ್ಛಿನ್ನತೆ; ವಸ್ತು ಪರಿಚ್ಛಿನ್ನತೆ. ಅದು ಅಸಾಮಾನ್ಯ. ಅದು ವಾಚಾತೀತ; ಮನಕ್ಕೆ ಅಗೋಚರ; ಪ್ರತ್ಯಕ್ಷಾದಿ ಪ್ರಮಾಣಾತೀತ; ಶಾಂತ್ಯತೀತೋತ್ತರ.

ಹಾಗಿದ್ದರೂ ಅದು ಪಿಂಡಾಂಡ ಬ್ರಹ್ಮಾಂಡಗಳನ್ನು ಗರ್ಭೀಕರಿಸಿಕೊಂಡ ಕೇಂದ್ರ. ಅದು ಕೇವಲತೆಗೆ ನಿಲಯವಾಗಿರುವಂತೆ ಕ್ರಿಯಾಜ್ಞಾನಗಳ ಸ್ಫುರಣೆಗೂ ನಿಲಯವಾಗಿದೆ. ಅವೆರಡರ ಹೃದಯವೂ ಆಗಿದೆ. ಅಪರೋಕ್ಷಾನು ಭವ ಸ್ವರೂಪವೂ ಆಗಿದೆ.

ಆ ಪೂರ್ಣತೆಯನ್ನು ಅರಿಯಬೇಕಾಗಿದೆ. ಅಲ್ಲಿಗೆ ಏರಬೇಕಾಗಿದೆ. ಏರಿ ಎರಕಗೊಳ್ಳಬೇಕಾಗಿದೆ. ಅದೂ ಒಂದು ಸ್ಥಲ, ಪರಿಪೂರ್ಣ ನಿಸ್ಥಲ; ಆದನ್ನು ಸೇರುವ ಸುಲಭ ಮಾರ್ಗ ಷಟ್‌ಸ್ಥಲ ಮಾರ್ಗ. ಇದು ಸಹಜ ಮಾರ್ಗ. ಬಿಡಿನೆಲೆಯಿಂದ ಇಡಿನೆಲೆಗೆ ಅಡಿಯಿಡಬೇಕಾಗಿದೆ. ಯಾವುದೇ ಆಗಲಿ ಇಡಿ ಯೊಡನೆ ಇಡಿದಾಗಿ ಬಳಕೆಗೆ ಬಾರದು; ಬದುಕಿಗೆ ನಿಲುಕದು.

ಮಾನವನಿಗಿರುವ ಮೊದಲು ಗುಣ ಬಯಕೆ. ಬಯಕೆಯಿಂದ ಬೇಡಿಕೆ. ಬಯಕೆ ಇಬ್ಬಗೆ: ಒಂದು ಇಹದ ಬಯಕೆ, ಇನ್ನೊಂದು ಪರದ ಬಯಕೆ. ಇಹದ ಬಯಕೆ ಇಚ್ಛಾನುಸಾರವಾಗಿರಬಾರದು; ಸ್ವೇಚ್ಛಾನುವರ್ತಿಯಾಗಿರಬಾರದು. ಆದಲ್ಲಿ ಭವಪಾಶವಾಗಿ, ಭವಬಂಧನಕಾರಿಯಾಗಬಲ್ಲುದು; ಆಗುತ್ತದೆ. ಬಯಕೆ ಸ್ವಾರ್ಥದ್ದಾಗಿರಬಾರದು; ಸಂಕುಚಿತವಾಗಿರಬಾರದು. ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕು. ಈ ಪಾಠವನ್ನು ಹೇಳಿಕೊಡುತ್ತದೆ ಭಕ್ತಸ್ಥಲ. ತನಗೆ ತನ್ನವರಿಗೆ ಎಂದು ಮಾತ್ರ ಬಯಸಿ ಬಳಲುವುದಕ್ಕಿಂತ, ಬಳಲಿ ಅಲ್ಪಾತ್ಮ ನಾಗುವುದಕಿಂತ ತಿರೆಯ ಜೀವರಿಗೆಲ್ಲ ಒಳಿತನ್ನು ಬಯಸಿ ಮಹಾತ್ಮನಾಗು ವುದು ಮಹಾಂತನಾಗುವುದು ಮೇಲು.

ಬೇಡಿ ಬಯಸುವ ಬದಲು, ಮಾಡಿ ನೀಡಿ ಸೊಗಸುವ ಉದಾರತೆಯನ್ನು ಮುಮ್ಮೊದಲು? ಕಲಿಸುತ್ತದೆ ಷಟ್‌ಸ್ಥಲ ಸಿದ್ಧಾಂತ. ಲೋಭದ ಇರುಳಿನಿಂದ ಮೋಹದ ಮಬ್ಬಿನಿಂದ ಹೊರಬರಿಸಿ ತ್ಯಾಗದ ತತ್ತ್ವಜ್ಞಾನಯೋಗದ ಹೆಬ್ಬೆಳ ಕಿಗೆ ಕರೆದೊಯ್ಯುತ್ತದೆ. ತಾತ್ತ್ವಿಕ ಕ್ರಿಯೆಗೆ ಕರೆದೊಯ್ಯುತ್ತದೆ.

ತಾತ್ತ್ವಿಕ ಕ್ರಿಯೆಯೆಂದರೆ ಕರ್ಮಯೋಗ. ಕರ್ಮಯೋಗ ಬೇರಲ್ಲ, ಬ್ರಹ್ಮ ಬೇರಲ್ಲ. 'ಕರ್ಮ ಬ್ರಹ್ಮಸಮುದ್ಭವಮ್'- ಎಂದಿದೆ ಗೀತೆ. 'ಸರ್ವ ಕರ್ತೃ ಸ್ವರೂಪಕಮ್'- ಎಂದಿದೆ ರೇಣುಕ ಗೀತೆ.

ಜೀವನವನ್ನು ಬಿಗಿದು ಕಟ್ಟಿದ ಅಜ್ಞಾನಪಾಶ, ಅವಿದ್ಯಾಬಂಧನ ಸಣ್ಣದಲ್ಲ; ಸುಲಭವಾಗಿ ಸಡಿಲುವುದಲ್ಲ. ಇವು ಮಾನವನನ್ನು ಅದುಮಿ ಹಿಡಿದು ಪ್ರಗತಿಗೆ ಪ್ರಜ್ಞಾನ ಮಾರ್ಗಕ್ಕೆ ಅವಕಾಶವಿಲ್ಲದಂತೆ ಮಾಡಿವೆ. ಕಾಲ್ತೊಡಕಾಗಿ ನಿಂತಿವೆ. ಕಣ್ಣು ಕುರುಡಾಗಿಸಿವೆ. ಕಾಳ್ಗತ್ತಲಲ್ಲಿ ಕೈಯಾಡಿಸದಂತಿರಿಸಿವೆ. ಇವನ್ನು ಆಮೂಲಾಗ್ರವಾಗಿ ಕಿತ್ತೆಸೆಯಲು ಹೆಣಗಿವೆ ಪಿಂಡ-ಪಿಂಡಜ್ಞಾನ ಸ್ಥಲಗಳು. ಪಿಂಡಸ್ಥಲವು ಬಾಳ್ಮರದ ತಾಯ್ಬೇರು; ಜೀವ ಬೀಜ. ಅದನ್ನು ಮುಂದೆ ವಿವರಿಸುತ್ತೇವೆ.

ಪಿಂಡಸ್ಥಲ

೧

ಷಟ್‌ಸ್ಥಲಗಳಲ್ಲಿ ಮೊದಲಿನದು ಭಕ್ತಸ್ಥಲ. ಭಕ್ತಸ್ಥಲದ ಹದಿನೈದು ಉಪಸ್ಥಲಗಳಲ್ಲಿ ಮೊದಲಿನದು ಪಿಂಡಸ್ಥಲ. ಈ ಪಿಂಡಸ್ಥಲವು ಜೀವನ ಸಿದ್ಧಾಂತದ ಬುನಾದಿಯಾಗಿದೆ; ಮೂಲಸೂತ್ರವಾಗಿದೆ.

ಯಾವುದು ಜೀವನ ಮೂಲ? ಯಾವುದು ಜೀವನ ಮೂಲಸ್ಥಲ? ಎಲ್ಲಿದೆ ಜೀವನ ಶುದ್ಧಿ? ಎಂತಾಗುವುದು ಜೀವನವೃದ್ಧಿ? ಯಾವುದು ಜೀವನ ಸಿದ್ಧಿ? ಎಂಬೀ ಮಾನವನ ಮೂಲ ಪ್ರಶ್ನೆಗಳಿಗೆ ಉತ್ತರವಾದಿಯಾಗಿದೆ ಈ ಪಿಂಡಸ್ಥಲ.

ಮುಮ್ಮೊದಲು ಬ್ರಹ್ಮಜಿಜ್ಞಾಸೆ ವೇದಾಂತ ಲಕ್ಷಣವಾದರೆ ಮುಮ್ಮೊದಲು ಜೀವಜಿಜ್ಞಾಸೆ ಶಿವಾದ್ವೈತ ಸಿದ್ಧಾಂತ ಲಕ್ಷಣವಾಗಿದೆ. ನಿವೃತ್ತಿಕಲೆಯಿಂದ ದೇವತ್ವದ ನೆಲೆಗಾಣಬೇಕೆಂಬ ಜೀವನ ನೈಜತೆಯ ಜಿಜ್ಞಾಸೆಗೆ ಪ್ರಪ್ರಥಮ ಸ್ಥಾನವನ್ನು ಮೀಸಲಾಗಿರಿಸಿರುವುದು ಷಟ್‌ಸ್ಥಲತತ್ತ್ವ. ಇದು ಜೀವನ ಸಿದ್ಧಾಂತ ತತ್ವಕ್ಕೆ ಹೆಗ್ಗುರುತಾಗಿದೆ. ಜೀವತ್ವದಲ್ಲಿಯೇ ದೇವತ್ವವನ್ನು ಕಾಣುವ ಕುಶಲ ಸಿದ್ಧಾಂತ ಷಟ್‌ಸ್ಥಲ ತತ್ತ್ವ. ಶರೀರದೊಳಗಿರುವ ಸದ್ರೂಪವೇ ಶಿವ; ಪ್ರಾಣದೊಳಗಿರುವ ಚಿನುಮಯನೇ ಪರಮಾತ್ಮ; ಭಾವದೊಳಗಿರುವ ಸುಖಸ್ವರೂಪನೇ ಆ ಪರಬ್ರಹ್ಮ ಎಂಬುದನ್ನು ಎಲ್ಲ ಮಾನವರಿಗೂ ಅರುಹಲು ಹೊರಟಿದೆ ಷಟ್‌ಸ್ಥಲ ತತ್ತ್ವ. ತನ್ನೊಳಗಿರುವ ಜೀವ (ಲಿಂಗ)ವನ್ನೇ ದೇವನನ್ನಾಗಿಸುವ ಧೀರರು ಷಟ್‌ಸ್ಥಲ ಜ್ಞಾನಿಗಳು. "ತಮಾತ್ಮಸ್ಥಂಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ" ಎಂಬುದಾಗಿ ಕಠೋಪನಿಷತ್ತು ಪಿಂಡಸ್ಥಲದ ಗುರಿಯನ್ನು ಕಂಠೋಕ್ತವಾಗಿ ಸಾರಿದೆ.

ತನ್ನೊಳಗಿರುವುದನ್ನು ತಾನು ನೋಡಬೇಕು. ನೋಡುವನಾತನೇ ಧೀರನು. ಆತನಿಗೆ ಶಾಶ್ವತ ಸುಖ. ಇತರರಿಗೆ ದುಃಖ.

'ಪಶ್ಯಂತಿ' ಪದದಲ್ಲಿ ತುಂಬಿದೆ ಸಾರಸಂಸ್ಕಾರದ ಮೂಲಮಂತ್ರ; ಪಿಂಡಶ್ವ ರೂಪದ ಪುಣ್ಯಕಲಾಸೂತ್ರ. ಪಿಂಡನಾಗದೆ ಪಿಂಡಮೂಲನಾದ ಆ ಪರಮಾತ್ಮ ನನ್ನು ಕಾಣಲಾಗದು. ಪುಣ್ಯ ಸಂಸ್ಕಾರವಿಲ್ಲದೆ ಪಿಂಡತ್ವ ಪ್ರಾಪ್ತಿಯಾಗದು.

ಹಸನಾಗಿಸುವುದೇ ಸಂಸ್ಕಾರ. ಹಸನಾಗುವುದು ಹೊಸತಾಗುವುದು ಬಾಳಿಗೊಂದು ಕಳಾತ್ಮಕ ಸತ್ವ. ಆ ಸತ್ವವನ್ನು ಸಂಪಾದಿಸುವುದೇ ಜೀವನ ತತ್ತ್ವ; ಪಾವನ ಸಿದ್ಧಾಂತ. ಈ ಪಾವನ ಸಿದ್ಧಾಂತವನ್ನು ಪ್ರಾರಂಭಿಸುತ್ತದೆ ಪಿಂಡಸ್ಥಲ.

ಶುದ್ಧವಾದ ಬಿಂದುಗಳಿಂದುತ್ಪನ್ನವಾದ ಕಳೆಯೇ ಪಿಂಡ. ಪಿಂಡ ಅದೊಂದು ಅವ್ಯಕ್ತವಾದ ನಿಲವು. ಅಶುದ್ಧವಾಗದ ನಿಲವು. ಅದು ಮೊಗ್ಗಿ ನೊಳಗಿನ ಕಂಪು; ಚಂದ್ರನೊಳಗಿನ ತಂಪು. ಮಣ್ಣಿನೊಳಗಿನ ಚಿನ್ನ; ಮೋಡ ದೊಳಗಿನ ಮಿಂಚು. ಜನ್ಮ ಮತ್ತು ಕರ್ಮಗಳಿಗೆ ಕಾರಣವಾದ ವಸ್ತು. ದೇಹ ವನ್ನು ಧರಿಸಲು ಸಿದ್ಧವಾದ ಚೈತನ್ಯ; ಶುದ್ಧವಾದ ಚೈತನ್ಯ. ಅದೊಂದು ಪ್ರವಾಹಿ ಚೈತನ್ಯ. ಅನಾದಿ ಕಾಲದಿಂದ ಬಂದ ಆದಿ ಚೈತನ್ಯ. ಅದೊಂದು ಜೀವನದ ಶ್ರೇಷ್ಠ ಸಾರ. ಜೀವನ ಸಾರವಸ್ತುಗಳ ಸಮೂಹ. ಸಮೂಹವೆಲ್ಲ ಸಮರಸಗೊಂಡ ಸಾಂದ್ರರೂಪ. ಜೀವಿಯಾಗುವ ಜೀವಾತು. ದೇಹಿಯಾಗುವ ನಿಜ ಧಾತು.

'ಪಿಂಡ' ಅದೊಂದು ಪಾರಿಭಾಷಿಕ ಪದ. ಅದಕ್ಕೆ ಅದರದೇ ಆದ ಅರ್ಥ ವಿದೆ. ಅದಕ್ಕೆ ವ್ಯಕ್ತಾವ್ಯಕ್ತ ಸ್ವರೂಪವಿದೆ. ಶುದ್ಧಸಾಂದ್ರತೆಯಿದೆ. 'ಪಿಡಿ–ಸಂಘಾತೆ' ಸಂಘಾತಾರ್ಥವನ್ನು ಸೂಚಿಸುವ 'ಪಿಡಿ' ಎಂಬ ಸಂಸ್ಕೃತ ಧಾತು ವಿನಿಂದ ಸಿದ್ಧವಾದುದು—ಪಿಂಡ ಶಬ್ದ. ಪಿಣ್ಡತೇ ಅಥವಾ ಪಿಣ್ಡ್ಯತೇ ಎಂಬ ವಿಗ್ರಹದಿಂದ ಪಿಂಡ ಶಬ್ದ ನಿಷ್ಪತ್ತಿಯಾಗುತ್ತದೆ. 'ಜೋಲೇ ಬಲೇ ಸಾಂದ್ರೇ ದೇಹಾಗಾರೈಕದೇಶಯೋಃ। ದೇಹಮಾತ್ರೇ ನಿವಾಪೇ ಚ ಗೋಲ ಸಿಲ್ಹಕಯೋರಪಿ। ಓಂಡ್ರಪುಷ್ಪೇ ಚ ಪುಂಸಿ ಸ್ಯಾತ್ ಕ್ಲೀಬ ಮಾಜೀವ ರಾಯಸೋಃ। ಪಿಂಡೀತು ಪಿಂಡತಗರೇಽಲಾವೂ ಖರ್ಜೂರಭೇದಯೋಃ।— ಎಂದು ಮೇದಿನೀಕೋಶದಲ್ಲಿ ಹೇಳಿದೆ. 'ಲೋಹೋಽಸ್ತ್ರೀ ಶಸ್ತ್ರಕಂ ತೀಕ್ಷ್ಣಂ ಪಿಂಡಂ ಕಾಲಾಯಸಾಯಸೀ। ಅಶ್ಮಸಾರಃ ಖೋಲಗಂಧರಸ ಪ್ರಾಣ ಪಿಂಡಗೋಸ ರಸಾಃ ಸಮಾಃ'॥ ಎಂಬುದಾಗಿ ಅಮರಕೋಶದ ನುಡಿ

ಇದೆ. ಬೋಲ (ಮಜ್ಜನ), ಬಲ, ಸಾಂದ್ರ, ದೇಹಾಗಾರ, ದೇಹಸಾರ, ಖರ್ಜೂರ, ಗೋಲ, ಕವಲ, ವೃಂದ, ಜಪಾಪುಷ್ಪ (ದಾಸಿವಾಳ), ಲೋಹ, ತೀಕ್ಷ್ಣ, ಪ್ರಾಣರಸ ಮುಂತಾದ ಅರ್ಥಗಳು 'ಪಿಂಡ' ಪದಕ್ಕಿವೆ. ಆದರೆ ಶಿವಾದ್ವೈತ ಸಿದ್ಧಾಂತದಲ್ಲಿ ಇವೆಲ್ಲಕ್ಕಿಂತಲೂ ವಿಶಿಷ್ಟವಾದ ವಿಶುದ್ಧವಾದ ಇದರದೇ ಆದ ಒಂದು ಉನ್ನತಾರ್ಥವಿದೆ:

'ಬಹುಜನ್ಮ ಕೃತೈಃ ಪುಣ್ಯೈಃ ಪ್ರಕ್ಷೀಣೇ ಪಾಪಪಂಜರೇ।
ಶುದ್ಧಾಂತಃಕರಣೋ ದೇಹೀ ಪಿಂಡಶಬ್ದೇನ ಗೀಯತೇ !॥

—ಸಿ. ಶಿಖಾಮಣಿ.

ಬರೀ ಅನ್ನಮಯಕೋಶ (ದೇಹ) ವೊಂದು ರೂಪುಗೊಳ್ಳುವುದೇ ಪಿಂಡ ಪದಾರ್ಥವಲ್ಲ. ಕ್ರಿಮಿಕೀಟಪತಂಗಾದಿ ಬಹು ಜನ್ಮ ಗಳನ್ನು ಬಾಹ್ಯದಲ್ಲಿ ಕಳೆದು ನಿಸರ್ಗಸಂಸ್ಕಾರಬಲದಿಂದ ಮಾನವ ಶರೀರವು ರೂಪಗೊಂಡಂತೆ; ಮಾನವತೆಯ ಬಹು ಜನ್ಮಗಳಲ್ಲಿ ಸಂಪಾದಿತವಾದ ಪುಣ್ಯಪುಂಜದಿಂದ ಅಂತಃಕರಣಗಳೂ ಶುದ್ಧಗೊಂಡಿರಬೇಕು. 'ಶದ್ಧಾಂತಃಕರಣೋದೇಹೀ' ಎಂಬ ವಾಕ್ಯದಿಂದ ಅಂತರಂಗ ಬಹಿರಂಗವೆರಡೂ ಪ್ರಯುಕ್ತವಾಗಿ ಪ್ರಬೋಧವಾಗಿವೆ. ದೇಹೀ ಪದ ಇದನ್ನು ಚೆನ್ನಾಗಿ ಬೋಧಿಸಿದೆ. 'ಶುದ್ಧಾಂತಕರಣ' ವಿಶೇಷಣವು ಮಾನವನ ಅಂತರಂಗ ವಿಶುದ್ಧಿಗೆ ಪ್ರಾಶಸ್ತ್ಯವನ್ನಿತ್ತಿದೆ. ಬಹಿರಂಗ ಸಂಪೂರ್ಣವಾಗಿ ಸುಂದರವಾಗಿರಬಹುದು. ಇಷ್ಟಾದರೆ ಸಾಲದು. ಮರ ಮನೋಹರವಾಗಿದ್ದು ಹಣ್ಣು ಹುಳಿಯಾಗಿದ್ದರೆ ಫಲವೇನು ? ಅದರಿಂದ ಎಳೆಯ ಸಸಿಯಲ್ಲಿ ಕಸಿಯಾಗಬೇಕು. ಹಣ್ಣಿನ ಹುಳಿತನ ಅಳಿದಿರಬೇಕು. ಅಂತರಂಗ ಶುದ್ಧಿಯೇ ಆತ್ಮಶುದ್ಧಿ; ಅತ್ಯಂತಿಕ ಶುದ್ಧಿ. ಶುದ್ಧಾತ್ಮನಾದಾಗಲೇ ಪಿಂಡತ್ವ ಪ್ರಾಪ್ತಿ. ಆ ಶುದ್ಧತ್ವವು ಆದಿಯಿಂದಲೇ ಬರಬೇಕು. ಅಂತಃಕರಣದಲ್ಲಿಯೇ ಅಗಬೇಕು. ಅಂತರಂಗ ಶುದ್ಧವಾದರೆ ಬಹಿರಂಗ ಶುದ್ಧವಾಗುವುದೊಂದು ಹೆಚ್ಚಲ್ಲ; ಹೆಚ್ಚು ಶ್ರಮಿಸಬೇಕಿಲ್ಲ. ಆಂತರಿಕ ಪಾತ್ರತೆಯಿಲ್ಲದ ಬಹಿರಂಗ ಫಾತ್ರತೆ ಪ್ರಯೋಜನಕ್ಕೆ ಬಾರದು. ನಾಟಕವೊಂದರಲ್ಲಿ ಪಾತ್ರವಹಿಸುವಾತನು ರಂಗಭೂಮಿಗೆ ಬಾರದ ಮೊದಲು ಪ್ರತ್ಯೇಕ ಗೃಹದಲ್ಲಿ ಬಣ್ಣಬಳಿದು ಉಡುಗೆ ಉಟ್ಟು ಸಜ್ಜಾಗುತ್ತಾನೆ. ಈ ಬಹಿರಂಗ ಪಾತ್ರತೆಗಿಂತ ಮುಮ್ಮೊದಲು ಅಂತರಂಗದಲ್ಲಿ ರಸಭಾವಗಳನ್ನು ಅಭಿವ್ಯಕ್ತ

ಗೊಳಿಸಲು ತಕ್ಕ ಅನುಭವರೂಪ ಭಾವಪಾತ್ರವನ್ನು ಅಳವಡಿಸಿಕೊಂಡಿರುತ್ತಾನೆ. ಮೊದಲು ಭಾವರಂಗದಲ್ಲಿ ಆಮೇಲೆ ಭವನವೊಂದರಲ್ಲಿ ಬಳಿಕ ಬಹಿರಂಗದಲ್ಲಿ ಪಾತ್ರ ಸಜ್ಜತೆಯಾಗುವುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಇದರಂತೆ ಮಾನವ ಜೀವನ ನಾಟಕದಲ್ಲಿ ಅಕೃತ್ರಿಮವಾದ ಆತ್ಮೀಯವಾದ ಪಾತ್ರವು ತಯಾರಾಗಬೇಕಾದರೆ ತಯಾರಾಗಿ ಬಹಿರಂಗಕ್ಕೆ ಬರಬೇಕಾದರೆ ಮೊದಲು ಮಾತೃಗರ್ಭದಲ್ಲಿ ದೈಹಿಕ ಪಾತ್ರರೂಪಗೊಳ್ಳಬೇಕು. ರೂಪುಗೊಂಡ ಆ ದೈಹಿಕ ಪಾತ್ರದೊಳಗಿನ ಕರಣಗಳು ಪರಿಶುದ್ಧವಾಗಬೇಕು. ಇದರಿಂದಾಗಿ ಎಂಟನೆಯ ತಿಂಗಳಲ್ಲಿ ಗರ್ಭಸಂಸ್ಕಾರವು ವೀರಶೈವರಲ್ಲಿ ನಿರ್ದಿಷ್ಟವಾಗಿದೆ. ಇದು ಆದಿ ಸಂಸ್ಕಾರ. ವಿಜ್ಞಾನಪೂರ್ಣ ಸಂಸ್ಕಾರ. ಪೂರ್ವಸಂಸ್ಕಾರಗಳು ಪೂರ್ಣವಾಗಿ ಮಾರ್ಪಡಬೇಕಾದರೆ ಆ ಆರಂಭ ಸಂಸ್ಕಾರವೇ ಉಚಿತ. ಬಹಿರಂಗ ವೇಷವನ್ನು ಧರಿಸಿ ರಂಗಸ್ಥಳಕ್ಕೆ ಬಂದು ನಿಂತ ಬಳಿಕ ರಸಭಾವಗಳ ಅಭ್ಯಾಸ ಮಾಡ ಹೊರಟರೆ ಸಾಧ್ಯವೆ ? ಸಾಧುವೆ? ಈ ಕೃತಕ ಪಾತ್ರದಲ್ಲಿಯೇ ಮೊದಲು ಆಂತರಿಕವಾಗಿ ಪಾತ್ರರೂಪಿತವಾಗಬೇಕೆಂದಿರುವಾಗ ಆ ಅಕೃತ್ರಿಮ ಸ್ವಂತ ಜೀವನ ನಾಟಕ ಪಾತ್ರವು ಪರಿಪೂರ್ಣ ಪರಿಶುದ್ಧವಾಗಬೇಕಾದರೆ ಶುದ್ಧಾಂತಃ ಕರಣಗಳಿಂದ ಶುದ್ಧಾತ್ಮನಾಗಬೇಕು.

ಅನ್ನ ಸಂಸ್ಕಾರದಿಂದಾಗುವುದು ಮಾನವ ದೇಹ. ಪುಣ್ಯ ಸಂಸ್ಕಾರ ದಿಂದಾಗುವುದು ಮಂಗಳ ಮನೋಭೂಮಿಯುಳ್ಳ ದೇಹೀ. ಮಾನವ ದೇಹ ಬರಬೇಕಾದರೆ ಹೀನವಾದ ಆಹಾರಗಳನ್ನು ಉಳಿದು, ಹಸನಾದ ಆಹಾರ ಸ್ವೀಕಾರ ಸಂಸ್ಕಾರ ಅಗತ್ಯ. ವಿಷಯ ಪಂಚಕಗಳನ್ನು ಭೋಗಿಸುವ ವಿಶುದ್ಧ ಪಂಚೇಂದ್ರಿಯಗಳು ಪೂರ್ಣ ರೂಪಗೊಳ್ಳಬೇಕಾದರೆ ಕ್ರಿಮಿಕೀಟಾದಿ ಜನ್ಮ ಗಳಿಂದ ಪರಿವರ್ತನಗೊಳ್ಳಲೇಬೇಕು. ನಿದರ್ಶನಕ್ಕಾಗಿ ವಾಗಿಂದ್ರಿಯವು ಪೂರ್ಣಗೊಳ್ಳಬೇಕಾದರೆ ಅದಕ್ಕೆ ತಕ್ಕ ಆಹಾರ ರಸವೇ ಬೇಕು. ಇದರಂತೆ ಶುದ್ಧಾಂತಃಕರಣನಾಗಬೇಕಾದರೆ ಶುದ್ಧ ಅಂದರೆ ಪುಣ್ಯಸಂಸ್ಕಾರ ಬೇಕು.

ಸಂಸ್ಕಾರ ಅನಾದಿ. ಅದು ಮೊಳೆತ ಬಳಿಕ ಅದನ್ನು ಮುರಿಯುವುದು ಅಸಾಧ್ಯ. ಮೊಳೆಯುದ ಮೊದಲು ಅದನ್ನು ಅಳಿಸಬೇಕು. ಪುಣ್ಯ ಸಂಸ್ಕಾರದಿಂದ ಪೂರ್ವಸಂಸ್ಕಾರ ನಿವೃತ್ತಿಯಾಗುತ್ತದೆ. ಸಂಸ್ಕಾರ ಜೀವನಕ್ಕೆ ಅನಿವಾರ್ಯ. ಪ್ರಾಕೃತಿಕವಾಗಿ ಬಂದ ಸಂಸ್ಕಾರಗಳ ಸ್ಥಾನದಲ್ಲಿ ಪಾರಮಾರ್ಥಿಕ

ಸುಸ್ಕಾರಗಳನ್ನು ತುಂಬುವ ಸತ್ಯ ಸಾಹಸವೇ ಗರ್ಭಾಷ್ಟಮ ಸಂಸ್ಕಾರ ಧ್ಯೇಯ.

ಪೂರ್ವ ಸಂಸ್ಕಾರಗಳಿಂದ ಪಾಪ ಪಂಜರ ಬೆಳೆದಿರುತ್ತದೆ. ಪಾಪವೆಂದರೆ ದೋಷ, ದುಷ್ಕೃತ ದೂಷಿತ ಸಂಸ್ಕಾರ. ಅದೊಂದು ಆತ್ಮನಿಗೆ ಪಂಜರ. ಬಂಧನ ಸಾಧನ. ಅದರಿಂದ ಆತ್ಮ ಸ್ವಾತಂತ್ರ್ಯ ಸಂಹರಣ. ಪ್ರಕೃತಿ ದೇಹ ಬಂಧನಕ್ಕಿಂತ ಪಾಪ ಬಂಧನ ಬಲವಾದುದು; ಬಲು ಕೇಡಿನದು. ದೇಹ ದೂಷಿತವಾಗಲು ಪಾಪವೇ ಕಾರಣ. ಅಂತೆಯೇ ಅಂತಃಕರಣ ದೂಷಿತ ವಾಗಲು ಅದುವೇ ಕಾರಣ. ಕಾಯಕರಣಗಳು ಶುದ್ಧವಾಗಿ ರೂಪುಗೊಳ್ಳ ಬೇಕಾದರೆ ಪುಣ್ಯರಾಶಿಯಿಂದ ಮಾತ್ರ ಸಾಧ್ಯ. ಪುಣ್ಯವೆಂದರೆ ಸುಕೃತ, ಧರ್ಮ, ಸೌಂದರ್ಯವೆಂದು ಅರ್ಥಗಳಿರುತ್ತವೆ. 'ಪುಣ್ಯಂತು ಸುಂದರೇ ಸುಕೃತೇ ಪಾವನೇ ಧರ್ಮೇ।' ಎಂತಲೂ 'ಸ್ಯಾದ್ಧರ್ಮಮಸ್ತ್ರಿಯಾಂ ಪುಣ್ಯ ಶ್ರೇಯಸೀ ಸುಕೃತಂ ವೃಷಃ। ಎಂಬುದಾಗಿಯೂ ಕೋಶಗಳು ಅರ್ಥಗಳನ್ನು ಸೂಚಿಸಿವೆ. ಶುದ್ಧ ಶ್ರೇಷ್ಠ ಧರ್ಮವೇ ಅಂದರೆ ಶ್ರೇಯಸ್ಕರ ಸುಕೃತವೇ ಪುಣ್ಯ. ಆ ಪುಣ್ಯವು ಪಾಪವನ್ನು ಪರಿಹರಿಸುತ್ತದೆ. ಅಂತಃಕರಣವನ್ನು ಶುದ್ಧವಿಸುತ್ತದೆ. ದೇಹಾತ್ಮ ರನ್ನು ರಕ್ಷಿಸುತ್ತದೆ. ಕರ್ಮ, ಜನ್ಮ ಮುಂತಾದ ಬಂಧನಗಳನ್ನು ಬಿಡಿಸುತ್ತದೆ. ಆಗ ದೇಹಿಯು 'ಪಿಂಡ'ನೆನಿಸುತ್ತಾನೆ.

ದೇಹವುಳ್ಳವನಾಗಿ 'ದೇಹೀ' ಎನಿಸಿದಾನೆ ಪಿಂಡನು. ಸಂಸ್ಕೃತದ ದಿಹ ಧಾತುವಿನಿಂದ ದೇಹವಾಗಿದೆ. 'ದಿಹ' ವೆಂದರೆ ಉಪಚಯ ಅಥವಾ ಸಂಚಯ. ಪಂಚಭೂತ ಸಂಚಯವೇ ದೇಹ. ವಿಗ್ರಹವಾಗುವ ಸಾಹಿತ್ಯ ಸಾಮಗ್ರಿಯೇ ದೇಹ; ಅದುಳ್ಳವನೇ ದೇಹೀ. "ದಿಹ್ಯತೇ ದೇಹಃ" ದೇಹವುಳ್ಳವನೇ ದೇಹೀ. ದೇಹಿಯೇ ಪಿಂಡ. ಪಿಂಡವು ಅಕ್ಷರವಾಗಿ ಆ ಅಕ್ಷರದ ಧ್ವನಿ (ನಾದ) ಆಗಿ ಸ್ತುತ್ಯವಾಗಿದೆ. ಭಾಂಡ (ಘಟ) ಕಾರ್ಯವಾಗುವ ಮೊದಲಿರುವ ಮೃತ್ಪಿಂಡದ ನೆನಹನ್ನು ತರುತ್ತದೆ. ನಾದ ಬಿಂದು ಕಳೋದಯವನ್ನು ಸೂಚಿಸುತ್ತದೆ.

ಪಿಂಡ ಶಬ್ದಕ್ಕೆ ಶರೀರಸ್ಥ ಅಥವಾ ಶರೀರೀ ಎಂಬ ಸಂಜ್ಞೆಯಿದೆ. ಪರ ಮತ್ತು ಗೂಢವಾದ ಆ ವಸ್ತುವು ಶರೀರಕ್ಕೆ ಬಂದು ನೆಲಸಿ ಪಿಂಡವೆನಿಸುತ್ತದೆ. ದೇಹೀ ಎನಿಸುತ್ತದೆ. ಪಿಂಡ ಪದವು ದೇಹೀ ಎಂಬುದರ ಸಂಕೇತಸೂಚಕ;

ಪವಿತ್ರಸೂಚಕ. ಲಿಂಗಕ್ಷೇತ್ರನೆಂಬ ಸಂಜ್ಞೆಯುಳ್ಳದೇ ಪಿಂಡ. ಪುಣ್ಯ ಆಚಾರ ವಿಚಾರಗಳಿಗೆ ಸುಸಿದ್ಧವಾದ ಪ್ರಥಮಾವಸ್ಥೆ. ಶುದ್ಧಕಾಯಕರಣೇಂದ್ರಿಯಾತ್ಮಗಳ ಗುಂಪು. ಸ್ಥೂಲ ಮೂವತ್ತಾರು ತತ್ತ್ವಗಳನ್ನೊಳಗೊಂಡುದು ಬ್ರಹ್ಮಾಂಡ. ಸೂಕ್ಷ್ಮ ಮೂವತ್ತಾರು ತತ್ತ್ವಗಳುಳ್ಳುದು ಪಿಂಡಾಂಡ. ಗರ್ಭದ ಎಂಟನೆಯ ತಿಂಗಳಿನಿಂದ ಎಂಟು ವರುಷದ ಬಾಲಕನವರೆವಿಗೂ ಇರುವ ಅವಸ್ಥೆಗೆ ಪಿಂಡ ಎಂದು ಹೇಳಬಹುದಾಗಿದೆ.

ಬ್ರಹ್ಮಾಂಡದ ಸೂಕ್ಷ್ಮಾಂಶವೇ ಪಿಂಡಾಂಡ. ಆದರೂ ಪಿಂಡಾಂಡವು ವಿಶಿಷ್ಟವಾಗಿದೆ. ಇದಕ್ಕೆ ಕಾರಣವು ಈ ಮುಂದಿನ ಮಂತ್ರದಲ್ಲಿ ಉಕ್ತವಾಗಿದೆ:

"ಶಿವ ಶಕ್ತಿ ಸಮುತ್ಪನ್ನೇ ಪ್ರಪಂಚೇಽ ಸ್ಮಿನ್ ವಿಶಿಷ್ಯತೇ"
ಪುಣ್ಯಾಧಿಕಃ ಕ್ಷೀಣಪಾಪಃ ಶುದ್ಧಾತ್ಮಾ ಪಿಂಡನಾಮಕಃ |

—ಸಿ. ಶಿಖಾಮಣಿ

ಶಿವಶಕ್ತಿಯರಿಂದ ಉತ್ಪನ್ನವಾಗಿದೆ ಬ್ರಹ್ಮಾಂಡ. ಆದರೆ ಸ್ಥೂಲವಾಗಿದೆ; ಜಡವಾಗಿದೆ. ಅದೇ ಶಿವಶಕ್ತಿಯರಿಂದ ಉತ್ಪನ್ನವಾದ ಈ ಪಿಂಡಾಂಡವು ಸೂಕ್ಷ್ಮವಾಗಿದ್ದು ಅಜಡವಾಗಿದೆ; ಅತ್ಯಂತ ಶುದ್ಧವಾಗಿದೆ. ಸಾಲದ್ದಕ್ಕೆ ಸ್ಥೂಲ ಬ್ರಹ್ಮಾಂಡವನ್ನೂ ಒಳಗೊಂಡಿದೆ. ಸುಕೃತರೂಪ ಧರ್ಮಾಚರಣೆಗೆ ಸಮರ್ಥವಾಗಿದೆ.

ಶಿವನು ಜ್ಞಾನಚೈತನ್ಯ ; ಶಕ್ತಿಯು ಕ್ರಿಯಾಧರ್ಮಿಣಿ. ಶಿವ ಪ್ರಕಾಶಾತ್ಮಕ; ಶಕ್ತಿ ವಿಮರ್ಶಾತ್ಮಕ. ಶಿವ ತಂದೆ; ಶಕ್ತಿ ತಾಯಿ. ಆದರೂ ಬೇರಲ್ಲ. ವಾಗರ್ಥಾವಿವಸಂಪೃಕ್ತೌ ಜಗತಃ ಪಿತರೌ ಪಾರ್ವತೀ ಪರಮೇಶ್ವರೌ ಎಂಬೀ ಕಾಳಿದಾಸ ಕವಿಯ ಉಕ್ತಿಯು ಪ್ರಪಂಚ ಶಿವಶಕ್ತಿ ಸಮುತ್ಪನ್ನವೆಂಬುದನ್ನು ಸಮರ್ಥಿಸಿದೆಯಲ್ಲದೆ ಶಬ್ದಾರ್ಥಗಳಂತೆ ಅವರಿಬ್ಬರು ಒಂದೇ ಆಗಿದ್ದಾರೆಂದು ಸಾರಿದೆ. ಶಬ್ದ ಪಾರ್ವತೀ ಶಕ್ತಿ. ಅರ್ಥ ಶಿವಚೈತನ್ಯ "ಶಿವ ಶಕ್ತ್ಯಾತ್ಮಕಂ ಜಗತ್" ಎಂದು ಪಾರಮೇಶ್ವರ ತಂತ್ರ ೨ನೆಯ ಪಟಲದಲ್ಲಿ ಹೇಳಿದೆ.

ಅಂತಹ ಶಿವಶಕ್ತಿ ಸಮುತ್ಪನ್ನವಾದುದು ಸಂವಿತ್ಕಲೆ ಮತ್ತು ಸಮಸ್ತ ಬ್ರಹ್ಮಾಂಡ. ಈ ಬ್ರಹ್ಮಾಂಡದ ಸೂಕ್ಷ್ಮಾಂಶವೇ ಪಿಂಡಾಂಡ. ಈ ಪಿಂಡಾಂಡವು

ಪುಣ್ಯಾಧಿಕ್ಯದಿಂದ ಪಾಪಕ್ಷಯವಾಗಿ ಶುದ್ಧಾತ್ಮನಾಗಿ ಪಿಂಡನೆನಿಸಿ ಪ್ರಪಂಚಕ್ಕಿಂತ ವಿಶಿಷ್ಟನೆನಿಸಿದ್ದಾನೆ.

ಪಾಪದಿಂದ ಸ್ಥಾವರತ್ವ. ಪಾಪ-ಪುಣ್ಯವೆರಡರಿಂದ ಮಾನವತ್ವ. ಪೂರ್ಣ ಪುಣ್ಯದಿಂದ ಮಹಾದೇವತ್ವ; ಅಥವಾ ಮಹಾನುಭಾವತ್ವ. ಆದ್ದರಿಂದ ಪುಣ್ಯಾಧಿಕನಾಗಬೇಕು. ಪುಣ್ಯಾತ್ಮರ ಗರ್ಭದಿಂದ ಉದಯವಾಗಬೇಕು. ಪುಣ್ಯ ಸಂಸ್ಕಾರ ಸಂಚಯವಾಗಬೇಕು.

ಪುಣ್ಯಾತ್ಮರ ಗರ್ಭದಲ್ಲಿ ಪಿಂಡೋದಯವಾದರೂ ಸೂಕ್ಷ್ಮಮಲ ಮಿಶ್ರಣ ವಿದ್ದೇ ಇರುತ್ತದೆ. ತಂದೆ ತಾಯಿಗಳ ಕಾರ್ಮಿಕಾದಿ ಮಲತ್ರಯ ಸಂದಣಿಯಿಂದ ಮಂದವಾಗಿರುತ್ತದೆ, ಮಲಿನವಾಗಿರುತ್ತದೆ; ಮೂಲಪರಮಾರ್ಥಕ್ಕೆ ಮರೆಯಾಗಿರುತ್ತದೆ. ಮಾತೃಗರ್ಭದ ಪ್ರಕೃತಿಯೇ ಅಂತಹದು; ಅಂತೆ ಅದು ರೂಪಿಸುತ್ತದೆ.

'ಮಲವೆರಡವು ಬೆರೆದೊಂದು ದಿನಕ್ಕೆ। ಕಲಲಂ ಬುದ್ಬುದವೈದು ದಿನಕ್ಕೆ।
ಪತ್ತು ದಿನಕ್ಕೆ ಕಂದಾಕೃತಿಯದಕ್ಕೆ ಮತ್ತೆಯು ದಿನದಶಪಂಚಕ
ಬಲಿಕೆ।
ತಲೆ ತೋಳ್ತೊಡೆ ಸರ್ವಾಂಗ ತತಿಗಳು। ಬೆಳೆದವು ಚೌಮಾಸಾಂತ
ಗತಿಯೊಳು।
ನವಿರಕುಳಿಗಳೆಲುಗಳು ಚಲನೆಗಳು। ನವನಿಪುವೈದಾರೇಳ್ಮಾಸದೊಳು।
ಪೂರ್ವಸ್ಮರಣಂ ಜನಿತಾಯಾಸ। ಸಾರ್ವಮದೆಂಟು ನವಕ್ರಮಮಾಸ।
ಸೂತಿಮರುತನಿಂದದು ಜನಿಯಿಕ್ಕು। ಈ ತೆರದಿಂ ಪಿಂಡೋದಯವಕ್ಕು।

—ಪರಮಾರ್ಥಗೀತೆ.

'ಜನನಿಯ ಜರಾಯುವಿನೊಳಗೊಂಡಿರ್ದ ರೇತೋರುಧಿರಂಗಳು,
ದಿನ ದಿನಕೊಂದು ಬಗೆಯಾಗಿ; ದಿನವಯ್ದಕೆ ನೀರ್ಗುಳ್ಳೆ ಬುಳಿಕೆ
ಯಂತಾಗಿ;
ದಿನವೇಳಕೆ ನೊರೆಯಂತಾಗಿ, ದಿನದಶಕಕೆ ಪಿಂಡದಾಕಾರವಾಗಿ;
ದಿನಪಂಚದಶಕಕೆ ದಂಡಾಕೃತಿಯೆನಿಪುದಯ್ಯ
ಶ್ರೀ ನಿಡುಮಾಮಿಡಿ ಶ್ರೀಗಿರಿಸೂರ್ಯ ಸಿಂಹಾಸನಾಧೀಶ್ವರ!

ಬಳಿಕೊಂದು ತಿಂಗಳಿಗೆ ತಲೆ ತೋರುವುದು
ಮೇಲೆರಡು ತಿಂಗಳಿಗೆ ತೋಳುಗಳೆರಡು ತೋರುವವು.
ಮೂರು ತಿಂಗಳಿಗೆ ಒಡಲು ತಾನಹುದು ನಾಲ್ಕು ತಿಂಗಳಿಗೆ
ಪಾದಾದಿಸರ್ವಾಂಗವಪ್ಪುದು
ತಿಂಗಳೈದಕ್ಕೆ ರೋಮಾಳಿಯುದಿಸುವುದು.
ತಿಂಗಳಾರಕ್ಕೆಮೂಳೆಗಳು ಮೂರಾಡುವವು.
ತಿಂಗಳೇಳಕ್ಕೆ ಪ್ರಾಣಾದಿ ಜೀವಕಳೆಯೊದಗುವುದು.
ತಿಂಗಳೆಂಟಕ್ಕೆ ಕದಲುತ್ತ ಅಳಲುತ್ತ ತಾನಿಪ್ಪುದು.
ತಿಂಗಳೊಂಬತ್ತಾಗೆ ತ್ರಿಕಾಲಜ್ಞಾನವಾಗಿ ತಿರೆಗೈತರ್ಪುದಯ್ಯ
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ.

—ವಚನವಲ್ಲರಿ, (ಭಾಗ–೧)

ಇದು ಪ್ರಕೃತಿ ಜನ್ಯ ಪಿಂಡೋದಯದ ರೀತಿ; ಪ್ರಾಕೃತಿಕಸ್ಥಿತಿ. ಪರಮಾರ್ಥ ವಿಸ್ಮೃತಿ. ಎಂಟನೆಯ ತಿಂಗಳಲ್ಲಿರುವ ಶಿಶುವಿಗೆ ಪೂರ್ವಜನ್ಮದ ಸಂಸ್ಕಾರ ಸ್ಮರಣೆಯುಂಟಾಗುತ್ತದೆ. ಪ್ರಸ್ತುತ ಪರಿಸ್ಥಿತಿಗೆ ಪರಿತಪಿಸುತ್ತದೆ. ಶಾರೀರಕ ಮತ್ತು ಹೇಯ ಸಾಂಸ್ಕಾರಿಕರೂಪ ಪಾಪ ಪಂಜರದಲ್ಲಿ ಬಂಧಿತವಾಗಿರುತ್ತದೆ. ಮಾತೃಗರ್ಭದ ಮಲಮೂತ್ರವಾಸನೆ ಮಗುವಿನ ಮಾನಸಿಕ ಪೂರ್ವಕರ್ಮವಾಸನೆ ಎರಡರಿಂದ ಮಗು ಪರಿತಪಿಸುತ್ತದೆ. ಪಂಜರದಿಂದ ಪಾರಾಗಬೇಕೆಂದೆನಿಸುತ್ತದೆ. ಆಗ ಶ್ರೀ ಗುರುವಿನಿಂದ ಸತ್ಯಸಂಸ್ಕಾರ ಅತ್ಯಗತ್ಯ. ದೇಹಜೀವಗಳ ಬೆಸುಗೆಯಾದಂತೆ ಜೀವದೇವರ ಬೆಸುಗೆಯನ್ನುಮಾಡಿ ಕಳಾಪೂರ್ಣಪಿಂಡವನ್ನಾಗಿಸುವುದೆ ಸಂಸ್ಕಾರ ಹೃದಯ. ಕವಿ ಅರ್ಥವನ್ನು ಅನುಭವವನ್ನು ಶಬ್ದದಲ್ಲಿ ಕಾವ್ಯದಲ್ಲಿ ತುಂಬುವಂತೆ ಗುರು ಪಿಂಡದಲ್ಲಿ ಪುಣ್ಯವನ್ನು ತುಂಬುತ್ತಾನೆ. ಆ ಪಿಂಡಕ್ಕೆ ಲಿಂಗಧಾರಣವೆಂದರೆ ಧರ್ಮಧಾರಣವೆಂದರ್ಥ. ಅಂತಹ ಸಂಸ್ಕಾರವನ್ನು ಪಡೆದ ಪಿಂಡ ಅದೊಂದು ಪರಮಾರ್ಥ ಪಿಂಡ. ಅದನ್ನು ರಕ್ಷಿಸಲು ತಾಯಿಗೆ ಗುರು ಆದೇಶಪೀಯುತ್ತಾನೆ. ಆ ಸಂಸ್ಕಾರದಿಂದಾಗಿ ಮುಂದೆ ತಾಯಿ ಧಾರ್ಮಿಕಳಾಗಿ ಭಾಕ್ತಿಕಳಾಗಿ ಬಾಳುತ್ತಾಳೆ. ಸತ್ ಶ್ರವಣ, ಸತ್ ಸೇವೆಯಲ್ಲಿರುತ್ತಾಳೆ. ಶಿವಪೂಜೆ, ಶಿವಧ್ಯಾನಗಳಲ್ಲಿ ನಿರತಳಾಗಿರುತ್ತಾಳೆ.

ಶಿವಪ್ರಸಾದವನ್ನೇ ಸ್ವೀಕರಿಸುತ್ತಾಳೆ. ದಿನ ತುಂಬಿದ ಬಳಿಕ ಸತ್ ಶಿಶುವಿಗೆ ಜನ್ಮವೀಯುತ್ತಾಳೆ.

"ಪ್ರಕೃತಿಪುರುಷರ ಸಮರಸದಿಂದ ಸಂದ
ಬಿಂದು ಬಿನ್ನಾಣದೊಳಗಂದವಿಟ್ಟಹ
ಕಳಾನಂದೋದಯವೇ ಪಿಂಡ ಕಂಡಯ್ಯ.
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ,
ನೂರೊಂದರೊಳಗಣ ಮೊದಲಿನ ಒಂದಿದು ಪಿಂಡವಯ್ಯ.

ದೇಹ—ಜೀವರ ಬೆಸುಗೆಯೆ ಸಾಮಾನ್ಯ ಪಿಂಡ.
ಜೀವ— ದೇವರ ಬೆಸುಗೆಯಾಂತ ದೇಹವೇ ವಿಶೇಷ ಪಿಂಡ.
ಅಂಗದೊಳಗೆ ಲಿಂಗ, ಲಿಂಗದೊಳಗೆ ಅಂಗ ಸಂಗಿಸಿ
ಹಾಸುಹೊಕ್ಕಾಗಿಪ್ಪುದೇ ಪರಮಪಿಂಡನೋಡಾ.
ಶ್ರೀ ನಿಡುಮಾಮಿಡಿ ಶ್ರೀ ಗಿರಿ ಸೂರ್ಯಸಿಂಹಾಸನಾಧೀಶ್ವರ!

— ವಚನವಲ್ಲರಿ, (ಭಾಗ—೧)

ಈ ಎರಡು ವಚನಗಳಿಂದ 'ಪಿಂಡ' ವಿಶೇಷಾರ್ಥ ವಿಶದವಾಗುತ್ತದೆ. ಪಿಂಡಗತವಸ್ತುವಿನ ನಿರ್ದೇಶವಾಗುತ್ತದೆ. ದೇವ, ಜೀವ, ದೇಹ–ಈ ಮೂರರ ಸಮೀಕರಣ ಗೋಲವೇ ಪಿಂಡವೆಂಬುದು ಮನವರಿಕೆಯಾಗುತ್ತದೆ. ಧರ್ಮ ಬೆಳೆದು ಅಧರ್ಮವಳಿದು ಹೋಗಬೇಕೆಂದು ಹಂಬಲಿಸುವ ಹೊಚ್ಚಹೊಸ ಸಾಧಕನೆಂಬುದು ಅರಿಕೆಯಾಗುತ್ತದೆ. ಅನೇಕತ್ವವನ್ನು ಗರ್ಭೀಕರಿಸಿಕೊಂಡ ಏಕವಸ್ತುವೆಂಬುದು ಮತ್ತು ಏಕವಾಗಿ 'ಶಿವ' ಎನಿಸಿಕೊಂಡುದೇ ಅನೇಕವಾಗಿ 'ಜೀವ' ಎನಿಸಿಕೊಳ್ಳುವುದೆಂಬುದು ಅನುಭವಕ್ಕೆ ಬರುತ್ತದೆ.

— ನಿಷ್ಕಲಲಿಂಗ ನಿರೂಪಣ —

"ಏಕ ಏವ ಶಿವಃ ಸಾಕ್ಷಾಚ್ಚಿದಾನಂದಮಯೋ ವಿಭುಃ
ನಿರ್ವಿಕಲ್ಪೋ ನಿರಾಕಾರೋ ನಿರ್ಗುಣೋ ನಿಷ್ಪ್ರಪಂಚಕಃ।'

ಅದ್ವಯನಾದ ಆ ಶಿವನು ಮಂಗಲಮಯನು, ಕಲ್ಯಾಣಕರನು. ಪ್ರತ್ಯಕ್ಷ ಚಿನ್ಮಯನು; ಆನಂದ ಸ್ವರೂಪನು. ಪರಿಪೂರ್ಣನು; ಸರ್ವವ್ಯಾಪಕನು. **ವಿಕಲ್ಪ**

ರಹಿತನು; ಸರ್ವಸ್ವರೂಪನು. ಪರಿಪೂರ್ಣನು; ಸರ್ವವ್ಯಾಪಕನು. ವಿಕಲ್ಪ ರಹಿತನು; ಆಕಾರವಿಲ್ಲದಾತನು. ಆಕಾರ ಮೂಲನು. ತ್ರಿಗುಣಾತೀತನು. ಹೊದ್ದಿಯೂ ಹೊದ್ದದ ಪ್ರಪಂಚವುಳ್ಳವನು.

ಜೀವ (ಪಿಂಡ)ನಿಗೆ ಮೂಲವಾದ ಆ ಪರವಸ್ತುವಿನ ನಿರ್ದೇಶವನ್ನಿಲ್ಲಿ ವಿಧಿಲಕ್ಷಣ, ನಿಷೇಧಲಕ್ಷಣಗಳಿಂದ ಜಗದ್ಗುರು ರೇಣುಕರು ನಿರೂಪಿಸಿದ್ದಾರೆ. ಇದು ನಿಗಮಾಗಮಗಳ ಸಾರವಾಗಿದೆ. ನಿಜಾನುಭವದ ಸಾರಾಯಸಿರಿಯಾಗಿದೆ. ಮೂಲ ವಸ್ತುವಿನ ಈ ಸೆನಿಕೆಯಿಂದ ಪಿಂಡನಿಗೆ ಒಂದು ಬಗೆಯಲ್ಲಿ ನಿಜಸ್ವರೂಪದ ಅರಿವುಂಟಾಗುತ್ತದೆ. ಅದರಂತಾಗಲು ಹವಣಿಸಬೇಕಾಗುತ್ತದೆ. ಆ ಹೊಲಬನ್ನು ಹುಡುಕಬೇಕಾಗುತ್ತದೆ. ಆ ಹೊಲಬಿನಲ್ಲಿ ಹೆಜ್ಜೆ ಹಾಕಲು ಅನುವಾಗುತ್ತದೆ. ಅದರಿಂದಾಗಿ ಮಂತ್ರದ ಪದಪದವನ್ನೂ ಹಿಂಜಿನೋಡೋಣ!

೧. 'ಏಕ ಏವ' ಕೇವಲನೆಂದು ಮುಖ್ಯನೆಂದು ನಿಗಮಾಗಮಗಳಲ್ಲಿ ಪರಿಗಣಿತನಾಗಿದ್ದಾನೆ. 'ಏಕಮೇವಾದ್ವಿತೀಯಂ ಬ್ರಹ್ಮ, 'ಏಕಂ ಸತ್' ಆತ ಒಬ್ಬನೇ ಒಬ್ಬನು. ಆತ ಸ್ವಗತ ಸಜಾತೀಯ ಭೇದ ಶೂನ್ಯನು. ತಾನೇ ತಾನಾದವನು. 'ಆದಿ ಅನಾದಿ ಇಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು, ಗೊಗ್ಗೇಶ್ವರ ನೀನೊಬ್ಬನೇ ಇದ್ದೆಯಲ್ಲ ಇಲ್ಲದಂತೆ !, ಎಂದಿದೆ ಪ್ರಭುವಾಣಿ. ಏಕಪದ ಬರೀ ಸಂಖ್ಯಾವಾಚಿಯಲ್ಲ. ಅದು ಕೇವಲಾರ್ಥಸೂಚಿ. ಏಕ ಏವ ಶಿವನಿಂದ ಶೂನ್ಯಕ್ಕೂ ನಿಶೂನ್ಯಕ್ಕೂ ಬೆಲೆ ಬಂದಿದೆ, ಕಳೆಕಟ್ಟಿದೆ, ನೆಲೆಯಾಗಿದೆ. ಸಮಸ್ತೋಪಾಧಿಗಳಿಂದ ನಿರಸ್ತವಾಗಿದೆ. ಆದಿ ಮಧ್ಯಾಂತರಹಿತವಾಗಿದೆ.

'ತಮಾದಿ ಮಧ್ಯಾಂತ ವಿಹೀನಮೇಕಂ' ಎಂದು ಕೈವಲ್ಯೋಪನಿಷತ್ತು, 'ಏಕೋ ದೇವಃ' ಎಂದು ಶ್ವೇತಾಶ್ವತರೋಪನಿಷತ್ತು, 'ಏಕ ಏವ ರುದ್ರೋನ ದ್ವಿತೀಯಾಯ ತಸ್ಥೇ' ಇತ್ಯಾದಿ ಶ್ರುತ್ಯುಕ್ತಿಗಳಿಂದ ಅದು ದ್ವಿತೀಯವಸ್ತು ರಹಿತವಾಗಿದೆ. 'ದೇವನೊಬ್ಬ' ಎಂದು ಬಸವಣ್ಣನವರೂ ಹೇಳಿ 'ಏಕ ಏವ' ಎಂಬುದನ್ನು ಸಮರ್ಥಿಸಿದ್ದಾರೆ. ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಅದು ಒಂದೇ ಆಗಿರುವುದರಿಂದ 'ಏಕ ಏವ' ಎಂದೆನಿಸಿದೆ.

೨. 'ಶಿವಃ-ಶೇತೇ ಅನೇನ - ಅಸ್ಮಿನ್ವಾ, ಶಿವಮಸ್ಯಾಸ್ತೀತಿ; ಶಿವಯತೀತಿ - ಶಿವಃ' ಎಂದು ಮೂಬಗೆಯಾಗಿ 'ಶಿವ' ಶಬ್ದವನ್ನು ವಿಗ್ರಹಿಸುತ್ತಾರೆ.

ಎಲ್ಲ ಕಲ್ಯಾಣಗುಣ ಪ್ರಪೂರ್ಣವಾಗಿದೆ ಆ ಅದ್ವಯ ವಸ್ತು. ಎಲ್ಲ ಕಾಲದಲ್ಲಿಯೂ ಕಲ್ಯಾಣಕಾರಕವಾಗಿದೆ. ಅಂತೆಯೇ ಅದನ್ನು 'ಶ್ವಃಶ್ರೇಯಸ'ವೆಂದು ಹೇಳುತ್ತಾರೆ. ಅದು ಸ್ವಯಂ ಶುಭಮಯವಾಗಿದೆ. ಕ್ಷೇಮಕರವಾಗಿದೆ. ಕುಶಲಮೂಲವಾಗಿದೆ. ಭವ್ಯವಾಗಿದೆ. ಭಾವುಕವಾಗಿದೆ. ಇವೆಲ್ಲ ಅರ್ಥಗಳನ್ನು ಈ ಒಂದು ಅಮರೋಕ್ತಿಯು ಕ್ರೋಢೀಕರಿಸಿದೆ :

'ಶ್ವಃ ಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಂ। ಬಾವುಕಂ ಭವಿಕಂ ಭವ್ಯಂ ಕುಶಲಂ ಕ್ಷೇಮಮಸ್ತ್ರಿಯಾಮ್॥' ಯಾವ ಬಗೆಯ ಕಾಲುಷ್ಯವಿಲ್ಲದ ವಸ್ತುವದು. ಎಲ್ಲ ಬಗೆಯ ಶ್ರೇಯಸ್ಸುಗಳಿಗೆ ತತ್ತ್ವಗಳಿಗೆ ಮೂಲವಾದ ವಸ್ತುವದು. ಶುದ್ಧವಾದವುಗಳಿಗೆಲ್ಲ ಶುದ್ಧವಾದ ವಸ್ತುವದು.

೩. 'ಸಾಕ್ಷಾಚ್ಚಿದ ನಂದಮಯಃ' 'ಸದೇವ ಸೌಮ್ಯ ಇದಮಗ್ರ ಆಸೀತ್' ಎಂಬಂತೆ ಅತೀಂದ್ರಿಯವಾದ ಅತಿಮಾನಸವಾದ ತ್ರಿಕಾಲಾತೀತವಾದ ಪರಮಸತ್ತದು, ಸಾಕ್ಷಾತ್ತದು; ಶಾಶ್ವತವದು. ಮತ್ತು ಸ್ವಯಂ ಪ್ರಕಾಶಕವಾದ ಚಿದ್ವಸ್ತುವದು; ಸಮ್ಯಜ್ಞಾನಸ್ವರೂಪವದು. 'ಪ್ರಜ್ಞಾನಂ ಬ್ರಹ್ಮ' ಎಂದಿದೆ ಐತರೇಯ. ಮೂರನೆಯದಾಗಿ ಶಾಶ್ವತಸುಖ ಸ್ವರೂಪವದು.

'ಸತ್ಯಂ ಜ್ಞಾನಮನಂತಂ ಬ್ರಹ್ಮ'–ಎಂದಿದೆ ಶ್ರುತಿ. ಕಾರಣ ಆ ಶಿವನು ಪಾರಮಾರ್ಥಿಕ ಸದ್ರೂಪನಾಗಿದ್ದಾನೆ. ಪ್ರಜ್ಞಾನಾತ್ಮಕನಾಗಿದ್ದಾನೆ. ಪರಮ ಪ್ರೇಮಾಸ್ಪದನಾಗಿದ್ದಾನೆ. 'ಆನಂದಂ ಬ್ರಹ್ಮ' 'ಆನಂದಮಯೋಽಭ್ಯಾಸಾತ್' ಎಂದು ಶ್ರುತಿ–ಬ್ರಹ್ಮಸೂತ್ರಗಳಿವೆ. ಅದು ಇರುವ ಅರಿವ ವಸ್ತು. ಆನಂದ ವಸ್ತು. ಬರೀ ಬರಡಲ್ಲ.

೪. 'ವಿಭುಃ' ಆ ಶಿವನು ಜಗದಗಲ ಮುಗಿಲಗಲ ಮಿಗೆಯಗಲನಾಗಿರುವನು. ಅಖಂಡಿತನಾಗಿರುವನು. ಅಸತ್ ಅಚಿತ್ ಅಸುಖ ಅನಿತ್ಯ ಅಪೂರ್ಣ ಖಂಡಿತ ಎಂಬೀ ಆರುದೋಷಗಳಿಂದ ದೂರಾಗಿರುವನು. ಕಾಲ ದೇಶ ವಸ್ತು ಪರಿಚ್ಛೇದ ಶೂನ್ಯನಾಗಿರುವನು. ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಇರುವನು. ಪ್ರಪಂಚದ ಪರಿಮಿತಿ ಆ ಪರಶಿವನಿಗಿಲ್ಲ. ಅತ ಅವಿರಳ. ನಿತ್ಯ, ಪರಿಪೂರ್ಣ, ಅಖಂಡ ಲಕ್ಷಣಗಳಿಂದ ಲಕ್ಷಿತನಾಗಿದಾನೆ. ಅಂತೆಯೆ ಆತ ವಿಭು.

'ಸ್ಥೂಲ ಸೂಕ್ಷ್ಮದೊಳಗೆ ಬೆಳಗುವ ಮಹಾಬೆಳಗಾಗಿ
ಹೊಳೆವ ಜ್ಞಾನಜ್ಯೋತಿ

ದಳಗಳನೆಲ್ಲವ ಮೀರಿ ನೆಳಲನುಂಗಿದ ಬಿಸಿಲಿನೊಳಗೆ
ಚಂದ್ರಮನುದಯ.
ಜಲಧಿವಳಯದ ಬೆಳಸ ಹೇಳಲಾರಳವಲ್ಲ. ಆಳು ಆಳನ ನುಂಗಿ,
ಈರೇಳುಭುವನವ ದಾಂಟಿ
ಗೊಗ್ಗೇಶ್ವರ ನಿಂದ ನಿಲವು ಹೊರಗುಒಳಗನೆ ನುಂಗಿತ್ತು.'

'ವಿಭು' ಪದಕ್ಕೆ ವ್ಯಾಪಕಾರ್ಥವಿರುವಂತೆ ಮಹಾಪ್ರಭು, ಮಹಾದೇವ ಎಂಬ ಅರ್ಥಗಳೂ ಉಂಟು. ವಿ-ಪದವು ವಿಶಿಷ್ಟತೆಯನ್ನು ಭು-ಪದವು ಸತ್ತೆಯನ್ನು ನಿರೂಪಿಸುತ್ತವೆ.

ಎಲ್ಲ ಭೂತಗಳಿಗಿಂತ ಹೆಚ್ಚು ವ್ಯಾಪಕವಾದುದು ಆಕಾಶ. ಆ ಆಕಾಶಕ್ಕಿಂತ ಹೆಚ್ಚು ವ್ಯಾಪಕವಾದುದು ಆ ನಿಷ್ಕಲ ಪರಶಿವನು. ಆದರಿಂದ ಆತನು ಪರಾಕಾಶಸ್ವರೂಪನೆಂದೆನಿಸಿದ್ದಾನೆ. ವಿಭುವೆಂದೆನಿಸಿದ್ದಾನೆ. 'ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ? ನೀನು ಬಹಿರಂಗ ವ್ಯವಹಾರ ದೂರಸ್ಥನು. ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ? ನೀನು ವಾಙ್ಮನಾತೀತನು. ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯ? ನೀನು ಮತಿಗತೀತನು. ಹೃದಯಕಮಲದಲ್ಲಿಂಬಿಟ್ಟುಕೊಂಬೆನೆ ಅಯ್ಯ? ನೀನು ಸರ್ವಾಂಗ ಪರಿಪೂರ್ಣನು! ಎಂಬುದಾಗಿ ಮಹಾದೇವಿಯು ವಿಭುತ್ವವನ್ನು ವರ್ಣಿಸಿದ್ದಾಳೆ.

೫. 'ನಿರ್ವಿಕಲ್ಪಃ' ಮನೋಧರ್ಮಗಳಾದ ಕಲ್ಪ-ವಿಕಲ್ಪ ವಿರಹಿತನು. ಸವಿಕಲ್ಪ ಮತ್ತು ಸಂಕಲ್ಪದ ಸೋಂಕಿಲ್ಲದಾತನು. ವಿಕಲ್ಪವು ಮಾನಸಕ್ರಿಯೆ. ಮನಸ್ಸಿಗೆ ಅತೀತವಾದ ವಸ್ತು ಮನದ ಪ್ರಕ್ರಿಯೆಗೆ ಮನದ ಪ್ರಯತ್ನಕ್ಕೆ ಒಳಗಾಗುವುದೆಂತು? ಅದರಲ್ಲಿಯೂ ವಿಕಲ್ಪಕ್ಕೆ ಒಳಗಾಗುವ ಮಾತು ಬಹುದೂರ ಉಳಿಯಿತು. ಕಲ್ಪಕ್ಕೆ ಸಿಕ್ಕದ ವಸ್ತು ವಿಕಲ್ಪಕ್ಕೆ ಸಿಕ್ಕುವುದೆ?

ಕಲ್ಪವೆಂದರೆ ಕಾಲ, ಕಲ್ಪವೆಂಬ ಶಾಸ್ತ್ರ, ಬ್ರಹ್ಮನ ಒಂದುದಿನ, ಸಂವರ್ತವಿಧಿ— ಮುಂತಾದ ಅರ್ಥಗಳಿವೆ. ಇವೆಲ್ಲವುಗಳಿಗೆ ಇಂಬಿಲ್ಲದ ವಸ್ತುವದು. ಕಲ್ಪನೆ ವಿಕಲ್ಪನೆಗಳಿಲ್ಲದ್ದು. ನಿರ್ವಿಕಲ್ಪವದು. ನಿರ್ವಿಕಲ್ಪವಾದುದೆ ವಿಭುವಾಗಿರಬಲ್ಲುದು. ವಿಭುವಾಗಿರುವುದು ವಿಕಲ್ಪಕ್ಕೊಳಗಾಗದು ; ತ್ರಿಮಲದೋಷಕ್ಕೊಳ

ಗಾಗದು. ಕರಣೇಂದ್ರಿಯ ಕುಲಕ್ಕೊಳಗಾಗದು. ಈ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿವೆ ಈ ವಚನಗಳು—

'ನಿರ್ವಿಕಲ್ಪಿತವೆಂಬ ನಿಜದೊಳಗಣದಯ್ಯ.
ನಿರಹಂಭಾವದಲ್ಲಿ ನಾನಿದ್ದೆನಯ್ಯ.
ನೋಡಿಹೆನೆಂದರೆ ನೋಡಲಿಲ್ಲ. ಕೇಳಿಹೆನೆಂದರೆ ಕೇಳಲಿಲ್ಲ.
ಘನ ನಿರಂಜನದ ಬೆಳಗಿಂಬಾದುದನೇನೆಂಬೆ ಗೊಗ್ಗೇಶ್ವರ ?—

ಕಂಗಳ ಬೆಳಗ ಕಲ್ಪಿಸಬಾರದು. ಕರ್ಣದ ನಾದವ ವರ್ಣಿಸಬಾರದು
ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂಮುದು. ಮತಿಗೆ ಮಾಹಾಘನವಪ್ಪ
ಸುಷುಮ್ನಾನಾಳದ ಸುಯಿಧಾನವ ಪ್ರಮಾಣಿಸಬಾರದು.
ಅಣುರೇಣುತೃಣಕಾಷ್ಠದೊಳಗೆ ಭರಿತ ಮನೋಹರ ನಿಂದ
ನಿರಾಳಗೊಗ್ಗೇಶ್ವರಾ !

'ಆಡಬಾರದ ಬಯಲು, ನೋಡಬಾರದ ಬಯಲು;
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು,
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತಬಲ್ಲರೈ ರಾಮನಾಥ? '—ದೇ. ದಾಸಮಯ್ಯ.

'ಮನದಲ್ಲಿ ಸಂಕಲ್ಪ ವಿಕಲ್ಪಂಗಳು ನೋಡಯ್ಯ;
ಮನಸಿನ ಕಾರ್ಯವೇ ಪುಣ್ಯಪಾಪ ನೋಡಯ್ಯ !
'ಮನಃ ಕಾರ್ಯಂ ಜಗದ್ಭೇದಂ' ಎಂಬುದು ಪುಸಿಯಲ್ಲ
ನೋಡಯ್ಯ ! ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ!'

—ಸಿದ್ಧರಾಮ.

ಈ ನಾಲ್ಕು ವಚನಗಳು ಶಿವಯೋಗಿ ಶಿವಾಚಾರ್ಯರ 'ನಿರ್ವಿಕಲ್ಪ' ಪದಕ್ಕೆ ವ್ಯಾಖ್ಯಾನಗಳಾಗಿವೆ. ಭಾವಪೂರ್ಣಭಾಷ್ಯಗಳಾಗಿವೆ. ನಿರ್ವಿಕಲ್ಪ ಶಬ್ದಕ್ಕೆ ಲಕ್ಷಣಕ್ಕೆ ಈ ವಚನಗಳಿಗಿಂತ ಬೇರೆ ನುಡಿಯ ಅವಸರವಿಲ್ಲ. ನುಡಿವ ಅವಸರವೂ ಇಲ್ಲ. ಅದು ಕಲ್ಪಕ್ಕೂ ಒಳಗಾಗಿಲ್ಲ. ವಿಶೇಷ ಕಲ್ಪಕ್ಕೂ ಒಳಗಾಗಿಲ್ಲ. ವಿಪರ್ಯಾಸಕ್ಕೂ ಒಳಗಾಗಿಲ್ಲ. ವಿಕಲ್ಪಕ್ಕೆ ಆಧಾರ ಮನ.

ಮನಕ್ಕೆ ಆಧಾರ ಪ್ರಾಣ. ಪ್ರಾಣಕ್ಕೆ ಅಧಾರ ಆತ್ಮ. ಆತ್ಮಕ್ಕೆ ಅಧಾರ ಆ ಪರಮಾತ್ಮ. ಅದಕ್ಕೆ ಬೋರೊಂದು ಆಧಾರವಿಲ್ಲ. ಅದನ್ನು ಕಲ್ಪಿಸುವ ಶಕ್ತಿ ವನುಲ್ಲ್ಕ. 'ಶಬ್ದ ಜ್ಞಾನಾನುಪಾತೀ ವಸ್ತುಶೂನ್ಯೋ ವಿಕಲ್ಪಃ' ಈ ಯೋಗ ಸೂತ್ರಾಭಿಪ್ರಾಯದಂತೆ ನಿಕಲ್ಪವೆಂದರೆ ಗಗನ ಕುಸುಮದಂತೆ ವಸ್ತುಶೂನ್ಯ ವಾಗಬೇಕಾದೀತು? ಅದು ಸಾಕ್ಷಾತ್ ಸತ್ಯವಾಗಿದೆ. ಆದ್ದರಿಂದ ಅದು ನಿರ್ವಿಕಲ್ಪ.

೬. 'ನಿರಾಕಾರಃ' ಆಕಾರ ಅಂಗದ ಚೌಕಟ್ಟಿಗೆ ಒಳಪಟ್ಟುದು ; ವರ್ಣ ಗಳ ರಂಜನೆಗೆ ಸಿಲುಕಿದುದು. ಇವೆರಡು (ಮೈ ಮತ್ತು ಬಣ್ಣ) ಇಲ್ಲದುದೇ ನಿರಾಕಾರ. ಅದು ಒಡಲಿಲ್ಲದ ಬಯಲು ; ರೂಹಿಲ್ಲದ ಚೆಲುವು. 'ತೆರಹಿಲ್ಲದ ಘನಕ್ಕೆ ಕುರುಹ ಮುನ್ನಿಲ್ಲ.' ಎಂಬೀ ಪ್ರಭುವಾಣಿಯು ಗಮನಾರ್ಹ. ಆಕಾರ ಗೊಂಡಲ್ಲಿ ವಿಭುತ್ವಕ್ಕೆ ಭಂಗ; ಅನರ್ಹ. ಆಕಾರ ಪರಿಮಿತ ಶಕ್ತಿಯುಳ್ಳದು. ನಿರಾಕಾರ ಅಪರಿಮಿತ ಶಕ್ತಿಗಾಶ್ರಯವಾದುದು.

'ನಿರಾಕಾರ ಶಕ್ತಿಯಲ್ಲಿ ನಿರಾಳವೆಂಬ ತನು,
ನಿಃ ಶೂನ್ಯವೆಂಬ ಸಿಂಹಾಸನದ ಮೇಲೆ ಘನವಾಗಿ ತೊಳಗಿ
ಬೆಳಗುತ್ತಿರ್ದನು.
ದೆಸೆಯೆಲ್ಲ ಮುಖವಾಗಿ – ಮುಖವೆಲ್ಲ ಜಗವಾಗಿ
ಅಖಂಡ ಪರಿಪೂರ್ಣ ಪರಬ್ರಹ್ಮ ತಾನಾದನು...........'

ಎಂದು ಹಡಪದಪ್ಪಣ್ಣನು ನಿರಾಕಾರದೊಳಗಿನ ಆಕಾರವನ್ನು ನಿರೂ ಪಿಸಿದ್ದಾನೆ. ಆ ಆಕಾರವು ಕಣ್ಣಿಗೆ ಕಾಣಿಸುವುದಲ್ಲ; ಕೈಗೆ ಸಿಕ್ಕುವುದಲ್ಲ. ನಿರಾಳ ತನು ಸುರಾಳದ ನಿಕಷಕ್ಕೆ ನಿಲುಕದು. ಅದರ ಸಿಂಹಾಸನವು ನಿಶ್ ಶೂನ್ಯ. ಶೂನ್ಯವೂ ಒಂದು ಆಕಾರಕ್ಕೆ ಒಳಗಾಗಿದೆ. ಕಾರಣ ಶೂನ್ಯವು ಅದಕ್ಕೆ ಸಿಂಹಾಸನವಲ್ಲ. ಅದು ಬೆಳಗುಗಳಿಗೆಲ್ಲ ಬೆಳಗಾಗಿ ಘನವಾಗಿದೆ. ಅದಕ್ಕೆ ಘನ ವಿಲ್ಲ. ಅದಕ್ಕೆಲ್ಲ ದಿಕ್ಕುಗಳು ಮುಖವಾಗಿವೆ. ಅದರ ಮುಖವೆಲ್ಲ ಜಗವಾಗಿವೆ. ಹೀಗಿರುವಾಗ ಅದಕ್ಕೆಲ್ಲಿಂದ ಬಂತು ಖಂಡವಾದ ಆಕಾರ? ಚೂರ್ಣವಾದ ರೂಪ? ಅದು ಅಖಂಡ ಪರಿಪೂರ್ಣ. ಅಂತೆಯೇ ಅದು ನಿರಾಕಾರ.

ಹೀಗಿದ್ದರೂ ಅದು ಆಕಾರಗಳಿಗೆಲ್ಲ ಆಕರವಾಗಿದೆ. ಆಕರ್ಷಣೀಯ ವಾಗಿದೆ. ಅದು 'ರೂಹಿಲ್ಲದ ಚೆಲುವ' ಎಂದು ಮಹಾದೇವಿಯಕ್ಕನು ಮನವಾರೆ

ಬಣ್ಣಿಸಿದ್ದಾಳೆ. ಇದೇ ಸರಣಿಯ ಚೆನ್ನಬಸವಣ್ಣನ ವಾಣಿಯಿದು: 'ರೂಪಿಲ್ಲದ ರೂಪು; ನಿಜವಿಲ್ಲದ ನಿಷ್ಪತ್ತಿ. ಸೀಮೆಯು ಮೀರಿದ ನಿಸ್ಸೀಮ. ಗಮನವಿಲ್ಲದಗಮ್ಯ. ನುಡಿಯುಡಗಿದ ನಿಶ್ಶಬ್ದ....ನಿರಂಜನ ಪ್ರಭುವನ್ನು ವರ್ಣಿಸುವ ನೆಪದಲ್ಲಿ ಆ ನಿರಾಕಾರತ್ವದ ಆಕರತ್ವ ಆಕರ್ಷಣತ್ವಗಳನ್ನು ನಿಚ್ಚಳವಾಗಿ ನಿರೂಪಿಸಲಾಗಿದೆ. ನಿರ್ವರ್ಣತ್ವವನ್ನು ನಿರೂಪಿಸಲಾಗಿದೆ. ಅದು 'ವೇದಾತೀತ, ಷಡುವರ್ಣರಹಿತ. ಅಷ್ಟತ್ರಿಂಶತ್ಕಳಾತೀತ, ವ್ಯೋಮಾತೀತ. ಎಂದರು ಬಸವಣ್ಣನವರು. ಅದು ವಾಙ್ಮಯರೂಪಾದ ವೇದಕ್ಕೆ ಅಗೋಚರ. ಅದು ಆಕಾರವುಳ್ಳ ಅಕ್ಷರಕ್ಕೆ ಅಗೋಚರ. ಅಕ್ಷರ (ವರ್ಣ) ಬ್ರಹ್ಮವೆಂಬ ಮಾತಿಗಿಲ್ಲಿ ಇಂಬಿಲ್ಲ. ಅದು ಮೂವತ್ತೆಂಟು ಕಲೆಗಳಿಗೆ ಮೀರಿದುದು. ವ್ಯೋಮ ಸೀಮೆಯನ್ನೂ ಮೀರಿದುದು. ಆಕಾಶಕ್ಕೆ ಆಕಾರವಿಲ್ಲದಾಗ ಅದಕ್ಕೆಲ್ಲಿ ಆಕಾರ ?

ಜನ್ಯವಾದುದಕ್ಕೆ ಆಕಾರವಿರುತ್ತದೆ. ಅದು ಜನ್ಯವಲ್ಲವಾಗಿ ಅದಕ್ಕೆ ಆಕಾರವಿಲ್ಲ. 'ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೇ ಹುಟ್ಟಿ ಬೆಳೆದೆಯಲ್ಲಾ ; ನಿನ್ನ ಪರಿಣಾಮವೆ ನಿನಗೆ ಪ್ರಾಣ ತೃಪ್ತಿಯಾಗಿರ್ದೆಯಲ್ಲಾ; ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೆ ಬೆಳಗುತಿರ್ದೆಯಲ್ಲಾ ; ನಿನ್ನ ಚಾರಿತ್ರ ನಿನಗೆ ಸಹಜ ಗೊಗ್ಗೇಶ್ವರಾ !' ಎಂದಿರುವರು ಪ್ರಭುದೇವರು. ಅದಕ್ಕೆ ಹುಟ್ಟು ಮೆಟ್ಟುಗಳಿಲ್ಲವಾದ್ದರಿಂದ ಅದು ನಿರಾಕಾರವಸ್ತು.

'ನಾಮ ಅನಾಮವಿಲ್ಲ. ನಾನು ತಾನು ಮುನ್ನವೆ ಇಲ್ಲ. ಈ ಉಭಯ ನಾಮವಾದ ಸೀಮೆಯೊಳಗು ಇಲ್ಲ. ಒಡಲು ಇಲ್ಲ, ನೆಳಲು ಇಲ್ಲ. ಏನೆಂಬುದೇನು, ತಾನು ಮುನ್ನಿಲ್ಲ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ನಾನು ಇಲ್ಲ, ನೀನು ಇಲ್ಲ.

ನಿಷ್ಕಲವಾದ ನಿರಾಕಾರವಾದ ಆ ವಸ್ತುವಿಗೆ ನಾಮ ನೇಮಗಳಿಲ್ಲ. ಒಡಲು ನೆಳಲುಗಳಿಲ್ಲ. ನಾನು ತಾನೆಂಬ ಕಪಲಿಲ್ಲ. ಅದು ಆದಿ ಅನಾದಿಗಳಿಗೆ ಆಚೆಯದು. ಮೂರ್ತಿ ರೂಪಗಳನ್ನು ಮೀರಿದುದು.

> 'ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರ—ಎಂಬ ಸಂದಣಿ ತಲೆದೋರದ ಮುನ್ನ ಬಯಲೇ ಸ್ವರೂಪವಾಯಿತ್ತು. ಆ ಸ್ವರೂಪಿನ ನಡೆಯನುಪಮಿಸಬಾರದು. ನೋಡಬಾರದ ಬೆಳಗು, ಕೂಡಬಾರದ ಮೂರ್ತಿ ; ಅಖಂಡ ಅಪ್ರತಿಮ ಗುಹೇಶ್ವರ ಲಿಂಗದ ಬೆಳಗಿನ ಮೂಲವ ಲಿಂಗಸಂಗಿಗಳಲ್ಲದ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರು ?'

ಬ್ರಹ್ಮ ವಿಷ್ಣು ಮುಂತಾದ ಮೂರ್ತಿರೂಪಗಳು ಮೂಡದ ಮುನ್ನಿನ ಸ್ವರೂಪವೇ ನಿರಾಕಾರ. ಅದು ಈ ಕಣ್ಣಿಗೆ ಕಾಣದ ಕಾಂತಿ. ಸಾವಯವತ್ವದ ಸಮರಸಕ್ಕೆ ಸಮನಿಸದ ಮೂರ್ತಿ. ಅದು ಅಖಂಡ, ಅಪ್ರತಿಮ. ಅದರ ಮೂಲವನ್ನು ಅರಿಯಬೇಕಾದರೆ ಅರಿತು ಅಳವಡಿಸಿಕೊಳ್ಳಬೇಕಾದರೆ ಲಿಂಗ ಸಂಗಿಗೆ ಸಾಧ್ಯ. ಅಂಗವಿಕಾರ ವಿರಹಿತರಿಗೆ ವೇದ್ಯ.

ಬಯಲಿಗೆ ಬಯಲು ನಿರ್ಬಯಲಾದ ಆ ವಸ್ತು ಶೂನ್ಯ ನಿಃಶೂನ್ಯಗಳಿಗಿಂತ ಆಚೆಯದು. ಸರ್ವಶೂನ್ಯ ನಿರಾಲಂಬಾದುದು. ಪ್ರಾಕೃತಿಕ ಆಕಾರ ವಿರಹಿತವಾದುದು. ಅದರ ಕೃತಿ ಉಪಮೆಗೆ ನಿಲುಕದು. ಅದು ಲೀಲೆಯಾದಡೆ ಉಮಾಪತಿ. ಲೀಲೆ ತಪ್ಪಿದಡೆ ಸ್ವಯಂಭು. ಅದು ನೇತ್ರೇಂದ್ರಿಯಾತೀತವಾದ ಪ್ರಕಾಶ. ಮಹಾಪ್ರಕಾಶ.

೭. 'ನಿರ್ಗುಣಃ' ಪ್ರಾಕೃತಿಕ ಅಪ್ರಾಕೃತಿಕವೆಂದು ಗುಣಗಳಲ್ಲಿ ಇಬ್ಬಗೆಯುಂಟು. ಅಪ್ರಾಕೃತ ಆ ವಸ್ತುವಿನಲ್ಲಿ ಪ್ರಾಕೃತ ಗುಣಗಳಿರುವುದಿಲ್ಲ. ತ್ರಿಗುಣಗಳು ಪ್ರಕೃತಿ ಜನ್ಯಗಳು. ಸರ್ವಜ್ಞತ್ವಾದಿ ಷಡ್ಗುಣಗಳುಪ್ರಕೃತಿ ಜನ್ಯಗಳಲ್ಲ.

ಪರಶಿವನು ಪ್ರಕೃತಿರಹಿತನು, ನಿರಾಕಾರನು. ಕಾರಣ ಆತನು ಸತ್ವ ರಜಸ್ತಮೋ ಗುಣರಹಿತನು. ತ್ರೈಗುಣ್ಯ ವಿಷಯಕ್ಕೆ ಒಳಗಾಗದವನು. ಹುಟ್ಟು ಸಾವಿಲ್ಲದಾತನು. ಹುಟ್ಟಿರುವಲ್ಲಿ ಪ್ರಕೃತಿಯಿದೆ. ಪ್ರಕೃತಿಯಿರುವಲ್ಲಿ ತ್ರಿಗುಣಗಳಿರುತ್ತವೆ. ತ್ರಿಗುಣಗಳಿರುವಲ್ಲಿ ಸುಖ–ದುಃಖ, ಬಂಧ–ಮೋಕ್ಷ ಮುಂತಾದ ದ್ವಂದ್ವಗಳಿರುತ್ತವೆ. ಇದರಿಂದಾಗಿ ಆಕಾರವಿಲ್ಲದ ಆ ಪರಶಿವನಲ್ಲಿ ವಿಕಾರ ಹೇತುಗಳಾದ ತ್ರಿಗುಣಗಳಿರುವುದಿಲ್ಲ.

ತ್ರಿಗುಣ ಸ್ವಭಾವಗಳನ್ನು ಇಲ್ಲಿ ಅರಿಯುವುದು ಸೂಕ್ತ, ಪ್ರಸಕ್ತ. "ಸತೋಃಭಾವಃ; ಸೀದಂತ್ಯಸ್ಮಿನ್ ಗುಣಾದಯ ಇತಿ ವಾ ಸತ್ವಮ್" ಎಂಬೀ ವಿಗ್ರಹದಿಂದ ಸತ್ವದ ಗುಣಾಭಿವ್ಯಕ್ತಿಯಾಗುತ್ತದೆ. ಸತ್ವಗುಣವನ್ನು ಕುರಿತು ಗೀತೆ ಹೀಗೆ ಹೇಳಿದೆ :

"ತತ್ರ ಸತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಂ ।
ಸುಖ ಸಂಗೇನ ಬಧ್ನಾತಿ ಜ್ಞಾನಸಂಗೇ ಚಾನಘ ॥"

ಸತ್ವಗುಣವು ಮಲರಹಿತ, ಪ್ರಕಾಶಕ, ಆರೋಗ್ಯಕಾರಕ. ಆದರೂ ಅದು ಸುಖಜ್ಞಾನಗಳ ಸಂಗದಿಂದ ಬಂಧಿಸುತ್ತದೆ.

'ರಂಜಯತೀತಿ ರಜಃ' 'ರಜೋರೇಣುಪರಾಗಯೋಃ |
ಸ್ತ್ರೀಪುಷ್ಪೇ ಗುಣಭೇದೇ ಚ |'

ಇವುಗಳಿಂದ ರಜೋಗುಣದ ಕಾರ್ಯವೇನೆಂಬುದನ್ನು ಕಂಡುಕೊಳ್ಳಬಹುದು.

'ರಜೋರಾಗಾತ್ಮಕಂ ವಿದ್ಧಿ ತೃಷ್ಣಾ ಸಂಗಸಮುದ್ಭವಮ್ |
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಮ್ ||'

–ರಜೋಗುಣವು ರಾಗಾತ್ಮಕವಾಗಿದೆ. ಅದು ಆಸೆ ಅಸಂಗಗಳಿಗೆ ಕಾರಣವಾಗಿದೆ. ಅದು ದೇಹಿಯನ್ನು ಕರ್ಮಸಂಗದಿಂದ ಕಟ್ಟುತ್ತದೆ.

'ತಾಮ್ಯತಿ ಅನೇನ ತಮಃ' ಇದು ಸ್ಥೂಲವಾದ ಅವರಣ. ಇದರಿಂದ ಆತ್ಮಗ್ಲಾನಿ. 'ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ | ಪ್ರಮಾದಾಲಸ್ಯ ನಿದ್ರಾಭಿಸ್ತನ್ನಿಬಧ್ನಾತಿ ಭಾರತ ||' ತಮೋಗುಣವನ್ನು ಕುರಿತು ಗೀತೆಯ ಪ್ರತಿಪಾದನೆಯಿದು. ಅಜ್ಞಾನದಿಂದ ತಮೋಗುಣದ ಉತ್ಪತ್ತಿ. ಇದು ಸರ್ವದೇಹಿಗಳನ್ನು ಮೋಹಕ್ಕೊಳೆಯುತ್ತದೆ. ಅಲ್ಲದೆ ಪ್ರಮಾದ, ಆಲಸ್ಯ, ನಿದ್ರೆಗಳೆಂಬ ಪಾಶಗಳಿಂದ ಬಂಧಿಸುತ್ತದೆ. ಇಂತಹ ಈ ಮೂರು ತನುಗುಣಗಳಿಂದ ಪರಶಿವನು ಮುಕ್ತನಾಗಿ ನಿರ್ಗುಣನೆನಿಸಿದಾನೆ. 'ಸತ್ವರಜತಮುಗಳೆಂಬ ಗುಣತ್ರಯಂಗಳಿಲ್ಲದಂದು....ನೀನೇ ನೀನಾಗಿರ್ದೆಯಲ್ಲಾ' ಎಂದು ತೋಂಟದ ಸಿದ್ಧಲಿಂಗೇಶ್ವರರು ವಚಿಸಿದ್ದಾರೆ.

೮. 'ನಿಷ್ಪ್ರಪಂಚಕಃ' ವಿಪರ್ಯಾಸದಿಂದ ವಿರಹಿತವಾದ್ದು ಆ ವಸ್ತು. ಪ್ರಪಂಚ ಪದಕ್ಕೆ ವಿಪರ್ಯಾಸವೆಂದು ಅರ್ಥ. 'ವಿಪರ್ಯಾಸೇ ವಿಸ್ತಾರೇ ಚ ಪ್ರಪಂಚಃ' ಇತ್ಯಮರಕೋಶಃ. 'ಪಚಿ ವ್ಯಕ್ತೀಕರಣೇ' ವ್ಯಕ್ತೀಕರಣ ಎಂಬರ್ಥದ ಪಚಿಧಾತುವಿನಿಂದ ಪಂಚವೆಂದಾಗಿದೆ. ಆ ಅವ್ಯಕ್ತ ವಸ್ತುವಿನಿಂದ ವ್ಯಕ್ತವಾದುದೇ ಈ ಜಗತ್ತು ; ಈ ಸಂಸಾರ ಇದರೊಳಗೆ ಇದ್ದೂ ಇಲ್ಲದಂತೆ ಇರುವಾತನು ಆ ಪರಶಿವನು. ಪಂಚಭೂತ, ಪಂಚತನ್ಮಾತ್ರ, ಪಂಚ ಪಂಚ ಕರ್ಮ–ಜ್ಞಾನೇಂದ್ರಿಯಾದಿಗಳಿಂದ ವಿಲಕ್ಷಣವಾಗಿರುವಾತನು. ಪಂಚ ಶಬ್ದವು ಸಂಖ್ಯಾವಾಚಿಯಾಗಿಯೂ ಹೆಸರಾಗಿದೆ. ಇದರಿಂದಾಗಿ ಪಂಚ ಸಂಖ್ಯೆಯುಳ್ಳ ತತ್ತ್ವಗಳೆಲ್ಲ ಪ್ರಪಂಚದಲ್ಲಿ ಅಡಕಾಗಿರುತ್ತವೆ. ಸಕಲವೆನಿಸಿರುತ್ತವೆ.

ವ್ಯಷ್ಟಿ ಸಮಷ್ಟಿಯೆಂದು ಪ್ರಪಂಚ ದ್ವಿವಿಧ. ಒಂದು ಪಿಂಡಾಂಡ; ಇನ್ನೊಂದು ಬ್ರಹ್ಮಾಂಡ. ಪಂಚೇಂದ್ರಿಯ, ಪಂಚತನ್ಮಾತ್ರಾದಿಗಳಿಂದ ಪಿಂಡಾಂಡವೂ ಪ್ರಪಂಚವೆನಿಸಿದೆ. ಶಬ್ದವೆಂಬೆನೆ, ಶ್ರೋತ್ರದೆಂಜಲು. ಸ್ಪರ್ಶವೆಂಬೆನೆ?–ತ್ವಕ್ಕಿನೆಂಜಲು. ರೂಪವೆಂಬೆನೆ?–ನೇತ್ರದೆಂಜಲು. ರುಚಿಯೆಂಬೆನೆ?–ಜಿಹ್ವೆಯೆಂಜಲು. ಪರಿಮಳವೆಂಬೆನೆ? – ಘ್ರಾಣದೆಂಜಲು. ನಾನೆಂಬೆನೆ? – ಅರಿವಿನೆಂಜಲು. ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಿನ ಬೆಳಗು ಗೊಗ್ಗೇಶ್ವರ ಲಿಂಗವು.' ಇದು ವಿಷಯ, ಇದು ಇಂದ್ರಿಯ ಎಂಬ ಭಿನ್ನಭಾವ ಅಲ್ಲಿಲ್ಲ. ಲಿಂಗ ಭಿನ್ನತೆಯೂ ಅಲ್ಲಿಲ್ಲ. ಆತನು ಈ ಪ್ರಪಂಚದಲ್ಲಿದ್ದರೂ ಈ ಪ್ರಪಂಚದ ವಿಪರ್ಯಾಸಕ್ಕೆ ವಿಭಿನ್ನತೆಗೆ ಒಳಪಡುವವನಲ್ಲ. ತನ್ನ ಅಖಂಡತೆಗೆ ಭಂಗವಿಲ್ಲ. ಕಬ್ಬು ಡೊಂಕಾದರೂ ಕಬ್ಬಿನ ರಸ ಹೇಗೆ ಡೊಂಕಲ್ಲವೋ ಹಾಗೆ! 'ಈರೇಳು ಭುವನವೆಲ್ಲ ತಾನಾಗಿ ಸಮತೆ ಸಮಾಧಿಯೆಂಬ ಸಮರಸದೊಳಗೆ, ಚಂದ್ರಕಾಂತದ ಕೊಡದೊಳಗೆ ಅಮೃತವ ತುಂಬಿ ಕೊಡನೊಡೆಯದೆ ಬೆಳಗುತ್ತಿಪ್ಪನು ಗೊಗ್ಗೇಶ್ವರ' ನಿಷ್ಪ್ರಪಂಚಕನೆಂದರೆ ಪ್ರಪಂಚರಹಿತನೆಂದಲ್ಲ. ಹೀಗೆ ಹೇಳಿದರೆ ಪರಶಿವನಿಗೆ ಖಂಡತ್ವವನ್ನು ಒಪ್ಪಬೇಕಾದೀತು? ಇಲ್ಲಿ ಬಳಸಿದ ಪ್ರಪಂಚ ಶಬ್ದವು ಭಿನ್ನಾರ್ಥಕವೇ ಹೊರತು ಭುವನಾರ್ಥಕವಲ್ಲ. ಏಕೆಂದರೆ ಈರೇಳು ಭುವನವಾದಾತನು ಆತನೇ! ಈರೇಳು ಭುವನದಲ್ಲಿ ಸಮತ್ವರೂಪದಲ್ಲಿರುವಾತನೂ ಆತನೇ! ಆತನು ಬ್ರಹ್ಮಾಂಡವೆಂಬ ಚಂದ್ರಕಾಂತದ ಕೊಡದಲ್ಲಿ ಅಮೃತ ತುಂಬಿದಂತಿರುತ್ತಾನೆ. ಕೊಡದ ಒಳಹೊರಗಿರುವುದಲ್ಲದೆ ಕೊಡದ ಒಪ್ಪು (ಕಪಾಲ)ಗಳಲ್ಲಿಯೂ ಇರುತ್ತಾನೆಂದಲ್ಲ – ಒಪ್ಪಾಗಿಯೂ ಇರುತ್ತಾನೆ. ಚಂದ್ರಕಾಂತದ ಕೊಡವೆಲ್ಲವೂ ಅಮೃತಮಯವಾಗಿರುವಂತೆ ಅಮೃತಕ್ಕೆ ಭಿನ್ನವಾಗಿರದಂತೆ ಪರಶಿವನು ಬ್ರಹ್ಮಾಂಡಕ್ಕೆ ಭಿನ್ನನಲ್ಲ. ಬ್ರಹ್ಮಾಂಡ (ಪ್ರಪಂಚ) ಆಗಿರುವುದು ಭಿನ್ನವಸ್ತುವಿನಿಂದಲ್ಲ. ಆದ್ದರಿಂದ ನಿಷ್ಪ್ರಪಂಚಕನೆಂದರೆ ನಿರ್ಗತ ವಿಪರ್ಯಾಸವುಳ್ಳವನೆಂದರ್ಥ.

ಪ್ರಪಂಚ ಶಬ್ದಕ್ಕೆ ವಿಪರ್ಯಾಸ ಮತ್ತು ವಿಸ್ತಾರ ಎಂದು ಎರಡೇ ಅರ್ಥಗಳಿರುತ್ತವೆ. ಇವೆರಡರಲ್ಲಿ ವಿಪರ್ಯಾಸನಿರಸನವನ್ನು ಹೇಳಬೇಕಲ್ಲದೆ ವಿಸ್ತಾರ ನಿರಸನವನ್ನು ಹೇಳಬಾರದು. ಹೇಳಿದರೆ ಅದರ ವಿಭುತ್ವಕ್ಕೆ ಭಂಗ ಬರುತ್ತದೆ.

ಎರಡನೆಯದಾಗಿ ವಿಕಲ್ಪ, ಆಕಾರ, ಗುಣ, ವಿಪರ್ಯಾಸಗಳು ಪ್ರಕೃತಿ ಜನ್ಯ ವೃತ್ತಿಗಳು. ಈ ವೃತ್ತಿರಹಿತವಾದುದು ಆ ವಸ್ತು. ಇವನ್ನೆಲ್ಲ ಬೆಳಗುವ ವ್ಯಾಪಕವಸ್ತುವದು. ವೃತ್ತಿ, ವ್ಯಕ್ತಿಮೂಲಪ್ರಕೃತಿ, ಪ್ರಕೃತಿಯೊಡೆಯ ಪುರುಷ ಇವೆಲ್ಲವನ್ನೂ ಒಳಗೊಂಡ ಬಯಲಿಗೆ ಬಯಲಾದ ವಸ್ತುವದು. ಅದರ ವಿಸ್ತಾರ ಇಷ್ಟೇ ಎಂದು ಹೇಳಲು ಬಾರದಂತಹದು. ಆಕಾಶದ ವಿಸ್ತಾರವನ್ನೇ ಅಳೆದು ಹೇಳಬಾರತಿರುವಾಗದಂ ಆ ಪರಾಕಾಶ ಸ್ವರೂಪನ ವಿಸ್ತಾರವನ್ನು ಹೇಳಲು ಸಾಧ್ಯವೇ ? 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ' ಎಂಬೀಪುರುಷಸೂಕ್ತವು ಆ ಪರವಸ್ತುವಿನ ವಿಸ್ತಾರವನ್ನು ಅಳೆಯ ಹೊರಟು ಎಟುಕದೆ ಅದು ವಿಶ್ವವನ್ನೆಲ್ಲ ಆವರಿಸಿಕೊಂಡು ಆಚೆ ಹತ್ತಂಗುಲ ಹಬ್ಬಿದೆಯೆಂದು ಹೇಳಿದೆ. ಅದರ ವಿಸ್ತಾರ ಅಪಾರ ಎಂಬರ್ಥದಲ್ಲಿ ದಶಾಂಗುಲ ಪದ ಪ್ರಯೋಗ ವಿದೆ. ಈ ಪುರುಷ ಸೂಕ್ತದ ಅಭಿಪ್ರಾಯವನ್ನು ಈ 'ನಿಷ್ಪ್ರಪಂಚಕ' ಎಂಬ ಒಂದೇ ಪದವು ಪ್ರತಿಪಾದಿಸಿದೆ. 'ನಿರ್ಗತಂ ಪ್ರಪಂಚಂ – ವಿಪರ್ಯಾಸಂ ಯಸ್ಯಸಃ' ಎಂತಲೂ 'ನಿರ್ಗತ ಮಾನದಂಡಂ ಪ್ರಪಂಚಂ – ವಿಸ್ತಾರಂ ಯಸ್ಯಸಃ' ಎಂತಲೂ ವಿಗ್ರಹಿಸಲಾಗುತ್ತದೆ.

ಇನ್ನು ಪ್ರಪಂಚ ಶಬ್ದಕ್ಕೆ ವೈವಿಧ್ಯವೆಂದರ್ಥವಿದೆ. ಈ ವೈವಿಧ್ಯವಿರಹಿತ ವಾದುದೆಂದು ಹೇಳುವುದೂ ಶಿವಕವಿಯ ಆಶಯವಿರಬೇಕು. ಒಂದೇ ಒಂದಾದ ಆ ವಸ್ತುವಿನಲ್ಲಿ ಹಲವಕ್ಕೆ ಮುಖವಿಲ್ಲ. ಮೂರನೆಯದಾಗಿ ಪ್ರಪಂಚ ಪದಕ್ಕೆ ಜಗತ್ತು ಸಂಸಾರವೆಂಬುದಾಗಿ ಹೇಳುವ ವಾಡಿಕೆಯಿದೆ. ಈ ದೃಷ್ಟಿಯಲ್ಲಿ ಆತನು ನಿಷ್ಪ್ರಪಂಚಕನೆಂದರೆ ಪ್ರಪಂಚವನ್ನು ಹೊದ್ದಿಯೂ ಹೊದ್ದದ, ಪ್ರಪಂಚ ದಲ್ಲಿದ್ದರೂ ಇಲ್ಲದ ವಸ್ತುವೆಂದರ್ಥ. ಪೃಥ್ವಿ ಅಪ್ ತೇಜ ವಾಯು ಆಕಾಶಾದಿ ಪ್ರಪಂಚವು ವ್ಯಕ್ತವಾಗದ ಮುನ್ನವೇ ತಾನೇ ತಾನಾಗಿರುವ ವಸ್ತುವದು. '....ಜಗವ ಸೃಷ್ಟಿಸಿದೆನೆಂಬ ಭಾವ ಬಣಿತೆಯವನಲ್ಲ.' 'ಲೋಕಾದಿ ಲೋಕಂಗಳೇನೂ ಏನೂ ಇಲ್ಲದಂದು 'ಏಕಮೇವಾದ್ವಿತೀಯಂ ಪರಂ ಬ್ರಹ್ಮ' – ತಾನೊಂದೇ ನೋಡಾ !'

'ಅಸುರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ, ಬ್ರಹ್ಮಕಪಾಲವಿಲ್ಲ,
ಭಸ್ಮಭೂಷಣನಲ್ಲ, ವೃಷಭವಾಹನನಲ್ಲ, ಋಷಿಯ ಮಗಳೊಡನಿರ್ದಾತನಲ್ಲ,

ಎಸಗುವ ಸಂಸಾರದ ಕುರುಹಿಲ್ಲದಾತಂಗೆ ಹೆಸರಾವುದೆಂದನಂಬಿಗರ
ಚೌಡಯ್ಯ.'

ಶೂನ್ಯ ಹುಟ್ಟದಂದು, ನಿಶ್ ಶೂನ್ಯವಿಲ್ಲದಂದು, ಬ್ರಹ್ಮವಿಷ್ಣು
ಮಹೇಶ್ವರರಿಲ್ಲದಂದು, ಹದಿನಾಲ್ಕು ಭುವನ ದಿಕ್ಕು ವಿದಿಕ್ಕು
ವಳಯಂಗಳಿಲ್ಲದಂದು, ಕೂಡಲ ಚೆನ್ನಸಂಗಯ್ಯ ಹೆಸರಿಲ್ಲದಿರ್ದನಂದು.'

ಪ್ರಪಂಚದ ಪಂಚಕೃತ್ಯಕರ್ತರಿಗೆ ಮಹಾಕರ್ತನಾದಾತನಾತನು. ಆದರೂ ಈ ಭಾವ ಅವನಿಗಿಲ್ಲ. ಭಾವ ದ್ವಿವಿಧ. ಒಂದು ಸಂಕಲ್ಪಾತ್ಮಕ, ಇನ್ನೊಂದು ಸತ್ತಾತ್ಮಕ. ಸತ್ತಾತ್ಮಕಭಾವವು ತ್ರಿವಿಧ. ಆದಿಸತ್ತಾ, ಅನಾದಿಸತ್ತಾ, ಆದಿ ಅನಾದಿಗಳಿಂದಾಚೆಯಿರುವ ಸತ್ತಾ. ಈ ಮೂರು ಸತ್ತಾತ್ಮಕವಾಗಿದ್ದರೂ ಮುಖ್ಯವಾಗಿ ತ್ರಿಕಾಲಾಬಾಧಿತವಾಗಿ ಶಬ್ದಾತೀತವಾಗಿ ಇರುವ ಮೂರನೆಯ ಸತ್ತಾತ್ಮಕವಾದುದು ಆ ವಸ್ತು. ಸಾಕಾರವನ್ನು ಶೂನ್ಯವನ್ನು ಮೀರಿದುದು ಆ ವಸ್ತು. ಜಡಪ್ರಪಂಚ ಜೀವಪ್ರಪಂಚವೆರಡೂ ಉದಯಿಸದ ಮೊದಲು ಹೆಸರಿಲ್ಲದ ಹೆಸರುಳ್ಳುದು ಆ ವಸ್ತು. ಅದೇ ಶಿವ; ಅದೊಂದೇ ಶಿವ. ಅದು ಸಚ್ಚಿದಾನಂದ ನಿತ್ಯ ಪರಿಪೂರ್ಣಾಖಂಡ ಶಿವ.

ಅದು ಅಲಕ್ಷ್ಯ, ಅಮೂರ್ತ, ಅರೂಪ, ಅನಾಮಯ, ಅಕಾರಣ, ಅಕಾರ್ಯ, ಅಪ್ರಮಾಣ, ಅಗೋಚರ, ಅನಾಮಾದಿ ನಿಷಿದ್ಧಲಕ್ಷಣಗಳಿಂದ ಕೂಡಿದ್ದಾಗಿದೆ.

'ಏನೆಂದೆನಲಿಲ್ಲ. ನುಡಿದು ಹೇಳಲಿಕ್ಕಿಲ್ಲ,
ನಿಜವಲ್ಲಿರ್ದ ಬೆರಗ ಕುರುಹ ಅರಿವುದೆ ?
ಅದು ತನ್ನಲ್ಲಿ ತಾನಿಲ್ಲ ; ಏನೆಂದೆನಲಿಲ್ಲದ ಬಯಲು.
ಅಲ್ಲಿ ಏನೇನೂ ಅರಸಲಿಲ್ಲ.
ಇದಿರಿಲ್ಲ, ತಾನಿಲ್ಲ ; ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.'

ಇದನ್ನೇ ಸರ್ವಶೂನ್ಯನಿರಾಲಂಬವೆಂದು ಆಗಮಾದಿಗಳು ನುಡಿದಿವೆ ; ನಿರ್ಬಯಲೆಂದು ನಿರೂಪಿಸಿವೆ.

ನಿರಾಲಂಬ ನಿರವಯಲವಾದ ಆ ಅಖಂಡಾದ್ವಯ ವಸ್ತುವಿನಲ್ಲಿ ಬಯಲ ರೂಪಾದ ಶೂನ್ಯ ತೋರುವುದು. ಚಿತ್ರಭಾವದಿಂದ ನಿರ್ಬಯಲು ಬಯಲಾ

ಗುವುದು. ಇದುವೆ ಮೂಲ ಮಹಾಸ್ಥಲವೆಂದೆನಿಸುವುದು ; ಚಿತ್ರಕಾಶವೆನಿಸುವುದು. ಇದು ಸಂಪಾದನೆಗೆ ಸಲ್ಲುವ ವಸ್ತುವಾಗುವುದು.

'ಭಾವೈಕಗಮ್ಯಮಜಡಂ ಶಿವತತ್ವ್ತಮಾಹುಃ । ಚಿದ್ಭಕ್ತಿ ಸಂಸ್ಫುರಣ ರೂಪಮಹಾತ್ಮಲಿಂಗಂ ಪರತ್ತ್ವಂ ಗೋಲಕಾಕಾರಂ ಚಿನ್ಮಯಂ ಸದ್ವಿಲಾಸಿತಂ। ಶರಣ್ಯಂ ಸರ್ವತತ್ತ್ವಾನಾಂ ಲಿಂಗಾಕಾರೇಣ ವರ್ತತೇ'

ಶೂನ್ಯ ವಸ್ತು ಅನುಭಾವಗಮ್ಯ ; ಅಜಡವಾದರೂ ಶಿವತತ್ತ್ವ ವಾಚ್ಯ. ಚಿಚ್ಛಕ್ತಿಯಿಂದ ಪ್ರಕಟಿತ ; ಗೋಲಾಂಕಿತ. ಸರ್ವತತ್ತ್ವಗಳಿಗೆ ಶರಣ್ಯವಾಗಿ ಮಹಾಸ್ಥಲವೆಂದೆನಿಸಿದೆ

'ಏನೂ ಏನೂ ಇಲ್ಲದ ಬಯಲೊಳಗೊಂದು
ಬಗೆಗೊಳಗಾದ ಬಣ್ಣ ತಲೆದೋರಿತ್ತು.
ಆ ಬಣ್ಣವನಾ ಬಯಲು ಶೃಂಗರಿಸಲು ಸ್ವರೂಪುಗೊಂಡಿತ್ತು.
ಅಂತಪ್ಪ ಸ್ವರೂಪಿನ ಬೆಡಗು ತಾನೆ ನಮ್ಮ ಗೋಹೇಶ್ವರ ಲಿಂಗದ
ಪ್ರಥಮ ಭಿತ್ತಿ.'

ಎಂಬುದಾಗಿ ಪ್ರಭುದೇವರು ಸರ್ವಶೂನ್ಯವಾದ, ನಿರ್ಬಯಲು ಬಯಲಾದ, ನಿರೂಪು ಸ್ವರೂಪಾದ ಪ್ರಥಮ ಭಿತ್ತಿಯ ಬೆಡಗನ್ನು ಬಿತ್ತರಿಸಿದ್ದಾರೆ.

'ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ ।
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ ॥'

ಎಂದು ಜಗದ್ಗುರು ರೇಣುಕ ಶಿವಾಚಾರ್ಯರು ಆ ಬೃಹದ್ಭಿತ್ತಿಯ ಸೌಂದರ್ಯ ಸಾಮರ್ಥ್ಯಗಳನ್ನು ಸರ್ವಾಧಾರ ಸ್ವರೂಪವನ್ನು ಸಚ್ಚಿದಾನಂದ ಕಳೆಯನ್ನು ಕಮನೀಯವಾಗಿ ನಿರೂಪಿಸಿದ್ದಾರೆ.

'ಬಯಲು ಮೊಳಗಿ, ಮಳೆ ಸೃಜಿಸಿ,
ಆ ಬಯಲು ಆ ಮಳೆಯನೊಡಗೂಡಿ
ದೃಷ್ಟವಪ್ಪ ವಾರಿಕಲ್ಲಾಗಿ ತೋರಿದಂತೆ
ನಿನ್ನ ನೆನಹೇ ನಿನಗೆ ಶಕ್ತಿಯಾಯಿತಲ್ಲಾ

ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮ
ಸೂಚನೆಯಾಯಿತಲ್ಲಾ !
ಮಹಾಲಿಂಗಕಲ್ಲೇಶ್ವರಾ ನಿಮ್ಮ ಆದಿಗೆ ಇದೇ ಪ್ರಥಮವಾಯಿತಲ್ಲಾ !'

ಈ ವಚನವು ಶೂನ್ಯದಲ್ಲಿ ಶಕ್ತಿಯಾದುದನ್ನು ನಾಮರೂಪಕ್ರಿಯೆಯಾದುದನ್ನು ನಿಸರ್ಗ ನಿದರ್ಶನವಾಗಿ ನಿಜಜ್ಞಾನದಾರ್ಶನಿಕವಾಗಿ ನಿರೂಪಿಸಿದೆ. ಮುಗಿಲು ಮೊಳಗಿ ನೀರು ಹುಟ್ಟುವುದು. ಮರಳಿ ಆ ಬಯಲುಲಿಯು ತಂಗಾಳಿಯಾಗಿ ತಣ್ಣೀರ ಸೇರಲು ಆಣಿಕಲ್ಲಾಗುವುದು. ಹೀಗೆ ಆಕಾಶವೇ ಆಣಿಕಲ್ಲಾಗುವಂತೆ ನಿಷ್ಕಲವಸ್ತುವೇ ಸಕಲವಾಗುತ್ತದೆ. ಆ ಪರಮ ಚೈತನ್ಯವೇ ಚಿಚ್ಛಕ್ತಿಯಾಗುತ್ತದೆ ನೆನಹೆಂಬ ನಾದದಿಂದ ! ಅದೃಷ್ಟ ದೃಷ್ಟವಾಗುತ್ತದೆ ಸ್ವಸಾಮರ್ಥ್ಯದಿಂದ ! ಆ ಚಿದ್ವಿಲಾಸದಿಂದ ಜ್ಞೇಯ ನಾಮಧೇಯವುಳ್ಳದಾಗುತ್ತದೆ. ದೃಶ್ಯರೂಪುಳ್ಳುದಾಗುತ್ತದೆ. ಆ ಚಿಚ್ಚೈತನ್ಯವಾಗುತ್ತದೆ. ಜತೆಗೆ ಆ ಚಿಚ್ಛಕ್ತಿಯೇ ಪರಾಶಕ್ತಿಯಾಗಿ ಬಳಿಕ ಆದಿಶಕ್ತಿಯಾಗಿ ಪರಿಣಮಿಸುತ್ತಾಳೆ.

ಶಕ್ತಿಯೆಂದರೆ ಆ ಪರಶಿವನ ನೆನಹು, ಆ ಪರಶಿವನ ಸ್ವಭಾವ ; ಆ ಪರಶಿವನ ಚಿತ್ಪ್ರಭಾಸಾಮರ್ಥ್ಯ. ಚೈತನ್ಯವೇ ಶಿವನು. ಚಿತ್ತವೇ ಶಕ್ತಿಯು. ಆತನ ಚಿದ್ವಿಲಾಸಲೀಲೆಯೇ ಜೀವಸೃಷ್ಟಿ. ಚೈತನ್ಯಪ್ರಭೆಯೇ ಲಿಂಗ ; ಚಿದ್ಬಿಂದುವೇ ಅಂಗ. ಚೈತನ್ಯಚಿನ್ನಾದವೇ ಮಂತ್ರ. ಅದುವೇ ಸೃಷ್ಟಿಗೆ ಮೂಲವಾದ ಮಹಾಸ್ಥಲ. ಸಮಷ್ಟಿರೂಪಾದ ಸನಾತನ ತತ್ತ್ವ. ಬೌದ್ಧರ ಶೂನ್ಯ (ನಿಷೇಧಾತ್ಮಕ) ತತ್ತ್ವವಲ್ಲ. ಎಲ್ಲವನ್ನೂ ತನ್ನೊಳಗೊಂಡ ಪೂರ್ಣ ತತ್ತ್ವ.

ಲಿಂಗಾಂಗಸ್ಥಲ ನಿರೂಪಣ

ಸಹಜ ಮತ್ತು ಸ್ವಭಾವ ಸ್ವರೂಪರಾದ ಶಿವಶಕ್ತಿ ಸಂಪುಟದಿಂದ ಸ್ಥಲವು ಲಿಂಗವೆಂದು ಅಂಗವೆಂದು ಇಬ್ಬಗೆಯಾಗುವುದು. ಇಬ್ಬಗೆಯಾಗಲು ಶಕ್ತಿ ಸ್ಪಂದನವೇ ಕಾರಣ.

'ಸ್ವಶಕ್ತಿ ಕ್ಷೋಭ ಮಾತ್ರೇಣ ಸ್ಥಲಂ ತದ್ ದ್ವಿವಿಧಂ ಭವೇತ್ |
ಏಕಂ ಲಿಂಗಸ್ಥಲಂ ಪ್ರೋಕ್ತಂ ಅನ್ಯದಂಗಸ್ಥಲಂ ಸ್ಮೃತಮ್ ||

ಒಂದೇ ವಸ್ತುವು ತನ್ನ ಶಕ್ತಿ ಚಲನದಿಂದ ಲಿಂಗ-ಅಂಗವೆಂದು ಎರಡಾಗುವುದು. ಎರಡಾದರೂ ಬೇರಲ್ಲ. ಘಟಾಕಾಶ ಮಹಾಕಾಶಗಳಂತೆ ಅನ್ಯೋನ್ಯವಾಗಿವೆ. ಪರತತ್ತ್ವರೂಪವಾದ ಸ್ಥೂಲವೆಂಬ ತೊಟ್ಟಿಗೆ ಲಿಂಗ-ಅಂಗವೆಂಬ ಎರಡು ಫಲಗಳಾಗಿವೆ. ಉಪಾಸ್ಯ ಉಪಾಸಕ ಭಾವವನ್ನು ತೊಟ್ಟವೆ. ಇವುಗಳದು ಕ್ರಮ ಸೃಷ್ಟಿಯಲ್ಲ. ಇವೆರಡು ಒಮ್ಮೆಯೇ ಮೈದೋರಿದವು. ಮೈದೋರಿ ಮೂರ್ತಾಮೂರ್ತರೂಪವಾಗಿವೆ.

ಚಿದ್ರೂಪವೇ ಲಿಂಗ

'ಚಿತ್ತುವೆಂಬ ಬಿತ್ತು ಬಲಿದು ಎರಡಾದಲ್ಲಿ ಲಿಂಗವೆಂಬ ಕಳೆ ಅಂಕುರಿಸಿ ಮೂರ್ತಿಯಾಯಿತು. ಆ ಮೂರ್ತಿಯ ಘನತೆಯನೇನೆಂದುಪಮಿಸಬಾರದು. ನೋಡಿದಡೆ ಮೂರ್ತಿ, ಹಿಡಿದಡೆ ಬಯಲು; ಆ ಮೂರ್ತಿಯೊಳಗದೆ ಈರೇಳು ಲೋಕದ ಪ್ರಾಣಕಳೆ. ಆ ಕಳೆಯ ಬೆಳಗು ತಾನೆ ನಮ್ಮ ಗೊಹೇಶ್ವರಲಿಂಗದ ಲೀಲಾಮೂಲದ ಪ್ರಥಮ ಭಿತ್ತಿ.

'ಬಯಲ ಸ್ತ್ರೀಯಳ ನಿರವಯಲ ಪುರುಷ ಬಂದು ಕೂಡಲು
ಚಿದ್ಘನವೆಂಬ ಶಿಶು ಹುಟ್ಟಿತು........'—ಅಖಂಡೇಶ್ವರ.
'ಲಿಕಾರವೇ ಶೂನ್ಯ, ಬಿಂದುವೇ ಲೀಲೆ, ಗಕಾರವೆ ಚಿತ್ತು,
ಈ ತ್ರಿವಿಧದೊಳಗದೆ ಲಿಂಗವೆಂಬ ಸಕೀಲ........'

—ಚೆನ್ನ ಬಸವಣ್ಣ.

'ಲಿಂಗವೆಂಬುದು ಸರ್ವಕಾರಣ ನಿರ್ಮಲ.
ಲಿಂಗವೆಂಬುದು ಸಚ್ಚಿದಾನಂದ ನಿತ್ಯ ಪರಿಪೂರ್ಣ.
ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಕಾರಣ.
ಲಿಂಗವೆಂಬುದು ಸರ್ವತತ್ತ್ವ ಪೂರಣ ನಿಜ ಚೈತನ್ಯ.

ಲಿಂಗವೆಂಬುದು ಜನ್ಮ ವಾರುಧಿಯ ದಾಂಟಿಸುವ ಭೈತ್ರ.
ಲಿಂಗವೆಂಬುದು ಶರಣರ ಹೃದಯದಲ್ಲಿ
ಬೆಳಗುವ ಜ್ಯೋತಿರ್ಮಯ ರೂಪು.
ಇಂತೀ ಲಿಂಗದ ಮರ್ಮವನರಿದವನೆ ಅರಿದವನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

'ಲಿಂಗವೆಂಬುದು ಪರಶಕ್ತಿಯುಕ್ತ. ಲಿಂಗವೆಂಬುದು ಪರಶಿವನ ನಿಜ ದೇಹ. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಪರ ಶಿವನು ತಾನು. ಲಿಂಗವೆಂಬುದು ಷಡಧ್ವಮಯ ಜಗಜ್ಜನ್ಮಭೂಮಿ ತಾನು; ಲಿಂಗವೆಂಬುದು ಅಖಂಡಿತ ಅಭೇದ್ಯಪಂಚಸಂಜ್ಞೆ ತಾನು. ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ ಜ್ಯೋತಿರ್ಮಯ ಲಿಂಗ. ಶ್ರುತಿ: 'ಆಲಯಂ ಸರ್ವಭೂತಾನಾಂ ಲಯಾತ್ಮಕಂ ಲಿಂಗಮುಚ್ಯತೇ' ಎಂಬುದಾಗಿ ಇದು ಲಿಂಗದ ಮರ್ಮ. ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರ ಲಿಂಗವನಿಂತು ತಿಳಿಯಬಲ್ಲಾತನೆ ಬಲ್ಲವನು.'

'ನಾದರೂಪಃ ಶಿವಸ್ಸಾಕ್ಷಾಲ್ಲಿಂಗಮಿತ್ಯಭಿಧೀಯತೇ'

—ಸೂಕ್ಷ್ಮಾಗಮ.

'ನಾದೋಲಿಂಗಾಕೃತಿರ್ಮನೇ'—ಚಂದ್ರಜ್ಞಾನಾಗಮ.
'ನಾದಂ ಲಿಂಗಮಿತಿ ಪ್ರೋಕ್ತಂ'

—ಶಿ. ಸೂತ್ರ.

ಇವೇ ಮುಂತಾದ ಪ್ರಮಾಣಗಳು, ಲಿಂಗವು ಚಿದ್ರೂಪವು ನಾದಾತ್ಮಕವು ಎಂಬುದನ್ನು ಸ್ಪಷ್ಟಗೊಳಿಸಿವೆ. ಲಿಂಗ ಲಕ್ಷಣವನ್ನು ನಿರ್ದಿಷ್ಟಗೊಳಿಸಿವೆ. ಲಿಂಗವೈಶಿಷ್ಟ್ಯವನ್ನೂ ಉಗ್ಗಡಿಸಿವೆ.

ಸದ್ರೂಪವೇ ಅಂಗ

"ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ।
ದೇವತಿರ್ಯಙ್ಮನುಷ್ಯಾದಿಜಾತಿಭೇದೇ ವ್ಯವಸ್ಥಿತಃ ॥
ಮಾಯೀ ಮಹೇಶ್ವರಸ್ತೇಷಾಂ ಪ್ರೇರಕೋ ಹೃದಿ ಸಂಸ್ಥಿತಃ ॥"

ಆ ಅನಾದಿಯಾದ ಅವಿದ್ಯೆಯು ಬಂಧುರವಾದ ಬಂಧರೂಪ ಸಂಪರ್ಕದಿಂದ ಸಚ್ಚಿದಾನಂದ ನಿತ್ಯಪರಿಪೂರ್ಣ ಅಖಂಡನೂ ನಿರ್ವಿಕಲ್ಪ–ನಿರಾಕಾರ–ನಿರ್ಗುಣ ನಿಷ್ಪ್ರಪಂಚಕನೂ ಆದ ಆ ಪರಶಿವನ ಅಂಶವೇ ಜೀವ (ಅಂಗ) ನೆನಸಿರುವನು. ಮತ್ತು ದೇವ, ಪಶು, ಪಕ್ಷಿ, ಕ್ರಿಮಿ, ಕೀಟ, ಮನಷ್ಯಾದಿ ಜಾತಿ ವಿಜಾತಿ ಭೇದಗಳಲ್ಲಿರುವನು. ಜೀವಕೋಟಿಯ ಹೃದಯದಲ್ಲಿ ಮಾಯಾಶಕ್ತಿ ಸಮೇತ ನಾದ ಮಹೇಶ್ವರನು ಇದ್ದುಕೊಂಡು ಪ್ರೇರಕನಾಗಿರುವನು. ಜೀವ(ಅಂಗ) ರು ಪ್ರೇರ್ಯರಾಗಿರುವರು.

ಅವಿದ್ಯೆಯೆಂದರೆ ಮಾಯೆ, ಅಚಿತ್ ಶಕ್ತಿ. ಆ ಪರಶಿವನು ಸ್ಫುರಣರೂಪ ಪ್ರಥಮ ಪರಿಣಾಮವೆ ಶಕ್ತಿತ್ತ್ವ. ಇದು ಚಿದ್ರೂಪವೆಂದು ಅಚಿದ್ರೂಪವೆಂದು ಇಬ್ಬಗೆಯಾಗುವುದು. ಚಿದ್ರೂಪವು ದೇವಶಕ್ತಿ; ಅಚಿದ್ರೂಪವು ಜೀವಶಕ್ತಿ. ಚಿಚ್ಛಕ್ತಿಯನ್ನು ಪರಾ ಎಂದು, ವಿದ್ಯೆಯೆಂದು ಹೇಳುತ್ತೇವೆ. ಅಚಿಚ್ಛಕ್ತಿ ಯನ್ನು ಅಪರಾ ಎಂದು, ಅವಿದ್ಯೆಯೆಂದು ಹೇಳುತ್ತೇವೆ. ಅಪರಾವಿದ್ಯೆ ಕಾರ್ಯ ಕಾರಣರೂಪಾದ ಪ್ರಪಂಚಕ್ಕೆ ಜೀವಸೃಷ್ಟಿಗೆ ಸಂಬಂಧ.

ಚಿಚ್ಛಕ್ತಿಜ್ಞಾನ ಪ್ರಧಾನ. ಅಚಿಚ್ಛಕ್ತಿ ಕ್ರಿಯಾ ಪ್ರಧಾನ. ಒಂದು ಜ್ಞಾನ ಶಕ್ತಿ; ಇನ್ನೊಂದು ಅಂದರೆ ಅವಿದ್ಯೆ ಕ್ರಿಯಾಶಕ್ತಿ· ವಿದ್ಯೆಯೆಂದರೆ ಜ್ಞಾನಶಕ್ತಿ ಹೇಗೆ ಉಪಾಶ್ಯವೋ ಹಾಗೆ ಅವಿದ್ಯೆಯೆಂದರೆ ಕ್ರಿಯಾಶಕ್ತಿಯೂ ಉಪಾಶ್ಯವು. ಯೋಗ ಮತ್ತು ಶಿವಯೋಗಗಳಿಗೆ ವಿದ್ಯಾ(ಜ್ಞಾನ) ಶಕ್ತಿ, ಅವಿದ್ಯಾ (ಕಿಯಾ) ಶಕ್ತಿಗಳೆರಡೂ ಚರಣಗಳಂತಿರುತ್ತವೆ. ತತ್ತ್ವಾಭಿವ್ಯಕ್ತಿಗೆ ಇವೆರಡೂ ಆವಶ್ಯಕ. ಪಂಚಕೃತ್ಯ ನಿರ್ವಹಣೆಗೆ ಪ್ರಪೂರಕ. ಇದರಿಂದಾಗಿ ಇವೆರಡರ ಉಪಾಸನೆ ಉಕ್ತವಾಗಿದೆ.

‘ವಿದ್ಯಾಂಚಾವಿದ್ಯಾಂಚ ಏತದ್ವೇದೋಭಯಗ್ಂ’।
ಅವಿದ್ಯಯಾ ಮೃತ್ಯುಂ ತೀರ್ತ್ವಾವಿದ್ಯಯಾ ಮೃತಮಶ್ನು ತೇ॥’

ಈಶಾವಾಸ್ಯವು ಈ ರೀತಿ ಪ್ರತಿಪಾದಿಸಿದೆ.

ವಿದ್ಯೆ ಪ್ರಕಾಶಕ, ಅವಿದ್ಯೆ ಪ್ರಚೋದಕ; ವಿದ್ಯೆ ಅಮೃತದಾಯಕ, ಅವಿದ್ಯೆ ಮೃತ್ಯು ಪ್ರತಾರಕ. ಅವಿದ್ಯೆ ಸೃಷ್ಟಿಗೆ ಕಾರಣವಾದಂತೆ ಸ್ಥಿತ್ಯಾದಿಗಳಿಗೂ

ಅನುಗ್ರಹಕ್ಕೂ ಕಾರಣವಾಗಿರುತ್ತದೆ. ಹೆತ್ತ ತಾಯಿ ಹೊತ್ತು ಸಲಹುವಂತೆ ಸಲಹುತ್ತದೆ. ಅಂತೆಯೇ ಅದರ ಉಪಾಸನೆ ಉಚಿತವಾಗಿದೆ. ಅವಿದ್ಯಾ (ಕ್ರಿಯಾ) ನಿರತನಿಗೆ ಕ.ಲ ಕರ್ಮಗಳ ಮಾಯೆ-ಮೋಹಗಳ ಸೋಂಕು ಸಮನಿಸುವುದಿಲ್ಲ.

ಜಗದ್ಗುರು ರೇಣುಕ ಶಿವಾಚಾರ್ಯರು ಹೇಳುವ ಅವಿದ್ಯೆ ಅದ್ವೈತಿಗಳು ಹೇಳುವ ಮಿಥ್ಯಾಭೂತವಾದ ಮಾಯೆಯಲ್ಲ. ಸಾಂಖ್ಯರು ಹೇಳುವ ಭಿನ್ನಾತ್ಮಕ ವಾದ ಪ್ರಕೃತಿಯಲ್ಲ. ಸಹಕಾರಿಣಿಯಾದ ಅಚಿತ್‌ಶಕ್ತಿ; ಅನೆ ಸಚ್ಛಕ್ತಿ. ಅದರಿಂದ ಈ ಸೃಷ್ಟಿ.

'ವಿದ್ಯಾವಿದ್ಯೇ ಈಶತೇ ಯಸ್ತು ಸೋಽನ್ಯಃ' ಶ್ವೇತಾಶ್ವತರೋಪನಿಷದುಕ್ತಿ ಯಂತೆ ವಿದ್ಯೆ ಅವಿದ್ಯೆಗಳೆರಡು. ಇವಕ್ಕೆ ಪ್ರೇರಕವಾದ ಪರವಸ್ತುವೊಂದಿದೆ. ಅದು ಅದಿ ಅನಾದಿಗಳಿಗೆ ಅತೀತವಾದ ವಸ್ತು. ಅತೀತವಾಗಿದ್ದರೂ ಅವು ಗಳಲ್ಲಿ ವ್ಯಾಪ್ತವಾದ ವಸ್ತು. ತತ್ಪದನಿಷ್ಠವಾದ ವಸ್ತು. ಅನಾದಿ ಅವಿದ್ಯೆಗೂ ಆದಿ ಅಂಗಕ್ಕೂ ಪ್ರೇರಕವಾದ ಪೂರಕವಾದ ವಸ್ತು. ಅದರಿಂದ ವಿದ್ಯಾವಿದ್ಯೆ ಗಳು. ಅದರಿಂದ ದೇವಜೀವಗಳು. ಜೀವ ಜಗತ್ತುಗಳ ಜನಕನಾತನು; ಶಾಸಕನಾತನು. ಸೂಕ್ಷ್ಮವಾದ ಚಿದಚಿದ್ವಿಶಿಷ್ಟನು. ಸರ್ವಕಾರಣನು. ಸ್ಥೂಲ ಚಿದಚಿದ್ವಿಶಿಷ್ಟವಾದುದೇ ಈ ಕಾರ್ಯ; ಈ ಜೀವ ಜಗತ್ತು.

ಅವಿದ್ಯೆಯ ನಿಲವಿದು: ಅವಿದ್ಯೆ ಅನಾದಿ. ಅನಾದಿ ಪದ ಲಕ್ಷಿತವಾದುದು ಅವಿದ್ಯೆ. ಮೂರ್ತಸ್ವರೂಪವಿಲ್ಲವಾಗಿ ಅದಕ್ಕೆ ಕಾಲಕಟ್ಟಳೆಯಿಲ್ಲ. ಅದಿರು ವುದು ಅಂಗೋತ್ಪತ್ತಿಗೆ ಮುನ್ನ. ಆದಿತ್ವವಿರುವಲ್ಲಿ ಮೂರ್ತಿತ್ವವಿದೆ. ಅನಾದಿ ಯಿಂದ ಆದಿಯಾದ ಅಂಗನುತ್ಪತ್ತಿ. 'ಅನಾದಿಯ ಮಗನು ಆದಿ. ಆದಿಯ ಮಗನತೀತ. ಅತೀತನ ಮಗನು ಆಕಾಶ. ಆಕಾಶದ ಮಗನು ವಾಯು. ವಾಯು ವಿನ ಮಗನಗ್ನಿ. ಅಗ್ನಿಯ ಮಗ ಅಪ್ಪು. ಅಪ್ಪುವಿನ ಮಗ ಪೃಥ್ವಿ. ಪೃಥ್ವಿಯಿಂದ ಸಕಲ ಜೀವರೆಲ್ಲರೂ ಉದ್ಭವ ಗೊಹೇಶ್ವರಾ.'–ಎಂಬೀ ವಚನವು 'ಅನಾದಿ'ಯ ನಿಲವನ್ನು ನಿಚ್ಚಳಗೊಳಿಸಿದೆ; ಅವಿದ್ಯಾ ಪದಕ್ಕೆ ಭಾಷ್ಯವನ್ನು ಬರೆದಂತಿದೆ.

ಅದಿಯಿಲ್ಲದುದು ಅನಾದಿ. ಆದಿಯುಳ್ಳುದಕ್ಕೆ ಅಂತ್ಯವಿದೆ. ಅದಿಯಿಲ್ಲ ದ್ದಕ್ಕೆ ಅಂತ್ಯವಿಲ್ಲ. ಅನಾದಿಯೆಂದರೆ ನಾಶವಿಲ್ಲುದು ; ಶಾಶ್ವತವಾದುದು.

"ಆ ಪ್ರಥಮಂ ದೀಯತೇ ಗೃಹ್ಯತೇ–ಆದಿಃ; ನ ಅದಿಃ–ಅನಾದಿಃ ಅಥವಾ ನ ವಿದ್ಯತೇ ಆದಿಃ ಯಸ್ಯಾ ಸಾ ಅನಾದಿ:' ಅಂದರೆ ಆದ್ಯಂತವಿಲ್ಲದ ಮಾಯೆಯಿಂದ ಕೂಡಿದ್ದಾನೆ ಆ ಪರಶಿವನು, 'ಮಾಯಾಂ ತು ಪ್ರಕೃತಿಂ ವಿಂದ್ಯಾನ್ಮಾಯಿನಂತು ಮಹೇಶ್ವರಃ' ಎಂದಿದೆ ಶ್ವೇತಾಶ್ವತರ ಶ್ರುತಿಯು. ಅಂತೆಯೇ ಜೀವನೂ ಸಹ ಅನಾದಿ ಅವಿದ್ಯೆಯೊಡನೆ ಸಂಬಂಧವುಳ್ಳವನಾಗಿದ್ದಾನೆ. ಜೀವಲೋಕಕ್ಕೆಲ್ಲ ಅನಾದಿ ಅವಿದ್ಯೆಯೇ ಮಾತೃಸ್ಥಾನದಲ್ಲಿದಾಳೆ. 'ಶರಣು ಶರಣಾರ್ಥಿ ಎಲೆ ತಾಯೆ; ಧರೆಯಾಕಾಶ ಮನೆಗಟ್ಟದಂದು, ಹರಿವನಿಲ ಅಗ್ನಿ ಜಲ ಮೊಳೆದೋರ ದಂದು ಹುಟ್ಟಿದಳೆಮ್ಮವ್ವೆ. ಅದಕ್ಕೆ ಮುನ್ನವೆ ಹುಟ್ಟದೆ ಬೆಳೆದನೆಮ್ಮಯ್ಯ. ಈ ಇಬ್ಬರ ಬಸುರಲ್ಲಿ ಬಂದೆ ನಾನು.' ಈ ವಚನದಲ್ಲಿ ಪ್ರಭುದೇವರು ಅವಿದ್ಯೆಯ ಅನಾದಿತ್ವವನ್ನು ಅಭಿವ್ಯಕ್ತಗೊಳಿಸಿದ್ದಾನೆ. ಜತೆಗೆ ಜೀವನಿಗೆ ಅವಿದ್ಯಾಸಂಬಂಧ ವನ್ನು ತದಂಶತ್ವವನ್ನು ತಾ ಬಂದುದನ್ನು ಹೇಳುವ ನೆಪದಲ್ಲಿ ನಿರ್ದಿಷ್ಟಗೊಳಿ ಸಿದ್ದಾನೆ.

'ಕಾಯದ ಮೊದಲಿಂಗೆ ಬೀಜವಾವುದೆಂರಿಯದೀ ಲೋಕ.
ಇಂದ್ರಿಯಂಗಳು ಬೀಜವಲ್ಲ. ಆ ಕಳಾಭೇದವಲ್ಲ.
ಸ್ವಪ್ನಬಂದೆರಗಿತ್ತಲ್ಲ.
ಇದಾವಂಗೂ ಶುದ್ಧ ಸಯಿಧಾನವಲ್ಲ ಕಾಣಾ ಗೊಗ್ಗೇಶ್ವರ!'

ತದಂಶವಾದ ಆ ಚಿತ್ಕಳಾ ಚೈತನ್ಯವು ಕಾಯಗೊಂಡು ಜೀವನೆನಿಸಲು ಕಾರಣ ಇಂದ್ರಿಯಗಳಲ್ಲ; ಮತ್ತು ಆ ಆತ್ಮ ಕಳೆಯೂ ಅಲ್ಲ. ಈ ಇಂದ್ರಿಯಗಳು ಜಡ. ಆ ಆತ್ಮ ಕಳೆಯು ಅಜಡ, ಚಿದ್ರೂಪ; ನಿಷ್ಕಲ. ಇದರಿಂದಾಗಿ ಇವೆ ರಡೂ ಕಾರಣವಲ್ಲ. ಸ್ವಪ್ನರೂಪ ಅವಿದ್ಯೆ (ಅಜ್ಞಾನವೇ) ಕಾರಣ. ಈ ಅವಿದ್ಯೆ ಶಾಶ್ವತವಲ್ಲ; ಶುದ್ಧವಾದ ಆಹಾರವೂ ಅಲ್ಲ.

ಅವಿದ್ಯೆಗೆ ಅಜ್ಞಾನವೆಂಬುದೂ ಒಂದರ್ಥ. ಇದು ಅನಾದಿಯೆಂದರೆ ಮೊದಲಿಲ್ಲದ್ದು, ಅಥವಾ ಮೂಲವಿಲ್ಲದ್ದು. ಈ ಆಗಂತುಕ ಅಜ್ಞಾನವು ಜೀವತ್ವಕ್ಕೆ ಕಾರಣವಾಗಿದೆ. 'ಅನಾದ್ಯಜ್ಞಾನ ವಾಸನಾವಷ್ಟಂಭ ವಿಜೃಂಭಿತ ವಿಚಿತ್ರ ಕರ್ಮ ಫಲಭೋಗಾನುಗುಣ ಬಹು ಶರೀರ ಪ್ರವೇಶ ನಿರ್ಗಮ ವ್ಯಾಪಾರ ಪರವಶ

ನಿಸ್ಸೀಮತಾಪಸಹಿಷ್ಣುತ್ವಂ ಹಿ ಜೀವತ್ವಂ' ಎಂದು ಶ್ರೀಕಂಠಶಿವಾಚಾರ್ಯರು ತಮ್ಮ ಬ್ರಹ್ಮಮೀಮಾಂಸೆಯ ಭಾಷ್ಯದಲ್ಲಿ ಈ ಸಿದ್ಧಾಂತ ಶಿಖಾಮಣಿಯ ಈ ಶ್ಲೋಕಕ್ಕೆ ಅನುಗುಣವಾಗಿ ಜೀವತ್ವ ಲಕ್ಷಣವನ್ನು ಹೇಳಿದ್ದಾರೆ. 'ಜೀವಯ ತೀತಿ ಜೀವಃ' ಅಸುಗಳನ್ನು ಧಾರಣ ಮಾಡಿದವನೇ ಜೀವನಾಮಕನು. ಜೀವನ ಕಾರಣನು ಜೀವನು. ಇಪತ್ತಯ್ದು ತತ್ತ್ವಗಳನ್ನು ಜೀವಿಸುವಂತೆ ಮಾಡುವ ವನಾಗಿ ಜೀವನೆಂದೆನಿಸಿದ್ದಾನೆ. ಅವಿದ್ಯಾಕಾರ್ಯವಾಗಿದ್ದಾನೆ.

ಈ ಜೀವನು ಆ ಶಿವನ ಅಂಶನಾಗಿದಾನೆ; ಅನೇಕನಾಗಿದಾನೆ. 'ಅಂಶೋ ನಾನಾ ವ್ಯಪದೇಶಾತ್' ಎಂಬುದಾಗಿ ಬ್ರಹ್ಮಸೂತ್ರವು ಈ ಮಾತಿಗೆ ಸಾಕ್ಷಿ ಯಾಗಿದೆ. ಮತ್ತು 'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾ ತನಃ' ಎಂಬ ಶ್ರುತ್ಯುಕ್ತಿಯೂ ಸಹಕಾರಿಯಾಗಿದೆ. 'ಏನೆಂದೆನಲಿಲ್ಲದ ಮಹಾ ಘನವು ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತ್ತು. ಆ ಲಿಂಗ ದಿಂದಾಯಿತ್ತು ಶಿವಶಕ್ತ್ಯಾತ್ಮಕ. ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ. ಆತ್ಮನಿಂದಾದುದು ಆಕಾಶ. ಆಕಾಶದಿಂದಾದುದು ವಾಯು. ವಾಯುವಿ ನಿಂದಾದುದು ಅಗ್ನಿ. ಅಗ್ನಿಯಿಂದಾದುದು ಅಪ್ಪು. ಇವೆಲ್ಲಾ ನಿಮ್ಮ ನೆನಹು ಮಾತ್ರದಿಂದಾದವು ಚೆನ್ನಮಲ್ಲಿಗೆಯ ಚೆನ್ನರಾಮಾ'.

ತದಂಶ ಪದಕ್ಕೆ ಈ ವಚನ ಸರಿಯಾದ ವಿವರಣೆಯನ್ನಿತ್ತಿದೆ. ಇದರಿಂದ ಅಂದರೆ 'ತನ್ನ ಲೀಲೆಯಿಂದ ತಾನೇ ಸ್ವಯಂಭು ಲಿಂಗವಾಯಿತ್ತು.' ಎಂದಿರು ವುದರಿಂದ 'ತಸ್ಯ ಅಂಶಃ' ಎಂದು ಷಷ್ಠೀ ಸಮಾಸವನ್ನಾಗಲಿ ಅತ್ಯಂತ ಭೇದ ಸೂಚಕಾರ್ಥವನ್ನಾಗಲಿ 'ತದಂಶ' ಪದಕ್ಕೆ ಮಾಡಲು ಸಾಧ್ಯವಿಲ್ಲ. ತದಂಶ ವೆಂದರೆ ಸ್ವಗತ ಭೇದವೆಂದರ್ಥ. ವಿಜಾತೀಯ ಭೇದವಲ್ಲ. ಸ್ವರ್ಣಾಭರಣ ದಂತೆ ಸಾಗರ ತರಂಗದಂತೆ ವೃಕ್ಷಪತ್ರ ಪುಷ್ಪ ಫಲಗಳಂತೆ ಪರಶಿವನಿಗೂ ಜೀವ ಜಗತ್ತುಗಳಿಗೂ ಅಂಶವನ್ನು ಅಂಗೀಕರಿಸಲಾಗಿದೆ.

ಕೇವಲಾದ್ವೈತದಲ್ಲಿ ಅಂಶವಾದವಿಲ್ಲ. ನಿರವಯ ವಸ್ತುವಿಗೆ ಅಂಶವಾದವು ಘಟಿಸದೆಂದು ಅವರ ಹೇಳಿಕೆ; ಅವರ ತಿಳುವಳಿಕೆ. 'ಆದ್ದರಿಂದ ಜೀವೋ ಬ್ರಹ್ಮೈವ ನಾಪರಃ' ಎಂದು ಅವರ ಸಿದ್ಧಾಂತ. ಇದು ಶಿವಾದ್ವೈತಕ್ಕೆ ಒಪ್ಪಿತವಲ್ಲ. ನಿರವಯವ ವಸ್ತುವಿನಲ್ಲಿಯೂ ಅಂಶತ್ವ ಪ್ರತೀತಿಯಿದೆ. ನಿದರ್ಶನಕ್ಕಾಗಿ ಆಕಾಶ ನಿರವಯವಾದರೂ ಘಟಾಕಾಶ, ಮಠಾಕಾಶ ರೂಪ

ಗಳಲ್ಲಿ ಅಂಶತ್ವ ಪ್ರತೀತಿಯಿದೆ. ಅಂಶತ್ವ ಪ್ರತೀತಿಯಿದ್ದರೂ ಅತ್ಯಂತ ಭೇದವಲ್ಲ; ಅತ್ಯಂತ ಅಭೇದವೂ ಅಲ್ಲ. ಭೇದಾಭೇದರೂಪ ಅಂಶತ್ವವಿದೆ. ಇದನ್ನು ಶಿವಾದ್ವೈತಿಗಳು ಒಪ್ಪಿದ್ದಾರೆ. ಆದ್ದರಿಂದ 'ತದಂಶ'ವೆಂದು ಹೇಳುವಲ್ಲಿ ವಿರೋಧವಿಲ್ಲ. 'ಸ್ವಶಕ್ತಿಕ್ಷೋಭವಾತ್ರೇಣಸ್ಥಲಂ ದ್ವಿವಿಧಂ ಭವೇತ್' ಎಂದು ಅನುಭವ ಸೂತ್ರವು ಸಹ ಸಾಕ್ಷಿಯಾಗಿದೆ.

'ಜೀವನಾಮಕಃ' ಪದದ ವಿಚಾರ. ಅವಿದ್ಯಾ ಸಂಬಂಧದಿಂದ ಆ ದೇವನೇ ಜೀವವೆಂದೆನಿಸುತ್ತಾನೆ. ಅವಿದ್ಯೆಗಿರುವ ಅನಾದಿ ಸಂಬಂಧವು ಜೀವ ನಿಗೂ ಜತೆಗೂಡಿ ಬರುವುದು. ಇದರಿಂದ ಶಬ್ದಕ್ಕೊಳಗಾಗುತ್ತಾನೆ; ಜೀವ ನಾಮನಾಗುತ್ತಾನೆ. ಒಟ್ಟನಲ್ಲಿ ಜೀವವೆನಿಸಲು ಅನಾದಿ ವಿಶೇಷಣ ವಿಶಿಷ್ಟ ಅವಿದ್ಯೆಯ ಸಂಬಂಧವೇ ಕಾರಣ. ಅಪೂರ್ಣ ಅಥವಾ ಸ್ಥೂಲಾಹಂಭಾವವೇ ಜೀವ. ತ್ರಿವಿಧ ಮಲಯುಕ್ತವಾದುದೇ ಜೀವ; ತ್ರಿವಿಧ ಮಲಯುಕ್ತವಾಗ ದುದೇ ದೇವ. ಪಂಚಕಂಚುಕಗಳಿಂದ ಕೂಡಿದವನೇ ಜೀವ; ಕಂಚುಕ ಗಳಿಂದ ಕೂಡದವನೇ ಶಿವ. ಸಾತಿಶಯ ಸುಖಿ ಜೀವ. ನಿರತಿಶಯ ಸುಖಿ ಶಿವ.

ಕೇವಲಾದ್ವೈತದಲ್ಲಿ ಪ್ರಾಜ್ಞಾದಿ ಜೀವತ್ರಯರನ್ನು ಹೇಳುವಂತೆ ಶಿವಾ ದ್ವೈತದಲ್ಲಿ ಪಿಂಡತ್ರಯರನ್ನು ಹೇಳಲಾಗುತ್ತದೆ. ಅನಾದಿ ಪಿಂಡ, ಮಧ್ಯ ಪಿಂಡ, ಆದಿ ಪಿಂಡವೆಂದು ಹೆಸರು. ಚಿತ್ಪಿಂಡವೆ ಅನಾದಿ ಪಿಂಡ. ಇದು ಶಿವತತ್ತ್ವವನ್ನು ಬಿಟ್ಟು ಅದೆಂದಿಗೂ ಅಗಲದು. ಚಿನ್ನ ಬಣ್ಣದಂತೆ ಎಂದೆಂದಿಗೂ ಹೊಂದಿರುವುದು. ಇನ್ನು ಮಧ್ಯ ಪಿಂಡವನ್ನು ಸುಜ್ಞಾನ ಪಿಂಡವೆಂದು, ಆದಿ ಪಿಂಡವನ್ನು ಜೀವ ಪಿಂಡವೆಂದು ಹೇಳುವರು. ಮಧ್ಯ ಪಿಂಡವು ಕಾಯವಿದ್ದು ಕಾಯವಿಲ್ಲದಂತಿರುತ್ತದೆ. ದೇಹದ ಗುಣಧರ್ಮಗಳಿಂದ ದೂರಾಗಿರುತ್ತದೆ. ಇದೇ ಜೀವನ್ಮುಕ್ತಿಯ ಸ್ಥಿತಿ. ಸುಜ್ಞಾನವೆಂಬ ಪರುಷ ವನ್ನು ಸೋಂಕಿ ಕಾಯವು ತನ್ನ ಕರ್ಮವನ್ನು ಕಳಚಿ ಹಾಕಿರುತ್ತದೆ. ಪ್ರಾಪಂಚಿಕ ಪ್ರಕೃತಿ ಭಾವವನ್ನು ಪರಿಹರಿಸಿ ಪಾರಮಾರ್ಥಿಕ ಪ್ರಸಾದ ಸ್ವರೂಪ ವನ್ನು ಪಡೆದಿರುತ್ತದೆ. ಶ್ರೀ ಜಗದ್ಗುರು ರೇಣುಕರದು ಪ್ರಸಾದ ಪಿಂಡವಾಗಿತ್ತು. ಸ್ವಚ್ಛಂದ ಸಂಚರಣಶೀಲವಾಗಿತ್ತು. ಅಂತೆಯೇ ಪ್ರಮಥಪುಂಗವ ಬಸವಣ್ಣನ ಕಾಯವೂ ಪ್ರಸಾದ ಪಿಂಡವಾಗಿತ್ತು. ಶುದ್ಧ ಸುಯಿಧಾನವಾಗಿತ್ತು.

ಇನ್ನು ಆದಿಪಿಂಡವೆನಿಸಿದ ಜೀವನು ದೇಹಧರ್ಮಗಳನ್ನು ಹಿಡಿದು ಚರಿಸುವನು. ಭವಭವಗಳಿಗೆ ಅಂದರೆ ಜನ್ಮಜನ್ಮಗಳಿಗೆ ಬರುವನು. ಅಂಡಜ, ಪಿಂಡಜ, ಬಿಂದುಜ, ಜರಾಯುಜಾದಿ ಗರ್ಭಗಳಲ್ಲಿ ಜನಿಸುವನು. ದೇವತಿರ್ಯಙ್ಮನುಷ್ಯಾದಿ ಜಾತಿ ವಿಜಾತಿಗಳಿಗೆ ಒಳಗಾಗುವನು. ಮಂತ್ರದಲ್ಲಿ ಜಾತಿಪದ ಬಹು ವಿಶಾಲಾರ್ಥದಲ್ಲಿ ಉಕ್ತವಾಗಿದೆ. ಶ್ರೀ ರೇಣುಕರ ದೃಷ್ಟಿಯಲ್ಲಿ ದೇವಕುಲ ಒಂದು ಜಾತಿ, ತಿರ್ಯಕ್ ಇನ್ನೊಂದು ಜಾತಿ; ಮನುಷ್ಯಾದಿ ಮತ್ತೊಂದು ಜಾತಿ. ಮಾನವರೆಲ್ಲರೂ ಒಂದು ಜಾತಿ; ಮಾನವತ್ವ ಜಾತಿ. ದೇವತಿರ್ಯಙ್ಮನುಷ್ಯಾದಿ ಎಂಬಲ್ಲಿ ಆದಿ ಪದದಿಂದ ಏಳು ಲಕ್ಷ ಜೀವಜಂತುಗಳು ಉಪಲಕ್ಷಿತವಾಗುತ್ತವೆ.

'ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ ;
ಎಂಬತ್ತುನಾಲ್ಕು ಲಕ್ಷ ಯೋನಿಯೊಳಗೆ ಬಂದೆ ಬಂದೆ !
ಬಾರದ ಭವಂಗಳನುಂಡೆನುಂಡೆ !
ಶುಭಾಶುಭಂಗಳ ಕಂಡೆ ಕಂಡೆ !
ಹಿಂದಣ ಜನ್ಮಗಳೇನಾದರೂ ಆಗಲಿ ;
ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನಾ !'

'ತದೇತ್ಸತ್ಯಂ ಯಥಾ ಸುದೀಪ್ತಾತ್ಪಾವಕಾದಿ ಸ್ಫುಲಿಂಗಾಃ
ಸಹಸ್ರಶಃ ಪ್ರಭವಂತೇ ಸರೂಪಾಃ । ತಥಾಕ್ಷರಾದ್ವಿವಿಧಾಃ
ಸೋಮ್ಯ ಭಾವಾಃ ಪ್ರಜಾಯಂತೇ ತತ್ರಚೈವಾಪಿಯಂತಿ ॥'

—ಮುಂಡಕಶ್ರುತಿ.

ಎಂಬ ನಾಲ್ಕು ಲಕ್ಷ ಯೋನಿಗಳ ವಿವರ ಸ್ಕಾಂದ ಪುರಾಣದಲ್ಲಿ ಹೀಗೆ ಹೇಳಿದೆ. ದೇವತೆಗಳಲ್ಲಿ ೧೬ ಲಕ್ಷ; ಮಾನವರಲ್ಲಿ ೯ ಲಕ್ಷ, ಜಲದ ಪ್ರಾಣಿಗಳಲ್ಲಿ ೧೦ ಲಕ್ಷ, ಪಕ್ಷಿಗಳಲ್ಲಿ ೧೦ ಲಕ್ಷ, ಪಶುಗಳಲ್ಲಿ ೧೦ ಲಕ್ಷ, ಸರ್ಪಗಳಲ್ಲಿ ೧೧ ಲಕ್ಷ, ಸ್ಥಾವರಗಳಲ್ಲಿ ೧೮ ಲಕ್ಷ,–ಅಂತು ೮೪ ಲಕ್ಷ. ಹೀಗೆ ಜೀವ ಪ್ರವಾಹದಲ್ಲಿ ಸಿಕ್ಕು ಕೊಚ್ಚಿ ಹೋಗುವ ಜೀವನಿಗೆ ಆಧಾರವೆಂದರೆ ಪ್ರೇರಕನಾದ ಮಹೇಶ್ವರನೊಬ್ಬನೇ! ಜನ್ಮ ನಿವೃತ್ತಿಯಾಗುವಂತೆ ಜೀವನ ಬುದ್ಧಿಗೆ ಪ್ರೇರೇಪಣೆ

ಯನ್ನಿತ್ತು ಸುಜ್ಞಾನವನ್ನು ಕರುಣಿಸಿ ಭವಭವಕ್ಕೆ ಬಾರದಂತೆ ಅನುಗ್ರಹಿಸ ಬೇಕಾದ ಸಮರ್ಥನವನು. ಆದ್ದರಿಂದ ಆತ ಮಹೇಶ್ವರ.

ಆದಿ ಪಿಂಡವು (ಜೀವನ) ಸ್ಥೂಲಪಿಂಡ, ಸೂಕ್ಷ್ಮಪಿಂಡ, ಕಾರಣಪಿಂಡ ವೆಂದು ಮೂರೆರನಾಗಿದೆ. ಇವನ್ನೇ ವಿಶ್ವ ತೈಜಸ ಪ್ರಾಜ್ಞರೆಂದು ಹೇಳುತ್ತಾರೆ. 'ಜೀವನು ಆಶಾಪಾಶ, ಕ್ಲೇಶಪಾಶ, ಮೋಹಪಾಶ, ಭವಪಾಶವೆಂಬ ಚತುಃ ಪಾಶಂಗಳಲ್ಲಿ ಬಿಗಿವೊಡೆದಿರುವಂತಹ ಬದ್ಧಜೀವನು. ಬಹಿರಂಗ ಷಟ್‌ಕೃಷಿ ವ್ಯಾಪಾರಂಗಳೊಡನೆ ಕೂಡಿ ಚರಿಸಲು ಅವತಾನೆ ವಿಶ್ವನೆಂಬ ಬದ್ಧಜೀವನೆನಿಸಿ ಕೊಂಬನು. ಬದ್ಧ ಜೀವನು ತೈಜಸ ಸಂಬಂಧದಿಂ ಎಂದರೆ ಇಂದ್ರಿಯ ಸಂಬಂಧವಾದ ವಿಷಯಂಗಳೊಡನೆ ಕೂಡಿ ಚರಿಸಲು ತೈಜಸ ಜೀವನೆಂದೇ ಹೇಳಿಸಿಕೊಂಡನು. ತೈಜಸ ಜೀವನೆಂದೂ ಇಂದ್ರಿಯ ಜೀವನೆಂದೂ ಸ್ವಪ್ನಗ್ರಾಹಕನೆಂದೂ ಒಂದೇ ನಾಮ ಪರ್ಯಾಯಂಗಳಾಗಿಪ್ಪವು. ಬದ್ಧಜೀವನು ಲೇಸಾಗಿ ಕತ್ತಲೆಯೊಳಗೆ ಕಾರಣ ತನುವಿನ ಮರೆವೆಯಲ್ಲಿರ್ದ ನಾಗಿ ಮಗ್ನನಾಗಿರ್ದ ಕಾರಣ ಪ್ರಾಜ್ಞ ಜೀವನೆಂದೇ ಹೇಳಿಸಿಕೊಂಡನು. ಇವು ತಾವೇ ಜೀವತ್ರಯಂಗಳ ಭೇದದ ಹಸಿಗೆಯ ವಿಚಾರವನ್ನು ತಿಳಿದುಕೊಂಬುದು ತತ್ತ್ವಜ್ಞಾನಿಗಳು,' ಎಂದು ವಚನ ಶಾಸ್ತ್ರಸಾರ ಭಾಗ ೨ ರಲ್ಲಿ ನಿರ್ವಚಿಸ ಲಾಗಿದೆ.

ದ್ರೋಹದ ಮೋಹದ ವ್ಯಾಪಾರಗಳನ್ನು ಬಿಟ್ಟು ಧರ್ಮಾಚಾರ ಸದಾ ಚಾರಗಳಲ್ಲಿ ನಿರತನಾದರೆ ಬದ್ಧಜೀವನು ಶುದ್ಧಜೀವನಾಗುತ್ತಾನೆ. ಇಂದ್ರಿಯ ವಿಷಯಗಳ ಸಂಬಂಧವನ್ನು ಬಿಟ್ಟರೆ ತೇಜಸ್ವಿಯಾಗುತ್ತಾನೆ. ಮರವೆಯನ್ನು ಹರಿದರೆ ತತ್ತ್ವಜ್ಞಾನಿಯೆನಿಸಿ ಪ್ರಾಜ್ಞನು ಮುಂದೆ ಮಧ್ಯಪಿಂಡನಾಗಲು ಸಮರ್ಥನಾಗುತ್ತಾನೆ. ಆಗ ಮಹೇಶನ ಸತ್ಪ್ರೇರಣೆಯುಂಟಾಗಿ ಮರಳಿ ಮೊದಲಿ ನಂತೆ ಚಿತ್ಪಿಂಡನೆನಿಸುವನು. ಹಾಗೆ ಮಾಡಲು ಹೃದಯಸ್ಥನಾಗಿರುವನು ಮಹೇಶ್ವರನು. ಸತ್ವಶಾಲಿಯಾತನು. ಮಾಯಿಗೆ ಮಹೇಶ್ವರನಾತನು. ಸರ್ವಜೀವ ಪ್ರೇರಕನಾತನು. ಅಗಲಿ ಬಂದ ಜೀವನನ್ನು ಅಗಲದಂತೆ ಅವಿರಳವಾಗುವ ಸತ್ಪಥದಲ್ಲಿ ಮುಂದಿನ ಶತಪಥದಲ್ಲಿ ನಡೆಯಿಸುವಾತನು. ಆ ಮಹೇಶನು ಮುಂದಿನ ನೂರು ನೆಲೆಗಳ ನಿಯಾಮಕನು. ಪ್ರೇರಕನೂ ಆದ ಆ

ಪರಶಿವನೆಂಬ ಮಹೇಶನು ಈ ಪಿಂಡದೊಳಗೆ ಹೇಗಿರುವನೆಂಬುದನ್ನು ಮುಂದಿನ ಮಂತ್ರದಲ್ಲಿ ಶ್ರೀ ರೇಣುಕ ಜಗದ್ಗುರುವು ಹೀಗೆ ಹೇಳಿದಾನೆ:

"ಚಂದ್ರಕಾಂತೇ ಯಥಾ ತೋಯಂ ಸೂರ್ಯಕಾಂತೇ ಯಥಾಽನಲಃ |
ಬೀಜೇ ಯಥಾಂಕುರಃ ಸಿದ್ಧಸ್ತಥಾತ್ಮನಿ ಶಿವಃ ಸ್ಮೃತಃ||"

ಹಾಲುಗಲ್ಲು ಅಂದರೆ ಅಮೃತಶಿಲೆಯಲ್ಲಿ ನೀರು, ನೇಸರ್ಗಲ್ಲು ಅಂದರೆ ಸ್ಫಟಿಕ ಶಿಲೆಯಲ್ಲಿ ಉರಿ, ಬಿತ್ತುವಿನಲ್ಲಿ ಮೊಳಕೆ ಹೇಗಿರುವವೋ ಹಾಗೆ ಪಿಂಡವೆನಿಸಿದ ಆತ್ಮನಲ್ಲಿ ಪರಮಾತ್ಮನು ಅವ್ಯಕ್ತನಾಗಿ ಪ್ರೇರಕನಾಗಿ ಸಿದ್ಧನಾಗಿ ಇರುವನು. ನಿಷ್ಪನ್ನನಾಗಿ ನಿಗೂಢನಾಗಿರುವನು.

ಈ ಶ್ಲೋಕಾರ್ಥವನ್ನೇ ಸೂಚಿಸುವ ವಚನಗಳಿವು :

'ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನ ಆರೂ ಕಾಣದಂತಿರಿಸಿದೆ. ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯ ರಾಮನಾಥ'

—ದೇವ ದಾಸಮಯ್ಯ.

'ಉದಕದೊಳಗೆ ಬಯಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು. ಸಸಿಯೊಳಗಣ ರಸದ ರುಚಿಯಂತಿದ್ದಿತ್ತು. ನನೆಯೊಳಗಣ ಪರಿಮಳದಂತಿದ್ದಿತ್ತು. ಕೂಡಲ ಸಂಗಮದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು.'—ಬಸವಣ್ಣ.

ಪಿಂಡಾತ್ಮನಲ್ಲಿ ಪರಮಾತ್ಮನಿರುವ ನಿಲವಿದು. ಭಾವದ ಮರೆಯ ಬ್ರಹ್ಮವಾಗಿಪ್ಪ ಪರಶಿವಬ್ರಹ್ಮನು ಭಾವದಲ್ಲಿರುವ ಬೆಡಗಿದು.

ನಾಮರೂಪಕ್ರಿಯೆಗಳಿಂದ ವ್ಯಕ್ತನಾಗಿದ್ದಾನೆ ಆತ್ಮ; ಅವ್ಯಕ್ತನಾಗಿದ್ದಾನೆ ಪರಮಾತ್ಮ. ಗುಣ ಗಾತ್ರಾದಿಗಳಿಗೆ ಒಳಗಾಗಿದ್ದಾನೆ ಆತ್ಮ ; ಒಳಗಾಗದಂತಿದ್ದಾನೆ ಪರಮಾತ್ಮ. ಹೀಗಿದ್ದರೂ ವಸ್ತು ಒಂದು ! ಹಾಲುಗಲ್ಲು-ನೀರು, ನೇಸರ್ಗಲ್ಲು ಉರಿ, ಬಿತ್ತು ಮೊಳಕೆಗಳಲ್ಲಿರುವಂತೆ ಭೇದಾಭೇದ ಸ್ವರೂಪು ಆತ್ಮ ಪರಮಾತ್ಮರಲ್ಲಿದೆ. ಆತ್ಮ ಬಹಿರಂಗ; ಪರಮಾತ್ಮ ಅಂತರಂಗ. 'ಪೃಥ್ವಿಯೇ ಬಹಿರಂಗ, ಆಕಾಶವೇ ಅಂತರಂಗ. ಆ ಅಂತರಂಗವಪ್ಪ ಆಕಾಶದಲ್ಲಿ ನೀನಿರ್ಪೆ. ಬಹಿರಂಗವಪ್ಪ ಪೃಥ್ವಿಯಲ್ಲಿ ನಾನಿರ್ಪೆನು. ಅಂತರಂಗ

ಜ್ಞಾನವು ನಿನಗೆ ; ಬಹಿರ್ಜ್ಞಾನವೆನಗೆ. ನೀನು ಅಂತರಂಗದಲ್ಲಿ ಆನಂದಿಸುತ್ತಿರುವೆ ; ನಾನು ಬಹಿರಂಗದಲ್ಲಿ ಆನಂದಿಸುತ್ತಿರ್ಪೆನು. ನಿನಗೆ ಅಂತರಂಗಮೇ ನಿಜಮಾಗಿರ್ಪುದು ; ಎನಗೆ ಬಹಿರಂಗಮೇ ನಿಜಮಾಗಿರ್ಪುದು. ನೀನು ಅಂತರಂಗದಲ್ಲಿ ನಡೆವುತ್ತಿರ್ಪೆ ; ನಾನು ಬಹಿರಂಗದಲ್ಲಿ ನಡೆವುತ್ತಿರ್ಪೆನು. ಅಂತರಂಗದಲ್ಲಿ ನೋಟವು ನಿನಗೆ ; ಬಹಿರಂಗದಲ್ಲಿ ನೋಟವೆನಗೆ. ನಿನ್ನ ಸತ್ವವೆನ್ನ ಬಹಿರಂಗವನಾವರಿಸಿ ಎನ್ನಂ ಮೋಹಿಸುತಿರ್ಪುದು. ಎನ್ನ ಮನವು ನಿನ್ನ ಅಂತರಂಗವನಾವರಿಸಿ ನಿನಗೆ ಆಗ್ರಹವಂ ಪುಟ್ಟಿಸುತ್ತಿಹುದು. ನಿನಗೆ ಅಂತಃಶಕ್ತಿಯಾದ ಕಾರಣ ನನ್ನ ತಮಸ್ಸನ್ನು ನಿನ್ನ ಕೈವಶ ಮಾಡಿಕೊಂಡು ಅದರಿಂದಲೇ ನನ್ನಂ ಸಂಹರಿಸುತ್ತಿರುವೆ. ನನಗೆ ಶಕ್ತಿ ಬಾಹ್ಯವಾದ ಕಾರಣ ನಿನ್ನ ಸತ್ವಗುಣವಂ ನಾನು ಪರಿಗ್ರಹಿಸಲಾರದೆ ಲಯವನೈದುತ್ತಿರ್ಪ ಸಕೀಲವನ್ನು ನಿನ್ನಿಂದ ನಾನು ಕಂಡಲ್ಲಿ ನಿನಗೆ ಅಂತರಂಗವಾಗಿರ್ಪವನು ನಾನೆಂದು ನೀನು ಕಂಡಿರಯ್ಯಾ. ಬಹಿರಂಗದಲ್ಲಿ ನೀನು ಎನಗೆ ಆಧಾರಮಾದಲ್ಲಿ, ಅಂತರಂಗದಲ್ಲಿ ನಿನಗೆ ನಾನೇ ಆಧಾರವಾದೆನಯ್ಯಾ. ಬಹಿರಂಗದಲ್ಲಿ ನೀನೆನಗೆ ಶಕ್ತಿಯಾದಲ್ಲಿ ಅಂತರಂಗದಲ್ಲಿ ನಿನಗೆ ನಾನೇ ಶಕ್ತಿಯಾದೆನಯ್ಯಾ. ತಮೋಗುಣಂ ಪಿಡಿದು ನನ್ನಂ ನೀನಾಡಿಸಿದೊಡೆ, ಸತ್ವ ಗುಣವಂ ಪಿಡಿದು ನಿನ್ನಂ ನಾನಾಡಿಸುತ್ತಿರ್ಪೆನಯ್ಯಾ. ಕರ್ಪುರವಪ್ಪಿದುರಿಯಾದೆ ಮಹಾ ಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ'.

'ಶಬ್ದ ಮಧ್ಯದಲ್ಲಿರ್ಪ ಅರ್ಥವೇ ಜೀವನುತಮೋರೂಪಮಾಗಿಹನು. ಜ್ಞಾನದಲ್ಲಿರ್ಪ ಅರ್ಥವೇ ಪರಮನು ಸತ್ವರೂಪಮಾಗಿಹನು. ಜ್ಞಾನಶರೀರದಲ್ಲಿರ್ಪ ಪರಮಾರ್ಥ ಭಾವನೆಂಬ ಹಸ್ತದಲ್ಲಿ ಬುದ್ಧಿಯೆಂಬ ತ್ರಿಗಣಾತ್ಮಕಮಪ್ಪ ಮುನ್ಮೊನೆಯಲಗಂ ಪಿಡಿದು ಆ ಶಬ್ದಶರೀರಮಂ ಭೇದಿಸಿ ತನ್ಮಧ್ಯದಲ್ಲಿರ್ಪ ಅರ್ಥವನ್ನು ಅಜ್ಞಾನವು ಗ್ರಹಿಸಿದಲ್ಲಿ, ಜ್ಞಾನಾರ್ಥದೊಳಗೆ ಬೆರೆದು ಎರಡೂ ಒಂದಾಗಿ, ಆ ಅರ್ಥವೇ ಸತ್ಯವಾಗಿ ಆನಂದಮಯಮಪ್ಪುದು. ಜ್ಞಾನವು ಗ್ರಹಿಸದೆ ಬಿಟ್ಟರೆ ಶಬ್ದಾರ್ಥವೇ ದುರರ್ಥಮಾಗಿ ಸೃಷ್ಟಿ ಸ್ಥಿತಿ ಸಂಹಾರಂಗಳಲ್ಲಿ ಕೋಟಲೆಗೊಳ್ಳುತ್ತಿರ್ಪುದೇ ಜೀವನು ; ಅದೇ ಪರಮನು ತತ್ಪರಿಗ್ರಹವೇ ಐಕ್ಯಮಾದಲ್ಲಿ ಎರಡೂ ಒಂದೆ ಆಗಿರ್ಪುದು ಕಾಣಾ ಮಹಾ ಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ'.

ಇದು ಆತ್ಮ-ಪರಮಾತ್ಮರ ವಿಶ್ಲೇಷ ಮತ್ತು ಸಂಶ್ಲೇಷ ; ಶಬ್ದದಂತೆ ಆತ್ಮ, ಜ್ಞಾನದಂತೆ ಪರಮಾತ್ಮ. ಶಬ್ದ ಮತ್ತು ಜ್ಞಾನಗಳೆರಡರಲ್ಲಿರುವ ಅರ್ಥರೂಪರು ಇಬ್ಬರು. ಶಬ್ದ - ಜ್ಞಾನಗಳಿಂದ ಭಿನ್ನರಾಗಿದ್ದರೂ ಅರ್ಥ ರೂಪದಲ್ಲಿ ಅಭಿನ್ನರಾಗಿದ್ದಾರೆ. ಶಬ್ದ ಬಹಿರಂಗ, ಜ್ಞಾನ ಅಂತರಂಗ ; ಅರ್ಥ ಸಮರಸಾಂಗ. ಈ ನಿದರ್ಶನದಿಂದ ಆತ್ಮ - ಪರಮಾತ್ಮರ ಭಿನ್ನಾಭಿನ್ನ ಸ್ವರೂಪವನ್ನು ಸರಸವಾಗಿ ವಚನಕಾರನು ಗುರವಾಗಿ ವಿವರಿಸಿ ಮನಂಬುಗುವಂತೆ ಮಾಡಿದ್ದಾನೆ. ಇದು ಗುರುವಿನ ಮಣಿಹ.

"ಆತ್ಮತ್ವಮೀಶ್ವರತ್ವಂಚ ಬ್ರಹ್ಮಣ್ಯೇಕತ್ರ ಕಲ್ಪಿತಂ
ಬಿಂಬತ್ವ ಪ್ರತಿಬಿಂಬತ್ವಂ ಯಥಾ ಪೂಷಣಿ ಕಲ್ಪಿತಂ |
ಗುಣತ್ರಯ ವಿಭೇದೇನ ಪರತತ್ತ್ವೇ ನ ಚಿದಾತ್ಮನಿ
ಭೋಕ್ತೃತ್ವಂ ಚೈವ ಭೋಜ್ಯತ್ವಂ ಪ್ರೇರಕತ್ವಂ ಚ ಕಲ್ಪಿತಂ ||"

ಬಿಂಬ ಪ್ರತಿಬಿಂಬ ವಾದ ವೀರಶೈವರ ಒಂದು ಸಮಸ್ಯೆಯಾಗಿದೆ. ಇದು ವೀರಶೈವರಲ್ಲಿಲ್ಲವೆಂದು, ಇದರಿಂದಾಗಿ ಈ ಶ್ಲೋಕಗಳು ಸೇರ್ಪಡೆಯಾಗಿವೆಯೆಂದು ವಾದಿಸುವರು. ಈ ವಾದದಲ್ಲಿ ತಿರುಳಿಲ್ಲ.

ದ್ವೈತಾದ್ವೈತಿಗಳಾದ ವೀರಶೈವರು ದ್ವೈತಾವಸ್ಥೆಯಲ್ಲಿ ಪ್ರತಿಬಿಂಬ ವಾದವನ್ನು ಅಂಗೀಕರಿಸುತ್ತಾರೆ ; ಅದ್ವೈತಾವಸ್ಥೆಯಲ್ಲಿ ನಿರಾಕರಿಸುತ್ತಾರೆ. ಭಕ್ತಸ್ಥಲಾಂತರ್ಗತ ಪಿಂಡಸ್ಥಲವು ಭೇದ (ದ್ವೈತ) ಸೂಚಕವಾಗಿರುವುದರಿಂದ ಪ್ರತಿಬಿಂಬ ಪ್ರತಿಪಾದನೆ ವಿರೋಧವಾಗಲಾರದು. ಕೇವಲಾದ್ವೈತಿಗಳೇ ಶ್ರಾವಕರ ಸೌಕರ್ಯಕ್ಕಾಗಿ ಈ ವಾದವನ್ನು ಅಂಗೀಕರಿಸಿರುವಾಗ ಶಿವಾದ್ವೈತಿಗಳು ಅರ್ಧಾಂಗೀಕಾರಮಾಡುವಲ್ಲಿ ತಪ್ಪೇನಿಲ್ಲ. ನಿಜವಾಗಿಯೂ ಕೇವಲಾದ್ವೈತಿಗಳೇ ಈ ವಾದವನ್ನು ಸಂಪೂರ್ಣ ಕೈಬಿಡಬೇಕಾಗಿತ್ತು. ಹೀಗಿದ್ದರೂ ಅವರು ಅಂಗೀಕರಿಸಿದ್ದಾರೆ. ಅವರಷ್ಟು ಹಾನಿ ಅಥವಾ ವಿರೋಧ ವೀರಶೈವರಿಗಿಲ್ಲ. ದ್ವೈತಸ್ಥಿತಿಯಲ್ಲಿ ಅಂಗೀಕರಿಸಿದರೆ ಭಕ್ತನ ಬೋಧೆಗಾಗಿ ನಿರ್ದೇಶಿಸಿದರೆ ದೋಷವೇನು ? ಅದರಲ್ಲಿಯೂ ಮಂತ್ರದಲ್ಲಿರುವ ಕಲ್ಪಿತಪದ ಗಮನಾರ್ಹವಾಗಿದೆ. 'ಕಲ್ಪಿತ' ಪದಕ್ಕೆ ರಚಿತ, ಊಹಿತ- ಈ ಎರಡರ್ಥಗಳುಂಟು.

ವೀರಶೈವ ವಚನಕಾರರು ತತ್ತ್ವಕೋವಿದರು ಎಲ್ಲರೂ ಪ್ರತಿಬಿಂಬವಾದ ವನ್ನು ಪ್ರತಿಪಾದಿಸಿದ್ದಾರೆ ; ಅನುಮತಿಸಿದ್ದಾರೆ.

"ತನ್ನ ನರಿದರಿವೆಂತುಟೋ? ತನ್ನ ಮರೆದ ಮರವೆಯಂತುಟೋ ? ಅರಿದು ಮರೆದವರು ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ ಗೋಹೇಶ್ವರಾ' 'ಅಕಾಯ ಮುಖದಲ್ಲಿ ಕಾಯ ಪ್ರತಿಬಿಂಬಿಸುವುದು. ಸಕಾಯ ಮುಖದಲ್ಲಿ ಅಕಾಯ ಪ್ರತಿಬಿಂಬಿಸುವುದು. ಸೊಂಕಿಲ್ಲದೆ ಸೊಗಸಿಲ್ಲದೆ ಹೊಣಿ ಹೋಗುವನು ಅನುಭಾವ ಸಕಾಯನಾಗಿ ; ಶ್ರುತಿಃ 'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗ ಮುಚ್ಯತೇ' ಎಂದುದಾಗಿ ಕೂಡಲ ಚೆನ್ನಸಂಗಾ, ನಿಮ್ಮ ಘನತೆಯ ಶರಣನೇ ಬಲ್ಲ."

ಹೀಗೆ ಪ್ರಭು, ಚೆನ್ನಬಸವಣ್ಣನವರು ಹೇಳಿರುವರಲ್ಲದೆ ಬಸವಣ್ಣ ಮೊದಲಾದವರೂ ಹೇಳಿದ್ದಾರೆ. ವಿಸ್ತಾರ ಭಯದಿಂದ ಉದ್ಧರಿಸಿಲ್ಲ.

> 'ಸೋಽಹಂ ದಾಸೋಽಹಮಾಖ್ಯಾತಂ ದ್ವಯೋರ್ನಾಮ ಪ್ರವರ್ತತೇ ।
> ಏತದ್ಭಾವದ್ವಯಂ ನಾಸ್ತಿ ಪ್ರತಿಬಿಂಬಸಮುದ್ಭವಮ್ ॥
> ಭಕ್ತೋ ದಾಸೋಽಹಭಾವಶ್ಚ ಸೋಽಹಂಭಾವಶ್ಚ ಜಂಗಮಃ !
> ಭಾವಭೇದದ್ವಯಂ ನಾಸ್ತಿ ಪ್ರಕೃತಿಃ ಪ್ರತಿಬಿಂಬವತ್ ॥'
>
> —ಲಿಂಗಲೀಲಾವಿಲಾಸ ಚಾರಿತ್ರ.

ಕಲ್ಮಠದ ಪ್ರಭುದೇವರು ಭಕ್ತಿಸ್ಥಲದಲ್ಲಿ ಈ ಶ್ಲೋಕಗಳನ್ನು ಉದಹರಿಸಿದ್ದಾರೆ. ಹೀಗಿದ್ದರೂ ಈ ಶ್ಲೋಕಗಳನ್ನು ಬಿಡಬೇಕೆಂದು ಕೆಲವರು ಹೇಳುತ್ತಾರೆ. ಏಕೆ ಬಿಡಬೇಕೋ ಅರ್ಥವಾಗುವುದಿಲ್ಲ. ಬಿಡಬೇಕೆಂಬ ವಾದ ಸುಲಭ. ಬಿಡುವುದು ಸುಲಭವಲ್ಲ. ಹಿಂದಿನ ತತ್ತ್ವಜ್ಞಾನಿಗಳು ಯಾರೂ ಬಿಟ್ಟಿಲ್ಲ. ಮರಿತೋಂಟದಾರ್ಯರಾಗಲಿ, ಕಲ್ಮಠದ ಪ್ರಭುದೇವರಾಗಲಿ ಈ ಶ್ಲೋಕಗಳನ್ನು ಬಿಟ್ಟಿಲ್ಲ. ಎರಡನೆಯವರು ತಮ್ಮ ಲಿಂಗಲೀಲಾವಿಲಾಸ ಚಾರಿತ್ರ ಗ್ರಂಥದ ಪಿಂಡಸ್ಥಲದಲ್ಲಿ ಇವೆರಡು ಶ್ಲೋಕಗಳನ್ನು ಅಂಗೀಕರಿಸಿ ಉದ್ಧರಿಸಿದ್ದಾರೆ. ಇದರಿಂದಾಗಿ ಇವೆರಡು ಶ್ಲೋಕಗಳು ಅನ್ಯಸಿದ್ಧಾಂತ ಬೋಧಕಗಳಲ್ಲ ; ಕೇವಲಾದ್ವೈತ ಮತಕ್ಕೆ ಸೇರಿದವೆಂದು ಹೇಳುವುದು ಉಚಿತವಲ್ಲ.

ಮಂತ್ರಾಭಿಪ್ರಾಯವನ್ನು ಮನನ ಮಾಡೋಣ. ಒಂದೆ ಒಂದಾದ ಆ ಪರಶಿವ ಬ್ರಹ್ಮನಲ್ಲಿ ಆತ್ಮ ಪರಮಾತ್ಮ ಇಬ್ಬರೂ ತೋರಿದಾರೆ. ಇದೊಂದು ಇವರ ವಿಚಿತ್ರ ಮಹಿಮೆ ; ವಿಶಿಷ್ಟ ಹಿರಿಮೆ. 'ಒಂದೆಂಬೆನೆ ಎರಡಾಗಿದೆ. ಎರಡೆಂಬೆನೆ ಒಂದಾಗಿದೆ. ಒಂದೆರಡೆಂಬ ಸಂದೇಹವಿದೇನೋ ?' ಎಂದು ಕೇಳಿ ಪ್ರಭುದೇವರು ಈ ವಾದವನ್ನು ಎತ್ತಿ ಹಿಡಿದಿದಾರೆ. ಬಿಂಬವೆಂದರೆ ನೆಳಲು. ಬಿಂಬವೆಂದರೆ ಮೈ. ಇವೆರಡಕ್ಕೂ ಭೇದಾಭೇದ ಪ್ರಸಕ್ತಿಯಿದೆ. ಈ ವಿಷಯವನ್ನು ತನ್ನದೇ ಆದ ಒಂದು ಸುಂದರ ದೃಷ್ಟಾಂತದಿಂದ ಸಮಂಜಸವಾಗಿ ಸಮರ್ಥಿಸಿದ್ದಾಳೆ ಮಹಾದೇವಿಯಕ್ಕಗಳು.

ಎನ್ನ ನಾನರಿಯದಂದು ಮುನ್ನ ನೀನೆಲ್ಲಿರ್ದೆ ಹೇಳಯ್ಯ ?
ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯ.
ಎನ್ನೊಳಗೆ ಇದು ಮೈದೋರದ ಭೇದವ ನಿಮ್ಮಲ್ಲೇ ಕಂಡೆನು ಕಾಣಾ
ಚೆನ್ನಮಲ್ಲಿಕಾರ್ಜುನಾ.'

ಆತ್ಮೇಶ್ವರರ ಸಂಬಂಧ ಚಿನ್ನಬಣ್ಣಗಳಂತಹದು. ಅರಿಯದ ಮೊದಲು ಅದೊಂದು. ಅರಿತ ಬಳಿಕ ಎರಡಾದರೂ ಒಂದೆ ವಸ್ತು. ಎರಡೆಂಬುದು ಅರಿವು ಮಾತ್ರ. ಚಿನ್ನದೊಳಗಣ ಬಣ್ಣ ಬೇರಾಗದು. ಅಂತೆಯೇ ಆತ್ಮನೊಳಗಿನ ಈಶ್ವರ ಬೇರಾಗದು. ಪ್ರೇರ್ಯಪ್ರೇರಕ ಭಾವದಿಂದ ಬೇರೆ ಕಂಡಂತಾದರೂ ಅದು ಬೇರಲ್ಲ ; ಅದು ಅವಿರಳ ಸಂಬಂಧವುಳ್ಳದು. ಚಿನ್ನವೇ ಪಿಂಡಾತ್ಮ ; ಬಣ್ಣವೇ ಪರಮಾತ್ಮ. ವರ್ಣವು ಸುವರ್ಣತ್ವಕ್ಕೆ ಪ್ರೇರಕವಾಗಿದೆ.

'ಎತ್ತಣ ಮಾಮರ, ಎತ್ತಣ ಕೋಗಿಲೆ;
ಎತ್ತಣಿಂದೆತ್ತ ಸಂಬಂಧವಯ್ಯ,
ಬೆಟ್ಟದ ಮೇಲಣ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ !
ಗೋಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ !'

ಪ್ರಭುದೇವರು ಈ ವಚನದಲ್ಲಿ ಈಶ್ವರನಿಗೂ ಆತ್ಮಕ್ಕೂ ಅಂದರೆ ಲಿಂಗಾಂಗಕ್ಕೂ ಬಿಚ್ಚಿ ಬೇರ್ಪಡಿಸದ ಸಂಬಂಧವನ್ನು ಸುಂದರವಾಗಿ ಧ್ವನಿಕಾವ್ಯವಾಗಿ ಭಾವಗರ್ಭಿತಗೀತವಾಗಿ ಚಿತ್ರಿಸಿದ್ದಾರೆ. ಇದರಿಂದಾಗಿ ಆತ್ಮೇಶ್ವರರ ಭೇದಾಭೇದಗಳು ವಾಸ್ತವವಾಗಿರುವುದರಿಂದ ಮತ್ತು ಬ್ರಹ್ಮಾಭಿನ್ನ ವಸ್ತು ಬ್ರಹ್ಮಾಂಡದಲ್ಲಿಲ್ಲವಾದುದರಿಂದ ವೀರಶೈವ ಉತ್ತರ ಪ್ರಕ್ರಿಯೆಯಲ್ಲಿ ಅಂದರೆ ಐಕ್ಯಸ್ಥಲದಲ್ಲಿ ಬಿಂಬ ಪ್ರತಿಬಿಂಬವಾದವಿಲ್ಲೆಂಬುದನ್ನು ಒಪ್ಪುತ್ತೇವೆಯಾದರೂ ಭಕ್ತಸ್ಥಲದಲ್ಲಿ ತನುಃಛಾಯಾವಾದವನ್ನು ಒಪ್ಪಲೇಬೇಕಾಗುತ್ತದೆ.

ಮಾಮರ ಕೋಗಿಲೆಗಳಿಗೂ ನೆಲ್ಲಿಕಾಯಿ ಉಪ್ಪುಗಳಿಗೂ ಜಾತಿತ್ವ ಮತ್ತು ಪ್ರಾದೇಶಿಕ – ಪ್ರಾಕೃತಿಕ ಭೇದಗಳಿದ್ದರೂ ಪಾರಮಾರ್ಥಿಕ ಭೇದವಿಲ್ಲ. ಸಂಯೋಗ ಸಂಬಂಧದಿಂದ ಅವಿರಳ ಸಂಬಂಧಕ್ಕೆ ಇವು ಬಂದು ನಿಲ್ಲುತ್ತವೆ. ಮಾಮರ – ನೆಲ್ಲಿಕಾಯಿಗಳು ಕೋಗಿಲೆ – ಉಪ್ಪುಗಳಿಗೆ ತಮ್ಮನ್ನೇ ಸರ್ವಾತ್ಮದಿಂದ ಸಮರ್ಪಿಸಿಕೊಳ್ಳುತ್ತವೆ ; ಸಮರಸಗೊಳ್ಳುತ್ತವೆ. ಅಂತೆಯೇ ಅಂಗ – ಲಿಂಗಗಳು. ಆಯತದಿಂದ ಸ್ವಾಯತ, ಸ್ವಾಯತದಿಂದ ಸನ್ನಿಹಿತವಾಗಿ ಭೇದಾಭೇದ ಸ್ವರೂಪದಲ್ಲಿ ಸ್ವಾಭಾವಿಕವಾಗಿರುತ್ತವೆ ; ವಾಸ್ತವಿಕವಾಗಿರುತ್ತವೆ.

ಆತ್ಮನೇ ಅಂಗ ; ಈಶ್ವರನೇ ಲಿಂಗ. ಅಂಗ-ಲಿಂಗವೆಂಬುದು ಶಿವಾದ್ವೈತದ ಪರಿಭಾಷೆ. ಲಿಂಗವು ಅಂಗನನ್ನು ಪರಿಶುದ್ಧಗೊಳಿಸುತ್ತದೆ. ಇವೆರಡೂ ಸಮರಸಕ್ಕೆ ಅನುಕೂಲವಾಗಿವೆ. ಲಿಂಗದಲ್ಲಿ ಅಡಗುವ ಅಂದರೆ ಸಮರಸವಾಗುವ ಅಳವುಳ್ಳದೇ ಅಂಗ. ಆ ಅಂಗವನ್ನು ತನ್ನೊಳಗೆ ಅಡಗಿಸಿಕೊಳ್ಳುವುದೇ ಲಿಂಗ. ಆತ್ಮೇಶ್ವರರು ಸಮಷ್ಟಿಗತವಾದರೆ, ಅಂಗಲಿಂಗರು ವ್ಯಷ್ಟಿಗತರು. ಇವರು ಆ ಪರಬ್ರಹ್ಮನೊಬ್ಬನಲ್ಲಿ ತೋರಿದ್ದಾರೆ; ಚಿಚ್ಛಕ್ತಿಯ ನೆರವಿಯಲ್ಲಿ ತೋರಿದ್ದಾರೆ.

'ಪಿಂಡಮಧ್ಯಗತಾ : ಪ್ರಾಣಾ : ಪ್ರಾಣಮಧ್ಯಗತೋಧ್ವನಿ :।
ಧ್ವನಿ ಮಧ್ಯಗತೋ ನಾದೋ ನಾದಮಧ್ಯೇ ಸದಾಶಿವ :॥'

ವ್ಯಷ್ಟಿಯಲ್ಲಿ ಪ್ರಕೃತಿ, ಪಿಂಡದಲ್ಲಿ ಪ್ರಾಣಾತ್ಮನು, ಪ್ರಾಣಾತ್ಮನ ಮಧ್ಯದಲ್ಲಿ ಅನಾಹತನಾದವು, ಆ ಅನಾಹತನಾದದಲ್ಲಿ ಸದಾಶಿವನು ತೋರುವನೆಂದು ತಿಳಿದು ಬರುತ್ತದೆ. ಅಂತೆಯೇ ಆತ್ಮೇಶ್ವರರು ಸಮಷ್ಟಿ ಬ್ರಹ್ಮಾಂಡದಲ್ಲಿ ತೋರುವರು. ಇವರಿಬ್ಬರು ಬೇರಾಗಿದ್ದರೂ ಬೇರಲ್ಲ. ಬೇರಾಗಿಲ್ಲ ; ಬೇರಾದಂತೆ ಕಾಣುತ್ತಾರೆ.

ಇನ್ನು ಎರಡನೆಯದಾಗಿ ರಾಜಸ ತಾಮಸ ಸಾತ್ವಿಕ ಗುಣತ್ರಯ ಭೇದಗಳಿಂದ ಭೋಕ್ತೃವಾದ ಆತ್ಮನು, ಭೋಜ್ಯವಾದ ಜಗತ್ತು, ಪ್ರೇರಕನಾದ ಈಶ್ವರನು ವೈದೋರುವರು. 'ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮ ಮೇತತ್ !' ಎಂಬೀ ಶ್ವೇತಾಶ್ವತರೋಪನಿಷದುಕ್ತಿಯು ಪ್ರಮಾಣವಾಗಿದೆ.

ಈ ಭೋಕ್ತೃ ಈ ಭೋಗ್ಯ ಈ ಪ್ರೇರಕ ವಸ್ತುಗಳು ಉಂಟಾದುದು ಆ ಚಿದಾತ್ಮನಾದ ಪರತತ್ತ್ವದಲ್ಲಿ. ಈ ಮೂರಕ್ಕೂ ಮೂಲವೊಂದೆ. ಇದರಿಂದಾಗಿ ಇವು ಆ ಪರಬ್ರಹ್ಮ ಸ್ವರೂಪಗಳಾಗಿವೆ. ಗುಣಭೇದವಿದ್ದರೂ ಮೂಲಾಣು ಭೇದವಿಲ್ಲ. ಮುಂದೆ ಮೂರೊಂದಾಗುವ ಆ ಮಹತ್ತು ಬೇರಲ್ಲ. ಆದ್ಯಂತದಲ್ಲಿ ಇವು ಒಂದಾಗಿದ್ದು ಅವ್ಯಕ್ತವಾಗಿರುತ್ತವೆ. ಮಧ್ಯದಲ್ಲಿ ವ್ಯಕ್ತವಾಗಿರುತ್ತವೆ. ಆದ್ದರಿಂದ ಇವು ತ್ರಿಕಾಲಾಬಾಧಿತಗಳು.

ತ್ರಿವಿಧದ ಅನಿತ್ಯ ತ್ರಿವಿಧದ ನಿತ್ಯವ ಬಲ್ಲವರಾರೊ ?
ತ್ರಿವಿಧಕ್ಕೆ ತ್ರಿವಿಧವನ್ನಿತ್ತು ತ್ರಿವಿಧ ಪ್ರಸಾದವ ಕೊಳಬಲ್ಲಡೆ
ಆತನ ತ್ರಿವಿಧನೆಂಬೆ, ಆತನ ವೀರನೆಂಬೆ, ಆತನ ಧೀರನೆಂಬೆ,
ಗೊಹೇಶ್ವರ ಲಿಂಗದಲ್ಲಿ ಆತನ ಅಚ್ಚಪ್ರಸಾದಿ ಎಂಬೆ.

ವ್ಯಷ್ಟಿ ತ್ರಿವಿಧ ಜ್ಞಾನವಾಗಲಿ ಸಮಷ್ಟಿ ತ್ರಿವಿಧ ಜ್ಞಾನವಾಗಲಿ ಉಂಟಾಗುವುದು ಸುಲಭವಲ್ಲ. ಇದು ಕೇವಲ ಓದು ಬರೆಹಗಳಿಂದ ಬರುವದಲ್ಲ. ಇದೊಂದು ಅನುಭವ ಸಿದ್ಧಾಂತ. ಜೀವಾತ್ಮ, ಪರಮಾತ್ಮ, ಜಗತ್ತು ಈ ಮೂರರ ಈ ಸಮಷ್ಟಿ ತತ್ತ್ವಗಳ ಅನುಭವ ಅಗತ್ಯ ಪಿಂಡಸ್ಥಲಿಗೆ.

ಭಕ್ತನ ಉಪಾಸನೆ ಸಗುಣ ನಿರ್ಗುಣ ಎಂದು ಇಬ್ಬಗೆ. ಆ ಪರತತ್ತ್ವವು ಸಗುಣವೂ ಅಹುದು ; ನಿರ್ಗುಣವೂ ಅಹುದು. ಸಗುಣದಲ್ಲಿ ಮರಳಿ ಎರಡು ಬಗೆ. ಲೌಕಿಕ ಸಗುಣ, ವೈದಿಕ ಸಗುಣವೆಂದು. ಲೌಕಿಕ ಸಗುಣ ಸ್ಥೂಲ. ವೈದಿಕ ಸಗುಣ ಸೂಕ್ಷ್ಮ. ನಿರ್ಗುಣಕ್ಕೆ ಸಮಾನ.

ಸತ್ವ ರಜತಮಗಳು ಪ್ರಾಕೃತಿಕ ಗುಣತ್ರಯಗಳು ; ಮಾಯಿಕಗಳು. ಈ ಗುಣತ್ರಯಗಳ ಜನ್ಮಭೂಮಿ ಸನಾತನ ಶಕ್ತಿ. ಆ ಶಕ್ತಿ ಸ್ವರೂಪವನ್ನು ಕುರಿತು ಮುಂದೆ ವಿವೇಚಿಸಲಾಗುತ್ತದೆ.

ಶಿವಶಕ್ತಿ ಮತ್ತು ವಸ್ತುತ್ರಯಃ

"ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ ।
ತದ್ವೈಷಮ್ಯಾತ್ಸಮುತ್ಪನ್ನಾ ತಸ್ಮಿನ್ವಸ್ತು ತ್ರಯಾಭಿಧಾ ॥"

ಅನಾದಿ ಸಿದ್ಧಳೂ ಪರಶಿವ ಬ್ರಹ್ಮನಿಷ್ಠಳೂ ಆದ ಶಕ್ತಿಯು ತ್ರಿಗುಣಾತ್ಮಕಳಾಗಿದ್ದಾಳೆ. ಆ ಶಕ್ತಿಯ ವಿಭಾಗ ಪರಾಮರ್ಶಾವಸ್ಥೆಯಿಂದ ಮತ್ತು ತ್ರಿಗುಣಗಳ ವೈಷಮ್ಯದಿಂದ ಆ ಪರಶಿವನಲ್ಲಿ ಭೋಕ್ತೃ ಭೋಜ್ಯ ಪ್ರೇರಕ ಎಂಬ ವಸ್ತುತ್ರಯ ಉತ್ಪನ್ನವಾಗುವುದು.

ಶಿವನು ತನ್ನ ಶಕ್ತಿಯಾದ ಜೀವ—ಜಗತ್ತು—ಈಶ್ವರ ಎಂಬ ಮೂರು ವಸ್ತುಗಳನ್ನು ಉತ್ಪತ್ತಿಮಾಡುತ್ತಾನೆ. ಅಭಿನ್ನ ನಿಮಿತ್ತೋಪಾದಾನ ಕಾರಣನೆನಿಸಿದ್ದಾನೆ. ಆತನೊಳಗಿರುವ ಆ ಶಕ್ತಿ ಆತನಿಗೆ ಭಿನ್ನವಲ್ಲ; ಇತ್ತೀಚಿನದಲ್ಲ.

ಶಕ್ತಿಯು ಸನಾತನಳು, ಸದಾತನಳು ; ಶಾಶ್ವತಳು, ನಿತ್ಯಳು ; ಬ್ರಹ್ಮನಿಷ್ಠಳು. ಬ್ರಹ್ಮನಲ್ಲಿ ನಿಯತವಾದ ಸ್ಥಾನವುಳ್ಳವಳು. 'ನಿಯತಂ ಸ್ಥಾನಂ ಯಸ್ಯಾ ಸಾ ನಿಷ್ಠಾ.' ಬ್ರಹ್ಮಧರ್ಮಚಾರಿಣಿಯೂ ಆಗಿದ್ದಾಳೆ. ಬ್ರಹ್ಮವನ್ನು ಬಿಟ್ಟು ಅಗಲದವಳಾಗಿದ್ದಾಳೆ. ಉತ್ಪಾದಿಸಲು ಶಕ್ತಳಾಗಿ ಶಕ್ತಿಯೆನಿಸಿದ್ದಾಳೆ. ಸತ್ವ ರಜ ತಮ ಗುಣಾತ್ಮಕಳಾಗಿದ್ದಾಳೆ. 'ಸಾ ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಿಕ್ರಿಯಾ ಚ' ಎಂಬುದಾಗಿ ಶ್ರುತಿಯೂ ಸಹ ಶಕ್ತಿಯು ಸ್ವಾಭಾವಿಕಳೆಂದು ಹೇಳಿ ಶಕ್ತಿಯ ನಿತ್ಯತ್ವವನ್ನು ಅವಿನಾಭಾವತ್ವವನ್ನು ನಿರೂಪಿಸಿದೆ ಮತ್ತು ಸತ್ವ ರಜ ತಮೋ ಧರ್ಮಗಳಾದ ಜ್ಞಾನ ಬಲ ಕ್ರಿಯಾತ್ಮಕಳೆಂದು ಪ್ರತಿಪಾದಿಸಿದೆ. 'ಅಸ್ಯಶಕ್ತಿ :' 'ಸ್ವಾಭಾವಿಕೀ' ಈ ಎರಡು ಪದಗಳು ಬಿನ್ನಾಭಿನ್ನ ಅಥವಾ ಭೇದಾ ಭೇದ ಸೂಚಕಗಳಾಗಿವೆ. ಆದುದರಿಂದ ವಿವಿಧತ್ವಕ್ಕೆ ವಿಶಾಲತ್ವಕ್ಕೆ ಮಾರ್ಗವಾಗಿದೆ.

ಶಕ್ತಿಯು ಸನಾತನಳಾಗಿ ಶಾಶ್ವತಳಾಗಿದ್ದಾಳೆ. ಬ್ರಹ್ಮನಿಷ್ಠಳಾಗಿ ಸನ್ನಿಹಿತಳಾಗಿದ್ದಾಳೆ. ತ್ರಿಗುಣಾತ್ಮಕ ಪ್ರಕೃತಿಯೂ ಆಗಿದ್ದಾಳೆ. ಪರಶಿವೆಯೆನಿಸಿದ್ದಾಳೆ. ಬ್ರಹ್ಮನಿಷ್ಠಳಾದ್ದರಿಂದ ವೇದಾಂತಿಗಳ ಮಾಯೆಗಿಂತ ವಿಲಕ್ಷಣಳೂ ವಿಶಿಷ್ಟಳೂ ಆಗಿದ್ದಾಳೆ. ವೇದಾಂತಿಗಳ ಮಾಯೆ ಪ್ರಾತಿಭಾಸಿಕ ಸತ್ತೆಯುಳ್ಳವಳಾಗಿದ್ದರೆ ಶಿವಾದ್ವೈತಿಗಳ ಈ ಶಕ್ತಿ ಪಾರಮಾರ್ಥಿಕ ಸತ್ತೆಯುಳ್ಳವಳಾಗಿದ್ದಾಳೆ. ಇವಳು ವಿಮರ್ಶಕಶಕ್ತಿಯಾದ ಕಾರಣ ಇವಳ ವೈಷಮ್ಯದಿಂದ ವಸ್ತುತ್ರಯದ ಅಭಿವ್ಯಕ್ತಿಯಾಗಿದೆ.

ವಸ್ತುತ್ರಯದ ಉತ್ಪತ್ತಿಗೆ ಶಕ್ತಿಗತ ಗುಣತ್ರಯವೇ ಸಕೀಲ. ಆ ಸತ್ವಾದಿಗಳು ಶಕ್ತಿಗೆ ಗುಣಗಳು. ಮೂಲಶಕ್ತಿಯೇ ಇವಲ್ಲ. ಸಾಂಖ್ಯರು ತ್ರಿಗುಣಗಳೇ ಪ್ರಧಾನವೆಂದು ಹೇಳುವರು. ಶಿವಾದ್ವೈತಿಗಳು ಇದನ್ನು ಒಪ್ಪುವುದಿಲ್ಲ. ಇವರ ಶಕ್ತಿ ಗುಣಿ.

ಜಗನ್ನಿರ್ಮಾಣ ಕಾರ್ಯದಲ್ಲಿ ತ್ರಿಗುಣಗಳ ಪಾತ್ರ ಪ್ರಾಮುಖ್ಯ. ತ್ರಿಗುಣಗಳು ಸಮವಾಗಿದ್ದರೆ ಜಗದುತ್ಪತ್ತಿಯಾಗದು. ವಿಷಮ ರೂಪದಲ್ಲಿ ಸಂಗಮವಾಗಬೇಕು. ವಸ್ತುತ್ರಯಗಳ ಉತ್ಪತ್ತಿಯಲ್ಲಿ ಯಾವುದಕ್ಕೆ ಯಾವ ಯಾವ ಗುಣ ಎಷ್ಟೆಷ್ಟಿರಬೇಕೆಂಬುದನ್ನು ಮುಂದಿನ ಶ್ಲೋಕಗಳಲ್ಲಿ ಮಂತ್ರಗಳಲ್ಲಿ ಮನಗಾಣುತ್ತೇವೆ. ಶುದ್ಧ ಸತ್ವವು ವ್ಯವಹಾರಕ್ಕೆ ಪ್ರಪಂಚಕ್ಕೆ ದೂರಾಗಿರಿಸುತ್ತದೆ. ಸತ್ವಗುಣದ ಸ್ವಭಾವ ನಿಶ್ಚಲತೆ, ನಿರ್ಮಲತೆ. ರಜೋಗುಣದ ಸ್ವಭಾವ ಕಾಮಕ್ರೋಧಗಳು. 'ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವ:' ಎಂದಿದೆ ಗೀತೆ. ತಮೋಗುಣ ಸ್ವಭಾವಗಳು ಲೋಭ ಮೋಹಗಳು. ಸತ್ವದಿಂದ ಜ್ಞಾನೋತ್ಪತ್ತಿ. ರಜದಿಂದ ಕರ್ಮಪ್ರವೃತ್ತಿ. ತಮದಿಂದ ಅಪ್ರವೃತ್ತಿ, ಅಜ್ಞಾನ.

ಸತ್ವದಿಂದ ಊರ್ಧ್ವಲೋಕವಾದ ಸ್ವರ್ಗಪ್ರಾಪ್ತಿ. ರಜಸ್ಸಿನಿಂದ ಮಧ್ಯಮ ಲೋಕವಾದ ಮರ್ತ್ಯಲೋಕಪ್ರಾಪ್ತಿ. ತಮಸ್ಸಿನಿಂದ ಅಧೋಲೋಕವಾದ ತಮೋಲೋಕ (ನರಕ) ಪ್ರಾಪ್ತಿ ; ಎಂದು ಗೀತೆ ಹೇಳುತ್ತದೆ.

ಕಾರಣದಲ್ಲಿ ಗುಣಗಳು ಸಮವಾಗಿರುತ್ತವೆ. ಕಾರ್ಯದಲ್ಲಿ ವಿಷಮವಾಗಿರುತ್ತವೆ. ಗುಣಗಳಿಗೆ ಕಾರಣ ಶಕ್ತಿ. ಇದರಿಂದ ಶಕ್ತಿಯನ್ನು ಪ್ರಕೃತಿಯೆಂದು ಧರ್ಮಚಾರಿಯೆಂದು ಶಿವಕಾರಿಯೆಂದು ಹೇಳುವುದುಂಟು. ಶಿವ

ಯೋಗಿ ಶಿವಾಚಾರ್ಯರೂ ಸಹ ತಮ್ಮ ಶಕ್ತಿಸ್ತುತಿಯಲ್ಲಿ 'ಸರ್ವಲೋಕಾನಾಂ ಪ್ರಕೃತಿಂ' 'ಧರ್ಮ ಚಾರಿಣೀಂ' 'ಪರಾಂಶಿವಾಂ' 'ಶಾಂತ್ಯತೀತ ಪರೋತ್ತರಾಂ' 'ಮಾತರಂ ಸಮಸ್ತಾನಾಂ' 'ಶಿವಕರೀಂ ಶಿವಾಂ' 'ವಿಶ್ವಭಾವಿನೀಂ' 'ಪರಮಾನಂದ ಪ್ರಬೋಧ ಲಹರೀಂ' 'ಈಶಾನ ಮನೋರಮಾಂ' ಎಂದು ಮುಂತಾಗಿ ವಾಸ್ತವವಾಗಿ ವರ್ಣಿಸಿದ್ದಾರೆ; ಶಕ್ತಿಯ ಸ್ವಾಭಾವಿಕ ಸ್ವರೂಪವನ್ನು ಚಿತ್ರಿಸಿದ್ದಾರೆ. 'ಯಯಾ ಮಾಹೇಶ್ವರ: ಶಂಭುರ್ನಾಮರೂಪಾದಿ ಸಂಯುತಃ। ತಸ್ಮೈ ಮಾಯಾ ಸ್ವರೂಪಾಯೈ ನಮಃ ಪರಮ ಶಕ್ತಯೇ ॥' ಪರಶಿವನು ಮಹೇಶ್ವರನೆಂದು ಶಂಭುವೆಂದು ಮುಂತಾದ ನಾಮ ರೂಪಾದಿಗಳನ್ನು ತಾಳಲು ಕಾರಣಳು ಮಾಯೆಯೆನಿಸಿದ ಮಹಾಶಕ್ತಿಯು.

ಚೈತನ್ಯಾತ್ಮಕ ಶಿವ. ನಾಮರೂಪಾತ್ಮಕ ಶಕ್ತಿ. ಕಾರ್ಯದಲ್ಲಿ ಈ ಬಗೆಯಾಗಿ ತೋರುತ್ತಾರೆ. ಹೀಗಿದ್ದರೂ ಇವರಿಗೆ ಅಂತರವಿಲ್ಲ; ಇವರು ಅಗಲಿ ಇರುವುದಿಲ್ಲ. 'ನ ಶಿವೇನ ವಿನಾ ದೇವೀ ನ ದೇವ್ಯಾಪಿ ವಿನಾ ಶಿವಃ । ನಾನಯೋರಂತರಂ ಕಿಂಚಿತ್ ಚಂದ್ರ ಚಂದ್ರಿಕಯೋರಿವ ॥' ಪ್ರೇರಕತ್ವವೇ ಶಿವ; ಧಾರಕತ್ವವೇ ಶಕ್ತಿ. ಸಹಜವೇ ಶಿವ; ಸ್ವಭಾವವೇ ಶಕ್ತಿ.

ಅಂತಹ ಶಕ್ತಿವಂತನಾದ ಶಿವನಲ್ಲಿ ಭೋಕ್ತೃ, ಭೋಜ್ಯ, ಪ್ರೇರಕರೂಪ ಜೀವ ಜಗತ್ತು ಈಶ್ವರ ಎಂಬ ವಸ್ತುತ್ರಯವು ಉತ್ಪನ್ನವಾಗಿದೆ. ಶಿವ ಶಕ್ತಿ ಸಂಪುಟವೇ ಈ ಚರಾಚರ ಜಗತ್ತು. ಅಂತೆಯೇ 'ಸ್ವಶಕ್ತಿ ಪ್ರಚಯೋಽಸ್ಯ ವಿಶ್ವಂ' ಎಂದಿದೆ ಶಿವಸೂತ್ರ.

ಶಿವಪಾರಮ್ಯವನ್ನು ಹೇಳುತ್ತದೆ ಶೈವ ಮತ. ಶಕ್ತಿ ಪಾರಮ್ಯವನ್ನು ಹೇಳುತ್ತದೆ ಶಾಕ್ತ ಮತ. ಶಿವ-ಶಕ್ತಿ ಈ ಉಭಯ ಸಮ ಪಾರಮ್ಯವನ್ನು ಹೇಳುತ್ತದೆ ವೀರ ಶೈವ ಮತ. 'ಶಿವ ಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ ! ಶಿವವೇ ಚೈತನ್ಯಾತ್ಮಕನು. ಶಕ್ತಿಯೇ ಚಿತ್ತು. ಇಂತೀ ಚೈತನ್ಯಾತ್ಮಕನೇ ಚಿತ್ಸ್ವರೂಪನಾದ; ಆತನೇ ಶರಣ ಗೊಹೇಶ್ವರಾ.' ಚೈತನ್ಯಾತ್ಮಕನೇ ಶಿವ. ಆ ಚೈತನ್ಯದ ಚಿತ್ಪ್ರಕಾಶವೇ ಶಕ್ತಿ. ಸ್ವಯಂ ಪ್ರಕಾಶಕನಾದ ಆ ಶಿವನೇ ಸ್ವಲೀಲಾ ಸ್ವತಂತ್ರತೆಯಿಂದ ವಸ್ತುತ್ರಯುವಾಗುತ್ತಾನೆ.

'ಶಿವ ತನ್ನ ವಿನೋದಕ್ಕೆ ರಚಿಸಿದನನಂತ ವಿಶ್ವವ. ರಚಿಸಿ ಏನು ವಿಶ್ವಕ್ಕೆ ಹೊರಗಾಗಿದ್ದನೇ ?—ಇಲ್ಲ; ವಿಶ್ವಮಯ ತಾನಾದನು. ವಿಶ್ವವೆಲ್ಲವು

ತಾನಾದನೆಂದರೆ ವಿಶ್ವದ ಉತ್ಪತ್ತಿ ಸ್ಥಿತಿ ಲಯಕ್ಕೆ ಒಳಗಾದಾತನೇ ?—ಅಲ್ಲ ; ಅದೇನು ಕಾರಣವೆಂದಡೆ : ಅಜಾತನಾಗಿ ಉತ್ಪತ್ಯನಲ್ಲ. ಸ್ಥಿತಿಕರ್ಮರಹಿತನಾಗಿ ಸ್ಥಿತಿಗೊಳಗಲ್ಲ. ಮರಣ ವಿರಹಿತನಾಗಿ ಲಯಕ್ಕೆ ಒಳಗಲ್ಲ. ಇಂತೀ ಗುಣತ್ರಯಂಗಳು ಹೊದ್ದಲರಿಯವು. ತಾನಿಲ್ಲದೆ ವಿಶ್ವಕ್ಕೆ ಆಧಾರವಿಲ್ಲವಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲವಾಗಿ ವಿಶ್ವಮಯವು ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ; ನಮ್ಮ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲ.'

ಸ್ವಶಕ್ತಿಯಿಂದ ಅಖಂಡನೂ ಅದ್ವಯನೂ ನಿತ್ಯ ಪರಿಪೂರ್ಣನೂ ಆದ ಪರಶಿವನು ತನ್ನ ಲೀಲಾ ವಿನೋದಕ್ಕಾಗಿ ತನ್ನಂಶವನ್ನು ಬೇರ್ಪಡಿಸಿ ಪರಿಚ್ಛಿನ್ನನಾಗಿ ವಸ್ತುತ್ರಯವಾಗುವನು. ಅವಸ್ಥಾತ್ರಯರಹಿತನಾಗಿರುವನು. ವಿಶ್ವಮಯನಾಗಿರುವನು. ತಾನೇ ಪೂಜಿಸುವ ಭೋಕ್ತ್ರಾತ್ಮನಾದನು. ತಾನೇ ಪೂಜಿಸಿಕೊಂಬ ಪ್ರೇರಕ ಪರಮಾತ್ಮನಾದನು. ತಾನೇ ಪೂಜಾಸಾಧನ ಭೋಜ್ಯ ಜಗತ್ತಾದನು. ಇನ್ನು ಯಾವ ಯಾವ ಗುಣವಿಶೇಷದಿಂದ ಯಾವ ಯಾವ ವಸ್ತು ಉತ್ಪನ್ನವಾಯಿತೆಂಬುದನ್ನು ವಿಶ್ಲೇಷಿಸುತ್ತಾರೆ :

"ಕಿಂಚಿತ್ಸತ್ತ್ವ ರಜೋರೂಪಂ ಭೋಕ್ತೃ ಸಂಜ್ಞಕಮುಚ್ಯತೇ
ಅತ್ಯಂತ ತಾಮಸೋಪಾಧಿರ್ಭೋಜ್ಯಮಿತ್ಯಭಿಧೀಯತೇ ।
ಪರತತ್ತ್ವಮಯೋಪಾಧಿರ್ಬ್ರಹ್ಮಚೈತನ್ಯಮೀಶ್ವರಃ
ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಂ॥"

ಸ್ವಲ್ಪವಾದ ಸತ್ವ ಮತ್ತು ರಜೋಗುಣಗಳೆರಡರಿಂದ ಆ ಶಿವಾದ್ವೈತ ಬ್ರಹ್ಮ ಚೈತನ್ಯವೇ ಭೋಕ್ತೃಜೀವವೆನಿಸುತ್ತಾನೆ. ಅತಿಶಯವಾದ ತಾಮಸಗುಣದಿಂದ ಆ ಶಿವಾದ್ವೈತ ಬ್ರಹ್ಮ ಚೈತನ್ಯವೇ ವಿಶ್ವರೂಪ ಭೋಗ್ಯ ವಿಷಯವಾಗುತ್ತದೆ. ಇದನ್ನು ಭೋಗಿಸುವವನೇ ಭೋಕ್ತೃವೆನಿಸುತ್ತಾನೆ. ಇನ್ನು ಉತ್ಕೃಷ್ಟವಾದ ಶುದ್ಧ ಸತ್ವಗುಣದಿಂದ ಆ ಶಿವಾದ್ವೈತ ಬ್ರಹ್ಮ ಚೈತನ್ಯವೇ ಪ್ರೇರಕನಾದ ಈಶ್ವರನೆನಿಸಿದ್ದಾನೆ. ಭೋಕ್ತೃವಿಗೆ ಪ್ರೇರಕನಾಗಿದ್ದಾನೆ. ಇವು ವಸ್ತುತ್ರಯವೆಂದು ತಿಳಿಯುವುದು.

ಗುಣತ್ರಯ ವೈಷಮ್ಯವೇ ವಸ್ತುತ್ರಯದ ನೆಲೆ; ಆ ಶಿವಾದ್ವೈತದ ಲೀಲೆ. ಗುಣತ್ರಯವೆಂಬ ವಾಯುವಿನಿಂದ ಶಿವಾದ್ವೈತವೆಂಬ ನಿಸ್ತರಂಗ ಸಾಗರದಲ್ಲಿ ತತ್ತ್ವತ್ರಯ ತರಂಗಗಳು ತೋರುತ್ತವೆ. ತರಂಗ ಭೂಮಿಕೆಯಲ್ಲಿ ತ್ರಿಗುಣ ಗಳು ಯಾವಾಗಲೂ ಎಲ್ಲಿಯೂ ಸಮವಾಗಿರುವುದಿಲ್ಲ. ಒಂದು ಹೆಚ್ಚಿದರೆ ಇನ್ನೆರಡು ತಗ್ಗಿರುತ್ತವೆ. 'ರಜಸ್ತಮಶ್ಚಾಭಿಭೂಯ ಸತ್ವಂ ಭವತಿ ಭಾರತ । ರಜಸ್ಸತ್ವಂ ತಮಶ್ಚೈವ, ತಮಸ್ಸತ್ವಂ ರಜಸ್ತಥಾ ॥' ಎಂದು ತ್ರಿಗುಣಗಳ ವೈಷಮ್ಯ ಸ್ವಭಾವವನ್ನು ಸ್ಪಷ್ಟವಾಗಿ ಗೀತೆಯು ಗುರುತಿಸಿದೆ. ಸತ್ವಗುಣ ಹೆಚ್ಚಿದರೆ ರಜಸ್ತಮಗಳು ಕಮ್ಮಿಯಾಗುತ್ತವೆ. ರಜೋಗುಣ ಹೆಚ್ಚಿದರೆ ಸತ್ವ ತಮಸ್ಸುಗಳು ತಗ್ಗುತ್ತವೆ. ತಮೋಗುಣ ತೀವ್ರವಾದರೆ ಸತ್ವ ರಜೋಗುಣಗಳು ನಿಕೃಷ್ಟವಾಗುತ್ತವೆ. ಈ ಬಗೆಯ ಗುಣವೈಷಮ್ಯದಿಂದ ವಸ್ತುತ್ರಯೋತ್ಪತ್ತಿಯಾಗುತ್ತದೆ. ಗುಣತ್ರಯಗಳಲ್ಲಿ ಚೈತನ್ಯ ಸತ್ವವಿದ್ದೇ ಇರುತ್ತದೆ.

'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್ ।' ಜೀವ ಜಗತ್ತು ಈಶ್ವರ ಈ ಮೂರು ಪರಶಿವ ಬ್ರಹ್ಮ ಸ್ವರೂಪವಾಗಿವೆ. ಈ ಮೂರನ್ನು ತಿಳಿದರೆ ಸರ್ವವನ್ನು ತಿಳಿದಂತಾಗು ತ್ತದೆಯೆಂದು ಶ್ವೇತಾಶ್ವತರೋಪನಿಷತ್ತು ಹೇಳುತ್ತ ವಸ್ತುತ್ರಯವನ್ನು ಒಪ್ಪಿ ಕೊಂಡಿದೆ. ಪರಶಿವರೂಪ ಬ್ರಹ್ಮಸತ್ವವೊಂದು ಎಲ್ಲದರಲ್ಲಿ ಇರುವುದೆಂಬುದು ಅರಿಕೆಯಾಗುತ್ತದೆ. ಅದೇ ಚಿಚ್ಛಕ್ತಿ.

"ಅತ್ರ ಪ್ರೇರಯಿತಾ ಶಂಭುಃ ಶುದ್ಧೋಪಾಧಿರ್ಮಹೇಶ್ವರಃ
ಸಮಿಶ್ರೋಪಾದಿಯಃ ಸರ್ವೇ ಭೋಕ್ತಾರಃ ಪಶವಃ ಸ್ಮೃತಾಃ ।
ಭೋಜ್ಯಮವ್ಯಕ್ತಮಿತ್ಯುಕ್ತಂ ಶುದ್ಧತಾಮಸರೂಪಕಂ ॥"

ಶುದ್ಧ ಸತ್ವೋಪಾಧಿಯುಳ್ಳವನೇ ಮಹೇಶ್ವರನು. ಅವನೇ ಸರ್ವಜೀವ ಪ್ರೇರಕನು. ಸರ್ವಜೀವರೆಂಬ ಪಶುಗಳಿಗೆ ಪತಿಯು. ತ್ರಿವಿಧ ಗುಣ ಮಿಶ್ರ ವುಳ್ಳವರೇ ಜೀವರು; ಪಶುನಾಮಕರು. ಇವರೇ ಸುಖದುಃಖ ಭೋಕ್ತರು. ಇನ್ನು ಶುದ್ಧ ಅಂದರೆ ಕೇವಲ ತಾಮಸಗುಣವುಳ್ಳುದೇ ಪ್ರಕೃತಿ; ಇದೇ ಭೋಜ್ಯ. ಇದನ್ನು ಅವ್ಯಕ್ತ ಅಚೇತನವೆಂದು ಹೇಳುವರು. ಇದನ್ನೇ ಪಾಶವೆಂಬರು.

ವಸ್ತುತ್ರಯದ ಮೂಲವಸ್ತು ಶಕ್ತಿ ವಿಶಿಷ್ಟಾದ್ವೈತ. ಅದು ಅಭಿನ್ನ ನಿಮಿತ್ತೋಪಾದಾನ ಕಾರಣವಾಗಿದೆ. ತನ್ನ ವಿಮರ್ಶಾಶಕ್ತಿಯೇ ತನ್ನಲ್ಲಿ ಉಪಾದಾನ ಕಾರಣವಾಗಿದೆ. ಪರಶಿವನು ತನ್ನ ಶುದ್ಧ ಸತ್ವ ಶಕ್ತಿಯೊಡನೆ ಸ್ಫುರಿಸಿದಾಗ ಪ್ರೇರಕನಾದ ಮಹೇಶ್ವರನೆನಿಸುತ್ತಾನೆ. ಪರಶಿವನು ತನ್ನ ಚಿದಂಶದಿಂದ ತ್ರಿಗುಣ ಸಾಮ್ಯವುಳ್ಳ ತನ್ನ ಶಕ್ತಿಯೊಡನೆ ಸ್ಫುರಿಸಿದಾಗ ಜಲತರಂಗಗಳಂತೆ ಭೋಕ್ತಾರರಾದ ಜೀವರೆಂದೆನಿಸುತ್ತಾರೆ. ಅದೇ ಪರಶಿವನು ತನ್ನ ಸದಂಶವನ್ನು ಶುದ್ಧ ತಾಮಸ ಶಕ್ತಿಯೊಡನೆ ವ್ಯಕ್ತಗೊಳಿಸಿದಾಗ ಭೋಗ್ಯವೂ ಅವ್ಯಕ್ತವೂ ಆದ ಜಗತ್ತು ಮೈದೋರುತ್ತದೆ. ಈ ಮೂರಕ್ಕೂ ಹುಟ್ಟಿಲ್ಲ, ಸಾವಿಲ್ಲ. ಶಿವಯೋಗಿ ಶಿವಾಚಾರ್ಯನು ಇವಕ್ಕೆ ಹುಟ್ಟನ್ನು ಹೇಳಿಲ್ಲ. ಹುಟ್ಟಿಲ್ಲದ ಬಳಿಕ ಸಾವಿಲ್ಲ. ಸೃಷ್ಟಿಯಿದ್ದರಲ್ಲವೇ ಲಯವಿರುವುದು ? ಅವ್ಯಕ್ತವಾದವುಗಳು ವ್ಯಕ್ತವಾಗುವವು ವಸ್ತುತ್ರಯವು ಶಿವನ ಲೀಲೆಯಿಂದ. ಅದೇ ಲೀಲೆ ತಪ್ಪಿದಾಗ (ತೀರಿದಾಗ) ಅವು ಅವ್ಯಕ್ತವಾಗುವವು. ಆ ಪರಶಿವ ಬ್ರಹ್ಮನಿಷ್ಠಳಾದ ಶಕ್ತಿಯೇ ಶಿವನ ಇಚ್ಛಾಲೀಲೆಗೆ ಶಿವನ ಸಂಕಲ್ಪ ವಿನೋದಕ್ಕೆ ಭೂಮಿಕೆಯಾಗಿದ್ದಾಳೆ. ಆಗ ಶಿವನು ತನ್ನೊಳಗಿದ್ದ ಜೀವ–ಜಗತ್ತು–ಈಶ್ವರ ಬೀಜಗಳನ್ನು ಆ ಶಕ್ತಿ ಭೂಮಿಯಲ್ಲಿಟ್ಟು ಮೊಳಕೆಯಾಗಿಸಿ ಮೈದಾಳಿಸುತ್ತಾನೆ. ಅದೇ ಜಗತ್ತಿನ ಕಾರ್ಯಾರಂಭ. ಜೀವರು ಶಿವನ ಚಿದಂಶದಿಂದಾದರೂ ಶಕ್ತಿಯ ತ್ರಿಗುಣಗಳಿಂದ ಕೂಡಿದವರಾಗಿರುವುದರಿಂದ ತ್ರಿಮಲವುಳ್ಳವರಾಗಿರುತ್ತಾರೆ; ಅದರಿಂದ ಪಶುಗಳೆನಿಸಿದ್ದಾರೆ. ಸುಖದುಃಖ ಭೋಕ್ತೃಗಳಾಗಿದ್ದಾರೆ. ಭೋಗ್ಯವಸ್ತುಗಳಿಂದ ಲಿಪ್ತರಾಗಿದ್ದಾರೆ. ಪ್ರೇರಕನಾದ ಪರಮೇಶ್ವರನು ಅಲಿಪ್ತನಾಗಿ ಸರ್ವ ಸ್ವತಂತ್ರನಾಗಿದ್ದಾನೆ. ಪಶುಪತಿಯಾಗಿ ಪ್ರೇರಕನಾಗಿದ್ದಾನೆ.

ಆ ಮಹೇಶ್ವರನ ಪ್ರೇರಣೆಯ ರೂಪ ಅನುಗ್ರಹದಿಂದ ಪಿಂಡಾತ್ಮರ ಪ್ರಾದುರ್ಭಾವ. ಆ ಪರವನ್ನು ಮರೆತು ಪ್ರವೃತ್ತಿ ಮುಖವಾಗಿ ಇಹಕ್ಕೆ ಬರುವಂತಾದುದೇ–ಬಂದಿರುವುದೇ ತಿರೋಧಾನ. ಇದಕ್ಕೆ ಕಾರಣ ಶಕ್ತಿ. ತನ್ನನ್ನು ತನ್ನ ನೆಲೆಕಲೆಗಳನ್ನು ಸ್ಥಳಕುಳಗಳನ್ನು ಮರೆತಿರುವುದೇ ತಿರೋಧಾನ ಶಕ್ತಿ. ಮರೆತು ಮರ್ತ್ಯಕ್ಕೆ ಇಳಿದು ಬಂದಿರುವುದೇ ಉತ್ಪತ್ತಿ. ಈ ಸೃಷ್ಟಿರೂಪ ಸ್ಥಲದಿಂದ ಜೀವನು ತನ್ನ ಉದ್ಧಾರಕ್ಕಾಗಿ ಶಿವನ ಅನುಗ್ರಹಕ್ಕಾಗಿ ಊರ್ಧ್ವಗಮನಕ್ಕಾಗಿ ಷಟ್ ಸ್ಥಲವನ್ನು ಏರಬೇಕು. ನಿಸ್ಥಲವನ್ನು ಸೇರಬೇಕು. ಏರಿ

ಸೇರಲು ಷಟ್‌ಸ್ಥಲವೊಂದು ಸುಭದ್ರವಾದ ಏಣಿ. ಆ ಏಣಿಯ ಕಾಲುಗಳೇ ನೂರೊಂದು ನೆಲೆಗಳು. ನೂರೊಂದರಲ್ಲಿ ಒಂದನೆಯದೇ ಪಿಂಡಸ್ಥಲ.

'ಪಿಪೀಲಕನು ಬೇರಿನಲ್ಲಿ ರಸವ ನೋಡಿ ಪಕ್ವ ಅಪಕ್ವ ತಿಳಿದು ಆ ವೃಕ್ಷವ ನೇರಿ ಫಲರಸವ ಸವಿವಂತೆ, ಶಿವಜ್ಞಾನೋದಯವಾದ ನಿಜ ಶಿವಯೋಗಿ ಸದಾಚಾರ ಸತ್ಕಾಯಕವ ಭಕ್ತ ಸ್ಥಲದಲ್ಲಿ ಆಚರಿಸಿ, ಅಲ್ಲಿಂದ ಮುಂದಕ್ಕೆ ಹೋಗಿ ಗುರುಕರುಣದಿಂದ ಉಭಯ ಸ್ಥಲವ ತಿಳಿದು, ಅಲ್ಲಿಂದ ತ್ರಿವಿಧ ಸಂಪತ್ತು-ಚತುರ್ವಿಧ ಸಾರಾಯ ಮೊದಲಾದ ನೂರೊಂದು ಸ್ಥಲವೆಂಬ ವೃಕ್ಷವನೇರಿ ಆ ವೃಕ್ಷದ ಶಾಖೆಗಳಲ್ಲಿ ಭಕ್ತಿ ಜ್ಞಾನ ವೈರಾಗ್ಯವೆಂಬ ಫಲರಸವಂ ಸವಿದು ಮೂಗ ಕಂಡ ಕನಸಿನಂತೆ ನಿರ್ಲಜ್ಜಾಭಿಮಾನಿಯಾಗಿ ನಿರ್ಮತ್ಸರನಾಗಿ ವೇಧಾ ಸ್ವರೂಪ ಮಹಾಲಿಂಗವನಪ್ಪಿ ಸಮಸ್ತ ಭೋಗಂಗಳ ಕುಲಾಲನ ಪುಳು ವಿನಂತೆ ಇಹ ಪರಂಗಳ ಮೀರಿಪ್ಪ ಲಿಂಗೈಕ್ಯನು.'

ಈ ಪುರಾತನೋಕ್ತಿಯು ನೂರೊಂದು ಸ್ಥಲಗಳನೇರುವ-ಪರವಸ್ತು ವನ್ನು ಸೇರುವ ವಿಧಾನವನ್ನೇ ವೆಗ್ಗಳಿಸಿದೆ. ತನಗೆ ಔಪಾಧಿಕವಾದ ತ್ರಿಗುಣ ಗಳನ್ನು ಜಯಿಸಲು ಉದಾಶೀನನಂತಿರದೆ ಭಕ್ತಿ ಜ್ಞಾನ ಕ್ರಿಯೆಗಳನ್ನು ಸಾಧಿ ಸಲು ಹೇಳುವುದೇ ಷಟ್‌ಸ್ಥಲ ಸಿದ್ಧಾಂತದ ವೈಶಿಷ್ಟ್ಯ. ಕ್ರಿಯಾ ಜ್ಞಾನ ಭಕ್ತಿ ಗಳು ತ್ರಿವಿಧ ತನುಗಳನ್ನು ತೊಡೆಯುತ್ತವೆ; ಶುದ್ಧವಿಸುತ್ತವೆ. ಅರಿಷಡ್ವ ರ್ಗವನ್ನು ಮಾರ್ಪಡಿಸುತ್ತವೆ.

ಷಟ್‌ಸ್ಥಲ ಸಾಧನೆಗೆ ಸಿದ್ಧವಾದುದೇ ಪಿಂಡ. ತಾಯಿ ತಂದೆ ಮತ್ತು ಶಿವ ಈ ಮೂವರ ಅಂಶಗಳಿಂದಾದುದೇ ಪಿಂಡ. 'ಮಾತೃತ್ರೀಣಿ ಪಿತೃತ್ರೀಣಿ ಶಿವಾಂಶತ್ರೀಣಿ ಚೋಚ್ಯತೇ । ತತ್‌ತ್ರಿಧಾಮಿಶ್ರ ಸಂಖ್ಯಾನಾಂ ನವಾಂಶಃ ಪಿಂಡ ಸಂಜ್ಞಕಃ ॥ ರುಧಿರಂ ಮಾಸಕಂ ತ್ವಕ್ ಚ ಮಾತೃಕಾಂಶಾ ಇತಿ ಸ್ಮೃತಾಃ । ಅಸ್ಥಿ ನಾಡ್ಯಶ್ಚ ರೋಮಾಣಿ ಪಿತ್ರಂಶಾಃ ಪರಿಕೀರ್ತಿತಾಃ । ಅಗ್ನಿಶ್ಚ ವಾಯು ರಾತ್ಮಾ ಚ ಶಿವಾಂಶಾ ಪರಿಕೀರ್ತಿತಾಃ ॥' ರಕ್ತ ಮಾಂಸ ಚರ್ಮಗಳು ತಾಯಿಯ ಅಂಶಗಳು. ಮೂಳೆ ನಾಡಿ ರೋಮಗಳು ತಂದೆಯ ಅಂಶಗಳು. ತೇಜ ವಾಯು (ಪ್ರಾಣ) ಆತ್ಮಗಳು ಶಿವಾಂಶಗಳು. ಈ ಒಂಬತ್ತರ ಒಬ್ಬಳಿ ಯಿಂದ ಪ್ರಾಕೃತಿಕ ಪಿಂಡವಾಗಿದೆ. ಈ ಪಿಂಡಾತ್ಮನಿಗೆ ಪ್ರೇರಕನಾಗಿ ಪರ ಮಾತ್ಮನಿದ್ದಾನೆ.

'ಜ್ಞಾಽಜ್ಞೌ ದ್ವಾವಜಾವೀಶಾನೀಶೌ' ಎಂಬ ಶ್ವೇತಾಶ್ವತರ ಶ್ರುತಿಯಂತೆ ಶುದ್ಧ ಸತ್ವಮಯನೂ ಪ್ರೇರಕನೂ ಆದ ಈಶ್ವರನು ಸರ್ವಜ್ಞನು ಸರ್ವ ಕರ್ತನು ಆಗಿದ್ದಾನೆ. ತ್ರಿಗುಣಿಯಾದ ಜೀವಾತ್ಮನು ಅಲ್ಪಜ್ಞನು ಅಲ್ಪ ಕರ್ತೃವೂ ಅಲ್ಪಭೋಕ್ತೃವೂ ಆಗಿದ್ದಾನೆ. ಕಲಾ ಕಾಲ ಅಶುದ್ಧವಿದ್ಯೆ ರಾಗ ನಿಯತಿ ಈ ಅಯ್ದು ಕಂಚುಕಿಗಳಿಂದ ಜೀವನು ಕೂಡಿದವನಾಗಿ ಪಶು ಸ್ವರೂಪಕನಾಗಿದ್ದಾನೆ. ಈ ಪಂಚಕಂಚುಕಿಗಳು ಕಿಂಚಿತ್ ಶಕ್ತಿಯುಳ್ಳವುಗಳು. ಇವೇ ಕಾಲ ಕರ್ಮ ಮಾಯ ರೂಪದಲ್ಲಿ ಜೀವನನ್ನು ತ್ರಿವಿಧಾಂಗಗಳಲ್ಲಿ ಆವರಿಸಿ ಕಾಡುತ್ತವೆ. ಇವುಗಳಿಂದ ಜೀವಿ ರಾಗಿಯಾಗಿ ನಿಯತ (ಸಣ್ಣ) ಜೀವಿಯಾಗಿ ಇಲ್ಲಿ ಬಾಳುತ್ತಾನೆ. ಪರವನ್ನು ಮರೆತು ಇಹದಲ್ಲಿ ಬೆರತು ಇರುತ್ತಾನೆ. ಸಂಕೋಚ ಶಕ್ತಿಯುಳ್ಳವನಾಗುತ್ತಾನೆ. ಪಿಂಡದಲ್ಲಿ ಜೀವೇಶರಿರುವಿಕೆಯನ್ನು ಶ್ರುತಿಗಳು ಸಾರಿವೆ: 'ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷ್ವಜಾತೇ ।' ಮುಂಡಕೋಪನಿಷತ್ತು ತನು ವೃಕ್ಷದಲ್ಲಿರುವ ಪ್ರೇರ್ಯ-ಪ್ರೇರಕರಾದ ಜೀವೇಶ್ವರರೆಂಬ ಎರಡು ಹಕ್ಕಿಗಳು ಇರುವ ವಿಷಯವನ್ನು ವಿವರಿಸಿದೆ. ಇದನ್ನೇ ಗೀತೆಯು ಹೀಗೆ ಹೇಳಿದೆ: 'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ । ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥' ಜೀವನು ಈಶ್ವರನಲ್ಲಿಗೆ ಚಲಿಸುವನಾಗಿ ಕ್ಷರನೆನಿಸಿದ್ದಾನೆ.

ಪ್ರೇರಕ ಪರಮಾತ್ಮನೇ ಜೀವನಾದಂತೆ, ಆ ಪರಮಾತ್ಮನಲ್ಲಿರುವ ಸದ್ರೂಪ ಸರ್ವಕರ್ತೃತ್ವ ಶಕ್ತಿಯೇ ಸಂಕುಚಿತವಾಗಿ ವಿಭಜನವಾಗಿ ಜೀವನಲ್ಲಿ ಕಲೆಯಾಗಿದೆ. ವಿಭಜನಾರ್ಥ ಕಲ ಧಾತುವಿನಿಂದ 'ಕಲಾ' ಆಗಿದೆ; ಜೀವನನ್ನು ಕಿಂಚಿತ್ ಕರ್ತೃವನ್ನಾಗಿಸಿದೆ. ಆ ಪರಶಿವನ ಚಿದ್ರೂಪ ಸರ್ವಜ್ಞತ್ವವೇ ಜೀವನಲ್ಲಿ ಸಂಕುಚಿತವಾಗಿ 'ಅಶುದ್ಧವಿದ್ಯೆ' ಯೆನಿಸಿದೆ; ಜೀವನನ್ನು ಅಲ್ಪಜ್ಞನನ್ನಾಗಿಸಿದೆ. ಆ ಶಿವನ ಆನಂದರೂಪ ಸರ್ವಭೋಕ್ತೃತ್ವ ಶಕ್ತಿಯೇ ಜೀವನಲ್ಲಿ ಸಂಕುಚಿತವಾಗಿ 'ರಾಗ'ವಾಗಿದೆ; ಜೀವನನ್ನು ಅಲ್ಪಭೋಕ್ತೃವನ್ನಾಗಿಸಿದೆ; ವಿಷಯ ಮೋಹಿಯನ್ನಾಗಿಸಿದೆ. ಆ ಮೃತ್ಯುಂಜಯನ ನಿತ್ಯತ್ವ ಶಕ್ತಿಯೇ ಸಂಕುಚಿತವಾಗಿ ಜೀವನಲ್ಲಿ 'ಕಾಲ'ವಾಗಿ ಸೇರಿದೆ; ಕಾಲಪಾಶದಿಂದ ಬಂಧಿಸಿದೆ. 'ಭಾವಿ ಭವದ್ಭೂತಮಯಂ ಕಲಯತಿ ಜಗದೇಷಃ ಕಾಲೋತಃ ।' ಭವಿಷದ್ವರ್ತಮಾನ ಭೂತ ಜಗತ್ತನ್ನು ನುಂಗಡಿಸುವುದರಿಂದ ಕಾಲವೆಂದೆನಿಸಿದೆ

ಯೆಂದು ತತ್ತ್ವ ಪ್ರಕಾಶಿಕೆಯಲ್ಲಿ ಹೇಳಿದೆ. ಆ ಪರಮೇಶನ ಪರಿಪೂರ್ಣತ್ವವೇ ಪರಿಮಿತಿಗೊಂಡು ಜೀವನಲ್ಲಿ 'ನಿಯತಿ'ಯಾಗಿದೆ; ಚೂರ್ಣನನ್ನಾಗಿಸಿದೆ; ಚುಳುಕಾಗಿಸಿದೆ. ಈ ಪಂಚಪಾಶಗಳಿಂದ ಬಂಧಿತನಾಗಿರುವ ಕಾರಣ ಜೀವನು ಪಶುನಾಮಕನಾಗಿದ್ದಾನೆಂದು ಜಗದ್ಗುರು ರೇಣುಕರು ನಿರೂಪಿಸಿದ್ದಾರೆ.

ಆ ಪರಶಿವ ಶಕ್ತಿಯು ಶುದ್ಧ ತಾಮಸದಿಂದ ಕಾಣುವ ಭೋಗ್ಯವೆಂದೆನಿಸುವ ಈ ಪ್ರಕೃತಿ ಪ್ರಾದುರ್ಭವಿಸಿದೆ. ಇದನ್ನು ಅವ್ಯಕ್ತವೆಂದು ಹೇಳುವರು. ಇದು ಸ್ಥೂಲ ಕಾರ್ಯವಾಗಿರುವುದು. ಜಡ ಜಗತ್ತೆಂದೆನಿಸಿರುವುದು. ಇಪ್ಪತ್ಮೂರು ತತ್ತ್ವಗಳಿಂದ ಕೂಡಿರುವುದು. ಜೀವನೆನಿಸಲು ಮಾಯೆ ಕಾರಣವಾದರೆ ಜಗತ್ತೆನಿಸಲು ಪ್ರಕೃತಿ ಕಾರಣವಾಗಿದೆ. ಮಾಯೆಯ ಮತ್ತೊಂದು ರೂಪವೇ ಪ್ರಕೃತಿ. ಮಾಯೆಯಲ್ಲಿ ತ್ರಿಗುಣಸಾಮ್ಯವಿದ್ದರೆ ಪ್ರಕೃತಿಯೆನಿಸಿದಾಗ ಶುದ್ಧ ತಮೋಗುಣ ಆಧಿಕ್ಯವಾಗಿರುತ್ತದೆ. ಇದಿಷ್ಟೇ ವ್ಯತ್ಯಾಸ. ಇಷ್ಟರಿಂದ ಇವೆರಡು ಭಿನ್ನವೆಂದು ಭಾವಿಸಬಾರದು. 'ಮಾಯಾಂ ತು ಪ್ರಕೃತಿಂ ವಿಂದ್ಯಾತ್' ಎಂಬೀ ನುಡಿಯನ್ನು ನೆನೆಯಬೇಕು. ಈ ಪ್ರಕೃತಿಯು ಜೀವನೆಂಬ ಪುರುಷನಿಗೆ ಭೋಗ್ಯವಾಗಿದೆ. ಭೋಗಭೂಮಿಯೆನಿಸಲು ವ್ಯಷ್ಟಿ ರೂಪದಲ್ಲಿ ಪ್ರಕೃತಿ ಪಿಂಡವಾಗಿದೆ.

ಜೀವನು ಸತ್ವ-ರಜ-ತಮುಗಳ ಮಿಶ್ರಣದಿಂದಾಗಿರುವನು. ಇದರಿಂದಾಗಿ ಸುಖ-ದುಃಖ-ಮೋಹಗಳಿಂದ ಕ್ರಮವಿಡಿದು ಕೂಡಿರುವನು. ಸತ್ವಗುಣದಿಂದ ಸುಖ, ರಜೋಗುಣದಿಂದ ದುಃಖ, ತಮೋಗುಣದಿಂದ ಮೋಹಗಳುಂಟಾಗುತ್ತವೆ ಮತ್ತು ಕ್ರಮವಾಗಿ ಪ್ರಕಾಶ, ಚಲನ, ಮಂದತ್ವಗಳು ಉಂಟಾಗುತ್ತವೆ. ಈ ಗುಣಧರ್ಮಗಳು ಜೀವನಿಗೆ ಮಾಯಾ ಮಾತೆಯಿಂದ ಬಳುವಳಿಯಾಗಿ ಬಂದಿವೆ. ಇವು ಹೀಗೆಯೇ ಭೋಜ್ಯರೂಪಾದ ಪ್ರಕೃತಿಯಲ್ಲಿಯೂ ಕೂಡಿಕೊಂಡು ಮುಂದುವರಿಯುತ್ತವೆ. ಮಹದಾದಿಗಳಲ್ಲಿಯೂ ಇರುತ್ತವೆ.

ಮಹತ್ತೆಂದರೆ ಬುದ್ಧಿ. ಬುದ್ಧಿಯಿಂದ ಅಹಂಕಾರ, ಅಹಂಕಾರದಿಂದ ಮನ, ಮನಸ್ಸಿನಿಂದ ಜ್ಞಾನೇಂದ್ರಿಯ ಪಂಚಕ, ರಾಜಸಾಹಂಕಾರದಿಂದ ಕರ್ಮೇಂದ್ರಿಯ ಪಂಚಕ, ತಾಮಸಾಹಂಕಾರದಿಂದ ತನ್ಮಾತ್ರಪಂಚಕ-ಭೂತ ಪಂಚಕ ಉತ್ಪತ್ತಿಯಾಗುತ್ತವೆ. ಈ ಮೂವತ್ತಾರು ತತ್ತ್ವಗಳೆಲ್ಲವೂ ಚಿಚ್ಛಕ್ತಿ ಯುಕ್ತ ಪರಶಿವನ ಪರಿಣಾಮದಿಂದಾದವುಗಳು. ಅರಿದು ನಿಶ್ಚಯಿಸುವುದರಿಂದ

ಬುದ್ಧಿ ಅಥವಾ ಮಹತ್ ಎನಿಸಿದೆ. ಅಭಿಮಾನಿಸುವುದರಿಂದ ಅಹಂಕಾರವೆನಿಸಿದೆ. ಬೇಕು-ಬೇಡೆಂದು ಸಂಕಲ್ಪಿಸಿ-ವಿಕಲ್ಪಿಸಿ ಮನಸ್ಸೆನಿಸಿದೆ. ಮಾಯಾತತ್ತ್ವದಲ್ಲಿ ಪ್ರತಿಫಲಿಸಿದ ಪರಶಿವನ ಪ್ರಕಾಶಾಂಶವೆ ಪುರುಷ ತತ್ವ. ಅಗ್ನಿ-ಅಗ್ನಿಸ್ಫುಲಿಂಗಗಳಂತೆ ಪರಮೇಶ್ವರ-ಪುರುಷರ ಭೇದಾಭೇದ ಪ್ರವೃತ್ತಿ. ಸ್ಫುಲಿಂಗಗಳಂತೆ ಪುರುಷರು ಅಂದರೆ ಜೀವರು ಅನೇಕರು. ಅಗ್ನಿಯಂತೆ ಆ ಪರಶಿವನೊಬ್ಬ.

ಈ ಮೊದಲು ಹೇಳಿದ ಪ್ರಕೃತಿ ತತ್ತ್ವವೇ ಪುರುಷನ ಶರೀರದ ಹೊರಗಿದ್ದು ಪಂಚ ಜ್ಞಾನೇಂದ್ರಿಯಗಳಾಗುತ್ತದೆ. ಇವಕ್ಕೆ ಜ್ಞಾನ ಶಕ್ತಿಯೇ ಪ್ರಧಾನವಾಗಿರುತ್ತದೆ. ಇವುಗಳಲ್ಲಿ ಶ್ರೋತ್ರವು ಶಬ್ದಜ್ಞಾನ, ಶ್ರವಣಗಳಿಗೆ ಸಾಧನವಾಗಿದೆ. ತ್ವಕ್ ಸ್ಪರ್ಶಜ್ಞಾನಕ್ಕೆ, ನೇತ್ರ ರೂಪಗ್ರಹಣ ಜ್ಞಾನಕ್ಕೆ, ಜಿಹ್ವೆ ರಸಜ್ಞಾನಕ್ಕೆ, ಘ್ರಾಣ ಗಂಧ ಜ್ಞಾನಕ್ಕೆ ಸಾಧನವಾಗಿವೆ. ವಾಣಿ, ಪಾಣಿ, ಪಾದ, ಪಾಯು, ಉಪಸ್ಥ ಇವು ಪಂಚಕರ್ಮೇಂದ್ರಿಯಗಳು. ಮಾತಿಗೆ ಸಾಧನ ವಾಣಿ. ದಾನಾದಾನಗಳಿಗೆ ಸಾಧನ ಪಾಣಿ. ಗಮನಾಗಮನಗಳಿಗೆ ಕಾರಣ ಪಾದ. ಮಲಾಪಾನ ವಿರ್ಸಜನ ಸಾಧನ ಪಾಯು. ಶುಕ್ರ-ಮೂತ್ರ ವಿಸರ್ಜನಾನಂದ ಕಾರಣ ಉಪಸ್ಥ. ಇವುಗಳಿಗೆ ಕ್ರಿಯಾಶಕ್ತಿಯೇ ಕಾರಣ. ಇವಕ್ಕೆ ಪಂಚಪ್ರಾಣ ವಾಯುಗಳೇ ಚೇತನವಾಗಿವೆ. ತನ್ಮಾತ್ರ ಪಂಚಕಗಳು ಜ್ಞಾನೇಂದ್ರಿಯಗಳಲ್ಲಿ ಸೃಷ್ಟಿಯಾಗಿ ಆಧಾರಾಧಿ ವಿಶುದ್ಧಾಂತ ಚಕ್ರಗಳಲ್ಲಿ ಸ್ಥಿತಿಗೊಂಡು ಈ ಕರ್ಮೇಂದ್ರಿಯಗಳಲ್ಲಿ ಲಯವಾಗುತ್ತವೆ. ಇನ್ನು ಜ್ಞಾನೇಂದ್ರಿಯಗಳಿಗೆ ಗ್ರಾಹ್ಯವಾಗಿ ಪಂಚತನ್ಮಾತ್ರಗಳು, ಇವಕ್ಕೆ ಆಧಾರವಾಗಿ ಇವುಗಳಿಂದ ಪಂಚಭೂತಗಳು ಉತ್ಪನ್ನವಾಗುತ್ತವೆ. ಇವಕ್ಕೆಲ್ಲ ಮಹಾ ಕಾರಣ ಅಂದರೆ ಅಭಿನ್ನ ನಿಮಿತ್ತೋಪಾದಾನ ಕಾರಣವಾದುದು ಆ ಪರಶಿವ ವಸ್ತು. ಅದರ ಪರಿಣಾಮವೇ ಈ ಸದಸದ್ರೂಪ ಪ್ರಪಂಚ.

'ಶಿವಾಭಿದಂ ಪರಂಬ್ರಹ್ಮ ಜಗನ್ನಿರ್ಮಾತು ಮಿಚ್ಛಯಾ
ಸ್ವರೂಪಮಾದಧೇ ಕಿಂಚಿತ್ ಸುಖಸ್ಫೂರ್ತಿ ವಿಜೃಂಭಿತಮ್ ।
ಸದಾಶಿವ ಮುಖಾಶೇಷ ತತ್ತ್ವಮೌಕ್ತಿಕ ಶುಕ್ತಿಕಾಂ
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಂ ।

ತತ್ರಲೀನಮಭೂತ್ಪೂರ್ವಂ ಚೇತನಾಚೇತನಂ ಜಗತ್
ಸ್ವಾತ್ಮಲೀನಂ ಜಗತ್ಕಾರ್ಯಂ ಸ್ವಪ್ರಕಾಶ್ಯಂ ತದದ್ಭುತಮ್ ||'
—ಸಿ. ಶಿಖಾಮಣಿ.

ಒಬ್ಬನಾದ ಆ ಪರಶಿವನು ಒಮ್ಮೆ ಜಗತ್ತನ್ನು ನಿರ್ಮಿಸಲು ಇಚ್ಛಿಸಿದನು. ಇಚ್ಛಾಶಕ್ತಿಯಿಂದ ಈ ಷಚ್ಚಲನವನ್ನು ತಾಳಿದನು. ಸುಖಸ್ಫೂರ್ತಿಯಿಂದ ವಿಜೃಂಭಿಸಿದನು. ಈಶನಲ್ಲಿರುವ ಈಶ್ವರಿಯು ಇದನರಿತಳು; ಸ್ಪಂದಿಸಿದಳು. ನಿಸ್ತರಂಗ ಸಾಗರದಂತಿದ್ದ ಆ ಪರೇಶನಲ್ಲಿ ತೆರೆಗಳಂತೆ ನ್ಯೂನಾಧಿಕಭಾವನ್ನುಂಟು ಮಾಡಿ ಮೂವತ್ತಾರು ತತ್ತ್ವ ಮೌಕ್ತಿಕಗಳನ್ನು ತೋರುವಳು. ಈ ಚರಾಚರ ಜಗತ್ತು ಮೊದಲು ಇರಲಿಲ್ಲವೆಂದಲ್ಲ. ಆ ಪರವಸ್ತುವಿನಲ್ಲಿ ನೀರಲ್ಲಿ ತೆರೆಯಂತೆ ಲೀನವಾಗಿತ್ತು. ಕಾರಣರೂಪಾಗಿದ್ದುದನ್ನು ಕಾರ್ಯರೂಪದಲ್ಲಿ ಕಾಣಿಸಿದಳು. ಅಪ್ರಕಾಶವಾಗಿದ್ದುದನ್ನು ಪ್ರಕಾಶಪಡಿಸಿದಳು.

"ಅತ್ಯಂತ ಗೂಢ ಚೈತನ್ಯಂ ಜಡಮವ್ಯಕ್ತಮುಚ್ಯತೇ
ಸರ್ವಜ್ಞಃ ಪ್ರೇರಕಃ ಶಂಭುಃ ಕಿಂಚಿಜ್ಞೋಜೀವ ಉಚ್ಯತೇ |"

ಜಗತ್ತು ಅವ್ಯಕ್ತ ಹೇಗೆಂಬುದನ್ನು ವೈಜ್ಞಾನಿಕ ಮನೋಭಾವದಿಂದ ಶ್ರೀರೇಣುಕ ಪೂಜ್ಯಪಾದರು ಈ ಮಂತ್ರದಲ್ಲಿ ಅಂದೇ ಅಪ್ಪಣೆ ಕೊಡಿಸಿದ್ದಾರೆ. ಜಗತ್ತು ಜಡವಾದರೂ ಗೂಢ ಚೈತನ್ಯವುಳ್ಳದಾಗಿದೆ. ಜಡ ಜಗತ್ತಿನಲ್ಲಿ ಗೂಢವಾಗಿ ಚೈತನ್ಯವಿದೆ. ಆದರೆ ಅದು ಸ್ಪಷ್ಟವಾಗಿ ವ್ಯಕ್ತವಾಗಿಲ್ಲ; ಅವ್ಯಕ್ತವಾಗಿದೆ. ಅಚಿದ್ರೂಪಾಗಿದೆ ; ಅಂದರೆ ಅಚಿತ್ಪಿಂಡವೆನಿಸಿದೆ. ಇದರಿಂದಾಗಿ ಇದು ಅವ್ಯಕ್ತವೆನಿಸಿದೆ. 'ಅಂತರ ಉಪಪತ್ತೇಃ' ಎಂಬುದಾಗಿ ಹೇಳಿ ಬ್ರಹ್ಮ ಸೂತ್ರವೂ ಇದಕ್ಕೆ ಪೋಷಕವಾಗಿದೆ.

ಜಗದೀಶನಾದ ಶಿವನು ಸರ್ವಜ್ಞನಾಗಿದ್ದಾನೆ; ಸರ್ವಪ್ರೇರಕನಾಗಿದ್ದಾನೆ. ಸತ್ಯ ಸುಖ ಸ್ವರೂಪನಾಗಿದ್ದಾನೆ; ಚಿದ್ರೂಪನಾಗಿದ್ದಾನೆ; ಅಂದರೆ ಚಿತ್ಪಿಂಡನೆನಿಸಿದ್ದಾನೆ.

ಇನ್ನು ಜೀವನು ಕಿಂಚಿಜ್ಞನಾಗಿದ್ದಾನೆ. ಪ್ರೇರ್ಯನಾಗಿದ್ದಾನೆ. ಸುಖ ದುಃಖ ಸಂಮಿಶ್ರನಾಗಿದ್ದಾನೆ. ಚಿದಚಿತ್ಪಿಂಡನೆನಿಸಿದ್ದಾನೆ. ಹೀಗೆ ಜಗತ್ತು–ಜಗದೀಶ್ವರ–ಜೀವ ಈ ಮೂವರ ಮುಖ್ಯ ಲಕ್ಷಣಗಳನ್ನು ಮನಮುಟ್ಟುವಂತೆ ಈ ಮಂತ್ರದಲ್ಲಿ ಮಹಾಗುರು ಶ್ರೀ ರೇಣುಕ ಭಗವತ್ಪಾದರು ಬೋಧಿಸಿದ್ದಾರೆ.

'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್'

—ಈಶೋಪನಿಷತ್

ಶಿವಮಯವಾದುದು ಜಗತ್ತು. ವ್ಯಕ್ತಾವ್ಯಕ್ತರೂಪದಲ್ಲಿರುವುದಾಗಿ ಶಾಶ್ವತವಾದದು–ಜಗತ್ತು. ಲಿಂಗಮಧ್ಯದಲ್ಲಿರುವುದು ಜಗತ್ತು. ಅಂತೆಯೇ ಇದಕ್ಕೆ ಬ್ರಹ್ಮಾಂಡವೆಂದರು. ಹೀಗಿರುವಾಗ ಆ ನಿರಾಕಾರ ವಸ್ತುವೇ ಸಾಕಾರ ಗೊಂಡಿರುವಾಗ ಜಗತ್ತು ಮಿಥ್ಯವಾಗದು.

'ಸರ್ವಂ ಶಿವಮಯಂ ಜಗತ್ತೆ'ಂಬವಾಕ್ಯವನರಿಯದೆ
ಹೋಗದಿರಾ ಮನವೆ !
'ಪಂಚತತ್ತ್ವ ಸ್ವರೂಪಾಯ' | ಎಂಬ ಶೃತಿ ಶಾಖೆಯರಿ
ಯದೆಯಲ್ಲ ಮನವೆ !
'ಲಿಂಗಮಧ್ಯೇ ಜಗತ್ಸರ್ವಂ' | ಎಂಬ ಮಹಾ ವಾಕ್ಯವ
ಮರೆದೆಯಲ್ಲ ಮನವೆ !
ಸರ್ಪರಜ್ಜುವೆಂದು ನಂಬಿ ಕಪಿಲಸಿದ್ಧ ಮಲ್ಲಿಕಾರ್ಜುನಂಗೆ
ಬೇರೆಯಾದೆಯಲ್ಲ ಮನವೆ !'

ಸತ್ಯವಾದ ಜಗತ್ತನ್ನು ಅಸತ್ಯವನ್ನಾಗಿ, ಶಿವವಾದುದನ್ನು ಅಶಿವವನ್ನಾಗಿ ಭಾವಿಸಿ ಸರ್ಪರಜ್ಜು ನ್ಯಾಯವನ್ನು ಹೇಳುವ ವೇದಾಂತಿಯ ಭ್ರಾಂತಿಗೊಳಗಾಗ ಬೇಕಾಗುತ್ತದೆ. ಬ್ರಹ್ಮಾಂಡರೂಪ ಪರಬ್ರಹ್ಮಸಿಂದ ದೂರಾಗಬೇಕಾಗುತ್ತದೆ.

'ಅಹಮೇಕಃ ಪ್ರಥಮಮಾಸಂ ವರ್ತಾಮಿ ಚ ಭವಿಷ್ಯಾಮಿ ಚ |
ನಾನ್ಯಃ ಕಶ್ಚಿನ್ಮತ್ತೋ ವ್ಯತಿರಿಕ್ತಃ |'

—ಅಥರ್ವಶಿರಸ್ಸ.

'ತತ್ಸೃಷ್ಟ್ವಾ ತದೇವಾನು ಪ್ರಾವಿಶತ್, ತದನುಪ್ರವಿಶ್ಯ
ಸಚ್ಚತ್ಯಚ್ಚಾಭವತ್'

—ತೈತ್ತರೀಯೋಪನಿಷತ್.

'ವಿಗ್ರಹಂ ದೇವದೇವಸ್ಯ ಖಗದೇತಚ್ಚರಾಚರಂ'

—ವಾಯು ಸಂಹಿತಾ.

'ಆತ್ಮಶಕ್ತಿ ವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ |
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯಪ್ರಸಾರಣಾತ್ ||
ಶಿವತತ್ತ್ವಾತ್ಸಮುತ್ಪನ್ನಂ ಜಗದಸ್ಮಾನ್ನಭಿದ್ಯತೇ |
ಫೇನೋರ್ಮಿ ಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ ||
ಪತ್ರಶಾಖಾದಿ ರೂಪೇಣ ಯಥಾ ತಿಷ್ಠತಿ ಪಾದಪಃ |
ತಥಾ ಭೂಮ್ಯಾದಿ ರೂಪೇಣ ಶಿವ ಏಕೋವಿರಾಜತೇ ||'

—ಸಿದ್ಧಾಂತ ಶಿಖಾಮಣಿ.

ಇವೇ ಮುಂತಾದ ಮಾತುಗಳಿಂದ ಜಗತ್ತಿನಲ್ಲಿ ಅವ್ಯಕ್ತವಾಗಿ ಶಿವ ಚೈತನ್ಯವಿದೆಯೆಂದು ಜಗತ್ತು ಶಿವಸ್ವರೂಪವೆಂದು ಸತ್ಯವೆಂದು ಸ್ಪಷ್ಟವಾಗುತ್ತದೆ. ಮತ್ತು 'ಸ್ಥಿತ ಏವೋಪಾದಾನೇ ತದ್ಭಿನ್ನ ವ್ಯವಹಾರ ಯೋಗ್ಯ ಕಾರ್ಯೋತ್ಪತ್ತಿರೇವ ಪರಿಣಾಮಃ' ಎಂಬಂತೆ ಆ ಪರಶಿವನೇ ಸ್ವರ್ಣಕುಂಡಲ ನ್ಯಾಯದಂತೆ, ಬೀಜಾಂಕುರದಂತೆ, ಜಲತರಂಗದಂತೆ ತನ್ನ ಶಕ್ತ್ಯಂಶದೊಡನೆ ಜಗದ್ರೂಪಾಗಿ ಪರಿಣಮಿಸುವನು. ಕ್ಷೀರದಧಿ ನ್ಯಾಯದಂತೆ ಪೂರ್ವರೂಪ ವಿಕಾರವಾಗಿ ಪರಿಣಮಿಸುವುದಿಲ್ಲ. ವಿಕಾರ ಪರಿಣಾಮವಾದವನ್ನು ಮತ್ತು ವಿವರ್ತವಾದವನ್ನು ಶಿವಾದ್ವೈತಿಗಳು ಅಂಗೀಕರಿಸುವುದಿಲ್ಲ. ಆ ಪರಶಿವನ ಸಾಕಾರವೂ ಅಚಿದ್ರೂಪವೂ ಆದ ಶಕ್ತಿಯ ವಿಕಾಸವೇ ಜಗತ್ತು. ಇದು ಜಡವಾಗಿದ್ದರೂ ಇದರಲ್ಲಿ ಚೈತನ್ಯ ಗೂಢವಾಗಿ ಬೀಡು ಬಿಟ್ಟಿದೆ.

ವಿಮರ್ಶಾಶಕ್ತಿ ವಿಶಿಷ್ಟನಾದ ಶಿವನೇ ಜಗನ್ನಿರ್ಮಾಣ ಉದ್ಯಮದಲ್ಲಿ ಮಾಯಾ ವಿಶಿಷ್ಟ ಮಹೇಶ್ವರನಾಗುತ್ತಾನೆ. ಸರ್ವಜ್ಞ ಸರ್ವಕರ್ತೃ ಸರ್ವಪೂರ್ಣ ಶಾಶ್ವತ ಸರ್ವವ್ಯಾಪಕನಾಗಿ ಸಗುಣನೆನಿಸುತ್ತಾನೆ. ಸರ್ವಜ್ಞನಾಗದೆ ಸರ್ವಪ್ರೇರಕನಾಗಲು ಸಾಧ್ಯವಿಲ್ಲ. ಅಂತೆಯೇ ಸರ್ವಕರ್ತೃವಾಗದೆ ಶಂಭುವಾಗಲಾರ. ನಿತ್ಯಮುಕ್ತವಾಗದೆ ಸರ್ವಸ್ವತಂತ್ರನೆನಿಸ. ಅಂತೆಯೇ ಆತನು 'ಸರ್ವಜ್ಞಃ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ' ಎಂದು ಶ್ರೀ ರೇಣುಕಪೂಜ್ಯರು ಅಪ್ಪಣೆ ಕೊಡಿಸಿದ್ದಾರೆ.

ಸೃಷ್ಟಿಗೆ ಮೊದಲಿರುವ ಪರಶಿವನು ನಿರ್ಗುಣನು. ಸೃಷ್ಟಿಕರ್ತನಾದ

ಮೇಲೆ ಸಗುಣನು. ಗುಣಾತ್ಮಕಳಾದ ಮಾಯೆಯೊಡಗೂಡಿ ಸಗುಣನೆನಿಸುವ ಸುವನು.

"ಅಖಂಡೇ ಬ್ರಹ್ಮಚೈತನ್ಯೇ ಕಲ್ಪಿತಂ ಗುಣಭೇದತಃ ।
ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ
ಸ್ಮೃತಮ್ ॥"

ನಿರ್ಗುಣನಾಗಿ ತತ್ತ್ವಐಕ್ಯತೆಯನ್ನು, ಸಗುಣನಾಗಿ ತತ್ತ್ವವೈವಿಧ್ಯತೆಯನ್ನು ಶಿವನು ನಿರ್ವಹಿಸುತ್ತಾನೆ. 'ಲೋಕವತ್ತು ಲೀಲಾ ಕೈವಲ್ಯಂ' 'ಗುಣೋಪಪತ್ತೇಶ್ಚ' ಎಂಬೀ ಬ್ರಹ್ಮ ಸೂತ್ರಗಳು ಇದನ್ನೇ ಸಮರ್ಥಿಸಿವೆ. ಮತ್ತು,

'ಸೃಷ್ಟೇಃ ಪೂರ್ವಂ ಮಹಾದೇವಃ ಶಕ್ತಿ ಸಂಕೋಚ ಹೇತುನಾ ।
ನಿರ್ಗುಣತ್ವೇನ ಶಾಸ್ತ್ರೇಷು ಗೀಯತೇ ತತ್ತ್ವವೇದಿಭಿಃ ॥
ಅಥ ಸತ್ವಾದಿ ವೈಶಿಷ್ಟ್ಯಾತ್ ಸಗುಣತ್ವಂ ಸದಾಶಿವೇ ॥
ತತ್ಸಾಕ್ಷಿತ್ವಾತ್ ಸ್ವಚಿಚ್ಛಕ್ತ್ಯಾಃ ನಿರ್ಗುಣತ್ವಂ ವಿಧೀಯತೆ ॥
ಸಕಲೋ ನಿಷ್ಕಲಶ್ಚೇತಿ ತಸ್ಮಾತ್ ವೇದೇಷು ಗೀಯತೆ ।
ಮೂರ್ತಾಮೂರ್ತ ಸ್ವರೂಪೇಣ ಯಥಾವಾಯುರ್ವಿರಾಜತೇ ।
ಮೂರ್ತಾಮೂರ್ತ ಜಗದ್ರೂಪಾ ಯಥಾ ಮಾಯಾ ತಥಾ ಶಿವಃ॥'

—ಶ್ರೀಕರ ಭಾಷ್ಯ.

ಸಗುಣ–ನಿರ್ಗುಣ, ಸಕಲ–ನಿಷ್ಕಲ, ಮೂರ್ತಾಮೂರ್ತ ಇವು ಒಂದೇ ಅರ್ಥದ ಪರ್ಯಾಯ ಪದಗಳು. ಒಂದೇ ವಸ್ತು ನಿಷ್ಠಗಳು. ಅಂತೆಯೇ ಮಹೇಶನು ಈ ಉಭಯ ಸ್ವರೂಪನಾಗಿದ್ದಾನೆ. ಸೃಷ್ಟಿಗೆ ಮೊದಲು ಶಿವನು ಶಕ್ತಿ ಸಂಕೋಚದಿಂದ ನಿರ್ಗುಣನೂ, ಸೃಷ್ಟಿಯ ಬಳಿಕ ಸತ್ವಾದಿ ಗುಣಗಳಿಂದ ಸಗುಣನೂ ಅಗಿರುತ್ತಾನೆ. ಶಿವನ ಆ ಸಗುಣ–ನಿರ್ಗುಣ ಸ್ವರೂಪಗಳನ್ನೇ ವೇದವು ಸಕಲ–ನಿಷ್ಕಲವೆಂದು ಹೇಳಿದೆ; ವಾಯುವಿನಂತೆ ಮೂರ್ತಾಮೂರ್ತ ಸ್ವರೂಪನೂ ಆಗಿದಾನೆ. ತಾಮಸಗುಣ ಭೇದದಿಂದ ಭೋಜ್ಯವೂ ಆಗಿದಾನೆ.

'ಬೀಜ ವೃಕ್ಷದಂತೆ ನೀನಿರ್ಪೆಯಯ್ಯಾ :
ನಿರಾಕಾರವೆ ಮೂರ್ತಿಯಾಗಿ, ಮೂರ್ತಿಯೇ ನಿರಾಕಾರವಾಗಿ ;
ಇವೆಲ್ಲವನಳಿದು ಬಯಲಾಗಿಪ್ಪೆ,
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನ ದೇವದೇವಾ'

—ಶಿವಯೋಗಿ ಸಿದ್ಧರಾಮ.

ವಸ್ತುತ್ರಯವು ಗುಣತ್ರಯದಿಂದಾಗಿ ಸಗುಣವೆನಿಸಿವೆ. ವಸ್ತುವೊಂದೇ ಆಗಿರುವಾಗ ನಿರ್ಗುಣವೆನಿಸಿರುತ್ತದೆ.

'ಅಸ್ತಿ ಸಚ್ಚಿತ್ಸುಖಾಕಾರ ಮಲಕ್ಷಣಪದಾಸ್ಪದಂ
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷ ವಿಪ್ಲವಮ್ ।
ಪರಿಚ್ಛೇದ ಕಥಾಶೂನ್ಯಂ ಪ್ರಪಂಚಾತೀತ ವೈಭವಂ
ಪ್ರತ್ಯಕ್ಷಾದಿ ಪ್ರಮಾಣಾನಾಮಗೋಚರಪದೇ ಸ್ಥಿತಮ್ ।
ಸ್ವಪ್ರಕಾಶವಿರಾಜಂತಮನಾಮಯಮನೌಪಮಂ
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿ ನಿರಂಕುಶಮ್ ॥'

—ಸಿದ್ಧಾಂತ ಶಿಖಾಮಣಿ.

ಇದು ನಿರ್ಗುಣ ಪರಶಿವನ ಸ್ವರೂಪು. ಸಕಲಗುಣಾತೀತವೈಭವ-ನಿಷ್ಕಳಂಕ ಸ್ವಭಾವಗಳುಳ್ಳುದು. ಪರಿಚ್ಛೇದ ಶೂನ್ಯ. ಪ್ರಪಂಚವನ್ನು ಮೀರಿದ ಸೌಭಾಗ್ಯವಂತ. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರ. ಸ್ವಯಂ ಪ್ರಕಾಶಕ, ನಿರಾವಿಲ, ನಿರುಪಮ, ಸರ್ವಜ್ಞ, ಸರ್ವಗ, ಶಾಂತ, ಸರ್ವಶಕ್ತಿ ಪ್ರಭು.

ಅದೇ ಸಿದ್ಧಾಂತ ಶಿಖಾಮಣಿಯು ಸಗುಣ ಶಿವನನ್ನು ಹೀಗೆ ಬಣ್ಣಿಸಿದೆ :

'ಶಿವಾಭಿದಂ ಪರಂಬ್ರಹ್ಮ ಜಗನ್ನಿರ್ಮಾತುಮಿಚ್ಛಯಾ
ಸ್ವರೂಪ ಮಾದದೇ ಕಿಂಚಿತ್ ಸುಖಸ್ಫೂರ್ತಿ ವಿಜೃಂಭಿತಮ್ ।
ನಿರಸ್ತ ದೋಷ ಸಂಬಂಧಂ ನಿರುಪಾಧಿಕಮವ್ಯಯಂ
ದಿವ್ಯಮಪ್ರಾಕೃತಂ ನಿತ್ಯಂ ನೀಲಕಂಠಂ ತ್ರಿಲೋಚನಮ್ ।

ಚಂದ್ರಾರ್ಧಶೇಖರಂ ಶುದ್ಧಂ ಶುದ್ಧ ಸ್ಫಟಿಕಸನ್ನಿಭಂ
ಶುದ್ಧ ಮುಕ್ತಾಫಲಾಭಾಸಮುಪಾಶ್ಯಂ ಗುಣಮೂರ್ತಿಭಿಃ ।
ವಿಶುದ್ಧ ಜ್ಞಾನಕಿರಣಂ ವಿಷಯಂ ಸರ್ವಯೋಗಿನಾಂ
ಕೋಟಿ ಸೂರ್ಯಪ್ರತೀಕಾಶಂ ಚಂದ್ರಕೋಟಿ ಸಮಪ್ರಭಮ್ ।
ಅಪ್ರಾಕೃತ ಗುಣಾಧಾರಮನಂತ ಮಹಿಮಾಸ್ಪದಂ
ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತ ಲೋಕ ನಿರ್ಮಾಣ ಸಮವಾಯ ಸ್ವರೂಪಿಣೀ
ತದಿಚ್ಛಯಾಽಭವತ್ ಸಾಕ್ಷಾತ್ ತತ್ಸರೂಪಾನುಕಾರಿಣೀ ।
ಸ ಶಂಭುರ್ಭಗವಾನ್ ದೇವ ಸರ್ವಜ್ಞಃ ಸರ್ವಶಕ್ತಿಮಾನ್'

ಇದು ಸಗುಣ ಶಿವನ ಸ್ವರೂಪು. ಸೃಷ್ಟಿ ರಚನೆಗಾಗಿ ಸ್ವರೂಪವನ್ನು ತಳೆದು ಸಾಕಾರನಾಗುತ್ತಾನೆ. ಸುಖಸ್ಫೂರ್ತಿಯಿಂದ ವಿಜೃಂಭಿತನಾಗುತ್ತಾನೆ. ಆದರೂ ನಿರ್ದೋಷಿ ; ನಿರುಪಾಧಿಕ. ಅವಿನಾಶಿ ; ಅಪ್ರಾಕೃತ. ನಿತ್ಯ, ಶುದ್ಧ, ಶುಭ್ರ, ಉಪಾಶ್ಯ, ಜ್ಞಾನಗಮ್ಯ, ಉತ್ಕೃಷ್ಟಪ್ರಭಾನ್ವಿತ, ಅಪ್ರಾಕೃತ ಗುಣಾಧಾರ, ಅನಂತ ಮಹಿಮಾಗಾರ ; ಸಮಸ್ತ ಲೋಕ ನಿರ್ಮಾಣದಲ್ಲಿ ಸಮವಾಯ ಸ್ವರೂಪಿಣಿಯಾದ ಸಚ್ಚಿದಾನಂದೆಯಾದ ಪರಾಶಕ್ತಿ ವಿಶಿಷ್ಟ. ಸರ್ವಜ್ಞ, ಸರ್ವಶಕ್ತಿಮಂತ ; ಶಿವ, ಶಂಭುನಾಮಾಂಕಿತ, ಷಡ್ಗುಣೈಶ್ವರ್ಯವಂತ. ಹೀಗಿದ್ದರೂ ಈ ಸಗುಣ ಆ ನಿರ್ಗುಣ ತತ್ತ್ವಗಳಿಗೆ ಭೇದವಿಲ್ಲ. 'ಶಿವೋ ಮಹೇಶ್ವರಶ್ಚೇತಿ ನಾತ್ಯಂತಮಿಹಭಿದ್ಯೆತೇ' ನಿಷ್ಕಲ ಶಿವನೂ ಸಕಲ ಈಶ್ವರನೂ ತಿಳಿದುಪ್ಪ-ಹೆತ್ತುಪ್ಪಗಳಂತೆ ಒಂದೇ ಆಗಿದ್ದಾರೆ. ನಿಷ್ಕಲದಲ್ಲಿ ಸಕಲತ್ವವು, ಸಕಲದಲ್ಲಿ ನಿಷ್ಕಲತ್ವವು ಹಿನ್ನೆಲೆಯಾಗಿರುತ್ತವೆ. ಇದರಿಂದಾಗಿಯೇ ಈ ವಸ್ತುವಿಗೆ 'ಸ್ಥಲ' ಎಂದು ಕರೆದರು. 'ಸರ್ವೇಷಾಂ ಸ್ಥಾನಭೂತತ್ವಾತ್‌ಲಯ ಭೂತತ್ವತಸ್ತಥಾ । ತತ್ತ್ವಾನಾಂ ಮಹದಾದೀನಾಂ ಸ್ಥಲಮಿತ್ಯಭಿಧೀಯತೇ ॥' ಸೃಷ್ಟಿ ಸ್ಥಿತಿ ಲಯ ತಿರೋಧಾನ ಅನುಗ್ರಹಗಳಿಗೆ ಕಾರಣವಾಗಿ ಸಕಲನಿಷ್ಕಲವಾಗಿ ಸ್ಥಲವೆನಿಸಿದೆ. 'ಸ್ಥೀಯತೇ ಲೀಯತೇ ಯತ್ರ ವಿಶ್ವಂ ತತ್‌ಸ್ಥಲಂ' ಎಂದು ವಿಗ್ರಹಿಸಿದಾಗ ಸ್ಥಳ ಶಬ್ದಾರ್ಥವು ಸ್ಪಷ್ಟವಾಗುತ್ತದೆ. ಸ್ಥಲ, ಶಿವಪದಗಳಿಗೆ ವ್ಯತ್ಯಾಸವಿಲ್ಲ. 'ಶೇತೇ ಜಗದಸ್ಮಿನ್ನಿತಿ ಶಿವಃ' ಈ ಶಿವ ಶಬ್ದೋತ್ಪತ್ತಿಯೂ ಅದೇ

ಅರ್ಥವನ್ನು ಸೂಚಿಸುತ್ತದೆ. 'ಜನ್ಮಾದ್ಯಸ್ಯ ಯತಃ' ಈ ಬ್ರಹ್ಮಸೂತ್ರವೂ ಅದನ್ನೇ ಪ್ರತಿಪಾದಿಸಿದೆ.

ಶಿವಾದ್ವೈತ ದರ್ಶನದಲ್ಲಿ ಶಿವನು ನಿರ್ವಿಶೇಷನಲ್ಲ. ಶಕ್ತಿ ಅವ್ಯಕ್ತವಾಗಿ ಅವಿರಳವಾಗಿ ಇರುವುದರಿಂದ ಸವಿಶೇಷನೆನಿಸಿದ್ದಾನೆ. ನಿರ್ಗುಣಾವಸ್ಥೆಯಲ್ಲಿಯೂ ನಿರ್ವಿಶೇಷನಲ್ಲ. ವಿಶೇಷ ಎರಡು ಬಗೆಯಾಗಿದೆ. ಸರ್ವಜ್ಞತ್ವಾದಿಗಳು ಗುಣವಿಶೇಷ ; ಪ್ರೇರಕತ್ವಾದಿಗಳು ಧರ್ಮವಿಶೇಷ. ಇವೆರಡು ಇರುವುದರಿಂದ ಶಿವನು ಸವಿಶೇಷನೆನಿಸಿರುವನು. 'ಸರ್ವಜ್ಞಃ ಪ್ರೇರಕಃ ಶಂಭುಃ' 'ಸರ್ವಜ್ಞಃ ಸರ್ವಶಕ್ತಿಮಾನ್' ಎಂಬ ಶ್ರೀ ರೇಣುಕ ಶಿವಾಚಾರ್ಯರ ವಾಣಿಗಳು ಇದನ್ನೇ ಉಗ್ಗಡಿಸಿವೆ. ನಿತ್ಯತ್ವವಿಭುತ್ವಾದಿ ಧರ್ಮಗಳೂ ಶಿವನಲ್ಲಿರುವುದರಿಂದ ಶಿವನು ಯಾವಾಗಲೂ ಸವಿಶೇಷನೆನಿಸಿರುವನು.

ಕೇವಲಾದ್ವೈತ ಮತದಲ್ಲಿ ಸಗುಣಬ್ರಹ್ಮ ಮಾಯಾಕಲ್ಪಿತ, ಅಸತ್ಯ ; ಮಿಥ್ಯ. ಮತ್ತು ಔಪಾಧಿಕ. ಶಿವಾದ್ವೈತ ಮತದ ಸಗುಣ ಶಿವನು ನಿರಸ್ತ ದೋಷಸಂಬಂಧವುಳ್ಳವನು, ನಿರುಪಾಧಿಕನು ; ಅವ್ಯಯನು, ದಿವ್ಯನು, ಅಪ್ರಾಕೃತನು, ನಿತ್ಯನು, ನಿಟಿಲಾಕ್ಷನು.

ಸಚ್ಚಿತ್ಸುಖ ಸ್ವರೂಪನಾದ ನಿಷ್ಕಲ ಶಿವನು ಈಶ್ವರನಲ್ಲಿ ಸತ್ ಚಿತ್ ಆನಂದ ಈ ತ್ರಿವಿಧ ಸ್ವರೂಪದಲ್ಲಿರುತ್ತಾನೆ. ಜೀವನಲ್ಲಿ ಸತ್ ಚಿತ್ ಈ ಉಭಯರೂಪದಲ್ಲಿರುತ್ತಾನೆ. ಬ್ರಹ್ಮಾಂಡದಲ್ಲಿ ಕೇವಲ ಸದ್ರೂಪದಲ್ಲಿರುತ್ತಾನೆ. ಹೀಗೆ ಪರಶಿವನು ಮೂವತ್ತಾರು ತತ್ತ್ವರೂಪ ಬ್ರಹ್ಮಾಂಡದಲ್ಲಿದ್ದರೂ ಇದರ ದೋಷದಿಂದ ದೂರನಾಗಿರುವನು. 'ಜಲದೊಳಗಣ ಸೂರ್ಯನಂತಿರ್ಪನಯ್ಯ ಶಿವನು. ಲೋಕಾದಿ ಲೋಕಂಗಳೊಳಗಿದ್ದರೇನು ? ಜಗದ ಪುಣ್ಯ ಪಾಪ, ಸ್ವರ್ಗ ನರಕ, ಬಂಧ ದೋಷಕ್ಕೊಳಗಾದಾತನೇ-ಅಲ್ಲ. ಅದೆಂತೆಂದೊಡೆ: ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯನಿಗಿಲ್ಲವಾಗಿ, ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ ಶಿವನಿಗಿಲ್ಲವಾಗಿ, ಅನಂತ ಕೋಟಿ ಬ್ರಹ್ಮಾದಿಗಳು ತನ್ನ ಒಡಲೊಳಗೆ ಅಡಗಿದವೆಂದೊಡೆ ತಾ ಹೊರಗಾಗಿ ಅಡಗಲೆಡೆ ಏನುಂಟು ? ಇದು ಕಾರಣ ನಮ್ಮ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ ; ವಿಶ್ವಾಧಿಪತಿ ಆಗಲೂ ಬಲ್ಲ.' ಇದೂ ಒಂದು ಬಗೆಯ ಶಿವನ ಸವಿಶೇಷತೆ ಹಾಗು ನಿರ್ಲಿಪ್ತತೆ. ಶಿವನು ಜಗವಾಗಬಲ್ಲ, ಜಗವಾಗದಿರಬಲ್ಲ. ಅದು ಅವನ ಇಚ್ಛೆ ;

ಅವನ ಸ್ವತಂತ್ರತೆ. ‘ಉಭಯವ್ಯಪದೇಶಾತ್ವಹಿ ಕುಂಡಲವತ್’ ಹಾವು ಕುಂಡಲಾಕಾರವಾಗಬಲ್ಲುದು, ದಂಡಾಕಾರವಾಗಬಲ್ಲುದು. ಇದರಂತೆ ಶಿವನು ತನ್ನಿಚ್ಛೆ ಬಂದಂತೆ ಉಭಯರೂಪವನ್ನು ತಳೆಯಲು ಅಳವುಳ್ಳವನಾಗಿದ್ದಾನೆ.

ಆ ಪರಂಜ್ಯೋತಿ ರೂಪಾದ ಪರವಸ್ತುವು ಜ್ಞಾನಶಕ್ತಿಯಲ್ಲಿ ಕೂಡಿ ಶಿವನಾಗುತ್ತಾನೆ; ಅನುಗ್ರಹ ಕಾರ್ಯವನ್ನು ಮಾಡುತ್ತಾನೆ. ಕ್ರಿಯಾಶಕ್ತಿಯಲ್ಲಿ ನಿಂತು ಶಕ್ತಿಯಾಗಿ ತಿರೋಧಾನ ಕಾರ್ಯವನ್ನು ಮಾಡುತ್ತಾನೆ. ಮರಳಿ ಆ ಶಿವನು ಜ್ಞಾನಶಕ್ತಿಯ ಆಧಿಕ್ಯದಿಂದ ಸದಾಶಿವನೆನಿಸುತ್ತಾನೆ. ಈ ಸದಾಶಿವನೇ ಸತ್ವಾಧಿಕ್ಯದಿಂದ ರುದ್ರನಾಗಿ ಲಯ ಕಾರ್ಯವನ್ನು ಮಾಡುತ್ತಾನೆ. ಕ್ರಿಯಾ ಶಕ್ತಿಯ ಅಧಿಕ್ಯದಿಂದ ಈಶ್ವರನೆನಿಸುತ್ತಾನೆ. ಈ ಈಶ್ವರನೇ ರಜೋಗುಣದಿಂದ ವಿಷ್ಣುವಾಗಿ ಸ್ಥಿತಿಕಾರ್ಯವನ್ನು ಮಾಡುತ್ತಾನೆ. ದೃಕ್ಕ್ರಿಯೆಗಳೆರಡರ ಸಾಮ್ಯಾವಸ್ಥೆಯಲ್ಲಿ ಶಿವನು ಶುದ್ಧವಿದ್ಯೆಯೆನಿಸುವನು. ಈ ಶುದ್ಧವಿದ್ಯೆಯೇ ತಮೋಗುಣದಿಂದ ಬ್ರಹ್ಮನಾಗಿ ಸೃಷ್ಟಿಕಾರ್ಯವನ್ನು ನೆರವೇರಿಸುತ್ತಾನೆ.

‘ವಿವಕ್ಷಿತ ಗುಣೋಪಪತ್ತೇಶ್ಚ’ ಎಂಬೀ ಬ್ರಹ್ಮಸೂತ್ರದಂತೆ ಮತ್ತು ಹಾಲಿಗೆ ಮಧುರತ್ವ, ಶುಭ್ರತ್ವ, ದ್ರವತ್ವಗಳಿರುವಂತೆ ಆ ಅಖಂಡಬ್ರಹ್ಮಚೈತನ್ಯದಲ್ಲಿ ಭೋಕ್ತೃತ್ವ ಭೋಜ್ಯತ್ವ, ಪ್ರೇರಕತ್ವ ಧರ್ಮತ್ರಯಗಳಿರುತ್ತವೆ. ಈ ವಸ್ತುತ್ರಯತ್ವವು ಅಸ್ಮೃತವಲ್ಲ; ಅಂದರೆ ಅನನುಭೂತವಲ್ಲ. ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯನು ಮಂತ್ರದಲ್ಲಿ ‘ಇದಂ ಸ್ಮೃತಂ’ ಎಂದು ಹೇಳಿ ಅನುಭೂತ ವಿಷಯವೆಂದು ಸಿದ್ಧಾಂತ ಮಾಡುತ್ತಾನೆ. ‘ಅನುಭೂತ ವಿಷಯಾ ಸಂಪ್ರಮೋಷಃ ಸ್ಮೃತಿಃ’ ಎಂಬೀ ಪಾತಂಜಲ ಯೋಗಸೂತ್ರವು ಸ್ಮೃತಿಯ ಲಕ್ಷಣವನ್ನು ನಿರ್ದೇಶಿಸಿದೆ. ಹಿಂದೊಮ್ಮೆ ಅನುಭವಕ್ಕೆ ಬಂದು ಅಂತರ್ಹಿತವಾಗಿರುವುದು ಮರಳಿ ನೆನವಿಗೆ ಬರುವುದೇ ಸ್ಮೃತಿ. ಮೊದಲಿದ್ದದ್ದೇ ಮತ್ತೆ ತೋರುವಿಕೆಯೆಂದೂ ಹೇಳಬಹುದು. ಅಂತೆಯೇ ಭೋಕ್ತೃ ಭೋಜ್ಯಾದಿಗಳು ಮೊದಲಿಗೆ ಇದ್ದವುಗಳೆ! ಅವನ್ನು ಮರಳಿ ನೆನೆಯುವುದರಿಂದ ಅವುಗಳ ಸ್ವರೂಪವು ಅವಗತವಾಗುತ್ತದೆ. ‘ಸ್ಮೃತೇಶ್ಚ’ ಎಂಬ ಸೂತ್ರದಿಂದ ವ್ಯಾಸರೂ ಇದನ್ನೇ ಸಮರ್ಥಿಸಿದ್ದಾರೆ. ಅಲ್ಲದೆ ‘ಸರ್ವತ್ರ ಪ್ರಸಿದ್ಧೋಪದೇಶಾತ್’ ಆ ಪರಶಿವನ ವಸ್ತುತ್ರಯವು ಎಲ್ಲೆಲ್ಲಿಯೂ ಪ್ರಸಿದ್ಧವಾಗಿದೆ. ವ್ಯಷ್ಟಿ–ಸಮಷ್ಟಿಯಲ್ಲಿ, ಪ್ರಪಂಚ–ಪರಮಾರ್ಥದಲ್ಲಿ, ಲೌಕಿಕ–ವೈದಿಕಗಳಲ್ಲಿ, ಯೋಗ–ರೂಢಿ

ಗಳಲ್ಲಿ ಪ್ರಸಿದ್ಧವಾಗಿದೆ. ಇವು ಗುಣಭೇದದಿಂದ ಭಿನ್ನವಾಗಿದ್ದಂತೆ ತೋರಿದರೂ ಚೈತನ್ಯಧರ್ಮದಿಂದ ಅಖಂಡವಾಗಿವೆ ; ಅಭಿನ್ನವಾಗಿವೆ. ಸ್ಥೂಲ ತನುವೇ ಭೋಜ್ಯ, ಸೂಕ್ಷ್ಮತನುವೇ ಭೋಕ್ತೃ ; ಕಾರಣತನುವೇ ಪ್ರೇರಕವೆಂದು ಸ್ಥೂಲಮಾನದಲ್ಲಿ ತಿಳಿಯುವುದಾದರೆ ಸದ್ಯಕ್ಕೆ ಸಾಕಾಗಿದೆ.

"ಉಪಾಧಿಃ ಪುನರಾಖ್ಯಾತಃ ಶುದ್ಧಾಶುದ್ಧ ವಿಭೇದತಃ
ಶುದ್ಧೋಪಾಧಿಃ ಪರಾ ಮಾಯಾ ಸ್ವಾಶ್ರಯಾಽ ಮೋಹಕಾರಿಣೀ |
ಅಶುದ್ಧೋಪಾಧಿರಪ್ಯೇವಮವಿದ್ಯಾಶ್ರಯ ಮೋಹಿನೀ ||"

ತ್ರಿಗುಣಾತ್ಮಕ ಶಕ್ತಿಯೇ ಉಪಾಧಿ. ಇದು ಶುದ್ಧ ಅಶುದ್ಧವೆಂದು ಇಬ್ಬಗೆ. ಶುದ್ಧೋಪಾಧಿಯು ಅಭಿನ್ನ ; ಅಮೋಹಕಾರಿ. ಅದೇ ಪರಾ ಮಾಯೆ ; ಶುದ್ಧವಿದ್ಯೆ. ಇದು ಈಶ್ವರನನ್ನು ಆಶ್ರಯಿಸಿರುತ್ತದೆ. ಅಶುದ್ಧೋಪಾಧಿಯು ಭಿನ್ನ, ಮೋಹಕಾರಿ ; ಅವಿದ್ಯೆಯೆನಿಸಿದೆ. ಅಶುದ್ಧವಿದ್ಯೆಯೆನಿಸಿದೆ. ಇದು ಜೀವನನ್ನು ಆಶ್ರಯಿಸಿರುತ್ತದೆ. ಇದು ಮಿಥ್ಯೆಯಲ್ಲ. ಹೀಗೆ ಶಿವ-ಜೀವರಿಬ್ಬರೂ ಶಕ್ತಿ ವಿಶಿಷ್ಟರಾಗಿದ್ದಾರೆ. ಶಿವನಲ್ಲಿ ಅಂದರೆ ಈಶನಲ್ಲಿ ಸೂಕ್ಷ್ಮವಾದ ಚಿದಚಿದ್ರೂಪಾದ ಶುದ್ಧ ವಿದ್ಯೆಯೆನಿಸಿದ ಮಹಾಮಾಯೆ ಇರುತ್ತಾಳೆ. ಜೀವನಲ್ಲಿ ಸ್ಥೂಲವಾದ ಚಿದಚಿದ್ರೂಪಾದ ಅಶುದ್ಧವಿದ್ಯೆಯಾದ ಅವಿದ್ಯೆಯಿರುತ್ತದೆ. 'ವಿಶೇಷಣ ಭೇದವ್ಯಪದೇಶಾಭ್ಯಾಂಚ ನೇತರೌ' ವಿಶೇಷಣಗಳಿಂದ ವಿಭೇದ ವ್ಯಪದೇಶವಿರುತ್ತದೆ. ವಿಶೇಷಣವು ಭಿನ್ನಾಭಿನ್ನ ಅಥವಾ ಶುದ್ಧಾಶುದ್ಧವೆಂದು ಇಬ್ಬಗೆಯಾಗಿದೆ.

'ಕಾರ್ಯೋಪಯೋಗೇಽಪೃಥಕ್ಸಿದ್ಧ ವಿಶೇಷಣಂ ಹಿ ಶಕ್ತಿಃ'

ಆ ಮಹೇಶ್ವರನಿಗೆ ಮಹಾ ಮಾಯೆಯು ಜಗತ್ಕಾರ್ಯದಲ್ಲಿ ಉಪಯುಕ್ತಳಾಗಿ ಅಭೇದರೂಪದಿಂದಿರುವಳು. ಅಪೃಥಕ್ ವಿಶೇಣವೇ ಶಕ್ತಿಯೆನಿಸಿದೆ. ವಿಶೇಷಣವು ಭಿನ್ನಾಭಿನ್ನವೆಂದು ದ್ವಿವಿಧವಾಗಿದೆ. ಘಟಾಕಾಶವು ಭಿನ್ನ ವಿಶೇಷಣದ ಕುರುಹು. ನೀಲಾಕಾಶವೆಂಬುದು ಅಭಿನ್ನ ವಿಶೇಷಣದ ಕುರುಹು. ಆಕಾಶದಲ್ಲಿ ನೀಲವು ಹೇಗೆ ಅಭಿನ್ನವಾಗಿರುವುದೋ ಹಾಗೆ ಮಹೇಶ್ವರನಲ್ಲಿ ಮಹಾಮಾಯೆ ಅಭಿನ್ನವಾಗಿರುವುದು. ನಾಮರೂಪಕ್ರಿಯೆ ತಾಳದೆ ತೋರದೆ

ಇರುವುದು. ಜೀವನಲ್ಲಿರುವ ಅವಿದ್ಯೆಯು ನಾಮರೂಪಕ್ರಿಯೆಗಳಿಂದ ತೋರಿ ಭಿನ್ನವಾಗಿರುತ್ತದೆ. ಘಟದಂತೆ ವಿಶೇಷಣವಾಗಿರುತ್ತದೆ. 'ತದ್ವೇದಂ ತರ್ಹ್ಯ ವ್ಯಾಕೃತಮಾಸೀತ್, ತನ್ನಾಮ ರೂಪಾಭ್ಯಾಂ ವ್ಯಾಕ್ರಿಯತ' ಈ ಬೃಹದಾರಣ್ಯಕೋಪನಿಷತ್ತಿನ ಉಕ್ತಿಯು ನಮ್ಮ ಅಭಿಪ್ರಾಯವನ್ನೇ ಅಭಿವ್ಯಕ್ತಗೊಳಿಸಿದೆ. ಸೃಷ್ಟಿಗೆ ಮೊದಲು ನಾಮರೂಪಾದಿಗಳಿಲ್ಲದೆ ಅವ್ಯಾಕೃತವಾಗಿ ಅಂದರೆ ಸೂಕ್ಷ್ಮವಾಗಿ ಈಶನಲ್ಲಿದ್ದು ಸೃಷ್ಟಿಯ ಬಳಿಕ ನಾಮರೂಪಗಳಿಂದ ವ್ಯಾಕೃತವಾಯಿತು ; ಸ್ಥೂಲವಾಗಿ ಭಿನ್ನವಾಯಿತು. ಮಣ್ಣು ಮಡಕೆಗಳಾದಂತೆ, ಹೊನ್ನು ತೊಡಗೆಗಳಾದಂತೆ !

'ಶಕ್ತ್ಯಾದಿ ಚ ಪೃಥಿವ್ಯಂತಂ ಜಗದೇತಚ್ಚರಾಚರಂ
ಶಿವಶಕ್ತಿ ಸಮುತ್ಪನ್ನಂ ತಂತೂರ್ಲುತೋದ್ಭವೋ ಯಥಾ |
ಶಕ್ತಿಮಾನುಚ್ಯತೇ ದೇವಃ ಸಚ್ಚಿದಾನಂದ ಲಕ್ಷಣಃ
ಧರ್ಮರೂಪಾ ಪರಾಶಕ್ತಿಃ ಧರ್ಮಿರೂಪಃ ಪರಃ ಶಿವಃ |
ತಸ್ಯಾನಾ ವೃತರೂಪತ್ವಾತ್ ಪರಾಶಕ್ತಿಃ ಪರಾತ್ಮನಃ
ಸರ್ವದಾ ತತ್ಸ್ವರೂಪೇಣ ಭಾತಿ ಭಾನೋರಿವ ಪ್ರಭಾ |
ತಾದಾತ್ಮ್ಯ ಮನಯೋರ್ನಿತ್ಯಂ ಧರ್ಮ ಧರ್ಮಿಸ್ವಭಾವತಃ
ತತ್ರ ಸ್ವತಂತ್ರರೂಪೇಣ ಶಿವಸ್ಸಚ್ಚಿತ್ಸುಖಾತ್ಮಕಃ |'

—ಶಕ್ತಿ ಸಂದೋಹ.

ಶಕ್ತಿ ಮೊದಲ್ಗೊಂಡು ಪೃಥ್ವಿ ಕೊನೆಯಾಗಿರುವ ಈ ಚರಾಚರ ಜಗತ್ತು ಶಿವಶಕ್ತಿ ಸಮುತ್ಪನ್ನವಾದುದು. ಸಚ್ಚಿದಾನಂದ ಸ್ವರೂಪನಾದ ಶಿವನು ಶಕ್ತಿವಂತನು. ಶಕ್ತಿ ಧರ್ಮರೂಪಳು. ಶಿವನು ಧರ್ಮಿರೂಪನು. ಆ ಪರಾಶಕ್ತಿಯಿಂದ ಆ ಪರಾತ್ಮನಿಗೆ ಸ್ಥೂಲರೂಪಾದಿಗಳಿಲ್ಲ. ಶಕ್ತಿಯು ಶಿವನಲ್ಲಿ ಪ್ರಭಾಕರನಲ್ಲಿ ಪ್ರಭೆಯು ಬೆಳಗುವಂತೆ ಬೆಳಗುವಳು. ನಿತ್ಯ ತಾದಾತ್ಮ್ಯರೂಪದಲ್ಲಿ ಶಿವಶಕ್ತಿಯರಿರುವರು. ಧರ್ಮ ಧರ್ಮಿಸ್ವಭಾವದಿಂದ ಸ್ವತಂತ್ರರಾಗಿರುವರು ; ಸಚ್ಚಿದಾನಂದಾತ್ಮಕರು.

'ಮಾಂ ವಿದ್ಧಿ ಪರಮಾಂ ಶಕ್ತಿಂ ಮಹೇಶ್ವರ ಸಮಾಶ್ರಯಾಂ
ಅನನ್ಯಾಮವ್ಯಯಾಮೇಕಾಂ ಮಾಂ ಪಶ್ಯಂತಿ ಮುಮುಕ್ಷವಃ |
ಅಹಂ ವೈ ಸರ್ವಭೂತಾನಾಮಾತ್ಮಾ ಸರ್ವಾಂತರಾ ಶಿವಾ
ಶಾಶ್ವತೈಶ್ವರ್ಯ ವಿಜ್ಞಾನಮೂರ್ತಿಸ್ಸರ್ವ ಪ್ರವರ್ತಿಕಾ |'

ಎಂಬುದಾಗಿ ಕೂರ್ಮ ಪುರಾಣದಲ್ಲಿ ಪ್ರತಿಪಾದಿತವಾಗಿದೆ. 'ಮಹೇಶ್ವರ ಸಮಾಶ್ರಯಾಂ' ಎಂದು ಹೇಳಿ ಸ್ವಾಶ್ರಯತ್ವವನ್ನು ಎತ್ತಿ ಹಿಡಿದಿದೆ. 'ಮಾಂ ಪಶ್ಯಂತಿ ಮುಮುಕ್ಷವಃ' ಎಂದು ನಿರೂಪಿಸಿ 'ಅಮೋಹಕಾರಿಣೀ' ಎಂಬ ರೇಣುಕವಾಣಿಯನ್ನು ಸಂಪೋಷಿಸಿದೆ. ಶಿವೆಯು ಸರ್ವಾಂತರಾತ್ಮಸ್ವರೂಪಳು. ಶಾಶ್ವತೈಶ್ವರ್ಯ ವಿಜ್ಞಾನರೂಪಳು. ಸರ್ವಪ್ರವರ್ತಕಳು.

'ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ |'

—ಸಿದ್ಧಾಂತಾಗಮ

ಮಾಯಾ ಮತ್ತು ಸ್ವಾಶ್ರಯಾ ಎಂದು ಬೋಧಿಸಿದ ಶ್ರೀ ರೇಣುಕ ಭಗವತ್ಪಾದರ ಸೂತ್ರವಾಣಿಗೆ ಈ ಸಿದ್ಧಾಂತಾಗಮ ಶ್ಲೋಕವು ಭಾಷ್ಯರೂಪಾಗಿದೆ; ವಿಮರ್ಶಾತ್ಮಕವಾಗಿದೆ. ಮತ್ತು 'ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ' ಎಂಬ ಮಂತ್ರಕ್ಕೆ ಪೋಷಕವೂ ಧಾರಕವೂ ಆಗಿದೆ.

'ವಿದ್ಯೇತಿ ಚೇತನಾಂ ಪ್ರಾಹುಸ್ತಥಾಽವಿದ್ಯಾಮಚೇತನಾಂ
ವಿದ್ಯಾಽವಿದ್ಯಾತ್ಮಕಂ ಸರ್ವಂ ವಿಶ್ವಂ ವಿಶ್ವಗುರೋರ್ವಿಭೋ |'

ಮಂತ್ರದಲ್ಲಿ ಶಿವಾಚಾರ್ಯರು ಹೇಳಿದ ವಿದ್ಯೆ ಅವಿದ್ಯೆಗಳ ವಿಶ್ಲೇಷಣೆ–ಸಂಶ್ಲೇಷಣೆ ನಡೆದಿದೆ. ವಾಯುಸಂಹಿತೆಯ ಈ ಶ್ಲೋಕವು ಶಿವಾಚಾರ್ಯರ ಮಂತ್ರವನ್ನು ಪೂರ್ಣ ಪ್ರತಿನಿಧಿಸುತ್ತದೆ. ಇದು ವಿದ್ಯಾವಿದ್ಯೆಗಳೆರಡು ಚೇತನಾಚೇತನ ಸ್ವರೂಪಗಳೆಂದು ನಿರೂಪಿಸಿದೆ. ವಿದ್ಯಾವಿದ್ಯೆಗಳೆರಡರಿಂದಲೂ ವಿಶ್ವವು ವಿಶಿಷ್ಟವಾಗಿದೆಯೆಂದು ತಿಳುಹಿದೆ. ವಿದ್ಯಾವಿದ್ಯೆಗಳಿಗೆ ಜ್ಞಾನಕ್ರಿಯೆಗಳೆಂಬ ಅರ್ಥವುಂಟು.

ಪರಾಮಾಯೆಗೆ ಶುದ್ಧ ಮಾಯೆ, ಶುದ್ಧವಿದ್ಯೆ, ಮಹಾ ಮಾಯೆ, ಪರ ಬಿಂದು, ಪರಾಪ್ರಕೃತಿ, ಶುದ್ಧೋಪಾಧಿ ಎಂಬುದಾಗಿ ಬೇರೆ ಬೇರೆ ಹೆಸರುಗಳಿವೆ. ಅಪರಾಮಾಯೆಗೆ ಅಶುದ್ಧ ಮಾಯೆ, ಅಶುದ್ಧವಿದ್ಯೆ, ಅವಿದ್ಯೆ, ಕುಟಿಲೆ, ಕುಂಡಲಿನಿ, ಪ್ರಕೃತಿ, ಅಶುದ್ಧೋಪಾಧಿ ಎಂಬ ಹೆಸರುಗಳಿವೆ.

ಉಪಾಧಿಯು ಶುದ್ಧವಾಗಿರುವಾಗ ಧರ್ಮ ಚಿಂತೆ, ಆತ್ಮಧ್ಯಾನಾದಿಗಳು ಉಂಟಾಗುತ್ತವೆ. ಉಪಾಧಿಯು ಅಶುದ್ಧವಾದಾಗ ಅದರ ಹೆಸರಿಗೆ ತಕ್ಕಂತೆ ಉಪ-ಆಧಿ ಅಂದರೆ ಸಮೀಪ ಮನೋವ್ಯಥೆಯಾಗಿ ಕಾಡುತ್ತದೆ; ಅವಿದ್ಯೆ ಯಾಗಿ ಕಾಡುತ್ತದೆ. ಮೋಹಿನಿಯಾಗಿ ಮುಂದುಗೆಡಿಸುತ್ತದೆ.

ಶಿವಾಚಾರ್ಯರು ಹೇಳಿದ ಅವಿದ್ಯಾ ಮತ್ತು ಆಶ್ರಯಮೋಹಿನೀ ಎಂಬೆರಡು ಅಭಿಪ್ರಾಯಗಳನ್ನು ಅಕ್ಕಮಹಾದೇವಿಯ ಈ ವಚನಗಳು ಚೆನ್ನಾಗಿ ಚಿತ್ರಿಸಿವೆ: 'ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. ಪ್ರಾಣಕ್ಕೆ ಮನ ವಾಗಿ ಕಾಡಿತ್ತು ಮಾಯೆ. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ. ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ. ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ. ಚೆನ್ನಮಲ್ಲಿಕಾರ್ಜುನ ನೀನೊಡ್ಡಿದ ಮಾಯೆಯನಾರೂ ಗೆಲಲಾರರು.' ಈ ವಚನದಲ್ಲಿ ಅವಿದ್ಯಾ ಸ್ವರೂಪವು ಸರ್ವಾಂಗದಲ್ಲಿ ಹೇಗಿರು ತ್ತದೆಯೆಂಬುದನ್ನು ಸ್ಪಷ್ಟವಾಗಿ ರೂಪಿಸಿದೆ.

ಅವಿದ್ಯೆಯ ಬಗೆಗಳಿವು. ನೆಳಲಾಗಿ ನೆನಹಾಗಿ ಮನವಾಗಿ ಮರವೆಯಾಗಿ ಅರಿವು-ಮರವೆಯಾಗಿ ಮಾನವತೆಯನ್ನು ಮುತ್ತಿಕೊಂಡಿರುತ್ತದೆ. 'ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ! ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ! ಲೋಕವೆಂಬ ಮಾಯೆಗೆ ಶರಣ ಚಾರಿತ್ರ ಮರುಳಾಗಿ ತೋರುವುದು ನೋಡಾ......' 'ಬಿಟ್ಟೆನೆಂದರೆ ಬಿಡದೀ ಮಾಯೆ. ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ. ಸವಣಂಗೆ ಸವಣೆ ಯಾಯಿತ್ತು ಮಾಯೆ. ಯತಿಗೆ ಪರಾಕಿಯಾಯಿತ್ತು ಮಾಯೆ....'

'ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ. ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ. ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ. ಈ ಮಾಯೆಯ ಕಳೆವರೆ ಎನ್ನಳವಲ್ಲ. ನೀವೇ ಬಲ್ಲಿರಿ ಕೂ. ಸಂ. ದೇವಾ.'

ಈ ವಚನಗಳಲ್ಲಿ ಅಕ್ಕ ಅಣ್ಣಗಳು ಮಾಯೆಯ ಮೋಹದಾಟ-ಕಾಟಗಳನ್ನು ಮನನೀಯವಾಗಿ ಬಿತ್ತರಿಸಿದ್ದಾರೆ. ಆಶ್ರಿತರಲ್ಲಿ ಹೇಗೆ ಹೇಗೆ ಮೋಹಿನಿಯಾಗಿ ಮೈಗೂಡಿ ಮುಂಗೆಡಿಸುತ್ತದೆಯೆಂಬುದನ್ನು ಚಿತ್ರಿಸಿದ್ದಾರೆ.

'ಮಾಂ ಯಾತಿ, ವಿಶ್ವಂ ಮಾತಿ–ಮಿಮೀತೆ ವಾ ಮಾಯಾ' ಈ ಉತ್ಪತ್ತಿಗಳಿಂದ ತನ್ನ ಪಿಂಡಾಂಡವನ್ನು ಮತ್ತು ಬ್ರಹಾಂಡವನ್ನು ಒಳಪಡಿಸಿಕೊಂಡು ಅಳತೆ ಮಾಡುವ ಅಳವುಳ್ಳುದೆಂದು ಅರ್ಥವಾಗುತ್ತವೆ. ಮನದಾಸೆ–ಮರವೆ ಮುಂತಾದವುಗಳು ಮಾಯೆಯೆಂದು ಇವುಗಳ ಆವರಣದಿಂದ 'ಜೀವ'ನೆನಿಸಿರುವನೆಂದು ತಿಳಿದು ಬರುತ್ತದೆ. ಪಶು ಸ್ವಭಾವಕ್ಕೆ ಪಕ್ಕಾಗಿರುವನೆಂದು ಮನವರಿಕೆಯಾಗುತ್ತದೆ. ಇಲ್ಲಿ ಅವಿದ್ಯೆಗೆ ಮಾಯೆಯೆಂದು ವಚನಕಾರರು ಅಭಿಪ್ರಾಯಪಟ್ಟಿದಾರೆ. ಗೀತೆಯೂ ಇದೇ ಅಭಿಪ್ರಾಯವುಳ್ಳುದಾಗಿದೆ:

ತ್ರಿಭಿರ್ಗುಣಮಯೈರ್ಭಾವೈರೇಭಿಸ್ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥
ದೈವೀಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ
ತರಂತಿ ತೇ ॥'

ಶ್ರೀ ರೇಣುಕ ಜಗದ್ಗುರುವಿನ ಮಾಯಾ ಅಥವಾ ಶಕ್ತಿ ಲಕ್ಷಣವನ್ನೇ ಭಗವದ್ಗೀತೆಯೂ ಒಪ್ಪಿಕೊಂಡಿರುತ್ತದೆ. ರೇಣುಕ ಗೀತೆಯಂತೆ ಭಗವದ್ಗೀತೆಯ ಮಾಯೆಯೂ ಗುಣತ್ರಯಾತ್ಮಕಳಾಗಿದ್ದಾಳೆ. ಅಶುದ್ಧೋಪಾಧಿಯಿಂದ ಅಂದರೆ ಮಲಿನ ಸತ್ವ ಸ್ವರೂಪವುಳ್ಳ ಅವಿದ್ಯೆಯಿಂದ ಜೀವ ಜಗತ್ತು ಮೋಹಿತವಾಗಿದೆ.

ಶಕ್ತಿ ಗುಣತ್ರಯದಿಂದ ವೃತ್ತಿತ್ರಯವುಳ್ಳವಳಾಗುತ್ತಾಳೆ. ವೃತ್ತಿತ್ರಯದಿಂದ ನಾಮತ್ರಯವುಳ್ಳವಳಾಗುತ್ತಾಳೆ. ಶುದ್ಧ ಸತ್ವಗುಣದಿಂದ 'ಮಾಯೆ'ಯೆಂದೆನಿಸುತ್ತಾಳೆ. ಮಲಿನ (ಅಶುದ್ಧ) ಸತ್ವದಿಂದ ಅಥವಾ ರಜೋಗುಣದಿಂದ 'ಅವಿದ್ಯೆ'ಯೆಂದೆನಿಸುತ್ತಾಳೆ. ತಮೋಗುಣದಿಂದ 'ಪ್ರಕೃತಿ'ಯೆಂದೆನಿಸುತ್ತಾಳೆ.

ಶುದ್ಧೋಪಾಧಿಯುಳ್ಳ ಮಾಯೆಯು ಈಶ್ವರನಲ್ಲಿದ್ದು ಪ್ರೇರಕಶಕ್ತಿಯಾಗುತ್ತಾಳೆ. ಆತನಲ್ಲಿ ಯೋಗವುಳ್ಳವಳಾಗಿರುತ್ತಾಳೆ; ಅಂದರೆ ಸಮರಸವುಳ್ಳವಳಾಗಿರುತ್ತಾಳೆ. ಅದರಿಂದ ಐಕ್ಯಸ್ಥಿತಿಯುಂಟಾಗುತ್ತದೆ. ಈಶ್ವರನಲ್ಲಿರುವ ಮಾಯೆ ಅಧ್ಯಾಸವಲ್ಲ. ಆದ್ದರಿಂದ ಐಕ್ಯಸ್ಥಿತಿ ಅಧ್ಯಾಸವಲ್ಲ.

ಅಶುದ್ಧೋಪಾಧಿಯುಳ್ಳ ಅವಿದ್ಯೆಯು ಅಂತರಾತ್ಮನಲ್ಲಿರುತ್ತಾಳೆ. ಮಾಯೆ ಯೋಗಾಂಗದಲ್ಲಿದ್ದರೆ ಅವಿದ್ಯೆ ಭೋಗಾಂಗದಲ್ಲಿರುತ್ತಾಳೆ. ಸ್ವಪ್ನಕಾರಣಳಾಗಿರುತ್ತಾಳೆ. ಭೋಗವೃತ್ತಿಯನ್ನುಂಟು ಮಾಡುತ್ತಾಳೆ.

ಅವಿದ್ಯೆಯೆ ತಮೋಗುಣಪ್ರಧಾನಳಾಗಿ ತ್ಯಾಗಾಂಗ (ಆತ್ಮ) ದಲ್ಲಿರುತ್ತಾಳೆ. ಮೋಹಕಾರಿಯಾಗುತ್ತಾಳೆ. ಪ್ರಕೃತಿಯಾಗಿ ಭೋಗ್ಯ ವಸ್ತುಗಳಲ್ಲಿಯೂ ಇರುತ್ತಾಳೆ. ಪದಾರ್ಥಗಳನ್ನು 'ಪಾತ'ವೆಂದೆನಿಸುತ್ತಾಳೆ. ಅವಿದ್ಯೆಗೆ ಒಳಗಾದ ಜೀವನೆಂಬ ಪಶುವಿಗೆ ಪಾಶವನ್ನು ಬಂಧಿಸುತ್ತಾಳೆ.

"ಅವಿದ್ಯಾ ಶಕ್ತಿ ಭೇದೇನ ಜೀವಾ ಬಹು ವಿಧಾಃಸ್ಮೃತಾಃ
ಮಾಯಾಶಕ್ತಿ ವಶಾದೀಶೋ ನಾನಾಮೂರ್ತಿಧರಃ ಪ್ರಭುಃ |"

ಜೀವಶಕ್ತಿ ಅವಿದ್ಯೆ. ದೇವಶಕ್ತಿ ಮಾಯೆ. ಅವಿದ್ಯೆ ಅಸ್ವತಂತ್ರ; ಮಾಯೆ ಸ್ವತಂತ್ರ. ಅಸ್ವತಂತ್ರ ಅವಿದ್ಯೆಯನ್ನು ಆಶ್ರಯಿಸಿ ಜೀವರು ಆತ್ಮಸ್ವಾತಂತ್ರದಿಂದ ವಂಚಿತರಾಗುತ್ತಾರೆ. ಸ್ವತಂತ್ರ ಶಕ್ತಿಯುಳ್ಳ ದೇವತೆಗಳು ದೇವೇಶನು ಆತ್ಮಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

ರಜೋಗುಣದಿಂದ ಮಲಿನಸತ್ವದಿಂದ ಅಶುದ್ಧೋಪಾದಿಯಿಂದ ಕೂಡಿದ ಅವಿದ್ಯೆಯೂ ಒಂದು ಶಕ್ತಿ. ಅದು ಬೇರ್ಪಡಿಸುವ ಶಕ್ತಿ. ಸಂಕೋಚ-ವಿಕಾಸಧರ್ಮದ್ವಯವುಳ್ಳ ಶಕ್ತಿ. ಅವಿದ್ಯೆಯಾದಾಗ ವಿಕಾಸಗೊಳ್ಳುತ್ತದೆ. ವಿದ್ಯೆಯಾದಾಗ ಸಂಕೋಚಗೊಳ್ಳುತ್ತದೆ. ಇಲ್ಲಿ ಸಂಕೋಚವೆಂದರೆ ಕೇಂದ್ರೀಕರಣವೆಂದರ್ಥ.

ಅವಿದ್ಯೆಯು ಆತ್ಮನನ್ನು ಶಿವನಿಂದ ಬೇರ್ಪಡಿಸಿ ತಾನು ಆತ್ಮನನ್ನು ಆವರಿಸಿ ಜೀವನೆನಿಸಿದೆ. ಅನಲ್ಪದಿಂದ ಅಲ್ಪತ್ವಕ್ಕೆ ತಂದು, ವಿದ್ಯೆಯಿಂದ ಅವಿದ್ಯೆಗೆ ತಂದು ಅಗ್ನಿಸ್ಫುಲಿಂಗಗಳಂತೆ ಅನಂತ (ಬಹು) ಜೀವರನ್ನಾಗಿಸಿವೆ.

ಈ ಬಹುತ್ವಕಲ್ಪನೆ ದೇಹೋಪಾಧಿಯಿಂದ. 'ಎಣಿಸುವೊಡೆ ತನು ಭಿನ್ನ; ಆತ್ಮನೊಬ್ಬನೆ. ಅನುರೇಣುತೃಣಭರಿತ ನೀನೆಂದು ಆನು ಮಣಿಯುತಿಪ್ಪೆನಯ್ಯ ರಾಮನಾಥ.' ಈ ವಚನ ವಿಚಾರವನ್ನು ತಿಳಿಯದಂತಿರುವುದೇ ಅವಿದ್ಯಾಶಕ್ತಿ; ಜೀವ ಬಹುವಿಧತ್ವ ಸ್ಮೃತಿ.

ಸತ್ವಗುಣದಿಂದ ಶುದ್ಧೋಪಾಧಿಯಿಂದ ಕೂಡಿದುದೇ ಮಾಯೆ. ಮಾಯಾಶಕ್ತಿಯ ವಶನಾಗಿ ಪರಶಿವನು ಈಶನೆನಿಸುತ್ತಾನೆ. ಸ್ವತಂತ್ರನಾಗಿ ಸ್ವಲೀಲೆಗಾಗಿ ತಾನೇ ಅನಂತಮೂರ್ತಿ ರೂಪಗಳನ್ನು ಧರಿಸುತ್ತಾನೆ. ಪಂಚ ಬ್ರಹ್ಮರಾಗುತ್ತಾನೆ. ರುದ್ರ ವಿಷ್ಣು ಬ್ರಹ್ಮಾದಿ ನಾನಾ ದೇವತೆಗಳ ರೂಪನ್ನು ತಾಳುತ್ತಾನೆ. ದೇವ ಸ್ವಭಾವವುಳ್ಳ ಮಹಾನುಭಾವನಾಗುತ್ತಾನೆ. ಈ ವಿವೇಚನೆಯಿಂದ ತಿಳಿಯುವುದೇನೆಂದರೆ: ಅವಿದ್ಯಾಶಕ್ತಿಯಿಂದ ಮಾನವ ಸ್ವಭಾವದವರು, ಮಾಯೊಶಕ್ತಿಯಿಂದ ದೇವ ಸ್ವಭಾವದವರು ಜನಿಸುವರೆಂಬುದು ವಿಶದವಾಗುತ್ತದೆ. ನಿದರ್ಶನವಾಗಿ, ಅಲ್ಲಮಪ್ರಭುವು ಮಾಯಾ ಶಕ್ತಿಗೆ ವಶವಾಗಿ ಇಲ್ಲಿಗೆ ಅವತರಿಸಿ ದೇವಭಾವವನ್ನು ಧರಿಸಿ ಮಾಯೆಯನ್ನು ಗೆದ್ದರು. ಅದರ ಅಳವಿಗೆ ಒಳಗಾಗದೆ ಮಾಯಾ ಕೋಲಾಹಲಿ ಎಂದು ಹೆಸರಾದರು. ಕೇವಲ ಚಿದ್ವಿಲಾಸಿಗಳಾದರು. ವಿಜ್ಞಾನ ಕೇವಲರಾದರು.

"ಸರ್ವಜ್ಞಃ ಸರ್ವಕರ್ತಾ ಚ ನಿತ್ಯಮುಕ್ತೋ ಮಹೇಶ್ವರಃ
ಕಿಂಚಿತ್ಕರ್ತಾ ಚ ಕಿಂಚಿಜ್ಞೋ ಬದ್ಧೋಽನಾದಿ ಶರೀರವಾನ್ ।"

ಮಾಯಾಶಕ್ತಿಯುಳ್ಳ ಮಹೇಶ್ವರನು ಎಲ್ಲ ಬಲ್ಲಿದನು, ಸರ್ವಸಮರ್ಥನು; ಸಕಲ ಜಗನ್ನಿರ್ಮಾಣಕ್ಕೆ ಕಾರಣನು. ನಿತ್ಯಮುಕ್ತನು. ಭವದ ಪಂಚ ಪಾಶರಹಿತನು. ಹಿರಿಯೊಡೆಯನು. ಅನುಗ್ರಹಕರ್ತನು.

ಅದೇ ಅವಿದ್ಯಾಶಕ್ತಿಯುಳ್ಳ ಜೀವನು ಮಲತ್ರಯಗಳಿಂದ ಭವಬಂಧನದಿಂದ ಬದ್ಧನಾಗಿ ಅಲ್ಪಜ್ಞ ಅಲ್ಪಕರ್ತೃವಾಗಿರುವನು. ಬಹು ಜನ್ಮಗಳಿಂದ ದೇಹಧಾರಿಯಾಗಿರುವನು. ಆಣವಾದಿ ಮಲಗಳಿಂದ ಅವಿದ್ಯಾವಶನಾಗಿದ್ದಾನೆ. ಅಲ್ಪತ್ವವುಳ್ಳವನಾಗಿದ್ದಾನೆ. ವಿವೇಕ ವಿರಾಗಗಳಿಲ್ಲದವನಾಗಿದಾನೆ. 'ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್' ಎಂಬ ಬ್ರಹ್ಮಸೂತ್ರವು ಜೀವಾತ್ಮ ಪರಮಾತ್ಮರಿಬ್ಬರನ್ನು ಪ್ರತಿಪಾದಿಸಿದೆ. ಮತ್ತು ಅವರಿಬ್ಬರೂ ಒಳಗಿದ್ದಾರೆ.

ಇದ್ದರೂ ಗುಹೇಶ್ವರ ಅಥವಾ ಮಹೇಶ್ವರ ಎಂದೆನಿಸುವಾತನು ಆ ಪರಮಾತ್ಮನು. ಆತ ಮುಕ್ತನು. ಜೀವಾತ್ಮನು ಬದ್ಧನು. ಭವದ ಭ್ರಮಣವುಳ್ಳವನು.

ಜೀವನು ಶರೀರ; ಶರೀರ ಅನಾದಿ; ಬಂಧನಕಾರಿ. ಸರ್ವಸ್ವಾತಂತ್ರ್ಯಕ್ಕೆ ವಿರೋಧಿ. ಸರ್ವಕರ್ತೃತ್ವ ಸರ್ವಜ್ಞತ್ವ ನಿರೋಧಿ. ಇಷ್ಟಾದರೂ ಇದು ಅನಾದಿಯೆಂಬುದನ್ನು ಲಕ್ಷಿಸಬೇಕು. ಪ್ರಾಕೃತಿಕ ಮತ್ತು ಪ್ರವರ್ತಕ ಶರೀರ ಬಂಧನಕಾರಿ. ಆದರೆ ಶರೀರಗತ ಪ್ರಕೃತಿತನ ಪ್ರವೃತ್ತಿತನಗಳನ್ನು ಶಿವದೀಕ್ಷಾಸಂಸ್ಕಾರದಿಂದ ತೊಡೆದರೆ ಶರೀರವಿದ್ದರೂ ಜೀವನು ಮುಕ್ತನಾಗುತ್ತಾನೆ. ಭವಬಂಧನಕ್ಕೆ ಭವಭ್ರಮಣಕ್ಕೆ ನೇರವಾದ ಕಾರಣ ಶರೀರವಲ್ಲ, ಅವಿದ್ಯಾಮಲ ಕರ್ಮಮಲಗಳು.

"ಅವಿದ್ಯಾ ಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನ ವರ್ಜಿತಾಃ
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ
ದೇವತಿರ್ಯಙ್ಮನುಷ್ಯಾದಿ ನಾನಾಯೋನಿ ವಿಭೇದತಃ
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ ।
ಜಾತ್ಯಾಯುರ್ಭೋಗ ವೈಷಮ್ಯಕಾರಣಂ ಕರ್ಮಕೇವಲಮ್ ॥"

ತಮಸ್ಸು, ಮಾಯೆ, ಮೋಹ, ಅವಿದ್ಯೆ, ಅನೃತಾತ್ಮಿಕೆ-ಇವೈದು ಮಾಯಾ ಪಂಚಕವೆಂದು ಕೇವಲಾದ್ವೈತಿಗಳು ಹೇಳುತ್ತಾರೆ. ಆಣವ ಮಾಯಿಕ, ಕಾರ್ಮಿಕ ಈ ಮಲತ್ರಯದಲ್ಲಿ ಮಾಯಾಪಂಚಕಗಳು ಅಡಕಾಗುತ್ತವೆಯೆಂದು ಶಿವಾದ್ವೈತಿಗಳು ಹೇಳುತ್ತಾರೆ. ಇದರಿಂದಾಗಿ ಜೀವತ್ವಕ್ಕೆ ಈ ಮೂರು ಮಲಗಳೇ ಮುಖ್ಯಕಾರಣಗಳೆಂದು ಇವರ ಅಭಿಪ್ರಾಯ. ಇದನ್ನೇ ಈ ಮಂತ್ರಗಳು ಸಾರಿವೆ.

ಕರ್ತವ್ಯ ಯಾವುದು-ಅಕರ್ತವ್ಯ ಯಾವುದು? ನಿತ್ಯ ಯಾವುದು-ಅನಿತ್ಯ ಯಾವುದು? ಆತ್ಮ ಯಾವುದು-ಅನಾತ್ಮ ಯಾವುದು?-ಎಂಬುದನ್ನು ಅರಿಯದಿರುವುದೇ ಅವಿದ್ಯೆ. ಇದರಿಂದ ಮೋಹಿತರಾದವರು ಅಂದರೆ ವಿಪರೀತ ಜ್ಞಾನವುಂಟಾದವರು ಜೀವರು. ಇವರು ಬ್ರಹ್ಮೈಕ್ಯ ಜ್ಞಾನಶೂನ್ಯರು. ನಿಂದ್ಯ ಕರ್ಮನಿರತರು. ಅಲ್ಪಜೀವಿಗಳು. ಶಿವೈಕ್ಯಜ್ಞಾನವೇ ವಿದ್ಯೆ. ಆ ಶಿವೈಕ್ಯತೆ

ಯನ್ನು ಸಂಪಾದಿಸುವ ಶಿವಾರ್ಚನವೇ ಸತ್ಕರ್ಮ. ಇವಿಲ್ಲದೆ ಕೇವಲ ಜೀವನ ನಿರ್ವಹಣಕ್ಕಾಗಿ ಪ್ರಾಣಿಗಳಂತೆ ಪಾಮರ ಜೀವನವನ್ನು ನಡೆಯಿಸಿ ಪಾಪಕರ್ಮಿಗಳಾಗುತ್ತಾರೆ. ತಂತಮ್ಮ ಕರ್ಮಾನುಸಾರವಾಗಿ ಸಂಸಾರದಲ್ಲಿ ಸುತ್ತುತ್ತಾರೆ. ಭವಕ್ಕೆ ಭ್ರಮಿಸುತ್ತಾರೆ. ನಾನಾ ಯೋನಿಗಳಲ್ಲಿ ಬರುತ್ತಾರೆ. ನಾನಾ ಶರೀರಗಳನ್ನು ತೊಡುತ್ತಾರೆ. ನಾನಾ ಕರ್ಮಗಳನ್ನು ಕೈಗೊಳ್ಳುತ್ತಾರೆ. ಅಲ್ಪ ಜಾತಿ, ಅಲ್ಪ ಆಯುಷ್ಯ, ಅಲ್ಪಭಾಗ್ಯ, ಅತ್ಯಂತ ಹೇಯಭೋಗವುಳ್ಳವರಾಗುತ್ತಾರೆ. 'ಸತಿಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ' ಎಂಬ ಪತಂಜಲಿಯ ಯೋಗ ಸೂತ್ರದಂತೆ ಜನ್ಮಜನ್ಮಾಂತರ ವಾಸನೆಯ ಬಲದಿಂದ ಅಂಡಜಾದಿ ಜಾತಿಗಳು, ತಿರ್ಮಜ್ಮನುಷ್ಯಾದಿ ದೇಹಗಳು, ಆಯುಷ್ಯ ಸುಖ ದುಃಖ ಭೋಗಗಳು ಉಂಟಾಗುತ್ತವೆ. ಹೀಗೆ ಈ ಭವರಾಟಾಳ (ಚಕ್ರ)ದಲ್ಲಿ ಅಂಡಲೆವ ಜೀವರಿಗೆ ಶಾಂತಿ-ವಿಶ್ರಾಂತಿಗಳಿರುವುದಿಲ್ಲ. ಕರ್ಮದ ಕೋಟಲೆಗೆ ಸಿಕ್ಕು ಬರಬಾರದ ಭವಗಳಿಗೆ ಬರುತ್ತಾರೆ. ಪಡಬಾರದ ಕಷ್ಟಗಳನ್ನು ಪಡುತ್ತಾರೆ. ಮಾಯಿಕ ಕಾರ್ಮಿಕ ಮಲಗಳ ಪರಿಣಾಮವಿದು ; ಪರಮ ಹಗರಣವಿದು.

ಈ ಭುವನ ಸಂಸಾರಕ್ಕಿಂತ ಸಂಭ್ರಮಣಕ್ಕಿಂತ ತನ್ನ ಮನದ ಭ್ರಮೆ ಕೇಡಿನದು. ಭ್ರಾಂತಿಗೆ ಸಿಕ್ಕರೆ ಮಾನವನಿಗೆ ಶಾಂತಿಯಿಲ್ಲ; ಪ್ರಗತಿಯಿಲ್ಲ. ನಿಜಗುಣರು ಈ ಚಿತ್ರವನ್ನು ಈ ಪದ್ಯದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

೧) ನಿದ್ರೆ ಬಾರದಿದೆನ್ನ ಪರಿಬವದುಃಖ ಸ-।
ಮುದ್ರವೆನಿಸುವ ಸಾಹಸವ ನೆನೆನೆನೆದು ॥ಪ॥
ಪಾಪಾನುಗುಣದಿಂದೆ ಗಿಡ ಮರ ಕ್ರಿಮಿಗಳ-।
ರೂಪಾಗಿಕೀಟ ಪತಂಗಾದಿಯಾಗಿ ।
ಆ ಪಕ್ಷಿಕುಲವಾಗಿ ಮೃಗಜಾತಿಯಾಗಿ ಮೇ-।
ಲಾ ಪಶುರೂಪಾಗಿ ಬಹು ಬಾಧೆಗಲಿಸಿ ॥೧॥

ಭೂತ ಪಂಚಕದ ರೂಪಾಗಿ ಓಷಧಿಯಾಗಿ ।
ಧಾತು ಸಪ್ತಕದ ರೂಪಾಗಿ ತಂದೆಯೊಳು ।
ಮಾತೆಯ ಸೂತಕ ರುಧಿರ ರೂಪಾಗಿ ಮ-।
ತ್ತೀ ತನುವಾಗುವಚ್ಚರಿಯನು ಕೇಳಿ ॥೨॥

ಬಾಲಕ ತರುಣ ಜರಾಜೀರ್ಣ ರೂಪಾಗಿ ।
ಮೇಲೆ ನರಕಿಯಾಗಿ ಬಳಿಕೀ ಕ್ರಮದೊಳು ।
ತಾಳಲಾರೆನು ತನುವನು ಶಂಭುಲಿಂಗವೆ।
ಪಾಲಿಸೆಂದೆರಗಿ ಬಿಂನೈಪೆ ಭೀತಿಯೊಳು ||೩||

೨) ಸುಮ್ಮನೆ ಕಾಲವನು ಕಳೆದು ಸಾವುದುಚಿತವೇ ? ।
ನೆಮ್ಮಿ ನಿಜವನು ಮುಕ್ತಿವಡೆಯದೆ ಮನುಜನೆ ||ಪ||
ಧರೆಯನೆಲ್ಲವನು ಸಂಣಿಸಿ ಧೂಳಿ ಮಾಡಲಾ-
ಪರಮಾಣುಗಳೆ ನಿತನಿತು ದೇಹವನು ।
ಧರಿಸುತೊಂದೊಂದು ಜೀವರ ಬಸುರೊಳು ಬಂದು-
ಮರಳಿ ನೀನತ್ತ ತಿರುಗದಂತೆ ರಚಿಸದೆ ||೧||

ಜನನ ಮರಣ ರುಜೆ ಭಯ ಶೋಕ ಜರೆ ಬಡ-
ತನ ಪರಸೇವೆಯಾಚನೆ ಹಾನಿ ಹಳಿವು ।
ಮುನಿಸು ವಿಷಯ ರತಿ ವಿರಹ ಸಂತಾಪ ಚಿಂ-
ತನೆಗಳು ನಿನಗಾಗದಿಹ ಬುದ್ಧಿ ಗಲಿಯದೆ ||೨||

ಹವಣಿಸಬಾರದ ಹಲವು ದುಃಖಗಳನ-
ನವರತವನುಭವಿಸುವ ನಿನಗಿನ್ನು ।
ಸವೆಯದಾನಂದವೀವ ಶಂಭುಲಿಂಗದ
ಸುವಿಚಾರ ಭಜನೆ ಭಕ್ತಿಯೊಳಿಂಬುವರಿಯದೆ ||೩||

ಎಂದು ಎದೆಗಂಟುವಂತೆ ಹೆಚ್ಚು ವಿಶದವಾಗುವಂತೆ ಜಾತ್ಯಾಯಭೋಗಗಳ ವೈಷಮ್ಯವನ್ನು ವರ್ಣಿಸಿದ್ದಾರೆ. ಜಾತ್ಯಾದಿ ಭೋಗಗಳಿಗೆ ಸಾಧನವಾದ ಈ ತನುಭಾಂಡದಲ್ಲಿ ಅವಿದ್ಯೆಯೆಂಬ ಹೆಂಡವನ್ನು ತುಂಬದೆ, ವಿದ್ಯೆ ಭಜನೆ ಭಕ್ತಿಯೆಂಬ ಅಮೃತವನ್ನು ತುಂಬಬೇಕೆಂದು ಬೋಧಿಸಿದ್ದಾರೆ.

ಇನ್ನು ಜಾತ್ಯಾಯುಭೋಗಗಳಿಗೆ ಕರ್ಮಕಾರಣವೆಂದು ಮಂತ್ರದಲ್ಲಿ ಹೇಳಲಾಗಿದೆ. ಕರ್ಮಕಾರ್ಯಗಳು ಜಾತ್ಯಾಯುಭೋಗಗಳು. ಇವು ಕರ್ಮ ಜನ್ಯ ಫಲಗಳು.

ಸೋಪಕ್ರಮ, ನಿರುಪಕ್ರಮವೆಂದು ಕರ್ಮ ದ್ವಿವಿಧವಾಗಿದೆ. ಸೋಪಕ್ರಮ ಕರ್ಮವೆಂದರೆ ಫಲವನ್ನು ಕೊಡಮಾಡುವ ಕರ್ಮ. ನಿರುಪಕ್ರಮ ಕರ್ಮವೆಂದರೆ ಫಲವನ್ನು ಕೊಡದಿರುವ ಕರ್ಮ. ಸಕಾಮಕರ್ಮ ನಿಷ್ಕಾಮ ಕರ್ಮಗಳೆಂದು ಪರ್ಯಾಯವಾಗಿ ಹೇಳಬಹುದು.

ಜ್ಞಾನಿಗಳು ನಿರುಪಕ್ರಮ ಕರ್ಮಗಳನ್ನೂ ಸಹ ಕಡೆಗಣ್ಣಿನಿಂದ ಕಾಣುತ್ತಾರೆ. ಅಜ್ಞಾನಿಗಳು ಸೋಪಕ್ರಮ ಕರ್ಮಗಳಲ್ಲಿ ಸದಾ ನಿರತರಾಗಿರುತ್ತಾರೆ. ಕಾರಣ ಜಾತ್ಯಾಯುರ್ಭೋಗರೂಪ ಸಂಸಾರದಲ್ಲಿ ಪರಿಭ್ರಮಿಸುತ್ತಾರೆ. ದೇವತಿರ್ಯಕ್ ಜಾತಿಗಳು ಭೋಗಜನ್ಮಗಳು. ಮಾನವ ಜಾತಿಯು ಕರ್ಮಜನ್ಮವುಳ್ಳವರು. ಮನುಷ್ಯ ಜನ್ಮ ದೇವತಿರ್ಯಕ್ ಜನ್ಮಗಳಲ್ಲಿ ಮಧ್ಯದ ಜನ್ಮ. ಇದರಿಂದ ಇತ್ತ ಹೀನವಾದ ತಿರ್ಯಕ್ ಜಾತಿಗಾದರೂ ಇಳಿಯಬಹುದು. ಅತ್ತ ಉತ್ತಮವಾದ ದೇವ ಜಾತಿಗಾದರೂ ಏರಬಹುದು. ಇದಕ್ಕೆಲ್ಲ ಅವರವರ ಕರ್ಮ ಕಾರಣವಾಗುತ್ತದೆ.

ಸೋಪಕ್ರಮ ಕರ್ಮದಿಂದ ತಿರ್ಯಕ್ ಜಾತಿ, ನಿರುಪಕ್ರಮಕರ್ಮದಿಂದ ದೇವ ಜಾತಿ–ಸಂಭವಿಸುತ್ತವೆ. ಇವೆರಡು ಕರ್ಮಗಳನ್ನು ಸಂಯಮನ ಮಾಡುವುದರಿಂದ ಜೀವನ್ಮುಕ್ತಿಯುಂಟಾಗುತ್ತದೆ; ಅಂದರೆ ಸ್ವಯಂ ಪರಶಿವ ಸ್ವರೂಪಿಯಾಗುತ್ತಾನೆ.

ಶರೀರೇಂದ್ರಿಯ ಮೋಹವು ಸಕಾಮ ಅಥವಾ ಸೋಪಕ್ರಮಕರ್ಮವನ್ನು ಮಾಡ ಹಚ್ಚುತ್ತದೆ. ಈ ಕರ್ಮ ಸಂಚಯದಿಂದ ಜಾತ್ಯಾಯುರ್ಭೋಗಗಳುಂಟಾಗುತ್ತವೆ. ಸೋಪಕ್ರಮ ಕರ್ಮಗಳಿಗೆ ಶರೀರವೇ ಕೇಂದ್ರವಾಗಿರುತ್ತದೆ. ಯಾವ ಕರ್ಮವನ್ನು ಮಾಡುವುದೂ ಬೇಡ, ಯಾವ ಕಷ್ಟಗಳನ್ನು ಅನುಭವಿಸುವುದೂ ಬೇಡ ಎಂದು ಯೋಚಿಸಿ ನಿಷ್ಕ್ರಿಯರಾಗಿರುವುದೇ ನಿರುಪ ಕ್ರಮ. ಯಾವ ಕಾರ್ಯಕ್ಕೂ ಉಪಕ್ರಮವಿಲ್ಲದಿರುವಿಕೆಯೇ ನಿರುಪಕ್ರಮ. ಕರ್ಮಫಲವನ್ನು ಅಪೇಕ್ಷಿಸದೆ ಮಾಡುವ ಕರ್ಮಗಳಿಗೂ ನಿರುಪಕ್ರಮ ಕರ್ಮವೆಂದು ಹೇಳುವುದುಂಟು. ನಿರುಪಕ್ರಮಕರ್ಮದಲ್ಲಿ ಹೀಗೆ ಇತ್ತೆರಗಳುಂಟು.

ಸೋಪಕ್ರಮ ಕರ್ಮದಂತೆ ಪ್ರಥಮ ಪ್ರಕಾರದ ಅಂದರೆ ನಿಷ್ಕ್ರಿಯ ಕರ್ಮವು ಉಗ್ರ ಮತ್ತು ಹೀನ ಫಲಕಾರಿಯಾಗಿದೆ. ಎರಡನೆಯ ಬಗೆಯ

ನಿಷ್ಕಾಮ ನಿರುಪಕ್ರಮ ಕರ್ಮವು ಸ್ವರ್ಗೀಯ ಜನ್ಮ ಆಯುರ್ಭೋಗ ಗಳನ್ನುಂಟುಮಾಡಿಕೊಡುತ್ತದೆ.

ಈ ಉಭಯ ಕರ್ಮಗಳ ಸಂಯಮದಿಂದ ಮಾನವನಿಗೆ ಪಿಂಡಜ್ಞಾನ ವುಂಟಾಗುತ್ತದೆ : 'ಸೋಪಕ್ರಮಂ ನಿರುಪಕ್ರಮಂ ಚ ಕರ್ಮ, ತತ್ಸಂಯ ಮಾದಪರಾಂತಜ್ಞಾನಂ....' ಎಂದು ಪತಂಜಲಿಯು ಪ್ರಬೋಧಿಸಿದ್ದಾನೆ. ಇಲ್ಲಿ ಅಪರಾಂತ ಜ್ಞಾನವೆಂದರೆ ಮರಣ ಜ್ಞಾನವೆಂದು ಅರ್ಥವಿಸುತ್ತಾರೆ; ನಾವಿಲ್ಲಿ ಅಪರಾಂತವೆಂದರೆ ಅಪರಕ್ಕೆ ಕೊನೆಯಾದ ಜ್ಞಾನ ; ಅಂದರೆ ಆ ಪರಶಿವಜ್ಞಾನ ವುಂಟಾಗುತ್ತದೆಯೆಂದು ಹೇಳುತ್ತೇವೆ. ಆಂದರೆ ಲಿಂಗೈಕ್ಯ ಜ್ಞಾನವುಂಟಾಗುತ್ತದೆ ಯೆಂದರ್ಥ. (ಈ ನಮ್ಮ ಅರ್ಥ ಪ್ರಸ್ತುತಕ್ಕೆ ಮಾತ್ರವೆಂದು ತಜ್ಞರು ತಿಳಿಯ ಬೇಕು.) ಒಟ್ಟನಲ್ಲಿ ಪಿಂಡಜ್ಞಾನದ ಪರಿಣತಿಯುಂಟಾಗುತ್ತದೆ.

ಜಡಕರ್ಮದಲ್ಲಿ ನಿರತರಾದರೆ ದುಃಖಮಯ ಸಂಸಾರ ಸಾಗರದಲ್ಲಿ ಮುಳುಗಬೇಕಾಗುತ್ತದೆ. ಹೀನ ಯೋನಿಚಕ್ರದಲ್ಲಿ ತೊಳಲಬೇಕಾಗುತ್ತದೆ. ಅಲ್ಪಾಯು ಅಲ್ಪಭೋಗಾದಿಗಳಲ್ಲಿ ಬಳಲಬೇಕಾಗುತ್ತದೆ. ಅವಿದ್ಯಾವಶರಾದ ಜೀವರ ವಿಧಿಯದು.

ಅದೇ ಕ್ರಿಯಾಜ್ಞಾನ ನಿರತರಾಗಿರುವವರು ಸಂಸಾರದಲ್ಲಿದ್ದರೂ ಸಂಸಾ ರವನ್ನು ಗೆದ್ದು ಪ್ರಶಾಂತರಾಗಿರುತ್ತಾರೆ. ತಿರ್ಯಕ್ ಜಾತಿಗಳಲ್ಲಿ ಜನ್ಮ ಗಳಲ್ಲಿ ಬರುವುದನ್ನು ತಪ್ಪಿಸಿಕೊಳ್ಳುತ್ತಾರೆ. ದೀರ್ಘಾಯುಗಳಾಗಿ ಧರ್ಮಿ ಗಳಾಗಿ ಸುಖಿಗಳಾಗಿ ಬಾಳುತ್ತಾರೆ. ಶಿವಮಯ ಭೋಗಿಗಳಾಗಿ ಶಿವಯೋಗಿ ಗಳಾಗಿ ಬದುಕುತ್ತಾರೆ.

ಕಾರ್ಮಿಕಮಲ ಮಾಯಿಕ (ಅವಿದ್ಯಾ) ಮಲಗಳನ್ನು ಕಳೆದುಕೊಂಡರೆ ಆಣವಮಲ ಅದಷ್ಟಕ್ಕೆ ಅದೇ ತೊಲಗುತ್ತದೆ. ಪ್ರಪಂಚ ಪರಿಭ್ರಮಣಕ್ಕೆ ಇವೇ ಮೂಲ ಕಾರಣಗಳು. ಇವೆರಡರಲ್ಲಿ ಕರ್ಮಕ್ಕೆ ಮೂಲ ಅವಿದ್ಯೆ. ಶಿವಜೀವೈಕ್ಯ ವಿದ್ಯೆಯನ್ನು ಸಂಪಾದಿಸದ ಜನ್ಮ ಜನ್ಮವಲ್ಲ. ಜೀವತ್ವ ನಿರ್ಮಳವಾಗುವುದಿಲ್ಲ.

'ಜಾತ್ಯಾಯುರ್ಭೋಗರ್ವೈಷಮ್ಯ ಕಾರಣಂ' ಎಂಬ ಮಂತ್ರದಲ್ಲಿ ಜಾತಿ ಪದ ನಿರ್ದಿಷ್ಟವಾಗಿದೆ. ಇಲ್ಲಿ ಜಾತಿಪದ ಸಂಕುಚಿತಾರ್ಥದಲ್ಲಿಲ್ಲ. ಅಖಂಡ ಮಾನವತ್ವ ಜಾತಿಯನ್ನು ಕುರಿತಿದೆ. 'ನಿತ್ಯತ್ವೇ ಸತಿ ಅನೇಕ ಸಮವೇತತ್ವಂ ಜಾತಿಃ' ಎಂಬುದಾಗಿ ಜಾತಿ ಪದಕ್ಕೆ ಅರ್ಥವಿದೆ. ಮಾನವರು ಅನೇಕರಿದ್ದರೂ

ಮಾನವತ್ವ ಜಾತಿ ಒಂದು. ಕರ್ಮಗಳಿಂದ ಕಲ್ಪಿತಗಳಾದ ಒಳಜಾತಿಗಳ ಮಾತಿಲ್ಲ ಇಲ್ಲಿ. ಆ ಮಾನವತ್ವ ಜಾತಿಗೆ ಮುಪ್ಪಿಲ್ಲ. ಅದು ನಿತ್ಯ. ಅದು ಸಮವಾಯ ಸಂಬಂಧ. ಘಟ ನಾಶವಾಗಬಹುದು; ಘಟತ್ವ ನಾಶವಾಗುವುದಿಲ್ಲ. ಅಂತೆಯೇ ಮಾನವನು ಮಣ್ಣಿನ ಮರೆಯಾಗಬಹುದು; ಮಾನವತ್ವ ಮಣ್ಣಾಗದು. ವ್ಯಕ್ತಿ ಅಳಿಯಬಹುದು; ಜಾತಿ ಅಳಿಯದು.

ಶರೀರೇಂದ್ರಿಯಗಳಿಂದ ಶರೀರೇಂದ್ರಿಯ ಭೋಗಗಳಿಂದ ಮಾನವನಾಗಿರಬಹುದು; ಆದರೆ ಇದು ನಿಜವಾದ ಮಾನವತ್ವವಲ್ಲ. ಹಾಲನ್ನು ಹಿಂಡದ ಬರಡ ಹಸು ಹಸುವಾಗಿರಬಹುದು. ಆದರೆ ಅದು ನಿಜವಾದ ಗೋತ್ವವಲ್ಲ. ಗೋಧರ್ಮವಾವುದೋ ಅದಿದ್ದರೆ ಗೋತ್ವವೆಂದರಿಯುವುದು. ಅಂತೆಯೇ ಮಾನವ ಧರ್ಮ ಮಾನವಕ್ರಿಯೆ ಮಾನವಗುಣಗಳಿದ್ದರೆ ಅದು ಮಾನವತ್ವ. ಮಾನವತ್ವವು ಬರೀ ಶಬ್ದನಿಷ್ಠವಲ್ಲ, ನಾಮನಿಷ್ಠವಲ್ಲ; ಗುಣಕರ್ಮನಿಷ್ಠ. ಜ್ಞಾನಾರ್ಥನಿಷ್ಠ.

'ಜಾತ್ಯಾಯುರ್ಭೋಗ' ಎಂಬಲ್ಲಿ ಮಧ್ಯದಲ್ಲಿ ಪ್ರಯುಕ್ತವಾದ ಆಯುಷ್ಯವು ಜಾತಿಭೋಗಗಳೆರಡಕ್ಕೂ ಜೀವಾಳ. 'ಜೀವಾಮ ಶರದಶ್ಶತಮ್' ಎಂದು ಋಷಿಗಳು ಹಾಡಿದರು. ಅದು ಮಾನವ ಶ್ರುತಿ. ಮಾನವತ್ವದ ಸ್ಮೃತಿ. ದಿಟ, ಆಯುಷ್ಯವೇ ಮಾನವ ಜೀವನ. ಅದು ಜೀವನದ ಮಾನದಂಡ.

'ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ?' ಎಂಬ ಶರಣವಾಣಿ ಅಳತೆಗೋಲಾದ ಆಯುಷ್ಯವನ್ನೇ ಅಳೆದಿದೆ. ಮಾನವತ್ವವನ್ನು ಸಂಪಾದಿಸದ ದೀರ್ಘಾಯುಷ್ಯ ಅದೊಂದು ದಂಡ. ಅದರಿಂದ ಪ್ರಯೋಜನವಿಲ್ಲ. ಕೆಟ್ಟವನಾಗಿ ನೀತಿ ಬಾಹಿರನಾಗಿ ನೂರು ವರುಷ ಬಾಳುವುದಕ್ಕಿಂತ ಒಳ್ಳೆಯವನಾಗಿ ಒಳ್ನಡತೆಯವನಾಗಿ ನೂರು ನಿಮಿಷ ಬಾಳಿದರೆ ಲೇಸು. ಅಷ್ಟೇ ಸಾಕು. ಅದೇ ಸಾರ್ಥಕ.

ಆಯುಷ್ಯದ ಅಳತೆ ಅಚ್ಚ ನಡೆನುಡಿಗಳಲ್ಲಿದೆ. ದುಷ್ಟನಾಗಿ ದಿನಗಳನ್ನು ಕಳೆಯುವುದರಲ್ಲಿಲ್ಲ. ನಿರುಪಯುಕ್ತನಾಗಿ ನಿಡುಗಾಲ ಬಾಳನ್ನು

ನೂಕುವುದರಲ್ಲಿಲ್ಲ. 'ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ ?' ಎಂದು ಕೇಳುವರು ನಿಜಗುಣರು.

ಇನ್ನು ಭೋಗ ಜೀವನಿಗೆ ಎರಡುಂಟು. ಒಂದು ಐಹಿಕ ಭೋಗ; ಇನ್ನೊಂದು ಆಮುಷ್ಮಿಕ ಭೋಗ. ಇವೆರಡರ ಸೆಳತಕ್ಕೆ ಸಿಕ್ಕ ಜೀವನು ವೈಷಮ್ಯಜೀವನಕ್ಕೆ ವಿಷಾದಜೀವನಕ್ಕೆ ಗುರಿಯಾಗಬೇಕಾಗುತ್ತದೆ. ಮುಮುಕ್ಷುವಿಗೆ ಇವು ತರವಲ್ಲ. ಲಿಂಗಭೋಗೋಪಭೋಗಿಯಾಗುವುದೇ ಮುಮುಕ್ಷುವಿನ ಧರ್ಮ. ಅದೇ ಆತನಿಗೆ ಸವೆಯದಾನಂದ. ಅದೇ ಆತನು ಆರ್ಜಿಸಬೇಕಾದ ಆತ್ಮಾನುಭೋಗ.

ಬೇರೆ ಭೋಗಗಳಿಂದ ತೃಪ್ತಿಯಿಲ್ಲ; ತುದಿಗಾಣುವಂತಿಲ್ಲ. ಭೋಗಾಪೇಕ್ಷೆ ಅದೊಂದು ಸುಡುವ ಕಾಳ್ಗಿಚ್ಚು. ಭೋಗದ ಬೇಗೆಗೆ ಬಿದ್ದವನು ಬದುಕುವಂತಿಲ್ಲ. ಬೆಳಕು ಕಾಣುವಂತಿಲ್ಲ. ಭೋಗಮಾಲಿನ್ಯದಿಂದ ಹೃದಯ ಕೊಳೆಯಾಗುತ್ತದೆ. ಸುವಿಚಾರಕ್ಕೆಡೆಯಿರುವುದಿಲ್ಲ. ಭಕ್ತಿಭಾವಕ್ಕಿಂಬಿರುವುದಿಲ್ಲ. ಇದೊಂದು ಈಚೆ ಬಾರದ ಇಂದ್ರಜಾಲ. ಇದರ ಸೆರೆಗೆ ಸಿಕ್ಕರೆ ಪರಿಪರಿ ದುಃಖ ತಪ್ಪಿದ್ದಲ್ಲ; ಪರಿಭ್ರಮಣ ತಪ್ಪಿದ್ದಲ್ಲ.

ಭೋಗ ಬೆನ್ನುಬಿದ್ದ ಭೂತ. ಅದನ್ನು ಬಿಡಿಸಿಕೊಳ್ಳುವ ಉಪಾಯವನ್ನು ಮಾನವನು ಮೊದಲು ಮಾಡಬೇಕು. ಅನುಭವ ಮಾರ್ಗಕ್ಕೆ ಶರಣು ಹೋಗದೆ ಅದರ ಬಿಡುಗಡೆಯಾಗದು. ಶಿವಸಂಸ್ಕಾರ ಸಂವೃದ್ಧಿಯಾಗದೆ ಭೋಗದಾಸೆ ತೊಲಗದು. ಆತ್ಮಜ್ಞಾನ ಅಳವಡದೆ ಅಂತಃಕರಣಗಳು ಭೋಗ ನಿಶೆಯನ್ನು ದಾಟಿ ಬೆಳಕಿಗೆ ಬಾರವು.

ಬಗೆ ಬಗೆಯಾದ ಬಾಹ್ಯರೂಪಗಳಿಗೆ ಭೌತಿಕಭೋಗಗಳಿಗೆ ಒಳಗಾಗುವುದೇ ಸಂಸಾರ. ಇವನ್ನು ಮನಸ್ಸಿನಿಂದ ಬಿಡುವುದೇ ಮುಕ್ತಿ. ಈ ಜನ್ಮಾದಿ ಭೋಗಗಳ ಬಿಡುಗಡೆಯಾಗಬೇಕಾದರೆ ಭಕ್ತಿ ಬೇಕು; ಆತ್ಮಜ್ಞಾನಶಕ್ತಿ ಬೇಕು.

ಅಶುದ್ಧ ಮಾಯೆಯಿಂದ ಮೋಹಿತನಾದ ಜೀವನು ಲಿಂಗೈಕ್ಯ ಜ್ಞಾನ ಹೀನನಾಗಿರುತ್ತಾನೆ. ಆತ್ಮಜ್ಞಾನ ಶೂನ್ಯನಾಗುತ್ತಾನೆ. ಸತ್ತನ್ನು ಅಸತ್ತನ್ನಾಗಿ, ಚಿದ್ರೂಪನನ್ನು ಅಚಿದ್ರೂಪವನ್ನಾಗಿ, ಸುಖಿಯನ್ನು ದುಃಖಿಯನ್ನಾಗಿ, ನಿತ್ಯನನ್ನು ಅನಿತ್ಯನನ್ನಾಗಿ, ಪರಿಪೂರ್ಣನನ್ನು ಅಪರಿಪೂರ್ಣನನ್ನಾಗಿ, ಅಖಂಡ

ನನ್ನು ಖಂಡಿತನನ್ನಾಗಿ ಭಾವಿಸುತ್ತಾನೆ. ಒಳಬಾಳನ್ನು ಮರೆತು ಹೊರಬಾಳಿಗಾಗಿ ಹೆಣಗುತ್ತಾನೆ; ಇವರಲ್ಲಿಯೇ ಹರಣಗಳನ್ನು ನೀಗುತ್ತಾನೆ. ಕರ್ಮವಾಸನೆಯನ್ನು ಚಿತ್ತಭೂಮಿಕೆಯಿಂದ ಕಳೆಯದ ಜೀವರೆಲ್ಲರೂ ಪಡುವ ಪಾಡಿದು :

"ಏತೇಷಾಂ ದೇಹಿನಾಂ ಸಾಕ್ಷೀ ಪ್ರೇರಕಃ ಪರಮೇಶ್ವರಃ
ಸಂಸಾರೇ ಭ್ರಮತಾಂ ನಿತ್ಯಂ ಕರ್ಮಯಂತ್ರ ನಿಯಂತ್ರಣೇ ।
ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶತಃ
ಪುನರಾವೃತ್ತಿ ರಹಿತ ಮುಕ್ತಿಮಾರ್ಗೋಪ ದೇಶಕಃ ॥"

ದೇಹಾಭಿಮಾನವುಳ್ಳವರೆಲ್ಲರೂ ದೇಹಿಗಳು. ಇವರೇ ಜೀವರು. ಇವರು ದೇಹಗಳನ್ನು ಹಿಡಿದು ಜೀವಿಸುವರು; ಭೋಗಿಸುವರು. ಅರಿವರು, ಮರೆವರು; ಅಹಮಿಸುವರು. ಸಂಸಾರಿಗಳು. ಅಂತೆಯೇ ಇವರು ಮಾಯಾ ಮೋಹದ ಕಟ್ಟಿಗೆ ಸಿಕ್ಕುವರು. ಹೈಯ ಸಂಸಾರದಲ್ಲಿ ನಿತ್ಯಸುತ್ತುವವರು. ತ್ರಿವಿಧ ಕರ್ಮಯಂತ್ರದಲ್ಲಿ ನಿಯಂತ್ರಿತರಾದವರು. ಬದ್ಧಾತ್ಮರು. ಕರ್ಮಪಾಶ ಜನ್ಮ ಜನ್ಮಾಂತರದ್ದು. ಪೂರ್ವ ಜನ್ಮಗಳಲ್ಲಿ ಮಾಡಿದ ಸುಕೃತ ದುಷ್ಕೃತ ರೂಪ ಕರ್ಮಗಳೇ ಸಂಸಾರರೂಪದಿಂದ ಅನೇಕ ಭವಗಳಿಗೆ ಬೀಜವಾಗಿ ಬುದ್ಧಿಯಲ್ಲಿದ್ದು ಸಂಚಿತ ಕರ್ಮವೆನಿಸುವುದು. ಆ ಸಂಚಿತ ಕರ್ಮದಿಂದ ಈಗ ಈ ದೇಹವುಂಟಾಗಿ ಭೋಗಕಾರಣವಾದುದೇ ಪ್ರಾರಬ್ಧ ಕರ್ಮವೆನಿಸುವುದು. ಈ ಪ್ರಾರಬ್ಧ ಭೋಗವನ್ನು ಭೋಗಿಸುತ್ತ ಮಾಡಿದ ಪಾಪಾದಿಗಳೇ ಮುಂದಿನ ಆಗಾಮಿಕರ್ಮವೆನಿಸುವುದು. ಈ ಕರ್ಮತ್ರಯದಿಂದ ಬದ್ಧರು ಜೀವರು. ಇದರಿಂದಾಗಿ ಈ ಸಂಸಾರದಲ್ಲಿ ಬಿಡುವಿಲ್ಲದೆ ಸುತ್ತುತ್ತಾರೆ. ತಪ್ತಾಯಃ ಪಿಂಡದಂತೆ ಶಾರೀರಕ ಸರ್ವಸಂಬಂಧವುಳ್ಳವರಾಗಿರುತ್ತಾರೆ. ಈ ಸಂಬಂಧದಿಂದ ಈ ಬಂಧನದಿಂದ ಬಿಡುಗಡೆಯಿಲ್ಲದೆ ಬಳಲುತ್ತಿರುತ್ತಾರೆ. ಬಿಡುಗಡೆಗಾಗಿ ಬಾಯ್ಬಿಡುತ್ತಿರುತ್ತಾರೆ. ಬರೀ ಬಾಯ್ಬಿಟ್ಟರೆ ಆಗದು. ಬರೀ ನಿದ್ದೆ ತೀರಿದರೆ ಪ್ರಯೋಜನವಿಲ್ಲ. ಬೆಳಕು ಬರಬೇಕು. ಆಗ ಏಳಲು ಪ್ರೇರಣೆಯಾಗುತ್ತದೆ. ಎದ್ದರೆ ಪ್ರಯೋಜನವಾಗುತ್ತದೆ. ಇದರಂತೆ ಅಂದರೆ ಸೂರ್ಯನಂತೆ ದೇಹಿಗಳೆಲ್ಲರ ಅಂತರಾತ್ಮ ವ್ಯವಹಾರಗಳಿಗೆಲ್ಲ ಸಾಕ್ಷಿಯಾದ ಆ ಪರಮಾತ್ಮನ ಪ್ರೇರಣೆ ಅತ್ಯಗತ್ಯ. ಆತನು ಪರಮ ಈಶನು. ಅಶುದ್ಧ ಮಾಯೆಯ ಕಟ್ಟಿಗೆ ಸಿಕ್ಕದೆ,

ಸಂಸಾರದ ಸುಳಿಗೆ ಬೀಳದೆ, ಕರ್ಮದ ಕೈಚಳಕಕ್ಕೆ ಪಕ್ಕಾಗದೆ ಇರುವನು. ಅಂತರ್ಯಾಮಿಯಾಗಿರುವನು. ಸರ್ವ ಜೀವರಿಗೆ ಸಾಕ್ಷಿಯಾಗಿರುವನು. ಗೂಢನಾಗಿರುವನು. ಕೂಟಸ್ಥನಾಗಿರುವನು. "ತೋಡಿರ್ದ ಬಾವಿಗೆ ಕೂಡಿರ್ದ ಜಲಸಾಕ್ಷಿ! ಮಾಡಿದ್ದಕ್ಕೆಲ್ಲ ಮನಸಾಕ್ಷಿ, ಸರ್ವಕು ಮೃಡನೆ ತಾ ಸಾಕ್ಷಿ ಸರ್ವಜ್ಞ ||" ಎಂದು ಸರ್ವಜ್ಞನು ಪರಮಾತ್ಮನೇ ಸರ್ವಕ್ಕೆ ಸಾಕ್ಷಿಯೆಂದು ಹೇಳಿದ್ದಾನೆ. ಆತನಿಗೆ ಅವಸ್ಥಾತ್ರಯಗಳಾಗಲಿ ಸುಖದುಃಖಾದಿಗಳಾಗಲಿ ಸೋಂಕುವುದಿಲ್ಲ. ವ್ಯವಹಾರ ಲೇಪವಿಲ್ಲ. 'ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್' ಈ ಬ್ರಹ್ಮಸೂತ್ರ ಪ್ರತಿಪಾದನೆಯಂತೆ ಪರಮೇಶ್ವರನು ಭವದಲ್ಲಿದ್ದೂ ಇಲ್ಲದಂತಿರುವ ವಿಶೇಷಧರ್ಮಿಯು. ಆತನು ಈ ಭವವೆಂಬ ಬೆಂಕಿಯನ್ನು ಮುಟ್ಟುವುದಿಲ್ಲ. ನೋಡುತ್ತಿರುತ್ತಾನೆ. ಅದರಿಂದ ಆತನು ಸಾಕ್ಷಿಕನು, ಜತೆಗೆ ಸಂಕಟದಲ್ಲಿರುವ ಜೀವರಿಗೆ ಸತ್ಕ್ರಿಯೆಗಳ ಪ್ರೇರಣೆಯನ್ನುಂಟು ಮಾಡುವನು. ಹಿತಮಾರ್ಗಗಳನ್ನು ಉಪದೇಶಿಸುವನು; ಮಾಡುವಂತೆ ಮನಸ್ಸಿಗೆ ಪ್ರೇರೇಪಿಸುವನು. ಮರಳಿ ಭವಕ್ಕೆ ಬಾರದ ಮುಕ್ತಿಗೆ ಮಾರ್ಗವನ್ನು ತೋರುವನು.

ಎಲ್ಲೆಲ್ಲಿಯೂ ಇರುವ ಈ ಪರಮಾತ್ಮನು ತನ್ನಲ್ಲಿಯೂ ಸಕಲ ಜೀವರಲ್ಲಿಯೂ ಇರುವನು. ಆನೆಯು ಕನ್ನಡಿಯಲ್ಲಿ ಅಡಗಿರುವಂತೆ ಪರಮಾತ್ಮನು ದೇಹಿಗಳಲ್ಲಿ ಇರುವನು. ಪ್ರೇರಕತ್ವಕ್ಕೆ ಕಾರಣನಾಗಿರುವನು.

ಈ ಜೀವೇಶ್ವರರಿಬ್ಬರೂ ವ್ಯಷ್ಟಿಗತರು. ಪರಶಿವನು ಸಮಷ್ಟಿಸ್ವರೂಪನು. ಈ ಪ್ರೇರ್ಯವಾದ ಜೀವನು ಪ್ರೇರಕನಾದ ಪರಮಾತ್ಮನೊಡಗೂಡಿ ಹೋದಾಗ ಆ ಪರಶಿವನಲ್ಲಿ ಪರವಶನಾಗುವನು. ವ್ಯಷ್ಟಿಯಿಂದ ಸಮಷ್ಟಿಸ್ವರೂಪಕ್ಕೆ ಬರುವನು. ಕರ್ಮಬಂಧನವನ್ನು ಕಳಚುವನು. ಸಂಸಾರ ಭ್ರಮಣದಿಂದ ದೂರಾಗುವನು.

"ಸರ್ವಾಜೀವೇ ಸರ್ವಸಂಸ್ಥೇ ಬೃಹಂತೇ ಅಸ್ಮಿನ್ಹಂಸೋ
ಭ್ರಾಮ್ಯತೇ ಬ್ರಹ್ಮಚಕ್ರೇ |
ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ ಜುಷ್ಟಸ್ತತಸ್ತೇನಾ
ಮೃತತ್ವಮೇತಿ ||"

ಪ್ರೇರಕನಾದ ಪರಮೇಶ್ವರನಿಂದ ಪ್ರೇರ್ಯರಾದ ಜೀವರು ಕರ್ಮಚಕ್ರದಿಂದ ಹೊರಬಂದು ಸರ್ವಕ್ಕೆಲ್ಲ ಕಾರಣವಾದ ಮಹತ್ತಾದ ಆ ಬ್ರಹ್ಮಚಕ್ರದಲ್ಲಿ ತಿರುಗಿಸಲ್ಪಡುವರು. ಜೀವನು ತನ್ನನ್ನೂ ಆ ಪ್ರೇರಕನನ್ನೂ ಪೃಥಕ್ಕಾಗಿ ಅರಿದು ಆದರಿಸಿ ಅವನಿಂದ ಅಮೃತತತ್ತ್ವವನ್ನು ಪಡೆವನು ; ಎಂದು ಶ್ವೇತಾಶ್ವತರೋಪನಿಷತ್ತು ಸಾರಿದೆ.

ಜೀವನು ತನ್ನೊಳಗಿರುವ ಆ ಪರಮಾತ್ಮನನ್ನು ಮರೆತು ಮಾನವನಾಗಿ ಮೈಯ ಮಮತೆಯುಳ್ಳವನಾಗಿ ಶೋಕಮೋಹಕ್ಕೊಳಗಾಗುತ್ತಾನೆ. ಅದೇ ಅರಿತು ಅಮೃತತತ್ವಕ್ಕೆ ಸಲ್ಲುತ್ತಾನೆ. ಜೀವಾತ್ಮ ಪರಮಾತ್ಮರಿಬ್ಬರು ಒಂದೇ ವೃಕ್ಷದಲ್ಲಿರುವರು. ಜೀವನು ಅವಿದ್ಯಾ ಮೋಹಿತನಾಗಿ ಕರ್ಮನಿರತನಾಗಿದ್ದಾನೆ. ಅಣುವಾಗಿದ್ದಾನೆ, ದುಃಖಿಯಾಗಿದ್ದಾನೆ. ಅದೇ ಆ ಪರಮಾತ್ಮನು ಕರ್ಮಕೋಟಲೆಗಳಿಗೆ ಸಿಕ್ಕದೆ ಸಾಕ್ಷಿಯಾಗಿದ್ದಾನೆ; ಸ್ವತಂತ್ರನಾಗಿದ್ದಾನೆ. ಅಂತಹ ಆ ಪರಮಾತ್ಮನನ್ನು ಅರಿತ ಜೀವಾತ್ಮನು ಕರ್ಮತಂತ್ರನಾಗದೆ ಸ್ವತಂತ್ರನಾಗುವನು. ಶೋಕರಹಿತನಾಗುವನು. ವಿಭುವಾಗುವನು.

ಆ ಪರಮಾತ್ಮ ಸ್ವರೂಪನಾದ ಪರಮಗುರು ಬೋಧಿಸಿದ ಮುಕ್ತಿಮಾರ್ಗದಲ್ಲಿ ಜೀವಾತ್ಮನು ಮುನ್ನಡೆಯಬೇಕು, ಚೆನ್ನಿಗನಾಗಬೇಕು ; ಸತ್ಯಸಾಧಕನಾಗಬೇಕು, ಉತ್ತಮ ಉಪಾಸಕನಾಗಬೇಕು. ಜನನ ಮರಣಗಳನ್ನು ಜಯಿಸಬೇಕು.

‘ಗುರುದೇವೋ ಮಹೇಶ್ವರಃ’ ಎಂಬಂತೆ ಗುರುದೇವನೇ ಮಹಾದೇವನು. ಸಕಲವಿದ್ಯಾ ಸಮುದ್ರನು. ಸರ್ವಾನುಗ್ರಹ ಸಮರ್ಥನು. ಪ್ರಭುಸ್ವರೂಪನು. ಅಂತಹ ಕಳಾಗುರುವಿನ ಕರುಣೆಗೆ ಪಾತ್ರನಾಗಿ ಪರಮೋಪದೇಶವನ್ನು ಆತನಿಂದ ಪಡೆಯಬೇಕು. ಅದರಿಂದ ಕರ್ಮಪಕ್ವವಾಗುತ್ತದೆ. ಕತ್ತಲೆ ಹರಿಯುತ್ತದೆ.

“ಸ್ವಕರ್ಮ ಪರಿಪಾಕೇನ ಪ್ರಕ್ಷೀಣಮಲವಾಸನಃ
ಶಿವಪ್ರಸಾದಾಜ್ಜೀವೋಽಯಂ ಜಾಯತೇ ಶುದ್ಧಮಾನಸಃ ।
ಶುದ್ಧಾಂತಃ ಕರಣೇ ಜೀವೇ ಶುದ್ಧಕರ್ಮವಿಪಾಕತಃ

ಜಾಯತೇ ಶಿವಕಾರುಣ್ಯಾತ್ ಪ್ರಸ್ಫುಟಾ ಭಕ್ತಿರೈಶ್ವರೀ ।
ಜಂತುರಂತ್ಯ ಶರೀರೋಽಸೌ ಪಿಂಡಶಬ್ದಾಭಿಧೇಯಕಃ ॥"

ಪ್ರತ್ಯಕ್ಷ ಪರಮಾತ್ಮನಾದ ಪರಮ ಶ್ರೀಗುರುವಿನ ಅನುಗ್ರಹವಿಲ್ಲದೆ ತ್ರಿಮಲಗಳು ತೊಳೆದು ಹೋಗಲಾರವು. ತ್ರಿಮಲಗಳು ನಿರ್ಮಲವಾಗದೆ ಕರ್ಮಕ್ಷಯವಾಗದು ; ಪ್ರಾರಬ್ಧ ಕರ್ಮ ಪರಿಪಾಕವಾಗದು. ಕರ್ಮ ಕೈಬಿಡದೆ ಮನಸ್ಸು ಶುದ್ಧವಾಗದು. ಮನಸ್ಸು ಶುದ್ಧವಾಗದೆ ಶಿವಭಕ್ತಿ ಸಂಭವಿಸದು ; ಶಿವಪ್ರಸಾದವುಂಟಾಗದು. ಶಿವಭಕ್ತಿ ಸಂಭವಿಸದೆ ಜೀವನು ಚರಮ ಶರೀರಿಯಾಗನು. ಚರಮಶರೀರಿಯಾಗದೆ ಪಿಂಡನೆಂದೆನಿಸನು.

ಮಲತ್ರಯ ನಿವೃತ್ತಿಗೆ ಶಿವಪ್ರಸಾದವೇ ಮದ್ದು. ಶಿವಪ್ರಸಾದ ಉಭಯಾತ್ಮಕವಾಗಿದೆ. ಪದಾರ್ಥಾತ್ಮಕವೊಂದು ; ಪರಮ ಕಾರುಣ್ಯಾತ್ಮಕವಿನ್ನೊಂದು. ಇವೆರಡೂ ಪೂರಕವಾಗಿವೆ. ಈ ಉಭಯ ಪ್ರಸಾದಗಳಿಂದ ಮನಸ್ಸು ಪ್ರಸನ್ನವಾಗುತ್ತದೆ; ಪರಿಶುದ್ಧವಾಗುತ್ತದೆ.

'ಪಿಂಡ'ನಿಗೆ ಭಕ್ತಿಯೇ ಬೆನ್ನಾಸರ; ಬಾಳ ಜೀವಾಳ. ಭಕ್ತಿಯಿಲ್ಲದೆ ಪಿಂಡತ್ವ ಸಿದ್ಧಿಯಾಗದು. ಪಿಂಡತ್ವ ಸಿದ್ಧಿಯಾಗದೆ ಮುಂದೆ ಪಿಂಡಜ್ಞಾನವು ಸಾಧಿಸದು. ಪಿಂಡನಿಗೆ ಪಿಂಡಜ್ಞಾನವೇ ಪ್ರಾಣ.

ಭಕ್ತಿ ಪ್ರತ್ಯಕ್ಷ ಪರೋಕ್ಷ ಎಂದು ಇಬ್ಬಗೆ. ಅವನ್ನೇ ಅಪರಾಭಕ್ತಿ, ಪರಾಭಕ್ತಿ ಎಂದೂ ಹೇಳುವುದುಂಟು. ಕಾರಣ ಶಿವನಲ್ಲಿಡುವುದು ಪರಾಭಕ್ತಿಯಾದರೆ ಕಾಣುವ ಶಿವನಾದ ಶ್ರೀಗುರುವಿನಲ್ಲಿ ಇರಿಸುವುದು ಪ್ರತ್ಯಕ್ಷ ಭಕ್ತಿ. ಮೊದಲು ಇದು ಆವಶ್ಯಕ; ಸರ್ವರಿಗೆ ಸುಲಭ ಸಾಧ್ಯ. 'ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈವ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥'—ಶಿವನಂತೆ ಶ್ರೀಗುರುವಿನಲ್ಲಿ ಸದ್ಭಕ್ತಿ ಅಥವಾ ಶ್ರದ್ಧಾಭಕ್ತಿ ಅಳವಟ್ಟರೆ ಚರಮ ಶರೀರಿಯೆನಿಸುವ ಪಿಂಡತ್ವವು ಪ್ರಾಪ್ತಿಯಾಗುವುದು. ಈ ಪ್ರಾಪ್ತಿಯಿಂದಲೇ ಮುಂದೆ ಬೋಧಿಸುವ ಪಿಂಡಜ್ಞಾನವು ಪ್ರಕಾಶಿಸುವುದು.

ಭಕ್ತಿ ಅದೊಂದು ಹುರಿದ ಬೀಜ. ಅದಕ್ಕೆ ಮುಂದೆ ಜನನದ ಅಂಕುರವಿಲ್ಲ. ಮರಣದ ಭಯವಿಲ್ಲ. ಭಕ್ತಿ ಶಕ್ತಿ ಅಂತಹದು. ಅದರಿಂದ ಪ್ರವೃತ್ತಿ

ನಿವೃತ್ತಿಯಾಗುತ್ತದೆ. ಚಿನ್ನ ಅಪರಂಜಿಯಾಗುತ್ತದೆ. ಸಲುವ ಕಳೆ, ಸಲುವ ಬೆಲೆ ಬರುತ್ತವೆ.

ಶ್ರದ್ಧಾ ಭಕ್ತಿಯು ಶಾಂತಿಗೆ ಸಾಗುವ ಸೋಪಾನ. ಸ್ವಪ್ರಕಾಶವನ್ನು ಕಾಣುವ ಕಣ್ಣು. ಹಾರ್ದಿಕ ಶ್ರದ್ಧೆಯಿಲ್ಲದೆ ಹೊರಗೆ ಅದೆಷ್ಟು ಕಣ್ಣು ತೆರೆದರೂ ಕಾಣದು ಗುರು ತೋರಿದ ಆ ವಸ್ತು ; ಬೆಳಗದು ತನ್ನ ಒಳಮನೆಯನ್ನು. ಒಳಗೆ ಬೆಳಗಿಲ್ಲದಿದ್ದರೆ ಬಾಳು ಸುಖವಿಲ್ಲ. ಒಳ ಬದುಕನ್ನು ಒಳಗೊಳ್ಳುವ ಒಳಗಣ್ಣು ಇರುವುದಿಲ್ಲ. ಶಾಂತಿ ಕಾಂತಿಗಳೆಂಬ ಹೂವು ಹಣ್ಣುಗಳನ್ನು ಬಿಡುವ ಭಕ್ತಿಲತೆಯ ಅಂಕುರ ಆವಶ್ಯಕ. ಆ ಭಕ್ತಿಯಂಕುರಕ್ಕೆ ಹಸಗೊಂಡ ಬಲಗೊಂಡ ಕ್ಷೇತ್ರವೇ ಭೂಮಿಕೆಯೇ ಪಿಂಡ.

'ಅಂಡವಷ್ಟು ಕೂಡಿ ಸ್ಥೂಲ ದೇಹವು. ಅಂಡದೊಳಗಿನ ಪಿಂಡವೆ ಸೂಕ್ಷ್ಮದೇಹವು. ಆ ಪಿಂಡದೊಳಗಿನ ಬಿಂದುವೆ ಕಾರಣದೇಹವು. ಆ ಬಿಂದುವಿನ ಪ್ರಕಾಶವೇ ಮಹಾಕಾರಣದೇಹವು. ರಂಧ್ರವೇ ಕೈವಲ್ಯತನುವೆನಿಸುವುದು.' ಇದು ವ್ಯಷ್ಟಿ ಜೀವನ ಪಿಂಡಾಂಡದ ಪಂಚವಿಧತನುಲಕ್ಷಣ. ಇನ್ನು ಬ್ರಹ್ಮಾಂಡ ಸಮೂಹವಷ್ಟು ಕೂಡಿ ಈಶ್ವರನ ಸ್ಥೂಲದೇಹವು. ಜೀವರ ಕರಣೇಂದ್ರಿಗಳ ಅಧಿದೇವತೆಗಳೇ ಈಶ್ವರನ ಸೂಕ್ಷ್ಮದೇಹವು. ಜೀವನು ನಿತ್ಯ ನಿರಾಳ ನಿರ್ಗುಣವಸ್ತು ತಾನೆಂದರಿವುದೆ ಈಶ್ವರನ ಕಾರಣ ದೇಹವು. ಜೀವನು ತಾನೇ ಆಗಿ ತನ್ನ ಮರೆದುದೇ ಈಶ್ವರನ ಮಹಾಕಾರಣ ದೇಹವು.' ಇದು ಸಮಷ್ಟಿರೂಪ ಜೀವನೆಂದರೆ ಈಶ್ವರನ ಬ್ರಹ್ಮಾಂಡರೂಪ ಸಮಷ್ಟಿ ಪಿಂಡ ಸ್ವರೂಪಲಕ್ಷಣ.

ವಿಶ್ವದ ಅಣು ಅಣುವಿನಲ್ಲಿಯೂ ಮೂರು ತತ್ತ್ವಾಂಶಗಳಿರುವವೆಂದು ಪ್ರತಿಯೊಬ್ಬ ವಿಜ್ಞಾನಿಯೂ ತಿಳಿದ ವಿಷಯು. ಇದರಂತೆ ಪ್ರತಿಪಿಂಡದಲ್ಲಿಯೂ ಭೋಕ್ತೃ, ಭೋಜ್ಯ, ಪ್ರೇರಕ ಎಂಬ ವಸ್ತುತ್ರಯಗಳಿರುತ್ತವೆಂದು ಶ್ರೀ ರೇಣುಕ ಗೀತೆಯಲ್ಲಿ ಶಿವಯೋಗಿ ಶಿವಾಚಾರ್ಯರು ತಿಳುಹಿಸಿ ತಮ್ಮ ಪಿಂಡವಿಜ್ಞಾನದ ಪ್ರತಿಭೆಯನ್ನು ಪ್ರಕಾಶಿಸಿದ್ದಾರೆ.

ಈ ಪಿಂಡಗತ ತತ್ತ್ವತ್ರಯದಲ್ಲಿ ಮೂವತ್ತಾರು ಕ್ರಮವಾಗಿ ತತ್ತ್ವಗಳು ಶುದ್ಧಾಶುದ್ಧ, ಅಶುದ್ಧ, ಶುದ್ಧ ರೂಪದಲ್ಲಿರುತ್ತವೆ. ವ್ಯಕ್ತಾವ್ಯಕ್ತವಾಗಿರುತ್ತವೆ. ವ್ಯಕ್ತ ಬ್ರಹ್ಮಾಂಡದಲ್ಲಿ ಪರಶಿವನು ಹೇಗೆ ನಿರಾಕಾರನಾಗಿ

ನಿರಾಲಂಬನಾಗಿ ಇರುವನೋ ಹಾಗೆ ಪಿಂಡಾಂಡದಲ್ಲಿ ಅವ್ಯಕ್ತನಾಗಿ ಆಕಾರ ರಹಿತನಾಗಿ ಇರುತ್ತಾನೆ. ಈ ದೇಹಿಯೇ ಪಿಂಡಸ್ಥಲವಾಚ್ಯ. 'ಈ ಶರೀರ ಸಂಬಂಧವನ್ನು ನಿಃಕಲ ಪರಶಿವನು ತನ್ನಯ ಚಿದಂಶಭೂತನಾದ ಮೂಲಾತ್ಮಂಗೆ ಸಂಬಂಧಿಸಿ ಕೊಟ್ಟವನಾದ ಇಲ್ಲಿಗೆ ಪಿಂಡಸ್ಥಲ.' ಎಂದು ಅಕ್ಕಗಳು ತಮ್ಮ ಸೃಷ್ಟಿವಚನದಲ್ಲಿ ಹೇಳಿದ್ದಾರೆ. '....ಪರಬ್ರಹ್ಮವು ತನ್ನ ಸ್ವಲೀಲೆಯಿಂದ ತನ್ನ ತದಂಶವನೆ ಜೀವಾತ್ಮನೆನಿಸಿ ದೇಹ ಕರಣ ಸಂಬಂಧಿಯ ಮಾಡಿದಲ್ಲಿ ಆ ದೇಹಸಂಬಂಧಿಯಾದ ಆತ್ಮಾಂತರ್ಗತವಾಗಿ ಶಿವನಿಪ್ಪನು. ಅದೆಂತೆಂದಡೆ, ನಷ್ಟ ಚಿನ್ನದ ಬಣ್ಣದಂತೆ, ಅಂತು ಶಿವನು ಆತ್ಮನಕೂಡೆ ತದಾಕಾರವಾಗಿ ಪಿಂಡಸ್ಥವಾಗಿರ್ದ ಆ ಜೀವಾತ್ಮನ ಗುಣಧರ್ಮ ಕರ್ಮಂಗಳ ಹೊದ್ದದೆ ತನ್ನ ನಿಜವ ಪ್ರಕಾಶಿಸಿ ಜೀವಂಗೆ ಅರುಹುದೆ ಅಡಗಿಪ್ಪನು. ಅಂತು ತನ್ನ ನಿಜದ ನಿಲವಪ್ಪ ಪರವಸ್ತು ತನ್ನಲ್ಲಿರ್ದುದ ತಾವರಿಯದಿಪ್ಪರು ಜಡದೇಹ ಸಂಬಂಧದಿಂದ ಜೀವಿಗಳು....' ಎಂದು ಕಲ್ಲುಮಠದ ಪ್ರಭುದೇವರು ತಮ್ಮ ಲಿಂಗಲೀಲಾ ವಿಲಾಸ 'ಚಾರಿತ್ರ'ದ ಪಿಂಡಸ್ಥಲದಲ್ಲಿ ದೇವರ ದಾಸಮಯ್ಯನವರ 'ಆಡಬಾರದ ಬಯಲು....' ಎಂಬ ವಚನಕ್ಕೆ ಅರ್ಥವನ್ನು ಬರೆಯುತ್ತ ಬಿತ್ತರಿಸಿದಾರೆ. ತನ್ನಲ್ಲಿ ಅಂದರೆ ಪಿಂಡನಲ್ಲಿ ಪ್ರೇರಕವಸ್ತುವಿದ್ದರೂ ಪ್ರಕಾಶಕನಾಗಿಲ್ಲ. ಮಲ ಜಡದೇಹಾದಿಗಳ ಆವರಣವಿದೆ. ಇವನ್ನು ನಿವಾರಿಸಿ ಶುದ್ಧಾಂತಃಕರಣಿಯನ್ನಾಗಿಸಲು ಗುರು ಬೇಕು ಎಂಬುದು ಅವರ ಮಾತಿನಿಂದ ಸೂಚ್ಯವಾಗಿದೆ.

ಚಿದಂಶೀಭೂತನಾದ ಮೂಲಾತ್ಮನೇ ಶರೀರ ಸಂಬಂಧದಿಂದ ಶರೀರಿ ಆಗಿದಾನೆ. ದೇಹೀ ಆಗುವುದೇ ದುರ್ಲಭ. ದುರ್ಲಭವಾದ ದೇಹವು ಅದರಲ್ಲಿಯೂ ಮಾನವದೇಹವು ಲಭ್ಯವಾದಾಗ ಅದನ್ನು ಅವಶ್ಯವಾಗಿ ಸಾರ್ಥಕ ಪಡಿಸಬೇಕು. ದೇಹ ಒಂದು ಪಾತ್ರೆ. ಅದಕ್ಕೆ ಜ್ಞಾನಾಮೃತವನ್ನು ತುಂಬಬೇಕು. ಆ ಜ್ಞಾನಾನುಭವದಿಂದ ದೇವರನ್ನು ಕಾಣಬೇಕು. ಕಂಡು ಕರಿಗೊಳ್ಳಬೇಕು.

ಬದ್ಧರು, ಮುಮುಕ್ಷುಗಳು, ಮುಕ್ತರು—ಎಂದು ಮಾನವರು ಮೂಬಗೆಯಾಗಿದಾರೆ. ಇವರಲ್ಲಿ ಬದ್ಧರು ಭವದ ಬಂಧನದಲ್ಲಿ ಬಿದ್ದಿರುವರು. ಇವರು ಭವವಿಮುಕ್ತಿಗಾಗಿ ಶ್ರಮಿಸರು. ಭವಬಂಧನೇ ಸುಖದ ಸುಪ್ಪತ್ತಿಗೆ ಎಂದು ತಿಳಿದು ಇದರಲ್ಲಿಯೇ ಸುಪ್ತರಾಗಿರುತ್ತಾರೆ. ಇನ್ನು ಮೂರನೆಯವರು ಜೀವನ

ದಿಂದ ಮುಕ್ತರಾಗಿರುತ್ತಾರೆ. ಜೀವನದ ಜಂಜಡ ಇವರಿಗಿರುವುದಿಲ್ಲ. ಇವರಿಗಾಗಿ ಏನನ್ನೂ ಹೇಳಬೇಕಾಗಿರುವುದಿಲ್ಲ.

ಇನ್ನುಳಿದವರು ಮಧ್ಯದವರಾದ ಮುಮುಕ್ಷುಗಳು. ಇವರನ್ನೇ ಇಲ್ಲಿ ಪಿಂಡ'ರೆಂದು ಹೇಳುವುದು. ಇವರೇ ಸಾಧಕರು; ಸತ್ಯಜಿಜ್ಞಾಸುಗಳು. 'ಇವರಿಗಾಗಿಯೇ ಪಿಂಡಜ್ಞಾನಾದಿ ಭಾವೀ ಶತಸ್ಥಲಗಳು. ಇವರು ಬದ್ಧರಾಗಿರಲು ಇಷ್ಟಪಡರು. ಪ್ರಬುದ್ಧರಾಗಲು ಮುಕ್ತರಾಗಲು ಮನಸ್ಸುಳ್ಳವರು. ಇವರು ಜ್ಞಾತೃಗಳು. ಇವರಿಗೆ ಜ್ಞೇಯು ವಸ್ತುವಿದೆ.

'ಪಂಚತತ್ತ್ವಾತ್ಮಕಂ ಜ್ಞೇಯಂ ಸರ್ವಾಧಾರಂ ಸಮಾಶ್ರಿತಂ । ಏತದ್ವೈ ಮೂರ್ತಿಪಿಂಡತ್ವಾತ್ ಪಿಂಡಕಾಯಮಿತಿ ಸ್ಮೃತಮ್ ॥ ಪಿಂಡಸ್ಥಂ ಪಿಂಡ ಮಧ್ಯಸ್ಥಂ ಪಿಂಡೇನತು ಪುಟೇ (ಘಟೇ) ಕೃತಂ । ಪಿಂಡೇನ ಪಿಂಡಿತಂ ಪಿಂಡಂ ಪಿಂಡ ರೂಪಮುದಾಹೃತಮ್ ॥ ತಸ್ಮಾದ್ವೈ ಕರ್ಮಸಾದಾಖ್ಯಂ ಪಿಂಡ ರೂಪಮು ದಾಹೃತಂ। ಏತಚ್ಛಿವಮಯಂ ಪಿಂಡಂ ಸರ್ವತತ್ತ್ವಾಲಯಂ ವಿದುಃ ॥

ದೇಹಂ ತ್ರ್ವೇತತ್ಕಲೋಪೇತಂ ಧಾತುಪಿಂಡಮಿತಿ ಸ್ಮೃತಂ ।
ಷಟ್ಕಲಾಶ್ಚೈವ ಧಾತ್ರೀಶ್ಚ ಷಡ್ಗುಣೈಸ್ತು ಪ್ರಕಲ್ಪಯೇತ್ ॥
ಸರ್ವಾಂಗೈರಪಿ ಸಂಪೂರ್ಣಂ ಸರ್ವಾವಯವಸುಂದರಮ್ ।
ಏವಂ ತತ್ ಸ್ಮೃತಿಮಾತ್ರೇಣ ಮೂರ್ತಿಸ್ಸಕಲರೂಪಧೃತ್ ॥'

—ತತ್ತ್ವಭೇದ ಪಟಲ.

'ಪಂಚಮೂರ್ತ್ಯಾತ್ಮಕಂ ಯತ್ತತ್ಪಿಂಡ ಬ್ರಹ್ಮಾಕೃತಿರ್ಭವೇತ್ ।
ಏವಂ ಪಿಂಡಾಕೃತಿಃ ಪ್ರೋಕ್ತಾ ಕಲಾರೂಪಮಿಹೋಚ್ಯತೇ ॥'

—ವಾತುಲಶುದ್ಧಾಖ್ಯತಂತ್ರ.

ಆಗಮದಲ್ಲಿ ಪಿಂಡದ ವೈಶಿಷ್ಟ್ಯವು ಈ ರೀತಿ ಉಕ್ತವಾಗಿದೆ. ಸರ್ವತತ್ತ್ವಾಲಯವೆಂದು ಸರ್ವಾಧಾರವೆಂದು ಕಲೋಪೇತವೆಂದು ಷಡ್ಗುಣೋಪೇತವೆಂದು ಸರ್ವಾಂಗಸುಂದರವೆಂದು ಸರ್ವಾವಯವ ಸಂಪೂರ್ಣವೆಂದು ಕರ್ಮಸಾದಾಖ್ಯವೆಂದು ಮೂರ್ತಿರೂಪವೆಂದು ಬ್ರಹ್ಮಾಕೃತಿಯೆಂದು ಪಿಂಡಾಕೃತಿ

ಯನ್ನು ಪ್ರತಿಬೋಧಿಸಿದೆ. ಶುದ್ಧಾಂತಃಕರಣೆಯು ಇದನ್ನು ಬುದ್ಧಿಪೂರ್ವಕವಾಗಿ ಗಮನಿಸಬೇಕು. ಪ್ರಬುದ್ಧರಾಗಲು ಪ್ರಯತ್ನಿಸಬೇಕು.

ಮುಮುಕ್ಷು ಅಂದರೆ ಪಿಂಡನು ಮೊದಲು ಅರಿಯಬೇಕಾದುದು ತನ್ನನ್ನು. ತನ್ನ ತಾನರಿಯದೆ ಇನ್ನೇನನ್ನು ಅರಿತರೂ ಅರ್ಥವಿಲ್ಲ. ತನ್ನ ಅರಿವೇ ತನ್ನ ನೆಲೆ. ನೆಲೆಯೊಂದಿಲ್ಲದೆ ನಿಲ್ಲುವುದು ಸಾಧ್ಯವಿಲ್ಲ. ಮನೆಯೊಂದಿಲ್ಲದೆ ಪ್ರಪಂಚದಲ್ಲಿ ಬಾಳುವುದು ಸಾಧ್ಯವಿಲ್ಲ. ಪರಮಾರ್ಥದಲ್ಲಿಯೂ ಪಿಂಡಸ್ಥನಾಗಿ 'ಪಿಂಡಸ್ಥಲ'ದಲ್ಲಿ ಜೀವಿಸಬೇಕು. ಅಂದರೆ ಶುದ್ಧಾಂತಃಕರಣಿಯಾಗಬೇಕು.

"ಆದಿಯಲ್ಲಿ ಗುರುಬೀಜವಾದ ಪಿಂಡಕ್ಕೆ ಅನಾದಿ ಎಂಬುದನೊಬ್ಬರು ತಿಳುಹಲುಂಟೆ ? ಆದಿಕಾಯ ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ, ತನ್ನೊಳಗೆ ತಾನೆ ತಿಳಿದು ನೋಡಲು, ಕೋऽಹಂ ಎಂಬುದು ತಾನೇ ಸತ್ಯ ನೋಡಾ! ಗೊಹೇಶ್ವರ ಲಿಂಗದ ನಿಲವು ಹೇಳಿ ಕಂಡಿಹೆನೆಂದರೆ ಅಸಾಧ್ಯಕಾಣಾ ಸಿದ್ಧರಾಮಯ್ಯಾ !"

ಎಂದು ಪ್ರಭುದೇವರು ನಿರ್ಣಯಿಸಿದಾರೆ. ಪಿಂಡಕ್ಕೆ ಗುರು ಬೀಜ. ಗುರುಬೀಜದಲ್ಲಿ ಪಿಂಡದ ನಿಲವು ತಾನಾಗಿದೆ. ಅದು ಮಾತಿಗೆ ಎಟಕುವುದಲ್ಲ. ಗುರುಕರುಣೆಗೆ ಎಟಕುತ್ತದೆ.

ಪಿಂಡ ಏಕವೇ ಅನೇಕವೇ ಎಂದು ಕೇಳಬೇಕಿಲ್ಲ. ಏಕಾನೇಕವಾಗಿದೆ. ಏಕ ಅನೇಕವಾಗಿದೆ. ಅನೇಕದಲ್ಲಿ ಏಕತ್ವವನ್ನು ಕಾಣಬೇಕಾಗಿದೆ.

ಪಿಂಡಜ್ಞಾನಸ್ಥಲ

೨

ಜೀವನ ಸಿದ್ಧಾಂತದಲ್ಲಿ ಪಿಂಡಜ್ಞಾನಕ್ಕೆ ಪ್ರಾಮುಖ್ಯತೆಯಿದೆ. ಪಿಂಡದಲ್ಲಿ ಜಡ ಅಜಡ ಎಂಬುದಾಗಿ ಎರಡು ವಸ್ತುಗಳುಂಟು. ಇವೆರಡರಿಂದ ಮಾನವ ಶರೀರ ರಚಿತವಾಗಿದೆ. ಶರೀರ ಯಾವುದು ? ಶರೀರ ಯಾರು ?

ಇವೆರಡರ ಸಂಬಂಧ ಎಂತಹದು, ಎಷ್ಟರದು ? ಶಾರೀರೋಪಾಸನೆ ಶಾರೀರ ಮಾತ್ರದಲ್ಲಿಯೇ ಪರ್ಯ್ಯವಸಾನವಾಗಬೇಕೆ ? ಅಥವ ಶರೀರವಾಗಿ ಮೀಸಲಾಗಬೇಕೆ ? ಇದನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ಪಿಂಡವಿಜ್ಞಾನ. ಬರೀ ಶರೀರಜ್ಞಾನ ಪಿಂಡಜ್ಞಾನವಲ್ಲ ದೇಹಾತ್ಮ ಜ್ಞಾನವೇ ಪಿಂಡಜ್ಞಾನ. ಪಿಂಡವೆಂದರೆ ಬರೀ ಶರೀರವಲ್ಲ. ಶರೀರಾತ್ಮಗಳೆರಡು. ಬರೀ ಶರೀವನ್ನು ಬೋಧಿಸುವ ಕ್ಷೇತ್ರಪದಕ್ಕಿಂತ ಮಿಗಿಲಾದುದು.

ಜ್ಞಾನ-ಸಾಮಾನ್ಯ, ವಿಶೇಷವೆಂದು ಇಬ್ಬಗೆ. ಬ್ರಹ್ಮಾಂಡಜ್ಞಾನ ಸಾಮಾನ್ಯ. ·ಪಿಂಡಾಂಡಜ್ಞಾನ ವಿಶೇಷ. ಬ್ರಹ್ಮಾಂಡವನ್ನರಿತವನು ವಿಜ್ಞಾನಿ ; ಪಿಂಡಾಂಡವನ್ನರಿತವನು ಸುಜ್ಞಾನಿ.

ಭಕ್ತಿಪಿಂಡನು ಸಾಧಕ. ಪಿಂಡಜ್ಞಾನವು ಆತನ ಸಾಧನೆ. ಪ್ರಪಂಚದಲ್ಲಿ ಮಾನವನಿಗೆ ಪಿಂಡಜ್ಞಾನ ಅಂದರೆ ದೈವದ ತಿಳುವಳಿಕೆ ಆವಶ್ಯಕ. ಮೂಢ ಭಕ್ತಿಗೆ ಒಳಗಾಗಿ ವೈಗಣ್ಣಿಗೆ ಕಂಡುದನ್ನೆಲ್ಲ ದೈವವೆಂದು ಭಾವಿಸುವುದುಂಟು ; ಆರಾಧಿಸುವುದುಂಟು. ಇದರಿಂದ ದೈವನಿಷ್ಠೆ ಕುದುರದು. ದಿವ್ಯ ಸೌಖ್ಯ ಕೈಗೂಡದು. ದಿಟವಾದ ದೈವಜ್ಞಾನ ಲಭಿಸದು.

> "ಮಡಿಕೆ ದೈವ, ಮರವುದೈವ, ಬೀದಿಯಕಲ್ಲುದೈವ.
> ಮಾರಿದೈವ, ಬಿಲ್ಲನಾರಿದೈವ ; ಕೊಳಗ ದೈವ ಕಾಣಿರಯ್ಯ !
> ಹಣತೆ ದೈವ, ಗಿಣಿಲುದೈವ ; ಮಸಣದೈವ ಕಾಣಿರಯ್ಯ !
> ಒಳಲುದೈವ ಒನಕೆದೈವ ; ಒಲೆದೈವ ಕಾಣಿರಯ್ಯ !
> ದೈವ ದೈವವೆಂದು ಕಾಲಿಡಲಿಂಬಿಲ್ಲ.
> ದೇವನೊಬ್ಬನೇ ಕೂಡಲ ಸಂಗಮದೇವ !"

ಮೂಢಭಕ್ತರು ಬಾಹ್ಯದೃಷ್ಟಿಯ ಸೆಳವಿಗೆ ಸಿಕ್ಕಿ ಭೌತಿಕ ಜಡವಸ್ತುಗಳೇ ದೈವವೆಂದು ಭಾವಿಸಿ ಧಾವಿಸುವರು. ಬಹು ದೈವಗಳಿಗೆ ಬಾಗುವರು. ಹೊಸಲು ದೈವವೆಂದು ಕೈಯಲ್ಲಿ ಮುಟ್ಟಿ ಪೂಜಿಸಿ ಕಾಲಲ್ಲಿ ಮೆಟ್ಟಿ ದಾಂಟಿ ಹೋಗುವರು. ಬೀಳು ಆಸೆಗಳಿಗಾಗಿ ಪ್ರಾಪಂಚಿಕ ಫಲಗಳಿಗಾಗಿ ಬೀದಿಯ ಕಲ್ಲು ಮರಗಳನ್ನು ಪೂಜಿಸುವರು. ಅಗ್ನಿಯನ್ನು ಆರಾಧಿಸಿ ಆ ಅಗ್ನಿ ಮನೆಗೆ ಬಿದ್ದು ಉರಿಯುವಾಗ ಬೀದಿಯ ಮಣ್ಣು ತೂರುವರು; ಬಾಯಿಗೆ ಬಂದಂತೆ ಬೈಯುವರು. ಒಮ್ಮೆ ವಂದಿಸಿ ಇನ್ನೊಮ್ಮೆ ನಿಂದಿಸುವಂತಹ ದೈವ ದೈವವೆ? ಹೊತ್ತು ಬಂದರೆ ಮಾರಿಕೊಂಡು ತಿಂಬುವ ದೈವಗಳು ದೈವವಲ್ಲ.

"ಕಲ್ಲ ದೇವರು ದೇವರಲ್ಲ. ಮಣ್ಣ ದೇವರು ದೇವರಲ್ಲ.
ಮರ ದೇವರಲ್ಲ ಪಂಚಲೋಹದಲ್ಲಿ ಮಾಡುವ ದೇವರು
ದೇವರಲ್ಲ.
ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ
ಮೊದಲಾದ
ಅಷ್ಟಾಷಷ್ಠಿ ಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲ್ಲಿಹ
ದೇವರು ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ
ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ"

ಹೀಗೆ ವಿಜಾತೀಯ ವಸ್ತುಗಳು ಯಾವೂ ದೇವರಲ್ಲ. ಅವೆಲ್ಲ ದೇವರೆಂದು ತಿಳಿಯುವುದು ಪಿಂಡಜ್ಞಾನವಲ್ಲ. ತನ್ನೊಳಗೆ ಇರುವ ದೇವರನ್ನು ಮೊದಲು ಕಾಣಬೇಕು

ಶಾರೀರಕ ವಿಚಾರ ಅದೊಂದು ವೇದಿಕೆ! ಇಷ್ಟರಿಂದಲೆ ಜೀವನ ಚಿತ್ರ ಮುಗಿಯುವುದಿಲ್ಲ. ಸ್ವರೂಪ ತೋರುವುದಿಲ್ಲ. ಸ್ವತ್ವ ಸಿದ್ಧಿಸುವುದಿಲ್ಲ. ಇದೊಂದು ಹೊರನೋಟ. ಇನ್ನೊಂದಿದೆ ಒಳನೋಟ. ಅದು ಅತಿ ಮಹತ್ವಪೂರ್ಣವಾದ ನೋಟ. ವ್ಯಕ್ತಿತ್ವಕ್ಕೆ ಉಜ್ವಲ ಉಜ್ಜೀವನಕ್ಕೆ ಉತ್ತಮವಾದ ಉಪಯುಕ್ತವಾದ ನೋಟ. ಅದೇ ಆದಿ ಆಧಾರವಾದ ನೋಟ.

"ಶರೀರಾತ್ಮವಿವೇಕೇನ ಪಿಂಡಜ್ಞಾನೀ ಸ ಕಥ್ಯತೇ
ಶರೀರಮೇವ ಚಾರ್ವಾಕೈರಾತ್ಮೇತಿ ಪರಿಕೀರ್ತ್ಯತೇ ।
ಇಂದ್ರಿಯಾಣಾಂ ತಥಾತ್ಮತ್ವಮುಪಸ್ಯೈಃ ಪರಿಭಾಷ್ಯತೇ
ಬುದ್ಧಿತತ್ತ್ವಗತೈರ್ಬೌದ್ಧೈರ್ಬುದ್ಧಿರಾತ್ಮೇತಿ ಗೀಯತೇ ।"

ಇನ್ನು ತನ್ನ ಸಜಾತೀಯ ವಸ್ತುಗಳೂ ದೇವರಲ್ಲವೆಂಬುದನ್ನು ಹೇಳ ಹೊರಟು ಈ ವಿಚಾರದಲ್ಲಿ ಯಾರು ಯಾರು ಎಲ್ಲಿ ಎಲ್ಲಿ ಮುಗ್ಗರಿಸಿರುವರೆಂಬುದನ್ನು ಪರಶಿವ ಸ್ವರೂಪಿಗಳಾದ ಶ್ರೀ ರೇಣುಕ ಶಿವಾಚಾರ್ಯರು ನಿರ್ದೇಶಿಸುತ್ತಾರೆ.

ಶರೀರಾತ್ಮವಿವೇಕವಿಲ್ಲದೆ ಪಿಂಡಜ್ಞಾನ ಪರಿಪೂರ್ಣವಾಗದು. ಆ ಪಿಂಡಜ್ಞಾನವಿಲ್ಲದೆ ಜೀವನು ಪಿಂಡಜ್ಞಾನಿಯೆಂದೆನಿಸನು. ತನಿಗೆ ಅನ್ಯವಾದ ವಿಜಾತೀಯ ದೃಶ್ಯದ್ರವ್ಯಗಳೇ ದೇವರೆಂದು ಹಲವರು ಭ್ರಮಿಸಿದಂತೆ, ತನ್ನವೇ ಆದ ಸಜಾತೀಯ ಸ್ವಗತ ಶರೀರಾದಿಗಳು ಆತ್ಮವೆಂದು ಅನೇಕರು ಭ್ರಮಿಸಿದಾರೆ. ಅಂಥವರಲ್ಲಿ ಚಾರ್ವಾಕನೊಬ್ಬನು. ಈತನು ಸ್ಥೂಲವಾದ ಶರೀರವೆ ಆತ್ಮವೆಂದು ಹೇಳುವನು. ಇನ್ನೊಬ್ಬನು ಇಂದ್ರಿಯಗಳೆ ಆತ್ಮವೆಂದು ಹೇಳುವನು. ಬುದ್ಧಿ ತತ್ವವಾದಿಯಾದ ಬುದ್ಧನು ಬುದ್ಧಿಯೇ ಆತ್ಮವೆಂದು ಹಾಡಿದನು. ಇವರೆಲ್ಲರೂ ಏಕೈಕ ದೃಷ್ಟಿಯುಳ್ಳವರು. ಈ ಮತಗಳು ಯಾವೂ ಸಮ್ಮತವಲ್ಲ. ದಾರ್ಶನಿಕ ದೃಷ್ಟಿಗೆ ಸಲ್ಲತಕ್ಕವಲ್ಲ.

ಚಾರ್ವಾಕಮತ ಚಿರಕಾಲ ಪೂರ್ವದ್ದು. ಋಗ್ವೇದಕ್ಕಿಂತ ಪುರಾತನದ್ದು. ಚಾರ್ವಾಕಮತದ ಆಚಾರ್ಯಪುರುಷನು ಬ್ರಹಸ್ಪತಿ. ವಾಚಸ್ಪತಿ, ಗೀರ್ಪತಿ ಎಂದು ಈತನಿಗೆ ಹೆಸರುಗಳಿವೆ. ಇವನನ್ನು ಚಾರ್ವಾಕನೆಂತಲೂ ಕರೆಯುತ್ತಿರಬೇಕು. ಬೃಹಸ್ಪತಿ ಸೂತ್ರವೆಂಬುದೇ ಈ ಮತದ ಗ್ರಂಥ. ಅರ್ಥ, ಕಾಮುಗಳೆರಡೇ ಈ ಮತದ ಪುರುಷಾರ್ಥಗಳು. ಪ್ರತ್ಯಕ್ಷವೊಂದೇ ಇವರ ಪ್ರಮಾಣ. ಶರೀರವೇ ಆತ್ಮವೆಂದು ಇವರ ಗ್ರಹಿಕೆ. ಭೋಗವೇ ಮೋಕ್ಷ. ಕಾರಣ ಸುಖವಾಗಿ ಬಾಳುವುದೇ ಇವರ ಜೀವನೋದ್ದೇಶ.

'ಯಾವಜ್ಜೀವಂ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ।।' ಎಂದು ಹೇಳುವುದೇ

ಇವರ ಧರ್ಮಸರ್ವಸ್ವ. ಇವರು ದೇಹವೇ ದೇವರೆಂಪರು. ಇನ್ನು ಕೆಲವರು ಇಂದ್ರಿಯ ಆತ್ಮವೆಂದರು. ಬೌದ್ಧರು ಬುದ್ಧಿಯೇ ಅತ್ಮವೆಂದರು

"ನೇಂದ್ರಿಯಾಣಾಂ ನ ದೇಹಸ್ಯ ನ ಬುದ್ದೇರಾತ್ಮತಾ ಭವೇತ್
ಅಹಂಪ್ರತ್ಯಯ ವೇದ್ಯತ್ವಾದನುಭೂಸ್ಮೃತೇರಪಿ ।
ಶರೀರೇಂದ್ರಿಯಬುದ್ಧಿಭ್ಯೋ ವ್ಯತಿರಿಕ್ತಃ ಸನಾತನಃ
ಆತ್ಮಸ್ಥಿತಿ ವಿವೇಕೀ ಯಃ ಪಿಂಡಜ್ಞಾನೀ ಸ ಕಥ್ಯತೇ ।"

ಸಾಂಖ್ಯರ ಗಣನೆಯಿಂದ ಆರಂಭವಾದ ಪಂಚಭೂತ ಪಂಚತನ್ಮಾತ್ರ, ದಶೇಂದ್ರಿಯ, ಮನ, ಬುದ್ಧಿಮಹತ್, ಚಿತ್ತ, ಅಹಂಕಾರಗಳು ಪ್ರಾಕೃತಿಕ ವಾಗಿರುವುದರಿಂದ ಆತ್ಮವಲ್ಲ. ಕಾರ್ಯಕರಣಗಳ ಗಣನೆ ಮಾತ್ರದಿಂವ ಸಾಧನೆ ಮಾತ್ರದಿಂದ ಶುದ್ಧಿ ಸಿದ್ಧಿಗಳು ಪೂರ್ಣಗೊಳ್ಳುವುದಿಲ್ಲ. ಜೀವನ ಸಿದ್ಧಾಂತ ವಾಗುವುದಿಲ್ಲ. ಶರೀರ ಭೂಮಿಕೆಯ ಮೇಲೆ ಮಾನಸಿಕವೇದಿಕೆ ರಚಿತವಾಗ ಬೇಕು. ಮಾನಸಿಕ ವೇದಿಕೆಯ ಮೇಲೆ ಆತ್ಮವಿವೇಕವೆಂಬ ಮಾಮನೆ ರೂಪಿತ ವಾಗಬೇಕು. ಆ ಮಾಮನೆಗೆ ಅನುಭಾವಿಕ ಶೃಂಗಾರಬೇಕು.

ಸತ್ತಲ್ಲದ ನಿತ್ಯವಲ್ಲದ ತ್ರಿಗುಣ ತ್ರಿದೋಷಗಳಿಂದ ಕೂಡಿದ ದೇಹೇಂದ್ರಿ ಯಗಳು ಆತ್ಮವಲ್ಲ. ಸತ್ತಲ್ಲದ ಎಂಬ ಪದ ಗಮನಾರ್ಹ. ಅದೇ ಸಂಸ್ಕಾರ ವಾಗಿ ಸತ್ತಾದರೆ ಅತ್ಮನಿಗೆ ಅನ್ಯವಲ್ಲ. ಅಕ್ಕಿ ಅನ್ನವಲ್ಲ, ಬೆರಣಿ ಬೂದಿಯಲ್ಲ. ದಿಟ. ಅದರೆ ಅವೇ ಅಕ್ಕಿ ಬೆರಣಿಗಳಿಗೆ ಅಗ್ನಿ ಸಂಸ್ಕಾರವಾದಾಗ ಅನ್ನ-ಬೂದಿಗಳಾಗುವವೆಂಬುದನ್ನು ಮರೆಯದಿರಬೇಕು. ದೇಹೇಂದ್ರಿಯವಾದಿಗಳು ಇದನ್ನು ಮರೆತರು. ಸತ್ಸಂಸ್ಕಾರಇಲ್ಲದ ಶರೀರೆಂದ್ರಿಯಗಳು ಆತ್ಮವೆಂದು ಛಲ ಹಿಡಿದರು. ಆತ್ಮವಲ್ಲೆಂಬುದನ್ನು ಅಸಂದಿಗ್ಧವಾಗಿ ಒಪ್ಪಬೇಕು. ಹಸಿಗಡಿಗೆಯಲ್ಲಿ ನೀರಿರದು. ಅಸಂಸ್ಕೃತ ಅಂಗದಲ್ಲಿ ಆತ್ಮಾನಂದಾಮೃತಇರದು. ಅದೇ ತ್ರಿವಿಧ ದೀಕ್ಷೆಯಿಂದ ತ್ರಿವಿಧ ಮಲವಳಿದು ಮಾಂಸಪಿಂಡವಳಿದು ಮಂತ್ರ ಪಿಂಡವಾದರೆ ಆಗ ಅದೇ ಚಿತ್ಪಿಂಡವಾಗುತ್ತದೆ. ಚಿದಮೃತ ಭಾಂಡವಾಗುತ್ತದೆ. ಅಸದ್ರೂ ಪಾದ ಶರೀರೇಂದ್ರಿಯಗಳು ಆತ್ಮವೆಂದು ಅದಾರು ಹೇಳಲಾದೀತು? ಸಂಸ್ಕಾರ

ದಿಂದ ಸದ್ರೂಪವಾದಾಗ ಆತ್ಮವಲ್ಲೆಂದು ಅದೆಂತು ಹೇಳಲಾದಿತು? ಎಲೆ ಹೂವಾಗದೆ? ಹೂವು ಹಣ್ಣಾಗದೆ? ಹಣ್ಣು ಮೂಲಬೀಜವಾಗದೆ? ಅಂತೆಯೇ ಆತ್ಮಸಂಸ್ಕಾರ ಪಡೆದ ಅಂಗ, ಆತ್ಮನಿಂದಲೇ ಆದ ಅಂಗ ಸೂಕ್ಷ್ಮಾತಿ ಸೂಕ್ಷ್ಮವಾಗಿ ಆತ್ಮವಾಗದಿರುವುದೆ? ಆದರೆ ಹೂವಾಗಿಸದೆ ಹಣ್ಣಾಗಿಸದೆ ಬರೀ ಎಲೆಯೇ ಬೀಜವಾಗದು. ಹೃದಯವಿಲ್ಲದ ಹದುಳವಿಲ್ಲದ ಆತ್ಮಿಕ ಜ್ಞಾನಕ್ರಿಯೆಗಳಿಲ್ಲದ ಶರೀರೇಂದ್ರಿಯಗಳು ಮೂಲ ಆತ್ಮವಾಗವು.

ಶಿವದೀಕ್ಷಾ ಸಂಸ್ಕಾರವನ್ನು ಪಡೆದ ದೇಹೇಂದ್ರಿಯಾದಿಗಳು 'ಆತ್ಮತತ್ತ್ವ'ದಲ್ಲಿ ಪರಿಗಣಿತಗಳಾಗುತ್ತವೆ. ೩೬ ತತ್ತ್ವಗಳಲ್ಲಿ ಮೊದಲಿನವೈದು ಶಿವತತ್ತ್ವ. ಮುಂದಿನವೇಳು 'ವಿದ್ಯಾತತ್ತ್ವ'ವೆಂದು ಉಕ್ತವಾಗಿವೆ. ಕೊನೆಯವಿಪ್ಪತ್ತು ನಾಲ್ಕು 'ಆತ್ಮತತ್ತ್ವ'ವೆಂಪು ನಿರ್ದಿಷ್ಟವಾಗಿವೆ. ಈ ವಿಭಾಗವು ಈ ತತ್ತ್ವತನವು ಸಂಸ್ಕಾರವಾದ ಬಳಿಕವೆಂಬುದನ್ನು ಮರೆಯಬಾರದು. ಸಂಸ್ಕಾರವಿಲ್ಲದ ಸ್ಥೂಲ ಶರೀರೇಂದ್ರಿಯಗಳೇ ಆತ್ಮವೆಂದು ಹೇಳುವ ಚಾರ್ವಾಕರ ಸಾಂಖ್ಯರ ಮಾತುಗಳು ಸಲ್ಲವು; ನಿಲ್ಲವು, ಸ್ಥೂಲದೃಷ್ಟಿಯುಳ್ಳವರಿಗೆ ಮಾತ್ರ ಅವು ಚಾರು ವಾಕ್ಯಗಳಾಗಬಹುದು; ವಾತ್ಸಲ್ಯದ ವಚನಗಳಾಗಬಹುದು. ವಿಚಾರಾಚಾರಗಳುಳ್ಳವರು ಒಪ್ಪುವ ಮಾತುಗಳಲ್ಲವೆಂದು ಹೇಳುವುದೇ ಶ್ರೀ ಜಗದ್ಗುರು ರೇಣುಕರ ಅರ್ಥಗರ್ಭಿತ ಅಭಿಪ್ರಾಯ.

ಪ್ರಾಕೃತಿಕ ದೇಹ ಹೊರಗೊಂದು ಬಗೆ; ಒಳಗೊಂದು ಬಗೆ. ಹೊರಗೆ ಒಪ್ಪು, ಒಳಗೆ ಕಪ್ಪು. ಹೊರಗೆ ಹೊಳಕು; ಒಳಗೆ ಕೊಳಕು. ಹೊರಗೆ ಆಕರ್ಷಣೀಯ ಒಳಗೆ ಹೇಯ. ಪಂಚಭೂತಗಳಿಂದಾದುದು ಪ್ರಕೃತಿ. ಇದಕ್ಕೆ ಎಂದಿದ್ದರೂ ಕಾಯ್ದಿದೆ ವಿಕೃತಿ. ವಿಲಯಗತಿ. ಅತ್ಯಂತ ಸ್ಥೂಲವಾದ ಅಸಂಸ್ಕೃತವಾದ ಶರೀರ ಅಸಾರ. ೮೧ ತೆರದ ವಾತ, ೬೪ ಬಗೆಯ ಪಿತ್ತ, ೨೧೫ ಬಗೆಯ ಶ್ಲೇಷ್ಮಗಳಿಂದ ಕೂಡಿದೆ. ೩೬೦ ರೋಗಯುಕ್ತವಾಗಿದೆ. ಆದ್ದರಿಂದ ಆತ್ಮವಲ್ಲ.

ಇನ್ನು ಇಂದ್ರಿಯಗಳು ಆತ್ಮವಲ್ಲ. ಇವು ಸ್ಥೂಲವಾದವುಗಳು. ಬಾಹ್ಯ ಪ್ರವೃತ್ತಿಯುಳ್ಳವು. ಇಂದ್ರಿಯ ಬಾಹ್ಯಹೊದಿಕೆ. ಇಂದ್ರಿಯತ್ವ ಅಂತಸ್ಸತ್ವ. ಅದೇ ಆತ್ಮತತ್ತ್ವ. "ಯಚ್ಚಕ್ಷುಷಾ ನಪಶ್ಯತಿ ಯೇನ ಚಕ್ಷುಂಷಿ ಪಶ್ಯತಿ; ಯಚ್ಛ್ರೋತ್ರೇಣ ನ ಶೃಣೋತಿ ಯೇನಶ್ರೋತ್ರಮಿದಂ ಶ್ರುತಂ—ತದೇವ

ಬ್ರಹ್ಮತ್ವಂ ವಿದ್ಧಿ ನೇದಂ ಯದಿದಮುಪಾಸತೇ." ಕೇನೋಪನಿಷತ್ತಿನ ಉಕ್ತಿಯಂತೆ ಕಾಣದ ಈ ಕಣ್ಣು, ಕೇಳವ ಈ ಕಿವಿ ಆತ್ಮಗಳಲ್ಲ ಕಾಣುವ ಕಣ್ಣು, ಕೇಳುವ ಕಿವಿ ಒಳಗಿವೆ. ಅವು ಆತ್ಮರೂಪ. ಬಾಹ್ಯೇಂದ್ರಿಯಗಳು ಬ್ರಹ್ಮವಲ್ಲ. ಇವು ಜಡ. ಇವುಗಳಿಂದಾಗದು ಸಮುನ್ನತಿ; ಸದ್ಗತಿ. "ನ ತತ್ರ ಚಕ್ಷುರ್ಗಚ್ಛತಿ, ನ ವಾಗ್ಗಚ್ಛತಿ, ನೋಮನೋ........"

"ಕಂಡಿಹರೆಂದು ಕಣ್ಗೆಮರೆ ಮಾಡಿದ. ಕೇಳಿಹರೆಂದು ಕಿವಿಗೆ ಮರೆ ಮಾಡಿದ ಮುಟ್ಟಿಹರೆಂದು ಕೈಗೆ ಮರೆಮಾಡಿದ ಸೋಂಕಿಹರೆಂದು ಮೈಗೆ ಮರೆಮಾಡಿದ. ನೆನೆದಿಹರೆಂದು ಮನಕ್ಕೆ ಮರೆ ಮಾಡಿದ. ಅರಿದಿಹರೆಂದು ಅಂತರಂಗದಲ್ಲಿ ಮರೆಮಾಡಿದ. ಪೂಜಿಸಿಹರೆಂದು ಕ್ರೀಗೆ ಮರೆಮಾಡಿದ. ಕೂಡಲಸಂಗಮದೇವರೊಡನೆ ಅಹಂಕಾರವ ಮಾಡಿ ಕೆಟ್ಟ ಕೇಡನೇನೆಂದು ಪವಿಸುವೆನು ?" ಎಂದು ಬಸವಣ್ಣನವರು ಇಂದ್ರಿಯಗಳಿಗೆ ಅಂತಃಕರಣಗಳಿಗೆ ಮರೆಯಾದ ಕಾರಣ ಅಹಂಕಾರವೆಂದು ಹೇಳಿದಾರೆ. ಆದ್ದರಿಂದ ಅಲ್ಲಿಗೆ ಈ ಜಡೇಂದ್ರಿಯಗಳು ನಿಲುಕವು.

> "ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋಹ ವಾಚಂ
> ಸ ಉ ಪ್ರಾಣಸ್ಯ ಪ್ರಾಣಶ್ಚಕ್ಷುಷಶ್ಚಕ್ಷುರತಿಮುಚ್ಯಧೀರಾಃ
> ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ"
>
> —ಕಠೋಪನಿಷತ್.

ಆತ್ಮನು ಕಿವಿಗೆ ಕಿವಿಯಾಗಿದಾನೆ; ಮನಸ್ಸಿಗೆ ಮನಸ್ಸಾಗಿದಾನೆ; ಮಾತಿಗೆ ಮಾತಾಗಿದಾನೆ; ಪ್ರಾಣಕ್ಕೆ ಪ್ರಾಣವಾಗಿದಾನೆ; ಕಣ್ಣಿಗೆ ಕಣ್ಣಾಗಿದಾನೆ. ಧೀರರು ಈ ಇಂದ್ರಿಯಗಳಿಂದಾಚೆಗೆ ಸಾಗುವರು. ಮೃತ್ಯುಲೋಕದಿಂದ ಅಮೃತಲೋಕಕ್ಕೆ ಹೋಗುವರು; ಅಮೃತರಾಗುವರು. ಈ ಸ್ಥಿತಿಬದಗಬೇಕಾದರೆ "ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿತುಂಬಿ, ಕಿವಿಯಲ್ಲಿ ಕೀರುತಿ ತುಂಬಿ, ಮನದಲ್ಲಿ ನೆನಹು ತುಂಬಿ, ಕೂ. ಸಂ. ದೇವ.

ನಿಮ್ಮ ಚರಣ ಕಮಲದಲ್ಲಿ ಆನು ತುಂಬಿ" ಎಂದಂತಾಗಬೇಕು. ಇಂತಾಗದೆ ಇಂದ್ರಿಯಗಳು ಆತ್ಮವಾಗಲರಿಯವು.

ಬಳಿಕ ಬುದ್ಧಿಯೂ ಆತ್ಮವಲ್ಲ. ಆತ್ಮನು ಬುದ್ಧಿಗೆ ವಿಷಯವೂ ಅಲ್ಲ. ಆತ್ಮನನ್ನೇ ಕಾಣದ ಬುದ್ಧಿಯು ಪರಮಾತ್ಮನನ್ನು ಕಾಣಲರಿಯದು. ಬುದ್ಧಿಯು ಗುಣತತ್ತ್ವದ ಕಾರ್ಯ.

"ಅಂತಃಕರಣವೃತ್ತಿರ್ಯಾ ಬುದ್ಧ್ಯಾಖ್ಯಾ ಸಾ ಮಹೇಶ್ವರಂ |
ನ ಪ್ರಕಾಶಯಿತುಂ ಶಕ್ತಾ ಪಾಶತ್ವಾನ್ನಿಗಡಾದಿವತ್ ||"

ಇದು ವಿಶ್ವಾರಾಧ್ಯ ವಿರಚಿತ 'ಮಲಯರಾಜಸ್ತವ' ಕೃತಿಯ ಟೀಕೆಯಲ್ಲಿರುವುದು. ಬುದ್ಧಿ ಇದೊಂದು ಅಂತಃಕರಣವೃತ್ತಿ. ಜೀವಾತ್ಮನ ಪಾಶ. ಇದರಿಂದಾಗಿ ಇದು ಆ ಮಹೇಶ್ವರನನ್ನು ತಿಳಿಯದು ; ತೊಳಗಿಸದು.

"ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ ತ್ವಂ ವೇತ್ಥ|
ಬ್ರಹ್ಮಣೋ ರೂಪಂ ಯದಸ್ಯತ್ವಂ ಯದಸ್ಯ ಚ ದೇವೇಷ್ವಥನು
ಮೀಮಾಂಸ್ಯಮೇವ ತೇ ಮನ್ಯೇ ವಿದಿತಮ್ ||"

—ಕೇನೋಪನಿಷತ್ತು.

ಅದನ್ನು ನೀನು ಅರಿತಿರುವೆನೆಂದು ಭಾವಿಸಿದ್ದರೆ ಅದು ನಿನ್ನ ಪೊ[illegible] ಪಾಟು. ಅದನ್ನು ನೀನು ತೀರ ತುಸು ತಿಳಿದುಕೊಂಡಿರುವೆ. ನಿನಗಾಗಿ ಅದರ ವಿಷಯವಾಗಿ ಇನ್ನೂ ಮೀಮಾಂಸೆಯು (ವಿಚಾರವು) ಆಗಬೇಕಾಗಿದೆ.

ನಾನು ಬುದ್ಧಿವಂತನು ; ನಾನು ತಿಳಿದಿರುವೆನು ; ಎಂದು ಅಹಂಕರಿಸಬಹುದು. ಇದರಿಂದ ಫಲವಿಲ್ಲ. ಈ ಬುದ್ಧಿಗೆ ಸಿದ್ಧಿಯಾಗತಕ್ಕ ವಸ್ತು ಅದಲ್ಲ.

"ಯಸ್ಯಾಮತಂ ತಸ್ಯಮತಂ, ಮತಂ ಯಸ್ಯ ನ ವೇದಸಃ |"

—ಕೇನ.

ಯಾವನು ಅದನ್ನು ತಾನು ತಿಳಿದಿಲ್ಲೆಂದು ಭಾವಿಸಿ ಹಮ್ಮು ಹಳಚಿರುವನೋ ಅವನು ತಿಳಿದಿರುವನು. ಯಾವನು ತಿಳಿದಿರುವೆನೆಂದು ಹಮ್ಮಿಸುವನೋ ಅವನು ಅದೆಂದಿಗೂ ತಿಳಿಯನು. ಇವೆಲ್ಲ ಕಾರಣಗಳಿಂದ ಬುದ್ಧಿಯು ಆತ್ಮವೆನಿಸದು. ಈ ಶರೀರೇಂದ್ರಿಯ ಬುದ್ಧಿಗಳಿಗೆ ವ್ಯತಿರಿಕ್ತನಾಗಿ ಸನಾತನನಾಗಿ ಒಬ್ಬನಿದ್ದಾನೆ. ಅವನು ಅನುಭವಗಮ್ಯನಾಗಿದ್ದಾನೆ. 'ಅಹಂ' ಪ್ರತ್ಯಯಕ್ಕೆ ವೇದ್ಯನಾಗಿದ್ದಾನೆ. ಅವನೇ ಆತ್ಮ. ಅವನನ್ನು ಅರಿತವನೇ ಆತ್ಮಜ್ಞಾನಿ,–ಅಥವಾ ಪಿಂಡಜ್ಞಾನಿ.

ಜೀವನದಲ್ಲಿ ಅರಿಯಬೇಕಾದ ವಸ್ತುವದು. ಅದು ಬೇರಿಲ್ಲ. ಅದು ತಾನೇ ತಾನು. ತನ್ನ ತಾನರಿವುದೇ ಚರಮಜ್ಞಾನ; ಪರಮಜ್ಞಾನ. ಆ ಆತ್ಮಾನುಭವಕ್ಕಿಂತ ಅಧಿಕವಾದುದು ಬೇರೊಂದಿಲ್ಲ. ಅದೇ ಪರಮ ಪ್ರಮಾಣ.

'ಚಿತ್ತದು ಕೇಳನುಭೂತಿಯೆ ನಿಕ್ಕು |
ಮತ್ತದು ತಾನೇ ಪವಣವೆನಿಕ್ಕು'

—ಪರಮಾರ್ಥಗೀತಾ

'ಪ್ರಮಾಣತ್ವಾಽಪ್ರಮಾಣತ್ವೇ ಸ್ವತಃ ಸಾಂಖ್ಯಾ ಸಮಾಶ್ರಿತಃ |
ನೈಯಾಯಿಕಾಸ್ತೇ ಪರತಃ ಸೌಗತಾಶ್ಚರಮಂ ಸ್ವತಃ–|
ಪ್ರಥಮಂ ಪರತಃ ಪ್ರಾಹುಃ ಪ್ರಾಮಾಣ್ಯಂ ವೇದವಾದಿನಃ |
ಪ್ರಮಾಣತ್ವಂ ಸ್ವತಃ ಪ್ರಾಹುಃ ಪರತಶ್ಚಾಪ್ರಮಾಣತ್ವಾತ್ ||'–

ಸಾಂಖ್ಯರು ಸ್ವತಃ ಪ್ರಮಾಣವನ್ನು, ನೈಯಾಯಿಕರು ಪರತಃ ಪ್ರಮಾಣವನ್ನು, ಸೌಗತರು ಎರಡನ್ನೂ, ವೈದಿಕರು ಸಾಂಖ್ಯರಂತೆ–ಸ್ವತಃ ಪ್ರಮಾಣವೊಂದನ್ನು ಅಂಗೀಕರಿಸಿದ್ದಾರೆ. ಪ್ರಮೆಗೆ ಕಾರಣವಾದ ಪ್ರಮಾಣಗಳು ಪ್ರತ್ಯಕ್ಷ. ಅನುಮಾನ, ಆಗಮ, ಅರ್ಥಾಪತ್ತಿ, ಉಪಮಾನ, ಅನುಪಲಬ್ಧಿ, ಸಂಭವ ಐತಿಹ್ಯ ಎಂಬುದಾಗಿ ಎಂಟು ಪ್ರಮಾಣಗಳನ್ನು ಚಾರ್ವಾಕ, ವೈಶೇಷಿಕ, ಸಾಂಖ್ಯ, ನೈಯಾಯಕ, ಪ್ರಾಭಾಕರ, ಭಾಟ್ಟ, ವೇದಾಂತಿಗಳು, ಪೌರಾಣಿಕರು ಕ್ರಮವಾಗಿ ಹೇಳುವುದುಂಟು. ತಾಂತ್ರಿಕರು ಲಿಂಗ ಅಥವಾ ಸಂಜ್ಞೆಯೆಂಬ ಪ್ರಮಾಣವನ್ನು ಸೇರಿಸಿ ಒಂಬತ್ತನ್ನು ಒಪ್ಪುತ್ತಾರೆ. ಶಿವಾದ್ವೈತಿಗಳು ಮಾತ್ರ ಮೊದಲಿನ ಮೂರನ್ನೇ ಹೇಳುತ್ತಾರೆ.

"ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ
ನಿಧಿಧ್ಯಾಸಿತವ್ಯಃ ।"

ಎಂದು ಮೈತ್ರೇಯಿಗೆ ಯಾಜ್ಞವಲ್ಕ್ಯರು ಬೋಧಿಸಿರುವರು. ಜೀವನದಲ್ಲಿ ನೋಡ ಬೇಕಾದುದು ಆತ್ಮ; ಕೇಳಬೇಕಾದುದು ಆತ್ಮವಿಷಯ; ಮನನ ಮಾಡಬೇಕಾದುದು ಆತ್ಮ; ನಿಧಿಧ್ಯಾಸನ ಮಾಡಬೇಕಾದುದು ಆತ್ಮ. ಎಲ್ಲ ಶರೀರೇಂದ್ರಿಯಗಳನ್ನು ಅಂತಕರಣಗಳನ್ನು ಆತ್ಮನಲ್ಲಿ ಕೇಂದ್ರೀಕರಿಸಬೇಕು. ಇದರಿಂದ ಅಪಾರಬಲ ಬರುತ್ತದೆ; ಅಮೃತತ್ವ ಸಿದ್ಧಿಸುತ್ತದೆ.

"ಪ್ರತಿಬೋಧವಿದಿತಂಮತಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ, ವಿದ್ಯಯಾ ವಿಂದತೇಽಮೃತಮ್ ॥"

—ಕೇನೋಪನಿಷತ್ತು.

ನಿಜಸ್ವರೂಪದ ಸಂಧಾನದಿಂದಲೇ ಆತ್ಮಜ್ಞಾನವುಂಟಾಗುತ್ತದೆ. ಅಂತಹ ಪಿಂಡಜ್ಞಾನದಿಂದಲೇ ಪರಮ ಅಮೃತತ್ವವು ಪ್ರಾಪ್ತವಾಗುತ್ತದೆ. ಆತ್ಮಜ್ಞಾನದಿಂದಲೇ ಆತ್ಮಶಕ್ತಿಯು ಅಳವಡುತ್ತದೆ. ಆತ್ಮಶಕ್ತಿಯು ಶರೀರೇಂದ್ರಿಯ ಬುದ್ಧಿಗಳಿಂದ ಸಂಪ್ರಾಪ್ತವಾಗದು. ಇಂತಹ ಈ ಪಿಂಡ (ಆತ್ಮ) ಜ್ಞಾನವನ್ನು ಇಲ್ಲಿಯೇ ಈ ಜನ್ಮದಲ್ಲಿಯೇ ಪಡೆಯಬೇಕು.

"ಇಹ ಚೇದವೇದೀದಥ ಸತ್ಯಮಸ್ತಿ,
ನ ಚೇದಿಹಾವೇದೀನ್ಮಹತೀವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥"

—ಕೇನೋಪನಿಷತ್.

ಆತ್ಮಜ್ಞಾನವನ್ನು ಇಲ್ಲಿಯೇ ಆರ್ಜಿಸಿಕೊಳ್ಳಬೇಕು. ಇಹದಲ್ಲಿ ಇದುವೇ ಸತ್ಯಜ್ಞಾನ. ಇದನ್ನು ಇಲ್ಲಿ ಗಳಿಸದಿದ್ದರೆ ಮಿಗಿಲಾದ ಕೊರತೆ; ತುಂಬಿ ಬಾರದ ನಷ್ಟ. ಎಲ್ಲ ಭೂತಗಳಲ್ಲಿಯೂ ತನ್ನಂತೆ ಸತ್ಯಾತ್ಮನನ್ನು ಕಾಣಬೇಕು. ಕಂಡವರೇ ಧೀರರು. ಅಂದರೆ ಸಕಲ ಜೀವರಿಗೆ ಲೇಸನ್ನು ಬಯಸುವವರೇ

ವೀರರು. ಅವರು ಇಲ್ಲಿಯೂ ಅಲ್ಲಿಯೂ ಸಲ್ಲುವರು. ಸಾಯದೆ ಚಿರಂಜೀವಿಗಳಾಗುವರು. ಆತನು ಸನಾತನನಾದ್ದರಿಂದ ಆತನನ್ನು ಅರಿತವರು ಸನಾತನರಾಗುವರು. ಅಂದರೆ ಶಾಶ್ವತರಾಗುವರು.

"ನಶ್ವರಾಣಿ ಶರೀರಾಣಿ ನಾನಾರೂಪಾಣಿ ಕರ್ಮಣಾ ।
ಆಶ್ರಿತೋ ನಿತ್ಯ ಏವಾಸಾವಿತಿ ಜಂತೋರ್ವಿವೇಕಿತಾ ॥"

ನಶ್ವರವಾದ ಈ ಶರೀರಾದಿಗಳು ನಾನಾ ರೂಪುಳ್ಳವು. ಇವುಗಳ ಕರ್ಮದಿಂದ ತಿಳಿಯುವುದೇನೆಂದರೆ ಇವು ಅಸ್ವತಂತ್ರಗಳು; ಅನಿತ್ಯಗಳು. ಈ ಕರ್ಮೇಂದ್ರಿಯಗಳು ಜ್ಞಾನೇಂದ್ರಿಯಗಳಿಗೆ, ಜ್ಞಾನೇಂದ್ರಿಯಗಳು ಅಂತಃಕರಣಗಳಿಗೆ, ಅಂತಃಕರಣಗಳು ಆತ್ಮನಿಗೆ ಅಧೀನವಾಗಿರುವವು. ಆತ್ಮನು ಇವಕ್ಕೆಲ್ಲ ಆಶ್ರಿತನಾಗಿದ್ದಾನೆ. ನಿತ್ಯನೆನಿಸಿದ್ದಾನೆ. ಹೀಗೆ ವಿಂಗಡಿಸುವುದೇ ವಿವೇಕವೆನಿಸುವುದು.

"ಶರೀರಾತ್ಪೃಥಗಾತ್ಮಾನಮಾತ್ಮಭ್ಯಃ ಪೃಥಗೀಶ್ವರಂ ।
ಪ್ರೇರಕಂ ಯೋ ವಿಜಾನಾತಿ ಪಿಂಡಜ್ಞಾನೀತಿ ಕಥ್ಯತೇ ॥"

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಆನಂದಮಯ ಪಂಚಕೋಶಗಳಿವೆ ಈ ಶರೀರದಲ್ಲಿ. ಇವು ಒಂದಕ್ಕಿಂತ ಒಂದು ಸೂಕ್ಷ್ಮವಾಗುತ್ತ ಹೋಗುತ್ತವೆ. ಇವುಗಳಲ್ಲಿ ಅನ್ನಮಯ ಕೋಶವು ಸ್ಥೂಲವು; ತ್ಯಾಗಾಂಗವೆನಿಸಿದೆ. ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶತ್ರಯಗಳು ಸೂಕ್ಷ್ಮವಾದವು. ಇವು ಮೂರು ಸೇರಿ ಭೋಗಾಂಗವೆನಿಸಿವೆ. ಇನ್ನು ಆನಂದಮಯ ಕೋಶವು ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ ಯೋಗಾಂಗವೆನಿಸಿದೆ. ಈ ಯೋಗಾಂಗವನ್ನೇ ಆತ್ಮವೆಂದು ಹೇಳುತ್ತಾರೆ. ಈ ಆತ್ಮಾಂಗವು ಯೋಗವಾಗುವುದು ಎಲ್ಲಿ ಎಂಬ ಪ್ರಶ್ನೆ ಏಳುತ್ತದೆ. ಈ ಆತ್ಮಾಂಗಕ್ಕೆ ಪೃಥಕ್ಕಾಗಿ ಈಶ್ವರನೊಬ್ಬನಿದ್ದಾನೆ. ಅವನೇ ಆತ್ಮರಿಗೆಲ್ಲ ಪ್ರೇರಕನಾಗಿದ್ದಾನೆ.

ಅನ್ನ, ಪ್ರಾಣ, ಮನ, ವಿಜ್ಞಾನ ಶರೀರಗಳು ಆನಂದಕೋಶದಲ್ಲಿ ಲಯವಾಗುತ್ತವೆ. ಆ ಆನಂದರೂಪ ಆತ್ಮನು ಅಜ್ಞಳಿಯದೆ ಪರಮಾತ್ಮನಲ್ಲಿ

ಸಮರಸಯೋಗ (ಶಿವಯೋಗ)ವನ್ನು ಪಡೆಯುತ್ತಾನೆ. ಇದಕ್ಕೆ ಪ್ರೇರಕನಾಗಿ ಪರಮಾತ್ಮನಾಗಿರುವನೆಂದು ಇವನು ಗುಣಾತೀತನೆಂದು ತಿಳಿಯುವುದೇ ಪಿಂಡಜ್ಞಾನ; ತಿಳಿದಾತನೇ ಪಿಂಡಜ್ಞಾನಿ.

ಶರೀರಗಳು ತಮೋರಜಗುಣಗಳುಳ್ಳವು. ಆತ್ಮನು ಸತ್ವಗುಣವುಳ್ಳವನು. ಪರಮೇಶ್ವರನು ತ್ರಿಗುಣಾತೀತನು; ಎಂದರಿದಾತನೇ ಪಿಂಡಜ್ಞಾನಿ.

ಪಿಂಡ ಒಂದು ಪುಷ್ಪ; ಆತ್ಮಜ್ಞಾನ ಅದರೊಳಗಿರುವ ಮಕರಂದ. ಹೀಗಾದಾಗ ಗುರುಕಾರುಣ್ಯವುಂಟಾದೀತು! ಲಿಂಗಭೃಂಗ ಸುಳಿದು ಬಂದೀತು! ಅಂಗನ್ಯಾಸ–ವಿನ್ಯಾಸ ಲಿಂಗದಲ್ಲಾದೀತು!

ಒಟ್ಟನಲ್ಲಿ ಶರೀರಸಹಿತನಾದ ಶುದ್ಧಆತ್ಮನೇ ಪಿಂಡ. ಆತ್ಮೇಶ್ವರ ಅರಿವೇ ಪಿಂಡಜ್ಞಾನ. ಇದೇ ಅಭಿಪ್ರಾಯವನ್ನು ಗೀತೆಯು ೧೩ನೆಯ ಅಧ್ಯಾಯದಲ್ಲಿ ಹೀಗೆ ಹೇಳಿದೆ:

"ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ।
ಏತದ್ಯೋ ವೇದ ತಂ ಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥
ಕ್ಷೇತ್ರ ಕ್ಷೇತ್ರಜ್ಞಯೋರ್ಜ್ಞಾನಂ ಯತ್ತತ್ ಜ್ಞಾನಂ ಮತಂ ಮಮ ।
ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ॥"

ಇದು ಶರೀರಾತ್ಮವಿವೇಕ. ಇದರಿಂದ ನಿತ್ಯತೆ ಬರುತ್ತದೆ, ನಿಶ್ಚಲತೆ ಬರುತ್ತದೆ. ಮಿಗಿಲಾಗಿ ನಿಸ್ಪೃಹತೆ ಒದಗುತ್ತದೆ.

"ಅಶರೀರಂ ಯದಾತ್ಮಾನಂ ಪಶ್ಯತಿ ಜ್ಞಾನಚಕ್ಷುಷಾ ।
ತದಾ ಭವತಿ ಶಾಂತಾತ್ಮಾ ಸರ್ವತೋ ವಿಗತಸ್ಪೃಹಃ ॥"
—ದೇವೀಕಾಲೋತ್ತರಾಗಮ.

ನಶ್ವರವಾಗುವುದು ಶರೀರ; ಶಾಶ್ವತವಾಗಿರುವುದು ಶರೀರಿ–ಎಂದು ತಿಳಿಗಣ್ಣಿನಿಂದ ತಿಳಿದರೆ ಶಾಂತಿ ಸಮನಿಸುತ್ತದೆ. ಸಂಸಾರದಲ್ಲಿ ನಿಸ್ಪೃಹತೆಯುಂಟಾಗುತ್ತದೆ. ಸತ್ಕ್ರಿಯೆಗಳಲ್ಲಿ ಶಿವಲಿಂಗಾರ್ಚನೆಯಲ್ಲಿ ಆಸಕ್ತಿಯೊದಗುತ್ತದೆ.

ಅನ್ನಾಂಗದಿಂದ ಆತ್ಮಾಂಗದವರೆಗೂ ಇರುವ ಈ ಶರೀರ ಸಮುದಾಯವೇ ಪಿಂಡ. ಈ ಅರ್ಥದಿಂದಾಗಿ 'ಪಿಡಿ ಸಂಘಾತೇ' ಪಿಂಡ ನಾಮಸಾರ್ಥಕವಾಗಿದೆ; ಸಮರ್ಪಕವಾಗಿದೆ. ಪಾಪರಹಿತವಾದುದು ಪುಣ್ಯ ಸಹಿತವಾದುದು ಪಿಂಡ. ಆದ್ದರಿಂದ ಈ ಪಿಂಡವು ಕೆಳಕ್ಕೆ ಬೀಳುವ ಆತ್ಮನನ್ನು ರಕ್ಷಿಸುವ ಸಾಮರ್ಥ್ಯವುಳ್ಳದಾಗುತ್ತದೆ. ಪರಮಾತ್ಮಜ್ಞಾನದ ಬೆಳೆಯನ್ನು ಬೆಳೆಯಲು ತಕ್ಕುದಾಗುತ್ತದೆ. ಈ ಅಭಿಪ್ರಾಯವನ್ನು ತೋರಲು ಗೀತೆಯು ಪಿಂಡವನ್ನು ಕ್ಷೇತ್ರವೆಂದು ಹೆಸರಿಸಿದೆ. ಆದರೆ ಗೀತೆಯ ದೃಷ್ಟಿಯಲ್ಲಿ ಕ್ಷೇತ್ರವಿಕಾರಿ. ದ್ವೇಷ ದುಃಖಾದಿ ಸಂಘಾತವುಳ್ಳದು. ಶಿವಾದ್ವೈತಮತದ ಪಿಂಡ ಅವಿಕಾರಿ. ಅಮಲಮೈತ್ರಿ ಅಂದರೆ ಭಕ್ತಿಭಾವವುಳ್ಳದು. ಅಂತಃಕರಣ ಶುದ್ಧಿಯುಳ್ಳದು. ಬಾಹ್ಯಾಭ್ಯಂತರ ದೋಷಗಳಿಂದ ದೂರಾದುದು.

ಗೀತೆಯಲ್ಲಿ ಹೇಳಿದುದು ಭೂತ ಪ್ರಕೃತಿಯನ್ನು ಬಿಡುವುದು ಕ್ಷೇತ್ರಜ್ಞತೆ; ಪರವಸ್ತು ಸಂಪನ್ನತೆ. ಇಲ್ಲಿ ಹೇಳಿದುದು ಭೂತಪ್ರಕೃತಿಯನ್ನು ಬಿಡದೆ ಪ್ರಕೃಷ್ಟ ಕೃತಿಯನ್ನಾಗಿ ಸುಕೃತಿಯನ್ನಾಗಿ ಮಾಡುವುದು ಪಿಂಡಜ್ಞತೆ; ಪರವಸ್ತು ಸಮರಸತೆ.

ಪಿಂಡವೆಂದರೆ ಮೂಲವಸ್ತು; ಕಾರಣವಸ್ತು. ಅದನರಿವುದೇ ಪಿಂಡಜ್ಞಾನ. ಘಟಕಾರ್ಯಕ್ಕೆ ಮೃತ್ಪಿಂಡವೇ ಮೂಲ ತಾನೇ? ಅಂತೆಯೇ ಪಿಂಡಜ್ಞಾನಕ್ಕೆ ಚಿತ್ಪಿಂಡವೆಂತಲೂ ಹೇಳಬಹುದು. ಆಧ್ಯಾತ್ಮಜ್ಞಾನವೆಂದು ಹೇಳಬಹುದು. ಇದರಿಂದ ತತ್ತ್ವಜ್ಞಾನ ವೃದ್ಧಿಯಾಗುತ್ತದೆ; ಸಿದ್ಧಿಗೇರಲು ಸಾಧ್ಯವಾಗುತ್ತದೆ.

ನನೆಯೊಳಗಿನ ಪರಿಮಳದಂತೆ ಇರುವುದೇ ಪಿಂಡಸ್ಥಲ. ಬಳಿಕ ಅರಳಿದ ಹೂವಿನ ನರುಗಂಪಿನಂತೆ, ಸತಿಯ ಸ್ನೇಹದಂತೆ ಹೊರಹೊಮ್ಮುವುದೇ ಪಿಂಡಜ್ಞಾನಸ್ಥಲ. ಅಂದರೆ ಚಿತ್ ಉದಯವಾಗುವುದೆ ಪಿಂಡಜ್ಞಾನಸ್ಥಲ. ಆ ಪಿಂಡಜ್ಞಾನಿಯ ದೃಷ್ಟಿ ಮನಭಾವಗಳು ದಿವ್ಯವಾಗುತ್ತವೆ. ದೂರ ನೋಡುವ ಶಕ್ತಿಯುಳ್ಳವಾಗುತ್ತವೆ. ಬಿಡತಕ್ಕುದು ಯಾವುದು, ಹಿಡಿಯತಕ್ಕುದು ಯಾವುದೆಂಬುದನ್ನು ವಿಚಾರಿಸಿ ಮುನ್ನಡೆಯುತ್ತವೆ. ವಿಶುದ್ಧ ಮತ್ತು ವಿಶಾಲ ಮನೋಭಾವಗಳು ಬೆಳೆದು ಬರುತ್ತವೆ. ವಿವೇಚನಶಕ್ತಿ ಮೈಗೂಡುತ್ತದೆ. ದೈಹಿಕೈಂದ್ರಿಕ ಅಹಂಕಾರವಳಿಯುತ್ತದೆ. ಐಹಿಕಾಮುಷ್ಮಿಕ ಮಮಕಾರ ಮಣ್ಣುಗೂಡುತ್ತದೆ.

"ಆ ಸ್ವಾಯತ ಮಾಡಿಕೊಟ್ಟ ದೇಹಸಂಬಂಧವಾದ ಪೂರ್ವಾಶ್ರಯುವು ಇಪ್ಪತ್ತೈದು ತತ್ತ್ವಂಗಳು ಯಾವ ಕಡೆಯಿಂದುಂಟಾಯಿತ್ತು, ಎತ್ತಣಿಂದ ಬಂದು ದೊರಕೊಂಡಿತು ಎಂಬಲ್ಲಿ, ಮೊದಲು ನಿರಾಕಾರವಾದ ನಿಃಕಲಬ್ರಹ್ಮವು. ಆ ನಿಃಕಲಬ್ರಹ್ಮನಿಂದ ಚಿತ್ತು, ಆ ಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು ಪುಟ್ಟಿದವು. ಆ ಚಿನ್ನಾದ-ಚಿದ್ಬಿಂದು-ಚಿತ್ಕಳೆ-ಮೂಲ ಚಿತ್ತೆಂಬಚತುರ್ವಿಧವು ಗಟ್ಟಿಗೊಂಡ ಆ ಅಖಂಡ ಗೋಳಕಾಕಾರದ ತೇಜೋಮೂರ್ತಿಯುಪ್ಪ ಮಹಾಲಿಂಗವಾಯಿತ್ತು. ಆ ಮಹಾಲಿಂಗವೇ ಪಂಚಸಾದಾಖ್ಯಮೂರ್ತಿಯೆಂದೆನಿಸಿತ್ತು. ಆ ಪಂಚಸಾದಾಖ್ಯವೇ ಪಂಚಲಿಂಗಪ್ರಕಾಶವೆಂದೆನಿಸಿತು. ಆ ಪಂಚಲಿಂಗ ಪ್ರಕಾಶವೇ ಪಂಚಮುಖವೆನಿಸಿತು. ಆ ಪಂಚಮುಖದಿಂದಲೆ ಪಂಚಾಕ್ಷರಂಗಳುತ್ಪತ್ತಿ. ಆ ಪಂಚಾಕ್ಷರಂಗಳಿಂದಲೆ ಪಂಚಕಲೆಗಳುತ್ಪತ್ತಿ. ಆ ಪಂಚಕಲೆಗಳಿಂದಲೇ ಪಂಚಶಕ್ತಿಗಳುತ್ಪತ್ತಿ. ಆ ಪಂಚಶಕ್ತಿಗಳಿಂದಲೆ ಪಂಚಕರಣಗಳುತ್ಪತ್ತಿ. ಆ ಪಂಚಕರಣಗಳಿಂದಲೆ ಪಂಚತನ್ಮಾತ್ರಗಳುತ್ಪತ್ತಿ. ಆ ಪಂಚತನ್ಮಾತ್ರಗಳಿಂದಲೆ ಪಂಚಭೂತಗಳುತ್ಪತ್ತಿ. ಆ ಪಂಚಭೂತಗಳೆ ಪಂಚಕರಣತ್ವವನ್ನೈದಿ ಒಂದೊಂದು ತತ್ತ್ವಗಳು ಐದು ಐದು ತತ್ತ್ವಂಗಳ ಸ್ವರೂಪವನ್ನು ತಾಳಿ ಇಪ್ಪತ್ತೈದು ತತ್ತ್ವಂಗಳಾಗಿ ಆ ಇಪ್ಪತ್ತೈದು ತತ್ತ್ವಾತ್ಮಕವಾದ ಶರೀರವು ತನಗೆ ಬಂದು ದೊರಕೊಂಡಿತಲಾ ಎಂದು ವಿವೇಕಿಸುವುದೆ ಪಿಂಡಜ್ಞಾನಸ್ಥಲ."–

—ಅಕ್ಕಗಳ ಸೃಷ್ಟಿ ವಚನ.

ಪಿಂಡಜ್ಞಾನವು ಜೀವನಾದರ್ಶಸಾಧಕನ ಷಟ್‌ಸ್ಥಲ ಮಾರ್ಗ ಕ್ರಮಣಕ್ಕೆ ಬೇಕಾಗುವ ವಿದ್ಯುದ್ದೀಪವು. ತತ್ತ್ವಾರಾಧಕನು ಬರೀ ಭೌತಿಕವಸ್ತುಗಳನ್ನರಿತರೆ ಸಾಲದು; ಬರೀ ಬೌದ್ಧಿಕ ಶಿಕ್ಷಣವನ್ನು ಕಲಿತರೆ ಸಾಲದು. ಜತೆಗೆ ಆತ್ಮಜ್ಞಾನವೂ ಬೇಕು. 'ಏನಾದರೆಯೂ ಸಾಧಿಸಬಹುದು; ತಾನಾರೆಂಬುದು ಸಾಧಿಸಲಾಗದು' ಎಂದರು ಬಸವಣ್ಣನವರು. ಸರ್ವರಿಗೂ ಸಾಧ್ಯವಾಗದ ಪಿಂಡಜ್ಞಾನವನ್ನು ಸಾಧಿಸಲು ತಕ್ಕ ಪ್ರತಿಭೆ ಬೇಕು; ಪ್ರಸನ್ನತೆಬೇಕು.

"ತನ್ನ ತಾನರಿತಂಗೆ ಭಿನ್ನಭಾವನೆಯಿಲ್ಲ ।
ತನ್ನವರಿಲ್ಲ ಪರರಿಲ್ಲ ತ್ರೈಭುವನ । ತನ್ನೊಳಗಿಹುದು ಸರ್ವಜ್ಞ ।"

ಸಂಸಾರ ಹ್ಯೇಯಸ್ಥಲ

೩

ಸಂಸಾರವು ಶರೀರಿಗೆ ಬೆಂಬಳಿವಿಡಿದು ಬಂದ ನೆರಳು. ಮಾತೃಗರ್ಭಕ್ಕೆ ಬರುವುದೇ ಒಂದು ಸಂಸಾರ. ಬಂದು ಕಾಯೇಂದ್ರಿಯಕರಣಗಳನ್ನು ತಾಳುವುದು ಮತ್ತೊಂದು ಸಂಸಾರ. ತಳೆದ ತನುಮನಜೀವರಿಗೆ ಬೇಕಾದ ಈ ಜಾಗತಿಕ ಹೊನ್ನು ಹೆಣ್ಣು ಮಣ್ಣು ಮುಂತಾದ ಭೋಗ್ಯಗಳನ್ನು ಗಳಿಸುವುದು ಇನ್ನೊಂದು ಬಗೆಯ ಸಂಸಾರ. ಪಂಚ ವಿಷಯಮೋಹ, ಈ ಪಂಚ ವಿಷಯಗಳನ್ನು ಭೋಗಿಸಲು ಸಾಧನವಾದ ಶರೀರಮೋಹ, ಈ ಶರೀರ ಜೀವನ ನಿರ್ವಹಣ ಕಾರಣವಾದ ಆತ್ಮ ಮೋಹ–ಇವು ಸಂಸಾರದ ಮುಮ್ಮೈ. ಸಂಸಾರದ ಈ ತ್ರಿವಿಧಾಂಗ ಮೋಹವನ್ನು ಬಿಡುವುದೇ ಸಂಸಾರ ಹ್ಯೇಯ.

ಮಾತೃಗರ್ಭ ಅದೊಂದು ಹ್ಯೇಯ ಸಂಸಾರ. ಅದರಲ್ಲಿರುವುದೆಲ್ಲವೂ ಅಸಾರ. ಅಲ್ಲಿಗೆ ಬರುವುದೂ ಒಂದು ಕರ್ಮ. ಬಂದರೂ ಅದು ಹ್ಯೇಯವೆಂದರಿಯದಿರುವುದು ಮತ್ತೊಂದು ಕರ್ಮ.

"ಆದೌ ಕರ್ಮ ಪ್ರಸಂಗಾತ್ಕಲಯತಿಕಲುಷಂ
ಮಾತೃಕುಕ್ಷೌ ಸ್ಥಿತಂ ಮಾಂ |
ವಿಣ್ಮೂತ್ರಾಮೇಧ್ಯ ಮಧ್ಯ ಕ್ವಥಯತಿ ನಿತರಾಂ
ಜಾಠರೋ ಜಾತವೇದಾಃ |
ಯದ್ಯದ್ವೇದಸ್ತತ್ರದುಃಖಂ ವ್ಯಥಯತಿ ನಿತರಾಂ
ಶಕ್ಯತೇ ಕೇನ ವಕ್ತುಂ |
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಭೋ
ಶ್ರೀ ಮಹಾದೇವ ಶಂಭೋ ||"

ಎಂದು ಶ್ರೀ ಶಂಕರರು ಹೇಳಿದರೆ,

"ಎಂತಕ್ಕೆ ಮನುಜ ಜನ್ಮಕ್ಕೆ ಬರಲನುವಾಗೆ
ತಾಯಿ ತಂದೆಯ ಶುಕ್ಲ ಶೋಣಿತಂ ನೆರವಾಗೆ
ಆಯುವಿಂದವಯವಂಗಳು ಬಲಿಯುತೊಂದಾಗೆ
ತಾಯಿಪೊಟ್ಟೆಯ ಕರುಳ್ಸುತ್ತಿ ಮಿಗೆ ಸಿಡಿವುತಂ
ತಾಯೆತ್ತ ಮಗ್ಗುಲಾದತ್ತತ್ತ ಕೆಡೆಯುತಂ
ಉದರಗತ ಶಿಖಿಯ ಸೆಕೆ ತಾಗೆ ಮಿಗೆ ಕಂದುತುಂ
ಪುದಿದ ಮಾಂಸು ಮುಸುಕಲುಬ್ಬಸದೊಳೊಂದುತುಂ
ಕ್ರಿಮಿಕೀಟಕಂ ಕ್ಷುದ್ರಜಂತಿನೊಳ್ಸೆಳೆವುತುಂ
ಶ್ರಮದಿಂದೆ ತಾಯಿ ಬಳಲಲೊಡನೆ ಬಳಲುತುಂ
ಕೀವು ನೆತ್ತರ್ನೆಣಂ ದೊಡಹು ಮಿದುಳಂ ಮುತ್ತಿ
ಆವಾವ ಹೇಯಮುಂಟವರವರೊಳುಂ ಸುತ್ತಿ
ಇಂತು ನರಕದ ಚೀಲವೆನಿಸಿದುದರದ ನಡುವೆ
ಸಂತತೊಂಬತ್ತು ಮಾಸಂ ಪೇಸಿಕೆಯ ನಡುವೆ
ಕತ್ತಲೆಯ ಕರುಳೊಳಗೆ ಮರುಳಂದದಿಂ ಬೆಳೆದು
ಬರ್ತಲೆಯ ಪುಳುವಿನಂತೆಂತಕ್ಕೆ ಬೆಳೆಬೆಳೆದು"

ಎಂದು ಶಿವಕವಿ ಹರಿಹರದೇವನು ಗರ್ಭಹೇಯವನ್ನು ಹೇಳಿದಾನೆ. ಜನ್ಮ ಧಾರಣ ಜಂಜಡವನ್ನು ರೂಪಿಸಿದಾನೆ. ಇದಲ್ಲದೆ ಇನ್ನು ದೇಹಿಯಾಗುವ ದುರವಸ್ಥೆಯನ್ನು ಹೀಗೆ ತೋರುತ್ತಾನೆ :

"ಅಲ್ಲಿ ಕಣ್ ಬಲಿಯದಿರೆ ಕುರುಡನಾಗುತೆ ಬಪ್ಪ
ಅಲ್ಲಿ ಕಿವಿ ಬಲಿಯದಿರೆ ಕಿವುಡನಾಗುತೆ ಬಪ್ಪ
ಅಲ್ಲಿ ನಾಲಗೆ ಬೀಳೆ ಮೂಗುನಾಗುತೆ ಬಂದು
ಅಲ್ಲಿ ಕೈ ಬಲಿಯದಿರೆ ಮುಡುಬನಾಗುತೆ ಬಂದು
ಅಲ್ಲಿ ಕಾಲ್ ಬಲಿಯದಿರೆ ಹೆಳವನಾಗುತೆ ಬಂದು
ಅಲ್ಲಿ ಮೈ ಬಲಿಯದಿರೆ ಮುದುಡೆಯಾಗುತೆ ಬಂದು
ಜೀವಂ ಬಲಿಯದಿರಲು ಬಸಿರಿಳಿಯುತಂ ಬಂದು
ಆವಾವ ಕಂಟಕಂಗಳ ನಡುವೆ ಸಲೆ ನಿಂದು"

ಹೀಗೆ ಸ್ನ್ಯೂನಾವಯುವಗಳಿಂದ ನಿಂದ್ಯನಾಗಿ ಚಂದಗೇಡಿಯಾಗಿ ದುರ್ಬಲನಾಗಿ ಜನಿಸುವನು. ಅಂಗಹೀನತೆಯೂ ಒಂದು ಸಂಸಾರ. ಅಲ್ಲದೆ ಶರೀರದಲ್ಲಿರುವ ಸಪ್ತಧಾತುಗಳು ಪ್ರಾಕೃತಿಕವಾಗಿ ಹೇಯವಾಗಿವೆ; ಮಾಂಸಮಜ್ಜಾದಿಗಳು ಜಿಗುಪ್ಸಿತವಾಗಿವೆ:

"ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ.
ಕೀವಿನ ಹಡಿಕೆ, ಸುಡಲೀ ದೇಹವ.
ಒಡಲವಿಡಿದು ಕೆಡದಿರು; ಚೆನ್ನಮಲ್ಲಿಕಾರ್ಜುನನರಿ ಮರುಳೆ."

ಇದು ಶರೀರದ ಒಳಗಿರುವ ಹೇಯ ಸಂಸಾರ. ಇದರಿಂದಾಗಿ ದೇಹಮೋಹ ತ್ಯಾಜ್ಯ. ಈ ತ್ಯಾಗವೇ ಶ್ರೇಯಸ್ಕರ. ಇದು ಸುಲಭವಾಗಿ ಲಭಿಸುವುದಲ್ಲ.

"ಆವಾಗಲೂ ಎನ್ನ ಮನ ಉದರಕ್ಕೆ ಹರಿವುದು
ಕಾಣಲಾರೆನಯ್ಯ ನಿಮ್ಮವನು; ಭೇದಿಸಲರಿಯೆನಯ್ಯ !
ಮಾಯದ ಸಂಸಾರದಲ್ಲಿ ಸಿಲುಕಿದೆನು
ಎನ್ನ ದೇವ ಚೆನ್ನ ಮಲ್ಲಿಕಾರ್ಜುನಯ್ಯ,
ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ"

ದೇಹದ ಮೇಲೆ ಹರಿವ ಕಣ್ಣು ಮನಗಳು ದೇವನ ಮೇಲೆ ಹರಿಯವು. ಹೊರಗೆ ಹೊರರೂಹಿನ ಮೇಲೆ ಹರಿವುದೇ ಕಣ್ಮನಗಳ ಸ್ವಭಾವ. ಅಂತರಾತ್ಮನನ್ನು ಇವು ಕಾಣಲರಿಯವು.

"ಪರಾಂಚಿಖಾನಿ ವ್ಯತೃಣತ್ ಸ್ವಯಂಭೂಃ
ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ |
ಕಶ್ಚಿದ್ಧೀರಃ ಪ್ರತ್ಯಗಾತ್ಮಾನ—
ಮೈಕ್ಷದಾವೃತ್ತ ಚಕ್ಷುರಮೃತತ್ವಮಿಚ್ಛನ್ ||"

—ಕಠೋಪನಿಷತ್.

ಶ್ರುತಿಯು ಅಕ್ಕನ ಅಭಿಪ್ರಾಯವನ್ನೇ ಸಾರಿದೆ.

ಸ್ವಯಂಭು ಶಕ್ತಿಗಳನ್ನು ಸೃಷ್ಟಿ (ದೃಶ್ಯ) ಮುಖವಾಗಿ ಸೃಜಿಸಿ ಪ್ರಸರಿಸಿರುವನು. ಆದರಿಂದಾಗಿ ಸಕಲೇಂದ್ರಿಯಗಳು ಹೊರಗಿನ ವಿಷಯಗಳನ್ನೇ ವಿಮೋಹಿಸಬಲ್ಲವು. ಅಂತರಾತ್ಮನನ್ನು ಅವಲೋಕಿಸವು. ಯಾವುನೋ ಒಬ್ಬ ಧೀಮಂತನಾದ ಧೀರನು ಅಂತಶ್ಚಕ್ಷುವನ್ನು ತೆರೆಯುವನು. ಅಂತರಾತ್ಮವನ್ನು ಅವಲೋಕಿಸುವನು. ಕರಣೇಂದ್ರಿಯಗಳನ್ನೆಲ್ಲ ಅಂತರ್ಮುಖ ಮಾಡಿ ಆ ಆನಂದವನ್ನು ಹೊಂದುವನು. ಇನ್ನು ಬಾಲ ಬುದ್ಧಿಯುಳ್ಳವರು ಬಾಹ್ಯ ಕಾಮನೆಗಳ ಬೆನ್ನು ಬೀಳುವರು. ಚಿರಮರಣಕ್ಕೆ ತುತ್ತಾಗುವರು. ನಿತ್ಯಾನಿತ್ಯ-ಸತ್ಯಾಸತ್ಯತೆಗಳನ್ನು ವಿಚಾರಿಸರು.

ಶರೀರಧರ್ಮಗಳು ಶಾಶ್ವತವಲ್ಲ. ಶರೀರ ಅವಸ್ಥೆಗಳಿಗೆ ಒಳಗಾಗುತ್ತದೆ. ಬಾಲ್ಯ ಯೌವನ ಮುಪ್ಪು ಮರಣ ಇವು ಒಂದರ ಮೇಲೊಂದು ಬೆನ್ನು ಹತ್ತಿ ಬರುತ್ತವೆ. ಒಳಗಿರುವ ಚೈತನ್ಯದೇವನು ಹೊರವಂಟ ಬಳಿಕ ಒಡಲು ಒಡೆದ ಓಡು. ಅರೆಗಾಸಿಗೂ ತರವಿಲ್ಲ ನೋಡು :

> "ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬೆಲೆಗೈವರಯ್ಯ !
> ನೆಲನಾಳ್ವನ ಹೆಣನೆಂದರೆ ಒಂದಡಕೆಗೆ ಕೊಂಬುವರಿಲ್ಲ ಕಂಡಯ್ಯ !
> ನರನ ಬಾಳ್ವೆ ಆ ಮೊಲನಸಿಗಿಂದ ಕರಕಷ್ಟ ಕೂ. ಸಂ. ದೇವ !"

ಬೆಲೆಬಾಳದ ಸಂಸ್ಕಾರದ ಕಳೆಯೇರದ ಈ ಶರೀರವೇ ಈ ಶರೀರ ವ್ಯವಹಾರವೇ ಒಂದು ಸಂಸಾರ. ಇದು ದುಃಖದಾಗರ.

> "ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ
> ಆಗಮಾಪಾಯಿನೋಽನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ ।
> ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಶ್ಶರೀರಿಣಃ ।"
>
> —ಗೀತೆ.

ಇಂದ್ರಿಯಗಳಿಂದ ಶೀತೋಷ್ಣ, ಸುಖದುಃಖಗಳು ಉಂಟಾಗುತ್ತವೆ. ಇವು ಆಗಂತುಕಗಳು ; ಅಪಾಯಕಾರಿಗಳು ; ಅನಿತ್ಯಗಳು. ಇವನ್ನು ನಿರೋಧಿಸಬೇಕು.

> "ಎನ್ನ ಕಾಯದ ಕತ್ತಲೆಯ ಕಳೆಯಯ್ಯ.
> ಎನ್ನ ಮಾಯದ ಮದವ ಮುರಿಯಯ್ಯ.

ಎನ್ನ ಜೀವದ ಜಂಜಡವ ಮಾಣಿಸಯ್ಯ.
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಪ್ರಪಂಚವ ಬಿಡಿಸು, ನಿಮ್ಮ ಧರ್ಮ."

ಅಕ್ಕನು ತನುಗತ ತ್ರಿವಿಧ ಸಂಸಾರಗಳನ್ನು ಬಿಡಿಸಲು ಬೇಡಿದ್ದಾಳೆ; ಬಿಡಲು ಹೆಣಗಿದ್ದಾಳೆ. ಪ್ರಗತಿ ಪರನು ಪ್ರಾಕೃತಿಕವಾದ ಈ ತ್ರಿವಿಧ ಪ್ರಪಂಚವನ್ನು ಪರಿಹರಿಸಬೇಕು.

ಇನ್ನು ಭೌತಿಕ ಸಂಸಾರವೂ ಬೃಹತ್ತಾದುದು; ಚಿತ್ತಾಕರ್ಷಕವಾದುದು. ವಿಷಯಭೋಗಕ್ಕೆಳಸದ ವಿರಾಗಿ ಯಾರು ? ಒಂದಿಲ್ಲೊಂದು ಬಗೆಯಲ್ಲಿ ವಿಷಯಗಳನ್ನು ಬಳಸಿಯೇ ಬಳಸುತ್ತಾನೆ; ಬಳಲುತ್ತಾನೆ. 'ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸದಿರಯ್ಯ! ಪಶುವೇನು ಬಲ್ಲುದು ? ಹಸುರೆಂದೆಳೆಸುವದಲ್ಲದೆ' ವಿಷಯದಿಂದ ವಿರಹಿತವಾಗದು. ಎಂದು ಬಸವಣ್ಣನವರು ಬೇಡಿದ್ದರೆ, 'ಹೊನ್ನಿಗಾಗಿ ಸತ್ತವರು ಕೋಟಿ. ಮಣ್ಣಿಗಾಗಿ ಸತ್ತವರು ಕೋಟಿ. ಹೆಣ್ಣಿಗಾಗಿ ಸತ್ತವರು ಕೋಟಿ. ನಿನಗಾಗಿ ಸತ್ತವರನೊಬ್ಬರನು ಕಾಣೆ ಗೊಗ್ಗೇಶ್ವರಾ!' ಎಂದು ಪ್ರಭುದೇವರು ಪ್ರತಿಪಾದಿಸಿದ್ದಾರೆ. ಈ ತ್ರಿವಿಧ ಸಂಸಾರವನ್ನು ತೊರೆದ ತಾತ್ತ್ವಿಕರು, ಮರಿವ ಮಹಾತ್ಮರು ತೀರ ವಿರಳ. ಅಂತಾಗಬೇಕಾದರೆ ಅಪಾರವಾದ ಸಂಸ್ಕಾರವಿರಬೇಕು.

"ನಿರಸ್ತ ಹೃತ್ಕಲಂಕಸ್ಯ ನಿತ್ಯಾನಿತ್ಯ ವಿವೇಕಿನಃ
ಸಂಸಾರ ಹೇಯತಾ ಬುದ್ಧಿ ರ್ಜಾಯತೇ ವಾಸನಾ ಬಲಾತ್ !"

ಕಳಂಕ (ಪಾಪ), ಅವಿವೇಕ ಇವೆರಡು ಸಂಸಾರ ಸರಿತ್ತಿನ ಎರಡು ತೀರಗಳು. ಇವೆರಡನ್ನು ಸತ್ಕ್ರಿಯೆ ಸುಜ್ಞಾನಗಳಿಂದ ಬಗೆದು ಹಾಕಿರಬೇಕು. ಹಾಕಿದಾಗ ಪಾಪ ಪರಿಹಾರವಾಗಿ ನಿತ್ಯಾನಿತ್ಯ ವಿವೇಕೋದಯವಾಗಿ ಪಿಂಡಜ್ಞಾನಿಯೆನಿಸುತ್ತಾನೆ. ಅಶುಭವಾಸನೆ ಅಳಿದು ಶುಭವಾಸನೆ ಬಲವಾಗುತ್ತದೆ. ಆ ಹೆಬ್ಬಲದಿಂದ ಹಾಳು ಸಂಸಾರದಲ್ಲಿ ಹೇಯಬುದ್ಧಿ ಹುಟ್ಟುತ್ತದೆ. ಪಿಂಡ, ಪಿಂಡಜ್ಞಾನಸ್ಥಲಗಳೆರಡರ ಶುಭ್ರ ಸಂಸ್ಕಾರವಿಲ್ಲದವನಿಗೆ ಸಂಸಾರ ಹೇಯತೆಯು ಹುಟ್ಟದು. ಇವನಿಗೆ ಸಂಸಾರವೇ ಶುಭ್ರವಾಗಿ ಸುಖವಾಗಿ

ಕಾಣುತ್ತದೆ. ಏಕೆಂದರೆ ಈತನು ನಿಷ್ಪಾಪಿಯಾಗಿರನು ; ನಿತ್ಯಾನಿತ್ಯವಿವೇಕಿಯಾಗಿರನು. ಇದಕ್ಕಿಂತ ಬೇರೆ ಸುಖವನ್ನು ಕಂಡರಿಯನು. ಹೃತ್ಕಮಲದಲ್ಲಿರುವ ಅಷ್ಟ ದೋಷಗಳಿಂದ ಆವೃತನಾಗಿರುತ್ತಾನೆ. 'ಪೂರ್ವ ದಳದಲ್ಲಿ ಪುಣ್ಯಮತಿ, ಅಗ್ನಿದಳದಲ್ಲಿ ನಿದ್ರಾಲಸ್ಯ, ಯಮದಳದಲ್ಲಿ ಕ್ರೋಧಬುದ್ಧಿ, ನೈರುತ್ಯದಲ್ಲಿ ಪಾಪಕೃತ್ಯ, ವರುಣ ದಳದಲ್ಲಿ ವಿನೋದ, ವಾಯುವ್ಯ ದಳದಲ್ಲಿ ಗಮನ, ಕುಬೇರ ದಳದಲ್ಲಿ ರತಿ ಪ್ರೀತಿ, ಈಶಾನ್ಯ ದಳದಲ್ಲಿ ದ್ರವ್ಯಾಪೇಕ್ಷೆ, ಮಧ್ಯದಳದಲ್ಲಿ ವೈರಾಗ್ಯವೆಂಬ ಹೃದಯ ಕಮಲದಷ್ಟದಳಗತಿಗಳಿಂ ತೊಳಲಿ ಬಳಲಿ' ಎಂದು ನಿಜಗುಣರು ಹೃದಯ ಕಲಂಕಗಳನ್ನು ನಿರೂಪಿಸಿದ್ದಾರೆ. ಇವನ್ನು ಕಳೆಯದೆ ಸಂಸಾರ ಹೇಯಬುದ್ಧಿಯು ಬಾರದು. ಪುಣ್ಯಪಾಪಗಳ ಕಲ್ಪನೆ ಬಾರದು.

'ಪುಣ್ಯ ಪಾಪಂಗಳನರಿಯದ ಮೊದಲು ಅನೇಕ ಭವಂಗಳಲ್ಲಿ ಬಂದೆನಯ್ಯ!' ಅಕ್ಕಮಹಾದೇವಿಯ ಅಭಿಪ್ರಾಯದಂತೆ ಸಂಸಾರ ಅನಾದಿಯಾಗಿ ಅರಿಯದವನ ಬೆನ್ನು ಹತ್ತಿದೆ; ಬೆಂಗೋಲನೆತ್ತಿದೆ. ಇದೇ ಬೆಂಗಾವಲೆಂಬ ಭ್ರಾಂತಿಯ ಹುಟ್ಟಿಸಿದೆ. ಅದೇ ಅರಿತವನಿಗೆ ಅಕಳಂಕ ಹೃದಯದವನಿಗೆ ಐಹಿಕ ಆಮುಷ್ಮಿಕ ಸುಖಗಳೆರಡರಲ್ಲಿಯೂ ಆಸಕ್ತಿ ಹುಟ್ಟದು.

"ಐಹಿಕೇ ಕ್ಷಣಿಕೇ ಸೌಖ್ಯೇ ಪುತ್ರದಾರಾದಿ ಸಂಭವೇ
ಕ್ಷಯಿತ್ವಾದಿಯುತೇ ಸ್ವರ್ಗೇ ಕಸ್ಯ ವಾಂಛಾ ವಿವೇಕಿನಃ |"

ಐಹಿಕಸುಖ ಕ್ಷಣಿಕ. ಆಮುಷ್ಮಿಕಸುಖ ಅಶಾಶ್ವತ. 'ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂದು ಶ್ರುತಿ ಉದ್ಘೋಷಿಸಿದೆ. ವಿಚಾರಶೀಲನಿಗೆ ಇವುಗಳಲ್ಲಿ ವಾಂಛೆಯು ಮೊಳೆಯದು. ಅದು ಕ್ಷಯಿಕ, ಇದು ಕ್ಷಣಿಕ. ಇದು ಕರ್ಮಭೂಮಿ, ಅದು ಭೋಗ ಭೂಮಿ. ಇವುಗಳಲ್ಲಿರುವ ಅಸಾರತೆಯನ್ನು ಕಂಡು ಅನುತಾಪ ಪಡುತ್ತಾನೆ. ಇವೆರಡನ್ನು ತನ್ನ ಆತ್ಮಲೋಕದಲ್ಲಿ ಕಾಣಲು ಹವಣಿಸುತ್ತಾನೆ–ವಿವೇಕಿಯಾದವನು. "ಊರ ಸೀರೆಗೆ ಅಸಗ ತಡಬಡಗೊಂಬಂತೆ ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು—ಎಂದು ನೆನೆನೆನೆದು ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯ ಚೆನ್ನಮಲ್ಲಿಕಾರ್ಜುನ."

ಮಮಕಾರ-ಅಹಂಕಾರಗಳು ಸಂಸಾರವನ್ನು ಹೆಚ್ಚಿಸುವ ಸಾಧನಗಳು. ತನ್ನವಲ್ಲದವನ್ನು ತನ್ನವೆಂದು ತಿಳಿಯುತ್ತದೆ ಮನ. ತಿಳಿದು ತಿರೆಯ ಭೋಗ ವಸ್ತುಗಳಲ್ಲಿ ತಲ್ಲೀನಗೊಳ್ಳುತ್ತದೆ ಹುಚ್ಚು ಮನ. ತನ್ನನ್ನೇ ತಾ ಮರೆಯುತ್ತದೆ. ಕೆಮ್ಮನೇ ಕೆಡುತ್ತದೆ. ತನಗೆ ಶತ್ರುವಾದ ಸಂಸಾರವನ್ನೇ ಕೆಳೆಯೆಂದು ಕಳೆಯೆಂದು ಬಗೆದು ಭ್ರಾಂತಿಗೊಳ್ಳುತ್ತದೆ. ವಿಚಾರಿಸಿದರೆ ಇದು ವಾಸ್ತವವಲ್ಲ. ಕ್ಷಣಿಕವಾದ ಐಹಿಕವು ಸೌಖ್ಯದಂತೆ ತೋರುತ್ತದೆ. ಪುತ್ರೇಚ್ಛೆ ದಾರೇಚ್ಛೆ ದ್ರವ್ಯೇಚ್ಛೆಗಳನ್ನು ಹೆಚ್ಚಿಸುತ್ತದೆ. ಈ ಈಷಣತ್ರಯದಿಂದ ಶಾಶ್ವತ ಸುಖವು ಸಿಕ್ಕದು. ಈ ಈಷಣಗಳೇ ಒಗ್ಗೂಡಿ ಒಂದು ಅಭೇದ್ಯ ಸಂಸಾರವಾಗಿ ಶತ್ರುವಿನಂತೆ ಬೆನ್ನು ಹತ್ತಿ ಕಾಡುತ್ತದೆ. ಭ್ರಾಂತಿಗೀಡುಮಾಡಿ ಮೃತಿಗೆ ತುತ್ತಾಗಿಸುತ್ತದೆ.

> "ಸಂಸಾರವೆಂಬ ಹಗೆಯಯ್ಯ ತಂದೆ. ಎನ್ನ ವಂಶವಂಶದಪ್ಪದೆ
> ಅರಸಿಕೊಂಡು ಬರುತ್ತಿದೆಯಯ್ಯ !
> ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ !
> ನಿಮ್ಮ ಮರೆವೊಕ್ಕೆ ಕಾಯಯ್ಯ !
> ಎನ್ನ ಬಿನ್ನಪವನವಧಾರು ಚೆನ್ನಮಲ್ಲಿಕಾರ್ಜುನಾ !"

ಇದನರಿಯದ ಜೀವನು ಇದಕ್ಕೆ ಮರುಳಾಗಿದ್ದಾನೆ. ಇದೇ ತಿರುಳೆಂದು ತಿಳಿದಿದ್ದಾನೆ. ಕೊಲ್ಲುವವನು ಶತ್ರುವಲ್ಲದೆ ಮಿತ್ರನಾಗನು. ಮೃತ್ಯುವನ್ನು ತಪ್ಪಿಸನು. ಮೃತ್ಯುವನ್ನು ತಪ್ಪಿಸುವ ಮಿತ್ರನು ಆ ಮೃತ್ಯುಹರನೊಬ್ಬನೆ !

ಸಂಸಾರಕ್ಕೆ ಐಹಿಕಾಮುಷ್ಮಿಕ ಮಮಕಾರ ಒಂದು ಮುಖ. ಐಂದ್ರಿಕ ದೈಹಿಕಾಹಂಕಾರ ಇನ್ನೊಂದು ಮುಖ. ಈ ಐಹಿಕ ಮತ್ತು ಆಮುಷ್ಮಿಕ ಮಮಕಾರ ಅನಿವಾರ್ಯವಾಗಿದೆ; ಅಖಂಡ ವಿಶ್ವವನ್ನೇ ಇಂದು ಕಬಳಿಸಿ ನಿಂತಿದೆ. ಇದರಿಂದಲೇ ರಾಷ್ಟ್ರ ರಾಷ್ಟ್ರಗಳಲ್ಲಿ ಅಸಹಕಾರ ಮತ್ಸರ ಹೆಚ್ಚುತ್ತಿವೆ. ಎಲ್ಲ ರಾಷ್ಟ್ರಗಳೂ ನಮ್ಮವಾಗಬೇಕೆಂಬ ಕಾಂಕ್ಷೆ ಜಗದಗಲವಾಗುತ್ತಿರುವುದಲ್ಲದೆ ಮುಗಿಲಗಲವೂ ಆಗುತ್ತಿದೆ; ಆಗಿದೆ. ಅಂತೆಯೇ ಚಂದ್ರಲೋಕ ಇಂದ್ರಲೋಕಗಳಿಗೆ ಹೋಗುವ ಮನ ಮಮಕಾರಗಳು ಹೆಚ್ಚಾಗಿ ಹೆಣಗಾಟ ಸಾಗಿದೆ. ಈ ಹಿರಿಯ ಸಂಸಾರಗರ ವಿಶ್ವದ ಹಿರಿಯರನ್ನೆಲ್ಲ ಹೆಚ್ಚಾಗಿ ಹಿಡಿದಿದೆ. ಹೆಡೆ

ಮುರಿಗೆ ಹಾಕಿದೆ. ಐಹಿಕಾಮುಷ್ಮಿಕ ಮಮಕಾರದ ಪೈಪೋಟಿ :ಹತೋಟಿ ತಪ್ಪಿ ಹೆಜ್ಜೆ ಹಾಕುತ್ತಿದೆ. ಇಂದ್ರ ಚಂದ್ರಲೋಕಗಳನ್ನು ಗಳಿಸಿದ ಮೇಲಾದರೂ ಶಾಂತಿ ಸ್ಥಿರಬುದ್ಧಿ ಸ್ಥಿತಪ್ರಜ್ಞತೆಗಳು ಸಂಭವಿಸಲು ಸಾಧ್ಯವೆ ? ಎಂದಿಗೂ ಸಾಧ್ಯವಿಲ್ಲ. ಇದರಿಂದಾಗಿ ಇವನ್ನು ಇಚ್ಛಿಸುವುದು ವಿವೇಕವಲ್ಲೆಂದು ಶ್ರೀ ರೇಣುಕ ಜಗದ್ಗುರುವಿನ ಜಾಗತಿಕ ಉಪದೇಶ.

ಇವೇ ಹೀಗಿರುವಾಗ ಇನ್ನು ಐಹಿಕ ವೈಷಯಿಕ ಸುಖಗಳ ಮಾತೇನು ? ಇವು ಕ್ಷಣಲವ ವಿರಸಗಳು. ಕುಂದುಕೊರತೆಯುಳ್ಳವು. ಇವುಗಳಿಂದ ಇನ್ನೂ ಆಶೆ ಆಕಾಂಕ್ಷೆ ಅಧಿಕವಾಗುತ್ತವೆ. ಅಧಿಕವಾದಂತೆ ಅತಂತ್ರತೆ ಅತಿಯಾಗುತ್ತದೆ. ಅನಿತ್ಯತೆ ಅನತಿ ದೂರದ್ದಾಗುತ್ತದೆ.

> "ಧ್ಯಾಯತೋ ವಿಷಯಾನ್ ಪುಂಸಸ್ಸಂಗಸ್ತೇಷೂಪಜಾಯತೇ
> ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಭಿಜಾಯತೇ ।
> ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ
> ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥"
>
> —ಗೀತೆ.

ಮೃತ್ಯುವಿನ ಮಡುವಿಗೆ ಧುಮುಕಿಸುವ ಐಹಿಕ ಸುಖಕ್ಕಿಂತ ಆತ್ಮಿಕ ಸುಖ ಲೇಸು. ಇಂದ್ರಿಯಗಳ ಸಂಬಂಧವಿಲ್ಲದೆ, ಇಂದ್ರಿಯ ತೃಪ್ತಿಗಾಗಿ ಎಂದು ಭಾವಿಸಿದೆ ಪಡೆವ ಆಗುವ ಸುಖವೆ ಆತ್ಮಸುಖ. ಇಂದ್ರಿಯ ಸಂಬಂಧವಾಗ ಬಾರದೆಂದೇ ಆ ಆ ಇಂದ್ರಿಯಗಳಲ್ಲಿ ಆ ಆ ಇಂದ್ರಿಯತ್ವ ಧರ್ಮವುಳ್ಳ ಆಚಾರಾದಿಲಿಂಗಗಳನ್ನು ಪ್ರತಿಷ್ಠಿಸುತ್ತದೆ ಷಟ್‌ಸ್ಥಲ ಸಿದ್ಧಾಂತ. ಇದು ಇದರದೇ ಆದ ನವ್ಯಮಾರ್ಗ; ದಿವ್ಯಮಾರ್ಗ. ಐಹಿಕ ಭೋಗವನ್ನೆಲ್ಲ ಆತ್ಮರೂಪ ಲೈಂಗಿಕ ಭೋಗವನ್ನಾಗಿಸುತ್ತದೆ.

> "ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್
> ಆತ್ಮವಶ್ಯೈರ್ವಿಧೇಯಾತ್ಮಾಪ್ರಸಾದಮಧಿಗಚ್ಛತಿ ।" —ಗೀತೆ.

ರಾಗದ್ವೇಷಗಳಿಲ್ಲದೆ ಮನಸ್ಸು ದೇಹೇಂದ್ರಿಯ ವಶವಾಗದೆ ಆತ್ಮರೂಪ ಲಿಂಗದ ವಶವಾಗಿ ವಿಷಯಗಳನ್ನು ಭೋಗಿಸಿದರೂ ವಿಷಯಸಂಗವುಂಟಾಗುವುದಿಲ್ಲ. ವಿಷಾದವುಂಟಾಗುವುದಿಲ್ಲ. ಪ್ರತಿಯಾಗಿ 'ಆತ್ಮಾರ್ಪಣ ಮಾಡಿದ ವಿಷಯಗಳೆಲ್ಲ ಪ್ರಸಾದಗಳಾಗಿ ಚಿತ್ತಕ್ಕೆ ಪ್ರಸನ್ನತೆಯೊದಗುತ್ತದೆ. ಚಿತ್ತ ಪ್ರಸನ್ನವಾದರೆ ಸಂಸಾರಭ್ರಾಂತಿಭ್ರಮಣಗಳು ತಪ್ಪುತ್ತವೆ. ಇಲ್ಲವಾದರೆ ಜನನ ಮರಣರೂಪ ಸಂಸಾರವನ್ನು ದಾಟುವುದು ದುಸ್ಸಾಧ್ಯ :

ಜಾತಸ್ಯ ಹಿ ಧ್ರುವೋಮೃತ್ಯುರ್ಧ್ರುವಂ ಜನ್ಮಮೃತ್ಯಸ್ಯ ಚ
ಜಂತುರ್ಮರಣ ಜನ್ಮಾಭ್ಯಾಂ ಪರಿಭ್ರಮತಿ ಚಕ್ರವತ್ ।
ಮತ್ಸ್ಯಕೂರ್ಮವರಾಹಾಂಗೈರ್ನೃಸಿಂಹ ಮನುಜಾದಿಭಿಃ
ಜಾತೇನ ನಿಧನಂ ಪ್ರಾಪ್ತಂ ವಿಷ್ಣುನಾऽಪಿ ಮಹಾತ್ಮನಾ ॥"

ಐಹಿಕ ಮತ್ತು ಐಂದ್ರಿಕ ಭಾವವುಳ್ಳ ಪ್ರತಿಜೀವಿಗೂ ಹುಟ್ಟು ಸಾವು ಕಟ್ಟಿಟ್ಟ ಬುತ್ತಿ. ಈ ವಿಶ್ವಜೀವಿಯ ಮಾತೊಂದಿಗಲಿ ವಿಶಿಷ್ಟ ಮಹಿಮೆಯುಳ್ಳ ವಿಷ್ಣುವಿಗೂ ಉಣ್ಣಲು ತಪ್ಪಲಿಲ್ಲ ಈ ಮೃತ್ಯು ಬುತ್ತಿ. ಮೀನ, ಆಮೆ, ಹಂದಿಯಾಗಿ ನೃಸಿಂಹನಾಗಿ ನಂತರ ನರಜನ್ಮದ ರಾಮನಾಗಿ ಹುಟ್ಟಿ ಸಾಯಬೇಕಾಯಿತು. ಮೀನದಿಂದ ಮನುಷ್ಯನವರೆಗೆ ಕ್ರಮವಿಡಿದು ಜನ್ಮಗಳ ತಾಳಬೇಕಾಯಿತು. ಇನ್ನುಳಿದವರ ಪಾಡೇನು ? ಕಾಲ ಕಟ್ಟಳೆಗೆ ಸಿಕ್ಕದ ದಾನವ ಮಾನವರಿಲ್ಲ ; ದೇವಸಮೂಹವಿಲ್ಲ. 'ರೋಮಜರು, ಮೀನಜರು ಕಾಲ ಕಲ್ಪಿತಕ್ಕೊಳಗಾದರು ; ಮಹಾಲಿಂಗ ಗಜೇಶ್ವರಯ್ಯನೊಬ್ಬನೇ ಶಾಶ್ವತನು' ಸಾಕಾರಕ್ಕೆ ಬಂದುದೆಲ್ಲ ಸಾಯಲೇಬೇಕು.

"ಸತ್ತು ಹುಟ್ಟಿ ಕೆಟ್ಟವರೆಲ್ಲರೂ ದೇವಲೋಕಕ್ಕೆ
ಹೋದರೆಂಬ ಬಾಲಭಾಷೆಯ ಕೇಳಲಾಗದು
ಸಾಯದ ಮುನ್ನ ಸ್ವಯವನರಿದಡೆ ದೇವನೊಲಿವ ನಮ್ಮ
ಗೊಗ್ಗೇಶ್ವರ "

'ಯದ್ದೃಷ್ಟಂ ತನ್ನಷ್ಟಂ'– ಎಂದು ಹೇಳುತಿಹುದಾದ ಕಾರಣ ಯಾವಲ್ಲಿ ಹುಟ್ಟಿದ ವಸ್ತುವೊ ತಾನು ಅದರೊಳಗೆ ಅಡಗುತಿಹುದು. ಅದು

ಹೇಗೆಂದೊಡೆ, ಆ ದೇಹ ಸಂಬಂಧವಾದ ಇಪ್ಪತ್ತೈದು ತತ್ತ್ವಂಗಳನ್ನೇ, ಪಂಚ ಭೂತಂಗಳಲ್ಲಿ ಪಂಚ ವಿಷಯುಗಳನ್ನೇ, ಪಂಚಕರಣಂಗಳಲ್ಲಿ ಪಂಚಕರಣಂ ಗಳನ್ನೇ, ಪಂಚಶಕ್ತಿಯರಲ್ಲಿ ಆ ಪಂಚಶಕ್ತಿಗಳನ್ನೇ ಪಂಚಕಲೆಗಳಲ್ಲಿ ಆ ಪಂಚಕಲೆಗಳನ್ನೇ, ಪಂಚಾಕ್ಷರಂಗಳಲ್ಲಿ ಆ ಪಂಚಾಕ್ಷರಂಗಳನ್ನೇ, ಪಂಚ ಮುಖಂಗಳಲ್ಲಿ ಆ ಪಂಚಮುಖಂಗಳನ್ನೇ, ಪಂಚಲಿಂಗ ಪ್ರಕಾಶಂಗಳಲ್ಲಿ ಆ ಪಂಚ ಲಿಂಗ ಪ್ರಕಾಶಂಗಳನ್ನೇ ಪಂಚಸಾದಾಖ್ಯಂಗಳಲ್ಲಿ ಆ ಪಂಚಸಾದಾಖ್ಯಂಗಳನ್ನೇ, ಮೇಲಣ ಮಹಾ ಸಾದಾಖ್ಯ ಸ್ವರೂಪಮಾದ ಮಹಾಲಿಂಗದಲ್ಲಿ ಅಡಗಿಸಿ, ಮಹಾಲಿಂಗ ಸ್ವರೂಪವೇ ತಾನು ಎಂದ ತಿಳಿಯುವುದೇ ಸಂಸಾರ ಹೇಯಸ್ಥಲ.'

—ಅಕ್ಕಗಳ ಸೃಷ್ಟಿ ವಚನ

ಮರಣವೆಂದರೆ ಮಹಾ ಕಷ್ಟ, ಮಹಾ ನಷ್ಟ ಎಂದು ಭಾವಿಸುವವರೆ ಬಹು ಜನ. ಇದುವೇ ಅಜ್ಞಾನ. ಯಾವುದು ಕಾಣುವುದೋ ಅದು ಅಡಗು ವುದು ಎಷ್ಟು ಸತ್ಯವೋ ಅದರಂತೆ ಯಾವುದು ಅಡಗುವುದೋ ಅದು ತನ್ನ ಮೂಲವನ್ನು ಹೊಂದುವುದು ಅಷ್ಟೇ ಸತ್ಯ. ಇದನರಿತರೆ ಇಲ್ಲ ಯಾವ ವಸ್ತುವಿಗೆ ಮಿಥ್ಯ. ಎಲ್ಲೆಲ್ಲಿಂದ ಯಾವ ಯಾವ ವಸ್ತು ಅಥವಾ ತತ್ತ್ವ ಬಂದಿತ್ತೋ ಬಂದು ಒಂದು ಪಿಂಡವಾಗಿತ್ತೋ ಅದದು ಆ ಮೂಲ ವಸ್ತುಗಳಲ್ಲಿ ಹೋಗಿ ಸೇರುವುದೇ ಸಾವು ಅಥವಾ ಅದೇ ಸಂಸಾರ ಹೇಯ. ಇದನರಿತವರು ಅದೆಷ್ಟು ಜನ ? ಇದ ನರಿತರೆ 'ಮರಣವೇ ಮಹಾನವಮಿ' ಆಗದೇನು ? ಈ ಸ್ಥಿತಿಯನ್ನು ಅಳವಡಿಸಿ ಕೊಳ್ಳುವ ದೃಕ್ಕ್ರಿಯಾ ರೂಪ ಕಲೆ ಮಾತ್ರ ಸಾಧಿತವಾಗಿರಬೇಕು. ಆಗ,

> "ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು
> ನಮಗೀಗಲೇ ಬರಲಿ. ಇದಕಾರಂಜುವರು ? ಇದಕಾರಳಕುವರು ?
> 'ಜಾತಸ್ಯ ಮರಣಂಧ್ರುವಂ' ಎಂದುದು ಕೂ. ಸಂ. ನ ವಚನ."

ಎಂಬೀ ಧೃತಿ, ಎಂಬೀ ಸ್ಮೃತಿ ಮೈಗೂಡಿ ಬರುವುದು. ಮೃತಿ ಭೀತಿ ತಪ್ಪಿ ಹೋಗುವುದು. ಈ ಸಾವಿನ ಅಳುಕನ್ನು ತಪ್ಪಿಸಿಕೊಳ್ಳುವುದೂ ಸಂಸಾರ ಹೇಯಸ್ಥಲ.

ಮರಣವೆಂದರೆ ದೇಹೇಂದ್ರಿಯುಗಳನ್ನು ದುಃಖ ದುರುವಸ್ಥೆಗಳನ್ನು ಏರಿಳಿ ತಗಳನ್ನು ಶಮನ ಮಾಡುವುದು, ಸಂಯಮ ಮಾಡುವುದು; ಸಮವಾಗಿ

ಕಾಣುವುದು. ಯಮ ಎಂಬುದು ಶಮದಮ ಎಂಬರ್ಥಗಳಲ್ಲಿ ವರ್ತಿಸುತ್ತದೆ ಯೆಂಬುದನ್ನು ನೆನೆಯಬೇಕು. ಮೃತ್ಯುವಿಗೆ ಶಮನ, ಸಮವರ್ತೀ, ಧರ್ಮ ರಾಜ ಈ ಹೆಸರುಗಳಿರುವುದು ಗಮನಾರ್ಹ. ಜನ್ಮರೋಗವನ್ನು ಅಂತ್ಯಗೊಳಿ ಸುವನಾಗಿ 'ಅಂತಕ'ನೆನಿಸಿದಾನೆ. ಮರಳಿ ಹುಟ್ಟಿ ಬರುವಂತಹ ಕರ್ಮವನು ಈ ಜೀವನು ಸಂಚಯ ಮಾಡಿಕೊಂಡಿದ್ದರೆ ಇದಕ್ಕೆ ಅಂತಕನ ಜವಾಬ್ದಾರಿ ಯೇನು."

"ಭೂತ್ವಾ ಕರ್ಮವಶಾಜ್ಜಂತುರ್ಬ್ರಾಹ್ಮಣಾಧಿಷು ಜಾತಿಷು
ತಾಪತ್ರಯ ಮಹಾವಹ್ನಿಸಂತಾಪಾದ್ದಹ್ಯತೇ ಭೃಶಂ ।

ನಿಯತ, ವಿಹಿತ, ನಿಷಿದ್ಧ, ಸಕಾಮ, ನಿಷ್ಕಾಮ, ನಿತ್ಯ, ನೈಮಿತ್ತಿಕ, ಸಂಚಿತ, ಆಗಾಮಿ, ಪ್ರಾರಬ್ಧ ತಾಮಸ, ರಾಜಸ, ಸಾತ್ವಿಕ-ಎಂದು ಮುಂತಾಗಿ ಕರ್ಮಗಳು ಎಷ್ಟೋ ಇವೆ. 'ಮಾಡಿದ್ದುಣ್ಣೋ ಮಹಾರಾಯ' ಎಂಬಂತೆ ಯಾವ ಕರ್ಮವನ್ನು ಮಾಡಿದರೆ ಅದಕ್ಕೆ ತಕ್ಕ ಜಾತಿಯಲ್ಲಿ ಜನಿಸಬೇಕಾಗು ತ್ತದೆ. ಅದಕ್ಕೆ ತಕ್ಕ ದುಃಖಾದಿಗಳನ್ನು ಅನುಭವಿಸಬೇಕಾಗುತ್ತದೆ. ನಿಷಿದ್ಧ ಕರ್ಮಗಳನ್ನು ಮಾಡಿದರೆ ನಿಂದ್ಯ ಜಾತಿಯಲ್ಲಿ ಬಂದು ದುಃಖತ್ರಯದ ಬೆಂಕಿ ಯಲ್ಲಿ ಬೆಂದು ಹೋಗಬೇಕಾಗುತ್ತದೆ.

ಇಲ್ಲಿ ಜಾತಿಗೆ ಕರ್ಮವೇ ಮೂಲವೆಂದು ಹೇಳಿದ್ದರೂ ಗುಣವನ್ನೂ ಜತೆಗೆ ಗ್ರಹಿಸಬೇಕು. 'ಗುಣ ಕರ್ಮವಶಾತ್' ಎಂದೇ ಹೇಳಬೇಕು. ಏಕೆಂದರೆ ಕರ್ಮಕ್ಕೆ ತಕ್ಕ ಗುಣ ಇದ್ದೇ ಇರುತ್ತದೆ. ಪ್ರಕೃತಿ ಗುಣ ಯಾವುದಿದ್ದರೆ ಆ ಗುಣಕ್ಕೆ ತಕ್ಕ ಕರ್ಮವನ್ನು ಕೈಕೊಳ್ಳಬೇಕಾಗುತ್ತದೆ. 'ಪ್ರಕೃತೇಃ ಕ್ರಿಯ ಮಾಣಾನಿ·ಗುಣೈಃ ಕರ್ಮಾಣಿಸರ್ವಶಃ' ಈ ಗೀತೋಕ್ತಿಯು ನಮ್ಮ ಮಾತನ್ನೇ ಸಮರ್ಥಿಸಿದೆ. ಆದ್ದರಿಂದ ಕರ್ಮ ಪದದಿಂದ ಗುಣವೂ ಉಕ್ತವಾದಂತೆ ಎಂದು ತಿಳಿಯಬೇಕು. ಜಾತಿ ಕರ್ಮವನ್ನು ತೋರಿದರೆ ಕರ್ಮ ಗುಣವನ್ನು ತೋರುತ್ತದೆ. ಈ ಮೂರಕ್ಕೂ ಬಿಚ್ಚಬಾರದ ಬೆಸುಗೆಯಿರುತ್ತದೆ.

ಕರಣೇಂದ್ರಿಯಗಳು ನಿತ್ಯ ಪ್ರಾಕೃತಿಕವಾಗಿ ಮಾಡುವ ಕಾರ್ಯಗಳೇ ನಿಯತಕರ್ಮಗಳು. ಆ ಆ ಇಂದ್ರಿಯಕ್ಕೆ ನಿಶ್ಚಿತವಾದ ಕ್ರಿಯೆಯೇ ನಿಯತ ಕಾರ್ಯ. ಸಕಲೇಂದ್ರಿಯ;ಕ್ರಿಯೆಗಳಲ್ಲಿ ವ್ಯತ್ಯಾಸವಾದರೆ ಅಥವಾ ಮಾಡದಿದ್ದರೆ ದುಃಖವುಂಟಾಗುತ್ತದೆ. ದುರವಸ್ಥೆಯುಂಟಾಗುತ್ತದೆ.

ವಿಧಿಸಿದ ನಿಯಮಗಳಿಗೆ ವಿಹಿತ ಕರ್ಮಗಳೆನ್ನುತ್ತಾರೆ. ಇವುಗಳಿಂದ ವಿಶೇಷ ಹಿತವುಂಟಾಗುವುದರಿಂದ ಈ ಹೆಸರು ಬಂದಿದೆ. ಶಿವಪೂಜಾದಿಗಳು ವಿಹಿತ ಕ್ರಿಯೆಗಳು. ಸ್ವಾಧ್ಯಾಯ ಪ್ರವಚನಾದಿಗಳು ದಾನಧರ್ಮಾದಿಗಳು ವಿಹಿತ ಕ್ರಿಯೆಗಳು. ಇವು ಸುಖಪ್ರದಗಳು. ಇವನ್ನು ನಿರಹಂಕಾರದಿಂದ ಮಾಡಬೇಕು.

ಕೊಲೆ, ಕಳವು, ಸುಳ್ಳು, ಕುಹಕತನ ಮುಂತಾದವುಗಳು ನಿಷಿದ್ಧ ಕರ್ಮಗಳು. ಇವು ದುಃಖದಾಯಕಗಳು. ಇವನ್ನು ಅಕರ್ಮಗಳೆಂದು ಹೇಳು ವರು. ಕರ್ಮ, ಅಕರ್ಮ, ವಿಕರ್ಮಗಳ ಲಕ್ಷಣ ಇದೇ ಎಂದು ಹೇಳಲಾಗು ವುದಿಲ್ಲ. ಅಕರ್ಮವೂ ಕರ್ಮವಾಗಬಲ್ಲುದು.

ಪ್ರತಿಫಲಾಕಾಂಕ್ಷೆಯಿಂದ ಮಾಡುವುದು ಸಕಾಮಕರ್ಮ. ಇದರಿಂದ ತೃಪ್ತಿಯಿಲ್ಲ. ಇದಕ್ಕೆ ತುದಿಯಿಲ್ಲ. 'ಕೃಪಣಾಃ ಫಲ ಹೇತವಃ' ಫಲ ಪದವಿ ಗಳನ್ನು ಬೇಡುವುದು ಸಣ್ಣತನಕ್ಕೆ ಕುರುಹು; ಕೊಡುಕೊಂಬುವ ವ್ಯವಹಾರ ಲಕ್ಷಣ.

ಫಲಕಾಮನೆಯಿಲ್ಲದೆ ಮಾಡುವುದು ನಿಷ್ಕಾಮಕರ್ಮ. ಇದು ಉತ್ತಮ ವಾದುದು. ಫಲಗಳನ್ನು ಸ್ಥೂಲಫಲ, ಸೂಕ್ಷ್ಮಫಲಗಳುಂಟು. ಸೂಕ್ಷ್ಮ ಫಲ ಗಳನ್ನೂ ಸಹ ಆಶಿಸದಿರುವುದೇ ನಿಜವಾದ ನಿಷ್ಕಾಮಕರ್ಮ.

"ಅಯ್ಯಾ ನೀ ಕೇಳಿದರೆ ಕೇಳು, ಕೇಳದಿದ್ದೊಡೆ ಮಾಣು;
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ !
ಅಯ್ಯಾ ನೀ ಒಲಿದರೆ ಒಲಿ, ಒಲಿಯದಿದ್ದೊಡೆ ಮಾಣು;
ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ !....
ಚೆನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ
ಹರುಷದೊಳೋಲಾಡುವೆನಯ್ಯ !"

ಏನನ್ನಾದರೂ ಹೊರ ಒಡವೆಯೊಂದನ್ನು ಕೊಡುವುದಾಗಲಿ ಪಡೆವು ದಾಗಲಿ ಇದು ಸ್ಥೂಲಫಲ. ಏನನ್ನೂ ಕೊಡದೆ ತನ್ನ ಕಿವಿ ಕಣ್ಣು ಮನ ಗಳನ್ನು ಕೊಡುವುದು ಸೂಕ್ಷ್ಮ ಫಲ. ಮಹಾದೇವಿಯಕ್ಕ ಇದನ್ನೂ ಅಪೇಕ್ಷಿ ಸಿಲ್ಲ. ನಿರಪೇಕ್ಷತೆಯಿಂದ ತನ್ನ ಕರ್ತವ್ಯವನ್ನು ನೆರವೇರಿಸಿ ನೋಯದೆ

ನಲುಗದೆ ನಲಿಯುತ್ತಿರುವುದೆ ನಿಷ್ಕಾಮಕ್ರಿಯೆ. ಇದು ಕರ್ಮವಲ್ಲ ಇದನ್ನು ಗೀತೆಯೂ ವಿವರಿಸಿದೆ.

"ತ್ಯಕ್ತ್ವಾ ಕರ್ಮ ಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ
ಕರ್ಮಣ್ಯಭಿಪ್ರವೃತ್ತೋಽಪಿ ನೈವ ಕಿಂಚಿತ್ಕರೋತಿ ಸಃ ।"

ಬರೀಕರ್ಮ ಫಲಾಸೆಯನ್ನು ಬಿಟ್ಟರೆ ಸಾಲದು. ಜತೆಗೆ ನಿತ್ಯತೃಪ್ತನಾಗಿರಬೇಕು; ಅಂದರೆ ಸದಾ ಸಂತುಷ್ಟನಾಗಿರಬೇಕು. ಆಶ್ರಯಿಸುವ ಆಸಯು ಇರಬಾರದು. ಅಂಥವನು ಕರ್ಮನಿರತನಾಗಿದ್ದರೂ ಅಕರ್ಮಿಯಾಗಿರುತ್ತಾನೆ.

ಲಿಂಗಾರ್ಚನ, ಲಿಂಗಾರ್ಪಣಾದಿಗಳು ನಿತ್ಯಕರ್ಮ. ಗುರುಜಂಗಮ ಪೂಜೆ, ಅತಿಥಿ ಸತ್ಕಾರಾದಿಗಳು ನೈಮಿತ್ತಿಕ ಕರ್ಮ. ಹಿಂದೆ ಮಾಡಿದ್ದು ಸಂಚಿತ ಕರ್ಮ, ಇಂದು ಮಾಡಿದ್ದು ಪ್ರಾರಬ್ಧ ಕರ್ಮ; ಮುಂದೆ ಬರುವುದು ಆಗಾಮಿಕರ್ಮ. ಶುದ್ಧ ಮನಸ್ಸಿನಿಂದ ಆಸಕ್ತಿಯಿಂದ ಮಾಡಿದ್ದು ಸಾತ್ವಿಕ ಕರ್ಮ. ಬೇಕು ಬೇಡೆಂಬ ಮನಸ್ಸಿನಿಂದ ಆಶೆ ನಿರಾಶೆಗಳಿಂದ ಮಾಡುವ ಕರ್ಮ. ರಾಜಸಕರ್ಮ. ತನಗಿಷ್ಟವಿಲ್ಲದೆ ಮಾಡುವ ಬಲವೂ ಇಲ್ಲದೆ ಒಬ್ಬರ ಬಲವಂತಕ್ಕೆ ಮಾಡುವುದು ತಾಮಸಕರ್ಮ. ಮತ್ತು ಪಾಪಕರ್ಮಗಳೆಲ್ಲ ತಾಮಸ ಕರ್ಮಗಳಲ್ಲಿ ಸೇರುತ್ತವೆ. ಪಾಪಪುಣ್ಯ ಎರಡರಿಂದ ಕೂಡಿದ ಕರ್ಮಗಳು ರಾಜಸವೆನಿಸುತ್ತವೆ. ಈ ರಾಜಸ ತಾಮಸ ಕರ್ಮಗಳು ನಿಷಿದ್ಧ ಕರ್ಮಗಳು. ಇವುಗಳಿಂದ ಜನ್ಮ ಜಾತಿಗಳು ದುಃಖ ದುರವಸ್ಥೆಗಳು ಪ್ರಾಪ್ತವಾಗುತ್ತವೆ. ಇವನ್ನು ಬಿಟ್ಟು ಬಿಡುವುದು ಸಂಸಾರ ಹೇಯವೆನಿಸುತ್ತದೆ. ಜನ್ಮಜಾತಿತ್ವಕ್ಕಿಂತ ಬೇರೆ ಸಂಸಾರ ಮತ್ತೊಂದಿಲ್ಲ; ಸೂತಕ ಬೇರೊಂದಿಲ್ಲ.

ತಾಪತ್ರಯಕ್ಕಿಂತ ಹಿರಿದಾದ ಕಾಳ್ಕಿಚ್ಚಿಲ್ಲ. ಈ ಕಾಳ್ಕಿಚ್ಚಿಗಿಂತ ಸಂತಾಪವಿಲ್ಲ. ಇದರಲ್ಲಿ ಬೆಂದು ಬೂದಿಯಾಗುತ್ತಾನೆ ಜಾತಿಸೂತಕಿಯಾದ ಜೀವಿ; ಮಾನವ ದೇಹಿ.

"ಕರ್ಮ ಮೂಲೇನ ದುಃಖೇನ ಪೀಡ್ಯಮಾನಸ್ಯ ದೇಹಿನಃ
ಆಧ್ಯಾತ್ಮಿಕಾದಿನಾ ನಿತ್ಯಂ ಕುತ್ರ ವಿಶ್ರಾಂತಿರಾಪ್ಯತೇ ।
ಆಧ್ಯಾತ್ಮಿಕಂ ತು ಪ್ರಥಮಂ ದ್ವಿತೀಯಂ ಚಾಧಿಭೌತಿಕಂ
ಆಧಿದೈವಿಕಮನ್ಯಚ್ಚ ದುಃಖತ್ರಯಮಿದಂ ಸ್ಮೃತಮ್ ॥"

ಮಾನವನು ಅನೇಕ ಕನಸಿನ ಸೌಧಗಳನ್ನು ಕಟ್ಟಲೆಳಸುತ್ತಾನೆ. ಅದಕ್ಕಾಗಿ ಅನೇಕ ಕರ್ಮಗಳನ್ನು ಕೈಗೊಳ್ಳುತ್ತಾನೆ. ಕೈಕೊಂಡ ಕೋಟಿ ಕೋಟಿ ಕರ್ಮಗಳಲ್ಲಿ ಸತ್ಕರ್ಮಗಳಿಗಿಂತ ದುಷ್ಕರ್ಮಗಳೇ ಸೀಮೆಯನ್ನು ಮೀರಿರುತ್ತವೆ. ಈ ಹೇಯ ಕರ್ಮಗಳೇ ಕಾರ್ಮಿಕಮಲವಾಗಿ ಮಾನವ ಜೀವನವನ್ನು ಬಳಸಿಕೊಂಡಿರುತ್ತದೆ. ಈ ಕಾರ್ಮಿಕಮಲದಿಂದ ಮಾಯಾಮಲ, ಆ ಮಾಯಾಮಲದಿಂದ ಆಣವಮಲಗಳು ಜನಿಸುತ್ತವೆ. ಈ ಮಲತ್ರಯ ಮುಸುಕಿನಿಂದ ಮಾನವನು ಮತ್ತೂ ಹೆಚ್ಚು ಹೇಯಕರ್ಮಗಳಲ್ಲಿ ನಿರತನಾಗುತ್ತಾನೆ. ಪಾಶವೀ ಜೀವನದಲ್ಲಿ ಪ್ರವೇಶಿಸುತ್ತಾನೆ. ವ್ಯಥೆ ವಿಷಾದಗಳಿಂದ ಕಂಗೆಡುತ್ತಾನೆ. ಇದೇ ಮಾಯಾಮಲವಾಗಿ ಮೈಗೂಡುತ್ತದೆ. ಕಂಗೆಟ್ಟು ತನ್ನ ಹಿರಿಯತನವನ್ನು ಹಾಳು ಮಾಡಿಕೊಳ್ಳುತ್ತಾನೆ. ಇದರಿಂದಾಗಿ ಆಣವ ಮಲದಿಂದ ಆವೃತನಾಗುತ್ತಾನೆ. ಕರ್ಮ ಮಲಗಳಿಂದಾಗಿ ಆಧ್ಯಾತ್ಮಿಕ. ಆಧಿಭೌತಿಕ ಆಧಿ ದೈವಿಕವೆಂಬ ದುಃಖತ್ರಯದಿಂದ ನಿತ್ಯ ಉದ್ರಿಕ್ತನಾಗುತ್ತಾನೆ; ಉನ್ಮತ್ತನಾಗುತ್ತಾನೆ. ವ್ಯಥೆ ವಿಷಾದಗಳಿಗೆ ಕೊನೆಯಿರುವುದಿಲ್ಲ. ಶಾಂತಿ ವಿಶ್ರಾಂತಿಗಳಿಗೆ ಅವಕಾಶವಿರುವುದಿಲ್ಲ. ಕರ್ಮ ಕಂಟಕವಾಗಿ ಸಂಕಟವಾಗಿ ಕಡೆ ಮೊದಲಿಲ್ಲದೆ ಕಾಡುತ್ತದೆ. ಸುಡುವ ಓಡಿನಲ್ಲಿ ಕಾಳುಸೊಪ್ಪುಗಳನ್ನು ಹುರಿದಂತೆ ಹುರಿಯುತ್ತದೆ. ಒಲೆ ಉರಿದಂತೆ ಉರಿಯುತ್ತದೆ.

ಒಡಲ ಕಿಚ್ಚು ಕರ್ಮ. ಇದು ತನ್ನ ಕೆನ್ನಾಲಗೆಗಳನ್ನು ಚಾಚಿ ಉರಿಯುತ್ತದೆ. ಕಾಯ ಕರಣೇಂದ್ರಿಯಗಳನ್ನೆಲ್ಲ ಬಾಚಿ ಕರಿ ಮಾಡುತ್ತದೆ. ಈ ಕರ್ಮಕ್ಕಿವೆ ಮುಮ್ಮೊಗಗಳು :

> "ಆಧ್ಯಾತಿಕಂ ದ್ವಿಧಾ ಪ್ರೋಕ್ತಂ ಬಾಹ್ಯಾಭ್ಯಂತರ ಭೇದತಃ
> ವಾತಪಿತ್ತಾದಿಜಂ ದುಃಖಂ ಬಾಹ್ಯಮಾಧ್ಯಾತ್ಮಿಕಂ ಮತಂ
> ರಾಗದ್ವೇಷಾದಿಸಂಪನ್ನಮಾಂತರಂ: ಪರಿಕೀರ್ತ್ಯತೇ ।
> ಆಧಿ ಭೌತಿಕಮೇತದ್ಧಿ ದುಃಖಂ ರಾಜಾದಿ ಭೂತಜಂ
> ಆಧಿ ದೈವಿಕಮಾಖ್ಯಾತಂ ಗ್ರಹಯಕ್ಷಾದಿ ಸಂಭವಮ್ ।
> ದುಃಖೈರೇತೈರು ಪೇತಸ್ಯ ಕರ್ಮಬದ್ಧಸ್ಯ ದೇಹಿನಃ
> ಸ್ವರ್ಗೇ ವಾ ಯದಿ ವಾ ಭೂಮೌ ಸುಖಲೇಸೋ ನ ವಿದ್ಯತೇ।"

ಬಾಹ್ಯ, ಆಭ್ಯಂತರ ಎಂದು ಆಧ್ಯಾತ್ಮಿಕ ದುಃಖ ಎರಡು ಬಗೆ. ವಾತ ಪಿತ್ತ ಕಫಗಳು ತ್ರಿದೋಷಗಳು. ಇವು ತನುಗತವಾಗಿ ಹೊರಗಿನವೆನಿಸಿವೆ. ಇವುಗಳ ವೈಷಮ್ಯದಿಂದ ಬೇನೆ ಬರುತ್ತದೆ. ಬೇನೆಯಿಂದ ಬಳಲಿಕೆ ಬಾಯಾರಿಕೆ ಮುಂತಾದ ಬವಣೆಯುಂಟಾಗುತ್ತದೆ. ರೋಗಬಾಧೆ ಕಾಯವನ್ನು ಕೃಶವಾಗಿ ಸುತ್ತದೆ. ಕಲಿತನವನ್ನು ಕಳೆಯುತ್ತದೆ. ಕಾಯ ಕರಣಗಳ ದೋಷದಿಂದ ದುರಿತ ಕರ್ಮದಿಂದ ಕಾಹಿಲೆ ಬರುತ್ತದೆ. ಕಾಯ ಕರಣಗಳ ಸಂಯಮನ ವಿಲ್ಲದೆ ರೋಗಕ್ಕೆ ಪಕ್ಕಾಗಬೇಕಾಗುತ್ತದೆ. ಕಾಯ ಕರ್ಮವಿಲ್ಲದೆ ಕಾಹಿಲೆ ಬಾರದು. ತಿನ್ನಬಾರದ್ದನ್ನು ತಿನ್ನುವುದು, ಕುಡಿಯಬಾರದ್ದನ್ನು ಕುಡಿವುದು; ಮಾಡಬಾರದ್ದನ್ನು ಮಾಡುವುದು ಇವು ಮೂರು ಕಾಯ ಕರ್ಮ. ಇವು ಗಳಿಂದ ತ್ರಿದೋಷಗಳು ಕೆರಳಿ ಬೇನೆ ಬರಲು ಬಾಗಿಲ ತೆರೆದಂತಾಗುತ್ತದೆ. ಬೇನೆಯಿಂದ ಬೇಗುದಿಗೆ ಮೈ ನೆಲೆಯಾಗುತ್ತದೆ. ತನುಭೋಗ ನಂಜುವೆರಸಿದ ಸವಿಯೂಟವೆಂದು ನಿಜಗುಣರು ನಿರೂಪಿಸಿದ್ದಾರೆ. 'ಭೋಗೇ ರೋಗ ಭಯಂ' ಎಂಬುದು ಎಂದಿಗೂ ಹುಸಿಯಾಗದು.

ಆಧ್ಯಾತ್ಮಿಕವೆನಿಸುವ ಬಾಹ್ಯಾಂಗ ದುಃಖಗಳು ಬಹುವಾಗಿವೆ. ಕಾಯ ದುಃಖವೊಂದಲ್ಲದೆ ಕರಣೇಂದ್ರಿಯ ದುಃಖಗಳು ಬೇರೆ ಬೇಕಾದಷ್ಟಿವೆ. ಬಾಯಿ ಹುಸಿನುಡಿ ಬಿರಿಸು ನುಡಿಗಳಾಡಿದರೆ ನೋವು. ಕಣ್ಣುಗಳು ತಪ್ಪಿ ನೋಡಿ ದರೆ ನೋವು. ಕೈಗಳು ಮುಟ್ಟಬಾರದುದನ್ನು ಮುಟ್ಟಿದರೆ ನೋವು. ಕಿವಿ ಗಳು ಕೇಳಬಾರದುದನ್ನು ಕೇಳಿದರೆ ನೋವು; ಕಾಲು ಹೋಗಬಾರದಲ್ಲಿಗೆ ಹೋದರೆ ನೋವು. ಮೂಗು ಮೂಸಬಾರದುದನ್ನು ಮೂಸಿದರೆ ನೋವು. ಇದೆಲ್ಲವು ಆಧ್ಯಾತ್ಮಿಕದ ಹೊರ ನೋವು. ಇನ್ನು ರಾಗದ್ವೇಷಾದಿಗಳು ಅವಿದ್ಯಾ, ಅಸ್ಮಿತ, ಅಭಿನಿವೇಶಾದಿಗಳು ಆಂತರಿಕ ಅಳಲುಗಳು.

'ರಾಗದಿಂ ಬೇರಿನ್ನು ಭವ ಬೀಜಮುಂಟೆ ?' ರಾಗ ಶಬ್ದಕ್ಕೆ ಸ್ವರ, ಸಿಟ್ಟು, ಕಾಂತಿ, ಪ್ರೀತಿ, ಕೆಂಪು, ಬಣ್ಣ-ಹೀಗೆ ಬೇರೆ ಬೇರೆ ಅರ್ಥಗಳಿವೆ. ಇಲ್ಲಿ ರಾಗ ಶಬ್ದಕ್ಕೆ ಸಂಸಾರದಲ್ಲಿರುವ ಆಸಕ್ತಿಗೆ ಅರ್ಥವಿದೆ. ವಿಷಯುಗಳಲ್ಲಿ ಮನಸ್ಸಿ ಗಿರುವ ಒಂದು ಮಧುರ ಭಾವವೇ ರಾಗ. ಅದೇ ಮನಸ್ಸು ಅಂತರಾತ್ಮನಲ್ಲಿ ಮಧುರಭಾವವನ್ನು ತಳೆದರೆ ಭಕ್ತಿಯೆನಿಸುತ್ತದೆ. ಇದನ್ನೇ ಅಂತರ್ದೃಷ್ಟಿ ಯೆನ್ನುತ್ತಾರೆ. ಇದರ ಮಾತು ಈಗ ಇಲ್ಲಿ ಬೇಕಿಲ್ಲ. ಇಲ್ಲಿ ಬೇಕಾದುದು

ರಾಗ ವಿಷಯ. ಬಾಹ್ಯ ವಿಷಯಗಳಲ್ಲಿ ಪ್ರೀತಿ; ವಿಷಯ ಸುಖಕ್ಕಾಗಿ ಹೊರ ವಂಟ ಚಿತ್ತವೃತ್ತಿ ಇವನ್ನು ರಾಗವೆಂದು ಹೇಳಬೇಕು. ಈ ವಿಷಯ ಸುಖೇಚ್ಛೆಗೆ ಕಾಮವೆಂದು ಮತ್ತೊಂದು ಹೆಸರು. ಇದು ತನ್ನ ಇರುವನ್ನು ಕೆಡಿಸಿ ನಿಲುಕಡೆಯಿಲ್ಲದ ನೋವಿಗೀಡು ಮಾಡುತ್ತದೆ.

'ಬಿಡಬೇಕು ಬಲು ಹಿಂದೆ ಬರಿದೆ ತನ್ನಿರವನು
ಕೆಡಿಸುವ ಕಾಮವಿದನು ಕಂಡ ಯೋಗಿ ||ಪ||
ಸುಗುಣ ಸಂತತಿಯನು, ನಿಗಮಾದಿ ವಿಧಿಯನು
ಮಿಗೆ ತಪವನು, ತನಗಹ ಸಿದ್ಧಿಗಳನು ।
ಜಗದ ಪೂಜ್ಯತೆಯನು ಸೊಗಸುವೀ ತನುವನು
ಬಗೆಯೇ ಕಾಮವೇ ಬಣ್ಣವಳಿವುದರಿಂದೆ ||೧||

ಪಿರಿಯರೊಲವನು, ರಾಜರ ಮನ್ನಣೆಯನು, ಸ-
ತ್ಪುರುಷರ ಭಯ ಭಕ್ತಿಯನು, ಲೋಕದವರಾ-।
ವರ ವಂದನೆಯನು, ತನ್ನುರು ತೇಜವನು, ಕಷ್ಟ-
ತರದ ಕಾಮವೇ ಕಡೆಗಣಿಪುದರಿಂದೆ ||೨||

ತನಗೆ ಮುಂದೊದಗುವ ಮುನಿದೇವ ಗಣಪದ-
ವನು, ರುದ್ರೇಶ್ವರ ಸದಾಶಿವ ಭಾವನೆಯನು ।
ಘನ ಶಂಭುಲಿಂಗವಾಗಿಹ ಮುಕ್ತಿ ಸುಖವನು
ಜನಿಸಿದೀ ಕಾಮವಿಲ್ಲೆನಿಪುದರಿಂದೆ ||೩||

ಶಿಕ್ಷಣವನ್ನು ಪಡೆವ ವಿದ್ಯಾರ್ಥಿಯು ವಿದ್ಯಾರ್ಜನೆಯು ಚೆನ್ನಾಗಿ ಆಗಬೇಕಾದರೆ ಆತನಿಗೆ ಯಾವ ತಾಪತ್ರಯಗಳಿರಬಾರದು. ಜತೆಗೆ ಮನೆಯ ಮನೆಯವರ ವಿಷಯದಲ್ಲಿ ರಾಗವನ್ನು ಅಂದರೆ ಪ್ರೇಮವನ್ನು ಬೆಳಸಿಕೊಂಡಿರಬಾರದು. ತಾನು ಕಲಿಯುವ ವಿಷಯದ ಮೇಲೆ ಹೆಚ್ಚಿನ ಪ್ರೇಮವಿರಬೇಕು. ಇದರಂತೆ ತತ್ವಜ್ಞಾನವನ್ನು ಸಾಧಿಸುವವನು ವಿಷಯ ರಾಗಕ್ಕೆ ಹೊಂದಿಕೊಂಡಿರಬಾರದು. ರಾಗ ಅಥವಾ ಕಾಮವು ತನ್ನಿರವನ್ನೇ ಹಾಳು ಮಾಡುತ್ತದೆ. ಯಮ ನಿಯಮಾದಿಗಳು ಉಳಿಯವು. ಧ್ಯಾನ ಧಾರಣ ಸಮಾಧಿಗಳಿಗೆ

ಸಂದೀಯದು. ಭಯ ಭಕ್ತಿಗಳು ಬಾರವು. ತನಗೆ ತಾತ್ವಿಕ ತೇಜಸ್ಸು ದೊರಕದು. ಇಷ್ಟಾದ ಮೇಲೆ ಮಾನ ಮನ್ನಣೆಗಳು ಮಣ್ಣುಗೂಡು ವವು. ಇಹದ ಬಾಳೇ ಇಷ್ಟಾದ ಮೇಲೆ ಪರತತ್ತ್ವದ ಪ್ರಾಪ್ತಿಯು ಕನಸಿನ ಕನವರಿಕೆಯಾಗುವುದು. ರಾಗವು ಭೋಗಕ್ಕೆ, ಭೋಗವು ಭವ ರೋಗಗಳಿಗೆ, ಭವರೋಗಗಳು ಅಂತಸ್ತಾಪಕ್ಕೆ ಬೀಜವಾಗಿವೆ. ಕಾರಣ ಮಮಕಾರಕ್ಕೆ ಕಾರಣವಾದ ರಾಗದಿಂದ ರಹಿತರಾಗಬೇಕು. ಮಮಕಾರ ಕ್ಕಿಂತ ಮಿಕ್ಕಿನ ಬಂಧ ಬೇರಿಲ್ಲ. ವಿರಾಗಕ್ಕಿಂತ ಬೇರೆ ಸಂಪತ್ತಿಲ್ಲ; ಬೇರೆ ಸುಖವಿಲ್ಲ.

ರಾಗದಂತೆ ದ್ವೇಷವೂ ದೂಷ್ಯವಾದುದು; ದುಃಖದಾಯಕವಾದುದು. ದ್ವೇಷವೆಂದರೆ ವೈರ ಮನೋಭಾವ. ಸ್ನೇಹರಹಿತ ಮನೋಭಾವ. ಭೌತಿಕ ಪ್ರೀತಿ ಎಷ್ಟು ಕೇಡಿನದೋ ಅಷ್ಟೇ ಅಥವಾ ಅದಕ್ಕೂ ಹೆಚ್ಚು ಕೇಡಿನದು ಭೌತಿಕ ದ್ವೇಷ. ಯಾರಲ್ಲಿಯೂ ಯಾವ ಬಗೆಯಲ್ಲಿಯೂ ದ್ವೇಷವನ್ನು ಬೆಳಸಬಾರದು, ವಿರಸವಾಗಿರಬಾರದು. 'ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದಮಾಮಾ। ತಲ್ಲಣಿಸದೆ ನಿ ಜ ದ ಲ್ಲಿ ಪು ರ್ದೇ ಚಂದಮಾಮಾ ॥" ಎಂಬುದು ನಿಜಗುಣರ ನಿಜಾನುಭೂತಿ. ಇದನಾಚರಿಸಿದರೆ ಒದಗುವುದು ನಿಜಶಾಂತಿ.

ವ್ಯಕ್ತಿಗಾಗಲಿ, ಒಂದು ರಾಷ್ಟ್ರಕ್ಕಾಗಲಿ, ವಿಶ್ವಕ್ಕಾಗಲಿ ದ್ವೇಷವನ್ನು ಬೆಳೆಸುವುದು ಲೇಸಲ್ಲ. ದ್ವೇಷವು ಅದೊಂದು ದಳ್ಳುರಿ. ಅದು ಅಂತರಂಗ ಬಹಿ ರಂಗವೆರಡನ್ನೂ ಸುಟ್ಟು ಹಾಕುತ್ತದೆ. ಅದು ಶಾಂತಿಗೆ ಪ್ರತಿಬಂಧವಾದಂತೆ ಪ್ರಗತಿಗೂ ಪ್ರತಿಬಂಧಕವಾಗಿರುತ್ತದೆ.

ವಿಷಯಗಳಲ್ಲಿಯೂ ಸಹ ರಾಗದ್ವೇಷಗಳೆರಡೂ ಇರಬಾರದು. ವಿಷಯ ಗಳಲ್ಲಿ ಅತಿಪ್ರೀತಿ ಹೇಗೆ ಬಾಧಕವೋ ದ್ವೇಷವೂ ಹಾಗೇ ಬಾಧಕವು. ಪ್ರಾಕೃ ತಿಕ ದೃಷ್ಟಿಯಿಂದ ನೋಡಿದರೆ ವಿಶೇಷ ವಿರತಿಯೂ ಬಾಧಕವು.

ರಾಗ–ಕಾಮಗಳು ಸಹಚರಿಗಳಾದರೆ ದ್ವೇಷ ಕ್ರೋಧಗಳು ಸಹಚರಿ ಗಳು. ಕ್ರೋಧವಿದ್ದಲ್ಲಿ ದ್ವೇಷವಿರುತ್ತದೆ. ದ್ವೇಷವಿದ್ದಲ್ಲಿ ಕ್ರೋಧವಿರುತ್ತದೆ. ಇವೆರಡೂ ಕೇಡಾಳಿ; ಕಾಡುರಿ.

"ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯ ?
ತನ್ನ ತನುವಿನ ಕೋಪ ತನ್ನ ಹಿರಿಯತನದ ಕೇಡು.
ತನ್ನ ಮನದ ಕೋಪ ತನ್ನ ಅರುವಿಂಗೆ ಹಾನಿ.
ತನ್ನ ಮನೆಯ ಕಿಚ್ಚು ತನ್ನ ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು ಕೂಡಲಸಂಗಮ ದೇವಾ."

ಕೋಪತಾಪವು ಮೊದಲು ತನ್ನನ್ನು ಸುಡುತ್ತದೆ. ಬಳಿಕ ಅನ್ಯರನ್ನು ಸುಡುತ್ತದೆ. ಕೋಪಿಯ ಅಂತರಂಗವು ಬಿಸಿಯಾಗಿ ಶಾಂತಿ ಹಾಳಾಗಿ ಜೀವನಕ್ಕೆ ಅವಶ್ಯವಾದ ರಕ್ತವು ಸುಟ್ಟು ಹೋಗುತ್ತದೆ. ಒಳಗಿನ ಅರಿವು, ಹೊರಗಿನ ಹಿರಿಯತನ ಕೆಟ್ಟು ಹೋಗುತ್ತವೆ; ಹಾನಿಯೊದಗುತ್ತದೆ. ಪ್ರೀತಿ-ಅಪ್ರೀತಿಗಳ ನಡುವಿನ ಮಾರ್ಗ ಹೇಗೆ ಜೀವನಕ್ಕೆ ಆದರ್ಶವಾದುದೋ ದ್ವೇಷ-ಕ್ರೋಧಗಳ ಮಾಧ್ಯಮಿಕ ಮಾರ್ಗ ಹಾಗೆ ಆದರ್ಶವಾದುದು. ಪ್ರೀತಿ-ಅಪ್ರೀತಿಗಳಿಗೆ ಭಕ್ತಿಯು ಮಧ್ಯ ಮಾರ್ಗ. ದ್ವೇಷ ಕ್ರೋಧಗಳಿಗೆ ಸಹಕಾರ ಸಮಾಧಾನಗಳು ಮಧ್ಯ ಮಾರ್ಗ.

ಅಪೂಜ್ಯರನ್ನು ಅಜ್ಞಾನಿಗಳನ್ನು ರಾಗಿಸುವುದಕ್ಕಿಂತ ಪೂಜ್ಯರನ್ನು ಪ್ರಾಜ್ಞರನ್ನು ಪವಿತ್ರ ಪದಾರ್ಥಗಳನ್ನು ರಾಗಿಸುವುದು ಶ್ರೇಯಸ್ಕರ. ಅಂಗಕ್ಕಾಗಿ ವಿಷಯಗಳನ್ನು ಕಾಮಿಸುವುದಕ್ಕಿಂತ ಲಿಂಗಕ್ಕಾಗಿ ಪ್ರಸಾದಗಳನ್ನಾಗಿಸಿ ಕಾಮಿಸುವುದು ಸುಖಕರ. ಪರಪ್ರನ್ಯ ದೇಶಗಳಿಗಾಗಿ ಸ್ವಾರ್ಥಕ್ಕಾಗಿ ಪರರನ್ನು ದ್ವೇಷಿಸುವುಪಕ್ಕಿಂತ ತನ್ನ ತತ್ತ್ವ ಮಾರ್ಗಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುವ ತನ್ನ ಇಂದ್ರಿಯಾದಿಗಳನ್ನು ದ್ವೇಷಿಸುವುದು ಅಂದರೆ ಜಯಸುವುದು ಹೆಚ್ಚು ಲೇಸು. ಅಂತೆಯೆ ಒಬ್ಬರ ಅವಗುಣಗಳಿಗೆ ಮುನಿಸಬೇಕಲ್ಲದೆ ಪ್ರಾಣಕ್ಕೆ ಮುನಿಸಬಾರದು. ಇದೆಲ್ಲವೂ ರಾಗ-ದ್ವೇಷಗಳೆಂಬ ಸಂಸಾರ ಹೇಯದ ಮರ್ಮ. ತನಗೆ ದೋಷವನ್ನು ಪರರಿಗೆ ಹಾನಿಯನ್ನು ತರುವಲ್ಲಿ ಬಿಡಬೇಕು. ತನಗೆ ಪರರಿಗೆ ಲೇಸನ್ನು ವೃದ್ಧಿಯನ್ನು ತರುವಂತಹದರಲ್ಲಿ ಹಿಡಿಯಬೇಕು.

'ರಾಗದ್ವೇಷಾದಿ ಸಂಪನ್ನಂ' ಎಂದಿರುವಲ್ಲಿ ಆದಿ ಪದ ಪ್ರಯೋಗದಿಂದ ಕಾಮ ಕ್ರೋಧಾದಿ ಅರಿಷಡ್ವರ್ಗವನ್ನೂ ರಾಗದ್ವೇಷ ಎಂಬ ನೇರವಾದ ಹೆಸರಿರು

ವುದರಿಂದ ಅವಿದ್ಯಾದಿ ಪಂಚಕ್ಲೇಶಗಳನ್ನೂ ಆಧ್ಯಾತ್ಮಿಕದ ಆಂತರಿಕ ದುಃಖ ಕಾರಿಗಳೆಂದು ಹೇಳಬೇಕು.

ಆಧ್ಯಾತ್ಮಿಕ ದುಃಖ ಒಂದಲ್ಲ ಎರಡಲ್ಲ. ನೂರು ಸಾಸಿರ ಕೋಟಿ ಎಂದು ನಿಜಗುಣರು ಹೇಳಿದಾರೆ.

ಶಂಕರ! ನೋಡು, ನೀನೆನ್ನ ಪರಿಭವದ ಬಾಧೆಯನು
ಶಂಕರ ! ಕೃಪೆ ಮಾಡು ಬೇಗದೊಳ ಭಯವಿತ್ತು ||ಪ||
ಮಾಯಕರ್ಮದ ಬಾಧೆ, ಕಾಯಕರಣದ ಬಾಧೆ
ವಾಯು ವಿಷಯೇಂದ್ರಿಯದ ಬಾಧೆ ಶಂಕರ |
ಹೇಯವಹ ಜನನ ಮರಣವ ಬಾಧೆ ತಾಪ–ಸಮು
ದಾಯದತಿ ಬಾಧೆ ಬಲುಹೆನಗೆ ಶಂಕರ ||೧||
ಹಸಿವ ತೃಷೆಗಳ ಬಾಧೆ, ವೆಸನವೇಳರ ಬಾಧೆ
ದೆಸೆಗೆಡಿಸುವರಿಕುಳದ ಬಾಧೆ ಶಂಕರ !
ಮದಶೋಕ ಮೋಹ ರತಿ ಕುಸುಮಬಾಣದ ಬಾಧೆ
ವಿಸರ ದುರು ಬಾದೆ ಘನವೆನಗೆ ಶಂಕರ ||೨||
ಬೇರೆ ಬೇರಿನ್ನು ಮೈದೋರಿ ಕಾಡುವ ಬಾಧೆ
ನೂರು ಸಾಸಿರ ಕೋಟಿಯುಂಟು ಶಂಕರ |
ಮೀರಲರಿದಿದೆನೆನಗೆ ನೀನೆ ತೊಲಗಿಸಿ ಸುಖದ
ಸೂರೆಗೊಡು ಗುರುಶಂಭುಲಿಂಗಾ ||೩||

ಗುರು ಕಾರುಣ್ಯಕ್ಕೆ ಚಿರಸುಖ ಶಾಂತಿಗೆ ಬಾಧಕಗಳು ಈ ಬಾಧೆಗಳು. ಮನದಲ್ಲಿ ಬಾಧೆಯಿದ್ದರೆ ಘನ ತತ್ತ್ವ ಹಿಡಿಯದು. ಕಾಯ ಕರಣಗಳಲ್ಲಿ ಬಾಧೆಯಿದ್ದರೆ ಶಿವಾಚಾರ ಅಥವಾ ಸದಾಚಾರಾದಿಗಳು ಸಾಗವು. ಲಿಂಗಾಚಾರವೂ ನಡೆಯದು.

ಪರಿಭವದಲ್ಲಿ ಅಂದರೆ ಸಂಸಾರದಲ್ಲಿ ಈ ಎಲ್ಲ ಬಾಧೆಗಳಿವೆ. ಇದರಿಂದಾಗಿ ಈ ಬಗೆಯ ಶರೀರ ಸಂಸಾರಹೇಯ. ಈ ತನು ಸಂಸಾರದಿಂದ ತೃಣವಾಗುವುದಕ್ಕಿಂತ ತಾತ್ತ್ವಿಕ ಸಂಸಾರದಿಂದ ತನ್ಮಯನಾಗುವುದು ಲೇಸಕ್ಕೆ ಲೇಸು. ಬರೀ ಆತ್ಮ ಜ್ಞಾನವನ್ನು ಅಳವಡಿಸಿಕೊಂಡರೆ ಆನಂದವೊದಗುವುದಿಲ್ಲ. ಅದರ

ಜತೆಗೆ ತನ್ನ ಶೀಲ ಸ್ವಭಾವಗಳನ್ನು ತಿದ್ದಿಕೊಂಡರೆ ಸುಖಸಂತೋಷಗಳುಂಟಾಗುತ್ತವೆ; ಗುರು ಕೃಪೆಗೆ ಪಾತ್ರತೆ ಉಂಟಾಗುತ್ತದೆ. ಶೀಲ ಸ್ವಭಾವಗಳ ವಿಶುದ್ಧ ವಿಕಾಸವೇ ಮಾನವನ ವಿಕಾಸ. ಮಹೋನ್ನತ ವಿಲಾಸ. ತನುವಿನ ವರ್ತನವನ್ನು ತಿದ್ದಿಕೊಂಡಂತೆ ಮನದ ವೃತ್ತಿಯನ್ನೂ ತಿದ್ದಿಕೊಳ್ಳಬೇಕು. ಆಗ ಆಧ್ಯಾತ್ಮಿಕ ದುಃಖವು ಹೋಗಿ ಆಧ್ಯಾತ್ಮಿಕ ಸುಖವಾಗಿ ಪರಿಣಮಿಸುತ್ತದೆ. ಆಗ ತನ್ನ ತನುಮನಗಳು ತನಗೂ ಸಮಾಜಕ್ಕೂ ಪ್ರಯೋಜನಕಾರಿಗಳಾಗುತ್ತವೆ.

ಇನ್ನು ಅರಸರಿಂದ ಕಳ್ಳಕಾಕರಿಂದ ದಾಯಾದಿಗಳಿಂದ ಹಾವು ಚೇಳುಗಳಿಂದ ಹಿಂಸ್ರಪಶುಗಳಿಂದ ಭೂಕಂಪದಿಂವ ಬರತಕ್ಕವು ಆಧಿಭೌತಿಕ ದುಃಖಗಳು. ಗರ ಹೊಡೆಯುವುದರಿಂದ ಬಿರುಗಾಳಿ ಬೀಸುವುದರಿಂದ ಸಿಡಿಲು ಬಡಿಯುವುದರಿಂದ ನವಗ್ರಹಗಳಿಂದ ಅಗ್ನಿಸ್ಫೋಟದಿಂದ ಆಗತಕ್ಕವು ಆಧಿದೈವಿಕ ದುಃಖಗಳು. ಈ ದುಃಖತ್ರಯ ಕರ್ಮತ್ರಯ ಬದ್ಧನಾದ ದೇಹಿಗೆ ಸ್ವರ್ಗ ಮರ್ತ್ಯ ಲೋಕಗಳೆರಡರಲ್ಲಿ ಸುಖಲೇಶವಿಲ್ಲ. ಅಂತರಂಗ ಬಹಿರಂಗಗಳೆರಡರಲ್ಲಿ ಶಾಂತಿ ಸಮಾಧಾನಗಳಿಲ್ಲ.

ಎಲ್ಲ ಭೂತಗಳಲ್ಲಿ ಎಲ್ಲ ಮಾನವರಲ್ಲಿ ಸಮಭಾವವಿರುವವನಿಗೆ ಆಧಿಭೌತಿಕ ದುಃಖವಿರುವುದಿಲ್ಲ. ಸರ್ವ ಸಮದರ್ಶಿಗೆ ಆಧಿ ಭೌತಿಕ ಸುಖವಿರುತ್ತದೆ. ಸುಖವಿದ್ದಲ್ಲಿ ನಿಷ್ಕಂಪತೆಯಿರುತ್ತದೆ. ನಿಸ್ಪೃಹತೆಯಿರುತ್ತದೆ. ಇವಿರುವಲ್ಲಿ ನಿರ್ವೈರವಿರುತ್ತದೆ. ವಿಶ್ವ ಮೈತ್ರಿಯೊದಗುತ್ತದೆ.

"ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ !"

—ಗೀತೆ

ಸಮದರ್ಶಿತ್ವವು ಸರ್ವರಿಗೆ ಬರುವುದಿಲ್ಲ. ಸುಜ್ಞಾನಿಗೆ ಬರುತ್ತದೆ. ವಿಕಲ್ಪ ವಿರಹಿತನಿಗೆ ಬರುತ್ತದೆ. ಸರ್ವಭೂತಗಳನ್ನು ಸಮನಾಗಿ ನೋಡುವುದೆಂದರೇನು ?

"ಸಮಂ ಸರ್ವೇಷು ಭೂತೇಷು ತಿಷ್ಠಂತಂ ಪರಮೇಶ್ವರಂ
ವಿನಶ್ಯತ್ಸ್ವವಿನಶ್ಯಂತಂ ಯಃ ಪಶ್ಯತಿ ಸ ಪಶ್ಯತಿ ।

ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತ ಮೀಶ್ವರಮ್
ನ ಹಿ ನಸ್ತ್ಯಾತ್ಮನಾऽತ್ಮಾನಂ ತತೋ ಯಾತಿ ಪರಾಂಗತಿಂ ||"—ಗೀತೆ

ಶಾರೀರಕ ದೃಷ್ಟಿಯಿಂದ ಸಮಭಾವವಲ್ಲ. ಇದಿರಲು ಸಾಧ್ಯವೂ ಇಲ್ಲ. ಆತ್ಮ ದೃಷ್ಟಿಯಿಂದ ಸಮವಾಗಿ ಸರ್ವಭೂತಗಳನ್ನು ನೋಡಬೇಕು. ಸೂರ್ಯನು ಸರ್ವತ್ರ ಸರ್ವಗ್ರಹಗಳಲ್ಲಿ ಬೆಳಗುವಂತೆ ಪರಮೇಶ್ವರನು ಎಲ್ಲ ಭೂತಗಳಲ್ಲಿ ಬೆಳಗಿರುತ್ತಾನೆ. ಅಚ್ಚಳಿಯದಿರುತ್ತಾನೆ. ಎಲ್ಲೆಲ್ಲಿಯೂ ಆತ್ಮವಸ್ತು ಒಂದೇ ಎಂದು ನೋಡುವವನು ಆತ್ಮಹಾನಿಯನ್ನು ಮಾಡಿಕೊಳ್ಳನು. ಅಂದರೆ ಯಾವ ಭೂತ ಜನ್ಯ ದುಃಖಕ್ಕೆ ಈಡಾಗನು. ಯಾವ ಭೂತವೂ ಆತನನ್ನು ಬಾಧಿಸದು. ಆ ಸಮದರ್ಶಿಯು ಪರಮಗತಿಯನ್ನು ಪಡೆಯುತ್ತಾನೆ. ವಿಶ್ವ ವಿಕೃತಿ ವಿರಹಿತನಾಗುತ್ತಾನೆ. ಅಂದರೆ ಆ ಸಮದರ್ಶಿಗಳು ವಿಭೂತಿ ಪುರುಷರಾಗಿ ಮೃತಿ ರಹಿತರಾಗುತ್ತಾರೆ. ಅಂದರೆ ಮೃತಿ ಭೀತಿಯಿಲ್ಲದವರಾಗುತ್ತಾರೆ. 'ನಾಂತೋऽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ' ಎಂಬುದಾಗಿ ಗೀತೆಯೂ ಅದನ್ನೇ ಎತ್ತಿ ಹೇಳಿದೆ.

ಇನ್ನು ದೈವೀಭಾವವುಳ್ಳವರು ಆಧಿದೈವಿಕ ದುಃಖವನ್ನು ಅನುಭವಿಸರು. ಆಸುರೀ ಭಾವವುಳ್ಳವರಿಗೆ ದೈವೀಸುಖ ಬಾರದು. ದೈವೀದುಃಖ ತಪ್ಪದು. 'ಯಾಂತಿ ದೇವವ್ರತಾ ದೇವಾನ್' ಎಂಬ ಗೀತೋಕ್ತಿಯಂತೆ ದೇವವ್ರತವುಳ್ಳವರು ದೇವಸಮಾನರೇ ಆಗುವರು. ದೇವರಂತೆ ಸನ್ಮಾನ್ಯರೇ ಆಗುವರು. ದೈವಭಾವವನ್ನು ದೂರ ದೂರ ಕೈಬಿಡುವವರು ಈ ಮಾತಿನತ್ತ ದೃಷ್ಟಿಯನ್ನು ಚೆಲ್ಲಬೇಕು. ದೈವದೃಷ್ಟಿಯನ್ನು ಕೈಬಿಡದಿರಬೇಕು. ಇಲ್ಲವಾದರೆ ದೈವೀ ವಿಕೋಪ ತಪ್ಪಿದ್ದಲ್ಲ.

ರೋಗಗಳು, ರಾಗದ್ವೇಷಗಳು, ಅಸಮಭಾವ, ಅದೈವಭಾವ ಇವು ತಾಪತ್ರಯಕ್ಕೆ ಮೂಲ. ತನು ಆರೋಗ್ಯವಾಗಿರಬೇಕಾದರೆ ಆಹಾರದಲ್ಲಿ ಶುದ್ಧತೆ ಸಾತ್ವಿಕತೆ ಇರಬೇಕು. ಹಿತಮಿತವಾಗಿರಬೇಕು. ರಾಜಸ ತಾಮಸಾಹಾರಗಳನ್ನು ತೊರೆಯಬೇಕು.

"ಆಯುಸ್ಸತ್ವ ಬಲಾರೋಗ್ಯ ಸುಖಪ್ರೀತಿ ವಿವರ್ಧನಾಃ
ರಸ್ಯಾಃಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸ್ವಾತಿಕಪ್ರಿಯಾಃ |"—ಗೀತೆ

ಇವು ಸಾತ್ವಿಕಾಹಾರಗಳು. ಇವುಗಳಿಂದ ಆಯುರಾರೋಗ್ಯಗಳು ಪುಷ್ಟಿ ತುಷ್ಟಿಗಳು ಉಂಟಾಗುತ್ತವೆ.

"ಕಟ್ವಮ್ಲ ಲವಣಾತ್ಯುಷ್ಣ ತೀಕ್ಷ್ಣ ರೂಕ್ಷವಿದಾಹಿನಃ
ಆಹಾರಾ ರಾಜಸ ಸ್ಯೇಷ್ಟಾ ದುಃಖ ಶೋಕಾಮಯಪ್ರದಾಃ ।"

—ಗೀತೆ

ಕಹಿ, ಹುಳಿ, ಉಪ್ಪು, ಹೆಚ್ಚು ಬಿಸಿ, ಹೆಚ್ಚು ತೀಕ್ಷ್ಣ, ನೀರಸ, ನೀರಡಿಕೆಯಾಗಿಸುವ ಆಹಾರ ರಾಜಸ. ಇದರಿಂದ ದುಃಖ ಶೋಕ ರೋಗಗಳುಂಟಾಗುತ್ತವೆ.

"ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್ ।"

ಆರಿದುದು, ರಸರಹಿತವಾದುದು, ದುರ್ವಾಸನೆಯುಳ್ಳುದು, ತಂಗಳಾದುದು, ಎಂಜಲಾದುದು, ಮೀಸಲಾಗಿಲ್ಲದುದು ಅಂದರೆ ಅಪವಿತ್ರವಾದುದು ತಾಮಸಾಹಾರ. ಇದರಿಂದ ದೇಹಾರೋಗ್ಯ ಹಾನಿ. ದುಃಖಪ್ರಾಪ್ತಿ. ಕಾರಣ ತಾಮಸ ರಾಜಸಾಹಾರಗಳನ್ನು ಬಿಡಬೇಕು.

"ಶಕ್ನೋತೀಹೈವ ಯಃ ಸೋಢುಂ ಪ್ರಾಕ್ ಶರೀರವಿಮೋಕ್ಷಣಾತ್
ಕಾಮ ಕ್ರೋಧೋದ್ಭವಂ ವೇಗಂ ಸ ಯುಕಃ ಸ ಸುಖೀ ನರಃ ।"

ಈ ಲೋಕದಲ್ಲಿ ಈ ಶರೀರವನ್ನು ಬಿಡುವ ಮೊದಲೇ ಕಾಮಕ್ರೋಧಗಳ ವೇಗವನ್ನು ತಡೆಯಬೇಕು. ತಡೆದಾತನು ಯೋಗ್ಯನಾಗುತ್ತಾನೆ. ಸುಖಿಯಾಗುತ್ತಾನೆ.

"ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾತ್ಮಾನಂ ನಿಯಮ್ಯ ಚ
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌ ವ್ಯುದಸ್ಯ ಚ ।
ವಿವಿಕ್ತ ಸೇವೀ ಲಘ್ವಾಶೀ ಯತವಾಕ್ಕಾಯ ಮಾನಸಃ
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ।
ಅಹಂಕಾರಂ ಬಲಂದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ ।"

—ಗೀತೆ

ಆಧ್ಯಾತ್ಮಿಕಾದಿ ದುಃಖಗಳನ್ನು ಕಳೆದುಕೊಳ್ಳಬೇಕಾದವನು ಈ ಎಲ್ಲ ಗುಣಗಳನ್ನು ಗಳಿಸಬೇಕು. ಶುದ್ಧಬುದ್ಧಿಯುಳ್ಳವನಾಗಬೇಕು. ಯೋಗ್ಯ ನಾಗಬೇಕು. ಆತ್ಮ ಸಂಯಮಿಯಾಗಿರಬೇಕು. ಶಬ್ದಾದಿ ವಿಷಯಗಳನ್ನು ತ್ಯಾಗ ಮಾಡಿರಬೇಕು. ರಾಗದ್ವೇಷಗಳನ್ನು ಗೆದ್ದಿರಬೇಕು. ಏಕಾಂತ ಸೇವಿ ಯಾಗಬೇಕು. ಅಲ್ಪಾಹಾರಿಯಾಗಬೇಕು. ಮತ್ತು ಹಗುರವಾದ ಆಹಾರ ವನ್ನು ಸೇವಿಸಬೇಕು. ವಾಕ್ಕಾಯ ಮನಸ್ಸುಗಳನ್ನು ಅಂಕಿತದಲ್ಲಿರಿಸಿರಬೇಕು. ಧ್ಯಾನಯೋಗ, ವೈರಾಗ್ಯಗಳಲ್ಲಿ ನಿತ್ಯ ನಿರತನಾಗಿರಬೇಕು. ಅಹಂಕಾರ, ಬಲ, ದರ್ಪ, ಜಂಭ, ಕಾಮ, ಕ್ರೋಧ, ಪರಿಗ್ರಹಗಳನ್ನು ಪರಿಹರಿಸಿರಬೇಕು. ಮಮತೆ ಚಪಲತೆ ಅಳಿದಿರಬೇಕು. ಬ್ರಹ್ಮಭಾವಿಯಾಗಿರಬೇಕು. ಆಗ ಬ್ರಹ್ಮೋಪಾಸ ನೆಗೆ ಬ್ರಹ್ಮರೂಪ ಲಿಂಗಪ್ರಾಪ್ತಿಗೆ ತಕ್ಕವನಾಗುತ್ತಾನೆ.

"ತಟಿತ್ಸು ವೀಚಿಮಾಲಾಸು ಪ್ರದೀಪಸ್ಯ ಪ್ರಭಾಸು ಚ
ಸಂಪತ್ಸು ಕರ್ಮ ಮೂಲಾಸು ಕಸ್ಯ ವಾ।ಸ್ಥಿರತಾ ಮತಿಃ ।

ಕರಣತ್ರಯ ಶುದ್ಧಿಯಿಲ್ಲದೆ ಕಾಯಕ ದೃಷ್ಟಿಯಿಲ್ಲದೆ ದಾಸೋಽಹಂ ಸೇವಾಭಾವವಿಲ್ಲದೆ ಸಂಪಾದಿಸಿದ ಸಂಪತ್ತು ಶಾಶ್ವತವಲ್ಲ; ಸತ್ಯ ಶುದ್ಧವಲ್ಲ. ಮುಗಿಲಮಿಂಚಿನಂತೆ, ಕಡಲ ತೆರೆಗಳಂತೆ, ಗಾಳಿಗೊಡ್ಡಿದ ಸೊಡರಿನಂತೆ–ಕ್ಷಣಿಕ, ಚಂಚಲ, ನಶ್ವರ. ಅಲ್ಲದೆ ಕರ್ಮದಿಂದ ಕುಟಿಲತೆಯಿಂದ ಸಂಚಿತವಾದ ಸಂಪತ್ತು ಸತ್ಪಾತ್ರಕ್ಕೆ ಸಲ್ಲದು. ಸಾರ್ಥಕ್ಯವಾಗದು.

"ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲುವುದೇನಯ್ಯ?
ನಾಯಿಯ ಹಾಲು ನಾಯಿಯ ಕುನ್ನಿಗಲ್ಲದೆ ಪಂಚಾಮೃತಕ್ಕೆ
ಸಲ್ಲುವುದೇನಯ್ಯ ? ಕೂ. ಸಂ. ನ ಶರಣರಿಗಲ್ಲದ ಅರ್ಥ
ವ್ಯರ್ಥ ಕಂಡಯ್ಯ." ಹಣವುಳ್ಳವರು ಗುಣಿಗಳನ್ನು ಆರಾಧಿಸರು.

ಒಣ ಆಡಂಬರಕ್ಕೆ ಆಡಂಬರವುಳ್ಳವರಿಗೆ ಮನ ಸೋಲುವರು. ದಯೆ ಧರ್ಮಗಳಿಗೆ ಸಲ್ಲದು ಅವರ ಹಣ. ದರ್ಪ ದುರಹಂಕಾರಗಳ ಅರ್ಜನೆಗೆ ಸಲ್ಲವುದು. ಪಾಪದ ಪ್ರಾಯಶ್ಚಿತ್ತಕ್ಕೆ ಸಲ್ಲುವುದು. ಸಲ್ಲದ ಸಾರ್ಥಕವಲ್ಲದ ಸಿರಿ ಎಷ್ಟಿದ್ದರೂ ಏನು ಪ್ರಯೋಜನವಿಲ್ಲ. ಸುಖಕ್ಕೆ ಬದಲು ದುಃಖಕ್ಕೆ,

ಮೋಕ್ಷಕ್ಕೆ ಬದಲು ಬಂಧಕ್ಕೆ ಕಾರಣವಾಗುತ್ತದೆ. ಇದನ್ನು ಗೀತೆಯು ಆಸುರೀ ಸಿರಿ ಎಂದು ಹೇಳಿದೆ: 'ದೈವೀಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಮ್' ಇಂತಹ ಸಂಪತ್ತು ಇದ್ದರೂ ಇಲ್ಲದಂತೆ. ಇದು ನಿರರ್ಥಕ ಕಾನನದ ಬೆಳದಿಂಗಳಂತೆ! ಕರ್ಮ ಮೂಲವಾದ ಸಂಪತ್ತು ಹೇಗೆ ಚಂಚಲವೋ ಹಾಗೆ ಕ್ಲೇಶಕರವೂ ಆಗಿದೆ. ಒಂದಲ್ಲ, ಎರಡಲ್ಲ, ಪಂಚಕ್ಲೇಶಗಳಿಗೆ ಪಥವನ್ನು ನಿರ್ಮಿಸುತ್ತದೆ.

"ಮಾಡಲುಚಿತವೆ ಮನುಜ ಮಾಡಲುಚಿತವೆ ?
ಕೂಡೆ ಬಾಧೆ ಬಹಳ ವಿಹುದ ನೋಡಿ ಧನದ ಲೋಭವಿದನು ||
ಧನವಗಳಿಸುವಲ್ಲಿ ಮೊದಲು । ತನುವಿಗತಿ ಬಳಲ್ಕೆ ನಡುವೆ
ಮನಕೆ ದಿಗಿಲು ಮಿಗಿಲು. ಮರಸೆ ಜನರು ನೋಪುವೆಡೆಯೊಳು ।
ಜನಿಪುದಳಲು ಮತಿಗೆ ವೆಚ್ಚವನಿತನೆಸಗೆ ಕೆಡಲು ಕಡೆಗೆ
ತನಗೆ ಕಂಟಕಂಗಳಾವ ದಿನದೊಳದರಿನಪ್ಪವಾಗಿ ||೧||

ಉರಗ ವಹ್ನಿ ಮರುಳು ಮೋಸವರಸು ಚೋರರನುಜ ರುಜೆಗು
ಳಿರಿಸಿ ನೆಲನಿವೆಲ್ಲವಳುಪೆ ಸರಿದು ತಾನೆ ಪೋಪುದಾಗಿ ।
ಪಿರಿದು ಧನವ ನೆರುಪುವಂಗೆ ದುರಿತ ಕೋಟಿ ಪುದಿದು ಪಲವು
ಪರಿಯ ನೋವನಿಹ ಪರದೊಳು ತಿರುಗಿಸುತ್ತೆ ಮಾಳ್ಪುದಾಗಿ |೨|

ಇಂತು ವಿಷಸಮೇತ ಮಧುವಿನಂತೆ ಸೊಗಸುದೋರಿ ನಿಖಿಳ
ಚಿಂತೆಗುಡುವ ಧನದ ಕಾಂಕ್ಷೆಯುಂ ತೊರೆದು ಸುಜಾಣನು ।
ಮುಂತೆ ಶಂಭುಲಿಂಗದೊಲವನಂತು ಪಡಿಯೆ ಶರಣ ತತಿಗೆ
ಸಂತಸದೊಳು ಸವೆವುದುಂಬುದು ಮುಂತೆ ತನುವಿದಳಿ
ವುದಾಗಿ ||೩||

ಕಾಸಿನಿಂದ ಕ್ಲೇಶಗಳು ಎಷ್ಟೇ ಒದಗಿದರೂ ಅದರಾಶೆ ಬಿಡದು. ಅದಕ್ಕಾಗಿ ಕರ್ಮಗಳನ್ನು ಕಟ್ಟಿಕೊಳ್ಳದವರಾರು ? ಅದಕ್ಕಾಗಿ ಕಾಲವನ್ನು ಕಳೆಯದವರಾರು ?

"ಕಾಂಚನವೆಂಬ ನಾಯಿಯ ನೆಚ್ಚಿ ನಿಮ್ಮ ನಾ ಮರೆದೆನಯ್ಯ !
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ.
ಹಡಕಿಗೆ ಮೆಚ್ಚಿದ ಸೊಣಗನು ಅಮೃತದ
ರುಚಿಯ ಬಲ್ಲುದೇ ಕೂ. ಸಂ. ದೇವಾ ?''

ಎಂದು ಬಸವಣ್ಣನವರೇ ಹೇಳಿರುವಾಗ ಬೇರೆಯವರ ಮಾತೇನು ? ಅದಕ್ಕೆ ಸೋಲದ ವೀರರಾರು ? ಅದನ್ನು ಮೆಚ್ಚದ ಚಾಗಿಗಳಾರು ? 'ಹಣವೆಂದರೆ ಹೆಣ ಬಾಯ್ದೆರೆಯದೆ ?' ಹಣ ಗಳಿಕೆಗೆ ಕಾಲ ಕಳೆದಂತೆ ಗುಣ ಗಳಿಕೆಗೆ ಕಾಲ ಕಳೆವವರಾರು ?

ಹೊರಗಿನ ವ್ಯವಹಾರಕ್ಕೆಲ್ಲ ಹರಣ ರೂಪಾದ ಹಣ ಎಂಥವರಿಗೂ ಅನಿವಾರ್ಯ. ಆದರೆ ಆದರ ಅತ್ಯಂತ ಲೋಭ ಮೋಹಗಳು ನಿವಾರ್ಯ. ನ್ಯಾಯವಾಗಿ ಆರ್ಜಿಸಿ ನ್ಯಾಯವಾದುದಕ್ಕೆ ವ್ಯಯಿಸಬೇಕು. ಅರ್ಥವನ್ನು ಎರಡನೆಯ ಪುರುಷಾರ್ಥವನ್ನಾಗಿಸಬೇಕು. ಹೇಗೂ ಲಕ್ಷ್ಮಿ ಚಂಚಲ. ಎಂದಿದ್ದರೂ ಹೊರಟು ಹೋಗುವದದು. ಅಂತಹದನ್ನು ಸ್ಥಿರವೆಂದು ಭಾವಿಸಿ ಮಡುಗಿ ಕೊಳ್ಳುವುದು ಪಿಂಡಜ್ಞಾನಿಗೆ ಉಚಿತವಲ್ಲ. ಇಂದಿನದು ನಾಳಿಗೆ ತಂಗುಳವೆಂದು ಭಾವಿಸಬೇಕು. 'ಇಂದಿಂಗೆಂತು, ನಾಳೆಗೆಂತು ಎಂದು ಚಿಂತಿಸಲೇಕೆ ? ತಂದಿಕ್ಕುವ ಶಿವಂಗೆ ಬಡತನವುಂಟೆ ರಾಮನಾಥ ?' ಎಂಬುದು ದೇವರ ದಾಸಮಯ್ಯನ ಉಪದೇಶ. ಸಂಪತ್ತಿನ ಮೋಹಹೇಯವಾಗಿರಬೇಕೆಂಬುದೇ ಆ ಉಪದೇಶದಸಾರಾಂಶ. ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರದೂ ಅದೇ ಆದೇಶ. 'ಸಂಪತ್ಸು ಕಸ್ಯ ವಾ ಸ್ಥಿರತಾ ಮತಿಃ !' ಎಂತಹ ಅರ್ಥಪೂರ್ಣವಾದ ಪ್ರಶ್ನೆಯಿದು ! ಎಷ್ಟು ಅನುಭವ ಜನ್ಯವಾಣಿಯಿದು ! ಹಣದ ಅನುಭವವುಳ್ಳವನು ಹಣಸ್ಥಿರವೆಂದು ಎಂದಿಗೂ ತಿಳಿಯನು. ಈ ಭೌತಿಕ ಐಶ್ವರ್ಯಕ್ಕೆ ಎಂದಿಗೂ ಹೆಮ್ಮೆಪಡನು. ಎಂದಿಗೂ ತೊತ್ತಾಗಿ ಬಾಳನು. ತಾನು ಹಣವನ್ನು ಗಳಿಸಬಲ್ಲನಲ್ಲದೆ ತನ್ನನ್ನು ಹಣಗಳಿಸದು. ತನ್ನ ಗಳಿಕೆಗಾಗಿ ಹಣವನ್ನು ಹಳ್ಳ ಹರಿದಂತೆ ಹರಿಸಿ ಬಿಡಬೇಕು. ತನ್ನ ಆತ್ಮ ಸಾಧನೆಗಾಗಿ ಆತ್ಮಾನುಭಾವಿಗೆ ಕೊಟ್ಟರೆ ಅದೇ ತನ್ನದು. ಲೋಭ ಮೋಹದಿಂದ ಮನೆಯಲ್ಲಿ ಮುಚ್ಚಿಟ್ಟದ್ದು

ಮಣ್ಣು ಪಾಲು; ಪರರ ಪಾಲು. ಹೀಗಾದಾಗ ಗಳಿಸಿ ಫಲವಿಲ್ಲ; ಉಳಿಸಿ ಫಲವಿಲ್ಲ.

"ಸಿರಿಯು ಸಂಸಾರವನು ಸ್ಥಿರವೆಂದು ನಂಬದಿರು |
ಹಿಂದೊಂದು ಸಂತೆ ನೆರದೊಂದು ಜಾವಕ್ಕೆ |
ಹರಿದು ಹೋದಂತೆ ಸರ್ವಜ್ಞ |"

"ಮಲಕೋಶೇ ಶರೀರೇಽಸ್ಮಿನ್ ಮಹಾ ದುಃಖವಿವರ್ಧನೇ
ತಡಿದಂಕುರಸಂಕಾಶೇ ಕೋ ವಾ ಮೋದೇತ ಪಂಡಿತಃ |
ನಿತ್ಯಾನಂದ ಚಿದಾಕಾರಮಾತ್ಮತತ್ತ್ವಂ ವಿಹಾಯ ಕಃ
ವಿವೇಕೀ ರಮತೇ ದೇಹೇ ನಶ್ವರೇ ದುಃಖಭಾಜನೇ |"

ಪ್ರಾಕೃತಿಕಮಲ, ಪದಾರ್ಥಜನ್ಯಮಲ ಇವೆರಡಕ್ಕೂ ಆಗರವಾಗಿದೆ ಈ ಶರೀರ. ಪ್ರಾಕೃತಿಕ ಮಲಗಳು ಆಣವಾದಿಗಳು. ಪದಾರ್ಥ ಜನ್ಯ ಮಲಗಳು ಮಲ ಮೂತ್ರಾದಿಗಳು ; ವಾತಪಿತ್ತ ಶ್ಲೇಷ್ಮಾದಿಗಳು.

"ಭಗವನ್ನಸ್ಥಿ ಚರ್ಮಸ್ನಾಯು ಮಜ್ಜಾ ಮಾಂಸ ಶುಕ್ಲ ಶೋಣಿತ
ಶ್ಲೇಷ್ಮಾಶ್ರುದೂಷಿತೇ ವಿಣ್ಮೂತ್ರ ವಾತಪಿತ್ತ ಕಫ ಸಂಘಾತೇ
ದುರ್ಗಂಧೇ ನಿಸ್ಸಾರೇ ಕಿಂ ಕಾಮೋಪಭೋಗೈಃ |"

—ಮೈತ್ರೇಯೋಪನಿಷತ್

ಸ್ಥೂಲ ಮಲದೇಹದ ಚಿತ್ರವಿದು. ಎಷ್ಟು ಹೊಲಸಿನದು. ಎನಿತು ಹೇಸಿಕೆಗೆ ತಾಣವಿದು. ಸಾಲದ್ದಕ್ಕೆ ತಾಪತ್ರಯಗಳನ್ನು, ಪಂಚಕ್ಲೇಶಗಳನ್ನು ಸಪ್ತ ವ್ಯಸನಗಳನ್ನು ಹೆಚ್ಚಿಸಬಲ್ಲುದು. ತೋರಿ ಅಡಗುವ ಮಿಂಚಿನ ಮೊಳಕೆಯಂತಹದು. ಇದೆಲ್ಲ ತಿಳಿದವನು ಇದರಲ್ಲಿ ಮೋದಿಸುವನೆ ?

ದಶಾವಸ್ಥೆಯುಳ್ಳ ಈ ದೇಹವು ಹತ್ತು ವರುಷಕ್ಕೊಂದು ಅವಸ್ಥೆಯನ್ನು ಕಳೆದುಕೊಳ್ಳುತ್ತದೆ. ಹುಟ್ಟಿದ ಹತ್ತು ವರುಷಕ್ಕೆ ಬಾಲ್ಯವು ಬಿಟ್ಟು ಹೋಗುತ್ತದೆ. ಇಪ್ಪತ್ತು ವರುಷಕ್ಕೆ ವೃದ್ಧಿ (ಬೆಳವಣಿಗೆ) ನಿಲ್ಲುತ್ತದೆ. ಇಂಕ್ಕೆ ಬಲ,

೪೦ಕ್ಕೆ ನೇತ್ರ, ೫೦ಕ್ಕೆ ಚರ್ಮಬಲ, ೬೦ಕ್ಕೆ ಮತಿ, ೭೦ಕ್ಕೆ ಕಿವಿ, ೮೦ಕ್ಕೆ ವಿಷಯಾಶಕ್ತಿ, ೯೦ಕ್ಕೆ ಉತ್ಥಾನಸ್ಥಿತಿ ಬಿದ್ದು ಹೋಗುತ್ತವೆ. ೧೦೦ಕ್ಕೆ ಪತನವಾಗುತ್ತದೆ. ಇದರಿಂದಾಗಿ ಈ ದೇಹ ತಡಿದಂಕುರದಂತೆ ಸ್ಥಿರವಲ್ಲ. ಇದರಿಂದ ಸತ್ಯ ಸುಖವಿಲ್ಲ.

'ಪಡೆವೆ ನೀನೆಂದಿಗೆ ಪರಮುಕ್ತಿ ಸುಖವನು
ಕೆಡುವ ಕಾಯದ ಮೋಹವನು ಮಾಡೆ ಮನುಜ ॥ಪ॥

ಮಲ ಮೂತ್ರವಣುವಿರ್ದನೆಲೆಯೊಳು ನೆಲೆಸೆಂಬೆ
ಪಲವಪೇಯದ ತಾಣವೆನಿಸುವಂಗದೊಳು ।
ನೆಲಸಿ ವಿಷಯ ಸುಖವನು ಭೋಗಿಸುವೆನೆಂದು
ಸಲೆ ಮನವೆಳಸುವದನು ಬಿಡೆ ಮನುಜಾ ॥೧॥

ಜಡದೃಶ್ಯಮಿತಿ ಪರಿಣತೆ ಭೂತ ಕಾರ್ಯತೆ
ವಿಡಿದು ಕನಸು ನಿದ್ರೆಯೊಳಗಿಲ್ಲವಾಗಿ ।
ಕೊಡನಂತೆ ಬೇರೆನಿಸಿಹುದು ತಾನಲ್ಲ ವೀ
ಒಡಲೆಂಬ ಸುವಿವೇಕವನು ಮಾಡೆ ಮನುಜಾ ॥೨॥

ಅನಿಮಿತ್ತವರಿಗಳೆನಿಸುವ ಕಾಮಾದಿಗೆ
ತನುವನೇಕವನಿತ್ತೆ ಭವಭವಂಗಳಲಿ ।
ನಿನಗೊಂದು ದೇಹವಿದನು ತೊಟ್ಟು ತಪವಾಂತು
ಘನ ಶಂಭುಲಿಂಗವಾಗಿರಲೊಲ್ಲೆ ಮನುಜಾ ॥೩॥

ಈ ತೋರಿ ಅಡಗುವ ಹೊರಮೈ ಮೆಚ್ಚಿ ಮುಕ್ತಿ ಪಡೆಯಲು ಸಾಧ್ಯವೆ? ಮಣ್ಣನ್ನೇ ತಿಂದು ತೃಪ್ತಿ ಪಡೆಯಬಹುದೆ? ಕೆಸರಲ್ಲಿ ಹುಲುಸಾದ ಬೆಳೆ ಬೆಳೆದು ಉಣ್ಣುವಂತೆ ಸಂಸ್ಕಾರದಿಂದ ಮೈ ಹೊಲವನ್ನು ಹಸನ ಮಾಡಿ ಬಲವಿತ್ತು ಅದರಲ್ಲಿ ಆ ಪರತತ್ತ್ವವೆಂಬ ಬೆಳೆಯನ್ನು ಬೆಳೆದುಣ್ಣಬೇಕಲ್ಲದೆ ಹುಲು ಮೈಯಲ್ಲಿ ಹರುಷವೊದಗದು. ಇದು ಎಷ್ಟಾದರೂ ತ್ಯಾಗಾಂಗವೆನಿಸಿದೆ. ತ್ಯಾಗಾಂಗ ಭೋಗಾಂಗವಾಗದು. 'ನೀರ ಬೊಬ್ಬುಳಿಯಂತೆ ತೋರುತಿಹ ದೇಹದ ಸಾರ ವರಿಯದೆ ಸುಖಿಪುದಜ್ಞಾನದ ದಾರಿಯುಹುದೆಂದ ಸರ್ವಜ್ಞ' ಇದೆಲ್ಲ ಸ್ಥೂಲ

ಕಾಯುವಿಷಯ. ಕಾಯ ಮೂರುಂಟು. ಅವು ಸ್ಥೂಲ ಸೂಕ್ಷ್ಮ ಕಾರಣವು. ಸ್ಥೂಲವು ತ್ಯಾಗಾಂಗವೆನಿಸಿದೆ. ಸೂಕ್ಷ್ಮವು ಭೋಗಾಂಗವೆನಿಸಿದೆ. ಕಾರಣವು ಯೋಗಾಂಗವೆನಿಸಿದೆ. ವಿಶ್ವ ತೈಜಸ ಪ್ರಾಜ್ಞ ಜೀವರು ಇವುಗಳ ಸಂಗದಲ್ಲಿ ಕ್ರಮವಾಗಿ ಇರುವರು. ದುಃಖ, ದುಃಖಸುಖ, ಸುಖಗಳನ್ನು ಕ್ರಮವಾಗಿ ಪಡೆವರು.

"ಹಂದಿ, ಕುಂಜರ, ಹಂಸಗಳಂತೆ
ಮಂದಿ ಮೂವರು ಸಂದ ಸಂಗದೊಳಿಹರು
ಸಂದ ಸಂಗವೀಡಾಡಲಾನಂದ ಬಿಂದುವಿನಂದಹುದದುವೆ
ಬೆಟ್ಟದ ಪಾಂಗು ಬಂದುದಯ್ಯ ಗೊಗ್ಗೇಶ್ವರಾ."

ವಚನದ ವಿವರ : ಸ್ಥೂಲ ದೇಹದಲ್ಲಿ ವಿಷಯ ಸುಖವ ಹೊಂದುವವರು ಸೂಕರನೋಪಾದಿ, ಸೂಕ್ಷ್ಮದೇಹದಲ್ಲಿ ವಿಷಯ ಸುಖವಂ ಹೊಂದುವರು ಕುಂಜರನೋಪಾದಿ; ಕಾರಣ ದೇಹದಲ್ಲಿ ವಿಷಯ ಸುಖವಂ ಹೊಂದುವರು ಹಂಸನೋಪಾದಿ. ಅದೆಂತೆನೆ,-ಸ್ಥೂಲ ದೇಹವು ಮಾಂಸಸ್ವರೂಪ; ಸ್ಥೂಲ ದೇಹಮಂ ಹೊಂದಲು ಆ ದೇಹಕ್ಕೆ ಸುಖವು ಬಿಂದು ಮಾತ್ರವಾಗಿರ್ಪುದು. ದುಃಖವು ಪರ್ವತದಷ್ಟು-ಪಂಚಭೂತಸಂಗಿಯಾದ ಕಾರಣ. ಸೂಕ್ಷ್ಮದೇಹವು ದಿವ್ಯಾಮೃತ ಸ್ವರೂಪ. ಆ ದೇಹಕ್ಕೆ ಬಿಂದು ಮಾತ್ರ ದುಃಖ, ಪರ್ವತದಷ್ಟು ಸುಖ. ಆತ್ಮ ಸಂಗಿಯಾದ ಕಾರಣ ಕಾರಣ ದೇಹವು ಕೇವಲದಿವ್ಯ ಸುಧಾಮೃತ ಸ್ವರೂಪ; ಪುಷ್ಪದಲ್ಲಿ ಗಂಧವಿರ್ಪಂತಿರುವುದು. ಆ ದೇಹಕ್ಕೆ ದುಃಖಾವರಣ, ಅಜ್ಞಾನಾವರಣ, ಅಭಾವಾವರಣ,-ಪ್ರಾತಿಭಾಸಿಕವಲ್ಲದೆ ಅದರ ಸಹಜ ಸ್ವರೂಪವು ಸುಖವಾಗಿರ್ಪುದೆಂದು ಜಾಗ್ರದಲ್ಲಿ ನಿದ್ರೆಯೊಳಗಿನ ಪ್ರತ್ಯಭಿಜ್ಞೆಯಿಂ ತಿಳಿಯಲಾಗುವುದು. ಲಿಂಗಸಂಗಿಯಾದ ಕಾರಣದಿಂ ಕಾರಣ ದೇಹದೊಳು ಲಿಂಗಸುಖವು ವ್ಯಕ್ತವಾಗುವುದು. ಇಂತಪ್ಪ ಲಿಂಗಾಂಗ ಸಮರಸದಿಂದ ಅಖಂಡ ಸುಖ ತಾನಾಗಿ ಸಹಜದಲ್ಲಿ ನಿಲ್ಲಬೇಕಾದಡೆ ಪಿಂಡಾದಿ ಜ್ಞಾನ ಶೂನ್ಯಾಂತಮಾದ ನೂರೊಂದು ಸ್ಥಲವಂ ಕರತಲಾಮಲಕವಾಗಿ ತಿಳಿದು ಮೇಲಾದ ಜ್ಞಾನಶೂನ್ಯಸ್ಥಲದಲ್ಲಿ ನಿಂದ ಮುನ್ನಿನ ಮೊದಲಿಗರು ಪಿಂಡ-ಪಿಂಡ ಜ್ಞಾನಾದಿ ಸ್ಥಲಂಗಳ ಮಾರ್ಗವಂ ತಪ್ಪದೆ ನಡೆಯಲ್ಕೆ ಲಿಂಗಸಂಗಿಗಳಾಗಿ

ಪಂಚಭೂತವಿಕಾರವೆಂಬ ಪರ್ವತಕ್ಕೆ ಕಾಷ್ಠಾಯುಧವಾಗಿ ನಿಂತರು ಮುನಿಗಳು ದೇಹಸಂಗಿಯಾಗಿ ನಡೆಯಲಿಕ್ಕೆ ಪಂಚಭೂತವಿಕಾರವೆಂಬ ಪರ್ವತಕ್ಕೆ ಬೆಂಡಿನಾಯುಧವಾಗಿ ನಿಂತರು ನರಸುರೋರಗಾಸುರರು. ನಮ್ಮ ಶರಣರಾದರೋ ಲಿಂಗಸಂಗದಿಂ ಅಂಗಗುಣವಿಕಾರವೆಂಬ ಸಮುದ್ರವಂ ದಾಟಿದರು. ಶರಣರಲ್ಲದವರು ಎಷ್ಟೆಷ್ಟು ಓದಿದಡೆಯೂ ಎಷ್ಟು ಕೇಳಿದಡೆಯೂ ದೇಹಗುಣ ವಿಕಾರವೆಂಬ ಇರುಬನ ಕೊಳ್ಳದಲ್ಲಿ ಬಿದ್ದು ಪ್ರಳಯರಾಗುವರಯ್ಯ ಗೊಗ್ಗೇಶ್ವರಾ."

ಎಂದು 'ಪಂಚಯೋಗ'ದ ಅನುಬಂಧ ಮೂರರಲ್ಲಿ ಶ್ರೀ ಷ. ಚ. ಸದಾಶಿವ ಶಿವಾಚಾರ್ಯರು ಸಖರಾಯಪಟ್ಟಣ ಅವರು ಪುರಾತನೋಕ್ತಿಯಿಂದ ಎತ್ತಿ ಉದ್ಧರಿಸಿದ್ದಾರೆ. ದೇಹತ್ರಯಗಳ ಸ್ವಾಭಾವಿಕ ಮತ್ತು ಸಾಂಸ್ಕಾರಿಕ ಚಿತ್ರಗಳನ್ನು ಚೆನ್ನಾಗಿ ಚಿತ್ರಿಸಿದೆ ಈ ಪೂರ್ವೋಕ್ತಿ. ಪ್ರಾಕೃತಿಕವಾದ ವಿಕಾರ ಶರೀರ ಏನು ಮಾಡಬಲ್ಲದು ? ಸಾಂಸ್ಕೃತಿಕವಾದ ಅವಿಕಾರ ಶರೀರ ಏನು ಮಾಡಬಲ್ಲುದು ?–ಎಂಬುದನ್ನು ತಿಳಿದು ವಿವೇಕಿ ಮುನ್ನಡೆಯಬೇಕು. ವಿಕಾರ ಶರೀರವನ್ನು ವಿಸರ್ಜಿಸಿ ಸಂಸ್ಕಾರ ಶರೀರ ಸಂಗಿಗಳಾಗಬೇಕು. ಸಾಂಸ್ಕಾರಿಕ ಶರೀರ ನಶ್ವರವಾದರೂ ಅದರಲ್ಲಿ ನಿತ್ಯಾನಂದ ಚಿದಾಕಾರ ರೂಪ ಆತ್ಮತತ್ತ್ವವು ಲಭ್ಯವಾಗುತ್ತದೆ. ಅದಿರುವುದು ಸಾಂಸ್ಕಾರಿಕ ಶರೀರದಲ್ಲಿ. ಅದು ಕೊಡುವುದು ನಿತ್ಯಾನಂದವನ್ನು. ಅದು ತೋರುವುದು ಚಿದಾಕಾರದಲ್ಲಿ. ಅಲ್ಲಿ ವಿವೇಕಿಯು ರಮಿಸುತ್ತಾನೆ, ಆಮೋದಿಸುತ್ತಾನೆ.

**"ವಿವೇಕಿ ಶುದ್ಧಹೃದಯೋ ನಿಶ್ಚಿತಾತ್ಮ ಸುಖೋದಯಃ
ದುಃಖಹೇತೌ ಶರೀರೇಽಸ್ಮಿನ್ ಕಲತ್ರೇ ಚ ಸುತೇಷು ಚ ।
ಸುಹೃತ್ಸು ಬಂಧುವರ್ಗೇಷು ಧನೇಷು ಕುಲಪದ್ಧತೌ
ಅನಿತ್ಯ ಬುದ್ಧ್ಯಾ ಸರ್ವತ್ರ ವೈರಾಗ್ಯಂ ಪರಮಶ್ನುತೇ ॥**

ನಿತ್ಯಾನಂದವನ್ನು ಕೊಡುವ ನಿರ್ಮಲ ಚಿದಾಕಾರವನ್ನು ತೋರುವ ಆತ್ಮ ತತ್ತ್ವಕ್ಕಾಗಿ ಅಂಗವೇ ಹೊರತು ಅನಿತ್ಯ ಸುಖವನ್ನು ಪಡೆಯಲು ಅಚಿದ್ರೂಪವನ್ನು ಆರ್ಜಿಸಲು ಅಂಗವಲ್ಲ ಎಂಬ ವಿವೇಕವುಳ್ಳವನು ಶುದ್ಧ ಹೃದಯವುಳ್ಳ ಪಿಂಡನೆನಿಸುತ್ತಾನೆ. ಈ ಪಿಂಡನೇ ನಿಶ್ಚಿತಾತ್ಮ ಸುಖಸ್ಫುರಣವುಳ್ಳವನಾಗಿ ಪಿಂಡಜ್ಞಾನಿಯೆನಿಸುತ್ತಾನೆ. ಈ ಪಿಂಡಜ್ಞಾನಿಯು ದುಃಖದಾಯಕ

ದೇಹದಲ್ಲಿ ಹೇಯ ಹೃದಯವುಳ್ಳವನಾಗುವುದರಿಂದ ಹೆಂಡರು ಮಕ್ಕಳು ಕೆಳೆಯರು, ಬಂಧು ಬಳಗದವರು ಎಂಬ ಮಮಕಾರವನ್ನು ಹಣದಾಸೆಯನ್ನು ಕುಲಾಭಿಮಾನವನ್ನು ಬಿಟ್ಟುಬಿಡುತ್ತಾನೆ. ಇವೆಲ್ಲ ನಟ್ಟ ನಡುವಿನವೆಂದು ತಿಳಿಯುತ್ತಾನೆ. ಪರಮ ವೈರಾಗ್ಯದಲ್ಲಿ ಪರಿಣಮಿಸುತ್ತಾನೆ.

ಐಶ್ವರ್ಯದ ಮದಮಮಕಾರಗಳನ್ನು ಶರೀರ ಸೌಂದರ್ಯದ ಮದ ಮಮಕಾರಗಳನ್ನು ತೊರೆದ ಬಳಿಕ ಮಡದಿ ಮಕ್ಕಳ ಮದ ಮಮಕಾರಗಳನ್ನೂ ತೊರೆಯಬೇಕು.

"ಸೋಲದಾತನೆ ವಿರತನು ಮನದೊಳಗೆ
ಬಾಲೆಯರ ಸಿಂಗರವನು ಕಂಡು ||ಪ||"

ಎಂದರು ನಿಜಗುಣರು. ಕಾಮವು ಸೋಲಿನ ಒಡಲು. ಪ್ರೇಮವು ಗೆಲುವಿನ ತಿರುಳು. ಶುದ್ಧ ಪ್ರೇಮವೇ ಪ್ರೇಮ. ಅದೇ ಪರಂಧಾಮ. ಅದೇ ನಿಜ ಧೈರ್ಯದ ನಿಲಯ. ಕಾರಣ ಕಾಮಕ್ಕೆ ಬದಲು ಧರ್ಮಪ್ರೇಮವನ್ನು ಬೆಳಸಬೇಕು.

ಮಕ್ಕಳಾಸೆ ಮನಕ್ಕೆ ನೆಮ್ಮದಿಯನ್ನು ನೀಡದು; ನಿಶ್ಚಿಂತೆಯನ್ನು ತಾರದು. "ಸುತನ ಸೊಗಸು ಮಿಗಿಲೆನ್ನದೆ ಚಿಂತೆಗಳ ಮತಿವಂತರರಿದು ಮೋಹವನುಳಿದಿಹುದು" ಎನ್ನುತ್ತಾರೆ ನಿಜಗುಣರು. ಮಕ್ಕಳಾಸೆ ಚಿಂತೆಗಳ ತವರು. ಸುತನ ಸೊಗಸು ಮಿಗಿಲೆಂದು ಭಾವಿಸಬಾರದು. ಇದು ಮತಿವಂತರ ಲಕ್ಷಣವಲ್ಲ. ಏಕೆಂದರೆ:

"ಮೊದಲು ಪುತ್ರನ ವಾಂಛೆಯೊಳು ಚಿಂತೆ ಗರ್ಭವಾಗ |
ಲದು ಕೆಡದಿರಲೆಂಬ ಕಡು ಚಿಂತೆ ಪಡೆವಾ |
ಹದನುರುತರ ಚಿಂತೆ ಗ್ರಹರೋಗದುಪಹತಿ
ಯೊದಗುವ ಚಿಂತೆ ಪೊರೆಯುವ ಚಿಂತೆ ಪಿರಿದು ||೧||

ಬಾಲನ ದುರುಳತನದ ಚಿಂತೆ ಯೌವನದ |
ಕಾಲದೊಳ್ಕಂತು ಕಂಗೆಡಿಪ ಚಿಂತೆಯುದರ |

ಪೋಲೆ ವಿವಾಹನೆಸಗುವ ಚಿಂತೆ ಬಾಳುವೆಗೆ ।
ಪೇಳಿ ಬುದ್ಧಿಯನು ಕಲಿಸುವ ಚಿಂತೆ ಬಲುಹು ॥೨॥

ಬಳಿಕ ದೈವಾಧೀನದಿಂದಳಿಯಲತಿ ಚಿಂತೆ ।
ತಿಳಿಯಲಾತ್ಮಜರಿಂದೆ ಬಹು ಚಿಂತೆಗಳನು ।
ತಳೆವುದೀ ಪರಿತಥ್ಯವಹುದಾಗಿ ಶಂಭುಲಿಂಗ ।
ದೊಳು ಪ್ರೀತರೆನಿಸಿ ಚಿಂತಿಸರು ಬಲ್ಲವರು ॥೩॥

ಹೀಗೆ ಮಕ್ಕಳ ಮೋಹ ಚಿಂತೆಗಳ ಮಡುವಿಗೆ ತಳ್ಳುತ್ತದೆ. ಅಲ್ಲದೆ

"ಬಗೆಯ ಭೋಗಗಳಿರಲು ನಗುತಿಹರು ಸತಿಸುತರು ।
ನಗೆ ಹೋಗಿ ಹೊಗೆಯು ಬರಲವರು ಅಡವಿಯ-।
ಲ್ಲೊಗೆದು ಬರುತಿಹರು ಸರ್ವಜ್ಞ ॥"

ಎಂದು ಒಂದೇ ಮಾತಿನಲ್ಲಿ ಸತಿಸುತರ ಮತಿ ಎಂತಹದೆಂಬುದನ್ನು ಹೃದಯಸ್ಪರ್ಶಿಯಾಗಿ ಸರ್ವಜ್ಞನು ಸ್ಪಷ್ಟಗೊಳಿಸಿದ್ದಾನೆ. ಮಡದಿ ಮಕ್ಕಳೇ ಹೀಗಿರುವಾಗ ಇನ್ನು ಅನ್ಯರ ಮಾತೇನು ? ಮಿತ್ರರೆಲ್ಲಿಗಾದಾರು ? ಬಂಧು ಬಳಗ ವೆಷ್ಟಿದ್ದರೇನು ? ಬಂಧನವನೀಗಲರಿಯರು.

ಅಲ್ಲಲ್ಲಿಗೆ ಅಗಲಿ ಹೋಗುವ ಈ ಬಾಹ್ಯ ಸಂಸಾರವೇ ನಿತ್ಯವೆಂದರಿಯು ವುದು ಸತ್ಯವಂತಿಕೆಯ ಲಕ್ಷಣವಲ್ಲ. ತನುಮನೆಯಲ್ಲಿರುವ ಮತಿಯೆಂಬ ಮಡದಿಯನ್ನು ಮನಾಹಂಕಾರಾದಿ ಮಕ್ಕಳನ್ನು ಪ್ರಾಣಪಂಚಕ ಮಿತ್ರರನ್ನು ಸನ್ಮಾರ್ಗದಲ್ಲಿ ಸಂರಕ್ಷಿಸುವಲ್ಲಿ ತಪ್ಪಿಲ್ಲ. ಆತ್ಮಾರಾಧನೆಯಲ್ಲಿ ನಿರತವಾಗಿಸು ವುದಕ್ಕಿಂತ ಬೇರೆ ವಿವೇಕವಿಲ್ಲ ; ಬೇರೆ ವಿಶುದ್ಧತೆಯಿಲ್ಲ. ವ್ಯಾಕುಲಕ್ಕೀಡಾಗುವ ಕುಲಪದ್ಧತಿಗೆ ಅಂಟಿಕೊಂಡಿರುವುದರಿಂದೇನು ಫಲವಿಲ್ಲ.

"ಕುಲಗೆಟ್ಟವರು ಚಿಂತೆಯೊಳಗಿರ್ಪರೆಂತಲ್ಲ ।
ಕುಲಗೆಟ್ಟು ಶಿವನ ಮರೆ ಹೊಕ್ಕ ಋಷಿಗಳು ।
ಕುಲವಾದರಯ್ಯ ಸರ್ವಜ್ಞ ।"

ಶಿವಕುಳದವರಾಗಬೇಕಲ್ಲದೆ ಭವಕುಲದವರಾಗಬಾರದು. ಭವಭವದ ವ್ಯಾಕುಳಕ್ಕೆ ಪಕ್ಕಾಗಬಾರದು. ನಿತ್ಯ ಸತ್ಯಸುಖ ಸ್ವರೂಪವಾದ ಸ್ವಯಂ ಪ್ರಕಾಶಾತ್ಮಕವಾದ ಆತ್ಮ ಸ್ಥಳಕುಳಗಳಲ್ಲಿ ಆನಂದಿಸಬೇಕು. ಶರೀರ, ಹೆಂಡತಿ ಮಕ್ಕಳು, ಜತೆಗಾರರು, ಬಂಧುಬಳಗ, ಸಿರಿ, ಕುಲ ಇವೆಲ್ಲ ಹೊರಗಿನವು. ಇವುಗಳಲ್ಲಿರಿಸುವ ಪ್ರೇಮವು ಸಾಮಾನ್ಯವೂ ಅನ್ಯಾರ್ಥವೂ ಆದುದು. ಆತ್ಮ ಪ್ರೇಮವೇ ಆಂತರಿಕವಾದುದು. ಆತ್ಯಂತಿಕವಾದುದು. "ತದೇತತ್ಪ್ರೇಯಃ ಪುತ್ರಾತ್ಪ್ರೇಯೋ ವಿತ್ತಾತ್ಪ್ರೇಯೋಽನ್ಯಸ್ಮಾತ್ಸರ್ವಸ್ಮಾದಂತರತಮಂ ಯ ದಯಮಾತ್ಮಾ" ಎಂದು ಪುರುಷವಿಧ ಬ್ರಾಹ್ಮಣದಲ್ಲಿ ಉಕ್ತವಾಗಿದೆ. ವಿತ್ತಾದಿ ವಿಷಯಗಳಿಗಿಂತ ಸನ್ನಿಹಿತನೂ ಶಾಶ್ವತನೂ ಆದ ಆತ್ಮನೇ ನಿರತಿಶಯ ಪ್ರೀತಿಗೆ ಪಾತ್ರನಾಗಿದ್ದಾನೆ.

"ವಿವೇಕಿನೋ ವಿರಕ್ತಸ್ಯ ವಿಷಯೇಷ್ವಾತ್ಮರಾಗಿಣಃ ।
ಸಂಸಾರ ದುಃಖವಿಚ್ಛೇದ ಹೇತೌ ಬುದ್ಧಿಃ ಪ್ರವರ್ತತೇ ॥"

ಶ್ರೀ ರೇಣುಕ ಜಗದ್ಗುರುವು ಹಿಂದಿನ ಮಂತ್ರದಲ್ಲಿ ವಿಶ್ವಾತ್ಮನ ತ್ಯಾಗಾಂಗ ವಿವೇಕವನ್ನು ನಿರೂಪಿಸಿ ಈ ತಮ್ಮ ಮಂತ್ರಮಯ ವಾಣಿಯಲ್ಲಿ ತೇಜಸಾತ್ಮನಿಗೆ ಭೋಗಾಂಗ ವಿವೇಕವಿರಬೇಕೆಂಬುದನ್ನು ವಿಷಯ ವಿರಾಗಿ ಯಾಗಿ ಆತ್ಮರಾಗಿಯಾಗಿ ಬಾಳಬೇಕೆಂಬುದನ್ನು ಬಿತ್ತರಿಸಿದ್ದಾನೆ. ಸಂಸಾರ ದುಃಖವು ಯಾರಿಗೂ ತಪ್ಪಿದ್ದಲ್ಲ. ಆದರೆ ಸಂಸಾರ ದುಃಖಾಂಬುಧಿಯಲ್ಲಿ ಮುಳುಗಿರಬಾರದು ಸತ್ಯಸಾಧಕನು.

ಸಂಸಾರ ಒಂದು ಮಹಾಸಾಗರ. ಜಲಸಾಗರ ಜಗತ್ತಿನ ಮುಕ್ಕಾಲು ಪಾಲು ಆವರಿಸಿದ್ದರೆ ಸಂಸಾರ ಮಹಾಸಾಗರ ಸಂಪೂರ್ಣ ಜಗತ್ತನ್ನು ಆವರಿಸಿದೆ. ಆದ್ದರಿಂದ ಇದು ಮಹಾಸಾಗರ. ಇದರಲ್ಲಿ ಮುಳುಗಿದವರು ಮುಕ್ಕಾಲು ಪಾಲಿಗಿಂತ ಮಿಕ್ಕಿದ ಜನರು. ಬಾಹ್ಯಾಭ್ಯಂತರ ಸಂಸಾರ ಗುಂಡು ಕಟ್ಟಿ ಕೊಂಡಿರುವರು. ಇನ್ನು ಕೆಲವರು ಬಾಹ್ಯಸಂಸಾರವನ್ನು ಮಾತ್ರಬಿಟ್ಟು ಬೆಂಡು ಕಟ್ಟಿಕೊಂಡು ತೇಲುತ್ತಿರುವರು. ಭವ್ಯಜೀವಿಗಳೊಬ್ಬಬ್ಬರು ಪೂರ್ಣ ವಿಚಾರಾಚಾರವುಳ್ಳವರಾಗಿ ಅಂದರೆ ಅದನ್ನೇ ನೌಕೆಯನ್ನಾಗಿಸಿಕೊಂಡು

ಸಂಸಾರ ಮಹಾಸಾಗರದಲ್ಲಿ ಮುಂದು ಮುಂದಕ್ಕೆ ಸಾಗುತ್ತಿರುವನು. ಸಾಗಿ ಸಾಗರದಿಂದ ಪಾರಾಗುತ್ತಿರುವರು.

"ಒಡಲು ತಾನಳಿವಲ್ಲಿ ಮಡದಿಯರು ಮಡಿವಲ್ಲಿ |
ತಡೆಯೆಡರು ನಿಂದೆ ಬರುವಲ್ಲಿ ಸಮತೆಯ |
ಬಿಡದಿಹನೆ ಯೋಗಿ ಸರ್ವಜ್ಞ |"

ವಿಷಯ ವಿರಕ್ತಿಯುಳ್ಳ ವಿವೇಕಿಗೆ ವಿಶ್ವದ್ವಂದ್ವದಲ್ಲಿ : ಸಮಚಿತ್ತನಾಗಿರುತ್ತಾನೆ. ವಿಷಯ ಭೋಗಿಯಾಗದೆ ಆತ್ಮಭೋಗಿಯಾಗಿರುತ್ತಾನೆ.

"ನಿತ್ಯಾನಿತ್ಯವಿವೇಕಿನಃ ಸುಕೃತಿನಃ ಶುದ್ಧಾಶಯಸ್ಯಾತ್ಮನೋ !
ಬ್ರಹ್ಮೋಪೇಂದ್ರ ಮಹೇಂದ್ರ ಮುಖ್ಯ
ವಿಭವೇಷ್ವಸ್ಥಾಯಿತಾಂ ಪಶ್ಯತಃ ||
ನಿತ್ಯಾನಂದ ಪದೇ ನಿರಾಕೃತ ಜಗತ್ಸಂಸಾರ ದುಃಖೋದಯೇ |
ಸಾಂಬೇ ಚಂದ್ರಶಿರೋಮಣೌ
ಸಮುದಯೇದ್ಭಕ್ತಿರ್ಭವಧ್ವಂಸಿನೀ ||"

ಪ್ರಾಜ್ಞಾತ್ಮನು ತನ್ನ ಯೋಗಾಂಗದ ಯೋಗವೆಲ್ಲಿ ಎಂಬುದನ್ನು ಎಚ್ಚರಿಕೆಯಿಂದ ಅಳವಡಿಸಿಕೊಂಡಿರಬೇಕು. ಬರೀ ಅರಿವಿನ ಎಚ್ಚರಿಕೆಯನ್ನಲ್ಲ ಆಚಾರದ ಎಚ್ಚರಿಕೆಯೂ ಇರಬೇಕು. ನುಡಿ ನಡೆಗಳೊಂದಾಗಿರಬೇಕು. ನಿರ್ಮಲಾಂತಃಕರಣಿಯಾಗಿರಬೇಕು. ಬ್ರಹ್ಮಾದಿ ದೇವತೆಗಳ ವೈಭವಕ್ಕೂ ಆಶಿಸದವನಾಗಿರಬೇಕು. ಜಾಗತಿಕ ಸಂಸಾರ ದುಃಖದಿಂದ ದೂರನಾಗಿರಬೇಕು. ಅಂತಾದಾಗ ನಿತ್ಯಾನಂದದಾಯಕನಾದ ಸಾಂಬನಾದ ಸಂಸಾರ ದುಃಖದೂರನಾದ ಚಂದ್ರಶೇಖರನಲ್ಲಿ ಭವಧ್ವಂಸಿಯಾದ ನವಭಕ್ತಿಯು ಉತ್ತಮವಾಗಿ ಉತ್ಪತ್ತಿಯಾಗುತ್ತದೆ.

ಜೀವನಿಗೆ ಅಡಿಗಡಿಗೆ ಅಜ್ಞಾನ ಕಾಡುತ್ತದೆ; ಜಡಸಂಬಂಧ ಬಂಧವಾಗಿರುತ್ತದೆ. ಅಂಗತ್ರಯ ಅವಸ್ಥಾತ್ರಯಗಳ ಅಂಡಲೆಯಲ್ಲಿ ಅಳಲುತ್ತಿರುತ್ತಾನೆ. ಆಜನ್ಮವೂ ಸಂಸಾರ ಬಲೆಯಲ್ಲಿ ಬಿದ್ದು ಬಳಲುತ್ತಿರುತ್ತಾನೆ. ಈ

ಸಂಸಾರ ಒಮ್ಮೆ ಇದ್ದು ಇನ್ನೊಮ್ಮೆ ತೊಲಗುವುದಿಲ್ಲ. ಸಾಮಾನ್ಯರಿಂದ ತೊಲಗಿಸಲು ಸಾಧ್ಯವಿಲ್ಲ.

"ಆರು ತರಹರಿಸಬಹುದಡಿಗಡಿಗೆ ತೋರುವತಿ |
ಘೋರ ಸಂಸಾರದನುತಾಪ ಸಂತತಿಯ ||ಪ||

ಮಾತೆಯುದರದೊಳು ಮೊಗವಿಡದ ಮುನ್ನ ಸುವಳಿವ |
ಪೂತಿ ಗಂಧದ ಹೇಯವನು ಸಿಡಿಲ ಸಮುದಾ-|
ಘಾತಿ ಮಿಗೆ ತೊಡೆದು ಕೆಡಪುವ ಸೂತಿ ವಾಯುವನು |
ಯಾತನೆಯ ನಡುಗಡಲದೆನಿಪ ಜನನವನು ||೧||

ನಿರಯದೋಕಳಿಯನಾಡುವ ಪರಿಯ ಬಾಲ್ಯವನು |
ದುರುಳತೆಯೊಳೇನನರಿಯದ ಶಿಶುತ್ವವನು |
ಮರುಳುಗೊಳಿಸುವ ಕಂತುವಿನ ಕಾಟ ಮೊದಲಾದ |
ದುರಿತ ಕುಲಬಂಧುವೆನಿಸುವ ಯೌವನವನು ||೨||

ನುಡಿಯಬಾರದ ಲಜ್ಜೆಗೊಡುವ ಜರೆಯನು ತನ್ನ |
ನಡಸಿ ತೀರದ ಬಾಧೆಗೊಳಿಪ ಮರಣವನು |
ಜಡಿವ ಯಮಭಟರ ಕೋಪವನಿಂತುಭವಭವದೊ-|
ಳಿಡೆವಿಡದೆ ಶಂಭುಲಿಂಗವೆ ಬಿಡಿಸು ನೀವಿದನು ||೩||

ಭವಭವದಲ್ಲಿ ಬಂದು ಬಿಡದೆ ಕಾಡುವ ಭವವಿದು ಬಗೆಬಗೆಯಾಗಿ ಬೆನ್ನು ಬಿದ್ದಿರುವುದು. ಈ ಸಂಸಾರ ಕತ್ತಲೆ ಕಳೆಯಬೇಕಾದರೆ ಆ ಚಿಚ್ಚಂದ್ರ ಚೂಡನಾಗಬೇಕು. ಆ ಚಿಚ್ಛಕ್ತಿ ಸಂಪನ್ನನೇ ಆಗಬೇಕು. ಜಡ ಜಾಗತಿಕ ಸಂಸಾರದುಃಖದೂರನಾಗಿ ನಿತ್ಯಾನಂದ ತುಂದಿಲನಾಗಿರಬೇಕು. ಅಂತಹ ಶಿವನಲ್ಲಿ ಅಥವಾ ಶ್ರೀಗುರುವಿನಲ್ಲಿ ಈ ಶುದ್ಧ ಜೀವನಿಗೆ ಭಕ್ತಿಯುದಯವಾಗಬೇಕು. ಇಲ್ಲವಾದರೆ ಇದು ತೊಲಗದು. ಅದು ಬೆಳಗದು.

ಸಾಂಬನೊಲಿಯಬೇಕಾದರೆ ನಂಬುಗೆಯು ಅವಶ್ಯಕ. ನಂಬದೆ ನಚ್ಚದೆ ಇದ್ದರೆ ತುಂಬಿಬಾರದು ಶಿವಾತ್ಮವಿದ್ಯಾಗುರುವಿನ ಕರುಣಾಕಟಾಕ್ಷ. ತಾನಾಗನು ಭವವಿಮುಕ್ತ.

"ಶಿವಭಕ್ತಿಯುಳ್ಳಾತ ಭವ ಮುಕ್ತನಾದಾತ !
ಶಿವಭಕ್ತಿಯಿರದ ಭುಕ್ತಗೆ ಎಂದೆಂದು ।
ಭವಮುಕ್ತಿ ಇಲ್ಲ ಸರ್ವಜ್ಞ ॥"

ಭಕ್ತಿಯೆಂದರೆ ಒಳಿತಾದುದನ್ನು ಭಜಸುವಿಕೆ; ಭಜಿಸಿ ಹೊಂದುವಿಕೆ. ಒಂದನ್ನು ಸೇರದೆ ಹೊಂದಿರುವುದು ಸಾಯದು; ಮರೆಯಾಗದು. ಹುಳಿ ಕಮ್ಮಿಯಾಗಬೇಕಾದರೆ ಉಪ್ಪನ್ನೊ ಸಕ್ಕರೆಯನ್ನೊ ಸೇರಿಸಲೇಬೇಕು. ಅಂತೆಯೇ ಭವವೆಂಬ ಕಹಿ ಕಮ್ಮಿಯಾಗಬೇಕಾದರೆ ಭವಹರನೆಂಬ ಸಿಹಿಯನ್ನು ಸೇರಲೇಬೇಕು.

"ದೇವರನು ನೆನವಂಗೆ ಭಾವಿಸಿದು ಬಂದಿಹುದು ।
ದೇವರನು ನೆನೆಯದಧಮಂಗೆ ಇಹ ಪರದಿ ।
ಯಾವುದೂ ಇಲ್ಲ ಸರ್ವಜ್ಞ ।"

ಪಿಂಡ ಪಾಪರಹಿತವಾಗಿ ಅಂತಃಕರಣ (ಬುದ್ಧಿ) ವಿವೇಕಸಂಪನ್ನವಾಗಿ ನಿಂತ ಬಳಿಕ ಭಾವವು ಭವ ವಿಮುಕ್ತವಾಗಬೇಕು. ಅದಾಗಬೇಕಾದರೆ ಭಾವಕ್ಕೆ ದೈವೀ ಪ್ರೇಮದ ಸಂಸ್ಪರ್ಶವಾಗಬೇಕು. ಕಂಡ ದೈವದ ಪ್ರೇಮಕ್ಕೆ ಎಳಸಿದರೆ ಏನೂ ಫಲವಿಲ್ಲ.

"ಭ್ರಷ್ಟ ದೈವಕೆ ಬಾಯಬಿಟ್ಟಲ್ಲಿ ಫಲವಿಲ್ಲ ।
ಸೃಷ್ಟಿಗೀಶನ ಭಜಿಸಿದರೆ ಮುಂದಕೆ ।
ಇಷ್ಟಾರ್ಥವೀವ ಸರ್ವಜ್ಞ !"

ತನಗೆ ತ್ರಿವಿಧ ತನುವಿನಲ್ಲಿ ಪ್ರಾಪ್ತವಾದ ಪಿಂಡತ್ವ, ಪಿಂಡಜ್ಞಾನತ್ವ, ಸಂಸಾರ ಹೇಯತ್ವ (ಭಕ್ತಿತ್ವ ಅಥವಾ ಸತ್ಕ್ರಿಯತ್ವ)ಗಳು ಅಚ್ಚಳಿಯದೆ ಉಳಿದು ಬೆಳೆದು ಬರಬೇಕಾದರೆ ತನಗಿಷ್ಟವಾದ ತನ್ನನ್ನು ಅದೆಂದಿಗೂ ಅಗಲದ ತ್ರಿವಿಧ ತನುವಿನಲ್ಲಿಯೂ ತೊಳಗಿ ಬೆಳಗುವ ಲಿಂಗಧಾರಣವಿದ್ದಾಗಬೇಕು.

"ಹಲವನೋದಿದಡೇನು ಚೆಲುವನಾದಡೇನು ।
ಕುಲವೀರನೆನಿಸಿ ಫಲವೇನು ?
ಲಿಂಗದ ಒಲುಮೆ ಇಲ್ಲದಲೆ ಸರ್ವಜ್ಞ ।"

ತನ್ನನ್ನು ಶಿವತ್ವದ ಸಮರಸಕ್ಕೆ ಕರಿಗೊಳಿಸುವ ಲಿಂಗವು ತನಗಾಗ ಬೇಕು. ತನಗಾಗಬೇಕಾದರೆ ಅಂತಹ ಉತ್ತಮವಾದ ಚಿತ್ಕಳೆಯನ್ನು ತುಂಬಿ ಕೊಡುವ ಶ್ರೀ ಗುರುವನ್ನೇ ಆಶ್ರಯಿಸಬೇಕು. ಶಿವನಂತೆ ಶ್ರೀಗುರುವಿನಲ್ಲಿ ಭಕ್ತಿಯನ್ನಿರಿಸಲೇ ಬೇಕು.

"ಸತಿಯರಾದಡೇನು ಸುತರಾಗಿ ಫಲವೇನು !
ಶತಕೋಟಿ ಧನವಗಳಿಸೇನು ?
ಭಕ್ತಿಯ ಸ್ಥಿತಿಯಿಲ್ಲದನಕ ಸರ್ವಜ್ಞ ।"

"ವಿದ್ಯೆ ಕಲಿತಡೆ ಇಲ್ಲ; ಬುದ್ಧಿ ಕಲಿತಡೆ ಇಲ್ಲ ।
ಉದ್ಯೋಗ ಮಾಡಿದಡೆ ಇಲ್ಲ ಗುರು ಮುಖ-।
ವಿದ್ದಲ್ಲದಿಲ್ಲ ಸರ್ವಜ್ಞ ॥"

"ಹರ ತನ್ನೊಳಿರ್ದು ಗುರು ತೋರದೇ ತಿಳಿವುದೇ ?।
ಮರದೊಳಗಗ್ನಿಯಿರುತಿರ್ದು ತನ್ನ ತಾ-।
ನರಿಯಬೇಕೆಂದ ಸರ್ವಜ್ಞ ॥"

"ತಾಪದಲಿ ಸಂಸಾರ ಕೂಪದಿಲಿ ಬಿದ್ದವರು ।
ಆಪತ್ತನಳಿದು ಪೊರಮಡಲು ಗುರುಪಾದ ।
ಸೋಪಾನವಯ್ಯ ಸರ್ವಜ್ಞ ॥"

ಭಕ್ತಿ ಜ್ಞಾನ ಕ್ರಿಯೆಗಳ ಬಲವಿಲ್ಲದೆ ಸಂಸಾರ ಸಾಗರದ ಸುಳಿಗಳಲ್ಲಿ ಸಿಕ್ಕು ಬಿದ್ದು ಸಂತಾಪ ಸಂತಪ್ತರಾಗಿ ಭಕ್ತಿಯೆಂಬ ಬೆಂಡನ್ನು ಬೆಂಬಲವಾಗಿಸಿ ಕೊಂಡು ಜನ್ಮವೆಂಬ ಸುಳಿಗಳಲ್ಲಿ ಮುಳುಗದೆ ತೆರೆಗಳ ಸೆಳೆತಗಳನ್ನು ತಪ್ಪಿಸಿ ಕೊಳ್ಳದೆ ತೇಲುತ್ತಿರುವ ಶಿಷ್ಯರನ್ನು ಉದ್ಧರಿಸಲು ದೃಕ್ಕ್ರಿಯಾರೂಪ ನೌಕೆ ಯಲ್ಲಿರುವ ಶ್ರೀಗುರುವೇ ಸರ್ವ ಸಮರ್ಥನು. 'ಗುರುಃ ಸಾಕ್ಷಾತ್ ಪರಬ್ರಹ್ಮ' ಮರ್ತ್ಯಲೋಕದ ಮಾನವರಿಗೆ ಶ್ರೀಗುರುವೇ ಪ್ರತ್ಯಕ್ಷ ಪರಬ್ರಹ್ಮ ಸ್ವರೂಪನಾಗಿ ದ್ದಾನೆ.

ಸಾಂಸಾರಿಕ ಮೋಹಾತಿಶಯದಿಂದ ಶಾರೀರಕ ಬಲ ಮಾನಸಿಕ ಬಲಗಳು ತಗ್ಗುತ್ತವೆ. ಆಮ್ಲಜನಕ ಹೊಸರಕ್ತ ಹೆಚ್ಚದೆ ಹೃದಯ ಬಲವೂ ಕಮ್ಮಿ

ಯಾಗುತ್ತದೆ; ಅಮೃತ ಪ್ರಾಯವಾದ ಓಜಸ್ಸು ತೇಜಸ್ಸು ತಗ್ಗುತ್ತವೆ; ಮೆದುಳಿನ ವಿದ್ಯುದಲೆಗಳು ನಿಸ್ತೇಜವಾಗುತ್ತವೆ. ಈ ನಿಸ್ತೇಜತೆಯಿಂದ ಪ್ರಜ್ಞಾಹೀನತೆಯು ಪ್ರಾಪ್ತವಾಗುವುದುಂಟು. ಹೃದಯ ದೌರ್ಬಲ್ಯದಿಂದ ಉಸಿರಾಟ ಬಳಿಕ ನಿಲ್ಲುತ್ತದೆ. ಹೀಗೆ ಮೆದುಳು ಮತ್ತು ಹೃದಯಗಳೆರಡು ತಂತಮ್ಮ ಕಾರ್ಯವನ್ನು ಕಮ್ಮಿಮಾಡಿ ಕೊನೆಗೊಳ್ಳುವುದೆ ಸಾವು. ಇನ್ನೂ ಬದುಕುವ ಬಾಳುವ ಅವಧಿಯಿದ್ದರೂ ಮಧ್ಯದಲ್ಲಿಯೇ ಮರಣಕ್ಕೆ ತುತ್ತಾಗುವ ಪ್ರಸಕ್ತಿಯೊದಗುತ್ತದೆ. ಹೆಚ್ಚು ಜನ ಈ ಅಪಮೃತ್ಯುವಿಗೆ ಈಡಾಗುತ್ತಾರೆ. ಇದರಿಂದಾಗಿ ಮೆದುಳನ್ನು ಹೃದಯುವನ್ನು ಬಲಪಡಿಸುವ ಪಿಂಡಜ್ಞಾನ, ಸಂಸಾರ ಹೇಯಸ್ಥಲಗಳೆರಡನ್ನು ಪಿಂಡಾತ್ಮನು ಸಂಪಾದಿಸಲೇ ಬೇಕು. ಪಿಂಡ ಜ್ಞಾನದಿಂದ ಮೆದುಳು ತನ್ನ ಪ್ರಭೆಯನ್ನು ತನ್ನ ಪ್ರಾಜ್ಞತೆಯ ಬಲವನ್ನು ಹೆಚ್ಚಿಸಿಕೊಳ್ಳಲು ಸಮರ್ಥವಾಗುತ್ತದೆ. ಸಂಸಾರ ದುಃಖಗಳನ್ನು ಚಿಂತೆ ಗಳನ್ನು ತೊರೆಯುವುದರಿಂದ ಪ್ರಾಣ ಶಕ್ತಿ ಪಟುವಾಗುತ್ತದೆ. ಹೀಗೆ ಜ್ಞಾನ ಬಲ-ಕ್ರಿಯಾಬಲಗಳನ್ನು ಹೆಚ್ಚಿಸಿಕೊಳ್ಳುವುದೇ ಜೀವನ. ಬರೀ ಜೀವನವಲ್ಲ, ಉಜ್ಜೀವನ.

ಓದುವ ಆಸೆ ಹುಟ್ಟಿದವನಿಗೆ ಓದಿಸುವಾತನು (ಶಿಕ್ಷಕನು) ಹೇಗೆ ಆವಶ್ಯಕವೋ ಹಾಗೆ ದೃಕ್ಕ್ರಿಯೆಗಳು ಬೇಕೆಂಬುವವನಿಗೆ ಅವನ್ನು ಒದಗಿಸಿ ಕೊಡಲು ಗುರು ಅಗತ್ಯ; ಅನಿವಾರ್ಯ. ಸಮರ್ಥ ಗುರು ಶಿಷ್ಯನ ಎದೆ ಮೆದುಳುಗಳಿಗೆ ಕ್ರಿಯಾಜ್ಞಾನಗಳ ಸತ್ವವನ್ನು ತುಂಬುತ್ತಾನೆ. ಸಚ್ಚಿ ಚ್ಚೈತನ್ಯವನ್ನು ಸಂವೃದ್ಧಿಸುತ್ತಾನೆ. ಇದರಿಂದಾಗಿ ಶಿಷ್ಯನ ಆಯುರಾರೋಗ್ಯ ಗಳು ಅಭಿವೃದ್ಧಿಯಾಗುತ್ತವೆ. ನಿರ್ದಿಷ್ಟ ಕಾಲದವರೆವಿಗೂ ನಷ್ಟವಾಗದಿರುತ್ತವೆ.

ಪಿಂಡಾತ್ಮನು ಪಿಂಡಜ್ಞಾನ, ಸಂಸಾರ ಹೇಯಗಳೆಂಬ ಸಾಧನ ರೂಪ ಭಕ್ತಿ ಕಾಣಿಕಾಪಾಣಿಯಾಗಿ ಶ್ರೀಗುರುವಿನ ಬಳಿಗೆ ಹೋಗಿ ಬಾಗಿ ಬೇಡಿ ಕೊಂಡರೆ ಗುರುವು ಶಿಷ್ಯನನ್ನಾಗಿ ಸ್ವೀಕರಿಸಿ ಉತ್ತಮಬಾಳಿಗೆ ಉಪಕಾರಕವಾದ ದೃಕ್ಕ್ರಿಯಾತ್ಮಕವಾದ ತನ್ನ ಕಾರುಣ್ಯರಸವನ್ನು ಊಡಿಸುತ್ತಾನೆ. ಮುಂದು ಮುಂದಕ್ಕೆ ದಿವ್ಯರಸ ಜೀವನ ಯಾತ್ರೆ ಜರಗುತ್ತದೆ. ದಿವ್ಯ ಫಲಗಳು ಪ್ರಾಪ್ತ ವಾಗುತ್ತವೆ.

ದೃಕ್ಕ್ರಿಯೆಗಳಿಲ್ಲದ ಜೀವನವೇ ಮೃತಜೀವನ. ದೃಕ್ಕ್ರಿಯೆಗಳ ಸುಳಿ

ದಾಟಿವೇ ಅಮೃತಜೀವನ. ಭವರೋಗವು ನೀಗಿ ಶಿವಯೋಗವು ಸಂಪ್ರಾಪ್ತ ವಾಗಿ ಬಾಳು ಬದುಕಿಗೆ ಬಲವೊದಗುತ್ತದೆ; ಬೆಲೆ ಬರುತ್ತದೆ.

ಶ್ರೀಗುರುವು ಶಿಷ್ಯನಿಗೆ ಹೃದಯ ಬಲವನ್ನು ತುಂಬುವಾಗ ಭವರೋಗಕ್ಕೆ ವೈದ್ಯನಾಗುತ್ತಾನೆ. ಮಿದುಳಿನ ಅರುವಿನ ತಿರುಳನ್ನು ತುಂಬುವಾಗ ಶಿವ ಯೋಗ ಶಿಕ್ಷಕನಾಗುತ್ತಾನೆ. ಆದಕಾರಣ ಮಾನವನು ಶಿಷ್ಯನಾಗಿ ಶ್ರೀಗುರು ವಿನ ಕಾರುಣ್ಯವನ್ನು ಪಡೆದಾಗಬೇಕು. ಪಡೆಯಲು ತಕ್ಕವನಾಗಬೇಕಾದರೆ ಸಂಸಾರ ತ್ಯಾಗವನ್ನು ಮಾಡಿಯಾಗಬೇಕು

"ತ್ಯಜೇದೇಕಂ ಕುಲಸ್ಯಾರ್ಥೇ, ಗ್ರಾಮ
ಸ್ಯಾರ್ಥೇ ಕುಲಂ ತ್ಯಜೇತ್ |
ಗ್ರಾಮಂ ಜನಪದಸ್ಯಾರ್ಥೇ,
ಹ್ಯಾತ್ಮಾರ್ಥೇ ಪೃಥಿವೀಂ ತ್ಯಜೇತ್ ||"

ಮನೆತನದ ಹಿತಕ್ಕಾಗಿ ಒಗ್ಗದಿರುವ ಒಬ್ಬನನ್ನು ಬಿಟ್ಟುಬಿಡಬೇಕು. ಊರಿನ ಉಪಕಾರಕ್ಕಾಗಿ ಮನೆಯನ್ನಾಗಲಿ ಮನೆಯ ಬಳಗವನ್ನಾಗಲಿ ಬಿಡ ಬೇಕು. ನಾಡಿನ ಹಿತಕ್ಕಾಗಿ ಊರನ್ನಾದರೂ ಬಿಡಬೇಕು. ಆತ್ಮೋದ್ಧಾರ ಕ್ಕಾಗಿ ಪ್ರಪಂಚವನ್ನೇ ಪರಿಹರಿಸಬೇಕು. ಇಲ್ಲಿ ಬಿಡುವುದೆಂದರೆ ಬಿಟ್ಟೋಡು ವುದಲ್ಲ. ಕಟ್ಟಡವಿಯ ಸೇರುವುದಲ್ಲ. ಮಾನಸಿಕವಾಗಿ ಪ್ರಾಪಂಚಿಕ ಚಿಂತನೆ ಯನ್ನು ಛೇದಿಸಬೇಕು. ಸತ್ಯವಾದ ಶಿವವಾದ ಸಂಸ್ಕಾರವನ್ನು ಪಡೆಯಬೇಕು. ಅಂತಹ ಸಂಸ್ಕಾರವುಳ್ಳ ಶ್ರೀಗುರುವನ್ನಾಶ್ರಯಿಸಬೇಕು.

"....ಕೆಡುವುದೇ ಗುರುವಿನುಪದೇಶ ?
ಪಿಂಡವ ಮರೆವುದೇ ಶಿವಜ್ಞಾನವು ?
ಹಿಂದೆ ಏಳು ನೂರು ವರುಷ ಮಂಡೋದರಿಯ
ಬಸುರಲ್ಲಿ ಉದಯಂಗೈಯನೇ ಇಂದ್ರಜಿತು ?
ನೀವು ನಾನು ಹೊಟ್ಟೆಯಲ್ಲಿರ್ದಂದು ವಿಭೂತಿಯ
ಪಟ್ಟವ ಕಟ್ಟಿದಂದೆ ಅನುಗ್ರಹವಾಯಿತ್ತು.
ಕೂಡಲ ಚೆನ್ನಸಂಗಮದೇವಯ್ಯಾ,
ನಿಮ್ಮ ತೊತ್ತಿನ ತೊತ್ತು ನಾನು ಚೆನ್ನಬಸವಣ್ಣನು."

ಗುರುಕಾರುಣ್ಯಸ್ಥಲ

೪

"ತತೋ ವಿವೇಕ ಸಂಪನ್ನೋ ವಿರಾಗೀ ಶುದ್ಧಮಾನಸಃ
ಜಿಜ್ಞಾಸುಃ ಸರ್ವಸಂಸಾರ ದೋಷಧ್ವಂಸಕರಂ ಶಿವಂ ।
ಉಪೈತಿ ಲೋಕ ವಿಖ್ಯಾತಂ ಲೋಭ ಮೋಹ ವಿವರ್ಜಿತಂ
ಆತ್ಮ ತತ್ತ್ವ ವಿಚಾರಜ್ಞಂ ವಿಮುಕ್ತ ವಿಷಯ ಭ್ರಮಂ
ಶಿವ ಸಿದ್ಧಾಂತ ತತ್ತ್ವಜ್ಞಂ ಛಿನ್ನ ಸಂದೇಹ ವಿಭ್ರಮಂ
ಸರ್ವತಂತ್ರ ಪ್ರಯೋಗಜ್ಞಂ ಧಾರ್ಮಿಕಂ ಸತ್ಯವಾದಿನಂ ॥
ಲಿಂಗಾಂಗ ಸ್ಥಲಭೇದಜ್ಞಂ ಶ್ರೀಗುರುಂ ಶಿವವಾದಿನಮ್ ।"

ಪಾವನಾತ್ಮನಾದ ಪಿಂಡ (ಸಾಧಕ)ನಿಗೆ ಅರಿವೆಂಬ ಅರುಣೋದಯವಾಗಲು ಸಂಸಾರವೆಂಬ ತಿಮಿರ ನಸು ಹರಿಯುತ್ತದೆ. ಕಣ್ಣ ಪರೆ ಕೊಂಚ ಕಡಿಮೆಯಾಗುತ್ತದೆಯಾದರೂ ಮಸಕು ಚೆನ್ನಾಗಿ ಚೆದುರಿರದು. ಆಗ ಗುರು ಭಾನು ಉದಯವಾಗಬೇಕು; ಆಗುತ್ತಾನೆ. ಆ ಗುರು ಭಾನುವಿನ ಪ್ರಭೆಯಿಂದ ಮಸಕಿನ ಮುಸುಕು ತೆರೆಯುತ್ತದೆ. ಶಿಷ್ಯನ ಕಣ್ಣು ತೆರೆಯುತ್ತವೆ. ಹೃದಯಕಮಲ ಅರಳುತ್ತದೆ. ಆಗ ಶಿಷ್ಯನು ಕಣ್ತೆರೆದು ಕರುಳೊಲಿದು ವಿರಾಗಿಯಾಗಿ ವಿಶುದ್ಧನಾಗಿ ಶಿವತತ್ತ್ವವನ್ನು ತಿಳಿಯಲು ತವಕಿಸುತ್ತಾನೆ. ಕಾಣದ ಆ ಪರಶಿವತತ್ತ್ವವನ್ನು ತಂದು ತೋರುವ ಸಾಕ್ಷಾತ್ ಶಿವನೆನಿಸಿರುವ ಶ್ರೀಮಂತ ಗುರುವಿನ ಸನ್ನಿಧಿಯನ್ನೇ ಸೇರಬಯಸುತ್ತಾನೆ; ಸೇರುತ್ತಾನೆ.

"ತದ್ವಿಜ್ಞಾನಾರ್ಥಂ ಸದ್ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್"

ಎಂದು ಮುಂಡಕೋಪನಿಷತ್ತು ಮುಖೋದ್ಗತವಾಗಿ ಮುಖ್ಯವಾಗಿ ಉಪದೇಶಿಸಿದೆ. ಆ ಪರಶಿವನನ್ನು ಅರಿಯಬೇಕಾದರೆ ಅಳವಡಿಸಿಕೊಳ್ಳಬೇಕಾದರೆ

ಸದ್ಗುರುವನ್ನೇ ಆಶ್ರಯಿಸಬೇಕು. ಸದ್ಗುರುವು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರಬೇಕು. ಶಿಷ್ಯನು ರಿಕ್ತಹಸ್ತನಾಗಿದೆ ಅವರಲ್ಲಿಗೆ ಹೋಗಬೇಕು. ತನ್ನಲ್ಲಿ ಏನಿಲ್ಲದಿದ್ದರೂ ಸಮಿದಂಜಲಿಯಾಗಿ ಅಥವಾ ಸುಮಾಂಜಲಿಯಾಗಿ ಸನ್ನಿಧಿಯ ಸಾರಬೇಕು. ಶ್ರೀಗುರುವಿನ ಶ್ರೀಚರಣ ನಿಧಿಯ ಹೃದಯದಿಂದ ಹಿಡಿಯಬೇಕು. ಹಸನಾಗಿ ಹೊಸಬನಾಗಿ ಹಿಡಿಯಬೇಕು.

"ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ
ಹಿಡಿದಿಹೆನೆಂದರೆ ಸಿಕ್ಕದೆಂಬ ಬಳಲಿಕೆಯ ನೋಡಾ !
ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ
ಕಾಣದುದ ಕಾಣಬಹುದು ಗೊಗ್ಗೇಶ್ವರಾ !"

"ಹರ ತನ್ನ ರೂಪ ತೋರಬೇಕೆಂದು ಗುರುರೂಪಾಗಿ ಮರ್ತ್ಯಕ್ಕೆ ಬಂದು ಮನಸ್ಥಲಕ್ಕೆ ಮಂತ್ರವಾದನು ; ತನುಸ್ಥಲಕ್ಕೆ ಪ್ರಸಾದವಾದನು ; ಕರಸ್ಥಲಕ್ಕೆ ಲಿಂಗವಾದನು ; ಪ್ರಾಣಸ್ಥಲಕ್ಕೆ ಜಂಗಮವಾದನು. ಇಂತೀ ಚತುರ್ವಿಧ ಸ್ವಾಯುತವಾದನು ಕೂಡಲ ಚೆನ್ನಸಂಗಯ್ಯನಲ್ಲಿ."

ಶ್ರೀಗುರು ಸಾಕಾರ. ಶಿವನು ನಿರಾಕಾರ. ನಿರಾಕಾರದಲ್ಲಿ ಏನೊಂದೂ ತೋರದು ; ಏನೂ ಸಿಕ್ಕದು. ಅದನ್ನು ಕಾಣಬಯಸುವವನು ಶ್ರೀಗುರುವಿನಾಕಾರದಲ್ಲಿಯೆ ಕಾಣಬೇಕು. ಕಾರಣ ಕಾಣುವ ಕಳಾಗುರುವಿನ ಚರಣ ಪದ್ಮವನ್ನು ಪಿಡಿಯಬೇಕು. ಗುರುಕರುಣ ಮಕರಂದವನ್ನು ಪಾನ ಮಾಡಬೇಕು. ಶ್ರೀಗುರುವಿನ ಕರುಣವುಂಟಾದರೆ ಶಿವತ್ವ ಪ್ರಾಪ್ತಿಯಾಗುತ್ತದೆ. ಶಿವತ್ವಪ್ರಾಪ್ತಿಯಿಂದ ಸರ್ವದೋಷಗಳು ಧ್ವಂಸವಾಗುತ್ತವೆ. ಸಂಸಾರ ತಿಮಿರ ತಿಳಿಯಾಗುತ್ತದೆ.

ಎಷ್ಟೇ ಒಳ್ಳೆಯದಾಗಿದ್ದರೂ ಅದು ಅಸಾಧ್ಯವಾಗಿದ್ದರೆ ನೇರವಾಗಿ ಅದನ್ನು ಸಾಧಿಸಲು ಹೊರಟರೆ ಅದು ಸಿಕ್ಕದು. ಅದರ ಬಳಲಿಕೆ ತಪ್ಪದು. ಅಸಾಧ್ಯವಾದುದನ್ನು ಸಾಧಿಸುವ ಸದುಪಾಯವನ್ನು ಕಂಡುಕೊಳ್ಳಬೇಕು. ಸಾಧ್ಯವಿರುವ ಮಾರ್ಗವನ್ನು ಹಿಡಿಯಬೇಕು. ಸಾಲಂಬದಿಂದ ನಿರಾಲಂಬಕ್ಕೇರಬೇಕು.

ಆ ಸರ್ವಶೂನ್ಯ ನಿರಾಲಂಬ ವಸ್ತುವನ್ನು ನಮಗೆ ಒದಗಿಸಿಕೊಡುವಾತನು ಶ್ರೀಗುರು. ಈತನು ನಮಗೆ ಸನ್ನಿಹಿತನು; ಸತ್ಕರುಣ ಸಂಯುತನು. ಶಿಷ್ಯರನ್ನು ಕರುಣಿಸುವ ಶ್ರೀಗುರು ಸಮರ್ಥಶಾಲಿಯಾಗಿರಬೇಕು ; ಕೀರ್ತಿಶಾಲಿಯಾಗಿರ ಬೇಕು. ಪಿಂಡಾಂಡ ಬ್ರಹ್ಮಾಂಡ ಎರಡರಲ್ಲಿಯೂ ವಿಖ್ಯಾತನಾಗಿರಬೇಕು. ಭುವನ ಜನಮಾನ್ಯನಾಗಿರಬೇಕು. ಲೋಭ ಮೋಹ ರಹಿತನಾಗಿರಬೇಕು. ಲೋಭ ವೆಂದರೆ ಕೃಪಣತೆ ಮತ್ತು ಅತ್ಯಾಶೆ. ಇವೆರಡೂ ಗುರುವಿನಲ್ಲಿರಬಾರದು. ಲೋಭಿ ಯಾಗುವುದಕ್ಕಿಂತ ಬೇರಿಲ್ಲ ಪಾಪ. 'ಲೋಭ ಮೂಲಾನಿ ಪಾಪಾನಿ' 'ಕಡುಲೋಭದಿಂದೆ ದುರ್ಗುಣಮನ್ಯಮುಂಟೆ?' ಎಂಬುವು ಅದನ್ನೇ ಸಾಟುತ್ತವೆ.

"ನುಡಿಸುವುದಸತ್ಯವನು, ಕೆಡಿಸುವುದು ಧರ್ಮವನು |
ಹಿಡಿಸುವುದು ಕಟ್ಟೆ ಒಡಲನು, ಲೋಭದ-|
ಗಡಣ ತಾನಯ್ಯ ಸರ್ವಜ್ಞ ||"

ಆಸೆಗೆ ಕೊನೆ ಮೊದಲಿಲ್ಲ. ಆದ್ದರಿಂದ ಲೋಭ ಅದೊಂದು ಆಳಕಡಲ. ಅದರಲ್ಲಿ ಅದೆಷ್ಟೋ ಕ್ರೂರ ಜಂತುಗಳಿರುತ್ತವೆ. ಲೋಭಿಗೆ ತೃಪ್ತಿಯಿರುವುದಿಲ್ಲ. ಶಾಂತಿಯಿರುವುದಿಲ್ಲ. ಕಾರಣ ಲೋಭವನ್ನು ಲಯ ಗೊಳಿಸಬೇಕು. ಅಂತೆಯೇ ಮೋಹವೂ ಕೆಟ್ಟದು. ಮೋಹ ಇರುವಲ್ಲಿ ಕಣ್ಣಿರುವುದಿಲ್ಲ. ಕಣ್ಣಿದ್ದರೂ ಕಾಣುವುದಿಲ್ಲ. ಮೋಹ ಅದೊಂದು ಮಹೇಂದ್ರಜಾಲ; ಅಜ್ಞಾನಮೂಲ. ಮೋಹಕ್ಕಿಂತ ಮಿಕ್ಕಿನ ಬಂಧವಿಲ್ಲ. ಆದಕಾರಣ ಗುರು ಲೋಭ ಮೋಹಗಳೆರಡನ್ನು ವಿಸರ್ಜಿಸುತ್ತಾನೆ.

ವಿಷಯೇಂದ್ರಿಯಗಳು ವಿಭಿನ್ನ. ಇವೆಲ್ಲವುಗಳನ್ನು ಅರಿವ ಪ್ರೇರೇಪಿಸುವ ಆತ್ಮನೊಬ್ಬ. ಅವಸ್ಥಾತ್ರಯಕ್ಕೂ ಸಾಕ್ಷಿಯಾಗಿರುವಾತನು ಆತ್ಮ. ಸಚ್ಚಿ ತ್ಸ್ವರೂಪ, ನಿತ್ಯಾನಂದಪ್ರದೀಪ ಆತ್ಮ. ಕಾಣುವಾತ ಕೇಳುವಾತ ಮೂಸು ವಾತ ಮುಟ್ಟುವಾತ ಆತ್ಮ. ಜ್ಞಾತೃ ಕರ್ತೃ ಭೋಕ್ತೃ ಆತ್ಮ. ನಾಮ ರೂಪರಹಿತ ಆತ್ಮ. ಚೈತನ್ಯಾತ್ಮಕ ಆತ್ಮ ಎಂದು ಆತ್ಮ ತತ್ತ್ವ ವಿಚಾರವನ್ನು ಅರಿತವನಾಗಿರಬೇಕು ಗುರು.

"ಆತುಮದ ನೆಲೆಯನ್ನು ಚೇತನದ ಬೊಮ್ಮವನು
ಜ್ಯೋತಿರೂಪವದು ತಾನೆಂದು ನೆರೆಬಲ್ಲ-
ಡಾತನೆ ಯೋಗಿ ಸರ್ವಜ್ಞ ||"

ವಿಷಯ ಭ್ರಮೆಯಿಂದ ವಿಮುಕ್ತನಾಗಿರಬೇಕು. ಜೀವ ಅಣು, ಶಿವ ವಿಭು ; ಜೀವ ಪ್ರೇರ್ಯ, ಶಿವ ಪ್ರೇರಕ ; ಜೀವ ಸಕಲ, ಶಿವ ನಿಷ್ಕಲ ; ಜೀವ ಅಲ್ಪಜ್ಞ, ಶಿವ ಸರ್ವಜ್ಞ ; ಸರ್ವಕರ್ತೃ, ಸರ್ವ ಸ್ವತಂತ್ರ, ಅಲುಪ್ತ ಶಕ್ತಿ ಸಂಪನ್ನ, ಅನಂತಶಕ್ತಿಯುಕ್ತ, ಅನಾದಿ ಬೋಧರೂಪ ಇತ್ಯಾದಿ ಶಿವ ಸಿದ್ಧಾಂತ ತತ್ತ್ವಜ್ಞನಾಗಿರಬೇಕು. ಯಾವ ವಿಚಾರದಲ್ಲಿಯೂ ಸಂಶಯವಿರ ಬಾರದು. ಪ್ರಮಾತೃ ಪ್ರಮಾಣ ಪ್ರಮೇಯಗಳಲ್ಲಿ ಸಂದೇಹ ಗ್ರಸ್ತನಾಗಿರ ಬಾರದು.

"ಇಂದುವಿನೊಳುರಿಯುಂಟೆ, ಸಿಂಧುವಿನೊಳರಬುಂಟೆ ?
ಸಂದವೀರನೊಳು ಭಯವುಂಟೆ, ಭಕ್ತಗೆ-।
ಸಂದೇಹವುಂಟೆ ಸರ್ವಜ್ಞ ?||"

ಎಲ್ಲ ಆಗಮಗಳನ್ನು ಬಲ್ಲವನಾಗಿರಬೇಕು. ಆಗಮ ಸಾಹಿತ್ಯ ಅಪಾರ ವಾಗಿದೆ. ಶೈವಾಗಮಗಳು, ಶಾಕ್ತಾಗಮಗಳು, ಪಾಂಚರಾತ್ರಾಗಮಗಳು, ಜಿನಾಗಮಗಳು ಮುಂತಾಗಿ ತಂತ್ರ ಪ್ರಭೇದಗಳಿವೆ. ಇವುಗಳಲ್ಲಿ ಶೈವಾ ಗಮಗಳೇ ಪುರಾತನವಾದವುಗಳು. ಶಿವಾಗಮಗಳೇ ೨೮೧ ಇವೆಯೆಂದು ಡಾ|| ಶಿ. ಚೆ. ನಂದಿಮಠ, ಎಂ.ಎ, ಪಿ.ಹೆಚ್.ಡಿ. (ಲಂಡನ್) ಅವರು 'ವಿಭೂತಿ' ಗ್ರಂಥದಲ್ಲಿ ಬರೆದ 'ಚಂದ್ರಜ್ಞಾನಾಗಮ' ಎಂಬ ತಮ್ಮ ಬರೆಹದಲ್ಲಿ ಹೇಳಿದ್ದಾರೆ. ಇವುಗಳಲ್ಲಿ ಇಪ್ಪತ್ತೆಂಟಾಗಮಗಳು ಪ್ರಮುಖವಾಗಿವೆ ; ಪ್ರಮಾ ಣಾರ್ಹವಾಗಿವೆ. ಗುರುವಾದವನು ಆಗಮ ಮಾರ್ಗವನ್ನೇ ಆಚರಿಸುವವ ನಾಗಬೇಕು ; ಅನುಸರಿಸುವವನಾಗಬೇಕು.

ಗುರು ಧಾರ್ಮಿಕನಿರಬೇಕು. ಗುರುವಿನ ಧರ್ಮವು ಶಿಷ್ಯರನ್ನು ಸೃಷ್ಟಿ ಯನ್ನು ಸಂರಕ್ಷಿಸುತ್ತದೆ. ಗುರುವಿನ ಪಾವನಾಚಾರಗಳು ಲೋಕೋದ್ಧಾರದ ಕುರುಹುಗಳು. ಆತನ ಆ ಧಾರ್ಮಿಕ ಪ್ರಭಾವವು ಎಂತಹರನ್ನೂ ಎತ್ತಿ ಹಿಡಿ

ಯುತ್ತದೆ. ಗುರು ಧರ್ಮವು ಶಿಷ್ಯನ ಹಿತವಾದ ದೃಕ್ಕ್ರಿಯಾರೂಪ ಜೀವನ ವನ್ನು ಧಾರಣ ಮಾಡುತ್ತದೆ. ದಯಾರಸವನ್ನು ತುಂಬುತ್ತದೆ. ದೈವೀ ಪ್ರಭಾವವನ್ನು ಅಳವಡಿಸುತ್ತದೆ.

ಗುರು ಧಾರ್ಮಿಕನಾಗಿರಬೇಕಾದುದು ಇಬ್ಬಗೆಯಲ್ಲಿ. ವೈಯಕ್ತಿಕ ಮತ್ತು ಸಾಮಾಜಿಕ ಧರ್ಮಗಳೆರಡನ್ನೂ ರೂಢಿಸಿಕೊಂಡಿರಬೇಕು. ಶಿವಾಚಾರ-ಸಮಯಾಚಾರಗಳೆರಡನ್ನೂ ಹುಲುಸಾಗಿ ಬೆಳೆಸಿಕೊಂಡಿರಬೇಕು. ಸ್ವಧರ್ಮ-ಪರಧರ್ಮ ಸಹಿಷ್ಣುವಾಗಿರಬೇಕು.

ಶ್ರೀಗುರು ಸತ್ಯವಾದಿಯಾಗಬೇಕೆಂದು ಹೇಳಿ ಶ್ರೀಜಗದ್ಗುರುವು ಧರ್ಮದ ವಿಶ್ಲೇಷಣವನ್ನು ಮಾಡಿದಾನೆ. ನುಡಿಯ ಸತ್ಯ, ನಡೆಯ ಸತ್ಯ ಎಂದು ಸತ್ಯ ಇತ್ತೆರನಾಗಿದೆ. ನುಡಿ ಸತ್ಯ ಮೂರಂಗವುಳ್ಳದಾಗಿದೆ. ಕಂಡದ್ದನ್ನು ಕಂಡಂತೆ ಆಡುವುದೊಂದು ; ಆಡಿದಂತೆ ಇನ್ನೊಬ್ಬರಿಗೆ ಮಾಡುವುದಿನ್ನೊಂದು ; ನುಡಿದಂತೆ ತಾನು ತನಗಾಗಿ ನಡೆವುದು ಮತ್ತೊಂದು. ನುಡಿಯ ಸತ್ಯ ನುಡಿಯನ್ನೇ ಹೆಚ್ಚಾಗಿ ಬಳಸಿಕೊಂಡಿದ್ದರೆ ನಡೆಯು ಸತ್ಯ ಸರ್ವಾಂಗವನ್ನು ಬಳಸಿಕೊಂಡಿದೆ. ಅಂದರೆ ಮನೋವಾಕ್ಕಾಯಗಳಲ್ಲಿ ತುಂಬಿ ಸತ್ಯವನ್ನು ತುಂಬಿಕೊಂಡಿರಬೇಕು. ಪ್ರತಿಯೊಬ್ಬರ ಪ್ರತ್ಯಂಗವೂ ಋತ ಪಥದಲ್ಲಿ ಪಾದಾರ್ಪಣ ಮಾಡಬೇಕು. ಇಂತಹ ಸತ್ಯದಿಂದ ತನಗೂ ಸಮಾಜಕ್ಕೂ ಪೋಷಣಪ್ರಗತಿಗಳುಂಟಾಗುತ್ತವೆ. ಪ್ರಗತಿಜೀವನಭವನ ಕುಸಿದು ಬೀಳದಂತಿರುತ್ತದೆ. ಸತ್ಯವಂತಿಕೆಗೆ ಸಾವಿಲ್ಲ. ಇದನರಿದು ಶರಣರು 'ನುಡಿದು ಹುಸಿಯದಿಪ್ಪುದೇ ನೇಮ.' 'ಹುಸಿಯ ನುಡಿಯು ಬೇಡ' ಎಂದು ಮುಂತಾಗಿ ಹೇಳಿದರು. ಸರ್ವಜ್ಞನು 'ದಿಟವೆ ಪುಣ್ಯದ ಪುಂಜ, ಸಟೆಯೆ ಪಾಪದ ಬೀಜ। ಕುಟಿಲ ವಂಚನೆಗೆ ಪೋಗದೆ ನಿಜದಿ ಪಿಡಿ। ಘಟವನೆಚ್ಚರದಿ ಸರ್ವಜ್ಞ ॥' 'ಸತ್ಯಕ್ಕೆ ಸರಿಯಿಲ್ಲ, ಮಿಥ್ಯಕ್ಕೆ ನೆಲೆಯಿಲ್ಲ। ಹೆತ್ತಮ್ಮನಿಂದ ಹಿತರಿಲ್ಲ, ನರರೊಳು। ನಿತ್ಯರೇ ಇಲ್ಲ ಸರ್ವಜ್ಞ ॥' ಎಂದು ಸತ್ಯದ ಹಿರಿಮೆಯನ್ನು ಸಾರಿರುವನು.

'ಸತ್ಯವಾದಿ' ಎಂದು ಕವಿ ಹೇಳುವಲ್ಲಿ ಇನ್ನೊಂದು ದಿವ್ಯದೃಷ್ಟಿಯನ್ನಿಟ್ಟಿದ್ದಾನೆ. ಮತ್ತೊಂದು ಮಹೋನ್ನತ ಧ್ವನಿಯನ್ನಿರಿಸಿದ್ದಾನೆ. ಸತ್ಯವಸ್ತುವನ್ನು ಸತ್ಯವನ್ನಾಗಿ ಕಾಣುವದರಲ್ಲಿ ಹೆಚ್ಚುಗಾರಿಕೆಯೇನಿಲ್ಲ.

ಆದರೆ ಇತರರು ಅಸತ್ಯವೆಂದು ಹೇಳುವ ಬ್ರಹ್ಮಾಂಡದಲ್ಲಿಯೂ ಪಿಂಡಾಂಡದಲ್ಲಿಯೂ ಸತ್ಯತ್ವವಾದಿಯಾಗಿರಬೇಕು ಶಿವಾದ್ವೈತದ ಶ್ರೀಗುರು. 'ಯಸ್ಯ ಅಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ' ಎಂಬ ಕೇನೋಪನಿಷತ್ತಿನ ತತ್ವವನ್ನು ಸಂಪೂರ್ಣಸತ್ಯದಲ್ಲಿ ಪರ್ಯ್ಯವಸಾನಗೊಳಿಸಬೇಕು. ಕಾಣದ ಆ ವಸ್ತುವನ್ನು ಸತ್ಯವೆಂದು ಹೇಳಿ ಅದರಿಂದಲೇ ಕಂಡ ಈ ವ್ಯಷ್ಟಿ ಸಮಷ್ಟಿ ಸೃಷ್ಟಿಯನ್ನು ಅಸತ್ಯವೆಂದು ವಾದಿಸುವಲ್ಲಿ ಹುರುಳಿಲ್ಲ. ಬಲ್ಲೆವೆಂದು ಹೇಳುವುದರಲ್ಲಿ ಬಲುಮೆಯಿಲ್ಲ. ಸರ್ವಜ್ಞತೆಯಿಲ್ಲ. ಸಾಕಾರ ನಿರಾಕಾರಗಳೆರಡರಲ್ಲಿಯೂ ಸತ್ಯವಾದಿಯಾಗಬೇಕು. ಚರಾಚರವೆರಡರಲ್ಲಿಯೂ ಸತ್ಯವಾದಿಯಾಗಬೇಕು.

"ಕುಲಕ್ರಮಾಗತಾಚಾರಂ ಕುಮಾರ್ಗಾಚಾರವರ್ಜಿತಂ
ಶಿವಧ್ಯಾನಪರಂ ಶಾಂತಂ ಶಿವ ತತ್ತ್ವ ವಿವೇಕಿನಂ ।
ಭಸ್ಮೋದ್ಧೂಲನನಿಷ್ಣಾತಂ ಭಸ್ಮತತ್ತ್ವ ವಿವೇಕಿನಂ ।
ತ್ರಿಪುಂಡ್ರಧಾರಣೋತ್ಕಂಠಂ ಧೃತರುದ್ರಾಕ್ಷಮಾಲಿಕಂ ।
....................ಶ್ರೀ ಗುರುಂ ಶಿವವಾದಿನಂ ।"

ಹಿಂದಿನ ಎರಡು ಶ್ಲೋಕಗಳಲ್ಲಿ ಸರ್ವಾಚಾರ ಸಂಪನ್ನತೆಯನ್ನು ಬಿತ್ತರಿಸಿ ಈ ಎರಡು ಶ್ಲೋಕಗಳಲ್ಲಿ ಶ್ರೀ ಗುರುವಿನ ಸಮಯಾಚಾರ ಸಂಪನ್ನತೆಯನ್ನು ನಿರೂಪಿಸುತ್ತಾನೆ ಕವಿ. ಉಭಯ ಸಾಮಾನ್ಯಾಧಿಕರಣತ್ವವನ್ನು ಶ್ರೀ ಗುರುವಿನಲ್ಲಿ ರೂಪಿಸುತ್ತಾನೆ.

ಕುಲ ಶಬ್ದಕ್ಕೆ ವಂಶವೆಂತಲೂ ಸಮಾಜವೆಂತಲೂ ಅರ್ಥಗಳಿವೆ. ಸಜಾತೀಯ ಗಣರು ಅನುಷ್ಠಿಸುತ್ತ ಬಂದ ಆಚಾರಗಳನ್ನು ಅಲ್ಲಗಳೆಯದೆ ಆಚರಿಸಬೇಕು ಆಚಾರ್ಯನು. 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಎಂಬುದಾಗಿ ಗೀತೋಕ್ತಿಯೂ ಇದನ್ನೇ ಸಮರ್ಥಿಸಿದೆ. ಮನೆತನದ ಪೂರ್ವದವರು ಮತ್ತು ಸಮಾಜದ ಪೂರ್ವ ಪುಣ್ಯಾತ್ಮರು ನಡಿಸಿಕೊಂಡು ಬಂದ ಒಳ್ಳೆಯ ನಡತೆಗಳನ್ನು ಕೈ ಬಿಡಬಾರದು ಗುರುವಾದವನು. ಕೆಟ್ಟ ನಡತೆಗಳಿಗೆ ಕೈ ಹಾಕಬಾರದು. ಶಿವಧ್ಯಾನವನ್ನು ಮರೆಯಬಾರದು.

ಸಚ್ಚಿದಾನಂದನಿತ್ಯಪರಿಪೂರ್ಣಾಖಂಡಸ್ವರೂಪನೂ ಸ್ವಯಂಪ್ರಕಾಶಕನೂ ನಿತ್ಯ ನಿರ್ಮಲನೂ ಚಿಚ್ಛಕ್ತಿಯುಕ್ತನೂ ಪ್ರಣವಾತ್ಮಕನೂ ಆದ ಶಿವನನ್ನು ಧ್ಯಾನಿಸಬೇಕು. 'ಪ್ರತ್ಯಯೈಕತಾನತಾ ಧ್ಯಾನಂ' ಎಂಬಂತೆ ಬಾಹ್ಯ ವೃತ್ತಿಗಳಿಲ್ಲದೆ ಆ ಶಿವ ಸ್ವರೂಪವೊಂದನ್ನೇ ಮತ್ತೆ ಮತ್ತೆ ನೆನೆವುದೇ ಧ್ಯಾನ. ಧ್ಯಾನವು ಸಗುಣ, ನಿರ್ಗುಣವೆಂದು ದ್ವಿವಿಧ. ಪ್ರಸಾದಾದಿ ಲಿಂಗಗಳ ಧ್ಯಾನವೇ ಸಗುಣಧ್ಯಾನ. ಮಹಾಲಿಂಗರೂಪ ಶಿವಧ್ಯಾನವೇ ನಿರ್ಗುಣ ಧ್ಯಾನ. ಈ ಉಭಯಧ್ಯಾನ ನಿರತನಾಗಿರಬೇಕು ಶ್ರೀಗುರು. ಶ್ರೀ ಗುರುವಿನ ಲಕ್ಷ್ಯವೆಲ್ಲ ಶಿವಮಯವಾಗಿರಬೇಕು. 'ಯೋಗೀ ಯುಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ' ಎಂದಿದೆ ಭಗವದ್ಗೀತೆ. ಇದರಿಂದ ಉಂಟಾಗುತ್ತದೆ ಮನಕ್ಕೆ ಶಾಂತತೆ.

"ದ್ಯಾನದಾ ಹೊಸಬತ್ತಿ ಮೌನದಾ ತಿಳಿದುಪ್ಪ ।
ಸ್ವಾನುಭವವೆಂಬ ಬೆಳಗಿನಾ ಜ್ಯೋತಿ ಅ- ।
ಜ್ಞಾನವಂ ಸುಡುಗು ಸರ್ವಜ್ಞ"
ನವದ್ವಾರಗಳ ಕಟ್ಟಿ ಶಿವಧ್ಯಾನದೊಳಗಿರಲು ।
ನವಖಂಡ ಪೃಥ್ವಿಯೊಳಗಿನ ಮಾತೆಲ್ಲ ।
ಕಿವಿಯೊಳಗಿಹುದು ಸರ್ವಜ್ಞ ॥"

ಶ್ರೀ ಗುರು ಶಾಂತನಾಗಿರಬೇಕು. ಮನದ ಹರಿದಾಟವಿರಬಾರದು. ಸ್ಥಿತ ಪ್ರಜ್ಞನಾಗಿರಬೇಕು. ದುಃಖ ಬರಲಿ, ಸುಖ ಬರಲಿ, ಮಾನವಾಗಲಿ, ಅಪಮಾನವಾಗಲಿ-ಸಮವಾಗಿ ಕಾಣಬೇಕು. ವ್ಯಗ್ರನಾಗಬಾರದು. ಭಯಸ್ಥನಾಗಬಾರದು.

"ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನಚಾಭಾವಯುತಶ್ಯಾಂತಿರಶಾಂತಸ್ಯ ಕುತಃ ಸುಖಮ್ ॥"

ಮನಸ್ಸಿನ ಪ್ರಸನ್ನತೆಯಿಲ್ಲದವನಿಗೆ ಬುದ್ಧಿ ಭಾವಗಳಿರುವುದಿಲ್ಲ. ಭಾವುಕನಾಗದೆ ಶಾಂತಿಯಿಲ್ಲ. ಶಾಂತಿಯಿಲ್ಲದೆ ಸುಖವಿಲ್ಲ. ಕಾರಣ ಶ್ರೀಗುರು ಮನಸ್ಸಿನ ಪ್ರಸನ್ನತೆಯ ಪಡೆದು ಪ್ರಶಾಂತನಾಗಿರಬೇಕು. ಆ

ಶಾಂತ ಮನಸ್ಸಿನಲ್ಲಿ ಶಿವತತ್ತ್ವ ವಿವೇಕದ ಉದಯವಾಗುತ್ತದೆ. ಇದು ಎಲ್ಲರಿಗೂ ಲಭಿಸುವುದಲ್ಲ. ನಿರ್ಮಲವೃತ್ತಿ, ನಿಶ್ಚಲವೃತ್ತಿ, ಶಾಂತಿ ಯಾರಿಗಿರುವವೋ ಅವರಿಗೆ ಮಾತ್ರ ಶಿವಜ್ಞಾನ ಸಾಧ್ಯ. 'ಕಶ್ಚಿನ್ಮಾಂ ವೇತ್ತಿ ತತ್ತ್ವತಃ' ಎಂಬುದನ್ನು ನೆನೆಯಬೇಕು. ತಾತ್ತ್ವಿಕವಾಗಿ ಶಿವತತ್ತ್ವವನ್ನು ತಿಳಿದು ಅಳವಡಿಸಿಕೊಳ್ಳುವುದು ಒಂದು ಮಹಾ ಭಾಗ್ಯ. ಅದು ಶ್ರೀ ಗುರುವಿಗೆ ಮಾತ್ರ ಲಭಿಸುವ ಸೌಭಾಗ್ಯ.

ಶಿವ ತತ್ತ್ವ ವಿವೇಕವುಳ್ಳಾತನೇ ಶಿವನಾಗುತ್ತಾನೆ. 'ಜ್ಞಾನವಾನ್ ಮಾಂ ಪ್ರಪದ್ಯತೇ' ಎಂಬಂತೆ ಶಿವಜ್ಞಾನವಿಲ್ಲದೆ ಶಿವನನ್ನು ಪಡೆಯಲು ಸಾಧ್ಯವಿಲ್ಲ. ಶಿವಜ್ಞಾನ ಸ್ವರೂಪನೇ ಶ್ರೀ ಗುರು. ಸ್ವಯಂ ಜ್ಯೋತಿ ಸ್ವರೂಪ ಶ್ರೀ ಗುರು.

"ಗುಕಾರಂ ತೈಲವರ್ತಿಶ್ಚ ರುಕಾರಂ ಜ್ವಲನಸ್ತಥಾ ।
ದ್ವಯೋರೈಕ್ಯ ಪ್ರಭಾವೇನ ಸ್ವಯಂ
ಜ್ಯೋತಿ ಗುರುಸ್ಮೃತಃ ॥

ಎಂಬುದನ್ನು ಎಣಿಕೆ ಹಾಕಬೇಕು.

ಶ್ರೀ ಗುರುವಿನ ಅಂತರಂಗ ಲಕ್ಷಣವನ್ನು ಹೇಳಿದ ಬಳಿಕ ಇನ್ನು ಬಹಿರಂಗ ಕ್ರಿಯಾಚಾರಗಳನ್ನು ಕಾಣಿಸುತ್ತಾನೆ ಶಿವಕವಿ ಶಿವಯೋಗಿ ಶಿವಾಚಾರ್ಯ ಗುರು.

ಶಿವನ ವಿಭೂತಿತ್ವವು ಶ್ರೀ ಗುರುವಿಗೆ ಬರಬೇಕಾದರೆ ಶಿವನ ಮೈವೆಳಗಾದ ಶಿವನನ್ನು ಒಲಿಸುವ ಭಸಿತ ತತ್ತ್ವವನ್ನು ಚೆನ್ನಾಗಿ ಅರಿತು ಭಸ್ಮೋದ್ಧೂಲನ ಭಸ್ಮಧಾರಣಗಳನ್ನು ಪ್ರತಿನಿತ್ಯ ತಪ್ಪದೆ ಮಾಡುತ್ತಿರಬೇಕು. ದುರಿತಗಳನ್ನು ದುಃಖತ್ರಯಗಳನ್ನು ಸುಟ್ಟುಹಾಕುವ ಸದ್ಗುಣೈಶ್ವರ್ಯವನ್ನು ಶಿವಸೌಂದರ್ಯವನ್ನು ಕೊಟ್ಟು ರಕ್ಷಿಸುವ ಭಸ್ಮದ ಮಹಿಮೆ ಸಣ್ಣದಲ್ಲ. ನಿರುಪಾಧಿಕ ಭಸಿತದ ಮಾತಿರಲಿ. ಸೋಪಾಧಿಕ ಭಸಿತದ ಪಾವಿತ್ರತೆಯೇ ಮಾತಿಗೆ ನಿಲುಕುವದಲ್ಲ. ಧೇನು ಕಾಮಧೇನುವೆಂದೆನಿಸಿದೆ. ಅದು ದೈವ ಸ್ವರೂಪವಾಗಿದೆ. 'ಧೇನೂನಾಮಸ್ಮಿ ಕಾಮಧುಕ್' ಎಂದಿದಾನೆ ಭಗವಂತ. ಆದರಿಂದಾದ ಭೂತಿ ವಿಭೂತಿಯಾಗಿ ಧರಿಸಿದವರನ್ನು ದೈವತ್ವಕ್ಕೇರಿಸುತ್ತದೆ.

ಇದನರಿತು ಶ್ರೀ ಗುರು ಭಸ್ಮೋದ್ಧೂಲನ ನಿಷ್ಣಾತನಾಗಬೇಕು ; ಭಸ್ಮಧಾರಣ ಸಂಸಕ್ತನಾಗಬೇಕು.

"ಪರಮ ಜ್ಞಾನ ತ್ರಿಪುಂಡ್ರಂ,
ಪರಮ ಗುರುತರಾಯುಷ್ಯಪದಂ ತ್ರಿಪುಂಡ್ರಂ ।
ಪರಮಾಧಾರಂ ತ್ರಿಪುಂಡ್ರಂ,
ಪರಮಜನ ಮನೋರಾಗದರ್ಥಂ ತ್ರಿಪುಂಡ್ರಂ ।
ಪರಮೈಶ್ವರ್ಯಂ ತ್ರಿಪುಂಡ್ರಂ,
ಪರಮ ಸುಖನಿಕಾಯಾಸ್ಪದಂ ತ್ರಿಪುಂಡ್ರಂ ।
ಹರುಷಂ ಕೈವಿಗೆ ಪಂಪಾಪುರದರಸ
ವಿರೂಪಾಕ್ಷನೊಲ್ದ ತ್ರಿಪುಂಡ್ರಂ ॥"

—ಹರಿಹರದೇವ.

ಶ್ರೀರುದ್ರದೇವನ ನಯನಾಂಬುವಿನಿಂದ ಉತ್ಪತ್ತಿಯಾದ ರುದ್ರಾಕ್ಷಿಯೂ ಶ್ರೇಷ್ಠ ಸಂಪತ್ತಿಯಾಗಿದೆ. ಶ್ರೀರುದ್ರದೇವನ ಕಾರುಣ್ಯ ಮಣಿಯಾಗಿದೆ. ಶಿವನ ಆಭರಣವಾಗಿದೆ. ಮಂತ್ರಜಪ ಕಾರಣವಾಗಿದೆ. ಮಂಗಳಾಕರವಾಗಿದೆ. ಇಂತಹ ರುದ್ರಾಕ್ಷ ಮಾಲೆಯನ್ನು ಶ್ರೀ ಗುರು ಧರಿಸಿರಬೇಕು.

"ಮೋಕ್ಷ ಶ್ರೀ ಸದನಂ ಪ್ರಸಿದ್ಧವದನಂ ರುದ್ರಾಕ್ಷಿ ಶ-।
ರ್ವಾಕ್ಷಿ ಪ್ರೌಢತೆಯನ್ನತೋನ್ನತಕರಂ ರುದ್ರಾಕ್ಷಿ ರುದ್ರಾಕ್ಷಿ ತಾಂ ।
ಸಾಕ್ಷಾಚ್ಛಂಕರ ಮೂರ್ತಿ ಕೀರ್ತಿಕಳಶಂ ರುದ್ರಾಕ್ಷಿ ರುದ್ರಾಕ್ಷಿ ಸು ।
ಪ್ರೇಕ್ಷ ಪ್ರಸ್ಫುರಿತ ಪ್ರಮೋದ ಚರಿತಂ ಪಂಪಾ ವಿರೂಪಾಕ್ಷನಾ ॥"

ಎಂದು ಹಂಪೆಯ ಹರಿಹರದೇವನು ರುದ್ರಾಕ್ಷವನ್ನು ಹೊಗಳಿದಾನೆ.

"ಲಿಂಗಾಧಾರಣ ಸಂಯುಕ್ತಂ ಲಿಂಗಪೂಜಾಪರಾಯಣಂ
ಲಿಂಗಾಂಗಯೋಗ ತತ್ತ್ವಜ್ಞಂ ವಿರೂಢಾದ್ವೈತ
ಮಾನಸಮ್ ।
ಲಿಂಗಾಂಗಸ್ಥಲ ಭೇದಜ್ಞಂ ಶ್ರೀಗುರುಂ ಶಿವವಾದಿನಮ್ ।"

ಮೊದಲು ಅಂತಃಕರಣಗಳ ಶುದ್ಧಿಗೆ ಬೇಕಾದ ಆಂತರಿಕ ಗುಣಗಳನ್ನು ಜ್ಞಾನವನ್ನು ನಿರೂಪಿಸಿ ಬಳಿಕ ಬಾಹ್ಯೇಂದ್ರಿಯಗಳ ಪರಿಶುದ್ಧಿಗೆ ಬೇಕಾದ ಕ್ರಿಯಾಚಾರಗಳನ್ನು ಭಸ್ಮರುದ್ರಾಕ್ಷಗಳನ್ನು ವಿಧಿಸಿ ಈಗ ಉಭಯಾಂಗ ಗಳಿಗೂ ಬೇಕಾದ ಸಾಕ್ಷಾಚ್ಚೈತನ್ಯ ವಸ್ತುವಿನ ಧಾರಣ, ಅರ್ಚನ, ಅನು ಭವಗಳನ್ನು ಅತ್ಯಂತ ಸುಂದರವಾಗಿ ಸಾರವಾಗಿ ಹೇಳುತ್ತಾನೆ.

ತ್ರಿವಿಧ ತನುವಿನಲ್ಲಿ ಸಚ್ಚಿದಾನಂದ ರೂಪಾದ ಇಷ್ಟ ಪ್ರಾಣ ಭಾವಲಿಂಗ ಗಳನ್ನು ಶ್ರೀ ಗುರು ಧರಿಸಿರಬೇಕು. ಲಿಂಗಕ್ಕೆ ಅಂಗವು ಹೇಗೆ ಆವಶ್ಯಕವೋ ಹಾಗೆ ಅಂಗಕ್ಕೆ ಲಿಂಗಧಾರಣ ಆವಶ್ಯಕ. ಲಿಂಗ ಅಂಗದೊಳಗಾದರೆ ಅಂಗ ಲಿಂಗದೊಳಗಾಗಬೇಕು. ಸ್ಥೂಲಾಂಗವೂ ಶಿವಲಿಂಗಮಯವಾಗಬೇಕಾದರೆ ಅರ್ಚನ ಕ್ರಿಯೆಯ ಸಮರ್ಪಿಸಬೇಕಾದರೆ ಇಷ್ಟಲಿಂಗಧಾರಣವಿದ್ದಾಗಬೇಕು. ಇಷ್ಟಲಿಂಗವಿಲ್ಲದೆ ಈ ದೇಹ ದೇವಾಲಯವಾಗದು. ಇದು ಸಾಮಾನ್ಯರ ಸ್ಥಿತಿ. ಶ್ರೀಗುರುವಿನ ಅಂಗವು ಲಿಂಗವೇ ಆಗಿರುತ್ತದೆ. ಉಪ್ಪಿನೊಳಗಿಟ್ಟ ಉಪ್ಪಿನಕಾಯಿಯ ಸಿಪ್ಪೆಯೂ ಉಪ್ಪೆ ಆಗಿರುವಂತೆ ಲಿಂಗದೊಡನಾಡಿ ಲಿಂಗಾರ್ಚನೆಯ ಮಾಡಿ ಅಂಗವೂ ಲಿಂಗವೇ ಆಗಿರುತ್ತದೆ. ಬಾಹ್ಯಾಂಗ ದಲ್ಲಿ ಇಷ್ಟಲಿಂಗಧಾರಣವಿದ್ದಂತೆ ಅಂತರಂಗದಲ್ಲಿ ಅಂದರೆ ಸೂಕ್ಷ್ಮಕಾರ ಣಾಂಗಗಳಲ್ಲಿ ಪ್ರಾಣಲಿಂಗ, ಭಾವಲಿಂಗಗಳ ಧಾರಣವಿರುತ್ತದೆ. "ಆನೆ ಕನ್ನಡಿಯಲ್ಲಿ ತಾನಡಗಿ ಇಪ್ಪಂತೆ । ಜ್ಞಾನವುಳ್ಳವರ ಹೃದಯದಿ ಪರಶಿವನು । ತಾನಡಗಿಹನು ಸರ್ವಜ್ಞ ॥"

ಇನ್ನು ಶ್ರೀ ಗುರು ನಿತ್ಯ ತ್ರಿವಿಧ ಲಿಂಗಾರ್ಚನೆಯಲ್ಲಿ ನಿರತನಾಗಿರ ಬೇಕು. "ದೇಹ ದೇವಾಲಯವು, ಜೀವವೇ ಶಿವಲಿಂಗ । ಬಾಹ್ಯಗಳಳಿದು ಭಜಿಪಂಗೆ ಮುಕ್ತಿ ಸಂ- । ದೇಹವಿಲ್ಲೆಂದ ಸರ್ವಜ್ಞ ॥" ಇದು ಇಷ್ಟಲಿಂಗ ಪೂಜೆ. ಇಷ್ಟಲಿಂಗವನ್ನು ಪೂಜಿಸುವಾತನಿಗೆ ಬಾಹ್ಯಗಳಾದ ಸೃಷ್ಟಿಯ ಸ್ಥಾವರಲಿಂಗಪೂಜೆ ಬೇಕಿಲ್ಲ. ಇಷ್ಟಲಿಂಗವು ತನ್ನ ಜೀವ ಸ್ವರೂಪ. "ಆತುಮದ ಲಿಂಗವನು ಪ್ರೀತಿಯಲಿ ಪೂಜಿಪಗೆ । ಆತಂಕವಿಲ್ಲ ಭಯವಿಲ್ಲ ದಶವಿಧ । ಪಾತಕಗಳಿಲ್ಲ ಸರ್ವಜ್ಞ ॥" ಇದು ಪ್ರಾಣಲಿಂಗಪೂಜೆ. "ಭಾವಕಮಲವೆ ಸಜ್ಜೆ, ಜೀವರತುನವೆ ಲಿಂಗ । ಭಾವ ಪುಷ್ಪದಿ ಶಿವಪೂಜೆ ಮಾಡುವನ । ದೇವನೆಂಬೆಂಬೆ ಸರ್ವಜ್ಞ ॥" ಇದು **ಭಾವಲಿಂಗಪೂಜೆ.**

ನಿಷ್ಕಾಮ ಪೂಜೆಯೇ ಪರಮ ಪ್ರಾಪ್ತಿಯನ್ನುಂಟು ಮಾಡುವ ಪೂಜೆ. ಭವಕ್ಕೆ ಬರಬಾರದೆಂದು ಬಯಸುವಾತನು ಸಕಾಮ ಪೂಜೆಯ ಮಾಡಬಾರದು. "ತಿರುಗಿ ಬಯಸದನ ಶಿವಪೂಜೆ ಶಿವನಿಂದ । ಹಿರಿದೆಂದು ಅರಿಗು ಸರ್ವಜ್ಞ ॥" ಎಂಬುದನ್ನು ನೆನೆಯಬೇಕು. ಶ್ರೀಗುರುವು ಇಂತಹ ಪೂಜಾಪರಾಯಣನಾಗಿರಬೇಕು.

ಶ್ರೀಗುರು ಲಿಂಗಾಂಗ ಯೋಗ ತತ್ತ್ವವನ್ನು ತಿಳಿದಿರಬೇಕು. ಲಿಂಗ ಲಕ್ಷಣವೇನು ? ಅಂಗ ಸ್ವರೂಪವೇನು ? ಹೇಗಾದರೆ ಲಿಂಗ-ಅಂಗಗಳೆರಡರ ಯೋಗವುಂಟಾಗುತ್ತದೆ ? ಇತ್ಯಾದಿ ವಿಚಾರಗಳುಳ್ಳವನಾಗಿರಬೇಕು.

"ಆತ್ಮಗಂಗೆಯ ಮಿಂದು ಜ್ಯೋತಿಲಿಂಗವನರಿಯೆ ।
ಪಾತಕವು ಕೋಟಿ ಪರಿವುದು ಆತ ಪರ– ।
ಮಾತುಮನಕ್ಕು ಸರ್ವಜ್ಞ ॥"

ಎಂಬಂತೆ ಜ್ಯೋತಿಲಿಂಗವನರಿತರೆ ಪರಂಜ್ಯೋತಿರೂಪನೇ ತಾನಾಗುವನು.

ಶ್ರೀಗುರು ಲಿಂಗಾದ್ವೈತ ಸಂಸ್ಕಾರವುಳ್ಳವನಾಗಿರಬೇಕು. ಸರ್ವಾಂಗವೂ ಲಿಂಗಮಯವಾಗಿರಬೇಕು.

"ಲಿಂಗವೆ ದರುಶನವು, ಲಿಂಗವೇ ಸ್ಪರುಶನವು ।
ಲಿಂಗಸಹ ಸರ್ವಸುಖ ಭೋಗವಾದವನು ।
ಲಿಂಗಕಾಣಯ್ಯ ಸರ್ವಜ್ಞ ॥"

ಇದು ಬಾಹ್ಯಾಂಗವೆಲ್ಲ ಲಿಂಗಾದ್ವೈತವಾಗುವ ಪರಿ.

"ಲಿಂಗದಲಿ ಮನವಾಗಿ, ಲಿಂಗದಲಿ ನೆನಹಾಗಿ ।
ಲಿಂಗದಿ ನೋಟ ನುಡಿ ಕೂಟವಾದವನು ।
ಲಿಂಗವೇ ಅಕ್ಕು ಸರ್ವಜ್ಞ ॥"

ಇದು ಸೂಕ್ಷ್ಮಾಂಗವೆಲ್ಲ ಲಿಂಗದೊಡನೆ ಸಮರಸವಾಗುವ ಕುರುಹು.

"ನಾನು ನೀನುಗಳಳಿದು, ತಾನು ಲಿಂಗದಿ ಉಳಿದು |
ನಾನಾ ಭ್ರಮೆಗಳತಿಗಳೆದು ನಿಂದಾತ |
ತಾನೈಕ್ಯ ನೋಡ ಸರ್ವಜ್ಞ ||"

ಇದು ಭಾವಾಂಗ ಅಥವಾ ಜೀವಾಂಗ ಲಿಂಗದೊಳಗೈಕ್ಯವಾಗುವ ತಿರುಳು. ಇಂತಾಗಿರಬೇಕು ಶ್ರೀಗುರು.

ಒಂದೇ ಒಂದಾದ ಆ ಪರವಸ್ತುವೇ ಮೂಲಮಹಾಸ್ಥಲ; ಅದೇ ಪ್ರಥಮ ಸ್ಥಲ. ಅದೇ ಅಂಗ-ಲಿಂಗವೆಂದಾಗಿ ದ್ವಿತೀಯ ಸ್ಥಲವಾಯಿತು. ಅಂಗಮೂರಾಗಿ, ಲಿಂಗ ಮೂರಾಗಿರುವುದೆ ಮೂರನೆಯ ಸ್ಥಲ. ಬಳಿಕ ಮೂರಂಗ ಆರಾಗಿ, ಮೂರು ಲಿಂಗ ಆರಾದುದೇ ನಾಲ್ಕನೆಯ ಸ್ಥಲ. ಆಮೇಲೆ ಆರಂಗಗಳಲ್ಲಿ ಒಂದೊಂದು ಮೂರಾಗಿ ಹದಿನೆಂಟು ಅಂಗಗಳಾಗಿ, ಲಿಂಗಗಳಾರರಲ್ಲಿ ಒಂದೊಂದು ಮೂರಾಗಿ ಹದಿನೆಂಟು ಲಿಂಗಗಳಾಗಿ ಅಯ್ದನೆಯ ಸ್ಥಲ. ಕೊನೆಯದಾಗಿ ಅಂಗಸ್ಥಲಗಳು ೪೪, ಲಿಂಗಸ್ಥಲಗಳು ೫೭ ಆಗಿ ಆರನೆಯ ಸ್ಥಲವೆನಿಸುವುದು. ಈ ಲಿಂಗಾಂಗ ಸ್ಥಲಭೇದಗಳನ್ನು ಶ್ರೀಗುರು ಸಂಪೂರ್ಣವಾಗಿ ಚೆನ್ನಾಗಿ ಅರಿತಿರಬೇಕು.

ಅಂಗಸ್ಥಲದ ಆಚಾರಗಳನ್ನು ಲಿಂಗಸ್ಥಲದ ವಿಚಾರಗಳನ್ನು ವಿಮರ್ಶಿಸುವನಾಗಬೇಕು. ಲಿಂಗಾಚಾರ ಲಿಂಗವಿಚಾರಗಳನ್ನೇ ಮಾತನಾಡುವವನಾಗಿರಬೇಕು. ಮಂಗಳದ ಮಾತುಗಳನ್ನೇ ಉಚ್ಚರಿಸುವವನಾಗಿರಬೇಕು. ಶ್ರೀ ಗುರು ವಚನದಿಂದಧಿಕ ಸುಧೆಯುಂಟೆ?

"ಗುರು ವಚನವುಪದೇಶ, ಗುರುವಚನ ಪರಭಕ್ತಿ |
ಗುರುವಚನ ಮೋಕ್ಷ ಪದವದು, ಗುರುವಚನ |
ಪರಮಾರ್ಥವಯ್ಯ ಸರ್ವಜ್ಞ ||"

"ಆರಯ್ದು ನುಡಿವವನು ಆರಯ್ದು ನಡೆವವನು |
ಆರಯ್ದು ಪದವನಿಡುವವನು ಲೋಕಕ್ಕೆ |
ಆರಾಧ್ಯನಕ್ಕು ಸರ್ವಜ್ಞ ||"

ಶ್ರೀ ಗುರುವಿನ ನುಡಿ ನಡೆಯಲ್ಲಿ ಎಂತಹ ದಿವ್ಯ ಶಕ್ತಿಯಿದೆ? ಅದು ಬರಬೇಕಾದರೆ ಆತನು ಸದಾ ಶಿವವಾದಿಯಾದರೆ ತಾನೆ? ಸತ್ಯವಾದಿ–ಶಿವವಾದಿ ಈ ಎರಡು ವಿಶೇಷಣಗಳು ಗಮನಾರ್ಹ. ಗುರುತ್ವಕ್ಕೆ ಇವೆರಡು ಅನಿವಾರ್ಯ.

ಇನ್ನು ಬರೀ ಗುರುವಾದರೆ ಆಗದು. ಶ್ರೀಗುರುವಾಗಬೇಕು. ಭೌತಿಕ ಸಂಪತ್ತಿನಿಂದಲ್ಲ ಆತ್ಮಿಕ ಸಂಪತ್ತಿನಿಂದ ಶ್ರೀಮಂತನಾಗಬೇಕು. ಶ್ರೀಮಂತ ಗುರುವಾಗಬೇಕು. ಷಡ್ಗುಣೈಶ್ವರ್ಯವುಳ್ಳವನಾಗಿರಬೇಕು. ಜ್ಞಾನ, ಐಶ್ವರ್ಯ, ಶಕ್ತಿ, ಧರ್ಮ (ಬಲ), ವೀರ್ಯ, ತೇಜಸ್ಸುಗಳೇ ಶ್ರೀಪದದಿಂದ ಸೂಚಿತವಾದ ಷಡೈಶ್ವರ್ಯ. ಅಥವಾ ಅನಾದಿಬೋಧ ಶಕ್ತಿ, ಅಲುಪ್ತಶಕ್ತಿ, ಅನಂತಶಕ್ತಿ, ಸ್ವತಂತ್ರಶಕ್ತಿ, ಸರ್ವಜ್ಞಶಕ್ತಿ, ನಿತ್ಯ ಶಕ್ತಿ–ಇವೂ ಷಡ್ಗುಣೈಶ್ವರ್ಯ.

'ಲಕ್ಷ್ಮೀರೂಪಂ ಶಕಾರಂ ಸ್ಯಾದ್ಧೇಮಾಭಂ ಶ್ರೀಕರಂ ಭವೇತ್'' ಎಂದು ವಾತುಲ ತಂತ್ರದ ವರ್ಣಭೇದ ಪಟಲದಲ್ಲಿ 'ಶ್ರೀ' ಅಕ್ಷರಾರ್ಥವನ್ನು ಹೀಗೆ ಹೇಳಿದೆ. ಶ್‌ಕಾರ ಐಶ್ವರ್ಯವಾಚಿ. ಚಿನ್ನದ ಬಣ್ಣ. ರಕಾರ ಅಗ್ನಿದೇವ ಸೂಚಕ. ಜ್ಞಾನಾರ್ಥ ಬೋಧಕ. ಈಕಾರ ಶಕ್ತಿಸೂಚಕ. ಇವುಗಳಿಂದ ಕೂಡಿದವನಾಗಿರಬೇಕು. ಶ್ರೀಗುರುವಿನ ಬೆಳುಬಾಳು ಹೀಗೆ ಹದಗೊಂಡು ಕುದುರಿರಬೇಕು. ಹಿರಿದಾಗಿರಬೇಕು. ಹೊದ್ದಿದವರಿಗೆ ಹೆದ್ದಾರಿಯು ತೋರುವದಾಗಿರಬೇಕು.

"ಸೇವೇತ ಪರಮಾಚಾರ್ಯಂ ಶಿಷ್ಯೋ ಭಕ್ತಿಭಯಾನ್ವಿತಃ
ಷಣ್ಮಾಸಾನ್ ವತ್ಸರಂ ವಾಪಿ ಯಾವದೇಷ ಪ್ರಸೀದತಿ |"

ಶಿಷ್ಯನೆನಿಸುವುದು ಇಬ್ಬಗೆಯಲ್ಲಿ. ಬೌದ್ಧಿಕ ವಿದ್ಯೆಯನ್ನು ಅರ್ಥಿಸುವನಾಗಿ ಒಬ್ಬನಾದರೆ ಆತ್ಮಿಕ ವಿದ್ಯೆ ಅಥವಾ ಅನುಭಾವ ವಿದ್ಯೆಯನ್ನು ಅರ್ಥಿಸುವನಾಗಿ ಇನ್ನೊಬ್ಬನಾಗುತ್ತಾನೆ. ಇವರಿಬ್ಬರೂ ಶಿಷ್ಯನಾಮಕರೆ! ಆದರೆ ಎರಡನೆಯವನು ವಿಶಿಷ್ಟನೆನಿಸುತ್ತಾನೆ. ಬರೀ ಒಡಲು ಹೊರೆವವನಿಗಿಂತ ಒಡಲೊಡನೆ ಮೆದುಳನ್ನೂ ತುಂಬಿಕೊಳ್ಳುವವನು ಹೆಚ್ಚಿನವನು; ಮೆದುಳಿನೊಡನೆ ಭಾವವನ್ನು ಅನುಭಾವದಿಂದ ತುಂಬಿಕೊಳ್ಳುವವನು ಇನ್ನೂ ಹೆಚ್ಚಿನವನು. ಇವನೇ ಇಲ್ಲಿ ಉದ್ಧೃತನಾದ ಶಿಷ್ಯನು.

ಒಡಲೊಂದನ್ನು ತುಂಬಿಕೊಳ್ಳುವವನಿಗೆ ಜ್ಞಾನದ ಗಂಧವಿಲ್ಲ. ಒಡಲೊಡನೆ ಮೆದುಳನ್ನು ತುಂಬಿಕೊಳ್ಳುವವನಿಗೆ ಜ್ಞಾನ ಮಾತ್ರವಿರುತ್ತದೆ. ಜತೆಗೆ ಭಾವವನ್ನು ತುಂಬಿಕೊಳ್ಳುವವನಿಗೆ ಜ್ಞಾನದೊಡನೆ ಜ್ಞೇಯವೂ ಇರುತ್ತದೆ. ಇದರಿಂದಾಗಿ ಈತನು ಇನ್ಮ್ರಿಗಿಲಾಗಿರುತ್ತಾನೆ. ಈತನ ಬಾಳು ಇಮ್ಮಾಗುತ್ತದೆ, ಇನಿದಾಗುತ್ತದೆ. ಈತನ ತನು ಈತನ ಮನ ಈಶನಿಗೆ ಮೀಸಲಾಗಿರುತ್ತದೆ. ಈತನು ಶಿಷ್ಯನಾಗಿ ಶ್ರೀ ಗುರುವಿನ ಬಳಿ ಸಾರಿರುತ್ತಾನೆ. ಭಕ್ತಿ ಭಯಗಳುಳ್ಳವನಾಗಿರುತ್ತಾನೆ.

ಭಕ್ತಿಯೊಂದಿದ್ದರೆ ಸಾಲದು. ಭಯವೂ ಇರಬೇಕು. ಭಕ್ತಿ ಭಯಗಳೆರಡೂ ಇದ್ದರೆ ಶಿಷ್ಯನಾಗಲು ಸಮರ್ಥ. ಶ್ರೀ ಗುರುಕರುಣ ಪಡೆಯಲು ಸಮರ್ಥ. ಪಡೆದ ಕಾರುಣ್ಯ ಸಾಫಲ್ಯ. "ಭಕ್ತಿಯಿಲ್ಲದ ಶಿಷ್ಯಗೊತ್ತಿ ಕೊಟ್ಟುಪದೇಶ । ಬತ್ತಿದ ಕೆರೆಯ ಬಯಲಲ್ಲಿ ರಾಜಾನ್ನ । ಬಿತ್ತಿ ಬೆಳೆದಂತೆ ಸರ್ವಜ್ಞ ॥" ಮತ್ತು "ಹಸಿಯ ಸಮಿಧೆಯ ತಂದು ಹೊಸೆದರುಂಟೇ ಕಿಚ್ಚು । ವಿಷಯಂಗಳುಳ್ಳ ಮನುಜಗೆ ಗುರುಕರುಣ ವಶವರ್ತಿಯಹುದೆ ಸರ್ವಜ್ಞ ?॥" ಎಂಬೀ ಸರ್ವಜ್ಞನ ಮಾತುಗಳು ಶ್ರೀ ರೇಣುಕರ 'ಭಕ್ತಿ ಭಯಾನ್ವಿತಃ' ಎಂಬ ಪದವನ್ನೇ ಪುಷ್ಟೀಕರಿಸುತ್ತವೆ. ಶಿಷ್ಯನಾದವನಿಗೆ ಭಕ್ತಿಯಿಂದ ಕೂಡಿದ ಭಯವಿರಬೇಕು, ವಿಷಯ ಚಪಲ ವಿರಹಿತನಾಗಿರಬೇಕು. ಇಷ್ಟಿದ್ದರೆ ಸಾಲದು. ಶಿಷ್ಯನು ಶ್ರೀ ಗುರುವಿನ ಸೇವೆಯನ್ನು ಮಾಡಬೇಕು. ಶ್ರೀಗುರು ಸೇವೆಯಲ್ಲಿ ತನ್ನ ತನುಕರಣೇಂದ್ರಿಯಗಳನ್ನು ದಣಿಸಿ ಧರ್ಮದ ಹದಕ್ಕೆ ತರಬೇಕು. ಹಾಗೆ ತಾರದೆ ಗುರುಕೃಪೆಯು ಕೈಗೂಡದು. ಹರಸುಖವು ಮೈಗೂಡದು. "ಖಂಡಿಸದೆ ಕರಣವನು, ದಂಡಿಸದೆ ದೇಹವನು ಉಂಡುಂಡು ಸಗ್ಗ ಕಯ್ದಲ್ಕೆ ಅದನೇನು । ರಂಡೆಯಾಳುವಳೆ ಸರ್ವಜ್ಞ ?॥" ಎಂದು ಕೇಳುತ್ತಾನೆ ಭಯ ಭಕ್ತಿ ವಿನಯಗಳ ಮೂರ್ತಿಯಾದ ಸರ್ವಜ್ಞನು. ಗರ್ವವಿದ್ದರೆ ಸೇವೆ ಸಾಗದು. ತನು ಮನ ಧನಗಳ ಗರ್ವವನ್ನು ತೆಗೆದುಹಾಕಿ ಶ್ರೀ ಗುರುವನ್ನು ಸೇವಿಸಬೇಕು. ಸತ್ಸೇವೆಯಲ್ಲಿ ಕಾಯಕರಣಗಳನ್ನು ಹದಗೊಳಿಸಬೇಕು. ಮೃದುವಾಗಿಸಬೇಕು. ಮಧುರ ರಸವನ್ನು ಗಳಿಸಬೇಕು.

ಸೇವೆ ಪಾವನವಾದುದು. ಆ ಪಾವನತೆ ಉಳಿದುಬರಬೇಕಾದರೆ ಕಂಡ ಕಂಡವರಲ್ಲಿ ಸೇವಾವೃತ್ತಿಯನ್ನು ಕೈಕೊಳ್ಳಬಾರದು. ಪರಮನನ್ನು

ಅರಿಯದವರ ಸೇವೆಯಿಂದ ಜನ್ಮ ಪಾವನವಾಗದು. ಕರ್ಮ ಪರಿಹಾರ ವಾಗದು. ಮನಸ್ಸು ಪ್ರಸನ್ನವಾಗದು. ಪರಮ ಗುರಿ ಪ್ರಾಪ್ತವಾಗದು. ಆದಕಾರಣ ಜಗದ್ಗುರು ರೇಣುಕರು 'ಪರಮಾಚಾರ್ಯ'ನನ್ನು ಸೇವಿಸೆಂದು ಕಟ್ಟಪ್ಪಣೆಯ ಮಾಡುತ್ತಾರೆ. ಪರಮಾಚಾರ್ಯರ ಸೇವೆ ಪರಮಾನಂದ ದಾಯಕ; ಪರಮಾರ್ಥ ದೀಪಕ; ಪರಮೇಶತ್ವ ಪ್ರಾಪಕ.

ಅಂತಹ ಪರಮಾಚಾರ್ಯರೇ ದುರ್ಲಭ. ಅಂಥವರ ಸೇವೆ ಲಭ್ಯವಾಗು ವುದು ಇನ್ನೂ ದುರ್ಲಭ. "ಸೇವಾ ಧರ್ಮಃ ಪರಮ ಗಹನೋ ಯೋಗಿ ನಾಮಪ್ಯಗಮ್ಯಃ" ಎಂದಿದಾರೆ ಸೇವಾಧರ್ಮಜ್ಞನಾದ ಹಿರಿಯರು.

ಕ್ಷುಧಾರ್ಥಿಯು ಅನ್ನವನ್ನು ಅರ್ಥಾರ್ಥಿಯು ಹೊನ್ನನ್ನು ಆಶಿಸು ವಂತೆ ಆತ್ಮಾರ್ಥಿಯು ಆಧ್ಯಾತ್ಮ ಗುರುವನ್ನು ಆಶಿಸಿ ಸೇವಿಸಬೇಕು. ಆಪ್ತ, ಅಂಗ, ಸ್ಥಾನ, ಸದ್ಭಾವರೂಪ ಚತುರ್ವಿಧ ಸೇವೆಗಳನ್ನು ಶ್ರೀ ಗುರುವಿಗೆ ಸಲ್ಲಿಸಬೇಕು. ಗುರುವಿಗೆ ಅನುಕೂಲವಾದ ಅಪೇಕ್ಷಿತವಾದ ಗುರು ರಹಸ್ಯ ವನ್ನು ಹೊರಗೆ ಹಾಕದ ಸೇವೆಯೇ ಆಪ್ತ. ಆಪ್ತ ಸೇವೆಯು ಸಲ್ಲಿಸಿದರೆ ಶಿಷ್ಯನು ಶ್ರೀ ಗುರುವಿನ ಆಪ್ತನಾಗುತ್ತಾನೆ. ಯಾವುದರಲ್ಲಿಯೂ ಭಿನ್ನ ಭಾವ ಬಾರದಂತೆ ಸಮಭಾವ ಸಾರುವಂತೆ ಮಾಡುವುದೇ ಆಪ್ತ ಸೇವೆಯ ಇಂಗಿತ. ತನ್ನ ಶ್ರೀಗುರು ಸ್ವೀಕರಿಸಿ ಮಿಕ್ಕುದನ್ನು ಸೇವಿಸಿ ಸಂತೋಷದಿಂದಿರುವುದೇ ಅಂಗಸೇವೆ. ಶ್ರೀ ಗುರುವೇ ಆತ್ಮ (ಲಿಂಗ), ತಾನೇ ಆತನಿಗೆ ಅಂಗ ಎಂದ ರಿದು ಸೇವಿಸುವುದೇ ಅಂಗಸೇವೆ. ಶ್ರೀ ಗುರುವಿನ ಸ್ಥಾನ (ಮಠ–ಆಶ್ರಮಾದಿ ಗಳನ್ನು)ವನ್ನು ಸಂರಕ್ಷಿಸುವುದೇ ಸ್ಥಾನಸೇವಾಂಗ. ಶ್ರೀ ಗುರುವಿನ ಸ್ಥಾನವೇ ಶಿಷ್ಯನಿಗೆ ಕೈಲಾಸ. ಶ್ರೀ ಗುರುವನ್ನು ಸಾಕ್ಷಾತ್ ಪರಮೇಶ್ವರನೆಂದರಿದು ಆತನ ಆಜ್ಞೆಯನ್ನು ಅನ್ಯಥಾ ಭಾವಿಸದಿರುವುದು ಸದ್ಭಾವ ಸೇವೆ. ಶ್ರೀ ಗುರು ವಿನ ನೆರಳಾಗಿ ಉಸಿರಾಗಿ ಸೇವೆ ಸಲ್ಲಿಸಬೇಕು. ಎಲ್ಲಿದ್ದರೂ ಏನಿದ್ದರೂ ಶ್ರೀ ಗುರುವನ್ನು ಮರೆಯಬಾರದು ; ಮತ್ತೊಂದಕ್ಕೆ ಮನ ಮುಗ್ಧವಾಗಬಾರದು. ನಾರದರೊಮ್ಮೆ ಪರಶಿವ ಗುರುವಿನ ಸೇವೆಯಲ್ಲಿದ್ದರು. ಶ್ರದ್ಧೆಯಿಂದ ಸೇವೆ ಯಲ್ಲಿ ಸನ್ನದ್ಧರಾಗಿದ್ದರು.

ಗುರು ಶಿಷ್ಯರಿಬ್ಬರೂ ಒಮ್ಮೆ ಪಯಣವಾದರು. ಶಿಷ್ಯನಾದ ನಾರದರ

ಮನಸ್ಸನ್ನು ಪರೀಕ್ಷಿಸಲು ಪರಶಿವ ಗುರುವು ನಡುದಾರಿಯಲ್ಲಿ ನೀರಡಿಸಿದಂತೆ ನಟಿಸಿ ನೀರು ಬೇಕೆನ್ನುವರು. ನಾರದರು ನೀರಿಗಾಗಿ ಹುಡುಕಿಕೊಂಡು ಹೋಗುವರು. ದೂರದಲ್ಲಿ ಬಾವಿ ಕಾಣಿಸುವುದು. ಬಾವಿಯ ಬಳಿ ಸಾರುವರು. ನೀರಿನ ಬಳಿಯಲ್ಲಿ ಒಬ್ಬ ಚೆಲುವ ನಾರಿಯಿರುವಳು. ಅವಳನ್ನು ಕಂಡು ನಾರದರು ಮೋಹಿಸುವರು. ಇವರನ್ನು ನೋಡಿ ಆ ನೀರೆಯೂ ಮನ ಸೋಲುವಳು. ನಾರದರು ಗುರುವನ್ನು ಮರೆತು ನೀರ ಬಳಿಯಿರುವ ನಾರಿಯ ಕೈವಿಡಿಯುವರು. ಕೂಡಿ ಸಂಸಾರಿಯಾಗುವರು. ಮೂವರು ಮಕ್ಕಳಾಗುವರು. ಕೆಲದಿನ ಕಳೆದ ಬಳಿಕ ನಾರದರು ಸಂಸಾರಸಹಿತ ಸಂಚಾರ ಹೊರಡುವರು. ದಾರಿಯಲ್ಲಿ ಒಂದು ತೊರೆ ಸಿಕ್ಕುವುದು. ಅದನ್ನು ದಾಟುತ್ತಿರುವಾಗ ತೊರೆ ಏರಿಬರುವುದು. ಮಡದಿ ಮಕ್ಕಳೆಲ್ಲರೂ ನೀರ ಪಾಲಾಗುವರು. ಆಗ ನಾರದರು ಗುರುವನ್ನು ನೆನೆಯುವರು. ನೀರಿಲ್ಲದ ಗುರುವನ್ನು ಬಳಲಿಸಿದ ಫಲವಿದೆಂದು ಮಮ್ಮಲನೆ ಮರಗುವರು.

"ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ |
ಮತ್ತೆ ಪಾದದ ಕೆರವಾಗಿ ಗುರುವಿನ |
ಹತ್ತಲಿರು ಎಂದ ಸರ್ವಜ್ಞ ||"

ಏನಾದರೂ ಗುರುವಿನ ಸೇವೆಗೆ ಹೊರಗಾಗಬಾರದು. ಎಂತಾದರೂ ಎನಿತು ಕಾಲವಾದರೂ ಗುರು ಸೇವೆಯಲ್ಲಿ ಶರಣಾಗತಿಯಲ್ಲಿ ಕಾಲವನ್ನು ಕಳೆಯಬೇಕು. ಮಾಸ, ವರ್ಷಗಳೆನ್ನದೆ ಶ್ರೀ ಗುರುವಿನ ಕರುಣಕ್ಕಾಗಿ ಚರಣದಲ್ಲಿ ಶರಣಾಗಿ ಸೇವೆ ಸಲ್ಲಿಸಬೇಕು. ಏಕೆಂದರೆ ಆ ಆತ್ಮಸಾಕ್ಷಾತ್ಕಾರವು ತರ್ಕಾದಿಗಳಿಂದ ತನಗಳವಡುವುದಲ್ಲ. ಪ್ರವಚನಾದಿಗಳಿಂದ ಪ್ರಾಪ್ತವಾಗುವುದಲ್ಲ.

ನಾಯಮಾತ್ಮಾ ಪ್ರವಚನೇನ ಲಭ್ಯೋ,
ನ ಮೇಧಯಾ, ನ ಬಹುನಾ ಶ್ರುತೇನ |
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ
ಆತ್ಮಾ ವಿವೃಣುತೇ ತನೂಂ ಸ್ವಾಮ್"

ಎಂದು ಕಠೋಪನಿಷತ್ತು ಕಂಠೋಕ್ತವಾಗಿ ಹೇಳಿದೆ. ಅಂತೆಯೇ ಸೇವೆಯಿಂದ ಶ್ರೀ ಗುರುವನ್ನು ಪ್ರಸನ್ನವಾಗಿಸಿದರೆ ಪರಮ ಕರುಣೆಗೆ ಪಾತ್ರರಾಗಲು ಅರ್ಹತೆಯುಂಟಾಗುತ್ತದೆ.

ಸತ್ಯರ ಸೇವೆಯಲ್ಲಿ ಸೊಗಸಿದೆ, ಸಂತೃಪ್ತಿಯಿದೆ ; ಸಂಪ್ರಾಪ್ತಿಯಿದೆ. ಸಿರಿವಂತರ ಸೇವೆಗಿಂತ ಶ್ರೀ ಗುರುವಿನ ಸೇವೆ ಸಾವಿರ ಪಾಲು ಮೇಲು. "ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ ; 'ತಾರೋ ಅಗ್ಗವಣಿಯ, ನೀಡೋ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೋ' ಎಂಬರು ; ಕೂಡಲಸಂಗನ ಮಹಾಮನೆಯಲ್ಲಿ ಒಕ್ಕುದನುಣ್ಣೋ ತೊತ್ತೇ ; ಎಂಬರು.

ಇಂತಹ ಸತ್ಕ್ರಿಯೆಗಳನ್ನು ಮಾಡುವ ಸೌಭಾಗ್ಯ ಸತ್ಯರ ಸೇವೆಯಲ್ಲಿ ಸಂಪ್ರಾಪ್ತವಾಗುತ್ತದೆ. ಇದಕ್ಕಿಂತ ಇನ್ನಾವ ಸಂಪ್ರಾಪ್ತಿ ; ಇನ್ನಾವ ಸಂತೃಪ್ತಿ ?

ನಾಯಕರಾಗಿ ಸೇವೆ ಮಾಡುವುದಕ್ಕಿಂತ ಸೇವಕರಾಗಿ ಸೇವೆ ಮಾಡುವಲ್ಲಿ ಸುಖವಿದೆ ; ಸೊಕ್ಕಿನ ಸೊಂಕಿಲ್ಲದಿರುತ್ತದೆ.

"ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ, ರುದ್ರ ಪದವಿಯನೊಲ್ಲೆ; ಮತ್ತಾವ ಪದವಿಯನೊಲ್ಲೆನಯ್ಯಾ ! ಕೂಡಲ ಸಂಗಮ ದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೆ ಕುರುಣಿಸಯ್ಯಾ" ಎಂದಿದಾರೆ ಬಸವಣ್ಣನವರು. ಶಿಷ್ಯನಿಗೆ ಶ್ರೀ ಗುರುವಿನ ಪಾದಸೇವೆಯೇ ಮಹಾ ಪದವಿ. ಶ್ರೀ ಗುರುವಿನ ಸೇವೆಯಿಂದ ಶಿಷ್ಯನಾಗುವನು ಸದ್ಭಾವಿ, ಸ್ವಾನುಭಾವಿ. ಆಯತ ಸ್ವಾಯತ ಸನ್ನಿಹಿತಾನುಭಾವಕ್ಕಿಂತ ಬೇರಿಲ್ಲ ಜೀವಾಳ. ಶಿಷ್ಯನಿಗೆ ಶ್ರೀ ಗುರುವಿಗಿಂತ ಬೇರಿಲ್ಲ ಜೀವ ಜೀವಾಳ. ನಿಷ್ಕಾಮ ಸೇವೆಯಿಂದ ಶ್ರೀ ಗುರುವಿನ ಮನಸ್ಸನ್ನು ಪ್ರಸನ್ನಗೊಳಿಸುವುದೇ ಶಿಷ್ಯನ ಮೂಲ ಬಂಡವಳ.

"ಒಮ್ಮೆಯು ಶ್ರೀ ಗುರುವಿನ ಶ್ರೀ ಚರಣವ ನೆನೆಯಲೊಡನೆ
ಭವ ಬಂಧನ ಬಿಡುವುದು. ಗುರುವೆ ಶರಣು,
ಗುರು ಲಿಂಗವೆ ಶರಣು ;

ಹರಿ ಬ್ರಹ್ಮಾದಿಗಳಿಗೆ ಅಗೋಚರವಾದ ಕೂಡಲ
ಚೆನ್ನಸಂಗಯ್ಯನೆಂಬ
ಲಿಂಗವ ತೋರಿದ ಗುರುವೆ ಶರಣು."

"ಪ್ರಸನ್ನಂ ಪರಮಾಚಾರ್ಯಂ ಭಕ್ತ್ಯಾ ಮುಕ್ತಿ ಪ್ರದರ್ಶಕಂ
ಪ್ರಾರ್ಥಯೇದಗ್ರತಃ ಶಿಷ್ಯಃ ಪ್ರಾಂಜಲಿರ್ವಿನಯಾನ್ವಿತಃ |
ಭೋ ಕಲ್ಯಾಣ ಮಹಾಭಾಗ ಶಿವಜ್ಞಾನ ಮಹೋದಧೇ
ಆಚಾರ್ಯವರ್ಯ ಸಂಪ್ರಾಪ್ತಂ ರಕ್ಷಮಾಂ ಭವರೋಗಿಣಮ್ ||"

ತನ್ನ ಸೇವೆಯಿಂದ ಸಂತುಷ್ಟನಾದ, ತನಗೆ ಸಮರಸ ರೂಪವಾದ ಮುಕ್ತಿಯ ಮಾರ್ಗವನ್ನು ತೋರುವ ಪರಮಾಚಾರ್ಯನನ್ನು ಶಿಷ್ಯನು ಪ್ರಾರ್ಥಿಸಬೇಕು. ಭಕ್ತಿಭಾವದಿಂದ ನಯವಿನಯದಿಂದ ಮುಂಗಡೆಯಲ್ಲಿ ನಿಂತು ಮುಂಗೈ ಜೋಡಿಸಿ ಪ್ರಾರ್ಥೇಯತೆಯಿಂದ ಪ್ರಾರ್ಥಿಸಬೇಕು. ಈ ಪದ್ಯದಲ್ಲಿ ಪ್ರತಿಯೊಂದು ಪದವನ್ನೂ ಕವಿ ಅರ್ಥವತ್ತಾಗಿ ಉಪಯೋಗಿಸಿದ್ದಾನೆ. ಗುರು ಪ್ರಸನ್ನನಾಗದೆ ಪ್ರಾರ್ಥನೆಯನ್ನು ಮಾಡಬಾರದು. ಮಾಡಿದರೆ ತನ್ನ ಪ್ರಾರ್ಥನೆ ಫಲಿಸದು. ತಾನು ಪ್ರಾರ್ಥಿಸುವ ಆಚಾರ್ಯನು ಪರಾಚಾರ್ಯನಲ್ಲ ಪರಮಾಚಾರ್ಯನಾಗಿರಬೇಕು. ಶ್ರೀಗುರು ಶ್ರೇಷ್ಠನಾಗಿರಬೇಕಲ್ಲದೆ ಆಳವಾಗಿ ಅಳೆದು ನೋಡುವ ಆಲೋಚಿಸಿ ಮಾಡುವ (ಪರಂ ಮಿಮೀತೇ ಮಿನೋತಿ ವಾ ಪರಮಂ) ಆಚಾರ್ಯನಾಗಿರಬೇಕು. ಅಂತೆಯೇ ಆಚಾರ್ಯ ಪದವೂ ಅರ್ಥವತ್ತಾಗಿದೆ. ಸಕಲಾಗಮಗಳ ಅರ್ಥವನ್ನು ಅರಿತವನೂ ಅರಿತಂತೆ ಆಚರಿಸುವವನೂ ಆಚಾರ್ಯನೆನಿಸುತ್ತಾನೆ. ಇವೆಲ್ಲ ಅಭಿಪ್ರಾಯಗಳಿಂದ ಕೂಡಿದೆ 'ಪರಮಾಚಾರ್ಯ' ಪದ. ಆಚಿನೋತಿ ಚ ಶಾಸ್ತ್ರಾರ್ಥಮಾಚಾರೇ ಸ್ಥಾಪಯತ್ಯಪಿ ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಚೋಚ್ಯತೇ ಎಂಬುದಾಗಿ ಧರ್ಮಶಾಸ್ತ್ರ ನಿರೂಪಣೆಯಿದೆ. ಇಂತಹ ಆಚಾರ್ಯನಿಗೆ ಆ ಪ್ರಸ್ಥಾನ ಮೀಸಲಾಗಿದೆ ಮತ್ತು ಆತನು ಮುಕ್ತಿ ಪ್ರದಾಯಕನಾಗಿರಬಾರದು ; ಮುಕ್ತಿ ಪ್ರದರ್ಶಕನಾಗಿರಬೇಕು. ಮುಕ್ತಿಯನ್ನೇ ಆತನಿಂದ ಶಿಷ್ಯನು ಪಡೆದು ಮುಕ್ತನಾಗಿರುವುದಕ್ಕಿಂತ ಮುಕ್ತಿ ಮಾರ್ಗವನ್ನು ತಿಳಿದು ಆ ಮಾರ್ಗದಲ್ಲಿ ಮುನ್ನಡೆದು ಹೋಗುವುದರಲ್ಲಿ

ಸುಖವಿದೆ. ಸಕ್ಕರೆಯೆ ತಾನಾಗಿರುವುದಕ್ಕಿಂತ ಸಕ್ಕರೆಯನ್ನು ಸವಿದುಂಬುವವನಾಗುವಲ್ಲಿ ಸಾರ್ಥಕ್ಯವಿದೆ; ಸಮರ್ಪಕತೆಯಿದೆ. 'ಕರುಣಿಸೆನಗಿದನೆ ಬೇಡುವೆನಭವ ಬೇರೊಂದು ವರವನೊಲ್ಲೆನು ಮುಕ್ತಿ ದೊರೆವ ಸಾಧನವ' ಎಂದು ನಿಜವರಿತ ನಿಜಗುಣರೂ ಸಹ ಸಿದ್ಧಿಯನ್ನು ಕೇಳದೆ ಸಾಧನವನ್ನು ಕೇಳಿದ್ದಾರೆ.

ಇನ್ನು ಶಿಷ್ಯನು ಅರ್ಥಿಸುವುದಕ್ಕಿಂತ ಪ್ರಾರ್ಥಿಸುವುದು ಲೇಸು. ಅರ್ಥಿಯಾಗುವುದರಲ್ಲಿ ಸ್ವಾರ್ಥವಿದೆ; ಸಣ್ಣಪುಟ್ಟ ಆಶೆ ಆಕಾಂಕ್ಷೆಗಳಿವೆ. ಪ್ರಾರ್ಥನೆಯಲ್ಲಿ ಇವಾವೂ ಇರುವುದಿಲ್ಲ; ಇರಬಾರದು. ಇದ್ದರೆ ಅದು ಪ್ರಾರ್ಥನೆಯಲ್ಲ. ಪ್ರಾರ್ಥಿಸುವವನು ಅಕ್ಕ ಪಕ್ಕಗಳಲ್ಲಾಗಲಿ ಹಿಂಬದಿಯಲ್ಲಾಗಲಿ ಇರಬಾರದು. ಇದರಿಂದ ಪರಸ್ಪರ ಮುಖದರ್ಶನಕ್ಕೂ ಇಂಗಿತಜ್ಞತೆಗೂ ಅವಕಾಶವಿಲ್ಲದಾಗುತ್ತದೆ. ಶ್ರೀ ಗುರುವಿನ ಕರುಣಾ ಕಟಾಕ್ಷಕ್ಕೂ ಶಿಷ್ಯನು ವಂಚಿತನಾಗಬೇಕಾಗುತ್ತದೆ. ಪ್ರಾರ್ಥಿಸುವವನು ಪ್ರಥಮದಲ್ಲಿ ಸೇವೆ ಸಲ್ಲಿಸಿ ಶಿಷ್ಯನಾಗಿರಬೇಕು. ಬರೀ ಅಂಜಲಿಯನೊಡ್ಡದೆ ಪ್ರಾಂಜಲಿ ಆಗಿರಬೇಕು. ಶ್ರೀ ಗುರುವಿನ ಒಲುಮೆಗೆ ಮೂಲ ಕಾರಣವಾದ ವಿನಯ ಭಯ ಭಕ್ತಿಗಳಿರಬೇಕು.

ಅಂಜಲಿ (ಬೊಗಸೆ)ಯನೊಡ್ಡುವಲ್ಲಿ ಪ್ರತಿಫಲಾಕಾಂಕ್ಷೆಯ ಚಿನ್ಹೆಯಿದೆ. ಪ್ರಾಂಜಲಿ (ಪೂರ್ಣ ಹಸ್ತಸಂಪುಟ)ಯಲ್ಲಿ•ಅಂದರೆ ಕೈ ಮುಗಿಯುವಿಕೆಯಲ್ಲಿ ಫಲೇಚ್ಛೆಯ ಚಿನ್ಹೆಯಿಲ್ಲ. ಪ್ರತಿಯಾಗಿ ಅಂಗಲಿಂಗ ಸಂಗಸನುರಸವನರಿವ ಸಲ್ಲಕ್ಷಣ ಪ್ರಾಂಜಲಿಯಲ್ಲಿದೆ. ಕಾರಣ ಶಿಷ್ಯನು ಪ್ರಾಂಜಲಿಯಾಗಿ ವಿನಯಶಾಲಿಯಾಗಿ ಭಕ್ತಿ ಶೀಲನಾಗಿ ಪ್ರಸನ್ನನಾದ ಪರಮಾಚಾರ್ಯನನ್ನು ಮುಂದಿನಂತೆ ಪ್ರಾರ್ಥಿಸಬೇಕು: ಈ ಎಲ್ಲ ಗರ್ಭಿತಾರ್ಥಗಳನ್ನು ಗುರುತಿಸಿದಾಗ ಆಗುವ ಆನಂದ ಅಷ್ಟಿಷ್ಟಲ್ಲ. ಆ ಶ್ಲೋಕದ ಸೌಂದರ್ಯ ಅನಿತಿನಿತಲ್ಲ.

"ಶೀಲ ಭಾರವತೀ ಕಾಂತಾ, ಪುಷ್ಪ ಭಾರವತೀ ಲತಾ | ಅರ್ಥಭಾರವತೀ ವಾಣೀ ಭಜತೇ ಕಾಮಪಿ ಶ್ರಿಯಮ್" ಎಂಬಂತೆ ಆ ಶಿವಕವಿ ವಾಣಿ ಒಂದು ಅಪೂರ್ವ ಶೋಭೆಯನ್ನು ತಳೆದಿದೆ; ಅನುಪಮ ಪ್ರಭೆಯನ್ನು ತಾಳಿದೆ. ಇನ್ನು ಇದು ಶಿಷ್ಯಪ್ರಾರ್ಥನೆ:

ಭೋಕಲ್ಯಾಣ ! ಓ ಭವರೋಗಹರನೆ, ಮಂಗಳಕರನೆ ; 'ಕಲ್ಯಂ ನೀರುಜತ್ವಂ ಆಣಯತಿ ಕಲ್ಯಾಣಂ' ಈ ಉತ್ಪತ್ತಿ ಭವರೋಗಹರ ಎಂಬ ಅರ್ಥವನ್ನೆ ಅಭಿವ್ಯಕ್ತಗೊಳಿಸುತ್ತದೆ. 'ಕಲ್ಯೇ ಪ್ರಾತಃಕಾಲೇ ಅಣ್ಯತೇ' ಎಂಬೀ ವಿಗ್ರಹದಿಂದ ಪ್ರಾತಃಕಾಲದಲ್ಲಿರುವ ಪ್ರಶಾಂತ ಸ್ಥಿತಿ ಜನಕ ಅಂದರೆ ಮಂಗಳಕರ ಅಥವಾ ಮಂಗಳಾತ್ಮ ಎಂದು ಅರ್ಥವಾಗುತ್ತದೆ. ಭವ ರೋಗಿಯು ಭವರೋಗಹರನನ್ನೇ ಆಶ್ರಯಿಸಬೇಕಲ್ಲವೆ ? ಮಲದೂಷಿತನು ಮಂಗಳಾತ್ಮನನ್ನೇ ಮೊರೆಯಿಡಬೇಕಲ್ಲವೆ ?

ಭೋ ಮಹಾಭಾಗ ! ಮಹಾಭಾಗ್ಯವಂತನೆ, ಮಹಾಪುಣ್ಯವಂತನೆ. 'ಭಜ್ಯತೇ ಭಾಗ :' ಆ ಮಹಾಭಾಗವನ್ನು ಅಲ್ಪಭಾಗಿಯಾದ ನನಗೂ ಕರು ಣಿಸಿಕೊಡುವ ಮಹಾದಾನಿ ನೀನು ; ಮಹೋದಾರಿ ನೀನು. ಅಂತಹ ಮಹಾ ಭಾಗವುಳ್ಳಾತ ನೀನು. ಅದರಿಂದಾಗಿ ಆಶ್ರಯಕ್ಕೆ ಯೋಗ್ಯನು ನೀನು. ಜಗದ ಜೀವರ ಕಲ್ಯಾಣಕ್ಕಾಗಿ ಅವತರಿಸಿದಾತ ನೀನು. ಇದರಿಂದ ಮಹಾ ಭಾಗ ನೀನು.

ಭೋ ಶಿವಜ್ಞಾನ ಮಹೋದಧೇ ! ಶಿವಜ್ಞಾನಾಮೃತಕ್ಕೆ ಮಹಾಸಾಗರ ನೀನು. ಆಚಾರ್ಯರಿಗೆಲ್ಲ ಆರಾಧ್ಯ ನೀನು. ಭವರೋಗಿಯಾದ ನಾನು ನಿನ್ನ ಬಳಿಗೆ ಬಂದಿದ್ದೇನೆ. ನಿನ್ನನ್ನು ಭಕ್ತಿಯಿಂದ ಬೇಡುತ್ತಿದ್ದೇನೆ. ನನ್ನನ್ನು ಕಾಪಿಡು.

'ಶ್ರೀ ಗುರುವೆ ನೀನೆ ಶರಣಾಗೆನಗೆ ನಿಜಸುಖದ ಸಾಗರನೆ ಸಕಲ ವಿದ್ಯಾ ಗುಣನಿವಾಸ |' ಎಂದು ನಿಜಗುಣಶಿವಯೋಗಿಯು ಶಿವಯೋಗಿ ಶಿವಚಾರ್ಯನ ಅಭಿಪ್ರಾಯಕ್ಕೆ ಏನೂ ವ್ಯತ್ಯಾಸವಿಲ್ಲದಂತೆ ಯೋಗಪ್ರತಿಪಾದನ ಸ್ಥಲದಲ್ಲಿ ಪ್ರಥಮನಾಗಿ ಪ್ರಾರ್ಥಿಸಿದ್ದಾರೆ. ಇದು ಗಮನಾರ್ಹವಾಗಿದೆ.

ಶಿಷ್ಯನು ಶ್ರೀ ಗುರುವಿನಲ್ಲಿ 'ರಕ್ಷಮಾಂಭವರೋಗಿಣಂ' ಎಂದು ಬಿನ್ನ ವಿಸಿಕೊಂಡ ಈ ಪದಕ್ಕೆ ಮಹಾದೇವಿಯಕ್ಕಗಳು ಹೀಗೆ ಸಮರ್ಥನೆ ಮಾಡಿ ದಾರೆ : 'ಸಂಸಾರವೆಂಬ ಹಗೆಯಯ್ಯ ತಂದೆ ! ಎನ್ನ ವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ ! ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆ ಯಯ್ಯ ! ನಿಮ್ಮ ಮರೆಹೊಕ್ಕೆ ಕಾಯಯ್ಯ ! ಎನ್ನ ಬಿನ್ನಪವನವಧಾರ

ಚೆನ್ನಮಲ್ಲಿಕಾರ್ಜುನ.' ಆ ಶಿಷ್ಯನ ಸೂಕ್ತಿ ಸೂತ್ರಕ್ಕೆ ಇದು ಭಾಷ್ಯವಿದ್ದಂತಿದೆ. ಅದನ್ನೇ ಹಿಗ್ಗಿಸಿ ಅನುವಾದಿಸಿದಂತಿವೆ. '....ಭವರೋಗ ವೈದ್ಯ ನೀನು, ಭವವಿರಹಿತ ನೀನು ; ಅವಧಾರು ! ಕರುಣಿಸುವುದು ಕೂಡಲ ಸಂಗಮ ದೇವಾ ;' ಎಂದು ಬಸವಣ್ಣನವರು ಗುರುವಿನಲ್ಲಿ ಮೊರೆಯಿಟ್ಟಿದ್ದಾರೆ. 'ಕ್ರೂರ ವಿಕಾರಮಂ ಹೊರಿಸಿ ನೋಡಿ ನಗುತ್ತಿರಲೇಕೆದೇವ ಸಂ. | ಸಾರದ ಭಾರಮಂ ಹೊರುವೊಡೆನ್ನಳವೇಂ ಹೊರಲಾರೆನೆಂದು ಧಿಕ್ಕರಿಸಬೇಡ........ ಗುರುಶಂಕರೇಶ್ವರಾ.' ಎಂದು ಶಂಕರದೇವರು ಮೊರೆಯಿಡುತ್ತಾರೆ.

ಇವೆಲ್ಲ 'ಮೊರೆ'ಗಳನ್ನು ನೆನೆದರೆ ಮನಸ್ಸಿಗೆ ಈ ಬಾಳಿನ ಬಗೆ ಹೊಳೆಯು ದಿರದು. ಈ ಜೀವನ ಕಲ್ಪತರುವಿನ ಬುಡಕ್ಕೆ ಭವಕೀಟಬಿದ್ದಿರುವುದು ಗೋಚರವಾಗದಿರದು. ಭೌತಿಕ ಐಂದ್ರಿಕ ಸುಖ-ದುಃಖಗಳ ಜಾಲದಲ್ಲಿ ಸಿಕ್ಕು ಚಟಪಟೆಸುತ್ತಿರುವ ವಿಕಾರ ದೃಶ್ಯ ಸಾಧಕನಿಗೆ ಸಹಿಸದು. ಕಣ್ಣಿದ್ದು ಕುರುಡರಾಗಿರಬೇಕೆ ? ಆತ್ಮನಿದ್ದು ಅದರ ಅತೀಂದ್ರಿಯ ಸುಖವನ್ನು ಅನುಭವಿಸದಿರಬೇಕೆ ? ತನ್ನ ಬದುಕು ಬಾಳು ಯಾರಿಗಾಗಿ ? ಆಂತರಿಕ ಜೀವನ ವಿಕಾಸವಾಗಬೇಡವೆ ? ಆತ್ಮಋಣವನ್ನು ತೀರಿಸಬೇಡವೆ ? ತ್ರಿಕರಣ ಪೂರ್ವಕವಾಗಿ ಪರಿಶ್ರಮಿಸಬೇಡವೆ ? ಪ್ರಪಂಚದಲ್ಲಿ ಪರಮಾರ್ಥವನ್ನು ಕಾಣಬೇಡವೆ ? ಕುಡು ಸಾಮಾಜಿಕ ಋಣ, ಜಾಗತಿಕ ಋಣಗಳಿಂದ ಮುಕ್ತನಾಗಬೇಡವೆ ? ಕ್ಷುಲ್ಲತನದಲ್ಲಿ ತಲ್ಲಣಗೊಳ್ಳದೆ ಸಲ್ಲೀಲೆಯಲ್ಲಿ ಮನ ತಲ್ಲೀನವಾಗಬಾರದೆ ? ತಲ್ಲೀನವಾಗಿ ತೃಪ್ತಿ ಶಾಂತಿಗಳನ್ನು ಪಡೆಯಬಾರದೆ ? ಸಂಸಾರದ ಸೆಳತಕ್ಕೆ ಸಿಕ್ಕು ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕೆ ? ಪ್ರಕೃತಿಗೆ ಪ್ರಾಸಾದಿಕತೆ ಪ್ರಾಪ್ತವಾಗಬೇಕಾದರೆ ವರ್ತಿಸುವ ಬಗೆ ಹೇಗೆ ? ಕಷ್ಟನಷ್ಟ ಗಳಾದರೂ ಸಹಿಷ್ಣುವಾಗಿರಬಲ್ಲ ಬಲ್ಮೆ ಬೇಡವೆ ? ಕಾಮಕ್ರೋಧಗಳಿ ಗೀಡಾಗಿ ಪ್ರಮೆ ಕ್ಷಮೆಗಳನ್ನು ಶಮೆ ದಮೆಗಳನ್ನು ಹಾಳುಮಾಡಿಕೊಳ್ಳು ವುದೆ ? ಇಚ್ಛೆ ಸ್ವಚ್ಛವಾಗುವುದೆಂದಿಗೆ, ಹೇಗೆ ? ಹಳೆಯ ಹಲವುಕಡ್ಡಾ ಯಕ್ಕೆ ಹೊಸ ಹಗರಣಕ್ಕೆ ತಲೆಬಾಗಬೇಕೆ ? ಸತ್ಯಾಸತ್ಯಗಳ ವಿಮರ್ಶೆ ಬೇಡವೆ ? ಮೂರ್ಖತನವನ್ನು ಬಿಟ್ಟು ಮುಂದುವರಿಯಬಾರದೆ ? ಮಂಗಳ ಮಾರ್ಗದರ್ಶನವಾಗಬಾರದೆ ? ಮುಂಬೆಳಗು ಬಾಳಿನಲ್ಲಿ ಮೂಡಿಬರ ಬಾರದೆ ? ಆದರ್ಶ ಜೀವನ ಅಳವಡಬಾರದೆ ಬೆಲೆಯುಳ್ಳ ಈ ಬಾಳು

ಸತ್ಯಶುದ್ಧವಾಗಿ ಶಿವವಾಗಿ ಸುಂದರವಾಗಿ ಮಾರ್ಪಡಬಾರದೆ? ಅಲುಪ್ತ ಮತ್ತು ಅನಂತಶಕ್ತಿಯ ಸಾಕ್ಷಾತ್ಕಾರವಾಗಬಾರದೆ? ಸರಳ ಜೀವನದಿಂದ ಮೈ ಮನಸ್ಸುಗಳಿಗೆ ನೆಮ್ಮದಿಯೊದಗಬೇಡವೆ? ಕ್ರಿಯೆಯಲ್ಲಿ ಶ್ರದ್ಧೆ, ಜ್ಞಾನ ದಲ್ಲಿ ನಿಷ್ಠೆ, ಸಮತೆಸಮಾಧಾನಗಳಲ್ಲಿ ಅವಧಾನ, ಜೀವನ ರಹಸ್ಯದಲ್ಲಿ ಅನುಭವ,-ಒದಗಬೇಡವೆ? ಒವಗಿ ಓಲಾಡಬೇಡವೆ? ಹಾಳಾಗುವ ಹೊಲಬಿ ನಿಂದ ಹಿಂತಿರುಗಬೇಡವೆ? ಇವೆಲ್ಲವೂ ಇಲ್ಲದ ಮೇಲೆ ಈ ಬಾಳು ಬೀಳ ಲ್ಲವೆ? ದೋಷದೂಷಿತವಲ್ಲವೆ? ಇದೇ ಒಂದು ಬಿಡಲಾರದ ಭವರೋಗವಲ್ಲವೆ? ಈ ರೋಗದಿಂದ ನರಳಬೇಕೆ? ಈ ಭವರೋಗ ವೈದ್ಯನಾದ ಆಚಾರ್ಯವರ್ಯನಲ್ಲಿ ಚಿನ್ಮಯ ಚಿಕಿತ್ಸೆಯನ್ನು ಪಡೆಯದೆ ಬೇರೆ ನಿರೋಗಿಯಾಗುವ ಮಾರ್ಗವೆಲ್ಲಿ? ಎಂದು ಮುಂತಾಗಿ ಚೆನ್ನಾಗಿ ಯೋಚಿಸಿ ಸಚ್ಛಿಷ್ಯನು ಸದ್ಗುರುವಿನಲ್ಲಿ 'ರಕ್ಷ ಮಾಂಭವ ರೋಗಿಣಮ್' ಎಂದು ಮರೆಹೋಗುತ್ತಾನೆ.

ಬೆನ್ನು ಬಿದ್ದಿದೆ ಭವರೋಗ. ತನ್ನ ಕೈ ಬಿಟ್ಟಿದೆ ಶಿವಯೋಗ. ತನಗಿಲ್ಲ ಆ ಶಿವಸುಖ. ತನಗೆ ತಪ್ಪಿಲ್ಲ ಈ ಭವದುಃಖ, ಈ ಭವ ಬಂಧನ. ಇದರಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ; ನಿಸ್ಸಾರನಾಗಿದ್ದಾನೆ; ನಿಸ್ಸಹಾಯಕನಾಗಿ ದ್ದಾನೆ. ತನ್ನೊಳಗಿರುವ ಸುಖ ತನಗಿಲ್ಲ. ತನ್ನೊಳಗಿರುವ ಶಿವ ತನಗೆ ಕಾಣುತ್ತಿಲ್ಲ; ತನಗೆ ಸಹಾಯಕವಾಗಿಲ್ಲ. ಸಹಾಯಕನನ್ನಾಗಿ ಮಾಡಿಕೊಳ್ಳುವ ಶಕ್ತಿ ತನಗಿಲ್ಲ, ಯುಕ್ತಿ ತನಗಿಲ್ಲ. ಆ ಶಕ್ತಿ ಆ ಯುಕ್ತಿಗಳನ್ನು ಕರುಣಿಸುವ ಪರಮಗುರುವಿನ ಹೊರತು ತನಗೆ ಗತ್ಯಂತರವಿಲ್ಲ. ಅದಕ್ಕಾಗಿ ಶಿಷ್ಯನಾಗಿ ಶ್ರೀ ಗುರುವಿನಲ್ಲಿ ಮೊರೆ ಹೋಗಿದ್ದಾನೆ. ಪ್ರತ್ಯಕ್ಷದೇವನ ಪಾದವನ್ನು ಹಿಡಿದಿ ದ್ದಾನೆ.

"ಇತಿ ಶಬ್ದೇನ ಶಿಷ್ಯೇಣ ಪ್ರಾರ್ಥಿತಃ ಪರಮೋ ಗುರುಃ
ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಂ ।"

ತನ್ನ ತನಕ್ಕೆ ತವಕಗೊಂಡು ಅವನ್ನು ತನ್ನ ಕರಸ್ಥಲಕ್ಕೆ ತಂದುಕೊಡು ವವನು ಪರಮಗುರುವೆಂದು ಮನಗಂಡು ಪರಿಶುದ್ಧನಾಗಿ ಶಿಷ್ಯನು ಪ್ರಾರ್ಥಿಸಲು ಶ್ರೀ ಗುರು ಸುಮ್ಮನೇ ಒಮ್ಮೆಗೆ ಆತನನ್ನು ಅಂಗೀಕರಿಸಬಾರದು. ಶಿಷ್ಯನ ಶಕ್ತಿಪಾತ ಚಿನ್ಹೆಗಳನ್ನು ಚೆನ್ನಾಗಿ ನೋಡಬೇಕು. ಶಿಷ್ಯನ ಮನ ಸಂಸಾರಕ್ಕೆ

ಬೇಸತ್ತಿರಬೇಕು. ತನುಮನ ವಿಷಯಕ್ಕೆ ವಿಮುಖವಾಗಿರಬೇಕು. ನಿವೃತ್ತಿಯಲ್ಲಿ ಸಾಗಲು ಆಸಕ್ತಿ ಉದಯವಾಗಿರಬೇಕು. ಸದ್ಗೋಷ್ಠಿಯಲ್ಲಿ ಮೈ ಪುಳಕಗೊಳ್ಳಬೇಕು.

'ಅಥಾತೋ ಬ್ರಹ್ಮಜಿಜ್ಞಾಸಾ' ಈ ಬ್ರಹ್ಮಸೂತ್ರದಂತೆ ಶಿಷ್ಯನು ಶಕ್ತಿಪಾತ ಚಿನ್ಹೆಗಳಾದ ಗದ್ಗದ, ಜಿಹ್ವಾಸ್ಪಂದ, ಓಷ್ಠಸ್ಫುರಣ, ಕಂಪನ, ರೋಮಾಂಚ, ಸ್ವೇದ, ಸ್ಖಲನ, ಬಾಷ್ಪೋದಯಾದಿಗಳು ಉತ್ಪನ್ನವಾದ ಬಳಿಕ ಅಂದರೆ ಆತ್ಮಜ್ಞಾನದ ಆಸಕ್ತಿ ಹುಟ್ಟಿದ ಬಳಿಕ ಅದರ ಅರಿಕೆಗೆ ಅದರ ಪ್ರಾಪ್ತಿಗೆ ಸಾಂಸ್ಕಾರಿಕವಾಗಿ ಪ್ರಯತ್ನಿಸಬೇಕು. ದೀಕ್ಷಾ ರೂಪ ಸಂಸ್ಕಾರ ಪಡೆಯಲು ಶಕ್ತಿಪಾತವು ಅತ್ಯಾವಶ್ಯಕ. ಅದು ಉಭಯಾಂಗಗಳಲ್ಲಿ ಉದಯವಾಗಬೇಕು.

'ತೆರೆ ಮಸಗಲ್ ಸುಖಾಶ್ರುವೆದುರೇರುತಿರಲ್ ಪುಳಕಂ ಬೆಮರ್ಕರಂ
ಪರಿಯಿಡೆ ಗದ್ಗದಂ ಸುಳಿಗಳೊತ್ತಿರೆ ಕಂಪನಮುರ್ಕ್ಕಿ ಲೀಲೆಯೊ-।
ತ್ತರಿಸುತಿರಲ್ ಮದೀಶ ನಿಜಭಕ್ತಿ ತರಂಗಿಣಿ ಮೀರುತುಬ್ಬುರುಂ
ಬರುವುತುಮೆನ್ನ ಮೇಲೆ ಮಡುಗಟ್ಟುವುದೆಂದಲೆ ಹಂಪೆಯಾಳ್ದನೆ ॥'

ಹರಿಹರದೇವನು ಹೇಳುವ ಈ ಲಕ್ಷಣಗಳು ಶಕ್ತಿಪಾತವನ್ನು ಸೂಚಿಸುವ ಕುರುಹುಗಳು. ಇವು ತನ್ನಿಂದ ತನ್ನಲ್ಲಿ ಹುಟ್ಟುವವು. ಈ ಹಂಬಲ ಶಿಷ್ಯನಲ್ಲಿ ಹುಟ್ಟಿರಬೇಕು.

'ಏಷಾಂ ಶರೀರಿಣಾಂ ಶಕ್ತಿಃ ಪತತ್ಯವಿನಿವೃತ್ತಯೇ
ತೇಷಾಂ ತಲ್ಲಿಂಗಮೌತ್ಸುಕ್ಯಂ ಮುಕ್ತೌ, ದ್ವೇಷೋ ಭವಸ್ಥಿತೌ ।
ಭಕ್ತಿಶ್ಚ ಶಿವಭಕ್ತೇಷು. ಶ್ರದ್ಧಾ ತಚ್ಛಾಸಕೇ ವಿಧೌ'

ಈ ಮೃಗೇಂದ್ರಾಗಮವು ಪರಮಾತ್ಮ ಶಕ್ತಿಯ ಪ್ರಾಪ್ತಿಯೇ ಶಕ್ತಿಪಾತವೆಂದು ಹೇಳಿದೆ. ಮುಕ್ತಿಯಲ್ಲಿ ಆಸಕ್ತಿ, ಸಂಸಾರದಲ್ಲಿ ಅನಾಸಕ್ತಿ, ಶಿವಭಕ್ತರಾದವರಲ್ಲಿ ಭಕ್ತಿ, ಶಿವಾಗಮಗಳಲ್ಲಿ ಶ್ರದ್ಧೆ ಹುಟ್ಟುವುದೇ ಶಕ್ತಿಪಾತವಾದುದಕ್ಕೆ ಗುರುತು.

'ಎನೆಲೆ ಧರ್ಮಿ ಎನೆಲೆ ದಯಾಪರ ಎನೆಲೆ ಭಕ್ತವತ್ಸಲಾ
ಎನೆಲೆ ಜಾತ ಎನೆಲೆಯಜಾತ ಇದೆಲ್ಲಿಯು ದಂದುಗಕ್ಕೆ ತಂ-।

ದಾನಿಸಿ ಎನ್ನ ನೂಂಕೆವಪೆ ನಾಂ ಪೊರಲಾರ್ಪೆನೆ ಕಾಮುಭಾರವಂ
ನೀನತಿ ಬೇಗದಿಂದಲಿಳುಹೈ ತಿಳುಹೈ ಗುರುಶಂಕರೇಶ್ವರಾ ||'
ನಿಮ್ಮೊಲವಿಲ್ಲದಾತನೆ ಕುಲಾಧಮು, ನಿಮ್ಮೊಲವಿಲ್ಲದಾತನೇ
ಕರ್ಮಿಯಧರ್ಮಿಯಾತ್ಮಭವಿಯುಂಗಮುಹಾಭವಿ ಕೋಟಿ
ದುರ್ಜನಂ |
ನಿಮ್ಮೊಲವಿಲ್ಲದಾತನೆ ಇಹಕ್ಕೆ ಪರಕ್ಕೆ ವಿರುದ್ಧ ಬದ್ಧಕಂ
ನಿಮ್ಮೊಲವಿಲ್ಲದಾತನೆ ಕಳಾವಿಕಳಂ ಗುರು ಶಂಕರೇಶ್ವರಾ'

ಈ ಭಾವ ಈ ಆಳಾಪ ಈ ಆಸಕ್ತಿ ಈ ಭಕ್ತಿ ಹೃದಯದಿಂದ ಹೊಮ್ಮಿ ಬರು ವುದೇ ಶಕ್ತಿಪಾತದ ಹೊಳಹು ; ಹೀಗಾದ ಶಿಷ್ಯನಿಗೆ ಶಿವದೀಕ್ಷೆಯನ್ನು ಶ್ರೀಗುರು ಅನುಗ್ರಹಿಸಬೇಕು.

ಹಾವಿನ ಡೊಂಕು ಹುತ್ತದಲ್ಲಿ ಸಸಿನ, ಹೊಳೆಯ ಡೊಂಕು ಹೆಗ್ಗಡಲಲ್ಲಿ ಸಸಿನವಾದಂತೆ ಶಿಷ್ಯನ ಡೊಂಕು ಶ್ರೀ ಗುರುವಿನಲ್ಲಿ ಸಸಿನ: ಶ್ರೀ ಗುರು ಕರುಣಿ ಸುವ ಶಿವದೀಕ್ಷೆಯಲ್ಲಿ ಸಸಿನ. ಇದರಿಂದಾಗಿ ಶ್ರೀ ಗುರು ಶಿಷ್ಯನ ಪರಿಣಾಮ ಕಾರಿಯಾದ ಪ್ರಾರ್ಥನೆಯ ಪರಾಂಬರಿಸಿ ಅನುಗ್ರಹಿಸಿ ಆತನ ಈ ಭವಭಾರ ವನ್ನು ಇಳುಹಿ ನಿಜರೂಪದಿಂದ ಸ್ವಸ್ವರೂಪವನ್ನು ತಿಳುಹಿ ಪೊರೆಯಬೇಕು.

ಶಿವದೀಕ್ಷೆ ಅದೊಂದು ಶಿವಸಂಸ್ಕಾರ. ಅದೊಂದು ಜೀವನ ಪರಿವರ್ತನ ಸಾಧನ. ಸತ್ವದ ಆವಿಷ್ಕಾರ; ಸತ್ಯದ ಸಾಕ್ಷಾತ್ಕಾರ. ಅಸತ್ಯದಿಂದ ಸತ್ಯಕ್ಕೆ, ಅನಿತ್ಯದಿಂದ ನಿತ್ಯಕ್ಕೆ, ತಮಸ್ಸಿನಿಂದ ತೇಜಸ್ಸಿಗೆ ಕರೆದೊಯ್ಯುವ ಸಹಾಯ ಸಂಪತ್ತು. ನೆರೆ ಕಾಪಿಡುವ ಅಭಯ ಸಂಪತ್ತು. ಪರಮಾತ್ಮ ಪ್ರಭಾವ ಮುದ್ರೆಯನ್ನೊತ್ತುವ ಮಹತ್ತು. ಲೋಹಕ್ಕೆ ವಿದ್ಯುತ್ ಸಂಸ್ಕಾರ ವಾದಂತೆ ಅದರ ಮಹತ್ತು ; ಪರುಷ ಸೋಂಕಿದಂತೆ ಅದರ ಸ್ಪರ್ಶಪ್ರಭಾವ.

"ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ |"

ಇದು ದಿವ್ಯಗುರುವಿನ ದೀಕ್ಷೋಪದೇಶ. ಇದು ದೀಕ್ಷಾ ಪದದ ದಿವ್ಯ ಸಂದೇಶ; ಉದ್ದೀಪಕ ವಿಶ್ಲೇಷ. ದಾ ಮತ್ತು ಕ್ಷೀ ಧಾತುಗಳೆರಡು ಸೇರಿ

ದೀಕ್ಷಾಪದವಾಗಿದೆ. ಕೊಡು, ನಾಶಮಾಡು ಎಂದು ಅವೆರಡು ಧಾತ್ವರ್ಥ. ಅವು ಕ್ರಿಯಾಶ್ರಿತ ಧಾತುಗಳಾದ್ದರಿಂದ ಕ್ರಿಯಾಪೇಕ್ಷೆಯುಳ್ಳವಾಗಿವೆ. ಕ್ರಿಯೆಗಳು ಕರ್ತೃ ಅಪೇಕ್ಷೆಯುಳ್ಳವಾಗಿವೆ. ದಾ ಧಾತು ಶಿವಜ್ಞಾನವನ್ನು ಕೊಡುತ್ತದೆ. ಕ್ಷೀ ಧಾತು ಭವ ಪಾಶ ಬಂಧನವನ್ನು ಬಿಡಿಸುತ್ತದೆ. ಭವಪಾಶ ಬಂಧನ ಬಿಡದೆ ಶಿವಜ್ಞಾನ ಕೈಗೂಡದು. ಮಲತ್ರಯಗಳಿಂದ ಭವಪಾಶ ಬಂಧನವುಂಟಾಗುತ್ತದೆ. ಮಲತ್ರಯ ನಿರ್ಮೂಲವಾಗದೆ ಭವಪಾಶ ಬಂಧನ ಬಿಡದು. ಈ ಮಲತ್ರಯ ನಿರ್ಮೂಲವಾಗಬೇಕಾದರೆ ಶಿವಜ್ಞಾನೋದಯವಾಗಬೇಕು. ಕತ್ತಲು ಹೋಗದೆ ಬೆಳಕು ಬಾರದು; ಬೆಳಕು ಬಾರದೆ ಕತ್ತಲೆ ಹೋಗದು. ಈ ನಿಯತಿಗನುಸರಿಸಿ ಜ್ಞಾನಪ್ರಕಾಶವನಿತ್ತು ಕರ್ಮಮಲ ಪಾಶಬಂಧನವನ್ನು ಕಳಚಿ ಹಾಕುವುದೇ ದೀಕ್ಷೆ. ಚಿಸ್ಕಳೆಯನಿತ್ತು ಚಿತ್ತದ ಕೊಳೆಯ ಕಳೆವುದೇ ದೀಕ್ಷೆ. 'ದೀಯತೇ ಜ್ಞಾನಸಂಬಂಧಃ ಕ್ಷೀಯತೇಚ ಮಲತ್ರಯಂ । ದೀಯತೇ ಕ್ಷೀಯತೇಯಸ್ಮಾತ್ತಸ್ಮಾ ದೀಕ್ಷೇತಿ ನಿಗದ್ಯತೇ ॥" ಶಿವಾನುಭವಸೂತ್ರವೂ ಇದೇ ಅಭಿಪ್ರಾಯವನ್ನು ಹೇಳಿದೆ. ಈ ಬಗೆಯ ದೀಕ್ಷೆ (ಸಂಸ್ಕಾರ)ಯನ್ನು ಕೊಡುವಕರ್ತನೇ ಶ್ರೀಗುರು. ಈ ಹಿರಿಮೆಯುಳ್ಳ ದೀಕ್ಷಾಶಬ್ದದ ಅರ್ಥವನ್ನು ವಿಚಕ್ಷಣರಾದ ಗುರುಗಳು ಬಲ್ಲರಲ್ಲದೆ ಉಳಿದವರು ತಿಳಿಯರು. 'ಹೇಳಿದ್ದೆ ಹೇಳುವರು । ಕೇಳಿದ್ದೆ ಕೇಳುವರು ಕೇಳಿದ್ದೆ ಕೇಳಿ ಸುಖಿಸುವರೆ ಗುರುಗಳ । ಹೇಳಿಕೆಯೇ ಬೇರೆ ಸರ್ವಜ್ಞ ।' ಗುರುಬೋಧನೆಯ ಹಿರಿಮೆಯಿದು.

ದೀಕ್ಷೆಗೆ ಅಯ್ಯತನ, ಅಯ್ಯಾಚಾರ, ಉಪದೇಶ, ಉಪನಯನ, ಗುರುಕರುಣ. ಗುರುಕಾರುಣ್ಯ, ಗುರುಬೋಧೆ, ನಿಜಾಚಾರಣೆಯ ನಿಲುಕಡೆ, ಕಣ್ದೆರೆವಿಕೆ. ಕ್ರಿಯಾಬೋಧೆ, ಜ್ಞಾನಬೋಧೆ, ಸಂಸ್ಕಾರ, ಶಿವಸಂಸ್ಕಾರ, ಶಿವದೀಕ್ಷೆ, ಲಿಂಗಧಾರಣ, ಹಸ್ತಮಸ್ತಕ ಸಂಯೋಗ, ಶಿವಯೋಗ ಎಂಬುವಾಗಿ ಬೇರೆ ಬೇರೆ ಹೆಸರುಗಳನ್ನು ಹೇಳುತ್ತಾರೆ. ಇವೆಲ್ಲಕ್ಕೂ 'ದೀಕ್ಷಾ'ಪದ ಸೂತ್ರಪ್ರಾಯವಾಗಿ ಸಂಪೂರ್ಣಾರ್ಥವನ್ನು ಬೋಧಿಸುತ್ತದೆ. ಅಂತೆಯೇ ಇದನ್ನೇ ವಿಚಕ್ಷಣರು ಅಂಗೀಕರಿಸುತ್ತಾರೆಂದು ಕವಿ ಸೂಚಿಸಿದ್ದಾನೆ. ಜ್ಞಾನಶಕ್ತಿಕ್ರಿಯಾಶಕ್ತಿಸಂಪನ್ನವಾದುದೇ ದೀಕ್ಷೆಯೆನಿಸುತ್ತದೆ.

ದೀಕ್ಷೆಯು ನಿರಧಿಕರಣ, ಸಾಧಿಕರಣ ಎಂದು ಎರಡು ಬಗೆ. ಸಾಧಿಕರಣ ದೀಕ್ಷೆಯಲ್ಲಿ ಸಬೀಜ, ನಿರ್ಬೀಜ, ಚಿನ್ಮಯವೆಂದು ಮೂರುಬಗೆ. ಇವುಗಳಲ್ಲಿ ಸಬೀಜವು ಲೋಕಧರ್ಮಿಣಿ, ಶಿವಧರ್ಮಿಣಿ ಎಂದು ಇಬ್ಬಗೆಯಾಗಿವೆ. ನಿರ್ಬೀಜ ದೀಕ್ಷೆಯು ಸದ್ಯೋನಿರ್ವಾಣ, ಅಸದ್ಯೋನಿರ್ವಾಣ ಎಂದು ಇತ್ತೆರನಾಗಿವೆ. ಸದ್ಯೋನಿರ್ವಾಣದೀಕ್ಷೆಯಲ್ಲಿ ಕರ್ಮತ್ರಯನಾಶವಾದೊಡನೆ ದೇಹತ್ಯಾಗವಾಗಿ ವಿದೇಹ ಮುಕ್ತಿಯುಂಟಾಗುತ್ತದೆ. ಅಸದ್ಯೋನಿರ್ವಾಣ ದೀಕ್ಷೆಯಲ್ಲಿ ಸಂಚಿತಾಗಾಮಿ ಕರ್ಮಗಳು ಕಳೆದು ಪ್ರಾರಬ್ಧವು ಪರಿಪಕ್ವವಾಗಿ ಶಿವಯೋಗ ಸಾಧನೆಯು ಆಜನ್ಮವಾಗಿ ಸಾಗಿ ಬರುತ್ತವೆ. ಈ ಅಸದ್ಯೋನಿರ್ವಾಣದೀಕ್ಷೆಯೇ ಮೂರು ವಿಧವೆಂದು ಶ್ರೀಜಗದ್ಗುರು ರೇಣುಕರು ಮುಂದಿನ ಮಂತ್ರದಲ್ಲಿ ನಿರೂಪಿಸಿದ್ದಾರೆ.

"ಸಾ ದೀಕ್ಷಾ ತ್ರಿವಿಧಾ ಪ್ರೋಕ್ತಾ ಶಿವಾಗಮ ವಿಶಾರದೈಃ
ವೇಧಾರೂಪಾ ಮಂತ್ರರೂಪಾ ಕ್ರಿಯಾರೂಪಾ ಚ ತಾಪಸ ।"

ವೇಧಾ (ಜ್ಞಾನ) ದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆಯೆಂದು ದೀಕ್ಷೆಯನ್ನು ಮೂರುಬಗೆಯಾಗಿ ಶಿವಾಗಮ ವಿಶಾರದರು ಹೇಳುತ್ತಾರೆ. ಈ ವಿಚಾರಗಳಲ್ಲಿ ಶಿವಾಗಮ ವಿಶಾರದರನ್ನೇ ಪ್ರಾಮಾಣ್ಯವಾಗಿ ಅಂಗೀಕರಿಸುವ ಕವಿ ಕಾಲ ಯಾವುದೆಂಬುದನ್ನು ಮನಗಾಣಬೇಕು. ದೀಕ್ಷಾವಿಧಿಯು ಶಿವಾಗಮಗಳ ಸೊತ್ತೆಂಬುದನ್ನು ಗಮನಿಸಬೇಕು. 'ಶಾಸ್ತ್ರಯೋನಿತ್ವಾತ್' ದೀ ಶಬ್ದಾರ್ಥವಾದ ಶಿವನ ಅಸ್ತಿತ್ವಕ್ಕೆ ಶಿವತ್ವ ಪ್ರಾಪ್ತಿಗೆ ಶಿವಾಗಮ ಶಾಸ್ತ್ರಗಳೇ ಪ್ರಮಾಣಗಳಾಗಿವೆ. ಅವನ್ನು ಅರಿತವರು ದೀಕ್ಷಾಸಂಸ್ಕಾರ ಮೂರು ವಿಧವೆಂದರು.

ಶಿಷ್ಯಬೋಧಕ್ಕಾಗಿ ದೀಕ್ಷೆ ತ್ರಿವಿಧವೆಂದು ಹೇಳಿದರೂ ಅದೊಂದೆ! ಹಾಲನ್ನು ದ್ರವ, ಶುಭ್ರ, ಮಧುರ ಎಂದು ವಿಂಗಡಿಸಿ ಹೇಳಿದರೂ ವಸ್ತುವೊಂದೆ! ಮೂಲದೀಕ್ಷೆ ಗುಣದಿಂದ ಮೂಬಗೆಯಾಗಿದೆ ಮುಮ್ಮೈಗಳ ಸಂಸ್ಕಾರಕ್ಕಾಗಿ! ವೇಧೆಯಿಂದ ಕಾರಣತನು, ಮಂತ್ರದಿಂದ ಸೂಕ್ಷ್ಮತನು, ಕ್ರಿಯೆಯಿಂದ ಸ್ಥೂಲತನು ಶುದ್ಧವಾಗುತ್ತವೆ; ಪ್ರಬುದ್ಧವಾಗುತ್ತವೆ. ತ್ರಿವಿಧ ತನುಗಳು ಹಾಸು ಹೊಕ್ಕಾಗಿರುವಂತೆ ತ್ರಿವಿಧ ದೀಕ್ಷೆಗಳು ಬೆರೆದಿರುತ್ತವೆ.

ವೇಧವು, ಮಂತ್ರದಲ್ಲಿ ಮಂತ್ರವು ಕ್ರಿಯೆಯಲ್ಲಿ, ಅಭಿವ್ಯಕ್ತಗೊಳ್ಳುತ್ತವೆ. ಸ್ಥೂಲವಾದ ಕರ್ಮೇಂದ್ರಿಯುಗಳಲ್ಲಿ ಕ್ರಿಯಾದೀಕ್ಷೆಯು, ಸೂಕ್ಷ್ಮವಾದ ಜ್ಞಾನೇಂದ್ರಿಯುಗಳಲ್ಲಿ ಮಂತ್ರದೀಕ್ಷೆಯು ಕಾರಣಗಳಾದ ಅಂತಃಕರಣಗಳಲ್ಲಿ ವೇಧಾದೀಕ್ಷೆಯು ಅನುಗ್ರಹೀತಗಳಾಗಿ ವೇಧಿಸಿಕೊಳ್ಳುತ್ತವೆ; ಆಯತ ಸ್ವಾಯತ ಸನ್ನಿಹಿತ ರೂಪದಲ್ಲಿ ಪರಿಣತಗೊಳ್ಳುತ್ತವೆ. ಈ ಮೂರು ದೀಕ್ಷೆಗಳೇ ಮೂರುಲಿಂಗಗಳಾಗುತ್ತವೆ ಕರುಣೆಯ ಬಲದಿಂದ ವೇಧೆಯೇ ಭಾವಲಿಂಗವಾಗಿ ಮಂತ್ರವೇ ಪ್ರಾಣಲಿಂಗವಾಗಿ ಕ್ರಿಯೆಯೆ ಇಷ್ಟಲಿಂಗವಾಗಿ ಭಾವ ಮನಕರಗಳಲ್ಲಿ ಪ್ರತಿಷ್ಠಿತವಾಗುತ್ತವೆ. ಕರದ ಕ್ರಿಯಾಲಿಂಗವು ಕರ್ಮೇಂದ್ರಿಯಗಳೆಲ್ಲವುಗಳ ಆ ಆ ಕ್ರಿಯಾಚಾಲನ ಶಕ್ತಿಯಾಗಿ ಚೈತನ್ಯವಾಗಿ ನೆಲಸುತ್ತದೆ. ಉರದ ಪ್ರಾಣ (ಮಂತ್ರ)ಲಿಂಗವು ಜ್ಞಾನೇಂದ್ರಿಯಗಳೆಲ್ಲವುಗಳ ಆ ಆ ಜ್ಞಾನಚಾಲನ (ಜ್ಞಾನಾಚಾರ) ಶಕ್ತಿಯಾಗಿ ಚೈತನ್ಯವಾಗಿ ನೆಲಸುತ್ತದೆ. ಶಿರದ ಭಾವ (ವೇಧಾ) ಲಿಂಗವು ಅಂತಃಕರಣಗಳೆಲ್ಲವುಗಳ ನೆನಹು ನಿಶ್ಚಯ ಭಕ್ತಿ ಜ್ಞಾನ ಅಭಿಮಾನಾದಿ ಧರ್ಮಗಳ ಚಾಲನ ಶಕ್ತಿಯಾಗಿ ಚೈತನ್ಯವಾಗಿ ನೆಲಸುತ್ತದೆ. ನೆಲಸುವಂತೆ ಮಾಡುವ ವಿಧಾನವನ್ನು ಮುಂದಿನ ಮಂತ್ರದಲ್ಲಿ ಮನದಟ್ಟಾಗುವಂತೆ ನಿರೂಪಿಸಲಾಗಿದೆ.

ವೇಧಾದೀಕ್ಷೆ :

"ಗುರೋರಾಲೋಕ ಮಾತ್ರೇಣ ಹಸ್ತಮಸ್ತಕಯೋಗತಃ
ಯಃ ಶಿವತ್ವ ಸಮಾವೇಶೋ ವೇಧಾದೀಕ್ಷೇತಿ ಸಾ ಮತಾ !"

ಶ್ರೀಗುರುವು ತನ್ನ ಕರುಣಾಪೂರಿತ ಕಟಾಕ್ಷ ವೀಕ್ಷಣದಿಂದ ಶಿಷ್ಯನನ್ನು ನಿಟ್ಟಿಸಿ ನೋಡಿ, ತನ್ನ ಅಮೃತಹಸ್ತವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ಶಿವತ್ವವನ್ನು ಶಿಷ್ಯನಲ್ಲಿ ಸಮಾವೇಶಗೊಳಿಸುವನು. ಅದುವೇ ವೇಧಾದೀಕ್ಷೆಯೆನಿಸುವುದು. ಅಂದರೆ ಶಿಷ್ಯನು ಶ್ರೀಗುರುವಿನ ದಿವ್ಯ ದೃಷ್ಟಿಗರ್ಭಕ್ಕೆ ಬಂದು ಬಳಿಕ ಗುರುಕರಕಮಲಜಾತನಾಗಬೇಕು. ಇದು ಶಿಷ್ಯ ಶ್ರೀಗುರುಗಳಿಬ್ಬರ ಜನ್ಯಜನಕಭಾವಸಂಬಂಧ. ಶಿವತ್ವರೂಪ ಕಾರಣಸಂಬಂಧ. ಸನ್ನಿಹಿತ ಸಂಬಂಧ. ಯೋಗಾಂಗ-ಭಾವಲಿಂಗ ಸಂಬಂಧ. 'ಗುರುಃಸ್ಪೃಶತಿ ಹಸ್ತೇನ ಯಂ ಯಂ ಪಶ್ಯತಿ ಚಕ್ಷುಷಾ । ಶಿವಂ ಭವತಿ ತತ್ಸರ್ವಂ ಗುರೋರೇವ ಪ್ರಸಾದತಃ' ಎಂಬುದಾಗಿ ಅಚಿಂತ್ಯ ವಿಶ್ವಸಾರಾಖ್ಯ ವಚನವಿವೆ. ಮತು

'ಜ್ವಲತ್ಕಾಲಾನಲಾಭಾಭಾ ತಟಿತ್ಕೋಟಿ ಸಮಪ್ರಭಾ ।
ತಸ್ಯೋರ್ಧ್ವಂ ಚ ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾಕಲಾ ॥
ಏವಂ ಭೇದಕಲಾದೇವೀ ಸದ್ಗುರೋಃ ಶಿಷ್ಯಮಸ್ತಕೇ ।
ಹಸ್ತಾಬ್ಜಮಥನಾದ್ ಗ್ರಾಹ್ಯಾ ತಸ್ಯ ಭಾವಕರೋದಿತಾ ॥'

ಗುರುವಿನ ಹಸ್ತದಲ್ಲಿ ಗುರುವಿನ ನೇತ್ರದಲ್ಲಿ ಆ ದಿವ್ಯಶಕ್ತಿಯಿದೆ; ಆ ದಿವ್ಯದೀಪ್ತಿಯಿದೆ. 'ಹಸತಿ ಹಸ್ಯತೇಽನೇನ ವಾ ಹಸ್ತಃ' ಹರ್ಷವನ್ನುಂಟು ಮಾಡುವುದಾಗಿ 'ಹಸ್ತ'ವೆನಿಸಿದೆ. ಅಂತೆಯೇ 'ಆ ಲೋಕ' ಶಬ್ದವೂ ಸ್ಮರಣಾರ್ಹವಾಗಿವೆ; ಆಲೋಚನೀಯವಾಗಿದೆ. 'ಲೋಕೃ ದರ್ಶನೇ' ದರ್ಶನಾರ್ಥಕ ಲೋಕೃಧಾತುವಿನಿಂದ ಲೋಕ ಶಬ್ದೋತ್ಪತ್ತಿಯಾಗಿದೆ. ಬರೀ ಲೋಕ (ದರ್ಶನ ಅಥವಾ ನೋಡುವಿಕೆ ಮಾತ್ರ)ವಲ್ಲ; ಆಲೋಕ. ಲೋಕ ಪದವು ಪವಿತ್ರ ದರ್ಶನವನ್ನು ಸೂಚಿಸಿದರೆ ಆ ಉಪಸರ್ಗವು ಪರಿಪೂರ್ಣದರ್ಶನವನ್ನು ಪ್ರತಿನಿಧಿಸುತ್ತದೆ. ಅಂದರೆ ಗುರುವಿನ ನೋಟ ಪವಿತ್ರವೂ ಪರಿಪೂರ್ಣವೂ ಪರಿಣಾಮಕಾರಿಯೂ ಆಗಿರುತ್ತದೆಯೆಂಬುದನ್ನು 'ಆಲೋಕ' ಪದಪ್ರಯೋಗವು ಸೂಚಿಸುತ್ತದೆ. ಗುರುದರ್ಶನ ಗುರುಸ್ಪರ್ಶನಗಳು ಶಿಷ್ಯನ ಯೋಗಾಂಗವನ್ನು ಪರಿಶುದ್ಧಗೊಳಿಸುತ್ತವೆ; ಪ್ರಭುದ್ಧಗೊಳಿಸುತ್ತವೆ. ಶಿವತ್ವ ಪದದಿಂದ ಪರಿಶುದ್ಧತೆಯು ಅರ್ಥವಾಗುತ್ತದೆ. ಅರ್ಥವಾದರೆ ಸಂ-ಆವೇಶ ಪದದ ಧ್ವನಿಯಿಂದ ಪ್ರಬುದ್ಧತೆಯು ಇಲ್ಲಿ ಶಿವತ್ವವು ಶ್ರೀಗುರುವಿನದು. ಅದನ್ನು ಪಡೆವ ಯೋಗಾಂಗತ್ವವು ಶಿಷ್ಯನದು. ಅವೆರಡರ ಸಾಮರಸ್ಯವೆ ವೇಧಾದೀಕ್ಷೆ. ಶಿಷ್ಯನ ಯೋಗಾಂಗದಲ್ಲಿರುವ ಅಣುತ್ವರೂಪ ಅಶಿವತ್ವವನ್ನು ಹೋಗಲಾಡಿಸುವುದೇ ಮೋಕ್ಷಗುರುವು ಮಾಡುವ ವೇಧಾದೀಕ್ಷೆ. ನಿಜತತ್ತ್ವವಾದ ಶಿವತ್ವಾಭಿವ್ಯಕ್ತಿಯೇ ವೇಧಾದೀಕ್ಷೆ. ಇದು ಏಳು ಬಗೆಯಲ್ಲಿ ಒಳಗೆ ಅಳವಡುವುದರಿಂದ ಈ ವೇಧಾದೀಕ್ಷೆಯು ಏಳು ಬಗೆಯಾಗಿದೆ. ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸಾ, ಲಿಂಗನಿಷ್ಠಾ, ಮನೋಲಯ, ಸದ್ಯೋಮುಕ್ತಿ ಈ ಏಳು ವೇಧಾದೀಕ್ಷಾಂಗಗಳು.

(೧) ಹಲವು ಹಂಬಲಿಸಿ ಹಲವೆಡೆಗಳಿಗೆ ಹರಿದಾಡುವ ಹಲವು ನೇಮವ್ರತಂಗಳನ್ನು ಹಿಡಿವ ಚಿತ್ತಕ್ಕೆ ಒಂದೇ ಕಡೆಯಲ್ಲಿ ಒಂದೇ ಗುರಿಯಲ್ಲಿ ಒಂದೇ ಧ್ಯಾನದಲ್ಲಿ ನಿಲ್ಲುವಂತೆ ಭಾವಲಿಂಗಕ್ಕೆ ಸಲ್ಲುವಂತೆ ಬೋಧಿಸುವುದೇ ಏಕಾಗ

ಸಂಸ್ಕಾರ. ಏಕಾಗ್ರತೆಯಿಲ್ಲದೆ ಏಳ್ಗೆಯಾಗದು. ಯೋಗಬಲವೊದಗದು. ಐಕ್ಯತೆ ಅಳವಡದು. ಈ ಸಂಸ್ಕಾರದಲ್ಲಿ ಯೋಗಶಾಸ್ತ್ರವೆಲ್ಲಿ ಅಡಕವಾಗು ತ್ತದೆ.

(೨) ಮೊದಲು ಚೆನ್ನಾಗಿ ಯೋಚಿಸಿ ಚೆನ್ನಾದ ವ್ರತವನ್ನು ಕೈಗೊಳ್ಳ ಬೇಕು. ಕೈಕೊಂಡ ವ್ರತವನ್ನು ನಡುವೆ ಕೈಬಿಡಬಾರದು. ಬುದ್ಧಿ ಬಂದಂತೆಲ್ಲ ಬದಲಿಸಬಾರದು. ದೃಢವ್ರತದಿಂದ ಬುದ್ಧಿಗೆ ಶುದ್ಧಿ ವೃದ್ಧಿ ಗಳುಂಟಾಗುತ್ತವೆ. ವ್ರತಗಳಲ್ಲೆಲ್ಲ ಗುರುವ್ರತ ಲಿಂಗವ್ರತಗಳೇ ದಿವ್ಯವ್ರತ ಗಳು. ಜ್ಞಾನಿಯಾದ ಗುರುವೇ ತನ್ನ ಮನೋಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗವೆಂದು ನೆರೆ ನಂಬಿ ಮನ ತುಂಬಿ ಮತ್ತೊಂದನ್ನು ಹಾರೈ ಸದೆ ಇರುವುವೇ ದೃಢವ್ರತ. ಗುರುಲಿಂಗದ ವಿಚಾರದಲ್ಲಿ ಚಿತ್ರದಲ್ಲಿ ಶ್ರದ್ಧೆ ಯಿರುವಂತೆ ಬುದ್ಧಿಯಲ್ಲಿ ನಿಷ್ಠೆ ನೆಲೆ ನಿಲ್ಲುವುದೇ ದೃಢವ್ರತ. ಲಿಂಗವ್ರತಕ್ಕೆ ಲಿಂಗಮತಕ್ಕೆ ತನ್ನ ಉಸಿರಿರುವವರೆಗಿಗೂ ತಪ್ಪದಂತಿರುವ ಬುದ್ಧಿಯುಂಟಾಗು ವುದೇ ದೃಢವ್ರತದೀಕ್ಷೆ. ಎಷ್ಟೇ ನೋವು ಬರಲಿ ಸಾವು ಬರಲಿ ನಚ್ಚಿ ಹಿಡಿದ ನೋಂಪಿಯನ್ನು ನಿರಾಕರಿಸಬಾರದು. 'ಶಿವಭಕ್ತನಾಗಿ ತನ್ನ ಹಿಡಿದಿಹೆ ನೆಂದು ಹೋದರೆ,–ನುಗ್ಗು ಮಾಡುವ, ನುಸಿಯ ಮಾಡುವ; ಮಣ್ಣ ಮಾಡುವ, ಮಸಿಯ ಮಾಡುವ; ಕೂಡಲ ಸಂಗಮದೇವರ ನೆರೆ ನಂಬಿದ ನಾದರೆ ಕಡೆಗೆ ತನ್ನಂತೆ ಮಾಡುವ.' 'ಜಾಗ್ರಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ ತಲೆ ದಂಡ, ತಲೆದಂಡ! ಕೂಡಲ ಸಂಗಮದೇವ, ನೀವಲ್ಲದೆ ಅನ್ಯವ ನೆನೆವಡೆ ತಲೆದಂಡ, ತಲೆದಂಡ!' 'ಸತ್ಯ ಶೌಚ ನಿತ್ಯ ನೇಮವ ತಪ್ಪದೆ ಮಾಡಬಲ್ಲರೆ ಅದು ಲೇಸು. ಸತ್ಯದಿಂದ ನಡೆವಂಗೆ ನಿತ್ಯ ನೇಮವಾಗಿ ಸಲಿಸುವನಲ್ಲದೆ, ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ! ಲಿಂಗವ ಪೂಜಿಸಿ ಮರಳಿ ಅನ್ಯಕ್ಕೆರಗಿದಡೆ ಕೂಡಲಸಂಗಮದೇವನವರ ಹಲ್ಲ ಕಳೆವ!' 'ಮನಕ್ಕೆ ಮನವೊಂದಾಗಿ ಧನಕ್ಕೆ ಧನವೊಂದಾಗಿ ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣವೊಂದಾಗಿ ಶುಭ ಸೂಚನೆ ಯೊಂದಾಗಿರದ ನಚ್ಚು ಮಚ್ಚು ಪಾರವೈದುವುವೆ? ಸಿರ ಹರಿದರೇನು, ಕರುಳು ಕುಪ್ಪಳಿಸಿದರೇನು; ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದ ರೇನು? ಚಿತ್ತ ಮನ ಬುದ್ಧಿಯೊಂದಾದ ಮಚ್ಚು ಬಿಚ್ಚಿ ಬೇರಾಗದಿದ್ದರೆ

ಮೆಚ್ಚುವ ನಮ್ಮ ಕೂಡಲ ಸಂಗಮದೇವ.' ಪರರನ್ನು ನೋಡಿ ನೋಡಿ ನೇಮ ಮಾಡಬಾರದು. ತನುವುದ್ದೇಶ-ಮನವುದ್ದೇಶವಾಗಿ ನೇಮ ಮಾಡ ಬಾರದು. ತನ್ನ ಗುರುಪಥವನ್ನು ಮೀರಿ ನೇಮ ಮಾಡಬಾರದು. ತನ್ನ ಗುರುಪಥವನ್ನು ಮೀರಿ ನೇಮ ಮಾಡಬಾರದು. ತನ್ನ ಗುರು ಬೋಧಿಸಿದ ವ್ರತವನ್ನು ಶತಾಯುಗತಾಯುವಾದರೂ ಬಿಡಬಾರದು. ಇದುವೆ ಬುದ್ಧಿಯ ಶುದ್ಧಿ, ಸಿದ್ಧಿ.

(3) ಪಂಚೇಂದ್ರಿಯಗಳ ಆಧಾರದ ಮೇಲೆ ಅಹಂಕಾರ ಅಂಕುರಿಸುತ್ತದೆ. ಪಂಚೇಂದ್ರಿಯಗಳ ಮುಖಾಂತರವೇ ವಿಷಯಾಭಿಮಾನ ಉದಯವಾಗುತ್ತದೆ. ನಾನು ನನ್ನದು ನನ್ನವರು ಎಂಬ ಅಹಂಕಾರ ಮಮಕಾರಗಳ ಸಂಕೋಲೆಗೆ ಅಂಕಿತನಾಗಬೇಕಾಗುತ್ತದೆ. ಆದ್ದರಿಂದ ಪಂಚೇಂದ್ರಿಯಗಳಲ್ಲಿ ಇಂದ್ರಿಯಭಾವವನ್ನು ಬಿಚ್ಚಿ ಬಿಸಾಕಬೇಕು. ಇಂದ್ರಿಯಭೋಗವೆಂಬ ಭಾವನೆಯನ್ನು ಕಿತ್ತೆಸೆಯಬೇಕು. ಪಂಚೇಂದ್ರಿಯಗಳಲ್ಲಿ ಪರಮೇಶ್ವರ ಭಾವನೆಯನ್ನು ಬೆಳಸಿಕೊಳ್ಳಬೇಕು. ಪಂಚೇಂದ್ರಿಯಗಳಲ್ಲಿರುವ ಆ ಆ ಲಿಂಗಕ್ಕೆ ಆ ಆ ಇಂದ್ರಿಯಗಳನ್ನು ಅರ್ಪಿಸಬೇಕು. ಪರಮ ಚಿದಹಂಭಾವವನ್ನು ತಳೆಯಬೇಕು. ಸ್ಥೂಲ ಸೂಕ್ಷ್ಮಾಹಂಕಾರಗಳು ತೊಲಗಬೇಕಾದರೆ ಮಾನವತ್ವದಿಂದ ಮೇಲಕ್ಕೇರಬೇಕಾದರೆ ಪಂಚೇಂದ್ರಿಯಾರ್ಪಣವೇ ಪರಮೋಪಾಯ. ಈ ಉಪಾಯವಿಲ್ಲದೆ ಆಗದು ಅಹಂಕಾರದ ಲಯ. ಅಹಂಕಾರವೇ ಈ ಸಂಸಾರಕ್ಕೆ ಮೂಲ. ಸಂಸಾರವೇ ಸರ್ವದುಃಖಕ್ಕೆ ಮೂಲ. 'ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ ವಿಷಯವೆಂಬ ವಿಷದಿಂದೆ ಆನು ಮುಂದುಗೆಟ್ಟೆನಯ್ಯ. ಆನು ಹೊರಳಿ ಬೀಳುತ್ತಿದ್ದೆನಯ್ಯ; ಕೂಡಲ ಸಂಗಮದೇವ.' ಪಂಚೇಂದ್ರಿಯಗಳೇ ಪ್ರಪಂಚಾಹಂಕಾರಕ್ಕೆ ಮೂಲ. ವಿಷಯವೆಂಬ ವಿಷಪಾನಕ್ಕೆ ಮದಮತ್ಸರಕ್ಕೆ ಮೂಲ. ಕಾರಣ ಪಂಚೇಂದ್ರಿಯಗಳನ್ನು ವಿಷಯವ್ಯಾಮೋಹಗಳಿಗೆ ಬಿಡದೆ ಕಾಮಾದಿಗಳ ಕೈಗೆ ಕೊಡದೆ ಲಿಂಗಭೋಗೋಪಭೋಗದಲ್ಲಿ ಇರುವಂತೆ ಪ್ರಸಾದದಿಂದ ಪ್ರಸನ್ನವಾಗಿ ಲಿಂಗಗಳಲ್ಲಿ ಬೆರೆವಂತೆ ಮಾಡಲು ಶಿಷ್ಯನಿಗೆ ಶ್ರೀ ಗುರು ಪ್ರಬೋಧಿಸುವುದೇ ಪಂಚೇಂದ್ರಿಯಾರ್ಪಿತ ದೀಕ್ಷೆಯೆನಿಸುವುದು.

(೪) ಅಹಿಂಸಾದೀಕ್ಷೆಯೂ ಒಂದು ಸಂಸ್ಕಾರ. ಅದರಲ್ಲಿಯೂ ಕಾರಣಾಂಗದ ಕರುಣಾದ್ರ ಸಂಸ್ಕಾರ. ಕಾರಣದಲ್ಲಿಯೇ ಹಿಂಸಾಭಾವವಿಲ್ಲ ದಂತಾದ ಮೇಲೆ ಕಾರ್ಯಾಂಗದಲ್ಲಿ ಕಾಣಿಸಿಕೊಳ್ಳುವುದೆಂತು ?

ಈ ಉಪದೇಶ ಮನಸ್ಸಿಗೆ ಸಂಬಂಧಿಸಿದುದು. ಕಾಯಕವಾಚಕ ಹಿಂಸೆ ಗಳಿಗೆ ಕಾರಣವಾದುದು ಮಾನಸಿಕ ಹಿಂಸೆ. ಇದರಿಂದಾಗಿ ಮೂಲ ಮಾನಸಿಕ ದಲ್ಲಿಯೇ ಹಿಂಸೆಯ ಜಾಡ್ಯವಿರಬಾರದೆಂದ ಶ್ರೀ ಗುರು ಶಿಷ್ಯನಿಗೆ ಬೋಧಿಸು ತ್ತಾನೆ. ಸ್ತುತಿ-ನಿಂದೆ, ಪುಣ್ಯ-ಪಾಪ, ಸಂಕಲ್ಪ-ವಿಕಲ್ಪಗಳೆಂಬ ಕುಟಿಲ ವ್ಯವಹಾರಕ್ಕೆ ಬಿದ್ದರೇನೆ ಹಿಂಸೆಗೆ ಹಾದಿಯಾಗುತ್ತದೆ. ರಾಗ-ದ್ವೇಷಗಳಿಗೆ ರಾಜಮಾರ್ಗವೇರ್ಪಡುತ್ತದೆ. ಕಾರಣಸ್ತುತಿ ನಿಂದೆಗಳು ಬಂದರೂ ಕೋಪವ ತಾಳದೆ ಸಮಾಧಾನಿಯಾಗಿಬೇಕೆಂದು ಶತ್ರುಮಿತ್ರರೆನ್ನದೆ ಸಕಲ ಜೀವಾತ್ಮ ರಿಗೆ ಲೇಸನ್ನೇ ಬಯಸಬೇಕೆಂದು ಶ್ರೀ ಗುರು ಶಿಷ್ಯನಿಗೆ ಅಹಿಂಸೋಪದೇಶ ವನ್ನು ಮಾಡಿ ದಯಾ ಧರ್ಮದಲ್ಲಿರಿಸಿ ಮನವನ್ನು ಘನಮನವನ್ನಾಗಿಸು ತ್ತಾನೆ. 'ನಾನೊಂದು ಸುರಗಿಯನೇನೆಂದು ಹಿಡಿವೆನು? ಏನಕಿತ್ತೇನನಿರಿವೆನು ? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥ.' ಜಗದ್ರೂಪನಾದ ಜಗದೀಶ ನನ್ನು ಆರಾಧಿಸುವ ಶಿಷ್ಯನು ಜಾಗತಿಕ ಯಾವ ಜೀವಿಯನ್ನೂ ಹಿಂಸಿಸ ಬಾರದು. ಮಾನಸಿಕವಾಗಿಯೂ ಕೇಡನ್ನು ಬಗೆಯಬಾರದು. ತನ್ನ ಮೇಲೆ ಯಾರಾದರೂ ಮುನಿಯಲಿ ತಾನು ಅವರಿಗೆ ಮುನಿಯಬಾರದು. ಮುನಿದರೆ ತನ್ನ ಅರಿವು ಇರುವುಗಳಿಗೆ ಕೇಡು. ತನಗಿಲ್ಲ ಶಾಂತಿಯ ಬೀಡು. ಶಾಂತಿಗಿಂತ ಬೇರಿಲ್ಲ ಶಿವಸ್ವರೂಪ. ಅಹಿಂಸೆಗಿಂತ ಬೇರಿಲ್ಲ ಸದ್ಧರ್ಮರೂಪ.

(೫) ಜ್ಞಾನ ಸುಜ್ಞಾನವೆನಿಸಬೇಕಾದರೆ ಲಿಂಗನಿಷ್ಠಾಸಂಸ್ಕಾರವನ್ನು ಶ್ರೀ ಗುರುವಿನಿಂದ ಸಚ್ಛಿಷ್ಯನು ಪಡೆಯಬೇಕು. ಸದ್ಗುರುವು ಉದ್ಬೋಧಿಸ ಬೇಕು. ಲಿಂಗಜ್ಞಾನವಿಲ್ಲದ ಅಂಗನಿಷ್ಠೆಯಿಲ್ಲದ ಜ್ಞಾನ ಎಷ್ಟಿದ್ದರೂ ನಿಕೃಷ್ಟ.

ಲಿಂಗವು ತನ್ನನ್ನು ತನ್ನಿರವನ್ನು ಬಿಟ್ಟು ಬೇರಿಲ್ಲ. ತಾನು ಮಾಡುವ ಸತ್ಕ್ರಿಯೆಗಳೆಲ್ಲವೂ ಮಾತಾಡುವ ಸುಭಾಷಿತಗಳೆಲ್ಲವೂ ತಾನರಿವ ಸ್ವಾನುಭವ ವೆಲ್ಲವೂ ಲಿಂಗಸ್ವರೂಪ. ಇವುಗಳಲ್ಲಿ ನೇಹವು ನಿಬಿಡವಾಗುವುವೇ ಶ್ರದ್ಧೆಯು ಸಾಂದ್ರವಾಗುವುವೇ ನಿಷ್ಠೆ. ಸತ್ಕ್ರಿಯಾಚರಣೆಗಳಿಗಿಂತ ಬೇರಿಲ್ಲ ಇಷ್ಟ

ಲಿಂಗೋಪಾಸನೆ. ಮಾತಾ ಮಂತ್ರಗಳಾಗುವುವಕ್ಕಿಂತ ಬೇರಿಲ್ಲ ಪ್ರಾಣಲಿಂಗ ಪ್ರತಿಷ್ಠೆ. ಸ್ವಾನುಭೂತಿಯಸಂಪಾದನೆಗಿಂತ ಬೇರಿಲ್ಲ ಭಾವಲಿಂಗ ನಿಷ್ಠೆ. ಈ ತ್ರಿವಿಧವೂ ಮಾನವೋತ್ತಮನೆನಿಸಬೇಕೆನ್ನುವವನಿಗೆ ಮುಖ್ಯ. ಲಿಂಗ ನಿಷ್ಠೆ ಇದು ಜೀವನ ಸರ್ವಸ್ವ. ಜ್ಯೋತಿರ್ಮಯ ಜೀವನದ ಜೀವಾಳ. ಇದನ್ನು ದೊರಕಿಸುವುದೇ ಧರ್ಮಧ್ಯೇಯ.

'ಸಲೆ ಶತಕೋಟಿ ಜನ್ಮದೊಳು ಘೋರ ತಪಂಗಳ ಮಾಡದಲ್ಲದೀ-
ಸುಲಲಿತ ಲಿಂಗನಿಷ್ಠೆ ದೊರಕೊಳ್ಳದು ಸಂತತ ಲಿಂಗಪೂಜೆಯೇಂ
ಸುಲಭವೆ ಕಂಡಕಂಡವರಿಗೇತರ ಮಾತದು ಬೇಡ ಸುಮ್ಮನಿರ್
ತಿಳಿವೊಡೆ ವೀರಶೈವರಳವೇನಣುವೇ ಗುರುಶಂಕರೇಶ್ವರಾ'

ಸಪ್ತ ವ್ಯಸನಗಳಲ್ಲಿ ಅಷ್ಟಮದಗಳಲ್ಲಿ ಮುಳುಗಿರುವ ಮಾನವನಿಗೆ ಲಿಂಗ ನಿಷ್ಠೆ ಲೀಲಾ ಜಾಲವಾಗಿ ರುಚಿಸದು. ಕಾಂಚನಾದಿಗಳಿಗೆ ವೇಳೆಯಲ್ಲದೆ ಲಿಂಗಪೂಜೆಗೆ ವೇಳೆಯಿರುವುದಿಲ್ಲ. ವಿಷಯ ನೆನಹಿಗೆ ಮನವಿರುವುದಲ್ಲದೆ ಲಿಂಗ ನೆನಹಿಗೆ ಮನ ಬರುವುದಿಲ್ಲ. ಭವದ ಅನುಭವಕ್ಕಲ್ಲದೆ ಶಿವದ ಅನುಭವಕ್ಕೆ ಬಗೆ ಬಾರದು. ಹೀಗಾದ ಮೇಲೆ ಲಿಂಗನಿಷ್ಠೆ ಸಂಗಡಿಸುವುದು ಸಾಧ್ಯವಿಲ್ಲ ; ಸುಲಭವಲ್ಲ. ಲಿಂಗದಲ್ಲಿ ಅಂತಃಕರಣ ಜ್ಞಾನಗಳು ಗಟ್ಟಿಗೊಳ್ಳಬೇಕು. ಎಡೆಬಿಡವೆ ಅಂಗಾನುಭವದಲ್ಲಿ ಲಿಂಗಾನಂದದಲ್ಲಿ ಇರುವುದೇ ಲಿಂಗನಿಷ್ಠೆಯೆಂದು ಲಿಂಗಕಳಾಗುರು ನಿಜ ಶಿಷ್ಯೋತ್ತಮನಿಗೆ ನಿರೂಪಿಸುತ್ತಾನೆ. ಶಿಷ್ಯನ ತ್ರಿವಿಧ ಲಕ್ಷ್ಯಗಳನ್ನು ಲಿಂಗದಲ್ಲಿಯೇ ಕೀಲಿಸುತ್ತಾನೆ.

'ಲಿಂಗವೊಳಿಟ್ಟ ದೃಷ್ಟಿ ನಿಜದೃಷ್ಟಿಯೊಳಿಟ್ಟ ಮನಂ ಮನಸ್ಸಿನೊಳ್
ಲಿಂಗವೆ ನಟ್ಟ ಭಾವಮುದರೊಳ್ ನೆಲೆಗೊಂಡ ಶಿವಾತ್ಮಲಿಂಗವಾ-।
ಲಿಂಗವೊಳಿರ್ದು ನಿತ್ಯಸುಖಿಯಾಗಿ ವಿರಾಜಿಪವಂಗೆ ಬಾಹ್ಯ ಕ-
ರ್ಮಂಗಳವೇತಕಯ್ಯ ಪರಮ ಪ್ರಭುವೇ ಮಹದೈಪುರೀಶ್ವರಾ.'

(೬) ಮನೋಲಯವೆಂದರೆ ಮನಸ್ಸನ್ನು ನಾಶಗೊಳಿಸುವುದಲ್ಲ. ಮನೋಧರ್ಮಗಳಾದ ಬೇಕು-ಬೇಡೆಂಬ (ಸಂಕಲ್ಪ-ವಿಕಲ್ಪವೆಂಬ) ಭವ ಬೀಜಗಳನ್ನು ಹುರಿಯುವುದು. ಹುರಿದರೆ ಮನೋಲಯವಾದಂತೆ !

'ಮನಸ್ಸು ಮರ್ತ್ಯದ ವಿಷಯ ಚಿಂತನೆಯ ಮರೆತು ಮಹಾಲಿಂಗದ ಧ್ಯಾನದಲ್ಲಿ ತಲ್ಲೀನವಾಗಿರುವುದೇ ಮನೋಲಯ. ಸದ್ಯೋನ್ಮುಕ್ತಿಗೆ ಪಂಚೇಂದ್ರಿಯಾರ್ಪಣವು ಒಂದು ಮುಖವಾದರೆ ಮನೋಲಯವು ಮತ್ತೊಂದು ಮುಖ. ಮೊದಲಿನದು ಸ್ಥೂಲ ; ಎರಡನೆಯದು ಸೂಕ್ಷ್ಮ. ಮೊದಲಿನದು ಕಾಷ್ಠವನ್ನು ಅಗ್ನಿಗೆ ಅರ್ಪಿಸಿದಂತೆ! ಎರಡನೆಯದು ಕರ್ಪುರವನ್ನು ಅಗ್ನಿಗೆ ಸಮರ್ಪಿಸಿದಂತೆ ! ಮಾನವ ಜೀವನದ ಪೂರ್ಣ ಪ್ರಗತಿಗೆ ಪರಿಣಾಮಕ್ಕೆ ಮನೋಲಯವೇ ಮೂಲ ಮದ್ದು. ಇಲ್ಲಿಗೆ ಸಂಸ್ಕಾರವು ಸಂಪೂರ್ಣ ಮುಖಕ್ಕೆ ಬಂದು ಮುಂದೆ ಮುಕ್ತಿ ಸೌಖ್ಯದ ಆವಿಷ್ಕಾರಕ್ಕೆ ಅಣಿಯಾಗಿ ನಿಲ್ಲುತ್ತದೆ; ತಿರುಳಾಗಿ ತೀವುತ್ತದೆ.

ಮನ ಎರಕವಾಗದ ಸಾಧನೆ ನಿಷ್ಫಲ. ಸಂಸ್ಕಾರ ವಿಫಲ. ಮನ ಮನ ಒಂದಾಗದೆ ಅನ್ಯರ ಸ್ನೇಹ ಸೌಖ್ಯವನ್ನು ಅನುಭವಿಸಲಾರೆವು. ಅವಿರಳವಾದ ಅಚ್ಚಳಿಯದ ಆತ್ಮ ಸುಖ ಸಂಪ್ರಾಪ್ತವಾಗಬೇಕಾದರೆ ಮನ ಎರಕವಾಗದೆ ಗತ್ಯಂತರವಿಲ್ಲ. ಮನದ ತಲ್ಲೀನತೆಯಿಂದಲೇ ಸುಗತಿ, ಸದ್ಗತಿ, ಸದ್ಯೋನ್ಮುಕ್ತಿ.

'ಸಕಲೇಂದ್ರಿಯಗಳಲ್ಲಿ ವಿಕಾರಿಸುವ ಮನವ
ಸೆಳೆದು ನಿಂದಾತನೇ ಸುಖಿ.
ಪಂಚೇಂದ್ರಿಯಂಗಳಿಚ್ಛೆಯಲ್ಲಿ ಕೀಳು ಮನಂಗೊಂಡು
ಸುಳಿವಾತ ದುಃಖಿ.
ಮನವು ಬಹಿರ್ಮುಖವಾಗಲು ಮಾಯಾ ಪ್ರಪಂಚಿ;
ಮನವು ಅಂತರ್ಮುಖವಾಗಲು ಅವಿರಳ ಜ್ಞಾನಿ.
ಮನವು ಮಹದಲ್ಲಿ ನಿಂದಿರಲಾತ ಮುಕ್ತ.
ಮನೋಲಯವಾದಡೆ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ
ಅಭೇದ್ಯನು.'

ಮನೋಲಯ ಸಂಸ್ಕಾರ ಮಹತ್ತನ್ನು ಬಿತ್ತರಿಸುವ ಈ ವಚನಕ್ಕಿಂತ ಬೇರೆ ವಚನ ಬೇಕಿಲ್ಲ. ಮನೋಲಯ ಸಂಸ್ಕಾರದಿಂದ ಸತ್ಯಸೌಖ್ಯ ಮಾತ್ರವಲ್ಲ, ಶಾಶ್ವತ ಸಾಮರಸ್ಯವೂ ಸಹ ಸಂಪ್ರಾಪ್ತವಾಗುತ್ತದೆಂದು ಬಿತ್ತರಿಸಿದೆ ಈ ವಚನ. ಸೌಖ್ಯಾನುಭೂತಿಯಿರುವವರೆವಿಗೂ ಸಾಮರಸ್ಯ ಸಂಪೂರ್ಣ

ಸವುನಿಸಲಾರದು. ಸಾಮರಸ್ಯವಾದ ಬಳಿಕ ಸೌಖ್ಯಾನುಭೂತಿ ಪ್ರತ್ಯೇಕ ವಾಗಿರಲಾರದು. ಆ ಸೌಖ್ಯ ಸ್ವರೂಪವು ತಾನಾಗುವುದೇ ಸಾಮರಸ್ಯ. ಅದಕ್ಕಾಗಿ ಆಗಬೇಕು ಮನೋಲಯ.'

ಈ ಮಾತುಗಳನ್ನು ನಮ್ಮದೇ ಆದ 'ಸಂಸ್ಕಾರ' ಎಂಬ ಗ್ರಂಥದಿಂದ ಇಲ್ಲಿ ಎತ್ತಿಕೊಳ್ಳಲಾಗಿದೆ. ಚಿನ್ನಾದದಲ್ಲಿ ಮನವೆರಕಗೊಳ್ಳಬೇಕು. ಆಗಮನ, ಮನನ, ಮನನೀಯ ಇವಾವೂ ಇರುವುದಿಲ್ಲ. ಶಬ್ದಾತ್ಮಕ ಮಂತ್ರವೂ ಇರುವುದಿಲ್ಲ. ನಿಶ್ಶಬ್ದ ಸ್ಥಿತಿಯೊದಗುತ್ತದೆ. ನಿಶ್ಚಲತ್ವವೊದಗುತ್ತದೆ. ಅಮನಸ್ಕನಾಗುವಿಕೆಯೆ ಮನೋಲಯ ಸಂಸ್ಕಾರ.

(೭) ಸದ್ಯೋಮುಕ್ತಿ ಸಂಸ್ಕಾರ: ಇದು ವೇಧಾದೀಕ್ಷೆಯ ಕೊನೆಯ ಸಂಸ್ಕಾರ. ಆತ್ಮಸಂಸ್ಕಾರ. ಆತ್ಮನನ್ನು ಜೀವನ್ಮುಕ್ತನ ಮಾಡುವ ಸಂಸ್ಕಾರ.

'ಸದ್ಯಃ' ಅಂದರೆ ಈಗಲೇ–ಈ ಮನೋಲಯವಾದೊಡನೆ, 'ಮುಕ್ತಿ' ಅಂದರೆ ಬಿಡುಗಡೆ. ಯಾರಿಗೆ ಬಿಡುಗಡೆ?–ಆತ್ಮನಿಗೆ! ಯಾವುದರಿಂದ?–ಏಕಾದಶೇಂದ್ರಿಯಗಳ ವ್ಯವಹಾರದಿಂದ, ಭವಬಂಧನದಿಂದ; ಕಾರ್ಮಿಕ ಮಾಯಾ ಆಣವ ಮಲಗಳಿಂದ! ಆತ್ಮನು ಪರಿಶುದ್ಧನಾಗಿ ಜಾಗ್ರತ್ ಸ್ವಪ್ನ ಸುಷುಪ್ತಿಗಳಲ್ಲಿ ಐಂದ್ರಿಕ ಮಾನಸಿಕ ವ್ಯವಹಾರ ವ್ಯಾಸಂಗನಾಗಿ ಜನನ ಮರಣ ಗಳ ದುಃಖಕ್ಕೀಡಾಗವೆ ನಿರ್ಮಲನನಾಗಿ ನಿರಾಮಯನಾಗಿ ನಿಜಾನುಭಾವಿಯಾಗಿ ಇರುವುದೇ ಸದ್ಯೋಮುಕ್ತಿ, ಅಂದರೆ ಜೀವನ್ಮುಕ್ತಿ. ಇಂತಾಗುವಂತೆ ಶ್ರೀಗುರು ಕರುಣಿಸುವುದೇ ಸದ್ಯೋಮುಕ್ತಿ ಸಂಸ್ಕಾರ.

ಸದ್ಯೋಮುಕ್ತಿಯನ್ನು ಶ್ರೀಗುರುವಿನಿಂದ ಪಡೆದ ಶಿಷ್ಯನು ಎಲ್ಲರಂತೆ ಕಾಯವಿಡಿದಿದ್ದರೂ ಕಾಯಗುಣಗಳಿರುವುದಿಲ್ಲ. ಸಂಸಾರ ವ್ಯವಹಾರಗಳ ಲ್ಲಿದ್ದರೂ ಇವುಗಳ ಲೇಪ ಅತನಿಗಿರುವುದಿಲ್ಲ. ಕುಂಬರ ಹುಳದಂತೆ, ಕೆಸರು ಮಲ್ಲಿಗೆಯಂತೆ ನಿರ್ಲಿಪ್ತನಾಗಿರುತ್ತಾನೆ. 'ಮರವೊಳಿಹುದನಲಂ, ಆ ಮರ ವನಲನಲ್ಲಿರದ ಪರಿಯಂತೆ ಸಕಲ ಸಂಸಾರವೊಳಗೆ ಬೆರದಿಹನು ಗುರುಶಂಭು ಲಿಂಗವೇ ತಾನಾದ ಶರಣ ನಾ ಸಂಸಾರವಿಲ್ಲಾತಗೆ'–ಎಂದುದಾಗಿ ಜೀವ ನ್ಮುಕ್ತನ ನಿರ್ಲೇಪತೆಯನ್ನು, ಇದ್ದೂ ಇಲ್ಲದಂತಿರುವ ಹೊದ್ದೂ ಹೊದ್ದದಂತಿ

ರುವ ಸ್ಥಿತಿಯನ್ನು-ಮರ-ಅಗ್ನಿಗಳಿಗೆ ಹೊಂದಿಸಿ ಸೊಗಸಾಗಿ ಸರ್ವರೊಪ್ಪಿಗೆ ಯಾಗುವಂತೆ ನಿಜಗುಣ ಶಿವಯೋಗಿಗಳು ಹೇಳಿದಾರೆ. ಮರದೊಳಗೆ ಬೆಂಕಿ ಇರಬಹುದು; ಇರುತ್ತದೆ. ಆದರೆ ಆ ಅಗ್ನಿಯಲ್ಲಿ ಮರ ಇರಲಾರದು. ಇದ್ದರೆ ಬಾಳದು. ಅದರಂತೆ ಸದ್ಯೋಮುಕ್ತನು ಸಂಸಾರದಲ್ಲಿರಬಹುದು; ಸಂಸಾರವು ಜೀವನ್ಮುಕ್ತನದಲ್ಲಿನದು. ನೀರಲ್ಲಿ ನಾವೆಯಿರುತ್ತದೆ. ನಾವೆ ಯಲ್ಲಿ ನೀರಿರದು. ಇಂತಿರಿಸುವುದೇ ಸದ್ಯೋಮುಕ್ತಿ ಸಂಸ್ಕಾರದ ಸಾರ. ಶಿವತ್ವಸಮಾವೇಶರೂಪ ವೇಧಾ ಸಂಸ್ಕಾರ. ಯೋಗಾಂಗ ಸಂಸ್ಕಾರ. ಆ ಯೋಗಾಂಗಾವಚ್ಛಿನ್ನ ಚೈತನ್ಯಗೋಚರ. ಈ ಸಂಸ್ಕಾರದ ವ್ಯಾಪ್ತಿ ಮಂತ್ರ, ಕ್ರಿಯಾ ಸಂಸ್ಕಾರಗಳಲ್ಲಿಯೂ ಇರುವುದು. ಕ್ರಿಯಾ ಸಂಸ್ಕಾರವು ವ್ಯಾಪ್ಯ ವಾದರೆ ಮಂತ್ರಸಂಸ್ಕಾರವು ವ್ಯಾಪಕವಾಗುತ್ತದೆ. ವ್ಯಾಪ್ಯವಾದ ಇಷ್ಟಲಿಂಗ ಸಾಕ್ಷಾತ್ಕಾರದಿಂದ ವ್ಯಾಪಕವಾದ ಪ್ರಾಣಲಿಂಗ ಪರಿಚಯುವಾಗುತ್ತದೆ. ವ್ಯಾಪ್ತಿರೂಪ ಭಾವಲಿಂಗವುಳ್ಳದ್ದು ವ್ಯಾಪ್ಯವಾದ ಇಷ್ಟಲಿಂಗ. ಈ ವ್ಯಾಪ್ತಿ ರೂಪಭಾವಲಿಂಗವನ್ನು ನಿರೂಪಿಸುವುದು ವ್ಯಾಪಕವಾದ ಪ್ರಾಣಲಿಂಗ. ಆದ್ದರಿಂದ ಅನುಮತಿ ಪ್ರಮೆಗೆ ಕಾರಣವಾದ ಭಾವಲಿಂಗ ಸಂಸ್ಕಾರವನ್ನು ನಿರೂಪಿಸಿದ ಬಳಿಕ ಆಗಮ ಪ್ರಮಾಣ ಕಾರಣವಾದ ಪ್ರಾಣಲಿಂಗ ಸಂಸ್ಕಾರವು ಮುಂದುವರಿದಿದೆ.

ಮಂತ್ರದೀಕ್ಷೆ :

"ಮಾಂತ್ರೀ ದಿಕ್ಷೇತಿ ಸಾಪ್ರೋಕ್ತಾ ಮಂತ್ರ ಮಾತ್ರೋಪದೇಶಿನೀ ।"

ಇದು ಭೋಗಾಂಗ ಸಂಸ್ಕಾರ. ಪ್ರಣವ ಪಂಚಾಕ್ಷರಿ ಮಂತ್ರೋಪ ದೇಶವನ್ನು ಮಾಡುವುದೇ ಮಂತ್ರದೀಕ್ಷೆ. ಮಹಾಗುರುವಿನ ಮುಖದಿಂದ ಬಂದ ಮಂತ್ರವನ್ನು ಮನನ ಮಾಡಿದರೆ ಮಾಯಾ ಮಲಪಾಶ ಹರಿಯುತ್ತದೆ. ಶೋಕ ಮೋಹಗಳಿಗೆ ಬೀಳದಂತೆ ಸಂರಕ್ಷಣೆಯಾಗುತ್ತದೆ. ಉತ್ತಮ ಗುರು ವಿನ ಉಪದೇಶದಿಂದ ಪಡೆಯದ ಮಂತ್ರ ಉಪಯುಕ್ತವಾಗದು; ಮಂತ್ರ ವೆನಿಸದು. ಮಂತ್ರಕ್ಕೆ ಉದ್ಧರಿಸುವ ಶಕ್ತಿ ಮಹಾ ಗುರುವಿನಿಂದ ಬರುತ್ತದೆ. ಅರ್ಥವತ್ತಾಗಿ ಬರುತ್ತದೆ. ನಾದ ಬಿಂದು ಕಲಾತ್ಮಕವಾಗಿ ಬರುತ್ತದೆ. ಮಂತ್ರಮೂರ್ತಿಯಾದ ಪ್ರಾಣಲಿಂಗಸಹಿತವಾಗಿ ಬರುತ್ತದೆ. ಕಾರಣ ಮಂತ್ರ

ವನ್ನು ಮಹಾಗುರುವಿನಿಂದಲೇ ಪಡೆಯಬೇಕು. ಮಾನಸಿಕವಾಗಿಯೇ ಜಪಿಸಬೇಕು. ಮನದ ಮಾಯಾಮಲವನ್ನು ಕಳೆವುದೇ ಮಂತ್ರಧ್ಯೇಯ. ಆದುದರಿಂದ ಮಂತ್ರ ಮನಕ್ಕೆ ಹೆಚ್ಚು ಸಂಬಂಧವುಳ್ಳುದು. ಮನನೀಯ ವಾದುದು. ಮಂತ್ರದ ಪೂರ್ಣಶಕ್ತಿ ಮನಕ್ಕೆ ಉಂಟಾಗಬೇಕಾದರೆ ಮಾನ ಸಿಕವಾಗಿಯೇ ಮಂತ್ರಾನುಷ್ಠಾನವನ್ನು ಮಾಡಬೇಕು. ಗುಪ್ತಭಾಷಣ ವೆಂಬ ಅರ್ಥವುಳ್ಳ 'ಮತ್ರಿ' ಧಾತುವಿನಿಂದ ಮಂತ್ರವಾಗಿದೆ. 'ಮಂತ್ರ್ಯತೇ ಮಂತ್ರಣಂ ವಾ ಮಂತ್ರಃ' ಎಂತಲೂ ವಿಗ್ರಹಿಸುತ್ತಾರೆ. ಮಂತ್ರ ಶಬ್ದಕ್ಕೆ ಗುಪ್ತವೆಂಬ ಅರ್ಥವಿದೆ. 'ಮಂತ್ರಾಲೋಚನ' ಪದ ಇದನ್ನೇ ಬೋಧಿಸುತ್ತದೆ. ಗುರೂಪದಿಷ್ಟ ಮಂತ್ರವು ವೇದಮಯವಾಗಿದೆ. ದೇವ ವಾದಿಯಾಗಿದೆ. ದೇವತ್ವ ಸಾಧನವಾಗಿದೆ. 'ಮಂತ್ರೋ ವೇದವಿಶೇಷೇ ಸ್ಯಾದ್ದೇವಾದೀನಾಂ ಚ ಸಾಧನೇ। ಗುಹ್ಯವಾದೇಽಪಿ ಚ ಪುಮಾನ್ ।' ಎಂದು ಮೇದಿನೀ ಕೋಶವು ಮಂತ್ರಶಬ್ದಕ್ಕೆ ಅರ್ಥಗಳನ್ನು ಬಿತ್ತರಿಸಿದೆ.

'ಮನನಂ ಸರ್ವಪಕ್ಷೇಷು ತ್ರಾಣಂ ಸಂಸಾರಸಾಗರಾತ್
ಮನನ ತ್ರಾಣಧರ್ಮತ್ವಾನ್ ಮಂತ್ರ ಇತ್ಯಭಿಧೀಯತೇ ।'

—ವಾತುಲಾಗಮ

ಶ್ರೀಗುರೂಪಷ್ಟವಾದ ಮಂತ್ರಾಭ್ಯಾಸವೇ ಮನೋನಿಗ್ರಹವನ್ನು ಆತ್ಮೋದ್ಧಾರವನ್ನೂ ಉಂಟುಮಾಡುತ್ತದೆ. ಮನೋನಿರೋಧಕ್ಕೆ ಮಂತ್ರಾ ಭ್ಯಾಸವು ಮಹಾ ಸಿದ್ಧೌಷಧ. ಮಂತ್ರಾಭ್ಯಾಸವು ಸ್ವಾಧ್ಯಾಯವೆನಿಸಿ ಕೊಂಡಿದೆ. ವೇದಾಧ್ಯಯನವೂ ಅದೇ ಆಗಿದೆ.

ಮಂತ್ರ ಅದೊಂದು ಶ್ರೀ ಗುರುವಿನ ಹೃದಯವಾಣಿ. ಆತನ ಆ ಹೃದಯವಾಣಿಗಿಂತ ಹೆಚ್ಚಿನ ವೇದವಾಣಿ ಬೇರಿಲ್ಲ. ಕರ್ಣರಸಾಯನವಾದ ಕರುಣರಸಪೂರ್ಣವಾದ ಕಾಲಕರ್ಮ ಮಾಯಾತೀತವಾದ ಮಂತ್ರವನ್ನು ಮಹಾಗುರುವು ತನ್ನ ಶಿಷ್ಯನಿಗೆ ಅನುಗ್ರಹಿಸುತ್ತಾನೆ. ವೇದಗಳ ಸಾರವಾದ ನಾದಮೂಲವಾದ ಪ್ರಣವ ಪಂಚಾಕ್ಷರಿಯನ್ನು ಶ್ರೀಗುರು ಶಿಷ್ಯನ ಕರ್ಣ

ದ್ವಾರದಿಂದ ಮನಕ್ಕೆ ಮುಟ್ಟಿಸುತ್ತಾನೆ. ಶಿಷ್ಯನನ್ನು ಮಂತ್ರಜ್ಞಾನಿ ಯನ್ನಾಗಿಸಿ ಮಂತ್ರಮೂರ್ತಿಯಾದ ಪ್ರಾಣಲಿಂಗೋಪಾಸನೆಗೆ ಸಮರ್ಥ ನನ್ನಾಗಿಸುತ್ತಾನೆ. ಮಂತ್ರೋಪದೇಶದಿಂದ ಮನಸ್ಸನ್ನು ಮಂಗಳಮಯ ವಾಗಿಸುತ್ತಾನೆ; ಮೋಹಲಯಗೊಳಿಸುತ್ತಾನೆ. ಪ್ರಣವರೂಪ ಪರಮಾತ್ಮ ನನ್ನು ಪ್ರತಿಷ್ಠಿತಗೊಳಿಸುತ್ತಾನೆ. ಶಿಷ್ಯನ ಪ್ರಾಣವನ್ನು ಊರ್ಧ್ವಗೊಳಿಸಿ ಮನವನ್ನು ನಿಶ್ಚಲಗೊಳಿಸಿ ಪ್ರಣವಾನುಷ್ಠಾನವನ್ನು ಮಾಡಹೇಳುತ್ತಾನೆ. ಅದೇ ಪರಮಾತ್ಮನನ್ನು ಸೇರುವ ಪರಮಗತಿಯೆಂದು ಮತಿಗಲಿಸುತ್ತಾನೆ. ಪ್ರಣವಕಿರಣಗಳಾದ ಪಂಚಾಕ್ಷರಗಳ ಪರಿಚಯವನ್ನುಂಟುಮಾಡಿಕೊಡು ತ್ತಾನೆ. ಮಂತ್ರಲಕ್ಷಣವಾದ ಋಷಿ, ಛಂದಸ್ಸು, ದೇವತೆ, ಬೀಜ, ಶಕ್ತಿ, ಸ್ವರ, ವರ್ಣ, ಪಲ್ಲವಾದಿಗಳನ್ನು ತಿಳಿಸುತ್ತಾನೆ. ಶ್ರೀ ಗುರು ಶಿಕ್ಷಾಗುರು ವಾಗಿ ತೈಜಸಾತ್ಮನಿಗೆ ಮಂತ್ರದೀಕ್ಷೆಯನ್ನು ಮಾಡುತ್ತಾನೆ. ಸಮಯ, ನಿಸ್ಸಂಸಾರ, ನಿರ್ವಾಣ, ತತ್ತ್ವ, ಅಧ್ಯಾತ್ಮ, ಅನುಗ್ರಹ, ಸತ್ಯಶುದ್ಧ ಎಂಬುದಾಗಿ ಮಂತ್ರದೀಕ್ಷೆಯೂ ಏಳು ಬಗೆಯಾಗಿದೆ.

ಮಂತ್ರದೀಕ್ಷೆಯಿಂದ ಪ್ರಾಣಲಿಂಗ ಪ್ರತಿಷ್ಠೆಯಾಗುತ್ತದೆ. ಪ್ರಾಣಲಿಂಗ ನಿಷ್ಠೆಯಿಂದ ಅಂತರಂಗಪುಷ್ಟಿಯಾಗುತ್ತದೆ. ಪ್ರಾಣಗತ ಅನಿಷ್ಟಗಳನ್ನು ತೊಲಗಿಸುವುದೇ ಪ್ರಾಣಲಿಂಗ ಪ್ರತಿಷ್ಠೆಯ ಧ್ಯೇಯ. '....ತಾನೆಂಬ ಅನಿಷ್ಟವ ತೊಲಗಿಸಿದಲ್ಲದೆ ಪ್ರಾಣಲಿಂಗಸಂಬಂಧವಾಗದು.' ಎಂದು ಚೆನ್ನಬಸವಣ್ಣನು ಹೇಳಿದಾನೆ. ಕಾರಣ ಸಮಯಾದಿ ಸಂಸ್ಕಾರಗಳಿಂದ ಶ್ರೀ ಗುರುವು ಶಿಷ್ಯನಲ್ಲಿ ಪ್ರಾಣಲಿಂಗಪ್ರತಿಷ್ಠೆಯನ್ನು ಮಾಡುವುದೇ ಮಂತ್ರದೀಕ್ಷೆ.

(೧) **ಸಮಯ ಸಂಸ್ಕಾರ :** ಇಲ್ಲಿ ಸಮಯ ಪದ ಅರ್ಥಗರ್ಭಿತ ಪದ. ಸಮಯ ಶಬ್ದಕ್ಕೆ ಕಾಲ, ಸಂಪ್ರದಾಯ, ಸಿದ್ಧಾಂತ, ಸಂದರ್ಭ, ಶಪಥ, ಅವಕಾಶ, ಆಚಾರ, ಮತ-ಮುಂತಾಗಿ ಅನಂತ ಅರ್ಥಗಳಿವೆ. ಇಲ್ಲಿ ನಿರ್ದಿಷ್ಟವಾದವುಗಳಲ್ಲಿ ಯಾವುವನ್ನೂ ತೆಗೆದು ಹಾಕಲು ಸಾಧ್ಯವಿಲ್ಲ. ಆದರೆ ಸಮಯವರಿತು ಶ್ರೀ ಗುರು ಇವೆಲ್ಲವನ್ನೂ ಶಿಷ್ಯನಿಗೆ ಸಂಬೋಧಿಸಬೇಕಾಗು ತ್ತದೆ. ಪ್ರಸ್ತುತ ಕ್ರಿಯಾದೀಕ್ಷೆ ಕೊನೆಗಂಡೊಡನೆ ಮಂತ್ರದೀಕ್ಷೆ ನೆರವೇರ ಬೇಕಾದ ಸಮಯ. ಕ್ರಿಯಾದೀಕ್ಷೆಗೆ ವಾರ, ನಕ್ಷತ್ರ, ತಿಥಿ, ಯೋಗ, ಕರಣಗಳ ಅವಶ್ಯಕತೆಯಿರುವಂತೆ ಮಂತ್ರದೀಕ್ಷೆಗೆ ಸುಸಮಯ ಆವಶ್ಯಕ.

ದೀಕ್ಷಾ ಕಾಲದಲ್ಲಿ ಮಂತ್ರ ಮಾತ್ರ ಉಪದೇಶವಾಗಿದ್ದರೆ ಮಂತ್ರಾರ್ಥ ಬೋಧೆಯನ್ನು ಲಿಂಗಪೂಜಾಸಮಯದಲ್ಲಿ ಶಿಷ್ಯನಿಗೆ ಮಾಡಬೇಕಲ್ಲದೆ ಬೇರೆ ಕಾಲಗಳಲ್ಲಿ ಮಾಡಬಾರದು. ಮಂತ್ರಬೋಧೆಯ ಪಡೆವವರ ಆಯುಷ್ಯ ಪರಿಮಿತಿಯನ್ನೂ ತಪ್ಪದೆ ಗಮನಿಸಬೇಕಾಗುತ್ತದೆ. ಎರಡನೆಯದಾಗಿ ಸಮಯಾಚಾರಗಳನ್ನು ಶಿಷ್ಯನಿಗೆ ವಿಧಿಸಬೇಕಾಗುತ್ತದೆ. ಸಮಯಾಚಾರ ಜಂಗಮಲಿಂಗಕ್ಕೆ ಅಂದರೆ ಪ್ರಾಣಲಿಂಗಕ್ಕೆ ಸಂಬಂಧವುಳ್ಳದು. 'ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರ ಇಲ್ಲ ದಿದ್ದರೆ ನಮ್ಮ ಕೂ. ಚೆ. ಸಂ. ದೇವ ಮೆಚ್ಚ ಕಾಣಿರೋ!' ಎಂದು ಚಿನ್ಮಯ ಮೂರ್ತಿ ಚೆನ್ನಬಸವಣ್ಣ ನಿರೂಪಿಸಿದ್ದಾನೆ. 'ಸಮಯೋಚಿತವನರಿಯದೆ ಉದರವ ಹೊರೆವವರ ನರಕದಲ್ಲಿಕ್ಕದೆ ಮಾಣ್ಬನೆ ಕೂಡಲ ಸಂಗಮದೇವ?' ಎಂದು ಭಕ್ತಿಬಲ್ಲಿದ ಬಸವಣ್ಣ ಬಿತ್ತರಿಸಿದ್ದಾನೆ. ಅಲ್ಲದೆ, ಸಮಯೋಚಿತ ದಲ್ಲಿ ಲಿಂಗಾರ್ಚನೆ, ಸಮಯೋಚಿತದಲ್ಲಿ ಮಂತ್ರಾನುಷ್ಠಾನ, ಸಮಯೋಚಿತ ದಲ್ಲಿ ಗುರು ಜಂಗಮಸೇವೆ ಸಲ್ಲಬೇಕೆಂದು ಸೊಲ್ಲಿದ್ದಾನೆ. ಇದಲ್ಲದೆ ಶಿವ ಸಮಯಾಚಾರಗಳನ್ನೆಲ್ಲ ವೀರಶೈವ ಸಮಯಾಚಾರಗಳನ್ನೆಲ್ಲ ಶ್ರೀ ಗುರು ಶಿಷ್ಯನಿಗೆ ಬೋಧಿಸುತ್ತಾನೆ. ಮುಖ್ಯವಾಗಿ ಮಂತ್ರಸಿದ್ಧಾಂತ, ಮಂತ್ರ ಸಂಪ್ರದಾಯ, ಮಂತ್ರ ಸಂದರ್ಭಗಳನ್ನು ಸಂಬೋಧಿಸುತ್ತಾನೆ.

(೨) **ನಿಸ್ಸಂಸಾರ ಸಂಸ್ಕಾರ**; ತಾನು ಈ ಸಂಸಾರದೊಳಗಿದ್ದರೂ ತನ್ನೊಳಗೆ ಈ ಸಂಸಾರವಿರಬಾರದು. ಸಂಸಾರ ಸಾಗರದಲ್ಲಿ ತೇಲಬೇಕಲ್ಲದೆ ತಳಕ್ಕೆ ಮುಳುಗಬಾರದು. ತಾನು ಬೆಂಡಾಗಬೇಕಲ್ಲದೆ ಕಲ್ಲು ಗುಂಡಾಗ ಬಾರದು. ಹೀಗೆಂದು ಹೇಳುವುದೇ ನಿಸ್ಸಂಸಾರ ಸಂಸ್ಕಾರ.

ಸಂಸಾರ ಇತ್ತೆರ. ಹೊರಗಿನದೊಂದು; ಒಳಗಿನದಿನ್ನೊಂದು. ಭೌತಿಕ ಜೀವನ ಹೊರಗಿನದು. ಮನೆ ಹೊಲ ಧನಕನಕ, ಹೆಂಡರು ಮಕ್ಕಳು, ಬಂಧು ಬಳಗ, ಊರು ನಾಡು, ದೇಶ ವಿಶ್ವ ಇವುಗಳಿಗಾಗಿ ಹೋರಾಡುವುದು ಹೊರಗಿನ ಸಂಸಾರ. ತನುಕರಣ, ಮನ ಹರಣ, ಬುದ್ಧಿ ಭಾವಾದಿಗಳು ಒಳಗಿನ ಸಂಸಾರ. ಇವುಗಳ ಸೆಳವಿಗೆ ಸಿಲುಕಿ ಬಳುಕುವುದು ಒಳಗಿನ ಸಂಸಾರ. ಇವೆರಡರ ವ್ಯಾಮೋಹವನ್ನು ವಿಸರ್ಜಿಸುವುದೇ ನಿಜ ವಾದ ನಿಸ್ಸಂಸಾರ ಸಂಸ್ಕಾರ. ಮಂತ್ರಸಂಸ್ಕಾರವನ್ನು ಮಹಾಗುರುವಿನಿಂದ

ಪಡೆದ ಬಳಿಕ ಸಮಯವರಿತು ಮಂತ್ರಜಪ ಮಂತ್ರಾರ್ಥ ನಿರೂಪಗಳಲ್ಲಿ ನಿರತನಾಗಿರಬೇಕು. ಆ ಸಮಯದಲ್ಲಿ ತನುವಿನ ಮೇಲಾಗಲಿ ತನ್ನ ಬಾಳು ಬದುಕಿನ ಮೇಲಾಗಲಿ ಮನಸ್ಸು ಹರಿಯಬಾರದು ಮತ್ತು ಜನನ ಮರಣ ಸೂತಕಗಳನ್ನು ಸೂರೆಯಾಡುವುದೂ ಸಹ ನಿಸ್ಸಂಸಾರ ದೀಕ್ಷೆಯೆನಿಸುತ್ತದೆ. ಜೀವಭಾವದಲ್ಲಿದ್ದು ಜನ್ಮಭೂಮಿಯ ಬೀಜವಾಗಬಾರದು. ಜಾಗತಿಕ ಸುಖಕ್ಕೆ ಮೆಚ್ಚಿ ಜಗದೀಶ ಸುಖಕ್ಕೆ ವಂಚಿತನಾಗಿ ಮರಣಭಯಕೂಪದಲ್ಲಿ ಬೀಳಬಾರದು. ಮಥಿತಾರ್ಥವಿಲ್ಲದ ಮತಿಮಂದವಾಗಿಸುವ ಮಾತಿನ ಮಂಟಪವನ್ನು ಕಟ್ಟುವುದೂ ಒಂದು ಸಾರವಿಲ್ಲದ ಸಂಸಾರ. ಜೊಳ್ಳು ಮಾತುಗಳನ್ನು ಬಿಟ್ಟು ಚಿಲ್ಲಿಂಗ ಮಂತ್ರ ಮೈತ್ರಿಯಲ್ಲಿರುವುದು ನಿಸ್ಸಂಸಾರ ಸಂಸ್ಕಾರ. ಮರವೆಯಲ್ಲಿರುವುದು ಅಂದರೆ ಅಜ್ಞಾನಿಯಾಗಿರುವುದು ನಿಜವಾದ ಸಂಸಾರ. ಈ ಸರ್ಪನ ಬಾಯ ಕಪ್ಪೆಯಾಗಬಾರದು. ಮೋಹ ಬಲೆಯಲ್ಲಿ ಬೀಳಬಾರದು. ತನಗೆ ಹಗೆಯಾದ ಸಂಸಾರ ರಾಹುವಿನ ಗ್ರಾಸ ವಾಗಬಾರದು. ಬೆಂದೊಡಲ ಬಾಳಿನಲ್ಲಿ ಬೆಂಬೂದಿಯಾಗಬಾರದು. ಕಾಯಕರ್ಮಗಳೆಂಬ ಶೂಲವನೇರಬಾರದು. ದೇಹದಂದುಗಕ್ಕೆ ಆಶಾಪಾಶಕ್ಕೆ ಪಾಪಕೋಪಕ್ಕೆ ತಾಪಲೇಪಕ್ಕೆ ಚಿತ್ತಚಾಪಲ್ಯಕ್ಕೆ ಆಚಾರ ವಿಚಾರ ವಂಚನೆಗೆ ಪಂಚೇಂದ್ರಿಯ ಸಂಚಿಗೆ ಬಲಿಯಾಗಿ ಬಿಾಯ ಬಿಡಬಾರದು. ಈ ಸಂಸಾರ ಬಂಧನದಲ್ಲಿದ್ದರೆ ಶಿವನ ನೆನಹು ಬಾರದು. ಶಿವ ಮಂತ್ರಸ್ಮರಣ ಸಾಗದು. ಇದರಿಂದಾಗಿ ನಿಸ್ಸಂಸಾರದ ದೀಕ್ಷೆಯ ಪಡೆಯಬೇಕು.

(೩) **ನಿರ್ವಾಣ ಸಂಸ್ಕಾರ:** 'ನಿ' ಉಪಸರ್ಗ 'ವಾ' ಧಾತುವಿನಿಂದ ನಿರ್ವಾಣ ಶಬ್ದೋತ್ಪತ್ತಿಯಾಗಿದೆ. 'ವಾ' ಧಾತುವಿಗೆ ಗತಿಯೆಂದು ಗಂಧನ ವೆಂದು ಅರ್ಥಗಳಿವೆ. ದ್ವಂದ್ವದ ಗತಿಯನ್ನು ವಿಷಯ ಗಂಧವನ್ನು ನಿವಾರಿ ಸುವುದೇ ನಿರ್ವಾಣ. ವಸ್ತ್ರಗಳ ಮುಸುಕಿಲ್ಲದಿರುವುದೂ ನಿರ್ವಾಣವೆಂಬ ಅರ್ಥವು ರೂಢಿಯಲ್ಲಿ ಬಂದಿದೆ. ವಸ್ತ್ರಗಳ ಮುಸುಗನ್ನು ತೆಗೆಯಬಹುದು. ವಿಷಯ ಮುಸುಗನ್ನು ಮಲಗಳ ಮುಸುಗನ್ನು ತೆಗೆಯುವುದು ತೀರಕಷ್ಟ. ವಿಷಯಗಳ ಮುಸುಕಿಗೆ ಮಾಯಾಮಲ ವಾಸನೆಯೇ ಮೂಲಕಾರಣ. ಆ ಮಾಯಾಮಲ ವಾಸನೆಯ ಮುಸುಗನ್ನು ತೆಗೆದುಹಾಕುವುದೇ ನಿರ್ವಾಣ ಸಂಸ್ಕಾರ.

ನಿರ್ವಾಣವೆಂದರೆ ಮುಕ್ತಿ, ಕೈವಲ್ಯವೆಂಬುದಾಗಿಯೂ ಅರ್ಥಗಳಿವೆ. ನಿರ್ವಾಣವೆಂದರೆ ಮರಣವೆಂತಲೂ ಬಳಕೆಯಲ್ಲಿ ಹೇಳಿಕೆಯಿದೆ. ವಿದೇಹ ಕೈವಲ್ಯವೇ ನಿರ್ವಾಣ ಪದದರ್ಥವಲ್ಲ. ಜೀವನ್ಮುಕ್ತಿಯೂ ಅದರರ್ಥ. ದೇಹವನ್ನೇ ಬಿಟ್ಟು ಬಾಳಬೇಕೆಂಬುದೇ ನಿರ್ವಾಣ ದೀಕ್ಷೆಯ ನಿಜವಾದ ಲಕ್ಷ್ಯ ; ನಿರುಪಮ ಲಕ್ಷ್ಯ.

ಬರೀ ಬಟ್ಟೆ ಬರಿಗಳನ್ನು ಹೊದಿಯುದಂತಿರುವುದೇ ನಿರ್ವಾಣ ಲಕ್ಷಣ ವಲ್ಲ ; ಹುಟ್ಟಿ ಬರುವಾಗ ಹೊದ್ದು ತಂದ ಮಾಂಸ ಮೊದಲಾದ ಸಪ್ತಧಾತು ಗಳ ಗುಣಕರ್ಮಗಳನ್ನು ಕಳಚಿ ಮಂತ್ರ ದೀಕ್ಷೆಯಿಂದ ಅದನ್ನು ಮಂತ್ರಮಯ ವಾಗಿಸುವುದೇ ನಿಜವಾದ ನಿರ್ವಾಣದೀಕ್ಷೆ.

(೪) **ತತ್ತ್ವ ಸಂಸ್ಕಾರ:** ಜೀವನದ ಯಾವ ಕತ್ತಲನ್ನಾದರೂ ಕಳೆಯಬಹುದು. ತತ್ತ್ವದ ವಿಷಯದಲ್ಲಿ ಇರುವ ಕಗ್ಗತ್ತಲನ್ನು ಕಳೆವುದು ಕಷ್ಟದ ಕೆಲಸ. ಶ್ರೀಗುರುವು ಶಿಷ್ಯನಿಗೆ ಕರುಣಿಸುವ ಈ ತತ್ತ್ವದೀಕ್ಷೆ ಒಂದು ಅಪಾರ ಅಂತಃಶಕ್ತಿ ; ಅನುಪಮ ಅನಂತಜ್ಯೋತಿ. ಸಕಲ ನಿಷ್ಕಲ **ತತ್ತ್ವಾನುಭೂತಿ.**

ತತ್‌ದಿಂದ ತ್ವ-ದ ವರೆಗೆ ಇರುವ ಅಂದರೆ ಒಂದು ನೂರೊಂದಾಗಿರುವ ಎಲ್ಲ ವಸ್ತುಗಳ ವಿವೇಕವನ್ನುಂಟುಮಾಡಿಕೊಡುವುದೇ ತತ್ತ್ವ ಸಂಸ್ಕಾರ. 'ಅಯ್ಯಾ, ಒಂದು ಅನಾದಿ ಮೂಲಪ್ರಣವವೆ ಸಾಕಾರಲೀಲೆಯ ಧರಿಸಿ ಚಿದಂಗ ಚಿಹ್ನಲಿಂಗವಾಗಿ, ಆ ಒಂದಂಗ ಲಿಂಗವೇ ತ್ರಿವಿಧಾಂಗ, ತ್ರಿವಿಧಲಿಂಗ ವಾಗಿ ಆ ತ್ರಿವಿಧಾಂಗ ಲಿಂಗಾಂಗವೇ ಷಡ್ವಿಧಲಿಂಗವಾಗಿ ಆ ಷಡ್ವಿಧ ಲಿಂಗಾಂಗವೇ ಮೂವತ್ತಾರು ಲಿಂಗಾಂಗವಾಗಿ, ಆ ಮೂವತ್ತಾರು ಲಿಂಗಾಂಗ ಗಳನೆ ಶ್ರದ್ಧಾದಿ ಮೂವತ್ತೆರಡು ಭಕ್ತಿಗಳಲ್ಲಿ ಕೂಟವ ಮಾಡಿ, ಇಂತು ಲಿಂಗಾಂಗ ಭಕ್ತಿಗಳನೆ ಸತ್ಕ್ರಿಯಾ ಸಮ್ಯಜ್ಞಾನ ಸತ್ಕಾಯಕ ಸತ್ಪಾತ್ರ ಭಿಕ್ಷ ದಲ್ಲಿ ಸಮರಸವ ಮಾಡಿ, ಆ ಮಹಾಜ್ಞಾನವ ಸಾಧಿಸಿ ಆ ಮಹಾಜ್ಞಾನದ ಬಲ ದಿಂದ ಪೃಥ್ವಿ ತತ್ತ್ವಸಂಬಂಧವಾದ ಕರ್ಮೇಂದ್ರಿಯಂಗಳು, ಅಪ್ಪು ತತ್ತ್ವ ಸಂಬಂಧವಾದ ಜ್ಞಾನೇಂದ್ರಿಯಂಗಳು, ಅಗ್ನಿತತ್ತ್ವಸಂಬಂಧವಾದ ವಿಷ ಯೇಂದ್ರಿಯಂಗಳು, ವಾಯುತತ್ತ್ವಸಂಬಂಧವಾದ ಪ್ರಾಣವಾಯುಗಳು, ಆಕಾಶತತ್ತ್ವಸಂಬಂಧವಾದ ಕರಣಂಗಳು, ಭಾನುತತ್ತ್ವಸಂಬಂಧವಾದ ಉದರ

ವೆಂಬ ಭೂತಂಗಳು, ಶಿವತತ್ತ್ವಸಂಬಂಧವಾದ ಶ್ವೇತವರ್ಣಂಗಳು, ಆತ್ಮತತ್ತ್ವ ಸಂಬಂಧವಾದ ಸಮಸ್ತನಾದಂಗಳು ಇಂತು ಸಮಸ್ತ ತತ್ತ್ವಂಗಳು ಕೂಡಲಾಗಿ ನಾಲ್ವತ್ತು ತತ್ತ್ವವೆನಿಸುವವು. ಈ ತತ್ತ್ವಂಗಳ ಶಿವತತ್ತ್ವ, ಅನಾದಿಶಿವ ತತ್ತ್ವ, ಅನಾದಿ ನಿಃಕಲಪರಶಿವತತ್ತ್ವ, ಅನಾದಿನಿಃಕಲ ಪರಾತ್ಪರ ಶಿವತತ್ತ್ವ ವೆಂಬ ಚತುರ್ವಿಧ ತತ್ತ್ವಸ್ವರೂಪ ಗುರುಲಿಂಗಜಂಗಮವ ಕೂಡಿಸಿ ಆ ಮಹಾ ಜ್ಞಾನದಿಂದ ನೋಡಲಾಗಿ ೪೪ ತತ್ತ್ವಸ್ವರೂಪಿನಿಂದ ಒಂದು ಚಿದಂಗವೆನಿಸು ವುದಯ್ಯ. ಆ ಚಿದಂಗ ಷಟ್ ಚಕ್ರಂಗಳಲ್ಲಿ ಶ್ರೀಗುರುಲಿಂಗಜಂಗಮ ಕೃಪೆಯಿಂದ ಮೂರ್ತಿಗೊಂಡಿರುವ ೫೬ ಪ್ರಣವಂಗಳೆ ಸಾಕಾರ ಲೀಲೆಯು ಧರಿಸಿ ನಾನಾ ಕೃತಿ ಸಂಬಂಧವಾದ ಅನಾದಿ ಮೂಲ ಪ್ರಣವವ ಕೂಡಿ ಏಕ ಸ್ವರೂಪಿನಿಂದ ೫೭ ಲಿಂಗಸ್ವರೂಪ ಪ್ರಣಮವನೊಳಗೊಂಡು ಬಂದು ಚಿದ್ಘನಲಿಂಗವೆನಿಸು ವುದಯ್ಯ. ಇಂತು ಅಂಗಲಿಂಗವೆಂಬ ನೂರೊಂದು ಸ್ಥಲಕುಲಂಗಳ ವಿಚಾರಿಸಿ ಶಿಷ್ಯರೂಪಿಂದ ತನ್ನಾದಿ ಮಧ್ಯಾವಸಾನವ ತಿಳಿದು, ಕರ್ತೃಭೃತ್ಯ ತ್ವದ ವಿಚಾರವನರಿದು ದ್ವಾದಶಾಚಾರದ ಮರ್ಮವನರಿದು ಕರ್ತೃಭೃತ್ಯತ್ವ ಆಚಾರ ಸದ್ಭಕ್ತಿಯೆಂಬ ನಿಜಸಮಾಧಿಯಲ್ಲಿ ನಿರವಯಲ ಕೂಡುವಂಥಾದ್ದು ತತ್ತ್ವದೀಕ್ಷೆ. ಇಂತುಟೆಂದು ಶ್ರೀಗುರು ನಿಃಕಳಂಕ ಚೆನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತ ಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡು ತೀರ್ದರು ನೋಡಾ ಸಂಗನಬಸವೇಶ್ವರಾ'.–ಈ ವಚನದಲ್ಲಿ ಒಂದೇ ಅನಾದಿ ಪ್ರಣವವು ನೂರೊಂವಾಗಿ ವಿಕಾಸವಾಗಿ ಮರಳಿ ತದೇಕವಾಗುವು ದನ್ನೂ ಆಗುವ ಆಚಾರಗಳನ್ನೂ ಅರಿಯಬಹುದಾಗಿದೆ. ಮುಖ್ಯವಾಗಿ ಮಂತ್ರಮಯವೇ ತತ್ತ್ವವಾಗಿದೆ.

ಮತ್ತೊಂದು ಬಗೆಯಲ್ಲಿ ಮೂವತ್ತಾರು ತತ್ತ್ವಗಳನ್ನು ತಿಳಿಸುವುದೂ ಸಹ ತತ್ತ್ವದೀಕ್ಷೆಯೆನಿಸುತ್ತದೆ.

"ಪೃಥಿವ್ಯಾದಿ ಭೂತಪಂಚಕ, ಗಂಧಾದಿ ತನ್ಮಾತ್ರಪಂಚಕ, ವಾಗಾದಿ ಕರ್ಮೇಂದ್ರಿಯ ಪಂಚಕ, ಶ್ರೋತ್ರಾದಿ ಜ್ಞಾನೇಂದ್ರಿಯ ಪಂಚಕ, ಮಾನಸಾ ದ್ಯಂತಃಕರಣತ್ರಯ, ಗುಣ, ಪ್ರಕೃತಿ, ಪುರುಷ, ಅಶುದ್ಧವಿದ್ಯೆ, ರಾಗ, ನಿಯತಿ, ಕಾಲ, ಕಲೆ–ಎಂಬೀ ಮೂವತ್ತೊಂದು ತತ್ತ್ವಂಗಳು ಭುವನ ರೂಪ ದಿಂದಾತ್ಮರ ಭೋಗಕ್ಕೆ ಸಾಧಾರಣಂಗಳು ; ಸೂಕ್ಷ್ಮದೇಹರೂಪದಿಂದ ಅಸಾ

ಧಾರಣಂಗಳು ; ಸ್ಥೂಲರೂಪದಿಂ ಸಾಧಾರಣಾಸಾಧಾರಣಂಗಳಾಗಿ ಮೋಹಕತ್ವದಿಂ ಸಂಸಾರ ಚಕ್ರಭ್ರಮಣಕ್ಕೆ ಕಾರಣವಾಗಿದವು. ಮೇಲೆ ಶುದ್ಧವಿದ್ಯೆ, ಈಶ್ವರ, ಸದಾಶಿವ, ಶಕ್ತಿ, ಶಿವತತ್ತ್ವ ಎಂಬಯ್ದು ತತ್ತ್ವಂಗಳೇ ನಿರ್ಮೋಹಕಂಗಳಾಗಿ ಪರಮುಕ್ತಿ ಸಾಧನಂಗಳಾಗಿರ್ಪನಿಂತು ಶುದ್ಧಾಶುದ್ಧಭೇದವಾದ ಪೃಥಿವ್ಯಾದಿ ಶಿವಾಂತಮಪ್ಪ ಮೂವತ್ತಾರೇ ತತ್ತ್ವಾಧ್ವಮಕ್ಕುಂ" ಎಂದು ನಿಜಗುಣರು ತಮ್ಮ "ಪಾರಮಾರ್ಥ ಪ್ರಕಾಶಿಕೆ" ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ.

ಈ ತತ್ತ್ವಸಂಸ್ಕಾರದಿಂದ ಬಾಳಿನಲ್ಲಿ ಒಂದು ಬೆಳಕು ಬರುತ್ತದೆ. ವಿಶ್ವವಿಶಾಲ ವಿಚಾರವೂ ವಿಶದವಾಗುತ್ತದೆ ಅಂತರ್ಬಾಹ್ಯಸ್ತರಗಳ ಪರಿಚಯುವಾಗುತ್ತದೆ. ಬದುಕಿನ ಬಗೆ ಬಿತ್ತರವಾಗುತ್ತದೆ. ಜೀವ ಜಗತ್ತು ಈಶ್ವರ ಈ ತತ್ತ್ವತ್ರಯಗಳಲ್ಲಿ ಸಮನ್ವಯಭಾವ ಉದಯುವಾಗುತ್ತದೆ. ಸಮಾಧಾನ ಭಾವ ಸಮನಿಸುತ್ತದೆ. ಈ ಸಮನ್ವಯ ಸಮಾಧಾನಗಳಿಲ್ಲದ ವಿಷಮಭಾವ ಸತ್ಯಸಾಧನೆಗೆ ಸಾಧಕವಲ್ಲ ; ಪ್ರೇರಕವಲ್ಲ. ತತ್ತ್ವೋಪದೇಶದಲ್ಲಿ ಸರ್ವಸಮದರ್ಶನ ದೃಷ್ಟಿಯಿದೆ. ಶಿವತತ್ತ್ವವನ್ನು ಬಿಟ್ಟು ಜಗತ್ತಿಲ್ಲ ; ಜಗತ್ತನ್ನು ಬಿಟ್ಟು ಜೀವತತ್ತ್ವವಿಲ್ಲ. ಪರಸ್ಪರ ಪೂರಕವಾಗಿವೆ.

೧೦೧ ಈ ನೂರೊಂದು ತತ್ತ್ವಗಳಲ್ಲಿ ಏಕಸೂತ್ರತೆಯಿದೆ. ಮೊದಲೊಂದು ; ಕೊನೆಗೊಂದು. ನಡುವೆ ಅನಂತ. ಇದಲ್ಲ, ಅದು ಸಲ್ಲ ಎಂಬ ಸೊಲ್ಲು ಸರಿಯಲ್ಲ. ತತ್ತ್ವ (ಸತ್ಯ)ವಿಲ್ಲದ ವಸ್ತುವಿಲ್ಲ. ಮೂಡಿ ಬರುತ್ತದೆ. ಮೂಡಿಬಂದಲ್ಲಿಯೇ ಕೂಡಿ ಬೆರೆಯುತ್ತದೆ. ಈ ಶುದ್ಧಭಾವನೆಯಿಂದ ಋತಜೀವನ ಸಿದ್ಧವಾಗುತ್ತದೆ. ತತ್ತ್ವಸಿದ್ಧಿಯಾಗುತ್ತದೆ. ಸರ್ವಸಮತ್ವ ದರ್ಶನವಾಗುತ್ತದೆ. ತತ್ತ್ವಗಳ ವಿಚಾರದಲ್ಲಿ ಹಳೆ ಹೊಸ ಎಂಬ ಮಾತಲ್ಲದೆ ಹುಟ್ಟು ಸಾವೆಂಬ ಮಾತಿಲ್ಲ. ಪೃಥಿವ್ಯಾದಿಗಳಿಗೂ ತತ್ತ್ವದ ಮುಪ್ಪೆಯನ್ನಿತ್ತುದು ಸಣ್ಣ ಸಿದ್ಧಿಯಲ್ಲ ; ಸಣ್ಣ ಶೋಧವಲ್ಲ. ಈ ತತ್ತ್ವ ದೀಕ್ಷೆಯಿಂದ ವ್ಯಕ್ತಿಯ ಅಂತರಂಗ ವಿಕಾಸವಾಗುತ್ತದೆ. ಬಹಿರಂಗದಲ್ಲಿ ಆ ವಿಕಾಸವೇ ಪ್ರಕಾಶವಾಗುತ್ತದೆ. ಶ್ರೀಗುರುವಿನಿಂದ ಈ ಸಂಸ್ಕಾರವನ್ನು ಪಡೆಯುವ ಮುಹೂರ್ತವೇ ಶಿಷ್ಯನಿಗೆ ಸುಮುಹೂರ್ತ. ಈ ಸಂಸ್ಕಾರದಲ್ಲಿ ಶ್ರೀಗುರು ತನ್ನ ದಾರ್ಶನಿಕಾನುಭೂತಿಯನ್ನೆಲ್ಲ ತನಗೆ ಸಾಧ್ಯವಿದ್ದಷ್ಟೂ ವಿವರಿಸಿ ತಿಳಿಸುತ್ತಾನೆ. ಇದ

ರಿಂದಾಗಿ ಶ್ರೀಗುರು ಸರ್ವತತ್ತ್ವಜ್ಞನಾಗಿರಬೇಕು; ಸರ್ವತತ್ತ್ವ ಶ್ರೀಮಂತನಾಗಿರಬೇಕು.

ಸರ್ವತತ್ತ್ವಗಳನ್ನು ಮಂತ್ರಮುಖದಲ್ಲಿ ವಿಶ್ಲೇಷಿಸಿ ತೋರಿಸಿ ಮರಳಿ ಮಂತ್ರಮುಖದಲ್ಲಿ ಏಕೀಕರಿಸಿ ನಿರ್ದೇಶಿಸುವುದೇ ತತ್ತ್ವದೀಕ್ಷೆ! ತತ್ತ್ವನೇಕತೆ ವಿಕಾಸದ ಕುರುಹು. ಪ್ರತಿ ತತ್ತ್ವವೂ ತಾತ್ತ್ವಿಕ (ಸತ್ಯ)ವೆಂದು ಗುರುಮುಖದಿಂದರಿವುದು ಮಾನವ ವಿವೇಕ ವಿಕಾಸದ ಕುರುಹು. ಏಕವಿಲ್ಲದೆ ಅನೇಕವಾಗದು. ಅನೇಕ ಏಕವಾಗದಿರದು. ಇದು ತತ್ತ್ವದ ಗೂಢ. ಇದು ಆ ಆದಿಕವಿಯ ಕಾವ್ಯ. ಈ ಕಾವ್ಯಾರ್ಥವನ್ನು ಬಿಚ್ಚಿ ಬಿತ್ತರಿಸುವಾತನೇ ಕಾವ್ಯಕಲಾಗುರು. ಬಿತ್ತರಿಸಿದುದನ್ನು ಮನದಲ್ಲಿ ಅಚ್ಚೊತ್ತಿಕೊಳ್ಳುವಾತನೇ ಸ್ವಾಧ್ಯಾಯ ನಿರತ ಸಚ್ಛಿಷ್ಯ.

(ಞ) **ಅಧ್ಯಾತ್ಮ ದೀಕ್ಷೆ:** ಅಧಿಗತ ಆತ್ಮಾ ಅಧ್ಯಾತ್ಮಃ ಅಂದರೆ ತನ್ನೊಳಗೆ ಅಳವಟ್ಟ ಆತ್ಮನ ವಿಚಾರವನ್ನು ವಿವರಿಸುವಿಕೆಯೇ ಅಧ್ಯಾತ್ಮ ದೀಕ್ಷೆ. ಆತ್ಮ ಪರಮಾತ್ಮವೆಂದು ಅಧ್ಯಾತ್ಮ ದ್ವಿವಿಧ. ಆತ್ಮವೇ ಅಂಗ; ಪರಮಾತ್ಮವೆ ಲಿಂಗ. ಈ ಅಂಗಲಿಂಗ ಸಮರಸಕ್ಕೆ ಕಾರಣವಾದುದು ಮಂತ್ರ. ತನ್ನೊಳಗಿರುವ ಷಡ್ವಿಧ ಲಿಂಗಗಳನ್ನು ತಾನು ಷಡ್ವಿಧ ಅಂಗವಾಗಿ ಷಡಕ್ಷರ ಮಂತ್ರ ಸಂಬಂಧದಿಂದ ಆರಾಧಿಸಿ ಅವಿರಳವಾಗುವುದನ್ನು ಶಿವಾತ್ಮವಿದ್ಯಾ ಗುರುವಿನಿಂದ ಅರಿವುದೇ ಅಧ್ಯಾತ್ಮ ಸಂಸ್ಕಾರ.

ತತ್ತ್ವದೀಕ್ಷೆ ಸಮಷ್ಟಿಯದಾದರೆ ಅಧ್ಯಾತ್ಮ ದೀಕ್ಷೆ ವ್ಯಷ್ಟಿಯದು. ವ್ಯಷ್ಟಿ ಜೀವನವು ತೀರ ಹತ್ತಿರದ್ದಾದರೂ ತಿಳಿದಿರುವವರು ವಿರಳ. ವ್ಯಷ್ಟಿ (ಅಧ್ಯಾತ್ಮ) ತತ್ತ್ವವು ಆಳತೆಯಲ್ಲಿ ಚಿಕ್ಕದಾಗಿ ಕಂಡರೂ ಆಳದಲ್ಲಿ ಚಿಕ್ಕದಲ್ಲ. ಭೂಜವಡಗಿದ ಬೀಜ. ಬ್ರಹ್ಮಾಂಡವೇ ಸೂಕ್ಷ್ಮಗೊಂಡ ಪಿಂಡಾಂಡ. ಈ ಪಿಂಡಾಂಡದಲ್ಲಿ ಪರಮಾತ್ಮನು ನೂರಾರು ಬಗೆಯಾಗಿ ಸೇವ್ಯ ಸೇವಕ ಅಥವಾ ಪೂಜ್ಯ ಪೂಜಕ ಸಂಬಂಧವನ್ನು ಪಡೆದಿದಾನೆ.

ಪರಮಾತ್ಮನು 'ಅ' ಕಾರ ಬೀಜಾಕ್ಷರ ಪ್ರಣವ ಮೂರ್ತಿರೂಪ ಇಷ್ಟ ಲಿಂಗವಾದರೆ ಆತ್ಮನು ತ್ಯಾಗಾಂಗನಾಗಿ ಜಾಗ್ರದವಸ್ಥೆಯಲ್ಲಿ ಅದೇ ಅಕಾರ ಮಂತ್ರದಿಂದ ಇಷ್ಟಲಿಂಗೋಪಾಸನೆಯನ್ನು ಮಾಡುತ್ತಾನೆ. ಪರಮಾತ್ಮನು 'ಉ' ಕಾರ ಬೀಜಾಕ್ಷರ ಪ್ರಣವ ಮೂರ್ತಿರೂಪ ಪ್ರಾಣಲಿಂಗವಾದರೆ ಆತ್ಮನು

ಭೋಗಾಂಗನಾಗಿ ಸ್ವಪ್ನಾವಸ್ಥೆಯಲ್ಲಿ ಅದೇ ಉ ಕಾರ ಮಂತ್ರದಿಂದ ಪ್ರಾಣ ಲಿಂಗವನ್ನು ಆರಾಧಿಸುತ್ತಾನೆ. ಪರಮಾತ್ಮನು 'ಮ' ಕಾರ ಬೀಜಾಕ್ಷರ ಪ್ರಣವ ಮೂರ್ತಿರೂಪ ಭಾವಲಿಂಗವಾದರೆ ಆತ್ಮನು ಯೋಗಾಂಗನಾಗಿ ಸುಷುಪ್ತಿಯಲ್ಲಿ ಅದೇ ಮಕಾರ ಮಂತ್ರದಿಂದ ಭಾವಲಿಂಗವನ್ನು ಉಪಾಸಿಸು ತ್ತಾನೆ. ಇವರೇ ಆರಾಗಿ ಜ್ಞಾನೇಂದ್ರಿಯ ಮನಗಳಲ್ಲಿಯೂ ಆಧಾರಾದಿ ಷಟ್‌ಚಕ್ರಗಳಲ್ಲಿಯೂ ನೇತ್ರಗತ ಷಡಂಗಗಳಲ್ಲಿಯೂ ಷಡಕ್ಷರ ಮಂತ್ರ ಮೂರ್ತಿಗಳಾಗಿ ಅದೇ ಷಡಕ್ಷರ ಮಂತ್ರದಿಂದ ಭಕ್ತಾದಿಷಡಂಗರಿಂದ ಆರಾಧಿತರಾಗುತ್ತಾರೆ. ಆಚಾರಾದಿಷಡ್ಲಿಂಗಗಳೇ ನ ಕಾರಾದಿ ಷಡಕ್ಷರ ಮಂತ್ರ ಮೂರ್ತಿಗಳು. ನಾಶಿಕಾದಿ ಸ್ಥೂಲಷಡಂಗಗಳಲ್ಲಿ, ಆಧಾರಾದಿ ಸೂಕ್ಷ್ಮ ಷಡಂಗಗಳಲ್ಲಿ ಕ್ರಮವಾಗಿದ್ದು ಲಿಂಗಾಂಗರು ಪೂಜ್ಯ ಪೂಜಕ ರಾಗಿರುತ್ತಾರೆ. ಇನ್ನು ನೇತ್ರವೊಂದರಲ್ಲಿಯೇ ಷಟ್ ಚಕ್ರಗಳಿದ್ದು ಷಡಂಗ ಲಿಂಗರು ಷಣ್ಮಂತ್ರಾಕ್ಷರಗಳಿಂದ ಉಪಾಸಕೋಪಾಸ್ಯರಾಗುವ ರೀತಿಯಿದು.

ಕಣ್ಣಿನ ಪೀತವರ್ಣವೇ ಆಧಾರ. ಅದರಲ್ಲಿರುವ ನಕಾರವೇ ಆಚಾರ ಲಿಂಗ. ಆ ಪೀತ ವರ್ಣದ ಗಂಧವೇ ಭಕ್ತಾಂಗ. ಕಣ್ಣಿನ ಶ್ವೇತವರ್ಣವೇ ಸ್ವಾಧಿಷ್ಠಾನ. ಅದರೊಳಗಿನ ಮಕಾರಾಕೃತಿಯೇ ಗುರುಲಿಂಗ. ಶ್ವೇತ ವರ್ಣದ ರುಚಿಯೇ ಮಹೇಶಾಂಗ. ಕಾಟಿಯೇ ಮಣಿ ಪೂರಕ. ಅದ ರೊಳಗಿನ ಶಿಕಾರಾಕೃತಿಯೇ ಶಿವಲಿಂಗ. ಕಾಟಿವರ್ಣದ ರೂಪವೇ ಪ್ರಸಾ ದ್ಯಂಗ. ಆ ಕಪ್ಪಿನೊಳಗಿನ ಒಗರುಗೆಂಪು ವರ್ಣವೇ ಅನಾಹತ. ಅದರ ವಾಕಾರಾಕೃತಿಯೇ ಜಂಗಮಲಿಂಗ. ರಕ್ತದ ಸ್ಪರ್ಶವೇ ಪ್ರಾಣಲಿಂಗ್ಯಂಗ. ಕಣ್ಣಿನೊಳಗಿನ ಉದ್ದಿನ ಬೇಳೆಯ ಪ್ರಮಾಣದ ಮಧ್ಯವೇ ವಿಶುದ್ಧಿ. ಅದರ ಯಕಾರಾಕೃತಿಯೇ ಪ್ರಸಾದಲಿಂಗ. ಮಧ್ಯ ಬಿಂಧುವಿನ ನಾದವೆ ಶರಣಾಂಗ. ಕಣ್ಣಿನ ನೀಲವರ್ಣವೆ ಅಜ್ಞಾ ಚಕ್ರ. ಅದರ ಓಂಕಾರಾಕೃತಿಯೇ ಮಹಾ ಲಿಂಗ. ನೀಲ ವರ್ಣದೊಳಗಿನ ತೃಪ್ತಿಯೇ ಐಕ್ಯಾಂಗ. ಇದೆಲ್ಲವನ್ನು ತಿಳಿಸುವುದೇ ಅಧ್ಯಾತ್ಮ ದೀಕ್ಷೆಯೆನಿಸುತ್ತದೆ.

(೬) **ಅನುಗ್ರಹ ದೀಕ್ಷೆ**: ಕ್ಷೇಮದಾನ, ಅಕ್ಷೇಮ ನಿವಾರಣ— ಪ್ರವೃತ್ತಿಗೆ ಅನುಗ್ರಹವೆಂದು ಅರ್ಥವಿಸುತ್ತಾರೆ. ಆದರೆ ಇಲ್ಲಿ ಇದಕ್ಕೂ ಹೆಚ್ಚಿನ ಆತ್ಮೀಯ ಆಂತರಿಕ ಅರ್ಥವಿದೆ. ಗುರು ಬೇರಿದ್ದು ಅನುಗ್ರಹಿಸದೆ

ಬೆರೆದು ಅನುಗ್ರಹಿಸಬಲ್ಲ. ಅಂಗ ಬೇರಾಗಿದ್ದರೂ ಆತ್ಮ ಬೇರಾಗುವುದಿಲ್ಲ ಅನುಗ್ರಹದಲ್ಲಿ ! ಅನು ಪದ ಸಾದೃಶ್ಯಾರ್ಥದಲ್ಲಿ ಸಹಾರ್ಥಗಳಲ್ಲಿ ಉಪಯುಕ್ತ ವಾಗಿದೆ. ಗುರು ಶಿಷ್ಯನನ್ನು ತನಗೆ ಸಾದೃಶ್ಯವಾಗಿ ತನ್ನೊಡನೆ ಗ್ರಹಣ ಮಾಡಿಕೊಳ್ಳುವಿಕೆಯೆ ಅನುಗ್ರಹ. ಕ್ರಿಯಾ ಜ್ಞಾನಗಳಲ್ಲಿ ಪ್ರಸಾದ ಭೋಗದಲ್ಲಿ ಸಮ ಸಮತ್ವ ಪ್ರಾಪ್ತಿಯನ್ನು ಶ್ರೀಗುರು ಶಿಷ್ಯನಿಗೆ ಸಮನಿಸು ತ್ತಾನೆ.

ಎಚ್ಚರಾಗದೆ ಸ್ವಪ್ನ ಸರಿಯದು. ಅಂತೆಯೆ ಶಿಷ್ಯನಿಗೆ ಅಧ್ಯಾತ್ಮ ಪ್ರಜ್ಞೆ ಅಳವಡದೆ ಅನುಗ್ರಹವೊದಗದು ;–ಅನುಗ್ರಹವೊದಗದೆ ಅಪ್ರಸನ್ನತೆ ತೊಲಗದು. ಶ್ರೀ ಗುರುವಿನ ಅಂತಃಕರಣ ಪ್ರಸಾದಪ್ರದಾನವೇ ಅನು ಗ್ರಹ. ಅದನ್ನು ಗ್ರಹಿಸುವ ಹೃದಯ ಪರಿಪಕ್ವತೆ ಶಿಷ್ಯನಿಗಿರಬೇಕು. ಶಿಷ್ಯ ಮತ್ತು ಶ್ರೀಗುರು ಇವರಿಬ್ಬರ ಅಂತಃಕರಣಗಳ ಅನ್ಯೋನ್ಯ ಆಕರ್ಷಣ ಶಕ್ತಿಯೇ ಅನುಗ್ರಹ. ಶ್ರೀ ಗುರು ಶಿಷ್ಯನ ಅಂತಃಕರಣದಲ್ಲಿ ಪವಿತ್ರ ಭಾವ ಗಳನ್ನು ಪ್ರತಿಬಿಂಬಿಸುವುದೇ ಅನುಗ್ರಹ; ಸತ್ಕಾರ್ಯ ಸುಜ್ಞಾನಗಳ ಪ್ರೇರಕ ಶಕ್ತಿಯೇ ಅನುಗ್ರಹ. ಮನ, ಪಂಚಜ್ಞಾನೇಂದ್ರಿಯ, ಸ್ಥೂಲ, ಸೂಕ್ಷ್ಮ, ಕಾರಣವೆಂಬ ನವಾಂಗಗತ ಗ್ರಹಗಳ ನಿಗ್ರಹವನ್ನು ತೊಲಗಿಸಿ ನವಲಿಂಗಗಳ ಕರುಣಿಸುವುದೆ ಅನುಗ್ರಹ. ಹೃದಯದಲ್ಲಿ ಹೃದ್ಯತೆಯನ್ನು ಭಾವದಲ್ಲಿ ಭವ್ಯತೆಯನ್ನು ಬೆರಸಿ ಬೆಳಗಿಸುವುದೆ ಅನುಗ್ರಹ. ಅನುಕಂಪ, ಅನುಷಂಗ, ಅನುನಯ, ಅನುಭಾವಗಳನ್ನು ಅಂಗವಿಸಿ ಅಳವಡಿಸುವುದು ಅನುಗ್ರಹ. ಸರ್ವ ಕ್ರಿಯಾಸಾಮರಸ್ಯವನ್ನು ಕರುಣಿಸುವುದೇ ಅನುಗ್ರಹ. ಅಭಯದ ಹಸ್ತ ಬರುವವರೆವಿಗೂ ಭವ ಭಯ ತಪ್ಪಿದ್ದಲ್ಲ. ಇದನ್ನು ತಪ್ಪಿಸಿ ಅಭಯ ಹಸ್ತ ಪ್ರದಾನವನ್ನು ಕೃಪಾಗುರು ಕರುಣಿಸುವುದೇ ಅನುಗ್ರಹ. ಶ್ರೀ ಗುರು ತನ್ನ ಮಂತ್ರ ಪ್ರಭಾವದಿಂದ ಸರ್ವತತ್ತ್ವ ಸಕೀಲಗಳನ್ನು ಶಿಷ್ಯನ ಸರ್ವಾಂಗ ದಲ್ಲಿ ನೆಲೆಗೊಳಿಸುವುದೇ ಅನುಗ್ರಹ. 'ಅಯ್ಯಾ ನಿನ್ನ ಚಿದಂಗ ಷಟ್ ಸ್ಥಾನಂಗಳಲ್ಲಿ ತತ್ತ್ವಂಗಳಡಗಿರ್ಪವು ; ಚಿದ್ಘನಲಿಂಗ ಷಟ್ ಸ್ಥಾನಂಗಳಲ್ಲಿ ಎಪ್ಪತ್ತೆಯ್ದು ತತ್ತ್ವಂಗಳಡಗಿರ್ಪವಯ್ಯ. ಆ ತತ್ತ್ವವಿಭಾಗವೆಂತೆಂಪೊಡೆ : ಪೃಥ್ವೀತತ್ತ್ವ ಇಪ್ಪತ್ತೆಯ್ದು ; ಅಪ್ ತತ್ತ್ವ ಇಪ್ಪತ್ತು. ಅಗ್ನಿ ತತ್ತ್ವ ಹದಿನಯ್ದು ; ವಾಯುತತ್ತ್ವ ಹತ್ತು ; ಆಕಾಶತತ್ತ್ವ ಆಯ್ದು–ಇಂತು

ಎಪ್ಪತ್ತೆಯ್ದು ತತ್ತ್ವಂಗಳು ಆತ್ಮ ತತ್ತ್ವವೊಂದರಲ್ಲಿ ಅಡಗಿರ್ಪವು. ಇಂಥ ಅನಂತಾನಂತಾತ್ಮರು ಅವುದುಂಬರ ವೃಕ್ಷಕ್ಕೆ ಫಲ ತೊಂತಿದೋಪಾದಿಯಲ್ಲಿ ಆ ಚಿದಂಗಕ್ಕೆ ಅನಂತಾತ್ಮ ತತ್ತ್ವಂಗಳು ತೊಂತಿಕೊಂಡಿರ್ಪವು ನೋಡಾ. ಆ ಚಿದಂಗ ೧೮ ಪ್ರಣವಸ್ವರೂಪಿನಿಂದ ತಿಳಿದು ಇಂತೀ ಅಂಗಲಿಂಗ ಸಂಗದಲ್ಲಿ ಅಡಗಿರುವ ನೂರೊಂದು ತತ್ತ್ವ ಸಕೀಲಂಗಳನು ನೂರೊಂದು ಸ್ಥಲದಲ್ಲಿ ನೆಲೆಗೊಳಿಸಿ ಪರತತ್ತ್ವಲಿಂಗಲೀಲೆಯಿಂದ ನಿಂದ ನಿಲುಕಡೆಯೇ ಅನುಗ್ರಹ ದೀಕ್ಷಾ; ಇಂತುಂಟೆಂದು ಶ್ರೀ ಗುರು ನಿಃಕಳಂಕ ಸ್ವತಂತ್ರಮೂರ್ತಿ ಚೆನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು.' ಈ ವಚನದಿಂದ ಅನುಗ್ರಹ ಸಂಸ್ಕಾರದ ಅಂತರಂಗವು ಅವಗತವಾಗುತ್ತದೆ. ಅಂಗದ ಪ್ರಕೃತಿಗುಣವಳಿದು ಲಿಂಗಗುಣಗಳು ಬೆಳೆದು ಪ್ರಗತಿ ಪಂಥದಲ್ಲಿ ಮುನ್ನಡೆವಂತೆ ಮಾಡುವುದೇ ಅನುಗ್ರಹ ಸಂಸ್ಕಾರ ಸಾರ. ಈ ಅನುಗ್ರಹದಿಂದ ಅಕಳಂಕನಾದ ಶಿಷ್ಯನ ಪ್ರಕೃತಿ ಲೋಹವು ಶ್ರೀ ಗುರುವಿನ ಅನುಗ್ರಹ ರೂಪ ರಸವೇಧದಿಂದ ಅಂದರೆ ಪರುಷ ಸ್ಪರ್ಶದಿಂದ ಚಿನ್ನವಾಗಿ ಚಿತ್ಕಳೆಯಿಂದ ತಳತಳಿಸುತ್ತದೆ.

ಈ ತತ್ತ್ವಾನುಗ್ರಹದ ಸತ್ವ ಅಸದೃಶ. ಶ್ರೀಗುರುವಿಗಿದೆ ಉದಾತ್ತ ಉದ್ದೇಶ. ಶಿಷ್ಯನ ಜೀವನವನ್ನು ಪ್ರಾಣಲಿಂಗದ ಸೀಮೆಗೆ ಪರಿಣಾಮಕಾರಿಯಾಗಿ ಕರೆದೊಯ್ಯುವ ಕರುಣೆ ಕಂಡುಬರುತ್ತದೆ. ಶ್ರೀ ಗುರುವಿನ ಈ ಪ್ರಾಸಾದಿಕ ಅನುಗ್ರಹದಿಂದ ಶಿಷ್ಯನ ಅಂಗ ಚಿದಂಗವಾಗಿ ಚಿಲ್ಲಿಂಗದ ನಿಲುಕಡೆಗೆ ನಿಲುಕಲು ಪಯಣಿಗನಾಗುತ್ತಾನೆ. ತನ್ನೊಳಗಿರುವ ಅನಂತಾತ್ಮರ ದರ್ಶನವಾಗುತ್ತದೆ. ಆ ಅನೇಕಾತ್ಮರನ್ನು ಏಕತೆಯಲ್ಲಿ ಸಕೀಲಿಸುವ ಮಾಂತ್ರಿಕ ಶಕ್ತಿಯನ್ನು ಶ್ರೀ ಗುರು ಶಿಷ್ಯನಿಗೆ ಅನುಗ್ರಹಿಸುತ್ತಾನೆ. ತನ್ನ ರಾಮಣೀಯಕ ಕ್ರಿಯಾನುಗ್ರಹರೂಪ ಪ್ರಸಾದವನ್ನು ಶಿಷ್ಯನ ಹೃದಯದ ಹೊಂದಳಿಗೆಯಲ್ಲಿ ಎಡೆಬಿಡಿಸುತ್ತಾನೆ.

(೭) **ಸತ್ಯಶುದ್ಧ ದೀಕ್ಷೆ:** ಸತ್ಯವಾಗಬೇಕು ಶಿಷ್ಯನ ವಾಣಿ. ಶುದ್ಧವಾಗಬೇಕು ಶಿಷ್ಯನ ಮನ. ಮಂತ್ರ ಸಂಸ್ಕಾರಕ್ಕೆ ಮಾತು ಮನಗಳೆರಡು ಮುಖ್ಯ. ಮಾತಿನಲ್ಲಿ ದಿಟ, ಮನದಲ್ಲಿ ನಿಚ್ಚಟ ಅಳವಡದೆ ಮಂತ್ರ ಸಂಸ್ಕಾರ ಪರಿಣಾಮವುಂಟಾಗದು, ಪರಿಪೂರ್ಣವಾಗದು. ಮಂತ್ರವನ್ನು

ಚ್ಚರಿಸುವ ವಾಣಿ ಸತ್ಯನಿರತವಾಗದೆ ವಿಧಿಯಿಲ್ಲ. ಮಂತ್ರ ಮನನ ಮಾಡುವ ಮನ ಶುದ್ಧವಾಗದೆ ಗತ್ಯಂತರವಿಲ್ಲ. ಅಷ್ಟೇ ಅಲ್ಲ ಪ್ರತ್ಯಂಗದಲ್ಲಿಯೂ ಪಾವಿತ್ರತೆಯನ್ನು ತಂದುಕೊಳ್ಳಬಲ್ಲ ಈ ಸಂಸ್ಕಾರದ ವಿಷಯದಲ್ಲಿ ವಚನವಿದು.

'ಅಯ್ಯಾ, ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಪಂಚಾಂಗವನಂಗೀಕರಿಸಿಕೊಂಡಿರುತ್ತಿಹ ಪರಬ್ರಹ್ಮದಲ್ಲಿ ಸಮರಸ ಸಂಗದಿಂದ ಕೂಟವ ಮಾಡಿ, ಅವಿರಳ ಪರಂಜ್ಯೋತಿ ಸ್ವರೂಪ ಶರಣನ ನಿಲುಕಡೆ ಎಂತೆಂದೊಡೆ: ಅಣುಮಾತ್ರ ಸತ್ಯ ನಡೆ ನುಡಿ ತೊಲಗನಯ್ಯ. ದೃಢಚಿತ್ತದಿಂದ ಕೊಟ್ಟ ಭಾಷೆಗಳನ್ನು ಬಿಡನು. ಮನದ ಸಂಗವ ಮಾಡಿ ಹುಸಿ ನುಡಿಯ ನುಡಿಯನಯ್ಯ. ನಿಜ ನೈಷ್ಠಾ ಪರತ್ವದಿಂದ ಸತ್ಕಾಯಕ ಸತ್ಪಾತ್ರ ಭಕ್ತಿ ಸತ್ಕ್ರಿಯಾ ಜ್ಞಾನಚಾರಂಗಳ ಅವರಂತರದಲ್ಲಿ ನಿಂದೆ, ಕುಂದು, ದರಿದ್ರ, ರೋಗ, ರುಜೆ, ವಿಪತ್ತು, ಹಾಸ್ಯ ರೋಷಗಳು ಬಂದು ತಟ್ಟಿದಲ್ಲಿ ಶ್ರೀಗುರು ಜಂಗಮದ ಕರುಣಾಕಟಾಕ್ಷೆಯಿಂದ ಬಂದುದೆ ಮಹಾ ಪ್ರಸಾದವೆಂದು ಲಿಂಗಭೋಗಿಯಾಗಿರುವನಲ್ಲದೆ ಶೈವ ಜಡಕರ್ಮ ಭೂತ ಪ್ರಾಣಿಗಳಂತೆ ಆ ಸತ್ಕಾಯಕ, ಸತ್ಪಾತ್ರ ಭಕ್ತಿ, ಸತ್ಕ್ರಿಯೆ, ಜ್ಞಾನಾಚಾರಂಗಳ ನಿಮಿಷಾರ್ಧವನಗಲನುವವನಲ್ಲ ನೋಡಾ. ಕುಲಛಲಕ್ಕಾದೊಡೆ ಶಿವಶರಣರಲ್ಲಿ ಜಾತಿಸೂತಕವ ಬಳಸದೆ ದುಷ್ಕಾಯಕ, ಅಪಾತ್ರಭಕ್ತಿ, ಅಕ್ರಿಯ, ಅಜ್ಞಾನ, ಅನಾಚಾರಂಗಳನುಕರಿಸಿ ಉದರಪೋಷಣಕ್ಕೆ ಲಾಂಛನದಿಚ್ಛೆಗೆ ನುಡಿಮ, ಸಮಪಂಕ್ತಿಯ ಮಾಡದೆ ಪರಮಾನಂದಸುಧಾಬ್ಧಿಯಲ್ಲಿ ಮುಳುಗಿ ಅಷ್ಟಾಥಾದನ ಎಚ್ಚರಗುಂದದೆ ಮನಪ್ರಾಣಲಿಂಗವಾದುದೀ ಸತ್ಯ ಶುದ್ಧ ದೀಕ್ಷೆ; ಇಂತುಂಟೆಂದು ಶ್ರೀಗುರುನಿಃಕಳಂಕ ನಿಜಾನಂದ ಮೂರ್ತಿ ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ಪರು ನೋಡಾ ಸಂಗನ ಬಸವೇಶ್ವರಾ.'

ಸತ್ಯಸಾಧಕನು ತನ್ನ ಪ್ರತ್ಯಂಗದಲ್ಲಿಯೂ ಇರುವ ಅಸತ್ಯತೆಯನ್ನು ಅಶುದ್ಧತೆಯನ್ನು ಅಲ್ಲಗಳೆಯಬೇಕು. ಸತ್ಯಾತ್ಮನಾಗಬೇಕು; ಶುದ್ಧಾತ್ಮನಾಗಬೇಕು. ತನ್ನ ಚೈತನ್ಯದಲ್ಲಿರುವ ಜೀವಭಾವವನ್ನು ತೊರೆದು ಶಿವಭಾವವನ್ನುಂಟುಮಾಡಿಕೊಳ್ಳಬೇಕು. ಅಲ್ಪಜ್ಞ, ಅಲ್ಪಕರ್ತೃ, ಅಲ್ಪಭೋಕ್ತೃ, ಅಲ್ಪಜೀವಿ ಎಂಬ ಅಸತ್ಯಭಾವವನ್ನು ನಿವಾರಿಸಬೇಕು. ತ್ರಿಮಲರಹಿತನಾಗಿ

ತೇಜೋವಂತನಾಗಿ ತತ್ತ್ವಸ್ವರೂಪನಾಗಿರುವುದೇ ಸತ್ಯಶುದ್ಧಸಂಸ್ಕಾರ. ಭೋಗಾಂಗವಚ್ಛಿನ್ನಶುದ್ಧಾತ್ಮಗೋಚರ.

ಈ ಏಳು ಸಂಸ್ಕಾರಗಳಿಂದ ಮಂತ್ರದೀಕ್ಷೆಯು ಪೂರ್ಣಗೊಳ್ಳುತ್ತದೆ. ಈ ಮಂತ್ರದೀಕ್ಷೆಯನ್ನು ಕೈಗೊಳ್ಳುವ ಭೋಗಾಂಗವು ಪ್ರಸಾದಿ ಪ್ರಾಣಲಿಂಗ ಸ್ಥಲಗಳೆರಡರ ಆಚರಣೆಯಲ್ಲಿರುತ್ತದೆ.

ಭೂಮಿಗೆ ಬಿದ್ದ ಮನುಷ್ಯನು ಭೂಮಿಯ ಬಲದಿಂದಲೇ ಮೇಲಕ್ಕೇಳು ವಂತೆ ಭವದ ನಾಮರೂಪಗಳ ಬಲೆಗೆ ಬಿದ್ದ ಮನುಷ್ಯನು ಶಿವನ ನಾಮರೂಪ ಗಳ ಉಪಾಸನೆಯಿಂದಲೆ ಭವದ ಬಲೆಯಿಂದ ಈಚೆಗೆ ಬರಬಲ್ಲನು; ಬರು ತ್ತಾನೆ. ಶಿವನ ನಾಮವೇ ಮಂತ್ರ. ಆ ಮಂತ್ರ ಮನನದಿಂದ ಚಿಂತನೆ ಭಿನ್ನವಾಗುತ್ತದೆ. ಮನದ ವಿಷಯ ಚಿಂತನೆ ಭಿನ್ನವಾದ ಬಳಿಕ ಇಂದ್ರಿಯ ಭೋಗಾಪೇಕ್ಷೆ ತನ್ನಿಂದ ತಾನೇ ಮಾಯವಾಗುತ್ತದೆ.

ಮಂತ್ರಮೂರ್ತಿಯಾದ ಮಹಾಗುರುವು ಕರುಣಿಸಿದ ಮಂತ್ರದೀಕ್ಷೆಯ ಈ ಪರಿವಿಡಿಯನ್ನು ಏರಿ ನಿಂತ ಶಿಷ್ಯನಿಗೆ ಅಂತರಾತ್ಮ ಜೀವನವು ಸಿದ್ಧ ವಾಗುತ್ತದೆ. ಅಂತರಂಗವು ಅಂತರಾತ್ಮನ ಸತ್ವದಿಂದ ಕೂಡಿಕೊಳ್ಳದಿದ್ದರೆ ಜೀವನವು ನಿಸ್ಸತ್ವವಾಗುತ್ತದೆ. ನಿವೃತ್ತಿ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆಗ ಮಾನವತೆಯಿಂದ ಕೆಳಕ್ಕೆ ಇಳಿಯಬೇಕಾಗುತ್ತದೆ.

ಮಾನವನು ಮಾನಸಿಕ ಘನತೆಯನ್ನು ಗಳಿಸಬೇಕಾದರೆ ಮಂತ್ರ ಪ್ರಾಣ ಗಳ ನೆರವು ಅನಿವಾರ್ಯ. ಮನನಾತ್ಮಕವಾದ ಮಂತ್ರದ ಪೌರೋಹಿತ್ಯವು ಮನನೀಯವಾದ ಪ್ರಾಣಲಿಂಗದ ಆಧಿಪತ್ಯವು ಅಂತರಂಗಕ್ಕೆ ಅತ್ಯವಸರ. ಪ್ರಾಕೃತಿಕವಾದ ಪ್ರಾಣದ ಬೆಂಬಲದಿಂದ ಮನವು ಮನವಾದರೆ ಪಾರಮಾರ್ಥಿಕ ವಾದ ಪ್ರಾಣಲಿಂಗದ ಬೆಂಬಲದಿಂದ ಮನವು ಘನಮನವಾಗುತ್ತದೆ. ಹಾಗಾಗಲು ಸತ್ಯಸಾಧನ ಮಂತ್ರ ಸಂಪತ್ತು. ಪ್ರಾಣವನ್ನು ಪ್ರಾಣಲಿಂಗ ವನ್ನಾಗಿಸಲು ಸರ್ವಸಮರ್ಥ ಶ್ರೀಗುರು. ಆ ಪರಂಜ್ಯೋತಿಯ ಸಕಲ ನಿಷ್ಕಳ ಕಳೆಯನ್ನು ತಂದು ಪ್ರಾಣದಲ್ಲಿರಿಸಿ ಪ್ರಾಣಲಿಂಗವನ್ನಾಗಿಸುತ್ತಾನೆ ಶ್ರೀಗುರು ತನ್ನ ಮಂತ್ರೋಪದೇಶದಿಂದ. ಪ್ರಾಣವನ್ನು ಪ್ರಕಾಶಗೊಳಿಸುತ್ತಾನೆ; ಶುದ್ಧ ಪ್ರಕಾಶಾತ್ಮನನ್ನಾಗಿಸುತ್ತಾನೆ. ಬಿಂಬರೂಪ ಆ ಭಾವಪ್ರಕಾಶವನ್ನು

ನಿರಾಕಾರಸ್ವರೂಪದಿಂದ ಪ್ರಾಣದಲ್ಲಿ ಕಿರಣರೂಪದಲ್ಲಿ ಸಾಕಾರ–ನಿರಾಕಾರ ಸ್ವರೂಪಕ್ಕೆ ತರುತ್ತಾನೆ. ಆದ್ದರಿಂದ ಇದು ಶುದ್ಧಾತ್ಮಗೋಚರವಾಗುತ್ತದೆ. ಮಹಾಮಂತ್ರದ ಮೂಲಕ ಆ ಪರಶಿವಲಿಂಗವು ಅಂತರಂಗದಲ್ಲಿ ಪ್ರತ್ಯಕ್ಷವಾಗುತ್ತದೆ. ಶಿವಾದ್ವೈತ ತತ್ತ್ವದಲ್ಲಿ ಪ್ರತ್ಯಕ್ಷ ಪ್ರಮಾಣವು ಸ್ಥೂಲ, ಸೂಕ್ಷ್ಮ, ಕಾರಣವೆಂದು ಮೂಬಗೆಯಾಗಿದೆ. ಕಣ್ಣಿನ ಕ್ರಿಯೆ (ವೃತ್ತಿ)ಗೆ ಗೋಚರವಾಗುವುದು ಸ್ಥೂಲಪ್ರತ್ಯಕ್ಷ. ಮನದರಿಕೆಗೆ ಗೋಚರವಾಗುವುದು ಸೂಕ್ಷ್ಮಪ್ರತ್ಯಕ್ಷ. ಭಾವದನುಭಾದಕ್ಕೆ ಗೋಚರವಾಗುವುದು ಕಾರಣ ಪ್ರತ್ಯಕ್ಷ. ಇದೀಗ ಮಂತ್ರಜನ್ಯ ಮನದರಿಕೆಗೆ ಪ್ರಾಣಲಿಂಗವು ಗೋಚರಿಸಿದೆ. ಇದನ್ನು ಸೂಕ್ಷ್ಮಪ್ರತ್ಯಕ್ಷವೆಂದು ಹೇಳುತ್ತೇವೆ.

ಕ್ರಿಯಾದೀಕ್ಷೆ :

> **ಕುಂಡಮಂಡಲಿಕೋಪೇತಾ ಕ್ರಿಯಾದೀಕ್ಷಾ ಕ್ರಿಯೋತ್ತರಾ**
> **ಶುಭಮಾಸೇ ಶುಭತಿಥೌ ಶುಭಕಾಲೇ ಶುಭೇऽಹನಿ ।**
> **ವಿಭೂತಿಂ ಶಿವಭಕ್ತೇಭ್ಯೋ ದತ್ವಾ ತಾಂಬೂಲಪೂರ್ವಕಂ ।**
> **ಯಥಾವಿಧಿ ಯಥಾಯೋಗಂ ಶಿಷ್ಯಮಾನೀಯ ದೇಶಿಕಃ ।**
> **ಸ್ನಾತಂ ಶುಕ್ಲಾಂಬರಧರಂ ದಂತಧಾವನ ಪೂರ್ವಕಮ್ ।"**

ಇನ್ನು ತ್ಯಾಗಾಂಗಕ್ಕೆ ವಿಧಿಸಬೇಕಾದ ಕ್ರಿಯಾದೀಕ್ಷೆಯ ಕ್ರಮವನ್ನು ನಿರೂಪಿಸಲಾಗಿದೆ. ಒಳ್ಳೆಯ ತಿಂಗಳಲ್ಲಿ ಒಳಿತಾದ ತಿಥಿಯಲ್ಲಿ ಶುಭದಿನ ಶುಭಸಮಯದಲ್ಲಿ ಬಾಳೆಯ ಕಂಬಗಳ ನಿಲ್ಲಿಸಿ ಮಾಂದಳಿರುಗಳಿಂದ ತೋರಣ ಕಟ್ಟಿ ಮಂಟಪ ರಚನೆಯನ್ನು ಮಾಡಿ ಆ ಚಪ್ಪರದ ಚೌಕಟ್ಟಿಗೆ ಒಳಪಟ್ಟ ನೆಲಗಟ್ಟನ್ನು ಸಾರಣೆಕಾರಣೆಗಳಿಂದ ಶುಚಿಗೊಳಿಸಿ ರಂಗವಲ್ಲಿಯನಿಟ್ಟು ಬಾಳೆಯೆಲೆಯ ಹಾಸಿ ಅಕ್ಕಿಯ ಹರಹಿ ಅಕ್ಕಿಯ ಮೇಲೆ ಪಂಚಕೋಣಾಕೃತಿಯ ಬರೆದು ಪ್ರಣವಪಂಚಾಕ್ಷರಗಳನ್ನು ಅಲ್ಲಲ್ಲಿ ಆ ಕೋಣಗಳಲ್ಲಿ ತುಂಬಿ ಪಂಚ ಕಲಶಗಳನ್ನು ಸ್ಥಾಪಿಸುವುದು. ತೆಂಗಿನಕಾಯಿ ವಸ್ತ್ರ ಪತ್ರಪುಷ್ಪಗಳಿಂದ ಅಲಂಕರಿಸುವುದು. ಹಸಿನೂಲಿನ ಸೂತ್ರಬಂಧನ, ಶುದ್ಧೋದಕ ದಕ್ಷಿಣ ಧಾರಣ, ಫಲತಾಂಬೂಲ ನಿವೇದನ, ಧೂಪದೀಪನಿರಾಜನ, ಮುಂತಾದವು

ಗಳಿಂದ ವಿಧ್ಯುಕ್ತವಾಗಿ ಪೂಜಿಸುವುದು. ಗಣಪತಿ ಪೂಜಾ, ಧ್ಯಾನ, ಸ್ವಸ್ತಿ ವಾಚನ, ಪುಣ್ಯಾಹ, ನಾಂದೀಸಮಾರಾಧನ, ಕುರಾಂಅರ್ಪಣ, ಮಂಟಪ ದೇವತಾ ಪ್ರತಿಷ್ಠೆಗಳನ್ನು ನೆರವೇರಿಸಿ, ಶಿವಭಕ್ತರಿಗೆ ವಿಭೂತಿ ತಾಂಬೂಲ ಗಳನ್ನು ಆಹ್ವಾನ ಚಿಹ್ನೆಗಾಗಿ ಕೊಡುವುದು. ವಪನ, ದಂತಧಾವನಾದಿ ಗಳನ್ನು ತೀರಿಸಿ ಮಿಂದು ಬಿಳಿಮಡಿಯುಟ್ಟು ಸಜ್ಜಿತನಾದ, ಕಾಯಿಹಣ್ಣು ವಿಭೂತಿ ವೀಳೆಯ ಕಾಣಿಕೆಯುಳ್ಳ ತಟ್ಟೆಯನ್ನು ಹಸ್ತದಲ್ಲಿ ಹಿಡಿದ ವಟುವನ್ನು ಮಂಟಪಕ್ಕೆ ಶ್ರೀಗುರುವು ಬರಮಾಡಿಕೊಳ್ಳಬೇಕು. ಬಂದ ವಟುವು ತಂದ ತಟ್ಟೆಯನ್ನು ಶ್ರೀಗುರುವಿಗೆ ಸಮರ್ಪಿಸಿ ಸಾಷ್ಟಾಂಗವೆರಗಬೇಕು. ಎದೆಯುಕ್ಕ ರಿಂವ ಎಣ್ಮ್ಯಯಿಂದ ಎರಗಿದ ವಟುವು ಏಳದ ಮುನ್ನ ವಿಭೂತಿಧಾರಣದಿಂದ ಏಣಾಂಕಧರನಂತಿರುವ ಪರಮಾಚಾರ್ಯನು ಪರಮಕರುಣೆಯಿಂದ 'ಏಕೆ ಬಂದೆ ಕಂದಾ, ಏನು ಬಯಸಿ ಬಂದೆ ?' ಹೇಳು ಎಂದು ವಟುವನ್ನು ಕೇಳಬೇಕು. ಓ ಎನ್ನ ಶ್ರೀಗುರುವೆ. ಶಿವಾತ್ಮವಿದ್ಯಾಗುರುವೇ ; ನನ್ನೀ ನರಜನ್ಮವ ತೊಡೆದು ಹರಜನ್ಮವ ಮಾಡಲು, ಭವಬಂಧನವ ಬಿಡಿಸಿ ಶಿವಸುಖನಂದನವ ತೋರಲು, ನಿನ್ನಡಿಯ ಭಕ್ತನೆಂದೆನಿಸಲು, ಕಾಣದ ಆ ಪರವಸ್ತುವನ್ನು ಎನ್ನ ಕರಸ್ಥಲಕ್ಕೆ ಕರುಣಿಸಲು–ಬಂದಿರುವೆನೆಂದು ಭಯಭಕ್ತಿಯಿಂದ ಬೆಸ ಗೊಳ್ಳಬೇಕು. ಅಂತಾದೊಡೆ ಎನ್ನಾಣತಿಯಂತೆ ಮುನ್ನಡೆಯುವೆಯಾ ಕಂದಾ ? ನಡೆಯುವೆ ತಂದೆ ! ನಡೆವೆನೆಂಬುದಕ್ಕೆ ದೃಢ ಸಾಕ್ಷಿಯಾರು ಕಂದಾ ! ತಮ್ಮಪಾದ ಎನ್ನಮನ ಆತ್ಮಸಾಕ್ಷಿ ತಂದೆ ! ಓ ಕಂದ, ಆನಂದ ; ಎದ್ದೇಳು ಕರುಣಿಸುವೆ ! ಎಂದು ಹೃದಯಾರೆ ಹರಿಸಿ ಎರಗಿದ ವಟುವನ್ನು ಎಬ್ಬಿಸಿ

"ಮಂಡಲೇ ಸ್ಥಾಪಯೇಚ್ಛಿಷ್ಯಂ ಪ್ರಾಙ್ಮುಖಂ ತಮುದಙ್ಮುಖಃ
ಶಿವಸ್ಯ ನಾಮಸಂಕೀರ್ತಿಂ ಚಿಂತಾಮಪಿ ಚ ಕಾರಯೇತ್ ।"

ಮಂಟಪದಲ್ಲಿ ಮೊದಲೇ ಮಾಡಿಸಿದ ಸ್ವಸ್ತಿಕ ಮಂಡಲದಲ್ಲಿ ಶಿಷ್ಯನನ್ನು ಮೂಡಣಕೆ ಮುಖವಾಗಿ ಕುಳ್ಳಿರಿಸಿ ಉಸಿರಿರುವವರೆಗೂ ಎಸೆವ ಲಿಂಗದೆಸಕ (ವ್ರತ)ವನ್ನು ಬಿಡೆನೆಂಬ ಭಾವವನ್ನು ಸೂಚಿಸುವ ಕಂಕಣವನ್ನು ಶಿಷ್ಯನ

ಬಲದ ಮುಂಗೈಗೆ ಕಟ್ಟಿ ತಾನು ಬಡಗಣಕ್ಕೆ ಮೊಗನಾಗಿ ಮಂಡಿಸಬೇಕು. ಶಿಷ್ಯನಿಗೆ ಶಿವನಾಮಸಂಕೀರ್ತನ, ಶಿವಧ್ಯಾನಗಳನ್ನು ಮಾಡಿಸಬೇಕು.

"ಆ ಹರ ಸಂಹರ ಪ್ರಹರ ಎಂದವನೆಯ್ದಿದನಂತೆ ಮುಕ್ತಿಯಂ
ಮೋಹದೊಳಾದೊಡಂ ಹರಹರಾ ಎನುತಿರ್ಪವನೆಯ್ದುದಿರ್ಪನೇ
ಸಾಹಸದಿಂದೆ ಸದ್ಗತಿಯನೇತರ ಮಾತದು ಪೋಗಲಿನ್ನು ಸಂ-
ದೇಹವೆ ನಿತ್ಯಮುಕ್ತ ಶಿವಭಕ್ತ ಕಣಾ ಗುರು ಶಂಕರೇಶ್ವರಾ |"

ನಾಮಸಂಕೀರ್ತನದ ಮಹಿಮೆಯಿದು, ಇದರಿಂದಾಗಿ ಶ್ರೀಗುರು ಶಿಷ್ಯನಿಂದ ನಾಮಸಂಕೀರ್ತನ ಮಾಡಿಸಬೇಕು. ಬಳಿಕ ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ಆಯತ್ತ, ಸ್ವಾಯತ್ತ- ಎಂದು ಏಳು ಬಗೆಯಾದ ಕ್ರಿಯಾದೀಕ್ಷೆಯನ್ನು ಕ್ರಮವಿಡಿದು ಕರುಣಿಸ ಬೇಕು.

(೧) ಆಜ್ಞಾ ದೀಕ್ಷೆ :

ಆಜ್ಞೆಯೂ ಒಂದು ದೀಕ್ಷೆ; ಆದಿದೀಕ್ಷೆ. ಅಂತೆಯೇ ಗುರುವಿನ ಅಪ್ಪಣೆಯ ಮೀರಬಾರದೆಂದು ಧರ್ಮಶಾಸನವಿದೆ. ಆಜ್ಞೆಯೆಂದರೆ ಶಿಷ್ಯನು ಶಿಷ್ಯನಾಗಲು ಬೇಕಾದ ಕೃತಿನಿರ್ದೇಶ; ನೀತಿನಿರ್ದೇಶ. ಶುದ್ಧ ಸತ್ವಗುಣಗಳ ಆದೇಶ. ಗುರುವಿನ ಈ ವೈಖರಿವಾಣಿಯೇ ಶಿಷ್ಯನ ಹೃದಯ ಭೂಮಿಯಲ್ಲಿ ಗುಣ ಜ್ಞಾನ ನೀತಿ ನಡತೆಗಳೆಂಬ ಮಳೆಯ ಸುರಿಸುವ ಮೇಘ.

ಈ ವರ್ಷಣವಿಲ್ಲದೆ ಕ್ರಿಯಾಜ್ಞಾನಾನುಭವಗಳ ಹುಲುಸಾದ ಬೆಳೆ ಯಿಲ್ಲ. ಲಿಂಗಫಲಗಳಿಲ್ಲ. ಲಿಂಗದೇವನ ದರ್ಶನ ಅರ್ಚನ ಸ್ಪರ್ಶನಾದಿ ಗಳಿಲ್ಲ. ಶ್ರೀಗುರು ವಚನೋಪದೇಶ ವರ್ಷಣಕರ್ತನು. ಶಿಷ್ಯನ ಹೃದ ಯಕ್ಕೆ ಸ್ಫೂರ್ತಿಯನ್ನು ಜಾಗ್ರತಿಯನ್ನು ಒದಗಿಸುವಾತನು. ಇದರಿಂದಾಗಿ ಗುರುವೇ ಬ್ರಹ್ಮನು; ವಾಕ್ಪತಿಯು. ಈ ಶಬ್ದಬ್ರಹ್ಮನಾದ ಶ್ರೀಗುರುವಿನಿಂದ ಶಿಷ್ಯಜೀವನದ ವಾಗ್ಝರಿಯು ಹೀಗೆ ಹರಿದು ಬರುತ್ತದೆ: ಹೊಮ್ಮಿಬರುವ ಈ ಶ್ರೀಗುರುವಚನ ಸುಧೆಯ ಪಾನಕ್ಕೆ ಪಾತ್ರನಾದ ಶಿಷ್ಯ ಹೃದಯಭೂಮಿಕೆ ಪವಿತ್ರವಲ್ಲವೆ ? ಶಿಷ್ಯನು ಧನ್ಯನಲ್ಲವೆ ?

ಓ ಸಚ್ಛಿಷ್ಯ, ನಿನ್ನನ್ನು ಕರುಣಿಸಿದ ಶ್ರೀಗುರುವನ್ನು ಎಂದಿಗೂ ಮರೆಯ ಬೇಡ. ಶ್ರೀಗುರುವಚನವನ್ನು ಮೀರಬೇಡ. ಗುರುವಾಜ್ಞೆಗಿಂತ ಹಿರಿದಾದ ಅಮೃತವಿಲ್ಲ. ಗುರು ನರನಲ್ಲ.

ಓ ಕಂದ, ಧರೆಯಲ್ಲಿ ನರಜನ್ಮಕ್ಕಿಂತ ಮಿಗಿಲಾದ ಮತ್ತೊಂದು ಜನ್ಮ ವಿಲ್ಲ. ಕರಣ ವಿಜಯಕ್ಕಿಂತ ಕಲಿತನವಿಲ್ಲ. ಪರಶಿವಲಿಂಗದ ಪೂಜೆಗಿಂತ ಬೇರೆ ಪಾವನ ಕ್ರಿಯೆಯಿಲ್ಲ. ಪ್ರಪಂಚ ಪರಮಾರ್ಥಗಳೆರಡನ್ನು ಕೂಡಿ ನಡೆ ಯಿಸುವುದಕ್ಕಿಂತ ಬೇರೆ ಜಾಣ್ಮೆಯಿಲ್ಲ.

ಓ ಶಿಷ್ಯಶಿಶು, ಅಭಕ್ಷ್ಯ ಭಕ್ಷಣ ಮಾಡದಿರು. ಅಪೇಯಪಾನ ಬಿಟ್ಟು ಬಿಡು. ಸಾತ್ವಿಕವಾದುದನ್ನೇ ಸೇವಿಸು. ಶಾಖಾಹಾರವನ್ನೇ ಭುಂಜಿಸು. ಅತಿಯಾಗಿ ಉಣಬೇಡ. ಅನೇಕ ವೇಳೆ ತಿನಬೇಡ. ಆಹಾರವನ್ನು ಸೇವಿಸು ವಾಗ ಅಲ್ಲಸಲ್ಲದುದನ್ನು ನೆನೆಯಬೇಡ. ಅವಾಚ್ಯ ವಾಕ್ಕುಗಳ ಬಳಸಬೇಡ. ಲಿಂಗಕ್ಕೆ ನಿವೇದಿಸದಿರಬೇಡ.

ಚಿರಂಜೀವಿಯೆ, ಜನನ ಜರೆ ಮರಣಗಳಿಗೆ ಅಂಜದಿರು. ನಷ್ಟಕಷ್ಟ ಗಳಿಗೆ ಅಳುಕದಿರು. ಅವಾಸ್ತವವಾದ ಅಪಮಾನವನ್ನು ಮನಕ್ಕೆ ತಾರದಿರು. ಅನ್ಯಾಯಕ್ಕೆ ದುಡುಕದಿರು.

ದೀನ ದುಃಖಿತರಲ್ಲಿ ದಯೆಯುಳ್ಳವನಾಗು. ಕುಟಿಲ ಕುಹಕಗಳಿಂದ ದೂರಾಗು. ದಿಟವನಾಡು. ದಿಟದಲ್ಲಿ ನಡೆ. ಮಂಗಳ ರೂಪವ ನೋಡು. ಮಂಗಳ ಶಬ್ದವ ಕೇಳು. ಮಂಗಳ ಸ್ಥಳಗಳಿಗೆ ಹೋಗು. ಮಂಗಳಮಯರಿಗೆ ಬಾಗು.

ಕಾರ್ಪಣ್ಯಕ್ಕೆ ಒಳಗಾಗಬೇಡ. ದಾಕ್ಷಿಣ್ಯಕ್ಕೆ ಮನಸೋಲಬೇಡ. ಸತ್ಪಾತ್ರದಲ್ಲಿ ದಾನಮಾಡು. ಬಿಕ್ಕೆ ಬೇಡಬೇಡ. ಕಾಯದ ಕತ್ತಲೆಯ ಕಳೆ. ಕಾಯಕ ನಿರತನಾಗಿ ಭಾಗ್ಯದ ಹುಲುಸು ಬೆಳೆಯ ಬೆಳೆ. ಲೋಕಸೇವಾಸಕ್ತಿಯ ತಳೆ. ನಿಜಕೀರ್ತಿ ಕಾಂತಿಗಳಿಂದ ಹೊಳೆ. ಇತ್ಯಾದಿಯಾಗಿ ಶ್ರೀಗುರು ಶಿಷ್ಯನಿಗೆ ಉಪಕರಿಸಿ ಉಪದೇಶಿಸುವುದೇ ಆಜ್ಞಾದೀಕ್ಷೆ. ಸದ್ಗುರುವಿನ ಈ ಹೃದಯ ವಾಣಿಯೇ ಶಿಷ್ಯನ ರಕ್ಷಾಕವಚ. ಜೀವನ ಸೀಳಿಕೆ. ಸನ್ಮಾರ್ಗ ಪ್ರದೀಪ. ಸತ್ವವನ್ನು ತುಂಬುವ ಅಂತರ್ವಾಣಿ !

೨) ಉಪಮಾ ದೀಕ್ಷೆ :

'ಉಪಮೀಯತ ಇತಿ ಉಪಮಾ' ಉಪಮೆಯೆಂದರೆ ಹೋಲಿಸಿ ಹೇಳುವುದು; ಉದಹರಿಸಿ ಉದದೇಶಿಸುವುದು. ಎಚ್ಚರಿಕೆಯಿಂದ ಎತ್ತರವಾಗಿ ಬಾಳದವರನ್ನು ಎಣಿಸಿ ಅವರಂತೆ ಬಾಳಿ ಬದುಕೆಂದು ಹೋಲಿಸಿ ಹೇಳುವುದು.

ಓ ಶಿಷ್ಯಶಿಶು ಆಲಿಸು, ಆಲಿಸಿ ಅದರಂತೆ ಪಾಲಿಸು. ಪೂರ್ವದಲ್ಲಿ ಜಗದ್ಗುರು ಜ್ಞಾನತರು ಪಂಡಿತಾಚಾರ್ಯರಿದ್ದರು. ಅವರೇ ಮತಸ್ಥಾಪಕರು. ಅವರು ಪ್ರಪಂಚವನುಳಿದು ಪ್ರಪಂಚವ ಬೆಳಗಿದರು. ಭಾಷ್ಯವ ಬರೆದು ಭುವನವ ಬದುಕಿಸಿದರು. ಆಚಾರ್ಯಪದವಿಗೇರಿ ಆರಾಧ್ಯರಾಗಿ ಅಂದಿಂದಿಗೂ ಅಖಂಡವಾಗಿ ಬೆಳಗಿ ಬೆಳಗುತ್ತಿದ್ದಾರೆ. ಅವರಂತೆ ಆಚರಿಸಿ ಆಚಾರ್ಯ ಪದವಿಗೇರು. ಇಲ್ಲವಾದರೆ ಭಕ್ತಿ ಬಂಡಾರಿ ಬಸವಣ್ಣನವರಂತೆ ಬಾಳು. ಇವರು ಸಂಸಾರವ ಹೊದ್ದಿಯೂ ಹೊದ್ದದಂತಿದ್ದರು. ಅಧಿಕಾರಿಯಾಗಿದ್ದರೂ ಅಹಂಕಾರಿಯಾಗಿರಲಿಲ್ಲ. ಅರ್ಥವಗಳಿಸಿದರೂ ಸ್ವಾರ್ಥಕ್ಕೆ ಬಳಸುತ್ತಿರಲಿಲ್ಲ. ಲೋಕಸೇವೆಯಲ್ಲಿ ನಿರತರಾಗಿದ್ದರೂ ಶಿವಪೂಜೆಯ ಬಿಟ್ಟಿರಲಿಲ್ಲ. ಶಿವಾನುಭವ ಗೋಷ್ಠಿಯ ಹಿಂಗಿರಲಿಲ್ಲ. ವಚನ ರಚನೆಯನ್ನು ಮುಂದುವರಿಸಿ ನುಡಿಯೂಳಿಗವನ್ನು ನಡೆಯಿಸಿದರು. ದಾಸೋಹವ ನಡಿಸಿ ಧರ್ಮವ ಬಿತ್ತರಿಸಿದರು. ನೀತಿಯ ಬಿತ್ತುಗಳ ಬಿತ್ತಿದರು. ಜಾತಿವಾದವ ತೊಡೆದರು. ಸ್ತ್ರೀಯರಿಗೆ ಆಧ್ಯಾತ್ಮದಲ್ಲಿ ಪುರುಷ ಸಮಾನತೆಯ ತಂದು ತುಂಬಿಕೊಟ್ಟರು. ಮರಣಕ್ಕೆ ಹೆದರದೆ ಮುನ್ನಡೆದರು. ಮರಣವೇ ಮಹಾನವಮಿ ಎಂದರು. ಎಲ್ಲರನ್ನು ತನ್ನವರೆಂದು ಭಾವಿಸಿದರು. ಎಲ್ಲರಿಗೂ ಲೇಸನೇ ಬಯಸಿದರು. ಎಲ್ಲರಿಂದಲೂ ತಾವು ಲೇಸೆನಿಸಿಕೊಂಡರು. ಅವರಂತೆ ಆಚರಿಸಲು ಅಭ್ಯಾಸವ ಮಾಡು,

ಸಂಸ್ಕಾರ ಪಡೆದ ಶಿಷ್ಯರು ಹೆಣ್ಣುಮಕ್ಕಳಾದರೆ ಅವರಿಗೆ: ದುಗ್ಗಳೆಯಂತೆ ದಾಸೋಹದಲ್ಲಿ ದೇಹದುಡಿಮೆಯಲ್ಲಿ · ನಿರತರಾಗಬೇಕು. ಧರ್ಮಚಾರಿಣಿಯರಾಗಬೇಕು. ಸುಗ್ಗಳೆಯ ರಾಣಿಯಂತೆ ಶಿಷ್ಯರಾಗಬೇಕು. ಧರ್ಮಪ್ರಚಾರಿಣಿಯರಾಗಬೇಕು. ರುದ್ರಕನ್ನಿಕೆ ಅಕ್ಕಮಹಾದೇವಿಯಂತೆ ಬಾಳಬೇಕು. ಮಲ್ಲಿಕಾರ್ಜುನನಲ್ಲಿ ಮನ ಮೀಸಲಿರಿಸಿ ಪೂಜಿಸಿದಂತೆ ಲಿಂಗಪೂಜೆಯಮಾಡಬೇಕು. ನಿಮ್ಮ ನಿಮ್ಮ ತ್ರಿಕೂಟವೆಂಬ ಶ್ರೀಗಿರಿಯಲ್ಲಿರುವ ಮಹಾಲಿಂಗವೆಂಬ

ಮಲ್ಲಿಕಾರ್ಜುನನಲ್ಲಿ ಬೆರೆಯಬೇಕು. ಲಕ್ಕಮ್ಮ ನೀಲಮ್ಮಗಳಂತೆ ಬಾಳದೇರನ್ನು ಏಳಿಯಬೇಕು. ಸಂಸಾರದಲ್ಲಿದ್ದರೂ ಶಿವಲಿಂಗ ಪೂಜೆಯನ್ನು ಬಿಡಬಾರದು. ಸದ್ಗುರು ಸೇವೆಯಲ್ಲಿ ನಿರತರಾಗಿರಬೇಕು. ಸತ್ಯಪಂಥವ ಸಾಧಿಸುವುದರಲ್ಲಿ, ಸಾತ್ಮಶಕ್ತಿ ಭಕ್ತಿಗಳ ಸಂಪಾದಿಸುವುದರಲ್ಲಿ ಸ್ಥೈರ್ಯವಿರಬೇಕು. ಪುರಾತನರ ಮಾರ್ಗದಂತೆ ಪ್ರವರ್ತಿಸಬೇಕು. ಎಂದು ಹೋಲಿಸಿ ಹೇಳುವುದೇ ಉಪಮೆಯ ಉಪದೇಶ. ಉಪಹತಿಯಿಲ್ಲದ ಉತ್ತಮ ಉಪಪತ್ತಿ, ಶ್ರೀಗುರುವಿನ ಆಜ್ಞಾ ದೀಕ್ಷೆಗೆ ಉಪಮಾದೀಕ್ಷೆ ಉಪಕಾರಕ; ಪ್ರೇರಕ. ಅನುಕರಣಾಸಕ್ತಿ ಮಾನವ ಹೃದಯದಲ್ಲಿ ಮನೆಮಾಡಿದೆ. ಅದಕ್ಕೆ ಯಾವುದನ್ನು ಕೊಟ್ಟರೆ ಅದನ್ನು ಅಂಗೀಕರಿಸುತ್ತದೆ. ಅದರಿಂದಾಗಿ ಹಿಂದಿನ ವಂದ್ಯರ ಜಾಗತಿಕ ಜೀವನ ಜ್ಯೋತಿಗಳ ಉಜ್ಜೀವನದ ಉದಾಹರಣೆಯನ್ನು ಉದ್ಧರಿಸಿ ತೋರುವ ಈ ಉಪಯುಕ್ತ ಉಪದೇಶವನ್ನು ಶ್ರೀಗುರು ಕರುಣಿಸುತ್ತಾನೆ.

ಶ್ರೀಗುರು ತನ್ನ ಶಿಷ್ಯನನ್ನು ಯಾವ ಮಾರ್ಗದಲ್ಲಿ ಕರೆದೊಯ್ಯಬೇಕೋ ಆ ಮಾರ್ಗದಲ್ಲಿ ಹಿಂದೆ ಆದರ್ಶವಾಗಿ ನಡೆದುಹೋದವರ ನಿರ್ದಶನವನ್ನು ಕೊಡುವುದರಲ್ಲಿ ಔಚಿತ್ಯವಿದೆ; ದೋಹದವಾಗುವ ಶಕ್ತಿಯಿದೆ. ಶಿವಾಚಾರ್ಯರ ಶಿವಶರಣರ ನಡೆನುಡಿಗಳ ಸಾಕ್ಷಿಯನ್ನು ಶಿಷ್ಯನ ಮನಮುಟ್ಟುವಂತೆ ಬೋಧಿಸು ವುದೊಂದು ಸಂಸ್ಕಾರವಾಗಿದೆ.

೩) ಸ್ವಸ್ತಿಕಾರೋಹಣದೀಕ್ಷೆ:

'ಸ್ವಸತಿ ಸ್ವಸ್ಯತಿ ವಾ ಸ್ವಸ್ತಿ' 'ಸ್ವಸ್ತಿಕ್ಷೇಮಂ, ಕಾಯತಿ ಕರೋತಿ ವಾ ಸ್ವಸ್ತಿಕಃ' ಈ ಎರಡು ವಿಗ್ರಹಗಳಿಂದ ಸ್ವಸ್ತಿಕಪದದ ಅರ್ಥ ಮನದಟ್ಟಾಗುತ್ತದೆ.

ಸ್ವಸ್ಥಿಯನ್ನು ಬಯಸಿ ಬಂದ ಓ ಶಿಷ್ಯ, ಕೇಳು; ಕುಳಿತುಕೊಳ್ಳುವುದೂ ಒಂದು ಕಲೆ; ಒಂದು ಸಂಸ್ಕಾರ. ಸಿಕ್ಕಹಾಗೆ ಕುಳಿತುಕೊಳ್ಳಬಾರದು. ಸಿಕ್ಕಾ ಬಟ್ಟೆ ಕುಳಿತರೆ ಶರೀರಾರೋಗ್ಯಕ್ಕೆ ಹಾನಿಯಲ್ಲದೆ ಸೌಜನ್ಯಕ್ಕೂ ಹಾನಿ. ಗೌರವ ತೆಗೂ ಹಾನಿ. ಕುಳಿತುಕೊಳ್ಳಲು ಎಷ್ಟೋ ಆಸನಗಳಿವೆ. ಆದರೆ ಅವೆಲ್ಲ ಅಂಗಕ್ಕೆ ಆಯಾಸವನ್ನು ಅತಿಬೇಗ ಅಳವಡಿಸುತ್ತವೆ. ಅವುಗಳಲ್ಲೆಲ್ಲಾ ಸ್ವಸ್ಥಿ ಕಾಸನವೇ ಶರೀರಕ್ಕೆ ಸ್ವಸ್ಥಿ. ಅದರಿಂದಾಗಿ ನೀನು ಸ್ವಸ್ಥಿಕಾಸನಾರೂಢನಾಗು.

ಆಸನ ಎರಡುಂಟು. ನೀನು ಹಾಕುವ ಸ್ವಸ್ಥಿಕಾಸನಕ್ಕೆ ನೆಲದ ಸ್ವಸ್ತಿಕಾಸನದ ನೆರವು ಬೇಕು, ಎಲ್ಲ ನೆಲವೂ ಒಂದೇ ಎಂದು ಸಿಕ್ಕಲ್ಲಿ ಕುಳಿತುಕೊಳ್ಳಬಾರದು. ನೆಲಕ್ಕೆ ಪೂರ್ವಾಶ್ರಯ ದೋಷವುಂಟು, ಇದನ್ನು ಕಳೆವ ಸಂಸ್ಕಾರ ನೆಲಕ್ಕೂ ಆಗಿರಬೇಕು. ಆದುದೇ ಸ್ವಸ್ತಿಕ; ಪಾವನಕಾರಕ.

ಗೋಮಯ ಶುದ್ಧಜಲಗಳಿಂದ ಸಾರಿಸಿದ, ರಂಗವಲ್ಲಿಯ ರಚಿಸಿದ, ದರ್ಭಾಸನ ಕಂಬಲಾಸನಗಳನ್ನು ಹಾಕಿ ಸಜ್ಜುಗೊಳಿಸಿದ ಪಾವನ ಗದ್ದುಗೆಗೆ ಸ್ವಸ್ತಿಕವೆಂದು ಹೆಸರು. ಆ ಸಸ್ತಿಕಾಸನದಲ್ಲಿ ಶಿಷ್ಯನನ್ನು ಶಾರೀರಕ ಸ್ವಸ್ತಿಕಾಸನದೊಡನೆ ಕುಳ್ಳಿರಿಸುವುದೇ ಬಾಹ್ಯ ಸ್ವಸ್ತಿಕಾರೋಹಣ ಸಂಸ್ಕಾರ!

ಇನ್ನು ಚಿತ್ತ ಚಪಲತೆಗಳನ್ನು ಪರಿಹರಿಸಿ ಶಿಷ್ಯನನ್ನು ಸ್ವಸ್ಥಚಿತ್ತನನ್ನಾಗಿಸುವುದೇ ಸ್ವಸ್ತಿಕಾರೋಹಣ ಸಂಸ್ಕಾರದ ಮತ್ತೊಂದು ಮುಖ; ಅಂತರ ಮುಖ. ಹಗರಣಕ್ಕೀಡು ಮಾಡುವ ಹಲವು ಚಿಂತೆಗಳ ಹಿಳಿದು ಹದುಳತೆಯ ಹೊಲಬಾದ ಒಂದೇ ಒಂದಾದ ತನ್ನ ಆತ್ಮ ನೆನಹಿನೊಳಗೆ ನಿಶ್ಚಿಂತನಾಗಿರುವುದೆ ಈ ಸಂಸ್ಕಾರದ ಮೂರನೆಯ ಮುಖ. ಮಾಂಸಪಿಂಡವಳಿದು ಮಂತ್ರಪಿಂಡವಾದ ಅಂಗವೆಂಬ ಸ್ವಸ್ತಿಕಾಸನದಲ್ಲಿ ಲಿಂಗವೆಂಬ ಶಿಶುವನ್ನು ಶ್ರೀಗುರು ಆರೋಹಣ ಮಾಡಿಸುವುದೆ ಆಂತರಿಕ ಸ್ವಸ್ತಿಕಾರೋಹಣ ಸಂಸ್ಕಾರ!

ಬಾಹ್ಯದಲ್ಲಿ ಭೂಸ್ಥಲವ ಗೋಮಯಾದಿಗಳಿಂದ ಶೋಧಿಸಿ ಶುದ್ಧವಿಸಿ ಸ್ಥೂಲಾಂಗವನ್ನು ಸ್ವಸ್ತಿಕಾರೋಹಣ ಮಾಡಿಸುವಂತೆ ಅಂತರಂಗದಲ್ಲಿ ಅಂಗಸ್ಥಲವನ್ನು ಪಾದೋದಕ ಭಸ್ಮೋದಕ ಮಂತ್ರೋದಕಗಳಿಂದ ಪರಿಶೋಧಿಸಿ ಲಿಂಗಮೂರ್ತಿ (ದೈವಶಕ್ತಿ)ಯನ್ನು ಅಂಗಸ್ಥಲದಲ್ಲಿ ಆರೋಹಣಮಾಡಿಸುವ ಈ ಸಂಸ್ಕಾರ ಸಣ್ಣದಲ್ಲ.

ಶಾರೀರಕ ಮಾನಸಿಕ ಸ್ವಸ್ಥಿ ಜೀವನಕ್ಕೆ ಒಂದು ದಿವ್ಯಶಕ್ತಿ; ಮುಂದಿನ ಸಂಸ್ಕಾರ ಪರಿಣಾಮಕ್ಕೆ ಒಂದು ಸಂಪತ್ತಿ.

೪) ಕಲಶಾಭಿಷೇಕ ದೀಕ್ಷೆ:

"ಪಂಚಬ್ರಹ್ಮಮಯೈಸ್ತತ್ರ ಸ್ಥಾಪಿತೈಃ ಕಲಶೋದಕೈಃ
ಆಚಾರ್ಯಃ ಸಮಾವೃತ್ತಿಗ್ಭಿಸ್ತ್ರಿವಾರಮಭಿಷೇಚಯೇತ್ ।"

ಪೂರ್ವ ಜನನ ದೋಷವ ಕಳೆದು ಪುನರ್ಜಾತನ ಮಾಡಲು ಈ ಸಂಸ್ಕಾರವನ್ನು ಶ್ರೀಗುರು ಶಿಷ್ಯನಿಗೆ ಕರುಣಿಸುವನು. ಋತ್ವಿಕ್‌ರಿಂದ ಪೂಜೆಗೊಂಡ ಪಂಚಕಲಶಗಳು ಪಂಚಬ್ರಹ್ಮಮಯಗಳು. ಪಂಚಾಚಾರ್ಯರೇ ಪಂಚಬ್ರಹ್ಮರು. ಇವರು ತಮ್ಮ ತಮ್ಮ ಅಂತಶ್ಶಕ್ತಿಗಳನ್ನು ಭಸ್ಮಮಂತ್ರ ಸ್ಪರ್ಶಗಳಿಂದ ಆ ಆ ಕಲಶೋದಕಗಳಲ್ಲಿ ಇರಿಸಿರುತ್ತಾರೆ. ಅಂತಹ ಕಲಶೋದಕಗಳನ್ನು ಒಂದು ಪಾತ್ರೆಗೆ ತೆಗದುಕೊಂಡು ಅದರಲ್ಲಿ ಶ್ರೀಗುರು ಚರಣೋದಕವನ್ನು ಮಿಶ್ರಮಾಡಿ ಶಿಷ್ಯನ ಮಸ್ತಕದ ಮೇಲೆ ಅಂಗಾಂಗಗಳ ಮೇಲೆ ಋತ್ವಿಕ್‌ರೊಡನೆ ಮೂರು ಸಲ ಸಂಪ್ರೋಕ್ಷಿಸುವನು. ತ್ರಿವಿಧ ಸಂಪ್ರೋಕ್ಷಣವು ತ್ರಿವಿಧ ತನುಗತ ತ್ರಿವಿಧಮಲ ನಿವಾರಣವನ್ನು ನಿರ್ದೇಶಿಸುತ್ತದೆ.

ಶ್ರೀಗುರುವಿನ ಕರಕಮಲವೆ ಒಂದು ಪಂಚಕಲಶ. ಆ ಕರಕಮಲದೊಳಗಿರುವ ಮಕರಂದವೇ ಗುರುಕರುಣಾರೂಪ ಜಲ. ಇದನ್ನು ಶಿಷ್ಯನ ಮಸ್ತಕದ ಮೇಲೆ ಅಭಿಷೇಕಿಸುವುದೇ ಆತ್ಮಿಕದ ಕಲಶಾಭಿಷೇಕ. ಅಂದರೆ ಗುರು ತನ್ನ ಕರುಣಾ ಜಲಪೂರಿತ ಕರಕಂಜವನ್ನು ಶಿಷ್ಯನ ಮಸ್ತಕದ ಮೇಲಿರಿಸಿ ವೈದಿಡವಿ ಪೂರ್ವ ಜನ್ಮ ಕಲ್ಮಷವ ಕಳೆದು ಪುನರ್ಜಾತನ ಮಾಡುವುದೇ ಕಲಶಾಭಿಷೇಕ ಸಂಸ್ಕಾರ. ಈ ಪುಣ್ಯಸಂಸ್ಕಾರವನ್ನು ಪಡೆವುದೊಂದು ಭಾಗ್ಯ.

ಕಲಸ-ಕಲಶ ಎಂದು ಎರಡು ಬಗೆಯಾಗಿ ಶಬ್ದ ಪ್ರಯೋಗವಿದೆ. ಎರಡೂ ಸಾಧುವಾಗಿವೆ. ‘ಕೇನ-ಜಲೇನ ಲಸತಿ-ಮೋದತಿ ಮೋದಯತಿ ವಾ ಕಲಸಃ’ ‘ಕಲಂ-ಪಾತ್ರಂ ಪಾತ್ರತಾಂ ವಾ ಶ್ಯತಿ ಶವತಿ ವಾ ಕಲಶಃ’

ಕಲಸವೆಂದಾಗ ತನ್ನ ಮಂಗಳೋದಕದಿಂದ ಮುದವನ್ನುಂಟುಮಾಡುತ್ತದೆಂದು ಅರ್ಥವಾಗುತ್ತದೆ. ಈ ವಿವರಣೆಯಿಂದ ಕಲಶಾಭಿಷೇಕ ದೀಕ್ಷೆಯ ಅಗತ್ಯ ಸಾಮರ್ಥ್ಯಗಳು ಮನದಟ್ಟಾಗುತ್ತವೆ.

ಉದಕದಲ್ಲಿ ನಿಸರ್ಗವಾಗಿ ತಂಪು ಗುಣವಿದೆ. ಪ್ರಕೃತಿಗೆ ಮಾತ್ರ ತಂಪನ್ನುಂಟುಮಾಡುತ್ತದೆ. ಅದೇ ಸಂಸ್ಕಾರವನ್ನು ಪಡೆದ ಕಲಶೋದಕವು ಅಂತರಂಗಕ್ಕೂ ಆತ್ಮಕ್ಕೂ ಸ್ವಸ್ಥಿಯನ್ನು ಸಂಪಾದಿಸಿಕೊಡುತ್ತದೆ. ಕಾಯದ ಪೂರ್ವಾಶ್ರಯ ದೋಷವನ್ನು ದೂರೀಕರಿಸುತ್ತದೆ. ದೇಹಭಾವವು ದೂರಾಗಿ ಅಂಗಭಾವವು ಅಂಗವಿಸುತ್ತದೆ.

೫) ವಿಭೂತಿ ಪಟ್ಟ ದೀಕ್ಷೆ:

"ವಿಭೂತಿಪಟ್ಟಂ ಕೃತ್ವಾಽಗ್ರೇ ಯಥಾ ಸ್ಥಾನಂ ಯಥಾ ವಿಧಿ ।"

'ವಿಭೂತಿ' ಶಬ್ದಕ್ಕೆ ಭಸ್ಮ, ಐಶ್ವರ್ಯ, ಅಣಿಮಾದ್ಯಷ್ಟಭೂತಿ, ಅದ್ವಿತೀಯ ವ್ಯಕ್ತಿ ಎಂದು ಅರ್ಥಗಳಿದ್ದರೂ ಭಸ್ಮವೆಂಬುದೇ ಪ್ರಥಮಾರ್ಥವಾಗಿದೆ. ಶ್ರೀಗುರುವಿನ ಹಸ್ತದಿಂದ ವಿಭೂತಿಧಾರಣ ಸಂಸ್ಕಾರವನ್ನು ಪಡೆದರೆ ಐಶ್ವರ್ಯಾದಿಗಳು ಮೈಗೂಡುತ್ತವೆ; ಮಹಾಪುರುಷತ್ವ ಸಂಪ್ರಾಪ್ತವಾಗುತ್ತದೆ.

ಐಶ್ವರ್ಯ ಎರಡು ವಿಧ. ಈಶ್ವರ ಭಾವವುಂಟಾಗುವುದೊಂದು ಇಹದ ಸಿರಿಯುಂಟಾಗುವುದಿನ್ನೊಂದು. ಈಶ್ವರ ಭಾವವುಂಟಾಗುವುದು ಅಚ್ಚಳಿಯದ ಮಹಾ ಸಂಪತ್ತು. ಇಹದ ಸಿರಿಯುಂಟಾಗುವುದು ಅಳಿವ ಅಣುಸಂಪತ್ತು; ಲಘುಸಂಪತ್ತು. ಇದರಿಂದಾಗಿ ಅಣಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ ಐಶ್ವರ್ಯಗಳಿಗಿಂತ ಮಹಿಮಾ, ಗರಿಮಾ, ಈಶಿತ್ವ ವಶಿತ್ವಗಳು ಉತ್ತಮ ಐಶ್ವರಗಳೆನಿಸಿವೆ. ಇವೆಲ್ಲವೂ ವಿಭೂತಿ ಪಟ್ಟದೀಕ್ಷೆಯಿಂದ ವಶವಾಗುತ್ತವೆ.

ಪಟ್ಟ ಪದಕ್ಕೆ ರೇಖೆ (ಗೆರೆ), ಗದ್ದುಗೆ, ಅಧಿಕಾರಸ್ಥಾನ, ಅರಸುತನ, ಮಾಠಾಧಿಪತ್ಯ, ತಲೆಪಟ್ಟಿ ಮುಂತಾದ ಅರ್ಥಗಳಿವೆ. 'ಪಟಗತೌ' ಗತ್ಯರ್ಥಕ ಪಟ ಧಾತುವಿಗೆ ಬಾಹುಲಕ ನಿಯಮದಿಂದ ತ್ ಪ್ರತ್ಯಯ ಬಂದು ಪಟ್ಟ ಪದವಾಗಿದೆ. 'ಪಟತಿ ಪಟ್ಯತೇ ವಾ ಪಟ್ಟಃ' ವಿಭೂತಿ ಪಟ್ಟವೆಂದರೆ ವಿಭೂತಿ ತ್ರಿರೇಖೆಗಳ ಧಾರಣವೆಂದರ್ಥವಾಗುತ್ತದೆ.

ಹಣೆ, ತಲೆ, ಕಿವಿಗಳೆರಡು, ಹೆಗಲುಗಳೆರಡು, ಕೊರಳು, ಎದೆ, ಹೊಕ್ಕುಳ, ಬೆನ್ನು, ತೋಳುಗಳೆರಡು, ಮುಂಗೈಗಳೆರಡು, ಹಿಂಗೊರಳು-ಈ ಹದಿನಯ್ದು ಸ್ಥಾನಗಳಲ್ಲಿ ವಿವ್ಯಕ್ತವಾಗಿ ಮಂತ್ರಧ್ಯಾನ ಪೂರ್ವಕವಾಗಿ ವಿಭೂತಿ ಕಣಗಳು ಸೂಸದಂತೆ ಮೂರು ಬೆರಳುಗಳಿಂದ ಧರಿಸಬೇಕು. ಮಂತ್ರೋದಕ ಮಿಶ್ರವಾಗಿ ಧರಿಸಬೇಕು. ಹಣೆ, ಹೆಗಲುಗಳೆರಡು, ಮೊಳಕಾಲುಗಳೆರಡು-ಈ ಆರುಸ್ಥಾನಗಳಲ್ಲಿ ಷಡಕ್ಷರ ಮಂತ್ರದ ಬಿಡಿಬಿಡಿ ಬೀಜಾಕ್ಷರ (ಪ್ರಣವ)ಗಳನ್ನು ವಿಭೂತಿಯಿಂದ ಸಂಬಂಧಿಸಬೇಕು. ಪಶ್ಚಿಮ ಮತ್ತು ಶಿಖಾಚಕ್ರಗಳಲ್ಲಿ ಮುಖದಲ್ಲಿ ಓಂಕಾರವನ್ನು ಲಿಖಿಸಬೇಕು.

ಗುರುವರನೇ ಮಹಾ ವಿಭೂತಿರೂಪ ಪರಶಿವನು. ಆತನ ಬಲಹಸ್ತದ ಪಂಚಾಂಗುಲಿಗಳೇ ಪಂಚಗೋವುಗಳು. ಅವುಗಳ ನಖ ಸಂದುಗಳಿಂದ ಹೊರ ಹೊಮ್ಮಿ ಬರುವ ಅರಿವೇ ಜ್ಯೋತಿರೂಪ ಅಯ್ದು ವಿಭೂತಿಗಳು. ಪಾದೋದಕದಿಂದ ಕೂಡಿದ ಭಸ್ಮೋದಕದಲ್ಲಿ ತನ್ನ ಪಂಚಾಂಗುಲಿಗಳನ್ನು ಅದ್ದಿ ಅಭಿಮಂತ್ರಿಸಿ ಶಿಷ್ಯನ ಸರ್ವಾಂಗಕ್ಕೆ ಸ್ನಾನ-ಧೂಳನಗಳನ್ನು ದಯಪಾಲಿಸುತ್ತಾನೆ. ಧಾರಣವನ್ನು ದಯಪಾಲಿಸುತ್ತಾನೆ. ಶಿಷ್ಯನ ಮಸ್ತಕವೇ ಲಿಂಗದ ಗೋಳಕವೆಂದು ಭಾವಿಸಿ ಕ್ರಿಯಾಭಸಿತವನ್ನು ಹಣೆಯಲ್ಲಿ ಶಿಖಾಗ್ರದಲ್ಲಿ ಪಶ್ಚಿಮ ಚಕ್ರದಲ್ಲಿ ತ್ರಿಪುಂಡ್ರವಾಗಿ ಧರಿಸಿ ತ್ರಿವಿಧ ಕರ್ಮಗಳನ್ನು ಕಳೆಯುತ್ತಾನೆ ಶ್ರೀಗುರು. ಇದೇ ಅನಾದಿ ಪರಶಿವ ಲಿಖಿತವೆಂದು ಪರಶಿವ ಧರ್ಮ ಶಾಸನವೆಂದು ಪರತರ ಪರಂಜ್ಯೋತಿಯೆಂದು ಪರಮುಕ್ತಿ ಸಂಪತ್ತಿಯೆಂದು ಪರಿಪರಿಯಾಗಿ ಪ್ರಬೋಧಿಸುತ್ತಾನೆ. ವಿಶ್ವಸಾಧನ ವಿಭೂತಿತ್ವ ಪಟ್ಟವನ್ನು ಅನುಗ್ರಹಿಸುತ್ತಾನೆ.

"ಅಭಿಷಿಚ್ಯ ಗುರುಃ ಶಿಷ್ಯಮಾಸೀನಂ ಪುರತಃ ಶುಚಿಂ
ತತಃ ಪಂಚಾಕ್ಷರೀಂ ಶೈವೀಂ ಸಂಸಾರಭಯತಾರಿಣೀಂ ।
ತಸ್ಯ ದಕ್ಷಿಣಕರ್ಣೇತು ನಿಗೂಢಮಪಿ ಕೀರ್ತಯೇತ್
ಛಂದೋ ರೂಪಮೃಷಿಂ ಚಾಸ್ಯ ದೇವತಾಂ ನ್ಯಾಸ
ಪದ್ಧತಿಮ್ ॥"

ಬಳಿಕ ಎಮರಿಗೆ ಏನೊಂದು ದೋಷವಿಲ್ಲದೆ ದೀಪ್ತನಾಗಿ ಜುಗುಪ್ಸಾರಹಿತನಾಗಿ ಕುಳಿತಿರುವ ಶಿಷ್ಯನಿಗೆ ಕಲಶೋದಕ ಭಸ್ಮೋದಕಗಳಿಂದ ಸಿಂಚನ ಮಾಡಿ ಶಿಷ್ಯನು ಜೋಡಿಸಿದ ಕೈಗಳನ್ನು ಶ್ರೀಗುರು ತನ್ನ ಕೈಯಿಂದ ಹಿಡಿದು ಇಬ್ಬರೂ ಎಡಪಾದಗಳನ್ನುಎತ್ತಿರಿಸಿಕೊಂಡು ಶಿಷ್ಯನ ಬಲಗಿವಿಯಲ್ಲಿ ಬಹು ರಹಸ್ಯವಾಗಿ ಸಂಸಾರ ಭಯವನ್ನು ಕಳೆವ ಶಿವಪಂಚಾಕ್ಷರಿಯನ್ನು ಶ್ರೀಗುರುವು ಉಪದೇಶಿಸಬೇಕು. ನಂತರ ಮಂತ್ರದ ಛಂದಸ್ಸು ಸ್ವರೂಪ, ಋಷಿ, ಅಧಿದೇವತೆ, ನ್ಯಾಸಪದ್ಧತಿಗಳನ್ನು ತಿಳಿಸಿಕೊಡಬೇಕು. 'ಓಂ ಅಸ್ಯ ಪಂಚಾಕ್ಷರ ಮಹಾಮಂತ್ರಸ್ಯ ವಾಮದೇವ ಋಷಿಃ, ಪಂಕ್ತಿಃ ಛಂದಃ, ಶ್ರೀಸದಾಶಿವೋ ದೇವತಾ, ಓಂ ಬೀಜಂ, ಉಮಾಶಕ್ತಿರುದಾತ್ತಃ ಸ್ವರಃ, ಶಿವ ಇತಿ ಕೀಲಕಂ, ಶ್ವೇತವರ್ಣಃ ಸದಾಶಿವ ಪ್ರೀತ್ಯರ್ಥೇ ಜಪೇ ವಿನಿಯೋಗಃ।' ಈ ಬಂಧದಲ್ಲಿ ಋಷಿಛಂದಸ್ಸಾದಿ

ಗಳು ನಿರ್ದಿಷ್ಟವಾಗಿವೆ- ಇನ್ನು ಮಂತ್ರದ ರೂಪ ಸ್ವರೂಪಗಳ ವಿಚಾರ 'ಪಂಚಾಕ್ಷರ ಜಪಸ್ಥಲ'ದಲ್ಲಿ ಬರುತ್ತದೆ. ಅದರಿಂದಾಗಿ ಇಲ್ಲಿ ವಿವರಿಸಲಾಗಿಲ್ಲ.

ಇನ್ನು ನ್ಯಾಸ ಪದ ವಿಮರ್ಶೆ ಅಗತ್ಯ. ನಿ ಉಪಸರ್ಗ ಕ್ಷೇಪಣಾರ್ಥದ ಅಸುಧಾತುವಿನಿಂದ ನ್ಯಾಸ ಶಬ್ದ ನಿರ್ದಿಷ್ಟವಾಗಿದೆ. ನಿಕ್ಷೇಪ, ಮುದ್ರೆ, ಪ್ರಬಂಧ, ಪಣಕಟ್ಟು, ಸ್ಥಾಪನ, ಇರಿಸುವಿಕೆ ಎಂಬ ಅರ್ಥಗಳು ನ್ಯಾಸ ಶಬ್ದಕ್ಕಿವೆ. ಅಂಗದ ಆ ಆ ಸ್ಥಳಗಳಲ್ಲಿ ಆ ಆ ಮಂತ್ರಾಕ್ಷರಗಳನ್ನು ಮುದ್ರಾ ಪ್ರದರ್ಶನ ಪೂರ್ವಕವಾಗಿ ಇರಿಸುವಿಕೆಗೆ 'ನ್ಯಾಸಪದ್ಧತಿ' ಎಂದು ಹೇಳಲಾಗಿದೆ. 'ನ್ಯಸ್ಯತ ಇತಿ ನ್ಯಾಸಃ'

ನ್ಯಾಸ ಪದ್ಧತಿಯು ಕರನ್ಯಾಸ, ದೇಹನ್ಯಾಸ, ಅಂಗನ್ಯಾಸವೆಂದು ತ್ರಿವಿಧವಾಗಿದೆ. ಮತ್ತೆ ಇವು ಒಂದೊಂದು ಸೃಷ್ಟಿ-ಸ್ಥಿತಿ-ಲಯ ಭೇದಗಳಿಂದ ಮೂರು ಮೂರಾಗಿ ಒಂಬತ್ತು ಬಗೆಯಾಗುತ್ತವೆ.

ಕೇವಲ ಕೈಬೆರಳುಗಳಲ್ಲಿ ಮಂತ್ರಾಕ್ಷರಗಳನ್ನಿರಿಸುವುದು ಕರನ್ಯಾಸ. ಆಶಿರಚರಣವರೆವಿಗೂ ದೇಹದಲ್ಲಿ ಮಂತ್ರಾಕ್ಷರಗಳನ್ನಿರಿಸುವುದು ದೇಹನ್ಯಾಸ. ಅಂಗ ಅಂದರೆ ನೇತ್ರಾದಿ ಅವಯವಗಳಲ್ಲಿ ಮಂತ್ರಾಕ್ಷರಗಳನ್ನಿರಿಸುವುದು ಅಂಗನ್ಯಾಸ. ಉಭಯ ಹಸ್ತಗಳ ಅಂಗುಷ್ಠಾದಿ ಕನಿಷ್ಠಾಂತವಾಗಿ ಆಯಾ ಅಂಗುಲಿಗಳ ಆದ್ಯಂತ ಪರ್ವಗಳಲ್ಲಿ ಮೂಲಪ್ರಣವವನ್ನೂ, ಮಧ್ಯ ಪರ್ವಗಳಲ್ಲಿ ಬಿಂದು ಸಮೇತ ಯಕಾರಾದಿ ನಕಾರಾಂತ ಪ್ರಣವಗಳನ್ನೂ, ಕರತಲಗಳೆರಡರಲ್ಲಿ ಕೇವಲ ಮೂಲ ತಾರೆಯನ್ನೂ ಆಯಾ ಶಕ್ತಿಗಳೊಡನೆ ಸಂಬಂಧಗೊಳಿಸಿ ಕರತಲ ಕರಪೃಷ್ಠ ಸ್ಪರ್ಶವನ್ನು ಮಾಡುವುದೇ ಸೃಷ್ಟಿಕರನ್ಯಾಸ, ನಿದರ್ಶನಕ್ಕಾಗಿ,

ಓಂ ಯಂ ಓಂ ಅಲುಪ್ತ ಶಕ್ತಿಧಾಮ್ನೇ ಅಂಗುಷ್ಠಾಭ್ಯಾಂ ನಮಃ
ಓಂ ವಾಂ ಓಂ ಸ್ವತಂತ್ರ ಶಕ್ತಿಧಾಮ್ನೇ ತರ್ಜನೀಭ್ಯಾಂ ನಮಃ
ಓಂ ಶಿಂ ಓಂ ಅನಾದಿ ಬೋಧ ಶಕ್ತಿಧಾಮ್ನೇ ಮಧ್ಯಮಾಭ್ಯಾಂ ನಮಃ
ಓಂ ಮಂ ಓಂ ನಿತ್ಯತೃಪ್ತಿ ಶಕ್ತಿಧಾಮ್ನೇ ಅನಾಮಿಕಾಭ್ಯಾಂ ನಮಃ
ಓಂ ನಂ ಓಂ ಸರ್ವಜ್ಞ ಶಕ್ತಿಧಾಮ್ನೇ ಕನಿಷ್ಠಿಕಾಭ್ಯಾಂ ನಮಃ
ಓಂ ಓಂ ಓಂ ಅನಂತ ಶಕ್ತಿಧಾಮ್ನೇ ಕರತಲ ಕರಪೃಷ್ಠಾಭ್ಯಾಂ ನಮಃ

ಇದನ್ನೇ ಕೈಗಳ ನಡುಬೆರಳುಗಳಿಂದ ಮೊದಲ್ಮಾಡಿ ತೋರಬೆರಳು ಹೆಬ್ಬೆರಳು ಕಿರುಬೆರಳು ಉಂಗುರ ಬೆರಳುಗಳಲ್ಲಿ ಕ್ರಮವಾಗಿ ಶಿವಾಯನಮಃ ಈ ಶಾಖಾ ಪ್ರಣವಗಳನ್ನು ಅಂಗೈಗಳಲ್ಲಿ ಕೇವಲ ಸಮುಷ್ಟಿ ಮೂಲಪ್ರಣವವನ್ನು ಸಂಬಂಧಗೊಳಿಸಿದರೆ ಸ್ಥಿತಿ ಕರನ್ಯಾಸವಾಗುವುದು. ಇದನ್ನೇ ಕಿರಿಬೆರಳಿನಿಂದ ಕ್ರಮವಾಗಿ ಅಯ್ದು ಬೆರಳುಗಳಲ್ಲಿ ನಮಃ ಶಿವಾಯ ಶಾಖಾಪ್ರಣವಗಳನ್ನು ಸಂಪುಟಗೊಳಿಸಿದರೆ ಸಂಹಾರಕರನ್ಯಾಸವಾಗುವುದು.

ದೇಹನ್ಯಾಸಕ್ರಮಃ ಮಸ್ತಕ, ಮುಖ, ಹೃದಯ, ಗುಹ್ಯ, ಪಾದ, ಸರ್ವದೇಹ ಇವುಗಳಲ್ಲಿ ಮೇಲಿನಂತೆ ಯಂ ವಾಂ ಶಿಂ ಮಂ ನಂ ಓಂ ಮಂತ್ರಾಕ್ಷರಗಳನ್ನು ಆಯಾ ಶಕ್ತಿ ಸಮೇತವಾಗಿ ಸಂಬಂಧಗೊಳಿಸಿದರೆ ಸೃಷ್ಟಿದೇಹನ್ಯಾಸವಾಗುವುದು. ಇಲ್ಲಿ ಆಯಾ ಸ್ಥಾನಗಳಲ್ಲಿ ಮುದ್ರೆಗಳನ್ನು ಬದಲಿಸಬೇಕು. ನಿದರ್ಶನಕ್ಕಾಗಿ;

ಓಂ ಯಂ ಓಂ ಅಲುಪ್ತ ಶಕ್ತಿಧಾಮ್ನೆ ನಮಃ ಶಿರಸಿ;
(ಸಮುಷ್ಟಿಕಾಂಗುಷ್ಠಾಗ್ರ ಮುದ್ರೆಯಿಂದ)
ಓಂ ವಾಂ ಓಂ ಸ್ವತಂತ್ರ ಶಕ್ತಿಧಾಮ್ನೇ ನಮಃ ಮುಖೇ;
(ತರ್ಜನ್ಯಂಗುಷ್ಠಾಗ್ರ ಸ್ಪರ್ಶಮುದ್ರೆ)
ಓಂ ಶಿಂ ಓಂ ಅನಾದಿ ಬೋಧ ಶಕ್ತಿಧಾಮ್ನೇ ನಮಃ ಹೃದಯೇ
(ಮಧ್ಯಮಾಂಗುಷ್ಠಾಗ್ರಾಂಗುಲಿ ಮುದ್ರೆ)
ಓಂ ಮಂ ಓಂ ನಿತ್ಯತೃಪ್ತಿ ಶಕ್ತಿಧಾಮ್ನೇ ನಮಃ ಗುಹ್ಯೇ
(ಅನಾಮಿಕಾಂಗುಷ್ಠಾಗ್ರಾಂಗುಲಿ ಮುದ್ರೆ)
ಓಂ ನಂ ಓಂ ಸರ್ವಜ್ಞ ಶಕ್ತಿಧಾಮ್ನೇ ನಮಃ ಪಾದಯೋಃ
(ಕನಿಷ್ಠಾಂಗುಷ್ಠಾಗ್ರಾಂಗುಲಿ ಮುದ್ರೆ)
ಓಂ ಓಂ ಓಂ ಅನಂತ ಶಕ್ತಿಧಾಮ್ನೇ ನಮಃ ಸರ್ವದೇಹೇ
(ಬದ್ಧಮುಷ್ಟಿತರ್ಜನ್ಯಗ್ರ ಮುದ್ರೆ)

ಇದನ್ನೇ ಹೃದಯದಿಂದ ಮೊದಲ್ಮಾಡಿ ಪರಿವಿಡಿದು ಮುಖ, ಶಿರ, ಪಾದ, ಗುಹ್ಯ, ದೇಹಾಂತವಾಗಿ ಮಾಡಿದಲ್ಲಿ ಸ್ಥಿತಿ ದೇಹನ್ಯಾಸವಾಗುತ್ತದೆ.

ಪಾದ, ಗುಹ್ಯ, ಹೃದಯ, ಮುಖ, ಶಿರ, ದೇಹ ಈ ಕ್ರಮದಲ್ಲಿ ಮಾಡಿದರೆ ಲಯದೇಹನ್ಯಾಸವೆನಿಸುತ್ತದೆ.

ಅಂಗನ್ಯಾಸಕ್ರಮಃ ಕವಚ, ಶಿಖಾ, ಶಿರ, ಹೃದಯ, ಅಂಗೈ ಇವುಗಳಲ್ಲಿ ಸೃಷ್ಟಿ ಕರ ನ್ಯಾಸದಂತೆ ಮಂತ್ರಾಕ್ಷರಗಳನ್ನು ಆಯಾ ಶಕ್ತಿ ಸಮೇತವಾಗಿ ಸಂಪುಟಗೊಳಿಸಿದರೆ ಸೃಷ್ಟಿಅಂಗನ್ಯಾಸವೆನಿಸುವುದು. ಇಲ್ಲಿನ ಮುದ್ರೆಗಳೂ ಬೇರಾಗಿರುತ್ತವೆ. ನಿದರ್ಶನಕ್ಕಾಗಿ

ಓಂ ಯಂ ಓಂ ಅಲುಪ್ತ ಶಕ್ತಿಧಾಮ್ನೇ ನೇತ್ರತ್ರಯಾಯ ವೌಷಟ್ ;
(ಅಂಗುಷ್ಠ ವಿಶಿಷ್ಟ ಮಧ್ಯಮಾನಮಿಕತರ್ಜನ್ಯಗ್ರಾಂಗುಲಿ ಮುದ್ರೆ)
ಓಂ ವಾಂ ಓಂ ಸ್ವತಂತ್ರ ಶಕ್ತಿಧಾಮ್ನೇ ಕವಚಾಯ ಹುಮ್
(ಸಮುಷ್ಟಿಕ ತರ್ಜನ್ಯಗ್ರಾಂಗುಲಿ ಮುದ್ರೆ)
ಓಂ ಶಿಂ ಓಂ ಅನಾದಿಬೋಧ ಶಕ್ತಿಧಾಮ್ನೇ ಶಿಖಾಯೈ ವಷಟ್
(ಮಧ್ಯಮಾಂಗುಷ್ಠಾಗ್ರಾಂಗುಲಿ ಮುದ್ರೆ)
ಓಂ ಮಂ ಓಂ ನಿತ್ಯತೃಪ್ತಿ ಶಕ್ತಿಧಾಮ್ನೇ ಶಿರಸೇ ಸ್ವಾಹಾ
(ಅಂಗುಷ್ಠಾನಾಮಿ ಕಾಂಗುಲಿ ಮುದ್ರೆ)
ಓಂ ನಂ ಓಂ ಸರ್ವಜ್ಞ ಶಕ್ತಿಧಾಮ್ನೇ ಹೃದಯಾಯ ನಮಃ
(ಕನಿಷ್ಠಾಂಗುಷ್ಠಾಂಗುಲಿ ಮುದ್ರೆ)
ಓಂ ಓಂ ಓಂ ಅನಂತ ಶಕ್ತಿಧಾಮ್ನೇ ಅಸ್ತ್ರಾಯಫಟ್
(ಬಲಗೈ ನಡುವಿನ ಮೂಬೆರಳುಗಳಿಂದ ಎಡ ಅಂಗೈನಡುವೆ ಮೂವೇಳೆ ಮೆಲ್ಲಗೆ ತಾಡನ ಮಾಡುವುದು)

ಇದನ್ನೇ ಶಿಖಾಗ್ರದಿಂದ ಆರಂಭಿಸಿ ಕವಚ, ನೇತ್ರ, ಹೃದಯ, ಶಿರ, ಅಂಗೈ ಪರಿವಿಡಿದು ಮಾಡಿದಲ್ಲಿ ಸ್ಥಿತಿ ಷಡಂಗನ್ಯಾಸವೆನಿಸುವುದು. ಹೃದಯ, ಶಿರ, ಶಿಖಾಗ್ರ, ಕವಚ, ನೇತ್ರತ್ರಯ, ಅಂಗೈಗಳ ಕ್ರಮದಲ್ಲಿ ಮಾಡಿದಲ್ಲಿ ಲಯ ಷಡಂಗನ್ಯಾಸವೆನಿಸುವುದು. ಇದು ನವವಿಧ ನ್ಯಾಸಪದ್ಧತಿ. ಇದರಿಂದ ಶಿಷ್ಯನ ಮಾಂಸಪಿಂಡವಳಿದು ಮೈಯೆಲ್ಲ ಮಂತ್ರಮಯವಾಗುತ್ತದೆ.

ಇನ್ನು ಕ್ರಿಯಾದೀಕ್ಷೆಯ ಕೊನೆಯ ಉಪದೀಕ್ಷೆಗಳಾದ ಆಯತ್ತ ಸ್ವಾಯತ್ತ ದೀಕ್ಷೆಗಳೆರಡು ನೂರೊಂದು ಸ್ಥಲಾಂತರ್ಗತ 'ಲಂಗಧಾರಣಸ್ಥಲ' ದಲ್ಲಿ ಬರುತ್ತವೆ. ಅದರಿಂದಾಗಿ ಅವೆರಡನ್ನು ಇಲ್ಲಿ ಹೇಳಲಿಲ್ಲ.

ಈಗ ಶಿಷ್ಯನು ಸನಾತನ ಸತೆಯನ್ನು ಪಡೆಯಲು ತಕ್ಕ ಅಧಿಕಾರಿ; ಸುಸಂಸ್ಕಾರಿ. ಹಸಿದವನಿಗೆ ಪ್ರಸಾದ (ಅನ್ನ)ದ ಆಸೆಯಿರುವಂತೆ ಆತ್ಮ ಪಿಪಾಸುವಾಗಿರುತ್ತಾನೆ. ಉತ್ಕ್ರಾಂತಿಯ ಉತ್ಸುಕತೆಯುಳ್ಳವನಾಗಿರುತ್ತಾನೆ. ಹಸನಾದ ಭೂಮಿಕೆಯುಳ್ಳವನಾಗಿರುತ್ತಾನೆ. ಜಡತೆ ಜಾಡ್ಯತೆಗಳ ಉಳಿವಿರುವುದಿಲ್ಲ. ಶಿಷ್ಯನ ಕಣ್ಮನಗಳ ಆಸಕ್ತಿ ನೇರವಾಗಿ ಆತ್ಮದರ್ಶನದತ್ತ ಆನಂದ ಸ್ವರೂಪದತ್ತ ಸಾಗಿರುತ್ತದೆ. ತನ್ನ ತನುಭಾಂಡದಲ್ಲಿ ಮೊದಲಿನಿಂದ ಮಡುಗಟ್ಟಿಕೊಂಡು ನಿಂತಿದ್ದ ಮಲಗಳೆಲ್ಲ ಮಾಯವಾಗಿರುವವು. ತನ್ನ ಇರುವಿನ ಕುರುಹಾದ ತನ್ನ ಸತ್ಕ್ರಿಯೆಯ ಸುಳುಹಾದ ತನ್ನ ಸತ್ ಚಿತ್ ಸುಖಗಳ ಕಳೆಯಾದ ವಸ್ತು ಪ್ರಾಪ್ತಿಯ ವಾತ್ಸಲ್ಯ ಸಾಕಲ್ಯವಾಗಿರುತ್ತದೆ. ತನು ಮನವೆಲ್ಲ ಸಂಸ್ಕಾರ ವೈಭವದಿಂದ ತುಂಬಿ ಸತ್ಯಸುಂದರವಾಗಿದೆ; ಶೈವ ಬಂಧುರವಾಗಿದೆ. ತ್ರಿಗುಣ ಜನ್ಯ ಅರಿವರ್ಗ ಪರಾಜಿತವಾಗಿದೆ; ಪರಿವರ್ತಿತವಾಗಿದೆ. ಶಿಷ್ಯನ ಮನಸ್ಸು ಮನೋಗತ ಚೈತನ್ಯದಿಂದಾಚೆಗೆ ಸಾಗಿದೆ; ಪಾಶವೀ ಪಾಶದಿಂದ ಪಾರಾಗಿದೆ. ಮಾನವೀ ಸೀಮೆಯನ್ನು ಉಲ್ಲಂಘಿಸಿದೆ. ಮಹೋನ್ನತ ಮೈದಾನದಲ್ಲಿ ಮೈದುಂಬಿ ಮನದುಂಬಿ ನಲಿಯಬಯಸಿದೆ. ಆ ಪರಾವಾಣಿಯಲ್ಲಿ ಹೃದಯ ಹಾಡಬಯಸಿದೆ. ಆ ಪರಂಜ್ಯೋತಿಯ ಕಾಣಬಯಸಿದೆ. ಆತ್ಮದ್ರಷ್ಟನಾಗಿ ಆ ಮಹಾಕವಿಯಾಗಲು ಆಶಿಸಿದೆ.

ಕಾಯದಲ್ಲಿ ಕ್ರಿಯಾ ಸತ್ತೆಯನ್ನು ಮನದಲ್ಲಿ ಮಹಾಜ್ಞಾನ ಸತ್ತೆಯನ್ನು ಆತ್ಮನಲ್ಲಿ ಪರಿಪೂರ್ಣಾನುಭೂತಿಸತ್ತೆಯನ್ನು ಪ್ರತಿಷ್ಠಿಸಿಕೊಂಡು ಪೋಷಿಸಲು ಪರಿಣಮಿಸಲು ಪರವಶನಾಗಲು ಬೃಹದಾಕಾರದ ಭಾವಾಸಕ್ತಿಯು ಭಕ್ತಿಯು ಮೂಡಿ ಕೂಡಿ ನಿಂತಿವೆ. ಅತೀಂದ್ರಿಯದ ಅಸ್ತಿತ್ವಕ್ಕೆ ಆಸಕ್ತಿಯನ್ನೇರಿಸಿ ಕುಳಿತ ಶಿಷ್ಯನ ಶಿವಕಾಂತಿಮಯ ಆಕೃತಿಯನ್ನು ಸಚ್ಚಿದಾನಂದಮಯ ಶಿವರತಿಯನ್ನು ಕಣ್ಣಿಗೆ ಕಾಣಿಸಲು ಮನಕ್ಕೆ ಮುಟ್ಟಿಸಲು ಬೇರೆ ಸಲುಪ ಚೆಲುವ ನುಡಿ ಸಿರಿಯ ಗಳಿಕೆಯಿಲ್ಲ. ಬಗೆಸಿರಿಯ ಬಡತನವಳಿದಿಲ್ಲ. ಒಟ್ಟಿನಲ್ಲಿ ಒಮ್ಮನದ

ಶಿಷ್ಯನು ಸಮ್ಮುದದ ಶ್ರೀಗುರುಪುತ್ರನು ತನ್ನ ಮುಂಬಾಳಿನ ಹೊಂಬೆಳಗಿನ ಲಿಂಗಮೂರ್ತಿಯನ್ನು ಮೈಮನೆಗೆ ಆಯತ್ತಗೊಳಿಸಿಕೊಳ್ಳಲು ಮನಕ್ಕೆ ಸ್ವಾಯತ್ತಗೊಳಿಸಿಕೊಳ್ಳಲು ಧನಕ್ಕೆ ಸನ್ನಿಹಿತಗೊಳಿಸಿಕೊಳ್ಳಲು ಎದೆ ಹಸಾದವುಳ್ಳವನಾಗಿದ್ದಾನೆ. 'ಏವಮಂತ್ರ ಮುಪಾದಿಶ್ಯ ಶಿಷ್ಯಾಂಗಮಪಿ ದೇಶಿಕಃ । ಶಿವಾಂಗಮಿತಿ ಸಂಚಿಂತ್ಯ ಲಿಂಗಸಂಸ್ಕಾರ ಮಾಚರೇತ್॥' ಆಜ್ಞಾದಿ ವಿಭೂತಿ ಪಟ್ಟಾಂತ್ಯ ಪಂಚ ಉಪದೀಕ್ಷೆಗಳಿಂದ ಮಂಗಲಾಂಗನಾದ ಮತ್ತು ಮಂತ್ರೋಪದೇಶವನ್ನು ಪಡೆದು ಶಿವಾಂಗನಾದ ಶಿಷ್ಯನಿಗೆ ಲಿಂಗಾಯತ್ತ ಲಿಂಗಸ್ವಾಯತ್ತ ಸಂಸ್ಕಾರಗಳನ್ನು ಶ್ರೀಗುರುವು ಆಚರಿಸಬೇಕು.

ಲಿಂಗಧಾರಣಸ್ಥಲ

(೫)

ಆಯತ್ತದೀಕ್ಷೆ:

ಆಯತದೀಕ್ಷೆ, ಲಿಂಗಾಯತದೀಕ್ಷೆ ಎಂದು ಹೇಳುವುದೂ ಉಂಟು. ಆಯತವೇ ಆಯತ್ತವಾಗುತ್ತದೆ. ಎರಡಕ್ಕೂ ಮೂಲಧಾತು ಒಂದೆ! ಪ್ರಯತ್ನಾರ್ಥದ ಯತೀ ಧಾತು ಅಕರ್ಮಕವಾದ ಕಾರಣ 'ಕ್ತ' ಪ್ರತ್ಯಯ ಕೂಡಿ ಆಯತ್ತವಾಗಿದೆ. ಆಯತ ಅಂದರೆ ದೀರ್ಘ. ಆಯತ್ತ ಅಂದರೆ ಅಧೀನ. 'ಆಯಮ್ಯತೇ, ಆಯತತೇ ವಾ ಆಯತಂ, ಆಯತ್ತಂ ವಾ' ಎಂದು ವಿಗ್ರಹಿಸಲಾಗುತ್ತದೆ. ಒಂದು ದೃಷ್ಟಿಯಿಂದ ಆಯತ್ತ ಪದವೇ ಹೆಚ್ಚು ಸೂಕ್ತವೆಂದು ಇದನ್ನೇ ನಾವಿಲ್ಲಿ ಅಂಗೀಕರಿಸಿದ್ದೇವೆ. ಶಿಷ್ಯನ ಅಧೀನಲಿಂಗ, ಲಿಂಗದ ಅಧೀನ ಶಿಷ್ಯ ಆಗುವುದರಿಂದ ಅಧೀನಾರ್ಥದ ಆಯತ್ತ ಶಬ್ದವೇ ಸಮರ್ಪಕವೆಂದು ನಮ್ಮ ಅಭಿಪ್ರಾಯ.

'ಆತ್ಮಾವಾ ಅರೆ ದ್ರಷ್ಟವ್ಯಃ' ಎಂಬೀ ಯಾಜ್ಞವಲ್ಕ್ಯರ ಹಿತವಚನವನ್ನು ಕಾರ್ಯದಲ್ಲಿ ಅಂದರೆ ಆಚರಣೆಯಲ್ಲಿ ತಂದ ಕೀರ್ತಿ ವೀರಶೈವ ಶ್ರೀಗುರುವಿಗೆ ಸತ್ಯಕ್ಕೂ ಸಲ್ಲಬೇಕು. ಅಗೋಚರವಾದ ಆ ವಸ್ತುವನ್ನು ಗೋಚರಕ್ಕೆ ತರಬಲ್ಲನು. ಅವ್ಯಕ್ತವಾದ ಆ ವಸ್ತುವನ್ನು ವ್ಯಕ್ತಗೊಳಿಸಬಲ್ಲನು. ಏಕವಾದ ಆ ವಸ್ತುವನ್ನು ಅನೇಕವಾಗಿಸಬಲ್ಲನು–ಶಿಷ್ಯನ ಉದ್ಧಾರಕ್ಕಾಗಿ ಶ್ರೀಗುರು.

'ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆನೆಂದೆಡೆ ಸಿಕ್ಕದೆಂಬ ಬಳಲಿಕೆಯ ನೋಡಾ! ಕಂಡುದನೆ ಕಂಡು ಗುರುಪಾದದ ಹಿಡಿದಲ್ಲಿಯೇ ಕಾಣದುದ ಕಾಣಬಹುದು ಗೊಗ್ಗೇಶ್ವರಾ.' ಕಾಣದ ಆ ಪರವಸ್ತುವನ್ನು ಕಾಣಿಸುವಾತನು ಗುರುದೇವನೆಂದು ಪ್ರಭುದೇವರು ಹೇಳಿದ್ದಾರೆ.

'ಕಣ್ಣು ಕಂಡಲ್ಲದೆ ಮನ ನೆನೆಯದು. ಆ ಮನ ನೆನೆದಲ್ಲಿಗೆ ಕಾಲು ನಡೆದಲ್ಲದೆ ಕಾಕ್ಯವಾಗದು. ಕಾಲೆಂದರೆ ನೀ ಚರಿಸುವ ವರ್ತನೆ. ಆ ವರ್ತನಾ

ಚಾರವೆಲ್ಲವೂ ಲಿಂಗವು. ಇದು ಕಾರಣ ಲಿಂಗವ ಹಿಂಗಿದ ಮಾಟ ಮೀಸಲಿಲ್ಲದ ಮನೆ ದೇವರ ಹಬ್ಬದಂತೆ. ನಮ್ಮ ಗೊಗ್ಗೇಶ್ವರ ಲಿಂಗಕ್ಕೆ ಇದೇ ಬೇಹ ಶೌಚ ಕೇಳಾ ಚಂದಯ್ಯ.

ಶಿಷ್ಯನ ಕಣ್ಣಾರೆ ಕಾಣಿಸುವಂತೆ ಮಾಡುವ ಸಲುವಾಗಿ ಆ ಚಿತ್ಕಳೆಯನ್ನು ತಂದು ಒಂದರಲ್ಲಿ ಇರಿಸಿ ಕೈಗೆ ಕರುಣಿಸುವ ಸಲುವಾಗಿ ಶಿಲಾ ನಿರ್ಮಿತ ಪೀಠ (ಪೀಟಿಕೆ) ಒಂದನ್ನು ಶ್ರೀಗುರು ಆಯ್ದುಕೊಳ್ಳಬೇಕಾಗುತ್ತದೆ. ಈ ಮರ್ಮ ವನ್ನು ತಿಳಿಯದವರು ಪೀಟಿಕೆಯೇ (ಕಲ್ಲೇ) ದೇವ (ಲಿಂಗ)ವೆಂದು ತಿಳಿದು ಹೀಯಾಳಿಸುತ್ತಾರೆ. ಕಲ್ಲೊಳಗಿರುವ ಚಿತ್ಕಳೆಯೇ ಲಿಂಗವೆಂಬುದನ್ನು ಅವರೇನು ಬಲ್ಲರು ? ಲೋಟವೊಂದರಲ್ಲಿ ಹಾಲು ಕೊಟ್ಟರೆ ಲೋಟ (ಪಾತ್ರೆಯೇ) ಹಾಲೆಂದು ಭಾವಿಸಿದರೆ ಮೂರ್ಖತನವಲ್ಲವೆ ?

ದೇವ ಸ್ವಾತಂತ್ರ್ಯಕ್ಕಾಗಿ ದೇವಪೂಜಾ ಸ್ವಾತಂತ್ರ್ಯಕ್ಕಾಗಿ ಲಿಂಗಧಾರಣವು ಉದಯವಾಯಿತು. ಗುಡಿಗಳಲ್ಲಿ ದೇವಲಿಂಗಗಳನ್ನು ಸ್ಥಾಪಿಸಿ ಪೂಜಾರಿಯೊಬ್ಬನ ವಶವಾಗಿಸಿ ದೇವಸ್ವಾತಂತ್ರ್ಯಕ್ಕೆ ಭಂಗಬಂದಿತ್ತು. ದೇವಪೂಜಾ ಸ್ವಾತಂತ್ರ್ಯವು ಅಪಹೃತವಾಗಿತ್ತು. ವ್ಯಕ್ತಿ ವ್ಯಕ್ತಿಗೂ ಅಂಗದಲ್ಲಿ ಲಿಂಗ ಧಾರಣ ಮಾಡುವುದರಿಂದ ಆವೆರಡು ಕೊರತೆಗಳು ತುಂಬಿಬಂದವಲ್ಲದೆ ತನ್ನಾತ್ಮವೇ ತನಗೆ ದೇವನೆಂಬ ಭಾವವುಂಟಾಗಿ ಅಧ್ಯಾತ್ಮ ದೇವತ್ವದ ಸಮೀಪಕ್ಕೆ ಸೇರುವಂತಾಯಿತು. ದೇವರೆಲ್ಲಿಯೋ ದೂರದಲ್ಲಿರುವನೆಂಬ ಏಕೈಕ ಕಲ್ಪನೆ ಖಚಿತವಾಗಿ ಉಚಿತವಲ್ಲೆಂಬ ಅರಿಕೆಗೆ ನಿಲುಕುವಂತಾಯಿತು.

ಸಂತೆಯೊಳಗಿನ ಪೀಠವನ್ನಾಗಲಿ ಕಂಥೆಧರಿಸಿದ ಲಿಂಗವನ್ನಾಗಲಿ ತಂದು ತಾವೇ ಧರಿಸಿಕೊಂಡರೆ ಅದು ಲಿಂಗವಲ್ಲ; ಅದು ಲಿಂಗಧಾರಣವೂ ಅಲ್ಲ. ಶ್ರೀಗುರುವಿನ ಹಸ್ತದಿಂದ ಪಡೆದು ಧರಿಸಬೇಕು. ಶ್ರೀಗುರು ಮಂತ್ರ ಸಂಸ್ಕಾರ ದಿಂದ ದೃಷ್ಟಿಯೋಗದಿಂದ ಶಿಷ್ಯನ ಚಿತ್ಕಳೆಯನ್ನು ತಂದು ಪೀಠದಲ್ಲಿರಿಸಿದ ಬಳಿಕ ಅದು ಲಿಂಗವೆನಿಸುತ್ತದೆ. ಅದಕ್ಕಾಗಿ ಗುರು ಶುದ್ಧ ಶಿಲೆಯ ಪೀಠವೊಂದನ್ನು ಆಯ್ದುಕೊಳ್ಳಬೇಕು.

'ಸ್ಫಾಟಿಕಂ ಶೈಲಜಂ ವಾಪಿ ಚಂದ್ರಕಾಂತಮಯಂ ತು ವಾ
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್ ।'

ಚೈತನ್ಯವನ್ನು ಹಿಡಿದಿರಿಸಲು ಮಣಿ ಮಂತ್ರ ಔಷಧಿಗಳು ಮುಖ್ಯಸಾಧನ ವಾಗಿವೆ. ಇವುಗಳಲ್ಲಿ ಮಣಿ(ಧಾತು) ಮೊದಲಿನದು. ಮಣಿಗಳು ಹಲವಿವೆ: ಸ್ಫಟಿಕ, ಶಿಲೆ, ಬೆಟ್ಟದಕಲ್ಲು, ಹೊಳೆಯಕಲ್ಲು, ಹಾಲುಗಲ್ಲು, ನೇಸರ್ಗಲ್ಲು ಇವುಗಳಲ್ಲಿ ಯಾವುದರಿಂದಲಾದರೂ ಮಾಡಿದ್ದಾಗಬಹುದೆಂದು ಕವಿ ಹೇಳು ತ್ತಾನೆ. ಶ್ರೀಶೈಲ ಶಿಲೆಯಿಂದ ಮಾಡಿದುದೇ ಶ್ರೇಷ್ಠವೆಂದು ಹೇಳುವುದಲ್ಲದೆ ಬಳಕೆಯಲ್ಲಿಯೂ ಬಂದಿದೆ. ಅನುಭವವೂ ಆಗಿದೆ.

"....ಕೃತಯುಗದಲ್ಲಿ ಸುವರ್ಣದ ಲಿಂಗವಾದಲ್ಲಿ ನಿನ್ನ ಹೆಸರೇನು ?
ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದಲ್ಲಿ ನಿನ್ನ ಹೆಸರೇನು ?
ದ್ವಾಪರಯುಗದಲ್ಲಿ ತಾಮ್ರದ ಲಿಂಗವಾದಲ್ಲಿ ನಿನ್ನ ಹೆಸರೇನು ?....
ಕಲಿಯುಗದಲ್ಲಿ ಕಲ್ಲು ಲಿಂಗವಾದಲ್ಲಿ ಇಕ್ಕಿದ ಬೋನವನುಣ್ಣ
ದೇಕೋ ?...."

ಎಂದು ಚೆನ್ನಬಸವಣ್ಣನವರು ಹೇಳಿ ಬರೀಕಲ್ಲು ಲಿಂಗವಲ್ಲ. ಆ ಕಲ್ಲೊಳಗಿರಿಸಿದ ಚಿತ್ಕಳೆಯೇ ಲಿಂಗವೆಂದು ಕಲಿಯುಗದಲ್ಲಿ ಕಲ್ಲಿನ ಪೀಟಿಕೆಯೇ ಉತ್ತಮ ಪಾತ್ರವೆಂದು ಪ್ರತಿಪಾದಿಸಿದಂತಾಗಿದೆ. ಲಿಂಗದ್ರವ್ಯದ ಇತಿಹಾಸ ವನ್ನೇ ಹೇಳಿದಂತಾಗಿದೆ.

ಕಲಿಯುಗದಲ್ಲಿ ಕಲ್ಲಿನ ಲಿಂಗವನ್ನೇ ಮಾಡುತ್ತಿದ್ದರೆಂದು ಚೆನ್ನಬಸವಣ್ಣನ ಅಭಿಪ್ರಾಯ. ಶಿವಶರಣರ ಕಾಲಕ್ಕಂತೂ ಸ್ಫಾಟಿಕಾದಿಲಿಂಗ ರಚನೆಯಿರಲೇ ಇಲ್ಲ. ಕಲ್ಲಿನ ಪೀಠಿಕೆಗಳನ್ನೇ ಮಾಡುವ ರೂಢಿ. ಈಚೆಗಂತೂ ವೀರಶೈವರಲ್ಲಿ ಪೀಟಿಕೆಗೆ ಕಲ್ಲಿನ ಹೊರತು ಬೇರೆ ಸ್ಫಟಿಕಾದಿಗಳನ್ನು ಉಪಯೋಗಿಸುವುದೇ ಇಲ್ಲ. ಗ್ರಂಥಕರ್ತರಾದ ಶಿವಯೋಗಿ ಶಿವಾಚಾರ್ಯರು ಸ್ಫಟಿಕ ಚಂದ್ರಕಾಂತ ಸೂರ್ಯಕಾಂತ ಮಣಿಗಳ ಮಾತನ್ನು ಹೇಳಬೇಕಾದರೆ ಇವರ ಕಾಲಮಾನ ಎಷ್ಟು ಹಿಂದಿನದೆಂಬುದು ಮತ್ತು ಶಿವಶರಣರಿಗಿಂತ ತೀರ ಹಿಂದಿನದೆಂಬುದು ವ್ಯಕ್ತವಾಗುತ್ತದೆ. 'ಎಲ್ಲರೂ ಲಿಂಗವ ಪೂಜಿಸಿ ಮಹಾ ಪ್ರಸಾದಸ್ಥರಾದ ಪರಿಯನೊರೆವೆ ಕೇಳಾ ! ಸ್ಫಟಿಕ ಶಿಲಾಮಯ ಲಿಂಗವ ಪೂಜಿಸಿ ಪಡೆದ ಸತ್ಯ ಲೋಕವ ನೋಡಾ ವಿಧಾತ್ರನು ! ಇಂದ್ರನೀಲಮಯ ಲಿಂಗವ ಪೂಜಿಸಿ ವೈಕುಂಠವಪಡೆದ ನೋಡಾ ನಾರಾಯಣನು!.... ಇಂತಪ್ಪ ನಾನಾಕೃತಿ ಲಿಂಗವ

ಪೂಜಿಸಿ ಹಲಕೆಲವು ಪದಸ್ಥರಾದರು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗದಲ್ಲಿ!" ಎಂದು ಸಿದ್ಧರಾಮೇಶ್ವರನು ಹೇಳಿ ಸ್ಫಾಟಿಕಾದಿ ಲಿಂಗಪೂಜೆಯ ಕಾಲವನ್ನು ಬಹುಪುರಾತನ ಕಾಲಕ್ಕೆ ಕೊಂಡೊಯ್ದಿದ್ದಾನೆ.

ಸ್ಫಟಿಕ ಶಿಲೆಗಿಂತ ಶ್ರೀಶೈಲ ಶಿಲೆಯಲ್ಲಿ ಯಾವ ಶ್ರೇಷ್ಠತೆಯಿದೆಯೋ ಸ್ಫುಟವಾಗಿ ನಾವರಿಯೆವು. ರತ್ನಪರೀಕ್ಷಕರ ಪರಿಜ್ಞಾನ ಪರಿಮಿತಿಗೆ ಸೇರಿದ ಮಾತದು. ಆದರೂ ಒಂದು ಮಾತನ್ನು ಇಲ್ಲಿ ಹೇಳದಿರಲಾರೆವು. ಶಿವಯೋಗಿ ಶಿವಾಚಾರ್ಯನಿಂದೀಚೆಗೆ ಶ್ರೀಶೈಲ ಶಿಲೆಗೆ ಹೆಚ್ಚಳಿಕೆ ಬಂದಿದೆ. ಇದರಲ್ಲಿ ಒಂದು ಮೂಲಗುಣವಿದೆ. ತಾಮ್ರ, ಹಿತ್ತಾಳೆ, ಸ್ಟೀಲ್ ಪಾತ್ರೆಗಳಿಗಿಂತ ಅಡುಗೆಗೆ ಶ್ರೇಷ್ಠವಾದವುಗಳೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದರಂತೆ ಸ್ಫಟಿಕ, ಸೂರ್ಯಕಾಂತ, ಚಂದ್ರಕಾಂತ ಶಿಲೆಗಳಿಗೆಲ್ಲ ಮೂಲಶಿಲೆಯಾದ ಮೂಲಧಾತು ವಾದ ಕಾಡು ಕಲ್ಲಿನಲ್ಲಿ ಹೆಚ್ಚು ಗುಣಗಳಿರಬೇಕು. ಚೈತನ್ಯಧಾರಕ ಶಕ್ತಿಯಿರ ಬೇಕು.

ಎರಡನೆಯದಾಗಿ ಶಿವನಿಗೆ ಸ್ಫಟಿಕಾದಿ ರತ್ನಗಳ ಮೇಲೆ ಆಸೆಯಿಲ್ಲ. ಅಂತೆಯೇ ಆತನನ್ನು ಆರಾಧಿಸುವ ಶಿಷ್ಯನಿಗೂ ಅವುಗಳ ಮೇಲೆ ಅಸೆ ಅಂಕುರಿಸ ಬಾರದು. ಅಲ್ಲದೆ ಇತರ ಮಾನವರಿಗೆ ಕದ್ದೊಯ್ಯುವ ಕೆಟ್ಟಗುಣ ಹುಟ್ಟ ಬಾರದು. ಸ್ಫಾಟಿಕಾದಿಗಳು ಪೀಠಿಕೆಯನ್ನು ಉಪಯೋಗಿಸಿದರೆ ಕಳ್ಳರ ಕಾಟ ತಪ್ಪಿದ್ದಲ್ಲ. ಕಾರಣ ಶಿಲೆಗಳಲ್ಲಿ ಶ್ರೇಷ್ಠವಾದ ಶ್ರೀಶೈಲ ಶಿಲೆಯನ್ನೇ ಉಪಯೋ ಗಿಸುವುದು ಉತ್ತಮ. ಚಿತ್ಕ್ರಿಯಾತ್ಮಕ ಚೈತನ್ಯವನ್ನು ಸದ್ರೂಪದಲ್ಲಿರಿಸಲು ಶೈಲಜ ಶಿಲೆಯೆ ಸರ್ವೋತ್ತಮವೆಂದು ತಿಳಿದು ಶ್ರೀಗುರುವು ಶಿಲಾಪೀಟಿಕೆಯನ್ನೇ ತನ್ನ ಮುಂದಿನ ಕಾರ್ಯಕ್ಕಾಗಿ ತೆಗೆದುಕೊಳ್ಳಬೇಕು. 'ಶೈಲಜಂ ಲಿಂಗ ಮೇಕಂ ಸಮಾಹರೇತ್' ಎಂದೇ ಹೇಳಬೇಕು. ಮತ್ತು ಸ್ಫಟಿಕದಂತೆ ಶುದ್ಧ ವಾದ ಶೈಲಜಂ ಲಿಂಗಂ ಎಂದು ಹೇಳಬೇಕು. ಸ್ಫಾಟಿಕಂ ಪದಶೈಲಜಂ ಎಂಬು ದಕ್ಕೆ ವಿಶೇಷಣವಾಗಿಸೆ. ಇದರಿಂದ ಕವಿಯೂ ಶೈಲಜ ಲಿಂಗಕ್ಕೆ ಪ್ರಾಶಸ್ತ್ಯವ ನ್ನಿತ್ತಂತಾಗುತ್ತದೆ.

'ಪೀಠಮೇಕಂ ಸಮಾಹರೇತ್' ಎಂದು ಹೇಳದೆ 'ಲಿಂಗಮೇಕಂ ಸಮಾಹ ರೇತ್' ಎಂದು ಹೇಳಿದಾರೆ. ಹೀಗೆ ಹೇಳುವಲ್ಲಿ ಅರ್ಥವಿದೆ. ಸಾಕಾರಲಿಂಗವಾ ಗುವ ಆಕೃತಿಯನ್ನು ತಳೆದಿರುವುದಲ್ಲವೆ ಶ್ರೀಗುರುವಿನಿಂದ ಅಷ್ಟವಿಧ ಪೂಜಾ

ಸಂಸ್ಕಾರವನ್ನು ಆಗಲೇ ಪಡೆದಿದೆ. ಶೈವೀಕಲೆಯನ್ನು ಇರಿಸಿಕೊಳ್ಳುವ ಶಕ್ತಿ ಸಂಪನ್ನವಾಗಿದೆ. ಇಂದೇ ಶಾಲೆಗೆ ಬಂದ ಇನ್ನೂ ವಿದ್ಯೆಯನ್ನು ಆರ್ಜಿಸದ ಆರ್ಜಿಸುವ ಅಪೇಕ್ಷೆ ಮಾತ್ರವುಳ್ಳ ಹುಡುಗನಿಗೆ 'ವಿದ್ಯಾರ್ಥಿ'ಯೆಂದೇ ಹೇಳು ವಂತೆ ಲಿಂಗದ ಪೂರ್ವಭಾವೀ ಸಂಸ್ಕಾರಗಳನ್ನು ಪಡೆದುದರಿಂದ ಲಿಂಗಮೆಕಂ ಎಂದು ಉಪಯೋಗಿಸಲಾಗಿದೆ.

ಇನ್ನು 'ಬಾಣ' ಪದಪ್ರಯೋಗವು ಸಾಂಕೇತಕವಾಗಿದೆ. ಶಬ್ದಾರ್ಥವುಳ್ಳ 'ವಣ' ಧಾತುವಿನಿಂದ ವಾಣ, ಬಾಣ ಎಂದಾಗಿದೆ. ಶರ, ಸರಳು, ಹಸುವಿನ ಮೊಲೆ, ರವಿ, ಮುಗಿಲು, ನೀಲವರ್ಣ, ಬಾಣಾಸುರ, ಬಾಣಕವಿ, ಲಿಂಗ ಪೀಠದ ಮೇಲಿನ ಗೋಳಕ-ಎಂಬುದಾಗಿ ಅರ್ಥಗಳಿವೆ. ಇಲ್ಲಿ ಕವಿ ನರ್ಮದಾ ನದಿಯಲ್ಲಿ ಹುಟ್ಟುವ ಲಿಂಗಕ್ಕೆ 'ಬಾಣಂ' ಎಂದು ಸಾಂಕೇತಕವಾಗಿ ಪ್ರಯೋಗಿಸಿ ದ್ದಾನೆ. ವಿಂಧ್ಯಾಚಲದ ಪ್ರತ್ಯಂತ ಪ್ರದೇಶದಲ್ಲಿ ನರ್ಮದೆ ಉದಿಸಿದೆ. ಅದ ರೊಳಗೊಂದು ಓಂಕಾರ ಕುಂಡವಿದೆ. ಆ ಕುಂಡದೊಳಗೆ ಯುಗವೊಂದಕ್ಕೆ ಶತಕೋಟಿ ಶಿವಲಿಂಗಗಳು ಹುಟ್ಟುತ್ತವೆಯಂತೆ! ಅವು ಚಂದ್ರಕಲೆಯಿಂದ ಕೂಡಿ ಸಲ್ಲಕ್ಷಣವಾಗಿರುತ್ತವೆಯೆಂದು ಅವನ್ನು ಚಿರಕೃತ ಸುಕೃತಿಗಳು ಆರಾಧಿಸುವ ರೆಂದು ಸ್ಮೃತ್ಯಾಗಮ ಪುರಾಣಗಳು ಸಾರುತ್ತಿವೆಯೆಂದು ನಿಜಗುಣರು ತಮ್ಮ ವಿವೇಕ ಚಿಂತಾಮಣಿಯಲ್ಲಿ ಹೇಳಿದ್ದಾರೆ. ನರ್ಮದಾ ನದಿಯಲ್ಲಿ ತಯಾರಾದ ಲಿಂಗಕ್ಕೆ 'ಬಾಣಂ' ಎಂದು ಪ್ರಯೋಗಿಸಲಾಗಿದೆ. ಇದಕ್ಕಿಂತ ಹಿಂದೆ ಹೇಳಿ ದಂತೆ ಸ್ಫಟಿಕದಂತೆ ಶುಭ್ರವಾದ ಶೈಲಜವೇ ಶ್ರೇಷ್ಠವೆಂಬುದನ್ನು ಮರೆಯು ಬಾರದು.

'ಶ್ರೀಶೈಲಜಂ ಮಹಾದೇವಿ ಹ್ಯೈಹಿಕಾಮುಷ್ಮಿಕಪ್ರದಂ ।
ಸರ್ವೋತ್ತಮೋತ್ತಮಂ ಲಿಂಗಂ ಸರ್ವಾಭೀಷ್ಟಾರ್ಥದಾಯಕಂ ॥
ಯದ್ದತ್ತಂ ಗುರಣಾ ದೇವಿ ಲಿಂಗಂ ತದಹಮೇವ ಹಿ ।
ಬದರೀ ಫಲಮಾನಂತು ಕೃತಂ ಧರ್ಮಾಭಿವೃದ್ಧಿದಂ ॥
ಕ್ರಮುಕೀ ಫಲಮಾನಂತು ಧರ್ತುಃ ಸರ್ವಾರ್ಥದಾಯಕಂ ।
ಜಂಬೀರ ಫಲಮಾನಂತು ಸರ್ವಕಾಮಾರ್ಥದಾಯಕಂ॥'

ಶ್ರೀಶೈಲ ಶಿಲೆಯ ಲಿಂಗವೇ ಶ್ರೇಷ್ಠವೆಂದು, ಲಿಂಗವು ಬೋರೆ, ಅಡಿಕೆ, ಲಿಂಬೆಹಣ್ಣುಗಳ ಗಾತ್ರದಲ್ಲಿರಬೇಕೆಂದು ಸೂಕ್ಷ್ಮಾಗಮ ಪ್ರಮಾಣಗಳಿವೆ.

'ಸರ್ವಲಕ್ಷಣಸಂಪನ್ನೇ ತಸ್ಮಿನ್ ಲಿಂಗೇ ವಿಶೋಧಿತೇ
ಪೀಠಸ್ಥಿತೇಽಭಿಷಿಕ್ತೇ ಚ ಗಂಧಪುಷ್ಪಾದಿ ಪೂಜಿತೇ ।
ಮಂತ್ರಪೂತೇ ಕಲಾಂ ಶೈವೀಂ ಯೋಜಯೋದ್ವಿಧಿನಾ ಗುರುಃ
ಶಿಷ್ಯಸ್ಯ ಪ್ರಾಣಮಾದಾಯ ಲಿಂಗೇ ತತ್ರ ನಿಧಾಪಯೇತ್॥'

ಪೀಠವು ಲಿಂಗ; ಶೈವೀಕಲೆಯು ಲಿಂಗತ್ವ. ಈ ತರತಮದ ಅರಿವು ಇಲ್ಲಿ ಅಗತ್ಯ. ಪೀಠರೂಪಲಿಂಗವು ಸರ್ವಲಕ್ಷಣ ಸಂಪನ್ನವಾಗಿರಬೇಕು. ಅಂದರೆ ಶಿವಾಗಮ ಶಿಲ್ಪ ಶಾಸ್ತ್ರಕ್ಕೆ ಅನುಸರಿಸಿ ಇರಬೇಕು. ಮತ್ತು 'ಲಿಂಗವೃತ್ತಸಮಂ ಪೀಠಂ ದೀರ್ಘಂ ವಿಸ್ತಾರಮೇವ ಚ । ತದರ್ಧಂ ಗೋಮುಖಂ ಚೈವ ಇತ್ಯೇತ ಲ್ಲಿಂಗ ಪಂಚಕಮ್ ॥ ಲಿಂಗ (ಗೋಳಕ)ದ ಸುತ್ತಳತೆ, ಆ ಸುತ್ತಳತೆಯಷ್ಟೆ ಪೀಠ, ಪೀಠದ ಸುತ್ತಳತೆಯಷ್ಟೆ ಎತ್ತರ, ಎತ್ತರದ ಅಳತೆಯಷ್ಟೆ ಬಿತ್ತರ, ಬಿತ್ತರದ ಅಳತೆಯಷ್ಟೆ ಗೋಮುಖ ಇರಬೇಕು. ಇವು ಲಿಂಗಪೀಠದ ಪಂಚಸೂತ್ರ ಗಳು. ಇವುಗಳಿಂದ ಲಿಂಗಪೀಠವು ಸರ್ವಲಕ್ಷಣ ಸಂಪನ್ನವಾಗುತ್ತದೆ. 'ಪಂಚಸೂತ್ರಕೃತಂ ಲಿಂಗಂ ಧಾರಯೇದ್ವಿಧಿವಚ್ಛುಭಮ್' ಎಂದು ವೀರಶೈವ ಆಚಾರ ಪ್ರದೀಪಿಕೆಯಲ್ಲಿ ಹೇಳಿದೆ. ಮಂತ್ರಗತ ಪಂಚಾಕ್ಷರಗಳೇ ಪಂಚ ಸೂತ್ರಗಳೆಂದು ಪರಿಭಾವಿಸಬೇಕು; ಪ್ರಸಿದ್ಧಿಯೂ ಇದೆ. 'ಪಂಚಾಕ್ಷರ ಸ್ಯೈವ ಸೂತ್ರನಾಮ ಪ್ರಸಿದ್ಧತಃ' ಎಂದಿರುವುದಲ್ಲದೆ '....ಸೂತ್ರಂ ಪಂಚಾಕ್ಷರ ಸ್ತಥಾ' ಎಂದು ಶ್ರೀರೇಣುಕರ ಸುಧಾವಾಣಿಯೇ ಪ್ರಮಾಣವಾಗಿದೆ. 'ಸೂಚ ನಾತ್ಪರಮೇಶಸ್ಯ ಲಿಂಗಂ ಸೂತ್ರಮಿತೀರಿತಮ್' ಎಂದು ಕಿರಣಾಗಮ ಉಕ್ತಿ ಸಾಕ್ಷಿಯಿದೆ.

'ನಕಾರಸ್ತಾರಕ ಸ್ಥಾನಂ ಮಕಾರೋ ದಂಡಮುಚ್ಯತೇ ।
ಶಿಕಾರ; ಕುಂಡಲಾಕಾರೋ ವಾಕಾರಶ್ಚಾರ್ಧಚಂದ್ರಕಃ ।
ಯಕಾರೋ ಬಿಂದುರೂಪೋಯಮೋಂಕಾರಃ ಪಂಚವರ್ಣಕಂಃ'

ಪಂಚಾಕೃತಿಗಳ ರೂಪಾಗಿವೆ ಪಂಚಾಕ್ಷರಗಳು. ಪಂಚಾಕ್ಷರಗಳು ಪ್ರಣವ ದಲ್ಲಿವೆ. ಇವೆಲ್ಲವೂ ಲಿಂಗಪೀಠವಲ್ಲಿವೆ. ಪಂಚಾಕ್ಷರ ಸ್ವರೂಪವೆ ಮತ್ತು ಪ್ರಣವ ಸ್ವರೂಪವೇ ಲಿಂಗಪೀಠವಾಗಿದೆ.

'ನಕಾರಶ್ಚಾದಿಪೀಠಂ ಚ ಮಕಾರೋ ಮಧ್ಯಮೇವ ಚ |
ಶಿಕಾರೋ ವರ್ತುಳಂ ಚೈವ ವಾಕಾರೋ ಗೋಮುಖಂ ತಥಾ |
ಯಕಾರೋ ಬಿಂದುರೇವಂಸ್ಯಾತ್ ಪ್ರಣವೋ ಲಿಂಗಮುಚ್ಯತೇ||'

ಎಂದು ಶಿವತತ್ತ್ವ ರತ್ನಾಕರ ಗ್ರಂಥದಲ್ಲಿ ಸುಸ್ಪಷ್ಟವಾಗಿದೆ.

'ಲಿಂಗಾಧಿಕ್ಯೇ ಭವೇನ್ಮೃತ್ಯುಃ ಶಕ್ತ್ಯಾಧಿಕ್ಯೇ ಧನಕ್ಷಯಂ |
ಲಿಂಗ ಶಕ್ತ್ಯೋಸ್ಸಮತ್ವಂ ಹಿ ಭೋಗಮೋಕ್ಷಫಲಪ್ರದಂ ||'

ಇನ್ನೊಂದು ಮಾತಿನ ವಿಚಾರ ಉಳಿಯಿತು. ಅದೆಂದರೆ 'ಸರ್ವಲಕ್ಷಣ ಸಂಪನ್ನೇ' ಎಂದಿರುವಲ್ಲಿ ಲಕ್ಷಣಪದ ಲಕ್ಷಿತವಾಗಿದೆ. ಸರ್ವಲಕ್ಷಣಗಳೆಂದರೆ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣ ಈ ಪಂಚಲಕ್ಷಣಗಳಿಂದ ಸಂಪನ್ನವಾಗಿರಬೇಕು. ಆಗುವಂತೆ ಎಸಗಿರುತ್ತಾನೆ ಶ್ರೀಗುರು. ಬಳಿಕ ಲಿಂಗವನ್ನು ವಿಶೋಧಿಸುವ ವಿಶುದ್ಧಕ್ರಮವಿದು:

ಪರಮಾಚಾರ್ಯನು ಮಂಟಪದ ಉತ್ತರ ಭಾಗದಲ್ಲಿ ಭೂಮಿಯಲ್ಲಿ ಒಂದು ಪೀಠದ ಮೇಲೆ ಲಿಂಗವನ್ನಿರಿಸಿ ಶುದ್ಧೋದಕದಿಂದ ಮಜ್ಜನಮಾಡಿ ವಿಭೂತಿ, ಗಂಧಾಕ್ಷತೆ, ಪತ್ರಪುಷ್ಪ, ಧೂಪದೀಪ, ಛತ್ರಚಾಮರ, ನೈವೇದ್ಯಾದಿಗಳಿಂದ ಪೂಜಿಸಿ ಪಂಚಾಕ್ಷರಮಂತ್ರ ಜಪದಿಂದ ಪರಿಶುದ್ಧಗೊಳಿಸಬೇಕು. ಮತ್ತೆ ಲಿಂಗವನ್ನು ಜಲಾಧಿವಾಸ ಮಾಡಿಸಬೇಕು. ಅಂದರೆ ಗೋಮೂತ್ರ, ಗೋಮಯ, ಗೋಕ್ಷೀರ, ಗೋದಧಿ, ಗೋಘೃತಗಳೆಂಬ ಪಂಚಗವ್ಯಗಳನ್ನು ಒಂದು ಪಾತ್ರೆಯಲ್ಲಿ ಹಾಕಿ ಅದಕ್ಕೆ ಮಂತ್ರೋದಕ ಭಸ್ಮೋದಕ ಪಾದೋದಕಗಳನ್ನು ಮಿಶ್ರಮಾಡಿ ಆ ಜಲದಲ್ಲಿ ಲಿಂಗವನ್ನಿರಿಸಿ ನೂರೆಂಟುವೇಳೆ ಶ್ರೀಗುರು ಶಿವಮಂತ್ರವನ್ನು ಜಪಿಸಿ ಬಳಿಕ ಆ ಜಲದಿಂದ ಲಿಂಗವನ್ನು ತೆಗೆದು ಶುದ್ಧೋದಕದಿಂದ ಅಭಿಷೇಕಮಾಡಿ ಅಷ್ಟವಿಧಾರ್ಚನೆಯಿಂದ ಅರ್ಚಿಸಬೇಕು. ಬಳಿಕ ಮತ್ತೊಂದು ಪವಿತ್ರಸ್ಥಳದಲ್ಲಿ ಏಳುಮೊಳದ ಹೊಸಬಟ್ಟೆಯನ್ನು ಏಳೆಂಟು ಮಡಿತೆಮಾಡಿ ಹಾಸಿ ಅದರ ಮಡಿತೆಗಳಲ್ಲಿ ನವಧಾನ್ಯಗಳನ್ನಿರಿಸಿ ಅದರಲ್ಲಿ ಲಿಂಗವನ್ನು ಪವಡಿಸಿಸಿ ಶ್ರೀಗುರು ಪ್ರಾಣಾಯಾಮವನ್ನುಮಾಡಿ ಪೂಜಿಸಿ ಆ ಧಾನ್ಯಶಯನದಿಂದ ಲಿಂಗಮೂರ್ತಿಯನ್ನು ಎಚ್ಚರಿಸಿ ಎಡದ ಹಸ್ತಕ್ಕೆ ತೆಗೆದುಕೊಂಡು ಮರಳಿ ಅಭಿಷೇಕಾರ್ಚನೆಗಳನ್ನು ಮಾಡಿ ಒಂದು ತಟ್ಟೆಯಲ್ಲಿ ಅಕ್ಕಿಯನ್ನು

ಹಾಕಿ ಅದರ ಮೇಲೆ ಪ್ರಣವವನ್ನು ಬರೆದು ಅದರಲ್ಲಿ ಲಿಂಗವನ್ನಿರಿಸಬೇಕು. ಶ್ರೀಗುರು ತನ್ನ ಬಲಗೈ ದರ್ಭೆಯಿಂದ ಲಿಂಗದ ಕೆಳಪೀಠವನ್ನು ಮುಟ್ಟಿ ಅನಾಶ್ರಿತ ಭುವನ ಮೊದಲಾಗಿ ಕಾಲಾಗ್ನಿರುದ್ರ ಭುವನಾಂತ್ಯವಾದ ಇನ್ನೂರಿ ಪ್ಪತ್ತುನಾಲ್ಕು ಭುವನನ್ಯಾಸವನ್ನು ಆಚರಿಸಬೇಕು. ನಂತರ ಕೆಳಪೀಠದ ಮೇಲಿನ ಭಾಗವನ್ನು ಮುಚ್ಚಿ ವ್ಯೋಮವ್ಯಾಪಿಪದಾದಿ ಓಂಕಾರ ಪದಾಂತ ಎಂಬ ತ್ತೊಂದು ಪದನ್ಯಾಸವನ್ನು ಮಾಡಬೇಕು. ಆಮೇಲೆ ಲಿಂಗದ ಮಧ್ಯಭಾಗ ವನ್ನು ಸ್ಪರ್ಶಿಸಿ ಅಂಕಾರಾದಿ ಹ್ರಾಂಕಾರಾಂತ ಐವತ್ತೊಂದು ವರ್ಣನ್ಯಾಸವನ್ನು, ಲಿಂಗದ ಮೇಲು ಪೀಠದ ಕೆಳಭಾಗವನ್ನು ಸ್ಪರ್ಶಿಸಿ ನಿವೃತ್ಯಾದಿ ಶಾಂತ್ಯತೀ ತೋತ್ತರಾಂತ್ಯ ಆರು ಕಲಾನ್ಯಾಸವನ್ನು, ಲಿಂಗದ ಮೇಲು ಪೀಠವನ್ನು ಮುಚ್ಚಿ ಶಿವಾದಿ ಪೃಥಿವ್ಯಂತ ಮೂವತ್ತಾರು ತತ್ತ್ವನ್ಯಾಸವನ್ನು, ಲಿಂಗದ ಬಾಣವನ್ನು ಮುಟ್ಟಿ ಹೃದಯಾದಿ ಪರಶಿವಾಂತ ಹನ್ನೆರಡು ಮಂತ್ರನ್ಯಾಸವನ್ನು ಆಚರಿಸಿ ಷಡಧ್ವಶುದ್ಧಿಯನ್ನು ಮಾಡಿ ಲಿಂಗವನ್ನು ವಿಶೋಧಿಸಬೇಕು. ಇದು ಲಿಂಗ ಷಡಧ್ವ ಸಂಸ್ಕಾರ. ಈ ರೀತಿ ವಿಶುದ್ಧವಾದ ಲಿಂಗದಲ್ಲಿ ಶ್ರೀಗುರು ಶಿಷ್ಯನ ಶೈವೀ ಕಳೆಯನ್ನು ತನ್ನ ಯೋಗಶಕ್ತಿಯಿಂದ ಶಿಷ್ಯನ ಪ್ರಾಣದೊಡನೆ ತಂದು ಲಿಂಗ ದಲ್ಲಿ ಸ್ಥಾಪಿಸಬೇಕು. ಲಿಂಗದಲ್ಲಿ ಪ್ರಾಣ, ಪ್ರಾಣದಲ್ಲಿ ಲಿಂಗ ಎರಕಗೊಳ ಬೇಕು.

> 'ಲಿಂಗಂ ಹಸ್ತೇ ಗೃಹೀತ್ವಾತು ಭಾವದೃಷ್ಟ್ಯಾ ಚ ದೇಶಿಕಃ |
> ಸಂಸ್ಥಾಪ್ಯ ಲಿಂಗಂ ಶಿಷ್ಯಸ್ಯ ಮಸ್ತಕಸ್ಥಾಂ ಕಲಾಂ ಪರಾಂ |
> ಲಿಂಗೇಪ್ರಾಣಾನ್ ಪ್ರನಿಕ್ಷಿಪ್ಯ ಪ್ರಾಣೇ ಲಿಂಗಂ ವಿಕ್ಷಿಪೇತ್ |
>
> —ಸೂಕ್ಷ್ಮಾಗಮ.

> 'ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ |
> ನೀವಾರ ಶೂಕವತ್ತನ್ವೀ ಪೀತಾಭಾಸ್ವತ್ಯಣೂಪಮಾ |
> ತಸ್ಯಾಃ ಶಿಖಾಯಾಮಧ್ಯೇ ಪರಮಾತ್ಮಾ ವ್ಯವಸ್ಥಿತಃ |'

'ಸ ಓಂಕಾರೋ ಯ ಓಂಕಾರಃ ಸಃ ಪ್ರಣವೋ ಯಃ ಪ್ರಣವಃ ಸಃ ಸರ್ವವ್ಯಾಪೀ ಸೋಽನಂತೋಯೋಽನಂತಃ, ತತ್ತಾರಂ ಯತ್ತಾರಂ, ತತ್ಸೂಕ್ಷ್ಮಂ

ಯತ್ಸೂಕ್ಷ್ಮಂ, ತ ಚ್ಛುಕ್ಲಂ ಯಚ್ಛುಕ್ಲಂ, ತದ್ವೈದ್ಯುತಂ ಯದ್ವೈದ್ಯುತಂ, ತತ್ಪರಂ ಬ್ರಹ್ಮ ಸ ಏವ ಸ ಏಕೋ ರುದ್ರಃ ಸ ಈಶ್ವರಃ ಸ ಭಗವಾನ್ ಸ ಮಹೇಶ್ವರಃ ಸ ಮಹಾದೇವಃ'

'ಜ್ವಲತ್ಕಾಲಾನಲಾಭಾ ಸಾ ತಟಿತ್ಕೋಟಿ ಸಮಪ್ರಭಾ
ತಸ್ಯೋರ್ಧ್ವಂ ಚ ಶಿಖಾಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ ।
ಯಥಾ ಕಲಾ ತಥಾ ಭಾವೋ ಯಥಾ ಭಾವಸ್ತಥಾ ಮನಃ
ಯಥಾ ಮನಸ್ತಥಾ ದೃಷ್ಟಿರ್ಯಥಾ ದೃಷ್ಟಿಸ್ತಥಾ ಸ್ಥಲಂ ।
ಸಾಕ ಲಾ ಪರಮಾ ಸೂಕ್ಷ್ಮಾ ತತ್ತ್ವನಾಂ ಬೋಧಿನೀ ಪರಾ ।'

'ಅಯ್ಯಾ, ಎನ್ನ ಹೃದಯುದಲ್ಲಿ ನ್ಯಸ್ತವಾಗಿಹ ಪರಮಚಿದ್ಬೆಳಗೇ' ಹಸ್ತಮಸ್ತಕ ಸಂಯೋಗದಿಂದ ಒಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ ! ಅಯ್ಯಾ, ಎನ್ನ ಮಸ್ತಕದೊಳಗೊಂದು ಗೂಡಿದ ಮಹಾಬೆಳಗ ತಂದು ಭಾವದೊಳಗೆ ಇಂಬಿಟ್ಟರಲ್ಲಾ ! ಅಯ್ಯಾ, ಭಾವದೊಳಗೆ ಕೂಡಿದ ಮಹಾ ಬೆಳಗ ತಂದು ಕಂಗಳೊಳಗಿಂಬಿಟ್ಟೆರಲ್ಲಾ ! ಅಯ್ಯಾ, ಎನ್ನ ಕಂಗಳೊಳಗೆ ಕೂಡಿದ ಮಹಾಬೆಳಗ ತಂದು ಕರಸ್ಥಲದೊಳಗಿಂಬಿಟ್ಟೆರಲ್ಲಾ ! ಅಯ್ಯಾ, ಎನ್ನ ಕರಸ್ಥಲದೆ ಥಳಥಳಿಸಿ ಬೆಳಗಿ ಹೊಳೆಯುತ್ತಿಪ್ಪ ಅಖಂಡ ತೇಜವನೆ ಇಷ್ಟಲಿಂಗ ವೆಂಬ ದೃಷ್ಟವ ತೋರಿ, ನಿಶ್ಚಯದ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ ! ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಮಂತ್ರದೊಳಗೆ ನೀವು ನಿಂದು ಮಹತ್ವವ ಹುದುಗಿದಿರಲ್ಲಾ ! ಅಯ್ಯಾ, ಎನ್ನ ಆರಾಧ್ಯ ಕೂ. ಸಂ. ದೇವಾ, ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ !'

'ಸಕಲವೆಲ್ಲ ಲಿಂಗದೊಳಗೆ ತೋರಿದನು. ಆ ಲಿಂಗದ ಬೆಳಗ ಸಕಲದೊಳಗೆ ತೋರಿದನು. ಎನ್ನ ಮನಕ್ಕೆ ಅತಿಶಯುವಾಗಿ ತೋರಿ ತೋರಿ ರಕ್ಷಿಸಿದನು. ಎನ್ನೊಳಗೆ ತನ್ನ ತೋರಿದನು. ತನ್ನೊಳಗೆ ಎನ್ನ ತೋರಿದನು. ಮತ್ತೆ, ಎರಡನೇಕ ಮಾಡಿ, ಎನ್ನೊಳಗೆ ಗುಹೇಶ್ವರನಾದನು. ಹೊರಗೆ ಮಹಾಲಿಂಗವಾಗಿ ನಿಂದನು ಶ್ರೀಗುರುವು.'

ಮೇಲೆ ಉದಹರಿಸಿದ ಆಗಮ ಮತ್ತು ಆದ್ಯರ ವಚನಗಳು ಶ್ರೀಗುರು ಶಿಷ್ಯನಲ್ಲಿ ಶೈವೀಕಲೆಯನ್ನು ಯೋಜಿಸಿದ ವಿಷಯದಲ್ಲಿ ವಿವರವಾದ ಸಾಕ್ಷಿಗಳಾ

ಗಿವೆ. ಶ್ರೀಗುರು ಶಿಷ್ಯನ ಮಸ್ತಕದಲ್ಲಿ ಮಂತ್ರೋದಕ ಮತ್ತು ಶ್ರೀಗಂಧಮಿಶ್ರ ಭಸ್ಮದಿಂದ ಅಯ್ದು ಕೋಣಾಕೃತಿಯ ಬರೆದು ಅದರಲ್ಲಿ ಅಯ್ದಕ್ಕರಗಳನ್ನು ಸಂಪುಟಗೊಳಿಸಿ ನಡುವೆ ಓಂಕಾರ ಸಂಬಂಧಿಸಿ ಅರ್ಚಿಸಿ ಹಸ್ತವನ್ನು ಸ್ಪರ್ಶಿಸಿ ಶಿಷ್ಯನ ಕಣ್ಣಲ್ಲಿ ಕಣ್ಣನ್ನು ಮನದಲ್ಲಿ ಮನವನ್ನು ಭಾವದಲ್ಲಿ ಭಾವವನ್ನು ಬೆರಸಲು ಶಿಷ್ಯನ ಸುಷುಮ್ನೆಯೊಳಗೆ ಉನ್ಮನವು ಉದ್ದೀಪಿತವಾಗುತ್ತದೆ. ಚಿನ್ಮಯ ಶಿವಕಳೆಯು ಸಾಕ್ಷಾತ್ತಾಗಿ ಸ್ಫುರಿಸುತ್ತದೆ. ಅದನ್ನು ಆಚಾರ್ಯನು ಅಂಕುಶ ಮುದ್ರೆಯಿಂದ ಆಕರ್ಷಿಸಿ ಭ್ರೂಮಧ್ಯಕ್ಕೆ ತಂದು ಅಲ್ಲಿ ಬೆಳಗು ರೂಪಾಗಿ ಭಾವಿಸಿ ಭಾವಲಿಂಗವನ್ನಾಗಿಸುವುದು, ಅಲ್ಲಿಂದ ಹೃದಯ (ಎದೆಗೆ)ಕ್ಕೆ ತಂದು ಅಲ್ಲಿ ಕಿರಣ ರೂಪಾಗಿ ಸಕಲ ನಿಷ್ಕಲವಾಗಿ ನಿಯೋಜಿಸಿ ಪ್ರಾಣಲಿಂಗವನ್ನಾಗಿಸುವುದು. ಅಲ್ಲಿಂದ ಕರಸ್ಥಲದಲ್ಲಿರುವ ಪೀಠಿಕೆಯಲ್ಲಿ ಪ್ರದೀಪ ರೂಪವಾಗಿ ಸಕಲವಾಗಿ ಕ್ರಿಯಾತ್ಮಕವಾಗಿ ಇಷ್ಟಲಿಂಗವನ್ನಾಗಿ ಸ್ಥಾಪಿಸುವುದು. 'ಏತತ್ ಸೋಮಸ್ಯ ಸೂರ್ಯಸ್ಯ ಸರ್ವಲಿಂಗ್ಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ ಎಂಬ ಶ್ರುತಿಮಾತವನ್ನು ಸಾರ್ಥಕಗೊಳಿಸುವುದು.

'ತಲ್ಲಿಂಗಂ ತಸ್ಯ ತು ಪ್ರಾಣೇ ಸ್ಥಾಪಯೇದೇಕಭಾವತಃ
ಏವಂ ಕೃತ್ವಾ ಗುರುರ್ಲಿಂಗಂ ಶಿಷ್ಯಹಸ್ತೇ ನಿಧಾಪಯೇತ್ ।'

'ತಲ್ಲಿಂಗಂ' ಎಂಬ ತತ್ತ್ವವಾಣಿಯನ್ನು ತಳಸೋಸಿ ತಿಳಿಯಬೇಕು. ತತ್ ಆ ಶೈವೀ ಸಚ್ಚಿತ್ಕಳೆಯೇ ಲಿಂಗವು. ಕಲ್ಲು ದೇವರೆಂದು ಕುಲ್ಲು ನುಡಿವವರು ಕಣ್ದೆರೆಯಬೇಕು. ಮನಗಾಣದೆ ಮನಬಂದಂತೆ ಮಾತನಾಡಬಾರದು.

'ಸಂತೆಯೊಳಗಿದ್ದ ಕಲ್ಲುಗಳೆಲ್ಲ ಲಿಂಗವೇನೋ ಅಯ್ಯಾ ? ಪರ್ವತ ವಾರಣಾಸಿ ಬದರಿಕಾ ಕ್ಷೇತ್ರಗಳಲ್ಲಿದ್ದ ಕಲ್ಲುಗಳೆಲ್ಲಾ ಲಿಂಗವೇನೋ ಅಯ್ಯಾ ? ಅಂತಕಾಂತಕ ಶ್ರೀಗುರು ಮೂರ್ತಿಯು ತನ್ನ ರೂಹಿನ ರೂಪುಮಿಂತೆಂದು ತೋರಿದ ನಿಜಕಲ್ಲೇ ನಿಜಲಿಂಗ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

'ಕಟೆದ ಕಲ್ಲು ಲಿಂಗವೆಂದೆನಿಸಿತ್ತು. ಕಟೆಯದ ಕಲ್ಲು ಕಲ್ಲು ಕಲ್ಲೆನಿಸಿತ್ತು. ಪೂಜಿಸಿದ ಮಾನವ ಭಕ್ತನೆನಿಸಿದನು. ಪೂಜಿಸದ ಮಾನವ ಮಾನವನೆನಿಸಿದನು. ಕಲ್ಲಾದರೇನು ? ಪೂಜೆಗೆ ಫಲವಾಯಿತ್ತು. ಮಾನವನಾದರೇನು ?

ಭಕ್ತಿಗೆ ಕಾರಣಿಕನಾದನು. ಕಲ್ಲು ಲಿಂಗವಲ್ಲ. ಲಿಂಗ ಕಲ್ಲಲ್ಲ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

'ಗಟ್ಟಿಹಿಡಿದು ಗೊತ್ತು ಮುಚ್ಚಬಾರದಯ್ಯ. ನೀರಲ್ಲಿಯ ಕ್ರೀಡೆ ಕುಂಬಳಕಾಯಿಗಲ್ಲದೆ ದೊಡ್ಡ ಬಂಡೆಗುಂಟೇನಯ್ಯ ? ಚರಿಸುವ ಜೀವಿಗೆ ನಿರ್ವಯಲ ಪರವಸ್ತು ಲಿಂಗವಲ್ಲದೆ ಪಾಷಾಣಮಯ ಲಿಂಗವೆ ಅಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ ? '

ಸಿದ್ಧರಾಮೇಶ್ವರನ ಈ ಸಮರ್ಥನೆಯ ತ್ರಿವಿಧ ವಚನಗಳಿಂದ ಕಲ್ಲೊಳಗಿರುವ ಕಳೆಯು ಲಿಂಗವಲ್ಲದೆ ಕಲ್ಲು ಲಿಂಗವಲ್ಲ. ಅಲ್ಲದೆ ಆ ಕಳೆಯು ಹಿಡಿದಿರುವ ಶಿಲೆಯು ಕಾಡ ಶಿಲೆಯಂತೆ ಜಡವಲ್ಲ, ಎಂಬುದು ಎರಕವಾಗುತ್ತದೆ.

ಆ ಪರಶಿವನು ತನ್ನಂಶವಾದ ಜೀವಾತ್ಮನನ್ನು ಈ ಮೂಳೆಮಾಂಸಗಳಲ್ಲಿರಿಸಿದರೆ ಶ್ರೀಗುರುವು ಶಿಷ್ಯನೊಳಗಿರುವ ಶಿವಕಳೆಯನ್ನು ಶಿಲೆಯಲ್ಲಿ ನೆಲೆ ನಿಲ್ಲಿಸುತ್ತಾನೆ. ಜೀವಕಳೆ ಇರುವವರೆವಿಗೂ ಮೂಳೆ ಮಾಂಸಾದಿಗಳುಳ್ಳ ದೇಹವು ಜಡವಲ್ಲ, ಬಿಡಬೇಕಾದುದಲ್ಲ. ಇದರಂತೆ 'ಅಯಂ ಮೇ ಹಸ್ತೋ ಭಗವಾನ್, ಅಯಂ ಮೇ ಭಗವತ್ತರಂ, ಅಯಂ ಮೇ ವಿಶ್ವಭೇಷಜಃ । ಅಯಂ ಶಿವಾಭಿಮರ್ಶನಃ । ' ಎಂದು ಶ್ರೀಗುರುವು ಧ್ಯಾನಿಸಿ ತನ್ನ ಹಸ್ತದಂತೆ ಇಂದಿನಿಂದ ಶಿಷ್ಯನ ಹಸ್ತವೂ ಪವಿತ್ರವೂ ಪರಮ ತೇಜೋಮೂರ್ತಿಯಾದ ಲಿಂಗವನ್ನು ಧರಿಸಿ ಪೂಜಿಸಲು ಸಮರ್ಥವೂ ಎಂದು ಭಾವಿಸಿ ಭಾವಿಸಿದಂತೆ ಪಾವನಗೊಳಿಸಿ ಪೂಜಿಸಲು ಯೋಗ್ಯವಾದುದನ್ನಾಗಿಸಿ ಶಿಷ್ಯನ ಕರಸ್ಥಲಕ್ಕೆ ಕರುಣಿಸಿದ ಇಷ್ಟಲಿಂಗವು ತ್ಯಾಜ್ಯವಲ್ಲ. ತನ್ನ ಪ್ರಾಣಕ್ಕೆ ಭಿನ್ನವಲ್ಲ. ಲಿಂಗದಲ್ಲಿ ಪ್ರಾಣವನ್ನು ಪ್ರಾಣದಲ್ಲಿ ಲಿಂಗವನ್ನು ಶ್ರೀಗುರು ಸ್ಥಾಪಿಸಿ ಅದ್ವಯಗೊಳಿಸಿದ್ದಾನೆ. ಅದ್ವಯಗೊಳಿಸಿ ಹಸ್ತಕ್ಕೆ ದಯಪಾಲಿಸಿದ್ದಾನೆ.

'ಲಿಂಗವೇ ಪ್ರಾಣ. ಪ್ರಾಣವೇ ಲಿಂಗವಾಯಿತ್ತು. ಅಂಗ ಲಿಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ'

'ತನುವಿನಲ್ಲಿಪ್ಪುದು ಇಷ್ಟಲಿಂಗವೆಂಬರು. ಆತ್ಮನ ನೆನಹಿನಲ್ಲಿಪ್ಪುದು ಪ್ರಾಣಲಿಂಗವೆಂದೆಂಬರು. ಇಂತೀ ಘಟಾತ್ಮಕ್ಕೆ ಉಭಯ ಲಿಂಗವುಂಟೆ ? ಹೊರಗಣ ಅಸ್ಥಿ ಚರ್ಮಕ್ಕೆ ಬೇರೊಂದು ಅಸುವ ಕಲ್ಪಿಸಬಹುದೆ ? ಒಳಗಣ

ಕರಳು ಮಜ್ಜೆ ಮಾಂಸಕ್ಕೆ ಬೇರೊಂದು ಅಸುವಿನ ಕಲೆಯುಂಟೆ? ಇದಕ್ಕೆ ದೃಷ್ಟವ ಕಂಡಡೆ ಇಷ್ಟಪ್ರಾಣಲಿಂಗವೆಂಬುದಕ್ಕೆ ಕಟ್ಟು. ಅದು ಚೇತನವಪ್ಪುದೊಂದು ಸಾವಯುವ, ಚೇತನವಪ್ಪುದೊಂದು ನಿರವಯುವ; ಸಾವಯುವ ನಿರವಯುವದೊಳಡಗಿ ಕುರುಹಾದ ಭೇದ ಆ ಕಾಯದ ಒಳಹೊರಗಿನ ನೋವಿನ ಭೇದದಂತೆ, ಉಭಯುವನರಿದಾತ್ಮ ಒಂದೇ ಆಗಿ ಕಾಯದ ಇಷ್ಟವೆಂದು, ಆತ್ಮನ ಅರಿವೆಂದು ಎರಡೆನಿಸುವ ಲಿಂಗವೆಂಬುದೊಂದು ಕುರುಹಿಲ್ಲ. ಅದು ಏಕಮೇವ ಸ್ವರೂಪು. ಅದು ಘಟ ಮಠದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನ ಪರಿಯಂತೆ; ಎನ್ನಯ್ಯ ಪ್ರಿಯ ಇಮ್ಮಡಿ ನಿಷ್ಕಳಂಕ ಮಲ್ಲಿಕಾರ್ಜುನ ಲಿಂಗವು ಅತ್ಯತಿಷ್ಠದ್ದಶಾಂಗುಲನಾಗಿಪ್ಪನು.’

‘ಇಷ್ಟಲಿಂಗದ ಪೀಠದಲ್ಲಿ ಆಚಾರಲಿಂಗ, ಕಟೆಯಲ್ಲಿ ಗುರುಲಿಂಗ, ವರ್ತುಳದಲ್ಲಿ ಶಿವಲಿಂಗ, ಗೋಮುಖದಲ್ಲಿ ಜಂಗಮಲಿಂಗ, ನಾಳದಲ್ಲಿ ಪ್ರಸಾದಲಿಂಗ, ಮಸ್ತಕದಲ್ಲಿ ಮಹಾಲಿಂಗವು. ಆಚಾರಲಿಂಗದರಿವು ಗಂಧ, ಗುರುಲಿಂಗದರಿವು ರಸ, ಶಿವಲಿಂಗದರಿವು ರೂಪು, ಜಂಗಮಲಿಂಗದರಿವು ಸ್ಪರ್ಶನ, ಪ್ರಸಾದಲಿಂಗದರಿವು ಶಬ್ದ, ಮಹಾಲಿಂಗದರಿವು ಸರ್ವೇಂದ್ರಿಯವು. ಇಂತು ಇಷ್ಟಲಿಂಗದಲ್ಲಿ ಆರು ಸ್ಥಾನಂಗಳಿರ್ಪವು.

‘ಚೌಪೀಠದ ಮಂಟಪದಲ್ಲಿ ಗುರು ಕುಳ್ಳಿರ್ದು ದ್ವಿದಳ ಮಂಟಪದಲ್ಲಿ ಶಿಷ್ಯಂಗೆ ತ್ರಿಕೂಟ ಸ್ಥಾನದ ಲಿಂಗವನುಪದೇಶಿಸಿ ತೋರಿದ ಗುರುಲಿಂಗದೊಳಗಾದನು. ಇದು ಕರಚೋದ್ಯ ನೋಡಾ! ಶಿಷ್ಯಲಿಂಗವ ಗ್ರಹಿಸಿ ಲಿಂಗವಾದ ಪರಿಯನು ಇತರರ್ಗೆ ಅರಿಯಬಹುದೆ? ಜ್ಞಾನೋಪದೇಶದ ಬಗೆಯನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣ ಬಲ್ಲನು.’ ಶ್ರೀಗುರು ಕರುಣವೆಲಿಂಗ.’ ‘ಆಚಾರವೇಲಿಂಗ. ಆಚಾರದರಿವೇ ಗುರು. ಚೈತನ್ಯವೆ ಜಂಗಮ’.

ಇತ್ಯಾದಿ ವಚನಗಳು ಲಿಂಗದ ಸ್ವರೂಪವನ್ನು ಸುಂದರವಾಗಿ ಚಿತ್ರಿಸಿವೆ; ಲಿಂಗ ಪ್ರಾಣ ಶಿಷ್ಯಗುರು ಈ ನಾಲ್ಕು ಬೇರಲ್ಲ. ಬೇರಿದ್ದು ಬೇರಿಲ್ಲದೆ ಬೆರೆದೇಕವಾದ ಭಿನ್ನಾಭಿನ್ನ ವಸ್ತು. ಸಾವಯುವ ನಿರವಯುಗಳೆರಡಕ್ಕೂ ಕವಲಿಲ್ಲ. ಇಷ್ಟಲಿಂಗ ಬರೀಸ್ಥೂಲ ಮಾತ್ರವಲ್ಲ. ಸೂಕ್ಷ್ಮಕಾರಣ ಸ್ವರೂಪವೂ ಸತ್ ಚಿತ್ ಆನಂದಮಯವೂ ಆಗಿದೆ.

'ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ
ಕದಾಚಿತ್ಕುತ್ರ ಚಿದ್ವಾಪಿ ನ ವಿಯೋಜಯ ದೇಹತಃ ।'

ಓ ಶಿಷ್ಯಶಿಶು, ಇದುವೆ ನಿನಗೆ ಪರಮ ಪ್ರೇಮಾಸ್ಪದವಾದ ಪ್ರಾಣಲಿಂಗ. ಪ್ರಾಣರೂಪ ಚೈತನ್ಯದಂತೆ ಧರಿಸು. ಎಂದಿಗೂ ಎಲ್ಲಿಯೂ ಅಂಗದಿಂದ ಅಗಲದಿರು. ಅಗ್ಗದ ಸೊಮ್ಮು. ಅಳಿವುದು ನಿನ್ನ ಹಮ್ಮು. ಅಗಮ್ಯ ಗಮ್ಯವಾಗಿದೆ. ಮಹದ್ವಸ್ತು ಅಣುವಾಗಿ ಅಂಗೈಗೆ ಅಂಗವಿಸಿದೆ; ಸಂಗಡಿಸಿದೆ.

'ತನುವಿನೊಳಗೆ ಲಿಂಗ, ಲಿಂಗದೊಳಗೆ ಪ್ರಾಣವಾಗಿರ್ದು ಬೇರಿಟ್ಟು ನುಡಿವ ಭಿನ್ನ ಜ್ಞಾನಿಗಳಿಗೆ ಲಿಂಗವೆಲ್ಲಿಯದೋ? ಲಿಂಗವಿಲ್ಲವಾಗಿ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಪ್ರಾಣವಿಲ್ಲ, ಪ್ರಪಂಚ ಮುಕ್ತಿ ಇಲ್ಲ ನೋಡಾ! ಇದು ಕಾರಣಭಾವವಳಿದು ನಿನ್ನೊಳತಗಿದೆನು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.'

'ದೇವಭಕ್ತರ ಬಗೆಯು ಬೇರೆಂದರೆ, ಭಕ್ತಿಯ ಬೀಜದ ಅಂಕುರವೆ? ಸತಿಪತಿಯು ಬೇರಾದರೆ, ಪಿಂಡದಂಕುರವೆ? ಭೂಮಿ ಬೀಜ ಬೇರಾದರೆ, ವೃಕ್ಷದಂಕುರವೆ? ಇದು ಕಾರಣ ದೇವಭಕ್ತರಲ್ಲಿ ಬೇರೆಂಬ ಬಗೆಯದೆಂತು ಹೇಳಾ ಕೂಡಲ ಚೆನ್ನಸಂಗಮದೇವಾ?'

'ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿ, ಮನಸ್ಥಲದ ಲಿಂಗ ಮಹಾಸ್ಥಲಕ್ಕೆ ವೇದ್ಯವಾಗಿ, ಮಹಾಸ್ಥಲವೇ ಎನ್ನ ಸರ್ವಾಂಗ ವೇದ್ಯವಾದ ಬಳಿಕ, ಇನ್ನು ಭಿನ್ನಭಾವಕ್ಕೆ ತೆರಹುಂಟೆ ಹೇಳಾ? ಗುಹೇಶ್ವರನೆಂಬ ಪ್ರಾಣಲಿಂಗವು ಬೆರಸಿ ಸಮಧಾತುವಾದ ಬಳಿಕ ಎರಡೆಂಬುದಿಲ್ಲ ನೋಡಾ ಚೆನ್ನಬಸವಣ್ಣ!'

ಈ ವಚನಗಳಿಂದ ಅಂಗಲಿಂಗಗಳ ಅಗಲಿಕೆ ಎರಡು ಬಗೆಯೆಂದು ಅರಿಕೆಯಾಗುತ್ತದೆ. ಒಂದು ದೈಹಿಕ, ಇನ್ನೊಂದು ಭಾವಾತ್ಮಿಕ. ಈ ಎರಡು ಬಗೆಯ ಅಗಲಿಕೆಯು ಶ್ರೀಗುರುವಿನ ಸಂಸ್ಕಾರ ಪಡೆದ ಶಿಷ್ಯನಲ್ಲಿ ಸಂಭವಿಸಬಾರದು. ದೇಹದಿಂದ ಅಗಲಿದರೂ ದೋಷ. ಮನದಲ್ಲಿ ನೆನೆಯದಿದ್ದರೂ ದೋಷ. ಧಾರಣ ಧ್ಯಾನಗಳೆರಡರಲ್ಲಿ ಚ್ಯುತಿಯುಂಟಾಗಬಾರದು.

'ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ।'

ಶಿಲಾಪೀಠದಲ್ಲಿ ಶಿವಕಳೆಯು ಸ್ಥಾಪಿತವಾಗಿ ಸಾಕಾರವಾಗಿ ದೇಹದಲ್ಲಿ ಧಾರಣವಾಗಿರುವುದರಿಂದ ಅಗಲಿಕೆಗೆ ಅನುಕೂಲವೊದಗಿದೆ. ಅಜಾಗ್ರತತೆಯಿಂದ ಅಗಲಿದರೆ ಅಂದರೆ ದೇಹದಿಂದ ಭೂಮಿಗೆ ತ್ರುಟಿತವಾದರೆ ಒಡನೆ ಉಸಿರನ್ನು ಬಿಡು. ಬಿಟ್ಟರೆ ಮೋಕ್ಷಸಂಪತ್ತು ನಿನ್ನದಾಗುತ್ತದೆ.

'ಲಿಂಗ ಹೋಯಿತ್ತೆಂದು ಅಂಗವ ಬಿಡುವವನ ನೋಡಿ ಎನ್ನಂಗ ನಡುಗಿತ್ತಯ್ಯ. ಲಿಂಗಹೋದರೆ ನಿನ್ನ ಪ್ರಾಣಂಗಳುಳಿವವೆ ? ಲಿಂಗಪ್ರಾಣ, ಪ್ರಾಣಲಿಂಗ ಎಂಬುದು ಹುಸಿಯೇ ಅಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ?'

ಲಿಂಗವು ಕಳೆದು ಹೋದರೂ ಅಂಗವನ್ನು ಬಿಡಬಾರದೆಂದು ಈ ವಚನವು ಸಾರುವಾಗ ಬರೀ ಸೂತ್ರತಪ್ಪಿ ತಳಕ್ಕೆ ಬಿದ್ದರೆ ಪ್ರಾಣಬಿಡುವುದು ಸರಿಯಲ್ಲ. ಪ್ರಾಣವು ಬೇಕಿದ್ದರೆ ತಾನಾಗಿಯೇ ತೊಲಗಿ ಹೋಗುವಷ್ಟು ಸಂಬಂಧಸೂತ್ರ ಬೆಳದು ಬರಬೇಕಲ್ಲದೆ ಬಲವಂತದಿಂದ ಬಿಡಬಾರದು. ಕಳೆಯದೆ ಕೇವಲ ಕೆಳಕ್ಕೆ ಬಿದ್ದರೂ ಬಿಡಬಾರದು.

'ಸೂತ್ರ ಬಿಟ್ಟಿತೆಂದು ಸಂದೇಹಗೊಳ್ಳದಿರಾ ಮರುಳು ಮನುಜರಿರಾ ! ಸೂತ್ರವಿದ್ದಲ್ಲಿ ನಿಮ್ಮಂಗ ಸೂತ್ರವಾದನಯ್ಯ ಲಿಂಗಮೂರ್ತಿಯು. ಸೂತ್ರ ತಪ್ಪಿತ್ತೆಂಬಲ್ಲಿ ಸೂತ್ರ ತಪ್ಪಿಲ್ಲ. ನಿಮ್ಮ ಮನೋಸೂತ್ರವೇ ಭಿನ್ನವಾಯಿತ್ತಯ್ಯ ಎಲೆ ಕಪಿಲ ಸಿದ್ಧ ಮಲ್ಲಿಕಾರ್ಜುನ.'

'ಅಂಗದೊಳಗೆ ಮಹಾಲಿಂಗವಿರಲು ಕೆಯ್ಯ ಲಿಂಗವು ಬಿದ್ದಿತೆಂದು ನೆಲದೊಳಗಂಗವ ಹೂಣುವವರು-ಭಂಗಬಡುವರಲ್ಲಾ ಗುಹೇಶ್ವರಾ ಲಿಂಗವ ನರಿಯದ ಜಡರುಗಳು ! '

'ತೆರಹಿಲ್ಲದ ಮಹಾಘನ ಪರಿಪೂರ್ಣ ಲಿಂಗವು ಬೀಳಲಿಕ್ಕೆ ತೆರಹುಂಟೆ ? ಅರಿಯರರಿಯರು ಪ್ರಾಣಲಿಂಗದ ನೆಲೆಯನು. ಅರಿಯದ ಅಜ್ಞಾನದಲ್ಲಿ ಕರುಹು ಬಿದ್ದಿತ್ತೆಂದು ಪ್ರಾಣಘಾತಕವ ಮಾಡಿಕೊಂಡು ಸಾವ ಅಜ್ಞಾನಿಗಳ ನೋಡಾ ! ಅರಿದುಕೂಡಿ ಸ್ವಯವಾಗಿರ್ದ ಲಿಂಗವು ಓಸರಿಸಿತ್ತೆಂದು ಆ ಲಿಂಗ ದೊಡನೆ ಸಾವ ಅಜ್ಞಾನಿಗಳಿಗೆ ಅಘೋರ ನರಕತಪ್ಪದು ನೋಡಾ ಕೂಡಲ ಚೆನ್ನಸಂಗಮದೇವಾ.'

ಲಿಂಗವು ನೆಲಕ್ಕೆ ಬೀಳುವ ವಿಷಯದಲ್ಲಿ ಶಿವಶರಣರ ವಿಮರ್ಶೆ ಸಿದ್ಧಾಂತ ಶಿಖಾಮಣಿಯಗಿಂತ ಮುಂದುವರಿದಿದೆ. ಕಾಲಕಳೆದಂತೆ ವಿಚಾರಧಾರೆ ವಿಶೇಷ

ವಾಗುವುದು ಸಹಜತಾನೆ ? ಇನ್ನು ಕೆಲವರು ಲಿಂಗಕ್ಕೆ ಧರಿಸಿದ ಕಂಥೆ ಭಿನ್ನ ವಾದರೆ ಕಾಯ ಬಲಿದಾನವನ್ನು ಕೈಕೊಂಡುದುಂಟು; ಕೈಕೊಳ್ಳುವುದುಂಟು. ಇದೂ ಸಹ ಶುದ್ಧ ತಪ್ಪು. ಮೂಢನಂಬಿಕೆಗೆ ಸೇರಿದ ಮಾತು.

ಲಿಂಗದ ನೆನಹು ತಪ್ಪಿದರೆ ಇದೂ ಸಹ ಅಗಲಿಕೆಯೆಂದು ಅಭಿಪ್ರಾಯ ಪಟ್ಟುದಾಗಿದೆ. ಇದರಲ್ಲಿಯೂ ಇಬ್ಬಗೆಯಿದೆ. ತನ್ನ ಎದೆಯಲ್ಲಿರುವ ಹೃದಯ ದಲ್ಲಿರುವ ಲಿಂಗಗಳ ಅರ್ಚನ ಮನನಗಳನ್ನು ಆಚರಿಸದಿರುವುದು ಒಂದು ಬಗೆ. ತನಗನ್ಯವಾದ ಸ್ಥಾವರಲಿಂಗಗಳಿಗೆ ಎರಗುವುದು ಇನ್ನೊಂದು ಬಗೆ. ಇವೆರಡೂ ಆಗಬಾರದು. ಆದರೆ ಲಿಂಗಕ್ಕೆ ದೂರ; ಲಿಂಗವ್ರತಕ್ಕೆ ದೂರ. ಹೀನಜನ್ಮಗಳಿಗೆ ಬರುವುದು ತಪ್ಪುವುದಿಲ್ಲ. ಹೀನ ಮನಸ್ಕರಾಗುವುದನ್ನು ತಪ್ಪಿಸಿಕೊಳ್ಳು ವಂತಿಲ್ಲ.

'ಅಂಗದ ಮೇಲೆ ಪರಶಿವಲಿಂಗವಿರ್ದು ಸ್ಥಾವರಲಿಂಗಕ್ಕೆ ಶರಣೆನಲಾಗದು, ತನ್ನಲ್ಲಿ ಲಿಂಗವಿರ್ದಂತೆ ಅನ್ಯಲಿಂಗವ ಮುಟ್ಟಿ ದರ್ಶನಸ್ಪರ್ಶನವ ಮಾಡುವ ಕುನ್ನಿಗಳನೇನೆಂಬೆನಯ್ಯ ? ತನ್ನಂಗದ ಲಿಂಗವು ರಂಗದ ಕಲ್ಲು ತಾಗಿದಡೆ, ಆವುದು ಹಿರಿದು, ಆವುದು ಕಿರಿದು ಎಂದೆನೆಯ್ಯಾ; ತಾಳಸಂಪುಟಕ್ಕೆ ಬಾರದ ಘನವು ?

'ಪ್ರಾಣಲಿಂಗಂ ಪರಿತ್ಯಜ್ಯ ಅನ್ಯಲಿಂಗಮುಪಸ್ಥಿತಂ । ಶ್ವಾನಯೋನಿ ಶತಂಗತ್ವಾ ಚಂಡಾಲ ಗೃಹಮಾಚರೇತ್ ।' ಎಂಬುದಾಗಿ....ಹಿಂತಿಲಿದ್ದ ಲಿಂಗವ ಕಿರಿಳು ಮಾಡಿ ದೂರದಲ್ಲಿರ್ದ ಸ್ಥಾವರವ ಹಿರಿದು ಮಾಡುವ ಅನಾಚಾರಿ ವ್ರತ ಭ್ರಷ್ಟರ ಎನಗೊಮ್ಮೆ ತೋರದಿರಯ್ಯ, ಕೂಡಲ ಚೆನ್ನಸಂಗಮ ದೇವಾ.'

ಇದೂ ಒಂದು ಬಗೆಯ ಸಾವು. ತನ್ನತಾ ಮರೆಯುವುದಕ್ಕಿಂತ ಬೇರಿಲ್ಲ ಮರಣ. ತನ್ನತಾನರಿಯುವುಕ್ಕಿಂತ ಬೇರಿಲ್ಲ ತಾತ್ತ್ವಿಕ ಜೀವನ. ಸತ್ಯಾನ್ವೇಷ ಣದಲ್ಲಿ ಆತ್ಮೈಕನಿಷ್ಠೆ ಅತ್ಯಗತ್ಯ. ಹಾದಿ ತಪ್ಪಿದರೆ ಮಾಡುವ ಮಾಟ ತಪ್ಪಿದರೆ ಊರುಸಿಕ್ಕದು; ಫಲಪ್ರಾಪ್ತಿಯಾಗದು. ನೈಷ್ಠಿಕದ ನಡೆಯಲ್ಲಿ ಧೀರನಾಗಲೇ ಬೇಕು. ಆತ್ಮಸಾಧನೆಯಲ್ಲಿ ಆತ್ಮೈಕ ಕ್ರಿಯೆ ಆತ್ಮೈಕ ಪ್ರಜ್ಞೆ ಪ್ರತಿಷ್ಠಿತ ವಾಗದೆ ಪರಮ ಪ್ರಾಪ್ತಿಯಿಲ್ಲ. ಉಸಿರಾಡಿಸುವುದೂ ಒಂದು ಕ್ರಿಯೆ. ಅದೇ ಆಚಾರಲಿಂಗ ಅದು ನಿಂತಾಗ ಜೀವಿಸಿರಲು ಸಾಧ್ಯವಿಲ್ಲ.

ಆಚಾರವೇ ಲಿಂಗವೆಂದು ಅರಿತಿರುವಾಗ ಆಚರಿಸುತ್ತಿರುವಾಗ ಆಚಾರ ಭ್ರಷ್ಟವಾಗಿರುವುದಕ್ಕಿಂತ ಅಸು ನೀಗುವುದೇ ಲೇಸೆಂದು ಶ್ರೀರೇಣುಕ ಜಗದ್ಗುರುವಿನ ಅಂತರಾಶಯ. ಆಚಾರದ ನೆಪದಲ್ಲಿ ಅನಾಚಾರಿಯಾಗಿ ಬಾಳಬಾರದು. ಕಪಟನಾಗಿ ಕುಹಕನಾಗಿ ಬದುಕಬಾರದು. ಮಾನವತೆಗೆ ಆಚಾರವೇ ಶರಣಾಗತಿ; ಸದ್ಗತಿ. ಅಂತಹ ಆಚಾರರೂಪ ಕ್ರಿಯಾಶಕ್ತಿಯನ್ನು ಕಳೆದುಕೊಂಡ ಬಳಿಕ ಬಾಳಿ ಏನು ಫಲ? ಬದುಕಿ ಏನು ಫಲ? ಜೀವನ ಸೌಧದ ತಳಹದಿಯೇ ಇಲ್ಲದ ಬಳಿಕ ಸೌಧ ನಿಲ್ಲುವ ಬಗೆ ಹೇಗೆ ? ಕ್ರಿಯೆಯೇ ಇಲ್ಲದಾಗ ಕಾಯವಿದ್ದೇನು ? ರಸವೇ ಇಲ್ಲದಾಗ ಫಲವಿದ್ದೇನು ? ಸದಾಚಾರವಿಲ್ಲದೆ ಶಿವಾಚಾರವಿಲ್ಲದೆ ಸತ್ಕ್ರಿಯೆಯಿಲ್ಲದೆ ಉಸಿರೆತ್ತಿ ನಿಲ್ಲಬಾರದು. ಬರೀ ಹೊಟ್ಟೆಹೊರೆವ ಹಂಚಿಕೆಯಲ್ಲಿರಬಾರದು.

'ಇತಿ ಸಂಬೋಧಿತಃ ಶಿಷ್ಯೋ ಗುರುಣಾ ಶಾಸ್ತ್ರವೇದಿನಾ
ಧಾರಯೇಚ್ಛಾಂಕರಂ ಲಿಂಗಂ ಶರೀರೇ ಪ್ರಾಣಯೋಗತಃ ।'

ಶಾಸ್ತ್ರವಿತ್ತನಾದ ಶ್ರೀಗುರುವಿನಿಂದ ಚೆನ್ನಾಗಿ ಚಿದ್ಬೋಧೆಯನ್ನು ಪಡೆದ ಶಿಷ್ಯನು ಶಿವಲಿಂಗವನ್ನು ಶರೀರದಲ್ಲಿ ಪ್ರಾಣವಿರುವ ಪರ್ಯಂತರ ಅಗಲದೆ ಧರಿಸಿರಬೇಕು.

ಶಾಸ್ಯತೇ ಶಿಷ್ಯತೇ ವಾ ಅನೇನ ಶಾಸ್ತ್ರಂ-ನೀತಿ ನಡತೆಗಳನ್ನು ಹೇಳುವ ಗ್ರಂಥಕ್ಕೆ ಶಾಸ್ತ್ರವೆನ್ನುತ್ತಾರೆ. ಅದನ್ನು ಅರಿತವನು 'ಶಾಸ್ತ್ರವಿತ್' ಎನಿಸುತ್ತಾನೆ. ನೀತಿ ರೀತಿಗಳ ಹಿತೋಕ್ತಿಗಳಿಂದ ಅನೀತಿಯ ಅಂಧಕಾರವನ್ನು ಓಡಿಸುವಾತನೇ ಶಾಸ್ತ್ರವಿತ್ತನಾದ ಶ್ರೀಗುರು. ಆತನೇ ಶಿಷ್ಯರಿಗೆ ಬೋಧಿಸಲು ಸಮರ್ಥನು. ಪ್ರಸ್ತುತ ಕ್ರಿಯಾಲಿಂಗದ ನೆಲೆಕಲೆಗಳನ್ನು ಕ್ರಿಯಾಲಿಂಗಕ್ಕೂ ಜೀವನಕ್ಕೂ ಇರುವ ನಿತ್ಯ ಸಂಬಂಧವನ್ನು ಸತ್ಯ ಸಕೀಲವನ್ನು ಸ್ಫುಟವಾಗಿ ಸಂಪುಟಗೊಳಿಸುವ ಶಕ್ತಿಯುಕ್ತಿಯುಳ್ಳವನಾಗಿರಬೇಕು ಶ್ರೀಗುರು.

'ಯೋ ವಿನಾ ಗುರುಕಾರುಣ್ಯಮಿಚ್ಛಯಾ ಲಿಂಗಧಾರಣಂ ।
ಸ ಜೀವನ್ನೇವ ಚಾಂಡಾಲೋ ಮೃತೋ ನರಕಮಶ್ನುತೇ ॥'

ಈ ಸೂಕ್ಷ್ಮಾಗಮವಾಣಿಯಂತೆ ಶ್ರೀಗುರುವಿನಿಂದಲೇ ಲಿಂಗಧಾರಣವಾಗಬೇಕು. ಲಿಂಗದಲ್ಲಿ ಕಳೆಯನ್ನು ನೆಲೆಸುವ ಕಲೆ ಶ್ರೀಗುರುವಿಗಿರುತ್ತದೆ. 'ಯದ್ದೀಯತೇ ಹಿ ಗುರುಣಾ ಲಿಂಗಂ ಸರ್ವೋತ್ತಮೋತ್ತಮಮ್ ।'

ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।
ಜೋಷಯೇತ್ ಸರ್ವಕರ್ಮಾಣಿ ವಿದ್ವಾನ್ ಯುಕ್ತಃ
ಸಮಾಚರನ್ ॥ '

ಎಂಬ ಗೀತೋಕ್ತಿಯಂತೆ ಜಡಕರ್ಮಗಳಲ್ಲಿ ಆಸಕ್ತರಾಗುವವರು ಅಜ್ಞಾನಿಗಳು. ಅವರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸದೆ ಸಂಶಯಕ್ಕಾಸ್ಪದವಾಗದಂತೆ ಒಳ್ಳೆಯ ಕೆಲಸಗಳನ್ನು ಸಮತ್ವ ಬುದ್ಧಿಯಿಂದ ಮಾಡುವಂತೆ ಬೋಧಿಸಬೇಕು.

ಅಜ್ಞಾನ ಅಹಂಕಾರಗಳಿಂದ ಕ್ರಿಯೆಗಳನ್ನು ಮಾಡಬಾರದು. ಸೋಮಾರಿತನದಿಂದ ಮಾಡಬಾರದು. ಹಿಡಿದುದನ್ನು ಕೊನೆಗಾಣಿಸದೆ ಬಿಡಬಾರದು. ಸ್ಥಿರಚಿತ್ತರಾಗಿ ಮಾಡಬೇಕು. ತಮೋಗುಣ ರಜೋಗುಣಗಳಿಂದ ಮಾಡಬಾರದು. ರಾಗದ್ವೇಷಗಳಿಂದ ಮಾಡಬಾರದು. ಲಿಂಗಾರ್ಪಣ ಬುದ್ಧಿಯಿಂದ ಆಜನ್ಮವೂ ಕ್ರಿಯಾನಿರತನಾಗಿರಬೇಕೆಂದು ಶ್ರೀಗುರು ಶಿಷ್ಯನಿಗೆ ಬೋಧಿಸಬೇಕು. ಆಗ ಆ ಕ್ರಿಯಾಲಿಂಗವು ಶಿಷ್ಯನಿಗೆ ಸುಖಕರವಾಗುತ್ತದೆ. ಶಾಂಕರವೆಂದೆನಿಸುತ್ತದೆ. ಅದನ್ನು ಆ ಕ್ರಿಯಾಲಿಂಗವನ್ನು ಶಿಷ್ಯನು ಕಾಯವಿರುವವರೆವಿಗೂ ಕೈಕೊಂಡಿರಬೇಕು.

'ಲಿಂಗಸ್ಯ ಧಾರಣಂ ಪುಣ್ಯಂ ಸರ್ವಪಾಪ ಪ್ರಣಾಶನಮ್
ಆದೃತಂ ಮುನಿಭಿಃ ಸರ್ವೈರಾಗಮಾರ್ಥವಿಶಾರದೈಃ ।'

ಲಿಂಗಧಾರಣ ಪರಮಪಾವನ. ಅದರಿಂದ ಪಾಪವೆಲ್ಲ ಪ್ರಣಾಶನ. ಈ ಕ್ರಿಯಾ ಲಿಂಗಧಾರಣವನ್ನು ಸಕಲಾಗಮಗಳ ಅನುಭವವುಳ್ಳ ಮುನಿಗಳೆಲ್ಲರೂ ಆದರಿಸಿದ್ದಾರೆ; ಅಂಗೀಕರಿಸಿದ್ದಾರೆ. ಸ್ಕಂದ, ನಂದಿ ಮೊದಲಾದವರು ಲಿಂಗಧಾರಿಗಳಾಗಿದ್ದರು. ಶಿವಾಗಮಕರಾದ ಮಹಾಪಾಶುಪತರು ಲಿಂಗಧಾರಣ ಮಾಡಿದ್ದರು.

'ನಿಗಮಾಗಮಾನು ಸಂಧಾನ ಶೈವದೀಕ್ಷಾ ವಿಧಾನತಃ ।
ಶಿವಲಿಂಗಂ ಕರೇ ಕಂಠೇ ಧೃತ್ವಾ ವಕ್ಷಸ್ಥಳೇಽಪಿ ವಾ ।
ತ್ರಿಕಾಲಂಯೋಽರ್ಚಯೋದ್ಭಕ್ತ್ಯಾ ಮಹಾಪಾಶುಪ ತೋ ಹಿ ಸಃ ।'

ಮಹಾಪಾಶುಪತ ಅಂದರೆ ವೀರಶೈವಲಕ್ಷಣವನ್ನು ಈ ಶ್ಲೋಕವು ಸಾಟುತ್ತದೆ.

'ಸನತ್ಕುಮಾರಪ್ರಮುಖಾ ಜ್ಞಾನನಿಷ್ಠಾ ಯಶಸ್ವಿನಃ ।
ಧೃತಲಿಂಗಾಂಗಭಾವಾಶ್ಚ ವಿರಾಜಂತೇಽನಿಶಂ ಮುದಾ ।
ದುಂಡಿ ನಂದಿ ಮಹಾಕಾಳಿ ಪ್ರಮುಖಗಣನಾಯಕಾಃ ।
ಚತುರ್ದಶ ಸಹಸ್ರಂ ಹಿ ಕೈಲಾಸಾವರಣಾಧಿಪಾಃ ।
ಮತಪ್ರವರ್ತಕಾಸ್ಸರ್ವೇ ಗುರುಪೀಠಾಧಿರೋಹಿಣಃ ।
ಮಹೇಶ್ವರ ಸಮೀಪೇ ತೇ ವರ್ತಂತೇ ಶೂಲಪಾಣಯಃ ।
ಅಗಸ್ತ್ಯೋ ಜೈಮಿನಿಶ್ಚೈವ ವಿಶ್ವಾಮಿತ್ರೋಽಥ ಕಾಶ್ಯಪಃ ।
ಭರದ್ವಾಜೋಽಂಗಿರಾ ಅತ್ರಿರ್ವಶಿಷ್ಠೋ. ರೋಮಹರ್ಷಣಃ ।
ಏತೇ ಸರ್ವೇ ಮಹಾಭಾಗಾ ಅತೀವರ್ಣಾಶ್ರಮೇರ ತಾಃ ।
ವೀರಶೈವಾ ಸಮಾಖ್ಯಾತಾ ಜೀವನ್ಮುಕ್ತಾ ನ ಸಂಶಯಃ ॥'

ಎಂಬುದಾಗಿ ನೀಲಕಂಠಶಿವಾಚಾರ್ಯ ಪ್ರಣೀತ ಕ್ರಿಯಾಸಾರದಲ್ಲಿ ಲಿಂಗಧಾರಿಗಳಾದ ಶಿವಾಗಮ ವಿಶಾರದರ ನಾಮ ನಿರ್ದೇಶವಿದೆ; ಶಿವಯೋಗಿ ಶಿವಾಚಾರ್ಯರ ಮಾತಿಗೆ ನಿದರ್ಶನವೂ ಆಗಿದೆ.

ಪುಣತಿ ಪುನಾತಿ ವಾ ಪುಣಂ, ಪುಣೇ ಸಾಧುಃ ಪುಣ್ಯಂ ಎಂಬ ವಿಗ್ರಹ ದಿಂದ ಪುಣ್ಯ ಶಬ್ದಕ್ಕೆ ಸತ್ಕ್ರಿಯೆ ಸತ್ಕಳೆ ಎಂಬುದಾಗಿ ಅರ್ಥಗಳಾಗುತ್ತವೆ. ಈ ವಿಚಾರದಿಂದ ಪುಣ್ಯಪದ ಪ್ರಯೋಗ ಪ್ರಶಸ್ತವಾಗಿದೆ. ಲಿಂಗವನ್ನು ಧರಿಸು ವುದೆಂದರೆ ಸತ್ಕ್ರಿಯೆಗಳನ್ನು ಕೈಕೊಳ್ಳುವಿಕೆ. ಸತ್ಕ್ರಿಯೆಗಳಿಂದ ಸತ್ಕಳೆ ಮೈಗೂಡಿ ಬಾರದಿರದು. ಸರ್ವಪಾಪ ಪರಿಹಾರವಾಗದಿರದು. ಪಾಪ ಮೂಲ ಕರ್ಮ, ಕರ್ಮನಾಶಕ ಸತ್ಕರ್ಮ. 'ಪುಣ ಕರ್ಮಣಿ ಶುಭೇ' ಶುಭ ಕರ್ಮ ಅರ್ಥವನ್ನು ಸೂಚಿಸುವ ಪುಣಧಾತುವಿನಿಂದ ಪುಣ್ಯಶಬ್ದವಾಗಿದೆ. ಶುಭ ಕರ್ಮ ಸಂಪಾದನೆಯಲ್ಲಿ ಸಮರ್ಥವಾದುದೆ ಪುಣ್ಯ. 'ಪುಣ್ಯಂತು ಸುಂದರೇ ।

ಸುಕೃತೇ ಪಾವನೇ ಧರ್ಮೆ |' ಎಂದು ಮೇದಿನೀ ಕೋಶವೂ 'ಪುಣ್ಯಸ್ತ್ರಿಷು ಮನೋಜ್ಞೆ ಸಾತ್‌ಕ್ಲೀಬಂ ಸುಕೃತ ಧರ್ಮಯೋಃ' ಎಂದು ವಿಶ್ವಕೋಶವೂ ಅರ್ಥವಿಸಿವೆ. 'ಸ್ಯಾದ್ಧರ್ಮಮಸ್ತ್ರಿಯಾಂ ಪುಣ್ಯ ಶ್ರೇಯಸೀ ಸುಕೃತಂ ವೃಷಃ|' ಎಂದು ಅಮರಕೋಶವೂ 'ಧರ್ಮೋಽಸ್ತ್ರೀ ಪುಣ್ಯ ಆಚಾರೇ ಸ್ವಭಾವೋ ಪಮಯೋಃ ಕ್ರತೌ | ಅಹಿಂಸೋಪನಿಷನ್ಯಾಯೇ....'ಕೋಶಾಂತರಗಳೂ ಪುಣ್ಯ ಶಬ್ದಾರ್ಥಗಳನ್ನು ವಿಶ್ಲೇಷಿಸಿ ಸಮರ್ಥಿಸಿವೆ. ವಿಶುದ್ಧಾಚಾರ ಅರ್ಥವನ್ನು ಅಂಗೀಕರಿಸಿವೆ. ಒಟ್ಟನಲ್ಲಿ ಪುಣ್ಯಶಬ್ದಕ್ಕೆ ಸುಂದರ, ಸುಕೃತ, ಪಾವನಧರ್ಮ, ಮನೋಜ್ಞ, ಶ್ರೇಯ, ಆಚಾರ, ಸುಸ್ವಭಾವ, ಅಹಿಂಸ ಮುಂತಾದ ಅರ್ಥ ಗಳಿದ್ದರೂ ಸುಕೃತ ವಿಶೇಷವೆಂಬುದನ್ನು ಎಲ್ಲರೂ ಒಪ್ಪಿದಾರೆ. ಮತ್ತು ಎಲ್ಲ ಅರ್ಥಗಳೂ ಜೀವನೋನ್ನತಿಯ ಪೋಷಕಗಳಾಗಿವೆ. ಲಿಂಗಧಾರಣದಿಂದ ಸೌಂದರ್ಯ ಪ್ರಾಪ್ತಿ, ಸುಕೃತ ಪ್ರಾಪ್ತಿ, ಶಿವತ್ವ ಪ್ರಾಪ್ತಿ, ಧರ್ಮಶ್ರೇಯಸ್ಸುಗಳ ಪ್ರಾಪ್ತಿ, ಸುಸ್ವಭಾವ ಸುಪ್ರಭಾವ ಪ್ರಾಪ್ತಿ, ಎಂದು ಹೇಳುವುದೇ ಶ್ರೀ ರೇಣುಕ ಜಗದ್ಗುರುವಿನ ಅಂತರಾಶಯವಾಗಿದೆ.

ಪಾಪಕರ್ಮಗಳನ್ನು ಪರಿಹರಿಸುವಲ್ಲಿ ಪುಣ್ಯಕರ್ಮಗಳನ್ನು ಪ್ರಾಪ್ತಿಸು ವಲ್ಲಿ ಸಂಪೂರ್ಣಸಮರ್ಥವಾದ ಲಿಂಗವನ್ನು ಧಾರಣ ಮಾಡುವುದು. ಧರ್ಮಾ ರ್ಥಿಯ ಕರ್ತವ್ಯವಾಗಿದೆ. ಧರ್ಮ ಮಾರ್ಗದಲ್ಲಿ ದಿವ್ಯಶಕ್ತಿಯಾಗಿ ದಿವ್ಯತೇಜ ವಾಗಿ ಎದೆಗೆ ಬಂದು ನಿಂತ, ನಿಂತು ಶೋಭಿಸುವ ಆತ್ಮದೇವರಾಗಿದೆ ಲಿಂಗ.

ಮಣಿಧಾರಣವೇ ಪುಣ್ಯಪ್ರದವೆಂದು ಎಲ್ಲ ಮತೀಯರು ಅರಿತಿದ್ದಾರೆ. ಅಂತೆಯೆ ಆಭರಣಗಳ ರೂಪದಲ್ಲಿ ಉಂಗುರದಲ್ಲಿ ಕೆಚ್ಚಿ ಧರಿಸುತ್ತಾರೆ. ಅರಸರು ಕಿರೀಟಗಳಲ್ಲಿ ಕೆಚ್ಚಿ ಧರಿಸುತ್ತಾರೆ. ಚಿನ್ನದಲ್ಲಿ ಕುಂದಣಿಸಿ ಧರಿಸಿದರೆ ಪ್ರಾಪ್ತಿ ಸುವ ಪುಣ್ಯಕ್ಕೆ ಎಣೆಯುಂಟೆ ? ಚಿತ್ಕ್ರಿಯಾ ರೂಪ ಅಪರಂಜಿಯಲ್ಲಿ ಕುಂದ ಣಿಸಿದ ಮಣಿ (ಶಿಲೆ)ಗೆ ಬೆಲೆಯುಂಟೆ ? ಭೌತಿಕ ರತ್ನ ವಜ್ರಗಳ ಸ್ವಭಾವ ಪ್ರಭಾವಗಳಿಗಿಂತ ಸಾವಿರಪಟ್ಟು ಕೋಟಿ ಪಟ್ಟು ಹೆಚ್ಚು ಪ್ರಭಾವಶಾಲಿಯಾಗಿರು ತ್ತದೆ. ಮಂತ್ರಕಳೆಯಿಂದ ಮಹೋನ್ನತವಾಗಿರುತ್ತದೆ. ಅಷ್ಟಬಂಧದಿಂದ ಶ್ರೇಷ್ಠ ವೆನಿಸಿರುತ್ತದೆ. ಜೀವನದ ಆರೋಗ್ಯಕ್ಕೆ ಜೀವನ ಸೌಭಾಗ್ಯಕ್ಕೆ ಜ್ಯೋತಿರ್ಮಯ ಸತ್ಕ್ರಿಯೆಗೆ ಕ್ರಿಯಾ ಲಿಂಗವೇ ತುಂಬಿದ ತೊರೆಯಂತಿದೆ. ಅರ್ಚಿಸುವಾಗ ಕರದಲ್ಲಿ ಧಾರಣವಾಗಿ ಸ್ಪರ್ಶನವಾಗಿ ಉಳಿದ ವೇಳೆಯಲ್ಲಿ ಉರದಲ್ಲಿ ಧಾರಣ

ವಾಗಿ ಸ್ಪರ್ಶನವಾಗಿ ಕರ ಉರಗಳ ಪ್ರೀತಿಗೆ ಸ್ಫೂರ್ತಿಗೆ ಕಾರಣವಾಗಿರುತ್ತದೆ. ಸತ್ಕೃತಿಗೆ ಪ್ರೇರಕವಾಗಿರುತ್ತದೆ. ಅಲ್ಲದೆ ಕಣ್ಣಿನ ನೋಟಕ್ಕೆ ಮಾಟಕ್ಕೆ ಉನ್ಮೇಷಕ್ಕೆ ಉತ್ತೇಜಕ್ಕೆ ಸತ್ಯಸಾಧನವಾಗಿದೆ. ಕರಉರ ನೇತ್ರಗಳಿಗೆ ಉಪಕಾರಕವಾದ ಮಣಿ ಮಂತ್ರ ಔಷಧಿಗಳಿಂದ ಭರಿತವಾಗಿದೆ ಲಿಂಗ. ಶಾರೀರಕ ವಿಜ್ಞಾನ ಕೇಂದ್ರ ವಾಗಿದೆ ಇಷ್ಟಲಿಂಗ. ಇಷ್ಟಲಿಂಗಕ್ಕೆ ಧರಿಸಿದ ಅಷ್ಟಬಂಧಕ್ಕೆ (ಕಂಥೆಗೆ) ತುಪ್ಪದ ಕಾಡಿಗೆ, ಗೇರೆಣ್ಣೆ, ರ್‍ಯಾಳ, ಅರಗ, ಇಂಗಳೀಕ, ಮಸ್ತಕಿ, ಅಂಜನ, ಶಿಲಾರಸ ಈ ಎಂಟು ಸಾಮಗ್ರಿಗಳು ಸೇರಿರುತ್ತವೆ. ಇದರಿಂದಾಗಿ ಇದು ಅಷ್ಟಬಂಧ ವೆಂದೆನಿಸಿದೆ. ಈ ಪದಾರ್ಥಗಳಲ್ಲಿ ಕಣ್ಣಿನ ವಿದ್ಯುಚ್ಛಕ್ತಿ (ಕಾಂತಿ)ಯನ್ನು ಹೆಚ್ಚಿಸುವ ಶಕ್ತಿಯಿದೆ. ಇವುಗಳಿಂದ ಮಾಡಿದ ದ್ರವ್ಯಕ್ಕೆ 'ಕಾಂತಿ' ಎಂದೇ ಹೆಸರು. ಸೂಕ್ತವಾದ ಹೆಸರು. ಅದರಲ್ಲಿಯೂ ಕಾಂತಿಯಿರುತ್ತದೆ. ಅದನ್ನು ನೋಡುವುದರಿಂದ ಕಣ್ಣಿಗೂ ಸಹ ಕಾಂತಿ ಕೂಡಿ ಬರುತ್ತದೆ. ಕಣ್ಣಿನ ದೋಷಗಳೆಲ್ಲ ದೂರಾಗುತ್ತವೆ. ಲಿಂಗದ ಕಂತೆಯಲ್ಲಿ ಜೈವಿಕ ವಿಜ್ಞಾನ ರಹಸ್ಯ ವಿದೆ. ಪ್ರಕೃತಿಗೆ ಬೇಕಾದ ಜ್ಯೋತಿಯಿದೆ. ಮಣಿ ಮಂತ್ರ ಔಷಧಿಗಳ ಶ್ರೇಷ್ಠ ಸಮ್ಮೇಲನವಾಗಿದೆ ಈ ಇಷ್ಟಲಿಂಗ. ಜೀವನ ಜೈತ್ರಸೂತ್ರವಾಗಿದೆ ಈ ಲಿಂಗ. ಪ್ರಕೃತಿ ಸಂಸ್ಕೃತಿಗಳೆರಡರ ಒಕ್ಕೂಟ. ದೃಕ್ಕ್ರಿಯೆಗಳೆರಡರ ಒಕ್ಕೂಟ. ಶಿಷ್ಯನ ಹೃದಯ ಶ್ರೀಗುರುವಿನ ಅಭಯ ಇವೆರಡರ ಒಕ್ಕೂಟ. ಸ್ಪರ್ಶನ ದರ್ಶನ ಅರ್ಚನ ಈಳನಾದಿಕ್ರಿಯೆಗಳಿಗೆ ಸಾಧನವಾಗಿದೆ. ಕ್ರಿಯಾ ಕಲಾಪಗಳ ಕೇಂದ್ರವಾಗಿದೆ. ಇದರಿಂದಾಗಿ ಇಷ್ಟಲಿಂಗದ ಧಾರಣ ಪುಣ್ಯ. ಸತ್ಕ್ರಿಯಾ ಪ್ರೇರಕವಾಗಿ ಸುಕೃತ ಪೂರಕವಾಗಿ ಇರುವ ಲಿಂಗಧಾರಣವು ಪುಣ್ಯವಲ್ಲದೆ ಮತ್ತೇನು ? ಇಂತಹ ಈ ಲಿಂಗವು ಶ್ರೀಗುರುವಿನಿಂದ ಶಿಷ್ಯನ ಅಂಗಕ್ಕೆ ಅಂಗೈಗೆ ಆಯುತ್ತವಾಗುವುದೇ ಆಯತ್ತದೀಕ್ಷೆ! ಶಿಷ್ಯನ ಪ್ರಕೃತಿಯಲ್ಲಿ ಸುಕೃತಿ ಸಂಸ್ಕೃತಿ ಆಯತ್ತವಾಗಿ ಮೂರ್ತೀಭವಿಸುತ್ತದೆ. ಉತ್ತಮವೂ ಪವಿತ್ರವೂ ಆದ ಕ್ರಿಯಾ ಶಕ್ತಿಯಿಂದ ಶಿಷ್ಯನು ಶಿಷ್ಟನೂ ವಿಶಿಷ್ಟನೂ ಆಗುವದಲ್ಲದೆ ಲಿಂಗಭಕ್ತನೆನಿಸು ತ್ತಾನೆ. ಸ್ವಾಭಾವಿಕವಾಗಿ ಲಿಂಗಪೂಜಾ ಕರ್ತೃತ್ವ ಶಕ್ತಿ ಭಕ್ತಿ ಸಮನಿಸುತ್ತವೆ. ಆತ್ಮಶ್ರದ್ಧೆ ಸತ್ವಶುದ್ಧಿಗಳು ವೃದ್ಧಿಗೊಳ್ಳುತ್ತವೆ. ಶುದ್ಧಕ್ರಿಯಾ ಪ್ರಕಾಶದಲ್ಲಿವ್ಯಕ್ತಿತ್ವ ವಿಕಾಸಲಾಗಿ ವಿರಾಜಿಸುತ್ತಾನೆ. ಭಕ್ತಿ ಸಂಪತ್ತಿಯಿಂದ ಆಢ್ಯನಾಗುತ್ತಾನೆ, ಸತ್ಕ್ರಿಯಾ ನಿರತನಾಗಿ ಸರ್ವಾದರಣಕ್ಕೆ ಪಾತ್ರನಾಗುತ್ತಾನೆ. ಸಜ್ಜನ

ಮಾನವ ಹೃದಯದಲ್ಲಿ ಹುದುಗಿದ ಮಹೋಜ್ವಲ ಸತ್ವವದು. ಅದನ್ನು ಅನುಸಂಧಾನ ಮಾಡಲು ಅಭಿವ್ಯಕ್ತಗೊಳಿಸಲು ಕ್ರಿಯಾಲಿಂಗವನ್ನು ಕರಸ್ಥಲಕ್ಕೆ ಕರುಣಿಸುತ್ತಾನೆ. ಕಲಾಭಿಜ್ಞನಾದ ಶ್ರೀಗುರು ಅಗಲದಂತೆ ಧರಿಸು ಆರಾಧಿಸು ಎಂದು ಅಪ್ಪಣೆನೀಯಯುತ್ತಾನೆ. ಆಯತ್ತಗೊಳಿಸು ತ್ತಾನೆ.

'ಅಯ್ಯಾ, ವೀರಶೈವ ಷಟ್‌ಸ್ಥಲಾಚಾರ್ಯ ಘನಲಿಂಗ ಚಕ್ರವರ್ತಿ ಯಪ್ಪ ಶ್ರೀ ಗುರುಲಿಂಗದೇವರು. ತನ್ನ ತೊಡೆಯ ಮೇಲೆ ಮೂರ್ತ ಗೊಂಡಿರುವ ಇಷ್ಟಲಿಂಗದೇವಂಗೆ ಪ್ರಾಣಲಿಂಗ ಭಾವಲಿಂಗ ಸ್ವರೂಪವಾದ ಶರಣನ ಚಿದಂಗವೇ ನಿನಗೆ ನಿಜ ಮೋಕ್ಷ ಮಂದಿರವೆಂದು ಅರುಹಿದಮೇಲೆ, ನಿಮಿಷಾರ್ಧವಗಲಿದರೆ, ನಮ್ಮ ಪ್ರಮಥಗಣಾಚಾರಕ್ಕೆ ಹೊರಗು ಮಾಡಿ ಭವಕ್ಕೆ ನೂಂಕುವೆವೆಂದು ಪ್ರತಿಜ್ಞೆಯನ್ನಿತ್ತು ಆ ಶಿಷ್ಯನ ಕರಸ್ಥಲಕ್ಕೆ ಪ್ರಾಣ ಕಳಾ ಚೈತನ್ಯ ಮೂರ್ತಿಲಿಂಗದೇವನ ಮೂರ್ತವ ಮಾಡಿಸಿ, ಆ ಲಿಂಗ ದೇವಂಗೆ ಪ್ರಮಥಗಣಾರಾಧ್ಯ ಭಕ್ತ ಮಾಹೇಶ್ವರರೆಲ್ಲ ಅಭಯ ಹಸ್ತ ವನ್ನಿತ್ತು ಆಮೇಲೆ ಚಿದಂಗಸ್ವರೂಪವಾದ ಶಿಷ್ಯಂಗೆ ಈ ಲಿಂಗದೇವನ ನಿಮಿಷಾರ್ಧವಗಲಿದರೆ ನಿನಗೂ ಅದೇ ಪ್ರತಿಜ್ಞೆ ಬಂದೀತೆಂದು ಆಜ್ಞಾಪನವ ಮಾಡಿ, ಹೃದಯಕಮಲ ಮಧ್ಯದಲ್ಲಾಡುವ ಸಹಸ್ರ ಹೆಡೆಯ ಕುಂಡಲಿ ಸರ್ಪಂಗೆ ಮುಸುಕಿರುವ ಅಜ್ಞಾನ ಮಾಯಾ ಮರವೆಯನ್ನು ಅನಾಹತ ದ್ವಾರದಿಂದ ಅನಾದಿ ಮೂಲ ಮಂತ್ರವನುಸುರಿ ಕುಂಡಲಿ ಸರ್ಪನ ಹೆಡೆ ಯೆತ್ತಿಸಿ ಚಿದಗ್ನಿಯ ಪುಟವ ಮಾಡುವಂಥಾದ್ದೇ ಲಿಂಗಾಯತ ದೀಕ್ಷೆ; ಇಂತು ಎಂದು ಶ್ರೀ ಗುರು ನಿಃಕಳಂಕ ಚೆನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಂ ಕೊಡುತಿರ್ದರು ನೋಡಾ ಸಂಗಮ ಬಸವೇಶ್ವರಾ !

ಈ ಸಂಗನ ಬಸವೇಶ್ವರ ವಚನವು ಆಯತ್ತ ದೀಕ್ಷೆಯ ಲಕ್ಷಣವನ್ನು ಹೇಳಹೊರಟು ಲಿಂಗವನ್ನು ಅಗಲದೆ ಧರಿಸುವಂತೆ ಶಿಷ್ಯನಿಗೂ ಶಿಷ್ಯನನ್ನು ಅಗಲವಂತೆ ಇರಲು ಕ್ರಿಯಾಲಿಂಗಕ್ಕೂ ಶ್ರೀಗುರು ಅಪ್ಪಣೆಯನೀಯುವು

ದನ್ನು ಸ್ಫುಟಗೊಳಿಸಿ ಮಂತ್ರೋಪದೇಶವನ್ನೂ ಅದರ ಅಜ್ಞಾನ ನಿವಾರಣ ಶಕ್ತಿಯನ್ನೂ ಪ್ರಸ್ಫುಟಗೊಳಿಸಿದೆ.

ಶ್ರೀ ಗುರು ಸಲ್ಲಕ್ಷಣ ಪರಶಿವನನ್ನು ತನ್ನ ಪರಮ ಲೀಲಾ ಶಕ್ತಿಯಿಂದ ಶಿಷ್ಯನ ಕರದ ಕುರುಹಾಗಿಸಿ ಪ್ರತ್ಯಕ್ಷ ಪ್ರಮಾಣವೆನಿಸಿದನು. ತತ್ಸ್ವರೂಪ ವಾದ ಮಂತ್ರವನ್ನು ಶಾಬ್ದಿಕವಾಗಿ ಶಿಷ್ಯನ ಕರ್ಣಮುಖಕ್ಕೆ ಮುಂದೆ ಉಪದೇಶಿಸಿ ಅದನ್ನೇ ಪ್ರಾಣಲಿಂಗವನ್ನಾಗಿಸಿ ಆಗಮ ಪ್ರಮಾಣವನ್ನಾಗಿಸು ವನು. ಆ ಮಂತ್ರಾರ್ಥವನ್ನು ಆ ಅರ್ಥಾನುಭೂತಿ ರೂಪ ಕಳಾಮೂರ್ತಿ ಯನ್ನು ಭಾವದಲ್ಲಿ ಬೆಳಗಿಸಿ ಅನುಮಾನ ಪ್ರಮಾಣ ಗೋಚರವೆನಿಸುತ್ತಾನೆ. ಆ ಅನುಮಾನ ಪ್ರಮಾಣವನ್ನೇ ಶಿಷ್ಯನು ತನ್ನ ನಿಜಾನುಚರಣೆಯಿಂದ ನಿಷ್ಪತ್ತಿಗೊಳಿಸಿಕೊಂಡು ಸ್ವಾನುಭಾವ ಪ್ರಮಾಣವನ್ನಾಗಿಸಿಕೊಳ್ಳುತ್ತಾನೆ.

'ಚಿತ್ತದು ಕೇಳನುಭೂತಿಯೆನಿಕ್ಕು ।
ಮತ್ತದು ತಾನೇ ಪವಣವೆನಿಕ್ಕು ।
ಸತ್ಯವಿದಿಂದ್ರಿಯದನುಭವದಿಂದ ।
ಪ್ರತ್ಯಕ್ಷಮೆನಿಪ್ಪುದು ಪೆಸರಿಂದ ।
ಕುರುಹಂ ಕಂಡನುಭವಿಪುದರಿಂದ ।
ಅರಿಯದನನುಮಾನದ ಪೆಸರಿಂದ ।
ಆಗಳು ನುಡಿವಿಡಿದರಿವುದರಿಂದ ।
ಆಗಮವೆನಿಸುವುದಂತದರಿಂದ ।
ತನುವಿನುಪಾಧಿಯಲೇ ಮಾತೃತ್ವ ।
ನಿನಗಾಗಮುದಲಹುದು ಮೇಯತ್ವ ।
ಅನುಭವಕೆಡಲಾ ಮೂದೆರನಳಿದು ।
ಮನವಂ ಮೀರಿಹ ನುಡಿಗಳನುಳಿದು ।
ಅದರಿಂ ನಿನ್ನಿಂ ಬೇರೊಂದಿಲ್ಲ ।
ವಿದಿತಂ ತಿಳಿ ಬಂಧಂ ನಿನಗಿಲ್ಲ ।
ಪ್ರತ್ಯಕ್ಷಾದಿಕಮಂ ನೆರೆ ಬಿಟ್ಟು ।
ನಿತ್ಯ ಸುಖದೊಳಿರು ನಿಜವಳವಟ್ಟು ।'

ಎಂಬುದಾಗಿ ನಿಜಗುಣರು ತಮ್ಮ ಪರಮಾರ್ಥ ಗೀತೆಯ ಪ್ರಥಮ ಗತಿಯಲ್ಲಿ ಪರವಸ್ತು ಪರಶಕ್ತಿಗಳನ್ನು ನಿರೂಪಿಸುತ್ತ ಶಿವಾದ್ವೈತ ಸಿದ್ಧಾಂತವನ್ನು ಸ್ಫುಟಗೊಳಿಸುತ್ತ ಕೊನೆಯಲ್ಲಿ ಸತ್ ಚಿತ್ ಆನಂದ ಸ್ವರೂಪವಾದ ಇಷ್ಟ-ಪ್ರಾಣ-ಭಾವಲಿಂಗಗಳನ್ನು ಪ್ರತ್ಯಕ್ಷ ಆಗಮ ಅನುಮಾನ ಪ್ರಮಾಣಗಳಿಂದ ಪ್ರತಿಪಾದಿಸಿದ್ದಾರೆ. ಬಳಿಕ ಆ ಆನಂದ ಪರಿಣಾಮ ನಿಷ್ಪತ್ತಿ ರೂಪ ತುರ್ಯಾವಸ್ಥೆಯನ್ನೂ ಅಂದರೆ ಕೇವಲ ರೂಪ ಶಿವಾದ್ವೈತ ಸಿದ್ಧಾಂತವನ್ನೂ ಸಾರಭೂತವಾಗಿ ಸಿರಿಗನ್ನಡದಲ್ಲಿ ಅರಿವಿಗೆ ತಂದಿದಾರೆ. ಇಲ್ಲಿ ನಿಜಗುಣರು ಬಳಸಿದ 'ಅನುಭವ ಕೆಡಲು' ಎಂಬ ವಾಕ್ಯಕ್ಕೆ ತ್ರಿವಿಧಲಿಂಗಧಾರಿಯ ಚಿದಹಂಭಾವ ಅಥವಾ ಆನಂದಾನುಭೂತಿಯು ಆ ಪರಶಿವನಲ್ಲಿ ಅವಿರಳವಾಗಲು ಅವಿನಾಭೂತವಾಗಲು ಎಂದರ್ಥವು. ಮೂದೆರನಳಿದು ಅಂದರೂ ಇವೇ ಅರ್ಥವು. ಅತ್ಯಂತಾಭಾವವಲ್ಲ. ತ್ರಿವಿಧ ರೂಪವು ಪೃಥುಗ್ಭಾವದಿಂದ ಅಪೃಥಗ್ಭಾವವನ್ನು ತಳೆಯುವಿಕೆ ! ಪ್ರತ್ಯಕ್ಷಾದಿಗಳನ್ನು ಆ ಅಪರೋಕ್ಷಾನುಭಾವದಲ್ಲಿ ಇಂಬಿಟ್ಟು ಬೇರೆನಿಸದೆ ಬೆರೆವೇಕವಾಗಿಸಿ ನಿಜವಳವಟ್ಟು ನಿತ್ಯಸುಖದೊಳಿರೆಂದು ಬೋಧಿಸಿದ್ದಾರೆ.

ಕ್ರಿಯಾಲಿಂಗವೆನಿಸಿದ ಇಷ್ಟಲಿಂಗವೇ ಪ್ರಮಾತೃ. ಚಿತ್ತಾವಚ್ಛಿನ್ನ ಚೈತನ್ಯವಾದ ಪ್ರಾಣಲಿಂಗವೇ ಪ್ರಮಾಣ. ಆನಂದ ವಿಷಯಾವಚ್ಛಿನ್ನ ಚೈತನ್ಯವಾದ ಭಾವಲಿಂಗವೇ ಪ್ರಮೇಯ. 'ತನುವಿನುಪಾಧಿಯಲೇ ಮಾತೃತ್ವ....' ಎಂಬುದರಿಂದ ಇಷ್ಟಲಿಂಗದ ಪ್ರಮಾತೃತ್ವವನ್ನು ಸಿದ್ಧಗೊಳಿಸಿದಾರೆ. ನಿದರ್ಶನಕ್ಕಾಗಿ 'ನಾನು ಭಾವಲಿಂಗವನ್ನು ಕಂಡೆನು.' ನಾನೆಂಬುದೆ ಇಷ್ಟ. ಅದೇ ಪ್ರಮಾತೃ. ಕಂಡೆನೆಂಬುದೇ ಮನ. ಅದೇ ಪ್ರಮಾಣ. ಭಾವಲಿಂಗವನ್ನು ಕಾಣುವುದು ಮನವಲ್ಲದೆ ಕಣ್ಣಲ್ಲ. ಭಾವಲಿಂಗವೇ ಪ್ರಮೇಯ. ಈ ಮೂರರ ಸಾಮರಸ್ಯವೇ ಪ್ರಮಾರೂಪ ಅನುಭೂತಿ. ಆ ಸಾಮರಸ್ಯಾನುಭೂತಿಯನ್ನು ಮೀರಿರುವುದೇ ಚತುರ್ಥಾವಸ್ಥೆ. ಮಂತ್ರರೂಪ ಪದದ ನೆನಹಿನಿಂದ ಪದಾರ್ಥರೂಪ ಭಾವಲಿಂಗವು ಅನುಮಾನಿಸಲ್ಪಡುತ್ತದೆ. ಮಂತ್ರವೇ ಹೊಗೆ. ಮಂತ್ರಾರ್ಥವೆ ಬೆಂಕಿ. ಮಂತ್ರವೇ ಪ್ರಾಣಲಿಂಗ, ಮಂತ್ರಾರ್ಥವೆ ಭಾವಲಿಂಗ. ಮಂತ್ರಕ್ಕೆ ಆಕೃತಿಯನ್ನು ಕೊಟ್ಟ ರೇಖಾರೂಪ ಅಕ್ಷರವೇ ಇಷ್ಟಲಿಂಗ.

ಇಷ್ಟಲಿಂಗ ರೂಪ ಪ್ರತ್ಯಕ್ಷ ಪ್ರಮಾಣದ ಆಶ್ರಯದಿಂದಲೇ ಅನುಭವ ಪ್ರಮಾಣಕ್ಕೆ ಏರಲು ಸೇರಲು ಸಾಧ್ಯ. ಆದ್ದರಿಂದ ಇಷ್ಟಲಿಂಗವು ಅಸಾಧಾರಣ ಕಾರಣವಾಗಿದೆ. ಅಂತೆಯೇ ಪ್ರಾಣಲಿಂಗವೂ ಆಗಿದೆ. ತುರ್ಯಾವಸ್ಥೆಗೆ ಅನುಭಾವರೂಪ ಭಾವಲಿಂಗವು ಅಸಾಧಾರಣ ಕಾರಣವಾಗಿದೆ. ಈ ಮೂರು ಅಸಾಧಾರಣ ಕಾರಣಗಳು ಕ್ರಮವಾಗಿ ಸ್ಥೂಲ ಸೂಕ್ಷ್ಮ ಕಾರಣ ರೂಪಾಗಿವೆ. ಪ್ರಮಾತೃ ಪ್ರಮಾಣ ಪ್ರಮೇಯ ರೂಪ ಈ ತ್ರಿಪುಟಿ ಸ್ವರೂಪ ಸಂಪುಟಾತೀತತತ್ವವೇ ತುರ್ಯ. ಅದೇ ತ್ರಿವಿಧಾಹಂಕಾರ ನಿವೃತ್ತಿ. ಕೈವಲ್ಯ ನಿಷ್ಪತ್ತಿ.

ಸ್ವಾಯತ್ತ ದೀಕ್ಷೆ:

"ಲಿಂಗಧಾರಣಮಾಖ್ಯಾತಂ ದ್ವಿಧಾ ಸರ್ವಾರ್ಥ ಸಾಧಕಮ್
ಬಾಹ್ಯಮಾಭ್ಯಂತರಂ ಚೇತಿ ಮುನಿಭಿರ್ಮೋಕ್ಷಕಾಂಕ್ಷಿಭಿಃ ।
ಚಿದ್ರೂಪಂ ಪರಮಂ ಲಿಂಗಂ ಶಾಂಕರಂ ಸರ್ವಕಾರಣಮ್
ಯತ್ತಸ್ಯ ಧಾರಣಂ ಚಿತ್ತೇ ತದಾಂತರಮುದಾಹೃತಮ್ ॥"

ಭೋಗ ಮೋಕ್ಷಗಳೆರಡನ್ನು ಕೊಡುವ ಲಿಂಗಧಾರಣವು ಹೊರ ಒಳಗೆಂದು ಇತ್ತೆರನಾಗಿದೆ. ಮೋಕ್ಷಾಪೇಕ್ಷಿಗಳಾದ ಮುನಿಜನರು ಇದನ್ನು ಹೇಳಿದಾರೆ.

ಸರ್ವಕ್ಕೂ ಕಾರಣವಾದ ಸಚ್ಚಿದ್ರೂಪಾದ ಶಿವಸಂಬಂಧವಾದ ಸುಖಪ್ರದವಾದ ಪರಮಕಳೆಯೇ ಪ್ರಾಣ (ಜ್ಞಾನ) ಲಿಂಗ.

'ಅತ ಏವ ಪ್ರಾಣಃ' ಪ್ರಾಣಸ್ತಥಾನುಗಮಾತ್

ಎಂಬೀ ಬ್ರಹ್ಮಸೂತ್ರಗಳು ಪ್ರಾಣವೂ ಲಿಂಗ (ಪರಬ್ರಹ್ಮ)ವೆಂದು ಸಿದ್ಧಾಂತಮಾಡಿವೆ. ಪ್ರಾಣಶಬ್ದಕ್ಕೆ ಜ್ಞಾನವೆಂತಲೂ ಶಿವಾದ್ವೈತಿಗಳು ಸಿದ್ಧಾಂತಮಾಡಿದ್ದಾರೆ.

'ಹೃತ್ಪದ್ಮಕರ್ಣಿಕಾಮಧ್ಯೇ ಶುದ್ಧಂ ದೀಪಶಿಖಾಕೃತಿ ।
ಅಂಗುಷ್ಠ ಮಾತ್ರ ವಿಕಲಂ ಧ್ಯಾಯೇದೋಂ ಕಾರಮೀಶ್ವರಂ ।

ಪ್ರಣವ ಮಯಮತರ್ಕ್ಯಂ ಯೋಗಿಹೃದ್ಧ್ಯಾನಗಮ್ಯಂ ।
ಅಜಹರಿ ಶಿವಯೋಗಗಂಸರ್ವ ಭೂತಸ್ಥಮೇಕಂ ।
ಸಕೃದಪಿ ಮನಸಾ ಮಾಂ ಧ್ಯಾಯತೇಯಃ ಸ ಮುಕ್ತಃ ॥"

—ಉತ್ತರ ಭಗವದ್ಗೀತಾ.

ಆ ಚಿಲ್ಲಿಂಗವನ್ನು ಅವಧಾರಣಾತ್ಮಿಕ ವೃತ್ತಿಯುಳ್ಳ ಚಿತ್ತದಲ್ಲಿ ಧ್ಯಾನ ರೂಪದಲ್ಲಿ ಧಾರಣಮಾಡುವುದೇ ಆಂತರಧಾರಣ. ಅದೇ ಸ್ವಾಯತ್ತ ದೀಕ್ಷೆ.

ಮೂರು ಮೈಯುಳ್ಳ ಮನುಷ್ಯನಿಗೆ ಮೂರವಸ್ಥೆಗಳಿವೆ. ಕ್ರಿಯಾ ಲಿಂಗಧಾರಣದಿಂದ ಸ್ಥೂಲಾಂಗವನ್ನು ಜಾಗ್ರದವಸ್ಥೆಯನ್ನು ಪರಿಶುದ್ಧಗೊಳಿಸಿ ಕೊಂಡ ಶಿಷ್ಯನಿಗೆ ಸೂಕ್ಷ್ಮಾಂಗದಲ್ಲಿ ಸ್ವಪ್ನಾವಸ್ಥೆಯನ್ನು ಶುದ್ಧವಿಸುವ ಚಿಲ್ಲಿಂಗಧಾರಣವು ಅತ್ಯಾವಶ್ಯಕವಾಗಿದೆ. ಇಲ್ಲಿ ಸ್ವಪ್ನಶುದ್ಧಿಯೆಂದರೆ ಅಜ್ಞಾನ ನಿವೃತ್ತಿ; ಮಾಯಾಮೋಹ ನಿಚ್ಛಿತ್ತಿ. ಅಕರ್ತವ್ಯದಲ್ಲಿ ತೊಡ ಗಲು ಅಜ್ಞಾನವೇ ಕಾರಣ. ಅಂತೆಯೇ ಕರ್ತವ್ಯವನ್ನು ಕೈಬಿಡಲು ಮರ ವೆಯೇ ಮೂಲ. ಅದೇ ಜ್ಞಾನಜ್ಯೋತಿಯು ಅಂತರಂಗದಲ್ಲಿ ಬೆಳ್ಳನೇ ಬೆಳಗಲು ಅನ್ಯಾಯ ಅಕ್ರಿಯಾದಿಗಳು ಸಾಮಾನ್ಯವಾಗಿ ಸಂಭವಿಸವು. ಮಿಗಿಲಾಗಿ ಸ್ವಸ್ವರೂಪ ಜ್ಞಾನವನ್ನು ಮಾಡಿಕೊಳ್ಳುವುದು ಮಾನವನಿಗೆ ಮುಖ್ಯವಾದ ಕಾರ್ಯ. ಅಂತರಂಗದ ಜ್ಞಾನ ಬಹಿರಂಗದ ಕ್ರಿಯೆಗೆ ಅಂತ ರಂಗದ ಸೂಕ್ಷ್ಮವಾದ ಮನನಾದಿ ಕ್ರಿಯೆಗೆ ಕೈಯಾಸರ. ಒಟ್ಟಿನಲ್ಲಿ ಮನದ ಮರವೆಯನ್ನು ಕಾಯದ ಕರ್ಮವನ್ನು ಕತ್ತರಿಸಲು ಚಿಜ್ಯೋತಿರ್ಲಿಂಗಧಾರಣ ಧ್ಯಾನಗಳು ಅತ್ಯವಸರ. ಆತ್ಮಸ್ವರೂಪವನ್ನು ಅರಿಯಲು ಆಧಾರ. ಸ್ವರೂಪವನ್ನು ತಿಳಿಯದೆ ಸತ್ಕ್ರಿಯೆಯಲ್ಲಿ ಶಿವಲಿಂಗಾರ್ಚನೆಯಲ್ಲಿ ಮಾತ್ರ ನಿರತನಾದವನು ಮಂದಾಧಿಕಾರಿ, ಅಥವಾ ಮುಗ್ಧಭಕ್ತನೆನ್ನುವರು. ಮತ್ತೂ ಒಂದು ಮಾತಿನಲ್ಲಿ ಹೇಳಬೇಕೆಂದರೆ ಸಂಪ್ರದಾಯ ಶರಣನೆನ್ನುವರು

'ತ್ಯಜೇದ ಜ್ಞಾನ ನಿರ್ಮಾಲ್ಯಂ ಸೋಽಹಂ ಭಾವೇನ ಪೂಜಯೇತ್'

ಕರ್ತೃತ್ವವು ಹೇಗೆ ಪರಶಿವನ ಒಂದು ಲಕ್ಷಣವೋ ಜಾತೃತ್ವವೂ

ಇನ್ನೊಂದುಲಕ್ಷಣವಾಗಿದೆ. ಕರ್ತೃತ್ವವು ಹಸರೆಲೆಯಾದರೆ ಜ್ಞಾತೃತ್ವವು ನರುಗಂಪನೀವ ಹೂವು; ಮರಂದವುಳ್ಳ ಹೂವು.

ಅಂತರಂಗದಲ್ಲಿ ಅರಿವಿದ್ದರೆ ಬಹಿರಂಗದ ಎಲ್ಲ ಇಂದ್ರಿಯಗಳ ಆ ಆ ಕ್ರಿಯೆಗಳು ವ್ಯವಹಾರಗಳು ಸಾಂಗವಾಗಿ ಸೂಕ್ತವಾಗಿ ಸಾಗುತ್ತವೆ. ಕಾಯೇಂದ್ರಿಯಗಳು ಅಂತಃಕರಣಗಳು ಆತ್ಮರತವಾಗಬೇಕಾದರೆ ಸಂಕಲ್ಪ ವಿಕಲ್ಪ ಮಮಕಾರ ಅಹಂಕಾರವಿರಹಿತವಾಗಬೇಕಾದರೆ ಆತ್ಮಜ್ಞಾನ ಅತ್ಯಗತ್ಯ. ಇಷ್ಟಲಿಂಗ–ಪ್ರಾಣಲಿಂಗಗಳಲ್ಲಿ ವಾಸ್ತವಿಕವಾಗಿ ಭೇದವಿಲ್ಲ. ಉಪದೇಶಕ್ಕಾಗಿ ಭೇದವಿದೆ. 'ಉಪದೇಶ ಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್' ಕ್ರಿಯಾಜ್ಞಾನಾತ್ಮಗಳಾದ ಇಷ್ಟಪ್ರಾಣಲಿಂಗಗಳಿಗೆ 'ಹಾಲು–ಬೆಣ್ಣೆ' ಗಳಂತೆ ನಾಮಭೇದವಲ್ಲದೆ ವಸ್ತುಭೇದವಲ್ಲ, ಧ್ಯೇಯವಿರೋಧವಿಲ್ಲ. ಹೀಗೆ ಅಂಗ–ಲಿಂಗಗಳೆರಡರ ನಿಜಜ್ಞಾನವು ತನಗೆ ನೆಲಗೊಳ್ಳಬೇಕು. ಜೀವತ್ವಕ್ಕೆ ಕಾರಣವಾದಂತೆ ಕಾರ್ಯಕ್ಕೂ ಕಾರಣವಾಗಿದೆ ಅವಿದ್ಯೆ.

'ಕಾಯದ ಮೊದಲಿಂಗೆ ಬೀಜವಾವುದೆಂದರಿಯದೀ ಲೋಕ.
ಇಂದ್ರಿಯಂಗಳು ಬೀಜವಲ್ಲ.
ಆ ಕಳಾಭೇದವಲ್ಲ. ಸ್ವಪ್ನಬಂದೆರಗಿತ್ತಲ್ಲ.
ಇದಾವಂಗೂ ಶುದ್ಧ ಸುಯಿಧಾನವಲ್ಲ ಕಾಣಾ ಗೊಗ್ಗೇಶ್ವರಾ.'

ಕಾಯೋತ್ಪತ್ತಿಗೆ ಅವಿದ್ಯೆ (ಸ್ವಪ್ನ) ಮೂಲವಾಗಿದೆ. ಅವಿದ್ಯೆ ಅಂದರೆ ಅಜ್ಞಾನವು ಶುದ್ಧವಾದ ಜಾಗ್ರತ್ತಲ್ಲ: ರಕ್ಷಕವಲ್ಲ. ಕಾರಣ ಅದನ್ನು ಕಳೆದುಕೊಳ್ಳಬೇಕು. ಅದು ತೊಲಗಬೇಕಾದರೆ ಚಿತ್ತದಲ್ಲಿ ಚಿಲ್ಲಿಂಗಧಾರಣವಾಗಲೇಬೇಕು.

ಸತ್ಕ್ರಿಯೆಗಳಿಂದ ಚಿತ್ತಶುದ್ಧಿಯಾಗುತ್ತದೆ. ನಿರ್ಮಲ ಮತ್ತು ನಿಶ್ಚಲ ಚಿತ್ತದಲ್ಲಿ ನಿಜಜ್ಞಾನ ಅಳವಡುತ್ತದೆ. ಅಂದರೆ ಚಿಲ್ಲಿಂಗಧಾರಣವಾಗುತ್ತದೆ. ಚಿತ್ತಶುದ್ಧಿಯಿಲ್ಲದೆ ಚಿಲ್ಲಿಂಗಧಾರಣ ಸುತರಾಂ ಸಾಧ್ಯವೇ ಇಲ್ಲ. ಇದರಿಂದಾಗಿ ಮೊದಲು ತ್ಯಾಗಾಂಗದಲ್ಲಿ ಕ್ರಿಯಾಲಿಂಗಧಾರಣ ಅರ್ಚನಾದಿಗಳನ್ನು ವಿಧಿಸಿಯಾಯಿತು. ಆಯತ್ತ ಸಂಸ್ಕಾರವು ಸ್ವಾಯತ್ತ ಸಂಸ್ಕಾರಕ್ಕೆ ಪೋಷಕವಾಗಿದೆ. ಆ ಕರಸ್ಥಲದ ಸಕಲಲಿಂಗವನ್ನೇ ಸಕಲ

ನಿಷ್ಕಲಗೊಳಿಸಿ ಮನಸ್ಥಲದಲ್ಲಿ ಮುಹೂರ್ತಗೊಳಿಸುವುದೇ ಸ್ವಾಯತ್ತ ದೀಕ್ಷೆ! 'ಆತ್ಮಾವಾ ಅರೆ ದ್ರಷ್ಟವ್ಯಃ' ಎಂಬಂತೆ ಕಾಯದ ಕರಸ್ಥಲಕ್ಕೆ ಕರುಣಿಸಿ ಕಣ್ಣಿಗೆ ಕಾಣಿಸಿದರೆ 'ಆತ್ಮಾವಾ ಅರೆ ಮಂತವ್ಯಃ' ಎಂಬಂತೆ ಅದನ್ನೇ ಮನಸ್ಥಲಕ್ಕೆ ಶ್ರೀಗುರು ಕರುಣಿಸಿ ಮನನಕ್ಕೆ ಅನುಕೂಲಿಸುವನು. ಮುಂಡಕೋಪನಿಷತ್ತಿನಲ್ಲಿ ಈ ವಿಷಯ ಸ್ಫೂಟವಾಗಿ ಉಕ್ತವಾಗಿದೆ :

'ಏಷೋಽಣುರಾತ್ಮಾ ಚೇತಸಾ ವೇದಿತವ್ಯೋ,
ಯಸ್ಮಿನ್ ಪ್ರಾಣಃ ಪಂಚಧಾ ಸಂವಿವೇಶ
ಪ್ರಾಣೈಶ್ಚಿತ್ತಂ ಸರ್ವಮೋತಂ ಪ್ರಜಾನಾಂ,
ಯಸ್ಮಿನ್ವಿಶುದ್ಧೇ ವಿಭವತ್ಯೇಷ ಆತ್ಮಾ ||'

ಪ್ರಾಣಲಿಂಗರೂಪವಾದ ಸೂಕ್ಷ್ಮಾತ್ಮವು (ಅಂತರಾತ್ಮವು) ಚೇತಸ್ಸಿಗೆ ವೇದ್ಯವಾಗುತ್ತದೆ. ಆದ್ದರಿಂದ ಅದನ್ನು ಚಿತ್ತದಲ್ಲಿ ಧಾರಣಮಾಡುತ್ತಾನೆ ಶ್ರೀಗುರು. ಆ ಅಂತರಾತ್ಮನಲ್ಲಿ ಪಂಚಪ್ರಾಣಗಳು ಪ್ರವೇಶಿಸಿ ಸಮ್ಮಿಲನವಾಗಿರುತ್ತವೆ. ಅದರಿಂದ ಅದು ಪ್ರಾಣ ಲಿಂಗವೆನಿಸಿದೆ. ಮತ್ತು ಪ್ರಾಣಗಳೊಡನೆ ಚಿತ್ತವೂ ಸಂಪೂರ್ಣವಾಗಿ ಅಂತರಾತ್ಮರೂಪಪ್ರಾಣಲಿಂಗದಲ್ಲಿ ಕೂಡಿಕೊಂಡಿರುತ್ತದೆ. ಮತ್ತು ವಿಶುದ್ಧವಾದ ಆ ಚಿತ್ತದಲ್ಲಿ ಆ ಪ್ರಾಣಲಿಂಗವು ಇದ್ದು ಬೆಳಗುತ್ತದೆ.

'....ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದ....' 'ಅಂಗದಲ್ಲಿ ಆಚಾರವ ತೋರಿದ; ಆ ಆಚಾರವೇ ಲಿಂಗವೆಂದರುಹಿದ. ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ; ಆ ಅರಿವೇ ಜಂಗಮವೆಂದು ತೋರಿದ. ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಎನಗೀ ಕ್ರಮುವನರುಹಿದನಯ್ಯ.' ಇದು ಶ್ರೀಗುರು ಸ್ವಾಯತ್ತ ದೀಕ್ಷೆಯನ್ನು ಕರುಣಿಸುವ ಕ್ರಮ.

ಕಾಯಕ್ಕೆ ನೆಳಲಾಗಿ ಕಾಡಿದ ಮಾಯೆ ಪ್ರಾಣಕ್ಕೆ ಮನವಾಗಿ ಕಾಡದೆ ಬಿಟ್ಟಲ್ಲ. ಮನಕ್ಕೆ ರಜೋಗುಣದಿಂದ ವಿಷಯದ ನೆನಹಾಗಿ ಕಾಡದೆ ಬಿಟ್ಟಲ್ಲ. ವಿಷಯದ ನೆನಹೇ ವಿಸ್ಮೃತಿ. ವಿಸ್ಮೃತಿಯೆ ಅವಿದ್ಯೆ. ಅವಿದ್ಯಾ ಸಂಬಂಧವೇ ಜೀವತ್ವ. ಜೀವತ್ವವೇ ಭವಬಂಧನ ಸಾಧನ ಸತ್ವ. ಈ ಜೀವ

ಭಾವ ತೊಲಗಬೇಕಾದರೆ ವಿಷಯದ ಸಂಬಂಧ ತೊಲಗಬೇಕು. ವಿಶ್ವಭಾಸಕನ ಸಂಬಂಧ ತನಗಾಗಬೇಕು. ತನ್ನನ್ನು ತಾನು ತಿಳಿಯಬೇಕು.

'ಅಂತರಂಗದಲ್ಲಿ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನರಿಯದೆ ಬಹಿರಂಗದಲ್ಲಿ ಬಳಲುತ್ತಿದ್ದರಲ್ಲಾ! ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾಶ ಪರಬ್ರಹ್ಮ ಪ್ರಾಣಲಿಂಗವನು ಅವರೆತ್ತಬಲ್ಲರು? ಮಹಾನುಭಾವದಿಂದ ತಿಳಿದು ನೋಡಲು, ತನ್ನಲ್ಲಿಯೇ ತೋರುತ್ತಿವೆ. ಹೇಳಿ ಹೇಳಿಹೆನೆಂಬಡೆ ನುಡಿಗೊಳಗಾಗದು. ತಿಳಿದು ನೋಡಲು ತಾನಲ್ಲದೆ ಮತ್ತೇನೂ ಇಲ್ಲ. ಅದೇ ಪ್ರಾಣಮಯಲಿಂಗ; ತಾನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು'

'ಲಿಂಗದಲ್ಲಿ ಪ್ರಾಣವನಿರಿಸಿ, ಪ್ರಾಣದಲ್ಲಿ ಲಿಂಗವನಿರಿಸಿ ನೆನೆವುತ್ತಿದ್ದ ಕಾರಣ ಪ್ರಾಣಲಿಂಗವಾಯಿತ್ತು. ಆ ಲಿಂಗ ಸರ್ವ ಕರಣಂಗಳ ವೇಧಿಸಿ, ಕರಣಂಗಳು ಲಿಂಗಕರಣಂಗಳಾದ ಕಾರಣ, ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ ಹೊರೆದೆನೆಂದು ಅರಿಯೆನು; ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನೀವು ಪ್ರಾಣಲಿಂಗವಾಗಿ!'

'ಅಂತರಂಗದಲ್ಲಿ ಆವರಿಸಿ ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳಗುವೆ. ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ ಉರುಲಿಂಗದೇವನವ್ವಾ!'

'ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಇಷ್ಟಲಿಂಗವಿಡಿದು ಪ್ರಾಣಲಿಂಗಸ್ವಾಯತ. ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲ ಚೆನ್ನ ಸಂಗಯ್ಯನಲ್ಲಿ ಲಿಂಗೈಕ್ಯವು.'

'ಅಗ್ನಿ ದಿಟವೆಂದರೆ ತಾ ಹುಸಿ, ಕಾಷ್ಠವಿಲ್ಲದೆ! ಕಾಷ್ಠದಲ್ಲಡಗಿ ಸುಡವಿಪ್ಪ ಭೇದವನರಿತಡೆ ಪ್ರಾಣಲಿಂಗ ಎಂವೆಂಬೆನೆಂದನು ಅಂಬಿಗರ ಚೌಡಯ್ಯ.'

'ಲಿಂಗವೇ ಪ್ರಾಣ; ಪ್ರಾಣವೇ ಲಿಂಗವಾಯಿತ್ತು. ಅಂಗಲಿಂಗವಾಯಿತ್ತು. ಗುಹೇಶ್ವರಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ.'

'ಇಷ್ಟಲಿಂಗ ಪ್ರಾಣಲಿಂಗವೆಂದು ವಿಭೇದಿಸುವಲ್ಲಿ, ಕುಸುಮದ ಗಿಡು ವಿಂಗೆ ವಾಸನೆಯುಂಟೆ, ಕುಸುಮಕ್ಕಲ್ಲದೆ ? ಅದು ಗಿಡವಿಡಿದಾದ ಕುಸುಮ ವೆಂದರಿದು, ಗಿಡುವಿನ ಹೆಚ್ಚುಗೆ ಕುಸುಮದ ನಲಿವು, ಸುಗಂಧದ ಬೆಳೆ. ಭಕ್ತಿಗೆ ಕ್ರಿಯೆ, ಕ್ರಿಯೆಗೆ ಶ್ರದ್ಧೆ, ಶ್ರದ್ಧೆಗೆ ಪೂಜೆ, ಪೂಜೆಗೆ ವಿಶ್ವಾಸ, ವಿಶ್ವಾ ಸಕ್ಕೆ ವಸ್ತು ತನ್ಮಯವಾಗಿಪ್ಪುದು. ಇದುತುರ್ಯ ಭಕ್ತಿಯ ಇರವು. ಎನ್ನಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗವ ಮೆಲ್ಲ ಮೆಲ್ಲನೆ ಕೂಡುವ ಕೂಟ.'

ಈ ವಚನಗಳೆಲ್ಲ ಇಷ್ಟಪ್ರಾಣಗಳ ಸ್ವರೂಪವನ್ನು ಸಂಬಂಧವನ್ನು ಸ್ವಾನುಭೂತಿಯಿಂದ ಸವಿಸ್ತಾರಗೊಳಿಸಿವೆ. ಆ ಪ್ರಾಣಲಿಂಗದ ಪರಂಜ್ಯೋತಿ ಸ್ವರೂಪವನ್ನು ಅಸಾಧಾರಣ ವಿಭೂತಿತ್ವವನ್ನು ಸಾಮಾನ್ಯರು ಅರಿಯರು. ಸ್ವಾನುಭಾವಿಗಳು ಅರಿವರು. ಅದು ತನ್ನೊಳಗಿದ್ದರೂ ತನಗರಿಯದು. ತಿಳಿಗಣ್ಣಿಲ್ಲದೆ ತೋರದು. ಸೂರ್ಯನ ಬೆಳಕಿನಿಂದಲೇ ಸೂರ್ಯನನ್ನು ನೋಡುವಂತೆ ಜ್ಞಾನದಿಂದ ಜ್ಞಾನಲಿಂಗವನ್ನು ನೋಡಬೇಕಲ್ಲದೆ ಬೇರೆ ಹೊಲಬಿಲ್ಲ. ಅದು ನುಡಿಗೆ ನಿಲುಕದು. ಅದರಿಂದ ನುಡಿ ಮೈಗೂಡಿದೆ. ನುಡಿಗೆ ಸಾಕ್ಷಿಯಾಗಿದೆ; ಪ್ರೇರಕ ಶಕ್ತಿಯಾಗಿದೆ. ಅದುವೆ ತಾನೆಂದರಿಯ ಬೇಕು.

ಪ್ರಾಣವಾವುದು, ಲಿಂಗವಾವುದು ? ಲಿಂಗಪ್ರಾಣಗಳೆರಡೂ ಒಂದಾ ದಾಗ ವಿಂಗಡಿಸಲು ಅಳವಿಲ್ಲ. ಅಷ್ಟೇ ಅಲ್ಲ ಆ ಲಿಂಗವ್ಯಾಪ್ತಿಗೆ ಯಾವ ಕರಣವೂ ಹೊರಗಾಗುವಂತಿಲ್ಲ. ಎಲ್ಲೆಲ್ಲಿಯೂ ಅದರ ವ್ಯಾಪ್ತಿ, ಎಲ್ಲೆಲ್ಲಿಯೂ ಅದರ ಪ್ರಾಪ್ತಿ. ಕಣ್ಣಿನೊಳಗಿರುವ ಮೂರುತಿಯೂ ಅದೆ. ಮನದೊಳ ಗಿರುವ ಕೀರುತಿಯೂ ಅದೆ. ಬ್ರಹ್ಮರಂಧ್ರದೊಳಗೆ ಬೆಳಗುವ ಜ್ಯೋತಿಯೂ ಅದೇ. ಇಷ್ಟದಿಂದ ಪ್ರಾಣಲಿಂಗ; ಪ್ರಾಣಲಿಂಗದಿಂದ ಇಷ್ಟಲಿಂಗ. ಕಾಷ್ಠ ವಿಲ್ಲದೆ ಅಗ್ನಿಯಿಲ್ಲ. ಅಗ್ನಿ ಮೈದೊರದೆ ಕಾಷ್ಟ ಅಗ್ನಿಯಾಗದು. ಗಿಡ ದಿಂದ ಹೂವಾದರೂ ಹೂವಿನ ಕಂಪು ಮರಕ್ಕಿಲ್ಲ. ಆದರೆ ಗಿಡವಿಲ್ಲದೆ ಹೂವಾಗದು. ಈ ಭೇದಾಭೇದಗಳನ್ನು ತಿಳಿದವನು ಪ್ರಾಣಲಿಂಗಧಾರ ಕನು. ಸ್ವಾಯತ್ತ ದೀಕ್ಷೆಗೆ ಸಂದಾತನು.

ಇದಿಷ್ಟು ಹೇಳಿದರೂ ಪ್ರಾಣಲಿಂಗದ ಪರಿಚಯ ಪೂರೈಸಲಿಲ್ಲ ; ಪೂರ್ಣ ವಾಗಲಿಲ್ಲ. ಅಖಂಡವಾಗಲಿಲ್ಲ. ಇದಿಷ್ಟೂ ವ್ಯಷ್ಟಿಗತ ವ್ಯಕ್ತಿಗತ ಅಂತ ರಾತ್ಮನ ಒವ್ಮೊಗದ ನೋಟವಾಯಿತು. ವ್ಯಷ್ಟಿಗತವಾದರೂ ವ್ಯಾಪಕವಾದ ಸಮಷ್ಟಿಸ್ವರೂಪವನ್ನು ಶ್ರೀ ಜಗದ್ಗುರು ರೇಣುಕರು ಮುಂದಿನ ಮಂತ್ರಗಳಲ್ಲಿ ಮನದಟ್ಟು ಮಾಡಿಸುತ್ತಾರೆ. ಅಂತರಂಗದಲ್ಲಿ ಅಂಗುಷ್ಠ ಮಾತ್ರವಾಗಿದ್ದರೂ ಅದರ ಪ್ರಭಾವ ವ್ಯಾಪ್ತಿ ವಿಶ್ವಾತೀತವಾದುದು :

ಚಿದ್ರೂಪಂ ಹಿ ಪರಂ ತತ್ತ್ವಂ ಶಿವಾಖ್ಯಂ ವಿಶ್ವಕಾರಣಮ್
ನಿರಸ್ತ ವಿಶ್ವಕಾಲುಷ್ಯಂ ನಿಷ್ಕಳಂ ನಿರ್ವಿಕಲ್ಪಕಮ್ ।
ಸತ್ತಾನಂದ ಪರಿಸ್ಫೂರ್ತಿ ಸಮುಸಲ್ಲಾಸಕಲಾಮಯಮ್
ಅಪ್ರಮೇಯಮನಿರ್ದೇಶ್ಯಂ ಮುಮುಕ್ಷುಭಿರುಪಾಸಿತಮ್ ॥
ಪರಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಮ್ ।"

ಅದು ಜೀವಾತ್ಮನಿಗಿಂತ ಬೇರಾಗಿ ಪರವೆನಿಸಿವೆ. ತತ್ತ್ವವೆನಿಸಿಕೊಂಡು ದರಿಂದ ಮಹಾವಾಕ್ಯಜನ್ಯ ಅಂದರೆ ಲಿಂಗಾಂಗಸಾಮರಸ್ಯಜನ್ಯ ಅಪರೋಕ್ಷ ಜ್ಞಾನಗಮ್ಯವಾಗಿರುವುದು. 'ತತ್ತ್ವ' ಶಬ್ದದಲ್ಲಿ ತತ್-ತ್ವ ಎರಡು ಪದಗಳಿ ರುವುದರಿಂದ ತತ್ಪದಾರ್ಥವಾದ ಪರಮಾತ್ಮ (ಲಿಂಗ) ತ್ವಂಪದಾಥದವಾದ ಶುದ್ಧ ಜೀವಾತ್ಮ (ಅಂಗ) ಹೀಗೆ ಉಭಯಾರ್ಥ ಪ್ರತಿಪಾದಕವಾಗಿ ಪಾರ ಮಾರ್ಥಿಕ ತತ್ತ್ವಬೋಧಕವಾಗಿದೆ. ಮತ್ತು ಚಿದ್ರೂಪವಾಗಿರುವುದು. ಅದು ಬರೀ ಸದ್ರೂಪ ಮಾತ್ರವಲ್ಲ ; ಜತೆಗೆ ಚಿದ್ರೂಪವೂ ಆಗಿದೆ. ಇದ ರಿಂದಾಗಿ ಜಡರಹಿತ. ಮಾಯಾಮಲ ಆವರಣರಹಿತವಾದ ಘಮನದ ಅಂದರೆ ಚಿತ್ತದ ಜ್ಞಾನಕ್ಕೆ ವಿಷಯನಾಗಿದ್ದಾನೆ. ಮತ್ತು ಶಿವಾಖ್ಯವಾದುದು. ವೀರಶಿವಾಗಮ ಶ್ರುತಿವೇದ್ಯವಾಗಿದೆ. ವ್ಯಷ್ಟಿಯಿಂದ ಸಮಷ್ಟಿಯಾಗುವುದು ಲಿಂಗ. ಸಮಷ್ಟಿಯಾಗಿದ್ದು ವ್ಯಷ್ಟಿಗೆ ಬರುವುದು ಶಿವ. ಶಿವನಿಂದ ಲಿಂಗ ವಾಗುತ್ತದೆ. ಶೈವೀಕಳೆಯಿಂದ ಲಿಂಗವಾಗಿದೆ. ಪಂಚಾಕ್ಷರ ಮಂತ್ರದಲ್ಲಿ ಶಿವತತ್ತ್ವವುಂಟಲ್ಲದೆ ಲಿಂಗವಿಲ್ಲ. ಲಿಂಗತತ್ತ್ವಕ್ಕಿಂತ ಶಿವತತ್ತ್ವ ಅನಾದಿ. ಶಿವಲಿಂಗವಾಗುವುದರಲ್ಲಿ ಔಚಿತ್ಯವಿದೆಯೆಂದು ನಮ್ಮ ಅಭಿಮತ.

'ಶೇತೇ ಅನೇನ, ಶೇತೇ ಅಸ್ಮಿನ್ ಸರ್ವಮಿತಿ ಶಿವಃ' 'ಶಿವಮಸ್ಯಾಸ್ತಿ ಶಿವಯತಿ ವಾ ಶಿವಃ' ಹೀಗೆ ವಿಗ್ರಹಿಸುವುದರಿಂದ ಈ ಶಬ್ದವು ಆ ಪರತತ್ತ್ವ ವಿಷಯದಲ್ಲಿ ಯೋಗರೂಢ ಪದವಾಗಿದೆ. ಶಕ್ತಿ (ವಾಚ್ಯ) ವೃತ್ತಿ, ಲಕ್ಷಣಾ ವೃತ್ತಿಗಳೆರಡೂ ಶಿವಶಬ್ದಕ್ಕುಂಟು. ಮಂಗಲಕರನೂ ಕ್ಷೇಮಕರನೂ ಸರ್ವಾ ಧಾರನೂ ಶುಭ್ರನೂ ಆಗಿದಾನೆ. ಅದರಿಂದಾಗಿ ವಿಶ್ವಕಾರಣನಾಗಿದಾನೆ. ಚರಾಚರ ವಿಶ್ವಕ್ಕೆಲ್ಲ ಮಹಾಕಾರಣನಾಗಿದಾನೆ. ಅಭಿನ್ನ ನಿಮಿತ್ತೋ ಪಾದಾನ ಕಾರಣನಾಗಿದಾನೆ. ವಿಶ್ವಕಾರಣನಾಗಿದ್ದರೂ ವಿಶ್ವದೋಷ ಅವನಿ ಗಿಲ್ಲ. ಗಾಳಿ ಮೋಡಗಳ ಸಂಪರ್ಕವಿದ್ದರೂ ಆಕಾಶವೂ ಹೇಗೆ ಶುದ್ಧವಾಗಿ ದೆಯೋ ಹಾಗೆ ಅದಕ್ಕೂ ಹೆಚ್ಚು ಶುದ್ಧನಾಗಿದ್ದಾನೆ. ನಿಷ್ಕಲವಾದುದು ಅಂದರೆ ನಿರವಯವಾದುದು; ನಿಶ್ಶಬ್ದ ಬ್ರಹ್ಮವಾದುದು. ಅಖಂಡವಾದುದು. ಕಲಯತಿ, ಕಲ್ಯತೇ, ಕಂ ಲಾತಿ ವಾ ಕಲಾ; ನಿರ್ಗತಾ ಕಲಾ ಯಸ್ಯ ತತ್ ನಿಷ್ಕಲಂ ಎಂದು ಮುಂತಾಗಿ ನಿಷ್ಕಲ ಶಬ್ದವನ್ನು ಬಿಡಿಸುವುದುಂಟು. ಒಟ್ಟಿನಲ್ಲಿ ಅದು ಚೂರ್ಣವಸ್ತುವಲ್ಲ, ಪೂರ್ಣವಸ್ತು. ಅದು ಕಾರಣ ಅದು ನಿರ್ವಿಕಲ್ಪಕಂ ನಾಮರೂಪಾದಿಗಳಿಂದ ರಹಿತವಾದುದು; ಮಾನಸಿಕ ವಿಕಲ್ಪ ವೃತ್ತಿಗೆ ನಿಲುಕದಂತಿರುವಂತಹುದು.

'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ, ಯಥಾ ಪೃಥಿವ್ಯಾ ಮೋಷಧಯ: ಸಂಭವಂತಿ। ಯಥಾ ಸತಃ ಪುರುಷಾತ್ಕೇಶ ಲೋಮಾನಿ, ತಥಾಕ್ಷರಾತ್ಸಂಭವತೀಹ ವಿಶ್ವಮ್' ಈ ಮುಂಡಕ ಶ್ರುತಿಯಂತೆ ಮಹಾ ಲಿಂಗವು ವಿಶ್ವಕಾರಣವಾಗಿದೆ; ಅಭಿನ್ನ ನಿಮಿತ್ತೋಪಾದಾನಕಾರಣವಾಗಿದೆ. 'ಜನ್ಮಾದ್ಯಸ್ಯಯತಃ' ಎಂದು ಬ್ರಹ್ಮ ಸೂತ್ರವೂ ಸಾರಿದೆ. ಅದು 'ಸತ್ತ್ವಾನಂದ ಪರಿಸ್ಫೂರ್ತಿ ಸಮುಲ್ಲಾಸ ಕಲಾಮಯಂ.' ಸತ್ ಚಿತ್ ಆನಂದ ನಿತ್ಯ ಪರಿಪೂರ್ಣಾಖಂಡ ಲಕ್ಷಣಗಳನ್ನು ಸ್ಫೂರ್ತಿಗೊಳಿಸಿ ಪ್ರಕಾಶಿಸಿ ವಿಕಾಸವಾದ ಪೂರ್ಣ ಕಲಾಮಯವಾದುದು. ಚಿತ್ಕಳಾ ಪ್ರಪೂರ್ಣ ವಾದುದು. ಅದು ಅಪ್ರಮೇಯ. ಅಂದರೆ ಪ್ರತ್ಯಕ್ಷಾದಿ ಪ್ರಮಾಣಗಳ ಅಳತೆಗೆ ಎಟಕುವುದಲ್ಲ. ಕುರುಹಿಟ್ಟು ತೋರುವುದಲ್ಲ. ವ್ಯಾವಹಾರಿಕ ಶಬ್ದ ಬೋಧ್ಯವಲ್ಲ. ಕಾರ್ಯಾದೇಶವಲ್ಲ. ಇವೆರಡು ಕಾರಣಗಳಿಂದ ಅದು ಅನಿರ್ದೇಶ್ಯವೆನಿಸಿದೆ. ಹೀಗಿದ್ದರೂ ಅದು ಮೋಕ್ಷಾಪೇಕ್ಷಿಗಳ ಉಪಾಸನೆಗೆ

ವಚನದಲ್ಲಿ ಹೇಳಿದ ಮನದ ಕೊನೆಯೇ ಆಧಾರವೆಂದು ಭಾವಿಸಬೇಕು. ಒಂದೇ ಮೂರಾಗಿದೆ. ಮೂರೂ ಒಂದೇ ಆಗಿವೆ.

"ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮ ಸನಾತನಮ್
ಉಪಾಸನಾರ್ಥಮಂತಃಸ್ಥಂ ಪರಿಚ್ಛಿನ್ನಂ ಸ್ವಮಾಯಯಾ ।"

ಅಖಂಡಿತವಾದ ಆ ವಸ್ತು ಖಂಡಿತವೂ ನಿರ್ದೇಶ್ಯವೂ ಆದಕಾರಣವನ್ನು ಇಲ್ಲಿ ಕಾಣಿಸುತ್ತಾನೆ ಕವಿ :

ಅದು ಅಖಂಡ, ಅವ್ಯಕ್ತ ; ಮತ್ತು ಬೃಹ್ಮತ್, ಶಾಶ್ವತವಾದ ಮಹಾ ಲಿಂಗ. ಉಪಾಸನೆಗಾಗಿ ಅಂತಸ್ಥವಾಗಿದೆ. ಪರಿಚ್ಛಿನ್ನವಾಗಿದೆ. ವ್ಯಕ್ತವಾಗಿದೆ. ಚಿಚ್ಛಕ್ತಿ ವಿಶಿಷ್ಟವಾಗಿ ಭ್ರೂಮಧ್ಯದಲ್ಲಿ, ಚಿದಚಿಚ್ಛಕ್ತಿ ವಿಶಿಷ್ಟವಾಗಿ ಹೃದಯದಲ್ಲಿ ಅಚಿಚ್ಛಕ್ತಿ ವಿಶಿಷ್ಟವಾಗಿ ಆಧಾರದಲ್ಲಿ ಆವಾಸವಾಗಿದೆ. ಮಾತು ಮನಗಳಿಗೆ ನಿಲುಕದ ಮಹಾಲಿಂಗವು ಗುರುಕೃಪೆಯಿಂದ ಮಾತು ಮನ ಭಾವಗಳಿಗೆ ನಿಲಕುವಂತಾಗಿದೆ. ಉಪಾಶ್ಯವಾಗಿದೆ. ಅಂಗಉಪಾಸಕನಾಗಿದ್ದಾನೆ. 'ಅನುಪಪತ್ತೇಸ್ತು ನ ಶಾರೀರಃ' 'ಕರ್ಮಕರ್ತೃವ್ಯಪದೇಶಾಚ್ಚ' ಅಂಗನಲ್ಲಿ ಸರ್ವಜ್ಞತ್ವಾದಿ ಶಕ್ತಿಯಿಲ್ಲದ್ದರಿಂದ ಕರ್ಮಕರ್ತೃತ್ವವಿರುವದರಿಂದ ಅಂಗ ಉಪಾಸಕನೆನಿಸಿದ್ದಾನೆ. ಲಿಂಗ ಉಪಾಸ್ಯನೆನಿಸಿದ್ದಾನೆ. ಮತ್ತು 'ಶಬ್ದ ವಿಶೇಷಾತ್' ಅಂಗ-ಲಿಂಗವೆಂಬ ನಾಮ ವ್ಯತ್ಯಾಸವೂ ವೃತ್ತಿ ವಿಶೇಷವೂ ಗುಣ ವಿಶೇಷವೂ ವ್ಯಾಪ್ಯ ವ್ಯಾಪಕಭಾವವೂ ಇರುತ್ತದೆಂದು ಬ್ರಹ್ಮಸೂತ್ರಗಳು ಬಿತ್ತರಿಸಿವೆ.

'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲಃ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದತ್ತತ್ತ
ನಿಮ್ಮ ಶ್ರೀ ಮಕುಟ : ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ !
ಕೂಡಲ ಸಂಗಮ ದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದುಚುಳುಕಾದಿರಯ್ಯ !'

ಮಹಿ-ಮುಗಿಲುಗಳಿಗಿಂತ ಪಾತಾಳ - ಬ್ರಹ್ಮಾಂಡಗಳಿಗಿಂತ ಮಹೀ

ಯಾನ್ ಆದ ಮಹಾಲಿಂಗವು ಅಣೀಯಾನ್ ಆಗಿ ಅಂತಸ್ಥವಾಯಿತು ; ಅಂಗೈಗೆ ಸಂಗಡಿಸಿತು ; ಅಂಗವಿಸಿತು.

'ಅಂಗುಷ್ಠ ಮಾತ್ರಃ ಪುರುಷೋಂತರಾತ್ಮಾ, ಸದಾ ಜನಾನಾಂ ಹೃದಯೇ ಸಂನಿವಿಷ್ಟಃ। ಹೃದಾ ಮನ್ವೀಶೋ ಮನಸಾಭಿ ಕ್ಲೃಪ್ತೋಯ ಏತದ್ವಿದುಃ ಅಮೃತಾಸ್ತೇ ಭವಂತಿ' ಎಂದು ಶ್ವೇತಾಶ್ವತರೋಪನಿಷತ್ತು ಪ್ರತಿಪಾದಿಸಿದೆ. ಮನ್ವೀಶಃ ಮನಸಾಭಿ ಕ್ಲೃಪ್ತಃ ಪದಗಳೆರಡು ಗಮನಾರ್ಹ ವಾದವು. ಮಂತ್ರದೊಡೆಯನಾಗಿ ಮನದ ಮನನದ ವ್ಯಾಪ್ತಿಗೆ ಒಳಪಡು ವವನಾಗಿ ಅಂಗಷ್ಠಮಾತ್ರನಾಗಿ ಹೃದಯಸ್ಥನಾಗಿದ್ದಾನೆ.

'ಅರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚನ್ನೇತಿ ಚೇನ್ನ ನಿಚಾಯ್ಯತ್ವಾ ದೇವಂ ವ್ಯೋಮವಚ್ಚ' ಈ ಬ್ರಹ್ಮಸೂತ್ರದಂತೆ ವಿಶಾಲಾಕಾಶವು ಸೂಜಿಯ ಕಣ್ಣಿನಲ್ಲಿ ಚಿಕ್ಕದಾಗಿರುವಂತೆ ತೆರಹಿಲ್ಲದ ಪರಶಿವನು ಉಪಾಸನೆಗಾಗಿ ಹೃದಯ ದಲ್ಲಿ ಚುಳಕಾಗಿದ್ದಾನೆ.

"ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್ ।
ತಸ್ಮಾಲ್ಲಿಂಗಮಿತಿ ಖ್ಯಾತಂ ಸತ್ತಾನಂದ ಚಿದಾತ್ಮಕಮ್
ಬೃಹತ್ವಾದ್ಬೃಂಹಣತ್ವಾಚ್ಚ ಬ್ರಹ್ಮ ಶಬ್ದಾಭಿಧೇಯಕಮ್ ॥"

'ಅತ್ತಾಚರಾಚರಗ್ರಹಣಾತ್' ಎಂಬ ಬ್ರಹ್ಮಸೂತ್ರದಂತೆ ಕಾಣುವ ಈ ಚರಾಚರ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಅಭಿನ್ನ ನಿಮಿತ್ತೋಪಾ ದಾನಕಾರಣವಾದುದೇ ಲಿಂಗ. ಲಿಂಗವು ಸತ್ ಚಿತ್ ಆನಂದಸ್ವರೂಪ ವಾಗಿದೆ. ಶಾಶ್ವತವಾಗಿದೆ. ಪರಬ್ರಹ್ಮರೂಪಾಗಿದೆ. ಬೃಹತ್ತಾಗಿ ಬೃಂಹಣ ಅಂದರೆ ಸೃಷ್ಟಿಯ ವೃದ್ಧಿಸುವದಾಗಿ ಬ್ರಹ್ಮಶಬ್ದ ವಾಚ್ಯವಾಗಿದೆ. 'ಲಿಂಗದಿ ಜಗವು ಅಡಗಿಹುದು' ಎಂದು ಸರ್ವಜ್ಞನು ಲಿಂಗ ಲಕ್ಷಣವನ್ನು ನಿರೂಪಿಸಿ ದ್ದಾನೆ. 'ಲೀಯತೇ ಗಮ್ಯತೇ ಯತ್ರ ಜಗದೇತಚ್ಚರಾಚರಂ । ತದೇವ ಲಿಂಗಮಿತ್ಯಾಹುರ್ಲಿಂಗತತ್ತ್ವವಿಶಾರದಾಃ' ಎಂಬುದಾಗಿ ಆಗಮ ಪ್ರಮಾಣವುಂಟು. ಯಸ್ಮಿನ್ ದ್ಯೌಃಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ। ತಮೇವೈಕಂ ಜಾನಥ ಆತ್ಮಾನಮನ್ಯಾ

ಚೋ ವಿಮುವಾಂಚಥ ಅಮೃತಸ್ಯೈಷ ಸೇತುಃ ॥ ಮುಂಡಕ ಶ್ರುತಿ ಮತ್ತು 'ಜನ್ಮಾದ್ಯಸ್ಯಯತಃ' ಎಂದು ಬ್ರಹ್ಮಸೂತ್ರವೂ ಲಿಂಗದ ಜಗತ್ಕಾರಣ ಸ್ವರೂಪ ಲಕ್ಷಣವನ್ನು ನಿರೂಪಿಸಿವೆ.

'ಲಿಂಗವೆಂಬುದು ಪರಶಕ್ತಿಯುತಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖವು. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಷಟಧ್ವಮಯ ಜಗಜನ್ಮಭೂಮಿ. ಲಿಂಗವೆಂಬುದು ಅಖಂಡಿತ ಅಭೇದ್ಯ ಪಂಚಸಂಜ್ಞೆ. ಲಿಂಗವೆಂಬುದು ಹರಿಬ್ರಹ್ಮರ ನಡುವೆ ನೆಗಳ್ದ ಜ್ಯೋತಿರ್ಲಿಂಗವು. ಇಂತಿದು ಲಿಂಗದ ವರ್ಮವು. ಉರಿಲಿಂಗ ಪೆದ್ದಿಪ್ರಿಯ ಗುರುವಿಶ್ವೇಶ್ವರಲಿಂಗದೊಳಗಿಂತು ತಿಳಿಯ ಬಲ್ಲಾತನೇ ಬಲ್ಲವನು.' ಇದೆಲ್ಲವೂ ಲಿಂಗ ಲಕ್ಷಣವು.

"ಆಧಾರೇ ಹೃದಯೇ ವಾಪಿ ಭ್ರೂಮಧ್ಯೇ ವಾ ನಿರಂತರಮ್
ಜ್ಯೋತಿರ್ಲಿಂಗಾನುಸಂಧಾನಮಾಂತರಂ ಲಿಂಗಧಾರಣಮ್
ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಮ್
ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಂ ಯೋಗೀ
ವಿಭಾವಯೇತ್ ॥"

ಅಂತರ್ಲಿಂಗಧಾರಣ ವಿಧಾನವನ್ನು ನಿರೂಪಿಸುತ್ತಾರೆ. ಆಧಾರ, ಹೃದಯ, ಭ್ರೂಮಧ್ಯಗಳಲ್ಲಿ ಏಕತಾನವಾಗಿ ಜ್ಯೋತಿರ್ಲಿಂಗವನ್ನು ಅನುಸಂಧಾನ ಮಾಡುವುದೇ ಅಂದರೆ ಲಿಂಗದೊಡನೆ ಏಕಾಕಾರ ವೃತ್ತಿ ಧಾರೆಯುಳ್ಳವರಾಗುವುದೇ ಆಂತರಲಿಂಗ ಧಾರಣವೆನಿಸುತ್ತದೆ. ಆಧಾರದಲ್ಲಿ ಕ್ರಿಯಾ ಜ್ಯೋತಿಯನ್ನು, ಹೃದಯದಲ್ಲಿ ಜ್ಞಾನ ಜ್ಯೋತಿಯನ್ನು ಭ್ರೂಮಧ್ಯದಲ್ಲಿ ಅನುಭವ ಜ್ಯೋತಿಯನ್ನು ಅನುಸಂಧಾನ ಮಾಡಬೇಕು.

'ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಂ ।
ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ
ತದ್ಯದಾತ್ಮವಿದೋವಿದುಃ ॥'

—ಮುಂಡಕಶ್ರುತಿ

ಈ ಮಂತ್ರವು ಲಿಂಗವು ಜ್ಯೋತಿರ್ಮಯವೆಂಬುದಕ್ಕೆ ಪೂರ್ಣಪೋಷಕವಾಗಿದೆ. ಉತ್ತರ ಭಗಸದ್ಗಿತೆಯಲ್ಲಿ ಪುರುಷೋತ್ತಮನ ವರ್ಣಗಳ ವಿವರಣೆಯಿದೆ.

ಅನುಸಂಧಾನ ಮಾಡಲು ಅನುಕೂಲವಾಗುವಂತೆ ಆ ಆ ಜ್ಯೋತಿರೂಪಗಳನ್ನು ಬೇರ್ಪಡಿಸಿ ಬಿತ್ತರಿಸುತ್ತಾರೆ :

ಆಧಾರದಲ್ಲಿರುವ ಕ್ರಿಯಾಜ್ಯೋತಿಯು ತುಸು ರಜೋಗುಣ ಮಿಶ್ರವಾದ ತಮದ ಸುವರ್ಣ ವರ್ಣವುಳ್ಳುದು. ಹೃದಯದಲ್ಲಿರುವ ಜ್ಞಾನಜ್ಯೋತಿಯು ನಸು ಸತ್ವಗುಣಮಿಶ್ರವಾದ ರಜೋಗುಣದ ಹವಳ ಬಣ್ಣವುಳ್ಳುದು. ಭ್ರೂಮಧ್ಯದಲ್ಲಿರುವ ಅನುಭವ ಜ್ಯೋತಿಯು ಶುದ್ಧ ಸತ್ವಗುಣದ ಸ್ಫಟಿಕಚ್ಛಾಯವುಳ್ಳುದು-ಎಂದು ಲಿಂಗಾಂಗಯೋಗವುಳ್ಳ ಯೋಗಿಯು ಭಾವಿಸಬೇಕು ಮತ್ತು ಆಧಾರದ ಅಖಿಲ ವೃತ್ತಿಮಯದ ಕ್ರಿಯಾಲಿಂಗವು ಚಿನ್ನಾದ ರೂಪಾಗಿದೆ. ಶ್ರವಣ ವಿಷಯವಾಗಿದೆ. ಹೃದಯದ ಮಂತ್ರಮಯವಾದ ದೀಪ್ತಿರೂಪಾದ ಜ್ಞಾನ ಲಿಂಗವು ಚಿದ್ಬಿಂದುರೂಪಾಗಿದೆ. ಮನನಕ್ಕೆ ವಿಷಯವಾಗಿದೆ. ಭ್ರೂಮಧ್ಯದ ಮಂತ್ರಾರ್ಥರೂಪಾದ ಅಚಲವಾದ ಮಹಾಜ್ಞಾನಲಿಂಗವು ಚಿತ್ಕಳಾರೂಪಾಗಿದೆ. ನಿಧಿಧ್ಯಾಸಕ್ಕೆ ವಿಷಯವಾಗಿದೆ. ಚಿನ್ನಾದಲಿಂಗದ ಶ್ರವಣಾನುಸಂಧಾನದಿಂದ ಸಂಶಯ ನಿವೃತ್ತಿ ; ಚಿದ್ಬಿಂದು ಲಿಂಗದ ಮನನಾನುಸಂಧಾನದಿಂದ ನಿಶ್ಚಯ ಬುದ್ಧಿ ಪ್ರಾಪ್ತಿ ; ಚಿತ್ಕಳಾಲಿಂಗದ ನಿದಿಧ್ಯಾಸದಿಂದ ಅದ್ವಯ ಮುಕ್ತಿ-ಸಂಪ್ರಾಪ್ತವಾಗುತ್ತವೆ. ಕ್ರಮವಿಡಿದು ಭಕ್ತಿ ಜ್ಞಾನ ವೈರಾಗ್ಯಗಳೂ ಉಂಟಾಗುತ್ತವೆ.

ತ್ರಿವಿಧಲಿಂಗಗಳು ಜ್ಯೋತಿರೂಪಾದ ಕಾರಣ ಅಂತರಂಗದ ಕಾಳಿಕೆಯೆಲ್ಲ ಕಳೆದು ಹೋಗುತ್ತದೆ. ಜ್ಯೋತಿರ್ಲಿಂಗದ ಯೋಗಕ್ಕಿಂತ ಹೆಚ್ಚಿನ ಯೋಗವಿಲ್ಲ. 'ಶ್ರೀಗುರು ಸ್ವಾಮಿ ಸಾತಿಶಯವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಲಕ್ಕೆ ಕೊಟ್ಟ ಬಳಿಕ ಬೇರೆಯೋಗವುಂಟೆ ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿಪ್ಪುದ ಕೊಂಡು ಲಿಂಗಪ್ರಾಣಿಯ ಮಾಡಿದ ಬಳಿಕ, ಅಕ್ಷರ-ಆಯ್ದರಲ್ಲಿ ಮುಕ್ತನ ಮಾಡಿದ ಬಳಿಕ ಮರಳಿ ಯೋಗ ಉಂಟೆ ?....ಎಂದು ಸಿದ್ಧರಾಮ ಶಿವಯೋಗಿಯು ಯೋಗಪದ ಅರ್ಥವನ್ನು ಮಾಡಿದಾನೆ. ಈ ಯೋಗವುಳ್ಳವನೇ ಯೋಗಿ.

'ನಿರುಪಾಧಿಕಮಾಖ್ಯಾತಂ ಲಿಂಗಸ್ಯಾಂತರ ಧಾರಣಮ್
ವಿಶಿಷ್ಟಂ ಕೋಟಿಗುಣಿತಂ ಬಾಹ್ಯಲಿಂಗಸ್ಯಧಾರಣಾತ್ ।
ಯೇ ಧಾರಯಂತಿ ಹೃದಯೇ ಲಿಂಗಂ ಚಿದ್ರೂಪಮೈಶ್ವರಮ್
ನ ತೇಷಾಂ ಪುನರಾವೃತ್ತಿರ್ಘೋರ ಸಂಸಾರ ಮಂಡಲೇ ॥

ಸೋಪಾಧಿಕವಾದ ಬಾಹ್ಯಲಿಂಗ ಧಾರಣಕ್ಕಿಂತ ನಿರುಪಾಧಿಕವಾದ ಆಂತರ ಲಿಂಗಧಾರಣವು ಅಧಿಕವಾದುದು; ಕೋಟಿ ಪಾಲು ಮೇಲಾದುದು. ಚಿನ್ಮಯ ರೂಪಾದ ಶಿವಲಿಂಗವನ್ನು ಯಾರು ಚಿತ್ತದಲ್ಲಿ ಅಚ್ಚೊತ್ತಿದಂತೆ ಧರಿಸುವರೋ ಅವರಿಗೆ ಸಂಸಾರ ಭೀತಿಯಿಲ್ಲ. ಮರಳಿ ಅವರು ಈ ಭವಕ್ಕೆ ಬಾರರು.

ಸಾಧ್ಯಸಾಧನಗಳೆರಡರಲ್ಲಿ ವ್ಯಾಪಕವಾದುದೇ ನಿರುಪಾಧಿಕವು. 'ಸಾಧ್ಯ ವ್ಯಾಪಕತ್ವೇ ಸತಿ ಸಾಧನಾಽವ್ಯಾಪಕತ್ವಂ ಉಪಾಧಿಃ' ಸಾಧ್ಯದಲ್ಲಿ ವ್ಯಾಪಕವಾಗಿ ಸಾಧನದಲ್ಲಿ ಅವ್ಯಾಪಕವಾಗಿರುವುದೇ ಉಪಾಧಿಯು. ತಾರ್ಕಿಕ ದೃಷ್ಟಾಂತದಲ್ಲಿ ಸಾಧ್ಯ ಹಸಿಕಟ್ಟಿಗೆ. ಸಾಧನ ಬೆಂಕಿ. ಉಪಾಧಿ ಹೊಗೆ. ಇಲ್ಲಿ ಬಾಹ್ಯೋ ಪಾಧಿಯು ಧ್ಯೇಯ ವಸ್ತುವಿನಿಂದ ಇಷ್ಟಲಿಂಗವನ್ನು ತುಸು ದೂರಾಗಿರಿಸಿರು ತ್ತದೆ. ಸಾವಯವತ್ವ ಅಥವಾ ಸಾಕಾರತ್ವರೂಪ ಉಪಾಧಿಯು ಇಷ್ಟಲಿಂಗಕ್ಕಿದೆ ಯೆಂದು ಇಲ್ಲಿ ನಿರೂಪಿತವಾಗಿದೆ. ಆಂತರಕ್ಕಿಂತ ಬಾಹ್ಯವು ಹೇಗಿದ್ದರೂ ಕೊಂಚದೂರ ತಾನೆ ?

ವೇದಾಂತಿಗಳು ಹೇಳುವ ಪ್ರತಿಬಿಂಬೋಪಾಧಿ, ಅಧ್ಯಾಸೋಪಾಧಿಗಳು ಇಲ್ಲಿ ಸಂಬಂಧವಿಲ್ಲ. ಅವೆರಡನ್ನೂ ನಾವು ಒಪ್ಪುವುದಿಲ್ಲ.

ನಿರುಪಾಧಿಯ ಲಕ್ಷಣವನ್ನು ನಿಜಗುಣರು ಹೀಗೆ ಹೇಳಿದ್ದಾರೆ:

'ದೀಪವ ದೀಪದ ಕಿರಣವ ತಾನೆ
ವ್ಯಾಪಿಸಿ ತೋರುವ ಪ್ರಭೆಯಂತೆ
ರೂಪಿಸಿ ಬೆಳಗುವಿಷ್ಟಪ್ರಾಣ ಲಿಂಗ
ರೂಪು ವಿಲ್ಲದ ನಿರುಪಾಧಿಯ ॥೨॥

ಭಾವಲಿಂಗವನು ಬಿಡದೆ ನೀನು-ಪರಿ-
ಭಾವಿಸು ಭೇದವಿಲ್ಲದೆ ಯೋಗಿ ॥ಪ॥

ರೂಪಿಲ್ಲದೆ ಸ್ಥೂಲಾದಿಗಳ ಆರೋಪವಿಲ್ಲದೆ ಇರುವ ಲಿಂಗವೇ ನಿರುಪಾಧಿಕ ಲಿಂಗವು. ಅಂದರೆ ಆಕಾರ-ವಿಕಾರ-ಪ್ರಕಾರಗಳಾವೂ ಇಲ್ಲದುದೆ ನಿರುಪಾಧಿಕ ವೆಂದು ತಿಳಿಯುತ್ತದೆ. ಇಷ್ಟಲಿಂಗಕ್ಕೆ ಆಕಾರವಿರುವ ಮಾತ್ರದಿಂದ ಸೋಪಾಧಿಕವೆನಿಸಿದೆ. ಪ್ರಾಣಲಿಂಗಕ್ಕೆ ನಿಷ್ಕಳದಂತೆ ಸಕಲರೂಪವೂ ಇರುವುದರಿಂದ ಅದೂ ಸೂಕ್ಷ್ಮ ಸೋಪಾಧಿಕವೆನಿಸುತ್ತದೆ. ಕೇವಲ ನಿಷ್ಕಳವಾದ ಅಚ್ಚಬೆಳಗಾದ ಭಾವಲಿಂಗವೇ ನಿರುಪಾಧಿಕ ಲಿಂಗವು. ರೂಪುರುಚಿಗಳ ಮೀರಿ ಸಾಟ ದೋರದೆ ಇರುವ ಲಿಂಗವೇ ನಿರುಪಾಧಿಕ ಲಿಂಗವು. ಅದೇ ತೃಪ್ತಿಲಿಂಗವು. ರೂಪುಳ್ಳಲಿಂಗ ಇಷ್ಟಲಿಂಗ. ರುಚಿಯುಳ್ಳಲಿಂಗ ಪ್ರಾಣಲಿಂಗ. ಇವೆರಡರ ದರ್ಶನ ಆಸ್ವಾದನಗಳಿಂದ ಮುಂದುವರಿದು ಮಹಾಲಿಂಗದ ಅಪರೋಕ್ಷಾನುಭವದ ಸಂತೃಪ್ತಿಯೊಳಗಿರುವುದು ವಿಶಿಷ್ಟವೂ ಕೋಟಿಪಾಲು ಮಿಗಿಲೂ ಅಲ್ಲದೆ ಮತ್ತೇನು ?

'ಯೋಗೀ ವಿಭಾವಯೇತ್' ಎಂಬ ಜಗದ್ಗುರು ರೇಣುಕನ ಅನುಭಾವ ವಾಣಿಯನ್ನೇ ನಿಜಗುಣ ಶಿವಯೋಗಿಯು 'ಪರಿಭಾವಿಸು ಭೇದವಿಲ್ಲದ ಯೋಗೀ' ಎಂದು ಅನುವಾದಿಸಿದಂತಿದೆ.

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂದೆನಿಸುವ ಲಿಂಗವು. 'ಅತ್ಯತಿಷ್ಠದ್ದಶಾಂಗುಲಂ' ಎಂದೆನಿಸುವ ಲಿಂಗವು. ಚಕಿತ ಮಭಿದತ್ತೇ' ಎಂದೆನಿಸುವ ಲಿಂಗವು. 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು. 'ಅಯಂ ಮೇ ಹಸ್ತೋ ಭಗವಾನ್ ಆಯಂ ಮೇ ಭಗವತ್ತರಃ' ಎಂದೆನಿಸುವ ಲಿಂಗವು-ಎನ್ನ ಕರಸ್ಥಲಕ್ಕೆ ಬಂದು ಕರತಲಾಮಲಕದಂತೆ ತೋರುತ್ತಿದ್ದಾನೆ-ಉರುಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ!'

ಇನ್ನು ಳಿಯಿತು ಧಾರಣ ವಿಷಯ. ಲಿಂಗವನ್ನು ಹೃದಯ ಧರಿಸಬೇಕೆ ? ಹೃದಯವನ್ನು ಲಿಂಗ ಧರಿಸಬೇಕೆ ? ವಿಮರ್ಶಿಸಿದರೆ ಇವೆರಡೂ ಆಗಬೇಕು. ಮೊದಲು ಹೃದಯವು ಲಿಂಗದ ಗುಣಧರ್ಮಗಳನ್ನು ಧಾರಣಮಾಡಿದರೆ ಬಳಿಕ ಲಿಂಗವು ಧರ್ಮಿಯಾಗಿ ಉಪಾಸಕನನ್ನು ಉಪಾಸಕನ ಹೃದಯವನ್ನು ಲಿಂಗವು ಧಾರಣ ಮಾಡುತ್ತದೆ. ವಿಷಯ, ಸಂಶಯಾದಿ ಕೂಪದಿಂದ ಎತ್ತಿ ಹಿಡಿಯುತ್ತದೆ. ಮನೆಗೆ ಮೊದಲು ಗುರು ಚಿತ್ತೈಸಿದರೆ ಬಳಿಕ ಶಿಷ್ಯನ ಚಿತ್ತವು ಶ್ರೀಗುರುವಿನ ಶ್ರೀಚರಣದಲ್ಲಿ ನಿಲ್ಲುತ್ತದೆ. ಮನದಲ್ಲಿ ಚಿಲ್ಲಿಂಗವು ಬೇರೊಂದು

ಕಡೆಯಿಂದ ಬರುವುದಿಲ್ಲ. ಅದು ಅಲ್ಲಿಯೇ ಇರುತ್ತದೆ. ಆದರೆ ಮಾಯಾ ಮಲದಿಂದ ಮರೆಯಾಗಿರುತ್ತದೆ. ಮೆರಗಿಲ್ಲದಾಗಿರುತ್ತದೆ. ಬೆಳಗುವಂತೆ ಮಾಡಿಕೊಳ್ಳುವುದೇ ಲಿಂಗಾಧಾರಣ. ಆ ಜ್ಯೋತಿರ್ಲಿಂಗವು ಬೆಳಗದ ಮುನ್ನ ಸಂಶಯದಲ್ಲಿ ವಿಷಯದಲ್ಲಿ ಹರಿದಾಡುವ ಮನವು ಆ ಜ್ಯೋತಿರ್ಲಿಂಗವು ಬೆಳಗಿದ ಬಳಿಕ ನಿಶ್ಚಯಾರ್ಥವುಳ್ಳದ್ದಾಗುತ್ತದೆ; ನಿಶ್ಚಲಾತ್ಮಕವಾಗುತ್ತದೆ. ಲಿಂಗ ಪ್ರಕಾಶದಲ್ಲಿಯೇ ಲೀನವಾಗಿರುತ್ತದೆ. ಆಗ ಚಿತ್ತಧಾರಣವಾಗುತ್ತದೆ. ಅದನ್ನು 'ದೇವ ಬಂಧಶ್ಚಿತ್ತಸ್ಯಧಾರಣಾ' ಎಂದು ಹೇಳಬಹುದಾಗಿದೆ. ಶ್ರೀಜಗದ್ಗುರು ರೇಣುಕರು ಬೋಧಿಸಿದಂತೆ ಚಿತ್ತದಲ್ಲಿ ಚಿದ್ರೂಪ ಜ್ಯೋತಿರ್ಲಿಂಗಧಾರಣವಾಗಿ, ಚಿದ್ರೂಪವೇ ಆದ ಚಿತ್ತವು ಬಳಿಕ ಚಿಲ್ಲಿಂಗದಲ್ಲಿ ಧಾರಣವಾಗುತ್ತದೆ. ಆ ಚಿಲ್ಲಿಂಗದಿಂದೀಚೆಗೆ ಬಾರದಂತಾಗುತ್ತದೆ. ಭವದ ಸೋಂಕವಿಲ್ಲದಂತಾಗುತ್ತದೆ. ಚಿತ್ತವೃತ್ತಿಗಳು ಅಡಗಿ ಲಿಂಗನಿಷ್ಪತ್ತಿಯುಂಟಾಗಿರುತ್ತದೆ. ಧ್ಯೇಯವಸ್ತುವಿನಲ್ಲಿ ಏಕತಾನತೆಯೊದಗುತ್ತದೆ. ಅದೇ ಸಾಮರಸ್ಯ.

ಸಂಸಾರ ಕಾರಣವಾದ ಕರ್ಮ, ಕರ್ಮಕ್ಕೆ ಕಾರಣವಾದ ಅಜ್ಞಾನಗಳೂ ತೊಲಗಿ ಸತ್ಯಸುಖಕ್ಕೆ ಕಾರಣವಾದ ಧರ್ಮ, ಧರ್ಮಕ್ಕೆ ಕಾರಣವಾದ ಸುಜ್ಞಾನಗಳು ತೊಳಗಿ ನೆಲೆನಿಲ್ಲುವವು ಚಿಲ್ಲಿಂಗಧಾರಣದಿಂದ. ಸುಖ, ಸುಖಸಾಧನಗಳ ಸಂಪ್ರಾಪ್ತಿ ಅವಾಂತರಫಲ. ಆ ಮಹಾಲಿಂಗ ಸಾಮರಸ್ಯವು ಆತ್ಯಂತಿಕಫಲ.

'ಅಂತರ್ಲಿಂಗಾನುಸಂಧಾನಮಾತ್ಮವಿದ್ಯಾಪರಿಶ್ರಮಃ
ಗುರೂಪಾಸನ ಶಕ್ತಿತ್ವ ಕಾರಣಂ ಮೋಕ್ಷಸಂಪದಾಮ್ ।'

ಬಹಿರಂಗ ಕ್ರಿಯೆಗಿಂತ ಅಂತರಂಗ ಕ್ರಿಯೆಗೆ ಅಗ್ರಸ್ಥಾನವಿದೆ.

'ಮನಃ ಕೃತಂ ಕೃತಂ ರಾಮ, ನ ಶರೀರಕೃತಂಕೃತಮ್, ಎಂಬುದನ್ನಿಲ್ಲಿ ನೆನೆಯಬೇಕು. 'ಮನೆಮುರಿದರೆ ಕಟ್ಟಬಹುದು, ಮನಮುರಿದರೆ ಕಟ್ಟಲಾಸಲ್ಲ.' ಎಂಬ ಗಾದೆಯೂ ಅದನ್ನೆ ಸಮರ್ಥಿಸಿದೆ. ಈ ನಾಣ್ಣುಡಿಯನ್ನನುಸರಿಸಿ 'ಮನವೆ ನಿಜ (ಶಿವ) ಮನೆಯು ಸರ್ವಜ್ಞ' ಎಂದು ಸರ್ವಜ್ಞನೂ ಸಾರಿದ್ದಾನೆ. ಇವೆಲ್ಲ ಮಾತುಗಳ ಮರ್ಮವಿಷ್ಟು. ಅಂತರಂಗವು ಅಳವಿನಲ್ಲಿರಬೇಕು. ಅಂತರಂಗಕ್ಕೆ ಪ್ರಧಾನವಾದ ಮನವು ಅನುಸಂಧಾನನಿರತವಾಗಿರಬೇಕು. ಮನವು ಲಿಂಗಾನುಸಂಧಾನನಿರತವಾಗದೆ ನಿಶ್ಚಲತೆ ನೆಲಸದು. ಅಂತರಂಗವಾದ

ಮನಸ್ಸು ಒಂದು ಕರಣ. ಕರಣಧಾರಣವು ಒಂದು ಕ್ರಿಯೆ; ಮತ್ತು ಅದೊಂದು ಅವಾಂತರ ಪ್ರಯೋಜನ. ಅದರಾಚೆ ಆತ್ಮವಿದೆ. ಆ ಆತ್ಮನ ವಿಷಯದಲ್ಲಿ ಅದೆಂದಿಗೂ ಅಜ್ಞಾನವಿರಬಾರದು. ಅನಾದಿಯಾಗಿ ಗಂಟುಬಿದ್ದ ಅವಿದ್ಯೆಯನ್ನು ಹೊಡೆದೋಡಿಸುವ ಆತ್ಮವಿದ್ಯೆಯನ್ನು ಅಂದರೆ ಆತ್ಮಜ್ಞಾನವನ್ನು ಆರ್ಜಿಸಬೇಕು. ಇದೂ ಸಹ ಕೇವಲ ಜ್ಞಾನ; ಅಪೂರ್ಣ ಪ್ರಯೋಜನ. ಇದರಾಚೆ ಅನುಭೋಗ ಅಥವಾ ಅನುಭೂತಿಯಿದೆ. ಅದನ್ನು ಸಂಪಾದಿಸಬೇಕು. ಅದು ಕ್ರಿಯಾಜ್ಞಾನಗಳೆರಡರಿಂದ ಸಂಪೂರ್ಣವಾಗಿರುತ್ತದೆ. ಅದು ದೊರೆಯ ಬೇಕಾದರೆ ಗುರುವಿನ ಉಪಾಸನೆಯನ್ನು ನೆರವೇರಿಸಲು ಶಕ್ತನಾಗಿರಬೇಕು. ಗುರು ಶುಶ್ರೂಷೆಯಲ್ಲಿ ಕ್ರಿಯೆಯೂ ಇರುತ್ತದೆ; ಜ್ಞಾನವೂ ಇರುತ್ತದೆ. ಇದ್ದಾಗಬೇಕು. ಜ್ಞಾನರಹಿತವಾದ ಸೇವೆ ಶುಶ್ರೂಷೆಯಲ್ಲ; ಉಪಾಸನವಲ್ಲ. ಲಿಂಗಾನುಸಂಧಾನರೂಪ ಸೂಕ್ಷ್ಮಕ್ರಿಯೆ, ಆತ್ಮಜ್ಞಾನ, ಗುರೂಪಾಸನಾನುಭವ ಇವು ಮೂರು ಮೋಕ್ಷ ಸಂಪತ್ತುಗಳನ್ನು ಕೊಡಲು ಕಾರಣಗಳಾಗಿವೆ.

'ಪರುಷ ಲೋಹವ ಸೋಂಕಿ ಪರುಷವಿರಬಲ್ಲುದೆ? ।
ಪರುಷವೆಂತಂತೆ ಶಿಷ್ಯಂಗೆ ಗುರುವಿನ ।
ದರುಶನವೇ ಪರುಷ ಸರ್ವಜ್ಞ ।

ಗುರುವೆ ನಿಮ್ಮನ್ನು ನೆನೆದು ಉರಿವ ಕಿಚ್ಚನು ಹೋಗಲು ।
ಉರಿತಗ್ಗಿ ಉದಕ ಕಂಡಂತೆ ನಿಮ್ಮಯ ।
ಕರುಣವುಳ್ಳವರಿಗೆ ಸರ್ವಜ್ಞ ।

ಗುರುವಿಂದ ಬಂಧುಗಳು ಗುರುವಿಂದ ದೈವಗಳು ।
ಗುರುವಿಂದಲಿಹುದು ಪುಣ್ಯವು ಜಗಕೆಲ್ಲ ।
ಗುರುವಿಂದ ಮುಕ್ತಿ ಸರ್ವಜ್ಞ ।'

ಸರ್ವಜ್ಞನ ಈ ಮಾತುಗಳು ಗುರುವಿನ ದರ್ಶನ, ಕರುಣಗಳನ್ನು ಸೇವೆ ಮಾಡಿ ಪಡೆಯದೆ ಮುಕ್ತಿಯಿಲ್ಲೆನ್ನುತ್ತಿವೆ. 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕ್ತಿ' 'ಹರಪೂಜೆ ಗುರುಸೇವೆ ಪರವುಣ್ಯವಿಲ್ಲದೆ । ಬರಿದೆ ಸುಖ ಭೋಗವು ದೊರಕುವುದೆ ಆತ್ಮ ?। ಈ ಉಕ್ತಿಗಳು ಗುರುಶಕ್ತಿಯನ್ನೇ ಗುರು ಸೇವೆಯ ಮಹತ್ವವನ್ನೇ ಸಮರ್ಥಿಸಿವೆ.

'ಗುರುಕಾರುಣ್ಯವೇ ಸದಾಚಾರ. ಗುರುಕಾರುಣ್ಯವೇ ಶಿವಾಚಾರ. ಗುರುಕಾರುಣ್ಯವೇ ಪ್ರಸಾದ ರುಚಿ. ಮುಂದೆ ಗುರು, ಹಿಂದೆ ಲಿಂಗ ಕೂ. ಸಂ. ದೇವಾ.'

'ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೇ ಮುಖ್ಯವಯ್ಯ. ಪೂಜೆಗೆ ನಿಮ್ಮ ಶ್ರೀಪಾದವೇ ಮುಖ್ಯವಯ್ಯ. ಮಂತ್ರಕ್ಕೆ ನಿಮ್ಮ ನಾಮಾಮೃತವೇ ಮುಖ್ಯವಯ್ಯ. ನಿಮ್ಮಿಂದಧಿಕರನಾರನೂ ಕಾಣೆನಯ್ಯ. ಕೂಡಲಸಂಗಮದೇವಾ, ನೀವು ಜ್ಞಾನಗುರುವಾದ ಕಾರಣ.' ಜ್ಞಾನಿಯಾದ ಶ್ರೀಗುರುವಿನ ಉಪಾಸನೆಯನ್ನು ಬಸವಣ್ಣನವರು ಬಹು ಸೊಗಸಾಗಿ ಸುಂದರವಾಗಿ ಬಣ್ಣಿಸಿದ್ದಾರೆ. 'ಧ್ಯಾನ ಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ । ಮಂತ್ರ ಮೂಲಂ ಗುರೋರ್ವಾಕ್ಯಂ ಮುಕ್ತಿ ಮೂಲಂ ಗುರೋಃಕೃಪಾ॥' ಎಂಬೀ ಸಂಸ್ಕೃತ ಶ್ಲೋಕವನ್ನು ಅನುವಾದಿಸಿದಂತಿದೆ.

ಆತ್ಮಜ್ಞಾನಕ್ಕೂ ಅಂತರ್ಲಿಂಗಾನುಸಂಧಾನಕ್ಕೂ ಶ್ರೀಗುರುವೇ ಕಾರುಣ್ಯಕರ್ತೃವಾಗಿರುವನು; ಕಾರಣಕರ್ತನೂ ಆಗಿರುವನು.

'ಅಂಗಕ್ಕೆ ಲಿಂಗವ ಕೊಟ್ಟು ದೀಕ್ಷಾಚಾರ್ಯನಾದ. ಮನಕ್ಕೆ ಅರುಹ ತೋರಿ ಶಿಕ್ಷಾಗುರುವಾದ. ಮೋಕ್ಷ ವಿಮೋಕ್ಷವ ತೋರಿ ಕಾಯದ ಕರ್ಮವ ಕೆಡಿಸಿ ಜೀವನ ಭವವ ಛೇದಿಸಿ ತದ್ರೂಪವ ತೋರಿದಾತನಾಗಿ ಜ್ಞಾನಗುರು. ಆತ ಪರಮ ಪ್ರಕಾಶ. ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ.'

'ಒಳಗೆ ಶೋಧಿಸಿ, ಹೊರಗೆ ಶುದ್ಧವಿಸಿ, ಒಳಹೊರಗೆಂಬ ಉಭಯ ಶಂಕೆಯ ಕಳೆದು ಸ್ಫಟಿಕದ ಶಲಾಕೆಯಂತೆ ತಳವೆಳಗುಮಾಡಿ, ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ ಶಿಷ್ಯನ ಸರ್ವಪ್ರಪಂಚ ನಿಷ್ಪತ್ತಿಯಂ ಮಾಡಿ, ನಿಜೋಪದೇಶವನಿತ್ತು ಆ ಶಿಷ್ಯನ ನಿಜಪದದಿಯನೈದಿಸುವನೀಗ ದೀಕ್ಷಾಗುರು. ಆ ಸಹಜ ಗುರುವೀಗ ಜಗದಾರಾಧ್ಯರು. ಅವರ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚೆನ್ನಮಲ್ಲಿಕಾರ್ಜುನಾ.'

ಇಂತಹ ಕಾರಣಿಕನಾದ ಕಳುಗುರುವಿನ ಉಪಾಸನೆಯು ಸಾಧಕನಿಗೆ ಸರ್ವೋತ್ಕೃಷ್ಟವೂ ಸಾಯುಜ್ಯಪ್ರದವೂ ಆಗಿದೆ ಎಂದು ಶ್ರೀರೇಣುಕಜಗದ್ಗುರು ಆದೇಶವಿತ್ತುದು ಅರ್ಥಪೂರ್ಣವಾಗಿದೆ.

ಕ್ರಿಯಾ ಜ್ಞಾನಾನುಭಾವಿಯಾದ ಶ್ರೀಗುರುವಿನ ಸೇವೆಯೇ ಮಹಾ ತಪಸ್ಸು. ಅದರಿಂದುಂಟಾಗುತ್ತದೆ ಆತ್ಮಶ್ರೇಯಸ್ಸು; ಆಧ್ಯಾತ್ಮ ತೇಜಸ್ಸು.

"ವೈರಾಗ್ಯ ಜ್ಞಾನಯುಕ್ತಾನಾಂ ಯೋಗಿನಾಂ ಸ್ಥಿರಚೇತಸಾಮ್
ಅಂತರ್ಲಿಂಗಾನುಸಂಧಾನೇ ರುಚಿರ್ಬಾಹ್ಯೇ ನ ಜಾಯತೇ ।'

ಭಕ್ತಿಜ್ಞಾನ ವೈರಾಗ್ಯವುಳ್ಳ ಸ್ಥಿರಚಿತ್ತವುಳ್ಳ ಯೋಗಿಗಳಿಗೆ ಅಂತರ್ಲಿಂಗದ ಅನುಸಂಧಾನದಲ್ಲಿ ಅತ್ಯಂತ ಆಸಕ್ತಿಯಿರುತ್ತದೆ. ಬಾಹ್ಯ ಸ್ಥಾವರ ಲಿಂಗಗಳಲ್ಲಿ ಪ್ರೀತಿಯಿರದು. ಇಲ್ಲಿ ಬಾಹ್ಯ ಶಬ್ದಕ್ಕೆ ಇಷ್ಟಲಿಂಗವೆಂದೂ ಅರ್ಥವಾಗುವುದುಂಟು. ಆದರೂ ಕೆಲವರು ಭಾವಿಸಿರುವಂತೆ ಇಷ್ಟಲಿಂಗ ಪ್ರೀತಿಯೇ ಇರುವುದಿಲ್ಲವೆಂದಲ್ಲ. ಜ್ಞಾನಿಗೆ ಜ್ಞಾನಾಮೃತದಲ್ಲಿಯೇ ರುಚಿ ಹೆಚ್ಚು ಎಂದು ಹೇಳಿದರೆ ಅನ್ನವನ್ನು ಊಟಮಾಡುವುದೇ ಇಲ್ಲೆಂದು ಹೇಳಬಾರದು. ಮಾಡದಿರಲು ಸಾಧ್ಯವೂ ಇರುವುದಿಲ್ಲ.

ಅಂತರ್ಲಿಂಗ ಧಾರಣವಾದ ಬಳಿಕ ಬಾಹ್ಯ ಇಷ್ಟಲಿಂಗ ಬೇಡೆನ್ನುವವರೂ ಇದ್ದಾರೆ. ಅಂಥವರಿಗೆ ಶ್ರೀರೇಣುಕರು ಮುಂದೆ ಬುದ್ಧಿವಾದ ಹೇಳಿದ್ದಾರೆ. ಆದರೆ ಪ್ರಸ್ತುತ ಪ್ರಸ್ತಾಪಕ್ಕೆ ಒಂದು ಮಾತನ್ನು ಆಡುತ್ತೇವೆ. ಕನ್ನಡಿಯಲ್ಲಿ ಮೊಗಕಂಡೊಡನೆ ಕನ್ನಡಿ ಇನ್ನೇತಕೆಂದು ಎತ್ತಿ ಬಿಸಾಕಿದರೆ ತನ್ನ ಮುಖ ತೋರದು. ಮುಖನೋಡುವವರೆವಿಗೂ ಮುಕುರವಿದ್ದಾಗಬೇಕು. ಅಂತೆಯೇ ಇಲ್ಲಿ ಅಂತರ್ಲಿಂಗಾನುಸಂಧಾನದಲ್ಲಿ ಆಸಕ್ತಿಯನ್ನು ಹೆಚ್ಚಿಸುವುದೇ ಮುಖ್ಯವುದ್ದೇಶ. ಇಷ್ಟಕ್ಕೂ ಪ್ರಾಣಕ್ಕೂ ಬಾಹ್ಯಾಭ್ಯಂತರವೆಂಬ ಭೇದವಿಲ್ಲ. ಕ್ರಿಯೆಯಲ್ಲಿ ಪ್ರಾಣವಿದೆ. ಪ್ರಾಣದಲ್ಲಿ ಕ್ರಿಯೆಯಿದೆ. ಇವೆರಡೊಂದಾದಲ್ಲಿ ಅನುಭವವಿದೆ.

'ಭಾವಪ್ರಾಣೇಷ್ಟಲಿಂಗಾನಿ ಪೂಜಯೇದೇಕಭಾವತಃ ।
ಪೃಥಗ್ಭಾವಂ ನ ಕುರ್ವೀತ ಪ್ರಾಣಲಿಂಗಪರೋ ಯತಃ ॥'

—ಸೂಕ್ಷ್ಮಾಗಮ.

ವಿಷಯುಗಳಲ್ಲಿ ವಿರಾಗ, ವಿಶುದ್ಧಾತ್ಮರಲ್ಲಿ ಅನುರಾಗ, ಸಚ್ಚಿದಾನಂದ ಸ್ವರೂಪವಿವೇಕವುಳ್ಳವರಿಗೆ ಚಿತ್ತವೃತ್ತಿನಿರೋಧ ರೂಪಯೋಗವುಂಟಾಗುತ್ತದೆ. ಆ ಯೋಗವುಳ್ಳವರೆ ಯೋಗಿಗಳೆನಿಸುತ್ತಾರೆ. ಅವರಿಗೆ ಅಂತರ್ಲಿಂಗ ಸಂಬಂಧ ಸಮನಿಸುತ್ತದೆ. ಅದರ ಅನುಸಂಧಾನವೇ ಅವರಿಗೆ ಅಮೃತಮಯವಾಗಿರುತ್ತದೆ. ಅದರ ಅಭಿರುಚಿಯಲ್ಲಿಯೇ ಅವರು ಆಸಕ್ತರಾಗಿರುತ್ತಾರೆ. ಆ ಅಂತಶ್ಚೈತನ್ಯದ ಮಹಂತ ಗರ್ಭದಲ್ಲಿ ಅಚ್ಚಳಿಯದ ಅತ್ಯಂತಾನಂದದ ರಸವೊಂದು ಉಕ್ಕುತ್ತಿರುತ್ತದೆ. ಅದು ಸಚ್ಚಿದಾನಂದ ನಿತ್ಯಪರಿಪೂರ್ಣಾಖಂಡ ರೂಪ ಷಡ್ರಸ ಸ್ವರೂಪವಾಗಿದೆ. ಅದರಲ್ಲಿ ನಿತ್ಯ ಸತ್ಯಗಳು ಓತ ಪ್ರೋತವಾಗಿರುತ್ತವೆ. ಅದರೊಳಗೆ ಪ್ರಿಯ ಮೋದ ಪ್ರಮೋದಗಳು ಮುಪ್ಪುರಿಗೊಂಡಿರುತ್ತವೆ. ಪಂಚಾಕ್ಷರಗಳ ಪಂಚಾಮೃತತತ್ವವು ಮಡುಗಟ್ಟಿರುತ್ತದೆ. ಮೂಲಪ್ರಣವವೆಂಬದು ಮೂರುಕೋಟಿ ಚಂದ್ರರ ಪ್ರಭೆಯಿಂದ ಪ್ರಕಾಶಿತವಾಗಿರುತ್ತದೆ. ಅದರ ಆ ಅತ್ಯುನ್ನತ ಆಧ್ಯಾತ್ಮಿಕದ ಗಾಡಿ ಮೋಡಿಗಳನ್ನು ಆ ಭಾವಭರಿತ ಯೋಗಿಯೇ ಬಲ್ಲ. ಆದರಿಂದಾಗಿ ಆತನು ಬಾಹ್ಯಕ್ಕೆ ಭೌತಿಕಕ್ಕೆ ಬಾರದಿರಬಲ್ಲ. ಬರಡಾದ ಇದು ಆತನಿಗೆ ಅದೆಷ್ಟೂ ಸಲ್ಲ. ಅಸೀಮವಾದ ಆ ಪರಮ ಪ್ರಾಂತದಿಂದ ಆತನು ದಾಂಟಿ ಬರುವುದೆಲ್ಲಿಗೆ ? ಅದಕ್ಕೆ ಬಾಹ್ಯವೇ ಇಲ್ಲ. ಅದನ್ನು ಮೀರುವ ಸೌಖ್ಯವೇ ಇಲ್ಲ. ಅದೇ ಎಲ್ಲ. ಇದು ಆಕಾಶ ಪುರಾಣವಲ್ಲ. ಆಂತರಿಕದ ಅಚ್ಚಸುಳುವಿನ ಸೊಲ್ಲ.

ಆ ಅಂತಃ ಸತ್ತೆಯಲ್ಲಿ ವೃದ್ಧಿಯಾದ ಯೋಗಿಯ ಶ್ರದ್ಧೆ ಸಡಿಲದು. ಆ ಅಂತರ್ಜ್ಯೋತಿಯಲ್ಲಿ ಗಟ್ಟಿಗೊಂಡ ನಿಷ್ಠೆಗೆ ವಜ್ರ ಪುಡಿಯಾಗಬಲ್ಲುದು. ಆ ಅಂತರಾನಂದದಲ್ಲಿ ಮುಳುಗಿದ ಚಿತ್ತಕ್ಕೆ ಮತ್ತೊಂದನ್ನು ಅರಿಯಲು ಅವಕಾಶವಿರದು. ಆ ಅಂತರ್ಲಿಂಗದ ಅನುಸಂಧಾನಕ್ಕೆ ಆಕರ್ಷಿತವಾಗಿ ಆಮಂತ್ರಿತವಾಗಿ ಉದ್ಗತವಾದ ಉದ್ದೀಪಿತವಾದ ಮತಿಗೆ ಪ್ರತಿಯಿಲ್ಲ. ಭಾವಕ್ಕೆ ಭವವಿಲ್ಲ. ಆ ಆಸಕ್ತಿಯೇ ಅದಕ್ಕೆ ಮುಕ್ತಿ. ಅದುವೇ ಅದಕ್ಕೆ ಸುಖೋನ್ನತಿ. ಅದಕ್ಕಿಂತ ಬೇರಿಲ್ಲ ಮಹೋನ್ನತಿ.

ಸ್ಥಿರಚಿತ್ತನ ಆ ಚಿಚ್ಚೈತನ್ಯ ಸಾಧನೆಯ ಫಲ ಅಂತಹದು. ಅದು ಆತನೊಬ್ಬನ ಮಾತ್ರವಲ್ಲ. ಆ ಯೋಗವುಳ್ಳವರೆಲ್ಲರೂ ಅಲ್ಲಿಗೆ ಸಾರುತ್ತಾರೆ. ಆ ಸತ್ಯ ಸ್ವರೂಪವ ಕಾಣುತ್ತಾರೆ. ಆ ಸತ್ಯ ಸುಖವ ಅನುಭವಿಸುತ್ತಾರೆ.

"ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ? ವಾಸವಾದ್ಯಾಶ್ಚ ಲೋಕಪಾಃ
ಮುನಯಃ ಸಿದ್ಧಗಂಧರ್ವಾ ದಾನವಾ ಮಾನವಾಸ್ತಥಾ ।
ಸರ್ವೇ ಸುಜ್ಞಾನಯೋಗೇನ ಸರ್ವಕಾರಣ ಕಾರಣಮ್
ಪಶ್ಯಂತಿ ಹೃದಯೇ ಲಿಂಗಂ ಪರಮಾನಂದಲಕ್ಷ್ಮಣಮ್

ಲೋಕಪಾಲಕರಾದ ಸೃಷ್ಟಿಸ್ಥಿತಿಸಂಹಾರ ಕರ್ತರಾದ ಬ್ರಹ್ಮ ವಿಷ್ಣು ರುದ್ರರು, ಅಷ್ಟದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ವಾಯು, ಕುಬೇರ, ಈಶಾನರು ; ವಸಿಷ್ಠ, ವಾಮದೇವ, ವಿಶ್ವಾಮಿತ್ರ, ಶೌನಕ, ದಧೀಚಿ, ಗೌತಮ, ಸಾನಂದ, ಶುಕ, ನಾರದ, ಉಪಮನ್ಯು, ಭೃಗು, ವ್ಯಾಸ, ಪರಾಶರ, ಮರೀಚಿ ಮುಂತಾದ ಮುನಿಗಳು ; ಮೇರು ಮಂದಿರದಲ್ಲಿದ್ದ ಸಿದ್ಧರು. ವಿದ್ಯಾಧರರು ; ದೇವ ಗಂಧರ್ವರು; ದಾನವರು ಮಾನವರು ಮುಂತಾದವರೆಲ್ಲರು ತಂತಮ್ಮ ಸುಜ್ಞಾನಯೋಗಬಲದಿಂದ ಸರ್ವ ಕಾರಣವಾದ ತನಗೆ ಮತ್ತೊಂದು ಕಾರಣವಿಲ್ಲದ ವಿಷಯಾದಿ ಆನಂದಗಳಿಗಿಂತ ವಿಶಿಷ್ಟವಾದ ಆನಂದ ಲಕ್ಷಣವುಳ್ಳ ಲಿಂಗವನ್ನು ಹೃದಯದಲ್ಲಿ ಕಂಡರು.

'ಕೌಶಿಕಃ ಕಾಶ್ಯಪಶ್ಚೈವ ಭರದ್ವಾಜಾತ್ರಿ ಗೌತಮಾಃ
ಆದಾವೇತೇ ಮಹಾದೇವಿ ಪಂಚವಕ್ತ್ರೇಷು ದೀಕ್ಷಿತಾಃ ।'

ಇಲ್ಲಿ ಉಕ್ತವಾದ ಬ್ರಹ್ಮಾದಿಗಳನ್ನು ಕ್ರಮವಾಗಿ ಆಧಾರಾದಿ ಚಕ್ರಗಳಲ್ಲಿರುವ ಉಪಾಸಕರೆಂಬುದಾಗಿ ಭಾವಿಸುವದಾದರೆ ಆಚಾರಾದಿ ನವಲಿಂಗಗಳನ್ನು ಅವರವರು ಅವರವರ ಹೃದಯಗಳಲ್ಲಿ ಅವಲೋಕಿಸಿ ಆನಂದಿಸಿದರೆಂದು ಹೇಳಬಹುದು.

ಆ ಅಂತರ್ಲಿಂಗದ ಮಹಿಮೆ ಮಹತ್ತರ. ಅದು ಪಿಂಡಾಂಡಬ್ರಹ್ಮಾಂಡಗಳಿಗೆಲ್ಲ ಪ್ರಭು ; ಪರಮ ವಿಭು. ಅದು ಸರ್ವಕ್ಕೆಲ್ಲ ಮಹಾ ಕಾರಣ. ಮಹಾದಾನಂದ ಲಕ್ಷಣ. ಅದನ್ನು ಆರಾಧಿಸುವವರರು, ಆರಾಧಿಸಿ ಅಂತರಂಗದಲ್ಲಿ ಕಾಣುವವರು ಧೀರರು ; ವೀರರು. ಅಂಥವರ ಹೃದಯ ಸಂಶಯಗಳು ಹರಿಯುತ್ತವೆ. ಕರ್ಮಗಳು ಕಳಚುತ್ತವೆ. ಗ್ರಂಥಿಗಳು ಒಡೆಯುತ್ತವೆ. ಎಂದೆಂದಿಗೂ ಕುಂದದ ಆನಂದದಲ್ಲಿರುತ್ತಾರೆ.

'ಯಃ ಸರ್ವಜ್ಞಃ ಸರ್ವವಿದ್ ಯಸ್ಯೈಷ ಮಹಿಮಾ ಭುವಿ ।
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನಿ ಆತ್ಮಾ ಪ್ರತಿಷ್ಠಿತಃ ॥
ಮನೋಮಯಃ ಪ್ರಾಣಶರೀರನೇತಾ
ಪ್ರತಿಷ್ಠಿತೋಽನ್ನೇ ಹೃದಯಂ ಸಂನಿಧಾಯ ।
ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾಃ
ಆನಂದರೂಪಮಮೃತಂ ಯದ್ವಿಭಾತಿ ॥
ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥'

ಆ ಮುಂಡಕ ಶ್ರುತಿಯ ಈ ಮಂತ್ರಗಳನ್ನು ಮನನ ಮಾಡಿಕೊಂಡು ಶ್ರೀರೇಣುಕ ಜಗದ್ಗುರು ಮೇಲಿನ ಶ್ಲೋಕಗಳನ್ನು ಅಗಸ್ತ್ಯ ಶಿಷ್ಯನಿಗೆ ಉಪದೇಶಿಸಿದ್ದಾರೆ. ಈ ಶ್ರುತ್ಯುಕ್ತಿಗಳ ಸಾರವೇ ಎರಡು ಶ್ಲೋಕಗಳಲ್ಲಿ ತುಂಬಿದೆ. ಶ್ರುತಿಯಲ್ಲಿ ಹೇಳಿದ ಧೀರರೇ ಬ್ರಹ್ಮಾದಿಗಳು. 'ತದ್ವಿಜ್ಞಾನೇನ ಪರಿಪಶ್ಯಂತಿ' ಎಂಬುದಕ್ಕೆ 'ಸುಜ್ಞಾನ ಯೋಗೇನ ಪಶ್ಯಂತಿ' ಎಂಬುದಾಗಿ ಪ್ರತಿಬೋಧಿಸಿದ್ದಾರೆ. ಶ್ರುತಿಯಲ್ಲಿರುವ 'ಆನಂದರೂಪಂ' ಪದಕ್ಕೆ 'ಪರಮಾನಂದ ಲಕ್ಷಣಮ್' ಎಂದು ಹೇಳಿ ಹೆಚ್ಚಿನ ಭಾವವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಅಂತೆಯೇ ವಿಜ್ಞಾನ–ಸುಜ್ಞಾನಪದಗಳ ತರತಮವನ್ನು ಕಾಣಬೇಕು. 'ಹೃದಯಂ ಸಂನಿಧಾಯ'ಕ್ಕೆ ಸರಿಯಾಗಿ 'ಹೃದಯೇ' ಎಂಬುದೊಂದೇ ಪದ ಪ್ರಯೋಗದ ಪ್ರಾಜ್ಞತೆಯನ್ನು ಅವಲೋಕಿಸಬೇಕು. ಇನ್ನು 'ಯಃ ಸರ್ವಜ್ಞಃ' ಎಂಬ ಪೂರ್ಣ ಮಂತ್ರಾರ್ಥವನ್ನು 'ಸರ್ವ ಕಾರಣ ಕಾರಣಮ್' ಎಂಬ ಪದವು ಪರಿಪೂರ್ಣವಾಗಿ ಪ್ರತಿನಿಧಿಸುತ್ತದೆ.

'ಪಶ್ಯಂತಿ' ಪ್ರಯೋಗದಿಂದ ಸಂಶಯ ನಿವೃತ್ತಿ, 'ಕಾರಣ' ಪದ ಪ್ರಯೋಗದಿಂದ ಕರ್ಮ ನಿವೃತ್ತಿ, 'ಆನಂದ' ಪದದಿಂದ ದುಃಖ ಮೂಲ ಗ್ರಂಥಿ ನಿವೃತ್ತಿ ಸೂಚಿತವಾಗುತ್ತವೆ. ಸುಜ್ಞಾನಯೋಗದ ಪ್ರಾಶಸ್ತ್ಯವನ್ನು ವೈಶಿಷ್ಟ್ಯವನ್ನು ವಿಶುದ್ಧತೆಯನ್ನು ಈ ಮುಂಡಕ ಶ್ರುತಿಯು ಸಾರುತ್ತಿದೆ.

'ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ,
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ ।

ಜ್ಞಾನಪ್ರಸಾದೇನ ವಿಶುದ್ಧ ಸತ್ವಸ್ತತಸ್ತು ತಂ
ಪಶ್ಯತೇ ನಿಷ್ಕಲಂ ಧ್ಯಾಯಮಾನಃ ॥'

ನಿಷ್ಕಲವಾದ ಭಾವಲಿಂಗದ ಸಾಕ್ಷಾತ್ಕಾರಕ್ಕೆ ಜ್ಞಾನಪ್ರಸಾದವೇ ಮುಖ್ಯ. ಬೇರೆ ಕರಣಗಳು ಮತ್ತು ಸಾಧನಗಳು ಅಮುಖ್ಯ. ಜ್ಞಾನದಿಂದ ಸತ್ವಶುದ್ಧಿ. ನಿಷ್ಕಲ ವಸ್ತು ಸಿದ್ಧಿ.

'ಲಿಂಗಂ ಶೈವಮಿದಂ ಸಾಕ್ಷಾಚ್ಛಿವಶಕ್ತ್ಯುಭಯಾತ್ಮಕಮ್ ।
ಧ್ಯಾತವ್ಯಮರ್ಚನೀಯಂ ಚ ಭುಕ್ತಿಮುಕ್ತಿಫಲೇಚ್ಛುನಾ ॥
ಅತೋ ಯಜೇತ್ತದಾ ಲಿಂಗಂ ಸರ್ವಕಾರಣ ಕಾರಣಮ್ ।'

—ಸೂಕ್ಷ್ಮಾಗಮ,

ಆ ಲಿಂಗವು ಸರ್ವಕಾರಣಗಳಿಗೆ ಕಾರಣವೆಂದು ಶಿವಶಕ್ತಿ ಸಂಪುಟವೆಂದು ಧ್ಯಾನಾರ್ಚನಗಳಿಗೆ ಉಚಿತವೆಂದು ಭುಕ್ತಿ (ಭೋಗ) ಮುಕ್ತಿ ಫಲಪ್ರದವೆಂದು ಸೂಕ್ಷ್ಮಾಗಮವೂ ಸಾರಿದೆ. ಇಹದಲ್ಲಿ ಪ್ರಸಾದ ಭೋಗವನ್ನು, ಪರದಲ್ಲಿ ಪರಮ ಸಾಮರಸ್ಯ ಮುಕ್ತಿಯನ್ನು ಲಿಂಗವು ಕರುಣಿಸುತ್ತದೆ.

ಲಿಂಗಕ್ಕೆ 'ಸರ್ವಕಾರಣಕಾರಣಂ' ಪರಮಾನಂದ ಲಕ್ಷಣಂ' ಎಂದು ಹೇಳಿದ ಎರಡು ಸ್ವರೂಪಲಕ್ಷಣಗಳು ಸರ್ವೋತ್ಕೃಷ್ಟವಾಗಿವೆ; ಸೀಮಾತೀತವಾಗಿವೆ. ಅಂತಹ ಲಿಂಗವು ಅಂತರಂಗದಲ್ಲಿಯೇ ಇದೆ. ಅಂತಹದನ್ನು ಕಾಣುವುದಕ್ಕಿಂತ ಬೇರೆ ಭಾಗ್ಯವಿದೆಯೆ ? ಭಾವ ಭಂಡಾರವಿದೆಯೆ ?

'ತಸ್ಮಾತ್ಸರ್ವ ಪ್ರಯತ್ನೇನ ಶಾಂಕರಂ ಲಿಂಗಮುತ್ತಮಮ್
ಅಂತರ್ಬಿಭಾವಯೇದ್ವಿದ್ವಾನಶೇಷಕ್ಲೇಶ ಮುಕ್ತಯೇ ।'

ಮೇಲೆ ಹೇಳಿದ ಕಾರಣದಿಂದಾಗಿ ಏನೆಲ್ಲ ಉಪಾಯಗಳಿಂದ ಅಂದರೆ ಬಾಹ್ಯಾಭ್ಯಂತರ ಸರ್ವೋಪಾಯಗಳಿಂದ ಉತ್ಕೃಷ್ಟವಾದ ಸುಖಕರವಾದ ಶಿವ ಲಿಂಗವನ್ನು ಅಂತರಂಗದಲ್ಲಿ ಭಾವಪೂರ್ಣವಾಗಿ ಉಪಾಸಿಸಬೇಕು. ಪ್ರಾಜ್ಞನಾದವನು ಮಾಡತಕ್ಕ ಪ್ರಯತ್ನವಿದು. ಅದರಿಂದ ತ್ರಿವಿಧತಾಪಗಳು ಪಂಚ ವಿಧಕ್ಲೇಶಗಳು ಪರಿಹಾರವಾಗುತ್ತವೆ.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ,
ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ ।
ಅಂತಃ ಶರೀರೇ ಜ್ಯೋತಿರ್ಮಯೋ ಹಿ ಶುಭ್ರಃ,
ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥'

ಈ ಮುಂಡಕಶ್ರುತಿಯೇ ಆ ಶ್ಲೋಕವಾಗಿ ರೂಪುಗೊಂಡಂತಿದೆ:

ಅಂತರಂಗದಲ್ಲಿರುವ ಜ್ಯೋತಿರ್ಮಯವಾದ ಶುಭ್ರವಾದ ಆ ಪರಮಾತ್ಮ ವಸ್ತುವು ಲಭ್ಯವಾಗಬೇಕಾದರೆ ಸತ್ಯ, ತಪಸ್ಸು, (ಅರ್ಚನಾದಿಕ್ರಿಯೆ) ಸಮ್ಯಗ್ ಜ್ಞಾನ, ಬ್ರಹ್ಮಚರ್ಯ ಮುಂತಾದ ಪ್ರಯತ್ನಗಳು ಬೇಕು. ಈ ಪ್ರಯತ್ನಗಳೇ ಅದು ಒಲಿವ ಉಪಾಯಗಳು. ಇವುಗಳಿಂದ ಪರಮಾತ್ಮನು ಒಲಿದು ದೋಷಗಳೆಲ್ಲ ದೂರಾಗುತ್ತವೆ. ದೋಷಮೂಲವಾದ ದುಃಖಗಳೂ ದೂರವಾಗುತ್ತವೆ.

ಯತಯಃ ಪದ ಪ್ರಯತ್ನಸೂಚಕವಾಗಿದೆಯಲ್ಲದೆ ಸತ್ಯಾದಿ ಗುಣ ಪ್ರಯತ್ನಗಳೂ ಸ್ವತಃ ಸೂಚಿತವಾಗಿವೆ. ವಿದ್ವಾನ್ ಪದದರ್ಥವೇ ಸಮ್ಯಗ್ ಜ್ಞಾನ. ಅಶೇಷಕ್ಲೇಶವಿಮುಕ್ತಿ ಪದದರ್ಥವೇ ಕ್ಷೀಣದೋಷಾಃ ಎಂಬುದು. ಅಂತಃ ಶರೀರೇ, ಲಿಂಗಂ-ಜ್ಯೋತಿಃ, ಶಾಂಕರಂ-ಶುಭ್ರಂ, ವಿಭಾವಯೇತ್ ಪಶ್ಯಂತಿ ಇವೆಲ್ಲವೂ ಉಭಯ ಮಂತ್ರಗಳಲ್ಲಿರುವ ಶಬ್ದ ಮತ್ತು ಅರ್ಥಸಾಮ್ಯ ಗಳು.

ಅಂತರುಪಾಸನೆಯಿಂದ ಅಂತಃಕ್ಲೇಶಗಳು ಅಂತ್ಯಗೊಳ್ಳುತ್ತವೆ. ಅವಿದ್ಯಾದಿ ಪಂಚಕ್ಲೇಶಗಳು ಬುದ್ಧಿಕಾರ್ಯಗಳು. ಅಗ್ನಿಜನ್ಯ ಬುದ್ಧಿಯು ಬೇಗ ಅವಿದ್ಯಾಸ್ಮಿತರಾಗ ದ್ವೇಷ ಅಭಿನಿವೇಶಗಳಿಗೆ ಒಳಗಾಗುತ್ತದೆ. ತನ್ನ ತೇಜಸ್ಸಿನ ಶಕ್ತಿಯನ್ನು ತಾನು ಕಳೆದುಕೊಂಡಿರುತ್ತದೆ. ಅದು ವೃದ್ಧಿಯಾಗ ಬೇಕಾದರೆ ಪ್ರಜ್ಞಾನರೂಪ ಪರಬ್ರಹ್ಮಾತ್ಮಕ ಜ್ಯೋತಿರ್ಲಿಂಗಾನುಸಂಧಾನವು ಅತ್ಯಾವಶಕವಾದುದು. ಪ್ರಜ್ಞೆ ಪ್ರಬಲವಾದರೆ ಅವಿದ್ಯಾದಿ ಕ್ಲೇಶಗಳು ತೊಲಗುತ್ತವೆ.

ಅಧ್ಯಾತ್ಮ ವಿದ್ಯೆಯನ್ನು ಕಳೆದುಕೊಂಡ ಬುದ್ಧಿ ಸುಲಭವಾಗಿ ಪಂಚ ಕ್ಲೇಶಗಳಿಗೆ ಮಾರುಹೋಗುತ್ತದೆ. ತತ್ವಜ್ಞಾನದ ಜ್ಯೋತಿಯಿಲ್ಲದ ರಾತ್ರಿ

ಯಲ್ಲಿ ಕ್ಲೇಶಭೂತಗಳು ಸಂಚಾರ ಸಹಜವಷ್ಟೆ ! ಅದರಿಂದಾಗಿ ಪ್ರಜ್ಞಾನ ಘನವಾದ ಅಂತರ್ಲಿಂಗದ ಆರಾಧನೆ ಆತ್ಮಸಾಕ್ಷಾತ್ಕಾರದ ಅಪೇಕ್ಷೆಯುಳ್ಳವರಿಗೆ ಅತ್ಯವಶ್ಯಕ.

'ಅಂತರ್ಧಾರಯಿತುಂ ಲಿಂಗಮಶಕ್ತಃ ಶಕ್ತ ಏವ ವಾ
ಬಾಹ್ಯಂ ಚ ಧಾರಯೇಲ್ಲಿಂಗಂ ತದ್ರೂಪಮಿತಿ ನಿಶ್ಚಯಾತ್ ॥'

ಒಳಗೆ ಜ್ಞಾನಲಿಂಗವನ್ನು ಧರಿಸಲು ಸಮರ್ಥನಾಗಲಿ, ಅಸಮರ್ಥನಾಗಲಿ ಹೊರಗಿನ ಕ್ರಿಯಾತ್ಮಕ ಇಷ್ಟಲಿಂಗವನ್ನು ಧರಿಸಿಯೇ ತೀರಬೇಕು. ಇಷ್ಟಲಿಂಗವು ಪ್ರಾಣಲಿಂಗದ ಸ್ವರೂಪವೇ ಹೊರತು ಬೇರಲ್ಲ. ಇದು ದಿಟಕ್ಕೆ ದಿಟ.

ಕ್ರಿಯಾಚರಣೆಯಿಲ್ಲದೆ ಕ್ರಿಯಾಲಿಂಗಾರ್ಚನೆಯಿಲ್ಲದೆ ಬರೀ ನೆನೆದರೆ ಬರೀ ಅರಿದರೆ ಪ್ರಯೋಜನವಿಲ್ಲ. ನೆನಿಕೆ ಅರಿಕೆಗಳಿಗೆ ಮಾಡುವಿಕೆಯೇ ಮೂಲ. ಆಚಾರವಿಲ್ಲದ ವಿಚಾರ ಫಲಿಸದು; ಪಕ್ವವಾಗದು. ದೀಪವನ್ನು ನೆನೆದರೆ ಬೆಳಕುಬಾರದು. ಜ್ಯೋತಿಯನ್ನು ಅಂಟಿಸುವ ಕಾರ್ಯವೇ ಇಷ್ಟ ಲಿಂಗಧಾರಣ ಅರ್ಚನಾದಿಗಳು.

'ಅಂತರಂಗದಲ್ಲಿ ಅರಿವಾದಡೇನಯ್ಯ, ಬಹಿರಂಗದಲ್ಲಿ ಕ್ರಿ ಇಲ್ಲದನ್ನಕ್ಕ ? ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯವುಂಟೆ ? ಕನ್ನಡಿ ಇಲ್ಲದಿರ್ದರೆ ತನ್ನ ಮುಖವ ಕಾಣಬಹುದೆ ? ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲ ಸಂಗಯ್ಯ.'

'ತದ್ರೂಪಮಿತಿ ನಿಶ್ಚಯಾತ್' ಎಂಬ ಬೀಜದ ಭೂಜವೇ 'ಸಾಕಾರ ನಿರಾಕಾರ ಏಕೋದೇವ' ಎಂಬ ಮಾತು. ಎರಡಕ್ಕೂ ಏಕಕಂಠತೆಯಿದೆ.

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಅವ್ಯಕ್ತವೂ ಅಪರಿಚ್ಛಿನ್ನವೂ ಆದ ಆ ಪರವಸ್ತುವ್ಯಕ್ತವಾಗಿ ಪರಿಚ್ಛಿನ್ನವಾಗಿ ಇಷ್ಟಲಿಂಗದಲ್ಲಿರಬಹುದೆಂದು ಆಶ್ಮರಥ್ಯಾಚಾರ್ಯರು ಒಪ್ಪಿದ್ದಾರೆ. ಅಲ್ಲದೆ 'ಅನುಸ್ಮೃತೇರ್ಬಾದರಿಃ' ಆ ಪರವಸ್ತು ವಾಙ್ಮನಗಳಿಗೆ ಮೀರಿದ್ದರೂ ಧ್ಯಾನಸ್ತೋತ್ರಾರ್ಚನಾದಿಗಳಿಗೆ ವಿಷಯನಾಗಬಲ್ಲನೆಂದು ಬಾದರಿ (ವ್ಯಾಸ) ಆಚಾರ್ಯನೂ ಅನುಮತಿಸಿದ್ದಾನೆ.

'ದೇಹದೊಡನೆ ಪ್ರಾಣ ಹುಟ್ಟಿತ್ತಯ್ಯ. ಆ ದೇಹದೊಡನೆ ಮಿಶ್ರವಾದ ಪ್ರಾಣನು ಶ್ರೀಗುರುವಿನ ಕರಕಮಲದಲ್ಲಿ ಉತ್ಪತ್ತಿಯಾಗಿ, ಆ ಗುರುವು ಅಂಗದ ಮೇಲೆ ಲಿಂಗವ ಆಯುತವ ಮಾಡಿ ಉರುತರ ಲಿಂಗದಲ್ಲಿ ಭರಿತಚರಿತ ಚಾರಿತ್ರನ ಮಾಡಿದನಾಗಿ ಲಿಂಗದೇಹಿ, ಲಿಂಗಪ್ರಾಣಿ ಎನಿಸಿಕೊಂಡು ಬದುಕಿದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ.'

ಅಂತರಂಗದಲ್ಲಿ ಪ್ರಾಣಲಿಂಗವಿದ್ದರೆ ಸಾಲದೆ? ಬಹಿರಂಗದಲ್ಲಿ ಕ್ರಿಯಾಚಾರಗಳಿದ್ದರೆ ಸಾಲದೆ ? ಬೇರೆ ಇಷ್ಟಲಿಂಗಧಾರಣವೇಕೆ ? ಎಂದು ಕೇಳುವವರಿದ್ದಾರೆ. ಅಂತರಂಗದಲ್ಲಿ ಜ್ಞಾನ ಲಿಂಗವಿದ್ದರೆ ಅಂತರಂಗ ಭಕ್ತವಾಯಿತು. ಬಹಿರಂಗವು ಭಕ್ತನಾಗಬೇಡವೆ ? ಕ್ರಿಯಾಚಾರಗಳು ಸಲ್ಲಬೇಕಾದರೆ ಸದ್ರೂಪವಾದ ಇಷ್ಟಲಿಂಗವು ಬೇಕೇ ಬೇಕು. ಸ್ಥೂಲವಾದ ಕಾಯ ಕ್ರಿಯಾಚಾರಗಳನ್ನು ಸಲ್ಲಿಸಿಕೊಳ್ಳುವ ಪರವಸ್ತುವೇ ಕರದಿಷ್ಟಲಿಂಗವು.

'ಆಯತ ಲಿಂಗ ಸಂಬಂಧವಿಲ್ಲದಾತ ಅಂಗಭವಿ. ಸ್ವಾಯತ ಲಿಂಗ ಸಂಬಂಧವಿಲ್ಲದಾತ ಮನಭವಿ. ಸನ್ನಿಹಿತ ಲಿಂಗ ಸಂಬಂಧವಿಲ್ಲದಾತ ಆತ್ಮಭವಿ. ಇದು ಕಾರಣ ಆಯತಲಿಂಗವ ಅಂಗದಲ್ಲಿ ಧರಿಸಿ, ಸ್ವಾಯತ ಲಿಂಗವ ಮನದಲ್ಲಿ ಅಳವಡಿಸಿ, ಸನ್ನಿಹಿತ ಲಿಂಗವ ಆತ್ಮನಲ್ಲಿ ಸಂಬಂಧಿಸಿ ಹೀಂಗೆ ಅಂಗಮನ ಪ್ರಾಣದಲ್ಲಿ ಲಿಂಗವ ಧರಿಸಿ ಹೆರೆಹಿಂಗದಿರ್ದೆನಯ್ಯಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ,'

'ಭಾವ ಮನಕ್ಕೆ ಲಿಂಗವಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುದೆ? ಎರಡಂಗ ಭಕ್ತರಾಗಿ ಒಂದಂಗ ಭವಿಯಾಗಿಪ್ಪ ಭ್ರಾಂತರ ಮುಖವ ನೋಡಲಾಗದಯ್ಯ. ತನುಮನಭಾವದಲ್ಲಿ ಲಿಂಗವಧರಿಸಿ ಅಂಗತ್ರಯಕ್ಕೆ ಅಗಲಿಕೆ ಇಲ್ಲದೆ ಅಚಲಿತನಾಗಿರ್ದೆನಯ್ಯಾ, ಮಹಾಲಿಂಗ ಗುರು ಸಿದ್ಧೇಶ್ವರ ಪ್ರಭುವೇ.'

ಅಂಗಕ್ರಿಯೆ ಇಷ್ಟಲಿಂಗ. ಅಂಗಕಳೆ ಇಷ್ಟಲಿಂಗ. ಅಂಗದ ಭವಿತನ ಬಯಲಾಗಬೇಕಾದರೆ ಬೇಕು ಇಷ್ಟಲಿಂಗ. ಅಂಗದಲ್ಲಿ ನಡೆ ಚೆನ್ನ ನುಡಿ ಚೆನ್ನ ಆಗಬೇಕಾದರೆ ಆವಶ್ಯಕ ಇಷ್ಟಲಿಂಗ. ಅಂಗದ ಆರೋಗ್ಯ ಉಳಿದು ಬೆಳೆದು ಬರಬೇಕಾದರೆ ಬೇಕು ಮಣಿಮಂತ್ರೌಷಧಿರೂಪಾದ ಇಷ್ಟಲಿಂಗ ; ಜೀವಕಣ ಸತ್ವವೂ ಶುದ್ಧವೂ ಆಗಬೇಕಾದರೆ ಅತ್ಯಗತ್ಯ ಇಷ್ಟಲಿಂಗ.

ಇಷ್ಟಲಿಂಗವಿದ್ದರೆ ಅನಿಷ್ಟಕ್ರಿಯೆಗಳಿಗೆ ಕೈದುಡುಕುವುದು ಕಮ್ಮಿಯಾಗುತ್ತದೆ. ದೃಷ್ಟಿ ನೋಟ ನಿಚ್ಚಟವಾಗುತ್ತದೆ. ಲಿಂಗಸ್ಪರ್ಶದಿಂದ ದೇಹಭಾವ ತೊಲಗುತ್ತದೆ. ದೈವದೃಷ್ಟಿ ದೈವಭಾವ ದೈವಕ್ರಿಯೆಗಳು ಉತ್ಪನ್ನವಾಗುತ್ತವೆ. ಇದಕ್ಕಿಂತ ಭಕ್ತತ್ವ ಬೇರಾವುದು ? ದೈವಕ್ರಿಯೆ ದೂರಾದರೆ ಭವಿತನ ದೇಹಕ್ಕೆ ಹತ್ತಿರದ್ದಾಗುತ್ತದೆ. ಅಂಗದಲ್ಲಿ ಲಿಂಗವಿದ್ದರೆ ಆ ಲಿಂಗದ ನಡೆ ಆ ಲಿಂಗದ ನುಡಿಗಳು ಮೈಗೂಡಿ ಬರುತ್ತವೆ. ಲಿಂಗಮುಖಕ್ಕೆ ಅರ್ಪಿಸಲು ಉಚಿತವಾದ ಸತ್ವಾಹಾರವನ್ನೇ ಸ್ವೀಕರಿಸಬೇಕಾಗುವುದರಿಂದ ಸಾತ್ವಿಕತೆ ಮೈಹದುಳತೆಗಳು ಮೈಗೂಡುತ್ತವೆ. ಸಾಮಾನ್ಯವಾದ ನಾರುಬೇರುಗಳನ್ನು ಮೈಗೆ ಕಟ್ಟಿಕೊಂಡು ರೋಗಗಳನ್ನು ನೀಗುವುದುಂಟು. ಸರ್ವಶ್ರೇಷ್ಠವಾದ ಶೈವಮಂತ್ರ ಸಹಿತವಾದ ಮಣಿ ಮದ್ದುಗಳಿಂದ ಕೂಡಿದ ಇಷ್ಟಲಿಂಗಸ್ಪರ್ಶದಿಂದ ತನು ತನ್ನ ಪ್ರಾಕೃತಿಕ ರೋಗಗಳನ್ನೂ ಪ್ರಾಪಂಚಿಕ ರೋಗವನ್ನೂ ಕಳೆದುಕೊಳ್ಳಬಲ್ಲುದು. ಸತ್ವಾಹಾರ ವಿಹಾರಗಳಿಂದ ಶುಕ್ರ ಶುದ್ಧತೆ ಸಂಭವಿಸುತ್ತದೆ. ಶುಕ್ರ ಶುದ್ಧತೆಯಿಂದ ಸಂತಾನ ಶುದ್ಧಿಯೂ ಉಂಟಾಗುತ್ತದೆ. ಇವೆಲ್ಲ ಕಾರಣಗಳಿಂದ ಇಷ್ಟಲಿಂಗಧಾರಣವು ಶಕ್ತಾಶಕ್ತರಿಗೂ ಅವಶ್ಯಕ.

ಸಾಲದ್ದಕ್ಕೆ ಬಹಿರಂಗದ ಕ್ರಿಯಾಶಕ್ತಿ ಕಾಯಶಕ್ತಿ ಸಂಪುಷ್ಟವಾಗದೆ ಸತ್ವಮಯವಾಗದೆ ಅಂತರಂಗದ ಜ್ಞಾನಶಕ್ತಿ ಪ್ರಾಣಶಕ್ತಿ ಪ್ರತಿಷ್ಠಿತವಾಗದು ; ಇಷ್ಟಲಿಂಗವೆ ಪ್ರಾಣ, ಪ್ರಾಣಲಿಂಗವೆ ಇಷ್ಟ, ದೃಷ್ಟಿ ಬಲಿಯಲು ಉಭಯವೊಂದಾದುದೈ ! ಇಷ್ಟವನು ನೋಡ ನೋಡಲು ಸಕಲ ಸಂಧಾನವು, ನಿಷ್ಕಲದ ಹೊಲಬಯ್ಯ ಯೋಗಿನಾಥ !

'ಕಾಯದ ಕರದಲ್ಲಿ ಕಾಯಲಿಂಗವನಿತ್ತು |
ಕಾಯಲಿಂಗವು ತಾನು ಪ್ರಾಣ ಭೇದಿಸುವ,
ಇತ್ತೆರನ ಮುತ್ತೆರನ ನಾಲ್ದೆರನ ಭೇದವನು
ಚಿತ್ತಶುದ್ಧಿಯಲರಿದೆ ಯೋಗಿನಾಥ'—

ಎಂದು ಸಿದ್ಧರಾಮ ಶಿವಯೋಗಿಯು ತನ್ನ ಅಷ್ಟಾವರಣ ಸ್ತೋತ್ರ ವಿಧಿಯಲ್ಲಿ ಇಷ್ಟದ ವೈಶಿಷ್ಟ್ಯವನ್ನು ಸ್ಪಷ್ಟಪಡಿಸಿದ್ದಾನೆ.

'ಲಿಂಗಧರಣ ಮಾತ್ರೇಣ ಶಿವತ್ವ ಪ್ರಾಪ್ತಿರೇವ ಹಿ' ಎಂದು ಪಾರಮೇಶ್ವರಾಗಮವು ಪ್ರತಿಪಾದಿಸಿದೆ. ಆದ್ದರಿಂದ ಬಾಹ್ಯಲಿಂಗಧಾರಣವು ಅವಶ್ಯಕ. ಬಾಹ್ಯಾಂಗಕ್ಕೂ ಶಿವತ್ವಪ್ರಾಪ್ತಿ ಆವಶ್ಯಕ ; ಅಪೇಕ್ಷಿತ.

"ಲಿಂಗಂ ತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ಪರಾತ್ಪರಮ್
ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ ।
ಪ್ರಾಣಲಿಂಗಮಿದಂ ಸೂಕ್ಷ್ಮಂ ಯದಂತರ್ಭಾವನಾಮಯಮ್
ಪರಾತ್ಪರಂ ತು ಯಶ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ ।
ಭಾವನಾತೀತಮವ್ಯಕ್ತಂ ಪರಬ್ರಹ್ಮ ಶಿವಾಭಿಧಮ್ ।"

ಸ್ಥೂಲ ಸೂಕ್ಷ್ಮ ಕಾರಣ ಎಂದು ಲಿಂಗವು ಮೂರು ಬಗೆ. ಇಷ್ಟಲಿಂಗವೆ ಸ್ಥೂಲ. ಇದು ಬಾಹ್ಯಾಂಗದಲ್ಲಿ ಧಾರಣವಾಗಿರುತ್ತದೆ. ಪ್ರಾಣಲಿಂಗವೆ ಸೂಕ್ಷ್ಮ. ಇದು ಭಾವನಾಮಯವಾಗಿದೆ. ಭಾವಲಿಂಗವೇ ಕಾರಣ ; ಪರಾತ್ಪರ. ತೃಪ್ತಿಮಯವಾಗಿದೆ. ತೃಪ್ತಿಲಿಂಗವೆನ್ನುತ್ತಾರೆ. ಭಾವಾತೀತವಾದುದೆ ಪರಬ್ರಹ್ಮ ; ಅದೇ ಪರಶಿವ. ಅದು ನಿರಾಕಾರ. ಇಷ್ಟಲಿಂಗವು ನಾಮ ರೂಪು ಕ್ರಿಯಾತ್ಮಕವಾದುದು. ಪ್ರಾಣಲಿಂಗವು ನಾಮರೂಪೋಭಯ ಮಾತ್ರವಾದುದು. 'ರೂಪೋಪನ್ಯಾಸಾಚ್ಚ' ಎಂದಿದೆ ಬ್ರಹ್ಮ ಸೂತ್ರ. ಭಾವಲಿಂಗವು ನಾಮ ಮಾತ್ರ ನಿರ್ದೇಶಿತವಾದುದು. 'ಶಬ್ದ ವಿಶೇಷಾತ್' ತುರ್ಯವಸ್ತು ನಾಮಾತೀತವಾದುದು. ನೇತ್ರಗ್ರಾಹ್ಯವಾದುದು ಇಷ್ಟಲಿಂಗ. ಮನೋಗ್ರಾಹ್ಯವಾದುದು ಪ್ರಾಣಲಿಂಗ. ಭಾವಗ್ರಾಹ್ಯವಾದುದು ಭಾವಲಿಂಗ. ಸಕ್ರಮವಾಗಿ ಈ ಮೂರು ಲಿಂಗಗಳು ಸಕಲ, ಸಕಲನಿಷ್ಕಲ, ನಿಷ್ಕಲರೂಪಾಗಿವೆ. ಸತ್ ಚಿತ್ ಆನಂದ ರೂಪಾಗಿವೆ. ಕ್ರಿಯಾ ಜ್ಞಾನ ಅನುಭವ ನಿಷ್ಕಲರೂಪಾಗಿವೆ. ಕುರುಹು ಅರುಹು ಸುಳುಹು ತಾವಾಗಿವೆ. ನಾದ ಬಿಂದು ಕಲಾತ್ಮಕವಾಗಿವೆ. ರೂಪು ರುಚಿ ತೃಪ್ತಿ ರೂಪಾಗಿವೆ. ಗುರು ಲಿಂಗ ಜಂಗಮಾತ್ಮಕವಾಗಿವೆ. ಆರ್ಚನ ಅರ್ಪಣ ಅನುಭವ ಗಮ್ಯವಾಗಿವೆ. ಸಚ್ಛಕ್ತಿ ಚಿಚ್ಛಕ್ತಿ ಆನಂದಶಕ್ತಿ ವಿಶಿಷ್ಟಗಳಾಗಿವೆ. ತತ್ ತ್ವಂ ಅಸಿ ರೂಪಾಗಿವೆ. ಅ-ಉ-ಮ-ಕಾರಮಂತ್ರಾತ್ಮಕಗಳಾಗಿವೆ. ಶಿವಶಕ್ತಿ ಸಂಪುಟವಾಗಿವೆ.

'ಜೀವ ಮುಖ್ಯ ಪ್ರಾಣಲಿಂಗಾನ್ನೇತಿ ಚೇನ್ನೋಪಾಸಾ ತ್ರೈವಿಧ್ಯಾದಾಶ್ರಿತತ್ವಾದಿಹ ತದ್ಯೋಗಾತ್' ಎಂಬೀ ಬ್ರಹ್ಮಸೂತ್ರದಲ್ಲಿ ಜೀವ ಇಷ್ಟಲಿಂಗ, ಪ್ರಾಣಲಿಂಗ, ಆಶ್ರಿತಪದದಿಂದ ಭಾವಲಿಂಗ ಈ ಮೂರರ ಉಪಾಸನೆಯು ಉಕ್ತವಾಗಿದೆ.

'ಅಂಗದಲ್ಲಿ ಆಯತವಾಯಿತ್ತು, ಮನದಲ್ಲಿ ಸ್ವಾಯತವಾಯಿತ್ತು ; ಭಾವದಲ್ಲಿ ಸನ್ನಿಹಿತವಾಯಿತ್ತು. ಆಯತವಾದುದೇ ಸ್ವಾಯತವಾಗಿ, ಸ್ವಾಯತವಾದುದೇ ಸನ್ನಿಹಿತವಾಗಿ, ಸನ್ನಿಹಿತ ಸಮಾಧಾನವಾಗಿ ನಿಂದುದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾಗಿ !' 'ಸ್ಥೂಲ ತನು, ಸೂಕ್ಷ್ಮ ತನು; ಕಾರಣತನು. ಸ್ಥೂಲತನುವಿನ ಮೇಲೆ ಪ್ರಾಣಲಿಂಗ ಪ್ರತಿಷ್ಠೆ ; ಕಾರಣ ತನುವಿನ ಮೇಲೆ ಭಾವಲಿಂಗ ಪ್ರತಿಷ್ಠೆ. ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ಮಹವು. ಆ ಮಹದ ಹೃದಯದಲ್ಲಿ ಕೊನೆದೋರುತಿಪ್ಪ ಜ್ಯೋತಿಯು ನಮ್ಮ ಶರಣರ ಸರ್ವಾಂಗದಲ್ಲುಂಟು ನೋಡಯ್ಯ ಕೂಡಲಚೆನ್ನಸಂಗಮದೇವಾ.'

'ಶ್ರೀಗುರು ಕರುಣಿಸಿ ಕೊಟ್ಟ ಲಿಂಗ, ತನ್ನ ನಚ್ಚಿನ ಲಿಂಗ ಆಯತವಾಯಿತ್ತಯ್ಯ. ಪ್ರಾಣನ ನಚ್ಚಿನಿಂದ ಸ್ವಾಯತವಾಯಿತ್ತಯ್ಯ. ಉಭಯದ ನಚ್ಚಿನಿಂದ ಸಂಗಮವಾಯಿತ್ತು ಕೂಡಲ ಚೆನ್ನ ಸಂಗ ನಿಮ್ಮಲ್ಲಿ !'

ಕಣ್ಣು ಕಾಣದೆ ಮನ ನೆನೆಯದು. ಮನ ನೆನೆಯದೆ ಭಾವ ಅನುಭವಿಸದು. ಇದರಿಂದಾಗಿ ಕಣ್ಣಿಗೆ ಕಾಣಲು ಸದ್ರೂಪ ಇಷ್ಟಲಿಂಗವೆನಿಸಿತು. ಮನ ನೆನೆಯಲು ಚಿದ್ರೂಪ ಪ್ರಾಣಲಿಂಗವಾಯಿತು. ಭಾವ ತೃಪ್ತಿ ಪಡೆಯಲು ಆನಂದರೂಪ ಭಾವಲಿಂಗವಾಯಿತು.

'ಲಿಂಗಸ್ಯ ದರ್ಶನಾದ್ದೇವಿ ಮುಮುಜ್ಞಾಸಂ ಪ್ರಜಾಯತೇ ।
ಗತೇಷು ಬಹು ಸಂಖ್ಯೇಷು ದುಃಖ ರೂಪೇಷು ಜನ್ಮಸು ।
ಮತ್ಕಾರುಣ್ಯೇನ ತಸ್ಯಾಂತೇ ಜಾಯತೇ ಲಿಂಗದರ್ಶನಮ್ ॥'

ಪಾರಮೇಶ್ವರಾಗಮವೂ ಸಹ ಇಷ್ಟಲಿಂಗ ದರ್ಶನಕ್ಕೆ ಫಲವನ್ನು ಪ್ರತಿಪಾದಿಸಿದೆ. ಮತ್ತು,

'ಸ್ಮರಣಾತ್ಕೀರ್ತನಾದ್ದೇವಿ ಮಮ ಲಿಂಗಸ್ಯ ಧಾರಣಾತ್ ।
ಅನಾಯಾಸೇನಾತಿಶಯಂ ಫಲಂ ಸ್ಯಾದುತ್ತಮೋತ್ತಮಂ ॥

ಎಂದು ಹೇಳಿ ಪ್ರಾಣಲಿಂಗ ಭಾವಲಿಂಗಧಾರಣ ಸ್ಮರಣಗಳ ಫಲವನ್ನು ನಿರ್ದೇಶಿಸಿದೆ.

'ನಾದ ರೂಪಃ ಶಿವಃ ಸಾಕ್ಷಾಲ್ಲಿಂಗಮಿತ್ಯಭಿಧೀಯತೇ
ತತ್ಪ್ರತೀಕಾ ಮಹಾಶಕ್ತಿಃ ಸಾ ಚ ವೈ ಬಿಂದುರೂಪಿಣೀ ।
ತಯೋಃ ಸಮ್ಮೇಲನಾದ್ದೇವೀ ಕಳಾ ತತ್ರ ಪ್ರತಿಷ್ಠಿತಾ ।'

—ಸೂಕ್ಷ್ಮಾಗಮ, ಪ-೬.

ನಾದರೂಪವೇ ಶಿವನು. ಆ ನಿಷ್ಕಲ ಪರಶಿವನೇ ಭಾವಲಿಂಗ. ಆ ಭಾವಲಿಂಗದ ಪ್ರತೀಕವೇ ಮಹಾಶಕ್ತಿ. ಆ ಮಹಾಶಕ್ತಿಯೇ ಬಿಂದು. ಆ ಬಿಂದುರೂಪವೇ ಪ್ರಾಣಲಿಂಗ. ಆ ನಾದ – ಬಿಂದು ರೂಪರಾದ ಶಿವಶಕ್ತಿಗಳ ಸಮ್ಮಿಲನವೇ ಕಳಾ. ಆ ಕಳೆಯೇ ಇಷ್ಟಲಿಂಗ.

ಈ ಆಗಮ ಮಂತ್ರಕ್ಕೆ ಇನ್ನೊಂದರ್ಥವಿದೆ. ಇಷ್ಟಲಿಂಗದ ಗೋಳಕ (ಬಾಣ)ವೆ ನಾದರೂಪಲಿಂಗ. 'ತತ್ಪೀಠಿಕಾ' ಪಾಠಾಂತರದಲ್ಲಿ ಇಷ್ಟಲಿಂಗದ ಪೀಠಿಕೆಯೆ ಬಿಂದು ರೂಪ. ಗೋಳಕ ಶಿವ; ಪೀಠಿಕೆ ಶಕ್ತಿ. ಇವೆರಡರ ಸಂಬಂಧವೇ ಅಂದರೆ ಗೋಳಕಪೀಠಿಕೆಗಳ ಸಂಬಂಧವೇ ಕಳಾರೂಪ ಇಷ್ಟಲಿಂಗ. ಒಟ್ಟಿನಲ್ಲಿ ಶಿವಶಕ್ತಿಗಳ, ನಾದಬಿಂದುಗಳ, ಗೋಳಕಪೀಠಿಕೆಗಳ, ಭಾವ ಪ್ರಾಣಗಳ ಸಮ್ಮಿಲನವೆ ಇಷ್ಟಲಿಂಗ. ಈ ಎಂಟರ ನಂಟತನದಿಂದ ಇಷ್ಟವು ಕಳಾ ಮೂರ್ತಿಯಾಗಿ ಕಂಗೊಳಿಸುತ್ತದೆ.

'ಸಾ ಕಲಾ ಪರಮಾ ಸೂಕ್ಷ್ಮಾ ವ್ಯಾಪ್ತಾ ಸರ್ವತ್ರ ಸರ್ವದಾ
ತಿಲೇಷು ತೈಲಂ ಪುಷ್ಪೇಷು ಗಂಧೋ ಯದ್ವದ್ವಿಭಾಸತೇ ।
ತಥಾ ಗುರುಕಟಾಕ್ಷೇಣ ತಾಂ ಪಶ್ಯೇತ್ ಜ್ಞಾನ ಚಕ್ಷುಷಾ
ತಸ್ಮಾಲ್ಲಿಂಗಮಿತಿಖ್ಯಾತಂ ನಾದಬಿಂದು ಕಲಾತ್ಮಕಮ್ ।'

ಸೂಕ್ಷ್ಮಾಗಮ, ಪ-೬,

ಆ ಕಳೆ ಸಾತಿಶಯ ಸೂಕ್ಷ್ಮವಾಗಿದೆ. ಸರ್ವಾಂಗದಲ್ಲಿ ವ್ಯಾಪಿಸಿದೆ. ತಿಲದಲ್ಲಿ ತೈಲ, ಪುಷ್ಪದಲ್ಲಿ ಪರಿಮಳ ಪ್ರಸರಿಸಿರುವಂತೆ ಪ್ರಸರಿಸಿದೆ. ಅಲ್ಲದೆ ಅದೆಂದಿಗೂ ಅಚ್ಚಳಿಯದಿರುತ್ತದೆ. ಅಂಗದ ಕಣಕಣದಲ್ಲಿಯೂ ಅಂಗವಿಸಿದೆ;

ಸಂಗಡಿಸಿದೆ. ಅದರಿಂದ ಅದು ಲಿಂಗವೆನಿಸಿದೆ. ಕಳೆಯಂತೆ ನಾದಬಿಂದುಗಳೂ ಅಂಗಾಂಗಗಳಲ್ಲಿ ತುಂಬಿಕೊಂಡಿವೆ.

'ಅಂಗಕಳೆ ಲಿಂಗದಲಿ ಲಿಂಗಕಳೆ ಅಂಗದಲಿ ।
ಅಂಗಲಿಂಗವೆಂಬುಭಯವಳಿದು ।
ಮಂಗಳ ಮಹಾ ಬೆಳಗಿನಾ ಬೆಳಗಿನೊಳಗೆ ।
ಕಂಗಳೇ ಪ್ರಾಣವಾಗಿರುತಿರ್ದೆನು ॥೧೩॥'—

ಪ್ರಭುದೇವರ ಮಂತ್ರಗೋಪ್ಯ ಅಂಗದ ಕಳೆಯನ್ನು ಲಿಂಗಕ್ಕೆ, ಲಿಂಗದ ಕಳೆಯನ್ನು ಅಂಗಕ್ಕೆ ಪೂರಕ ಮಾಡುವ ಪರಮ ಗುರುವಿನ ಜಾಣ್ಮೆಗೆ ಎಣೆಯಿಲ್ಲ. ಶುದ್ಧಾತ್ಮನಲ್ಲಿರುವ ಶಿವಕಳೆಯನ್ನು ತೆಗೆದು ತಂದು ಶಿಷ್ಯನ ಕರಸ್ಥಲದ ಲಿಂಗದಲ್ಲಿರಿಸುವನು. ಅಂತೆಯೇ ಲಿಂಗಗತ ಶಿವಕಳೆಯನ್ನು ಶಿಕ್ಷೆಯಿಂದ (ಜ್ಞಾನೋಪದೇಶದಿಂದ) ಅಂಗದಲ್ಲಿ ಅಳವಡಿಸುವನು. ಆಗ ಅಂಗಲಿಂಗವೆಂಬ ಕವಲು ಕಾಣಿಸದು. ಅಂಗವೇ ಲಿಂಗವಾಗಿ ಲಿಂಗವೇ ಅಂಗವಾಗಿ ಮಂಗಳ ಮಹಾ ಬೆಳಗಿನ ಬೆಳಗಾಗಿ ಆ ಬೆಳಗನ್ನು ನಿಬ್ಬೆರಗಿನಿಂದ ಸಿಟ್ಟಿಸುವ ಕಣ್ಣುಗಳೇ ಪ್ರಾಣವಾಗಿರುವ ಪರಮಭಾಗ್ಯವುಂಟಾಗುತ್ತದೆ.

ಸ್ಥೂಲವಾದ ಶರೀರಕ್ಕೆ ಸ್ಥೂಲವಾದ ಲಿಂಗಬೇಕು. ಆಕಾರವುಳ್ಳ ಕಾಯಕ್ಕೆ ಆಕಾರವುಳ್ಳ ಲಿಂಗಬೇಕು. ಸೃಷ್ಟಿಯಾದ ಶರೀರಕ್ಕೆ ಅದರದೇ ಆದ ಒಂದು ಲಯವಿದೆ. ಆ ಲಯ ಅವಿಷಯದಲ್ಲಿ ಆಗಬಾರದು; ಅಮಂಗಳವಾಗಬಾರದು ಎಂದು ಭಾವಿಸಿ ಲಿಂಗವನ್ನು ಕರುಣಿಸುವ ಕಲೆಯನ್ನು ಕೈಗೊಂಡರು. ಅಂಗವಲಯ ಮಂಗಳಮಯಲಿಂಗದಲ್ಲಿಯೇ ಆಗಬೇಕೆಂದು ಅದನ್ನು ಸಾಧಿಸಬೇಕೆಂದು ಅದೇ ಜೀವನದ ಇಷ್ಟವಸ್ತುವೆಂದು ಇಷ್ಟಲಿಂಗದ ಮುಖಾಂತರ ಬೋಧಿಸಿದರು ಶ್ರೀಗುರುಗಳು.

ಆ ಲಯಕ್ಕೆ ಮೊದಲು ಅಂಗಕ್ಕೆ ಒಂದು ಸ್ಥಿತಿಯಿದೆ ಸ್ಥಿತಿ ಕ್ರಿಯಾತ್ಮಕವಾಗಿ ಸ್ಥಿತವಾಗಿರುತ್ತದೆ. ನಿಸರ್ಗವಾಗಿ ಮಾನವ ದೇಹದಲ್ಲಿನ ಜೀವಸತ್ವಗಳು ಕ್ರಿಯೆಗಳಲ್ಲಿ ಜ್ಞಾನಗಳಲ್ಲಿ ಸ್ಥಿತಿಗೊಳ್ಳುತ್ತವೆ. ಜಡಕರ್ಮಗಳಲ್ಲಿ ಅವು ಸ್ಥಿತಿಗೊಂಡರೆ ಮಾನವನ ಜೀವನ ಹಾಳಾಗುತ್ತದೆ. ಜ್ಯೋತಿರ್ಮಯ ಕಳೆಯಿಲ್ಲದಾಗುತ್ತದೆ. ಅದರಿಂದಾಗಿ ಈ ಜಡಕರ್ಮಗಳಿಗೆ

ಜಾಗತಿಕ ಅಜ್ಞಾನಕ್ಕೆ ಬಲಿಯಾಗಬಾರದೆಂದು ಭಾವಿಸಿ ಕ್ರಿಯಾತ್ಮಕ ಜ್ಞಾನಾತ್ಮಕ ಲಿಂಗಗಳನ್ನು ದಯಪಾಲಿಸಿ ಅವುಗಳ ಮುಖಾಂತರ ಬಾಳಿನಲ್ಲಿ ಬದುಕುವ ಎಚ್ಚರಿಕೆಯನ್ನು ತಂದುಕೊಡುತ್ತಾನೆ ಶ್ರೀಗುರು. ಶರೀರದಲ್ಲಿ ಸತ್ಕ್ರಿಯೆಗಳ ಧಾರಣವಾಗಬೇಕು. ಮನದಲ್ಲಿ ಸಮ್ಯಜ್ಞಾನಗಳ ಧಾರಣವಾಗಬೇಕು ಅಥವಾ ಸದ್ವಾಸನೆ ಶಿವಧ್ಯಾನಾದಿಗಳು ಧಾರಣವಾಗಬೇಕು. ಭಾವದಲ್ಲಿ ಶಿವಾನುಭವವು ಧಾರಣವಾಗಬೇಕು. ಇವೇ ತ್ರಿವಿಧ ಲಿಂಗಗಳ ಧಾರಣದ ತಿರುಳು.

'ಇಷ್ಟಲಿಂಗ ಮುಖವಾವುದು, ಪ್ರಾಣಲಿಂಗ ಮುಖವಾವುದು, ಭಾವಲಿಂಗ ಮುಖವಾವುದು ಎಂದರೆ ಹೇಳಿಹೆ ಕೇಳಿರಣ್ಣಾ ;

ಪಂಚೇಂದ್ರಿಯಗಳ ಮುಖವನ್ನೈದಿ ಇಷ್ಟಲಿಂಗವಾಯಿತ್ತು. ಪ್ರಾಣವಾಯುಗಳ ಮುಖವನ್ನೈದಿ ಇಷ್ಟಲಿಂಗವೆನಿಸಿತ್ತು. ಭಾವವನೆಯ್ದಿ ಭಾವಲಿಂಗವೆನಿಸಿತ್ತು. ಒಂದೇ ಲಿಂಗವು ತನುತ್ರಯಂಗಳಲ್ಲಿ ಇಷ್ಟ, ಪ್ರಾಣ, ಭಾವರೂಪಕವಾಗಿರ್ಪುದು. ಅವಸ್ಥಾತ್ರಯಂಗಳಲ್ಲಿ ಸತ್ಕ್ರಿಯಾಚರಣೆ ಸದ್ವಾಸನೆ, ಸುವಿಚಾರವಾಗಿ ತಲ್ಲೀಯವಾಗಿರ್ಪುದು. ಈಷಣತ್ರಯಂಗಳಲ್ಲಿ ತ್ರೈಲಿಂಗ ಪ್ರೇಮರತಿಗೆ ಸಕಲ ಸಾಧನಂಗಳಾಗಿ, ಮಾಯಾಭ್ರಾಂತಿಯನು ನಿಭ್ರಾಂತಿ ಎನಿಸಿ, ಶುದ್ಧ ಪ್ರಭಾವ ಪರಿಪೂರ್ಣ ಲಿಂಗವು ತಾನೇ ಪ್ರಸನ್ನ ಪ್ರಸಾದ ರೂಪಕನಾಗಿರ್ದೆನಯ್ಯ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.'

ಈ ವಚನವು ನಮ್ಮ ಮೇಲಿನ ಅಭಿಪ್ರಾಯದಲ್ಲಿ ಏಕಕಂಠತೆಯುಳ್ಳುದಾಗಿದೆ ಮತ್ತು ವಿಚಾರಾರ್ಹವೂ ಆಗಿದೆ. ಲಿಂಗತತ್ತ್ವವನ್ನು ಜೀವನದ ದೃಷ್ಟಿಯಲ್ಲಿ ಆಳವಾಗಿ ಆಲೋಚಿಸಿ ಜೀವನ ಸಿದ್ಧಾಂತಕ್ಕೆ ಸಮನ್ವಯಗೊಳಿಸಿದೆ. ಇದಲ್ಲದೆ ವಚನಕಾರರ ತ್ರಿವಿಧಲಿಂಗಗಳ ಸಹಜ ಸ್ವರೂಪ ಸಮನ್ವಯ ಸಿದ್ಧಾಂತವನ್ನು ಮುಂದಿನ ವಚನಗಳಲ್ಲಿ ಕಣ್ಣಾರೆ ಕಾಣಬಹುದಾಗಿದೆ.

'ಅಂಗದ ಮೇಲೆ ಸಾಕಾರವಿಡಿದು ಮಂತ್ರಾಹ್ವಾನಗಳಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಲ್ಲಿ ವ್ಯಾಪಿಸಿಕೊಂಡಿಪ್ಪುದೀಗ ಇಷ್ಟಲಿಂಗ. ಆ ಇಷ್ಟಲಿಂಗಕ್ಕೆ ಆಶ್ರಯವಾಗಿ ಚತುರ್ದಶ ಇಂದ್ರಿಯಂಗಳಲ್ಲಿ ತನ್ಮುಖವಾಗಿ ಸರ್ವೇಂದ್ರಿಯಂಗಳಿಗೆ ಚೈತನ್ಯವಾಗಿ ಪ್ರಾಣದಲ್ಲಿ ಪರಿಪೂರ್ಣವಾಗಿಪ್ಪುದೀಗ ಪ್ರಾಣಲಿಂಗ. ಆ ಪ್ರಾಣಲಿಂಗಕ್ಕೆ ಆದಿಯಾಗಿ ಭಾವಭ್ರಮೆಗಳು ನಷ್ಟವಾಗಿ ಅನುಭಾವದಲ್ಲಿ ಅನುವಾಗಿ **ಭಾವ, ಸದ್ಭಾವ, ನಿರ್ಭಾವಂ**

ಗಳಲ್ಲಿ ಭರಿತವಾಗಿ ಭಾವಬ್ರಹ್ಮವೆಂಬ ಭೇದವಿಲ್ಲದೆ ಸನ್ನಿಹಿತ ಭಾವದಿಂದ ಇಪ್ಪುದೀಗ ಭಾವಲಿಂಗ. ಇಂತೀ ಮೂರು ಲಿಂಗದ ಮೂಲ, ಆರು ಲಿಂಗದ ಅಂತ್ಯವನೊಳಕೊಂಡು, ಮಾರ್ಗಕ್ರಿ ನಿಕ್ರಿಯವಾಗಿ, ಧ್ಯಾನ ನಷ್ಟವಾಗಿ, ಮಂತ್ರ ಗೋಪ್ಯವಾಗಿ, ಜ್ಞಾನಶೂನ್ಯವಾಗಿ, ಭಾವದಿಗಂಬರವಾಗಿ, ಘನಕ್ಕೆ ಘನವಾದ ಪರಬ್ರಹ್ಮವು ತಾನೇ ಸೌರಾಷ್ಟ ಸೋಮೇಶ್ವರಾ.'

ಈ ವಚನದಲ್ಲಿ ಮೂರು ಲಿಂಗಗಳ ಸಾದ್ಯಂತ ಸಾರ ವಿಷಯವೆಲ್ಲ ಸರ್ವೋನ್ನತವಾಗಿ ಸ್ವಾನುಭವಪೂರ್ಣವಾಗಿ ಸಂಪುಟಗೊಂಡಿದೆ. ಇಷ್ಟಲಿಂಗದ ವ್ಯಾಪ್ತಿ ಎಲ್ಲಿ? ಪ್ರಾಣಲಿಂಗದ ವ್ಯಾಪ್ತಿ ಎಲ್ಲಿ? ಭಾವಲಿಂಗದ ವ್ಯಾಪ್ತಿ ಎಲ್ಲಿ? ಆ ಮೂರಕ್ಕೆ ಪರಸ್ಪರ ಆಶ್ರಯವೆಂತಹದು? ಆದ್ಯಂತವೇನು? ತಾನು ಕೊನೆಗೆ ಆ ಪರಬ್ರಹ್ಮವಾದಾಗ ಕ್ರಿಯಾಧ್ಯಾನ ಮಂತ್ರ ಜ್ಞಾನ ಭಾವಗಳು ಏನಾಗಬಲ್ಲವು? ಎಂಬುದನ್ನು ವಿವರಿಸಿದೆಯಲ್ಲದೆ ಅಣುವಾದ ಘನಕ್ಕೆ ಘನವಾಗುವುದೇ ಮುಖ್ಯ ಸಿದ್ಧಾಂತವೆಂಬುದನ್ನು ಸಾರಿದೆ.

ಮಾನವ ಜೀವನವು ಸುಖಮಯವಾಗಬೇಕಾದರೆ ಅದಕ್ಕೆ ಒಳ್ಳೆಯ ಕಟ್ಟುನಿಟ್ಟುಗಳು ಇದ್ದಾಗಬೇಕು. ಇಲ್ಲವಾದರೆ ಸ್ವೈರ ವೃತ್ತಿಗಳು ಮೊದಲಾಗಿ ಮುಂದುವರಿದು ಸರ್ವನಾಶಕ್ಕೆ ಮಾರ್ಗವಾಗುತ್ತದೆ. ಸರ್ವದುಃಖಗಳಿಗೆ ಆಗರವಾಗುತ್ತದೆ. ಇದನ್ನು ತಪ್ಪಿಸಲು ತ್ರಿವಿಧಲಿಂಗಗಳ ಧಾರಣ ಏರ್ಪಟ್ಟಿದೆ. ಲಿಂಗವ್ರತಗಳು ಸೇರ್ಪಡೆಯಾಗಿವೆ. ಸದಾಚಾರಗಳಿಗೆ ದಾರಿ ಹಾಕಿದೆ ಇಷ್ಟಲಿಂಗ. ಇಂದ್ರಿಯ ಸಂಯಮಕ್ಕೆ ಮುಖವಾಗಿದೆ ಪ್ರಾಣಲಿಂಗ. ಸಚ್ಛೀಲಕ್ಕೆ ಸಹಾಯಕವಾಗಿದೆ ಭಾವಲಿಂಗ.

'ನಾದ ಬಿಂದು ಕಳೆಯಂ ತಿಳಿದು, ಚಿನ್ನಾದ ಸ್ವರೂಪವಾದ ಗುರುದೇವನು; ಚಿದ್ಬಿಂದು ಸ್ವರೂಪವಾದ ಲಿಂಗದೇವನು; ಚಿತ್ಕಳಾ ಸ್ವರೂಪವಾದ ಜಂಗಮದೇವನೆಂದರಿದು, ಸ್ಥೂಲ ಶರೀರಾಭಿಮಾನಿಯಾದ ಜೀವಾತ್ಮನು; ಸೂಕ್ಷ್ಮ ಶರೀರಾಭಿಮಾನಿಯಾದ ಅಂತರಾತ್ಮನು; ಕಾರಣ ಶರೀರಾಭಿಮಾನಿಯಾದ ಪರಮಾತ್ಮನು—ಎಂದೆನಿಸಿಕೊಂಬ ಆತ್ಮತ್ರಯದಲ್ಲಿ—ಸತ್ಕ್ರಿಯಾ ಸ್ವರೂಪಮಾದ ಇಷ್ಟಲಿಂಗವು, ಸುಜ್ಞಾನ ಸ್ವರೂಪಮಾದ ಪ್ರಾಣಲಿಂಗವು; ಪರಿಪೂರ್ಣ ಸ್ವರೂಪಮಾದ ಭಾವಲಿಂಗವು ಎನಿಸಿಕೊಂಬ ಲಿಂಗತ್ರಯಂಗಳಲ್ಲಿ ಸಂಬಂಧಿಸಿ ಸ್ವಾಯತವ ಮಾಡಿಕೊಂಡು ಜೀವಾತ್ಮನಲ್ಲಿ ಇಷ್ಟಲಿಂಗ, ಅಂತ

ರಾತ್ಮನಲ್ಲಿ ಪ್ರಾಣಲಿಂಗ, ಪರಮಾತ್ಮನಲ್ಲಿ ಭಾವಲಿಂಗವನು ಸಂಬಂಧಿಸಿ ಸ್ವಾಯತವ ಮಾಡಿಕೊಂಬುವುದು.'

ನಾದ ಅದೊಂದು ಅವ್ಯಕ್ತ ಶಬ್ದ; ಅನಾಹತ ಧ್ವನಿ. ಅದೊಂದು ಆ ಪರಾವಾಣಿ. ಅದು ಚಿನ್ನಾದವಾದಾಗ ಗುರುಸ್ವರೂಪವಾಗುತ್ತದೆ. ಆ ಗುರು ಸ್ವರೂಪವೇ ಸತ್ಕ್ರಿಯಾರೂಪ ಇಷ್ಟಲಿಂಗವಾಗುತ್ತದೆ. ಜೀವಾತ್ಮ ಚೈತನ್ಯದಿಂದ ಕೂಡಿಕೊಂಡಿರುತ್ತದೆ. ಸ್ಥೂಲ ತನುವಿನಲ್ಲಿ ಆಯತ್ತವಾಗುತ್ತದೆ. ಎಂಬುದನ್ನರಿತಾಗ ಇಷ್ಟಲಿಂಗದ ಶಿಷ್ಟತೆ ಸ್ಪಷ್ಟವಾಗುತ್ತದೆ.

ಬಿಂದು ಅದೊಂದು ಆಂತರಂಗಿಕ ರಸ; ಜೀವನ ಪೋಷಕ ರಸ. ಹೃತ್ಕೋಶದಲ್ಲಿ ಉತ್ಪತ್ತಿಯಾಗುವ ಉತ್ತಮ ರಸದ ಹನಿ. ಅದು ಅಧೋಮುಖವಾದರೆ ಹಾನಿ. ಅದು ಊರ್ಧ್ವಮುಖವಾಗಿ ಭ್ರೂಮಧ್ಯಕ್ಕೆ ಏರಿದರೆ ಆಗುವನು ಆತ್ಮಜ್ಞಾನಿ. ಅದಾಗುವುದು ಚಿದ್ಬಿಂದು. ಆ ಕಾರ್ಯವನ್ನು ಮಾಡುವುದು ಲಿಂಗ. ಆ ಚಿದ್ಬಿಂದು ರೂಪವೇ ಲಿಂಗ. ಅದೇ ಅಂತರಾತ್ಮ. ಅದು ಸೂಕ್ಷ್ಮ ಶರೀರಾಭಿಮಾನಿ. ಅಂದರೆ ಸುಜ್ಞಾನ ಸ್ವರೂಪ ತೇಜೋಮಯ ಪ್ರಾಣಲಿಂಗವಾಗಿ ಸೂಕ್ಷ್ಮತನುವಿನಲ್ಲಿ ಸ್ವಾಯತ್ತವಾಗುತ್ತದೆ

ಇಲ್ಲಿ ಇನ್ನೊಂದು ವಿಚಾರವಿದೆ. ಬಿಂದು ಉತ್ಪತ್ತಿ ಹೃತ್ಕೋಶದಲ್ಲಿ! ಹೃತ್ಕೋಶಕ್ಕೆ ಹೃತ್ಪಿಂಡ, ಎಂತಲೂ ಹೇಳುತ್ತಾರೆ. ಆ ಹೃತ್ಕೋಶವು ಅಛಿದ್ರವಾಗಿರಬೇಕು. ಆಗ ಅದಕ್ಕೆ ಪ್ರಾಣಧಾರಣ ಶಕ್ತಿ ಬರುತ್ತದೆ. ಬಿಂದು ಧಾರಣಶಕ್ತಿ ಉಂಟಾಗುತ್ತದೆ.

ಹೃತ್ಪಿಂಡವು ಪರಿಶುದ್ಧ ರಸವನ್ನು (ಬಿಂದುರೂಪ ಪ್ರಾಣವನ್ನು) ಶರೀರದ ಸರ್ವಭಾಗಗಳಿಗೆ ಹಂಚುತ್ತದೆ. ಅದರಿಂದಾಗಿ ಆ ಹೃತ್ಪಿಂಡವು ಛಿದ್ರವಾಗದೆ ದೋಷಯುಕ್ತವಾಗದೆ ಸೊಸವೆ ಇರಬೇಕು. ಇರುವಂತೆ ಮಾಡುವುದೇ ಪ್ರಾಣಲಿಂಗಧಾರಣದ ಮೂಲೋದ್ದೇಶ. ವಿಗತಿ ತಪ್ಪಿ ಪ್ರಗತಿಯುಂಟಾಗುತ್ತದೆ. ಪ್ರಾಣಲಿಂಗಧಾರಣವೆಂದರೂ ಒಂದೇ! ಬಿಂದು ಅಥವಾ ಚಿದ್ಬಿಂದು ಧಾರಣವೆಂದರೂ ಒಂದೇ! ಈ ಅರ್ಥ ತಿಳಿದಾಗ ಅದಾರಿಗೆ ಆನಂದವಾಗಲಿಕ್ಕಿಲ್ಲ?

ಇನ್ನು ಳಿಯಿತು ಕಳೆಯ ಮಾತು. ಇದನ್ನು ಕಲಾ, ಕಳಾ ಎಂದು ಉಭಯ ರೀತಿಯಲ್ಲಿ ಉಪಯೋಗಿಸುತ್ತಾರೆ. 'ಲಳಯೋರ ಭೇದಃ' ಎಂಬಂತೆ

ಅವೆರಡಕ್ಕೂ ಅಭೇದವಿದೆ. ಆದರೂ ಸ್ವಲ್ಪ ವ್ಯತ್ಯಾಸ ತೋರಿಯೇ ತೋರುತ್ತದೆ. ಕಲಾ ಎಂದಾಗ ಕಾಲ, ಭಾಗ, ಶಿಲ್ಪ ಮುಂತಾದ ಅರ್ಥಗಳೇ ಅಭಿವ್ಯಕ್ತವಾಗುತ್ತವೆ. ಕಳಾ ಅಂದಾಗ ಒಂದು ಅಪೂರ್ವ ಕಾಂತಿ, ಮಧುರ ಶಾಂತಿ, ಅವ್ಯಕ್ತ ಮಧುರ ಧ್ವನಿ ಎಂದು ಅರ್ಥಗಳು ಸ್ಫುರಿಸುತ್ತವೆ. ಹಿಂದೆ ಹೇಳಿದ ರಸಬಿಂದುವಿನಿಂದ ಉತ್ಪನ್ನವಾಗುವ ಅದರಲ್ಲಿಯೂ ಊರ್ಧ್ವ ಮುಖವಾದ ಚಿದ್ಬಿಂದುವಿನಿಂದ ಉದಯವಾದ ಕಾಂತಿ ಶಾಂತಿಗಳೇ ಕಳಾ ಶಬ್ದಾರ್ಥ. ಅಜೀರ್ಣರೇತಸ್ಸಿನ ಅಪೂರ್ವ ತೇಜಸ್ಸಿಗೆ ಕಳೆಯೆಂದು ನಾವಿಲ್ಲಿ ಕರೆಯುತ್ತೇವೆ. ಆ ಚಿತ್ಕಳೆಯೇ ಜಂಗಮದೇವ, ಅಂದರೆ ಚೇತನ. ಅದು ಕಾರಣ ಶರೀರಿಯಾಗಿ ಪರಮಾತ್ಮನೆನಿಸಿದೆ. ಅದೇ ಪರಿಪೂರ್ಣ ಸ್ವರೂಪವಾದ ಭಾವಲಿಂಗವಾಗಿದೆ. ಕಾರಣ ತನುವಿನಲ್ಲಿ ಪರಿಪೂರ್ಣ ಪರಮಾತ್ಮರೂಪ ಭಾವಲಿಂಗವನ್ನು (ಚಿತ್ಕಳೆಯನ್ನು) ಧಾರಣ ಮಾಡಬೇಕು.

> 'ಆ ಮಹಾನಾದ ಕಳೆಯೇ ಲಿಂಗಕ್ಕಾಶ್ರಯವಾಗಿ, ಲಿಂಗದ
> ಕಳೆಯೇ ಹೃದಯಕ್ಕಾಶ್ರಯಮಾಗಿ, ಹೃದಯದ ಕಳೆಯೇ
> ಜ್ಞಾನಕ್ಕಾಶ್ರಯಮಾಗಿ, ಜ್ಞಾನದ ಕಳೆಯೇ ನಿತ್ಯಕ್ಕಾಶ್ರಯಮಾಗಿ
> ನಿತ್ಯ ನಿರವಯ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.'

ಆ ಮಹಾನಾದವುಳ್ಳ ಪರಶಿವಬ್ರಹ್ಮದ ಚಿತ್ಕಳೆಯೇ ಇಷ್ಟಲಿಂಗಕ್ಕೆ ಚೈತನ್ಯವಾಗಿ, ಇಷ್ಟಲಿಂಗದ ಚೈತನ್ಯ ಕಳೆಯೇ ಮನದಲ್ಲಿ ಪ್ರಾಣಲಿಂಗವಾಗುವುದಕ್ಕೆ ಆಸ್ಪದವಾಗಿ, ಹೃದಯದಲ್ಲಿ ಬೆಳಗಲ್ಪಟ್ಟ ಪ್ರಾಣಲಿಂಗವೇ ಚಿತ್ಪ್ರಾಣವನು ಒಳಕೊಂಬುವುದಕ್ಕೆ ಅಶ್ರಯವಾದ ಭಾವಲಿಂಗವಾಗಿ, ಆ ಚಿತ್ಪ್ರಾಣವನೊಳಕೊಂಡಿಪ್ಪ ಭಾವಲಿಂಗವೇ ಆತ್ಮನೊಳಕೊಂಬುವುದಕ್ಕೆ ಆಶ್ರಯವಾದ ಮಹಾಲಿಂಗವಾಗಿ ಶಾಶ್ವತವಾದ ನಿರಾಕಾರವಾದ ಪರಶಿವಲಿಂಗವಾಗಿ ಅಂತರಂಗ ಬಹಿರಂಗಗಳಲ್ಲಿ ಭಿನ್ನವಿಲ್ಲೆಂಬರ್ಥ.

> 'ಅಸಿ ಅರ್ಥೋ ಬಾವಲಿಂಗಂ ಸ್ಯಾತ್ ತ್ವಮರ್ಥಃ ಪ್ರಾಣಲಿಂಗ ಕಂ !
> ತದರ್ಥಸ್ತ್ವಿಷ್ಟಲಿಂಗಂ ಸ್ಯಾತ್ಪದತ್ರಯ ನಿರೂಪಣೇ ||'
>
> —ಅನುಭವ ಸೂತ್ರ

ಭಾವಲಿಂಗ ಧಾರಣವಾಗಿ ಭಾವಭ್ರಾಂತಿ ಭವಕ್ರಾಂತಿಗಳನ್ನು ಜಯಿಸುವುದು. ಪ್ರಾಣಲಿಂಗಧಾರಣವಾಗಿ ಸರ್ವೇಂದ್ರಿಯ ಸಂಯಮವುಂಟಾಗುವುದು. ಇಷ್ಟಲಿಂಗಧಾರಣವಾಗಿ ಸತ್ಕ್ರಿಯೆ ಸದಾಚಾರಗಳು ವೈಗೂಡಿಸಿಕೊಳ್ಳುವುದು. ಅನಿಷ್ಟಗಳನ್ನು ನಷ್ಟಗೊಳಿಸುವುದು.

"ಇಷ್ಟಲಿಂಗಮಿದಂ ಸಾಕ್ಷಾದನಿಷ್ಟ ಪರಿಹಾರಕಂ
ಧಾರಯೇದವಧಾನೇನ ಶರೀರೇ ಸರ್ವದಾ ಬುಧಃ।"

ಇದು ಇಷ್ಟಲಿಂಗನಾಮಕ. ಇದು ಪ್ರತ್ಯಕ್ಷ, ಅನಿಷ್ಟ ಪರಿಹಾರಕ. ವಿಚಾರಶೀಲನು ಇದನ್ನು ಎಡೆಬಿಡದೆ ಅಂಗದಲ್ಲಿ ಅವಧಾನದಿಂದ ಸಂಗಡಿಸಿಕೊಳ್ಳಬೇಕು. 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ವಿಶ್ವಾತ್ಮನೆನಿಸಿದ ಇಷ್ಟಲಿಂಗವು ಪರಶಿವರೂಪವೆಂದು ಹೇಳುವಲ್ಲಿ ವಿರೋಧವಿಲ್ಲ.

ಆಭರಣದಂತೆ ನಾಮರೂಪಾದಿಗಳು ಕ್ರಿಯೆಯು ಇದ್ದರೂ ಆಭರಣದಲ್ಲಿ ಸುವರ್ಣತ್ವವಿರುವಂತೆ ಸಾಕ್ಷಾದಿಷ್ಟಲಿಂಗದಲ್ಲಿ ಪರಶಿವತ್ವವು ಇದ್ದೇ ಇದೆ. ಸಾಕ್ಷಾತ್ ಪದವು ಇಷ್ಟಲಿಂಗಕ್ಕು ವಿಶೇಷಣ; ಅನಿಷ್ಟಕ್ಕೂ ವಿಶೇಷಣವಾಗಿ ಹೆಚ್ಚು ಸಮರ್ಪಕವಾಗಿದೆ.

ಇಚ್ಛೆ ಎಂಬ ಅರ್ಥವುಳ್ಳ 'ಇಷು' ಧಾತುವಿನಿಂದ ಇಷ್ಟ ಇಷ್ಟಿ ಎಂಬ ಎರಡು ಶಬ್ದಗಳು ಸೃಷ್ಟಿಯಾಗಿವೆ. ಇಷ್ಟ ಶಬ್ದಕ್ಕೆ ಈಪ್ಸಿತ, ವಾಂಛಿತ ಎಂದರ್ಥಗಳಿದ್ದರೆ, ಇಷ್ಟಿ ಶಬ್ದಕ್ಕೆ ಯಾಗ, ಇಚ್ಛೆ ಎಂಬರ್ಥಗಳಿವೆ. 'ಇಷ್ಟಮಾಶಂಸಿತೇಽಪಿ ಸ್ಯಾತ್ಪೂಜಿತೇ ಪ್ರೇಯಸಿ ತ್ರಿಷು। ಸಪ್ತತಂತೌ ಪುಮಾನ್ ಕ್ಲೀಬೇ ಸಂಸ್ಕಾರೇ ಕ್ರತುಕರ್ಮಣಿ।' ಇತಿವಿಶ್ವಃ. 'ಇಷ್ಟಿರ್ಮತಾಭಿಲಾಷೇಽಪಿ ಸಂಗ್ರಹ ಶ್ಲೋಕಯಾಗಯೋಃ।' ಇತಿ ಮೇದಿನೀ. ಎಂದು ಇಷ್ಟ ಮತ್ತು ಇಷ್ಟಿ ಶಬ್ದಾರ್ಥಗಳನ್ನು ಈ ವಿಶ್ವಕೋಶ, ಮೇದಿನಿಕೋಶಗಳು ಉದ್ಧರಿಸಿವೆ. 'ಯಜ್' ಧಾತುವಿನಿಂದ ಇಷ್ಟ–ಇಷ್ಟಿ ಶಬ್ದಗಳಾಗಿವೆಯೆಂದು ಹೇಳುವುದೂ ಉಂಟು. ಏನೇ ಹೇಳಲಿ : ಇಚ್ಛೆ ಅರ್ಚನೆ ಈ ಅರ್ಥಗಳು ಮುಖ್ಯವೆಂದು ಆಗಮಗಳು ಅಂಗೀಕರಿಸಿವೆ; ನಿರ್ಣಯಿಸಿವೆ. 'ಇಷ್ಟಲಿಂಗ' ಪದದೊಳಗಿನ ಇಷ್ಟ ಶಬ್ದಕ್ಕೆ ಕ್ರಿಯಾಚಾರಕ್ಕೆ ಆಚಾರಲಿಂಗಕ್ಕೆ ಹೊರಗಾದ ಅರ್ಥವಲ್ಲ; ಅಭಿಪ್ರಾಯವಲ್ಲ. ಇಷ್ಟದ ಧ್ಯೇಯ ಲಿಂಗವೇ ಹೊರತು ಮತ್ತೊಂದಲ್ಲ. ಸತ್ಕರ್ಮ

ಅಥವಾ ಸದ್ಭಾವಗಳನ್ನು ಪರ್ಯಾಯವಾಗಿ ಪ್ರತಿಪಾದಿಸುವ – ಸತ್ಕ್ರಿಯಾ ಲಿಂಗಚೈತನ್ಯವನ್ನು ಸೂಚಿಸುವ ಶಬ್ದವಿದು. ಸತ್ಕ್ರಿಯಾರಾಧನೆಗೆ ಸದಾಚಾರ ವರ್ತನೆಗೆ ಲಿಂಗ ಸಹಾಯವಿದೆಯೆಂಬುದನ್ನು ಈ 'ಇಷ್ಟಲಿಂಗ' ಪದ ಸೂಚಿಸುತ್ತದೆ. ಇಷ್ಟವಾದ ಲಿಂಗ, ಇಷ್ಟವನ್ನೆಲ್ಲ ಕೊಡುವ ಲಿಂಗ ಎಂದು ಹೇಳುವದಲ್ಲದೆ ಇಷ್ಟವಾದ ಅಂದರೆ ಸಂಸ್ಕಾರ ಯುಕ್ತವಾದ ಪದಾರ್ಥಗಳಿಂದ ಪ್ರವರ್ತನಗಳಿಂದ ಪೂಜಿಸಲು ಅರ್ಹವಾದ ಲಿಂಗವೆಂದು ಹೇಳುವಲ್ಲಿದೆ ಆ ಸಮಸ್ತಪದದ ಸ್ವಾರಸ್ಯ; ರಹಸ್ಯ. ಮುಂದೆ ಅನಿಷ್ಟ ಪರಿಹಾರಕವೆಂದು ವಿಶೇಷಣವಾಗಿ ಹೇಳುವುದರಿಂದ ಇವೆಲ್ಲ ಅರ್ಥಗಳು ಸ್ಫುರಿಸುತ್ತವೆ. ಮತ್ತು ಇದು ಅಪ್ರತ್ಯಕ್ಷ ವಸ್ತುವಲ್ಲ. ಪ್ರತ್ಯಕ್ಷ ವಸ್ತು; ಮತ್ತು ಪ್ರತ್ಯಕ್ಷವಾಗಿ ಪಾವನತೆಯನ್ನು ಪ್ರಸಾದಿಸುವ ಲಿಂಗ. ಅವಧಾನತೆಯನ್ನು ಅಂಗಾಂಗಗಳಲ್ಲಿ ಅಂಗವಿಸುವ ಲಿಂಗ.

ಈ ಇಷ್ಟಲಿಂಗಧಾರಣದಲ್ಲಿಯೇ 'ಜೀವನ ಸಿದ್ಧಾಂತ' ಸುವ್ಯಕ್ತವಾಗುತ್ತದೆ. ಜಾಗ್ರದವಸ್ಥೆಯನ್ನು ಇನ್ನೂ ಮತ್ತೂ ಜಾಗ್ರತಗೊಳಿಸುವ ಈ ಕ್ರಮ ಅತ್ಯಂತ ಪ್ರಿಯವಾದುದು. ಅನಿಷ್ಟಕ್ಕೆ ಅನುದಿನ ಹರಿಯುವ ಬಾಳನ್ನು ಇಷ್ಟದತ್ತ ಶಿಷ್ಟತೆಯತ್ತ ತಿರುಗಿಸುವ ಕಾರ್ಯ ಜೀವನದಲ್ಲಿ ಪ್ರಾಥಮಿಕವಾಗಿ ಬೇಕಾದುದು. ಕಾಮಕ್ರೋಧಾದಿಗಳಲ್ಲಿ ಆಸಕ್ತವಾಗುವ ಜೀವನವನ್ನು ಶ್ರದ್ಧೆ ನಿಷ್ಠೆ ಅವಧಾನಾದಿಗಳಲ್ಲಿ ಆಸಕ್ತವಾಗುವಂತೆ ಮಾಡುವುದೇ ಮೊದಲ ಕೆಲಸ; ಮಂಗಳ ಕೆಲಸ. ಇದಕಿಂತ ಇಷ್ಟವಾದ ಶ್ರೇಷ್ಠವಾದ ಸಿದ್ಧಾಂತ ಬೇರಿಲ್ಲ. ಶ್ರೋತವ್ಯದಿಂದ ಜೀವನ ಶುದ್ಧಿಯನ್ನು ಪ್ರತಿಪಾದಿಸುವ ವೇದೋಪನಿಷತ್ತುಗಳ ಧರ್ಮಕ್ಕಿಂತ ದ್ರಷ್ಟವ್ಯದಿಂದ ಜೀವನ ಶುದ್ಧಿವೃದ್ಧಿಗಳನ್ನು ಪ್ರತಿಪಾದಿಸುವ ಈ ತಾಂತ್ರಿಕ ಸಿದ್ಧಾಂತದಲ್ಲಿ ತಾತ್ತ್ವಿಕತೆಯಿದೆಯೆಂದು ಬೇರೆ ಹೇಳಬೇಕಿಲ್ಲ. ನ್ಯಾಯವಾದ ನಿಸರ್ಗವಾದ ಪರಮಾರ್ಥವಾದ ಮಾರ್ಗವೆಂಬುದನ್ನು ನಿಷ್ಪಕ್ಷ ದೃಷ್ಟಿಗೆ ತೋರಬೇಕಿಲ್ಲ.

ಇನ್ನು ಕೆಲವರು ಇಷ್ಟಲಿಂಗದ ವಿಷಯ ಪ್ರತಿಪಾದನೆಗೆ ಪ್ರಾರಂಭಿಸಿದಾಗ ಪ್ರಾಚೀನ ಆಗಮಿಕರನ್ನು ಕೊರತೆಯ ಕಣ್ಣಿನಿಂದ ನೋಡುವುದುಂಟು. ಸನಾತನಿಗಳೆಂದು ಸುಧಾರಕರಲ್ಲವೆಂದು ಮಾತೆತ್ತುವುದುಂಟು. ಹಿಂದಿನವರು

ಸನಾತನಿಗಳಾಗದೆ ಇನ್ನೇನಾದಾರು? ಮೊಳೆತು ಹೆಮ್ಮರವಾಗದ ಬೀಜ ಸುಧಾರಿತವಲ್ಲೆಂದು ಸಾಧಿಸಿದರೆ ಸಿದ್ಧಿಯೇನು?

ಅಗಮಿಕರು ಸೃಷ್ಟಿಯನ್ನು ದೃಷ್ಟಿಗಿಂತ ಕಿರಿದಾಗಿಸಿದ್ದರಲ್ಲಿ ತಪ್ಪೇನು? ದೃಷ್ಟಿಯಲ್ಲಿ ಸೃಷ್ಟಿಯನ್ನು ಸಮನ್ವಯ ಮತ್ತು ಸಮ್ಮಿಲನಗೊಳಿಸಿದ್ದಾರೆ. ಶಿವರಶರಣರು ಸೃಷ್ಟಿಯನ್ನು ಸಂಸಾರವನ್ನು ಕಿರಿದಾಗಿ ಕಂಡಿಲ್ಲವೆ? 'ಸುತ್ತಿದ ಪ್ರಪಂಚವ ಬಿಡಿಸು.' 'ಸುಡಲೀ ಪ್ರಪಂಚವ.' 'ಸಂಸಾರವೆಂಬ ಹಗೆಯಯ್ಯ ತಂದೆ.' ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯ!' 'ಸಂಸಾರ ರಾಹುಗ್ರಾಸಿಯಾಗಿ ನಂಗಿತ್ತಯ್ಯ.' 'ಇನ್ನೆಂದಿಗೆ ಮೋಕ್ಷವಹುದೋ?' 'ಅಕಟಕಟಾ ಸಂಸಾರಕ್ಕಾಸತ್ತೆ!' ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ.' ಇತ್ಯಾದಿ ವಚನಾಂಶಗಳು ಏನ್ನನ್ನು ಉಸುರುತ್ತವೆ? ಸೃಷ್ಟಿ ಕ್ಷಣಭಂಗುರವಾದುದು ಕೇವಲ ಆಗಮಿಕರಿಗೆ ಮಾತ್ರವಲ್ಲ ಶಿವಶರಣರಿಗೂ ಆಗಿದೆ. ದ್ವಂದ್ವಗಳಲ್ಲಿ ಹೋರಾಟವನ್ನು ಶರಣರಂತೆ ಆಗಮಿಕರೂ ಕಂಡಿದಾರೆ. ಕ್ರಿಯಾ ಮಾರ್ಗವನ್ನು ಆಗಮಿಕರೇ ಆದಿಯಲ್ಲಿ ಕೈಕೊಂಡಿದಾರೆ. ಶಿವನಿಗೂ ಅಥವಾ ಶಿವಕ್ಕೂ ಲಿಂಗಕ್ಕೂ ಭೇದವಿಲ್ಲ. ಸರ್ವವೂ ಶಿವಮಯ–ಲಿಂಗಮಯ ಎಂದು ಹೇಳುವಾಗ–ಶಿವ–ಲಿಂಗಗಳಲ್ಲಿಯೇ ಭೇದವನ್ನು ಎಣಿಸಬಾರದು. ಶಿವ ಸ್ವರೂಪವೇ ಲಿಂಗವೆಂದು ಅನೇಕ ವಚನಗಳು ಸಾಟುತ್ತಿವೆ. '....ಲಿಂಗವೆಂಬುದು ಪರಶಿವನ ನಿಜದೇಹ. ಲಿಂಗವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖ. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಪರಶಿವನು ತಾನು....' ಇತ್ಯಾದಿ ಎಷ್ಟೋ ವಚನಗಳನ್ನು ಉದ್ಧರಿಸಬಹುದು.

ಇನ್ನು ಶೈವರ ಸ್ಥಾವರ ಲಿಂಗಕ್ಕೂ ಶಿವಾಗಮಿಕರ ಇಷ್ಟಲಿಂಗಕ್ಕೂ ಯಾವ ಸಂಬಂಧವಿಲ್ಲ. ಅದು ಪಾರ್ಥಿವ; ಆಗಮಿಕರದು ಪಾರಮಾರ್ಥಿಕ. ಶಿವಶರಣರು ಹೇಳುವ ಶಿವಭಾವ ಕಲ್ಯಾಣಭಾವಗಳು ಆಗಮಿಕರ ಇಷ್ಟಲಿಂಗದಲ್ಲಿಯೂ ಇವೆ.

'ಭಾವ ಪ್ರಾಣೇಷ್ಟಲಿಂಗಾನಿ ಪೂಜಯೇದೇಕಭಾವತಃ।
ಪೃಥಗ್ಭಾವಂ ನ ಕುರ್ವೀತ ಪ್ರಾಣಲಿಂಗಪರೋ ಯತಃ॥'

'ಏವಂ ಸಮರ್ಚನಂ ಕುರ್ಯಾದಿಷ್ಟಲಿಂಗಸ್ಯ ಪಾರ್ವತಿ ।
ತದ್ಧ್ಯಾನಂ ಮನಸಾ ಯತ್ರ ಪ್ರಾಣಲಿಂಗಾರ್ಚನಂ ಮತಮ್ ॥'

ಸೂಕ್ಷ್ಮಾಗಮ, ಪ. ೬

ಆಗಮಿಕರ ಇಷ್ಟಲಿಂಗವನ್ನು ಸ್ಥಾವರ ಲಿಂಗಕ್ಕೆ ಸರಿಗಾಣುವ ಕೊರೆ ಗಣ್ಣಿನವರು ಮೇಲಿನ ಮಂತ್ರಗಳನ್ನು ಮನನ ಮಾಡಬೇಕು. ಕಣ್ದೆರೆದು ಕಾಣಬೇಕು.

ಆಗಮ ಬೀಜದಿಂದ ಹೊರಟ ವಚನ ವೃಕ್ಷವ ನೋಡಿ ಬೀಜದಲ್ಲಿ ಎಲೆ ಯಿಲ್ಲ, ಹೂವಿಲ್ಲ; ಹಣ್ಣಿಲ್ಲ ಎಂದು ವ್ಯರ್ಥ ವಾದವನ್ನು ಮಾಡುವುದು ವಾಸ್ತವವಲ್ಲ. ವಿಮರ್ಶೆಯ ಲಕ್ಷಣವೂ ಅಲ್ಲ.

'ಇಷ್ಟಮರ್ಥಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ ।
ತದಿಷ್ಟಲಿಂಗಮಿತ್ಯಾಹ ತಸ್ಮಾದಥರ್ವಣೀ ಶ್ರುತಿಃ ॥'
ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರದುನ್ಮಿಷನ್ನಪಿ ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ॥'

ಲಿಂಗವನ್ನು ಸರ್ವದಾಧರಿಸಬೇಕೆಂಬುದಕ್ಕೆ ಸಾಕ್ಷಿಯಿದು.

**"ಮೂರ್ಧ್ನಿ ವಾ ಕಂಠದೇಶೇ ವಾ ಕಕ್ಷೇ ವಕ್ಷಃಸ್ಥಲೇಪಿ ವಾ
ಕುಕ್ಷೌ ಹಸ್ತಸ್ಥಲೇ ವಾಪಿ ಧಾರಯೇಲ್ಲಿಂಗಮೈಶ್ವರಮ್ ॥"**

ಹಿಂದಿನ ಮಂತ್ರದಲ್ಲಿ ಲಿಂಗವನ್ನು ಸಾಮಾನ್ಯವಾಗಿ ಶರೀರದಲ್ಲಿ ಸದಾ ಧರಿಸಬೇಕೆಂದು ಜಗದ್ಗುರು ರೇಣುಕರ ಆಣತಿಯಾಗಿತ್ತು. ಆದರೆ ಶರೀರದಲ್ಲಿ ಎಲ್ಲಿ ಧರಿಸಬೇಕೆಂಬ ಶಂಕೆಗೆ ಈ ಮಂತ್ರ ಉತ್ತರವಾದಿಯಾಗಿದೆ.

ತಲೆ, ಕೊರಳು, ಕಂಕುಳ, ಎದೆ, ಹೃದಯ (ಕುಣಿ), ಹಸ್ತ ಈ ಆರು ಸ್ಥಲಗಳಲ್ಲಿ ಎಲ್ಲಿಯಾದರೂ ಧರಿಸಬಹುದು. ಆರು ಸ್ಥಲಗಳನ್ನು ಮಾತ್ರ ಹೇಳಿ ಐಶ್ವರ ಲಿಂಗವೆಂದು ನಿರೂಪಿಸಿರುವಲ್ಲಿ ಕ್ರಮವಾಗಿ ಮಸ್ತಕದಲ್ಲಿ ಮಹಾ ಲಿಂಗ, ಕಂಠದಲ್ಲಿ ಪ್ರಸಾದಲಿಂಗ, ರೆಟ್ಟೆಯಲ್ಲಿ ಜಂಗಮಲಿಂಗ, ಎದೆಯಲ್ಲಿ ಶಿವ ಲಿಂಗ, ಹೃದಯದಲ್ಲಿ ಗುರುಲಿಂಗ, ಕರದಲ್ಲಿ ಆಚಾರಲಿಂಗಗಳನ್ನು ಧಾರಣ ಮಾಡಬಹುದೆಂಬ ಧ್ವನಿಯೂ ಉಂಟಾಗುತ್ತದೆ. ಆ ಆ ಸ್ಥಲಗಳು ಆ ಆ

ಲಿಂಗಕ್ಕೆ ವಿಚಾರಿಸಿದಲ್ಲಿ ಉಚಿತಗಳೂ ಆಗಿವೆ. ಇಷ್ಟಲಿಂಗದಲ್ಲಿಯೇ ಆರು ಲಿಂಗಗಳಿರುವುದರಿಂದ ಅಲ್ಲಲ್ಲಿ ಧರಿಸಿದಾಗ ಆ ಆ ಲಿಂಗಗಳ ಭಾವನೆಯುಂಟಾಗುತ್ತದೆ. ಆದ್ದರಿಂದ ಆರು ಸ್ಥಲಗಳನ್ನು ಹೇಳುವಲ್ಲಿ ಔಚಿತ್ಯವಿದೆ. ಹಿಂದಿನ ಮಂತ್ರದಲ್ಲಿ ಇಷ್ಟಲಿಂಗ ಧಾರಣದ ಪ್ರಸ್ತಾಪವಿರುವುದರಿಂದ ಇಲ್ಲಿ ನಿರ್ದಿಷ್ಟವಾದ ಸ್ಥಲಗಳು ಮುಖ್ಯವಾಗಿ ಇಷ್ಟಲಿಂಗಕ್ಕೆ ಸಂಬಂಧಿಸಿದವುಗಳಾಗಿವೆ,

'ಉತ್ತಮಾಂಗೇ ಗಳೇ ಬಾಹೌ ಹೃದಿ ವಕ್ಷಸ್ಥಲೇऽಪಿ ವಾ
ಮತ್ಪ್ರಾಣಲಿಂಗ, ಯೋ ಧತ್ತೇ ಸ್ಥಿತಸ್ತತ್ಸನ್ನಿಧಾವಹಂ !'

—ವಾತುಲೋತ್ತರತಂತ್ರ

ಶಿವಾಗಮಗಳಲ್ಲಿ ಈ ಬೇರೆ ಬೇರೆ ಸ್ಥಲಗಳನ್ನು ಹೇಳಿ, ಧಾರಕರಿಗೆ ಇಷ್ಟಾಪತ್ತಿಯ ಸ್ವಾತಂತ್ರ್ಯವನ್ನಿತ್ತುದನ್ನು ಕೆಲವರು ಪರ್ಯಾಯವಾಗಿ ಭಾವಿಸಿದ್ದಾರೆ. ಆಗಮ ಕಾಲದಲ್ಲಿ ಎದೆಯಲ್ಲಿಯೇ ಧರಿಸುವ ಕ್ಲೃಪ್ತತೆಯಿರಲಿಲ್ಲೆಂದು ಆಕ್ಷೇಪಿಸಿದ್ದಾರೆ. ಇದರಲ್ಲಿ ಹುರುಳಿಲ್ಲ. ಎದೆಯ ಮೇಲೆ ಧರಿಸಬೇಕೆಂಬ ಕ್ಲೃಪ್ತತೆ ಅಂದಿಗೂ ಇಲ್ಲ, ಇಂದಿಗೂ ಇಲ್ಲ. ಹೆಚ್ಚು ಜನ ಹೃದಯದ ಮೇಲೆ ಧರಿಸುತ್ತಿರಬಹುದು. ಆದರೆ ಅನೇಕರು ಬಟ್ಟೆಯಲ್ಲಿ ರಟ್ಟೆಗೆ ಧರಿಸುವವರಿದ್ದಾರೆ. ಕೆಲವರು ಹೃದಯ ಕುಹರಕ್ಕೆ ಧರಿಸಿದರೆ ಇನ್ನು ಕೆಲವರು ಎದೆಯ ಮೇಲೆ ಧರಿಸುತ್ತಾರೆ. ಬೇರೆ ಕೆಲವರು ಕಂಠಕ್ಕೆ ಧರಿಸುತ್ತಾರೆ. ಇನ್ನು ಕೆಲವರು ನಾಭಿಯ ಕೆಳಕ್ಕೂ ಧರಿಸುವವರಿದ್ದಾರೆ. ಹೀಗಿದ್ದರೂ ಆಗಮಗಳ ಮೇಲೆ ಮಾತ್ರ ಈ ಆರೋಪ ಮಾಡುವುದು ಮನಘನವುಳ್ಳವರಿಗೆ ಸಲ್ಲತಕ್ಕದಲ್ಲ.

ಅಲ್ಲದೆ ಶಿವಶರಣರ ಕಾಲದಲ್ಲಿಯೂ ಬೇರೆ ಬೇರೆ ಸ್ಥಳಗಳಲ್ಲಿ ಧರಿಸುವವರಿದ್ದರೆಂಬುದಕ್ಕೆ ಚೆನ್ನಬಸವಣ್ಣನವರ ಈ ವಚನಭಾಗಗಳು ಪ್ರತ್ಯಕ್ಷ ಸಾಕ್ಷಿಯಾಗಿವೆ :

'ಊರಸ್ಥಲದಲ್ಲಿ ಲಿಂಗವ ಧರಿಸಿದ ಬಳಿಕ, ಮನದ ಕೊನೆಯ ಮೊನೆಯಲ್ಲಿ ಲಿಂಗವನಗಲದಂತಿರಬೇಕು. ಇದು ಉರು ಗುರುಸ್ಥಲ.'

'ಕರಸ್ಥಲದಲ್ಲಿ ಲಿಂಗವಧರಿಸಿದ ಬಳಿಕ, ಅನಿಮಿಷ ದೃಷ್ಟಿಯೇ ಆ ಬಿಂದುವಾಗಿರಬೇಕು ! ಇದು 'ಕರ ಕ್ರಿಯಾಚಾರಸ್ಥಲ.'

'ಕಕ್ಷೆಯಲ್ಲಿ ಲಿಂಗವಧರಿಸಿದ ಬಳಿಕ, ಅನ್ಯಕಾಂಕ್ಷೆ ಇಲ್ಲದಿರಬೇಕು.' 'ಇದು ಜಂಗಮಸ್ಥಲ '

'ಅಮಳೋಕ್ಯದಲ್ಲಿ (ಕಂಠದೊಳಗೆ) ಲಿಂಗವ ಧರಿಸುವಡೆ, ಅನ್ನಪಾನಾದಿಗಳ ಹಂಗವಳಿದಿರಬೇಕು....ಶಬ್ದ ನಿಶ್ಶಬ್ಧವಾಗಿರಬೇಕು.' ಇದು 'ಪ್ರಸಾದ ಲಿಂಗಸ್ಥಲ'

'ಉತ್ತಮಾಂಗದಲ್ಲಿ ಲಿಂಗವಧರಿಸಿದ ಬಳಿಕ, ಅನ್ಯರಿಗೆ ತಲೆವಾಗದಿರ ದಿರಬೇಕು.' 'ಇದು ಮಹಾಲಿಂಗಸ್ಥಲ ಸೂಚಕ.'

ಅಂಗದ ಮೇಲೆ ಲಿಂಗ ಸಂಬಂಧಿಯಾದ ಬಳಿಕ ಸರ್ವಾಂಗದಲ್ಲಿ ತೋರುವ ವಿಕಾರವಳಿದಿರಬೇಕು....'

ತಲೆ, ತೋಳು, ಮುಂಗೈ ಅಥವಾ ಅಂಗೈಗಳಲ್ಲಿ ಧರಿಸಲು ವಸ್ತ್ರವಾದರೆ ಸಾಕಾಗುತ್ತದೆ. ಅಮಳೋಕ್ಯದಲ್ಲಿ ಲಿಂಗವನ್ನು ಧರಿಸಲು ಏನೂ ಬೇಕಾಗುವುದಿಲ್ಲ. ಇಲ್ಲಿ ಧರಿಸುವವರು ವಿರಳ. ಇನ್ನು ಹೃದಯ ಎದೆ ಕಂಠಾದಿಗಳಲ್ಲಿ ಲಿಂಗವನ್ನು ಧರಿಸಲು ಬಟ್ಟೆಯಾಗಲಿ, ಸೆಜ್ಜೆ (ಕರಡಿಗೆ) ಶಿವಾದಾರಗಳಾಗಲಿ ಬೇಕು. ಕರಡಿಗೆಯನ್ನು ಧರಿಸುವ ರೂಢಿಯು ಆಗಮ ಕಾಲದಿಂದಲೂ ಬಂದಿದೆ. ಆಗಮಗಳಲ್ಲಿ ಇದಕ್ಕೆ ಬೇಕಾದಷ್ಟು ಆಧಾರಗಳು ಸಿಕ್ಕುತ್ತವೆ. ಅವುಗಳಲ್ಲಿ ಪಾರಮೇಶ್ವರಾಗಮದ ದ್ವಿತೀಯ ಪಟಲದಲ್ಲಿ ಹೀಗೆ ಹೇಳಿದೆ:

'ಅಥಕುರ್ಯಾನ್ಮಹಾದೇವಿ ಸಜ್ಜಿಕಾಖ್ಯಂ ತದಾಲಯಮ್
ಪಂಚಸೂತ್ರೋತ್ಥಲಿಂಗಸ್ಯ ಯಾವತ್ಪೂರ್ಣಂ ತಥಾ ಭವೇತ್ ।
ಸೌವರ್ಣಮುತ್ತಮಂ ದೇವಿ ಯದಿ ಶಕ್ತಿಸ್ತಥಾ ಚರೇತ್
ರಾಜತಂ ಪಿತ್ತಲಂ ತಾಮ್ರಂ ನೈವ ಕಾಂಸ್ಯೇನ ಕಾರಯೇತ್ ।
ಸೀಸೇನ ತ್ರಪುಣಾ ದೇವಿ ತಾಂತವೀ ಪಾಟಿಕಾಪಿ ವಾ
ಏತೇಷ್ವನ್ಯತಮಂ ನಿತ್ಯಂ ನಾನ್ಯತ್ಕುರ್ಯಾದನಾರತಮ್ ।

ಸಜ್ಜಿಕೆಯೆ ಶಿವಲಿಂಗಕ್ಕೆ ಶಿವಾಲಯ. ಸೆಜ್ಜೆಯ ಗಾತ್ರ ತನ್ನ ಇಷ್ಟಲಿಂಗವು ಹಿಡಿಯುವಷ್ಟಿರಬೇಕು. ಚಿನ್ನ, ಬೆಳ್ಳಿ, ಹಿತ್ತಳೆ, ತಾಮ್ರ ಮುಂತಾದವುಗಳಿಂದ ಕರಡಿಗೆಯನ್ನು ಮಾಡಿಸಬೇಕು.

ಕಂಚು ಸೀಸುಗಳಿಂದ ಮಾಡಿಸಬಾರದು. ದಾರದಿಂದ ಹೆಣೆದು ಮಾಡಿಸ

ಬಹುದು. ಬಿಲ್ವ–ಶ್ರೀಗಂಧ ಕಾಷ್ಠಗಳಿಂದ ಮಾಡಿಸಬಹುದು. ಕರಡಿಗೆಯು ದಪ್ಪ ಎಷ್ಟಿರಬೇಕು; ಆಕೃತಿ ಹೇಗಿರಬೇಕು – ಎಂಬುದಕ್ಕೆ ಕೆಳಗಿನ ಈ ಪ್ರಮಾಣಗಳನ್ನು ಪರಿಶೀಲಿಸಬೇಕು;

'ಭೋಗಸ್ವರ್ಗಾಪವರ್ಗಾಯ ಮಮ ನಂದೀಶ್ವರಾಕೃತಿಃ ।
ಆಯುರಾರೋಗ್ಯ ಫಲದಾ ಯಾಸೌ ಚೂತಫಲಾಕೃತಿಃ ।
ಆಯುಷ್ಮತ್ಪುತ್ರ ಸೌಭಾಗ್ಯಫಲದಾ ಮೋದಕಾಕೃತಿಃ ।
ಐಶ್ವರ್ಯ ವಿಜಯಾಯುಷ್ಯ ತೇಜಃ ಪ್ರಜ್ಞಾ ವಿಲಾಸಕೃತ್ :
ಸಜ್ಜಿಕಾ ಶಿವಲಿಂಗಸ್ಯ ಬಿಲ್ವೀಫಲಸಮಾಕೃತಿಃ ।
ಶಿವಲಿಂಗಾಕೃತಿಃ ಸಜ್ಜಾ ಭೋಗಮೋಕ್ಷೈಕಸಾಧನೀ ।
ಯದ್ಯದಿಷ್ಟತಮಂ ದೇವಿ ಭೂಷಣಂ ಮಣಿ ಕಾಂಚನಮ್
ತದೇವ ಸಜ್ಜಿಕಾಂ ಕೃತ್ವಾ ಸರ್ವಕಾಮಂ ಸಮಶ್ನುತೇ ।
ಚತುರಸ್ರಂ ಪಂಕಜಾಭಂ ವರ್ತುಲಂ ಬಿಂಬಕೋಪಮಮ್,
ಯಥಾ ಸಂದರ್ಶಿತಂ ದೇವಿ ಗುರುಣಾ ತತ್ತಥಾ ಚರೇತ್ ।

ಕರಡಿಗೆಯು ನಂದಿ (ವೃಷಭ), ಮಾವಿನ ಹಣ್ಣು, ಕಡುಬು, ಬಿಲ್ವಫಲಗಳ ಆಕೃತಿಯಲ್ಲಿರಬೇಕು. ಮತ್ತು ಚತುಷ್ಕೋಣಾಕಾರವಾಗಿ ಕಮಲಾಕಾರವಾಗಿ ವರ್ತುಲ ಅಂದರೆ ದುಂಡಾಕಾರವಾಗಿ ಇರಬೇಕು; ಇಲ್ಲವೆ ಗುರುಗಳು ಅಪ್ಪಣೆ ಮಾಡಿದ ಆಕಾರದಲ್ಲಿ ಮಾಡಿಸಬಹುದು. ಆ ಆ ಆಕಾರಕ್ಕೆ ತಕ್ಕಫಲಗಳು ಉದ್ಧರಿಸಿದ ಪಾರಮೇಶ್ವರಾಗಮ ಶ್ಲೋಕಗಳಲ್ಲಿ ನಿರ್ದಿಷ್ಟವಾಗಿವೆ. ಲಿಂಗವನ್ನು ಧರಿಸುವ ಈ ಸಾಧನಕ್ಕೆ ಸೆಜ್ಜೆ, ಸಜ್ಜಿಕಾ, ಕರಡಿಗೆ, ಕರಂಡಕ, ಚೌಕ, ಲಿಂಗದ ಕಾಯಿ, ಲಿಂಗದ ಪೆಟ್ಟಿಗೆ, ಸಂಪುಟ, ಇಷ್ಟಲಿಂಗಾಲಯ ಮುಂತಾದ ಹೆಸರುಗಳಿವೆ.

ಬರೀ ಸೆಜ್ಜೆಯನ್ನು ಧರಿಸಲು ಬರುವುದಿಲ್ಲ. ಅದಕ್ಕೆ ಶಿವದಾರಬೇಕು. ಶಿವದಾರಕ್ಕೆ ಸಂಸ್ಕೃತದಲ್ಲಿ ಶಿವಸೂತ್ರವೆಂದು ಗುಣವೆಂದು ಹೆಸರುಗಳಿವೆ. ಶಿವದಾರವು ಅಂದರೆ ಎಳೆಗಳು ಬಂಗಾರ ಬೆಳ್ಳಿ ಮುಂತಾದ ಧಾತುಮಯ ಸೂತ್ರಗಳಿರಬಹುದು. ಅಥವಾ ನೂಲಿನದಾದರೂ ಇರಬಹುದು. ಕರಡಿಗೆ ಯಾವ ಧಾತುವಿನದಿದ್ದರೆ ಆ ಧಾತುವಿನ ಸೂತ್ರವಿರಬೇಕೆಂದು ಹೇಳುವುದುಂಟು. ಧಾತುವಿಗೆ ತಕ್ಕ ಗುಣಫಲಗಳುಂಟೆಂದು ಆಗಮಗಳು ಸಾರಿವೆ.

'ಸನ್ನದ್ಧಗುಣ ಸಂಬದ್ಧಾ ದೃಥಾ ಸಂತಾನ ಶೋಭಿನೀ ।
ಸೌವರ್ಣಃ ಸೌದ್ಯದಿ ಗುಣಃ ಸರ್ವಸೌಭಾಗ್ಯದಾಯಕಃ ।
ರಾಜತಃ ಪುತ್ರಕೀರ್ತಿಃ ಸ್ಯಾತ್ತಾಮ್ರಶ್ಚೇದ್ಧನಧಾನ್ಯಕೃತ್ ।
ಪೈತ್ತಲ ಸರ್ವಭೋಗಾಯ ಕಾಂಸ್ಯಃ ಕಲ್ಮಷನಾಶನಃ ।
ತ್ರಪು ಸೀಸಮಯೋ ವಾಪಿ ಸರ್ವಾಭೀಷ್ಟ ಫಲಪ್ರದಃ ।
ದಾರಿದ್ರ್ಯಯಾಯ ಸಂವಿದ್ಧಿ ಪಟಜಃ ಸರ್ವದುಃಖಕೃತ್ ।
ಕಾರ್ಪಟಃ ಸರ್ವಭೋಗಾಯ ತಾಂತವಃ ಸರ್ವಕಾಮದಃ ।

—ಪಾರಮೇಶ್ವರಾಗಮ

ಎಲ್ಲ ಧಾತು ಸೂತ್ರಗಳಂತೆ ತಂತು (ನೂಲು)ಗಳಿಂದ ಮಾಡಿದ ಶಿವದಾರವೂ ಧಾರಣೀಯವೆಂದು ಹೇಳಲಾಗಿದೆ. ಶಿವದಾರ ೮೧, ೬೩, ೪೫ ಎಳೆಗಳುಳ್ಳದಾಗಿರಬೇಕು. ೮೧ ಪದಾಧ್ವಸೂಚಕ ಎಳೆಗಳಿಂದ ಉತ್ತಮ. ೬೩ ಶೀಲ ಅಥವಾ ಪುರಾತನರ ಮತ್ತು ೬೩ ಮರುದ್‌ರುದ್ರರ ಸೂಚಕವಾಗಿ ಮಾಡಿದ್ದು ಮಧ್ಯಮ. ೪೪ ಅಂಗಸ್ಥಲಗಳಿಗೆ ಮೂಲಲಿಂಗಸ್ಥಲವೊಂದು ಸೇರಿಸಿ ಆಗುವ ೪೫ ಅಂಗಲಿಂಗಸ್ಥಲ ಸೂಚಕವಾಗಿ ಮಾಡಿದ್ದು ಅನುತ್ತಮ. ೮೧ ಎಳೆಯ ಶಿವಾದಾರವನ್ನು ೨೭ ಎಳೆಗಳಂತೆ ಮೂರು ಭಾಗ ಮಾಡಿ ಕೂಡಿಸಬೇಕು. ೬೩ ಎಳೆಯ ಶಿವದಾರವನ್ನು ೨೧ ಎಳೆಗಳಂತೆ ಮೂಪ್ಪುರಿಗಳ ಮಾಡಿ ಕೂಡಿಸಬೇಕು. ೪೫ ಎಳೆಯ ಶಿವಾದಾರವನ್ನು ೧೫ ಎಳೆಗಳಂತೆ ಮುಪ್ಪುರಿ ಮಾಡಿ ಕೂಡಿಸಬೇಕು. ಲಿಂಗದ ಸೆಜ್ಜೆಗೆ ಪವಣಿಸುವ ಶಿವದಾರವನ್ನು ೬೩ ಎಳೆಗಳಿಂದ ಮಾಡುವುದೇ ಹೆಚ್ಚು ರೂಢಿ ಮೂಲವಾಗಿದೆ. ಹೀಗೆ ೬೩ ಎಳೆಗಳಿಂದ ಮುಪ್ಪುರಿಗಳಿಂದ ಮಾಡಿದ ಶಿವದಾರವನ್ನು ಕರಡಿಗೆಗೆ ಎರಡು ಎಳೆಯಾಗಿ ಪವಣಿಸುವುದು ಶಿವಶಕ್ತಿ ಅಥವಾ ಅಂಗ-ಲಿಂಗಸೂಚಕವಾಗಿ! ದೃಕ್ಕ್ರಿಯಾ ಸೂಚಕವಾಗಿ! ಇನ್ನುಳಿಯಿತು ಶಿವದಾರದ ಬಣ್ಣದ ಬಗೆ! ಯಾವ ಬಣ್ಣದ ಶಿವದಾರ ಇರಬೇಕೆಂಬುದಕ್ಕೆ ಪಾರಮೇಶ್ವರಾಗಮವು ಪ್ರಮಾಣವಾಗಿದೆ :

'ಶುಕ್ಲೋ ಜ್ಞಾನಪ್ರದಸ್ತತ್ರ ರಕ್ತೋ ವಶ್ಯಕರೋ ಗುಣಃ
ಶ್ಯಾಮಃ ಶತ್ರು ಭಯಂಕರಃ ಪೀತಃ ಪುತ್ರಪ್ರದಾಯಕಃ ।

ಚಿತ್ರೋ ವಿಚಿತ್ರ ಫಲದಃ ಸುದೃಢಶ್ಛೇದವರ್ಜಿತಃ
ಅಗ್ರಂಥಿರ್ಋಜುರೂಪಃ ಸ್ಯಾದಾನಾಭ್ಯಾಕಂಠಮಧ್ಯತಃ ।
ಯಾವದಿಚ್ಛಂ ಭವೇದ್ದೇವಿ ಸಜ್ಜಿಕಾಗುಣ ಉತ್ತಮಃ
ತಾವದೇವ ಪ್ರಕುರ್ವೀತ ಸಜ್ಜಿಕಾಗುಣಮೀಶ್ವರಿ ।
ಸಜ್ಜಿಕಾ ಯಾ ಭವದ್ರೂಪಾ ಮದ್ರೂಪೋ ಯೋ ಗುಣಃಶಿವೇ
ಉಭಯೋರಾವಯೋರ್ಯೋಗಾಜ್ಜಗದೇತಚ್ಚರಾಚರಮ್ ।
ಮಾಯಾವಿನಾ ಕ್ವಚಿನ್ನಾಸ್ತಿ ತವರೂಪಂ ತಥಾ ಮಮ
ತದೇಕರೂಪಲಾಭಾಯ ಗುಣಯೋಗಃ ಪ್ರಕೀರ್ತಿತಃ ।
ಗುಣಸ್ಯಾಗ್ರದ್ವಯೋರೇವ ಸಂಬಂಧೌ ದ್ವೌ ಸುವರ್ತುಲೌ
ಪದ್ಮಕುಟ್ಮಲ ಸದ್ರೂಪೌ ಪ್ರೋಕ್ತೌ ಜ್ಞಾನಕ್ರಿಯೇತಿ ಚ ।
ಯಸ್ಯಮದಾತ್ಮಕ ಗುಣೋ ಭೋಗ ಮೋಕ್ಷ ಫಲಾತ್ಮಕಃ
ಉಕ್ತಮೇವಂ ಮಯಾಲಿಂಗ ಸಜ್ಜಿಕಾಗುಣ ಲಕ್ಷಣಮ್ ।

ಬಿಳುಪು, ಕೆಂಪು, ಕಪ್ಪು, ಹಳದಿ–ಬಣ್ಣದ ಶಿವದಾರಗಳನ್ನು ಧರಿಸಬೇಕು. ಇವುಗಳಲ್ಲಿ ಜ್ಞಾನಪ್ರದವಾದ ಬಿಳಿಯದೇ ಸರ್ವಶ್ರೇಷ್ಠ. ಹೆಚ್ಚಾಗಿ ಬೆಳ್ಳಿಯ ಕರಡಿಗೆಯನ್ನೇ ಧರಿಸುವ ಪ್ರಸಕ್ತಿಯಿರುವುದರಿಂದ ಅದಕ್ಕೆ ತಕ್ಕ ಬಣ್ಣ ಬಳಿಯದೆ! ಇನ್ನು ಕೆಲವರು ಬಂಗಾರದ ಮತ್ತು ಶ್ರೀಗಂಧದ ಕರಡಿಗೆಗಳನ್ನು ಧರಿಸುತ್ತಾರೆ. ಇವರು ಹಳದಿ ಬಣ್ಣದ ಶಿವಧಾರವನ್ನು ಪೋಣಿಸಿ ಧರಿಸಬೇಕು. ಕೆಂಪು ಕಪ್ಪು ಬಣ್ಣದವುಗಳು ಅಷ್ಟೇನು ಉಪಯುಕ್ತಗಳಲ್ಲ. ಬಗೆಬಗೆಯ ಅಂದರೆ ಬೇರೆ ಬೇರೆ ಬಣ್ಣದ ಎಳೆಗಳನ್ನು ಕೂಡಿಸಿ ಮಾಡಿದ ಚಿತ್ರ ವಿಚಿತ್ರವಾದ ಬಹುವರ್ಣದ ಶಿವದಾರವನ್ನು ಹೇಳಿದ್ದರೂ ಅದು ವಿಚಿತ್ರಫಲವಾದ್ದರಿಂದ ಅಂದರೆ ನಂಬುಗೆ ಇಲ್ಲದ ಫಲವುಳ್ಳದಾದ್ದರಿಂದ ಅದನ್ನು ಯಾರು ಧರಿಸಲು ಅಪೇಕ್ಷಿಸರು. ಶಿವದಾರ ಗಟ್ಟಿಯಾಗಿ ಯಾವ ಎಳೆಯೂ ಹರಿಯದೆ ಇರುವುದಾಗಿ ಗಂಟು ಹಾಕದೆ ಇರುವದಾಗಿ ಇರಬೇಕು. ಋಜುವಾಗಿರಬೇಕು. ಕೊರಳಿನಿಂದ ಹೊಕ್ಕುಳದವರೆವಿಗೂ ಶಿವದಾರವಿರಬಹುದು. ಹೊಕ್ಕುಳದ ಕೆಳಕ್ಕೆ ಇರಬಾರದು.

**“ನಾಭೇರಧಸ್ತಾಲ್ಲಿಂಗಸ್ಯಧಾರಣಂ ಪಾಪಕಾರಣಮ್
ಜಟಾಗ್ರೇ ತ್ರಿಕಭಾಗೇ ಚ ಮಲಸ್ಥಾನೇ ನ ಧಾರಯೇತ್ ।”**

ನಾಭಿಯ ಕೆಳಗೆ ಲಿಂಗಧಾರಣ ಮಾಡಬಾರದು. ಮಾಡಿದರೆ ಪಾಪ ವುಂಟಾಗುತ್ತದೆ. ಅಂತೆಯೇ ಜಡೆಯಲ್ಲಿ ಬೆನ್ನಿನಲ್ಲಿ ಕಟಿಪೃಷ್ಠಗಳಲ್ಲಿ ಬೇರೆ ಕೊಳೆಯಿರುವೆಡೆಗಳಲ್ಲಿ ಲಿಂಗವನ್ನು ಧರಿಸಬಾರದು. ಎಂದಿರುವುದರಿಂದ ಶಿವ ಸೂತ್ರವನ್ನಾಗಲಿ ಶಿವಲಿಂಗವನ್ನಾಗಲಿ ಮುಕ್ತಿಯನ್ನು ಅಪೇಕ್ಷಿಸುವ ಭಕ್ತರು ನಾಭಿಯ ಕೆಳಕ್ಕೆ ಧರಿಸಬಾರದು. ಎರಡೆಳೆಯಾಗಿ ಕರಡಿಗೆಗೆ ಧರಿಸುವುದು ಜ್ಞಾನ ಕ್ರಿಯಾ ಸೂಚಕವೆಂದು ಶಿವಶಕ್ತಿ ಸೂಚಕವೆಂದು ಶಿವಾಗಮವೂ ಪ್ರತಿಪಾದಿಸಿದೆ. ಸೆಜ್ಜೆ ಶಿವದಾರಗಳನ್ನೂ ಶ್ರೀ ಗುರುವಿನಿಂದ ಸಂಸ್ಕರಿಸಿ ಧರಿಸಬೇಕು.

ಕರಡಿಗೆಯಲ್ಲಿ ಇಷ್ಟಲಿಂಗವನ್ನು ಹಾಗೆಯೇ ಮುಹೂರ್ತ ಮಾಡಿಸ ಬಾರದು. ವಸ್ತ್ರ ಅಂದರೆ ಹುದುಗು ಪಾವುಡದಲ್ಲಿ ಹುದುಗಿಸಿ ಇರಿಸಬೇಕು.

ತೇನೈವಾಂತಸ್ತರೇದ್ವಸ್ತ್ರಂ ಲಿಂಗಂ ತೇನೈವ ನಿಕ್ಷಿಪೇತ್
ತೇನೈವೋಪರಿ ಸೌವರ್ಣಂ ಪೂಜಯೇತ್ಪುಷ್ಪ ಮುತ್ತಮಮ್।
ಸುವರ್ಣರಹಿತಂ ಲಿಂಗಂ ಧಾರಯೇನ್ನ ಕದಾಚನ
ಸಸುವರ್ಣಮಭೀಷ್ಟಾರ್ಥಂ ಕಾರ್ಯ್ಯಂ ಲಿಂಗಂ ನ ಸಂಶಯಃ ।
ಕಪಾಟಂ ಬಂಧಯೇದ್ದೇವಿ ಮೂಲೇನಾರ್ಗಲ ಯೋಜನಮ್
ಮೂಲೇನ ವಸ್ತ್ರಮಾಬದ್ಧ್ಯ ಸಂಪ್ರದಾಯ ಗುರೂಕ್ತತಃ ।

—ಪಾರಮೇಶ್ವರಾಗಮ, **ಪ. ೫**

ಸುವರ್ಣದೊಡನೆ ಲಿಂಗವನ್ನು ಧರಿಸಬೇಕೆಂದು ಆಗಮ ವಿಧಿಸಿದೆ. ಸುವರ್ಣದ ಕರಡಿಗೆಯನ್ನು ಮಾಡಿಸಲು ಸಾಧ್ಯವಿಲ್ಲದವರು ಹುದುಗ ಪಾವುಡ ದಲ್ಲಿ ಕಲಾಬತ್ತಿನ ಎಳೆಗಳನ್ನು ಜೋಡಿಸಿಯಾದರೂ ಧರಿಸಿದರೆ ಲೇಸು. ಚಿನ್ನದ ಎಳೆಗಳನ್ನು ಕೆಚ್ಚಿ ನೇಯ್ದ ಹುದುಗು ಪಾವುಡದಲ್ಲಿ ಪ್ರಣವಲಿಖಿಸಿ ಅಷ್ಟಬಂಧವುಳ್ಳ ಇಷ್ಟಲಿಂಗವನ್ನು ತಲೆಕೆಳಕಾಗದಂತೆ ಗೋಮುಖ ಎಡಕ್ಕಿರು ವಂತೆ ಎಚ್ಚರಿಕೆಯಿಂದ ಕರಡಿಗೆಯಲ್ಲಿರಿಸಿ ಎದೆಯ ಮೇಲೆ ಎಂದಿಗೂ ಅಗಲ ದಂತೆ ಧರಿಸಬೇಕು. ಇದಿಷ್ಟು ಇಷ್ಟಲಿಂಗದ ಸೆಜ್ಜೆ, ಶಿವದಾರ, ಹುದುಗು

ಪಾವುಡಗಳ ಮಾತಾಯಿತು. ಇದರಂತೆ ಪ್ರಾಣಲಿಂಗಕ್ಕೂ ಉಂಟು. ಪ್ರಾಣಲಿಂಗಕ್ಕೆ ತನುಮನಗಳೇ ಕರಡಿಗೆ. ಅಕಾರಾದಿ ಕ್ಷಕಾರಾಂತವಾಗಿ ೫೧ ವರ್ಣಗಳುಳ್ಳ ವರ್ಣಾಧ್ವದಿಂದ ಮತ್ತು ಹೃದಯಾದಿ ಪರಶಿವಾಂತವಾದ ೧೨ ವಸ್ತು (ತತ್ವ) ಗಳುಳ್ಳ ಮಂತ್ರಾಧ್ವದಿಂದ ಕೂಡಿ ೬೩ ಎಸಳುಳ್ಳ ಮತ್ತು ವರ್ಣಾಧ್ವ ಮಂತ್ರಾಧ್ವ ಪದಾಧ್ವತ್ರಯವೇ ಮುಪ್ಪುರಿಯುಳ್ಳ ಅಥವಾ ಓಂ-ನಮಃ ಶಿವಾಯ ಈ ಮುಪ್ಪುರಿಯುಳ್ಳ ಷಡಕ್ಷರವೇ ಶಿವದಾರ. ಶರೀರದೊಳಗೆ ಹಾಸು ಹೊಕ್ಕಾಗಿ ನೇಯ್ದಂತಿರುವ ಪಂಚಪ್ರಾಣಗಳೇ ಹುದುಗು ಪಾವುಡ. ಇನ್ನು ಭಾವಲಿಂಗಕ್ಕೆ ತ್ರಿಪುಟಿಯೇ ಸೆಜ್ಜೆ. ಮಹಾಜ್ಞಾನ ಅಥವಾ ಅನುಭಾವವೇ ಶಿವದಾರ. ಭಾವ ವಿಭಾವಾದಿ ಪರಂಪರೆಗಳಿಂದ ನೆಯ್ದುಕೊಂಡ ಸದ್ಭಾವವೇ ಹುದುಗು ಪಾವುಡ. 'ಪ್ರಾಣಲಿಂಗಕ್ಕೆ ಕಾಯ ಸೆಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ; ಹೂವಿಲ್ಲದ ಪರಿಮಳದ ಪೂಜೆ. ಹೃದಯ ಕಮಲದಲ್ಲಿ ಶಿವ ಶಿವ ಎಂಬ ಶಬ್ದ; ಇದು ಶಿವಾದ್ವೈತ ಕಾಣಾ ಗುಹೇಶ್ವರ.' 'ಅಂಗದ ಮೇಲೆ ಲಿಂಗ ಸಂಬಂಧಿಯಾದ ಬಳಿಕ, ಸರ್ವಾಂಗದಲ್ಲಿ ತೋರುವ ವಿಕಾರವಳಿದಿರಬೇಕು. ಆ ಅಂಗವ ಸೋಂಕಿದ ಲಿಂಗಕ್ಕೆ ಸೆಜ್ಜೆ ಶಿವದಾರವಾವುದೆಂದೊಡೆ: ಅಂಗವೆ ಸೆಜ್ಜೆ, ಆಚಾರವೆ ಶಿವದಾರ; ತ್ರಿಕರಣ ಶುದ್ಧವಾದುದೆ ಕುಳಿಕೆ; ಈ ತ್ರಿವಿಧದ ಗುಣವನರಿಯಬೇಕು. ಈ ತ್ರಿವಿಧದಲ್ಲಿ ಸಂಪನ್ನನಾಗಿರಬೇಕು. ಈ ತ್ರಿವಿಧವು ಮುಟ್ಟಿ ಲಿಂಗಾರ್ಚನೆಯ ಮಾಡಬೇಕು. ಅಂಗಲಿಂಗ ಸಂಬಂಧಕ್ಕೆ ಇದೇ ಕ್ರಮವಯ್ಯ ಕೂಡಲ ಸಂಗಮದೇವಾ.'

ಕರಡಿಗೆಯ ಮೇಲಿನ ಭಾಗವು ಕಳಚದಂತೆ ಶಿವದಾರದಿಂದ ಮೂರುಸಲ ಮಲಕು ಹಾಕುವುದುಂಟು. ಹೀಗೆ ಹಾಕುವ ಮಲಕಿಗೆ ಕುಳಿಕೆ, ಕಣಿಕೆ ಎಂದು ಬೇರೆ ಹೆಸರುಗಳುಂಟು–ಇವನ್ನು ತ್ರಿಕರಣ ಶುದ್ಧಿಗೆ ಹೋಲಿಸಿ ಚೆನ್ನಬಸವಣ್ಣನವರು ಚೆನ್ನಾಗಿ ಹೇಳಿದ್ದಾರೆ. ಕಾಯವಾಙ್ಮನಗಳು ಪರಿಶುದ್ಧವಾಗಿ ಲಿಂಗದಲ್ಲಿ ಕೀಲಿಸಿರಬೇಕು. ಲಿಂಗಸೂತ್ರಗಳಾಗಿರಬೇಕು. ಆಗ ಅಂಗಲಿಂಗ ಸಂಬಂಧದ ಸಂಪುಟ ಬಚ್ಚಿ ಬೇರಾಗದಂತಿರುತ್ತದೆ.

'ಜಲವ ಚಿತ್ತಾರದ ಕೊರಳಿನಲ್ಲಿ ದಾರವಿಲ್ಲದ ಮುತ್ತಿನ ಸರವ ನೋಡಾ! ಚಿತ್ತಾರವಳಿಯದೆ, ಮುತ್ತು ಉಳಿಯದೆ ನಿಂದ ನಿಲವಿನ ಪರಿಯ ನೋಡಾ! ಗಮನವಿಲ್ಲದ ಗಂಭೀರ, ಶಬ್ದವಿಲ್ಲದ ಸಾರಾಯ ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು ಸರಿಯೆಂದೆಂಬೆನು.'

ಶಾಂತಿ ಸ್ವಭಾವವುಳ್ಳ ಸೂಕ್ಷ್ಮತನುವಿನಲ್ಲಿ ಭಿನ್ನ ಜ್ಞಾನವೆಂಬ ಶಿವದಾರವಿಲ್ಲದೆ ಅಭಿನ್ನ ಜ್ಞಾನಸೂತ್ರದಲ್ಲಿ ಕ್ರಿಯಾ ಮತ್ತು ಪ್ರಾಣ-ಲಿಂಗ ಮುತ್ತುಗಳನ್ನು ಪೋಣಿಸಿ ಮಾಡಿದ ಹಾರ ಅಚ್ಚರಿಯ ಅಲಂಕಾರ; ಸೋಜಿಗದ ಲಿಂಗ ಸಾಹಿತ್ಯ. ಇಲ್ಲಿ ದಾರವೂ ಶಿವವಾಗುವ ಸೊಬಗನ್ನು ಸವಿಯಬೇಕು. ಜ್ಞಾನವೂ ಜ್ಞೇಯವಾಗುವಂತೆ ಅಂದರೆ ಅದ್ವೈತವಾಗುವಂತೆ ದಾರವೂ ಲಿಂಗವನ್ನು ಸೋಂಕಿ ಶಿವವಾಗುತ್ತದೆ. ಅಂದರೆ ಸಂಬಂಧ ಸೂತ್ರ ಸನ್ನಿಹಿತವಾಗುತ್ತದೆ. ಕುರುಹಿಟ್ಟು ತೋರದಂತೆ ತಲ್ಲೀಯವಾಗುತ್ತದೆ. ಅಂತೆಯೇ ಅಂಗವೂ ಅಳಿಯದೆ ಅಂಗವೇ ಲಿಂಗವಾಗುತ್ತದೆ. ಲಿಂಗವುಳಿಯದೆ ಅಂದರೆ ತೆರಹಿಲ್ಲದೆ ಕುರುಹಿಲ್ಲದೆ ಸರ್ವಶೂನ್ಯ ನಿರಾಲಂಬವಾಗಿರುತ್ತದೆ. ಸರ್ವಶೂನ್ಯವಾದರೂ ನಿತ್ಯಪರಿಪೂರ್ಣಾಖಂಡವಾಗಿರುವುದೇ ಅದರ ನಿಂದ ನಿಲವಿನ ಪರಿ. ಅಂತಾದಾಗ ಗಮನವಿಲ್ಲದ ಗಂಭೀರ:—ಭಿನ್ನ ಕ್ರಿಯಾರಹಿತ; ಕ್ರಿಯಾನಿಷ್ಪತ್ತಿಗೊಂಡಿರುತ್ತದೆ ಶಬ್ದವಿಲ್ಲದ ಸಾರಾಯ:—ಭಿನ್ನಜ್ಞಾನರಹಿತ; ಜ್ಞಾನಶೂನ್ಯ (ನಿಷ್ಪತ್ತಿ) ವಾಗಿರುತ್ತದೆ. ಸಮತೆಯಾಗಿ ತ್ರಿವಿಧವೊಂದಾಗಿ ನಿಲ್ಲುತ್ತದೆ. ಕರಡಿಗೆ, ಶಿವದಾರ, ಶಿವಲಿಂಗ ಇವು ತ್ರಿವಿಧ. ಕರಡಿಗೆಯೆಂದರೆ ಅಂಗ. ಅಂಗವೇ ಜ್ಞಾತೃ. ಶಿವದಾರವೆಂದರೆ ಸೂತ್ರ ಅಥವಾ ಸಂಬಂಧ; ದಾರವೇ ಜ್ಞಾನ. ಲಿಂಗವೇ ಜ್ಞೇಯ. ಈ ಮೂರರ ಸಮತ್ವವನ್ನು ಸಾಧಿಸುವುದೇ ಲಿಂಗಧಾರಣದ ಗುರಿ; ಲಿಂಗವಂತಿಕೆಯ ಪರಿ.

ಲಿಂಗಧಾರೀ ಸದಾ ಶುದ್ಧೋ, ನಿಜಲಿಂಗಂ ಮನೋರಮಂ
ಅರ್ಚಯೇದ್ಗಂಧ ಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ।
ಬಾಹ್ಯ ಪೀಠಾರ್ಚನಾದೇತತ್ ಕರಪೀಠಾರ್ಚನಂ ವರಂ
ಸರ್ವೇಷಾಂ ವೀರಶೈವಾನಾಂ ಮುಮುಕ್ಷೂಣಾಂ ನಿರಂತರಂ ॥"

ಸೋಂಕಿದುದನ್ನು ಶುದ್ಧಿ ಮಾಡಲು ಸಮರ್ಥವಾದ ಸಂಸ್ಕಾರ ಸಹಿತವಾದ ಲಿಂಗವನ್ನು ಧರಿಸಿದಾತನು ಯಾವಾಗಲೂ ಶುದ್ಧನಾಗಿರುತ್ತಾನೆ. ಸರ್ವಾಂಗದಲ್ಲಿಯೂ ಶುದ್ಧನಾಗಿರುತ್ತಾನೆ. ಲಿಂಗಧಾರಿಯು ಕಾಯ ಕರಣಗಳನ್ನು ಮನ ಹರಣಗಳನ್ನು ತನ್ನ ಲಿಂಗಕ್ಕೆ ಸಮರ್ಪಿಸಿರುತ್ತಾನೆ; ಲಿಂಗಕ್ಕೆ ಮೀಸಲಾಗಿರಿಸುತ್ತಾನೆ. ಲಿಂಗಧಾರಿಯ ಕಾಯದಲ್ಲಿ ಕಾರ್ಪಣ್ಯವಾಗಲಿ ಕಳವಳ

ವಾಗಲಿ ಇರದು. ಮನದಲ್ಲಿ ಮಾಯಾ ಮಲದ ಕಾಳಿಕೆ ತೋರದು, ಭಾವದಲ್ಲಿ ಬೇಸರ ಬೀಸರಗಳು ಭ್ರಮೆ-ವಿಭ್ರಮೆಗಳು ವಾಸಿಸವು. ತನುಮನ ಭಾವಗಳು ಶುದ್ಧವಾಗಿ ನಡೆನುಡಿಗಳೆಲ್ಲ ಶುಚಿಯಾಗಿ ಇರುವುದೇ ಲಿಂಗಧಾರಿಯ ಸತ್ಯ ಶುದ್ಧತೆ. ಅಂಗದ ಮೇಲೆ ಲಿಂಗವನ್ನು ಧರಿಸಿದಾತನು ಲಿಂಗಕ್ರಿಯೆಗಳಲ್ಲಿ ನಿರತನಾಗಿರುತ್ತಾನೆ. ಲಿಂಗಜ್ಞಾನೋಪಾಸನೆಯೆ ಆತನ ಸ್ವಾಧ್ಯಾಯವಾಗಿರುತ್ತದೆ. ಲಿಂಗ ಸಾಹಿತ್ಯ ಸಂಪನ್ನನಾಗಿರುತ್ತಾನೆ. ಲಿಂಗ ನಡೆ ಲಿಂಗ ನುಡಿಯಲ್ಲಿರುವಾತನು ಸದಾಶುದ್ಧನಾಗಿಯೇ ಇರುತ್ತಾನೆ. ಪರುಷಮಣಿ ಮುಟ್ಟಿದ ಕಬ್ಬುನದಂತಿರುತ್ತಾನೆ; ಅಂದರೆ ಚೊಕ್ಕ ಚಿನ್ನದಂತಿರುತ್ತಾನೆ.

'ಚತುರ್ವೇದಿಯಾದರೇನು ? ಲಿಂಗವಿಲ್ಲದವನೇ ಹೊಲೆಯ !
ಶ್ವಪಚನಾದರೇನು ? ಲಿಂಗವಿದ್ದವನೇ ವಾರಣಾಸಿ,
ಆತನ ನುಡಿಗಡಣವೇ ಲೇಸು, ಆತ ಜಗಕ್ಕೆ ಪಾವನ :
ಆತನ ಪ್ರಸಾದವೆನಗೆ ಅಮೃತ ಸೇವನೆ !
'ನ ಮೇ ಪ್ರಿಯಶ್ಚತುರ್ವೇದಿ, ಮದ್ಭಕ್ತಃ ಶ್ವಪಚೋಪಿ ವಾ
ತಸ್ಮಾದೇವ ತತೋ ಗ್ರಾಹ್ಯಂ, ಸ ಚ ಪೂಜ್ಯೋಯಥಾಹ್ಯಹಂ |'
ಎಂದುದಾಗಿ ಕೂಡಲ ಸಂಗಮ ದೇವನನರಿತು ಪೂಜಿಸಿದಾತ
ಪಡುದರುಶನಕ್ಕಧಿಕ ; ಜಗಕ್ಕೆ ಪಾವನ ನೋಡಾ !

'ಆಯತ ಲಿಂಗದಲ್ಲಿ ಆಚಾರವರತು, ಸ್ವಾಯತ ಲಿಂಗದಲ್ಲಿ ವಿಚಾರವರತು ; ಸನ್ನಿಹಿತ ಲಿಂಗದಲ್ಲಿ ಅನುಭಾವವರತು ಇಂತೀ ತ್ರಿವಿಧದಲ್ಲಿ ತ್ರಿವಿಧ ವರತ ಬಳಿಕ ಒಂದಲ್ಲದೆರಡುಂಟೆ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ?

ಕ್ರಿಯಾಚಾರ ತಪ್ಪುವುದು ಕಾಯದ ಅಶುದ್ಧಿ. ಇಮ್ಮನವಾಗುವುದು ಲಿಂಗ ವಿಚಾರ ತಪ್ಪುವುದು ಮನದ ಅಶುದ್ಧಿ. ಅನುಭಾವಕ್ಕೆ ತಪ್ಪಿ ಭ್ರಮೆಗೆಣೆಯಾಗುವುದು ಭಾವದ ಅಶುದ್ಧಿ. ಲಿಂಗಧಾರಿಯು ಈ ಮೂರನ್ನೂ ತೊರೆದು ತ್ರಿವಿಧ ಶುದ್ಧನಾಗಿರುತ್ತಾನೆ.

'ಅಂಗವೇ ಲಿಂಗ, ಲಿಂಗವೇ ಅಂಗವೆಂದರಿದ ಬಳಿಕ ನಮ್ಮ ಕೂಡಲಚೆನ್ನ ಸಂಗಮದೇವರು ಅಲ್ಲಿ ಹೆರೆಹಿಂಗದಿರ್ಪ ಕಾಣಿರೋ !'

ಲಿಂಗಧಾರಿಯಲ್ಲಿ ಲಿಂಗವು ಹಿಂಗದಿರುವುದು. ಏಕೆಂದರೆ ಅಂಗವೇ ಲಿಂಗವಾಗಿ ಲಿಂಗವೇ ಅಂಗವಾಗಿ ಅರಿತಿರುವುದರಿಂದ ಅವೆರಡೂ ಅಗಲದೆ ಅನ್ಯೋನ್ಯವಾಗಿರುತ್ತವೆ. ಸಕ್ಕರೆಯ ಕಣಕ್ಕೂ ಸಿಹಿಗೂ ಹೇಗೆ ಅನ್ಯೋನ್ಯತೆ ಇದೆಯೋ ಹಾಗೆ! ಕುಸುಮಕ್ಕೂ ಕಂಪಿಗೂ ಹೇಗೆ ಸಂಬಂಧವಿದೆಯೋ ಹಾಗೆ! ಸಿಹಿಯಿರುವಲ್ಲಿ ಕಹಿ ಇರದು. ಕಂಪಿರುವಲ್ಲಿ ದುರ್ಗಂಧವಿರದು. ಅಂತೆಯೇ ಶುದ್ಧಿಯಾದ ಅಂಗಲಿಂಗಗಳಿರುವಲ್ಲಿ ಅಶುದ್ಧಿಯಿರದು.

'ಅಂಗಾಶ್ರಯವಳಿದು ಲಿಂಗಾಶ್ರಯವಾದ ಬಳಿಕ, ಆ ಅಂಗಕ್ಕೆ ಲಿಂಗಾಚಾರವಲ್ಲದೆ, ಅಂಗಕ್ರಿಯೆಯೆಂಬುದಸಂಗ್ಯೆಸರು ನೋಡಾ! ಲಿಂಗದಲ್ಲಿ ನೈಷ್ಠಿಕವಂತನಾದ ಬಳಿಕ ಅನ್ಯನಾಮವಿಡಿದು ಬಳಲುವ ಬಳಲಿಕೆ ಎಲ್ಲಿಯದೋ? ಅನಾಚಾರವ ಜರಿದು, ಆಚಾರವನರಿದ ಬಳಿಕ ನಮ್ಮ ಕೂಡಲ ಚೆನ್ನ ಸಂಗನ ಶರಣರು ಅನ್ಯವನಾಚರಿಸುವರಲ್ಲ.'

ಇದೊಂದು ಅಂಗಕ್ಕೆ ಲಿಂಗಯೋಗ. ಲಿಂಗಾಚಾರಯೋಗ. ಅಂಗದಲ್ಲಿ ಲಿಂಗ ಚೈತನ್ಯದ ಯೋಗವಾದ ಬಳಿಕ ಲಿಂಗಾಚಾರಗಳನ್ನೆ ಅಂಗನು ಆಚರಿಸಿ ಅನಾಚಾರಗಳನ್ನು ಅಲ್ಲಗಳೆದು ಅಚ್ಚನೆನಿಸುತ್ತಾನೆ, ನಿಚ್ಚಟನಾಗುತ್ತಾನೆ; ನಿಚ್ಚಲನಾಗುತ್ತಾನೆ.

'ಅಂಗದ ಕೊನೆಯಲಿ ಲಿಂಗ ಮುಂತಲ್ಲದೆ ಸಂಗವ ಮಾಡನಾ ಶರಣ.
ನಯನದ ಕೊನೆಯಲಿ ಲಿಂಗಮುಂತಲ್ಲದೆ ಅನ್ಯವ ನೋಡನಾ ಶರಣ.
ಶ್ರೋತ್ರದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ಕೇಳನಾ ಶರಣ.
ಘ್ರಾಣದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ವಾಸಿಸನಾ ಶರಣ.
ಜಿಹ್ವೆಯ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ರುಚಿಸನಾ ಶರಣ.
ಅದೇನು ಕಾರಣವೆಂದೊಡೆ, ಕೂಡಲಚೆನ್ನಸಂಗಯ್ಯ, ನಿಮ್ಮ ಶರಣ
ಸರ್ವಾಂಗ ಲಿಂಗಿಯಾದ ಕಾರಣ.'

ಹೀಗೆ ಸರ್ವಾಂಗ ಲಿಂಗಧಾರಿಯಾಗಿ ಸರ್ವಾಂಗ ಶುದ್ಧನಾಗಿರುತ್ತಾನೆ. ಇದರಿಂದಾಗಿ ಲಿಂಗಧಾರಿಯ ಜೀವನವೆಲ್ಲ ಲಿಂಗಮಯ. ಲಿಂಗಧಾರಿಯ ಜೀವಚೈತನ್ಯ ಮರಣ ಕಾಲದಲ್ಲಿ ಬಾಯಿ ಮೂಗು ಕಣ್ಣು ಈ ಯಾವ ಇಂದ್ರಿಯದಲ್ಲಿ ಹೋದರೂ ಲಿಂಗದಲ್ಲಿಯೇ ಹೋದಂತಾಗಿ ಆತನಿಗೆ ಲಿಂಗ ಸಾಮರ

ಸ್ಯಪ್ರಾಪ್ತಿ ಸಹಜವಾಗಿ ಸಂಪ್ರಾಪ್ತವಾಗುತ್ತದೆ. ಹೀಗೆ ಸ್ಥಿತಿಲಯಗಳಲ್ಲಿ ಶುದ್ಧನಾದವನಿಗೆ ಸದಾಶುದ್ಧನೆಂದು ಶ್ರೀರೇಣುಕ ಜಗದ್ಗುರುಗಳ ನಿರೂಪಣೆ. ಹೀಗೆ ಸದಾಶುದ್ಧನಾದ ಲಿಂಗಧಾರಿಯು ತನ್ನ ಮನೋಜ್ಞವಾದ ನಿಜಲಿಂಗವನ್ನು ಅನುದಿನ ಅರ್ಚಿಸಬೇಕು.

ತನ್ನ ಕೈಯಲ್ಲಿರುವ ಲಿಂಗವು ತನಗೆ ಬೇರಲ್ಲ. ತಾನೇ ಲಿಂಗ ; ಲಿಂಗವೇ ತಾನು. ಅದು ಪ್ರತೀಕವಲ್ಲ. ಪ್ರತಿಕೃತಿಯೂ ಅಲ್ಲ.

'ಪರತರ ಶಿವಲಿಂಗವೆಳಸಿ ನಿನಗಾಗಿ
ಕರಕಂಜದೊಳು ಕಾಣಿಸಿತು ಯೋಗಿ ಯಜಿಸು || ಪ ||

ಮೊದಲ ಪೀಠವೆ ಬಿಂದುವಾಗಿ, ಮೇಲೆ ನೆಲ-
ಸಿದ ವೃತ್ತವದು ನಾದವಾಗಿ, ಗೋಮುಖವೆ
ಸದಮಳಕಳೆಯಾಗಿ, ಶಕುತಿ ತಾನೆ ಲಿಂ-
ಗದ ನಿಜವಾಗಿರಲದರೊಳುಜ್ವಲಿಪ || ೧ ||

ತರುವಿಸ್ತಾರವನೊಳಗೊಂಡ ಬೀಜದ
ಪರಿಯಂತಿರಾರಧ್ವಗಳಿಗಿಂಬುವಡೆದ
ಪರಬೊಮ್ಮಕಾಶ್ರಯವಾದ ನಿಜಶಕ್ತಿ-
ವೆರಸಿ ತನಗೆ ತಾನಾಧಾರವಾಗಿರ್ಪ || ೨ ||

ಮೂರು ಮಂಡಲವನುಚ್ಚಳಿಸಿ ಗುಣವರ್ಣ
ಮೂರನು ಮೀರಿ ಬೋಧಮಾತ್ರವಾಗಿ
ತೋರುವ ಗುರುಶಂಭು ಲಿಂಗವನು ತಾನೆ
ಬೇರೆನಿಸದೆ ನಿನ್ನ ಕಣ್ಣ ಮುಂದಿಹುದು. || ೩ ||

ಆ ಪರತರ ಶಿವಲಿಂಗವೆ ಎಳಸಿ ಗುರುಕರುಣೆಯಿಂದ ನಿನ್ನ ಕರಕಂಜಕ್ಕೆ ಬಂದಿದೆ. ಬಂದು ಕಾಣಿಸಿದೆ. ಕೂಡುದನ್ನು ಬಿಡದೆ ಅರ್ಚಿಸು. ಲಿಂಗದ ಕೆಳಮೇಲಿನವೆರಡು ಪೀಠಗಳು ಬಿಂದು ನಾದಾತ್ಮಕಗಳಾಗಿವೆ. ಗೋಮುಖ ಕಳಾತ್ಮಕವಾಗಿದೆ. ಗೋಳಕ (ಬಾಣ) ಶಿವಶಕ್ತಿರೂಪಾಗಿ ಶೋಭಿಸುತ್ತಿದೆ. ಹೀಗಿದ್ದರೂ ಬೀಜದಂತೆ ಚಿಕ್ಕದಾಗಿದೆ. ಚಿಕ್ಕದಾದರೂ ನಿನ್ನ ಪಿಂಡಾಂಡವನ್ನೂ ಬ್ರಹ್ಮಾಂಡವನ್ನೂ ಒಳಕೊಂಡಿದೆ. ವರ್ಣ, ಪದ, ಮಂತ್ರ, ಭುವನ

ತತ್ತ್ವ, ಕಲೆಗಳೆಂಬಾರು ಮಾರ್ಗಗಳಿಗೆ ಆಶ್ರಯವಾಗಿದೆ. ಪರಬ್ರಹ್ಮ ಸ್ವರೂಪವಾದ ನಿಜಶಕ್ತಿಯಿಂದೊಡಗೂಡಿದೆ. ತನಗೆ ತಾನೇ ಆಧಾರವಾಗಿದೆ.

ಸೂರ್ಯ ಚಂದ್ರಾಗ್ನಿಗಳೆಂಬ ಮೂರು ಮಂಡಲಗಳಿಂದ ಹೊರಹೊಮ್ಮಿ ಮೂರು ಗುಣ, ಮೂರು ವರ್ಣಗಳನ್ನು ಮೀರಿ ದೃಕ್‌ಕ್ರಿಯಾ ಮಾತ್ರವಾಗಿ ನಿನಗೆ ಬೇರೆನಿಸದೆ ನಿನ್ನ ಕಣ್ಣಿಗೆ ತೋರಿರುವುದು. ಇದೇ ನಿನ್ನ ನಿಜಲಿಂಗ. ಇದನ್ನು ನೀನು ನೋಡು. ಇದುವೇ ನಿನಗೆ ದ್ರಷ್ಟವ್ಯವಸ್ತು. 'ನೋಡುವದನ್ನೇ ನೋಡಲರಿಯದೆ ಕೆಟ್ಟಿತೀ ಲೋಕವೆಲ್ಲ. ನೋಡುವುದ ನೋಡ ಬಲ್ಲಡೆ ಕೂಡಲಿಲ್ಲ, ಅಗಲಲಿಲ್ಲ; ನೋಟದ ಕೂಟದ ಅಗಲದ ಸುಖವ ಗೊಗ್ಗೇಶ್ವರಾ ನಿಮ್ಮ ಶರಣ ಬಲ್ಲ.' ಈ ನಿಜಲಿಂಗವನ್ನು ನೋಡುವ ಪೂಜೆ ಮಾಡುವ ಕಲೆಯನ್ನು ಶರಣನಾದವನು ತಿಳಿಯಬಲ್ಲ.

ಈ ನಿಜಲಿಂಗವು ಕೇವಲ ಕಣ್ಣಿಗೆ ಕಾಣಿಸಿದುದಲ್ಲ; ಕೇವಲ ಕರಸ್ಥಲಕ್ಕೆ ಬಂದುದಲ್ಲ. ಮನೋರಮವೂ ಆಗಿದೆ. ಆಹಾ, ಎಂತಹ ಮನೋಜ್ಞವಾದ ಮಾತಿದು. ಮಂಜುಳವಾದ ಮೂರ್ತಿಯಿದು ! ಆ ಮನೋರಮನನ್ನು ಮನದಲ್ಲಿ ಅಳವಡಿಸಿಕೊಂಡು ಮಂಗಳ ಕೇಳಿಯಲ್ಲಿ ಮನ ಮುಗ್ಧವಾದ ಶಿಷ್ಯನ ಸ್ವರೂಪ ಸೌಂದರ್ಯವನ್ನು ಚೆನ್ನಬಸವಣ್ಣನು ತನ್ನ ಈ ವಚನವಾಣಿಯಲ್ಲಿ ಚೇತೋಹಾರಿಯಾಗಿ ಚಿತ್ರಿಸಿದ್ದಾನೆ:

'ಕಳೆ ಏರಿದ ಲಿಂಗ ತೆರಹನರಿದು,
ಕಳೆ ಕಳೆಯದ ವಳಯದ ಸೀಮೆಯಿಂದತ್ತಲು
ವೇಧಿಸಿದ ಮುಗ್ಧೆಯ ನೋಡಾ !
ಆಕಾರ ನಿರಾಕಾರದ, ಪುಣ್ಯ ಪಾಪದ, ಅರುಹಿನ
ಮರಹಿನ ಅಷ್ಟದಳದ ಕಮಲದಲ್ಲಿ ಮಧುಪಾನವಾಗದೆ,
ಕೂಡಲ ಚೆನ್ನ ಸಂಗಯ್ಯನೆಂಬ ಮಹಾಲಿಂಗವ
ಮನದಲ್ಲಿ ಅಳವಡಿಸಿದ ಮುಗ್ಧೆಯ ನೋಡಾ !'

ಮನದಲ್ಲಿ ಕರಿಗೊಂಡು ಕಳೆಯೇರಿದ ಲಿಂಗದ ಬಗೆಯನರಿದು ಆ ಅಚ್ಚಳಿಯದ ಕಳಾವಳಯದ ಸೀಮೆಯಿಂದಾಚೆ ಸಾಗಿ ಸಂವೇಧಿಸಿದ ಆ ಲಿಂಗಸತಿಯ ಮುಗ್ಧತೆಯ ನೋಟವೇ ನೋಟ; ಅದು ಸಾಟಿಯಿಲ್ಲದ ಸೌಂದರ್ಯದ ನೋಟ.

ಆ ಶರಣಸತಿ ಅಷ್ಟದಳ ಕಮಲದ ಹೃದಯ ಮಧುಪಾನಕ್ಕೆ ಮರುಳಾಗಳು. ಏಕೆಂದರೆ ಅದು ಪುಣ್ಯ ಪಾಪದ ಬೀಡು. ಅರುಹು ಮರಹುಗಳ ನಾಡು.

'ಪೂರ್ವದಲೇ ಪುಣ್ಯವೃತ್ತಿಃ ಆಗ್ನೇಯೇ ನಿದ್ರಾಲಸ್ಯಾದಯೋ ಭವಂತಿ । ಯಾಮ್ಯೇದಕ್ಷಿಣೀ ಕ್ರೌರ್ಯಮತಿಃ, ನೈಋತೇ ಪಾಪೇ ಮನೀಷಾ, ವಾರುಣ್ಯಾಂಕ್ರೀಡಾ, ವಾಯವ್ಯೇಗಮನಾದೌ ಬುದ್ಧಿ; ಸೌಮ್ಯೇಉತ್ತರದಲೇ ರತಿ.ಪ್ರೀತಿಃ, ಐಶಾನ್ಯೇ ದ್ರವ್ಯಾದಾನಂ' ಎಂದು ಹಂಸೋಪನಿಷತ್ತು ಅಷ್ಟ ದಳಗಳಲ್ಲಿ ಸಂಚರಿಸುವ ಮಾನಸಿಕ ವೃತ್ತಿಗಳನ್ನು ಬಿತ್ತರಿಸಿದೆ. ಅಲ್ಲಿಂದಾಚೆ ಮುಂದುವರಿದರೆ 'ಮಧ್ಯೇವೈರಾಗ್ಯಂ, ಕೇಸರೇ ಜಾಗ್ರದವಸ್ಥಾ । ಕರ್ಣಿಕಾಯಾಂ ಸ್ವಪ್ನಃ, ಲಿಂಗೇ ಸುಷುಪ್ತಿಃ, ಪದ್ಮತ್ಯಾಗೇ ತುರೀಯಂ । ಯದಾ ಹಂಸೋ ನಾದೇ ವಿಲೀನೋ ಭವತಿ ತದಾ ತತ್ತುರ್ಯಾತೀತಮಪಿ ॥'—ಎಂದು ಅದೇ ಹಂಸೋಪನಿಷತ್ತು ಹೇಳಿದೆ. ಇದರಂತೆ ಚೆನ್ನಬಸವಣ್ಣನವರೂ ಮನವು ಹೃತ್ಪದ್ಮದ ಮಧುಪಾನಮಾಡದೆ ಅದನ್ನು ದಾಟಿ ಆ ಮಹಾಲಿಂಗದಲ್ಲಿ ಮುಗ್ಧ ವಾದ ಮನೋರಮೆಯ ಮನೋಜ್ಞತೆಯನ್ನು ನೋಡೆಂದು ನಿರ್ದೇಶಿಸಿದ್ದಾರೆ. ಅಂತಹ ಆ ಮನೋರಮೆಯಲ್ಲಿ ರಮಿಸುವ ಮನೋರಮನು ನಿಜಲಿಂಗದೇವ ನೆಂದು ಶ್ರೀರೇಣುಕ ಜಗದ್ಗುರು ಬೋಧಿಸಿದ್ದಾರೆ. ಅಂತಹ ಲಿಂಗವನ್ನು ಅರ್ಚಿಸೆಂದು ಆದೇಶವಿತ್ತಿದ್ದಾರೆ. ಹೃತ್ಕಂಜದಿಂದ ಕರಕಂಜಕ್ಕೆ ಲಿಂಗಮೂರ್ತಿ ಯನ್ನು ಬಿಜಯಂಗೈಸಿ ಗಂಧ ಪುಷ್ಪ ಮುಂತಾದವುಗಳಿಂದ ಅರ್ಚಿಸಬೇಕು. ಮುಮುಕ್ಷುಗಳಾದ ಸರ್ವವೀರಶೈವರಿಗೆ ನಿತ್ಯ ಕರಸ್ಥಲದಲ್ಲಿ ಪೂಜಿಸುವುದೇ ಪರಮೋತ್ತಮ. ಬಾಹ್ಯ ಪೀಠಗಳಲ್ಲಿರಿಸಿ ಪೂಜಿಸುವುದಕ್ಕಿಂತ ಹಸ್ತ ಪೀಠ ದಲ್ಲಿರಿಸಿ ಅರ್ಚಿಸಬೇಕು.

'ಕರಾಬ್ಜಪೀಠೇ ಯಜನಂ ಧಾರಣ .... ಮೋಕ್ಷಕಾರಣಂ'
ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾಪಿ ಶಾಂಕರಿ
ಪೂಜಯೇನ್ನಿಯತಂ ಲಿಂಗಂ ಪ್ರಾಣಲಿಂಗಪರಾಯಣಃ ।
ಅನಭ್ಯರ್ಚ್ಯ ನ ಭುಂಜೀತ ಲಿಂಗರೂಪಂ ಸದಾಶಿವಮ್
ಯಸ್ತ್ವೇವಂ ನಿರ್ವಹೇದ್ಭಕ್ತಃ ಸ ವೈ ಶಿಷ್ಯೋ ಮಮಪ್ರಿಯಃ ।
ವಾರ್ಗಂಧಾಕ್ಷತ ಪುಷ್ಪೈಶ್ಚ ಧೂಪದೀಪಹಾರಕೈಃ

ತಾಂಬೂಲ ಸಹಿತೈಃ ಪ್ರೋಕ್ತಮಷ್ಟಧಾ ಚ ಸಮರ್ಚನಮ್ ।

ಸೂಕ್ಷ್ಮಾಗಮ, ಪಟಲ-೬.

ಲಿಂಗಪೂಜೆಗೆ ಬಾಹ್ಯ ಕಾಷ್ಠ ಪೀಠಗಳಿಗಿಂತ ಕರಪೀಠವೇ ಮುಖ್ಯವೆಂದು ಮೋಕ್ಷಕಾರಣವೆಂದು ಆಗಮ ಸಾಕ್ಷಿಯೊಡನೆ ಆತ್ಮಸಾಕ್ಷಿಯೂ ಇರುತ್ತದೆ. ಜಡಪೀಠಕ್ಕಿಂತ ಜೀವಂತಪೀಠ ಹೆಚ್ಚಿನದು—ಮೆಚ್ಚಿನದೆಂದು ಮತ್ತೆ ಹೇಳ ಬೇಕಿಲ್ಲ. 'ಪ್ರಾಣಿಮಂತ್ರಂ ಪವಿತ್ರಂ' ಎಂಬ ತೈತ್ತರೀಯೋಪನಿಷತ್ತು ನಿದರ್ಶನವಾಗಿದೆ. ಹಸ್ತ ಹೃದಯದ ಪ್ರತೀಕವಾಗಿದೆ. ಹಸ್ತ ಮುಟ್ಟಿದರೆ ಹೃದಯ ಮುಟ್ಟಿದಂತಾಗುತ್ತದೆ. ಹಸ್ತ ಬಾಹ್ಯಾಂಗದ ಬಾಹ್ಯ ಹೃದಯ ವಾಗಿದೆ. 'ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ ' ಈ ಋಗ್ವೇದ ಶ್ರುತಿಯನ್ನು ಗಮನಿಸಿ ಹಸ್ತಕ್ಕೆ ಪ್ರಾಶಸ್ತ್ಯವೊದಗಿದೆ. ತಾಯಿ ತನ್ನ ಮಗುವನ್ನು ಮುದ್ದಿಸಬೇಕಾದರೆ ಎದೆಗಪ್ಪಿಕೊಳ್ಳಬೇಕಾದರೆ ಮೊದಲು ಮಗುವನ್ನು ತನ್ನ ಹಸ್ತಕ್ಕೆ ತಕ್ಕೊಳ್ಳುತ್ತಾಳೆ. ಯಾವುದೇ ವಸ್ತುವಾಗಲಿ ಮೊದಲು ಹಸ್ತಕ್ಕೆ ಬರಬೇಕು. ಹೀಗಿರುವಾಗ ಆ ಪರವಸ್ತುವನ್ನು ಹಸ್ತ ಕಮಲಕ್ಕೆ ತಂದು ಅರ್ಚಿಸುವಲ್ಲಿ ಔಚಿತ್ಯವಿದೆ. ಹಸ್ತ ಪರಮಾರ್ಥವಾದ ಪದ್ಮಪೀಠ; ಕರಕಮಲ.

ಅಂತಹ ಕರಕಮಲದಲ್ಲಿ ಕ್ರಿಯಾಲಿಂಗವನ್ನಿರಿಸಿ ಗಂಧ ಪುಷ್ಪಾದಿಗ ಳಿಂದ ಅರ್ಚಿಸಬೇಕೆಂದು ಶ್ರೀರೇಣುಕ ದೇಶಿಕೋತ್ತಮನ ಆಜ್ಞೆ! ಈ ಆಜ್ಞೆಯಲ್ಲಿಯೂ ಒಂದು ವಿಶೇಷವಿದೆ.

ಗಂಧ ಪುಷ್ಪಾದಿ ಪದಪ್ರಯೋಗದಲ್ಲಿ ಒಂದು ವಿಮರ್ಶೆಯಿದೆ. ಅರ್ಚನ ಸಾಹಿತ್ಯ ಮತ್ತು ಲಿಂಗಾರ್ಪಣಸಾಹಿತ್ಯ ಸೂಚನೆಯಲ್ಲಿಯೂ ತಮ್ಮ ಬೋಧ ನೆಯ ಬೆಳಕನ್ನು ಬೀರಿದಾರೆ.

ಪೂಜೋಪಚಾರಗಳಲ್ಲಿ ಅವೆಷ್ಟೋ ಬಗೆಗಳಿವೆ. ಮೂರು ಅಯ್ದು ಎಂಟು ಹದಿನಾರು ಇಪ್ಪತ್ತುನಾಲ್ಕು ಮೂವತ್ತೆರಡು ಉಪಚಾರಗಳಿವೆ. ಇವು ಗಳಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳು ಹೆಚ್ಚು ಪ್ರಚಾರದಲ್ಲಿವೆ; ಪ್ರಾಮುಖ್ಯವಾಗಿವೆ. ಅಭಿಷೇಕ, ಪೂಜೆ, ನೈವೇದ್ಯ ಪ್ರದಕ್ಷಿಣ, ನಮಸ್ಕಾರ, ಸಂಗೀತ, ನರ್ತನ, ವಾದ್ಯ ಇವು ಅಷ್ಟೋಪಚಾರಗಳು. ಇವುಗಳಿಂದ ಮಾಡು ವುದು ಅಷ್ಟವಿಧಾರ್ಚನೆಯು; ಎಂದು ಹೇಳುವ ರೂಢಿಯಿದೆ 'ಕುರ್ಯಾ

ದಷ್ಟ ವಿಧಾರ್ಚನವರ್ ' ಎಂದು ಸೂಕ್ಷ್ಮ ತಂತ್ರವು ಹೇಳಿದೆ. ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ನೈವೇದ್ಯ, ತಾಂಬೂಲ ಇವೆಂಟು ಉಪಚಾರಗಳೆಂದು ವಿಧಿಸಿದೆ. ಅಷ್ಟವಿಧಾರ್ಚನೆ ಅಷ್ಟೋತ್ತರ ಶತಜಪಅರ್ಚನವಿಧಿಯಲ್ಲಿ ಮುಖ್ಯವಾದುವುಗಳು. ಸೂಕ್ಷ್ಮ ತಂತ್ರವು ಹೇಳಿದ ಅಷ್ಟೋಪಚಾರಗಳಿಗಿಂತ ಸಿದ್ಧಾಂತ ಶಿಖಾಮಣಿಯು ಹೇಳಿದ ಉಪಚಾರಗಳ ಆರಂಭ ಮಾಡುವಿಕೆಯಲ್ಲಿ ಒಂದು ಕ್ರಮವಿದೆ; ಪ್ರಮೆಯಿದೆ. ಗಂಧ ಪುಷ್ಪಗಳು ಪೃಥಿವ್ಯಂಗ ಅರ್ಪಣ ಉಪಚಾರ. ಜಲ ಕ್ಷೀರಗಳ ಅಭಿಷೇಕಾರ್ಪಣೋಪಚಾರಗಳು ಜಲಾಂಗಕ್ಕೆ ಸಂಬಂಧಿಸಿದವುಗಳು. ದೀಪ ಧೂಪಾದಿಗಳು ಅಗ್ನ್ಯಂಗಾರ್ಪಣ ಉಪಚಾರಗಳು. ಚಾಮರ ಬೀಸುವಿಕೆಯು ವಾಯ್ವರ್ಪಣೋಪಚಾರ· ಘಂಟಾನಾದವು ಆಕಾಶಾಂಗ ಸಮರ್ಪಣ ವಿಧಾನವು. ಚಲಿಸದೆ ಸುಖಾಸನ ಅಥವಾ ಸಿದ್ಧಾಸನಗಳೊಂದರಲ್ಲಿ ಕುಳಿತಿರುವುದು ಕಾಯಾರ್ಪಣ ವಿಧಾನ. ಪಂಚೇಂದ್ರಿಯಗಳನ್ನು ಲಿಂಗಸೇವೆಯಲ್ಲಿ ತೊಡಗಿಸಿರುವುದು ಕರಣಾರ್ಪಣ ವಿಧಾನ. ಮನಸ್ಸಿನಿಂದ ಜಪಿಸಿ ಲಿಂಗವನ್ನೇ ಭಾವಿಸುವುದು ಭಾವಾರ್ಪಣ· ಇವು ಎಂಟು ಸಮಷ್ಟಿ ವ್ಯಷ್ಟಿರೂಪ ಅಷ್ಟಾಂಗಾರ್ಪಣೋಪಚಾರ. ಬ್ರಹ್ಮಾಂಡ ಪಿಂಡಾಂಡವೆರಡರ ಸಮರ್ಪಣ. ಇದನ್ನು ತಿಳಿದು ಅಷ್ಟವಿಧಾರ್ಪಣ ಪೂಜೆಯನ್ನು ಆಚರಿಸಬೇಕು. ಇದನ್ನು ಸೂಚಿಸಲು ಶ್ರೀರೇಣುಕ ದೇಶಿಕೋತ್ತಮರು, 'ಗಂಧಪುಷ್ಪಾದಿ' ಎಂದು ಕ್ರಮವಿಡಿದು ಉಪಚಾರಗಳನ್ನು ಬೋಧಿಸುವ ದಿವ್ಯಧ್ವನಿಯನ್ನು ಆ ಪದ ಪ್ರಯೋಗದಲ್ಲಿ ತೋರಿದ್ದಾರೆ.

ಇಷ್ಟಲಿಂಗಾರ್ಚನೆ ಜೀವನದಲ್ಲಿ ಒಂದು ಸತ್ಕಲೆ; ಸತ್ಯವನ್ನು ಬಿಂಬಿಸುವ ಶ್ರೇಷ್ಠ ಕಲೆ. ಸತ್ಕಾಲಕ್ಷೇಪ, ಸತ್ಕ್ರಿಯಾಕಲಾಪ ಸತ್ಯಸಂಕಲ್ಪ ಇವುಗಳನ್ನು ಸಾಧಿಸುವ ಶುಭ್ರ ಸಾಧನೆ. ಶ್ರದ್ಧೆಯನ್ನು ಶುದ್ಧೀಕರಿಸುವ ಸತ್ಕ್ರಿಯೆ, ಶರೀರವನ್ನು ವಿಭೂತಿಯಿಂದ ರುದ್ರಾಕ್ಷಗಳಿಂದ ಶಿವಾಲಂಕಾರಗೊಳಿಸುವ ಸತ್ಕಲೆ. ದಶೇಂದ್ರಿಯಗಳನ್ನು ಅಂತಃಕರಣಗಳನ್ನು ಸತ್ಯ ಸುಂದರ ಶಿವದಲ್ಲಿ ಶಿವನಲ್ಲಿ ಕೇಂದ್ರೀಕರಿಸುವ ಕ್ರಿಯಾ ನಿರತವಾಗಿಸುವ ಕುಶಲಕಲೆ. ನಮ್ಮೀ ಮಾತುಗಳು ಮನದಟ್ಟಾಗಲು ಭಕ್ತಿಬಲ್ಲಿದ ಬಸವಣ್ಣನವರ ವಚನಗಳನ್ನಿಲ್ಲಿ ಉದಹರಿಸುತ್ತೇವೆ :

'ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು ?
ಹೊತ್ತು ಹೋಗದ ಮುನ್ನ, ಮೃತ್ಯು ಮುಟ್ಟದ ಮುನ್ನ
ತೊತ್ತುಗೆಲಸವ ಮಾಡು ಕೂಡಲ ಸಂಗಮದೇವನ.'

ಬಾಳಿನಲ್ಲಿ ಹೊತ್ತಿಗಿದೆ ಮಹತ್ತು. ಅದರಲ್ಲಿಯೂ ಹೊತ್ತಾರೆ ಅಂದರೆ ಮುಂಜಾವಿಗೆ ಹೆಚ್ಚಿನ ಮಹತ್ತಿದೆ–ದೈನಂದಿನದಲ್ಲಿ: ಆಜನ್ಮದಲ್ಲಿ ಕೌಮಾರ ಯೌವನ ಕಾಲಗಳಲ್ಲಿ ಹೆಚ್ಚಿನ ಮಹತ್ತಿದೆ. ಆದ್ದರಿಂದ ನಿಚ್ಚ ಹೊತ್ತಾರೆ ಲಿಂಗವನ್ನು ಪೂಜಿಸಬೇಕು. ಬಾಳಿನಾರಂಭದಿಂದಲೇ ಲಿಂಗವನ್ನು ಅರ್ಪಿಸಬೇಕು. 'ಅಷ್ಟವಿಧಾರ್ಚನೆ–ಷೋಡಶೋಪಚಾರವ ಮಾಡುವುದು ; ಮಾಡಿದ ಪೂಜೆಯ ನೋಡುವುದಯ್ಯ. ಶಿವತತ್ವ ಗೀತವ ಪಾಡುವುದು ; ಶಿವನಮುಂದೆ ನಲಿದಾಡುವುದಯ್ಯಾ. ಭಕ್ತಿ ಸಂಭಾಷಣೆಯ ಮಾಡುವುದು ; ನಮ್ಮ ಕೂಡಲ ಸಂಗಯ್ಯನ ಕೂಡುವುದು '

'ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವವು ಅಪಮೃತ್ಯು ಕಾಲ ಕರ್ಮಂಗಳಯ್ಯ !
ದೇವ ಪೂಜೆಯು ಮಾಟ, ದುರಿತ ಬಂಧನದೋಟ !
ಶಂಭು ನಿಮ್ಮಯ ನೋಟ ಹಿಂಗದ ಕಣ್ಬೇಟ !
ಸದಾ ಸನ್ನಿಹಿತನಾಗಿ ಶರಣೆಂಬುವುದು.'

'ಅಂಗೈಯೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿ
ವರಿವುತ್ತ, ಸುರಿವುತ್ತ ಎಂದಿಪ್ಪೆನೋ ? ನೋಟವೇ ಪ್ರಾಣವಾಗಿ
ಎಂದಿಪ್ಪೆನೋ ? ಕೂಟವೇ ಪ್ರಾಣವಾಗಿ ಎಂದಿಪ್ಪೆನೊ ?
ಎನ್ನಂಗವಿಕಾರದ ಸಂಗವಳಿದು ಕೂಡಲ ಸಂಗಯ್ಯಾ ಲಿಂಗಯ್ಯ,
ಲಿಂಗ ಲಿಂಗ ಲಿಂಗವೆನ್ನುತ್ತ ?'

'ಅಚ್ಚುಗವೇಕಯ್ಯ ಸಂಸಾರದೊಳಗೆ ? ನಿಚ್ಚ ನಿಚ್ಚ ಶಿವರಾತ್ರಿಯ
ಮಾಡುವುದು ; ಬೇಗ ಬೇಗ ಅರ್ಚನೆ-ಪೂಜನೆಯ ಮಾಡುವುದು,
ಕೂಡಲ ಸಂಗನ ಕೂಡುವುದು.'

'ಅಂಗಯ್ಯ ಲಿಂಗದಲ್ಲಿ ಕಂಗಳು ನಟ್ಟು ಎವೆ ಹಳಚದೆ
ಮನ ಕವಲಿಡದೆ ಚಿತ್ರದ ರೂಹಿನ ತೆರದಂತೆ; ಲಿಂಗವ
ನೋಡಿ ನೋಡಿ ಕಂಗಳಲ್ಲಜ್ಝೊತ್ತಿ, ಮನದಲ್ಲಿ ನೆನೆನೆನೆದು,
ನೆರವ ಲಿಂಗ ಸುಖ ಸಂಪನ್ನರನೇ ಲಿಂಗವೆಂಬೆನು ನಿಜಗುರು
ಸ್ವತಂತ್ರ ಸಿದ್ಧಲಿಂಗೇಶ್ವರಾ.'

ಈ ಎಲ್ಲ ವಚನಗಳು ಅರ್ಚನೆಯಿಂದ ತ್ರಿಕರಣಗಳ ವಿಕಾರ ದೂರಾಗುವ ಸುಂದರ ಚಿತ್ರವನ್ನು ತೋರಿವೆ. ಇದಲ್ಲದೆ,

ಆವ ಜನ್ಮದ ಪುಣ್ಯವೋ ಲಿಂಗ ಪೂಜಾ ವಿಧಿಯನು–!
ಭಾವವಹುದು ನರಜನ್ಮದೊಳು
ಸಾವಿರ ಮುಖದೊಳರಸಿ ನೋಡಿ ನಿಗಮಾಗ–
ಮಾವಳಿ ಕಾಣದ ಸಾಧ್ಯವಿದು ||ಪ||

ಮೊದಲು ಲಿಂಗದ ಕಳೆಯನು ಭಾವಿಸುವ ರತಿ
ಹೃದಯದೊಳೊಡಗೂಡಿ ನೆನೆವ ರತಿ,
ಸದಮಳ ಲೋಚನದೊಳು ನಿಟ್ಟಿಸುವ ರತಿ
ಯೊದವಿ ಕರದೊಳಿಂಬಿಡುವ ರತಿ ||೧||

ಹರುಷರಸದೊಳು ಮಜ್ಜನವೆರೆವಿಂಪು
ಪರಮ ವಸ್ತ್ರಗಂಧಾಕ್ಷತೆ–ಗೊಡುವಿಂಪು,
ಪರಿಮಳವೆಸೆವಲರನು ಸಿಂಗರಿಸುವಿಂಪು
ವರಧೂಪಾರತಿಗಳನೆತ್ತುವಿಂಪು ||೨||

ರಸವೊಸರುವ ಸವಿಗಳನೂಡುವನುರಾಗ
ವೆಸೆವ ತಾಂಬೂಲವನು ನೀಡುವನುರಾಗ,
ಮಿಸುನಿಯ ಛತ್ರ ಚಾಮರವ ನಿಕ್ಕುವನುರಾಗ
ವೊಸೆದು ದರ್ಪಣವನು ಪಿಡಿವನುರಾಗ ||೩||

ಕೂಡೆ ಬಿಜ್ಜಣಿಗೆಯ ನೋಡಿ ಬೀಸುವ ಲೇಸು
ನಾಡೆ ನಮಿಸಿ ಲಲ್ಲೆಗರೆವ ಲೇಸು,

ಮೂಡುವ ತನು ಪುಳಕದೊಳು ಪಾಡುವ ಲೇಸು
ನೋಡುತಾನಂದಾಶ್ರು ಸುರಿವ ಲೇಸು ||೪||

ಹಿಂಗದೆ ಪುಷ್ಪಾಂಜಲಿ ಗೈಯುವತಿ ಸುಖ
ಸಿಂಗರವೆನಿಸಿ ಬಣ್ಣಿಸುವ ಸುಖ,
ಮಂಗಳಮಯ ಶಂಭುವೆನಿಸಿ ರಾಜಿಪಸುಖ
ಲಿಂಗಪೂಜಾ ಸಂಭ್ರಮದ ಸುಖ ||೫||

ಅರ್ಚನೆ ಒಂದು ಸತ್ಕಲೆಯೆಂಬುದಕ್ಕೆ, ಅರ್ಚನೆಯ ಅಗ್ಗಳಿಕೆಗೆ, ಸಮಗ್ರಾರ್ಚನೆಯ ಸವಿಯಾದ ಬಣ್ಣನೆಗೆ ಇದಕ್ಕಿಂತ ಬೇರೆ ಪದ್ಯವಿಲ್ಲ. ಲಿಂಗಪೂಜೆಯಿಂದ ಪದಾರ್ಥಕಾಯ ಹೋಗಿ ಪ್ರಸಾದ ಕಾಯವಾಗುತ್ತದೆ. ಪರಮ ಪುಣ್ಯ, ಉತ್ತಮ ಭಾಗ್ಯವುಂಟಾಗುತ್ತವೆ.

ಪತ್ರೆ ಪುಷ್ಪ ಗಂಧಾದಿಗಳನ್ನು ಅರ್ಪಿಸುವುದರಿಂದ ಆಯುಷ್ಯ ವೃದ್ಧಿಯಾಗುತ್ತದೆ. ಜಲ ಕ್ಷೀರಾದಿಗಳ ಮಜ್ಜನ ಮಾಡುವುದರಿಂದ ಶಾಂತಿ ಸಮಾಧಾನಗಳು ಮೈಗೂಡುತ್ತವೆ. ಅಕ್ಷತೆಯ ಅರ್ಪಣದಿಂದ ಅಕಾಲ ಮರಣ ತಪ್ಪುತ್ತದೆ. ದೀಪಾರತಿಯಿಂದ ದಿವ್ಯ ಜ್ಞಾನವುಂಟಾಗುತ್ತದೆ; ಆರೋಗ್ಯವುಂಟಾಗುತ್ತದೆ. ಮಂತ್ರಜಪದಿಂದ ಸ್ತೋತ್ರಪಠನದಿಂದ ಆಧ್ಯಾತ್ಮಿಕ ಶಬ್ದ ಸಾಹಿತ್ಯ ಸಂಪತ್ತೊದಗುತ್ತದೆ; ಮಂತ್ರಮೂರ್ತಿಯಾದ ಲಿಂಗಚೈತ್ಯನ್ಯದ ಸಾಕ್ಷಾತ್ಕಾರವುಂಟಾಗುತ್ತದೆ. ನೈವೇದ್ಯವನ್ನು ನಿವೇದಿಸುವುದರಿಂದ ನಿಖಿಲೈಶ್ವರ್ಯಪ್ರಾಪ್ತಿಯಾಗುತ್ತದೆ. ಲಿಂಗಸ್ಪರ್ಶದಿಂದ ಸರ್ವ ಪಾಪಗಳು ಪರಿಹಾರವಾಗುತ್ತವೆ; ದೃಷ್ಟಿಯಲ್ಲಿ ದಿವ್ಯ ಕಳೆಯುಂಟಾಗುತ್ತದೆ. ಅರ್ಘ್ಯಪಾದ್ಯಾಚಮನಾದಿ ರುದ್ರಾಭಿಷೇಕಗಳಿಂದ ಸರ್ವರೋಗಗಳು ಎಲ್ಲ ಕೊರತೆಗಳು ತೊಲಗುತ್ತವೆ. ಮುಖ್ಯವಾಗಿ ಮನಸ್ಸು ನೆಮ್ಮದಿಯಾಗಿ ನಿಲ್ಲುತ್ತದೆ. ಸಂಸಾರ ವ್ಯವಹಾರ ಸಾಗರದಲ್ಲಿ ಮುಳುಗಿದವರಿಗೆ ಲಿಂಗಪೂಜೆ ಒಂದು ಉತ್ತಮವಾದ ನೌಕೆ. ಬೇಗ ಮನ ಆತ್ಮಗಳು ಪ್ರಸನ್ನವಾಗುವ ಪಾವನ ಪಥ.

'ಸತ್ಯಂ ವಚ್ಮಿ ಹಿತಂ ವಚ್ಮಿ ಸಾರಂ ವಚ್ಮಿ ಪುನಃ ಪುನಃ
ಲಿಂಗ ಮಧ್ಯೇ ಮಹಾದೇವಃ ಸಾಕ್ಷಾತ್ ದೇವೋ ವ್ಯವಸ್ಥಿತಃ

ಅನುಗ್ರಹಾಯ ಲೋಕಾನಾಂ ತಸ್ಮಾತ್ ಲಿಂಗಂ
ಪ್ರಪೂಜಯೇತ್ ।'
—ವೀರಶೈವಾಚಾರ ಪ್ರದೀಪಿಕೆ, ಅ–೨.

ಇಡೀ ಲೋಕಾನುಗ್ರಹವನ್ನೇ ಮಾಡುವ ಲಿಂಗಪೂಜೆ ತನ್ನ ಅನುಗ್ರಹಕ್ಕೆ ಅಳವಡದೆ? ಇದನರಿತು ಲಿಂಗಧಾರಿಯು ಲಿಂಗಪೂಜೆಯನ್ನು ನಿತ್ಯ ತಪ್ಪದೆ ಮಾಡಬೇಕು. ಅಷ್ಟವಿಧಾರ್ಚನೆಯನ್ನು ಮಾಡುವ ಶಕ್ತಿ ಸಂಪತ್ತುಗಳಿಲ್ಲದಿದ್ದರೆ ರೂಢಿಗೀಶನಿತ್ತ ಜಲಪುಷ್ಪಾದಿಗಳಿಂದಲಾದರೂ ಪೂಜಿಸಿಯೇ ತೀರಬೇಕು.

'ಆಢ್ಯೋ ವಾಥ ದರಿದ್ರೋ ವಾ ಸ್ವಕಾಂ ಶಕ್ತಿಮವಂಚಯನ್
ದ್ರವ್ಯೈರ್ನ್ಯಾಯಾರ್ಜಿತೈರೇವ ಭಕ್ತ್ಯಾ ದೇವಂ ಸಮರ್ಚಯೇತ್ !'
—ಕ್ರಿಯಾಸಾರ

ಲಿಂಗಪೂಜೆಗೆ ಬಡವ ಬಲ್ಲಿದರೆಂಬ ಭೇದವಿಲ್ಲ. ಅವರವರ ಶಕ್ತಿ ಭಕ್ತಿಗಳಿನುಸರಿಸಿ ಪೂಜಿಸಬೇಕು. ಸ್ವಂತದ ಕಾಯಕದಿಂದ ಬಂದ ದ್ರವ್ಯದಿಂದ ಆರಾಧಿಸಬೇಕು. ಸ್ತ್ರೀಯರೂ ಲಿಂಗಪೂಜೆಗೆ ಅರ್ಹರು. ಆಗಮಗಳೇ ಸ್ತ್ರೀಯರಿಗೂ ಲಿಂಗಪೂಜಾಧಿಕಾರವನ್ನು ಕೊಟ್ಟವೆ. ಲಿಂಗಧಾರಿಗಳೆಲ್ಲರಿಗೂ ಲಿಂಗಾರ್ಚನ ನಿರತರಾಗಿರಬೇಕು.

'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್‍ಂ ಸಮಾಃ
ಏವಂತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ !

ಈ ಜಗದ ಈ ಬಾಳಿನಲ್ಲಿ ಈ ಸಂಸ್ಕಾರಿತ ಜೀವನದಲ್ಲಿ ತ್ರಿವಿಧಾರ್ಚನ ರೂಪಕ್ರಿಯೆಗಳಲ್ಲಿ ನಿರತರಾಗಿ ನೂರು ವರುಷ ಬಾಳಬೇಕು. ಹೀಗೆ ಸ್ವಾರ್ಥ ರಹಿತ ಸತ್ಯಶುದ್ಧ ಕಾಯಕ ಮತ್ತು ಪೂಜಾಕ್ರಿಯೆಗಳಲ್ಲಿದ್ದರೆ ಕರ್ಮ ಲೇಪವಿಲ್ಲ. ಈ ಕ್ರಿಯಾ ಮಾರ್ಗವನ್ನು ಬಿಟ್ಟು ಬೇರೆ ಉದ್ಧಾರವಾಗುವ ಮಾರ್ಗವೇ ಇಲ್ಲ ಎಂದು ಈಶಾವಾಸ್ಯವು ಹೇಳಿದೆ.

ಅನಾಚಾರವನ್ನು ಓಡಿಸಲು ಅತ್ಯುತ್ತಮ ಉಪಾಯ ಅರ್ಚನೆ. ಕಾಯದ ಕ್ರಿಯಾಜ್ಯೋತಿ ಅರ್ಚನೆ. ಕರಕಂಜದ ಕುಂಜ, ವರಪುಣ್ಯದ ಪುಂಜ ಲಿಂಗಪೂಜೆ. ಪರಿಶುದ್ಧವಾದ ಪ್ರಾಮಾಣಿಕವಾದ ಜೀವನದ ಅಡಿಗಲ್ಲು;

ಅರ್ಚನೆ. ದೈವೀ ಕ್ರಿಯಾಲತೆಯ ಅಂಕುರಾರ್ಪಣ ಅರ್ಚನ. ನಿದ್ದೆಯಿಂದ ಎದ್ದೊಡನೆ ಶೌಚವಿಧಿಯನ್ನು ತೀರಿಸಿಕೊಂಡು ಸ್ನಾನ ಮಾಡಿ ಶುಚಿರ್ಭೂತನಾಗಿ ನಿಶ್ಚಿಂತನಾಗಿ ಲಿಂಗಾರ್ಚನೆಯನ್ನು ಮಾಡಿಕೊಂಡು ನಿರ್ಮಲನಾಗಿ ನಿತ್ಯದ ಕಾಯಕಕ್ಕೆ ತೊಡಗುವ ಬಾಳಿಗಿಂತ ಬೇರೆ ಬೆಳು ಬಾಳಿಲ್ಲ ; ಬದುಕಿಗಿಂತ ಬೇರೆ ಬಗೆದುಂಬುವ ಬದುಕಿಲ್ಲ.

'ಆಗಮೋಕ್ತ ಮಾರ್ಗೇಣ ಗುರುಣಾ ದತ್ತಮಿಷ್ಟಕಮ್
ಲಿಂಗಂ ಸಂಪೂಜಯೇದ್ಯಸ್ತು ಕೃತಕೃತ್ಯೋ ಭವೇತ್ಪುಮಾನ್ '
ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ
ಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ ಸಂಪೂಜಯೇತ್ಯಂಗ ಸ
ವೀರಶೈವಃ'

ವೀರಶೈವನಾದ ಬಳಿಕ ವೀರವ್ರತಿಯಾದ ಬಳಿಕ ನಿಜೇಷ್ಟಲಿಂಗವನ್ನು ನಿಜಹಸ್ತ ಪೀಠದಲ್ಲಿರಿಸಿ ನಿಶ್ಚಲನಾಗಿ ನಿಸ್ಪೃಹನಾಗಿ ಪೂಜಿಸಿ ಕೃತಕೃತ್ಯನಾಗಬೇಕೆಂದು ಸ್ಕಾಂದ ಪುರಾಣ ಪ್ರಮಾಣವಿದೆ.

'ಲಿಂಗಸ್ಯ ನಿತ್ಯಪೂಜಾಯಾಂ ಕರಪಂಕಜಮಾದಿತಃ ।
ಸ್ವವಾಮಹಸ್ತಂ ದೇವೇಶಿ ವಿಭಾವ್ಯ ಕಮಲಾಕೃತಿಮ್ ॥
ಲಿಂಗಂ ತತ್ಕರ್ಣಿಕಾಮಧ್ಯೇ ಪ್ರತಿಷ್ಠಾಪ್ಯರ್ಚಯೇತ್ಸದಾ ।
ತದೇತತ್ಕರಪೀಠಾಖ್ಯಂ ಚತುರ್ವರ್ಗಫಲ ಪ್ರದಮ್ ॥ '

ಇಷ್ಟಲಿಂಗಕ್ಕೆ ವಾಮಹಸ್ತವೇ ಪೀಠವಾಗಿರಬೇಕೆಂದು ಅಂಗೈಮಧ್ಯದಲ್ಲಿಟ್ಟು ಪೂಜಿಸಬೇಕೆಂದು ಪಾರಮೇಶ್ವರಾಗಮವು ಪರಮ ಪ್ರಮಾಣವಾಗಿ ಹೇಳಿದೆ.

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ

ಲಿಂಗಧಾರಣವು ಇಂದಿನದಲ್ಲ, ನಿನ್ನಿನದಲ್ಲ; ಬಹುಪುರಾತನದ್ದು. ಸೃಷ್ಟಿಯ ಆದಿಯಿಂದಲೂ ಇಷ್ಟಲಿಂಗಧಾರಣವು ಬಳಕೆಯಲ್ಲಿ ಬಂದಿದೆ. ಆದಿ ಕಾಲದ ಆ ಮಹಾಪುರುಷರೂ ಸ್ತ್ರೀಯರೂ ಇಷ್ಟಲಿಂಗವನ್ನು ಧರಿಸುತ್ತಿದ್ದರು. ಬ್ರಹ್ಮ ವಿಷ್ಣು ಮುಂತಾದ ದೇವತೆಗಳು ಗೌತಮ ಕಾಶ್ಯಪಾದಿ ಮುನಿಗಳೂ ತಂತಮ್ಮ ಮಸ್ತಕಗಳಲ್ಲಿ ಲಿಂಗಧಾರಿಗಳಾಗಿದ್ದರು.

'ಉರಃಸ್ಥಲೇ ಹರಿರ್ಲಿಂಗಂ ಧೃತ್ವಾ ಮೂರ್ಧ್ನಿ ಪಿತಾಮಹಃ
ಲಿಂಗಸ್ಥಂ ಮಾಂ ಸಮಾರಾಧ್ಯ ಸ್ವಂ ಸ್ವಂ ಪದಮವಾಪತುಃ ।
ಮಲ್ಲಿಂಗಂ ಮಸ್ತಕಾನ್ಯಂಗೇ ಧೃತ್ವಾ ಶಕ್ರಪುರೋಗಮಾಃ
ದೇವಾ ಮಾಂ ಲಿಂಗಮಧ್ಯಸ್ಥಂ ಪೂಜ್ಯಂ ಸ್ವಂ ಸ್ವಂ ಪದಂ ಯಯುಃ ।

— ಶಂಕರ ಸಂಹಿತೆ

'ಬ್ರಹ್ಮಾ ಪೂಜಯತೇ ನಿತ್ಯಂ ಲಿಂಗಂ ಶೈಲಮಯಂ ಶುಭಮ್
ತಸ್ಯ ಸಂಪೂಜನಾದೇವ ಪ್ರಾಪ್ತಂ ಬ್ರಹ್ಮತ್ವಮುತ್ತಮಮ್ ।
ಶಕ್ರೋಪಿ ದೇವರಾಜೇಂದ್ರೋ ಲಿಂಗಂ ಮಣಿಮಯಂ ಶುಭಮ್
ಭಕ್ತ್ಯಾ ಪೂಜಯತೇ ನಿತ್ಯಂ ತೇನ ಶಕ್ರತ್ವಮಾಪ್ತವಾನ್ ।

— ಆದಿತ್ಯ ಪುರಾಣ

'ರೌದ್ರಂ ಲಿಂಗಂ ಮಹಾವಿಷ್ಣು ರ್ಭಕ್ತ್ಯಾ ಶುದ್ಧಂ ಶಿಲಾಮಯಮ್
ಚಾರು ಚಿತ್ರಂ ಸಮಭ್ಯರ್ಚ್ಯ ಲಬ್ಧವಾನುತ್ತಮಂ ಪದಮ್ ।'

— ಪದ್ಮ ಪುರಾಣ

'ಬ್ರಹ್ಮಣಃ ಸೃಷ್ಟಿಕರ್ತೃತ್ವಂ ವಿಷ್ಣೋರ್ದಾನವ ಮರ್ದನಮ್
ಸ್ವರ್ಗಾಧಿ ಪತ್ಯಮಿಂದ್ರಸ್ಯ ಶಿವಲಿಂಗಸ್ಯ ಪೂಜನಾತ್ ।'

— ಕೂರ್ಮ ಪುರಾಣ

ಲಕ್ಷ್ಮ್ಯಾದಿಶಕ್ತಯಃ ಸರ್ವಾಃ ಶಿವಭಾವವಿಭಾವಿ ತಾಃ
ಧಾರಯಂ ತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಮ್ ॥

ಪುರುಷರು ಮಾತ್ರವಲ್ಲ, ಸ್ತ್ರೀಯರೂ ಶಿವಲಿಂಗಧಾರಿಗಳಾಗಿದ್ದರು. ಲಿಂಗಧರ್ಮಕ್ಕೆ ಲಿಂಗಭೇದವಿಲ್ಲ. ಚೈತನ್ಯಕ್ಕೆ ಹೆಣ್ಣುಗಂಡೆಂಬ ಕವಲುಂಟೆ ? ಆತ್ಮೋದ್ಧಾರಕ್ಕೆ ಸ್ತ್ರೀಯರೂ ಅರ್ಹರು. ಅಂತೆಯೇ ಆತ್ಮೋಪಾಸನೆಯಲ್ಲಿ ಅವರಿಗೂ ಲಿಂಗವಂತಿಕೆಯಲ್ಲಿ ಸ್ಥಾನವಿದೆ. ಈ ಸಾಮ್ಯತತ್ವವನ್ನು ಅನುಸರಿಸಿ ಲಕ್ಷ್ಮೀ ಸರಸ್ವತಿ ಪಾರ್ವತಿಯರು ಲಿಂಗಧಾರಿಗಳಾಗಿದ್ದರು. ಸ್ತ್ರೀಯರಿಗೆಲ್ಲ ಆದರ್ಶರಾಗಿದ್ದರು. ತಮ್ಮ ಉತ್ತಮಾಂಗದಲ್ಲಿ ಸದ್ರೂಪ ಇಷ್ಟಲಿಂಗವನ್ನು

ಧರಿಸಿದ್ದರು.

'ಲಕ್ಷ್ಮೀ ಸರಸ್ವತೀ ಮುಖ್ಯಾ ದೇವ್ಯೋ ಮಲ್ಲಿಂಗಮಾದರಾತ್
ಧೃತ್ವಾನಿಜಾಂಗೇ ತಲ್ಲೀನಭಾವಾ ಜಗ್ಮುಃ ಪರಂ ಸುಖಮ್ |'

—ಶಂಕರಸಂಹಿತೆ.

'ಗಂಡ ಶಿವಲಿಂಗದೇವರ ಭಕ್ತ, ಹೆಂಡತಿ ಮಾರಿಮಸಣೆಯ ಭಕ್ತೆ ; ಗಂಡಕೊಂಬುದು ಪಾದೋದಕಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ ; ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ; ಕೂಡಲಸಂಗಮದೇವಾ !'—ಬಸವಣ್ಣ.

'ಸತಿ ಪತಿಯೊಂದಾದ ಭಕ್ತಿ ಹಿತವಪ್ಪುದು ಶಿವಂಗೆ !
ಸತಿಪತಿಗಳೊಂದಾಗದ ಭಕ್ತಿ ಅಮೃತದೊಳಗೆ ವಿಷಬೆರತಂತೆ
ರಾಮನಾಥ' —ದೇವರದಾಸಮಯ್ಯ.

ಈ ಪುರಾಣ ಮತ್ತು ವಚನಗಳು ಶ್ರೀರೇಣುಕ ದೇಶಿಕೋತ್ತಮನ ಸಾಮ್ಯಸಂದೇಶವನ್ನೇ ಬೀರಿವೆ.

'ಅದೀಕ್ಷಾ ऽ ಸಂಸ್ಕೃತಾ ನಾರೀ ದೀಕ್ಷಿತಸ್ಯ ನಿಜೇಶಿತುಃ |
ನ ಯೋಗ್ಯ ಪರಿಚರ್ಯಾಯೈ ದೀಕ್ಷಣೀಯಾ ಸತೀ ತತಃ ||
ಐಹಿಕೇಷ್ವಪಿ ಮೋಕ್ಷಾರ್ಥೇ ನ ಸ್ವಾತಂತ್ರ್ಯಂ ವಿಹನ್ಯತೇ |
ತಸ್ಮಾದವಶ್ಯಂ ನಾರೀಣಾಂ ದೀಕ್ಷಾ ದೇಯಾ ಬುಧೋತ್ತಮೈಃ ||'

—ಕಾರಣಾಗಮ, ಪಟಲ-೨

**"ವೇದ ಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ |"**

ನಿಗಮಗಳಲ್ಲಿ ಉಪನಿಷತ್ತುಗಳಲ್ಲಿ ಪುರಾಣಗಳಲ್ಲಿ ಕಾಮಿಕಾದಿ ಆಗಮಗಳಲ್ಲಿ ವೀರಶೈವನಿಗೆ ಲಿಂಗಧಾರಣವು ನಿಶ್ಚಯವಾಗಿ ನಿರ್ದೇಶಿತವಾಗಿದೆ.

"ಋಗಿತ್ಯಾಹ 'ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ
ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾ ಮಯಮ್ |"

19

ಋಗ್ವೇದ ಹೀಗೆ ಹೇಳಿದೆ : 'ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ । ಪ್ರಭ ಗಾರ್ತ್ರಾಣಿ ಪರ್ಯೇಷಿ ವಿಶ್ವತಃ । ' ಇದು ಋಗ್ವೇದ ಮಂತ್ರ. ಇದರಲ್ಲಿ ಲಿಂಗಧಾರಣವು ಉಕ್ತವಾಗಿದೆ. ಇದರ ಅರ್ಥವು ಹೀಗಿದೆ :

"ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ
ಪವಿತ್ರಂ ತದ್ಧಿ ನಿಖ್ಯಾತಂ ತತ್ಸಂಪರ್ಕಾತ್ತನುಃ ಶುಚಿ ಃ । "

ಶ್ರೀ ಜಗದ್ಗುರು ರೇಣುಕದೇಶಿಕೋತ್ತಮರೇ ಅರ್ಥಮಂತ್ರಕ್ಕೆ ಈ ಅರ್ಥವನ್ನು ಅಪ್ಪಣೆ ಕೊಡಿಸಿದ್ದಾರೆ.

ಬ್ರಹ್ಮವೆಂದರೆ ಲಿಂಗ. ಆ ಲಿಂಗಕ್ಕೆ ಒಡೆಯು ಪರಶಿವ. ಆತನ ಸ್ವರೂಪು ಪವಿತ್ರವಾದುದು. ಇಷ್ಟ ಪ್ರಾಣ ಭಾವ–ಲಿಂಗರೂಪದಲ್ಲಿಯೂ ಆಚಾರಾದಿ ಆರುಲಿಂಗಗಳ ರೂಪದಲ್ಲಿಯೂ ವಿಸ್ತಾರವಾದುದು. ಪ್ರಭು ಮತ್ತು ವಿಭುವಾದ ಆ ಲಿಂಗರೂಪ ಪರಶಿವನು ಎಲ್ಲ ಅಂಗಾಗಗಳನ್ನು ನವ ಲಿಂಗಗಳಾಗಿ ವ್ಯಾಪಿಸಿಕೊಂಡಿರುವನು. ಅಂದರೆ ಧಾರಣರೂಪದಿಂದ ಧ್ಯಾನ–ಸಂಧಾನ ರೂಪದಿಂದ ತ್ರಿವಿಧಾಂಗಗಳಲ್ಲಿ ವಾಸವಾಗಿರುವನು. ಅದರಿಂದಾಗಿ ತನು ಶುದ್ಧವಾಗಿರುವುದು. ಲಿಂಗಸಂಗ ಸನ್ನಿಹಿತವಾಗಿರುವುದು.

"ಅತಪ್ತ ತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ ।"

ಅದೇ ಋಗ್ವೇದ ಮಂತ್ರದ ಮೂರನೆಯ ಪಾದಕ್ಕೆ ಅರ್ಥವನ್ನು ಈ ಶ್ಲೋಕದಲ್ಲಿ ಸ್ಫುಟವಾಗಿ ನಿರೂಪಿಸಿದ್ದಾರೆ. 'ಅತಪ್ತತನುರ್ನ ತದಾಮೋ ಅಶ್ನುತೇ ' ಇದು ಋಗ್ವೇದದ 'ಪವಿತ್ರಂ ತೇ, ಮಂತ್ರದ ಮೂರನೆಯ ಪಾದ. ಅತಪ್ತತನುಃ ತ್ರಿವಿಧ ದೀಕ್ಷಾಸಂಸ್ಕಾರ ತೇಜದಿಂದ ಪಕ್ವವಾಗದ ಪರಶಿವ ಜ್ಞಾನವನ್ನು ಪಡೆಯದ ಆಮಃ ಕ್ರಿಯಾಸಂಸ್ಕಾರವಿಲ್ಲದ ಮಾನವನು ನ ತದಶ್ನುತೇ ಆ ಪರಶಿವ ರೂಪ ಲಿಂಗವನ್ನು ಪಡೆಯನು. ಸಾಕ್ಷಾನ್ನಾಪ್ನುಯಾತ್ ಅಂದರೆ ಇಷ್ಟಲಿಂಗ ಧಾರಣಕ್ಕೂ ಯೋಗ್ಯನಾಗನು. ಇನ್ನುಳಿದುದು 'ಶ್ರುತಾಸ ಇದ್ವಹಂ ತಸ್ತತ್ಸಮಾಶತ ' ಎಂಬೀ ನಾಲ್ಕನೆಯ ಚರಣ.

'ಇದ್ವಹಂತಃ '-ಶೀಕ್ಷಾದೀಕ್ಷೆಯಿಂದ ಶಿವಜ್ಞಾನವನ್ನು ಪಡೆದವರು, 'ಶ್ರುತಾಸ'-ಮಂತ್ರೋಪದೇಶವನ್ನು ಪಡೆದವರಾಗಿ 'ತತ್ಸಮಾಶತ'—ಆ ಇಷ್ಟ ಲಿಂಗವನ್ನು ಪಡೆವರು.

"ಅಘೋರಾऽಪಾಪಕಾಶೀತಿ ಯಾತೇ ರುದ್ರಶಿವಾ ತನೂಃ
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋ
ಘವರ್ಜಿತಃ"

ಋಗ್ವೇದ ಮಂತ್ರದಿಂದ ಇಷ್ಟಲಿಂಗಧಾರಣವನ್ನು ಸಮರ್ಥಿಸಿ ಈ ಮಂತ್ರದಿಂದ ಯಜುರ್ವೇದೀಯ ರುದ್ರಾನುವಾಕದಿಂದ ಲಿಂಗಧಾರಣ ಪರವಾಗಿ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿದ್ದಾರೆ. ಆ ಯಜುರ್ವೇದೀಯ ಮಂತ್ರದ ಪೂರ್ಣ ಪಾಠವು ಹೀಗಿದೆ :

'ಯಾ ತೇ ರುದ್ರ ಶಿವಾತನೂರಘೋರಾ ऽ ಪಾಪಕಾಶಿನೀ ತಯಾನಸ್ತನು ವಾ ಶಂತಮಯಾ ಗಿರಿಶಂತಾ ऽ ಭಿಚಾಕಶೀಹಿ |'

ದುಃಖವನ್ನು ದೂರ ಮಾಡುವನಾದಕಾರಣ ರುದ್ರನೆಂಬ ನಾಮವುಳ್ಳ ಶಿವನೇ, ನಿನ್ನ ತನು ಮಂಗಲಮಯುವಾದುದು, ಶಾಂತವಾದುದು; ಪುಣ್ಯದಿಂದ ಪ್ರಕಾಶಿಸುವಂತಹದು ಮತ್ತು ಪುಣ್ಯವಂತರಲ್ಲಿ ಪ್ರಕಟವಾಗುವಂತಹದು. ಸುಖಪ್ರದವಾದುದು, ಸೂಕ್ಷ್ಮವಾದುದು; ಮಂತ್ರಮಯುವಾದುದು. ಆ ನಿನ್ನ ಲಿಂಗರೂಪದಿಂದ ನಮ್ಮ ಶರೀರಗಳಲ್ಲಿ ಶೋಭಿಸುವವನಾಗು. ಮಲಗಳ ಕಳೆದು ಮಂಗಲವ ಬೀರುವವನಾಗು.

'ಭ್ರುವೋರ್ಮಧ್ಯೇ ಮಹಾರೂಪಂ ನಿಷ್ಕಲಾಖ್ಯಂ ಲಿಂಗಂ ಸ್ಥಿತಂ'
—ಸಾಮವೇದೀಯಶ್ರುತಿ

'ವಾಲಾಗ್ರಮಾತ್ರಂ ಹೃದಯಸ್ಯ ಮಧ್ಯೇ ವಿಶ್ವೇದೇವಂ
ಜಾತವೇದಂ ವರೇಣ್ಯಮ್ ' —ಅಥರ್ವ ಶಿರಸ್ಸು

'ವಾಯುರನಿಲಮಮೃತ ಮಥೇದಂ ಭಸ್ಮಾಂತಗ್‌ಂ ಶರೀರಮ್
ಓಂ ಕ್ರತೋಸ್ಮರ ಕೃತಗ್‌ಂಸ್ಮರ ಕ್ರತೋಸ್ಮರ ಕೃತಂಗ್‌ಂಸ್ಮರ |'

ವಾಯುಃ ಪ್ರಾಣವು ಅಮೃತಃ—ಅಚ್ಚಳಿಯದ, ಅನಿಲಂ ಪ್ರಾಣ ಲಿಂಗವನ್ನು ಪ್ರವಿಶತು ಪ್ರವೇಶಿಸಲಿ ಅಂದರೆ ಪ್ರಾಣಲಿಂಗ ಸ್ವರೂಪ

ವಾಗಲಿ. ಇದಂ ಶರೀರಂ ಈ ತ್ಯಾಗಾಂಗವು ಭಸ್ಮಾಂತರ್ಗ್ಂ ಭವತು ಸಂಸ್ಕಾರಾಗ್ನಿಯಿಂದ ದಗ್ಧವಾಗಿ ಸಂಸ್ಕಾರಾಂತ್ಯದಲ್ಲಿ ಶ್ರೀಗುರು ಕರುಣಿಸುವ ಕರದಿಷ್ಟ ಲಿಂಗವುಳ್ಳದ್ದಾಗಲಿ. ಪ್ರಣವಜಪಾನ-ಷ್ಠಾನವನ್ನು ಸ್ಮರಿಸು ; ಆ ಪ್ರಣವ ಜಪಸ್ವರೂಪವಾದ ಪ್ರಾಣಲಿಂಗವನ್ನು ಸ್ಮರಿಸು. ಅಂತೆಯೆ ಆ ಜಪಾನುಷ್ಠಾನಕ್ಕೆ ಬೇಕಾದ ಅರ್ಚನಕ್ರಿಯೆಯನ್ನು ಕ್ರಿಯಾಮೂರ್ತಿಯಾದ ಇಷ್ಟ ಲಿಂಗವನ್ನು ಧರಿಸು. ಎಂಬುದಾಗಿ ಯಜುರ್ವೇದೀಯ ಈಶಾವಾಸ್ಯೋಪನಿಷತ್ತು ಪ್ರಾಣಲಿಂಗ-ಇಷ್ಟಲಿಂಗ ಧ್ಯಾನಧಾರಣಗಳನ್ನು ವಿಧಿಸಿದೆ. ಇನ್ನು ಸಾಮವೇದೀಯ ಕೇನೋಪನಿಷತ್ತಿನಲ್ಲಿ ಕಾಣೋಣ.

'ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ। ಭೂತೇಷು ಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಸ್ಮಾಲ್ಲೋಕಾದಮೃತಾ ಭವಂತಿ ॥'

ತಸ್ಮಾದ್ವಾ ಎತೇ ದೇವಾ ಅತಿತರಾವಿವಾನ್ಯಾನ್ ದೇವಾನ್ ಯದಗ್ನಿರ್ವಾ ಯುರಿಂದ್ರಸ್ತೇ ಹ್ಯೇನನ್ನೇದಿಷ್ಟಂ ಪಸ್ಪೃಶುಸ್ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ। —ಕೇನೋಪನಿಷತ್

ಅಥ ಶ್ರೀ ಗುರುವಿನಿಂದ ನಿಜಸ್ವರೂಪ ರೂಪ ಪ್ರತಿಬೋಧವಾದ ಬಳಿಕ ಇಹ ಈ ಸುಸಂಸ್ಕೃತ ಮಾನವ ಶರೀರದಲ್ಲಿಯೇ ಅವೇದೀತ್ ಆ ಪರಶಿವ ರೂಪ ಚಿತ್ಕಳೆಯನ್ನು ತಿಳಿಯಬೇಕು. ಸತ್ಯಮಸ್ತಿ-ಅದು ಸತ್ಯವಾಗಿದೆ. ನ ಚೇತ್ ಇಹ ಅವೇದಿತ್ ಇಲ್ಲಿಯೇ ತಿಳಿದುಕೊಳ್ಳದಿದ್ದರೆ ಮಹತೀ ವಿನಷ್ಟಿಃ ಮಹತ್ತರವಾದ ನಷ್ಟವಾಗುವುದು. ಧೀರಾಃ ಅಂಗಲಿಂಗಗಳ ಜ್ಞಾನವುಳ್ಳ ವೀರರು ಭೂತೇಷು ಭೂತೇಷು ವ್ಯಷ್ಟಿ ಸಮಷ್ಟಿರೂಪಾದ ಭೂತಾಂಗಗಳಲ್ಲಿ ವಿಚಿತ್ಯ ಲಿಂಗಗಳ ಸಾಕ್ಷಾತ್ಕಾರವನ್ನು ಪಡೆದು ಅಸ್ಮಾಲ್ಲೋಕಾತ್ ಈ ಐಂದ್ರಿಕ ಪ್ರಪಂಚದಿಂದ ಅಥವಾ ಈ ಭೌತಿಕ ಪ್ರಪಂಚದಿಂದ ಪ್ರೇತ್ಯ ಪಯಣವಾಗಿ ಅಂದರೆ ಪ್ರಾಕೃತಿಕ ಭಾವವನ್ನು ತೊರೆದು ಅಮೃತಾ ಭವಂತಿ ಅಮೃತತ್ವವನ್ನು ಪರಮಾರ್ಥತೆಯನ್ನು ಪಡೆವರು. ಇದಿಷ್ಟು ಮೊದಲ ಮಂತ್ರಾರ್ಥ.

ಮಾನವ ಜನ್ಮವು ಅತ್ಯಂತ ದುರ್ಲಭವಾದುದು. ಅಂತಹದು ದೊರೆತಿರುವಾಗ ಆ ಪರಮಾತ್ಮನ ಪ್ರಾಪ್ತಿಗಾಗಿ ಪ್ರಯತ್ನಿಸಬೇಕು. ಪಡೆದು ಕೃತಾರ್ಥರಾಗಬೇಕು. ಆ ಪರಮಾತ್ಮ ವಸ್ತುವು ತನ್ನ ಪ್ರತ್ಯಂಗದಲ್ಲಿಯೂ

ಪ್ರತಿಷ್ಠಿತವಾಗಿದೆ. ಪ್ರಪಂಚದಲ್ಲಿಯೂ ಪ್ರತಿಷ್ಠಿತವಾಗಿದೆ. ತನ್ನಲ್ಲಿರುವ ತತ್ತ್ವವನ್ನು ತನ್ನ ಶಕ್ತಿಪಾತ ಚಿನ್ಹೆಯಿಂದ ಶ್ರೀಗುರು ಕರುಣೆಯಿಂದ ಮೊದಲು ತ್ರಿವಿಧರೂಪಾಗಿ ತಿಳಿಯಬೇಕು. ಇದನ್ನೇ ಮುಂದಿನ ಮಂತ್ರದಲ್ಲಿ ಸ್ಪಷ್ಟ ಪಡಿಸಲಾಗಿದೆ.

ಬ್ರಹ್ಮಾಂಡದಲ್ಲಿರುವಂತೆ ಪಿಂಡಾಂಡದಲ್ಲಿಯೂ ಅದೆಷ್ಟೋ ಆತ್ಮರೆಂಬ ದೇವತೆಗಳಿರುವರು. ಶಿವಾದ್ವೈತದ ಪ್ರಕಾರ ನೂರೆಂಟು ಜನ ಆತ್ಮದೇವತೆ ಗಳಿರುವರು. ಅವರಲ್ಲಿ ವಿಶ್ವಾತ್ಮ ತೈಜಸಾತ್ಮ ಪ್ರಾಜ್ಞಾತ್ಮರೇ ಮುಖ್ಯರು. ಇವರನ್ನೆ ಈ ಕೇನೋಪನಿಷತ್ತು ಅಗ್ನಿ ವಾಯು ಇಂದ್ರ ಎಂದು ಪರಿಭಾಷೆ ಯಲ್ಲಿ ಹೇಳಿದೆ. ಅಗ್ನಿಗೆ ವೈಶ್ವಾನರ ಎಂದಿರುವಂತೆ ವಿಶ್ವಾತ್ಮನಿಗೂ ವೈಶ್ವಾನರ ಎಂದಿದೆ. ಅಲ್ಲದೆ ಅಂಗ (ಶರೀರ) ದಲ್ಲಿರುವವನೇ ಅಗ್ನಿ, ಅಂಗ ಅಗ್ನಿಗಳೆರಡೂ ಗತ್ಯರ್ಥಕ ಅಗಿ ಧಾತುವಿನಿಂದ ಹುಟ್ಟಿವೆ. ಇದರಿಂದಾಗಿ ಅಗ್ನಿ ಅಂದರೆ ವಿಶ್ವಾತ್ಮ ಅಥವಾ ತ್ಯಾಗಾಂಗ. ಇನ್ನು ವಾಯು ಅಂದರೆ ಪ್ರಾಣಾತ್ಮ ಅಥವಾ ತೈಜಸಾತ್ಮ. ಅಗ್ನಿಜನಕ ವಾಯು. ಆದ್ದರಿಂದ ಆತ ತೈಜಸನೆನಿಸಿ ದ್ದಾನೆ. ಪ್ರಾಣಾಂಗನೆನಿಸಿದ್ದಾನೆ. ಅಂತೆಯೇ ಭೋಗಾಂಗನೂ ಆಗಿದಾನೆ. ಮೂರನೆಯದಾಗಿ ಯೋಗಾಂಗನಾದ ಪ್ರಜ್ಞಾತ್ಮನಿಗೆ ಇಂದ್ರನೆಂದು ಹೆಸರು. ಪರಮೈಶ್ವರ್ಯ ಎಂಬ ಅರ್ಥವುಳ್ಳ ಇದಿ ಧಾತುವಿನಿಂದ ಇಂದ್ರ ಎಂದಾಗಿದೆ. ಬಹಿರಂತರ ಎಲ್ಲ ಇಂದ್ರಿಯಗಳಿಗೂ ಪ್ರಾಜ್ಞಾತ್ಮನು ಒಡೆಯನು. ಆತನು ಪರಮಾತ್ಮನಿಗೆ ಸನ್ನಿಹಿತನು. ಆ ಪರಮೈಶ್ವರ್ಯ ಯೋಗವುಳ್ಳವನು. 'ಇಂದ್ರಃ ಶಕ್ರಾದಿತ್ಯ ಭೇದ ಯೋಗ ಭೇದಾಂತರಾತ್ಮಸು' ಎಂದು ಕೋಶಾರ್ಥ ಗಳಿವೆ. ಯೋಗ ಭೇದಕ್ಕು ಅರ್ಥವಿರುವುದರಿಂದ ಯೋಗಾಂಗನೆನಿಸಿದ್ದಾನೆ. ಅಂತರಂಗದಲ್ಲಿರುವ ಆತ್ಮನೆಂದು ಅರ್ಥವೂ ಇರುತ್ತದೆ. '....ತಮಿದಂದ್ರಂ ಸಂತಮಿಂದ್ರಂ ಇತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷ ಪ್ರಿಯಾ ಇವಹಿದೇವಾಃ' ಎಂಬುದಾಗಿ ಐತರೇಯೋಪನಿಷತ್ತು ಸಾಕ್ಷಿ ನುಡಿದಿದೆ. ಸಾಕ್ಷಿಯಾದ ಪ್ರತ್ಯ ಗಾತ್ಮನನ್ನು ಇಂದ್ರನೆಂದು ಹೇಳಿ, ಆ ಇಂದ್ರನನ್ನೆ ಇಂದ್ರನೆಂದು ಪರೋಕ್ಷವಾಗಿ ಕರೆಯುತ್ತಾರೆ. ಇವೆಲ್ಲ ಕಾರಣಗಳಿಂದ ಕೇನಶ್ರುತಿಯಲ್ಲಿ ಬರುವ ಅಗ್ನಿ ವಾಯು ಇಂದ್ರರೆಂದರೆ ತ್ಯಾಗಾಂಗ,ಭೋಗಾಂಗ, ಯೋಗಾಂಗರು. ಇವರೇ ಮುಮ್ಮೊ ದಲು ಶಕ್ತಿಪಾತ ಸಹಾಯದಿಂದ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳನ್ನು

ಕ್ರಮವಾಗಿ ಚೆನ್ನಾಗಿ ಗುರುಕರುಣೆಯಿಂದ ಸ್ಪರ್ಶಿಸಿದರು; ತಿಳಿದುಕೊಂಡರು. ಹೀಗೆ ಕೈ ಮನಭಾವಗಳು ಮುಟ್ಟಿ ಮನವರಿಕೆ ಮಾಡಿಕೊಳ್ಳುವುದೇ ನಿಜವಾದ ಉಪನಿಷತ್ ಶಬ್ದಾರ್ಥ. ಇದನರಿವುದೇ ಪರಮಾರ್ಥ.

ಮುಂದಿನ ಮೂರು ಶ್ಲೋಕಗಳಲ್ಲಿ ಇಷ್ಟೂ ಸ್ಪಷ್ಟಗೊಳಿಸಿದೆ ಕೇನೋಪನಿಷತ್ತು. ಇಂದ್ರನಾಮಕ ಯೋಗಾಂಗವೇ ಹೆಚ್ಚಿನವನು. ಅವನಿಗೆ ಮೊದಲಿಗೇನೆ ಅತ್ಯಂತ ಸನ್ನಿಹಿತವಾದ ಪರಶಿವರೂಪ ಬ್ರಹ್ಮದ ಸಂಸ್ಪರ್ಶವಾಯಿತು; ಮೊದಲಿಗೇನೆ ಅರಿತು ಅನುಭವಿಸಿದನು. ಇದನ್ನೇ ಸನ್ನಿಹಿತ ಸಂಸ್ಕಾರವೆಂದು ಶಿವಾದ್ವೈತವು ಹೇಳುತ್ತದೆ.

'ತಸ್ಯೈಷ ಆದೇಶಃ ಯದೇತದ್ವಿದ್ಯುತೋ ವ್ಯದ್ಯುತದಾ ಇತೀತಿ
ನ್ಯಮೀಮಿಷದಾ ಇತ್ಯಧಿ ದೈವತಮ್'

ಇದು ಆ ಮೋಕ್ಷ ಗುರುವಿನ ಆದೇಶ; ನಿರ್ದೇಶಾತ್ಮಕ ಉಪದೇಶ: ಅದು ಆ ನಿಷ್ಕಲ ತತ್ತ್ವವು ವಿದ್ಯುಲ್ಲತೆಯಂತೆ ಪ್ರಭೆಯುಳ್ಳುದಾಗಿದೆ. ಅದು ಆ ಜ್ಞಾನ ನೇತ್ರಕ್ಕೆ ಗೋಚರಿಸುವುದು. ಓ ಶಿಷ್ಯನೇ ಇದು ನಿನಗೆ ಅಧಿದೈವತೆಯ ಉಪದೇಶ. ಅಂದರೆ ವೇಧಾದೀಕ್ಷೆ. ನಿರಾಕಾರವಾದ ಆ ವಸ್ತು ನಿನ್ನ ಅನುಭವಕ್ಕೆ ಸದ್ರೂಪವಾಗಿ ಗೋಚರಿಸುತ್ತದೆ.

'ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇನ
ಚೈತದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ' —ಕೇನಶ್ರುತಿ

ಬಳಿಕ ಆಧ್ಯಾತ್ಮಿಕರೂಪ ಮಂತ್ರೋಪದೇಶವು ಅನುಗ್ರಹಿಸಲ್ಪಡುತ್ತದೆ. ಇದರಿಂದ ಶಿಷ್ಯನೇ ನಿನ್ನ ಮನಸ್ಸು ಚಿಲ್ಲಿಂಗದ ಸಮೀಪಕ್ಕೆ ಹೋಗುತ್ತದೆ; ಹೋದಂತೆ ನಿನಗೆ ಅರಿಕೆಯಾಗುತ್ತದೆ. ಅರಿತು ಆ ಪ್ರಾಣಲಿಂಗವನ್ನು ನಿನ್ನ ಮನಸ್ಸು ನಿರಂತರ ನಿರತಿಶಯ ಪ್ರೇಮದಿಂದ ಸ್ವಾಯತ್ತವಾಗಿ ಸ್ಮರಿಸುತ್ತದೆ. ಅಂದರೆ ಧ್ಯಾನಿಸುತ್ತದೆ. ಇದರಿಂದಾಗಿ ಆ ಚಿಲ್ಲಿಂಗದ ಸಾಕ್ಷಾತ್ಕಾರಕ್ಕಾಗಿ ಉತ್ಕಟ ಅಭಿಲಾಷೆಯುಂಟಾಗುತ್ತದೆ. ಇದೇ ಸತ್ಯ ಸಂಕಲ್ಪ ಅಂದರೆ ಉಪದೇಶಿಸಿದ ಮಂತ್ರದಲ್ಲಿ ಮನ ತಲ್ಲೀನವಾಗಲು ತವಕಗೊಳ್ಳುತ್ತದೆ. ಇದೇ ಆಧ್ಯಾತ್ಮಿಕರೂಪ ಮಂತ್ರೋಪದೇಶ.

ಸಾಕಾರ ನಿರಾಕಾರ ರೂಪ ಪ್ರಾಣಲಿಂಗದ ಸ್ವರೂಪವು ಮಂತ್ರ ದೀಕ್ಷೆಯಿಂದ ಮನಕ್ಕೆ ಗಮ್ಯವಾಗುತ್ತದೆ. ಮನದ ವಿಕಲ್ಪ ವೃತ್ತಿಯಳಿಯುತ್ತದೆ. ವಿಸ್ಮೃತಿ ನಷ್ಟವಾಗುತ್ತದೆ ಪರಮ ಪ್ರೇಮ ಪ್ರಾಪ್ತವಾಗುತ್ತದೆ ವಿಸ್ಮೃತಿಯಳಿದು ಪ್ರೀತಿಯುಳಿದಲ್ಲಿ ದುಃಖವಿರುವುದಿಲ್ಲ. 'ತದ್ವಿಸ್ಮರಣೇ ಪರಮ ವ್ಯಾಕುಲತಾ' ಎಂದು ನಾರದರು ತಮ್ಮ ಭಕ್ತಿ ಸೂತ್ರದಲ್ಲಿ ವ್ಯಾಕುಲಕ್ಕೆ ಕಾರಣ ವಿಸ್ಮೃತಿಯೆಂದು ಹೇಳಿದ್ದಾರೆ. ಕೊನೆಯದಾಗಿ ಕ್ರಿಯಾದೀಕ್ಷೆಯ ಲಕ್ಷಣವನ್ನು ಮುಂದಿನ ಮಂತ್ರದಲ್ಲಿ ನಿರೂಪಿಸಲಾಗಿದೆ.

> 'ತದ್ಧ ತದ್ವನಂ ನಾಮ ತದ್ವನಮಿತ್ಯು ಪಾಸಿತವ್ಯಂ ಸ
> ಯ ಏತದೇವಂ ವೇದಾಽಭಿ ಹೈನಂ ಸರ್ವಾಣಿ ಭೂತಾನಿ
> ಸಂವಾಂಛಂತಿ ।'

ಆ ಪರಶಿವನು ಆನಂದಘನನಾಗಿದ್ದಾನೆ. ಆ ಆನಂದಸ್ವರೂಪವೇ ಇಷ್ಟಲಿಂಗವಾಗಿ ಗುರುಕರುಣೆಯಿಂದ ಕರಕಂಜಕ್ಕೆ ಬಂದಿದೆ. ಆನಂದ ಘನವಾದ ವಸ್ತುವಿಗೆ 'ತದ್ವನ' ವೆಂದು ಪ್ರಸಿದ್ಧವಾಗಿದೆ ; ಸರ್ವೇಂದ್ರಿಯಗಳಿಗೂ ಸರ್ವಭೂತಗಳಿಗೂ ಉಪಾಸ್ಯವಾಗಿದೆ. ಆನಂದ ಸ್ವರೂಪವಾಗಿ ಅಖಿಲ ಜೀವಿಗಳಿಗೆ ಅಪೇಕ್ಷಿತವಾಗಿದೆ. ಅರಿಯಲು ಅನುಕೂಲವಾಗಿದೆ ; ಅರ್ಚಿಸಲು ಅನುಗೊಳ್ಳುವಂತೆ ಎಸಗುತ್ತದೆ. ಸರ್ವರಿಗೂ ಬೇಕಾದುದು ಆ ಆನಂದ. ಅದನ್ನೇ ಗುರುದೇವನು ಉರುಕರುಣೆಯಿಂದ ಕರಕ್ಕೆ ಕರುಣಿಸುತ್ತಾನೆ. ಅದನ್ನು ಇಷ್ಟಲಿಂಗವೆಂಬ ಹೆಸರಿನಿಂದ ಅನುಗ್ರಹಿಸುತ್ತಾನೆ. ಅದರ ಧಾರಣ ಅರ್ಚನ ದರ್ಶನ ಈಳನಗಳಿಂದ ಧನ್ಯರಾಗುತ್ತೇವೆ ; ಪುಣ್ಯರಾಗುತ್ತೇವೆ. ಪರಮಾನಂದಭರಿತರಾಗುತ್ತೇವೆ.

> ತಸ್ಯೈ ತಪೋದಮಃ ಕರ್ಮೇತಿ ಪ್ರತಿಷ್ಠಾ ವೇದಾಃ
> ಸರ್ವಾಂಗಾನಿ ಸತ್ಯಮಾಯತನಮ್ । ಯೋ ವಾ ಏತಾಮೇವಂ
> ವೇದ, ಅಪಹತ್ಯ ಪಾಪ್ಮಾನಂ, ಅನಂತೇ ಸ್ವರ್ಗೇ ಲೋಕೇ
> ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ ॥ '—ಕೇನಶ್ರುತಿ

ಆ ಸಚ್ಚಿದಾನಂದರೂಪಾದ ಭಾವ ಪ್ರಾಣೇಷ್ಟ ಲಿಂಗಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ತಪ, ದಮ, ಕ್ರಿಯೆ ಇವು ಪರಿವಿಡಿದು ಸಾಧನಗಳಾ

ಗಿವೆ. ಶಮ ವಿವೇಕಾದಿ ಮಾನಸಿಕ ತಪಸ್ಸಿನಲ್ಲಿ ಆ ಸತ್ತಾತ್ಮಕ ಭಾವಲಿಂಗವು ಪ್ರತಿಷ್ಠಿತವಾಗುತ್ತದೆ. ದಮ (ಬಹಿರಿಂದ್ರಿಯನಿಗ್ರಹ) ದಯಾದಿಗಳೆಂಬ ವಾಚಕ ತಪಸ್ಸಾಧನೆಯಿಂದ ಚಿದ್ರೂಪ ಪ್ರಾಣಲಿಂಗ ಪ್ರತಿಷ್ಠಿತವಾಗುತ್ತದೆ. ಅರ್ಚನಾದಿ ಸಕಲ ಸತ್ಕ್ರಿಯೆಗಳಿಂದ ಸುಖರೂಪ ಇಷ್ಟಲಿಂಗವು ಪ್ರತಿಷ್ಠಿತ ವಾಗುತ್ತದೆ. ಈ ತ್ರಿವಿಧವೂ ಒಂದೇ. ಈ ತ್ರಿವಿಧ ಸಾಧ್ಯಸಾಧಕಗಳಲ್ಲಿ ನಾಲ್ಕು ವೇದಗಳು ಅಡಗಿಕೊಂಡಿರುತ್ತವೆ. ಉಪಾಸಕನಿಗಾಗಿ ತ್ರಿವಿಧಾತ್ಮಕ ವಾದ ಆ ಪರಶಿವಲಿಂಗವು ಸತ್ಯಾಶ್ರಯವಾಗಿದೆ. ತ್ರಿಕಾಲಾಬಾಧಿತವಾಗಿದೆ.

ಯಾರು ಈ ರೀತಿಯಾಗಿ ಅರಿತುಕೊಳ್ಳುವರೋ ಅವರ ಪಾಪಗಳೆಲ್ಲ ಪರಿಹಾರವಾಗುತ್ತವೆ- ಅವರು ಅವಿನಾಶಿಯಾದ ಅಸೀಮವಾದ ಅವ್ಯಯ ವಾದ ಸರ್ವಶ್ರೇಷ್ಠವಾದ ಪರಮಧಾಮದಲ್ಲಿ ಪರಮಪಾವನವಾದ ಈ ಲೋಕ ದಲ್ಲಿ ಅಂದರೆ ಇಹ ಪರಗಳಲ್ಲಿ ಪ್ರತಿಷ್ಠಿತರಾಗುತ್ತಾರೆ. 'ಓಂ ಆಪ್ಯಾಯಂತು ಮಮಾಂಗಾನಿ' ಈ ಶಾಂತಿಮಂತ್ರವೂ ಸಹ ಲಿಂಗಧಾರಣ ಪ್ರತಿಪಾದಕವಾಗಿದೆ.

೧). 'ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ
ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ
ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥

೨). ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯ ಧಾರಣಾಂ ॥
ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥

3)- ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ
ಹೃದಯೇ ಸನ್ನಿವಿಷ್ಟಃ । ತಂ ಸ್ವಾಚ್ಛರೀರಾತ್ಪ್ರವೃಹೇನ್ಮುಂಜಾ
ದಿವೇಷಿಕಾಂ ಧೈರ್ಯೇಣ । ತಂ ವಿದ್ಯಾಚ್ಛುಕ್ರಮಮೃತಂ
ತಂ ವಿದ್ಯಾಚ್ಛುಕ್ರಮಮೃತಮಿತಿ ॥ ' —ಕಠಶ್ರುತಿ

ಗೌತಮವಂಶೀಯನಾದ ವಾಜಶ್ರವನ ಮಗನು ನಚಿಕೇತನು, ವಾಜ ಶ್ರವ ಅಂದರೆ ಅನ್ನರಸ. ಅದರಿಂದ ಹುಟ್ಟಿದ ಅಗ್ನಿ ಅಂದರೆ ವೈಶ್ವಾನರ ನಾಮಕ ಜೀವಾತ್ಮನು. ಅವನು ಧರ್ಮ(ಯಮ)ರೂಪನಾದ ಶ್ರೀಗುರುವಿನ ಬಳಿಗೆಹೋಗಿ ಆತ್ಮ ವಿದ್ಯೆಯ ಉಪದೇಶವನ್ನು ಅಪೇಕ್ಷಿಸುವನು. ಆಗ ಆ ಗುರು ಹೀಗೆ ಬೋಧಿಸುವನು :

ಓ ಶಿಷ್ಯನೆ! ಆತ್ಮಸಾಕ್ಷಾತ್ಕಾರವು ಬರೀ ಹೇಳುವುದರಿಂದ ಕೇಳುವುದರಿಂದ ಬುದ್ಧಿವಂತಿಕೆಯಿಂದ ಲಭ್ಯವಾಗುವುದಲ್ಲ. ಗುರುಕೃಪೆಯಿಂದ ಆತ್ಮನು ಯಾವಾತನಿಗೆ ಒಲಿದು ಪ್ರಸನ್ನನಾಗುವನೋ ಆತನಿಗೆ ಮಾತ್ರ ಆತ ಲಭ್ಯ. ಆ ಆತ್ಮನು ತನ್ನ ಯಥಾರ್ಥಸ್ವರೂಪವನ್ನು ಒಲಿಸಿದಾತನಿಗೆ ವ್ಯಕ್ತವಾಗಿ ತೋರುವನು. ಅಂದರೆ ಆತ್ಮಜ್ಞಾನಿಯಾದ ಗುರುಕೃಪೆಯಿಂದ ಇಷ್ಟಲಿಂಗವನ್ನಾಗಿ ಪಡೆವುದೇ ಪರಮಾತ್ಮ ಪ್ರಾಪ್ತಿ. ಇದರ ಹೊರತು ಬೇರೆ ಆತ್ಮಪ್ರಾಪ್ತಿಯ ಮಾರ್ಗವಿಲ್ಲ. ಬರೀ ಬಾಯಿ ವೇದಾಂತದಿಂದಾಗಲಿ, ಬರೀ ಜ್ಞಾನದಿಂದಾಗಲಿ, ಬರೀ ಶ್ರವಣದಿಂದಾಗಲಿ ಅದೆಂದಿಗೂ ಪಡೆಯಲಾಗುವುದಿಲ್ಲ. ಶ್ರೀಗುರುವನ್ನು ಸೇವಿಸಿ ಒಲಿಸಿಕೊಳ್ಳಬೇಕು. ಆತನು ಪಂಚಜ್ಞಾನೇಂದ್ರಿಯಗಳಲ್ಲಿ ಮನಸ್ಸಿನಲ್ಲಿ ಆಚಾರಾದಿ ಆರುಲಿಂಗಗಳನ್ನು ಪ್ರತಿಷ್ಠಿಸುತ್ತಾನೆ. ಆ ಶೈವೀಕಲೆಯನ್ನು ತಂದು ಸ್ಥಾಪಿಸುತ್ತಾನೆ. ಇಂದ್ರಿಯಗಳಲ್ಲಿ ಸ್ಥಿರವಾಗಿ ಶೈವೀಕಲೆಗಳನ್ನು ಧಾರಣಮಾಡುವುದನ್ನೇ ಯೋಗವೆಂದು ತಿಳಿಯುತ್ತಾರೆ. ಹಾಗೆ ಸಕಲೇಂದ್ರಿಯಗಳಲ್ಲಿ ಲಿಂಗಧಾರಣವಾದ ಯೋಗಿಯು ತುಂಬಾ ಎಚ್ಚರದಿಂದಿರುವನು. ಎಚ್ಚರಿಕೆಯನ್ನು ವಹಿಸದಿದ್ದರೆ ದೃಕ್ಕ್ರಿಯೆಗಳ ಅವಧಾನದಿಂದ ಧರಿಸದಿದ್ದರೆ ಧರಿಸಿಯೂ ಧರಿಸದಂತಾಗುತ್ತದೆ. ಹುಟ್ಟು ಸಾವುಗಳಿಗೊಳಗಾಗಬೇಕಾಗುತ್ತದೆ. ಇದು ಎರಡನೆಯ ಮಂತ್ರದ ಅಭಿಪ್ರಾಯ. ಇನ್ನು ಮೂರನೆಯದಾದ 'ಅಂಗುಷ್ಠಮಾತ್ರಃ ಪುರುಷಃ' ಎಂಬ ಮಂತ್ರದಲ್ಲಿ ಶ್ರೀಗುರು ಮಾಡುವ ದೀಕ್ಷಾವಿಧಾನವೇ ಸಾಕ್ಷಾತ್ತಾಗಿ ಉಕ್ತವಾಗಿದೆ.

ಅಂಗುಷ್ಠದಷ್ಟು ಪರಿಮಾಣವುಳ್ಳವನು ಪುರುಷನು. ಅವನು ಯಾವಾಗಲೂ ಜನರ ಅಂತಃಕರಣದಲ್ಲಿ ಇರುವವನಾಗಿ ಅಂತರಾತ್ಮನೆನಿಸಿದ್ದಾನೆ. ಆ ಅಂತರಾತ್ಮನನ್ನು ಶ್ರೀಗುರು ತನ್ನ ಧೈರ್ಯದಿಂದ ಅಂದರೆ ಯೋಗಬಲದಿಂದ ದರ್ಭೆಯ ನೆರವಿನಿಂದ ದೃಷ್ಟಿ ಕೂಟದಿಂದ ಶಿಷ್ಯನ ಶರೀರದಿಂದ ಬೇರ್ಪಡಿಸುತ್ತಾನೆ. ಬೇರ್ಪಡಿಸಿ ಶೈಲಪೀಠದಲ್ಲಿ ಇರಿಸುತ್ತಾನೆ. ಶಿಷ್ಯನ ಕರಸ್ಥಲಕ್ಕೆ ಕರುಣಿಸುತ್ತಾನೆ. ಅದೇ ಆ ಇಷ್ಟಲಿಂಗವೇ ಶುಭ್ರವಾದ ತೇಜಸ್ಸುಳ್ಳುದು; ಅಮೃತ ಸ್ವರೂಪವಾದುದು.

ಪ್ರಾಣರೂಪವೇ ಇಷ್ಟಲಿಂಗ, ಆ ಪ್ರಾಣದ ಪಂಚವಿಭಾಗಗಳೇ ಇಷ್ಟ

ಲಿಂಗದ ಪಂಚಸೂತ್ರಗಳೆಂಬುದನ್ನು ಪ್ರಶ್ನೋಪನಿಷತ್ತು ಪರಿಶುದ್ಧವಾಗಿ ಪ್ರತಿಪಾದಿಸಿರುವುದನ್ನು ಪರಿಕಿಸೋಣ.

'ತಾನ್ವರಿಷ್ಠಃ ಪ್ರಾಣ ಉವಾಚ । ಮಾ ಮೋಹಮಾಪದ್ಯಥಾಹಮೇವೈ
ತತ್ಪಂಚಧಾತ್ಮಾನಂ ಪ್ರವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮೀತಿ
—ಪ್ರಶ್ನೋಪನಿಷತ್, ಪ್ರಶ್ನೆ-೨. ಮಂತ್ರ-.೩

ಆರು ಮಂದಿ ಶಿಷ್ಯರು ಒಮ್ಮೆ ಪಿಪ್ಪಲಾದ ಮುನಿಯ ಬಳಿಗೆ ಬಂದು ಒಬ್ಬೊಬ್ಬರಾಗಿ ಪರಿಪ್ರಶ್ನೆ ಮಾಡುವರು. ಮೊದಲನೆಯವನಾದ 'ಕಬಂಧಿ'ಯ ಕೇಳಿಕೆಯಾದನಂತರ ವಿದರ್ಭದೇಶದ ಭಾರ್ಗವನು ಹೀಗೆ ಬಿನ್ನವಿಸಿಕೊಳ್ಳುವನು:

ಓ ಭಗವನ್, ಮಾನವರ ದೇಹಧಾರಣ ದೇವಶಕ್ತಿಗಳೆಷ್ಟು? ಅವುಗಳಲ್ಲಿ ಈ ದೇಹವನ್ನು ಪ್ರಕಾಶಿಸುವ ದೇವಶಕ್ತಿಯಾವುದು? ಆ ದೇವಶಕ್ತಿಗಳಲ್ಲಿ ಶ್ರೇಷ್ಠವಾವುದು? ಇದಕ್ಕೆ ಮುನಿಯು, ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ವಾಣಿ, ಮನ, ಚಕ್ಷು, ಶ್ರೋತ್ರ ಇವು ಆ ದೇವಶಕ್ತಿಗಳು. ಇವು ಶರೀರವನ್ನು ಪ್ರಕಾಶಗೊಳಿಸಿ ಚೇತನಮಯವಾಗಿಸಿ ಶರೀರಕ್ಕೆ ಆಧಾರವಾಗಿ ನಿಂತಿವೆ. ಇವುಗಳಿಂದ ಶರೀರ ಧಾರಣವಾಗಿದೆ. ಇವನ್ನು ದೇಹಧಾರಣ ದೇವತೆಗಳೆಂದು ಹೇಳುತ್ತಾರೆ.

'ಇವುಗಳಿಗೆಲ್ಲ ಶ್ರೇಷ್ಠವಾದುದು ಪ್ರಾಣ. ಆ ಪ್ರಾಣವು ಹೀಗೆ ಹೇಳಿತು. ನೀವೆಲ್ಲ ಮೋಹಗೊಳ್ಳಬೇಡಿರಿ; ನಾನೇ ಅಯ್ದು ಭಾಗವಾಗಿ ಅಂದರೆ ಅಯ್ದು ಸೂತ್ರವಾಗಿ ಇಷ್ಟಲಿಂಗದ ಬಾಣವನ್ನು (ಕಾಯರೂಪವನ್ನು) ಆಶ್ರಯಿಸಿ ನಿಂತು ಈ ಶರೀರಕ್ಕೆ ಆಧಾರವಾಗಿರುವೆನು.' ಎಂಬುದೇ ಆ ಮಂತ್ರಾರ್ಥ.

ಈ ಮಂತ್ರಾರ್ಥದಂತೆ ಪಂಚಪ್ರಾಣಗಳೇ ಪಂಚಸೂತ್ರ ಪೀಠಸಹಿತವಾದುದು ಬಾಣ. ಅಂತೆಯೇ ಅಂಗವೂ ಪಂಚ ಸೂತ್ರವುಳ್ಳದು. ಪ್ರಾಣಸ್ವರೂಪವೇ ಇಷ್ಟಲಿಂಗವೆಂಬುದು ಪ್ರಶ್ನೋಪನಿಷತ್ತಿನ ಈ ಮಂತ್ರದಿಂದ ಸಿದ್ಧಾಂತವಾಗುತ್ತದೆ. ಆದ್ದರಿಂದಲೇ ದೀಕ್ಷಾಕಾಲದಲ್ಲಿ ಶ್ರೀಗುರು ಶಿಷ್ಯನಿಗೆ 'ಹೇವತ್ಸ-ತವ ಪ್ರಾಣಲಿಂಗಮೇತದಿತಿ ಭಾವಯ; ಹೇವತ್ಸ-ಏತದೇವ ಖಲು ಸರ್ವತತ್ತ್ವಾತೀತಂ ಪರವಸ್ತು ಇತ್ಯನುಚಿಂತಯ; ಹೇ ವತ್ಸ ಇದ

ಮೇವ ಹಿ ಅಜಹರ್ಯೋರಪಿ ದುರ್ಲಕ್ಷ್ಯಂ ನಿಜ ತತ್ತ್ವಮಿತಿ ನಿಶ್ಚಿನು. ಇತಃ ಪರಂ ಏತನ್ನಿಮಿಷಾರ್ಧಮಪಿ ತ್ವಚ್ಛರೀರಾನ್ನ ವಿಯೋಜಯನ್ ಹೃದಯಾದಿ ವಿಧ್ಯುಕ್ತಸ್ಥಾನೇಷು ಅವಧಾನೇನ ಧಾರಯ....' ಎಂದು ಬೋಧಿಸುತ್ತಾನೆ.

ಇಷ್ಟಲಿಂಗವು ಪ್ರಾಣಸ್ವರೂಪವಾದ್ದರಿಂದ ಅದರ ಧಾರಣವೇ ಪ್ರಾಣ ಧಾರಣ. ಅದರ ಅಗಲಿಕೆಯೇ ಪ್ರಾಣದ ಅಗಲಿಕೆ. ಈ ತತ್ತ್ವವನ್ನು ಅನುಸರಿಸಿ ಶ್ರೀ ರೇಣುಕ ಭಗವತ್ಪಾದರು, ಇಷ್ಟಲಿಂಗವು ನಿನ್ನನ್ನಗಲಿ ನೆಲಕ್ಕೆ ಬಿದ್ದು ಹೋದರೆ ಒಡನೆಯೇ ಪ್ರಾಣವನ್ನು ಬಿಡು ಎಂದು ಬೋಧಿಸಿದರು. ಇದೇ ಅಭಿಪ್ರಾಯವನ್ನು ಪ್ರಶ್ನೋಪನಿಷತ್ತು ಈ ಮುಂದಿನ ಮಂತ್ರದಿಂದ ಮನದಟ್ಟಾಗಿಸುತ್ತದೆ.

'ತೇ ಅಶ್ರದ್ಧಧಾನಾ ಬಭೂವುಃ । ಸೋಽಭಿಮಾನಾದೂರ್ಧ್ವ
ಮುತ್ಕ್ರಮತ ಇವ ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವ
ಉತ್ಕ್ರಾಮಂತೇ । ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವಏವ
ಪ್ರತಿಷ್ಠಂತೇ ।....'

—ಪ್ರಶ್ನೋಪನಿಷತ್ತು, ಪ್ರಶ್ನ–೨: ಮಂತ್ರ–೪.

ಶಿಷ್ಯರು ಶ್ರದ್ಧೆವಹಿಸದಿದ್ದರೆ ಅವಧಾನದಿಂದಿಲ್ಲದಿದ್ದರೆ ಆಗುವ ಪರಿಣಾಮವನ್ನು ಈ ಮಂತ್ರವು ಚೆನ್ನಾಗಿ ಚಿತ್ರಿಸಿದೆ. ಪ್ರಾಣದಂತಿರುವ ಆ ದೇವಶಕ್ತಿ (ಇಷ್ಟಲಿಂಗವು) ಹೊರಟು ಹೋದರೆ ಪ್ರಾಣವೇ ಹೋದಂತೆ ! ಆ ಪ್ರಾಣ ಹೋದ ಬಳಿಕ ಅದರ ಕಿರಣಗಳಂತಿರುವ ಇತರ ದೈವೀಶಕ್ತಿಗಳೂ ಹೊರಟು ಹೋಗುತ್ತವೆ ಅದು ಇದ್ದರೆ ಇವೆಲ್ಲವೂ ಇರುತ್ತವೆ. ಆಚಾರದಿ ಲಿಂಗಗಳಿರುತ್ತವೆ, ಈ ರೀತಿಯಾಗಿ ಇಷ್ಟಲಿಂಗಧಾರಣವನ್ನು ಪ್ರಶ್ನೋಪನಿಷತ್ತು ಪ್ರತಿಪಾದಿಸಿದೆ.

'ಯಃ ಸರ್ವಜ್ಞಃ ಸರ್ವವಿದ್ ಯಸ್ಯೈಷಮಹಿಮಾಭುವಿ ।
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾಪ್ರತಿಷ್ಠಿತಃ ।
ಮನೋಮಯಃ ಪ್ರಾಣಶರೀರನೇತಾ ಪ್ರತಿಷ್ಠಿತೋಽನ್ನೇ
ಹೃದಯಂ ಸನ್ನಿಧಾಯ । ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾಃ
ಆನಂದರೂಪಮಮೃತಂ ಯದ್ವಿಭಾತಿ ॥' —ಮುಂಡಕೋಪನಿಷತ್

ಈ ಮುಂಡಕ ಶ್ರುತಿಯ ಮಂತ್ರದಲ್ಲಿ ಪರಿಮಿಡಿದು ಪರಿಸ್ಫುಟವಾಗಿ ತ್ರಿವಿಧ ಲಿಂಗಧಾರಣವು ಉಕ್ತವಾಗಿದೆ. ಯಾವ ಪರಶಿವನು ಸರ್ವಜ್ಞನೋ ಸರ್ವ

ರಿಂದಲೂ ತಿಳಿಯಲ್ಲಡತಕ್ಕವನೋ ಅವನ ಮಹಿಮೆ ಈ ಪಿಂಡಾಂಡದಲ್ಲಿ ಕಂಡು ಬರುವುದು. ಈ ಆತ್ಮನು ದಿವ್ಯವಾದ ಬ್ರಹ್ಮಪುರವೆಂಬ ಹೃದಯಾಕಾಶದಲ್ಲಿ ಕಾರಣಾಂಗದಲ್ಲಿ ಸತ್ತಾತ್ಮಕನಾಗಿ ನೆಲಸಿರುವನು. ಅಂದರೆ ಭಾವಲಿಂಗವಾಗಿ ಪ್ರತಿಷ್ಠಿತನಾಗಿರುವನು ಶ್ರೀ ಗುರುವಿನಿಂದ! ಅವನೇ ಮನೋಮಯನಾಗಿ ಪ್ರಾಣಾಂಗದ ಪ್ರಭುವಾಗಿ ಅಂದರೆ ಪ್ರಾಣಲಿಂಗವಾಗಿ ಸೂಕ್ಷ್ಮಾಂಗದಲ್ಲಿ ಪ್ರತಿಷ್ಠಿತನಾಗಿದ್ದಾನೆ ಶ್ರೀ ಗುರುವಿನಿಂದ! ಬಳಿಕ ಆತನೇ ಸ್ಥೂಲವಾದ ಈ ಅನ್ನಮಯ ತ್ಯಾಗಾಂಗದಲ್ಲಿ ಆನಂದರೂಪ ಇಷ್ಟಲಿಂಗವಾಗಿ ಪ್ರತಿಷ್ಠಿತನಾಗಿದ್ದಾನೆ ಶ್ರೀ ಗುರುವಿನಿಂದ. ಈ ತ್ರಿವಿಧರೂಪಾದ ಆ ಪರಶಿವನನ್ನು ಧೀರರಾದ ಅಂದರೆ ಲಿಂಗಾಂಗ ಸಾಮರಸ್ಯಜ್ಞಾನವುಳ್ಳ ವೀರಶೈವರು ಹೀಗೆ ಮೂರಂಗಗಳಿಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ.

'ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ಭೂತಿಕಾಮಃ' ನಾಯಮಾತ್ಮ ಬಲಹೀನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್ । ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮಧಾಮ ॥' ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ ತೇಷಾಮೇವೈತಾಂ । ಬ್ರಹ್ಮವಿದ್ಯಾಂ, ವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಮ್ ।'

ಈ ಮಂತ್ರಗಳಲ್ಲಿ ಇಷ್ಟಲಿಂಗವನ್ನು ಅರ್ಚಿಸಬೇಕೆಂದು, ಲಿಂಗಧರಿಸದಿದ್ದರೆ ಬೇರೆ ಮಾರ್ಗಗಳಿಂದ ಆ ಪರವಸ್ತು ತಿಳಿಯುವದಿಲ್ಲೆಂದು, ಈ ಲಿಂಗಧಾರಣ ವ್ರತಕ್ಕೆ ಶಿರೋವ್ರತವೆಂದು ಮುಂಡಕೋಪನಿಷತ್ತು ಮನಕ್ಕೆ ಹಿಡಿಯುವಂತೆ ಹೇಳಿದೆ.

'ಯಶ್ಛಂದಸಾಮೃಷಭೋ ವಿಶ್ವರೂಪಃ! ಛಂದೋಭ್ಯೋಽ
ಧ್ಯಮೃತಾತ್ ಸಂಬಭೂವ । ಸಮೇಂದ್ರೋ ಮೇಧಯಾ
ಸ್ಪೃಣೋತು । ಅಮೃತಸ್ಯ ದೇವ ಧಾರಣೋ ಭೂಯಾಸಮ್ ।
ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ ।
ಕರ್ಣಾಭ್ಯಾಂ ಭೂರಿ ವಿಶ್ರುವಮ್ । ಬ್ರಹ್ಮಣಃ ಕೋಶೋಸಿ
ಮೇಧಯಾ ಪಿಹಿತಃ । ಶ್ರುತಂ ಮೇ ಗೋಪಾಯ ।'

—ತೈತ್ತಿರೀಯ

ವೇದಗಳಲ್ಲಿ ಸರ್ವಶ್ರೇಷ್ಠನು, ವಿಶ್ವರೂಪನು ಅಮೃತಾತ್ಮನೂ ಆದ ಪರಮೇಶ್ವರನು ವೇದಮಂತ್ರಗಳಿಂದ ಪ್ರಧಾನರೂಪವಾಗಿ ಪ್ರಾದುರ್ಭವಿಸಿದನು. ಆ ಪರಮೈಶ್ವರ್ಯವುಳ್ಳವನಾಗಿ ಇಂದ್ರನೆನಿಸಿದ ಪರಮಾತ್ಮನು ನನ್ನನ್ನು ಸ್ಥಿತ ಪ್ರಜ್ಞನನ್ನಾಗಿ ಮಾಡಲಿ. ಅಂದರೆ ಪ್ರಾಣ(ಜ್ಞಾನ) ಲಿಂಗಧಾರಿಯನ್ನಾಗಿಸಲಿ, ಓ ದೇವ, ನಾನು ಅಂಗದಲ್ಲಿ ಅಮೃತಮಯವಾದ ಇಷ್ಟಲಿಂಗದ ಧಾರಣವುಳ್ಳವನಾಗಲಿ. ಇದರಿಂದಾಗಿ ನನ್ನ ಶರೀರವು ಎಲ್ಲ ಬಗೆಯಿಂದ ರೋಗ ರಹಿತವಾಗಲಿ. ನನ್ನ ನಾಲಗೆಯು ಇಷ್ಟಲಿಂಗ ಪ್ರಸಾದವನ್ನುಂಡು ಸವಿನುಡಿಯುಳ್ಳದ್ದಾಗಲಿ. ಅಂದರೆ ಪ್ರಣವಪಂಚಾಕ್ಷರಿಯನ್ನೇ ಶ್ರೀಗುರೂಪದೇಶದಂತೆ ಜಪಿಸಲಿ.

ನನ್ನ ಎರಡು ಕಿವಿಗಳು ಜಪಿಸುವ ಆ ಮಂತ್ರವನ್ನೇ ಹೆಚ್ಚಾಗಿ ಮೆಚ್ಚಾಗಿ ಕೇಳುವಂತಾಗಲಿ. ನನ್ನ ಜ್ಞಾನಲಿಂಗ ಕೋಶವು ಆ ಮಂತ್ರಾರ್ಥದಿಂದ ಭರಿತವಾಗಲಿ. ಓ ಲಿಂಗ ತಂದೆ, ನಾನು ಕೇಳಿದ್ದನ್ನೆಲ್ಲ ತಿಳಿದಿದ್ದನ್ನೆಲ್ಲ ಮರೆಯದಂತೆ ಕಾಪಾಡು; ಎಂದು ಹಾಡಿ ಹರಸಿ ಬೇಡಿದೆ. ಮತ್ತು

'ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।
ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ ।
ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು ।
ಅವತು ಮಾಮ್ । ಅವತು ವಕ್ತಾರಮ್ ।,

ಪ್ರಾಣವೇ ಲಿಂಗವಾಗಿದೆ. ಆ ಪ್ರಾಣಲಿಂಗಕ್ಕೆ ಶರಣು. ಓ ದೇವ ! ನೀನೇ ಪ್ರತ್ಯಕ್ಷವಾಗಿ ಬ್ರಹ್ಮನಾಗಿರುವೆ. ನಿನ್ನನ್ನೇ ನಾನು ಅಪರೋಕ್ಷ ಬ್ರಹ್ಮರೂಪ ಪ್ರಾಣಲಿಂಗವೆಂದು ಹೇಳುವೆ. ಸಟೆಯಲ್ಲ; ದಿಟವನ್ನೇ ಆಡುವೆನು. ನನ್ನ ಸತ್ಯವೇ ನನ್ನನ್ನು ಕಾಪಾಡಲಿ. ಆ ಪ್ರಾಣಲಿಂಗ ಪರಿಚಯವನ್ನು ಬೋಧಿಸಿದ ನನ್ನ ಗುರುವನ್ನು ಕಾಪಾಡಲಿ. ಎಂಬುದಾಗಿ ಪ್ರಾಣಲಿಂಗ ಪರಿಚಯವನ್ನೂ ಅದೇ ತೈತ್ತಿರೀಯೋಪನಿಷತ್ತು ತನ್ನ ಶಿಕ್ಷಾವಲ್ಲಿಯ ಶಾಂತಿ ಪಾಠದಲ್ಲಿ ಬಿತ್ತರಿಸಿದೆ.

'ವಹ್ನೇರ್ಯಥಾ ಯೋನಿಗತಸ್ಯ ಮೂರ್ತಿರ್ನ ದೃಶ್ಯತೇ
ನೈವ ಚ ಲಿಂಗನಾಶಃ । ಸ ಭೂಯ ಏವಾಂಧನ ಯೋನಿಗೃಹ್ಯ
ಸ್ತದ್ವೋಭಯಂ ವೈ ಪ್ರಣವೇನ ದೇಹೇ ॥ —ಶ್ವೇತಾಶ್ವತರೋಪನಿಷತ್

ಮರ (ಕಾಷ್ಠ)ದೊಳಗಿರುವ ಅಗ್ನಿಯು ತಾನೇ ಹೊರಹೊಮ್ಮಿ ತೋರುವುದಿಲ್ಲ. ಮಂಥನರೂಪ ಕ್ರಿಯೆಯಿಲ್ಲದಿದ್ದರೂ ತೋರುವದಿಲ್ಲ. ಅಂತೆಯೇ ಉರುವಲು ಇಲ್ಲದಿದ್ದರೂ ತೋರುವುದಿಲ್ಲ. ಉರುವಲಿನಲ್ಲಿ ಮಥನಕ್ರಿಯೆಯಿಂದ ಅಗ್ನಿಯು ಹೊರಹೊಮ್ಮಿ ತೋರುತ್ತದೆ. ಅದರಂತೆ ಒಳಗಿರುವ ಜೀವಾತ್ಮ ಪರಮಾತ್ಮರು ದೇಹದಲ್ಲಿ ಪ್ರಣವದಿಂದ ಪ್ರಣವಾಕಾರವಾದ ಕ್ರಿಯಾಲಿಂಗದಿಂದ ತೋರುತ್ತಾರೆ. ಪರಶಿವಲಿಂಗ ಜ್ಯೋತಿಗೆ ದೇಹವೇ ಕಾಷ್ಠ. ಓಂಕಾರಾತ್ಮಕ ಸದ್ರೂಪಲಿಂಗೋಪಾಸನೆಯೇ ಮಥನ.

'ಸ್ವದೇಹಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಮ್ ।
ಧ್ಯಾನ ನಿರ್ಮಥನಾಭ್ಯಾಸಾದ್ದೇವಂ ಪಶ್ಯೇನ್ನಿಗೂಢವತ್ ॥'
'ತಿಲೇಷು ತೈಲಂ, ದಧನೀವ ಸರ್ಪಿರಾಪಃ ಸ್ರೋತಃ
ಸ್ವರಣೀಷು ಚಾಗ್ನಿಃ । ಏವಮಾತ್ಮಾ ऽ ऽ ತ್ಮನಿ ಗೃಹ್ಯತೇ ऽ ಸೌ
ಸತ್ಯೇನೈನಂ ತಪಸಾ ಯೋ ऽ ನುಪಶ್ಯತಿ'

ಈ ಮಂತ್ರಗಳಿಂದ ಶ್ವೇತಾಶ್ವತರೋಪನಿಷತ್ತು ಕ್ರಿಯಾ ಮಥನವಿಲ್ಲದೆ ಅಂದರೆ ಕ್ರಿಯಾಲಿಂಗೋಪಾಸನೆಯಿಲ್ಲದೆ ಆ ಪರವಸ್ತು ಕಾಣದೆಂದು ಖಚಿತಗೊಳಿಸಿದೆ.

'ನಿಧನ ಪತಯೇ ನಮಃ, ನಿಧನ ಪತಾಂತಿಕಾಯ ನಮಃ ।
ಊರ್ಧ್ವಾಯ ನಮಃ, ಊರ್ಧ್ವ ಲಿಂಗಾಯ ನಮಃ ।
ಹಿರಣ್ಯಾಯ ನಮಃ, ಹಿರಣ್ಯ ಲಿಂಗಾಯ ನಮಃ ।
ಸುವರ್ಣಾಯ ನಮಃ, ಸುವರ್ಣ ಲಿಂಗಾಯ ನಮಃ ।
ದಿವ್ಯಾಯ ನಮಃ, ದಿವ್ಯಲಿಂಗಾಯ ನಮಃ ।
ಭವಾಯ ನಮಃ, ಭವಲಿಂಗಾಯ ನಮಃ ।
ಶರ್ವಾಯ ನಮಃ, ಶರ್ವಲಿಂಗಾಯ ನಮಃ ।
ಶಿವಾಯ ನಮಃ, ಶಿವಲಿಂಗಾಯ ನಮಃ ।
ಜ್ವಲಾಯ ನಮಃ, ಜ್ವಲಲಿಂಗಾಯ ನಮಃ ।
ಆತ್ಮಾಯ ನಮಃ, ಆತ್ಮಲಿಂಗಾಯ ನಮಃ ।
ಪರಮಾಯ ನಮಃ, ಪರಮಲಿಂಗಾಯ ನಮಃ ।
ಏತತ್ಸೋಮಸ್ಯ ಸೂರ್ಯಸ್ಯ ಸರ್ವಲಿಂಗಗ್ಂ

ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್ ॥'

—ತೈ. ಉ. ೪-೧೬, ೩೩, ೩೪

'ಅಂತರ್ಧಾರಣಶಕ್ತೋ ವಾ ಹ್ಯಶಕ್ತೋ ವಾ ದ್ವಿಜೋತ್ತಮಾಃ ಸಂಸ್ಕೃತ್ಯ ಗುರುಣಾ ದತ್ತಂ ಶೈವಂ ಲಿಂಗಮುರಸ್ಥಲೇ ಧಾರ್ಯಂ ವಿಪ್ರೇಣ ಮುಕ್ತ್ಯರ್ಥೇ ಶಿವತತ್ತ್ವ ವಿದೋ ವಿದುಃ ।'

—ಸಾನಂದೋಪನಿಷತ್

'ಶೈಲಂ ಲಿಂಗಮುರಸ್ಥಲೇ ಧಾರ್ಯಂ ವಿಪ್ರೇಣ । ಶಿವಾ ತನೂರ ಚಿತ್ತಾದ್ಬಿಲೇ ನಿಷಪೇತ್ ।'

—ಸವಾನಂಮೋಪನಿಷತ್

'ಪಿಂಡಾಜ್ಜನನಮ್ । ತಜ್ಜನನಕಾಲೇ ಧಾರಣಮುಚ್ಯತೇ । 'ಸರ್ವ ಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಮ್' 'ಅಯಂ ಮೇ ಹಸ್ತೋ ಭಗವಾನ್' ಇತಿ ಧಾರಯೇತ್ ।....ಅತ್ಯಾಶ್ರಮಾಣಾಂ ಮಧ್ಯೇ ಲಿಂಗಧಾರೀ ಶ್ರೇಷ್ಠೋ ಭವತಿ । ಶಿರಸಿ ಮಹಾದೇವಸ್ತಿಷ್ಠತು ಇತಿ ಧಾರಯೇತ್ । ಅನ್ಯಾಯೋನ್ಯಾಯಃ । ಪೃಥಿವ್ಯಾಪಸ್ತೇಜೋ ವಾಯುರಾಕಾಶ ಇತಿ ಪಂಚ ಸ್ವರೂಪಂ ಲಿಂಗಮ್ । ತ್ವಕ್ ಶ್ರೋತ್ರ ನೇತ್ರ ಜಿಹ್ವಾ ಪ್ರಾಣ ಪಂಚಸ್ವರೂಪ ಮಿತಿ ಲಿಂಗಮ್ । ಶೇತೋ ಭುದ್ಯಾಪ ಮನಸ್ವರೂಪ ಮಿತಿ ಲಿಂಗಮ್ । ಸಂಕಲ್ಪಮಿತಿ ಲಿಂಗಮ್ । ಜ್ಯೋತಿರಹಂ ವಿರಜಾ ವಿಪಾಪ್ಮಾ ಭೂಯಾಸಂ ಸ್ವರೂಪಮಿತಿ ಲಿಂಗಮ್ । ವ್ರತಂ ಚರೇತ್ । ಸಂತಿಷ್ಠೇನ್ನಿಯಮೇನ । ಸರ್ವಂ ಶಾಂಭವೀ ರೂಪಮ್ । ಶಾಂಭವೀ ವಿದ್ಯೋಚ್ಯತೇ । ಚರೇದೇತಾನಿ ಸೂತ್ರಾಣೀ ಪಂಚಮುಖಂ ಪಂಚಸ್ವರೂಪಂ ಪಂಚಾಕ್ಷರಂ ಪಂಚಸೂತ್ರಂ ಜ್ಞಾನಮ್ । ಸಿದ್ಧಿರ್ಭವತ್ಯೇವ । ಜ್ಞಾನಾದ್ಧಾರಣಂ ಲಿಂಗದೇಹ ಪ್ರಕಾರ ಉಚ್ಯತೇ । ಶಿರಃ ಪಾಣೀ ಪಾದ ಪಾಯೂಪಸ್ಥಂ ಸರ್ವಂ ಲಿಂಗಸ್ವರೂಪಮ್ । ಬ್ರಾಹ್ಮಣೋ ವದೇತ್ ।

ಓಂಕಾರೋ ಬಾಣಃ ಶಕ್ತಿ ಹ್ಯೇವ ಪೀಠಂ ಸಿಂಧೂರವರ್ಣಂ, ಸರ್ವಂ ಲಿಂಗಸ್ವರೂಪಮ್ । ಕೈವಲ್ಯಂ ಕೇವಲಂ ವಿದ್ಯಾತ್ । ವ್ಯವಹಾರ ಪರಃ ಸ್ಯಾತ್ । ಪ್ರಾಣ ಏವ ಪ್ರಾಣಃ ಪೂರ್ವಂ ಬ್ರಹ್ಮಾ ಪೀಠಮ್ । ವಿಷ್ಣು ರ್ಬಾಣಃ । ರುದ್ರಃ ಸ್ವರೂಪಮ್ । ಸರ್ವಭೂತೈರಥಾ ಪರಿತ್ಯಾಜ್ಯಶ್ಚ ।

ವಿಗ್ರಹಮನುಗ್ರಹಲಿಂಗೇಷು ಶಕ್ತಿಕಪಾಲೇಷು ಸರ್ವವಶಂ ಕರಂ ವಿದ್ಯಾತ್ । ಜಾತಿ ವಿಷಯಾನ್ ತ್ಯಜೇತಾ । ಶ್ರೌತಾಶ್ರೌತೇಷು ಧಾರಣಮ್ । ವೇದೋಕ್ತ ವಿಧಿನಾ ಶ್ರೌತಂ, ತದ್ರಹಿತ ಮಶ್ರೌತಮ್ । ಸರ್ವವರ್ಣೇಷು ಧಾರಣಂ ಕೈಲಾಸ ಸಿದ್ಧಿರ್ಭವತಿ । ಧಾರಣಂ ದೇಹೇ ಕೈಲಾಸಸ್ವರೂಪಮ್ । ಧಾರಣಂ ದೇಹೇ ಕೈವಲ್ಯಸ್ವರೂಪಮ್ । ಧಾರಣಂ ದೇಹೇ ಪ್ರಣವಸ್ವರೂಪಮ್ । ಧಾರಣಂ ದೇಹೇ ವೇದಸ್ವರೂಪಮ್ ! ಧಾರಣಂ ದೇಹೇ ಬ್ರಹ್ಮಸ್ವರೂಪಮ್ । ಧಾರಣಂ ದೇಹೇ ಶಿವಸ್ವರೂಪಮ್ । ಶಿರಸಿ ಬಾಣಂ ಬಾಹುನಾಭೀಪೀಠ ಪ್ರಕೃತಿ ರೂಪಕಂ ದೇಹೇ ಧಾರಣಂ ಯಸ್ಯ ನ ವಿದ್ಯತೇ ತದ್ದೇಹಂ ನ ಪಶ್ಯೇತ್ । ಶಿರಃ ಕಪಾಲಂ ಕೇಶಾನ್ ನ ಕುರ್ಯಾತ್ । ಶಿರಃ ಪೀಠಂ ಲಿಂಗಾತ್ಮಕಂ ಸರ್ವಮ್ । ಪ್ರಾಣಾದಿ ಲಿಂಗಸ್ವರೂಪಂ ಗುರೋರ್ಲಿಂಗಮ್ । ಗುರುಸಂಭ ವಾತ್ಮಕಂ ಲಿಂಗಂ ಪ್ರಗುರೋಃ ಪ್ರಥಮಂ ಪ್ರಣಿಪತತಿ । ಪ್ರಣವಸ್ವರೂಪಂ ಲಿಂಗಂ ಬ್ರಹ್ಮಲಿಂಗಮ್ । ಪ್ರಕಾಶಾತ್ಮಕಂ ಲಿಂಗಂ ವಿದ್ಯಾಲಿಂಗಮ್ । ವಿದ್ಯಾ ಲಿಂಗಂ ಜ್ಞಾನಸ್ವರೂಪಕಂ । ಸರ್ವದೇಹೇಷು ಲಿಂಗಧಾರಣಂ ಭವತಿ । ಇತಿ ವೇದ ಪುರುಷೋ ಮನ್ಯತೇ । ಮಹಾಪುರುಷೋಪೇತಂ ಯೋ ವೇದ ಸ ಏವ ನಿತ್ಯಪೂತಸ್ಥಃ । ಸ ಏವ ನಿತ್ಯಪೂತಸ್ಥಃ ಸ್ಯಾದ್ದೈವ ತಾಕಿಕಃ ಪುರುಷಃ । ಸ ಏವಾಯುಷ್ಮಿಕ ಪುರುಷ ಇತಿ ಮನ್ಯಂತೇ । ಜೀವಾತ್ಮಾ ಪರ ಮಾತ್ಮಾ ಚ ಸ ಏವೋಚ್ಯತೇ । ಇಷ್ಟ ಪ್ರಾಣ ಭಾವೇಷು ಲಿಂಗಧಾರಣಂ ವದಂತಿ । ಇಷ್ಟೇ ಧಾರಣಂ । ತಿಸ್ರಃ ರಸ್ತ್ರಿಪದಾ ವಿಶ್ವಚರ್ಷಿಣೀ । ಪುರ ನಾಶೇ ಲಿಂಗಸ್ವರೂಪಾಜ್ಞಾ ಸಿದ್ಧಿರ್ಭವತ್ಯವಜ್ಞಾನೇಽಸತಿ । ಸಂಯುಕ್ತಂ ಲಿಂಗಂ ಮೋಕ್ಷ ಏವ ಭವತ್ಯೇವ । ಮೋಕ್ಷಮೇವ ಧಾರಣಂ ವಿದ್ಯಾತ್ । ಉಶಂತೀವ ಮಾತರಂ ಕುರ್ಯಾತ್ । ಇತ್ಯೇವಂ ವೇದೇತ್ಯುಪನಿಷತ್ । ಓಂ ತತ್ಸತ್.

—ಲಿಂಗೋಪನಿಷತ್

'ಗಚ್ಛಂಸ್ತಿಷ್ಠನ್ನಿಮಿಷನ್ನುನ್ಮಿಷನ್ ವಾ ಸ್ವಪಂಚಾಗ್ರಾಲ್ಲಿಂಗಧಾರೀ ಶುಚಿಃ ಸ್ಯಾತ್ । ಭುಂಜನ್ ಮೂತ್ರಾದ್ಯುತ್ಸೃಜನ್ ವಾ ಕದಾಚಿನ್ನ ತತ್ರೋಚ್ಛಿಷ್ಟಂ ಭಜತೇ ಶುದ್ಧದೇಹೀ ।'

—ಸಿದ್ಧಾಂತ ಶಿಖೋಪನಿಷತ್

ಇವಲ್ಲದೆ ವೇದಾಂತ ಸಾರೋಪನಿಷತ್, ಭಕ್ತಿಯೋಗೋಪನಿಷತ್, ನಿರ್ಲೇಪೋಪನಿಷತ್, ಚಿದಂಬರೋಪನಿಷತ್, ಸಿದ್ಧಾಂತ ಶಿಖೋಪನಿಷತ್, ಪ್ರಸಾದಜಾ ಬಾಲೋಪನಿಷತ್, ವೀರಲೈಂಗೋಪನಿಷತ್ ಮುಂತಾದ ಶ್ರುತಿಗಳಲ್ಲಿ ಲಿಂಗಧಾರಣವು ಉದ್ಘೋಷಿತವಾಗಿದೆ

ಶಿವಾಗಮ ಪ್ರಮಾಣಗಳು :

'ಗುರುಣಾ ದತ್ತಲಿಂಗಂತು ಶಿವಮಂತ್ರೇಣ ಧಾರಯೇತ್ ।
ಮೂರ್ಧ್ನಿ ಕಂಠೇ ಭುಜೇ ಹಸ್ತೇಹೃತ್ಸ್ಥಲೇ ನಾಭಿ ಮಂಡಲೇ ॥
ಏತೇಷಾಮೇಕದೇಶೇ ತು ಧಾರಯೇಚ್ಛಿವಲಿಂಗಕಮ್ ।'

—ವಾತುಲಾಗಮ, ಮಂತ್ರಕೀಲಪಟಲ; ಮಂತ್ರ ೩೨, ೩೩.

'ಉತ್ತಮಾಂಗೇ ಗಲೇ ಕಕ್ಷೇ ತಥಾ ವಕ್ಷಃ ಸ್ಥಲೇಽಪಿ ವಾ ।
ಕರಸ್ಥಲೇಽಪಿ ವಾ ನಿತ್ಯಂ ಸಾವಧಾನೇನ ಧಾರಯ ॥
'ದೀಕ್ಷಾಯಾಂ ಗುರುಣಾಲಿಂಗಂ ಧಾರಿತಂ ಗಿರಿಜೇ ಯದಾ ।
ತದಾ ಪ್ರಭೃತಿ ಲಿಂಗಾಂಗಸಂಬಂಧೀ ಸ್ಯಾನ್ನಿರಂತರಮ್ ॥"

—ಸೂಕ್ಷ್ಮಾಗಮ ಪಟಲ-೫, ೭. ಮಂತ್ರ ೪೭, ೫೩.

'ಇಷ್ಟಂ ಸ್ಥೂಲತನೋಃ ಪ್ರೋಕ್ತಂ ಪ್ರಾಣಂಸೂಕ್ಷ್ಮತನೋಃ ಸ್ಮೃತಮ್ ।
ಭಾವಾಖ್ಯಂ ಕಾರಸ್ಯೈವಂ ತನುತ್ರಯಗತಂ ತ್ರಯಮ್ ॥
ಪೂಜಯನ್ನಿಷ್ಟಲಿಂಗಂತು ನಿಧ್ಯಾಯನ್ ಪ್ರಾಣಲಿಂಗಕಮ್ ।
ಭಾವಯನ್ ಭಾವಲಿಂಗಂ ವೈ ಮೃತ್ಯುಪಾಶಾಂಶ್ಛಿನತ್ತಿ ಸಃ ॥'

—ಚಂದ್ರಜ್ಞಾನಾಗಮ, ಪಟಲ-೩; ಮಂತ್ರ ೪೫, ೪೮

'ಇಷ್ಟಲಿಂಗಂ ಸಮಾಧಾಯ ವಾಮಹಸ್ತೇಽಭಿಪೂಜ್ಯಚ ।
ಸೌಮ್ಯೇತಲ್ಲಿಂಗ ಮೀಕ್ಷಸ್ವೇತೀಷ್ಟಲಿಂಗಂ ಪ್ರದರ್ಶಯೇತ್ ॥
ಸಪ್ತವಾರಂ ಸುಸಂಪೂಜ್ಯ ಸ್ವವಾಮಕರಸಂ ಸ್ಥಿತಮ್ ।
ನಿಕ್ಷಿಪೇತ್ತತ್ರ ತಲ್ಲಿಂಗಂ ತ್ರಿಯಂಬಕಮನು ಸ್ಮರನ್ ॥"

—ಕಾರಣಾಗಮ, ಪಟಲ-೧ ; ಮಂತ್ರ ೮೯, ೯೫.

'ಏಕಮೇವ ಪರಂ ಲಿಂಗಮಂಗೇಽಸ್ಮಿನ್ ಸುಪ್ರತಿಷ್ಠಿತಮ್ ।
ಸರ್ವತೋಮುಖಮಾಭಾತಿ ನಾಮರೂಪಕ್ರಿಯಾತ್ಮನಾ ॥
ಇಷ್ಟಲಿಂಗಂತು ಬಾಹ್ಯಾಂಗೇ ಪ್ರಾಣಲಿಂಗಂ ತಥಾಂತರೇ ।
ಭಾವಲಿಂಗಂ ತಥೈವಾಸ್ಮಿನ್ನಾತ್ಮಾಂಗೇ ಸುಪ್ರತಿಷ್ಠಿತಮ್ ॥'

—ಮಕುಟಾಗಮ, ಪಟಲ-೨; ಮಂತ್ರ-೨೫, ೨೬.

'ಲಲಾಟೇ ಭಸ್ಮನಾ ಪುಂಡ್ರಂ ರುದ್ರಾಕ್ಷೋ ಮನುಜಾಪನಮ್ ।
ಕಂಠೇ ಚ ಲಿಂಗಧಾರಣಂ ಸೋಽಹಂ ದೇವಿ ನ ಸಂಶಯಃ ॥'

—ಪಾರಮೇಶ್ವರಾಗಮ, ಪಟಲ-೩; ಮಂ–೯೮.

'ಶ್ರೌತಾಶ್ರೌತ ವಿಭೇದೇನ ದ್ವಿಧಾ ಲಿಂಗಸ್ಯ ಧಾರಣಮ್ ।
ಷಡಧ್ವಶುದ್ಧಿ ಲಿಂಗಂ ತು ಶ್ರೌತಮಿತ್ಯಭಿಧೀಯತೇ ॥
ಅಶ್ರೌತಾನಾಂ ತಪ್ತಲಿಂಗಾದಿ ಧಾರಣಂ ಪ್ರೋಚ್ಯತೇ ಶಿವೇ ।
ಶ್ರೌತಾನಾಂ ವೀರಶೈವಾನಾಂ ವೇದಮಾರ್ಗೈಕ ವರ್ತಿನಾಂ ।
ತಪ್ತಲಿಂಗ ಪರಿಗ್ರಾಹಃ ಪ್ರತ್ಯವಾಯೋ ಮಹಾನ್ ಭವೇತ್ ॥

—ಸಿದ್ಧಾಂತಾಗಮ

'ಲಿಂಗಾಂಗೀ ಚ ಮಮಪ್ರಾಣೋ ಲಿಂಗಾಂಗೀ ಚ ಮಮರಕ್ಷಕಃ ।
ಲಿಂಗಾಂಗೀ ಮಮಕರ್ತಾಚ ಲಿಂಗಾಂಗೀ ಚ ಮಮಪ್ರಭುಃ ॥'

—ವೀರಾಗಮ.

ಪೌರಾಣಿಕ ಪ್ರಮಾಣಗಳು :

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ।
ಯಃಬಾಹ್ಯಕ್ರಿಯಾ ಸಂಕುಲ ನಿಸ್ಪೃಹಾತ್ಮಾ ಪೂಜಯತ್ಯಂಗ ಸ ವೀರಶೈವಃ॥'

—ಸ್ಕಾಂದ ಪುರಾಣ.

'ತಸ್ಮಾದ್ಧಾರ್ಯಂ ಮಹಾಲಿಂಗಂ ಪಾಣಿಮಂತ್ರೇತಿ ಮಂತ್ರತಃ'
ಪವಿತ್ರಕರಣಾತ್ ಪುಂಸಾಂ ಪವಿತ್ರಮಿತಿ ಕಥ್ಯತೇ ।
ಅತಃ ಸರ್ವೇಷು ಕಾಲೇಷು ಧಾರಯೇಲ್ಲಿಂಗಮುತ್ತಮಮ್ ॥'

—ಲಿಂಗಪುರಾಣ, ಉ. ಭಾ. ಅ–೨೧.

'ಲಿಂಗಂ ಶಿವೋ ಭವೇತ್ ಕ್ಷೇತ್ರಂ ಅಂಗಂ ಸಂಯೋಗ ಆಶ್ರಯಃ |
ತಸ್ಮಾಲ್ಲಿಂಗಾಂಗ ಸಂಯುಕ್ತೋ ಯೋಽಪಿ ಸೋಽತ್ಯಾಶ್ರಮೀಭ
ವೇತ್ ||

ಬ್ರಹ್ಮಚಾರೀ ಗೃಹಸ್ಥೋ ವಾ ವಾನಪ್ರಸ್ಥೋ ಯತಿಸ್ತು ವಾ |
ಯಸ್ತು ಲಿಂಗಾಂಗ ಸಂಯುಕ್ತಸ್ಸ ಏವಾತ್ಯಾಶ್ರಮೀ ಭವೇತ್ ||'

—ಕೂರ್ಮಪುರಾಣ

'ಲಿಂಗಾಂಗ ಸಂಗಿನೋ ವತ್ಸ ಪುನರ್ಜನ್ಮ ನ ವಿದ್ಯತೇ |'
ಕೃತ್ವಾ ನಿಧೇಹಿ ಸತತಂ ಲಿಂಗಂ ವಸ್ತ್ರೇಣ ವೇಷ್ಟಿತಂ |
ಮುಸಕ್ತೇ ಕಂಧರೇ ಕುಕ್ಷೌ ವಕ್ಷಸ್ಯಥ ಕರಸ್ಥಲೇ ||

—ಶಂಕರ ಸಂಹಿತೆ.

ಮುಖೇ ಮಂತ್ರೋ ಹೃದಿಧ್ಯಾನಂ ಮಸ್ತಕೇ ಲಿಂಗಧಾರಣಮ್ |
ರುದ್ರಾಕ್ಷಂಚ ಶಿಖಾಭಸ್ಮ ಇತಿ ಬ್ರಾಹ್ಮಣ ಲಕ್ಷಣಮ್ ||'

—ಗೌತಮಸ್ಮೃತಿ

'ಜೀವಮುಖ್ಯ ಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾ
ದಾಶ್ರಿತತ್ವಾದಿಹ ತದ್ಯೋಗಾತ್' —ಅ. ೧; ಸೂ-೩೧.
'ಲಿಂಗಭೂಯ ಸ್ತ್ವಾತ್ತದ್ಧಿ ಬಲೀಯಸ್ತದಪಿ'-ಅ. ೩, ಪಾ-೩.
ಸೂ, ೪೪.

'ಲಿಂಗಾಚ್ಚ' -ಅ. ೪, ಪಾ-೧, ಸೂ-೨.

ಇವೇ ಮುಂತಾದ ಪುರಾಣ, ಸಂಹಿತಿ ಸ್ಮೃತಿ, ಬ್ರಹ್ಮಸೂತ್ರಗಳಿಂದ ಲಿಂಗಧಾರಣವು ಸೂಕ್ತವಾಗಿ ಸಮರ್ಥಿಸಲಾಗಿದೆ.

"ಯೋ ಲಿಂಗಧಾರೀ ನಿಯತಾಂತರಾತ್ಮಾ
ನಿತ್ಯಂ ಶಿವಾರಾಧನ ಬದ್ಧ ಚಿತ್ತಃ
ಸ ಧಾರಯೇತ್ ಸರ್ವಮಲಾಪಹತ್ಯೈ
ಭಸ್ಮಾಮಲಂ ಚಾರು ಯಥಾ ಪ್ರಯೋಗಮ್"

ಹಿಂದೆ ಹೇಳಿದ ವೇದ ಶ್ರುತ್ಯಾಗಮ ಪುರಾಣ ಸ್ಮೃತಿಸಂಹಿತ ಸೂತ್ರಾದಿಗಳ ಪ್ರಮಾಣವನ್ನು ಪಡೆದಿದೆ ಲಿಂಗಧಾರಣವು. ಅಂತಹ ಸಚ್ಚಿದಾನಂದ ಸ್ವರೂಪನಾದ ಶಿವವಾದ ಲಿಂಗವನ್ನು ಧರಿಸಿದಾತನು ನಿರ್ಮಳ ಚಿತ್ತನಾಗಿ ನಿಶ್ಚಿತಾಂತಃಕರಣವುಳ್ಳವನಾಗಿ ನಿಯಮಿತ ಮನಸ್ಕನಾಗಿ ಸ್ವಾಧೀನ ಸ್ವಾಂತನಾಗಿ ಸಂಯಮವೃತ್ತಿಯುಳ್ಳವನಾಗಿ ಅಂತರ್ಭಾವಿತಾತ್ಮನಾಗಿ ಅಂತರ್ಮನಸ್ಕನಾಗಿ ಇರುವನು ; ನಿತ್ಯ ಶಿವಾರಾಧನದಲ್ಲಿ ಆಸಕ್ತಚಿತ್ತನಾಗಿರುವನು. ಹೀಗೆ ಸದಾಚಾರ ನಿರತನಾದ ಸದ್ರೂಪ ಚೈತನ್ಯಭರಿತನಾದ ಶಿಷ್ಯನು ವಿಧ್ಯುಕ್ತವಾಗಿ ವಿಭೂಷಿತವಾಗಿ ವಿಮಲ ಭಸ್ಮವನ್ನು ಧರಿಸಬೇಕು. ಭಸ್ಮಧಾರಣವು ಸರ್ವ ಮಲಗಳನ್ನು ಸಂಹರಿಸುತ್ತದೆ.

ಅಪೂರ್ವ, ನಿಯಮ, ಪರಿಸಂಖ್ಯಾ ಎಂದು ವಿಧಿಯು ಮೂಬಗೆಯಾಗಿದೆ. ಇವುಗಳಲ್ಲಿ ಲಿಂಗಧಾರಣವು ಅಪೂರ್ವ ವಿಧಿ. ಅಪೂರ್ವವೆಂದರೆ ಇತರರಿಗೆ ಅಂದರೆ ಗುರುಕೃಪೆಯಿಲ್ಲದನರಿಗೆ ಅಲಭ್ಯವಾದ, ಅಸಾಮಾನ್ಯವಾದ, ಅತ್ಯಂತ ವಿಶೇಷವಾದ ವಿಧಿ ಲಿಂಗಧಾರಣವೆಂದರ್ಥ. 'ಯೋಲಿಂಗಧಾರೀ' ಎಂಬ ಪದಪ್ರಯೋಗದಿಂದ ಕವಿ ಅಪೂರ್ವವಿಧಿಯನ್ನು ನಿರ್ದೇಶಿಸಿದ್ದಾನೆ.

'ನಿಯತಾಂತರಾತ್ಮಾ' ಎಂದು ಹೇಳಿ ನಿಯಮವಿಧಿಯನ್ನು ನಿರ್ದೇಶಿಸಿದ್ದಾನೆ. ಅನಿತನಾದವನಿಗೆ ಲಿಂಗಧಾರಣವು ಸಲ್ಲದೆಂದು ಸ್ಪಷ್ಟಗೊಳಿಸಿದ್ದಾನೆ. 'ನಿತ್ಯಂ ಶಿವಾರಾಧನ ಬದ್ಧಚಿತ್ತಃ' ಎಂಬುದೂ ನಿಯಮ ವಿಧಿಯನ್ನೇ ಇನ್ನೂ ದೃಢಗೊಳಿಸಿದೆ. 'ನಿಯತಾಂತರಾತ್ಮಾ' ಎಂಬುದು ಆಂತರಿಕ ನಿಯಮ ವಿಧಿಯಾದರೆ, 'ನಿತ್ಯಂ ಶಿವಾರಾಧನ ಬದ್ಧಚಿತ್ತಃ' ಎಂಬುದು ಬಾಹ್ಯಾಭ್ಯಂತರ ನಿಯಮ ವಿಧಿ ಸೂಚಕವಾಗಿದೆ. ಇನ್ನು ಮಂತ್ರದ (ಶ್ಲೋಕದ) ಉತ್ತರಾರ್ಧವು ಪರಿಸಂಖ್ಯಾ ವಿಧಿಯನ್ನು ವಿಧಾನಮಾಡುತ್ತದೆ. ದೋಷಗಳನ್ನು ಕಳೆವ ಕಾರಣಗಳು ಒಂದಕ್ಕಿಂತ ಹೆಚ್ಚಿದ್ದರೆ ಆಗ ಇಂತಹದರಿಂದಲೇ ದೋಷವನ್ನು ದೂರ ಮಾಡಬೇಕೆಂದು ನಿರ್ಧರಿಸಿ ಹೇಳುವುದೇ ಪರಿಸಂಖ್ಯಾವಿಧಿಯ ಗುರಿ. ಬತ್ತದ ಹೊಟ್ಟನ್ನು ಒನಕೆಯಿಂದ ತೆಗೆಯಬೇಕೋ ಉಗುರಿನಿಂದ ತೆಗೆಯಬೇಕೋ ಎಂಬ ಸಂದೇಹ ಬಂದಾಗ ಒನಕೆಯಿಂದಲೇ ತೆಗೆಯಬೇಕೆಂದು ಅಥವಾ ಈ ಯಾಂತ್ರಿಕಯುಗದಲ್ಲಿ ಉಗುರಿಗೆ ಬದಲು ಅಥವಾ ಉಗುರಿನೊಡನೆ

ಬತ್ತದ ಹೊಟ್ಟನ್ನು ತೆಗೆವ ಯಂತ್ರವನ್ನು (ಆರೋಗ್ಯಕ್ಕೆ ಅನೇಕ ಕೇಡಿರುವುದರಿಂದ) ನಿಷೇಧಿಸಿ ಒನಕೆಯಿಂದಲೇ ತೆಗೆಯಬೇಕೆಂದು ಹೇಳುವುದೇ ಪರಿಸಂಖ್ಯಾವಿಧಿ.

ಪ್ರಸ್ತುತ ಮೈಯ ಮಲವನ್ನು ಜಲ, ಸೀಗೆಹಿಟ್ಟು, ಸೋಪು ಹೀಗೆ ಅನೇಕ ಸಾಧನಗಳಲ್ಲಿ ಭಸ್ಮವೇ ಸುಂದರವಾದ ಸರ್ವಶ್ರೇಷ್ಠವಾದ ಸಾಧನವೆಂದು, ಲಿಂಗಧಾರಣೆಗೆ ಅಂಗಭೂತವಾದುದೆಂದು ಮೈ ಮನಗಳೆರಡರ ಮಲಾಪಹಾರಕವೆಂದು ನಿಸ್ಸಂದೇಹವಾಗಿ ನಿರ್ಮಳ ಭಸ್ಮವನ್ನೇ ಧರಿಸಬೇಕೆಂದು ಪರಿಸಂಖ್ಯಾವಿಧಿ ನಿಯತಿಗನುಸರಿಸಿ ಕವಿ ಹೇಳಿ ಒಂದೇ ಶ್ಲೋಕದಲ್ಲಿ ವಿಧಿತ್ರಯಗಳನ್ನು ವಿಸ್ಪಷ್ಟಗೊಳಿಸಿದ್ದಾನೆ.

ಆಧ್ಯಾತ್ಮಿಕ ಭೋಗ-ಯೋಗಗಗಳನ್ನು ಪ್ರಸಾದಿಸುವ ಲಿಂಗವನ್ನು ಧರಿಸಿದ ಬಳಿಕ ಭೌತಿಕವೂ ದುಃಖದಾಯಕವೂ ಆದ ಭೋಗ ಭಾಗ್ಯಗಳನ್ನು ಮನ ಬಯಸಿ ಬಲ್ಲಂತೆ ಹರಿದಾಡಬಾರದು. ಮನದ ಹಂಬಲ ಹರಿದಾಟಗಳೇ ದುಃಖಮೂಲ. ನಿಯಮ ಸಂಯಮಗಳಿಂದ ಕೂಡಿದ ಮನವೇ ಸುಖದ ಮೂಲ; ಶಿವಾಚಾರ–ಶಿವಾರಾಧನಗಳಿಗೆ ಮೂಲ.

ಅಂಗಕ್ಕೆ ಹೇಗೆ ನಿತ್ಯ ಆಹಾರ ಬೇಕೋ ಹಾಗೆ ಆತ್ಮನಿಗೆ ನಿತ್ಯ ಶಿವಾರಾಧನ ಬೇಕು. ನಿತ್ಯವೂ ನಿಯತಿಯನ್ನು ತಪ್ಪುವ ಚಿತ್ತಕ್ಕೆ ನಿತ್ಯ ಶಿವಾರಾಧನೆ ಅತ್ಯಗತ್ಯ. ಶಿವಾರಾಧನೆಯಿಂದ ಚಿತ್ತ ನಿರ್ಮ್ಮಳವಾಗಿರುತ್ತದೆ; ನಿಶ್ಚಲವಾಗಿರುತ್ತದೆ. ಮಿಗಿಲಾಗಿ ನಿಯತಿಯಿಂದ ಕೂಡಿಕೊಳ್ಳುತ್ತದೆ. ಅಪೇಕ್ಷಿಸುವವರು ಆಚರಿಸಿ ಅನುಭವಿಸಬೇಕು.

ಆರಾಧನೆ ಅಂತಃಕರಣದ ನಿಯತಿಗೆ ಕಾರಣ. ಅಂತಃಕರಣದ ನಿಯತಿ ಸತ್ವಯುಕ್ತ ಸತ್ತೆಗೆ ಕಾರಣ. ಸತ್ವಯುಕ್ತ ಸತ್ತೆಯೆ ಲಿಂಗ. ಅದುಳ್ಳವನೇ ಲಿಂಗಧಾರಿ. ಈ ಜೀವನ ಸಿದ್ಧಾಂತವನ್ನು ಈ ಶ್ಲೋಕದ ಪೂರ್ವಾರ್ಧವು ಪೂರ್ಣಪರಿಣಾಮಕಾರಿಯಾಗಿ ಪ್ರತಿಪಾದಿಸಿದೆ. ಅಂತೆಯೇ ಮುಂದಿನ ಉತ್ತರಾರ್ಧವು ಸಹಜೀವನಾನುಭವವನ್ನು ಪ್ರಕಾಶಿಸಿದೆ.

ಆರಾಧನೆಗೆ ಆಧಾರ ಅಖಿಲಮಲನಿವೃತ್ತಿ. ದೀಕ್ಷಾಸಂಸ್ಕಾರದಲ್ಲಿ ಶ್ರೀಗುರು ತ್ರಿಮಲ ನಿವೃತ್ತಿಗೊಳಿಸಿಲ್ಲವೆ ? ಇನ್ನಾವ ಮಲ ನಿವೃತ್ತಿ ? ಎಂದು ಏಳುವ ಪ್ರಶ್ನೆಗೆ ಉತ್ತರ ಆವಶ್ಯಕ.

ಶ್ರೀಗುರು ಸಂಸ್ಕಾರದಲ್ಲಿ ಕಳೆದುದು ಆತ್ಮಿಕವುಲತ್ರಯ, ಭಸ್ಮ ಕಳೆವುದು ತನುಮಲತ್ರಯ. ವಾಯುಮಲ, ಚರ್ಮರೋಗಳು ಉದರಮಲ ಎಂಬಿವು ಮೂರು ಮೈಮಲಗಳು.

ಗಾಳಿಯಿಂದ ಬರುವ ಮಲಗಳು ಎರಡು ಬಗೆ. ದೂಳಿ ರೋಗಾಣುಗಳೆರಡನ್ನು ತಂದು ಮೈಗೆ ಸೋಂಕಿಸುತ್ತದೆ. ಇವೆರಡನ್ನು ನಿವಾರಿಸುತ್ತದೆ ಭಸ್ಮ. ಭಸ್ಮಸ್ನಾನದಿಂದ ಪರಿಶುದ್ಧ ಭಸ್ಮಕಣಗಳು ಪ್ರತಿರೋಮ ಕೂಪಗಳಲ್ಲಿ ತುಂಬಿಕೊಂಡಿರುತ್ತವೆ. ಇದರಿಂದಾಗಿ ಗಾಳಿಯಲ್ಲಿ ಬರುವ ರೋಗಾಣುಗಳು ಪ್ರವೇಶಿಸಲು ಅವಕಾಶವಿರುವುದಿಲ್ಲ. ಮತ್ತು ಮೈಗೆ ಲೇಪಿಸಿದ (ಪೂಸಿದ) ಭಸ್ಮಕಣ ನುಣುಪಾಗಿರುವುದರಿಂದ ಗಾಳಿಯೊಡನೆ ಬಂದ ದೂಳಿಯನ್ನು ಮೈತೊವಲಿಗೆ ತಾಕದಂತೆ ನುಣುಚುತ್ತದೆ ಅಂದರೆ ಜಾರಿಸುತ್ತದೆ. ಒಂದು ವೇಳೆ ಅಂಟಿಕೊಂಡರೂ ಭಸ್ಮಕಣಗಳ ಮೇಲೆ ಅಂಟಿರುವುದರಿಂದ ಬೇಗ ಅಂದರೆ ತೊಳೆದೊಡನೆ ಬಿಟ್ಟು ಹೋಗುತ್ತದೆ.

ಇನ್ನು ಚರ್ಮಗತ ದೋಷಣೆಗಳೂ ಎರಡು. ಒಂದು ಚರ್ಮದ ಒರಟುತನ. ಇನ್ನೊಂದು ಚರ್ಮವ್ಯಾಧಿ. ಇವೆರಡನ್ನೂ ಕಳೆಯುತ್ತದೆ ಭಸ್ಮಲೇಪನ. ಒರಟು ತೊವಲು ಮೃದುವಾಗುತ್ತದೆ; ಮೆರಗುತ್ತದೆ. ಎಂತಹ ಚರ್ಮವ್ಯಾಧಿಯೇ ಇರಲಿ ಅದನ್ನು ಬೇಗ ಒಣಗಿಸುವ ವಾಸಿಮಾಡುವ ಗುಣ ಭಸ್ಮಕ್ಕಿದೆ. ಹುಣ್ಣನ್ನು ಒಣಗಿಸುತ್ತದೆ. ಕಜ್ಜಿ ತದ್ದು ಇಸುಬು ಕುರು ಮುಂತಾದವುಗಳನ್ನೂ ಅಣಗಿಸುತ್ತದೆ. ಪ್ರಯೋಗಿಸಿ ಪರೀಕ್ಷಿಸಬೇಕು.

ಮೂರನೆಯದಾಗಿ ಉದರ ಮಲಗಳೂ ಇಬ್ಬಗೆ. ಉದರಗತ ಜಲಮಲಗಳು ದೇಹದ ರೋಮಕೂಪಗಳಿಂದ ಬೆವರಿನ ರೂಪದಲ್ಲಿ ಹೊರಹೊಮ್ಮುತ್ತದೆ. ಹೊಮ್ಮಿ ಮೈ ದುರ್ವಾಸಿತವಾಗುತ್ತದೆ. ಭಸ್ಮಲೇಪನದಿಂದ ಈ ದೋಷಗಳೂ ದೂರಾಗುತ್ತವೆ. ಅಲ್ಲದೆ ಉಂಡ ಅನ್ನವು ಸುಲಭವಾಗಿ ಜೀರ್ಣವಾಗುತ್ತದೆ ಭಸ್ಮಲೇಪನದಿಂದ! ಭಸ್ಮಕಣಗಳಲ್ಲಿರುವ ತೇಜಸ್ಸು ರೋಮಗಳ ಮುಖಾಂತರ ಒಳಕ್ಕೆ ಹೋಗಿ ರಕ್ತಕ್ಕೆ ಬಲವನ್ನುಂಟು ಮಾಡುತ್ತದೆ; ತೇಜಸ್ಸನ್ನು ತಂದುಕೊಡುತ್ತದೆ. ರಕ್ತಬಲದಿಂದ ಉಂಡ ಅನ್ನ ಜೀರ್ಣವಾಗುತ್ತದೆ. ಸಂಪೂರ್ಣ ಜೀರ್ಣವಾಗುವುದರಿಂದ ನಿತ್ಯಶೌಚವು ಸುಖವಾಗಿ ಆಗುತ್ತದೆ. ಶೌಚವು ಸುಖವಾಗಿ ಸಂಪೂರ್ಣವಾಗಿ ಆಗುವುದರಿಂದ ಅಂದರೆ

ಒಡಲೊಳಗಿನ ಮಲವೆಲ್ಲ ಹೊರಗೆ ಹೊರಟುಹೋಗುವುದರಿಂದ ಒಡಲು ಶುದ್ಧವಾಗುತ್ತದೆ ; ಮನ ನಿರ್ಮಳವಾಗಿರುತ್ತದೆ. ಇದರಿಂದ ಶಾರೀರಕ ಮಾನಸಿಕ ಆರೋಗ್ಯವುಂಟಾಗುತ್ತವೆ. ಇದು ಸುಳ್ಳಲ್ಲ. ಸ್ವಾನುಭವ ವಿಷಯ. ಬೇಕಾದವರು ನಿತ್ಯ ಭಸ್ಮಸ್ನಾನಧಾರಣಗಳನ್ನು ಮಾಡಿ ನೋಡಬೇಕು. ಇದರಿಂದಾಗಿ ಭಸ್ಮವು ಈ ಎಲ್ಲಾ ಮಲನಿವಾರಕವಾಗಿದೆಯೆಂದು ಶ್ರೀ ರೇಣುಕ ಭಗವತ್ಪಾದರು ಸ್ವಾನುಭವದಿಂದ ಅಪ್ಪಣೆ ಕೊಡಿಸಿದ್ದಾರೆ. ಇನ್ನು ಭಸ್ಮದಿಂದಾಗುವ ಎರಡನೆಯ ಪ್ರಯೋಜನವೆಂದರೆ ಚಾರುತನ. ಭಸ್ಮವನ್ನು ಧರಿಸಿದಾತನಿಗೆ ಶಿವ ಸೌಂದರ್ಯವು ಸಂಪ್ರಾಪ್ತವಾಗುತ್ತದೆ. ಭಸ್ಮಾಂಗನೆನಿಸುತ್ತಾನೆ. ಗೌರಾಂಗನಾಗುತ್ತಾನೆ.

ಇನ್ನುಳಿಯಿತು 'ಯಥಾ ಪ್ರಯೋಗಮ್' ಎಂಬ ಪದ ಪ್ರಯೋಗ ಪರಿಣತೆಯ ಮಾತು. ಇಲ್ಲಿ ಕವಿ ತನ್ನ ಪೂರ್ಣ ಜಾಣ್ಮೆಯನ್ನು ಪ್ರಯೋಗಿಸಿದ್ದಾನೆ. ಪ್ರಯೋಗ ಶಬ್ದಕ್ಕೆ ಅನೇಕ ಅರ್ಥಗಳಿವೆ. ಅನುಷ್ಠಾನ, ಆಚರಣ, ನಿದರ್ಶನ, ನಿಗಮಾಗಮವಿಧಿ ವಿಧಾನ. ಕ್ರಮ, ಉಪಕ್ರಮ, ಪರಮಪ್ರಾಪ್ತಿ ಮುಂತಾದ ಅರ್ಥಗಳನ್ನು ಹೇಳಬಹುದು. ಇತ 'ಯಥಾ ಪ್ರಯೋಗಮ್' ಎಂದಿರುವುದರಿಂದ ನಿಗಮಾಗಮ ವಿಧಿ ವಿಧಾನದಂತೆ ಮತ್ತು ನಿಜಚರಿತ ಗುರು ಬೋಧೆಯಂತೆ ಪರಮಪ್ರಾಪ್ತಿಯು ಲಭಿಸುವಂತೆ (ಪ್ರಯೋಗಂಯಥಾ) ಭಸ್ಮವನ್ನು ಧರಿಸು ಎಂದರ್ಥವಾಗುತ್ತದೆ.

ಎರಡನೆಯದಾಗಿ ಹೀಗೆ ತನ್ನ ತನುವಿನ ತ್ರಿಮಲಗಳನ್ನು ಕಳೆವ ಮಹಿಮೆಯುಳ್ಳ ಈ ಭಸ್ಮದ ರಚನೆಯ ಧಾರಣೆಯ ಪ್ರಯೋಗವು ಯಥಾ-ಹೇಗೆಂದರೆ ಎಂಬ ಪ್ರಶ್ನೆಯನ್ನು ಮಾಡಿಕೊಂಡು ಮುಂದಿನ ಸಪ್ತಮ ಪರಿಚ್ಛೇದವನ್ನು ಪ್ರಾರಂಭಿಸುತ್ತಾನೆ ಕವಿ. ಓದುಗರ ಮತ್ತು ಸಾಧಕರ ಮನಸ್ಸನ್ನು ಭಸ್ಮದ ಸಾದ್ಯಂತ ವಿಷಯವನ್ನು ತಿಳಿಯಬೇಕೆಂಬುದರಲ್ಲಿ ಕೆರಳಿಸಿ 'ಭಸ್ಮಧಾರಣಸ್ಥಲ' ವನ್ನು ನಿರೂಪಿಸುತ್ತಾನೆ ಮೇಧಾವಿ ಕವಿ.

ಭಕ್ತಸ್ಥಲವು ಗುರುಭಕ್ತ, ಲಿಂಗಭಕ್ತ ಜಂಗಮಭಕ್ತ ಎಂದು ಮೂಬಗೆಯಾಗಿದೆ. ಈ ಮೂರರಲ್ಲಿ ಗುರುಭಕ್ತಸ್ಥಲವು ಪಿಂಡ, ಪಿಂಡಜ್ಞಾನ' ಸಂಸಾರ ಹ್ಯೇಯ, ಗುರುಕಾರುಣ್ಯ, ಲಿಂಗಾಧಾರಣ ಎಂದು ಇಲ್ಲಿಯವರೆವಿಗೆ ಹೇಳಿದ ಅಯ್ದು ಉಪಸ್ಥಲಗಳುಳ್ಳದಾಗಿದೆ. ಇಲ್ಲಿಗೆ ಗುರು ಭಕ್ತಸ್ಥಲವು ಸಮಾಪ್ತ

ವಾಯಿತು, ಗುರುಭಕ್ತನೇ ಮುಂದೆ ಭಸ್ಮಧಾರಣಸ್ಥಲದಿಂದ ಲಿಂಗಭಕ್ತನೆನಿಸುತ್ತಾನೆ. ಲಿಂಗಭಕ್ತನಾದರೂ ಗುರುಭಕ್ತಿಯನ್ನು ಬಿಟ್ಟಿರುವುದಿಲ್ಲ. ಬಿಟ್ಟರೆ ಲಿಂಗವಿಲ್ಲ. ಮುಂದಿನ ಲಿಂಗ–ಜಂಗಮ ಭಕ್ತಿಗೆ ಗುರುಭಕ್ತಿಯೇ ಬುನಾದಿ.

ಗುರುಭಕ್ತನು ಕಳೆದುಕೊಂಡುದನ್ನು ಕಳಾಗುರುವಿನಿಂದ ಗಳಿಸುತ್ತಾನೆ. ಗಳಿಸುವುದು ಈ ಅರ್ಥವನ್ನಲ್ಲ, ಪರಮಾರ್ಥವನ್ನು. ಅಬಲನು ಸಬಲನಾಗುತ್ತಾನೆ. ಪರಮಚಿತ್ಕಳಾಸ್ವರೂಪವಾದ ಲಿಂಗವೇ ಗುರುಭಕ್ತನ ಬಡತನ ನೀಗುವ ಗಳಿಕೆ; ಬಲವಂತಿಕೆ.

ಬಡತನ ಬಲಹೀನತೆ ಎಲ್ಲಿಯೂ ಬಾಳಿಸವು. ಯಾವ ಬಗೆಯಲ್ಲಿಯೂ ಬಾಳಿಸವು. ಇಹದಲ್ಲಿ ಇತ್ತ ವೈಯಕ್ತಿಕವಾಗಿಯೂ ಬಾಳುವಂತಿಲ್ಲ; ಅತ್ತ ಸಾಮಾಜಿಕವಾಗಿಯೂ ಬಾಳುವಂತಿಲ್ಲ. ಪರಕ್ಕೆ ಸಲ್ಲುವಂತಿಲ್ಲ.

ಗುರುಭಕ್ತನಾಗಿ ಗುರುಕರುಣೆಯಿಂದ ಲಿಂಗಕಾಯನಾಗಿ ಸಬಲನೆನಿಸುತ್ತಾನೆ. ಈ ಸಬಲತೆಯಿಂದ ಮುಂದೆ ಲಿಂಗಾರ್ಚನ ರೂಪಕ್ರಿಯೆ ಸಾಗುತ್ತದೆ. ಲಿಂಗಾರ್ಚನಾಸಕ್ತನಾಗುವುದರಿಂದ ಸುಮನತೆ ಸಮನಿಸುತ್ತದೆ. ಮನಕ್ಕೆ ನಿರ್ಮಲತೆ ನಿಶ್ಚಲತೆಗಳು ಅಳವಡುವುದೆ ಸಮನತೆ. ಇವು ಗುರು ಕರುಣಿಸಿದ ಚಿತ್ಕಳಾರೂಪಲಿಂಗಾರಾಧನೆಯಿಂದ ಉಂಟಾಗುತ್ತವೆ. ಲಿಂಗಾರಾಧಕನಾಗ ಬೇಕಾದರೆ ಭಸ್ಮ ರುದ್ರಾಕ್ಷಧಾರಣ, ಮಂತ್ರಜಪ, ಭಕ್ತಮಾರ್ಗ ಕ್ರಮಣ, ಗುರು–ಲಿಂಗ ಇವೆರಡರ ಸಮನ್ವಯ ಇವು ಅನಿವಾರ್ಯ; ಅಂಗೀಕರ್ತವ್ಯ.

ಭಸ್ಮಧಾರಣಸ್ಥಲ

(೬)

ಚಿತ್ ಅದುವೇ ಪಿಂಡ ; ಚಿತ್ಪಿಂಡವೇ ಆಕಾಶ. ಆ ಚಿದಾಕಾಶಾವಚ್ಛಿನ್ನ ಚೈತನ್ಯವೇ ಲಿಂಗ ; ಲಿಂಗವೇ ಭಾನು. ಆ ಚಿಚ್ಚೈತನ್ಯಭಾನುವಿನ ಬೆಳಗೇ ಭಸ್ಮ. ಆ ಬೆಳಗು ಅಂಗ ಭೂಮಿಕೆಗೆ ಬಂದು ಅಳವಡಬೇಕು. ಆ ಬೆಳಗಿನಲ್ಲಿ ಅಂಗಕ್ರಿಯೆಗಳೆಲ್ಲ ಸಾಂಗವಾಗಿ ಸಾಗಬೇಕು.

> 'ಭಸ್ಮಜ್ಯೋತಿಸ್ಸಮಾಮ್ನಾತಮವಸ್ಯಂ ತಸ್ಯ ಧಾರಣಾತ್
> ಸಂಸಾರ ಸಾಗರಂ ತೀರ್ತ್ವಾ ಕೈವಲ್ಯಫಲಮಶ್ನುತೇ 1
> ಭಸ್ಮೇದಂ ಶಾಂಭವಂ ಜ್ಯೋತಿಸ್ತದ್ಧ್ಯಾನಾದ್ಧ್ಯಾತ ಈಶ್ವರಃ
> ಭಸ್ಮಸಂದರ್ಶನಾದೇವ ಶಿವದರ್ಶನಮಶ್ನುತೇ 11'
>
> —ಚಂದ್ರಜ್ಞಾನಾಗಮ

> 'ಶಿವನ ಮೈವೆಳಗು ತಾನಾದ ಭಸಿತವನು'
>
> —ನಿಜಗುಣರು

ಈ ಉಕ್ತಿಗಳು ಭಸ್ಮಜ್ಯೋತಿ, ಭಸಿತ ಶಿವನ ಮೈವೆಳಗು ಎಂಬುದನ್ನು ವೆಗ್ಗಳಿಸಿವೆ. ಭಾಸ್ಕರನ ಬೆಳಕಿನಿಂದ ಶರೀರಾರೋಗ್ಯವು ಬರುವಂತೆ ಶಿವಲಿಂಗದ ಮೈವೆಳಗಾದ ಭಸ್ಮದಿಂದ ಶಾರೀರಕ ಮಾನಸಿಕ ಆರೋಗ್ಯಗಳೆರಡೂ ಅಳವಡುತ್ತವೆ. ಸೂರ್ಯಪ್ರಕಾಶದಿಂದ ಕತ್ತಲೆಯು ಕಳೆವಂತೆ ಭಸ್ಮಜ್ಯೋತಿಯಿಂದ ಪಾಪತಮಸ್ಸು ಪರಿಹಾರವಾಗುತ್ತದೆ. ಸಾಂಸಾರಿಕ ರೋಗ ನಿವಾರಣವಾಗುತ್ತದೆ. ಸೂರ್ಯೋದಯದಿಂದ ಸರ್ವಲೋಕ ವ್ಯವಹಾರವು ಸಾಗುವಂತೆ ಭಸ್ಮಜ್ಯೋತಿಯ ಧಾರಣದಿಂದ ಲಿಂಗಾರ್ಚನ, ಮಂತ್ರ ಜಪಾನುಷ್ಠಾನ, ಧ್ಯಾನ, ಧಾರಣಾದಿ ಕ್ರಿಯೆಗಳು ಸಾಂಗಗೊಳ್ಳುತ್ತವೆ. ಶುದ್ಧಿ, ಶೋಭೆ, ಸಂರಕ್ಷಣೆಗಳು ಸಂಭವಿಸುತ್ತವೆ- ಪರಮೈಶ್ವರ್ಯ ಪ್ರಾಪ್ತಿಯಾಗುತ್ತದೆ.

'ಅನಾದಿ ಶಾಶ್ವತಂ ಶಾಂತಂ ಚೈತನ್ಯಂ ಚಿತ್ ಸ್ವರೂಪಕಮ್ ।
ಚಿದಂಗಮ್ಮೃಷಭಾಕಾರಂ ಚಿದ್ಭಸ್ಮಂ ಲಿಂಗಧಾರಣಮ್ ॥
ಪ್ರಥಮಂ ಗೂಢನಿರ್ನಾಮಂ ದ್ವಿತೀಯಂ ಚಿತ್ ಸ್ವರೂಪಕಮ್ ।
ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಮ್ ॥'

ಭಸ್ಮಜ್ಯೋತಿ ಅನಾದಿ, ಶಾಶ್ವತ, ಶಾಂತ. ನಾವು ಮೊದಲು ಹೇಳಿರುವಂತೆ ಚಿಚ್ಚೈತನ್ಯ ಸ್ವರೂಪ. ಚಿತ್ ಅಂಗವಾಗಿರುವುದರಿಂದ ಶ್ರೇಷ್ಠವಾದುದು. ಚಿದ್ರೂಪವಾದುದು. ಚಿತ್‌ರೂಪಕ್ಕೆ ಬಾರದ ಮುನ್ನ ಈ ಭಸ್ಮಜ್ಯೋತಿಯು ಗೂಢವಾಗಿರುತ್ತದೆ. ನಾಮರಹಿತವಾಗಿರುತ್ತದೆ. ಚಿತ್ ಸ್ವರೂಪವಾದಾಗ ಎರಡನೆಯ ಹಂತಕ್ಕೆ ಬರುತ್ತದೆ. ಅದೇ ಚಿಚ್ಚೈತನ್ಯ (ಲಿಂಗ) ವಾದಾಗ ಚಿದ್ವಿಲಾಸವೆನಿಸುತ್ತದೆ; ಇದೇ ಮೂರನೆಯ ಹಂತ ಇದುವೇ ನಿರುಪಾಧಿಕ ಚಿದ್ಭಸ್ಮ. ನಾಲ್ಕನೆಯ ರೂಪಕ್ಕೆ ಬಂದಾಗ ಸೋಪಾಧಿಕ ಭಸ್ಮವೆನಿಸುತ್ತವೆ. ನಾಮ ರೂಪುಗಳನ್ನು ಧರಿಸುತ್ತದೆ. ಧಾರಣಾದಿ ಕ್ರಿಯೆಗಳಿಗೆ ಕೈಗೂಡುತ್ತದೆ.

'ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾ ಪ್ರಕಾಶವೇ ಚಿತ್ ಎನಿಸಿತ್ತು. ಆ ಚಿತ್ತೇ ಚಿದಂಗ. ಆ ಚಿದಂಗದಲ್ಲಿ ತೋರಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣ ಜ್ಯೋತಿರ್ಲಿಂಗವಹುದು ತಪ್ಪದು ಕಾಣಾ ಉರುಲಿಂಗಪೆದ್ದಿ ಪ್ರಿಯಗುರು ವಿಶ್ವೇಶ್ವರಾ.'

ಭಸ್ಮ ಸಂಪಾದನ

"ಭಸ್ಮಧಾರಣ ಸಂಯುಕ್ತಃ ಪವಿತ್ರೋ ನಿಯತಾಶಯಃ ।
ಶಿವಾಭಿಧಾನಂ ಯತ್ಪ್ರೋಕ್ತಂ ಭಾಸನಾದ್ಭಸಿತಂ ತಥಾ ॥"

ಜ್ಞಾನಭಸ್ಮ, ಕ್ರಿಯಾಭಸ್ಮ ಎಂದು ಭಸ್ಮ ಇಬ್ಬಗೆ. ಉಭಯ ಭಸ್ಮ ಧಾರಣದಿಂದ ವಂಚಿತರಾಗಬಾರದು ಮುಮುಕ್ಷುಗಳು–'ಭೂತ್ಯೈ ನ ಪ್ರಮದಿತವ್ಯಮ್' ಎಂದಿದೆ ಶ್ರುತಿ. ಗಮನಾರ್ಹವಿದು. ಭಸ್ಮಧಾರಣವನ್ನು ಮಾಡಿದಾತನೇ ಪವಿತ್ರನು, ನಿರೋಧ ಚಿತ್ತವೃತ್ತಿಯುಳ್ಳವನು. ಕ್ರಿಯಾ ಭಸ್ಮ ಧರಿಸಿದಾತನೇ ಯುಕ್ತನೆನಿಸುತ್ತಾನೆ. ಆತನ ದೇಹದೋಷಗಳೆಲ್ಲ ತ್ಯಾಗವಾಗಿ

ಪಾವನನಾಗುತ್ತಾನೆ. ಜ್ಞಾನಭಸ್ಮಧರಿಸಿದಲ್ಲಿ ಚಿತ್ತವೃತ್ತಿ ನಿರೋಧರೂಪ ಯೋಗವೊದಗಿ ನಿಯತಾಶಯನಾಗುತ್ತಾನೆ. ಭರಿತಾಶಯನಾಗುತ್ತಾನೆ.

'ಭಾಸನಾದ್ಭಸಿತಂ' ಎಂದು ಹೇಳಿ ಭಸಿತ ಜ್ಯೋತಿಸ್ವರೂಪವೆಂಬುದನ್ನು ಜಗದ್ಗುರು ಶ್ರೀ ರೇಣುಕರು ಸಿದ್ಧಮಾಡಿದ್ದಾರೆ. ಭಸ್ಮ ಶಿವಾಭಿಧಾನವುಳ್ಳದಾಗಿದೆ. ಅದು ಶಿವಾಗ್ನಿಜನ್ಯವಾಗಿ ಶಿವಜ್ಯೋತಿ ರೂಪಾಗಿ ತ್ರ್ಯಂಬಕ ಮಂತ್ರಾತ್ಮಕವಾಗಿ ಶಿವನಾಮರೂಪುಳ್ಳದಾಗಿದೆ.

ಮಹಾಭಸ್ಮೇತಿ ಸಂಚಿಂತ್ಯ ಮಹಾದೇವ ಪ್ರಭಾಮಯಮ್ ।
ವರ್ತಂತೇ ಯೇ ಮಹಾಭಾಗಾ ಮುಖ್ಯಾಸ್ತೇ ಭಸ್ಮಧಾರಿಣಃ॥"

ಆ ಮಹಾದೇವನ ಮಹಾಪ್ರಭೆಯೇ ಮಹಾಭಸ್ಮ. ಅದುವೇ ನಿರುಪಾಧಿಕ ಚಿದ್ಭಸ್ಮ. ಅದೇ ಕಾಲ ಕಾಮರನ್ನು ಉರುಹಿದ ಭಸ್ಮ. ತ್ರಿಪುರ ಸಂಹರ ಭಸ್ಮ. ಕರ್ಮತ್ರಯ, ಗುಣತ್ರಯ, ಮಲತ್ರಯ, ಭಾವತ್ರಯಗಳನ್ನು ಸುಟ್ಟುಹಾಕುವ ಭಸ್ಮ. ಆದ್ದರಿಂದ ಅದು ಮಹಾಭಸ್ಮ. ಅದು ಮಹಾದೇವನ ಆ ಪ್ರಭಾಮಯ ಭಸ್ಮ. ಎಂದು ಯಾರು ಚೆನ್ನಾಗಿ ತಿಳಿದು ತಳೆದು ಕೊಳಗುವರೋ ಅವರೇ ಮಹಾನುಭಾವರು. ಅವರೇ ಮುಖ್ಯರು, ಮೊದಲಿಗರು. ಅವರೇ ಚಿಜ್ಜ್ಯೋತರೂಪ ಭಸ್ಮಧಾರಿಗಳು.

'ಮಹಾಭಸ್ಮ' ಪ್ರಯೋಗವು ಗಮನಾರ್ಹವಾಗಿದೆ; ಅರ್ಥ ಪೂರ್ಣವೂ ಅನುಭವಪೂರ್ಣವೂ ಆಗಿದೆ. ಮಹಾಲಿಂಗಕ್ಕೆ ಬೇಕಾದುದು ಮಹಾಭಸ್ಮ ತಾನೆ ? ಅಂತೆಯೇ ಆ ಮಹಾಲಿಂಗವನ್ನು ಧರಿಸಿದ ಮಹಾಂಗಕ್ಕೂ ಮಹಾಭಸ್ಮವೇ ಬೇಕು. ಆ ಮಹಾಂಗವೇ ಮನ. ಮನದ ಮರವೆಯೆಂಬ ಮಲ ಕಳೆಯಬೇಕಾದರೆ ಮಹಾಭಸ್ಮವೇ ಬೇಕು. ಹಾಗಾದರೆ ಆ ಮಹಾಭಸ್ಮ ಯಾವುದು ? ಎಂಬೀ ಪ್ರಶ್ನೆಗೆ ಮಂತ್ರದ ಮುಂದಿನ ಈ ದ್ವಿತೀಯ ಪಾದದಲ್ಲಿ ಉತ್ತರವಿದೆ: 'ಮಹಾದೇವ ಪ್ರಭಾಮಯಮ್.' ಇಲ್ಲಿರುವ ದೇವ ಶಬ್ದಕ್ಕೆ ಲಿಂಗವೆಂದರ್ಥ. ಲಿಂಗವೆಂದೇ ಹೇಳಬಹುದಾಗಿತ್ತು. ಆದರೆ ದೇವ ಪದಕ್ಕೆ ಇಲ್ಲಿ ಔಚಿತ್ಯವಿದೆ. ಏಕೆಂದರೆ ಪ್ರಭೆಯನ್ನು ವೆಗ್ಗಳಿಸುವ ಸೂಚಿಸುವ ಶಬ್ದ ದೇವ ಎಂಬುದು. ಆ ಮಹಾದೇವನ ಪ್ರಭಾಮಯವೇ ಮಹಾಭಸ್ಮ. ಅದರ ಧಾರಣದಿಂದ ಮನದ ವಿಸ್ಮೃತಿ ಮೃತಿಗೊಂಡು ಸ್ವಾನುಭವರೂಪ ಸಂಸ್ಕಾರ

ವುಂಟಾಗುತ್ತದೆ. ಆ ಸ್ವಾನುಭವದಿಂದ ಶಾಶ್ವತವಾದ ಪರಿಣಾಮವುಂಟಾಗುತ್ತದೆ. ಆ ಮಹಾದೇವನ ಅನುಭವಗಳನ್ನು ಕಾಯ್ದಿರಿಸಿಕೊಳ್ಳುವ ಶಕ್ತಿ ಯುಕ್ತಿ ಮನಸ್ಸಿಗೆ ಉಂಟಾಗುತ್ತದೆ. ಆ ಶಕ್ತಿಗೆ ವೇಧಾನಂಸ್ಕಾರವೆಂದು ಹೇಳುತ್ತೇವೆ.

ಮಹಾಭಸ್ಮ ಪದ ಪ್ರಯೋಗದಂತೆ 'ಮಹಾಭಾಗಾ' ಎಂಬ ಪದ ಪ್ರಯೋಗವೂ ಪೂರ್ಣ ಸ್ವಾನುಭವದಿಂದ ಕೂಡಿದೆ. ಆ ಮಹಾದೇವನ ಪ್ರಭೆಯೆಂಬ ಮಹಾಭಸ್ಮವನ್ನು ಧರಿಸಿದವರು ಮಹಾಭಾಗರು ಅಂದರೆ ಮಹಾನುಭಾವರು. ಅಂದರೆ ಆ ಮಹಾದೇವ (ಲಿಂಗ)ನ ಅನುಭವ ವುಳ್ಳವರು. ಆ ಮಹಾದೇವಾನುಭಾವವುಳ್ಳವರು ಮುಖ್ಯರಾಗದೆ ಇನ್ನೇನಾದಾರು ?

'ಮಹಾಭಾಗ' ಪದದಲ್ಲಿ ಮಹಾಭಸ್ಮಧಾರಣದಿಂದಾಗುವ ಫಲವೂ ಉದ್ದೀಪಿತವಾಗಿದೆ. ಇದರ ಪ್ರಯೋಗದ ಔಚಿತ್ಯವನ್ನೂ ಪರಿಣತೆಯನ್ನೂ ಇನ್ನೆಷ್ಟು ಹೇಳಿದರೂ ತೀರದು. ಆ ಮಹಾಭಸ್ಮಧಾರಿಗಳು ಆ ಮಹಾದೇವನ ಭಾಗಕ್ಕೆ ಸೇರಿದವರು. ಅಂದರೆ ಮಹಾದೇವಸ್ವರೂಪರು. ಅಂದರೆ ಆ ತೇಜಸ್ಸು, ಆ ಅನುಭವ, ಆ ಐಶ್ವರ್ಯ, ಆ ಶಕ್ತಿ, ಆ ಧರ್ಮ, ಆ ಬಲ–ಉಳ್ಳವರು. ಆದ್ದರಿಂದ ಅವರೇ ಭಸ್ಮಧಾರಿಗಳಲ್ಲಿ ಮುಖ್ಯರು. ಮಹಾದೇವಾನುಭಾವಿಗಳಲ್ಲಿ ಪ್ರಮುಖರು. ಕನ್ನಡದಲ್ಲಿ ಹೇಳಬೇಕೆಂದರೆ ಅವರೇ ಹೆಗ್ಗಡೆಯುವರು.

ಮಾನವನ ಅಂತರಂಗವೇ ಮನಸ್ಸು. ಮೊದಲು ಅಂತರಂಗಕ್ಕೆ ಮಹಾ (ಜ್ಞಾನ) ಭಸ್ಮದ ಧಾರಣವಾಗಬೇಕು. ಬಳಿಕ ಬಹಿರಂಗಕ್ಕೆ ಭಸ್ಮಧಾರಣ ವಾಗಬೇಕು. ಮನಸ್ಸು ಮೈಗಳು ಬೇರೆ ಬೇರೆ ಎಂದು ಹೇಳುವವರ ಮಾತಿಲ್ಲಿ ಬಿದ್ದುಹೋಗುತ್ತದೆ. ಅತ್ಯಂತ ಭಿನ್ನವಲ್ಲ. ಭಿನ್ನಾಭಿನ್ನ ಸ್ವರೂಪದಲ್ಲಿ ಮನಸ್ಸಿದೆ. ಒಂದರೊಳಗಿನ ಇನ್ನೊಂದು ವಸ್ತು ಮನಸ್ಸು. ಬೆನ್ನು ಬೇರೆ ಹೊಟ್ಟೆ ಬೇರೆ ಎಂದು ಹೇಳಬಹುದೆ ? ಹೇಳದಿರಬಹುದೇ ? ಬೇರೆಯೆಂದರೆ ಒಂದನ್ನೊಂದು ಬಿಟ್ಟಿರವು. ಒಂದೆಂದರೆ ಭಿನ್ನ ನಾಮ ರೂಪು ಕ್ರಿಯೆಗಳಿವೆ. ಆದ್ದರಿಂದ ಪ್ರಭುದೇವರು ಹೀಗೆ ಹೇಳಿದರು: 'ಒಂದೆಂಬೆನೆ ಎರಡಾಗಿದೆ; ಎರಡೆಂಬೆನೆ ಒಂದಾಗಿದೆ. ಈ ಮಾತು ಮೈ ಮನಸ್ಸುಗಳಿಗೂ ಒಪ್ಪಾಗಿದೆ. ಇದೀಗ ಇಷ್ಟು ವಿಮರ್ಶೆ ಸಾಕು.

ಅಂತರಂಗವಾಗಿ ಮನಸ್ಸೊಂದಿದೆ, ಆ ಮನಸ್ಸಿಗೊಂದು ಮಹಾ ಚೈತನ್ಯ ಇದೆ. ಆ ಚೈತನ್ಯದ ಪ್ರಭೆಯನ್ನು ಮಾಯಾಮಲ ಮರೆಮಾಡಿದೆ. ಆ ಮಾಯಾಮಲವನ್ನು ಮಂತ್ರ ಸಂಸ್ಕಾರದಿಂದ ಕಳೆದುಕೊಂಡು ಅಂದರೆ ಹಿನ್ನೆಲೆಯಾಗಿಸಿ ಆ ಮಹಾಲಿಂಗದ ಮಹಾಪ್ರಭೆ (ಮಹಾನುಭವ) ಯನ್ನು ಮನಕ್ಕೆ ಉಂಟುಮಾಡಿಕೊಳ್ಳುವುದೇ ಮಹಾಭಸ್ಮಧಾರಣ ; ಮಹಾಜ್ಞಾನ ಧಾರಣ.

'ವರ್ತಂತೇ' ಎಂದು ಹೇಳಿ ಕವಿ ಇಲ್ಲಿ ಭಕ್ತನ ಅಂತವರ್ತನವನ್ನು ಪ್ರತಿಪಾದಿಸಿದ್ದಾನೆ ಆಮಹಾಜ್ಞಾನ ಧಾರಣದಲ್ಲಿಯೂ ಒಂದು ಸೂಕ್ಷ್ಮ ಕ್ರಿಯೆಯಿದೆಯೆಂಬುದನ್ನು ವೆಗ್ಗಳಿಸುತ್ತಾನೆ ಮಹಾನುಭಾವಿ ಕವಿ. ಇದೊಂದು ಕವಿಯ ಅಂತರ್ದರ್ಶನ, ಅಂದರೆ ಒಳನೋಟ.

ಮೋಹಾಂಧಕಾರವುಳ್ಳ ಅಂತರಂಗಕ್ಕೆ ಮಹಾ ಪ್ರಭೆಯುಳ್ಳ ಪ್ರದೀಪ ವನ್ನು ಪ್ರಾಪ್ತಿಸಿದ್ದಾನೆ ಪ್ರಾಜ್ಞ ಕವಿ.

ಸೋಪಾಧಿಕ ಭಸ್ಮಲಕ್ಷಣ

"ಶಿವಾಗ್ನ್ಯಾದಿ ಸಮುತ್ಪನ್ನಂ ಮಂತ್ರನ್ಯಾಸಾದಿಯೋಗತಃ |
ತತ್ಸೋಪಾಧಿಕಮಿತ್ಯಾಹುರ್ಭಸ್ಮ ತಂತ್ರವಿಶಾರದಾಃ ||"

ಪಂಚಬ್ರಹ್ಮ ಮಂತ್ರಲೇಖನ ಸಂಸ್ಕಾರದಿಂದ ಶುದ್ಧವಾದ ಗೋಮಯ ವನ್ನು ಶಿವಷಡಕ್ಷರ ಮಂತ್ರಸಂಸ್ಕಾರದಿಂದ ಪ್ರತಿಷ್ಠಿತವಾದ ಶಿವಾಗ್ನಿಯಲ್ಲಿ ಸುಟ್ಟು ಮಾಡಿದ ಭಸ್ಮವೇ ಸೊಪಾಧಿಕಭಸ್ಮವೆಂದು ಭಸ್ಮತಂತ್ರಜ್ಞರ ಅಭಿಮತ.

ಭಸ್ಮರಚನೆ, ಭಸ್ಮರಚನೆಗೆ ಬೇಕಾದ ಬೆಂಕಿ, ಸಗಣಿಗಳು, ಬಗೆ ಬಗೆ ಯಾಗಿವೆ. ಸಿಕ್ಕ ಸಗಣಿಯಲ್ಲಿ ಮಂತ್ರನ್ಯಾಸವಿಲ್ಲದೆ ಒಲೆ, ಮಂತ್ರ ಹೋಮಾದಿಗಳ ಬೆಂಕಿಯಲ್ಲಾದ ಭಸ್ಮ ತಕ್ಕುದಲ್ಲ.

'ಶಿವಾಗ್ನಿ ಜನಿತಂ ಭಸ್ಮ ಶಸ್ತಂ ಸ್ಯಾಚ್ಛಿವಯೋಗಿನಾಮ್ |
ವಿರಜಾನಲಜಂ ಚೈವ ಧಾರ್ಯಂ ಭಸ್ಮ ಮಹಾಮುನೇ ||'
—ಚಂದ್ರಜ್ಞಾನಾಗಮ

ಶಿವಯೋಗ ಸಂಪನ್ನರಿಗೆ ಶಿವಾಗ್ನಿಯಿಂದಾದ ಕ್ರಿಯಾಭಸ್ಮವೇ ಪ್ರಶಸ್ತ. ಮತ್ತು ರಜೋಗುಣರಹಿತವಾದ ಜ್ಞಾನಾಗ್ನಿಯಿಂದುತ್ಪನ್ನವಾದ ಜ್ಞಾನ ಭಸ್ಮವೂ ಧರಿಸಲಿಕ್ಕೆ ತಕ್ಕದ್ದು. ಎಂಬುದಾಗಿ ಸೋಪಾಧಿ ನಿರುಪಾಧಿ ಭಸ್ಮಗಳೆರಡನ್ನೇ ವೀರಶೈವರಿಗೆ ವಿಧಿಸಿದೆ ಚಂದ್ರಜ್ಞಾನಾಗಮವೂ ಸಹ !

"ವಿಭೂತಿರ್ಭಸಿತಂ ಭಸ್ಮ ಕ್ಷಾರಂ ರಕ್ಷೇತಿ ಭಸ್ಮನಃ |
ಏತಾನಿ ಪಂಚನಾಮಾನಿ ಹೇತುಭಿಃ ಪಂಚಭಿರ್ಭೃಶಮ್ ||"

ಸೋಪಾಧಿಕ ಭಸಿತವು ಅಯ್ದು ಆಧಾರಗಳಿಂದ ವಿಭೂತಿ, ಭಸಿತ, ಭಸ್ಮ, ಕ್ಷಾರ, ರಕ್ಷೆ ಎಂಬುದಾಗಿ ಅಯ್ದು ಹೆಸರುಗಳುಳ್ಳದಾಗಿದೆ. ಈ ಅಯ್ದು ಆವಶ್ಯಕವಾದವುಗಳು ; ಆತ್ಯಂತಿಕವಾದವುಗಳು ; ಕಾರಣಧರ್ಮಗಳು ಕಾರ್ಯದಲ್ಲಿ ಬಂದಿರುವುದರಿಂದ ಬೇರೆಬೇರೆ ಹೆಸರುಗಳುಂಟಾಗಿವೆ ; ಬೇರೆ ಬೇರೆ ಫಲಗಳೂ ಉಂಟಾಗುತ್ತವೆ.

"ವಿಭೂತಿರ್ಭೂತಿ ಹೇತುತ್ವಾದ್ಭಸಿತಂ ತತ್ತ್ವಭಾಸನಾತ್ ।
ಪಾಪಾನಾಂ ಭರ್ತ್ಸನಾದ್ಭಸ್ಮ ಕ್ಷಾರಣಾತ್ ಕ್ಷಾರಮಾಪದಾಮ್ ।
ರಕ್ಷಣಾತ್ಸರ್ವಭೂತೇಭ್ಯೋ ರಕ್ಷೇತಿ ಪರಿಗೀಯತೇ ॥"

ಅಷ್ಟ ವಿಧ ಸಂಪತ್ತಿಯನ್ನು ಕೊಡುವದಾಗಿ ವಿಭೂತಿಯೆನಿಸಿದೆ. ಶ್ರೇಷ್ಟ ತತ್ತ್ವಪ್ರಕಾಶಕವಾಗಿ ಭಸಿತವೆನಿಸಿದೆ. ಪಾಪಗಳನ್ನು ಧ್ವಂಸಮಾಡುವುದಾಗಿ ಭಸ್ಮ. ವಿಪತ್ತುಗಳನ್ನು ವಿಲಯಿಸುವದಾಗಿ ಕ್ಷಾರ. ಸರ್ವಭೂತ ಪಿಶಾಚಗಳಿಂದ ರಕ್ಷಿಸುವುದಾಗಿ ರಕ್ಷೆ.

ವಿಭೂತಿ ಫಲ

'ಭೂತಿರ್ಭೂತಿಕರೀ ಪವಿತ್ರ ಜನನೀ ಪಾಪೌಘ ವಿಧ್ವಂಸಿನೀ
ಸರ್ವೋಪದ್ರವನಾಶಿನೀ ಶುಭಕರೀ ಶೋಕಂಚವಿಚ್ಛೇದಿನೀ ।
ಭೂತಪ್ರೇತ ಪಿಶಾಚಿ ರಾಕ್ಷಸಹರೀ ಇಷ್ಟಾರ್ಥ ಸಂಪತ್ಕರೀ
ತೇಜೋರಾಜ್ಯ ವಿಶೇಷ ಮೋಕ್ಷಫಲದಾ ಭೂತಿಸ್ಸದಾ ಧಾರ್ಯತಾಮ್ ।

ಈ ಶ್ಲೋಕದಲ್ಲಿ ವಿಭೂತಿಗಿರುವ ಶಕ್ತಿಚಿತ್ರ ಚೆನ್ನಾಗಿ ಚಿತ್ರಿತವಾಗಿದೆ. ವಿಭೂತಿಯಲ್ಲಿ ನಿವೃತ್ತಿ ಕಲೆಯಿದೆ. ವಿಭೂತಿಧಾರಣ ಅದೊಂದು ಅಮಳ

ಯೋಗ. ಅದನ್ನು ಧರಿಸುವಾತನು ಆಗುವನು ಲೋಕಕ್ಕೆಲ್ಲ ಮಹಾ ವಿಭೂತಿ. ವಿಭೂತಿ ವರ್ಣನೆಯನ್ನು ಹರಿಹರಕವಿಯು ಹೀಗೆ ಮಾಡಿದಾನೆ.

'ನೀತಿಯ ನೀತಿ ಜಗತ್ ಪ್ರಖ್ಯಾತಿಯ ನತನಾ ಹರತ್ಪದಾತಿಯನು ದ್ಯುತ್ । ಜ್ಯೋತಿಯನೆ ಪೊಗಳ್ವೆನೊಲ್ದು ವಿ-। ಭೂತಿಯ ನೆಲೆ ಶಿವನೆ ಹಂಪೆಯ ವಿರೂಪಾಕ್ಷಾ ॥

'ಘನಪದ ವೀವುದಾವುದು ವಿಭೂತಿ, ಜಗತ್ಪ್ರಭುವಾಗಿ ಬಾಳ್ವ ಪೆಂ 1
ಪಿನಪದ ವೀವುದಾವುದು ವಿಭೂತಿ, ಕರಂ ದುರಿತೌಘದಿಂದ ನೊಂ
ದನನುರೆ ಕಾವುದಾವುದು ವಿಭೂತಿ, ಸಮಸ್ತ ಜನಾನನಕ್ಕೆ ಮಂ-1
ಡನತೆಯನೀವುದಾವುದು ವಿಭೂತಿಯೆ ಹಂಪೆಯ ದೇವನುನ್ನತವ್॥'

ಹಂಪೆಯರಸನೊಲ್ದು ತಾನೆ ಧರಿಸಿಯಿರ್ಪ ವರ ವಿಭೂತಿ
ಇಂಪು ತಂಪು ಸೊಂಪುವಡೆದ ಸಂಪದ ಪ್ರದಂ ವಿಭೂತಿ
ಬಾಳನಯಿನದಿಂದೆ ಪುಟ್ಟಿ ತುಷ್ಟಿ ವಡೆದ ವರ ವಿಭೂತಿ
ಶೂಲಧರನ ಹರನ ವರನ ಪರಮಶಕ್ತಿಕಲೆ ವಿಭೂತಿ
ಭಕ್ತ ಕುಲದ ಭಾಳತಳದಿ ಹೊಳೆವ ತಿಲಕವೀ ವಿಭೂತಿ
ಮುಕ್ತಿ ಫಲದ ಬೆಳ್ಪು ದಳೆದ ರಸದ ಹಣ್ಣೆಯೀ ವಿಭೂತಿ
ಶರಣ ಜನದ ನಿಜದ ಭುಜದ ವಿಜಯ ಪಟ್ಟವೀ ವಿಭೂತಿ
ಶರಣ ತತಿಯ ಗತಿಯ ಮತಿಯ ನುತವಿಳಾಸವೀ ವಿಭೂತಿ
ಒಳಗಣ ಘವನಣಗಿಸಿರ್ಪ ವಾಯು ಬೀಜವೀ ವಿಭೂತಿ
ಬೆಳಗುತದನೆ ಸುಟ್ಟು ಕಳೆವ ವಹ್ನಿಬೀಜವೀ ವಿಭೂತಿ
ಅಂತರಂಗ ಮಲವನಳಿದು ತೊಳೆವ ಸಲಿಲವೀ ವಿಭೂತಿ
ಕಂತುಹರನನಿಲ್ಲಿ ನೆಲಸೆ ನಿಲಿಸುವಮೃತವೀ ವಿಭೂತಿ
ಶಿಕ್ಷೆಗಾದಿ ದೀಕ್ಷೆಗಾದಿ ಮೋಕ್ಷದಾದಿಯೀ ವಿಭೂತಿ
ಅಕ್ಷರಂ ಸುಲಕ್ಷಣಂ ಶಿಖೀಕ್ಷಣಂ ಘನಂ ವಿಭೂತಿ
ಪಟ್ಟ ಭದ್ರರೆನಿಪ ನೃಪತಿ ಕುಲಕೆ ತಿಲಕವೀ ವಿಭೂತಿ
ನಿಷ್ಠೆ ಮಿಗೆ ಪತಿವ್ರತಾ ಜನಕ್ಕೆ ಮಂಗಳಂ ವಿಭೂತಿ
ದೇವ ಸಭೆಗೆ ಬ್ರಹ್ಮ ಸಭೆಗೆ ಸಾಜ ಸಭೆಗೆ ಯೋಗ್ಯಮಿದುವೆ
ದೇವರಾಜ ರಾಜನಮರ ಪೂಜ್ಯನೊಲ್ವ ಭಾಗ್ಯಮಿದುವೆ.

ಚಿತ್ಪ್ರಕಾಶರಾಶಿಯೆನಿಪ್ಪ ಭವನಿಡುವನ ವರವಿಭೂತಿ
ಸುಪ್ರಬುದ್ಧ ಸತ್ಯಶರಣ ಸತ್ಪಥಪ್ರದಂ ವಿಭೂತಿ
ಸಿಂಗರಕ್ಕೆ ಸಿಂಗರಂ ಚಿರಂ ಕರಂ ವರಂ ವಿಭೂತಿ
ಮಂಗಳಕ್ಕೆ ಮುಖ್ಯ ಮಂಗಳ ಪ್ರಭೂತವೀ ವಿಭೂತಿ

ಧರೆ ಜಲಾಗ್ನಿ ವಾಯುಗಗನವಿಂದ್ವಿನಾತ್ಮತತಿ ವಿಭೂತಿ
ಪರಮತತ್ವ್ವಸಾರ ಶೈವಸುರಭಿ ನೋಡಿದೀ ವಿಭೂತಿ
ಸಕಲ ಶಕ್ತಿ ಯುಕ್ತಿ ಮುಕ್ತಿ ಭಕ್ತಿ ರಕ್ತಿಯೀ ವಿಭೂತಿ
ಧರಿಯಿಪರ್ಗೆ ವರ ಮುಖಂ ಸಖಂ ಸುಖಂ ವಿಭೂತಿ

ಸಿರಿಗೆ ಸಿರಿ ಗುಣಕೆ ಗುಣವನಾದಿ ಗಾದಿಯೀ ವಿಭೂತಿ.
ಧರೆಗೆ ಧರೆ ಜಲಕ್ಕೆ ಜಲವಿನಂಗಿನಂ ಘನಂ ವಿಭೂತಿ
ಹುತುವಹಂಗೆ ಹುತವಹಂ ನಭಕ್ಕೆ ನಭವೆನಿಪ್ಪ ಭೂತಿ
ಅತುಳವಾಯುವಿಂಗೆ ವಾಯುವಿಂದು ಗಂದು ಸಂದ ವಿಭೂತಿ
ಚೇತನಕ್ಕೆ ಚೇತನಂ ಪುರಾತನಂ ಪ್ರಸಿದ್ಧ ಭೂತಿ
ಭೂತಹಿತವ ಜಾತವಃಭವನಾಥರತಿಹಿತಂ ವಿಭೂತಿ
ನತ ಜನಕ್ಕೆ ಸತ್ಫಲಂ ಛಲಂ ನಲಂ ಬಲಂ ವಿಭೂತಿ
ಅತಿಶಯಂ ನಯಂ ಜಯಂ ವಯಂ ಪಯಂ ಪ್ರಿಯಂ ವಿಭೂತಿ

ವಿಭೂತಿಯ ವಿಷಯದಲ್ಲಿ ಈ ಮಾತುಗಳು ಮನನಾರ್ಹವಾಗಿವೆ. ಮನೋಹರವಾಗಿವೆ.

ಭಸಿತ ಫಲ :

ಶಿರದೊಳಿಟ್ಟ ಭಸಿತದೊಳ್ ಸದಾಶಿವಂ ಸರಾಗದಲ್ಲಿ
ಸರಿಯದಿರ್ಪನಾವ ನಿಡುವನವನ ನೊಲಿವನೀಶನಲ್ಲಿ
ನೊಸಲೊಳಿಟ್ಟ ಭಸಿತದಿಂದ ಭಾಳ ಯನ ನಿರ್ಪನಲ್ಲಿ
ಎಸೆವ ಭುಜದ ಭೂತಿಯಿಂದೆ ಶೂಲಹಸ್ತನಿರ್ಪನಲ್ಲಿ
ಕೊರಲೊಳಿಟ್ಟ ಭಸಿತದಿಂದೆ ಗರಳಕಂಠನಿರ್ಪನಲ್ಲಿ
ಉರದೊಳಿಡಲು ಮಾಮಹೇಶನೊಲ್ದು ನೆಲಸಿ ನಿಲ್ವನಲ್ಲಿ

ಕರದೊಳಿಟ್ಟೊಡಭಯಂಕರನ ನಾಥನಾಥನಿರ್ಪನರಿದು
ವರಗಭೀರನಾಭಿಯಲ್ಲಿ ಗಗನಕೇಶನಿರ್ಪನೊಲಿದು
ಸರ್ವದೇಹದಲ್ಲಿ ಧರಿಸಿಯಿರ್ದ ಭಕ್ತನಿರವನವುವು:
ಶರ್ವನೋರ್ವನರಿವನುರ್ವಿಯೊಳಗೆ ಬಲ್ಲವನಾವನವುವು !

ಹರಿಹರದೇವನು ಹೇಳಿದಂತೆ ಭಸಿತವನ್ನು ಯಾವ ಯಾವ ಇಂದ್ರಿಯ ಸ್ಥಲದಲ್ಲಿ ಧರಿಸಿದರೆ ಆ ಆ ಇಂದ್ರಿಯಾವಚ್ಛಿನ್ನ ಚೈತನ್ಯವು ಸ್ಫುಟವಾಗುತ್ತದೆ; ಸ್ಫುರಣಗೊಳ್ಳುತ್ತದೆ. ವಿಭೂತಿ ಪರವೈಶ್ವರ್ಯ ಮಾತ್ರವಾದರೆ ಭಸಿತ ಪರವೈಶ್ವರ್ಯವಾಗಿ ಪ್ರಕಾಶಮಾನವಾಗುತ್ತದೆ. ಲಿಂಗತತ್ವಗಳನ್ನೆಲ್ಲ ಪ್ರಕಾಶಗೊಳಿಸುತ್ತದೆ.

ಭಸ್ಮಫಲ

'ಭಸ್ಮಸಂಧಾರಣಾದೇವ ಸರ್ವತೀರ್ಥಫಲಂ ಭವೇತ್ ।
ಭಸ್ಮಸಂಧಾರಣಾತ್ಸರ್ವಂ ಭಸ್ಮೀಭವತಿ ಕಿಲ್ಬಿಷಮ್ ॥
ಭೂತಪ್ರೇತ ಪಿಶಾಚಾಶ್ಚ ಮಹಾರೋಗಾಶ್ಚ ದುಸ್ಸಹಾ :।
ಭಸ್ಮದರ್ಶನ ಮಾತ್ರೇಣ ಪಲಾಯಂತೇ ನ ಸಂಶಯಃ ।
ಭೂತ ವಿದ್ರಾವಣೇ ಪಾಪ ಸಂಹೃತೌ ಮುಕ್ತಿಸಾಧನೇ ।
ನ ಭಸ್ಮನೋऽ ನ್ಯತ್ಸದೃಶಮಿತ್ಯೇತಚ್ಛಿವ ಶಾಶನಮ್ ॥

—ಚಂದ್ರಜ್ಞಾನಾಗಮ

ಶ್ರೀ ಜಗದ್ಗುರು ರೇಣುಕರು ಬೋಧಿಸಿದಂತೆ ಭಸ್ಮಧಾರಣ ಫಲವನ್ನು ಈ ಆಗಮವೂ ಹೇಳಿದೆ. ಮುಖ್ಯವಾಗಿ ಭಸ್ಮವು ಪಾಪಗಳನ್ನು ಓಡಿಸಿ ಪುಣ್ಯಗಳನ್ನು ಮೈಗೂಡಿಸುತ್ತದೆ. ಪ್ರೇತಪಿಶಾಚಗಳು ಮಹಾರೋಗಗಳು ಬಿಟ್ಟೋಡುತ್ತವೆ. ಮುಕ್ತಿಯೊದಗುತ್ತದೆ. ಭಸ್ಮಕ್ಕೆ ಸದೃಶವಾದುದು ಇನ್ನೊಂದಿಲ್ಲ. ಅಂಗಗತಮಲ ಕರ್ಮಗಳನ್ನೆಲ್ಲ ಭಸ್ಮಮಾಡುತ್ತದೆ.

ಕ್ಷಾರಫಲ

ಯಾವ ಬಗೆಯ ಆಪತ್ತು ವಿಪತ್ತುಗಳೇ ಬರಲಿ ಅವನ್ನೆಲ್ಲ ಧ್ವಂಸ

ಗೊಳಿಸುತ್ತದೆ ಕ್ಷಾರಭಸ್ಮ. 'ಕ್ಷರಃ ಕಾಚೇರಸೇ ಗುಡೇ। ಭಸ್ಮನಿ ಧೂರ್ತೇ ಲವಣೇ, ಇತಿ ಹೇಮಚಂದ್ರಃ।'

ರಕ್ಷೆ ಫಲ:

ಗಜವದನಂಗೆ ಷಣ್ಮುಖಂಗೆ ಗಿರಿಜೆ ಭರದೊಳಿಡುವ ರಕ್ಷೆ
ವಿಜಯವೆನಿಪ ಗಣಕುಲಕ್ಕೆ ಬಾಳನಯನವಿಡುವ ರಕ್ಷೆ
ವಿಷವನಂದು ಧರಿಸುವಲ್ಲಿ ಪರಮನಿಟ್ಟುಕೊಂಡ ರಕ್ಷೆ
ಅಸಮ ಪುರವನುರುಪುವಲ್ಲಿ ಕಾಲವೈರಿ ತೊಳೆದ ರಕ್ಷೆ
ಶರಭ ರೂಪಿನಲ್ಲಿ ವೀರನಿಟ್ಟು ನಿಷ್ಠೆಪಡೆದ ರಕ್ಷೆ
ಪರಮನಂದು ಪಂಚಶರವನುರಪಿ ಕಳೆದು ತಳೆವ ರಕ್ಷೆ

ಎಂಬುದಾಗಿ ಹರಿಹರದೇವನು ರಕ್ಷೆಯನ್ನು ರಕ್ಷಾಕವಚವನ್ನಾಗಿ ಬಣ್ಣಿಸಿದ್ದಾನೆ. ವಿಘ್ನನಾಶಕನಾದ ಗಣೇಶನಿಗೂ ರಕ್ಷಕವಾದ ರಕ್ಷಾಭಸ್ಮದ ಮಹಿಮೆಯನ್ನು ಮತ್ತೊಂದು ಮಾತಿನಲ್ಲಿ ಹೇಳಬೇಕಾಗಿಲ್ಲ. ಗಣೇಶನೊಬ್ಬನಿಗಲ್ಲ ಆತನ ಅಣ್ಣಂದಿರು ತಂದೆತಾಯಂದಿರು ಎಲ್ಲರನ್ನೂ ರಕ್ಷಿಸಲು ರಕ್ಷಾಕವಚವಾದುದು ರಕ್ಷೆ ಎಂಬ ಭಸ್ಮ.

ಹೀಗೆ ಹೆಸರಿನಲ್ಲಿ ಗುಣದಲ್ಲಿ ಪಂಚಭಸಿತಗಳು ಪಂಚೀಕೃತವಾಗಿವೆಯಲ್ಲದೆ ಆ ಆ ನಾಮಗಳು ಆ ಆ ಅರ್ಥದಲ್ಲಿ ಸಾರ್ಥಕವಾಗಿವೆಯೆಂಬುದನ್ನು ಪ್ರಮಾಣೋಕ್ತಿಗಳಿಂದ ಪ್ರತಿಪಾದಿಸಲಾಯಿತು. ಕವಿಯ ಆ ಅರ್ಥವತ್ತಾದ ಯುಕ್ತಿಗೆ ಈ ಉಕ್ತಿಗಳು ಪೋಷಕವಾಗಿವೆ.

"ನಂದಾ ಭದ್ರಾ ಚ ಸುರಭಿಃ ಸುಶೀಲಾ ಸುಮನಾಸ್ತಥಾ
ಪಂಚಗಾವೋ ವಿಭೋರ್ಜಾತಾಃ ಸದ್ಯೋಜಾತಾದಿ ವಕ್ತ್ರತಃ।
ಕಪಿಲಃ ಕೃಷ್ಣ ಧವಲ ಧೂಮ್ರ ರಕ್ತಾಸ್ತಥೈವ ಚ
ನಂದಾದೀನಾಂ ಗವಾಂ ವರ್ಣಾಃ ಕ್ರಮೇಣ ಪರಿಕೀರ್ತಿತಾಃ॥"

ಪವಿತ್ರವಾದ ಪಂಚಭಸ್ಮಗಳಿಗೆ ಮೂಲವಸ್ತು, ಮುಖ, ಮಾತೃಕೆಗಳು; ಮತ್ತು ಆ ಮಾತೃಕೆಗಳಿಗಿರುವ ಬಣ್ಣಗಳು ಯಾವವೆಂಬುದನ್ನು ಈ ಎರಡು ಶ್ಲೋಕಗಳಲ್ಲಿ ಎಸೆವಂತೆ ಎರಕಗೊಳಿಸಲಾಗಿದೆ.

ವಿಭೂತ್ಯಾದಿ ಅಯ್ದು ಭಸಿತಗಳಿಗೆ ಮೂಲವಸ್ತು ವಿಭುಸ್ವರೂಪನಾದ ಆ ಪರಶಿವನು. ಆತನ ಆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಅಯ್ದು ಮುಖಗಳಿಂದ ಸಕ್ರಮವಾಗಿ ನಂದೆ, ಭದ್ರೆ, ಸುರಭಿ, ಸುಶೀಲೆ, ಸುಮನೆ ಎಂಬ ಹೆಸರುಳ್ಳ ಅಯ್ದು ಕವಿಲೆಗಳು ಹುಟ್ಟುವವು. ಇವುಗಳಿಗೆ ಪರಿವಿಡಿದು ಕಂದು, ಕಪ್ಪು, ಬಿಳುಪು, ಹೊಗೆ ಬಣ್ಣ, ಕೆಂಪು-ಬಣ್ಣಗಳು ಉಕ್ತವಾಗಿವೆ.

ಆ ಪರಶಿವನ ಶಕ್ತಿಯೇ ಗುಣತ್ರಯಾತ್ಮಕವಾಗಿ ಗೋವುಗಳಾಗಿದ್ದಾಳೆ. ಆ ಪರಶಿವನ ಪಂಚಮುಖೋತ್ಪನ್ನಳಾಗಿದ್ದಾಳೆ. ಗೋಮಾತೆಯಾಗಿ ಗೌರವ ಪಡೆದಿದ್ದಾಳೆ. ಕಾಮಧೇನುವಾಗಿ ಲೋಕವನ್ನೆಲ್ಲ ಕಾಪಾಡುತ್ತಿದ್ದಾಳೆ. ಶಕ್ತಿ ಸಂಪತ್ ವಿದ್ಯಾಸ್ವರೂಪಿಣಿಯಾಗಿ ಲೋಕಪೋಷಕಳಾಗಿದ್ದಾಳೆ. ಆ ಮಹಾಶಕ್ತಿಯೇ ಗೋವುಗಳಾಗಿ ಬಂದಿರುವಳೆಂದರೆ ಗೋಶಕ್ತಿ ಶುದ್ಧಿಗಳ ವಿಷಯದಲ್ಲಿ ಸಂಶಯ ಪಡಬೇಕಾಗಿಲ್ಲ.

> 'ವಿದ್ಯಾಶಕ್ತಿಃ ಸಮಸ್ತಾನಾಂ ಶಕ್ತಿರಿತ್ಯಭಿಧೀಯತೇ
> ಗುಣತ್ರಯಾಶ್ರಯಾ ವಿದ್ಯಾ, ಸಾ ವಿದ್ಯಾ ಚ ತದಾಶ್ರಯಾ ।
> ಗುಣತ್ರಯಮಿದಂ ಧೇನುರ್ವಿದ್ಯಾಽಭೂದ್ಗೋಮಯಂ ಶುಭಂ
> ಮೂತ್ರಂ ಚೋಪನಿಷತ್ಪ್ರೋಕ್ತಂ ಕುರ್ಯಾದ್ಭಸ್ಮ ತತಃಪರಮ್ ॥'
>
> —ಚಂದ್ರಜ್ಞಾನಾಗಮ

ಮಾನವರಿಗೆಲ್ಲ ಮುಖ್ಯವಾದ ಶಕ್ತಿಯೆಂದರೆ ವಿದ್ಯಾಶಕ್ತಿ. ಶಕ್ತಿವಿಶಿಷ್ಟ ಶಿವನಿಂದ ಆ ವಿದ್ಯೆ ಉದಯವಾಗಿದೆ. ವಿದ್ಯೆಯೆಂದರೆ ನಿಗಮಾಗಮಗಳು. ನಿಗಮಾಗಮರೂಪ ವಿದ್ಯೆಯು ಗುಣತ್ರಯಾತ್ಮಕವಾಗಿದೆ. ಗುಣತ್ರಯಗಳು ವಿದ್ಯಾಶ್ರಯಗಳಾಗಿವೆ. ಅಂತಹ ಆ ಗುಣತ್ರಯಗಳೇ ಧೇನುಗಳಾಗಿವೆ. ವಿದ್ಯೆಯೇ ಗೋಮಯವಾಗಿದೆ. ವೇದಾಂತವೇ ಗೋಮೂತ್ರವಾಗಿದೆ. ಇಂತಹ ಗೋಮಯ ಗೋಮೂತ್ರಗಳಿಂದ ಭಸ್ಮ ತಯಾರಾಗುತ್ತದೆ.

ಗಮಧಾತುವಿನಿಂದಾದ ಗೋಶಬ್ದ ಪ್ರಯೋಗವು ಗಮನಾರ್ಹವಾಗಿದೆ. ಈ ಶಬ್ದಕ್ಕೆ ಅನೇಕ ಅರ್ಥಗಳಿವೆ. ಅವುಗಳಲ್ಲಿ ಭಾರತಿ, ಭೂಮಿ, ಸುರಭಿ

ಇವು ಮುಖ್ಯವಾದವು. ಭಾರತಿ ಅರ್ಥವನ್ನು ಅನುಲಕ್ಷಿಸಿ ಚಂದ್ರಜ್ಞಾನಾಗಮವು ತ್ರಿಗುಣಾತ್ಮಕ ಶಕ್ತಿ ಸ್ವರೂಪವೆಂದು ಪ್ರತಿಪಾದಿಸಿರುವುದು ಅರ್ಥವತ್ತಾಗಿದೆ. ತ್ರೈಗುಣ್ಯವಿಷಯಗಳಾಗಿವೆ ವೇದಗಳು. ತ್ರೈಗುಣಾತ್ಮಕವಾಗಿವೆ ಧೇನುಗಳು.

ಹಸುಗಳ ಹೆಚ್ಚುಗಾರಿಕೆಗೆ ಈ ಪ್ರಮಾಣಗಳಲ್ಲದೆ ಅವುಗಳ ಹೆಸರುಗಳೇ ನಿಚ್ಚಳ ನಿದರ್ಶನವಾಗಿವೆ. ಒಂದು ಆನಂದವನ್ನುಂಟುಮಾಡುವುದಾಗಿ ನಂದಾ ಎನಿಸಿದ್ದರೆ ಇನ್ನೊಂದು ಮಂಗಳವನ್ನುಂಟು ಮಾಡುವುದಾಗಿ ಭದ್ರಾ ಎನಿಸಿದೆ. ಸುರಭಿ, ಸುಶೀಲೆ, ಸುಮನೆ ಎಷ್ಟು ಹೃದಯಾಕರ್ಷಕವಾದ ಹೆಸರುಗಳು. ಸುರಭಿ ಅಂದರೆ ಸುರಧೇನು, ಪುಷ್ಪದಂತೆ ಪರಿಮಳ, ವಸಂತದಂತೆ ಮನೋಹರ. ಸುಶೀಲೆಯಂದರೆ ಶೀಲವತಿ, ಗುಣವತಿ, ಒಳ್ಳಡತೆಯುಳ್ಳ ವ್ಯಕ್ತಿ. ಸುಮನೆಯೆಂದರೆ ಹೂವಿನಂತಹ, ಸಂತೋಷಚಿತ್ತ ಅಥವಾ ನಿರ್ಮಲಚಿತ್ತವುಳ್ಳ, ದೇವತೆಯೆನಿಸಿದ ವ್ಯಕ್ತಿ. ಈ ಅನ್ವರ್ಥ ನಾಮುಗಳಿಂದ ಗೋವುಗಳ ವ್ಯಕ್ತಿತ್ವ ವ್ಯಕ್ತವಾಗುತ್ತದೆ. ಸಾಲದ್ದಕ್ಕೆ ಅವುಗಳ ಜನ್ಮಭೂಮಿಗಳು ಪರಶಿವಬ್ರಹ್ಮಮುಖಗಳಾದ ಸದ್ಯೋಜಾತಾದಿಗಳು. ಮುಖಗಳು ವಿಭುವಾದ ಪರಶಿವನವು. ವಿಭುವಿನಿಂದ ಹುಟ್ಟಿವೆ ಗೋವುಗಳು. ಇಲ್ಲವಾದರೆ ವಿಭುತ್ವಕ್ಕೆ ಹಾನಿ. ಅನೇಕ ಭುವನಗಳನ್ನೊಳಗೊಂಡ ಬ್ರಹ್ಮಾಂಡವೇ ಆತನಿಂದ ಹುಟ್ಟಿರುವಾಗ ಗೋವುಗಳು ಹುಟ್ಟುವುದೊಂದು ಹೆಚ್ಚೇನು; ಅಚ್ಚರಿಯೇನು ?

"ಸದ್ಯೋಜಾತಾದ್ವಿಭೂತಿಶ್ಚ ವಾಮಾದ್ಭಸಿತಮೇವಚ
ಅಘೋರಾದ್ಭಸ್ಮ ಸಂಜಾತಂ ಕ್ಷಾರಂ ತತ್ಪುರುಷಾತ್ತಥಾ |
ರಕ್ಷಾ ಚೇಶಾನವಕ್ತ್ರಾಚ್ಚ ನಂದಾದಿದ್ವಾರತೋಽಭವತ್ |"

ಸದ್ಯೋಜಾತ ಮುಖೋದ್ಭವವಾದ ನಂದೆಯೆಂಬ ಹಸುವಿನ ಸಗಣಿಯಿಂದ ವಿಭೂತಿ, ವಾಮದೇವ ಮುಖಸಂಭೂತ ಭದ್ರೆಯ ಸಗಣಿಯಿಂದ ಭಸಿತ, ಅಘೋರಮುಖಜಾತ ಸುರಭಿಯ ಸಗಣಿಯಿಂದ ಭಸ್ಮ, ತತ್ಪುರುಷ ಮುಖೋತ್ಪನ್ನವಾದ ಸುಶೀಲೆಯ ಸಗಣಿಯಿಂದ ಕ್ಷಾರ,

ಈಶಾನ ಮುಖದಿಂದ ಹುಟ್ಟಿದ ಸುಮನೆಯು ಸಗಣಿಯಿಂದ ರಕ್ಷೆ ಹುಟ್ಟಿ ಹೆಸರುಗೊಳ್ಳುವವು.

ಗೋಮಯದಿಂದಾದ ಭಸ್ಮವೆಂದು ಯಾರೂ ಹೀಯಾಳಿಸಬೇಕಾಗಿಲ್ಲ. ಗೋಮಯದ ಗುಣ ಗೌರವಗಳು ಹಿಮಗಿರಿಗಿಂತ ಹೆಚ್ಚಿವೆ. ಗೋಮಯ ವೇದಮಯವೆಂದು ಗೋಮೂತ್ರ ಉಪನಿಷತ್ತೆಂದು ಆಗಮದೃಷ್ಟಿ. ಅದು ಹೇಗಾದರೂ ಇರಲಿ; ವೈಜ್ಞಾನಿಕವಾಗಿ ವಿಚಾರಿಸಿದರೂ ಗೋಮಯ ಶಕ್ತಿ, ಗೋಮಯಜ್ಯೋತಿ ಚಿಕ್ಕವಲ್ಲ. ಗಂಗೆಯ ನೀರು ಹೇಗೆ ಪವಿತ್ರವೋ ಹಾಗೆ ಗೋಮಯ ಗೋಮೂತ್ರಗಳು ಪವಿತ್ರ. ಪುನುಗು ಹೇಗೆ ಪರಿಮಳವನೀಯ ಬಲ್ಲುದೋ ಹಾಗೆ ಗೋಮಯ ಉಪಯುಕ್ತ ನಿಯತ ಪರಿಮಳವನೀಯ ಬಲ್ಲುದು ಗೋಮಯದಿಂದ ಮನೆ ಸಾರಣೆಯ ಮಾಡಿದರೆ ವಿಷಕ್ರಿಮಿಕೀಟ ಗಳನ್ನು ಕಳೆಯಬಲ್ಲುದು. ಪೃಥ್ವಿಯ ಅಂದರೆ ಮಣ್ಣಿನ ದೋಷವನ್ನು ದೂರಮಾಡಬಲ್ಲುದು. ದೀಕ್ಷಾಸಂಸ್ಕಾರದಲ್ಲಿ ಅದಕ್ಕೊಂದು ಸ್ಥಾನವಿದೆ. ದೀಕ್ಷೆಯಾಗುವ ವಟುವಿಗೆ ಗೋಮಯ ಗೋಮೂತ್ರಗಳನ್ನು ಪ್ರಾಶನ ಮಾಡಿಸಿದರೆ ಉದರದೋಷಗಳೆಲ್ಲ ಉದುರಿಹೋಗುತ್ತವೆ. ಪಂಚಗವ್ಯದಲ್ಲಿ ಗೋಮಯವೂ ಒಂದಾಗಿದೆ. ಗಣಪತಿ ಪೂಜೆಗೆ ಮೂರ್ತಿ ನಿರ್ಮಾಣಕ್ಕೆ ಗೋಮಯವೇ ಗಣ್ಯವಾಗಿದೆ. ಗೋಮಯದಲ್ಲಿ ಜ್ಯೋತಿಯಿದೆಯೆಂದು ಈಚೆಗೆ ಕಂಡುಕೊಂಡಿದ್ದಾರೆ. ಗೋಮಯದಿಂದ ಅಡುಗೆಮಾಡಲು ಬೇಕಾದ 'ಗ್ಯಾಸ್'ನ್ನು ಉತ್ಪತ್ತಿಮಾಡಿದ್ದಾರೆ. ಇದರಿಂದಾಗಿ ಗೋಮಯ ದಿಂದಾದ ಭಸಿತ ಮಂತ್ರಮಯವಾಗಿ ಭಸ್ಮಜ್ಯೋತಿಯೆನಿಸಿದೆ. ಭೂತಿ ದಾಯಕ ವಿಭೂತಿಯೆನಿಸಿದೆ. ಬಾಳನ್ನು ಬೆಳಗಿ ಭಸಿತವೆನಿಸಿದೆ. ರಕ್ಷಕ ವಾಗಿ ರಕ್ಷೆಯೆನಿಸಿದೆ. ಆದಕಾರಣ ಅನುವರಿತು ಅನುದಿನ ಧರಿಸಬೇಕು.

> "ಧಾರಯೇನ್ನಿತ್ಯಕಾರ್ಯೇಷು ವಿಭೂತಿಂಚ ಪ್ರಯತ್ನತಃ
> ನೈಮಿತ್ತಿಕೇಷು ಭಸಿತಂ, ಕ್ಷಾರಂ ಕಾಮ್ಯೇಷು ಸರ್ವದಾ ।
> ಪ್ರಾಯಶ್ಚಿತ್ತೇಷು ಸರ್ವೇಷು ಭಸ್ಮನಾಮ ಯಥಾವಿಧಿ
> ರಕ್ಷಾ ಚ ಮೋಕ್ಷ ಕಾರ್ಯೇಷು ಪ್ರಯೋಕ್ತವ್ಯಾ ಸದಾ ಬುಧೈಃ॥"

ನಿತ್ಯ ನಡೆಯಿಸುವ ಶಿವಪೂಜಾದಿ ಕಾರ್ಯಗಳಲ್ಲಿ ವಿಭೂತಿಧಾರಣ ವನ್ನು ಮಾಡಬೇಕು. ವಿಭೂತಿಧಾರಣದಲ್ಲಿ ವಿಶೇಷ ಗುಣಗಳಿವೆ. 'ಹಿತವಿದೆ. ಸಕಲ ಲೋಕದ ಜನಕ್ಕೆ ಮತವಿದೆ. ಶ್ರುತಿಪುರಾಣದ ಗತಿ ಯಿದೆ. ಭಕುತಿಯ ಬೆಳಗಿನುನ್ನತಿಯಿದೆ. ಶ್ರೀ ವಿಭೂತಿಯನೊಲಿದು ಧರಿಸಿರೇ ! ಭವವನು ಪರಿವುದು, ದುರಿತ ಸಂಕುಳವನೊರಿಸುವುದು, ಹರನ ಸಾಲೋಕ್ಯ, ಸಾಮೀಪ್ಯದಲ್ಲಿರಿಸುವುದು. ನಿರುತವಿದನೆ ನಂಬು ಮನುಜಾ! ಜನನ ಭೀತಿ ಮರಣ ಭಯದಿಂದ ಈ ವಿಭೂತಿಯ ಅಗಸ್ತ್ಯ, ಕಶ್ಯಪ, ಜಮದಗ್ನಿಗಳು ಧರಿಸುವರು ನೋಡಾ; ಶ್ರೀಶೈಲ ಚೆನ್ನಮಲ್ಲಿಕಾರ್ಜುನ ನೊಲಿಸುವ ಶ್ರೀ ವಿಭೂತಿ.' 'ಒಪ್ಪುವ ಶ್ರೀ ವಿಭೂತಿಯ ನೊಸಲಲ್ಲಿ ಧರಿಸಿ ದೃಷ್ಟಿಯಾರೆ ನಿಮ್ಮ ನೋಡಲೊಡನೆ ಬೆಟ್ಟದಷ್ಟು ತಪ್ಪುಳ್ಳೊಡೆ ಮುಟ್ಟ ಲಮ್ಮವು ನೋಡಾ !' 'ಮುನ್ನ ಮಾಡಿದ ಪಾಪ ಎಂತು ಹೋಹುದೆಂದು ಚಿಂತಿಸಬೇಡ : ಕಹಿ ಸೋರೆಯ ಕಾಯ ತಂದು ವಿಭೂತಿಯ ತುಂಬಿದೊಡೆ ಸಿಹಿಯಾಗದೆ ಮೂರು ದಿವಸಕ್ಕೆ ? ಹಲವು ಕಾಲ ಕೊಂದ ಸೂನೆಗಾರನ ಕತ್ತಿಯಾದರೇನು, ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ ? ಲಲಾಟ ದಲ್ಲಿ ವಿಭೂತಿ ಬರಲಿಕೆ ಪಾಪಪಲ್ಲಟವಾಗದೆ ಕೂಡಲ ಸಂಗಮ ದೇವಾ ?' 'ನೀರಿಂಗೆ ನೆಯ್ದಿಲೆ ಶೃಂಗಾರ ; ಸಮುದ್ರಕ್ಕೆ ತೆರೆಯೇ ಶೃಂಗಾರ ; ನಾರಿಗೆ ಗುಣವೇ ಶೃಂಗಾರ ; ಗಗನಕ್ಕೆ ಚಂದ್ರಮನೇ ಶೃಂಗಾರ ; ಕೂಡಲ ಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ.'

ಇವೆಲ್ಲ ಪ್ರಮಾಣಗಳಿಂದ ಕಾರಣಗಳಿಂದ ತನ್ನ ಬಾಳು ಹಸನಾಗಲು ನಿತ್ಯ ತಪ್ಪದೆ ಮೂರು ವೇಳೆ ವಿಭೂತಿಯನ್ನು ಧರಿಸಬೇಕು ಇದರಿಂದ ಶಿವನ ಸತ್ವಶಾಲಿಯಾಗಿ ಊರ್ಜಿತಶೀಲನಾಗಿ ಬಾಳುತ್ತಾನೆ. ಎಂದಾದ ರೊಮ್ಮೆ ಘಟಿಸುವ ಗುರು ಜಂಗಮ ಪೂಜೆಗಳಲ್ಲಿ ಭಸಿತವನ್ನು, ಪ್ರತಿಫಲ ಬಯಸಿ ಮಾಡುವ ಪೂಜೆಗಳಲ್ಲಿ ಕ್ಷಾರವನ್ನು, ಆಕಸ್ಮಿಕವಾಗಿ ಅಪರಾಧ ವೆಸಗಿದ್ದರೆ ಅದರ ನಿವೃತ್ತಿಗಾಗಿ ಭಸ್ಮವನ್ನು, ರೋಗ-ಭವರೋಗಗಳ ಬಿಡುಗಡೆಗಾಗಿ ರಕ್ಷೆಯನ್ನು ಧರಿಸಬೇಕು.

ಹಿಂದೆ ಹೇಳಿದಂತೆ ಅಯ್ದು ಹಸುಗಳಿಂದ ತಾನೇ ಬೇರೆ ಬೇರೆ ವಿಭೂ ತ್ಯಾದಿಗಳನ್ನು ಮಾಡಿರಿಸಿಕೊಂಡಿದ್ದರೆ ಈ ನಿಯಮ. ಇಲ್ಲವಾದರೆ ಎಲ್ಲ

ಕಾಲದಲ್ಲಿ ಎಲ್ಲ ಕಾರ್ಯ ಕಾರಣಗಳಲ್ಲಿ ವಿಭೂತಿಯನ್ನೇ ಧರಿಸಬಹುದು; ಧರಿಸಬೇಕು. ಅಲ್ಲದೆ ವಿಭೂತಿಯನ್ನು ಮಾಡುವವರು ಅಯ್ದು ಬಣ್ಣದ ಹಸುಗಳ ಸಗಣಿಯನ್ನು ಕೂಡಿಸಿ ಮಾಡಿರುವದರಿಂದ ಅಯ್ದು ಬಗೆಯ ಭಸ್ಮಗಳೂ ಒಂದರಲ್ಲಿಯೇ ಕೂಡಿರುವುದು. ಇದರಿಂದಾಗಿ ಅಯ್ದನ್ನೂ ಸೇರಿಸಿ ನಿತ್ಯಧರಿಸುವಂತಾಗಿ ಅಯ್ದಕ್ಕೂ ಹೇಳಿದ ಫಲಗಳು ಒಂದರಲ್ಲಿಯೇ ಒದಗುತ್ತವೆ.

"ನಂದಾದೀನಾಂ ತು ಯೇ ವರ್ಣಾಃ ಕಪಿಲಾದ್ಯಾಃ ಪ್ರಕೀರ್ತಿತಾಃ
ತ ಏವ ವರ್ಣಾ ವಿಖ್ಯಾತಾ ಭೂತ್ಯಾದೀನಾಂ ಯಥಾಕ್ರಮಮ್ |"

ನಂದೆಯ ಕಂದು ಬಣ್ಣವೇ ವಿಭೂತಿಯದು. ಭದ್ರೆಯ ಕಪ್ಪು ಬಣ್ಣವೇ ಭಸಿತದ್ದು. ಸುರಭಿಯ ಶುಭ್ರ ವರ್ಣವೇ ಭಸ್ಮದ್ದು. ಸುಶೀಲೆಯ ಧೂಮ್ರವರ್ಣವೇ ಕ್ಷಾರದ್ದು. ಸುಮನೆಯ ಕೆಂಬಣ್ಣವೆ ರಕ್ಷೆಯದೆಂದು ತಿಳಿಯಬೇಕು.

ವರ್ಣ ವಿಚಾರ ಅಗತ್ಯ. ವರ್ಣಗಳಲ್ಲಿ ಗುಣವೈಶಿಷ್ಟ್ಯಗಳಿವೆ. ಒಂದೊಂದು ವರ್ಣದಿಂದ ಒಂದೊಂದು ಬಗೆಯ ಪ್ರಯೋಜನವಿರುತ್ತದೆ. ವರ್ಣಗಳ ವಿಚಾರ ಅಪಾರವಾಗಿದೆ. ವರ್ಣಗಳಿಲ್ಲದೆ ಮಾನವ ಜೀವನವೇ ಇಲ್ಲ. ಕಾಯದಲ್ಲಿ ಕಣ್ಣಿನಲ್ಲಿ ಮೇಲೆ ಹೇಳಿದ ವರ್ಣಗಳೆಲ್ಲವೂ ಇರುತ್ತವೆ. ನಖ, ರೋಮ, ಚರ್ಮ, ನರ, ರಕ್ತಗಳಲ್ಲಿ ಕ್ರಮವಾಗಿ ಅಯ್ದು ಬಣ್ಣಗಳಿವೆ. ಕಣ್ಣಿನಲ್ಲಿಯೇ ಅಯ್ದು ಬಣ್ಣಗಳಿವೆ. 'ವರ್ಣ'ವೆಂದರೆ ಬಣ್ಣ, ಜಾತಿ, ಸ್ತುತಿ, ಅಕ್ಷರ ಎಂಬುದಾಗಿ ಅರ್ಥಗಳಿವೆ. ಇವೆಲ್ಲವೂ ಜೀವನಕ್ಕೆ ಪ್ರೇರಣೆಯನ್ನುಂಟುಮಾಡುತ್ತವೆ. ವರ್ಣ ಶಬ್ದಕ್ಕೆ ಪ್ರೇರಣೆ ಎಂಬುದೇ ಮುಖ್ಯವಾದ ಅರ್ಥ. ವರಣಾರ್ಥಕ 'ವೃಞ್' ಧಾತುವಿನಿಂದ ವರ್ಣವಾಗಿ 'ವ್ರಿಯತೇಽನೇನೇತಿ ವರ್ಣಃ' ಎಂತಲೂ ವಿಗ್ರಹಿಸುವುದುಂಟು.

ಕಾಯ ಕಣ್ಣುಗಳಂತೆ ಪಂಚೇಂದ್ರಿಯಗಳಲ್ಲಿಯೂ ಅಂತಃಕರಣಗಳಲ್ಲಿಯೂ ಪಂಚವರ್ಣಗಳುಂಟು. ಇವೆಲ್ಲವೂ ಕ್ರಮವಾಗಿ ಅರ್ಥದಲ್ಲಿ ನಂದಾದಿ ನಾಮಸಾರ್ಥಕ್ಯವುಳ್ಳವಾಗಿವೆ. ಗುಣದಲ್ಲಿ ವಿಭೂತ್ಯಾದಿ ನಾಮಾರ್ಥದಾಯಕಗಳಾಗಿವೆ. ಗುಣಧರ್ಮಗಳಲ್ಲಿ ಹಸುಗಳಂತೆ ಭಸ್ಮ

ಗಳಂತೆ ಇರಬೇಕೆಂಬುದೇ ಅಂತರಾನುಭೂತಿ. ಉತ್ತಮ ಗುಣಧರ್ಮಗಳು ಮೈಗೂಡಬೇಕಾದರೆ ಉತ್ತಮವಾದ ವಿಭೂತಿಯನ್ನು ಧರಿಸಬೇಕು. ಉತ್ತಮ ವಿಭೂತಿಯ ಉತ್ಪಾದನ ಕ್ರಮವನ್ನು ಸಹ ತಿಳಿದಿರಬೇಕು. ಅದನ್ನೂ ಜಗದ್ಗುರು ರೇಣುಕರು ಉಪದೇಶಿಸಿದ್ದಾರೆ:

“ಭಸ್ಮೋತ್ಪಾದನಮುದ್ದಿಷ್ಟಂ ಚತುರ್ಧಾ ತಂತ್ರವೇದಿಭಿಃ।
ಕಲ್ಪಂ ಚೈವಾನುಕಲ್ಪಂ ಚ ಉಪಕಲ್ಪಮಕಲ್ಪಕಮ್ ।
ವಿಷಾಮಾದಿಮಮುತ್ಕೃಷ್ಟ ಮನ್ಯತ್ಸರ್ವಮಭಾವತಃ !”

ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪ—ಎಂಬುದಾಗಿ ಭಸ್ಮೋತ್ಪತ್ತಿಯು ನಾಲ್ಕು ಬಗೆಯಾಗಿದೆಯೆಂದು ಶಿವಾಗಮ ಬಲ್ಲಿದರು ಹೇಳಿದ್ದಾರೆ. ಇವುಗಳಲ್ಲಿ ಮೊದಲಿನದಾದ ಕಲ್ಪ ವಿಧಾನದಲ್ಲಿ ಮಾಡಿದುದೇ ಉತ್ತಮವಾದುದು. ಇದು ಇಲ್ಲದಾಗ ಉಳಿದ ವಿಧಾನಗಳಿಂದ ಮಾಡಿದವುಗಳನ್ನು ಉಪಯೋಗಿಸಿಕೊಳ್ಳಬೇಕು. ಕಲ್ಪಾದಿಗಳನ್ನು ಮಾಡುವ ಬಗೆಯನ್ನು ಮುಂದಿನ ಮಂತ್ರಗಳಲ್ಲಿ ನಿರ್ದಿಷ್ಟಗೊಳಿಸಿದ್ದಾರೆ:

“ಯಥಾ ಶಾಸ್ತ್ರೋಕ್ತವಿಧಿನಾ ಗೃಹೀತ್ವಾ ಗೋಮಯಂನವಮ್
ಸದ್ಯೇನ ವಾಮದೇವೇನ ಕುರ್ಯಾತ್ಪಿಂಡಮನುತ್ತಮಮ್ ।
ಶೋಷಯೇತ್ಪುರುಷೇಣೈವ ದಹೇದ್ಘೋರಾಚ್ಛಿವಾಗ್ನಿನಾ
ಕಲ್ಪಂ ತದ್ಭಸ್ಮ ವಿಜ್ಞೇಯಮನುಕಲ್ಪಮಥೋಚ್ಯತೇ ॥”

ಹೊಸ ಸಗಣಿಯನ್ನು ಶಾಸ್ತ್ರೋಕ್ತವಿಧಿಯಂತೆ ಹಿಡಿಯಬೇಕಂತೆ ! ಆಗಮ ವಿಧಿ ಹೀಗಿದೆ :

‘ಪರೇದ್ಯುಃ ಪ್ರಾತರುತ್ಥಾಯ ಶುಚಿರ್ಭೂತ್ವಾ ಸಮಾಹಿತಃ
ಕೃತಸ್ನಾನೋ ಧೌತವಸ್ತ್ರಃ ಪಯೋರ್ಥಂ ಚ ಸೃಜೇಚ್ಚಗಾಂ ।
ಉತ್ಥಾಪ್ಯಗಾಂ ಪ್ರಯತ್ನೇನ ಗಾಯತ್ರ್ಯಾ ಮೂತ್ರ ಮಾಹರೇತ್

ಸೌವರ್ಣೇ ರಾಜತೇ ತಾಮ್ರೇ ಧಾರಯೇನ್ಮೃಣ್ಮಯೇ ಘಟೇ।
ಪೌಷ್ಕರೇಽಥ ಪಲಾಶೇ ವಾ ಪಾತ್ರೇ ಗೋಶೃಂಗ ಏವವಾ
ಆದಿದೀತ ಹಿ ಗೋಮೂತ್ರಂ ಮೂಲಮಂತ್ರೇಣ ಗೋಮಯಮ್
ಅಭೂಮಿಪಾತಂ ಗೃಹ್ಣೀಯಾತ್ ಪಾತ್ರೇ ಪೂರ್ವೋದಿತೇ ಗೃಹೇ॥'

—ಚಂದ್ರಜ್ಞಾನಾಗಮ

ವಿರುದ್ಧವಾದ ವಿಭೂತಿಯನ್ನು ಮಾಡಬೇಕೆನ್ನುವಾತನು ಗೋವುಗಳನ್ನು ಮೇಯಲು ಬಿಡದೆ ಮನೆಯಲ್ಲಿಯೇ ಸಾಕಬೇಕು. ಭಕ್ತನೇ ಹಸುಗಳಿಗೆ ಹುಲ್ಲುತಂದು ತಿನಿಸಿ ನೀರು ಕುಡಿಸಬೇಕು. ಹೊತ್ತಾರೆ ತಾನೆದ್ದು ಶೌಚಾದಿಗಳನ್ನು ತೀರಿಸಿ ಸ್ನಾನ ಶಿವಪೂಜಾದಿಗಳನ್ನು ನೆರವೇರಿಸಿ ಶುಭ್ರ ವಸ್ತ್ರಧಾರಿಯಾಗಿ ಬಂಗಾರ, ಬೆಳ್ಳಿ, ತಾಮ್ರ, ಮೃಣ್ಮಯ ಮುಂತಾದ ಪಾತ್ರೆಗಳಲ್ಲೊಂದರಲ್ಲಿ ಹಸುವಿನ ಸಗಣಿಯನ್ನು ನೆಲಕ್ಕೆ ಬೀಳದಂತೆ ಮೂಲ ಮಂತ್ರವನ್ನುಚ್ಚರಿಸುತ್ತ ಹಿಡಿಯಬೇಕು. 'ಭವಾಯ ನಮಃ' ಎಂದು ಹೇಳುತ್ತ ಮತ್ತೊಂದು ಪಾತ್ರೆಯಲ್ಲಿ ಹಿಡಿದಿರಿಸಿ ಗೋಮೂತ್ರವನ್ನು ಗೋಮಯಕ್ಕೆ ಹಾಕಿ ಮಿಶ್ರಮಾಡಬೇಕು. ವಾಮದೇವ ಮಂತ್ರದಿಂದ ಉಂಡೆಗಟ್ಟಬೇಕು. ತತ್ಪುರುಷ ಮಂತ್ರದಿಂದ ಒಣಗಿಸಬೇಕು. ಅಘೋರ ಮಂತ್ರದಿಂದ ಸುಡಬೇಕು ಈಶಾನಾಗ್ನಿಯಲ್ಲಿ! ಹೀಗೆ ಮಾಡಿದುದೇ ಕಲಭಸ್ಮ.

ಸಾಮರ್ಥ್ಯಾರ್ಥವುಳ್ಳ 'ಕೃಪೂ' ಧಾತುವಿನಿಂದ ಕಲ್ಪವೆಂದಾಗಿದೆ. ಕಲ್ಪವೆಂದರೆ ಶಾಸ್ತ್ರವಿಧಿಯಂತೆ ಮಾಡಿದ ಸಾಮರ್ಥ್ಯವುಳ್ಳ ಭಸ್ಮವೆಂದರ್ಥ. ಬ್ರಹ್ಮ ಕಲ್ಪದವರೆವಿಗೂ ಭೂಮಿಯಲ್ಲಿಟ್ಟರೆ ಮಣ್ಣಾಗದ ಭಸ್ಮವೆಂದರ್ಥ.

"ವನೇಷು ಗೋಮಯಂ ಯಚ್ಚ ಶುಷ್ಕಂ ಚೂರ್ಣೀಕೃತಂ ತಥಾ
ದಗ್ಧಂ ಚೈವಾನು ಕಲ್ಪಾಖ್ಯಮ್........"

ಅನುಕಲ್ಪ ಭಸ್ಮವನ್ನು ಮಾಡುವ ವಿಧಾನವಿದು: ಕಾಡು ಬೆರಣಿ

ಗಳನ್ನು ಆಯ್ದು ತಂದು ಕುಟ್ಟಿ ಪುಡಿ ಮಾಡಿ ಅಘೋರ ಮಂತ್ರದಿಂದ ಸಂಸ್ಕೃತವಾದ ಅಗ್ನಿಯಲ್ಲಿ ಸುಡಬೇಕು. ಇದು ಅನುಕಲ್ಪ ಭಸಿತ.

"ಆಪಣಾದಿಗತಂ ತು ಯತ್ ।
ವಸ್ತ್ರೇಣೋತ್ತಾರಿತಂ ಭಸ್ಮ ಗೋಮೂತ್ರಾ ಬದ್ಧ ಪಿಂಡಕಮ್
ದಗ್ಧಂ ಪ್ರಾಗುಕ್ತ ವಿಧಿನಾ ಭವೇದ್ಭಸ್ಮೋಪ ಕಲ್ಪಕಮ್ ॥"

ಅಂಗಡಿಯಲ್ಲಿಯೋ ಬೇರೆಡೆಯಲ್ಲಿಯೋ ದೊರಕುವ ಬೂದಿಯನ್ನು ತಂದು ವಸ್ತ್ರದಲ್ಲಿ ಶೋಧಿಸಿ ಗೋಮೂತ್ರದಲ್ಲಿ ಕಲಸಿ ಉಂಡೆಮಾಡಿ ಮೊದಲು ಹೇಳಿದಂತೆ ಮಂತ್ರ ಸಂಸ್ಕಾರ ಪೂರ್ವಕ ಸುಟ್ಟಲ್ಲಿ ಉಪಕಲ್ಪ ಭಸ್ಮವೆನಿಸುತ್ತದೆ.

"ಅನ್ಯೈರಾಪಾದಿತಂ ಭಸ್ಮ ಅಕಲ್ಪಮಿತಿ ನಿಶ್ಚಿತಮ್ ।"

ಮಂತ್ರ ಸಂಸ್ಕಾರವಿಲ್ಲದವರು ಮಾಡಿ ತಂದು ಮಾರುವ ಭಸ್ಮವು ಅಕಲ್ಪವೆಂದೆನಿಸುತ್ತದೆ.

ಈ ರೀತಿ ತಯಾರಾದ ಚತುರ್ವಿಧ ಭಸ್ಮಗಳಲ್ಲಿ ತನಗಿಷ್ಟವಾದ ಭಸ್ಮವನ್ನು ಶ್ರೀ ಗುರುವಿನ ಹಸ್ತಕ್ಕೆ ಕೊಟ್ಟು ಆತನಿಂದ ಪಾದೋದಕ ಪ್ರೋಕ್ಷಣ, ಮಂತ್ರ ಲೇಖನ, ಅರ್ಚನ, ಧಾರಣ ರೂಪ ಸಂಸ್ಕಾರಗಳಿಂದ ಶುದ್ಧಿ ಮಾಡಿಸಿಕೊಂಡು ಬಳಿಕ ತಾನು ಭಸ್ಮಸ್ನಾನಾದಿಗಳನ್ನಾಚರಿಸಬೇಕು. ಶ್ರೀಗುರು ಶುದ್ಧಿ ಮಾಡಿದ ಭಸ್ಮ ಮೂರು ಬಗೆಯಾಗಿರುತ್ತದೆ. ಸಾದಾಭಸ್ಮ, ಕ್ರಿಯಾಭಸ್ಮ, ಜ್ಞಾನಭಸ್ಮ—ಎಂಬುದಾಗಿ ! ಅಧಿಕಾರಿಗಳನ್ನು ನೋಡಿ ಕೇಳಿ ಅವರವರಿಗೆ ತಕ್ಕಂತೆ ಶ್ರೀಗುರು ಮಾಡಿಕೊಡಬೇಕು. ಅದೀಕ್ಷಿತರಿಗೆ ಸಾದಾಭಸ್ಮ—ದೀಕ್ಷಿತರಿಗೆ ಕ್ರಿಯಾಭಸ್ಮ. ಪ್ರಸಾದಿಗಳಿಗೆ ಜ್ಞಾನ ಭಸ್ಮ. ಸಾದಾಭಸಿತಕ್ಕೆ ಗುರುಪಾದೋದಕ-ಪ್ರಣವ ಮಾತ್ರಗಳನ್ನು ಉಪಯೋಗಿಸಿ ಸಂಸ್ಕರಿಸಬೇಕು. ಕ್ರಿಯಾಭಸಿತಕ್ಕೆ ಕ್ರಿಯಾಪಾದೋದಕ—ಪ್ರಣವ ಪಂಚಾಕ್ಷರ ಮಂತ್ರಗಳನ್ನು ಉಪಯೋಗಿಸಿ ಶುದ್ಧವಿಸಬೇಕು. ಜ್ಞಾನ ಭಸಿತಕ್ಕೆ ಜ್ಞಾನ ಪಾದೋದಕ ಪ್ರಸಾದ ಪ್ರಣವಾಕ್ಷರಗಳನ್ನು ಉಪಯೋಗಿಸಿ ಪರಿಶುದ್ಧ

ಗೊಳಿಸಬೇಕು. ಹೀಗೆ ಶುದ್ಧವಾಗಿಸದೆ ಯಾವ ಭಸಿತವನ್ನೂ ಉಪಯೋಗಿಸ ಬಾರದು.

"ಏಷ್ವೇಕತಮಮಾದಾಯ ಪಾತ್ರೇಷು ಕಲಶಾದಿಷು"
ತ್ರಿಸಂಧ್ಯಮಾಚರೇತ್ ಸ್ನಾನಂ ಯಥಾ ಸಂಭವಮೇವವಾ |"

ಮೇಲೆ ಹೇಳಿದ ಭಸ್ಮಗಳಲ್ಲಿ ಬೇಕಾದ ಯಾವುದಾದರೊಂದನ್ನು ತೆಗೆದು ಕೊಂಡು ಶುದ್ಧ ಮಾಡಿಸಿ ತಂದು ಶುದ್ಧವಾದ ರಜತಕರಂಡ, ಬಿಲ್ವಪಾತ್ರೆ, ಗಂಧದ ಭರಣಿ, ಬೆತ್ತದ ಬುಟ್ಟಿ, ತಾಮ್ರ ಕಲಶ, ಹಿತ್ತಳೆಯಗಿಂಡಿ, ವಸ್ತ್ರ, ಇವುಗಳಲ್ಲಿ ಯಾವುದಾದರೊಂದರಲ್ಲಿರಿಸಿಕೊಳ್ಳಬೇಕು. ಅಂತಹ ಭಸ್ಮದಿಂದ ದಿನಕ್ಕೆ ಮೂರು ವೇಳೆಯೋ ಎರಡು ವೇಳೆಯೋ ಒಮ್ಮೆಯೋ ತಮಗಿಷ್ಟ ವಿದ್ದಂತೆ ಸ್ನಾನವನ್ನು ಮುಂದೆ ಹೇಳಿದಂತೆ ಮಾಡಬೇಕು:

ಭಸ್ಮ ಸ್ನಾನ ವಿಧಿ:

"ಸ್ನಾನಕಾಲೇ ಕರೌಪಾದೌ ಪ್ರಕ್ಷಾಲ್ಯ ವಿಮಲಾಂಭಸಾ
ವಾಮಹಸ್ತತಲೇ ಭಸ್ಮ ಕ್ಷಿಪ್ತ್ವಾಽಽಚ್ಛಾದ್ಯನ್ಯಪಾಣಿನಾ|
ಅಷ್ಟಕೃತ್ವೋಽಥ ಮೂಲೇನ ಮೌನೀ ಭಸ್ಮಾಭಿಮಂತ್ರ್ಯ ಚ

ಭಸ್ಮಸ್ನಾನಕ್ಕೆ ಮೊದಲು ಕೈಕಾಲು ಮೊಗಗಳನ್ನು ತಿಳಿನೀರಿನಿಂದ ತೊಳೆದುಕೊಳ್ಳಬೇಕು. ಇದು ಮಧ್ಯಮ ಪಕ್ಷ ಮೈಯೆಲ್ಲ ಜಲಸ್ನಾನ ಮಾಡುವುದೇ ಉತ್ತಮಪಕ್ಷ. 'ಮಡಿವಸ್ತ್ರವನುಟ್ಟು ಮಂತ್ರಧ್ಯಾನ ಪೂರ್ವಕ ಪೂಜಾ ಗೃಹವನ್ನು ಪ್ರವೇಶಿಸಿ ಮೊದಲೇ ಸಿದ್ಧಗೊಳಿಸಿದ ಕಂಬಲಿ, ದರ್ಭಾದ್ಯಾಸನ ಮೇಲೆ ಮಂತ್ರೋದಕ ಪ್ರೋಕ್ಷಣಮಾಡಿ, ಮಂತ್ರಪುಷ್ಪ ವೊಂದನ್ನಿರಿಸಿ ಅದರಮೇಲೆ ಕುಳಿತುಕೊಳ್ಳಬೇಕು. ಮಂತ್ರೋದಕದಿಂದ ಲಿಂಗಯ್ಯನಿಗೆ ಸಂಕ್ಷಿಪ್ತವಾಗಿ ಅಭಿಷೇಕವನ್ನು ಮಾಡಿ ತೇವ ತೆಗೆದು ಸಂಕ್ಷಿಪ್ತ ವಾಗಿ ವಿಭೂತಿಯನ್ನು ಧರಿಸಿ ಮಡಿಹುದುಗದಲ್ಲಿ ಲಿಂಗಮೂರ್ತಿಯನ್ನಿರಿಸಿ ಕರಡಿಗೆಯಲ್ಲಿ ವಾಮಭಾಗಕ್ಕೆ ಗೋಮುಖ ಮಾಡಿ ಇರಿಸಬೇಕು. ಬಳಿಕ

ಮೌನವಾಗಿ ಶಾಂತಮನಸ್ಕನಾಗಿ ಸರಳ ಶರೀರಿಯಾಗಿ ಕೈ ಜೋಡಿಸಿ ಕುಳಿತು ಗುರುಧ್ಯಾನ, ಪೂಜಾ ಸಂಕಲ್ಪ, ಉಪಾಂಗ (ಇಂದ್ರಿಯ) ಸ್ಪರ್ಶನ ಪ್ರಾಣಾಯಾಮಗಳನ್ನಾಚರಿಸಬೇಕು. ನಂತರ ಪೂರ್ವದಲ್ಲಿ ಹೇಳಿದಂತಿರಿಸಿದ ವಿಭೂತಿಗೆ ಕೈ ಮುಗಿದು ಮಂತ್ರಧ್ಯಾನವನ್ನು ಮನದಲ್ಲಿ ಮಾಡುತ್ತ ಬಲಗೈ ಹೆಬ್ಬೆರಳು ನಡುಬೆರಳು ಉಂಗರಬೆರಳುಗಳಿಂದ (ಕುರಂಗ ಮುದ್ರೆಯಿಂದ) ಪಾತ್ರೆಯಲ್ಲಿರುವ ವಿಭೂತಿಯನ್ನು ತೆಗೆದುಕೊಂಡು ಪ್ರಣವೋಚ್ಚಾರ ಪೂರ್ವಕ ಷಡಂಗಗಳಿಗೆ ವಿಭೂತಿಯನ್ನು ಮುಟ್ಟಿಸಿ ಬಳಿಕ ಎಡಗೈ ಕಿರಿಬೆರಳಿನಿಂದ ಹೆಬ್ಬೆರಳುಗಳವರೆಗೆ ಆಯಾ ಮಂತ್ರಾಕ್ಷರಗಳೊಡನೆ ಸೋಂಕಿಸಿ ಎಡದ ಅಂಗೈಯಲ್ಲಿ ಮೂಲಪ್ರಣವವನ್ನು ಒರೆದು ಅದರ ಮೇಲೆ ಭಸ್ಮವನ್ನಿರಿಸಬೇಕು. ಬಳಿಕ ಆ ಭಸಿತದ ಮೇಲೆ ಪಂಚಕೋಣಾಕೃತಿಯನ್ನು ಬರೆದು ಆಯಾ ಕೋಣಗಳಲ್ಲಿ ಆಯಾ ಪಂಚಾಕ್ಷರ ಮಂತ್ರಾಕ್ಷರಗಳನ್ನು ಬಿಂದುಸಮೇತವಾಗಿ ಬರೆದು ಮಧ್ಯದಲ್ಲಿ ಮೂಲಪ್ರಣವವನ್ನು ಬರೆದು ಅಷ್ಟವಿಧಾರ್ಚನೆಯನ್ನು ಮಾಡಿ ಬಲಗೈಯನ್ನು ಭಸ್ಮದ ಮೇಲಿರಿಸಿ (ಶುಕ್ತಿಮುದ್ರೆಯಂತೆ) ಬಲದೊಡೆಯ ಮೇಲಿಟ್ಟು ಮೂಲ ಪ್ರಣವದಿಂದ ಎಂಟುಸಲವಾಗಲಿ 'ಅಗ್ನಿರಿತಿ ಭಸ್ಮ, ವಾಯುರಿತಿ ಭಸ್ಮ, ಜಲಮಿತಿ ಭಸ್ಮ, ಸ್ಥಲಮಿತಿ ಭಸ್ಮ ವ್ಯೋಮೇತಿ ಭಸ್ಮ....' ಎಂಬ ಮಂತ್ರದಿಂದ ಹನ್ನೊಂದು ಸಲವಾಗಲಿ ಹದುಳ ಮನಸ್ಸಿನಿಂದ ಭಸ್ಮವನ್ನು ಅಭಿಮಂತ್ರಿಸಬೇಕು.

> "ಶಿರ ಈಶಾನ ಮಂತ್ರೇಣ ಪುರುಷೇಣ ಮುಖಂ ತಥಾ
> ಹೃತ್ಪ್ರದೇಶಮಘೋರೇಣ. ವಾಮದೇವೇನ ಗುಹ್ಯಕಮ್
> ಪಾದೌ ಸದ್ಯೇನ ಸರ್ವಾಂಗಂ ಪ್ರಣವೇನೈವ ಸೇಚಯೇತ್."

ಅರ್ಚಿಸಿ ಅಭಿಮಂತ್ರಿಸಿದ ಭಸ್ಮವನ್ನು ಬಲಗೈ ನಡುವಿನ ಮೂರು ಬೆರಳುಗಳಿಂದ ಪಂಚಾಕ್ಷರಿಯನ್ನುಚ್ಚರಿಸುತ್ತ ಮೂರು ಸಲ ಮೊದಲು ತನ್ನಿಷ್ಟಲಿಂಗಕ್ಕೆ ಸಿಂಚಿಸಬೇಕು. ಆಮೇಲೆ ಅಯ್ದು ಕಲೆಗಳಿಂದ ಕೂಡಿದ ಈಶಾನ ಮಂತ್ರವನ್ನುಚ್ಚರಿಸುತ್ತ ಅಯ್ದು ಸಲ ಮಸ್ತಕದಲ್ಲಿ ಪ್ರೋಕ್ಷಿಸಬೇಕು. ನಂತರ ಮುಖದಲ್ಲಿ ನಾಲ್ಕು ಕಲೆಗಳುಳ್ಳ ತತ್ಪುರುಷ ಮಂತ್ರವನ್ನು ಪಠಿಸುತ್ತ ನಾಲ್ಕು ಸಲ ಭಸ್ಮಕಣಗಳನ್ನು ಸಂಪ್ರೋಕ್ಷಿಸಬೇಕು. ಇದಾದ ಮೇಲೆ ಹೃದಯದಲ್ಲಿ ಎಂಟು ಕಲೆಗಳುಳ್ಳ ಅಘೋರ ಮಂತ್ರದಿಂದ

ಎಂಟು ಸಲ ಭಸಿತ ಕಣಗಳನ್ನು ಸೇವಿಸಬೇಕು. ಬಳಿಕ ಗುಹ್ಯ ಪ್ರದೇಶದಲ್ಲಿ ಹದಿಮೂರು ಕಲೆಗಳುಳ್ಳ ವಾಮದೇವ ಮಂತ್ರಸ್ಮರಣಪೂರ್ವಕ ಹದಿಮೂರು ಸಲ ವಿಭೂತಿ ಕಣಗಳನ್ನು ಸಿಂಪಡಿಸಬೇಕು. ಆಮೇಲೆ ಪಾದವೆರಡರಲ್ಲಿ ಎಂಟು ಕಲೆಯು ಸದ್ಯೋಜಾತ ಮಂತ್ರಧ್ಯಾನದಿಂದ ಎಂಟು ಸಲ ಭಸ್ಮರೇಣು ಗಳನ್ನು ಸೇಚಿಸಬೇಕು. ಕೊನೆಗೆ ಸರ್ವಾಂಗದಲ್ಲಿ ಮೂಲಪ್ರಣವನ್ನುಚ್ಚರಿ ಸುತ್ತ ಭಸ್ಮಧೂಳಿಯನ್ನು ಉದುರಿಸಿಕೊಳ್ಳಬೇಕು. ಇದು ಭಸ್ಮಸ್ನಾನ, ಇದು ನೈರ್ಮಲ್ಯ ಕಾರಣ.

"ಭಸ್ಮನಾ ವಿಹಿತಂ ಸ್ನಾನಮಿದಮಾಗ್ನೇಯಮುತ್ತಮಂ"
ಸ್ನಾನೇಷು ವಾರುಣಾದ್ಯೇಷು ಮುಖ್ಯಮೇತನ್ಮಲಾಪಹಂ।
ಭಸ್ಮಸ್ನಾನವತಾಂ ಪುಂಸಾಂ ಯಥಾಯೋಗಂ ದಿನೇ ದಿನೇ
ವಾರುಣಾದ್ಯೈರಲಂ ಸ್ನಾನೈರ್ಬಾಹ್ಯ ದೋಷಾಪಹಾರಿಭಿಃ॥"

ಭಸ್ಮಸ್ನಾನ ಶ್ರೇಷ್ಠವಾದುದು. ಆಗ್ನೇಯಸ್ನಾನವೆಂದು ಇದಕ್ಕೆ ಹೆಸರು. ಜಲ ಆತಪ-ವಾಯುಸ್ನಾನಗಳಿಗಿಂತ-ಆಗ್ನೇಯನಾಮಕ ವಿಭೂತಿ ಸ್ನಾನವು ಮುಖ್ಯವಾಗಿದ್ದು ಮಲಾಪಹಾರಕವಾಗಿದೆ. ಕಾರಣ ನಿತ್ಯವೂ ತಪ್ಪದೆ ಈ ತೇಜೋಮಯವಾದ ವಿಭೂತಿಸ್ನಾನ ಮಾಡಬೇಕು. ಮಾಡಿ ದಲ್ಲಿ ಉಭಯಾಂಗಗಳು ವಿರುದ್ಧವಾಗುತ್ತವೆ. ಉಳಿದ ಜಲಾದಿಸ್ನಾನಗಳು ಬರೀ ಬಾಹ್ಯಾಂಗವನ್ನು ಶುದ್ಧಗೊಳಿಸುತ್ತವೆ.

"ಆಗ್ನೇಯಂ ಭಸ್ಮನಾ ಸ್ನಾನಂ ಯತಿಭಿಸ್ತು ವಿಧೀಯತೇ"
ಆರ್ದ್ರಸ್ನಾನಾತ್ಪರಂ ಭಸ್ಮ, ಆರ್ದ್ರೇ ಜಂತುವಧೋ ಧ್ರುವಮ್।
ಆರ್ದ್ರಂತು ಪ್ರಕೃತಿಂ ವಿದ್ಯಾತ್ ಪ್ರಕೃತಿಂ ಬಂಧನಂ ವಿದುಃ
ಪ್ರಕೃತೇಸ್ತು ಪ್ರಹಾರ್ಥಂ ಭಸ್ಮನಾ ಸ್ನಾನಮಿಷ್ಯತೇ॥"

ಭಸ್ಮದಿಂದ ಮಾಡುವ ಸ್ನಾನವು ಆಗ್ನೇಯಸ್ನಾನ. ಇದನ್ನು ಯತಿಗಳು ಮಾಡುತ್ತಾರೆ. ಅಗ್ನಿಯ ತೇಜಸ್ಸು ಭಸ್ಮದಲ್ಲಿದೆ. ಭಸ್ಮಸ್ನಾನ ದಿಂದ ಶೈತ್ಯತೆ ಅಡಗುತ್ತದೆ. ಜಠರಾಗ್ನಿ ದೀಪ್ತವಾಗುತ್ತದೆ. ಅದರಿಂದ ಆಂತರಿಕ ಮಲ ನಿವಾರಣವಾಗುತ್ತದೆ. ಅಂದರೆ ಮಲಬಂಧನವಾಗುವುದಿಲ್ಲ ಮಲಬಂಧನ ದ್ವಿವಿಧ. ಒಂದು ಪ್ರಕೃತಿಜನ್ಯ, ಇನ್ನೊಂದು ಪದಾರ್ಥಜನ್ಯ.

ಒಂದು ಮಾಯಾಮಲ, ಇನ್ನೊಂದು ಮೃಣ್ಮಯವಾದ ಅನ್ನಮಲ. ಇವೆರಡೂ ತೊಲಗುತ್ತವೆ. ಇದರಿಂದಾಗಿ ಜಲಸ್ನಾನಕ್ಕಿಂತ ಭಸ್ಮಸ್ನಾನ ಅಧಿಕ. ಜಲಸ್ನಾನದಿಂದ ಜಂತುವಧೆ ಒದಗುತ್ತದೆ. ಹಾಗು ಜಲವು ಪ್ರಕೃತಿಯೆನಿಸಿದೆ. ಪ್ರಕೃತಿ ಬಂಧನಕಾರಿಯಾಗಿದೆ. 'ಅನ್ನಾದ್ರೇತಃ ರೇತಸಃ ಪುರುಷಃ' ಜೀವತ್ವ ಪ್ರಾಪ್ತಿ ರೇತೋರಸದಿಂದ ! ಅಂತಹ ಬಂಧಕಾರಿಯಾದ ಪ್ರಕೃತಿಯನ್ನು ಪರಿಹರಿಸಬೇಕಾದರೆ ಭಸ್ಮಸ್ನಾನವನ್ನು ಮಾಡಿಯಾಗಬೇಕು.

ತನುವಿನಲ್ಲಿ ಜಲದಿಂದ ಜನಿಸುವ ಕಫ, ಮೂತ್ರ, ರಕ್ತ, ರಸ, ಪಿತ್ತಾದಿ ವಿಷಮತೆಯೂ ಪರಿಹಾರವಾಗುತ್ತದೆ. ಕಫ ಕೆರಳುವುದಿಲ್ಲ. ಮೂತ್ರರೋಗ ಬರುವುದಿಲ್ಲ. ರಕ್ತದ ಒತ್ತಡವಾಗಲಿ ಹೆಪ್ಪುಗಟ್ಟುವಿಕೆಯಾಗಲಿ ಕೆಡುವುದಾಗಲಿ ಉಂಟಾಗುವುದಿಲ್ಲ. ರಸದೋಷಗಳು ರಹಿತವಾಗುತ್ತವೆ. ಪಿತ್ತೋದ್ರೇಕವಾಗುವುದಿಲ್ಲ. ಭಸ್ಮಸ್ನಾನದಿಂದ ಈ ರೋಗಬಂಧನವು ದೂರಾಗುತ್ತದೆ.

ಪೃಥ್ವಿಯ ಅಂಶವೇ ತನುವಾದಂತೆ ಜಲಾಂಶವೇ ರಸವಾಗಿದೆ. ಆ ರಸವೇ ಜಡವಾಗಿ ಮೂಢವೃತ್ತಿಗೆ ಒಳಗಾಗಿಸುತ್ತದೆ. ಆ ರಸದ ಜಡತ್ವವನ್ನು ಕಳೆಯಬೇಕಾದರೆ ಭಸ್ಮಸ್ನಾನವು ತೀರ ಅಗತ್ಯ.

ಪ್ರಕೃತಿ ಕಾಲಾಧೀನವಾಗಿದೆ. ವಿಕೃತಿಗೀಡಾಗುತ್ತದೆ. ಕಾಲನಿಗೆ ಅಂಜುವುದೇ ಪ್ರಕೃತಿ ಸ್ವಭಾವ. ಕಾಲಕ್ಕಂಜದೆ ಕಾಲಾತೀತವಾದ ಆ ವಸ್ತುಸ್ವರೂಪಜ್ಞಾನವುಂಟಾಗಬೇಕಾದರೆ ಭಸ್ಮಸ್ನಾನವು ಅನಿವಾರ್ಯ. ಅಂತೆಯೇ ಪ್ರಕೃತಿ ವಿಕೃತಿಗಳಿಗೀಡಾಗದಂತೆ ಇರಬೇಕಾದರೆ ಭಸ್ಮಸ್ನಾನವನ್ನು ನಿತ್ಯ ನೆರವೇರಿಸಬೇಕು.

"ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಂ ನಸಂಶಯಃ ।"

—ಅನಾದಿವೀರಶೈವ ಸಂಗ್ರಹ

ಎಲ್ಲ ತೀರ್ಥಸ್ನಾನದ, ಎಲ್ಲ ಯಜ್ಞ ಸಾಧನದ ಪುಣ್ಯ ಫಲಗಳು ಭಸ್ಮಸ್ನಾನವೊಂದರಲ್ಲಿ ಉಂಟಾಗುವ ಪುಣ್ಯಫಲಗಳಿಗೆ ಸರಿಬಾರವು. ಅನಿಶ್ಚಿತ ಅಭಿಪ್ರಾಯವಿದಲ್ಲ. ನಿಶ್ಚಿತವಾದ ನಿಜಾನುಭವದ ನುಡಿಯಿದು. ನಿತ್ಯ

ಭಸ್ಮ ಸ್ನಾನ ಮಾಡಿ ನೋಡಿ ನಿಜವರಿಯಬೇಕು. ನಿಜಸುಖದೊಳಗಿರಬೇಕು. ವೈದ್ಯಶಾಸ್ತ್ರದಲ್ಲಿ ಅನೇಕ ವಿಧ ಭಸ್ಮಗಳಿವೆ. ಪ್ರವಾಳಾದಿ ನವರತ್ನ ಭಸ್ಮಗಳಿವೆ. ಸುವರ್ಣಾದಿ ಸರ್ವಧಾತ ಭಸ್ಮಗಳಿವೆ. ಈ ಗೋಮಯದಿಂದಾದ ಪಾದೋದಕ ಪಾವನ ಮಂತ್ರಗಳಿಂದ ಸಂಸ್ಕೃತವಾದ ಭಸ್ಮಕ್ಕೆ ಸರಿಬಾರವು. ಈ ಭಸ್ಮ ಸ್ನಾನ ಧಾರಣಗಳಿಂದ ಸರ್ವ ದೋಷಗಳು ದೂರಾದಂತೆ ನಿತ್ಯ ಸ್ವಲ್ಪ ಸ್ವಲ್ಪ ಸ್ವೀಕರಿಸುವುದರಿಂದ ಸಕಲ ರೋಗಗಳು ತೊಲಗಿ ಸಂಪೂರ್ಣಾರೋಗ್ಯವು ಕರತಲಾಮಲಕವಾಗುತ್ತದೆ. ಭಸ್ಮರಾಜ, ಭಸ್ಮರತ್ನವೆಂದು ಹೇಳಬಹುದು. ದಿವ್ಯ ಸಂಜೀವಿನಿಯೆಂದು ಹೇಳಬಹುದು. ಪ್ರಾಕೃತಿಕ ದೋಷಗಳನ್ನೆಲ್ಲ ಪರಿಹರಿಸುತ್ತದೆ ಈ ಗೋಮಯ ಭಸ್ಮ.

"ಬಹ್ಮಾದ್ಯಾ ವಿಬುಧಾಃ ಸರ್ವೇ ಮುನಯೋ ನಾರದಾದಯಃ
ಯೋಗಿನಃ ಸನಕಾದ್ಯಾಶ್ಚ ಬಾಣಾದ್ಯಾ ದಾನವಾ ಅಪಿ ।
ಭಸ್ಮಸ್ನಾನರತಾಃ ಸರ್ವೇ ಶಿವಭಕ್ತಿ ಪರಾಯಣಾಃ
ನಿರ್ಮುಕ್ತದೋಷಕಲಿಲಾ ನಿತ್ಯ ಶುದ್ಧಾ ಬವಂತಿ ಹಿ ॥"

ಶಬ್ದ ಪ್ರಮಾಣವನ್ನು ಹೇಳಿ ಅದು ಸಾಲದೆ ಸನಾತನಸಂತರ ಶಿವಭಕ್ತರ ಪ್ರಮಾಣವನ್ನು ಕಾಣಿಸಿದ್ದಾನೆ ಕವಿ.

ಭಸ್ಮಸ್ನಾನ ಮಾಡಿ ಭಕ್ತಿವಂತರಾಗಿ, ನಿರ್ಮುಕ್ತದೋಷರಾಗಿ ನಿತ್ಯ ಶುದ್ಧರಾಗಿ ಅಂದರೆ ಅಸತ್ತಿನಿಂದ ಸತ್ ಸ್ವರೂಪಕ್ಕೆ ಸಾಗಿನಿಂತ ಅನಿಮಿಷರ ಆದರ್ಶತೆ ಬೇಕೆ? ಬ್ರಹ್ಮಾದಿಗರನ್ನು ನೋಡಿ! ಮುನಿಗಳ ನಿದರ್ಶನ ಬೇಕೆ? ನಾರದಾದಿಗರನ್ನು ನೋಡಿ! ಯೋಗಿಗಳ ತೋರಬೇಕೆ? ಸನಕಾದಿ ಸಂತರನ್ನು ನೋಡಿ! ದಾನವರ ದೃಷ್ಟಾಂತ ಬೇಕೆ? ಬಾಣಾದಿಗರನ್ನು ನೋಡಿ! ಮೂರು ಲೋಕದವರು ಭಸ್ಮಸ್ನಾನದಿಂದ ಭವದ ಬವಣೆಯನ್ನು ಕಳೆದುಕೊಂಡಿದ್ದಾರೆ. ಭವದೋಷದಿಂದ ಮುಕ್ತರಾಗಿದ್ದಾರೆ. ಅಂತೆಯೇ ಅಕ್ಕಮಹಾದೇವಿಯು 'ಹಿತವಿದೆ. ಸಕಲ ಲೋಕದ ಜನಕ್ಕೆ ಮತವಿದೆ. ಶ್ರುತಿ ಪುರಾಣದ ಗತಿಯಿದೆ.' ಎಂದು ಮುತ್ತಿನಂತಹ ಮೂರು ಮಾತುಗಳಲ್ಲಿ ವಿಭೂತಿಯ ಮಹತಿಯನ್ನು ವ್ಯಾಪ್ತಿಯನ್ನು ಅಖಿಲರ ಅನುಮತಿಯನ್ನು ಉದ್ಘೋಷಿಸಿದ್ದಾಳೆ.

ಶಿವಭಕ್ತಿ ವೈಗೂಡಲು ಭಸ್ಮಸ್ನಾನ ಪ್ರಥಮ ಸೋಪಾನ. ಭಸ್ಮೋದ್ಧೂಲನ ದ್ವಿತೀಯ ಸೋಪಾನ. ಭಸ್ಮಧಾರಣ ತೃತೀಯ ಸೋಪಾನ. ಶುದ್ಧತೆಯಿಲ್ಲದೆ ಶ್ರದ್ಧೆ ಬಾರದು. ಶ್ರದ್ಧೆ ಬಾರದೆ ಭಕ್ತತ್ವ ಅಳವಡದು.

ಭಸ್ಮ ಸ್ನಾನದಿಂದ ಬ್ರಹ್ಮಾದಿಗಳಿಗೆ ವಿಬುಧತ್ವ, ನಾರದಾದಿಗಳಿಗೆ ಮುನಿತ್ವ, ಸನಕಾದಿಗಳಿಗೆ ಯೋಗಿತ್ವ, ಬಾಣಾದಿಗಳಿಗೆ ದಾನತ್ವ ಪ್ರಾಪ್ತಿ. ದಾನವ ಪದ ಹೀನಸೂಚಿಯಲ್ಲ. ಪೂರ್ವದೇವರು ಅವರು. ದಾನಗುಣದಿಂದ ದಾನವರಾದರು. ದೇವತೆಗಳಿಗಿಂತ ಮೊದಲು ದೇವತೆಗಳೆನಿಸಿದರು. ದೈತ್ಯರು ದೇವತೆಗಳ ಅಣ್ಣಂದಿರು ದಿತಿಯ ಮಕ್ಕಳು ದೈತ್ಯರು. ಅದಿತಿಯ ಮಕ್ಕಳು ಆದಿತೇಯರು. ದಿತಿ ಅದಿತಿಯರು. ಅಕ್ಕತಂಗಿಯರು. ಆದ್ದರಿಂದ ದಾನವರು ದೇವತೆಗಳ ಸಹೋದರರು. ದಾನಿಯೇ ಪ್ರಥಮ ದೇವ. ಆ ದಾನಗುಣ ಭಸ್ಮಸ್ನಾನದಿಂದ ಬರುತ್ತದೆ. ಯೋಗಶಕ್ತಿ, ವಾಙ್ಮನ ಧಾರಣಶಕ್ತಿ, ಪ್ರಜ್ಞಾ ಶಕ್ತಿ–ಇವು ಭಸ್ಮಸ್ನಾನದಿಂದ ಬಂದೊದಗುತ್ತವೆಯೆಂಬುದನ್ನು ವಿಶೇಷ್ಯ ಪದಗಳು ಸೂಚಿಸುತ್ತವೆ. ದೇವದಾನವರು ಮುನಿ—ಯೋಗಿಗಳು ಸಹ ಭಸ್ಮ ಸ್ನಾನದಲ್ಲಿ ಆಸಕ್ತರಾಗಿದ್ದರೆಂದರೆ ಅದರ ಮಹಿಮೆಗೆ ಮೇರೆಯೆಲ್ಲಿ ? ಬಸ್ಮ ಜ್ಯೋತಿ ಅಂದು ಎಲ್ಲೆಲ್ಲಿ ಎಲ್ಲರಲ್ಲಿ ತನ್ನ ಪ್ರಭಾವವನ್ನು ಬೀರಿತ್ತು. ಸಕಲ ಲೋಕದ ಜನ ಅದನ್ನು ಸ್ವಾಗತಿಸಿತ್ತು. ಪ್ರತಿ ಸೂರ್ಯನಂತೆ ಪ್ರಜ್ವಲಿಸಿತ್ತು.

ಭಸ್ಮೋದ್ಧೂಲನ ವಿಧಿ :

> **"ನಮಃಶಿವಾಯೇತಿ ಭಸ್ಮಕೃತ್ವಾ ಸಪ್ತಾಭಿಮಂತ್ರಿತಮ್**
> **ಉದ್ಧೂಲಯೇತ್ತೇನ ದೇಹಂ........................"**

ಪಂಚಾಕ್ಷರ ಮಂತ್ರದಿಂದ ಏಳು ಸಲ ಭಸ್ಮವನ್ನು ಅಭಿಮಂತ್ರಿಸಿ ಬಳಿಕ ಸರ್ವಾಂಗಕ್ಕೆ ಭಸ್ಮಲೇಪನವನ್ನು ಅಧಿಕಾರವರಿತು ವಿಧಿಗನುಸರಿಸಿ ಆಚರಿಸಬೇಕು. ಏಳು ಸಲ ಅಭಿಮಂತ್ರಿಸುವುದರಿಂದ ಏಳು ಜನ್ಮದ ಪಾಪ ಪಲ್ಲಟವಾಗುತ್ತದೆ. ಮತ್ತು ಸಪ್ತಧಾತುಗಳ ಶುದ್ಧಿಯಾಗುತ್ತದೆ. ಸಪ್ತ ವ್ಯಸನಗಳು ಸಡಿಲಾಗುತ್ತವೆ.

ಎರಡು ಅಂಗೈಗಳಿಗೆ ವಿಭೂತಿಯನ್ನು ಲೇಪಿಸಿಕೊಂಡು ಪಂಚಾಂಗುಲಿಗಳಿಗೆ ಪಂಚಾಕ್ಷರಗಳನ್ನು ಬಿಂದುಸಹಿತವಾಗಿ ಸಂಬಂಧಿಸಿಕೊಂಡು ಅಂಗೈಗಳೆರಡರಲ್ಲಿ ಮಂಗಳ ಪ್ರಣವಾಕ್ಷರಗಳನ್ನು ಉಲ್ಲಿಖಿಸಿ ಮುವ್ಮೊದಲು ಲಿಂಗಮೂರ್ತಿಯನ್ನು ಸ್ಪರ್ಶಿಸಿ ಬಳಿಕ ಹಣೆಗೆ ನಡು ಮೂರ್ಬೆರಳುಗಳಿಂದ ಧರಿಸಿ ಅನಂತರ ತಲೆಯಿಂದ ನಡುವಿನವರೆವಿಗೂ ಧ್ಯಾನಪೂರ್ವಕ ಲೇಪನ ಮಾಡಿಕೊಳ್ಳುವುದೇ ಉದ್ಧೂಲನ ವಿಧಿ.

ಶ್ರೀಗುರುವಿನಿಂದ ಅನುಗ್ರಹ ಪಡೆದು ಪ್ರಸಾದಿಯಾದಾತನು ಸರ್ವಾಂಗೋದ್ಧೂಲನವನ್ನು ಮಾಡಬೇಕು.

'ಸರ್ವಾಂಗೋದ್ಧೂಲನಂಕುರ್ಯಾತ್ಪಂಚಭಿರ್ಬ್ರಹ್ಮಭಿಃಪುನಃ।' ಎಂದು ಚಂದ್ರ ಜ್ಞಾನಾಗಮದಲ್ಲಿ ನಿರ್ದಿಷ್ಟವಾಗಿದೆ. 'ಅಭಿಧ್ಯಾಯನ್ನುದ್ಧೂಲಿತಾಂಗಂ ಕೃತ್ವಾ' ಎಂದು ಭಸ್ಮಜಾಬಾಲೋಪನಿಷತ್ತು ನಿರೂಪಿಸಿದೆ.

ಭಸ್ಮ (ತ್ರಿಪುಂಡ್ರ) ಧಾರಣ ವಿಧಿ :

> **"......................ತ್ರಿಪುಂಡ್ರಂಚಾಪಿ ಧಾರಯೇತ್ ।**
> **ಸರ್ವಾಂಗೋದ್ಧೂಲನಂ ಚಾಪಿ ನ ಸಮಾನಂ ತ್ರಿಪುಂಡ್ರಕೈಃ।**
> **ತಸ್ಮಾತ್ತ್ರಿಪುಂಡ್ರಮೇವೈಕಂ ಲಿಖೇದುದ್ಧೂಲನಂ ವಿನಾ ॥**
> **ತ್ರಿಪುಂಡ್ರಂ ಧಾರಯೇನ್ನಿತ್ಯಂ ಭಸ್ಮನಾ ಸಜಲೇನ ಹಿ ।**
> **ಸ್ಥಾನೇಷು ಪಂಚದಶಸು ಶರೀರೇ ಸಾಧಕೋತ್ತಮಃ ॥"**

ಮೂರು ಗೆರೆಯಾಗಿ ಧರಿಸುವುದಕ್ಕೆ ತ್ರಿಪುಂಡ್ರ ಧಾರಣವೆಂದು ಹೆಸರು. ಖಂಡನಾರ್ಥದ 'ಪುಡಿ' ಧಾತುವಿನಿಂದ ಪುಂಡ್ರ ಎಂದಾಗಿದೆ. ಉದ್ಧೂಲನವಾದ ಬಳಿಕ ತ್ರಿಪುಂಡ್ರಧಾರಣ ಮಾಡಬೇಕು. ಒಂದು ತ್ರಿಪುಂಡ್ರಕ್ಕೆ ಸರ್ವಾಂಗೋದ್ಧೂಲನವು ಸಮವಾಗದು. ಒಂದು ವೇಳೆ ಉದ್ಧೂಲನವನ್ನು ಮಾಡದಿದ್ದರೂ ತ್ರಿಪುಂಡ್ರವನ್ನು ಬಿಡಬಾರದು. ಪಾದೋದಕ ಮಿಶ್ರವಾದ ಭಸ್ಮದಿಂದ ನಿತ್ಯ ತ್ರಿಪುಂಡ್ರವನ್ನು ಅಂಗದಲ್ಲಿರುವ ಹದಿನಯ್ದು ಸ್ಥಲಗಳಲ್ಲಿ ಸಾಧಕಶ್ರೇಷ್ಠನು ಧರಿಸಬೇಕು.

**"ಉತ್ತಮಾಂಗೇ ಲಲಾಟೇ ಚ ಶ್ರವಣದ್ವಿತಯೋ ತಥಾ
ಗಲೇ ಭುಜದ್ವಯೋ ಚೈವ ಹೃದಿ ನಾಭೌ ಚ ಪೃಷ್ಠಕೇ।
ಬಾಹುಯುಗ್ಮೇ ಕಕುದ್ದೇಶೇ ಮಣಿಬಂಧದ್ವಯೋ ತಥಾ
ತ್ರಿಪುಂಡ್ರಂ ಭಸ್ಮನಾ ಧಾರ್ಯಂ ಮೂಲಮಂತ್ರೇಣ ಸಾಧಕೈಃ॥"**

ತಲೆ, ಹಣೆ, ಕಿವಿಗಳೆರಡು, ಕೊರಳು, ಹೆಗಲುಗಳೆರಡು, ಎದೆ, ಹೊಕ್ಕುಳ, ಬೆನ್ನು, ತೋಳುಗಳೆರಡು, ಹಿಂದಿನ ಕತ್ತು, ಮುಂಗೈಗಳೆರಡು– ಈ ಹದಿನಯ್ದು ನೆಲೆಗಳಲ್ಲಿ ಸಾಧಕರು ಮೂಲಮಂತ್ರವನ್ನು ನೆನೆಯುತ್ತ ಭಸ್ಮ ತ್ರಿಪುಂಡ್ರವನ್ನು ಧರಿಸಬೇಕು.

"ದ್ವಾತ್ರಿಂಶತ್ ಸ್ಥಾನಕೇ ವಾಥ ಷೋಡಶಸ್ಥಾನಕೇಽಥವಾ।
ಅಷ್ಟಸ್ಥಾನೇ ತಥಾ ಚೈವಂ ಪಂಚಸ್ಥಾನೇ ಚ ಯೋಜಯೇತ್॥"
—ಚಂದ್ರಜ್ಞಾನಾಗಮ.

**ವಾಮಹಸ್ತತಲೇ ಭಸ್ಮ ಕ್ಷಿಪ್ತ್ವಾಽಚ್ಛಾದ್ಯಾನ್ಯಪಾಣಿನಾ
ಅಗ್ನಿರಿತ್ಯಾದಿ ಮಂತ್ರೇಣ ಸ್ಪೃಶನ್ ವಾರಾಭಿಮಂತ್ರ್ಯ ಚ।
ತ್ರಿಪುಂಡ್ರಮುಕ್ತ ಸ್ಥಾನೇಷು ದಧ್ಯಾತ್ ಸಜಲಭಸ್ಮನಾ
ಶಿವಂ ಶಿವಂಕರಂ ಶಾಂತಂ ಸ ಪ್ರಾಪ್ನೋತಿ ನ ಸಂಶಯಃ॥"**

ಭಸ್ಮಸ್ನಾನವಿಧಿಯಲ್ಲಿ 'ಸ್ನಾನಕಾಲೇಕರೌ....' ಎಂಬ ಮಂತ್ರಾರ್ಥ ವಿವರಣೆಯಲ್ಲಿ ಈ ಮಂತ್ರಾರ್ಥವನ್ನು ವಿಶದಗೊಳಿಸಿದೆ. ಹಿಂದೆ ಹೇಳಿದಂತೆ ಹದಿನಯ್ದು ಸ್ಥಾನಗಳಲ್ಲಿ ಭಸ್ಮತ್ರಿಪುಂಡ್ರಧಾರಣ ಮಾಡಿದರೆ ಶಿವಂಕರನಾದ ಶಾಂತನಾದ ಶಿವನ ಸಾಕ್ಷಾತ್ಕಾರವಾಗುತ್ತದೆ. ಶಿವನ ಸಾಕ್ಷಾತ್ಕಾರವೆಂದರೆ ಶುಭ, ಶೋಭೆ, ಶಾಂತತೆ, ಸುಖಗಳುಂಟಾಗುವುದೆಂದು ಭಾವಿಸಬೇಕು.

**"ಮಧ್ಯಾಂಗುಲಿತ್ರಯೇಣೈವ ಸ್ವದಕ್ಷಿಣಕರಸ್ಯತು
ಷಡಂಗುಲಾಯತಂ ಮಾನಮಪಿ ವಾಲಿಕಮಾನಕಮ್।
ನೇತ್ರಯುಗ್ಮ ಪ್ರಮಾಣೇನ ಫಾಲೇ ದಧ್ಯಾತ್ ತ್ರಿಪುಂಡ್ರಕಂ
ಮಧ್ಯಮಾನಾಮಿಕಾಂಗುಷ್ಠೈರನುಲೋಮವಿಲೋಮತಃ
ಧಾರಯೇದ್ಯಸ್ತ್ರಿಪುಂಡ್ರಕಂ ಸ ರುದ್ರೋ ನಾತ್ರ ಸಂಶಯಃ॥"**

ಹಣೆಯಲ್ಲಿ ಭಸಿತವನ್ನು ಧರಿಸುವ ಎರಡು ರೀತಿಗಳನ್ನು ಇಲ್ಲಿ ಕಾಣಿಸಲಾಗಿದೆ. ಬಲಗೈಯ ನಡುವಿನ ಮೂರು ಬೆರಳುಗಳಿಂದ ಆರಂಗುಲ ಅಗಲವಾಗಿ ಹಣೆಯ ತುಂಬಾ ಕಡೆಗಣ್ಣುದ್ದಕ್ಕೂ ವಿಭೂತಿಧಾರಣ ಮಾಡುವುದೊಂದು ಬಗೆ ಅಥವಾ ಅದೇ ಬಲಗೈ ನಡುಬೆರಳು ಉಂಗುರ ಬೆರಳು ಹೆಬ್ಬೆರಳುಗಳಿಂದ ಲೋಮ ವಿಲೋಮವಾಗಿ ಧರಿಸುವುದು ಇನ್ನೊಂದು ಬಗೆ. ಈ ಎರಡನೆಯ ರೀತಿಯು ಉತ್ತಮವೆಂದು ಹೇಳುವುದುಂಟು. ಎರಡು ಬಗೆಯಲ್ಲಿ ಯಾವ ರೀತಿಯಾಗಿ ಧರಿಸಿದರೂ ತಪ್ಪಿಲ್ಲ. ಹಣೆಯಲ್ಲಿ ತ್ರಿಪುಂಡ್ರಧಾರಣ ಮಾಡಿದಾತನು ಹರನ ಸ್ವರೂಪನಾಗುತ್ತಾನೆ.

'ಅಕಾರೋಽನಾಮಿಕಃ ಪ್ರೋಕ್ತೋ ಹ್ಯುಕಾರೋ ಮಧ್ಯಮಾಂಗುಲಿಃ
ಮಕಾರಸ್ತರ್ಜನೀ ಜ್ಞೇಯಾ ತ್ರಿಭಿಃಕುರ್ಯಾತ್ತ್ರಿಪುಂಡ್ರಕಮ್ ।'

ಪ್ರಣವಾಕ್ಷರಗಳಾದ ಅಕಾರವೇ ಅನಾಮಿಕಾಂಗುಲಿ. ಉಕಾರವೆ ಮಧ್ಯಮಾಂಗುಲಿ. ಮಕಾರವೇ ತರ್ಜನಿ. ಆದುದರಿಂದ ಅವನ್ನು ಅಲ್ಲಲ್ಲಿ ಬರೆದು ಭಸ್ಮಧಾರಣ ಮಾಡಬೇಕು.

ಸಕಲ ಕ್ರಿಯೆಗಳಿಗಿದು ಕವಚ, ಸಕಲ ವಶ್ಯಕ್ಕಿದು ಶುಭ ತಿಲಕ ; ಸಕಲ ಸಂಪದಕ್ಕೆ ತಾಣವಿದು, ಅಘಟಿತ ಘಟಿತವೆನಿಸುವ ಅನುಪಮ ಮಹಾ ತ್ರಿಪುಂಡ್ರವಿದು.

ಆಗಮಕ್ಕೆ ಮೊದಲಿದು, ಆಚಾರದ ಸುಗತಿಯ ಪಥವಿದು ; ಕಾಲ ಕರ್ಮದ ಮೂಲನಾಶನವಿದು, ಜನನ ಮರಣದ ಭಯವೆಂಬ ದುಷ್ಕೃತವ ದೂರವ ಮಾಡುವುದು ವಿಭೂತಿ.

'ಅಣುಮಾತ್ರ ವಿಭೂತಿಯ ಹಣೆಯೊಳಿಡೆ ಎಣಿಕೆಯಿಲ್ಲದ ಭವಪಾಶ
ಹರಿಯುವುದು; ತ್ರಿಣಯನೊಲಿದು ಧರಿಸಿದನೆಂದೆನೆ ಆನು ಬದುಕಿದೆನು
ಕೂಡಲಸಂಗಯ್ಯ.' –ಏಕೋತ್ತರ ಶತಸ್ಥಲ.

**"ಋಜುಶ್ವೇತಮವ್ಯಾಪ್ತಂ ಸ್ನಿಗ್ಧಂನು ಶ್ರೋತ್ರ ಪ್ರಮಾಣಕಂ
ಏವಂ ಸಲ್ಲಕ್ಷಣೋಪೇತಂ ತ್ರಿಪುಂಡ್ರಂ ಸರ್ವಸಿದ್ಧಿದಮ್ ।**

ವಿಭೂತಿಯನ್ನು ಲಲಾಟದಲ್ಲಿ ಸರಳವಾಗಿ ಬೆಳುಪಾಗಿ ಸುಂದರವಾಗಿ ಬಿಡಿಬಿಡಿಯಾಗಿ ನುಣುಪಾಗಿ ನೀಳ್ಪಾಗಿ ಸಲ್ಲಕ್ಷಣವಾಗಿ ಮೂರು ಸಾಲಾಗಿ

ಧರಿಸಿದಲ್ಲಿ ಸರ್ವಸಿದ್ಧಿಗಳುಂಟಾಗುತ್ತವೆ. ಕಳಾಪೂರ್ಣವಾಗಿ ವಿಭೂತಿಧಾರಣ ಮಾಡಬೇಕು.

"ಪ್ರಾತಃಕಾಲೇ ಚ ಮಧ್ಯಾಹ್ನೇ ಸಾಯಾಹ್ನೇಚ ತ್ರಿಪುಂಡ್ರಕಂ
ಕದಾಚಿದ್ಭಸ್ಮನಾ ಕುರ್ಯಾತ್ಸ ರುದ್ರೋನಾತ್ರಸಂಶಯಃ !
ಏವಂ ವಿಧಂ ವಿಭೂತ್ಯಾಹಿ ಕುರುತೇಯಸ್ತ್ರಿಪುಂಡ್ರಕಮ್
ಸ ರೌದ್ರ ಧರ್ಮಸಂಯುಕ್ತ ಸ್ತ್ರಯೀಮಯ ಇತಿಶ್ರುತಿಃ ॥"

ಮೂರುಹೊತ್ತು ತ್ರಿಪುಂಡ್ರ ಧರಿಸಿರುವುದು ಉತ್ತಮ. ಎರಡು ಹೊತ್ತು ಧರಿಸಿರುವುದು ಮಧ್ಯಮ. ಒಮ್ಮೆ ಧರಿಸಿರುವುದು ಅನುತ್ತಮ ವಾದರೂ ಅದರ ಫಲ ಸರ್ವೋತ್ತಮ, ಆತ ಸಾಕ್ಷಾತ್ ಶ್ರೀರುದ್ರದೇವಸಮ. ಆತ ಆ ಶಿವಾಚಾರ ಸಂಪನ್ನ, ಆ ಶೈವಚಾರಿತ್ರ ಸಂಯುಕ್ತ. ವೇದತ್ರಯ ವಿದಿತ. ರುದ್ರನಾಗುವನೆಂದರೆ ರುದ್ರನಂತೆ ಸ್ಥಿರವಾದ ಚಿರವಾದ ಅಂಗವುಳ್ಳವ ನಾಗುವನೆಂದರ್ಥ.

'ಯ ಇದಂ ತ್ರಿಪುಂಡ್ರಂ ಧರತೇ ಸ ವೇದತ್ರಯಧಾರೀ ಭವತಿ ।
ಸ ಸಂತತಂ ತ್ರೇತಾಗ್ನಿರ್ಭವತಿ ।...ಯ ಇದಂ ತ್ರಿಪುಂಡ್ರಂ ಧೃತವಂತಂ
ಪುರುಷಂ ಪಶ್ಯತಿ ಸ ಸರ್ವಪಾಪೇಭ್ಯೋ ವಿನಿರ್ಮುಕ್ತೋ ಭವತಿ ।
ಸ ಸರ್ವ ವೇದಾಧ್ಯಯನ ಜನ್ಮ ಫಲವಾನ್ ಭವತಿ ।'

—ವೃದ್ಧಜಾಬಾಲಶ್ರುತಿ

"ಬ್ರಹ್ಮಾವಿಷ್ಣುಶ್ಚ ರುದ್ರಶ್ಚ ದೇವಾಃ ಶುಕ್ರಮುಖೋಗಣಾಃ
ತ್ರಿಪುಂಡ್ರಂ ಧಾರಯಂತ್ಯೇವ ಭಸ್ಮನಾ ಪರಿಕಲ್ಪಿತಮ್ ।
ವಸಿಷ್ಠಾದ್ಯಾ ಮಹಾಭಾಗಾ ಮುನಯಃ ಶ್ರುತಿಕೋವಿದಾಃ
ಧಾರಯಂತಿ ಸದಾಕಾಲಂ ತ್ರಿಪುಂಡ್ರಂ ಭಸ್ಮನಾಕೃತಮ್ ॥

ವಿಧಿ ವಿಷ್ಣು ರುದ್ರರು ಇಂದ್ರಾದಿ ದೇವತೆಗಳು ಭಸ್ಮ ತ್ರಿಪುಂಡ್ರವನ್ನು ಧರಿಸುವರು. ಶ್ರುತಿಗಳನ್ನು ಬಲ್ಲ ಮಹಿಮಾಶಾಲಿಗಳಾದ ವಸಿಷ್ಠಾದಿ ಮುನಿಗಳು ಸಹ ಭಸ್ಮತ್ರಿಪುಂಡ್ರವನ್ನು ಎಡೆಬಿಡದೆ ಧರಿಸುತ್ತಿದ್ದರು.

ತ್ರಿಪುಂಡ್ರಧಾರಣ ಇತಿಹಾಸ ಇಂದಿನದಲ್ಲ. ಸೃಷ್ಟಿಕರ್ತನಿಂದ ಸಾಗಿ ಬಂದಿದೆ. ಸೃಷ್ಟಿಪಾಲಕನಿಂದ ಬೆಳೆದು ನಿಂತಿದೆ, ಕಾರ್ಯಕೋಟಿಯಲ್ಲಿ

ಸೇರಿದ ಎರಡನೆಯು ರುದ್ರನ ಅಂಗೀಕಾರವನ್ನು ಪಡೆದಿದೆ. ಇಂದ್ರಾದಿ ಸ್ವರ್ಗೀಯ ದೇವತೆಗಳ ವಸಿಷ್ಠಾದಿ ಮರ್ತ್ಯದ ಮಹಾಮಹಾ ಮುನಿಗಳ ಮತವನ್ನು ಮನ್ನಣೆಯನ್ನು ಪಡೆದಿದೆ. ಇದಲ್ಲದೆ,

"ಶೈವಾಗಮೇಷು ವೇದೇಷು ಪುರಾಣೇಷ್ವಖಿಲೇಷು ಚ
ಸ್ಮೃತೀತಿಹಾಸಕಲ್ಪೇಷು ವಿಹಿತಂ ಭಸ್ಮಪುಂಡ್ರಕಮ್ |"

ಶೈವಾಗಮಗಳಲ್ಲಿ ಸರ್ವವೇದಗಳಲ್ಲಿ ಸಮಸ್ತ ಪುರಾಣಗಳಲ್ಲಿ ಸಕಲಸ್ಮೃತಿ ಇತಿಹಾಸ ಕಲ್ಪಗಳಲ್ಲಿ ಭಸ್ಮ ತ್ರಿಪುಂಡ್ರವು ವಿಹಿತವಾಗಿರುವುದು.

ಶಿವಾಗಮಗಳ ಕಾಲ ಬಹು ಪ್ರಾಚೀನವಾದುದು. ನಿಗಮಗಳ ಕಾಲ ಕ್ರಿ. ಪೂ. ಸಾವಿರ ವರುಷವೆಂದು ಹೇಳುತ್ತಾರೆ. ಸ್ಮೃತಿಗಳಲ್ಲಿ ಮನು, ಅತ್ರಿ, ಹರಿತ, ವಿಷ್ಣು, ಯಾಜ್ಞವಲ್ಕ್ಯ ಸ್ಮೃತಿಗಳು ಪ್ರಥಮವಾದುದು. ನಾರದ ಸ್ಮೃತಿ, ಪರಾಶರ ಸ್ಮೃತಿ, ಬೃಹಸ್ಪತಿ ಸ್ಮೃತಿ, ಕಾತ್ಯಾಯನ ಸ್ಮೃತಿ, ವಸಿಷ್ಠ ಸ್ಮೃತಿ ಮುಂತಾದುವುಗಳು ಆ ಬಳಿಕ ಪ್ರಸಿದ್ಧವಾಗಿವೆ. ಇವು ಕ್ರಿ. ಶ. ಎರಡನೇಯ ಶತಾಬ್ದದಿಂದ ಐದನೆಯ ಶತಾಬ್ದ ಕಾಲವಿಧಿಯಲ್ಲಿ ಮೈದಾಳಿವೆ.

ಈ ವಿವರಣೆಯಿಂದ ಭಸ್ಮಧಾರಣದ ಪುರಾತನತೆಯುವ್ಯಕ್ತವಾಗುತ್ತದೆ. ಮತ್ತು ತಾಂತ್ರಿಕ ವೈದಿಕವೆರಡರ ಮೈತ್ರಿಯನ್ನು ಪಡೆದಿದೆ.

ಅನೇಕ ಉಪನಿಷತ್ತುಗಳಲ್ಲಿ ಭಸ್ಮ ರುದ್ರಾಕ್ಷಗಳ ವಿಷಯ ವಿಹಿತವಾಗಿದೆ. 'ಉಪನಿಷತ್ತುಗಳಲ್ಲಿ ಜ್ಞಾನಾಂಗಮಾದ ಭಸ್ಮರುದ್ರಾಕ್ಷಾದಿಗಳಂ ಬ್ರಹ್ಮಜ್ಞಾನಾದಿಕಮಂ ವಿವರಿಸುತಿರ್ಕುಂ' ಎಂದು ನಿಜಗುಣರು ವಿವೇಕ ಚಿಂತಾಮಣಿಯಲ್ಲಿ ಹೇಳಿದ್ದಾರೆ. ಭಸ್ಮರುದ್ರಾಕ್ಷಗಳಿಗೆ ಮೀಸಲಾದ ಉಪನಿಷತ್ತುಗಳೂ ಇರುತ್ತವೆ.

ಬಳಿಕ ಪುರಾಣ ಇತಿಹಾಸಗಳು ಬಂದವು. ಇವುಗಳಲ್ಲಿಯೂ ಭಸ್ಮಧಾರಣವು ಪ್ರತಿಪಾದಿತವಾಗಿದೆ. 'ಪುರಾ ಭವಂ ಪುರಾಣಂ' 'ಇತಿ ಹ ಆಸ–ಇತಿಹಾಸ' ಎಂದು ವಿಗ್ರಹಿಸುತ್ತಾರೆ. ಪೂರ್ವವೃತ್ತಗಳನ್ನು ತಿಳಿಸುವ ಗ್ರಂಥಗಳೇ ಪುರಾಣೇತಿಹಾಸಗಳು. ಬ್ರಹ್ಮ, ಪದ್ಮ, ಶೈವ, ವೈಷ್ಣವಾದಿ ೧೮ ಪುರಾಣಗಳು, ರಾಮಾಯಣ-ಭಾರತಗಳು ಇತಿಹಾಸಗಳು. ಇವು ವಿಶ್ವಕೋಶದಂತಿವೆ. ಇವುಗಳಲ್ಲಿ ಇಲ್ಲದ ವಿಷಯವೇ ಇಲ್ಲ. ಇವುಗಳಲ್ಲಿಯೂ ಭಸ್ಮಧಾರಣವು ಉಕ್ತವಾಗಿದೆ. ಕಲ್ಪ ಶಬ್ದ ಎರಡರ್ಥದಲ್ಲಿ ಬಳಸಲಾಗಿದೆ. ಮನ್ವಂತರ, ಶಾಸ್ತ್ರ

ಇವೇ ಎರಡು. ಆಗಮಾದಿ ಯುಗಗಳಲ್ಲಿ ಅಥವಾ ಆಗಮಾದಿ ಶಾಸ್ತ್ರಗಳಲ್ಲಿ ಎಂದು ಅರ್ಥವಿಸಬೇಕು.

'ಯೋ ಪೂತಂ ಭಸ್ಮಪೂತಾಂಗೋ ಶಿವಪೂಜೋನ್ಮುಖೋಭವೇತ್
ಸ ತರತ್ಯೇವ ಸಂಸಾರಮಪಾರಮತಿದಾರುಣಮ್ ।
ಆಪಾದ ಮಸ್ತಕಂ ಸಮ್ಯಕ್ ಭಸ್ಮನೋದ್ಧೂಳ್ಯ ಸಾದರಮ್
ಸರ್ವ ಶ್ರುತಿ ಶ್ರುತಂ.....ದಿಗ್ಭಸ್ಮರಹಿತಂ ಫಾಲಂ'

—ಶಿವಪುರಾಣ

'ತ್ರಿಪುಂಡ್ರ ಧಾರಣಂ ತ್ಯಕ್ತ್ವಾ ಮುಕ್ತಿಮಿಚ್ಛತಿ ಯಃ ಪುಮಾನ್
ವಿಷಪಾನೇನ ನಿತ್ಯತ್ವಂ ಕುರುತೇ ಹ್ಯಾತ್ಮನೋ ಹಿ ಸಃ ।'

ಇವೇ ಮುಂತಾದ ಪುರಾಣಗಳಲ್ಲಿ ಪ್ರತಿಪಾದಿತವಾಗಿದೆ.

'ಉಮಾದೇವ್ಯಾ ಚ ಲಕ್ಷ್ಮ್ಯಾ ಚ ವಾಣ್ಯಾ ಚಾನ್ಯಾಭಿರೇವ ಚ
ಸರ್ವಸ್ತ್ರೀಭಿರ್ಧೃತಂ ಭಸ್ಮ ತ್ರಿಪುಂಡ್ರೋದ್ಧೂಳನಾತ್ಮನಾ ।'

ಕ್ರಿಯಾಸಾರ ಗ್ರಂಥವು ಈ ಇತಿಹಾಸವನ್ನು ಹೇಳಿದೆ. ಉಮಾದೇವಿಯಿಂದ ಮೊದಲ್ಗೊಂಡು ಉಳಿದೆಲ್ಲ ಪುರಾತನ ಪುಣ್ಯಾಂಗನೆಯರು ಪಾವನ ವಿಭೂತಿಯನ್ನು ಧರಿಸುತ್ತಿದ್ದರು. ಕಾರಣ ಸ್ತ್ರೀಯರೂ ಧರಿಸಿ ಪಾವನರಾಗಬೇಕು. ಭಸ್ಮತ್ರಿಪುಂಡ್ರಕ್ಕೆ ಬಹು ಪುರಾತನ ಇತಿಹಾಸವಿದೆ. ಆದಿಮಾನವನಿಂದ ಆದರಿಸಲ್ಪಟ್ಟಿದೆ.

'ಚಂದನಾದ್ಯುಪರಿ ಪ್ರಾಜ್ಞೋ ಧಾರಯೋದ್ಭಸ್ಮವೈದಿಕಮ್ ।
ಲೌಕಿಕಂ ಚಂದನಾದ್ಯಂತು ಭಸ್ಮೋಪರಿ ನ ಧಾರಯೇತ್ ॥'

ಎಂಬುದಾಗಿ ಕ್ರಿಯಾಸಾರ ಗ್ರಂಥವು ಹೇಳಿದೆ. ಗಂಧ ಚಂದನಾದಿ ತಿಲಕಗಳ ಮೇಲೆ ಭಸ್ಮವನ್ನು ಧರಿಸಬೇಕಲ್ಲದೆ ಪಾರ್ಥಿವವಾದ ಚಂದನಾದಿಗಳನ್ನು ಪಾವನವಾದ ಭಸ್ಮದ ಮೇಲೆ ಧರಿಸಬಾರದು. ವೀರಶೈವರು–ಸ್ತ್ರೀಯರು ಗಂಧ ಚಂದನಾದಿಗಳನ್ನು ಕುಂಕುಮಾದಿಗಳನ್ನು ಧರಿಸಬಾರದೆಂದು ಸಖರಾಯ ಪಟ್ಟಣದ ಶ್ರೀ ಸದಾಶಿವ ಶಿವಾಚಾರ್ಯರು ಪ್ರತಿಪಾದಿಸುತ್ತಾರೆ.

"ಧಾರಣೀಯಂ ಸಮಸ್ತಾನಾಂ ಶೈವಾನಾಂ ಚ ವಿಶೇಷತಃ
ನಾಸ್ತಿಕೋ ಭಿನ್ನಮರ್ಯಾದೋ ದುರಾಚಾರಪರಾಯಣಃ
ಭಸ್ಮತ್ರಿಪುಂಡ್ರಧಾರೀ ಚೇನ್ಮುಚ್ಯತೇ ಸರ್ವಕಿಲ್ಬಿಷೈಃ !"

ಸರ್ವರೂ ಶ್ರೀ ವಿಭೂತಿಧಾರಣವನ್ನು ಮಾಡಬೇಕು. ಅದರಲ್ಲಿಯೂ ವಿಶೇಷವಾಗಿ ವೀರಶೈವರು ತಪ್ಪದೇ ಮಾಡಬೇಕು. ನಾಸ್ತಿಕನಾಗಲಿ ಮಾನರಹಿತನಾಗಲಿ ಅನಾಚಾರಿಯಾಗಲಿ ಇವರೆಲ್ಲರೂ ಭಸ್ಮಧಾರಣ ಮಾಡಿದರೆ ಆಸ್ತಿಕರಾಗುತ್ತಾರೆ ; ಆದರಣೀಯರಾಗುತ್ತಾರೆ; ಸದಾಚಾರಪರರಾಗುತ್ತಾರೆ.

'ವಿಭೂತಿಧಾರಣಂ ತ್ಯಕ್ತ್ವಾ ಯಃ ಶಿವಂ ಪೂಜಯಿಷ್ಯತಿ.
ಸ ದುರ್ಭಾಗ್ಯಶ್ಶಿವದ್ವೇಷೀ ತಸ್ಯಸರ್ವಂ ನಿರರ್ಥಕಮ್।
ಯೇಭಸ್ಮಧಾರಣಂ ತ್ಯಕ್ತ್ವಾ ಕರ್ಮಕುರ್ವಂತಿ ಮಾನವಾಃ
ತೇಷಾಂ ನಾಸ್ತಿ ವಿನಿರ್ಮೋಕ್ಷಃ ಸಂಸಾರಾಜ್ಜನ್ಮಕೋಟಿಭಿಃ ||

ಈ ಮಾತುಗಳನ್ನು ಪೂಜಕರು ಧಾರ್ಮಿಕರು ಕಾರ್ಮಿಕರು ಮೆಲಕು ಹಾಕಬೇಕು. ಮನಕ್ಕೆ ತರಬೇಕು.

'ಅಡ್ಡ ವಿಭೂತಿಯಿಲ್ಲದವರ ಮುಖಹೊಲ್ಲ; ನೋಡಲಾಗದು.
ಲಿಂಗದೇವರಿಲ್ಲದ ಠಾವು ನರವಿಂದ್ಯ; ಹೋಗಲಾಗದು.
ದೇವಭಕ್ತರಿಲ್ಲದೂರು ಸಿನೆ ಹಾಳು ! ಕೂಡಲ ಸಂಗಮ ದೇವಾ !

ರುದ್ರಾಕ್ಷಧಾರಣಸ್ಥಲ

(೭)

ಲಿಂಗಭಕ್ತನು ಲಿಂಗವನ್ನು ಕಾಣಬೇಕಾದರೆ ಭಸ್ಮಭಾನುವಿನ ಬೆಳಗಿನಲ್ಲಿ ಮಾತ್ರವಿದ್ದರೆ ಸಾಲದು. ಜತೆಗೆ ರುದ್ರಾಕ್ಷರೂಪ ಅಕ್ಷಿಬೇಕು. ಭಸ್ಮಭಾನು ಹೇಗೆ ಲಿಂಗದ ಬೆಳಗೋ ಹಾಗೆ ರುದ್ರಾಕ್ಷವೂ ಆ ಲಿಂಗದ ಅಕ್ಷಿಯೇ ಆಗಿದೆ ಯಲ್ಲದೆ ಬೇರಲ್ಲ. ತನ್ನ ಬೆಳಗಿನಲ್ಲಿ ತನ್ನ ಕಣ್ಣಿಂದ ತಾನೇ ತನ್ನನ್ನು ನೋಡಬಲ್ಲ ಆ ಲಿಂಗಭಕ್ತ.

ರುದ್ರಾಕ್ಷ ತತ್ವಕ್ಕೆ ಇವ್ಮೊಗಗಳಿವೆ. ಒಂದು ಆಧ್ಯಾತ್ಮಿಕ ; ಇನ್ನೊಂದು ಭೌತಿಕ ಆಧ್ಯಾತ್ಮಿಕ ರುದ್ರಾಕ್ಷವೆಂದರೆ ಚಿದಕ್ಷಿ. ಚಿದಕ್ಷಿಯ ಉತ್ಪತ್ತಿಗೆ ಶ್ರೀಗುರುವೆಂಬ ರುದ್ರದೇವನ ಕಾರುಣ್ಯರಸವೇ ಕಾರಣ. ಗುರುಕಾರುಣ್ಯ ರಸದ ಹನಿಗಳು ಚಿದ್ಬಿಂದುಗಳು ಸಚ್ಛಿಷ್ಯನ ಹೃದಯ ಭೂಮಿಯಲ್ಲಿ ಬೀಳಲು (ಶಕ್ತಿಪಾತವಾಗಲು)ಸಚ್ಛಿಷ್ಯನಲ್ಲಿ ಚಿದಕ್ಷಿ ರೂಪಚಿದ್ ರುದ್ರಾಕ್ಷಿಗಳ ಧಾರಣ ವಾಗುತ್ತದೆ. ಈ ನಮ್ಮ ಮಾತನ್ನು ಈ ಕೆಳಗಿನ ಪ್ರಮಾಣಗಳು ಪೋಷಿಸು ತ್ತವೆ.

'ರುದ್ರಾಕ್ಷ ಮೂಲಮೋಂಕಾರಂ, ಮುಖಂ ಪಂಚಾಕ್ಷರಂ ವಿದುಃ
ತನ್ನಾಲಂ ಭಕ್ತಹೃನ್ನಾಲಂ, ತತ್ಸೂತ್ರಂ ಜ್ಞಾನಸೂತ್ರವತ್ ।,

'ತತ್ತ್ವ ಚಿಂತಾಮಣಿಗಳೆಂಬ ರುದ್ರಾಕ್ಷಿಗಳ ಭಕ್ತಿದಾರದಲ್ಲಿ ಸರಗೊಳಿಸಿ ಯುಕ್ತಿ ವಿಧಾನವಿಡಿದು ಧರಿಸಿ ಸದ್ಯೋನ್ಮುಕ್ತನಾದೆನಯ್ಯ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.' 'ಅಯ್ಯಾ, ಎನಗೆ ರುದ್ರಾಕ್ಷಿಯೇ ಸರ್ವ ಪಾವನ. ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ. ಅಯ್ಯಾ, ನಿಮ್ಮ ಪಂಚವಕ್ತ್ರಂಗಳೇ ಪಂಚಮುಖದ ರುದ್ರಾಕ್ಷಿಗಳಾದವಾಗಿ, ಅಯ್ಯಾ, ಕೂಡಲ ಸಂಗಮ ದೇವಾ, ಎನ್ನ ಮುಕ್ತಿ ಪಥಕ್ಕೆ ಈ ಶ್ರೀರುದ್ರಾಕ್ಷಿಯೇ ಸಾಧನವಯ್ಯ.'

ಮೊದಲಿನ ಎರಡು ಪ್ರಮಾಣಗಳು ಆಧ್ಯಾತ್ಮಿಕ ವೈಭವವನ್ನು ವರ್ಣಿಸಿ ಭಕ್ತಿ ಮುಕ್ತಿಗಳಿಗೆ ಜ್ಞಾನಸಿದ್ಧಿಗೆ ತತ್ತ್ವ ತಾದಾತ್ಮ್ಯತೆಗೆ ಹೇಗೆ ಸೂತ್ರಪಾತ್ರ ವಾಗಿವೆಯೆಂಬುದನ್ನು ವಿವರಿಸಿವೆ. ಮೂರನೆಯ ಪ್ರಮಾಣವು ಸರ್ವಪಾವನ, ಸರ್ವಸಿದ್ಧಿ ಕಾರಣಗಳೆಂದು ಹೇಳುತ್ತ ಭೌತಿಕವಾಗಿ ಉತ್ಪತ್ತಿಯಾದುದನ್ನೂ ಹೇಳಿದೆಯಲ್ಲದೆ ಇತ್ತ ನಮ್ಮ ಗಮನವನ್ನು ಸೆಳೆದಿದೆ. ಭೂಮಿಯಲ್ಲಿ ಶ್ರೀರುದ್ರ ನೇತ್ರಬಿಂದುಗಳಿಂದ ಉತ್ಪತ್ತಿಯಾದ ರುದ್ರಾಕ್ಷಿಗಳನ್ನು ಧರಿಸುವುದರಿಂದ ದೇಹಾರೋಗ್ಯವುಂಟಾಗುತ್ತದೆಯೆಂಬುದಕ್ಕೆ ರುದ್ರಾಕ್ಷಜಾಬಾಲೋಪನಿಷತ್ತು ಮತ್ತು ಚಂದ್ರಜ್ಞಾನಾಗಮಗಳೆರಡು ಪರಮಸಾಕ್ಷಿಯಾಗಿವೆ.

'ಚತುರ್ದಶಮುಖಂ ಚಾಕ್ಷಂ ರುದ್ರನೇತ್ರಸಮುದ್ಭವಮ್
ಸರ್ವವ್ಯಾಧಿಹರಂ ಚೈವ ಸರ್ವದಾಽರೋಗ್ಯಮಾಪ್ನುಯಾತ್ ।
ಮಹತೀಜ್ಞಾನಸಂಪತ್ತಿಃ ಶುಚಿರ್ಧಾರಣತಸ್ಸದಾ ।
ಮತಿವಿಜ್ಞಾನಸಂಪತ್ತಿಶುದ್ಧಯೇ ಧಾರಯೇತ್ಸುಧೀಃ ।'
ಭಕ್ತಾನಾಂ ಧಾರಣಾತ್ಪಾಪಂ ದಿವಾರಾತ್ರಿಕೃತಂ ಹರೇತ್ ।

ಇತ್ಯಾದಿ ಶ್ರುತ್ಯುಕ್ತಿಗಳಿಂದ ರುದ್ರಾಕ್ಷಿ ಮಹಿಮೆ ಮತ್ತು ಧಾರಣಾವಶ್ಯ ಕತೆ ವ್ಯಕ್ತವಾಗುತ್ತವೆ.

"ಭಸ್ಮನಾ ವಿಹಿತಸ್ನಾನ ಸ್ತ್ರಿಪುಂಡ್ರಾಂಕಿತ ಮಸ್ತಕಃ
ಶಿವಾರ್ಚನಪರೋ ನಿತ್ಯಂ ರುದ್ರಾಕ್ಷಮಪಿ ಧಾರಯೇತ್ ।
ರುದ್ರಾಕ್ಷಧಾರಣಾದೇವ ಮುಚ್ಯಂತೇ ಸರ್ವಪಾತಕೈಃ
ದುಷ್ಟಚಿತ್ತಾ ದುರಾಚಾರಾ ದುಷ್ಪ್ರಜ್ಞಾ ಅಪಿ ಮಾನವಾಃ ॥"

ಭಸ್ಮಸ್ನಾನ ಭಸ್ಮಧಾರಣವಾದ ಬಳಿಕ ಶಿವಾರ್ಚನಾಸಕ್ತನಾದ ಭಕ್ತನು ನಿತ್ಯ ರುದ್ರಾಕ್ಷಿಗಳನ್ನೂ ಧರಿಸಬೇಕು. ರುದ್ರಾಕ್ಷಿಧಾರಣದಿಂದ ಸರ್ವಪಾಪ ಗಳ ತೊಲಗುತ್ತವೆ. ದುಷ್ಟಚಿತ್ತರು ಸುಚಿತ್ತರಾಗುತ್ತಾರೆ. ದುರಾಚಾರಿ ಗಳು ಸದಾಚಾರಿಗಳಾಗುತ್ತಾರೆ. ದುಷ್ಟಬುದ್ಧಿಯುಳ್ಳವರು ಸದ್ಬುದ್ಧಿಯುಳ್ಳ ವರಾಗುತ್ತಾರೆ ಅಜ್ಞರು ಸುಜ್ಞರಾಗುತ್ತಾರೆ. ಅಂತಹ ರುದ್ರಾಕ್ಷೋತ್ಪ ತ್ತಿಯ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು.

“ಪುರಾ ತ್ರಿಪುರಸಂಹಾರೇ ತ್ರಿನೇತ್ರೋ ಜಗತಾಂ ಪತಿಃ
ಉದಪಶ್ಯತ್ಪರಾಂ ಯೋಗಮುನ್ಮೀಲಿತವಿಲೋಚನಃ ।
ನಿಪೇತುಸ್ತಸ್ಯ ನೇತ್ರೇಭ್ಯೋ ಬಹವೋ ಜಲಬಿಂದವಃ
ತೇಭ್ಯೋಜಾತಾ ಹಿ ರುದ್ರಾಕ್ಷಾ ರುದ್ರಾಕ್ಷಾ ಇತಿ ಕೀರ್ತಿತಾಃ॥

ಪುರಾತನ ಕಾಲದಲ್ಲಿ ತ್ರಿಪುರ ಸಂಹಾರ ಸಮಯದಲ್ಲಿ ಜಗದೊಡೆಯನಾದ ಕಾಲಾಗ್ನಿರುದ್ರನು ತನ್ನ ಸೂರ್ಯಚಂದ್ರಾಗ್ನಿ ನೇತ್ರಗಳನ್ನು ತೆರೆದು ನಿಡುಗಾಲ ಮೇಲಕ್ಕೆ ನೋಡಿದನು. ನೋಡುವ ಆ ನಯನಗಳಿಂದ ಹೆಚ್ಚು ಹೆಚ್ಚಾಗಿ ನೀರು ಹನಿಗಳು ಉದುರುವವು. ಅವುಗಳಿಂದ ಹುಟ್ಟಿದವುಗಳು ರುದ್ರಾಕ್ಷಿಗಳೆಂದು ಹೆಸರಾದವು. ರುದ್ರನೇತ್ರದಿಂದ ಹುಟ್ಟಿದ ಕಾರಣ ರುದ್ರಾಕ್ಷಿವೆನಿಸಿದವು.

ಪುರಾ ಪದಪ್ರಯೋಗವು ಪರಿಶೀಲನಾರ್ಹವಾದುದು. ನಿಗಮಾಗಮುಗಳ ಕಾಲಕ್ಕಿಂತ ಬಹು ಪೂರ್ವದಲ್ಲಿ ಶಿವಯುಗಕ್ಕಿಂತ ಪೂರ್ವದಲ್ಲಿ ಕಾಲಾಗ್ನಿರುದ್ರನಿದ್ದನು. ರುದ್ರಾಕ್ಷಿ ಜಾಬಾಲೋಪನಿಷತ್ತಿನಲ್ಲಿ ಭುಸುಂಡ ಮುನಿಯು ಸ್ವತಃ ಕಾಲಾಗ್ನಿ ರುದ್ರನನ್ನು ರುದ್ರಾಕ್ಷೋತ್ಪತ್ತಿಯನ್ನು ರುದ್ರಾಕ್ಷಿಧಾರಣ ಫಲವನ್ನು ಕೇಳುತ್ತಾನೆ; ಆ ಮುನಿಗೆ ಕಾಲಾಗ್ನಿರುದ್ರನು ಹೀಗೆ ಹೇಳಿದ್ದಾನೆ :

‘ದಿವ್ಯವರ್ಷಸಹಸ್ರಾಣಿ ಚಕ್ಷುರುನ್ಮೀಲಿತಂ ಮಯಾ ।
ಭೂಮಾವಕ್ಷಿಪುಟಾಭ್ಯಾಂ ತು ಪತಿತಾ ಜಲಬಿಂದವಃ ॥
ತತ್ರಾಶ್ರುಬಿಂದವೋ ಜಾತಾ ಮಹಾರುದ್ರಾಕ್ಷ ವೃಕ್ಷಕಾಃ ।
ಸಾ ವರತ್ವಮನುಪ್ರಾಪ್ಯ ಭಕ್ತಾನುಗ್ರಹಕಾರಣಾತ್ ॥’

‘ದಿವ್ಯವರ್ಷಸಹಸ್ರಾಣಿ’ ಎಂದು ಕಾಲನಿರ್ದೇಶವಾಗಿದೆ. ಮಾನವನ ಕಾಲಮಾನ ದೃಷ್ಟಿಯಿಂದ ಅಜಕಲ್ಪಗಳೇ ಅಗಾಧವಾದುವುಗಳು. ಆ ಅಜನಿಂದಾಚೆ ವಿಷ್ಣು; ಆ ವಿಷ್ಣು ಕಲ್ಪಗಳಿಂದಾಚೆ ಕಾಲಾಗ್ನಿರುದ್ರ. ಆತನ ದಿವ್ಯ ವರ್ಷಸಹಸ್ರಗಳಂತೆ ! ಇದರಿಂದಾಗಿ ರುದ್ರಾಕ್ಷೋತ್ಪತ್ತಿ ಇತಿಹಾಸ ಬಹು ಪುರಾತನದ್ದಾಗಿದೆ. ಇದನ್ನು ಸೂಚಿಸಲು ಪುರಾ ಶಬ್ದ ಪ್ರಯೋಗವಾಗಿದೆ.

ಆ ಕಾಲಾಗ್ನಿರುದ್ರನು ತ್ರಿಪುರಗಳ ಸಂಹಾರಕ್ಕಾಗಿ ತ್ರಿನೇತ್ರಗಳನ್ನು ತೆರೆಯಬೇಕಾಗಿದೆ. ಅದರಲ್ಲಿಯೂ ಯೋಗಮುದ್ರೆಯಿಂದ ತೆರೆದಿದ್ದಾನೆ.

ಊರ್ಧ್ವಮುಖವಾಗಿ ನೋಟ ಬೀರಿದ್ದಾನೆ. ಉನ್ಮೀಲಿತ ಉದಪ್ಯತ್ ಪದ ಪ್ರಯೋಗಗಳು ಉದಾತ್ತವಾದ ಅರ್ಥದ್ಯೋತಕಗಳಾಗಿವೆ. ಆ ಬಗೆಯ ದಿವ್ಯನೇತ್ರಜಲ ಬಿಂದುಗಳಿಂದ ಜನಿಸಿವೆ ರುದ್ರಾಕ್ಷಿಗಳು.

ಕಾರ್ಯವೊಂದು; ಫಲವೆರಡು. ಅತ್ತ ತ್ರಿಪುರ ಸಂಹಾರ. ಇತ್ತ ತ್ರಿಲೋಕ ಭಕ್ತರುದ್ಧಾರ. ಒಂದೆಡೆ ಸಂಹಾರ. ಇನ್ನೊಂದೆಡೆ ಸೃಷ್ಟಿ. ಇದೇ ಯೋಗ ಪದ ಪ್ರಯೋಗದ ಅಂತರಾಶಯ.

ಇಷ್ಟಾದರೂ ಈ ಮಂತ್ರಾರ್ಥ ಮುಗಿಯಲಿಲ್ಲ. ಇದಿಷ್ಟೂ ಐತಿಹಾಸಿಕ ಅಥವಾ ಪೌರಾಣಿಕ ಬಾಹ್ಯಾರ್ಥವಾಯಿತು. ಇನ್ನು ತಾತ್ತ್ವಿಕವಾದ ಅಂತರಾರ್ಥವಿದೆ: ಸಾಂಸ್ಕಾರಿಕ ಪ್ರಕ್ರಿಯವಿದೆ.

ತತ್ತ್ವಾರ್ಥದಲ್ಲಿ ಪುರಾ ಅಂದರೆ ಸಂಸ್ಕಾರಕ್ಕಾಗಿ ಶ್ರೀಗುರುವಿನ ಬಳಿಗೆ ಶಿಷ್ಯನು ಬಾರದ ಮೊದಲು ಆತನ ತನು ಮೂರು ತ್ರಿಪುರಗಳಾಗಿರುತ್ತವೆ. ದೃಕ್ಕ್ರಿಯಾನುಭವಗಳೆಂಬ ಮೂರು ಕಣ್ಣುಳ್ಳ ಶಿಷ್ಯನ ಪಿಂಡಾಂಡ ಜಗತ್ತಿಗೆ ಒಡೆಯನಾದ ಶ್ರೀಗುರುವಿನ ಸನ್ನಿಧಿಗೆ ಶಿಷ್ಯನು ಬಂದು ಸಂಸ್ಕಾರ ಪಡೆಯಲು ಪ್ರಾರ್ಥಿಸಿದ ಬಳಿಕ ಶ್ರೀಗುರು ಆ ತ್ರಿಪುರರೂಪ ತ್ರಿತನುಗಳ ಸಂಹಾರಕ್ಕೆ ತೊಡಗುತ್ತಾನೆ. ಆ ಕಾಲದಲ್ಲಿ ಶ್ರೀಗುರು ತನ್ನ ಯೋಗಬಲದಿಂದ ತನ್ನ ಕಣ್ಣನ್ನು ತೆರೆಯುತ್ತಾನೆ. ಅದರಿಂದಾಗಿ ಶಿಷ್ಯನ ಕಣ್ಣುಗಳನ್ನೂ ತೆರೆಯಿಸುತ್ತಾನೆ. ಅಂದರೆ ಕ್ರಮವಾಗಿ ಕ್ರಿಯೆ, ಜ್ಞಾನ, ಅನುಭವಗಳನ್ನು ಬೋಧಿಸುತ್ತಾನೆ. ಕ್ರಿಯಾ ಮಂತ್ರ ವೇಧಾ ದೀಕ್ಷೆಗಳನ್ನೀಯುತ್ತಾನೆ. ಆಗ ಶಿಷ್ಯನನ್ನು ಊರ್ಧ್ವಮುಖವಾಗಿ ಶ್ರೀಗುರು ನೋಡುತ್ತಾನೆ. ಆ ನೋಟದಲ್ಲಿ ಕರುಣಾರಸ ಪ್ರಪೂರಿತ ಚಿತ್ಕ್ರಿಯಾ ಜಲಬಿಂದುಗಳು ಶಿಷ್ಯನ ಹೃದ್ಭೂಮಿಕೆಗೆ ಪಾತವಾಗುತ್ತವೆ- ಆಗ ಶಿಷ್ಯನ ಅಂಗತ್ರಯದಲ್ಲಿ ಕ್ರಿಯಾಜ್ಞಾನಾನುಭವರೂಪ ರುದ್ರಾಕ್ಷ ಧಾರಣವಾಗುತ್ತದೆ.

"ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ
ಅಷ್ಟತ್ರಿಂಷತ್ಪ್ರಭೇದೇನ ಭವಂತ್ಯುತ್ಪತ್ತಿ ಭೇದತಃ।"

ಆ ರುದ್ರನೇತ್ರಗಳಿಂದ ಉತ್ಪತ್ತಿಯಾಗಿ ರುದ್ರಾಕ್ಷಗಳೆನಿಸಿದವು. ಲೋಕಪಾವನವೆನಿಸಿದವು. ಉತ್ಪತ್ತಿ ಭೇದದಿಂದ ರುದ್ರಾಕ್ಷಗಳು ಮೂವತ್ತೆಂಟು

ಪ್ರಕಾರಗಳಾಗಿವೆ. ಭೂರುದ್ರನೆನಿಸಿದ ಶ್ರೀಗುರುವಿನ ಕೃಪಾಕಟಾಕ್ಷದಿಂದ ಶಿಷ್ಯನ ಪಿಂಡಾಂಡದಲ್ಲಿ ಅಂಗ–ಲಿಂಗ ಸೇರಿ ಅಥವಾ ಗುರು–ಶಿಷ್ಯತತ್ತ್ವ ಸೇರಿ ೩೬ ತತ್ತ್ವಗಳು ೩೮ ಆಗಿ ಪ್ರಕಾಶಗೊಳ್ಳುತ್ತವೆ.

"ನೇತ್ರಾತ್ ಸೂರ್ಯಾತ್ಮನಃ ಶಂಭೋಃ ಕಪಿಲಾ ದ್ವಾದಶೋದಿತಾಃ।
ಶ್ವೇತಾಃ ಷೋಡಶಸಂಜಾತಾಃ ಸೋಮರೂಪಾದ್ವಿಲೋಚನಾತ್
ಕೃಷ್ಣಾ ದಶವಿಧಾ ಜಾತಾ ವಹ್ನಿರೂಪಾದ್ವಿಲೋಚನಾತ್
ಏವಮುತ್ಪತ್ತಿ ಭೇದೇನ ರುದ್ರಾಕ್ಷಾ ಬಹುಧಾ ಸ್ಮೃತಾಃ ॥ "

ಸುಖಕರನಾದ ಆ ರುದ್ರನ ಸೂರ್ಯನಾಮಕ ಬಲಗಣ್ಣಿನಿಂದ ಕಂದು ಬಣ್ಣದ ಹನ್ನೆರಡು ರುದ್ರಾಕ್ಷಗಳು, ಸೋಮನಾಮಕ ಎಡಗಣ್ಣಿನಿಂದ ಬಿಳುಪು ಬಣ್ಣದ ಹದಿನಾರು ರುದ್ರಾಕ್ಷಗಳು; ವಹ್ನಿನಾಮಕ ನಡುಗಣ್ಣಿನಿಂದ ಕಪ್ಪು ಬಣ್ಣದ ಹತ್ತು ರುದ್ರಾಕ್ಷಗಳು ಹುಟ್ಟಿದವು ಹೀಗೆ ಉತ್ಪತ್ತಿ ಭೇದದಿಂದ ಹಲವು ಬಗೆಯಾಗಿವೆ.

ತಪನಿ, ತಾಪನಿ, ಧೂಮ, ಮರೀಚಿ, ಜ್ವಾಲಿನಿ, ರುಚಿ, ಸುಷುಮ್ನೆ, ಭೋಗದೆ, ವಿಶ್ವಬೋಧಿನಿ, ಧರಣಿ, ಕ್ಷಮೆ, ಪ್ರಭೆ–ಇವು ಹನ್ನೆರಡು ಸೂರ್ಯ ಕಲೆಗಳು. ಅಮೃತ, ಮಾನದ, ಪೂಷ, ತುಷ್ಟಿ, ಪುಷ್ಟಿ, ರತಿ, ಧೃತಿ, ಶಶಿನಿ, ಚಂದ್ರಿಕೆ, ಕಾಂತಿ, ಜ್ಯೋತ್ಸ್ನೆ, ಶ್ರೀ ಅಂಗದೆ, ಪೂರ್ಣೆ, ಅಮೃತೆ, ಕಾಮ ದಾಯಿನಿ,–ಇವು ಹದಿನಾರು ಚಂದ್ರಕಲೆಗಳು–ಹೊಗೆ, ಬೆಳಕು, ಬಿಸಿ, ಉರಿ, ಕಿಡಿ, ಅಂಗಾರ, ಶ್ರೀಲಕ್ಷಣ, ಕಪಿಲತಾಮ್ರ ಸ್ವರ್ಣವರ್ಣ, ಗಂಧವ್ಯಂಜನ, ಹವ್ಯವಾಹ ಕವ್ಯವಾಹ–ಇವು ಹತ್ತು ಅಗ್ನಿ ಕಲೆಗಳು. ಅಂತೆಯೇ ಸಾಕ್ಷಾತ್ ಶಂಭು ಸ್ವರೂಪನಾದ ಶ್ರೀಗುರುವಿನ ಅನುಭವರೂಪ ಸೂರ್ಯನೇತ್ರದಿಂದ ಅಥವಾ ವೇಧಾ ಸಂಸ್ಕಾರದಿಂದ ಶಿಷ್ಯನ ಕಾರಣ ರೂಪಯೋಗಾಂಗದಲ್ಲಿ ಆತ್ಮತ್ರಯ, ಅಹಂಕಾರತ್ರಯ, ಚಿತ್ತತ್ರಯ, ಭಾವತ್ರಯ ರೂಪ ಹನ್ನೆರಡು ತತ್ತ್ವಾನುಭವವುಂಟಾಗುತ್ತದೆ. ಸೂಕ್ಷ್ಮರೂಪ ಭೋಗಾಂಗದಲ್ಲಿ ಮಂತ್ರ ಸಂಸ್ಕಾರದಿಂದ ದಶವಾಯುತತ್ತ್ವ, ಸುಚಿತ್ತಾದಿಭಾವಾಂತ ಆರು ಹಸ್ತ ತತ್ತ್ವ ಗಳು ಸೇರಿ ಹದಿನಾರು ತತ್ತ್ವಜ್ಞಾನವುಂಟಾಗುತ್ತದೆ. ಸ್ಥೂಲರೂಪ ತ್ಯಾಗಾಂಗ ದಲ್ಲಿ ಕ್ರಿಯಾಸಂಸ್ಕಾರದಿಂದ ದಶೇಂದ್ರಿಯ ತತ್ವ ಪ್ರಕ್ರಿಯ ಪ್ರಕಾಶವಾಗುತ್ತದೆ.

"ಅಚ್ಛಿದ್ರಂ ಕನಕಪ್ರಖ್ಯಮನನ್ಯಧೃತಮುತ್ತಮಂ
ರುದ್ರಾಕ್ಷಂ ಧಾರಯೇತ್ ಪ್ರಾಜ್ಞಃ ಶಿವಪೂಜಾಪರಾಯಣಃ|"

ಒಡಕಾಗದ, ಹುಳಬೀಳದ, ಚಿನ್ನದಂತೆ ಬಣ್ಣವುಳ್ಳ ಬೇರಾರು ಧರಿಸಿದ ರುದ್ರಾಕ್ಷಗಳು ಉತ್ತಮವಾದವುಗಳು. ಅವುಗಳನ್ನು ಪೂಜಾಪರಾಯಣನಾದ ಪ್ರಾಜ್ಞನು ಧರಿಸಬೇಕು.

ಗುರುಕರುಣೆಯಿಂದ ಚಿಲ್ಲಿಂಗಧಾರಣವಾದ ಬಳಿಕ ಶಿಷ್ಯನ ಚಿತ್ತ ಛಿದ್ರವಾಗಬಾರದು. ಆಧಾರದ ಆಚಾರ ಲಿಂಗವನ್ನು ಕನಕಪ್ರಖ್ಯ ಅಂದರೆ ಸುವರ್ಣವರ್ಣವನ್ನಾಗಿ ಭಾವಿಸಬೇಕು. 'ಆಧಾರೇ ಕನಕ ಪ್ರಖ್ಯಂ....ಲಿಂಗಯೋಗೀ ವಿಭಾವಯೇತ್' ಎಂದು ಲಿಂಗಧಾರಣ ಪ್ರಕರಣದಲ್ಲಿ ಉದ್ಬೋಧಿಸಿದುದನ್ನು ಇಲ್ಲಿ ನೆನೆಯಬೇಕು. ಲಿಂಗಭಕ್ತನು ಅನ್ಯಧರ್ಮವನ್ನಾಗಲಿ, ಅನ್ಯಧ್ಯಾನವನ್ನಾಗಲಿ, ಅನ್ಯಧಾರಣವನ್ನಾಗಲಿ ಮಾಡಬಾರದು. ಇದು ಆಂತರಿಕ ರುದ್ರಾಕ್ಷ (ಜ್ಞಾನಾಕ್ಷ) ಧಾರಣವಿಧಾನ. ಇದು ಪ್ರಾಜ್ಞಲಕ್ಷಣ. ಇದು ಅಂತರಾರ್ಚನ

"ಯಥಾಸ್ಥಾನಂ ಯಥಾವಕ್ತ್ರಂ ಯಥಾಯೋಗಂ ಯಥಾವಿಧಿಃ
ರುದ್ರಾಕ್ಷಧಾರಣಂ ವಕ್ಷ್ಯೇ ರುದ್ರಸಾಯುಜ್ಯ ಸಿದ್ಧಯೇ | "

ಸಾಯುಜ್ಯ ಮುಕ್ತಿಸಿದ್ಧಿಗಾಗಿ ಶಾಸ್ತ್ರೋಕ್ತವಾಗಿ ಯಾವ ಯಾವ ಸ್ಥಲದಲ್ಲಿ ಯಾವ ಯಾವ ಮುಖದ ರುದ್ರಾಕ್ಷಗಳನ್ನು ಹೇಗೆಹೇಗೆ ಧರಿಸಬೇಕೆಂಬುದನ್ನು ಹೇಳುವೆವು.

ಜೀವನ್ಮುಕ್ತಿಯ ಚತುರ್ವಿಧ ಪ್ರಕಾರಗಳಲ್ಲಿ ಸಾಯುಜ್ಯ ಮುಕ್ತಿಗೆ ಅಗ್ರಸ್ಥಾನವಿದೆ; ಚರಮಸ್ಥಾನವಿದೆ. ಸಾಲೋಕ್ಯ ಸಾಮಿಪ್ಯ ಸಾರೂಪ್ಯಗಳನ್ನು ದಾಟಿ ಸಾಯುಜ್ಯವು ಲಭಿಸುತ್ತದೆ ಭ್ರಮರಕೀಟನ್ಯಾಯದಂತೆ. ಶಿಷ್ಯನು ಶ್ರೀಗುರುಸಮನಾಗುವುದೇ ಸಾಯುಜ್ಯಮುಕ್ತಿ. 'ಗುರೂಪದಿಷ್ಟ ಮಾರ್ಗೇಣ ಧ್ಯಾಯನ್ಮದ್ಗುಣಮವ್ಯಯಮ್| ಮತ್ಸಾಯುಜ್ಯಂ ದ್ವಿಜಃ ಸಮ್ಯಗ್ಭಜೇದ್ಭ್ರಮರಕೀಟವತ್||' ಎಂದು ಮುಕ್ತಿಕೋಪನಿಷತ್ತು ಮುಕ್ತಕಂಠದಿಂದ ಉಗ್ಗಡಿಸಿದೆ. ಅಂತಹ ಸಾಯುಜ್ಯಸಿದ್ಧಿಯು ಮುಂದೆ ಹೇಳಿದಂತೆ ರುದ್ರಾಕ್ಷಗಳನ್ನು ದೇಹಾದ್ಯಂತವಾಗಿ ಧರಿಸಿದರೆ ಲಭ್ಯವಾಗುತ್ತದೆ.

"ಶಿಖಾಯಾಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ಬುಧಃ
ದ್ವಿತ್ರಿದ್ವಾದಶವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್।"

ಬುದ್ಧಿವಂತನು ಒಂದು ಮುಖದ ಒಂದು ರುದ್ರಾಕ್ಷವನ್ನು ಜಡೆಯಲ್ಲಾಗಲಿ ನಡುದಲೆಯಲ್ಲಾಗಲಿ ಧರಿಸಬೇಕು. ಮತ್ತು ಎರಡು ಮುಖದ ಒಂದು ರುದ್ರಾಕ್ಷವನ್ನು ಮೂರು ಮುಖದ ಒಂದು ರುದ್ರಾಕ್ಷವನ್ನು ಹನ್ನೆರಡು ಮುಖವುಳ್ಳ ಒಂದನ್ನು ಹೀಗೆ ಮೂರನ್ನು ಸೇರಿಸಿ ಮುಂದಲೆಯಲ್ಲಿ ಮುಡಿಯಬೇಕು.

'ಏಕವಕ್ತ್ರಂತು ರುದ್ರಾಕ್ಷಂ ಪರತತ್ತ್ವಸ್ವರೂಪಕಮ್
ತದ್ಧಾರಣಾತ್ಪರೇ ತತ್ತ್ವೇಲೀಯತೇ ವಿಜಿತೇಂದ್ರಿಯಃ।'

ಎಂಬುದಾಗಿ ಒಂದು ಮುಖ ರುದ್ರಾಕ್ಷಮಹಿಮೆಯನ್ನು ಅದರ ಧಾರಣ ಫಲವನ್ನು ಚಂದ್ರಜ್ಞಾನಾಗಮವು ಮತ್ತು ರುದ್ರಾಕ್ಷಜಾಬಾಲೋಪನಿಷತ್ ಎರಡೂ ಏಕಕಂಠದಿಂದ ಸಾರಿವೆ. ಇನ್ನು ಎರಡು ಮುಖದ ರುದ್ರಾಕ್ಷವನ್ನು ಧರಿಸಿದರೆ ಉಮಾಧವನ ಒಲುಮೆ ಒದಗುತ್ತದೆ. ಮೂರು ಮುಖದ ರುದ್ರಾಕ್ಷವು ತ್ರಯಾಗ್ನಿ ಸ್ವರೂಪವಾಗಿದೆ. ಅದರ ಧಾರಣದಿಂದ ಅಗ್ನಿ ಸಾಕ್ಷಾತ್ಕಾರವಾಗುತ್ತದೆ. ದ್ವಾದಶಮುಖ ರುದ್ರಾಕ್ಷಧಾರಣದಿಂದ ದ್ವಾದಶಾದಿತ್ಯರ ದೀಪ್ತಿಯುಂಟಾಗುತ್ತದೆ; ಪ್ರೀತಿಯುಂಟಾಗುತ್ತದೆ.

"ಷಟ್‌ತ್ರಿಂಶದ್ಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾಸನಾನ್
ಪಶ ಸಪ್ತ ಪಂಚವಕ್ತ್ರಾನ್ ಷಟ್ ಷಡ್ ಕರ್ಣದ್ವಯೇ
ವಹೇತ್।"

ಹನ್ನೊಂದು ಮುಖದ ಮೂವತ್ತಾರು ರುದ್ರಾಕ್ಷಗಳನ್ನು ಯಾವಾಗಲೂ ನೆತ್ತಿಯ ಮೇಲೆ ಧರಿಸಬೇಕು. ಹತ್ತು ಮುಖದವೆರಡು, ಏಳುಮುಖದವೆರಡು, ಅಯ್ದು ಮುಖದವೆರಡು ಸೇರಿ ಆರು ರುದ್ರಾಕ್ಷಗಳನ್ನು ಒಂದು ಕಿವಿಯಲ್ಲಿ ಇನ್ನಾರನ್ನು ಇನ್ನೊಂದು ಕಿವಿಯಲ್ಲಿ ಧರಿಸಬೇಕು. ಕಡೆಗೆ ಒಂದೊಂದನ್ನಾದರೂ ಧರಿಸಬಹುದು.

ಏಕಾದಶ ಮುಖದ ರುದ್ರಾಕ್ಷವು ಏಕಾದಶ ರುದ್ರಸ್ವರೂಪದ್ಯೋತಕವಾಗಿದೆ. ಅದರ ಧಾರಣದಿಂದ ಸಕಲ ಸೌಭಾಗ್ಯ ಪ್ರಾಪ್ತಿಯಾಗುತ್ತದೆ; ಪ್ರಾಪ್ತವಾದ ಸೌಭಾಗ್ಯವು ಸತತ ಅಭಿವೃದ್ಧಿಯಾಗುತ್ತದೆ.

ಹತ್ತುಮುಖ ರುದ್ರಾಕ್ಷವು ಯಮಧರ್ಮಸೂಚಕವಾಗಿದೆ. ಅದನ್ನು ಧರಿಸುವುದರಿಂದ ಆತನ ಕೃಪೆಯುಂಟಾಗುತ್ತದೆ. ಏಳು ಮುಖ ರುದ್ರಾಕ್ಷವು ಸಪ್ತಮಾತೃಕೆಯರ ಸೂಚಕವಾಗಿದೆ. ಅದನ್ನು ಧರಿಸುವುದರಿಂದ ಅವರ ಅನುಗ್ರಹವುಂಟಾಗುತ್ತದೆ; ಆರೋಗ್ಯಭಾಗ್ಯವುಂಟಾಗುತ್ತದೆ. ಪಂಚಮುಖ ರುದ್ರಾಕ್ಷವು ಪಂಚವಕ್ತ್ರ ಪರಮಾತ್ಮ ಸ್ವರೂಪವಾಗಿದೆ; ಪಂಚ ಬ್ರಹ್ಮಾತ್ಮಕವೂ ಆಗಿದೆ. ಅದನ್ನು ಧರಿಸಿದರೆ ಅವರೆಲ್ಲರ ಪ್ರೀತಿಗೆ ಪಾತ್ರನಾಗುತ್ತಾನೆ. ಬ್ರಹ್ಮಹತ್ಯೆ ಪುರುಷಹತ್ಯಾದಿ ದೋಷಗಳು ದೂರಾಗುತ್ತವೆ.

"ಷಡಷ್ಟವದನಾನ್ ಕಂಠೇ ದ್ವಾಂತ್ರಿಶದ್ಧಾರಯೇತ್ಸದಾ
ಪಂಚಾಶದ್ಧಾರಯೇದ್ಧೀಮಾನ್ ಚತುರ್ವಕ್ತ್ರಾಣಿ ವಕ್ಷಸಿ।"

ಆರು ಮುಖದ ಹದಿನಾರು, ಮತ್ತು ಎಂಟು ಮುಖದ ಹದಿನಾರು ರುದ್ರಾಕ್ಷಗಳನ್ನು ಸೇರಿಸಿ ಮೂವತ್ತೆರಡರ ಮಾಲೆಯನ್ನು ಕತ್ತಿನಲ್ಲಿ ನಿತ್ಯ ಧರಿಸಬೇಕು. ನಾಲ್ಕುಮುಖ ಅಯ್ವತ್ತು ರುದ್ರಾಕ್ಷಗಳನ್ನು ಎದೆಯಲ್ಲಿ ಧರಿಸುಬೇಕು.

ಆರು ಮುಖದ ರುದ್ರಾಕ್ಷಗಳು ಷಣ್ಮುಖ ಸೂಚಕಗಳು. ಮತ್ತು ವಿನಾಯಕ ಸೂಚಕಗಳೂ ಆಗಿವೆ. ಅವನ್ನು ಧರಿಸಿದರೆ ಜ್ಞಾನಸಂಪತ್ತು ಉಂಟಾಗುತ್ತದೆ, ವಿಘ್ನ ವಿಪತ್ತುಗಳು ದೂರಾಗುತ್ತವೆ. ಎಂಟು ಮುಖದವು ಅಷ್ಟದಿಕ್ಪಾಲಕರನ್ನು ಅಷ್ಟವಸುಗಳನ್ನು ನಿರ್ದೇಶಿಸುತ್ತವೆ. ಅಲ್ಲದೆ ಗಂಗೆಯನ್ನೂ ನಿರ್ದೇಶಿಸುತ್ತವೆ. ಇವುಗಳ ಧಾರಣದಿಂದ ಇವರೆಲ್ಲರ ಕರುಣೆಯುಂಟಾಗುವುದಲ್ಲದೆ ಕಲ್ಯಾಣವೂ ಉಂಟಾಗುತ್ತದೆ. ನಾಲ್ಕು ಮುಖದ ರುದ್ರಾಕ್ಷವು ಚತುರ್ಮುಖ ಸೂಚಕವಾಗಿ ಆತನ ಪ್ರೇಮಕಾರಣವಾಗಿದೆ.

"ತ್ರಯೋದಶಮುಖಾನ್ ಬಾಹ್ವೋರ್ಧರೇತ್ ಷೋಡಶ ಷೋಡಶ
ಪ್ರತ್ಯೇಕಂ ದ್ವಾದಶವಹೇನ್ನವಾಸ್ಯಾನ್ಮಣಿ ಬಂಧಯೋಃ।"

ಹದಿಮೂರು ಮುಖದ ಹದಿನಾರು ರುದ್ರಾಕ್ಷಗಳ ಸರವನ್ನು ತೋಳೊಂದಕ್ಕೆ ಧರಿಸಬೇಕು; ಇದರಂತೆ ಇನ್ನೊಂದು ತೋಳಿಗೆ ಧರಿಸಬೇಕು. ಒಂಬತ್ತು ಮುಖದ ಹನ್ನೆರಡು ರುದ್ರಾಕ್ಷಗಳನ್ನು ಮುಂಗೈಯೊಂದಕ್ಕೆ ಧರಿಸಬೇಕು. ಇದರಂತೆ ಇನ್ನೊಂದು ಮುಂಗೈಗೂ ಧರಿಸಬೇಕು.

ಹದಿಮೂರು ಮುಖದ ರುದ್ರಾಕ್ಷವು ಕಾಮದೇವನ ಕೃಪೆಯನ್ನು ಗಳಿಸುತ್ತದೆ. ಮತ್ತು ಶುದ್ಧಿ ಸಿದ್ಧಿಗಳನ್ನು ಶುಭವನ್ನು ಉಂಟುಮಾಡುತ್ತದೆ. ಇಷ್ಟಸಿದ್ಧಿಯೂ ಆಗುತ್ತದೆ. ನವಮುಖದ ರುದ್ರಾಕ್ಷಿಯು ನವಶಕ್ತಿ ಸೂಚಕವಾಗಿ ಅವರ ಪ್ರಸನ್ನತೆಯನ್ನು ಪಡೆಯಲು ಸಮರ್ಥವಾಗಿದೆ.

"ಚತುರ್ದಶಮುಖಂ ಯಜ್ಞಸೂತ್ರ ಮಷ್ಟೋತ್ತರಂ ಶತಮ್
ಧಾರಯೇತ್ ಸರ್ವಕಾಲಂ ತು ರುದ್ರಾಕ್ಷಂ ಶಿವಪೂಜಕಃ। "

ಹದಿನಾಲ್ಕು ಮುಖದ ನೂರೆಂಟು ರುದ್ರಾಕ್ಷಗಳನ್ನು ಲಿಂಗಪೂಜಾ ರೂಪಯಜ್ಞ ಸೂತ್ರವನ್ನಾಗಿ ಪ್ರತಿನಿತ್ಯ ಪೂಜೆಯಲ್ಲಿ ಧರಿಸಬೇಕು. ಪೂಜೆಯಲ್ಲಿ ಇಷ್ಟಲಿಂಗಕ್ಕೆ ಹದಿಮೂರು ರುದ್ರಾಕ್ಷಿಗಳನ್ನು ಧರಿಸಬೇಕು. ಕೊರಳಲ್ಲಿ ಕರಡಿಗೆಯ ಎರಡು ಕಡೆಗಳಲ್ಲಿ ಸೇರಿ ಮೂರು ರುದ್ರಾಕ್ಷಿಗಳನ್ನು ಧರಿಸಬೇಕು. ಹೀಗೆ ಒಟ್ಟಿಗೆ ೨೧೬ ರುದ್ರಾಕ್ಷಿಗಳಿನ್ನು ಲಿಂಗಭಕ್ತನು ಧರಿಸುವುದು ಉತ್ತಮ. ೧೦೮ನ್ನು ಧರಿಸುವುದು ಮಧ್ಯಮ. ೫೪ನ್ನು ಧರಿಸುವುದು ಅನುತ್ತಮ. ಆ ಎಲ್ಲ ಮುಖದವುಗಳು ಸಿಗದಿದ್ದರೆ ಸಿಕ್ಕವುಗಳನ್ನೆ ಧರಿಸಬೇಕು. ಯಾವುದೂ ಸಿಕ್ಕದಿದ್ದರೆ ಐಯ್ದು ಮುಖದವುಗಳನ್ನಾದರೂ ಧರಿಸಬೇಕು.

'ಚತುರ್ದಶ ಮುಖಂಚಾಕ್ಷಂ ರುದ್ರನೇತ್ರ ಸಮುದ್ಭವಮ್ ।
ಸರ್ವವ್ಯಾಧಿಹರಂ ಚೈವ ಸದಾರೋಗ್ಯಮಾಪ್ನುಯಾತ್ ॥
ತನ್ಮುಖಂ ರುದ್ರಮಿತ್ಯಾಹುಸ್ತದ್ಬಿಂದು ಸ್ಸರ್ವದೇವತಾಃ ।
ರುದ್ರಾಕ್ಷಧಾರಣಾತ್ಸದ್ಯಃ ಸರ್ವಪಾಪೈಃ ಪ್ರಮುಚ್ಯತೇ ॥ ,

-ಚಂದ್ರಜ್ಞಾನಾಗಮ

ಎಂಬುದಾಗಿ ಹದಿನಾಲ್ಕು ಮುಖದ ರುದ್ರಾಕ್ಷ ಸ್ವರೂಪವನ್ನು ಫಲವನ್ನು ಆಗಮೋಪನಿಷತ್ತುಗಳು ಉಗ್ಗಡಿಸಿವೆ.

"ಏವಂ ರುದ್ರಾಕ್ಷಧಾರೀಯಃ ಸರ್ವಕಾಲೇ ತು ವರ್ತತೇ
ತಸ್ಯ ಪಾಪಕಥಾ ನಾಸ್ತಿ ಮೂಢಸ್ಯಾಪಿ ನ ಸಂಶಯಃ ।
ಬ್ರಹ್ಮಹಾ ಮದ್ಯಾಪಾಯೀ ಚ ಸ್ವರ್ಣಹೃದ್ಗುರುತಲ್ಪಗಃ
ಮಾತೃಹಾ ಪಿತೃಹಾ ಚೈವ ಭ್ರೂಣಹಾ ಕೃತಘಾತಕಃ ।
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ ॥ "

ಮೂಢನಾಗಲಿ ಪಂಡಿತನಾಗಲಿ ಹೇಳಿದಂತೆ ರುದ್ರಾಕ್ಷಗಳನ್ನು ಎಲ್ಲ ಕಾಲದಲ್ಲಿ ಧರಿಸಿದರೆ ಎಲ್ಲ ಪಾಪಗಳೂ ಪರಿಹಾರವಾಗುತ್ತವೆ. ಅಲ್ಲದೆ ಮಹಾಪಾತಕಗಳಾದ ಬ್ರಹ್ಮಹತ್ಯ, ಮದ್ಯಪಾನ, ಸ್ವರ್ಣಸ್ತೇಯ, ಗುರುತಲ್ಪ ಗಮನ, ಮಾತೃಹತ್ಯ, ಪಿತೃಹತ್ಯ, ಭ್ರೂಣಹತ್ಯ, ಕೃತಘ್ನತೆ ಮುಂತಾದ ಎಲ್ಲ ಪಾತಕಗಳು ಬಿಟ್ಟೋಡುತ್ತವೆ.

"ದರ್ಶನಾತ್ ಸ್ಪರ್ಶನಾಚ್ಚೈವ ಸ್ಮರಣಾದಪಿ ಪೂಜನಾತ್
ರುದ್ರಾಕ್ಷಧಾರಣಾಲ್ಲೋಕೇ ಮುಚ್ಯಂತೇ ಪಾತಕೈರ್ಜನಾಃ |"

ರುದ್ರಾಕ್ಷಗಳನ್ನು ನೋಡಿದರೆ ಮುಟ್ಟಿದರೆ ನೆನೆದರೆ ಪೂಜಿಸಿದರೆ ಧರಿಸಿದರೆ ಲೋಕದಲ್ಲಿ ಜನರು ಪಾಪಮುಕ್ತರಾಗುತ್ತಾರೆ.

"ಬ್ರಾಹ್ಮಣೋ ವಾಂತ್ಯಜೋ ವಾಪಿ ಮೂರ್ಖೋವಾ ಪಂಡಿತೋಪಿವಾ
ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ |"

ಅಗ್ರಜನಾಗಲಿ ಅಂತ್ಯಜನಾಗಲಿ, ಪಾಮರನಾಗಲಿ ಪಂಡಿತನಾಗಲಿ ಯಾರಾದರಾಗಲಿ ರುದ್ರಾಕ್ಷ ಧರಿಸಲು ಕುಲಮುಲವಿಲ್ಲ. ಸರ್ವರೂ ಜಾತಿಭೇದ ವಿಲ್ಲದೆ ಧರಿಸಬೇಕು. ಧರಿಸಿದವರ ಜನ್ಮ ಪಾವನವಾಗುತ್ತದೆ. ಮತ್ತು

"ಗವಾಂ ಕೋಟಿ ಪ್ರದಾನಸ್ಯ ಯತ್ಫಲಂ ಭುವಿ ಲಭ್ಯತೇ
ತತ್ಫಲಂ ಲಭತೇ ಮರ್ತ್ಯೋ ನಿತ್ಯಂ ರುದ್ರಾಕ್ಷಧಾರಣಾತ್ |"

ದಾನಗಳಲ್ಲಿ ಗೋದಾನವೇ ಗರಿಷ್ಠವೆಂದು ಹೇಳುತ್ತಾರೆ. ಅಂತಹ ಕೋಟಿ ಗೋವುಗಳ ದಾನ ಮಾಡಿದರೆ ಬರುವ ಫಲ ಒಂದೇ ಒಂದು ರುದ್ರಾಕ್ಷ ಧಾರಣದಿಂದ ಬರುತ್ತದೆ.

ಇದಲ್ಲದೆ ಹಿಂದೆ ಹೇಳಿದ ಕ್ರಮದಂತೆ ಧರಿಸಿದರೆ ಷಡಧ್ವಶುದ್ಧಿಯೂ ಸೌಭಾಗ್ಯವೃದ್ಧಿಯೂ ಉಂಟಾಗುತ್ತದೆ. ಅಲ್ಲದೆ ರುದ್ರಾಕ್ಷಗಳ ಗಾತ್ರ ದಲ್ಲಿಯೂ ತರತಮ ಫಲಗಳುಂಟು; ಮೇಲು ಕೀಳುಂಟು. ರುದ್ರಾಕ್ಷವು

ನೆಲ್ಲಿಕಾಯಿ ದಪ್ಪವಿದ್ದರೆ ಉತ್ತಮ. ಬದರೀ ಫಲ (ಬೋರಿಹಣ್ಣು) ಮಾತ್ರ ಗಾತ್ರವಿದ್ದರೆ ಮಧ್ಯಮ. ಕಡಲೆ ಕಾಳಿನಷ್ಟು ದಪ್ಪವಿದ್ದರೆ ಅಧಮ.

'ಲೋಕೋಪಕಾರವಾಗಿ ಜನಿಸಿದವಾರು ದ್ರಾಕ್ಷಂಗಳಲ್ಲಿ ಸರಂಗೈವುದಕ್ಕೆ ಮಣಿಗಳ ಉನ್ನತ ಸ್ಥಾನಂಗಳೇ ಪೃಷ್ಠಂಗಳಹವು। ಮುಖದ ಗಣನೆಯರಿವುದಕ್ಕೆ ರೇಖೆಗಳೇ ಮುಖಂಗಳಪ್ಪವೆಂದು ಅರಿವುದು। ಮಣಿಗಳ ಮೂಲವೇ ಬ್ರಹ್ಮನು. ನಾಳವೇ ವಿಷ್ಣು. ಮುಖವೇ ರುದ್ರನು. ಕೇಸರಂಗಳೇ ಸಕಲದೇವತೆಗಳೆಂದರಿವುದು. ಅವುಗಳ ಸಲ್ಲಕ್ಷಣಂಗಳಂ ಪರೀಕ್ಷಿಸಿ, ಮೇಲೆ ಪ್ರಕ್ಷಾಳನಾದಿ ವಿಧಿಗಳಿಂ ಸರಂಗೊಳಿಸಿ, ಸ್ನಾನಾದಿಗಳಿಂ ತಾನು ಶುಚಿಯಾಗಿ ಕುಳ್ಳಿರ್ದು, ಮರಳಿ ಸಮಸ್ತ ಪಾಪಕ್ಷಯ ದ್ವಾರಕ ಶಿವಪ್ರಸಾದ ಜ್ಞಾನ ಸಿದ್ಧ್ಯರ್ಥವಾಗಿ ಧರಿಸುತ್ತಲಿದ್ದೇನೆ ಎಂದು ಸಂಕಲ್ಪಿಸುವುದು।' ಎಂದು ನಿಜಗುಣರು ವಿವೇಕ ಚಿಂತಾಮಣಿಯಲ್ಲಿ ಹೇಳಿದಾರೆ.

ರುದ್ರಾಕ್ಷ ಸರವನ್ನು ಪವಣಿಸುವಾಗ ಪ್ರತಿರುದ್ರಾಕ್ಷದ ಪೃಷ್ಠಕ್ಕೆ ಪೃಷ್ಠವನ್ನು ಮುಖವನ್ನು ಮುಖಕ್ಕೆ ಜೋಡಿಸಬೇಕು. ತಲೆಮಣಿಯು ತಲೆ (ಮುಖ) ಮೇಲಕ್ಕಾಗಿರಬೇಕು. ಸರಕ್ಕೆ ರುದ್ರಗಂಟನ್ನೇ ಹಾಕಬೇಕು. ಹೊಸತಾಗಿ ಸರ ಮಾಡಿದಾಗ ಶ್ರೀಗುರುವಿನಿಂದ ಶುದ್ಧಮಾಡಿಸಬೇಕು.

ರುದ್ರಾಕ್ಷಧಾರಣ ಬೀಜಮಂತ್ರ

'ಬಳಿಕ ಏಕಮುಖದ ಮಣಿಯಾದಿಯಾಗಿ ಚತುರ್ದಶ ಮುಖದ ಮಣಿ ಪರ್ಯಂತವಾದ ಹದಿನಾಲ್ಕು ಮಣಿಗಳಂ—ಓಂ, ಹ್ರಾಂ, ಉಂ, ಬಂ, ಹ್ರೀಂ, ಹ್ರೂಂ, ಹ್ರೌಂ, ಶ್ರೀಂ, ಹ್ರೈಂ, ಮಂ, ವಂ, ಕ್ಷೋಂ, ಕ್ಷಾಂ, ವೂಂ—ಎಂಬ ಕ್ರಮದಿಂ ಆಯಾ ಮಂತ್ರಪೂರ್ವಕವಾಗಿ ಧರಿಸುವುದು.'

—ವಿವೇಕ ಚಿಂತಾಮಣಿ

ಕೇವಲ ಪಂಚಮುಖದವುಗಳನ್ನೇ ಧರಿಸುವಾಗ ಬೇರಾವ ಒಂದೇ ಬಗೆಯ ಮುಖದವುಗಳನ್ನು ಧರಿಸುವಾಗ ಪಂಚಾಕ್ಷರಮಂತ್ರ ಧ್ಯಾನ ಪೂರ್ವಕವಾಗಿ ಧರಿಸಬೇಕು. ರುದ್ರಾಕ್ಷಗಳನ್ನು ಲಿಂಗಪೂಜಾ ಕಾಲದಲ್ಲಿ ನಿತ್ಯ ಪೂಜಿಸಿ ಧರಿಸಬೇಕು. ಕರಡಿಗೆಯು ಶಿವದಾರದಲ್ಲಿ ಪೋಣಿಸಿದ್ದರೆ ಅಲ್ಲಿಯೇ ಪೂಜಿಸಬೇಕು.

"ಮೃತಿಕಾಲೇತು ರುದ್ರಾಕ್ಷಂ ನಿಷ್ಪೀಡ್ಯ ಸಹವಾರಿಣಾ
ಯಃಪಿಬೇಚ್ಚಿಂತಯನ್ ರುದ್ರಂ ರುದ್ರಲೋಕಂ ಸ ಗಚ್ಛತಿ |"

ಮರಣ ಸಮಯದಲ್ಲಿ ರುದ್ರಾಕ್ಷವನ್ನು ನೀರಲ್ಲಿ ತೆಯ್ದು ಶಿವಧ್ಯಾನ ಮಾಡುತ್ತ ಕುಡಿದರೆ ಶಿವಲೋಕ ಪ್ರಾಪ್ತಿಯಾಗುತ್ತದೆ.

ಮಿತಿ ಮೀರಿ ಜ್ವರ ಬಂದಾಗ ರುದ್ರಾಕ್ಷ ಮಾಲೆಗಳನ್ನು ಮೈತುಂಬ ಸುತ್ತಿಸಿದರೆ ಅವು ಜ್ವರವನ್ನು ಹೀರಿಬಿಡುತ್ತವೆ. ವಾಯು ಶುದ್ಧಿಯನ್ನು ಮಾಡುವ ಮಹತ್ತರ ಶಕ್ತಿಯಿದೆ ರುದ್ರಾಕ್ಷದಲ್ಲಿ. ಜ್ವರದಲ್ಲಿ ನಾಲಗೆ ನಂಜೇರಿದಾಗ ರುದ್ರಾಕ್ಷವನ್ನು ತೆಯ್ದ ಗಂಧದಿಂದ ನಾಲಗೆಯನ್ನು ತಿಕ್ಕಿದಲ್ಲಿ ನಾಲಗೆಯ ನಂಜೆಲ್ಲ ಹೋಗಿ ನಾಲಗೆಗೆ ರುಚಿರಸ ಬರುತ್ತದೆ. ರುದ್ರಾಕ್ಷವು ಬಿಲ್ವದಂತೆ ದಿವ್ಯ ವನೌಷಧಿಯಾಗಿದೆ.

ತಾತ್ವಿಕಾಂಗಗಳಾದ ಅಷ್ಟಾವರಣಗಳಲ್ಲಿ ಒಂದು ಸ್ಥಾನ ಅದಕ್ಕೆ ಮೀಸಲಾಗಿದೆಯೆಂದರೆ ಅದರ ಶ್ರೇಷ್ಠತೆಗೆ ಬೇರೆ ಸಾಕ್ಷಿವಚನ ಬೇಕಿಲ್ಲ. ಪೂಜೆಯಲ್ಲಿ ಅದೂ ಒಂದು ಮುಖ್ಯಾಂಗವಾಗಿದೆ. ರುದ್ರಾಕ್ಷ ಧಾರಣವಾಗದೆ ಲಿಂಗಭಕ್ತತ್ವ ಬರುವುದಿಲ್ಲ. ಮಂತ್ರ ಜಪಾನುಷ್ಠಾನಕ್ಕೆ ಅರ್ಹತೆ ಇರುವುದಿಲ್ಲ. ಪರಮಾತ್ಮ ಸ್ವರೂಪವೇ ಆದ ಪಂಚಾಕ್ಷರ ಮಂತ್ರ ಜಪರೂಪ ಪ್ರಮೇಯಕ್ಕೆ ಭಸ್ಮ ರುದ್ರಾಕ್ಷಗಳು ಅಸಾಧಾರಣ ಪ್ರಮಾಣಗಳಾಗಿವೆ: ಅನಿವಾರ್ಯ ಕಾರಣಗಳಾಗಿವೆ. ನಮ್ಮೀ ಅಭಿಪ್ರಾಯವನ್ನು ಮುಂದಿನ ಮೂರು ಮಂತ್ರವಾಣಿ (ಶ್ಲೋಕ) ಗಳು ಮನದಟ್ಟಾಗಿಸುತ್ತವೆ.

"ಭಸ್ಮೋದ್ಧೂಲಿತ ಸರ್ವಾಂಗಾ ಧೃತರುದ್ರಾಕ್ಷ ಮಾಲಿಕಾಃ
ಯೇ ಭವಂತಿ ಮಹಾತ್ಮಾನೋ ರುದ್ರಾಸ್ತೇ ನಾತ್ರ ಸಂಶಯಃ |
ನಿತ್ಯಾನಿ ಕಾಮ್ಯಾನಿ ನಿಮಿತ್ತಜಾನಿ ಕರ್ಮಾಣಿ ಸರ್ವಾಣಿ ಸದಾಪಿ ಕುರ್ವನ್
ನ ಭಸ್ಮರುದ್ರಾಕ್ಷಧರೋ ಯದಿ ಸ್ಯಾತ್ ದ್ವಿಜೋ ನ ತಸ್ಯಾಸ್ತಿ ಫಲೋಪ ಪತ್ತಿಃ |

ಸರ್ವೇಷು ವರ್ಣಾಶ್ರಮಸಂಗತೇಷು ನಿತ್ಯಂ ಸದಾಚಾರ ಪರಾಯಣೇಷು

ಶ್ರುತಿ ಸ್ಮೃತಿಭ್ಯಾಮಿಹ ಚೋದ್ಯಮಾನೋ ವಿಭೂತಿ ರುದ್ರಾಕ್ಷಧರಃ ಸಮಾನಃ ।"

ಸರ್ವಾಂಗದಲ್ಲಿ ಭಸ್ಮೋದ್ಧೂಲನವ ಮಾಡಿ, ರುದ್ರಾಕ್ಷ ಮಾಲಿಕೆಗಳ ಸೂಡಿ ಇರುವ ಮಹಾತ್ಮರು ರುದ್ರರೂಪರೇ ಆಗುವರು.

ಗುರುಕರ ಕಂಜಾತನಾದ ದ್ವಿಜನು ನಿತ್ಯಕರ್ಮ ನೈಮಿತ್ತಿಕಕರ್ಮ ಗಳಲ್ಲಿ ನಿತ್ಯ ನಿರತನಾಗಿದ್ದರೂ ಆತನು ಭಸಿತ ರುದ್ರಾಕ್ಷಗಳನ್ನು ಒಂದು ವೇಳೆ ಧರಿಸದೆ ಹೋದರೆ ಆತನಾಚರಿಸಿದ ನಿತ್ಯನೈಮಿತ್ತಿಕ ಪೂಜಾಕ್ರಿಯೆ ಗಳಿಗೆ ಫಲಪ್ರಾಪ್ತಿಯಾಗುವುದಿಲ್ಲ.

ವಿಭೂತಿ ರುದ್ರಾಕ್ಷಧಾರಣದಿಂದ ವೀರಶೈವರು ಮಾತ್ರ ವಿಮುಕ್ತ ರಾಗುವರೆಂದಲ್ಲ. ಇತರ ವರ್ಣಾಶ್ರಮದವರೂ ಅವನ್ನು ಧರಿಸಿದರೆ ಸದಾಚಾರ ಪರಾಯಣರಾದರೆ ಅವರೂ ಸಹ ಶ್ರುತಿಸ್ಮೃತಿ ಮಾನ್ಯರಾಗು ತ್ತಾರೆ.

ರುದ್ರಾಕ್ಷವನ್ನು ರುದ್ರಾಕ್ಷಿಯೆಂತಲೂ ಹೇಳುತ್ತಾರೆ. ಹೇಗೆ ಹೇಳಿ ದರೂ ತಪ್ಪಿಲ್ಲ. ಇದನ್ನು ಹರಿಹರದೇವನು ಹೀಗೆ ಹೊಗಳಿದಾನೆ:

"ಪುಣ್ಯಂ ರುದ್ರಾಕ್ಷಿ ಸರ್ಪಾಭರಣನ ಘನಸಂಪತ್ತಿ ರುದ್ರಾಕ್ಷಿ ದೇವಾ ।
ಗಣ್ಯಂ ರುದ್ರಾಕ್ಷಿ ಶೈವಾಗಮನಿಕರ ಮುಖಃ ಕಾಯಂ ರುದ್ರಾಕ್ಷಿ ಸಲ್ಲಾ—।
ಪುಣ್ಯಂ ರುದ್ರಾಕ್ಷಿ ಸರ್ವೇಶನ ನಿಜವದನ ಶ್ರೇಣಿ ರುದ್ರಾಕ್ಷಿ ಸತ್ಕಾ—।
ರುಣ್ಯಂ ರುದ್ರಾಕ್ಷಿ ಪಂಪಾಪುರದರಸ ವಿರೂಪಾಕ್ಷ ನಕ್ಷಿ ಪ್ರಭಾವಮ್ ॥
ಮಂತ್ರಬೀಜಂ ತಂತ್ರ ಫಲ ಸಮಿತಿ ರುದ್ರಾಕ್ಷಿ ।
ಮಂತ್ರ ತಂತ್ರಗಳಾಭರಣವೀ ರುದ್ರಾಕ್ಷಿ !
ಪಂಚವದನನ ನೇತ್ರಫಲ ಸಮಿತಿ ರುದ್ರಾಕ್ಷಿ ।
ಪಂಚಾಕ್ಷರೀ ಕಲ್ಪಕುಜಫಲಂ ರುದ್ರಾಕ್ಷಿ !

ವರರೆ ! ಮುಕ್ತಿದ್ವಾರದೊಳಗಾದ ರುದ್ರಾಕ್ಷಿ !
ಪರತತ್ತ್ವಗುಣದೊಡನೆ ಸೇರಿಸುವ ರುದ್ರಾಕ್ಷಿ ।
ಶಿವಮಂತ್ರಭೂಮಿ ಸ್ವಯಂಬು ಮೀ ರುದ್ರಾಕ್ಷಿ ।
ಶಿವನ ಪಂಚಾನನದ ಸಂಚಮೀ ರುದ್ರಾಕ್ಷಿ ।
ಶರಣ ಸಂಕುಳ ವಜ್ರಪಂಜರಂ ರುದ್ರಾಕ್ಷಿ ।
ಧರಣೀತಳಕ್ಕೆ ಪಾವನಕರಂ ರುದ್ರಾಕ್ಷಿ ।
ವರಮುಖಂ ಸುಖಮುಖಂ ಶ್ರೀಮುಖಂ ರುದ್ರಾಕ್ಷಿ ।
ಹರಮುಖಂ ಪರಮುಖಂ ಸ್ಥಿರಮುಖಂ ರುದ್ರಾಕ್ಷಿ ।
ಸಕಲ ಸುಕೃತಾಂಕುರದ ಬಿತ್ತುಗಳು ರುದ್ರಾಕ್ಷಿ ।
ನಿಖಿಲ ಫಲ ತತಿಗಳ್ಗೆ ತೆತ್ತುಗಳು ರುದ್ರಾಕ್ಷಿ ।
ಪರಮಹಂಸಾನಂದ ಕುಂಜಮೀ ರುದ್ರಾಕ್ಷಿ ।
ಪರಮಯೋಗಾನಂದ ಪುಂಜಮೀ ರುದ್ರಾಕ್ಷಿ ।
ಹರಭಕ್ತಿ ಭೂಷಣಂ ಪೋಷಣಂ ರುದ್ರಾಕ್ಷಿ ।
ದುರಿತ ಕುಳ ಶೋಷಣಂ ಭೀಷಣಂ ರುದ್ರಾಕ್ಷಿ ।
ಶುಭನಿಳಯ ದೋರಣಂ ತೋರಣಂ ರುದ್ರಾಕ್ಷಿ ।
ಅಭವನಿಳಯದ ತೋರಣೋರಣಂ ರುದ್ರಾಕ್ಷಿ ।
ವಿಭವತತಿ ಕಾರಣಂ ಧಾರಣಂ ರುದ್ರಾಕ್ಷಿ ।
ಅಭವಾಂಘ್ರಿ ಭಕ್ತಿ ವಿಸ್ತಾರಣಂ ರುದ್ರಾಕ್ಷಿ ।
ಜಪದಲ್ಲಿ ತಪದಲ್ಲಿ ಹೊಂದುವತಿನೇಮದೊಳು ।
ವಿಪುಳ ಯಮ ನಿಯಮದೊಳು ಶಿವಪೂಜೆಯುಚಿತದೊಳು ।
ಮಂತ್ರದೊಳು ತಂತ್ರದೊಳು ಧರ್ಮದೊಳು ದಾನದೊಳು ।
ಯಂತ್ರದೊಳು ಯಾಗದೊಳು ನಿರ್ಮಲ ಸ್ಥಾನದೊಳು ।
ರಕ್ಷೆಯೊಳು ಶಿಕ್ಷೆಯೊಳು ಸಕಲ ಕಾರ್ಯಂಗಳೊಳು ।
ದೀಕ್ಷಾವಿಧಾನದೊಳು ಸರ್ವಕರ್ಮಂಗಳೊಳು ।
ಧರಿಸುತಂ ಮಾಡಿದೊಡೆ ಸಫಲ ಮಲ್ಲದೊಡಫಲ ।

ಉರುತರಂ ಗುರುತರಂ ಧರಿಸಿರ್ಪುದಮೃತಫಲ ।
ಸಿರಿಗೆ ಸಿರಿ ರುದ್ರಾಕ್ಷಿ ಸಿಂಗರಂ ರುದ್ರಾಕ್ಷಿ
ಪರಮ ಗುರು ರುದ್ರಾಕ್ಷಿ ಪರಲಿಂಗ ರುದ್ರಾಕ್ಷಿ ।
ಜಯತು ಸರ್ಪಾಭರಣ ವಿತತಿಗೆ ನಮೋಸ್ತುತೇ
ಜಯತು ಪಂಪಾವಿರೂಪಾಕ್ಷ ನಮೋಸ್ತುತೇ ॥"

'ಶ್ರೀ ವಿಭೂತಿ ರುದ್ರಾಕ್ಷಿಯಿದ್ದವರ ಲಿಂಗವೆಂಬೆ. ಇಲ್ಲದವರ ಭವಿಯೆಂಬೆ. ಕೂಡಲ ಸಂಗಮ ದೇವಾ, ಸದ್ಭಕ್ತರ ನೀನೆಂಬೆ.'

ಪಂಚಾಕ್ಷರೀ ಜಪಸ್ಥಲ

೮

ಭಸ್ಮ ಸೂರ್ಯೋದಯವಾಗಿ ರುದ್ರಾಕ್ಷಿ ಉನ್ಮೀಲಿತವಾಗಿ ಕರ ದಿಷ್ಟರೂಪ ಪರವಸ್ತುವನ್ನು ಕಣ್ಣಾರೆ ಕಂಡ ಬಳಿಕ ಅದರೊಡನೆ ಮಾತಾಡುವ ಸಾಧನೆಯೇ ಪಂಚಾಕ್ಷರೀ ಜಪಸ್ಥಲ ಮೂಲ. ಮಾತಾಡಲು ಆ ಪರಶಿವನ ನಾಮಾತ್ಮಕವಾದ ಮಂತ್ರವೇ ಮುಖ್ಯ ಸಾಧನ. ಆ ಮಂತ್ರ ಜಪದ ಮೂಲಕ ಆತನನ್ನು ಉಪ್ಪವಡಿಸಿ ಉಪಾಸಿಸಿ ಅಂತರಂಗಕ್ಕೆ ಬರಿಸಿ ಇರಿಸಿ ಕೊಳ್ಳುವ ಉಪಾಯವೇ ಮಂತ್ರ ಜಪಸ್ಥಲ.

ವಿಭೂತಿ ಪರಶಿವನ ಕಳಾ (ಜ್ಯೋತಿ) ಸ್ವರೂಪ. ರುದ್ರಾಕ್ಷಿ ಆತನ ಬಿಂದು ಸ್ವರೂಪು. ಮಂತ್ರ ಆತನ ನಾದಸ್ವರೂಪು. ಮಂತ್ರವು ಪರಾ ಪಶ್ಯಂತಿ ಮಧ್ಯಮ ವೈಖರಿಯಾಗಿ ಹೊರಹೊಮ್ಮುತ್ತದೆ. ಮಂತ್ರಾನುಷ್ಠಾನ ವೆಂದರೆ ನಾದಾನುಷ್ಠಾನವೆಂದರ್ಥ.

ಪಂಚಾಕ್ಷರಿಯ ಅರ್ಥ ವಿವರಣೆ ಮುಂದೆ ಬರುತ್ತದೆ. ಜಪವೆಂದರೆ ಸ್ವಾಧ್ಯಾಯ. ಪುನಃ ಪುನಃ ಮಂತ್ರಪಠನ.; ಮಂತ್ರ ಮೂರ್ತಿಯಲ್ಲಿ ಮಾನ ಸಿಕ ಪ್ರಾರ್ಥನೆ. ಅದರಿಂದ ಪಾಪ ವಿಸರ್ಜನೆ.

ಮಂತ್ರಾಧ್ಯಯನಕ್ಕೆ ಜಪವೆಂದು ಹೆಸರು. ಗುರೂಪದಿಷ್ಟವಾದುದೇ ಮಂತ್ರ. ಅದನ್ನು ಅರ್ಥಪೂರ್ಣವಾಗಿ ಅರಿತು ವಿಧಾನಪೂರ್ವಕವಾಗಿ ಸತಿಯು ಪತಿನಾಮವನ್ನು ಬಳಸುವಂತೆ ಬಳಸುವುದೇ ಜಪ.

ಮಂತ್ರಾಧ್ಯಯನಕ್ಕೆ ಸ್ವಾಧ್ಯಾಯ ಎಂಬುದೇ ಸೂಕ್ತ. ವೇದಾಧ್ಯಯ ನಕ್ಕೆ ಸ್ವಕೀಯಾಧ್ಯಯನಕ್ಕೆ ಸ್ವಾಧ್ಯಾಯವೆನ್ನುತ್ತಾರೆ. ಆತ್ಮಜ್ಞಾನವನ್ನುಂಟು ಮಾಡಿಕೊಡುವ ಮಂತ್ರಜಪವು ವೇದಾಧ್ಯಯನವೂ ಅಹುದು; ಸ್ವಕೀಯಾಧ್ಯ ಯನವೂ ಅಹುದು.

ಮಾತುಬಾರದವರು ಮೂಕರು. ಆದರೆ ಮಾತು ಬರುವವರೆಲ್ಲರೂ ಮುಖವಂತರಲ್ಲ. ಮನಬಂದಂತೆ ಮನನವಿಲ್ಲದೆ ಮಾತಾಡುವವರು

ಮೂರ್ಖರು. 'ಮಾತೆಂಬುದು ಜ್ಯೋತಿರ್ಲಿಂಗ, ಎಂಬಂತೆ ಮಾತನ್ನು ಜ್ಯೋತಿರ್ಲಿಂಗವನ್ನಾಗಿಸಿ ಮಾತಾಡುವವರು ಮಾತಾಡಿಯೂ ಮೌನಿಗಳು; ಮಹಾನುಭಾವಿಗಳು. ಮಾತು ಜ್ಯೋತಿರ್ಲಿಂಗವಾಗಬೇಕಾದರೆ ಮಾತು ಮಂತ್ರವಾಗಬೇಕು. ಆ ಮಂತ್ರಾರ್ಥವರಿದು ಜಪಿಸಬೇಕು.

'ಶಿವನಿಚ್ಛೆಯನರಿಯದೆ ಮಾತಾಡುವವರ ಮೆಚ್ಚುವನೆ ಗುಹೇಶ್ವರ ಲಿಂಗವು ?' ಶಿವನು ಮೆಚ್ಚುವಂತೆ ಮಾತಾಡುವುದೇ ಮಂತ್ರಜಪ.

ಒಬ್ಬರನ್ನು ಸ್ವಾಗತಿಸಿ ಸನ್ಮಾನಿಸುವುದರಲ್ಲಿ ಸಮ್ಮುಖೀಕರಣದಲ್ಲಿ ಮಾತಿಗೆ ಮಂತ್ರಕ್ಕೆ ಅಗ್ರಸ್ಥಾನವಿದೆ. 'ಏನು ಬಂದಿರಿ ? ಹದುಳವಿದ್ದಿರಾ ? ಎಂದರೆ ನಿಮ್ಮ ವೈಸಿರಿ ಹಾರಿ ಹೋಹುದೆ ? ಕುಳ್ಳಿರೆಂದರೆ ನೆಲ ಕುಳ್ಳಿ ಹೋಹುದೆ ? ಕೊಡಲಿಲ್ಲದಿದ್ದರೀ ಒಂದು (ಸವಿನುಡಿಯು) ಗುಣವಿಲ್ಲದಿದ್ದರೆ ಮೂಗ ಕೊಯ್ಯದೆ ಮಾಣ್ಬನೇ ಕೂಡಲ ಸಂಗಮದೇವ.' ಎಂದು ಕೇಳುತ್ತಾನೆ ಮಾತು ಬಲ್ಲ ಬಸವಣ್ಣ. 'ಬಸವಣ್ಣನ ಮಾತೇ ಮಾತು.' ಅಲ್ಲವೆ ?

'ಏನೆಂದರಿಯದೆ ಎಂತೆಂದರಿಯದೆ ಬರೀ ಮಾತಿನ ಬ್ರಹ್ಮವನಾಡುತ್ತಿಪ್ಪರು.' ಇದು ಲೇಸಲ್ಲ. ಮಾತಿನ ಮೊದಲರಿತು ಮಾತಾಡಬೇಕು. ಆ ಮಾತು ಈ ಮಾತು ಆಡಿ ಅನ್ಯರನ್ನು ಒಲಿಸುವ ಬದಲು ಮನದ ಮಾತಾದ ಮಂತ್ರವನ್ನು ಜಪಿಸಿ ಮನದೊಡೆಯನಾದ ಲಿಂಗಮೂರ್ತಿಯನ್ನು ಒಲಿಸುವುದೇ ಜೀವನೋದ್ದೇಶ; ಜೀವನಾದರ್ಶ. ಆ ಮಂತ್ರದಲ್ಲಿ ಅಮೃತವಿದೆ; ಆನಂದವಿದೆ. ಅದರಿಂದ ವಾಕ್ಕರ್ಣಮನಗಳೆಂಬ ಮೂರು ಕರಣಗಳು ತುಂಬಿ ಬರುತ್ತವೆ. ಆತನನ್ನು ನಂಬಿ ಆತನಿಗೆ ತಮ್ಮಲ್ಲಿ ಇಂಬಿಟ್ಟು ನಿಲ್ಲುತ್ತವೆ; ಸಲ್ಲುತ್ತವೆ. 'ವಚನದಲ್ಲಿ ನಾಮಾಮೃತ ತುಂಬಿ; ಕಿವಿಯಲ್ಲಿ ಕೀರುತಿ ತುಂಬಿ; ನಯನದಲ್ಲಿ ಮೂರುತಿ ತುಂಬಿ; ಮನದಲ್ಲಿ ನೆನಹು ತುಂಬಿ, ಕೂಡಲ ಸಂಗನು ದೇವ, ನಿಮ್ಮ ಚರಣ ಕಮಲದೊಳಗಾನು ತುಂಬಿ.' ಬಸವಣ್ಣನವರ ಈ ಕಾವ್ಯವಾಣಿಯಲ್ಲಿ ಪಂಚಕರಣಗಳನ್ನು ತುಂಬುವ ಪಂಚಾಕ್ಷರೀ ಮಂತ್ರ ರೂಪ ಆ ಪರಶಿವನ ನಾಮಮಹಿಮೆ ಸೂರೆಗೊಂಡಿದೆ. 'ಜಪತಪ ನಿತ್ಯ ನೇಮವೆನಗೆ ಉಪದೇಶ: ನಿಮ್ಮ ನಾಮವೆನಗೆ ಮಂತ್ರ; ಶಿವನಾಮವೆನಗೆ ತಂತ್ರ. ಕೂಡಲ ಸಂಗಮ ದೇವಯ್ಯಾ, ನಿಮ್ಮ ನಾಮ ಕಾಮಧೇನುವೆನಗೆ.' 'ಪಾತಕ ಶತಕೋಟಿಯನೊರಿಸಲು ಸಾಲದೆ ಒಂದು ಶಿವನಾಮ ?

ಸಾಲದೆ ಒಂದು ಹರನ ನಾಮ ? ಕೂಡಲ ಸಂಗಮ ದೇವಾ ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ !' ಕರಿಯಂಜುವುದು ಅಂಕುಶಕ್ಕಯ್ಯಾ, ಗಿರಿಯಂಜುವುದು ಕುಲಿಶಕ್ಕಯ್ಯಾ; ತಮಂಧವಂಜುವುದು ಜ್ಯೋತಿಗಯ್ಯಾ; ಕಾನನವಂಜುವುದು ಬೇಗೆಗಯ್ಯಾ ; ಪಂಚಮಹಾಪಾತಕವಂಜುವುದು ಕೂಡಲ ಸಂಗನನಾಮಕ್ಕಯ್ಯ.'

'ವಶ್ಯವ ಬಲ್ಲೆವೆಂದೆಂಬಿರಯ್ಯ,—ಬುದ್ಧಿಯನರಿಯದ ಮನುಜರು ಕೇಳಿರಯ್ಯಾ, ವಶ್ಯವಾವುದೆಂದರಿಯದೆ ಮರುಳುಗೊಂಬಿರೆಲೆಗಾವಿಲ ಮನುಜರಿರಾ ! 'ಓಂ ನಮಃಶಿವಾಯ'—ಎಂಬ ಮಂತ್ರ ಸರ್ವ ಜನವಶ್ಯ, ಕೂಡಲ ಸಂಗಮ ದೇವಾ !' ಹೀಗೆ ಬಸವಣ್ಣನವರ ಭಾವಪೂರ್ಣ ವರ್ಣನೆಯಂತೆ ಆ ಶಿವನ ನಾಮಮಹಿಮೆಗೆ ಸೀಮೆಯಿಲ್ಲ. ಆ ಮಂತ್ರಕ್ಕೆ ವಶವಾಗದ ಭೂಮಿಜನವಿಲ್ಲ; ದೇವಜನವಿಲ್ಲ. ಇದರಿಂದಾಗಿ ಅದನ್ನು ನಿತ್ಯ ಜಪಿಸಬೇಕು.

"ಧೃತ ಶ್ರೀ ಭೂತಿ ರುದ್ರಾಕ್ಷಂ ಪ್ರಯತೋ ಲಿಂಗಧಾರಕಃ
ಜಪೇತ್ ಪಂಚಾಕ್ಷರೀ ವಿದ್ಯಾಂ ಶಿವತತ್ತ್ವ ಪ್ರಬೋಧಿನೀಮ್ ।"

ಪಂಚಾಕ್ಷರಿಯು ಅದೊಂದು ಆತ್ಮ ವಿದ್ಯೆ; ಅನುಪಮ ವಿದ್ಯೆ. ಅದು ಸರ್ವತತ್ತ್ವಗಳಿಗೆ ಮೂಲವಾದ ಮುಖ್ಯವಾದ ಶಿವತತ್ತ್ವವನ್ನು ಪ್ರಬೋಧಿಸುವ ಮಹಾವಿದ್ಯೆ. 'ಶಿವತತ್ತ್ವ ಪ್ರಬೋಧಿನೀಂ' ಎಂದು ಹೇಳಿದ ಜಗದ್ಗುರು ಶ್ರೀರೇಣುಕರ ಆ ಆತ್ಮವಾಣಿಯಲ್ಲಿ ಅಗಾಧ ಅನುಭಾವವಿದೆ. ತನ್ನ ಅಂದರೆ ಜಪಿಸುವಾತನ ಪಿಂಡಾಂಡಗತ ಶಿವತತ್ತ್ವವನ್ನು ಮತ್ತು ಬ್ರಹ್ಮಾಂಡಗತ ಆ ಶಿವತತ್ತ್ವವನ್ನು ಕೂಡ ಪ್ರಬೋಧಿಸುವ ವಿಶ್ವ ಶಕ್ತಿಯುಳ್ಳುದು ಪಂಚಾಕ್ಷರಿ ವಿದ್ಯೆ. ಅದನ್ನು ಜಪಿಸುವ ಭಕ್ತನು ಲಿಂಗಧಾರಕನಾಗಿರಬೇಕು. ಲಿಂಗವಿಲ್ಲದ ಮಂತ್ರಜಪ ವರನಿಲ್ಲದ ವಿವಾಹದಂತೆ ವ್ಯರ್ಥ. ಸದಾಚಾರ ಸಂಪನ್ನನಾಗಿರಬೇಕು. ಜತೆಗೆ ಶ್ರೀ ವಿಭೂತಿ ರುದ್ರಾಕ್ಷಿಗಳೆಂಬ ವೈದೊಡಿಗೆಯುಳ್ಳವನಾಗಿರಬೇಕು, ವಾಕ್ಕಾಯಮನಗಳಲ್ಲಿ ಭಕ್ತಿರಸಗಂಗೆ ಮಡುಗಟ್ಟನಿಲ್ಲದೆ ಶಿವತತ್ತ್ವ ಪ್ರಬೋಧವಾಗದು; ಶಿವತ್ವ ಪ್ರಾಪ್ತಿಯಾಗದು.

'ಕರಗಿ ಮನ ಕಂಗಳೊಳು ಸುರಿಯೆ ಶುಖಾಶ್ರುವಂ । ಕುರಿಸೆ ಪುಳಕಂಗಳಿಗೆ ವೇದಂದದಿ । ಹರುಷದಿಂ ನೆನೆದು ನೆನೆವರಿಗೆ ಗಿರಿಜಾವರನ । ಕರೆದು ತೋರುವುದು ಶ್ರೀ ಪಂಚಾಕ್ಷರೀ ॥' ಈ ಪದ್ಯ 'ಶಿವತತ್ತ್ವ ಪ್ರಬೋಧಿನೀಂ' ಎಂಬುದಕ್ಕೆ ಬಿಚ್ಚಿ ಬರೆದ ಭಾಷ್ಯದಂತಿದೆ.

"ಶಿವತತ್ತ್ವಾತ್ಪರಂ ನಾಸ್ತಿ ಯಥಾ ತತ್ತ್ವಾಂತರಂ ಮಹತ್
ತಥಾ ಪಂಚಾಕ್ಷರೀಮಂತ್ರಾನ್ನಾಸ್ತಿ ಮಂತ್ರಾಂತರಂ
ಮಹತ್ !"

ಶಿವತತ್ತ್ವಕ್ಕಿಂತ ಶ್ರೇಷ್ಠ ತತ್ತ್ವವಿಲ್ಲ. ಶಿವಮಂತ್ರಕ್ಕಿಂತ ಮಿಗಿಲಾದ ಮಂತ್ರ ಬೇರಿಲ್ಲ. ಸರ್ವವು ಶಿವನಲ್ಲಿ ಲೀನವಾಗುವುದಾಗಿ ಶಿವನೇ ಸರ್ವಕ್ಕಾಧಾರನಾಗಿದ್ದಾನೆ. ಶಿವನಿಗಾಧಾರ ಬೇರಿಲ್ಲ. ಸದಾಶಿವಾದಿಪೃಥಿವ್ಯಂತ ೩೬ ತತ್ತ್ವಗಳು ಶಕ್ತಿವಿಶಿಷ್ಟ ಶಿವನಿಗೆ ಸರಿಬಾರವು. ಶಿವನಿಲ್ಲದೆ ವ್ಯೈದೋರವು.

ಅಸ್ತಿ ಕಶ್ಚಿತ್ ಸ್ವತಃಸಿದ್ಧಃ ಸಚ್ಚಿದಾನಂದ ಲಕ್ಷಣಃ । ನಿತ್ಯೋ ನಿರಂಜನಃ
ಶುದ್ಧೋ ನಿರ್ಮಲೋ ನಿರುಪಪ್ಲವಃ ॥ ನಿರ್ಗುಣೋ ನಿತ್ಯಸಂಪನ್ನೋ
ನಿರ್ಮಾಯೋ ನಿರುಪಾಧಿಕಃ । ಅಕಾಯೋ ಭಕ್ತಕಾಯಶ್ಚ ಪರಾತ್ಪರಃ ಶಿವಃ ॥
ಏಕೋ ರುದ್ರಃ ಪರಂಜ್ಯೋತಿಃ ಪರಮಾತ್ಮಾ ಸನಾತನಃ । ಪುರುಷಃ ಶಾಶ್ವತಃ
ಸ್ಥಾಣುರೂರ್ಧ್ವರೇತಾಸ್ತ್ರಿಯಂಬಕಃ ॥ ಸಾದಾಖ್ಯ ಪಂಚಕಾತೀತೋ ವೇದ
ವೇದಾಂತ ಗೋಚರಃ । ಷಡಧ್ವಕರ್ತಾ ದೇವೇಶಃ ಸರ್ವತತ್ತ್ವೇ ಪರಿಸ್ಥಿತಃ ॥"

—ಸೂಕ್ಷ್ಮಾಗಮ

'ಏಕಾತ್ಮ ಪ್ರತ್ಯಯ ಸಾರಂ ಪ್ರಪಂಚೋಪಶಮಂ
ಶಾಂತಂ ಶಿವಮದ್ವೈತಂ ಚತುರ್ಥಂಮನ್ಯಂತೇ ಸ ಆತ್ಮಾ ಸ
ವಿಜ್ಞೇಯಃ ।
'ಶಿವೋಽದ್ವೈತ ಏವಮೋಂಕಾರ ಆತ್ಮೈವ....'

—ಮಾಂಡೂಕ್ಯೋಪನಿಷತ್.

ಈ ಆಗಮೋಪನಿಷತ್ತುಗಳು ಶಿವತತ್ತ್ವ ಶ್ರೇಷ್ಠತೆಯನ್ನು ಸಾರಿವೆ.

'ಸೈಷಾ ಪಂಚಾಕ್ಷರೀ ವಿದ್ಯಾ ಸರ್ವಶ್ರುತಿ ಶಿರೋಗತಾ
ಶಬ್ದ ಜಾತಸ್ಯ ಸರ್ವಸ್ಯ ಬೀಜ ಭೂತಾ ಸಮಾಸತಃ
ಆದೌ ಶಿವಮುಖೋದ್ಗೀರ್ಣಾ ಸಾ ತಸ್ಯೈವಾತ್ಮವಾಚಿಕಾ ।'

—ಚಂದ್ರಜ್ಞಾನಾಗಮ

ಇಲ್ಲಿ ಪರಮ ಪಂಚಾಕ್ಷರೀ ಮಂತ್ರದ ಪ್ರಾಶಸ್ತ್ಯವು ಪರಿಣಾಮಕಾರಿಯಾಗಿ ಪ್ರತಿಪಾದಿತವಾಗಿದೆ. ವಾಚಕವೂ ವಾಚ್ಯವೂ ಆದ ಆ ಪಂಚಾಕ್ಷರ ನಾಮವನ್ನು ಶಿವನಿಗೆ ಇನ್ನಾರು ಇಟ್ಟಿಲ್ಲ. ಅದು ಆತನ ಮುಖದಿಂದಲೇ ಉದ್ಗೀರ್ಣವಾಗಿದೆ. ಆತನ ಆತ್ಮವಾಚಿಯಾಗಿದೆ.

ಶ್ರೀ ರೇಣುಕ ಜಗದ್ಗುರುವು ಪಂಚಾಕ್ಷರಿಗೆ ಪರಮಾತ್ಮನನ್ನೇ ಉಪಮಾನವನ್ನಿತ್ತು ತನ್ನ ಉದಾತ್ತಾನುಭೂತಿಯನ್ನು ಉದ್ಗಮಿಸಿದ್ದಾನೆ. ಸರ್ವಸಿದ್ಧವಾದ ಸರ್ವೋನ್ನತವಾದ ಶಿವಸ್ವರೂಪವಾದ ಶಿವಪಂಚಾಕ್ಷರಿಗೆ ಶಿವನಲ್ಲದೆ ಬೇರೆ ದೃಷ್ಟಾಂತವೆಂದರೇನು? ಅಭಿನ್ನ ವಸ್ತುವಿನ ಉಪಮಾನವನ್ನೀಯುವ ವಿಶಿಷ್ಟತೆಯನ್ನು ಇಲ್ಲಿ ಶ್ರೀ ಜಗದ್ಗುರುವು ಬೀರಿ ತೋರಿದಾನೆ. ಶಿವಪ್ರಮೆಗೆ ಶಿವನಾಮ, ಶಿವನಾಮ ಪ್ರಮೆಗೆ ಶಿವಮಂತ್ರ ಪ್ರಮಾಣವಾಗಿವೆ. ಬೇರೆ ಪ್ರಮಾಣ ಬೇಕಿಲ್ಲ. ಇದನ್ನು ಶಿವಾದ್ವೈತಿಗಳು ಪೃಥಕ್ಕಾಗಿ ಅಂಗೀಕರಿಸುವುದೂ ಇಲ್ಲ.

'ಓದುವಾದಿನಲಿ ಸುರರಾದರಿಪ ಧರ್ಮದಲಿ। ಸಾಧಿಸುವ ತಪಸ್ಸಿದ್ಧಿ ವಿದ್ಯೆಗಳಲಿ ॥ ವೇದದಲಿ ಹಿರಿದು ಹೆಸರಾದ ಹೆಂಪುಳ್ಳ ಶಿವ–। ನಾದಿ ನಾಮವ ನೋಡು ಪಂಚಾಕ್ಷರೀ ॥ ಎಂದು ಗುರುಪುರದ ಮಲ್ಲಯ್ಯನು ಉದ್ಗಾನ ಮಾಡಿದಾನೆ.

**"ಜ್ಞಾತೇ ಪಂಚಾಕ್ಷರೀ ಮಂತ್ರೇ ಕಿಂ ವಾ ಮಂತ್ರಾಂತರೈಃ ಫಲಂ?
ಜ್ಞಾತೇ ಶಿವೇ ಜಗನ್ಮೂಲೇ ಕಿಂ ಫಲಂ ದೇವತಾಂತರೈಃ ।**

ಸಪ್ತಕೋಟೀಷು ಮಂತ್ರೇಷು ಮಂತ್ರಃ ಪಂಚಾಕ್ಷರೋ ಮಹಾನ್
ಬ್ರಹ್ಮವಿಷ್ಣ್ವಾದಿ ದೇವೇಷು ಯಥಾ ಶಂಭುರ್ಮಹತ್ತರಃ"

ಸರ್ವಮಂತ್ರಗಳನ್ನು ಗರ್ಭೀಕರಿಸಿಕೊಂಡ ಶಿವಪಂಚಾಕ್ಷರಿಯನ್ನು ತಿಳಿದ ಬಳಿಕ ಬೇರೆ ಯಾವ ಮಂತ್ರವನ್ನು ತಿಳಿಯಬೇಕಿಲ್ಲ. ಸರ್ವಮಂತ್ರ ಸ್ವರೂಪವೂ ಅದೇ ಆಗಿದೆ. ಸಪ್ತಕೋಟಿ ಮಂತ್ರಗಳಿಗೆಲ್ಲ ಮಹತ್ತಮ ಮಂತ್ರವಾಗಿದೆ. ದೇವಾದಿ ದೇವತೆಗಳಿಗೆಲ್ಲ ದೊಡ್ಡವನಾದ ಶಿವನಂತೆ ಶ್ರೇಷ್ಠವಾಗಿದೆ.

'ಬಣ್ಣಿಸಲೇನು ಲಕ್ಷತರುವೊಂದು ಸುರದ್ರುಮವಾಗಬಲ್ಲುವೇ ? ಸಣ್ಣ ತಟಾಕ ಬಾವಿ ನದಿ ಕೋಟಿಗಳೊಂದು ಸಮುದ್ರವಾಗವೀರ್ಕಣ್ಣಿನ ಬಣ್ಣ ಬಚ್ಚನೆಯ ಹೆಣ್ಣಿನ ದೈವ ಸಹಸ್ರಕೋಟಿ ಮುಕ್ಕಣ್ಣಮಹೇಶಗೊಬ್ಬಗೆಣೆಯಪ್ಪುವೆ ಪೇಳ್ ಗುರುಶಂಕರೇಶ್ವರಾ ?

'ಏಳು ಕೋಟಿ ಮಹಾಮಂತ್ರಾದಿಗಳ ಹಡೆದ ತಾಯಿ। ತ್ರೈಲೋಕ್ಯ ಪತಿ ಮಂತ್ರರಾಜಾ। ಶೂಲಿಯಗ್ಗದ ಸಿರಿಕಪಾಲಿಯುರುತರ ತೇಜ ಬಾಲೇಂದುಧರನ ನಿಜಪಂಚಾಕ್ಷರೀ ॥'

—ಗುರುಪುರದ ಮಲ್ಲಯ್ಯ.

'ಏಳು ಕೋಟಿ ಮಹಾಮಂತ್ರ ಉಪಮಂತ್ರಗಳಿಗೆ ಲೆಕ್ಕವಿಲ್ಲ. ಚಿತ್ತ ವ್ಯಾಕುಳನಾಗಿ ಭ್ರಮಿಸದಿರಾ ! ಎಲೆ ಮನವೆ' 'ಶಿವಶಿವಾ' ಎಂದರೆ ಸಾಲದೆ ? ಅದೆಂತೆಂದೊಡೆ : 'ಶಿವೇತಿ ಮಂಗಳಂ ನಾಮ ಯಸ್ಯ ವಾಚಿ ಪ್ರವರ್ತತೇ। ಭಸ್ಮೀ ಭವಂತಿ ತಸ್ಯತು ಮಹಾ ಪಾತಕ ಕೋಟಯಃ।' ಎಂಬುದಾಗಿ ಎನಗಿದೇ ತಂತ್ರ, ಎನಗಿದೇ ಮಂತ್ರ; ಎನಗಿದೇ ಗತಿ ಮತಿ ಚೈತನ್ಯವಯ್ಯಾ ! ಸದ್ಗುರು ಚೆನ್ನಮಲ್ಲಿಕಾರ್ಜುನನಲ್ಲಿ ತೋರಿದ ಎನಗಿದೇ ಸಹ ಮಂತ್ರವಯ್ಯಾ.'

ಮಂತ್ರಗಳಲ್ಲಿ ಸಹಜಮಂತ್ರ, ಅಸಹಜಮಂತ್ರವೆಂದು ಇತ್ತೆರ. ಸಪ್ತಕೋಟಿಮಂತ್ರಗಳಲ್ಲಿ ಶಿವಮಂತ್ರವೇ ಸಹಜಮಂತ್ರ. ಉಳಿದವುಗಳೆಲ್ಲ ಅಸಹಜಮಂತ್ರಗಳು.

ಸಹಜವೆಂದರೆ ಸ್ವಾಭಾವಿಕ, ಸತ್ಯ, ನಿಜ, ಉಚಿತ, ಅಕೃತ್ರಿಮ

ಎಂಬುದಾಗಿ ಅರ್ಥಗಳಿವೆ. ಇವೆಲ್ಲವೂ ಶಿವಮಂತ್ರಕ್ಕೆ ಸಲ್ಲುತ್ತವೆ. ಮತ್ತು ವಿಶೇಷವಾಗಿ 'ಸಹ–ಜ' ಅಂದರೆ ಶಿವನಲ್ಲಿ ಉದಯವಾದುದು ಶಿವಪಂಚಾಕ್ಷರಿಯು ಅದರಿಂದಾಗಿ ಅದಕ್ಕೆ ಬೇರೆ ಜನ್ಮಭೂಮಿಯಿಲ್ಲ. 'ಶಿವಮುಖೋದ್ಗೀರ್ಣಾ' ಎಂದು ಹೇಳಿದ ಚಂದ್ರಜ್ಞಾನಾಗಮ ಅಭಿಪ್ರಾಯವನ್ನೇ ಮಹಾದೇವಿಯಕ್ಕನು ತನ್ನೀ ವಚನದಲ್ಲಿ 'ಸಹಜ'ಪದ ಪ್ರಯೋಗದಿಂದ ವ್ಯಕ್ತಗೊಳಿಸಿದ್ದಾಳೆ. ಇದರಿಂದಾಗಿ ಸರ್ವಸಹಜವಾದ ಶಿವಸಹಜವಾದ ಶಿವಪಂಚಾಕ್ಷರಿಯೊಂದನ್ನು ತಿಳಿದರೆ ಸಾಕು ; ತಿಳಿವುದೇ ಲೇಸು ; ತಿಳಿದವರೇ ಸಹಜರು.

> "ಅಶೇಷ ಜಗತಾಂ ಹೇತು: ಪರಮಾತ್ಮಾ ಮಹೇಶ್ವರಃ
> ತಸ್ಯ ವಾಚಕ ಮಂತ್ರೋಽಯಂ ಸರ್ವಮಂತ್ರೈಕಕಾರಣಮ್ ।
> ತಸ್ಯಾಭಿಧಾನ ಮಂತ್ರೋಽಯಮಭಿಧೇಯಶ್ಚ ಸಃ ಸ್ಮೃತಃ
> ಅಭಿಧಾನಾಭಿಧೇಯತ್ವಾನ್ಮಂತ್ರಾತ್ ಸಿದ್ಧಃ ಪರಃ ಶಿವಃ ॥"

ಜಗಕ್ಕೆಲ್ಲ ಕಾರಣನು ಪರಮಾತ್ಮನು. ಆತನೇ ಸರ್ವೇಶ್ವರನು. ಅವನಿಗೆ ಮೇಲೆ ದೇವನಿಲ್ಲ. ಅಂಥವನ ವಾಚಕವಾಗಿದೆ ಪಂಚಾಕ್ಷರಿ. ಅದರಿಂದಾಗಿ ಅದರರ್ಥವು ಆತನೇ ಆಗಿದಾನೆ. ಅದು ಆತನ ಸ್ವರೂಪವಾಗಿದೆ. ಕಾರಣ ಅದು ಸರ್ವಮಂತ್ರಗಳಿಗೆ ಕಾರಣವಾಗಿದೆ. ಶಿವನ ಅಭಿಧಾನವಾಗಿದೆ. ಶಿವನು ಅಭಿಧೇಯನಾಗಿದಾನೆ. ಭಕ್ತನ ತಿಳುವಳಿಕೆಗೆ ಹೀಗೆ ಹೇಳಿದರೂ ಅವೆರಡರಲ್ಲಿ ಭೇದವಿಲ್ಲ. ಅಭಿಧಾನವೇ ಅಭಿಧೇಯವಾಗಿ ಅಭೇದತ್ವವು ಸಿದ್ಧವಾಗುತ್ತದೆ. 'ವಾಚಕೋವರ್ಣರೂಪಸ್ಸ್ಯಾದ್ವಾಚ್ಯಸ್ತು ಪರಮೇಶ್ವರಃ' ಅಕ್ಷರ ಮಾತ್ರ ವಾಚಕವಾಗಿ ಆ ಅಕ್ಷರಾರ್ಥರೂಪನೇ ಶಿವನಾಗಿದ್ದಾನೆ. ಆದ್ದರಿಂದ ಅದರ ಜಪದಿಂದ ಶಿವಚೈತನ್ಯವು ಭಕ್ತನಿಗೆ ಅಭಿಮುಖವಾಗುತ್ತದೆ; ಅಭಿವ್ಯಕ್ತವಾಗುತ್ತದೆ. ಶಬ್ದರೂಪಳು ಶಕ್ತಿ. ಅರ್ಥರೂಪನು ಶಿವ. ಇವರಿಬ್ಬರಿಗೂ ಅವಿನಾಭಾವಸಂಬಂಧ.

'ಅಶೇಷ ಜಗತಾಂ ಹೇತುಃ ಪರಮಾತ್ಮಾ' ಎಂಬ ವಾಕ್ಯವನ್ನು ಲಕ್ಷಿಸಿ ವಿವರಿಸಬೇಕು. ಪರಮಾತ್ಮತ್ವವು ಸರ್ವಸಾಮಾನ್ಯವಾದುದಲ್ಲ. ಈರೇಳು ಭುವನಗಳಿಗೆ ಈಶನಾಗದೆ ಮಹಾಕಾರಣನಾಗದೆ ಆ ಪರಮಾತ್ಮ

ತ್ವವು ಪ್ರಾಪ್ತವಾಗದು. 'ಸರ್ವಂ ಶಿವಮಯಂ' 'ಶಿವಃ ಸರ್ವಮಿದಂ ಜಗತ್' ಎಂಬಿವೇ ಮುಂತಾದ ಶ್ರುತಿವಾಕ್ಯಗಳನ್ನು ಲಕ್ಷಿಸಿ ಈ ಮಾತನ್ನು ಕವಿ ಆಡಿದ್ದಾನೆ. ಅಲ್ಲದೆ 'ಶಿವ' ಶಬ್ದದ ಅಗ್ಗಳಿಕೆಯೂ ಅದ್ವಿತೀಯವಾಗಿದೆ. ಅದರ ಅಗ್ಗಳಿಕೆಯನ್ನು ಮುಂದಿನ ಮಂತ್ರಗಳಲ್ಲಿ ವಿವರಿಸೋಣವಾಗುತ್ತದೆ.

> 'ಯೋವೈ ಮಹೇಶ್ವರ ಇತಿ ಪ್ರೋಕ್ತಃ ಸರ್ವಜಗತ್ಪ್ರಭುಃ
> ನಿರ್ಗುಣಃ ಸಗುಣಶ್ಚೈವ ಸ ಏವಾಹಂ ನ ಸಂಶಯಃ ।
> ಸೃಷ್ಟಿಸ್ಥಿತಿಲಯಾದ್ಯೈಶ್ಚ ವಿಹಾರೈಃ ಕ್ರೀಡತೇಽನಿಶಮ್ ।
> ಮಂತವ್ಯೋ ಮನನಾಸಕ್ತೈರ್ಮುಮುಕ್ಷುಭಿರಹರ್ನಿಶಮ್
> ಪೂಜ್ಯಃ ಸದಾಭಕ್ತಿನಿಷ್ಠೈರ್ಭವಾಂಬುಧಿ ತಿತೀರ್ಷುಭಿಃ ।
> ಅಹಮೇವ ಸದಾ ಧ್ಯೇಯೋ ಯಮಾದ್ಯಷ್ಟಾಂಗಸಾಧಕೈಃ ।'
> ಈಶ್ವರಸ್ತ್ವಧಿದೈವಂ ಚ ಪಂಚಮಾತ್ರಾಸಮನ್ವಿತಮ್
> ಸರ್ವಸಿದ್ಧಿಪ್ರದಂ ದೇವಿ ಸಾಧಕಾನಾಮಿದಂಪರಮ್ ।
> ಪಂಚಾಕ್ಷರೋ ಮಹಾಮಂತ್ರಃ ಮಂತ್ರರಾಜಾಹ್ವಯಃ ಪರಃ ॥'

—ಸೂಕ್ಷ್ಮಾಗಮ

'ವಿಪುಲ ವೇದ ವೇದಾಂತಸಾರ, ಸಕಲ ಲೋಕದ ಜನ ಹಿತಾಧಾರ, ಸಪ್ತಕೋಟಿ ಮಹಾಮಂತ್ರಂಗಳ ತವರುಮನೆ; ಸದ್ಭಕ್ತ ಜನಜೀವಾನಂದ, ಅಖಿಳಾಗಮದ ಸಂತಾನದ ಹರಣ; ಮುಕ್ತಿ ಮೇಲುಪ್ಪರಿಗೆಯ ಸೋಪಾನ, ಪ್ರಣವಾಂಕುರ ಪಲ್ಲವ; ಫಲರೂಪ ತ್ರಿಣಯನನೊಲಿಸುವ ಕರ್ಣಾಭರಣ, ಶ್ರೀಹರನಾಮದ ಸಾಕಾರ ನಿಲವು, ಶ್ರೀಮತ್ಪರಮ ಪಂಚ ಪಂಚ ಬ್ರಹ್ಮಾನಂದ ಶ್ರೀಮತ್ಪರತತ್ತ್ವದ ನಿತ್ಯನೆಲೆಯು, ಶ್ರೀ ಹಂಪೆಯ ವಿರೂಪನ ತೋರುವ ಶ್ರೀ ಗುರು ಪಂಚಾಕ್ಷರಿ.'

'ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ; ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ: ಕೂಡಲ ಸಂಗಯ್ಯನೊಬ್ಬನೇ ದೈವವೆಂದು.'

'ಈಶ್ವರ ಸದ್ಭಾವೇ ಕಿಂ ಪ್ರಮಾಣಂ' ಎಂಬ ಮೀಮಾಂಸಕನ ಮೂಗಿನ

ಕೊನೆಯನು, 'ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತೋ ಬಾಹು ರುತ ವಿಶ್ವತಸ್ಪಾತ್ | ಸಬಾಹುಭ್ಯಾಂ ಧಮತಿ ಸಂಪತತ್ರೈರ್ ದ್ಯಾವಾಭೂಮೀ ಜನಯನ್ ದೇವ ಏಕಃ' ಎಂಬ ಸುರಗಿಯಲಿರಿದು, ವೈಶೇಷಿಕ ಎಂಬ ಇಟ್ಟಗೆಯಲೊರಸಿ, ಕೂಡಲ ಸಂಗಯ್ಯನೆಂಬ ಕನ್ನಡಿಯ ತೋರುವೆನು.'

'ಸ್ವಾಮಿ ನೀನು, ಶಾಶ್ವತ ನೀನು : ಎತ್ತಿದೆ ಬಿರುದ ಜಗವೆಲ್ಲರಿಯಲು. 'ಮಹಾದೇವ, ಮಹಾದೇವ' ಇಲ್ಲಿಂದ ಮುಂದೆ ಶಬ್ದವಿಲ್ಲ ! ಪಶುಪತಿ ಜಗಕ್ಕೆ ಏಕೋದೇವ; ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ಕೂಡಲ ಸಂಗಮ ದೇವ.'

ಇವೇ ಮುಂತಾದ ಸಾಕ್ಷಿವಚನಗಳು ಶಿವನ ಜಗತ್ಕಾರಣತ್ವವನ್ನು ವಿಶ್ವವ್ಯಾಪಕತ್ವವನ್ನು ಪರಮಾತ್ಮತ್ವವನ್ನು ಮಹೇಶ್ವರತ್ವವನ್ನು ಪಂಚಾಕ್ಷರಿಯ ಮಹಿಮೆ ಹಿರಿಮೆಗಳನ್ನು ಸ್ಫುಟವಾಗಿ ಸಾರಿವೆ.

"ನಮಃ ಶಬ್ದಂ ವದೇತ್ಪೂರ್ವಂ ಶಿವಾಯೇತಿ ತತಃಪರಂ
ಮಂತ್ರಃ ಪಂಚಾಕ್ಷರೋ ಹ್ಯೇಷಃ ಸರ್ವಶ್ರುತಿಶಿರೋಗತಃ |"

ಇಲ್ಲಿ ಪಂಚಾಕ್ಷರೀ ಮಂತ್ರದ ಪೂರ್ಣ ನಾಮ ನಿರ್ದೇಶವನ್ನು ಉಚ್ಚಾರಣ ಕ್ರಮದೊಡನೆ ಮಾಡಲಾಗಿದೆ. 'ನಮಃ ಶಿವಾಯ' ಇದು ಪಂಚಾಕ್ಷರೀ ಮಂತ್ರ. ಇದು ಸರ್ವವೇದ ಮಾನ್ಯವಾಗಿದೆ. 'ನಮಃ ಶಿವಾಯಚ ಶಿವತರಾಯಚ' ಎಂಬುದು ಯಜುಃ ಶ್ರುತ್ಯಂತರ್ಗತ ಶ್ರೀರುದ್ರ ಸೂಕ್ತವಾಗಿದೆ.

'ಅಯಂಮೇ ವಿಶ್ವ ಭೇಷಜೋಽಯಂ ಮೇ ಶಿವಾಭಿಮರ್ಶನಃ'— ಋಗ್ವೇದ. 'ಅಪಿ ವಾಯಶ್ಚಂಡಾಲಶ್ಶಿವ ಇತಿವಾಚಂ ವದೇತ್ತೇನ ಸಹ ಸಂವದೇತ್'– ಸಾಮವೇದ. 'ಶಿವ ಏಕೋಧ್ಯೇಯಶ್ಶಿವಂಕರಸ್ಸರ್ವಮನ್ಯತ್ಪರಿತ್ಯಜ್ಯ—ಅಥರ್ವವೇದ. ಹೀಗೆ ಸರ್ವಶ್ರುತಿಗಳಿಂದ ಗಣನೀಯವಾಗಿದೆ.

'ನಮಃ ಶಿವಾಯ ಇತಿ ಸಂಹಾರಮಂತ್ರ:, 'ಶಿವಾಯ ನಮಃ ಇತಿ ಸ್ಥಿತಿ ಮಂತ್ರಃ, 'ಯವಾಶಿಮನ ಇತಿ ಸೃಷ್ಟಿ ಮಂತ್ರ:'—ಎಂಬುದಾಗಿ ಶಿವ ಮಂತ್ರ ಜಪ ವಿಧಿಯಲ್ಲಿ ಉಕ್ತವಾಗಿದೆ. ಇವುಗಳಲ್ಲಿ ಮೊದಲಿನವೆರಡು

ರೂಢಿಗತವಾಗಿವೆ. ಸೃಷ್ಟಿಮಂತ್ರವು ಜಪಿಸಲು ಅರ್ಥ ಮಾಡಿಕೊಳ್ಳಲು ಕಷ್ಟಕರವಾದುದರಿಂದ ಅದನ್ನು ಉಪದೇಶಿಸುವುದಿಲ್ಲ; ಉಪಯೋಗಿಸುವುದಿಲ್ಲ. ಅವರವರ ದೀಕ್ಷಾಗುರುಗಳು ಹೇಗೆ ಉಪದೇಶಿಸುವರೋ ಹಾಗೆ ಜಪಿಸಬೇಕು. ಗುರೂಪದೇಶದ ಮುಂದೆ ಯಾವ ಶಾಸ್ತ್ರವಿಧಿಯೂ ನಿಲ್ಲುವುದಿಲ್ಲ. ಗುರುವಾದರೂ ಶಿಷ್ಯರ ಅಧಿಕಾರವನ್ನು ಉಪಾಸನ ಸ್ಥಿತಿಯನ್ನು ಕಾಲಾವಧಿಯನ್ನು ನೋಡಿಕೊಂಡು ಔಚಿತ್ಯವರಿತು ಉಪದೇಶಿಸಬೇಕು. ಪೂರ್ಣ ಪರಮಾರ್ಥನಿರತರಾಗುವವರಿಗೆ ಸಂಹಾರ ಕ್ರಮವನ್ನೂ ಪ್ರಪಂಚ ಪರಮಾರ್ಥವೆರಡರಲ್ಲಿ ನಿರತರಾಗುವವರಿಗೆ ಸ್ಥಿತಿ ಕ್ರಮವನ್ನೂ ಉಪದೇಶಿಸಬೇಕು.

ನಮಃ ಪದದಿಂದ ಉಪಾಸಕನಾದ ವಿನಯಾನ್ವಿತನಾದ ಜೀವ (ಅಂಗ) ನೆಂದು, ಶಿವ ಪದದಿಂದ ಉಪಾಶ್ಯನಾದ ಸರ್ವಸಮರ್ಥನಾದ ಪರಶಿವ (ಲಿಂಗ) ನೆಂದು, 'ಅಯಗತೌ' ಎಂಬ ಧಾತು ಜನ್ಯ ಆಯ ಪದದಿಂದ ಐಕ್ಯಾರ್ಥವೆಂದು ಅರಿಯಬೇಕು. ಮತ್ತು 'ನ ಮಮ ಸರ್ವಂ ವ್ಯಷ್ಟಿ ಸಮಷ್ಟಿ ಪದಾರ್ಥಂ ಶಿವಾಯ' ಅಂದರೆ ನನ್ನದೆಂಬುದು ಯಾವುದಿಲ್ಲ. ಎಲ್ಲವೂ ಶಿವನ ಸೊಮ್ಮು, ಶಿವನಿಗೆ ಸಮರ್ಪಣ ಎಂದು ಭಾವಿಸಬೇಕು. ತತ್ತ್ವಮಸ್ಯರ್ಥವುಳ್ಳ ಲಿಂಗಾಗ ಸಾಮರಸ್ಯವನ್ನು ಪಂಚಾಕ್ಷರಿಯು ಪ್ರಬೋಧಿಸುತ್ತದೆ. 'ನಮಶ್ಶಿವಾಯ' ಅಂದರೆ ತ್ವಂತದಸಿ ಎಂದು ಹೇಳಿದಂತಾಗುತ್ತದೆ. ನಿವೃತ್ತಿಮಾರ್ಗದಲ್ಲಿ ಹೀಗೆ ಹೇಳುವುದೇ ಲೇಸು. ಅಂಗನಾದ ನೀನೇ ಆ ಲಿಂಗವಾಗಿರುವೆ–ಎಂದರ್ಥ. ಇದೇ ಸಮರ್ಪಕ. ಇದನ್ನು ಬೋಧಿಸಲು ನಮಃ ಪದವನ್ನು ಪ್ರಥಮವಾಗಿ ಉಪಯೋಗಿಸಬೇಕೆಂದು ಆಗಮಾದಿಗಳ ಅಭಿಪ್ರಾಯ, ಅಂತೆಯೇ ಶ್ರೀ ರೇಣುಕಾಚಾರ್ಯರ ಸಿದ್ಧಾಂತ. ಇಲ್ಲಿ ಸದ್ಯದ ಸಾಮಾಜಿಕ ಸಂಹಾರ ಸ್ಥಿತಿಗಳ ಗುದ್ದಾಟವಿಲ್ಲ. ಆದ್ದರಿಂದ ನಮಶ್ಶಿವಾಯ ಎಂಬುದು ಪ್ರಭೋಧ.

'ಅಂಗಂ ನಮಃ ಪದಮಿದಂ ಶಿವ ಏಷಲಿಂಗಂ ಸಂಬಂಧ ಆಯಪದಮೇವ ತಯೋರಭೇದಮ್ | ಲಿಂಗಾಂಗಸಂಗಮಪದತ್ರಯಬೋಧನಾರ್ಥಂ ಪಂಚಾಕ್ಷರೋऽಯಮಭಿಧಾಸ್ಯತಿ ಮಂತ್ರರಾಜಃ ||' ಎಂದು ಆಗಮಪ್ರಮಾಣವಿದೆ.

ಈ ಅರ್ಥವುಳ್ಳ ಪಂಚಾಕ್ಷರಿಯಯು ಮಂತ್ರವೆನಿಸಬೇಕಾದರೆ ಶ್ರೀಗುರುವಿನಿಂದಲೇ ಉಪದೇಶ ಪಡೆಯಬೇಕು. ಹಾಗಿಲ್ಲದೆ ಯಾರೋ ಎಲ್ಲಿಯೋ ಹೇಳಿದ್ದನ್ನು ಕೇಳಿ, ಯಾವುದೋ ಪುಸ್ತಕದಲ್ಲಿ ಬರೆದುದನ್ನು ನೋಡಿ ಓದಿ ಜಪೋಪಾಸನೆಯನ್ನು ಮಾಡಿದರೆ ಪ್ರಯೋಜನವಿಲ್ಲ. ಪ್ರತಿಯಾಗಿ ಲೋಪ ಪಾಪಗಳುಂಟಾಗುತ್ತವೆ.

ನೀರು ಕೆರೆ ಬಾವಿಗಳಲ್ಲಿ ದೊರೆಯುತ್ತದೆ. ಎಳೆನೀರು ದೊರೆಯದು. ಇದು ತೆಂಗಿನ ಮರದಲ್ಲಿಯೇ ದೊರೆಯಬಲ್ಲುದು. ಹಾದಿ ಬೀದಿಗಳಲ್ಲಿ ಹೇಳುವವರಲ್ಲಿ ವೇದಾದಿಗ್ರಂಥಗಳಲ್ಲಿ ಬರೀ ಶಬ್ದಗಳು ಸಿಕ್ಕಬಹುದಲ್ಲದೆ ಮಂತ್ರ ಸಿಕ್ಕದು, ಮಂತ್ರವನ್ನಾಗಿ ಮಾಡುವ ಸಂಸ್ಕಾರ ಅವರಲ್ಲಿ ಅವುಗಳಲ್ಲಿ ಇಲ್ಲ. ಅವರು ಬರೀ ಶ್ರೋತ್ರೀಯರಾಗಿರಬಹುದು. ಬ್ರಹ್ಮನಿಷ್ಠರಲ್ಲ. ಸಾಲದ್ದಕ್ಕೆ ಸಂಸ್ಕಾರ ಪ್ರಕ್ರಿಯೆಗಳನ್ನು ಮಾಡಿ ಅರಿಯರು. ವೇದಾದಿ ಗ್ರಂಥಗಳೂ ಅಷ್ಟೇ ! 'ಚಕಿತಮಭಿಧತ್ತೇ' ವೇದಾದಿ ಯಾವ ಗ್ರಂಥಗಳು ಆ ಪರಮಾತ್ಮನನ್ನು ಕಂಡಿಲ್ಲ. ಕಾಣದವು ಕೊಡುವುದೇನನ್ನು? ನೀರಿಲ್ಲದ ಬರಿದಾದ ಕೊಡವನ್ನು ಮಾತ್ರ; ಗ್ರಂಥಗಳಲ್ಲಿರುವ ಪಂಚಾಕ್ಷರಿಯೆಂಬ ಕೊಡದಲ್ಲಿ ಲಿಂಗ ಮೂರ್ತಿರೂಪ ಆತ್ಮಚೈತನ್ಯಾಮೃತವಿರುವುದಿಲ್ಲ. ಗುರುವಾದವನು ಸ್ವಾತ್ಮ ರೂಪ ಚೈತನ್ಯ ಮೂರ್ತಿಯನ್ನು (ಲಿಂಗವನ್ನೊ) ಕರಮನ ಭಾವಗಳಿಗೆ ಕರುಣಿಸಿ ತೋರಿಸಿ ಮಂತ್ರದಲ್ಲಿಯೂ ಆ ಕಳೆಯನ್ನಿರಿಸಿ ಬೋಧಿಸುತ್ತಾನೆ.

'ಪುಸ್ತಕೇ ಲಿಖಿತಾನ್ಮಂತ್ರಾನಾಲೋಕ್ಯ ಪ್ರಜಪಂತಿ ಯೇ
ಬ್ರಹ್ಮಹತ್ಯಾ ಸಮಂ ತೇಷಾಂ ಪಾತಕಂ ಪರಿಕೀರ್ತಿತಂ ।'
—ಶಿವಮಂತ್ರಜಪವಿಧಿ

ಇನ್ನು ಮಂತ್ರ ಶಬ್ದದ ಅರ್ಥ ಸಾಮರ್ಥ್ಯಗಳನ್ನು ಈ ವಾತುಲ ಶುದ್ಧಾಖ್ಯ ತಂತ್ರಮಂತ್ರಗಳಿಂದ ತಿಳಿಯಬೇಕು.

'ಮಂತ್ರೇಣ ಪಾತಕಾದೀನಿ ಮುಚ್ಯಂತೇ ಸರ್ವಜನ್ಮಿನಾಂ
ಮನನಂ ಸರ್ವಪಕ್ಷೇಷು ತ್ರಾಣಂ ಸಂಸಾರ ಸಾಗರಾತ್

ಮನನ ತ್ರಾಣಧರ್ಮತ್ವಾನ್ಮಂತ್ರ ಇತ್ಯಭಿಧೀಯತೇ ॥
ಆಹ್ವಾನತಃ ಸ್ವನಾಮ್ನಾತು ಜನಃ ಸನ್ನಿಹಿತೋ ಯಥಾ
ತಥಾ ಮಂತ್ರಪ್ರಯೋಗೇಣ ಶಿವಃ ಸನ್ನಿಹಿತೋ ಭವೇತ್
ತಸ್ಮಾನ್ಮಂತ್ರಂ ಮಹಾಸೇನ ರಹಸ್ಯಂ ನ ಪ್ರಕಾಶಯ ।'

ಬಳಿಕ ಪಂಚಾಕ್ಷರಿಯು ಸರ್ವಶ್ರುತಿ ಶಿರೋಧಾರಿಯಾಗಿದೆಯೆಂಬುದನ್ನು ಹರಿಹರ ದೇವನು ತನ್ನ ರಸಮಯ ಕವಿವಾಣಿಯಲ್ಲಿ ಹೀಗೆ ಹೇಳಿದಾನೆ:

'ವೇದದ ಮಾತೆ ಪಿತಂ ಪಂಚಾಕ್ಷರಿ । ವೇದ ನಿಧಾನಂ ಶ್ರೀ ಪಂಚಾಕ್ಷರಿ ।
ಶಾಸ್ತ್ರದ ಸರ್ವಸ್ವಂ ಪಂಚಾಕ್ಷರಿ । ವಿಶ್ರುತವೆಲ್ಲರೊಳುಂ ಪಂಚಾಕ್ಷರಿ ।
ಸಕಲ ಪುರಾಣದೊಳುಂ ಪಂಚಾಕ್ಷರಿ । ಸಕಲಸ್ಮೃತಿಗಳೊಳುಂ ಪಂಚಾಕ್ಷರಿ ।
ಮಂತ್ರದ ತಂತ್ರದ ಗತಿ ಪಂಚಾಕ್ಷರಿ । ಯಂತ್ರದ ಯಾಗದ ಪತಿ ಪಂಚಾಕ್ಷರಿ ।'

ಅಮೃತವಾದ ಮೊಲೆವಾಲು ಮಗುವಿಗೆ ಬೇಕಾದರೆ ತನ್ನ ಹೆತ್ತ ತಾಯಿಯ ಬಳಿಗೆ ಹೋಗಿ ಪಡೆಯಬೇಕಲ್ಲದೆ ಬೇರೆಲ್ಲಿ ಪಡೆದರೂ ಅದು ದಕ್ಕದು. ದಕ್ಕಿದರೂ ಅದು ತಾಯಿಯ ಎದೆ ಹಾಲಲ್ಲ. ಅದರಿಂದ ತನ್ನ ಶಕ್ತಿ ಬರುವಷ್ಟು ಬಾರದು. ಬೆಳವಣಿಗೆ ನಸು ಕುಗ್ಗುವುದು. ಪ್ರಣವ ರೂಪಾದ ಪಂಚಾಕ್ಷರಿಗೆ ವೇದಾದಿಗಳೂ ಮಕ್ಕಳು. ಜೀವರೂ ಮಕ್ಕಳು. ಮಕ್ಕಳು ಮಕ್ಕಳಲ್ಲಿ ಎದೆ ಹಾಲನ್ನು ಪಡೆಯಲು ಸಾಧ್ಯವೆ? ಮಾತೆಗೆ ಮಾತೃತ್ವ ಹೇಗೆ ಮೂಲಮಹಾಮಾತೆಯಾದ ಉಮೆಯಿಂದ ಪ್ರಾಪ್ತವಾಗುತ್ತದೆಯೋ ಹಾಗೆ ಪಂಚಾಕ್ಷರಿಗೆ ಪರಮಾತ್ಮನ ತೋರುವ ಮಂತ್ರತ್ವ ಶ್ರೀ ಗುರುವಿನಿಂದ ಸಂಪ್ರಾಪ್ತವಾಗುತ್ತದೆ. ಗುರುಪದವಶ್ಯಂ ಶ್ರೀ ಪಂಚಾಕ್ಷರಿ। ದುರಿತ ವಿನಾಶಂ ಶ್ರೀ ಪಂಚಾಕ್ಷರಿ । ಶಿವ ವಿಸ್ತಾರಂ ಶ್ರೀ ಪಂಚಾಕ್ಷರಿ । ಶಿವನ ಸುಖಾಕಾರಂ ಪಂಚಾಕ್ಷರಿ । ಶಬ್ದ ಬ್ರಹ್ಮಂ ಶ್ರೀ ಪಂಚಾಕ್ಷರಿ । ಶಬ್ದಾಮೃತರಸವೀ ಪಂಚಾಕ್ಷರಿ ! ಪರಮಜ್ಯೋತಿರ್ಲತೆ ಪಂಚಾಕ್ಷರಿ ! ಪರಮ ಪವಿತ್ರಂ ಶ್ರೀ ಪಂಚಾಕ್ಷರಿ । ಪರಮಜ್ಞಾನದ ಮೊನೆ ಪಂಚಾಕ್ಷರಿ । ಪರ

ತತ್ತ್ವದ ನೆಲೆವನೆ ಪಂಚಾಕ್ಷರಿ। ಪಂಚಾಕ್ಷರಿ ಜಿಹ್ವೆಯ ಪುಣ್ಯಾರ್ಥಂ। ಪಂಚಾಕ್ಷರಿ ಕರ್ಣಾಮೃತ ತೀರ್ಥಂ।' ಎಂದು ಅದೇ ಹರಿಹರದೇವನು ಗುರುಸ್ಥಲದಿಂದ ವಶವಾದ ಪಂಚಾಕ್ಷರಿಯೇ ಶ್ರೀಮಂತ್ರವಾಗಬಲ್ಲುದು; ಮೇಲೆ ಹೇಳಿದ ಇವೆಲ್ಲ ಸಿರಿಗೂಡಿ ಶ್ರೀಮಂತ್ರವಾಗಬಲ್ಲದೆಂದು ಹೇಳಿದ್ದಾನೆ. 'ಅತ್ಯಧಿಕಂ ಸದ್ಗುರು ಪಂಚಾಕ್ಷರಿ। ಅತ್ಯನುಪಮಮೂರ್ಜಿತ ಪಂಚಾಕ್ಷರಿ। ಎಂತಲೂ ಹೇಳಿ ಹೃದಯ ಹೊಂಪುಳಿಗೊಳಿಸುತ್ತಾನೆ. ಆಗ ನಮಃಶಿವಾಯ ವೆಂದರೆ ನಮಃ ಅಂಗನು ಶಿವಾಯ ಲಿಂಗಕ್ಕಾಗಿ ಇರುವನು ಎಂದೂ ನಮಃ ಅಂಗಕ್ರಿಯೆಯು ಶಿವಾಯ ಲಿಂಗಕ್ಕಾಗಿ ಎಂದೂ ಲಿಂಗರೂಪ ಮಂಗಲಕ್ಕಾಗಿ ಎಂದೂ ಅರ್ಥಗಳುಂಟಾಗುತ್ತವೆ. ಶಿವ ಪದ ಮಂಗಲಾರ್ಥವುಳ್ಳುದಾಗಿದೆ.

"ಆದಿತಃ ಪರಿಶುದ್ಧತ್ವಾನ್ಮಲತ್ರಯ ವಿಯೋಗತಃ
ಶಿವ ಇತ್ಯುಚ್ಯತೇ ಶಂಭುಶ್ಚಿದಾನಂದ ಘನಃ ಪ್ರಭುಃ।
ಆಸ್ಪದತ್ವಾದಶೇಷಾಣಾಂ ಮಂಗಲಾನಾಂ ವಿಶೇಷತಃ
ಶಿವ ಶಬ್ದಾಭಿಧೇಯೋ ಹಿ ದೇವದೇವಸ್ತ್ರಿಯಂಬಕಃ।
ಶಿವ ಇತ್ಯಕ್ಷರದ್ವಂದ್ವಂ ಪರಬ್ರಹ್ಮ ಪ್ರಕಾಶಕಂ
ಮುಖ್ಯವೃತ್ತ್ಯಾ ತದನ್ಯೇಷಾಂ ಶಬ್ದಾನಾಂ ಗೌಣವೃತ್ತಯಃ।
ತಸ್ಮಾನ್ಮುಖ್ಯತರಂ ನಾಮ ಶಿವ ಇತ್ಯಕ್ಷರದ್ವಯಂ
ಸಚ್ಚಿದಾನಂದ ರೂಪಸ್ಯ ಶಂಭೋರಮಿತ ತೇಜಸಃ।
ಏತನ್ನಾಮಾವಲಂಬೇನ ಮಂತ್ರಃ ಪಂಚಾಕ್ಷರಃ ಸ್ಮೃತಃ
ಯಸ್ಮಾದತಃ ಸದಾಜಪ್ಯೋ ಮೋಕ್ಷಕಾಂಕ್ಷಿಭಿರಾದರಾತ್।"

ಪಂಚಾಕ್ಷರವೆಂಬ ಅಂಗಕ್ಕೆ ಮಧ್ಯಸೂತ್ರದಂತಿರುವ ಸಾಕ್ಷಿಯಾಗಿರುವ ಸರ್ವಸ್ವವಾಗಿರುವ 'ಶಿವ' ಪದಾರ್ಥದ ಪ್ರಭಾವ ಪರಿಶುದ್ಧತೆ ಪ್ರಭುತ್ವ-ವಿಭುತ್ವ ಪ್ರಾಮುಖ್ಯತೆ ಜಪಾವಶ್ಯಕತೆಗಳನ್ನು ಈ ಪಂಚಶ್ಲೋಕ ಶ್ರುತಿಗಳಿಂದ ಶ್ರುತಗೊಳಿಸುತ್ತಾನೆ; ಶ್ರೋತ್ರ ಸಂಪದವಾಗಿಸುತ್ತಾನೆ.

ಮಲತ್ರಯದ ಮಾತಿಲ್ಲದೆ ಮುಮ್ಮೊದಲಿನಿಂದಲೂ ಪರಿಶುದ್ಧನಾಗಿದ್ದಾನೆ. ಅದರಿಂದಾಗಿ ಶಿವನೆನಿಸಿದ್ದಾನೆ. ಉಳಿದ ಜೀವರೆಲ್ಲ ದೇವತೆಗಳೆಲ್ಲ ಮಧ್ಯದಲ್ಲಿಂದ ಶುದ್ಧರು. ಆದಿಯಲ್ಲಿ ಮಲಬದ್ಧರು. ಸಂಸ್ಕಾರದಿಂದ

ಶುದ್ಧರೆನಿಸುವವರು. ಶಿವನಾದರೋ ಸ್ವಯಂಜ್ಯೋತಿಯಾದುದರಿಂದ ಮಲದೋಷದೂರನು; ಪರಿಶುದ್ಧನು. ಕಾಂತ್ಯರ್ಥ 'ವಶ' ಧಾತುವಿನಿಂದ ಶಿವರೂಪ ನಿಷ್ಪತ್ತಿಯನ್ನು ಸಂಸ್ಕೃತಜ್ಞರು ಪ್ರತಿಪಾದಿಸುತ್ತಾರೆ. ಈ ದೃಷ್ಟಿಯಿಂದ ಶಿವ ಪದವು ಕಾಂತಿಮಯವೆಂದು ಸಿದ್ಧವಾಗುತ್ತದೆ. 'ಅನಾದಿಮಲ ಸಂಶ್ಲೇಷ ಪ್ರಾಗಭಾವಾದ್ವಿಶೇಷತಃ | ಅತ್ಯಂತ ಪರಿಶುದ್ಧಾತ್ಮಾ ಶಿವ ಇತ್ಯುಚ್ಯತೇ ವಿಭುಃ ||' ಎಂಬುದಾಗಿ ವಾತುಲಾಗಮ ಪ್ರಮಾಣವಿದೆ. ಆ ಪರಿಶುದ್ಧವಾದ ಪ್ರಭಾಮಯವಾದ ಶಿವಜ್ಯೋತಿಯಿಂದ ಜೀವನ ತ್ರಿತನುಗತ ತಮಸ್ಸು ತೊಲಗುತ್ತದೆ. ಮುಮ್ಮೈ ಬೆಳ್ಳಂಬೆಳಗುತ್ತದೆ. ತನುಸಾರಾಯ, ಮನಸಾರಾಯ, ಭಾವಸಾರಾಯರಾಗುತ್ತಾರೆ. ಭಕ್ತಿಸಾರಾಯರಾಗುತ್ತಾರೆ.

ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣಗಳಾದ ಆಣವ ಮಾಯಾ ಕಾರ್ಮಿಕ ಮಲತ್ರಯ ರಹಿತನಾದ ಶಿವನಿಗೆ ಸೃಷ್ಟಿ ಸ್ಥಿತಿ ಸಂಹಾರಗಳಿಲ್ಲ. ಆದ್ದರಿಂದ ಆತನು ನಿತ್ಯ ಸತ್ಯ ಸುಖಸ್ವರೂಪನು; ತ್ರಿಕಾಲಗಳಿಂದ ಅಬಾಧಿತನು. ತ್ರಿವಿಧಾವಸ್ಥೆಗಳಿಲ್ಲದವನು. ಅಂತೆಯೇ ಸತ್ತಾಮಾತ್ರನು. ಚಿದಾನಂದಘನನು. ಅಂದರೆ ಚಿದ್ಘನ ಆನಂದಘನವುಳ್ಳವನು. ಬೇರೆ ಬೆಳಗುಗಳ ಹಂಗಿಲ್ಲದಾತನು. ಸ್ವಯಂಜ್ಞಾನಸ್ವರೂಪನು. ಅಚ್ಚಳಿಯದ ಅಖಂಡಾನಂದವುಳ್ಳವನು. ಪ್ರಭುವಾತನು. ಪಶುಪತಿ, ಮಹೇಶ್ವರ, ಈಶ್ವರ, ಈಶಾನ, ಭೂತೇಶ, ಅಧಿಪ ಇತ್ಯಾದಿ ನಾಮಗಳು ಆತನ ಪ್ರಭುತ್ವ ಸೂಚಕಗಳಾಗಿವೆ. ಆತನು ಪಶುಗಳಿ(ಜೀವರಿ)ಗೆಲ್ಲ ಪತಿ. ದೇವತೆಗಳಿಗೆಲ್ಲ ದೇವ; ಮಹಾದೇವ. ಜಂಗಮ ಜಗತ್ತಿಗೆ ಮಾತ್ರವಲ್ಲ ಜಡ ಜಗತ್ತಿಗೂ ಆತನೇ ಈಶನು. ಸರ್ವವಿದ್ಯೆಗಳಿಗೆ ಆತನೇ ಈಶಾನನು.

'ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಂ | ಬ್ರಹ್ಮಾಧಿಪತಿಃ ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾ ಶಿವೋಂ ||' ಎಂಬೀ ಮಂತ್ರವು ಪ್ರಭು ಪದದ ಪ್ರಕೃಷ್ಟ ವ್ಯಾಖ್ಯಾನವಾಗಿದೆ. ಅಂತೆಯೇ ಬಸವಣ್ಣನವರು, 'ಸ್ವಾಮಿ ನೀನು, ಶಾಶ್ವತ ನೀನು; ಎತ್ತಿದೆ ಬಿರುದ ಜಗವೆಲ್ಲರಿಯಲು. ಮಹಾದೇವ ಮಹಾದೇವ ಇಲ್ಲಿಂದ ಮುಂದೆ ಶಬ್ದವಿಲ್ಲ. ಪಶುಪತಿ ಜಗಕ್ಕೆ ಏಕೋದೇವ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ

ದೇವ!' ಎಂದು ದಿಟ್ಟತನದಿಂದ ಹೂಣಿತೊಟ್ಟರು. ಹಿರಿತನದ ಗುಡಿಯ ನೆತ್ತಿದರು. ಎತ್ತಿ ಮುಗಿಲ ಎತ್ತರದಲ್ಲಿ ಜಗದ ಬಿತ್ತರವಾಗಿ ಹಾರಿಸಿದರು. ಅಪ್ರತಿಮವಾಗಿ ಹಾರಿಸಿದರು. ಅದ್ವಿತೀಯವಾಗಿ ಹಾರಿಸಿದರು.

ಹೀಗೆ ಪ್ರಥಮ ಶ್ಲೋಕದಲ್ಲಿ ಶಿವಪದದ ಶುದ್ಧತೆಯನ್ನು ಜ್ಯೋತಿತ್ವ ವನ್ನು ನಿರೂಪಿಸಿ ದ್ವಿತೀಯ ಶ್ಲೋಕದಲ್ಲಿ ಶಿವಶಬ್ದದ ಮಂಗಲತೆಯನ್ನು ತ್ರಿಯಂಬಕತೆಯನ್ನು ನಿರೂಪಿಸುತ್ತಾರೆ: ಸೂರ್ಯಚಂದ್ರಾಗ್ನಿಗಳೇ ನೇತ್ರ ವಾಗಿ ದೇವತೆಗಳಿಗೆಲ್ಲ ಮಹಾದೇವನಾಗಿ ಇರುವುದರಿಂದ ಎಲ್ಲ ಮಂಗಲಗಳಿಗೆ ಅತಿಶಯವಾಗಿ ಆಶ್ರಯನಾಗಿ ಶಬ್ದವೃತ್ತಿಯಿಂದಲೇ ಶಿವನೆನಿಸಿದ್ದಾನೆ. 'ಶಿವಂ ಕಲ್ಯಾಣಂ ಅಸ್ಯಾಸ್ತೀತಿ ಶಿವಃ' ಎಂಬ ಶಿವಶಬ್ದದ ರೂಪನಿಷ್ಪತ್ತಿ ಯಿಂದ ಅದರ ಶಕ್ತಿವೃತ್ತಿಯು ಅಂದರೆ ವಾಚ್ಯಾರ್ಥವು ವ್ಯಕ್ತವಾಗುತ್ತದೆ.

ಶಿವನು ಮಂಗಲಕರನಾಗಲು ಮಹಾದೇವತ್ವವು ಮುಕ್ಕಣ್ಣತನವು ಮುಖ್ಯಕಾರಣಗಳಾಗಿವೆ. ಇವೆರಡು ವಿಶಿಷ್ಟ ಧರ್ಮಗಳಿಲ್ಲದೆ ಮಾಂಗಲ್ಯದ ಪರಮಾವಧಿಯು ಘಟಿಸದು. ಮಂತ್ರದಲ್ಲಿರುವ 'ವಿಶೇಷತಃ' ಪದವು ವಿಮರ್ಶನೀಯವೂ ಗಮನಾರ್ಹವೂ ಆಗಿದೆ. ನಿಶ್ಶೇಷ ಮಾಂಗಲ್ಯವು ಅಂದರೆ ಸಂಪೂರ್ಣ ಕಲ್ಯಾಣವು ಸಂಪ್ರಾಪ್ತವಾಗಬೇಕಾದರೆ ಅಂದರೆ ಉಪಾಸ ಕರಿಗೆ ಉಂಟುಮಾಡಿಕೊಡಬೇಕಾದರೆ ತಾನು ಮಹಾದೇವನಾಗಿಯೇ ಇರಬೇಕಾಗುತ್ತದೆ. ತನಗೊಬ್ಬ ಮೇಲಧಿಕಾರಿಯಿದ್ದರೆ ತನ್ನ ಉಪಾಸಕನಿಗೆ ತಾನು ಪೂರ್ಣ ಕಲ್ಯಾಣವನ್ನುಂಟು ಮಾಡಲಾರನು; ಮಾಡುವ ಅಧಿ ಕಾರವೂ ಇರುವುದಿಲ್ಲ. ಇದು ಸಹಜ ಸಿದ್ಧವಾದ ಸ್ವಾನುಭವ ಪ್ರಸಿದ್ಧವಾದ ಮಾತಾಗಿದೆ. ಇನ್ನು ಉಪಾಸಕನ ಯೋಗಾಂಗ-ಭೋಗಾಂಗ-ತ್ಯಾಗಾಂಗ ಗಳಲ್ಲಿರುವ ಅನನುಭವ ಅಜ್ಞಾನ ಅಕ್ರಿಯಾರೂಪ ಅಮಂಗಲ ಕತ್ತಲವನ್ನು ಕಳೆಯಬೇಕಾದರೆ ಮಂಗಲಪ್ರಭೆಯುಳ್ಳ ಮಂಗಲ ಪ್ರಜ್ಞೆಯುಳ್ಳ ಮಂಗಲ ಕ್ರಿಯೆಯುಳ್ಳ ಮೂರುಕಣ್ಣುಗಳು ಇದ್ದಾಗಬೇಕು. ಇವು ಶಿವನಿಗಿವೆ ಆದ್ದರಿಂದ ಶಿವನು ಸಂಪೂರ್ಣ ಶುಭವನ್ನುಂಟು ಮಾಡಲು ಸಮರ್ಥನಾಗಿ ದ್ದಾನೆಂದು ವಿಶೇಷವಾಗಿ ಎಲ್ಲ ಮಂಗಲಗಳಿಗೆ ಆಸ್ಪದನಾಗಿದ್ದಾನೆಂದು ದ್ವಿತೀಯ ಮಂತ್ರವು ಅತ್ಯಂತ ಸೂಕ್ತವಾಗಿ ಸಮರ್ಥಿಸಿದೆ.

ಇನ್ನು ಮೂರನೆಯ ಮಂತ್ರದಲ್ಲಿ ಶಿವಾಕ್ಷರಗಳೆರಡರ ಮುಖ್ಯ ವೃತ್ತಿಯನ್ನು ಪ್ರಕಾಶನಪಡಿಸುತ್ತಾರೆ:

ಶಿ-ವ ಈ ಎರಡಕ್ಕರಗಳು ತಮ್ಮ ಮುಖ್ಯ ವೃತ್ತಿಯಿಂದ ಪರಬ್ರಹ್ಮ ಪ್ರಕಾಶಕಗಳಾಗಿವೆ. ಉಳಿದ ಶಂಭು ಶಂಕರ ಈಶ ಈಶ್ವರಾದಿ ಶಬ್ದಗಳು ಗೌಣವೃತ್ತಿಯಿಂದ ಪ್ರಕಾಶನಗಳಾಗಿವೆ. ವಿಶೇಷಣಗಳಾಗಿವೆ. ಶಿವನಾಮವೆ ವಿಶೇಷ್ಯವಾಗಿದೆ.

'ಶಿವ' ಶಬ್ದದಲ್ಲಿ 'ಶ್-ಇ, ವ್-ಅ' ಎಂಬುದಾಗಿ ನಾಲ್ಕು ವರ್ಣಗಳಿರುವವು. ಅವುಗಳಲ್ಲಿ ಶ್ ಕಾರದಲ್ಲಿ ಈಶ್ವರ, ಶುದ್ಧ ವಿದ್ಯಾತತ್ತ್ವಗಳೂ ಇವುಗಳ ವಾಚಕಗಳಾದ ಶ-ಷ-ಸ-ಹ ಮಂತ್ರಾಕ್ಷರಗಳೂ ಅಡಕವಾಗಿವೆ. ಇ-ಕಾರದಲ್ಲಿ ೩೪ ತತ್ತ್ವಕಾರಣವಾದ ಶಕ್ತಿ ತತ್ತ್ವವು ಅಡಕವಾಗಿದೆ. ಇ ಕಾರವು ಇಚ್ಛಾಶಕ್ತಿ ವಾಚಕವೂ ಆಗಿದೆ. ವ್-ವ್ಯಂಜನಾಕ್ಷರದಲ್ಲಿ ಪೃಥ್ವಿ ಮೊದಲ್ಗೊಂಡು ಮಾಯಾಂತ್ಯವಾದ ೩೧ ತತ್ತ್ವಗಳು, ಇವುಗಳ ವಾಚಕಗಳಾದ ಕಕಾರಾದಿ ವಕಾರಾಂತ್ಯ ಅಕ್ಷರಗಳೂ ಅಡಕವಾಗಿವೆ. ಇನ್ನು ಅ-ಸ್ವರದಲ್ಲಿ ಅನುಗ್ರಹ ಶಕ್ತಿಯುಳ್ಳ ಷೋಡಶಕಲಾ ಪ್ರಪೂರ್ಣವಾದ ಸದಾಶಿವ ತತ್ತ್ವವೂ ಷೋಡಶಕಲಾ ವಾಚಕಗಳಾದ ಷೋಡಶ ಸ್ವರಾಕ್ಷರಗಳೂ ಅಡಕವಾಗಿವೆ. ಹೀಗೆ ಎಲ್ಲ ತತ್ತ್ವಗಳನ್ನು, ಮಂತ್ರಾಕ್ಷರ ರೂಪದಲ್ಲಿ ಎಲ್ಲ ವಿದ್ಯೆಗಳನ್ನು ಒಳಗೊಂಡ 'ಶಿವ' ಶಬ್ದವು ಪರಬ್ರಹ್ಮ ಪ್ರಕಾಶಕವಾಗಿದೆ. 'ಶೇತೇ ಅಸ್ಮಿನ್ ಸರ್ವಮಿತಿ ಶಿವಃ' ಎಂಬೀರೂಪ ನಿರೂಪಣವು ಶಿವ ಶಬ್ದದ ಮುಖ್ಯ ವೃತ್ತಿ ಸೂಚಕವಾಗಿ ಪರತ್ವ ಪ್ರಕಾಶಕವಾಗಿದೆ.

'ಚೈತನ್ಯಂ ದೃಕ್ಕ್ರಿಯಾರೂಪಂ ಶಿವಸ್ಯ ಪರಮಸ್ಯ ಯತ್ |
ಸ್ವಾತಂತ್ರ್ಯಮೇತದೇವಾತ್ಮಾ ತತೋಽಸೌ ಪರಮಶ್ಶಿವಃ ||'

ಈ ಎಲ್ಲ ಕಾರಣಗಳಿಂದ ಶಿವ ಶಬ್ದಕ್ಕೆ ಪರಬ್ರಹ್ಮರೂಪ ಅರ್ಥ ಸಂಬಂಧವು ಸಾಕ್ಷಾತ್ಸಂಬಂಧವುಳ್ಳುದಾಗಿದೆ. ಶಿವ ಪದಕ್ಕೆ ಪರಬ್ರಹ್ಮ ಚೈತನ್ಯವೇ ವಾಚ್ಯಾರ್ಥವಾಗಿದೆ; ಅಭೇದ ಸೂಚಿಯಾಗಿದೆ.

'ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ
ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್ |'

ಶ್ರೀ ರೇಣುಕ ಮಹಾಚಾರ್ಯರು ಇದೇ ಕೃತಿಯ ಪ್ರಥಮ ಪರಿಚ್ಛೇದದ ಶಿವಸ್ತುತಿಯಲ್ಲಿ ಹೀಗೆ ಹೇಳಿದ್ದಾರಲ್ಲದೆ,

'ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ |'

ಪ್ರಪ್ರಥಮ ಮಂಗಳ ಶ್ಲೋಕದಲ್ಲಿ ಶಿವನೇ ಪರಬ್ರಹ್ಮನೆಂದು ಪ್ರತಿಪಾದಿಸಿದ್ದಾರೆ. ಮತ್ತು ಶಿವವಸ್ತು ವ್ಯಾಪ್ತಿಯನ್ನು ಸ್ವರೂಪಲಕ್ಷಣವನ್ನು ಚಿತ್ರಿಸಿದ್ದಾರೆ. 'ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ ; ಸಕಲ ವಿಸ್ತಾರದ ರೂಹು ನೀನೇ ದೇವಾ ; ವಿಶ್ವತಃ ಚಕ್ಷು ನೀನೇ ದೇವಾ ; ವಿಶ್ವತೋಮುಖ ನೀನೇ ದೇವಾ ; ವಿಶ್ವತೋ ಬಾಹು ನೀನೇ ದೇವಾ ; ವಿಶ್ವತಃ ಪಾದ ನೀನೇ ದೇವಾ ಕೂಡಲ ಸಂಗಮ ದೇವಾ.' ಎಂಬುದಾಗಿ ಬಸವಣ್ಣನವರು ಹಾಡಿ 'ಶೇತೇ ಅಸ್ಮಿನ್ ಸರ್ವಂ ಶಿವಃ' ಎಂಬುದನ್ನು ಸಿದ್ಧಗೊಳಿಸಿದ್ದಾರೆ.

ನಾಲ್ಕನೆಯದರಲ್ಲಿ ಬೆಳಗಿನ ಬೆಳಗು ಮಹಾಬೆಳಗಾದ ಸಚ್ಚಿದಾನಂದ ಸ್ವರೂಪನಾದ ಶಂಭುವಿಗೆ ಶಿವ ಪದವೇ ಮುಖ್ಯತರವಾಗಿದೆಯೆಂದು ಮೇಲಿನ ಮೂರು ಶ್ಲೋಕಗಳಲ್ಲಿ ತೋರಿದ ಕಾರಣಗಳಿಂದ ನಿಶ್ಚಿತಗೊಳಿಸಿದ್ದಾನೆ. ಈ ಶ್ಲೋಕದಲ್ಲಿ ಮುಖ್ಯವಾಗಿ ಗಮನಿಸತಕ್ಕ ಪದವೆಂದರೆ 'ಅಮಿತ ತೇಜಸಃ' ಎಂಬುದು.

'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ |
ತಮೇವಭಾಂತಮನುಭಾತಿ ಸರ್ವಂ
ತಸ್ಯಭಾಸಾ ಸರ್ವಮಿದಂ ವಿಭಾತಿ ||
—ಶ್ವೇತಾಶ್ವತರ

ಹೀಗಿರುವಾಗ ಅದು ಅಮಿತ ತೇಜವಲ್ಲವೆ? ಅನುಪಮಿತ ತೇಜವಲ್ಲವೆ?

ಈ ಬಗೆಯಾದ ಶಿವನಾಮಾವಲಂಬನದಿಂದ ಮಂತ್ರವು ಪಂಚಾಕ್ಷರವೆಂದು ಪ್ರಸಿದ್ಧವಾಗಿದೆ ; ಸ್ಮೃತವಾಗಿದೆ. ಸ್ಮೃತವಾದುದರಿಂದಲೇ

ಜಪಕ್ಕೆ ಯೋಗ್ಯವಾಗಿದೆ. ಕಾರಣ ಮೋಕ್ಷಕಾಂಕ್ಷಿಗಳು ಸದಾ ಆದರದಿಂದ ಜಪಿಸಬೇಕು ಪಂಚಾಕ್ಷರವನ್ನು !

ಮಹತ್ತಿಗೆ ಮಹತ್ತಾದ ಆ ಪರಶಿವತೇಜವು ಅಣುವಿಗೆ ಅಣುವಾಗಿಯೂ ಇರಬಲ್ಲುದು ; ಇರುತ್ತದೆ. ಆ ಮಹತ್ತೇಜವನ್ನು ಸಾಮಾನ್ಯವೆಂದು ಸಮಷ್ಟಿಯೆಂದು ಹೇಳಿದರೆ ಅಣುತೇಜವನ್ನು ವಿಶೇಷವೆಂದು ವ್ಯಷ್ಟಿಯೆಂದು ಹೇಳುತ್ತೇವೆ. ಜಗದಗಲ ಮುಗಿಲಗಲ ಮಿಗೆಯಗಲವಾಗಿ ಬೆಳಗುವುದೇ ಸಾಮಾನ್ಯತೇಜ. ಆಸ್ಮಿ ಪ್ರಕಾಶೇ ನಂದಾಮಿ ಎಂಬ ವಿಮರ್ಶಾಶಕ್ತಿಯುಕ್ತ ವಾದ ಆ ಅಮಿತ ತೇಜಸ್ಸು ಸಮಸ್ತ ದೇಶ ಕಾಲಾದಿಗಳಲ್ಲಿ ಅನುಸ್ಯೂತ ವಾಗಿದೆ ಸಾಮಾನ್ಯ ಸ್ವರೂಪದಲ್ಲಿ ! ಅದೇ ಶಿವನಾಮ ಸಂಬಂಧದಿಂದ ಪಂಚಾಕ್ಷರಿಯಲ್ಲಿ ವಿಶೇಷವಾಗಿ ನೆಲಸಿ ಅದನ್ನು ಮಂತ್ರವನ್ನಾಗಿಸಿದೆ. ಮೋಕ್ಷಾಪೇಕ್ಷಿಗಳಿಗೆ ಉಪಾಸ್ಯವನ್ನಾಗಿಸಿದೆ ; ಉಪಾದೇಯವನ್ನಾಗಿಸಿದೆ.

“ಯಥಾsನಾದಿರ್ಮಹಾದೇವಃ ಸಿದ್ಧಃ ಸಂಸಾರ ಮೋಚಕಃ
ತಥಾ ಪಂಚಾಕ್ಷರೋ ಮಂತ್ರಃ ಸಂಸಾರಕ್ಷಯಕಾರಕಃ ।”

ಕಾಲಕ್ಕೆ ಒಳಗಾಗದ ಆ ಮಹಾದೇವನು ಹೇಗೆ ಸಂಸಾರ **ಮೋಚಕ** ನೆಂದು ಸಿದ್ಧವಾಗಿರುವನೋ ಹಾಗೆ ಪಂಚಾಕ್ಷರ ಮಂತ್ರವು ಸಂಸಾರ ಸಂಹಾರ ಕವಾಗಿದೆ.

ಅನಾದಿ ಎಂಬ ನಿಷೇಧ ವಿಶೇಷಣವು ಮಹಾದೇವತ್ವಕ್ಕೆ ಪೋಷಕ ವಾಗಿದೆಯಲ್ಲದೆ ಸಂಸಾರಮೋಚಕತ್ವ ಧರ್ಮ ಸೂಚಕಕ್ಕೆ ಸಾಕ್ಷಿಯೂ ಆಗಿದೆ. ಆದಿರೂಪ ಕಾಲವೂ ಬಂದು ಸಂಸಾರ. ಆ ಸಮಯರೂಪಿ ಸಂಸಾರಕ್ಕೂ ಒಳಗಾಗದವನಾದ್ದರಿಂದ ಮಹಾದೇವನೆನಿಸಿದಾನೆ. ಕಾಲ ಜನಕನೇ ಅವನಾದ ಕಾರಣ ಕಾಲಮಲ ಸೋಂಕು ಅವನಿಗಿಲ್ಲ. ಅವನಿಗೆ ಬೇರೆ ಜನಕವಿಲ್ಲವಾಗಿ ಆತ ಅನಾದಿ, ಅಸಂಸಾರಿ, ಸಿದ್ಧ ಪದ ಪ್ರಯೋಗ ದಿಂದ ಉಳಿದ ವಿಷ್ಣ್ವಾದಿಗಳಲ್ಲಿ ಸಂಸಾರಮೋಚಕತ್ವವು ಅಸಿದ್ಧವೆಂದು ದ್ಯೋತಕವಾಗುತ್ತದೆ. ಏಕೆಂದರೆ ಅವರೆಲ್ಲ ಜನ್ಯರಾಗಿದ್ದಾರೆ. ಜನಿ ಸಂಸಾ ರಕ್ಕೆ ಸಿಕ್ಕಿಕೊಂಡಿದ್ದಾರೆ.

‘ಅಮೃತವತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ ;
ಸತ್ಯ ಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ ;

ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು ;
ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ.
ಇವರೆಲ್ಲರೂ ಯೋನಿಜರೆಂಬುದ ತ್ರೈಜಗ ಬಲ್ಲುದು.
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲ ಸಂಗಮ ದೇವಂಗೆ
ಮಾತಾಪಿತರುಳ್ಳರೆ ಹೇಳಿರೋ !
'ಅಜಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣನಿಗೆ ಒಂದು ದಿನ ವಾಯಿತ್ತು.
ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು.
ರುದ್ರಾವತಾರ ಹಲವಳಿದಲ್ಲಿ ನಮ್ಮ ಕೂಡಲ ಸಂಗಮ ದೇವನೇನೆಂದೂ ಅರಿಯನು.'
'ಯುಗ ಜುಗ ಪ್ರಳಯುವಹೆಂದೂ ಕಾಣೆನಿಂದೂ ಕಾಣೆ !
ಧಿಗಿಲು ಭುಗಿಲೆಂದುರಿವಂದೂ ಕಾಣೆನಿಂದೂ ಕಾಣೆ !
ಕೂಡಲ ಸಂಗಮದೇವನಲ್ಲದೆ ತಲೆದೋಘ ದೈವಂಗಳನಂದೂ
ಕಾಣೆನಿಂದೂಕಾಣೆ!'
'ವಿಷ್ಣುಕರ್ಮಿ, ರುದ್ರನಿಷ್ಕರ್ಮಿ ; ಕ್ರಮವನರಿಯದೆ ನುಡಿವಿರೋ !
ವೇದ ಶ್ರುತಿಗಳ ತಿಳಿಯಲರಿಯದೆ ವಾದವ ಮಾಡುವರೆಲ್ಲಾ ಕೇಳಿ :
ವಿಷ್ಣು ನಾನಾ ಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತಿಪ್ಪ ;
ರುದ್ರನಾವ ಯೋನಿಯಲ್ಲಿ ಬಂದನೆಂಬುದ ನೀವು ಹೇಳಿರೋ !
'ಓಂ ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿಪಸ್ಪಸೇ
ಇಂದ್ರಸ್ಯ ಯುಜ್ಯಃ ಸಖಾ' 'ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್
ಗೋಪಾ ಅದಾಭ್ಯಃ ಅತೋ ಧರ್ಮಾಣಿ ಧಾರಯನ್''
'ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ'
'ವಿಷ್ಣೋರ್ಯತ್ ಪರಮಂ ಪದಮ್'' ಎಂಬ ಶ್ರುತಿಯ
ವಚನವ ತಿಳಿಯಿಂಭೋ, ಮರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ ;
ನಿಮ್ಮ ಕರ್ಮವು ಅತ್ಯತಿಷ್ಠದಾ ದಶಾಂಗುಲದಿಂದತ್ತತ್ತಲೆ ಕೂಡಲ ಸಂಗಮ ದೇವಾ !
ಕಾಲ ಕರ್ಮಗಳಿಗೆ ಜನನ ಮರಣಗಳಿಗೆ ಒಳಗಾಗುವುದೇ ಸಂಸಾರ.

ಇವಕ್ಕೆಲ್ಲ ಒಳಗಾಗಿದಾರೆ ಉಳಿದೆಲ್ಲ ದೇವತೆಗಳು. ಆ ಮಹಾದೇವನನು ಮಾತ್ರ ಒಳಗಾಗಿಲ್ಲ. ಆತ ಅನಾದಿ; ನಿಷ್ಕರ್ಮಿ, ಅಜ, ಅನಂತ, ಅದ್ವಯ ನಿರವಯ. ಅದರಿಂದ ಆತ ಸಂಸಾರಮೋಚಕ; ಆತನಂತೆ ಆತನ ಪಂಚಾಕ್ಷರ ಮಂತ್ರವೂ ಸಂಸಾರನಾಶಕ.

'ಸರ್ವಮನ್ಯತ್ಪರಿತ್ಯಜ್ಯ ಹ್ಯೇಯಾನ್ವಿಷ್ಣ್ವಾದಿಕಾನ್ ಸುರಾನ್ |
ಶಿವ ಏವ ಸದಾ ಧ್ಯೇಯಃ ಸರ್ವಸಂಸಾರ ನಾಶಕಃ |'

—ಪೈಪ್ಪಲಾದಶ್ರುತಿ

ಸಂಸಾರ ಒಂದಲ್ಲ, ಎರಡಲ್ಲ; ಹಲವು. ಕಾಲ, ಕರ್ಮ, ಮಾಯೆ, ಜನನ ಸ್ಥಿತಿ ಮರಣ ಇವೆಲ್ಲವೂ ಸಂಸಾರಗಳು. ಆಸೆ, ಅಸತ್ಯಾದಿಗಳೂ ಸಂಸಾರಗಳು. ಇವಾವೂ ಇಲ್ಲದಾತ ಆ ಶಿವನೊಬ್ಬ.

ಈ ಪೈಪ್ಪಲಾದ ಶ್ರುತಿಯಲ್ಲಿ ಉಪಯೋಗಿಸಿದ ಶಿವ ಪದವು ಪರಶಿವನನ್ನೂ ಪರಮ ಪಂಚಾಕ್ಷರ ಮಂತ್ರವನ್ನೂ ನಿರ್ದೇಶಿಸುತ್ತದೆ. ಶಿವನೇ ಮಂತ್ರ, ಮಂತ್ರವೇ ಶಿವನಾದ ಕಾರಣ ಭೇದವಿಲ್ಲ. ಭೇದ ಸೂಚಕ ಯಥಾ ಪದವನ್ನು ನಿರ್ದೇಶಿಸಿರುವುದು ಶಿಷ್ಯಬೋಧಕ್ಕಾಗಿ ಮಾತ್ರ! ವಾಸ್ತವವಾಗಿ ಮಂತ್ರಕ್ಕೂ ಮಹಾದೇವನಿಗೂ ಭೇದವಿಲ್ಲವಾಗಿ ಸಂಸಾರಮೋಚಕ ಧರ್ಮದಲ್ಲಿಯೂ ಭೇದವಿಲ್ಲ.

ಸುವರ್ಣ ಅದರಿಂದಾದ ಆಭರಣ ಇವು ಒಂದಾಗಿದ್ದರೂ ಭೇದ ಪ್ರತೀತಿಯಾಗುತ್ತದೆ. ವಿಚಾರಿಸಿದರೆ ಆಭರಣವು ಸುವರ್ಣಕ್ಕೆ ಭಿನ್ನವಲ್ಲ. ಇದರಂತೆ ಪರಶಿವನಿಗೂ ಪಂಚಾಕ್ಷರ ಮಂತ್ರಕ್ಕೂ ವಾಚ್ಯ ವಾಚಕ ಭೇದ ಪ್ರತೀತಿಯಾಗುತ್ತದೆಯಾದರೂ ವಾಸ್ತವವಲ್ಲ. ಪರಶಿವನಿಗೂ ಪ್ರಪಂಚಕ್ಕೂ ಕಾರಣ ಕಾರ್ಯರೂಪ ಪ್ರತೀತಿಯಾದರೂ ಸ್ವರ್ಣಕುಂಡಲ ನ್ಯಾಯದಿಂದ ಅಹಿಕುಂಡಲನ್ಯಾಯದಿಂದ ಹೇಗೆ ಭೇದಭ್ರಮೆ ಮಿಥ್ಯಭ್ರಮೆಗಳು ತೊಲಗುತ್ತವೆಯೋ ಹಾಗೆ ಶಿವ ಪಂಚಾಕ್ಷರಗಳಿಗೆ ತೋರುವ ಭೇದಪ್ರತೀತಿ ತೊಲಗುತ್ತದೆ. ಪರಮಾತ್ಮನಿಲ್ಲದೆ ಪಂಚಾಕ್ಷರವಿಲ್ಲ. ಪಂಚಾಕ್ಷರ ಮಂತ್ರರೂಪ ಗಾರುಡವಿಲ್ಲದೆ ಸಂಸಾರ ಸರ್ಪದ ವಿಷವಳಿಯದು. ಸಂಸಾರನಾಶವೆಂದರೆ ಸಂಸಾರಜನ್ಯ ವಿಷನಾಶ. ಸಂಸಾರವೂ ವ್ಯಾವಹಾರಿಕ ಸತ್ಯವಾದುದರಿಂದ ಸಂಸಾರನಾಶವೆಂದು ಅರ್ಥವಿಸಬಾರದು. ಈ ಅಭಿಪ್ರಾಯಕ್ಕೆ ಪೋಷಕ

ವಾಗಿದೆ ಸಂಸಾರಮೋಚಕ ಎಂಬ ಪ್ರಥಮ ಪಂಕ್ತಿಯಲ್ಲಿ ಪ್ರಯೋಗಿಸಿದ ಪ್ರಥಮ ಪದ.

'ಸಂಸಾರವೆಂಬ ಸರ್ಪ ಮುಟ್ಟಲು ಪಂಚೇಂದ್ರಿಯ
ವಿಷಯವೆಂಬ ವಿಷದಿಂದ್ಧೆ ಆನು ಮುಂದುಗೆಟ್ಟೆನಯ್ಯಾ ;
ಆನು ಹೊರಳಿ ಬೀಳುತ್ತಿರ್ದೆನಯ್ಯಾ. 'ಓಂ ನಮಶ್ಶಿವಾಯ'
ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ, ಕೂಡಲ ಸಂಗಮ ದೇವಾ।'

ಸಂಸಾರದಲ್ಲಿದ್ದರೂ ಅದರಲ್ಲಿ ಮುಳುಗದಂತೆ ಮಾಡುತ್ತದೆ ಪಂಚಾಕ್ಷರ ಮಂತ್ರ. ಸಂಸಾರ ಸರ್ಪ ಮುಟ್ಟದಂತೆ ಮಾಡುತ್ತದೆ ಮಂತ್ರ. ಪಂಚೇಂದ್ರಿಯಗಳ ವಿಷಯಗಳಾದ ಗಂಧರಸ ರೂಪು ಸಶ್ದಗಳ ವಿಷವನ್ನು ಅಂದರೆ ಪದಾರ್ಥತ್ವವನ್ನು ಪರಿಹರಿಸಿ ಪ್ರಸಾದತ್ವವನ್ನು ಪ್ರಸಾದಿಸುತ್ತದೆ ಪಂಚಾಕ್ಷರ ಮಂತ್ರ. ಮರಳಿ ಭವಕ್ಕೆ ಬಾರದಂತೆ ಮಾಡುತ್ತದೆ ಮಂತ್ರಜಪ. ಮುಂದುಗೆಡದಂತೆ ಮುಂದರಿವನಿತ್ತು ಮುಂಬರಿವಂತೆ ಮಾಡುತ್ತದೆ ಮಂತ್ರಮನನ.

'ಪಂಚಾಕ್ಷರಾತ್ಪರಂ ನಾಸ್ತಿ ಪರಿತ್ರಾಣಂ ಕಲೌಯುಗೇ ।
ಆಶ್ರಯೇತ್ಪರಮಾಂ ವಿದ್ಯಾಂ ಹೃದ್ಯಾಂ ಪಂಚಾಕ್ಷರೀಂ ಬುಧಃ ।

—ಚಂದ್ರಜ್ಞಾನಾಗಮ

"ಪಂಚಭೂತಾನಿ ಸರ್ವಾಣಿ ಪಂಚತನ್ಮಾತ್ರಕಾನಿ ಚ
ಜ್ಞಾನೇಂದ್ರಿಯಾಣಿ ಪಂಚಾಪಿ ಪಂಚಕರ್ಮೇಂದ್ರಿಯಾಣಿ ಚ ।
ಪಂಚ ಬ್ರಹ್ಮಾಣಿ ಪಂಚಾಪಿ ಕೃತ್ಯಾನಿ ಸಹಕಾರಿಣ್ಯೈಃ
ಬೋಧ್ಯಾನಿ ಪಂಚಭಿರ್ವರ್ಣೈಃ ಪಂಚಾಕ್ಷರ ಮಹಾಮನೋಃ ।
ಪಂಚಧಾ ಪಂಚಧಾ ಯಾನಿ ಪ್ರಸಿದ್ಧಾನಿ ವಿಶೇಷತಃ
ತಾನಿ ಸರ್ವಾಣಿ ವಸ್ತೂನಿ ಪಂಚಾಕ್ಷರಮಯಾನಿ ಹಿ ॥"

ಪರಮ ಪಂಚಾಕ್ಷರ ಮಂತ್ರದಲ್ಲಿರುವ ನಕಾರದಿಂದ ಪೃಥ್ವಿಭೂತ, ಗಂಧ ತನ್ಮಾತ್ರ, ಘ್ರಾಣ ಜ್ಞಾನೇಂದ್ರಿಯ, ಗುದಕರ್ಮೇಂದ್ರಿಯ, ಸದ್ಯೋಜಾತ ಬ್ರಹ್ಮ, ಅಥವಾ ಚತುರ್ಮುಖ ಬ್ರಹ್ಮ, ಸೃಷ್ಟಿಕೃತ್ಯಗಳು ಬೋಧ್ಯವಾಗುತ್ತವೆ. ಮಕಾರದಿಂದ ಅಪ್ಪು ಭೂತ, ರಸತನ್ಮಾತ್ರ, ಜಿಹ್ವಜ್ಞಾನೇಂ

ದ್ರಿಯ, ಗುಹ್ಯಕರ್ಮೇಂದ್ರಿಯ, ವಾಮದೇವ ಬ್ರಹ್ಮ ಮತ್ತು ವಿಷ್ಣು, ಸ್ಥಿತಿ ಕೃತ್ಯಗಳು ಬೋಧಿಸಲ್ಪಡುತ್ತವೆ.

ಶಿಕಾರಾಕ್ಷರದಲ್ಲಿ ಜ್ಯೋತಿಭೂತ, ರೂಪತನ್ಮಾತ್ರ, ನೇತ್ರಜ್ಞಾನೇಂದ್ರಿಯ, ಪಾದಕರ್ಮೇಂದ್ರಿಯ, ಅಘೋರ ಬ್ರಹ್ಮ ಮತ್ತು ರುದ್ರದೇವ ಸಂಹಾರಕೃತ್ಯಗಳು ನೆಲಸಿರುತ್ತವೆ.

ವಾಕಾರವರ್ಣದಲ್ಲಿ ವಾಯುಭೂತ, ಸ್ಪರ್ಶತನ್ಮಾತ್ರ, ತ್ವಕ್ ಜ್ಞಾನೇಂದ್ರಿಯ, ಹಸ್ತ ಕರ್ಮೇಂದ್ರಿಯ, ತತ್ಪುರುಷಬ್ರಹ್ಮ ಮತ್ತು ಈಶ್ವರ, ತಿರೋಧಾನಕೃತ್ಯಗಳು ನೆಲಸಿರುತ್ತವೆ.

ಯಾಕಾರಕ್ಷರದಲ್ಲಿ ಆಕಾಶಭೂತ, ಶಬ್ದತನ್ಮಾತ್ರ, ಶ್ರೋತ್ರ ಜ್ಞಾನೇಂದ್ರಿಯ, ವಾಕ್ ಕರ್ಮೇಂದ್ರಿಯ, ಈಶಾನಬ್ರಹ್ಮ ಮತ್ತು ಸದಾಶಿವ, ಅನುಗ್ರಹಕೃತ್ಯಗಳು ನೆಲಸಿರುತ್ತವೆ. ಅಂದರೆ ಶಿವಶಕ್ತಿ ಸ್ವರೂಪವಾದ ಪಂಚಾಕ್ಷರಗಳ ಕಾರ್ಯಗಳಾಗಿರುತ್ತವೆ. ಇವೇ ಅಲ್ಲದೆ ವಿಶ್ವದಲ್ಲಿ ವಿಶೇಷವಾಗಿ ವಿಖ್ಯಾತಗಳಾದ ಅಯ್ದು ಅಯ್ದು ಎಂದು ಹೇಳಿಸಿಕೊಳ್ಳುವವುಗಳು ಯಾವು ಯಾವು ಉಂಟೋ ಅವೆಲ್ಲವೂ ಪಂಚಾಕ್ಷರಮಯವಸ್ತುಗಳಾಗಿವೆ. ನಿದರ್ಶನಕ್ಕಾಗಿ ಕರ್ಮ, ಕರ್ತೃ, ಮೂರ್ತ, ಅಮೂರ್ತ, ಶಿವಸಾದಾಖ್ಯಗಳು; ಪೀತ, ಹರಿತ, ಮಾಂಜಿಷ್ಟ, ಶ್ವೇತ, ನೀಲ ವರ್ಣಗಳು; ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳು; ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವಾಯುಗಳು; ಭಕ್ಷ್ಯ, ಭೋಜ್ಯ, ಚೋಹ್ಯ, ಪಂಚಭಕ್ಷ್ಯ, ಲೇಹ್ಯ, ಪೇಯಗಳು; ಕ್ರಿಯಾಯಜ್ಞ, ಜ್ಞಾನಯಜ್ಞ, ಮಹಾಜ್ಞಾನಯಜ್ಞ, ಭಕ್ತಿಯಜ್ಞ, ಯೋಗಯಜ್ಞ, ಎಂಬೀ ಪಂಚಯಜ್ಞಗಳು, ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ—ಎಂಬೀ ಪಂಚವ್ರತಗಳು; ತಿಥಿ, ವಾರ, ನಕ್ಷತ್ರ, ಯೋಗ, ಕರಣ—ಎಂಬೀ ಪಂಚಾಂಗಗಳು; ಗಂಧ, ಜಲ, ದೀಪ, ಚಾಮರ, ಗಂಟಾನಾದ ಎಂಬೀ ಪಂಚೋಪಚಾರಗಳು ಇವೆ ಮುಂತಾದವುಗಳು ಪಂಚಾಕ್ಷರ ಕಾರ್ಯಗಳಾಗಿವೆ.

ಷಡಕ್ಷರ ಸಂಪಾದನೆ:

"ಓಂಕಾರ ಪೂರ್ವೋಮಂತ್ರೋಽಯಂ ಪಂಚಾಕ್ಷರಮಯಃ ಪರಃ
ಶೈವಾಗಮೇಷು ವೇದೇಷು ಷಡಕ್ಷರ ಇತಿ ಸ್ಮೃತಃ ।

ಪೂರ್ವದಲ್ಲಿ ಪ್ರಣವವುಳ್ಳ ಪಂಚಾಕ್ಷರ ಪ್ರಾಚುರ್ಯವುಳ್ಳ ಈ ಮಂತ್ರವು ಮಹತ್ತರವಾದುದು. ಇದನ್ನು ಶಿವಾಗಮಗಳು ವೇದಗಳು ಷಡಕ್ಷರವೆಂದು ಹೇಳುತ್ತವೆ. ಅಂದರೆ 'ಓಂ ನಮಶ್ಶಿವಾಯ' ಎಂಬುದೇ ಷಡಕ್ಷರಮಂತ್ರ. ಇದು ನಿಗಮಾಗಮ ಪ್ರಸಿದ್ಧವಾಗಿದೆ. ಮೂಲಬೀಜವಾದ ಓಂಕಾರದ ಅರ್ಥವೆಲ್ಲವೂ ಪರಪಂಚಾಕ್ಷರ ಮಂತ್ರದಲ್ಲಿರುವುದರಿಂದ ಷಡಕ್ಷರ ವನ್ನು ಶಿವಪಂಚಾಕ್ಷರವೆಂತಲೂ ಹೇಳುತ್ತಾರೆ. ಮೂಲ ಪಂಚಾಕ್ಷರವೆಂದು ಷಡಕ್ಷರಕ್ಕೆ ಮತ್ತೊಂದು ಹೆಸರು.

'ಮಂತ್ರಗಳಲ್ಲಿ ಮೂಲಪಂಚಾಕ್ಷರವೆಂಬುದೊಂದೇ ಮುಖ್ಯವಾಗಿ ವಿದ್ಯೆಯೆಂದು, ಶಿವವೆಂದು, ಶೈವವೆಂದು, ಶಿವಹೃದಯವೆಂದು, ಸೂತ್ರ ವೆಂದು—ಪರ್ಯಾಯ ನಾಮಂಗಳುಳ್ಳದ್ದಾಗಿ ವೇದಾಗಮ ಪುರಾಣಗಳೊಳ್ ಪ್ರಸಿದ್ಧಮೆನಿಸಿ, ಸೂಕ್ಷ್ಮಮಂತ್ರವಾದರೂ ವಟ ಬೀಜದಂತೆ ಮಹಾರ್ಥ ವುಳ್ಳದ್ದಾಗಿ, ಸಕಲ ಶಿವಭಕ್ತರ್ಗೆ ತಾನೇ ಜಪಿಸಲು ಯೋಗ್ಯಮೆನಿಸಿ, ಪ್ರಣವಪೂರ್ವಕಮಾದ ಭೂತಾದಿ ಪಂಚಸರ್ಗಾತ್ಮಕಮಪ್ಪ ನಕಾರಾದಿ ಯಕಾರಾಂತಮಾದ ಆರಕ್ಷರಂಗಳುಳ್ಳದ್ದಾಗಿ, ನಿಷ್ಪ್ರಯಾಸದಿಂ ಭುಕ್ತಿ ಮುಕ್ತಿ ಪ್ರದವಾಗಿಹುದಾ ಪಂಚಾಕ್ಷರಮಂ ಮೊದಲು ಶ್ರೀಗುರುಮುಖದಿಂದ ಅರ್ಥ ಸಮೇತವಾಗಿ ತಿಳಿದು, ಯಥಾಶಕ್ತಿ ಗುರುದಕ್ಷಿಣೆಯಂ ಕೊಟ್ಟು, ಬಳಿಕ ಆ ಶ್ರೀಗುರುವಿನಾಜ್ಞೆಯಿಂದಾ ಮಂತ್ರಸಿಧ್ಯರ್ಥಮಾಗಿ............ದಿನವೊಂದಕ್ಕೆ ನೂರೆಂಟನಾದರೂ, ಇನ್ನೂರೈವತ್ತಾದರೂ ಮುನ್ನೂರನ್ನಾದರೂ ಐನೂ ರನ್ನಾದರೂ, ಹನ್ನೆರಡು ಸಾವಿರವಾದರೂ ಸಂಖ್ಯಾನಿಯಮಪೂರ್ವಕಮಾಗಿ ನಿತ್ಯ ಜಪಂಗೈಯಲ್ತಕ್ಕದು. ಸಂಖ್ಯಾಹೀನಜಪವಂ ರಾಕ್ಷಸರು ಅಪಹರಿಸುವ ರೆಂದು ನಿಜಗುಣರು ವಿವೇಕಚಿಂತಾಮಣಿಯ ಎರಡನೆಯ ಪ್ರಕರಣದಲ್ಲಿ ಪ್ರಣವವಿವೇಕಿಸಲಕ್ಕುಂ, ಎಂದು ಪಂಚಾಕ್ಷರವನ್ನು ಪ್ರತಿಪಾದಿಸಿದ್ದಾರೆ.

ಆಗಮಗಳಲ್ಲಿ ವೇದಗಳಲ್ಲಿ ಷಡಕ್ಷರವು ಪ್ರಸಿದ್ಧವಾಗಿದೆಯೆಂಬ ಮಾತಿನ ವಿಚಾರವನ್ನು ಮಾಡಬೇಕು. ಆಗಮವೆಂದರೆ ಮಾನವನ ಮೂಗಿನ ಒಳಗೆ ಬರುವ ಶ್ವಾಸ, ವೇದವೆಂದರೆ ಹೊರಗೆ ಹೋಗುವ ನಿಶ್ವಾಸ. ಶ್ವಾಸಕ್ಕೆ ಆಚಾರವೆಂತಲೂ ನಿಶ್ವಾಸಕ್ಕೆ ವಿಚಾರವೆಂತಲೂ ಹೆಸರು. ಆಚಾರಕ್ಕೆ ಸಂಬಂಧಿ ಸಿದುದೇ ಆಚಾರ. ವಿಚಾರಕ್ಕೆ ಸಂಬಂಧಿಸಿದುದೆ ವಿಚಾರ. ಒಳಬರುವ ಶ್ವಾಸ

ರೂಪ ಆಚರ ಸಂಬಂಧವಾದುದು ಓಂಕಾರ. ಹೊರಹೋಗುವ ನಿಶ್ವಾಸರೂಪ ವಿಚರ ಸಂಬಂಧವಾದುದು ಪಂಚಾಕ್ಷರ. ಓಂಕಾರವು ಆಚಾರರೂಪಾಗಿದೆ. ಪಂಚಾಕ್ಷರವು ವಿಚಾರರೂಪಾಗಿದೆ. ಓಂಕಾರರೂಪಶಿವನಿಂದ ಉತ್ಪತ್ತಿಯಾದ ಆಗಮುಗಳಲ್ಲಿ ಅಂದರೆ ಶಾಬ್ದಿಕ ಶಾಸ್ತ್ರಗಳಲ್ಲಿ ಓಂಕಾರವು ಪ್ರಸಿದ್ಧವಾಗಿದೆ. ಓಂಕಾರದಲ್ಲಿ ಅ, ಉ, ಮ, ನಾದ, ಬಿಂದು, ಕಳಾರೂಪ ಷಡಕ್ಷರಗಳಿರುತ್ತವೆ. ಪಂಚಾಕ್ಷರಸ್ವರೂಪನಾದ ಆ ಪರಶಿವನಿಂದ ಉತ್ಪತ್ತಿಯಾದ ವೇದಗಳಲ್ಲಿ (ಶಬ್ದ ಪ್ರಮಾಣದಲ್ಲಿ)ಪಂಚಾಕ್ಷರವು ಪ್ರಸಿದ್ಧವಾಗಿದೆ. ಸಾಮವೇದದಲ್ಲಿ "ನಮಃ ಶಿವಾಯ'—ಚ, ಶಿವತರಾಯಚ' ಎಂದು ಪ್ರಯುಕ್ತವಾಗಿದೆ.

'ಇಯಂ ಪ್ರಣವ ಪೂರ್ವಾತು ಷಡಕ್ಷರೀತಿ ಕಥ್ಯತೇ |'

—ಚಂದ್ರಜ್ಞಾನಾಗಮ, ಪಟಲ-೮

'ಮಣೀನಾಂ ಕೌಸ್ತುಭೋ ಯದ್ವಲ್ಲೋಹಾನಾಂ ಕಾಂಚನಂ ಯಥಾ
ತಥಾಷಡಕ್ಷರ ಪರೋ ಮಾನುಷೇಷು ವರಃಪ್ರಿಯೇ |
ತಸ್ಮಾತ್ಸರ್ವಕ್ರಿಯಾರಂ ಭಾನ್ ಫಲಾನಿ ಚ ವಿಶೇಷತಃ
ತ್ಯಕ್ತ್ವಾ ಷಡಕ್ಷರಪರೋಭವೇನ್ನಿತ್ಯಂ ವಿಚಕ್ಷಣಃ
ಏತಾವದ್ಧಿ ಶಿವಜ್ಞಾನ ಮೇತಾವತ್ಪರಮಂ ಪದಂ |
ಯಸ್ಸೋಂ ನಮಃಶಿವಾಯೇತಿ ಸದಾವಾಚಿ ಪ್ರವರ್ತತೇ ||'

—ಸೂಕ್ಷ್ಮಾಗಮ, ಪಟಲ-೨

'ಪಂಚಾಕ್ಷರೋ ಮೋಕ್ಷದಃ ಸ್ಯಾತ್ ಅಭಿವೃದ್ಧಿಃ ಷಡಕ್ಷರಃ|'

—ವಾತುಲಶುದ್ಧಾಖ್ಯತಂತ್ರ

'ಪಂಚಾಕ್ಷರಸ್ಯ ಮಾಹಾತ್ಮ್ಯಂ ವರ್ಷಕೋಟಿ ಶತೈರಪಿ
ನ ಶಕ್ಯಂ ವಿಸ್ತರಾದ್ವಕ್ತುಂ ತಸ್ಮಾತ್ಸಂಕ್ಷಿಪ್ತತಃ ಶೃಣು|
ವೇದೇ ಚ ವೇದಶಿರ್ಷೇ ಚಾಪ್ಯುಬಯತ್ರ ಷಡಕ್ಷರಃ
ಮಂತ್ರಃ ಸ್ಥಿತಃ ಸದಾ ಮುಖ್ಯೋ ಲೋಕೇಪಂಚಾಕ್ಷರಃ ಸ್ಮೃತಿಃ |'

—ಪಾರಮೇಶ್ವರ ತಂತ್ರ, ಪಟಲ ೧೧

ಇವು ಮುಂತಾದ ಆಗಮ ಪ್ರಮಾಣಗಳುಂಟು ವೈದಿಕ ಪ್ರಸಿದ್ಧಿಯಂತೆ ವೈಯಕ್ತಿಕ ಉಸಿರಾಟದಲ್ಲಿಯೂ ಷಡಕ್ಷರ ಮಂತ್ರದ ಸ್ಮೃತಿಯುಂಟು. ಶ್ವಾಸವೇ ಓಂಕಾರ. ನಿಶ್ವಾಸವೇ ಪಂಚಾಕ್ಷರ.

"ಮಂತ್ರಸ್ಯಾಸ್ಯಾದಿ ಭೂತೇನ ಪ್ರಣವೇನ ಮಹಾಮುನೋಃ
ಪ್ರಬೋಧ್ಯತೇ ಮಹಾದೇವಃ ಕೇವಲಶ್ಚಿತ್ಸುಖಾತ್ಮಕಃ।
ಪ್ರಣವೇನೈಕವರ್ಣೇನ ಪರಬ್ರಹ್ಮ ಪ್ರಕಾಶ್ಯತೇ
ಅದ್ವಿತೀಯಂ ಪರಾನಂದಂ ಶಿವಾಖ್ಯಂ ನಿಷ್ಪ್ರಪಂಚಕಮ್ ॥"

ನಿಷ್ಕಲವೂ ಮಹಾಜ್ಞಾನ ಶೀಲವೂ ಆತ್ಮಸ್ವರೂಪವೂ ಆದ ಪ್ರಣವವು ಮಹಾಮಂತ್ರವಾದ ಪಂಚಾಕ್ಷರದ ಪ್ರಥಮ ಮನುವಾಗಿದೆ. ಮಹಾಮಂತ್ರದ ಮೂಲವಾದ ಓಂಕಾರದಿಂದ ಕೇವಲನಾದ ಚಿತ್ಸುಖಾತ್ಮಕನಾದ ಮಹಾದೇವನು ಪ್ರಬೋಧಿಸಲ್ಪಡುತ್ತಾನೆ. ಓಂಕಾರ ಒಂದರಿಂದಲೇ ನಿಷ್ಕಲ ಪರಬ್ರಹ್ಮವು ಪ್ರಕಾಶಿತವಾಗುತ್ತದೆ. ಆ ಪರಬ್ರಹ್ಮವು ಪರಾನಂದ, ಶಿವಾಖ್ಯ ವಿಧಿವಿಶೇಷಣಗಳುಳ್ಳದು. ಅದ್ವೈತ, ನಿಷ್ಪ್ರಪಂಚಕ ಎಂಬೀ ನಿಷೇಧ ವಿಶೇಷಣಗಳುಳ್ಳದು.

ಪರಾನಂದ ವಿಶೇಷಣವು ಅಪರಾನಂದಗಳನ್ನು ನಿಷೇಧಿಸುತ್ತದೆ. ವಿಷಯಾನಂದಗಳು ಅಪರಾನಂದಗಳು. ಶಿವಾಖ್ಯಂ ವಿಶೇಷಣವು ಶಿವೇತರ ದೇವತೆಗಳನ್ನು ನಿಷೇಧಿಸುತ್ತದೆ. ಶಿವ – ಓಂಕಾರಗಳಿಗೆ ಅವಿನಾಭವ ಸಂಬಂಧವಿದೆ. 'ಶಿವೋ ಮೇ ಅಸ್ತು ಸದಾ – ಶಿವೋಂ' ಎಂದು ಶ್ರುತಿ ಪ್ರಮಾಣವಿದೆ. ಅದ್ವಿತೀಯಂ, ನಿಷ್ಪ್ರಪಂಚಕಂ ಏಂಬೀ ನಿಷೇಧ ವಿಶೇಷಣಗಳು ಆ ಪರಶಿವನಿಗೆ ಕೇವಲತ್ವವನ್ನು ನಿಷ್ಕಲತ್ವವನ್ನು ವಿಧಿಸುತ್ತವೆ.

'ಆದಿಭೂತೇನ ಪ್ರಣವೇನ' ಆತ್ಮರೂಪಾದ ಪ್ರಣವವು ಸಮಷ್ಟಿ ಸೃಷ್ಟಿಯಲ್ಲಿಯೂ ವ್ಯಷ್ಟಿ ಸೃಷ್ಟಿಯಲ್ಲಿ ಆದಿಭೂತವಾಗಿದೆ. 'ಆತ್ಮನ ಆಕಾಶಃ' ಎಂಬ ಶ್ರುತಿಯು ಸಮಷ್ಟಿ ಸೃಷ್ಟಿ ಉತ್ಪತ್ತಿಗೆ ಆತ್ಮವೇ ಆದಿಯೆಂದು ಹೇಳಿದೆ. ವ್ಯಷ್ಟಿ ಸೃಷ್ಟಿಯಲ್ಲಿಯೂ ಆತ್ಮಾಂಗವಾದ ಪ್ರಣವಾಂಗವಾದ ಯೋಗಾಂಗದಿಂದ ಭೋಗಾಂಗ, ಭೋಗಾಂಗದಿಂದ ತ್ಯಾಗಾಂಗ ಉತ್ಪತ್ತಿಯಾಗುತ್ತದೆ. ಈ ಕ್ರಮದಲ್ಲಿ ಓಂಕಾರದಿಂದ ಸೋಽಹಂ, ಸೋಽಹಂದಿಂದ ಹಂಸ ಮಂತ್ರೋತ್ಪತ್ತಿಯಾಗುತ್ತದೆ. ಸಾಕಾರದಿಂದ ಸಾಮರಸ್ಯಕ್ಕೆ ಸಾಗುವಾಗ ಹಂಸವೆಂಬ ಅಜಪಾಗಾಯತ್ರಿ ಮಂತ್ರದಿಂದ 'ಸೋಽಹಂ' ರೂಪ ಅಂತರಾತ್ಮತ್ವಕ್ಕೇರಿ ಅಲ್ಲಿಂದ ನಿಷ್ಕಲರೂಪ ಓಂಕಾರಾತ್ಮಕ ಪರಮಾತ್ಮ ಸ್ವರೂಪ ಪ್ರಾಪ್ತಿಯಾಗುತ್ತದೆ.

"ಪರಮಾತ್ಮ ಮನುಜ್ಞೇರ್ಯಃ ಸೋಽಹಂ ರೂಪಃ ಸನಾತನಃ
ಜಾಯತೇ ಸುಹಯೋರ್ಲೋಪಾದೋಮಿತ್ಯೇಕಾಕ್ಷರೋ
ಮನುಃ |"

ಮಂತ್ರಸಂಸ್ಕಾರವು ಇಲ್ಲಿ ವಿಧಾಯಕವಾಗಿದೆ. ಅತ್ತಿಂದ ಬರುವಾಗ ಸಂಗಳಿಸುತ್ತ ಬಂದ ಸ್ಥೂಲಾಂಗಗಳನ್ನು (ಹೊರ ಹೊದಿಕೆಗಳನ್ನು) ಇತ್ತಿಂದ ಹೋಗುವಾಗ ಸಂಹರಿಸುತ್ತ ಅಂದರೆ ತನ್ನೊಳಗೆ ಅಡವಳಿಸಿಕೊಳ್ಳುತ್ತ ಹೋಗುತ್ತದೆ.

ಪ್ರತಿಯೊಬ್ಬರ ಶ್ವಾಸೋಚ್ಛ್ವಾಸಗಳಲ್ಲಿ ದಿನವೊಂದಕ್ಕೆ ೨೧೬೦೦ ಸಲ ಸಂಚರಿಸುವ ಆತ್ಮಪ್ರಸಾದವಾದ 'ಹಂಸ' ಮಂತ್ರವಿದೆ. ಹಂಸವೆಂದರೆ ಉಚ್ಛ್ವಾಸ ನಿಶ್ವಾಸಗಳು. ಇದಕ್ಕೆ ಪ್ರಾಣವೆನ್ನುವರು. ಹಂಸದೊಳಗಿನ ಹಕಾರ ಶಿವಬೀಜ. ಸಕಾರ ಶಕ್ತಿಬೀಜ. ಇವೆರಡರ ನಡುವೆ ಇರುವ ಬಿಂದುವೇ ಜೀವ. ಹ—ಶುಕ್ಲವೆಂದು, ಸ—ರಕ್ತವೆಂದು ಇವೆರಡರ ಒಕ್ಕೂಟವೇ ಬಿಂದುವೆಂದು ಹೇಳುತ್ತಾರೆ. ಹಕಾರವೇ ಸೂರ್ಯ (ಪಿಂಗಳ) ನಾಡಿ. ಸಕಾರವೇ ಚಂದ್ರ (ಇಡಾ) ನಾಡಿ. ಹಕಾರವು ಬಲ ಮೂಗಿನಲ್ಲಿ, ಸಕಾರವು ಎಡ ಮೂಗಿನಲ್ಲಿ, ಬಿಂದು ಸುಷುಮ್ನ (ತೇಜೋ) ನಾಡಿಯಲ್ಲಿ ಇರುತ್ತದೆ. ನಾದ ಬಿಂದು ಕಳಾತ್ಮಕವಾಗಿವೆ. ಹಂಸವು ಆಧಾರದಿಂದ ಸಹಸ್ರಾರದವರೆಗೆ ಸಂಚರಿಸುತ್ತದೆ. ಇದು ಪ್ರಕೃತಿಮಯವಾಗಿದ್ದು ಪ್ರಪಂಚ ನಿರ್ವಹಣ-ಪ್ರಪಂಚಜ್ಞಾನಗಳಿಗೆ ಸಾಧನ ವಾಗಿದೆ. ಅದನ್ನು 'ಅಜಪಾ ಗಾಯತ್ರಿ' ಎಂದು ಅನ್ವರ್ಥನಾಮದಿಂದ ಕರೆಯುತ್ತಾರೆ. ಅದು ಜಪಿಸದಲೆ ತಾನೇ ಹಾಡುತ್ತ ಗಮನಾಗಮನ ಗಳನ್ನು ಮಾಡುತ್ತದೆ. ಶಿವಾಜ್ಞೆಯಿಂದ ಪ್ರಾಕೃತ ಪ್ರಾಣಾಯಾಮದಲ್ಲಿ ಸಂಚರಿಸುತ್ತದೆ. ಅದನ್ನು ಸಾಧಕನಾದ ಭಕ್ತನು ಗುರೂಪದೇಶದಿಂದ ವೈಕೃತ ಪ್ರಾಣಾಯಾಮವನ್ನು ಮಾಡಿ 'ಸೋಽಹಂ' ರೂಪಕ್ಕೆ ತರುವನು. ಗುರೂಪದೇಶ, ಸ್ವಾನುಭವಗಳಿಂದ ಮರಳಿ ಸಹಜ ಪ್ರಾಣಾಯಾಮದಿಂದ ಕುಂಭಕದಿಂದ 'ಸ-ಹ'ಕಾರಗಳೆರಡನ್ನು ಸಂಹರಿಸಿ ಓಂಕಾರ ರೂಪ ಏಕಾಕ್ಷರ ಮಂತ್ರವನ್ನಾಗಿಸುವನು.

'ಸೋऽಹಮ್' ಎಂಬುದರ ಸಕಾರವು ಚಂದ್ರಬೀಜ. ಹಕಾರವು ಸೂರ್ಯಬೀಜ. ಇವೆರಡಕ್ಕೂ ವೇದ್ಯ ವೇದನರೂಪತ್ವವಿದೆ. ವೇದ್ಯ-ವೇದನಗಳೆರಡು ವೃತ್ತಿಬೀಜಗಳಾಗಿವೆ. ಪ್ರವೃತ್ತಿಗೋ ನಿವೃತ್ತಿಗೋ ಎಳಿಸಲು ಸಮರ್ಥಗಳಾಗಿವೆ ಆದ್ದರಿಂದ ಆ ಸ್-ಹ್ ವ್ಯಂಜನರೂಪ ಸ್ಥೂಲಾಕ್ಷರಗಳನ್ನು ತೊಲಗಿಸಬೇಕು. ಉಳಿದುದೇ ಓಂ. ಇದು ಇವುಮ್ಮೂರುಗಳನ್ನೊಳಗೊಂಡಿದ್ದರೂ ಒಂದೇ ಎಂದೆನಿಸಿದೆ. ಇದೇ ಲೀಲಾ ವತ್ತು ಕೈವಲ್ಯವೆನಿಸಿದೆ. ಸಕಲ ಮಂತ್ರ ಶ್ರೇಷ್ಠವೆನಿಸಿದೆ. ಪರಮಾತ್ಮ ಪ್ರತಿಪಾದಕ ಮಂತ್ರವಾಗಿದೆ. ಸನಾತನವಾಗಿದೆ. ಇದರಿಂದ ಶಿವಯೋಗ ಸಂಪಾದನವಾಗುತ್ತದೆ ; ಸಾಮರಸ್ಯ ಸಿದ್ಧಿಸುತ್ತದೆ. ಅಕ್ರಿಯೆಯನ್ನು ಕಳೆಯಲು ಹಂಸ ಮಂತ್ರಾನುಷ್ಠಾನ. ಅಜ್ಞಾನವನ್ನು ನೀಗಲು ಸೋऽಹಂ ಮಂತ್ರಾನುಷ್ಠಾನ. ಅನನಭೂತಿಯನ್ನಳಿಯಲು ಶಿವೋಂ ಮಂತ್ರಾನುಷ್ಠಾನ.

'ಅನಂತರದೊಳ್ ಮಂತ್ರಗಳೊಳಗೆ ಆತ್ಮ ಪ್ರಸಾದವೆಂಬುದೇ ಸರ್ವಾತ್ಮರ ಹೃದಯದಲ್ಲಿ ರೇಚಕ ಪೂರಕವೆಂಬ ಪ್ರಾಣಾಪಾನ ರೂಪ ರವಿ ಶಶಿಗಳೊಡಗೂಡಿ ಸಂಚರಿಸಿ, ಹಂಸ :—ಸೋऽಹಂ ಎಂದಿತ್ತೆರನಾಗಿ ಹಂಸ ಜೀವವೆಂದು, ಅಜಪಾ ಗಾಯತ್ರಿಯೆಂದು ಪೆಸರ್ವಡೆದಿಪ್ಪುದು. ಅದನಾದೊಡೆ ಪ್ರಾಣಾಯಾಮತ್ರಯಪೂರ್ವಕಮಾಗಿ, ಮೇಲಾ ಮಂತ್ರಕ್ಕೆ ಹಂಸಋಷಿ, ಅವ್ಯಕ್ತ ಗಾಯತ್ರೀ ಛಂದಸ್ಸು, ಪರಮಹಂಸನೇ ದೇವತೆ, ಹಂಬೀಜಂ, ಸ್ವಾಹಾ ಶಕ್ತಿಃ, ಸೋಹಂ ಕೀಲಕಂ, ಪರಮಹಂಸ ಪ್ರಸಾದ ಸಿದ್ಧ್ಯರ್ಥಮಾದ ಜಪದಲ್ಲಿ ವಿನಿಯೋಗವೆಂದು ಸ್ಮರಿಸಿ, ಬಳಿಕ ಹಂ ಸಾಂ ಸೂರ್ಯಾತ್ಮನೇ ಅಂಗುಷ್ಠಾಭ್ಯಾಂ ನಮಃ। ಹಂ ಸೀಂ ಸೋಮಾತ್ಮನೇ ತರ್ಜನೀಭ್ಯಾಂ ನಮಃ। ಹಂ ಸೂಂ ನಿರಂಜನಾತ್ಮನೇ ಮಧ್ಯಮಾಭ್ಯಾಂ ನಮಃ। ಹಂ ಸೈಂ ನಿರಾಭಾಸಾಯ ಪರಮಾತ್ಮನೇ ಅನಾಮಿಕಾಭ್ಯಾಂ ನಮಃ। ಹಂ ಸೌಂ ಅವ್ಯಕ್ತಾತ್ಮನೇ ಕನಿಷ್ಠಕಾಭ್ಯಾಂ ನಮಃ। ಹಂಸಃ ಅತಿಸೂಕ್ಷ್ಮಾತ್ಮನೇ ಕರತಲ ಕರಪೃಷ್ಠಾಭ್ಯಾಂ ನಮಃ—ಎಂದು ಕರನ್ಯಾಸಮಂ ಮಾಡಿ, ಮೇಲಾ ಕ್ರಮದಿಂದಲೇ ಹೃದಯಾದಿ ಕರಾಂತಮಾದ

ಷಡಂಗಗಳಲ್ಲಿ ಆಯಾಪಲ್ಲವಂ ಕೂಡಿ ಅಂಗನ್ಯಾಸಗೈದು, ಬಳಿಕ ಹೃತ್ಕಮಲ ಕರ್ಣಿಕಾ ಮಧ್ಯದಲ್ಲಿ ಶ್ವೇತವರ್ಣದಿಂ ಪರಶು ಮೃಗ ವರಾಭಯಂಗಳುಳ್ಳ ಕರಚತುಷ್ಟಯದಿಂದೆಸೆದು ಸರ್ವಲಕ್ಷಣ ಸಂಪನ್ನನಾದುಮಾಪತಿಯ ಧ್ಯಾನ ಯುಕ್ತಮಾಗಿ ಶ್ರೀ ಗುರೂಪದೇಶದಿಂದ ಉದಯಸಮಯದಲ್ಲಿ ಜಪಂಗೈವುದಾ ಮಂತ್ರಜಪವೇ ಸೂರ್ಯೋದಯಾದಿ ಸೂರ್ಯಾಂತಮಾದ ದಿನ ಪೊಂದಕ್ಕೆ ಇಪ್ಪತ್ತೊಂದು ಸಾವಿರದಾರುನೂರಾದವುಗಳೊಳಗೆ ಆಧಾರಾದಿ ಬ್ರಹ್ಮರಂಧ್ರಾಂತಮಾದ ಸಪ್ತಚಕ್ರಕಮಲಂಗಳಲ್ಲಿ ಕ್ರಮವಿಡಿದಿರ್ದ ಶ್ರೀ ಗಣಪತಿಗಾರುನೂರು, ಬ್ರಹ್ಮನಿಗಾರುಸಾವಿರ, ವಿಷ್ಣುವಿಗಾರು ಸಾವಿರ, ಮಹೇಶ್ವರಂಗಾರು ಸಾವಿರ, ಜೀವಾತ್ಮಂಗೆ ಸಾವಿರ ಪರಮಾತ್ಮಂಗೆ ಸಾವಿರ, ಶ್ರೀ ಗುರುವಿಗೆ ಸಾವಿರ—ಅಜಪಾ ಗಾಯತ್ರೀ ಮಂತ್ರಮಂ ನಿವೇದಯಾಮಿ-ಎಂದು ಸಂಕಲ್ಪಿಸುವುದು. ಇಂತು ಜಪಂಗೈದಾತಂಗೆ ಸಮಸ್ತ ಪಾಪಂಗಳಂ ಕೆಡಿಸಿ ಆಯುರಾರೋಗ್ಯಾದಿಭೋಗ ಮೋಕ್ಷಂಗಳ ನೀವುದೆಂದು ನಿರ್ಧರಿಸಿರ್ಪರಂ.

ಬಳಿಕ ಆ ಸಕಲ ಮಂತ್ರಂಗಳೊಳಗೆ ಮುಖ್ಯಮಾದ ಪ್ರಣವಮೇ ಪರಪ್ರಣವವೆಂದು, ಅಪರಪ್ರಣವವೆಂದು ದ್ವಿವಿಧಮಾಗಿರ್ಪುದದರಲ್ಲಿ ಪರ ಪ್ರಣವವೇ ವಾಚ್ಯಮಾದ ಸತ್ಯಜ್ಞಾನಾದಿ ಲಕ್ಷಣಮುಳ್ಳ ಪರಬ್ರಹ್ಮಮೆನಿಸಿಹುದು. ಬಳಿಕ ಅಪರ ಪ್ರಣವೇ ವಾಚಕಮಾದ ಶಬ್ದರೂಪಮಾಗಿ, ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರ ಅಧಿದೇವತೆಗಳಾದ ; ರಕ್ತ ಶುಕ್ಲ ಕೃಷ್ಣ ಜ್ಯೋತಿ ಸ್ಫಟಿಕವೆಂಬ ಪಂಚವರ್ಣ ಕ್ರಮವುಳ್ಳ ; ಅಕಾರ, ಉಕಾರ, ಮಕಾರ, ಬಿಂದು, ನಾದವೆಂಬ ಪಂಚಾಕ್ಷರಾತ್ಮಕತ್ವದಿಂ ; ತಾರಕ, ದಂಡಕ, ಕುಂಡಲಾಕಾರ, ದರ್ಪಣಾಕಾರ, ಜ್ಯೋತಿರಾಕಾರವೆಂಬಾರು ರೂಪದಿಂ ಓಂಕಾರವೆಂದು ಬ್ರಹ್ಮವೆಂದು ಜ್ಞಾನವೆಂದು ಶಿವಾತ್ಮಕವೆಂದು ಮುಕ್ತಿಬೀಜವೆಂದು ನಿಷ್ಕಲವೆಂದು ನಾದವೆಂದು ನಾದಾದಿಯೆಂದು ಹೃನ್ನಾದವೆಂದು ವೇದಾದಿಯೆಂದು ವೇದಭೂಮಿಯೆಂದು ಮಂತ್ರಪ್ರಾಣವೆಂದು ಬ್ರಹ್ಮಮೂರ್ತಿಯೆಂದು ಅಕ್ಷರವೆಂದು ಮುಖ್ಯಸ್ವರವೆಂದು ವೇದಾದ್ಯಂತವೆಂದು ನಾದಮಂತ್ರವೆಂದು ಆತ್ಮಮಂತ್ರವೆಂದು ಮೊದಲಾದ ಪರ್ಯಾಯ ನಾಮಂಗಳುಳ್ಳದ್ದಾಗಿಹುದು.’

ಹಂಸ, ಸೋಽಹಂ, ಓಂ ಇವುಗಳ ಉಪಾಸನಾದಿ ವಿವರ ವಿಚಾರವನ್ನು ನಿಜಗುಣರು ವಿವೇಕ ಚಿಂತಾಮಣಿಯಲ್ಲಿ ವಿಶದಗೊಳಿಸಿದ್ದಾರೆ.

ಈ ಮಂತ್ರತ್ರಯದ ವಿಚಾರವನ್ನು ಇನ್ನು ಮಿಗಿಲಾಗಿ ತಿಳಿಯಬೇಕೆನ್ನುವವರು ನಮ್ಮಿಂದ ರಚಿತವಾಗಿ ಪ್ರಕಟವಾದ 'ಶಿವಾದ್ವೈತ ದರ್ಶನ' ಎಂಬ ದಾರ್ಶನಿಕ ಗ್ರಂಥದ ಪುಟ ೧೨೩, ೧೨೪, ೧೨೫ ರಲ್ಲಿ ಇರುವುದನ್ನು ಓದಿ ಮನನ ಮಾಡಿಕೊಳ್ಳಬೇಕು.

ಸರ್ವಶೂನ್ಯ ನಿರಾಲಂಬವೇ ಮೂಲವಸ್ತು. ಅದುವೇ ತುಸುಗಟ್ಟಿಗೊಂಡು ನಿಶ್ಶೂನ್ಯ (ನಿರಂಜನ) ವಸ್ತುವಾಗುತ್ತದೆ. ಈ ನಿಶ್ಶೂನ್ಯವು ಅವಾಚ್ಯವು; ಅವಾಚ್ಯಪ್ರಣವೋಪಾಸಿತವು. ನಿಶ್ಶೂನ್ಯದಿಂದ ಶೂನ್ಯವಸ್ತು. ಶೂನ್ಯವಸ್ತುವಿನಿಂದ ವಾಚ್ಯಪ್ರಣವವು. ಅಂದರೆ ಓಂಕಾರವು ಉತ್ಪತ್ತಿಯಾಗುತ್ತದೆ. ಓಂಕಾರವೇ ಶೂನ್ಯವಸ್ತು, ಶೂನ್ಯವಸ್ತುವೇ ಓಂಕಾರ. ಇದುವೇ ಮೂಲಲಿಂಗ. ಈ ಮೂಲಲಿಂಗಕ್ಕೆ ಅಂಗವಾಗಿ ಪೀಠವಾಗಿ ಇರವುದೇ ಪ್ರಣವವು ಇದು ಚಿನ್ನಾದ ಚಿದ್ಬಿಂದು ಚಿತ್ಕಳಾರೂಪಾಗಿದೆ. ಆ ಚಿನ್ನಾದ ರೂಪವೇ ಅಕಾರ. ಚಿದ್ಬಿಂದು ರೂಪವೆ ಉಕಾರ. ಚಿತ್ಕಳಾ ರೂಪವೇ ಮಕಾರ. ಪ್ರಣವದ ತಾರಕ-ದಂಡಕಾಕೃತಿಗಳೆರಡರಿಂದ ಅಕಾರೋತ್ಪತ್ತಿ ಕುಂಡಲ-ಚಂದ್ರಾಕೃತಿಗಳೆರಡರಿಂದ ಉಕಾರೋತ್ಪತ್ತಿ. ಜ್ಯೋತಿ-ದರ್ಪಣಾಕೃತಿಗಳೆರಡರಿಂದ ಮಕರೋತ್ಪತ್ತಿ. ಅ.ಉ.ಮ. ಇವುಗಳಲ್ಲಿ ಕ್ರಮವಾಗಿ ರುದ್ರ-ಈಶ್ವರ-ಸದಾಶಿವರುತ್ಪತ್ತಿ. ಸಂಹಾರ-ತಿರೋಧಾನ-ಅನುಗ್ರಹ ಇವರ ಕಾರ್ಯಗಳು. ಪ್ರಣವನೇ ಚಿನ್ನ; ಪರಮಾತ್ಮನೇ ಬಣ್ಣ. ಪ್ರಣವವೇ ಪುಷ್ಪ; ಪರಶಿವನೇ ಪರಿಮಳ.

"ಪ್ರಣವೇನೈವ ಮಂತ್ರೇಣ ಬೋಧ್ಯತೇ ನಿಷ್ಕಲಃ ಶಿವಃ
ಪಂಚಾಕ್ಷರೇಣ ಮಂತ್ರೇಣ ಪಂಚಬ್ರಹ್ಮತನುಸ್ತಥಾ ।
ನಿಷ್ಕಲಃ ಸಂವಿದಾಕಾರಃ ಸಕಲೋ ವಿಶ್ವಮೂರ್ತಿಕಃ
ಉಭಯಾತ್ಮಾ ಶಿವೋ ಮಂತ್ರೇ ಷಡಕ್ಷರಮಯೇ ಸ್ಥಿತಃ॥"

ಓಂಕಾರವೇ ಒಂದು ಮಂತ್ರ. ಮಂತ್ರ ಮಾತ್ರವಲ್ಲ ಮಹಾಮಂತ್ರ. ಅದರಿಂದ ನಿಷ್ಕಲ ಶಿವನು ಬೋಧ್ಯನಾಗುತ್ತಾನೆ. 'ಶಿವೋಽದ್ವೈತ ಏವ-ನೋಂಕಾರಃ। ಎಂದಿದೆ ಮಾಂಡೂಕ್ಯೋಪನಿಷತ್ತು. ಅಲ್ಲದೆ,

'ಓಮಿತ್ಯೇತದಕ್ಷರಮಿದಗ್ಂ ಸರ್ವಂ ತಸ್ಯೋಪವ್ಯಾಖ್ಯಾನಂ
ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ
ಯಚ್ಚಾನ್ಯತ್ರಿಕಾಲಾತೀತಂ ತದಪ್ಯೋಂಕಾರ ಏವ'

ಎಂದು ಅದೇ ಮಾಂಡೂಕ್ಯವು ಓಂಕಾರದ ವ್ಯಾಪ್ತಿ ವೈಶಿಷ್ಟ್ಯಗಳನ್ನು ಪ್ರಸ್ಫುಟಗೊಳಿಸಿದೆ.

'ಯ ಓಂಕಾರಃ ಸಪ್ರಣವೋ ಯಃ ಪ್ರಣವಃ ಸಸ್ಸರ್ವವ್ಯಾಪೀ
ಸೋಽನಂತೋ ಯೋಽನಂತಸ್ತತ್ತಾರಂ ಯತ್ತಾರಂ ತತ್ಸೂಕ್ಷ್ಮಂ,
ಯತ್ಸೂಕ್ಷ್ಮಂ ತಚ್ಛುಕ್ಲಂ, ಯಚ್ಛುಕ್ಲಂ ತದ್ವೈದ್ಯುತಂ ಯದ್ವೈ
ದ್ಯುತಂ ತತ್ಪರಂ ಬ್ರಹ್ಮ, ಸ ಏಕಃ ಸ ಏಕೋ ರುದ್ರಃ ಸ ಈಶಾನಃ
ಸ ಭಗವಾನ್ ಸ ಮಹೇಶ್ವರಃ ಸ ಮಹಾದೇವಃ'

ಎಂಬುದಾಗಿ ಅಥರ್ವಶ್ರುತಿಯು ಪ್ರಣವವೇ ನಿಷ್ಕಲ ಶಿವ ಎಂಬುದನ್ನು ನಿಷ್ಕಲಶಿವರೂಪ ಪ್ರಣವಸ್ವರೂಪವನ್ನು ಸೊಗಸಾಗಿ ಚಿತ್ರಿಸಿದೆ. 'ಸರ್ವವ್ಯಾಪಕಮೋಂಕಾರಂ' ಎಂಬಂತೆ ಅದರ ವ್ಯಾಪಕತೆಯಿದೆ. ಸಾಕಲ್ಯವೆನಿಸಿದೆ.

ಅ. ಉ. ಮ. ಈ ಬೀಜಾಕ್ಷರತ್ರಯವುಳ್ಳದು ಓಂಕಾರ. ಅಂತೆಯೇ ನಾದ ಬಿಂದು ಕಲಾತ್ಮಕವಾದುದು ಓಂಕಾರ. ಶಿವಶಕ್ತಿ ಸಂಪುಟವಾದುದು ಓಂಕಾರ. ಅಂತಹ ಓಂಕಾರದಿಂದ ಪಂಚಾಕ್ಷರೋತ್ಪತ್ತಿಯಾಗುತ್ತದೆ. ಆ ಪ್ರಣವದಿಂದ ನಿಷ್ಕಲಶಿವಜ್ಞಾನವಾದರೆ ಪಂಚಾಕ್ಷರದಿಂದ ಪಂಚಬ್ರಹ್ಮಮಯ ನಾದ ಸಕಲ ಶಿವನಜ್ಞಾನವಾಗುತ್ತದೆ. ನಿಷ್ಕಲವು ಸಂವಿದಾಕಾರ. ಸಕಲವು ವಿಶ್ವಾಕಾರ. ಪ್ರಣವಪಂಚಾಕ್ಷರರೂಪ ಷಡಕ್ಷರ ಮಂತ್ರದಿಂದ ಸಕಲ ನಿಷ್ಕಲ ರೂಪ ಶಿವಪ್ರಕಾಶನವಾಗುತ್ತದೆ.

'ಪ್ರಥಮಂ ತಾರಕಾರೂಪಂ ದ್ವಿತೀಯಂ ದಂಡ ಉಚ್ಯತೇ
ತೃತೀಯಂ ಕುಂಡಲಾಕಾರಂ ಚತುರ್ಥಂ ಚಾರ್ಧಚಂದ್ರಕಂ ।
ಪಂಚಮಂ ದರ್ಪಣಾಕಾರಂ ಷಷ್ಠಂ ಜ್ಯೋತಿ ಸ್ವರೂಪಕಂ
ನಕಾರಸ್ತಾರಕಾರೂಪೋ ಮಕಾರೋದಂಡ ಉಚ್ಯತೇ ।
ಶಿಕಾರಃ ಕುಂಡಲಾಕಾರೋ ವಾಕಾರಶ್ಚಾರ್ಧಚಂದ್ರಕಃ
ಯಕಾರೋ ದರ್ಪಣಾಕಾರ ಓಂಕಾರಃ ಪಂಚವರ್ಣರಾಟ್ ।'

ಷಡಕ್ಷರಗಳ ರೂಪ ಸ್ವರೂಪಗಳನ್ನು ಈ ಶಿವಾಗಮ ಸೂಕ್ತಿಗಳು ನಿರ್ದೇಶಿಸಿವೆ. ನ-ಮಃ—ಶಿ-ವಾ-ಯ-ಓಂ ಈ ಆರು ಕ್ರಮವಾಗಿ ಅ-ಉ-ಮ-ನಾದ-ಬಿಂದು-ಕಳಾತ್ಮಕವಾಗಿವೆ. ಓಂಕಾರರೂಪ ಗೌಪ್ಯಮುಖ ದಿಂದ ಪಂಚಾಕ್ಷರರೂಪ ಪಂಚವಕ್ತ್ರಗಳು ಉತ್ಪತ್ತಿಗೊಂಡಿವೆ.

ಪರಶಿವನ ಸ್ಪಂದನದಿಂದ ಚಿನ್ನಾದ ಹುಟ್ಟುತ್ತದೆ. ಆ ಚಿನ್ನಾದದಿಂದ ಅ ಉ ಮ ವಿಶಿಷ್ಟ ಓಂಕಾರರೂಪ ಅಪರಪ್ರಣವ ಹುಟ್ಟುತ್ತದೆ. ಅಪರ ಪ್ರಣವದಿಂದ ಅಯ್ವತ್ತೊಂದು ಅಕ್ಷರಗಳು ಹುಟ್ಟುತ್ತವೆ. ಈ ಅಕ್ಷರಗಳಿಂದ ನಿಗಮಾಗಮೋಪನಿಷದಾದಿಸರ್ವಶ್ರುತಿಗಳು ಹುಟ್ಟುತ್ತವೆ. ಪಂಚಾಕ್ಷರ ಗಳಿಂದ ಪ್ರಪಂಚೋತ್ಪತ್ತಿಯಾಗುತ್ತದೆ.

ಶ್ರೀಗುರುವಿನಿಂದ ಶಿಷ್ಯನಿಗೆ ಷಡಕ್ಷರೋಪದೇಶವಾಗಲಾಗಿ ಶಿಷ್ಯನ ಕಾಯವು ಮಂತ್ರಕಾಯವೆನಿಸುತ್ತದೆ; ಜ್ಞಾನ ಕಾಯವೆನಿಸುತ್ತದೆ. ಸಕಲ-ಸಕಲ ನಿಷ್ಕಲ-ನಿಷ್ಕಲರೂಪ ಇಷ್ಟ-ಪ್ರಾಣ-ಭಾವಲಿಂಗಾಂಗವಾಗುತ್ತದೆ.

'ನಾಮ ರೂಪು ಕ್ರಿಯೆಗಳೇನೂ ಏನೂ ಇಲ್ಲದ ನಿತ್ಯನಿರಂಜನ ಪರವಸ್ತು ತಾನೇ ನಿರಂಜನ ಪ್ರಣವನೋಡಾ. ಆ ನಿರಂಜನ ಪರವಸ್ತುವಿನಲ್ಲಿ ಪರಮ ಚಿತ್ಕಳೆ ಉದಯವಾಗಿ, ಆ ಚಿದ್ರೂಪಕಲೆಯೇ ಶುದ್ಧ ಪ್ರಣವವೆನಿಸಿತ್ತು. ಆ ಶುದ್ಧ ಪ್ರಣವದಲ್ಲಿ ಚಿತ್ತು, ಆ ಚಿತ್ತೇ ಸಚ್ಚಿದಾನಂದ. ಆ ಸ್ವರೂಪ ವನ್ನು ಉಳ್ಳದಾಗಿ ಚಿತ್ಪ್ರಣವವೆನಿಸಿತ್ತು ನೋಡಾ. ಆ ಚಿತ್ಪ್ರಣವ ಸ್ವರೂಪವಪ್ಪ ಪರತತ್ತ್ವದಲ್ಲಿ ಪರಶಕ್ತಿ ಉದಯವಾಯಿತ್ತು. ಆ ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವಯ್ಯ. ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ. ಇಂತೀ ಮೂರಕ್ಕೆ ಪರಶಕ್ತಿಯೇ ತಾಯಿ. ಇಂತೀ ನಾಲ್ಕು ಒಂದಾದಲ್ಲಿ ಪ್ರಣವನಾಯಿತ್ತಯ್ಯ. ಆ ಪ್ರಣವವೇ ಪಂಚಲಕ್ಷಣವಾಯಿತ್ತು. ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ಬಿಂದು—ಇಂತೀ ಪಂಚಾ ಕೃತಿಯಾಯಿತ್ತಯ್ಯ. ಇವುಗಳಿಂದ ನಕಾರಾದಿ ಪಂಚಾಕ್ಷರಂಗಳುತ್ಪತ್ತಿ ಯಾದವಯ್ಯ. ಪ್ರಣವವೇ ಕೂಡಿ ಷಡಕ್ಷರವೆಂದೂ ಪಂಚಾಕ್ಷರವೆಂದೂ ಹೇಳಲ್ಪಟ್ಟಿತ್ತಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.'

'ನಕಾರವೆ ಮೂರ್ತಿಬ್ರಹ್ಮ, ಮಕಾರವೆ ಪಿಂಡಬ್ರಹ್ಮ, ಶಿಕಾರವೆ ಕಲಾಬ್ರಹ್ಮ, ವಕಾರವೆ ಆನಂದ ಬ್ರಹ್ಮ, ಯಕಾರವೆ ವಿಜ್ಞಾನ ಬ್ರಹ್ಮ,

ಓಂಕಾರವೆ ಪರಬ್ರಹ್ಮ, ಈ ಷಡಕ್ಷರವೇ ಷಡ್ವಿಧ ಬ್ರಹ್ಮವೆಂದು ಹೇಳಲ್ಪಟ್ಟಿತ್ತು ನೋಡಾ! ಮತ್ತೆ ನಕಾರವೆ ಕ್ರಿಯಾಶಕ್ತಿ, ಮಕಾರವೆ ಜ್ಞಾನಶಕ್ತಿ, ಶಿಕಾರವೆ ಇಚ್ಛಾಶಕ್ತಿ, ವಕಾರವೆ ಆದಿಶಕ್ತಿ; ಯಕಾರವೆ ಪರಶಕ್ತಿ, ಓಂಕಾರವೇ ಚಿಚ್ಛಕ್ತಿ, ಇವು ಮಂತ್ರ ಶಕ್ತಿ ಸ್ವರೂಪೆಂದರಿವುದು. ಮತ್ತೆ ನಕಾರವೆ ಆಚಾರಲಿಂಗ, ಮಕಾರವೆ ಗುರುಲಿಂಗ, ಶಿಕಾರವೆ. ಶಿವಲಿಂಗ, ವಕಾರವೆ ಜಂಗಮಲಿಂಗ, ಯಕಾರವೆ ಪ್ರಸಾದಲಿಂಗ, ಓಂಕಾರವೆ ಮಹಾಲಿಂಗ; ಇವು ಷಡಕ್ಷರ ಮಂತ್ರಲಿಂಗವೆಂದರಿವುದಯ್ಯ. ಇಂತು ಲಿಂಗಕ್ಷರವೆಂದು ಹೇಳಲ್ಪಟ್ಟವು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ.'

ಇವಲ್ಲದೆ ಷಡಂಗ, ಷಡ್ಭಕ್ತಿ, ಷಟ್‌ಪದಾರ್ಥ, ಷಟ್‌ಪ್ರಸಾದ, ಷಟ್‌ಹಸ್ತ, ಷಟ್‌ಮುಖ, ಷಟ್‌ತತ್ತ್ವ ಮುಂತಾದವುಗಳು ಷಡಕ್ಷರ ಜನ್ಯಗಳಾಗಿ ಷಡಕ್ಷರಸ್ವರೂಪಗಳಾಗಿವೆ.

'ಆಧಾರಚಕ್ರದಲ್ಲಿ ನಕಾರ ಸ್ವಾಯತ, ಸ್ವಾಧಿಷ್ಠಾನ ಚಕ್ರದಲ್ಲಿ ಮಕಾರ ಸ್ವಾಯತ, ಮಣಿಪೂರಕ ಚಕ್ರದಲ್ಲಿ ಶಿಕಾರಸ್ವಾಯತ, ಅನಾಹತ ಚಕ್ರದಲ್ಲಿ ವಕಾರ ಸ್ವಾಯತ, ವಿಶುದ್ಧಿಚಕ್ರದಲ್ಲಿ ಯಕಾರಸ್ವಾಯತ, ಆಜ್ಞಾ ಚಕ್ರದಲ್ಲಿ ಓಂಕಾರ ಸ್ವಾಯತ; ಇದು ಕಾರಣ ಶರಣಕಾಯ ಷಡಕ್ಷರ ಮಂತ್ರ ಶರೀರವಾಗಿ ಸರ್ವಾಂಗವೆಲ್ಲವೂ ಜ್ಞಾನಕಾಯ ಕಾಣಾ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ'

ಇದರಂತೆ ನಕಾರಾದಿ ಷಡಕ್ಷರಗಳು ಪ್ರಾಣಾದಿ ಹೃದಯಾಂತ ಷಟ್ಕರಣಗಳಲ್ಲಿ ಆಯತವಾಗಿ ಗುದಾದಿ ಕರ್ಮೇಂದ್ರಿಯಗಳಲ್ಲಿ ಆಯತವಾಗಿ ತ್ಯಾಗಾಂಗವೂ ಮಂತ್ರಮಯವಾಗಿರುತ್ತದೆ.

ಮೂಲ ಶ್ಲೋಕದಲ್ಲಿ ಹೇಳಿದಂತೆ ನಿಷ್ಕಲವೂ ಓಂಕಾರಾತ್ಮಕವೂ ಆದ ಭಾವಲಿಂಗವು ಯೋಗಾಂಗದಲ್ಲಿ, ಸಕಲವೂ ವಿಶ್ವಮೂರ್ತಿಕವೂ ಪಂಚಾಕ್ಷರಾತ್ಮಕವೂ ಆದ ಇಷ್ಟಲಿಂಗವು ತ್ಯಾಗಾಂಗದಲ್ಲಿ; ಸಕಲ ನಿಷ್ಕಲವೂ ತೈಜಸಾಕಾರವೂ ಷಡಕ್ಷರಾತ್ಮಕವೂ ಆದ ಪ್ರಾಣಲಿಂಗವು ಭೋಗಾಂಗದಲ್ಲಿ ಸನ್ನಿಹಿತ ಆಯತ ಸ್ವಾಯತವಾಗಿರುತ್ತವೆ. ಷಡಕ್ಷರಕ್ಕೆ ಪ್ರಾಣಲಿಂಗವೇ ಪ್ರಾಣ. ಸಕಲ ನಿಷ್ಕಲಗಳೆರಡರ ಸಕೀಲ. ಷಡಕ್ಷರದರ್ಥವನ್ನು ಪ್ರಭುದೇವರು ಹೀಗೆ ಹೇಳಿದಾರೆ.

'ನಾ ಎಂಬುದೆ ನಂದಿಯಾಗಿ, ಮಾ ಎಂಬುದೇ ಮಹತ್ತಾಗಿ, ಶಿ ಎಂಬುದೇ ರುದ್ರನಾಗಿ, ವಾ ಎಂಬುದೇ ಹಂಸಿಯಾಗಿ, ಯಾ ಎಂಬುದೇ ಅರಿವಾಗಿ, ಓಂಕಾರವೇ ಗುರುವಾಗಿ, ಸಂಬಂಧವೇ ಅಸಂಬಂಧವಾಗಿ, ಅಸಂಬಂಧವೇ ಸಂಬಂಧವಾಗಿ ಎರಡೂ ಒಂದೇ ಆಗಿ ಗೊಗ್ಗೇಶ್ವರ (ಗುಹೇಶ್ವರ) ಲಿಂಗದಲ್ಲಿ ಸಂಬಂಧಿ.'

ಟೀಕು; 'ನಕಾರಂ ಚಿತ್ತಮಿತ್ಯುಕ್ತಂ' ಎಂಬುದಾಗಿ ಆ ಚಿತ್ತವೆ ಲೋಕವೆಲ್ಲಕ್ಕೂ ಆದಿಯಾಗಿಪ್ಪ ಕಾರಣ ಅಂತಪ್ಪ ಚಿತ್ತವೇ ಪ್ರಥಮದಲ್ಲಿ ಅಂಗದಲಿ ಅಳವಟ್ಟು, ಅದು ನಂದಿಯೆಂಬ ನಾಮವನೆಯ್ದಿದ ಕಾರಣ ನಾ ಎಂಬುದೇ ನಂದಿಯಾಗಿತ್ತೆಂಬ ಶಬ್ದಕ್ಕರ್ಥ. 'ಮಕಾರೋ ಬುದ್ಧಿರುಚ್ಯತೇ' ಎಂಬುದಾಗಿ ಅಂತಪ್ಪ ಮಕಾರಸಂಯುಕ್ತಮಪ್ಪ ಸುಬುದ್ಧಿಕೃತ ಸಿಶ್ಚಯ ಮಹತ್ತಿನಲ್ಲಿ ಇಂಬುಗೊಳ್ಳಲು ಆ ಮಹತ್ತೆ ಎಡೆಗೊಂಡಿತ್ತೆಂಬುದೀಗ ಮಾ ಎಂಬುದೇ ಮಹತ್ತಾಗಿ ಎಂಬ ಶಬ್ದಕ್ಕರ್ಥ. 'ಶಿಕಾರೋ ರುದ್ರರೂಪಶ್ಚ' ಎಂಬುದಾಗಿ ಅಂತಪ್ಪ ಶಿಕಾರವೇ ಶಿವಸ್ವರೂಪವಾಗಿ ಸರ್ವಾಂಗದ ಮೇಲೆ ಎಡೆಗೊಂಡು ಭವಭಾರ ಪಾಶ ವಿಮೋಚನವ ಮಾಡುತ್ತಿರಲು ಅದೀಗ ಶಿ ಎಂಬುದೇ ರುದ್ರನಾಗಿ ಎಂಬ ಶಬ್ದಕ್ಕರ್ಥ. 'ವಕಾರೋ ವಾಯುರುಚ್ಯತೇ' ಎಂಬುದಾಗಿ ಅಂತಪ್ಪ ಪ್ರಾಣವಾಯುವೆ ಲಿಂಗವಾಗಿ ಲಿಂಗಪ್ರಾಣವೆನಿಸಲು ಅದೇ ಪರಮಹಂಸನಾಮವನೆಯ್ದಿತೆಂಬುದೀಗ ವಾ ಎಂಬುದೆ ಹಂಸವಾಗಿ ಎಂಬ ಶಬ್ದಕ್ಕರ್ಥ. 'ಯಕಾರಂ ಜ್ಞಾನಮೇವ ಚ' ಎಂಬುದಾಗಿ ಅಂತಪ್ಪ ಯಕಾರಸಂಯುಕ್ತಮಪ್ಪ ಸುಜ್ಞಾನವೇ ಬಾಹ್ಯಾಭ್ಯಂತರವೊಳಗೆ ಸಮವೇದಿಸಿಕೊಂಡಿತ್ತೆಂಬುದೀಗ ಯಾ ಎಂಬುದೇ ಅರಿವಾಗಿ ಎಂಬಶಬ್ದಕ್ಕರ್ಥ.

'ಓಂಕಾರಪ್ರಭವಾ ವೇದಾ ಓಂಕಾರ ಪಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ' ಎಂಬುದಾಗಿ ಅಂತಪ್ಪಓಂಕಾರವೇ ಸಮಸ್ತಲೋಕಕ್ಕೆ ಗುರುವಾಗಿಪ್ಪುದು. ಆ ಓಂಕಾರವೇ ತಾನಾಗಿದ್ದನೆಂಬುದೀಗ ಓಂಕಾರವೇ ಗುರುವಾಗಿ ಎಂಬ ಶಬ್ದಕ್ಕರ್ಥ. ಇಂತಪ್ಪ ಷಡಕ್ಷರವೇ ಸರ್ವಾಂಗವಳವಟ್ಟು ಭಿನ್ನವಾಗಿರದೆ ಅಭಿನ್ನವಾಗಿ ಎಡೆಗೊಂಡುದು ಉಭಯ ನಾಮವಳಿದು

ಇರ್ಪಾತನೆ ಅಚ್ಚ ಶರಣನೆಂಬದೀಗ ಸಂಬಂಧವೆ ಅಸಂಬಂಧವಾಗಿ, ಅಸಂಬಂಧವೇ ಸಂಬಂಧವಾಗಿ ಎರಡೂ ಒಂದಾಗಿ ಗುಹೇಶ್ವರ ಲಿಂಗದಲ್ಲಿ ಸಂಬಂಧಿ ಎಂಬ ಶಬ್ದಕ್ಕರ್ಥ.

ಈ ಪ್ರಭುದೇವರ ವಚನಾಭಿಪ್ರಾಯವನ್ನು ಸೂಕ್ಷ್ಮಾಗಮವು ಪೂರ್ವದಲ್ಲಿಯೇ ಪ್ರತಿಪಾದಿಸಿದೆ. ಅದಿಂತಿರುತ್ತದೆ;

"ಭಾವೋಜ್ಞಾನಂಚ ಸುಮನೋ ನಿರಹಂಕಾರ ಏವ ಚ ।
ಬುದ್ಧಿಶ್ಚಿತ್ತಂ ಭಾವಾದಿ ಹಸ್ತರೂಪಃ ಷಡಕ್ಷರಃ"

—ಸೂಕ್ಷ್ಮಾಗಮ

ಅದೇ ಷಡಕ್ಷರದರ್ಥವನ್ನು ಚೆನ್ನಬಸವಣ್ಣನವರು ಮಹೇಶ್ವರನ ಶಿವಲಿಂಗ ಸ್ಥಳದಲ್ಲಿ ಹೀಗೆ ಹೇಳಿದಾರೆ:

'ಓಂ ಪಂಚಾಕ್ಷರದ ಪ್ರಣಮಂಗಳು ಆದಿ ಅನಾದಿ
ಇಲ್ಲಿದಂದು ಉತ್ಪತ್ತಿ ಸ್ಥಿತಿ ಲಯಂಗಳಿಲ್ಲದಂದು, ಭಕ್ತಿಯ
ಮಗನು ಭವಿಯ ಬಸಿರೊಳಗಿರ್ದು, ಆ ಸತ್ಯಜ್ಞಾನವೆಂಬ
ಬಸಿರೊಳಗೆ ಸತ್ಯಜ್ಞಾನವೆಂಬ ಶಾಸ್ತ್ರಂಗಳು ಪುಟ್ಟಿದವು.
ಆ ಶಾಶ್ತ್ರದೊಳಗಡಗಿದವು ವೇದ—ಪೌರಾಣಾಗಮಂಗಳು.
ಆ ಆಗನುಂಗಳೊಳಗಿಡಗಿದವು ಐವತ್ತೆರಡಕ್ಷರಂಗಳು.
ಆ ಐವತ್ತೆರಡಕ್ಷರಂಗಳೊಳಡಗಿದವು ಇಪ್ಪತ್ತೇಳು ನಕ್ಷತ್ರಂಗಳು.
ಆ ಇಪ್ಪತ್ತೇಳು ನಕ್ಷತ್ರಂಗಳೊಳಡಗಿದವು ಈರೇಳು ಲೋಕದ
ಗಳಿಗಿ—ಜಾವ—ದಿನ—ಮಾಸ—ಸಂವತ್ಸರಂಗಳು.
ಇಂತಿವಿಲ್ಲವನೊಳಗಿಟ್ಟುಕೊಂಡು ಓಂ ನಮಃಶಿವಾಯ
ಎಂಬಾತನು ಮಹಾಲಿಂಗವು ಕಾಣಿರೆ !
ಹೊರಗಿಪ್ಪಾತನು ಓಂ ನಮಃಶಿವಾಯ ಎಂಬಾತ ಕಾಣಿರೆ !
ಓಂ ನಮಃಶಿವಾಯ ಎಂಬಾತ ಇಷ್ಟ ಬ್ರಹ್ಮವೆಂಬ ಮಹಾಲಿಂಗವು.
ಆ ಪಂಚಾಕ್ಷರವೇ ಪರಮೇಶ್ವರನು. ಅ ಪಂಚಾಕ್ಷರವೆ ಪರತತ್ತ್ವವು.
ಆ ಪಂಚಾಕ್ಷರವೇ ಪರಮಯೋಗ, ಆ ಪಂಚಾಕ್ಷರವೆ ಪರಂಜ್ಯೋತಿ.
ನಾ ಎಂಬಕ್ಷರವೇ ದೇವರ ಚರಣ. ಮಾ ಎಂಬಕ್ಷರವೆ ದೇವರ ಒಡಲು.
ಶ್ರೀ ಎಂಬಕ್ಷರವೇ ದೇವರ ಹಸ್ತ. ವಾ ಎಂಬಕ್ಷರವೇ ದೇವರ ನೇತ್ರ.
ಯಾ ಎಂಬಕ್ಷರವೇ ದೇವರ ಶ್ರೋತ್ರ. ಮತ್ತೆ,

ನಾ ಎಂಬಕ್ಷರವೇ ದೇವರ ದಯೆ. ಮಾ ಎಂಬಕ್ಷರವೇ ದೇವರ ಶಾಂತಿ.
ಶ್ರೀ ಎಂಬಕ್ಷರವೇ ದೇವರ ಶಬ್ದ. ಮತ್ತೆ
ನಾ ಎಂಬಕ್ಷರವೇ ಪೃಥ್ವಿ. ಮಾ ಎಂಬಕ್ಷರವೇ ಅಪ್ಪು. ಶ್ರೀ ಎಂಬಕ್ಷರವೇ ಅಗ್ನಿ. ವಾ ಎಂಬಕ್ಷರವೇ ವಾಯು. ಯಾ ಎಂಬಕ್ಷರವೇ ಆಕಾಶ.
ಮತ್ತೆ ನಾ ಎಂಬಕ್ಷರವೇ ಬ್ರಹ್ಮ. ಮಾ ಎಂಬಕ್ಷರವೇ ವಿಷ್ಣು.
ಶೀ ಎಂಬಕ್ಷರವೇ ರುದ್ರ. ವಾ ಎಂಬಕ್ಷರವೇ ಶಕ್ತಿ.
ಯಾ ಎಂಬಕ್ಷರವೇ ಲಿಂಗ. ಇಂತೀ ಪಂಚಾಕ್ಷರಂಗಳಡಗಿ
ಉಳಿದಕ್ಷರ ಒಂದು. ಈ ಪಂಚಾಕ್ಷರವೆಂಬವು ಏಕಾಕ್ಷರವಾದ
ಬಳಿಕ ದೇವನೊಬ್ಬನೇ ಎಂದರಿವುದು....'
ಷಡಕ್ಷರ ಮಂತ್ರಾರ್ಥವು ಸೂಕ್ಷ್ಮಾಗಮದಲ್ಲಿ ಹೀಗಿರುತ್ತದೆ :
'ಯಕಾರಃ ಪೂರ್ಣತಾಯುಕ್ತೋ ವಾಕಾರೋ ನಿತ್ಯವಾಚಕರಃ
ಆನಂದಃ ಸ್ಯಾಚ್ಛಿಕಾರಸ್ತು ಚಿದ್ರೂಪೋ ಹಿ ಮಕಾರಕಃ |
ಸತ್ಯರೂಪೋ ನಕಾರಃ ಸ್ಯಾನ್ಮಿಶ್ರಾತ್ಮಾ ಪ್ರಣವೋ ಭವೇತ್ ||
ಯಕಾರಃ ಪರಸಂಜ್ಞಃ ಸ್ಯಾದ್ವಾಕಾರೋ ಗೂಢರೂಪಕಃ |
ಶರೀರಸ್ಥಃ ಶಿಕಾರಶ್ಚ ಲಿಂಗಕ್ಷೇತ್ರಂ ಮಕಾರಕಃ ||
ಅನಾದಿ ರೂಪವಾನ್ನಶ್ಚ ಪ್ರಣವೋ ಹಿ ಮಹಾನ್ ಸ್ಮೃತಃ
ಸ್ಫಟಿಕಾಭೋ ಯಕಾರಶ್ಚ ವಾಕಾರಃ ಶ್ವೇತವರ್ಣಕಃ |
ನೀಲದ್ಯುತಿಃ ಶಿಕಾರಃ ಸ್ಯಾದ್ರತ್ನಕಾಂತಿರ್ಮಕಾರಕಃ ||
ನಕಾರಃ ಪೀತವರ್ಣಃ ಸ್ಯಾತ್ತಾರೋ ವರ್ಣಾತಿಗಃ ಪರಃ |
ಷಡಾತ್ಮಕಂ ಜಗತ್ಸರ್ವಂ ಷಡಕ್ಷರ ಸಮುದ್ಭವಂ ||
ಸರ್ವಸಿದ್ಧಿಕರಂ ಶಾಂತಂ ಸರ್ವಮಂತ್ರೇಷು ಗೋಪಿತಂ |
ವಿದ್ಯಾನಾಮಾದಿಭೂತಂ ಚ ಷಡಕ್ಷರಮಿದಂ ಪರಂ ||
ಷಡಕ್ಷರಮನುಜ್ಞಾನಂ ಸರ್ವಜ್ಞಾನೋತ್ತಮಂ |'

—ಸೂಕ್ಷ್ಮಾಗಮ

ಷಡಕ್ಷರವು ಸಚ್ಚಿದಾನಂದ ನಿತ್ಯ ಪರಿಪೂರ್ಣ ಅಖಂಡ ಸ್ವರೂಪವೆಂದು; ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿ, ಮಹಾ ಸಂಜ್ಞೆಗಳುಳ್ಳದೆಂದು ; ಸ್ಫಟಿಕ, ಶ್ವೇತ, ನೀಲ, ರತ್ನ, ಪೀತ ರೂಪವರ್ಣವುಳ್ಳದ್ದೆಂದು,

ಓಂಕಾರವು ವರ್ಣಾತೀತವೆಂದು ಹೇಳಿರುವುದಲ್ಲದೆ ಜಗವೆಲ್ಲ ಷಡಾತ್ಮಕವಾಗಿದೆಯೆಂದು ಷಡಕ್ಷರವು ಸರ್ವಜ್ಞಾನೋತ್ತಮವಾಗಿದೆಯೆಂದು ಸರ್ವಮಂತ್ರೋತ್ತಮವಾಗಿದೆಯೆಂದು ಸರ್ವಸಿದ್ಧಿದಾಯಕವೆಂದು ಹೇಳಲಾಗಿದೆ.

'ಯೋಽಯಂ ನಕಾರಃ ಸೋಽಯಮಕಾರಃ,
ಸ ಸದ್ಯೋಜಾತೋ ಭೂರ್ಋಗ್ವೇದಃ ಸಂಪುಟಮುಚ್ಯತೇ
ಯೋಽಯಂ ಮಕಾರಃ ಸೋಽಯಮುಕಾರಃ,
ಸ ವಾಮದೇವ ಆಪೋ ಯಜುರ್ವೇದೋ ವಕ್ತ್ರಮುಚ್ಯತೇ
ಯೋಽಯಂ ಶಿಕಾರಃ ಸೋಽಯಂ ಮಕಾರಃ,
ಸ ಘೋರಃ ಸ ವಾಯುಃ ಸಾಮವೇದೋ ಗುಣ ಉಚ್ಯತೇ
ಯೋಽಯಂ ವಕಾರಃ ಸೋಽಯಂ ನಾದಃ,
ಸ ತತ್ಪುರುಷಃ ಸ ತೇಜೋಽಥರ್ವವೇದೋಽ ಘೋರಮುಚ್ಯತೇ
ಯೋಽಯಂ ಯಕಾರಃ ತದಿದಂ ಸಮಸ್ತಮೋಮಿತಿ,
ನಿರ್ವಿಶೇಷ ಪ್ರಣವಃ ಸ ಸರ್ವೋತ್ತಮ ಈಶಾನ ಆಕಾಶ
ಆಗಮೋ ಲಿಂಗಮುಚ್ಯತೇ | ಇತ್ಯೇತತ್ತತ್ತ್ವಂ ಯೋ ವಿಜಾ
ನಾತಿ ಸ ನಿತ್ಯಂ ಶುದ್ಧ ಬುದ್ಧ ಪರಮಾನಂದ ಪರಮಶಿವಸ್ವರೂಪಃ |
—ಸಿದ್ಧಾಂತ ಸಾರೋಪನಿಷತ್

ಅರ್ಥರೂಪಾದ ಆ ಪರಶಿವತತ್ತ್ವವು ನಾದಮಯಿಯಾಗಿ ಆಕಾಶಗುಣವಾದ ಶಬ್ದ (ಮಂತ್ರ) ದಲ್ಲಿ ಪ್ರವೇಶಿಸಿ ಪಿಂಡಾಂಡದ ಆಕಾಶದಲ್ಲಿ ವ್ಯಾಪಿಸಿದೆ. ಆ ಆಕಾಶತತ್ತ್ವದ ಶಬ್ದವನ್ನು ವಾಯುತತ್ತ್ವಾತ್ಮಕವಾದ ಪ್ರಾಣವು ಒಳಕ್ಕೆ ಹೊತ್ತೊಯ್ಯುತ್ತದೆ. ಒಯ್ದು ಅಂಗಾಂಗಕ್ಕೆಲ್ಲ ಮಂತ್ರ ಸ್ಪರ್ಶವನ್ನುಂಟುಮಾಡುತ್ತದೆ. ಅಂಗಾಂಗವನ್ನು ಸೋಂಕಿದ ಆ ಮಂತ್ರ ರೂಪ ಪರಮಾತ್ಮನನ್ನು ತೇಜೋತತ್ತ್ವಾತ್ಮಕವಾದ ಬುದ್ಧಿಯು ಅರಿಯುತ್ತದೆ. ಆ ಜ್ಞಾನರೂಪ ಪರಮಾತ್ಮನಲ್ಲಿ ಅಪ್‌ತತ್ತ್ವಾತ್ಮಕವಾದ ಭಕ್ತಿರಸವು ಸೇವಿಸಿ ಆಸ್ವಾದಿಸುತ್ತದೆ. ಆ ರಸರೂಪವಾದ ಮಂತ್ರಾತ್ಮಕ ಪರಮಾತ್ಮನನ್ನು ಪೃಥ್ವೀತತ್ತ್ವಾತ್ಮಕವಾದ ವಾಸನಾಂಗವು ಸಂಗಡಿಸಿ ಸಮರಸಗೊಳ್ಳುತ್ತದೆ; ಸದ್ರೂಪಗೊಳ್ಳುತ್ತದೆ. ಹೀಗೆ ಷಡಕ್ಷರವು ಷಡಂಗ ಸ್ವರೂಪವಾಗಿದೆ.

ಮಂತ್ರಶಕ್ತಿಯು ಮಂತ್ರಚೈತನ್ಯವು ಪಿಂಡನಿಗೆ ಪ್ರಾಪ್ತವಾಗುವುದೆ

ಭಕ್ತನ ಭಕ್ತ. ಪ್ರಾಪ್ತ ಮಂತ್ರ ಒಳ ಹೊರಗಾಗಿ ತನ್ನದಾಗುವುದೆ ಭಕ್ತನ ಮಾಹೇಶಸ್ಥಲ. ಅದು ಅಂತಃಸ್ಪರ್ಶವಾಗಿ ಪಿಂಡನು ಪ್ರಸನ್ನನಾಗಿರುವುದೆ ಭಕ್ತನ ಪ್ರಸಾದಿ. ಬುದ್ಧಿಯು ಅರಿದು ಪ್ರಬುದ್ಧವಾಗುವುದೆ ಭಕ್ತನ ಪ್ರಾಣಲಿಂಗಿಸ್ಥಲ. ಆ ಮಂತ್ರರಸಾಸ್ವಾದದ ಆನಂದದಲ್ಲಿರುವುದೇ ಭಕ್ತನ ಶರಣಸ್ಥಲ. ಆ ಮಂತ್ರಮಯ ಚೈತನ್ಯದ ಆನಂದದಲ್ಲಿ ಪರವಶನಾಗಿರುವುದೆ ಭಕ್ತನ ಐಕ್ಯಸ್ಥಲ. ಆಗ ಆತನ ಕಾಯವೇ ಕೈವಲ್ಯವಾಗಿರುತ್ತದೆ. ಕಾಯ ಅಕಾಯವಾಗಿರುತ್ತದೆ. ಕೆಂಡದೊಳಗಿಟ್ಟ ಕೋಲಿನಂತಾಗಿರುತ್ತದೆ. ಕೋಲೆ ಽವೂ ಕೆಂಡವೇ ಆಗುವಂತೆ, ಕಾಯವೆಲ್ಲ ಕೇವಲಾತ್ಮ ಸ್ವರೂಪವಾಗಿರುತ್ತದೆ; ಮಂತ್ರಾತ್ಮಮಯವಾಗಿರುತ್ತದೆ. ಆತನ ಮಾತೆಲ್ಲ ಮಂತ್ರವಾಗಿ ಮಹಾಜ್ಯೋತಿರ್ಲಿಂಗವಾಗಿ ಮನವೆಲ್ಲ ಮಹಾಲಿಂಗವಾಗಿ ಕಳೆಗೊಂಡಿರುತ್ತವೆ. ಮಂತ್ರಜ್ಯೋತಿಯ ಮಹಿಮೆಯುದು. ಮಂತ್ರಪರುಷದ ಪ್ರಭಾವವದು. ಮಂತ್ರರಸದ ರಹಸ್ಯವದು. ಮಂತ್ರಸಂಸ್ಕಾರದ ಮಹಾಶಕ್ತಿಯದು.

ಆಗ ಆ ಐಕ್ಯಭಕ್ತನ ಮೈ ಎಲುವಿನ ಹಂಜರವಲ್ಲ, ಕರುಳಿನ ಜಾಳಿಗೆಯಲ್ಲ, ಮೂತ್ರದ ಕುಡಿಕೆಯಲ್ಲ, ಕೀವಿನ ಕಜ್ಜಲವಲ್ಲ, ನೆತ್ತರದ ನೆಲೆಯಲ್ಲ; ನರನಾಡಿಗಳ ಹಂದರವಲ್ಲ, ಮಾಂಸದ ಮುದ್ದೆಯಲ್ಲ, ತೊಗಲ ಚೀಲವಲ್ಲ; ಮೋಹಮದ ಮತ್ಸರಗಳ ವನವಲ್ಲ, ಕಾಮ ಕ್ರೋಧ ಲೋಭಗಳ ಕಾಡಲ್ಲ; ತೋರಿ ಕೆಡುವ ತನುವಲ್ಲ, ಮಂತ್ರವೇ ತಾನಾದ ತಾನೇ ಮಂತ್ರವಾದ ಸಜ್ಜ್ಯೋತಿ, ಸದ್ವಿಭೂತಿ. ತನ್ನ ತಾ ತಿಳಿದ ಚಿಜ್ಜ್ಯೋತಿ. ತಾನೇ ತಾನಾದ ಪರಂಜ್ಯೋತಿ.

ಮಂತ್ರ ಜಾಪಕನು ಎಚ್ಚತ್ತ ಮಾನವನು; ನಿದ್ದೆಯಿಂದೆದ್ದ ಶರಣನು. ಮರವೆಯೆಂಬ ಮಬ್ಬನು ಕಳೆದು ಆತ್ಮದರ್ಶನವನ್ನು ಮಾಡಿಕೊಂಡ ಶಿವನು. ಪಾರಮಾರ್ಥದ ಪರಮಾಣಿಯ ಪ್ರಭಾವವನ್ನು ಪ್ರತ್ಯಕ್ಷವಾಗಿಸಿಕೊಂಡು ಪರಿಣಾಮದೊಳಿರುವ ಶಿವಕವಿ. ಆ ಪಂಚಾಕ್ಷರಿಯ ಪರಂಜ್ಯೋತಿಯಲ್ಲಿ ವಿಹರಿಸುವ ವಿಶ್ವಾತ್ಮಜೀವಿ. ಮಾತನ್ನು ಮಂತ್ರವಾಗಿಸಿ ಮಹಾಸತ್ತೆಗೆ ಸಾರಿದ ಮಹಾನುಭಾವಿ.

‘ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ !
ಮೊತ್ತದ ಮಾಮರ ಉಲಿಯಿತ್ತ ಕಂಡೆ !

ಕತ್ತಲೆ ಬೆಳಗಾಯಿತ್ತ ಕಂಡೆ !
ಹೊತ್ತಾರೆ ಎದ್ದು ಹೊಲಬುದಪ್ಪಿತ್ತ ಕಂಡೆ !
ಇದೇನು ಹತ್ತಿತ್ತೆಂದರಿಯೆ ಗೊಗ್ಗೇಶ್ವರಾ !'

ಮರವೆಯಲ್ಲಿ ಮಾನವನು ಮಲಗಿದ್ದರೆ ಮನದಾಸೆಯ ಕಫ ಕಂಠವನ್ನು ಆವರಿಸಿರುತ್ತದೆ. ಮಾರ್ಗಕ್ರಿಯೆ ಮೀರಿದಕ್ರಿಯೆಗಳಲ್ಲಿ ಸಂಚರಿಸದೆ ಸತ್ತಂತಿರುತ್ತಾನೆ. ಅದೇ ಗುರುಕರುಣವೆಂಬ ಭಾನುವಿನ ಉದಯವಾದೊಡನೆ ಸತ್ತ ಮಾನವನು ಎದ್ದೇಳುತ್ತಾನೆ. ಮಂತ್ರೋಪದೇಶವನ್ನು ಪಡೆದು ಜಾಗ್ರತೆಯಿಂದ ಜಪಿಸುತ್ತಾನೆ. ಆಗ ಕಟ್ಟಿ ಬಂದ ಕಫ ಕತ್ತರಿಸುತ್ತದೆ. ಪಿಂಡಾಂಡವೆಲ್ಲ ಮಂತ್ರಮಯವಾಗಿ ಸ್ಪಂದಿತವಾಗಿ ಅಣುರಣಿತವಾಗುತ್ತದೆ. ಮೊತ್ತದ ಮಾಮರವೇ ಉರಿದಂತಾಗುತ್ತದೆ. ಇದೊಂದು ಇಹಕ್ಕೆ ಅಚ್ಚರಿಯಲ್ಲವೆ ? ಪರಮಾರ್ಥದರಿವಾಗಿ ಪ್ರಾಪಂಚಿಕ ಕತ್ತಲೆ ಹರಿದು ಹೋಗುತ್ತದೆ. ಆ ಮಂತ್ರ ಜಾಪಿಯು ಮಾರ್ಗಕ್ರಿಯೆಯಿಂದ ಮೀರಿದ ಕ್ರಿಯೆಗೆ ಹೆಜ್ಜೆಹಾಕಿ ಮುನ್ನಡೆಯುತ್ತಾನೆ. ಆಗ ಈ ಪ್ರಪಂಚ ಹತ್ತಿದ್ದರೂ ಹತ್ತದಂತಿರುತ್ತದೆ. ಇದರ ಸ್ಮೃತಿಯಿರುವುದಿಲ್ಲ. ಇದು ಮಂತ್ರಬ್ರಹ್ಮದ ಮಹಿಮೆ.

ಮಂತ್ರವಿದ್ಯೆ ಮಹಾವಿದ್ಯೆ. ಅದೊಂದು ಆತ್ಮಾನುಭೂತಿಯನ್ನು ಅಳವಡಿಸಿಕೊಡುವ ಆತ್ಮಾನಂದದಲ್ಲಿ ಅವಿರಳಗೊಳಿಸುವ ವಿಶಿಷ್ಟವಿದ್ಯೆ. ಆ ವಿಶಿಷ್ಟವಿದ್ಯೆಯ ವಿಶುದ್ಧ ಪ್ರಕಾಶವನ್ನು ಪ್ರತ್ಯಂಗದಲ್ಲಿಯೂ ಪರಮಗುರು ಪಸರಿಸುತ್ತಾನೆ. ಶಿಷ್ಯನ ಶ್ರೋತ್ರ-ನೇತ್ರಗಳಲ್ಲಿ, ಮನ-ಭಾವಗಳಲ್ಲಿ, ಹಸ್ತ-ಮಸ್ತಕಗಳಲ್ಲಿ ಇರಿಸಿ ಬೆಳಗಿಸುತ್ತಾನೆ. ಮಾಂಸದ ಕಣಕಣಗಳಲ್ಲಿ ತುಂಬಿ ತನ್ನಿರುವಿಗೆ ಅರಿವಿಗೆ ಇಂಬಿಡುತ್ತಾನೆ. ಶ್ರೀ ಗುರುವಿನ ಆ ಮಂತ್ರ ಜ್ಯೋತಿಯೆ ಶಿಷ್ಯನ ಮಸ್ತಕದಲ್ಲಿ ಅಖಂಡ ಕಳೆಯಾಗಿ ಸಹಸ್ರಾರದಲ್ಲಿ ಪರಿಪೂರ್ಣ ಪ್ರಕಾಶವಾಗಿ ತ್ರಿಪುಟಿಯಲ್ಲಿ ನಿತ್ಯಾನಂದ ಕಳೆಯಾಗಿ ಹೃದಯದಲ್ಲಿ ಚಿತ್ಕಳೆಯಾಗಿ ಕಣ್ಣು ಕೈಗಳಲ್ಲಿ ಸತ್ಕಳೆಯಾಗಿ ನೆಲಸಿ ಕಳೆಗೊಳ್ಳುತ್ತದೆ. ಜಿಹ್ವೆಯಲ್ಲಿ ಗುರುಲಿಂಗವಾಗಿ ವಾಣಿಯಲ್ಲಿ ಪ್ರಸಾದಲಿಂಗವಾಗಿ ಶಿವಾತ್ಮ ಪೂಜೆಗೆ ಅಣಿಯಾಗಿಸುತ್ತದೆ. ಶಿವಾದ್ವೈತ ಭಕ್ತಿಯನ್ನೆ ಉಗ್ಗಡಿಸುತ್ತದೆ. ಶಿವಾತ್ಮ ವಿದ್ಯಾಮೃತವನ್ನೇ ಪ್ರವಹಿಸುತ್ತದೆ.

ಮಂತ್ರಜ್ಯೋತಿ ಕಾಯದ ಎಲ್ಲ ಕತ್ತಲೆಗಳನ್ನು ಕಳೆಯುತ್ತದೆ. ಮಂತ್ರಾಮೃತವು ಶರೀರದ ನಶ್ವರತೆಯನ್ನೆಲ್ಲ ನಷ್ಟಗೊಳಿಸುತ್ತದೆ. ಮಂತ್ರ ರಸಸ್ಪರ್ಶವು ತನುವನ್ನೆಲ್ಲ ಶುದ್ಧಗೊಳಿಸುತ್ತದೆ. ಸಕಲತ್ವದಿಂದ ನಿಷ್ಕಲತ್ವ ಕ್ಕೊಯ್ದು ನಿಲ್ಲಿಸುತ್ತದೆ. ನಿರ್ಮಳ ನಿಜಸ್ಥಲಕ್ಕೆ ನಿಲುಕಿಸುತ್ತದೆ. ಮೂಲ ಮಂತ್ರದಲ್ಲಿ ಶ್ರೀ ರೇಣುಕ ಶ್ರೀಗುರುಗಳು ಅಪ್ಪಣೆಕೊಡಿಸಿದಂತೆ ಷಡಕ್ಷರವು ಶಿಷ್ಯನನ್ನು ಸಕಳ ನಿಷ್ಕಳ ರೂಪನನ್ನಾಗಿಸುತ್ತದೆ. ಆಗ ಆತನಿಗೆ ಉದಯಾ ಸ್ತಮಾನಗಳ ಹಂಗದ ಅರಿಕೆಯಿಲ್ಲ; ಹೆದರಿಕೆಯಿಲ್ಲ.

ಓಂ ನಿಷ್ಕಳ ಸ್ವರೂಪು. ನಮಶ್ಶಿವಾಯ ಸಕಲ ಸ್ವರೂಪು. ಓಂ ನಮಃಶಿವಾಯ ನಿಷ್ಕಳ–ಸಕಳ ಸ್ವರೂಪು.

ನಿಷ್ಕಳವೆಂದರೆ ಸಂವಿದಾಕಾರ. ಸಕಳವೆಂದರೆ ಸತ್ಕ್ರಿಯಾಕಾರ; ಅಥವಾ ವಿಶ್ವಾಕಾರ. ನಿಷ್ಕಳ–ಸಕಳವೆಂದರೆ ಜ್ಞಾನಕ್ರಿಯಾಕಾರ; ಅಥವಾ ಪರಾಪರರೂಪ; ಪರಮಾರ್ಥ ಪ್ರಪಂಚರೂಪ.

ನಿಷ್ಕಳವೇ ಲಿಂಗ. ಸಕಳವೇ ಅಂಗ. ನಿಷ್ಕಳ ಸಕಳರೂಪ ಷಡ ಕ್ಷರವೇ ಲಿಂಗಾಂಗ ಸಾಮರಸ್ಯ.

ಅರಿವು ಆಚಾರಗಳೆರಡು ಒಂದಾಗುವುದೆ ಷಡಕ್ಷರ ಮಂತ್ರ ಧ್ಯೇಯ. ಇದರಿಂದಾಗಿ ತನುಸೂತಕ–ಮನಸೂತಕಗಳು ಅಳಿಯುತ್ತವೆ. ಅಂದರೆ ಕಾರ್ಮಿಕಮಲ ಮಾಯಾಮಲಗಳು ಮರೆಯಾಗುತ್ತವೆ. ಹೀಗಾದ ಬಳಿಕ ಅಣುತ್ವದಿಂದ ವಿಭುತ್ವಕ್ಕೇರಿ ನಿಲ್ಲುವ ಸೌಭಾಗ್ಯ ಸಂಪ್ರಾಪ್ತವಾಗುತ್ತದೆ. ಕಾಯವಿಕಾರಗಳೆಲ್ಲ ಅಳಿದು ಶಿವಕಾಯವಾಗುತ್ತದೆ. ಶರೀರವನ್ನು ಶಿವಕಾಯವನ್ನಾಗಿ ಮಾಡುವ ಷಡಕ್ಷರ ಮಂತ್ರಮಹಿಮೆ ಸಣ್ಣದಲ್ಲ. ಅಂತಹ ಮಂತ್ರವನ್ನು ಕರುಣಿಸಿದ ಶ್ರೀ ಗುರುವಿನ ಹಿರಿಮೆ ನುಡಿಗೆ ನಿಲುಕು ವುದಲ್ಲ. 'ವೇದಾದಿ ಅಷ್ಟಾದಶ ವಿದ್ಯಂಗಳ ಸರ್ವಮಂತ್ರಂಗಳ ಮೂಲವು. ಶ್ರೀ ಪಂಚಾಕ್ಷರಿ. ಶಿವಾದಿ ಸರ್ವತತ್ತ್ವ ಮೂಲವು ಶ್ರೀಗುರು....' ಎಂದು ಉರಿಲಿಂಗ ಪೆದ್ದಿಗಳು ಮಂತ್ರ ಮತ್ತು ಗುರುವಿನ ಮೂಲವನ್ನು ತಿಳಿಸು ವುದರಲ್ಲಿಯೇ ಮಹತ್ವವನ್ನೂ ಬಿತ್ತರಿಸಿ ಮುಂದುವರಿದು ಹೀಗೆ ಹೇಳಿ ದಾರೆ: '....ಆ ಶ್ರೀ ಗುರು ಲಿಂಗ ಜಂಗಮ ಪ್ರಣವ ಸರ್ವಮೂಲವು. ಶ್ರೀ ಗುರು ಕರುಣಿಸಿದ ಮಹಾ ಇಷ್ಟಲಿಂಗವೆ ದೀಕ್ಷೆ ಶಿಕ್ಷೆ ಸರ್ವಭೋಗಾದಿ

ಭೋಗಂಗಳೆಲ್ಲವಕ್ಕು. ಶಿವನ ಸಾಕಾರ ಮೂರ್ತಿ ಜಂಗಮ ಮೂರ್ತಿ. ಶಿವನ ಮೂಲ ಮೂರ್ತಿ ಗುರುಮೂರ್ತಿ. ಕೇವಲ ಮುಕ್ತಿ ಮೂಲ ಮಂತ್ರ ದಾಸೋಹ. ಇದೇ ಜ್ಞಾನ ಮೂಲ; ಇದು ಸತ್ಯ ಶಿವನಾಣೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ!'

ಜ್ಞಾನಕ್ರಿಯಾ ಶಕ್ತಿಗಳ ಕೇಂದ್ರ ಮಂತ್ರ. ಮಂತ್ರದಿಂದ ಜ್ಞಾನ ಜ್ಯೋತಿ ಹೊಮ್ಮುತ್ತದೆ; ಕ್ರಿಯಾಗಂಗೆ ಚಿಮ್ಮುತ್ತದೆ. ಜಿಹ್ವೆ ಜಪಿಸಿ (ಹಾಡಿ) ಅರಿವನ್ನು ಹೊರಹೊಮ್ಮಿಸಿದರೆ, ಕೈಮಾಡಿ (ಅರ್ಚಿಸಿ) ಕ್ರಿಯೆಯನ್ನು ಪ್ರಕಟಿಸುತ್ತದೆ. ಮಂತ್ರಾರ್ಥವನ್ನು ಅರಿದು ಆಚರಿಸುವುದರಿಂದ ಅಪೂರ್ವಶಕ್ತಿ ಸಂಪನ್ನರಾಗುತ್ತೇವೆ. ಲಿಂಗಸಂಬಂಧಕ್ಕೆ ಹತ್ತಿರದವರಾಗುತ್ತೇವೆ. ರೂಢಿಯಲ್ಲಿ ಆಡುವ ಮಾತಿನ ಶಕ್ತಿಯನ್ನು ಅರಿತಾಗ ಮಾತ್ರ ಮಂತ್ರಶಕ್ತಿಯ ಮಹತ್ವವು ಮನದಟ್ಟಾಗಬಲ್ಲುದು. ಒಲುಮೆಯ ನಲ್ಮಾತು ಒಲುಮೆಯನು ನಲುಮೆಯನ್ನು ಹುಟ್ಟಿಸುತ್ತದೆಯೆಂಬುದನ್ನು ಒಪ್ಪುವುದಾದರೆ ಒಮ್ಮಿಲ್ಲ ಒಮ್ಮೆ ಮನಗಂಡಿದ್ದರೆ ಋಷಿ ಹೃದಯರಾದ ಶ್ರೀ ಗುರುಗಳ ಶಿವಾಚಾರ್ಯರ ಹೃದಯಮಂದಿರದಿಂದ ಮಧುಮಯ ಮುಖದಿಂದ ಬಂದ ಮಂತ್ರವು ಆತ್ಮದೇವನ ಒಲುಮೆಯನ್ನು ಆತ್ಮಾನಂದವನ್ನು ಹುಟ್ಟಿಸಬಲ್ಲುದೆಂಬುದನ್ನು ಹೇಳಿ ಒಪ್ಪಿಸಲು ಅಷ್ಟೊಂದು ಕಷ್ಟವೆನಿಸಲಾರದು. ಮಾತೇ ಜ್ಯೋತಿರ್ಲಿಂಗವೆಂದು ಹೇಳುವಾಗ ಮಾತೆಂಬ ಹೂವಿನಿಂದಾದ ಮಂತ್ರ ಏನಾಗಬೇಕೆಂಬುದನ್ನು ಅನುಭಾವಿಗಳು ಅರಿಯಬೇಕು. ಆ ಪರಂಜ್ಯೋತಿಯಿಂದ ಜನಿಸಿ ಚಿನ್ಮಯನಾದಾತ್ಮಕವೆನಿಸಿ ಜೀವ-ದೇವ, ಇಹ-ಪರ, ಜ್ಞಾನ-ಕ್ರಿಯೆ ಮುಂತಾದ ಉಚ್ಚ ದ್ವಂದ್ವಗಳನ್ನು ಅಭಿವ್ಯಕ್ತಗೊಳಿಸಬಲ್ಲ ಮಂತ್ರಶಕ್ತಿ ಅನುಪಮವಾದುದು. ಅದರ ಆಳ, ಅಗಲ, ಎತ್ತರಗಳು ಅಮೇಯವಾದವು. ಮಂಗಳಮಯವಾದ ಲಿಂಗಸೃಷ್ಟಿಯನ್ನು ನಿರ್ಮಿಸಬಲ್ಲ ದಿವ್ಯಶಕ್ತಿ ಮಂತ್ರಕ್ಕಿದೆ. ಎಂದೆಂದಿಗೂ ಕೇಡಿಲ್ಲದ ಎಂದೆಂದಿಗೂ ಕಡೆಯಾಗದ ನಲಿವನ್ನು ನೀಡಬಲ್ಲುದು. ಸತ್ಯವಾದ ಶಿವವಾದ ಚೆಲುವನ್ನು ತೋರಬಲ್ಲುದು.

ಬಿಂದು ಕಲೆಗಳಿಗೆ ಮೂಲ ಕೇಂದ್ರವಾಗಿ ನಿಂತಿದೆ ನಾದಮಯಿಯಾದ ಮಂತ್ರ. ಮೂಲ ಕಾರಣವಾಗಿದೆ ಷಣ್ಮಂತ್ರ. ಮೂಲ ಸಾಧನವಾಗಿದೆ

ಈ ಮಂತ್ರ. ಸತ್ಯಸಾಧಕನಿಗೆ ಇದು ಸಂಜೀವಿನಿ. ಮಹಾಲಿಂಗ ಸಮರ ಸತಿಗೆ ಇದು ಕಾಮಧೇನು.

"ಮೂಲಂ ವಿದ್ಯಾ ಶಿವಃ ಶೈವಸೂತ್ರ ಪಂಚಾಕ್ಷರಸ್ತಥಾ ।
ಏತಾನಿ ನಾಮಧೇಯಾನಿ ಕೀರ್ತಿತಾನಿ ಮಹಾ ಮನೋಃ ॥"

ಈ ಮಹಾಮಂತ್ರವನ್ನು ಮೂಲನೆಂದು, ವಿದ್ಯೆಯೆಂದು, ಶಿವವೆಂದು, ಶೈವಸೂತ್ರವೆಂದು, ಪಂಚಾಕ್ಷರವೆಂದು ಪಂಚನಾಮಗಳಿಂದ ಕರೆಯುತ್ತಾರೆ.

ಈ ಹೆಸರುಗಳಲ್ಲಿಯೇ ಮಂತ್ರದ ಸ್ಥಾನಮಾನ, ಗುಣಕ್ರಿಯೆ, ಸಂಬಂಧಾನುಬಂಧಗಳು ಸೂಚ್ಯವಾಗಿವೆ.

ಆ ನಿಷ್ಕಲ ಲಿಂಗದಿಂದ ಮುನ್ಮೊದಲು ಚಿಮ್ಮಿದುದು ಚಿನ್ನಾದ. ಆ ಚಿನ್ನಾದವೇ ಓಂಕಾರ. ಓಂಕಾರಮಯವೇ ಪಂಚಾಕ್ಷರ, ಇದರಿಂದಾಗಿ ಇದು ಸೃಷ್ಟಿಗೆ ಮೂಲವಾಗಿದೆ.

ವೇದಾಗಮಗಳಿಗೆ ಮೂಲವಾದ ಓಂಕಾರವೇ ಮಹಾವಿದ್ಯೆಯೆನಿಸಿದೆ. 'ಓಮಿತ್ಯೇದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ....' ಎಂದು ಮಾಂಡೂಕ್ಯಶ್ರುತಿಯು ವರ್ಣಿಸಿರುವುದರಿಂದ ಉಳಿದೆಲ್ಲ ವಿದ್ಯೆಗಳು ಈ ಮಂತ್ರದ ಉಪವ್ಯಾಖ್ಯಾನಗಳಾಗಿವೆ; ಉಪವಿದ್ಯೆಗಳೆನಿಸಿವೆ. ಇದೇ ಮೂಲ ವಿದ್ಯೆಯೆನಿಸಿದೆ. 'ಓಂಕಾರ ಪ್ರಭವಾ ವೇದಾಃ'

ಪ್ರಣವ ವಿಶಿಷ್ಟ ಪಂಚಾರಿ ಯು ಶಿವವಾಗಿದೆ; ಶಿವಾತ್ಮವೂ ಆಗಿದೆ. ಓಂಕಾರ ಮತ್ತು ಅಥ ಈ ಎರಡೇ ಮಾಂಗಲಿಕಗಳೆಂದು ಹೇಳಿಸಿಕೊಂಡಿವೆ. ಅದರಲ್ಲಿಯೂ ಓಂಕಾರವೇ ಒಂದನೆಯದಾಗಿದೆ. ಓಂಕಾರಗತ ಅಕಾರವೇ ಶಿವಸ್ವರೂಪ. ಉ-ಮಕಾರಗಳೇ ಶಕ್ತಿ ಸ್ವರೂಪ. ಇದರಿಂದಾಗಿ 'ಶಿವ' ಎಂದೆನಿಸಿದೆ. 'ಶಿವ ಅದ್ವೈತ ಏವ ಓಂಕಾರಃ' ಓಂಕಾರವು ಶಿವನ ವಾಚಕ ವಾಗಿದೆ

ಜೀವನನ್ನು ಶಿವನನ್ನಾಗಿಸುವ ಸೂತ್ರವಾಗಿದೆ ಈ ಷಡಕ್ಷರಮಂತ್ರ. ಶಿವಸಂಬಂಧವನ್ನುಂಟುಮಾಡಲು ಶಿವಾನುಭವನ್ನುಂಟುಮಾಡಲು ಶಿವಾದ್ವೈತ ಸ್ಥಿತಿಗೇರಿಸಲು ಷಡಕ್ಷರ ಮಂತ್ರವನ್ನು ಬಿಟ್ಟರೆ ಬೇರೆ ಉತ್ತಮ

ಉಪಾಯವಿಲ್ಲ. ಇದರಿಂದಾಗಿ 'ಶೈವಸೂತ್ರ'ವೆಂಬ ಸೂಕ್ತನಾಮವುಳ್ಳು ವಾಗಿದೆ.

ಓಂಕಾರವು ಪಂಚವರ್ಣ ಪ್ರತೀಕವಾಗಿದೆ. ತಾರಕ, ದಂಡ, ಕುಂಡಲ, ಅರ್ಧಚಂದ್ರ, ದರ್ಪಣ ಎಂಬೀ ಪ್ರಣವದ ಪಂಚ ಆಕಾರಗಳಿಂದ ಆವಿರ್ಭವಿಸಿದ ನಮಃಶಿವಾಯ ಈ ಪಂಚಾಕ್ಷರಗಳೇ ಪಂಚ ಅಂಗಗಳಾಗಿವೆ. 'ಓಂಕಾರಃ ಪಂಚವರ್ಣರಾಟ್' ಎಂದು ಪ್ರಸಿದ್ಧವಾಗಿದೆ. ಆದ್ದರಿಂದ ಇದಕ್ಕೆ 'ಪಂಚಾಕ್ಷರ'ವೆಂಬ ಹೆಸರು.

ಆತ್ಮನಿಗೆ ಪಂಚಭೂತಗಳು ಹೇಗೆ ಅಂಗವಾಗಿವೆಯೋ ಹಾಗೆ ಮಂತ್ರಕ್ಕೆ ಪಂಚಾಕ್ಷರಗಳು ಅಂಗವಾಗಿವೆ. ಅಕ್ಷರಗಳೇ ಮಂತ್ರವಲ್ಲ. ಅಕ್ಷರಗಳನ್ನು ಬಿಟ್ಟು ಮಂತ್ರಾಭಿವ್ಯಕ್ತಿಯಿಲ್ಲ. ಅಕ್ಷರರೂಪಶಬ್ದ ವೈಖರೀವಾಣಿಗೆ ನಿಲುಕುತ್ತದೆ. ಮಂತ್ರ ನಿಲುಕದೆ ಪರವಾಣಿಯಿಂದಾಚೆ ಇರುತ್ತದೆ. ಹಾಲೊಳಗೆ ತುಪ್ಪಿದ್ದಂತೆ; ಶಶಿಯೊಳಗೆ ತಂಪಿದ್ದಂತೆ ಇರುತ್ತದೆ. ಸರ್ವ ವರ್ಣಗಳಿಗೆ ಪ್ರಣವ ಬೀಜವಾದರೆ ಪ್ರಣವಕ್ಕೆ ಬೀಜ ಪರಶಿವ ಚೈತನ್ಯ. ಪ್ರಣವರೂಪೀ ಪಂಚಾಕ್ಷರಕ್ಕೂ ಪ್ರಾಣವಾಗಿದಾನೆ ಪರಶಿವನು.

ಮನನಮಾಡಿದವರನ್ನು ರಕ್ಷಿಸುವುದು ವರ್ಣವಲ್ಲ ; ವರ್ಣಪ್ರಾಣ ವಾದ ಆ ಶಿವನು. ಇದರಿಂದಾಗಿ ಆತನು ಮಂತ್ರನೆನಿಸಿದ್ದಾನೆ.

ಓಂಕಾರವೆಂಬ ಲಿಂಗಕ್ಕೆ ಪಂಚಾಕ್ಷರಗಳೇ ಪಂಚಸೂತ್ರಗಳಾಗಿವೆ ; ಪಂಚಾಂಗಗಳಾಗಿವೆ ; ಪಂಚಮುಖಗಳಾಗಿವೆ. ಇದರಿಂದಾಗಿ ಪಂಚಾಕ್ಷರ ವೆಂದು ಪವಿತ್ರಾಂಕಿತವು ಪಜ್ಜಳಿಸಿದೆ. ಇದಿಷ್ಟು ಪಂಚಾಕ್ಷರಮಂತ್ರನಾಮ ಗಳ ವಿವರಣೆ.

ಇನ್ನು ಓಂಕಾರವನ್ನು ಬ್ರಹ್ಮ, ಜ್ಞಾನ, ಶಿವಾತ್ಮ, ಸರ್ವಾತ್ಮ, ಸರ್ವವಿದ್ಯಾಬೀಜ, ತೇಜೋಬೀಜ, ಮುಕ್ತಿಬೀಜ, ನಿಷ್ಕಲ, ನಾದ, ನಾದಾದಿ, ಹೃನ್ನಾದ, ವೇದಾದಿ, ವೇದಭೂಮಿ, ಮಂತ್ರಪ್ರಾಣ, ಅಕ್ಷರ, ಮುಖ್ಯಸ್ವರ, ವೇದಾದ್ಯಂತ, ನಾದಮಂತ್ರ, ಆತ್ಮಮಂತ್ರ ಎಂದು ಮುಂತಾದ ಹೆಸರುಗಳಿಂದ ಕರೆಯುತ್ತಾರೆಂದು ನಿಜಗುಣರು ವಿವೇಕ ಚಿಂತಾಮಣಿಯಲ್ಲಿ ನಿರೂಪಿಸಿದ್ದಾರೆ.

ಪಂಚಾಕ್ಷರವನನ್ನು 'ಮಹಾಮನು' ಎಂದು ನಿರ್ದೇಶಿಸಿ ನಿರತಿಶಯತೆಯನ್ನು ನಿಷ್ಕರ್ಷೆಗೊಳಿಸಿದ್ದಾರೆ. ಮಂತ್ರ ಸೂಕ್ಷ್ಮವಾಗಿದ್ದರೂ ಮಂತ್ರಾರ್ಥ ಸೂಕ್ಷ್ಮವಾಗಿಲ್ಲ. ವೇದ ವೇದಾಂತಾರ್ಥಗಳೆಲ್ಲ ಇದರಲ್ಲಿವೆ. ನಿಗಮಾಗಮಗಳೆಲ್ಲ ಇದನ್ನು ತಲೆಯಲ್ಲಿ ಹೊತ್ತು ಮನ್ನಿಸಿವೆ. ಶಿವ ಹೃದಯವೇ ಇದಾಗಿರುವುದರಿಂದ ಶೈವ ಪ್ರಪಂಚಕ್ಕೆಲ್ಲ ಸೌಭಾಗ್ಯಸ್ವರೂಪವಾಗಿದೆ. ಸಾಯುಜ್ಯ ಮುಕ್ತಿಗೆ ಸಾಧನವಾಗಿದೆ. ಸಪ್ತಕೋಟಿ ಮಂತ್ರಾಂಗಕ್ಕೆ ಶಿರಃಪ್ರಾಯವಾಗಿದೆ. ಮೂಲ, ಸ್ಥೂಲ, ಸೂಕ್ಷ್ಮ, ಮಾಯಾ, ಪ್ರಸಾದ ಪಂಚಾಕ್ಷರಿಗಳಿಗೆ ಪ್ರಮುಖವಾಗಿದೆ. ಇವೆಲ್ಲ ಕಾರಣಗಳಿಂದ 'ಮಹಾಮನು'ವೆಂದು ಹೇಳಿಸಿಕೊಂಡಿದೆ.

"ಪಂಚಾಕ್ಷರೀಮಿಮಾಂ ವಿದ್ಯಾಂ ಪ್ರಣವೇನ ಷಡಕ್ಷರೀಂ ||
ಜಪೇತ್ ಸಮಾಹಿತೋ ಭೂತ್ವಾ ಶಿವಪೂಜಾ ಪರಾಯಣಃ ||
ಪ್ರಾಣಾಯಾಮತ್ರಯಂ ಕೃತ್ವಾ ಪ್ರಾಙ್ಮುಖೋದಙ್ಮುಖೋಽಪಿವಾ |
ಚಿಂತಯನ್ ಹೃದಯಾಂಭೋಜೇ ದೇವದೇವಂ ತ್ರಿಲೋಚನಂ ||
ಸರ್ವಾಲಂಕಾರ ಸಂಯುಕ್ತಂ ಸಾಂಬಂ ಚಂದ್ರಾರ್ಧಶೇಖರಂ |
ಜಪೇದೇತಾಂ ಮಹಾವಿದ್ಯಾಂ ಶಿವರೂಪಾಮನನ್ಯಧೀಃ ||"

ಪರಮಾತ್ಮನನ್ನು ಕಾಣದಿದೆ ವೇದ. ಕಂಡಿವೆ ಪಂಚಾಕ್ಷರೀ ವಿದ್ಯೆ. ಅದು ವೇದ; ಇದು ವಿದ್ಯೆ. ಅದನ್ನು ಅರಿತು ಬಿಡುವುದು. ಇದನ್ನು ಅರಿತಂತೆ ಆಚರಿಸಲು ಸಾಧ್ಯ. ಭೋಗ ಮೋಕ್ಷಪ್ರದವಾಗಿದೆ.

ಇಂತಹ ಪಂಚಾಕ್ಷರೀ ವಿದ್ಯೆಗೆ ಪ್ರಣವ ಸೇರಿದಲ್ಲಿ ಷಡಕ್ಷರೀ ವಿದ್ಯೆಯೆಂದೆನಿಸುತ್ತದೆ. ಷಟ್‌ಸ್ಥಲಕ್ಕೆ ಷಡಕ್ಷರಿಯೇ ಮುಖ್ಯ. ಇದಕ್ಕಿದೆ ಪೂರ್ಣ ಪ್ರಾತಿನಿಧ್ಯ. ಕಾರಣ ಶಿವಪೂಜಾಸಕ್ತನು ಷಡಕ್ಷರ ಮಂತ್ರವನ್ನು ಜಪಿಸಬೇಕು. ನಿರ್ಮಲ ಮತ್ತು ನಿಶ್ಚಲ ಮನಸ್ಸಿನಿಂದ ಜಪಿಸಬೇಕು.

ಜಪವೆಂದರೆ ಮನಸ್ಸಿನಲ್ಲಿ ಮತ್ತೆ ಮತ್ತೆ ಉಚ್ಚರಿಸುವಿಕೆ ; ಮಂತ್ರಾರ್ಥ

ವನ್ನು ನೆನೆಯುವಿಕೆ. ಇದೊಂದು ಮಾನಸಿಕ ಅಭ್ಯಾಸ ಅಥವಾ ಅಧ್ಯಯನ. ಜಪವನ್ನು ಸ್ವಾಧ್ಯಾಯವೆಂದು ಹೇಳುತ್ತಾರೆ. 'ಸ್ವ-ಅಧ್ಯಾಯ' ಮತ್ತು 'ಸು-ಅಧ್ಯಾಯ' ಎಂದು ಎರಡು ಬಗೆಯಾಗಿ ಬಿಡಿಸುವುದು (ಪದವಿಶ್ಲೇಷಣ ಮಾಡುವುದು) ಉಂಟು. ಇದರಿಂದ ಷಡಕ್ಷರ ಜಪವೆಂದರೆ ತನ್ನನ್ನೇ ತಾನು ಚೆನ್ನಾಗಿ ಅಭ್ಯಾಸ ಮಾಡುವುದೆಂದರ್ಥ.

ಎರಡನೆಯ ಮಂತ್ರದಲ್ಲಿ ಜಪಾನುಷ್ಠಾನ ರೀತಿಯನ್ನು ನಿರೂಪಿಸ ಲಾಗಿದೆ. ಜಪವು ಅಗರ್ಭ, ಸಗರ್ಭ ಎಂದು ಇತ್ತೆರವಾಗಿದೆ. ಕ್ರಮವಿಲ್ಲದೆ ಅರ್ಥವರಿಯದೆ ಮಾಡುವ ಜಪ ಅಗರ್ಭ ಜಪ. ಸಕ್ರಮವಾಗಿ ಶ್ರೀಗುರುವಿನಿಂದ ಅರ್ಥವರಿತು ಮಾಡುವ ಜಪ ಸಗರ್ಭ ಜಪ. ಇದುವೇ ಉತ್ತಮಜಪ. ಈ ಸಗರ್ಭಜಪಾನುಷ್ಠನವು ಎರಡನೆಯ ಮಂತ್ರದಲ್ಲಿ ಉಕ್ತವಾಗಿದೆ.

ಮೊದಲು ತನ್ನ ದೀಕ್ಷಾಗುರು ಮುಖದಿಂದ ಅರ್ಥವನ್ನು ಅರಿತು ಕೊಂಡಿರಬೇಕು. ತನ್ನ ಶ್ರೀಗುರುವಿಗೆ ಯಥಾಶಕ್ತಿ ಭಕ್ತಿಕಾಣಿಕೆಯನ್ನರ್ಪಿಸಿ ಜಪಾನುಷ್ಠಾನಕ್ಕೆ ಶ್ರೀಗುರುವಿನ ಅಪ್ಪಣೆಯನ್ನು ಪಡೆದಿರಬೇಕು. ಪ್ರತಿನಿತ್ಯ ಪ್ರಾತಃಕಾಲದಲ್ಲಿ ತಪ್ಪದೆ ಜಲಸ್ನಾನ ಮಾಡಿಕೊಂಡು ಶಿವಪೂಜಾಗೃಹಕ್ಕೆ ಬಂದು ಹಿಂದೆ ಹೇಳಿದಂತೆ ಪೂರ್ವಕ್ಕಾಗಲಿ ಉತ್ತರಕ್ಕಾಗಲಿ ಮುಖ ಮಾಡಿ ಕುಳಿತು ಗುರುಧ್ಯಾನ, ಭಸ್ಮಸ್ನಾನ, ಧಾರಣ, ರುದ್ರಾಕ್ಷಧಾರಣ, ನ್ಯಾಸತ್ರಯಗಳನ್ನಾಚರಿಸುವುದಲ್ಲದೆ ಪ್ರಾಣಾಯಾಮತ್ರಯವೆಂದರೆ ರೇಚಕ, ಪೂರಕ, ಕುಂಭಕಗಳನ್ನು ಮಾಡಿ ಮುಗಿಸಿದ ಬಳಿಕ ಹೃದಯಕಮಲದಲ್ಲಿ ಮಹಾದೇವನಾದ ಮುಕ್ಕಣ್ಣನನ್ನು ನೆನೆಯಬೇಕು. ಆ ಮಹಾದೇವನು ಸರ್ವಾಲಂಕಾರ ಸಂಪನ್ನನು, ಶಕ್ತಿಸಮೇತನು, ಚಂದ್ರಧರನು, ಆತನ ಆ ಪಾರಮಾರ್ಥಿಕ ಸೌಂದರ್ಯ ಪ್ರಾಪ್ತಿಗಾಗಿ, ಆತನ ಆ ದಿವ್ಯ ಶಕ್ತಿ ಸಂಪಾದನೆಗಾಗಿ, ಆತನ ಆ ಶಾಂತಿಕಾಂತಿಗಳಿಗಾಗಿ ಆತನದೇ ಆದ ಮಹಾವಿದ್ಯೆಯೆಂದೆನಿಸಿದ ಷಡಕ್ಷರ ಮಂತ್ರವನ್ನು ಅನನ್ಯ ಮನಸ್ಕನಾಗಿ ಜಪಿಸಬೇಕು.

ಜಪಾರಂಭದಲ್ಲಿ ಆಚರಿಸುವ ಅನುಸಂಧಾನವಿದು: ಮೊದಲು ಮಂತ್ರ ಪಲ್ಲವ, ಮಂತ್ರಾಂಗಗಳನ್ನು ಅರಿದು ಅನುಸಂಧಾನ ಮಾಡಬೇಕು.

ನಮಃ, ಸ್ವಾಹಾ, ವಷಟ್, ಹುಂ, ವೌಷಟ್, ಫಟ್ ಇವಾರು ಮಂತ್ರ ಪಲ್ಲವಗಳು. ಇವನ್ನು ಪರಿವಿಡಿದು ಹೃದಯ, ಶಿರಸ್ಸು, ಶಿಖೆ, ಕವಚ, ನೇತ್ರ

ತ್ರಯ, ಅಸ್ತ್ರ ಎಂಬೀ ಷಟ್‌ಸ್ಥಲಗಳಲ್ಲಿ ವಿನ್ಯಾಸ ಮಾಡಬೇಕು. ಇವು ಪ್ರಣವ ಪಂಚಾಕ್ಷರಿಗೆ ಪಾದಗಳಂತಿರುತ್ತವೆ. ಇವಿಲ್ಲದೆ ಮಂತ್ರಜಪ ಮಾಡಿದರೆ ಹೆಳವನಾಗುತ್ತಾನೆ.

'ಮಂತ್ರಾಣಾಂ ಪಲ್ಲವಃ ಪಾದಃ, ಪ್ರಣವಃ ಶಿರ ಉಚ್ಯತೇ
ಶಿರಃ ಪಲ್ಲವ ಸಂಯುಕ್ತೋ ಮಂತ್ರೋಽಭೀಷ್ಟಫಲಪ್ರದಃ !'

ಹೀಗೆ ಮಂತ್ರಕ್ಕೆ ಪಾದ-ಮಸ್ತಕಗಳು .ಉಕ್ತವಾಗಿವೆ. ಪ್ರಣವವೇ ಶಿರಸ್ಸಾಗಿದೆ. ಕಾರಣ ಪ್ರಣವರಹಿತವಾಗಿ ಜಪ ಮಾಡಬಾರದು. ಮಾಡಿದರೆ ಅಭೀಷ್ಟಸಿದ್ಧಿಯಾಗದು. ಇನ್ನು ಋಷಿ, ಛಂದಸ್ಸು, ದೇವತೆ, ಬೀಜ, ಶಕ್ತಿ, ಕೀಲಕ ಈ ಆರು ಮಂತ್ರಾಂಗಗಳು. ಇವನ್ನು ಕ್ರಮವಾಗಿ ಮಸ್ತಕ, ಮುಖ, ಹೃದಯ, ನಾಭಿ, ಗುಹ್ಯ, ಪಾದಗಳಲ್ಲಿ ವಿನ್ಯಾಸ ಮಾಡಬೇಕು. ಇಲ್ಲವಾದರೆ ಮೃತನಾಗುತ್ತಾನೆ.

ಮಂತ್ರಕ್ಕೆ ವಾಮದೇವ ಋಷಿ, ಪಂಕ್ತಿ ಛಂದಸ್ಸು, ಸದಾಶಿವ ದೇವತೆ ಓಂಕಾರ ಬೀಜ, ಉಮಾಶಕ್ತಿ, ಹ್ರಾಂ ಹ್ರೀಂ....ಇವಾರು ಕೀಲಕ. ಇವಲ್ಲದೆ ಇನ್ನು ಕೆಲವು ವಿನಿಯೋಗಗಳನ್ನು ನಿಜಗುಣರು ಹೀಗೆ ಹೇಳಿದಾರೆ:.... ಹಂಸ ಲಕ್ಷ್ಯ, ಸೋಹಂ ಭಾವನೆ, ಚಿನ್ಮುದ್ರೆ, ತಾರಕಸ್ಥಾನ, ಶಾಂಭವಿದ್ವಾರ, ಷಣ್ಮುಖೀ ತಂತ್ರ, ಉದಾತ್ತಸ್ವರ, ಶ್ವೇತವರ್ಣ, ಭೋಗಮೋಕ್ಷಾರ್ಥಮಾದ ಉಪಾತ್ತದುದುರಿತಂ ಕ್ಷಯದ್ವಾರಕ, ಪರಮೇಶ್ವರ ಪ್ರೀತಿಯೊಳ್ ವಿನಿಯೋಗ ವೆಂದು ಮೊದಲು ಸ್ಮರಿಸಿ ಬಳಿಕ ಪಿಂಡಾಂಡ ಬ್ರಹ್ಮಾಂಡಗಳಲ್ಲಿ ಭೂಮ್ಯಾ ದ್ಯಾತ್ಮಾಂತಮಾದ ತತ್ತ್ವಂಗಳ ಕ್ರಮದಿಂ ನಕಾರಾದಿ ಪ್ರಣವಾಂತಮಾದ ಅಕ್ಷರಾತ್ಮಕನೆಂದು ಅನುಸಂಧಾನಿಸಲಕ್ಕುಂ.

ಹೀಗೆ ಅನುಸಂಧಾನ ಮಾಡಿ ನಿತ್ಯ ಮೂರು ವೇಳೆ ಶಿವಪೂಜಾಕಾಲ ದಲ್ಲಿ ಶಿವಷಡಕ್ಷರ ಮಂತ್ರವನ್ನು ಒಂದು ವೇಳೆಗೆ ಕೊನೆಯದಾಗಿ ನೂರೆಂಟು ಸಲ ಜಪಿಸಬೇಕು. ಇನ್ನೂ ಹೆಚ್ಚು ಮಾಡಬೇಕೆನ್ನುವವರು ೨೧೬, ೩೦೦, ೫೦೦, ೧೦೦೮, ೧೧೦೮, ೫೦೦೮, ೮೦೦೮, ೧೨೦೦೮, ೨೧೬೦೦ರವರೆವಿಗೂ ಮಂತ್ರ ಜಪ ಮಾಡಬಹುದು. ಜಪ ಸಂಖ್ಯೆಯನ್ನು ಗುರುತಿಸಲು ಸಾಧನ ವೆರಡು. ಒಂದು ಹಸ್ತ ; ಇನ್ನೊಂದು ಮಾಲೆ. ಹಸ್ತಜಪ ಹೆಚ್ಚು ಗುಣ

ಕಾರಿ. ಮಾಲೆಗಳಲ್ಲಿ ರುದ್ರಾಕ್ಷಿ ಮಾಲೆ ಹೆಚ್ಚು ಫಲಕಾರಿ, ಹಸ್ತಜಪಕ್ಕೆ ರೇಖಾ ಜಪ, ಅಂಗುಳಿಜಪವೆಂದು ಹೇಳುತ್ತಾರೆ. ಶಂಖ, ಸ್ಪಟಿಕ, ಪ್ರನಾಳ ಮೌಕ್ತಿಕ, ಮಾಣಿಕ್ಯ, ಶ್ರೀಗಂಧ ಬಿಲ್ವ ಮುಂತಾದುವುಗಳ ಮಾಲೆಗಳಿಗಿಂತ ರುದ್ರಾಕ್ಷ ಮಾಲಿಕೆಯು ಮೇಲಾದುದೆಂದು ನಿಜಗುಣರು ನಿರೂಪಿಸಿದಾರೆ : ಅಷ್ಟಸಿದ್ಧಿಗಳಿಗೂ ಅಷ್ಟಾಂಗಯೋಗ ಸಿದ್ಧಿಗೂ ಸರ್ವಮಂತ್ರ ಸಿದ್ಧಿಗೂ ಸಕಲ ಕಾರ್ಯಸಿದ್ಧಿಗೂ ಜ್ಞಾನಮೋಕ್ಷಗಳಿಗೂ ರುದ್ರಾಕ್ಷ ಮಾಲಿಕೆಯೆಂದು ತಿಳಿವುದು. ಮತ್ತು ಸಕಾಮ ನಿಷ್ಕಾಮ ಜಪಗಳಿಗೆ ಸುರಕ್ಷಿತವಾಗಿಯುಂ ಸುಖಕರವಾಗಿಯುಂ ಶಂಭುಪ್ರಸಾದಕರವಾಗಿಯುಂ ಕ್ಷಿಪ್ರಸಿದ್ಧಿಕರಮಾಗಿಯುಂ ಸರ್ವೋತ್ತಮವಾಗಿಯುಂ ರುದ್ರಾಕ್ಷ ಮಾಲಿಕೆಯೇ ಅಂಗಿಕರಿಸಲ್ಪಟ್ಟು ಸಕಲ ದೇವರ್ಷಿ ಬ್ರಹ್ಮರ್ಷಿ ಮನುಜರ್ಷಿ ಸಿದ್ಧಯೋಗಿ ಪ್ರಥಮ ಗಣ ಪ್ರಮುಖರಿಂ ಗೋಪ್ಯಮಾಗಿ ಸರ್ವದಾ ಧರಿಸಲ್ಪಟ್ಟುದರಿಂದಾ ರುದಾಕ್ಷಮಾಲೆಯು ನೂರೆಂಟು ರುದ್ರಾಕ್ಷಗಳಿಂದ ರಚಿತಮಾಗಿಪ್ಪುದು.'

ತ್ರಿವಿಧ ಜಪಗಳು :

> **"ಜಪಸ್ತು ತ್ರಿವಿಧ : ಪ್ರೋಕ್ತೋ ವಾಚಿಕೋಪಾಂಶು ಮಾನಸಃ**
> **ಶ್ರೂಯತೇ ಯಸ್ತು ಪಾರ್ಶ್ವಸ್ಥೈರ್ಯಥಾವರ್ಣಸಮನ್ವಯಂ**
> **ವಾಚಿಕ : ಸ ತು ವಿಜ್ಞೇಯ : ಸರ್ವಪಾಪ ಪ್ರಭಂಜನ : ।**
> **ಈಷತ್ ಸ್ಪೃಷ್ಟಾಽಧರಪುಟಂ ಯೋಽಮುಂಮಭಿಧೀಯತೇ**
> **ಪಾರ್ಶ್ವಸ್ಥೈರಶ್ರುತ: ಸೋಽಯಮುಪಾಂಶು : ಪರಿಕೀರ್ತಿತ: ।**
> **ಅಸ್ಪೃಷ್ಟಾಽಧರ ಮಸ್ಪಂದಿ ಜಿಹ್ವಾಗ್ರಂ ಯೋಽಂತರಾತ್ಮನಾ**
> **ಭಾವ್ಯತೇ ವರ್ಣರೂಪೇಣ ಸ ಮಾನಸ ಇತಿ ಸ್ಮೃತ : ।"**

ವಾಚಿಕ, ಉಪಾಂಶು, ಮಾನಸ ಎಂದು ಜಪ ಮೂಬಗೆ. ವರ್ಣ ಸಮನ್ವಯುವನ್ನು ಅನುಸರಿಸಿ ಪಕ್ಕದಲ್ಲಿರುವವರಿಗೆ ಮಾತ್ರ ಕೇಳುವಂತೆ ಮಾಡುವ ಮಂತ್ರೋಚ್ಚರಣೆಯು ವಾಚಕ ಜಪವೆನಿಸುತ್ತದೆ. ಇದರಿಂದ ಎಲ್ಲ

ಪಾಪಗಳು ಪರಿಹಾರವಾಗುತ್ತವೆ. ಕೆಳದುಟಿಯನ್ನು ಕೊಂಚ ಕಂಪಿಸುತ್ತ ಮೆಲ್ಲಗೆ ಉಚ್ಚರಿಸುತ್ತ ಮತ್ತೊಬ್ಬರಿಗೆ ಕೇಳಿಸದಂತೆ ಮಾಡುವ ಮಂತ್ರ ಜಪವು ಉಪಾಂಶುವೆನಿಸುತ್ತದೆ. ಕೆಳದುಟಿಯುಲ್ಲಾಡದೆ ನಾಲಗೆ ತುದಿ ಮಿಡುಕದೆ ಅಂತರಂಗದಲ್ಲಿ ಮಂತ್ರಾಕ್ಷರಾರ್ಥಗಳನ್ನು ಭಾವಿಸುವುದೇ ಮಾನಸ ಜಪವೆನಿಸುತ್ತದೆ.

ಜಾಪಕನು ಜೀವನ ಜಂಜಡದಿಂದ ದೇಹದೋಷಗಳಿಂದ ದೂರನಾಗಿರ ಬೇಕು. ಶುಚಿಯಾಗಿ ಸರಳ ಶರೀರಿಯಾಗಿ ಸ್ಥಿರಚಿತ್ತನಾಗಿ ಮೌನಿಯಾಗಿ ಮೊದಲು ಶ್ರೀಗುರು ಚರಣ ಸ್ಮರಣವನ್ನು ಮಾಡಿ ಮಂಗಳಾತ್ಮನಾಗಿ ಕಂಬ ಳಾಸನದಲ್ಲಿ ಕುಳಿತು ಭಸ್ಮರುದ್ರಾಕ್ಷಧಾರಕನಾಗಿ ಬಳಿಕ ಮಂತ್ರವನ್ನು ಜಪಿಸ ಬೇಕು.

ತ್ರಿವಿಧ ಜಪ ಮಹಿಮೆಗಳು :

"ಯಾವಂತಃ ಕರ್ಮಯಜ್ಞಾದ್ಯಾ ವ್ರತದಾನ ತಪಾಂಸಿ ಚ |
ಸರ್ವೇತೇ ಜಪಯಜ್ಞಸ್ಯ ಕಲಾಂ ನಾರ್ಹಂತಿ ಷೋಡಶೀಮ್ ||
ಮಹಾತ್ಮ್ಯಂ ವಾಚಿಕಸ್ಯೈತಜ್ಜಪಯಜ್ಞಸ್ಯ ಕೀರ್ತಿತಂ |
ತಸ್ಮಾಚ್ಛತಗುಣೋಪಾಂಶುಃ ಸಾಹಸ್ರೋ ಮಾನಸಃ ಸ್ಮೃತಃ ||
ವಾಚಕಾತ್ತದುಪಾಂಶೋಶ್ಚ ಜಪಾದಸ್ಯ ಮಹಾಮುನೇಃ |
ಮಾನಸೋ ಹಿ ಜಪಃ ಶ್ರೇಷ್ಠೋ ಘೋರ ಸಂಸಾರ ನಾಶಕಃ ||
ಏತೇಷ್ವೇಕೇನ ವಿಧಿನಾ ಯಥಾಭಾವಂ ಯಥಾಕ್ರಮಂ |
ಜಪೇತ್ ಪಂಚಾಕ್ಷರೀಮೇತಾಂ ವಿದ್ಯಾಂ ಪಾಶವಿಮುಕ್ತಯೇ ||"

ಕಾಮ್ಯಕರ್ಮಯಜ್ಞಗಳು ವ್ರತದಾನ ತಪಗಳು ಜಪಯಜ್ಞದ ಹದಿನಾರರಲ್ಲೊಂದು ಭಾಗಕ್ಕೆ ಸರಿ ಬಾರವು. ಇದು ಈ ಮಹಾಮಂತ್ರದ ವಾಚಕ ಜಪಯಜ್ಞದ ಹಿರಿಮೆ. ಇಂತಹ ಈ ವಾಚಕ ಜಪಕ್ಕಿಂತ ಉಪಾಂಶು ಜಪವು ನೂರು ಪಾಲು ಮಿಗಿಲು. ಈ ಉಪಾಂಶುಜಪಕ್ಕಿಂತ ಮಾನಸ ಜಪವು ಸಾವಿರ ಪಾಲು ಮಿಗಿಲು. ಆದ ಕಾರಣ ವಾಚಕೋಪಾಂಶು ಜಪ ಗಳಿಗಿಂತ ಮಾನಸಜಪವೇ ಮಹಾಶ್ರೇಷ್ಠ ಮತ್ತು ಘೋರಸಂಸಾರ ಸಂಹಾರಕ. ಈ ತರತಮವನ್ನರಿತು ಇಷ್ಟವಾದೊಂದು ವಿಧಿಯಿಂದ ಕ್ರಮವನ್ನನುಸರಿಸಿ

ಭಾವವನ್ನಿರಿಸಿ ಈ ಪಂಚಾಕ್ಷರೀ ಮಹಾಮಂತ್ರವನ್ನು ಜಪಿಸಿ ಭವಪಾಶದಿಂದ ಬಿಡುಗಡೆಯನ್ನು ಪಡೆಯಬೇಕು.

ಮಾನಸ ಜಪದಿಂದ ಮನದೊಳಗುಂಟಾದ ಮಂತ್ರದ ಚಿನ್ನಾದ ಸ್ಪಂದವು ಪಿಂಡಾಂಡವನ್ನೆಲ್ಲ ಸ್ಪರ್ಶಿಸಿ ಜಾಗ್ರತೆಗೊಳಿಸುತ್ತದೆ. ಮಜ್ಜೆಮಾಂಸ ಶುಕ್ಲಶೋಣಿತಗಳೆಲ್ಲ ಶುದ್ಧವಾಗುತ್ತವೆ. ದುರಿತ ದುರ್ಮಾನಗಳು ದೂರಾಗುತ್ತವೆ.

ಮಂತ್ರ ಪೂಜಾಫಲ :

"ಅನೇನ ಮೂಲಮಂತ್ರೇಣ ಶಿವಲಿಂಗಂ ಪ್ರಪೂಜಯೇತ್
ನಿತ್ಯಂ ನಿಯಮಸಂಪನ್ನಃ ಪ್ರಯತಾತ್ಮಾ ಶಿವಾತ್ಮಕಃ ।
ಭಕ್ತ್ಯಾ ಪಂಚಾಕ್ಷರೇಣೈವ ಯಃ ಶಿವಂ ಸಕೃದರ್ಚಯೇತ್
ಸೋಽಪಿ ಗಚ್ಛೇಚ್ಛಿವಸ್ಥಾನಂ ಮಂತ್ರಸ್ಯಾಸ್ಯೈವ ಗೌರವಾತ್ ।
ಅಬ್‌ಭಕ್ಷಾ ವಾಯುಭಕ್ಷಾಶ್ಚಯೇ ಚಾನ್ಯೇವ್ರತಕರ್ಶಿತಾಃ
ತೇಷಾಮೇತೈರ್ವ್ರತೈರ್ನಾಸ್ತಿ ಶಿವಲೋಕಸಮಾಗಮಃ ।
ತಸ್ಮಾತ್ತಪಾಂಸಿಯಜ್ಞಾಶ್ಚ ವ್ರತಾನಿ ನಿಯಮಾಸ್ತಥಾ
ಪಂಚಾಕ್ಷರಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ।
ಅಶುದ್ಧೋ ವಾ ವಿಶುದ್ಧೋ ವಾ ಸಕೃತ್ಪಂಚಾಕ್ಷರೇಣ ಯಃ
ಪೂಜಯೇತ್ಪತಿತೋ ವಾಪಿ ಮುಚ್ಯತೇನಾತ್ರ ಸಂಶಯಃ ।"

ಪ್ರಣವ ಪಂಚಾಕ್ಷರಿಯು ಸಪ್ತಕೋಟಿ ಮಂತ್ರಗಳಿಗೆಲ್ಲ ಮೂಲ ಮಂತ್ರವಾಗಿದೆ. ಮೂಲತತ್ತ್ವ ಪ್ರತಿಪಾದಕವಾಗಿದೆ. ಇದರಿಂದಾಗಿ ಈ ಮಂತ್ರದಿಂದ .ಶಿವಲಿಂಗಪೂಜೆಯನ್ನು ನಿತ್ಯ ನೆರವೇರಿಸಬೇಕು ಪೂಜಕನು ನಿಯಮಸಂಪನ್ನನಾಗಿರಬೇಕು, ನಿರ್ಮಲಚಿತ್ತನಾಗಿರಬೇಕು ; ಮಂಗಳಾತ್ಮಕನಾಗಿರಬೇಕು. ತಾನು ಶಿವನಾಗಿ ಶಿವಲಿಂಗವನ್ನಾರಾಧಿಸಬೇಕು. ಪರಮ ಭಕ್ತಿಯಿಂದ ಪಂಚಾಕ್ಷರಮಂತ್ರದಿಂದ ಶಿವನನ್ನು ಒಮ್ಮೆ ಪೂಜಿಸಿದಲ್ಲಿ ಶಿವಲೋಕ ಸಂಪ್ರಾಪ್ತಿಯಾಗುತ್ತದೆ ಮಂತ್ರಮಹಿಮೆಯಿಂದ!

ಆ ಶಿವನಪೂಜೆಯಿಂದ ಸಿಕ್ಕುವ ಶಿವಲೋಕವು ಬೇರಾವ ವ್ರತಗಳಿಂದ ಸಿಕ್ಕದು. ಅನ್ನವನ್ನು ಬಿಟ್ಟು ಬರೀ ನೀರ್ಕುಡಿದು ಗಾಳಿಯನ್ನು ಸೇವಿಸಿ

ಕೃಚ್ಛ್ರಚಾಂದ್ರಾಯಣಾದಿ ವ್ರತಗಳಲ್ಲಿ ಕೃಶರಾದ ತಪಸ್ವಿಗಳಿಗೂ ಸಹ ಆ ಶಿವಲೋಕವು ಸಿಕ್ಕದು. ಇದರಿಂದಾಗಿ ತಪಯಜ್ಞಗಳು, ವ್ರತ ಹೋಮ ನೇಮಗಳು ಪಂಚಾಕ್ಷರ ಮಂತ್ರ ಪೂರ್ವಕ ಮಾಡುವ ಪೂಜೆಯ ಕೋಟಿಯ ಲ್ಲೊಂದು ಭಾಗಕ್ಕೆ ಸರಿಬಾರವು. ಅಶುದ್ಧನಾಗಲಿ ವಿಶುದ್ಧನಾಗಲಿ ಯಾರಾದ ರಾಗಲಿ ಒಮ್ಮೆ ಪಂಚಾಕ್ಷರಿಯನ್ನು ಪಠಿಸಿ ಪರಮಾತ್ಮನನ್ನು ಪೂಜಿಸಿದಲ್ಲಿ ನಿಸ್ಸಂಶಯವಾಗಿ ನಿಜಮುಕ್ತನಾಗುತ್ತಾನೆ.

ಪಂಚಾಕ್ಷರೋಪಾಸನೆಯು ಪರಮ ಶ್ರೇಷ್ಠವಾದುದು. ಆ ಪಂಚಾಕ್ಷರ ಮಂತ್ರಕ್ಕಿಂತ ಬೇರಿಲ್ಲ ಪರತತ್ತ್ವ; ಬೇರಿಲ್ಲ ಪರವಸ್ತು. ಪರಮ ಪಂಚಾಕ್ಷರ ಮಂತ್ರವೊಂದರ ಸಿದ್ಧಿಯಾದರೆ ಉಳಿದೆಲ್ಲ ಮಂತ್ರಗಳ ತಂತ್ರಗಳ ಸಿದ್ಧಿ ಸಮ ನಿಸುವುದು. ಸಕಲ ಶಾಸ್ತ್ರಗಳ ಸಾರವಾಗಿದೆ. ಸಕಲ ನಿಗಮಾಗಮಗಳ ಮೂಲವಾಗಿದೆ. ಸಕಲ ವಿದ್ಯೆಗಳಿಗೆ ಸಕಲ ಮಂತ್ರಗಳಿಗೆ ಮಾತೃಸ್ಥಾನ ದಲ್ಲಿದೆ. ಶಿವತ್ವದ ಸಂಜೀವಿನಿ ಶಿವಷಡಕ್ಷರಿ. ಪರಮತ್ವದ ಪರುಷಖಣಿ ಪಂಚಾಕ್ಷರಿ. ಪುಣ್ಯ ಪ್ರದಕಲ್ಪವಲ್ಲರಿ ಪಂಚಾಕ್ಷರಿ.

'ಅಂತ್ಯಜೋ ವಾಽಗ್ರಜೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ
ಪಂಚಾಕ್ಷರ ಜಪೇ ನಿಷ್ಠೋ ಮುಚ್ಯತೇ ಪಾಪ ಬಂಧನಾತ್ ।'

ಜಪಾಧಿಕೃತೆ :

"ಸಕೃದುಚ್ಚಾರ ಮಾತ್ರೇಣ ಪಂಚಾಕ್ಷರ ಮಹಾಮನೋಃ
ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋಭವೇತ್ ।
ಅನ್ಯೇಪಿ ಬಹವೋ ಮಂತ್ರಾ ವಿದ್ಯಂತೇ ಸಕಲಾಗಮೇ
ಭೂಯೋ ಭೂಯಃ ಸಮಭ್ಯಾಸಾತ್ ಪುರುಷಾರ್ಥ ಪ್ರದಾಯಿನಃ ।
ಏಷ ಮಂತ್ರೋ ಮಹಾಶಕ್ತಿರೀಶ್ವರ ಪ್ರತಿಪಾದಕಃ
ಸಕೃದುಚ್ಚಾರಣಾದೇವ ಸರ್ವಸಿದ್ಧಿ ಪ್ರದಾಯಕಃ ।
ಪಂಚಾಕ್ಷರೀಂ ಸಮುಚ್ಚಾರ್ಯ ಪುಷ್ಪಂ ಲಿಂಗೇ ವಿನಿಕ್ಷಿಪೇತ್

ಯಸ್ತಸ್ಯ ವಾಜಪೇಯಾನಾಂ ಸಹಸ್ರ ಫಲಮಿಷ್ಯತೇ ।
ಅಗ್ನಿ ಹೋತ್ರಂ ತ್ರಯೋವೇದಾ ಯಜ್ಞಾಶ್ಚ ಬಹುದಕ್ಷಿಣಾಃ
ಪಂಚಾಕ್ಷರ ಜಪಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ।"

ಪಂಚಾಕ್ಷರ ಮಹಾಮಂತ್ರವನ್ನು ಮರೆದೊಮ್ಮೆ ಜಪಿಸಿದರೆ ಉಚ್ಚಾರ ಮಾಡಿದರೆ ಸರ್ವಜೀವಿಗಳ ಸರ್ವ ಪಾಪಗಳು ಪಲ್ಲಟವಾಗುವವು.

ಆಗಮಗಳೆಲ್ಲವುಗಳಲ್ಲಿ ಅನೇಕ ಮಂತ್ರಗಳು ಉಕ್ತವಾಗಿವೆ. ಅವನ್ನು ಸಾಧಕನು ಮೇಲಿಂದ ಮೇಲೆ ದೀರ್ಘಾಭ್ಯಾಸ ಮಾಡಿದರೆ ಫಲಗಳನ್ನು ಕೊಡುತ್ತವೆ.

ಈಶ್ವರ ಪ್ರತಿಪಾದಕವಾದ ವಿಶೇಷ ಶಕ್ತಿ ಸಂಪನ್ನವಾದ ಈ ಪಂಚಾಕ್ಷರ ಮಹಾಮಂತ್ರವು ಒಮ್ಮೆ ಉಚ್ಚರಿಸುವುದರಿಂದಲೇ ಸರ್ವಸಿದ್ಧಿಗಳನ್ನು ಕೊಡುತ್ತದೆ.

ಪರಮ ಪಂಚಾಕ್ಷರಿಯನ್ನು ಚೆನ್ನಾಗಿ ಉಚ್ಚರಿಸುತ್ತ ಲಿಂಗದ ಮೇಲೊಂದು ಹೂವನ್ನು ಧರಿಸಿದರೆ ಸಾವಿರ ವಾಜಪೇಯಜ್ಞಗಳನ್ನು ಮಾಡಿದ ಫಲವುಂಟಾಗುತ್ತದೆ.

ಪಂಚಾಕ್ಷರ ಜಪಕ್ಕೆ ಅಗ್ನಿಹೋತ್ರ, ವೇದತ್ರಯಾಭ್ಯಾಸ, ಯಜ್ಞ ಯಾಗಾದಿಗಳು, ಬಹು ದಕ್ಷಿಣೆಯಿಂದ ಕೂಡಿದ ದಾನಗಳು ಕೋಟಿಯಲ್ಲಿ ಒಂದು ಭಾಗಕ್ಕೂ ಸರಿಬಾರವು.

'ಪೂಜಾಕೋಟಿ ಸಮಂ ಸ್ತೋತ್ರಂ, ಸ್ತೋತ್ರಕೋಟಿ ಸಮೋಜಪಃ' ಎಂಬ ಉಕ್ತಿಯು ಜಪಾಧಿಕ್ಯವನ್ನು ಉಗ್ಗಡಿಸಿದೆ. ಪೂಜೆಗಿಂತ ಸ್ತೋತ್ರ, ಸ್ತೋತ್ರಕ್ಕಿಂತ ಜಪ ಹೆಚ್ಚಿನದೆಂಬುದನ್ನು ಗಮನಿಸಬೇಕು.

'ಅರಿಯದೆ ಒಂದು ವೇಳೆ ಓಂ ನಮಃಶಿವಾಯ ಎಂದಡೆ
ಮರೆದು ಮಾಡಿದ ಹಿಂದೇಳು ಜನ್ಮದ ಕರ್ಮದ ಕಟ್ಟು ಹರಿದು
ಹೋಯಿತ್ತು ನೋಡಾ ! ಅದೊಂದು ವೇಳೆ ಓಂ ನಮಃ
ಶಿವಾಯ ಎಂದಡೆ ದುರಿತ ಸಂಕುಳವೆಲ್ಲ ದೂರಾಗಿಹವು ನೋಡಾ !
ಇದು ಕಾರಣ ಪ್ರಣವ ಪಂಚಾಕ್ಷರವನು ಜಪಿಸಿ ನಾನಾ ಭವದ
ಬಳ್ಳಿಯ ಬೇರ ಕಿತ್ತೊಗೆದೆನಯ್ಯ ಅಖಂಡೇಶ್ವರಾ !

'ಶ್ರೀಮಹಾಮಂತ್ರ ಜಪಿಸಿದಾತಂಗೆ ಮರ್ತ್ಯಲೋಕ ಮೊದಲಾಗಿ ಆವಲೋಕದಲ್ಲಿ ಹೋದರೂ ಸಮಸ್ತ ಲಿಂಗಭೋಗ ದೊರೆವುದಯ್ಯ. ಮಹಾಮಂತ್ರವ ಜಪಿಸಿದಾತಂಗೆ ಸಮಸ್ತ ಲೋಕದಲ್ಲಿ ಸತ್ಯಸಾತ್ವಿಕ ಪರೋಪಕಾರ ಸುಗುಣ ದೊರೆವುದಯ್ಯ. ಶ್ರೀ ಮಹಾ ಮಂತ್ರವ ಜಪಿಸಿದಾತಂಗೆ ಸದ್ಭಕ್ತಿ ದೊರೆವುದಯ್ಯ. ಕ್ಷಮೆ ದಯೆ ಶಾಂತಿ ಸೈರಣೆಸ ತ್ಕ್ರಿಯಾಜ್ಞಾನ, ಸದಾಚಾರ, ನಿಜ ಶಿವಯೋಗ ದೊರೆವುದಯ್ಯ. ಅದೆಂತೆಂದೊಡೆ: 'ಅಪವಿತ್ರಃ ಪವಿತ್ರೋ ವಾ ಸರ್ವ ವಸ್ತುಗತೋಽಪಿ ವಾ। ಸ್ಮರೇನ್ನಮಃ ಶಿವಾಯೇತಿ ತಸ್ಯ ಪಾಪಃ ಪ್ರಲೀಯತೇ ॥ ಸಪ್ತಕೋಟಿ ಮಹಾಮಂತ್ರ ಉಪಮಂತ್ರತಸ್ತ್ವನೇಕತಃ। ಮಹ್ಯಂ ನಮಶ್ಶಿವಾಯೇತಿ ಮಂತ್ರ ಸರೋಚ್ಯತೇ ॥' ಎಂಬುದಾಗಿ ಮಹಾಮಂತ್ರವೇ ಸಕಲ ಕಾರಣಕ್ಕೆ ಮೂಲ ಚೈತನ್ಯ ನೋಡಾ ಸಂಗನ ಬಸವೇಶ್ವರಾ.' 'ಮಂತ್ರಮಧ್ಯೇ ಭವೇಲ್ಲಿಂಗಂ ಲಿಂಗಮಧ್ಯೇ ಭವೇನ್ಮಂತ್ರಃ। ಮಂತ್ರಲಿಂಗದ್ವಯೋರೈಕ್ಯಂ ಇಷ್ಟಲಿಂಗತು ಶಾಂಕರೀ !' ಇವೆಲ್ಲ ವಚನಗಳಿಂದ ಜಪಮಹಾತ್ಮ್ಯವು ಮನದಟ್ಟಾಗುತ್ತದೆ. ಅಲ್ಲದೆ,

'ಓಂಕಾರವೆಂಬ ಮರಕ್ಕೆ ಪಟ್ಕೃತಿಯೆಂಬ ಶಾಖೆ ಪಸರಿಸಿ ಷಡಕ್ಷರಗಳೆಂಬ ತಳಿರುಕೊನರಿ ಷಟ್‌ಸ್ಥಳಗಳೆಂಬ ಕುಸುಮಗಳಾಗಿ ಷಡುಲಿಂಗಾಂಗಗಳೆಂಬ ಮೋಕ್ಷದ ಮಧುರ ಫಲಂಗಳ ತಳೆದಿಪ್ಪುದು ನೋಡಾ ! ಇದನು ನಾನು ಶ್ರುತಿ ಗುರುವಚನ ಸ್ವಾನುಭಾವಂಗಳಿಂದರಿದು ಓಂಕಾರವೆಂಬ. ವೃಕ್ಷವನೇರಿ ಓಂ ನಮಃ ಶಿವಾಯ ಎಂದು ಷಡುಲಿಂಗಾಂಗಗಳೆಂಬ ಮೋಕ್ಷದ ಮಧುರ ಫಲಂಗಳನು ಸವಿದು ನಿತ್ಯತೃಪ್ತನಾದೆನಯ್ಯ ಅಖಂಡೇಶ್ವರಾ !' ಷಡಕ್ಷರ ಮಂತ್ರಜಪದಿಂದ ಷಡ್ಧಾತು, ಷಡಿಂದ್ರಿಯ, ಷಡ್ಭಾವ, ಷಡೂರ್ಮಿ, ಷಡ್ವರ್ಗ, ಷಟ್ಕರ್ಮಗಳೆಲ್ಲವೂ ಷಡ್ಲಿಂಗ ಸ್ವರೂಪವಾಗುವವೆಂದು ಅಖಂಡೇಶ್ವರನು ಹೇಳಿದ್ದಾನೆ.

ಮಂತ್ರಸಿದ್ಧರ ಪ್ರಾಮಾಣ್ಯ :

"ಪುರಾ ಸಾನಂದಯೋಗೀಂದ್ರಃ ಶಿವಜ್ಞಾನ ಪರಾಯಣಃ
ಪಂಚಾಕ್ಷರಂ ಸಮುಚ್ಚಾರ್ಯ ನಾರಕಾನುದತಾರಯತ್ ।

ಸಿದ್ಧ್ಯೈ ಪಂಚಾಕ್ಷರಸ್ಯಾಸ್ಯ ಶತಾನಂದಃ ಪುರಾಮುನಿಃ
ನರಕಂ ಸ್ವರ್ಗಮಕರೋತ್ ಸಂಗಿರಸ್ಯಾಪಿ ಪಾಪಿನಃ ।
ಉಪಮನ್ಯುಃ ಪುರಾಯೋಗೀ ಮಂತ್ರೇಣಾನೇನ ಸಿದ್ಧಿಮಾನ್
ಲಬ್ಧವಾನ್ ಪರಮೇಶಾನಾಚ್ಛೈವ ಶಾಸ್ತ್ರ ಪ್ರವಕ್ತೃತಾಮ್ ।
ವಸಿಷ್ಠ ವಾಮದೇವಾದ್ಯಾ ಮುನಯೋ ಮುಕ್ತಕಿಲ್ಬಿಷಾಃ
ಮಂತ್ರೇಣಾನೇನ ಸಂಸಿದ್ಧಾಃ ಮಹಾತೇಜಸ್ವಿನೋ ಭವನ್ ।
ಬ್ರಹ್ಮಾದೀನಾಂಚ ದೇವಾನಾಂ ಜಗತ್ ಸೃಷ್ಟ್ಯಾದಿ ಕರ್ಮಣಿ
ಮಂತ್ರಸ್ಯಾಸ್ಯೈವ ಮಾಹಾತ್ಮ್ಯಾತ್ ಸಾಮರ್ಥ್ಯಮುಪ
ಜಾಯತೇ ।"

ಹಿಂದೊಮ್ಮೆ ಶಿವಜ್ಞಾನಿಯಾದ ಸಾನಂದಯೋಗಿಯು ಪಂಚಾಕ್ಷರವನ್ನು ಉಚ್ಚರಿಸಿ ನರಕಿಗಳನ್ನು ಉದ್ಧರಿಸಿದನು

ಪಂಚಾಕ್ಷರ ಮಂತ್ರ ಸಿದ್ಧಿಯುಳ್ಳ ಶತಾನಂದ ಮುನಿಯು ಪಾಪಿಯಾದ ಸಂಗಿರನ ನರಕವನ್ನೂ ಸ್ವರ್ಗವನ್ನಾಗಿಸಿದನು.

ಉಪಮನ್ಯು ಶಿವಯೋಗಿಯು ಇದೇ ಮಂತ್ರಸಿದ್ಧಿಯಿಂದ ಪರಮೇಶ್ವರನನ್ನೊಲಿಸಿಕೊಂಡು ವೀರಶೈವ ಶಾಸ್ತ್ರವನ್ನು ಪ್ರಭೋಧಿಸುವ ಪ್ರವೃಕ್ತತ್ವವನ್ನು ಪಡೆದನು. ಮತ್ತು ವಸಿಷ್ಠವಾಮದೇವಾದಿ ಮುನಿಗಳು ಪಂಚಾಕ್ಷರ ಮಂತ್ರ ಸಿದ್ಧಿಯಿಂದ ಮುಕ್ತದೋಷರಾಗಿ ಮಹಾತೇಜಸ್ವಿಗಳಾದರು ಬ್ರಹ್ಮ, ವಿಷ್ಣು, ರುದ್ರರು ಜಗತ್ ಸೃಷ್ಟಿಸ್ಥಿತಿಲಯ ಕಾರ್ಯಸಾಮರ್ಥ್ಯವನ್ನು ಪಂಚಾಕ್ಷರ ಮಂತ್ರ ಮಹಾತ್ಮ್ಯದಿಂದ ಸಂಪಾದಿಸಿದರು.

ಸಾನಂದ, ಶತಾನಂದ, ಉಪಮನ್ಯು, ವಸಿಷ್ಠ, ವಾಮದೇವರನ್ನು ಗ್ರಂಥಕರ್ತರು ಉದಹರಿಸಿದ್ದಾರೆ. ಪಂಚಾಕ್ಷರ ಮಂತ್ರಸಿದ್ಧರಾದ ಇತ್ತೀಚಿನ ತಿರುಜ್ಞಾನ ಸಂಬಂಧಿ, ಕೊಂಡಗುಳಿ ಕೇಶಿರಾಜ, ಅಜಗಣ್ಣ, ರಾಜಶೇಖರಾದಿಗಳ ಪ್ರಸಿದ್ಧ ನಾಮಗಳನ್ನು ನಿರ್ದೇಶಿಸಿಲ್ಲ. ಇದು ಸಹ ಈ ಕೃತಿಕಾಲ ನಿರ್ಣಯಕ್ಕೆ-ಪ್ರಾಚೀನತೆಗೆ ನಿದರ್ಶನವಾಗಿದೆ.

"ಕಿಮಿಹ ಬಹುಭಿರುಕ್ತೈರ್ಮಂತ್ರಮೇನಂ ಮಹಾತ್ಮಾ
ಪ್ರಣವ ಸಹಿತ ಮಾದೌ ಯಸ್ತು ಪಂಚಾಕ್ಷರಾಖ್ಯಂ ।

ಜಪತಿ ಪರಮಭಕ್ತ್ಯಾ ಪೂಜಯನ್ ದೇವ ದೇವಂ
ಸ ಗತದುರಿತಬಂಧೋ ಮೋಕ್ಷಲಕ್ಷ್ಮೀಂ ಪ್ರಯಾತಿ ||"

ಮಂತ್ರ ಮಹಿಮೆ ಅಪಾರವಾಗಿದೆ. ಅನೇಕ ಶಾಸ್ತ್ರಗಳು ಹೃದಯ ತುಂಬಿ ಹೊಗಳಿವೆ. ಎಷ್ಟು ಹೇಳಿದರೂ ತೀರದಷ್ಟಿದೆ. ಪ್ರಣವ ಸಹಿತವಾದ ಪಂಚಾಕ್ಷರ ಮಂತ್ರವನ್ನು ಮೊದಲು ಜಪಿಸಿ ಬಳಿಕ ಭಾವಪೂರ್ಣ ಭಕ್ತಿಯಿಂದ ಮಹಾದೇವನನ್ನು ಪೂಜಿಸಿದರೆ ದುರಿತಗಳು ದೂರಾಗಿ ಭಾವಬಂಧ ಬಿಟ್ಟು ಹೋಗಿ ಮೋಕ್ಷ ಸಂಪತ್ತು ಕೈಸಾರಿ ಬರುವುದು. ಮಂತ್ರ ಜಾಪಕನೇ ಮಹಾತ್ಮನೆಂದೆನಿಸುವನು.

ಮೊದಲು ಜಪ, ಬಳಿಕ ಪೂಜೆ ಉಕ್ತವಾಗಿದೆ. ಇದೇ ಉಚಿತವಾದುದು. ವೀರಶೈವಾಚರಣೆಯಲ್ಲಿಯೂ ಹೀಗೆಯೇ ಇದೆ. ಜಪದಿಂದ ಮೊದಲು ಮಾನಸ ವಾಸನೆಯನ್ನು ಕಳೆದು ನಿರ್ಮಲ ಮನವನ್ನಾಗಿಸಿ ಬಳಿಕ ಪೂಜಿಸುವುದು ಸೂಕ್ತ. ಮನವಿಲ್ಲದ ಪೂಜೆ ಪ್ರಯೋಜನವಿಲ್ಲ. ಮನದ ತಲ್ಲೀನತೆಗೆ ಜಪ ಧ್ಯಾನಗಳು ಸಮೀಪ ಸಾಧನಗಳು. ಮನದ ಕಾಳಿಕೆಯ ಕಳೆಯಬಲ್ಲವುಗಳು.

ಮಂತ್ರಜ್ಯೋತಿಯು ಮನದಲ್ಲಿ ಗುರುಕರಣೆಯಿಂದ ತುಂಬಿ ಒಳ ಹೊರಗೆ ಬೆಳಗುತ್ತದೆ. ಅತ್ತ ಕಾರಣಾಂಗದಲ್ಲಿ ಜ್ಞಾನಾನುಭವಜ್ಯೋತಿಯನ್ನು, ಇತ್ತ ಸ್ಥೂಲಾಂಗದಲ್ಲಿ ಸತ್ಕ್ರಿಯಾಚಾರ ನಿಷ್ಪತ್ತಿಯನ್ನು ಉಂಟು ಮಾಡುತ್ತದೆ. ಆ ಮುಮ್ಮೈ ಬೆಳಗಿನಲ್ಲಿ ಮೂರು ಲಿಂಗಗಳ ದರ್ಶನ ಲಾಭವುಂಟಾಗುತ್ತದೆ. ಆ ಕ್ರಿಯಾಜ್ಞಾನಾನುಭವರೂಪ ಬೆಳಗಿನಲ್ಲಿಯೇ ಸಾಧಕನು ಸುಳಿಯುತ್ತಿರುತ್ತಾನೆ. ಕಳೆಯಾಗಿ ಬಾಳುತ್ತಿರುತ್ತಾನೆ.

ಮಾತು ಮಾನವನಿಗಿರುವ ವಾಚಕ ಸಂಪತ್ತು. ಮಂತ್ರಮಹಾನುಭಾವರಲ್ಲಿರುವ ಮಾನಸಿಕ ಮಹಾಸಂಪತ್ತು. ಮಾನವನಿಗಿರುವುದು ಮೂರೇ ಮೂರು ಕರಣ. ಅವು ಮೈ ಮಾತು ಮನಗಳು. ಮೈಯಿಲ್ಲದೆ ಮಾತಿಲ್ಲ. ಮಾತಿಲ್ಲದೆ ಮನವಿಲ್ಲ. ಮನದಿಚ್ಛೆ ಮಾತಿನಲ್ಲಿ ವ್ಯಕ್ತವಾಗಬೇಕು. ಮಾತು ಮೈಯ ಅಂಗವಾದ ನಾಲಗೆಯಿಂದ ಮುಖದಿಂದ ಹೊರ

ಹೊಮ್ಮಬೇಕು. ಮತ್ತು ಮಾತಾಗಲಿ ಮಂತ್ರಾಗಲಿ ಮಾಳ್ಕೆಯಲ್ಲಿ ಪೂಜಾ ರೂಪಕ್ರಿಯೆಯಲ್ಲಿ ಪರ್ಯವಸಾನವಾಗಬೇಕು. ಕೃತಿಗೆ ಮಾತಿಗೆ ಮೂಲ ವಾದ ಮನಕ್ಕೆ ತಿಳಿವಿನ ಬೆಳಗನ್ನು ತರುವ ಸತ್ಯ ಸಾಧನ ಸಂಪತ್ತಿ ಮಂತ್ರ. ಮಂತ್ರೋಪಾಸನೆಯಿಂದ ಮನ ಮಾತು ಕೃತಿಗಳು ಸೋಜ್ವಲಗೊಂಡು ಸತ್ಪಥಗಾಮಿಗಳಾಗುತ್ತವೆ.

ಮಂತ್ರ ಗುರುಕವಿವಾಣಿ. ಗುರುಶಿವನ ಅಮರವಾಣಿ. ಗುರು ಮಂತ್ರ ಮೂರ್ತಿ. ಆ ಗುರುವಾಣಿಯಲ್ಲಿ ಅಮರ ನಾದ ವೊಳಗಿರುತ್ತದೆ. ಆ ದಿವ್ಯಾತ್ಮನ ಹೃದ್ಯ ಹೃದಯ ಅದರಲ್ಲಿ ಮಿಡಿಯುತ್ತಿರುತ್ತದೆ. ಆ ಮಿಡಿ ತಕ್ಕೆ ಶಿಷ್ಯನ ಜೀವ ಹಂಸವು ಹರ್ಷಾಕರ್ಷಿತವಾಗಿ ಮೇಲು ಮೇಲಕ್ಕೆ ಸಾಗುತ್ತದೆ; ಸಚ್ಚಿದಾನಂದ ಮಂದಿರ ಸೇರುತ್ತದೆ.

ಮಂತ್ರವೊಂದು ಮಹಾಚೈತನ್ಯಯುಕ್ತ ಮಹಾಕಾವ್ಯ. ಮಂತ್ರವೇ ಮಹಾವೇದ. ಆ ಮಂತ್ರದಿಂದ ಸತ್ಕ್ರಿಯಾಸಿದ್ಧಿ, ಸತ್ಯ ಜ್ಞಾನ ಸಿದ್ಧಿ. ಗುರುದತ್ತ ಮಂತ್ರ ಪರಮ ಸುಧೆ. ಅದರಲ್ಲಿ ಗುರುವಿನ ಲಿಂಗಾನಂದವು ಬೆರೆದೇಕವಾಗಿರುತ್ತದೆ. ಅದನುಂಡರೆ ಅಮರತೆ ಶತಸ್ಸಿದ್ಧ. ಅದನ್ನನು ಭವಿಸಿದರೆ ಅಖಂಡ ಪರಶಿವ ತಾನೆ.

ಪರಮಾನುಭವ ಸುಧೆಯನೀಯಬಲ್ಲ ಮಂತ್ರೋಪಾಸನೆ ಮಹಾ ತಪಸ್ಸು. ಅಪರೋಕ್ಷಾನುಭವರೂಪ ಪರಂಜ್ಯೋತಿಯನೀಯಬಲ್ಲ ಮಂತ್ರ ಚಿಂತನೆ ಮಂತ್ರ ಧಾರಣೆ ಮಂತ್ರತಲ್ಲೀನತೆ ಮಹಾ ಸಮಾಧಿ ಸಂಪತ್ತಿ.

ಸಂಸ್ಕಾರ ವಿಧಾನದಲ್ಲಿ—ಪ್ರದಾನದಲ್ಲಿ ಮಂತ್ರಸ್ಥಾನ ಸಣ್ಣದಲ್ಲ; ಮರೆಯುವಂತಹದಲ್ಲ. ನಾದಮಯವೂ ಚೈತನ್ಯಾತ್ಮಕವೂ ಆದ ಅದರ ಪ್ರಭಾವ ಸೀಮಾತೀತ. ಅದು ಕಿರಿಯಕ್ಕರಗಳಲ್ಲಿ ಮೂಡಿ ಬಂದಿದ್ದರೂ ಹಿರಿದಾದ ಅರ್ಥವುಳ್ಳದಾಗಿದೆ; ಜ್ಯೋತಿಯುಳ್ಳದಾಗಿದೆ. ಆಧ್ಯಾತ್ಮ ಅಥವಾ ಪರಮಾರ್ಥ ಜೀವನ ಸಫಲತೆಗೆ ಮಂತ್ರವೊಂದು ಮಹಾ ಕಲ್ಪ ತರುವಾಗಿನಿಂತಿದೆ. ಹೃದಯ ಹ್ರದಕ್ಕೆ ಪ್ರಾಣದೊಡನೆ ಪಂಚಾಕ್ಷರ ಮಂತ್ರವೂ ಹರಿದು ಬಂದು ಪ್ರಾಣಕ್ಕೆ ಪ್ರಾಣವಾಗಿ ನಿಲ್ಲುತ್ತದೆ. ಪರಮ

ಪ್ರಕಾಶವಾಗಿ ಪ್ರಜ್ವಲಿಸುತ್ತದೆ. ಪ್ರಾಣಶಕ್ತಿಗೆ ಪ್ರಣವ ಪಂಚಾಕ್ಷರ ಮಂತ್ರವೇ ಪರಮಪತಿ. ಪ್ರಾಣಕ್ಕೆ ಮಂತ್ರವೇ ಮನೋಹರ ಲಿಂಗ. ಪ್ರಾಣ, ಮಂತ್ರಗಳೆರಡೂ ಒಂದಾದಾಗ 'ಪ್ರಾಣಲಿಂಗ'ವೆಂಬ ಪರಮ ಪಾವನ ನಾಮ ವುಂಟಾಗುತ್ತದೆ.

ಮಾತಿನ ಮೂಲ ಪರಾಶಕ್ತಿ. ಮಂತ್ರದ ಮೂಲ ಚಿಚ್ಛಕ್ತಿ. ಮಾತು ಪ್ರಸಾದ ಲಿಂಗೋಪಾಸಕ. ಮಂತ್ರ ಮಹಾಲಿಂಗೋಪಾಸಕ. ಮಾತು ವಿಶುದ್ಧ ಜನ್ಯ. ಮಂತ್ರ ಆಜ್ಞಾಜನ್ಯ. ಮಾತು ವಾಚಕ ವ್ಯವಹಾರ. ಮಂತ್ರ ಮಾನಸಿಕ ವ್ಯವಹಾರ. ಅಂದರೆ ಮಾತು ಬಾಹ್ಯಕ್ರಿಯೆ. ಮಂತ್ರ ಅಂತಃಕ್ರಿಯೆ. ಆದ್ದರಿಂದ ಮಂತ್ರವು ಗರ್ಭಗತ ತಮವನ್ನೆಲ್ಲ ತೊಳೆಯುತ್ತದೆ. ಅಂತೆಯೇ 'ಗತ ದುರಿತ ಬಂಧಃ' ಎಂದು ಮಂತ್ರದಲ್ಲಿ ನಿರುಕ್ತವಾಗಿದೆ. ದುರಿತ ಪದಗಮನಾರ್ಹ. ದುಷ್ಕೃತವಲ್ಲ ದುರಿತ. ದುಷ್ಕೃತ ಬಾಹ್ಯ. ದುರಿತ ಆಂತರಿಕ. ದುಷ್ಟವಾಸನೆಯೆಂದರ್ಥ. ದುಷ್ಕೃತಕ್ಕೆ ಮೂಲವಾದ ದುರಿತವನ್ನು ಅಂದರೆ ದುಷ್ಟವಾಸನೆಯನ್ನು ಮಂತ್ರವು ಓಡಿಸುತ್ತದೆ.

ಮಂತ್ರ ಆತ್ಮವಾಣಿ; ಆತ್ಮ ನಿವೇದನ ಧ್ವನಿ. ಆತ್ಮ ಸಂಪತ್ತನ್ನು ಸಂಪಾದಿಸುವ ಆಂತ ಶಕ್ತಿ. ಆದ್ದರಿಂದ ಮಂತ್ರೋಪಾಸಕನು 'ಮೋಕ್ಷ ಲಕ್ಷ್ಮೀಂ ಪ್ರಯಾತಿ' ಎಂದು ಮಹಾನುಭಾವಿ ರೇಣುಕರು ಉಪದೇಶಿಸಿದ್ದಾರೆ.

ವೀರಶೈವ ಶ್ರೀಗುರು ಶಿಷ್ಯನಿಗೆ ಸುಮ್ಮನೇ ಮಂತ್ರೋಪದೇಶವನ್ನು ಮಾಡುವುದಿಲ್ಲ. ಮೊದಲು ಕ್ರಿಯಾ ದೀಕ್ಷೆಯಿಂದ ಶಿಷ್ಯನ ಕರಸ್ಥಲಕ್ಕೆ ಕ್ರಿಯಾಲಿಂಗವನ್ನು ಕರುಣಿಸಿ ಶಿಷ್ಯನ ಕಾಯವನ್ನು ಕ್ರಿಯಾಲಿಂಗವನ್ನಾಗಿಸಿ ಬಳಿಕ ಆ ಕ್ರಿಯಾಲಿಂಗದ ನಾಮದಂತಿರುವ ಮಂತ್ರವನ್ನು ಕರ್ಣ ಮುಖದಿಂದ ಮನಕ್ಕೆ ಬೋಧಿಸುತ್ತಾನೆ. ಲಿಂಗದ ನಾಮವೇ ಮಂತ್ರ. ನಾಮದ ಪಾತ್ರೆ ಮನಸ್ಸು.

ಮಂತ್ರ ಪ್ರಾಣಲಿಂಗದ ಸತ್ಯಸೂತ್ರ. ಮಂತ್ರ ಪ್ರಾಣಲಿಂಗವೆಂಬ ಭೃಂಗದ ಪ್ರಾಣಪುಷ್ಪ. ಆ ಪುಷ್ಪ ಮಕರಂದವನ್ನು ಪ್ರಾಣಲಿಂಗವು ಸ್ವೀಕರಿಸಿ ಪರಿಣಮಿಸುತ್ತದೆ.

ಮಂತ್ರ ಶಬ್ದವಲ್ಲ. ಪ್ರಾಣಲಿಂಗದ ಪ್ರಜ್ಞೆ. ಪ್ರಾಣದ ಊರ್ಧ್ವಗತಿಗೆ ಪ್ರೇರಕ: ಉದ್ಬೋಧಕ. ಓಂ ಎಂದಾಗ ಪ್ರಾಣಶಕ್ತಿ ಊರ್ಧ್ವಗಾಮಿಯಾಗುತ್ತದೆ. ಮನದೊಡನೆ ತ್ರಿಪುಟಿಯಲ್ಲಿ ಸಂಪುಟಗೊಳ್ಳುತ್ತದೆ. ಸೌಂಖ್ಯತಾರಕ ಯೋಗಗಳನ್ನು ಸಹಜವಾಗಿ ಸಂಗಳಿಸಿಕೊಂಡು ಅಮನಸ್ಕವಾಗಿರುತ್ತದೆ. ಶಿವಯೋಗ ನಿದ್ರಾಮುದ್ರಿತವಾಗಿರುತ್ತದೆ. ಇದಕ್ಕಿಂತ ಇನ್ನೆಂತಹ ಮೋಕ್ಷಪ್ರಾಪ್ತಿ ?

ಶಬ್ದ ಸಂಪತ್ತು ಬ್ರಹ್ಮವಸ್ತುವನ್ನು ತನ್ನ ಗರ್ಭದಲ್ಲಿರಿಸಿಕೊಳ್ಳಬಲ್ಲುದೆಂಬ ವೈಚಾರಿಕ ಹಾಗು ವೈಜ್ಞಾನಿಕ ಪ್ರಗತಿಯನ್ನು ಷಟ್‌ಸ್ಥಲವು ತನ್ನ ಮಂತ್ರ ಸಂಸ್ಕೃತಿಯಲ್ಲಿ ಸಾಟಿದೆ.

ಭಕ್ತ ಮಾರ್ಗ ಕ್ರಿಯಾಸ್ಥಲ

"ಸರ್ವತ್ರ ಭಕ್ತಿರೇಕ್ಯೈವ ಭಕ್ತಾನಾಂ ಮುಕ್ತಿ ಸಾಧನಮ್"

—ಪಾರಮೇಶ್ವರ ತಂತ್ರ.

ಭಕ್ತನು ಮುಕ್ತನಾಗುವ ಮಾರ್ಗದಲ್ಲಿ ಮುಂದುವರಿಯಲು ಬೇಕಾದ ಕ್ರಿಯೆಯೆಂದರೆ ಭಕ್ತಿ. ಈ ಮಾರ್ಗ ಕ್ರಮಣದಲ್ಲಿ ಇದೊಂದು ಬುತ್ತಿ. ಇದಿಲ್ಲದಿದ್ದರೆ ಜೀವನಕ್ರಿಯೆ ಜರಗದು. ಭಕ್ತಿ ಬಾಳಿನ ಜೀವಾಳ. ಧರ್ಮವೆಲ್ಲವುಗಳ ಮೂಲ. ಭಕ್ತಿಯಿಲ್ಲದ ಕ್ರಿಯೆಯಾಗಲಿ, ಜ್ಞಾನವಾಗಲಿ, ಇನ್ನಾವುದಾಗಲಿ ಎಲ್ಲವೂ ನೀರಸ; ನೀಹಾರ ಸದೃಶ.

ಭಕ್ತಿಯುಳ್ಳವನು ಭಕ್ತ. ಭಕ್ತಿಯ ಮೂಲಧನ ಪಾವನ ಪ್ರೇಮ. ಪ್ರೇಮ ಬಹು ವಿಶಾಲವಾದುದು, ವಿಶುದ್ಧವಾದುದು. ಅಂತಹ ಪ್ರೇಮವು ಯಾವ ಬಗೆಯಲ್ಲಿಯೂ ಸಂಕುಚಿತವಾಗಬಾರದು; ಕಲುಷಿತವಾಗಬಾರದು. ಸಂಕುಚಿತವಾಗಬಾರದೆಂದು ಹೇಳಿದ ಬಳಿಕ ಸ್ವಾರ್ಥವಾಗಬಾರದೆಂದು ಬೇರೆ ಹೇಳಬೇಕಾದ ಕೆಲಸವಿಲ್ಲ.

ಪ್ರೇಮ ಜೀವನದ ಮೂಲ ಬೀಜ. ಅದು ಶುದ್ಧವಾದಷ್ಟು ಜೀವನ ಶುದ್ಧವಾಗಿರುತ್ತದೆ. ಅದು ಪ್ರಬುದ್ಧವಾದಷ್ಟು ಜೀವನ ಪ್ರಬುದ್ಧವಾಗುತ್ತದೆ. ಮರ ಚೆನ್ನಾಗಿ ಬೆಳೆದು ಹೆಚ್ಚಾಗಿ ಫಲಿಸಬೇಕಾದರೆ ಬೀಜ ಪರಿಪುಷ್ಟವಾಗಿರಬೇಕು; ಹುಳ ಬೀಳದಿರಬೇಕು. ಶುದ್ಧ ಪ್ರೇಮವೇ ಸರ್ವಧರ್ಮ, ಶ್ರೇಷ್ಠ ಧರ್ಮ. ಮತ್ತು ಅದುವೇ ದೇವರು. ದಯೆ ಧರ್ಮವೆಂದು ಸತ್ಯದೇವರೆಂದು ಹೇಳುವವರಿದ್ದಾರೆ. ವಿಚಾರಿಸಿದರೆ ಅವೆರಡಕ್ಕೂ ಪ್ರೇಮವೇ ಮೂಲಾಧಾರವಾಗಿದೆ. ವಿಶುದ್ಧ ವಿಶಾಲ ಪ್ರೇಮವಿಲ್ಲದೆ ದಯೆ ಬಾರದು. ಧರ್ಮ ಮೊಳೆಯದು. ಶುದ್ಧಪ್ರೇಮವೇ ಸತ್ಯದ ತಳಹದಿ. ಪರಮ ಪ್ರೇಮವಿಲ್ಲದೆ ಸತ್ಯ ಬಾರದು. ಪರಮಪ್ರೇಮವೇ ಪರಮಾತ್ಮರೂಪು.

ದೇಶ ಕಾಲ ವಸ್ತು ಪರಿಚ್ಛೇದವಿಲ್ಲದೆ ಸ್ವಾರ್ಥಭೂತ ಕಡೆಯಿಲ್ಲದೆ ಸರ್ವಭೂತಗಳಲ್ಲಿ ಸರ್ವಭೂತನಾಥನಲ್ಲಿ ತೋರುವ ಇರಿಸುವ ಪ್ರೇಮವೆ ಭಕ್ತಿ. ಈ ಭಕ್ತಿಗೆ ಅಸಾಧ್ಯವಾದುದಿಲ್ಲ. ಇದನ್ನು ಬಿಟ್ಟು ಇನ್ನಾವ ಸಾಧನವೂ ಸಫಲವಾಗುವುದಿಲ್ಲ ; ಸಹಜವೂ ಸರಸವೂ ಆಗುವುದಿಲ್ಲ. ಅಂತಹ ಭಕ್ತಿಯುಳ್ಳವನೇ ಭಕ್ತ. ಆ ಭಕ್ತನಲ್ಲಿ ಭಗವಂತನು ನಿಮಿಷವೂ ಅಗಲದೆ ನಚ್ಚಿನಿಂದ ನೆಲಸಿರುತ್ತಾನೆ. ಭಕ್ತನ ಕಾಯವೇ ಆತನ ಕಾಯ. ಆ ಭಕ್ತನಿಗೆ ಮೃತ್ಯುಭಯವಿಲ್ಲ. 'ನ ಮೇ ಭಕ್ತಃ ಪ್ರಣಶ್ಯತಿ.' ಎಂದಿದೆ ಗೀತೆ. ಅಂತಹ ಭಕ್ತನ ಮಾರ್ಗ ಕ್ರಿಯೆಯನ್ನು ಈ ಪ್ರಕರಣದಲ್ಲಿ ಈ ಪರಿಚ್ಛೇದದಲ್ಲಿ ಶ್ರೀ ಜಗದ್ಗುರು ರೇಣುಕ ಪೂಜ್ಯರು ಪ್ರಬೋಧಿಸಿದ್ದಾರೆ :

ಮಾನವನು ಸಚ್ಚಾರಿತ್ರವುಳ್ಳವನಾಗಬೇಕಾದರೆ ಶಿವಭಕ್ತಿ ಸಂಪನ್ನ ನಾಗಬೇಕು. ಭಕ್ತಿ ಮಾರ್ಗದ ಸತ್ಕ್ರಿಯೆಗಳನ್ನು ಆಚರಿಸಬೇಕು. ಆಚರ ಣೆಗೆ ಅನುಗುಣವಾದ ವೇಷಭೂಷಣಗಳಿರಬೇಕು ಭಾಷೆ ಭಾವಗಳಿರಬೇಕು; ಎಂಬುದಾಗಿ ಮೈ ಮನ ತುಂಬುವಂತೆ ತಿಳಿಹೇಳಿದ್ದಾರೆ ಮುಂಬರುವ ಮಂತ್ರಗಳಲ್ಲಿ !

"ಭೂತಿ ರುದ್ರಾಕ್ಷ ಸಂಯುಕ್ತೋ ಲಿಂಗಧಾರೀ ಸದಾ ಶುಚಿಃ
ಪಂಚಾಕ್ಷರ ಜಪೋದ್ಯೋಗೀ ಶಿವಭಕ್ತ ಇತಿ ಸ್ಮೃತಃ ।"

ಶಿವನ ಸಾಧನ ಸಂಪತ್ತಿಯಿದು. ವ್ಯಕ್ತಿಯ ಹೃದಯದಲ್ಲಿ ವಿಶ್ವದ ಅಣು ಅಣುವಿನಲ್ಲಿ ನೆಲಸಿರುವ ಈಶ್ವರನ ದರ್ಶನವಾಗಬೇಕಾದರೆ ದೇವಭಕ್ತ ನಾಗಿರಬೇಕು. ದೇವಭಕ್ತ ನೆನಿಸಬೇಕಾದರೆ ಆ ದೇವನ ಕಳಾರೂಪಾದ ವಿಭೂತಿಯನ್ನು ಬಿಂದುರೂಪಾದ ರುದ್ರಾಕ್ಷವನ್ನು ಚೈತನ್ಯರೂಪಾದ ಲಿಂಗ ವನ್ನು ಕಾಯದಲ್ಲಿ ಧರಿಸಬೇಕು. 'ಶ್ರೀ ವಿಭೂತಿ ರುದ್ರಾಕ್ಷಿಯಿದ್ದವರ ಲಿಂಗವೆಂಬೆ.; ಇಲ್ಲಿದವರ ಭವಿಯೆಂಬೆ. ಕೂಡಲಸಂಗಮ ದೇವಾ, ಸದ್ಭಕ್ತರ ನೀನೆಂಬೆ.' ಆತನ ನಾದರೂಪಾದ ಪಂಚಾಕ್ಷರ ಮಂತ್ರವನ್ನು ವಾಙ್ಮನ ಗಳಲ್ಲಿ ಜಪಿಸುವ ಉದ್ಯೋಗ ನಿರತನಾಗಿರಬೇಕು. ಸದಾ ಶುಚಿಯಾಗಿರ ಬೇಕು. ಈ ಪಂಚ ಲಕ್ಷಣಗಳಿಂದ ಕೂಡಿದವನು 'ಶಿವಭಕ್ತ'ನೆನಿಸುತ್ತಾನೆ.

ಶಿವಭಕ್ತನಿಗೆ ತ್ರಿಕರಣ ಶುದ್ಧಿ ಮುಖ್ಯ. ಕಾಯವಾಙ್ಮನಗಳಲ್ಲಿ ಭಕ್ತನು ಸದಾ ಶುಚಿಯಾಗಿರಬೇಕು. ಭೂತಿ ರುದ್ರಾಕ್ಷ ಲಿಂಗಧಾರಣಗಳು ಉಭಯಾಂಗ ಶುದ್ಧಿಯನ್ನು ಪಂಚಾಕ್ಷರ ಜಪಯೋಗವು ವಾಙ್ಮನಗಳೆರಡರ ಶುದ್ಧಿಯನ್ನು ಉಂಟು ಮಾಡುತ್ತವೆ. ಶರೀರೇಂದ್ರಿಯ ಸಂಯಮ, ಆತ್ಮ ಸಂಯಮ ಭಕ್ತನಿಗೆ ಅತ್ಯಾವಶ್ಯಕಗಳು. ಈ ದಿಸೆಯಲ್ಲಿ 'ಸದಾಶುಚಿಃ' ಎಂಬ ವಿಶೇಷಣವು ವಿಶೇಷ ಗಮನಾರ್ಹವಾದುದು. ಎಲ್ಲೆಲ್ಲಿಯೂ ಯಾರಲ್ಲಿಯೂ ರಾಗ ದ್ವೇಷರಹಿತನಾಗಿರಬೇಕು. ಸಕಲ ಕರಣೇಂದ್ರಿಯ ಗಳಲ್ಲಿ ಶುಚಿತನವನ್ನು ಸಂರಕ್ಷಿಸಿಕೊಂಡಿರಬೇಕು.

ಭಕ್ತನು ಭವದ ಜಾಡ್ಯಕರ್ಮಗಳನ್ನು ನೀತಿದೃಷ್ಟಿಯಲ್ಲಿ ನಿಂದ್ಯಕರ್ಮ ಗಳನ್ನು ಕೈಬಿಡಬೇಕು. ಭೂತಿ ಧಾರಣಾದಿ ಕ್ರಿಯಾ ನಿರತನಾಗಿರಬೇಕು. ನಿಂದ್ಯನುಡಿಗಳನ್ನು ನಿರರ್ಥ ನುಡಿಗಳನ್ನು ನಿಲ್ಲಿಸಬೇಕು. ನಿಜಾನುಭೂತಿ ಯನ್ನುಂಟು ಮಾಡುವ ಮಂತ್ರಜಪ ನಿರತನಾಗಬೇಕು. ನಿಜ ಚೈತನ್ಯ ಸ್ವರೂಪವಾದ ಲಿಂಗದೇವಾರಾಧನೆಯಲ್ಲಿ ನಿರತನಾಗಿರಬೇಕು. ಹುಲು ದೈವಂಗಳಿಗೆಳಸಬಾರದು. ಪವಿತ್ರ ಪ್ರೇಮವನ್ನು ಹರಿದು ಹಂಚಬಾರದು. ಎಲ್ಲ ಯೋಗಗಳಲ್ಲಿ ಭಕ್ತಿಯೋಗವು ಮಿಗಿಲಾದುದು. ದೇವನಿಗೆ ಪ್ರಿಯ ವಾದುದು.

'ಪಂಚಾಕ್ಷರ ಜಪೋದ್ಯೋಗೀ' ಎಂಬ ಪದ ಪ್ರಯೋಗವು ವಿಚಾರ ಣೀಯವಾಗಿದೆ. ಪಂಚಾಕ್ಷರ ಜಪವು ಒಂದು ಉದ್ಯೋಗ; ಊರ್ಧ್ವ ಗಾಮಿಯೂ ಉತ್ತಮವೂ ಆದ ಯೋಗ. ಅದು ಕಾಯಿಕವೂ ಅಹುದು, ವಾಚಿಕವೂ ಅಹುದು; ಮಾನಸಿಕವೂ ಅಹುದು. ಈ ಜಪೋದ್ಯೋಗವು ತ್ರಿಕರಣಶುದ್ಧಿಗೆ ಶ್ರೇಷ್ಠ ಸಾಧನವಾಗಿದೆ; ಸಹಜ ಸಾಧನವಾಗಿದೆ. ಜಪಿಸು ವುದೂ ಒಂದು ಉದ್ಯೋಗ. ತ್ರಿವಿಧ ಕಾಯಕ ಆದರಲ್ಲಿ ಅಡಕವಾಗಿವೆ ಅದ ರಿಂದ ತ್ರಿಕರಣಗಳು ಉದ್ಗಮನವುಳ್ಳವುಗಳಾಗುತ್ತವೆ. ಉತ್ತಮಶೀಲವುಳ್ಳವು ಗಳಾಗುತ್ತವೆ. ಆದ್ದರಿಂದ ಇದು ಶಿವಭಕ್ತನಿಗೆ ಸನ್ನಿಹಿತ ವಿಶೇಷಣವಾಗಿ ಪ್ರಯುಕ್ತವಾಗಿದೆ. ಜಪಯೋಗವನ್ನು ಮಾಡುವವನು 'ಜಪೋದ್ಯೋಗೀ' ಎಂದೆನಿಸಿಕೊಳ್ಳುತ್ತಾನೆ.

ಜಪ ಭಕ್ತಿಲತೆಯ ಪುಷ್ಪ. ಅದರ ಅಂದವೇನು ? ಗಂಧವೇನು ? ಮಕರಂದವೇನು? ಇವುಗಳಿಗೊಲಿದು ಲಿಂಗ ಆಯತ ಸ್ವಾಯತ ಸನ್ನಿಹಿತವಾಗಿ ರುತ್ತದೆ. ಅಂದ ಸ್ಥೂಲಾಂಗ, ಗಂಧ ಸೂಕ್ಷ್ಮಾಂಗ, ಮಕರಂದಕಾರಣಾಂಗ ಸ್ಥೂಲಾಂಗ ಶಬ್ದಮಯೀ. ಸೂಕ್ಷ್ಮಾಂಗ ಅರ್ಥಮಯೀ. ಕಾರಣಾಂಗ ಅನುಭವಾಮೃತಮಯೀ. ಮಂತ್ರದ ಸ್ಥೂಲಾಂಗವಾದ ಶಬ್ದದಲ್ಲಿ ಇಷ್ಟ ಲಿಂಗವಿದೆ; ಅಥವಾ ಶಬ್ದವೇ ಇಷ್ಟಲಿಂಗವಾಗಿದೆ. ಮಂತ್ರದ ಸೂಕ್ಷ್ಮಾಂಗ ವಾದ ಅರ್ಥದಲ್ಲಿ ಪ್ರಾಣಲಿಂಗವಿದೆ; ಅಥವಾ ಅರ್ಥವೇ ಪ್ರಾಣಲಿಂಗವಾಗಿದೆ. ಮಂತ್ರದ ಕಾರಣಾಂಗವಾದ ಅನುಭವದಲ್ಲಿ ಭಾವಲಿಂಗವಿದೆ; ಅಥವಾ ಅನುಭವವೇ ಭಾವಲಿಂಗವಾಗಿದೆ. ಆದ್ದರಿಂದ ಮಂತ್ರವನ್ನು ಜಪಿಸುವಾತನು ಉತ್—ಯೋಗೀ ! ಆತ ಆ ಶಿವಪ್ರೇಮಿ; ಸರ್ವಾಂಗ ಶುಚಿ; ಸರ್ವಾಂಗ ಲಿಂಗಿ.

ಈ ಸ್ಥಲದಲ್ಲಿರುವ ಭಕ್ತನಿಗೆ ಸತ್ಕ್ರಿಯಾರೂಪ ಆಚಾರವೇ ಲಿಂಗ. ಆಚಾರವೇ ಪ್ರಾಣ. ನಿಚ್ಚಟವಾದ ನಂಬುಗೆಯೆ ಆ ಆಚಾರ ಲಿಂಗದ ಅಂಗ. ಶ್ರದ್ಧೆಯೆಂಬ ಅರ್ಥದಲ್ಲಿ ನಂಬುಗೆಯೆಂದು ಹೇಳಿದ್ದೇವೆ. ನಿವೃತ್ತಿಯೇ ಲಿಂಗಕ್ಕೆ ಅಂದರೆ ಆಚಾರಕ್ಕೆ ಕಳೆ. ನಿವೃತ್ತಿಯೆಂದರೆ ಸರ್ವೇಂದ್ರಿಯಗಳು ಸರ್ವಾಂತಃಕರಣಗಳು ಸತ್ಕ್ರಿಯೆಗಳಲ್ಲಿ ಸದಾ ನಿರತವಾಗಿರುವಿಕೆ. ಆ ಸತ್ಕ್ರಿಯೆಗಳಲ್ಲಿರಿಸಿದ ಶ್ರದ್ಧೆಯೇ ಸತ್ಯಶುದ್ಧ ಭಕ್ತಿ. ಇದುಳ್ಳವನೇ ಭಕ್ತ. ಶಿವಾತ್ಮಿಕನಾಗಿರುವವನೇ ಶಿವಭಕ್ತ.

"ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ।
ಏವಂ ನವವಿಧಾ ಭಕ್ತಿಃ ಪ್ರೋಕ್ತಾ ದೇವೇನ ಶಂಭುನಾ
ದುರ್ಲಭಾ ಪಾಪಿನಾಂ ಲೋಕೇ ಸುಲಭಾ ಪುಣ್ಯಕರ್ಮಣಾಂ ॥"

ಶ್ರವಣಂ: ಕೇಳುವುದೊಂದು ಕ್ರಿಯೆ. ಆದರೆ ಕೇಳಿದ್ದೆಲ್ಲವು ಕ್ರಿಯೆ ಯಲ್ಲ. ನಿವೃತ್ತಿ ಪರವಾದುದೇ ಕ್ರಿಯೆ. ಪ್ರವೃತ್ತಿ ಪರವಾದುದು ಕರ್ಮ. 'ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ.' ಕೇಳಬಾರದ್ದನ್ನೆಲ್ಲ ಕೇಳಬಾರದು. ಕೇಳಿದರೆ ಪ್ರಯೋಜನವಿಲ್ಲ. ಮನ ಘನವಾಗುವುದಿಲ್ಲ.

ಮನ ತನ್ನೊಳಗೆ ನಿಲ್ಲುವುದಿಲ್ಲ. ಕಾರಣ ಕೇಳಬಾರದ್ದನ್ನು ಕೇಳಬಾರದು. 'ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ' ಇದು ಕ್ರಿಯೆ. ಶಿವಾನುಭವ ಪ್ರವಚನವೇ ಶಿವ ಕೀರುತಿ. ಇದನ್ನು ಕೇಳುವುದೇ ಕರ್ಣಕ್ರಿಯೆ ಅಥವಾ ಶ್ರವಣಕ್ರಿಯೆ. ಪಿಕ್ಕವರ ಬಾಯಿಂದ ಸಾಮಾನ್ಯರ ಬಾಯಿಂದ ಕೇಳಿದರೆ ಸುಖವಿಲ್ಲ; ಶ್ರವಣಕ್ರಿಯೆಯೆನಿಸುವುದಿಲ್ಲ. 'ಶ್ರೀ ಗುರುವಚನದಿಂದ ಅಧಿಕ ಸುಧೆಯುಂಟೆ?' ನಿಜಗುಣರ ಈ ನಿಜೋಕ್ತಿಯಂತೆ ತನ್ನ ಶ್ರೀಗುರು ವಚನದಿಂದ ಬಂದುದೇ ತನಗೆ ಸುಧೆ; ತನ್ನ ಕರ್ಣಾಮೃತ. ಇಷ್ಟಾದರೂ ಶ್ರವಣವು ಕ್ರಿಯೆಯೆನಿಸಿತಲ್ಲದೆ ಭಕ್ತಿಯೆನಿಸಲಿಲ್ಲ. ತನ್ನ ಶ್ರೀಗುರು ವಚನ ಸುಧೆಯಿಂದ ಬರುವ ಶಿವಾನುಭವರೂಪ ಶಬ್ದಬ್ರಹ್ಮದಲ್ಲಿ ಶ್ರದ್ಧೆಯನ್ನಿಟ್ಟರೆ ಅಂದರೆ ಕರ್ಣದೊಡನೆ ಮನವನ್ನೂ ಇರಿಸಿದರೆ ಆಗ 'ಶ್ರವಣ ಭಕ್ತಿ' ಯೆನಿಸುತ್ತದೆ. ಇದರಿಂದ ಕಿವಿಯ ಸೂತಕ ಕಳೆಯುತ್ತದೆ. 'ಕಿವಿಯ ಸೂತಕ ಹೋಯಿತ್ತು ಸದ್ಗುರು ವಚನದಿಂದೆ!' ಎಂಬುದು ಬಸವಣ್ಣನವರ ಸಾಕ್ಷಿವಚನ. ಸದ್ಗುರು ವಚನ ಶ್ರವಣದಿಂದಲ್ಲದೆ ಶ್ರೋತ್ರ ಸೂತಕ ಅಳಿಯದು.

ಶ್ರವಣ ಭಕ್ತಿಯಲ್ಲಿ ತರ್ಕದ ತಿಕ್ಕಾಟವಿರಬಾರದು. ಸಂಶಯವುಂಟಾದರೆ ವಿನಯದಿಂದ ಭಯಭಕ್ತಿಯಿಂದ ಬಿನ್ನವಿಸಿಕೊಂಡು ಸಂಶಯನಿವೃತ್ತಿ ಮಾಡಿಕೊಳ್ಳಬಹುದಲ್ಲದೆ ನಾನು ಬಲ್ಲೆನೆಂಬ ಹಮ್ಮಿನಿಂದ ತರ್ಕ ವಿತರ್ಕಗಳನ್ನು ಮಾಡಬಾರದು. ಮಾಡಿದರೆ ಭಕ್ತಿ ಮಾರ್ಗಕ್ಕೆ ಹೊರಗು. ಅಮೃತ ಪ್ರಾಪ್ತಿಗೆ ಹೊರಗು. 'ಶಬ್ದ ಸುಖಕ್ಕೆ ಮೆಚ್ಚಿ, ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ! ಅನುಭಾವ ಅಕ್ಕವೆಯಾಗದೆ (ಅಳವಡದೆ), ಬೆಬ್ಬನೆ ಬೆರೆತೆನಯ್ಯಾ! ಅಮೃತದ ಕೊಡನ ತುಂಬಿ ಒಡೆಯೆ ಹೊಯ್ದು ಅರಸಲುಂಟೆ? ಸ್ವಾಮಿ—ಭೃತ್ಯ ಸಂಬಂಧವೆ ಎನ್ನ ಭಕ್ತಿ; ಪ್ರತ್ಯುತ್ತರ ನಾಯಕ ನರಕ, ಕೂಡಲಸಂಗಮ ದೇವಾ.' ಬಲ್ಲೆನೆಂಬ ಹಮ್ಮಿನಿಂದ ಮಾಡುವ ತರ್ಕ ವಿತರ್ಕ ಸ್ವಾಮಿ—ಭೃತ್ಯ ಸಂಬಂಧಕ್ಕೆ ದೂರ. ಭಕ್ತಿ ಪಂಥಕ್ಕೆ ದೂರ. ಭಾವಪೂರ್ಣ ಅನುಭಾವಕ್ಕೆ ದೂರ. ಪ್ರತಿಯಾಗಿ ಪರಿಮಿತಿಯಿಲ್ಲದ ದುಃಖಕ್ಕೆ ದಾರಿ; ದುರ್ಗತಿಗೆ ದಾರಿ.

ಶ್ರವಣ ಅಖಂಡವಾಗಬೇಕು. ಕೇವಲ ಕಿವಿಯೊಂದರಲ್ಲಿ ಕೇಳಿ ಬಿಟ್ಟರೆ ಅಖಂಡವಾಗದು ; ಅದು ಖಂಡ ಶ್ರವಣ. ತ್ರಿಕರಣಗಳಲ್ಲಿ ತುಂಬಿ ಕೊಂಡರೆ ಅಖಂಡವಾಗುತ್ತದೆ. ಆಗ ಶ್ರವಣ ಭಕ್ತಿಗೆ ಬಣ್ಣವೇರುತ್ತದೆ. ಮನವಿಟ್ಟು ಕೇಳಬೇಕು. ಕೇಳಿದಂತೆ ನಡೆಯಬೇಕು. ನಡೆದಂತೆ ನುಡಿಯ ಬೇಕು. ಇಲ್ಲವಾದರೆ ಶ್ರವಣ ಸುವರ್ಣ ಒರೆಗೆ ಬಾರದು.

'ಶಬ್ದ ಸಂಭಾಷಣೆಯ ನಡಿಯ ವರ್ತಿಸಿ ನುಡಿವೆ :
ತೊಡಹದ ಬಣ್ಣದ ಕೆಲಸವಂತೆ ಕಡಿಹಕ್ಕೆ ಒರೆಗೆ ಬಾರದು ನೋಡಾ !
ಎನ್ನ ಮನದಲೊಂದು, ಹೃದಯದಲೊಂದು, ವಚನದಲೊಂದು
ನೋಡಾ ! ಕೂಡಲಸಂಗಮ ದೇವಾ, ಆನು ಭಕ್ತನೆಂಬ ಹುಸಿಯ
ಮುಸಕವನೇನ ಬಣ್ಣಿಸುವೆನಯ್ಯಾ !'

ಶ್ರವಣ ಕರಣವೊಂದಂದರಲ್ಲಿಯೇ ತುಂಡವಾಗಬಾರದು. ಕೇಳಿಬಿಟ್ಟರೆ ಸಾಲದು ; ಹೇಳಿಬಿಟ್ಟರೆ ಸಾಲದು. ಕೇಳಿದಂತೆ ಹೇಳಿದಂತೆ ಕ್ರಿಯೆಯಲ್ಲಿ ಕರಿಗೊಳ್ಳಬೇಕು. ಆಗ ಶ್ರವಣ ಭಕ್ತಿಯು ಭಕ್ತ ಮಾರ್ಗಕ್ರಿಯೆಯೆನಿಸು ತ್ತದೆ. ಭಕ್ತ ಜೀವನದ ಬೆನ್ನಾಸರವಾಗುತ್ತದೆ. ಬೆಳು ಬಾಳಿನ ಬೆಳಗಾಗುತ್ತದೆ.

ಶ್ರೀಗುರು ವಚನೋಪದೇಶವನ್ನು ಕೇಳುವುದೆ ಶ್ರವಣ. ಈ ಶ್ರವಣ ದಲ್ಲಿ ಶಿವ ಸಂಸ್ಕಾರವಿದೆ. ಇದರಿಂದ ಪ್ರೇಮ ಪಾವನವಾಗುತ್ತದೆ. ಪ್ರೇಮ ಪಾವನವಾಗುವುದಕ್ಕಿಂತ ಬೇರಿಲ್ಲ ಪುಣ್ಯ, ಬೇರಿಲ್ಲ ಮುಕ್ತಿ. 'ಶ್ರೀಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ ! 'ಶ್ರುತಂ ಹರತಿ ಪಾಪಾನಿ' ಈ ಉಕ್ತಿಗಳು ಶ್ರವಣಭಕ್ತಿಯ ಶ್ರೇಷ್ಠತೆಗೆ ಸಾಕ್ಷಿಗಳು. ಇಂತಹ ಈ ಶ್ರವಣ ಭಕ್ತಿ ಕರಣಭಕ್ತಿಗಳಲ್ಲಿ ಒಂದು. ಮುಕ್ತಿ ಕಾರಣ ಸಾಮಗ್ರಿಯಲ್ಲಿ ಮುಂದು.

ಕೀರ್ತನಂ : ಶ್ರವಣ ವಿಷಯ ಕೀರ್ತಿ. ವದನ ವಿಷಯ ಕೀರ್ತನ. ಜಿಹ್ವೇಂದ್ರಿಯ ಭಕ್ತಿ ಕೀರ್ತನ. ಶಿವನ ಸ್ತುತಿಸುವುದು ಕೀರ್ತನ. ಕೀರ್ತನ ವೆಂದರೆ ಹೊಗಳು—ಹೇಳು ಎಂದರ್ಥ. ಹಾಡುವದನ್ನೇ ಮಾಡಲಿ, ಆಡುವುದನ್ನೇ ಮಾಡಲಿ ಮಂಗಲವಾದುದನ್ನೇ ಮಾಡಬೇಕು. ಕೀರ್ತನ

ಭಕ್ತ ಮಾರ್ಗಕ್ರಿಯೆ ಮತ್ತು ಕಲೆಯೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಬೇಕು. ಕೀರ್ತನ ಒಂದು ಕಲೆ. ಆದರೆ ಕಿರಿಚುವುದೆಲ್ಲ ಕಲೆಯಲ್ಲ; ಕ್ರಿಯೆಯಲ್ಲ.

ಕೀರ್ತನ ಅರ್ಥಗರ್ಭಿತ ಶಬ್ದ. ವಾಣಿಯ ಉಭಯಾರ್ಥಗಳೂ ಆದರಲ್ಲಿವೆ. ನಾಲಗೆ ಮಾತಾಡಬಲ್ಲುದು; ಹಾಡಬಲ್ಲುದು. ಆದರೆ ಬರೀ ಮಾತು ಗೀತೆಗಳೇ ಕೀರ್ತನವೆನಿಸವು. ಅವೆರಡು ಶಿವ ವಿಷಯಕವಾಗಿರಬೇಕು—ಶಿವಮಯವಾಗಿರಬೇಕು. ಆಗ ಅದು ಕೀರ್ತನವೆನಿಸುತ್ತದೆ. ಭಕ್ತ ಮಾರ್ಗಕ್ರಿಯೆಯೆನಿಸುತ್ತದೆ. ಅದರಿಂದ ನಾಲಗೆಯ ಸೂತಕವಳಿಯುತ್ತದೆ. ಕೀರ್ತನದ ಗುರಿ ಇದಾಗಿರಬೇಕು. ಕೇವಲ ಕಾಸಿನಾಸೆಗಾಗಿ ಕಿರಿಚುವುದು ಕೀರ್ತತನವಲ್ಲ; ಭಕ್ತಿಯಲ್ಲ. ಭಕ್ತನಾಗಿ ಕೀರ್ತನ ಮಾಡಬೇಕು. ಭಗವಂತನ ಪ್ರಾಪ್ತಿಗಾಗಿ ಕೀರ್ತನ ಮಾಡಬೇಕು. ಭಕ್ತಿ ವಾಣಿಯಲ್ಲಿ ಒಂದು ಭವ್ಯ ಶಕ್ತಿಯಿದೆ; ದಿವ್ಯಜ್ಯೋತಿಯಿದೆ. ಜೇನಿನಂತಹ ಮಧುರಶ್ರುತಿಯಿದೆ.

‘ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು; ವಾರಿಧಿ ಮೈದೆಗೆದರೆ ರತ್ನಂಗಳ ಕಾಣಬಹುದು. ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು.’ ಭಕ್ತನ ವಾಣಿ ಅದೊಂದು ಲಿಂಗವನ್ನು ಕಾಣುವ ದರ್ಪಣ; ಲಿಂಗವನ್ನು ತೋರುವ ದರ್ಶನ. ಅಂತಾದಾಗ ಅದು ಕೀರ್ತನ ಭಕ್ತಿ.

ಭಕ್ತ ಹೃದಯದಿಂದ ಹಾಡಬೇಕು; ಹೃದಯದಿಂದ ಆಡಬೇಕು. ಕೀರ್ತನದ ಜೀವಾಳ ಕರುಳು.

‘ಗೀತವ ಬಲ್ಲಾತ ಜಾಣನಲ್ಲ; ಮಾತ ಬಲ್ಲಾತ ಜಾಣನಲ್ಲ:
ಜಾಣನು, ಜಾಣನು, ಆತ ಜಾಣನು; ಲಿಂಗವ ನೆರೆನಂಬಿದಾತ
ಜಾಣನು. ಜಂಗಮಕ್ಕೆ ಸವೆಸುವಾತ ಜಾಣನು
ಜವನ ಬಾಯಲು ಬಾಲವ ಕೊಯ್ದು ಹೋದಾತ ಜಾಣನು.
ನಮ್ಮ ಕೂಡಲಸಂಗನ ಶರಣನು.’

ಕರುಳಿಲ್ಲದ ಕೀರ್ತನ ಹೇಗೆ ಜಾಣತನದ ಲಕ್ಷಣವಲ್ಲವೊ ಜಾಣತನದ

ಕಲೆಯಲ್ಲವೋ ಹಾಗೆ ಕ್ರಿಯೆಯಲ್ಲಿ ಬಾರದ ಕೀರ್ತನವೂ ಸತ್ಕಲೆಯಲ್ಲ; ಆದರಿಂದ ಶಿವನೊಲಿಯುವುದಿಲ್ಲ.

'ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ ?'

ನುಡಿದ ನುಡಿ ಹಾಡಿದ ಹಾಡು ಮುತ್ತಿನಂತೆ ಚೆಲುವಾಗಿರಬೇಕು, ಬೆಲೆಯುಳ್ಳುದಾಗಿರಬೇಕು; ಮಾಣಿಕ್ಯದ ದೀಪ್ತಿಯಂತೆ ಅರ್ಥ ಜ್ಯೋತಿಯುಳ್ಳದಾಗಿರಬೇಕು; ಸ್ಫಟಿಕದ ಸಲಾಕೆಯಂತೆ ಮನಂಬುಗುವಂತಿರಬೇಕು; ಲಿಂಗಮೆಚ್ಚುವಂತೆ ಶಿವವಾಗಿ ಸ್ವಾನುಭವಯುಕ್ತವಾಗಿರಬೇಕು. ಆಗ ಅದು ಕೀರ್ತನ ಭಕ್ತಿ. ಅದರಲ್ಲಿರುತ್ತದೆ ಅಮೃತ ಶಕ್ತಿ. ಆ ಅಮೃತ ವಾಣಿಯನ್ನು ಸವಿದರೆ ಆಗುವುದು ಜೀವನ್ಮುಕ್ತಿ.

'ಎದೆ ಬೀರವನ್ನಕ್ಕ, ಮನದಣಿವನ್ನಕ್ಕ, ನಾಲಿಗೆ ನಲಿನಲಿದಾಡುವನ್ನಕ್ಕ; ನಿಮ್ಮ ನಾಮಾಮೃತವ ತಂದಿರಿಸು ಕಂಡಯ್ಯಾ ಎನಗೆ ಎನ್ನ ತಂದೆ!......' ಆ ಅಮೃತಮಯ ಕೀರ್ತನ ವಾಣಿ ಹೀಗೆ ಹೃದಯವನ್ನು ಪರಿಶುದ್ಧಗೊಳಿಸುತ್ತದೆ. ಪ್ರೇಮ ಪರಿಶುದ್ಧಿಗೆ ಆಹಾರ ಶುದ್ಧಿ ಅಗತ್ಯ. ಆಹಾರ ಶುದ್ಧಿಗೆ ಅಚ್ಚನುಡಿ ಮೂಲಕಾರಣ. 'ಮೌನದಲುಂಬುದು ಆಚಾರವಲ್ಲ. ಲಿಂಗಾರ್ಪಿತವ ಮಾಡುವಲ್ಲಿ ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು. ಕರಣ ವೃತ್ತಿಗಳಡಗುವುವು ಕೂಡಲ ಸಂಗನ ನೆನೆಯುತ್ತ ಉಂಡರೆ!' ಬರೀ ಬಹಿರಂಗದಲ್ಲಿರಿಂತು ಹಾಡಿದ್ದೇ ಕೀರ್ತನವಲ್ಲ; ತಾನು ಪೂಜಿಸುವಾಗ ಪ್ರಸಾದವನ್ನು ಸ್ವೀಕರಿಸುವಾಗ ಮಂತ್ರವನ್ನು ಶಿವನಾಮವನ್ನು ಉಚ್ಚರಿಸುವುದೂ ಕೀರ್ತನ ಭಕ್ತಿ. ಇದರಿಂದ ಮನ ಮುಂತಾದ ಎಲ್ಲ ಕರಣಗಳ ವೃತ್ತಿಗಳು ಅಡಗುವವು. ಅದರಿಂದಾಗಿ 'ವಚನದಲ್ಲಿ ನಾಮಾಮೃತ ತುಂಬಿ' ಎಂದು ಬಸವಣ್ಣನವರು ಬೇಡಿದರು; ಹಾಡಿದರು.

ಸವಿಯೂಟಕ್ಕಿಂತ ಸವಿನುಡಿ ಸತ್ಯಸಾಧಕನಿಗೆ ಭಕ್ತಿ ಮಾರ್ಗಸ್ಥನಿಗೆ ಹೆಚ್ಚು ಆಧಾರ; ಹೆಚ್ಚು ಮಧುರ. ಮತ್ತು ಶಿವನಾಮವನ್ನು ಉಚ್ಚರಿಸುತ್ತ ಸಲ್ಲಿಸುವ ಆರೋಗಣೆಯು ಆರಾಧನೆಯಾಗಿ ಏರ್ಪಡುತ್ತದೆ. ಪ್ರಸಾದ ಸ್ವೀಕಾರವೂ ಸಂಕೀರ್ತನ ಭಕ್ತಿಯೆನಿಸುತ್ತದೆ.

ಕೀರ್ತಿಸುವ ನಾಮಾಮೃತವು ಹಳಸುವದಲ್ಲ : ಹುಳ ಬೀಳುವುದಲ್ಲ. ಸವೆಯುವದಲ್ಲ. ಸವಿದಷ್ಟೂ ಸವಿಯಬೇಕೆನಿಸುತ್ತದೆ.

ಭಕ್ತನಿಗೆ ಕೀರ್ತನ ಕ್ರಿಯೆ ಅಗತ್ಯ. ಕೀರ್ತನಭಕ್ತಿಯಿಲ್ಲದ ಜೀವನ ಬರಡಾಗಿರುತ್ತದೆ. ನಿಷ್ಕಲಾತ್ಮಕವಾಗಿರುತ್ತದೆ. 'ಮೂಗ ಕಂಡ ಕನಸಿನಂತೆ' ಆತನ ಭಕ್ತಿ ಅಂತಸ್ಥವಾಗಿ ಅಲ್ಲಿಯೆ ಅಡಗುತ್ತದೆ. ಭಕ್ತಿ ಸಂಭಾಷಣೆಯಲ್ಲಿ ಭಕ್ತಿಸಂಕೀರ್ತನೆಯಲ್ಲಿ ಭಾವಕ್ಕೆ ಬಣ್ಣವೇರುತ್ತದೆ. ಭಾವ ಪೂರ್ಣವಾದ ಕೀರ್ತನ ಭಕ್ತಿ ಶಿವನಿಗೆ ಸಂಪ್ರೀತಿ. ಒಲಿಸೊಮ್ಮೆ ಶಿವಶಿವ ಎಂದರೆ ಸಾಕು. ಒಲುಮೆಯಿಲ್ಲದೆ ಎಷ್ಟು ಕೂಗಿದರೂ ಆತನಿಗೆ ಕೇಳದು. 'ನಂಬರು ನಚ್ಚರು ಬರಿದೆ ಕರೆವರು. ನಂಬಲರಿಯರೀ ಲೋಕದ ಮನುಜರು. ನಂಬಿ ಕರೆದಡೆ. ಓ ಎನ್ನನೆ ? ನಂಬದೇ ನಚ್ಚದೆ ಬರಿದೆ ಕರೆವವರ ಕೊಂಬು ಮೆಟ್ಟಿ ಕೂಗೆಂದ ಕೂಡಲಸಂಗಮದೇವ.'

'ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ.'
'ಆಡಿದರೇನೊ, ಹಾಡಿದರೇನೊ, ಓದಿದರೇನೊ
ತ್ರಿವಿಧ ದಾಸೋಹವಿಲ್ಲದನ್ನಕ್ಕ ? ಆಡದೆ ನವಿಲು ?
ಹಾಡದೆ ತಂತಿ ? ಓದದೆ ಗಿಳಿ ? ಭಕ್ತಿಯಿಲ್ಲದವರನೊಲ್ಲ
ಕೂಡಲಸಂಗಮದೇವ.' 'ಮಾತಿನ ಮಾತಿನಲ್ಲಿಪ್ಪುದೆ ಭಕ್ತಿ ?'

ಇವೇ ಮುಂತಾದ ಬಸವಣ್ಣನವರ ಮಾತುಗಳು ಕೀರ್ತನ ಭಕ್ತಿಯ ವಿಮರ್ಶೆಗೆ ಒರೆಗಲ್ಲಾಗಿವೆ. ಕೀರ್ತನ ಭಕ್ತಿ ಹೇಗಿರಬೇಕೆಂಬುದನ್ನು ಎತ್ತಿ ತೋರುತ್ತವೆ. ಮರ್ಮಸ್ಪರ್ಶಿಯಾಗಿವೆ.

ವಚನ ಪಾತಕವನ್ನು ಪರಿಹರಿಸಲು ಕೀರ್ತನ, ಸ್ತೋತ್ರಗಳು ಸರಿಯಾದ ಸಾಧನಗಳಾಗಿವೆ. ಆದರೆ ಅವುಗಳ ಹಿಂದೆ ಹೃದಯವಿರಬೇಕು. ವಚನದೊಡನೆ ಮನ, ಮನದೊಡನೆ ವಚನ ಒಂದಾಗಿರಬೇಕು. ಜತೆಗೆ

ನುಡಿಯಂತೆ ನಡೆಯಿರಬೇಕು. ಗತಿಗೆಟ್ಟು ಮತಿಗೆಟ್ಟು ಆಸೆಗಾಗಿ ಅನ್ಯರನ್ನು ಹೊಗಳಬಾರದು. ವಾಸ್ತವವಾದ ಹೊಗಳಿಕೆಯಿದ್ದರೆ ತಪ್ಪಲ್ಲ. ಅವಾಸ್ತವವಾಗಿ ಪ್ರತಿಫಲಾಕಾಂಕ್ಷೆಯಿಂದ ಕಣ್ಮುಚ್ಚಿ ಕೀರ್ತಿಸಬಾರದು. ಬೆಂದ ಬಸುರಿಗಾಗಿ ಬಾಯಿ ಬಿಚ್ಚಬಾರದು : ಬಣ್ಣಿಸಬಾರದು. ಶಿವನನ್ನು ಶ್ರೀಗುರುವನ್ನು ಶಿವಭಕ್ತರನ್ನು ಶಿವಲಿಂಗವನ್ನು ಕೀರ್ತಿಸಿದರೆ ಫಲವುಂಟು ಅವರು ತನ್ನನ್ನು ಪರಿಪಾಲಿಸುತ್ತಾರೆ. ಶಿವನಿತ್ತ ವಾಣಿಯನ್ನು ಶಿವನಿಗೆ ಶಿವಸ್ವರೂಪರಿಗೆ ಮೀಸಲಾಗಿರಿಸಬೇಕು.

ಆಸೆ ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ ಕ್ಷುದ್ರ, ಮಿಥ್ಯೆ ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ ! ಅದೇಕೆಂದೊಡೆ ನಿಮ್ಮತ್ತಲೆನ್ನ ಬರಲೀಯವು, ಇವೆಲ್ಲವ ಕಳೆದು ಎನ್ನ ಪಂಚಯ್ಯರ ಭಕ್ತರ ಮಾಡು, ಕೂಡಲ ಸಂಗಮ ದೇವಾ.' ಕೀರ್ತಿಸುವ ನಾಲಗೆಯಿಂದ ಈ ದೋಷಗಳು ದೂರಾಗಿರಬೇಕು. ಕೀರ್ತನ ಭಕ್ತಿಗೆ ಕಾಯ ಶಿರ, ನರ, ಉರಗಳೆಲ್ಲ ಮೀಸಲಾಗಿರಬೇಕು : 'ಎನ್ನ ಕಾಯುವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ : ಎನ್ನ ನರವ ತಂತಿಯ ಮಾಡಯ್ಯ : ಎನ್ನ ಬೆರಳ ಕಡ್ಡಿಯ ಮಾಡಯ್ಯ ! ಬತ್ತೀಸರಾಗವ ಹಾಡಯ್ಯ, ಉರದಲೊತ್ತಿ ಬಾರಿಸು ಕೂಡಲ ಸಂಗಮ ದೇವಾ.' ಕೀರ್ತನ ಭಕ್ತನ ಕಾಯವೇ ಶಿವನ ವಾದ್ಯ ; ಜೀವಂತವಾದ್ಯ.

ಕೀರ್ತನ ಭಕ್ತಿ ಉದರಂಭರಣದ ಯುಕ್ತಿಯಾಗಬಾರದು. ಆಶೆ ಆಮಿಷ ವೃತ್ತಿಯಾಗಬಾರದು. 'ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ. ಕಾಮವೆಂಬಗ್ನಿಗೆ ಮುರಿದಿಕ್ಕಿತ್ತೆನ್ನ ಭಕ್ತಿ. ಉದರಕ್ಕೆ ಕುದಿಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ. ಇದಿರನಾಶ್ರಯಿಸಲು ಹೋಯಿತ್ತೆನ್ನ ಭಕ್ತಿ. ಹೆಣ್ಣಮೂಳನು ನಾನು. ಕೂಡಲಸಂಗಮದೇವಾ, ಕ್ಷಣ ಹದುಳವಿರದೆ ಬಾಯಟೊಣೆದು ಹೋಯಿತ್ತೆನ್ನ ಭಕ್ತಿ. ಈ ವಚನ ಕೀರ್ತನ ಕಾಯಕವವರನ್ನು ಎಚ್ಚರಿಸಿದೆ. ಕೀರ್ತನ ಭಕ್ತಿ, ಕೀರ್ತನಕಾಯಕ ದಕ್ಷಯಾಗದಂತಾಗಬಾರದು. ಬಾಳಬಟ್ಟೆಯನ್ನು ಕೆಡಿಸುವದಾಗಬಾರದು. ಹೀನ ಮನೋಭಾವಕ್ಕಾಗಿ ಉಪಯೋಗವಾಗಬಾರದು.

ನಿರ್ಮ್ಮಳವಾದ ನಿರಪೇಕ್ಷವಾದ ವಾಸ್ತವವಾದ ಭಾವಭರಿತವಾದ ಕೀರ್ತನ ಭಕ್ತಿ ಬಾಳಿಗೊಂದು ಭಾಗ್ಯ 'ಕೋಟ್ಯನುಕೋಟಿ ಜಪವನು ಮಾಡಿ ಕೊಟಲೆಗೊಳ್ಳಲದೇಕೆ ಮನವೆ? ಕಿಂಚಿತು ಗೀತವೊಂದನಂತಕೋಟಿ ಜಪಕ್ಕೆ ಸಮ! ಜಪವೆಂಬುದೇಕೆ ಮನವೆ? ಕೂಡಲಸಂಗನಶರಣರ ಕಂಡು, ಆಡಿ ಹಾಡಿ ಬದುಕು ಮನವೇ!' ನರಸುರರನ್ನು ಹಾಡಿ ಬೇಡುವುದಕ್ಕಿಂತ ಶಿವಶರಣರನ್ನು ಹಾಡಿ ಬದುಕುವುದು ಲೇಸು, ಅಧರದಲ್ಲಿ ಹೊಗಳಿ ಉದರದಲ್ಲ ಹಗೆಯನಿರಿಸಿಕೊಳುವುದಕ್ಕಿಂತ ಕೀಳ್ಮೆ ಬೇರಿಲ್ಲ. 'ಲೌಕಿಕರ ಕಂಡು ಆಡುವೆ, ಹಾಡುವೆ: ತಾರ್ಕಿಕರ ಕಂಡು ಆಡುವೆ ಹಾಡುವೆ; ಸಹಜಗುಣವೆನ್ನಲ್ಲಿಲ್ಲವಯ್ಯಾ; ನಿಜಭಕ್ತಿಯೆನಗಿಲ್ಲ ತಂದೆ! ಏಕೋ ಭವ ಎನಗುಳ್ಳರೆ ಏಕೆ ನೀ ಕರುಣಿಸೆ ಕೂಡಲಸಂಗಮದೇವಾ?'

'ಓತಿ ಬೇಲಿವರಿದಂತೆ ಎನ್ನ ಮನವಯ್ಯ, ಹೊತ್ತಿಂಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು, ಬಾವುಲ ಬಾಳುವೆಯಂತೆನ್ನ ಮನವು! ನಡುವಿರುಳೊಳಿದ್ದ ಕುರುಡಂಗೆ: ಆಗಸೆಯಲ್ಲಿ ಬೆಳಗಾದಂತೆ ನಾನಿಲ್ಲದ ಭಕ್ತಿಯ ಬಯಸಿದರುಂಟೆ ಕೂಡಲಸಂಗಮದೇವಾ?'

ಇಂತಹ ಇಮ್ಮನ ಭಕ್ತಿಯಿಂದ ವಚನ ವಂಚನೆ ಮನ ವಂಚನೆ ಭಾವ ವಂಚನೆಗಳಲ್ಲದೆ ಬೇರೇನು ಬಾರದು. 'ಮಾತಿನಲ್ಲಿ ಶ್ರೋತ್ರಸುಖವ ನುಡಿಯ ಬಹುದಲ್ಲದೆ ಮಾಡುವ ಸತ್ಕ್ರಿಯೆಯಿಂದ ಭಕ್ತನೆನಿಸಬಾರದು.' ಮನವಿಲ್ಲದ ಮಾತಿನ ಮಾಲೆ ಕೀರ್ತನಭಕ್ತಿಯೆನಿಸದು. ಬಾಣಮಯೂರರಂತೆ ಮನ ಮುಟ್ಟಿ ಶಿವಕೀರ್ತನಭಕ್ತಿಯನ್ನು ಮಾಡಬೇಕು. ಇದು ವಾಚಕ ಭಕ್ತಿ. ಸಿಂಪು ಸ್ವಾತಿ ನಕ್ಷತ್ರಕ್ಕಲ್ಲದೆ ಬೇರೆ ಇನ್ನಾವ ನಕ್ಷತ್ರಕ್ಕೆ ಬಾಯಿ ಬಿಡದು. ಅಂತೆಯೆ ಭಕ್ತನು ಪರಶಿವನನ್ನು ಕೀರ್ತಿಸುವನಲ್ಲದೆ ಸಪ್ತವ್ಯಸನಿಗಳಂತೆ ಸಿಕ್ಕವರನೆಲ್ಲ ಕೀರ್ತಿಸನು; ಸಿಕ್ಕುದನೆಲ್ಲ ಹರಟನು.

'ತಾಳಮಾನ ಸರಿಸವನರಿಯೆ' ಓಜೆಬಜಾವಣೆಯ ಲೆಕ್ಕವನರಿಯೆ; ಅಮೃತಗಣ ದೇವಗಣವನರಿಯೆ! ಕೂಡಲಸಂಗಮ ದೇವಾ, ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ!'

ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು? ಮುಟ್ಟುವ ಠಿರನನರಿಯದನ್ನಕ್ಕ? ಕಟ್ಟಿದರೇನು, ಬಿಟ್ಟರೇನು-ಮನವು ಲಿಂಗದಲ್ಲಿ ಮುಟ್ಟಿ

ದನ್ನಕ್ಕ? ಮಾತಿನ ಮಾತಿನಲೆ ಒಲಿಸಿ ಮಹತ್ತ್ವಪ್ಪ ಲಿಂಗವ ಕಂಡಹನೆಂಬ ಪಾತಕರ ಮೆಚ್ಚ ನಮ್ಮ ಕೂಡಲ ಸಂಗಮ ದೇವ!

'ಶಂಭೋಃ ಸ್ಮರಣಂ:' ಇದು ಮಾನಸಿಕ ಭಕ್ತಿ. ಸ್ಮರಣವು ಮನಸಿನ ಒಂದು ವೃತ್ತಿ. 'ಅನುಭೂತವಿಷಯಾಸಂಪ್ರಮೋಷಃ ಸ್ಮೃತಿಃ' ಮೊದಲು ಅನುಭವಿಸಿದ್ದುದನ್ನು ಹೆಚ್ಚುಕಮ್ಮಿಯಿಲ್ಲದಂತೆ. ಮರಳಿ ನೆನೆವುದೇ ಸ್ಮೃತಿ ಅಥವಾ ಸ್ಮರಣ. ಅನುಭೂತವೆಂದಿರುವುದರಿಂದ ಕನಸಿನ ನೆನಹು ಸ್ಮರಣವೆನಿಸುವುದಿಲ್ಲ. ಏಕೆಂದರೆ ಕನಸಿನ ವಿಷಯ ಅನುಭೂತವಲ್ಲ. ಅದು ಕಲ್ಪಿತ. ಅನುಭೂತ ವಿಷಯ ಕಲ್ಪಿತವಲ್ಲ. ಇಂದ್ರಿಯಾದಿಗಳಿಗೆ ಗೋಚರವಾಗಿ ಪ್ರತ್ಯಕ್ಷಾನುಭವಕ್ಕೆ ಬಂದಿರುತ್ತದೆ. ಸ್ವಪ್ನವಿಷಯ ಇಂದ್ರಿಯ ಗೋಚರವಲ್ಲ. ಇದರಿಂದಾಗಿ ಇದು ಸ್ಮೃತಿಯಲ್ಲ.

ಸ್ಮರಣ ದ್ವಿವಿಧ. ಶಿವಸ್ಮರಣ, ಅಶಿವಸ್ಮರಣ. ಶಿವಸ್ಮರಣವು ಭಕ್ತಿಯೆನಿಸುತ್ತದೆ. ಅಶಿವಸ್ಮರಣವು ವೃತ್ತಿಯೆನಿಸುತ್ತದೆ. ಭಕ್ತಿರೂಪದ ಶಿವಸ್ಮೃತಿಯು ನಿವೃತ್ತಿ ಸುಖಕ್ಕೆ ಕಾರಣವಾಗುತ್ತದೆ. ಆದ್ದರಿಂದ ಮಂತ್ರದಲ್ಲಿ ಬರೀ ಸ್ಮರಣಂ ಎಂದು ಹೇಳದೆ 'ಶಂಭೋಃಸ್ಮರಣಂ' ಎಂದು ಹೇಳಲಾಗಿದೆ.

ಆ ಶಿವನಿಂದ ಬಂದ ಜೀವನಿಗೆ ಶಿವನ ಅನುಭವವಿದೆ. ಆದರೆ ವಿಷಯ ಸ್ಮರಣದಲ್ಲಿ ಅದು ಮರೆತು ಹೋಗಿದೆ. ಅದು ಮರಳಿ ಸ್ಮರಣಕ್ಕೆ ಬರಬೇಕಾದರೆ ಉದ್ಬೋಧಕ ವಸ್ತು ಅಗತ್ಯ. ಅಂತಹ ಉದ್ಬೋಧಕ ವಸ್ತುಗಳು ಶಿವಾದ್ವೈತ ಸಿದ್ಧಾಂತದಲ್ಲಿ ಮೂರಿವೆ. ಗುರು ಲಿಂಗ ಮಂತ್ರ ಇವು ಮೂರು ಶಿವಸಂಸ್ಕಾರಕ್ಕೆ ಶಿವಸ್ಮರಣಕ್ಕೆ ಕಾರಣಗಳು.

ಅನುಭವವು ಪರೋಕ್ಷ, ಅಪರೋಕ್ಷ ಎಂದು ಎರಡು ಬಗೆ. ಈ ಎರಡು ಬಗೆಯ ಶಿವಾನುಭವ ವಿಷಯಸ್ಮೃತಿಯು ಭಕ್ತಿಯೆಂದೆನಿಸುತ್ತದೆ. ಶಿವನ ವಿಷಯಕವಾದ ಪರೋಕ್ಷಾನುಭೂತಿಯೂ ಶಿವ (ಮಂಗಳ) ವಾಗಿಯೇ ಇರುತ್ತದೆ; ಮಂಗಳಕರವೂ ಆಗಿರುತ್ತದೆ. ಶಿವಾನುಭವವನ್ನು ಕೇಳಿ ಶ್ರೋತ್ರಗಳು, ಶಿವನಾಮಸಂಕೀರ್ತನದಿಂದ ಜಿಹ್ವೆಯು ಶುದ್ಧವಾದರೆ ಶಿವಸ್ಮರಣದಿಂದ ಮನ ಶುದ್ಧವಾಗುತ್ತದೆ. ಶ್ರವಣ ಕೀರ್ತನ ಭಕ್ತಿಗಳು ಜಾಗ್ರದವಸ್ಥೆಯಲ್ಲಿ ಮಾತ್ರ ಸಾಗಿದರೆ ಸ್ಮರಣಭಕ್ತಿಯು ಜಾಗ್ರತ್ ಸ್ವಪ್ನ

ಸುಷುಪ್ತಿ ಈ ಮೂರು ಅವಸ್ಥೆಗಳಲ್ಲಿಯೂ ಸಾಧ್ಯವಾಗುತ್ತದೆ. ಶಿವಸ್ಮರಣೆ ದಿಂದ ತ್ರಿವಿಧಾವಸ್ಥೆಗಳು ಶುದ್ಧವಾಗುತ್ತವೆ; ಪ್ರಬುದ್ಧವಾಗುತ್ತವೆ.

ಸ್ಮರಣೆ ಶಿವವಾಗಬೇಕಾದರೆ ಮಂತ್ರ ಜಪ ಮುಖ್ಯ; ಮತ್ತು ಅಗತ್ಯ. ಮಾನಸಿಕ ಮಂತ್ರ ಜಪದಿಂದ ಶಿವನ ಸ್ಮರಣೆವುಂಟಾಗುತ್ತದೆ; ಮತ್ತು ಸ್ಮರಣೆ ಶಿವವಾಗುತ್ತದೆ. ಸ್ಮರಿಸುವ ಚಿತ್ತವೂ ಶಿವವಾಗುತ್ತದೆ.

'ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ ತಪ್ಪುವವು ಅಪಮೃತ್ಯು ಕಾಲಕರ್ಮಂಗಳಯ್ಯ !'

ಮುಹೂರ್ತಗಳಲ್ಲಿ ಸುಪ್ರಭಾತ ಸಮಯ ಬ್ರಾಹ್ಮೀ ಮುಹೂರ್ತ ವೆನಿಸಿದೆ. ಅಮೃತಗಳಿಗೆಯೆನಿಸಿದೆ. ಅಂತಹ ಮಂಗಳ ವೇಳೆಯಲ್ಲಿ ಭಕ್ತಿ ಯಿಂದ ಲಿಂಗ (ಶಿವ) ದೇವನನ್ನು ನೆನೆದರೆ ಸಂಸ್ಕಾರ ಶುದ್ಧವಾಗಿ ಅನಿಷ್ಟ ಚಿಂತನೆ ಅಳಿಯುತ್ತದೆ. ವಿಷಯ ಚಿಂತನೆಯಿಲ್ಲವಾದ ಬಳಿಕ ಪಾಪಕರ್ಮ ಗಳಿಗೆ ಪ್ರೇರಣೆಯಿಲ್ಲದಾಗುತ್ತದೆ. ಕರ್ಮವಳಿದಲ್ಲಿ ಧರ್ಮದ ಬಲ, ಪಾಪ ವಳಿದಲ್ಲಿ ಪುಣ್ಯದ ಬಲ ಬರುತ್ತವೆ. ಪುಣ್ಯ ಪುಷ್ಟಿಗೊಂಡಲ್ಲಿ ಅಪಮೃತ್ಯು ವಿಲ್ಲದಾಗುತ್ತದೆ. ಅದೇ ಪಾಪಜನಕ ವಿಷಯ ಚಿಂತನೆಯನ್ನು ಮಾಡಿದರೆ ವಿನಾಶ ಅಂದರೆ ಅಪಮೃತ್ಯುವುಂಟಾಗುತ್ತದೆ.

'ನ ಯಸ್ಯ ನಿರ್ಮಲಾ ಬುದ್ಧಿಃ ಸ ಧ್ಯಾಯೇದ್ವಿಷಯಾನ್ಸದಾ
ಧ್ಯಾಯತೋ ವಿಷಯಾನ್ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿ ಜಾಯತೇ
ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ।'

—ಪಾರಮೇಶ್ವರಾಗಮ, ಪ-೬, ೫೦-೫೩.

ಮಾನವನಿಗೆ ಸ್ಮರಣೆವೇ ಜೀವನ. ಸ್ಮರಣೆ ಶಿವವಾಗಿದ್ದರೆ ಜೀವನ ಪ್ರಗತಿ. ಅದೇ ಅಶಿವವಾಗಿದ್ದರೆ ಅಧೋಗತಿ. ಅಧೋಗತಿ ಮಾತ್ರವಲ್ಲ ಅನತಿದೂರದಲ್ಲಿಯೇ ಮೃತಿ; ಅಲ್ಪಾಯುಷ್ಯ. ಮನ ವಿಷಯಸಂಗದಲ್ಲಿ ಸ್ಮರಣೆದಲ್ಲಿ ಬಿದ್ದರೆ ಎದ್ದೇಳುವುದು ಕಷ್ಟ. ಎಣೆ ಎಣಿಕೆಗಳಿಲ್ಲದಷ್ಟು ನಷ್ಟ. ಮನವಿಕಾರದಿಂದ ಕಾಮಾದಿಗಳು ಕಾಲಿಡಲು ಇಂಬಾಗುತ್ತದೆ. ಕಾಮ

ಕ್ರೋಧಗಳ ಆಧಿಕ್ಯದಿಂದ ಸಂಮೋಹ, ಸಂಮೋಹದಿಂದ ಸ್ಮೃತಿನಾಶವಾಗುತ್ತದೆ. ಸ್ಮೃತಿನಾಶವಾದ ಬಳಿಕ ಬುದ್ಧಿ (ಮನ) ಇರದು. ಕಾಯವಳಿದ ಬಳಿಕ ಆತ್ಮ ಇರುವುದೆ? ಕಾರ್ಯನಾಶದಲ್ಲಿ ಕಾರಣನಾಶವಿದೆ. ಸ್ಮರಣ ಅಳಿದಲ್ಲಿ ಮನ ಬುದ್ಧಿ ಜೀವನಗಳು ಅಳಿಯುತ್ತವೆ. ಇದರಿಂದಾಗಿ ಸ್ಮರಣ ನಾಶಕ್ಕೆ ಅವಕಾಶವೀಯಬಾರದು.

ಸ್ಮೃತಿನಾಶಕ್ಕೆ ಅಸಂಸ್ಕಾರ ಕಾರಣ. ಶಿವಸಂಸ್ಕಾರವಿಲ್ಲದ ಮನ ಬುದ್ಧಿಗಳಲ್ಲಿ ಮಾಯಾ ಮೋಹಗಳು ಮನೆ ಮಾಡುತ್ತವೆ. ಆತ್ಮಸ್ವಾತಂತ್ರ್ಯವನ್ನು ಹರಣಮಾಡುತ್ತವೆ. 'ನಾನೊಂದು ನೆನೆದರೆ ತಾನೊಂದು ನೆನೆವುದು. ನಾನಿತ್ತಲೆಳೆದರೆ ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಇದಾವ ಪರಿಯಲ್ಲಿ ಕಾಡಿತ್ತು ಮಾಯೆ? ಈ ಮಾಯೆ ಕಳೆವರೆ ಎನ್ನವಳಲ್ಲ. ನೀವೇ ಬಲ್ಲಿರಿ, ಕೂಡಲ ಸಂಗಮದೇವಾ.'

'ಕೂಡಲಸಂಗನ ಕೂಡಿಹೆನೆಂದರೆ ತಾ ನೆನ್ನ ಮುಂದುಗೆಡಿಸಿತ್ತು ಮಾಯೆ!'

'ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯ ಈ ಮಾಯೆ!'

'ಸುಚಿತ್ತದಿಂದಲೆನ್ನ ಮನವು ನಿನ್ನ ನೆನೆಯಲೊಲ್ಲದು; ಎಂತಯ್ಯಾ? ಎನಗಿನ್ನಾವುದು ಗತಿ? ಎಂತಯ್ಯಾ? ಎನಗಿನ್ನಾವುದು ಮತಿ? ಎಂತಯ್ಯಾ? ಹರಹರಾ, ಕೂಡಲ ಸಂಗಮದೇವಾ ಮನವ ಸಂತಯಿಸೆನ್ನ.'

ಮಾಯಾಮೋಹವು ಪ್ರಬಲವಾದರೆ ಮಾನವತೆ ಹಾಳು. ಮಾನವಂತಿಕೆಗೆ ಹಾನಿ. ತನ್ನಾಟ ಏನೂ ಸಾಗದು. ಹೆದ್ದೊರೆಯ ಹಿರಿ ಸೆಳತಕ್ಕೆ ಸಿಕ್ಕಂತಾಗುತ್ತದೆ. ಅದಕ್ಕೆ ಕೊಚ್ಚಿ ಹೋಗಿ, ಕಲ್ಲು ಬಂಡೆಗಳಿಗೆ ತಾಗಿ ನುಚ್ಚು ನೂರಾಗಿ ನೀರ್ಸುಳಿಗೆ ಬಿದ್ದು ಬಸವಳಿವುದೇ ಗತಿ ಆಗಿರದು ಬೇರೆ ಮತಿ; ಬೇರೆ ಗತಿ! ತನ್ನ ಪುಣ್ಯ ತನ್ನ ಆಯುಷ್ಯ ನೆಟ್ಟಗಿದ್ದರೆ ಗಟ್ಟಿಯಾಗಿದ್ದರೆ ಆ ದೇವನು ಮಾತ್ರ ರಕ್ಷಿಸಬೇಕು. ಇಲ್ಲವಾದರಿಲ್ಲ. ಮೋಹದ ಮಹಾ ನದಿಯ ಪ್ರವಾಹಕ್ಕೆ ಬಿದ್ದವನ ಗತಿಯೂ ದುರ್ಗತಿಯೆ!

ಶಿವಸ್ಮರಣೆಯೆಂಬ ಈಜುಗುಂಬಳದ ನೆರವಿದ್ದರೆ ಮಾತ್ರ
ಸುಗತಿ ಸಾಧ್ಯ. ಸ್ವೈರಣೆ ಸಾಧ್ಯ. ಇಲ್ಲದಿದ್ದರಿಲ್ಲ.

'ಅಷ್ಟದಳ ಕಮಲವ ಸುತ್ತುವ ಜೀವಾತ್ಮನ ಮೆಟ್ಟದ ದಳವನರಿಯದೆ ಆನು ಭಕ್ತನೆಂತೆಂಬೆ, ಆನು ಶರಣನೆಂತೆಂಬೆ; ಆನು ಲಿಂಗೈಕ್ಯನೆಂತೆಂಬೆ? ಕೂಡಲಸಂಗಮದೇವಾ, ಎನ್ನ ಮನ ಸಮಾಧಾನವಾಗದನ್ನಕ್ಕ?' ಅಷ್ಟಮದಗಳೆಂಬ ಅಷ್ಟದಳಗಳಲ್ಲಿ ಸುತ್ತುವ ಜೀವಾತ್ಮನಿಗೆ ಆತ್ಮಸ್ಮರಣೆ ಬಾರದು. ಅದು ಬರಬೇಕಾದರೆ ಮನಸಮಾಧಾನವಾಗಬೇಕು. ಮದ ಮೋಹಗಳನ್ನು ಮುರಿಯಬೇಕು. ಮನ ಶುದ್ಧವಾಗದೆ ಮನಸಮಾಧಾನ ವಾಗದೆ ಹೊರಗೆ ಏನು ಮಾಡಿದರೂ ಫಲವಿಲ್ಲ. ಶ್ರವಣ ಕೀರ್ತನಗಳ ಮಾಡಿಯೂ ಫಲವಿಲ್ಲ. 'ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧ ವಾಗದನ್ನಕ್ಕ? ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನಕ್ಕ? ನೂರನೋದಿ ಏವೆನಯ್ಯ, ನಮ್ಮ ಕೂಡಲ ಸಂಗಮದೇವನ ಮನಮುಟ್ಟಿ ನೆನೆಯದನ್ನಕ್ಕ?'

'ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು,–ಸಗಣಕ್ಕೆ ಸಾಸಿರ ಹುಳು ಹುಟ್ಟವೆ ದೇವಾ?' ಶಿವಸ್ಮರಣವೊಂದಿಲ್ಲದ ಮನ ಕೊಳಕು ಮನ. ಅದರಲ್ಲಿ ದುರ್ಗಣಗಳೆಂಬ ಕ್ರಿಮಿಕೀಟಗಳು ಕೋಟಿಕೋಟಿಯಾಗಿ ಕಾಣಿಸಿಕೊಳ್ಳುತ್ತವೆ. ಮನದ ಶಿವಸ್ಮರಣೆಯನ್ನು ಶಾಂತಿಸ್ವೈರಣೆಯನ್ನು ಕಚ್ಚಿ ಕೊಚ್ಚಿ ಹಾಕುತ್ತವೆ. ಹೆಚ್ಚಿನ ವ್ಯಥೆ ವಿಷಯಚಿಂತೆಗಳಿಗೊಳಗಾಗಿಸಿ ಜೀವನ್ಮೃತನನ್ನಾಗಿಸುತ್ತವೆ. ಬಾಳಿನಲ್ಲಿ ಬಾಹ್ಯಚಿಂತೆಗಳು ಹಾಸಲಿರುತ್ತವೆ; ಹೊದಿಯಲಿರುತ್ತವೆ. ಆಂತ ರಿಕವಾದ ಆತ್ಮಚಿಂತ್ರೆಗೆ ಅಣುಮಾತ್ರವೂ ಅವಕಾಶವಿರುವುದಿಲ್ಲ. 'ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಇಡುವ ಚಿಂತೆ. ಇಡಲಾದರೆ ಕೆಡುವ ಚಿಂತೆ, ಕೆಡದಿರೆ ಮರಣದಚಿಂತೆ. ಇಂತೀ ಹಲವು ಚಿಂತೆಯೊಳಗಿಪ್ಪವರ ಕಂಡೆ. ನಿಮ್ಮ ಚಿಂತೆಯೊಳಗಿಪ್ಪವರನಾರನೂ ಕಾಣೆ' ಎಂದಿದಾರೆ ಶಿವಶರಣರೊಬ್ಬರು.

ಈ ಬಾಳು ಬದುಕಿನ ಆಸೆಗೆ ಮನಸೋತು ಆತ್ಮಚಿಂತನವನ್ನು ಮರೆತು

ನಿಂತ ಮಾನವನಿಗೆ ಆ ಪರಶಿವನ ನೆನಹಿಗೆ ತುಸು ಹೊತ್ತಾದರೂ ತೆರಹಿಲ್ಲ; ಆ ಅರುಹಿಲ್ಲ.

ಸಂಸಾರದಲ್ಲಿ ಸಪ್ತವ್ಯಸನಗಳಿಗೆ ಸಿಕ್ಕಿ ಮಣ್ಣು ಮುಕ್ಕಿ ನೋವಿನಿಕ್ಕೆಯಾಗಿರುತ್ತಾನೆ ಈ ಜೀವಾತ್ಮ. ಹೊರಗಿನ ಬಾಳಿನ ಬೇಗುದಿಗೆ ಸಿಕ್ಕು ದಿಕ್ಕು ತೋಚದಂತಾಗಿರುತ್ತಾನೆ ಈ ಜೀವಾತ್ಮ. ಅತಿಯಾಸೆಯೆಂಬ ಅಮಾವಾಸ್ಯೆಯ ಕಾಳ್ಗತ್ತಲಲ್ಲಿ ಕಂಗಾಣದಂತಿರುತ್ತಾನೆ ಈ ಜೀವಾತ್ಮ. ಚಂದಿರನ ಬೆಳದಿಂಗಳನ್ನು ಕಾಣದಂತಿರುತ್ತಾನೆ. ಕಾಳಸೊಗಕ್ಕೆ ಕೈ ಚಾಚಿರುತ್ತಾನೆ; ಬಾಯ್ ಬಿಟ್ಟಿರುತ್ತಾನೆ. ಇದಕ್ಕೆಲ್ಲ ಕಾರಣವೆಂದರೆ ಶಿವಜ್ಞಾನ ಶಿವಚಿಂತೆಗಳ ಕೊರತೆ. ಶಿವಸಂಸ್ಕಾರದ ಕೊರತೆ. ಅದೇ ಶಿವಸಂಸ್ಕಾರವುಳ್ಳವರ ಚಿಂತೆ ಆಂತರಿಕವಾಗಿರುತ್ತದೆ; ಆತ್ಮೀಯವಾಗಿರುತ್ತದೆ. 'ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ. ಅಂಬುಜಕ್ಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬುವ ಚಿಂತೆ. ಎನಗೆ ಎನ್ನ ಕೂಡಲ ಸಂಗಮದೇವರ ನೆನೆವ ಚಿಂತೆ.'

ಮನಘನವಾಗಬೇಕಾದರೆ ಮರವು ಹರಿಯಬೇಕಾದರೆ ಶಿವಸ್ಮರಣೆ ಅನಿವಾರ್ಯ. ಪ್ರವೃತ್ತಿಯಲ್ಲಿ ಸಿಕ್ಕಿರುವ ಮನ ಕಿಂಚಿತ್ತಾಗಿರುತ್ತದೆ; ಕೀಳಾಗಿಯೂ ಇರುತ್ತದೆ. ಅದೇ ಸದ್ವೃತ್ತಿಯಲ್ಲಿ ನಿರತವಾದರೆ ದೊಡ್ಡದಾಗಿರುತ್ತದೆ. ಮನ ದೊಡ್ಡದಾಗುವುದೇ ಮಹಾತ್ಮತೆಯ ಕುರುಹು. ವಿಶ್ವರೂಪನಾದ ಶಿವನನ್ನು ಸ್ಮರಿಸುವ ಮನ ವಿಶ್ವಸ್ವರೂಪವಾಗುತ್ತದೆ. ವಿಶ್ವಮೈತ್ರಿಯುಳ್ಳುದಾಗುತ್ತದೆ. ವಿಶ್ವವಂದ್ಯವಾಗುತ್ತದೆ.

'ಕರಿ ಘನ; ಅಂಕುಶ ಕಿರಿದೆನ್ನಬಹುದೇ ?–ಬಾರದಯ್ಯ.
ಗಿರಿ ಘನ; ವಜ್ರ ಕಿರಿದೆನ್ನಬಹುದೇ ?–ಬಾರದಯ್ಯ,
ತಮಂಧ ಘನ; ಜ್ಯೋತಿ ಕಿರಿದೆನ್ನಬಹುದೇ ?–ಬಾರದಯ್ಯ.
ಮರಹು ಘನ; ನಿಮ್ಮ ನೆನೆವ ಮನ ಕಿರಿದೆನ್ನಬಹುದೇ ?–
ಬಾರದಯ್ಯ, ಕೂಡಲಸಂಗಮದೇವಾ!'

ಸರ್ವಸಮರ್ಥನನ್ನು ನೆನೆವ ಮನ ಸರ್ವಸಮರ್ಥವಾಗಬಲ್ಲುದು; ಆಗುತ್ತದೆ. ಧ್ಯೇಯದಾಕಾರವಾಗುವುದೇ ಮನದ ಸ್ವಭಾವ. ಧ್ಯೇಯ

ವಸ್ತು ದಿವ್ಯವಾಗಿದ್ದರೆ ಮನವೂ ದಿವ್ಯವಾಗುತ್ತದೆ. ಧ್ಯೇಯವಸ್ತು ದೀನವಾಗಿದ್ದರೆ ಅಂದರೆ ಚಿಕ್ಕದಾಗಿದ್ದರೆ ಮನ ಚಿಕ್ಕದಾಗುತ್ತದೆ.

ಮನಘನವಾಗದಿರಲು ಹುಲುತನ ಮರೆವುಗಳು ಹೇಗೆ ಕಾರಣಗಳೋ ಹಾಗೆ ಹರಿದಾಟವೂ ಕಾರಣವಾಗಿದೆ. ಮನದ ಹೀನತೆಗೆ ಈ ಮೂರು ಮುಖ್ಯ ಕಾರಣಗಳು. ಕಾಳಿಕೆ ಕೀಳುತನಗಳನ್ನು ಕಳಕೊಂಡಂತೆ ಚಲಿಸುವಿಕೆಯನ್ನೂ ಕಳೆದುಕೊಳ್ಳಬೇಕು. ಮನದ ಚಂಚಲತೆಯನ್ನು ನಿಲ್ಲಿಸಬೇಕಾದರೆ ಶಿವಸ್ಮರಣೆಯೊಂದೇ ಶ್ರೇಷ್ಠವಾದ ಪಾಶ. ಭವಸ್ಮರಣೆಯಿಂದ ಮನ ಹರಿದಾಡುತ್ತದೆ. ಶಿವಸ್ಮರಣೆಯಿಂದ ಮನ ಸ್ಥಿರವಾಗುತ್ತದೆ. ಇಲ್ಲವಾದರೆ ಆಗದು. ಮನ ಒಂದು ಪಶು. ವಿಷಯ ಹಸುರಿಗೆ ಎಳಸುವುದೇ ಅದರ ಹಂಚಿಕೆ. ಚಪಲತೆಯ ಚಟಕ್ಕೆ ಬಿದ್ದ ಮನ ಪಶುವೆಂದೆನಿಸಿಕೊಂಡಿತಲ್ಲದೆ ಸೊಣಗವೆಂದೆನಿಸಿತು; ಮರ್ಕಟವೆಂದೆನಿಸಿಕೊಂಡಿತು. ವಿಷಯದ ಸವಿಗೆ ಸಂಸಾರದ ಸಂಗಕ್ಕೆ ಸಾಯುವುದೇ ಸೊಣಗನ ಬಾಳುವೆ. ಕೀಳುತನಕ್ಕೆಳಸುವುದೇ ಸೊಣಗನ ಸ್ವಭಾವ. ಇವೆರಡು ಚಿತ್ರಗಳನ್ನು ಈ ಎರಡು ವಚನಗಳಲ್ಲಿ ಬಸವಣ್ಣನವರು ಬಣ್ಣಿಸಿದ್ದಾರೆ: 'ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ! ಸಂಸಾರ ಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು, ಕೂಡಲ ಸಂಗಮದೇವಾ, ನಿಮ್ಮ ಧರ್ಮ!'

'ಅಂದಣವನೇರಿದ ಸೊಣಗನಂತೆ–ಕಂಡೊಡೆ ಬಿಡದು ತನ್ನ ಮುನ್ನಿನ ಸ್ವಭಾವವನು; ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು; ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು; ಸೆರೆಗೊಡ್ಡಿ ಬೇಡುವೆ, ನಿಮ್ಮ ಧರ್ಮ!' ಎಂದು ಅಂಗಲಾಚಿದರು. ಶಿವನ ಚರಣ ಸ್ಮರಣವನ್ನು ಅಂಗವಿಸಿಕೊಳ್ಳಲು ಆಶಿಸಿದರು. ಏಕೆಂದರೆ ಮನ ಮಂಗನಂತಾಗಿ ಕೈಗೆ ಸಿಕ್ಕದಂತಾಗುತ್ತಿತ್ತು, ವ್ಯೆಮರವನೇರಿ ಕರಣಶಾಖೆಗಳಿಗೆ ಹಾರಿ ವಿಷಯ ಫಲಗಳನ್ನು ಹೀರಿ ಭವಾರಣ್ಯದಲ್ಲಿ ಬಟ್ಟೆದಪ್ಪಿ ಹರಿದಾಡುತ್ತಿತ್ತು ಮನ. ಅದಕ್ಕೆ ಇಲ್ಲಿ ಎಲ್ಲಿಯೂ ನಿಲುಕಡೆಯಿಲ್ಲ. ಒಡಲವಸರ ತೀರುವಂತಿಲ್ಲ.

'ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು; ನಿಂದಲ್ಲಿ ನಿಲ್ಲಲೀಯದೆನ್ನ ಮನವು; ಹೊಂದಿದಲ್ಲಿ ಹೊಂದಲೀಯದೆನ್ನ ಮನವು; ಕೂಡಲಸಂಗಮದೇವಾ, ನಿಮ್ಮ ಚರಣದಲ್ಲಿ ಭ್ರಮರನಾಗಿರಿಸು, ನಿಮ್ಮ ಧರ್ಮ!'

ಮಾನಸ ಸಂಯಮಕ್ಕೆ ಮಾನಸ ಸಂತೃಪ್ತಿಗೆ ಶಿವನ ಶ್ರೀ ಚರಣ ಸ್ಮರಣವೇ ಅಮೃತಹಾರ; ಅನನ್ಯಧಾರ.

ಧೃತಿಗೆಡಲು ಕಾಯವಿಕಾರ ಕಾರಣವಾದಂತೆ ಮತಿಗೆಡಲು ಮನದ ವಿಕಾರ ಕಾರಣ. ಅಲ್ಲದೆ ನುಡಿ ನಡೆಗಳಲ್ಲಿ ಹುಸಿ ವೈದೋರಲು ಮನದ ವಿಕಾರವೇ ಕಾರಣ. ಪಂಚೇಂದ್ರಿಯಗಳು ಸಂಚಲಗೊಳ್ಳುವುದು ಮನದ ವಿಕಾರದಿಂದ. ಈ ಎಲ್ಲ ದೋಷಗಳನ್ನು ದೂಡಿ ಶಾಂತಿ ಸಮಾಧಾನ ಸುಜ್ಞಾನಗಳು ವೈಗೂಡಿ ಬರಬೇಕಾದರೆ ಶಿವಸ್ಮರಣವೊಂದೇ ಸಂಜೀವನ. ನಿರ್ಮಲ ಮನಸ್ಸಿನಿಂದ ಮುರಾರಿಯ ಮಂಗಳ ನಾಮ ಸ್ಮರಣವನ್ನು ಮಾಡಿದರೆ ವಿಕಾರವಳಿದು ಮನ ನೆಮ್ಮದಿಯಾಗಿ ಬಾಳುತ್ತದೆ. ಕರ್ಮ ಕಳೆಯುತ್ತದೆ.

'ಆಸೆ ಆಮಿಷ ತಾಮಸದಿಂದ ಭವಭಂದನವಾದುದನರಿಯಾ; ತ್ರಿವಿಧ ತ್ರಿವಿಧಾವಸ್ಥೆಯ ಮರೆಯಾ! ಓಂ ನಮಃಶಿವಾಯ, ಶರಣೆಂಬುದ ಬಿಡದೆ ನೆನೆಯಾ, ಮನವೆ! ಕೂಡಲ ಸಂಗನ ಪ್ರಸಾದ ಸಾನ್ನಿಧ್ಯದಿಂದ ಭವಜನ್ಮ ಕರ್ಮ ಪಂಚಭೂತ ಪೂರ್ವನಾಸ್ತಿ.'

ಕಳವು ಮೂರು ಬಗೆ. ಕಾಯಕ ವಾಚಿಕ ·ಮಾನಸಿಕವೆಂದು. ಈ ಮೂಬಗೆಯ ಕಳ್ಳತನವು ಭಕ್ತನಿಂದ ನಡೆಯಬಾರದು. ತ್ರಿವಿಧ ಭಕ್ತಿಯಿಂದ ತ್ರಿವಿಧ ಕಳ್ಳತನವನ್ನು ಗೆಲಿಯಬೇಕು. ಕರಸ್ಥಲದಲ್ಲಿ ಕ್ರಿಯಾ ಲಿಂಗಾರ್ಚನೆಯನ್ನು ಮಾಡಿದ ಬಳಿಕ ಕೈಯಿಂದ ಕಳ್ಳತನವನ್ನು ಮಾಡಬಾರದು. ಶಿವಸಂಕೀರ್ತನ ಭಕ್ತಿಯಲ್ಲಿರುವಾಗ ನುಡಿಗಳ್ಳನಾಗಬಾರದು. ಹರಸ್ಮರಣೆಯನ್ನು ಮಾಡುವ ಮನದಲ್ಲಿ ಪರಸ್ಮರಣೆಗೆ ಅವಕಾಶವೀಯಬಾರದು. ಇತ್ತರೆ ಆತನ ಮಾನಸಗಳ್ಳನೆನಿಸುತ್ತಾನೆ. ಕಾರಣ ಅನ್ಯ ವಿಷಯಕ್ಕೆಳಸದಂತಿರಬೇಕು.

'ಅಂಕ ಕಳನೇರಿ ಕೈಮರೆದಿದ್ದೊಡೆ, ಮಾರಾಂಕ ಬಂದಿರುವುದ ಮಾಣ್ಬನೆ? ನಿಮ್ಮ ನೆನಹ ಮತಿ ಮರೆದಿದ್ದೊಡೆ, ಪಾಪ ತನುವನಂಡಲೆವುದ ಮಾಣ್ಬುದೆ ? ಕೂಡಲಸಂಗಮಯ್ಯನ ನೆನೆದರೆ ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯ.'

'ಇಲ್ಲವೆಯ ಮೇಲೆ ಕಂಚೊಡೆದಂತೆ ಬಡಮನವೆನ್ನ ಕಾಡಿತ್ತಯ್ಯ; ಮತಿಯಿಲ್ಲದ ಮರುಳ ನಾನಯ್ಯ; ಭಕ್ತಿಯಿಲ್ಲದ ಬಡವ ನಾನು; ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯವಾದೆ; ಎನಗೆ ನೀ ಕರುಣಿಸಾ ಕೂಡಲ ಸಂಗಮದೇವ.'

'ಎನಗೆ ನಿಮ್ಮ ನೆನಹಾದಾಗಲೆ ಉದಯ; ಎನಗೆ ನಿಮ್ಮ ಮರಹಾದಾಗಲೆ ಅಸ್ತಮಾನ. ಎನಗೆ ನಿಮ್ಮ ನೆನೆಹನೆ ಜೀವನ: ಎನಗೆ ನಿಮ್ಮ ನೆನಹವೆ ಪ್ರಾಣ– ಕಾಣ ತಂದೆ, ಸ್ವಾಮಿ! ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ! ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲ ಸಂಗಮದೇವಾ!'

'ಪರಚಿಂತೆ ಎನಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲ ಸಂಗಯ್ಯ ಒಲಿದಾನೊ, ಒಲಿಯನೊ,–ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು.'

'ಮಾರಿ ಮಸಣಿಯೆಂಬುವು ಬೇರಿಲ್ಲಿ ಕಾಣಿರೋ! ಮಾರಿಯೆಂಬುದೇನು? ಕಂಗಳು ತಪ್ಪಿ ನೋಡಿದರೆ ಮಾರಿ, ನಾಲಗೆ ತಪ್ಪಿ ನುಡಿದರೆ ಮಾರಿ; ನಮ್ಮ ಕೂಡಲ ಸಂಗಮ ದೇವರ ನೆನಹು ಮರೆದರೆ ಮಾರಿ!'

'ಜಾಗ್ರ ಸ್ವಪ್ನಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ ತಲೆದಂಡ, ತಲೆದಂಡ! ಹುಸಿಯಾದರೆ, ದೇವ ತಲೆದಂಡ! ತಲೆದಂಡ ಕೂಡಲ ಸಂಗಮದೇವಾ, ನೀನಲ್ಲದೆ ಅನ್ಯವ ನೆನೆದೊಡೆ ತಲೆದಂಡ, ತಲೆದಂಡ;'

ಮತ್ತೊಂದನ್ನು ನೆನೆದರೆ ಮನವಂಚನೆಯನ್ನು ಮಾಡಿದಂತೆ! ಮನದಂತರ್ಯಾಮಿಯನ್ನು ಬಿಟ್ಟು ಬೇರೆ ನೆನೆದರೆ ಮನವಂಚನೆಯಿಲ್ಲದೆ ಮತ್ತೇನು? ಆತ್ಮಿಯ ಸತ್ಯಸುಖಕ್ಕೆ ಕಾರಣನಾದ ಶಂಭುವನ್ನೇ ಸ್ಮರಿಸಬೇಕು ಮನತುಂಬುವವರೆವಿಗೂ ನೆನೆಯಬೇಕು. ಆಗ ಆತನ ಚರಣಸೇವನ ಲಭ್ಯ

ವಾಗುತ್ತದೆ. ಮಾನವತೆಯನ್ನೇ ನುಂಗಿ ನೀರು ಕುಡಿವ ಮನ ತನ್ನದಾಗುತ್ತದೆ; ಚೆನ್ನಾಗುತ್ತದೆ. ಸಂಕಲ್ಪ ವಿಕಲ್ಪಗಳಿಂದ ಸಂದೇಹ ಸಂದೋಹಗಳಿಂದ ಮುಕ್ತವಾಗುತ್ತದೆ:

'ಪುನರ್ಜನ್ಮನಿವೃತ್ತಿಯಾಗಿ ಗುರುಕರುಣವಿಡಿದಂಗೆ ಬಂಧನ'ವೆಲ್ಲಿಯದೊ ; ಭವಬಂಧವೆಲ್ಲಿಯದೋ-ಸಂಕಲ್ಪವಿಕಲ್ಪವೆಂಬ ಸಂದೇಹಕಳೆದುಳಿದವಂಗೆ ; ಕೂಡಲ ಸಂಗಮದೇವನ ತ್ರಿಸಂಧ್ಯಾಕಾಲದಲ್ಲಿ ಮಾಣದೆ ನೆನೆವಂಗೆ ?'

'ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಸಂಗಯ್ಯಾ ? ದೋಷವೆಲ್ಲಿಯದೊ ದುರಿತವೆಲ್ಲಿಯದೋ ಸಂಗಯಾ ? ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲ ಸಂಗಯ್ಯಾ ?'

'....ನಾಮಾನುಸ್ಮರಣಂ ಚೈವ ಲಭ್ಯಂತಚ್ಛಮಮಾಪ್ತಯೇ'

—ಪಾರಮೇಶ್ವರತಂತ್ರ.

ಎದೆಗೊಳದಲ್ಲಿ ಸ್ಮರಣ ಸಸಿಯನ್ನು ನಾಟಿ ಬೆಳಸಬೇಕು. ಹೂವಾಗಿಸಬೇಕು. ಅದಕ್ಕೆ ಆ ಭಗವಂತ ಭೃಂಗ ಬಂದೆರಗುತ್ತದೆ. ಸೇವನಾರ್ಚನಾದಿಗಳು ಸಾಗುತ್ತವೆ.

ಪಾದಸೇವನಂ : ಪಾದಸೇವೆ ದ್ವಿವಿಧವಾಗಿದೆ. ಒಂದು ಶಿವನ ಪಾದಸೇವೆ. ಇನ್ನೊಂದು ಶ್ರೀಗುರುವಿನ ಪಾದಸೇವೆ. ಪ್ರತ್ಯಕ್ಷನಲ್ಲದ ಸಾಕಾರನಾಗದ ಶಿವನ ಚರಣ ಸೇವೆ ಸಾಧ್ಯವಿಲ್ಲ. ಈ ಅರ್ಥದಲ್ಲಿ ಪಾದವೆಂದರೆ ಜ್ಞಾನ. ಶಿವನ ಜ್ಞಾನಾರಾಧನೆಯನ್ನು ಮಾಡುವುದೇ ಪರಶಿವನ ಪಾದಸೇವನೆ. ಆ ಜ್ಞಾನಾರಾಧನೆಗೆ ಸಹಕಾರಿಯಾಗಿದೆ ಸಾಕಾರನಾದ ಸುಜ್ಞಾನಿಯಾದ ಶ್ರೀಗುರು ಪಾದಸೇವನ. ಸುಜ್ಞಾನಿಯಾದ ಶ್ರೀಗುರುವಿನ ಚಿದ್ರಸವು ಪಾದಾಂಗುಲಿಗಳಲ್ಲಿ ಉದ್ಗಮಿಸಿ ಪ್ರವಹಿಸುತ್ತಿರುತ್ತದೆ. ಆದ್ದರಿಂದ ಶ್ರೀಗುರು ಪಾದಸೇವನ ಸರ್ವಶ್ರೇಷ್ಠವಾದುದು.

ಗುರುಪಾದ ಅದೊಂದು ಪರುಷ. ಅದುಸೋಂಕಿದ ಶಿರಸ್ಸು ಪಾವನ ; ಶರೀರ ಪಾವನ. ಗುರುಪಾದವನ್ನು ಅರ್ಚಿಸಿ ವಂದಿಸಿದರೆ ಅಜ್ಞಾನಿ ಜ್ಞಾನಿಯಾಗುತ್ತಾನೆ. ಪಾಪಿ ಪಾವನನಾಗುತ್ತಾನೆ. ಪಾದೋದಕವನ್ನು ಪಾನ

ಮಾಡಿದರೆ ಅಂತರಂಗವೆಲ್ಲ ಪರಿಶುದ್ಧವಾಗುತ್ತದೆ; ಪ್ರಕಾಶಮಯವಾಗುತ್ತದೆ. ಶಿಷ್ಯನ ಉಭಯಾಂಗ ಶುದ್ಧಿಗೆ ಶ್ರೀಗುರು ಪಾದಕ್ಕಿಂತ ಬೇರೆ ಪರುಷವಿಲ್ಲ. 'ಬ್ರಹ್ಮಂಗೆ ವಾಕ್‌ಪರುಷ, ವಿಷ್ಣುವಿಂಗೆ ನಯನ ಪುರುಷ; ರುದ್ರಂಗೆ ಹಸ್ತ ಪುರುಷ. ನಮ್ಮ ಕೂಡಲ ಸಂಗನ ಶರಣಂಗೆ ಗುರು ಪಾದವೇ ಪರುಷ.'

'ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ ; ರುದ್ರ ಪದವಿ ಯನೊಲ್ಲೆ, ಮತ್ತಾವ ಪದವಿಯನೊಲ್ಲೆನಯ್ಯಾ ! ಕೂಡಲ ಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೆ ಕರುಣಿಸಯ್ಯಾ.'

ಪರಮಜ್ಞಾನಿಯ ಪಾದಮಹಿಮೆಗೆ ಪಾರವಿಲ್ಲ. ಅಂತಹ ಪಾದಸೇವೆ ಸಿಕ್ಕುವುದು ದುರ್ಲಭ. 'ಸೇವಾಧರ್ಮಃ ಪರಮಗಹನೋ ಯೋಗಿನಾಮ ಪ್ಯಗಮ್ಯಃ' ಎಂಬುದನ್ನರಿಯಬೇಕು. ಇದೇ ಅಭಿಪ್ರಾಯವನ್ನು ಬಸವಣ್ಣ ನವರು ಹೀಗೆ ಹೇಳಿದ್ದಾರೆ. 'ಹೊತ್ತಾರೆ ಎದ್ದು ಶಿವಲಿಂಗದೇವನ ದೃಷ್ಟಿ ಯಾರೆ ನೋಡದವನ ಸಂಸಾರವೇನವನ ? ಬಾಳುವೆಣನ ಬೀಳುವೆಣನ ಸಂಸಾರವೇನವನ ? ನಡೆವೆಣನ ನುಡಿವೆಣನ ಸಂಸಾರವೇನವನ ? ಕರ್ತೃ ಕೂಡಲ ಸಂಗಮ ದೇವಾ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇ ನವನ ?' ಈ ಅಚ್ಚರಿಯಲ್ಲಿ ಈ ಅಂತಃಕರಣಪೂರ್ಣಕೇಳಿಕೆಯಲ್ಲಿ ಈ ಮನದ ಮರುಕದಲ್ಲಿ ಈ ಅರ್ಥಪೂರ್ಣ ಮೂದಲಿಕೆಯಲ್ಲಿ ಹಾರ್ದಿಕತೆ ಹರಿದು ಬಂದಿದೆ ಹಿತೋಪದೇಶ ಹೊಮ್ಮಿ ಬಂದಿದೆ. ಶಿವಲಿಂಗದ ಶಿವಲಿಂಗಸ್ವರೂಪಿಯ ನೋಟ ಮತ್ತು ಮಾಟಗಳಮಹಿಮೆ, ಮತ್ತು ಅವೆರಡನ್ನು ಪ್ರಾತಃಕಾಲದಲ್ಲಿ ನಿದ್ದೆಯಿಂದೆದ್ದ ಮೊದಲಿನಲ್ಲಿ ಮಾಡಹೇಳುವ ಮಾರ್ವಿಕ ಶಿಕ್ಷಣದ ಹಿರಿಮೆ ಮನಮುಟ್ಟುವಂತಿವೆ ಎದ್ದೊಡನೆ ಲಿಂಗದೇವನ ಅಥವಾ ಲಿಂಗಾನುಭಾವಿಯ ಮುಖದರ್ಶನ ಪಾದಸೇವನಗಳನ್ನು ಮಾಡಿ ಮುಂದುವರಿದಾತನ ಸಂಸಾರ ಚೆಂದ, ನಡೆನುಡಿ ಚೆಂದ. ಇಲ್ಲವಾದರೆ ಆತನೊಂದು ಬಾಳುವ ಹೆಣ ; ಬೀಳುವ ಬೀಳಾದ ಹೆಣ. ಸಂಸಾರ ಸುಂದರವಾಗಬೇಕಾದರೆ ಸತ್ಯ ಸುಖಸಾ ರವಾಗಬೇಕಾದರೆ ನಿತ್ಯ ತತ್ವಜ್ಞಾನಿಯ ಪಾದ ಸೇವೆಗೆ ವಂಚಿತನಾಗ ಬಾರದು.

'ಪರಮತತ್ತ್ವವಿದರ ನಿಜಸಂಯುಕ್ತರ ಆನು ನೀನೆಂಬ ಶಬ್ದ ಸುಖಿಗಳ ತೋರಾ ಎನಗೆ, ಮಹಾನುಭಾವರ ತೋರಾ ಎನಗೆ; ಲಿಂಗೈಕ್ಯರ

ಲಿಂಗ ಸುಖಿಗಳ ಲಿಂಗಗೂಡಾಗಿಪ್ಪವರ ಲಿಂಗಾಭಿಮಾನಿಗಳ ತೋರಾ ಎನಗೆ. ಅಹೋ ರಾತ್ರಿಯಿಲ್ಲಿ ನಿಮ್ಮ ಶರಣರ ಸೇವೆಯುಲ್ಲಿರಿಸು ಕೂಡಲ ಸಂಗಮ ದೇವಾ.' ಇದು ನಿಜಭಕ್ತನ ಹೃದಯ ಹಂಬಲ. ಇದು ನಿಜಭಕ್ತನ ನಿತ್ಯ ಮಾರ್ಗಕ್ರಿಯೆ. ಇದು ಸರ್ವೋತ್ತಮ ಮಾರ್ಗ; ಮಹಾಸಾಧನ. ಇದು ಸಾಧಿಸದಿದ್ದರೆ ನೈಮಿತ್ತಕವಾಗಿಯಾದರೂ ಸಾಧಿಸಬೇಕು.

'ಭಕ್ತನ ಮಠವೆಂದು ಜಂಗಮ ನಡೆದು ಬಂದಲ್ಲಿ, ಆ ಭಕ್ತನ ಕಾಣುತ್ತ ಆಸನ ತ್ಯಜತೆಯ ಮಾಡುತ್ತ, ಕೊಂಕುತ್ತ ಕೈಮುಗಿದು ನಿಂದಿರ್ದು, ಬಾಗಿ ಬಳಕುತ್ತ, 'ಬಿಜಯಂ ಮಾಡಿ ದೇವಾ!' ಎಂದು ಕರೆದು ಕುಳ್ಳಿರಿಸಿ, ಪಾದಾರ್ಚನೆಯಂ ಮಾಡಿ, ಪಾದೋದಕವಂ ಕೊಂಡು, ವಿಭೂತಿ—ವೀಳೆಯಂ ಕೊಟ್ಟು, ಕಂಗಳು ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ, ಬಾಯಿತುಂಬಿ ಮಾತನಾಡಿ, 'ಏಗುವುದು ಏಬೆಸನೆಂ'ದು ತನುಕರಗಿ ಮನಕರಗಿ ನೋಡಿ ಮಾಡುವುದು ಭಕ್ತಿಸ್ಥಲ ಬಡವನಾಗಲಿ ಬಲ್ಲಿದನಾಗಲಿ ಇನಿತು ಮುಖ್ಯವಾಗಿ ಮಾಡಿಸಿಕೊಂಬುದು ಜಂಗಮಸ್ಥಲ. ಈ ಎರಡೊಂದಾದ ಘನವಂತಿಂತೆಂದುಪಮಿಸಲಾಗದಂತಿರಲಿ: ಇನಿತಲ್ಲದೆ ಮಾಡಿದ ಮಾಟ ಭಕ್ತ ಸ್ಥಲಕ್ಕೆ ಸಲ್ಲದು:—ಫಲದಾಯಕ ನೈಸೆ! ಇನಿತಲ್ಲದೆ ಮಾಡಿಕೊಂಬುದು ಜಂಗಮ ಸ್ಥಲಕ್ಕೆ ಸಲ್ಲದು:—ಉಪಜೀವಿತನೈಸೆ! ಈ ಎರಡಕ್ಕೆಯೂ ಭವ ಹಿಂಗದು ಕಾಣಾ ಕೂಡಲಸಂಗಮದೇವಾ.'

ಇದು ಭಕ್ತನು ಮಾಡಬೇಕಾದ ನೈಮಿತ್ತಕ ಪಾದ ಸೇವನ ಭಕ್ತಿ. ಭೋಕ್ತೃ (ಕರ್ತೃ)ವಾದ ಜಂಗಮನು ಕೈಕೊಂಬ ಸಮಭಾವಶಕ್ತಿ. ಈ ಸೇವಾಭಕ್ತಿ—ಸಮಭಾವ ಶಕ್ತಿ ಸಮರಸವಾದಲ್ಲಿ ಉಂಟಾಗುವ ಘನವಂತಿಕೆ ಸುಖವಂತಿಕೆಗಳನ್ನು ಸೊಲ್ಲಲು ಸೊಲ್ಲಿಲ್ಲ; ಹೋಲಿಸಲು ಹೋಲಿಕೆಯಿಲ್ಲ. ಭಯಭಕ್ತಿಯಿಂದ ಪಾದಸೇವೆ ಮಾಡದ ಭಕ್ತ ಸಮಭಾವದಿಂದ ಅನುಗ್ರಹಿಸದ ಜಂಗಮ ಇವರಿಬ್ಬರು ಭವದಿಂದ ತಪ್ಪಿಸಿಕೊಳ್ಳಲಾರರು: ಭಯ ಭಕ್ತಿಗಳಿಲ್ಲದ ಸೇವೆ ಸಾರ್ಥಕವಾಗದು; ಸಂತೋಷ ತಾರದು. 'ತನುವ ನೋಯಿಸಿ, ಮನವ ಬಳಲಿಸಿ, ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೇ? ಕೂಡಲ ಸಂಗಮದೇವಾ ಶಿವಭಕ್ತರ ನೋವೇ ಅದು ಲಿಂಗದ ನೋವು!'

ಶ್ರೀಗುರು ಜಂಗಮರು ಲಿಂಗವನ್ನಾರಾಧಿಸಿ ಲಿಂಗಸ್ವರೂಪರಾಗಿರುತ್ತಾರೆ. ಲಿಂಗ ಭಕ್ತರೆಂದೆನಿಸಿರುತ್ತಾರೆ. ಅಂಥವರ ತನು ಮನಗಳನ್ನು ನೋಯಿಸುವ ಬಳಲಿಸುವ ಕೆಲಸ ಮಾಡಬಾರದು. ಅಲ್ಲದೆ ಅವರಲ್ಲಿ ಹೆಚ್ಚು ಕುಂದುಗಳನ್ನು ಎಣಿಸಬಾರದು. ಗುರು—ಜಂಗಮರಲ್ಲಾಗಲಿ, ಗುರು—ಗುರುಗಳಲ್ಲಾಗಲಿ, ಜಂಗಮ—ಜಂಗಮರಲ್ಲಾಗಲಿ ವೇಷ ವೈಭವಗಳಿಂದ ಭೇದವನ್ನು ಎಣಿಸಬಾರದು.

'ಕುದುರೆ—ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು; ಬಡಭಕ್ತರು ಬಂದರೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು. ಎನ್ನೊಡೆಯ ಕೂಡಲಸಂಗಯ್ಯನವರ ತಡಗೆಡಹಿ ಮೂಗ ಕೊಯ್ಯದೆ ಮಾಣ್ಬನೆ ?'

ಗುಣ, ಜ್ಞಾನ, ಕ್ರಿಯ, ಅನುಭವಗಳಿಂದ ಅವಧಾನ, ನಿಷ್ಠೆಗಳಿಂದ ಹೆಚ್ಚು ಕುಂದುಗಳನ್ನು ನೋಡಬಹುದಲ್ಲದೆ ಬರೀ ಬಾಹ್ಯ ಭೌತಿಕ ಭಾಗಗಳಿಂದ ಪ್ರಾಕೃತಿಕ ಸೌಂದರ್ಯದಿಂದ ಕ್ಷಣಿಕ ಅಣಿಮಾದಿ ಸಿದ್ಧಿಯಿಂದ ನೋಡಬಾರದು ನುಡಿಯಬಾರದು. ಉದಾಶೀನವ ಮಾಡಬಾರದು. ದಿಟವಾಗಿ ನೋಡಿದರೆ ಹೊರಗಿನ ಬಡತನ ಬಡತನವಲ್ಲ; ಒಳಗಿನ ಬಡತನವೇ ಬಡತನ. ಹೊರಗಿನ ಸಿರಿವಂತಿಕೆ ದಿಟವಾದ ಸ್ಥಿರವಾದ ಸಿರಿವಂತಿಕೆಯಲ್ಲ. ಒಳಗಿನ ಜ್ಞಾನಾನುಭವಗಳ ಸಿರಿವಂತಿಕೆಯೇ ಸ್ಥಿರವಾದ ಪರಿಣಾಮಕಾರಿಯಾದ ಸಿರಿವಂತಿಕೆ. ಇಂಥವರ ಬರುವಿಕೆಗಾಗಿ ಬಂದರೆ ಬಗೆದುಂಬಿದ ಪಾದಸೇವೆಗಾಗಿ ಹಾರೈಸಿ ಸಜ್ಜಿತರಾಗಿರಬೇಕು.

'ಬಂದಹೆನೆಂದು ಬಾರದೆಯಿದ್ದರೆ, ಬಟ್ಟೆಗಳ ನೋಡುತ್ತ ಇದ್ದೇನಯ್ಯಾ ! ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯಾ ? ಕೂಡಲಸಂಗನ ಶರಣರು ಬಾರದಿದ್ದರೆ ಅಟ್ಟುವೆನೆನ್ನ ಪ್ರಾಣವನು !'

ಶಿವನಿಗೆ ಶರಣು ಹೊಕ್ಕು ಶಿವಸ್ವರೂಪರಾದ ಸ್ವಾಂತಃ ಶ್ರೀಮಂತರಾದ ಮಹಾನುಭಾವಿಗಳ ಶ್ರೀ ಚರಣಸೇವೆಯಲ್ಲಿ ಅರ್ಥ ಪ್ರಾಣಾಭಿಮಾನಗಳನ್ನು ಮುಡುಪಿಟ್ಟು ಕೃತಕೃತ್ಯರಾಗುವುದೇ ಭಕ್ತಮಾರ್ಗಕ್ರಿಯೆ. ತನುಮನಧನಗಳನ್ನು ಪಾದಸೇವೆಯಲ್ಲಿ ಸೂರೆಗೊಳ್ಳಬೇಕು. ಇವು ತನ್ನವು ತನಗಾಗಿರಬೇಕಾದವು ಎಂದು ಬಗೆದರೆ ಭಕ್ತಿ ಮಾರ್ಗಕ್ಕೆ ಹೊರಗು; ಭ್ರಾಂತಿ ಚಕ್ರಕ್ಕೆ ಒಳಗು. 'ತನುಮನ ಧನವೆಂಬ ಕನ್ನಡಿ ನೋಡಯ್ಯಾ; ಎನ್ನದೂ

ಅಲ್ಲ' ನಿನ್ನದೂ ಅಲ್ಲ, ಬರಿಯ ಭ್ರಮೆಯ ಮಾತು! ಆ ಭ್ರಮೆಯೊಳಗಾಗದೆ ನಿಮ್ಮ ಚರಣವ ಬಿಡೆ, ಕೂಡಲಸಂಗಮದೇವಾ.' ಪಾದಸೇವೆಯ ಪರಮ ಪರಿಣಾಮದಲ್ಲಿ ಪ್ರವೇಶಿಸಿದಾಗ ಪ್ರಾಕೃತಿಕ ಪ್ರಾಪಂಚಿಕ ಸರ್ವ ಸಂಪತ್ತಿಯ ತ್ಯಾಗಕ್ಕೆ ಸಿದ್ಧವಾದಲ್ಲದೆ ಅದು ಸಾಧ್ಯವಾಗದು.

ಶರೀರ ಪ್ರಕೃತಿಯ ಮೇಲೆ ಪಾದದ ಪ್ರಭಾವ ಪರಿಣಾಮಕಾರಿ; ಪ್ರಕರ್ಷಕಾರಿ. ಜ್ಞಾನೇಂದ್ರಿಯಗಳಲ್ಲಿ ಶ್ರವಣ ವಿಷಯವಾದ ಶ್ರೀಗುರು ವಚನಕ್ಕೆ ಯಾವ ಸ್ಥಾನವಿದೆಯೋ ಯಾವ ಪ್ರಯೋಜನವಿದೆಯೋ ಅದೇ ಸ್ಥಾನ ಅದೇ ಪ್ರಯೋಜನ ಪಾದಕ್ಕೆ ಪಾದ ಚಲನಕ್ಕೆ ಇದೆ. ಪಾದ ಸಂಚಲನದಿಂದ ಶರೀರಗತರಕ್ತ ಚಲನೆಯಾಗಿ ಶುದ್ಧಿಗೊಳ್ಳುತ್ತದೆ; ವೃದ್ಧಿಯಾಗುತ್ತದೆ. ರಕ್ತ ಶುದ್ಧಿಯಿಂದ ರೋಗ ರಹಿತವಾಗುತ್ತದೆ. ಸರಿಯಾದ ರಕ್ತಾಭಿಶರಣವೇ ಆರೋಗ್ಯ ಮೂಲ. ಅದನ್ನು ಕಾಪಾಡುತ್ತದೆ ಪಾದ ಕ್ರಿಯೆ. ಮೆದುಳು ಹೃದಯಗಳನ್ನು ಹದುಳತೆಯಲ್ಲಿರಿಸುತ್ತದೆ ಪಾದ ಪ್ರಕ್ರಿಯೆ. ರಕ್ತನಾಳಗಳು ನಿಷ್ಕ್ರಿಯವಾಗದಂತಿರಬೇಕಾದರೆ ಪಾದಗಳ ಗತಿ ಅತ್ಯಗತ್ಯ. ಎಲ್ಲಕ್ಕೂ ಮುಖ್ಯವಾಗಿ ಪಾದ ಪ್ರಭಾವ ದೃಷ್ಟಿಯ ಮೇಲಿರುತ್ತದೆ. ದೃಷ್ಟಿಯಿಂದ ಸೃಷ್ಟಿಯಾಗಿ ಬರುವ ರೂಪತೇಜಗಳನ್ನು ಮಣಿಪೂರಕವು ಹೊತ್ತುಳಿದುದನ್ನು ಪಾದಗಳು ನಿರ್ವಹಿಸುತ್ತವೆ. ಪಾದ ತೇಜದಿಂದಲೇ ಪ್ರಕೃತಿ ಪ್ರಕೃಷ್ಟವಾಗಿರುತ್ತದೆ; ಪ್ರಫುಲ್ಲವಾಗಿರುತ್ತದೆ; ಪ್ರಸನ್ನವಾಗಿರುತ್ತದೆ. ಈ ದಿಸೆಯಲ್ಲಿ ಪ್ರಾಮುಖ್ಯ ಪಾತ್ರ ಪಾದದ್ದು. ಪಾದದ ಪ್ರಭೆ ಉಳಿದು ಬೆಳೆದು ಬರಬೇಕಾದರೆ ಮಣ್ಣಿನ ಮೇಲೆ ನಡೆದಾಡುವುದಕ್ಕಿಂತ ಕಾಷ್ಠದ ಮೇಲೆ ನಡೆಯುವುದು ಉತ್ತಮ. ಸುವರ್ಣದ ಮೇಲೆ ನಡೆವುದು ಸರ್ವೋತ್ತಮ. ಈ ದೃಷ್ಟಿಯಿಂದ ಗುರುಗಳಾದವರು ಹಾವುಗೆಯ ಮೆಟ್ಟುವರು. 'ಹೊನ್ನು ಹಾವುಗೆಯ ಮೆಟ್ಟಿದನ' ಎಂಬ ಬಸವಣ್ಣನವರ ಮಾತು ಅದರ ಅಗ್ಗಳಿಕೆಯನ್ನು ಉಗ್ಗಡಿಸುವಂತಿದೆ. ಕಾಷ್ಠದ ತೇಜಸ್ಸಿಗಿಂತ ಕನಕದ ತೇಜಸ್ಸು ತೀರ್ರೈಸದು; ತ್ರಿಗುಣ ಹೆಚ್ಚಿನದು. ತಮ್ಮ ಸಜ್ಜನಿಕೆಯಿಂದಲೂ ಹಾವುಗೆಯ ಧಾರಣದಿಂದಲೂ ಒಳ್ನಡೆಯಿಂದಲೂ ಶ್ರೀಗುರು ಪಾದ ಪ್ರಭೆ ಪ್ರಭೂತವಾಗಿರುತ್ತದೆ. ಅದು ಪಾದಾಂಗುಲಿ ನಖಗಳಿಂದ

ಹೊರ ಹೊಮ್ಮುತ್ತಿರುತ್ತದೆ. ಪಾದಸೇವನೆಯಿಂದ ಆ ಚಿತ್ಪ್ರಕಾಶ ಪ್ರಾಪ್ತಿಯಾಗುತ್ತದೆ. ಅದರಿಂದಾಗಿ 'ಹರನಡಿವಿಡಿ, ಶಾಂತರೊಡನಾಡು.' ಎಂದು ನಿಜಗುಣರು ತಮ್ಮ ಕೈವಲ್ಯ ಪದ್ಧತಿಯ ಪ್ರಥಮ ಶಿವಕಾರುಣ್ಯಸ್ಥಲದಲ್ಲಿ ಪ್ರಬೋಧಿಸಿರುವರು. ಚರಣ ಸಚ್ಚಲನವೇ ಜೀವನ; ಆ ಸಚ್ಚರಣ ಸೇವೆಯೇ ಉಜ್ಜೀವನ.

ಪಾದ ಸೇವೆಯನ್ನು ದೂತಿಯಂತೆ ಮಾಡಬಾರದು; ಸತಿಯಂತೆ ಮಾಡಬೇಕು; ಗರತಿಯಂತೆ ಮಾಡಬೇಕು. ದುರ್ಯೋಧನನಂತೆ ಮಾಡಬಾರದು; ಧರ್ಮರಾಜನಂತೆ ಮಾಡಬೇಕು. ಅಡಿವಿಡಿದ ಧರ್ಮನು ಕೃಷ್ಣನ ಕೃಪೆಗೆ ಪಾತ್ರನಾದನು. ಶಿವನ ಮುಡಿವಿಡಿದ ಗಂಗೆಯ ಗತಿಸ್ಥಿತಿಗಳೇನು? ಅಡಿವಿಡಿದ ಗೌರಿಯ ಸ್ಥಾನ ಮಾನಗಳೇನು?

ದೂತಿಯ ಪಾದಸೇವೆಯಲ್ಲಿ ಧನವನ್ನು ಪಡೆವ ಧ್ಯೇಯವಿರುತ್ತದೆ. ಗರತಿಯಾದ ಸತಿಯ ಪಾದಸೇವೆಯಲ್ಲಿ ತನುಮನಧನ (ಹೃದಯ)ಗಳನ್ನು ಪಡೆವ ಧ್ಯೇಯವಿರುತ್ತದೆ; ದೊರಕಿಸಿ ಧನ್ಯಳಾಗುತ್ತಾಳೆ. ಅಂತೆಯೇ ಭಕ್ತನು ಭೌತಿಕದ ಬೀಳು ಬಯಕೆಗಳಿಗಾಗಿ ಪಾದಸೇವೆಯನ್ನು ಮಾಡಬಾರದು. ಭಾಕ್ತಿಕದ ಭಾವಪೂರ್ಣವಾದ ಪಾದಸೇವೆಯನ್ನು ಮಾಡಬೇಕು. ಅಂತೆಯೇ ಶ್ರವಣ, ಕೀರ್ತನ, ಶಿವಸ್ಮರಣಗಳ ನಂತರ ಪಾದಸೇವನ ಭಕ್ತಿಯ ನಿರೂಪೋಕ್ತಿಯಿದೆ. ಗುರುವಾಣಿ, ಗುರುನಾಮ, ಗುರುಮಂತ್ರಗಳು ಭಕ್ತನ ತ್ರಿಕರಣಗಳನ್ನು ತುಂಬಿರಬೇಕು. ತ್ರಿಕರಣ ಶುದ್ಧಿಯಿಂದ ನಿರಪೇಕ್ಷ ಬುದ್ಧಿಯಿಂದ ಗುರುವರನ ಚರಣ ಸೇವೆಯನ್ನು ಸಲ್ಲಿಸಬೇಕು. ಗುರುವಿನ ಚಿಚ್ಚರಣ ಚಿದ್ರಸವನ್ನು ಪಡೆವ ಉನ್ನತಾಪೇಕ್ಷೆಯಿರಬೇಕು. ಅವರ ಆ ಪಾವನ ನಯನ ತೇಜವನ್ನು ಪಾದಾಂಗುಲಿಗಳಿಂದ ಪಡೆಯಬೇಕು. ಇದುವೆ ಪಾದ ಸೇವನ ಧ್ಯೇಯವಾಗಿರಬೇಕು.

ಅರ್ಚನಂ:

ಅಶಾಂತಿಮಯ ಅಸುಖಮಯ ಜೀವನದಿಂದ ಬಿಡುಗಡೆಯನ್ನು ಪಡೆಯಬೇಕಾದರೆ ಅರ್ಚನ ನಿರತನಾಗಬೇಕು. ಆತ್ಮ ಸಾಕ್ಷಾತ್ಕಾರ ರೂಪ ಮುಕ್ತಿ ಸಂಸ್ಕಾರವನ್ನು ಅರ್ಜನ ಮಾಡಬೇಕಾದರೆ ಅರ್ಚನಕ್ಕೆ ಶರಣು ಹೋಗಬೇಕು. ವ್ಯರ್ಥಜೀವನ ಸಾರ್ಥಕವಾಗಬೇಕಾದರೆ ಶಿವಾ

ರ್ಚನ ಕ್ರಿಯೆಯನ್ನು ಕೈಕೊಳ್ಳಬೇಕು. ಕೈ ತೊಳೆದಲ್ಲದೆ ತನ್ನ ಶಿವಕಳಾ ಗುರುಪಾದವನ್ನು ಮುಟ್ಟಬಾರದು. ಜಡ ಜಲದಿಂದ ಕೈತೊಳೆವುದು ಸ್ಥೂಲ. ಇದೊಂದೇ ಸಾಲದು. ಅರ್ಚನ ರೂಪ ಅಗ್ಗವಣಿಯಿಂದ ಅಂಗೈಯನ್ನು ಅಂಗವನ್ನು ತೊಳೆದು ಗುರುಚರಣವನ್ನು ಸ್ಪರ್ಶಿಸಬೇಕು; ಹರಚರಣ ಸರೋಜವನ್ನೆತ್ತಬೇಕು. ಪರಮಾತ್ಮನ ಪ್ರಸಾದವನ್ನು ಪಡೆದು ಪಾವನ ಪ್ರತಿಮೆ ತಾನಾಗಬೇಕಾದರೆ ಪೂಜೆಯಿಂದ ಪುಳಕಿತನಾಗಬೇಕು. ಪುಷ್ಪದಂತೆ ಮಕರಂಧಾನಂದರಸ ಪೂರ್ಣ ಹೃತ್ಕಮಲವುಳ್ಳವನಾಗಬೇಕಾದರೆ ಕರುಣ ರಸಪೂರಾಯ ಗುರುಶಕ್ತಿಯುಳ್ಳ ಪೂಜ್ಯ ದೇವನ ಪೂಜೆಯ ಪುಣ್ಯಕ್ಕೆ ವಂಚಿತ ನಾಗಬಾರದು. 'ದೇವಪೂಜೆಯು ಮಾಟ ದುರಿತ ಬಂದನದೋಟ.' ದುರಿತ ಬಿಟ್ಟೋಡದೆ ದುಃಖ ದುರವಸ್ಥೆಗಳು ದೂರಾಗವು. ಸುಖ ಶಾಂತಿಗಳು ಸಂಪ್ರಾಪ್ತವಾಗವು ಸ್ವಾತ್ಮಸಾಕ್ಷಾತ್ಕಾರ ಸಾಧ್ಯವಾಗದು.

ಅರ್ಚನೆಯಿಂದ ಅಂಗದಲ್ಲಿ ಅಪೂರ್ವವಾದ ತೇಜಸ್ಸುಂಟಾಗುತ್ತದೆ. ಹದುಳತೆಯ ಹಸುರು ಹಸರಿಸುತ್ತದೆ. ಕರಣಕುಸುಮಗಳು ಅರಳುತ್ತವೆ. ಅಚ್ಚ ಪರಿಮಳವ ಸೂಸುತ್ತವೆ. ಶಾಂತಸ್ವರೂಪ ಶಿವಕಳಾರೂಪಗಳು ಮೂಡಿ ಮಂಗಳಮಯವಾಗಿಸುತ್ತವೆ. ಪೂಜೆಯೊಂದು ಪಾವನಕ್ರಿಯೆ; ಪಾವನಗಂಗೆ. ಅದರಲ್ಲಿ ಮಿಂದವರ ಪಾಪ ಪಲ್ಲಟವಾಗುತ್ತದೆ. ತಾಪ ತಾನಿಲ್ಲದಾಗುತ್ತದೆ. ಪುಣ್ಯದ ಹಣ್ಣು ತನ್ನದಾಗುತ್ತದೆ. ಪರಮಸುಖರುಚಿ ಸನ್ನಿಹಿತವಾಗುತ್ತದೆ. ಮಂಗಮನಸ್ಸು ಮಂಗಳತೇಜಸ್ಸುಳ್ಳುದಾಗುತ್ತದೆ, ಅಸ್ಥಿರ ಜೀವನ ಸುಸ್ಥಿರಗೊಳ್ಳುತ್ತದೆ.

'ಉತ್ಪತ್ತಿ ಶುಕ್ಲ ಶೋಣಿತದಿಂದಾದ ಲಜ್ಜೆ ಸಾಲದೆ? ಮತ್ತೆದುರಿತಂಗಳ ಹೊರುವ ಹೆಗ್ಗತನವೇಕಯ್ಯಾ? ಮೃತ್ಯುವಿನ ಬಾಯಿಗೆ ತುತ್ತಾಗಲೇಕೆ? ಒತ್ತೊತ್ತೆಯ ಜನನವ ಗೆಲಿಪೊಡೆ ಕರ್ತನ ಪೂಜಿಸು ನಮ್ಮ ಕೂಡಲ ಸಂಗಮದೇವನ.'

'ಮನವೇ ಸರ್ಪ, ತನುವೆ ಹೇಳಿಗೆ: ಹಾವಿನೊಡತಣ ಹುದುವಾಳಿಗೆ! ಇನ್ನಾವಾಗ ಕೊಂದಿಹುದೆಂದರಿಯೆ; ಇನ್ನಾವಾಗ ತಿಂದಿಹುದೆಂದರಿಯೆ!

ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ ಅದೇ ಗಾರುಡ ; ಕೂಡಲ ಸಂಗಮ ದೇವಾ.'

ತನುಮನಗಳನ್ನು ಸಂತೈಸುವ ಸಾಧನೆಯಲ್ಲಿ ಅರ್ಚನೆಗೆ ಅಗ್ರಸ್ಥಾನ ವಿದೆ ; ಅನನ್ಯ ಸ್ಥಾನವಿದೆ. ಅರ್ಚನೆಯಲ್ಲಿ ತನುಮನಗಳ ವ್ಯವಹಾರವೆಲ್ಲ ಅತೀಂದ್ರಿಯವಾಗಿರುತ್ತವೆ ; ಅಂತರಾತ್ಮ ಪರವಾಗಿರುತ್ತವೆ. ತನುಮನಗಳ ಪ್ರತಿಕ್ರಿಯೆಳೆಲ್ಲ ದೈವಿಕವಾಗಿದ್ದು ದುರಿತಕ್ಕೆ ದಾರಿಯಿರುವುದಿಲ್ಲ. ಮುಂದೊದಗಲಿರುವ ಮರಣ–ಜನನಗಳ ಮನವರಿಕೆಯಿರುವುದಿಲ್ಲ ; ಬೆದರಿಕೆಯಿರುವುದಿಲ್ಲ.

ಮೈ ಹುತ್ತದಲ್ಲಿ ಮನವೆಂಬ ಹಾವಿದೆ. ಅರ್ಚನೆಯೆಂಬ ಗಾರುಡ ಮಂತ್ರವಿಲ್ಲದಿದ್ದರೆ ಅದು ಕಚ್ಚಿ ವಿಷವೇರಿ ಕಾಲವಶವಾಗುವುದು ತಪ್ಪಿದ್ದಲ್ಲ. ಅದರ ಒಡೆತನವನ್ನು ಗಳಿಸಬೇಕಾದರೆ ಅದರೊಡನಾಡಿ ಆನಂದಿಸಬೇಕಾದರೆ ಹಾವಿನ ಹಲ್ಲು ಕಳೆಯಬೇಕು. ಮಂತ್ರವಾದಿಯಾಗಬೇಕು.

ಈ ಭೌತಿಕ ದೇಹಕ್ಕೆ ಎಂದಿದ್ದರೂ ಜರಾಮರಣಗಳು ತಪ್ಪುವವಲ್ಲ. ಶರೀರ ಶಾಶ್ವತವೆಂದು ನಂಬುವುದು ವಿವೇಕವಲ್ಲ. ನಂಬಿ ಆರಾಧಿಸದಿದದ್ದರೆ ಮತ್ತೆ ಮರ್ತ್ಯಕ್ಕೆ ಮೈ ಹೊತ್ತು ಬರಬೇಕಾಗುತ್ತದೆ. ನಿತ್ಯ ನಿತ್ಯ ಬಾಳಿನಲ್ಲಿ ಬೇಸರ ಪಡಬೇಕಾಗುತ್ತದೆ. ಕಾರಣ ಮುಪ್ಪಿಗೆ ಮೂಲಾಗುವ ಮುನ್ನವೇ ಮೃತ್ಯುಂಜಯನನ್ನು ಪೂಜಿಸಬೇಕು. 'ನೆರೆ ಕೆನ್ನೆಗೆ, ತೆರೆಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ ಮುಪ್ಪಿಂದೊಪ್ಪ ಅಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲಸಂಗಮದೇವನ.'

'ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ । ಮಹಾದಾನಿ ಕೂಡಲಸಂಗಮ ದೇವನ ಪೂಜಿಸಿ ಬದುಕು ಕಾಯವ ನಿಶ್ಚಯಿಸದೆ.'

ದೇಹವೊಂದು ಹೂವು. ಇದು ಹೊತ್ತು ಬಿದ್ದರೆ ಬಾಡುತ್ತದೆ. ಸೊಂಪುಕಂಪುಗಳಳಿಯುತ್ತವೆ. ಬತ್ತಿದ ಹೂವನ್ನು ದೇವನ ನೆತ್ತಿಯ

ಮೇಲೇರಿಸುವ ಬದಲು ಬತ್ತಿ ಬಾಡದ ಮುನ್ನ ಅಂದಚಂದವಳಿಯದ ಮುನ್ನ ದೇವನಾರಾಧನೆಗೆ ಸಲ್ಲಿಸಬೇಕು.

ತೋರಿ ಅಡಗುವ ತನು. ಅದೆಂದಿಗೂ ಅಚ್ಚಳಿಯದಿರದು. ಇದ ನರಿದು ಅಂಗಾರಾಧನೆಯಲ್ಲಿ ಕಾಲ ಕಳೆದು ಮರುಳಾಗದೆ ಲಿಂಗವನಾರಾಧಿಸ ಬೇಕು. ಸಲ್ಲುವ ಬಗೆಯಲ್ಲಿ ಬದುಕದೆ ಹೋಗುವುದಕ್ಕಿಂತ ಬೇಡಿದವಷ್ಟನ್ನು ಕೊಡುವ ಕೂಡಲಸಂಗನ ಪೂಜಿಸಬೇಕು. ವೈಸಿರಿಯ ಮಾತೇ ಹೀಗಿರು ವಾಗ ಇನ್ನು ಐಸಿರಿಯ ಮಾತೇನು ? 'ಎಲೆ ಎಲೆ ಮಾನವಾ ಅಳಿಯಾಸೆ ಬೇಡವೋ ಕಾಳ ಬೆಳದಿಂಗಳು ಸಿರಿ ಸ್ಥಿರವಲ್ಲ ! ಕೇಡಿಲ್ಲದ ಪದವಿಯನೀವ ಕೂಡಲಸಂಗಮ ದೇವನ ಮರೆಯದೆ ಪೂಜಿಸೋ !'

'ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ ! ಇದ ನೆಚ್ಚಿ ಕೆಡಬೇಡ. ಮರೆಯದೆ ಪೂಜಿಸು ಕೂಡಲಸಂಗಮದೇವನ !'

ಸಿರಿ ಸಂಸಾರಗಳನ್ನು ಮೆಚ್ಚಿ ಬಾಳುವುದೊಂದು ಹುಚ್ಚುತನ. ಬಿಸಿಲ್ಗುದುರೆಗೆ ಬಾಯ ಬಿಟ್ಟಂತೆ. ಬಾಯಾರಿಕೆ ಹಿಂಗದು. ಬೇಗುದಿ ತಪ್ಪದು, ಅಳಿಯಾಸೆ ಬೇಡ. ಉಳಿವ ಅಭಿಲಾಷೆಗೆ ವಂಚಿತನಾಗಬೇಡ. ಶಿವನ ಪೂಜಿಸಿದ ಫಲ ಕೇಡಿಲ್ಲದ್ದು. ಕೈಯಮೇಲೆ ದೊರೆಯುವಂತಹದು. ಕಾರಣ ನೇಹದಿಂದ ನಿತ್ಯ ಹೊತ್ತಾರೆ ಪೂಜಸು.

'ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು ?' 'ಆಚ್ಚುಗ ವೇಕಯ್ಯ ಸಂಸಾರದೊಳಗೆ ? ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು ; ಬೇಗ ಬೇಗ ಅರ್ಚನೆ—ಪೂಜನೆಯ ಮಾಡು ವುದು, ಕೂಡಲಸಂಗನ ಕೂಡುವುದು.' 'ಅಷ್ಟವಿಧಾರ್ಚನೆ—ಷೋಡ ಶೋಪಚಾರವ ಮಾಡುವುದು ; ಮಾಡಿದ ಪೂಜೆಯ ನೋಡುವುದಯ್ಯಾ. ಶಿವತತ್ತ್ವಗೀತವ ಪಾಡುವುದು ; ಶಿವನ ಮುಂದೆ ನಲಿದಾಡುವುದಯ್ಯಾ. ಭಕ್ತಿ ಸಂಭಾಷಣೆಯ ಮಾಡುವುದು ; ಕೂಡಲಸಂಗಯ್ಯನ ಕೂಡು ವುದು.'

'ಕಾಮಧೇನು ನಿಮ್ಮ ಸಾರಿರಲು ಸರರ ಬೇಡಲಾರೆನಯ್ಯಾ !
ನಿಮ್ಮವ ಪೂಜಿಸಿ ಭವಬಂಧನ ಬಿಡದೇಕಯ್ಯಾ ?'

ಅರ್ಚನ ಭಕ್ತಿಯೆಂದರೆ ಅಣ್ಣನಿಗೆ ಅಪಾರ ಆಸಕ್ತಿ. ಅದೆಷ್ಟು ಪೂಜಿಸಿದರೂ ತೀರದು :ಅವರ ಹೃದಯ ಹಂಬಲ. ಅದೆಷ್ಟು ತಿಳಿಹೇಳಿದರೂ ತೀರದು ಅವರ ಆ ಅರ್ಚನಾಭಿಮಾನ.

ಮಹಾದೇವನ ಪೂಜಿಸಿ ಮಾನವರಾಸೆ ಮಾಡಿದರೆ ಅವರ ಮನವೊಪ್ಪದು. ಆತ ಮಹಾದಾನಿ; ಕಾಮಧೇನು. ಹೀಗಿದ್ದರೂ ಈ ಮನ ಬಿಡದು ಈ ಕೀಳಾಸೆಯನ್ನು ! ಈ ಭವಕ್ಕೆ ಒಲಿದಂತೆ ಅನುಭವಕ್ಕೆ ಒಲಿಯದು. 'ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು ; ಡಂಬಕನೆಂಬವ ನಾನು ಕಂಡಯ್ಯಾ, ಕೂಡಲಸಂಗನ ಪೂಜಿಸಿ ಮಾನವರಾಸೆ ಬಿಡದಾಗಿ,' 'ಒಲವಿಲ್ಲದ ಪೂಜೆ ! ನೆಹವಿಲ್ಲದ ಮಾಟ !! ಆ ಪೂಜೆಯು, ಆ ಮಾಟವು ಚಿತ್ರದ ರೂಹು ; ಕಾಣಿರಣ್ಣಾ ! ಚಿತ್ತದ ಕಬ್ಬು ಕಾಣಿರಣ್ಣಾ !! ಅಪ್ಪಿದರೆ ಸುಖವಿಲ್ಲ ! ಮೆಲಿದರೆ ರುಚಿಯಿಲ್ಲ !! ಕೂಡಲಸಂಗಮದೇವಾ ನಿಜವಿಲ್ಲದವನ ಭಕ್ತಿ !!' ಅರ್ಚಿಸಿದ ಬಳಿಕ ಅಂಗದ ಅವಗುಣಗಳನ್ನೆಲ್ಲ ಕಳೆದು ಪೂಜಿಸಬೇಕು. ಆಸೆ ಆಮಿಷಗಳನ್ನು ತೊರೆದು ಪೂಜಿಸಬೇಕು. 'ಅಸನ ಕುಂದದು, ವ್ಯಸನ ಮಾಣದು, ಆರತವಡಗದು, ಬೆನಹಾರವುಡಗದು ; ಮಜ್ಜನಕ್ಕೆರೆವೆನಯ್ಯಾ, ಕಾಯವಿಕಾರಿಯಾನು ; ಮಜ್ಜನಕ್ಕೆರೆವೆನಯ್ಯಾ, ಜೀವವಿಕಾರಿಯಾನು ; ಮಜ್ಜನಕ್ಕೆರೆವೆನಯ್ಯಾ, ಶರಣನಲ್ಲ, ಲಿಂಗೈಕ್ಯನಲ್ಲಾ ! ಕೂಡಲಸಂಗನಲ್ಲಿ ಅಂತರ ಬೆಂತನಾನಯ್ಯಾ!' ಒಡಲಿಚ್ಚೆಗೆ ಜನದ ಮೆಚ್ಚುಗೆಗೆ ಅರ್ಚಿಸಿದರೆ ಫಲವಿಲ್ಲ. ಇಮ್ಮನರದಲ್ಲಿ ಅರ್ಚಿಸಿದರೆ ನೆಮ್ಮದಿಯೊದಗದು. 'ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ ? ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ಶುದ್ಧವಲ್ಲವಯ್ಯಾ, ಮನಮುಟ್ಟಿ ಪೂಜಿಸುವರೆ ಎನ್ನಮನ ಶುದ್ಧವಲ್ಲವಯ್ಯಾ. ಭಾವ ಶುದ್ಧವಾದೊಡೆ ಕೂಡಲಸಂಗಯ್ಯನು 'ಇತ್ತ ಬಾ' ಎಂದೆತ್ತಿಕೊಳ್ಳನೇಕಯ್ಯಾ ?' ಇತ್ತ ಪೂಜಿಸುವುದು ತಪ್ಪಲಿಲ್ಲ ; ಅತ್ತ ಪ್ರಾಯಶ್ಚಿತ್ತವೂ ತಪ್ಪದಿದ್ದರೆ ಅಂತಹ ಪೂಜೆಯನ್ನು ಮಾಡಿದರೇನು ? ಕಾಲಕ್ಕಂಜಿ ಸಾಲಕ್ಕಂಜಿ ಪೂಜಿಸಿದರೆ ಪ್ರಯೋಜನವಿಲ್ಲ. ನಿತ್ಯ ನೂರೆಂಟು ಹುಸಿಯಾಡಿ ಬೇಸರಗೂಡಿ ಆರಾಧಿಸಿದರೆ ಆಗುವುದೇನು ? ಅದೊಂದು ಯಾಂತ್ರಿಕಚಲನೆ,

ಆದರಿಂದಾಗದು ಅಂತಃಕರಣ ಪರಿವರ್ತನೆ. 'ಆಡುವುದಳವಟ್ಟಿತ್ತು, ಹಾಡುವುದಳವಟ್ಟಿತ್ತು ; ಅರ್ಚನೆಯುಳವಟ್ಟಿತ್ತು, ಪೂಜನೆಯುಳವಟ್ಟಿತ್ತು ; ನಿತ್ಯ ಲಿಂಗಾರ್ಚನೆ ಮುನ್ನವೆಯುಳವಟ್ಟಿತ್ತು ; ಕೂಡಲಸಂಗನ ಶರಣರು ಬಂದರೆ ಏ ಬೆಸನದಲಿ ಏಗುವುದೆಂಬುದು ಒಪ್ಪಚಿಯುಳವಡದು, ಮನವಿಲ್ಲದ ಅರ್ಚನೆ, ನಡೆಯಿಲ್ಲದ ನುಡಿ ನಿಚ್ಚ ನಿಚ್ಚ ನೆರವೇರಿಸಿದರೂ ಬಚ್ಚ ಬರಿಯವು. ಗುರುಹಿರಿಯುರು ಹೇಳಿದ್ದನ್ನು ಕೇಳದಿದ್ದರೆ ಮನವಿಟ್ಟು ಮಾಡದಿದ್ದರೆ ಪೂಜಿಸಿ ಫಲವಿಲ್ಲ ; ಭಜಿಸಿ ಬಂದುದಿಲ್ಲ. ಸ್ಮರಿಸಿ ಸುಖವಿಲ್ಲ. ವರುಷವೆಲ್ಲ ಗರಡಿ ಸಾಧನ ಮಾಡಿ ಕಡೆಯೊಂದು ದಿವಸದಲ್ಲಿ ಕುಸ್ತಿಯಲ್ಲಿ ಬಿದ್ದುಬಂದರೆ ಆ ಸಾಧನೆಗೆ ಸಾರ್ಥಕತೆಯೇನು ? ಎಳೆನೀರಿಗೆಂದು ತೆಂಗಿನಮರವೇರಿ ನಾರಿಕೇಳವನ್ನು ಹರಿಯದೆ ಕೈಯೆರಡನ್ನು ಬಿಟ್ಟರೆ ಆಗುವ ಗತಿಯೇನು ? 'ಏನನೋದಿ, ಏನಕೇಳಿ, ಏನಮಾಡಿಯೂ ಫಲವೇನು ? ನಿಮ್ಮವರೊಲಿಯದನ್ನಕ್ಕ ? ಶಿವ, ಶಿವಾ ; ಮಹಾದೇವಾ, ಬಾಳಿಲ್ಲದವಳ ಓಲೆಯುಂತಾಯಿತ್ತೆನಗೆ, ಕೂಡಲಸಂಗಮದೇವಾ.' ತ್ಯಾಗವಿಲ್ಲದ ಯೋಗ, ತ್ಯಾಗವಿಲ್ಲದ ಭೋಗ ಎರಡೂ ನಿರರ್ಥ, ಆಡುವ ಬಾಯಿಗೆ ಕೊಡುವ ಕೈ ಮುಂದಾದರೆ ಆಗ ಅರ್ಚನೆ ಸಾರ್ಥಕ. ಅರ್ಪಣಭಾವವಿಲ್ಲದ ಅರ್ಚನೆ ಅದೊಂದು ಕಣ್ಣಿಲ್ಲದ ಮೊಗ. ಅನುಭಾವವಿಲ್ಲದ ಅರ್ಚನೆ ಅದೊಂದು ಜೀವವಿಲ್ಲದ ದೇಹ. ಯುಕ್ತಿಯಿಂದ ಭಕ್ತಿಯ ಮಾಡಬಾರದು ; ಆಸಕ್ತಿಯಿಂದ ಮಾಡಬೇಕು. ಲಿಂಗಪೂಜೆಯಲ್ಲಿ ತನ್ನ ತನುಮನಧನಗಳನ್ನು ಅರ್ಪಿಸಿದಂತೆ ಗುರುಕಾರ್ಯದಲ್ಲಿ ಸಾಮಾಜಿಕ ಸೇವೆಯಲ್ಲಿ ವಂಚನೆಯಿಲ್ಲದೆ ತನುಮನಧನಗಳನ್ನು ಅರ್ಪಿಸಬೇಕು. ಬಾಳುಬದುಕಗಳನ್ನು ಅರಿತು ಸತ್ಪಾತ್ರದಲ್ಲಿ ಸಂಕೋಚವಿಲ್ಲದೆ ಸಲ್ಲಿಸುವ ವಿತರಣೆಯಲ್ಲಿ ನುರಿತು ಮುನ್ನಡೆಯಬೇಕು. ಅರ್ಥಪ್ರಾಣಾಭಿಮಾನಗಳ ಆಸೆಯನ್ನು ತ್ಯಜಿಸಿರಬೇಕು. ಗುರುಹಿರಿಯರನ್ನು ಕಂಡೊಡನೆ ಕಡೆಗಣಿಸಿ ಒಳಿತಾಡದೆ ಅರಿತು ಮಾಡದೆ ಬಾಳ್ಗೆಡಿಸಿ ಬಳಿಕ ಮರುಗಿ ಅರಸಿದರೆ ಬಾರದು. ಬರೀ ಕುಳಿತು ಲಿಂಗವ ಪೂಜಿಸಿದರೆ ಆಗದು ; 'ಎರೆದರೆ ನೆನೆಯದು, ಮರೆದರೆ ಬಾಡದು ; ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ ! ಕೂಡಲಸಂಗಮದೇವಯ್ಯಾ, ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು !' ಮಾಡುವ ಮನವುಂಟಾದರೆ ಕೊಡುವ ದೇವನಿಗೆ ಬಡತನವಿಲ್ಲ. ಇದನರಿದು ಔಚಿತ್ಯ ಕಂಡಲ್ಲಿ ಔದಾರ್ಯತೆ

ಯನ್ನು ತೋರಬೇಕು. ಮನೆ ಚಿಕ್ಕದಾಗಿದ್ದರೂ ಮನ ದೊಡ್ಡದಾಗಿರಬೇಕು. ಮಾತನಲ್ಲಿ ತಾನು ಹಿರಿಯನೆನಿಸಲು ಹಾತೊರೆಯಬಾರದು. ಮನಮುಟ್ಟಿ ಮಾಡಿ ಮತ್ತೊಬ್ಬರಿಂದ ಹಿರಿಯನೆನಿಸಿ ಕೊಳ್ಳಬೇಕು. ಲಿಂಗಪೂಜೆಯನ್ನು ಮಾಡಬೇಕು; ಜತೆಗೆ ಗುರು ಜಂಗಮ ಸೇವೆಯನ್ನು ನಡೆಯಿಸಿಕೊಂಡು ಬರಬೇಕು. ಆಗ ಪೂಜೆಪೂರ್ಣಶಕ್ತಿಯುಳ್ಳದ್ದಾಗುತ್ತದೆ. ಪೂಜೆ ಸೇವೆಗಳು ಬಾಳಿಗೆರಡು ಕಣ್ಣು, 'ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು, ಕಂಡೆಯಾ ಲಿಂಗವೇ; ಈ ಪರಮ ಸುಖವ ಕೊಡು ಕಂಡೆಯಾ ಲಿಂಗವೇ ! ಕೂಡಲಸಂಗಮದೇವಾ, ಇದೇ ವರವ ನಿಮ್ಮಲ್ಲಿ ಬೇಡುವೆ !'

ಅರ್ಚನೆ ಅದೊಂದು ದೇವರಿಗೆ ಮಾಡುವ ಉಪಚಾರ. ಬರೀಸ್ಥಾವರಕ್ಕೆ ಉಪಚಾರಮಾಡಿ, ಬಂದ ಗುರುಜಂಗಮಕ್ಕೆ ಅಪಚಾರ ಮಾಡಿದರೆ ಅದು ಸಹಜವಲ್ಲ; ಸತ್ಯಪಥವಲ್ಲ. ಅದರಿಂದ ಸುಖವಿಲ್ಲ. 'ಅಷ್ಟವಿಧಾರ್ಚನೆ ಷೋಡಶೋಪಚಾರವನು, ಆದುಸರಿಯದ ಬಿಟ್ಟಯಂತೆ ಮಾಡುವೆನು. ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲರಿಯದೆ ಉಪಚಾರಿಯಾನು; ಸ್ಥಾವರ ಜಂಗಮ ತಿರುಳರಿಯದ ಪೂಜಕ ನಾನು; ಮತ್ತೆನಾಚದೆ ನಿತ್ಯ ಪೂಜಿಸುವೆ; ಏನಪ್ಪುದಯ್ಯಾ ? ಕೂಡಲ ಸಂಗಮದೇವಯ್ಯಾ, ಜಂಗಮವೆನ್ನ ಪ್ರಾಣಲಿಂಗ ವೆಂಬುದರಿಯನ್ನಕ್ಕ ?' ಜಂಗಮವ ನಿಂದಿಸಿ ಲಿಂಗವ ವಂದಿಸಿ ಫಲವಿಲ್ಲ. ಜಂಗಮವನ್ನು ಉದಾಶೀನ ಮಾಡಿ ಲಿಂಗಕ್ಕೆ ಸನ್ಮಾನ ಮಾಡಿ ಪ್ರಯೋಜನ ವಿಲ್ಲ. ಕುರುಡನಿಗೆ ಕನ್ನಡಿಯ ಕೊಟ್ಟು ಕಣ್ಣಿದವನಿಗೆ ಕಲ್ಲಿತ್ತಂತಾಗುತ್ತದೆ. ಹಲ್ಲಿಲ್ಲದವನಿಗೆ ಕಡಲೆಯಕೊಟ್ಟು ಹಲ್ಲಿದ್ದವನಿಗೆ ಅಂಬಲಿಯನಿತ್ತಂತಾಗುತ್ತದೆ; ಅಥವಾ ಬರಿಯ ಅಂಜಲಿಯನಿತ್ತಂತಾಗುತ್ತದೆ. ನೀರಲ್ಲಿ ಬೆರಳದ್ದಿ ಸೀಪಿದಂತಾ ಗುತ್ತದೆ. 'ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಗುತ್ತದೆ.' ಇದನರಿದು ಉಭಯಾರ್ಚನೆಯನ್ನು ಔಚಿತ್ಯವರಿತು ಆಚರಿಸಬೇಕು. 'ಲಿಂಗದರುಶನ ಕರಮುಟ್ಟಿ ಜಂಗಮ ದರುಶನ ಸಿರಮುಟ್ಟಿ ಆವುದು ಘನವೆಂಬೆ, ಆವುದು ಕಿರಿದೆಂಬೆ ?' ಜಂಗಮ ವಿರಹಿತ ಲಿಂಗಾರ್ಚನೆ ಓಡುಬೆನ್ನಲೆರೆದ ಜಲದಂತೆ! ಜಂಗಮ ಸನ್ನಿಹಿತ ಲಿಂಗಾರ್ಚನೆ ಒಡಲೊಳಗೆರೆದ ಜಲದಂತೆ; ಇದೆ ಭಕ್ತಿಗೆ ಪಥವಯ್ಯಾ. ಜಂಗಮ ಪ್ರಸಾದ ಭೋಗೋಪಭೋಗವು: ಎನಗಿದೇಲಿಂಗಾರ್ಚನೆ. ಬೇರೆ

ಮತ್ತೊಂದರಿದೆನಾದರೆ, ಕೂಡಲಸಂಗಮದೇವ ನರಕದಲ್ಲಿಕ್ಕುವ.' ಅರ್ಚನೆ ಎರಡು ಬಗೆ : ಒಂದು ಲಿಂಗಾರ್ಚನೆ ; ಇನ್ನೊಂದು ಜಂಗಮಾರ್ಚನೆ. ಒಂದು ಸ್ಥಾವರ; ಇನ್ನೊಂದು ಚರ. ಒಂದು ಬಾಹ್ಯ ; ಇನ್ನೊಂದು ಅಂತರ. ಒಂದು ಕ್ರಿಯಾಪ್ರಧಾನ ; ಇನ್ನೊಂದು ಜ್ಞಾನಪ್ರಧಾನ. ಒಂದು ಪುಷ್ಪ ; ಇನ್ನೊಂದು ಪರಿಮಳ. ಕಾರಣ ಉಭಯಾರ್ಚನೆ ಘಟಿಸದರೆ [ಸವಿಸಕ್ಕರೆ ಯೊಂದಾದ ಸುಖ. 'ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು ? ಲಿಂಗ ಜಂಗಮರ ಸುಖವೆನ್ನ ಸುಖ ; ಅವರ ದುಃಖವೆನ್ನ ದುಃಖ ! ಕೂಡಲ ಸಂಗಮ ಶರಣರ ಮನನೊಂದರೆ ಆನುಬೆಂದೆನಯ್ಯ !' ಜಂಗಮ ಸ್ಥಲ ಲಿಂಗ ; ಲಿಂಗಪ್ರಾಣ ಕುಲ ಜಂಗಮವೆಂಬುದನರಿಯಬೇಕು ; ಅರ್ಚಿಸಬೇಕು. ಲಿಂಗದೇಹ ; ಜಂಗಮ ಬಾಯಿ. ಈ ಮರ್ಮವನರಿದು ಆರಾಧಿಸಬೇಕು.

ಅರ್ಚಿಸುವ ಮೊದಲು ದ್ವೈತ (ಭಿನ್ನ) ಭಾವದಲ್ಲಿದ್ದ ಅಂಗನು ಅರ್ಚಿಸುತ್ತ ಅದ್ವೈತ (ಅಭಿನ್ನ) ಭಾವಕ್ಕೆ ಬರುತ್ತಾನೆ. ಸ್ಥಾವರ-ಚರಗಳೆರಡು ಭಿನ್ನಗಳಲ್ಲ. ಕಾಯವೇ ಸ್ಥಾವರ ಅಥವಾ ಸ್ಥೂಲ. ಪ್ರಾಣವೇ ಚರ ಅಥವಾ ಸೂಕ್ಷ್ಮ. ಕಾಯವೆಂಬ ಇಷ್ಟಲಿಂಗವು ಪ್ರಾಣವೆಂಬ ಚರಲಿಂಗದಲ್ಲಿ ತಲ್ಲೀನವಾಗುವುದೇ ಅರ್ಚನದ ಅಂತರ್ಹೃದಯ :

'ಅಂಗೈಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿವರಿವುತ್ತ ಸುರಿವುತ್ತ ಎಂದಿಪ್ಪೆನೋ ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ ?ಕೂಟವೇ ಪ್ರಾಣವಾಗಿ ಎಂದಿಪ್ಪೆನೋ ? ಎನ್ನ ಅಂಗವಿಕಾರದ ಸಂಗವಳಿದು ಕೂಡಲ ಸಂಗಯ್ಯ ಲಿಂಗಯ್ಯ ಲಿಂಗ ಲಿಂಗ ಲಿಂಗವೆನ್ನುತ್ತ ?'

ಮುಮ್ಮೊದಲು ನೋಡಲು ಮಾಟವೆ ಪ್ರಾಣವಾಗಿ, ಬಳಿಕ ನೋಡುವ ನೋಟವೇ ಪ್ರಾಣವಾಗಿ, ಅಂದರೆ ಆ ಮಾಟ ನೋಟದಲ್ಲಿ ಎರಕವಾಗಿ, ಬಳಿಕ ನೋಟಕೂಟವೇ ಪ್ರಾಣವಾಗಿ ಅಂದರೆ ನೋಟವೂ ಪ್ರಾಣಕೂಟದಲ್ಲಿ ಎರಕವಾಗಿ-ಕೂಟವೂ ಪ್ರಾಣದಲ್ಲಿ ಪರವಶವಾಗಿ ಅಂಗತ್ವವಳಿದು ಲಿಂಗಮಯವಾಗಿ ಕಾಯ ಪ್ರಾಣವೆಂಬ ಕವಲಿಲ್ಲದೆ ಇಷ್ಟ-ಪ್ರಾಣ-ಭಾವವೆಂಬ ಭಿನ್ನವಿಲ್ಲದೆ ಎರಡೊಂದಾಗಿ ಮೂರೊಂದಾಗಿ ಭಕ್ತನೈಕ್ಯಕ್ಕೇರಿ ಆ ಐಕ್ಯಸ್ಥಲದ ಭಕ್ತನಾಗಿ, ಲಿಂಗವ ಪೂಜಿಸಿ ಲಿಂಗವಾಗಿ, ಲಿಂಗವಾಗಿ ಲಿಂಗವ ನೆನೆವ ಆ

ಅಪರೋಕ್ಷಾನುಭವನದಲ್ಲಿ ಆನಂದಿಸುವಂತಾಗುವ ಅರ್ಚನೆಯ ಪ್ರಭಾವ ಅಷ್ಟಿಷ್ಟಲ್ಲ. ಆ ಸಮರಸ ಸ್ಥಿತಿಗೇರಬೇಕಾದರೆ ಅರ್ಚನಾಸಕ್ತಿ ಅಂತಿಂತಿದ್ದರೆ ಆಗದು ; ಮಹಂತವಾಗಿರಬೇಕು: 'ಆಡಿಕಾಲು ದಣಿಯವು ; ನೋಡಿ ಕಣ್ಣು ದಣಿಯವು ; ಹಾಡಿ ನಾಲಿಗೆ ದಣಿಯದು : ಇನ್ನೇವೆ ನಿನ್ನೇವೆ ? ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲ್ಲೊಲ್ಲದಿನ್ನೇವೆ ನಿನ್ನೇವೆ ? ಕೂಡಲ ಸಂಗಮ ದೇವ ಕೇಳಯ್ಯ, ನಿಮ್ಮುದರವ ಬಗಿದಾನು ಹೋಗುವ ಭರವೆನಗೆ ; ' ಬರೀ ಬಹಿರಿಂದ್ರಿಯಗಳಿಂದ ಪೂಜಿಸಿ ಭಾವದ ಭರಹಿಂಗದು. ಭಾವದ್ದೇನ್ನು ಬಂತು ಅಲ್ಪಮಾತ್ರಕ್ಕೆ ತೃಪ್ತಿ ಪಡುವ ಕಾಲು ಕಣ್ಣು ಕೈ ನಾಲಗೆಗಳಿಗೂ ತೃಪ್ತಿಯಿಲ್ಲ. ಬೇರಿದ್ದು ಪೂಜಿಸುವ ಪರಿಣಾಮ ಏತಕ್ಕೂ ಸಾಲದು. ಹೊರಗಿದ್ದು ಆರಾಧಿಸುವುದಕ್ಕಿಂತ ಒಳಗಾಗಿ ಓಲವಿಸುವ ಒತ್ತಾಸೆ-ಭಾವಾಭಿ ಲಾಷೆ-ಭಕ್ತಿ ಬರವಸೆ ಬಸವಣ್ಣನದು. ಆ ಉತ್ಸುಕತೆ ಆ ಆತುರತೆ ಅರ್ಚನ ಭಕ್ತಿಯಲ್ಲಿ ಅವಳವಡದೆ ವಿಧಿಯಿಲ್ಲ ; ಅವಿರಳಾನಂದ ಸಂದಾಯವಿಲ್ಲ. ಆ ಸಂಬಂಧ ಸಂಭಾವ ಸಂಭ್ರಮದಲ್ಲಿ- ಸಂವೇಗದಲ್ಲಿ-ಸಂವಿಧಾನದಲ್ಲಿ- ಸಂಯೊಗ ಸಂಪ್ರಾಪ್ತಿಯಲ್ಲಿ ಬೇರಾವ ಅರಿವಿರುವುದಿಲ್ಲ. ಅದೆಷ್ಟು ಕಾಲಕಳೆ ದರೂ ಕಳೆದಂತಿರುವುದಿಲ್ಲ. 'ವಾರವೆಂದರಿಯೆ, ದಿನವೆಂದರಿಯ ; ಏನೆಂದ ಯೆನಯ್ಯಾ ! ಇರುಳೆಂದರಿಯೆ, ಹಗಲೆಂದರಿಯೆ ; ಏನೆಂದರಿಯೆನಯ್ಯಾ ! ನಿಮ್ಮವ ಪೂಜಿಸಿ ಎನ್ನುವ ಮರೆದೆ, ಕೂಡಲ ಸಂಗಮ ದೇವಾ !' ತನ್ನನ್ನೇ ತಾನು ಮರೆಯುವಾಗ ಹಗಲಿರುಳುಗಳನ್ನು ಅರಿಯದಿರುವುದೊಂದು ಆಚ್ಚರಿಯಲ್ಲ. ತನ್ನ ಹೊರ ನೋಟವೇ ದಿನಮಾನಗಳು. ತನ್ನ ಈ ಕ್ಷಣವೇ ಕ್ಷಣ. ತನ್ನ ಹೊರತು ಬೇರೆ ನೋಟ (ದೃಶ್ಯ) ವೇ ಇಲ್ಲದಾಗ ತನಗೆ ಹಗಲಿ ರುಳುಗಳ ದಿನ ವಾರಗಳ ಈ ಕ್ಷಣವಾಗಲಿ ಲಕ್ಷ್ಯವಾಗಲಿ ಇರುವುದೆಂತು ? ತನಗೆ ತಾನೇ ಲಕ್ಷ್ಯ. ತನ್ನ ಹೊತ್ತ ದೇಹದ ಲಕ್ಷ್ಯವೇ ತನಗಿಲ್ಲವಾದಾಗ ಈ ದೇಹವನ್ನು ಹೊತ್ತ ದಿನ-ಕ್ಷಣಗಳ ಅರಿವೆಲ್ಲಿರಬೇಕು ? ಆಗ ಮಾನವ ನಾಗಿ ಅರ್ಚನೆಯನ್ನು ಮಾಡುವುದಿಲ್ಲ. ಅರ್ಚನೆಯೇ ಮಾನವನನ್ನು ಮಹಾನುಭಾವಿಯನ್ನಾಗಿ ಮಾಡಿರುತ್ತದೆ. ಅಂದರೆ ಆ ಅರ್ಚನೆಯು ಮಹಾನು ಭಾವತ್ವವನ್ನು ರೂಢಿಸಿರುತ್ತದೆ. ಎಂತಹ ಭಾವಪೂರ್ಣಸಮಾಧಿ ? ನಿಮ್ಮವ ಪೂಜಿಸಿ ಎನ್ನುವ ಮರೆದೆ ' ಈ ಸಿರಿಗನ್ನಡ ನುಡಿಗೆ ಸಂಸ್ಕೃತ ಅನುವಾದ

ಮಾಡಹೊರಟರೆ 'ಅಸಂಪ್ರಜ್ಞಾತ ಸಮಾಧಿ'ಯೆಂದೇ ಹೇಳಬೇಕು. ಅದೇನು ಆ ಭಾವಸಮಾಧಿ ? ಅಲ್ಲಿಗೊಯ್ದು ಎಟಕಿಸುವ ಅರ್ಚನವಿಧಿ ಅದೊಂದು ಘನ ಮನನಿಧಿ.

ಕಾಯಿಕ ವಾಚಿಕ ಮಾನಸಿಕವೆಂದು ಅರ್ಚನವಿಧಿ ತ್ರಿವಿಧ. ವಿಭೂತಿ ರುದ್ರಾಕ್ಷಧಾರಣ, ಜಲಮಜ್ಜನ, ಬಿಲ್ವಧಾರಣಾದಿಕಾಯಿಕ ಪೂಜೆಯಲ್ಲಿ ಕ್ರಿಯೆ ಪ್ರಧಾನ. ದರ್ಶನ ಸ್ಪರ್ಶನ ಶ್ರವಣಾದಿಗಳೂ ಕಾಯಿಕಪೂಜೆ. ಇದು ಇಷ್ಟಲಿಂಗಪೂಜೆ. ಸ್ತೋತ್ರ ಜಪಾದಿಗಳು ವಾಚಕ ಪೂಜೆ ; ಜ್ಞಾನ ಪ್ರಧಾನ ಪೂಜೆ ; ಪ್ರಾಣಲಿಂಗಪೂಜೆ. ಹೃದಯ ಪುಷ್ಪವನ್ನರ್ಪಿಸುವುದೇ ಮಾನಸಿಕ ಪೂಜೆ ; ಅನುಭಾವ ಪ್ರದಾನ ಪೂಜೆ. ಭಾವಲಿಂಗ ಪೂಜೆ. ಈ ಮೂಬಗೆಯ ಆರಾಧನೆಯಲ್ಲಿ ಅಮೃತದ ಬೆಳಸು, ಸೊಗಸು ಹುಲುಸಾಗಿರುತ್ತದೆ. ಕಾಯಿಕಾರ್ಚನೆಯಲ್ಲಿ ಕಾಯಸಂಯಮ, ವಾಚಿಕಾರ್ಚನೆಯಲ್ಲಿ ವಾಕ್ಸಂಯಮ, ಮಾನಸಿಕ ಪೂಜೆಯಲ್ಲಿ ಮಾನಸಸಂಯಮ ಸಂಭವಿಸುತ್ತವೆ. :ತನುಮನ ಧರ್ಮಗಳೆಲ್ಲ ಧರ್ಮಿರೂಪಾಗಿ ನಿಲ್ಲುತ್ತವೆ. 'ವರಂ ಪ್ರಾಣ ಪರಿತ್ಯಾಗಶ್ಛೇದನಂ ಶಿರಸೋಽಪಿ ವಾ ! ನತ್ವನಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಮ್ |–ಎಂದುದಾಗಿ, ದೇಹಧರ್ಮ ತನ್ನ ಆದಂತೆ ಆಗಲಿ, ಕೂಡಲ ಸಂಗಮ ಪೂಜಿಸಿದಲ್ಲದೆ ನಿಲಲಾರನು. ' ಧ್ಯೇಯವೇ ತಾನಾದ ಬಳಿಕ ಧ್ಯಾನ ಧ್ಯಾತೃತ್ವಗಳಿರುವುದಿಲ್ಲ; ತನುಮನಗಳಿರುವುದಿಲ್ಲ. ಧಾರಣ-ಧ್ಯಾನಗಳಿರುವುದಿಲ್ಲ. ಆ ಅವಿರಳತೆಯಿಂದ ಉತ್ಥಾನವಾದ ಬಳಿಕವೂ ತನ್ನ ತನು ಪ್ರಾಣಗಳಿಗಿಂತ ತನ್ನರ್ಚನೆಯಲ್ಲಿ ತನಗಭಿರುಚಿ ಕಮ್ಮಿಯಾಗದು. ತನ್ನ ಹೃದಯದಲ್ಲಿಯೇ ಇರುವ ಪರಮಾತ್ಮನನ್ನು ಅರ್ಚಿಸದೆ ಅಂದರೆ ಉಪಚರಿಸಿದೆ ಉಂಬುವುದೆಂದರೇನು? ಆತನನೆನಹನ್ನೆ ಮರೆಯಲು ಸಾಧ್ಯವಿಲ್ಲದಾಗ ಆತನನ್ನೇ ಮರೆಯಲಾದೀತೆ ? ಸ್ಮರಣ ಆತನ ಅರ್ಚನಗಳೇ ಭಕ್ತನಿಗೆ ಪರ್ವಪ್ರಸಾದವಾಗಿರುವಾಗ ಪ್ರತ್ಯಹದ ಪ್ರಸಾದದ ಮೇಲೆ ಲಕ್ಷ್ಯವೆಂದರೇನು ? ಅರ್ಚನ ಮಾರ್ಗ ಪೂರ್ವೋತ್ತರ ಯೋಗವನ್ನು ಸುಲಭವಾಗಿ ಸಾಧಾರವಾಗಿ ಸಂಪಾದಿಸಿಕೊಡುವ ದಿವ್ಯನವ್ಯ ಮಾರ್ಗ. ತನು ಮನ ಭಾವಗಳನ್ನು ಬೆಳಗುವ ಜ್ಯೋತಿರೂಪ ; ಅಷ್ಟೇ ಅಲ್ಲ ಬೆಳಗೇ ಆಗಿಸುವ ಅರ್ಚೆ.

ಲೌಕಿಕ ಮತ್ತು ಸಾಂಸಾರಿಕ ವ್ಯವಹಾರಗಳಲ್ಲಿ ಸಿಕ್ಕ ಮನ ಬುದ್ಧಿಗಳು ಬೇಸರಗೊಂಡಿರುತ್ತವೆ; ಬೆರಗುಗೊಂಡಿರುತ್ತವೆ; ಭ್ರಮೆಯೊಳಗಾಗಿರುತ್ತವೆ. ಅದರಿಂದಾಗಿ ಅಂದಂದಿನ ಅರ್ಚನವನ್ನು ಅಂದಂದೇ ಅನುಸರಿಸಬೇಕು. ಆರಾಧಿಸಿ ಆಯಾಸರಹಿತರಾಗಬೇಕು; ಆರ್ಜವತೆಯುಳ್ಳವರಾಗಬೇಕು; ಆರಾಮಚಿತ್ತರಾಗಬೇಕು. ಕೃತಕೃತ್ಯರಾಗಬೇಕು.

'ಅಷ್ಟ ವಿಧಾರ್ಚನೆ ಷೋಡಶೋಪಚಾರವ, ಅಂದಂದಿನ ಕೃತ್ಯವನಂದಂದಿಗೆ ಅನುಮಾಡಿ ಶುದ್ಧನಯ್ಯ! ಹಂಗುಹರಿಯಿಲ್ಲದ ಕಾರಣ, ಕೂಡಲಸಂಗಮದೇವ ನಿಷ್ಫಲದಾಯಕನಾಗಿ, ಅನು ಮಾಡಿ ಶುದ್ಧನಯ್ಯಾ!'

ಆರು ಎಂಟು ಹದಿನಾರು ಉಪಚಾರಗಳಿಂದ ವ್ಯಗ್ರಮನ ವ್ಯವಧಾನಗೊಳ್ಳುತ್ತದೆ; ವಿಹ್ವಲ ಮನ ವಿಶುದ್ಧವಾಗುತ್ತದೆ. ಸಂಚಲಿತ ಬುದ್ಧಿ ಸ್ಥಿರಬುದ್ಧಿಯಾಗುತ್ತದೆ; ಸ್ಥಿತಪ್ರಜ್ಞನಾಗುತ್ತಾನೆ. ಇದಕ್ಕಿಂತ ಬೇರೆ ಫಲ ಪದಗಳ ಹಂಗಿರುವುದಿಲ್ಲ. ಶುದ್ಧಿಯೇ ಅನುಪಮ ಫಲಸಿದ್ಧಿ. ಇಲ್ಲಿ ಶುದ್ಧಿಯೆಂದರೆ ಕರ್ಮಶುದ್ಧಿ. ಕರ್ಮ ನಿರ್ಮಳವಾಗುವುದೇ ಪೂಜಾಫಲ. 'ಕಬ್ಬುನ ಪರುಷವೇದಿಯಾದರೇನು, ಕಬ್ಬುನ ಹೊನ್ನಾಗದೊಡಾ ಪರುಷವದೇಕೊ? ಮನೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೋ? ಕೂಡಲಸಂಗಮದೇವರ ಮನ ಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ?' ಜ್ಯೋತಿಗೆ ಜ್ಯೋತಿ ಅರ್ಚನಾರ್ಚಿ. ಪರುಷಕ್ಕೆ ಪರುಷಮಣಿ ಪೂಜಾತರಣಿ. ಅದು ಸೋಂಕಿದ ಕಾಯ ಶಿವಕಾಯವಾಗುತ್ತದೆ. ಮನ ಘನವಾಗುತ್ತದೆ. ಬುದ್ಧಿ ಪ್ರಜ್ಞಾಜ್ಯೋತಿಯಿಂದ ಬೆಳಗುತ್ತದೆ. ಅರ್ಚನೆಯಿಂದ ಅಚ್ಚಗೊಂಡ ಮೈ ಸಚ್ಚಿದಾನಂದಾತ್ಮನಿಗೆ ಶಿವಾಲಯವಾಗುತ್ತದೆ. ಶಿವಸ್ಥಲವಾಗುತ್ತದೆ: 'ಉಳ್ಳವರು ಶಿವಾಲಯವ ಮಾಡುವರು; ನಾನೇನ ಮಾಡುವೆನಯ್ಯಾ! ಎನ್ನ ಕಾಲೇ ಕಂಭ, ಎನ್ನ ದೇಹವೇ ದೇಗುಲ; ಎನ್ನ ಸಿರ ಹೊನ್ನ ಕಳಸವಯ್ಯಾ. ಕೂಡಲಸಂಗಮದೇವ ಕೇಳಯ್ಯಾ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.' ಅಚ್ಚಳಿಯದ ದೇಗುಲವಾಗುತ್ತದೆ ಅಡ್ಡಾಡುವ ಮಂದಿರವಾಗುತ್ತದೆ. ಚಿನ್ಮಯರೂಪ ಚಿನ್ನದ ಕಳಸವಾಗಿರುತ್ತದೆ. ಇದಕ್ಕಿಂತ ಇನ್ನೆಂತಹ ಇಂಬಾಗಬೇಕು? ಇಮ್ಮು ಮನೆಯಾಗಬೇಕು?

'ಹಾಲೆಂಜಲು ವತ್ಸನ, ಉದಕೆಂಜಲು ಮತ್ಸ್ಯನ ; ಪುಷ್ಪವೆಂಜಲು ತುಂಬಿಯ, ಎಂತು ಪೂಜಿಸುವೆನಯ್ಯಾ? ಶಿವ ಶಿವಾ, ಎಂತು ಪೂಜಿಸುವೆ? ಈ ಎಂಜಲವನತಿಗಳೆವಡೆ ಎನ್ನ ಳವಲ್ಲ, ಬಂದುದ ಕೈಕೊ ಕೂಡಲಸಂಗಮ ದೇವಾ.' ವಿಶ್ವವಸ್ತುಗಳಲ್ಲಿರುವ ದೋಷಗಳನ್ನು ಪೂರ್ಣಪರಿಹರಿಸಲು ಪೂಜಕನಿಂದ ಸಾಧ್ಯವೇ? ಪರಿಶುದ್ಧಿಯಿಲ್ಲದ ಪದಾರ್ಥವನ್ನು ನಾನು ಕೊಡಬಲ್ಲೆ. ಪೂರ್ಣ ಶುದ್ಧಿಯನ್ನು ನೀನು ಅನುಗ್ರಹಿಸಬಲ್ಲೆ. ಹಾಲು ನೀರು ಹೂವು ಮುಂತಾದವು ಬ್ರಹ್ಮಾಂಡ ಪದಾರ್ಥ. ಇವು ಹೇಗಿದ್ದರಿರಲಿ. ಭಾಂಡ ಪದಾರ್ಥಗಳಾದ ಕಾಯೇಂದ್ರಿಯಗಳು, ಭಾಜನ ಪದಾರ್ಥವಾದ ಅಂತಃಕರಣಗಳು ಮೀಸಲ ಬೀಸರವಾಗದಂತಿರಿಸುವುದೇ ಆರಾಧಕನ ಅರ್ಚನೆಯ ಇಂಗಿತ. ಕೈಮುಟ್ಟದೆ ಮೈಮುಟ್ಟದೆ, ಮನಮುಟ್ಟದೆ ಬಾಹ್ಯ ಪದಾರ್ಥವನ್ನು ಅರ್ಪಿಸಲು ಅದಾರ ಅಳವು? ಆದರೆ ಅದೇ ಕೈ ತನ್ನ ಇಷ್ಟಲಿಂಗವನ್ನಲ್ಲದೆ ಬೇರೆ ದೇವರನ್ನು ಮುಟ್ಟ ಬಾರದು. ತನ್ನ ಗುರು ಜಂಗಮ ಸೇವೆಯನ್ನಲ್ಲದೆ ಬೇರೆ ಸೇವೆಯನ್ನೆಸಗ ಬಾರದು. ನಾಲಗೆ ಶಿವನನ್ನಲ್ಲದೆ ಹೊಗಳಬಾರದು ; ಶಿವಪ್ರಸಾದವನ್ನಲ್ಲದೆ ಸೇವಿಸಬಾರದು. ಕಿವಿ ಶಿವಕೀರ್ತಿ ಯನ್ನಲ್ಲದ ಕೇಳಬಾರದು. ಮನ ಶಿವ ಸ್ಮರಣೆಯನ್ನಲ್ಲದೆ ಮಾಡಬಾರದು. ಈ ಅವಧಾನವಿರಬೇಕು, ಈ ಸುಯಿದಾನ ವಿರಬೇಕು ಅರ್ಚನ ಭಕ್ತಿಕ್ರಿಯೆಯಲ್ಲಿ–ಕರಣೇಂದ್ರಿಯಗಳಲ್ಲಿ ! ಯಾವ ಹಂಗಿ ಲ್ಲದೆ, ಯಾವ ಹಂಬಲವಿಲ್ಲದೆ ಹೃದಯದ ಹದುಳತೆಯಿಂದ ಮನ ಮುಡುಪಿಟ್ಟು ಅರ್ಚನ ಭಕ್ತಿಯನ್ನು ಲಿಂಗಕ್ಕರ್ಪಿಸ ಬೇಕು. ಅರ್ಚನೆಯಲ್ಲಿ ಅನನ್ಯತೆಬೇಕು; ಅರ್ಜವತೆ ಬೇಕು. ಇವೆರಡಿಲ್ಲದ ಅರ್ಚನೆ ಅದು ಅರ್ಚನೆಯಲ್ಲ. ಅದರಿಂದ ಅದಾವ–ಅಂತರ್ಜ್ಯೋತಿ ಬಾರದು; ಅಂತರ್ಭೂತಿ ಬಾರದು. 'ದಿಟವ ಮಾಡಿ ಪೂಜಿಸಿದರೆ ಸಟೆಯಮಾಡಿ ಕಳೆವೆ ; ಸಟೆಯ ಮಾಡಿ ಪೂಜಿಸಿದರೆ ದಿಟವ ಮಾಡಿ ಕಳೆವೆ. ಏನೆಂಬೆ, ಎಂತೆಂಬೆ? ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ–ಆನು ಮಾಡಿದ ಭಕ್ತಿ ಎನಗಿಂತಾಯಿತ್ತು, ಕೂಡಲಸಂಗಮದೇವಾ!' ಸ್ವಾರ್ಥ ಜೀವನಕ್ಕೆ ಬಿದ್ದು ಹೃದಯ ಶುದ್ಧಿಯಿಲ್ಲದೆ ಕರಿಯದನ್ನು ಬಿಳಿಯದನ್ನಾಗಿಸಿ, ಬಿಳಿಯದನ್ನು ಕರಿಯದನ್ನಾಗಿಸುವ ಕೀಳ್ಗೆಲಸವನ್ನು ಅರ್ಚನಭಕ್ತಿರತನು ಅದೆಂದಿಗೂ ಮಾಡಬಾರದು ತನುವಿನಲ್ಲಿ ಒಂದು, ಮನದಲ್ಲಿ ಮತ್ತೊಂದು ಬಗೆ ಯಿರಬಾರದು. ತನು ಮುಖ ಮನ ಭಾವಗಳು ಏಕಮುಖವಾಗಿರಬೇಕು.

ಏಕಭಕ್ತಿಯುಳ್ಳವಾಗಿರಬೇಕು. 'ಮರನ ಹೂವ ಕೊಯಿದು ಮರಕ್ಕೇರಿಸಿ, ನದಿಯುದಕವ ನದಿಗರ್ಪಿತವ ಮಾಡಿ, ಕರುವನಗಲಿಸಿ ತಾಯ ಮರುಗಿಸಿ ಮೊಲೆವಾಲ ಕರೆದುಣಬೇಡವೊ ! ಕೂಡಲಸಂಗಮದೇವಾ, ನೀ ಮಾಡಿದ ಮಾಯೆ ಹಲಬರ ಬಾಯ ಟೊಣೆದೇ ಹೋಯಿತ್ತು.'

ಈ ಆಸೆಯ ಈ ಮೋಸದ ಈ ಮಾಯಾವಂಚನೆಯ ಅರ್ಚನೆಯನ್ನು ಮಾಡಿದರೇನು, ಬಿಟ್ಟರೇನು ? ಹಾಲನೇಮ ಹಿಡಿದು ಹಸು-ಕರುಗಳನ್ನು ಮರುಗಿಸುವುದೆ ? ಹಾಲೆಂಜಲಾಗಬಾರದೆಂದು ಕರುವಿಗೆ ಹಾಲ್ಗುಡಿಸದೆ ಅಗಲಿಸುವುದೆ ? ಅವುಗಳ ಪ್ರಾಣವನ್ನು ಮರುಗಿಸಿ ಒಣಗಿಸಿ ತನ್ನ ಪ್ರಾಣ ಪೂಜೆಯ ಮಾಡುವುದಕ್ಕಿಂತ ನಿರ್ದಯತೆಗೆ ನಿದರ್ಶನ ಬೇರೇನು ? ಇದು ಮಾಯಾಮೋಹವಲ್ಲದೆ ಮತ್ತೇನು ? ಅರ್ಚನ ಜ್ಞಾನವಿಲ್ಲದೆ ಬರೀಮೂಢತನದಿಂದ ಸ್ವಾರ್ಥದ ಅಭಿಲಾಷೆಯಿಂದ ಭಕ್ತಿಯ ಮಾಡಬಾರದು. ಅರಿಯದೆ ಮಾಡಿದ್ದಾದರೂ ಈ ಕರ್ಮ ಯಾವ ಜನ್ಮಕ್ಕೂ ಕೈಬಿಡದು. ಸ್ವಾರ್ಥ, ಮೂಢಶೀಲ, ನೇಮಕಾಮಗಳು ಹೇಗೆ ಕೇಡಾಳಿಗಳೋ ಹಾಗೆ ಕಿನಿಸು ಕೂಡ ಕೇಡಿನದು. ಅರ್ಚನ ಪಥದಲ್ಲಿ ಶಾಂತಿ ಸಮಾಧಾನಗಳಿದ್ದಷ್ಟೂ ಲೇಸು ; ಸೈಪು ಇಲ್ಲವಾದರೆ ಆ ಪೂಜೆಯೇ ಪಾಪವಾಗಿ ಕಾಡದೆ ಬಿಡದು : 'ತಾಪತ್ರಯವೆಂದರೆ ರೂಪ ಕಾಣುತ್ತ ಕನಲಿದ, ಕೋಪದಲ್ಲಿ ಶಿವಕಳೆಯದ ಕರಡಿಗೆಯನೆ ಮುರಿದ, ಧೂಪಗುಂಡಿಗೆಯ ನೊಡೆದ, ದೀಪಾರತಿಯ ನಂದಿಸಿದ, ಬಪ್ಪ ಪರಿಯಾಣ ದೋಗರವ ತುಡುಕಿದ-ಪಾಪಕರ್ಮ ತನಗಾನದಿಪ್ಪುದೇ ಕೂಡಲ ಸಂಗಮದೇವಾ ? ' ಇದನರಿದು ಅರ್ಚನ ಭಕ್ತನು ತಾಪತ್ರಯ ಸಂಗವನ್ನು ಕಾಮಾದಿ ಅರಿಷಡ್ವರ್ಗ ಸಂಗವನ್ನು ಬಿಡಬೇಕು. ಶಿವಗುಣಗಳನ್ನು ಶಾಂತಿಯನ್ನು ಸಂಗಳಿಸಬೇಕು.

ಈ ಶಿವಪೂಜಾಸಾಹಿತ್ಯ ಅರ್ಚನ ಭಕ್ತಿ ಅಳವಟ್ಟವನಿಗೆ ಅನಗತ್ಯ. ಆತ್ಮವನ್ನರ್ಪಿಸಿ ಅಖಂಡನಾದವನಿಗೆ ಇವುಗಳ ಹಂಗಿಲ್ಲ ಆಗ ಆ ಶಿವಶರಣ ಇವನೆಲ್ಲ ಬಿಟ್ಟಿರುತ್ತಾನೆ. ಆದರೆ ಅವನಂತೆ ಅರ್ಚನ ಭಕ್ತಿ ಅಳವಡದವನು ಬಿಡಬಾರದು. ಓದುಮುಗಿದವನು ಹಲಗೆ ಬಳಪಗಳನ್ನು ಬಿಡಬಹುದು; ಹೊಸದಾಗಿ ಓದಿ ಬರೆಯಲು ಸಾಲೆಗೆ ಹೋದವನು ಬಿಟ್ಟರೆ ಗತಿಯೇನು ?

'ಲಿಂಗವ ಪೂಜಿಸಿ ಫಲವೇನಯ್ಯಾ ? ಸಮರತಿ ಸಮಕಳೆ ಸಮಸುಖ ವರಿಯದನ್ನಕ್ಕ ? ಲಿಂಗವ ಪೂಜಿಸಿ ಫಲವೇನಯ್ಯ, ಕೂಡಲ ಸಂಗಮ ದೇವರ ಪೂಜಿಸಿ ನದಿಯೊಳಗೆ ನದಿಯು ಬೆರಸಿದಂತಾಗದನ್ನಕ್ಕ ? '

ನವವಿಧ ಭಕ್ತಿಗಳಲ್ಲಿ ಅರ್ಚನ ಭಕ್ತಿ ಮಧ್ಯಬಿಂದು. ಭಕ್ತಿ ಶ್ರವಣದಲ್ಲಿ ಅಂಕುರಿಸುತ್ತದೆ. ಅರ್ಚನದಲ್ಲಿ ಅಭಿವೃದ್ಧಿ (ಸ್ಥಿತಿ) ಗೊಳ್ಳುತ್ತದೆ. ಆತ್ಮ ನಿವೇದನದಲ್ಲಿ ಸಮರಸಗೊಳ್ಳುತ್ತದೆ. ಶ್ರವಣ ನಾದಮಯಿ. ಅರ್ಚನ ಬಿಂದು ಮಯಿ. ಆತ್ಮನಿವೇದನ ಕಳಾಮಯಿ. ಶ್ರವಣದನಾದ ಪಾದಸೇವನದವರೆವಿಗಿರು ತ್ತದೆ. ಅರ್ಚನದ ಬಿಂದು ಸಖ್ಯ ಭಕ್ತಿಯವರೆವಿಗೂ ಮುಂದುವರಿಯುತ್ತದೆ. ಅರ್ಚನ ನಿರತನು ವಂದನೋಪಚಾರವನ್ನು ನೆರವೇರಿಸಲೇಬೇಕು.

ವಂದನಂ : ವಂದನವೂ ಒಂದು ಭಕ್ತಿ. ಭಕ್ತನು ಸಲ್ಲಿಸುವ ಒಂದು ಸತ್ಕ್ರಿಯೆ. ವಿನಯವನ್ನು ಪ್ರದರ್ಶಿಸುವ ಪ್ರಕ್ರಿಯೆ. ಅಭಯವನ್ನು ಆರ್ಜಿ ಸುವ ಉಪಚಾರ.

ವಂದನೆಗೆ ಶಿರ ಕರ ಉರಗಳು ಮುಖ್ಯಾಂಗಗಳು. ಆದರೆ ಇವುಗಳ ಹಿಂದೆ ವಿನಯಾನ್ವಿತ ಹೃದಯವಿದ್ದಾಗಬೇಕು. ಇದೊಂದಿಲ್ಲದಿದ್ದರೆ ತ್ರಿವಿ ಧಾಂಗದಿಂದಾಗಲಿ ಅಷ್ಟಾಂಗದಿಂದಾಗಲಿ ಮಾಡಿದ ನಮಸ್ಕಾರ ನಿಷ್ಫಲ. 'ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೆ ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೆ ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೆ ? ಕೂಡಲ ಸಂಗನ ಶರಣರು ಬಂದ ಬರವ ನಿಂದನಿಲವ ಅನಂ ಸಂಗಿಗಳೆತ್ತ ಬಲ್ಲರು ? ' ತಲೆ ಬಾಗುವುದು ಗುರುಭಕ್ತನಾಗುವ ಹೊಲಬು. ಆದರೆ ಬರೀ ತಲೆ ಬಾಗಿದರೆ ಗುರುಭಕ್ತನಾಗಲು ಅನುವಿಲ್ಲ. ತಾದಾತ್ಮ್ಯಭಾವವಿಲ್ಲದೆ ತಲೆ ವಾಗುವಲ್ಲಿ ತಿರುಳಿಲ್ಲ. ಕೈಮುಗಿಯುವುದು ಭೃತ್ಯಾಚಾರ ಲಕ್ಷಣ. ಕೆಮ್ಮನೆ ಕೈಮುಗಿದರೆ ಭೃತ್ಯಾಚಾರಿಯೆನಿಸರು. ಹಾಗಾಗುವುದಾದರೆ ಇಕ್ಕುಳ ಏಕಾಗ ಬಾರದು ? ಸಾಮಾಭಿವಾದ ಅಥವಾ ಮಂತ್ರಾಭಿವಾದ ಮಾಡಿದ ಮಾತ್ರಕ್ಕೆ ಲಿಂಗ ವೇದಿಯಾಗುವುದು ಸಾಧ್ಯವಿಲ್ಲ. ತಲೆವಾಗುವಲ್ಲಿಯೇ ಆಗಲಿ, ಕೈಮುಗಿ ವಲ್ಲಿಯೇ ಆಗಲಿ, ಅಭಿವಾದ ಮಾಡುವಲ್ಲಿಯೆ ಆಗಲಿ ಆತ್ಮೀಯತೆ ಬೇಕು ; ಹಾರ್ದಿಕತೆಬೇಕು. ಇವಿದ್ದು ಅಭಿವಂದಿಸಿದರೆ ಆಗುವ ಅಪೂರ್ವ ಫಲವನ್ನು ಮುಂದಿನ ಈ ವಚನದಲ್ಲಿ ನಿರೂಪಿಸಲಾಗಿದೆ :

'ಕಟ್ಟೆದಿರಿನಲ್ಲಿ ಶಿವಭಕ್ತನ ಕಂಡು, ದೃಷ್ಟಿಯಾರೆ ಶರಣೆಂದೊಡೆ ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು–ನೋಡಾ ! ಮುಟ್ಟಿ ಚರಣಕೆರಗಿದೊಡೆ ತನುವೊಪ್ಪಿದಂತೇ ಅಹುದು, ಪರುಷ ಮುಟ್ಟಿದಂತೆ ನೋಡಾ ! ಕರ್ತೃ ಕೂಡಲ ಸಂಗನ ಶರಣರ ಸಂಗವು ಮತ್ತೆ ಭವಮಾಲೆಗೆ ಹೊದ್ದಲೀಯದು–ನೋಡಾ !

ಶಿವಭಕ್ತನ ಕಂಡು ದೂರಿಂದ ಶರಣೆಂದು ನುಡಿದರೆ ಬರೀ ಕೈ ಜೋಡಿಸಿದರೆ ಏಳು ಜನ್ಮದ ಪಾಪವೆಲ್ಲ ಹಿಂಗುವುದಂತೆ ! ಮುಟ್ಟಿ ಚರಣಕೆರಗಿದರೆ ಕಾಯವೆಲ್ಲ ಕನಕದಂತಾಗುವುದಂತೆ ! ಭವಮಾಲೆ ಹರಿದುಹೋಗುವುದಂತೆ ! ಅಭಿವಾದಕ್ಕಿಂತ ಅಭಿವಂದನದ ಪ್ರಭಾವ ಬೃಹತ್ತಾದುದು. ಆದರೂ ಅಭಿವಾದ ಅಭಿವಂದನಕ್ಕೆ ಸಹಕಾರಿ. ಅಭಿವಾದ ಬರೀ ಪ್ರಕಾಶ. ಅಭಿವಂದನ ಪ್ರಕಾಶ ಸಹಿತವಾದ ಪರುಷಮಣಿ.

ಶಿವಭಕ್ತನ ಗುಣಶೀಲತೆ ಘನತೆ ಆತ್ಮವೈಶಾಲ್ಯ ಅನುಭಾವ ಜಾಜ್ವಲ್ಯ ಅಗಾಧವಾದವು. ಅವನ್ನು ಮರೆಹೊಕ್ಕರೆ ಪಾಪವಾಗಲಿ, ಪ್ರಾಕೃತಿಕಭಾವವಾಗಲಿ, ಪ್ರಪಂಚಕೊರಚಾಟವಾಗಲಿ ನಿಲ್ಲದು. ಪಾಪವೆಂಬುದು ಕತ್ತಲೆ. ಪಾಕೃತಿಕತೆ(ಭೌತಿಕತೆ ಯೆಂಬುದು ಕಬ್ಬಿನ. ಶಿವಭಕ್ತಜ್ಯೋತಿಯ ಮುಂದೆ ಕತ್ತಲಿರದು. ಶಿವಭಕ್ತಪರು ಷಮಣಿ ಮುಟ್ಟೆ ಕಾಯ ಕಬ್ಬಿನಕ್ಕೆ ಸುವರ್ಣ ವರ್ಣ–ಶುದ್ಧಿ–ಮೌಲ್ಯಗಳು ಬಾರದಿರವು.

'ಹೊಲಬುಗೊಂಡರಸ ಬೇಡ, ಬಿಲಿತು ತರಬೇಡ ;
ಒಲಿದೊಮ್ಮೆ 'ಶಿವಶರಣೆ' ನ್ನಿರಯ್ಯಾ. ಒಂದು ಸೊಲ್ಲಿಂಗೆ
ಮುಕ್ತಿ ಸಿದ್ಧಿ ; ಕೂಡಲಸಂಗಮದೇವ ಭಕ್ತಿಲಂಪಟನಾಗಿ. '

ಮುಕ್ತಿ ಮಂದಿರಕ್ಕೆ ವಂದನ ಭಕ್ತಿಯೇ ಸುಲಭವಾದ ಹೊಲಬು. ಇದನುಳಿದು ಇನ್ನಾವ ಹೊಲಬನ್ನು ಹುಡುಕಬೇಕಿಲ್ಲ. ದೇವನ ಅನುಗ್ರಹ ಪಡೆಯುವುದಕ್ಕೆ ವಂದನವೇ ಮುಡುಪಿಟ್ಟ ಕಾಣಿಕೆ. ವಂದನ ಧನವನ್ನು ಸಲ್ಲಿಸದೆ ಬೇರೆ ಇನ್ನಾವ ವಸ್ತುವನ್ನು ಹಣ್ಣು ಹೂವನ್ನು ಹೆಚ್ಚಿನ ಹಾಗವಿತ್ತು ತಂದೊಪ್ಪಿಸಬೇಕಿಲ್ಲ. ಶಿವಶರಣೆಂದು ಅಭಿವಾದನ ಮಾಡಿದರೆ ಸಾಕು. ಒಮ್ಮೆ ಮಾಡಿದರೆ ಸಾಕು, ಶಿವನೊಲಿವನು ; ಮುಕ್ತಿ ಕೊಡುವನು.

ಅಭಿವಾದನ, ಸ್ತುತಿ ಎಂಬೀ ಎರಡರ್ಥವುಳ್ಳ ವಧಿ' ಧಾತುವಿನಿಂದ ವಂದನ ಶಬ್ದೋತ್ಪತ್ತಿಯಾಗಿದೆ. ಈ ಅರ್ಥವನ್ನು ಈ ವಚನದಲ್ಲಿ ಪ್ರಯೋಗಿಸಿದ ಶರಣ ಶಬ್ದವು ಸಂಪೂರ್ಣ ಸಮರ್ಥಿಸುತ್ತದೆ. 'ಅಭಿವಾದನ' ವೆಂದರೆ ಹೆಸರು ಹೇಳುತ್ತ, ಮಂತ್ರಪಠಿಸುತ್ತ, ಇಲ್ಲವೆ ಸ್ತೋತ್ರಮಾಡುತ್ತ ನಮಸ್ಕರಿಸುವುದು. ಶರಣ ಪದದ ಹಿಂದೆ ಶಿವ ಶಬ್ದವನ್ನು ನಾಮವನ್ನು ಇಟ್ಟು 'ಶಿವಶರಣೆಂ' ದು ಉಚ್ಚರಿಸಲು ಬೋಧಿಸಿರುವುದು ಇನ್ನೂ ಹೆಚ್ಚಾಗಿ ಸ್ಫುಟವಾಗಿ ಅಭಿವಾದನ ಅರ್ಥವನ್ನು ಸಾಟಿದೆ. 'ಶಿವಶರಣು ಎಂಬುದೇ ಭಕ್ತನಿಗೆ ಪರಮ ಪಂಚಾಕ್ಷರಿ. ಈ ಶಿವಶರಣೆಂಬ ಪಂಚಾಕ್ಷರಿಯನ್ನು ಶಿವಭಕ್ತನು ಒಮ್ಮೆ ನುಡಿದರೆ ಭಕ್ತಿಪ್ರಿಯನಾದ ಭಗವಂತನು ಒಲಿವನು. ಒಲಿದು ಭವಬಂಧನ ಬಿಡಿಸುವನು. ಹೀಗಿರುವಾಗ ಗುರುಜಂಗಮರನ್ನು ಕಂಡು ಗರ್ವದಿಂದಿರಬಾರದು. ಕಣ್ಣುತಪ್ಪಿಸಿಕೊಂಡು ಮರೆಯಾಗಿ ಹೋಗಬಾರದು. ವಿನಯದಿಂದ ವಂದಿಸದೆ ಇರಬಾರದು. ಇದ್ದರೆ ಇನ್ನೆಂದಿಗೂ ಲಭ್ಯವಾಗದ ನಷ್ಟ. ಇನ್ನೆಂದಿಗೂ ಸುಖವೊದಗದ ಕಷ್ಟ.

'ಒಡಯನ ಕಂಡರೆ ಕಳ್ಳನಾಗದಿರಾ ಮನವೇ ! ಭವದ ಭಾರಿಯ ತಪ್ಪಿಸಿಕೊಂಬರೆ ನೀನು ನಿಯತನಾಗಿ, ಭಯಭರಿತನಾಗಿ, ಅಹಂಕಾರಿಯಾಗದೆ ಶರಣೆನ್ನು ಮನವೇ ! ಕೂಡಲ ಸಂಗನ ಶರಣರಲ್ಲಿ ಭಕ್ತಿಯ ನೋಲುವರೆ ಕಿಂಕಲನಾಗಿ ಬದುಕು ಮನವೇ ! '

ಮಾನವನಿಗೆ ಭವದ ಭಾರ ಹೊರಲಾರದ ಹೊರೆ. ಎಂದೆಂದಿಗೂ ತುಂಬಿಬಾರದ ಅರೆಕೊರೆ. ಈ ಭಾರ ಇಳುಹಿಕೊಳ್ಳಬೇಕಾದರೆ ಶರಣೆಂಬುದೆ ಸಲೆಸಾಧನ ; ಸುಲಭ ಸಾಧನ. ಇಷ್ಟನ್ನು ಮಾಡದೆ ಮೈಗಳ್ಳನಾಗುವುದೆ ? ತಲೆವಾಗದೆ ತಲೆತಪ್ಪಿಸಿಕೊಳ್ಳುವುದೆ ? ಒಡೆಯರಿಗೆ ವಂದನೆಯನರ್ಪಿಸಿ ಭವಭಾರದಿಂದ ಬಾಳನ್ನು ಹಗುರಾಗಿಸಿಕೊಳ್ಳಬಾರದೆ ? ಸತ್ಯಸುಖಸಂಪದವನ್ನು ಪಡೆದು ಲೇಸಾಗಿ ಬದುಕಬಾರದೆ ? ಈ ನಿಜವನ್ನರಿಯದೆ ಕೆಟ್ಟುಹೋಗುವುದು ಉಚಿತವಲ್ಲ ; ಉತ್ತಮವಲ್ಲ.

'ಅಭ್ಯಾಸವೆನ್ನ ವರ್ತಿಸಿತ್ತಯ್ಯಾ : ಭಕ್ತಿ ಸಾಧ್ಯವಾಗದು, ನಾನೇವೆನಯ್ಯಾ ? ಆ ನಿಮ್ಮ ಮನಬೊಗುವನ್ನಕ್ಕ ನೀವೆನ್ನ ಮನಬೊಗುವನ್ನಕ್ಕ ಕಾಯಗುಣಂಗಳ ಕಳೆದವರಿಗೆ ಶರಣೆಂಬೆ, ಕೂಡಲಸಂಗಮದೇವಾ , ಲೋಕದ ಮೂಢರ ರೂಢಿಗೊಳಗಾಗಿ ವಿನಯಸೂಚಕ ವಂದನೆಯನ್ನು ಮಾಡದೆ ಮದೋ

ನ್ಮತ್ತನಾಗಿ ವರ್ತಿಸಿದರೆ ಭಕ್ತಿಸಾಧ್ಯವಾಗದು ; ಮುಕ್ತಿ ಸಾಧ್ಯವಾಗದು. ಭವಿಗಳಸಂಗದಿಂದ ಭವಿಯಾಗಿ ಬಾಳುವುದು ಲೇಸಲ್ಲ. ಭವಹರ ರೂಪರಿಗೆ ದೂರಾಗಿ ಬಾಳುವುದು ಚೆನ್ನಲ್ಲ. ಧ್ಯಾನ ಧಾರಣಾಧಿಗಳನ್ನು ಮಾಡಿ ಸಾಧಿಸುವ ಸಮಾಧಿ ಸಂಪತ್ತಿಯನ್ನು ಸಮರಸ ಸೌಖ್ಯವನ್ನು ಶರಣು ಮಾಡುವುದರಲ್ಲಿ ಪಡೆವ ಸುಲಭ ಸೌಭಾಗಕ್ಕೆ ವಂಚಿತನಾಗಬಾರದು. ಇದನರಿತು ಕಾಯಗುಣಗಳನ್ನು ಕೈಬಿಟ್ಟವರೇ ಕೈಲಾಸಾಧಿಪತಿ ಸ್ವರೂಪರು. ಅಂಥವರಿಗೆ ಪೊಡಮಟ್ಟು ಕೃತಾರ್ಥರಾಗುವುದು ಕರಲೇಸು. ತನುಸಾರಾಯರು ಮನಸಾರಾಯರುನ ಜ್ಞಾನಸಾರಾಯರು ಸಿಕ್ಕುವುದು ಕಠಿನ. ಸಿಕ್ಕಾಗ ಕಕ್ಕುಲತೆಯಿಂದ ಕೈಮುಗಿಯುವುದೇ ಕಟ್ಟಳೆ ; ಅದೇ ಕಟ್ಟಿಸಕ.

'ಎನಿಸೆನಿಸೆಂದೊಡೆ ನಾಧೃತಿಗೆಡೆನಯ್ಯ : ಎಲುದೋರಿದರೆ ನರಹರಿದರೆ ಕರಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯಾ : ಸಿರಹರಿದು ಅಟ್ಟೆ ನೆಲೆಕ್ಕೆ ಬಿದ್ದರೆ ನಾಲಗೆ ಕೂಡಲಸಂಗಾ 'ಶರಣೆ ನ್ನುತ್ತಿದ್ದೀತಯ್ಯಾ !'

ಎಷ್ಟೆಷ್ಟು ದುರ್ಧರ ಪ್ರಸಂಗ ಬಂದರೂ ಧೃತಿಗೆಡಬಾರದು ; ಮತಿಗೆಡಬಾರದು. ದುರ್ಮರಣವೊದಗಿದರೂ ಶರಣೆಂಬ ಸತ್ಯನಿಷ್ಠೆಯನ್ನು ಬಿಡಬಾರದು. ಆಗ ವಂದನ ಭಕ್ತಿ ಫಲಿಸುತ್ತದೆ. ಆತ ಲೋಕ ವಂದ್ಯನೆನಿಸುತ್ತಾನೆ. ಮಹಾತ್ಮಾ ಗಾಂಧಿಯವರು ಮರಣವನ್ನಪ್ಪುವಾಗ ಈ ನಿಷ್ಠೆಯನ್ನು ನಾಲಗೆಯಲ್ಲಿ ನಿಲ್ಲಿಸಿದರು. ತನ್ನಾತ್ಮರಾಮನಿಗೆ ನಾಲಗೆಯನ್ನು ಮೀಸಲಾಗಿಸಿದರು, ಅಂತೆಯೇ ಅವರಿಂದು ವಿಶ್ವವಂದ್ಯರಾಗಿರುವರು. ವಂದನ ಭಕ್ತಿಯನ್ನು ಒಡಲಲ್ಲಿ ಉಸಿರಿರುವ ವರೆಗೂ ಬಿಡಬಾರದು. ವಂದನ ಭಕ್ತಿ ಒಂದು ಬಲವನ್ನು ಬೆಂಬಲವನ್ನು ತಂದು ಕೊಡುತ್ತದೆ. ಒಬ್ಬರಿಗಿಂತ ಇಬ್ಬರು ಲೇಸೆಂಬ ನಾಣ್ನುಡಿಯನ್ನು ಸಮರ್ಥಿಸುತ್ತದೆ. ಒಕ್ಕೈಗಿಂತ ಎರಡುಕೈಗಳು ಜೋಡಾದರೆ ಬಲಕ್ಕೆ ಬಲಬಾರದೇನು ? ಒಬ್ಬ ಸಜ್ಜನನಲ್ಲಿ ಶರಣು ಹೊಕ್ಕರೆ ಸತ್‌ಶಕ್ತಿ ತುಂಬಿ ಬಾರದೇನು ? ಸದ್ಗುಣ ಸಮನಿಸವೇನು ? ಸತ್ ಸಹವಾಸ ಪ್ರಾಪ್ತವಾಗದೇನು ?

'ಸಮ ಚಿತ್ತವೆಂಬ ನೇಮದ ಹೆಲಗೆಯ ಹಿಡಿದು, ಶಿವಚಿತ್ತವೆಂಬ ಕೂರಲಗ ಕೊಂಡು ಶರಣಾರ್ಥಿಯೆಂಬ ಶ್ರವವ ಕಲಿತರೆ ಆಳುತನಕ್ಕೆ ದೇಸಿಯಪ್ಪೆ ನೋಡಾ. ಮಾರಂಕ ಜಂಗಮ ಮನೆಗೆ ಬಂದರೆ ಇದಿರೆದ್ದು ನಡೆವುದು,

ಶರಣೆಂದು ನುಡಿವುದು ; ಕೂಡಲ ಸಂಗಮ ದೇವರನೊಲಿಸುವೊಡೆ ಇದು ಚಿನ್ಹ !,

ಶರಣಾರ್ಥಿಯೆಂಬ ಭಕ್ತಿ ಸಾಧನವನ್ನು ಕಲಿಯಲು ಚಿತ್ತ ಭಿತ್ತಿಯಲ್ಲಿ ಅಚ್ಚೊತ್ತಿಕೊಳ್ಳಲು ಸಮಚಿತ್ತ-ಶಿವಚಿತ್ತಗಳೇ ಸಾಧನ ಸಾಮಗ್ರಿ. ಇವಿಲ್ಲದೆ ಶರಣಾರ್ಥಿ ಎಂಬುದು ಅಳವಡದು, ಅಳವಡದಿದ್ದಲ್ಲಿ ಶಿವನೊಲುಮೆಯೊದಗದು. ಚಿತ್ತಸಮುನ್ನತಿಯನ್ನು ಸಾಧಿಸುವ ಸಾಮಾಜಿಕರಲ್ಲಿ ಸಮಭಾವವನ್ನು ಅಂದರೆ ಭಾವೈಕ್ಯವನ್ನು ಪ್ರಸಾಧಿಸುವ ವಂದನ ಭಕ್ತಿ ವಂದ್ಯವಲ್ಲದೆ ನಿಂದ್ಯವಲ್ಲ.

ದಾಸ್ಯಂ : ವಂದನ ಭಕ್ತಿಯೆಂಬ ಬೀಜದಲ್ಲಿಯೆ ದಾಸ್ಯಭಾವ ರೂಪವೊಳಕೆಯಿದೆ. ಅದರಿಂದಾಗಿ ವಂದನೆಯನ್ನು ಹೊಂದಿಕೊಂಡು ದಾಸ್ಯ ವಿನ್ಯಾಸವಿದೆ. ಗರ್ವ ಮೇಘವನ್ನು ಚದುರಿಸುವ ಇಲ್ಲವೆ ಬಿಳುಪಾಗಿಸುವ ಕಾರ್ಯದಲ್ಲಿ ದಾಸ್ಯ ಒಂದು ಶರದ್ ಋತು. ವಿನಯವೆಂಬ ಶೈತ್ಯೋಪಚಾರವನ್ನು ಮಾಡುವಲ್ಲಿ ಇದು ಶಿಶಿರ ಋತು. ಅಹಂಕಾರವೆಂಬ ಆನೆಯ ಮದ ಜಲವನ್ನು ಬತ್ತುವಂತೆ ಮಾಡುವ ಗ್ರೀಷ್ಮ ಋತುವಿನಂತಿದೆ ದಾಸ್ಯ.

ಇಹ-ಪರ ಎರಡನ್ನೂ ಸಾಧಿಸುವ ದಿವ್ಯಮಾರ್ಗವೆಂದರೆ ದಾಸ್ಯ ಭಕ್ತಿ, ದಾಸ್ಯ ವೃತ್ತಿಯಿಂದ ಇಹದಲ್ಲಿ ಸುಖವಿದೆ ; ಸ್ವಾವಲಂಬನವಿದೆ. ಸಾಧುಗುಣ ಸರಳ ಭಾವಗಳ ಸಂಪಾದನೆಯಿದೆ. ಪ್ರಭುತ್ವದಿಂದ ಇವಾವು ಪ್ರಾಪ್ತಿಯಾಗುವುದಿಲ್ಲ. 'ಹಿರಿತನವು ಹೆಡ್ಡಂಗೆ' ಎಂದು ಸರ್ವಜ್ಞ ಹೇಳಿದ್ದಾನೆ. ಇದು ಸ್ವಾನುಭವ ವಾಣಿ· 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ ; ಕೀಳಂಗಲ್ಲದೆ ಹಯನ ಕರೆವುದೆ ? ಮೇಲಾಗಿ ನರಕದೊಳೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು-ಮಹಾದಾನಿ ಕೂಡಲಸಂಗಮದೇವಾ.' ಅಮೃತ ಪ್ರಾಯವಾದ ಹಾಲು ಬೇಕಿದ್ದರೆ ಹಸುವಿನ ಕೆಳಗೆ ಕುಳಿತು ಹಿಂಡಬೇಕಲ್ಲದೆ ಬೆನ್ನೇರಿ ಕುಳಿತರೆ ಹಾಲುಸಿಕ್ಕದಿರುವುದಿರಲಿ, ಹಸು ತನ್ನ ಬಾಲವನ್ನೆತ್ತಿ ಬೀಸಿದರೆ ಕೆನ್ನೆಗೆ ಚೆನ್ನಾಗಿ ಚಾಟಿಯಂತಹ ಏಟು ಬೀಳುತ್ತದೆ. ಇದರಿಂದಾಗಿ ಈಶತನವನ್ನು ಬಯಸುವುದು ಜಾಣತನವಲ್ಲ. ಇಹವನ್ನು ಇನ್ನಾವ ಇಕ್ಕಟ್ಟುಗಳಿಲ್ಲದೆ ಇಮ್ಮನವಿಲ್ಲದೆ ಸಾಧಿಸಬೇಕಾದರೆ ದಾಸ್ಯ ಭಕ್ತಿಯೇ ಮೇಲು. ಇನ್ನು ಪರವನ್ನು ದಕ್ಕಿಸಿ

ಕೊಳ್ಳಲು ಸಹ ದಾಸ್ಯ ಭಕ್ತಿಯೇ ಬೇಕು. ದಾಸೋಽಹಂ ಭಾವವಿಲ್ಲದೆ ದೇವತ್ವಪ್ರಾಪ್ತಿಯಿಲ್ಲ.

'ದೇವನೊಲಿದನೆಂದು ಮುಯ್ಯಾನಲು ಬೇಡ. ಕರಕಟ ಕಾಡಿದನೊಳಿದನೆ ? ಅಳಿಸುವ ನಗಿಸುವನೊಳಿದನೆ ? ಬೆಚ್ಚದೆ ಬೆದರದೆ ತೊತ್ತುತನವ ಮಾಡಲು ತನ್ನನೀವ ಕೂಡಲ ಸಂಗಮದೇವ.'

ದೇವನೊೞಿದನಲ್ಲ. ನಾನು 'ಶಿವೋಽಹಂ' ಎಂದರೆ ಒಲಿಯುವವನಲ್ಲ. ಒಲ್ಲದ ನೋವುಗಳನ್ನಿಕ್ಕುತ್ತಾನೆ. ತನುಮನಗಳನ್ನು ಅಲ್ಲಾಡಿಸಿ ನೋಡುತ್ತಾನೆ. ಒಮ್ಮೆ ಅಳಿಸುತ್ತಾನೆ. ಇನ್ನೊಮ್ಮೆ ನಗಿಸುತ್ತಾನೆ. ಅದೇ ನಿನಗೆ 'ದಾಸೋಽಹಂ' ಎಂದು ಸೇವಿಸಿದರೆ ದಾಸರ ದಾಸನಾಗಿ ಬರುತ್ತಾನೆ. ತನ್ನನ್ನೇ ತೆತ್ತುತ್ತಾನೆ. ಪರದ ಮಾತೇ ಅಲ್ಲ, ಇಹದಲ್ಲಯೂ ಅಷ್ಟೇ! ಒಡೆಯನಾಗಿರುವುದಕ್ಕಿಂತ ಬಡವನಾಗಿರುವುದನ್ನೇ ಬಯಸಬೇಕು. ಅರಸನಾಗುವುದಕ್ಕಿಂತ ಆಳಾಗಿರುವುದೇ ಸೊಗಸೆನಬೇಕು.

'ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ : 'ತಾರೋ ಅಗ್ಗವಣಿಯ, ನೀಡೋ ಪತ್ರಿಯ ಲಿಂಗಕ್ಕೆ ಬೋನವ ಹಿಡಿಯೋ' ಎಂಬರು ; ಕೂಡಲ ಸಂಗನ ಮಹಾಮನೆಯಲ್ಲಿ ಒಕ್ಕುದನುಣ್ಣೋ ತೊತ್ತೇ ಎಂಬರು.'

ಭಕ್ತರ ಮನೆಯ ಈ ಪಾವನ ಸಂಸ್ಕಾರ ಭೂಪತಿಗಳ ಮನೆಗಳಲ್ಲಿರುವುದಿಲ್ಲ. ಅದು ದರ್ಪದ ದೌಲತ್ತು. ಅಲ್ಲಿ ಅಧಿಕಾರದ ಹಮ್ಮು. ಅದರಿಂದ ಅನೇಕರಿಗೆ ಕಿರುಕುಳ. ಅದೆಲ್ಲ ಕರ್ಮಮೂಲ. ಅದೇ ಅಚ್ಚ ಭಕ್ತರ ಮನೆಯಲ್ಲಿದ್ದರೆ ಮಾಡುವ ಕೆಲಸಗಳೆಲ್ಲ ಮಂಗಳಮಯ. ನುಡಿಯಲ್ಲಿ ನಯ. ಹೃದಯದಲ್ಲಿ ದಯ. ಫಲದಲ್ಲಿ ಅಭಯ. ಭಕ್ತರೊಕ್ಕುದನುಂಡರೆ ಜನ್ಮ ಪಾವನ. ಭಕ್ತರ ಸೇವೆ ಮಾಡಿದರೆ ಇಹ ಪರವೆರಡಕ್ಕೂ ಸಾರ್ಥಕ.

ಒಡಲಾಸೆಗೆ ಬಿದ್ದು ಒಡವೆಯಾಸೆಗೆ ಬಿದ್ದು ಅತಂತ್ರರಾಗಬಾರದು. ಘರಾವಲಂಬಿಗಳಾಗಬಾರದು, ಕೀಳರನ್ನಾಶ್ರಯಿಸಬಾರದು. 'ಧೂಪಕ

ನವನೊಬ್ಬ ದೇಶವ ಕೊಟ್ಟರೆ, ಆಸೆ ಮಾಡಿಯವನ ಹೊರಯಲಿರಬೇಡ. ಮಾದರ ಶಿವಭಕ್ತನಾದರೆ ಆತನ ಹೊರೆಯಲಿ ಭೃತ್ಯನಾಗಿರ್ಪುದು ಕರಲೇಸಯ್ಯಾ, ತೊತ್ತಾಗಿರ್ಪುದು ಕರಲೇಸಯ್ಯಾ. ಕಾಡಸೊಪ್ಪು ತಂದು, ಓಡಿನಲ್ಲಿ ಹುರಿದಿಟ್ಟು ಕೂಡಿಕೊಂಡಿಪ್ಪುದು ನಮ್ಮ ಕೂಡಲ ಸಂಗನ ಶರಣರ.'

ಗುಣವಿಲ್ಲದ ಬಳಿಕ ಹಣದಿಂದ ಹಿರಿಯರಾಗಿ ಫಲವಿಲ್ಲ. ನೀತಿ ಶೂನ್ಯರಾಗಿ ಜಾತಿಯಿಂದ ಮಾನ್ಯರಾಗಿ ಸುಖವಿಲ್ಲ. ಗುಣಹೀನರ ಸಿರಿಗಿಂತ ಗುಣವಂತರ ಬಡತನ ಲೇಸು. ಗುಣಿಗಳ ಸಂಗ ಲೇಸು. ಗುಣಿಗಳು ಏನನ್ನು ಕೊಡದಿದ್ದರೂ ಕಾಡಸೊಪ್ಪು ತಿಂದು ಅವರ ತೊತ್ತಾಗಿರುವುದು ನೂರುಪಾಲು ಮೇಲು. ಗಣನೆಗೆ ಮೀರಿದ ಗುಣಧನದ ಸಂಪಾದನೆಯಾಗುತ್ತದೆ. ದುರ್ಗುಣಿಗಳ ದೂಷಕರ ದಾಸರಾಗಿರುವುದೊಂದಿರಲಿ, ಅವರ ಬಳಿಯಲ್ಲಿ ಇರುವುದೂ ಸಹ ಕೇಡು. ಏನನ್ನಾದರೂ ಅವರಿಂದ ಪಡೆದಿದ್ದರಂತೂ ಮುಗಿಯಿತು. ಬಾಳು ಬದುಕೆಲ್ಲ ಅವರಿಗೇ ಸೂರೆ. ಅಷ್ಟಾದರೂ ಅವರ ಹೆಮ್ಮೆಗೆ ತುದಿ ಮೊದಲಿರುವುದಿಲ್ಲ. ಅವರ ಹೃದಯವಿಲ್ಲದ ಹಿಂಸೆಯನ್ನು ತಾಳಲಾಸಲ್ಲ. ಆಶ್ರಿತರ ಅವಸರವನ್ನು ಅನುವು ಆಪತ್ತುಗಳನ್ನು ಅವರರಿಯರು.

ಹೆಮ್ಮೆನ ಭಕ್ತಿ ಕರ್ಮಕ್ಕೆ ಮೊದಲು. ಮರ್ಮವನರಿಯದ ಮಾಟ ಸುಯಿದಾನದ ಕೇಡು. ಬಂದ ಸಮಯೋಚಿತವನರಿಯದಿದ್ದರೆ ನಿಂದಿರಲೊಲ್ಲ ಕೂಡಲಸಂಗಮದೇವ.'

ಭಕ್ತರೂ ಅಹಂಕಾರಿಗಳಾಗಬಾರದು. ಅಹಂಕಾರವು ಕಣ್ಣನ್ನು ಕೆಡಿಸುತ್ತದೆ. ಕರುಳನ್ನು ಕೆಡಿಸುತ್ತದೆ. ಅನ್ಯರ ಅಂತಃಕರಣವನ್ನು ಅರಿಯದವರಾಗಿರುತ್ತಾರೆ. ತಮ್ಮ ಬಳಿಗೆ ಬಂದವರ ಸಮಯವನ್ನೂ ತಿಳಿಯದವರಾಗುತ್ತಾರೆ. ತಮ್ಮ ಹೆಚ್ಚಳಿಕೆಯನ್ನೇ ಹೇಳಿಕೊಳ್ಳುತ್ತಿರುತ್ತಾರೆ. ತಮಗಿಂತ ಇನ್ನಿಲ್ಲ; ತಾವೇ ಎಲ್ಲ ಎಂದು ಹರಟುತ್ತಾರೆ. ಅವರ ಮನೆ ಸಿರಿ, ಮನೆ ಚೆಲುವುಗಳ ಮಾತೇ ಮಾತು. ಇದರಿಂದಲೋ ಏನೋ 'ಬಡವರ ಮನೆಯ ಊಟ ಚೆಂದ; ಬಲ್ಲಿದರ ಮನೆಯ ನೋಟ ಚೆಂದ.' ಎಂದು ಉಲಿದಿದೆ ನಾಳ್ನುಡಿ. ಬಂದವರು ಬೇಸರಿಸಿದರೂ ತಮ್ಮ ಸಿರಿ ಹೆಮ್ಮೆನ

ಮಾತನ್ನೇ ಮುಂದುವರಿಸುವವರಲ್ಲಿ ದೈವಶಕ್ತಿಯಿರದು. ಭಯ ನಯ ಗಳಿರಬೇಕು. ಅಂಥವರಿಗೆ ದಯಾಮಯದೇವನೊಲಿವನು. 'ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು. ದಕ್ಕ ನುಂಗಿದಂತೆ ಬೆರೆತು ಕೊಂಡಿರಬೇಡ. ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದರೆ ಬೇಡಿದ ಪದವಿಯನೀವ ಕೂಡಲಸಂಗಮದೇವ.'

ಭಕ್ತಿಯಿದ್ದರೂ ಭಯವಿರಬೇಕು. ಭಾಗ್ಯವಿದ್ದರೂ ಬಾಗಿಕೊಂಡಿರ ಬೇಕು. ಆಗ ಭಕ್ತಿಗೂ ಭಾಗ್ಯಕ್ಕೂ ಬೆಲೆಯಿದೆ, ಕಳೆಯಿದೆ. ಅದೇ ವಿನಮ್ರ ಭಾವವಿಲ್ಲದ ಪೂಜೆ ನಿಷ್ಫಲ. ಬಾಳೆ ಬೀಗಿ ಬೆಳೆದರೂ ಗೊನೆ ಬಿಟ್ಟೊಡನೆ ಬಾಗಿಕೊಂಡಿರುವಂತೆ, ಮಾನವನು ವೈಸಿರಿ ಐಸಿರಿಗಳಿಂದ ಹೆಚ್ಚಿದ್ದರೂ ವಿನಯಗುಣವುಳ್ಳವನಾದರೆ ಬಾಳೆಯಂತೆ ಪುನರ್ಜನ್ಮವಿಲ್ಲದವ ನಾಗುತ್ತಾನೆ. ಬಾಳೆಯ ಹಣ್ಣಿಗೆ ಬೀಜವಿಲ್ಲದಂತೆ ವಿನಯಶೀಲನಿಗೆ ಭವ ಬೀಜವಿಲ್ಲದಾಗುತ್ತದೆ.

'ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು, ಬಿದಿರಲ್ಲಿ ಗುಡಿಯು ಗೂಡಾರವಕ್ಕು; ಬಿದಿರಲ್ಲಿ ಸಕಲ ಸಂಪದವೆಲ್ಲವು. ಬಿದಿರದವರ ಮೆಚ್ಚ ನಮ್ಮ ಕೂಡಲ ಸಂಗಮದೇವ.'

ವೇಣುವನ್ನು ವಿನಯ ಗುಣವನ್ನು ಸೂಚಿಸುವ 'ಬಿದಿರ್' ಶಬ್ದ ವಿಶ್ಲೇಷಣವನ್ನು ಈ ವಚನವು ಸುಂದರವಾಗಿ ಮಾಡಿದೆ. ಕಾಯವಿನಯ ಕರಣವಿನಯಗಳೆರಡೂ ಮಾನವನಿಗೆ ಭೂಷಣ; ಮಹೋನ್ನತಿಗೆ ಕಾರಣ. ಬಿಚ್ಚು ಮನದವರಿಗೆ ಭಗವಂತನು ಬೇಗ ಮೆಚ್ಚುವನು. ಬಿದಿರು ಬಾಗುವ ಗುಣದಿಂದ ಜಗಕ್ಕೆ ಮಿಗಿಲಾಗಿ ಉಪಯೋಗವಾಗುವಂತೆ, ಸಕಲ ಸಂಪದ ವಾಗುವಂತೆ, ವಿನಯಶಾಲಿಯು ವಿಶ್ವವಂದ್ಯನಾಗುತ್ತಾನೆ. ವಿನಯ ರಹಿತನು ವಿಶ್ವನಿಂದ್ಯನಾಗುತ್ತಾನೆ. ಬಿದಿರಿನಿಂದ ಅಂದಣಾದಿ ಉತ್ತಮ ಕಾರ್ಯಗಳಾಗುವಂತೆ ಲೋಕಸೇವಕರಿಂದ ಮಹತ್ಕಾರ್ಯಗಳಾಗುತ್ತದೆ.

ದಾಸ್ಯ ಭಕ್ತಿಗೆ ದಾಸೋಽಹಂ ಭಾವವೇ ಭೂಷಣ. ಆ ದಾಸೋಽಹಂ ಭಾವ ತ್ರಿವಿಧವಾಗಿದೆ. ತ್ರಿಕರಣದಲ್ಲಿ ದಾಸೋಽಹಂ ಭಾವವಿರಬೇಕು. ಮಾಡುವಲ್ಲಿ ಮಾತಾಡುವಲ್ಲಿ ಮನನಿಸುವಲ್ಲಿ ದಾಸೋಽಹಂ ಭಾವವಿರ

ಬೇಕಲ್ಲದೆ ಅಹಂಭಾವವಿರಬಾರದು. ಕೊನೆಗೆ ಚಿದಹಂ ಭಾವವೂ ಇರಬಾರದು ಆಗ ದಾಸ್ಯ ಭಕ್ತಿ ಕೊರತೆಯಿಲ್ಲವಾಗುತ್ತದೆ.

'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು ಶಿವನ ಡಂಗುರ ! ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ! ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿತ್ತನೀವ ಕೂಡಲ ಸಂಗಮದೇವ.'

ಮಾಡಿದೆನೆಂದು ಹೇಳಿಕೊಳ್ಳುವುದು ಹೊಗಳಿಕೊಳ್ಳುವುದು ದಾಸ್ಯ ಭಕ್ತಿಗೆ ಹೊರಗು. ಇದು ತೀರ ಸ್ಥೂಲ. ಇದಕ್ಕಿಂತ ಸೂಕ್ಷ್ಮವಾಗಿ ಈ ವಿಷಯವನ್ನು ವಿಶ್ಲೇಷಿಸಿದೆ ಈ ವಚನ. ಮಾಡಿದ್ದನ್ನು ಮನ ನೆನೆದರೂ ಅಪರಾಧ ; ಅಕ್ಷಮ್ಯ ಅಪರಾಧ. ಆ ಅಪರಾಧಕ್ಕೆ ತಕ್ಕ ಶಿಕ್ಷೆಯೆಂದರೆ ಘಂಟಾಘೋಷವಾಗಿ ಅದನ್ನು ಸಾರಿ ಅಣಕವಾಡಿ ಕರಕರೆಯಾಗಿ ಕಾಡುವುದು ಶಿವನ ಶಾಸನ ! 'ಅಹಂಕರೋಮೀತಿ ವೃಥಾಭಿಮಾನಃ' ಮಾಡಿದೆನೆಂದು ಮನ ನೆನೆದರೆ ಅದೊಂದು ಭಾವಾಪಚಾರ. ಸೂಕ್ಷ್ಮವಾಗಿ ತನ್ನನ್ನೇ ತಾನು ಬಣ್ಣಿಸಿಕೊಂಡಂತೆ ! ಮಾಡಿಸಲು ಪ್ರೇರಕನಾಗಿ ಪರಮಾತ್ಮನೊಬ್ಬನಿರುವಾಗ ಆತನನ್ನು ನಿರ್ಲಕ್ಷಿಸಿದ ಅಪರಾಧ ಅಲ್ಪವೇನಲ್ಲ. ದೇವಾಭಿಮಾನವನ್ನು ದೂರಮಾಡಿ ಜೀವಾಭಿಮಾನದ ಜಂಬದಲ್ಲಿರುವುದು ಜಘನ್ಯ. ಅಲ್ಲದೆ ತಾ ಮಾಡಿದ ಭಕ್ತಿ ಅದೆಷ್ಟರದು ? ತಾನಿರುವುದಾದರೂ ಎಲ್ಲಿ ? ತನ್ನ ವ್ಯಕ್ತಿತ್ವ ಎಷ್ಟು ಮಾತ್ರದ್ದು ? ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೆ ? ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ ? ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ ? ಆನು ಭಕ್ತನೆಂಬ ನುಡಿ ಸುಡದೆ, ಕೂಡಲಸಂಗಮದೇವಾ ?' ಇಂತಿದು ತನ್ನ ವ್ಯಕ್ತಿತ್ವ. ಶಿವ ಶರಣರಿಗೆ ಸರಿಬಾರದಿರುವಾಗ ಶಿವನಿಗೆ ಸರಿ ಬರುವುದೆಂದರೇನು ? ಶಿವನ ಮರೆವುದೆಂದರೇನು ?

'ಆನೆ ಆ ದಾರಿಯಲ್ಲಿ ಹೋಯಿತ್ತೆಂದಡೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ ? ಸಂಗನ ಶರಣರಿಗೆ ಆನು ಸರಿಯೆಂದು ಗಳಹಲು ಬಹುದೆ ? ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ ? ಹೇಳಾ, ಕೂಡಲಸಂಗಮದೇವಾ.'

'ಮಾವಿನ ಕಾಯಿಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ.' ಹೀಗಿರಬೇಕು ದಾಸ್ಯ ಭಕ್ತಿಯ ಭಾವ. ಇದು ಬಾಳಿಗೆ ಬೆಳಕನ್ನು ತರುವ ಸದ್ಭಾವ. ತಾನು ಸರ್ವ ಸಮರ್ಥನಾಗಿದ್ದರೂ ಸರ್ವಾಧಿಕಾರಿಯಾಗಿದ್ದರೂ ಸರ್ವರಿಗೆ ತಾನು ಸಣ್ಣವನೆಂದೇ ಭಾವಿಸಬೇಕು. 'ಎನ್ನಿಂದ ಕಿರಿಯರಿಲ್ಲ; ಶಿವಭಕ್ತರಿಂದ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ; ಕೂಡಲ ಸಂಗಮದೇವಾ, ಎನಗಿದೇ ದಿಬ್ಯ!' 'ಅರ್ಥ ಪ್ರಾಣಾಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ ಎನಗಾರೂ ಇಲ್ಲವಯ್ಯಾ. 'ಭೃತ್ಯಾಪರಾಧ ಸ್ವಾಮಿನೋದಂಡ' ಕೂಡಲ ಸಂಗಮದೇವಾ ನೀವೇ ಪ್ರಮಾಣು.' ಇಷ್ಟಕ್ಕೂ ತಾನಾರು? ತನ್ನದೇನಿದೆ? ಮಾಡಿದ ಕೈ ತಾ ಮಾಡಿದೆನೆಂದು ಹೇಳುವುದೆ? ತನ್ನದಲ್ಲದ ಅರ್ಥ ಪ್ರಾಣಾಭಿಮಾನಗಳು ಅನರ್ಥವಾಗ ಬಾರದು. ಅನುಪಯಕ್ತವಾಗಬಾರದು. ತನ್ನವೆಂಬ ಅಹಮಿಕೆ ಅಂಕುರಿಸ ಬಾರದು. ಕರ್ತನ ಸಂಪತ್ತಿಗೆ ಭೃತ್ಯನ ಸ್ವಾಮ್ಯ ಎಷ್ಟರದು? ಭೃತ್ಯನು ಮಾಡಿದರೂ ಕರ್ತನೇ ಮಾಡಿದಂತಲ್ಲವೆ? ಭೃತ್ಯನು ಮಾಡಿದರೆ ಕರ್ತವ್ಯ ಪಾಲನ. ಮಾಡದಿದ್ದರೆ ಅಪರಾಧ; ಅದಕ್ಕೆ ತಕ್ಕ ದಂಡನ. ಮಾಡಿದ ಫಲ ಭೃತ್ಯನಿಗಲ್ಲ; ಮಾಡದಿರುವದರ (ಅಕರ್ತವ್ಯದ) ಫಲ ಮಾತ್ರ ಭೃತ್ಯನದು. ಕರ್ತರು ಹೇಗಿದ್ದರೂ ಕರ್ತರೆ! 'ಲಾಂಛನವ ಕಂಡು ನಂಬುವೆ, ನಮಿಸುವೆ; ಅವರಂತರಂಗವ ನೀನೇ ಬಲ್ಲೆ! ತೊತ್ತಿಂಗೆ ತೊತ್ತುಗೆಲಸ ವಲ್ಲದೆ, ಅರಸರ ಸುದ್ದಿ ನಮಗೇಕಯ್ಯಾ? ರತ್ನ ಮೌಕ್ತಿಕದಚ್ಚು ಕೂಡಲ ಸಂಗಮದೇವಾ, ನಿಮ್ಮ ಶರಣರು.' ಲೌಕಿಕದೃಷ್ಟಿಯಿಂದ ಭೃತ್ಯನ ಫಲಿತಾಂಶ ಚಿಕ್ಕದಾದರೂ ಅಳವಟ್ಟ ಆತ್ಮಶಕ್ತಿ ಚಿಕ್ಕದಲ್ಲ.

'ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ. ಅವರೊಕ್ಕುದ ನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ ಕಾಲ ಮುಟ್ಟಲಮ್ಮವು, ಕಲ್ಪಿತ ತೊಡೆಯಿತ್ತು; ಎನ್ನ ಭವ ಬಂಧನ ಹಿಂಗಿತ್ತು; ಕರ್ಮ ನಿರ್ಮಳ ವಾಯಿತ್ತು! ಅವರ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದು ಕೂಡಲ ಸಂಗಮ ದೇವ 'ಇತ್ತ ಬಾ' ಯೆಂದೆತ್ತಿಕೊಂಡನು!'

ತತ್ತ್ವಜ್ಞಾನಿಗಳಿಗೆ ತೊತ್ತಾದರೆ ಶಿವಶರಣರ ಸೇವಕನಾದರೆ ಆಗುವ ಸಂಪ್ರಾಪ್ತಿಯಿದು. ಎಂತೆಂತಹ ಯೋಗಿಯೂ ವೇದಾಂತಿಯೂ ಸಂಪಾದಿಸದ ಸಂಪ್ರಾಪ್ತಿ ಸೇವಾಧರ್ಮದಲ್ಲಿರುತ್ತದೆ. ನಿಷ್ಕಾಮ ನಿರಹಂಕಾರ ನಿರುದಾಶೀನ ಸೇವೆ ಅದೊಂದು ಮಹಾ ತಪಸ್ಸು; ಮಹಾ ಶ್ರೇಯಸ್ಸು.

'ಭಕ್ತ ಭಕ್ತನ ಮನೆಗೆ ಬಂದರೆ ಭೃತ್ಯಾಚಾರವ ಮಾಡಬೇಕು; ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ, ಹಿಂದೆ ಮಾಡಿದ ಭಕ್ತಿಗೆ ಹಾನಿ! ಲಕ್ಷ್ಯಗಾವುದ ದಾರಿಯು ಹೋಗಿ ಭಕ್ತನು ಭಕ್ತನ ಕಾಂಬುದು—ಸದಾಚಾರ; ಅಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು.'

ದಾಸ್ಯ ಭಕ್ತಿ ಒಂದು ಆಚಾರ; ಪಂಚಮಾಚಾರ. ಭಕ್ತನಿಗೆ ಭಕ್ತನಾಗಿ ಭೃತ್ಯಾಚಾರವನ್ನು ಕೈಕೊಳ್ಳಬೇಕು. ಸ್ವಯಂಸರ್ವಶಕ್ತನಾಗಿದ್ದರೂ ಕರ್ತನೆಂಬ ಕಲ್ಪನೆ ಕುಡಿಯೊಡೆಯಬಾರದು. ಭಕ್ತನು ತನ್ನಲ್ಲಿಗೆ ಬಂದಾಗ ಮಾತ್ರ ಭೃತ್ಯಾಚಾರವನ್ನು ಮಾಡಬೇಕೆಂದಲ್ಲ; ಭಕ್ತನೆಲ್ಲಿದ್ದರೂ ಅಲ್ಲಿಗೆ ಹೋಗಿ ಕೈಂಕರ್ಯವನ್ನೆಸಗಬೇಕು. ಇಲ್ಲಿ ಅಲ್ಲಿ ಎಂಬುದೇನಿಲ್ಲ. ಕಂಡ ಕಂಡಲ್ಲಿ ಕಿಂಕರತೆಯನ್ನು ತೋರಬೇಕು. 'ಕಂಡ ಭಕ್ತರಿಗೆ ಕೈಮುಗಿಯುವಾತನೇ ಭಕ್ತ: ಮೃದುವಚನವೇ ಸಕಲಜಪಂಗಳಯ್ಯ, ಮೃದು ವಚನವೇ ಸಕಲ ತಪಂಗಳಯ್ಯ; ಸದುವಿನಯವೇ ಸದಾಶಿವನೊಲಿಮೆಯಯ್ಯ. ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ'

ಕಾಯ ವಾಙ್ಮನಗಳಿಂದ ಕಿಂಕರತೆಯನ್ನು ಕಾಣಿಸಬೇಕು. ಇದಕಿಂತ ಬೇರಿಲ್ಲ ಶಿವಕಾರ್ಯ. ಇದಕಿಂತ ಇನ್ನಿಲ್ಲ ಶಿವದರ್ಶನ.

ಭಕ್ತರಿಗೆ ಭಕ್ತಿಯಿಂದ ಕೈಜೋಡಿಸಿದರೆ (ಬೊಗಸೆಯೊಡ್ಡಿದರೆ) ಬೊಗಸೆ ಬರಿದಾಗದು. ಬೇಡದಿದ್ದರೂ ಅವರ ಅಂತಃಕರಣವು ಹರಿದು ಬಂದ ಬೊಗಸೆದುಂಬುತ್ತದೆ. ಭಕ್ತಿ ಬಡತನ ನೀಗುತ್ತದೆ.

'ಭಕ್ತಿಯಿಲ್ಲದ ಬಡವ ನಾನಯ್ಯಾ: ಕಕ್ಕಯ್ಯನ ಮನೆಯಲು ಬೇಡಿದೆ; ಚೆನ್ನಯ್ಯನ ಮನೆಯಲು ಬೇಡಿದೆ, ದಾಸಯ್ಯನ ಮನೆಯಲೂ ಬೇಡಿದೆ. ಎಲ್ಲ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು; ಕೂಡಲ ಸಂಗಮದೇವಾ.'

ಯಾವ ಪಾತ್ರೆ ಬರಿದಾಗಿದ್ದರೂ ಹೃದಯ ಪಾತ್ರೆ ಬರಿದಾಗಿರಬಾರದು. ದಯೆಯಿಂದಲೋ ಧರ್ಮದಿಂದಲೋ ಭಕ್ತಿಯಿಂದಲೋ ಪ್ರೀತಿಯಿಂದಲೋ ಅಂತಃಕರಣದಿಂದಲೋ ಅನುಗ್ರಹದಿಂದಲೋ ತುಂಬಿರಬೇಕು. ಅದನ್ನು ಮುಖದಿಂದ ಬೇಡ ಬೇಕಾಗಿಲ್ಲ; ಮನದಿಂದ ಬಯಸಬೇಕಾಗಿಲ್ಲ. ಮಾಡುವ ಭೃತ್ಯಾಚಾರದಿಂದಾಗಿ ಅದೇ ಬರುವುದು. ಮಗು ಮಾತೆಯನ್ನು ಬೇಡ ಬೇಕೇನು ? ಮರದಲ್ಲಿರುವ ತೆಂಗು ತಿಳಿನೀರಿಗಾಗಿ ನೆಲತಾಯಿಯನ್ನು ಕೇಳ ಬೇಕೇನು ? ಕೈಂಕರ್ಯ ತನ್ನ ಕರ್ತವ್ಯ; ಕಾರುಣ್ಯ ಅವರ ಚಿತ್ತ. ಅರಳು ವುದು ತಾವರೆಯ ಧರ್ಮ ; ಬರುವುದು ತುಂಬಿಯಧರ್ಮ.

'ಕಾಮವ ತೊರೆದಾತ, ಹೇಮವ ಜರೆದಾತ : ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು ! ಆವಾಗಳೂ ನಿಮ್ಮ ನಿಮ್ಮ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು ; ಮಹಾದಾನಿ ಕೂಡಲ ಸಂಗಮದೇವಾ.

ಅರಳಿದ ಹೂವಿಗೆ ಬರುವುದು ಮಾತ್ರ ದುಂಬಿಯೇ ಆಗಿರಬೇಕು. ಬೇರೆ ಹುಳಗಳು ಬಂದರೇನು ಫಲ ? ದುಂಬಿ ಬಂಡುಂಡು ತನಿಜೇನುಕೊಡ ಬಲ್ಲುದು. ಅಂತೆಯೇ ಶಿವನ ನೆನೆದು ಶಿವನಾದವರಲ್ಲಿ ಭೃತ್ಯಭಕ್ತಿಯನ್ನು ಮಾಡಬೇಕು. ಅಲ್ಲಿ ಮಹಾದಾನ ದೊರೆತೀತು ; ದೊರೆಯುತ್ತದೆ.

'ಜನ್ಮ ಜನ್ಮಕ್ಕೆ ಹೋಗಲೀಯದೆ, ಸೋಽಹಂ ಎಂದೆನಿಸದೆ, ದಾಸೋಽಹಂ ಎಂದೆನಿಸಯ್ಯಾ. ಲಿಂಗ ಜಂಗಮದ ಪ್ರಸಾದದ ನಿಲವ ತೋರಿ ಬದುಕಿಸಯ್ಯಾ ; ಕೂಡಲ ಸಂಗಮದೇವಾ, ನಿಮ್ಮ ಧರ್ಮ !' ಇದು ಅಲ್ಲಿ ದೊರೆವ ಮಹಾದಾನ. ಜನ್ಮ ಹರಿಯುತ್ತದೆ. ಚಿದಹಂಭಾವದ ಕರ್ಮ ಹರಿಯುತ್ತದೆ. ದಾಸೋಽಹಂ ಭಾವದ ಭಕ್ತಿ ಭಾಗ್ಯ ದೊರೆಯು ತ್ತದೆ. ಯಾರಿಗೂ ಎಂದಿಗೂ ದೊರೆಯದ ಲಿಂಗ ಜಂಗಮ ಪ್ರಸಾದದ ನಿಲವು ತೋರುತ್ತದೆ. ಬೆಳ್ಳಂ ಬೆಳಕಾಗಿ ಬದುಕುವಂತಾಗುತ್ತದೆ. ಬಾಳು ಬಿತ್ತಿರವಾಗುತ್ತದೆ.

'ಐದು ಮಾನವ ಕುಟ್ಟಿ, ಒಂದು ಮಾನವ ಮಾಡು ಕಂಡೆಯಾ ಮದವಳಿಗೆ ! ಇದು ನಮ್ಮ ಬಾಳು—ಮದವಳಿಗೆ; ಇದು ನಮ್ಮ ವಿಸ್ತಾರ— ಮದವಳಿಗೆ ! ಮದವಳಿದು ನಿಜವುಳಿದ ಬಳಿಕ ಅದು ಸತ್ಯ ಕಾಣಾ–ಕೂಡಲ ಸಂಗಮ ದೇವಾ !'

ಮಾನವನಲ್ಲಿರುವ ಅಯ್ದರ ಭಿನ್ನಭಾವ ಅಳಿಯಬೇಕು. ಪಂಚೇಂದ್ರಿಯ ಪಂಚಕೋಶ ಇತ್ಯಾದಿ ಅಳತೆ ಅಳಿಯಬೇಕು. ಜತೆಗೆ ಮಾನ ಅಭಿಮಾನಗಳು,—ಮದ ಮತ್ಸರಗಳು ಅಳಿಯಬೇಕು. ಭೃತ್ಯಾಚಾರದ ಅಭಿಮಾನವೊಂದೇ ಉಳಿದು ಬೆಳೆದು ಬರಬೇಕು. ತನುಮದ ಅಳಿಯಬೇಕು. ತಾನೆಂಬ ನಿಜವುಳಿಯಬೇಕು. ತನುವೆಲ್ಲ ತತ್ತ್ವಮಯವಾಗಿ ತಾನೊಂದೇ ಎಂಬ ಅಪರೋಕ್ಷಾನುಭವ ಪ್ರಮಾಣವೊಂದೇ ಉಳಿಯುವಂತಾಗಬೇಕು. ಇದು ಭೃತ್ಯ ಭಕ್ತಿಯೋಗದಲ್ಲಿ ಸುಲಭವಾಗಿ ಸಾಧ್ಯವಾಗುತ್ತದೆ. ದೇಹೇಂದ್ರಿಯ ದಾಸನಾಗದೆ ದೇವದಾಸನಾದಾಗ ದೇಹ ಭಾವವೆಲ್ಲಿಯದು ? ದೇಹ ಭಾವವೇ ಇಲ್ಲದಾಗ ಪಂಚಭಾವವೆಲ್ಲಿಯದು ? ಪ್ರಪಂಚ ಭಾವವೆಲ್ಲಿಯದು ? ಒಬ್ಬ ಆಳ್ದನಲ್ಲಿ ಆಳಾಗಿರುವಾಗ ತಾನು ಮಾಡುವುದೆಲ್ಲವೂ ಅಳ್ದನದು ; ತಾನೂ ಆಳ್ದನವನು ; ಎಂಬ ಭಾವವಿರುವಂತೆ ದೇವಭೃತ್ಯನಿಗೂ ದಾಸೋಹಂ ಭಾವಿಗೂ ಅದೇ ಅದಕ್ಕೂ ಅಧಿಕವಾದ ಭಾವವರುತ್ತದೆ.

'ಕುಲಮದವಳಿಯದನ್ನಕ್ಕ ಶರಣನಾಗಲೇಕೆ ? ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ ? ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು ಕಿಂಕಲ ಕಿಂಕಲ ಕಿಂಕಲನಾಗಿರಬೇಕು ! ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು, ಕೂಡಲಸಂಗಮದೇವಾ, ನಿಮ್ಮ ಶರಣರು!'

ದಾಸ್ಯ ಭಕ್ತಿಯಲ್ಲಿ ದಾಸ್ಯಭಾವದಲ್ಲಿ ಕಾಯಮದ ಕುಲಮದಗಳಿಗಿಂಬಿಲ್ಲ. ಇದ್ದರೆ ಶರಣನಾಗಲು ಸಾಧ್ಯವಿಲ್ಲ. ಶರಣನಾಗದೆ ಸಾಮರಸ್ಯವಿಲ್ಲ. ಕಾಯಮದ ಕುಲಮದಗಳನ್ನು ಬಿಟ್ಟಾತನು ಕಾಲವಶನಾಗನು. ಅಂದರೆ ಕಾಲ ಕರ್ಮಗಳಿಗೆ ಅಂಜನು, ಅಳುಕನು. ಕಾಲ ಸನ್ನಿಹಿತವಾದರೆ ಕಾಲಾರಿಯ ಸ್ಮರಣದಲ್ಲಿರುವನು. ಕಾಲಾರಿಯಲ್ಲಿ ಶರಣಾಗಿರುವನು. ಕರ್ಮದ ಕೈಚಳಕಕ್ಕೆ ವಶನಾಗನು. ಕರ್ಮದ ಬಾಯ್ ಟೊಣೆದು ಧರ್ಮನಿರತನಾಗುವುನು. ಹಮ್ಮನು ಹುಟ್ಟಿಸುವ ಯಾವ ಸೊಮ್ಮಿನ ಸ್ನೇಹ ಮೋಹಗಳಿಗೆ ಒಳಗಾಗನು. ಭೃತ್ಯಾಚಾರದಲ್ಲಿ ದಾಸ್ಯಭಾವದಲ್ಲಿ ಇರುವವನು ಭೌತಿಕ ದೃಷ್ಟಿಯಲ್ಲಿ ಕೆಟ್ಟವನಂತೆ ಕಡುಬಡವನಂತೆ ಕಂಡರೂ ಅವನು ಕೆಟ್ಟಿರುವುದಿಲ್ಲ. ಒಂದು ವೇಳೆ ಕೆಟ್ಟಂತೆ ತೋರಿದರೂ ಅದು ಕೇಡಲ್ಲ. ಹಾಲು ಮೊಸರಾದರೂ ಮೇಲಲ್ಲದೆ ಕೀಳಲ್ಲ.

ಏಕೆಂದರೆ ಮುಂದೆ ತುಪ್ಪಾಗುತ್ತದೆ; ಕೆಡದ ಸ್ಥಿತಿಗೇರುತ್ತದೆ. ಆಗು ಹಾಲು ಮೊಸರುಗಳಿಗಿರುವ ಬಡತನ ತುಪ್ಪಕ್ಕಿರುವುದಿಲ್ಲ. ಹಾಗೆ ದಾಸ್ಯಭಕ್ತನು ಆತ್ಮ ಶ್ರೀಮಂತನಾಗಿರುತ್ತಾನೆ. ಅದು ಎಲ್ಲರಿಗೆ ಅರ್ಥವಾಗುವ ಶ್ರೀಮಂತಿಕೆಯಲ್ಲ. ಪ್ರಾಪ್ತವಾಗುವ ಶ್ರೀಮಂತಿಕೆಯಲ್ಲ.

'ಭಕ್ತನಾಯಿತ್ತೆ ಭಕ್ತಿದಾಸೋಹ; ಯುಕ್ತನಾಯಿತ್ತೆ ಯುಕ್ತಿ ದಾಸೋಹ; ಐಕ್ಯನಾಯಿತ್ತೆ ಮಮಕಾರ ದಾಸೋಹ! ಸರ್ವದರಲ್ಲೂ ದಾಸೋಹವೆ ಬೇಕು: ಈ ದಾಸೋಹದ ಅನುವ ಕೂಡಲಸಂಗಯ್ಯ ತಾನೇ ಬಲ್ಲ.'

ನಿಜಭಕ್ತನ ದಾಸೋಹವೇ ದೇವನಿಗೆ ಸರ್ವಸ್ವ. ದಾಸ್ಯಭಕ್ತನು ಬೇರೆ ಜಪ ತಪಗಳನ್ನು ಮಾಡಬೇಕಿಲ್ಲ. ಆತ ಆಡುವ ಮಾತೇ ಮಂತ್ರಜಪ. ಮಾಡುವ ಕಾಯಕವೇ (ಸೇವೆಯೇ) ಶಿವತಪ; ಅಥವಾ ಅರ್ಚನ. ಶಿವನ ಅಥವಾ ಸತ್ಪುರುಷರ ಸೇವೆಗಾಗಿ ಅಡ್ಡಾಡುವುದೇ ಪ್ರದಕ್ಷಿಣೆ. ಆತ ಮಾಡಿದ್ದೆಲ್ಲ ಆತನ ಆರಾಧನೆ. ಇದನರಿತ ಅಂತರ್ಯಾಮಿಯು ತನ್ನ ಭೃತ್ಯಾಚಾರಿಗೆ ಕೃಪೆಗೈಯುತ್ತಾನೆ. ತನಗೆ ದಾಸನಾದವನಿಗೆ ತಾನು ದಾಸನಾಗುತ್ತಾನೆ. ದಾಸ ದಾಸರಿಬ್ಬರ ಸತ್ಯ ಸಖ್ಯ ಬೆಳೆಯುತ್ತದೆ

ಸಖ್ಯಂ : ಪ್ರವೃತ್ತಿಯಲ್ಲಿ ಒಂದು ಎರಡಾದರೆ ನಿವೃತ್ತಿಯಲ್ಲಿ ಎರಡು ಒಂದಾಗುವುದು ಸಹಜ. ಅಂಗ-ಲಿಂಗಗಳೆರಡು (ಜೀವ-ದೇವರಿಬ್ಬರು) ಒಂದಾಗುವ ಹೊಲಬಿನಲ್ಲಿ ಸಖ್ಯಭಾವ ತೀರ ಹತ್ತಿರದ ಅಂದರೆ ಸನ್ನಿಹಿತದ ಧರ್ಮ; ಪ್ರತಿನಿಧಿಸುವ ಮರ್ಮ. ಲಿಂಗ ಲಿಂಗವಾಗಿಯೇ ಇದ್ದಿದ್ದರೆ ಅದರ ಅಸ್ತಿತ್ವವಾಗಲಿ ಸತ್ತೆಯಾಗಲಿ ಅರಿಕೆಯಾಗುತ್ತಿರಲಿಲ್ಲ. ಅದು ಅಂಗವಾಗಿ ಬಂದುದರಿಂದ ಅದನರಿಯಲು ಅದರೊಡನಿರಲು ಅಂತ್ಯದಲ್ಲಿ ಅದರೊಡನೆ ಬೆರೆಯಲು ಅನುಕೂಲವಾಯಿತು.

ಪ್ರತಿಸೃಜನ ಶಕ್ತಿಕಾರ್ಯ. ಪ್ರತಿಸೃಜನವನ್ನು ವಿಸರ್ಜನಗೊಳಿಸುವುದು ಭಕ್ತಿಕಾರ್ಯ. ಅಂಗ (ಜೀವ) ವಾಗುವುದು ಪ್ರತಿಸೃಜನ. ಅಂಗ ಲಿಂಗವಾಗುವುದು ಅಂಗತ್ವವಿಸರ್ಜನ. ಇದಾಗಬೇಕಾದರೆ ಸಖ್ಯಭಕ್ತಿ ಅವಶ್ಯಕ.

ಸಮವಾದ ಸ್ವಭಾವ ಶೀಲಗುಣ ಸ್ನೇಹವುಳ್ಳದೇ ಸಖ್ಯ. 'ಸಮಾನ

ಶೀಲ ವ್ಯಸನೇಷು ಸಖ್ಯಂ' ಎಂಬುದನ್ನು ನೆನೆಯಬೇಕು. ಜೀವನಾಗಿರು ವಾಗ ದೇವನಿಗೆ ತೀರ ಅಸಮನಾಗಿರುತ್ತಾನೆ. ಅದೇ ಸಂಸ್ಕಾರದಿಂದ ಅಂಗ ನಾದಾಗ ಬಹ್ವಂಶಗಳಲ್ಲಿ ಲಿಂಗದೇವನಿಗೆ ಸಮಸ್ವರೂಪನಾಗಿರುತ್ತಾನೆ ; ಸಮ ಧರ್ಮಿಯಾಗಿರುತ್ತಾನೆ. ಭಿನ್ನಭಾವದಿಂದ ಅಭಿನ್ನಭಾವದ ಬೆಂಬಳಿವಿಡಿದಿ ರುತ್ತಾನೆ. ವೈಷಮ್ಯದಿಂದ ಸಾಮ್ಯಕ್ಕೆ ಸಮನಿಸಿರುತ್ತಾನೆ.

ಸಾದೃಸ್ಯ ಅಥವಾ ಸಾಮ್ಯ ಬಾಹ್ಯ ಆಭ್ಯಂತರವೆಂದು ಇಬ್ಬಗೆ. ಬಾಹ್ಯ ಕ್ಕಿಂತ ಅಂತರವೇ ಅತ್ಯಂತ ಅಧಿಕ; ಅತ್ಯಂತಿಕ. ಬಾಹ್ಯಸಖ್ಯದಲ್ಲಿ ವಾಸ್ತ ವಿಕ, ಅವಾಸ್ತವಿಕ ಎಂದು ಇತ್ತೆರ. ವಾಸ್ತವಿಕ ಸಖ್ಯದಲ್ಲಿ ಸಕಾಮ ನಿಷ್ಕಾ ಮವೆಂದು ಎರಡುವಿಧ. ಸಕಾಮ ಸಖ್ಯದಲ್ಲಿ ಸತ್ಸಂಗ ದುಸ್ಸಂಗವೆಂದು. ದ್ವಿಮುಖ. 'ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ : ದೂರ ದುರ್ಜನರ ಸಂಗ ಭಂಗವಯ್ಯಾ. ಸಂಗವೆರಡುಂಟು : ಒಂದು ಬಿಡು, ಒಂದು ಹಿಡಿ ; ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ.

ಸತ್ಸಖ್ಯವೆಂಬ ವೃಕ್ಷಕ್ಕೆ ಶರಣರ ಸಖ್ಯವೇ ಮೂಲ. ಈ ಮೂಲ ವಿಡಿದು ಏರಿದರೆ ಶಿವಸಖ್ಯದ ತುದಿಗೆ ನಿಲುಕಲು ನೆರವಾಗುವುದು ; ಸತ್ಫಲವು ದೊರಕುವುದು. ಇದರಿಂದಾಗಿ ಸಜ್ಜನ ಸಖ್ಯ ಗ್ರಾಹ್ಯ. ದುರ್ಜನ ಸಖ್ಯ ತ್ಯಾಜ್ಯ. ದುರ್ಜನರೊಡನಿದ್ದರೆ ದುಷ್ಟಬುದ್ಧಿಯುಂಟಾಗಿ ಅರ್ಥ ಪ್ರಾಣ ಅಭಿಮಾನಗಳ ಭಂಗವುಂಟಾಗುತ್ತದೆ. ದುಃಖ ದುರವಸ್ಥೆಗಳುಂಟಾಗುತ್ತವೆ. ಅಂತೆಯೇ 'ದುಷ್ಟರನ್ನು ಕಂಡರೆ ದೂರಿರು' ಎಂದಿದೆ ನಾಡ ನುಡಿ.

'ಅರೆ ಭಕ್ತರಾದವರ ನೆರೆ ಬೇಡ, ದೂರ ನುಡಿಯಲು ಬೇಡ. ಕೂಡಲ ಸಂಗನ ಶರಣದಲ್ಲಿ ಅಚ್ಚಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ.'

ದುರ್ಜನರ ಸಹವಾಸ ದೂರುಳಿಯಿತು; ಅರೆ ಭಕ್ತರ ನೆರೆವಾಸ ಬೇಡೆಂದು ಹೇಳುತ್ತಿರುವಾಗ ! ಹತ್ತಿರ ಇರುವ ಮಾತೇನು ? ದಾರಿಯಲ್ಲಿ ಹೋಗುವಾಗಲೂ ಅರೆ ಭಕ್ತರ ಜತೆಗೂಡಿ ಹೋಗಬಾರದು. ಅವರೊಡನೆ ದೂರಾಲೋಚನೆಯನ್ನಾಗಲಿ ನೇಹನುಡಿಗಳನ್ನಾಗಲಿ ಮಾಡಬಾರದು ; ಆಡಬಾರದು. 'ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನುತುಪ್ಪವಹೊಯ್ದರೆ ಸಿಹಿಯಾಗಬಲ್ಲುದೆ, ಕಹಿಯಹುದ ಲ್ಲದೆ ? ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು ಕೂಡಲಸಂಗಮದೇವಾ.'

'ಸಿಂಗದ ನಡು ಮುರಿಯಲಾಸಿಂಗವೇನು ಬಾತೆ? ಸುಂಡಿಲು ಮುರಿದರೆ ಗಜವೇನು ಬಾತೆ? ಸಂಗ್ರಾಮದಲ್ಲಿ ವೀರನುಳಿಯಲಿದೇನು ಬಾತೆ? ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ? ನಿಜತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಕೂಡಲಸಂಗಮದೇವಾ?' ಲಿಂಗಗುಣಧರ್ಮಗಳಿಂದ ಪೂರ್ಣರಾದವರ ಲಿಂಗಸ್ವರೂಪರೇ ಆದವರ ಸಖ್ಯವನ್ನೇ ಅಲ್ಲ ಸೇವಕನಾಗಿಯಾದರೂ ಓಲೈಸುವುದು ಉಚಿತ; ಉತ್ತಮ.

ಸಖ್ಯ ಐಕ್ಯದ ಸಕೀಲ; ತಂತು. ಇದನರಿತು ತುಚ್ಛ ಸಖ್ಯಕ್ಕೆಳಸಬಾರದು. ಎಳಸಿದರೆ ಹೆಂಡದ ಕೊಡದಲ್ಲಿ ಹಾಲು ಹಾಕಿದಂತಾಗುತ್ತದೆ. ಹಾಲನ್ನು ಸ್ವಚ್ಛ ಪಾತ್ರೆಯಲ್ಲಿ ಹಾಕಬೇಕು. ಅಚ್ಚಲಿಂಗೈಕ್ಯದ ಸೌಖ್ಯವನ್ನು ಕಂಡುಂಡವರಲ್ಲಿ ಸಖ್ಯದಿಂದಿರಬೇಕು; ಅಥವಾ ಅವರ ಹತ್ತಿರ ತೊತ್ತಾಗಿಯಾದರೂ ಇರಬೇಕು. ಗಂಧವನ್ನು ಪೂಸಿ ಕೊಳ್ಳಬೇಕಲ್ಲದೆ ಗಂಜಳವನ್ನು ಪೂಸಿಕೊಳ್ಳಬಾರದು.

'ಎಂತಹನಾದರೇನು? ಲಿಂಗ ಮುಟ್ಟದವನೇ ಕೀಳು ಜಾತಿ. ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ; ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ. ಕೂಡಲ ಸಂಗಮ ದೇವನೊಲ್ಲ ಸರ್ವ ಸಂದೇಹಿಗಳ.'

ಸಹವಾಸ ಬಹಿರಂಗವಾದ ಶರೀರದಿಂದಲೇ ಮೊದಲಾಗುತ್ತದೆ. ಅಂತರಂಗ ಅದೆಷ್ಟೇ ಶುದ್ಧವಾಗಿದ್ದರೂ ಬಹಿರಂಗ ಶುದ್ಧಿ ಬೇಕೇ ಬೇಕು. ಬರೀ ಮೈದೊಳೆದರೆ ಶುದ್ಧಿಯಲ್ಲ. ಸತ್ಕುಲ ಬರುವುದಿಲ್ಲ. ನಿತ್ಯ ನೀರಿನಲ್ಲಿರುವ ಮೀನಕ್ಕೆ ಕುಲವುಂಟೆ? ಅಂಗಶುದ್ಧಿಯಾಗಬೇಕಾದರೆ ಲಿಂಗಧಾರಣವಾಗಿರಬೇಕು. ಲಿಂಗದ ಸೋಂಕು ಲಿಂಗದ ಸಖ್ಯ ಸತ್ಕುಲೀನತೆಗೆ ಸಾಧನ. ಲಿಂಗ ಅದೊಂದು ಮಂತ್ರಮಯ ಮಂಗಳಮಯ ಮಹಾ ಪರುಷಮಣಿ. ಅದನ್ನು ಮುಟ್ಟಿದರೆ ಅಂದರೆ ಧರಿಸಿದರೆ ತನುಶುದ್ಧವಾಗುತ್ತದೆ. ಮನದ ಸಂದೇಹ ನಿವೃತ್ತಿಯಾಗುತ್ತದೆ. ದೇವನಿರುವುದೆಲ್ಲಿ ಎಂಬ ಸಂಶಯ ನಿರಸನವಾಗಿ ಹೃದ್ದೇಶದಲ್ಲಿರುವನೆಂಬ ನಿಶ್ಚಯವುಂಟಾಗುತ್ತದೆ.

ಮಾನವ ದೇಹವೊಂದು ದೇಗುಲ. ಈ ದೇಗುಲದಲ್ಲಿ ದೇವದೇವನ ಪ್ರತಿಷ್ಠೆಯಾಗಬೇಡವೆ? ದೇವ ಪೂಜಾರೂಪಕ್ರಿಯೆ ಜರಗಬೇಡವೆ?

ಕ್ರಿಯೆಯೇ ಸದ್ರೂಪ ಶಿವಲಿಂಗ. ದೇವಜ್ಞಾನವೇ ಚಿದ್ರೂಪ ಪ್ರಾಣಲಿಂಗ. ಇವೆರಡನ್ನು ಪ್ರತಿಷ್ಠೆ ಮಾಡುವಾತ ಶ್ರೀಗುರು. ಶ್ರೀಗುರುವಿನಲ್ಲಿ ಸಖ್ಯ ಭಕ್ತಿಯಿಂದಿರಬೇಕು ; ಸೇವೆಯನ್ನು ಸಲ್ಲಿಸಬೇಕು. ಆಗ ಆತನಿಂದ ಕ್ರಿಯಾಜ್ಞಾನಗಳೆರಡೂ ಭಕ್ತನಿಗಳವಟ್ಟು ತನು ಮನಗಳೆರಡೂ ಶುದ್ಧವಾಗಿ ನಿರಾಕುಳವಾಗಿ ಸತ್ಕುಲೀನವೆ ಸಂಭವಿಸುವುದು. ಆ ಭಕ್ತನ ದೇಹ ದೇಗುಲ ವಾಗಿ ಕ್ರಿಯಾಲಿಂಗವಾಗಿ ಜ್ಞಾನ ಜ್ಯೋತಿಯಾಗಿ ಸದ್ಗುಣಗಳೇ ಪುಷ್ಪಗಳಾಗಿ ಸದ್ಭಾವವೇ ಸುವಾಸನೆಯಾಗಿ ಶೋಭಿಸುವುದು. ಇದುವೇ ಸತ್ಕುಲೀನತೆ. 'ಆರಾರ ಸಂಗವೇನೇನ ಮಾಡದಯ್ಯಾ ; ಕೀಡ ಕುಂಡಲಿಗನಾಗದೆ ಅಯ್ಯಾ ? ಚಂದನದ ಸನ್ನಿಧಿಯಲಿ ಪರಿಮಳ ತಾಗಿ ಬೇವು ಬೊಬ್ಬುಳಿ ತರೆಯ ಗಂಧಂಗ ಳಾಗವೆ ? ನಮ್ಮ ಕೂಡಲ ಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳ ವಾಗದಿಹುದೆ ? ಬರೀ ಅರಿತರೆ, ಬರೀ ಆಚರಿಸಿದರೆ ಆಗದು. ಶಿವತ್ವ ವೊದಗದು. ಅರಿವು ಆಚಾರದಲ್ಲಿ, ಆಚಾರ ಅರಿವಿನಲ್ಲಿ ಕರಿಗೊಳ್ಳಬೇಕು. ಅಂದರೆ ಅವೆರಡರ ಸಂಗಸಖ್ಯ ಅಗತ್ಯ. ಅದಾಗಬೇಕಾದರೆ ಶಿವಪಥದಲ್ಲಿ ಸಾಗುವವರ ಸಹವಾಸ ಅಗತ್ಯ. ಶರಣನಾಗಬೇಕಾದರೆ ಲಿಂಗಸಂಗ ಅಗತ್ಯ. ಲಿಂಗವಾಗಬೇಕಾದರೆ ಶ್ರೀಗುರುವಿನ ಸಂಗ ಅನಿವಾರ್ಯ.

'ಹಾವಿನ ಡೊಂಕು ಹುತ್ತಕ್ಕೆ ಸಸಿನ ; ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.'

'ಆ ಶಿವಲಿಂಗ ಪಥವನರಿವಡೆ ಗುರುಪಥವೇ ಮೊದಲು.'

ಈ ಸಾಕ್ಷಿವಚನಗಳಿಂದ ಲಕ್ಷಿಸುವುದೇನೆಂದರೆ ಸಂಗಸಖ್ಯದಲ್ಲಿ ಸಕ್ರಮ ವಾಗಿ ಶರಣರ—ಲಿಂಗದ—ಶ್ರೀಗುರುವಿನ ಸಂಗಸಖ್ಯಗಳೇ ಸರ್ವಶ್ರೇಷ್ಠ. ಶರಣನಲ್ಲಿರುವ ಕೊರತೆ ಲಿಂಗದಲ್ಲಿ, ಲಿಂಗದಲ್ಲಿರುವ ಕೊರತೆ ಶ್ರೀಗುರುವಿನಲ್ಲಿ ತುಂಬಿ ಬರುತ್ತವೆ. 'ಹರ ಮುನಿದರೆ ಗುರು ಕಾಯುವನು.' ಎಂದಿಲ್ಲವೆ ಜನವಾಣಿ ?

ಶಿವಶರಣರ ಡೊಂಕನ್ನೂ ತಿದ್ದುವ ಲಿಂಗ ಸಂಗವನ್ನು ಕರುಣಿಸು ವಾತನು ಶ್ರೀಗುರು. ಶ್ರೀಗುರು ಶಿಷ್ಯಾಂತಃಕರಣಿ ; ಲಿಂಗತ್ವವನ್ನು ಮಾಡುವ ಪರುಷಮಣಿ. ಶಿವಶರಣರೆಂಬ ಸರಿತ್ತುಗಳಿಗೆ ಸಾಗರ ಶಿವಲಿಂಗ.

ಆ ಶಿವಲಿಂಗದ ನಿಜನೆಲೆ ಶ್ರೀಗುರು. ಶ್ರೀಗುರು ಸಖ್ಯರೂಪ ಕಾರುಣ್ಯದಿಂದ ಶಿವಲಿಂಗೈಕ್ಯ. ಶ್ರೀಗುರುವಿನಲ್ಲಿ ಸಖ್ಯಭಾವದಿಂದಿರುವುದೇ ಶಿಷ್ಯತ್ವ; ಶಿವತ್ವ ವ್ರತಾಚಾರಗಳಿಂದ ಪೂಜೆ ಪುರಸ್ಕಾರಗಳಿಂದ ಲಭ್ಯವಾಗದ್ದು ಸಖ್ಯ ಭಕ್ತಿಯಿಂದ ಲಭ್ಯವಾಗುತ್ತದೆ.

'ಪರುಷದ ಹೊರೆಯಲ್ಲಿ ಕಬ್ಬುನವಿರ್ದು ಹೊನ್ನಾಯಿತ್ತು ನೋಡಿರೇ: ಅವ್ವಾ ಚಂಗಳೇ, ನೀನಿದ್ದೇಳು ಕೇರಿಯವರು ಲಿಂಗದ ನೋಂಪಿಯ ನೋಂತರೇ ಹೇಳಾ ? ಕೂಡಲ ಸಂಗಮದೇವಂಗೆ ಚೀಲಾಳನೆಂಬ ಬಾಯಿ ನವನಿಕ್ಕಿದರೇ ಹೇಳಾ ?' 'ಸಿರಿಯಾಳನ ಸಾರ್ದ ನರರೆಲ್ಲ ಸುರರಾಗರೇ ?'

ಸಖ್ಯ ಭಕ್ತಿಯ ಮಹಿಮೆಯಿದು. ಚಂಗಳೆಯಿದ್ದ ಕೇರಿ ಊರು ಪಾವನವಾದವು. ಚಂಗಳೆಯ ಊರಿನವರು ಯಾವ ವ್ರತನಿಯಮಗಳನ್ನು ಆಚರಿಸಲಿಲ್ಲ. ಚಂಗಳೆಯ ಸಂಗಮಾತ್ರದಿಂದ ಮಂಗಳಾತ್ಮರಾದರು. ಅಂತೆಯೇ ಚಂಗಳೆಯ ಪತಿಯಾದ ಸಿರಿಯಾಳನ ಸಂಗಸಖ್ಯದಲ್ಲಿರುವವರೆಲ್ಲರೂ ಅಮರರಾದರು. ತಮ್ಮ ಸತ್ಸಂಗತಿಯ ಸಿರಿಯಿಂದ ಸಖ್ಯ ಭಕ್ತಿಯ ಪ್ರಭಾವದಿಂದ ಸಾರ್ವಜನಿಕರನ್ನು ಮುಕ್ತಿಗೊಯ್ದ ಚಂಗಳೆ ಸಿರಿಯಾಳರ ಕೀರ್ತಿ ಮಹತ್ವಪೂರ್ಣವಾದುದು. ಬಸವಣ್ಣನು ಬಣ್ಣಿಸಿದ (ಕೀರ್ತಿಸಿದ) ಅವರಿಬ್ಬರ ಹೆಸರುಗಳು ಮಂತ್ರದಂತೆ ಮಂಗಳ ಪ್ರಸಾದವಾದವು. ಸಖ್ಯ ಭಕ್ತಿಯಿಂದ ಮುಕ್ತರಾದವರಲ್ಲಿ ಅವರಿಬ್ಬರು ಆದರ್ಶರು; ಅದರಣೀಯರು.

ದುಷ್ಟ ದುಷ್ಟರ ಸಖ್ಯ ಕಪ್ಪು ಮೊಗಕ್ಕೆ ಕರಿ ಬಳಿದಂತೆ, ಮತ್ತು ಗಾಯದ ಮೇಲೆ ಕಾಯ್ದ ಕಂಬಿಯ ಕೀಸಿದಂತೆ. ದುಷ್ಟನೊಡನೆ ಶಿಷ್ಟನ ಸಹವಾಸ ನಂಜಿನೊಳಗೆ ಹಾಲ ಬೆರಸಿದಂತೆ, ಮತ್ತು ಮಣ್ಣಿನೊಳಗೆ ಅನ್ನ ಬೆರತಂತೆ. ಸರಿಕರ ಸ್ನೇಹ ನೀರೊಳಗೆ ನೀರು ಬೆರೆದಂತೆ, ಮತ್ತು ಎಳ್ಳಿಲ್ಲದೆ ಗಾಣವನಾಡಿದಂತೆ. ಶಿಷ್ಟ ಶಿಷ್ಟರ ಸಖ್ಯ ಹಾಲೊಳಗೆ ಹಾಲು, ಜೇನೊಳಗೆ ಜೇನು ಬೆರೆತಂತೆ. ಗುರು ಶಿಷ್ಯರ ಸಖ್ಯ ಜೇನಿನೊಳಗೆ ಹಾಲು, ಹಾಲೊಳಗೆ ಜೇನು ಬೆರೆದಂತೆ.

'ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಕಲಾರೆನು.

ಶಿವಧೋ, ಶಿವಧೋ, ಕಂಗಳಶ್ರುಗಳಲ್ಲಿ ಮುಂದುಗಾಣೆನು; ಲಿಂಗಸಂಗಿಗಳ ನಗಲಿ ನಾನೆಂತು ಬದುಕುವೆ ಕೂಡಲ ಸಂಗಮದೇವಾ ? ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ; ಗಣ ತಿಂಥಿಣಿಯೊಳಗಿರಿಸೆನ್ನನು—ಲಿಂಗವೇ, ಶಿವ— ಶಿವಾ, ಕೂಡಲ ಸಂಗಮದೇವಾ ಸೆರಗೊಡ್ಡಿ ಬೇಡುವೆನು.'

ಇಲ್ಲಿಗೆ ಬಂದ ಬಗೆಯನರಿತರೆ ಆಗ ಅರಿವಾಗುವುದು ಸತ್ಸಂಗದ ಹಿರಿಮೆ; ಒಳ್ಮೆ. ಬಾಳಿನ ಜೀವಾಳವದು. ಸತ್ಸಂಗದಿಂದ ಬಾಳು ತಿಳಿಯಾಗುತ್ತದೆ; ತೊಳಗುತ್ತದೆ. ಸತ್ಸಂಗವೇ ನಿಸ್ಸಂಗ. ನಿಸ್ಸಂಗದಿಂದ ನಿರ್ಮೋಹ; ನಿರ್ಮೋಹದಿಂದ ನಿಶ್ಚಲತೆ; ನಿಶ್ಚಲತೆಯೇ ಜೀವನ್ಮುಕ್ತಿ. ಇದನುಂಟು ಮಾಡುವ ಲಿಂಗಾಂಗಿಗಳನ್ನು ಅಗಲಿ ದೇವಾತ್ಮರನ್ನು ಬಿಟ್ಟು ಬಾಳುವುದೊಂದು ಬಾಳಲ್ಲ. ಮಾನವನೆಂಬ ಮತ್ಸ್ಯಕ್ಕೆ ಸಖ್ಯ ಭಕ್ತಿಯೇ ಸಲಿಲ. ಅದಿಲ್ಲದೆ ಮಾನವತೆ ಮುಂದುವರಿಯುವುದಿಲ್ಲ. ಹುತ್ತೊಂದನ್ನು ಆಶ್ರಯಿಸಿರುವ ಮನಕ್ಕೆ ಮಂಗಳಾತ್ಮರ ಆಶ್ರಯ ಸಿಕ್ಕರೆ ಅದೇ ಆಕಾರವಾಗಿ ಅಚ್ಚಳಿಯದ ಆನಂದವನ್ನು ಅನುಭವಿಸುತ್ತದೆ. ಇಲ್ಲವಾದರೆ ಕಜ್ಜಲದಲ್ಲಿ ಬಿದ್ದು ಮೈಮನಗಳೆರಡೂ ಮಲಿನವಾಗುತ್ತವೆ. ಮಹಾದುಃಖವುಂಟಾಗುತ್ತದೆ; ಮಹಾ ನಷ್ಟವೊದಗುತ್ತದೆ. ಇಷ್ಟಾಗಿ ಇಲ್ಲಿ ಬದುಕುವುದೇತಕ್ಕೆ ? ಯಾವ ಸುಖಕ್ಕೆ ? ಯಾವ ಸೌಭಾಗ್ಯಕ್ಕೆ ? ಸುಖ ಸುಜ್ಞಾನಾನುಭಾವಗಳಿಗೆ ಕಾರಣವಾದ ಸಖ್ಯ ಭಕ್ತಿಗಾಗಿ ಮನ ಮಿಡಿಯುತ್ತಿರಬೇಕು. ದಿನ ನಿಮಿಷಗಳನ್ನು ಎಣಿಸುತ್ತಿರಬೇಕು. ಸತ್ಸಂಗವಿಲ್ಲದೆ ಕಾಲ ಕಳೆದರೆ ನಷ್ಟವಾರದು ? ಕಾಲಕ್ಕೆ ನಷ್ಟವಿಲ್ಲ; ಕಾಯಕ್ಕೆ ಕಷ್ಟವಿಲ್ಲ. ನಷ್ಟ—ಕಷ್ಟಗಳು ತನಗೆ !

'ಕಂಡರೆ ಮನೋಹರವಯ್ಯಾ; ಕಾಣದಿದ್ದರೆ ಅವಸ್ಥೆ ! ನೋಡಯ್ಯಾ ಹಗಲಿರುಳಹುದು, ಇರುಳು ಹಗಲಹುದು; ಎಂತಯ್ಯಾ ? ಆಳಾಡಿ ಕಳೆವೆನು ? ಒಂದು ಜುಗ ಮೇಲೆ ಕೆಡೆದಂತೆ ! ಕೂಡಲ ಸಂಗನ ಶರಣರ ನಗಲುವ ಧಾವತಿಯಿಂದ ಮರಣವೇ ಲೇಸು ಕಂಡಯ್ಯಾ !' 'ಜಕ್ಕನೆ ಜರಿದೆನು—ನೋಡಯ್ಯಾ ! ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು—ಕೂಡಲ ಸಂಗಮದೇವಾ, ನಿಮ್ಮ ಶರಣನಗಲಿದ ಕಾರಣ !'

ಸಜ್ಜನ ಸಖ್ಯದ ಸವಿಗಂಡರೆ ಬಿಡಲು ಮನವಾಗುವುದಿಲ್ಲ. ಸಜ್ಜನಿಕೆಯ ಸವಿ ಅಂತಹದು. ಸಜ್ಜನಿಕೆಯ ಸೌಂದರ್ಯದ ಮುಂದೆ ಸೌಂದರ್ಯವಿಲ್ಲ. ಅದನ್ನು ನೋಡುವ ಕಣ್ಣಿಗೆ ಸೋಲಿಲ್ಲ. ಕಾಣುವ ಕುತೂಹಲ ಕಮ್ಮಿಯಾಗುವುದಿಲ್ಲ. ಕಂಡಷ್ಟೂ ಕಾಣಬೇಕೆನಿಸುತ್ತದೆ. ಆ ಕಣ್ಣಿಗೆ ಕರುಳಿಲ್ಲ. ಕಣ್ಮರೆಯಾದರೆ ಪ್ರಾಣವಿರುವುದಿಲ್ಲ.

ಸಖ್ಯಭಕ್ತಿಯಿಂದ ಸಮರಸವಾಗಿ ಒಂದಾಗಿ ಇರುವುದು ಲೇಸಲ್ಲದೆ ಸಖ್ಯಭಕ್ತಿಯೇ ಅಳವಡದೆ ಒಬ್ಬಂಟಿಗನಾಗಿರುವುದು ಲೇಸಲ್ಲ. ಕಟ್ಟಿಗೆಯಾಗಲಿ, ಕಪ್ಪುರದಾಗಲಿ ಅಗ್ನಿಯ ಸಂಗವನ್ನು ಮಾಡಿ ಏಕವಾಗಿರಬೇಕಲ್ಲದೆ ಅಗ್ನಿಸಂಗವಿಲ್ಲದೆ ಒಂದಾಗಿದ್ದರೆ ಅಂದರೆ ಕಾಷ್ಠವೇ ಆಗಿದ್ದರೆ ಕರ್ಪೂರವೇ ಆಗಿದ್ದರೆ ಸುಖವಿಲ್ಲ. ಉರಿಸೋಂಕದ ಮುನ್ನಿನ ಏಕತ್ವಕ್ಕೂ ಉರಿ ಸೋಂಕಿ ಉರಿಯೇ ಆಗಿರುವ ಏಕತ್ವಕ್ಕೂ ಅದೆಷ್ಟು ವ್ಯತ್ಯಾಸ ?

ಸದ್ಭಕ್ತನಿಗೆ ಸಜ್ಜನ ಸಖ್ಯವೇ ಜೀವನ ಜೀವಾಳ. ಸತ್ಸಹವಾಸ ಸಿಕ್ಕರೆ ಕುರುಡನಿಗೆ ಕಣ್ಣು ಬಂದಂತೆ, ಬಡವನಿಗೆ ಭಾಗ್ಯ ಬಂದಂತೆ, ಹಸಿದವನಿಗೆ ಹಾಲೋಗರವಿಕ್ಕಿದಂತೆ ಆಗುತ್ತದೆ. ದರ್ಶನವೇ ಇಷ್ಟನ್ನು ಮಾಡುವಾಗ ಅವರ ಕಾರುಣ್ಯಪ್ರಸಾದ ಸಿಕ್ಕರಂತೂ 'ಸಾಸವೆಯ ಮೇಲೆ ಸಾಗರವರಿದಂತಾಯಿತ್ತಯ್ಯ ; ಆನಂದದಿಂದ ನಲಿನಲಿದಾಡುವೆ, ಆನಂದದಿಂದ ಕುಣಿಕುಣಿದಾಡುವೆ: ಕೂಡಲಸಂಗನ ಶರಣರು ಬಂದರೆ ಉಬ್ಬಿಕೊಬ್ಬಿ ಹರುಷದೊಳೋಲಾಡುವೆ.' ಎಂದಂತಾಗುತ್ತದೆ. ಸಖ್ಯಭಕ್ತಿಗಿದು ಕುರುಹು. 'ಮನ ಮನ ಬೆರಸಿದಲ್ಲಿ ತನು ಕರುಗದಿದ್ದರೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದರೆ, ಕಂಡಾಗಳ ಅಶ್ರುಜಲಂಗಳು ಸುರಿಯದಿದ್ದರೆ, ನುಡಿವಲ್ಲಿ ಗದ್ಗದಗಳು ಹೊರಹೊಮ್ಮದಿದ್ದರೆ-ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ —ಎನ್ನಲ್ಲಿಲ್ಲವಾಗಿ ಆನುಡಂಭಕ ಕಾಣಿರೇ !'

ಮಾವ ಜೀವನದಲ್ಲಿ ಪ್ರೇಮ ಪ್ರವಹಿಸುವುದು ದ್ವಿಮುಖವಾಗಿ ! ಒಮ್ಮೆ ವಿಷಯದಲ್ಲಿ, ಇನ್ನೊಮ್ಮೆ ವಿರತಿಯಲ್ಲಿ ! ಮೊದಲಿನದು ರಕ್ತಿ ; ಎರಡನೆಯದು ಭಕ್ತಿ. ಒಂದು ಕಲುಷಿತ ಇನ್ನೊಂದು ಕಾಂತಿಯುತ. ಒಂದು ಕ್ಷಣವಿರಸ. ಇನ್ನೊಂದು ಸತ್ಯರಸ. ಒಂದು ಅಧೋಮುಖಿ ; ಇನ್ನೊಂದು ಊರ್ಧ್ವಮುಖಿ.

ಸತ್ಯಸಖ್ಯದಲ್ಲಿ ಮನಕ್ಕೆ ಮನ, ಭಾವಕ್ಕೆ ಭಾವ ಬೆರೆದಾಗ ಉಂಟಾಗುವ ತನು ಚಿಹ್ನೆಗಳನ್ನು ಕಳೆಕುರುಹುಗಳನ್ನು ಈ ವಚನ ಶುಚಿರುಚಿಯಾಗಿ ಬಣ್ಣಿಸಿದೆ. ಸಮರತಿ, ಸಮಕಳೆ ಸಮಭಾವಗಳು ಸಖ್ಯಭಕ್ತಿಯ ಸತ್ಪ್ರಾಣ, ಸಚ್ಚೇತನ. ಸಮರತಿಯ ಸುಖಸ್ಪರ್ಶವು ರೋಮ ರೋಮಂಗಳನ್ನು ಜಾಗ್ರತಗೊಳಿಸುತ್ತದೆ, ಉದಗ್ರಗೊಳಿಸುತ್ತದೆ; ಉತ್ಸಾಹ ಉಕ್ಕುವಂತೆ ಮಾಡುತ್ತದೆ. ಹರ್ಷಾಶ್ರು ಉತ್ಪನ್ನವಾಗಿ ನೇತ್ರಗಳು ಉತ್ಫುಲ್ಲವಾಗುತ್ತವೆ. ನುಡಿಯಲ್ಲಿ ನಡುಕ (ಕಂಪ) ನಡೆ ತರುತ್ತದೆ. ನೈಜಭಕ್ತಿಗಿದು ನಿದರ್ಶನ. 'ಹಿಡಿವೆಡೆಯನೆ ಕಾಸಿ, ಹಿಡಿದು ಕೈ ಬೆಯ, ಮಿಡುಮಿಡನೆ ಮಿಡುಕುವ ಮರುಳ ಮಾನವನೇ, ಬಡವರೆಂದೆನಬೇಡಾ ಲಾಂಛನಧಾರಿಯನು: ಕಡುಸ್ನೇಹದಿಂದವರ ಪೂಜೆಯ ಮಾಡುವ್ದು, ನಿಜವಡಗಿದ ರೂಪು, ನಿರ್ವಯಲಸ್ಥಾನ. ನಡೆ ಲಿಂಗಸಂಗದಲಿ; ಕೂಡು ಕೂಡಲ ಸಂಗನಲಿ.'

ಮನದಲ್ಲಿ ವಿಕಲ್ಪವುಂಟಾಗಬಾರದು. ವಿಕಲ್ಪದಿಂದ ವ್ಯಗ್ರತೆಯುಂಟಾಗುವುದು. ಆಗ ತನ್ನ ಮನವೆ ತನಗೆ ವ್ಯಥೆಯನ್ನುಂಟು ಮಾಡುವುದು. ಹಿಡಿವ ಹಿಡಿಯನ್ನು ಕಾಯ್ಸಿ ಕೆಂಡವಾಗಿಸಿ ಹಿಡಿದ ಸುಡದಿಹುದೆ? ಕಾಯ್ಸಿ ಹಿಡಿಯುವವರು ಹುಚ್ಚರಲ್ಲವೆ ? ಶ್ರೀಗುರುವಿನ ವನ ಬಡವಾದುದೆಂದು ಭಾವಿಸಬಾರದು. ಅವರ ಮನ ಷೋಡಶಕಳೆಯ ಶಶಿ ಅವರನ್ನು ಆರಾಧಿಸುವ ಶಿಷ್ಯನ ಮನ ಶಶಿಕಾಂತ ಶಿಲೆಯಾಗಿರಬೇಕು. ಅಂದರೆ ಸಮಧರ್ಮ—ಸಮಸ್ನೇಹದಿಂದ ಆರಾಧಿಸಬೇಕು. ಆಗ ಮನ ಮನ ಕರಗಿ ಏಕರಸವಾಗುತ್ತವೆ. ಆ ಸ್ಥಿತಿಯೇ ಸಖ್ಯ ಭಕ್ತಿ. ಅದೇ ನಿಜವಡಗಿದ ರೂಪು. ಅದೇ ನಿರವಯಲ ಸ್ಥಾನ. ಅದಕ್ಕಿಂತ ಬೇರೆ ಲಿಂಗಾಂಗಸಂಗವಿಲ್ಲ. ಅದೇ ಅವಿರಳ ಮುಕ್ತಿ. 'ಚಂದ್ರಶೈತ್ಯದಲು ಬೆಳೆದ ಕಾಯಕ್ಕೆ; ಬೆಳದಿಂಗಳ ಬಯಸುವ ಹಂಗೇಕಯ್ಯಾ ? ಶರಣರ ಸಂಗದಲಿದ್ದರ್ ಶಿವನ ಬೇಡುವ ಹಂಗೇಕಯ್ಯಾ ? ಕೂಡಲ ಸಂಗಯ್ಯನ ಶರಣರು ಬಂದು ತವವಸೆಂದರೆ ಸಾಲದೆ ಅಯ್ಯಾ ?' ತಂಗದಿರನ ತಂಪಿನಲ್ಲಿಯೇ ಮೈಬೆಳದಿರುವಾಗ ಆತನ ಬೆಳದಿಂಗಳ ಬಯಕೆಯೇಕೆ ? ಸಕ್ಕರೆಯೇ ತಾನಾಗಿ ಸವಿಯ ಆಶಿಸುವುದೇ ?

ಶ್ರೀಗುರುವಿನ ಸತ್ಸಂಗವೇ ಸಾಕ್ಷಾತ್ ತನುತ್ರಯಕ್ಕೆ ತವನಿಧಿಯಂತೆ ದೊರಕಿರುವಾಗ ಕೇವಲ ಶಿವನ ಕಾಂಕ್ಷೆಯೇಕೆ? ಸಕಲ ನಿಷ್ಕಲವೆರಡೂ ದೊರಕಿರುವಾಗ ನಿಷ್ಕಲವೊಂದನ್ನೇ ನಿರೀಕ್ಷಿಸುವುದು ಒಂದು ಬಗೆಯಲ್ಲಿ ಒಂದರ ಕೊರತೆ ತಾನೆ? ಶ್ರೀಗುರು ಶಿಷ್ಯನು ತನ್ನವನೆಂದೆನ್ನುವಂತೆ ತನ್ನಲ್ಲಿ ಸಖ್ಯಭಕ್ತಿ ಭಾವೋದಯವಾದರೆ ಅದೇ ಪೂರ್ಣಾಭ್ಯುದಯ; ಅದೇ ಪೂರ್ಣಾದಾಯ.

ಸಖ್ಯ ಭಕ್ತನು ಶಿಷ್ಯರಿಗೆ ಸನ್ನಿಹಿತನಾಗಿರಬೇಕು. ದುಷ್ಟರಿಗೆ ದೂರನಾಗಿರಬೇಕು. ನಾಡಿಗರು ಆಡಿಕೊಂಡರೂ ಚಿಂತೆಯಿಲ್ಲ; ದಿಟವಾಗಿಯೂ ದೂರಿರಬೇಕು. ಏಕೆಂದರೆ;

'ಒಂದಕ್ಕೊಂಬತ್ತ ನುಡಿದು' ಕಣ್ಣ ಕೆಂಚನೆ ಮಾಡಿ, ಗಂಡುಗೆದರಿ ಮುಡುಹಿಕ್ಕಿ ಕೆಲೆವವರ ಕಂಡಡಂಜುವೆ, ಓಸರಿಸುವೆ! ಓಡಿದೆನೆಂಬ ಭಂಗವಾದಡಾಗಲಿ: ನಮ್ಮ ಕೂಡಲ ಸಂಗನ ಶರಣರ ಅನುಭಾವವಿಲ್ಲದವರ ಹೊಲಮೇರೆಯ ಹೊಂದೆ, ಹೊಲನಬಿಟ್ಟೋಡುವೆ!'

ಶಾಂತಿ ಸಂಯಮ ಸೈರಣೆಗಳಿಲ್ಲದವರ ಸಹವಾಸ ಎಂದಿಗೂ ಮಾಡಬಾರದು; ಅವರೊಡನೆ ಪ್ರತಿಭಟಿಸಿ ನಿಲ್ಲಲುಬಾರದು. ಪ್ರತಿಭಟಿಸಿ ನಿಂತರೆ ಪ್ರಯೋಜನವಿಲ್ಲ. ಶಾಂತಿಭಂಗ ಸನ್ಮತಿಭಂಗ ಸತ್ಕೀರ್ತಿಭಂಗ. ಅಂಥವರಲ್ಲಿ ಸೋಲುವುದೇ ಲೇಸು. ಅವರಿಂದ ದೂರಿರುವುದೇ ಸೊಗಸು. ಅವನಲ್ಲಿ ಅದಾವ ಆತ್ಮಾನುಭವವಿದೆ? ಮುನಿಸಿದ್ದರೂ ಅನುಭವವಾದರೂ ಇದ್ದರೆ ಆತನ ಸನಿಹದಲ್ಲಿದ್ದು ಆತನನ್ನು ಸ್ನೇಹದಿಂದ ಸೇವಿಸಬಹುದು. ಸೇವೆಯಿಂದ ಶಿವಾನುಭವ ಸಂಪ್ರಾಪ್ತಿಯಾದರೂ ಆದೀತೆಂಬ ಆತ್ಯಂತಿಕ ಆಕ್ಷಾಂಕ್ಷೆಯಿರುತ್ತದೆ. ಅದಿಲ್ಲದ ಬಳಿಕ ಕೇವಲ ಕೋಪಿಯ ಸಹವಾಸವನ್ನು ಸಾವಿರ ಪಾಲಿಗೂ ಮಾಡಬಾರದು.

'ಒಡೆಯರು ಬಂದರೆ ಗುಡಿತೋರಣವ ಕಟ್ಟಿ; ನಂಟರು ಬಂದರೆ ಸಮಯವಿಲ್ಲೆನ್ನಿ! ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊರಗಾದಂದು? ಸಮಯಾಚಾರಕೊಳಗಾದಂದು? ಪರುಷ ಮುಟ್ಟಲು ಕಬ್ಬುಣ ಸುವರ್ಣವಾಯಿತ್ತು; ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ?'

ಪಾಪಿಗಳ ಕೋಪಿಗಳ ಸಖ್ಯವು ಹೇಗೆ ತ್ಯಾಜ್ಯವೋ ಹಾಗೆ ನಂಟರ ನೇಹವೂ ತ್ಯಾಜ್ಯ. ಪೂರ್ವಾಶ್ರಯದ ಹಂಗು ವರ್ಜ್ಯ. ಕಬ್ಬಿನ ಚಿನ್ನಾದ ಬಳಿಕ ಕಬ್ಬಿನದಲ್ಲಿ ಮರಳಿ ಬೆರಸಿರಿಸಬಾರದು ; ಬೆರೆದಿರದು ನೀರಳಿದು ಮುತ್ತಾದ ಬಳಿಕ ಮತ್ತು ನೀರಾಗದು. ಸಮಯಾಚಾರಕ್ಕೆ ಪೂರ್ವದಲ್ಲಿರುವ ಬಂಧುತ್ವ ಪ್ರಾಕೃತಿಕವಾದುದು ; ಶಿವಾಚಾರಕ್ಕೆ ಬಂದ ಬಳಿಕ ಆತ್ಮಿಕವಾದುದು. ಇವೆರಡು ಇರುಳು ಹಗಲುಗಳಿದ್ದಂತೆ ! ಕೂಡಿರವು. ಇದರಿಂದಾಗಿ ಪೂರ್ವ ಸಂಬಂಧಿಗಳ ಸಖ್ಯ ತರವಲ್ಲ. 'ಅಣ್ಣ ತಮ್ಮ ಹೆತ್ತಣ್ಣ ಗೋತ್ರವಾದರೇನು, ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ. ನಂಟು ಭಕ್ತಿ ನಾಯಕನರಕ, ಕೂಡಲಸಂಗಮದೇವಾ !'

ಸಖ್ಯದ ವಿಚಾರ ಇನ್ನೂ ಸೂಕ್ಷ್ಮವಿದೆ. ಪಾಪಿಗಳು ಕೋಪಿಗಳು ಪೂರ್ವಾಶ್ರಮದವರು ಹೇಗೆ ಸಖ್ಯಕ್ಕೆ ವರ್ಜಿತರೋ ಹಾಗೆ ಲಿಂಗಭಕ್ತರಾಗಿದ್ದರೂ ಗುರುಭಕ್ತರಾಗದೆ ವಿನಯೋಕ್ತಿಯಿಲ್ಲದೆ ಇರುವವರ ಸಖ್ಯವೂ ಸರಿಯಲ್ಲ ; ಸಂದರ್ಶನವೂ ಸಹ ಸೂಕ್ತವಲ್ಲ.

'ಒಡೆಯರಾಡುವ ಮಾತ ಕಡೆ ಪರಿಯಂತರ ಕೇಳಿ, ಇದಿರು ಹೋಗಿ ಕಿಂಕರನಾಗಿ ಬಿನ್ನಹವ ಮಾಡುವ ಸದ್ಭಕ್ತರ ತೋರಯ್ಯಾ ! ಒಡೆಯರಾಡುವ ಮಾತಕಂಡು ಕರದಲ್ಲಿ ಕೆಡೆಮೆಟ್ಟಿ ಬಾಯಿ ಘನವೆಂದು ಆಡುವವನ ತೋರದಿರಯ್ಯಾ, ಅವನ ಸಂಗದಲ್ಲಿರಿಸದಿರಯ್ಯಾ, ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ ; ಕೂಡಲಸಂಗಮದೇವಯ್ಯಾ ನಿಮ್ಮ ಬೇಡುವುದೊಂದೇ ವರವು.'

ಮಾತು ಶುಚಿಯಿಲ್ಲದವನ ಮೈ ಶುಚಿಯಿಲ್ಲದವನ ಸಹವಾಸದಿಂದ ದೂರಿರಬೇಕು. ದೇವರೊಲಿದು ಮುಕ್ತಿಕೊಟ್ಟರೂ ಬೇಡ ; ಮೊದಲು ಇಂಥವರ ಸಂಗವನ್ನು ತಪ್ಪಿಸಬೇಕೆಂದು ಕೇಳಬೇಕಾದರೆ ಕಿಂಕರಭಕ್ತಿಗೆ ಭಕ್ತಿ ಭಯಕ್ಕೆ ಅದೆಷ್ಟು ಪ್ರಾಶಸ್ತ್ಯವಿದೆಯೆಂಬುದು ವ್ಯಕ್ತವಾಗುತ್ತದೆ. 'ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡರೆ ನಿಮ್ಮಾಣೆ ! ನಿಮ್ಮ ಪುರಾತರಾಣೆ ! ತಲೆದಂಡ ! ತಲೆದಂಡ ! ! ಕೂಡಲಸಂಗಮದೇವಾ, ಭಕ್ತರ ಕುಲವನರಿಸಿದರೆ ನಿಮ್ಮ ರಾಣಿವಾಸದಾಣೆ !'

ದೇವ (ಲಿಂಗ) ಭಕ್ತರು ಯಾರೇ ಬರಲಿ ಅವರನ್ನು ಮನ್ನಿಸಬೇಕು. ಸಖ್ಯ ಭಕ್ತಿಯಿಂದ ಸೇವಿಸಬೇಕು. ಹೀಗಿಲ್ಲದೆ ಅವರ ಉದ್ಯೋಗವೇನೋ

ಆ ಉದ್ಯಮ ಜನ್ಯ ಕುಲವೇನೋ ಎಂದು ಸಂದೇಹ—ಸಂಕೋಚಗಳಿಗಿಂಬು ಗೊಡಬಾರದು. ದೈವಗುಣ—ದೈವ ಸಖ್ಯಗಳಿಗೆ ಅವಕಾಶವಿದ್ದರಾಯಿತು. ಉದ್ಯಮ ಕುಲಗಳು ಮುಖ್ಯವಲ್ಲ. ಉತ್ತಮಗುಣ ಮುಖ್ಯ. ಲಿಂಗ ಸಂಗ ಮುಖ್ಯ. ಭೂತಿ ರುದ್ರಾಕ್ಷ ಧಾರಣ ಮುಖ್ಯ. ಅಷ್ಟಾವರಣಗಳೊಡನೆ ಸಂಗವಿದ್ದು ಅವುಗಳಲ್ಲಿ ಆಸಕ್ತಿ ಭಕ್ತಿಯಿದ್ದರೆ ಅವರೇ ಶಿವಸ್ವರೂಪರು. ಅಂಥವರ ಸಂಗಲೇಸು. ಅವರ ಸಹವಾಸದಿಂದ ಸದ್ಗತಿಯುಂಟಾಗುತ್ತದೆ. ಆದರಲ್ಲಿದೆ ಅಂತಹ ಶಕ್ತಿ. ಕ್ಷೇತ್ರಗಳ ಸಹವಾಸವೇ ಪುಣ್ಯಪ್ರದವಾಗಿರು ವಾಗ ಪಾತ್ರತೆಯುಳ್ಳ ಪುಣ್ಯಾತ್ಮರ ಸಹವಾಸದಿಂದ ಪುಣ್ಯಪ್ರಾಪ್ತಿಯಾಗದೆ? 'ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು.' ಹೀಗಿರುವಾಗ ಮಹಾ ಮೇರುವಿನಂತಿರುವ ಮಹಾಗುರುವಿನ ಸನ್ನಿಧಿಯ ಸಹವಾಸದಲ್ಲಿದ್ದರೆ ಕರ್ಮನಿರ್ಮೂಳವಾಗದಿರದೆ? ಜನ್ಮಜಾಡ್ಯ ಹರಿಯದಿಪ್ಪುದೆ? 'ಭವರೋಗ ವೈದ್ಯನೆಂದು ನಾ ನಿಮ್ಮ ಮರೆ ಹೊಕ್ಕೆ, ಭಕ್ತಿದಾಯಕ, ನೀ ಕರುಣಿಸು, ಲಿಂಗತಂದೇ!' ಎಂದು ಗುರುವಿನಲ್ಲಿ ಮರೆಹೊಕ್ಕರೆ ಮಾಂಸಪಿಂಡ ಮಂತ್ರ ಪಿಂಡವಾಗದೆ? ಲಿಂಗಕ್ಕೂ ತಂದೆ ಗುರುದೇವ. ಕರುಣಾಮೂರ್ತಿ ಗುರು ದೇವ. ಭಕ್ತಿ ಪ್ರದಾಯಕ ಗುರುದೇವ. ಭವರೋಗನಿವಾರಕ ಗುರುದೇವ. ಅಂಥವನ ಮರೆ ಹೋಗುವುದೆ ಬಾಳ್ಗೆಲುವಿಗೆ ಮೂಲ; ಬಗೆ ಚೆಲುವಿಗೆ ಮೂಲ. 'ಸುರರು ಕಿನ್ನರರು ಕಿಂಪುರುಷರೆಂಬವರನಾರು ಬಲ್ಲರು? ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯಾ; ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯಾ. ಕೂಡಲ ಸಂಗಮದೇವಾ, ಅನ್ಯವೆಂಬುದನರಿಯೆಸಯ್ಯಾ.' ಗುರುವಿನ ಮೇಲೆ, ಕರುಣಿಸಿದ ಲಿಂಗದ ಮೇಲೆ ಚಿತ್ತ ಅಚ್ಚೊತ್ತಿರಬೇಕಲ್ಲದೆ ಕಂಡ ಕಂಡವರ ಮೇಲೆ ಹರಿಯಬಾರದು, ಸುರ ಕಿನ್ನರಾದಿಗಳ ಮೇಲೆಯೂ ಮನಸ್ಸನ್ನಿಡಬಾರದು. ಅವರು ಸ್ವರ್ಗೀಯರಾದರೂ ಭವಿಗಳು. ಅಂಥವರ ಸಂಗ ತರವಲ್ಲ. 'ಭಕ್ತನೆಂತೆಂಬೆನಯ್ಯಾ ಭವಿಸಂಗ ಬಿಡದನ್ನಕ್ಕ?' ಲಿಂಗಾಂಗಿಗಳಾದವರು ಯಾರೇ ಇರಲಿ ಅವರ ಸಂಗ ಸರಿಯಲ್ಲ. ಅದೇ ಲಿಂಗಾನು ಭಾವಿಗಳ ಸಂಗವನ್ನು ಬಿಟ್ಟಿರುವುದು ತರವಲ್ಲ. 'ಕಾಮಸಂಗ ವಳಿದು ಅನುಭಾವ ಸಂಗದಲುಳಿದವರ ಅಗಲಲಾರೆನು. ಶಿವಂಗೆ ಮಿಗೆ

ಯೊಲಿದವರನು ನಾನಗಲಲಾರೆನು ಕಾಣಾ ಕೂಡಲಸಂಗಮದೇವಾ.'

ಹೃದಯಾರೆ ಅನುಭಾವಿಗಳಲ್ಲಿ ಅತ್ಯಂತ ಅನುರಕ್ತಿಯಿರಬೇಕು. 'ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದರೆ ರುಚಿಯುಂಟೆ ? ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ, ಅಕ್ಕಟಾ ! ಸಂಸಾರ ವೃಥಾ ಹೋಯಿತ್ತಲ್ಲಾ ! ಅದೇತರ ಭಕ್ತಿ ? ಅದೇತರ ಯುಕ್ತಿ ? ಕೂಡಿಕೋ ಕೂಡಲ ಸಂಗಮ ದೇವಾ.'

ಹೃದಯವಿಲ್ಲದವರ ಕೆಳೆತನದಲ್ಲಿ ಸತ್ಯಕ್ಕೂ ಸವಿಯಿಲ್ಲ ಹೃದಯ ವಿಲ್ಲದ ಸ್ವಭಕ್ತಿಯಲ್ಲಿಯೂ ಸುಖವಿಲ್ಲ. ಹೃದಯ ಹೃದಯವನ್ನು ಕಾಣ ಬಲ್ಲುದು. ಹೃದಯವಿಲ್ಲದೆ ಏನು ಮಾಡಿದರೂ ಏನು ಸುಖವಿಲ್ಲ. ಏಕ ಭಾವಕೆ ಎಟಕುವಂತಿಲ್ಲ.

'ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದೆ ; ಮನಮೆಚ್ಚಿ ಮರುಳಾದೆ, ನೋಡವ್ವಾ ! ಕೇಳು, ಕೇಳವ್ವಾ ಕೆಳದಿ, ಸುಖಿಯರಿಲ್ಲದೆ ಸುಖವ ಬಯಸಿ ದವರುಂಟೇ ಹೇಳಾ ? ಎನ್ನ ಮುನಿಸು ಎನ್ನಲ್ಲಿಯೇ ಅಡಗಿತ್ತು : ಇನ್ನು ಬಾರಯ್ಯಾ, ಕೂಡಲಸಂಗಮದೇವಾ !'

ಸಿಟ್ಟುಳ್ಳವರ ಸಖ್ಯ ಹೇಗೆ ತರವಲ್ಲವೋ ಹಾಗೆ ತನಗೂ ಭಕ್ತನಿಗೂ ಸಿಟ್ಟು ತರವಲ್ಲ. ಅದರಲ್ಲಿಯೂ ನಿಜವರಿಯದ ಹುಸಿಸಿಟ್ಟಿನಲ್ಲಿ ಹುರುಳಿಲ್ಲ ; ಹೊಂದಿಕೆಯಿಲ್ಲ. ಕಣ್ಣು ಕಂಡರೆ ಸಾಲದು ; ಕರುಳು ಕಾಣಬೇಕು. ಅಥವಾ ಅನುವರಿತ ತನ್ನ ಒಡೆಯರು ತನ್ನ ಸ್ವಾಮಿ ತನ್ನ ಮೇಲೆ ಕಣ್ಣು ಕೋಪ ತೋರಿದ ಮಾತ್ರಕ್ಕೆ ತಾನು ಮುಂದರಿಯದೆ ಮಾತನಾಡಬಾರದು. ಮಾತನಾಡಿದರೆ ಉಭಯ ನಷ್ಟ. ಅಂಥವರು ಅತ್ತ ಸ್ವಾಮಿ ಸಖ್ಯಕ್ಕೂ ಇತ್ತ ಸಖಿಯರ ಸಖ್ಯಕ್ಕೂ ವಂಚಿತರು. ತನ್ನ ಸ್ವಾಮಿಯಲ್ಲಿ ಮಾತಾಡು ವವರು ಸಖಿಯರಲ್ಲಿ ಬಿಡುವರೆ ? ಹೀಗೆ ಉಭಯ ಸಖ್ಯವಳಿದಲ್ಲಿ ಸುಖವೆಲ್ಲಿ ? ಕಾಯ ಭಾವಾದಿಗಳ ಐಕ್ಯವೆಲ್ಲಿ ? 'ಮಾಡುವ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕು ; ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ ಒಳಗೆ ಕೆಚ್ಚಿಲ್ಲ ದಿರಬೇಕು. ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು ; ಎನಗಿನ್ನಾವ ಭಯವಿಲ್ಲ ಕಾಣಾ ಕೂಡಲಸಂಗಮದೇವಾ.'— 'ಹರಿವ ನದಿಯ ತೆರನ ಹೊಲಬಲ್ಲರೆ ಭಕ್ತಿ ; ಕೂಡಿ ಮಯಿದಾನವ ಸೀಡಬಲ್ಲರೆ ಭಕ್ತಿ ;

ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲರೆ ಕೂಡಿ ಕೊಂಡಿಪ್ಪ ನಮ್ಮ ಕೂಡಲ ಸಂಗಮದೇವ !'

ಮಾಡುವ ಭಕ್ತ ಮೃದುವಾಗಿರಬೇಕು. ಶಾಂತಿರಸ ಭರಿತನಾಗಿರಬೇಕು. ಮುನಿಸಿರಬಾರದು. ಬಿಂಕಿರಬಾರದು. ಬಾಳೆಯ ಹಣ್ಣಿನಂತೆ ಒಳಗೆ ಬಿಡುವ ಭಾಗ ಏನೂ ಇರಬಾರದು. ಕೆಳೆತನ ಕದಳೀಫಲದಂತಿರಬೇಕು. ಭಕ್ತಿ ಭಾವಕ್ಕೆ ಸಖ್ಯ ಪ್ರವಾಹಕ್ಕೆ ಅಡೆ ತಡೆಯಿರಬಾರದು. ಹರಿವ ನದಿಯ ನೀರಿನ ಹನಿಗಳು ಒಂದಕ್ಕೊಂದು ಹೊಂದಿರುವಂತೆ ಭಕ್ತ ನವವಿಧ ಭಕ್ತಿಗಳು ಅವಿರಳವಾಗಿರಬೇಕು. ಆತ್ಮನಿವೇದನದವರೆವಿಗೂ ಅಖಂಡಿತವಾಗಿ ಅರ್ಪಿಸಲ್ಪಡಬೇಕು.

'ಮನಕ್ಕೆ ಮನವೊಂದಾಗಿ, ಧನಕ್ಕೆ ಧನವೊಂದಾಗಿ, ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣವೊಂದಾಗಿ ಶುಭಸೂಚನೆಯೊಂದಾಗಿರದ ನಚ್ಚು ಮಚ್ಚು ಪಾರವೈದುವುದೆ ? ಸಿರ ಹರಿದರೇನು ? ಕರುಳ ಕುಪ್ಪಳಿಸಿದರೇನು ? ಇಂತಪ್ಪ ಸಮಸ್ತವೆಲ್ಲವೂ ಹೋದರೇನು ? ಚಿತ್ತ ಮನ ಬುದ್ಧಿಯೊಂದಾದ ಮಚ್ಚು ಬಿಚ್ಚಿ ಬೇರಾಗದಿದ್ದರೆ ಮಚ್ಚುವ ನಮ್ಮ ಕೂಡಲ ಸಂಗಮದೇವ.'

ಮನ ಭಾವ ಪ್ರಾಣಗಳು ಸ್ವಾಮಿ ಭಕ್ತರಲ್ಲಿ ಒಂದಾಗಿರುವಂತಹ ಜೀವಸಖ್ಯ ಬೆಳೆದುಬರಬೇಕು ; ಬೆರೆದು ನಿಂದಿರಬೇಕು. ಅಂತಾಗಬೇಕಾದರೆ ಸಖ್ಯಭಕ್ತಿಯಲ್ಲಿ ಈ ಸೋಪಾನ ಸಾಧನ ಅತ್ಯಗತ್ಯ.

'ಅಯ್ಯಾ ಸಜ್ಜನ ಸದ್ಭಾವರ ಸಂಗದಿಂದ ಮಹಾನುಭಾವರ ಕಾಣಬಹುದಯ್ಯಾ ; ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು, ಲಿಂಗವನರಿಯಬಹುದು, ಜಂಗಮವನರಿಯಬಹುದು, ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು. ಇದು ಕಾರಣ, ಸದ್ಭಕ್ತರ ಸಂಗವನೆ ಕರುಣಿಸು, ಕೂಡಲಸಂಗಮದೇವಾ, ನಿಮ್ಮ ಧರ್ಮ !'

'ಮರ ಮರ ಮಥನದಿಂದ ಅಗ್ನಿ ಹುಟ್ಟಿ ಆ ಮರನೆಲ್ಲವ ಸುಡದಿಪ್ಪುದೆ ? ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ ಎನ್ನ ತನುಗುಣವೆಲ್ಲವ ಸುಡದಿಪ್ಪುದೆ ? ಇದು ಕಾರಣ, ಮಹಾನುಭಾವರ ತೋರಿಸು ಕೂಡಲಸಂಗಮದೇವಾ.'

ಭಕ್ತನ ಹಾರ್ದಿಕ ಹಾರೈಕೆಯಿದು. ಭಾವೈಕ್ಯದ ಬಯಕೆಯಿದು. ಸದ್ಭಕ್ತರ ಸಂಗದಲ್ಲಿ ಮಹಾನುಭಾವರ ಸಖ್ಯದಲ್ಲಿ ತನ್ನನ್ನು ತಾನರಿಯುವುದೇ ಗುರಿಯಾಗಿರಬೇಕು. ತನ್ನರಿವು ತನಗಾಗದೆ ಅದರ ನಿವೇದನ ಅವಧಾನ ಅಳವಡದು.

ಆತ್ಮನಿವೇದನಂ : ನಿವೇದನವೆಂದರೆ ವಿಜ್ಞಾಪನೆ ಮತ್ತು ಸಮರ್ಪಣೆ ಎಂಬುದಾಗಿ ಎರಡರ್ಥಗಳುಂಟು. ಎರಡೂ ಮುಖ್ಯವಾದ ಅರ್ಥಗಳೇ ಆಗಿವೆ. ಆತ್ಮ ವಿಜ್ಞಾಪನೆಯೆಂದರೆ ತನ್ನ ಆಗು ಹೋಗುಗಳನ್ನು ನೋವು ನಲಿವುಗಳನ್ನು ಹೇಳಿಕೊಳ್ಳುವಿಕೆ. ಆತ್ಮ ಸಮರ್ಪಣೆಯೆಂದರೆ ತನ್ನನ್ನೇ ಸರ್ವಸ್ವವಾಗಿ ಸಮರ್ಪಿಸುವಿಕೆ ಎಂದರೆ ಕೊಡುವಿಕೆ.

ಸಂಸಾರ ಅಥವಾ ಜೀವನ ಹೊರಗಿನದು, ಒಳಗಿನದು ಎಂದು ಎರಡು ಬಗೆ. ಹೊರಬಾಳಿಗಿಂತ ತನ್ನೊಳಗಿನ ಬಾಳು ಹೆಬ್ಬಾಳು. ಬಾಹ್ಯ ಸಂಸಾರವನ್ನಾಗಲಿ, ಜೀವನವನ್ನಾಗಲಿ ಪಳಗಿಸಿಕೊಳ್ಳಬಹುದು. ಒಳಗಿನದನ್ನು ಪಳಗಿಸುವುದು, ತನ್ನನ್ನು ತಾನು ಹಿಡುವಳಿಯಲ್ಲಿರಿಸಿಕೊಳ್ಳುವುದು ಹೆಚ್ಚು ಸಾಹಸದ ಕೆಲಸ. ಹೀಗಿರುವಾಗ ಎರಡೂ ಎದುರಿಸಿ ನಿಂತಾಗ ನಿರ್ವಹಿಸುವುದು ನಿಜಕ್ಕೂ ಕಠಿಣ. ಆ ಹೃದಯ ಭಾರವು ನಿವೇದಿಸದೆ ಅಂದರೆ ವಿಜ್ಞಾಪಿಸದೆ ಇಳಿಯುವುದಿಲ್ಲ. ಅಂತೆಯೇ ಹೃದಯ ಬಾಧೆ ಸಮರ್ಪಿಸದೆ ಸವೆಯುವುದಿಲ್ಲ; ತೀರವುದಿಲ್ಲ.

ಈ ಉಭಯಾತ್ಮಕ ಜೀವನರೂಪ ಸಂಸಾರ ಜೀವನಿಗೊಂದು ಬಂಧನ, ಗ್ರಹಣ, ಮರೆ, ತೆರೆ, ಬಲೆ, ಕೊಳೆ ಏನೇನೋ ಆಗಿ ಸುಖಸ್ವಾತಂತ್ರ್ಯಗಳಿಗೆ ಅಡ್ಡಾಗಿದೆ. ಪ್ರಗತಿಗೆ ಪ್ರತಿಬಂಧಕವಾಗಿದೆ. ಹೊರಲಾರದ ಹೊರೆ. ದಾಟಲಾರದ ತೊರೆ; ಹೆಗ್ಗಡಲ. ಅಲೆಗಳು ಕೊಬ್ಬಿ ಮುಖಕ್ಕೆ ಬಡಿಯುತ್ತಿವೆ. ಎದೆಯ ಅಲ್ಲಾಡಿಸುತ್ತವೆ. ಬುದ್ಧಿಯ ಭ್ರಮಿಸುತ್ತಿವೆ. ಇದರ ಸ್ನೇಹದಲ್ಲಿ ಶುದ್ಧತೆಯಿಲ್ಲ, ಸತ್ಯತೆಯಿಲ್ಲ. ಇದರ ಭೋಗದಲ್ಲಿ ಶಾಶ್ವತತೆಯಿಲ್ಲ. 'ಶೂಲದ ಮೇಲಣ ಭೋಗವೇನಾದೊಡೇನೊ ? ನಾನಾವರ್ಣದ ಸಂಸಾರ ಹಾವು–ಹಾವಾಡಿಗನ ಸ್ನೇಹದಂತೆ ! ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೇ, ಮಹಾದಾನಿ ಕೂಡಲಸಂಗಮದೇವಾ ?' ಇದಕ್ಕೆ

ಒಂದು ಬಣ್ಣವಿಲ್ಲ ; ಒಮ್ಮನದ ನೆಮ್ಮದಿಯಿಲ್ಲ. ಆತ್ಮವಿಶ್ವಾಸ ಇದ್ದದ್ದೂ ಇಲ್ಲ. ಏನೋ ಎಂತೋ, ಎಂದೋ ಹೇಗೋ ಎಂಬ ಸಂದೇಹದಲ್ಲಿ ಸ್ನೇಹದ ಗುಡಿಕಟ್ಟಿದೆ. ಸ್ನೇಹಲತೆ ಕುಡಿಯಿಟ್ಟಿದೆ. ಬಿಡುವ ಕಾಯಿ ಕಹಿ. ಅದ ನುಂಡರೆ ಆತ್ಮಘಾತ ! ತನ್ನಾತ್ಮವೇ ತನಗೆ ಹಗೆ ! ಈ ತುದಿ ಮೊದಲಿಲ್ಲದ ಚಿಂತೆಯಲ್ಲಿ ಚಿತ್ತವಿಭ್ರಮೆ ! ಇದರಿಂದಾಗಿ ಇನ್ನೆಲ್ಲಿ ಬಿನ್ನಾಣ? ಇನ್ನೆಲ್ಲಿ ಮನೋವಿಲಾಸ? ಇನ್ನೆಲ್ಲಿ ಬುದ್ಧಿ ಕೌಶಲ? ಇನ್ನೆಲ್ಲಿ ಭಾವಸೌಂದರ್ಯ ;– ಆತ್ಮಸೌಖ್ಯ ? ಇದೆಂತಹ ಆತ್ಮಸಖ್ಯ ? ಈ ಬಿಡಿಸಿಕೊಳ್ಳಲಾರದ ಬಲೆಯಲ್ಲಿ ಬಿದ್ದ ಜೀವನು ಇದು ಬಂಧನವೆಂದರಿತು ಇದನ್ನು ಬಿಡಿಸಿಕೊಳ್ಳಲು ಭವ ಹರನಲ್ಲಿ ಹೀಗೆ ಬಿನ್ನವಿಸಿಕೊಳ್ಳುವನು : 'ಸಂಸಾರವೆಂಬ ಬಲೆಯಲ್ಲಿ ಸಿಲು ಕಿದೆನಯ್ಯಾ ; ಎನ್ನನವನು ಕಾಯಯ್ಯಾ ! ಹುರುಳಿಲ್ಲ, ಹುರುಳಿಲ್ಲ ! ಕೂಡಲ ಸಂಗಮದೇವಾ, ಶಿವಧೋ, ಶಿವಧೋ !!' ಈ ಬಿನ್ನಹದಲ್ಲಿ ಈ ನಿವೇದನ ದಲ್ಲಿ ಅದೆಂತಹ ಆತುರತೆಯಿದೆ? ಬಲೆಯಿಂದ ಬೇಗ ಬಿಡಿಸಿಕೊಳ್ಳುವ ಕಾತರತೆಯಿದೆ. ಆ ಆತುರತೆ ಪಡಿ ಮಾತಿನಲ್ಲಿ ಮೂಡಿದೆ; ಆ ವೇಗ ಅಭಿವ್ಯಕ್ತವಾಗಿದೆ. ಬಲೆಯಲ್ಲಿ ಬಿದ್ದುದು ತಪ್ಪೆಂದು ತಿಳಿದಿದೆ. ಹೊರಬರ ಬೇಕೆಂಬ ಹವಣಿದೆ. ಅದರಲ್ಲಿದ್ದರೆ ಹುರುಳಿಲ್ಲ. ಹೃದಯ ವೇದನೆಗೆ ತುದಿಯಿಲ್ಲ. ದಿಟ, ಆತ್ಮ ಬಂಧುಗಳಾಗಿ ಬಂದುಬಿಡಿಸುವರಾರು ?

'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ ; ಚಂದ್ರ ಕುಂದೆ ಕುಂದುವುದಯ್ಯಾ. ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿ ಟ್ಟಿತ್ತೆ? ಅಂಬುಧಿಯನು ಮುನಿ ಆಪೋಷಣವ ಕೊಂಬಲ್ಲಿ ಚಂದ್ರಮನಡ್ಡ ಬಂದನೆ? ಅರಿಗಾರು ಇಲ್ಲಾ ; ಕೆಟ್ಟವಂಗೆ ಕೆಳೆಯಿಲ್ಲಾ ! ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವಾ !' ಎಲ್ಲರಿಗೂ ಎಂದೆಂದಿಗೂ ಇರು ವವನು ಆತನೊಬ್ಬ. ಆತ ಜಗದ ನಂಟ, ಜೀವ ನಂಟ ! ಆತನೊಬ್ಬ ಕೈಬಿಟ್ಟರೆ ಇನ್ನಾರಿಗೂ ಹೇಳಿಕೊಳ್ಳಲು ಸಾಧ್ಯವಿಲ್ಲ. ಹೇಳಿಕೊಂಡರೂ ತೀರುವಂತಿಲ್ಲ. ಆತನೇ ತೀರಿಸಬೇಕು. ಆತ ಸರ್ವಸಮರ್ಥ, ಆತನೇ ಜೀವನ ಪುರುಷಾರ್ಥ. ಅಂತಹ ಆ ಪರಮಾತ್ಮನೊಡನೆ ಈ ಆತ್ಮನು ಹಗೆತನ ಕಟ್ಟಿಕೊಳ್ಳಬಾರದು. ಕಟ್ಟಿಕೊಂಡರೆ ಕೊನೆಸಾಗದು. ಕಷ್ಟ

ತೀರದು. ಆತನನ್ನು ಸಾಧಿಸಲೇಬೇಕು. ಆತನ ಸಾಧನೆಗೆ ಆತ್ಮನಿವೇದನವೇ ನಿಜ ಸಂಪತ್ತಿ; ನಿಜಪ್ರಪತ್ತಿ.

ಎನ್ನ ಗುಣಾವಗುಣವ ಸಂಪಾದಿಸುವೆ ಅಯ್ಯಾ! ಪ್ರತಿಯೇ, ಅಪ್ರತಿಮ ಮಹಿಮಾ, ನಿಮಗಾನು ಪ್ರತಿಯೇ? ಕೂಡಲಸಂಗಮದೇವಾ, ನೀವು ಮಾಡಲು ಆನಾದೆನು!'

ಆತನನ್ನು ಸಾಧಿಸುವ ಗುಣವೂ ಜೀವನಲ್ಲಿಲ್ಲ, ವಿರೋಧಿಸುವ ನೆಣವೂ ಜೀವನಲ್ಲಿಲ್ಲ. ಹೀಗಿರುವಾಗ ಪರಮಾತ್ಮನಿಗೆ ಪ್ರತಿಯೆಂದರೇನು? ಹಾಗಾದರೆ ಆತನೊಲಿಸುವ ಬಗೆ ಯಾವುದು? ಅದೊಂದೇ ಇದೆ. ಅದೆಂದರೆ ತಂದೆ ಮಗನ ಸಂಬಂಧ. ತಂದೆ ತನ್ನ ಮಗನ ಗುಣಾವಗುಣಗಳನ್ನು ನೋಡಲಾರ; ಬಲಾಬಲಗಳನ್ನು ನೋಡಲಾರ. ಸಮತ್ವವಿಲ್ಲದಿದ್ದರೂ ಮಮತ್ವವಿದೆ. ಅದರಿಂದಾಗಿ ಅಪ್ಪನಲ್ಲಿ ಆತ್ಮನಿವೇದನ.

ತಂದೆಯನ್ನು ತೊರೆದು ನಿಂದ ಬಳಿಕ ಈತನಿಗೆ ಯಾರು ಇಲ್ಲದಾಯಿತು. ವಿರೋಧ ಸುತ್ತಲೂ ಹೆಚ್ಚಿತು. ನಿಲ್ಲದಂತಾಯಿತು. 'ಆನೊಬ್ಬನು; ಸುಡುವರೈವರು. ಮೇಲೆ ಕಿಚ್ಚು ಘನ; ನಿಲ್ಲಲು ಬಾರದು. ಕಾಡಬಸವನ ಹುಲಿಕೆಂಡೊಯ್ವರಿ ಆರಯ್ಯಲಾಗದೆ ಕೂಡಲಸಂಗಮದೇವಾ?'. ತಾನೊಬ್ಬಂಟಿಗ! ಸುತ್ತಿ ಸುಡುವ ಕಾಮಬಾಣಗಳೈದು! ಮೇಲೆ ಕಿಡಿಕಾರುವ ಕೋಪ! ಈ ಉರವಣೆಯಲ್ಲಿ ಇರುವುದೆಂತು? ಸಾಲದ್ದಕ್ಕೆ ಹಮ್ಮೆಂಬ ಹೆಬ್ಬುಲಿ ಹಿಡಿದೆಳೆಯುತ್ತಿದೆ. ಈ ದುರವಸ್ಥೆಯಲ್ಲಿರುವ ನಿನ್ನ ಕಂದನನ್ನು ನೀನು ವಿಚಾರಿಸಬಾರದೆ ತಂದೆ? ಅನ್ವೇಷಿಸಬಾರದೆ ಆತ್ಮಬಂಧುವೆ? ಪೋಷಿಸಬಾರದೇ ಎನ್ನೊಡೆಯ? ಎನ್ನ ಯೋಗಕ್ಷೇಮ ನಿನ್ನದಲ್ಲವೇ ತಂದೆ? ಎನ್ನ ಹಾನಿವೃದ್ಧಿ ನಿಮ್ಮದಲ್ಲವೆ? ಎನ್ನ ಮಾನಾಪಮಾನ ನಿಮ್ಮದಲ್ಲವೆ? ನಿಮಗೆ ನಾನು ದೂರನೆ? ಭಾರನೆ? 'ನೀ ಹುಟ್ಟಿಸಿದಲ್ಲಿ ಹುಟ್ಟದೆ ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ? ನೀನಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ? ಅಕಟಕಟಾ! ಎನ್ನವನೆನ್ನವನೆನ್ನಯ್ಯಾ, ಕೂಡಲಸಂಗಮದೇವಯ್ಯಾ!'

'ನರ ವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ 'ಶಿವ ಶಿವಾ' ಎಂದೋದಿಸಯ್ಯಾ. ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು, ಕೂಡಲಸಂಗಮದೇವಾ.' ಅಯ್ಯಾ ಅಯ್ಯಾ ಎಂದು ಕರೆಯುತ್ತಲಿದ್ದೇನೆ;

ಅಯ್ಯಾ ಅಯ್ಯಾ ಎಂದೊರಲುತ್ತಿದ್ದೇನೆ. ಓ ಎನ್ನಲಾಗದೇ ಅಯ್ಯಾ? ಆವಾಗಳೂ ನಿಮ್ಮುವ ಕರೆಯುತ್ತಲಿದ್ದೇನೆ; ಮೌನವೇ ಕೂಡಲಸಂಗಮ ದೇವಾ?' ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟೊಡೆ ನಿಮ್ಮ ನಗುವರಯ್ಯಾ. ಶಿವ ಬಟ್ಟೆಯೊಳೆನ್ನನು ಇರಿಸಯ್ಯಾ ಹರನೇ ಹೊಲಬು ಗೆಟ್ಟೆನು; ಬಟ್ಟೆಯ ತೋರಯ್ಯ! ಹುಯ್ಯಲಿಟ್ಟೆನು, ಗಣಂಗಳು ಕೇಳಿ ರಯ್ಯಾ, ಕೂಡಲಸಂಗಮದೇವನೆನ್ನ ಕಾಡಿಹನಯ್ಯ, 'ಸಟೆಯಿಲ್ಲದಂತೆ, ಪ್ರಪಂಚವಿಲ್ಲದಂತೆ, ವೈಶಿಕವಿಲ್ಲದಂತೆ ನಡೆಸಯ್ಯಾ ಲಿಂಗತಂದೆ; ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ; ಬೇರೆ ಮತ್ತೆ ಅನ್ಯವ ತೋರದಿರಯ್ಯಾ, ಹೊಲಬುಗೆಟ್ಟೆನಯ್ಯಾ ಕೂಡಲಸಂಗಮದೇವಾ!'

'ಅಕಟಕಟಾ! ಶಿವ, ನಿನಗಿನಿತು ಕರುಣವಿಲ್ಲ; ಅಕಟಕಟಾ! ಶಿವ, ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರ ಲೋಕದೂರನ? ಕೂಡಲ ಸಂಗಮದೇವ ಕೇಳಯ್ಯ, ಎನಗಾಗಿ ಮತ್ತೊಂದು ತರುಮರವಿರಲಿಲ್ಲವೆ?

'ನರ ಕೂರಂಬಿನಲೆಚ್ಚವಂಗೊಲಿದೆಯಯ್ಯಾ; ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ; ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕ್ಕೊಯ್ದೆಯಯ್ಯಾ, ಎನ್ನನೇತಕ್ಕೊಲ್ಲೆ ಕೂಡಲ ಸಂಗಮದೇವಾ?' 'ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೇ ಕಬ್ಬುನದಲ್ಲಿ? ಸಾಧುಗುಣವನರಸುವುದೇ ಅವಗುಣಿ ಯಲ್ಲಿ? ಚಂದನ ಗುಣವನರಸುವುದೇ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೇ, ನೀನೆನ್ನಲ್ಲಿ ಅವಗುಣವನರಸುವರೇ?' 'ಇವನಾರವ, ಇವ ನಾರವ, ಇವನಾರವನೆಂದೆನಿಸದಿರಯ್ಯಾ. ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯಾ ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ.' ಇದಿಷ್ಟು ಆತ್ಮನಿವೇದನ ಅಂದರೆ ಆತ್ಮನು ಮಾಡುವ ವಿಜ್ಞಾಪನೆ.

ಇನ್ನುಳಿಯಿತು ಆತ್ಮ ಸಮರ್ಪಣೆ. ಆತ್ಮ ಸಮರ್ಪಣವಾಗದೆ ಬರೀ ಬಿನ್ನವಿಸಿದರೆ ಸಾಲದು. ವಿಜ್ಞಾಪನೆ ದೇಹ; ಸಮರ್ಪಣೆ ಚೈತನ್ಯ.

ವಿಜ್ಞಾಪನೆ ಹೂವು; ಸಮರ್ಪಣೆ ಹಣ್ಣು. ಇದರಿಂದಾಗಿ ಆತ್ಮಸಮರ್ಪಣೆ ಚರಮ ಗುರಿಯಾಗಿದೆ.

ಆತ್ಮ ಅದ್ರವ್ಯ. ಅದನ್ನು ಅರ್ಪಿಸುವುದು ಹೇಗೆ? ಹಾಲನ್ನು ಮಡಕೆಯ ಮುಖಾಂತರ ಕೊಡುವಂತೆ ಆತ್ಮವನ್ನು ತ್ರಿಕರಣ ಮುಖಾಂತರ ಸಮರ್ಪಿಸಬೇಕು. 'ತನು ಮನ ಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯ ಒಳಲೊಟ್ಟೆಯ ನುಡಿವರು ನೀವೆಲ್ಲಾ ಕೇಳಿರೇ: ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ ಗುರಿಯ ತಾಗಬಲ್ಲುದೆ? ಮಾಯಾಪಾಶ ಹಿಂಗಿ ಮನದ ಗಂಟು ಬಿದದನ್ನಕ್ಕ ಕೂಡಲ ಸಂಗಮ ದೇವನೆಂತೊಲಿವನಯ್ಯಾ?'

ಮನಕ್ಕೆ ಸಂಕಲ್ಪ ವಿಕಲ್ಪವೆಂಬ ಗಂಟುಗಳೆರಡು ಬಿದ್ದಿವೆ. ಅವು ಬಿಚ್ಚದೆ ಆ ದೇವನೊಲುಮೆಯಿಲ್ಲ. ಮಾಯಾ ಪಾಶಹರಿಯದೆ ಗಂಟು ಬಿಚ್ಚವು. ತನು ಮನ ಧನಗಳನ್ನು ಆತನಿಗೆ ಅರ್ಪಣ ಮಾಡದೆ ಮಾತಿನ ಮಂಟಪ ಕಟ್ಟಿದರೆ ಮಾಯೆಯೆಂಬ ಹೆಗ್ಗ ಹರಿಯದು. ಕಾರಣ ತ್ರಿಕರಣಾರ್ಪಣವಾಗಬೇಕು. ತ್ರಿಕರಣಗಳಲ್ಲೊಂದಾದ ಬರೀ ಮಾತನ್ನು ಮುಂದು ಮಾಡಿದರೆ ಸುಖವಿಲ್ಲ. ಮಾತಿನಂತೆ ಮನ ಭಾವಗಳಿರಬೇಕು. ಮನಭಾವಗಳಿರುವಂತೆ ಮೈಮಾಟವಿರಬೇಕು. ಇಲ್ಲದಿದ್ದರಾಗದು.

'ಮಾತಿನ ಮಾತಿನಲ್ಲಿಪ್ಪುದೇ ಭಕ್ತಿ? ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ; ಧನಸವೆಯದನ್ನಕ್ಕ ಅಪ್ಪುದೇ ಭಕ್ತಿ? ಕೂಡಲ ಸಂಗಮದೇವಾ, ಎಲುದೋರೆ ಸರಸವಾಡುವನು, ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?' 'ಧನಕ್ಕೆ ಮನವೊಡ್ಡಿದರೇನು? ಮನಕ್ಕೆ ಧನವನೊಡ್ಡಿದರೇನು? ತನುಮನ ಧನವ ಮೀರಿ ಮಾತಾಡಬಲ್ಲರೆ ಆ ತನಿಸ್ಸೀಮನು; ಆತ ನಿಜೈಕ್ಯನು. ತನು ಮನ ಧನವನುವಾದರೆ ಕೂಡಲಸಂಗಮದೇವನೊಲಿವ.

ಒಂದನ್ನರ್ಪಿಸಿ ಇನ್ನೊಂದನ್ನು ಬಿಟ್ಟರಾಗದು. ಮೂರುಕರಣಗಳನ್ನೂ ಸಂಪೂರ್ಣ ಸಮರ್ಪಿಸಿ ಮೂರನ್ನು ಮೀರಿ ಮೌನವಾದಲ್ಲದೆ ಸೀಮಾತೀತತ್ವ ಬಾರದು. ಸಮರತತ್ವ ಸಮನಿಸದು. ತನುಮನ ಧನಗಳು ದೇವನಿಗೆ ಅನುವಾದರೆ ಆತನೇ ಮಹಾನುಭಾವಿ; ಆತನೇ ಸರ್ವರಿಂದ ಸಂಸೇವಿ. ಆತನೆಂದಿಗೂ ಅಗನು ಭವಿ. 'ಕಾಣುತ್ತ ಕಡೆಗಣಿಸಿ ಕೆಡಿಸಿಯರ

ಸುವ ಮತಿಭ್ರಷ್ಟ ನಾನು, ಲಿಂಗಯ್ಯಾ! ತನುಲೋಭ ಮನಲೋಭ, ಧನಲೋಭ ಮುಂದುಗೆಡಿಸಿ ಕಾಡಿಹವೆನ್ನಾ ! ತನುಮನಧನವ ನಿವೇದಿಸಿದವರ ಮನೆಯ ಮಗ ನಾನಯ್ಯಾ ಕೂಡಲಸಂಗಮದೇವಯ್ಯಾ !'

ಯಾವುದನ್ನಾದರೂ ತ್ಯಾಗ ಮಾಡಬಹುದು. ತ್ರಿಕರಣ ತ್ಯಾಗ ಮಾಡುವುದು ತುಂಬಾ ದುರ್ಲಭ. ತನು ಮಮತೆ, ಮನದಮೋಹ, ಭಾವ ದಾಶೆಗಳನ್ನು ಬಿಡುವುದು ಕಡುಕಷ್ಟ. ಇವುಗಳ ಲೋಭದಲ್ಲಿ ಬಿದ್ದು ಕಣ್ಮುಂದಿರುವ ಆತ್ಮಾರ್ಪಣರೂಪ ಅಮೃತವನ್ನು ಆರೋಗಿಸದೆ ಹೋದರೆ ಅದಕ್ಕಿಂತ ಭ್ರಷ್ಟತೆ ಬೇರಿಲ್ಲ. ಅದಕ್ಕಿಂತ ಮತಿಮಂದತೆ ಬೇರಿಲ್ಲ. ಅದಕ್ಕಿಂತ ಭಾಗ್ಯಹೀನತೆ ಬೇರಿಲ್ಲ. ಆದರಿಂದಾಗಿ ತ್ರಿಕರಣಾರ್ಪಣರೂಪ ಆತ್ಮಾರ್ಪಣಕ್ಕೆ ಹಿಂಜರಿಯಬಾರದು ; ಅಂಜಬಾರದು. 'ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನುಮನಧನವಲಸದಂತೆ ಮಾಡಯ್ಯ, ತನು ದಾಸೋಹಕ್ಕುಬ್ಬುವಂತೆ ಮಾಡು. ಮನ ದಾಸೋಹಕ್ಕೊಲಿಯುವಂತೆ ಮಾಡು ; ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ-ಹಾಡಿ, ನೋಡಿ-ಕೂಡಿ, ಭಾವಿಸಿ-ಸುಖಿಸಿ, ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ.' 'ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವೂ ನಿಮ್ಮದೆಂದು ಅರಿತ ಬಳಿಕ ಎನಗೆ ಬೇರೆ ವಿಚಾರವುಂಟೆ ? ಕೂಡಲಸಂಗಮದೇವಾ !'

ತ್ರಿವಿಧಾರ್ಪಣವಾದ ಬಳಿಕ ತ್ರಿವಿಧ ತನ್ನವಲ್ಲ. ತನ್ನವಲ್ಲದ ಮೇಲೆ ಇವುಗಳ ಮಮಕಾರಾದಿಗಳು ಮುನ್ನಿಲ್ಲ ; ತ್ರಿಗುಣವಿಲ್ಲ.

ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬವರಲ್ಲದೆ, ಕೊಟ್ಟ ಭಕ್ತರ ನಾರನೂ ಕಂಡುದಿಲ್ಲ. ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ. ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ. ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ ! ಇವೆಲ್ಲ ಹೊರಗಣ ಮಾತು: ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧು-ಮರಾಳ !' ಹೊರಗಿನದನ್ನು ಯಾವುದನ್ನು ಕೊಟ್ಟರೂ ಕೊಟ್ಟಂತಲ್ಲ. ಮತ್ತು ಮಾತು ಕೊಟ್ಟರೆ ಕೊಟ್ಟಂತಲ್ಲ. ಸಿಂಧು ಮರಾಳನಂತೆ ತನ್ನನ್ನೇ ಕೊಡಗಲಿಯಬೇಕು.

'ಅರ್ಥಪ್ರಾಣಾಭಿಮಾನವನ್ನೊಪ್ಪಿಸಿದಲ್ಲಿ ಭಕ್ತನಪ್ಪನೇ ?–ಅಲ್ಲ, ಆದಿ ರುದ್ರನ ಮಗಳು ಆದಿಶಕ್ತಿ; ಆದಿಶಕ್ತಿಯ ಮಗ ವಿಷ್ಣು; ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿಮೊತ್ತನೊಪ್ಪಿಸುವಲ್ಲಿ ಭಕ್ತನಪ್ಪನೆ?–ಅಲ್ಲ. ಎನ್ನ ಮನದೊಡೆಯ ಮಹಾದೇವಾ, ನಿಮ್ಮ ಮನವ ನಿಮಗೊಪ್ಪಿಸಿ ನಾ ಶುದ್ಧ ಕಾಣಾ ಕೂಡಲಸಂಗಮದೇವಾ !'

ಅರ್ಥಪ್ರಾಣಾಭಿಮಾನಗಳನ್ನು ಮಾತಿನಿಂದ ಒಪ್ಪಿಸಿದರಲ್ಲ; ಮನ ಮುಟ್ಟಿ ಮನಸಹಿತ ಒಪ್ಪಿಸಬೇಕು. ಅರ್ಥಪ್ರಾಣಾಭಿಮಾನಗಳೂ ಸಹ ತನ್ನ ವಲ್ಲ. ತನಗೆ ಬಹುದೂರದವು. ಇವುಗಳೊಡನೆ ಇವುಗಳೊಳಗಿರುವ ಘನ ಮನವನ್ನೂ ತನ್ನನ್ನೂ ನಿವೇದಿಸಬೇಕು.

'ಪರಿಯಾಣವೇ ಭಾಜನವೆಂಬರು ; ಪರಿಯಾಣ ಭಾಜನವಲ್ಲ. ಲಿಂಗಕ್ಕೆ ತನ್ನ ಮನವೇ ಭಾಜನ. ಪ್ರಾಣವನು ಬೀಸರವೋಗದೆ ಮೀಸಲಾಗ ರ್ಪಿಸಬಲ್ಲರೆ ಕೂಡಿಕೊಂಡಿರ್ಪ ನಮ್ಮ ಕೂಡಲಸಂಗಮದೇವ. ಆತ್ಮಾರ್ಪಣ ವಿಧಾನವಿದು. ತನು ಭಾಜನವಲ್ಲ. ಮನವೇ ಭಾಜನ. ಅದರಲ್ಲಿ ಪ್ರಾಣ ಪ್ರಸಾದವನಿಟ್ಟು ಮೀಸಲಳಿಯದೆ ದೇವನಿಗೆ ನಿವೇದಿಸಬೇಕು. ಆಗ ಅವಿರ ಳತೆ ಅಳವಡುತ್ತದೆ. ಆಗ ಯಾವ ಸೂಚಕ ಪಾತಕಗಳು ಅಂಟುವುದಿಲ್ಲ. ಶಂಕೆ ವಂಚನೆಗಳು ಸೋಂಕುವುದಿಲ್ಲ : 'ಭವಕ್ಕೆ ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ, ಆಕಾರ ನಿರಾಕಾರನಲ್ಲ–ನೋಡಯ್ಯಾ, ಕಾಯವಂಚಕನಲ್ಲ, ಜೀವವಂಚಕನಲ್ಲ, ಶಂಕೆಯಿಲ್ಲದ ಮಹಾಮಹಿಮ ನೋಡಯ್ಯಾ, ಕೂಡಲ ಸಂಗಮದೇವನ ಶರಣನುಪಮಾತೀತ ನೋಡಯ್ಯಾ !'

ಕಾಯಗುಣ ಕರಣಗುಣ ಜೀವಗುಣಗಳಿಲ್ಲದಾತನು ಉತ್ತಮೋತ್ತಮ ನಲ್ಲದೆ–ಉಪಮಾತೀತನಲ್ಲದೆ ಇನ್ನೇನಾದಾನು ? ಆತನ ಚರಿತೆಯೇ ಲೋಕೋತ್ತರ. ಆತನ ನಿವೇದನವೇ ಲೋಕಕ್ಕೆ ಆಶ್ಚರ್ಯ. 'ಕಾಯವೆಂಬ ಘಟಕ್ಕೆ ಚೈತನ್ಯವೇ ಸುಯಿದಾನ, ಸಮತೆಯೆಂಬ ಜಲ, ಕರಣಾದಿಗಳೇ ಶ್ರವಣ, ಜ್ಞಾನವೆಂಬಗ್ನಿಯಿಂನಿಕ್ಕೆ ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ, ಪರಿಣಾಮದೋಗರವ ನೀಡಿದರೆ ಕೂಡಲ ಸಂಗಮದೇವಂಗೆ ಆರೋಗಣೆಯಾಯಿತ್ತು.' ಇದು ತನ್ನಾತ್ಮವನ್ನು

ಪರಿಪಕ್ವಗೊಳಿಸಿ ಅರ್ಪಿಸುವ ವಿಧಾನ ಇದು ಸಾಧಿತ ನಿವೇದನ. ಇನ್ನು ಸಹಜನಿವೇದನ ವಿಧಾನವನ್ನು ಗಮನಿಸಬೇಕು.

'ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು ; ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು, ಆಚಾರವೆಂಬ ಕಾಯಾಯಿತ್ತು ; ನಿಷ್ಪತ್ತಿಯೆಂಬ ಹಣ್ಣಾಯಿತ್ತು; ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.'

ಸಾಧಿತ ನಿವೇದನದಲ್ಲಿ ಕಾಯದಿಂದ ಮೊದಲಾದರೆ, ಸಹಜ ನಿವೇದನದಲ್ಲಿ ಭಕ್ತಿಯಿಂದ ಮೊದಲಾಗುತ್ತದೆ. ಆದರೆ ಅಂತ್ಯ ಒಂದೇ ಆಗಿದೆ. ಅಲ್ಲಿ ಬರುವ ಪರಿಣಾಮವಾಗಲಿ, ಇಲ್ಲಿ ಬರುವ ನಿಷ್ಪತ್ತಿಯಾಗಲಿ ಎರಡೂ ಒಂದೇ ಫಲ ! ಅಲ್ಲಿ ಪರಿಣಾಮ ಓಗರದ ಹೋಲಿಕೆಯನ್ನು ಪಡೆದಿದ್ದರೆ, ಇಲ್ಲಿ ನಿಷ್ಪತ್ತಿ ಹಣ್ಣಿನ ಹೋಲಿಕೆಯನ್ನು ಹೊಂದಿದೆ. ಎರಡೂ ನಿವೇದನಕ್ಕೆ ಯೋಗ್ಯವಾದವುಗಳೆ ! ಆದರೆ ಓಗರ ಸಾಧಿತ ; ಹಣ್ಣು ಸಹಜ.

ಶ್ರವಣದಲ್ಲಿ ಶ್ರದ್ಧೆ, ಕೀರ್ತನದಲ್ಲಿ ನಿಷ್ಠೆ, ಸ್ಮರಣದಲ್ಲಿ ಅವಧಾನ, ಪಾದಸೇವೆಯಲ್ಲಿ ಅನುಭವ, ಅರ್ಚನದಲ್ಲಿ ಆನಂದ, ವಂದನದಲ್ಲಿ ಸಾಮರಸ್ಯ, ದಾಸ್ಯದಲ್ಲಿ ಪರಿಪೂರ್ಣತೆ, ಸಖ್ಯದಲ್ಲಿ ಅಪ್ರಮಾಣತೆ, ಆತ್ಮನಿವೇದನದಲ್ಲಿ ನಿರವಯತೆಗಳು ನೆಲೆಗೊಂಡಿರಬೇಕು ನೇರ್ಪುಗೊಂಡಿರಬೇಕು.

ಭಕ್ತಿಗೆ ಮೊಗಗಳು ಒಂಬತ್ತಾದರೂ ಒಡಲೊಂದೆ! ತೊರೆಗಳು ಹಲವಾದರೂ ನೀರೊಂದೆ! ಮರದ ಹಣ್ಣುಗಳು ಹಲವಾದರೂ ರಸವೊಂದೆ!

ಭಕ್ತಿ ಕ್ಷೀರ. ವಿಷಯರಕ್ತಿ ಕಾಫಿ. ಕಾಫಿಯನ್ನು ಕುಡಿದರೆ ಹೃದಯವಿಕಾರವಾಗುತ್ತದೆ. ನೇತ್ರೋದರಗಳ ನೋವು ಬರುತ್ತದೆ. ನಾಡಿಗಳಲ್ಲಿ ದುರ್ಬಲತೆಯುಂಟಾಗುತ್ತದೆ. ಅದೇ ಕ್ಷೀರ ಕುಡಿದರೆ ಯಾವ ವಿಕಾರವೂ ಆಗುವುದಿಲ್ಲ; ಯಾವ ನೋವು ಹುಟ್ಟುವುದಿಲ್ಲ. ಎಮ್ಮೆಯ ಹಾಲು ಕುಡಿದರೆ ವಾತವಿಕಾರವುಂಟಾಗುತ್ತದೆ. ಹಸುವಿನ ಹಾಲು ಸೇವಿಸಿದರೆ ಯಾವ ರೋಗವೂ ಬರುವುದಿಲ್ಲ. ಅಂತೆಯೇ ರಾಜಸ ತಾಮಸ ಭಕ್ತಿಗಳನ್ನು ಬಿಟ್ಟು ಸಾತ್ವಿಕ ಭಕ್ತಿಯೆಂಬ ಕ್ಷೀರಾಮೃತವನ್ನು ಪಾನ ಮಾಡಿದರೆ ಅನುಭವಾನಂದಾದಿಗಳು ಪುಷ್ಟವಾಗುತ್ತವೆ ; ಶಿವನಂಯೋಗ

ವುಂಟಾಗುತ್ತದೆ. ಉಭಯ ಸ್ಥಲಸಂಪ್ರಾಪ್ತಿಯಾಗುತ್ತದೆ. ಆದ್ದರಿಂದ ಈ ಭಕ್ತಿಮಾರ್ಗಕ್ರಿಯೆ ಸೂಕ್ತವಾದುದು. ಇಷ್ಟಾದರೂ ಈ ನವವಿಧ ಭಕ್ತಿಗಳು ಮಾರ್ಗಕ್ರಿಯೆಗಳು. ಇನ್ನೂ ಮುಂದುವರಿದರೆ ಅವಧಾನದಿಂದ ಸಂಸ್ಮರಣದಿಂದ ಆಚೆ ಸಾಗಿದರೆ ಮೀರಿದ ಕ್ರಿಯೆಗಳೆನಿಸುತ್ತವೆ. ಇವು ಈ ಲೋಕದಲ್ಲಿ ಅಧರ್ಮಿಗಳಿಗೆ ದುರ್ಲಭ; ಧರ್ಮಿಗಳಿಗೆ ಸುಲಭ.

ಭಕ್ತನೆನಿಸಬೇಕಾದರೆ ಭಕ್ತಿ ಇದ್ದಾಗಬೇಕು.

"ಅಧಮೋ ಚೊತ್ತಮೋ ವಾಪಿ ಯತ್ರಕುತ್ರಚಿದೂರ್ಜಿತಾ
ವರ್ತತೇ ಶಾಂಕರೀ ಭಕ್ತಿಃ ಸ ಭಕ್ತ ಇತಿ ಗೀಯತೇ ।"

ಭಕ್ತಿಗೆ ಅವರಿವರೆಂಬ ಕವಲಿಲ್ಲ; ಕೀಳುಮೇಲಿಲ್ಲ. ಅನುತ್ತಮನಾಗಲಿ ಉತ್ತಮನಾಗಲಿ ಮತ್ತಾವನಾದರಾಗಲಿ ಉತ್ತಮವಾದ ಊರ್ಜಿತವಾದ ಶೈವೀಭಕ್ತಿಯುಳ್ಳವನಾದರೆ ಅವನೇ 'ಭಕ್ತ' ನೆಂದೆನಿಸುತ್ತಾನೆ. ಇಲ್ಲಿ 'ಊರ್ಜಿತ' ಪದ ಪ್ರಯೋಗ ಗಮನಾರ್ಹ. ಭಕ್ತಿ ಬಹುಕಾಲದಿಂದ ಪ್ರಸಿದ್ಧವಾಗಿದೆ. ಪ್ರಬಲವಾಗಿದೆ, ಶ್ರೇಷ್ಠ ಶಕ್ತಿಯುಕ್ತವಾಗಿದೆ. ಶುದ್ಧಿ ವೃದ್ಧಿಯುಳ್ಳುದಾಗಿದೆ.

ಭಕ್ತಿ ತರಂಗಿಣಿಯು ಅದೊಂದು ಪಾವನಗಂಗೆ. ಅದರಲ್ಲಿ ಯಾರಾದರೂ ಮೀಯಬಹುದು. ಮಿಂದವರು ಮಡಿಯಾಗದಿರರು. ಮಡಿಯೆಂದರೆ ಮಲ (ದೋಷ)ರಹಿತತೆ,–ಮಂಗಳತೆ. ಅವರಿವರೆನ್ನದೆ ಸರ್ವರನ್ನು ಉದ್ಧಾರ ಮಾಡುವುದು ಭಕ್ತಿ. ಜೀವಭಾವವನ್ನು ತೊಲಗಿಸಿ ಶಿವಭಾವವನ್ನು ಪ್ರಸಾದಿಸುವುದು ಭಕ್ತಿ. ಮಾನವನ ಮನದಲ್ಲಿ ಹೃದಯದಲ್ಲಿ ಹುಟ್ಟಿದ ಹೀನವೃತ್ತಿಗಳನ್ನು ಹಳಚಿ ಸದ್ವೃತ್ತಿಗಳನ್ನು ವಿಕಾಸಗೊಳಿಸಬಲ್ಲುದು ಭಕ್ತಿ. ಹೃದಯಗಳನ್ನು ಮೃದುಗೊಳಿಸಬಲ್ಲದು ಭಕ್ತಿ. ಪವಿತ್ರಪಥದಲ್ಲಿ ಮುನ್ನಡೆಸುವ ಪ್ರಚೋದಕ ಶಕ್ತಿಯೇ ಭಕ್ತಿ. ಭಕ್ತಿಯಿರುವವನೇ ಭಾಗ್ಯವಂತ. ಭಕ್ತಿ ಊರ್ಜಿತವಾದರೆ ಅಧಮತೆ ಅಳಿಯುತ್ತದೆ. ದುಃಖ ದುರವಸ್ಥೆಗಳು ದೂರಾಗುತ್ತವೆ. ಅಶಿವವು ತೊಲಗಿ ಶಿವತ್ವವು ಸಮನಿಸುತ್ತದೆ.

ಶಿವತ್ವವು ಯಾರಿಗೆ ಬೇಡ? ಪ್ರಪಂಚದಲ್ಲಿ ಪ್ರೇಮವಿರುವವರೆಲ್ಲರೂ ಭಕ್ತಿಗೆ ಅಧಿಕಾರಿಗಳು. ಪ್ರೇಮ ಎಲ್ಲರಲ್ಲಿಯೂ ಇರುತ್ತದೆ. ಅದನ್ನು

ಪವಿತ್ರಗೊಳಿಸುವ ಹಕ್ಕು ಎಲ್ಲರಿಗೂ ಇರುತ್ತದೆ. ಯೋಗ್ಯಾಚರಣೆಗೆ ಸರ್ವ ಪ್ರಾಣಿಗಳಿಗೂ ಅರ್ಹತೆಯಿರುವಂತೆ ಭಕ್ತಿಕೈಂಕರ್ಯಕ್ಕೆ ಭಾವಕರಿಗೆಲ್ಲರಿಗೂ ಅರ್ಹತೆಯಿದೆ.

"ಭಕ್ತಿಃ ಸ್ಥಿರೀಕೃತಾಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ।
ಶಂಭೋಃ ಪ್ರಿಯಃ ಸವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ।"

ಊರ್ಜಿತ ಅಂದರೆ ಶ್ರೇಷ್ಠಭಕ್ತಿ ಅಧಮ-ಉತ್ತಮವೆಂಬ ಗುಣ ಭೇದ ಗಳನ್ನು ಕಳೆದರೆ ಸ್ಥಿರಭಕ್ತಿಯು ಮ್ಲೇಚ್ಛತ್ವ ದ್ವಿಜತ್ವರೂಪ ಕುಲಭೇದಗಳನ್ನು ಕಳೆಯುತ್ತದೆ. ಸ್ಥಿರಭಕ್ತಿ ಯಾರಲ್ಲಿಯೇ ಇರಲಿ ಅವನು ಶಿವನಿಗೆ ಪ್ರಿಯನು. ಆತನಿಗೆ ಶಿವಸುಖವುಂಟಾಗುತ್ತದೆ. ಅದೇ ಸ್ಥಿರಭಕ್ತಿಯಿಲ್ಲದಾತನು ವಿಪ್ರ ನಾದರೂ ಶಿವನಿಗೆ ಅಪ್ರಿಯನು. ಭಕ್ತಿಗೆ ದ್ವಿಜತ್ವ-ಅದ್ವಿಜತ್ವಗಳು ಮುಖ್ಯ ವಲ್ಲ. ದ್ವೇಷಾಸೂಯೆಗಳಿಲ್ಲದ ಶುದ್ಧಹೃದಯ ಮುಖ್ಯ. ಅಚಲ ಭಕ್ತಿ ಮುಖ್ಯ. ಪ್ರಬಲ ಭಕ್ತಿ ಮುಖ್ಯ. ಅವಿಚ್ಛನ್ನ ಭಕ್ತಿ ಮುಖ್ಯ. ಅನನ್ಯ ಭಕ್ತಿ ಮುಖ್ಯ. ಸ್ಥಿರಭಕ್ತಿಯುಳ್ಳವನೇ ಶ್ರೇಷ್ಠಯೋಗಿ

'ಏವಂ ಸತತಯುಕ್ತಾಯೇ ಭಕ್ತಾಸ್ತ್ವಾಂ ಪರ್ಯುಪಾಸತೇ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ॥'

ಎಂದು ಸ್ಥಿರಭಕ್ತರನ್ನು ಗೀತೆ ಯೋಗವಿತ್ತಮನೆಂದು ಯುಕ್ತತಮ ನೆಂದು ಹೊಗಳಿದೆ. ಅಲ್ಲದೆ 'ಸಂತುಷ್ಟಸ್ಸತತಂ ಯೋಗೀ ಯತಾತ್ಮಾದೃಢ ನಿಶ್ಚಯಃ। ಮಯ್ಯರ್ಪಿತ ಮನೋಬುದ್ಧಿರ್ಯೋ ಮದ್ಭಕ್ತಸ್ಸಮೇ ಪ್ರಿಯಃ

ಸ್ಥಿರಭಕ್ತಿಯುಳ್ಳವನು ಶಿವನಿಗೆ ಪ್ರಿಯನೆಂಬ ರೇಣುಕಗೀತೆಯ ಅಭಿ ಪ್ರಾಯವನ್ನು ಈ ಭಗವದ್ಗೀತೆಯು 'ಸತತಯುಕ್ತ ಭಕ್ತಾಃ' 'ಪರ್ಯುಪಾ ಸತೇ' 'ಸತತಂ' 'ದೃಢನಿಶ್ಚಯಃ' ಮುಂತಾದ ಪದಗಳಿಂದ ಅಭಿವ್ಯಕ್ತ ಗೊಳಿಸಿದೆ. ರೇಣುಕಗೀತೆಯಲ್ಲಿ 'ಶಂಭೋಃ ಪ್ರಿಯಃ' ಎಂದು ಹೇಳಿದ್ದರೆ ಭಗವದ್ಗೀತೆಯಲ್ಲಿ 'ಸಮೇ ಪ್ರಿಯಃ' ಎಂದು ಹೇಳಲಾಗಿದೆ. ಜ್ಞಾನಿಗಿಂತ ಯೋಗಿಗಿಂತ ಕರ್ಮಿಗಿಂತ ಬಹುವಾಗಿ ಭಕ್ತಿವಂತ ಶಿವನಿಗೆ ಪ್ರಿಯ. ಮನ ದಲ್ಲಿ ವ್ಯಾಕುಲವಿಲ್ಲದವನು ಮೇಲೆ ಮ್ಲೇಚ್ಛನೆನಿಸಿದ್ದರೂ ಅವನೇ ಪ್ರಿಯನು. ಅವನಿಗೆ ಇಲ್ಲಿ ಕುಲವಿಲ್ಲದಿದ್ದರೂ ಅಲ್ಲಿ ಕುಲವಿದೆ. ಅವನಿಗೆ ಇಲ್ಲಿ ನೆಲೆಯಿಲ್ಲ

ದಿದ್ದರೂ ಅಲ್ಲಿ ನೆಲೆಯಿದೆ ; ಅಲ್ಲಿ ಬೆಲೆಯಿದೆ. ಆತ ಆ ಶಿವನಿಗಾಪ್ತನಾಗಿ ನಿತ್ಯಬಂಧುವಾಗಿರುತ್ತಾನೆ.

'ತುಲ್ಯನಿಂದಾಸ್ತುತಿರ್ಮೌನೀ ಸಂತುಷ್ಟೋಯೇನ ಕೇನ ಚಿತ್ |
ಅನಿಕೇತಸ್ಥಿರಮತಿರ್ಭಕ್ತಿಮಾನ್ಮೇ ಪ್ರಿಯೋ ನರ ಃ!
ಯೋ ನಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ
ಶುಭಾಶುಭ ಪರಿತ್ಯಾಗೀ ಭಕ್ತಿಮಾನ್ ಯಸ್ಸಮೇ ಪ್ರಿಯ ಃ॥'

ಎಂಬುದಾಗಿ ಗೀತೆಯು ಸ್ಥಿರಭಕ್ತಿಯುಳ್ಳವನನ್ನು ಶುದ್ಧ ಪ್ರಬುದ್ಧ ಭಕ್ತಿಯುಳ್ಳವನನ್ನು ಪರಮಾತ್ಮನಿಗೆ ಪ್ರಿಯನೆಂದು ಪದೇ ಪದೇ ಪ್ರತಿ ಪದ್ಯ ದಲ್ಲಿ ಪ್ರತಿಪಾದಿಸಿದೆ.

ಭಕ್ತಿಯನ್ನು ಸ್ಥಿರಗೊಳಿಸುವುದು ಸುಲಭವಲ್ಲ. ಹೊರ ಒಳಗೂ ಸಂಯಮ ಸಿದ್ಧಿಕರಿಸಿರಬೇಕು. ಸಮಬುದ್ಧಿ ಸಂಪಾದಿತವಾಗಿರಬೇಕು. ಚಿತ್ತ ಸ್ಥಿರವಾಗದೆ ಭಕ್ತಿ ಸ್ಥಿರವಾಗದು. ಚಿತ್ತಸ್ಥಿರವಾಗಬೇಕಾದರೆ ಅನನ್ಯ ಭಾವವುಂಟಾಗಬೇಕು : ಅಪರಿಚ್ಛಿನ್ನ ಅಭ್ಯಾಸವುಂಟಾಗಬೇಕು ಬಾಹ್ಯ ಕಾಯೇಂದ್ರಿಯಗಳನ್ನೂ ಅಂತಃಕರಣಗಳನ್ನೂ ಶಿವನಿಗರ್ಪಿಸಿ ಶಿವನಲ್ಲಿರಿಸಿ ಶಿವಾರಾಧನೆಯಲ್ಲಿ ಸದಾ ನಿರತನಾಗಿರಬೇಕು. ನಿಷ್ಕಾಮದಿಂದ ನಿರ್ಮದ ದಿಂದ ಶಿವಲಿಂಗಾರ್ಚನೆಯನೆಸಗಬೇಕು.

"ಸಾ ಭಕ್ತಿರ್ದ್ವಿವಿಧಾ ಜ್ಞೇಯಾ ಬಾಹ್ಯಾಭ್ಯಂತರ ಭೇದತ ಃ
ಬಾಹ್ಯಾಸ್ಥೂಲಾಂತರಾ ಸೂಕ್ಷ್ಮಾ ವೀರಮಾಹೇಶ್ವರಾದೃತಾ !"

ಭಕ್ತಿ ಬಾಹ್ಯ ಆಭ್ಯಂತರ ಎಂದು ಇಬ್ಬಗೆಯಾಗಿದೆ. ಬಾಹ್ಯಭಕ್ತಿ ಸ್ಥೂಲ. ಆಂತರಭಕ್ತಿ ಸೂಕ್ಷ್ಮ. ಇದನ್ನು ವೀರಮಾಹೇಶ್ವರರು ಆದರಿಸಿದ್ದಾರೆ. ಬಾಹ್ಯದ್ದು ಕಾಯಿಕ ಭಕ್ತಿ. ಇದನ್ನು ಅಪರಾಭಕ್ತಿಯೆಂದು ಹೇಳುತ್ತಾರೆ. ಇದು ಕ್ರಿಯಾ ಪ್ರಧಾನವಾಗಿ ಪೂಜಾತ್ಮಕವಾಗಿ ಇರುತ್ತದೆ. ಆಂತರದ್ದು ಮಾನಸಿಕ ಭಕ್ತಿ. ಇದನ್ನು ಪರಾಭಕ್ತಿಯೆಂದು ಹೇಳುತ್ತಾರೆ ಇದು ಜ್ಞಾನಪ್ರಧಾನವಾಗಿ ಪ್ರಸನ್ನಾತ್ಮಕವಾಗಿ ಇರುತ್ತದೆ.

"ಸಿಂಹಾಸನೇ ಶುದ್ಧದೇಶೇ ಸುರಮ್ಯೇ ರತ್ನಚಿತ್ರಿತೇ
ಶಿವಲಿಂಗಸ್ಯ ಪೂಜಾ ಯಾ ಸಾ ಬಾಹ್ಯಾ ಭಕ್ತಿರುಚ್ಯತೇ !"

ಷಟ್‌ಸಮ್ಮಾರ್ಜನೆಗಳಿಂದ ಶುದ್ಧವಾದ ಪ್ರದೇಶದಲ್ಲಿ ಅತ್ಯಂತ ರಮ್ಯವಾದ ರತ್ನರಚಿತವಾದ ಸಿಂಹಾಸನದಲ್ಲಿ ಶಿವಲಿಂಗವನ್ನಿಟ್ಟು ಪೂಜಿಸುವುದೇ ಬಾಹ್ಯ ಭಕ್ತಿಯ ಲಕ್ಷಣ. ಬಾಹ್ಯಭಕ್ತಿಗೆ ದೇಶ ಕಾಲ ಕ್ರಿಯೆಗಳ ನೆರವಿರಬೇಕು. ಪರಿಶುದ್ಧ ಸ್ಥಳ, ಪಾವನಕಾಲ, ಪೂಜಾಪರಿಕರಗಳಿಲ್ಲದೆ ಬಾಹ್ಯ ಭಕ್ತಿ ಪ್ರಕಟವಾಗದು. ಅದರಿಂದಾಗಿ ಇದು ಸ್ಥೂಲವೆನಿಸಿತು. ಈ ಬಾಹ್ಯ ಪೂಜೆಯ ರೂಪದಲ್ಲಿ ಭಕ್ತಿಯನ್ನು ಬೀರಲು ಶಿವಲಿಂಗವನ್ನು ಆರಾಧಿಸಲು ಸಾಧಕನಿಗೆ ಸುಲಭ; ಉಪಯುಕ್ತ ಉಪಾಯ. ಮಾನವನ ಮನಸ್ಸು ಚೆಲುವಿಗೆ ಸೋಲುವುದು ಸಹಜ. ಆದರೆ ಭಕ್ತನಾಗುವವನ ಮನಸ್ಸು ಸತ್ಕಳಾರೂಪ ಶಿವಸೌಂದರ್ಯಕ್ಕಲ್ಲದೆ ಸಿಕ್ಕ ಚೆಲುವಿಗೆ ಒಲಿಯದು. ಸದ್ರೂಪ ಶಿವಲಿಂಗಕ್ಕೊಲಿದ ಸಾಧಕನು ಒಂದು ಶುದ್ಧ ಪ್ರದೇಶದಲ್ಲಿ ಪೂಜಾಮುಖದಲ್ಲಿ ತನ್ನ ಕಾಯಿಕಭಕ್ತಿಯನ್ನು ಸಲ್ಲಿಸುತ್ತಾನೆ; ಕಾಯಿಕ ಕೈಂಕರ್ಯವನ್ನು ಸಮರ್ಪಿಸುತ್ತಾನೆ; ಸೇವಾ ಶ್ರದ್ಧೆಯನ್ನು ಸತ್ಕ್ರಿಯಾರಸಾನುಭೂತಿಯನ್ನು ಹೊಮ್ಮಿಸುತ್ತಾನೆ. ಈ ಬಗೆಯ ಕಾಯಿಕಭಕ್ತಿಯು ಮುಂದಿನ ಮಾನಸಿಕ ಭಕ್ತಿಗೆ ಸಹಾಯಕವಾಗುತ್ತದೆ. ಕ್ರಿಯಾಲಿಂಗ ಪೂಜೆಯು ಕ್ರಿಯಾಯೋಗವೆಂದೆನಿಸುತ್ತದೆ. ಕ್ರಿಯಾಲಿಂಗವನ್ನು ಕರಸ್ಥಲದಲ್ಲಿ ಪೂಜಿಸುವುದೂ ಬಾಹ್ಯಭಕ್ತಿಯ ಸಲ್ಲಕ್ಷಣವಾಗಿದೆ.

"ಲಿಂಗೇ ಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂತು ಶಾಂಭವಂ
ಸ್ವಸ್ಥಂ ಮನಸ್ತಥಾ ಕೃತ್ವಾ ನ ಕಿಂಚಿಚ್ಚಿಂತಯೇದ್ಯದಿ ।
ಸಾಽಭ್ಯಂತರಾ ಭಕ್ತಿರಿತಿ ಪ್ರೋಚ್ಯತೇ ಶಿವಯೋಗಿಭಿಃ
ಸಾ ಯಸ್ಮಿನ್ ವರ್ತತೇ ತಸ್ಯ ಜೀವನಂ ಭ್ರಷ್ಟಬೀಜವತ್ ॥
ಬಹುನಾತ್ರ ಕಿಮುಕ್ತೇನ ಗುಹ್ಯಾದ್ಗುಹ್ಯತರಾ ಪರಾ
ಶಿವಭಕ್ತಿರ್ನ ಸಂದೇಹಸ್ತಯಾ ಯುಕ್ತೋ ವಿಮುಚ |"

ನಿರ್ಮಳ ನಿಷ್ಕಳ ಚೈತನ್ಯವೇ ಲಿಂಗ. ಆ ಬಗೆಯ ಲಿಂಗದಲ್ಲಿ ಪ್ರಾಣವನ್ನು, ಜೀವಕಳಾರೂಪಾದ ಪ್ರಾಣದಲ್ಲಿ ಶಿವಕಳಾರೂಪಾದ ಲಿಂಗವನ್ನು ಅಂಗವಿಸಿ ಅಚ್ಚುಮೆಚ್ಚಾಗಿ ಅಳವಡಿಸಿ ಒತ್ತಾಸೆಯಿಂದ ಒಂದಾಗುವಂತೆ ಒದಗಿಸಿ ಮನಸ್ಸನ್ನು ಸಮಾಧಾನಗೊಳಿಸಿ ಶಾಂತ ಮತ್ತು ನಿಶ್ಚಿಂತವಾಗಿಸಿ

ಮತ್ತೊಂದನ್ನು ನೆನೆಯದಿದ್ದರೆ ಅದು ಆಭ್ಯಂತರ ಭಕ್ತಿಯೆಂದು ಶಿವಯೋಗಿಗಳ ಸಮ್ಮತಿ. ಆ ಆಂತರಭಕ್ತಿ ಯುಳ್ಳವನ ಬಾಳು ಅದೊಂದು ಹುರಿದ ಬಿತ್ತು. ಅವನಿಗೆ ಮರಳಿ ಹುಟ್ಟಿಲ್ಲ. ಭಾವಪೂರ್ಣ ಭಕ್ತಿಯು ಬಗೆಗೆ ಹೆಚ್ಚು ಮಾತಾ· ಫಲವಿಲ್ಲ. ಅದು ಗೋಪ್ಯಕ್ಕೆ ಗೋಪ್ಯ, ಪರಕ್ಕೆ ಪರ. ಶಿವಭಕ್ತಿಗೆ ಸಾಟಿಯಿಲ್ಲ. ಶಿವಭಕ್ತಿಯುಳ್ಳವನು ಭವಪಾಶಗಳಿಂದ ವಿಮುಕ್ತನಾಗುತ್ತಾನೆ. ಈ ಸೊಲ್ಲಿನಲ್ಲಿ ಸಂದೆಗವಿಲ್ಲ.

ಮುಕ್ತಿ ಸಾಧನೆಗೆ ಹಲವು ಹೊಲಬುಗಳುಂಟು. ಬರೀ ಕ್ರಿಯಾ ಕುಶಲತೆಗಿಂತ ಜ್ಞಾನ ವಿಚಕ್ಷಣತೆಗಿಂತ ಜಪತಪಗಳಿಗಿಂತ ವ್ರತ ನಿಯತಿಗಳಿಗಿಂತ ಭಾವಪೂರ್ಣ ಭಕ್ತಿಯೋಗವು ಹೆಚ್ಚು ಮೆಚ್ಚಾದುದು, ಮಿಗಿಲಾದುದು. ಶಿವಯೋಗಕ್ಕೆ ಇದು ಚೈತನ್ಯಪ್ರಾಯವಾಗಿದೆ. ಪ್ರತಿಮಾನವನ ಪ್ರತಿನಿಧಿಯಾಗಿದೆ. ಪರಮಾತ್ಮ ಸಾಕ್ಷಾತ್ಕಾರಕ್ಕೆ ಸನ್ನಿಹಿತ ಸಾಧನವಾಗಿದೆ. ಹೆಚ್ಚು ಹಾರ್ದಿಕವಾಗಿದೆ. ಅಲ್ಲದೆ ಭಕ್ತಿಯಲ್ಲಿ ಆದರಲ್ಲಿಯೂ ಉಭಯ ಭಕ್ತಿಯಲ್ಲಿ ಸರ್ವಾಂಗ ಸಹಕಾರವಿರುತ್ತದೆ. ಸರ್ವಾಂಗ ಸಹಕಾರವಿರದೆ ಭಕ್ತಿಯೆಂದೆನಿಸದು.

ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯ ಸ್ವರೂಪವೇ ಲಿಂಗ. ಹೃದಯಾಕಾಶದಲ್ಲಿ ಹರಿದಾಡುವ ವಾಯುವೇ ಪ್ರಾಣ. ಆತ್ಮನು ಅದೇ ಆ ವಾಯು ಅಂದರೆ ಪ್ರಾಣತತ್ವದಲ್ಲಿ ಕೂಡಿದಾಗ ಮನವಾಗುತ್ತದೆ. ಸಚ್ಚಿದಾನಂದ ಸ್ವರೂಪವಾದ ಲಿಂಗದಲ್ಲಿ ಪ್ರಾಣವೂ ಪರಮಜ್ಞಾನರೂಪಾದ ಪ್ರಾಣದಲ್ಲಿ ಲಿಂಗವೂ ಎರಕಗೊಂಡಾಗ ಮನಸ್ಸ್ವಸ್ಥವಾಗುತ್ತದೆ. ಮತ್ತಾವುದನ್ನು ನೆನೆಯದಿರುತ್ತದೆ. ಹೀಗೆ ಈ ಮೂರೊಂದಾಗವುದೇ ಆಂತರ ಭಕ್ತಿ. ಚೈತನ್ಯ ಪ್ರಾಣ ಮನಗಳೊಂದಾಗುವುದಕ್ಕಿಂತ ಬೇರಿಲ್ಲ ಮುಕ್ತಿ.

ಬಾಹ್ಯಭಕ್ತಿಯಿಂದ ಕರಸ್ಥಲ ನೇತ್ರಸ್ಥಲಾದಿ ಅಂಗಾಂಗಗಳೆಲ್ಲ ಲಿಂಗರೂಪಾದರೆ ಆಂತರ ಭಕ್ತಿಯಿಂದ ಮನ ಪ್ರಾಣ ಭಾವಗಳು ಲಿಂಗರೂಪಾಗುವವು. ಇಂತಾದಾಗ ಭವದ ಭಯವಿಲ್ಲ. "ಅಂಗೈಯೊಳಗಣ ಲಿಂಗವ ಕಂಡ ಮನ ಹಾರಯ್ಸಿದಲ್ಲಿ, ಅಂಗೇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾದವು; ಅಂಜದಿರು ಮನವೆ, ಅಳುಕದಿರು ಮನವೇ, ಅಂಗಕ್ಕೂ ನಿನಗೂ ದೂರವೆನ್ನದಿರು; ಅಂಗದ ಕಂಗಳಲ್ಲಿರ್ಪ, ಮನದ ಮಧ್ಯದಲ್ಲಿರ್ಪ, ಪ್ರಾಣದ ಭಾವದ

ಲ್ಲಿರ್ಪ-ಅಂಗವುನ ಪ್ರಾಣವು ಭರಿತವಾದ ಬಳಿಕ ಅಂಗಮಧ್ಯವೇ ಪ್ರಾಣ' ಪ್ರಾಣ ಮಧ್ಯವೇ ಲಿಂಗ, ಇದು ಸತ್ಯ ಶಿವಬಲ್ಲ, ಶಿವನಾಣೆ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ."

ಈ ವಚನವು ಆಂತರಭಕ್ತಿಯನ್ನು ಬಿತ್ತರಿಸಿದ ರೇಣುಕವಾಣಿಗೆ ಭಾಷ್ಯ ದಂತಿದೆ. ಲಿಂಗೇಪ್ರಾಣಂ........ಎಂಬುದನ್ನು ಈ ವಚನವು ವಿವರಿಸಿದೆ. ಶ್ರೀಗುರು ಕರುಣಿಸಿದ ಇಷ್ಟ-ಪ್ರಾಣ-ಭಾವಲಿಂಗಗಳನ್ನು ಶಿಷ್ಯನು ಸದ್ಭಕ್ತಿ ಯಿಂದ ಅಂಗದ ಹೊರ ಒಳಗೆ ವೇಧಿಸಿಕೊಂಡ ಬಳಿಕ ಅಂಗಭಾವವಿಲ್ಲ, ಅಂಗಭಾವವಿಲ್ಲದಲ್ಲಿ ಜೀವಭಾವವಿಲ್ಲ. ಭವಭಯವಿಲ್ಲ. ಶಿಷ್ಯನ ಬಾಳು ಹುರಿದ ಬೀಜದಂತಾಗುವಲ್ಲಿ ಯಾವ ಸಂದೇಹವಿಲ್ಲ.

'ಎನ್ನ ಕರಸ್ಥಲದ ಮಧ್ಯದಲ್ಲಿ ಪರಮ ನಿರಂಜನ ಕುರುಹ ತೋರಿದ ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ; ಆ ಕಳೆಯ ಮಧ್ಯ ದಲ್ಲಿ ಮಹಾಜ್ಞಾನದ ಬೆಳಗ ತೋರಿದ, ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ, ಎನ್ನೊಳಗೆ ತನ್ನ ತೋರಿದ, ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾ ಗುರುವಿಗೆ ನಮೋ ನಮೋ ಎನುತಿರ್ಪೆನಯ್ಯಾ, ಅಖಂಡೇಶ್ವರಾ.'

ಅಂಗ-ಲಿಂಗಗಳ ಮತ್ತು ಪ್ರಾಣ-ಲಿಂಗಗಳ ಸಮರಸ ಭಾವವೇ ಬಾಹ್ಯಾಭ್ಯಂತರ ಭಕ್ತಿಯ ಹೆಗ್ಗುರುತು ಇದುಂಟಾಗುವ ಹೆದ್ದಾರಿಯನ್ನು ತೋರಿದೆ ಈ ವಚನ.

ಕಾಯ ಮನ ಪ್ರಾಣಗಳ ಮೋಹವಿರುವುದು ಭಕ್ತಿ ಪಥಕ್ಕೆ ಸಲ್ಲದು. ಬಾಹ್ಯ ಭಕ್ತಿಯಿಂದ ಶಿವಲಿಂಗಾರ್ಚನಾಸಕ್ತಿಯಿಂದ ತನುವಿನ ಹಂಗನ್ನು ತೊರೆದಿರಬೇಕು. ಚಿಲ್ಲಿಂಗಾರಾಧನೆಯರೂಪ ಆಂತರ ಭಕ್ತಿಯಿಂದ ಮನ ಪ್ರಾಣಗಳ ಮೋಹ ಮಾಯೆಗಳನ್ನು ಹರಿದಿರಬೇಕು, ಕಾಯದಲ್ಲಿ ಕಳವಳ ವಿರಲು, ಪ್ರಾಣದಲ್ಲಿ ಮಾಯೆಯಿಡಲು ಏತರ ಮನ ? ಇದೇತರ ನಿರ್ವಾಣ ? ಕಾಯದ ಕಳವಳಕ್ಕೆ ಪ್ರಾಣದ ಮಾಯೆಗೆ ಒಳಗಾಗಿದ್ದರೆ ಸಂಸಾರ ಸಂಗ ಬಿಡದು. ಸಜ್ಜನಿಕೆ ಸಮನಿಸದು; ಲಿಂಗ ಸಂಗವುಂಟಾಗದು. ಆದ್ದರಿಂದ ಅಂಗಮನ ಪ್ರಾಣಗಳ ಹೋರಾಟವನ್ನು ಲಿಂಗಭಕ್ತಿಯಿಂದ ಗೆಲ್ಲಬೇಕು.

ಮನದ ಜೀವಾಳ ಪ್ರಾಣ. ಪ್ರಾಣವನ್ನು ತಿದ್ದದೆ ಮನಶುದ್ಧವಾಗದು. ಮನ ಶುದ್ಧವಾಗದೆ ತನು ಶುದ್ಧವಾಗದು ತನು ಶುದ್ಧವಾಗದೆ ಹುಟ್ಟುಸಾವಿನ

ಬಿತ್ತು ನಷ್ಟವಾಗದು. 'ದೇಹಭಾವವಳಿದಲ್ಲದೆ ಜೀವಭಾವವಳಿಯದು. ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು. ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು. ಅರಿವು ತಲೆದೋರದಲ್ಲದೆ ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು. ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ ತಿಳಿಯಬಲ್ಲರೆ ಗೊಹೇಶ್ವರ ಲಿಂಗದರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ!'

ಭಕ್ತಿಭಾವವಳವಡಲು ದೇಹಭಾವ ಜೀವಭಾವಗಳು ಅಡ್ಡಾಗಿರುತ್ತವೆ. ಅವೆರಡು ತೊಲಗದೆ ಭಕ್ತಿಭಾವ ಬಾರದು. ಅರಿವು ತೋರಿ ಕುರುಹು ತೂರಿ ಮಾಯು ಹಿಂಗಬೇಕಾದರೆ ಭಕ್ತಿಭಾವವು ಆಳವಟ್ಟಾಗಬೇಕು. ತನುತೋಟವನ್ನು ಹಸಗೆಡಿಸುವ ಮಾಯೆ ಪ್ರಾಣದಲ್ಲಿ ಹುದುಗಿರುತ್ತದೆ. ಅದು ಹಿಂಗಿ ಹೋಗಬೇಕಾದರೆ ತನುಮನಗಳಲ್ಲಿ ಭಕ್ತಿಭಾವವು ಇದ್ದಾಗಬೇಕು.

ಬಾಹ್ಯಭಕ್ತಿಯಿಂದ ಆಂತರಭಕ್ತಿಯುಂಟಾಗುತ್ತದೆ. ಆಂತರಭಕ್ತಿಯಿಂದ ಮನ ಪ್ರಾಣಗಳು ಪರಿಶುದ್ಧವಾಗುತ್ತವೆ. ಅಂತಾದಬಳಿಕ ಪರಂಜ್ಯೋತಿಲಿಂಗ ದರ್ಶನವಾಗುತ್ತದೆ.

ತನುಮನಗಳ ಕಲ್ಮಷಗಳನ್ನು ತೊಳೆದು ಹಸನಾಗಿಸಬೇಕಾದರೆ ಭಕ್ತಿಯೆಂಬ ತಿಳಿಜಲ ಬೇಕು. ಆ ತಿಳಿಜಲವು ಪ್ರವಹಿಸಬೇಕಾದರೆ ಅಥವಾ ಹೊರಹೊಮ್ಮಬೇಕಾದರೆ ಲಿಂಗವೆಂಬ ಗಂಗೋತ್ರಿ (ಉಗಮಸ್ಥಾನ) ಬೇಕು.

"ಪ್ರಸಾದಾದೇವ ಸಾ ಭಕ್ತಿಃ ಪ್ರಸಾದೋ ಭಕ್ತಿಸಂಭವಃ
ಯಥೈವಾಂಕುರತೋ ಬೀಜಂ ಬೀಜತೋವಾಯಥಾಂಕುರಃ।
ಪ್ರಸಾದಪೂರ್ವಿಕಾ ಯೇಯಂ ಭಕ್ತಿರ್ಮುಕ್ತಿವಿಧಾಯಿನೀ
ನೈವ ಸಾ ಶಕ್ಯತೇ ಪ್ರಾಪ್ತುಂ ನರೈರೇಕೇನ ಜನ್ಮನಾ।
ಅನೇಕಜನ್ಮ ಶುದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ
ವಿರಕ್ತಾನಾಂ ಪ್ರಬುದ್ಧಾನಾಂ ಪ್ರಸೀದತಿ ಮಹೇಶ್ವರ :।
ಪ್ರಸನ್ನೇ ಸತಿ ಮುಕ್ತಃ ಸ್ಯಾನ್ಮುಕ್ತಃ ಶಿವಸಮೋ ಭವಾತ್
ಅಲ್ಪಭಾವೋಽಪಿ ಯೋ ಮರ್ತ್ಯಸ್ತಸ್ಯ ಜನ್ಮತ್ರಯಾತ್ಪರಂ।
ನ ಯೋನಿಯಂತ್ರಪೀಡಾ ವೈ ಭವನ್ನೈವಾತ್ರ ಸಂಶಯಃ॥"

ಭಕ್ತಿಗೂ ಪ್ರಸಾದ (ಅನುಗ್ರಹ)ಕ್ಕೂ ಅನ್ಯೋನ್ಯ ಭಾವವಿದೆ; ಬೀಜಾಂಕುರ ನ್ಯಾಯವಿದೆ. ಶಿವಪ್ರಸಾದವಿಲ್ಲದೆ ಶಿವಭಕ್ತಿ ಜನಿಸದು. ಭಕ್ತಿ ಭಾವವಿಲ್ಲದೆ ಶಿವಪ್ರಸಾದವುಂಟಾಗದು.

'ನೀನೊಲಿಯುತ್ತೇ ಪುಣ್ಯ, ನೀನೊಲ್ಲದುದೇ ಪಾಪ; ಕಂಡಯ್ಯಾ. ನೀನೊಲಿದವನೇ ನಿಮ್ಮನರಿವನು. 'ಪ್ರಸಾದಾದ್ದೇವತಾ ಭಕ್ತಿಸಂಭವಾಃ। ನೀನೊಲಿದವನೇ ಧನ್ಯ, ಜಗಕ್ಕೆ ಪಾವನ, ಕೂಡಲಸಂಗಮದೇವಾ.' ಎಂದು, ಬಸವಣ್ಣನು ಇದನ್ನೇ ಸಮರ್ಥಿಸಿದ್ದಾನೆ.

ಮಾನವನ ಕಾಯ ಕರಣಗಳಲ್ಲಿ ಅನೇಕ ಸೂತಕ ಪಾತಕಗಳಿರುತ್ತವೆ. ಕಾಮಕ್ರೋಧಾದಿ ದೋಷ ದುರಿತಗಳಿರುತ್ತವೆ. ಇವೆಲ್ಲ ಇಲ್ಲದಂತಾಗ ಬೇಕಾದರೆ ಶ್ರೀ ಗುರುವಿನ ಅಥವಾ ಶಿವನ ಪ್ರಸಾದ ಬೇಕು. ಕಿವಿ, ತೊವಲು, ಕಣ್ಣು, ನಾಲಗೆ, ಮೂಗುಗಳ ದೋಷಗಳು ದೂರಾಗಬೇಕಾದರೆ ಪರಿವಿಡಿದು ಗುರುವಚನ, ಗುರುಸ್ಪರ್ಶನ, ಗುರುದರ್ಶನ, ಗುರುವಿನ ಒಕ್ಕು ಮಿಕ್ಕ ಪ್ರಸಾದ, ಗುರು, ಲಿಂಗ ಪ್ರಸಾದಪುಷ್ಪಗಳ ರೂಪದಲ್ಲಿ ಪಂಚ ಪ್ರಸಾದಗಳು ಅತ್ಯಗತ್ಯ. ಅಂತೆಯೇ ಮನದ ಸೂತಕ ಪರಿಹಾರವಾಗಬೇಕಾದರೆ ಶ್ರೀ ಗುರುವಿನ ಮಂತ್ರೋಪದೇಶ ಪ್ರಸಾದ ಅಥವಾ ಶಿವಾನುಭಾವ ಪ್ರಸಾದ ಅತ್ಯಗತ್ಯ. ಈ ಆರು ಪ್ರಸಾದಗಳಿಂದ ಆರಾಧಕನಿಗೆ ಆರಾಧ್ಯ ದೇವತೆಯಲ್ಲಿ ಭಕ್ತಿಯುಂಟಾಗುತ್ತದೆ. ಆ ಪ್ರಸಾದಗಳನ್ನು ಪಡೆಯಬೇಕಾದರೆ ಮೊದಲು ತನ್ನಲ್ಲಿ ಮುಗ್ಧಭಕ್ತಿಯಿರಬೇಕು. ಇದರಿಂದ ಆ ಪ್ರಸಾದ ಪೂರ್ವಿಕವಾದ ಪೂರ್ಣಭಕ್ತಿಯು ಅಳವಡುತ್ತದೆ; ಆ ಪ್ರಾಸಾದಿಕ ಭಕ್ತಿಯೇ ಮುಕ್ತಿಗೆ ಮೂಲಕಾರಣವಾಗುತ್ತದೆ. ಹೃದಯಪ್ರಣತಿಗೆ ತೈಲದಂತಿರುತ್ತದೆ; ತುಪ್ಪ ದಂತಿರುತ್ತದೆ.

ಗುರುವಿನದು ಪ್ರಸಿದ್ಧ ಪ್ರಸಾದ. ಲಿಂಗದ್ದು ಶುದ್ಧಪ್ರಸಾದ, ಜಂಗ ಮದ್ದು ಸಿದ್ಧಪ್ರಸಾದ. ಈ ಮೂರು ಪ್ರಸಾದವನ್ನು ಪಡೆದವನಿಗೆ ಪರಾ ಭಕ್ತಿಯುಂಟಾಗುತ್ತದೆ. ಇದು ಲಿಂಗಭಕ್ತನಿಗೆ ಸಾಧ್ಯ. ಲಿಂಗಭಕ್ತರಾಗದ ನರರಿಗೆ ಒಂದು ಜನ್ಮಕ್ಕೆ ಇದು ಸಾಧ್ಯವಿಲ್ಲ. ಇವರಿಗೆ ಅನೇಕ ಜನ್ಮಗಳ ಶುದ್ಧಿ ಬೇಕು. ಶ್ರುತಿ ಸ್ಮೃತಿಗಳಲ್ಲಿ ನಿರ್ದಿಷ್ಟವಾದ ಆಚಾರಗಳನ್ನು ಆಚರಿಸಬೇಕು. ವಿರತಿಭಾವವಿರಬೇಕು. ಪ್ರಬುದ್ಧರಾಗಿರಬೇಕು. ಇಂಥವರಿಗೆ

ಪರಮೇಶ್ವರನು ಪ್ರಸನ್ನನಾಗುತ್ತಾನೆ. ಆಗ ಈತನು ಶಿವಭಕ್ತಿಗೆ ಶಿವಭಕ್ತ ಪಥಕ್ಕೆ ಸಲ್ಲುತ್ತಾನೆ. ಭವದಿಂದ ಮುಕ್ತನಾಗಿ ಶಿವಸಮನಾಗುತ್ತಾನೆ. ಶಿವ ಸ್ವರೂಪನಾಗುತ್ತಾನೆ. 'ಮಮಚಿಂತಾ ಸಮಾಕ್ರಾಂತೋ ಮಮರೂಪೋ ಭವೇದ್ಧ್ರುವಂ' ಎಂಬುದಾಗಿ ವೀರಾಗಮದಲ್ಲಿ ಸಾಕ್ಷಾತ್ ಶಿವನೆ ಹೇಳಿದ್ದಾನೆ. ಇನ್ನು ಅಪೂರ್ಣಭಕ್ತಿಯುಳ್ಳ ಭವಿಗಳಿಗೆ ಮೂರು ಜನ್ಮಕ್ಕೆ ಮುಕ್ತಿಯಾಗುತ್ತದೆ. ಅದೇ ಪೂರ್ಣಭಕ್ತಿಯುಳ್ಳ ವೀರಶೈವರಿಗೆ ಒಂದೇ ಜನ್ಮಕ್ಕೆ ಮುಕ್ತಿಯುಂಟಾಗುತ್ತದೆ. ಪೂರ್ಣಭಕ್ತಿಯು ಪೂರ್ಣಾವೇಶದಲ್ಲಿರುವವನಿಗೆ ಭವ ರೋಗವಂಟದು. ಭವದ ಭಾವವೂ ಇರದು ಪತಿಸುಖದಲ್ಲಿರುವ ಸತಿಗೆ ತವರಿನ ತೊಡರು ನೆನಹುಗಳಿಲ್ಲದಿರುವಂತೆ ಶಿವಸುಖದಲ್ಲಿ ಶಿವಾನುಗ್ರಹದಲ್ಲಿ ಇರುವ, ಶಿವಭಕ್ತನಿಗೆ ತವರಿನಂತಿರುವ ಭವದ ಮತ್ತು ಪ್ರಕೃತಿಯ ಸ್ಮರಣೆಯೂ ಇರದು. ಪ್ರಾಪಂಚಿಕ ಯಾವ ಪೀಡೆಯೂ ಆತನನ್ನು ಪರಿತಪಿಸದು. ಮರಳಿ ಆತನು ಈ ಯೋನಿಯಂತ್ರಕ್ಕೆ ಸಿಕ್ಕನು. 'ಏಕೇನ ಜನ್ಮನಾ ಮುಕ್ತಿರ್ವೀರಾಣಾಂತು ಮಹೇಶ್ವರಿ। ಇತರೇಷಾಂ ತು ಶೈವನಾಂ ಮುಕ್ತಿರ್ಜನ್ಮತ್ರಯೇ ಭವೇತ್।' ಎಂದು ಉದ್ಘೋಷಿಸಿದೆ ವೀರ ಶಿವಾಗಮ ವೀರವಾಣಿ! ವೀರಶೈವ ಭಕ್ತನಿಗೆ ಅಂತಹ ಮಹೋನ್ನತ ಆದರ್ಶವಿದೆ. ಆ ಮಹಾದೇವನ ಆ ಮಹಾಸುಖವನ್ನು ಪಡೆವ ಮಹದಾಸಕ್ತಿಯಿದೆ. ಮಹಾ ಭಕ್ತಿಯಿದೆ. ಮನ ಮತ್ತೆಲ್ಲಿಯೂ ತುಳುಕದಂತಹ ಮಹಾ ಏಕಾಗ್ರತೆಯಿದೆ. ಆ ಏಕಾಗ್ರತೆಯನ್ನು ಸಾಧಿಸುವ ಸದ್ರೂಪ-ಚಿದ್ರೂಪ ಶ್ರೀಗುರು-ಶಿವಲಿಂಗಗಳೆರಡರ ಪ್ರಸಾದ ನೆರವನ್ನು ಆತನು ಪಡೆದಿರುತ್ತಾನೆ. ಆದರಿಂದಾಗಿ ಆತನ ಕಾಯ ಕಳವಳಿಸದು; ಚಿತ್ತ ಚಂಚಲಿಸದು. ಆತನ ಆ ಭಾವಪೂರ್ಣಭಕ್ತಿ ಸಾಂಗವಾಗಿ ಸಾಗುತ್ತದೆ.

"ಸಾಂಗಾऽನ್ಯೂನಾ ಚ ಯಾ ಸೇವಾ ಸಾ ಭಕ್ತಿರೀತಿ ಕಥ್ಯತೆ"
ಸಾಂಗವೂ ಅನ್ಯೂನವೂ ಆದ ಸೇವೆಯು ಭಕ್ತಿಯೆನಿಸುತ್ತದೆ.
ಆಪ್ತ, ಅಂಗ, ಜ್ಞಾನ ಸದ್ಭಾವಗಳಿಂದ ಭರಿತವಾದ ಸೇವೆಯೇ

ಸಾಂಗಸೇವೆ, ಅನ್ಯೂನ ಸೇವೆ, ತ್ರಿಕರಣ ಪೂರ್ಣಕವಾಗಿ **ಮಾಡುವ ಸೇವೇಯೇ ಪೂರ್ಣ ಭಕ್ತಿ.** ಅಂತೆಯೇ

"ಸಾ ಪುನರ್ಭಿದ್ಯತೇ ತ್ರೇಧಾ ಮನೋವಾಕ್ಕಾಯ ಸಾಧನೈಃ
ಶಿವರೂಪಾದಿ ಚಿಂತಾ ಯಾ ಸಾ ಸೇವಾ ಮಾನಸಿ ಸ್ಮೃತಾ
ಜಪಾದಿರ್ವಾಚಿಕೀ ಸೇವಾ ಕರ್ಮಪೂಜಾ ಚ ಕಾಯಿಕೀ ।"

ಮನ ಮಾತು ಮೈಗಳು ಶಿವಸೇವೆಯಲ್ಲಿ ತಲ್ಲೀನವಾಗಿರುವುದೇ ತ್ರಿಕರಣ ಸೇವೆ ಅಥವಾ ಭಕ್ತಿ. ಮನದಲ್ಲಿ ಶಿವನನ್ನು ನೆನೆಯಬೇಕು; ವಾಚಕ್ರಿಯದಲ್ಲಿ ಶಿವಮಂತ್ರವನ್ನು ಜಪಿಸಬೇಕು. ಕಾಯಕದಲ್ಲಿ ಶಿವಪೂಜೆಯನ್ನೆಸಗಬೇಕು. ಅಂತಾದಾಗ ತ್ರಿಕರಣಗಳು ವಿಷಯಗಳಿಗಾಗಿ ವಿಚಲಿಸದಂತಿರುತ್ತವೆ. ಅರ್ಚಿಸದೆ ಪಂಚೇಂದ್ರಿಯಗಳು ನಿಶ್ಚಂಚಲವಾಗುವು. ಮಂತ್ರವನ್ನು ಜಪಿಸದೆ ವಾಣಿ ವಿಶುದ್ಧವಾಗದು. ಮಂತ್ರಾರ್ಥವನ್ನು ನೆನೆಯದೆ ಮನದ ಚಾಂಚಲ್ಯ ಉಡುಗದು; ಏಕಾಗ್ರತೆ ಉಳಿಯದು. ಏಕಾಗ್ರತೆ ಉಳಿಯದೆ ಏಳ್ಗೆಯಾಗದು.

ಮನಕ್ಕೆ ಅವಧಾನ ಆಗತ್ಯ. ಅದು ಒದಗಬೇಕಾದರೆ ಮಂತ್ರಜಪ-ಲಿಂಗಪೂಜೆಗಳು ಅತ್ಯಗತ್ಯ. ಈ ಸಾಧನೆಗಳಿಂದ ತ್ರಿಕರಣಗಳಲ್ಲಿ ಸತ್ಯಶಕ್ತಿ ಸಮನಿಸುತ್ತದೆ; ಸತ್ಪರಿಣಾಮವುಂಟಾಗುತ್ತದೆ. ಕ್ರಿಯಾಪೂಜೆಯಲ್ಲಿ ನಿರತವಾದ ಪಂಚೇಂದ್ರಿಯಗಳು ಅನ್ಯ ವಿಷಯಗಳನ್ನು ಮರೆಯುತ್ತವೆ. ಮಂತ್ರಾಭ್ಯಾಸದಲ್ಲಿ ನಿರತವಾದ ವಾಕ್ಕು ಮತ್ತೊಂದನ್ನು ಲೆಕ್ಕಿಸದು. ಮಂತ್ರಾರ್ಥರೂಪಾದ ಶಿವನ ನೆನಹಿನಲ್ಲಿ ಹುದುಗಿದ ಮನಕ್ಕೆ ಮರ್ತ್ಯದ ಚಿತ್ರವೇ ಕಾಣದು. ಮತ್ತೊಂದರ ಚಿಂತೆಯೇ ಬಾರದು. ಮನಕ್ಕೆ ಶಿವಚಿಂತೆಯೇ ಕಾಸಲು ಹೊದೆಯಲು ಸಾಕಾಗುವಷ್ಟಿರುತ್ತದೆ. ತ್ರಿಕರಣಗಳು ತುಂಬಿ ಮಾಡುವ ಭಕ್ತ ತುಂಬಿ ಹರಿವ ತೊರೆಯಂತೆ! ಭಕ್ತಿರಸದ ತೇವ ತ್ರಿಕರಣಗಳಲ್ಲಿರುತ್ತದೆ. ಭಕ್ತಿರತಿಯಿಂದ ಭರಿತವಾಗಿರುತ್ತದೆ.

'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ,........' ಈ ವಚನವು ಪೂರ್ಣ ತ್ರಿಕರಣ ಭಕ್ತಿಗೆ ಕುರುಹಾಗಿದೆ. ಶಿವನ ನಾಮಾಮೃತವನ್ನು ಆಸ್ವಾದಿಸುವ ಭಾಗ್ಯ ವಾಕ್ಕಿನದಾಗಬೇಕು. ಶಿವಸೌಂದರ್ಯವನ್ನು ನಿಟ್ಟಿಸುವ ಸೌಭಾಗ್ಯ ನೇತ್ರಕ್ಕೆ, ಮುಟ್ಟುವ ಸೌಭಾಗ್ಯತ್ವಕ್ಕಿಗೆ ಇರಬೇಕು. ಇದು ಕಾಯಿಕ ಭಕ್ತಿಯ ಕುರುಹು. ಚಕೋರವು ಚಂದ್ರಮನ ಚಿಂತಿಸುವಂತೆ ಚಿತ್ತವು ಚಂದ್ರಧರನ ನೆನಹಿನಲ್ಲಿ

ತನ್ನ ತಾ ಮರೆತಿರಬೇಕು. ತ್ರಿಕರಣಗಳಲ್ಲಿ ವಂಚನೆಗಿಂಬಿಲ್ಲದಂತಿರಬೇಕು. ಕಾಯಲಿಂಗ, ವಚನಲಿಂಗ, ಮನಸಲಿಂಗವಾಗಬೇಕಾದರೆ ತ್ರಿವಿಧ ಭಕ್ತಿರತಿಯಲ್ಲಿ ತಲ್ಲೀನವಾಗಿರಬೇಕು. ಮನದಲ್ಲಿ ಶಿವನ ಮರೆವೆಗಿಂಬಿರಬಾರದು. ನಾಲಗೆಗೆ ಹೆರರವನ್ನು ಹಾಡುವ ಹಂಬಲವಿರಬಾರದು. ಅಂಗಕ್ಕೆ ಅನ್ಯಾರಾಧನೆಯಲ್ಲಿ ತನ್ನ ಮೀಸಲು ಬೀಸರಾಗಬಾರದು. ನಡೆ–ನುಡಿ–ನೆನಹುಗಳನ್ನು ಮೀಸಲಾಗಿರಿಸುವುದೇ ಕಾಯವಾಙ್ಮನಗಳ ಕಟ್ಟಳ್ಕರತೆಯ ಕುರುಹು. ಅರ್ಚಿಸುವವನ ನಡೆ ಚೆನ್ನ. ಜಪಿಸುವವನ ನುಡಿ ಚೆನ್ನ. ಶಿವಧ್ಯಾನದಲ್ಲಿರುವವನ ನೆನಹು ಚೆನ್ನ. ಆತನದು ಸತ್ಯಸಂಕಲ್ಪ. ವಿಷಯಾರಾಧನೆಯಿಂದ ತನುವನ್ನು ನೋಯಿಸಬಾರದು. ವಿಷಯಸ್ಮರಣೆಯಿಂದ ಮನವನ್ನು ನೋಯಿಸಬಾರದು. ವಿಷಯಗಳ ಬೇಡಿ ಪರನಿಂದೆಗಳನಾಡಿ ನಾಲಗೆಯ ನೋಯಿಸಬಾರದು. ಅದು ತ್ರಿವಿಧ ಭಕ್ತಿಯ ಹೃದಯ, ಮಂಗಳ ಧ್ಯೇಯ.

"ಬಾಹ್ಯಮಾಭ್ಯಂತರಂ ಚೈವ ಬಾಹ್ಯಾಭ್ಯಂತರಮೇವ ವಾ
ಮನೋವಾಕ್ಕಾಯ ಭೇದೈಶ್ಚ ತ್ರಿಧಾ ತದ್ಭಜನಂ ವಿದುಃ।
ಅನ್ಯಾತ್ಮವಿದಿತಂ ಬಾಹ್ಯಂ ಶಂಭೋರಭ್ಯರ್ಚನಾದಿಕಂ
ತದೇವ ತು ಸ್ವಸಂವೇದ್ಯಮಾಭ್ಯಂತರಮುದಾಹೃತಂ।
ಮನೋ ಮಹೇಶಪ್ರವಣಂ ಬಾಹ್ಯಾಭ್ಯಂತರಮುಚ್ಯತೇ"

ಆ ಮನೋವಾಕ್ಕಾಯ ರೂಪ ತ್ರಿಕರಣಭಕ್ತಿಗಳಲ್ಲಿ ಒಂದೊಂದು ಮತ್ತೆ ಮೂರು ಮೂರು ಬಗೆಯಾಗುತ್ತವೆ: ಅವನ್ನು ಬಾಹ್ಯ, ಅಭ್ಯಂತರ, ಬಾಹ್ಯಾಭ್ಯಂತರ–ಎಂದು ಹೇಳುತ್ತಾರೆ. ಇವುಗಳ ಲಕ್ಷಣವಿಂತಿದೆ:

ತನಗನ್ಯರ ಕಣ್ಣಿಗೆ ಕಾಣುವಂತೆ ಮಾಡುವ ಶಿವಪೂಜಾದಿಗಳೇ ಬಾಹ್ಯಭಕ್ತಿ, ಅನ್ಯರ ಕಣ್ಣಿಗೆ ಕಾಣದಂತೆ ಅರ್ಚನವನ್ನು ಅನ್ಯರ ಕಿವಿಗೆ ಕೇಳದಂತೆ ಜಪವನ್ನು ತನಗೆ ಮಾತ್ರ ತಿಳಿಯುವಂತೆ ಮಾಡುವುದೇ ಆಂತರಭಕ್ತಿ. ಹೊರಗೂ ಒಳಗೂ ತ್ರಿಕರಣಗಳು ತುಂಬಿ ಮಾಡುವ ಸೇವೆಯೇ ಬಾಹ್ಯಾಭ್ಯಂತರ ಭಕ್ತಿ.

ಹೊರಗೆ ಮಾತ್ರ ಅರ್ಚಿಸಿ ಒಳಗೆ ಮನಮುಟ್ಟದಿದ್ದರೆ ಮನನಂಬದಿದ್ದರೆ ಫಲವಿಲ್ಲ. ಇದ್ದಲಿಯ ತೊಳೆದಂತೆ ವ್ಯರ್ಥ. ಕರ್ಮದ ಕಪ್ಪು

ಮಾಣದು. ನಂಬುಗೆಯಿಲ್ಲದ ಪೂಜೆ ಎಷ್ಟು ಇಂಬಾಗಿದ್ದರೂ ಅದೆಲ್ಲ ಡಾಂಬಿಕ. ಹೆಂಡದ ಕೊಡವನ್ನು ಹೊರಗೆ ತೊಳೆದಂತೆ! ಮನದ ಕಾಳಿಕೆ ಕಳೆಯದು. ಅಂತೆಯೇ ಒಳಗೆ ಧ್ಯಾನಿಸಿ ಹೊರಗೆ ಅಲ್ಲದಾಟವನಾಡಿದರೆ ಅದೂ ಹೊಲ್ಲ; ಸಲ್ಲ. ಅಮೃತ ತುಂಬಿದ ಕೊಡದಲ್ಲಿ ವಿಷಬಿಂದು ಬೆರತಂತೆ! ಹಾಲ ಹರವಿಯಲ್ಲಿ ಹುಳಿಯು ಹಿಂಡಿದಂತೆ! ಅಥವಾ ಹಾಲಹರವಿಗೆ ಡೊಣ್ಣೆಯ ಏಟು ಹಾಕಿದಂತೆ! ಭಕ್ತಿಯ ಬಾಳಿನಲ್ಲಿ ಒಳ ಹೊರಗೂ ಸಮರತಿ ಸಮಕಳೆ ಸಮಸಮವಾಗಿ ಸೂಸಬೇಕು. ಚಿತ್ತ ಅತ್ತಿಯ ಹಣ್ಣಾಗಿರಬಾರದು. ಕಾಯ ಕಳೆಗುಂದಿರಬಾರದು. ಆಚಾರದಿಂದ ವಂಚಿತವಾಗಿರಬಾರದು. ಒಳ ಹೊರ ಗೊಂದಾಗಿ ಹೆಂಪುಗೊಳ್ಳಬೇಕು; ಪೆಂಪುಗೊಳ್ಳಬೇಕು. ಮನವೆಂಬ ಬತ್ತಿಗೆ ಧ್ಯಾನದೀಪ್ತಿ ಅಂಟಿ ಬೆಳಗುತ್ತಿರಬೇಕು :

**" ಮನೋ ಮಹೇಶಧ್ಯಾನಾಢ್ಯಂ ನಾನ್ಯಧ್ಯಾನರತಂ ಮನಃ
ಶಿವನಾಮರತಾ ವಾಣೀ ವಾಙ್ಮತಾ ಚೈವ ನೇತರಾ ।
ಲಿಂಗೈಃ ಶಿವಸ್ಯ ಚೋದ್ದಿಷ್ಟೈಃ ತ್ರಿಪುಂಡ್ರಾದಿಭಿರಂಕಿತಃ
ಶಿವೋಪಚಾರನಿರತಃ ಕಾಯಃ ಕಾಯೋ ನ ಚೇತರಃ ॥ "**

ಶಿವಧ್ಯಾನದಲ್ಲಿ ನಿರತವಾದ ಮನವೇ ಮನ; ಶಿವೇತರ ಧ್ಯಾನದಲ್ಲಿ ನಿರತವಾದ ಮನ ಮನವಲ್ಲ. ಆ ಮನದಲ್ಲಿ ಶಿವವಿಲ್ಲ; ಶಿವನಿಲ್ಲ. ಶಿವ ನಾಮ ಸಂಕೀರ್ತನರತವಾಣಿಯೇ ವಾಣಿ. ಇದಕ್ಕನ್ಯವಾದುದು ವಾಣಿ ಯಲ್ಲ. ಶಿವಾಗಮಕ್ಕೆ, ಶಿವಮಂತ್ರಕ್ಕೆ ವಾಣಿ ಮೀಸಲಾಗಿರಬೇಕು. ಸಕ್ಕ ರೆಯ ಸವಿಗಂಡ ಜಿಹ್ವೆಯಂತಿರಬೇಕು. ಶಿವನಾಮಾಮೃತವನ್ನು ಸವಿಯುವ ನಾಲಗೆ ನಿಜಕ್ಕೂ ಧನ್ಯ.

ಉದ್ದಿಷ್ಟವೂ ನಿರ್ದಿಷ್ಟವೂ ಆದ ವಿಭೂತಿಧಾರಣ ರುದ್ರಾಕ್ಷಿಧಾರಣ ಗಳನ್ನು ಮಾಡಿ ಶಿವೋಪಚಾರದಲ್ಲಿ ನಿರತವಾದ ಕಾಯವೇ ಕಾಯ. ಈ ಈ ಶಿವಚಿನ್ಹೆಗಳಿಲ್ಲದ ಕಾಯ ಅದೊಂದು ಕಾರಾಗಾರ. ತನ್ನನ್ನು ಎಂದಿಗೂ ಕಾಯದ ಭಾರ.

ತ್ರಿಕರಣಗಳು ಶಿವಾರ್ಥವಾಗಿ ಶಿವಕಳೆಯುಳ್ಳವುಗಳಾಗಬೇಕಲ್ಲದೆ ಅನರ್ಥವಾಗಬಾರದು. ತ್ರಿಕರಣಗಳು ಶಿವತತ್ತ್ವವೆಂಬ ಪರುಷಮಣಿಯನ್ನು ಸೋಂಕಿ ಅಪರಂಜಿಯಾಗಬೇಕು. ಒಳಗಡಗಿದ ಆ ಒಳಿತನ್ನು ಒಡಗೂಡಲು ಮೈ ಮಾತು ಮನಗಳು ಒಲವುಳ್ಳವುಗಳಾಗಬೇಕು. ಒಳಿತನ್ನುಂಟುಮಾಡುವ ಆ ಶಿವತತ್ತ್ವವೇ ಇವುಗಳ ಜೀವಾಳವಾಗಿರಬೇಕು. ಒಳಿತಿನ ಬಳಿದಪ್ಪಿ ಒಂದಿನವೂ ಇರಬಾರದು. ಹಸನುಬಾಳಿನ ಹೊಲಬುಗೆಟ್ಟು ಹರಿಯುಬಾರದು. ತ್ರಿವಿಧ ಭಕ್ತಿಯಿಲ್ಲದ ಬಾಳು ತೈಲವಿಲ್ಲದ ದೀಪದಂತೆ ನಿಸ್ತೇಜ. ಶಿವತೇಜವಿಲ್ಲದ ಹೃದಯ ರವಿಯಿಲ್ಲದ ತಾವರೆಯಂತೆ ಮುದುಡಿದ ಮೊಗ್ಗು ; ದಿನಕರನಿಲ್ಲದ ದಿನ. ಕಣ್ಣಿಲ್ಲದ ಮೊಗ. ಶಿವಭಕ್ತಿರಸವಿಲ್ಲದ ಬಾಳು ನೀರಿಲ್ಲದ ಬಾವಿ. ಭಕ್ತಿಶಕ್ತಿಯಿಲ್ಲದ ಜೀವನ ಸೂತ್ರವಿಲ್ಲದ ಬೊಂಬೆ. ಭಕ್ತಿಕಲ್ಪತರುವಿಲ್ಲದ ತ್ರಿಕರಣ ಅದೊಂದು ದಗ್ಧಾರಣ್ಯ.

ಶಿವಾರ್ಚನ ಭಕ್ತಿಯಿಂದ ಸಜ್ಜನನಾಗುತ್ತಾನೆ ; ಸಂದರ್ಶನೀಯನಾಗುತ್ತಾನೆ. ಶಿವನಾಮಾಭ್ಯಾಸದಿಂದ ಶಿವಕವಿಯಾಗುತ್ತಾನೆ ; ಭಾವಪೂರ್ಣ ಶಿವಗೀತವ ಹಾಡುತ್ತಾನೆ. ಶಿವತತ್ತ್ವಧ್ಯಾನದಿಂದ ಸದ್ಭಾವಿಯಾಗುತ್ತಾನೆ ; ಶಿವಾನುಭಾವಿಯಾಗುತ್ತಾನೆ. ಈ ಸಂಸಿದ್ಧಿಗಳಿಂದ ಸ್ವಜೀವನದೊಡನೆ ಸಾಮಾಜಿಕ ಜೀವನ ಸಮಸ್ಯೆಗಳನ್ನು ಸಹಜವಾಗಿ ಬಿಡಿಸಬಲ್ಲವನಾಗುತ್ತಾನೆ.

ಶಿವಭಕ್ತನ ತ್ರಿಕರಣ ಧರ್ಮಗಳೆಲ್ಲವೂ ಅಂದರೆ ದೃಕ್ಕ್ರಿಯೆಗಳೆಲ್ಲವೂ ತ್ರಿವಿಧ ಭಕ್ತಿಯಾಗಿ ಪರಿಣಮಿಸುತ್ತವೆ. ಹಾರ್ದಿಕ ಧರ್ಮ ಮಿಶ್ರಣದಿಂದ ಆತ್ಮಿಕ ಶಕ್ತಿ ಭಕ್ತಿಯಾಗಿ ಏರ್ಪಡುತ್ತದೆ. ಶಕ್ತಿ ಆ ದೇವ ಚೈತನ್ಯದ ಅವತರಣಕ್ಕೆ ಕಾರಣವಾದರೆ ಭಕ್ತಿ ಆತ್ಮಚೈತನ್ಯದ ಉತ್ತರಣಕ್ಕೆ ಕಾರಣವಾಗುತ್ತದೆ ; ಆರೋಹಣಕ್ಕೆ ಆಧಾರವಾಗುತ್ತದೆ. ಈ ಭಕ್ತಿಯುಳ್ಳ ಭಕ್ತನಿಗೆ ಕೇವಲ ಶಿವಸಾಮರಸ್ಯವೇ ಶ್ರೇಷ್ಠ ಗುರಿಯಾಗಿರುತ್ತದೆ. ಬೇರೆ ಇನ್ನಾವ ಭೌತಿಕದ ಸಣ್ಣಪುಟ್ಟ ಸಂಕಲ್ಪಗಳಿರುವುದಿಲ್ಲ. ವ್ಯಾವಹಾರಿಕ ಜಡಕರ್ಮಗಳ ಜಂಜಡವಿರುವುದಿಲ್ಲ. ಎಲ್ಲ ಯೋಗಗಳನ್ನೊಳಗೊಂಡ ಶಿವಯೋಗಸೌಧವನ್ನೇರಲು–ಏರಿ ಏಕರಸವಾಗಲು ಸತ್ಯ ಮತ್ತು ಸತ್ವ ಸಾಧನ

ವಾದುದೇ ಷಟ್‌ಸ್ಥಲಾಂತರ್ಗತವಾದ ಸದ್ಭಕ್ತಿ. ಇದು ಕ್ರಿಯಾ ಜ್ಞಾನ ಧ್ಯಾನ ಜಪ ತಪ ಎಲ್ಲವನ್ನೂ ತನ್ನೊಳಗೆ ಸಮನ್ವಯಗೊಳಿಸುತ್ತದೆ. ಕರಣಗಳನ್ನೆಲ್ಲ ಸಮನ್ವಯಗಳಿಸಿಕೊಂಡಂತೆ ಕ್ರಿಯೆಗಳನ್ನೆಲ್ಲ ಸಮನ್ವಯ ಗಳಿಸಿಕೊಂಡ ವೈಶಿಷ್ಟ್ಯ ಷಟ್‌ಸ್ಥಲ ಭಕ್ತಿಗಿದೆ. ಅಂತೆಯೇ ಅದರ ಎಲ್ಲ ಮುಖಗಳನ್ನೂ ತೆರೆದು ತೋರುತ್ತಿದ್ದಾರೆ ಶ್ರೀ ರೇಣುಕ ಶಿವಾಚಾರ್ಯರು. ನವವಿಧ, ತ್ರಿವಿಧ ಮುಂತಾದ ಭಕ್ತಿಗಳನ್ನು ಬಿತ್ತರಿಸಿದ್ದರೂ ಸಾಕೆನಿಸದೆ ಮತ್ತೆ ಮುಂದಿನಂತೆ ಅಯ್ದು ಬಗೆಯಾಗಿ ಬಿಚ್ಚಿ ಬಿತ್ತರಿಸುತ್ತಿದ್ದಾರೆ.

"ಪಂಚಧಾ ಕಥ್ಯತೇ ಸದ್ಭಿಸ್ತದೇವ ಭಜನಂ ಪುನಃ
ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಂ ।
ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿ ನೋ ಮತಂ
ಶಿವಾರ್ಚಾ ಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿ ನೋಚ್ಯತೇ ।
ಜಪಃ ಪಂಚಾಕ್ಷರಾಭ್ಯಾಸಃ ಪ್ರಣವಾಭ್ಯಾಸ ಏವ ವಾ
ರುದ್ರಾಧ್ಯಾಯಾದಿಕಾಭ್ಯಾಸೋ ನ ವೇದಾಧ್ಯಯನಾದಿಕಂ ।
ಧ್ಯಾನಂ ಶಿವಸ್ಯರೂಪಾದಿಚಿಂತಾ ನಾತ್ಮಾದಿ ಚಿಂತನಂ
ಶಿವಾಗಮಾರ್ಥವಿಜ್ಞಾನಂ ಜ್ಞಾನಂ ನಾನ್ಯಾರ್ಥವೇದನಂ ।
ಇತಿ ಪಂಚಪ್ರಕಾರೋಽಯಂ ಶಿವಯಜ್ಞಃ ಪ್ರಕೀರ್ತಿತಃ
ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಂ
ಭಕ್ತ್ಯಾಪರಮಯಾಯುಕ್ತಃ ಸವೈ ಭಕ್ತ ಇತಿ ಸ್ಮೃತಃ ।"

ತಪ, ಜಪ, ಕರ್ಮ, ಜ್ಞಾನ, ಧ್ಯಾನ ಇವೈದು 'ಶಿವಯಜ್ಞ' ವೆಂದು ಹೆಸರಾಂತಿವೆ. ಇವುಗಳಿಂದ ಶಿವನನ್ನು ಅರ್ಚಿಸುತ್ತ ಪರಮಭಕ್ತಿಯಿಂದ ಕೂಡಿದಾತನೇ ಭಕ್ತನು. ಶಿವನಿಗಾಗಿ ಮಾಡುವ ಶಾರೀರಕ ಶ್ರಮವೇ ತಪಸ್ಸು. ಕೃಚ್ಛ್ರ ಚಾಂದ್ರಾಯಣಾದಿ ವ್ರತಗಳು ತಪಸ್ಸಲ್ಲ. ಇವು ಶಿವನಿಗೆ ಒಪ್ಪಿತವಲ್ಲ. ಶಿವಾರ್ಚನೆಗೆ ಸಲ್ಲುವ ಸಾಹಿತ್ಯ ಸಂಗ್ರಹೋದ್ಯಮವೇ ಕ್ರಿಯೆ. ಜ್ಯೋತಿಷ್ಟೋಮಾದಿ ಯಾಗಗಳು ಕ್ರಿಯೆಗಳಲ್ಲ. ಇವುಗಳಿಂದೊದ ಗುವ ಫಲ ಶಾಶ್ವತವಲ್ಲ; ಸಾಮರಸ್ಯಜನಕಗಳಲ್ಲ. ಪೂರ್ವ ಮೀಮಾಂಸೆಯು ಪ್ರತಿಪಾದಿಸಿದ ಈ ಕರ್ಮಕಾಂಡ ಕಡು ಜಡ. ಪಂಚಾಕ್ಷರವನ್ನಾಗಲಿ

ಪ್ರಣವವನ್ನಾಗಲಿ ರುದ್ರಾಧ್ಯಾಯನವನ್ನಾಗಲಿ ಮಾಡುವುದೇ ಜಪ. ತ್ರೈಗುಣ್ಯ ವಿಷಯಗಳಾದ ವೇದಾಧ್ಯಯನವು ಜಪವಲ್ಲ. ತ್ರಿಗುಣಗಳು ಪ್ರಕೃತಿ ಕಾರಣ. ಪ್ರಕೃತಿ ವಿಕೃತಿಸಾಧನ. ಇದರಿಂದಾಗಿ ವೇದಾಭ್ಯಾಸವು ಜಪಾನುಷ್ಠಾನದ ಅರ್ಹತೆಯನ್ನು ಪಡೆಯುವುದಿಲ್ಲ. ಶಿವಚಿಂತನವೇ ಧ್ಯಾನ. ಜೀವಾತ್ಮಚಿಂತೆ ಧ್ಯಾನವಲ್ಲ. ಪರಿಚ್ಛಿನ್ನನಾದ ಪರಿಮಿತನಾದ ಜೀವಾತ್ಮ ಧ್ಯಾನದಿಂದ ಪೂರ್ಣವಾದ ಫಲವುಂಟಾಗುವುದಿಲ್ಲ. ಅಂತೆಯೇ ವಿಷಯ ಚಿಂತನೆಯೂ ಧ್ಯಾನವಲ್ಲ. ಶಿವನಲ್ಲಿ ಏಕಾಗ್ರವಾದ ವೃತ್ತಿಯೇ ಧ್ಯಾನ. ಸರ್ವಯೋಗ ಸಮನ್ವಯವುಳ್ಳ ಶಿವಯೋಗವನ್ನು ದಾಟುವ ಶಿವಾಗಮಗಳ ಅರ್ಥವನ್ನರಿವುದೇ ಅರಿತು ಅನುಭವಿಸುವುದೇ ಜ್ಞಾನ. ಇಲ್ಲಿ ಉಪ ಯೋಗಿಸಿದ ವಿಜ್ಞಾನಪದ ವಿಚಾರಾರ್ಹವಾಗಿದೆ. ಶಿವಾಗಮಗಳ ಬರೀ ಜ್ಞಾನ ಪ್ರಯೋಜನವಿಲ್ಲ, ವಿಜ್ಞಾನವಾಗಬೇಕು ಅಂದರೆ ವಿಶೇಷ ಜ್ಞಾನ ವಾಗಬೇಕು. ವಿಶೇಷ ಜ್ಞಾನವೇ ಅನುಭವವೆನಿಸುತ್ತದೆ. ಶಿವಾಗಮಾನು ಭವದಿಂದ ಶಿವಯೋಗ ಸಂಪತ್ತಿಯು ಸಂಪ್ರಾಪ್ತವಾಗುತ್ತದೆಯಲ್ಲದೆ ಇತರ ಶಾಸ್ತ್ರಗಳಿಂದ ಸಂಪ್ರಾಪ್ತವಾಗುವುದಿಲ್ಲ. ಇದರಿಂದಾಗಿ ಇತರ ಶಾಸ್ತ್ರಾದಿಗಳ ಜ್ಞಾನ ನ್ಯೂನವಾದುದು. ಶಿವಯಜ್ಞಕ್ಕೆ ಸಂಬಂಧವಿಲ್ಲದುದು.

ಈ ಶಿವಯಜ್ಞವನ್ನೇ ಶಿವಯೋಗವೆಂದು ಹೇಳುತ್ತೇವೆ. ಶಿವ ಯೋಗದಲ್ಲಿರುವ ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿ, ಶಿವಾ ರ್ಚನಗಳು ಶಿವಯಜ್ಞದಲ್ಲಿಯೂ ಇವೆ. ಯಜ್ಞವೆಂದರೆ ಯೋಗವೆಂದರ್ಥ. ಈ ಪಂಚಯಜ್ಞಗಳನ್ನು ಪತಿಧರ್ಮಗಳೆಂದು ವೀರಶೈವರು ಭಾವಿಸುತ್ತಾರೆ. ಇವಕ್ಕೆ ಹೊರತಾದವು ಪಶುಧರ್ಮಗಳು.

ಶಿವಯಯಜ್ಞದಲ್ಲಿ ಯಮ-ನಿಯಮಗಳು ಆಸನ, ಪ್ರಾಣಾಯಾಮ ಪ್ರತ್ಯಾಹಾರಗಳು ಜ್ಞಾನ, ಧ್ಯಾನಗಳು ಸೇರಿರುವುದರಿಂದ ಯೋಗದರ್ಶನದ ಉತ್ತರಾಂಗಗಳೂ ಸೇರಿವೆ. ಇವುಗಳಿಂದ ಶಿವಯಜ್ಞವು ಮಾನವನ ಅಥವಾ ಭಕ್ತನ ಅಂತರಂಗ ಬಹಿರಂಗಗಳೆರಡನ್ನೂ ಶುದ್ಧಗೊಳಿಸುವುದಲ್ಲದೆ ವೈಯಕ್ತಿಕ ಜೀವನದೊಡನೆ ಸಾಮಾಜಿಕ ಜೀವನವನ್ನೂ ರೂಢಿಸುತ್ತದೆ. ಕರ್ಮ (ಕ್ರಿಯೆ) ಕ್ಕೆ ಅವಕಾಶವಿರುವುದರಿಂದ ದ್ವೈತ ತತ್ವವೂ ಜ್ಞಾನಕ್ಕೆ

ಅವಕಾಶವಿರುವುದರಿಂದ ಅದ್ವೈತ ತತ್ವವೂ ಇದರಲ್ಲಿ ಸಮಾವೇಶಗೊಂಡಿವೆ. ಅಂತೆಯೇ ಇದು 'ದ್ವೈತಾದ್ವೈತ' ವೆಂದು ಹೆಸರಾಗಿದೆ.

ಪರಾಭಕ್ತಿಯಿಂದ ಕೂಡಿದ ಭಕ್ತನು ಪೂರ್ಣ ನೈತಿಕಜೀವಿಯಲ್ಲದೆ ತಾತ್ವಿಕ ಜೀವಿಯೂ ಆಗಿದ್ದಾನೆ. ಇದು 'ಭಕ್ತಮಾರ್ಗಕ್ರಿಯಾ' ಸ್ಥಲ. ಇದರಲ್ಲಿ ಬರುವ ಮೊದಲನೆಯ 'ಭಕ್ತ' ನ ನಿಜನಿಲವನ್ನು ಇಲ್ಲಿಯವರೆ ವಿಗೂ ಎತ್ತಿತೋರಿಸಲಾಗಿವೆ. ಭಕ್ತನ ನಿಲವಿನೊಡನೆ ಭಕ್ತಿಯ ಎಲ್ಲ ಎಸಳು (ಭೇದ) ಗಳನ್ನೂ ಬಿತ್ತರಿಸಲಾಗಿದೆ.

ಷಟ್‌ಸ್ಥಲದ ಭಕ್ತನಲ್ಲಿರುವ ಭಕ್ತಿ ಕೇವಲ ಮುಗ್ಧಭಕ್ತಿಯಲ್ಲ. ಆಚಾರ-ವಿಚಾರಗಳಿಂದ ಕೂಡಿದ ಪರಿಪೂರ್ಣಭಕ್ತಿ. ಜಪತಪಾದಿ ಆಚಾರ ಗಳಿವೆ; ಜ್ಞಾನ ಧ್ಯಾನಾದಿ ವಿಚಾರಗಳಿವೆ. ತ್ರಿಕರಣ ಪೂರ್ಣ ಸೇವೆಗಿಂಬಿದೆ. ತ್ರಿಕರಣಗಳೊಡನೆ ಆತ್ಮನಿವೇದನ ಪಾವನಪ್ರೇಮವಿದೆ. ಶ್ರವಣಾದಿಗಳಿಗೆ ಸದವಕಾಶವಿದೆ. ಬಾಹ್ಯಾಭ್ಯಂತರ ಶುದ್ಧಿಯಿದೆ.

ಭಕ್ತಾದಿಕ್ಯ

ಹೀಗಿರುವ ಭಕ್ತನು ಯಾವ ಯೋಗಿಗಿಂತ ಯಾವ ಜ್ಞಾನಿಗಿಂತ ಇನ್ನಾವ ಮಹಾನುಭಾವನಿಗಿಂತ ಕಮ್ಮಿಯಲ್ಲ. 'ಮಮಭಕ್ತೋ ಮಮಾ ಧಿಕಃ' ಎಂದು ಸಾಕ್ಷಾತ್ ಶಿವನೇ ಒಪ್ಪಿ ಒಳ್ನುಡಿದಿದ್ದಾನೆ. ಇದನ್ನೇ ಅನುಸರಿಸಿ ಶ್ರೀ ರೇಣುಕ ಶಿವಾಚಾರ್ಯರು ಹೀಗೆ ಅಪ್ಪಣೆಯನ್ನಿತ್ತಿದಾರೆ:

" ಪೂಜನಾಚ್ಛಿವಭಕ್ತಸ್ಯ ಪುಣ್ಯಾಗತಿರವಾಪ್ಯತೇ
ಅವಮಾನಾನ್ಮಹಾ ಘೋರೋ ನರಕೋ ನಾತ್ರಸಂಶಯಃ"

ಶಿವಭಕ್ತನು ಶಿವಸ್ವರೂಪನು. ಶಿವಕ್ರಿಯೆ ಶಿವಜ್ಞಾನ ಶಿವಾನುಭವ ಗಳಿಂದ ಭರಿತನಾಗಿರುತ್ತಾನೆ. ಶಿವನಲ್ಲಿ ಶ್ರದ್ಧೆ ನಿಷ್ಠೆ ಅಪಾರವಾಗಿರುತ್ತವೆ. ಶರೀರಾಭಿಮಾನವಿಲ್ಲದವನು ಸದ್ಗುಣಿಯೂ ಆಗಿರುತ್ತಾನೆ. ಋಜವೋ ಮೃದವಃ ಸ್ವಚ್ಛಾ ವಿನೀತಾಃ ಸ್ಥಿರಚೇತಸಃ। ಶೌಚಾಚಾರಸಮೋಪೇತಾಃ ಶಿವಭಕ್ತಾಃ....।' ಎಂದು ಚಂದ್ರಜ್ಞಾನಾಗಮವು ಶಿವಭಕ್ತರ ಶುಭ್ರಗುಣ

ಗಳನ್ನು ವರ್ಣಿಸಿದೆ. ಶಿವಭಕ್ತನು ಹೇಗಿದ್ದರೂ ಉತ್ತಮೋತ್ತಮನೆಂದು ಕಾರಣಾಗಮವು ಹೇಳಿದೆ.

ಭಕ್ತರಲ್ಲಿ ಕನಿಷ್ಠ, ಮಧ್ಯಮ, ಉತ್ತಮ, ಉತ್ತಮೋತ್ತಮವೆಂಬುದಾಗಿ ನಾಲ್ಕುವಿಧ. ಸ್ವರ್ಗಾಪೇಕ್ಷಿಗಳಾಗಿರುವವರು ಕನಿಷ್ಠರು. ತ್ರಿಲೋಕ ಪೂಜ್ಯತೆಯಲ್ಲಿ ಇಚ್ಛೆಯುಳ್ಳ ರಾಜರ್ಷಿಗಳು ಬ್ರಹ್ಮರ್ಷಿಗಳು ದೇವರ್ಷಿಗಳು ಮಧ್ಯಮ ಭಕ್ತರು. ಮುಮುಕ್ಷು ಭಕ್ತರು ಉತ್ತಮರು. ಈ ಉತ್ತಮಭಕ್ತರಲ್ಲಿ ಮೂರುಬಗೆ: ಸಾಲೋಕ್ಯಭಕ್ತರು, ಸಾಮೀಪ್ಯಭಕ್ತರು, ಸಾರೂಪ್ಯಭಕ್ತರು. ಇನ್ನು ವೀರಶೈವನಿರತರಾಗಿ ಪ್ರಾಣಲಿಂಗ ಪರಾಯಣರಾಗಿ ಸಾಯುಜ್ಯರೂಪ ಶಿವತ್ವಪ್ರಾಪ್ತಿಯಲ್ಲಿ ಸದಾಸಕ್ತಿಯುಳ್ಳವರಾಗಿ ಇರುವವರೇ ಉತ್ತಮೋತ್ತಮಭಕ್ತರು. ಇವರೇ ಶಿವಭಕ್ತರು. ಶಿವೈಕನಿಷ್ಠ ಮನಸ್ಸುಳ್ಳವರು.

‘ ಶಿವಭಕ್ತಾ ಮಹಾತ್ಮನಃ ಕಾಮಾದಿ ಗುಣವರ್ಜಿತಾಃ
ತ್ಯಕ್ತಲೋಕಸಮಾಚಾರಾ ನಿರಸ್ತಭವಬಂಧನಾಃ ।
ನಿರ್ಮಾಯಾ ನಿರಹಂಕಾರಾಃ ಶಾಂತಾಃ ಸರ್ವತ್ರ ಪೂಜಿತಾಃ
ರಾಗಾದಿಗುಣನಿರ್ಮುಕ್ತಾ ನ ವಾಕ್ಪಾಣಿವಶಂಗತಾಃ ।
ನ ಚಕ್ಷು ಶ್ಶ್ರೋತ್ರವಶಗಾಃ ಕ್ಷುತ್ತೃಡ್ಭಯ ವಿವರ್ಜಿತಾಃ
ತತ್ತ್ವನಿಷ್ಠಾಃ ಸದಾ ದಾಂತಾಃ ಪುತ್ರದಾರಾದಿನಿಸ್ಪೃಹಾಃ ।
ಶಿವಜ್ಞಾನರತಾ ನಿತ್ಯಂ ಶಿವಜ್ಞಾನೈಕತತ್ಪರಾಃ
ಶಿವಧರ್ಮರತಾಃ ಕರ್ಮನಿಷ್ಠಾ ಶಿವಪರಾಯಣಾಃ ।
ಶಿವಾಶ್ರಿತೇಷು ಮರ್ತ್ಯೇಷು ಶಿವಜ್ಞಾನೇ ಶಿವವ್ರತೇ
ಶಿವಾಚಾರೇ ಚ ಸರ್ವತ್ರ ಶಿವೋತ್ಸವಪರೇಷು ಚ ।
ಗುರುಶುಶ್ರೂಷಣಾಸಕ್ತಾ ಗುರುಕಾರ್ಯೈಕ ತತ್ಪರಾಃ
ಮಹೋತ್ಸಾಹಾ ಮಹಾವೀರಾ ಮಹಾಸತ್ವಪರಾಕ್ರಮಾಃ ।
ತೇ ಭಕ್ತಾ ಯತ್ರ ತಿಷ್ಠಂತಿ ತತ್ತೀರ್ಥಂ ತತ್ತಪೋವನಂ
ತಸ್ಮಾತ್ತದ್ದರ್ಶನಾದೇವ ಧನ್ಯೋ ಭವತಿ ಮಾನವಃ ।
ಯೇ ಪೂಜಯಂತಿ ತಾನ್ನಿತ್ಯಂ ಮನೋವಾಕ್ಕಾಯ ಕರ್ಮಭಿಃ

ತೇಷಾಮಹಂ ಸಮುದ್ಧರ್ತಾ ಸಂಸಾರಭವಸಾಗರಾತ್ ।
ಲೋಕೇ ಹಿ ಬಹುಧಾ ಭಕ್ತಾ ನಾನಾಲಾಂಛನಧಾರಿಣಃ
ತೇಷು ಲಿಂಗಾಂಗಿನಃ ಶ್ರೇಷ್ಠಾ ವೀರಶೈವಪರಾಯಣಾಃ ।
ತೇಷು ಶ್ರೇಷ್ಠಾ ಮಹಾದೇವಿ ಶಿವಲಾಂಛನಸಂಯುತಾಃ ।
ತೇಷು ಶ್ರೇಷ್ಠಾ ಮಹಾಭಾಗಾಃ ಷಟ್‌ಸ್ಥಲ ಜ್ಞಾನಪಾರಗಾಃ ।
ತೇಭ್ಯೋऽಧಿಕಸ್ತತ್ಸಮೋ ವಾ ನಾಸ್ತಿ ಭಕ್ತೋ ಜಗತ್ತ್ರಯೇ ।
ನಾಹಂ ವಸಾಮಿ ಕೈಲಾಸೇ ನ ಮೇರೌ ನ ಚ ಮಂದರೇ
ಯತ್ರತಿಷ್ಠಂತಿ ಮದ್ಭಕ್ತಾಸ್ತತ್ರ ತಿಷ್ಠಾಮಿ ಪಾರ್ವತಿ ।
ಭಕಾರಾದ್ಭವ ಇತ್ಯುಕ್ತಃ ಕಕಾರಾತ್ಕಲುಷಂ ಭವೇತ್
ತತಃ ಸಂತ್ರಾಯತೇ ತಸ್ಮಾತ್ ಭಕ್ತ ಇತ್ಯುಚ್ಯತೇ ಬುಧೈಃ ।

—ಸೂಕ್ಷ್ಮಾಗಮ

ಹೀಗೆ ಆಗಮಸಾಹಿತ್ಯದಲ್ಲಿ ಭಕ್ತಾಧಿಕ್ಯವನ್ನು ಕುರಿತು ವಿಪುಲವಾಗಿ ಉಕ್ತಿಗಳುಂಟು. ಮೊದಲು ಭಕ್ತಿಗೆ ಆಧಿಕ್ಯವಿರುವುದರಿಂದ ಆ ಭಕ್ತಿಯುಳ್ಳ ಭಕ್ತನಿಗೆ ಆಧಿಕ್ಯವಿದ್ದೇ ಇರುತ್ತದೆ. ತತ್ತ್ವವೃಕ್ಷವು ಅಂಕುರಿಸಿ ಬೆಳೆದು ಫಲವೀಯಬೇಕಾದರೆ ಭಕ್ತಿಯ ಆಶ್ರಯ ಬೇಕೇ ಬೇಕು. 'ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು. ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿಯೆಂಬ ಹಣ್ಣಾಯಿತ್ತು. ಭಕ್ತಿಯೇ ಪೃಥ್ವಿ. ಇದಿಲ್ಲದೆ ಗುರುಬೀಜವಂಕುರಿಸದು. ದೃಕ್ಕ್ರಿಯೆಗಳು ತೋರವು. ಲಿಂಗ ಸಂಗವುಂಟಾಗದು. 'ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ; ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ; ಸಾರಿ ಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ;ಎಡಹು ಗುಳಿಗಳ ದಾಂಟೆ ಬರಬರ ಲಿಂಗೈಕ್ಯನೆನಿಸುವೆನಯ್ಯಾ ; ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ !' 'ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ; ನಿನ್ನ ಸುತ್ತಿಪ್ಪುದು ಎನ್ನಮನ ನೋಡಯ್ಯಾ; ನೀನು ಜಗಕ್ಕೆ ಬಲ್ಲಿದನು; ಆನು ನಿನಗೆ ಬಲ್ಲಿದನು, ಕಂಡಯ್ಯಾ! ಕರಿಯು ಕನ್ನಡಿಯೊಳಗಡಗಿದಂತಯ್ಯಾ, ಎನ್ನೊಳಗೆ ನೀನಡಗಿದೆ, ಕೂ. ಸಂ. ದೇವಾ!' 'ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ; ಎನಗೆಯೂ

ನಿನಗೆಯೂ ಸಮಯಾಚಾರ ಸರಿ: ಕೂಡಲ ಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ !' ಎಂಬುದು ಶರಣವಾಣಿ. ಶಿವನಿಗಿಂತ ಶಿವಭಕ್ತರು ಶ್ರೇಷ್ಠರು; ಸನ್ಮಾನ್ಯರು- ಪುಣ್ಯಪ್ರದರು. ಅವರನ್ನು ಆರಾಧಿಸಿದರೆ ಅಧಿಕವಾದ ಪುಣ್ಯ. ಅವಮಾನಿಸಿದರೆ ಅತ್ಯಂತ ಘೋರನರಕ. ಈ ಮಾತಿನಲ್ಲಿ ಎಳ್ಳಿನಷ್ಟು ಸುಳ್ಳಿಲ್ಲ. ಭಕ್ತಾಧಿಕ್ಯಕ್ಕೆ ಪ್ರತಿಯಿಲ್ಲ.

'ದೇವಲೋಕ ಮರ್ತ್ಯಲೋಕವೆಂಬವು ಬೇರಿಲ್ಲ ಕಾಣಿರೋ ! ಈ ಲೋಕದೊಳಗೆ ಮತ್ತನಂತಲೋಕ. ಶಿವಲೋಕವೆ ಶಿವಾಚಾರವಯ್ಯಾ. ಶಿವಭಕ್ತರಿದ್ದ ತಾವೇ ದೇವಲೋಕ. ಭಕ್ತನ ಅಂಗಳವೇ ವಾರಣಾಸಿ ಕಾಯವೇ ಕೈಲಾಸ. ಇದು ಸತ್ಯ ಕೂಡಲ ಸಂಗಮದೇವಾ

ಶಿವಭಕ್ತನ ಆಧಿಕ್ಯವನ್ನು ಅತ್ಯಂತ ಹೃದಯಂಗಮವಾಗಿ ಬಣ್ಣಿಸಿರುವುದಲ್ಲದೆ ಶಿವಭಕ್ತನ ನೆಲೆ, ಅಂಗಳ, ಕಾಯಗಳ ಹೆಚ್ಚಳಿಕೆಯನ್ನೂ ಹೆಚ್ಚು ಸುಂದರವಾಗಿ ಸಮರ್ಪಕವಾಗಿ ಬಿತ್ತರಿಸಲಾಗಿದೆ.

'ಕಟ್ಟಿದಿರಿನಲ್ಲಿ ಶಿವಭಕ್ತರ ಕಂಡು ದೃಷ್ಟಿಯಾರೆ ಶರಣೆಂದಡೆ
ಹುಟ್ಟಿದೇಳು ಜನ್ಮದ ಪಾಪ ಬಿಟ್ಟು ಹೋದುದು ನೋಡಾ !
ಮುಟ್ಟಿ ಚರಣಕ್ಕೆರಗಿದರೆ ತನುವಪ್ಪಿದಂತುಹುದು. ಕರ್ತೃಕೂಡಲ ಸಂಗನ ಶರಣರ ಸಂಗ ಮತ್ತೆ ಭವಮಾಲೆಯ ಹೊದ್ದಲೀಯುದು ನೋಡಾ !'

ಶಿವಭಕ್ತನ ಪೂಜೆಯಿಂದ ಪುಣ್ಯ ಬಪ್ಪುದೆಂಬ ಶ್ರೀರೇಣುಕಶಿವಾಚಾರ್ಯರ ಶ್ರೀವಾಣಿಗೆ ಈ ವಚನ ವ್ಯಾಖ್ಯಾನವನ್ನಿತ್ತಿದೆ.

ಭಕ್ತನ ಮಾರ್ಗಕ್ರಿಯೆಗಳು:

"ಶಿವಭಕ್ತೋ ಮಹಾತೇಜಾಃ ಶಿವಭಕ್ತಿ ಪರಾಙ್ಮುಖಾನ್
ನ ಸ್ಪೃಶೇನ್ನೈವ ವಿಕ್ಷೇತ ನ ತೈಃ ಸಹ ವಸೇತ್ ಕ್ವಚಿತ್ ।"

ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿಯಿಲ್ಲದವರನ್ನು ಮುಟ್ಟ ಬಾರದು, ನೋಡಬಾರದು, ಅವರೊಡಗೂಡಿ ಎಲ್ಲಿಯೂ ಎಂದಿಗೂ ಇರ ಬಾರದು.

ಶಿವಭಕ್ತಿ ಶೂನ್ಯರು ಭವಿಗಳು. ಸಂಸ್ಕಾರ ಶೂನ್ಯರು. ಅವರ ಸಂಗ ಸಲ್ಲದು. ಸಕ್ಕರೆಯಾದರೂ ನಂಜಿನ ಸಂಗ ಮಾಡಬಾರದು. ಶಿವಭಕ್ತಿ ಶೂನ್ಯರ ಸಂಗ ಭಂಗಕಾರಿ, ಅಮಂಗಳಕಾರಿ.

'ಎಲವದ ಮರ ಹೂತು ಫಲವಾದ ತೆರನಂತೆ.–ಸಿರಿಯಾದರೇನು ಶಿವ ಭಕ್ತಿಯಿಲ್ಲದನ್ನಕ್ಕ ? ಫಲವಾದರೇನು ಹಾವು ಮೆಕ್ಕೆಯ ಕಾಯಿ? ಕುಲವಿಲ್ಲದ ರೂಹು ಎಲ್ಲಿದ್ದರೇನು ? ಬಚ್ಚಲುನೀರು ತಿಳಿದಲ್ಲಿ ಫಲವೇನು ? ಅವಗುಣಿಗಳ ಮೆಚ್ಚ ಕೂಡಲ ಸಂಗಮದೇವ.'

ಶಿವಭಕ್ತಿಯಿಲ್ಲದವರಲ್ಲಿ ಸಿರಿಯಿದ್ದರೂ ರೂಹಿದ್ದರೂ ಅವರೊಡಗೂಡಿರ ಬಾರದು. ಇದ್ದರೆ ಮಾರ್ಗಕ್ರಿಯೆಗೆ ಸಲ್ಲದು. 'ಕಣ್ಣು ಮೀಸಲು ಶಿವನ. ಕೈಮೀಸಲು ಶಿವನ,–: ಎಂದು ದೇವರ ದಾಸಮಯ್ಯನವರು ಹೇಳಿದ್ದಾರೆ. ಹೀಗಿರುವಾಗ ಭವಿದರ್ಶನ ಸ್ಪರ್ಶನಗಳನ್ನು ಮಾಡಿದರೆ ಮೀಸಲುಳಿಯದು; ಮಂಗಳತೆಯುಳಿಯದು. ಬಿರುಗಾಳಿಗೆ ಉರಿವ ಸೊಡರನಿಟ್ಟಂತಾದೀತು– ಆಗಬಲ್ಲುದು. ಭಕ್ತನಾದ ಬಳಿಕ ಭವಿಯು ನಂಟನೆಂದು ಅವನೊಡನೆ ಇರಲಾಗದು.

'ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ; ದಾರಿ

ಸಂಗಡ ಬೇಡ, ದೂರ ನುಡಿಯಲು ಬೇಡ....'

ಎಂದು ಬಸವಣ್ಣನು ಅರೆಭಕ್ತರ ಸಂಗ ಸಹವಾಸವೂ ಸರಿಯಲ್ಲವೆಂದು ಹೇಳಿರುವಾಗ ಶ್ರೀರೇಣುಕ ಶಿವಾಚಾರ್ಯರು ಶಿವಭಕ್ತಿಯಿಲ್ಲದವರೊಡನೆ ಕೂಡಿ ಬಾಳಬಾರದು ಕೂಡಿ ಇರಬಾರದೆಂದು ಹೇಳುವಲ್ಲಿ ಅನೌಚಿತ್ಯವೇನಿಲ್ಲ.

“ಯದಾ ದೀಕ್ಷಾಪ್ರವೇಶಃ ಸ್ಯಾಲ್ಲಿಂಗಧಾರಣಪೂರ್ವಕಂ ।
ತದಾಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗಮಸ್ಥಿತಾನ್ ।”

ಲಿಂಗಧಾರಣದೊಡನೆ ಗುರುಕಾರುಣ್ಯವಾಗಿ ಭಕ್ತನಾದ ಬಳಿಕ ಶಿವಾಚಾರ ಸಂಪನ್ನರನ್ನೇ ಆರಾಧಿಸಬೇಕು. ಶಿವಸ್ವರೂಪಿಗಳ ಅರ್ಚನೆಯಿಂದ ಅವರ ಸನ್ನಿಧಿಯ ಸತ್ಸಹವಾಸವೊದಗುತ್ತದೆ; ಕರ್ಮ ನಿರ್ಮಳವಾಗುತ್ತದೆ.

‘....ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.’ ಸಿರಿಗಂಧದ ಸನ್ನಿಹಿತದಿಂದ ಗಿರಿ ತರುಗಳು ಪರಿಮಳಯುಕ್ತವಾಗುವಂತೆ ಎಂದು ಬಸವಣ್ಣನವರ ಭಾವನೆ. ಶ್ರೀಗುರುವಿನಿಂದ ಪಡೆದ ಶಿವಸಂಸ್ಕಾರ ಸ್ಥಿರಗೊಳ್ಳಬೇಕಾದರೆ ಶಿವಾಚಾರದವರೊಡನಾಟದಿಂದ. ವಿದ್ಯಾರ್ಥಿಯು ಯಾವ ವರ್ಗದಲ್ಲಿರುವನೋ ಆ ವರ್ಗದವರೊಡನೆಯೇ ಇದ್ದು ಓದು ಗಲಿಯಬೇಕಲ್ಲವೆ ? ಈ ಭಕ್ತಪೂಜೆಯಲ್ಲಿ ಭೃತ್ಯಾಚಾರವು ವಿಹಿತವಾಗಿದೆ.

“ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತುಯೇ
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ।
ಸ್ವಮಾರ್ಗಾಚಾರವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್ ॥”

ವೀರಶೈವಾಚಾರನಿರತರಲ್ಲಿ ಶಿವದೀಕ್ಷಾ ಸಂಸ್ಕಾರಗಳಲ್ಲಿ ಆರೋಗಣೆಯನ್ನು ಮಾಡಬೇಕಲ್ಲದೆ ಇತರರಲ್ಲಿ ಮಾಡಬಾರದು. ವೀರಶೈವಾಚಾರ ವಿಮುಖರೂ ಭವಿಗಳೂ ಪ್ರಾಕೃತಾತ್ಮರೂ ಆದವರು ತನ್ನಲ್ಲಿಗೆ ಕಳುಹಿದ ಇರಿಸಿದ ದ್ರವ್ಯವನ್ನು ಉಪಯೋಗಿಸಕೊಳ್ಳಬಾರದು. ‘ಭವಿಯ ಮನೆಯ ಅನ್ನ ಸವಿಯಾಯಿತ್ತೆಂದು ಉಂಡ ಭಕ್ತಂಗೆ ಅಘೋರ ನರಕ ತಪ್ಪದು.’ ಎನ್ನುತ್ತಾನೆ ದೇವರದಾಸಮಯ್ಯನು. ಭವಿಯು ಬೆರಸಿದ ಭಕ್ತಿ, ಹವಿಯು ಬೆರಸಿದ ಬೀಜ, ಉದಕವ ಮುಟ್ಟಿದ ಎಣ್ಣೆ, ಜ್ಯೋತಿ–ಪ್ರಜ್ವಲಿಸುವುದೆ?

ಭವಿಯಲ್ಲ ಭಕ್ತನಲ್ಲ. ಹವಿಯಲ್ಲ ಬೀಜವಲ್ಲ. ಉದಕವಲ್ಲ ಎಣ್ಣೆಯಲ್ಲ. ಒಡಲಚ್ಚಿಗೆ ಹೋಗಿ ಭವಿಯ ಮನೆಯ ತುತ್ತಿಡುವ ನರಕಿಗಳಿಗೇ ಕೊಲಿವ ನಮ್ಮ ಶಂಭು ಜಕ್ಕೇಶ್ವರನು ?

'ಒಡಲ ಕಳವಳಕ್ಕೆ ಬಾಯ ಸವಿಗೆ ಬಯಸಿ ಉಂಡೆನಾದರೆ ನಿಮ್ಮ ತೊತ್ತಿನ ಮಗನಲ್ಲಾ ! ಬೇಡೆ, ಬೇಡೆ ನಿಮ್ಮ ನಂಬಿದ ಸದ್‌ಭಕ್ತರ : ಅವರೊಕ್ಕುದ ಉಂಬೆ, ಅವರೆಂದಂತೆ ಎಂಬೆ. ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ ಹಿಡಿದೆನಾದಡೆ ನಿಮ್ಮ ಪಾದದಾಣೆ ;' ಶಿವಭಕ್ತರ ಮನೆಯ ಒಕ್ಕಪ್ರಸಾದವನ್ನೂ ಸಹ ಒಡಲ ಕಳವಳಕ್ಕೆ ಬಾಯ ಸವಿಗೆ ಉಣಬಾರದು. ಪವಿತ್ರವಾದ ಪ್ರಸಾದ ಭಾವನೆಯಿಂದ ಉಣಬೇಕೆಂದಿರುವಾಗ ಶಿವಾಚಾರ ದೂರರಲ್ಲಿ ಉಣುವದಂತೂ ತೀರ ಆಚಾರಕ್ಕೆ ವಿರೋಧ. ಮಿಗಿಲಾಗಿ ಸಂಸ್ಕಾರಕ್ಕೆ ವಿರೋಧ. ಭವಿಗಳು ಲಿಂಗಾರ್ಪಣ ಭಾವದಿಂದ ಅಡುಗೆಯನ್ನು ಮಾಡರು. ಪ್ರಕೃತಿ ಪ್ರಾಣಗಳ ಭಾವದಿಂದ ಮಾಡುವರು. ದೇಹಭಾವದಿಂದ ದೂರಿರುವ ಭಕ್ತನು ಅಸುವಿನ ಹಸಿವಿಗಾಗಿ ದೇಹ ಭಾವದಲ್ಲಿ ಮಾಡಿದ್ದನ್ನು ಉಂಡರೆ ಅದೇ ಭಾವನೆ ಬರಲು ಅವಕಾಶವಾಗುತ್ತದೆ. ಶಿವಭಕ್ತನ ಜೀವನ ಸರಳವಾಗಿ ಸಹಜವಾಗಿ ನೈಜಪಥದಲ್ಲಿ ನಡೆಯಬೇಕು.

ಪರರದ್ರವಿಣಕ್ಕೆ ಆಸೆ ಪಡಬಾರದೆಂದು ಶ್ರೀರೇಣುಕ ಶಿವಾಚಾರ್ಯರ ಸದ್ಬೋಧೆ. ಸ್ವಾವಲಂಬಿಯಾಗುವುದು ಶ್ರೇಯಸ್ಕರ. ಆದರೆ ಇದನ್ನು ಅಳವಡಿಸಿಕೊಳ್ಳುವುದು ಸುಲಭವಲ್ಲ. 'ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾವಂಗಳವಡುವುದಯ್ಯಾ ? ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವರಿಲ್ಲ; ಪ್ರಮಾದ ವಶದಿಂ ಬಂದರೆ ಹುಸಿಯೆನೆಂಬವರಿಲ್ಲ. ನಿರಾಶೆ–ನಿರ್ಭಯ ಕೂಡಲ ಸಂಗಮದೇವಾ ನೀನೊಲಿದ ಶರಣಂಗಲ್ಲದಿಲ್ಲ !' ಈ ಮಾತು ಸಾವಿರ ಪಾಲಿಗೂ ಸತ್ಯ ! ದ್ರವ್ಯದಾಸೆಯಿಂದ ದೂರಾಗುವುದು ಎಂತಹ ದೊಡ್ಡವರಿಗೂ ಸಾಧ್ಯವಿಲ್ಲ. ಚಾಗಿಗೂ ಸಾಧ್ಯವಿಲ್ಲ. ಒಂದು ವೇಳೆ ಒದಗಿ ಬಂದರೆ ಅವರಿಗೆ ಆ ಪರಶಿವನ ಅನುಗ್ರಹ ಬಲವಿದೆಯೆಂದು ಭಾವಿಸಬೇಕು. ಭವಿಯ ದ್ರವ್ಯದಾಶೆಯನ್ನು ಬಿಡುವುದು ಭಕ್ತನ ಮಾರ್ಗ ಕ್ರಿಯೆಗಳಲ್ಲಿ ಒಂದು ಕ್ರಿಯೆ. ಭಕ್ತನ ಮಾರ್ಗಕ್ರಿಯೆಗಳಲ್ಲಿ ವಿಧಿಕ್ರಿಯೆ. ನಿಷೇಧ ಕ್ರಿಯೆಗಳೆಂದು ಎರಡು ಬಗೆಯಾಗಿವೆ. ಶಿವಭಕ್ತರಲ್ಲದ ಭವಿಗಳನ್ನು

ಮುಟ್ಟಬಾರದು, ನೋಡಬಾರದು, ಅವರೊಡನಿರಬಾರದು, ಅವರೂಟವನುಣ ಬಾರದು, ಅವರ ಸಿರಿಯನ್ನು ತೆಗೆದುಕೊಳ್ಳಬಾರದು ಎಂಬಿವು ನಿಷೇಧ ಕ್ರಿಯೆ ಗಳು. ಶಿವಭಕ್ತರನ್ನು ಮನ್ನಿಸುವುದು, ಶಿವಭಕ್ತರ ಪ್ರಸಾದವನ್ನು ಸ್ವೀಕರಿಸುವುದು ವಿಧಿಕ್ರಿಯೆಗಳು ಇದಲ್ಲದೆ,

"ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನ ಚ ಕೀರ್ತಯೇತ್
ನ ಚ ತನ್ನೈವೇದ್ಯಮಶ್ನೀಯಾಚ್ಛಿವಭಕ್ತೋ ದೃಢವ್ರತಃ ।
ಯದ್ಗೃಹೇಷ್ವನ್ಯದೇವೋಽಸ್ತಿ ತದ್ಗೃಹಾಣಿ ಪರಿತ್ಯಜೇತ್
ನಾನ್ಯದೇವಾರ್ಚಕಾನ್ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್ ।
ಸದಾ ಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಂ
ನ ಹಿ ಸ್ಥಾವರ ಲಿಂಗಾನಾಂ ನಿರ್ಮಾಲ್ಯಾದ್ಯುಪಭುಜ್ಯತೇ ।"

ಅನನ್ಯ ಭಕ್ತಿಯನ್ನು ಬೆಳಸುವ ಭಕ್ತನು ಅನ್ಯ ದೇವಾರ್ಚನೆಯನ್ನು ಧ್ಯಾನವನ್ನು ಸ್ತೋತ್ರವನ್ನು ಮಾಡಬಾರದು. ಮತ್ತು ಅನ್ಯದೇವರ ನೈವೇ ದ್ಯವನ್ನು ಭುಂಜಿಸಬಾರದು. ಸ್ಥಿರವ್ರತವುಳ್ಳ ಶಿವಭಕ್ತನ ಹೊಲಬಿಗೆ ಹೊಲ್ಲದ ಕೆಲಸ. ಯಾರ ಮನೆಯಲ್ಲಿ ಅನ್ಯದೇವರಿರುವುದೋ ಅವರು ಶಿವಭಕ್ತರಾಗಿದ್ದರೂ ಅವರ ಮನೆಗೆ ಹೋಗಬಾರದು. ತಿಳಿಯದೆ ನೋಡದೆ ಹೋಗಿದ್ಧರೆ ತಿಳಿದ ಬಳಿಕ ಆ ಮನೆಯಲ್ಲಿರಬಾರದು. ಅದೇ ಕ್ಷಣದಲ್ಲಿ ಹೊರಟು ಬರಬೇಕು. ಅನ್ಯ ದೇವಾರ್ಚಕರನ್ನು ಶಿವಪೂಜಾ ಸಮಯ ದಲ್ಲಿ ನೋಡಬಾರದು. 'ಈಶ ನಿಮ್ಮ ಪೂಜಿಸಿದ ಬಳಿಕ ಅನ್ಯದೈವಂಗಳಿಗೆ ಹೇಸಿರಬೇಕು. ಹೇಸದೆ ಅನ್ಯದೈವಕ್ಕಾಸೆ ಮಾಡಿದರೆ ಅವ ನಮ್ಮ ಈಶ್ವರಂಗೆ ಹೊರಗು· ದೋಷರಹಿತ ಭಕ್ತರು ಅವಂಗೆ ಕುಲವೇದು ಕೂಸಕೊಟ್ಟು ಕೂಡಂಡರೆ ಮೀಸಲ ಬೋನವನಾಯಿ ಮುಟ್ಟಿದಂತೆ ಕಾಣಾರಾಮನಾಥಾ!'

ದ್ವೈತಾವಸ್ಥೆಯಲ್ಲಿರುವ ಶಿವಭಕ್ತನು ತನ್ನೊಳಗೆ ಶಿವೈಕಭಾವವು ಚೆನ್ನಾಗಿ ನೆಲೆ ಸಲ್ಲಬೇಕಾದರೆ ಅನನ್ಯಭಾವ ಅನನ್ಯನಿಷ್ಠೆ ಅನನ್ಯಶ್ರದ್ಧೆ ಇದ್ದಾಗಬೇಕು. ಒಂದೆಡೆಯಲ್ಲಿ ನೆಟ್ಟ ಸಸಿ ಬೆಳೆದು ಫಲಿಸುವಂತೆ ಒಬ್ಬ ದೇವನಲ್ಲಿಟ್ಟ ನಂಬುಗೆ ನಿಬ್ಬರವಾಗಿ ದೃಢವಾಗಿ ನಿಲ್ಲಬಲ್ಲದು. ನಿಜದ ಸಾಮ ರಸ್ಯಕ್ಕೇರಬಲ್ಲುದು. ಭಕ್ತನು ಹಲವು ದೈವಕ್ಕೆರಗಿದರೆ ಫಲವಿಲ್ಲ. 'ಹಲವು

ಕೊಂಬಿಗೆ ಹಾಯಬೇಡಾ : ಬರು ಕಾಯಕ್ಕೆ ನೀಡಬೇಡ : ಲೋಗರಿಗೆಡೆ ಕೊಟ್ಟು ಭ್ರುವಿತನಾಗಬೇಡಾ ! ಆಚಾರವೆಂಬುದು ಹಾವಸೆಗಲ್ಲು ; ಭಾವ ತಪ್ಪಿದ ಬಳಿಕ ಏಗಯ್ದೊಡಾಗದು. ಅಂಜದಿರು, ಅಳುಕದಿರು, ಪರದೈವ ಕ್ಕೆರಗದಿರು ; ಕೂಡಲಸಂಗನ ಕೈಯಲು ಈಸುವುದೆನ್ನ ಭಾರ !' 'ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ ! ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ ! ಬೇಡ, ಬೇಡ ! ಅನ್ಯ ದೈವವೆಂಬುದು ಹಾದರ ಕಾಣಿರೋ ! ಕೂಡಲಸಂಗಮದೇವ ಕಂಡರೆ ಮೂಗ ಕೊಯ್ವ ಕಾಣಿರೋ !' '....ಒಬ್ಬರಿ ಗಾಳಾಗಿ ಬೇರೊಬ್ಬರನೋಲೈಸುವ ದುರ್ಬುದ್ಧಿ ಮನುಜರನೇನೆಂಬೆ, ಕೂಡಲ ಸಂಗಮದೇವಾ ?' ಸಜ್ಜನಿಕೆ ಹಾಳು. ಏಕೈಕಭಕ್ತಿ ಹಾಳು. 'ಚರ್ತಾರನ ಪೂಜಿಸಿ ಕುಚ್ಚಿತ ದೈವಕ್ಕೆರಗುವರು, ಕತ್ತೆ ಕುದುರೆಗೆ ಹುಟ್ಟಿದ ಹೇಸರ ನಂತೆ ; ಭಕ್ತರೆಂತೆಂಬೆ, ಭೃತ್ಯರೆಂತೆಂಬೆ ; ಶರಣರೆಂತೆಂಬೆನವರ ? ಎರಡುಳ್ಳ ಪ್ರಪಂಚಗಳ ಮೆಚ್ಚ ಕೂಡಲಸಂಗಮದೇವ !' 'ದೇವನೊಬ್ಬ ನಾಮ ಹಲವು. ಪರಮಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ವನು. ಹಲವು ದೇವರ ಎಂಜಲ ತಿಂಬವವನೇನೆಂಬೆ, ಕೂಡಲಸಂಗಮದೇವಾ ?'

'ಯದ್ಗೃಹೇ ಭವಿಸಂಸರ್ಗಸ್ತದ್ಗೃಹಂ ಪರಿವರ್ಜಯೇತ್
ಯತ್ರಾನ್ಯದೇವ ಪೂಜಾಸ್ಯಾನ್ನ ತಿಷ್ಠೇತ್ತತ್ರಭಕ್ತಿಮಾನ್ ।'
—ಸೂಕ್ಷ್ಮಾಗಮ, ಪಟಲ-೬.

'ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ ! ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿನೋಡಾ ! ಕೂಡಲಸಂಗಮ ದೇವನಲ್ಲದೆ ಇಲ್ಲವೆಂದಿತ್ತು ವೇದ.'

'ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ' 'ಏಕ ಏವ ಶಿವಃ ಸಾಕ್ಷಾತ್' ಎಂಬೀ ವಚನ ಮತ್ತು ವೇದಗಳನ್ನು ಭಕ್ತನು ಮನಗಾಣ ಬೇಕು. ಮನಗಂಡು ಮತ್ತೊಂದನ್ನು ಸ್ಮರಿಸದಿರಬೇಕು. ಮತ್ತೊಂದು ದೇವರಿರುವ ಮನೆಯ ಹೊಸಲೊಳಗೆ ಹೆಜ್ಜೆಯನಿಡಬಾರದು. ಬ್ರಹ್ಮಾದಿ ಗಳಿರುವ ಆಧಾರಾದಿಗಳನ್ನು ದಾಟಿ ಪರಶಿವನಿರುವ ಪಶ್ಚಿಮ ಚಕ್ರಕ್ಕೇರು

ವಂತೆ ಬೇರೆ ದೇವರಿರುವ ಗೃಹಗಳಿಂದ ಹೊರಬರಬೇಕು. ಆರೋಗ್ಯವನ್ನು ಕಾಪಾಡಿಕೊಳ್ಳುವವನು ಕಂಡಕಂಡಲ್ಲಿ ತಿನ್ನದಿರುವಂತೆ ಆತ್ಮಾಮೃತತೃಪ್ತನಾದವನು ಅನ್ಯದೈವದೆಂಜಲನ್ನು ಆಶಿಸಬಾರದು. ಸತ್ಯ ಶಿವ ಸುಂದರನಲ್ಲಿ ಕಣ್ಣಿಟ್ಟಬಳಿಕ ಸತ್ಯವಲ್ಲದ ಶಿವವಲ್ಲದ ಅನ್ಯ ದೇವಾರ್ಚಕರನ್ನು ದಿಟ್ಟಿಸಬಾರದು; ದಿಟ್ಟಿಸಿ ಕಣ್ಣೆಂಜಲಾಗಿಸಬಾರದು. ಇದು ಶ್ರೀ ರೇಣುಕ ಶಿವಾಚಾರ್ಯವರ್ಯನ ಶಿವಾಜ್ಞೆ, ಮತ್ತು ಶಿವಯಜ್ಞ.

ಸದಾಶಿವೈಕ ನಿಷ್ಠೆಯಲ್ಲಿರುವುದು ಶಿವಾಚಾರ. ಸ್ಥಾವರಲಿಂಗಗಳ ನಿರ್ಮಾಲ್ಯ ನೈವಾದ್ಯಾದಿಗಳನ್ನು ಸ್ವೀಕರಿಸದೆ ತನ್ನ ಕ್ರಿಯಾಲಿಂಗ ಪ್ರಾಣಲಿಂಗ ಪ್ರಸಾದದಲ್ಲಿ ಪರಿತೃಪ್ತನಾಗಿರುವುದು ಲಿಂಗಾಚಾರ. ಭವಗುಣಗಳ ಭವಿಜನಗಳ ಸಂಸರ್ಗಕ್ಕೆಳಸದಿರುವುದೇ ಸದಾಚಾರ. ಇಷ್ಟಾದ ಮೇಲೆ ಇನ್ನು ಗಣಾಚಾರವನ್ನು ಗಣನಾಯಕನಾದ ರೇಣುಕ ಶಿವಾಚಾರ್ಯನು ನಿರೂಪಿಸುತ್ತಾನೆ.

“ ಯತ್ರ ಸ್ಥಾವರಲಿಂಗಾನಾಮುಪಾಯಃ ಪರಿವರ್ತತೇ
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಂ ।
ತತ್ರ ಪ್ರಾಣಾನ್ ವಿಹಾಯಾಪಿ ಪರಿಹಾರಂ ಸಮಾಚರೇತ್
ಶಿವಾರ್ಥಂ ಮುಕ್ತಜೀವಶ್ಚೇಚ್ಛಿವಸಾಯುಜ್ಯಮಾಪ್ನುಯಾತ್ ।”

ಎಲ್ಲಿ ಸ್ಥಾವರಲಿಂಗಗಳಿಗೆ ಶಿವಲಾಂಛನಧಾರಿಗಳಾದ ಶಿವಭಕ್ತರಿಗೆ ಅಪಾಯವೊದಗುತ್ತದೆಯೋ ಅಲ್ಲಿ ಪ್ರಾಣಗಳನ್ನು ಬಿಟ್ಟಾದರೂ ಅಪಾಯವನ್ನು ಪರಿಹರಿಸಬೇಕು. ಶಿವನಿಗಾಗಿ ಜೀವತ್ಯಾಗವನ್ನು ಮಾಡಿದರೆ ಶಿವಸಾಯುಜ್ಯವುಂಟಾಗುತ್ತದೆ. ಇದಲ್ಲದೆ

“ ಯತ್ರ ಚಾಚಾರನಿಂದಾಸ್ತಿ ಕದಾಚಿತ್ತತ್ರ ನ ವ್ರಜೇತ್
ಯದ್ಗೃಹೇ ಶಿವನಿಂದಾಸ್ತಿ ತದ್ಗೃಹಂ ತು ಪರಿತ್ಯಜೇತ್ ।
ಯಃ ಸರ್ವಭೂತಾದಿಪತಿಂ ವಿಶ್ವೇಶಾನಂ ವಿನಿಂದತಿ
ನ ತಸ್ಯ ನಿಷ್ಕೃತಿಃ ಶಕ್ಯಾ ಕರ್ತುಂ ವರ್ಷಶತೈರಪಿ ।
ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ಯದ್ಯಕ್ಷಮೋಭವೇತ್ । ”

ಆಚಾರನಿಂದೆ ಗರ್ಹ್ಯ. ಅದು ನಡೆವಲ್ಲಿಗೆ ಶಿವಭಕ್ತನು ಹೋಗಬಾರದು. ಶಿವನಿಂದೆಯನ್ನು ಮಾಡುವ ಮನೆಯಲ್ಲಿ ಇರಬಾರದು. ಶಿವನಿಂದಕನನ್ನು ಕ್ಷಮಿಸದೆ ದಂಡಿಸಬೇಕು. ಶಿವನನ್ನಾಗಲಿ ಶಿವಾಚಾರವನ್ನಾಗಲಿ ನಿಂದಿಸುವವನೊಬ್ಬ ಧರ್ಮದ್ರೋಹಿ, ಆತನೊಬ್ಬ ಆತತಾಯಿ. ಆತನಿಂದ ಸನಾತನವಾದ ಶಿವಧರ್ಮಕ್ಕೆ ಕುಂದು ಬರುವುದಲ್ಲದೆ ಸದಾಚಾರಗಳು ನಾಶವಾಗುತ್ತವೆ. ಧರ್ಮ ನಾಶಕನನ್ನು ಕೊಂದರೆ ಪಾಪವಿಲ್ಲ. ಧರ್ಮ-ಅರ್ಥಗಳನ್ನು ಅಪಹರಿಸುವವರನ್ನು ವಿಚಾರಮಾಡದೆ ವಿಳಂಬ ಮಾಡದೆ ಕೊಲ್ಲಬೇಕೆಂದು ಭಗವದ್ಗೀತೆಯೂ ವಿಧಿಸಿದೆ. ಅನಾಚಾರ, ಅಧರ್ಮಗಳನ್ನು ಪ್ರೋತ್ಸಾಹಿಸುವವನು ಮಹಾಪಾಪಿ. ಅವನಿಂದ ಪಾಪ ವ್ಯಾಪಿಸಿ ಅಪಾರ ಅಪಾಯವುಂಟಾಗುತ್ತದೆ. ಸರ್ವಭೂತಗಳಿಗೂ ಭುವನಗಳಿಗೂ ಒಡೆಯನಾದ ಶಿವನನ್ನು ನಿಂದಿಸುವುದು ಜೀವನಿಗೆ ಉಚಿತವಲ್ಲ. ಔಚಿತ್ಯವರಿಯದೆ ನಿಂದಿಸಿದಾತನಿಗೆ ತಕ್ಕ ಶಿಕ್ಷೆಯಾಗಬೇಕು. ಅದಾಗದಿದ್ದರೆ ಅಲ್ಲಿಂದ ಹೊರಟುಹೋಗಬೇಕು.

‘ ಶಿವನಿಂದಾ ಭಕ್ತನಿಂದಾ ನಿಂದಾ ರುದ್ರಾಕ್ಷ ಭಸ್ಮನೋಃ
ಯತ್ರಪ್ರವರ್ತತೇ ದೇವಿ ನ ತತ್ರ ದಿವಸಂ ವಸೇತ್ ।’

—ಸೂಕ್ಷ್ಮಾಗಮ, ಪ. ೬

ಇದುವೇ ಗಣಚಾರ. ಇದು ಸ್ಥೂಲ. ಇದು ಇನ್ನೂ ಸೂಕ್ಷ್ಮವಾಗಿ ನಿರೂಪಿತವಾಗಿದೆ. ಮತ್ತೊಬ್ಬರ ಕರ್ಮಕ್ಕೆ ಶಿಕ್ಷೆಯನ್ನು ಕೊಡುವುದು ಮಾತ್ರ ಗಣಾಚಾರವಲ್ಲ. ತನ್ನೊಳಗೆ ಆಚಾರಕ್ಕೆ ಆಚಾರಾದಿ ಲಿಂಗಭಕ್ತಿಗೆ ಲೋಪವೊದಗಬಾರದು. ಒದಗುವಂತೆ ಆಚರಿಸಬಾರದು. ಪೂರ್ವಕರ್ಮಜಾಲಕ್ಕೆ ಸಿಲುಕಬಾರದು.

“ ಶಿವಪೂಜಾಪರೋ ಭೂತ್ವಾ ಪೂರ್ವಕರ್ಮ ವಿಸರ್ಜಯೇತ್
ಅಥವಾ ಪೂರ್ವಕರ್ಮಸ್ಯಾತ್ ಸಾ ಪೂಜಾ ನಿಷ್ಫಲಾ ಭವೇತ್ ।
ಉತ್ತಮಾಂ ವೃತ್ತಿಮಾಶ್ರಿತ್ಯ ನೀಚಾಂ ವೃತ್ತಿಂ ಸಮಾಶ್ರಿತಃ
ಆರೂಢಪತಿತೋ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ।”

ಶಿವಪೂಜೆಯೇ ಶಿವಭಕ್ತನಿಗೆ ಸರ್ವೋತ್ಕೃಷ್ಟ ಕ್ರಿಯೆ; ಉತ್ತಮವಾದ ಉತ್ತರಕ್ರಿಯೆ. ಅದನ್ನು ಕೈಗೊಂಡ ಬಳಿಕ, ಶಿವಧರ್ಮರತನಾದ ಬಳಿಕ,

ಪೂರ್ವಾಶ್ರಮದ ಪೂರ್ವಕರ್ಮಗಳಿಗೆ ವಶನಾಗಬಾರದು. ವಶನಾದರೆ ಶಿವ ಪೂಜೆಯು ನಿಷ್ಫಲವಾಗುತ್ತದೆ. ಶಿವಧರ್ಮದ ಹಾನಿಯುಂಟಾಗುತ್ತದೆ. ಅಂದರೆ ಸ್ವಧರ್ಮ ಪಾತಿತ್ಯವುಂಟಾಗುತ್ತದೆ. ಉಚ್ಚವೃತ್ತಿಯಿಂದ ನೀಚ ವೃತ್ತಿಗೆ ಇಳಿದಂತಾಗುತ್ತದೆ. ಆತನು ಆರೂಢಪತಿತನಾಗಿ ಸರ್ವಶಿವಕ್ರಿಯೆ ಗಳಿಂದ ಬಹಿಷ್ಕೃತನಾಗುತ್ತಾನೆ.

ವೀರಶೈವನು ತನ್ನ ವೀರತ್ವವನ್ನು ಗಣಾಚಾರತ್ವವನ್ನು ಕರ್ಮತ್ರಯ ವನ್ನು ಕಳೆಯುವುದರಲ್ಲಿ ಶಿವಪೂಜಾಕ್ರಿಯೆಯನ್ನು ನಡೆಯಿಸಿಕೊಂಡು ಬರುವುದರಲ್ಲಿ ತೋರಬೇಕು. ಶೈವಭಕ್ತಿಯಲ್ಲಿ ತೋರಬೇಕು. 'ವೀರ ತ್ವಮಸ್ಯ ನ ಧನೇನ ನ ವಾ ಬಲೇನ । ನೋ ಕಾರ್ಯತಶ್ಚ ವಿಹಿತಂ ದೃಢ ಶಂಭುಭಕ್ತ್ಯಾ । ವೀರಸ್ತುರೀಯ ಇತಿ ಶಂಕರ ಭಾಷಣೇನ । ಶ್ರೀ ವೀರಶೈವ ಮತಗಾನ್ನ ಪರೋಽಸ್ತಿ ಕಶ್ಚಿತ್ ॥' ಎಂಬುದಾಗಿ ವೀರಶೈವ ಧರ್ಮ ಶಿರೋಮಣಿಯಲ್ಲಿ ಉಕ್ತವಾಗಿದೆ. ವೀರಶೈವನು ತನ್ನ ಈ ವೀರವೃತ್ತಿ ಯಿಂದ ವಿಶುದ್ಧವೃತ್ತಿಯಿಂದ ಉತ್ತಮೋತ್ತಮ ವೃತ್ತಿಯಿಂದ ಸಚ್ಚಾರಿತ್ರ ವನ್ನು ಸೃಜಿಸಬೇಕು. ದುರಾಚಾರಕ್ಕೆ ಧುಮುಕಿ ದುಶ್ಚರಿತ್ರನಾಗಬಾರದು.

'ಪೂರ್ವಿಕ ಪೂಜಕ; ಅಪೂರ್ವಿಕ ಭಕ್ತ. ಕರ್ಮಿ ಪೂಜಕ; ನಿಃಕರ್ಮಿ ಭಕ್ತ. ಲಿಂಗಪೂಜಕ; ಜಂಗಮಭಕ್ತ. ತನುಗುಣಪೂರ್ವಸೂತಕ ವಿರಹಿತ ನಮ್ಮ ಕೂಡಲ ಚೆನ್ನಸಂಗಮದೇವನಲ್ಲಿ ಆತನೇ ಅಚ್ಚಶರಣ!' ಶ್ರೀ ರೇಣುಕ ಶಿವಾಚಾರ್ಯ ವಾಣಿಗೆ ಈ ವಚನ ಕನ್ನಡಿಯಂತಿದೆ. ಭಕ್ತಪೂರ್ವ ಕರ್ಮ ರಹಿತ. ತನುಗುಣಗಳೇ ಪೂರ್ವ ಕರ್ಮ. ತನುಗುಣ, ಜಡಕರ್ಮವಿರಹಿತ ನಾಗಬೇಕು.

" ಪಂಚಾಕ್ಷರೋಪದೇಶೀ ಯೋ ನರಸ್ತುತಿಕರೋ ಯದಿ
ಸೋಽಲಿಂಗೀ ಸ ದುರಾಚಾರೀ ಕುಕವಿಃ ಸತು ವಿಶ್ರುತಃ । "

ಉತ್ತಮ ಗುರುವಿನಿಂದ ಉಪದೇಶವನ್ನು ಹೊಂದಿ ಪರಮಪಾವನ ಪಂಚಾಕ್ಷರವನ್ನು ಜಪಿಸುವ ಶಿವಭಕ್ತನು ಆ ತನ್ನ ಮಂಗಳ ಮುಖದಿಂದ ನರಸ್ತುತಿಯನ್ನು ಮಾಡಬಾರದು. ಅದಕ್ಕಿಂತ ದುರಾಚಾರ ಮತ್ತೊಂದಿಲ್ಲ. ಆಚಾರ ಬಿಟ್ಟು ಲಿಂಗವಿಲ್ಲ. ದುರಾಚಾರಿಯು ಲಿಂಗವಂತನೆನಿಸನು ;

ಶಿವಕವಿಯೆನಿಸನು. ಶಿವಾತ್ಮದರ್ಶನವನ್ನು ಪಡೆದವನೇ ಕವಿ. ಶಿವ ಭಾವಗೀತಗಳನ್ನು ರಚಿಸಿ ಹಾಡುವವನು ಸತ್ಕವಿ ; ಶಿವಕವಿ. ಈ ಹೆದ್ದಾರಿಯಲ್ಲಿ ಹರಿಹರ ಚಾಮರಸ ಷಡಕ್ಷರಾದಿ ಶಿವಕವಿಗಳು ಮುನ್ನಡೆದು ಮನ್ನಣೆಯ ಪಡೆದಿದಾರೆ ; ಹೊಂಗಡದ ಲಿಂಗವಂತರಾಗಿದಾರೆ ; ಸಚ್ಚರಿತ್ರರಾಗಿದಾರೆ–ಸತ್ಕವಿಗಳೆನಿಸಿದಾರೆ.

ನರಸ್ತುತಿ, ನರನಿಂದೆಗಳೆರಡೂ ಭಕ್ತನ ಮಾರ್ಗಕ್ರಿಯೆಗೆ ಸಲ್ಲತಕ್ಕವಲ್ಲ. ನರನನ್ನು ನಿಂದಿಸಿದರೆ ಬರುವ ದೋಷವು ಸ್ತುತಿಸಿದರೂ ಬರುತ್ತದೆ. ದುಷ್ಟರೊಡನೆ ಶತೃತ್ವ ಹೇಗೆ ಕೆಟ್ಟುವೋ ಹಾಗೆ ಮೈತ್ರಿಯೂ ಕೆಟ್ಟದು.

" ಚರ್ಮಪಾತ್ರೇ ಜಲಂ ತೈಲಂ ನ ಗ್ರಾಹ್ಯಂ ಭಕ್ತಿತತ್ಪರೈಃ
ಗೃಹ್ಯತೇ ಯದಿ ಭಕ್ತೇನ ರೌರವಂ ನರಕಂ ವ್ರಜೇತ್ | "

ಭಕ್ತಿಮಾರ್ಗದಲ್ಲಿರುವವರು ಚರ್ಮದ ಪಾತ್ರೆಯಲ್ಲಿ ಜಲವನ್ನಾಗಲಿ ತೈಲವನ್ನಾಗಲಿ ತುಪ್ಪವನ್ನಾಗಲಿ ಹಾಕಿ ಸ್ವೀಕರಿಸಬಾರದು. ಭಕ್ತನಾಗಿ ಸ್ವೀಕರಿಸಿದರೆ ಭೀಕರ ನರಕ. ಪವಿತ್ರನಾಗಿರಲು ಆಹಾರ ಪಾನಾದಿಗಳು ಪರಿಶುದ್ಧವಾಗಿರಬೇಕು. ಪಾನ ಪರಿಶುದ್ಧತೆಗೆ ಪಾತ್ರೆ ಪರಿಶುದ್ಧವಾಗಿರಬೇಕು. ಪಾತ್ರೆಯ ದೋಷ ಪಾನದಲ್ಲಿ ಬಂದು ಪಾನ ಮಾಡಿದವನಲ್ಲಿ ಬಂದು ದೋಷಯುಕ್ತನನ್ನಾಗಿ ಮಾಡುತ್ತದೆ. ಆ ಚರ್ಮವನ್ನು ಜೀವಂತತೆಯಲ್ಲಿ ಹೊದ್ದ ಪ್ರಾಣಿಯ ಚಾರಿತ್ರ ಅದರಲ್ಲಿ ಹೊಂದಿಬಂದಿರುತ್ತದೆ. ಅಲ್ಲದೆ ನಿರ್ಜೀವ ಚರ್ಮ ಸ್ವಯಂ ಅಪಾತ್ರವಾಗಿರುತ್ತದೆ. ಅನೇಕ ದೋಷದೂಷಿತವಾಗಿರುತ್ತದೆ.

ಚರ್ಮಜಲವನ್ನು ಪಾನಮಾಡಬಾರದೆಂಬುವುದು ಕೇವಲ ಆಚಾರ ದೃಷ್ಟಿಯಿಂದಲ್ಲ, ಆರೋಗ್ಯ ದೃಷ್ಟಿಯಿಂದಲೂ ಅನರ್ಥ ; ಅಯುಕ್ತ. ಜಲ ಯಾವುದರಿಂದ ಬರುತ್ತದೆಯೋ ಅದರ ಗುಣ ಬಲಗಳೊಡನೆ ಕೂಡಿ ಬರುತ್ತದೆಯೆಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ಕುಡಿದ ನೀರು ಯಾವ ಶಿಲೆ ಯಾವ ಧಾತುಗಳಿಂದ ಬಂದರೆ ಆ ಶಿಲೆ ಆ ಧಾತುಗಳ ಗುಣಧರ್ಮಗಳೊಡನೆ ಬರುವುದು ಯಾರಿಗೆ ಅರಿಯದ ಸಂಗತಿ ? ಸ್ಪರ್ಶವಸ್ತುವಿನ ಗುಣಶಕ್ತಿ

ಗಳನ್ನು ಗ್ರಹಿಸುವ ಶಕ್ತಿ ನೀರಿಗೆ ಚುರುಕಾಗಿದೆ. ಇದರಿಂದಾಗಿ ಕಂಡ ಕಂಡವರ ಕೈನೀರನ್ನು ಕುಡಿಯಬಾರದೆಂಬ ಕುಲಾಚಾರವನ್ನು ಕಟ್ಟು ಕಟ್ಟಳೆಯನ್ನು ಹಾಕಿಕೊಂಡು ಬಂದಿದಾರೆ. ಅಸಂಸ್ಕೃತರ ಅವಗುಣಿಗಳ ಕೈ ಸೋಂಕಿನ ನೀರನ್ನು ಕುಡಿದರೆ ಅದೇ ಸ್ವಭಾವಕ್ಕೆ ಎರವಾಗಬೇಕಾಗುತ್ತದೆ. ಅದೇ ಸುಸಂಸ್ಕೃತರ ಸುವಿವೇಕಿಗಳ ಹಸ್ತೋದಕವನ್ನು ತೆಗೆದುಕೊಂಡರೆ ಶುಭ ವಾಸನೆ ಸುಸ್ವಭಾವಗಳು ಸಮವೆನಿಸುತ್ತವೆ. ಪವಿತ್ರಾತ್ಮಕ ಪಾದೋದಕ ಸ್ವೀಕಾರದಲ್ಲಿಯೂ ಈ ದಿವ್ಯದೃಷ್ಟಿಯಿದೆ. ಗ್ರಾಹಕ ಶಕ್ತಿ ಜಲದಲ್ಲಿ ತೀವ್ರ ವಾಗಿರುವುದರಿಂದ ಗುರುಪಾದದಲ್ಲಿ ಹೊರಹೊಮ್ಮುವ ಚಿದ್ರೂಪ ರಸಾಮೃತ ವನ್ನು ತನ್ನೊಳಗೆ ತರುವ ಶಕ್ತಿ ಉದಕಕ್ಕಿರುತ್ತದೆ. ಇದರಿಂದಾಗಿ ಗುರುಪಾದಕ್ಕೆರೆದ ಉದಕವನ್ನು ಸ್ವೀಕರಿಸುವ ಸತ್‌ಸಂಪ್ರದಾಯ ಬಂದಿದೆ. ಇದರಿಂದ ಗುರುವಿನ ಚಿತ್ಕಳಾಂಶವನ್ನು ಶಿವರೂಪಾಂಶವನ್ನು ಶಿಷ್ಯನು ಪಡೆದ ಪಡೆವ ಭಾಗ್ಯಶಾಲಿಯಾಗುತ್ತಾನೆ. ಚರ್ಮಪಾತ್ರೆಯ ಉದಕವನ್ನು ಕುಡಿದು ನರಕಕ್ಕೆ ತೆರಳುವುದಕ್ಕಿಂತ ಸಮ್ಯಜ್ಞಾನಿ 'ಶ್ರೀ ಗುರು ಪಾದೋದಕವನ್ನು ಪಾನಮಾಡಿ ಪಾವನನಾಗಿ ಪರಮಜ್ಞಾನಿಯಾಗಿ ಪರಮಾತ್ಮರೂಪನಾಗುವ ಮಾರ್ಗಕ್ರಿಯೆಯು ಭಕ್ತನಿಗೆ ವಿಹಿತ. ಇದರಿಂದ ಸತ್ಯಸುಖ ಸನ್ನಿಹಿತ.

" ನ ತಸ್ಯ ಸೂತಕಂ ಕಿಂಚಿತ್ ಪ್ರಾಣಲಿಂಗಾಂಗಸಂಗಿನಃ
ಜನನೋತ್ಥಂ ಮೃತೋತ್ಥಂಚ ವಿದ್ಯತೇ ಪರಮಾರ್ಥತಃ । "

ಭಕ್ತನಾದ ಬಳಿಕ ಸೂತಕರಹಿತನಾಗಬೇಕು. ಸೂತಕವಳಿಯ ಬೇಕಾದರೆ ಭಕ್ತನು ಅಂತರಂಗದಲ್ಲಿ ಕ್ರಿಯಾಲಿಂಗ ಸಂಗವುಳ್ಳವನಾಗಬೇಕು. ಹೀಗಾದ ಬಳಿಕ ಭಕ್ತನಿಗೆ ಜನನ ಸೂತಕ ಮರಣ ಸೂತಕಗಳು ನಿಶ್ಚಿತ ವಾಗಿರುವುದಿಲ್ಲ. ಕುಲ ಸೂತಕ ಮುನ್ನವೇ ಇರುವುದಿಲ್ಲ.

ಭಕ್ತನಿಗೆ ಹೇಗೆ ಚರ್ಮೋದಕ ಸಲ್ಲದೋ ಹಾಗೆ ತನ್ನ ಪ್ರಾಣಲಿಂಗ ಸಂಗವಲ್ಲದೆ ಬೇರೆ ಪ್ರಾಕೃತಿಕ ಲಿಂಗ ಸಲ್ಲದು. ಬೇರೆ ಸ್ಥಾವರ ಲಿಂಗ ಪ್ರಸಾದವೂ ಸಲ್ಲದು. 'ಸಮನಿಸದಯ್ಯ ಭವಿಯ ಸಂಗಭಕ್ತಂಗೆ. ಸಮ ನಿಸದಯ್ಯ ಲಿಂಗಪ್ರಾಣಿಗೆ ಅನರ್ಪಿತ. ಸಮನಿಸದಯ್ಯ ಪ್ರಾಣಲಿಂಗ ಸಂಬಂಧಿಗೆ ಬಹುಲಿಂಗ ಪ್ರಸಾದ. ಇಂತೀ ಮೂರಕ್ಕಳುಕದಿರ್ದನಾದೊಡೆ ನಾಯಕ ನರಕದಲ್ಲಿಕ್ಕುವ ಕಪಿಲ ಸಿದ್ಧಮಲ್ಲಿಕಾರ್ಜುನಾ.' ಮಂಗಳಾಂಗ

ನಾದ ಭಕ್ತನಿಗೆ ಭವಿಸಂಗ ಹೇಗೆ ಸಲ್ಲದೋಲಿಂಗಪ್ರಾಣಿಯಾದ ಕಾರಣ ಆ ಲಿಂಗಜ್ಯೋತಿಯ ಮುಂದೆ ಸೂತಕ ಪಾತಕ ರೂಪಾಂಧಕಾರವಿರದು.

" ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಂ
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ ।
ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ
ಶಿವಪಾದಾಂಬು ಸಂಸ್ಪರ್ಶಾತ್ ಸರ್ವಪಾಪಂ ಪ್ರಣಸ್ಯತಿ॥ "

ಲಿಂಗಧಾರಿಗಳಿಗೆ ಲಿಂಗಾರ್ಚಕರಿಗೆ ಸ್ತ್ರೀ ಪುರುಷರೆಂಬ ದೈಹಿಕ ಭೇದವಿಲ್ಲ ; ಧಾರ್ಮಿಕ ಭೇದವಿಲ್ಲ. ದೇಹಭೇದ ಮುನ್ನವೇ ಇಲ್ಲ. ದೇಹಭಾವವಿಲ್ಲವಾಗಿ ದೇಹಧರ್ಮಗಳಿಲ್ಲ. ಇದರಿಂದಾಗಿ ಲಿಂಗಾರ್ಚನ ನಿರತರಾದ ಲಿಂಗವಂತ ಸ್ತ್ರೀಯರಿಗೆ ಋತುಸೂತಕ, (ಮಾಸಿಕ ಮುಟ್ಟು) ಪ್ರಸೂತಿ ಸೂತಕ (ಹೆರುಗೆಯ ಹೊರಗು) ಗಳು ಇರುವುದಿಲ್ಲ. ಶಿವಲಿಂಗಾರ್ಚನೆಯಿಂದ ಮಹಿಳೆಗೆ ಸೂತಕವಿಲ್ಲ : ಶಿವಪಾದೋದಕ ಸ್ಪರ್ಶದಿಂದ ಮನೆಗೆ ಸೂತಕವಿಲ್ಲ. ಪೂಜೆ ಪಾದೋದಕಗಳು ಸರ್ವಪಾಪಗಳನ್ನು ಕಳೆಯುಬಲ್ಲವು.

ಲಿಂಗದೇಹಿಗಳಾದ ಅಂಗನೆಯರಿಗೆ ಸೂತಕಾದಿಗಳಿಲ್ಲೆಂದು ಶಿವಾಗಮಗಳು ಶಿವ ಪುರಾಣಗಳು ವಿಪುಲವಾಗಿ ಉದ್ಘೋಷಿಸಿವೆ. ರವಿಚಂದ್ರಾಗ್ನಿಗಳಂತೆ ತೇಜಸ್ವಿಗಳಾಗಿರುವರೆಂದು ಬಣ್ಣಿಸಿವೆ. ಶ್ರೀಗುರು ಅಂಗಕ್ಕೆ ಲಿಂಗ ಸಾಹಿತ್ಯವ ಮಾಡಿ ಸರ್ವಾಂಗವನ್ನು ಲಿಂಗವನ್ನಾಗಿ ಮಾಡಿರುತ್ತಾನೆ. ಕಾರಣ ಲಿಂಗಸ್ಪರ್ಶದಿಂದ ಅಂಗಸೂತಕ ನಾಶ. ಶರೀರ ಗುಣವಿಲ್ಲವಾಗಿ ಸಂಸಾರ ಸೂತಕ ಭಯವಿಲ್ಲ. ಪ್ರಾಣಗುಣವಿಲ್ಲವಾಗಿ ಪ್ರಾಕೃತಿಕ ಮಾಯಾಗುಣವಿಲ್ಲ. ಕಾಯ ಮಾಯಗಳಲ್ಲಿದ್ದು ಪ್ರಸಾದಕಾಯವೆನಿಸುತ್ತದೆ. ಆ ಪ್ರಸಾದ ಕಾಯವೇ ಪರಶಿವನ ಕಾಯ. ಅದಕ್ಕಿಲ್ಲ ಸೂತಕ ಪಾತಕ ಪ್ರಸರ. 'ಅಂಗಮನ ಪ್ರಾಣ ತ್ರಿಸ್ಥಾನ ಸಂಗವಾಗಿ ಮನಕ್ರೀಯಳಿದು ಸಾರ ಉಳಿದು ನುಡಿಗಡಣ ಸಂಭಾಷಣೆಯಿಂದ ಕಣ್ದೆರೆದು ಜಂಗಮದಲ್ಲಿ ಅರಿದ, ಲಿಂಗದಲ್ಲಿ ಮರೆದ ಕೂಡಲಚೆನ್ನಸಂಗ ತಾನಾಗಿ !' ಲಿಂಗಸಂಗವುಳ್ಳ ವೀರಶೈವ ಸ್ತ್ರೀ ಪುರುಷರ ತ್ರಿವಿಧ ತನುವೆಲ್ಲ ತತ್ತ್ವಮಯವಾಗಿರುತ್ತದೆ. ಜ್ಯೋತಿರ್ಮಯ

ವಾಗಿರುತ್ತದೆ. ನೀರುಮುತ್ತಾದ ಬಳಿಕ ಮುತ್ತಳಿದು ನೀರಾಗದು. ಅಂತೆಯೇ ಅಂಗವಳಿದು ಲಿಂಗವಾದ ಬಳಿಕ ಲಿಂಗಾಂಗಕ್ಕೆ ಸೂತಕ್ಕಪಾತಕಗಳ ಮಾತಿಲ್ಲ. ಹೆಣ್ಣು ಗಂಡೆಂಬ ಕವಲಿಲ್ಲ. ಲಿಂಗದ ನಚ್ಚು ಬಿಚ್ಚದೆ ಮನದಲ್ಲಿ ಅಚ್ಚೊತ್ತಿದಂತಿರುವ ಲಿಂಗಭಕ್ತನಿಗೆ ತನುವೆಲ್ಲ ಶಿವಕ್ಷೇತ್ರ; ಧರೆಯೆಲ್ಲ ಶಿವಕ್ಷೇತ್ರ. ತನು–ಧರೆಗಳಲ್ಲಿ ಎಲ್ಲಿ ಸುಳಿದರೂ ಸೂತಕವಿಲ್ಲ. ನಿಷೇಧವಿಲ್ಲ.

" ಶಿವಸ್ಥಾನಾನಿ ತೀರ್ಥಾನಿ ವಿಶಿಷ್ಟಾನಿ ಶಿವಾರ್ಚಕಃ
ಶಿವಯಾತ್ರೋತ್ಸವೇ ನಿತ್ಯಂ ಸೇವೇತ ಪರಯಾ ಮುದಾ

ಶಿವಾರ್ಚಕನಾದ ಶಿವಭಕ್ತನು ಶ್ರೇಷ್ಠವಾದ ಶಿವಸ್ಥಾನಗಳಿಗೆ ಶಿವತೀರ್ಥಗಳಿಗೆ ನಿತ್ಯವೂ ಹೋಗಬಹುದು. ಸಂತೋಷಾತಿಶಯದಿಂದ ಶಿವಯಾತ್ರೆಯನ್ನು ಮಾಡಬಹುದು. ಆತನ ಯಾತ್ರೆ ಶಿವಯಾತ್ರೆ. ಶಿವಪಥದಲ್ಲಿ ಸಾಗುವವನಿಗೆ ವಿಧಿ ನಿಷೇಧಗಳಿಲ್ಲ. ಶಿವಾರ್ಚಕನ ಶ್ರೀಚರಣಸ್ಪರ್ಶದಿಂದ ತೀರ್ಥಕ್ಷೇತ್ರಗಳೆಲ್ಲ ಶಿವಸ್ಥಾನಗಳಾಗಿ ಏರ್ಪಡುತ್ತವೆ. ಅಲ್ಲಿ ನೆರೆದ ಯಾತ್ರಿಕರೆಲ್ಲ ಆತನ ಸಂದರ್ಶನದಿಂದ ಸಂಭಾಷಣದಿಂದ ಪವಿತ್ರಾತ್ಮರಾಗುತ್ತಾರೆ.

ಶಿವಭಕ್ತನು ಎಲ್ಲಿಗೆ ಯಾತ್ರೆಯು ಮಾಡಿದರೂ ತನ್ನ ಶಿವಲಿಂಗವನ್ನೇ ತಾನು ಪೂಜಿಸುವನೆಂಬುದನ್ನು ಮರೆಯಬಾರದು. ಇದನ್ನು ಅಚ್ಚೊತ್ತುವಂತೆ ಸೂಚಿಸಲು 'ಶಿವಾರ್ಚಕಃ' ಎಂದು ಹೇಳಿ ಶಿವಾರ್ಚನಕ್ರಿಯಾ ಕರ್ತೃತ್ವವನ್ನು ಅಭಿವ್ಯಕ್ತಗೊಳಿಸಿದ್ದಾನೆ. ಶಿವಾರ್ಚಕನದು ಲಿಂಗಲೀಲಾ ವಿಲಾಸಚಾರಿತ್ರ. ಅವನೆಲ್ಲಿದ್ದರೂ ಅದು ಅವಿಮುಕ್ತ ಕ್ಷೇತ್ರ. ಆತನು ಸುಳಿದುದೆಲ್ಲ ಶಿವಯಾತ್ರೆ. ಆತನ ಮನಕ್ಕೆ ಯಾವ ನೋವಿಲ್ಲ. ಆತನ ಅಂಗಕ್ಕೆ ಬಳಲಿಕೆಯಿಲ್ಲ. ಆತ ನಿತ್ಯ ಸಂಚಾರಿ; ನಿತ್ಯ ಸಾತಿಶಯ ಸಂತೋಷಿ. ಆತನ ಶಿವಯಾತ್ರೆಯಿಂದ ತೀರ್ಥಕ್ಷೇತ್ರಗಳು ವಿಶುದ್ಧಗಳೂ ವಿಶಿಷ್ಟಗಳೂ ಆಗುತ್ತವೆ.

" ಶಿವಕ್ಷೇತ್ರೋತ್ಸವ ಮಹಾಯಾತ್ರಾದರ್ಶನ ಕಾಂಕ್ಷಿಣಾಂ
ಮಾರ್ಗೇಽನ್ನಪಾನದಾನಂ ಚ ಕುರ್ಯಾನ್ಮಾಹೇಶ್ವರೋ ಜನಃ ।
ನಾನ್ನತೋಯಸಮಂ ದಾನಂ ನ ಚಾಹಿಂಸಾಪರಂ ತಪಃ
ತಸ್ಮಾನ್ಮಾಹೇಶ್ವರೋ ನಿತ್ಯಮನ್ನತೋಯಪ್ರದೋ ಭವೇತ್ ॥

ಶಿವಕ್ಷೇತ್ರಗಳಿಗೆ ಶಿವಯಾತ್ರೆಯನ್ನು ಮಾಡುವ ಮತ್ತು ಮಹೋತ್ಸವ ಮಹಾಯಾತ್ರೆಗಳನ್ನು ನೋಡುವ ಶಿವಭಕ್ತರಿಗೆ ಮಾರ್ಗಮಧ್ಯದಲ್ಲಿ ಪ್ರಸಾದ ಪಾದೋದಕಗಳ ದಾನವನ್ನು ಮಾಹೇಶ್ವರರು ಮಾಡಬೇಕು. ಅನ್ನೋದಕ ದಾನಕ್ಕೆ ಸಮವಾದ ದಾನವಿಲ್ಲ. ಅಹಿಂಸಾಧರ್ಮಕ್ಕಿಂತ ದೊಡ್ಡ ತಪವಿಲ್ಲ. ಅದರಿಂದ ಮಾಹೇಶ್ವರನು ನಿತ್ಯಅನ್ನೋದಕ ದಾಸೋಹವನ್ನು ಮಾಡಬೇಕು. ಇದು ಶಿವಭಕ್ತ ಪ್ರೇಮಕ್ಕೆ ಚಿನ್ಹೆ. ಶಿವಸೇವೆಗೆ ಚಿನ್ಹೆ. ಶಿವನ ಸಾಕ್ಷಾತ್ಕಾರವಾಗಬೇಕಾದರೆ ದಾಸೋಹ ಸೇವೆಗಿಂತ ಬೇರಿಲ್ಲ ಸತ್ಯಸಾಧನೆ ; ಸಹಜ ಸಾಧನೆ, ದಾನರೂಪ ದಾಸೋಹ ಕ್ರಿಯೆಯಲ್ಲಿ ದೇವ ದರ್ಶನಲಾಭ ಸುಲಭವಾಗಿ ಲಭ್ಯವಾಗುತ್ತದೆ. 'ಶಾಸ್ತ್ರ ಘನವೆಂಬೆನೇ ಕರ್ಮವ ಭಜಿಸುತ್ತದೆ. ವೇದ ಘನವೆಂಬೆನೇ ಪ್ರಾಣವಧೆಯ (ವೇಧೆಯು) ಹೇಳುತ್ತದೆ. ಶ್ರುತಿ ಸ್ಮೃತಿ ಘನವೆಂಬೆನೇ ಮುಂದಿಟ್ಟು ಅರಸುತ್ತದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲ ಸಂಗಮದೇವರ.'

ಭಕ್ತನ ತನುಮನಧನಗಳು ದಾಸೋಹಕ್ಕೆ ಮೀಸಲಾಗಿ ಸವೆಯಬೇಕು. ತನಗೆ ಬಂದ ತನುಸಂಪತ್ತು ಶಿವನ ಶಿವಭಕ್ತರ ಸೇವೆಯಲ್ಲಿ, ಮನ ಶಿವನೆನಹಿನಲ್ಲಿ, ಧನ ಶಿವಭಕ್ತರಿಗಾಗಿ ಸವೆಯಬೇಕು. ಅರ್ಥಪ್ರಾಣಾಭಿಮಾನಗಳೂ ದಾಸೋಹ ಸೇವೆಗೆ ಸಲ್ಲಬೇಕು. ಸಂಪಾದಿಸಿದ ಸ್ಥಿರ ಚರ ಸಂಪತ್ತು ಶಿವನಿಗೆ ಶಿವಭಕ್ತರಿಗೆ ಸಲ್ಲುವುದಕ್ಕಿಂತ ಬೇರಿಲ್ಲ ಸಾರ್ಥಕ್ಯ; ಬೇರಿಲ್ಲ ಸೌಭಾಗ್ಯ.

ಶ್ರುತಿ ಶಾಸ್ತ್ರಗಳನ್ನು ಬೆದಕಿದರೆ, ಬುದ್ಧಿಯಿಂದ ಮಾತ್ರ ಅರತರೆ ಆಗದು; ಆ ಪರವಸ್ತು ಸಿಕ್ಕದು. ಅರಿದಂತೆ ಆಚರಿಸಿಬೇಕು. ಸತ್ಪಾತ್ರದಲ್ಲಿ ತನ್ನದೆಲ್ಲ ತ್ಯಾಗವಾಗಬೇಕು, ಭೋಗವಾಗಬೇಕು; ಯೋಗವಾಗಬೇಕು. ಆಗ ಶಿವಯೋಗ ಸಮನಿಸುತ್ತದೆ. ಕಾರಣ ಶಿವಭಕ್ತನು ದಯಾಪರನಾಗಿ ಧರ್ಮಶೀಲನಾಗಿ ಪ್ರಸಾದ ಪಾದೋದಕತ್ಯಾಗವನ್ನು (ದಾನವನ್ನು) ಅಂದರೆ ದಾಸೋಹವನ್ನು ನಿತ್ಯ ನಡಿಸಬೇಕು. ತ್ರಿವಿಧ ವಂಚನೆ ಯಿಲ್ಲದೆ ಮಾಡಿ ಮುಕ್ತರಾಗಬೇಕು.

ಹಸಿದು ಬಂದ ಗಂಡಂಗೆ ಉಣಲಿಕ್ಕದೆ ಬಡವಾದನೆಂದು ಮರಗುವ ಸತಿಯ ಸ್ನೇಹದಂತೆ ಬಂದುದನರಿಯಳು, ಇದ್ದುದ ಸವೆಸಳು. ದುಃಖ ವಿಲ್ಲದಕ್ಕೆ ಹಗರಣಿಗನ ತೆರನಂತೆ. ಕೂಡಲಸಂಗನ ಶರಣರಿಗೆ ತ್ರಿವಿಧವ ವಂಚಿಸಿ ಬಣ್ಣಿಸುವನ ಭಕ್ತಿಯ ಕಂಡು ನಾಚಿದೆನು.

ಶಿವಭಕ್ತನಿಗೆ ಶಿವಾಚಾರವೇ ಸತ್ಪತಿ. ಶಿವಾಚಾರವು ಬಡವಾಗದೆ ಇರಬೇಕಾದರೆ ಶಿವಭಕ್ತನೆಂಬ ಸತಿಯು ತನ್ನ ತ್ರಿವಿಧವನ್ನು ವಂಚಿಸದೆ ಅರ್ಪಿಸಬೇಕು ; ಅಭಿವೃದ್ಧಿಗೊಳಿಸಬೇಕು. ಇದ್ದುದನ್ನು ಸಮರ್ಪಿಸಿ ಸವೆಸಲು ಹಿಂಜರಿಯಬಾರದು ; ಹೆದರಬಾರದು. 'ಬೆಚ್ಚದೆ ಬೆದರದೆ ತೊತ್ತುತನವ ಮಾಡಲು ತನ್ನಂತೆ ಮಾಡುವ ಕೂಡಲಸಂಗಮದೇವ.' ತ್ಯಾಗಕ್ಕೆ ಹಿಂದೆಗೆದರೆ ಮನ ಮಾಡದಿದ್ದರೆ ಅದು ಲೋಭವೆನಿಸುತ್ತದೆ. ಲೋಭ ಗುಣದಿಂದ ಯಾವ ಲಾಭವಿಲ್ಲ. ಸ್ವೋನ್ನತಿಯೂ ಇಲ್ಲ ; ಸಮಾಜೋನ್ನತಿಯೂ ಇಲ್ಲ. 'ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯಾ. ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯಾ. ಕೂಡಲಸಂಗಮ ಶರಣರ ಸನ್ನಿಧಿಯಿಂದ ಅರಿದರೆ ಆನು ಬದುಕುವೆನಯ್ಯಾ.'

ಈ ಭೌತಿಕ ಸಂಪತ್ತಾಗಲಿ, ಈ ದೈಹಿಕ ಸಂಪತ್ತಾಗಲಿ ಒಂದು ತೃಣ ; ಒಂದು ಕಣ. ಇವುಗಳ ಲೋಭಕ್ಕೆ ಎರವಾಗಿ ಶಿವಸ್ವರೂಪಿಗಳಿಗೆ ಶಿವಸಾಹಿತ್ಯಕ್ಕೆ ಇವನ್ನು ತ್ಯಾಗ ಮಾಡದಿದ್ದರೆ ಆ ತತ್ತ್ವಾನುಭವದ ಕೋಟಿಲಾಭ ಕೈಬಿಟ್ಟು ಹೋಗುತ್ತದೆ ; ಕೆಟ್ಟು ಹೋಗುತ್ತದೆ. ಅದಕ್ಕಿಂತ ನಷ್ಟ ಈ ಜನ್ಮದಲ್ಲಿ ಬೇರಿಲ್ಲ. ಇದೊಂದು ಮಹಾನಷ್ಟವೆಂದು ಶ್ರುತಿಗಳು ಸಾರಿವೆ. ಇದನರಿಯಬೇಕು. ಭಕ್ತಿಯ ಸಾಫಲ್ಯತೆ ತ್ಯಾಗದಲ್ಲಿದೆಯೆಂದರಿದು ತ್ರಿವಿಧ ದಾಸೋಹಿಯಾಗಬೇಕು. ದಿವ್ಯಾನುಭಾವರ ಸೇವಾನಂದದಲ್ಲಿ ಬಾಳಿ ಬದುಕಬೇಕು. 'ಕಾಣುತ್ತ ಕಾಣುತ್ತ ಕಡೆಗಣಿಸಿ ಕೆಡಿಸಿ ಅರಸುವ ಮತಿ ಭ್ರಷ್ಟನಾನು ಲಿಂಗಯ್ಯಾ ! ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿತ್ತೆನ್ನ. ತನುಮನಧನ ಶಿವಂಗೆ ನಿವೇದಿಸಿದ ಭಕ್ತರ ಮನೆಯ ಮಗ ನಾನಯ್ಯಾ ಕೂಡಲಸಂಗಮದೇವಾ.'

ಆ ಅಪ್ರತ್ಯಕ್ಷ ಶಿವನೇ ಶ್ರೀಗುರುವಾಗಿ ಕಾಣಿಸಿಕೊಂಡಿದಾನೆ. ಕಾಣಿಸಿಕೊಂಡು ತನ್ನ ಕೈವಿಡಿದವರನ್ನು ಕರಕಂಜಾತರನ್ನಾಗಿಸಿ ಶಿವಾಂಶಿಕನ್ನಾಗಿಸಿದಾನೆ. ಹೀಗಿದ್ದರೂ ಶ್ರೀಗುರುವನ್ನು ಅರಿಯದೆ ಆರಾಧಿಸದೆ ಅತಿಲೋಭದಿಂದ ತನುಮನಧನಗಳನ್ನು ಅರ್ಪಿಸದೆ ಮುಂದುಗೆಡುವುದಕ್ಕಿಂತ ಬೇರಿಲ್ಲ ದುರ್ಭಾಗ್ಯ. ಲೋಭಕ್ಕಿಂತ ಬೇರಿಲ್ಲ ಜನ್ಮಶತ್ರು. ಕಾರಣ ಭಕ್ತನು ತ್ರಿವಿಧಸಂಪತ್ತಿನ ಲೋಭವನ್ನು ಬಿಟ್ಟು ಬಾಳಬೇಕು. 'ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ ಎಂದೆಂದಿಗೆಯೂ ಕೇಡಿಲ್ಲ, ಮಾಡಿ ಭೋ ಮಾಡಿ ಭೋ ! ಎಲ್ಲವೂ ಸವೆಯಿತ್ತು ಹೋಯಿತೆಂಬ ಚಿಂತೆ ಸಂತೋಷವಿಲ್ಲದೆ ಮಾಡಿ ಭೋ ನಮ್ಮ ಸಕಳೇಶ್ವರ ದೇವನರಿದು ಸಲಹುವನಾಗಿ !'

ಈ ವಚನದಲ್ಲಿ ಸಕಳೇಶಮಾದರಸರು ಭಕ್ತನಿಗೆ ತ್ಯಾಗಮಾಡಲು ಎಂತಹ ಉತ್ಸಾಹವನ್ನು ಉದ್ಬೋಧಿಸಿದ್ದಾರೆ ! ಎನೂ ಅರೆಕೊರೆಯಿಲ್ಲದ ಅಭಯುವನ್ನು ಅನುಗ್ರಹಿಸಿದ್ದಾರೆ ! ಇದೇ ಅಭಯುಸ್ವರದಲ್ಲಿ ಶ್ರೀರೇಣುಕ ಶಿವಾಚಾರ್ಯರು 'ನಿತ್ಯಮನ್ನತೋಯಪ್ರದೋ ಭವೇತ್' ಎಂದು ಭಕ್ತನಿಗೆ ಮಾರ್ಗಕ್ರಿಯೆಯನ್ನು ಬೋಧಿಸಿದ್ದಾರೆ.

"ಸ್ವಮಾರ್ಗಾಚಾರವರ್ತಿಭ್ಯಃ ಸ್ವಜಾತಿಭ್ಯಃ ಸದಾವ್ರತೀ
ದದ್ಯಾತ್ತೆಭ್ಯಃ ಸಮಾದದ್ಯಾತ್ ಕನ್ಯಾಂ ಕುಲಸಮುದ್ಭವಾಂ"

ತನ್ನಂತೆ ಶಿವಾಚಾರದಲ್ಲಿರುವ ಸತ್ಕುಲೀನರಿಗೆ ಕನ್ಯಾದಾನವನ್ನು ಮಾಡಬೇಕು ; ಮತ್ತು ಅವರಿಂದ ತನ್ನ ಮನೆಗೆ ಕನ್ನೆಯನ್ನು ತಂದುಕೊಳ್ಳಬೇಕು. ಇದೂ ಶಿವಾಚಾರದ ಮಾರ್ಗಕ್ರಿಯೆ.

ಲೇಸೆಲ್ಲಿದೆಯೋ ಅಲ್ಲಿ ಕುಲವಿದೆ. ಕುಲಜತನವನ್ನು ಬಯಸುವುದೆಂದರೆ ಒಳಿತನ್ನು ಬಯಸಿದಂತೆ ! ಒಳಿತಕ್ಕೆ ಒಲಿಯುವುದೇ ಸಹಜ; ಅದೇ ಸತ್ಯತೇಜ. 'ಸ್ವಮಾರ್ಗಾಚಾರವರ್ತಿಭ್ಯಃ' ಎಂಬ ವಿಶೇಷಣದಿಂದ ಈ ಉದಾತ್ತಾರ್ಥ ಉದ್ಬೋಧವಾಗುತ್ತದೆಯಲ್ಲದೆ 'ಸ್ವಜಾತಿಭ್ಯಃ' ಎಂಬುದು ವಿಶಾಲವೂ ಗುಣಕ್ರಿಯಾಜನ್ಯವೂ ವಿಶುದ್ಧವೂ ಆಗಿ ಶೋಭಿಸಿದೆ.

'ಕೊಡಬೇಕುತ್ತಮನಾದವಂಗೆ ಮಗಳಂ, ಸತ್ಪಾತ್ರದೊಳ್ ದಾನಮಂ।
ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ ।........
ಇಡಬೇಕಿದ್ದುಣಬೇಕಲ್ಲೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ॥'

ಅನ್ನದಾನದಂತೆ ಹೊನ್ನು ಹೆಣ್ಣು ಮಣ್ಣುಗಳನ್ನು ಸತ್ಪಾತ್ರದಲ್ಲಿ ಕೊಡಬೇಕು. ಪವಿತ್ರ ಪ್ರೇಮವನ್ನು ಪರಮೇಶ್ವರನಲ್ಲಿ ಇಡಬೇಕು.

ಸತ್ಯ ಶಿವ, ನಿತ್ಯಶಿವ ; ಆತನಲ್ಲಿ ಪರಾಭಕ್ತಿಯನ್ನಿಟ್ಟರೆ ಪರಿಹರಿವುದು ಪರಿಭವ. ಕರಿಗೊಳ್ಳುವುದು ಪರೋಕ್ಷಾನುಭವ. ಆತಂಗೆ ಈ ಅನಿತ್ಯ ಸಂಪದಗಳನಿತ್ತರೆ ಆತನು ತನ್ನ ಭಕ್ತರಿಗೆ ಕೊಡುವನು ನಿತ್ಯಪದ ; ಸತ್ಯ ಸಂಪದ.

ಮಾರ್ಗಕ್ರಿಯೆಗಳಿಲ್ಲದೆ ಭಕ್ತಸ್ಥಲ ಬಾರದು. ಮಾರ್ಗಕ್ರಿಯೆಗಳು ಭಕ್ತನ ಪ್ರಾಣಗಳು. ಕ್ರಿಯಾಚೈತನ್ಯವಿಲ್ಲದ ಪ್ರೇಮ ಶುಷ್ಕ. ಬರೀ ಪ್ರೇಮ ಭಕ್ತಿಯೆನಿಸದು. ಸುಮ್ಮನೆ ಪ್ರೇಮಿಸುವವನು ಭಕ್ತನೆನಿಸನು. 'ಭಕ್ತರಲ್ಲದವರನಾಸೆಗೈದರೆ ಕಕ್ಕುಲತೆಯಲ್ಲದೆ ಕಾರ್ಯವಿಲ್ಲ. ಆಸೆಗೈದರೆ ಆಸೆಗೈವುದು ಭಕ್ತರನು. ಆಸೆಗೈದು ಬಂದ ಶಿವಂಗೆ ಸತಿಯ ಕೊಟ್ಟರು, ಸುತನ ಕೊಟ್ಟರು, ಧನವ ಕೊಟ್ಟರು, ಮನವ ಕೊಟ್ಟರು, ಅಸುವ ಕೊಟ್ಟರು. ಶರಣರ ಪರಿ ಆವ ಲೋಕದೊಳಗೆಯೂ ಇಲ್ಲ. ಶರಣಭರಿತ ಲಿಂಗವಾಗಿ ಬೇಡಿತ್ತ ಕೊಡುವರಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ,' ಮಾಡುವ ನೀಡುವ ಕೊಡುವ ಕ್ರಿಯೆಯುಳ್ಳಾತನೇ ನಿಜಭಕ್ತ. ನಿಜಭಕ್ತರು ಹೊರ ಸಿರಿಯನ್ನೂ ಕೊಡಬಲ್ಲರು ; ಮೈಸಿರಿಯನ್ನೂ ಕೊಡಬಲ್ಲರು ; ಒಳಸಿರಿ ಯನ್ನೂ ಕೊಡಬಲ್ಲರು. ಕಾಯಕರಣಗಳನ್ನು ಪ್ರಾಣಮನಗಳನ್ನು ಭಾವ ಜೀವಗಳನ್ನು ಕೊಡಬಲ್ಲರು. 'ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯಾ. ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯಾ. ಆಚಾರ ವಿಚಾರವೆಂಬುದು ಸ್ವಾನುಭವ ಸಂಭಾಷಣೆ ಕೂಡಲ ಚೆನ್ನಸಂಗಮದೇವಾ.' ತನುಮನಗಳನ್ನು ತೊಡೆದಾತನು ಜಂಗಮನೆನಿಸುತ್ತಾನೆ. ಆತ್ಮಧರ್ಮ ದಿಂದ ಅಂತರಾತ್ಮನಲ್ಲಿ ಆಚರಿಸುವ ಚೈತನ್ಯವುಳ್ಳಾತನೆ ಜಂಗಮ. ಪ್ರಾಣ ವನ್ನು ಲಿಂಗಕ್ಕರ್ಪಿಸಿ ಲಿಂಗಪ್ರಾಣಿಯಾದಾತನು ಭಕ್ತನೆನಿಸುತ್ತಾನೆ. ಲಿಂಗಕ್ಕೆ ಅಭಿನ್ನವಾಗಿರುವಾತನೇ ಭಕ್ತ. ಆ ಅಂತರಾತ್ಮನಲ್ಲಿ ಚರಿಸುವಾತನು

ಬರೀ ಚರಿಸಿದರೆ ತೀರದು, ಆಚಾರ ಸಹಿತ ಚರಿಸಬೇಕು. ಆಗ ಪೂರ್ಣ ಜಂಗಮತ್ವ ಸಿದ್ಧಿ. ಸೇವ್ಯಸೇವಕರು, ಪೂಜ್ಯ–ಪೂಜಕರು ಇಬ್ಬರೂ ಒಂದೇ ವಸ್ತುವೆಂದು ಅರಿದಾತನೇ ಭಕ್ತ. ಬರೀ ಲಿಂಗಪ್ರಾಣಿಯಾದರಲ್ಲ ; ಪ್ರಾಣ ಲಿಂಗಿಯಾದರಲ್ಲ ; ಉಭಯ ಸಾಮರಸ್ಯದ ಸ್ವಾನುಭವವುಳ್ಳವನಾಗಬೇಕು. ಅಂತೆಯೇ ಜಂಗಮ ಬೇರಲ್ಲ ; ಭಕ್ತ ಬೇರಲ್ಲ. ಬೀಜಾಂಕುರನ್ಯಾಯದಂತೆ ಒಂದಾಗಿ ಎರಡಾಗಿವೆ ; ಎರಡಾಗಿ ಒಂದಾಗಿವೆ.

‘ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದಲ್ಲದೆ ಮತ್ತೆಲ್ಲಿಯೂ ಕಾಣಬಾರದು. ಭಕ್ತದೇಹಿಕದೇವ ಅನುಮಿಷನಾಗಿ ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು.’ ಭಕ್ತದರ್ಪಣವು ಮಲಿನ ವಾಗದೆ ಬೆಳುವಾಗಿರಬೇಕಾದರೆ ಇಲ್ಲಿಯವರೆವಿಗೂ ನಿರ್ದೇಶಿಸಿದ ಮಾರ್ಗ ಕ್ರಿಯೆಗಳೆಂಬ ಭಸಿತದಿಂದ ಬೆಳಗುತ್ತಿರಬೇಕು.

——

ಉಭಯ ಸ್ಥಲಂ

"ಏವಮಾಚಾರ ಸಂಯುಕ್ತೋ ವೀರಶೈವೋ ಮಹಾವ್ರತೀ
ಪೂಜಯೇತ್ಪರಯಾ ಭಕ್ತ್ಯಾ ಗುರುಂ ಲಿಂಗಂ ಚ ಸಂತತಂ ।"

ತನು-ಪ್ರಾಣವುಳ್ಳ ವೀರಶೈವನು ತನುಭಾವ-ಪ್ರಾಣಭಾವಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ತನುಭಾವ ತೊಲಗಲು ಸದ್ರೂಪವನ್ನು ಪ್ರಾಣಭಾವ ಪರಿಹಸಲು ಚಿದ್ರೂಪವನ್ನು ಉಪಾಶಿಸಬೇಕು. ಸದ್ರೂಪವೇ ಶ್ರೀಗುರು. ಚಿದ್ರೂಪವೇ ಶಿವಲಿಂಗ.

ಹಿಂದೆ ಹೇಳಿದ ಮಾರ್ಗಕ್ರಿಯಾಚಾರಗಳಿಂದ ಕೂಡಿದಾತನು ವೀರ ಶೈವನು. ಅವನೇ ಮಹಾವ್ರತಿಯೆನಿಸುವನು. ಮಾರ್ಗಕ್ರಿಯೆಗಳೆಲ್ಲ ಮಹಾ ವ್ರತಗಳು. ಅವನ್ನು ಆಚರಿಸುವ ಸದ್ಭಕ್ತನು ಮಹಾವ್ರತಿ. ಇವನು ತನ್ನ ತನುಗುಣ ಪ್ರಾಣಗುಣಗಳನ್ನು ಕಳೆದುಕೊಳ್ಳಲು ಸದ್ಗುರುವನ್ನು ಚಿಲ್ಲಿಂಗವನ್ನು ಪರಾಭಕ್ತಿಯಿಂದ ಪ್ರತಿನಿತ್ಯ ಪೂಜಿಸಬೇಕು. ಅಂದರೆ ತನುವಿನಲ್ಲಿ ಗುರುಸಂಬಂಧವನ್ನು ಮಾಡಿಕೊಂಡು ಕಾಯದ ಕೊರತೆಯನ್ನು ಕಾಳಕೆಯನ್ನು ಕಳೆಯಬೇಕು. ಪ್ರಾಣದಲ್ಲಿ ಲಿಂಗಸಂಬಂಧವನ್ನು ಮಾಡಿಕೊಂಡು ಪ್ರಾಣದ ಪ್ರಕೃತಿಯನ್ನು ವಿಕೃತಿಯನ್ನು ಪರಿಹರಿಸಬೇಕು ಮತ್ತು ಗುರು--ಲಿಂಗಗಳೆರಡರ ಸಂಬಂಧ ಸಕೀಲವನರಿದು ಆರಾಧಿಸಬೇಕು.

"ಗುರೋರಭ್ಯರ್ಚನೇನಾಪಿ ಸಾಕ್ಷಾದಭ್ಯರ್ಚಿತಃ ಶಿವಃ
ನಾಸ್ತಿ ಭೇದಸ್ತಯೋಃ ಕಶ್ಚಿದೇಕತ್ವಾತ್ತತ್ತ್ವರೂಪತಃ ।"

ಶ್ರೀಗುರು ಶಿವಲಿಂಗಗಳಲ್ಲಿ ಯಾವ ಭೇದವಿಲ್ಲ. ತತ್ವದಿಂದ ಅವೆರಡು ಒಂದಾಗಿವೆ. ಗುರು ಬೀಜ; ಲಿಂಗ ಅಂಕುರ. ಅದರಿಂದಾಗಿ ಶ್ರೀಗುರುವನ್ನು ಸಮರ್ಚಿಸಿದರೆ ಶಿವಲಿಂಗವನ್ನು ಸಾಕ್ಷಾತ್ತಾಗಿ ಸಮರ್ಚಿಸಿದಂತೆಯೆ !

"ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ
ತಥಾ ಗುರುವರೇ ಕುರ್ಯಾದುಪಚಾರಾನ್ ದಿನೇದಿನೇ ।
ಅಪ್ರತ್ಯಕ್ಷೋ ಮಹಾದೇವಃ ಸರ್ವೇಷಾಮಾತ್ಮಮಾಯಯಾ
ಪ್ರತ್ಯಕ್ಷೋ ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ ॥"

ಜಗನ್ನಾಥನೂ ಜಗಜೀವಾನುಗ್ರಹಕರ್ತನೂ ಆದ ಶಿವನನ್ನಾರಾಧಿಸು ವಂತೆ ಗುರುವರ್ಯನನ್ನು ಪ್ರತಿನಿತ್ಯ ಆರಾಧಿಸಿ ಉಪಚರಿಸಬೇಕು. ಗುರುವರ್ಯನೂ ಜಗದೊಡೆಯನು; ಸರ್ವಾನುಗ್ರಹಕರ್ತನು. ಗುರುವಿಗಿಂತ ಬೃಹದ್ವಸ್ತುವಿಲ್ಲ ಭುವನದಲ್ಲಿ. ಭಕ್ತನ ಪಿಂಡಾಂಡಕ್ಕೆಲ್ಲ ಗುರುವರ್ಯನೇ ಒಡೆಯನು. ಸಂಸ್ಕಾರವನ್ನು ಕರುಣಿಸಲು ಕರ್ತನಾಗಿರುವುದರಿಂದ ಶಿವ ಸಂಸ್ಕಾರಾಪೇಕ್ಷಿಗಳಿಗೆಲ್ಲ ಅನುಗ್ರಹ ಕರ್ತನಾಗಿರುತ್ತಾನೆ ಶ್ರೀಗುರು. ಇದರಿಂದಾಗಿ ಗುರುದೇವನು ಮಹಾದೇವ ಸ್ವರೂಪನಾಗಿದ್ದಾನೆ. ಮಹಾದೇವನಂತೆ ಪರಮಪೂಜ್ಯನಾಗಿದ್ದಾನೆ.

'ನ ಗುರೋಧಿಕಂ ಕಶ್ಚಿತ್ತ್ರಿಷು ಲೋಕೇಷು ವಿದ್ಯತೇ' ಎಂದು ಯೋಗಶಿಖೋಪನಿಷತ್ತು ಗುರುವಿನ ಆಧಿಕ್ಯವನ್ನು ತ್ರಿಲೋಕಾಧಿಪತ್ಯವನ್ನು ಘೋಷಿಸಿದೆ. ಪ್ರತ್ಯಕ್ಷದಲ್ಲಿ ಇಲ್ಲದ ಆ ಮಹಾದೇವನು ತನ್ನ ಶಕ್ತಿಯಿಂದ ಸರ್ವರ ಭಕ್ತಿಸಿದ್ಧಿಗಾಗಿ ಪ್ರತ್ಯಕ್ಷ ಗುರುರೂಪದಲ್ಲಿ ಅವತರಿಸಿದ್ದಾನೆ. ಭಕ್ತರ ಭಕ್ತಿಯನ್ನು ಸಾಫಲ್ಯಗೊಳಿಸುವುದೇ ಮಹಾಗುರುವಿನ ಮಹಿಮೆ. ಶ್ರೀಗುರು ಕರುಣಿಸಿದ ಲಿಂಗದಿಂದ ಭಕ್ತನಿಗೆ ಭೋಗೋಪಭೋಗ ಮತ್ತು ಶಿವಯೋಗ ಸಿದ್ಧಿಗಳಾಗುತ್ತವೆ.

'ವೇದಾದಿ ಅಷ್ಟಾದಶ ವಿದ್ಯೆಂಗಳ-ಸರ್ವಮಂತ್ರಂಗಳ ಮೂಲವು ಶ್ರೀ ಪಂಚಾಕ್ಷರಿ. ಶಿವಾದಿ ಸರ್ವತತ್ವ ಮೂಲವು ಶ್ರೀಗುರು. ಆ ಶ್ರೀಗುರು ಲಿಂಗ ಜಂಗಮಕ್ಕೆ ಪ್ರಣವ ಸರ್ವ ಮೂಲವು. ಶ್ರೀಗುರು ಕರುಣಿಸಿದ ಮಹಾ ಇಷ್ಟಲಿಂಗವೆ ದೀಕ್ಷೆ ಶಿಕ್ಷೆ ಸರ್ವಭೋಗಾದಿ ಭೋಗಂಗಳೆಲ್ಲವಕ್ಕು. ಶಿವನ ಸಾಕಾರಮೂರ್ತಿ ಜಂಗಮ ಮೂರ್ತಿ. ಕೇವಲ ಮುಕ್ತಿಮೂಲದಾಸೋಹ. ಇದು ತಪ್ಪದಯ್ಯಾ ! ಇದೇ ಜ್ಞಾನಮೂಲ, ಇದು ಸತ್ಯ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.'

ಈ ವಚನವು ಉಭಯಸ್ಥಲವನ್ನು ಉತ್ತಮವಾಗಿ ಉದ್ಘೋಷಿಸಿದೆ. ವೇದಾದಿ ಹದಿನೆಂಟು ವಿದ್ಯೆಗಳಿಗೆ ಎಲ್ಲ ಮಂತ್ರಗಳಿಗೆ ಹೇಗೆ ಪಂಚಾಕ್ಷರಿಯು ಮೂಲವೋ ಹಾಗೆ ಶಿವನೇ ಮೊದಲಾದ ಸರ್ವತತ್ವಗಳಿಗೆ ಶ್ರೀ ಗುರು ಮೂಲ. ಇಂತಹ ಶ್ರೀ ಗುರು ಕರುಣಿಸಿದುದೇ ಕರದಿಷ್ಟಲಿಂಗ. ಗುರುವೆ ಲಿಂಗವಾಗಿ, ಲಿಂಗವೇ ಗುರುವಾಗಿ ಭಕ್ತನ ದೀಕ್ಷೆ ಶಿಕ್ಷೆ ಸರ್ವಭೋಗಾದಿ ಭೋಗಂಗಳೆಲ್ಲವನ್ನು (ಮೋಕ್ಷವನ್ನು)ನೆರವೇರಿಸುತ್ತಾರೆ, ಎಂದು ಸುಸ್ಪಷ್ಟಪಡಿಸಿದೆ.

'ಗುರುದೇವ ಸದಾಶಿವನು, ಗುರುದೇವ ಮಹಾಮಹಿಮನು ; ಗುರುದೇವ ಅಕಲ್ಪಿತ ನಿತ್ಯ ನಿರವಯನು. ಸಾಕಾರವಿಡಿದು ಗುರುಲಿಂಗವಾದ. ನಿರಾಕಾರವಿಡಿದು ಪ್ರಾಣಲಿಂಗವಾದ. ಉಭಯಸ್ಥಲವೇಕವಾದಲ್ಲಿ ಭವವಿರಹಿತಭಕ್ತ ಜೀವನ್ಮುಕ್ತನಾದ. ಅಂತು ಗುರು ನಿಂತಸ್ಥಾನ ಕಾಶೀಕ್ಷೇತ್ರ; ಗುರುಚರಣ ಪ್ರಕ್ಷಾಲೋದಕವೆ ಗಂಗಾತೀರ್ಥ. ಗುರುಲಿಂಗ ಸಾಕ್ಷಾತ್ ಪರಶಿವನಿಂದ ವಿಶೇಷ. ಗುರುದರ್ಶನ ಪರಮಬೋಧೆ. ಗುರುಪಾದ ರುದ್ರಗಾಯತ್ರಿ. ಗುರುವಿನಿಂದ ಅತಿಶಯ ಘನವೇನೂ ಇಲ್ಲ. ಕೂಡಲ ಚೆನ್ನಸಂಗಯ್ಯ ಎನ್ನ ಪರಮಗುರು ಶ್ರೀಪಾದಕ್ಕೆ ನಮೋನಮೋ ಎಂಬೆನು.'

ಕಲ್ಪನೆಗೆ ನಿಲುಕದ ಕಣ್ಣಿಗೆ ಕಾಣದ ಆ ನಿತ್ಯನಿರವಯ ಪರವಸ್ತುವೆ ತನ್ನ ಲೀಲಾವಿಲಾಸದಿಂದ ಸಾಕಾರವಾಗಿ ಪ್ರತ್ಯಕ್ಷ ಗುರುವೆನಿಸಿದ ; ಕರದಿಷ್ಟವೆನಿಸಿದ. ನಿರಾಕಾರವಾಗಿ ಪ್ರಾಣಲಿಂಗವೆನಿಸಿದ ; ಪ್ರಣವದ ಚೈತನ್ಯವೆನಿಸಿದ. ಗುರುಲಿಂಗಗಳೆರಡರಲ್ಲಿ ಭಿನ್ನವಿಲ್ಲ. ಲಿಂಗಾಂಗಸ್ವರೂಪವಾಗಿ ಪುಷ್ಪಪರಿಮಳದಂತಿರುವರು. ಸರ್ವರ ಭಕ್ತಿಸಿದ್ಧಿಗಾಗಿ ಬಂದ ಗುರುಮಹಿಮೆಗಿಲ್ಲ ಶಬ್ದ ಸೀಮೆ.

"ತದ್ಭಾಗಲಕ್ಷಣಾಂ ಭಕ್ತಿಂ ಸುಸೂಕ್ಷ್ಮಾಂ ಪರಮಾಮಪಿ।
ದರ್ಶಯಾಮಾಸ ಶಿಷ್ಯಸ್ಯ ದೇಶಕಃ ಪರಮೇಶ್ವರಃ ॥"

ಭಕ್ತಿ ಚಿಕ್ಕದಲ್ಲ ; ಸ್ಥೂಲವಲ್ಲ. ಸರ್ವರಿಗೆ ಸಮನಿಸುವುದಲ್ಲ. ಆ ಪರಶಿವ ಲಿಂಗದಂಶ, ಲಿಂಗಕಳೆ ; ಅತ್ಯಂತ ಸೂಕ್ಷ್ಮ; ಎಲ್ಲಕ್ಕಿಂತ ಶ್ರೇಷ್ಠ. ಅಂತಹ ಭಕ್ತಿಯನ್ನು ಪರಮೇಶ್ವರನಾದ ಶ್ರೀಗುರು ಅಂದರೆ ಪರಮಗುರು ತನ್ನ ಶಿಷ್ಯನಿಗೆ ತೋರಿಸುತ್ತಾನೆ. ಈ ಪ್ರಮಾಣವಚನದಿಂದ 'ಪ್ರತ್ಯಕ್ಷೋ

ಗುರುರೂಪೇಣ ವರ್ತತೇ ಭಕ್ತಿಸಿದ್ಧಯೇ' ಎಂಬ ಶ್ರೀರೇಣುಕಶಿವಾಚಾರ್ಯರ ಅಮೃತವಾಣಿ ಅಮರವಾಗಿದೆ ; ಪ್ರಮಾಣಪೂರ್ಣವಾಗಿದೆ.

ಪ್ರತ್ಯಕ್ಷಗುರುವೇ ಶಿಷ್ಯನಿಗೆ ಪರಮಲಕ್ಷ್ಯ. ಭಕ್ತನಿಗೆ ಭಕ್ತಿಯನ್ನು ಕೊಡುವವನು ಗುರು. ಮುಮುಕ್ಷುವಿಗೆ ಮೋಕ್ಷವನ್ನು ಕೊಡುವವನು ಗುರು. ದೃಷ್ಟಿಯಿಲ್ಲದವನಿಗೆ ದೃಷ್ಟಿಯನ್ನು ಕೊಡುವವನು ಗುರು.

"ಶಿವಜ್ಞಾನಂ ಮಹಾಘೋರ ಸಂಸಾರಾರ್ಣವತಾರಕಂ
ದೀಯತೇ ಯೇನ ಸ ಗುರುಃ ಕಸ್ಯ ವಂದ್ಯೋ ನ ಜಾಯತೇ।"

ಸರ್ವಮಾನವರು ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಸಂಸಾರಸಾಗರವಾದರೋ ಸೌಮ್ಯವಲ್ಲ ; ಮಹಾಘೋರ. ಅದನ್ನು ದಾಟಲು ಶಿವಜ್ಞಾನದಿಂದ ಮಾತ್ರಸಾಧ್ಯ. ಅಂತಹ ಶಿವಜ್ಞಾನವನ್ನು ಕೊಡುವ ಕಲಿತನವುಳ್ಳವನೇ ಗುರು. ಆತನೇ ಶಿವಕಳಾಗುರು. ಆ ಶಿವಜ್ಞಾನವನ್ನು ಕರುಣಿಸಿದ ಗುರು ಸರ್ವವಂದ್ಯ.

'ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರುವೇ ನಮಃ ।'

ಅಜ್ಞಾನ ಅದೊಂದು ಅಂಧಕಾರ. ಅದರಲ್ಲಿರುವವನು ಅಂಧ. ಅವನಿಗೆ ಕಾಣದ ಆ ಶಿವಪ್ರಕಾಶ. ಅದು ಕಾಣಬೇಕಾದರೆ ಬೇಕು ಸುಜ್ಞಾನನೇತ್ರ. ಆ ಸುಲೋಚನವನ್ನು ಕೊಡುವಾತನು ಶ್ರೀಗುರು. ಅವನಿಗೆ ಶರಣು.

ಗುರು ಅರಿವಿನ ಅಚ್ಚಿಯನ್ನು ಕರುಣಿಸದೆ ಪರವಸ್ತು ಪ್ರಕಾಶತೋರದು. ಅರಿವನ್ನು ತೋರುವಾತನು ಗುರುವಲ್ಲದೆ ಬೇರೆ ಯಾರಿಂದ ಸಾಧ್ಯವಿಲ್ಲ. ಕಾರಣ ತಿಳಿಗಣ್ಣಿಗಾಗಿ ಕಾಣುವ ಕಳಾಗುರುವನ್ನೇ ಆಶ್ರಯಿಸಬೇಕು. ಉಪಾಶಿಸಬೇಕು.

'ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆನೆಂದಡೆ ಸಿಕ್ಕ ದೆಂಬ ಬಳಲಿಕೆಯ ನೋಡಾ ! ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ ಕಾಣದುದ ಕಾಣಬಹುದು ಕಾಣಾ ಗುಹೇಶ್ವರಾ !'

ಕಾಣುವ ಈ ಕಳಾಗುರುವಿನಿಂದಲೇ ಕಾಣದ ಆ ನಿಷ್ಕಳ ವಸ್ತು ವನ್ನು ನಿರವಯ ಜ್ಯೋತಿಯನ್ನು ಕಾಣಬೇಕು;

"ಯೆತ್ಕಟಾಕ್ಷಕಲಾಮಾತ್ರಾತ್ ಪರಮಾನಂದಲಕ್ಷಣಂ
ಲಭ್ಯತೇ ಶಿವರೂಪತ್ವಂ ಸ ಗುರು : ಕೇನ ನಾರ್ಚ್ಯತೇ ।"

'ಸರ್ವಂ ಶಿವಮಯಂ ಜಗತ್' ಎಂಬಂತೆ ಎಲ್ಲವೂ ಶಿವಸ್ವರೂಪ. ಶಿಷ್ಯನೂ ಶಿವಸ್ವರೂಪ. ಹೀಗಿದ್ದರೂ ಶಿಷ್ಯನು ತಾನು ಶಿವಸ್ವರೂಪವೆಂದು ಭಾವಿಸಿಲ್ಲ. ಈ ಭಾವನೆಯೇ ಮರವೆ. ಈ ಮರವೆಯಿಂದ ಇವನಿಗೆ ಬಂದಿದೆ ಮಾನವತ್ವ. ಈ ಮಾನವತ್ವವನ್ನು ಮಾಣಿಸಿ ಶಿವತ್ವವನ್ನು ಕರುಣಿಸುತ್ತದೆ ಶ್ರೀಗುರು ಕಟಾಕ್ಷ. ಗುರುವಿನ ಕಡೆಗಣ್ಣೋಟ ಹಿರಿಮೆ ಹೆಚ್ಚಿನದು. ಆತನ ಆ ಕಡೆಗಣ್ಣೋಟದಲ್ಲಿ ಕಲಾಶಕ್ತಿಯಿದೆ. ಆ ಕಲಾಶಕ್ತಿಯು ಶಿಷ್ಯನ ಶಿಖಾಚಕ್ರದಲ್ಲಿರುವ ನಿಷ್ಕಳಕಳೆಯನ್ನು ಕಂಡು ಕೆರಳಿಸುತ್ತದೆ ; ಆವರಿಸಿ ಆಕರ್ಷಿಸುತ್ತದೆ.ಆಕರ್ಷಿಸಿ ಶಿವರೂಪತ್ವವನ್ನುಂಟುಮಾಡುತ್ತದೆ. ಸಚ್ಚಿದಾನಂದವನ್ನಾಗಿಸುತ್ತದೆ:

'ಜ್ವಲತ್ಕಾಲಾನಲಾಭಾಭಾ ತಟಿತ್ಕೋಟಿ ಸಮಪ್ರಭಾ
ತಸ್ಯೋರ್ಧ್ವಂಚ ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾಕಲಾ !
ವಾಚಾತೀತಾಂ ಮನೋತೀತಾಂ ವರ್ಣಾತೀತಾಂ ಚ ತತ್ಪರಾಂ
ಜ್ಞಾನಾತೀತಾಂ ನಿರಂಜನ್ಯಾಂ ಕಲಾಂ ಸೂಕ್ಷ್ಮೇತಿ ಭಾವಯೇತ್ ।
ಏವಂ ಭೇದಕಲಾ ದೇವಿ ಸದ್ಗುರೋಃ ಶಿಷ್ಯಮಸ್ತಕೇ
ಹಸ್ತಾಬ್ಜಮಥನಾದ್ಗ್ರಾಹ್ಯಾ ತಸ್ಯ ಭಾವ-ಕರೋದಿತಾ !
ಯಥಾ ಕಲಾ ತಥಾ ಭಾವೋ ಯಥಾ ಭಾವಸ್ತಥಾ ಮನಃ
ಯಥಾ ಮನಸ್ತಥಾ ದೃಷ್ಟಿರ್ಯಥಾ ದೃಷ್ಟಿಸ್ತಥಾ ಸ್ಥಲಂ ।'

ಈ ಶಿವವಾಣಿಗಳು ಇಲ್ಲಿ ಸ್ಮರಣಾರ್ಹವಾಗಿವೆ. ಶಬ್ದ ಶಬ್ದವನ್ನು ಉಚ್ಚರಿಸಬೇಕು. ಪ್ರತಿಶಬ್ದಾರ್ಥವನ್ನು ಮೆಚ್ಚಬೇಕು. ಗುರುಪ್ರಭಾವವನ್ನು ಅನುಭವಿಸಬೇಕು.

ಶಿಷ್ಯನ ಶಿಖಾಗ್ರದಲ್ಲಿರುವ ಕಳೆ ಜ್ವಲಿಸುವ ಕಾಲಾಗ್ನಿಯಂತೆ ಕಾಂತಿಯುಳ್ಳದು. ಕೋಟಿ ಮಿಂಚುಗಳಿಗೆ ಸಮಾನವಾದ ಶೋಭೆಯುಳ್ಳದು ಸೂಕ್ಷ್ಮವಾದುದು, ಚಿದ್ರೂಪವಾದುದು ; ಉತ್ಕೃಷ್ಟವಾದುದು. ಅದು ಮಾತಿಗೆ ಮೀರಿದೆ ; ಮನಸ್ಸಿಗೆ ಮೀರಿದೆ. ಅದು ಅಕ್ಷರಕ್ಕೆ ನಿಲುಕದು ; ಅರಿವಿಗೆ ನಿಲುಕದು. ಅದು ರಂಜನರಹಿತವಾದುದು. ಅಂತಹ ಆ ಅಗಮ್ಯ ಅರಮ್ಯಕಲೆಯನ್ನು ಸದ್ಗುರು ಶಿಷ್ಯನ ಮಸ್ತಕದಲ್ಲಿ ತನ್ನ ಹಸ್ತಾಬ್ಜಮಥನದಿಂದ ಗಮ್ಯವನ್ನಾಗಿಸುತ್ತಾನೆ ; ರಮ್ಯವನ್ನಾಗಿಸುತ್ತಾನೆ. ಆ ಕಳೆ ಕಳಾ ಗುರುವಿನ ಭಾವಹಸ್ತದಿಂದ ಹುಟ್ಟಿಬರುತ್ತದೆ. ಶಿಷ್ಯನ ಭಾವಕ್ಕೆ ಬಂದು ಸದ್ಭಾವವನ್ನಾಗಿಸುತ್ತದೆ. ಆ ಸದ್ಭಾವದಿಂದ ಮನ ಶುದ್ಧವಾಗುತ್ತದೆ. ಸುಮನದಿಂದ ದೃಷ್ಟಿ ದಿವ್ಯವಾಗುತ್ತದೆ. ದೃಷ್ಟಿದೀಪ್ತಿಯಿಂದ ಸ್ಥಲ (ಪಿಂಡ) ಶುದ್ಧವಾಗುತ್ತದೆ.

ಶ್ರೀಗುರುವಿನ ನೋಟ ನೆನಹು ಮುಟ್ಟುವಿಕೆ ಈ ಮೂರು ಮಹಾ ಪರುಷಮಣಿಗಳು. ಶ್ರೀಗುರುವಿನ ಕೃಪಾವಲೋಕನದಿಂದ ಸದ್ರೂಪತ್ವ ಪ್ರಾಪ್ತಿ. ಮಂತ್ರರೂಪ ಸ್ಮರಣದಿಂದ ಚಿದ್ರೂಪತ್ವ ಪ್ರಾಪ್ತಿ. ಶ್ರೀಗುರುವಿನ ಹಸ್ತಸ್ಪರ್ಶದಿಂದ ಪರಮಾನಂದತ್ವ ಪ್ರಾಪ್ತಿ. ಇಂತಹ ಸದ್ಗುರುವನ್ನು ಪಡೆದ ಪುಣ್ಯವಂತ ಶಿಷ್ಯನು ತನ್ನ ಶ್ರೀಗುರುವನ್ನು ಅದೆಷ್ಟು ಸೇವಿಸಿದರೂ ತೀರದು. ಅದೆಷ್ಟು ಸಂತೋಷಪಡಿಸಿದರೂ ತೀರದು.

" ಹಿತಮೇವ ಚರೇನ್ನಿತ್ಯಂ ಶರೀರೇಣ ಧನೇನ ಚ
ಆಚಾರ್ಯಸ್ಯೋಪಶಾಂತಸ್ಯ ಶಿವಜ್ಞಾನ ಮಹಾನಿಧೇಃ । "

ಶಿಷ್ಯನು ಶ್ರೀಗುರುವಿಗೆ ಅಹಿತವನ್ನು ಅದೆಂದಿಗೂ ಮಾಡಬಾರದು. ತನ್ನ ಶ್ರೀಗುರುವಿಗಾಗಿ ಶಿಷ್ಯನು ತನ್ನ ದೇಹವನ್ನು ದಂಡಿಸಿ ದ್ರವ್ಯವನ್ನು ಸಲ್ಲಿಸಿ ನಿತ್ಯ ಹಿತವನ್ನೇ ಮಾಡಬೇಕು. 'ಗುರುಕರುಣ ಚರಣಸೇವೆ ಭವದ ಬಳ್ಳಿಯ ಬೀಜವನತಿಗಳೆಯಿತ್ತು. ಘನ ಘನ ಪಥವ ತೋರಿತ್ತು ನೋಡಾ. ಉದಯಿಸಿತ್ತು ನಿರಾಕುಳ ನಿರಹರಣ ಮಹಾಲಿಂಗ ಕಲ್ಲೇಶ್ವರಾ.' ಇದರಿಂದಾಗಿ ಸಚ್ಛಿಷ್ಯನು ತನ್ನ ತ್ರಿಕರಣಪೂರ್ವಕ ಶ್ರೀಗುರು ಸೇವೆಯನ್ನೆಸಗಬೇಕು. ಪರಿಕರದಿಂದ ಪರಮಾನಂದಗೊಳಿಸಬೇಕು.

" ಗುರೋರಾಜ್ಞಾಂ ನ ಲಂಘೇತ ಸಿದ್ಧಿಕಾಮೋ ಮಹಾಮತಿಃ
ತದಾಜ್ಞಾಲಂಘನೇನಾಪಿ ಶಿವಾಜ್ಞಾಛೇದಕೋ ಭವೇತ್ ।"

ಗುರುವಿನಿಂದ ಪರಮಾನಂದರೂಪ ಮೋಕ್ಷ ಸಿದ್ಧಿಯನ್ನು ಅಪೇಕ್ಷಿಸುವ ಶಿಷ್ಯನು ಗುರುವಿನ ಅಪ್ಪಣೆಯನ್ನು ಉಲ್ಲಂಘಿಸಬಾರದು. ಉಲ್ಲಂಘಿಸುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಶ್ರೀಗುರುವೇ ಶಿವನಾದ ಕಾರಣ ಶ್ರೀಗುರುವಿನ ಆಜ್ಞೆಯನ್ನು ಮೀರಿದರೆ ಶಿವನ ಆಜ್ಞೆಯನ್ನು ಮೀರಿದಂತಾಗುತ್ತದೆ: ಶಿವನೇ ತಾನಾಗಿರುವುದರಿಂದ ತನ್ನನ್ನೇ ತಾನು ಮೀರಿದಂತಾಗಿ ಮಹಾಪಾತಕಿ ಯಾಗುತ್ತಾನೆ ; ಮಹಾನರಕಿಯಾಗುತ್ತಾನೆ.

'ಅರಿದಿಹೆನೆಂದೆಡೆ ಅರುಹಿಂಗಸಾಧ್ಯ. ನೆನೆದಿಹೆನೆಂದಡೆ ನೆನಹಿಂಗ ಸಾಧ್ಯ. ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ. ವಾಙ್ಮನಕ್ಕಗೋಚರವ ನರಿವ ಪರಿಯೆಂತಯ್ಯ ಗುರುತೋರದನ್ನಕ್ಕ ? ಗುರುಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿಲಿಂಗ ಉದಯವಪ್ಪುದೆಂಬ ಶ್ರುತಿ ಹುಸಿಯೇ ಕೂಡಲ ಸಂಗಮದೇವಯ್ಯ ? ನಿಮ್ಮ ಮಹಾನುಭಾವರ ಮಥನದಿಂದ ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೇ !'

' ತಸ್ಮಿನ್ ಲಿಂಗೇ ಪರೇ ದೃಷ್ಟೇ ನಿಷ್ಕಲೇ ನಿರುಪಾಧಿಕೇ ।
ಅಸ್ಯ ಜೀವಸ್ಯ ಕರ್ಮಾಣಿ ಕ್ಷೀಯಂತೇ ಸಕಲಾನಿ ವೈ ॥ '

ಇವೆರಡು ಪ್ರಮಾಣಗಳಿಂದ ಇದು ವೇದ್ಯವಾಗುತ್ತದೆ. ಶಿಷ್ಯನಿಗೆ ಅಸಾಧ್ಯವಾದುದು ಆ ಲಿಂಗ. ಅದು ಗುರುಸಂಬಂಧದಿಂದ ತನ್ನಲ್ಲಿ ತೋರು ತ್ತದೆ. ಅದು ತನಗೆ ಒದಗುವುದರಿಂದ ಜೀವಕರ್ಮಗಳೆಲ್ಲ ಕ್ಷಯಿಸುತ್ತವೆ. ಇದರಿಂದಾಗಿ ಭಕ್ತನು ಗುರುವಿನಂತೆ ಗುರು ಕರುಣಿಸಿದ ಲಿಂಗವನ್ನೂ ನಿತ್ಯ ಆರಾಧಿಸಬೇಕು. ಆಗ ಉಭಯಸ್ಥಲ ಸಿದ್ಧಿಯಾಗುತ್ತದೆ. ಕಾಯಭಾವ ಪ್ರಾಣಭಾವ ಎರಡೂ ಕಣ್ಮರೆಯಾಗುತ್ತವೆ. ಕಾಯಕೋಟಲೆ ಪ್ರಾಣಭಯ ತೊಲಗುತ್ತವೆ. ಇಲ್ಲಿಗೆ ಲಿಂಗಭಕ್ತ ಸ್ಥಲಗಳು ಪೂರೈಸುತ್ತವೆ. ಇಲ್ಲಿಗೆ ಶಿಷ್ಯನು ಲಿಂಗಭಕ್ತನಾಗಿ ಏರ್ಪಡುತ್ತಾನೆ. ಇದನರಿಯದೆ ಈ ಉಭಯ ಸ್ಥಲ

ದಲ್ಲಿ ಕೆಲವರು ಜಂಗಮವನ್ನು ಸೇರಿಸುತ್ತಾರೆ. ಇದರಲ್ಲಿ ಔಚಿತ್ಯವಿಲ್ಲ. ಮುಂದಿನ ತ್ರಿವಿಧ ಸಂಪತ್ತಿ ಸ್ಥಲದಿಂದ ಜಂಗಮಕ್ಕೆ ಅವಕಾಶವಿದೆ; ಔಚಿತ್ಯವಿದೆ. ತ್ರಿವಿಧ ಸಂಪತ್ತಿ ಸ್ಥಲದಿಂದ ಭಕ್ತನು ಜಂಗಮ ಭಕ್ತನೆಂದೆನಿಸುತ್ತಾನೆ.

" ಗುರುವಿಂಗಂ ಸಮವಾದ ತತ್ತ್ವಮದು ತಾನಿಲ್ಲಿಲ್ಲ ಮತ್ತೆಲ್ಲಿಯುಂ
ಪರಮೇಶಂಗುರೆ ಸಾಮ್ಯಮಾದಿತರ ದೈವಂ ನೋಡೆ ತಾನಿಲ್ಲವೆಂ-
ದುರು ಸದ್ಭಕ್ತಿಯನಿಂತು ಸದ್ಗುರುವನಾ ಶ್ರೀ ಲಿಂಗಮಂ ಪೂಜಿಪಾ-
ತುರಮುಳ್ಳಾತನೆ ಸತ್ಯತಾರ್ಥನೆನಿಪಂ ಶ್ರೀ ಸಿದ್ಧಲಿಂಗೇಶ್ವರಾ।"

—ಏಕೋತ್ತರ ಶತಸ್ಥಲ

ತನ್ನ ದೃಕ್ಕಿಗೆ ತನ್ನ ಕ್ರಿಯೆಗೆ ಕಾರಣವಾದ ಗುರುಲಿಂಗವನ್ನು ಭಕ್ತನು ಪೂಜಿಸುವ ಪ್ರೇಮವುಳ್ಳವನಾಗುವುದು ಸತ್ಯಮಾರ್ಗ. ಅದರಿಂದ ಅಂತಃಸತ್ವ ಅತ್ಯಧಿಕವಾಗುತ್ತದೆ. ಬಾಹ್ಯ ಬಂಧನಗಳ ಬಿಡುಗಡೆಯಾಗುತ್ತದೆ. ತನ್ನ ಪ್ರೇರಕ ಚೈತನ್ಯವನ್ನು ತಾನು ಅರ್ಚಿಸಲೇಬೇಕು.

'ಯತಃಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥'

—ಗೀತೆ, ಅ. ೧೮, ಶ್ಲೋ. ೪೬.

ಪ್ರಾಣಗಳ ಪ್ರವೃತ್ತಿಗೆ ಕಾರಣವಾದ ವಿಶ್ವವ್ಯಾಪಕವಾದ ವಸ್ತುವನ್ನು ಸ್ವಕರ್ಮದಿಂದ (ಸ್ವಾಚಾರದಿಂದ) ಪೂಜಿಸಿದರೆ ಮಾನವನು ಮುಕ್ತನಾಗುತ್ತಾನೆ.

ಪರೋಕ್ಷದಲ್ಲಿದ್ದು ಪ್ರವೃತ್ತಿಗೆ ಕಾರಣವಾದುದನ್ನೇ ಪೂಜಿಸಲು ಹೇಳಿರುವಾಗ ಪ್ರತ್ಯಕ್ಷದಲ್ಲಿದ್ದು ಪ್ರವೃತ್ತಿಯಿಂದ ನಿವೃತ್ತಿಗೆ ನಿಲುಕಿಸಿದ ಗುರುದೇವನನ್ನು ಲಿಂಗದೇವನನ್ನು ಆರಾಧಿಸಬೇಕೆಂದು ಬೇರೆ ಹೇಳಬೇಕಾಗಿಲ್ಲ.

ಇದರಿಂದಾಗಿ ಉಭಯಸ್ಥಲ ಗುರು ಮತ್ತು ಲಿಂಗ ಇವೆರಡಕ್ಕೆ ಮಾತ್ರ ಮೀಸಲಾಗಿದೆ. ಇವೆರಡನ್ನು ಹೇಳುವುದರಲ್ಲಿ ಔಚಿತ್ಯವಿದೆ. ಉಭಯಸ್ಥಲಾಧಿಕಾರವಿದೆ–ಗುರು–ಲಿಂಗಗಳಿಗೆ!

ತ್ರಿವಿಧ ಸಂಪತ್ತಿಸ್ಥಲಂ

ಪ್ರತಿಯೊಬ್ಬನಿಗೂ ತ್ರಿವಿಧ ತನುಗಳುಂಟು. ಅವನ್ನು ತನು, ಮನ, ಧನ (ಭಾವ) ಎಂದು ಹೇಳುವುದುಂಟು. ಇವು ಸ್ಥೂಲ, ಸೂಕ್ಷ್ಮ, ಕಾರಣ ರೂಪದಲ್ಲಿರುತ್ತವೆ. ಇವು ಪ್ರಾಕೃತಿಕವಾಗಿರುತ್ತವೆ. ಪರಮಾರ್ಥ ಸಂಪತ್ತಿಯಿಂದ ವಂಚಿತವಾಗಿರುತ್ತವೆ.ಗುರು, ಲಿಂಗ,ಜಂಗಮಇವೇ ಪರಮಾರ್ಥವಾದ ತ್ರಿವಿದ ಸಂಪತ್ತಿ. ಇವನ್ನು ಭಕ್ತನು ತನ್ನ ತ್ರಿವಿಧ ತನುಗಳಲ್ಲಿ ತುಂಬಿಕೊಳ್ಳುವುದೇ ಈ ಸ್ಥಲದ ಗುರಿ. ಗುರುಲಿಂಗಜಂಗಮರನ್ನು ತುಂಬಿಕೊಳ್ಳುವುದೆಂದರೆ ಅವರ ಪ್ರಭಾವವಾದ ಸಚ್ಚಿದಾನಂದಗಳನ್ನು ತುಂಬಿಕೊಳ್ಳುವುದು. ಅವರನ್ನು ಉಪವಾಸ ಮಾಡದೆ ಅವು ಬರುವಂತಿಲ್ಲ. ಅದರಿಂದಾಗಿ,

"ಯಥಾ ಗುರೌ ಯಥಾ ಲಿಂಗೇ ಭಕ್ತಿಮಾನ್ ಪರಿವರ್ತತೇ
ಜಂಗಮೇಚ ತಥಾ ನಿತ್ಯಂ ಭಕ್ತಿಂ ಕುರ್ಯಾದ್ವಿಚಕ್ಷಣಃ |"

ಗುರುವಿನಲ್ಲಿ ಲಿಂಗದಲ್ಲಿ ಬಲ್ಲಿದನು ಭಕ್ತಿಯನ್ನಿಟ್ಟು ಬಾಳುವಂತೆ ಜಂಗಮದಲ್ಲಿಯೂ ನಿತ್ಯಭಕ್ತಿಯುಳ್ಳವನಾಗಬೇಕು. ಗುರು ಅಜ್ಞಾನವನ್ನು ಹರಿಸಿದರೆ ಲಿಂಗ ಅಕ್ರಿಯೆಯನ್ನು ಹರಿಸುತ್ತದೆ. ಜಂಗಮನು ಅಸುಖವನ್ನು ಹರಿಸುತ್ತಾನೆ.

"ಏಕ ಏವ ಶಿವಃ ಸಾಕ್ಷಾತ್ಸರ್ವಾನುಗ್ರಹ ಕಾರಕಃ
ಗುರುಜಂಗಮಲಿಂಗಾತ್ಮಾ ವರ್ತತೇ ಭಕ್ತಿ ಮುಕ್ತಿದಃ |"

ಗುರುಲಿಂಗ ಜಂಗಮ ಇವು ಮೂರಾದರೂ ಭಿನ್ನವಲ್ಲ. ಒಂದೇ ವಸ್ತುವಿನ ಮೂರು ಮುಖ. ಸಾಕ್ಷಾತ್ ಶಿವಸ್ವರೂಪ. ಭಕ್ತರಿಗೆ ಭಕಿ

(ಭೋಗ) ಮುಕ್ತಿಗಳನ್ನಿತ್ತು ಸಲಹುವುದಕ್ಕಾಗಿ ಮೂರಾಗಿ ವರ್ತಿಸಿವೆ; ಮರ್ತ್ಯಕ್ಕೆ ಅವತರಿಸಿವೆ. ಸಾಮಾಜಿಕದಲ್ಲಿರುವಂತೆ ವೈಯುಕ್ತಿಕದಲ್ಲಿಯೂ ಇವೆ. ಜ್ಞಾನವಾಗಿ ಗುರು, ಕ್ರಿಯೆಯಾಗಿ ಲಿಂಗ, ಅನುಭವವಾಗಿ ಜಂಗಮ ಪ್ರತಿವ್ಯಕ್ತಿಯಲ್ಲಿ ಪ್ರತಿಷ್ಠಿತವಾಗಿರುತ್ತವೆ. ಜ್ಞಾನಕ್ರಿಯಾನುಭವಗಳು ಪ್ರಕೃತಿದೋಷದಿಂದ ಸಂಕೋಚಗೊಂಡಿರುತ್ತವೆ. ಇವನ್ನು ವಿಕಾಸಗೊಳಿಸಲು ಗುರುಲಿಂಗ ಜಂಗಮದಲ್ಲಿ ಭಕ್ತಿಭಾವವುಳ್ಳವರಾಗಬೇಕು.

'ಏಕ ಮೂರ್ತಿಸ್ತ್ರಯೋ ಭಾಗಾ ಗುರುರ್ಲಿಂಗಂಚ ಜಂಗಮಃ'

ಎಂದು ಆಗಮಾನುಮತಿಯಿದೆ. ಪ್ರಯೋಗದಲ್ಲಿ ಮೂರಾದರೂ ಪರಿಣಾಮದಲ್ಲಿ ಮೂರಲ್ಲ, ಎರಡಲ್ಲ, ಒಂದೇ ಒಂದು. ದ್ವೈತಾಪತ್ತಿಯಲ್ಲಿರುವ ಭಕ್ತನು ಮೂರನ್ನು ಬೇರೆ ಬೇರೆಯಾಗಿಯೇ ಉಪಾಸಿಸಬೇಕು. 'ಅರ್ಥ ಪ್ರಾಣಾಭಮಾನಾನಿ ಗುರೌ ಲಿಂಗೇಚ ಜಂಗಮೇ । ತಲ್ಲಿಂಗ ಜಂಗಮ ಪ್ರಾಣೋ ಭಕ್ತಸ್ಥಲಸುಬುದ್ಧಿಮಾನ್!' ಜ್ಞಾನಾರ್ಜನೆಗಾಗಿ ಅರ್ಥವನ್ನು ಕ್ರಿಯಾರ್ಜನೆಗಾಗಿ ಪ್ರಾಣವನ್ನು ಅನುಭವಾರ್ಜನೆಗಾಗಿ ಅಭಿಮಾನವನ್ನು ಕ್ರಮವಾಗಿ ಗುರುಲಿಂಗ ಜಂಗಮರಿಗೆ ಸಮರ್ಪಿಸಬೇಕು.

ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿವರು. ಭಕ್ತಿಸ್ಥಲವೆ
ಲ್ಲರಿಗೆಲ್ಲಿಯದೋ? ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ
ಮನವಂಚನೆ, ಜಂಗಮದಲ್ಲಿ ಧನ (ಭಾವ) ವಂಚನೆಯುಳ್ಳ
ನ್ನಕ್ಕ ಭಕ್ತನೇ? ಗುರುವಿನಲ್ಲಿ ಚಾರಿತ್ರವ, ಲಿಂಗದಲ್ಲಿ
ಲಕ್ಷಣವ, ಜಂಗಮದಲ್ಲಿ ಜಾತಿಯನರಸುವನ್ನಕ್ಕ
ಭಕ್ತನೆ? ಅಲ್ಲಲ್ಲ, ಅವನು ದೋಷಾರ್ತಿ, ಶ್ಲೋಕ:
'ಭಕ್ತಸ್ಯ ಪ್ರತಿಪಕ್ಷೇಣಾಂ ಸದಾಚಾರೇಣ ವರ್ಜಿತಃ।
ಗುರುಲಿಂಗ ಜಂಗಮದ್ವೇಷೀ ತೇನರಾಣಾಂ ದುರಾತ್ಮನಾಂ।'
ಇದು ಕಾರಣ ಕೂಡಲ ಚೆನ್ನಸಂಗಯ್ಯಾ ಭಕ್ತಿಸ್ಥಲವೆಲ್ಲರಿಗೆಲ್ಲಿ
ಯದೋ?

'ತನುಮನಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯ ಒಳಲೊಟ್ಟೆಯ ನುಡಿವರು ನೀವೆಲ್ಲಾ ಕೇಳಿರೇ: ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ ಗುರಿಯ ತಾಗಬಲ್ಲುದೆ?

ಮಾಯಾಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮ ದೇವನೆಂತೊಲಿವನಯ್ಯಾ ?'

'ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ : ಒಮ್ಮಿಂಗೆ ಕರುಣಿ ಸಯ್ಯಾ. ಇದನರಿದು ಇನ್ನು ತಪ್ಪಿದೆನಾದರೆ ನೀ ಮಾಡಿತ್ತೆ ಸಲುವುದು ಕೂಡಲಸಂಗಮದೇವಾ.'

'ತನುವಕೊಟ್ಟು ಗುರುವನೊಲಿಸಬೇಕು, ಮನವಕೊಟ್ಟು ಲಿಂಗವ ನೊಲಿಸಬೇಕು, ಧನವ ಕೊಟ್ಟು ಜಂಗಮವನೊಲಿಸಬೇಕು. ಈ ತ್ರಿವಿಧವ ಹೊರಗುಮಾಡಿ, ಹರಿಯು ಹೊಯ್ಸಿ, ಕುರುಹ ಪೂಜಿಸುವರ ಮೆಚ್ಚ ಕೂಡಲ ಸಂಗಮದೇವ.'

'ಶ್ರೀಗುರು ಲಿಂಗಜಂಗಮಕ್ಕೆ ತನು ಮನ ಧನವನು ವಂಚನೆಯಿಲ್ಲದೆ ಸದ್ಭಕ್ತಿಯಿಂದ ಅರ್ಪಿಸಿ ದಾಸೋಹಿಯೊದಡೆ ಸದ್ಭಕ್ತನು. ಆ ಸದ್ಭಕ್ತನ 'ಭಕ್ತಕಾಯ ಮಮಕಾಯ' ವೆಂಬ ಶಿವನ ವಾಕ್ಯದಿಂದ ಅದು ಶಿವನ ತನು. 'ಯತೋ ವಾಚೋ ನಿವರ್ತಂತೇ'

ಎಂಬ ಲಿಂಗವನು ಶ್ರೀಗುರು ಕಣ್ಗೆ ಗೋಚರವ ಮಾಡಿ, ಪ್ರಾಣಲಿಂಗವ ಮಾಡಿ, ಕರಸ್ಥಲದಲ್ಲಿ ಬಿಜಯಂಗೈಸಿಕೊಟ್ಟ ಬಳಿಕ ಲಿಂಗಪ್ರಾಣವಾಯಿತ್ತು. ಶಿವತನುವಾಯಿತ್ತು. ಶಿವಜ್ಞಾನ ಸದ್ಭಕ್ತಿ ಸಂಪೂರ್ಣವಾದಡೆ ಸರ್ವಾಂಗ ಲಿಂಗ. ಅಂಗಗುಣವೆಲ್ಲಾ ಲಿಂಗಗುಣ. ಪಂಚೇಂದ್ರಿಯಂಗಳು ಲಿಂಗೇಂದ್ರಿ ಯಂಗಳು. ಆ ಮಹಾ ಸದ್ಭಕ್ತನ ಕ್ರೀ ಲಿಂಗಕ್ರೀ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!'

ಈ ಎಲ್ಲ ವಚನಗಳು ತ್ರಿವಿಧ ಸಂಪತ್ತಿಯನ್ನು ಗಳಿಸದಿದ್ದರೆ ಆಗುವ ಕೀಳನ್ನು ಗಳಿಸಿದರೆ ಆಗುವ ಮೇಲನ್ನು ಮನಂಬುಗುವಂತೆ ವರ್ಣಿಸಿವೆ, ವಿವರಿಸಿವೆ. ಸದ್ಭಕ್ತನಿಗೆ ತಾತ್ತ್ವಿಕವಾಗಿ ಈ ತ್ರಿವಿಧವೇ ಸತ್ಯಸಂಪತ್ತು. ಜ್ಞಾನಕ್ರಿಯಾನುಭವಗಳಿಗಿಂತ ಮಿಗಿಲಿಲ್ಲ ಸುಸಂಸ್ಕೃತ ಜೀವನವನ್ನು ರೂಢಿ ಸಲು ಸಂಪತ್ತು. ಆ ಜ್ಞಾನಕ್ರಿಯಾನುಭವ ಸಂಪತ್ತುಳ್ಳವರೇ ಶ್ರೀಗುರು ಲಿಂಗ ಜಂಗಮರು. ಅವರಿಗಿಂತ ಅಧಿಕ ದೇವರಿಲ್ಲ, ಆರಾಧ್ಯರಿಲ್ಲ.

"ಲಿಂಗಂಚ ದ್ವಿವಿಧಂ ಪ್ರೋಕ್ತಂ ಜಂಗಮಾಜಂಗಮಾತ್ಮನಾ
ಅಜಂಗಮೇ ಯಥಾ ಭಕ್ತಿರ್ಜಂಗಮೇ ಚ ತಥಾ ಸ್ಮೃತಾ।
ಅಜಂಗಮಂ ತು ಯಲ್ಲಿಂಗಂ ಮೃಚ್ಛಿಲಾದಿವಿನಿರ್ಮಿತಂ
ತದ್ವರಂ ಜಂಗಮಂ ಲಿಂಗಂ ಶಿವಯೋಗೀತಿ ವಿಶ್ರುತಂ।
ಅಚರೇ ಮಂತ್ರಸಂಸ್ಕಾರಾಲ್ಲಿಂಗೇ ವಸತಿ ಶಂಕರಃ
ಸದಾಕಾಲಂ ವಸತ್ಯೇವ ಚ ರಲಿಂಗೇ ಮಹೇಶ್ವರಃ!"

ಚರಾಚರವೆಂದು ಲಿಂಗವೆರಡು ಬಗೆ. ಅಚರಲಿಂಗದಲ್ಲಿರುವಂತೆ ಚರ ಲಿಂಗದಲ್ಲಿಯೂ ಭಕ್ತಿಯಿರಬೇಕು. ಅಚರಲಿಂಗವು ಮಣ್ಣು ಕಲ್ಲುಗಳಿಂದ ಮಾಡಿದುದು. ಅದರಿಂದಾಗಿ ಜಂಗಮಲಿಂಗವು ಅದಕ್ಕಿಂತ ಅಧಿಕ. ಶಿವ ಯೋಗಿ ಎಂಬುದಾಗಿ ಚರಲಿಂಗವು ಹೆಸರಾಗಿದೆ. ಅಚರಲಿಂಗದಲ್ಲಿ ಶಿವನು ಮಂತ್ರಸಂಸ್ಕಾರದಿಂದಿರುತಾನೆ. ಚರಲಿಂಗದಲ್ಲಿ ಶಿವನು ಸದಾಕಾಲದಲ್ಲಿರುತ್ತಾನೆ.

'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್ ।'
'ಕಲ್ಲನಾಗರ ಕಂಡರೆ ಹಾಲ ನೆರೆಯೆಂಬರು ; ದಿಟದ ನಾಗರ
ಕಂಡರೆ ಕೊಲ್ಲೆಂಬರಯ್ಯಾ ! ಉಂಬ ಜಂಗಮ ಬಂದರೆ
ನಡೆಯೆಂಬರು ; ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರು.
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನ ಮಾಡಿದರೆ
ಕಲ್ಲತಾಗಿದ ಮಿಟ್ಟೆಯಂತಿಪ್ಪರಯ್ಯಾ !'
'ಎರೆದರೆ ನೆನೆಯದು, ಮರೆವರೆ ಬಾಡದು ; ಹುರುಳಿಲ್ಲ; ಹುರುಳಿಲ್ಲ
ಲಿಂಗಾರ್ಚನೆ ! ಕೂಡಲ ಸಂಗಮದೇವಯ್ಯ
ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು !'
'ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ ;
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ ;

ಜಂಗಮ ಆಪ್ಯಾಯನವಾದರೆ ಲಿಂಗಸಂತುಷ್ಟಿಯಹುದಯ್ಯಾ. ಇದು ಕಾರಣ ಕೂಡಲ ಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿ.'

ಇದು ಲಿಂಗಜಂಗಮ ವಿಷಯದಲ್ಲಿ ಬಸವಣ್ಣನವರ ದೃಷ್ಟಿ. ಇನ್ನು ಚೆನ್ನ ಬಸವಣ್ಣನವರ ದೃಷ್ಟಿಯನ್ನು ದಿಟ್ಟಿಸೋಣ :

'ಆಚಾರ ವಿಡಿದು ಲಿಂಗ. ಅನುಭಾವವಿಡಿದು ಜಂಗಮ. ತನುವಿನ ಪ್ರಾಣ ಆಚಾರ. ಮನದ ಪ್ರಾಣ ಅನುಭಾವ. ಇದು ಕಾರಣ ಕೂಡಲ ಸಂಗಮದೇವ ಲಿಂಗವನು ಜಂಗಮವನು ಬೇರಿರಿಸಲಿಲ್ಲ.'

'ಉನ್ಮನಿಯ ಲೌಕಿಕದನುಸಂಧಾನದ ತನುವಿನ ಕೊರತೆಯ ಕಳೆಯಲ್ಕೆ ಸ್ಥಾವರವಾಯಿತ್ತು. ಮನದ ಕೊರತೆಯ ಕಳೆಯಲ್ಕೆ ಜಂಗಮವಾಯಿತ್ತು;

'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ'

ಇಂತೆಂಬ ವಚನವ ಕೂಡಲ ಚೆನ್ನಸಂಗಯ್ಯನಲ್ಲಿ ಸಮಯಾಚಾರಿಗಳಿಗಲ್ಲದೆ ಎಲ್ಲರಿಗೆಲ್ಲಿಯದೋ ?'

ಸಮಭಾವಿ ಚೆನ್ನಬಸವಣ್ಣ. ಸಮಯಾಚಾರಿ ಚೆನ್ನಬಸವಣ್ಣ. ಹೊನ್ನು ಸಿಕ್ಕಿತೆಂದು ಹಿತ್ತಾಳೆಯನ್ನು ಬಿಸಾಕುವವನಲ್ಲ. ಜ್ಯೋತಿ ಬೆಳಗಿತೆಂದು ಪ್ರಣತೆಯನ್ನು ಬೀಸರ ಮಾಡುವವನಲ್ಲ. ಜೀವ ಬಂತೆಂದು ದೇಹವನ್ನು ಧಿಕ್ಕರಿಸುವವನಲ್ಲ. ಒಂದರಿಂದ ಇನ್ನೊಂದು. ಒಂದೊಂದರಲ್ಲಿ ಒಂದೊಂದು ಗುಣ. ಎಲೆಯೂ ಬೇಕು : ಹೂವೂ ಬೇಕು. ತನುವಿಲ್ಲದೆ ಮನವಿರದು ; ಲಿಂಗವಿಲ್ಲದೆ ಜಂಗಮವಾಗದು. ಲಿಂಗಕ್ಕಿಂತ ಜಂಗಮದಲ್ಲಿ ಚೈತನ್ಯ ಹೆಚ್ಚಿದೆಯೆಂಬುದನ್ನು ಒಪ್ಪಬೇಕು. ಆದರೆ ಲಿಂಗದಲ್ಲಿ ಚೈತನ್ಯವಿಲ್ಲದಿಲ್ಲ. ಜಂಗಮಚೈತನ್ಯ ಲಿಂಗದಲ್ಲಿದೆ. ಲಿಂಗದ ಸ್ಥಾವರತೆ (ಸ್ಥೂಲಂ) ಜಂಗಮದಲ್ಲಿದೆ ಎಂಬುದನ್ನು ಎಂದಿಗೂ ಯಾರೂ ಮರೆಯಬಾರದು.

"ಶಿವಯೋಗಿನಿ ಯದ್ದತ್ತಂ ತದಕ್ಷಯಫಲಂ ಭವೇತ್
ತಸ್ಮಾತ್ಸರ್ವಪ್ರಯತ್ನೇನ ತಸ್ಮೈದೇಯಂ ಮಹಾತ್ಮನೇ ।

ಯತ್ಫಲಂ ಲಭತೇ ಜಂತು ಃ ಪೂಜಯಾ ಶಿವಯೋಗಿನಃ
ತದಕ್ಷಯಮಿತಿ ಪ್ರೋಕ್ತಂ ಸಕಲಾಗಮಪಾರಗೈಃ ||"

'ಶಿವಯೋಗಿಗೆ ಕೊಟ್ಟ ದಾನಕ್ಕೆ ಹೆಚ್ಚಿನ ಫಲವುಂಟು. ಅದರಿಂದಾಗಿ ಆತನಿಗೆ ಆ ಮಹಾತ್ಮನಿಗೆ ಎಲ್ಲ ಬಗೆಯ ಯತ್ನದಿಂದ ಕೊಡಗಲಿಯಬೇಕು. ಶಿವಯೋಗಿಯನ್ನು ಪೂಜಿಸಿದ ಫಲ ಅಕ್ಷಯ. ಇದು ಎಲ್ಲ ಆಗಮಕೋವಿದರ ಅಭಿಪ್ರಾಯ. 'ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು–ನೋಡಾ! ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ ಮುಂದೆ ಸಕಲ ಪದಾರ್ಥವ ನೀವನು! ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ ನರಕ ತಪ್ಪದು ಕಾಣಾ, ಕೂಡಲಸಂಗಮದೇವಾ!'

'ಜಂಗಮವಿರಹಿತ ಲಿಂಗಾರ್ಚನೆ ಓಡಬಲಲೆರೆದ ಜಲದಂತೆ! ಜಂಗಮ ಸನ್ನಿಹಿತ ಲಿಂಗಾರ್ಚನೆ–ಇದೆ ಭಕ್ತಿಗೆ ಪಥವಯ್ಯಾ! ಜಂಗಮ ಪ್ರಸಾದ ಭೋಗೋಪಭೋಗವು ಎನಗಿದೇ ಲಿಂಗಾರ್ಚನೆ! ಬೇರೆ ಮತ್ತೊಂದರಿದೆನಾದರೆ, ಕೂಡಲಸಂಗಮದೇವ ನರಕದಲ್ಲಿಕ್ಕುವ!'

'ದರ್ಶನಾನರ್ಚನಾತ್ತಸ್ಯ ತ್ರಿಸಪ್ತಕುಲಸಂಯುತಾಃ |
ಜನಾ ಮುಕ್ತಿಪದಂ ಯಾಂತಿ ಕಿಂ ಪುನಸ್ತತ್ಪರಾಯಣಾಃ ||'

—ಯೋಗಜಾಗಮ

ಇವುಗಳಿಂದ ಜಂಗಮ ಪ್ರದಾನ, ಜಂಗಮ ಪೂಜೆಗಳ ಮಹಿಮೆ ಮನದಟ್ಟಾಗುತ್ತದೆ. ಅನುಭಾವಿಯಾದ ಜಂಗಮಕ್ಕೆ ಜಗತ್ತಿನಲ್ಲಿ ಮಾನ್ಯತೆಯಿದ್ದೇ ಇದೆ. ಆದರೆ ಜಂಗಮಕ್ಕೆ ಅನುಭಾವವೇ ಜೀವಾಳವೆಂಬುದನ್ನು ಮರೆಯದಿರಬೇಕು.

"ನಾವಮನ್ಯೇತ ಕುತ್ರಾಪಿ ಶಿವಯೋಗಿಸಮಾಗತಂ
ಅವಮಾನಾದ್ಭವೇತ್ತಸ್ಯ ದುರ್ಗತಿಶ್ಚ ನ ಸಂಶಯಃ |
ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯ ಭಕ್ತಿತಃ
ಪೂಜಯೇ ದಾದರೇಣೈವ ಯಥಾ ಲಿಂಗಂ ಯಥಾ ಗುರುಂ||"

ಅತಿಥಿಯಾಗಿ ಬಂದ ಶಿವಯೋಗಿಯನ್ನು ಯಾವಾಗಲೂ ಯಾವ ಬಗೆಯಲ್ಲಿಯೂ ಅವಮಾನಿಸಬಾರದು. ಅವಮಾನಿಸಿದಾತನು ಅನುಮಾನವಿಲ್ಲದೆ ಅವನತಿಗಿಳಿಯುತ್ತಾನೆ.

ಶಿವಯೋಗಿ ಸಾಕ್ಷಾತ್ ಶಿವಸ್ವರೂಪಿ. ಗುರು ಮತ್ತು ಲಿಂಗಗಳಂತೆ ಆತನನ್ನು ಆದರದಿಂದ ಕೈಂಕರ್ಯಭಕ್ತಿಯಿಂದ ಆರಾಧಿಸಬೇಕು.

'ಉತ್ತಮ, ಮಧ್ಯಮ, ಅಧಮವೆಂದು ಬಂದ ಜಗಮವನೆಂದೆನಾದರೆ ನೊಂದೆನಯ್ಯಾ, ಬೆಂದೆನಯ್ಯಾ, ಎನ್ನ ಕಿಚ್ಚು ಎನ್ನ ಸುಟ್ಟಿತ್ತು! ಸುಖಿ ಜಂಗಮ ಸಾಮಾನ್ಯ ಜಂಗಮವೆಂದುಂಟೆ ಕೂ. ಸಂ. ದೇವಾ?' ಇದು ಹೃದಯ ಸೊಲ್ಲು. ಇದು ಅದ್ವಯ ಭಕ್ತಿಯ ಒರೆಗಲ್ಲು.

'ಪ್ರಾಣವೊಂದಾಗಿ ದೇಹ ಬೇರಲ್ಲ, ಲಿಂಗವ ಪೂಜಿಸಿ ಜಂಗಮವ ಉದಾಶೀನವ ಮಾಡಿದರೆ ಬೆಂದೆನಯ್ಯಾ ನಾನು ಕೂ. ಸಂ. ದೇವಾ:'

'ತನುವ ನೋಯಿಸಿ, ಮನವ ಬಳಲಿಸಿ, ನಿಮ್ಮ ಪಾದವಿಡಿದವರೊಳರೆ? ಈ ನುಡಿ ಸುಡದಿಹುದೆ? ಕೂಡಲಸಂಗಮದೇವಾ, ಶಿವಭಕ್ತರ ನೋವೇ ಅದು ಲಿಂಗದ ನೋವು:'

ಅನುಭವವನ್ನು ಅಳವಡಿಸಿಕೊಳ್ಳಬೇಕೆಂಬುವವನು ಅನುಭಾವಿಯಾದ ಶಿವಯೋಗಿಯನ್ನು ಅವಮಾನಿಸಬಾರದು. ಅರಿವು ಆಚಾರ ಅನುಭವ ಈ ತ್ರಿವಿಧ ಸಂಪತ್ತನ್ನು ಸಂಪಾದಿಸುವುದು ಸದ್ಭಕ್ತನ ಕರ್ತವ್ಯ. ಆದ್ದರಿಂದ ಆತನು ಈ ತ್ರಿವಿಧ ಸಂಪತ್ತುಳ್ಳ ಗುರುಲಿಂಗ ಜಂಗಮರನ್ನು ಸರಿಬರಿಯಾಗಿ ಕಂಡು ಆರಾಧಿಸಬೇಕು.

'ಗುರುಸ್ಸಂಶಯ ವಿಚ್ಛಿತ್ತ್ಯೈ, ಸ್ವಾನಂದಾವಾಪ್ತಯೇ ಶಿವಃ |
ತದ್ಭಾವ ದಾರ್ಢ್ಯಾಯ ಸದಾ ಸೇವನೀಯಶ್ಶಿವಾತ್ಮಕಃ ||
ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ಹಿ ನಿಷ್ಫಲಾ |
ಸತ್ಸು ಭಕ್ತಿ ವಿಹೀನಸ್ಯ ದ್ವಿತಯಂ ತಚ್ಚ ನಿಷ್ಫಲಂ ||"

—ಶೈವರತ್ನಾಕರ

ಸಂಶಯ ವೃತ್ತಿಗೆ ಶ್ರೀಗುರುವನ್ನು, ಸ್ವಾನಂದ ಸಂಪ್ರಾಪ್ತಿಗೆ ಶಿವಲಿಂಗವನ್ನು, ಶಿವಭಾವ ಸಂಧಾನ ದೃಢತೆಗೆ ಶಿವಯೋಗಿಯನ್ನು ಸದಾ ಸೇವಿಸಬೇಕು.

ಗುರುಭಕ್ತಿಯಿಲ್ಲದಿದ್ದರೆ ಶಿವಭಕ್ತಿ ವ್ಯರ್ಥ. ಶಿವಯೋಗಿಯಲ್ಲಿ ಭಕ್ತಿಯಿಲ್ಲದಿದ್ದರೆ ಗುರುಭಕ್ತಿ ಶಿವಭಕ್ತಿ ಎರಡೂ ವ್ಯರ್ಥ. ಈ ಸಮರ್ಥನೆಯಿಂದ ತ್ರಿವಿಧದಲ್ಲಿ ಸಮಭಕ್ತಿಯಿರುವುದು ಸಾರ್ಥಕ, ಸಮರ್ಪಕ, ಎಂದು ಸಂವೇದ್ಯವಾಗುತ್ತದೆ, ಸಂಸಿದ್ಧವಾಗುತ್ತದೆ.

'ಗುರೌ ದೇವೇ ಸಮಾಬುದ್ಧಿರ್ಯಥಾಽಸೌ ಶಿವಯೋಗಿನಿ |
ಸೈಷಾ ತ್ರಿವಿಧ ಸಂಪತ್ತಿ ಸ್ಸಂವಿತ್ಸಾಮ್ರಾಜ್ಯಶಾಲಿನಾಂ ||'

—ವಾತುಲಾಗಮ

ತ್ರಿವಿಧ ಸಂಪತ್ತಿಯೇ ಸಂವಿತ್ಸಾಮ್ರಾಜ್ಯ ಅದನ್ನು ಆಳವಡಿಸಿಕೊಂಡ ಭಕ್ತ ಚಕ್ರವರ್ತಿಗಳು ಭಾಗ್ಯಶಾಲಿಗಳು. ಅಂತಾದ ಅವರಿಗೆ ಗುರು-ಲಿಂಗಗಳಲ್ಲಿರುವಂತೆ ಶಿವಯೋಗಿಯಲ್ಲಿಯೂ ಸಮಬುದ್ಧಿ ಸಮನಿಸಿರಬೇಕು. ಹಾಗಿದ್ದರೆ ಅದು ತ್ರಿವಿಧ ಸಂಪತ್ತಿ.

'ಗುರುಸ್ಥಲ ನಾಸ್ತಿಯಾದಲ್ಲದೆ ಶಿಷ್ಯನಲ್ಲ. ಲಿಂಗಸ್ಥಲ ನಾಸ್ತಿಯಾದಲ್ಲದೆ ಭಕ್ತನಲ್ಲ. ಜಂಗಮಸ್ಥಲ ನಾಸ್ತಿಯಾದಲ್ಲದೆ ಶರಣನಲ್ಲ. ಇದು ಕಾರಣ ಕೂಡಲ ಚೆನ್ನಸಂಗಮದೇವ, ಈ ತ್ರಿವಿಧ ನಾಸ್ತಿಯಾಗಿ ಭಕ್ತ ಕೆಟ್ಟು ಭವಿಯಾದಲ್ಲದೆ ಲಿಂಗೈಕ್ಯನಲ್ಲ.'

ಗುರು, ಲಿಂಗ, ಜಂಗಮವಿದ್ದರೆ ಶಿಷ್ಯ, ಭಕ್ತ, ಶರಣನಾಗಿ ಅಂಗನು ಉಪಾಸಕನಾಗುತ್ತಾನೆ. ಉಪಾಸನೆಯಿಂದ ಊರ್ಧ್ವಕ್ಕೇರಿ ತ್ರಿವಿಧವು ಏಕವಿಧವಾದಾಗ ಭಕ್ತನೆಲ್ಲಿ? ಭಕ್ತತ್ವವೆಲ್ಲಿ? ಎಲ್ಲವೂ ಒಂದೇ ಲಿಂಗವಾಗಿ ಲಿಂಗಕ್ಕೆ ಲಿಂಗವಿಲ್ಲ. ಅದು ಆದ್ಯಂತವಿಲ್ಲದ ಭವಿ. ಅಂಗ ಅವಿರಳವಾದ ಲಿಂಗ. ದೃಕ್ಕ್ರಿಯಾನುಭವ ನಿಷ್ಪತ್ತಿಗೊಂಡ ನಿಸ್ಥಲ.

ತಾನೇ ತ್ರಿವಿಧವಾದ ಆ ಪರವಸ್ತುವನು ಉಪಾಸನಾನಂತರ ಭಕ್ತನು ತ್ರಿವಿಧವೂ ಒಂದೇ ಎಂದು ಏನೂ ಸಂಶಯವಿಲ್ಲದೆ ಭಾವಿಸುತ್ತಾನೆ.

ಅಂಗವೇ ಲಿಂಗ, ಪ್ರಾಣವೇ ಗುರು, ಜೀವಚೈತನ್ಯವೇ ಜಂಗಮ ಇದು ಪಿಂಡಾಂಡ ತ್ರಿವಿಧ ಸಂಪತ್ತಿಯಲ್ಲಿನ ಏಕಭಾವ ನಿಷ್ಪತ್ತಿ ಬ್ರಹ್ಮಾಂಡವೇ ಲಿಂಗ, ಬ್ರಹ್ಮಾಂಡದಲ್ಲಿರುವ ಪ್ರಾಣಿಗಳೆಲ್ಲಿ ಗುರು, ಬ್ರಹ್ಮರೆ ಜಂಗಮ. ಇದು ಸಮಷ್ಟಿ ತ್ರಿವಿಧಸಂಪತ್ತಿಯಲ್ಲಿನ ಏಕಭಾವನಿಷ್ಪತ್ತಿ.

'ಸರ್ವಭೂತೇಷು ಯೇನೈಕಂ ಭಾವಮವ್ಯಯ ಮೀಕ್ಷತೇ ।
ಆದಿಭಕ್ತಂ ವಿಭಕ್ತೇಷು ತಜ್ಞಾನಂ ವಿದ್ಧಿ ಸಾತ್ವಿಕಂ ॥'

ಗೀತೆಯ ಈ ಸಾತ್ವಿಕ ಶ್ರದ್ಧೆಯನ್ನು ಮೀರಿರುತ್ತಾನೆ ತ್ರಿವಿಧ ಸಂಪತ್ತಿಯುಳ್ಳ ಸದ್ಭಕ್ತ.

ಚತುರ್ವಿಧ ಸಾರಾಯಸ್ಥಲಂ

ಶಿವಸ್ವರೂಪಿಯಾದ ಶ್ರೀಗುರು ಕಾರುಣ್ಯದಿಂದ ಸರ್ವ ಸುಖಕ್ಕೆ ಕಾರಣ ವಾದ ಮಹಾಲಿಂಗವು ಕರಸ್ಥಲಕ್ಕೆ ಕರಿಗೊಂಡು ಒಳ ಹೊರಗೆನ್ನದೆ ಸರ್ವಾಂಗ ಲಿಂಗಿಯಾದ ಸ್ವಾನುಭಾವಿಯಾದ ಸಮ್ಯಕ್‌ಜ್ಞಾನಿಯಾದಶಿಷ್ಯನು ಶ್ರೀಗುರುಲಿಂಗ ಜಂಗಮರಿಂದ ಪ್ರಾಪ್ತವಾಗುವ ಪಾದೋದಕ ಪ್ರಸಾದಗಳಿಗೆ ಹಾರೈಸಬೇಕಲ್ಲದೆ ಬೇರೆ ಭೋಜನಾದಿಗಳನ್ನು ಬಯಸಬಾರದು. ನಿತ್ಯ ಸುಖವೀವುದು ಪಾದೋದಕ ಪ್ರಸಾದ. ಅನಿತ್ಯ ಸುಖವೀವುದು ಪ್ರಾಕೃತಿಕ ಪಡಿ ಪದಾರ್ಥ.

'ಕ್ಷೀರಸಾಗರದೊಳಗಿರ್ದ ಹಂಸೆಗೆ ಹಾಲ ಬಯಸಲುಂಟೆ? ಪುಷ್ಪದೊಳಗಿರ್ದ ತುಂಬಿಗೆ ಪರಿಮಳವ ಬಯಸಲುಂಟೆ? ತಾ ಲಿಂಗದೊಳಗಿರ್ದು ಬೇರೆ ಇತರ ಕಾಮ್ಯಾರ್ಥದೊಳಗಿರ್ಪ ಭ್ರಾಂತರನೇನೆಂಬೆನಯ್ಯಾ ಗೊಹೇಶ್ವರಾ?'

ತ್ರಿವಿಧ ಸಂಪತ್ಶಾಲಿಯಾದ ಸದ್ಭಕ್ತನ ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮಭಕ್ತಿ ಅಳವಟ್ಟಬಳಿಕ ಪರಿಣಾಮದಲ್ಲಿ ಪಾದೋದಕಪ್ರಸಾದ ಭಕ್ತಿ ಅಳವಡಬೇಕಲ್ಲದೆ ಇತರ ಕಾಮ್ಯಾರ್ಥಗಳ ಭ್ರಾಂತಿ ಅಳವಡಬಾರದು. ಅಂಗತ್ರಯವನ್ನು ಲಿಂಗತ್ರಯಕ್ಕರ್ಪಿಸಿ ತ್ರಿವಿಧ ತನುವಳಿದು ತತ್ತ್ವಮಯನಾದ ಬಳಿಕ ತನುಸಾರಾಯ ಮನಸಾರಾಯ ಭಾವಸಾರಾಯವಾದ ಬಳಿಕ ಜೀವಸಾರಾಯನಾಗಬೇಕು, ಪರಿಣಾಮಸಾರಾಯನಾಗಬೇಕು. ಅದಾಗಬೇಕಾದರೆ ಪ್ರಸಾದಭಕ್ತಿಯುಳ್ಳವನಾಗಬೇಕು. ಪ್ರಸಾದವೇ ಭಕ್ತನಿಗೆ ನಿತ್ಯಮುಕ್ತಿ. ಪ್ರಸಾದವೇ ಪರಮ ಪುರುಷಾರ್ಥ. ಭಕ್ತನಿಗೆ ಬೇರೆ ಬೇರೆ ಚತುರ್ವಿಧ ಫಲಪದಗಳಾಸೆ ನಿಂದ್ಯ, ಪಾದೋದಕ ಪ್ರಸಾದಗಳಾಸೆ ವಂದ್ಯ. ಪಾದೋದಕ ಪ್ರಸಾದಗಳಲ್ಲಿ ಪರಿಣಮಿಸುವಾತನೆ ಸದ್ಭಕ್ತ, ಚತುರ್ವಿಧ ಸಾರಾಯ ಸಂಪನ್ನ.

'ಈ ಸತ್ಕ್ರಿಯೆಗೀಫಲ, ಈ ಪುಷ್ಪಕ್ಕೀ ಫಲವೆಂಬ ಕೂಲಿಕಾರರು ಅವರೆಲ್ಲಾ ಕರ್ಮಿಗಳಯ್ಯಾ ! ಪುಣ್ಯಪಾಪವನುಂಬ ಕರ್ಮಿಗಳಯ್ಯಾ ! ಸ್ವರ್ಗನರಕವನುಂಬ ಕರ್ಮಿಗಳಯ್ಯಾ ! ಒಡಲೊಡವೆ ಪಡೆದರ್ಥ ಮೃಡದೇವ ಸೊಡ್ಡಳನಂ°ಾತ ಬೆಡಗಿನ ಶಿವಪುತ್ರ, ಉಳಿದವರೆಲ್ಲಾ ಜಗದ ಮಿತ್ರರು·

'ಕೃಪಣಾಃ ಫಲಹೇತವಃ' ಎಂಬಂತೆ ಕರ್ಮಫಲಗಳನ್ನು ಬಯಸುವವರು ಕರ್ಮಿಗಳು ; ಕೃಪಣರು. ಪುಣ್ಯಪಾಪಗಳಿಗೆ ಸ್ವರ್ಗ ನರಕಗಳಿಗೆ ಗುರಿಯಾಗತಕ್ಕವರು. ನಿಷ್ಕಾಮಕರ್ಮಯೋಗವುಳ್ಳವರು ಭಕ್ತರು. ಒಕ್ಕುಮಿಕ್ಕ ಪ್ರಸಾದಕ್ಕೆ ಮಾತ್ರ ಮನಸ್ಸನ್ನು ಮಾಡುವವರು ಸದ್ಭಕ್ತರು. ಈ ಸದ್ಭಕ್ತನ ಒಡಲೊಡವೆ ಪರಶಿವನಲ್ಲದೆ ಬೇರಿಲ್ಲ. ಈತನಿಗೆ ಪರಶಿವನೇ ಪರಮಪದಾರ್ಥ ; ಅವೇ ಪ್ರಸಾದ. ಪ್ರಸಾದ ಬೇರಲ್ಲ, ಪರಶಿವ ಬೇರಲ್ಲ. ಪ್ರಸಾದ ಬಯಕೆಯೆಂದರೆ ಪರಶಿವನೆಂಬ ಪರಮ ಪದಾರ್ಥದ ಬಯಕೆ. ಅಂತೆಯೇ ಆ ಹೆಬ್ಬಯಕೆಯುಳ್ಳ ಸದ್ಭಕ್ತ ಬೆಡಗಿನ ಶಿವಪುತ್ರನೆಂದೆನಿಸುತ್ತಾನೆ.

ತನು ಮನ ಭಾವಗಳನ್ನು ಅರ್ಥ ಪ್ರಾಣಾಭಿಮಾನಗಳನ್ನು ಶಿವಸೊಮ್ಮೆಂದು ಭಾವಿಸಿ ಶಿವನಿಗರ್ಪಿಸಿದ ಸದ್ಭಕ್ತನಿಗೆ ಬೇರೆ ಭೌತಿಕ ತನು ಮನ ಭಾವಗಳಿಲ್ಲ ; ಅರ್ಥ ಪ್ರಾಣಾಭಿಮಾನಗಳಿಲ್ಲ. ಇವಿಲ್ಲದ ಬಳಿಕ ಇವನು ಇಹಪರ ಭೋಗಭಾಗ್ಯಗಳನ್ನು ಬಯಸಬೇಕಾಗಿಲ್ಲ; ಬಯಸುವುದಿಲ್ಲ. ಇವೆಲ್ಲ ಇವನಿಗೆ ನಿಸ್ಸಾರ.

'ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ಮತ್ತಾವಪದವಿಯನೊಲ್ಲೆನಯ್ಯಾ ! ಕೂಡಲಸಂಗಮದೇವಾ. ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೆ ಕರುಣಿಸಯ್ಯಾ !'

ಪರಮ ಪದವಿಯು ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ ! ಪರಮ ಪದವಿಯು ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ ! ಎನಗೆ ನಿಮ್ಮ ತೊತ್ತು ಸೇವೆಯೆ ಸಾಕು ಗ [illegible] !'

ಶಿವನ ಪರಮ ಪದವಿಯೂ ಸದ್ಭಕ್ತನಿಗೆ ಬೇಕಿಲ್ಲ. ಎಲ್ಲಿ ತತ್ತ್ವಗಳಿಗೆ ಮಿ[illegible]ಪ್ಪುದೇ ಶಿವತತ್ತ್ವ. ಆ ಶಿವನಿಪ್ಪುದೇ ಪರಮಪದ. ಪರಮನೆಂದರೆ ಪರಮಾತ್ಮ, ಪರಶಿವನೆಂದರ್ಥ. ಆ ಪರಶಿವನು ತನ್ನ ಪರಮ ಪದವಿಯನ್ನು

ಒಲಿದಿತ್ತರೂ ಒಲ್ಲೆನೆಂದು ಹೇಳುವುದೇ ನಿಷ್ಕಾಮಭಕ್ತಿ. ಈ ಭಕ್ತಿಯ ಬಯಕೆಯುಳ್ಳವನೇ ಸದ್ಭಕ್ತ : ಚತುರ್ವಿಧಸಾರಾಯ ಸಂಪನ್ನ. ಇವನಿಗೆ ಗುರುಲಿಂಗ ಜಂಗಮ ಪ್ರಸಾದವೇ ಪರಮಪದ. ಗುರುಲಿಂಗ ಜಂಗಮ ಸೇವೆಯೇ ಪರಶಿವಪದ.

'ದಾಸೋಹಂ ಎಂಬ ಸಂಜ್ಞೆಗೊಂಡು ಹೋಗಿ ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ, ಇಂತೀ ಚತುರ್ವಿಧ ಸಾರಾಯ ದಲ್ಲಿ ಸಂಪನ್ನನಾದೆನು ಕಾಣಾ ಕೂಡಲಸಂಗಮದೇವಾ !'

ಸದ್ಭಕ್ತನು ಜೀವಿಸಬೇಕು ಪಾದೋದಕ ಪ್ರಸಾದಕ್ಕಾಗಿ : ಪರಬ್ರಹ್ಮ ಸ್ವರೂಪನಾದ ಆ ಪಾದೋದಕ ಪ್ರಸಾದಗಳನ್ನು ಅನುಗ್ರಹಿಸುವ ಗುರು ಜಂಗಮರ ಸೇವೆಗಾಗಿ! ಅಂತೆಯೇ ಶ್ರೀರೇಣುಕ ಶಿವಾಚಾರ್ಯರು ಹೀಗೆ ನಿರೂಪಿಸುತ್ತಾರೆ :

"ಪಾದೋದಕಂ ಯಥಾ ಭಕ್ತ್ಯಾ ಸ್ವೀಕರೋತಿ ಮಹೇಶಿತುಃ
ತಥಾ ಶಿವಾತ್ಮನೋರ್ನಿತ್ಯಂ ಗುರುಜಂಗಮಯೋರಪಿ |
ಸರ್ವಮಂಗಲ ಮಾಂಗಲ್ಯಂ ಸರ್ವಪಾವನ ಪಾವನಂ
ಸರ್ವಸಿದ್ಧಿಕರಂ ಪುಂಸಾಂ ಶಂಭೋಃ ಪಾದಾಂಬುಧಾರಣಂ ||"

ಶಿವಲಿಂಗದ ಪಾದೋದಕವನ್ನು ಪ್ರೇಮಾಸಕ್ತಿಯಿಂದ ತೆಗೆದುಕೊಳ್ಳು ವಂತೆ ಶಿವಾತ್ಮರಾದ ಶ್ರೀಗುರುಜಂಗಮರ ಪಾದೋದಕವನ್ನೂ ತೆಗೆದುಕೊಳ್ಳು ವುದು ಸದ್ಧರ್ಮ. ಪಾದೋದಕವು ಸರ್ವಮಂಗಲಗಳಿಗೆ ಮಂಗಲ ; ಸರ್ವ ಪಾವನಗಳಿಗೆ ಪಾವನ. ಪಾದೋದಕಧಾರಣವು ಸರ್ವಸಿದ್ಧಿಗಳನ್ನುಂಟು ಮಾಡುತ್ತದೆ. ಪ್ರಸಾದತ್ವಕ್ಕೆ ಪಾದೋದಕವು ಪ್ರಥಮ ಮತ್ತು ಪ್ರಮುಖ ಕಾರಣವಾಗಿದೆ.

ಸತ್ಯ ಸುಖಪರಿಣಾಮದಲ್ಲಿರಲು ಎರಡು ಎಡರುಗಳಿವೆ. ಒಂದು ತೃಷೆ, ಇನ್ನೊಂದು ಅತೃಪ್ತಿ ಅಥವಾ ಕ್ಷುತ್.

ಬಾಯಾರಿಕೆ, ಬಯಕೆ ಎಂದು ತೃಷೆ ಇತ್ತೆರ. ಬರೀ ಉದಕ ಬಾಯಾರಿಕೆಯನ್ನು ಮಾತ್ರ ಕಳೆಯುತ್ತದೆ. ಪಾದೋದಕ ಬಾಯಾರಿಕೆ ಬಯಕೆ (ವಿಷಯಾಸೆ) ಗಳೆರಡನ್ನೂ ಕಳೆಯುತ್ತದೆ.

ಶಿವಾತ್ಮರಾದ ಶ್ರೀಗುರು-ಜಂಗಮರಿಂದ ಬರುವುದು ಬರೀ ಉದಕವಲ್ಲ; ಪಾದೋದಕ. ಅವರ ಆಂತರಿಕ ಚಿದ್ರಸಾಮೃತವೂ ಅದರಲ್ಲಿ ಅಡಕವಾಗಿ ಬರುವುದರಿಂದ ಅದು ಪಾದೋದಕ, ಪಾದವೆಂದರೆ ಕೇವಲ ಕಾಲು ಎಂಬ ಅರ್ಥವಲ್ಲ. 'ಪದಸ್ಯಇದಂ ಪಾದಂ' ಎಂಬ ಅವಯುವ ವಿಶ್ಲೇಷಣದಿಂದ 'ಪದ' ಮೂಲಶಬ್ದವೆಂಬುದು ಮನವರಿಕೆಯಾಗುತ್ತದೆ. ಪದಶಬ್ದಕ್ಕೆ ಚರಣ, ಶಬ್ದ, ಹಾಡು, ಪದವಿ ಮುಂತಾದ ಅರ್ಥಗಳಿವೆ. ಇದರಿಂದಾಗಿ ಆ ಗುರು ಜಂಗಮರ ಗುರುತ್ವ ಜಂಗಮತ್ವ ಪದವಿಯೂ ಪ್ರಭೆಯೂ ಪಾದದ ಮುಂಖಾತರ ಎರೆವ ಉದಕದಲ್ಲಿ ಎರಕವಾಗಿ ಬರುತ್ತದೆ. ಅದನ್ನು ಪಾನ ಮಾಡುವುದರಿಂದ ತೃಷೆ ತಷ್ಣೆಗಳೆರಡೂತೀರುತ್ತದೆ. ಇದಕ್ಕಿಂತ ಇನ್ನಿಲ್ಲ ಸಿದ್ಧಿ.

ಇನ್ನು ಜಲದಿಂದ ತೊಳೆದರೆ ಬಾಹ್ಯಮಲ ಹೋಗುತ್ತದೆ. ಚರಣ ಜಲಧಾರಣದಿಂದ ಪಾನದಿಂದ ಬಾಹ್ಯಾಭ್ಯಂತರ ಮಲಗಳೆರಡೂ ಮಾಯ ವಾಗುತ್ತವೆ. ಪಾದೋದಕದಲ್ಲಿ ಗುರುಜಂಗಮರ ಜ್ಞಾನಾನುಭವಗಳೆರಡೂ ಇರುವುದರಿಂದ ಸ್ವೀಕರಿಸಿದ ಶಿಷ್ಯನ ಅಥವಾ ಭಕ್ತನ ಆಂತರಿಕ ಮಾಯಾ ಮಲವೂ ಬಾಹ್ಯದ ಕಾರ್ಮಿಕ ಮಲವೂ ಧ್ವಂಸವಾಗುತ್ತವೆ. ಇದರಿಂದಾಗಿ ಪಾದಾಂಬು ಪಾವನಕ್ಕೆ ಪಾವನ, ಮಂಗಲಕ್ಕೆ ಮಂಗಲ.

ತೃಷೆಯಿಂದ ತನುವನ್ನು ತೊಳಲಿಸಬಾರದು. ತೃಷ್ಣೆಯಿಂದ ಮನ ವನ್ನು ಮರುಗಿಸಬಾರದು. ಇವೆರಡನ್ನು ಒಂದರಿಂದ ಓಡಿಸಬೇಕೆಂದರೆ ಪಾದೋದಕವೇ ಪರಮಪಂಥ, ಪರಮಾರ್ಥ.

ಪಾದೋದಕದಿಂದ ಪದಾರ್ಥಭಾವ ಹೋಗಿ ಪ್ರಸಾದ ಭಾವವುಂಟಾಗು ತ್ತದೆ. ದ್ರವ್ಯಭಾವ ತೊಲಗಿ ದಿವ್ಯಭಾವವುಂಟಾಗುತ್ತದೆ. ಪ್ರಸಾದಾಂಕುರಕ್ಕೆ ಪಾದೋದಕವೇ ಬೀಜವಾಗಿದೆ.

ತೃಷ್ಣೆಗೆ ತುದಿ ಮೊದಲಿಲ್ಲ. ತಿರೆಯ ದ್ರವ್ಯಗಳಿಂದ ತೃಷ್ಣೆಯನ್ನು ತೀರಿಸಲು ಯಾರಿಂದ ಸಾಧ್ಯವಿಲ್ಲ. ತೃಷ್ಣೆಯಿರುವಲ್ಲಿ ತೃಪ್ತಿಯೂ ಇರು ವುದಿಲ್ಲ, ಶಾಂತಿಯೂ ಇರುವುದಿಲ್ಲ.

'ತೃಷ್ಣಾಹಿ ಸರ್ವಪಾಪಿಷ್ಠಾ ನಿತ್ಯೋದ್ವೇಗಕರೀ ಸ್ಮೃತಾ।
ಅನಾದ್ಯಂತಾ ತು ಸಾ ತೃಷ್ಣಾ ಅಂತರ್ದೇಹಗತಾ ನೃಣಾಂ।
ವಿನಾಶಯತಿ ಭೂತಾನಿ ಅಯೋನಿಜ ಇವಾನಲಃ।
ಅಂತ್ಯಂ ನಾಸ್ತಿ ಪಿಪಾಸಾಯಾಃ ಸಂತೋಷಃ ಪರಮಂ ಸುಖಂ।
ತಸ್ಮಾತ್ಸಂತೋಷಮೇವೇಹ ಪರಂ ಪಶ್ಯಂತಿ ಪಂಡಿತಾಃ।

—ಭಾರತಪುರಾಣ

ಈ ಉಕ್ತಿಗಳಿಂದ ತೃಷ್ಣೆಯ ಉದ್ರಿಕ್ತತೆ ಪಿಪಾಸೆಯ ಪಾಪಿಷ್ಠತೆ, ಆಶೆಯ ಆದ್ಯಂತರಹಿತತೆ, ಅಂತರ್ಭೂತವಾಗಿ ಜೀವಿಗಳನ್ನೆಲ್ಲ ದಾವಾನಲ ದಂತೆ ದಹಿಸುವಿಕೆ ಮುಂತಾದವು ಮನಸ್ಸಿಗೆ ಬರುತ್ತವೆ. ಅಂತಹ ಆ ಆಶೆಯನ್ನು ಅಂತ್ಯಗೊಳಿಸಬೇಕಾದರೆ ಸಂತೋಷವೊಂದೇ ಪರಮ ಸಾಧನ.

ಸಂತೋಷವೆರಡುಂಟು. ಒಂದು ಕ್ಷಣಿಕ, ಇನ್ನೊಂದು ಶಾಶ್ವತ. ವಿಷಯಸುಖ ಕ್ಷಣಿಕ. ತಾತ್ತ್ವಿಕಸುಖ ಶಾಶ್ವತ. ಆ ನಿತ್ಯಾನಂದವೇ ಆ ಪರವಸ್ತು. ಆ ನಿತ್ಯಾನಂದರೂಪ ಪರವಸ್ತುವೇ ಗುರು ಜಂಗಮರ ಪಾದೋದಕವಾಗಿ ಪರಿಣಮಿಸುತ್ತದೆ. ಪರಿಣಮಿಸಿ ಪ್ರಾಪ್ತವಾಗುತ್ತದೆ.

'ಪಾಕಾರಂ ಪರಮಂ ಜ್ಞಾನಂ, ದೋಕಾರೋ ದೋಷನಾಶನಂ,
ದಕಾರೋ ಜನ್ಮದಹತಿ, ಕಕಾರಃ ಕರ್ಮನಾಶನಃ।
ಪಾದೋದಕಂ ಪರಂಬ್ರಹ್ಮ ಪವಿತ್ರಮಘನಾಶನಂ
ಅಜಡಂ ಜಡಮಿಶ್ರಂತು ಯೋ ಜಾನಾತಿ ಸ ಚಾಧಮಃ।

—ಬ್ರಹ್ಮಾಂಡಪುರಾಣ

'ಪ್ರಾಣಲಿಂಗಾಂಗಸಂಬಂಧಿ ಪಾದಪ್ರಕ್ಷಾಳನೋದಕಂ
ಲಿಂಗಾಂಗ ಸಂಗಸಹಿತೈಃ ಪಿಬೇತ್ತಸ್ಯ ಪುಣ್ಯದಂ।

ಗುರೋರಂಘ್ರಿಸ್ಪೃಶತ್ತೋಯಂ ಶಿರಸಾ ಧಾರಯನ್ ಸುಕೃತ್
ಸರ್ವತೀರ್ಥಾಭಿಷೇಕಸ್ಯ ಫಲಮಾಪ್ನೋತಿ ಮಾನವಃ।'

—ಸ್ಕಾಂದ ಪುರಾಣ

'ಅವಿದ್ಯಾ ಮೂಲನಾಶಾಯ ಜನ್ಮಕರ್ಮನಿವೃತ್ತಯೇ
ಜ್ಞಾನ ವೈರಾಗ್ಯ ಸಿಧ್ಯರ್ಥಂ ಗುರೋಃ ಪಾದೋದಕಂ ಪಿಬೇತ್ ।'
—ಸಿದ್ಧಾಂತ ಶೇಖರ

ಇತ್ಯಾದಿ ಪ್ರಮಾಣಗಳಿಂದ ಪಾದೋದಕ ಪ್ರಾಶಸ್ತ್ಯವು ಪಾದೋದಕ ಫಲಗಳು ಪಾದೋದಕ ಸ್ವರೂಪವು ವ್ಯಕ್ತವಾಗುತ್ತವೆ.

ಪಾದೋದಕವು ಆಸೆಯನ್ನು ನಿಲ್ಲಿಸಿದರೆ ಪ್ರಸಾದವು ಅತೃಪ್ತಿಯನ್ನು ನಿಲ್ಲಿಸುತ್ತದೆ. ಅತೃಪ್ತಿಯಿಂದಲೇ ಮಾನವ ಜೀವನಹೋರಾಟ; ಹಲ ವೆಡೆಗೆ ಹರಿದಾಟ. ತೃಪ್ತಿಯೇ ಸತ್ಯಸುಖ ಪರಿಣಾಮದ ಕೂಟ.

ಕಾಯ:ತೃಪ್ತಿ, ಕರಣತೃಪ್ತಿ ಎಂದು ಎರಡು ವಿಧ. ಒಡಲ ತೃಪ್ತಿಯೇ ಕಾಯತೃಪ್ತಿಯ ಅಣುಬೀಜ. ಮನದ ತೃಪ್ತಿಯೇ ಕರಣ ತೃಪ್ತಿಯ ಮಹದ್ಬೀಜ.

ತೃಪ್ತಿಯ ಮೂಲ ಪ್ರಸಾದ. ಬಾಹ್ಯ ಆಂತರವೆಂದು ಪ್ರಸಾದ ದ್ವಿವಿಧ. ಬಾಹ್ಯಪ್ರಸಾದ ಆಂತರ ಪ್ರಸಾದಕ್ಕೆ ಸಹಕಾರಿ ; ಸತ್ವಕಾರಿ.

ಬಾಹ್ಯಪ್ರಸಾದವು ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ ವೆಂದು ಮೂರುಬಗೆ. ಮನದ ನಿರ್ಮಲತೆ ಅಥವಾ ಭಾವಪ್ರಸನ್ನತೆ ಎಂಬುದೊಂದೇ ಆಂತರ ಪ್ರಸಾದ. ಈ ನಾಲ್ಕು ಪ್ರಸಾದಗಳಿಂದ ಶಿಷ್ಯನ ಅಥವಾ ಭಕ್ತನ ತನುಸಾರಾಯ, ಮನಸಾರಾಯ, ಭಾವಸಾರಾಯ, ಭಕ್ತಿ (ಹೃದಯ) ಸಾರಾಯವಾಗುತ್ತವೆ.

ಸಾರಾಯವೆಂದರೆ ಸಾರವಾದ ಅಂಶ. ಅಥವಾ ತಿರುಳು. ಮೋಕ್ಷ ವೆಂತಲೂ ಅರ್ಥವಿಸುವುದುಂಟು. ವೀರಶೈವನಿಗೆ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯರೂಪ, ಮೋಕ್ಷಗಳು ನಿಜವಾದ ಮೋಕ್ಷಗಳಲ್ಲ. ಮೇಲೆ ಹೇಳಿದ ಚತುರ್ವಿಧ:ಪ್ರಸಾದಗಳೇ ಮೋಕ್ಷಗಳು.

ಭಕ್ತನು ಶೀತಲ ಹೃದಯಿಯಾದ ಶ್ರೀಗುರು ಕರುಣಿಸಿದ ಲಿಂಗವನ್ನು ಅಂಗದಲ್ಲಿ ಧರಿಸಿ ಅರ್ಚನಾಚಾರಗಳನ್ನು ಆಚರಿಸಿದರೆ ಗುರು ಕರುಣಿಸಿದ ಪುಷ್ಪವನ್ನಾಗಲಿ ಪದಾರ್ಥರೂಪ ಪ್ರಸಾದವನ್ನಾಗಲಿ ಸೂಡಿದರೆ ಸ್ವೀಕರಿಸಿದರೆ ತನು ಸಾರಾಯವಾಗುತ್ತದೆ. ಸುಜ್ಞಾನದಾನಿ ಶ್ರೀಗುರುವಿನ ಮಂತ್ರಬೋಧ

ವನ್ನು ಮನದಲ್ಲಿ ಅರಿತರೆ ಮನಘನವಾಗಿ ಜ್ಞಾನಘನವಾಗಿ ಮನ ಅಥವಾ ಜ್ಞಾನ ಸಾರಾಯವಾಗುತ್ತದೆ. ಆಚರಿಸಿದ ಆಚಾರ, ವಿಚಾರಿಸಿದ ವಿಚಾರ ಏಕವಾಗಿ ಅನುಭವವು ಅಳವಟ್ಟಲ್ಲಿ ಅದೇ ಜಂಗಮ ಪ್ರಸಾದವಾಗಿ ಅದರಿಂದ ಭಾವಸಾರಾಯವಾಗುತ್ತದೆ. ಆ ಅನುಭವಾಮೃತ ಸಂತೃಪ್ತಿಯಿಂದ ಅಥವಾ ಪರಿಣಾಮಸುಖದಿಂದ ಹೃದಯ ಸಾರಾಯವಾಗುತ್ತದೆ. ಹೀಗೆ ತನು ಮನ ಭಾವ ಹೃದಯಗಳ ಸಾರಾಯಕ್ಕೆ ಸಾರಭೂತವಾದ ಪ್ರಸಾದಗಳನ್ನು ಪ್ರಸಾದ ಫಲಗಳನ್ನು ಶ್ರೀರೇಣುಕ ಶಿವಾಚಾರ್ಯರು ಬೋಧಿಸಿ ಶೃತಪಡಿಸಿದ್ದಾರೆ, ಭಕ್ತನಿಗೆ ಬೇಕಾದ ಪ್ರಸಾದ ಪ್ರಭೇದಗಳನ್ನು ಪ್ರದ್ಯೋತಿಸಿದ್ದಾರೆ.

"ಶಿರಸಾ ಧಾರಯೇದ್ಯಸ್ತು ಪತ್ರಂ ಪುಷ್ಪಂ ಶಿವಾರ್ಪಿತಂ
ಪ್ರತಿಕ್ಷಣಂ ಭವೇತ್ತಸ್ಯ ಪೌಂಡರೀಕ ಕ್ರಿಯಾಫಲಂ ।"

ಶಿವನಿಗೆ ಸಮರ್ಪಿತವಾದ ಪತ್ರವನ್ನಾಗಲಿ ಪುಷ್ಪವನಾಗಲಿ ಶಿವಭಕ್ತನು ಶ್ರದ್ಧೆಯಿಂದ ತೆಗೆದುಕೊಂಡು ತನ್ನ ಶಿರಸ್ಸಿನಲ್ಲಿ ಧರಿಸಿದರೆ ಆತನಿಗೆ ಕ್ಷಣಕ್ಷಣಕ್ಕೂ ಪೌಂಡರೀಕಯಾಗವನ್ನು ಮಾಡಿದ ಪುಣ್ಯ ಪ್ರಾಪ್ತಿಯಾಗುವುದು.

ಶ್ರೀಗುರು ಚರಣ ಸೋಂಕಿದ ಜಲ ಪಾದೋದಕವಾಗುವಂತೆ ಆತನ ಹಸ್ತಸ್ಪರ್ಶವಾದ ಫಲ ಮೊದಲಾದವು ಪ್ರಸಾದವಾಗುವುದು. ಅಂತೆಯೇ ಶಿವಲಿಂಗವನ್ನು ಸೋಂಕಿದ ಪುಷ್ಪ ಪತ್ರಗಳು ತಮ್ಮ ಪ್ರಾಕೃತಿಕ ಪದಾರ್ಥತ್ವವನ್ನು ಕಳೆದುಕೊಂಡು ಪ್ರಸಾದವೆನಿಸುತ್ತವೆ. ಸದ್ವಸ್ತುವಿನ ಸತ್ಪುರುಷರ ಸ್ಪರ್ಶದಲ್ಲಿ ಪ್ರಾಕೃತತೆ ಅಳಿವ ಪರಮಪ್ರಭಾವವಿರುತ್ತದೆ. ಪರುಷವನ್ನು ಮುಟ್ಟಿದ ಕಬ್ಬುನದಂತೆ ಪೂರ್ವರೂಪವಳಿದು ನವಸ್ವರೂಪವುಂಟಾಗುತ್ತದೆ. ಅಂತೆಯೇ ಶಿವನಿಗೆ ಅರ್ಪಿತವಾದ ನಿವೇದಿತವಾದ ಪತ್ರ ಪುಷ್ಪಗಳು ಪ್ರಸಾದಗಳಾಗುತ್ತವೆ; ಪರಿಶುದ್ಧವಾಗುತ್ತವೆ. ಆ ಪರಿಶುದ್ಧ ಪ್ರಸಾದ ಪುಷ್ಪಗಳನ್ನು ಭಕ್ತನು ತನ್ನ ಶಿರಸ್ಸಿನಲ್ಲಿ ಶ್ರದ್ಧಾಳುವಾಗಿ ಧರಿಸಿದಲ್ಲಿ ಕೃತಾರ್ಥನಾಗುತ್ತಾನೆ.

ಬಾಳು ಬದುಕು ಅಕ್ಷಯವಾಗುತ್ತದೆ. ನೂರಾರು ಸಾವಿರಾರು ಗಜದಾನ ಮಾಡಿದ ಫಲ ಪ್ರಾಪ್ತಿಯಾಗುತ್ತದೆ. ಸಾವಿರಾರು ಬೆಳ್ದಾವರೆ ಹೂವುಗಳನ್ನು ಹರನಿಗೆ ಧರಿಸಿ ಪೂಜಿಸಿದ ಪುಣ್ಯ ಪ್ರಾಪ್ತಿಯಾಗುತ್ತದೆ.

'ಪತ್ರಂ ಪುಷ್ಪಂ ಫಲಂ ವನ್ಯಂ ಗ್ರಾಮ್ಯಂ ವಾ ದುರ್ಬಲೋಚಿತಂ
ಸಮರ್ಪಿತಂ ಸಮಾನೀಯ ಭಕ್ತೇನ ಮಮ ತತ್ಪ್ರಿಯಮ್ ।'

—ಪಾರಮೇಶ್ವರಾಗಮ

ಇದೇ ಅಭಿಪ್ರಾಯವನ್ನು ಗ್ರಹಿಸಿ ಭಗವದ್ಗೀತೆ ಹೀಗೆ ಹೇಳಿದೆ;

'ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ।'

ಶಿವನಿಗರ್ಪಿತವಾದ ಪುಷ್ಪಾದಿಗಳು ಶಿವನಿಗೆ ಪ್ರಿಯವಾದವುಗಳು, ಅವನ್ನು ಶಿವನು ಸಂತೋಷದಿಂದ ಸ್ವೀಕರಿಸುತ್ತಾನೆ ; ಎಂದು ತಂತ್ರ ಗೀತೆಗಳು ಹೇಳಿದರೆ ಶ್ರೀರೇಣುಕಗೀತೆಯು ಇನ್ನೂ ಮುಂಬರಿದು ಆತನಿಗೆ ಪ್ರಿಯವಾದ ಆತನು ಸ್ವೀಕರಿಸಿ ಉಳಿದ ಪ್ರಸಾದವನ್ನು ಭಕ್ತನು ಮರಳಿ ಕೊಂಡು ಕೃತಾರ್ಥನಾಗುವುದನ್ನು ಕೀರ್ತಿಸಿ ಶ್ರುತಪಡಿಸಿದೆ. ಉಪಭೋಗದ ಉತ್ತುಮಿಕೆಯನ್ನು ಉಗ್ಗಡಿಸಿದೆ. ಈ ಕೊಟ್ಟು ಕೊಳ್ಳುವ ಆರಾಧನೆಯ ಮುಖದಲ್ಲಿ ದೇವ ಭಕ್ತರ ಸಮನ್ವಯವನ್ನು ಬಿತ್ತರಿಸಿದೆ. ಒಮ್ಮೆ ಶಿವನ ಶಿರಸ್ಸಿನಲ್ಲಿದ್ದ ಪುಷ್ಪ ಇನ್ನೊಮ್ಮೆ ಶಿವಭಕ್ತನ ಶಿರಸ್ಸಿನಲ್ಲಿ ಶೋಭಿಸುತ್ತದೆ. ಅಲ್ಲಿ ಪುಷ್ಪತಾನು ಪರಿಶುದ್ಧವಾದರೆ ಇಲ್ಲಿ ಶಿವಭಕ್ತನನ್ನು ಪರಿಶುದ್ಧವಾಗಿಸುತ್ತದೆ.

ಪ್ರಸಾದಪುಷ್ಪದ ಪ್ರತಿಭೆಗೆ ಮಹಿಮೆಗೆ ಪ್ರತಿಯಿಲ್ಲ. ಶ್ರೀಕೃಷ್ಣನ ಪಾದಕ್ಕೇರಿಸಿದ ಪುಷ್ಪವನ್ನು ಸತ್ಯಭಾಮೆಯು ತೂಕಕ್ಕಿರಿಸಿದಾಗ ಚಿನ್ನವೂ ತೂಗದ ತೂಕವನ್ನು ಆ ಪ್ರಸಾದಪುಷ್ಪವು ತರುತ್ತದೆ. ಅದೇ ಗುರು ಬೃಹಸ್ಪತಿಯು ಆಶೀರ್ವದಿಸಿದ ಪ್ರಸಾದ ಪುಷ್ಪಮಾಲೆಯನ್ನು ಉದಾಶೀನ ಮಾಡಿದ ದೇವೇಂದ್ರನು ತನ್ನ ಸ್ವರ್ಗಸಂಪತ್ತುಗಳನ್ನು ಕಳೆದುಕೊಳ್ಳುವನು. ಕಾರಣ ಶಿವಲಿಂಗಕ್ಕೆ ಅರ್ಪಿತವಾದ ಮತ್ತು ಶ್ರೀಗುರುಚರಣಕ್ಕೆ ಸಮರ್ಪಿತವಾದ ಪ್ರಸಾದ ಪುಷ್ಪ ಪತ್ರಗಳನ್ನು ಉದಾಶೀನ ಮಾಡಬಾರದು; ಸಿಕ್ಕಲ್ಲಿ ಚೆಲ್ಲ

ಬಾರದು. ಮುಡಿಯಲ್ಲಿ ಸೂಡಬೇಕು ; ಸತ್ಫಲವನ್ನು ಪಡೆಯಬೇಕು. ಪ್ರಸಾದಕಾಯನಾಗಬೇಕು.

"ಭುಂಜೀತ ರುದ್ರಭುಕ್ತಾನ್ನಂ ರುದ್ರಪೀತಂ ಜಲಂ ಪಿಬೇತ್
ರುದ್ರಘ್ರಾತಂ ಸದಾ ಜಿಘ್ರೇದಿತಿ ಜಾಬಾಲಿಕೀ ಶ್ರುತಿಃ |
ಅರ್ಪಯಿತ್ವಾ ನಿಜೇ ಲಿಂಗೇ ಪತ್ರಂ ಪುಷ್ಪಂ ಫಲಂ ಜಲಂ
ಅನ್ನಾದ್ಯಂ ಸರ್ವಭೋಜ್ಯಂ ಚ ಸ್ವೀಕುರ್ಯಾದ್ಭಕ್ತಿಮಾನ್ನರಃ |
ಗುರುತ್ವಾತ್ಸರ್ವಲೋಕಾನಾಂ ಶಂಭೋರಮಿತ ತೇಜಸಃ
ತಸ್ಮೈ ನಿವೇದಿತಂ ಸರ್ವಂ ಸ್ವೀಕಾರ್ಯಂ ತತ್ಪರಾಯಣೈಃ ||"

ಈ ಮೂರು ಮಂತ್ರಶ್ಲೋಕಗಳಲ್ಲಿ ಜಗದ್ಗುರು ರೇಣುಕಶಿವಾಚಾರ್ಯರು ರುದ್ರ, ಲಿಂಗ, ಶಿವ—ಪದಗಳನ್ನು ಪ್ರಯೋಗಿಸಿ ಈ ಮೂರರಲ್ಲಿ ಅಭೇದ ಪ್ರತಿಪತ್ತಿಯನ್ನು ಪ್ರಕಾಶಿಸಿದ್ದಾರೆ.

ಕೇವಲ ಪುಷ್ಪಪ್ರಸಾದವನ್ನು ಮಸ್ತಕದಲ್ಲಿ ಧರಿಸಿ ಕಾಯಪ್ರಸಾದವಾದರೆ ಸಾಲದು ; ರುದ್ರಭುಕ್ತಾನ್ನಪ್ರಸಾದವನ್ನು ಸ್ವೀಕರಿಸಿ ಮನಭಾವಗಳೂ ಪ್ರಸಾದವಾಗಬೇಕು. ಆಗ ರೋಗ ಭವರೋಗಗಳೆರಡೂ ಪರಿಹಾರವಾಗುತ್ತವೆ. ಕ್ಷುದ್ಬಾಧೆ ಹೃದ್ಬಾಧೆಗಳು ನೀಗುತ್ತವೆ. ಇದರಿಂದಾಗಿ ಈ ಮೂರು ಮಂತ್ರಗಳಲ್ಲಿ ಸರ್ವಾಂಗವೂ ಪ್ರಸಾದಾಂಗವಾಗುವ ಪೂರ್ಣ ಪ್ರಸಾದ ಪ್ರಣಾಳಿಕೆಯನ್ನು ಪ್ರಬೋಧಿಸಲಾಗಿದೆ.

ತೃಷ್ಣೆಯನ್ನು ಕಳೆಯುವುದರಿಂದ ಶುದ್ಧಿಯುಂಟಾದರೆ ತೃಪ್ತಿಯನ್ನು ತಳೆಯುವುದರಿಂದ ಆತ್ಮ ಸಿದ್ಧಿಯುಂಟಾಗುತ್ತದೆ. ಈ ಅಂಗಶುದ್ಧಿ ಲಿಂಗ ಸಿದ್ಧಿಗಳಿಗೆ ಪಾದೋದಕ ಪ್ರಸಾದಗಳೇ ಕಾರಣಕರ್ತೃಗಳು. ಆದಕಾರಣ 'ಭುಂಜೀತ ರುದ್ರ ಭುಕ್ತಾನ್ನಂ, ರುದ್ರಪೀತಂ ಜಲಂ ಪಿಬೇತ್' ಎಂದು ಜಾಬಾಲಶ್ರುತಿಯ ಬೆಂಬಳಿವಿಡಿದು ಬೋಧಿಸಿದ್ದಾರೆ ಶ್ರೀರೇಣುಕ ಶಿವಾಚಾರ್ಯರು. ಇಷ್ಟೇ ಅಲ್ಲ, ಜತೆಗೆ 'ರುದಘ್ರಾತಂ ಸದಾ ಜಿಘ್ರೇತ್' ಎಂದು ನಿರೂಪಿಸಿ ಅತ್ಯಂತ ಜಡವಾದ ಪೃಥ್ವ್ಯಂಗ—ಜಲಾಂಗಗಳಾದ ಘ್ರಾಣ—ಜಿಹ್ವೆಗಳ ಶುದ್ಧಿಸಿದ್ಧಿಗಳನ್ನು ರೂಪಿಸಿದ್ದಾರೆ. ಗಂಧ—ರಸಗಳ

ರಡು ಪ್ರಸಾದವಾಗಿ ಬಂದರೆ ಘ್ರಾಣ—ಜಿಹ್ವೆಗಳು ಶುದ್ಧಿಸಿದ್ಧಿಗಳನ್ನು ಪಡೆಯುತ್ತವೆ.

ಶಿವನು ಸರ್ವಾಂತರ್ಯಾಮಿ. ಸರ್ವ ಭಕ್ತಪ್ರೇಮಿ. ಸರ್ವಲೋಕ ಗುರು. ಮಹಾ ತೇಜಸ್ವಿ. ಅಂತೆಯೇ ಸ್ವಾತ್ಮಚೈತನ್ಯರೂಪಲಿಂಗ. ಅದರಿಂದಾಗಿ ಆತನಿಗೆ ಎಲ್ಲ ಬಗೆಯ ಭೋಜ್ಯಗಳನ್ನು ಸಮರ್ಪಿಸಿ ಬಳಿಕ ಭಕ್ತಿವಂತನು ಸ್ವೀಕರಿಸುವುದು ಶಿವಾಚಾರ.

"ಅನ್ನ ಜಾತೇತು ಭಕ್ತೇನ ಭುಜ್ಯಮಾನೇ ಶೀವಾರ್ಪಿತೇ
ಸಿಕ್ಥೇ ಸಿಕ್ಥೇಽಶ್ವಮೇಧಸ್ಯ ಯತ್ಫಲಂ ತದವಾಪ್ಯತೇ ।
ನಿರ್ಮಾಲ್ಯಂ ನಿರ್ಮಲಂ ಶುದ್ಧಂ ಶಿವೇನ ಸ್ವೀಕೃತಂ ಯತಃ
ನಿರ್ಮಲೈಸ್ತತ್ಪರೈರ್ಧಾರ್ಯಂ ನಾನ್ಯೈಃ ಪ್ರಾಕೃತಜಂತುಭಿಃ ।
ಶಿವಭಕ್ತಿವಿಹೀನಾನಾಂ ಜಂತೂನಾಂ ಪಾಪಕರ್ಮಣಾಂ
ವಿಶುದ್ಧೇ ಶಿವನಿರ್ಮಾಲ್ಯೇ ನಾಧಿಕಾರೋಽಸ್ತಿ ಕುತ್ರಚಿತ್ ॥"

ಶಿವಭಕ್ತನು ಶಿವಪ್ರಸಾದವನ್ನೇ ಸ್ವೀಕರಿಸಬೇಕು. ಆ ಶಿವಪ್ರಸಾದದ ಅಗುಳಗುಳಿನಲ್ಲಿ ಅಶ್ವಮೇಧಯಾಗಫಲವುಂಟು.

ನಿರ್ಮಾಲ್ಯವು ನಿರ್ಮಲವಾದುದು. ಶಿವನು ಸ್ವೀಕರಿಸಿದುದರಿಂದ ಶುದ್ಧವಾಗಿರುತ್ತದೆ. ಆ ನಿರ್ಮಲಪ್ರಸಾದವನ್ನು ನಿರ್ಮಲರೇ ಸ್ವೀಕರಿಸಬೇಕಲ್ಲದೆ ಪ್ರಾಕೃತ ಪ್ರಾಣಿಗಳು ಸ್ವೀಕರಿಸಬಾರದು.

ಶಿವಭಕ್ತಿಶೂನ್ಯರಾದ ಪಾಪಕರ್ಮನಿರತರಾದ ಭವಿಜೀವಿಗಳಿಗೆ ಶುದ್ಧ ಶಿವಪ್ರಸಾದ ಪರಿಗ್ರಹಣದಲ್ಲಿ ಅಧಿಕಾರವಿರುವುದಿಲ್ಲ.

ಜಾಬಾಲಶ್ರುತಿಯ ಪೂರ್ಣಪಾಠ ಹೀಗಿದೆ :

'ರುದ್ರೇಣಾತ್ತಮಶ್ನಂತಿ । ರುದ್ರೇಣ ಪೀತಂ ಪಿಬಂತಿ । ರುದ್ರೇಣ ಘ್ರಾತಂ ಜಿಘ್ರಂತಿ । ತಸ್ಮಾದ್ ಬ್ರಾಹ್ಮಣಾಃ ಪ್ರಶಾಂತಮನಸೋ ವಿದ್ವಾಂಸೋ ನಿರ್ಮಾಲ್ಯಮೇವ ಭಕ್ಷಯಂತಿ ನಿರ್ಮಾಲ್ಯಮೇವ ಅಶ್ನಿಯಾತ್ ।

ರುದ್ರಸ್ವೀಕೃತ ಫಲಜಲಗಳು ರುದ್ರಘ್ರಾತ ಪತ್ರಪುಷ್ಪಗಳು ಶುದ್ಧ ಪ್ರಸಾದಗಳಾಗುತ್ತವೆ. ಬಳಿಕ ಶಿವಭಕ್ತನು ಅತ್ಯಂತ ಮತ್ತು ಅಲ್ಪ

ಜಡವಲ್ಲದ ಮಧ್ಯಜಡವಾದ ರೂಪುಸ್ಪರ್ಶಗಳೆಂಬ ಪದಾರ್ಥಗಳನ್ನು ಪ್ರಸಾದ ವನ್ನಾಗಿಸಿಕೊಳ್ಳಬೇಕು.

'ಲಿಂಗದೃಷ್ಟಿನಿರ್ರಿಕ್ಷ್ಯಾಸ್ಯ ಲಿಂಗಹಸ್ತೋಪಸ್ಪರ್ಶನಂ' ನೇತ್ರ ಮತ್ತು ತ್ವಕ್ ಇಂದ್ರಿಯಗಳಿಂದ ರೂಪ—ಸ್ಪರ್ಶಗಳನ್ನು ಭೋಗಿಸದೆ ಇವನ್ನು ಶಿವಲಿಂಗ—ಜಂಗಮಲಿಂಗಗಳಿಗರ್ಪಿಸಿ ಸಿದ್ಧಪ್ರಸಾದವಾಗಿಸಿ ಬಳಿಕ ಭಕ್ತನು ಉಪಭೋಗಿಸಬೇಕು. ಅಂದರೆ ಶಿವಲಿಂಗನೇತ್ರದಿಂದ ಸುರೂಪವನ್ನು ಜಂಗಮಲಿಂಗಹಸ್ತದಿಂದ (ತ್ವಕ್ಕಿನಿಂದ) ಸುಸ್ಪರ್ಶವನ್ನು ಪ್ರಾಸಾದಿಕಭಾವ ದಿಂದ ಪರಿಗ್ರಹಿಸಬೇಕು. ಬಳಿಕ ಅತ್ಯಲ್ಪ ಜಡಭಾವವುಳ್ಳ ಅಂದರೆ ಪ್ರಾಕೃತಿ ಕವಾದ ಶಬ್ಧ—ತೃಪ್ತಿಗಳನ್ನು ಪ್ರಸಾದಲಿಂಗ—ಮಹಾಲಿಂಗಗಳಿಗೆ ನಿವೇದಿಸಿ ಪ್ರಸಿದ್ಧ ಪ್ರಸಾದಗಳನ್ನಾಗಿಸಿ ಉಪಭೋಗಿಸಬೇಕು. ಇದು ಶಿವೈಕ ಪರಾಯಣರಾದ ಲಿಂಗಧಾರಿಗಳಿಗೆ ಉಚಿತವಾದ ಉತ್ತಮವಾದ ಹಸನಾದ ಹೊಲಬು.

'ರುದ್ರೇಣಾನ್ನಮಮೃತಂ ದೇವಾ ವೈ ಭೋಕ್ತುಕಾಮಾ ವೇದಾಃ
ಕಾಮಯಂತೇ |' —ಯಜುರ್ವೇದ.

ರುದ್ರಾರ್ಪಿತಾನ್ನವು ಅಮೃತವು. ಅದನ್ನು ಆರೋಗಿಸಲು ದೇವತೆ ಗಳು ವೇದಗಳು ಕಾಂಕ್ಷಿಸುವರು.

ಪ್ರಸಾದ ಸಾಮಾನ್ಯ—ವಿಶೇಷವೆಂದು ದ್ವಿವಿಧ. ಸಾಮಾನ್ಯ ಪ್ರಸಾದ ಸರ್ವರಿಗೂ ಸಾಧ್ಯ. ಅದು ಬ್ರಹ್ಮಾಂಡ ಪ್ರಸಾದ. ಈ ಸಾಮಾನ್ಯ ಪ್ರಸಾದವೂ ಸಹ ಸರ್ವರಿಗೆ ಸುಲಭವಾಗಿ ಸಾಧ್ಯವಾಗುವುದಿಲ್ಲ. ಅನ್ನ ವಿಲ್ಲದೆ ಬಳಲುವವರು ಅನೇಕರಿರುವುದನ್ನು ಕಣ್ಣಾರೆ ಕಾಣುವುದುಂಟು. ಹೊಟ್ಟೆತುಂಬ ಅನ್ನ ಸಿಗುವುದಕ್ಕೂ ಒಂದು ಪುಣ್ಯಬೇಕು. ಹೀಗಿರುವಾಗ ವಿಶೇಷಪ್ರಸಾದವು ಲಭ್ಯವಾಗಬೇಕಾದರೆ ನಿರ್ಮಲಾತ್ಮರಾಗಿ ನಿಜಭಕ್ತರಾಗಿ ದ್ದಾಗಬೇಕು. ಪ್ರಾಕೃತಾಚಾರದಿಂದಾಚೆ ಸಾಗಿ ಪಾರಮಾರ್ಥಾಚಾರ ನಿರತ ರಾಗಿರಬೇಕು. ಶಿವಭಕ್ತಿ ಶಿವಕ್ರಿಯೆ ಶಿವಜ್ಞಾನವುಳ್ಳವರಾಗಿರಬೇಕು.

ಶಿವಪ್ರಸಾದಕ್ಕಿಂತ ಶ್ರೀಗುರು ಜಂಗಮ ಪ್ರಸಾದ ಇನ್ನೂ ಶ್ರೇಷ್ಠ ವಾದುದು. ಜ್ಞಾನಾನುಭಾವಗಳಿಗೆ ಕಾರಣವಾದುದು. ಸಿದ್ಧವೂ ಪ್ರಸಿದ್ಧವೂ ಆದುದು.

"ಶಿವಲಿಂಗ ಪ್ರಸಾದಸ್ಯ ಸ್ವೀಕಾರಾದ್ಯತ್ಫಲಂ ಭವೇತ್
ತಥಾ ಪ್ರಸಾದ ಸ್ವೀಕಾರಾದ್ಗುರುಜಂಗಮಯೋರಪಿ ।
ತಸ್ಮಾದ್ಗುರುಂ ಮಹಾದೇವಂ ಶಿವಯೋಗಿನಮೇವ ಚ
ಪೂಜಯೇತ್ತತ್ಪ್ರಸಾದಾನ್ನಂ ಭುಂಜೀತ ಪ್ರತಿವಾಸರಂ ।"

ಶಿವಲಿಂಗ ಪ್ರಸಾದ ಸ್ವೀಕಾರದಿಂದುಂಟಾಗುವ ಫಲ ಗುರುಜಂಗಮರ ಪ್ರಸಾದ ಸ್ವೀಕಾರದಿಂದಲೂ ಪ್ರಾಪ್ತವಾಗುತ್ತದೆ.

ಆದ್ದರಿಂದ ಗುರು ಲಿಂಗ ಜಂಗಮರನ್ನು ಪೂಜಿಸಬೇಕು. ಪೂಜಿಸಿದ ಬಳಿಕ ಅವರು ಅನುಗ್ರಹಿಸಿದ ಪ್ರಸಾದವನ್ನು ಪ್ರತಿದಿನವೂ ಸ್ವೀಕರಿಸಬೇಕು.

ಪ್ರಸಾದ ಸ್ವೀಕಾರವೇ ಪ್ರಾಧಾನ್ಯವಾಗಿ ಇಲ್ಲಿ ನಿರೂಪಿತವಾಗಿರುವುದರಿಂದ ಈ ಚತುರ್ವಿಧ ಸಾರಾಯ ಸ್ಥಲವನ್ನು 'ಪ್ರಸಾದ ಸ್ವೀಕಾರ' ಸ್ಥಲವೆಂದು ಹೇಳಿದ್ದಾರೆ. ಉಭಯ ಸ್ಥಲದಲ್ಲಿ ಗುರು-ಲಿಂಗಗಳ, ತ್ರಿವಿಧ ಸಂಪತ್ತಿ ಸ್ಥಲದಲ್ಲಿ ಜಂಗಮದ ವಿಚಾರವನ್ನು ವಿಶೇಷವಾಗಿ ಹೇಳಿರುವುದರಿಂದ ಉಳಿದ ಪ್ರಸಾದದ ವಿಷಯ ವಿಶೇಷವಾಗಿ ಇಲ್ಲಿ ಪ್ರತಿಪಾದಿತವಾದುದು ಸೂಕ್ತವಾಗಿದೆ. 'ಗುಣಭವಿಗೆ ಗುರುನಾಸ್ತಿ. ಅಂಗಭವಿಗೆ ಆಚಾರನಾಸ್ತಿ. ಲಿಂಗಭವಿಗೆ ಜಂಗಮನಾಸ್ತಿ. ಪ್ರಾಣಭವಿಗೆ ಪ್ರಸಾದನಾಸ್ತಿ. ಈ ಚತುರ್ವಿಧ ನಾಸ್ತಿಗೆ ಇಹಪರವಿಲ್ಲವಯ್ಯಾ ಕೂಡಲ ಚೆನ್ನಸಂಗಮದೇವಾ!' ಮಾನವನು ಮುಖ್ಯವಾಗಿ ಈ ನಾಲ್ಕು ಭವಿತನವನ್ನು ಕಳೆದುಕೊಳ್ಳಬೇಕು. ಮಾನವನಿಗೆ ಏನಿಲ್ಲದಿದ್ದರೂ ಗುಣವಿಲ್ಲದಿರಬಾರದು. ಗುಣವಿದ್ದವನಿಗೆ ಗುರುಕೃಪೆಯಿದೆ. ಗುರುಕೃಪೆಯಾದ ಬಳಿಕ ಅಂಗದಲ್ಲಿ ಲಿಂಗವಿರಬೇಕು. ಲಿಂಗವಿಲ್ಲದಿದ್ದರೆ ಆಚಾರವಿಲ್ಲ. ಲಿಂಗವಿದ್ದಲ್ಲಿ ಅರ್ಚನಾಚಾರವುಂಟು: ಜಂಗಮವುಂಟು. ಇಷ್ಟಾಗಿಯೂ ಪ್ರಾಣಭವಿಯಾಗಿರಬಾರದು. ಪ್ರಾಣಲಿಂಗ ಧಾರಣವಿದ್ದರೆ ಪ್ರಸಾದ ಪ್ರಾಪ್ತಿ. ಆಗ ಚತುರ್ವಿಧ ಸಾರಾಯ ಸಂಪ್ರಾಪ್ತಿ. ಇದನರಿಯಬೇಕು. ಇಲ್ಲವಾದರೆ,

'ಅರಿವಿಲ್ಲದ ಕಾರಣ ಭವಕ್ಕೆ ಬಂದರು. ಅರಿವಿಲ್ಲದವಂಗೆ ಗುರುವಿಲ್ಲ. ಗುರುವಿಲ್ಲದವಂಗೆ ಆಚಾರವಿಲ್ಲ. ಆಚಾರವಿಲ್ಲದವಂಗೆ ಲಿಂಗವಿಲ್ಲ. ಲಿಂಗವಿಲ್ಲದವಂಗೆ ಜಂಗಮವಿಲ್ಲ. ಜಂಗಮವಿಲ್ಲದವಂಗೆ ಪ್ರಸಾದವಿಲ್ಲ. ಪ್ರಸಾದ

ವಿಲ್ಲದವಂಗೆ ಗಣತ್ವವಿಲ್ಲ. ಅರಿವುಸಾಹಿತ್ಯ ಗುರು, ಗುರುಸಾಹಿತ್ಯ ಆಚಾರ; ಆಚಾರ ಸಾಹಿತ್ಯ ಲಿಂಗ, ಲಿಂಗಸಾಹಿತ್ಯ ಜಂಗಮ, ಜಂಗಮ ಸಾಹಿತ್ಯ ಪ್ರಸಾದ, ಪ್ರಸಾದ ಸಾಹಿತ್ಯ ಗಣತ್ವ. ಇದು ಕಾರಣ ಕೂಡಲ ಚೆನ್ನ ಸಂಗಯ್ಯನಲ್ಲಿ ಈ ಒಂದು ಸ್ಥಲವಾದವರಿಗೆಲ್ಲಾ ಭಕ್ತಿ ಉನ್ನತ ಉಂಟು, ಸಕಲ ನಿಃಕಲ ನಿರ್ವಾಣ ಲಿಂಗೈಕ್ಯವಪೂರ್ವ.'

'ಗುರು ಮುಟ್ಟಿ ಗುರುವಾಯಿತ್ತು. ಲಿಂಗ ಮುಟ್ಟಿ ಲಿಂಗವಾಯಿತ್ತು. ಜಂಗಮ ಮುಟ್ಟಿ ಜಂಗಮವಾಯಿತ್ತು. ಪ್ರಸಾದ ಮುಟ್ಟಿ ಪ್ರಸಾದ ವಾಯಿತ್ತು. ಪ್ರಸಾದ ಪರವಸ್ತು ಪರದಲ್ಲಿಪ್ಪುದಾಗಿ ಇನ್ನು ಪ್ರಸಾದ ಮುಟ್ಟಬೇಕೆಂಬವರ ಮುಖವ ನೋಡಲಾಗದು ಕೂಡಲ ಚೆನ್ನಸಂಗಯ್ಯಾ !'

ಗುರು ಲಿಂಗ ಜಂಗಮ ಪ್ರಸಾದ ಈ ಚತುರ್ವಿಧವೂ ಪರವಸ್ತು ಸ್ವರೂಪ. ಇವನ್ನು ಅಳವಡಿಸಿ ಅಂಗವಿಸಿಕೊಂಡ ಅಚ್ಚ ಭಕ್ತನು ನಿಚ್ಚ ಪರವಸ್ತು ಸ್ವರೂಪವಾಗಿರುವನು. ಈ ವಿಷಯದಲ್ಲಿ ವಿಶ್ವಾಸವಿಲ್ಲದೆ ಬೇರೆ ಬೇರೆ ಬಟ್ಟೆಯ ಹಿಡಿದರೆ ಬೇರೆ ಬೇರೆ ಸ್ಥೂಲದೇವರ ಪ್ರಸಾದಕ್ಕೆ ಬಾಯ್ದೆರೆದರೆ ಅವನು ನಿಂದ್ಯ, ಅವನು ಅದರ್ಶನೀಯ.

'ಮಾಡಿ ಮಾಡಿಸಿಕೊಂಬಿವೆರಡರ ನಿಲುಕಡೆ ಒಂದೇ. ಗುರು ಒಂದೇ, ಲಿಂಗವೊಂದೇ. ಜಂಗಮವೊಂದೇ, ಪ್ರಸಾದವೊಂದೇ. ಒಂದಾದಲ್ಲಿ ಎರಡಾಗಿ ಮಾಡದ ಭಕ್ತ ನೀನೇ ಕೂಡಲ ಸಂಗಮದೇವಾ !'

ಆ ಒಂದೇ ವಸ್ತು ಸ್ವಲೀಲಾನಂದಕ್ಕಾಗಿ ಸ್ವಭಕ್ತರುದ್ಧಾರಕ್ಕಾಗಿ ನಾಲ್ವಗೆಯಾದರೂ ವಾಸ್ತವಿಕವಾಗಿ ನಾಲ್ಕೂ ಒಂದೇ ! ನಾಲ್ಕರಲ್ಲಿ ನಿಜ ವರಿದ ಭಕ್ತನು ಭಿನ್ನ ಮಾಡಬಾರದು.

'ನನಗೆ ನಾನೇ ಗುರುವಾದೆನಯ್ಯಾ ! ನನಗೆ ನಾನೇ ಲಿಂಗವಾದೆ ನಯ್ಯಾ ! ನನಗೆ ನಾನೇ ಜಂಗಮವಾದೆನಯ್ಯಾ ! ನನಗೆ ನಾನೇ ಪ್ರಸಾದ ವಾದೆನಯ್ಯಾ ! ನನಗೆ ನಾನೇ ಭಕ್ತನಾದೆನಯ್ಯಾ ! ರೇಕಣ್ಣಪ್ರಿಯ ನಾಗಿ ನಾಥನಲ್ಲಿ ಆಗುಹೋಗುವನರಿಯೆನಯ್ಯಾ ನಾನು !'

ಆ ಪರಶಿವನು ಗುರು ಲಿಂಗ ಜಂಗಮ ಪ್ರಸಾದಗಳಾದುದಲ್ಲದೆ ಭಕ್ತನೂ ತಾನೇ ಆದ. ಅಲ್ಲದೆ ಮಾಡಿಸಿಕೊಳ್ಳುವ ಭಕ್ತಿಯೂ ತಾನೇ ಆದ. ಹೀಗಿರು

ವಾಗ ಹಿರಿದು ಕಿರಿದೆಂಬ ಭಾವವಿಲ್ಲ. ಇಹಪರವೆಂಬ ಆಗುಹೋಗುಗಳಿಲ್ಲ. ಚತುರ್ವಿಧ ಸಾರಾಯಸಂಪನ್ನನಾದಲ್ಲಿ ಸುಖದುಃಖಗಳಿಗಿಂಬಿಲ್ಲ. ಕೂಡಿ ಅಗಲುವ, ಅಗಲಿ ಕೂಡುವ ಧಾವತಿಯಿಲ್ಲ. ವಿರಸ ಸರಸ ಸಮರಸಗಳ ಮಾತಿಲ್ಲ.

'ಯದ್ಭಾವಂ ತದ್ಭವತಿ' ಎಂಬ ಭಾವವುಂಟಾಗಿ ಶಿವ ತಾನೆ ಗುರುವಾದ.

" " " " " ಶಿಷ್ಯನಾದ.
" " " " " ಜಂಗಮವಾದ.
" " " " " ಭಕ್ತನಾದ.
" " " " " ಪ್ರಸಾದವಾದ.
" " " " " ಪ್ರಸಾದಿಯಾದ.
" " " " " ಕೂಡಲಚೆನ್ನಸಂಗ ತಾನಾದ.

'ಸ್ವಯಂ ಪ್ರಸಾದಂ ವಾ, ಸ್ವಯಂ ಲಿಂಗಂ ವಾ, ಸ್ವಯಂ ದಾಸೋಹಂ ವಾ, ಸ್ವಯಂ ಶರಣಂ ವಾ, ಸ್ವಯಂ ವಾ ಕೂಡಲ ಚೆನ್ನಸಂಗಪ್ರಸಾದಂ ವಾ.'

'ಸರ್ವಾಂಗ ಪ್ರಸಾದಂ ವಾ, ಸರ್ವಾರ್ಥ ಪ್ರಸಾದಂ ವಾ, ಸರ್ವಾಂಗ ಸ್ವಯಂ ವಾ, ಕೂಡಲ ಚೆನ್ನಸಂಗ ಪ್ರಸಾದಂ ವಾ.'

ಎಂತಹ ಸುಂದರವಾದ ಸೂಕ್ತಿಯಿದು ? ಏನು ಮಧುರವಾದ ಸುಧೋಕ್ತಿಯಿದು ? ಚತುರ್ವಿಧ ಸಾರಾಯ ಸಾಹಿತ್ಯದಲ್ಲಿ ಶಿವ–ಜೀವರ ಜೀವನ ತಿರುಳಿದೆ. ಆ ಶಿವನ ವಿಕಾಸಲೀಲೆಯೇನು ? ಶಕ್ತಿಯ ವಿಲಾಸ ಸೊಗಸೇನು ? ಭಕ್ತಿಯ ಸರ್ವಸಮನ್ವಯ ಸದ್ಭಾವವೇನು ? ಚತುರ್ವಿಧ ಅಂಗ–ಲಿಂಗಗಳ ವಿಚಾರ ವಿಮರ್ಶೆಯ ಔನ್ನತ್ಯವೇನು ? ತನುಮನಭಾವ ಗಳನ್ನಲ್ಲದೆ ಹೃದಯವನ್ನೂ ಹೊಂದಿಸಿಕೊಂಡು, ದೃಕ್ಕ್ರಿಯಾನುಭವ ಗಳೊಡನೆ ಪರಿಣಾಮ ಸುಖವನ್ನೂ ಸೇರಿಸಿಕೊಂಡು, ಗುರುಲಿಂಗ ಜಂಗಮರ ಜತೆಗೆ ಪಾದೋದಕ ಪ್ರಸಾದವನ್ನೂ ಪುರಸ್ಕರಿಸಿಕೊಂಡು, ಸತ್ ಚಿತ್ ಆನಂದಗಳೊಡನೆ ನಿತ್ಯತೃಪ್ತತ್ವವನ್ನೂ ನೆರಹುಗೊಂಡು ನುಡಿಗಡೆಯಲ್ಲಿ ಬಾಳಿಗೊಂದು ಕಳೆ ತುಂಬಿ, ತುಂಬು ಬಾಳನ್ನು ತೋರುವಲ್ಲಿ ನವ್ಯತೆಯಿದೆ, ದಿವ್ಯತೆಯಿದೆ ; ಜತೆಗೆ ಕಾವ್ಯಕಲೆಯೂ ಇದೆ.

ತ್ರಿವಿಧ ಸಂಪತ್ತಿಯಃ ಗಳಿಕೆ ಚತುರ್ವಿಧ ಸಾರಾಯ ಸಂಪನ್ನತೆಗೆ ಗುರಿ. ಪ್ರಸಾದ ಸಾಹಿತ್ಯ ಗಣತ್ವಕ್ಕೆ ಸಾಕ್ಷಿ. ಸರ್ವಾಂಗ ಪ್ರಸಾದತ್ವಕ್ಕೆ ಸರ್ನಾರ್ಥ ಪ್ರಸಾದತ್ವಕ್ಕೆ ಸರ್ವಸಾಮರಸ್ಯಕ್ಕೆ ಪರಿವಿಡಿ. ಭಾವದ ಬೆಳವಣಿಗೆಗಾಗಿ ಆಚಾರ-ವಿಚಾರಗಳ ವಿಕಾಸಕ್ಕಾಗಿ ಗುರು-ಶಿಷ್ಯ, ಲಿಂಗ-ಶರಣ, ಜಂಗಮ-ಭಕ್ತ ಪ್ರಸಾದ-ಪ್ರಸಾದಿ ಎಂಬ ಉಭಯಸ್ಥಲಗಳುಂಟಲ್ಲದೆ ಭಾವೈಕ್ಯದಲ್ಲಿ ಆಚಾರ-ವಿಚಾರಗಳ ನಿಷ್ಪತ್ತಿಯಲ್ಲಿ ಸರ್ವವೂ ಸ್ವಯವಾಗಿದೆ; ಸಾರಾಯವಾಗಿದೆ.

'ಗುರು ಒಂದೇ ಬಸಿರು, ಲಿಂಗವೊಂದೇ ಬಸಿರು, ಜಂಗಮ ಒಂದೇ ಬಸಿರು, ಪ್ರಸಾದ ಒಂದೇ ಬಸಿರು. ಇದನಾರಯ್ಯ ಅವಲೋಕ್ಯವ ಮಾಡಿ ಬೇರೆ ತೋರಿದವರು ? ಇದನಾರಯ್ಯ ಪ್ರಜ್ವಲಿತವ ಮಾಡಿ ಬೇರೆ ತೋರಿದವರು ? ಪೂರ್ವಾಚಾರಿ ಭಕ್ತಿ ಭಂಡಾರಿ ಸಂಗನ ಬಸವಣ್ಣ ಎನಗೆ ನೀನು ಗೊಹೇಶ್ವರ ಲಿಂಗವ ತೋರಿದೆಯಾಗಿ ಲೋಕಾದಿ ಲೋಕವೆನಗೆ ಕಿಂಚಿತ್.'

ಮೇಲಿನ ನಮ್ಮ ಮಾತಿಗೆ ಅಲ್ಲಯ್ಯನ ಈ ವಚನ ಸಂಪೂರ್ಣ ಸಮರ್ಥನೆಯನ್ನು ಸಾಟುತ್ತದೆಯಲ್ಲದೆ ಈ ಹೊಲಬಿನಲ್ಲಿ ಮಡಿವಳಮಾಚಿತಂದೆಯೂ ಹೆಜ್ಜೆಯಿಟ್ಟು ಹೇಳಿದುದನ್ನು ಕೇಳಬೇಕು.

'ಇದು ಗುರು, ಇದು ಲಿಂಗ, ಇದು ಜಂಗಮ, ಇದು ಪ್ರಸಾದ-ಇಂತೀ ಚತುರ್ವಿಧ ಸ್ಥಲವನೊಂದು ಮಾಡಿ ದೊರೆದ ಜಂಗಮವ ನಿರಾಕಾರ ಲಿಂಗವೆಂದು ತೋರಿ, ಆ ಜಂಗಮದ ಪ್ರಸಾದವ ತೋರಿದನು. ನಿರವಯ ಹಾದಿಯ ಬಸವಣ್ಣನಿಂದ ಕಂಡೆ ಕಾಣಾ ಕಲಿದೇವಯ್ಯಾ.'

ಮಾಚಿತಂದೆಯ ಮಾತಿಗೆ ಮಾತೃಕೆಯಾಗಿ ಮೂಲಮರ್ಮವಿಡಿದು ಮಾಧುರ್ಯವಾಗಿ ಮಂತ್ರರೂಪಾಗಿ ಒರೆದ ಚಿನ್ಮಯಮೂರ್ತಿ ಚೆನ್ನಬಸವಣ್ಣನ ಚೆನ್ನುಡಿಗಳನ್ನು ಚಿತ್ತೈಸಬೇಕು :

'ಹರ ತನ್ನ ರೂಪ ತೋರಬೇಕೆಂದು, ಗುರುರೂಪಾಗಿ ಬಂದು ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ, ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ, ಇಂತು ಚತುರ್ವಿಧ ಕೂಡಲ ಚೆನ್ನಸಂಗಯ್ಯ ಬಸವಣ್ಣನೊಬ್ಬನೆ.' ಮತ್ತು,

‘ಗುರುವಿನಲ್ಲಿ ಸ್ವಾಯತ, ಲಿಂಗದಲ್ಲಿ ಸನ್ನಿಹಿತ, ಜಂಗಮದಲ್ಲಿ ಆಯತ, ಪ್ರಸಾದದಲ್ಲಿ ಪರಿಣಾಮಿ, ಇಂತೀ ಚತುರ್ವಿಧದಲ್ಲಿ, ಸನ್ಮತನು ಕೂಡಲ ಚೆನ್ನಸಂಗಯ್ಯನಲ್ಲಿ ಚೆನ್ನಬಸವಣ್ಣ!’

‘ಗುರುವಿನಲ್ಲಿ ಗುಣಸಂಪಾದನೆಯ ಮಾಡುವಲ್ಲಿ ಗುರುಸಂಬಂಧಿಯಲ್ಲ. ಲಿಂಗದಲ್ಲಿ ಸ್ಥಲಸಂಪಾದನೆಯ ಮಾಡುವನ್ನಕ್ಕ ಲಿಂಗಸಂಬಂಧಿಯಲ್ಲ. ಜಂಗಮದಲ್ಲಿ ಜಾತಿಸಂಪಾದನೆಯ ಮಾಡುವನ್ನಕ್ಕ ಜಂಗಮಸಂಬಂಧಿಯಲ್ಲ. ಇದುಕಾರಣ ಕೂಡಲ ಚೆನ್ನಸಂಗಯ್ಯ ಮಜ್ಜನಕ್ಕೆರೆವ ಭವಿಗಳನೇನೆಂಬೆ?’

‘ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಬುದು. ಲಿಂಗಕ್ಕೆ ಲಿಂಗವಾಗಿ ಲಿಂಗಪ್ರಸಾದವ ಕೊಂಬುದು. ಜಂಗಮಕ್ಕೆ ಜಂಗಮವಾಗಿ ಜಂಗಮಪ್ರಸಾದವ ಕೊಂಬುದು. ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಬುದು. ಇಂತೀ ಚತುರ್ವಿಧಸ್ಥಲಕ್ಕೆ ಚತುರ್ವಿಧವಾಗಬಲ್ಲಡೆ ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.’

ಈ ನಾಲ್ಕು ನಲ್ನುಡಿಗಳಲ್ಲಿ ಚತುರ್ವಿಧ ಸಾರಾಯಸ್ಥಲದ ಸಾರಾಂಶವೆಲ್ಲ ಸನ್ನಿಹಿತವಾಗಿದೆ. ಸ್ವಾನುಭಾವಸಂಪನ್ನ ಸಾಹಿತ್ಯವಾಗಿದೆ. ಚತುರ್ವಿಧ ಸಾರಾಯ ಪ್ರಸಾದವೇ ಪರವಸ್ತುವಾಗಿ ಅಪರೋಕ್ಷಾನುಭೂತಿಗೆ ಸಾಕ್ಷಾತ್ಕರಿಸಿದೆ. ಕೊನೆಯದಾಗಿ,

‘ವಿಶ್ವಾಸವೇ ಭಕ್ತಿ. ಗುರು ಲಿಂಗ ಜಂಗಮ ಒಂದೆಂದರಿವುದೇ ಜ್ಞಾನ.
ತ್ರಿವಿಧದಲ್ಲಿ ನಿರ್ವಂಚನೆಯೇ ವೈರಾಗ್ಯ. ಪ್ರಸಾದವೇ ಮುಕ್ತಿ.
ಇದು ಸತ್ಯ, ಶಿವಬಲ್ಲ–ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ!’

ಭಕ್ತಿ, ಜ್ಞಾನ, ವೈರಾಗ್ಯ, ಮುಕ್ತಿ ಇವು ನಾಲ್ಕು ಜೀವನಸಾರಾಯ. ಇವನ್ನು ಗಳಿಸುವುದೇ ಭಕ್ತನ ಗುರಿ.

‘ಸರ್ವಕರ್ಮಾಣ್ಯಪಿ ಸದಾ ಕುರ್ವಾಣೋ ಮದ್ವ್ಯಪಾಶ್ರಯಃ।
ಮತ್ಪ್ರಸಾದಾದವಾಪ್ನೋತಿ ಶಾಶ್ವತಂ ಪದಮವ್ಯಯಮ್ ॥’

—ಗೀತಾ, ಅ–೧೮, ಶ್ಲೋ–೫೬.

ಗುರು ಲಿಂಗ ಜಂಗಮ ಪ್ರಸಾದ ಇವುಗಳಲ್ಲಿ ಪ್ರಸಾದವನ್ನು ಬಿಟ್ಟು ಭಕ್ತನನ್ನು ಸೇರಿಸಿ ಚತುರ್ವಿಧ ಸಾರಾಯವೆಂದು ಹಲವರು ಹೇಳುತ್ತಾರೆ.

ಈ ಹೇಳಿಕೆಗೆ ಆಧಾರವಿಲ್ಲ. ಅಲ್ಲದೆ ಭಕ್ತನನ್ನು ಸೇರಿಸುವಲ್ಲಿ ಔಚಿತ್ಯವಿಲ್ಲ. ಚತುರ್ವಿಧ ಸಾರಾಯ ಯಾರಿಗೆ? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲವಾಗುತ್ತದೆ. ಮತ್ತು ಪ್ರಸಾದವಿಲ್ಲವಾದರೆ ಸಾರಾಯ ಪದಕ್ಕೆ ಅರ್ಥವಿಲ್ಲದಾಗುತ್ತದೆ. ಗುರುಲಿಂಗ ಜಂಗಮರಲ್ಲಿ ಪ್ರಸಾದವನ್ನು ಪಡೆಯತಕ್ಕವನು ಭಕ್ತ.

ಗುರುಲಿಂಗ ಜಂಗಮರೂಪ ಪರಮೇಶ್ವರನ ಪ್ರಸಾದವನ್ನು ಪಡೆಯುವುದೇ ಭಕ್ತನ ಸಾರಾಯ ಸಂಪತ್ತು. ಬಾಹ್ಯಾಭ್ಯಂತರದಲ್ಲಿಯೂ ಭಕ್ತನು ಇದನ್ನೇ ಪಡೆಯಬೇಕಾಗಿದೆ. ಬಾಹ್ಯದಲ್ಲಿ ಸಾಮಾಜಿಕ ಗುರುಲಿಂಗ ಜಂಗಮರ ಪ್ರಸಾದವನ್ನು ಪಡೆದರೆ ಅಂತರಂಗದಲ್ಲಿ ಜ್ಞಾನ ಕ್ರಿಯಾನುಭವಗಳಿಂದ ಮಾನಸಿಕ ಪ್ರಸನ್ನತೆಯನ್ನು ಪಡೆಯಬೇಕು. ಸರ್ವರ ಹೃದಯದಲ್ಲಿ ಪ್ರೇರಕನಾದ ಪರಮೇಶ್ವರನು ಪ್ರಾಣಲಿಂಗವಾಗಿರುತ್ತಾನೆ.

'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ |
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ |
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ |
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ||'

ಎಂಬುದಾಗಿ ಗೀತೆಯೂ ಹೃದಯೇಶ್ವರನ ಪ್ರಸಾದವನ್ನು ಪಡೆಯಬೇಕೆಂದು ಪ್ರಬೋಧಿಸಿದೆ.

ಹೃದಯ ಪ್ರಸನ್ನತೆಗೆ ಹೃದಯೇಶ್ವರನ ಪ್ರಸಾದ ಪ್ರಾಪ್ತಿ ಅತ್ಯಗತ್ಯ. ಹೃದಯೇಶ್ವರನ ಪ್ರಾಸಾದವೆಂದರೆ ನಿತ್ಯಾನಂದ ; ನಿಜಪ್ರಮೋದ. ಅದುವೇ ಸಾರಾಯ ಸಂಪತ್ತಿ. ಅದರಿಂದ ನಿಜ ನಿಷ್ಪತ್ತಿ; ಸರ್ವದುಃಖ ನಿವೃತ್ತಿ ; ಭವಬಂಧನ ವಿಚ್ಛಿತ್ತಿ.

ಗುರು-ಲಿಂಗ-ಜಂಗಮ ಪ್ರಸಾದವನ್ನು ಪಡೆವುದು ಸುಲಭವಲ್ಲ. ಸೋಪಾಧಿಯಿಂದ ಸಹಜದ ವರೆವಿಗೂ ಸರ್ವಾರ್ಪಣವಾಗಬೇಕು. ಅಂತಾಗದೆ ಅದು ಅಳವಡದು. ಆತ್ಮನಿವೇದನವೇ ಸಹಜದಾನ. ಅದರಿಂದ ಭಕ್ತಾಂಗ ಮುಕ್ತಾಂಗವಾಗುತ್ತದೆ.

ಸೋಪಾಧಿ ದಾನ ಸ್ಥಲಂ

"ಶಿವಲಿಂಗೇ ಶಿವಾಚಾರ್ಯೇ ಶಿವಯೋಗಿನಿ ಭಕ್ತಿಮಾನ್
ದಾನಂ ಕುರ್ಯಾದ್ಯಥಾಶಕ್ತಿ ತತ್ಪ್ರಸಾದಯುತಃ ಸದಾ।"

ಭಕ್ತಿವಂತನು ಗುರುಲಿಂಗಜಂಗಮರನ್ನು ಪೂಜಿಸಿ/ಅವರಿಂದ ಪ್ರಸಾದವನ್ನು ಪಡೆವನು. ಅದರಿಂದಾಗಿ ಅವರಿಗೆ ಶಕ್ತಿವಂಚನೆಯಿಲ್ಲದೆ ದಾನವನ್ನು ಮಾಡಬೇಕು.

ಮಾಡುವುದು ಪಡೆವುದು ಕೊಡುವುದು ಶ್ರದ್ಧಾಭಕ್ತಿಯ ಮೂರು ಮುಖಗಳು. ಸಂಸಾರ ವ್ಯವಹಾರಾದಿಗಳನ್ನು ಬಿಟ್ಟು ಕಾಯಕಾರ್ಜನಾದಿಗಳನ್ನು ಮಾಡುವುದು. ಲಿಂಗವನ್ನು ಪಾದೋದಕವನ್ನು ಪ್ರಸಾದವನ್ನು ಪಡೆವುದು. ಅರ್ಥಪ್ರಾಣಾಭಿಮಾನಗಳನ್ನು ಅಥವಾ ತನುಮನಧನಗಳನ್ನು ಕೊಡುವುದು. ಇವು ಮೂರು ಸಾತ್ವಿಕವಾದ ಶ್ರದ್ಧಾಭಕ್ತಿಯ ಕುರುಹುಗಳು.

ಮಾಡುವ ಪೂಜಾದಿಗಳು ಕಾಯಿಕ ವಾಚಿಕ ಮಾನಸಿಕವೆಂದು ಮೂರುಬಗೆ. ಈ ಮೂರರಲ್ಲಿ ಒಂದೊಂದೂ ಮರಳಿ ತಾಮಸ, ರಾಜಸ, ಸಾತ್ವಿಕವೆಂದು ಮೂರು ಬಗೆ. ನಿತ್ಯ ಸತ್ಕಾಯಕ ಶ್ರೀಗುರುಸೇವೆ ಶಿವಲಿಂಗ ಪೂಜೆ ಮುಂತಾದವು ಕಾಯಿಕ ಸಾತ್ವಿಕ ಮಾಟ. ಅನಿಯತವಾಗಿ ದಾಂಭಿಕವಾಗಿ ಮಾನಕ್ಕಾಗಿ ಮತ್ತೊಬ್ಬರ ಮೆಚ್ಚುಗೆಗಾಗಿ ಮಾಡುವುದೇ ಕಾಯಿಕದ ರಾಜಸ ಭಕ್ತಿಮಾಡದಿರುವುದು ಮಾಡಿದರೂ ತನಗೂ ಪರರಿಗೂ ಹಿತವಿಲ್ಲದಿರುವುದು ದುರಾಗ್ರಹದಿಂದ ಮಾಡುವುದು ತಾಮಸ ಕಾಯಿಕ ಭಕ್ತಿ. ಸಾತ್ವಿಕ ಶ್ರದ್ಧಾಳು ಮುಮ್ಮೊದಲು ಗುರುಭಕ್ತನಾಗಿ ಸತ್ಕ್ರಿಯೆಗಳನ್ನು ಮಾಡುತ್ತಾನೆ.

ಶಾಸ್ತ್ರಾಭ್ಯಾಸ, ಸ್ವಾಧ್ಯಾಯ, ಸತ್ಯವಾಣಿ, ಮಂತ್ರ ಜಪಾದಿಗಳು ಸಾತ್ವಿಕ ವಾಚಿಕಭಕ್ತಿ; ನಡೆಯಿಲ್ಲದ ನುಡಿ, ಅನುಚಿತ ಗ್ರಂಥಾಭ್ಯಾಸ,

ಹಾಳಹರಟೆ ಅನೃತವಾಣಿ ಮುಂತಾದವು ರಾಜಸ ವಾಚಿಕ ಭಕ್ತಿ. ಕ್ರೂರ ಕುಹಕ ಕುಭಾಷೆಗಳು ತಾಮಸ ವಾಚಕ ಭಕ್ತಿ. ಸಾತ್ವಿಕ ಶ್ರದ್ಧಾಳು ಗುರು ಲಿಂಗಭಕ್ತನಾಗಿ ಗುರುಸ್ತೋತ್ರ ಮಂತ್ರಜಪಾದಿ ಸತ್ವವಾಗ್ಮಿಯಾಗಿರುತ್ತಾನೆ.

ಶಮೆ ದಮೆ ದಯಾ ವಿವೇಕ ವಿರಕ್ತಿ ಆತ್ಮಸಂಯಮ ಆತ್ಮವಿದ್ಯಾಪರಿ ಶ್ರಮ ಶಾಂತಿ ಸೌಮ್ಯಭಾವಾದಿಗಳು ಮಾನಸಿಕ ಸಾತ್ವಿಕ ಭಕ್ತಿ. ಹಿಂಸೆ, ಅವಿವೇಕ, ರಕ್ತಿ, ಅಸಂಯಮ, ಅನಾತ್ಮಚಿಂತೆ ಮುಂತಾದವು ಮಾನಸಿಕ ರಾಸಜಮಾಟ. ಒಳಿತು ಕೇಡುಗಳಿಗೆ ಯಾವುದಕ್ಕೂ ಮನಸ್ಸು ಮೊಡದೆ ಮುಂದುವರಿಯದೆ ಮಂದವಾಗಿರುವುದೇ ಮಾನಸ ತಾಮಸ ಮಾಟ. ಬಳಿಕ ಶ್ರದ್ಧಾಳು ಗುರುಲಿಂಗಜಂಗಮ ಭಕ್ತನಾಗಿ ಭಕ್ತಿಜ್ಞಾನ ವಿರತಿಯಿಂದ ಜೀವಿಸುತ್ತಾನೆ.

ಪಡೆವ ಪ್ರಸಾದವೂ ಸಾತ್ವಿಕ ರಾಜಸಿಕ ತಾಮಸಿಕವೆಂದು ತ್ರಿವಿಧ. ಸಚ್ಚಿದಾನಂದ ಸ್ವರೂಪರಾದ ಗುರುಲಿಂಗಜಂಗಮರಿಂದ ಪಡೆವ ಪ್ರಸಾದವೇ ಸಾತ್ವಿಕ ಪ್ರಸಾದ. ಇದರಿಂದ ಆಯುಷ್ಯ, ಆರೋಗ್ಯ, ಸುಖ, ಶಾಂತಿ, ಸಮಾ ಧಾನಗಳುಂಟಾಗುತ್ತವೆ. ಕಂಡಕಂಡವರಿಂದ ಹಾದಿಬೀದಿಯ ದೈವಗಳಿಂದ ಪಡೆವ ಪ್ರಸಾದ ರಾಜಸ. ಮತ್ತು ಹುಳಿ ಉಪ್ಪುಕಾರ ಹೆಚ್ಚಾಗಿರುವುದು, ಎಣ್ಣೆ ಯಲ್ಲಿ ಕರಿದಿದ್ದು, ಹೆಚ್ಚು ಬಿಸಿಯಾದುದು ರಾಜಸ ಪ್ರಸಾದವೆಂದು ಹೇಳಲಾ ಗಿದೆ. ಇದರಿಂದ ರಾಜಸಗುಣಗಳುಂಟಾಗುತ್ತವೆ. ಅಶಾಂತಿ ಅಸಮಾಧಾನಗಳು ಹೆಚ್ಚುತ್ತವೆ. ಆರೋಗ್ಯ ಕೆಡುತ್ತದೆ. ಆಯುಷ್ಯ ತಗ್ಗುತ್ತದೆ. ಇನ್ನು ಯಾವ ದೈವಭಾವವಿಲ್ಲದೆ ಹೊಟ್ಟೆಯ ಪಾಡಿಗಾಗಿ ಉಂಡದ್ದು ತಾಮಸಾಹಾರ. ಮತ್ತು ತಂಗಳು, ರಸವಿಲ್ಲದ್ದು, ಮುಗ್ಗಾಗಿರುವುದು ಮುಂತಾದವು ಸಹ ತಾಮಸಾಹಾರ. ಇದರಿಂದ ಮಾನವತೆಯೇ ಹಾಳು. ಇವನ್ನೆಲ್ಲ ಅರಿತ ಭಕ್ತನು ಸಾತ್ವಿಕ ಪ್ರಸಾದವನ್ನೇ ತನ್ನ ಗುರುಲಿಂಗಜಂಗಮರಿಂದ ಪಡೆಯು ತ್ತಾನೆ. ಆ ಸಾತ್ವಿಕ ಪ್ರಸಾದ ಶುದ್ಧ ಸಿದ್ಧ ಪ್ರಸಿದ್ಧವೆಂದು ಮೂರುಬಗೆಯಾ ಗಿರುತ್ತದೆ. ಈ ಮೂರು ಬಗೆಯ ಪ್ರಸಾದವನ್ನು ಪಡೆದ ಭಕ್ತನು ತನ್ನ ತನು ಮನ ಧನಗಳನ್ನು ಅರ್ಥ ಪ್ರಾಣಾಭಿಮಾನಗಳನ್ನು ತ್ರಿವಿಧಕ್ಕೆ ಸಲ್ಲಿಸ ಬೇಕು.

ಭಕ್ತ ತ್ಯಾಗಾಂಗಿ. ತ್ಯಾಗವೇ ಭಕ್ತನ ಜೀವಾಳ. ತ್ಯಾಗದಿಂದ ಭಕ್ತತ್ವ ಪೂರ್ಣಗೊಳ್ಳುತ್ತದೆ. ಸಲ್ಲಸುವಿಕೆಯೇ ಸಮರಸ ಸುಖಫಲವೃಕ್ಷದ ಮೂಲ. ಅಲ್ಲದೆ ಪಡೆದುದನ್ನು ಕೊಡುವುದೇ ನಿಸರ್ಗನಿಯಮ. ತರುಲತೆಗಳು ತಾವು ಪಡೆದ ಹಣ್ಣು ಹೂವುಗಳನ್ನು, ಹಸು ಹೊಳೆಗಳು ತಾವು ಪಡೆದ ಹಾಲು-ನೀರುಗಳನ್ನು ಪ್ರಾಣಿಗಳಿಗೆ ಕೊಡುತ್ತವೆ. ಹೀಗಿರುವಾಗ ಮಾನವನಾಗಿ ಅದರಲ್ಲಿಯೂ ಶ್ರದ್ಧಾ ಭಕ್ತಿಯುಳ್ಳವನಾಗಿ ಕೊಡದಿರಬಾರದು, ಕೊಡದಿದ್ದರೆ ಭಕ್ತನಾಗನು. ತ್ಯಾಗ ಭಕ್ತಿಯ ಒರೆಗಲ್ಲು. ತನ್ನೊಡವೆಯ ಮೇಲೆ ತನ್ನ ಮೇಲೆ ಇರುವ ಪ್ರೇಮವನ್ನು ಅಭಿಮಾನವನ್ನು ತನ್ನ ಗುರು ಲಿಂಗ ಜಂಗಮರಲ್ಲಿ ಇರಿಸುವುದೇ ಭಕ್ತಿ. ತನ್ನನ್ನು ತನ್ನೊಡವೆಯನ್ನು ಅವರಿಗೆ ಕೊಟ್ಟಾಗ ತನ್ನ ಭಕ್ತಿಯ ಅಭಿವ್ಯಕ್ತಿಯಾಗುತ್ತದೆ. ತನ್ನ ತನ್ನದರ ಪ್ರೇಮಕ್ಕಿಳಿತ ತತ್ತ್ವಪ್ರೇಮ ಅತ್ಯಧಿಕವಾಗಿ ತೋರುತ್ತದೆ. ಆದ್ದರಿಂದ ತ್ಯಾಗವೇ ಭಕ್ತನ ಚರಮ ಜೀವನ ; ಉತ್ತಮಜೀವನ.

"ದಾನಂ ತು ತ್ರಿವಿಧಂ ಪ್ರೋಕ್ತಂ ಸೋಪಾಧಿ ನಿರುಪಾಧಿಕಂ
ಸಹಜಂ ಚೇತಿ ತಂತ್ರೇಷು ಸರ್ವತಂತ್ರವಿಶಾರದೈಃ ।"

ದಾನ ತ್ರಿವಿಧ ; ಸೋಪಾಧಿ, ನಿರುಪಾಧಿ, ಸಹಜವೆಂದು. ಹೀಗೆಂದು ಸರ್ವಾಗಮವಿಶಾರದರು ಶಿವಾಗಮಗಳಲ್ಲಿ ಹೇಳಿದ್ದಾರೆ.

ಇಲ್ಲಿ ದಾನಪದ, ತಂತ್ರಪದ, ತಂತ್ರವಿಶಾರದ ಪದಗಳು ಗಮನಾರ್ಹವಾದವು ; ವಿಮರ್ಶನೀಯವಾದವು. ಈ ದಾನವನ್ನು 'ಶಿವಶರಣರು ಮಾಟ'ವೆಂದು ಹೇಳಿದ್ದಾರೆ. ಈಸ್ಥಳಕ್ಕೆ 'ಉಪಾಧಿಮಾಟಸ್ಥಲ' ವೆಂದು ಹೇಳಿದ್ದಾರೆ. ಶಿವಯೋಗಿ ಶಿವಾಚಾರ್ಯನು ಶಿವಶರಣರಿಂದೀಚೆಯವನಾಗಿದ್ದರೆ 'ಮಾಟಂ ತು ತ್ರಿವಿಧಂ....'ಎಂದು ಶ್ಲೋಕವನ್ನಾರಂಭಿಸಬೇಕಾಗಿತ್ತು. ಮತ್ತು ಶಿವಶರಣರನ್ನು ಬಿಟ್ಟು ಶಿವಾಗಮಿಕರನ್ನು, ವಚನಗಳನ್ನು ಬಿಟ್ಟು ತಂತ್ರಗಳನ್ನು ಉದ್ಧರಿಸಬೇಕಾಗಿರಲಿಲ್ಲ. ಇದರಿಂದಾಗಿ ಕವಿ ಶಿವಶರಣರ 'ಮಾಟ' ಸಂಸ್ಕೃತಿಯಿಂದೀಚೆ ಇರುವವನಲ್ಲ.

**"ಫಲಾಭಿಸಂಧಿ ಸಂಯುಕ್ತಂ ದಾನಂ ಯದ್ನಿಹಿತಂ ಭವೇತ್
ತತ್ಸೋಪಾಧಿಕಮಾಖ್ಯಾತಂ ಮುಮುಕ್ಷುಭಿರನಾದೃತಮ್ ।"**

ಪ್ರತಿಫಲಾಶೆಯಿಂದ ಮಾಡಿದ ದಾನ ಸೋಪಾಧಿದಾನ. ಇದು ಒಂದು ಬಗೆಯ ವ್ಯಾವಹಾರಿಕವೃತ್ತಿ ಅಂದರೆ ಕೊಂಡುಕೊಳ್ಳುವ ವ್ಯವಹಾರ ವಾಗುವುದರಿಂದ ಇದರಿಂದ ಮೋಕ್ಷಪ್ರಾಪ್ತಿಯಿಲ್ಲ. ಇದರಿಂದಾಗಿ ಅದನ್ನು ಮುಮುಕ್ಷುಗಳು ಮನಸ್ಕರಿಸರು. ಇದು ಮಾಯೆ ಎಂದು ಭಾವಿಸುವರು.

'ಮಾಟಕೂಟ ಫಲಪ್ರಾಪ್ತಿ' ಎಂಬ ಮಾತ ಕೇಳಲಾಗದು. ಶಿವ ಶಿವಾ! ನಿಮ್ಮ ಭಕ್ತರಿಗೆ 'ಮಾಡಿದೆ' ನೆನ್ನದಿರೆಂದು ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ" ಫಲಾಕಾಂಕ್ಷೆ ಸಲ್ಲ. ಮಾಡಿದೆನೆಂಬುದು ಅಂದರೆ ಕೊಟ್ಟೆನೆಂಬುದು ಸಹ ಮನಕ್ಕೆ ಬರಬಾರದು. ಬಂದರೆ ಅದು ಸೋಪಾಧಿ ದಾನವಾಗಿ ಸದ್ಭಕ್ತರಿಗೆ ಸಲ್ಲದು. ಹೀಗಿರುವಾಗ ಪ್ರತಿಫಲವನ್ನು ಬಯಸಿ ಮಾಡಬಾರದು. ಮಾಡಿದರೆ ತೀರ ಸ್ಥೂಲವಾಗುವುದು. ರಾಜಸದಾನವೆನಿಸು ವುದು. ಸತ್ಪಾತ್ರದಲ್ಲಿ ಸಕಾಮದಾನವೇ ಸಲ್ಲದೆಂದು ಹೇಳಿರುವಾಗ ಅಪಾತ್ರ ದಲ್ಲಿ ಅನಾದರದಲ್ಲಿ ಕೊಡುವ ತಾಮಸ ದಾನವನ್ನಂತೂ ಶಿವಾಚಾರ್ಯರು ಅಂಗೀಕರಿಸರು ; ಅದರಮಾತನ್ನೇ ಎತ್ತಿ ಆಡರು. ಒಬ್ಬರು ಕೊಡುವ ದನ್ನು ಕೊಳ್ಳುವುದಿರಲಿ, ತನ್ನದನ್ನೇ ತಾನು ಆಸೆಮಾಡಿರಿಸಿಕೊಳ್ಳಬಾರದು ಭಕ್ತನು. 'ಹೊನ್ನಿನೊಳಗೊಂದೊರೆಯು, ಸೀರೆಯೊಳಗೊಂದೆಳೆಯು ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ ಪುರಾತರಾಣೆ ; ನಿಮ್ಮ ಶರಣರಿ ಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ.'

'ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ಕಣ್ಣು ಬೇಡಿದಡೀವೆ, ತಲೆಯ ಬೇಡಿದಡೀವೆ , ಕೂಡಲ ಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತರ ಮನೆಯಲ್ಲಿ :

'ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ ಎನ್ನೊಡಲಿಂಗೆ, ಎನ್ನೊಡ ವೆಗೆ ಎನ್ನಮಡದಿ ಮಕ್ಕಳಿಗೆಂದು ಕುದಿದೆನಾದರೆ ಎನ್ನಮನಕ್ಕೆ ಮನವೇ ಸಾಕ್ಷಿ !

'ಅಸನೇ ಸಯನೇ ಯಾನೇ ಸಂಪರ್ಕೇ ಸಹ ಭೋಜನೇ। ಸಂಚರಂತಿ ಮಹಾ ಘೋರೇ ನರಕೇ ಕಾಲಮಕ್ಷಯಂ। ಎಂಬ ಶ್ರುತಿಯ ಬಸವಣ್ಣ ನೋದುವನು, ಎಂಬರು........ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನೊಡಲ ವಸರಕ್ಕೆ ಕುದಿದೆನಾದರೆ ತಲೆದಂಡ ಕೂಡಲಸಂಗಮದೇವಾ.' 'ತ್ರಿವಿಧನಿತ್ತು ಎನಗೆ ಬೇಕೆಂಬ ಭಾವವು ಮನದಲ್ಲಿ ಹೊದ್ದಿದರೆ ಘನಮಹಿಮ ನಿಮ್ಮ ಪಾದ ದಾಣೆ! ಮನ ವಚನಕಾಯದಲ್ಲಿ ನೀವಲ್ಲದೆ ಮತ್ತೊಂದನರಿಯೆನು, ಅರಿದರೆ ಕೂಡಲಸಂಗಮದೇವಾ ಭವಘೋರ ನರಕದಲ್ಲಿಕ್ಕಯ್ಯಾ!'

ಈ ಹಾರ್ದಿಕವಚನಗಳು ಸೋಪಾಧಿದಾನ ನಿಷೇಧಕ್ಕೆ ಹೊಳುಗನ್ನಡಿ ಯನ್ನು ಹಿಡಿದಿವೆ, ನಿಲುಗನ್ನಡಿಯನ್ನು ತೋರಿವೆ. ಇದರಿಂದಾಗಿ ಶ್ರೀ ರೇಣುಕಶಿವಾಚಾರ್ಯರು ಫಲದ ಉಪಾಧಿಯಿಂದ ದಾನಮಾಡಬಾರದೆಂದು ನಿರೂಪಿಸಿದ್ದಾರೆ. ಮುಂದೆ ನಿರುಪಾಧಿದಾನವನ್ನು ನಿರ್ದೇಶಿಸುತ್ತಾರೆ.

ನಿರುಪಾಧಿ ದಾನ ಸ್ಥಲಂ

"ಫಲಾಭಿಸಂಧಿ ನಿರ್ಮುಕ್ತಮೀಶ್ವರಾರ್ಪಿತ ಕಾಂಕ್ಷಿತಂ ।
ನಿರುಪಾಧಿಕ ಮಾಖ್ಯಾತಂ ದಾನಂ ದಾನವಿಶಾರದೈಃ ॥"

ಫಲೋಪಾಧಿಯಿಲ್ಲದೆ ಪರಮೇಶ್ವರಾರ್ಪಿತ ಬುದ್ಧಿಯಿಂದ ಮಾಡಿದ ದಾನ ನಿರುಪಾಧಿಕ ದಾನವೆಂದು ದಾನಮರ್ಮ ಬಲ್ಲವರು ಹೇಳುವರು.

ಇದು ಭಗವದ್ಗೀತೆ ಹೇಳುವ ಸಾತ್ವಿಕ ದಾನಕ್ಕಿಂತ ಶ್ರೇಷ್ಠವಾದುದು. ಕೊಡಬೇಕೆಂಬ ಭಾವವಿಲ್ಲದೆ ಕೊಡುವುದು; ಮತ್ತು ಕೊಟ್ಟುದರಲ್ಲಿ ಈಶ್ವರಾರ್ಪಣ ಭಾವವಿರುವುದು. ದಾನ ಈಶ್ವರಾರ್ಪಣವಾಗುತ್ತಿರುವಾಗ ದೇಶ ಕಾಲಗಳನ್ನು ನೋಡಬೇಕಾದ ಅವಸರವೂ ಇರುವುದಿಲ್ಲ.

'ದಾತವ್ಯಮಿತಿಯದ್ದಾನಂ ದೀಯತೇಽನುಪಕಾರಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್॥"

ಇದು ಗೀತೋಕ್ತ ಸಾತ್ವಿಕ ದಾನ. ಇದುವೇ ಅದು ಪ್ರತಿಪಾದಿಸುವ ಶ್ರೇಷ್ಠದಾನ. ಶ್ರೀ ರೇಣುಕಗೀತೆಯು ಇದಕ್ಕಿಂತ ಮುಂದುವರಿದು 'ಸಹಜ ದಾನ' ವನ್ನು ನಿರೂಪಿಸಿದೆ. ಇದರ ವಿಚಾರವನ್ನು ಮುಂದೆ ವಿವರಿಸುತ್ತೇವೆ.

ನಿರಪೇಕ್ಷೆಯಿಂದ ನಿರಹಂಕಾರದಿಂದ ಕೀರ್ತಿಕಾಂಕ್ಷೆಯನ್ನು ಬಿಟ್ಟು ಮಾಡುವುದೇ ನಿರುಪಾಧಿದಾನ. ಫಲಾಸೆಯೊಂದೇ ಉಪಾಧಿಯಲ್ಲ; ಜತೆಗೆ ನಾನು ಮಾಡಿದೆನೆಂಬುದೂ ಉಪಾಧಿ. ಕೀರ್ತಿವಾರ್ತೆಯ ಕಾಂಕ್ಷೆಯೂ ಉಪಾಧಿ. ಉಪಾಧಿಯೆಂದರೆ ವಿಶೇಷಣ, ತೊಂದರೆ, ಅಡ್ಡಿ, ಗುಣ–ಭಾವ ಸೂಚಕ ಎಂಬ ಅರ್ಥಗಳುಂಟು. ಅಪೇಕ್ಷೆ ಅಹಂಕಾರ ಅಹಂಮನ್ಯತೆ ಮುಂತಾದವುಗಳು ಸತ್ಸಂಪಾದನೆಗೆ ಆತಂಕಗಳು. ಕಾರಣ ದಾನಿಯಲ್ಲಿ ಅಪೇಕ್ಷೆ ಅಹಂಕಾರಾದಿಗಳು ಇರಬಾರದು. 'ದಾಸ ವಸ್ತ್ರವನಿತ್ತ ಠಾವು ಲೇಸಾಯಿತ್ತು; ತವನಿಧಿಯ ಪಡೆದ ಠಾವು ಹೊಲ್ಲಹವಾಯಿತ್ತು. ಸಿರಿ

ಯಾಳ ಮಗನಿತ್ತ ಶಾವು ಲೇಸಾಯಿತ್ತು, ಮರಳಿ ಬೇಡಿದ ಶಾವು ಹೊಲ್ಲಹ ವಾಯಿತ್ತು. ಬಲ್ಲಾಳ ವಧುವನಿತ್ತ ಶಾವು ಲೇಸಾಯಿತ್ತು, ಸ್ವಯಲಿಂಗ ವಾದ ಶಾವು ಹೊಲ್ಲಹವಾಯಿತ್ತು. ಇವರೆಲ್ಲರೂ ಸಕಳೇಶ್ವರ ದೇವರಲ್ಲಿ ಅಪೇಕ್ಷಿತರಲ್ಲದೆ ನಿರಪೇಕ್ಷಿತರಾರೂ ಇಲ್ಲ.'

ನಿರಪೇಕ್ಷವು ನಿರುಪಾಧಿದಾನದ ನಿಜಹೃದಯವೆಂಬುದನ್ನು ಈ ವಚನವು ಚೆನ್ನಾಗಿ ಚಿತ್ರಿಸಿದೆ. ಕೊಡದಿರಬೇಡ; ಕೊಟ್ಟು ಮತ್ತೊಂದನ್ನು ಕೇಳ ಬೇಡ. ಮಾಡು; ಮಾಡಿದೆನೆಂದು ಆಡಬೇಡ ; ಮನನಿಸಬೇಡ.

'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ! ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ ! ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿತ್ತನೀವ ಕೂಡಲ ಸಂಗಮ ದೇವ !' 'ಮಾಡಿ ಕೆಟ್ಟರು ಮನವಿಲ್ಲದೆ ; ನೀಡಿ ನೀಡಿ ಕೆಟ್ಟರು ನಿಜ ವಿಲ್ಲದೆ ! ಮಾಡುವ ನೀಡುವ ನಿಜಗುಣವುಳ್ಳರೆ ಕೂಡಿಕೊಂಬ ನಮ್ಮ ಕೂಡಲ ಸಂಗಮದೇವ !' 'ಹರಸಿ ಮಾಡುವುದು ಹರಕೆಯ ದಂಡ ; ನೆರಹಿ ಮಾಡುವುದು ಡಂಬಿನ ಭಕ್ತಿ ! ಹರಸಬೇಡ, ನೆರಹಬೇಡ ; ಬಂದ ಭರವ ನರಿದರೆ ಕೂಡಿಕೊಂಡಿಪ್ಪ ಕೂಡಲ ಸಂಗಮದೇವ !

ನಿರುಪಾಧಿದಾನದ ಮರ್ಮವನರಿಯಲು ಈ ಮೂರು ವಚನಗಳು ನಿತಾಂತ ನಿದರ್ಶನವಾಗಿವೆ. ಮಾಡಿದೆನೆನ್ನದೆ ಮಾಡಬೇಕು. ಮಾಡಿದೆ ನೆಂಬುದು ಮನದ ಅಹಂಕಾರ ; ಮನದ ಹಮ್ಮು. ಲಿಂಗಜಂಗಮಕ್ಕೆ ನೀ ಮಾಡುವುದೇನು ? ಅವು ಮಾಡಿಸಿಕೊಂಬುದೇನು ? ನಿನಗಿರುವುದು ಅವ ಕ್ಕಿಲ್ಲವೇನು ? ನಾನು ಮಾಡಿದೆನೆಂಬುದು ವೃಥಾಭಿಮಾನ. ಮಾಡಿದೆ ನೆಂಬುದೇ ಪ್ರತಿಫಲವಾಗಿ ಮುಂದೆ ಸದ್ಗತಿಯಾಗದು, ಪ್ರಗತಿಯಾಗದು. ಮುಂದೆ ಬಂಧನವನ್ನು ಬಿಡಿಸೆಂದು ಬೇಡುವ ಹಕ್ಕಿರದು.

ಮನವಿಲ್ಲದೆ ಮಾಡಬಾರದು. ಮನಮುಟ್ಟಿ ಮಾಡಬೇಕು. ನಿಜ ವಿಲ್ಲದೆ ನೀಡಬಾರದು. ಸತ್ಯತನದಿಂದ ಸ್ವಾಭಾವಿಕತನದಿಂದ ಮಾಡಬೇಕು. ಮಾಡುವಲ್ಲಿ ನೀಡುವಲ್ಲಿ ಸತ್ಯಶೀಲತೆಯಿರಬೇಕು ; ಸಹಜಗುಣವಿರಬೇಕು. ಹೀಗಾದರೆ ಅಂಗನು ಲಿಂಗರೂಪನಾಗುತ್ತಾನೆ.

ಹರಕೆ ಹೇಳಿಕೊಂಡು ದಾನಮಾಡುವುದು ದಂಡ. ಹತ್ತು ಜನರನ್ನು ಹರಹಿಕೊಂಡು ಅವರಿಗೆ ದಾನಮಾಡುವೆನೆಂದು ಹೇಳಿಕೊಂಡು ಮಾಡುವುದು ಡಂಬ. ಇವೆರಡೂ ಸುಖವಿಲ್ಲ. ಇವೆಲ್ಲ ಉಪಾಧಿಗಳು. ಇವೆಲ್ಲ ಆಮಯ ವಿಧಿಗಳು. ಇವುಗಳಿಂದ ಅದ್ವಯದ ಅಭಯ ದೊರೆಯದು. ಇವನ್ನೆಲ್ಲ ಬಿಡಬೇಕು. ಆದರೆ ದಾನ ಧರ್ಮ ಜಪತಪಗಳೆಂಬ ನಿಯಮ ವಿಧಿಗಳನ್ನು ಬಿಡಬಾರದು.

ಆಸೆ ಆಕಾಂಕ್ಷೆಗಳನ್ನು ಬಿಡುವುದೇ ಸಂನ್ಯಾಸಯೋಗ. ಇದನ್ನು ಭಗವದ್ಗೀತೆಯು ತನ್ನ ಹದಿನೆಂಟನೆಯ ಅಧ್ಯಾಯದಲ್ಲಿ ಪ್ರತಿಪಾದಿಸಿದೆ.

'ಯಜ್ಞ ದಾನ ತಪಃ ಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್
ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ।
ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಂ ॥'

—ಗೀತೆ, ಅ. ೧೮, ಶ್ಲೋ. ೫-೬.

ಪೂಜೆ ದಾನ ತಪ ಕರ್ಮಗಳು ಬಿಡತಕ್ಕವಲ್ಲ. ಇವನ್ನು ಮಾಡಲೇ ಬೇಕು. ಇವು ಮಾನವರಿಗೆ ಪಾವನವಾದವುಗಳು.

ಮಮಕಾರವನ್ನು ಫಲಾಸೆಯನ್ನು ಬಿಟ್ಟು ಈ ಕರ್ಮಗಳನ್ನು ಮಾಡ ಬೇಕು. ಇದು ನನ್ನ ನಿಶ್ಚಿತ ಮತ, ಉತ್ತಮಾಭಿಪ್ರಾಯ.

'ಮಾಡುವಂತಿರಬೇಕು, ಮಾಡದಂತಿರಬೇಕು ; ಮಾಡುವ ಮಾಟ ದೊಳಗೆ ತಾನಿಲ್ಲದಿರಬೇಕು. ಕೂಡಲ ಸಂಗಮದೇವರ ನೋಡುತ್ತ ನೋಡ ದಂತಿರಬೇಕು.'

ಈ ವಚನವು ನಿರುಪಾಧಿ ಮಾಟವನ್ನು ನಿಚ್ಚಳವಾಗಿ ಪ್ರತಿನಿಧಿಸುತ್ತದೆ. ಈ ದಿಸೆಯಲ್ಲಿ ಇದಕ್ಕಿಂತ ಉತ್ತಮವಾದ ಮಾತಿಲ್ಲ.

ಮಾಡುವ ನೋಡುವ ಕೊಡುವ ಕೇಳುವ ಮುಂತಾದ ಸತ್ಕ್ರಿಯೆ ಗಳನ್ನು ಮಾಡಿಯೂ ಮಾಡದಂತಿರಬೇಕು. ಹಮ್ಮಿಲ್ಲದೆ ಮಮತ್ವವಿಲ್ಲದೆ ಮಾಡಬೇಕು. ಇದು ತ್ಯಾಗಯೋಗ ಸಮನ್ವಯ.

ದಾನ ಧರ್ಮಗಳನ್ನು ಬಿಡುವುದು ದೋಷ ; ತಾಮಸ. ತನುವಿಗೆ ನೋವಾದರೂ ಸತ್ಕಾರ್ಯಗಳನ್ನು ನಿತ್ಯಾರ್ಚನಾದಿಗಳನ್ನು ಬಿಡದೆ ಮಾಡಬೇಕು. ಮಾಡಬೇಕಾದುದನ್ನು ಮಮಕಾರವಿಲ್ಲದೆ ಮಾಡುವುದೇ ತ್ಯಾಗ, ಅದೇ ಸಂನ್ಯಾಸ. ಅದರಿಂದ ಆತನ ತ್ಯಾಗಾಂಗ ಸಾರ್ಥಕ. ಆತನೇ ತ್ಯಾಗಿ ಅಥವಾಭಕ್ತ. ತ್ಯಾಗಿಯೆಂದು ಭಗವದ್ಗೀತೆ ಹೇಳಿದರೆ ಭಕ್ತನೆಂದು ಶ್ರೀರೇಣುಕ ಗೀತೆಹೇಳುತ್ತದೆ. ಗೀತೆಯ ೧೮ನೆಯ ಅಧ್ಯಾಯವು ನಿರುಪಾಧಿ ದಾನ (ಕ್ರಿಯೆ)ವನ್ನು ಬಿತ್ತರಿಸಿದೆ. ಇದರಿಂದಾಗಿ ಶ್ರೀ ರೇಣುಕ ಗೀತೆಯ ಪ್ರಥಮ ಭಕ್ತಸ್ಥಲದ ಅಂಗಸ್ಥಲಕ್ಕೆ ಮಾತ್ರ ಭಗವದ್ಗೀತೆ ಪೂರೈಸುತ್ತದೆ.

ಅಂಗಭಾವವಿಲ್ಲದೆ ಲಿಂಗಭಾವದಲ್ಲಿ ನಿರ್ಮ್ಮಳ ಮನದಲ್ಲಿ ಮಾಡುವುದೇ ನಿರುಪಾಧಿದಾನ ಅಥವಾ ನಿರುಪಾಧಿಮಾಟ. ಇದು ಸರ್ವರಿಗೆ ಸಾಧ್ಯನಾಗುವ ಮಾತಲ್ಲ. 'ಹೊನ್ನು ಹೆಣ್ಣು ಮಣ್ಣು ಅನ್ನ ಉದಕ ವಸ್ತ್ರಂಗಳನು ಧರ್ಮದಾಸೆ ಕಾರಣ, ಅರ್ಥದಾಸೆ ಕಾರಣ, ಕಾಮದಾಸೆ ಕಾರಣ, ಮೋಕ್ಷದಾಸೆ ಕಾರಣ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯದಾಸೆ ಕಾರಣ, ಪಂಚಮಹಾಪಾತಕಂಗಳ ಮಾಡಿದ ದೋಷಂಗಳ ಕಾರಣ, ಆಧಿ ಕಾರಣ, ವ್ಯಾಧಿಕಾರಣ ಕೀರ್ತಿಕಾರಣ, ವಾರ್ತೆಕಾರಣ, ಸರ್ವವನು ನಿರಂತರ ಕೊಡುವರು. ನಿಷ್ಕಾರಣವಾಗಿ, ನಿರುಪಾಧಿಕರಾಗಿ, ನಿರಾಶ್ರಿತರಾಗಿ, ಶ್ರೀಗುರು ಕಾರಣವಾಗಿ, ಲಿಂಗಕಾರಣವಾಗಿ, ಜಂಗಮ ಕಾರಣವಾಗಿ, ಪ್ರಸಾದ ಕಾರಣ ವಾಗಿ ಈ ನಾಲ್ಕನೂ ಒಂದುಮಾಡಿ ಸದ್ಭಕ್ತಿಯಿಂದ ದ್ವಿವಿಧವು ಪರಿಣಾಮಿಸುವಂತೆ ಕ್ಷಣಮಾತ್ರದಲ್ಲಿ ಅಣುಮಾತ್ರ ದ್ರವ್ಯವ ಕೊಡುವವರನಾರನೂ ಕಾಣೆ ನಿರ್ವಂಚಕರಾಗಿ....' ಎಂದು ನಿರುಪಾಧಿ ದಾನ (ಮಾಟ) ದ ನಿಜಸ್ವರೂಪವನ್ನು ಜನತೆಯ ಸ್ವಾಭಾವಿಕ ಜೀವನದೊಂದಿಗೆ ಸುಂದರವಾಗಿ ಉರಿಲಿಂಗ ಪೆದ್ದಿಗಳು ನಿರೂಪಿಸಿದ್ದಾರೆ.

'ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ ।
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥
ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹ ಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ವಿಕ ಉಚ್ಯತೇ ॥'

—ಭಗವದ್ಗೀತೆ

'ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥'

—ಭಗವದ್ಗೀತೆ

ನಿರುಪಾಧಿ ದಾನಸ್ಥಲಕ್ಕೆ ಇರುವುದು ಇವೆರಡು ಮುಖ : ಒಂದು ಸರ್ವಕ್ರಿಯಾಫಲತ್ಯಾಗ ; ಇನ್ನೊಂದು ಸರ್ವ ಶಿವಾರ್ಪಣಯೋಗ. ಇವೆರಡನ್ನು ವಚಿಸಿವೆ ಮೇಲಿನ ಗೀತೋಕ್ತಿಗಳು. ವಚಿಸಿ 'ಫಲಾಭಿಸಂಧಿ ನಿರ್ಮುಕ್ತಂ-ಈಶ್ವರಾರ್ಪಿತಕಾಂಕ್ಷಿತಂ' ಎಂಬ ಶ್ರೀ ರೇಣುಕ ಶಿವಾಚಾರ್ಯರ ನಿರುಪಾಧಿಕ ನಿರುಕ್ತಿಗೆ ನಿದರ್ಶನವಾಗಿವೆ. ಫಲಾಪೇಕ್ಷೆಯಿಲ್ಲದೆ ಇದ್ದರೂ ಮನಸ್ಸಿಲ್ಲದೆ ಮಾಡಬಾರದು. ನಿಷ್ಕಾಮ ಹೇಗೆ ಅಗತ್ಯವೋ ದಾನ ಪ್ರೇಮ ಅಷ್ಟೇ ಅಗತ್ಯ. ಅಪ್ರೇಮದಿಂದ ಅನ್ಯಮನಸ್ಸಿನಿಂದ ಮಾಡಿದ ದಾನ ಅತ್ಯಂತ ಅನರ್ಥಕಾರಿ. 'ಧನೇಶೋ ವಿರಸೋ ಭೂತ್ವಾ ತಸ್ಮೈ ತದ್ದಾತುಮುದ್ಯತಃ । ಚಕಾರ ಭಸ್ಮಸ್ಯಾದ್ವಿಪ್ರ ಪುನರ್ಜನ್ಮ ಲಲಾಭ ಸಃ ॥' ಆಂಗಿರಸನ ಮಗನಾದ ಉತಥ್ಯಮುನಿಯು ತನ್ನ ಗುರುವಿಗೆ ದಕ್ಷಿಣೆ ಕೊಡಲು ಕುಬೇರನ ಬಳಿಗೆ ಬಂದು ಕೋಟಿ ಸುವರ್ಣ ನಾಣ್ಯಗಳನ್ನು ಕೇಳುವನು. ಆಗ ಕುಬೇರನು ಪ್ರತಿಫಲಾಪೇಕ್ಷೆಯಿಲ್ಲದೆ ದಾನ ಮಾಡಬಯಸಿದನಾದರೂ ಮನಃಪೂರ್ತಿ ಮಾಡಲಿಲ್ಲ ; ಬೇಸರದಿಂದ ಮಾಡಿದ್ದಕ್ಕಾಗಿ ಮುನಿ ಶಾಪದಿಂದ ಭಸ್ಮನಾಗುವನು ; ಪುನರ್ಜನ್ಮಕ್ಕೆ ಬರುವನು. ಎಂದು ಬ್ರಹ್ಮವೈವರ್ತ ಪುರಾಣದಲ್ಲಿ ಹೇಳಿದೆ. ಕಾರಣ 'ಫಲಾಭಿಸಂಧಿನಿರ್ಮುಕ್ತಂ-ಈಶ್ವರಾರ್ಪಿತ ಕಾಂಕ್ಷಿತಂ' ಎಂಬೆರಡು ಮಾತುಗಳೂ ನಿರುಪಾಧಿ ದಾನ ಮುಖಕ್ಕೆ ಎರಡು ಕಣ್ಣುಗಳು. ಮೊದಲಿನದು ಎಷ್ಟು ಅಗತ್ಯವೋ ಎರಡನೆಯದೂ ಅಷ್ಟೇ ಅಗತ್ಯ.

ಸಹಜ ದಾನ ಸ್ಥಲಂ

ಯಾವ ಬಗೆಯ ಕೃತಕತೆಯಿಲ್ಲದೆ ಬೇರಾವ ಬಗೆಯ ಭಿನ್ನಭಾವವಿಲ್ಲದೆ ಭಾವವಿಕಾರವಿಲ್ಲದೆ ಮಾಡುವ ದಾನವೇ ಸಹಜ ದಾನ; ಮಾಡುವ ಮಾಟವೇ ಸಹಜ ಮಾಟ.

"ಆದಾತೃ ದಾತೃ ದೇಯಾನಾಂ ಶಿವಭಾವಂ ವಿಚಿಂತ್ಯ ಹಿ
ಆತ್ಮನೋಽಕರ್ತೃಭಾವಂ ಚ ಯದ್ದತ್ತಂ ಸಹಜಂ ತು ತತ್ ।
ಸಹಜಂ ದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಂ
ಶಿವಜ್ಞಾನಪ್ರದಂ ಪುಂಸಾಂ ಜನ್ಮರೋಗನಿವರ್ತಕಮ್ ॥"

ಕೊಳ್ಳುವವನಲ್ಲಿ ಕೊಡುವವನಲ್ಲಿ ಕೊಡುವೊಡವೆಯಲ್ಲಿ ಶಿವಭಾವ ವನ್ನಿರಿಸಿ ತಾನು ಮಾಡುವೆನೆಂಬ ಭಾವವನ್ನು ತ್ಯಜಿಸಿ ತಾನು ದಾನಕರ್ತ ನೆಂದೆಣಿಸದೆ ಕೊಡುವುದೇ ಸಹಜ ದಾನ ; ಮಾಡುವುದೇ ಸಹಜ ಮಾಟ.

ಸರ್ವದಾನಗಳಲ್ಲಿ ಸಹಜದಾನವೇ ಉತ್ಕೃಷ್ಟ ; ಉತ್ತಮೋತ್ತಮ. ಸಹಜದಾನವು ಭವರೋಗವನ್ನು ತೊಡೆಯುತ್ತದೆ ; ಶಿವಯೋಗವನ್ನು ಕೊಡುತ್ತದೆ.

ದಾನ ಕೊಡುವಿಕೆ. ಮಾಟ ಮಾಡುವಿಕೆ. ಕೊಡುವಿಕೆಯಲ್ಲಿ ಮಾಡುವಿಕೆಯಿದ್ದೇ ಇದೆ. ಅಂತೆಯೇ ದಾನ ಪದವೂ ಒಂದು ಬಗೆಯಲ್ಲಿ ಕ್ರಿಯಾವಾಚಿಯೆಂದೇ ಹೇಳಬೇಕು. ದಾನದಲ್ಲಿ ಕ್ರಿಯೆ ಅಂತರ್ಭೂತ ವಾಗಿದೆ. ಮಾಟ ನುಡಿಯಲ್ಲಿ ಅಂತರ್ಭೂತವಾಗದು.

ಈ ಸ್ಥಲದೊಡನೆ ಭಕ್ತನ ಅಂಗಸ್ಥಲ ಅಂತ್ಯವಾಗುತ್ತದೆ. ಭಕ್ತನ ಅಂಗ ತ್ಯಾಗಾಂಗ. ತ್ಯಾಗಾಂಗವು ಅರ್ಥಪೂರ್ಣವಾಗಬೇಕಾದರೆ ಸಹಜವಾದ ತ್ಯಾಗ (ದಾನ) ದಿಂದ ! ಸ್ವಾಭಾವಿಕವಾದ ದಾನಗುಣದಿಂದ ! ಈ ವಿವರಣೆ ಯಿಂದ ದಾನ ಪದಪ್ರಯೋಗ ಔಚಿತ್ಯ ಅಭಿವ್ಯಕ್ತವಾಗುತ್ತದೆ.

ಸತ್ವಯುತವಾದ ಸಾರಭೂತವಾದ ದ್ರವ್ಯ, ದೇಹ, ಕ್ರಿಯೆಗಳು ಮತ್ತು ಮನ, ಪ್ರಾಣ, ಜೀವಭಾವಗಳು ದಾನಕ್ರಿಯೆಗೆ ಯೋಗ್ಯವಾದವುಗಳು.

ಸದ್ಭಕ್ತನು ಇವನ್ನೆಲ್ಲ ದಾನ ಮಾಡಬೇಕು. ವಂಚನೆಯಿಲ್ಲದೆ ವಾಂಛೆಯಿಲ್ಲದೆ ದಾನವೀಯಬೇಕು. ಡಂಭವಿಲ್ಲದೆ ದಂದುಗಕ್ಕಿಂಬಿಲ್ಲದೆ ದಾನಶೀಲನಾಗಬೇಕು. ದಾನ ಪಾತ್ರವನ್ನರಿತು ದಾನಕ್ರಿಯಾನಿರತನಾಗಬೇಕು :

"ಶಿವಾಯ ಶಿವಭಕ್ತಾಯ ದೀಯತೇ ಯದಿ ಕಿಂಚನ
ಭಕ್ತ್ಯಾ ತದಪಿ ವಿಖ್ಯಾತಂ ಸಹಜಂ ದಾನಮುತ್ತಮಂ ।
ದಾನಾತ್ ಸ್ವರ್ಣಸಹಸ್ರಸ್ಯ ಸತ್ಪಾತ್ರೇ ಯತ್ಫಲಂ ಭವೇತ್
ಏಕಪುಷ್ಪ ಪ್ರದಾನೇನ ಶಿವೇ ತತ್ಫಲಮಿಷ್ಯತೇ ॥
ಶಿವ ಏವ ಪರಂ ಪಾತ್ರಂ ಸರ್ವವಿದ್ಯಾನಿಧಿರ್ಗುರುಃ
ತಸ್ಮೈದತ್ತಂ ತು ಯತ್ಕಿಂಚಿತ್ತದನಂತಫಲಂ ಭವೇತ್ ॥"

ಶಿವನಿಗಾಗಲಿ ಶಿವಭಕ್ತನಿಗಾಗಲಿ ಭಕ್ತಿಯಿಂದ ಕೊಟ್ಟ ಕಿಂಚಿತ್ತು ಕೂಡ ಉತ್ತಮವಾದ ಸಹಜದಾನವೆಂದು ಹೆಸರಾಗಿದೆ.

ಸತ್ಪಾತ್ರದಲ್ಲಿ ಸಾವಿರ ಸುವರ್ಣ ನಾಣ್ಯಗಳನ್ನಿತ್ತ ಫಲ ಶಿವನಿಗೆ ಒಂದು ಹೂವನ್ನೀಯುವಲ್ಲಿ ಒದಗುತ್ತದೆ.

ಸಕಲ ವಿದ್ಯಾಸಾಗರನೂ ಸಕಲರಿಗೆ ಶ್ರೀಗುರುವೂ ಆದ ಶಿವನೇ ಪ್ರದಾನಕ್ಕೆ ಪರಮ ಪಾತ್ರ. ಅವನಿಗೆ ಅರ್ಪಿಸಿದ ಅತ್ಯಲ್ಪವೂ ಅನಂತ ಫಲವನ್ನು ಕೊಡುತ್ತದೆ.

ಪಾಪಿಗಳಿಗೆ ಪ್ರಾಯಶ್ಚಿತ್ತಕ್ಕೆ ಕೊಡುವುದು ದಾನವಲ್ಲ ; ತ್ಯಾಗವಲ್ಲ. ಕೊಡುವವನೂ ಪಾಪಿಯಾಗಿರಬಾರದು. ಭಕ್ತಿಹೀನನಾಗಿರಬಾರದು. ಪಾಪಿಗೆ ದಾನ ಮಾಡುವ ಪುಣ್ಯಪ್ರಾಪ್ತಿಯಿಲ್ಲ. ಅದರಲ್ಲಿಯೂ ಸಹಜದಾನದ ಸೌಭಾಗ್ಯಸಂಪ್ರಾಪ್ತಿಯಿಲ್ಲ. 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ. ನಾಯಿಯ ಹಾಲು ನಾಯಿಯ ಕುನ್ನಿಗಲ್ಲದೆ ಸತ್ಪಾತ್ರಕ್ಕೆ ಸಲ್ಲುವುದೇನಯ್ಯ ? ಕೂಡಲ ಸಂಗನ ಶರಣರಿಗಲ್ಲದ ಅರ್ಥ ವ್ಯರ್ಥ ಕಂಡಯ್ಯ.' ಇದರಿಂದಾಗಿ ಶಿವಭಕ್ತನಿಗೆ ದಾನ ಮಾಡಬಯಸುವವನು ಶಿವಭಕ್ತನಾಗಿಯೇ ಮಾಡಬೇಕು. ದಾತೃ ಆದಾತೃಗಳಿಬ್ಬರೂ ಮಂಗಳಾಚಾರಶೀಲರಾಗಿರಬೇಕು. ಅಂತೆಯೇ ದೇಯವಸ್ತುವೂ ಶಿವವಾಗಿರಬೇಕು.

'ದಾತಾ ಭೋಕ್ತಾ ಸ್ವಯಂ ಶಿವಃ' ಅಂತಾದಾಗ ಅದು ಸಹಜ ದಾನವೆನಿಸುತ್ತದೆ.

ದ್ರವ್ಯ ದೇಹ ಕ್ರಿಯೆ ಮನ ಪ್ರಾಣ ಭಾವ ಜೀವ ಈ ದೇಯ ವಸ್ತುಗಳಲ್ಲಿ ಒಂದಕ್ಕಿಂತ ಇನ್ನೊಂದು ಅತ್ಯಧಿಕ ಮತ್ತು ಆಂತರಿಕ. ಭೌತಿಕ ಸರ್ವ ದ್ರವ್ಯದಾನಗಳಲ್ಲಿ ಪರಮಾತ್ಮನಿಗರ್ಪಿಸುವ ಪುಷ್ಪದಾನ ಪ್ರಶಸ್ತವಾದುದು; ಪ್ರಧಾನವಾದುದು. ಹೂವು ಹೃದಯ ಪ್ರತೀಕವಾದುದು. ಹೂವನ್ನರ್ಪಿಸಿದರೆ ಹೃದಯವನ್ನರ್ಪಿಸಿದಂತೆ! ಹೂವಿನಂತೆ ಹೃದಯವಿರಬೇಕು, ವಿಕಾಸವಾಗಿರಬೇಕು; ಪುಷ್ಪರಸ (ಮಕರಂದ)ದಂತೆ ಭಕ್ತಿ ಮಕರಂದವುಳ್ಳದ್ದಾಗಿರಬೇಕು; ಪರಿಮಳಯುಕ್ತವಾಗಿರಬೇಕು. ಭಕ್ತಿಯಿಂದ ಭಾವಾರ್ಪಣವಾಗಬೇಕು; ಜೀವಾರ್ಪಣವಾಗಬೇಕು.

'ದೇಹ ದಾನಾತ್ಸತ್ಯಸಿದ್ಧಿರರ್ಥ ದಾನಾಚ್ಚ ನಿರ್ವೃತಿಃ |
ಪ್ರಾಣದಾನಾದ್ ಜ್ಞಾನಸಿದ್ಧಿರೇವಂ ಸರ್ವಂ ಸ್ಥಿರಂ ಭವೇತ್ ||'

ಅರ್ಥ ದಾನದಿಂದ ನಿವೃತ್ತಿ, ದೇಹ ದಾನದಿಂದ ಸತ್ಯಸಿದ್ಧಿ, ಪ್ರಾಣ ದಾನದಿಂದ ಜ್ಞಾನಸಿದ್ಧಿಗಳು ಉಂಟಾಗುತ್ತವೆಯೆಂದು ಯೋಗಜಾಗಮೋಕ್ತಿಯಿದೆ.

ಭೌತಿಕ ಸಂಪತ್ತಿಯಲ್ಲಿ ಆಸಕ್ತಿಯುಳ್ಳವನಿಗೆ ನಿವೃತ್ತಿಯುಂಟಾಗುವುದು ನಿಜಕ್ಕೂ ಕಷ್ಟ. ಅರ್ಥದಾಸೆಯನ್ನು ಬಿಟ್ಟುದಕ್ಕೆ ಅರ್ಥದಾನವೇ ಗುರುತು. ಅಲ್ಲಿಂದ ನಿವೃತ್ತಿ ಮೊದಲಾಗುತ್ತದೆ. ಭೌತಿಕ ಸಂಪತ್ತಿಲ್ಲದ ಭಕ್ತನು ಪೂಜಾಕ್ರಿಯೆಯಲ್ಲಿ ಸಹಜವಾಗಿ ಸಿಗುವ ಪುಷ್ಪವನ್ನು ಅರ್ಪಿಸಬೇಕು ಅದೂ ಸಾಧ್ಯವಿಲ್ಲದಾಗ ದೇಹವನ್ನು ಅರ್ಪಿಸಬೇಕು. ಅಂದರೆ ದೇಹಾಭಿಮಾನವನ್ನು ಬಿಡಬೇಕು. ಬಿಟ್ಟು ದೇಹವನ್ನು ಶಿವನ ಸೇವೆಯಲ್ಲಿ ತೊಡಗಿಸಬೇಕು. ಇಂತಾದಾಗ ಸತ್ಯ ಸಿದ್ಧಿಯಾಗುತ್ತದೆ. ಇಲ್ಲಿ ಸತ್ಯವೆಂದರೆ ಎರಡರ್ಥ. ವಾಣಿಸತ್ಯ, ಪರಬ್ರಹ್ಮರೂಪ ಸತ್ಯ. ಇವೆರಡೂ ಸಿದ್ಧಿಸುತ್ತವೆ. ದೇಹಪ್ರೀತಿ, ದೇಹಾಭಿಮಾನಗಳಿರುವಲ್ಲಿ ಅಸತ್ಯ ವ್ಯವಹಾರಕ್ಕಿಂಬುಂಟು. ಅವೇ ಇಲ್ಲದ ಮೇಲೆ ಅಸತ್ಯಕ್ಕೆ ಅವಕಾಶವಿಲ್ಲ. ಋಜುಜೀವನ – ಋತು ಜೀವನವೇ ಸತ್ಯಸ್ವರೂಪ ಪರಬ್ರಹ್ಮ ಜೀವನ. ದೇಹದಾನದಿಂದ ಸತ್ಯ

ಬ್ರಹ್ಮವು ಸಿದ್ಧಿಸಿದರೆ ಪ್ರಾಣದಾನದಿಂದ ಜ್ಞಾನಬ್ರಹ್ಮ ಸಿದ್ಧಿಸುತ್ತದೆ. ಪರಮಾತ್ಮನನ್ನು ಮರೆಯಲು ಪ್ರಾಣಮೋಹವೇ ಕಾರಣ, ಪ್ರಾಣ ಲೋಭದಿಂದ ಪ್ರಾಣಮೋಹದಿಂದ ಜೀವನು ಮಾನವನೆನಿಸಿದ್ದಾನೆ. ಮರವೆಯ ಬಂಧನಕ್ಕೆ ಸಿಕ್ಕಿದ್ದಾನೆ. ಎಲ್ಲಕ್ಕಿಂತ ಪ್ರಾಣಮೋಹ ಪ್ರಭೂತ; ಬಲಿಷ್ಠ. ಅರ್ಥ ಹೊರಗಿನ ಪ್ರಾಣವಾದರೆ ಪ್ರಾಣ ಒಳಗಿನ ಅರ್ಥ ವಾಗಿದೆ. ಅಂತಹ ಪ್ರಾಣಧನವನ್ನು ತ್ಯಾಗ ಮಾಡುವ ಸದ್ಬುದ್ಧಿ ಸರ್ವರಿಗೆ ಬರುವುದಿಲ್ಲ. ತನ್ನಲ್ಲಿರುವ ತಾ ಪಡೆದು ಬಂದಿರುವ ತನು ಪ್ರಾಣಗಳನ್ನು ಸಂಪಾದಿಸುವ ಸಾಹಸವಿಲ್ಲ. ಇದರಿಂದಾಗಿ ಇವುಗಳ ದಾನ ಸಹಜ ದಾನವೆನಿಸುತ್ತದೆ. ಅಲ್ಲದೆ ಮನದಾನದಿಂದ ನೈರ್ಮಲ್ಯ, ಭಾವದಾನದಿಂದ ಅನುಭೂತಿ, ಜೀವದಾನದಿಂದ ಸದಾಶಿವತ್ವ ಪ್ರಾಪ್ತಿ ಯಾಗುತ್ತವೆ. ಸರ್ವಸ್ವ ದಾನಿಗೆ ಸರ್ವ ಸಂಪನ್ನತ್ವವುಂಟಾಗುತ್ತದೆ. ದಾನಿಗೆ ದಾರಿದ್ರ್ಯವಿಲ್ಲ. ಜ್ಞಾನಿಗೆ ಮರಣವಿಲ್ಲ.

'ಮನೆ ನೋಡಾ ಬಡವರು, ಮನ ನೋಡಾ ಘನಸಂಪನ್ನರು; ಸೋಂಕಿನಲ್ಲಿ ಸುಖಿಗಳು, ಸರ್ವಾಂಗ ಕಲಿಗಳು ; ಪ್ರಸಾರಕ್ಕನುವಿಲ್ಲ; ಬಂದ ತತ್ಕಾಲಕ್ಕುಂಟು. ಕೂಡಲ ಸಂಗನ ಶರಣರು ಸ್ವತಂತ್ರಧೀರರು.'

ಸಹಜ ದಾನದ ಶಕ್ತಿ ಸಣ್ಣದಲ್ಲ. ಸಹಜದಾನಿ ಸಾಮಾನ್ಯನಲ್ಲ. ಸರ್ವಸ್ವ ದಾನದಿಂದ ಸದ್ಭಕ್ತನಲ್ಲಿ ಅಪಾರಶಕ್ತಿ ಸಂಭವಿಸಿರುತ್ತದೆ. ಅವರು ಬಡತನ ಸಿರಿತನಗಳಿಗೆ ಸುಖ – ದುಃಖಗಳಿಗೆ ಮಾನಾಪಮಾನಗಳಿಗೆ ಮಾರು ಹೋಗಿರುವುದಿಲ್ಲ. ಅಂತೆಯೇ ಹುಟ್ಟು ಸಾವುಗಳಿಗೆ ತನು ಪ್ರಾಣಗಳಿಗೆ ಅಂಜುವವರಲ್ಲ; ಹಿಂಜರಿವವರಲ್ಲ. ಅವರು ಸರ್ವಸ್ವತಂತ್ರರು, ಸತ್ಯಧೀರರು. 'ಸತ್ತು ಹುಟ್ಟುಪನನಲ್ಲ, ಸಂದೇಹಿಸೂತಕಿಯಲ್ಲ; ಆಕಾರ ನಿರಾಕಾರನಲ್ಲ ನೋಡಯ್ಯಾ! ಕಾಯವಂಚಕನಲ್ಲ, ಜೀವವಂಚಕನಲ್ಲ, ನಿರಂತರ ಸಹಜ ನೋಡಯ್ಯಾ! ಶಂಕೆಯಿಲ್ಲದ ಮಹಾಮಹಿಮನು ನೋಡಯ್ಯಾ! ಕೂಡಲ ಸಂಗನ ಶರಣನು ಪರಮಾತೀತ ನೋಡಯ್ಯ!,

ಮನ, ಮನನ, ಮನನೀಯ ಎಂಬ ಮನತ್ರಯಗಳನ್ನು ಅಸ್ತಿತೇ' ಜಾಯತೇ, ವಿಪರಿಕ್ಷಮತೇ, ವಿವರ್ಧತೇ, ಅಪಕ್ಷೀಯತೆ, ವಿನಶ್ಯತೇ

ಎಂಬೀ ಷಡ್ಭಾವ ವಿಕಾರಗಳನ್ನು ಷಡೂರ್ಮಿಗಳನ್ನು, ತನುತ್ರಯುವನ್ನು, ಜೀವತ್ರಯುವನ್ನು ತ್ಯಾಗ ಮಾಡಿದ ಶಿವನಿಗರ್ಪಿಸಿ ಶಿವವಾಗಿಸಿದ ಸದ್ಭಕ್ತ ಸಹಜ. ಆತನ ಜೀವನ ಚಾರಿತ್ರ ನಿಸ್ಸಂಶಯು. ಆತ ಅಪಾರ ಮಹಿಮ; ಆತ ನಿರುಪಮ.

"ಭಕ್ತ ತಾ ಮಾಡುವ ಕಾಯಕ ತನಗೆಂದೆಡೆ ಗುರುವಿಂಗೆ ದೂರ. ತನ್ನ ಸತಿಗೆಂದೆಡೆ ಲಿಂಗಕ್ಕೆ ದೂರ. ತನ್ನ ಸುತರಿಗೆಂದೆಡೆ ಜಂಗಮಕ್ಕೆ ದೂರ. ತನ್ನ ಬಂಧುಗಳಿಗೆಂದೆಡೆ ಶರಣ ಸಂಕುಳಕೆಲ್ಲಕ್ಕೂ ದೂರ. ನನಗೂ ದೂರ. ಉನ್ಮೊಳಗಾದ ನಿಃಕಳಂಕ ಮಲ್ಲಿಕಾರ್ಜುನ ನಿನಗೂ ದೂರ."

ಇದು ಕ್ರಿಯಾದಾನಕ್ಕೆ ಅಥವಾ ಕ್ರಿಯಾರ್ಪಣಕ್ಕೆ ನಿದರ್ಶನ. ಭಕ್ತನು ತಾ ಮಾಡುವ ಕ್ರಿಯೆಯಾಗಲಿ, ಕಾಯಕವಾಗಲಿ ತನಗೆನ್ನ ಬಾರದು; ತಾ ಮಾಡಿದೆನೆನ್ನಬಾರದು. ತಾನು ತನಗೆ ತನ್ನವರು ಎಂಬವು ಸದ್ಭಕ್ತನ ಸನಿಹದಲ್ಲಿ ಸುಳಿಯಬಾರದು. ಭಕ್ತನು ಈ ದೇಹಾದಿ ಗಳನೆಲ್ಲವನ್ನೂ ಅರ್ಪಿಸಿ ಆತ್ಮಾರ್ಪಣವನ್ನು ಮಾಡದಿದ್ದರೆ ಆತನು ಸಹಜ ಭಕ್ತನಲ್ಲ. ಆತ್ಮನಲ್ಲಿರುವ ಅಸಹಜತೆ ಅಳಿಯಬೇಕು.

'ಮೇರುಗಿರಿಗಳೆಲ್ಲವೂ ಪ್ರಮಥರೊಡವೆ. ರಜತಗಿರಿಗಳೆಲ್ಲವೂ ಪುರಾ ತನರೊಡವೆ, ಚತುರ್ದಶ ಭುವನಗಳೆಲ್ಲವೂ ಲಿಂಗದೊಡವೆ. ಪೃಥ್ವಿ ಯೆಂಬುದು ಕರ್ತಾರನ ಕಮ್ಮಟ. ಅಚ್ಚಿನಮೊಳೆ ಬಾಣಸದ ಮೊನೆ. ತನು ಮನ ಧನಂಗಳೆಲ್ಲವೂ ನಮ್ಮ ಗೊಗ್ಗೇಶ್ವರ ಲಿಂಗದ ಸೊಮ್ಮು. ನೀನೇನು ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣಾ ?'

ಭಕ್ತನೆನಿಸಬೇಕಾದರೆ ಬಾಯ್ಮಾತಲ್ಲ. ಬಾಹ್ಯ ವಸ್ತುಗಳನ್ನು ಕೊಟ್ಟರಲ್ಲ, ತನು ಮನ ಧನಗಳನ್ನಿತ್ತರಲ್ಲ ಇವೆಲ್ಲವುಗಳೊಡನೆ ಇವು ಗಳಾಚೆಯಿರುವ ಅಸಹಜವಾದ ಆತ್ಮ (ಅಂಗ)ವನ್ನು ಒಪ್ಪಿಸಬೇಕು. ಅದನ್ನು ಆತನಿಗೆ ಒಪ್ಪಿಸದೆ ಅದರ ರಕ್ಷಣೆಯ ಹಂಗ ಹರಿಯದು. ಅಂಗ ಭಾವ ತೊಲಗದು,

'ಎಲೆ ಆತ್ಮನೆ! ಪಾತಕದ ಹೊಕ್ಕುಳದಲೇಕೆ ಹುಟ್ಟಿದೆ? ಹೇಸಿದರೂ ಉಣ್ಣಬೇಕು ವಿಷವ! ಅನುಕರಿಸಬೇಕು ಹುಸಿಯು! ಇದೆಲ್ಲದರ ಘಸಣೆಗೊಳಗಾಗದಂತೆ ಏನ್ನಸುವ ಕೊಂಡೊಯ್ಯಾ ನಿಃಕಳಂಕ ಮಲ್ಲಿಕಾರ್ಜುನಾ! 'ಪೃಥ್ವಿ ಅಪ್ಪು ತೇಜ ವಾಯು ಆಕಾಶದಿಂದ ಹೊಂದುನ ಹುಟ್ಟುವ ದೇಹದ ಅಂದಗಾರಿಕೆಯಲ್ಲಿ ಬಂದುದನರಿಯಾ! ಬಂದಂತೆ ಅದು ಹಿಂಗಿತ್ತೆಂದರಿಯಾ! ಮುಂದಣ ನಿಜಲಿಂಗವನರಿಯಾ ನಿಃಕಳಂಕ ಮಲ್ಲಿಕಾರ್ಜುನ!' ಜೀವಭಾವವಿರುವವರೆವಿಗೆ ಹುಟ್ಟುವುದು ಹೊಟ್ಟಿ ಹೊರೆವುದು ಹುಸಿಯಾಡುವುದು ತಪ್ಪಿದ್ದಲ್ಲ. ಕರ್ಮಭೋಗ ಕೈ ಬಿಡುವುದಲ್ಲ. ಕಾಯರೋಗ ತಪ್ಪುವುದಲ್ಲ. ಕಾರಣ ಅಸುವನರ್ಪಿಸಿಯಾದರೂ ಲಿಂಗವನರಿಯಬೇಕು. ಈ ನಡೆಯಿಲ್ಲದೆ ಈ ಅಸುದಾನವಿಲ್ಲದೆ ಬರೀ ನುಡಿದರೆ ನಿರಾಮಯತ್ವ ನೆರೆದುಬಾರದು. ಸಹಜತೆ ಸಮನಿಸದು. ಲೆಕ್ಕದಲ್ಲಿ ಲೇಪಿತವಾಹರಿಗೇಕೆ ಅಜಾತನ ಸುದ್ದಿ? ಪ್ರಖ್ಯಾತದಲ್ಲಿ ನೀತಿಯ ಹೇಳಿಹೆನೆಂದು ದೇಶದಲ್ಲಿ ಸುಳಿವವರಿಗೇಕೆ ಪರದೋಷ ನಾಶನದ ಸುದ್ದಿ? ಇವರೆಲ್ಲರೂ ಈಶನ ಭಾಷೆಯಲಿ ಸಿಕ್ಕಿ ಭೂಗತರಾದರು ನಿಃಕಳಂಕ ಮಲ್ಲಿಕಾರ್ಜುನಾ'

ದುರಾಶೆ ದುರ್ನೀತಿ ಮಿತವಾಗಿದ್ದರೂ ಆ ಅಜಾತನು ಸಾಧ್ಯವಾಗನು; ಅಜಾತತ್ವ ಅಳವಡದು. ಮಾತುಗಾರಿಕೆಯಲ್ಲಿ ಭಾಷಣ ಪ್ರವಚನಗಳನ್ನು ಬಿತ್ತರಿಸುವುದರಲ್ಲಿ ಕೀರ್ತಿಶಾಲಿಗಳೆನಿಸಿ ಇತರರಿಗೆ ನೀತಿಯ ಹೇಳುತ್ತ ನಾಡಿನಲ್ಲಿ ಸುಳಿದರೆ ಇಹ ದೋಷವೇ ಹೋಗದು; ಇನ್ನು ಪರದೋಷ ಪರಿಹಾರವಾಗುವುದೆಲ್ಲಿ? ಇಲ್ಲಿ ಇಹವೆಂದರೆ ದೇಹ; ಪರವೆಂದರೆ ದೇಹಿ. ದೇಹ ದೋಷಗಳನ್ನು ಅಳಿಯಬಹುದು, ದೇಹಿಯ ದೋಷಗಳನ್ನು ಕಳೆವುದು ಕಷ್ಟಸಾಧ್ಯ. ಪರಬ್ರಹ್ಮ ವಿಷಯವಾಗಿ ಬರೀ ಭಾಷೆಯ ನೂಂಕುವವರೆಲ್ಲರೂ ಭಕ್ತರಾಗರು; ಇವರೆಲ್ಲ ಭೂಗತರು. 'ಅದ್ವೈತವ ಹೇಳುವ ಹಿರಿಯರೆಲ್ಲರು ದ್ವೈತಕ್ಕೊಳಗಾದರು. ನಿಸ್ಸಂಸಾರವ ಹೇಳುವ ಹಿರಿಯರೆಲ್ಲರೂ ಸಂಸಾರದ ಸಾರವ ಚಪ್ಪರಿಸಿಕೊಟ್ಟರು. ಭಕ್ತರಿಗೆ ನಿತ್ಯವಲ್ಲವೆಂದು ಹೇಳಿ ತಾವು ಅನಿತ್ಯವ ಹಿಡಿದು ಪಾಶಕ್ಕೆ

ಸಿಕ್ಕಿ ಸತ್ತುದನರಿಯದೆ ನಾವು ಮುಕ್ತರಾದೆವೆಂಬ ಭ್ರಷ್ಟರ ನೋಡಾ! ಎನಗಿನ್ನೆತ್ತಣ ಮುಕ್ತಿಯೆಂದಂಜಿದೆ ನಿಃಕಳಂಕ ಮಲ್ಲಿಕಾರ್ಜುನಾ!' ಆ ಪರಬ್ರಹ್ಮಗತರಾಗಬೇಕಾದರೆ ಆ ಪರಬ್ರಹ್ಮಾಗ್ನಿಯಲ್ಲಿ ಈ ಅಪರಬ್ರಹ್ಮ ಹವಿಸ್ಸನ್ನು ಹವನ ಮಾಡಬೇಕು. 'ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರ ಹ್ಮಾಗ್ನೌ ಬ್ರಹ್ಮಣಾ ಹುತಂ। ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮ ಕರ್ಮ ಸಮಾಧಿನಾ!' ಆದಾತೃ ದಾತೃ ದೇಯ ವಸ್ತುತ್ರಯವೂ ಬ್ರಹ್ಮಮಯ ವಾಗಬೇಕೆಂದು ಶ್ರುತಿ ಸಾರಿದೆ. ಈ ಮೂರರಲ್ಲಿ ಯಾವುದೊಂದು ಬೆರೆ ಯದೆ ಬೇರಾಗಿದ್ದರೆ ನಿಶ್ಚಿಂತತೆ ನಿಶ್ಚಯುವಾಗದು; ನಿಜತೆ ನಿಲುಕದು. 'ಸುಖ ದುಃಖಂಗಳನರಿವುದು-ಕಾಯ ಜೀವ ಒಂದಾದಲ್ಲಿ. (ಅಹುದಲ್ಲ ವೆಂಬುದನರಿವುದು, ಜೀವಪರಮ ಒಂದಾದಲ್ಲಿ ಕಂಡೆ ಕಾಣೆನೆಂಬುದು- ದೃಕ್ಕು ದೃಶ್ಯ ಒಂದಾದಲ್ಲಿ. ಇಂತೀ ಪೂರ್ವ ಉತ್ತರದ ಮಧ್ಯದಲ್ಲಿ ನಿಶ್ಚಯುಪದೇಕೋ ನಿಃಕಳಂಕ ಮಲ್ಲಿಕಾರ್ಜುನಾ?' ಕಾಯ ಜೀವ ರೊಂದಾಗಿ ಕರಣ ಬೇರಾದರೆ, ಸುಖ ದುಃಖ ದ್ವಂದ್ವ ಹಿಂಗದು. ಭೋಕ್ತೃ-ಪ್ರೇರಕರಾದ ಜೀವಪರಮರೊಂದಾಗಿ ಭೋಜ್ಯವೊಂದಾಗದಿದ್ದರೆ ಅಹುದಲ್ಲವೆಂಬ ಸಂಶಯವಳಿಯದು. ದೃಕ್ಕು ದೃಶ್ಯಗಳೆರಡೊಂದಾಗಿ ದೃಕ್ಕಿಗಿ ದೃಕ್ಕಾದ ಆ ದಿವ್ಯ ದೃಕ್ ಒಂದಾಗದಿದ್ದರೆ ಕಂಡೆ ಕಾಣೆ ಎಂಬ ದಂದುಗ ದೂರಾಗದು. ಈ ದ್ವಂದ್ವ ದಂದುಗದಲ್ಲಿರುವವರೇಬಹಳ.

'ಸಂಜೀವನವ ಕೈಯಲಿ ಹಿಡಿದಿರ್ದು ಸಾಯುವ ಹುಟ್ಟುವ ಜೀವವ ನಾ ಕಂಡೆ. ಕಂಗಳ ಮುಂದೆ ಕಡವರ ತುಂಬಿರ್ದು ದಾರಿದ್ರ್ಯ ದಲ್ಲಿ ನೊಂದನರ ನಾ ಕಂಡೆ. ತನ್ನಂಗದಲ್ಲಿ ಅಲಗ ಹೊರೆಯಾಗಿ ಹೊತ್ತಿರ್ದು ಕೋಲಿನ ಹೊರೆಯ ಮೊನೆಯಲ್ಲಿ ಇರಿಯಿಸಿಕೊಂಡು ಸತ್ತ ವರ ನಾ ಕಂಡೆ, ನಿಃಕಳಂಕ ಮಲ್ಲಿಕಾರ್ಜುನ ಲಿಂಗವನರಿಯದೆ ಹೋದವರ.'

'ಸಾರವಕೂಡಿದಲ್ಲಿ ಹಣ್ಣು. ನಿಸ್ಸಾರವಾದಲ್ಲಿ ಕಾಯಿ. ಕಾಯಿ. ಹಣ್ಣಹುದು. ಉಭಯದೊಡಲೊಂದೇ! ಅರಿದು ಮರೆವುದ ಹೆರೆ ಹಿಂಗಿ ದಲ್ಲಿ ನಿಃಕಳಂಕ ಮಲ್ಲಿಕಾರ್ಜುನನು ತಾನು ತಾನೆ!'

ಸರ್ವ ವಿದ್ಯಾನಿಧಿಯಾದ ಸದ್ಗುರುವಾದ ಪರಪಾತ್ರವಾದ ಶಿವ ಸಂಜೀವನವು ಕೈಯಲ್ಲಿದ್ದು ಸತ್ತು ಹುಟ್ಟುವುದು ಸೋಜಿಗವಲ್ಲವೆ? ಸರ್ವ ವಿದ್ಯಾನಿಧಿರೂಪ ಚಿನ್ಮಯ ಕಡವರ ಕಣ್ಮುಂದೆ ತುಂಬಿದ್ದು ದಾರಿದ್ರ್ಯದಲ್ಲಿ ದುರ್ಮಾನಿಗಳಾಗುವುದು ದುರದೃಷ್ಟವಲ್ಲವೆ? ತನ್ನ ಒಡಲೊಳಗೆ ಹಲವಾರು ಹುಲು ಆಸೆಗಳೆಂಬ ಕೂರಲಗುಗಳಿರಲು ಕಟ್ಟಿಗೆ ಹೊರೆಯ ಮೊನೆಯಲ್ಲಿ ಇರಿಸಿಕೊಂಡು ಸಾಯುವುದು ಲಜ್ಜೆಗೇಡಲ್ಲವೆ? ತನ್ನೊಳಗಿರುವ ತನ್ನ ಸಾರಸರ್ವಸ್ವವಾದ ಲಿಂಗನವರಿಯದಿದ್ದರೆ ಆ ಲಿಂಗಕ್ಕೆ ತನ್ನ ಸರ್ವಾಂಗವನ್ನರ್ಪಿಸದಿದ್ದರೆ ಅವರು ಭಕ್ತರೆನಿಸರು. ಮುಕ್ತಿ ಸಾರವನ್ನು ಅನುಭವಿಸರು. ಬರೀ ಯುಕ್ತಿಯ ನಿಸ್ಸಾರದಲ್ಲಿ ಕಾಯಾಗಿಯೇ ಇರುವರು. ಕಾಯಿ ಹಣ್ಣಾಗಬೇಕಾದರೆ ಅರಿದು ಮರೆಯದಂತಿರಬೇಕು. ಇದ್ದು ಹಣ್ಣಾದ ಬಳಿಕ ಹಣ್ಣನ್ನು ಪರಶಿವಲಿಂಗಕ್ಕೆ ಪೂರ್ಣವಾಗಿ ಅರ್ಪಿಸಿ ಅನಂತತ್ವವನ್ನು ಪಡೆಯಬೇಕು.

"ಶಿವಯೋಗೀ ಶಿವಃ ಸಾಕ್ಷಾಚ್ಛಿವಜ್ಞಾನ ಮಹೋದಧಿಃ
ಯತ್ಕಿಂಚಿದ್ದೀಯತೇ ತಸ್ಮೈ ತದ್ದಾನಂ ಪಾರಮಾರ್ಥಿಕಂ !
ಶಿವಯೋಗೀ ಮಹಾಪಾತ್ರಂ ಸರ್ವೇಷಾಂ ದಾನಕರ್ಮಣಿ
ತಸ್ಮಾನ್ನಾಸ್ತಿ ಪರಂ ಕಿಂಚಿತ್ಪಾತ್ರಂ ಶಾಸ್ತ್ರವಿಚಾರತಃ ||"

ಆ ಪರಶಿವನು ನಿರವಯ. ಅತನನ್ನು ನೇರವಾಗಿ ಪಡೆಯಲು ಆತನಿಗೆ ಸಾವಯವ ವಸ್ತುವನ್ನು ಕೊಡಲು ಸಾಧ್ಯವಿಲ್ಲ. ಆ ಶಿವಜ್ಞಾನವನ್ನು ಜೀರ್ಣಿಸಿಕೊಂಡು ಮಹಾಸಾಗರದಂತಿರುವ ಶಿವಯೋಗಿಯೊಬ್ಬನು ಬೇಕು. ದಾತೃದೇಯ ನದಿಗಳನ್ನೆಲ್ಲ ಒಳಕೊಳ್ಳುವ ಒಡಲುಳ್ಳ ಹೆಗ್ಗಡಲಬೇಕು. ಅವನೇ ಶಿವಯೋಗಿ; ಆತನೇ ಸಾಕ್ಷಾತ್-ಶಿವಸ್ವರೂಪಿ. ಶಿವಯೋಗಿ ಎಂಬ ಅಂಕಿತವು ಅನ್ವರ್ಥಕವಾಗಿರಬೇಕೇ ಹೊರತು ರೂಢವಾಗಿರಬಾರದು. ಶಿವನ-ಶಿವದ ಯೋಗವುಳ್ಳವನೇ ಶಿವಯೋಗೀ. ಈತನಿಗೆ ಕೊಟ್ಟ ಈಷದ್ದಾನವೇ ಪಾರಮಾರ್ಥಿಕ ದಾನ.

ಕೇವಲನಾದ ಆ ಪರಶಿವನಿಗೆ ಕೇವಲಾಂಗವನ್ನು ದಾನಮಾಡು (ಆರ್ಪಿಸು)ವುದು ಎಲ್ಲರಿಗೂ ಸುಲಭವಲ್ಲ. ದೃಶ್ಯದಾನದಿಂದ ಹಂತಹಂತವಾಗಿ ಹತ್ತುತ್ತ ದೃಕ್ ದಾನಕ್ಕೆ ನಿಲುಕಬೇಕು. ದೃಶ್ಯದಾನ ಮನಸ್ಸು ಮಾಡಿದರೆ ಸರ್ವರಿಗೂ ಸಾಧ್ಯ. ಈ ಸರ್ವರ ದಾನಕ್ರಿಯೆಗೆ ಈ ಶಿವಯೋಗಿಯೇ ಪರಮ ಪಾತ್ರ. ಈ ಶಿವಯೋಗಿ ಆ ಪರಶಿವ ಪ್ರಕಾಶವನ್ನು ತೋರುವ ಪಾರದರ್ಶಕ ಸೂತ್ರ; ಪಾರಂಗತ. ಈತನಿಗಿಂತ ಇಹದಲ್ಲಿಲ್ಲ ಪರಮ ಪಾತ್ರ. ಶಾಸ್ತ್ರ ವಿಚಾರದಿಂದಲೂ ಇದು ಸಿದ್ಧವಾಗಿದೆ. ಕವಿ ಇಲ್ಲಿ 'ವಚನ ವಿಚಾರತಃ' ಎಂದು ಹೇಳದೆ ಇರುವುದನ್ನು ವಿಚಾರಕ್ಕೆ ತಾರದೆ ಬಿಡುವಂತಿಲ್ಲ. ವಚನ ವಾಙ್ಮಯಕ್ಕೆ ಮೊದಲಿದ್ದು ಶಾಸ್ತ್ರಪ್ರಭಾವಕ್ಕೆ ಒಳಪಟ್ಟವನೆಂಬುದನ್ನು ಸ್ಮರಿಸದಿರುವಂತಿಲ್ಲ.

"ಭಿಕ್ಷಾ ಮಾತ್ರ ಪ್ರದಾನೇನ ಶಾಂತಾಯ ಶಿವಯೋಗಿನೇ
ಯತ್ಫಲಂ ಲಭ್ಯತೇ ನೈತದ್ಯಜ್ಞ ಕೋಟಿ ಶತೈರಪಿ ।
ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ
ತತ್ತೃಪ್ತ್ಯಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಂ
ತಸ್ಮಾತ್ಸರ್ವ ಪ್ರಯತ್ನೇನ ಯೇನ ಕೇನಾಪಿ ಕರ್ಮಣಾ
ತೃಪ್ತಿಂ ಕುರ್ಯಾತ್ಸದಾಕಾಲಮನ್ನಾದ್ಯೈಃ ಶಿವಯೋಗಿನಃ ॥"

ಶಮ ದಮಗಳುಳ್ಳ ಶಿವಯೋಗಿಗೆ ಭಿಕ್ಷವನ್ನೀಯಬೇಕು. ಅತಿಥಿ ರೂಪ ಶಿವಯೋಗಿಗೆ ಅದಕ್ಕಿಂತ ಬೇರೆ ಬೇಕಿಲ್ಲ. ಭಿಕ್ಷವೆಂದರೆ ಅನ್ನವೆಂದರ್ಥ. ಅದಕ್ಕಿಂತ ಹೆಚ್ಚಿನದಿಲ್ಲ. ಅನ್ನವೇ ಪ್ರತ್ಯಕ್ಷ ಬ್ರಹ್ಮ. ಅನ್ನದಾನಕ್ಕಿಂತ ಇನ್ನು ದಾನವಿಲ್ಲ. ಅಂತಹ ಅನ್ನವನ್ನು ಪೂರ್ಣ ಕೊಡುವುದೊಂದೆಡೆಗಿರಲಿ; ಒಂದೇ ಒಂದು ತುತ್ತನಿತ್ತರೆ ನೂರು ಕೋಟಿ ಯಜ್ಞಗಳನ್ನು ಮಾಡಿದ ಫಲವುಂಟಾಗುತ್ತದೆ. ಇನ್ನು ಪೂರ್ತಿ ತೃಪ್ತಿಪಡಿಸಿದರೆ ಆಗುವ ಫಲ ಅಳತೆಗೆ ಎಟುಕದ್ದು.

ಶಿವಯೋಗಿಯೊಬ್ಬ ಸಂತೃಪ್ತನಾದರೆ ಶಿವನು ಸಂತೃಪ್ತನಾಗುತ್ತಾನೆ. ಆ ಶಿವನ ಸಂತೃಪ್ತಿಯಿಂದ ಆ ಶಿವಮಯವಾದ ಈ ಚರಾಚರ ವಿಶ್ವವೇ ತೃಪ್ತವಾಗುತ್ತದೆ.

ಅದರಿಂದಾಗಿ ಯಾವ ಕಾಯಕವನ್ನಾದರೂ ಮಾಡಿ ಎಲ್ಲ ಬಗೆಯ ಸಾಸದಿಂದ ಶಿವಯೋಗಿಗೆ ಸದಾಕಾಲ ಸ್ವಯಾರ್ಜಿತ ಅನ್ನಪಾನಾದಿ ಗಳಿಂದ ಸಂತೃಪ್ತಿಯನ್ನುಂಟುಮಾಡಬೇಕು.

ಅನ್ನಮಯ ಪ್ರಾಣ; ಪ್ರಾಣಮಯ ಪರಮೇಶ್ವರ. ಅನ್ನ ಪ್ರತ್ಯಕ್ಷ ದೇವ. ಪರಮೇಶ್ವರರೂಪ ಚೈತನ್ಯ ಅಪ್ರತ್ಯಕ್ಷದೇವ. ಇವೆರಡರ ಮಧ್ಯ ದಲ್ಲಿ ಶಿವಯೋಗಿ ಸಕಲ ನಿಷ್ಕಲ ಸ್ವರೂಪ. ಇದರಿಂದಾಗಿ ಶಿವಯೋಗಿ ಯನ್ನು ತೃಪ್ತಿಪಡಿಸಿದರೆ ಸಕಲ ಜಗತ್ತು, ನಿಷ್ಕಲ ಜಗದೀಶನೂ ತೃಪ್ತಿ ಗೊಳ್ಳುವುದುಂಟು.

"ನಿರುಪಾಧಿಕ ಚಿದ್ರೂಪ ಪರಾನಂದತ್ಮ ವಸ್ತುನಿ
ಸಮಾಪ್ತಂ ಸಕಲಂ ಯಸ್ಯ ಸ ದಾನೀ ಶಂಕರಃ ಸ್ವಯಂ ।"

ಈ ಶ್ಲೋಕವನ್ನು 'ಯೋಗ ವಾಶಿಷ್ಠವು' ಎತ್ತಿ ಉದ್ಧರಿಸಿದೆ. ಇದರಿಂದ ಈ ಕೃತಿ ಸಿದ್ಧಾಂತ ಶಿಖಾಮಣಿಯೋಗವಾಸಿಷ್ಠಕ್ಕಿಂತ ಪೂರ್ವ ದ್ದೆಂದು ಹೇಳಬಹುದಾಗಿದೆ.

ಸಕಲ ವಿಶ್ವವು ಯಾವ ನಿರುಪಾದಿಕವೂ ಚಿದ್ರೂಪವೂ ಪರಾನಂದಾ ತ್ಮಕವೂ ಆದ ವಸ್ತುವಿನಲ್ಲಿ ಲೀನವಾಗುವುದೋ ಆ ಪರಿಪೂರ್ಣಾಖಂಡ ವಸ್ತುವಿಗೆ ಸರ್ವಾರ್ಪಣ ರೂಪ ದಾನವನ್ನು ಮಾಡಿದ ಸದ್ಭಕ್ತನು ಸಾಕ್ಷಾತ್ ಸಿವಸ್ವರೂಪನಾಗುವನು.

'ಅರ್ಚನೆಯ ಮಾಡುವಲ್ಲಿ ಮಚ್ಚಿ ಬಯಸಲಾಗದು. ಇಷ್ಟಾರ್ಥವ ಲೋಕದ ಪೂಜೆಯ ಮಾಡುವಲ್ಲಿ ಪುಣ್ಯಲೋಕವ ಮಚ್ಚಲಾಗದು. ಆತ್ಮಾರ್ಪಣೆಯ ಮಾಡುವಲ್ಲಿ ವಿನಾಭಾವವಿರಲಾಗದು. ಇಂತೀ ಗುಣ ವಿರಹಿತನಾಗಿ ಚತುರ್ವಿಧ ಫಲ ಹೊರತೆಯಾಗಿ ನಿತ್ಯನೇಮವೆಂದು ಮಾಡುವ ಭಕ್ತಿವಿದಂಗೆ ಮಾಡಿಯೂ ಮಾಡದಿದ್ದಡೇನು ದಗ್ಧಪಟದಂತೆ ನಿಃಕಳಂಕ ಮಲ್ಲಿಕಾರ್ಜುನಾ.'

ಸಹಜದಾನಿ ಸಾಕಾರನಾಗಿದ್ದರೂ ನಿರಾಕಾರ ಮಾನವನಂತಿದ್ದರೂ ಮಹಾನುಭಾವ ಭಕ್ತನಾಗಿದ್ದರೂ ಮುಕ್ತ; ಸ್ವಯಂ ಶಿವ.

"ಉಕ್ತಾಖಿಲಾಚಾರ ಪರಾಯಣೋಽಸೌ । ಸದಾ ವಿತನ್ವನ್ ಸಹಜಂತು ದಾನಂ । ಬ್ರಹ್ಮಾದಿ ಸಂಪತ್ಸು ವಿರಕ್ತ ಚಿತ್ತೋ । ಭಕ್ತೋ ಹಿ ಮಾಹೇಶ್ವರತಾಮುಪೈತಿ ॥"

ಈ ಸಹಜದಾನ ಸ್ಥಲದಲ್ಲಿ ನಿರೂಪಿಸಿದ ಸರ್ವಾಚಾರ ನಿರತನಾದ ಸದ್ಭಕ್ತನು ತನ್ನ ದ್ರವ್ಯ ದೇಹ ಪ್ರಾಣ ತ್ರಾಣಗಳನ್ನೆಲ್ಲ ಸಹಜವಾಗಿ ಸಮರ್ಪಿಸಿ ಬ್ರಹ್ಮ ವಿಷ್ಣು ದೇವೇಂದ್ರಾದಿಗಳ ಸಂಪತ್ತು ಸ್ವರ್ಗಾದಿಗಳಿಗೆ ಆಶಿಸದೆ ವಿರಕ್ತಚಿತ್ತನಾಗಿ ತ್ಯಾಗಿಯಾಗಿ ಸಂನ್ಯಾಸ ಯೋಗಿಯಾಗಿ ಇರುವುದರಿಂದ ಮುಂದೆ ಮಾಹೇಶ್ವರತ್ವವನ್ನು ಅಂದರೆ ಮಾಹೇಶ್ವರ ಸ್ಥಲವನ್ನು ಪಡೆಯುತ್ತಾನೆ.

ಭಕ್ತನು ಸರ್ವಸಮರ್ಥನಾದರೂ ಸಹಜವಾದ ಸರ್ವಾಚಾರಗಳನ್ನು ಬಿಡದೆ ಆಚರಿಸಬೇಕು. ಹೀಗೆ ಆಚರಿಸುವುದೇ ಸ್ವಧರ್ಮವೆಂದು, ಇದನ್ನು ಬಿಡಬಾರದೆಂದು ಭಗವದ್ಗೀತೆಯೂ ತನ್ನ ಕೊನೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಹೀಗೆ ಹೇಳಿದೆ:

'ಸ್ವಭಾವ ನಿಯತಂ ಕರ್ಮ ಕುರ್ವನ್ನಾಽಪ್ನೋತಿ ಕಿಲ್ಬಿಷಂ ।
ಸಹಜಂ ಕರ್ಮ ಕೌಂತೇಯ ಸ ದೋಷಮಪಿ ನ ತ್ಯಜೇತ್ ।
ಅಸಕ್ತಬುದ್ಧಿಸ್ಸರ್ವತ್ರ ಜಿತಾತ್ಮಾ ವಿಗತಸ್ಪೃಹಃ
ನೈಷ್ಕರ್ಮ್ಯಸಿದ್ಧಿಂ ಪರಮಾಂ ಸಂನ್ಯಾಸೇನಾಧಿಗಚ್ಛತಿ ।
ಬುದ್ಧ್ಯಾ ವಿಶುದ್ಧಯಾ ಯುಕ್ತೋ ಧೃತ್ಯಾಽತ್ಮಾನಂ ನಿಯಮ್ಯ ಚ
ಶಬ್ದಾದೀನ್ ವಿಷಯಾಂಸ್ತ್ಯಕ್ತ್ವಾ ರಾಗದ್ವೇಷೌವ್ಯುದಸ್ಯ ಚ ।
ವಿವಿಕ್ತ ಸೇವೀ ಲಘ್ವಾಶೀ ಯತವಾಕ್ಕಾಯ ಮಾನಸಃ
ಧ್ಯಾನಯೋಗಪರೋ ನಿತ್ಯಂ ವೈರಾಗ್ಯಂ ಸಮುಪಾಶ್ರಿತಃ ।
ಅಹಂ ಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಮ್
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ ।
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ
ಸಮಸ್ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಂ ।

ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಂ ॥ "

ಗೀತೆಯ ಈ ಚರಮೋಕ್ತಿಗಳು ಶ್ರೀ ರೇಣುಕ ಗೀತೆಯ ಭಕ್ತ ಸ್ಥಲದ ಕೊನೆಯ ಉಪಸ್ಥಲವಾದ ಸಹಜದಾನ ಸ್ಥಲದ ಕೊನೆಯ ಎರಡು ಶ್ಲೋಕಗಳನ್ನು ಸಮರ್ಥಿಸುತ್ತ ಮಾಡಿದ ವ್ಯಾಖ್ಯಾನಗಳಂತಿರುತ್ತವೆ. ನಿಜಕ್ಕೂ ಇಡೀ ಭಗವದ್ಗೀತೆ ಶಿವಾದ್ವೈತ ತತ್ವದ ಭಕ್ತಸ್ಥಲವನ್ನು ಮಾತ್ರ ಪ್ರತಿಪಾದಿಸಿದೆ. ಈ ವಿಷಯವಾಗಿ ನಾವು ಈ ಗ್ರಂಥದ ಕೊನೆಯ ಸಾರಾಂಶದಲ್ಲಿ ವಿವರವಾಗಿ ಬರೆಯುತ್ತೇವೆ.

ಇಲ್ಲಿ ಉದ್ಧರಿಸಿದ ಪ್ರಥಮ ಶ್ಲೋಕವು 'ಅಖಿಲಾಚಾರ ಪರಾಯಣಃ' ಎಂಬ ಶ್ರೀ ರೇಣುಕ ವಾಣಿಯನ್ನು ಸಮರ್ಥಿಸುತ್ತದೆ. ೨-೩-ನೆಯವು 'ವಿರಕ್ತಚಿತ್ತಃ' ಎಂಬುದನ್ನು, ಮುಂದಿನ ಮೂರು 'ಮಾಹೇಶ್ವರತಾಮುಪೈತಿ' 'ದಾನೀ ಶಂಕರಃ ಸ್ವಯಂ' ಎಂಬುವನ್ನು ವಿವರಿಸಿ ವ್ಯಾಖ್ಯಾನ ಮಾಡಿವೆ.

ಅಸಹಜಕ್ಕೆ ಕಾರಣಗಳು; ಅರಿಷಡ್ವರ್ಗಗಳು: ಅಹಂಕಾರ ಬಲ ದರ್ಪಗಳು. ಇವನ್ನು ಬಿಟ್ಟರೆ ಸಾಧಕನು ಶಾಂತನಾಗುತ್ತಾನೆ. ಸಹಜನಾಗುತ್ತಾನೆ. ಬ್ರಹ್ಮ ಭಾವವುಳ್ಳವನಾಗುತ್ತಾನೆ. ಸರ್ವಭೂತಗಳಲ್ಲಿ ಸಮದರ್ಶಿಯಾಗುತ್ತಾನೆ. ಆಶೆ ವ್ಯಸನಗಳನ್ನು ಅಳಿಯುತ್ತಾನೆ. ದೇವಭಕ್ತಿಯುಳ್ಳವನಾಗುತ್ತಾನೆ. ದೇವಜ್ಞಾನಿಯಾಗುತ್ತಾನೆ. ದೇವನೇ ತಾನಾಗುತ್ತಾನೆ.

'ಸಹಜದಾನ ಸ್ಥಲಂ' ಇದನ್ನು ಮೂರು ಬಗೆಯಾಗಿ ಅರ್ಥವಿಸಬಹುದು. ಸಹಜವಾದ ದಾನವನ್ನು ಮಾಡುವ ಸ್ಥಲ. ಈ ಅರ್ಥದಲ್ಲಿ ಇಲ್ಲಿಯವರೆವಿಗೂ ಸಾಕಷ್ಟು ವಿವರಣೆಯಾಗಿದೆ. ಎರಡನೆಯದಾಗಿ, ಸಹಜವನ್ನು ದಾನಮಾಡುವ ಸ್ಥಲ. ಅಂದರೆ ಅಂಗವನ್ನು ತ್ಯಾಗ ಮಾಡುವ ಸ್ಥಲವೆಂದರ್ಥ. ಇನ್ನು ಮೂರನೆಯದಾಗಿ, ಸಹಜಕ್ಕೆ ದಾನ ಮಾಡುವ ಸ್ಥಲ. ಅಂಗವನ್ನು ಯಾರಿಗೆ ದಾನಮಾಡುವುದೆಂದು ಕೇಳಿದರೆ ಅಂಗ

ನೊಡನೆ ಹುಟ್ಟಿದ ಲಿಂಗಕ್ಕೆ ಅಂಗವನ್ನು ಅರ್ಪಿಸುವ ಸ್ಥಲವೆಂದರ್ಥ. ಅಂದರೆ ಪಿಂಡಾಂಡವೆಲ್ಲ ಲಿಂಗದಲ್ಲಿಯೇ ಇದ್ದು ಲಿಂಗದಲ್ಲಿಯೇ ಲೀನವಾಗುವ ಬಗೆ. ಇದರಿಂದಾಗಿ ಸ್ಥಲ ಶಬ್ದ ನಿರ್ವಚನವೂ ನೆರವೇರಿದಂತಾಗುತ್ತದೆ.

ಇಲ್ಲಿಗೆ ಸಿದ್ಧಾಂತ ಶಿಖಾಮಣಿಯ ನವಮ ಪರಿಚ್ಛೇದವು ಮುಗಿಯುತ್ತದೆ. ಅಂತೆಯೇ ಶಿವಭಕ್ತ ಶಿಖಾಮಣಿಯ ನವದ್ವಾರವುಳ್ಳ ದೇಹಾಭಿಮಾನವು ದೂರವಾಗುತ್ತದೆ. ಭವದ ಭಾರವು ಬಿಡುಗಡೆಯಾಗುತ್ತದೆ. ತ್ರಿವಿಧ ಭಕ್ತಿಯಿಂದ ತ್ರಿವಿಧಾಂಗ ಭಕ್ತನಾಗಿ ತ್ರಿವಿಧ ಲಿಂಗ ಸಂಗನಾಗಿ ತ್ರಿವಿಧ ಲಿಂಗಾರ್ಚನೆಗೆ ಸನ್ನದ್ಧನಾಗುತ್ತಾನೆ. 'ಅರ್ಥ ಪ್ರಾಣಾಭಿಮಾನವನು ಗುರುಲಿಂಗಜಂಗಮದ ಮುಖಕ್ಕೆ ಸಮರ್ಪಿಸಿ ಆ ಗುರುಲಿಂಗಜಂಗಮವೆ ತನು ಮನ ಪ್ರಾಣವಾಗಿರಬಲ್ಲರೆ ಭಕ್ತನ ಸ್ಥಲವಿದೆಂಬೆನಯ್ಯ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ' ಎಂದಂತೆ ತ್ರಿವಿಧದಲ್ಲಿ ತ್ರಿವಿಧ ಸಂಪುಟಗೊಳ್ಳುತ್ತದೆ. 'ಲಿಂಗವನರಿವಡೆ ಮನವೆ ನಿಚ್ಚಣಿಕೆ, ಜಂಗಮನರಿವಡೆ ಧನವೆ ನಿಚ್ಚಣಿಕೆ ಪ್ರಸಾದವನರಿವಡೆ ತನುವೆ ನಿಚ್ಚಣಿಕೆ. ಈ ತ್ರಿವಿಧವನರಿವಡೆ ತ್ರಿವಿಧ ನಿಚ್ಚಣಿಕೆ. ಇದು ಕಾರಣ ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣರಿಗಲ್ಲದೆ ತ್ರಿವಿಧ ಸಂಪತ್ತಿಲ್ಲ.' ತ್ರಿವಿಧಕ್ಕೆ ತ್ರಿವಿಧಗಳು ಪರಸ್ಪರ ಆಧಾರ ಆಧೇಯವಾಗಿವೆ. ಗುರುಲಿಂಗಜಂಗಮವಿಲ್ಲದೆ ತನು, ಮನ, ಧನಗಳು ಉಜ್ಜೀವನವಿಲ್ಲ. ತನು, ಮನ, ಧನಗಳಿಲ್ಲದೆ ಗುರುಲಿಂಗ ಜಂಗಮರೂಪಚೈತನ್ಯಾಭಿವ್ಯಕ್ತಿಯಿಲ್ಲ-

'ಭಕ್ತನು ತಾನು ತಾನಾಗಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು. ತನು ಮನ ಧನವ ಗುರುಲಿಂಗ ಜಂಗಮಕ್ಕೆ ಸವೆಯಿಸಬೇಕು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ! ಲಿಂಗವ ಪೂಜಿಸಿ ಪ್ರಸಾದವಂ ಪಡೆವಡೆ ಇನೆ ಸಾಧನ ನಮ್ಮ ಕೂಡಲ ಚೆನ್ನ ಸಂಗಯ್ಯನಲ್ಲಿ.'

ಈ ಚೆನ್ನಬಸವಣ್ಣನ ನಿರೂಪದಂತೆ ಭಕ್ತನು ತಾನು ತಾನಾಗ ಬೇಕಾದರೆ ಈತನ ಷಡಂಗ ಶುದ್ಧಿ ಅತ್ಯಗತ್ಯ. ಆಗ ಸರ್ವಾಂಗವು ಲಿಂಗ ವಾಗಲು ಅರ್ಹತೆಯುಳ್ಳವುಗಳಾಗುತ್ತವೆ. ಬಹಿರಂಗ ಷಡಂಗ, ಅಂತರಂಗ ಷಡಂಗವೆಂದು ಎರಡು ಬಗೆ. ಬಹಿರಂಗ ಷಡಂಗ ಘ್ರಾಣ, ಜಿಹ್ವೆ, ನೇತ್ರ, ತ್ವಕ್, ಶ್ರೋತ್ರ, ಮನಗಳು. ಅಂತರಂಗ ಷಡಂಗಗಳೆಂದರೆ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವಗಳು. ಇವು ಒಂದಕ್ಕೊಂದು ಪರಿವಿಡಿದು ಸಂಬಂಧವಿರುವವು. ಒಂದರ ಶುದ್ಧಿ ಇನ್ನೊಂದಕ್ಕೆ ಸಂಬಂಧಿಸಿರುತ್ತದೆ. ಇದರಿಂದಾಗಿ ಒಟ್ಟಾಗಿ ಷಡಂಗ ಶುದ್ಧಿಯನ್ನು ನಿರೂಪಿಸಲಾಗುತ್ತದೆ.

'ಶಿವಭಕ್ತಿಯುಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ, ಲೋಭ ಬೇಡ; ಮೋಹ ಬೇಡ, ಮದ ಬೇಡ, ಮತ್ಸರ ಬೇಡ. ಶಿವಭಕ್ತಿಯುಳ್ಳ ವಂಗೆ ಕಾಮ ಬೇಕು, ಕ್ರೋಧ ಬೇಕು, ಲೋಭ ಬೇಕು ; ಮೋಹ ಬೇಕು, ಮದ ಬೇಕು, ಮತ್ಸರ ಬೇಕು. ಬೇಕೆಂಬುದಕ್ಕೆ ಯಾವ ಗುಣ ? ಬೇಡೆಂಬು ದಕ್ಕಾವ ಗುಣ ? ಕಾಮ ಬೇಕು ಲಿಂಗದಲ್ಲಿ. ಕ್ರೋಧ ಬೇಕು ಕರಣಂ ಗಳಲ್ಲಿ. ಲೋಭ ಬೇಕು ಪಾದೋದಕ ಪ್ರಸಾದದಲ್ಲಿ. ಮೋಹ ಬೇಕು ಗುರುಲಿಂಗ ಜಂಗಮದಲ್ಲಿ. ಮದ ಬೇಕು ಶಿವಾಚಾರ ಘನವೆಂಬಲ್ಲಿ. ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ. ಇಂತೀ ಷಡ್ಗುಣವಿರಬೇಕು. ಬೇಡೆಂಬುದಕ್ಕಾವ ಗುಣ ? ಕಾಮ ಬೇಡ ಪರಸ್ತ್ರೀಯರಲ್ಲಿ. ಕ್ರೋಧ ಬೇಡ ಗುರುವಿನಲ್ಲಿ. ಲೋಭ ಬೇಡ ತನು ಮನದಲ್ಲಿ. ಮೋಹ ಬೇಡ ಸಂಸಾರದಲ್ಲಿ. ಮದ ಬೇಡ ಶಿವಭಕ್ತರಲ್ಲಿ. ಮತ್ಸರ ಬೇಡ ಸಕಲ ಪ್ರಾಣಿ ಗಳಲ್ಲಿ. ಇಂತೀ ಷಡ್ವಿಧ ಗುಣವನರಿದು ಮರೆಯಬಲ್ಲಡೆ ಆತನೆ ಸದ್ಭಕ್ತ ಕಾಣಾ ಕೂಡಲ ಚೆನ್ನ ಸಂಗಮದೇವಾ.'

ಇದು ಅಂತರಂಗ ಷಡಂಗಶುದ್ಧಿ. ಇನ್ನು ಬಹಿರಂಗ ಷಡಂಗ ಶುದ್ಧಿ ಯೆಂದರೆ ಘ್ರಾಣಾದಿಗಳು ರೂಪು ರುಚಿ ಮುಂತಾದ ಪದಾರ್ಥಗಳಿಗೆಳಸದೆ ಸುರೂಪು ಸುರುಚಿ ಮುಂತಾದ ಪ್ರಸಾದಗಳಿಗೆ ಎಳಸಬೇಕು. ಆಗ ಬಹಿ ರಂಗ ಷಡಂಗ ಶುದ್ಧಿಯುಂಟಾಗುತ್ತದೆ. ಇದಾಗಬೇಕಾದರೆ ಘ್ರಾಣಾದಿ ಗಳಂತೆ ಘ್ರಾಣತ್ವಾದಿಗಳು ಸಹ ಭಕ್ತ ಮಹೇಶಾದಿ ಷಟ್‌ಸ್ಥಲ ಸಂಪನ್ನ

ವಾಗಬೇಕಾಗುತ್ತದೆ. ಇದರಿಂದಾಗಿ ಭಕ್ತಸ್ಥಲದಲ್ಲಿಯೇ ಷಟ್‌ಸ್ಥಲಗಳೇರ್ಪಟ್ಟವು.

'ಮೆಲ್ಲ ಮೆಲ್ಲನೆ ಭಕ್ತ, ಮೆಲ್ಲ ಮೆಲ್ಲನೆ ಮಹೇಶ್ವರ, ಮೆಲ್ಲ ಮೆಲ್ಲನೆ ಪ್ರಸಾದಿ, ಮೆಲ್ಲ ಮೆಲ್ಲನೆ ಪ್ರಾಣಲಿಂಗಿ, ಮೆಲ್ಲ ಮೆಲ್ಲನೆ ಶರಣ, ಮೆಲ್ಲ ಮೆಲ್ಲನೆ ಐಕ್ಯನಾದೆನೆಂಬರು ನಿಮ್ಮ ಶರಣರು. ತಾವೇನು ಮರುಜೀವಣಿಯ ಕೊಂಡಿದ್ದರೆ ? ಅಮೃತ ಸೇವನೆಯ ಮಾಡಿದ್ದರೆ ? ಆವಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗದಿದ್ದಡೆ, ಆ ಭಕ್ತನ ಬಾಯಲ್ಲಿ ಹುಡಿಮಣ್ಣು ಹೊಯ್ದು ಹೋಗನೆ ನಮ್ಮ ಕೂಡಲ ಚೆನ್ನಸಂಗಮ ದೇವಾ ?'

ಚೆನ್ನಬಸವಣ್ಣನವರ ಈ ಚೆಲುವ ಅನುಭಾವ ವಚನವನ್ನು ಅನುಸರಿಸಿ ಭಕ್ತಸ್ಥಲದೊಳಗಿನ ಷಟ್‌ಸ್ಥಲಗಳನ್ನು ಸಾಗರದೊಳಗಿನ ಮಳಲ ಕಣಗಳಂತೆ ಬಗೆ ಬಂದಂತೆ ಮುಂದುವರಿಸುವೆವು.

ಷಟ್‌ಸ್ಥಲಗಳು ಸಾಮಾಜಿಕವೆಂತಲೂ ವೈಯಕ್ತಿಕವೆಂತಲೂ ದ್ವಿವಿಧ. ವೀರಶೈವ ಕೌಟುಂಬಿಕ ಅಥವಾ ಸಾಮಾಜಿಕ ಜೀವನದಲ್ಲಿ ಒಬ್ಬ ಕಿರಿಯ ಭಕ್ತನಿಗೆ ಇನ್ನೊಬ್ಬ ಹಿರಿಯನು ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯನಾಗುತ್ತಾನೆ. ಇದು ರೂಢಿಗತ ಶಿವಾಚಾರ. ಭಕ್ತನ ಭಕ್ತನೆಂದರೆ ಕಿರಿಯನೆಂದರ್ಥವಲ್ಲ. ಭಕ್ತನೇ ಶಿವನಿಗಿಂತ ಅಧಿಕ. ಭಕ್ತನ ಭಕ್ತ ಇನ್ನೂ ಅಧಿಕ. ಇನ್ನು ಮುಂದಿನ ಭಕ್ತನ ಮಹೇಶಾದಿಗಳು ಹಿರಿಯರಾಗಿಯೇ ಇರುವರು. ಇದು ಸಂಪ್ರದಾಯ ದೃಷ್ಟಿ. ಸಾಗಿಬಂದ ಸಾಮಾಜಿಕ ದೃಷ್ಟಿ.

ಆಚರಣೆಯ ದೃಷ್ಟಿಯಲ್ಲಿ ಹಿರಿದು ಕಿರಿದೆಂಬ ಭೇದವಿಲ್ಲ ; ಆಯುಷ್ಯದ ಪರಿಮಿತಿಯಿಲ್ಲ. ಆಚಾರ-ವಿಚಾರವುಳ್ಳ ಕಿರಿಯ ಹಿರಿಯನಾಗುತ್ತಾನೆ. ಅದೇ ಆಚಾರ ವಿಚಾರ ವಿರಹಿತನು ವಯಸ್ಸಿನಿಂದ ಹಿರಿಯನಾಗಿದ್ದರೂ ಕಿರಿಯನೆನಿಸುತ್ತಾನೆ. ಇಲ್ಲಿ ಆ ಆ ಸ್ಥಲಾಚರಣೆಗಳೇ ಮುಖ್ಯ. ಇದು ಸ್ವಯಾಚರಣೆಯ ಸಂಗತಿ. ಈ ಬಗೆಯಲ್ಲಿ ಮುಂದಿನ ವಿವರಣೆ :

ಭಕ್ತನ ಭಕ್ತ ಸ್ಥಲ :

ಇಷ್ಟಲಿಂಗದ ಆಚಾರ ವಿಚಾರಾನುಭವಗಳಿಂದ ತ್ಯಾಗಾಂಗನು ಪೃಥ್ವಿ ಜಲಗಳೆರಡರ ಪೂರ್ವಾಶ್ರಯವನ್ನು ಕಳೆದು 'ಭಕ್ತ' ನೆನಿಸುತ್ತಾನೆ. ಈ ತ್ಯಾಗಾಂಗನ ಉಪಾಂಗವಾದ ಘ್ರಾಣವು ಆಚಾರ ಲಿಂಗಾನುಭಾವದಿಂದ ಪೃಥ್ವಿಜನ್ಯಗಂಧದ ಪೂರ್ವಾಶ್ರಯುವಾದ ಪದಾರ್ಥತ್ವವನ್ನು ಕಳೆದು ಪ್ರಸಾದವನ್ನಾಗಿಸಿ ತ್ಯಾಗಾಂಗ 'ಭಕ್ತನ ಭಕ್ತ' ನೆಂದೆನಿಸುತ್ತದೆ. ಭಕ್ತನ ಭಕ್ತನಾದ ಈ ಘ್ರಾಣವಿಲ್ಲದೆ ತ್ಯಾಗಾಂಗದಾಟ ನಡೆಯದು. ಮತ್ತು ಘ್ರಾಣವು ಭಕ್ತನ:ಭಕ್ತವಾಗದಿದ್ದರೆ ತ್ಯಾಗಾಂಗ ಭಕ್ತನಾಗಿಯೂ ಸುಖವಿಲ್ಲ, ಭಕ್ತನಾಗಲು ಬರುವಂತಿಲ್ಲ. ಬರೀ ಪೃಥ್ವಿಯ ಪೂರ್ವಾಶ್ರಯವನ್ನು ಕಳೆದರಾಗದು. ಪೃಥ್ವಿಗುಣವಾದ ಗಂಧದ ಪೂರ್ವಾಶ್ರಯವನ್ನು ಕಳೆಯಬೇಕು.

ಸಗಣಿಯಿಂದ ಸಾರಿಸಿ ರಂಗವಲ್ಲಿಯನಿಟ್ಟರೆ ಧೂಳೋದಕವನ್ನು ಸಿಂಪಡಿಸಿದರೆ ಮನೆಯು ಪೃಥ್ವಿಯ ಪೂರ್ವಾಶ್ರಯ ದೋಷ ಪರಿಹಾರವಾಗುತ್ತದೆ. ಮಂತ್ರೋದಕದಿಂದ ಮೈತೊಳೆದರೆ (ಜಳಕ ಮಾಡಿದರೆ) ಶುದ್ಧೋದಕದಿಂದ ಸಿಂಚಿಸಿಕೊಂಡರೆ ಮೈ (ತ್ಯಾಗಾಂಗ) ಯ ಪೃಥ್ವಿಯ ಪೂರ್ವಾಶ್ರಯ ನಿವೃತ್ತಿಯಾಗುತ್ತದೆ. ಆಗ ತ್ಯಾಗಾಂಗ ಭಕ್ತನೆನಿಸುತ್ತದೆ. ಯಾವ ವಸ್ತುವಿನಿಂದ ಗಂಧ ಬರಲಿ ಅದನ್ನು ಮೊದಲು ಆಚಾರಲಿಂಗಕ್ಕೆ ಅರ್ಪಿಸಿ ಸುಗಂಧ ಪ್ರಸಾದವಾಗಿಸಿ ಉಪಭೋಗಿಸಿದರೆ ಆಗ ಘ್ರಾಣೇಂದ್ರಿಯವು ತ್ಯಾಗಾಂಗ ಭಕ್ತನ ಭಕ್ತನೆನಿಸುತ್ತದೆ. ಘ್ರಾಣೇಂದ್ರಿಯವು ತ್ಯಾಗಾಂಗ ಭಕ್ತನ ಭಕ್ತನಾದಂತೆ ಆಧಾರ ಮತ್ತು ಆಧಾರ ಗತಚಿತ್ತ, ಗುದ ಇವು ಸಹ 'ಭಕ್ತನ ಭಕ್ತ' ಆಗುತ್ತವೆ. ಘ್ರಾಣ, ಆಧಾರ ಗತಚಿತ್ತ, ಗುದ ಈ ಮೂರು ಸೃಷ್ಟಿಭಕ್ತ, ಸ್ಥಿತಿಭಕ್ತ, ಲಯಭಕ್ತರಾಗಿರುತ್ತಾರೆ. ಸೃಷ್ಟಿಭಕ್ತನಾದ 'ಘ್ರಾಣ'ದಲ್ಲಿ ಸುಗಂಧ ಪ್ರಸಾದ ಸೃಷ್ಟಿಯಾದರೆ ಆಧಾರದಲ್ಲಿ ಸ್ಥಿತಿಯಾಗಿ ಚಿತ್ತಹಸ್ತದಲ್ಲಿ ಶ್ರೇಷ್ಠಾಂಶನಿಂತು ಗುದದಲ್ಲಿ ಶೇಷಾಂಶ ಲಯವಾಗುತ್ತದೆ.

"ತ್ಯಾಗಾಂಗಕ್ಕೆ ಕ್ರಿಯವೇ ಆಶ್ರಯ. ಕ್ರಿಯೆಗೆ ಪ್ರಾಣವೇ ಆಶ್ರಯ. ಪ್ರಾಣಕ್ಕೆ ಘ್ರಾಣಾಧಾರಗಳೇ ಆಶ್ರಯ. ಘ್ರಾಣಾಧಾರಾದಿಗಳಿಗೆ ಸುಗಂಧ

ಪ್ರಸಾದವೇ ಆಧಾರ. ಸುಗಂಧ ಪ್ರಸಾದಕ್ಕೆ ಕರ್ಮಸಾದಾಖ್ಯ ಆಚಾರ ಲಿಂಗವೇ ಮೂಲಾಧಾರ. ಇಂತಿವನು ಶ್ರದ್ಧೆಯಿಂದ ಅರಿದು ಆಚರಿಸ ಬಲ್ಲಾತನೆ ಭಕ್ತನ ಭಕ್ತ ಶ್ರೀ ನಿಡುಮಾಮಿಡಿ ಶ್ರೀಗಿರಿಸೂರ್ಯ ಸಿಂಹಾಸನಾ ಧೀಶ್ವರ. ಇದು ಭಕ್ತನ ಭಕ್ತಸ್ಥಲ ನಿರ್ಣಯ."

'ಕೃಷಿಕೃತ್ಯ ಆವ ಕಾಯಕದಿಂದಾದೊಡೇನು ? ತನು ಮನ ಬಳಲಿಸಿ ಗಳಸಿ ತಂದು, ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂತೆಂದೊಡೆ ಆತನ ತನುಶುದ್ಧ, ಆತನ ಮನಶುದ್ಧ; ಆತನ ನಡೆಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು. ಅಂತಪ್ಪ ಸದ್ಭ ಕ್ತನ ಮನೆಯು ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೆ ಜಗತ್ಪಾವನ. ಇಂತಪ್ಪ ಗುರು ಶಿಷ್ಯ ಜಂಗಮಕ್ಕೆ ನಾನು ನೆರೆ ನಂಬಿ ನಮೋ ನಮೋ ಎಂಬೆನಯ್ಯಾ ಕೂಡಲ ಚೆನ್ನ ಸಂಗಮದೇವಾ'

ಕರ್ಮಸಾದಾಖ್ಯಾತ್ಮಕ ಆಚಾರ ಲಿಂಗದ ಬೆಂಬಲವುಳ್ಳುದಕ್ಕೆ ಇದು ಸಾಕ್ಷಿ. ಅದಕ್ಕೆ ಭಕ್ತನಾಗದೆ ಜೀವನವಿಲ್ಲ. ಆ ಆಚಾರದೊಳಗಿನ ಆಚಾರಲಿಂಗವನ್ನು ಆರಾಧಿಸುವಾಗ 'ಭಕ್ತನ ಭಕ್ತ' ಎಂದೆನಿಸುತ್ತಾನೆ ಭಕ್ತ.

ಭಕ್ತನ ಮಹೇಶ ಸ್ಥಲ :

ಇಲ್ಲಿಯೂ 'ಭಕ್ತನ ಭಕ್ತಸ್ಥಲ'ದಲ್ಲಿ ಹೇಳಿದ ತ್ಯಾಗಾಂಗನೇ ಭಕ್ತ. ಅಲ್ಲಿ ಪೃಥ್ವಿಯ ಪೂರ್ವಾಶ್ರಯವನ್ನು ಕಳೆದಿದ್ದರೆ ಇಲ್ಲಿ ತ್ಯಾಗಾಂಗನು ಅಪ್ಪುವಿನ ಪೂರ್ವಾಶ್ರಯ ದೋಷವನ್ನು ಕಳೆದಿರುತ್ತಾನೆ. ತ್ಯಾಗಾಂಗ ಭಕ್ತನೇ ಮಹೇಶನಾಗುತ್ತಾನೆ. ಭಕ್ತತ್ವ ಮಹೇಶತ್ವವೆರಡೂ ತ್ಯಾಗಾಂಗ ಕ್ಕಿರುವುದರಿಂದ ಭಕ್ತನ ಮಹೇಶಸ್ಥಲವು ತ್ಯಾಗಾಂಗಕ್ಕೆ ಸಂಘಟಿಸುತ್ತದೆ.

ಎರಡನೆಯದಾಗಿ ಕೇವಲ ಭಕ್ತನಿಗೆ ಕೇವಲ ಮಹೇಶನ ಸಂಬಂಧ ವಿರುವುದನ್ನು ಅನುಭವಕ್ಕೆ ತಂದುಕೊಳ್ಳಬೇಕು. ತ್ಯಾಂಗಾಂಗನೆಂಬ

ಭಕ್ತನಿಗೆ ಭಕ್ತನಾದ ಘ್ರಾಣವು ಇಲ್ಲಿ ಕೇವಲ ಭಕ್ತನೆಂದೆನಿಸುತ್ತದೆ. ಅಲ್ಲಿ ಅಂಗೋಪಾಂಗ ದೃಷ್ಟಿಯಲ್ಲಿ ಭಕ್ತನ ಭಕ್ತವಾದರೆ ಇಲ್ಲಿ ಉಪಾಂಗ ಗಳ ಮಾಲಿಕೆಯಲ್ಲಿ ಘ್ರಾಣವು ಕೇವಲ ಭಕ್ತಸ್ಥಲಸ್ಥವಾಗಿರುತ್ತದೆ. ಈ ಆಚಾರಲಿಂಗೋಪಾಸಕ ಘ್ರಾಣಭಕ್ತನಿಗೆ ಗುರು ಲಿಂಗೋಪಾಸಕ ಜಿಹ್ವೆಯು ಭಕ್ತನ ಮಹೇಶಸ್ಥಲ ಸಂಪನ್ನವಾಗುತ್ತದೆ. ಘ್ರಾಣದ ಸಂಬಂಧ ದಲ್ಲಿ ಜಿಹ್ವೆ ತನ್ನ ಕ್ರಿಯಾನಿರತವಾಗುತ್ತದೆ. ಆಚಾರ ಲಿಂಗದ ಸಂಬಂಧ ಸೂತ್ರದಲ್ಲಿ ಗುರುಲಿಂಗ ಸುರಸ ಪ್ರಸಾದವನ್ನು ಸ್ವೀಕರಿಸುತ್ತದೆ.

ಒಟ್ಟಿನಲ್ಲಿ ಘ್ರಾಣಭಕ್ತನ ಮಹೇಶ ಅಥವಾ ತ್ಯಾಗಾಂಗ ಭಕ್ತನ ಮಹೇಶ ಜಿಹ್ವೆ. ಈ ಜಿಹ್ವೆಯು ಗುರುಲಿಂಗಾನುಭಾವದಿಂದ ಜಲಜನ್ಯ ರಸದ ಪೂರ್ವಾಶ್ರಯ ಪದಾರ್ಥತ್ವವನ್ನು ಪರಿಹರಿಸಿ ಪ್ರಸಾದವನ್ನಾಗಿಸಿ ಭಕ್ತನ ಮಹೇಶನೆಂದೆನಿಸುತ್ತದೆ.

ಭಕ್ತನ ಮಹೇಶ ಎಂದೆನಿಸಿದ ಈ ಜಿಹ್ವೆಯಿಲ್ಲದೆ ಘ್ರಾಣಭಕ್ತನ ಆಟ ನಡೆಯದು. ಘ್ರಾಣಭಕ್ತನಿಗೆ ಜಿಹ್ವೆಯೇ ಪ್ರಭು. ಆಚಾರಲಿಂಗಕ್ಕೆ ಗುರುಲಿಂಗವೇ ಚೈತನ್ಯ. ಘ್ರಾಣಕ್ಕೆ ಭಕ್ತತ್ವ ಮೀಸಲಾದರೆ ಜಿಹ್ವೆಗೆ ಮಹೇಶತ್ವ ಮೀಸಲ. ಅಂತೆಯೇ ಭಕ್ತನ ಮಹೇಶತ್ವವೂ ಮೀಸಲ.

ತ್ಯಾಗಾಂಗ ಬರೀ ಅಪ್ಪುವಿನ ಪೂರ್ವಾಶಯ ದೋಷವನ್ನು ಕಳೆ ದರೆ ಪೂರ್ಣ ರೂಪವಾಗದು. ಆ ಜಲಜನ್ಯ ರಸದ ಗುಣದೋಷವನ್ನು ಕಳೆಯುವುದೇ ಮುಖ್ಯ. ಈ ಕಾರ್ಯವನ್ನು ಮಾಡುತ್ತದೆ ಗುರು ಲಿಂಗದಾಶ್ರಯದಲ್ಲಿ ಜಿಹ್ವೆ. ಸುರಸ ಪ್ರಸಾದದ ಮಾಧುರ್ಯವನ್ನು ಉಣಿಸಿ ಸ್ವಾಧಿಷ್ಠಾನವನ್ನು ತಣಿಸುತ್ತದೆ ರಸನೆ.

ಪಾದ ಹಸ್ತ ಮಂತ್ರಗಳ ಸ್ಪರ್ಶದಿಂದ ಸಮಷ್ಟಿ ಜಲಶುದ್ಧಿಯಾದರೆ ಆ ಜಲಜನ್ಯರಸವು ಪಾದ ಹಸ್ತ ಮಂತ್ರ ಭೂತಿಗಳ ಜತೆಗೆ ಜಿಹ್ವೆಯ ಸ್ಪರ್ಶದಿಂದ ತನ್ನ ರಸದೋಷವನ್ನು ಕಳೆದುಕೊಳ್ಳುತ್ತದೆ. ತನ್ನಲ್ಲಿಗೆ ಬಂದ ಆ ರಸವನ್ನು ಗುರುಲಿಂಗಕ್ಕರ್ಪಿಸಿ ಸುರಸ ಪ್ರಸಾದವನ್ನಾಗಿಸುವ ಅಧಿಕಾರ ಜಿಹ್ವೆಗಿರುತ್ತದೆ. ಆ ಸುರಸ ಪ್ರಸಾದವನ್ನು ಉಪಭೋಗಿಸಿ ಅದರ ಸತ್ವದಿಂದ ಘ್ರಾಣಭಕ್ತನನ್ನು ನೇತ್ರಪ್ರಸಾದಿಯನ್ನು ತ್ವಕ್ ಪ್ರಾಣ

ಲಿಂಗಿಯನ್ನು ಶ್ರೋತ್ರ ಶರಣನನ್ನು ಹೃದಯೈಕ್ಯನನ್ನು ಬಾಳಿಸಿ ಪ್ರೇರೇಪಿಸುವ ಪ್ರಭುತ್ವ ಗುರುಲಿಂಗಾಶ್ರಯದ ಜಿಹ್ವೆಗಿದೆ. ಅಂತೆಯೇ ಇದು ಮಹೇಶಸ್ಥಲ ಸಂಪನ್ನ.

ಜಿಹ್ವೆ, ಸ್ವಾಧಿಷ್ಠಾನ, ಗುಹ್ಯ ಇವು ಮೂರು ಭಕ್ತನ ಮಹೇಶ ಸ್ಥಲ ಸಂಪನ್ನವಾಗುತ್ತವೆ. ಇವು ಕ್ರಮವಾಗಿ ಸೃಷ್ಟಿ ಮಹೇಶ. ಸ್ಥಿತಿ ಮಹೇಶ, ಲಯಮಹೇಶಗಳಾಗಿರುತ್ತವೆ. ಸುರಸಪ್ರಸಾದವು ಜಿಹ್ವಾಮಹೇಶನಲ್ಲಿ ಸೃಷ್ಟಿಯಾಗಿ ಸ್ವಾಧಿಷ್ಠಾನ ಮಹೇಶನಲ್ಲಿ ಸ್ಥಿತಿಗೊಂಡು, (ಬುದ್ಧಿಹಸ್ತದಲ್ಲಿ ಶ್ರೇಷ್ಠಾಂಶ ನಿಂತು) ಗುಹ್ಯ ಮಹೇಶನಲ್ಲಿ ಶೇಷಾಂಶಲಯವಾಗುತ್ತದೆ.

ಗುರುಲಿಂಗವು ಹೇಗೆ ಉಳಿದೆಲ್ಲ ಲಿಂಗಗಳಿಗೆ ತನ್ನ ಚಿತ್ಕಳಾಚೈತನ್ಯ ಸತ್ವವನ್ನೀಯಬಲ್ಲುದಾಗಿ ಗುರು ಅಂದರೆ ಬೃಹತ್ ಎಂದೆನಿಸಿಕೊಂಡಿವೆಯೋ ಹಾಗೆ ಅದರಂಗವಾದ ಜಿಹ್ವೆಯು ಉಳಿದೆಲ್ಲ ಅಂಗೋಪಾಂಗಗಳಿಗೆ ಕ್ರಿಯಾಸತ್ವವನ್ನು ಕೊಡುವುದಾಗಿ ಮಹೇಶ (ಹಿರಿಯೊಡೆಯ) ನೆಂದೆನಿಸಿದೆ.

"ತ್ಯಾಗಾಂಗಕ್ಕೆ ಕ್ರಿಯೆಯೇ ಆಧಾರ. ಕ್ರಿಯೆಗೆ ಪ್ರಾಣವೇ ಆಧಾರ. ಪ್ರಾಣಕ್ಕೆ ಜಿಹ್ವೆ ಸ್ವಾಧಿಷ್ಠಾನಗಳೇ ಆಧಾರ. ಜಿಹ್ವೆ ಸ್ವಾಧಿಷ್ಠಾನಾದಿಗಳಿಗೆ ಸುರಸ ಪ್ರಸಾದವೇ ಆಧಾರ. ಸುರಸ ಪ್ರಸಾದಕ್ಕೆ ಕರ್ತೃಸಾದಾಖ್ಯ ಗುರುಲಿಂಗವೇ ಮುಖ್ಯಾಧಾರ. ಇಂತೀ ಆಯುದ್ಧ ಲಕ್ಕಣವನು ಅರಿದು ನಿಷ್ಠೆಯಿಂದ ಆಚರಿಸಬಲ್ಲರೆ ಆತ ಭಕ್ತನ ಮಹೇಶನೆಂಬ ಶ್ರೀ ನಿಡುಮಾಮಿಡಿ ಶ್ರೀಗಿರಿಸೂರ್ಯಸಿಂಹಾಸನಾಧೀಶ್ವರ."

ಕಾಯಭಕ್ತನಲ್ಲಿ ಜೀವ ಮಾಹೇಶ್ವರನಿರುವುದರಿಂದ ಭಕ್ತನ ಮಾಹೇಶ್ವರತ್ವವು ಸ್ವಯಂ ಸಿದ್ಧವಾಗುತ್ತದೆ.

'ಕಾಯದ ಮೇಲೆ ಲಿಂಗವ ಧರಿಸಿ ದೇವಪೂಜೆಯ ಮಾಡಿ ಕಾಯವಳಿದು ದೇವತಾಭೋಗವನು ಎಯ್ದಿಹೆನೆಂಬ ಗಾವಿಲರನೆನಗೊಮ್ಮೆ ತೋರದಿರಯ್ಯಾ! ಕಾಯವನೂ ಜೀವವನೂ ಲಿಂಗದಲ್ಲಿ ಇರಿಸಬಲ್ಲರೆ ಮಹಾ

ದೇವನೆಂದು ಬೇರುಂಟೆ? ಆ ಮಹೇಶ್ವರಂಗೆ ನಮೋ ನಮೋ ಎಂಬೆನು ಕಾಣಾ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ!'

ಕರ್ತೃಸಾದಾಖ್ಯ ಸ್ವರೂಪ ಗುರುಲಿಂಕ್ಕೆ ನೆಲೆಯಾದ ರಸನೆಯು ಮಹೇಶ್ವರನೆನಿಸುವಲ್ಲಿ ಅಚ್ಚರಿಯೇನಿಲ್ಲ, ಮತ್ತು ಕರ್ಮಸಾದಾಖ್ಯ ಸ್ವರೂಪ ಆಚಾರ ಲಿಂಗಾರಾಧಕ ಘ್ರಾಣಭಕ್ತನ ಭಕ್ತನಾಶ್ರಯದಲ್ಲಿರುವುದರಿಂದ ರಸನೆಯು ಭಕ್ತನ ಮಹೇಶ್ವರ ಎಂದು ಹೇಳಿಸಿಕೊಂಡಿದೆ. ಕರ್ತೃಸಾದಾಖ್ಯತ್ವವನ್ನು ಸಂಪಾದಿಸದೆ ಮಹೇಶತ್ವವಿಲ್ಲ. ಆ ಆಚಾರಲಿಂಗದೊಳಗಿನ ಗುರು ಲಿಂಗವನ್ನು ಆರಾಧಿಸುವಾಗ 'ಭಕ್ತನ ಮಹೇಶ್ವರ'ನೆನಿಸುತ್ತಾನೆ.

ಭಕ್ತನ ಪ್ರಸಾದಿ ಸ್ಥಲ :

ಇಲ್ಲಿ ಭೋಗಾಂಗ ಭಕ್ತ. ತೇಜದ ಪೂರ್ವಾಶ್ರಯ ದೋಷವನ್ನು ಈ ಭೋಗಾಂಗನು ಬಿಟ್ಟಿರುತ್ತಾನೆ. ತ್ಯಾಗಾಂಗದಾಶ್ರಯದಲ್ಲಿ ಭೋಗಾಂಗನಿರುತ್ತಾನೆ. ತ್ಯಾಗಾಂಗ ಸ್ಥೂಲ: ಭೋಗಾಂಗ ಸ್ಥೂಲ ಸೂಕ್ಷ್ಮ. ತ್ಯಾಗಾಂಗಕ್ಕೆ ಇಷ್ಟ (ಕ್ರಿಯಾ) ಲಿಂಗ ಚೈತನ್ಯವಾದರೆ ಭೋಗಾಂಗಕ್ಕೆ ಪ್ರಾಣ (ಜ್ಞಾನ) ಲಿಂಗ ಚೈತನ್ಯವಾಗಿದೆ. ತ್ಯಾಗಾಂಗಕ್ಕೆ ಸದ್ಯೋಜಾತ ವಾಮದೇವ ಮುಖಗಳಾದರೆ ಭೋಗಾಂಗಕ್ಕೆ ಅಘೋರ ತತ್ಪುರುಷಗಳು ಮುಖಗಳಾಗಿವೆ. ಕ್ರಿಯಾಲಿಂಗಕ್ಕೆ ಕರ್ಮಸಾದಾಖ್ಯ ಕರ್ತೃಸಾದಾಖ್ಯಗಳು ಕಿರಣಗಳಾದರೆ ಜ್ಞಾನಲಿಂಗಕ್ಕೆ ಮೂರ್ತಸಾದಾಖ್ಯ ಅಮೂರ್ತಸಾದಾಖ್ಯಗಳು ಕಿರಣಗಳಾಗಿವೆ.

ಮೂರ್ತಸಾದಾಖ್ಯಾತ್ಮಕ ಶಿವಲಿಂಗಾರಾಧನ ಅನುಭೂತಿಗಳಿಂದ ತೇಜೋಂಗವಾದ ನೇತ್ರೋಪಾಂಗವು ಭಕ್ತನ ಪ್ರಸಾದಿಯಾಗುತ್ತದೆ. ರೂಪ ಪದಾರ್ಥವನ್ನು ಮೂರ್ತಸಾದಾಖ್ಯಾತ್ಮಕ ಶಿವಲಿಂಗಕ್ಕೆ ನೇತ್ರಾಂಗನರ್ಪಿಸಿ ಶೇಷ ಸುರೂಪ ಪ್ರಸಾದೋಪಭೋಗಿಯಾಗಿ, ಪ್ರಸಾದಿಯೆನಿಸುತ್ತಾನೆ. ಭೋಗಾಂಗವು ನೇತ್ರಪ್ರಸಾದಿಯಿಂದ ಸುರೂಪಪ್ರಸಾದವನ್ನು ಪಡೆದು ಭಕ್ತ

ಎನಿಸುತ್ತದೆ. ನೇತ್ರವು ಶಿವಲಿಂಗ ಪ್ರಸಾದವನ್ನು ಪಡೆದು ಪ್ರಸಾದಿಯೆನಿಸುತ್ತದೆ. ಇದರಿಂದಾಗಿ 'ಭಕ್ತನ ಪ್ರಸಾದಿ' ಎಂಬ ಹೆಸರು.

ಸ್ಥೂಲ ತ್ಯಾಗಾಂಗದಾಶ್ರಯದಲ್ಲಿ ಸೂಕ್ಷ್ಮ ಭೋಗಾಂಗವು ಎಲೆಯಿಂದ ಹೂವಾಗುವಂತೆ ರೂಪಿತಗೊಳ್ಳುವ ರೀತಿಯಲ್ಲಿ ಜಿಹ್ವೋಪಾಂಗ ಮಹೇಶನಿಂದ ನೇತ್ರೋಪಾಂಗ ಪ್ರಸಾದಿ ರೂಪಿತನಾಗುತ್ತಾನೆ. ಸುರಸ ಪ್ರಸಾದವಿಲ್ಲದೆ ಸುರೂಪ ಪ್ರಸಾದವುಂಟಾಗದು.

ಭೋಗಾಂಗವು ಬರೀ ತೇಜ (ಅಗ್ನಿ)ದ ಪೂರ್ವಾಶ್ರಯ ದೋಷವನ್ನು ನಿವೃತ್ತಿಗೊಳಿಸಿದರೆ ಆ ತೇಜೋಗತ ರೂಪದ ಗುಣದೋಷಗಳನ್ನು ಕಳೆಯುತ್ತದೆ. ಶಿವಲಿಂಗಾರಾಧನೆಯಲ್ಲಿರುವ ಕಣ್ಣು ಸುರೂಪು (ಸೌಂದರ್ಯ) ಜ್ಯೋತಿಯನ್ನು ಮಣಿಪೂರಕದಲ್ಲಿ ಬೆಳಗಿಸುತ್ತದೆ ಸುಲೋಚನ.

ಧೂಪ ದೀಪಾರ್ಪಣದಿಂದ ಉಷ್ಣಪ್ರಸಾದಾರ್ಪಣದಿಂದ ಪಾಣಲಿಂಗದ ಪರಿಧಿಯಲ್ಲಿ ಸನ್ನಿಧಿಯಲ್ಲಿ ತ್ಯಾಗಾಂಗನು ತೇಜವನ್ನು ಪ್ರಸಾದವನ್ನಾಗಿಸಿದರೆ ಆ ತೇಜದ ಪರಿಣಾಮವಾದ ರೂಪವನ್ನು ನೇತ್ರೋಪಾಂಗವು ಮೂರ್ತ ಸಾದಾಖ್ಯವಾದ ಶಿವಲಿಂಗಕ್ಕರ್ಪಿಸಿ ಪ್ರಸಾದವನ್ನಾಗಿಸುತ್ತದೆ. ಈ ನೇತ್ರ ಪ್ರಸಾದಿಯ ದರ್ಶನ ಪ್ರಸನ್ನತೆಯಿಂದ ಉಳಿದ ಸರ್ವಾಂಗ ಸ್ಥಲವೂ ಪ್ರಸನ್ನವಾಗಿರುತ್ತದೆ. ಮಾಟ, ನೋಟ, ನಿಚ್ಚಟವಾಗದೆ ಮನದ ಪ್ರಸನ್ನತೆಯುಂಟಾಗದು. ಇದಾಗದ ಬಳಿಕ ಮೈ ಪ್ರಸನ್ನವಾಗಿರದು.

ನೇತ್ರ ಮಣಿಪೂರಕ ಪಾದ ಇವು ಮೂರು ಭೋಗಾಂಗ ಭಕ್ತನ ಪ್ರಸಾದಿಸ್ಥಲ ಸಂಪನ್ನವಾಗುತ್ತವೆ. ಇವು ಪರಿವಿಡಿದು ಸೃಷ್ಟಿಪ್ರಸಾದಿ, ಸ್ಥಿತಿ ಪ್ರಸಾದಿ, ಲಯಪ್ರಸಾದಿಗಳಾಗಿರುತ್ತವೆ. ಸುರೂಪ ಪ್ರಸಾದವು ನೇತ್ರ ಪ್ರಸಾದಿಯಲ್ಲಿ ಹುಟ್ಟಿ, ಮಣಿಪೂರಕ ಪ್ರಸಾದಿಯಲ್ಲಿ ತಂಗಿ, (ಅಹಂಕಾರ ಹಸ್ತದಲ್ಲಿದ್ದು) ಪಾದ ಪ್ರಸಾದಿಯಲ್ಲಿ ಶೇಷಾಂಶವು ಹೊರ ಹೋಗುತ್ತದೆ.

ನೇತ್ರ ಪ್ರಸನ್ನವಾದರೆ ಅಹಂಕಾರವೆಂಬ ಅಂತಃಕರಣ ಮತ್ತು ಚರಣಗಳು ಪ್ರಸನ್ನವಾಗಿರುತ್ತವೆ. ಪ್ರಸನ್ನಾತ್ಮರ ಚರಣಾಂಗುಳಿಗಳ ಮುಖಾಂತರ ಹೊರಹೊಮ್ಮುವ ಶೇಷ ಸುರೂಪ ಪ್ರಸಾದಾಂಶವನ್ನು ಗ್ರಹಿಸುವ ವಿಧಾನವೇ ಪಾದೋದಕ ವಿಧಾನ. ಆ ಪ್ರಸಾದ ತೇಜೋಂಶವಾದ್ದರಿಂದ ಪಾದೋದಕವೂ

ತೇಜೋರೂಪವಾಗಿ ಬರುತ್ತದೆ. ಅದರ ಸ್ವೀಕಾರದಿಂದ ತೇಜಸ್ವಿತೆಯು ಪ್ರಸನ್ನತೆಯು ಪ್ರಾಪ್ತವಾಗುತ್ತದೆ.

"ಭೋಗಾಂಗಕ್ಕೆ ಜ್ಞಾನವೇ ಆಸರ. ಜ್ಞಾನಕ್ಕೆ ನೇತ್ರ ಮಣಿ ಪೂರಕಗಳೇ ಆಸರ. ನೇತ್ರ ಮಣಿ ಪೂರಕಗಳಿಗೆ ಸುರೂಪ ಪ್ರಸಾದವೇ ಆಸರ. ಆ ಸುರೂಪು ಪ್ರಸಾದಕ್ಕೆ ಮೂರ್ತಸಾದಾಖ್ಯ ಸ್ವರೂಪ ಶಿವಲಿಂಗವೇ ಆದಿ ಆಸರ· ಇಂತಿವನು ಅವಧಾನ ಭಕ್ತಿಯಿಂದ ಅರಿದಾಚರಿಸಿದಲ್ಲಿ ಆತನ ಭಕ್ತನ ಪ್ರಸಾದಿಯೆಂಬೆ ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ."

"ತನ್ನ ಅಂಗದ ಮೇಲೆ ಶಿವಲಿಂಗವಿದ್ದು ಸತ್ಕ್ರಿಯಾ ಮುಖದಿಂದ ಲಿಂಗಾರ್ಪಿತವ ಮಾಡಿ, ಆ ಲಿಂಗಪ್ರಸಾದವ ಕೊಂಬುದೇ ಶಿವಾಚಾರ ಸತ್ಪಥ. ಆ ಸದ್ಭಕ್ತನಲ್ಲಿ ಶಿವನಿಪ್ಪನು. ಹೀಂಗಲ್ಲದೆ ಅಂತರಂಗದೊಳಗೆ ಆತ್ಮ ಲಿಂಗವುಂಟೆಂದು ಮನಭಾವಂಗಳಿಂದ ಅರ್ಪಿತವೆಂದು ಇಷ್ಟಲಿಂಗಾರ್ಪಣ ವಿಲ್ಲದ ಕರಕಷ್ಟಂಗೆ ಅವನಿಗೆ ಆವ ಸತ್ಯವೂ ಇಲ್ಲ; ಆವ ಸದಾಚಾರವೂ ಇಲ್ಲ. ಶಿವಜ್ಞಾನವೆಂಬುದು ಮುನ್ನವೇ ಇಲ್ಲ. ಶಿವಲಿಂಗಾರ್ಪಣ ಹೀನ ವಾಗಿ ಕೊಂಬುದು ಅದು ಶಿವಜ್ಞಾನವೇ ? ಇಂತಪ್ಪ ಅಜ್ಞಾನಿಗಳನೆನ ಗೊಮ್ಮೆ ತೋರದಿರಯ್ಯಾ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ"

ಕಣ್ಣು ಮೊದಲು ಪ್ರಸಾದಿಯಾಗುವುದು ಶಿವಸ್ವರೂಪಿಯಾದ ಶ್ರೀ ಗುರು ದರ್ಶನದಲ್ಲಿ ! ಬಳಿಕ ಆ ಶ್ರೀಗುರುಕಾರುಣ್ಯದಿಂದ ಪಡೆದ ರದಿಷ್ಟವಾದ ಕ್ರಿಯಾಲಿಂಗದಲ್ಲಿ ! ತದ್ರೂಪದಲ್ಲಿ ! ದೃಕ್ಕ್ರಿಯಾ ರೂಪವಾದ ಸಚ್ಚಿದ್ರೂಪ ಸಂಬಂಧ ಪ್ರಸಾದದಿಂದ ನೇತ್ರೋಪಾಂಗವು ಪ್ರಸಾದಿಯಾಗುತ್ತದೆ. ಭೋಗಾಂಗವೆಂಬ ಬೇರಿಗೆ ಹಣ್ಣುಳ್ಳ ರೆಂಬೆಯಾಗಿ ಹೊಂಪುಳಿಗೊಳ್ಳುತ್ತದೆ. "ರೂಪಾಗಿ ಬಂದ ಪದಾರ್ಥವ ಕಾಯದ ಕೈಯಲ್ಲಿ ನಯನ ಮುಖದಲ್ಲಿ ಇಷ್ಟಲಿಂಗಕ್ಕೆ ಕೊಟ್ಟು ಶುದ್ಧಪ್ರಸಾದವ ಕೊಂಡು ಸರ್ವಾಂಗ ಶುದ್ಧನಾದೆ ನೋಡಾ ! ರುಚಿಯಾಗಿ ಬಂದ ಪದಾರ್ಥವ ಮನದ ಕೈಯಲ್ಲಿ ಜಿಹ್ವೆಯ ಮುಖದಲ್ಲಿ ಪ್ರಾಣಲಿಂಗಕ್ಕೆ ಕೊಟ್ಟು ಸಿದ್ಧಪ್ರಸಾದ ಗ್ರಾಹಕನಾಗಿ ಮನ ನಿರ್ಮಲವಾಯಿತ್ತು ನೋಡಾ ! ಪರಿಣಾಮವಾಗಿ ಬಂದ ಪದಾರ್ಥವ

ಭಾವದ ಕೈಯಲ್ಲಿ ಹೃದಯ ಮುಖದಲ್ಲಿ ತೃಪ್ತಿಲಿಂಗಕ್ಕೆ ಕೊಟ್ಟು ಪ್ರಸಿದ್ಧ ಪ್ರಸಾದವ ಕೊಂಡು ಶುದ್ಧ ಪರಮಾತ್ಮನಾದೆನು ನೋಡಾ! ಈ ಕ್ರಿಯಾ ಜ್ಞಾನಾರ್ಪಣವಿರಬೇಕು. ಕಾಯುವೂ ಆತ್ಮನೂ ಬಯಲು ಆಗುವನ್ನಕ್ಕರ ಕಾಯುವೂ ಜೀವವೂ ಪರತತ್ವದಲ್ಲಿ ಅಡಗದೆ ಬರಿಯ ವಾಗದ್ವೈತದಿಂದ ತಾನೆಲಿಂಗವಾದೆನೆಂದು ಇಷ್ಟಲಿಂಗಾರ್ಪಣವ ಬಿಡುವ ಅಜ್ಞಾನಿಯ ಮುಖ ವನು ಎನಗೊಮ್ಮೆ ತೋರದಿರಯ್ಯಾ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ !"

ಭಕ್ತ ಮಹೇಶ ಪ್ರಸಾದಿ ಇವು ಮೂರು ಕ್ರಿಯಾ ಪ್ರಧಾನವಾದ ಒಂದು ಘಟ್ಟ. ಪರಿಣಾಮ ।ನಿವೃತ್ತಿಯಲ್ಲಿ ಪ್ರಸಾದಿ ಅಂತ್ಯವಾಗಿದ್ದರೂ ಅರ್ಪಣ ಕ್ರಿಯಾ ಪ್ರವೃತ್ತಿಯಲ್ಲಿ ಆದಿಯಾಗಿದೆ. ಯಾವ ಪದಾರ್ಥವೇ ಆಗಲಿ ಅದರ ರೂಪಾರ್ಪಣವು ನಯನ ಮುಖದಲ್ಲಿ ಲಿಂಗಾರ್ಪಣವಾಗು ತ್ತದೆ. ಲಿಂಗಾರ್ಪಣವಾಗದೆ ಕೇವಲ ಕಣ್ಣು (ನೇತ್ರೇಂದ್ರಿಯ) ಮುಟ್ಟಿದ ರೂಪು ಅಶಿವ (ವಿಕಾರ)ವನ್ನು ತರುತ್ತದೆ. ಪ್ರಸನ್ನತೆ ಹುಡಿಗೂಡುತ್ತದೆ. ಅದೇ ಶಿವಲಿಂಗಾರ್ಪಣವಾದರೆ ಶಿವವನ್ನು ತರುತ್ತದೆ. ಮನಕ್ಕೆ ಪ್ರಸನ್ನತೆ ಯೊದಗುತ್ತದೆ. ಸತ್ಯವೂ ಶಿವವೂ ಆದ ಸುಂದರತೆಯ ಅರಿವುಂಟಾಗುತ್ತದೆ.

ಪರುಷ ಸೋಂಕಲು ಅವಲೋಕದ ಗುಣ ಕೆಟ್ಟು ಚಿನ್ನವಾಗದಿ ಹುದೆ? ಹಲವು ತಣಂಗಳೆಲ್ಲವು ಅಗ್ನಿ ಮುಟ್ಟಲು ಭಸ್ಮವಾಗದೆ ಇಹವೆ? ಹಳ್ಳಕೊಳ್ಳದ ನೀರೆಲ್ಲಾ ಒಂದು ಅಂಬುಧಿಯನೈದಿ ಅಂಬುಧಿಯಪ್ಪುದು ತಪ್ಪದು ನೋಡಾ! ಹಲವು ವರ್ಣದ ಪದಾರ್ಥವ ತಂದು ಶಿವಲಿಂಗಾ ರ್ಪಣವ ಮಾಡಲು ಪದಾರ್ಥದ ಪೂರ್ವಾಶ್ರಯುವಳಿದು ಪ್ರಸಾದವಪ್ಪುದು ತಪ್ಪದು ನೋಡಾ! ಆ ಪ್ರಸಾದವ ಕೊಂಬ ಪ್ರಸಾದಿ ಪವಿತ್ರಕಾಯನು ನೋಡಾ! ಆತನು ಶುದ್ಧ ನಿರ್ಮಲನು ನೋಡಾ! ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ." ಆ ಆಚಾರಲಿಂಗದೊಳಗಿನ ಶಿವಲಿಂಗವನ್ನಾರಾಧಿ ಸುವಾಗ ಆ ಭಕ್ತನೇ 'ಭಕ್ತನ ಪ್ರಸಾದಿ'ಯೆನಿಸುತ್ತಾನೆ.

ಭಕ್ತನ ಪ್ರಾಣಲಿಂಗಿ ಸ್ಥಲ

ಇಲ್ಲಿಯೂ ಭೋಗಾಂಗನೇ ಭಕ್ತ. ವಾಯುವಿನ ಪೂರ್ವಾಶ್ರಯ ವನ್ನು ಕೊಡವಿ ಪೂರ್ಣ ಭಕ್ತನಾಗಿರುತ್ತಾನೆ. ಸ್ಪರ್ಶದ ಪೂರ್ವಾಶ್ರಯ ವನ್ನು ಸದೆದು ತ್ವಗುಪಾಂಗವು ಪ್ರಾಣಲಿಂಗಿಯೆನಿಸಿರುತ್ತದೆ. ತ್ವಗು ಪಾಂಗವು ಅಮೂರ್ತಸಾದಾಖ್ಯಸ್ವರೂಪ ಜಂಗಮಲಿಂಗಾನುಭವದಿಂದ ಸ್ಪರ್ಶ ವಿಕಾರವನ್ನು ಕಳೆದು ಭೋಗಾಂಗಭಕ್ತನ ಪ್ರಾಣಲಿಂಗಿಯಾಗಿರುತ್ತದೆ. ವಾಯ್ವಂಗವನ್ನು ತೊಡೆದ ಭೋಗಾಂಗ ಭಕ್ತನು ತ್ವಕ್ ಪ್ರಾಣಲಿಂಗಿ ಯಿಂದ ಜಂಗಮಲಿಂಗದ ಸುಸ್ಪರ್ಶಪ್ರಸಾದವನ್ನು ಪಡೆಯುತ್ತಾನೆ. ಸುರೂಪ ಪ್ರಸಾದದಿಂದ ಮೊಗ್ಗಾದ ಭೋಗಾಂಗನು ಸುಸ್ಪರ್ಶ ಪ್ರಸಾದ ದಿಂದ ಅರಳುತ್ತಾನೆ; ನೇಸರ ಕಿರಣ ಸ್ಪರ್ಶದಿಂದ ತಾವರೆ ಬಿರಿವಂತೆ! ಸುಸ್ಪರ್ಶ ಪ್ರಸಾದವು ಭೋಗಾಂಗವನ್ನು ಚಿಲ್ಲಿಂಗವನ್ನಾಗಿಸುತ್ತದೆ; ಪರುಷ ಮಣಿ ಕಬ್ಬುನವನ್ನು ಚಿನ್ನವನ್ನಾಗಿಸುವಂತೆ !

ತ್ವಕ್ ಅನಾಹತ ಹಸ್ತ ಇವು ಮೂರು ಭೋಗಾಂಗಭಕ್ತನಿಗೆ ಪ್ರಾಣಲಿಂಗಿಸ್ಥಲಸ್ಥವಾಗಿರುತ್ತವೆ. ಸೃಷ್ಟಿ ಪ್ರಾಣಲಿಂಗಿ ತ್ವಕ್, ಸ್ಥಿತಿ ಪ್ರಾಣಲಿಂಗಿ ಅನಾಹತ; ಲಯ ಪ್ರಾಣಲಿಂಗಿ ಹಸ್ತ. ಸುಸ್ಪರ್ಶ ಪ್ರಸಾ ದವು ತ್ವಕ್ಕಿನಲ್ಲಿ ಉದಯಿಸಿ, ಅನಾಹತದಲ್ಲಿ ವಾಸಿಸಿ, ಹಸ್ತದಲ್ಲಿ ಹೊರ ಸೂಸುತ್ತದೆ.

ತ್ವಕ್ ಪ್ರಾಣಲಿಂಗಿಯಾದರೆ ಅನಾಹತ ಹಸ್ತಗಳೂ ಲಿಂಗಪ್ರಾಣಿ ಗಳಾಗುತ್ತವೆ. ಪ್ರಾಣಲಿಂಗ ಸ್ವರೂಪವಾದ ಹಸ್ತದ ಸ್ಪರ್ಶವನ್ನು ಪಡೆದ ಫಲ ಪದಾರ್ಥಗಳು ಪ್ರಸಾದವಾಗಿ ಪರಿಣಮಿಸುತ್ತವೆ. ಅಂತೆಯೆ ಪ್ರಾಣ ಲಿಂಗ ಸ್ವರೂಪವಾದ ಹೃದಯ ಕರುಣ ಸ್ಪರ್ಶದಿಂದ ಶಿಷ್ಯನ ಸರ್ವಾಂಗವೆಲ್ಲ ಪಾವನ ವಾಗುತ್ತದೆ.

ಭೋಗಾಂಗಕ್ಕೆ ಜ್ಞಾನವೇ ಆಸರ. ಜ್ಞಾನಕ್ಕೆ ತ್ವಗನಾಹತಾದಿ ಗಳೇ ಆಸರ. ತ್ವಗನಾಹತಾದಿಗಳಿಗೆ ಸುಸ್ಪರ್ಶ ಪ್ರಸಾದವೇ ಆಸರ.

ಆ ಸುಸ್ಪರ್ಶ ಪ್ರಸಾದಕ್ಕೆ ಅಮೂರ್ತ ಸಾದಾಖ್ಯಾತ್ಮಕ ಜಂಗಮಲಿಂಗವೆ ನಿಜ ಆಸರ. ಇಂತಿವನು ಅನುಭವ ಭಕ್ತಿಯಿಂದ ಅರಿದಾಚರಿಸಿದಲ್ಲಿ ಆತನ ಭಕ್ತನ ಪ್ರಾಣಲಿಂಗಿಯೆಂಬೆ ಕಾಣಾ ಶ್ರೀ ಸಿಡುಮೂಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ."

ಇಲ್ಲಿಂದ ಜ್ಞಾನ ಪ್ರಧಾನವಾಗಿರುತ್ತದೆ. ಕ್ರಿಯೆ ಗೌಣವಾಗಿರುತ್ತದೆ. ಕ್ರಿಯೆಯಿದ್ದರೂ ಮಾರ್ಗಕ್ರಿಯೆಯಲ್ಲ; ಮೀರಿದ ಕ್ರಿಯೆ.

ಸುಸ್ಪರ್ಶ ಪ್ರಸಾದದಿಂದ ಅನಾಹತಗತ ಮನ ಪ್ರಸನ್ನವಾಗುತ್ತದೆ. ಸುಮನವೆನಿಸುತ್ತದೆ. ಮನ ಘನವಾಗುತ್ತದೆ. ಪ್ರಾಣವು ತನ್ನ ಪೂರ್ವಾಶ್ರಯ ದೋಷದಿಂದ ದೂರಾಗಿ ಲಿಂಗಪ್ರಾಣಿಯಾಗುತ್ತದೆ. ಇದು ಇಷ್ಟಲಿಂಗ ಸ್ಪರ್ಶದಿಂದಾಗುತ್ತದೆ. ಇಷ್ಟಲಿಂಗ ಸ್ಪರ್ಶವು ದಿವ್ಯವಾದುದು. ಪರುಷ ಮಣಿಗಿಂತಲೂ ಸಾಸಿರ ಪಾಲು ಶ್ರೇಷ್ಠವಾದುದು. ಬಾಹ್ಯದಲ್ಲಿದ್ದರೂ ಇದರ ಸ್ಪರ್ಶಶಕ್ತಿ ಪ್ರಾಣವನ್ನು ಲಿಂಗವನ್ನಾಗಿಸುವುದು. ಮನವನ್ನು ಘನವನ್ನಾಗಿಸುವುದು. ಇಂತಿರುವಾಗ ಜಂಗಮಲಿಂಗ ಸ್ಪರ್ಶದ ಮಹಿಮೆ ಇನ್ನೂ ಅಗಾಧವಾದುದು.

"ಅಂಗದ ಮೇಲೆ ಲಿಂಗವು ಕಾಣಲ್ಪಡುತ್ತಿಪ್ಪುದಯ್ಯ
ಅಂಗದೊಳಗೆ ಪ್ರಾಣವಿಪ್ಪುದಯ್ಯ, ತನುವಿನ ಮೇಲಿಪ್ಪ
ಲಿಂಗವ ಮನದಲ್ಲಿ ಸ್ವಾಯತವ ಮಾಡಿ ನೆನೆಯಲರಿಯದೆ
ಧನ ಕಾಮಿನಿಯರ ಭ್ರಾಂತಿನಲ್ಲಿ ಜಿನುಗುವ ಮನುಜರಿಗೆ
ಪ್ರಾಣಲಿಂಗದಿಂದೇನು ಹೇಳಾ, ಮಹಾಲಿಂಗಗುರು ಶಿವ ಸಿದ್ಧೇಶ್ವರ
ಪ್ರಭುವೇ ?"

"ಹೊರಗೆ ಅಗ್ನಿ ಉರಿವುತಿಪ್ಪುದಯ್ಯ, ಕುಂಭದೊಳಗೆ ಉದಕವಿಪ್ಪುದಯ್ಯ. ಅಗ್ನಿ ಸಂಪರ್ಕದ ದೆಸೆಯಿಂದ ಕಂಭದೊಳಗಿದ್ದ ಉದಕವು ಹೇಗೆ ಉಷ್ಣವಪ್ಪುದೋ ಹಾಗೆ ಸರ್ವೇಂದ್ರಿಯುವನುಳ್ಳ ಪ್ರಾಣವು ತನ್ನ ಪೂರ್ವ ಗುಣವನು ಬಿಟ್ಟು ಲಿಂಗಕಳೆಯನೇ ವೇಧಿಸಿ ಪ್ರಾಣವೇ ಲಿಂಗವೆನಿಸಿಕೊಂಡಿತ್ತಯ್ಯ; ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ."

ಬಾಹ್ಯ ಸುಸ್ಪರ್ಶದಿಂದ ಆಂತರಿಕ ಪ್ರಾಣ ಲಿಂಗವಾಗುವ ಬಗೆ ಬೆಡಗು ಚೆನ್ನಾಗಿ ವರ್ಣಿತವಾಗಿದೆ. ಹೊರಗಿನ ಉರಿಯಿಂದ ಮಡಕೆಯೊಳಗಿನ ನೀರು ತನ್ನ ಪ್ರಾಕೃತಿಕ ಶೀತತ್ವವನ್ನು ಕಳೆದುಕೊಂಡು ಬಿಸಿಯಾಗುವಂತೆ ಪ್ರಾಣವು ತನ್ನ ಪ್ರಾಕೃತಿಕ ಧರ್ಮವನ್ನು ಬಿಟ್ಟು ಪಾರಿಮಾರ್ಥಿಕ ಧರ್ಮದಿಂದ ಕೂಡಿಕೊಳ್ಳುತ್ತದೆ. ಪ್ರಾಣಲಿಂಗಿ ತ್ವಕ್ಕಾದರೆ ಲಿಂಗ ಪ್ರಾಣಿ ಪ್ರಾಣವಾಗುತ್ತದೆ. 'ಪ್ರಾಣನ ಪೂರ್ವಾಶ್ರಯವಳಿದು ಲಿಂಗನೆನಹು ಸಂಬಂಧಿಸಿದ ಪ್ರಾಣಲಿಂಗಿಯ ಅಂಗವು ಹೇಗಿಹುದಯ್ಯಾ ಎಂದರೆ, ಅಂಗ ನೆನೆಹೆ ಹಿಂಚಾಗಿ ಲಿಂಗ ನೆನಹೇ ಮುಂಚಾಗಿಪ್ಪುದಯ್ಯ. ಅಂಗವಿಷಯಂಗಳೇ ಹಿಂಚಾಗಿ ಲಿಂಗ ವಿಷಯಂಗಳೇ ಮುಂಚಾಗಿ ಇಪ್ಪವಯ್ಯ. ಆವಾಗಲೂ ಲಿಂಗ ಸಹಿತವಾಗಿಯೇ ಇಂದ್ರಿಯಂಗಳ ಭೋಗೋಪಭೋಗವ ಭೋಗಿಸುತಿಪ್ಪುದಯ್ಯ............ಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತಿಪ್ಪಾತನೆ ಪ್ರಾಣಲಿಂಗಿ ಲಿಂಗಪ್ರಾಣಿಯಯ್ಯಾ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ." ಆ ಆಚಾರದೊಳಗಿನ ಜಂಗಮಲಿಂಗಾರಾಧರನಾದಾಗ ಆ ಭಕ್ತನೇ 'ಭಕ್ತನ ಪ್ರಾಣಲಿಂಗಿ' ಯಾಗುತ್ತದೆ.

ಭಕ್ತನ ಶರಣ ಸ್ಥಲ :

ಈ ಭಕ್ತ ಯೋಗಾಂಗ. ಈತನ ಮತ್ತೊಂದು ಹೆಸರು ಕಾರಣಾಂಗ. ಆಕಾಶ ಈತನ ಪ್ರಾಕೃತಿಕ ಪೂರ್ವಾಂಗ. ತ್ಯಾಗಾಂಗ ಎಲೆ. ಭೋಗಾಂಗ ಹೂವು; ಯೋಗಾಂಗ ಹಣ್ಣು. ಯೋಗಾಂಗಕ್ಕೆ ಚೈತನ್ಯ ಭಾವ (ತೃಪ್ತಿ) ಲಿಂಗ. ಇದಕ್ಕೆ ಈಶಾನ-ಗೋಪ್ಯ ಮುಖಗಳು. ಭಾವ ಲಿಂಗಕ್ಕೆ ಶಿವಸಾದಾಖ್ಯ ಮಹಾಸಾದಾಖ್ಯಗಳು ಕಿರಣಗಳು. ಯೋಗಾಂಗದ ಈಶಾನ ಮುಖದ ಮಾತನ್ನಿಲ್ಲಿ ಮುಂದುವರಿಸಲಾಗಿದೆ:

ಈಶಾನ ಮುಖದಿಂದಾದುದೇ ಶ್ರೋತ್ರ. ಇದು ಯೋಗಾಂಗದ ಉಭಯ ಮುಖಗಳಲ್ಲಿ ಮೊದಲಿನದು. ಇದು ಆಕಾಶಜನ್ಯ. ಶಬ್ದಗ್ರಾಹಕ ಜ್ಞಾನೇಂದ್ರಿಯ. ಇದು ಶಿವಸಾದಾಖ್ಯಾತ್ಮಕ ಪ್ರಸಾದ ಲಿಂಗಾನುಭೂತಿ

ಯಿಂದ ಭಕ್ತನ ಶರಣಸ್ಥಲ ಸಂಪನ್ನವಾಗುತ್ತದೆ. ಶಬ್ದಪದಾರ್ಥವನ್ನು ಪ್ರಸಾದಲಿಂಗಕ್ಕರ್ಪಿಸಿ ಆ ಲಿಂಗದಿಂದ ಶೇಷವಾದ ಸುಶಬ್ದ ಪ್ರಸಾದೋಪ ಭೋಗಿಯಾಗುತ್ತದೆ. ಯೋಗಾಂಗವು ಈ ಶರಣಸ್ಥಲಸ್ಥ ಶ್ರೋತ್ರದಿಂದ ಸುಶಬ್ದ ಪ್ರಸಾದವನ್ನು ಪಡೆದು ಭಕ್ತನೆಂದೆನಿಸುತ್ತದೆ. ಶ್ರೋತ್ರವು ಪ್ರಸಾದ ಲಿಂಗ ಪ್ರಸಾದವನ್ನು ಪಡೆದು ಶರಣನೆನಿಸುತ್ತದೆ. ಇದರಿಂದಾಗಿ ಯೋಗಾಂಗ ನೆಂಬ ಭಕ್ತನ ಶರಣನೆಂಬ ಹೆಸರು.

ಯೋಗವೆಂದರೆ ಅಪೂರ್ವ ವಸ್ತುವಿನ ಒದಗುವಿಕೆ ಮತ್ತು ಎರಡು ವಸ್ತುಗಳ ಕೂಡುವಿಕೆ ಎಂದರ್ಥ. ಯೋಗಾಂಗದಲ್ಲಿ ಅಂಗ–ಲಿಂಗಗಳ ಕೂಡುವಿಕೆಯುಂಟಾಗುತ್ತದೆ. ಆ ಕೂಡುವಿಕೆಗೆ ಐಕ್ಯವೆಂಬ ಹೆಸರು. ಅದಕ್ಕೆ ಹಿನ್ನೆಲೆ ಅಂದರೆ ಹತ್ತಿರದ ನೆಲೆಯೇ ಶರಣಸ್ಥಲ. ಆ ಐಕ್ಯಕ್ಕಾಗಿಯೇ ಶರಣುಹೊಕ್ಕ ಸ್ಥಲ.

ಶ್ರೀಗುರುವಿನಿಂದ ಮಂತ್ರೋಪದೇಶವನ್ನು ಪಡೆದ ಶ್ರೋತ್ರೇಂದ್ರಿಯವು ಮತ್ತೊಂದನ್ನು ಕೇಳುವ ಕಕ್ಕುಲತೆಯನ್ನು ತಾಳದೆ ಆ ಮಂತ್ರದಲ್ಲಿಯೇ ಆ ಮಂತ್ರಾರ್ಥದ ನೆನಹಿನಲ್ಲಿಯೇ ಆ ಮಂತ್ರಸ್ವರೂಪವಾದ ಪ್ರಸಾದಲಿಂಗ ದಲ್ಲಿಯೇ ಏಕಾಗ್ರತೆಯಿಂದ ಶರಣುಹೊಕ್ಕು ಶರಣ ಎಂದೆನಿಸುತ್ತದೆ. ಜೀವ ಭಾವದ ಹಂಗನ್ನು ಹರಿದಿರುತ್ತದೆ. ಭಕ್ತ ದೇಹಭಾವವನ್ನು, ಮಹೇಶ ಇಂದ್ರಿಯಭಾವವನ್ನು, ಪ್ರಸಾದಿ ಮನಸ್ಸನ್ನು, ಪ್ರಾಣಲಿಂಗಿ ಪ್ರಾಣವನ್ನು, ಜಯಿಸಿದಂತೆ ಶರಣ ಜೀವಭಾವವನ್ನು ಜಯಿಸಿರುತ್ತಾನೆ ; ಜಯಿಸಬೇಕು. ಇಲ್ಲವಾದರೆ ಶ್ರೇಯಸ್ಸಾಗದು ; ಯಶಸ್ಸು ದೊರೆಯದು. ಲಿಂಗಭಾವ ಬಲಿಯದೆ ಐಕ್ಯವಿಲ್ಲ. ಅದಕ್ಕೆ ಹತ್ತಿರದ ಮುಖ್ಯಾಂಗ ಶರಣಸ್ಥಲ. ಇದಕ್ಕೆ ಈ ಉಪಾಂಗವಾದ ಶ್ರೋತ್ರವು ಸಂಪೋಷಕ. ಮಂತ್ರಮಯನಾದ ನಾದ ರೂಪಾದ ಆ ಪ್ರಸಾದ ಲಿಂಗಕ್ಕೆ ಸನ್ನಿಹಿತ ಉಪಾಂಗ. ಸರ್ವಸ್ವ ನಿವೇದಿತ.

ಅದು ಅಪರೋಕ್ಷ, ಅಕ್ಷರ, ಅನಾಹತನಾದ ; ಅದು ಅಮೃತಸ್ವಾದ. ಮಹಾಪ್ರಸಾದ. ಅಲ್ಲಿ ಭಾವೋನ್ಮಾದ. ಅದು ಸನ್ನಿಹಿತ ಅಭೇದ. ಸಾಮಾನ್ಯ ಸಂಗೀತ ನಾದವೇ ಪ್ರಾಣಿವರ್ಗವನ್ನು ಸಸ್ಯವರ್ಗವನ್ನು ಸಚೇತನಗೊಳಿಸು ವಾಗ ಮಂತ್ರನಾದ ಜೀವಭಾವವನ್ನು ಸಚೇತನಗೊಳಿಸದೆ ? ಸಚ್ಚಿದಾನಂದ ಕ್ಕೇರಿಸದೆ ?

ಯೋಗಾಂಗ ಭಕ್ತನು ಆಕಾಶ ಪೂರ್ವಾಶ್ರಯ ನಿವೃತ್ತಿಗೊಳಿಸುವನು. ಆ ಭಕ್ತನ ಶರಣನಾದ ಶ್ರೋತ್ರೋಪಾಂಗವು ಆ ಆಕಾಶಗತ ಶಬ್ದಸೂತಕವನ್ನು ನಿವೃತ್ತಿಗೊಳಿಸುತ್ತದೆ ಪ್ರಸಾದಲಿಂಗದ ಕರುಣೆಯಿಂದ. ಪೂರ್ಣ ಪಂಚಾಕ್ಷರಿಯು ಪರಮ ಪ್ರಸಾದಾಮೋದದಲ್ಲಿ ತನ್ನ ಮರೆಯಲೆಳಸುತ್ತದೆ. ಸರ್ವಾಂಗವು ಆ ಸರ್ವೋನ್ನತ ನಾದಸ್ಪಂದದಿಂದ ತಲ್ಲೀನಗೊಳ್ಳಲು ಸಜ್ಜಿತವಾಗಿರುತ್ತದೆ; ಸಮೀಹಿತಗೊಂಡಿರುತ್ತದೆ. ಸಮ್ಮೇಳ ಸಮ್ಮುಖವಾಗಿರುತ್ತದೆ. ಅಂಗಾಂಗಳೆಲ್ಲ ಸಮುಚ್ಚಯಗೊಂಡಿರುತ್ತವೆ; ಸಮೀಚೀನವಾಗಿರುತ್ತವೆ. ಸತ್ ಚಿತ್ ಆನಂದ ಈ ಮೂರು ಸಮನ್ವಯಗೊಂಡು ಸಚೇತನವಾಗಿರುತ್ತವೆ.

ಇಲ್ಲಿ ಶ್ರೋತ್ರ ವಿಶುದ್ಧ ಮುಖ ಈ ಮೂರು ಯೋಗಾಂಗ ಭಕ್ತನಿಗೆ ಶರಣಸ್ಥಲದಲ್ಲಿರುತ್ತವೆ. ಶಬ್ದವನ್ನು ಶ್ರೋತ್ರ ಸೃಷ್ಟಿಸುತ್ತದೆ. ವಿಶುದ್ಧ ಸ್ಥಿತಿಗೊಂಡಿರುತ್ತದೆ. ಮುಖ ಲಯಗೊಳಿಸುತ್ತದೆ.

"ಯೋಗಾಂಗಕ್ಕೆ ಪರಿಣಾಮವೇ ನೆಲೆ. ಪರಿಣಾಮಕ್ಕೆ ಕರ್ಣ-ವಿಶುದ್ಧಿ-ಮುಖಗಳೇ ನೆಲೆ. ಕರ್ಣ ವಿಶುದ್ಧಿ ಮುಖಗಳಿಗೆ ಸುಶಬ್ದ ಪ್ರಸಾದವೆ ನೆಲೆ. ಆ ಸುಶಬ್ದಪ್ರಸಾದಕ್ಕೆ ಶಿವಸಾದಾಖ್ಯಾತ್ಮಕ ಪ್ರಸಾದಲಿಂಗವೇ ನಿರ್ಮ್ಮಲ ನೆಲೆ. ಇಂತಿವನು ಆನಂದಭಕ್ತಿಯಿಂದ ಅರಿದಾಚರಿಸಿದಲ್ಲಿ ಆತನ ಭಕ್ತನ ಶರಣನೆಂಬೆ ನೋಡಾ ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ." ಸುಶಬ್ದ ಪ್ರಸಾದದಿಂದ ತನು ಮನ ಭಾವರೋಗಗಳೆಲ್ಲ ಕಣ್ಮರೆಯಾಗುತ್ತವೆ; ಕಳಾಪೂರ್ಣವಾಗುತ್ತವೆ.

ಇಲ್ಲಿಗೆ ಜೀವಭಾವ ಕೊನೆ. ಇಲ್ಲಿಗೆ ಧಾರಣ ಧ್ಯಾನಗಳೂ ಕೊನೆ. ಸಂಕಲ್ಪ-ವಿಕಲ್ಪಗಳು ಕೊನೆ. ಅರುಹು ಕುರುಹು ಕೊನೆ. ಪ್ರಕೃತಿ ವಿಕೃತಿಗಳು ಕೊನೆ. ಇಲ್ಲಿ ಶರಣ ಸದಾಶಿವ ಸ್ವರೂಪನಾಗಿರುತ್ತಾನೆ. ಎಲ್ಲ ಸಂಶಯವಳಿದಿರುತ್ತಾನೆ. ಎರವಿಲ್ಲದ ನಿಶ್ಚಯದೊಳಗಿರುತ್ತಾನೆ.

"ಮುಖದಲ್ಲಿ ಮಂತ್ರ, ಹೃದಯದಲ್ಲಿ ಧ್ಯಾನ, ಪ್ರಾಣದಲ್ಲಿ ಲಿಂಗ ನೆನಹು ಕರಿಗೊಂಡ ಶಿವಾತ್ಮ ಶರಣನ ಹೃದಯವೇ ಪರಮೇಶ್ವರಂಗೆ ನಿವಾಸ

ಸ್ಥಾನವಾಗಿಪ್ಪುದಯ್ಯ. ಆ ಪರಮೇಶ್ವರನೊಳಗಣ ಸಮರಸಭಾವವೇ ಆ ಶರಣಂಗೆ ನಿತ್ಯನೇಮವಾಗಿ ಪೂಜೆಯಾಗಿಪ್ಪುದಯ್ಯ. ಇದೇ ಪೂರ್ಣ ಶರಣ ಭಾವ. ಅಲ್ಲಿಯೇ ಲಿಂಗಸಿದ್ಧಿ. ಘನಲಿಂಗ ಪದಸ್ಥಿತಿ. ಲಿಂಗಪೂಜೆ ಮತ್ತಲ್ಲಿಯೇ ನಿಶ್ಚಯ. ಇದೇ ಪರಮಾರ್ಥ. ಇದಲ್ಲದೆ ಅನ್ಯಮಪ್ಪೆಲ್ಲವೂ ಆತ್ಮದುಃಖ ಕಾಣಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ."

ಇಲ್ಲಿಗೆ ಶರಣ ಪರಿಪೂರ್ಣ. ಶರಣಸ್ಥಲ ಸಿದ್ಧಿಯಾದಲ್ಲಿ ಯಾವ ಕೊರತೆಯಿಲ್ಲ ; ಯಾವ ಕೊರಗಿಲ್ಲ.

"ಶರನಿಧಿ ರತ್ನವ ಧರಿಸಿದ್ದರೆ ಆ ಮಹಾನಿಧಿಗೆ ಒಂದು ಬಡತನ ಉಂಟೇ ಅಯ್ಯಾ ? ಮೇರುಗಿರಿ ಮೂಲಿಕೆಯ ಧರಿಸಿದ್ದರೆ ಆ ಪರ್ವತಕ್ಕೆ ಬಡತನ ವುಂಟೇ ಅಯ್ಯಾ ? ಅನಾದಿಮಯ ಪರಿಪೂರ್ಣ ಲಿಂಗವು ಶರಣ ತಾನಾಗಿ ಪ್ರವರ್ತಿಸಿತ್ತು. ಏತಕಯ್ಯ ಎಂದರೆ ತನ್ನ ಮಹಿಮಾಗುಣ ವೈಭವವ ಪ್ರಕಾಶಿಸಿ ತೋರಲಾಯಿತ್ತಯ್ಯ. ಶರಣ, ಲಿಂಗ ಎಂಬ ಅಂತರವೆಲ್ಲಿಯದೋ ? ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭು ತಾನೆ ಶರಣಲಿಂಗ ಎಂಬಾತ ಕಾಣಿರೋ !"

ಪರಿಪೂರ್ಣ ಲಿಂಗವು ಶರಣನಿಗೊಲದಿರುವಾಗ ಕೊರಗು – ಕೊರತೆ ಗಳಿಲ್ಲ. ಅಂತರ–ಅಗಲಿಕೆಗಳಿಲ್ಲ. ಶರಣನದು ಮಾನವ ಜೀವನವಲ್ಲ ; ಮಹಾಜೀವನ. ಅಪೂರ್ಣ ಜೀವನವಲ್ಲ ; ಪೂರ್ಣಜೀವನ.

ಆಚಾರಲಿಂಗದೊಳಗಿನ ಪ್ರಸಾದಲಿಂಗವನ್ನು ಆರಾಧಿಸಿ, ಸುಗಂಧ ಪ್ರಸಾದದೊಳಗಿನ ಸುಶಬ್ದ ಪ್ರಸಾದವನರ್ಪಿಸಿ 'ಭಕ್ತನ ಶರಣ'ನೆನಿಸುತ್ತಾನೆ.

ಭಕ್ತನ ಐಕ್ಯಸ್ಥಲ

ಶರಣಸ್ಥಲದಲ್ಲಿ ಜೀವಭಾವವನ್ನು ಕಳೆದುಕೊಂಡ ಯೋಗಾಂಗನು ಇಲ್ಲಿ ಈ ಐಕ್ಯಸ್ಥಲದಲ್ಲಿ ಶುದ್ಧ ಸಂಪೂರ್ಣ ಭಕ್ತನಾಗಿರುತ್ತಾನೆ. ಆತ್ಮ ತ್ವದ ಪೂರ್ವಾಶ್ರಯವನ್ನು ಪರಿಹರಿಸಿರುತ್ತಾನೆ. ಭಾವಲಿಂಗಾಶ್ರಯಸ್ಥ ನಾಗಿರುತ್ತಾನೆ.

ಗೋಪ್ಯ ಮುಖಜನ್ಯ ಮನೋಮುಖವು ಮಹಾಲಿಂಗಾನುಭಾವದಲ್ಲಿ ತೃಪ್ತಿಯ ಪೂರ್ವಾಶ್ರಯವ ಕಳೆದು ಸಂತೃಪ್ತಿ ಪ್ರಸಾದದಲ್ಲಿ ಭಕ್ತನ ಐಕ್ಯ

ನೆಂದೆನಿಸುತ್ತದೆ. ಆತ್ಮಾಂಗದಿಂದಾಚೆ ಸಾಗಿದ ಯೋಗಾಂಗ ಭಕ್ತನು ಹೃದಯುವೆಂಬ ಐಕ್ಯನಿಂದ ಮಹಾಲಿಂಗದ ಸುತೃಪ್ತಿ ಪ್ರಸಾದವನ್ನು ಪಡೆದು ತಾನೂ ಐಕ್ಯಸ್ಥಲ ಸಂಪನ್ನನಾಗುತ್ತಾನೆ. ಖಂಡಭಾವದಿಂದ ಅಖಂಡಭಾವಕ್ಕೇರುತ್ತಾನೆ. ಸಾವಯುವದಿಂದ ನಿರವಯ ರೂಪಕ್ಕೆ ಬರುತ್ತಾನೆ. ನಿರಾಮಯ ನಿರಾಕುಳನಾಗುತ್ತಾನೆ. ನಿರ್ದ್ವಂದ್ವ ನಿರ್ಭಾವನೆನಿಸುತ್ತಾನೆ. ನಿರಾಕಾರ ನಿರಾಧಾರನೆನಿಸುತ್ತಾನೆ. ಸರ್ವಾಧಾರ ಸರ್ವೋದ್ಧಾರ ಸಮರ್ಥನಾಗುತ್ತಾನೆ.

ಆತ್ಮ ಆಜ್ಞಾ ಚಕ್ರ ಅಂಬಕ ಇವು ಮೂರು ಯೋಗಾಂಗ ಭಕ್ತನಿಗೆ ಐಕ್ಯಸ್ಥಲದಲ್ಲಿರುತ್ತವೆ. ಆತ್ಮಸೃಷ್ಟೈಕ್ಯ, ಆಜ್ಞಾ ಸ್ಥಿತ್ಯೈಕ್ಯ, ಅಂಬಕ ಸಂಹಾರೈಕ್ಯ. ಆತ್ಮನಲ್ಲಿ ತೃಪ್ತಿ ಉದಯುವಾಗಿ, ಆಜ್ಞಾಚಕ್ರದಲ್ಲಿದ್ದು, ಆಲಿಯಲ್ಲಿ ಲಯುವಾಗುತ್ತದೆ.

ಆತ್ಮನಿಗೆ ಕಾಯಭಾವ ಜೀವಭಾವಗಳೆರಡೂ ನಷ್ಟವಾಗುತ್ತವೆ. ಸಮಭಾವ ಸಮಯೋಗವುಂಟಾಗುತ್ತವೆ.

"ಯೋಗಾಂಗಕ್ಕೆ ಪರಿಣಾಮವೇ ನೆಲೆವನೆ. ಪರಿಣಾಮಕ್ಕೆ ಸಮರಸವೇ ನೆಲೆವನೆ. ಸಮರಸಕ್ಕೆ ಆತ್ಮಆಜ್ಞಾಅಂಬಕಗಳೇ ನೆಲೆವನೆ. ಆತ್ಮಾದಿಗಳಿಗೆ ಸುತೃಪ್ತಿ ಪ್ರಸಾದವೇ ನೆಲೆವನೆ. ಆ ಸುತೃಪ್ತಿ ಮಹಾಪ್ರಸಾದಕ್ಕೆ ಮಹಾಸಾದಾಖ್ಯಾತ್ಮಕ ಮಹಾಲಿಂಗವೆ ಮಾಮನೆ. ಇಂತು ಅಯ್ದರ ನೆಲೆಕಲೆಯನು ಸಮರಸ ಭಕ್ತಿಯಲ್ಲಿ ಅರಿದಾಚರಿಸಿ ಆರರಲ್ಲಿ ಬೆರೆದು ತಾನಾರೆಂದರಿಯದಂತಿಪ್ಪಾತನೆ ಭಕ್ತನ ಐಕ್ಯನೆಂಬೆ ನೋಡಾ ಶ್ರೀನಿಡುಮಾಮಿಡಿ ಶ್ರೀಗಿರಿಸೂರ್ಯ ಸಿಂಹಾಸನಾಧೀಶ್ವರ"

"ಪ್ರವೃತ್ತಿವಿಡಿದು ತತ್ತ್ವಮಸಿ ಆಯಿತ್ತು, ನಿವೃತ್ತಿ ವಿಡಿದು ತ್ವಂತದಸಿ ಆಯಿತ್ತು ನೋಡಾ! ಪ್ರವೃತ್ತಿಯ ತತ್ತ್ವಮಸಿಯನೇ ಬೋಧಿಪುದು ಬ್ರಹ್ಮಾದ್ವೈತ. ನಿವೃತ್ತಿಯ ತ್ವಂತದಸಿಯೆಂಬುದನು ಬೋಧಿಪುದು ಶಿವಾದ್ವೈತ. ಈ ಮರ್ಮವನರಿವರು ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶನಲ್ಲಿ ಶಿವಶರಣರು ಶಿವಾನುಭಾವಿಗಳು–ನೋಡಾ!"

"ಇಲ್ಲಿ ಐಕ್ಯನೆಂದರೆ ಮರಣವಲ್ಲ, ಲೌಕಿಕ ಭಾವದಿಂದ ನಿರ್ಲೇಪ ನಾಗಿರುವಿಕೆ. ಅಕ್ರಿಯೆ, ಅಲ್ಪಕ್ರಿಯೆಗಳಿಂದ ಅಜ್ಞಾನ ಅಲ್ಪಜ್ಞಾನಗಳಿಂದ ಆಚೆ ಸಾಗಿ ಸರ್ವಜ್ಞನಾಗಿ ಸರ್ವ ಸತ್ಕ್ರಿಯಾ ಸಮರ್ಥನಾಗಿ ಜೀವನ್ಮುಕ್ತನಾಗಿ ಬಾಳುವಿಕೆ. ಅಲ್ಪಾತ್ಮನು ಮಹಾತ್ಮನಾಗಿರುವಿಕೆ. ದ್ವಿವಿಧ, ತ್ರಿವಿಧಾದಿ ಎಲ್ಲ ವಿಧಗಳಳಿದು ಏಕವಿಧವಾಗಿ ಎಸೆಯುವಿಕೆ. ಏರಿಳಿತಗಳಿಲ್ಲದೆ ಎಡೆಯಾಟವಿಲ್ಲದೆ ಸಮದರ್ಶಿಯಾಗಿರುವಿಕೆ.

"ತನುವಿನೊಳಗೆ ತನುವಾಗಿಪ್ಪಿರಯ್ಯ, ಮನದೊಳಗೆ ಮನವಾಗಿಪ್ಪಿರಿಯಯ್ಯ, ಭಾವದೊಳಗೆ ಭಾವವಾಗಿಪ್ಪಿರಿಯಯ್ಯ. ಎನ್ನ ಅಂಗ ಪ್ರಾಣ ಮಹಾಲಿಂಗ ನೀವೆಯಾದ ಕಾರಣ, ಎನಗಿನ್ನಾವ ಭಂಗವೂ ಇಲ್ಲವಯ್ಯ. ಅದೇನು ಕಾರಣವೆಂದರೆ: ಎನ್ನ ಅಂಗವು ನಿಮ್ಮೊಳಗೆ ಅಡಗಿ ಶುದ್ಧ ಪರಮಾತ್ಮನಾದೆನು ಕಾಣಾ. ಇನ್ನಾವ ಪ್ರಪಂಚವೂ ಎನಗಿಲ್ಲ, ನೀನು ನಿರ್ಲೇಪಕನಾದ ಕಾರಣ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ."

'ಕಡೆಯಲ್ಲಿ ಮೊದಲಲ್ಲಿ ಸುವರ್ಣ ಒಂದೇ ಅಲ್ಲದೆ ಬೇರಿಲ್ಲ ಕಾಣಿರೋ! ಬಂಗಾರ ಪ್ರಕೃತಿಯಿಂದ ಬೇರಿಟ್ಟು ತೋರಿತ್ತು-ಎಂದರೆ ಬೇರಾಗಬಲ್ಲುದೇ ಅಯ್ಯ. ಶುದ್ಧ ಪರಮಾತ್ಮ ತಾನೆ ಒಂದೆರಡಾಗಿ ಜೀವ ಪರಮ ಎಂದು ತೋರಿತ್ತೆಂದರೆ ಆವಾಗೆ ಜೀವ, ಆವಾಗ ಪರಮ ಎಂಬ ಭೇದವನು ಅರಿಯದೆ ಅತಿ ಮರುಳಾದಿರಲ್ಲದೆ ದೇಹಭಾವದ ಉಪಾಧಿ ಉಳ್ಳನ್ನಕ್ಕರ ಜೀವನು. ಇವನ ದೇಹಭಾವದ ಉಪಾಧಿ ಶಿವಭಾವದಲ್ಲಿ ಅಳಿದ ಬಳಿಕ ಜೀವನೆಂಬುವನೂ ಪರಮನೆಂಬುವನೂ ತೀವಿ ಪರಿಪೂರ್ಣ ಪರವಸ್ತು ತಾನೆ. ತಾನೇ ಈತ, ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭು ತಾನೇ ಕಾಣಿರೊ!'

'ಆದಿಯಲ್ಲಿ ನಾನು ಹುಟ್ಟಿದಂದು ಎನ್ನ ಒಡಹುಟ್ಟಿದವರು ಅಯ್ವರು ನೋಡಾ. ಒಡಹುಟ್ಟಿದವರು ಎನಗೆ ಒಡಲಾಗಿಪ್ಪರು ನೋಡಾ; ಒಡಲನು ಉರಿಗಿತ್ತು, ಎನ್ನ ನಿಮಗಿತ್ತು ನಿರ್ವಯಲಾದೆನು ಕಾಣಾ; ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೇ'

'ಹೊನ್ನು ತನ್ನ ಬಣ್ಣದ ಲೇಸನು ತಾನರಿಯದಂತೆ, ಬೆಲ್ಲ ತನ್ನ ಮಧುರವ ತಾನರಿಯದಂತೆ, ಪುಷ್ಪ ತನ್ನ ಪರಿಮಳವ ತಾನರಿಯದಂತೆ,

ವಾರಿಶಿಲೆ ಅಂಬುಧಿಯೊಳು ಲೀಯವಾದಂತೆ ಮನಮಹಾಲಿಂಗದಲ್ಲಿ ಲೀಯವಾಗಿ ಮನವು ಅಳಿದು ನೆನಹು ಉಳಿದು ನೆನಹು ನಿಷ್ಪತ್ತಿಯಾಗಿ ನಾನು ನೀನಾಗಿರ್ದೆನಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.'

'ಕತ್ತಲೆಯನೊಳಕೊಂಡ ಬೆಳಗಿನಂತೆ, ಪಕ್ಷಿಯನೊಳಕೊಂಡ ತತ್ತಿಯಂತೆ, ಮುತ್ತನೊಳಕೊಂಡ ಚಿಪ್ಪಿನಂತೆ, ಸಾಗರವನೊಳಕೊಂಡ ಶಶಿಯಂತೆ, ಜಗವನೊಳಕೊಂಡ ಆಕಾಶದಂತೆ ಎನ್ನ ನೀವು ಒಳಕೊಂಡಿರಿಯಾಗಿ ನಾನೋ ನೀನೋ ಏನೆಂದರಿಯೆನಯ್ಯ; ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.'

'ಷಟ್‌ಸ್ಥಲ ಜ್ಞಾನಸಂಪನ್ನಃ ಷಡಂಗಾಂಗ ಸಮಾಧಿಮಾನ್
ಆತ್ಮವತ್ಪರಿದ್ರಷ್ಟಾ ಚ ಸ ಏವಾಹಂ ನ ಸಂಶಯಃ |'

—ಸೂಕ್ಷ್ಮಾಗಮ, ಪ. ೬

ಇಲ್ಲಿಯವರೆವಿಗೆ ವಿವರಿಸಿದವು ಭಕ್ತನ ಉಪಾಂಗ ಷಟ್‌ಸ್ಥಲಗಳು. ಇವನ್ನಾಚರಿಸಿದಾಗ ಭಕ್ತನು ಪೂರ್ಣ ಭಕ್ತನೆನಿಸುತ್ತಾನೆ. ಭಕ್ತ ಸ್ಥಲದಲ್ಲಿದ್ದುಕೊಂಡೇ ಷಟ್‌ಸ್ಥಲಜ್ಞಾನಸಂಪನ್ನನೆನಿಸುತ್ತಾನೆ. ಷಡಂಗಾಂಗ ಸಮಾಧಿ ಸ್ಥಿತಿಯುಳ್ಳವನಾಗಿ ಭಕ್ತನು ಮುಕ್ತನಾಗುತ್ತಾನೆ. ಹೀಗೆ ಜೀವನ್ಮುಕ್ತನಾದ ಭಕ್ತನು ಜೀವಿಗಳನ್ನೆಲ್ಲ ತನ್ನಂತೆ ತಿಳಿಯುತ್ತಾನೆ. ಸಮದರ್ಶಿಯಾಗುತ್ತಾನೆ. ಸಮದರ್ಶಿತ್ವವೇ ಶಿವಸಮಾನತ್ವ. ಇದರಲ್ಲಿ ಇನ್ನಾವ ಸಂಶಯವಿಲ್ಲ.

ಭಕ್ತನ ಉಪಾಂಗ ಷಟ್‌ಸ್ಥಲಗಳನ್ನು ಪಾರಮೇಶ್ವರ ತಂತ್ರವು ಮತ್ತೊಂದು ಬಗೆಯಲ್ಲಿ ವಿಶೇಷವಾಗಿ ವಿವಕ್ಷಿಸಿದೆ; ವಿವಕ್ಷಿಸಿ ಅಂಗಾಂಗಿ ಭಾವ ಬೋಧನವನ್ನು ಪೂರೈಸಿದೆ.

'ಉಪಾಂಗಷಟ್ಕಮಪರಂ ಭಕ್ತ್ಯಾದಿ ಪರಮಂ ಪದಂ |
ಭಕ್ತಿಃ ಕರ್ಮಕ್ಷಯೋ ಬುದ್ಧಿರ್ವಿಚಾರೋ ದರ್ಪಸಂಕ್ಷಯಃ |
ಸಮ್ಯಗ್ಜ್ಞಾನಮಿತಿ ಪ್ರೋಕ್ತಂ ಸ್ಥಲಷಟ್ಕಂ ಮಮಪ್ರಿಯಮ್ ||'

ಭಕ್ತಿ, ಕರ್ಮಕ್ಷಯ, ಶುದ್ಧಬುದ್ಧಿ, ಸುವಿಚಾರ, ದರ್ಪಕ್ಷಯ, ಸಮ್ಯಗ್‌ಜ್ಞಾನ ಇವು ಸ್ಥಲಷಟ್ಕ. ಇವು ಶಿವನಿಗೆ ಪರಮಪ್ರಿಯ. ಇವನ್ನು

ಭಕ್ತನು ಕ್ರಮವಾಗಿ ಅಳವಡಿಸಿಕೊಳ್ಳಬೇಕು. ಇವುಗಳಿಂದ ಷಟ್‌ಸ್ಥಲ ಸ್ವರೂಪ, ಷಟ್‌ಸ್ಥಲ ಹೃದಯ ಚೆನ್ನಾಗಿ ಚಿತ್ರಿತವಾಗುತ್ತವೆ.

ಭಕ್ತಿ ಸ್ಥಲ :

ಭಕ್ತಿಯುಳ್ಳವ ಭಕ್ತ. ಭಕ್ತಿಯೋಗವಿಲ್ಲದೆ ಭಕ್ತನೆನಿಸಲು ಸಾಧ್ಯವಿಲ್ಲ. ಭಕ್ತಿಗೆ ಹಾರ್ದಿಕ ಪ್ರೇಮಪ್ರದರ್ಶನಕ್ಕೆ ಎಲ್ಲರಿಗೂ ಹಕ್ಕಿದೆ. ಆದರೆ ಭಕ್ತಿಯೆನಿಸುವುದು ಯಾವಾಗ ?

'ಅಸ್ಪೃಷ್ಟವಿಷಯಸ್ನೇಹೋ ಯೋ ಮೋಹಃ ಶುದ್ಧಸಾತ್ವಿಕಃ ।
ಮಯೀಶ್ವರೇ ಮಹಾದೇವಿ ಸದ್ಭಕ್ತಿರಭಿಧೀಯತೇ ॥

ವಿಷಯವಾಸನೆಯಿಲ್ಲದ ಶುದ್ಧಸಾತ್ವಿಕವಾದ ಶಿವಮೋಹವೇ ಸದ್ಭಕ್ತಿ. ಭಕ್ತಿಲಕ್ಷಣಕ್ಕೆ ಇದಕ್ಕಿಲ್ಲ ಮಿಗಿಲೋಕ್ತಿ.

'ಭಕ್ತಿರ್ಮಾತಾ ಪಿತಾದೇವಿ ಕಾಮಧೇನುಃ ಸುರದ್ರುಮಃ ।
ಕರಸ್ಥಮಮೃತಗ್ರಾಸಂ ವಿದ್ಧಿ ಭಕ್ತಿಂ ಕುಲೇಶ್ವರಿ ॥'

ಅಂತಾದರೆ ಆ ಭಕ್ತಿಯ ಒಲುಮೆಯೇನು, ಎಂದು ಕೇಳಿದ ಕುಲೇಶ್ವರಿ ಶಂಕರಿಗೆ ಶಿವನು ಅಮೃತಶ್ರಾವಿಯಾಗಿ ಅಪ್ಪಣೆ ಮಾಡಿದ್ದಾನೆ.

ಭಕ್ತಿ–ತಾಯಿ, + ತಂದೆ ; ಭಕ್ತಿ–ಕಾಮಧೇನು, ಕಲ್ಪವೃಕ್ಷ. ಹೆಚ್ಚೇನು, ಭಕ್ತಿ ಕೈಯಲ್ಲಿರುವ ಅಮೃತದೋಗರ. ಆಹಾ ! ಶಿವನ ಈ ಉತ್ತರ ಅದೇನು ಮಧುರ ! ಅಷ್ಟೇ ಮಧುರ ಭಕ್ತಿ ! ಅದೇ ಭಕ್ತಿಯಿಲ್ಲದವನ ಬಾಳು ಕಹಿ :

'ಯೋಭಕ್ತಿರಹಿತೋ ಮರ್ತ್ಯಃ ಸಮಸ್ತಾ ನಿಷ್ಫಲಾಃ ಕ್ರಿಯಾಃ
ನ ತಸ್ಯ ಪರಲೋಕೋಽಸ್ತಿ ಮೃತಃ ಶ್ವಾನೋ ಭವಿಷ್ಯತಿ ।
ಭಕ್ತಿಹೀನಸ್ಯಕರ್ಮಾಣಿ ವೃಥಾ ಪೂಜಾ ಜಪಾದಿಕಂ
ಧೃತಮಂಗಲಸೂತ್ರಾಽಪಿ ವಿಧವಾ ನ ಸುವಾಸಿನೀ ॥'

ಭಕ್ತಿಯಿಲ್ಲದವನು ಭವಿ, ಮೃತಜೀವಿ. ಆತನ ಕ್ರಿಯೆಗಳೆಲ್ಲ ನಿಷ್ಫಲ. ಆತನಿಗೆ ಭವದ ಬಿಡುಗಡೆಯಿಲ್ಲ ; ಭವಹರನ ಹೊಂದುಗಡೆಯಿಲ್ಲ. ಆತನಿಗೆ ಪರಲೋಕದ ವಾಸನೆಯಿಲ್ಲ. ಆತ ಕೇವಲ ಪ್ರಪಂಚಿ. ಆತ ಸತ್ತರೆ ಆತ

ನಾಗುವನು ಇದಾದ ಬೀದಿಯ ನಾಯಿ. ಮಾನವನಾಗಿ ಭಕ್ತಿಯನ್ನು ಕಲಿಯದಿದ್ದರೆ ಮರುಜನ್ಮದಲ್ಲಿ ಶ್ವಾನ ಜನ್ಮಕ್ಕೆ ಬಂದು ನಂಬುಗೆಯನ್ನಿಡಲು ಕಲಿಯಬೇಕು. ಭಕ್ತಿಯಿಲ್ಲದ ಮಾನವ ಶ್ವಾನಕ್ಕಿಂತ ಹೀನ. ಭಕ್ತಹೀನನ ಪೂಜೆ ಪೂಜೆಯಲ್ಲ ; ಜಪ ಜಪವಲ್ಲ. ಶಿವಭಕ್ತಿಯಿಲ್ಲದೆ ಶಿವಲಿಂಗ ಧರಿಸಿದ್ದರೂ ಪ್ರಯೋಜನವಿಲ್ಲ. ಆತ ಭಕ್ತನಲ್ಲ. ಪತಿಯ ಮೇಲೆ ಪ್ರೇಮವಿಲ್ಲದವಳು ಮಂಗಳಸೂತ್ರವನ್ನು ಧರಿಸಿದ್ದರೂ ಅವಳು ಸುವಾಸಿನಿಯಲ್ಲ ; ವಿಧವೆ. ಅಂತೆಯೇ ಭಕ್ತಿಯಿಲ್ಲದ ಭಕ್ತನ ಸ್ಥಿತಿ. ಆತನೊಬ್ಬ ಕರ್ಮಿ.

ಕರ್ಮಕ್ಷಯ ಸ್ಥಲ :

ಕರ್ಮ ಕಳೆಯಬೇಕಾದರೆ ಭಕ್ತಿ ಬೇಕು. ಕರ್ಮ ಒಂದು ಪಾಶ ; ಬಿಚ್ಚಬಾರದ ಬಂಧನ. ಆ ಬಂಧನದಿಂದ ಭವಭವಾಂತರ ಪ್ರಾಪ್ತಿ. ಇದನರಿದು ಕರ್ಮಕ್ಷಯಕ್ಕೆ ಪ್ರಯತ್ನಿಸಬೇಕು. ಬರೀ ಅರಿತರೆ ಹೋಗದು. ಅರಿತಂತೆ ಭಕ್ತಿಯ ಮುಖಾಂತರ ಆಚರಿಸಬೇಕು.

'ತಥಾಭಕ್ತಿರ್ದೃಢಾ ಯಸ್ಯ ತದ್ವಶಾದ್ಗತಜನ್ಮಸು । ಪ್ರಾಪ್ತಾನಿ ಬಂಧಕರ್ಮಾಣಿ ತೇಷಾಂ ಸ್ಯಾತ್ಸಂಕ್ಷಯೋ ಭವೇತ್ ॥ ದುರ್ವಾಸನಾನುಬಂಧಾನಿ ಕರ್ಮಾಣಿ ಪ್ರಕೃತಾನಿ ಚ । ಕೃತಾ ಭಕ್ತಿರ್ಮಯೀ ಶಕ್ತಿಃ ಸಾ ನಾಶಯತಿ ತಾನಿ ಹಿ ॥'

ಭಕ್ತಿ ದೃಢವಾದರೆ ಪೂರ್ವಜನ್ಮದ ದುಷ್ಕರ್ಮಗಳೆಲ್ಲ ದೂರಾಗುತ್ತವೆ. ಕರ್ಮಗಳು ದ್ವಿವಿಧ. ವಾಸನಾಜನ್ಯ, ಪ್ರಕೃತಿಜನ್ಯ ಎಂದು. ಈ ಎರಡೂ ಬಗೆಯ ಕರ್ಮಗಳನ್ನು ಭಕ್ತಿಯು ಕಳೆಯುತ್ತದೆ. ಭಕ್ತಿಯ ಶಕ್ತಿ ಅಂತಹದು. ಶಿವಶಕ್ತಿ ಸಂಪನ್ನವಾದುದು. ಭವಕರ್ಮಗಳನ್ನು ಕ್ಷಯಿಸುವಂತಹದು. ಭಕ್ತಿಯಿದ್ದರೆ ಭಕ್ತ ; ಕರ್ಮಕ್ಷಯವಾದರೆ ಮಹೇಶ.

ಶುದ್ಧಬುದ್ಧಿ ಸ್ಥಲ :

'ಕರ್ಮಬಂಧೇಷು ನಷ್ಟೇಷು ಬುದ್ಧಿಃ ಸ್ವಚ್ಛಾ ಭವತ್ಯಥ ।
ಸಂತ್ಯಕ್ತವಿಷಯಾ ದೇವಿ ಸ್ಥಿರಾ ಮಯಿ ಪರಾತ್ಮನಿ ।

ಯಸ್ಯಾಸ್ತಿ ನಿರ್ಮಲಾಬುದ್ಧಿರಧೀಶೇಮಯಿ ಶಂಕರೇ
ಸ.ಮಾಮುಪೈತಿ ಭ್ರಮರಕೀಟನ್ಯಾಯೇನ ಸುಂದರೀ ||'

ಭಕ್ತಿಯಿಂದ ಕರ್ಮಕ್ಷಯವಾದರೆ ಬುದ್ಧಿ ಸ್ವಚ್ಛವಾಗುತ್ತದೆ ; ವಿಷಯ ವಿರಹಿತವಾಗುತ್ತದೆ. ಪರಶಿವನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಬುದ್ಧಿ ನಿರ್ಮಲವೂ ನಿಶ್ಚಲವೂ ಆದರೆ ಭ್ರಮರಕೀಟನ್ಯಾಯದಂತೆ ಶಿವಯೋಗ ಪ್ರಾಪ್ತಿಯುಂಟಾಗುತ್ತದೆ. ಇಲ್ಲವಾದರೆ,

'ನ ಯಸ್ಯ ನಿರ್ಮಲಾ ಬುದ್ಧಿಃ ಸ ಧ್ಯಾಯೇದ್ವಿಷಯಾನ್ ಸದಾ |
ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ||
ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ||
ಕ್ರೋಧಾತ್ ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ||
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾದ್ವಿನಶ್ಯತಿ |
ತಚ್ಛುದ್ಧಬುದ್ಧಿಮಾನೇತಿ ಮಾಮೇವ ಜಗದೀಶ್ವರಿ ||'

ಎಂದು ಜಗದೀಶ್ವರಿ ಶಂಕರಿಗೆ ಜಗದೀಶನಾದ ಶಂಕರನು ಪಾರಮೇಶ್ವರ ತಂತ್ರದಲ್ಲಿ ಪರಿಣಾಮಕಾರಿಯಾಗಿ ಪ್ರಬೋಧಿಸಿದ್ದಾನೆ.

ಬುದ್ಧಿ ಅಸ್ಥಿರವಾಗಿ ವಿಷಯಚಿಂತನೆಗೊಳಗಾಗುತ್ತದೆ. ಕಾಮಕ್ರೋಧಗಳಿಗೀಡಾಗುತ್ತದೆ. ಸಮ್ಮೋಹಾಸಕ್ತವಾಗುತ್ತದೆ. ಇದರಿಂದ ಕರ್ಮಸಂಚಯವಾಗಿ ಭಕ್ತಿ ನಾಶವಾಗಿ ಸ್ಮೃತಿಬುದ್ಧಿಗಳು ನಷ್ಟವಾಗುತ್ತವೆ. ಬುದ್ಧಿನಾಶವಾದಲ್ಲಿ ಮಾನವತ್ವ ನಾಶ ಶತಸ್ಸಿದ್ಧ. ಕಾರಣ ಶುದ್ಧಬುದ್ಧಿಯುಳ್ಳವನಾಗಬೇಕು. ಶಿವಸಿದ್ಧಿಗೇರಬೇಕು.

ವಿಚಾರಸ್ಥಲ :

ಬುದ್ಧಿ ಶುದ್ಧಿಗೆ ವಿಚಾರ ಅನಿವಾರ್ಯ. ವಿಚಾರ ವೃದ್ಧಿಗೆ ವಾಕ್ಯಾರ್ಥ ಚಿಂತನ ಅಗತ್ಯ. ವಾಕ್ಯಾರ್ಥ ಚಿಂತನಕ್ಕೆ ವಿದ್ಯಾನಿಧಿಯಾದ ಶ್ರೀ ಗುರುವಿನ ಉಪದೇಶ ಉಚಿತ ; ಉದ್ದೀಪಿತ.

"ತಯಾ ಗುರೂಕ್ತ ವಾಕ್ಯಾರ್ಥ ಚಿಂತನಂ ನಿಶ್ಚಯೋ ಹೃದಿ
ಹಿತಾಹಿತ ವಿವೇಕೋ ಯೋ ವಿಚಾರಃ ಸ ಉದಾಹೃತಃ ।
ವಿನಾ ಗುರೂಕ್ತವಾಕ್ಯಾರ್ಥ ವಿಚಾರಂ ನ ಪ್ರಯೋಜನಮ್
ವಿಚಾರೇಣೈವ ಜಾನಾತಿ ಸಕಲಂ ಚ ಶುಭಾಶುಭಮ್

ಉತ್ತರಣ ಕಾರಣವಾದ ಗುರೂಕ್ತ ವಚನವು ಹೃದಯದಲ್ಲಿ ನಿಸ್ಸಂಶಯಗೊಳ್ಳಬೇಕು; ನಿಶ್ಚಯಗೊಳ್ಳಬೇಕು. ಅದರಿಂದ ಹಿತಾಹಿತ ವಿವೇಕೋದಯವಾಗುತ್ತದೆ. ಅದುವೇ ವಿಚಾರ. ಗುರು ವಾಕ್ಯಾರ್ಥ ವಿಚಾರವಿಲ್ಲದೆ ಪ್ರಯೋಜನವಿಲ್ಲ. ಶುಭಾಶುಭಗಳನ್ನು ಕರ್ತವ್ಯಾಕರ್ತವ್ಯಗಳನ್ನು ತಿಳಿಯಬೇಕಾದರೆ ವಿಚಾರ ಅತ್ಯಗತ್ಯ. ಬುದ್ಧಿ ಶುದ್ಧವಿಲ್ಲದೆ ಹೇಗೆ ಪ್ರಸಾದಿಯಾಗಲಾರನೋ ಹಾಗೆ ವಿಚಾರವಿಲ್ಲದೆ ಪ್ರಾಣಲಿಂಗಿಯಾಗನು.

ದರ್ಪಸಂಕ್ಷಯ ಸ್ಥಲ :

"ಏವಂ ವಿಚಾರಿತೇ ಶಾಸ್ತ್ರೇ ಜ್ಞಾತ್ವಾ ಮಾಮಖಿಲೇಶ್ವರಮ್
ಸ್ವರೂಪಮಪಿ ಜಾನಾತಿ ತಸ್ಯ ಸ್ಯಾದ್ಗರ್ವ ಸಂಕ್ಷಯಃ ।

ವಿಚಾರವಿರುವಲ್ಲಿ ವಿನಯವಿರುತ್ತದೆ. ವಿದ್ಯಾವಿನಯಗಳಿರುವಲ್ಲಿ ವಿಶ್ವನಾಥನ ದಯವಿರುತ್ತದೆ ; ಗರ್ವ ಕ್ಷಯವಾಗುತ್ತದೆ. ಹೀಗಾದ ಬಳಿಕ ಸಾಧಕನು ಶಿವನಲ್ಲಿ ಶರಣು ಹೊಕ್ಕು ಶರಣನೆನಿಸುತ್ತಾನೆ.

ಸಮ್ಯಗ್‌ಜ್ಞಾನ ಸ್ಥಲ :

"ನಿರಸ್ತದರ್ಪ ಸಂಬದ್ಧಃ ಶಿವಜ್ಞಾನವತೋ ಭವೇತ್
ತೇನ ಶೀಘ್ರಂ ಗಿರಿಸುತೇ ಸಮ್ಯಗ್‌ಜ್ಞಾನಂ ತತೋ ಭವೇತ್ ।
ಯೇನ ಭೂತಾನ್ಯಶೇಷಾಣಿ ದ್ರಕ್ಷ್ಯತ್ಯಾತ್ಮನ್ಯಥೋ ಮಯಿ
ಪ್ರತ್ಯಯ ತ್ರಿತಯಯ್ಯೈಕ್ಯೇನ ಸಮ್ಯಗ್‌ಜ್ಞಾನೀ ಸ ಚಾಸ್ಮ್ಯಹಂ।
ಚರಾಚರಾತ್ಮಕಂ ಸರ್ವಂ ಭಾವಯನ್ ಪರಮಾತ್ಮನಃ
ಮಮ ರೂಪಂ ಮಹೇಶಾನಿ ಸಮ್ಯಗ್ಜ್ಞಾನೀ ಸ ಉಚ್ಯತೇ ॥"

ಹಮ್ಮಳಿದು ಬಿಮ್ಮಳಿದು ನಿಂತವನಿಗೆ ಶಿವನನ್ನು ಮೊರೆಹೊಕ್ಕ ಮಹಂತನಿಗೆ ಶಿವಜ್ಞಾನರತಿಯುಂಟಾಗುತ್ತದೆ; ಸಮ್ಯಗ್ ಜ್ಞಾನಗತಿಯುಂಟಾಗುತ್ತದೆ. ಸಮ್ಯಗ್ ಜ್ಞಾನಸಂಪನ್ನನಾದುದಕ್ಕೆ ಸಾಕ್ಷಿಯಾಗಿ ಸರ್ವ ಜೀವಿಗಳನ್ನು ತನಗೆ ಸಮವಾಗಿ ಶಿವಸ್ವರೂಪವಾಗಿ ಭಾವಿಸುತ್ತಾನೆ. ಅವನೇ ಸಮ್ಯಗ್‌ಜ್ಞಾನಿ. ಅವನೇ ನಾನು. ತನ್ನಲ್ಲಿ ಜಗದ ಜೀವಿಗಳಲ್ಲಿ ಜಗದೀಶನಲ್ಲಿ ಭಾವೈಕ್ಯವುಂಟಾಗಿ ಆತನು ಐಕ್ಯಸ್ಥಲಸಂಪನ್ನನೆನಿಸುತ್ತಾನೆ.

ಈ ಷಟ್‌ಸ್ಥಲಸಂಪನ್ನ ಭಕ್ತನಿಗೆ ಕ್ರಮವಾಗಿ ಸರ್ವಜ್ಞತೆ, ನಿತ್ಯತೃಪ್ತತೆ, ಅನಾದಿಬೋಧ, ಸ್ವತಂತ್ರತೆ, ಅಲುಪ್ತಶಕ್ತಿ, ಅನಂತಶಕ್ತಿಗಳು ಆ ಆಸ್ಥಲಸಿದ್ಧಿಯಿಂದ ಸಂಪಾದನವಾಗುತ್ತವೆ. ಷಡೂರ್ಮಿ, ಷಡ್ವರ್ಗಗಳು ಓಡಿಹೋಗುತ್ತವೆ. ಇದು ಅಂಗೋಪಾಂಗಾತ್ಮಕ ಷಟ್‌ಸ್ಥಲಜ್ಞಾನ. ಇದನರಿದಾತನೇ ಶಿವಸ್ವರೂಪ, ಎಂದು ಪಾರಮೇಶ್ವರತಂತ್ರ ಪ್ರತಿಪಾದಿಸಿದೆ.

"ಭಕ್ತಾಶ್ಚತುರ್ವಿಧಾ ಲೋಕೇ ನಾನಾ ಲಕ್ಷಣ ಸಂಯುತಾಃ
ಕನಿಷ್ಠಾ ಮಧ್ಯಮಾಶ್ಚೈವಮುತ್ತಮಾ ಉತ್ತಮೋತ್ತಮಾಃ
ಪ್ರಖ್ಯಾತಾ ಭುವನೇ ದೇವಿ ತತ್ತದಾಚಾರಭೇದತಃ।"

—ಸೂಕ್ಷ್ಮಾಗಮ, ಪ-೯.

ಸಾಮಾನ್ಯವಾಗಿ ಸರ್ವ ಭುವನಗಳಲ್ಲಿ ಕನಿಷ್ಠರು, ಮಧ್ಯಮರು, ಉತ್ತಮರು, ಉತ್ತಮೋತ್ತಮರು ಎಂದು ಭಕ್ತರು ನಾಲ್ಕು ಬಗೆಯಾಗಿರುತ್ತಾರೆ. ಈ ಭೇದವು ಅವರವರ ಆಚಾರ ವಿಚಾರಗಳಿಂದ. ಇದೇ ಅಭಿಪ್ರಾಯವನ್ನು ಭಗವದ್ಗೀತೆ ಹೀಗೆ ಹೇಳಿದೆ: 'ಚತುರ್ವಿಧಾ ಭಜಂತೆ ಮಾಂ ಜನಾಃ ಸುಕೃತಿನೋಽರ್ಜುನ। ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥'

ಸೂಕ್ಷ್ಮಾಗಮವು ಚತುರ್ವಿಧ ಭಕ್ತರ ಲಕ್ಷಣಗಳನ್ನು ಹೀಗೆ ಹೇಳಿದೆ; ಸಿದ್ಧವಿದ್ಯಾಧರರ ಲೋಕಗಳಲ್ಲಿರುವವರು ಕನಿಷ್ಠ ಭಕ್ತರು. ಇವರು ಸ್ವರ್ಗ ಸುಖಾಪೇಕ್ಷಿಗಳಾಗಿ ಶಿವಾಜ್ಞೆಯಿಂದ ಅಲ್ಲಿರುತ್ತಾರೆ. ಮಧ್ಯಮ ಭಕ್ತರಲ್ಲಿ ರಾಜರ್ಷಿಗಳು, ಬ್ರಹ್ಮರ್ಷಿಗಳು, ದೇವರ್ಷಿಗಳು – ಎಂಬುದಾಗಿ ಮೂರು

ಬಗೆ. ಇವರು ಶಿವಾಜ್ಞಾ ಪರಿಪಾಲಕರಾಗಿ ಶಾಪಾನುಗ್ರಹಕಾರಕರಾಗಿ ಲೋಕ ವಂದ್ಯರಾಗಿ ಎಲ್ಲ ಲೋಕಗಳಲ್ಲಿ ಸಂಚರಿಸುತ್ತಾರೆ. ಉತ್ತಮ ಭಕ್ತರು ತಂತಮ್ಮ ಉತ್ತಮಾಚರಣೆಯಿಂದ ಮೂರು ಬಗೆಯಾಗಿರುವವರು. ಇವರು ಶಿವಾನುಗ್ರಹದಿಂದ ಸಾಲೋಕ್ಯರು, ಸಾಮೀಪ್ಯರು, ಸಾರೂಪ್ಯರು ಆಗಿರುತ್ತಾರೆ; ನಿರಾಕುಲರಾಗಿರುತ್ತಾರೆ. ಇನ್ನು ವೀರಶೈವ ನಿರತರಾಗಿ ಪ್ರಾಣಲಿಂಗ ಪರಾಯಣರಾಗಿ ಧರ್ಮೈಕನಿರತರಾಗಿ ಶಿವೈಕನಿಷ್ಠರಾಗಿ ಉತ್ತಮೋತ್ತಮ ವೃತ್ತಿ (ಕಾಯಕ)ಯುಳ್ಳವರಾಗಿ ಇರುವವರೇ ಉತ್ತಮೋತ್ತಮವಾದ ಶಿವಸಾಯುಜ್ಯನನ್ನು ಪಡೆಯುತಕ್ಕವರು. ಇವರು ಶಿವನಿಗೆ ಅತ್ಯಂತ ಪ್ರಿಯರು.

ಈ ಉತ್ತಮೋತ್ತಮರಾದ ಶಿವಭಕ್ತರು ಮಹಿತಾತ್ಮರು. ಕಾಮಾದಿ ಗುಣವರ್ಜಿತರು. ಲೋಕಸಮಾಚಾರ ದೂರರು. ಭವಬಂಧ ವಿಮುಕ್ತರು. ನಿರ್ಮಾಯಕರು, ನಿರಹಂಕಾರಿಗಳು, ರಾಗಾದಿಗುಣರಹಿತರು, ಶಾಂತರು, ಸರ್ವವಂದ್ಯರು. ಕರ್ಮೇಂದ್ರಿಯ ಜ್ಞಾನೇಂದ್ರಿಯ ನಿಗ್ರಹ ಸಮರ್ಥರು, ಕ್ಷುತ್ತೃಷೆಗಳನ್ನು ಗೆದ್ದವರು, ತತ್ತ್ವನಿಷ್ಠರು, ದಾಂತರು, ಸತಿಸುತರಲ್ಲಿ ನಿಸ್ಪೃಹರು, ನಿತ್ಯ ಶಿವಜ್ಞಾನ ಶಿವಕ್ರಿಯಾನಿರತರು, ಶಿವವ್ರತದಲ್ಲಿ ಶಿವಾಚಾರದಲ್ಲಿ ಶಿವಭಕ್ತರಲ್ಲಿ ಶಿವೋತ್ಸವಗಳಲ್ಲಿ ಶಿವಚರರಲ್ಲಿ ಅಭಿಮಾನವುಳ್ಳವರು, ಕೃತಕೃತ್ಯರು, ನಿರಾಕುಳರು, ಸತ್ವಸಂಪನ್ನರು, ಸತ್ಯವಾಕ್ಯರತರು, ಸತ್ಯಸಂಕಲ್ಪರು, ದುರಾಚಾರದೂರರು, ದ್ವಂದ್ವದೂರರು, ಸ್ವದಾರನಿರತರು, ಸದಾ ಭೂತಿರುದ್ರಾಕ್ಷಧಾರಕರು, ಗುರುಶುಶ್ರೂಷೆಯಲ್ಲಿ ಆಸಕ್ತರು, ಗುರುಕಾರ್ಯಗಳಲ್ಲಿ ತತ್ಪರರು, ಮಹೋತ್ಸಾಹಿಗಳು, ಮಹಾ ಪರಾಕ್ರಮಿಗಳು.

ಈ ಸರ್ವೋತ್ತಮ ಭಕ್ತರಿರುವ ನೆಲೆಯೇ ಕ್ಷೇತ್ರ; ಅದೇ ತಪೋವನ. ಇವರ ದರ್ಶನದಿಂದ ಮಾನವರು ಧನ್ಯರಾಗುತ್ತಾರೆ. ಇವರನ್ನು ತ್ರಿಕರಣಗಳಿಂದ ಪೂಜಿಸುವವರನ್ನು ಶಿವನು ಉದ್ಧರಿಸುತ್ತಾನೆ. ಸಂಸಾರ ಸಾಗರವನ್ನು ದಾಟಿಸುತ್ತಾನೆ. ಇವರಿಗೆ ಊಟ ಉಡಿಗೆಗಳನ್ನು ಕೊಟ್ಟು ಪೋಷಿಸುವವರು ಶಿವನಿಗೆ ಪ್ರಿಯರು. ತಿಂಗಳೋ ವರುಷವೋ ಇಲ್ಲವೆ ಯಾವಜ್ಜೀವವೋ ಜೀವನವನ್ನು ಕಲ್ಪಿಸಿ ಶಿವಭಕ್ತರನ್ನು ಸಂರಕ್ಷಿಸಿದರೆ ಕೋಟಿ

ಸೂರ್ಯಕಾಂತಿಯುಳ್ಳ ದಿವ್ಯವಿಮಾನಾರೂಢರಾಗಿ ಶಿವಲೋಕಕ್ಕೆ ಹೋಗಿ ಶಿವಸ್ವರೂಪಿಗಳಾಗುತ್ತಾರೆ. ಹಾವುಗೆ ಹಾಸುಗೆ ಹೊದಿಕೆಗಳನ್ನಿತ್ತು ಪ್ರಣಾಮವನ್ನು ಸಲ್ಲಿಸಿದವರಿಗೆ ಸಂಶಯವಿಲ್ಲದೆ ಸಂಕಲ್ಪಸಿದ್ಧಿಯುಂಟಾಗುತ್ತದೆ.

"ಲೋಕೇ ಹಿ ಬಹುಧಾ ಭಕ್ತಾ ನಾನಾ ಲಾಂಛನಧಾರಿಣಃ
ತೇಷು ಶ್ರೇಷ್ಠಾ ಮಹಾದೇವಿ ಶಿವಲಾಂಛನ ಸಂಯುತಾಃ ।
ತೇಷು ಲಿಂಗಾಗಿನಃ ಶ್ರೇಷ್ಠಾ ವೀರಶೈವ ಪರಾಯಣಾಃ
ತೇಷು ಶ್ರೇಷ್ಠಾ ಮಹಾಭಾಗಾಃ ಷಟ್‌ಸ್ಥಲಜ್ಞಾನ ಪಾರಗಾಃ ।
ತೇಭ್ಯೋಽಧಿಕಸ್ತುತ್ಸಮೋ ವಾ ನಾಸ್ತಿ ಭಕ್ತೋ ಜಗತ್ತ್ರಯೇ
ಭಕ್ತಸ್ತು ತಾದೃಶೋ ಯತ್ರ ದೇಶೇ ವಸತಿ ಪೂತಧೀಃ
ನಿತ್ಯಂ ವಸಾಮಿ ತತ್ರೈವ ಸಗುಣೋಽಹಂ ತ್ವಯಾ ಸಹ ॥
ಭಕ್ತಸೇವಾಸಮಂ ಪುಣ್ಯಂ ನಾಸ್ತಿ ನಾಸ್ತಿ ನಗಾತ್ಮಜೇ
ಭಕ್ತದ್ರೋಹಸಮಂ ಪಾಪಂ ನಭೂತಂ ನ ಭವಿಷ್ಯತಿ ॥"

ವಿವಿಧ ವೇಷಧಾರಿಗಳಾದ ಭಕ್ತರು ಲೋಕದಲ್ಲಿ ಬಹು ಜನರಿರುವರು. ಅವರಲ್ಲಿ ಶಿವಲಾಂಛನಧಾರಿಗಳು ಶ್ರೇಷ್ಠರು; ಅವರಲ್ಲಿ ಲಿಂಗಾಂಗಿಗಳು ಶ್ರೇಷ್ಠರು; ಅವರಲ್ಲಿ ಷಟ್‌ಸ್ಥಲ ನಿಪುಣರಾದ ಶಿವಭಕ್ತರು ಸರ್ವಶ್ರೇಷ್ಠರು. ಇವರಿಗೆ ಶ್ರೇಷ್ಠರಿಲ್ಲ. ಈ ಷಟ್‌ಸ್ಥಲ ಭಕ್ತರಿರುವಲ್ಲಿ ಶಿವನು ಸಗುಣನಾಗಿ ಶಿವೆಯೊಡನೆ ಇರುವನು. ಷಟ್‌ಸ್ಥಲ ಭಕ್ತನ ಆರಾಧನೆಗಿಂತ ಪುಣ್ಯವಿಲ್ಲ. ಈತನಿಗೆ ದ್ರೋಹ ಬಗೆಯುವುದಕ್ಕಿಂತ ಪಾಪವಿಲ್ಲ.

ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ ಎಂಬುದಾಗಿ ಹಿಂದೆ ಹೇಳಿದಂತೆ ಆರು ತೆರನಾದ ಭಕ್ತರಿರುವುದು ತಿಳಿದ ವಿಷಯ. ಇದಲ್ಲದೆ ಬೇರೆ ಆರು ಬಗೆಯ ಭಕ್ತರಿರುವರೆಂದು ಸೂಕ್ಷ್ಮಾಗಮವು ಸೂಚಿಸಿದೆ. ಆ ಹೆಸರುಗಳಿವು:

'ಮೋಹೀ ಭಕ್ತಃ ಪೂಜಕಶ್ಚ ತಥಾ ವೀರಃ ಪ್ರಸಾದವಾನ್ ।
ಪ್ರಾಣೀ ಚಾಚಾರಲಿಂಗಾದಿಃ ಸ ವೈ ಭಕ್ತೋಽಪಿ ಷಡ್ವಿಧಃ ॥

ಆಚಾರ ಲಿಂಗಮೋಹೀ, ಆಚಾರ ಲಿಂಗಭಕ್ತ, ಆಚಾರ ಲಿಂಗಪೂಜಕ,

ಆಚಾರಲಿಂಗವೀರ, ಆಚಾರಲಿಂಗಪ್ರಸಾದಕ, ಆಚಾರಲಿಂಗಪ್ರಾಣಿ ಎಂಬು ದಾಗಿ ಭಕ್ತ ಆರು ವಿಧ.

ತನ್ನ ಶಿವಾಚಾರಕ್ಕೆ ವಿರುದ್ಧವಾದ ಸತಿಸುತಾದಿಗಳಲ್ಲಿ ಮೋಹವನ್ನು ಬಿಡಬೇಕು. ಅನ್ಯಾಚಾರಗಳನ್ನು ಆಚರಿಸಬಾರದು. ತನ್ನ ಆಚಾರಗಳನ್ನು ಬಿಡಬಾರದು. ಹೀಗಿರುವಾತನೇ ಆಚಾರ ಲಿಂಗಮೋಹಿ.

ಪೂರ್ವಾಚಾರಗಳನ್ನೆಲ್ಲ ಬಿಟ್ಟು ಶಿವಾಚಾರೈಕನಿರತನಾಗಿರುವಾತನೇ ಆಚಾರಲಿಂಗ ಭಕ್ತ.

ಅನ್ಯದೇವರ ಪೂಜೆಯನ್ನು ಪರಿತ್ಯಜಿಸಿ ತನ್ನ ಆಚಾರಲಿಂಗಪೂಜೆ ಯಲ್ಲಿ ಮಾತ್ರ ತತ್ಪರನೂ ಶಿವಾಚಾರಪರನೂ ಆಗಿರುವಾತನೇ ಆಚಾರಲಿಂಗ ಪೂಜಕನು.

ಪ್ರಾಣ ಹೋದರೂ ತನ್ನ ಆಚಾರವನ್ನು ಬಿಡದೆ ಅನ್ಯಥಾ ಕಾಲ ಹರಣಮಾಡದೆ ಅನ್ವರ್ಥವಾದ ಆಚಾರಪರಾಯಣನಾದಾತನೇ ಆಚಾರ ಲಿಂಗವೀರ.

ಹುಡಿ ಹುಡಿಗೂ ಶುಚಿ–ಅಶುಚಿತ್ವಗಳನ್ನು ಶಂಕಿಸದೆ, ಹೆಜ್ಜೆ ಹೆಜ್ಜೆಗೂ ಗ್ರಾಹ್ಯ–ಅಗ್ರಾಹ್ಯಾದಿಗಳನ್ನು ಲೆಕ್ಕಿಸದೆ ಹಗಲಿರುಳು ಹಸನ್ಮುಖನಾಗಿರು ವಾತನೇ ಆಚಾರಲಿಂಗ ಪ್ರಸಾದಕ.

ಬೇರೆಯವರಿಂದ ಬರುವ ಈಶ್ವರ ನಿಂದೆಯನ್ನಾಗಲಿ ಆಚಾರನಿಂದೆ ಯನ್ನಾಗಲಿ ಎಂದೂ ಎಲ್ಲಿಯೂ ಕೇಳದಿರುವಾತನೇ ಆಚಾರಲಿಂಗಪ್ರಾಣಿ.

‘ಏವಮಾಚಾರಲಿಂಗೈಕತತ್ಪರೋ ಮಾಂ ಸಮಾಶ್ರಯೇತ್ ।
ಪ್ರತಿಪದ್ಯ ಸ ನಿತ್ಯತ್ವಂ ಗಾಣಪತ್ಯಮವಾಪ್ನುಯಾತ್ ॥’

—ಸೂಕ್ಷ್ಮಾಗಮ

ಹೀಗೆ ಆಚಾರಲಿಂಗೈಕತತ್ಪರನಾದವನು ಆ ಪರಮೇಶ್ವರನನ್ನು ಪಡೆಯು ತ್ತಾನೆ. ಪಡೆದು ನಿತ್ಯನೆನಿಸುತ್ತಾನೆ. ಗಣಾಧಿಪತ್ಯದ ಗೌರವಕ್ಕೆ ಪಾತ್ರ ನಾಗುತ್ತಾನೆ.

ಉಳಿದ ಲಿಂಗಗಳಲ್ಲಿಯೂ ಇದರಂತೆ ವರ್ತಿಸುವಲ್ಲಿ ಆ ಸ್ಥಲಗಳಲ್ಲಿ ಈ ಆರು ಬಗೆಯ ಭಕ್ತತ್ವಗಳುಂಟು.

ಭಕ್ತಿಯಿಂದ ಭವಿತನ ಖಚಿತವಾಗಿ ಬಿಟ್ಟೋಡುತ್ತದೆ. ಅಂದರೆ ಭವಭಾವವು ಹೋಗಿ ಶಿವಭಾವವು ಹೊಂದುತ್ತದೆ; ಶಾಂತಿ ಸಮನಿಸುತ್ತದೆ. ಭಕ್ತಿಯಲ್ಲಿ ಆಸಕ್ತಿಯಿದ್ದರೆ ಎಂದಿಗೂ ದುರ್ಗತಿಯಿಲ್ಲ. ಸದ್ಗತಿ ತಪ್ಪುವುದಿಲ್ಲ. ಇಂತಹ ಭಕ್ತಿಮಾರ್ಗವನ್ನು ತೋರುವ ಗುರುವಿಗಿಂತ ಹಿರಿಯ ದೇವರಾರುಂಟು ; ಎಲ್ಲುಂಟು ?

ಸದ್ಗತಿಯನ್ನು ಕೋರುವ ಶಿಷ್ಯನು ಸಮ್ಯಗ್ ಜ್ಞಾನಿಯಾದ ಶ್ರೀಗುರುವಿನಲ್ಲಿ ಶರಣುಹೋಗಬೇಕಲ್ಲದೆ ಬೇರೆಲ್ಲಿಯಯೂ ಶರಣಾಗಬಾರದು. ಶ್ರೀಗುರುವಿಗೆ ಶರಣಾದ ಬಳಿಕ ಬೇರೆ ಬೇರೆ ಶರಣುಹೊಕ್ಕರೆ ಕ್ಷೇಮವಿಲ್ಲ. ಅದು ಉತ್ತಮ ಭಕ್ತಿಯಲ್ಲ. ಆತನು ಉತ್ತಮ ಭಕ್ತನಲ್ಲ.

ತಾನು ಮಾಡುವ ಮಾಟಕ್ಕೆ ನೋಡುವ ನೋಟಕ್ಕೆ ಅಡ್ಡಿಯಾಗಿ ಬರುವ ದುಷ್ಟಪ್ರವೃತ್ತಿಗಳನ್ನೆಲ್ಲ ಪರಿಹರಿಸುವ ಸದುಪಾಯ ಇಷ್ಟಲಿಂಗೋಪಾಸನೆ. ಇದರಿಂದ ತನುಶುದ್ಧಿ, ಮನಶುದ್ಧಿ ; ಭಾವಶುದ್ಧಿ. ಇದರಿಂದ ಸತ್ಯಸಾಧಕನಿಗೆ ಸತ್ಕ್ರಿಯೆಗಳ ಸಾಕ್ಷಾತ್ಕಾರ, ಸಮ್ಯಜ್ಞಾನದ ಸಾಕ್ಷಾತ್ಕಾರ ; ಸ್ವಾನುಭವದ ಆವಿಷ್ಕಾರ. ಇಷ್ಟೊಂದು ಸುಯ್ದಾನಿ ಸದ್ಗುರುವಿನಿಂದ ಬರುವಾಗ ಇನ್ನೇನಾಗಬೇಕು ?

ಸಾಧಕನು ತನ್ನೊಳಗಿರುವ ಭಕ್ತಿ (ಶುದ್ಧಪ್ರೇಮ) ಯೊಂದನ್ನು ಕೊಟ್ಟರೆ ಶ್ರೀಗುರು ಪ್ರತಿಯಾಗಿ ಮುಕ್ತಿಯನ್ನೇ ಅನುಗ್ರಹಿಸುತ್ತಾನೆ. ಪಿಂಡವನ್ನೇ ಪರಿಶೋಧಿಸುತ್ತಾನೆ. ಹುಟ್ಟು ಬಾಳು ಸಾವುಗಳ ಹಸನಾದ ಹೊಲಬನ್ನು ತೋರುತ್ತಾನೆ. ಹದುಳತೆಯಿಂದ ಹೆಜ್ಜೆ ಹಾಕಿಸುತ್ತಾನೆ. ಅನಾಯಾಸವಾಗಿ ಮುನ್ನಡೆಯಿಸುತ್ತಾನೆ. ದುಃಖದ ಮಂದಿರದಿಂದ ಸತ್ಯ ಸುಖದ ಮಂದಿರಕ್ಕೆ ಕರೆದೊಯ್ಯುತ್ತಾನೆ. ಮುಕ್ತಿ ಮಂದಿರ ಬೇರಿಲ್ಲ, ಮನದೊಳಗಿದೆ. ಮನ ನಿಂತಲ್ಲಿ ಮನ ಘನವಾದಲ್ಲಿ ಮುಕ್ತಿಯುಂಟು ; ಅದೇ ಮುಕ್ತಿಮಂದಿರ. ಅದು ತಮದ ನೆರಳಿನಿಂದ ತಿಳಿಯ ಬೆಳಕಿಗೆ

ಬಂದು ನಿಲ್ಲುತ್ತದೆ. ಕಾರ್ಯ ಕಾರಣ ರಹಸ್ಯವನ್ನರಿಯುತ್ತದೆ. ಕಾಮ ಕ್ರೋಧಾದಿಗಳನ್ನು ಕೈಬಿಡುತ್ತದೆ. ಶುದ್ಧಪ್ರೇಮ, ಶಾಂತಿ, ಔದಾರ್ಯ, ಅರಿವು, ವಿನಯ, ಸಮಭಾವಗಳನ್ನು ಕೈಕೊಳ್ಳುತ್ತದೆ.

ಕಾಮ ಕಾರಣವಾಗಿ ಕೆಟ್ಟ ವಾಸನೆ ಹುಟ್ಟುತ್ತದೆ. ಕೆಟ್ಟ ವಾಸನೆಯಿಂದ ಕೆಟ್ಟ ನುಡಿ ಕೆಟ್ಟ ನಡೆಗಳು ಮೊದಲಾಗುತ್ತವೆ. ಕೆಟ್ಟ ನಡೆಯಿಂದ ಕೇಡುಂಟಾಗುತ್ತದೆ.

ಕಾಮಪ್ರವೃತ್ತಿಯನ್ನು ನಿವೃತ್ತಿಗೊಳಿಸಿ ಶಿವಪ್ರೇಮವನ್ನು ಬೆಳೆಸಿದರೆ ಸದ್ವಾಸನೆ, ಸದ್ವಾಸನೆಯಿಂದ ಸತ್ಕ್ರಿಯೆ, ಸತ್ಕ್ರಿಯೆಯಿಂದ ಸದ್ಗತಿಗಳು ಉಂಟಾಗುತ್ತವೆ. ಇದರಿಂದಾಗಿ ದುಷ್ಪ್ರೇಮವನ್ನು ನಿರೋಧಿಸಿ ಸತ್ಪ್ರೇಮವನ್ನು ಆರಾಧಿಸಬೇಕು.

ಅಸತ್ತಿನಿಂದ ಸತ್ತಿಗೆ ಹೋಗುವುದು ಮೊದಲ ಕೆಲಸ. ಇದಕ್ಕೆ ಮೊದಲ ಮಾರ್ಗ ಭಕ್ತಿಮಾರ್ಗ. ಪ್ರೇಮವೊಂದು ಪರಿಶುದ್ಧರಸ. ಅದು ಪಾತ್ರ ಕಾಲಗಳಿಂದ ಪರಿವರ್ತಿತವಾಗುತ್ತದೆ. ದುಷ್ಪಾತ್ರದಲ್ಲಿ ದೀರ್ಘ ಕಾಲವಿದ್ದರೆ ದೂಷಿತವಾಗುತ್ತದೆ. ದುಃಖಹೇತುವಾಗುತ್ತದೆ. ಸತ್ಪಾತ್ರದಲ್ಲಿ ಸ್ವಲ್ಪ ಕಾಲವಿದ್ದರೂ ಸತ್ ಆಗಿ ಸುಖಶಾಂತಿ ಹೇತುವಾಗುತ್ತದೆ.

ಎರಡನೆಯದಾಗಿ ಸತ್ತಿನಿಂದ ಎಡವಬಾರದೆಂಬ ಭಕ್ತನಿಗೆ ತೃಷೆ–ತೃಷ್ಣೆಗಳೆರಡೂ ಇರಬಾರದು. ತೃಷೆಯೆಂದರೆ ಎಷ್ಟು ಬೇಕೋ ಅದಕ್ಕೂ ಕಮ್ಮಿಯಾಗಿರುವಿಕೆ ; ಅಥವಾ ಇಲ್ಲದಿರುವಿಕೆ. ತೃಷ್ಣೆಯೆಂದರೆ ಬೇಕಾದಷ್ಟಿದ್ದೂ ಹೆಚ್ಚಾಗಿ ಬಯಸುವಿಕೆ. ಇವೆರಡೂ ತೃಪ್ತಿಯನ್ನು ತಾರವು. ಸತ್ತಿನಲ್ಲಿರಿಸವು. ಕೊರತೆಯಿದ್ದುದನ್ನು ಕೈಗೂಡಿಸಕೊಳ್ಳಬೇಕು. ಹೆಚ್ಚಾಗಿದ್ದುದನ್ನು ಸತ್ಪಾತ್ರದಲ್ಲಿ ವಿತರಣದೊಡನೆ ವಿನಿಯೋಗಿಸಬೇಕು. ಇದು ಸದ್ಭಕ್ತನ ನಡೆ.

ಕಾಮವೆಂಬುದು ಸದಸತ್ತುಗಳನ್ನು ಕ್ರಿಯಾಕ್ರಿಯಗಳನ್ನು ತಿಳಿಯದಂತೆ ಮನವನ್ನು ತಬ್ಬಿಕೊಂಡ ತಮಸ್ಸು. ಅಸತ್ತು ಅಕ್ರಿಯೆಗಳಲ್ಲಿರುವ ಆಸಕ್ತಿ. ತೃಷೆಗಾಗಿ ತೃಷ್ಣೆಗಾಗಿ ದಾರಿ ತಪ್ಪಿ ಧಾವಿಸುವ ಧಾವಂತ. ಈ ಸಚ್ಚ್ಯುತಿಯಿಂದ ಉದ್ಧರಿಸುತ್ತದೆ ಭಕ್ತಿಮಾರ್ಗ. ಕಾಮಾಗ್ನಿಯಲ್ಲಿ ಬೆಂದು

ಬೂದಿಯಾಗುವುದನ್ನು ತಪ್ಪಿಸುತ್ತದೆ ಭಕ್ತಿಯ ಸದ್ರಸ. ಕಾಮಾಗ್ನಿಯನ್ನು ಕಳೆದುಕೊಂಡ ಕಾಯ ಮುಕ್ತವಾಗುತ್ತದೆ

ಕಾಮದಲ್ಲಿ ಕೈ ಬರಿದಾಗುತ್ತದೆ; ಪ್ರೇಮದಲ್ಲಿ ಕೈ ತುಂಬಿ ಬರುತ್ತದೆ. ಕಾಮದಲ್ಲಿ ಕಣ್ಣು ಮುಚ್ಚುತ್ತದೆ; ಪ್ರೇಮದಲ್ಲಿ ಕಣ್ಣು ತೆರೆಯುತ್ತದೆ. ಕಾಮದಲ್ಲಿ ಕಾಯ ಕೃಶವಾಗುತ್ತದೆ; ಪ್ರೇಮದಲ್ಲಿ ಕಾಯ ಪುಷ್ಟವಾಗುತ್ತದೆ. ಕಾಮದಲ್ಲಿ ಮನ ಚಲನವಾಗುತ್ತದೆ; ಪ್ರೇಮದಲ್ಲಿ ಮನ ನಿಶ್ಚಲನವಾಗುತ್ತದೆ. ಪ್ರೇಮವೆಂದರೆ ಭಕ್ತಿ. ಕಾಮವೆಂದರೆ ರಕ್ತಿ.

ಇಂದ್ರಿಯ ನಿಷ್ಠವಾದುದು ರಕ್ತಿ ; ಈಶ್ವರ ನಿಷ್ಠವಾದುದು ಭಕ್ತಿ. ಇಂದ್ರಿಯನಿಷ್ಠ ರಕ್ತಿ ಹುಟ್ಟಿ ಸಾಯುತ್ತದೆ. ಈಶ್ವರ ನಿಷ್ಠ ಭಕ್ತಿ ಅರಳಿ ಬೆಳೆಯುತ್ತದೆ. ಬೆಳೆದು ಬೆಳಗುತ್ತದೆ. ಉಡುಗದೆ ಉಳಿಯುತ್ತದೆ.

ಉತ್ತರಭಾಗ

(ಭಕ್ತ ಸಂಪುಟ)

ಲಿಂಗಸ್ಥಲಗಳು

ಭಕ್ತಸ್ಥಲದ ಲಿಂಗಸ್ಥಲಗಳು

'ತ್ವಂ ತದಸಿ' ಇದು ಶಿವಾದ್ವೈತ ಸಿದ್ಧಾಂತ. ಜೀವನ ಸಿದ್ಧಾಂತಕ್ಕೆ ಇದುವೆ ನಿರ್ದುಷ್ಟ ನಿದರ್ಶನ; ಪ್ರತ್ಯಕ್ಷ ಪ್ರಮಾಣ. ಸಹಜ ಸಾಕ್ಷಿ. ಇಲ್ಲಿಯುವರೆವಿಗೂ ತ್ವಂ ಪದವಾಚ್ಯನಾದ ಅಂಗಸ್ಥಲ ವಿಚಾರವಾಯಿತು. ಇನ್ನು ತತ್ಪದ ವ್ಯಾಚ್ಯವಾದ ಲಿಂಗಸ್ಥಲ ವಿಚಾರವನ್ನು ಮಾಡಲಾಗುವುದು.

೧. ಸರ್ವಶೂನ್ಯ ನಿರಾಲಂಬವಸ್ತು

"ವಾಚಾತೀತಂ ಮನೋತೀತಂ ಭಾವಾತೀತಂ ಪರಂ ಶಿವಃ ।
ಸರ್ವಶೂನ್ಯ ನಿರಾಲಂಬ ನಿತ್ಯತ್ವಂ ಪರಮಂ ಪದಂ ॥"

ಆ ಸರ್ವಶೂನ್ಯ ನಿರಾಲಂಬವಸ್ತು ಮಾತು ಮನ ಭಾವಗಳಿಗೆ ಅತೀತ ವಸ್ತು; ತುರ್ಯವಸ್ತು. ಅದು ಸರ್ವ ಶೂನ್ಯ. ಅದು ಆಲಂಬ ಶೂನ್ಯ. ಅದು ನಿತ್ಯಕ್ಕೆ ನಿತ್ಯ. ಅದು ಪರಕ್ಕೆ ಪರಮ, ಶಿವಕ್ಕೆ ಶಿವ; ಶಿವನಿಗೆ ಶಿವ ಎಂದಿದೆ ಶಿವಾಗಮ.

"ಸರ್ವಂಶೂನ್ಯಂ ನಿರಾಲಂಬಂ ಶಾಂತಿ ವಿಜ್ಞಪ್ತಿ ಮಾತ್ರಕಂ ।
ನ ಸನ್ನಾಸದಿತಿ ಯಸ್ಯಾಮಾಸಿತಂ ಮೌನಮುತ್ತಮಂ ॥"

ಅದು ಪರಮ ಶಾಂತ. ಅದಿಲ್ಲ, ಆದಿದೆ; ಅದನ್ನು ಕುರಿತು ಮೌನವೇ ಉತ್ತಮ ಎಂದಿದೆ ಯೋಗವಾಸಿಷ್ಠ.

"ಆಡಬಾರದ ಬಯಲು, ನೋಡಬಾರದ ಬಯಲು, ನುಡಿಯಬಾರದ ಬಯಲು, ಹಿಡಿಯಬಾರದ ಬಯಲು, ಈ ಒಡಲಿಲ್ಲಿದ ಬಯಲೊಳಗೆ ಅಡಗಿರ್ದ ಭೇದವ ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥ" ದೇವರ ದಾಸಮಯ್ಯನವರ ಈ ವಚನದಲ್ಲಿ 'ಒಡಲಿಲ್ಲದ ಬಯಲು' ಎಂಬುದು ಗಮನಾರ್ಹ ಗುರುತು.

ಶೂನ್ಯಕ್ಕಿರುವ ಒಡಲು ಆ ಸರ್ವಶೂನ್ಯಕ್ಕಿಲ್ಲ; ಆದ್ದರಿಂದ ಸರ್ವಶೂನ್ಯ. ಒಡಲಿಲ್ಲದೆ ಅಡಗಿದ ಬೆಡಗು ಅದರದು; ಅಂತೆಯೇ ಅದು ನಿರಾಲಂಬ. ಇದ್ದೂ ಇಲ್ಲದ, ಅಡಗಿಯೂ ಅಡಗದ ಆ ನಿರ್ಬಯಲನ್ನು ಹಿಡಿವರಾರು ? ನುಡಿವರಾರು ? ನೋಡುವರಾರು ? ಅದು ಶಿವ ಮತ್ತು ಶೂನ್ಯಗಳ ಮೂಲ. ಅದು ಪರಾತ್ಪರಾಕಾಶ. ಅದು ಕಾಲಕ್ರಿಯಾತೀತ. "ಆದಿ ಅನಾದಿ ಇಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು ; ಸುರಾಳ ನಿರಾಳ ಇಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು ; ಸಚರಾಚರವೆಲ್ಲ ರಚನೆಗೆ ಬಾರದಂದು ಗೊಹೇಶ್ವರನೊಬ್ಬನೇ ಇದ್ದೆಯಲ್ಲ – ಇಲ್ಲದಂತೆ !" ಅದು ಮಹಾಶೂನ್ಯ. ಅದು ಅಖಂಡ. ಅದು ಸಮಯ ಶಬ್ಧಗಳನ್ನು ಮೀರಿದ್ದು. ಹೆಮ್ಮೆ ಹೆಚ್ಚಳಗಳನ್ನು, ಜಡ-ಜೀವಗಳನ್ನು ಮೀರಿದ್ದು. ಸುರಾಳ ನಿರಾಳ (ವ್ಯಕ್ತಾವ್ಯಕ್ತ)ವಿಲ್ಲದ್ದು. ಶೂನ್ಯ ನಿಶ್ಶೂನ್ಯ (ಇಲ್ಲ – ಉಂಟು) ಎಂಬುದಿಲ್ಲದ್ದು. ಅದರಲ್ಲಿ ಶಕ್ತಿ ಹೂವಿನ ಮರಬಳ್ಳಿಗಳಲ್ಲಿ ಪರಿಮಳ, ಸಣ್ಣ ಮಗುವಿನಲ್ಲಿ ಸ್ನೇಹ ತೀರ ಅವ್ಯಕ್ತವಾಗಿ ಇರುವಂತೆ ಇರುತ್ತದೆ.

ಈ ಸಮಷ್ಟಿ ಸರ್ವಶೂನ್ಯ ನಿರಾಲಂಬವು ವ್ಯಷ್ಟಿಯಲ್ಲಿ ಪಶ್ಚಿಮ ಚಕ್ರದಲ್ಲಿರುತ್ತದೆ.

೨. ಶೂನ್ಯವಸ್ತು

ಆ ಸರ್ವಶೂನ್ಯದಿಂದ ಶೂನ್ಯವಸ್ತು. ಶೂನ್ಯಕ್ಕೆ ರೂಪಿಲ್ಲದ ರೂಪುಂಟು. ಇದು ವಾಙ್ಮನಸ್ಸುಗಳಿಗೆ ತೋರದಿದ್ದರೂ ಸದ್‌ಭಾವಗಮ್ಯವಾಗಿರುತ್ತದೆ. ಇದು ಆದಿಮಧ್ಯಾಂತ ಶೂನ್ಯ ಅನಾದಿಶಿವ.

"ಅಲಕ್ಷ್ಯಮದ್ವಯಂ ಶೂನ್ಯಮಮೂರ್ತಂ ಪರಮವ್ಯಯಮ್
ಅನಾಮಮಕುಲಂ ಶುದ್ಧಂ ಅನಾದ್ಯಂ ಶಿವಮುಚ್ಯತೇ |
ಆದಿಮಧ್ಯಾಂತಶೂನ್ಯಂ ಚ ವ್ಯೋಮಾ ವ್ಯೋಮ ವಿವರ್ಜಿತಮ್
ಧ್ಯಾನ ಜ್ಞಾನದ್ವಯೋರ್ಹೀನಂ ಶೂನ್ಯಲಿಂಗಮನಾಶ್ರಯಮ್ ||"

ಕಾರಣಕ್ಕೆ ಕಾಣುವುದಲ್ಲ ಎರಡಾಗಿಲ್ಲ, ಒಂದಲ್ಲ; ಶೂನ್ಯ. ಮೂರ್ತವಲ್ಲ, ಮುಹೂರ್ತವೂ ಅಲ್ಲ. ಮೂರ್ತ–ಮುಹೂರ್ತಗಳಿಗೆ ಭಿನ್ನ ; ಸರ್ವ

ಶ್ರೇಷ್ಠ. ಸಾವಿಲ್ಲದ್ದು ; ಕೇಡಿಲ್ಲಿದ್ದು. ಹೆಸರಿಲ್ಲದ್ದು ; ವಂಶವಿಲ್ಲದ್ದು. ನಿಷ್ಕಲಂಕ. ಆದಿಯಿಲ್ಲದ ವಸ್ತುವಿನಿಂದಾದ್ದು. ಶಿವನಾಮವುಳ್ಳದ್ದು. ಅದು ಆದಿಮಧ್ಯಾಂತ (ಸೃಷ್ಟಿ ಸ್ಥಿತಿ ಸಂಹಾರ) ಶೂನ್ಯ. ವ್ಯೋಮಾವ್ಯೋಮ (ಅವಕಾಶ–ಅನವಕಾಶ) ಶೂನ್ಯ. ಧ್ಯಾನ ಜ್ಞಾನ ದ್ವಯ ಶೂನ್ಯ. ಆಶ್ರಯ ಶೂನ್ಯ. ಅದರಿಂದಾಗಿ ಅದು ಶೂನ್ಯಲಿಂಗ.

"ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಂಬ ಪಂಚಾದಿ ದೇವತೆಗಳಿಲ್ಲದಂದು, ಈ ಪಂಚೈವರ ಲಯ ಗಮನಂಗಳಿಗೆ ಕಾರಣವಾದ ಶಿವಶಕ್ತಿ ಇಲ್ಲದಂದು, ಈ ಶಿವಶಕ್ತಿಗೆ ಕಾರಣವಾದ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣನೆಂಬ ನಿಃಕಳ ಶಿವತತ್ತ್ವವಿಲ್ಲದಂದು, ನೀನು ಶೂನ್ಯನಾಗಿ ಇರ್ದಿಯಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ."

ಶೂನ್ಯವಸ್ತು ಶಿವಶಕ್ತಿಯರಿಗಿಂತ ಮೊದಲಿನದು. ಮೂವತ್ತಾರು ತತ್ತ್ವಗಳಿಗೆ ಮುನ್ನಿನದು. ನಾದಕಳೆಗಳಿಲ್ಲದುದು. ಜೀವಾತ್ಮ ಪರಮಾತ್ಮರಿಗೆ ಹಿಂದಿನದು. ಜಗದ–ಸುಳುಹಿಗಿಂತ ಪೂರ್ವದಲ್ಲಿರುವುದು. ಇಹಪರಗಳಿಗಿಂತ ಆಚೆಯದು. ವಾಚ್ಯವಲ್ಲದ್ದು. "ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರ ಎಂಬ ಸಂದಣಿ ತಲೆದೋರದ ಮುನ್ನ ಬಯಲೇ ಸ್ವರೂಪವಾಯಿತ್ತು. ಆ ಸ್ವರೂಪಿನ ನಡೆಯನುಪಮಿಸಬಾರದು. ನೋಡಬಾರದ ಬೆಳಗು, ಕೂಡಬಾರದ ಮೂರ್ತಿ, ಅಖಂಡ ಅಪ್ರತಿಮ ಗುಹೇಶ್ವರಲಿಂಗದ ಬೆಳಗಿನ ಮೂಲವ ಲಿಂಗಸಂಗಗಳಲ್ಲದ ಮಿಕ್ಕಿನ ಅಂಗವಿಕಾರಿಗಳೆತ್ತಬಲ್ಲರು ?" ಪ್ರಭುದೇವರು ಆ ಶೂನ್ಯದ ಸ್ವರೂಪವನ್ನು ಇಲ್ಲಿ ಬಣ್ಣಿಸಿದ್ದಾರೆ. 'ಬಯಲೇ ಸ್ವರೂಪವಾಯಿತ್ತು' ಎನ್ನುತ್ತಾರೆ. ಅದಕೊಂದು ಬೇರೆ ರೂಪಿಲ್ಲ. ಅದೇ ದೇವರ ಸ್ವರೂಪು. ಆ ಸ್ವರೂಪು ವಿಕಾಸವಾಗಬಲ್ಲುದು. ಆದರೆ ಆ ವಿಕಾಸದ ಗತಿಯನ್ನು ಉಪಮಿಸಲಾಗದು. ಅದಕೊಂದು ಸ್ವರೂಪವಿದ್ದರೂ ಅದು ದರ್ಶನದೂರ ; ಸ್ಪರ್ಶನದೂರ. ಅಖಂಡವಾದ ಅಪ್ರತಿಮವಾದ ಆ ಶೂನ್ಯಲಿಂಗದ ಪರಿಪೂರ್ಣ ಪ್ರಕಾಶವನ್ನು ಲಿಂಗಸಂಗಿಗಳು ಬಲ್ಲರು. ಅದರ ಶಕ್ತಿ ಮೊಗ್ಗಿನೊಳಗಿನ ಕಂಪಿನಂತೆ, ಕನ್ನೆಯೊಳಗಿನ ಸ್ನೇಹದಂತೆ ಇರುತ್ತದೆ. ಈ ಸಮಷ್ಟಿವಸ್ತು ವ್ಯಷ್ಟಿಗತ ಶಿಖಾಚಕ್ರದಲ್ಲಿ ನೆಲೆಸಿರುತ್ತದೆ.

೩. ಶಿವವಸ್ತು

"ಅಸ್ತಿ ಕಶ್ಚಿತ್ಸ್ವತಃ ಸಿದ್ಧಃ ಸಚ್ಚಿದಾನಂದ ಲಕ್ಷಣಃ
ನಿತ್ಯೋ ನಿರಂಜನಃ ಶುದ್ಧೋ ನಿರ್ಮಲೋ ನಿರುಪಪ್ಲವಃ |
ನಿರ್ಗುಣೋ ನಿತ್ಯಸಂಪನ್ನೋ ನಿರ್ಮಾಯೋ ನಿರುಪಾಧಿಕಃ
ಅಕಾಯೋ ಭಕ್ತಕಾಯಶ್ಚ ಪರಾತ್ಪರತರಃ ಶಿವಃ |"

—ಸೂಕ್ಷ್ಮಾಗಮ, ಪ-೧.

ಇದೇ ಪರಶಿವ. ಇದು ಸ್ವಯಂಭು. ಸಚ್ಚಿದಾನಂದ ಸ್ವರೂಪ; ನಿತ್ಯ, ರಂಜನ, ಮಲ, ಉಪಪ್ಲವ, ಗುಣ, ಮಾಯ, ಉಪಾಧಿ-ರಹಿತ. ನಿತ್ಯಸಂನಿಹಿತ.

"ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನಭಿತ್ತಯೇ
ಸಚ್ಚಿದಾನಂದರೂಪಾಯ ಶಿವಾಯ ಬ್ರಹ್ಮಣೇ ನಮಃ |
ಅಸ್ತಿ ಸಚ್ಚಿತ್ಸುಖಾಕಾರಮಲಕ್ಷಣಪದಾಸ್ಪದಂ
ನಿರ್ವಿಕಲ್ಪಂ ನಿರಾಕಾರಂನಿರಸ್ತಾಶೇಷವಿಪ್ಲವಮ್ |
ಸ್ವಪ್ರಕಾಶಂ ಪರಾಕಾಶ ಮನೌಪಮ್ಯ ಮನಾಮಯಂ
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿನಿರಂಕುಶಮ್ |
ಶಿವ ರುದ್ರ ಮಹಾದೇವ ಭವಾದಿ ಪದಸಂಜ್ಞಿತಂ
ಅದ್ವಿತೀಯಮನಿರ್ದೇಶ್ಯಂ ಪರಂ ಬ್ರಹ್ಮ ಸನಾತನಮ್ ||"

—ಸಿದ್ಧಾಂತ ಶಿಖಾಮಣಿ

ಶಿವನು ಮೂಜಗದಾಧಾರ. ಕ್ರಿಯಾಜ್ಞಾನಾನುಭೋಗ ರೂಪ. ಸ್ವಪ್ರಕಾಶ ಅಂದರೆ ಸ್ವತಸ್ಸಿದ್ಧ. ಸರ್ವಜ್ಞ, ಸರ್ವವ್ಯಾಪಿ; ಶಾಂತಸ್ವರೂಪಿ. ಶಿವ ರುದ್ರ ಮಹಾದೇ ವಭವ ಎಂದು ಮುಂತಾದವುಗಳಿಂದ ಅಂಕಿತ. ಶಕ್ತಿ ಸಹಿತ; ಸ್ವತಂತ್ರ. ಪರಬ್ರಹ್ಮ. ಸನಾತನಶಿವ ; ಷಡಧ್ವಾತೀತ ಶಿವ;

ಈ ಶಿವನನ್ನೇ ವಚನಕಾರರು ನಿಷ್ಕಲಲಿಂ,ಗ ಮೂಲಲಿಂಗ, ನಿಷ್ಕಲ ಶಿವತತ್ವವೆಂದು ಮುಂತಾಗಿ ಹೇಳುವರು.

"ಅಂಗವಾರು, ಲಿಂಗವಾರು, ಶಕ್ತಿಯಾರು, ಭಕ್ತಿಯಾರು, ಇಂತಿವೆಲ್ಲವ ನಿನ್ನಲ್ಲಿ ಗರ್ಭೀಕರಿಸಿಕೊಂಡು ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಂಜನ

ನೀನಾದ ಕಾರಣ ನಿನ್ನ ನಿಷ್ಕಲ ಶಿವತತ್ವವೆಂದೆನು ಕಾಣಾ, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ"

ಷಟ್‌ಸ್ಥಲ ಭಿತ್ತಿಯಿದು. ಮಯೂರಾಂಡರಸದಂತೆ ಜಗತ್ಸಾಮಗ್ರಿಯನ್ನು ಗರ್ಭೀಕರಿಸಿಕೊಂಡಿರುವುದು. ಇದು ಬ್ರಹ್ಮಾಂಡ ತರಂಗಸಾಗರ. ಜ್ಯೋತಿರ್ಗಣಸ್ಫುಲಿಂಗಮಹಾತೇಜ. ಸಮಸ್ತ ತತ್ತ್ವಕೇಂದ್ರ. ಪುಷ್ಪ ಪರಿಮಳದಂತೆ ಸತಿಸ್ನೇಹದಂತೆ ಇರುವ ಶಕ್ತಿಸಂಪನ್ನ.

"ಸ್ವಾನುಭೂತಿಪ್ರಮಾಣಸ್ಥಂ ಜ್ಯೋತಿಷಾಮುದಯಸ್ಥಲಂ
ಶಿವಾಖ್ಯಂ ಪರಮಂ ಬ್ರಹ್ಮ ಪರಮಾಕಾಶಲಕ್ಷಣಮ್ ।
ಲಿಂಗಮಿತ್ಯುಚ್ಯತೇ ಸದ್ಭಿರ್ಯದ್ವಿನಾ ನ ಜಗತ್ ಸ್ಥಿತಿಃ ॥"

—ಸಿದ್ಧಾಂತ ಶಿಖಾಮಣಿ, ಪ. ೧೯

ಪರಬ್ರಹ್ಮನಾಮಕ ಶಿವನಿಗೆ ಇದು ಪ್ರಕೃಷ್ಟ ಲಕ್ಷಣ. ಸ್ವಾನುಭಾವ (ಪರಾಸಂವಿತ್) ಪ್ರಮಾಣಗಮ್ಯ, ಆಕಾಶಕ್ಕೆ ಆಕಾಶವಾದ ಪರಮಾಕಾಶರಮ್ಯ ; ಲಿಂಗನಾಮ ; ವಿಶ್ವಜ್ಯೋತಿಗಳಿಗೆಲ್ಲ ಉದಯ ಸ್ಥಾನ. ಅಂತೆಯೇ ಸ್ಥಲ ವಾಚ್ಯನಾಗಿದ್ದಾನೆ – ಷಟ್‌ಸ್ಥಲ ಶಾಸ್ತ್ರದಲ್ಲಿ ! ಈ ಶಿವನು ದೃಷ್ಟಿಗತ ಸಹಸ್ರಾರದಲ್ಲಿರುತ್ತಾನೆ. 'ಶಿವ ಏಕೋಧ್ಯೇಯಃ ಶಿವಂಕರಃ' 'ಶಿವಮಯಂ ಸರ್ವಮಿದಂ' 'ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ' 'ಬ್ರಹ್ಮಾ ಶಿವೋ ಮೇ ಅಸ್ತು' ಇತ್ಯಾದಿ ಶ್ರುತಿ – ಪ್ರಮಾಣಗಳಿಂದ ಶಿವವಸ್ತು ಉಪಾಶ್ಯವಾಗಿದೆ. ಶಿವನಿಗೆ ಪರಬ್ರಹ್ಮ ಎಂಬುದು ಪರ್ಯಾಯವಾಗಿದೆ. ಅಂತೆಯೇ ಸ್ಥಲನಾಮಕನೂ ಆಗಿದಾನೆ.

ಸ್ಥಲನಾಮ ನಿರ್ವಹಣ :

ವಿಮರ್ಶಾಶಕ್ತಿಯುತ ಸದಾಶಿವನೇ ಸ್ಥಲವಾಚ್ಯನಾಗಿದ್ದಾನೆ. ಸಮಸ್ತ ಸೃಷ್ಟಿಯ ಸ್ಥಿತಿ ಲಯಗಳಿಗೆ ಸೃಷ್ಟಿಗೆ ಅಂದರೆ ವಿಕಾಸ ಸಂಕೋಚಗಳಿಗೆ ಕಾರಣವಾದ ಆ ಪರಬ್ರಹ್ಮನಾಮಕ ಶಿವನೇ ಸ್ಥಲವೆಂದೆನಿಸಿದ್ದಾನೆ. ಸದಾಶಿವಾದಿ ಸಮಸ್ತ ತತ್ತ್ವಗಳ ಉನ್ಮೇಷ ವಿಧಾಯಕನಾಗಿ ಸ್ಥಲವೆಂದು ಹೇಳಿಸಿಕೊಂಡಿದ್ದಾನೆ. ಹೆಚ್ಚೇನು ಚರಾಚರವೆಲ್ಲಕ್ಕೂ ಅಧಿಷ್ಠಾನನಾಗಿದ್ದಾನೆ.

"ಅಧಿಷ್ಠಾನಂ ಸಮಸ್ತಸ್ಯ ಸ್ಥಾವರಸ್ಯ ಚರಸ್ಯ ಚ ।
ಜಗತೋ ಯದ್ಭವೇತ್ತತ್ತ್ವಂ ತದ್ಧಿ ವೈ ಸ್ಥಲಮುಚ್ಯತೇ ॥
'ಯದ್ಭವೇತ್ಪರಂ ಬ್ರಹ್ಮ ಸ್ಥಲಂ ತತ್ಪ್ರಾಹುರಕ್ಷರಮ್'

—ಅನುಭವಸೂತ್ರ

ಪಂಚಕೃತ್ಯ ನಿರ್ವಹಣ ಸಮರ್ಥಶಾಲಿಯಾದ ವಸ್ತುವೇ ಸ್ಥಲ. ಬೇರೊಂದರ ನೆರವನ್ನು ಬಯಸದ ಸರ್ವಸ್ವತಂತ್ರ ವಸ್ತುವೇ ಸ್ಥಲ. ಷಡಧ್ವಾತೀತ ಶಿವನೇ ಸ್ಥಲ. ಅಂತೆಯೇ ಸ್ಥಲವೂ ಷಟ್‌ಸ್ಥಲಾತೀತ.

ಶಿವಾದ್ವೈತ ತತ್ತ್ವ

ಈ ಸ್ಥಲವನ್ನೇ ಶಿವಾದ್ವೈತವೆಂದು ಶಕ್ತಿವಿಶಿಷ್ಟಾದ್ವೈತವೆಂದು ಹೇಳುತ್ತೇವೆ. 'ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ' ಎಂದು ಶ್ರುತಿಪ್ರಮಾಣದಂತೆ ಶಿವನು ಶಕ್ತಿ ಸಮೇತನಾಗಿದ್ದಾನೆ. "ನ ಶಿವೇನ ವಿನಾ ಶಕ್ತಿಃ ನ ಶಕ್ತಿರಹಿತಃ ಶಿವಃ । ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ ॥ ಯಥಾ ಚಂದ್ರೇ ಸ್ಥಿರಾಜ್ಯೋತ್ಸ್ನಾ ವಿಶ್ವವಸ್ತು ಪ್ರಕಾಶಿನೀ । ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥" ಹೀಗೆ ಸಿದ್ಧಾಂತ ಶಿಖಾಮಣಿಯಲ್ಲಿ ಶಿವಶಕ್ತಿಗಳ ಅವಿನಾಭಾವ ಸಂಬಂಧವನ್ನು ಸುಂದರವಾಗಿ ಬಣ್ಣಿಸಲಾಗಿದೆ.

"ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥"

—ಸಿದ್ಧಾಂತಾಗಮ.

ಆ ಶಿವನಲ್ಲಿರುವ ಶಕ್ತಿಯನ್ನೇ ಈ ಲೋಕದಲ್ಲಿ ಮಾಯೆಯೆಂದು ಹೇಳುತ್ತಾರೆ. ಮಾಯಾಪದ ನಿರ್ವಚನವೂ ಸಹ ಶಿವನನ್ನು ಸ್ವಾಭಾವಿಕವಾಗಿ ಹೊಂದಿರುವ ಶಕ್ತಿಯೆಂದಾಗುತ್ತದೆ. ಪ್ರಕಾಶವೇ ಶಿವ; ಪ್ರಕಾಶದ ಚಲನವೇ ಶಕ್ತಿ. ಶಕ್ತಿ ಬಿಟ್ಟು ಶಿವನಿಲ್ಲ. ಶಕ್ತಿ ಬ್ರಹ್ಮನಿಷ್ಠವೂ ಸನಾತನವೂ ಆಗಿದೆ. 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ

ಜ್ಞಾನಬಲ ಕ್ರಿಯಾಚ' ಶ್ವೇತಾಶ್ವತರ ಶ್ರುತಿಯು ಸಿದ್ಧಾಂತಾಗಮದ ಶಕ್ತಿ ಸ್ವಾಭಾವಿಕತೆಗೆ ಸಮರ್ಥ ಸಾಕ್ಷಿಯಾಗಿದೆ. ಶಿವನು ಶಕ್ತಿ ಸಮೇತನಾಗಿದ್ದರೂ ದ್ವೈತನಲ್ಲ. ಶಕ್ತಿಯ ಅವಿನಾಭಾವ ಸಂಬಂಧದಿಂದ ಅದ್ವೈತನಾಗಿದ್ದಾನೆ. ಹೀಗೆ 'ಶಿವಾದ್ವೈತ'ದ ಸತ್ಯಸ್ವರೂಪವನ್ನು ತಿಳಿಯುವುದೇ ತತ್ತ್ವ. ಶಿವನಲ್ಲಿ ಅವಿನಾಭಾವದಿಂದ ಸ್ವಾಭಾವಿಕವಾಗಿ ಇರುವ ಆ ಶಕ್ತಿಯ ವಿಕಾಸದಿಂದಾಗಿ ವಿಶ್ವ ಸೃಷ್ಟಿಯಾಗುವುದು.

"ಸ್ವಶಕ್ತಿ ಕ್ಷೋಭ ಮಾತ್ರೇಣ ಸ್ಥಲಂ ತದ್ ದ್ವಿವಿಧಂ ಭವೇತ್ ।
ಏಕಂ ಲಿಂಗಸ್ಥಲಂ ಪ್ರೋಕ್ತಮನ್ಯದಂಗ ಸ್ಥಲಂ ಸ್ಮೃತಮ್ ॥"
—ಅನುಭವಸೂತ್ರ

ಶಕ್ತಿಸ್ಪಂದನದಿಂದ ವಿಕಾಸಭಾವದಿಂದ ಶಿವಸ್ಥಲವೇ ಲಿಂಗ – ಅಂಗವೆಂದು ಎರಡಾಗುವುದು. ಅಂತೆಯೇ ಆ ಸ್ಥಲಗತ ಚಿತ್‌ವೂ ಚಿದಚಿತ್ ಎಂದು ಇಬ್ಬಗೆಯಾಗಿ ಲಿಂಗದಲ್ಲಿ ಸೇರಿ ಶಕ್ತಿಯೆಂದೂ, ಅಂಗದಲ್ಲಿ ಸೇರಿ ಭಕ್ತಿಯೆಂದೂ ಹೇಳಿಸಿಕೊಳ್ಳುತ್ತದೆ. ಅಂಗಗತ ಭಕ್ತಿಯಿಂದ ಅಂಗನು ನಿವೃತ್ತಿಪರನಾಗಿ ತ್ಯಾಗಾಂಗ–ಭೋಗಾಂಗ–ಯೋಗಾಂಗನೆಂದು ತ್ರಿವಿಧನಾಗಿ ಬಳಿಕ ಭಕ್ತ ಮಹೇಶಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು ಷಡ್ವಿಧನಾಗುತ್ತಾನೆ. ಇದೇ ಷಟ್‌ಸ್ಥಲ.

ಇನ್ನು ಲಿಂಗಗತ ಶಕ್ತಿಯಿಂದ ಲಿಂಗರೂಪ ಶಿವನು ಇಷ್ಟ ಪ್ರಾಣ ಭಾವ–ಲಿಂಗಗಳಾಗಿ ಬಳಿಕ ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾ–ಲಿಂಗಗಳಾಗಿ ಆರು ಬಗೆಯಾಗುತ್ತಾನೆ. ಗುರುಲಿಂಗಕ್ಕೆ ಆಗಮಲಿಂಗವೆಂದು, ಶಿವಲಿಂಗಕ್ಕೆ – ಅನುಗ್ರಹಲಿಂಗವೆಂದು, ಜಂಗಮಲಿಂಗಕ್ಕೆ– ಒಲವುಲಿಂಗವೆಂದು, ಪ್ರಸಾದಲಿಂಗಕ್ಕೆ – ನಿಷ್ಪತ್ತಿಲಿಂಗವೆಂದು ಪರ್ಯಾಯ ಹೆಸರುಗಳಿವೆ.

ಆರಂಗ ವಿಕಾಸವಾಗಿ ೪೪ ಉಪಾಂಗ ಸ್ಥಲಗಳಾಗುತ್ತವೆ. ಆರು ಲಿಂಗಗಳು ವಿಕಾಸವಾಗಿ ೫೭ ಉಪಲಿಂಗಸ್ಥಲಗಳಾಗುತ್ತವೆ.

ತ್ಯಾಗಾಂಗವು ಭಕ್ತ, ಮಹೇಶ – ಎಂದು ಎರಡು ಬಗೆಯಾದಂತೆ ತ್ಯಾಗಾಂಗಗತ ಕ್ರಿಯಾ (ಇಷ್ಟ) ಲಿಂಗವು ಆಚಾರಲಿಂಗ, ಗುರುಲಿಂಗವೆಂದು ಎರಡು ತೆರನಾಗುವುದು.

ಮರಳಿ ಭಕ್ತನು ಮೂರು ಬಗೆಯಾಗುತ್ತಾನೆ:

"ಗುರುಭಕ್ತೋ ಲಿಂಗಭಕ್ತಶ್ಚರಭಕ್ತಸ್ತಥೈವ ಚ ।
ಏವಂ ಭೇದ ಸಮಾಯುಕ್ತೋ ಭಕ್ತಸ್ತು ತ್ರಿವಿಧೋ ಭವೇತ್ ॥"

—ಸೂಕ್ಷ್ಮಾಗಮ

ಭಕ್ತನು ಹೀಗೆ ಮೂರು ತೆರನಾದಂತೆ ಭಕ್ತಸ್ಥಲದ ಆಚಾರಲಿಂಗವು ಮೂರು ತೆರನಾಗುತ್ತದೆ ಆ ಭಕ್ತತ್ರಯರ ಆಚಾರ ನಿರ್ವಹಣೆಗಾಗಿ!

"ಏಕಮೂರ್ತಿ ಸ್ತ್ರಯೋಭಾಗಾ ಗುರುರ್ಲಿಂಗಂತು ಜಂಗಮಂ ।
ಜಂಗಮಂ ಚ ಗುರುರ್ಲಿಂಗಂ ತ್ರಿವಿಧಂ ತ್ವೇಕಮುಚ್ಯತೇ ॥"

ಒಂದಾದ ಆ ಆಚಾರ ಲಿಂಗರೂಪ ಶಿವನೇ ಗುರುಲಿಂಗ ಜಂಗಮ ವೆಂದಾ ಭಕ್ತಸ್ಥಲದಲ್ಲಿ ಆರಾಧ್ಯನಾಗುತ್ತಾನೆ. ಭಕ್ತನು ಈ ಮೂರರಲ್ಲಿ ಕ್ರಮವಾಗಿ ಭಕ್ತಿ, ಪೂಜೆ, ದಾಸೋಹಗಳನ್ನು ಆಚರಿಸುತ್ತಾನೆ. ಕ್ರಮ ವಾಗಿ ಕ್ರಿಯೆ, ಜ್ಞಾನ, ವೈರಾಗ್ಯ ಗುಣಗಳನ್ನು ಸಂಪಾದಿಸುತ್ತಾನೆ. ಗುರು–ಲಿಂಗ–ಜಂಗಮರು ಭಕ್ತನ ಈಕ್ಷಣ–ಜ್ಞಾನ–ಸ್ಪರ್ಶನಗಳನ್ನೂ ಅಭಿವೃದ್ಧಿ ಗೊಳಿಸುವರು. ಈಕ್ಷಣವೇ ಕ್ರಿಯೆಯೆನಿಸುತ್ತದೆ. ಸ್ಪರ್ಶನವೇ ಅನು ಭವ (ಅನುಭೋಗ) ವೆನಿಸುತ್ತದೆ. ಕ್ರಿಯಾಜ್ಞಾನಾನುಭವಗಳನ್ನು ಬೇರಾಗಿ ಹೇಳಿದರೂ ಬೇರಲ್ಲ. ಸಾಧನೆಗಾಗಿ ತಿಳುವಳಿಕೆಗಾಗಿ ಬಿಡಿಸಿ ಹೇಳಲಾ ಗಿದೆ. ಈ ಮೂರು ಗುರುವಿನಲ್ಲಿ ಉದಯುವಾಗಿ ಲಿಂಗದಲ್ಲಿ ಅಭ್ಯಾಸ ವಾಗಿ ಜಂಗಮರೂಪ ಚೈತನ್ಯದಲ್ಲಿ ಸ್ಥಿರವಾಗುತ್ತವೆ. ಇದರಿಂದಾಗಿ ಗುರು–ಲಿಂಗ–ಜಂಗಮವೆಂದು ವಿಂಗಡಿಸಲಾಗಿದೆ. ಸ್ಥೂಲತನು ಅಂದರೆ ತ್ಯಾಗಾಂಗ ಗತ ಚೈತನ್ಯವೇ ಗುರು. ಸೂಕ್ಷ್ಮವಾದ ಭೋಗಾಂಗಗತ ಚೈತನ್ಯವೇ ಲಿಂಗ. ಕಾರಣವಾದ ಯೋಗಾಂಗಗತ ಚೈತನ್ಯವೇ ಜಂಗಮ. ಗುರುತ್ರಯ ದಿಂದ ಕ್ರಿಯಾಜ್ಞಾನಾನುಭವಗಳು ಕ್ರಮವಾಗಿ ಉದಯವಾಗುತ್ತವೆ. ಲಿಂಗ ತ್ರಯದಿಂದ ಕ್ರಮವಾಗಿ ಆ ಮೂರು ಅಭ್ಯಾಸವಾಗುತ್ತವೆ. ಜಂಗಮತ್ರಯ

ದಿಂದ ಆ ಮೂರು ದೃಢವಾಗುತ್ತವೆ. ಇದರಿಂದಾಗಿ ಆಚಾರಲಿಂಗವೊಂದೇ ಮೂರಾಗಿ ಒಂಬತ್ತಾಗುತ್ತದೆ:

"ಅದೌ ನವಸ್ಥಲಾನೀಹ ಭಕ್ತಸ್ಥಲ ಸಮಾಶ್ರಯಾತ್ ।
ಕಥ್ಯಂತೇ ಗುಣಸಾರೇಣ ನಾಮನ್ಯೇಷಾಂ ಪೃಥಕ್ ಶೃಣು ॥
ದೀಕ್ಷಾ ಗುರುಸ್ಥಲಂ ಪೂರ್ವಂ ತತಃ ಶಿಕ್ಷಾಗುರುಸ್ಥಲಂ ।
ಪ್ರಜ್ಞಾಗುರುಸ್ಥಲಂ ಚಾಥ ಕ್ರಿಯಾಲಿಂಗಸ್ಥಲಂ ತತಃ ॥
ಭಾವಲಿಂಗಸ್ಥಲಂ ಚಾಥ ಜ್ಞಾನಲಿಂಗಸ್ಥಲಂ ತತಃ ।
ಸ್ವಯಂ ಚರಂ ಪರಂಚೇತಿ ತೇಷಾಂ ಲಕ್ಷಣಮುಚ್ಯತೇ ॥"

ಭಕ್ತಸ್ಥಲವನ್ನಾಶ್ರಯಿಸಿ ಆಚಾರಲಿಂಗವು ಒಂಬತ್ತು ಬಗೆಯಾಗುತ್ತದೆ. ದೀಕ್ಷಾಗುರು, ಶಿಕ್ಷಾಗುರು, ಜ್ಞಾನ (ಮೋಕ್ಷಾ) ಗುರು; ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ; ಸ್ವಯುಜಂಗಮ, ಚರಜಂಗಮ, ಪರಜಂಗಮ, ಇವು ನವನಾಮಗಳು. ಗುಣಾನುಸಾರದಿಂದ ಈ ಹೆಸರುಗಳು ಬಂದಿವೆ. ಇವುಗಳ ಲಕ್ಷಣವನ್ನು ಹೇಳಲಾಗುತ್ತದೆ.

೧. ದೀಕ್ಷಾಗುರುಸಲ್ಥಂ

ಮಾನವನಿಗೆ ಮೊದಲು ಎರಡು ದೋಷಗಳಿರುತ್ತವೆ. ಒಂದು ಜನ್ಮದೋಷ; ಇನ್ನೊಂದು ಕರ್ಮದೋಷ. ಜನ್ಮದೋಷವನ್ನು ಭವಿತನವೆನ್ನುತ್ತೇವೆ. ಕರ್ಮದೋಷವನ್ನು ಕಾರ್ಮಿಕಮಲವೆನ್ನುತ್ತೇವೆ. ಇವೆರಡನ್ನು ಕಳೆದು ಕ್ರಿಯೆಯ ಜ್ಞಾನೋದಯವನ್ನು ಕರುಣಿಸಲು ದೀಕ್ಷಾಗುರು ಅವಶ್ಯಕವಾಗಿ ಬೇಕು. 'ದೀಕ್ಷಾಗುರು' ಎಂಬಲ್ಲಿ ಎರಡು ಪದಗಳಿವೆ. ಇವುಗಳಲ್ಲಿ ಮೊದಲಿನದಾದ ದೀಕ್ಷಾ ಶಬ್ದದ ವಿಶ್ಲೇಷಣವನ್ನು ಶ್ರೀ ರೇಣುಕ ಶಿವಾಚಾರ್ಯನು ಹೀಗೆ ಮಾಡಿದಾನೆ:

"ದೀಯತೇ ಪರಮಂ ಜ್ಞಾನಂ ಕ್ಷೀಯತೇ ಪಾಶ ಬಂಧನಂ
ಯಯಾ ದೀಕ್ಷೇತಿ ಸಾ ತಸ್ಯಾಂ ಗುರುರ್ದೀಕ್ಷಾಗುರುಃ ಸ್ಮೃತಃ।"

ವಿಚಾರಪೂರ್ಣವಾದ ವಿಶ್ಲೇಷಣ; ವಿಹಿತವಾದ ವಿವೇಚನ. ಮಾನವನು ಪಾಶಬಂಧನದಿಂದ ಪಶು (ಬದ್ಧಜೀವ) ವಾಗಿದ್ದಾನೆ. ಪತಿಕರ್ಮರಹಿತನಾಗಿದ್ದಾನೆ. ಪಶುಕರ್ಮನಿರತನಾಗಿದ್ದಾನೆ. ದುಷ್ಕರ್ಮಜನ್ಯ ದುಃಖಕ್ಕೆ ಭಾಗಿಯಾಗಿದ್ದಾನೆ. ಕರ್ಮ-ಜನ್ಮಗಳ ಪರಿಭವವನ್ನು ಕಳೆದು ಪರಮಕ್ರಿಯಾಜ್ಞಾನಗಳನ್ನುಂಟುಮಾಡುವುದೇ ದೀಕ್ಷೆ. ಇದೊಂದು ಉತ್ತಮ ಶಿವಸಂಸ್ಕಾರ. ಕ್ರಿಯಾ, ಮಂತ್ರ, ವೇಧಾ ಎಂದು ದೀಕ್ಷೆ ತ್ರಿವಿಧವಾಗಿದೆ. ದೀಕ್ಷಾಗುರುವು ಕ್ರಿಯಾದೀಕ್ಷೆಯನ್ನು ಅನುಗ್ರಹಿಸುತ್ತಾನೆ. ಕಾಯದಲ್ಲಿರುವ ಕಾರ್ಮಿಕಮಲವನ್ನು ಕಳೆಯುತ್ತಾನೆ.

ಕ್ರಿಯಾದೀಕ್ಷೆ ಏಳು ಬಗೆ. ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ್ತ, ಲಿಂಗಸ್ವಾಯತ್ತ, ಎಂಬಿವು ಏಳು ಕ್ರಿಯಾದೀಕ್ಷೆಗಳು. ಇವನ್ನು ಚೆನ್ನಾಗಿ ಬಲ್ಲಿದನೇ ದೀಕ್ಷಾಗುರು. ಈ ಏಳನ್ನು ವಿವರವಾಗಿ ತಿಳಿಯಬಯಸುವವರು ನಮ್ಮಿಂದ ರಚಿತವಾದ 'ಸಂಸ್ಕಾರ' ಎಂಬ ಗ್ರಂಥವನ್ನು ಓದಬೇಕು.

ದೀಕ್ಷಾಗುರು ಕರುಣಿಸುವ ಕ್ರಿಯಾದೀಕ್ಷೆಯಿಂದ ಕರ್ಮ ನಿರ್ಮಳವಾಗುವಂತೆ ಭವಿತನಕ್ಕೆ ಕಾರಣವಾಪ ಕಾಯದ ಪೂರ್ವಾಶ್ರಯನ್ನು ಕಳೆಯುತ್ತಾನೆ. ಭೂತಶುದ್ಧಿಯನ್ನು ಕಾಯಶುದ್ಧಿಯನ್ನು ಮಾಡಿ ಕರಸ್ಥಲಕ್ಕೆ ಕ್ರಿಯಾಲಿಂಗವನ್ನು ಕರುಣಿಸುತ್ತಾನೆ. ಕರ್ಮೇಂದ್ರಿಯ ಕಾಳಿಕೆಯನ್ನು ಜ್ಞಾನೇಂದ್ರಿಯ ಅಂಧಕಾರವನ್ನು ಅಣಗಿಸಿ ಲಿಂಗಜ್ಯೋತಿಯಿಂದ ಬೆಳ್ಳನೇ ಬೆಳಗಿಸುತ್ತಾನೆ. ದೀಕ್ಷಾಗುರು ದಿವ್ಯಕಳಾಗುರು.

ಶಿಷ್ಯನ ಶರೀರದ ಕಾರ್ಮಿಕಮಲವನ್ನು ಕಳೆವವನು ಶಾಂತಿಕಳಾನ್ವಿತ ಶಿವದೀಕ್ಷಾಗುರು. ಕಾರ್ಮಿಕಮಲ ಸಂಚಿತ ಆಗಾಮಿ ಪ್ರಾರಬ್ಧ ಎಂದು ಮೂರುಬಗೆ. ಜನನ ಜೀವನ ಮರಣ ಈ ಮೂರು ಪರಿವಿಡಿದು ಸಂಚಿತ, ಪ್ರಾರಬ್ಧ, ಆಗಾಮಿ ಕರ್ಮಗಳು. ಈ ಮೂರರ ದೋಷಗಳನ್ನು ದುಃಖಗಳನ್ನು ದೂರ ಮಾಡುತ್ತಾನೆ-ದೀಕ್ಷಾಗುರು. ಈ ತ್ರಿವಿಧ ಸಂಸಾರದ ಕಗ್ಗೆಸರನ್ನು ತೊಳೆಯುತ್ತಾನೆ-ಕಳಾಗುರು. ಕಾಳ್ಗಿಲಸಗಳನ್ನು ಕೈ ಬಿಡಿಸುತ್ತಾನೆ. ಕ್ರಿಯಾ ಲಿಂಗಾರ್ಚನೆಯನ್ನು ಕೈಯಾರೆ ಕೈಕೊಳ್ಳುವಂತೆ

ಮಾಡುತ್ತಾನೆ. ಕಣ್ಣಿಗೂ ಕಾಣದ ಆ ಪರತರ ಶಿವಲಿಂಗವನ್ನು ಚೆಲುವ ಚಿತ್ಕಳೆಯನ್ನು ತಂದು ಕರಸ್ಥಲಕ್ಕಿತ್ತು ಕೈಪಿಡಿಯನ್ನಾಗಿಸುತ್ತಾನೆ; ಕೈಗೆಡೆಯನ್ನಾಗಿಸುತ್ತಾನೆ. ಕೈಗೆ ಚುಳುಕಾಗಿಸಿ ಕಣ್ಣಿಗೆ ಚೆಲು ಹೊಳಕಾಗಿಸುತ್ತಾನೆ. ಮುಂಗಾಣದೆ ದಿಕ್ಕು ದೆಸೆಗಾಣದೆ ಕರ್ಮದ ಕೆಸರಲ್ಲಿ ಬಿದ್ದವನನ್ನು ಎಬ್ಬಿಸಿ ಸತ್ಕ್ರಿಯಾರಾಧನ ತತ್ಪರನನ್ನಾಗಿಸುತ್ತಾನೆ. ಸ್ವಸ್ತಿಕಾರೋಹಣ ಮಾಡಿಸುತ್ತಾನೆ. ಕಲಶಾಭಿಷೇಕ ಮಾಡಿಸುತ್ತಾನೆ. ವಿಭೂತಿಯನ್ನು ಇಡ ಕಲಿಸುತ್ತಾನೆ. ಕಾಯ್ದೊಡಿಗೆಯನ್ನು ತೊಡಕಲಿಸುತ್ತಾನೆ. ಹರನರ್ಚನೆಯ ಹೆದ್ದಾರಿಯಲ್ಲಿ ನಡೆಗಲಿಸುತ್ತಾನೆ. ಲಿಂಗಾಯತ್ತಗೊಳಿಸಿ ಮಂಗಳರೂಪನನ್ನು ನೋಡಗಲಿಸುತ್ತಾನೆ.

'ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಂ
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ |'

—ಕಾರಣಾಗಮ

'ದೀಯತೇ ಲಿಂಗಸಂಬಂಧಃ ಕ್ಷೀಯತೇ ಕರ್ಮ ಸಂಚಯಃ
ದೀಯತೇ ಕ್ಷೀಯತೇ ಸಾಕ್ಷಾತ್ ಯಯಾ ದೀಕ್ಷೇತಿ ಕಥ್ಯತೇ |'

—ಸೂಕ್ಷ್ಮಾಗಮ

"ಗುಣಾತೀತಂ ಗುವರ್ಣಂ ರೂಪಾತೀತಂ ರುವರ್ಣಂ
ಗುಣಾತೀತಮರೂಪಂ ಚ ಯೋ ದದ್ಯಾತ್ ಸ ಗುರುಸ್ಮೃತಃ |"

'ದೀಕ್ಷಾಗುರು' ಎಂಬುದರಲ್ಲಿನ ದೀಕ್ಷಾಪದ ವಿಶ್ಲೇಷನವಾದ ಬಳಿಕ ಆ ದೀಕ್ಷೆಯನ್ನು ಬಲ್ಲ 'ಗುರು'ನಾಮದ ವಿಶ್ಲೇಷಣವನ್ನು ಈ ಮಂತ್ರದಲ್ಲಿ ಮಾಡುತ್ತಾನೆ:

ಗು-ವರ್ಣವು ಪ್ರಕೃತಿರೂಪ ತ್ರಿಗುಣ ಪಾರದರ್ಶಕ; ರು-ವರ್ಣವು ಪ್ರಾಕೃತಿಕ ರೂಪರಹಿತ. ಪ್ರಾಕೃತಿಕ ಗುಣರೂಪಗಳಿಲ್ಲದ ಪಾರಮಾರ್ಥಿಕ ಕಳಾಲಿಂಗವನ್ನು ಕರುಣಿಸುವಾತನೇ ಗುರು. ಕೆಡುವ ಗುಣ ಕೆಡುವ ರೂಪಗಳಿಲ್ಲದ ದೃಕ್ಕಳಾಗ್ರಾಹ್ಯವಾದ ದುಷ್ಕರ್ಮತಮವನ್ನು ಕತ್ತರಿಸುವ ಚಿತ್ಕಳಾಪೂರ್ಣ ಕ್ರಿಯಾಲಿಂಗವನ್ನು ಕರುಣಿಸುವಾತನೇ ಗುರು. 'ತನು

ತ್ರಯುಗತಾನಾದಿ ಮಲತ್ರಯಮಸೌ ಗುರುಃ । ದೀಕ್ಷಾತ್ರಯೇಣ ಸಂದಹ್ಯ ಲಿಂಗತ್ರಯ ಮುಪಾದಿಶತ್ ।' ಎಂಬ ಕಾರಣಾಗಮ ವಚನದಂತೆ ತ್ರಿಗುಣ ರಹಿತ ಮಾಯಿಕ ರೂಪರಹಿತ ಲಿಂಗವನ್ನು ಕರುಣಿಸುವವನು ಶ್ರೀಗುರು.

> 'ಸಕಲವನೆಲ್ಲ ಲಿಂಗದೊಳಗೆ ತೋರಿದನು. ಆ ಲಿಂಗದ ಬೆಳಗ ಸಕಲದೊಳಗೆ ತೋರಿದನು, ಎನ್ನ ಮನಕ್ಕೆ ಅತಿಶಯವಾಗಿ ತೋರಿ ತೋರಿ ರಕ್ಷಿಸಿದನು. ಎನ್ನೊಳಗೆ ತನ್ನ ತೋರಿದನು ತನ್ನೊಳಗೆ ಎನ್ನ ತೋರಿದನು. ಮತ್ತೆ ಎರಡನು ಏಕಮಾಡಿ ಎನ್ನೊಳಗೆ ಗುಹೇಶ್ವರನಾದನು.'

ಶ್ರೀಗುರು ಶಿಷ್ಯನ ಕರದೊಳಗೆ ಕುರುಹ ಕೊಡುವನು. ಆದರೆ ಆ ಕುರುಹಿಗೆ ರೂಹಿಲ್ಲ. ಅದು ರೂಹಿಲ್ಲದ ರೂಹು. ಲಿಂಗದೊಳಗೆ ತಾನಾಗಿ ತೋರುವನು. ತನ್ನೊಳಗೆ ನಿನ್ನನ್ನು ತೋರುವನು. ನಾನು ನೀನೆಂಬ ರೂಪಗಳನಳಿದು ಗುರು ಶಿಷ್ಯ ಲಿಂಗವೆಂಬ ಗುಣಭೇದಗಳನಳಿದು ತೋರುವನು. ಪಿಂಡಾಂಡದ ಗುಣಗಳನ್ನೆಲ್ಲ ಕಳೆದು ಪಿಂಡಾಂಡದ ರೂಪನ್ನೆಲ್ಲ ಲಿಂಗರೂಪಾಗಿಸುವನು ಗುರು. 'ಗುರುವಿನ ಕೃಪೆಯಿಂದ ಮಲತ್ರಯವ ತೊಳೆದೆ. ಗುರುವಿನ ಕೃಪೆಯಿಂದ ಅನುಭಾವಿಯಾದೆ........' ಎಂಬಂತೆ ಗುರುವು ತನು ಗುಣಗಳನ್ನು ತನು ರೂಪನ್ನು ತೊಡೆದು ಲಿಂಗಗುಣ ಲಿಂಗರೂಪನ್ನು ಕರುಣಿಸುತ್ತಾನೆ. ಆತನೇ ನಿಜವಾದ ಗುರು. ಅಂತೆಯೆ. ಆತನನ್ನು ಆಚಾರ್ಯನೆಂದು ವಚಿಸುತ್ತಾರೆ:

> "ಆಚಿನೋತಿ ಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ
> ಸ್ವಯಮಾಚರತೇ ಯಸ್ತು ಸ ಆಚಾರ್ಯ ಇತಿ ಸ್ಮೃತಃ ।"

ಸಕಲ ಶಾಸ್ತ್ರಾರ್ಥಗಳನ್ನು ಸಂಪಾದಿಸಿ ಅವನ್ನು ಅಂತೇವಾಸಿಗಳಿಗೆ ಅನುಗ್ರಹಿಸಿ ಅವರನ್ನು ಆಚಾರದಲ್ಲಿ ನಡೆವಂತೆ ಏರ್ಪಡಿಸುವನು. ಮತ್ತು ತಾನೂ ಆಚರಿಸುವನು. ಈ ತ್ರಿವಿಧ ಕಾಯಕದಲ್ಲಿರುವಾತನೇ ಆಚಾರ್ಯನು.

ಆಚಿನೋತಿ; ಆಚಾರೇ, ಆಚರತೇ, ಆಚಾರ್ಯ – ಈ ಮೂರು ಪದ ವೈತ್ರಿಯಲ್ಲಿ ಈ ಸುಭಗ ಶೈಲಿಯಲ್ಲಿ ಯಾವ ಸೌಂದರ್ಯವಿದೆಯೋ ಯಾವ

ಮಾಧುರ್ಯವಿದೆಯೋ ಅವಕ್ಕಿಂತ ಈ ಎಲ್ಲ ಶಬ್ದಗರ್ಭಗತ ಅರ್ಥಭಾವಗಳು ಇನ್ನೂ ಸುಂದರವಾಗಿವೆ; ಇನ್ನೂ ಮಧುರವಾಗಿವೆ. ವಿಶಿಷ್ಟವಾದ ವಿಶಾಲವಾದ ವಿಶುದ್ಧವಾದ ಸಾರ್ಥಕವಾದ ಅರ್ಥಗಳಿಕೆ. ಅದರಲ್ಲಿಯೂ ಶಿವಶಾಸನ ಮಾಡುವ ಮತ್ತು ತ್ರಾಣ ಗುಣವುಳ್ಳ ಶಾಸ್ತ್ರಗಳ ಅರ್ಥ ಸಂಪಾದನೆ. ಧರ್ಮಮಾರ್ಗದಲ್ಲಿ ಆಧ್ಯಾತ್ಮಿಕ ಪಥದಲ್ಲಿ ಅಭ್ಯುದಯವನ್ನು ಬಯಸುವ ಭಕ್ತರಿಗೆ ಬಲೋತ್ಸಾಹಗಳನ್ನು ಕೊಡುವ ಧರ್ಮಶಾಸ್ತ್ರಾರ್ಥ ಸಂಗ್ರಹವನ್ನು ಮಾಡಿ ಭಕ್ತರ ಆಚಾರದಲ್ಲಿ ತರುವಂತೆ ಮಾಡುವ ಮಣಿಹ ಆಚಾರ್ಯನದು. ಪರೋಪದೇಶದಲ್ಲಿ ಮಾತ್ರ ಆಚಾರ್ಯತ್ವವಿಲ್ಲ. ಸ್ವಂತ ಆಚರಣದಲ್ಲಿ ಶಾಸ್ತ್ರಾರ್ಥ ಅಳವಟ್ಟಿರಬೇಕು. ಆಗ ಆ ಗುರುವೇ ಆಚಾರ್ಯನೆನಿಸುತ್ತಾನೆ. ಆದರ್ಶ ವ್ಯಕ್ತಿ ಆಚಾರ್ಯ. ಶಾಸ್ತ್ರಾರ್ಥ ದರ್ಶನ ಪ್ರವರ್ತಕ ಮಾತ್ರನಲ್ಲ, ಬೋಧಕ ಮಾತ್ರವಲ್ಲ–ಸ್ವಯಂ ಸದಾಚಾರಸಿದ್ಧ; ಶಿವಾಚಾರ ಶುದ್ಧ. ಆಚಾರ್ಯನು ಆಚಾರ ವಿಚಾರಗಳ ಭಾಂಡಾರ. ಧರ್ಮಗಳ ದರ್ಶನಗಳ ಆಗರ.

'ಆಚಿನೋತಿ ಚ ಶಾಸ್ತ್ರಾರ್ಥಮಾಚಾರೇ ಸ್ಥಾಪಯತ್ಯಪಿ |
ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಚೋಚ್ಯತೇ ||'

ಎಂಬುದಾಗಿ ಹೇಳಿ ಆಪಸ್ತಂಭ ಧರ್ಮಸೂತ್ರವು ಈ ಮಂತ್ರದ ಸಹಚರಿಯಾಗಿದೆ; ಸಹಕಾರಿಯಾಗಿದೆ.

"ಷಡಧ್ವಾತೀತಯೋಗೇನ ಯತತೇ ಯಸ್ತು ದೇಶಿಕಃ
ಮಾಯಾಬ್ಧಿತರಣೋಪಾಯ ಹೇತುರ್ವಿಶ್ವಗುರುಃ ಸ್ಮೃತಃ |"

ಷಡಧ್ವಗಳನ್ನು ಮೀರಿ ಮೇಲೆ ಸಹಸ್ರಾರದಲ್ಲಿ ಶೋಭಿಸುವ ಶಿವನ ಯೋಗವುಳ್ಳ ಶ್ರೀಗುರುವು ದೇಶಿಕನೆನಿಸುತ್ತಾನೆ. ಆ ದೇಶಿಕನೇ ತನ್ನ ದಿವ್ಯೋಪದೇಶದಿಂದ ಶಿಷ್ಯರನ್ನು ಮಾಯಾಂಬುಧಿಯಿಂದ ದಾಟಿಸಲು ಸಮರ್ಥನೆನಿಸುತ್ತಾನೆ; ಮತ್ತು ಆತನೇ ಜಗದ್ಗುರು ಎಂದೆನಿಸುತ್ತಾನೆ. ತನ್ನೊಳಗಿರುವ ಆ ಶಿವಶಕ್ತಿಯನ್ನು ಶ್ರೀಗುರು ಶಿಷ್ಯನಲ್ಲಿ ಶಿವಲಿಂಗದಲ್ಲಿ ಷಡಧ್ವಗಳ ಮೂಲಕ ಪ್ರವಹಿಸುತ್ತಾನೆ. ಅಧ್ವಗಳು ಚಿತ್ಕಳೆಯನ್ನು ಹಿಡಿದು ತರುವ ತಂತಿಗಳು.

ಶ್ರೀಗುರು ಷಡಧ್ವಗಳನ್ನು ಚೆನ್ನಾಗಿ ಅರಿತಿರಬೇಕು. ಅರಿಯದ ಹೊರತು ಉಪದೇಶಿಕನೆನಿಸನು. ತನ್ನೊಳಗಿರುವ ಅನುಭವವನ್ನು ಷಡಧ್ವಗಳ ಮೂಲಕ ಹೊರಹೊಮ್ಮಿಸಬೇಕಾಗುತ್ತದೆ. ಅರಿಯುವವರೆವಿಗೂ ಷಡಧ್ವಗಳ ನೆರವು; ಅರಿತ ಬಳಿಕ ಇವುಗಳ ನೆರವು ಬೇಕಿಲ್ಲ.

ಶಬ್ದಮಯವೂ ಅರ್ಥರೂಪವೂ ಆಗಿದೆ ಈ ಜಗತ್ತು. ಬ್ರಹ್ಮಾಂಡದಂತೆ ಪಿಂಡಾಂಡವೂ ಶಬ್ದಾರ್ಥಮಯವಾಗಿದೆ. ಶಬ್ದವೇ ಶಕ್ತಿ ; ಅರ್ಥವೇ ಶಿವ. ಶಬ್ದವೇ ವರ್ಣಾಧ್ವ, ಪದಾಧ್ವ, ಮಂತ್ರಾಧ್ವವೆಂದಾಗುತ್ತದೆ. ಇವು ನಾದಮಯವಾಗಿವೆ. ಅರ್ಥವೇ ಭುವನಾಧ್ವ, ತತ್ತ್ವಾಧ್ವ, ಕಲಾಧ್ವವೆಂದಾಗುತ್ತದೆ. ಇವು ಬಿಂದುಮಯವಾಗಿವೆ. ಇವೆಲ್ಲವೂ ಸೇರಿ ಷಡಧ್ವವೆನ್ನುತ್ತಾರೆ. ಇವು ಬ್ರಹ್ಮಾಂಡದಲ್ಲಿ ಸ್ಥೂಲವಾಗಿದ್ದು, ಪಿಂಡಾಂಡದಲ್ಲಿ ಸೂಕ್ಷ್ಮವಾಗಿರುತ್ತವೆ. ಪಿಂಡಾಂಡದ ಷಟ್‌ಚಕ್ರಗಳೇ ಷಡಧ್ವಗಳು.

ಈ ಷಡಧ್ವಗಳು ಶೈವರಿಗಲ್ಲದೆ ವೀರಶೈವರಿಗಿಲ್ಲೆಂದು ಕೆಲವರು ಅರಿತಿದ್ದಾರೆ. ಷಡಧ್ವಾತೀತವೆಂದರೆ ಷಡಧ್ವಗಳಾಚೆಯಿರುವ ಸಹಸ್ರಾರದ ಶಿವಯೋಗವೆಂದು ಹೇಳಬೇಕಲ್ಲದೆ ಷಡಧ್ವ ಸಂಬಂಧವೇ ವೀರಶೈವರಿಗಿಲ್ಲೆಂದು ಹೇಳಬಾರದು. ಪರಶಿವನು ಷಡಧ್ವರೂಪ ಷಟ್‌ಚಕ್ರಗಳಾಚೆಯಿರುವ ಸಹಸ್ರಾರದಲ್ಲಿರುವನು. ಶ್ರೀಗುರುವು ಅಲ್ಲಿಗೇರಿ ಆ ಶಿವನ ಯೋಗವನ್ನು ಪಡೆದವನಾಗಿರಬೇಕು. ಅಂದರೆ ಷಡಧ್ವಗಳ ಸಿದ್ಧಿಯನ್ನು ಪಡೆದು ಸಹಸ್ರಾರದ ಶಿವಯೋಗ ಸಂಪನ್ನನೆನಿಸಿರಬೇಕು. ಆಗ ಪಿಂಡಾಂಡ ಜಗತ್ತನ್ನೆಲ್ಲ ತನ್ನ ವಶಪಡಿಸಿಕೊಂಡಂತಾಗುತ್ತದೆ. ಇದರಿಂದ ಗುರು ಶಿಷ್ಯನ ಪಿಂಡಾಂಡ ಜಗತ್ತಿಗೆ ಗುರುವಾಗಿ 'ಜಗದ್ಗುರು'ವೆನಿಸುತ್ತಾನೆ.

"ಮಂತ್ರಾಧ್ವ ಪದಾಧ್ವವ ತನ್ನಲ್ಲಿ ತಿಳಿದು ಅನುಭವಿಸಬಲ್ಲಾತನೆ ಆಚಾರ್ಯನೆಂಬೆ. ವರ್ಣಾಧ್ವ ಭುವನಾಧ್ವವ ತನ್ನಲ್ಲಿ ತಿಳಿದು ಅನುಭವಿಸಬಲ್ಲಾತನೇ ಆಚಾರ್ಯನೆಂಬೆ. ತತ್ತ್ವಾಧ್ವ ಕಲಾಧ್ವವ ತನ್ನಲ್ಲಿ ತಿಳಿದು ಅನುಭವಿಸಬಲ್ಲಾತನೇ ಆಚಾರ್ಯನೆಂಬೆ. ಈ ಷಡ್ವಿಧವ ತನ್ನಲ್ಲಿ ತಿಳಿದು ಅನುಭವಿಸಲರಿಯದೆ ಆಚಾರ್ಯರೆಂಬ ಅನಾಚಾರ್ಯರ ಮೆಚ್ಚುವನೇ ನಮ್ಮ ಅಪ್ರಮಾಣ ಕೂಡಲ ಸಂಗಮದೇವಾ ?

ಈ ಷಡ್ವಿಧದಿಂದವೇ ಅನೇಕಾನೇಕ ವೇದಂಗಳೆಸಗಿತ್ತು. ಈ ಷಡ್ವಿಧದಿಂದವೇ ಅನೇಕ ಶಾಸ್ತ್ರಂಗಳೆಸಗಿತ್ತು. ಈ ಷಡ್ವಿಧದಿಂದವೇ ಅನೇಕ ಪೌರಾಣಂಗಳೆಸಗಿತ್ತು. ಈ ಷಡ್ವಿಧದಿಂದವೇ ಅನೇಕಾಗಮಂಗಳೆಸಗಿತ್ತು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ."

ಈ ವಚನ ಪ್ರಮಾಣಗಳಿಂದ ಷಡಧ್ವಗಳು ಕೇವಲ ಶೈವದವೆಂಬ ಮಾತು ಬಿದ್ದುಹೋಗುತ್ತದೆ. ವೀರಶೈವರೂ ಅಂಗೀಕರಿಸಿರುವರೆಂಬುದು ಸಿದ್ಧಾಂತವಾಗುತ್ತದೆ. ಮತ್ತು ಶಿವದೀಕ್ಷಾ ಸಂಸ್ಕಾರದಲ್ಲಿ ಇವಕ್ಕೆ ಮುಖ್ಯ ಸ್ಥಾನವಿದೆ. ಷಡಧ್ವ ಶುದ್ಧಿಯಿಲ್ಲದೆ ಶಿವದೀಕ್ಷಾ ಸಂಸ್ಕಾರವಿಲ್ಲ.

ಮತ್ತೊಂದು ಬಗೆಯಲ್ಲಿ ಶಿವಾಗಮಂಗಳು ಈ ಷಡಧ್ವಗಳನ್ನು ಶುದ್ಧಾಧ್ವ, ಮಿಶ್ರಾಧ್ವ, ಅಶುದ್ಧಾಧ್ವಗಳೆಂದು ಮೂಬಗೆಯಾಗಿ ವಿಭಾಗಿಸಿದ್ದಾರೆ. ಈ ವಿಭಾಗಗಳನ್ನು ನಿಜಗುಣರು ಹೀಗೆ ಹೇಳಿದ್ದಾರೆ:

'ಮೊದಲು ಶಿವಾದಿ ವಿದ್ಯಾಂತುಮಾದೈದು ತತ್ತ್ವಂಗಳೇ ಬಿಂದುಮಯವಾಗಿ, ಶುದ್ಧಾಧ್ವವೆನಿಸಿಕೊಂಡು, ವಿಜ್ಞಾನ ಕೇವಲರೆಂಬಾತ್ಮವರ್ಗಕ್ಕೆ ಶರೀರಾದಿ ಭೋಗಸಾಧನಂಗಳಾಗಿರ್ಕುಂ.

ಮತ್ತಮಾ ಕಾಲಾದಿ ಪ್ರಕೃತಿ ಕಡೆಯಾದೇಳು ತತ್ತ್ವಂಗಳೇ ಮಾಯಾವಿಕಾರವಾಗಿ, ಮಿಶ್ರಾಧ್ವವೆನಿಸಿಕೊಂಡು ಪ್ರಳಯಾಕಲರೆಂಬಾತ್ಮವರ್ಗಕ್ಕೆ ಕರಣಾದಿ ಭೋಗಸಾಧನಂಗಳಾಗಿರ್ಕುಂ.

ಬಳಿಕ ಗುಣಾದಿ ಭೂಮ್ಯಂತಮಾದಿಪ್ಪತ್ನಾಲ್ಕು ತತ್ತ್ವಂಗಳೇ ಪ್ರಕೃತಿಕಾರ್ಯಮಾಗಿ, ಅಶುದ್ಧಾಧ್ವವೆನಿಸಿಕೊಂಡು, ಸಕಲರೆಂಬಾತ್ಮವರ್ಗಕ್ಕೆ ಭುವನಾದಿ ಭೋಗಸಾಧನಂಗಳಾಗಿರ್ಕುಂ.'

೫೨ ಅಕ್ಷರಗಳೇ ವರ್ಣಾಧ್ವ. ಸಪ್ತಕೋಟಿ ಮಹಾಮಂತ್ರಗಳ ಸಾರವಾದ ಹೃದಯಮಂತ್ರ ಮೊದಲಾದ ೧೧ ಮಂತ್ರಗಳೇ ಮಂತ್ರಾಧ್ವ. ವ್ಯೋಮವ್ಯಾಪಿನೆ ಮೊದಲಾಗಿ ಓಂ ಕೊನೆಯಾಗಿರುವ ೮೪ ಪದಗಳೇ ಪದಾಧ್ವ. ಅನಾಶ್ರಿತ ಆದಿಯಾಗಿ ಪ್ರಳಯಕಾಲ ಮಹಾರುದ್ರಾಂತ್ಯ ೨೨೪ ಭುವನಗಳೇ ಭುವನಾಧ್ವ. ಶಿವಾದಿ ಪೃಥ್ವ್ಯಂತ ೩೬ ತತ್ತ್ವಗಳೇ

ತತ್ತ್ವಾಧ್ವ. ಶಾಂತ್ಯತೀತೋತ್ತರಾದಿ ನಿವೃತ್ತ್ಯಂತವಾದ ೬ ಕಲೆಗಳೇ ಕಲಾಧ್ವ.

ಷಟ್‌ಚಕ್ರಗಳಲ್ಲಿ ಒಂದೊಂದುಚಕ್ರಕ್ಕೂ ಈ ಷಡಧ್ವಗಳನ್ನು ಹರಿದು ಹಂಚುತ್ತಾರೆ ವೀರಶೈವರು. ಇದರಿಂದಾಗಿ ಪ್ರತಿ ಚಕ್ರದಲ್ಲಿಯೂ ಷಡಧ್ವಗಳಿರುತ್ತವೆ. ಆಜ್ಞಾಚಕ್ರಕ್ಕೆ ಷಡಧ್ವಗಳು ಸಮಾಪ್ತವಾಗುತ್ತವೆ. ಸಹಸ್ರಾರವು ಷಡಧ್ವಾತೀತವಾದ ಷಟ್‌ಸ್ಥಲಾತೀತವಾದ ನಿಸ್ಥಲ. ಅಲ್ಲಿರುವ ಆ ಪರಶಿವನನ್ನು ಪಡೆಯುವುದೇ ಶಿವಯೋಗ. ಈ ಶಿವಯೋಗಸಿದ್ಧನು ಶ್ರೀಗುರು. ಈತನು ಈ ಮಾಯಾ ಮಹಾಸಾಗರವನ್ನು ದಾಟಿಸಲು ಸಮರ್ಥನೂ ಕಾರಣಕರ್ತನೂ ಆಗಿರುತ್ತಾನೆ.

ಅಖಂಡಂ ಯೇನ ಚೈತನ್ಯಂ ವ್ಯಜ್ಯತೇ ಸರ್ವವಸ್ತುಷು
ಆತ್ಮಯೋಗ ಪ್ರಭಾವೇನ ಸ ಗುರುರ್ವಿಶ್ವಭಾಸಕಃ ।"

ಎಲ್ಲ ವಸ್ತುಗಳಲ್ಲಿ ಅಖಂಡ ಚೈತನ್ಯವನ್ನು ಗುರು ತನ್ನ ದಿವ್ಯ ಯೋಗ ಪ್ರಭಾವದಿಂದ ವೆಗ್ಗಳವಾಗಿಸುತ್ತಾನೆ; ಮತ್ತು ವಿಶ್ವವನ್ನು ಬೆಳಗಿಸುತ್ತಾನೆ.

ಶ್ರೀಗುರು ಶಿಷ್ಯನ ಅಂಗವನ್ನೆಲ್ಲ ಲಿಂಗಮಯವಾಗಿಸುವಂತೆ ಸಮಷ್ಟಿ ವಿಶ್ವದಲ್ಲಿ ವಿಶ್ವಗತವಸ್ತುಗಳಲ್ಲಿ ಆ ಅಖಂಡ ಚೈತನ್ಯವನ್ನೇ ಪ್ರದರ್ಶಿಸುತ್ತಾನೆ. 'ಸರ್ವಂ ಶಿವಮಯಂ ಜಗತ್' ಎಂಬುದನ್ನು ಸ್ವಾನುಭವಕ್ಕೆ ತೆಗೆದುಕೊಂಡಿರುತ್ತಾನೆ. ದೀಕ್ಷಾಗುರುವಿನ ದೃಷ್ಟಿದರ್ಶನಗಳ ಪಾರಮ್ಯವನ್ನಿಲ್ಲಿ ಪರಕಿಸಬಹುದಾಗಿದೆ. ವ್ಯಕ್ತಿಯಿಂದ ವಿಶ್ವದವರೆವಿಗೂ ದೀಕ್ಷಾಗುರುವಿನ ದಿವ್ಯದೃಷ್ಟಿ ದಿವ್ಯಭಾವಗಳು ಶಿವವಾಗಿ ವ್ಯಾಪಿಸಿರುತ್ತವೆ. ವಿಶ್ವವನ್ನೇ ವಿಶ್ವನಾಥರೂಪವನ್ನಾಗಿ ವಿಭಾಸಿಸುತ್ತಾನೆ. ದೀಕ್ಷಾಗುರುವಿನದು ತೆರಹಿಲ್ಲದ ನೋಟ; ತೆರಹಿಲ್ಲದ ಮಾಡುವಮಾಟ. ಜೀವವೆಂಬಭಾವಜಗವೆಂಬ ಭಾವಗಳನ್ನು ಬಿಡಿಸಿ ಸರ್ವವಸ್ತುಗಳಲ್ಲಿ ವಿಶ್ವದಲ್ಲಿ ಶಿವಭಾವವನ್ನು ಸ್ಥಾಪಿಸುತ್ತಾನೆ ದೀಕ್ಷಾಗುರು. ಗುರುಭಕ್ತನ ಕರಸ್ಥಲಕ್ಕೆ ನಾದಬಿಂದು ಕಲೆಗಳಿಗೆ ಚೈತನ್ಯಸ್ವರೂಪವಾದ ಕ್ರಿಯಾಲಿಂಗವನ್ನು ಕರುಣಿಸಿ ಆ ಇಷ್ಟಲಿಂಗದ ಪೀಠಿಕೆಯ ವೃತ್ತದಲ್ಲಿ ಸಕಲ ಲೋಕಗಳು ಅಡಗಿವೆಯೆಂದು ಅಂತಹ ವಿಶ್ವ

ಭಾಸಕಲಿಂಗವೇ ನಿನ್ನ ಪ್ರಾಣವೆಂದು ಚೈತನ್ಯವೆಂದು ಅಖಂಡ ಸ್ವರೂಪ ವೆಂದು ಬೋಧಿಸುತ್ತಾನೆ. ನಿನ್ನ ಸರ್ವಾಂಗವೂ ಶಿವಲಿಂಗಚೈತನ್ಯ ಸ್ವರೂಪವೆಂದು ಬೋಧಿಸುತ್ತಾನೆ.

೨. ಶಿಕ್ಷಾಗುರುಸ್ಥಲಂ

ಕ್ರಿಯಾಶಕ್ತಿಯ ಸಂಕೋಚದಿಂದಾದ ಕಾರ್ಯಮಲವು ಶಿಷ್ಯನ ತನು ವಿನಲ್ಲಿರುವಂತೆ ಜ್ಞಾನಶಕ್ತಿಯ ಸಂಕೋಚದಿಂದಾದ ಮಾಯೀಯ ಮಲವು ಶಿಷ್ಯನ ಮನದಲ್ಲಿರುತ್ತದೆ. ಇದರಿಂದ ಸ್ವರೂಪದ ಮರವೆಯುಂಟಾಗಿರು ತ್ತದೆ; ಮತ್ತು ಭಿನ್ನಭಾವವುಂಟಾಗಿರುತ್ತದೆ. ಜೀವನ ಜ್ಞಾನಶಕ್ತಿ ತೀರ ಸಂಕೋಚವಾಗಿರುತ್ತದೆ. ಜ್ಞಾನವಿಕಾಸವಾಗಬೇಕಾದರೆ ಶಿಕ್ಷೆ (ಶಿಕ್ಷಣ) ಬೇಕು. ಅದನ್ನು ಕೊಡುವವನೇ ಶಿಕ್ಷಾಗುರು.

**"ದೀಕ್ಷಾಗುರುರಸೌ ಶಿಕ್ಷಾಹೇತುಃ ಶಿಷ್ಯಸ್ಯ ಬೋಧಕಃ
ಪ್ರಶ್ನೋತ್ತರ ಪ್ರವಕ್ತಾ ಚ ಶಿಕ್ಷಾಗುರುರಿತೀರ್ಯತೇ ।
ಬೋಧಕೋಽಯಂಸಮಾಖ್ಯಾತೋ ಬೋಧ್ಯಮೇತದಿತಿ ಸ್ಫುಟಂ
ಶಿಷ್ಯೋ ನಿಯುಜ್ಯತೇ ಯೇನ ಸ ಶಿಕ್ಷಾಗುರುರುಚ್ಯತೇ ॥"**

ಹಿಂದೆ ಹೇಳಿದ ದೀಕ್ಷಾಗುರುವೇ ಶಿಕ್ಷಾಗುರುವಾಗಿ ಶಿಷ್ಯನನ್ನು ಬೋಧಿ ಸುತ್ತಾನೆ. ಶಿಷ್ಯನ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. ಶಿಷ್ಯನ ತನು ಶುದ್ಧ ವಾಗಿದ್ದರೂ ಮನ ಶುದ್ಧವಾಗಿರುವುದಿಲ್ಲ; ಸಂಶಯಗಳಿಂದ ತುಂಬಿರುತ್ತದೆ. ಅಜ್ಞಾನಾವೃತವಾಗಿರುತ್ತದೆ. ಆದ್ದರಿಂದ ಶಿಷ್ಯನ ಶಿಕ್ಷೆಗೆ ಕಾರಣವಿರುತ್ತದೆ.

ಇವನು ಬೋಧಿಸುವಾತನು. ಇದು ಬೋಧ್ಯವಾದ ಪ್ರಾಣ (ಜ್ಞಾನ) ಲಿಂಗವು. ಇದು ಮಂತ್ರಮಯವಾಗಿ ಸ್ಫುಟಗೊಂಡಿದೆ. ಇದುವೇ ವಿಶಿಷ್ಟ ಜ್ಞಾನ ಎಂದು ಶಿಷ್ಯನಿಗೆ ಬೋಧಿಸುವಾತನೇ ಶಿಕ್ಷಾಗುರು.

"ಮುಕ್ತ್ಯರ್ಥ ಮಾಯಪ್ರಪಂಚಮಂ ಬಿಡಿಸಿ, ಜೀವನೇ ಶಿವನೆಂದು ಬೋಧಿಸಿ, ಪರಿಯಾಯಮಂ ಕೆಡಿಸಿ, ಆ ವರಶಿವನೇ ಇಷ್ಟಬ್ರಹ್ಮ, ಆ

ಇಷ್ಟವೇ ನಿನ್ನ ಪ್ರಾಣ, ಆ ಪ್ರಾಣವೇ ಇಷ್ಟವೆಂದರುಹಿ, ಜೀವ ಶಿವನಲ್ಲ, ಆ ಶಿವನೇ ನಿನ್ನ ಜೀವವೆಂಬ ಪರಿಯಾಮಂ ತೋರಿಸಿ, ಆತ್ಮನ ಭಾವವಂ ಕಳೆದು ಶಿವಭಾವವೆಂದೆನಿಸಿ ಜೀವಶುದ್ಧಿಯಂ ಮಾಡುವುದು........ಕರ್ಣದಲ್ಲಿ ಪಂಚಾಕ್ಷರಿಯನುಪದೇಶಿಸಿ, ಸರ್ವಭವಿಕುಲವಂ ತೊಳೆದು, ಮಾಂಸಪಿಂಡವಂ ಕಳೆದು ಮಂತ್ರಪಿಂಡವಂ ಮಾಡುವುದು ಮಂತ್ರಶುದ್ಧಿ. ಇಂತೀ ಪರಿಯಲ್ಲಿ ಕಾಯಶುದ್ಧಿ, ಜೀವಶುದ್ಧಿ, ಭೂತಶುದ್ಧಿ, ಆತ್ಮಶುದ್ಧಿ, ಮಂತ್ರಶುದ್ಧಿ–ಎಂಬ ಪಂಚಶುದ್ಧಿಯಂ ಸರ್ವಶುದ್ಧಿಯಂ ಮಾಡಿ ಪುನರ್ಜಾತನಂ ಮಾಡುವುದು. ಇದು ಸಹಜ ದೀಕ್ಷೆಯಯ್ಯಾ ಕೂಡಲ ಚೆನ್ನಸಂಗಯ್ಯಾ."

"....ಸಮಯ, ನಿಸ್ಸಂಸಾರ, ನಿರ್ವಾಣ, ತತ್ತ್ವದೀಕ್ಷೆ ಅಧ್ಯಾತ್ಮ ಅನುಗ್ರಹ, ಸತ್ಯಶುದ್ಧ ಈ ಏಳನು ಪ್ರಾಣಕ್ಕುಪದೇಶ ಮಾಡುವುದು."

ಚೆನ್ನಬಸವಣ್ಣನವರ ಈ ವಚನಗಳು ಮಂತ್ರದೀಕ್ಷೆಯ ಸ್ವರೂಪವನ್ನು ಸುಂದರವಾಗಿ ಚಿತ್ರಿಸಿವೆ. ಕ್ರಿಯಾದೀಕ್ಷೆಯನ್ನಿತ್ತ ದೀಕ್ಷಾಗುರುವೆ, ಶಿಕ್ಷಾಗುರುವಾಗಿ ಮಂತ್ರದೀಕ್ಷೆಯನ್ನೀಯುತ್ತಾನೆ. ಶಿಷ್ಯನಮನಕ್ಕೆಮುತ್ತಿರ್ದ ಮಾಯಾಪ್ರಪಂಚವನ್ನು ಬಿಡಿಸುತ್ತಾನೆ. 'ಮಾಯಾಪ್ರಪಂಚ' ಎಂಬ ಮಾತು ಗಂಭೀರವಾದುದು ; ಅರ್ಥಬಾಹುಳ್ಯವುಳ್ಳದು. ಮಾಯೆ ಮನಕ್ಕೆ ಹರವಿದ ಅಜ್ಞಾನ, ಸಂಶಯ, ಭೇದಭಾವ ಚಪಲತೆ, ಮಲಿನತೆ, ಮೋಹ, ಲೋಭ, ಸ್ವಪ್ನ ಮುಂತಾದ ಎಲ್ಲ ಅವಗುಣಗಳನ್ನು ಶಿಕ್ಷಾಗುರು ಮಂತ್ರೋಪದೇಶದಿಂದ ಪರಿಹರಿಸುತ್ತಾನೆ. ಮಾಂಸಪಿಂಡವನ್ನೆಲ್ಲ ಮಂತ್ರಮಯ ಪಿಂಡವನ್ನಾಗಿಸುತ್ತಾನೆ. ತನು ಮನವೆಲ್ಲ ಶುದ್ಧವಾಗಿ ಪೂರ್ವಜನ್ಮವನಳಿದು ಪುನರ್ಜನ್ಮದ ಸೌಭಾಗ್ಯವನ್ನು ಶಿಷ್ಯನು ಪಡೆಯುತ್ತಾನೆ. ಸಮಯಾದಿ ಸಪ್ತವಿಧ ಮಂತ್ರದೀಕ್ಷೆಗಳನ್ನು ಬೋಧಿಸುತ್ತಾನೆ ಶಿಕ್ಷಾಗುರು. ಈ ಸಪ್ತದೀಕ್ಷೆಗಳ ವಿವರವನ್ನು ಅರಿಯಬಯಸುವವರು ನಮ್ಮ 'ಸಂಸ್ಕಾರ' ಗ್ರಂಥವನ್ನು ಓದಬೇಕು. 'ಆಚಾರ್ಯಃ ಪೂರ್ವರೂಪಂ ಅಂತೇ ವಾಸ್ಯುತ್ತರರೂಪಂ ವಿದ್ಯಾಸಂಧಿಃ । ಆಚಾರ್ಯೋಽಂತೇವಾಸಿನಮಾಶಾಸ್ತಿ ।' ಈ ತೈತ್ತರೀಯ ಶ್ರುತಿಯಂತೆ ಶಿಕ್ಷಾಗುರುವೇ ಪೂರ್ವರೂಪ, ಆ ಮಂತ್ರರೂಪ ಶಿಕ್ಷೆಯನ್ನು ಪಡೆದ ಶಿಷ್ಯನೇ ಉತ್ತರರೂಪ. ಇವರಿಬ್ಬರ ಮಧ್ಯದಲ್ಲಿ ಪ್ರಾಣಲಿಂಗರೂಪ ಸುಜ್ಞಾನೋದಯವಾಗುವುದು.

"ಸಂಸಾರ ತಿಮಿರೋನ್ಮಾಥೆ ಶರಚ್ಚಂದ್ರ ಮರೀಚಯಃ
ವಾಚೋ ಯಸ್ಯ ಪ್ರವರ್ತಂತೇ ತಮಾಚಾರ್ಯಂ ಪ್ರಚಕ್ಷತೇ।"

ಶಿಷ್ಯನ ಸಂಸಾರವೊಂದು ಕಟ್ಟಿರುಳು. ಶ್ರೀಗುರುವಿನ ಉಪದೇಶ ವಚನಗಳು ಶರಚ್ಚಂದ್ರನ ತಂಗಿರಣಗಳು. ಇವುಗಳ ತಂಬೆಳಗಿಗೆ ಕಟ್ಟಿರುಳು ಕತ್ತರಿಸಿ ಹೋಗುತ್ತದೆ. ಇಂತಹ ತುಂಬುಬೆಳಗಿನ ನುಡಿ ಹೊಂಗಿರಣವುಳ್ಳ ಗುರುಚಂದ್ರಮನೇ ಆಚಾರ್ಯನೆಂದೆನಿಸುತ್ತಾನೆ.

"ಕಂಗಳ ಕತ್ತಲೆಯ ಕೆಡಿಸಿದ ರವಿಯ ಚಂದದಂತಾಯಿತ್ತು ಎನ್ನ ಗುರುವಿನುಪದೇಶ. ಕನ್ನಡಿಯು ರವಿಯ ತನ್ನೊಳಗೆ ಇರಿಸಿಕೊಂಡಂತಾಯಿತೆನ್ನ ಗುರುವಿನುಪದೇಶ. ಜಲದ ನಿರ್ಮಳ ಗಗನವನೊಳಕೊಂಡ ಪರಿಯಂತಾಯಿತ್ತೆನ್ನ ಗುರುವಿನುಪದೇಶ. ಚಂದ್ರಕಾಂತದ ಶಿಲೆಯು ಚಂದ್ರಮನ ಸೋಂಕಿದಂತಾಯಿತ್ತೆನ್ನ ಗುರುವಿನುಪದೇಶ. ಕೊಡನೊಳಗಣ ಬಯಲ ಹಂಚಿಕೊಂಡ ಪರಿಯಂತಾಯಿತೆನ್ನ ಗುರುವಿನುಪದೇಶ. ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗದಂತಾಯಿತ್ತೆನ್ನ ಗುರುವಿನುಪದೇಶ.

ಭವ ತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು,
ಕಾಣಬಾರದೆ ಇದ್ದಾಗ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು
ಶಿವಪಥವಿದೆಂದು ತೋರಿದ ಸದ್ಗುರುದೇವಂಗೆ ನಮೋ ನಮೋ
ಎಂಬೆನಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

'ಗುರುವಚನವಿಲ್ಲದೆ ಲಿಂಗವೆಂದೆನಿಸದು, ಗುರುಚನವಲ್ಲದೆ ನಿತ್ಯವೆಂದೆನಿಸದು; ಗುರುವಚನವಲ್ಲದೆ ನೇಮವೆಂದನಿಸದು.' 'ಶ್ರೀಗುರುವಚನದಿಂದಧಿಕ ಸುಧೆಯುಂಟೆ ?' ಇತ್ಯಾದಿ ಇನಿದಾದ ವಚನಗಳು ಈ ಮಂತ್ರಮುಖಚಂದ್ರನಿಗೆ ನಿಲುಗನ್ನಡಿಯನ್ನು ಹಿಡಿದಿವೆ.

ಗುರುವಿನ ಉಪದೇಶವಚನ ರವಿಶಶಿಗಳಂತೆ ಪ್ರಭಾವಶಾಲಿಯಾದುದು ಮಾತ್ರವಲ್ಲ; ಅದಕ್ಕಿಂತ ಮಿಗಿಲಾಗಿ ಪ್ರತಿಭಾಶಾಲಿಯಾದುದು. ಸಚ್ಛಿಷ್ಯನ ಹೃದಯವನ್ನು ಹದಗೊಳಿಸುವ ಸುಜ್ಞಾನ ಸಂಪತ್ತಿನಿಂದ ಸಡಗರಿಸುವ

ಶಕ್ತಿ ಅದಕ್ಕಿದೆ. ಗುರುವಾಣಿ ಮಿಂಚಿನ ಗೊಂಚಲು; ನಾಗಸಂಜೀವಿನಿ. ಅಂತೆಯೇ 'ಗುರುವಿನುಪದೇಶ ಮಂತ್ರವೈದ್ಯ' ಎಂದು ಕೊಂಡಾಡಿದನು ಭಕ್ತಿಬಲ್ಲಿದ ಬಸವಣ್ಣ. ಇಂತಹ ಅಮೃತಶ್ರಾವಿಯಾದ ವಾಣಿಯುಳ್ಳ ಅನುಭಾವಿ ಆಚಾರ್ಯನು ಸಿಕ್ಕುವುದು ದುರ್ಲಭ. ಶರಶ್ಚಂದ್ರನಂತಿರಬೇಕು ಶ್ರೀಗುರು.

"ದದಾತಿ ಯಃ ಪರಿಜ್ಞಾನಂ ಜಗನ್ಮಾಯಾವರ್ತಕಂ
ಅದ್ವೈತವಾಸನೋಪಾಯಂ ತಮಾಚಾರ್ಯವರಂ ವಿದುಃ ।"

ಭಕ್ತನ ಬಾಳಿನ ಹಗಲಿರುಳುಗಳಂತಿರುವ ಅಲ್ಪಜ್ಞಾನ – ಅಜ್ಞಾನಗಳನ್ನು ಹೋಗಲಾಡಿಸಿ ಜಗನ್ಮಾಯೆಯನ್ನು ಕಳೆವ ಪತಿಜ್ಞಾನವನ್ನು ಕರುಣಿಸಿ ಅಭೇದ ಅದ್ವಯರೂಪ ಸದ್ಭಾವನೆಯನ್ನುಂಟುಮಾಡುವಾತನೇ ಆಚಾರ್ಯಶ್ರೇಷ್ಠ.

ಪಶುಜ್ಞಾನ ತುಂಬಿ ತುಳುಕುತ್ತಿದೆ ಈ ಜಗತ್ತಿನ ಜೀವರಾಶಿಯಲ್ಲಿ! ಭೇದಭಾವನೆಯಿಂದ ಬಡಿದಾಡುತ್ತಿದೆ ಈ ಲೋಕವೆಲ್ಲ. ಈ ಪಾಶವೀಜ್ಞಾನದಿಂದ ಉದ್ಧರಿಸುವ, ಈ ಎಲ್ಲ ಬಗೆಯ ಭೇದಭಾವಗಳನ್ನು ಬಡಿದೋಡಿಸುವ ಭಾವೈಕ್ಯವನ್ನು ಬೋಧಿಸುವ, ಸರ್ವೈಕ್ಯತೆಯಿಂದ ವಿಶ್ವದಲ್ಲಿ ಶಾಂತಿಯನ್ನು ತುಂಬುವ ಗುರು ಆಚಾರ್ಯವರ್ಯನಲ್ಲದೆ ಇನ್ನೇನು ?

"ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮಾಯೆ. ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮರವೆ. ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಎನ್ನ ಸುತ್ತಿದ್ದ ಮಾಯಾಪಾಶವು. ಕಣ್ಣಿಂಗೆ ಸತ್ವರಜತಮವೆಂಬ ತಿಮಿರು ಕವಿದು ಅಜ್ಞಾನ ವಶದಲ್ಲಿ ಸದ್ಗುರುವನುಪಥಾವಿಸಿ ಔಷಧ ಬೇಡಲೊಡನೆ ಶಿವಜ್ಞಾನವೆಂಬ ಅಂಜನವ ಹಚ್ಚಿ, ಎನ್ನ ಕಣ್ಣ ಮುಸುಕಿದ ಅಜ್ಞಾನವೆಂಬ ಕಾಳಿಕೆಯ ಬೇರ್ಪಡಿಸಿ ತನ್ನ ಶ್ರೀಗುರು ಪಾದವನರುಹಿಸಿ ಕೊಟ್ಟನಯ್ಯ ನಮ್ಮ ಕಪಿಲಸಿದ್ಧ ಮಲ್ಲಿನಾಥಯ್ಯ."

ವೀರಶೈವ ಶಿಕ್ಷಾಗುರು ಕರುಣಿಸಿದ ಮಂತ್ರದೀಕ್ಷೆಯಿಂದ ಶಿಷ್ಯನಲ್ಲಿರುವ ಪಶು-ಪಾಶಗಳೆರಡರ ಜ್ಞಾನ ಹೋಗಿ ಪತಿಜ್ಞಾನವುಂಟಾಗುತ್ತದೆಂದು

ಜಗನ್ಮಾಯಾಪಾಶವು ಬಿಡುತ್ತದೆಂದು ತ್ರಿಗುಣವೆಂಬ ತಿಮಿರ ಹರಿದು ಶಿವಾದ್ವೈತಜ್ಞಾನ (ಶಿವಜ್ಞಾನ) ಉದಯವಾಗುತ್ತದೆಂದು ಹೇಳಿ ಈ ವಚನವು ಶ್ರೀ ರೇಣುಕ ಮಂತ್ರಕ್ಕೆ ಪರ್ಯಾಯವಾಗಿ ವಿವರಣೆಯನ್ನಿತ್ತಂತಾಗಿದೆ.

ಇನ್ನು 'ಜಗನ್ಮಾಯಾ ನಿವರ್ತಕಂ ಅದ್ವೈತವಾಸನೋಪಾಯಂ ಪತಿಜ್ಞಾನಂ' ಎಂಬುದನ್ನು ತಾತ್ವಿಕವಾಗಿ ತಿಳಿಯಬೇಕು.

೩೬ ತತ್ತ್ವಗಳ ವಿಭಜನೆ ಇಬ್ಬಗೆಯಾಗಿದೆ. ೫-೭-೨೪ ಈ ಸಂಖ್ಯೆಗಳಿಗನುಗುಣವಾಗಿ ಶುದ್ಧ, ಮಿಶ್ರ, ಅಶುದ್ಧವೆಂದು ಮೂಬಗೆಯಾಗಿ ಆಗಮಗಳ ವಿಭಜನೆ. ೧೧-೨೫ ಈ ಸಂಖ್ಯೆಗಳನ್ನು ಅನುಸರಿಸಿ ಲಿಂಗತತ್ತ್ವ-ಅಂಗತತ್ತ್ವವೆಂದು ಇಬ್ಬಗೆಯಾಗಿ ಆದ್ಯರ ವಿಭಜನೆ. ಒಂದರಲ್ಲಿ ಜಗತ್ತಿನ ಪ್ರತಿಪಾದನೆಗೆ ದ್ವೈತವಾಸನೆಗೆ ಅವಕಾಶವಿದೆ. ಇನ್ನೊಂದರಲ್ಲಿ ಇಲ್ಲ. ಇದು ಹೇಗೇ ಇರಲಿ, ೩೬ ತತ್ತ್ವಗಳಲ್ಲಿ ಶಕ್ತಿ ಇಬ್ಬಗೆಯಾಗಿದ್ದಾಳೆ. ಶುದ್ಧವಿದ್ಯೆಯೆಂದು ಮತ್ತು ಮಾಯೆಯೆಂದು. ಇಲ್ಲಿ ಮಾಯೆಯೆಂದರೆ ಕೇವಲಾದ್ವೈತನ ಮಿಥ್ಯಾಮಾಲೆಯಲ್ಲ, ಶಿವನ ಶಕ್ತಿ ಈ ಮಾಯೆ. ಅಶುದ್ಧವಿದ್ಯೆಯೆಂದೆನಿಸಿದೆ. ಜಗತ್ಕಾರಣವಾಗಿ ಜಗನ್ಮಾಯೆಯೆನಿಸಿದೆ. ಜಗತ್ತನ್ನು ಸುತ್ತಿದೆ. (ಜಗವ ಸುತ್ತಿಹುದು ನಿನ್ನ ಮಾಯೆ) ಎಂದು ಬಸವಣ್ಣನವರೂ ಹೇಳಿದ್ದಾರೆ. ಈ ಜಗನ್ಮಾಯೆಯಿಂದ ಜೀವ (ಪಶು)ಜ್ಞಾನ ಜಗದ (ಪಾಶದ) ಜ್ಞಾನಗಳು ಮಾತ್ರ ಉಂಟಾಗಿ ಶಿವಾದ್ವೈತಜ್ಞಾನ ಅಂದರೆ ಪತಿಜ್ಞಾನಕ್ಕೆ ಪ್ರತಿಬಂಧಕವಾಗಿರುತ್ತದೆ. ಜಗನ್ಮಾಯೆ ಶುದ್ಧ ಚಿದ್ರೂಪ ಸ್ವರೂಪಳಲ್ಲ. ಅಶುದ್ಧವಿದ್ಯಾ ಅಥವಾ ಅವಿದ್ಯಾಸ್ವರೂಪಳು. ಇವರಿಂದಾಗಿ ನಿಜವಾದ ಸ್ವಸ್ವರೂಪವನ್ನು ಮರೆಯಿಸಿ ಬರೀ ಭೇದಜ್ಞಾನ ಕಾರಣವಾಗಿರುತ್ತಾಳೆ. ಮಾಯೆ ಸಂಕೋಚಾವಸ್ಥೆಯಲ್ಲಿರುತ್ತಾಳೆ; ಅಶುದ್ಧಾವಸ್ಥೆಯಲ್ಲಿರುತ್ತಾಳೆ. ಅದನ್ನೇ ಗುರು ತನ್ನ ಶಿಕ್ಷಣ (ಶಿಕ್ಷಾ) ಬಲದಿಂದ ವಿಕಾಸಗೊಳಿಸಿ ಶುದ್ಧವಾಗಿಸುತ್ತಾನೆ. ಆಗ ಅದ್ವೈತಭಾವ (ಏಕೋಭಾವ) ಒದಗಿ ಬರಲು ಉಪಾಯವಾಗುತ್ತದೆ; ಅಂದರೆ ಅನುಕೂಲವಾಗುತ್ತದೆ.

'ಜಗನ್ಮಾಯಾ ನಿವರ್ತನಂ' ಎಂಬಲ್ಲಿ ಇರುವ ಮಾಯಾ ಶಬ್ದಕ್ಕೆ ಭೇದವೆಂಬರ್ಥವನ್ನು ಮಾಡುವುದುಂಟು. ಹೀಗೆ ಮಾಡುವಲ್ಲಿ ಜಗತ್ತು ಶಿವನಿಗೆ ಭೇದವೆಂಬ ವಾದವನ್ನು ಅಲ್ಲಗಳೆವ, ಜಗವೂ ಶಿವರೂಪವೆಂದು ಅರುಹುವ ಪತಿಜ್ಞಾನವನ್ನು ಶಿಕ್ಷಾಗುರು ಕೊಡುತ್ತಾನೆ. 'ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮುಚ್ಯುತಂ' ಶಿವನು ವಿಶ್ವಕ್ಕೂ ವಿಶ್ವತೈಜಸಪ್ರಾಜ್ಞ ಳೆಂಬ ಆತ್ಮರಿಗೂ ಪತಿಯಾಗಿದ್ದಾನೆ. ಹೀಗಿರುವಾಗ ಜೀವ ಜಗತ್ತು ಈಶ್ವರರಲ್ಲಿ ತಾತ್ವಿಕ ಭೇದವಿಲ್ಲ.

'ಅದ್ವೈತವಾಸನೋಪಾಯಂ' ಎಂಬಲ್ಲಿ ವಾಸನಾ ಪದಪ್ರಯೋಗದ ಪರಿಣತಿಯನ್ನು ಔಚಿತ್ಯವನ್ನು ಮನಗಾಣಬೇಕು. ವಾಸನಾ ಪದವನ್ನು ಪರಿಸುತ್ತಿರುವಂತೆ (ಬಳಸದಿರದ್ವೈತವನು ಬಾಹ್ಯದಲ್ಲಿ ನಿನ್ನೊಳಗೆಗೇಕೋ ಭಾವನೆಯೊಡಗೂಡು' ಎಂಬ ನಿಜಗುಣರ ಶಿವಕಾರುಣ್ಯಸ್ಥಲದ ಪ್ರಥಮ ಪದ್ಯಭಾಗವು ತಟ್ಟನೆ ಸ್ಮೃತಿಪಥಕ್ಕೆ ಬರುತ್ತದೆ. ಇದು ಅಲ್ಲಿನ ಶ್ರೀಗುರು ವಚನೋಪದೇಶ. ಇದಲ್ಲದೆ ಮುಂದುವರಿದು, '........ಸಮಯನಿಷ್ಠೆಗಲಿ' ಎಂದು ಹೇಳಿ ಶಿಕ್ಷಾಗುರು ಉಪದೇಶಿಸಬೇಕಾದ 'ಸಮಯ' ಸಂಸ್ಕಾರವನ್ನು 'ವಿಷಮಸಂಸಾರವಿದನು ಕನಸೆಂದರಿ' ಎಂದು ಹೇಳಿ 'ತತ್ತ್ವದೀಕ್ಷೆ'ಯನ್ನು ಮತ್ತು 'ಅಧ್ಯಾತ್ಮ' ದೀಕ್ಷೆಯನ್ನು ೧-೨-೩ ನುಡಿಗಳ ವಚನೋಪದೇಶದಿಂದ ಸತ್ಯ ಶುದ್ಧ ಸಂಸ್ಕಾರವನ್ನು ಕೊನೆಯದಾಗಿ 'ಶಂಭುಲಿಂಗವನೊಲಿಸಿ ಗಂಭೀರ ಸುಖದೊಳಿರು' ಎಂದು ಹೇಳಿ ಅನುಗ್ರಹ ಮತ್ತು ನಿರ್ವಾಣ ದೀಕ್ಷೆಗಳೆರಡನ್ನು ಸಹಜವಾಗಿ ಸಮಂಜಸವಾಗಿ ಬಿತ್ತರಿಸಿ ಪ್ರತಿಪಾದಿಸಿದ್ದಾರೆ. ಶಿಕ್ಷಾಗುರು ಉಪದೇಶಿಸುವ ಸಪ್ತವಿಧ ಸಂಸ್ಕಾರಗಳಿವು.

ಬಾಹ್ಯದಲ್ಲಿ ಬಳಸದ ಅದ್ವೈತಭಾವವನ್ನು ಮನದಲ್ಲಿ ಮರೆಯದ ಪತಿ (ಶಿವ) ಜ್ಞಾನವನ್ನು ಶಿಷ್ಯನಿಗೆ ಶಿಕ್ಷಾಗುರು ಅನುಗ್ರಹಿಸುವನೆಂಬುದೇ ಮಂತ್ರದ ಮಥಿತಾರ್ಥ. 'ಪತಿಜ್ಞಾನಂ' ಎಂಬಲ್ಲಿನ ಪತಿ ಶಬ್ದವು ಪರಶಿವ ಪ್ರಬೋಧಕವಾಗಿದೆ. ತ್ರಿವಿಧಾವಸ್ಥೆಗಳಿಗೆ ಒಳಗಾದವನು ಪಶು. ತ್ರಿವಿಧಾವಸ್ಥೆಗಳನ್ನು ಮೀರಿ ಅದಕ್ಕೆ ಒಡೆಯನಾದ ತುರ್ಯನು ಪತಿ. 'ಪತ್ಯಾದಿಶಬ್ದೇಭ್ಯಃ' ಬ್ರಹ್ಮಸೂತ್ರ-೧, ೩.೪೩. ಭೂತಗಳಿಗೂ ಅವಸ್ಥೆಗಳಿಗೂ ಮೀರಿ

ನಿಂತ ಒಡೆಯನನ್ನು ಪತ್ಯಾದಿ ಶಬ್ದಗಳು (ಪರಮೇತ್ಯಾದಿ) ಪ್ರತಿ ಬೋಧಿಸುತ್ತವೆಯೆಂದು ಪ್ರಮಾಣವುಂಟು.

"ಪೂರ್ವ ಪಕ್ಷಂ ಸಮಾದಾಯ ಜಗದ್ಭೇದ ವಿಕಲ್ಪನಂ
ಅದ್ವೈತಕೃತ ಸಿದ್ಧಾಂತೋ ಗುರುರೇಷ ಗುಣಾಧಿಕಃ ।"

ಜಗದ್ಭೇದವನ್ನು ಕಲ್ಪಿಸುವ ಪೂರ್ವಪಕ್ಷವನ್ನು ಕೇಳಿಕೊಂಡು ಸಪ್ರಮಾಣವಾಗಿ ಶಿವಾದ್ವೈತ ಸಿದ್ಧಾಂತವನ್ನು ಮಂಡಿಸಲು ಸಮರ್ಥನಾದ ಗುರುವೇ ಗುಣದಲ್ಲಿ ಅಧಿಕನು.

'ಪೂರ್ವಪಕ್ಷ' ಪದವು ಉಭಯಾರ್ಥ ಸೂಚಕವಾಗಿದೆ. ದ್ವೈತಮತದ ಪೂರ್ವಪಕ್ಷವೊಂದು ; ಪ್ರಸ್ತುತ ಮಂತ್ರೋಪದೇಶಕ್ಕೆ ಸನ್ನದ್ಧನಾದ ಶಿಷ್ಯನ ಪೂರ್ವಪಕ್ಷವಿನ್ನೊಂದು. ಇವೆರಡನ್ನು ಪರಿವಿಡಿದು ಪರ್ಯಾಲೋಚಿಸೋಣ:

ಬ್ರಹ್ಮನಿಗೆ ಬ್ರಹ್ಮಾಂಡ ಎಂದೆಂದಿಗೂ ಭಿನ್ನ. ಅಂತೆಯೇ ಜೀವನೂ ಭಿನ್ನ ಎಂದು ದ್ವೈತಮತ ಪ್ರತಿಪಾದನೆ. ಇದು ಪರಮಾರ್ಥವಲ್ಲ. ಜಗತ್ತು ಜಗದೀಶನಿಂದಾಗಿದೆ. ಇದರಿಂದ ಇದು ಅಭಿನ್ನ. ಭಿನ್ನವಾಗಿ ತೋರಿದರೂ ಅಭಿನ್ನ. ಶಾಶ್ವತವಾಗಿ ಭಿನ್ನವಲ್ಲ.

"ಎತಸ್ಮಾಜ್ಜಾಯತೇ ಪ್ರಾಣೋಮನಃ ಸರ್ವೇಂದ್ರಿಯಾಣಿ ಚ ।
ಖಂ ವಾಯುರ್ಜ್ಯೋತಿರಾಪಶ್ಚ ಪೃಥ್ವೀ ವಿಶ್ವಸ್ಯಧಾರಿಣೀ ॥
ಸರ್ವಭೂತಸ್ಥಮಾತ್ಮಾನಾಂ ಸರ್ವಭೂತಾನಿ ಚಾತ್ಮನಿ ।
ಸಂಪಶ್ಯನ್ ಬ್ರಹ್ಮ ಪರಮಂ ಯಾತಿ ನಾನ್ಯೇನ ಹೇತುನಾ ॥"

—ಕೈವಲ್ಯೋಪನಿಷತ್

ಈ ಪ್ರಾಣಾದಿಕರಣೇಂದ್ರಿಯಗಳುಳ್ಳ ಪಿಂಡಾಂಡವೂ ಆಕಾಶಾದಿ ಪೃಥಿವ್ಯಂತವಾದ ಬ್ರಹ್ಮಾಂಡವೂ ಆ ಪರಶಿವಬ್ರಹ್ಮನಿಂದಲೇ ಜನಿಸಿವೆ. ಕಾರ್ಯದಲ್ಲಿ ದ್ವೈತವಾಗಿ ಬಂದ ಇವನ್ನು ಕಾರಣದಲ್ಲಿ ಅದ್ವೈತವನ್ನಾಗಿ ಕಂಡರಿಯುವವನೇ ಪರಬ್ರಹ ಸ್ವರೂಪವನ್ನು ಪಡೆಯುತ್ತಾನಲ್ಲದೆ ಬೇರೆ ಹೊಲಬಿಲ್ಲ.

ಸೋಽಕಾಮಯತ । ಬಹುಸ್ಯಾಂ ಪ್ರಜಾಯೇಯೇತಿ । ಸತಪೋಽತಪ್ಯತ । ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ ಯದಿದಂ ಕಿಂಚ ತತ್ ಸೃಷ್ಟ್ವಾ ತದೇವಾನು ಪ್ರಾವಿಶತ್ । ತದನುಪ್ರವಿಶ್ಯ ಸಚ್ಚ ತಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ, ನಿಲಯನಂ ಚಾನಿಲಯನಂ ಚ, ವಿಜ್ಞಾನಂ ಚಾವಿಜ್ಞಾನಂ ಚ, ಸತ್ಯಂ, ಚಾಸತ್ಯಂಚ ಸತ್ಯಮಭವತ್ । ಯದಿದಂ ಕಿಂ ಚ ತತ್ ಸತ್ಯಮಿತ್ಯಾಚಕ್ಷತೇ ।"

—ತೈತ್ತಿರೀಯೋಪನಿಷತ್

ಈ ಮುಂತಾದ ಶ್ರುತಿಪ್ರಮಾಣಗಳು ಜಗದ್ಭೇದವನ್ನು ಕಲ್ಪಿಸುವ ಪೂರ್ವಪಕ್ಷವನ್ನು ಖಚಿತವಾಗಿ ಖಂಡಿಸಿವೆ. ಇದಲ್ಲದೆ "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ । ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ ॥" ಎಂಬುದು ಜಗತ್ಪೂರ್ಣತ್ವವನ್ನೂ ಜೊತೆಗೆ ಅಭಿನ್ನತ್ವವನ್ನೂ ಚೆನ್ನಾಗಿ ಚಿತ್ರಿಸಿದೆ. 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್' ಎಂಬುದಾಗಿ ಈಶಾವಾಸ್ಯೋಪನಿಷತ್ತು ಘಂಟಾಘೋಷವಾಗಿ ಪೂರ್ವಪಕ್ಷವನ್ನು ನಿರಾಕರಿಸಿದೆ. ಇದು ಪತಿ ಪಾಶ ಸಮನ್ವಯ.

ಇನ್ನು ಎರಡನೆಯದಾಗಿ ಸಂಸ್ಕಾರಕ್ಕೆ ಸನ್ನದ್ಧನಾದ ಶಿಷ್ಯನ ಪೂರ್ವಪಕ್ಷವಾದರೂ ಮೂಬಗೆಯಾಗಿದೆ; ಲಿಂಗ-ಲಿಂಗಗಳನ್ನು ಕುರಿತು, ಅಂಗ-ಅಂಗವನ್ನು ಕುರಿತು ಮತ್ತು ಅಂಗ-ಲಿಂಗವನ್ನು ಕುರಿತು.

ಇವೆಲ್ಲ ದ್ವೈತಾಪತ್ತಿಯು ಲೀಲಾಭೂಮಿಕೆಯಲ್ಲಿ. ಲೀಲೆ ಮುಗಿದಲ್ಲಿ ಏಕೋಭಾವ. ಪೂಜಕ ಪೂಜ್ಯಭಾವದಲ್ಲಿ ಅಂಗ ಲಿಂಗವೆಂಬ ದ್ವೈತಭಾವ.

'ಅಂಗದುದಯ ಲಿಂಗಸುಖವು, ಲಿಂಗದುದಯ ಅಂಗಸುಖವು. ಅಂಗಲಿಂಗಲಿಂಗಸಂಗಸುಖದಿಂದ ಮಿಕ್ಕು ಮೀರಿನಿಂದ ಪರಮ ಸುಖವನೇನೆಂಬೆನಯ್ಯಾ ? ಕೂಡಲ ಚೆನ್ನಸಂಗಯ್ಯ ತಾನಾದ ಬಳಿಕ ಏನೆಂಬೆನಯ್ಯಾ ?'-ಇದು ಅಂಗ-ಲಿಂಗಗಳೆರಡರ ದ್ವೈತಾದ್ವೈತ ಧ್ಯೇಯ.

'ಅಂಗಲಿಂಗ ಸಂಬಂಧವಾದವರ ಲಿಂಗವೆಂದೇ ಕಾಂಬುದು. ಕೀಟೋಪಿ ಭ್ರಮರಾಯತೇ' ಎಂಬ ನ್ಯಾಯದಂತೆ ಅಂಗಲಿಂಗ ಸೋಂಕಿ ಲಿಂಗವಾಯಿ

ತ್ತಾಗಿ, ಲಿಂಗವೆಂದೇ ಕಾಂಬುದು. ಸರ್ಪದಷ್ಟಸ್ಯ ಯದ್ದೇಹಂ ತದ್ದೇಹಂ ವಿಷದೇಹಿನಾಂ । ಲಿಂಗದಷ್ಟಸ್ಯ ಯದ್ದೇಹಂ ತದ್ದೇಹಂ ಲಿಂಗದೇಹಂ । ಎಂಬುದಾಗಿ ಸರ್ವಾಂಗಲಿಂಗ ಕೂಡಲ ಚೆನ್ನಸಂಗನ ಶರಣನು.'

'ಪಾಪ ನನ್ನದೆ, ಪುಣ್ಯ ನಿನ್ನದೆ ಅಯ್ಯ ? ದ್ವಂದ್ವಕರ್ಮ ಎನಗೆ ಬೇರಾದ ಪರಿ ಎಂತಯ್ಯಾ ? ವಿಚಾರವಾದ ಬಳಿಕ ನಾನು ಲಿಂಗಪ್ರಾಣಿ; ನೀನು ಭಕ್ತಕಾಯನು. ಇದು ಕಾರಣ ದ್ವಂದ್ವಕರ್ಮ ಮುನ್ನವೇ ನಾಸ್ತಿ. ಇನ್ನು ಭಾವಭೇದವೆಂದಡೆ ನಗೆಗೆಡೆಯಪ್ಪುದು, ಹೆಚ್ಚು ಕುಂದು ನನ್ನದಲ್ಲ, ನಿನ್ನದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.'

ಇತ್ಯಾದಿ ವಚನಗಳು ಅಂಗದ ಪೂರ್ವಾಶ್ರಯವನ್ನು ಉತ್ತರಾಶ್ರಯದಲ್ಲಿ ಪರಿಹರಿಸಿವೆ. ಇದು ಪಶುಪತಿಭಾವ ಸಮನ್ವಯ.

ಇನ್ನು ಅಂಗ-ಅಂಗವನ್ನು ಕುರಿತು ವಿಚಾರ. ಅಂಗ ಮೂರು ಆರು ಬಗೆಯಾಗಿದೆ. ಎಷ್ಟೇ ಆದರೂ ಅಂಕುರದ ಭೇದವಿದು. ಫಲಿತದಲ್ಲಿ ಒಂದೇ ! ಸ್ಥಾನಭೇದದಿಂದ ನಾಮ ಹಲವಾದರೂ ಮೂಲವೊಂದೆ ! ಮರಕ್ಕೆ ರೆಂಬೆಗಳು ಎಷ್ಟಿದ್ದರೂ ಮರದ ಮೂಲವೊಂದೆ ! ಕಾರ್ಯಭೇದದಿಂದ ಕಾರಣ ಭೇದ ತೋರಿದರೂ ಭೇದ ದಿಟವಲ್ಲ. ಇದೇ ಅಭಿಪ್ರಾಯವನ್ನು ಲಿಂಗ-ಲಿಂಗಗಳ ಭೇದಕ್ಕೂ ಹೇಳುತ್ತೇವೆ.

'ಪಲವು ವಿವರವಾಂತ ಕುಂಭದೊಳಗಣಚಲ ದೀಪದೊಂದು ।
ಬೆಳಗು ಮಸಗುವಂತೆ ದೇಹ ಕರಣ ನಿಕರ ಮುಖದೊಳು ।
ಪೊಳೆದು ವಿಶ್ವದೃಶ್ಯ ವೀಥಿಗಳನು ಬೇರೆ ಬೇರೆ ತೋರ್ಕೆ ।
ಗೊಳಿಪ ಚಾರು ಚಿತ್ಕಳಾ ಪ್ರಪೂರ್ಣ ಶಂಭುಲಿಂಗವೇ ॥ ೩ ॥'

ಎಂದು ನಿಜಗುಣರು ತಮ್ಮ ಕೈವಲ್ಯ ಪದ್ಧತಿಯ ಶಿವಯೋಗಸ್ಥಲದಲ್ಲಿ ಪ್ರಾಣಲಿಂಗವನ್ನು ವರ್ಣಿಸುತ್ತ ಲಿಂಗ – ಲಿಂಗಗಳ ಪೂರ್ವಪಕ್ಷಕ್ಕೆ ಸಮಾಧಾನವನ್ನು ಸುಂದರೋಪಮೆಯಿಂದ ಚಿತ್ತಾಕರ್ಷಕವಾಗುವಂತೆ ಬಣ್ಣಿಸಿದ್ದಾರೆ.

ಪೂರ್ವಪಕ್ಷದ ಮಾತಾಯಿತು. ಇನ್ನು 'ಸಮಾದಾಯ' ಎಂಬುದು ಸಮ್ಯಗಾಲೋಚನೀಯ; ಸ್ವಾನುಭವಪೂರ್ಣ ಪದಪ್ರಯೋಗ. ಕವಿ ತುಂಬಾ ತೂಕವಾಗಿ ಅಳೆದು ಬಳಸಿದಾನೆ. 'ನಿರಾಕೃತ್ಯ' ಎಂದು ಹೇಳದೆ

'ಸಮಾದಾಯ' ಎಂದು ಹೇಳಿದಾನೆ. ಪೂರ್ವಪಕ್ಷವನ್ನು ಅಂದರೆ ದ್ವೈತವನ್ನು ಪೂರ್ಣ ನಿರಾಕರಿಸಿಲ್ಲ; ಪೂರ್ಣ ಅಂಗೀಕರಿಸಿಲ್ಲ. ಅರ್ಧಾಂಗೀಕಾರದ ಮುದ್ರೆಯನ್ನೊತ್ತಿದ್ದಾನೆ ಶಿವಕವಿ. ದ್ವೈತಮತದ ದ್ವೈತವನ್ನು ಅಂಗೀಕರಿಸದಿದ್ದರೂ 'ದ್ವೈತಾದ್ವೈತ'ದ ದ್ವೈತಾಂಗೀಕಾರದ ಧ್ವನಿಯನ್ನಿರಿಸಿದ್ದಾನೆ. ಮೊದಲು ದ್ವೈತ ಬೇಕು; ಆ ದ್ವೈತದ ಮೇಲೆ ಅದ್ವೈತ ಸಿದ್ಧಾಂತವಾಗಬೇಕು. ಪೂರ್ವಪಕ್ಷವನ್ನು ನಿರಾಕರಿಸದೆ ಹೊಂದಿಕೊಂಡು ಮುಂದಿನ ಅದ್ವೈತಸಿದ್ಧಿಗೆ ಸನ್ನದ್ಧನಾಗುವ ದ್ವೈತಾದ್ವೈತಿಯೇ ಗುಣಾಧಿಕ್ಯವುಳ್ಳ ಗುರು. ದ್ವೈತಾದ್ವೈತ ಸಮನ್ವಯ ಯುಗಪುರುಷ ಶಿಕ್ಷಾಗುರು.

ತ್ಯಾಗಾಂಗ ದ್ವೈತ, ಭೋಗಾಂಗ ದ್ವೈತಾದ್ವೈತ; ಯೋಗಾಂಗ ಅದ್ವೈತ-ಪ್ರಧಾನವಾದ ಕ್ಷೇತ್ರಗಳು. ಇದೀಗ ತ್ಯಾಗಾಂಗಕ್ಷೇತ್ರದ ಕೃಷಿ ಸಾಗಿದೆ. ಕೃಷಿಗಾರ ಶಿಕ್ಷಾಗುರು. ಅದನ್ನರಿತು ಮಂತ್ರಯೋಗ ಶಿಕ್ಷಣವನ್ನು ಭೋಗಾಂಗನಿಗೆ ಕೊಡುತ್ತಿದ್ದಾನೆ. ಕ್ರಿಯೆಯಲ್ಲಿ ಕುಶಲತೆಯನ್ನು ತೋರುತ್ತಿದ್ದಾನೆ. ಅಂದರೆ ಕ್ರಿಯಾಜ್ಞಾನವೆರಡನ್ನೂ ಶಿಕ್ಷಣ ವಿಷಯವನ್ನಾಗಿಸಿಕೊಂಡಿದ್ದಾನೆ. ಆದರೂ ಇಲ್ಲಿ ಕ್ರಿಯೆ ಪೂರ್ವಪಕ್ಷ, ಜ್ಞಾನ ಉತ್ತರಪಕ್ಷ. ಅಂದರೆ ಕ್ರಿಯೆ ಗೌಣ, ಜ್ಞಾನ ಪ್ರಧಾನ. ಇಷ್ಟನ್ನು ವೆಗ್ಗಳಿಸುತ್ತದೆ. 'ಸಮಾದಾಯ' ಪದ ಪ್ರಯೋಗ. ಈ ಗುಣಾಧಿಕ್ಯವುಳ್ಳವನು ಶಿಕ್ಷಾಗುರು.

ಕ್ರಿಯೆಯಲ್ಲಿ ಜಗದ್ಭೇದವಿದೆ; ಜ್ಞಾನದಲ್ಲಿ ಜಗದ್ಭೇದವಿಲ್ಲ. ಕ್ರಿಯಾಜ್ಞಾನ ಸಮನ್ವಯದಲ್ಲಿ ಜಗದ್ಭೇದಾಭೇದ ಸಮನ್ವಯವಿದೆ. ಕೇವಲಾನುಭೂತಿಯಲ್ಲಿ ಯಾವುದೂ ಇಲ್ಲ, ಎಲ್ಲವೂ ಒಂದೇ ಒಂದಾಗಿ ನಿಲ್ಲುತ್ತದೆ. ಅದೇ ಅದ್ವೈತಕೃತ ಸಿದ್ಧಾಂತ. ಅದನರಿದಾತ ಮಹಂತ. ಅಲ್ಲಿಗೆ ಮುಗಿಯಿತು ಈ ಮಂತ್ರಾರ್ಥ.

"ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ"

—ಮುಂಡಕೋಪನಿಷತ್.

'ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್' – ಬ್ರಹ್ಮಸೂತ್ರ, ೧-೨-೧೧ ಇತ್ಯಾದಿ ದ್ವೈತಪರ ಪ್ರಮಾಣಗಳೂ ಉಂಟು. 'ಯತ್ರತ್ವಸ್ಯ ಸರ್ವಮಾತ್ಮೈವಾ ಭೂತ್ತತ್ಕೇನ ಕಂ ಪಶ್ಯೇತ್' ಎಂಬಿವೇ ಮುಂತಾದ ಅದ್ವೈತ ಪರ ಪ್ರಮಾಣಗಳೂ ಉಂಟು. ಕಾರಣ ವೀರಶೈವವು ದ್ವೈತಾ ದ್ವೈತ ಪ್ರತಿಪಾದಕವು.

"ಶ್ರೀಗಂಧವನು ಕಡಿದು ಕೊರೆದು ಸಣ್ಣಿಸುವಂತೆ, ಕರುಣದಿಂದೆನ್ನ ಪೂರ್ವಾಪರವನು। ಶಿರವ ಹಿಡಿದೆತ್ತಿ ತೋರಿಸಿ ಭಕ್ತಿ ಸಂಪದವ ದೊರ ಕೊಳಿಸಿ ಪಾಲಿಸಿದ ಪರಮಗುರುವೆ॥ ಅಂಗಲಿಂಗ ನೋಟವನು ಪ್ರಾಣ ಭವದೊಳು ಹಿಂಗದಿರಿಸುವ ಭೇದವನು ತೋರಿಸಿ। ಅಂಗದಾಚರಸ್ಥಲದೊಳು ನೆಲಸಿರುತಿರ್ಪ ಸಂಗಿ ಚಿನ್ಮೂರ್ತಿ ಶ್ರೀಗುರುಲಿಂಗವೇ॥ ಒಳಗೆಯರುಹಿಸಿ ತಿಳುಹಿ, ಹೊರಗೆ ಬೋಧಿಸಿ ನಿಲಿಸಿ, ಒಳಹೊರಗೆಂದೆಂಬವೆರಡ ಕೆಡಿಸಿ। ಕಳೆಯಲಿಂಗದೊಳೊಚ್ಚತವನೊಪ್ಪುಗೊಳಿಸಿದ ಕರುಣಿ ಗುರುಪುರದ ಮಲ್ಲಿ ನಾಥ ಗುರುವೇ॥

ಎಂತಹ ಹೃದಯಂಗಮವಾದ ಹಾಡಿದು? ಏನು ಹೃದಯಾನುಭವ ಭರಿತ ಹೊಳಪಿದು? ಆಚಾರವರುಹಿದ ಗುರುವೇ ಪೂರ್ವಪಕ್ಷವಾಗಿ ಆ ಆಚಾರದೊಡನೆ ವಿಚಾರವರುಹುವ ಗುರುಲಿಂಗವೇ ಅಪರಪಕ್ಷವಾಗಿ ಪೂರ್ವಾ ಪರ ಭೇದಾಭೇದವೆನಿತೆಂಬುದನು ಬೋಧಿಸಿದ ಈ ಪದ್ಯ ಪರಮ ಹೃದ್ಯ. ಅಷ್ಟೇ ಅಲ್ಲ, ಶಿಷ್ಯನ ಹೊರಗೇ ಪೂರ್ವ, ಒಳಗೇ ಅಪರ; ಈ ಒಳಹೊರ ಗೆಂಬೆರಡನು ಕಳೆಯಲಿಂಗದೊಳಗೆ ಒಚ್ಚತವಾಗಿ ಒಪ್ಪುಗೊಳಿಸಿದ ಕರುಣಾ ಮೂರ್ತಿ–ಕಳಾಮೂರ್ತಿ ಶಿಕ್ಷಾಗುರು; ಚೆನ್ನಿಗಮೂರ್ತಿ – ಚಿನ್ಮೂರ್ತಿ ಶಿಕ್ಷಾಗುರು.

ಕಡಿದು ಕೊರೆದು ಸಣ್ಣಿಸಿದರೂ ಗಂಧವನು ಬಿಡದ ಶ್ರೀಗಂಧದಂತಿ ರುವ ಶಿಷ್ಯನನ್ನು ಗುರು ದೀಕ್ಷೆ ಶಿಕ್ಷೆಗಳೆಂಬ ಪೂರ್ವಾಪರಗಳಿಂದ ಪಳಗಿಸಿ ದರೂ ಭಕ್ತಿಗಂಧವನ್ನು ಬಿಡದ ಶಿಷ್ಯನಪೂರ್ವ; ಆ ಶಿಷ್ಯನನ್ನು ಪಾಲಿ ಸಿದ ಗುರು ಪರಮ.

ಸಂದೇಹ ವನ ಸಂದೋಹ ಸಮುಚ್ಛೇದ ಕುಠಾರಿಕಾ
ಯತ್ಸೂಕ್ತಿಧಾರಾ ವಿಮಲಾ ಸ ಗುರೂಣಾಂ ಶಿಖಾಮಣಿಃ ।
ಯತ್ಸೂಕ್ತಿ ದರ್ಪಣಾಭೋಗೇ ನಿರ್ಮಲೇ ದೃಶ್ಯತೇ ಸದಾ
ಮೋಕ್ಷಶ್ರೀರ್ಬಿಂಬರೂಪೇಣ ಸಗುರುರ್ಭವತಾರಕಃ ॥"

ಸಂಶಯವೆಂದರೆ ಅನುಮಾನ. ಅನುಮಾನ ಅದೊಂದು ವನ. ವನವೆಂದರೆ ತೋಟವಲ್ಲ ಕಾಡು. ದುರ್ಗಮವಾದ ದುರ್ಗ. ಚಿತ್ತಭೂಮಿಯಲ್ಲಿ ಸಂದೇಹ ಪೊದೆ ದಟ್ಟವಾಗಿ ಹಬ್ಬಿದ್ದರೆ ಅಲ್ಲಿ ತತ್ತ್ವ ಪುರುಷನು ಪ್ರವೇಶಿಸಲಾರನು;ವಾಸಿಸಲಾರನು. ಆದರೆ ಅಂತರಾತ್ಮನು ಅಲ್ಲಿಯೇ ವಾಸಿಸಬೇಕಾಗಿದೆ. ಅದುವಾಸಕ್ಕೆ ಯೋಗ್ಯವಾಗಬೇಕಾದರೆ ಸಂಶಯವೆಂಬಮುಳ್ಳು ಪೊದೆಗಳನ್ನು ಸಮೂಲವಾಗಿ ಕತ್ತರಿಸಬೇಕು. ಕತ್ತರಿಸಲು ಕೊಡಲಿ ಬೇಕು; ಮೊನಚಾದ ಕೊಡಲಿ ಬೇಕು. ಆದರೆ ಕಬ್ಬಿಣದ ಕೊಡಲಿಯಲ್ಲ; ಇದರಿಂದ ಅಲ್ಲಿ ಆಗಬೇಕಾದ ಕೆಲಸವಿಲ್ಲ. ಆ ಕೊಡಲಿ ಬೇರೆ; ಆ ಕುಠಾರ ಬೇರೆ. ಅದು ಸದ್ಗುರುವಿನ ಸೂಕ್ತಿಧಾರಾ. ಅದು ಬರೀ ಉಕ್ತಿಧಾರೆಯಲ್ಲ; ಸೂಕ್ತಿಧಾರೆ. ಅದು ಮಲಿನ ಸೂಕ್ತಿಧಾರೆಯಲ್ಲ, ವಿಮಲ ಸೂಕ್ತಿಧಾರೆ. ಅಲ್ಲಿ ಮೋಕ್ಷಲಕ್ಷ್ಮಿಯ ಬಿಂಬ ಕಾಣುತ್ತದೆ. ಅಂತಹ ಚೇತೋಹಾರಿಯಾದ ವಚೋಧಾರೆಯುಳ್ಳವನೇ ಗುರುಗಳಲ್ಲಿ ಶಿಖಾಗ್ರಣಿ, ಶಿಖಾಮಣಿ.

ಸಾವು ಸಾವಲ್ಲ; ಸಂಶಯವೇ ಸತ್ಯವಾದ ಸಾವು. ಸತ್ಯಸಾಧಕನು ಸಂಶಯಾತ್ಮನಾಗಿ ಬಾಳಬಾರದು, ಹಾಗೆ ಬಾಳಿದರೂ ಸತ್ತಂತೆ ! 'ಸಂದ ಮುರಿದರೂ ಸಂಶಯ ಉಳಿಯಬಾರದು' 'ಸಂಶಯಾತ್ಮಾ ವಿನಶ್ಯತಿ' ಈ ಗಾದೆ-ಈ ವೇದಗಳು ಇದನ್ನೇ ಬೋಧಿಸಿವೆ.

ಕಳಾ ಜೀವನವನ್ನು ಕಟ್ಟಡವಿಯನ್ನಾಗಿ ಮಾಡುವ ಮರಣಪ್ರಾಯವಾದ ಸಂಶಯವನ್ನು ಕಳೆದುಕೊಳ್ಳಬೇಕಾದರೆ ಅದರಲ್ಲಿಯೂ ಸ್ವರೂಪ ಸಂಶಯವನ್ನು ಕಳೆದುಕೊಳ್ಳಬೇಕಾದರೆ ಕಳಾವಾಣಿಯುಳ್ಳ ಗುರುವನ್ನೇ ಆಶ್ರಯಿಸಬೇಕು. ಮಂತ್ರಮಯವಾಣಿಯುಳ್ಳ ಗುರುವನ್ನೇ ಸೇವಿಸಬೇಕು. ಮಾತು ಜ್ಯೋತಿರ್ಲಿಂಗವಾದ ಗುರುವಿನ ದೀಕ್ಷೆ ಶಿಕ್ಷೆಗಳನ್ನು ಪಡೆಯಬೇಕು. ಮಾತು ಮತ್ತು ಮಂತ್ರಗಳ ಮೂಲವನ್ನರಿತ ಗುರುವಿಗೆ ಶಿಷ್ಯ

ರಾಗಬೇಕು. 'ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು.' ಇಂತಹ ಸೂಕ್ತಿಧಾರೆಯುಳ್ಳವನಾಗಬೇಕು ಶಿಕ್ಷಾಗುರು. ಮಾತನ್ನು ಮಂತ್ರವನ್ನಾಗಿಸಿದವನೇ ಮಹಾಗುರು. ಅಂಥವನಿಂದ ಸಚ್ಛಿಷ್ಯನಾದವನು ಸದ್ಗತಿಯರತಿಯುಳ್ಳವನು ಮಂತ್ರಬೋಧೆಯನ್ನು ಪಡೆಯಬೇಕು. ತತ್ತ್ವಬೋಧೆಯನ್ನು ಕೇಳಬೇಕು. ಅದರಿಂದ ಸಂಶಯ ಛೇದವಾಗುತ್ತದೆ. 'ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವ ಸಂಶಯಾಃ | ಕ್ಷೀಯಂತೇ ಚಾಸ್ಯ ಕರ್ಮಾಣಿ....' ಎಂಬ ಶ್ರುತಿಮತದಂತೆ ಸರ್ವಜ್ಞನಾದ ಸ್ವಾನುಭಾವಿಯಾದ ಶ್ರೀಗುರುವಿನ ಬೋಧೆಯಿಂದ ಶಿಷ್ಯನ ಹೃದಯಗ್ರಂಥಿಗಳು ಬಿಚ್ಚುತ್ತವೆ. ಹೃದಯ ಸಂಶಯಗಳು ಚದುರುತ್ತವೆ. ಕರ್ಮಗಳು ಕ್ಷಯವಾಗುತ್ತವೆ. ಇಲ್ಲವಾದರೆ ಇಲ್ಲ.

ಶ್ರವಣದ ಹಸಿವಾಗಿದೆಯೆಂದು ಸಿಕ್ಕ ಸಿಕ್ಕವರಲ್ಲಿ ಅಂತರಾತ್ಮನನ್ನು ಅಂತರಾರ್ಥವನ್ನು ಅರಿಯದವರಲ್ಲಿ ಶ್ರವಣಕ್ಕೆ ಹೋಗಬಾರದು. ಮತ್ತು ಅಂತರಾತ್ಮನನ್ನರಿಯದ ಮಂತ್ರಾರ್ಥವನ್ನು ಮನನ ಮಾಡಿಸದ ಗುರುವಿನಲ್ಲಿ ಸಂಸ್ಕಾರವನ್ನು ಪಡೆಯಬಾರದು. 'ಹಸಿದಡೆ ಉಣಬಹುದೇ ನಸುಗುನ್ನಿ ತುರುಚಿಯನು ?' ಎಂದು ಕೇಳುತ್ತಾನೆ ಪ್ರಭುದೇವ ! ಮುಟ್ಟಬಾರದ ನಸುಗುನ್ನಿಯನ್ನು ಉಂಡರೆ ಇನ್ನೇನು ಗತಿ ?

ಅಂತರಾತ್ಮನು ಅಂಗುಷ್ಠ ಮಾತ್ರನಾಗಿದ್ದಾನೆ. ಆಗಮ (ಶಬ್ದ) ಪ್ರಮಾಣದಿಂದ ಸಿದ್ಧನಾಗಿದ್ದಾನೆ. ಆತ್ಮನೆನಿಸುವ ಇಷ್ಟಲಿಂಗವು ಕ್ರಿಯಾದೀಕ್ಷೆಯಿಂದ ಪ್ರತ್ಯಕ್ಷ ಪ್ರಮಾಣ ಗೋಚರವಾದರೆ, ಅಂತರಾತ್ಮನಾದ ಪ್ರಾಣಲಿಂಗವು ಶಿಕ್ಷಾಗುರುವಿನ ಶಬ್ದಪ್ರಮಾಣವಾದ ಮಂತ್ರದರ್ಪಣದಲ್ಲಿ ದೃಷ್ಟವಾಗುತ್ತದೆ. ಮಂತ್ರದರ್ಪಣವು ಮಲಿನವಾಗಿರಬಾರದು. ಅದರಲ್ಲಿ ಮೋಕ್ಷಶ್ರೀಯು ಪ್ರತಿಬಿಂಬಿಸದೆ ಮೂಲಬಿಂಬವೇ ಪ್ರದರ್ಶಿತವಾಗುತ್ತದೆ. ಮಂತ್ರದೀಕ್ಷೆಯ ಮಹಿಮೆ ಇಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. ಮಂತ್ರಮೂರ್ತಿಯಾದ ಆ ಪ್ರಾಣಲಿಂಗ ಸಾಕ್ಷಾತ್ಕಾರವೇ ಮೋಕ್ಷ. ಅಜ್ಞಾನ ಸಂಶಯ ಭೇದಗಳ ಬಿಡುಗಡೆ. ಶಿಕ್ಷಾಗುರುವು ತನ್ನ ಮಂತ್ರಸೂಕ್ತಿಯಿಂದ ಶಿಷ್ಯನ ಚಿತ್ತದಲ್ಲಿ

ಸಕಲ ನಿಷ್ಕಲರೂಪಾದ ಚಿಲ್ಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ. 'ಶಬ್ದಾದೇವ ಪ್ರಮಿತಃ'–ಅ-೧, ಪಾ-೩, ಸೂ-೨೪. ಈ ಬ್ರಹ್ಮಸೂತ್ರವು ಸಹ ಪ್ರಾಣಲಿಂಗವು ಶಬ್ದಪ್ರಮಾಣದಿಂದಲೇ ಸಿದ್ಧವಾಗುತ್ತದೆ, ಪ್ರತಿಷ್ಠಿತವಾಗುತ್ತದೆಯೆಂದು ನಿರೂಪಿಸಿದೆ. 'ಪುರುಷೋಽಂತಃ ಪ್ರತಿಷ್ಠಿತಂ ವೇದ' ಎಂಬುದು ನಿದರ್ಶನವಾಗಿದೆ. ಜೀವನಿಗೆ ಜಗತ್ತು ಬಂಧ; ಈಶ್ವರ ಪ್ರಾಪ್ತಿಯೇ ಮೋಕ್ಷ. ಶ್ರೀಗುರುವಿನ ಮಂತ್ರೋಪದೇಶವೆಂಬ ಸೂಕ್ತಿದರ್ಪಣದಲ್ಲಿ ಪ್ರಾಣಲಿಂಗರೂಪ ಮೋಕ್ಷಶ್ರೀಯು (ಆನಂದಸಂಪತ್ತು) ಶಿಷ್ಯನಿಗುಂಟಾಗುತ್ತದೆ. ಹೀಗೆ ಕರುಣಿಸುವ ಕಾಣಿಸುವ ಶಿಕ್ಷಣತಜ್ಞನೇ ಶಿಕ್ಷಾಗುರು.

'ಅಕ್ಷರದಲಭ್ಯಾಸವ ಮಾಡಿ ಬರಹವ ತೊಡೆವ ಪರಿ ಎಂತೋ ? ಸ್ವರೂಪೆಂಬುದಾವುದು, ನಿರೂಪೆಂಬುದಾವುದೆಂದರಿಯರಾಗಿ, ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವ ನಿರಾಳ ಗೊಹೇಶ್ವರಾ.'

ಹೊರಗೆ ಹಲಗೆಯ ಮೇಲೆ ಬರೆದ ಅಕ್ಷರಗಳನ್ನು ಅಳಿಸಬಹುದಲ್ಲದೆ ಅಭ್ಯಾಸ ಮಾಡಿ ಒಳಗೆ ಚಿತ್ತಫಲಕದ ಮೇಲೆ ಬರೆದುಕೊಂಡುದನ್ನು ಅಳಿಸಲು ಅಳವೆ ? ಇದರಂತೆ ಗುರೂಪದೇಶ ಮಂತ್ರಸೂಕ್ತಿಗಳನ್ನು ಮನದಲ್ಲಿ ಜಪಾಭ್ಯಾಸದಿಂದ ಅಚ್ಚೊತ್ತಿಕೊಂಡ ಬಳಿಕ ಅದನ್ನು ತೊಡೆಯಲಾಸಲ್ಲ. ಅದು ಸುರಾಳವಲ್ಲ. ಅರ್ಥರೂಪದಲ್ಲಿ ಆಳವಟ್ಟ ಬಳಿಕ ಅದು ನಿರಾಳ. ಆ ಅರ್ಥರೂಪ ಅಂತರಾತ್ಮನು ಶುದ್ಧಚಿತ್ತದಲ್ಲಿ ಘನಮನದಲ್ಲಿ ಸಾಕ್ಷಾತ್ತಾಗಿ ತೋರುವನು. 'ತಸ್ಮಿನ್ ದೃಷ್ಟೇ ಪರಾವರೇ' ದರ್ಶನಸಾಧ್ಯತೆ ಇಲ್ಲಿ ಉಕ್ತವಾಗಿದೆ. ಅದು ಕಂಡ ಬಳಿಕ ಸಂಶಯಾಂಧಕಾರವು ನಿಸ್ಸಂಶಯವಾಗಿ ನಿಶ್ಶೇಷವಾಗುತ್ತದೆ. ಅನುಮಾನಾಂಧಕಾರವು ಅಳಿದ ಬಳಿಕ ಹೃದಯ ಹೂವು ಅರಳುತ್ತದೆ. ಆನಂದ ಮಕರಂದ ತುಂಬಿ ತುಳುಕುತ್ತದೆ. ಈ ಆನಂದ ಮಕರಂದವೇ ಮೋಕ್ಷಶ್ರೀ. ಆಗ ದುಃಖ ಬಿಟ್ಟು ಹೋಗುತ್ತದೆ. ದುಃಖವಿಲ್ಲದಲ್ಲಿ ಭವವಿಲ್ಲ ; ಬಂಧನವಿಲ್ಲ. ಹೀಗಾಗುವುದೇ ಮೋಕ್ಷ ಶ್ರೀಸಂಪ್ರಾಪ್ತಿ. ಇದೇ ಮಧ್ಯನಿರಾಳ. ದೀಕ್ಷೆಯಿಂದ ಕಾರ್ಮಮಲವನ್ನು ಕಳೆದು ತನು ನಿರಾಳವಾದರೆ ಅದು ಆದಿ ನಿರಾಳ. ಶಿಕ್ಷೆಯಿಂದ ಮನ ಘನವಾದುದೇ ಮಂತ್ರಮಯ ಲಿಂಗಮೂರ್ತಿದರ್ಶನವಾದುದೇ ಮಧ್ಯನಿರಾಳ.

"ಶಿಷ್ಯಾಣಾಂ ಹೃದಯಾಲೇಖ್ಯಂ ಪ್ರದ್ಯೋತಯತಿ ಯಃ ಸ್ವಯಂ ಜ್ಞಾನ ದೀಪಿಕಯಾ ತೇನ ಗುರುಣಾ ಕಃ ಸಮೋ ಭವೇತ್ ।"

ಶಿಕ್ಷಾಗುರು ತನ್ನ ಶಿವಾದ್ವೈತ ಜ್ಞಾನದೀಪವನ್ನು ಮಂತ್ರಮುಖದಲ್ಲಿ ಶಿಷ್ಯನ ಹೃದಯಮಂದಿರದಲ್ಲಿ ಬೆಳ್ಳನೇ ಬೆಳಗಿಸಿ ಶಿಷ್ಯನ ಹೃದಯಗುಹೆಯಲ್ಲಿ ಗೂಢವಾಗಿದ್ದ ಚಿಲ್ಲಿಂಗವೆಂಬ ಚೆಲುವಿನ ತುಂಬು ಚಿತ್ತರವನ್ನು ಶಿಷ್ಯನಿಗೆ ತಾನೇ ತೋರಿಸುತ್ತಾನೆ. ಅಂತಹ ಶಿಕ್ಷಾಗುರುವಿಗೆ ಸರಿಸಮರು ಯಾರೂ ಇಲ್ಲ.

'ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಟಂ ಪುರಾಣಂ । ಅಧ್ಯಾತ್ಮ ಯೋಗಾಭಿಗಮೇನ ದೇವಂ ಮತ್ವಾ ಧೀರೋ ಹರ್ಷ ಶೋಕೌ ಜಹಾತಿ'

ಹೃದಯ ಗುಹೆಯಲ್ಲಿ ಗೂಢವಾಗಿರುವ ಆ ಅಂತರಾತ್ಮವು ದುರ್ದರ್ಶವಾಗಿದೆ. ಅದು ಶಿಕ್ಷಾಗುರುವಿನ ಅಧ್ಯಾತ್ಮಯೋಗದ ಅನುಗ್ರಹದಿಂದ ಅರಿಯಲು ತಕ್ಕುದಾಗಿದೆ. ಅದನ್ನು ಆ ಅಧ್ಯಾತ್ಮಯೋಗದಿಂದ ಅರಿತವನು ಧೀರನು. ಹರ್ಷ ಶೋಕರಹಿತನು.

ವೀರಶೈವ ಮಂತ್ರದೀಕ್ಷೆಯಲ್ಲಿ ಅಡಗಿರುವುದೇ ಅಧ್ಯಾತ್ಮದೀಕ್ಷೆ. ಈ ಅಧ್ಯಾತ್ಮ ದೀಕ್ಷೆಯನ್ನೇ ಅಧ್ಯಾತ್ಮಯೋಗವೆಂದು ಶ್ರುತಿ ಸಾರಿದೆ. ಅಂತೆಯೇ ದೇವಶಬ್ದದಿಂದ ಜ್ಯೋತಿರ್ಲಿಂಗವನ್ನು ಧೀರ ಶಬ್ದದಿಂದ ವೀರ ಶೈವವನ್ನು ಸ್ಪಷ್ಟವಾಗಿ ಬೋಧಿಸಿದೆ. ಈ ಶ್ರುತ್ಯರ್ಥವನ್ನೇ ಶ್ರೀರೇಣುಕೋಕ್ತ ಈ ಮಂತ್ರವು ಕಾವ್ಯಕಲಾತ್ಮಕವಾಗಿ ಕಮನೀಯವಾಗಿ ಚಿತ್ರಿಸಿ ನಯನ ಮನೋಹಾರಿಯಾಗಿಸಿದೆ.

'ಎನ್ನ ಕರಸ್ಥಳದ ಮಧ್ಯದಲ್ಲಿ ಪರಮ ನಿರಂಜನ ಕುರುಹು ತೋರಿದ. ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ. ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗು ತೋರಿದ. ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆನ್ನ ನಿಂಬಿಟ್ಟುಕೊಂಡ

ಮಹಾಗುರುವಿಗೆ ನಮೋ ನಮೋ ಎನುತಿರ್ಪೆನಯ್ಯ ಅಖಂಡೇಶ್ವರಾ' ಈ ಅಖಂಡೇಶ್ವರ ವಚನವೂ ಶ್ರೀ ರೇಣುಕ ಕಾವ್ಯಕಲಾಮಯ ಶ್ಲೋಕದ ಭಾವಸೌಂದರ್ಯವನ್ನು ತಿಳಿಗನ್ನಡದ ರನ್ನಗನ್ನಡಿಯಲ್ಲಿ ತೋರಿದೆ.

ಮಂತ್ರದಲ್ಲಿರುವ ಆಲೇಖ್ಯ ಪದವನ್ನು ಬಿಚ್ಚಿ ಕುರುಹು ಅರುಹು ಬೆಳಗು ಎಂಬ ಮೂರ್ನುಡಿಗಳಲ್ಲಿ ಬಿತ್ತರಿಸಿದೆ. ಸ್ವಯಂ ಪದವನ್ನು ಎನ್ನ-ತನ್ನ ಎಂಬ ತನಿನುಡಿಗಳೆರಡರಲ್ಲಿ ಎರಕ ಹೊಯ್ದಿದೆ. ಜ್ಞಾನದೀಪವೆಂಬುದನ್ನು ಮಹಾಜ್ಞಾನದ ಬೆಳಗು ಎಂದು ಅನುವಾದಿಸಿದೆ. ಪ್ರದ್ಯೋತಯತಿ ಎಂಬುದಕ್ಕೆ ತೋರಿದ ಇಂಬಿಟ್ಟುಕೊಂಡ ಎಂದು ಪಡಿನುಡಿದಿದೆ. 'ಶಿಷ್ಯ' ಎಂಬುದಕ್ಕೆ 'ಎನ್ನ' ಪದವನ್ನೂ 'ಗುರುಣಾ ಕಃ ಸಮೋಭವೇತ್' ಎಂಬುದಕ್ಕೆ ಮಹಾಗುರು ಎಂಬುದನ್ನು ತೋರಿಸಿ ಸಕ್ಕದದ ಆ ಸವಿಯನ್ನು ಅಕ್ಕರೆಯ ಕನ್ನಡಿಯಲ್ಲಿ ಇನ್ನೂ ಸವಿಯಾಗಿ ನಯವಾಗಿ ಊಡಿಸಿ ಉಲ್ಲಾಸಗೊಳಿಸಿದೆ.

'ಗುರುಲಿಂಗ ಚರಾಖ್ಯಾನಾಂ ಲಿಂಗಾನಾಮೇಕರೂಪಕಂ ।
ಯದ್‌ಜ್ಞಾನಂ ಬೋಧಿತಂ ಸದ್ಭಿಃ ಸಾ ಶಿಕ್ಷೇತಿ ನಿಗದ್ಯತೇ ॥

ಎಂಬುದಾಗಿ ಸೂಕ್ಷ್ಮಾಗಮವು ಶಿಕ್ಷಾಗುರುವಿನ ಲಕ್ಷಣವನ್ನು ಸಮನ್ವಯ ಜ್ಞಾನಬೋಧವೆಂದು ಹೇಳಿದೆ.

"ಪರಮಾದ್ವೈತ ವಿಜ್ಞಾನ ಪರಮೌಷಧ ದಾನತಃ
ಸಂಸಾರ ರೋಗ ನಿರ್ಮಾಥೀ ದೇಶಿಕಃ ಕೇನ ಲಭ್ಯತೇ ॥"

ಜೀವಿಗೆ ಬೆನ್ನುಬಿದ್ದಿರುವ ರೋಗಗಳೆರಡು. ಒಂದು ತನುರೋಗ; ಇನ್ನೊಂದು ಮನೋರೋಗ. ಮನೋರೋಗವನ್ನೇ ಭವರೋಗ ಅಥವಾ ಸಂಸಾರ ರೋಗವೆಂದು ಶಾಸ್ತ್ರೋಕ್ತಿ. ತನುರೋಗವು ನಾರು ಬೇರುಗಳಿಂದ ವಾಸಿಯಾಗುತ್ತದೆ. ಮನೋರೋಗಕ್ಕೆ ಮಾತ್ರ ಶಿವಾದ್ವೈತ ವಿಜ್ಞಾನ (ಪ್ರಾಣಲಿಂಗ ಪರಿಜ್ಞಾನ)ವೆಂಬ ದಿವ್ಯೌಷಧವೇ ಬೇಕು. ಇದನ್ನು ಕೊಡುವಾತನು ಶಿಕ್ಷಾಗುರು. ಈ ಶಿಕ್ಷಾಗುರು ಸರ್ವರಿಗೆ ಸುಲಭವಾಗಿ ಲಭ್ಯವಾಗುವುದಿಲ್ಲ.

'ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಂ ।
ನಿಧಯೇ ಸರ್ವವಿದ್ಯಾನಾಂ ತಸ್ಮೈ ಶ್ರೀ ಗುರವೇ ನಮಃ ॥'

ಗುರು ಸರ್ವವಿದ್ಯಾನಿಧಿ ; ಭವರೋಗ ಭಿಷಕ್. ಅಂತೆಯೇ ಸರ್ವಲೋಕ (ಜನ)ಗಳಿಗೆ ವಂದ್ಯನೂ ಪೂಜ್ಯನೂ ಆದ ಗುರು.

ಭವರೋಗ ನಿವಾರಕನು ಗುರುವಲ್ಲದೆ ಬೇರಿಲ್ಲ. ಆತನು ಕರುಣಿಸುವ ಮಂತ್ರದೀಕ್ಷೆ, ಶಿವಾದ್ವೈತ ವಿಜ್ಞಾನ ಶಿಕ್ಷಣ ಬೇರೆ ಯಾರಿಂದ ಸಾಧ್ಯವಿಲ್ಲ. 'ಅರಿದಿಹೆನೆಂದಡೆ ಅರುಹಿಂಗಸಾಧ್ಯ. ನೆನದಿಹೆನೆಂದಡೆ ನೆನಹಿಂಗಸಾಧ್ಯ. ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ. ವಾಙ್ಮನಕ್ಕಗೋಚರವನರಿವ ಪರಿಯೆಂತಯ್ಯ ಗುರುತೋರದನ್ನಕ್ಕ ? ಗುರುಶಿಷ್ಯರ ಮಧ್ಯದಲ್ಲಿ ಸ್ವಯಂ ಜ್ಯೋತಿ-ಲಿಂಗ ಉದಯವಪ್ಪುದೆಂಬ ಶ್ರುತಿ ಹುಸಿಯೇ ಕೂಡಲಸಂಗಮದೇವಯ್ಯಾ ?........' ಆ ಗುರುದತ್ತ ಜ್ಯೋತಿರ್ಲಿಂಗ ಸಂಜೀವಿನಿಯಿಂದ ಸಂಸಾರರೋಗ ಸಮೂಲ ನಾಶವಾಗುತ್ತದೆ.

೩. ಜ್ಞಾನಗುರುಸ್ಥಲಂ

ಪರಶಿವನ ಈಕ್ಷಣವೇ ಇಚ್ಛಾಶಕ್ತಿ. ಆ ಇಚ್ಛಾಶಕ್ತಿಯ ಸಂಕೋಚಾವಸ್ಥೆಯೇ ಆಣವಮಲ. ಯೋಗಾಂಗದಲ್ಲಿದ್ದು 'ಅಪೂರ್ಣೋಽಹಂ' ನಾನು ಅಪೂರ್ಣನು ಚೂರ್ಣನು ಎಂಬ ಭಾವವನ್ನು ಹುಟ್ಟಿಸಿದೆ. ಆಣವಮಲದಿಂದ ಜೀವನು ಅಣುವಾಗಿದ್ದಾನೆ. ಈ ಅಣುಭಾವದಿಂದ ಜೀವನು ತನ್ನ ಪೂರ್ಣತ್ವವನ್ನು ಕಳೆದುಕೊಂಡಿದ್ದಾನೆ. ಪೂರ್ಣಾನುಭವದಿಂದ ವಂಚಿತನಾಗಿದ್ದಾನೆ. ಮರಣಬಾಧೆಯಿಂದ ಬಳಲಿ ಬೆಂಡಾಗಿದ್ದಾನೆ. ಕಾರ್ಮಿಕಮಲದಿಂದ ಜನನಬಾಧೆ. ಮಾಯಾಮಲದಿಂದ ಜೀವನಬಾಧೆ, ಆಣವಮಲದಿಂದ ಮರಣದ ಬಾಧೆ. ಅಪೂರ್ಣಭಾವವಿರುವಲ್ಲಿಯೇ ಮರಣವಿದೆ; ಮರಣಬಾಧೆಯಿದೆ. ಈ ಬಾಧೆಯನ್ನು ಭಾವಾಭಾವದ ಭೇದವನ್ನು ತಪ್ಪಿಸುವಾತನೇ ಜ್ಞಾನ (ಮೋಕ್ಷ) ಗುರು. ಮರಣವೆ ಮಹಾನವಮಿಯೆಂಬ ಸುಖಭಾವವನ್ನು ಹುಟ್ಟಿಸುವಾತನೇ ಜ್ಞಾನಗುರು. ಮೃತ್ಯುವಿನಿಂದ ಅಮೃತತತ್ತ್ವಕ್ಕೆ ನಿಲುಕಿಸುವಾತನೇ ಜ್ಞಾನಗುರು. ಅಪೂರ್ಣಭಾವದಿಂದ ಪೂರ್ಣಸೌಧಕ್ಕೆ ಕರೆದೊಯ್ಯುವಾತನೇ ಜ್ಞಾನಗುರು.

ಹೊಟ್ಟಿರುವುದು ನೆಲ್ಲು. ಕಾಠಿಣ್ಯವಿರುವುದು ಅಕ್ಕಿ. ಪದಾರ್ಥತ್ವ ವಿರುವುದು ಅನ್ನ. ತ್ಯಾಗಾಂಗ-ಭೋಗಾಂಗ-ಯೋಗಾಂಗಗಳು ಪರಿವಿಡಿದು ಹೀಗಿವೆ. ಹೊಟ್ಟಿರುವಲ್ಲಿ ಅಂಕುರತೆಯಿದೆ. ಕಾಮುಮಲವಿರುವಲ್ಲಿ ಜಾನ್ಮ ದುಃಖವಿದೆ. ಕಾಠಿಣ್ಯವಿರುವಲ್ಲಿ ಬಾಹ್ಯಜೀವನವಿದೆ. ಮಾಯಾಮಲವಿರು ವಲ್ಲಿಯೂ ಜೀವನಸ್ಥಿತಿಯಿದೆ. ಇವೆರಡೂ ಭೋಗ್ಯವಲ್ಲ. ಪದಾರ್ಥವಿರು ವಲ್ಲಿ ಎಂಜಲಿದೆ. ಆಣವತೆಯಿರುವಲ್ಲಿ ಕಾಲನ ಬಾಯೆಂಜಲ ಭಯವಿದೆ. ಇವನ್ನು ಕ್ರಮವಾಗಿ ಕಳಾಗುರುವಿನ ಕ್ರಿಯಾ-ಮಂತ್ರ-ವೇಧ ದೀಕ್ಷೆಗಳು ಕಳೆಯುತ್ತವೆ. ಕಾರಣ ಪ್ರಸ್ತುತದಲ್ಲಿ ವೇಧಾ ದೀಕ್ಷಾಧಿಕಾರಿಯಾದ ಜ್ಞಾನ (ಮೋಕ್ಷ)ಗುರುವಿನ ವಿಚಾರವನ್ನು ಪ್ರಸ್ತಾಪಿಸಲಾಗುತ್ತದೆ.

"ಉಪದೇಷ್ಟೋಪದೇಶ್ಯಾನಾಂ ಸಂಶಯಚ್ಛೇದಕಾರಕಃ
ಸಮ್ಯಗ್ ಜ್ಞಾನಪ್ರದಃ ಸಾಕ್ಷಾದೇಷ ಜ್ಞಾನಗುರುಃ ಸ್ಮೃತಃ ।"

ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗಸಜ ಮನೋಲಯ, ಸದ್ಯೋನ್ಮುಕ್ತಿ-ಈ ಏಳು ಉಪದೇಶಗಳು. ಇವನ್ನು ಜ್ಞಾನಗುರು ಶಿಷ್ಯನ ಭಾವಕ್ಕೆ ಉಪದೇಶಿಸುತ್ತಾನೆ. ಭಾವಲಿಂಗದ ವಿಷ ಯಕ ಸಂಶಯವನ್ನು ನಿವಾರಿಸುತ್ತಾನೆ. ಮಹಾಜ್ಞಾನವನ್ನು (ಪರಮಾನು ಭವವನ್ನು) ಅನುಗ್ರಹಿಸುತ್ತಾನೆ. ಇಷ್ಟನ್ನು ಕರುಣಿಸುವವನೇ ಜ್ಞಾನಗುರು.

ವೇಧೋಪದೇಶ ಏಳೆಂದು ಹೇಳಲಾಗಿದೆ. ಸಂಶಯ ತ್ರಿವಿಧ. ಜ್ಞಾನ ತ್ರಿವಿಧ ಜ್ಞಾತೃಸಂಶಯ, ಜ್ಞಾನಸಂಶಯ, ಜ್ಞೇಯಸಂಶಯವೆಂದು ಮೂರು ಬಗೆ. ಜ್ಞಾನ,ಸುಜ್ಞಾನ, ಸಮ್ಯಗ್ ಜ್ಞಾನ, ಅಥವಾ ಅನುಭವ ಎಂದು ಜ್ಞಾನ ಮೂರುತೆರ. ಹಿಂದಿನ ದೀಕ್ಷೆಗಳಲ್ಲಿ ಜ್ಞಾತೃ ಜ್ಞಾನಗಳ ಸಂಶಯ ನಿವೃತ್ತಿ ಯಾಗಿದೆ. ಈಗ ಜ್ಞೇಯವಸ್ತುವಿನ ಸಂಶಯ ನಿವೃತ್ತಿಯಾಗಬೇಕು. ಕೇಳಿ, ಕಂಡು-ಜ್ಞಾನ-ಸುಜ್ಞಾನಗಳುಂಟಾಗಿವೆ. ಈಗ ಅನುಭವರೂಪ ಸಮ್ಯಗ್ ಜ್ಞಾನವುಂಟಾಗಬೇಕು. ಇವೆರಡನ್ನು ಜ್ಞಾನಗುರು ಅನುಗ್ರಹಿಸುತ್ತಾನೆ- ಯೋಗಾಂಗನಿಗೆ !

ಜ್ಞಾನಗುರು ಬೇರಲ್ಲ. ಕ್ರಿಯಾ ಮತ್ತು ಮಂತ್ರಪ್ರದನಾಗಿ ದೀಕ್ಷಾ ಗುರು ಮತ್ತು ಶಿಕ್ಷಾಗುರುವಾದಾತನೇ ಈಗ ಸಮ್ಯಗ್ ಜ್ಞಾನಪ್ರದನಾಗಿ ಗುರುವೆನಿಸುತ್ತಾನೆ.

ಹಿಂದೆ ಸಕಲಲಿಂಗ, ಸಕಲ ನಿಷ್ಕಲಲಿಂಗಗಳನ್ನು ಅನುಗ್ರಹಿಸಿದ ಗುರುವೇ ಈಗ ಶಿಷ್ಯನಿಗೆ ಕೇವಲ ನಿಷ್ಕಲಲಿಂಗವನ್ನು ಅನುಗ್ರಹಿಸುತ್ತಾನೆ. ಹಿಂದೆ ಸತ್–ಚಿತ್‌ಗಳನ್ನು ಕರುಣಿಸಿದ ಗುರುವೇ ಈಗ ಆನಂದಸ್ವರೂಪ ವನ್ನು ಕರುಣಿಸುತ್ತಾನೆ. ಹಿಂದೆ ದೀಪ–ದೀಪದ ಕಿರಣಗಳನ್ನು ತೋರಿದ ಗುರುವೇ ಈಗ ದೀಪದ ದೀಪ್ತಿಯನ್ನು ತೋರುತ್ತಾನೆ. ಹಿಂದೆ ಕ್ರಿಯಾ ಜ್ಞಾನಗಳನ್ನು ಅರುಹಿದ ಗುರುವೇ ಈಗ ಅನುಭವವನ್ನು ಅರುಹುತ್ತಾನೆ. ಹಿಂದೆ ಕಳಾಬಿಂದುಗಳನ್ನು ಸಾಕ್ಷಾತ್ಕರಿಸಿದ ಗುರುವೇ ಈಗ ನಾದವನ್ನು ಸಾಕ್ಷಾತ್ಕರಿಸುತ್ತಾನೆ. ಹಿಂದೆ ಇಷ್ಟ–ಪ್ರಾಣಗಳನ್ನು ಇತ್ತ ಗುರುವೇ ಈಗ ಭಾವಲಿಂಗವನ್ನೀಯುತ್ತಾನೆ. 'ಭಾವಕ್ಕೆ ಇಂಬಿಲ್ಲ, ಶಬ್ದ ಮೀಸಲು ನೋಡಾ ! ನುಡಿಗೆಡೆಯಿಲ್ಲ ಗೊಹೇಶ್ವರನೆಂಬ ಲಿಂಗವೆರಸಲೊಡನೆ.' ಏಕಾಗ್ರ ಚಿತ್ತವಾದಲ್ಲಿ ಮನೋಲಯವಾದಲ್ಲಿ ಭಾವಕ್ಕೆ ನೆಲೆಯಿಲ್ಲ. ಭಾವವಿಲ್ಲದಲ್ಲಿ ಭಾಷೆ ಮೊದಲಿಲ್ಲ. ಭಾಷೆ ಭಾವಗಳೆರಡೂ ನಿಷ್ಕಲಲಿಂಗದಲ್ಲಿ ಮೀಸಲು. ಏನು ರಹಸ್ಯೋಪದೇಶ ? ಅದೇನು ಅಪರೋಕ್ಷಾನುಭಾವ ? ಅಂತೆಯೇ

ನಿರಸ್ತ ವಿಶ್ವಸಂಭೇದಂ ನಿರ್ವಿಕಾರಂ ಚಿದಂಬರಂ
ಸಾಕ್ಷಾತ್ಕರೋತಿ ಯೋ ಯುಕ್ತ್ಯಾ ಸ ಜ್ಞಾನಗುರುಚ್ಯತೇ ।"

ಮಾತು ಮನೋಭೂಮಿಯನ್ನು ಮೀರಿ ಮುಂದುವರಿಯುತ್ತಿವೆ; ಭಾವಭೂಮಿಕೆಯನ್ನು ದಾಟಿ ಅನುಭಾವದ ಅಚ್ಚ ಬಯಲಲ್ಲಿ ಹೆಚ್ಚಳ ಗೊಂಡು ನಿರವಯದಲ್ಲಿ ನಿಚ್ಚಳಿಸುತ್ತಿವೆ. ಆಹಾ ! ಅದೆಂತಹ ಅಖಂಡಾ ನುಭಾವ ; ಅದೇನು ಪರವಶಪ್ಪೈದುವ ಸಾಕ್ಷಾತ್ಕಾರ;

ವಿಶ್ವವೈವಿಧ್ಯವಿಲ್ಲದ ವಿಕಾರ ವಿರಹಿತವಾದ ಚಿನ್ಮಯಾಂಬರವನ್ನು ತನ್ನ ಪರಮಾನುಭೂತಿಯಿಂದ ಶಿಷ್ಯನಿಗೆ ಸಾಕ್ಷಾತ್ಕಾರ ಮಾಡಿಕೊಡುವ ಮಹಾ ಮಹಿಮನೇ ಜ್ಞಾನಗುರು.

ವಿಶ್ವದಲ್ಲಿ ಭೇದಗಳಿಗೆ ತುದಿ ಮೊದಲಿಲ್ಲ. ವಸ್ತುಭೇದ, ಗುಣಭೇದ, ಉದ್ಯಮಭೇದ, ಬುದ್ಧಿಭೇದ, ಭಾವಭೇದ, ತನುಭೇದ, ರೂಪಭೇದ ಮುಂತಾಗಿ ಅನಂತವಿವೆ. ಈ ಭೇದ ಬಲೆಗಳಲ್ಲಿ ಜೀವರೆಲ್ಲ ಸಿಕ್ಕುಬಿದ್ದಿದ್ದಾರೆ. ಆದರೆ ಚಿದಂಬರಕ್ಕೆ ಈ ಯಾವ ಭೇದಗಳಿಲ್ಲ. ಷಡ್ಭಾವವಿಕಾರಗಳಿಲ್ಲ. ಶೈಶವಾದಿ ತನು ವಿಕಾರಗಳಿಲ್ಲ. ಅದು ಅವಿಕಾರಿ; ನಿರವಯವಿ. ಅಗಮ್ಯ; ಅಗೋಚರ. ಅಂತಹದನ್ನು ಶ್ರೀಗುರು ತನ್ನ ಯುಕ್ತಿ ಶಕ್ತಿಗಳಿಂದ ಶಿಷ್ಯನಿಗೆ ಸಾಕ್ಷಾತ್ಕರಿಸುತ್ತಾನೆ. ಜ್ಞಾನಿಯಾದ ಗುರು ಮೊದಲು ತನ್ನ ಶಿವಯೋಗ ಶಕ್ತಿಯಿಂದ ಶಿವಾನುಭವ ಯುಕ್ತಿಯಿಂದ ಆ ಚಿದಂಬರಕ್ಕೇರುತ್ತಾನೆ; ಶಿಷ್ಯನನ್ನೂ ಏರಿಸುತ್ತಾನೆ. ಗುರುಶಿಷ್ಯರ ಆ ಸಂಬಂಧ ಆದೊಂದು ಅವಿರಳ ಸಂಬಂಧ; ಸವಿ ಸಕ್ಕರೆಯ ಸಂಬಂಧ.

'ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ ತಾನೆ ಗುರುವಾದ. ತಾನೆ ಶಿಷ್ಯನಾದ, ತಾನೆ ಲಿಂಗವಾದ. ಗೊಹೇಶ್ವರ ನಿಮ್ಮ ಶರಣ ಕಾಯದ ಕೈಯಲ್ಲಿ ಲಿಂಗವ ಕೊಟ್ಟಡೆ ಭಾವ ಬತ್ತಲೆಯಾಯಿತ್ತು.'

ಗುರು ಶಿಷ್ಯ ಲಿಂಗವೆಂಬ ತ್ರಿವಿಧ ಭಾವವಿಲ್ಲ. ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿಪುಟಿಯಿಲ್ಲ. ಆಕಾರವಿದ್ದಲ್ಲಿ ವಿಕಾರ, ವಿಭೇದ. ಚಿನ್ನದ ಗಣೇಶನನ್ನು ಮುರಿದು ಗಟ್ಟಿ ಮಾಡಿದಾಗ ಕೈ ಕಾಲು ಮೊಗ ಮೈ ಮುಂತಾದ ಭೇದವೆಲ್ಲಿ ? ಮಣ್ಣು ಮಡಕೆಯಾದಾಗ ಮಣ್ಣಿನ ಭಾವವೆಲ್ಲಿ ? ಅಥವಾ ಮಡಕೆಯಳಿದು ಮಣ್ಣಾದಲ್ಲಿ ಮಡಕೆಯ ಭಾವವೆಲ್ಲಿ ? ನಾಮರೂಪಗಳ ಭೇದ ತನುಮನಗಳ ವಿಕಾರ ಎಲ್ಲವೂ ಆ ಸಾಮರಸ್ಯದಲ್ಲಿ ಸಮಾಪ್ತಗೊಳ್ಳುತ್ತವೆ.

'ಎಸವಿನ ಗುರು ಹೋಗಿ ಶಿಶುವಧೆಯ ಮಾಡಿದಡೆ, ಶಿಶು ಹೋಗಿ ಮರಳಿ ಗುರುವ ಕೊಂದಡೆ ಹೆಸರುಗೊಂಬ ಅಣ್ಣಗಳು ನೀವು ಕೇಳಿರೇ, ಇವರಿಬ್ಬರು ಸತ್ತ ಠಾವ ಒಬ್ಬರು ಅರಿಯರು; ನಿರ್ವಯಲೆಂದಾತ ನಮ್ಮ ಅಂಬಿಗರ ಚೌಡಯ್ಯ.'

ಗುರು ಶಿಷ್ಯರೊಂದಾಗಿ ಚಿದಂಬರರೂಪಾದ ರಹಸ್ಯವನ್ನು ಸೊಗಸಾಗಿ ಬಣ್ಣಿಸುವ ಬೆಡಗಿನ ವಚನವಿದು. ಸೊಬಗನು ಉಣ್ಣಿಸುವ ಅಣ್ಣಿವಾ

ಲಿದು. ಇಂತಹ ವಚನಗಳಿಂದಲೇ ಬೆಡಗು ನುಡಿ ಬಹುಮಟ್ಟಿಗೆ ಸಾಕಲ್ಯ-ಸಾರ್ಥಕ. ಅದರರ್ಥವಿದು:

ದಿಗ್ದೆಸೆಗಳನೊಳಗೊಂಡ ಅಖಂಡ ಚಿತ್ಪ್ರಕಾಶವೇ ಗುರುಮೂರ್ತಿ. ಶಿಷ್ಯೋದ್ಧಾರ ಕಾರಣಕ್ಕಾಗಿ ಆಗಮಿಸಿ ಗುರು ಎಂಬ ಭಾವ ಹೋಗಿ (ನೀಗಿ), ಶಿಷ್ಯಶಿಶುವನ್ನು ಕರುಣಿಸಲು ಆ ಶಿಷ್ಯನಲ್ಲಿರುವ ಆಣವ ಮಲ ಜನ್ಯ ಅಣುಭಾವವೆಂಬ ಅಣುಗ ಸಾಯುವುದು; ಜೀವಭಾವ ಅಥವಾ ಭೇದಭಾವವೆಂಬ ಶಿಶು ಸಾಯುವುದು. ಹೀಗೆ ಚಿನ್ಮಯ ಗುರುವಿನಿಂದ ಜೀವಭಾವ, ಭೇದಭಾವ, ಅಣುಭಾವಗಳಳಿದ ಶಿಷ್ಯಶಿಶು ಶಿವಸ್ವರೂಪನಾಗಿ, ಚಿನ್ಮಯಗುರು ರೂಪನಾಗಿ ಗುರು-ಶಿಷ್ಯ ಎಂಬ ಭೇದವಿಲ್ಲದೆ ಅಭಿನ್ನನಾಗುವನು. ಗುರುವೆಂಬ ಭಾವ ಗುರುವಿನಲ್ಲಿ, ಶಿಶು (ಅಣು)ವೆಂಬ ಭಾವ ಶಿಷ್ಯನಲ್ಲಿ ಇಲ್ಲದಂತಾಗುವುದು. ಇಬ್ಬರೊಂದಾಗುವರು, ಸಚ್ಚಿದ್ರೂಪರಾಗುವರು. ಯಾವ ಸಮ್ಯಗ್ ಚಿತ್ತಿನಿಂದ ಇಬ್ಬರೊಂದಾಗುವರೋ ಆ ಸಮ್ಯಗ್ ಚಿದಂಬರ (ಠಾವ)ವನ್ನೂ ಅರಿಯರು. ಜ್ಞಾನಶೂನ್ಯ (ನಿಷ್ಪತ್ತಿ) ಸ್ಥಲದಲ್ಲಿರುವರು. ಅಂದರೆ ಭಿನ್ನಜ್ಞಾನಿಗಳಾಗದೆ ಅಭಿನ್ನ ಅವಿರಳ ಜ್ಞಾನಿಗಳಾಗುವರು. ಆಗ ವಿಶ್ವಭೇದವೆಲ್ಲಿ? ವಿಕಾರಭಾವವೆಲ್ಲಿ? ಚಿದಂಬರ ಸಾಕ್ಷಾತ್ಕಾರ ಸಾರ ರಹಸ್ಯವಿದು. ಶ್ರೀ ರೇಣುಕ ಜಗದ್ಗುರುವಿನ ಚಿದಂಬರ ಸ್ವರೂಪವೇ ಅವತಾರವೇ ಅಂಬಿಗ ಚೌಡಯ್ಯನಾಗಿ ಬಂದು ಆ ಮಂತ್ರ ವಾಣಿಯನ್ನು ಕನ್ನಡಿಸಿದಂತಿದೆ.

ಜೀವನದ ಉದ್ದಕ್ಕೂ ಹೊಸ ಹೊಸ ಸಮಸ್ಯೆಗಳ ಬಿರುಗಾಳಿ ಬೀಸುತ್ತದೆ. ಭೇದ ವ್ಯವಹಾರ ಕಾರಣವಾಗುತ್ತದೆ. ಬರೀ ಬಹಿರಂಗದಲ್ಲಿ ಮಾತ್ರವಲ್ಲ ಅಂತರಂಗದಲ್ಲಿಯೂ ಅನಂತ ಚಿಂತೆಗಳು ಮೈದೋರಿ ವಿಕಾರಕ್ಕೆಡೆಗೊಡುತ್ತವೆ. ಇದು ಇಂದಿನ ನವನಾಗರಿಕತೆಯಲ್ಲಿ ಸರ್ವಾನುಭವದಲ್ಲಿ ತೀರ ಸತ್ಯವಾಗಿದೆ. ಹೀಗಾಗಿ ಬಾಳಿನಲ್ಲಿ ಶಾಂತಿಯಿಲ್ಲ; ವಿಶ್ರಾಂತಿಯಿಲ್ಲ. ಈ ಎಲ್ಲ ಭೇದಗಳಿಂದ ಈ ಎಲ್ಲ ಕಾರಣಗಳಿಂದ ದೂರಾಗದೆ ಆ ಸತ್ಯ ಶಾಂತಿ ಸಿಗದು. ಆ ಚಿದಂಬರ ರಹಸ್ಯದ ಸ್ವಾರಸ್ಯ ಸಂಪ್ರಾಪ್ತವಾಗದು. ಸರ್ವ ಸಮರಸಭಾವದ ಆ ಅಖಂಡಾನಂದದ ಮಧುರತೆಯನ್ನು ಅನು

ಭವಿಸದೆ ಈ ಜಗದ ಜಂಜಡ ನೀಗದು; ಮನದ ದುಗುಡ ಹೋಗದು. ಭೌತಿಕ ಮಾನಸಿಕ ವಸ್ತು-ವ್ಯವಹಾರಗಳೆಲ್ಲ ಕ್ಷಯ ವೃದ್ಧಿಗಳಿಂದ ಕೂಡಿದವುಗಳು.

"ಕಲಂಕವಾನಸೌ ಚಂದ್ರಃ ಕ್ಷಯವೃದ್ಧಿ ಪರಿಪ್ಲುತಃ
ನಿಷ್ಕಲಂಕಃ ಸ್ಥಿತೋ ಜ್ಞಾನ ಚಂದ್ರಮಾ ನ ವಿಕಾರವಾನ್ |"

ಜಗತ್ತಿಗೆಲ್ಲ ಶಾಂತಿದಾಯಕ ಚಂದ್ರ. ಸೌಮ್ಯಕಿರಣವುಳ್ಳವ. ಅಂಬರದಲ್ಲಿ ಆಡುವವ. ಆದರೇನು ಕಲಂಕಿತ; ಕ್ಷಯವೃದ್ಧಿ ಸಹಿತ. ಸಾಲದ್ದಕ್ಕೆ ಮಾನವನು ಜಾಗತಿಕ ಭೇದಗಳನ್ನು ಮಾನಸಿಕ ವೇದನೆಗಳನ್ನು ತನ್ನೊಳಗೆ ತುಂಬಿಕೊಂಡಿದ್ದರೆ ತಿಂಗಳಿನ ಬೆಳದಿಂಗಳು ತಿಲಮಾತ್ರವಾದರೂ ಶಾಂತಿಯನ್ನು ತಾರದು. ಒಬ್ಬನಲ್ಲ ಒಂದು ಕೋಟಿ ಚಂದ್ರರು ಮೂಡಿಬಂದರೂ ಶಾಂತಿ ಸಂಭವಿಸದು. ಅಷ್ಟೇ ಅಲ್ಲ ಆ ಚಂದ್ರಮಂಡಲಕ್ಕೆ ಹೋಗಿ ಕುಳಿತರೂ ಅದನ್ನೇ ತೇಯ್ದು ಕುಡಿದರೂ ಶಾಂತಿ ಸಿಕ್ಕದು. ಅಂತರಂಗದಲ್ಲಿ ಅಚ್ಚಳಿಯದ ಶಾಂತಿ ಚಂದ್ರಿಕೆಯನ್ನು ಬೀರುವ ನಿಷ್ಕಳಂಕ ಜ್ಞಾನ ಚಂದ್ರಮನು ಉದಯವಾಗದೆ ಮಾನಸಿಕ ವಿಕಾರಗಳು ವಿನಾಶವಾಗವು; ಅಶಾಂತಿ ತೊಲಗದು.

ಜ್ಞಾನಚಂದ್ರನಿಗೆ ಕಲಂಕವಿಲ್ಲ, ವಿಕಾರವಿಲ್ಲ. ಕಾಲ ಪರಿಚ್ಛೇದವಾಗಲಿ, ದೇಶ ಪರಿಚ್ಛೇದವಾಗಲಿ, ದ್ರವ್ಯ ಪರಿಚ್ಛೇದವಾಗಲಿ ಇಲ್ಲ. ಇದರಿಂದಾಗಿ ಅದು ತ್ರಿಕಾಲಾಬಾಧಿತ. ವಿಶ್ವಭೇದ ವಿರಹಿತ, ಅಖಂಡಿತ. ಕಾರಣ ಆತ್ಮಶಾಂತಿಯನ್ನು ವಿಶ್ವಶಾಂತಿಯನ್ನು ಕೋರುವವರು ಬಾಹ್ಯಾಕಾಶದ ಚಂದ್ರಮಂಡಲಕ್ಕೇರುವ ಚಪಲತೆಗಿಂತ ತನ್ನೊಳಗಿರುವ ಜ್ಞಾನಚಂದ್ರನನ್ನು ಹೃದಯಾಕಾಶದಲ್ಲಿ ಹೊಮ್ಮಿಸಿಕೊಳ್ಳಬೇಕು. ಯೋಗಾಂಗ ಶಾಂತವಾಗದೆ ಭೋಗಾಂಗ ತ್ಯಾಗಾಂಗಗಳು ಶಾಂತವಾಗವು. ಯೋಗಾಂಗ ಶಾಂತವಾಗಬೇಕಾದರೆ ಆ ಪರಮಾನುಭವರೂಪ ಜ್ಞಾನಚಂದ್ರನು ಪ್ರಕಾಶಿಸಬೇಕು. ಅದು ಅಚ್ಚಳಿಯದ ಯೋಗ, ಅಕಳಂಕಯೋಗ; ಅವಿಕಾರಯೋಗ.

'ಹಸ್ತ ಮಸ್ತಕ ಸಂಯೋಗವಾಗದ ಮುನ್ನ ಯೌವನ ಮಥನವಾಯಿತ್ತು. ಆವುದು ಅಂತರಂಗವೆಂಬೆ? ಆವುದು ಬಹಿರಂಗವೆಂಬೆ?

ಆವುದು ಆತ್ಮಸಂಗವೆಂಬೆ ? ಹಸ್ತ ಮಸ್ತಕ ಸಂಯೋಗವೇ ಬಹಿರಂಗ, ಮನಸಂಯೋಗವೇ ಅಂತರಂಗ ; ಕೂಡಲ ಚೆನ್ನಸಂಗಯ್ಯನಲ್ಲಿ ಆತ್ಮ ಸಂಯೋಗವಾಯಿತ್ತು'

ಹೊರಗೆ ಸಂಸ್ಕಾರವಿಧಿಯಲ್ಲಿ ಗುರು ಶಿಷ್ಯರ ಹಸ್ತಮಸ್ತಕ ಸಂಯೋಗವಾದಂತೆ ಒಳಗೆ ಗುರುವಿನ ಜ್ಞಾನ ಶಿಷ್ಯನ ಮನ ಇವೆರಡರ ಸಂಯೋಗವಾದರೆ ಆಗ ಆತ್ಮ ಸಂಯೋಗವುಂಟಾಗುತ್ತದೆ. ಕ್ಷಯ ವೃದ್ಧಿಯಿಲ್ಲದ ಚಿತ್ಕಳಾಚಂದ್ರನ ತಂಬೆಳಗು ತೊಲಗದೆ ತೊಳಗುತ್ತದೆ. ಆ ಅಂಗ ಈ ಅಂಗವೆನ್ನದೆ ಸರ್ವಾಂಗದಲ್ಲಿ ಸ್ಥಿರಸಂಗವಾಗುತ್ತದೆ. ಯುವತಿ ಪತಿಯ ಬೆರೆದಂತಾಗುತ್ತದೆ. ಶಿಷ್ಯಸತಿಯಲ್ಲಿ ಭಕ್ತಿಯೌವನ ಮೊದಲು ಹೊಮ್ಮಬೇಕು. ಬಳಿಕ ಗುರುಪತಿಯ ಹಸ್ತ ಶಿಷ್ಯಮಸ್ತಕಕ್ಕೆ ಸಂಯೋಗವಾಗಬೇಕು. ಆ ವೇಧ ಅಂತರಂಗ ಬಹಿರಂಗ ಆತ್ಮಾಂಗಗಳನ್ನೆಲ್ಲ ವ್ಯಾಪಿಸಿ ಆ ಮಹಾಜ್ಞಾನದಲ್ಲಿ ಮೈಮರೆದು ಲೀಲೆಯೊತ್ತರಿಸಿ ವಿಲಾಸ ಸ್ಫುರಿಸಿ ನಿರಾಲಂಬವೆಂಬ ನಿರ್ಮಲಾಂಬರ ತಾನಾಗುವುದು. ಅಲ್ಲಿ ಏನುಂಟು, ಏನಿಲ್ಲ ? ಅಲ್ಲಿ ಎಲ್ಲವಿದ್ದರೂ ಯಾವ ವಿಕಾರವಿಲ್ಲ; ವಿಭೇದವಿಲ್ಲ. ಚಿದಂಬರವೂ ತಾನೆ ! ಚಿಚ್ಚಂದ್ರನೂ ತಾನೆ ! ಚಂದ್ರಾಂಬರ ಭೇದವೂ ಇಲ್ಲ. ಕ್ಷಯ ವೃದ್ಧಿಯ ಭಯವೂ ಇಲ್ಲ. ಚಂದ್ರ ಚಂದ್ರಿಕೆಯ ಭಾವವೂ ಇಲ್ಲ. ಈ ಚಂದ್ರಪ್ರಮೇಯ: ಆ ಚಿಚ್ಚಂದ್ರ ಅಪ್ರಮೇಯ, ನಿರಾಮಯ. ಅಖಂಡ ಸತ್ ; ಅಖಂಡ ಚಿತ್ !

"ಪಾರ್ಶ್ವಸ್ಥಂ ತಿಮಿರಂ ಹಂತಿ ಪ್ರದೀಪೋ ಮಣಿನಿರ್ಮಿತಃ
ಸರ್ವಗಾಮಿ ತಮೋಹಂತಿ ಬೋಧದೀಪೋ ನಿರಂಕುಶಃ ।"

ರತ್ನರಚಿತ ದೀಪವು ಹತ್ತಿರದ ಕತ್ತಲೆಯನ್ನು ಕಳೆಯುತ್ತದೆ. ಯಾವ ಅಡೆತಡೆಯಿಲ್ಲದ ಸರ್ವ ಸ್ವತಂತ್ರವಾದ ಬೋಧ (ಜ್ಞಾನ ಮತ್ತು ಉಪದೇಶ) ದೀಪವು ಎಲ್ಲೆಲ್ಲಿಯೂ ಹರಡಿದ ತಮವನ್ನು ತೊಡೆಯುತ್ತದೆ.

ಮಣಿನಿರ್ಮಿತ ಪ್ರದೀಪ ಒಬ್ಬ ಕರ್ತೃವುಳ್ಳದ್ದು. ಪ್ರದೀಪವಾದರೂ ಪರಿಮಿತ ಪ್ರಕಾಶವುಳ್ಳದ್ದು. ತೈಲದೀಪಕ್ಕಿಂತ ಹೆಚ್ಚಿನದೆನಿಸಿದರೂ ಎಲ್ಲೆಯುಳ್ಳ ಬೆಳಗುಳ್ಳುದು. ಹತ್ತಿರದ ಕತ್ತಲೆಯನ್ನು ಮಾತ್ರ ಕಳೆಯತಕ್ಕದ್ದು

ಬೋಧದೀಪ ಅಕರ್ತೃಕವಾದುದು. ತರತಮಗಳನ್ನು ಮೀರಿದುದು, ಅಡೆತಡೆಗಳಿಲ್ಲದುದು. ಎಲ್ಲ ತಮೋಗುಣಗಳನ್ನು ತೊಲಗಿಸುವಂತಹದು. ಎಲ್ಲೆಯಿಲ್ಲದ ಎಲ್ಲ ಎಚ್ಚರಿಕೆಯನ್ನು ಎರಕಗೊಳಿಸುವಂತಹದು. ಎಲ್ಲ ಅವಸ್ಥೆಗಳಲ್ಲಿಯೂ ಇರುವಂತಹದು. ಸ್ವಯಂ ಪ್ರಕಾಶವುಳ್ಳುದು. ಪ್ರಾದೇಶಿಕತೆಯಿಲ್ಲ, ಪರಾಪೇಕ್ಷಿತವಲ್ಲ. ಮಣಿದೀಪ ವಸ್ತುನಿಷ್ಠವು. ಅಂದರೆ ದ್ರವ್ಯಸ್ಥವು. ಬೋಧದೀಪ ವಸ್ತುನಿಷ್ಠವಲ್ಲ ; ವಸ್ತುವೇ ಅದು. ಮಣಿದೀಪ ಇರುಳಿನಲ್ಲಿ ಮಾತ್ರ ಬೆಳಗುತ್ತದೆ. ಬೋಧದೀಪಕ್ಕೆ ಹಗಲಿರುಳುಗಳ ಪರಿಚ್ಛೇದವಿಲ್ಲ. ಮಣಿದೀಪ ಗಮ್ಯ; ಬೋಧದೀಪ ಅಗಮ್ಯ. ಮಣಿದೀಪ ಮೌಲ್ಯ; ಬೋಧದೀಪ ಅಮೌಲ್ಯ; ವೈಶಾಲ್ಯ.

> "ಸರ್ವಾರ್ಥ ಸಾಧಕ ಜ್ಞಾನವಿಶೇಷಾದೇಶ ತತ್ಪರಃ
> ಜ್ಞಾನಾಚಾರ್ಯಃ ಸಮಸ್ತಾನಾಮನುಗ್ರಹಕರಃ ಶಿವಃ ।"

ಸಕಲ ಭೋಗ ಮೋಕ್ಷಗಳನ್ನು ಕೊಡುವ ಮಹಾಜ್ಞಾನವನ್ನು ಉಪದೇಶಿಸುವುದರಲ್ಲಿ ತತ್ಪರನಾದವನೇ ತಾತ್ತ್ವಿಕವಾಗಿ ಜ್ಞಾನಾಚಾರ್ಯನೆನಿವನು. ಇವನೇ ಸಮಸ್ತರನ್ನು ಅನುಗ್ರಹಿಸುವ ಪ್ರತ್ಯಕ್ಷ ಪರಶಿವನು.

'ಗುರುವನರಿವನ್ನಕ್ಕ ಅಷ್ಟಾದಶ ವಿದ್ಯೆಯನರಿಯಲುಂಟು; ಓದಲುಂಟು, ಕೇಳಲುಂಟು, ಹೇಳಲುಂಟು. ಗುರುಕರುಣದಿಂದ ಗುರುವನರಿದ ಬಳಿಕ ಗುರುವಲ್ಲದೆ ತಾನಿಲ್ಲ, ತಾನಿಲ್ಲವಾಗಿ ಓದಲಿಲ್ಲ; ಓದಲಿಲ್ಲಾಗಿ ಕೇಳಲಿಲ್ಲ ; ಕೇಳಲಿಲ್ಲಾಗಿ ಹೇಳಲಿಲ್ಲ ; ಹೇಳಲಿಲ್ಲಾಗಿ ಅರಿಯಲಿಲ್ಲ ; ಅರಿಯಲಿಲ್ಲಾಗಿ ಅರಿವನರಿಯದ ಗುರುವನರಿಯಲುಂಟೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ?'

'ಗುರುಕಾರುಣ್ಯವೇ ಸದಾಚಾರ. ಗುರುಕಾರುಣ್ಯವೇ ಶಿವಾಚಾರ. ಗುರುಕಾರುಣ್ಯವೇ ಪ್ರಸಾದರುಚಿ. ಮುಂದೆ ಗುರು ; ಹಿಂದೆ ಲಿಂಗ ಕೂಡಲ ಸಂಗಮದೇವಾ.'

ಸಮ್ಯಗ್‌ಜ್ಞಾನಿಯ ಕರುಣೆಯಿಂದ ಲಭ್ಯವಾಗದ್ದು ಯಾವುದಿಲ್ಲ? ಇಹಪರಗಳೆರಡೂ ಲಭ್ಯವಾಗುತ್ತವೆ. ಸಕಲ ವಿದ್ಯೆ ಬುದ್ಧಿಗಳೂ ಲಭ್ಯವಾಗುತ್ತವೆ. ಅಗೋಚರ ಶಿವನೂ ಗುರುವಾಗಿ ಗೋಚರನಾಗುತ್ತಾನೆ. ಸರ್ವರನ್ನು ಅನುಗ್ರಹಿಸುತ್ತಾನೆ. ಸರ್ವೋದಯ ಭಾವವುಳ್ಳವನು ಶಿವನಲ್ಲದೆ ಇನ್ನೇನು! ಸರ್ವರ ಉದ್ಧಾರವೇ ಶಿವಾಚಾರ್ಯನ ಮಣಿಹ. ಸರ್ವಾರ್ಥಸಾಧಕತ್ವವೇ ಆತನ ಉಪದೇಶ ಉದ್ದೇಶ.

'ಅಂಕುರ ಫಲ ತರು ಕುಸುಮ ಫಲರಸ ಸಾರಾಯ ಇನಿತಿನಿತೆಲ್ಲಿರ್ದುದೋ-ಬೀಜ ಮೊಳೆದೋರದಂದು ? ಪಶುವಿನ ಅಮೃತವೆಲ್ಲಿರ್ದುದೋ-ವೃಷಭ ಮುಟ್ಟದಂದು ? ಘನ ಜವ್ವನೆಯರ ಅವಸ್ಥಾಂತರದಲ್ಲುದಿಸಿದ ಶಿಶುವೆಲ್ಲಿರ್ದುದೋ-ಕೂಸು ಕನ್ನೆತನಗಳಳಿದು ಪತಿಯ ಕೂಡದಂದು ? ಶರಧಿಯ ಸಿಂಪಿನ ರತ್ನವೆಲ್ಲಿರ್ದುದೋ-ಸ್ವಾತಿಯ ಸಲಿಲವಿಲ್ಲದಂದು ? ಸಪ್ತಸ್ವರ, ಅಕ್ಷರ, ವಸ್ತುಕ, ವರ್ಣಕವೆಲ್ಲಿರ್ದುದೋ-ಜ್ಞಾನವುದಯಿಸದಂದು ? ತ್ರಿಜಗದುತ್ಪತ್ತಿ ಸ್ಥಿತಿ ಲಯ ಕಾರಣ ಸಚರಾಚರ ಗಂಭೀರವೆಲ್ಲಿರ್ದುದೋ-ಶಿವನ ಅಷ್ಟತನುಮೂರ್ತಿಗಳಿಲ್ಲದಂದು ? ಶರಣಪದ ಲಿಂಗೈಕ್ಯವೆಲ್ಲಿರ್ದುದೋ-ಆರಾಧ್ಯಲಿಂಗ ಸಕಳೇಶ್ವರ ಮಹಾಲಿಂಗನಿದ್ದಾನೆಂದು ಸದ್ಗುರುಸ್ವಾಮಿ ಕೃಪೆಮಾಡಿ ತೋರದಂದು ?'

'ಸರ್ವಾರ್ಥ' ಪದ ಸಂಪೂರ್ಣ ಸ್ಮರಣಾರ್ಹ. ಪ್ರಣವಗರ್ಭಗತ ಆ ಪರಶಿವನೇ ಸರ್ವಾರ್ಥ. ಇಲ್ಲಿ ಸರ್ವ ಶಬ್ದಾರ್ಥ ಮುಖ್ಯವಾಗಿ ಶಿವ. ಸಂಪೂರ್ಣ ವಸ್ತು ಅವನೊಬ್ಬನೆ! ಎಲ್ಲ ವಸ್ತುವು ಅವನೆ! ಎಲ್ಲೆಲ್ಲಿರುವ ವಸ್ತುವು ಅವನೆ! ಅಂತಹ ಆ ಶಿವ-ಅರ್ಥವನ್ನು ಸಾಧಿಸುವ ಜ್ಞಾನ ವಿಶೇಷವಲ್ಲವೇನು ? ಅಂತಹ ಜ್ಞಾನವುಳ್ಳವನು ಸರ್ವಜ್ಞ. ಅವನೇ ಶಿವಾಚಾರ್ಯ. ಆ ಶಿವಾಚಾರ್ಯ ಸದ್ಗುರುವು ಕೃಪೆ ಮಾಡಿ ತೋರಿಸದಿದ್ದರೆ ಸರ್ವಾರ್ಥರೂಪಾದ ಮಹಾಘನಲಿಂಗವು ತೋರದು. ಶರಣಸ್ಥಲದ ಮೇಲೆ ಬರುವ ಲಿಂಗೈಕ್ಯಸ್ಥಲವು ಸಮನಿಸದು. ಅರ್ಥಾತ್ ಸರ್ವಾರ್ಥರೂಪ ಸಾಮರಸ್ಯಕ್ಕೆ ಸರ್ವಜ್ಞ ಸದ್ಗುರುವೇ ಸರ್ವ ಕಾರಣವೆಂಬುದನ್ನು ಅರಿಯುಬೇಕು.

"ಕಟಾಕ್ಷ ಚಂದ್ರಮಾ ಯಸ್ಯ ಜ್ಞಾನಸಾಗರ ವರ್ಧನಃ
ಸಂಸಾರ ತಿಮಿರಚ್ಛೇದೀ ಸ ಗುರುಜ್ಞಾನ ಪಾರಗಃ ।"

ಆ ಮಹಾಗುರುವಿನ ಕೃಪಾಕಟಾಕ್ಷ ಚಂದ್ರನಿಗೆ ಮುಖ್ಯವಾಗಿ ಎರಡೇ ಫಲಗಳು. ಒಂದು ಸಮ್ಯಗ್ ಜ್ಞಾನಸಾಗರವನ್ನು ಹೆಚ್ಚಿಸುವುದು ; ಇನ್ನೊಂದು ಸಂಸಾರ ತಿಮಿರವನ್ನು ವಿಚ್ಛೇದಿಸುವುದು. ಆತನೇ ಪರಮ ಜ್ಞಾನ ಪಾರಂಗತನು.

'ತಡೆ ನೆಲೆ ಇಲ್ಲದ ಮಹಾನದಿಯಲ್ಲಿ **ಒಡಲಿಲ್ಲದ** ಅಂಬಿಗ ಬಂದಿದ್ದಾನೆ. ಹಿಡಿವ ಬಿಡುವ ಮನವ ಬೆಲೆಗೊಟ್ಟರೆ ಗಡಣವಿಲ್ಲದೆ ಹಾಯಿಸುವೆ ಹೋಳಿಯಾನು. ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವೆನೆಂದಾತನಂಬಿಗರ ಚೌಡಯ್ಯ.'

ಗುರುವಿನ ಕಾರುಣ್ಯಪ್ರವಾಹ ಅದೊಂದು ಮಹಾನದಿ. ಅದಕ್ಕಿಲ್ಲ ದೇಹಭಾವವೆಂಬ ನೆಲ. ದ್ವಂದ್ವಭಾವವೆಂಬ ದಡ. ಆ ಮಹಾನದಿಯಲ್ಲಿ ತೇಲಿಬರುವ ಅಂಬಿಗ ಗುರುದೇವ. ಆತನಿಗೆ ಜಡಭಾವವಿಲ್ಲವಾಗಿ ಅದರಲ್ಲಿ ಮುಳುಗ. ಆ ಕಾರುಣ್ಯಶಾಲಿಗುರು ಈ ಸಂಸಾರದಲ್ಲಿದ್ದರೂ ಸಂಸಾರ ಸಂಪರ್ಕ ಅವನಿಗಿಲ್ಲ. ಆತ ಆ ಮಹಾಜ್ಞಾನ ನೌಕೆಯಲ್ಲಿರುತ್ತಾನೆ. ಆತನೊಡನೆ ಆ ನೌಕೆಯಲ್ಲಿ ಕುಳಿತು ಶಿಷ್ಯನು ಸಂಸಾರ ನದಿಯನ್ನು ದಾಟಬೇಕಾದರೆ ಹಣವನ್ನೀಯಬೇಕು. ಹಣ ಹೊರಗಿನದಲ್ಲ. ಸಂಕಲ್ಪ ವಿಕಲ್ಪರಹಿತ ಮನವೇ ಆತನಿಗೆ ಸಲ್ಲಿಸುವ ಬೆಲೆ. ಅದನಿತ್ತರೆ ಹೊಳೆ ದಾಟಿಸುವನು. ನುಡಿಗೆ ನಿಲುಕದ ನಿಸ್ಸೀಮ ಶಿವನೆಂಬ ಗ್ರಾಮದಲ್ಲಿರಿಸುವನು.

ಶ್ರೀಗುರು ತನ್ನಲ್ಲಿ ಭಕ್ತಿಕಾಣಿಕೆಯನ್ನಿತ್ತ ಭಕ್ತನ ಸಂಸಾರ ತಿಮಿರವನ್ನು ಕಳೆದು ಮುನ್ನಡೆಯಿಸಿ ಶಿವಜ್ಞಾನ ಸಾಗರವನ್ನು ಸೇರಿಸುವನು. ಭಕ್ತನೆಂಬ ನದಿಯ ನಾಮರೂಪುಗಳು ನಿರ್ನಾಮವಾಗುವವು.

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವಂತೆ, ಚಿನ್ಮಯ ಗುರುಕಟಾಕ್ಷ ಚಂದ್ರನ ಆಕರ್ಷಣೆಯಿಂದ ಶಿಷ್ಯನ ಚಿತ್ಸಾಗರ ವರ್ಧಿಸುತ್ತದೆ. ಶಿಷ್ಯನ ಸಂಕಲ್ಪ ನದಿಗಳೆಲ್ಲ ಆ ಸಾಗರದಲ್ಲಿ ಲೀನವಾಗುವುವು. ಭವತಿಮಿರ ಬಿಟ್ಟೋಡುವುದು. ಗುರುಕಟಾಕ್ಷದಲ್ಲಿ ಕೃಪಾದೃಷ್ಟಿಯಲ್ಲಿ ಆ ಶಕ್ತಿಯಿದೆ.

ಗುರುವಿನ ಆ ಕಟಾಕ್ಷ ಪ್ರಯೋಗ ಆದೊಂದು ಮಹಾ ಪ್ರಯೋಗ; ಮಹಾ ಯೋಗ. ಅದು ಪಾರದರ್ಶಕ. 'ಗುರುವಿನ ಕೃಪೆಯಿಂದ ಸಾಧಾರಣ ತನುವ ಮರೆದೆ. ಗುರುವಿನ ಕೃಪೆಯಿಂದ ಮಲತ್ರಯುವ ತೊಳೆದೆ. ಗುರುವಿನ ಕೃಪೆಯಿಂದ ಅನುಭಾವಿಯಾದೆ. ಗುರುವಿನ ಕೃಪೆಯಿಂದ ಶುದ್ಧಸಿದ್ಧ ಪ್ರಸಿದ್ಧ ಪ್ರಮಾಣವನರಿದೆ. ಎನಗಾಧಿಕ್ಯವಪ್ಪ ವಸ್ತು ಬೇರೊಂದಿಲ್ಲ. ಅದೇನು ಕಾರಣ ?–ಅವನಾದೆನಾಗಿ !....' ಎಂದು ಸಿದ್ಧರಾಮನು ಗುರುಕೃಪೆಯ ಮಹಿಮೆಯುನ್ನು ಮಹಾಪ್ರಯೋಗ ಫಲವನ್ನು ಬಿಚ್ಚಿ ಬಣ್ಣಿಸಿದ್ದಾನೆ.

ಶಿಷ್ಯನ ಜ್ಞಾನಸಾಗರ ಕೃಷ್ಣಪಕ್ಷದಿಂದ ತಳಕ್ಕೆ ತಗ್ಗಿರುತ್ತದೆ. ತ್ರಿಮಲವೆಂಬ ಸಂಸಾರವೆಂಬ ಹಾವಸೆ ಆವರಿಸಿರುತ್ತದೆ. ತಗ್ಗಿದ ಕಡಲನ್ನು ಉಕ್ಕಿಸುತ್ತದೆ ಗುರುಕಟಾಕ್ಷಚಂದ್ರ. ಆವರಿಸಿದ ಹಾವಸೆಯುನ್ನು ನೂಂಕಿ ತಿಳಿಗೊಳಿಸುತ್ತದೆ ಆ ಚಂದ್ರಕಿರಣಕರ.

> **"ಬಹಿಸ್ತಿಮಿರವಿಚ್ಛೇತ್ತಾ ಭಾನುರೇಷ ಪ್ರಕೀರ್ತಿತಃ**
> **ಬಹಿರಂತಸ್ತಮುಶ್ಛೇದೀ ವಿಭುರ್ದೇಶಿಕಭಾಸ್ಕರಃ ।"**

ಗುರು ಪರಂಜ್ಯೋತಿ ಸ್ವರೂಪ. ಸ್ವಯಂಜೋತಿರೂಪ. ಅವನ ಮುಂದೆ ಸೂರ್ಯನು ನಿಲ್ಲನು. ಈ ಸೂರ್ಯನು ಬರೀ ಬಾಹ್ಯ ತಿಮಿರವನ್ನು ತೊಲಗಿಸುತ್ತಾನೆ. ಗುರುಭಾನು ಹೊರವೊಳಗಿನ ತಿಮಿರವನ್ನು ಕಳೆಯುತ್ತಾನೆ. ಆದುದರಿಂದ ದೇಶಿಕಭಾಸ್ಕರನು ವಿಭು. ದೃಶ್ಯದೀಪ್ತಿಗಳಿಗೆಲ್ಲ ಪ್ರಭು. ಪ್ರಕಾಶಪ್ರದ. ಗುರು ಚಿನ್ಮಯ ಚಂದ್ರ; ಈ ಚಂದ್ರ ಕಲಂಕಿತ. ಗುರು ಬೋಧದೀಪ; ಈತನ ಮುಂದೆ ಮಣಿದೀಪ ಪರಿಮಿತ. ಗುರು ದೇಶಿಕಭಾಸ್ಕರ; ಈತನ ಮುಂದೆ ಬಾನೊಳಗಿನ ಭಾನು ಕೇವಲ ಬಾಹ್ಯ ಪ್ರಕಾಶ. ಅಂತೆಯೇ 'ನ ತತ್ರ ಸೂರ್ಯೋಭಾತಿ, ನ ಚಂದ್ರ ತಾರಕಾಃ, ನೇ ಮಾ ವಿದ್ಯುತೋಭಾಂತಿ ; ಕುತೋಽಯುಮಗ್ನಿಃ' ಎಂದು ಶ್ರುತಿಗಳು ಸಾರಿದವು.

ಭಾನುಪ್ರಕಾಶ ಗೋಚರ. ದೇಶಿಕಭಾಸ್ಕರನ ಪ್ರಭೆ ಗೋಚರಾಗೋಚರ. ಹೊರಗಿದ್ದು ಹೊರಗಣ್ಣಿಗೆ ತೋರದಿರುತ್ತದೆ. ಗುರುಭಾನುವಿನ ಚಿತ್ಕಳೆಯು ಸಕಲ, ಸಕಲ ನಿಷ್ಕಲ, ನಿಷ್ಕಲವಾಗಿ ಗೋಚರ, ಗೋಚರಾ

ಗೋಚರ, ಅಗೋಚರವಾಗಿ ಮೂದೆರನಾಗುತ್ತದೆ. ಇದನ್ನು ಬಿತ್ತರಿಸು ವುದೇ ಈ ಮಂತ್ರಹೃದಯ.

ಭಾನುವಿನ ಭೌತಿಕ ಬೆಳಗಿನಿಂದ ಭೌತಿಕ ವಸ್ತುಗಳನ್ನು ಮಾತ್ರ ನೋಡುತ್ತೇವೆ. ಆತ್ಮವಸ್ತುವನ್ನು ಈ ಬೆಳಕಿನಲ್ಲಿ ಮಾತ್ರ ಕಾಣಲು ಸಾಧ್ಯವಿಲ್ಲ. 'ಆತ್ಮಾ ವಾ ಅರೇ ದ್ರಷ್ಟವ್ಯಃ' ಎಂಬಂತೆ ಆತ್ಮದ್ರಷ್ಟಾ ಆಗ ಬೇಕಾದರೆ ಗುರುಭಾನುವಿನ ಸತ್ಕಳಾರೂಪ ಕ್ರಿಯಾಲಿಂಗವೇ ಬೇಕು. ಇನ್ನು ಒಳಗಿರುವ ಅಜ್ಞಾನಾಂಧಕಾರವು ತೊಲಗಬೇಕಾದರೆ ಗುರುಭಾನುವಿನ ಜ್ಞಾನೋಪದೇಶ ಬೇಕು. ಬಾಹ್ಯ ಲಿಂಗದರ್ಶನಾರ್ಚನಗಳಿಂದ ಅಕ್ರಿಯ ರೂಪ ಅಂಧಕಾರ ತೊಲಗುತ್ತದೆ. ಪ್ರಾಣಲಿಂಗ ಧ್ಯಾನದಿಂದ ಮಾನಸಿಕ ಬೌದ್ಧಿಕ ಅಜ್ಞಾನಾಂಧಕಾರ ನೀಗುತ್ತದೆ. ಭಾವಲಿಂಗಾನುಸಂಧಾನದಿಂದ ಭಾವಗತ ಭ್ರಾಂತಿ ಬಿಡುತ್ತದೆ. ಅನುಭಾವ ಪ್ರಕಾಶವುಂಟಾಗುತ್ತದೆ.

ಬಾಹ್ಯ ಭಾನು ಮಾನವನ ಬಾಹ್ಯದೃಷ್ಟಿಯೊಂದನ್ನು ಮಾತ್ರ ತೆರೆ ಯಿಸಿದರೆ, ಅದೂ ಭೌತಿಕವಾಗಿ ಮಾತ್ರ–ಗುರುಭಾನು ಮಾನವನ ಮೂರು ಕಣ್ಣುಗಳನ್ನು ತೆರೆಯಿಸುತ್ತಾನೆ. ದರ್ಶನ ಮನನ ನಿಧಿಧ್ಯಾಸನ ಪ್ರಕ್ರಿಯೆಗೆ ಪಾತ್ರನನ್ನಾಗಿಸುತ್ತಾನೆ. 'ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿವುದೇ ಅಯ್ಯಾ ?' ಎಂಬಂತೆ ಶಿಷ್ಯನ ಯಾವ ಅಂಗದಲ್ಲಿಯೂ ಅಣುಮಾತ್ರ ಅಂಧ ಕಾರವುಳಿಯದಂತೆಸಗುತ್ತಾನೆ ಗುರು. ಆಣವಮಲಕ್ಕೆ ಇಂಬಿಲ್ಲದಂತಾಗಿಸು ತ್ತಾನೆ ಮಹಾಗುರು. ಶಿಷ್ಯನ ಮೂರು ಅಂಗಗಳಲ್ಲಿ ಮೂರು ಲಿಂಗಗಳಾಗಿ ವ್ಯಾಪಿಸುತ್ತಾನೆ, ವಿಭಾಸಿಸುತ್ತಾನೆ ಗುರು. ಆದಕಾರಣ 'ವಿಭು' ವೆಂದೆನಿಸಿ ದ್ದಾನೆ. ವಿಶೇಷ ಜ್ಞಾನಾನುಭವಗಳನ್ನು ಅನುಗ್ರಹಿಸುತ್ತಾನೆ : 'ಸಂಸ್ಕಾರೈಃ ಪ್ರಾಕ್ತನೈರ್ದೇವಿ ಸ್ವಕೀಯ ಸುಕೃತಾರ್ಜನೈಃ। ಜ್ಞಾನಾಧಿಕ್ಯಂ ಭವೇದ್ಯತ್ತು ಸ್ವಾನುಭಾವಃ ಸ ಉಚ್ಯತೇ ॥' ಶಿಷ್ಯನ ಪಿಂಡಾಂಡವನ್ನೆಲ್ಲ ವ್ಯಾಪಿಸುವ ಅನುಭವವನ್ನು ಆದೇಶಿಸುವ ಗುರುವೇ 'ಅನುಭಾವಗುರು' ವೆಂದು ಸೂಕ್ಷ್ಮಾ ಗಮವು ಸಾಟಿದೆ.

"ಕಟಾಕ್ಷ ಲೇಶ ಮಾತ್ರೇಣ ವಿನಾ ಧ್ಯಾನಾದಿಕಲ್ಪನಂ
ಶಿವತ್ವಂ ಭಾವಯೇದ್ಯತ್ರ ಸ ವೇಧಃ ಶಾಂಭವೋ ಮತಃ ।

ಶಿವವೇಧಕರೇ ಜ್ಞಾನೇ ದತ್ತೇ ಯೇನ ಸುನಿರ್ಮಲೇ
ಜೀವನ್ಮುಕ್ತೋ ಭವೇಚ್ಛಿಷ್ಯಃ ಸ ಗುರುರ್ಜ್ಞಾನಸಾಗರಃ ॥"

ಧ್ಯಾನ ಧಾರಣಾದಿಗಳ ಅಲಂಬನವಿಲ್ಲದೆ ಕಿಂಚಿತ್ ಕಟಾಕ್ಷಮಾತ್ರದಿಂದ ಯಾವ ಸ್ಥಲದಲ್ಲಿ ಶಿವತ್ವವನ್ನು ಸಂಸ್ಥಾಪಿಸುವನೋ ಅದು ಶಂಭು ಸಂಬಂಧ ವಾದ ವೇಧ ದೀಕ್ಷೆಯೆನಿಸಿಸುತ್ತದೆ.

ಜ್ಞಾನಗುರುವಿನಿಂದ ನಿರ್ಮಲವಾದ ಶಿವಸ್ವರೂಪವನ್ನುಂಟುಮಾಡುವ ಜ್ಞಾನವನ್ನು ಪಡೆದ ಶಿಷ್ಯನು ಜೀವನ್ಮುಕ್ತನೆನಿಸುತ್ತಾನೆ. ಹಾಗೆ ಮಾಡ್ವಾತನೇ ಜ್ಞಾನಸಾಗರ ಗುರುವೆನಿಸುತ್ತಾನೆ. 'ಹಸ್ತಾಬ್ಜ ಮಥನದಿಂದೊತ್ತಿ ಭಸ್ಮವ ಮಾಡಿ ಮತ್ತೆ ಪಂಚಾಕ್ಷರಿಯು ಜಪಮಣಿಯು ಚಿತ್ತ ಶ್ರೋತ್ರದೊಳು ಮತ್ತೆ ಧಾರೆಯನೆರೆಯೆ ಸತ್ಯವಿದು ನಿಮ್ಮಂತೆ ರಾಮನಾಥ.'

'ಹಸ್ತಮಸ್ತಕಸಂಯೋಗಚ್ಛಲಾದ್ವೇಧೇತಿಗೀಯತೇ ।
ಗುರುಣೋದೀರಿತಾ ಕರ್ಣೇಯಾಸಾ ಮಾಂತ್ರೀತಿ ಕಥ್ಯತೇ ।
ಶಿಷ್ಯಪಾಣಿತಲೇದತ್ತಾ ಯಾ ದೀಕ್ಷಾ ಸಾಕ್ರಿಯಾತ್ಮಿಕಾ ॥'

'ಅಯ್ಯಾ ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿದ್ಬೆಳಗ್ನ ಹಸ್ತ ಮಸ್ತಕ ಸಂಯೋಗದಿಂದೊಡಗೂಡಿ ಮಹಾಬೆಳಗ ಮಾಡಿದಿರಲ್ಲಾ ! ಅಯ್ಯಾ ಎನ್ನ ಮಸ್ತಕದೊಳಗೊಂದುಗೂಡಿದ ಮಹಾಬೆಳಗ ತಂದು ಭಾವ ದೊಳಗಿಂಬಿಟ್ಟರಲ್ಲಾ ! ಅಯ್ಯಾ ಭಾವದೊಳಗೆ ಕೂಡಿದ ಮಹಾಬೆಳಗ ತಂದು ಮನಸ್ಸಿನೊಳಗಿಂಬಿಟ್ಟರಲ್ಲಾ ! ಅಯ್ಯಾ ಎನ್ನ ಮನಸ್ಸಿನೊಳು ಕೂಡಿದ ಮಹಾಬೆಳಗ ತಂದು ಎನ್ನ ಕಂಗಳೊಳಗಿಂಬಿಟ್ಟರಲ್ಲಾ ! ಅಯಾ ಎನ್ನ ಕಂಗಳೊಳು ಕೂಡಿದ ಮಹಾಬೆಳಗ ತಂದು ಕರಸ್ಥಲದೊಳಿಂಬಿಟ್ಟ ರಲ್ಲಾ ! ಅಯ್ಯಾ ಎನ್ನ ಕರಸ್ಥಲದಲ್ಲಿ ಥಳಥಳಸಿ ಬೆಳಗಿ ಹೊಳೆವುತ್ತಿಪ್ಪ ಅಖಂಡತೇಜವನೆ ಇಷ್ಟಲಿಂಗವೆಂಬ ದೃಷ್ಟವ ತೋರಿ, ನಿಶ್ಚಯವ ಶ್ರೋತ್ರ ದಲ್ಲಿ ಸೃಜಿಸಿದರಲ್ಲಾ ! ಅಯ್ಯಾ ಎನ್ನ ಶ್ರೋತ್ರದೊಳಗೆ ಸೃಜಿಸಿದ ಸುಮಂತ್ರ ದೊಳಗೆ ನೀವು ನಿಮ್ಮ ಮಹತ್ವವ ಹುದುಗಿದಿರಲ್ಲಾ ! ಅಯ್ಯಾ ಎನ್ನ ಆರಾಧ್ಯ ಕೂಡಲ ಸಂಗಮದೇವಾ, ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ !

ಸದ್ಗುರು ಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ ತತ್ ಶಿಷ್ಯನ ಮಸ್ತಕದ ಮೇಲೆ ತನ್ನ ಶ್ರೀಹಸ್ತವನಿರಿಸಿದಡೆ, ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯ ! ಒಪ್ಪುವ ಶ್ರೀ ವಿಭೂತಿಯು ನೊಸಲಿಂಗೆ ಪಟ್ಟವ ಕಟ್ಟಿದಡೆ ಮುಕ್ತಿ ಸಾಮ್ರಾಜ್ಯದೊಡೆತನಕ್ಕೆ ಪಟ್ಟವ ಕಟ್ಟಿದಂತಾಯಿತ್ತಯ್ಯ ! ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನವೆಂಬ ಪಂಚ ಕಲಶದ ಅಭಿಷೇಕವ ಮಾಡಿಸಲು ಶಿವನ ಕಾರುಣ್ಯಾಮೃತದ ಸೊನೆ ಸುರಿದಂತಾಯಿತ್ತಯ್ಯ ! ನೆರೆದ ಶಿವಗಣಂಗಳ ಮಧ್ಯದಲ್ಲಿ ಮಹಾಲಿಂಗವನು ಕರಸ್ಥಳಾಮಳಕವಾಗಿ ಶಿಷ್ಯನ ಕರಸ್ಥಳಕ್ಕೆ ಇಟ್ಟು ಅಂಗದಲ್ಲಿ ಪ್ರತಿಷ್ಠಿಸಿ ಪ್ರಣವ ಪಂಚಾಕ್ಷರಿಯನುಪದೇಶವ ಕರ್ಣದಲ್ಲಿ ಹೇಳಿ, ಕಂಕಣವ ಕಟ್ಟಿದಲ್ಲಿ ಕಾಯವೇ ಕೈಲಾಸವಾಯಿತ್ತು. ಪ್ರಾಣವೇ ಪಂಚಬ್ರಹ್ಮಮಯ ಲಿಂಗವಾಯಿತ್ತು. ಇಂತು ಮುಂದೆ ತೋರಿ ಹಿಂದೆ ಬಿಡಿಸಿದ ಶ್ರೀಗುರುವಿನ ಸಾನ್ನಿಧ್ಯದಿಂದಾನು ಬದುಕಿದೆನಯ್ಯ ಚೆನ್ನ ಮಲ್ಲಿಕಾರ್ಜುನಯ್ಯ.'

ಈ ಪ್ರಮಾಣಗಳಿಂದ ಜ್ಞಾನಗುರುವಿನ ವೇಧಾದೀಕ್ಷಾ ಪ್ರಭಾವವು ವ್ಯಕ್ತವಾಗುತ್ತದೆ. ಗುರುವಿನ ಕಟಾಕ್ಷ ವೀಕ್ಷಣವು ಧ್ಯಾನ ಧಾರಣಗಳಿಗಿಂತಲೂ ದಿವ್ಯವಾದುದು. ಆ ದಿವ್ಯ ಈಕ್ಷಣದಿಂದ ಶಿಷ್ಯನ ಇಚ್ಛಾಶಕ್ತಿಯು ವಿಕಾಸವಾಗುತ್ತದೆ; ಸ್ವಚ್ಛವಾಗುತ್ತದೆ; ಶಿವವಾಗುತ್ತದೆ. ಗುರುಕಟಾಕ್ಷದಂತೆ ಶ್ರೀಹಸ್ತ ಸ್ಪರ್ಶವು ದಿವ್ಯವಾಗಿ ಶಿವವೇಧವನ್ನುಂಟುಮಾಡುವಂತಹದು. ಜೀವನ್ಮುಕ್ತಿಯನ್ನು ಸದ್ಯದಲ್ಲಿ ಸಿದ್ಧಿಸುವಂತಹದು.

ಏಕಾಗ್ರಚಿತ್ತ ಮೊದಲಾಗಿ ಸದ್ಯೋನ್ಮುಕ್ತಿ ಕೊನೆಯಾಗಿ ಸಪ್ತವಿಧ ಸಂಸ್ಕಾರ ಸಂಪತ್ತಿಯನ್ನು ಕೊಡುವ ಮಹಾದಾನಿ ಮಹಾಜ್ಞಾನಿ ಶ್ರೀಗುರು. ಸದ್ಯೋನ್ಮುಕ್ತಿಗಿಂತ ಸಂಪತ್ತಿಲ್ಲ; ಸತ್ಯಸುಖವಿಲ್ಲ. ಇದರಿಂದಾಗಿ ಭಕ್ತ ಮುಕ್ತನಾಗಬೇಕಾದರೆ ಮಹಾದಾನಿಯಾದ ಮಹಾಗುರುವನ್ನೇ ಮೊರೆ ಹೋಗಬೇಕು.

"ಜನವೇನು ಕೊಟ್ಟೀತು, ಮನವೇನು ತಣದೀತು ?
ಅನುಪಮದಾನಿ ಗುರುದೇವ ಕೊಟ್ಟರೆ,
ಮನೆ ತುಂಬಿ ಮನ ತುಂಬಿ ನಲಿದೇವು ನಾವು ನಿಡುಗಾಲ."

ಯಾರು ಏನನ್ನಾದರೂ ಕೊಟ್ಟಾರು. ಜೀವನಸಾರವಾದ ಲಿಂಗಗಳನ್ನು (ಕ್ರಿಯಾ ಜ್ಞಾನಾನುಭವಗಳನ್ನು) ಗುರುವಲ್ಲದೆ ಇನ್ನಾರು ಕೊಟ್ಟಾರು ? ಗುರುವಿನ ಈ ದಾನ ಅನುಪಮ ದಾನ. ಇದರಿಂದ ಮನೆಯೊಂದಲ್ಲ ತ್ರಿವಿಧ ತನುಗಳೂ ತುಂಬುತ್ತವೆ; ತೃಪ್ತಿ ಪಡೆಯುತ್ತವೆ. ಇದರಿಂದಾಗಿ ಗುರುವಿನ ಅನುಪಮ ದಾನವನ್ನು ಪಡೆಯೋಣ ಬನ್ನಿ !

ಗುರುತ್ರಯ ನಿರೂಪಣೆ :

ಆಚಾರಲಿಂಗದ ಸದ್ರೂಪವೇ ಶ್ರೀಗುರು. ಒಬ್ಬನೇ ಗುರು ನಾಮ ಕ್ರಿಯೆಗಳಿಂದ ತ್ರಿವಿಧನಾಗುತ್ತಾನೆ. ಆಚಾರಲಿಂಗದ ಸತ್ತಿನ ಸದ್ರೂಪವೇ ದೀಕ್ಷಾಗುರು. ಆಚಾರಲಿಂಗದ ಸತ್ತಿನ ಚಿದ್ರೂಪವೇ ಶಿಕ್ಷಾಗುರು. ಆಚಾರಲಿಂಗದ ಸತ್ತಿನ ಆನಂದರೂಪವೇ ಜ್ಞಾನ ಅಥವಾ ಮೋಕ್ಷಗುರು. ಬಿಡಿಬಿಡಿಯಾಗಿ ಬಿತ್ತರಿಸಿದ ಗುರುತ್ರಯ ನಿರೂಪಣೆಯನ್ನು ಇಡಿಇಡಿಯಾಗಿ ಇಲ್ಲಿ ನೋಡಲಾಗಿದೆ. ನಾಮ ಬೇರೆ ಕ್ರಿಯೆ ಬೇರೆಯಾದರೂ ಸ್ವರೂಪವೊಂದೆಂಬುದನ್ನು ಮರೆಯಬಾರದು.

'ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಾಗುರು ತ್ರಿವಿಧಾಕಾರಂಗಳನರಿದು ಕರ್ಮಕ್ರಿ ಆಚಾರ ಸಂಬಂಧವ ಸಂಬಂಧಿಸಿ ಮಾಡುವಲ್ಲಿ ದೀಕ್ಷಾಗುರು. ಆ ಕ್ರಿ ತಪ್ಪಿದಲ್ಲಿ ಬಂಧನವ ಮಾಡುವಲ್ಲಿ ಶಿಕ್ಷಾಗುರು. ಇಷ್ಟ ಕಾಮ್ಯ ಮೋಕ್ಷಂಗಳ ಗೊತ್ತುಗೆಡಿಸಿ ನಿಶ್ಚೈಸಿ ಮಾಡುವುದು ಮೋಕ್ಷಾಗುರು. ಇಂತೀ ಭೇದದಾಗವನರಿಯಬಲ್ಲಡೆ ಪರಮಗುರು ನಿಃಕಳಂಕ ಮಲ್ಲಿಕಾರ್ಜುನಾ.'

ಈ ವಚನದಲ್ಲಿ ಮೋಳಿಗೆಯ ಮಾರಯ್ಯನವರು ತ್ರಿವಿಧ ಗುರುಲಕ್ಷಣಗಳನ್ನು ಶಿಷ್ಯನಿಗೆ ಸಂಸ್ಕರಿಸುವ ಮುಖದಲ್ಲಿ ಗುರುತಿಸಿದ್ದಾರೆ.

'ದೀಕ್ಷಾಗುರುವಾದಲ್ಲಿ ತ್ರಿವಿಧದಾಸೆ ಇಲ್ಲದಿರಬೇಕು. ಶಿಕ್ಷಾಗುರುವಾದಲ್ಲಿ ಅರಿಗಳಿಗಂಜದೆ ಪ್ರಾಣತ್ಯಾಗ ನಿಶ್ಚಯನಾಗಿರಬೇಕು. ಮೋಕ್ಷಾಗುರುವಾದಲ್ಲಿ ಸರ್ವದೋಷ ಸರ್ವೇಂದ್ರಿಯ ನಾಶವಾಗಿರಬೇಕು. ಇಂತೀ

ಮೂರು ಮೀರಿ ಬೇರೊಂದರಲ್ಲಿ ನಿಂದು, ತ್ಯಾಗಾಂಗ – ಭೋಗಾಂಗ– ಯೋಗಾಂಗ ತ್ರಿವಿಧಲೇಪನಾಗಿ ನಿಂದುದು ನಿಜಗುರುಸ್ಥಲ. ಆ ಗುರುವಿನ ಕೆಯ್ಯ ಅನುಜ್ಞೆ ಪರಂಜ್ಯೋತಿ ಪ್ರಕಾಶ. ಅದು ನಿರವಯ ತತ್ತ್ವ; ಸದಾಶಿವಮೂರ್ತಿಲಿಂಗವು ತಾನೆ.'

ಅರಿವಿನ ಮಾರಿತಂದೆಗಳು ಗುರುವಿನಲ್ಲಿರುವ ಗುಣಗಳಿಂದ ತ್ರಿವಿಧತ್ವ ವನ್ನು ತಿಳಿಸಿದ್ದಾರೆ.

'ದೀಕ್ಷಾಗುರುವಾಗಿ ಬಂದು ಬ್ರಹ್ಮನ ಉತ್ಪತ್ತಿಯ ತೊಡೆದೆ. ಶಿಕ್ಷಾ ಗುರುವಾಗಿ ಬಂದು ತ್ರಿವಿಧಮಲವ ಕೆಡಿಸಿ ಮುಕ್ತನ ಮಾಡಿದೆ. ಮೋಕ್ಷಾ ಗುರುವಾಗಿ ಬಂದು ಆತ್ಮನ ಪ್ರಕೃತಿಯ ಕೆಡಿಸಿದೆ. ಇಂತೀ ಲೀಲೆಗೆ ಗುರು ರೂಪಾಗಿ, ಸ್ವಲೀಲೆಗೆ ಲಿಂಗರೂಪಾಗಿ, ನಿಜಲೀಲೆಗೆ ಜಂಗಮ ರೂಪಾಗಿ, ಇಂತೀ ತ್ರಿವಿಧ ರೂಪಾಗಿ ಭಿನ್ನನಾದೆಯಲ್ಲಾ ಭಕ್ತಿಕಾರಣನಾಗಿ! ಶಂಭು ಗಿಂದಿತ್ತ, ಸ್ವಯಂಭುಗಿಂದತ್ತ ಅತಿಬಳ ನೋಡಾ ಮಾತುಳಂಗ ಮಧು ಕೇಶ್ವರನು.'

ಇನ್ನೊಬ್ಬ ಶರಣನು ಈ ವಚನದಲ್ಲಿ ಉಪದೇಶ ಭೇದದಿಂದ ಗುರು ತ್ರಯವನ್ನು ವಿಭಾಗಿಸಿದ್ದಲ್ಲದೆ ಲೀಲಾಭೇದದಿಂದ ಗುರುಲಿಂಗ ಜಂಗಮ ರೂಪಗಳನ್ನೂ ಹೊಸ ದೃಷ್ಟಿಯಲ್ಲಿ ಕಂಡಿದಾನೆ.

ಅಂಗಕ್ಕೆ ಲಿಂಗವ ಕೊಟ್ಟವ ಆಚಾರ್ಯನಾದ. ಮನಕ್ಕೆ ಅರುಹ ತೋರಿದಾತ ಶಿಕ್ಷಾಗುರುವಾದ. ಮೋಕ್ಷ ವಿಮೋಕ್ಷವಾಗಿ ಉಭಯದ ಗೊತ್ತು ತೋರಿ, ಕಾಯದ ಕರ್ಮವ ಕೆಡಿಸಿ ಜೀವನ ಭವವ ಭೇದಿಸಿ ತದ್ರೂಪವ ತೋರಿದಾತ ಜ್ಞಾನಗುರು. ಆತ ಪರಮಪ್ರಕಾಶ ಈಶಾನ್ಯಮೂರ್ತಿ ಮಲ್ಲಿ ಕಾರ್ಜುನ ಲಿಂಗವು ತಾನೆ.'

ಇದು ಶಿವಲೆಂಕ ಮಂಚಣ್ಣನ ದೃಷ್ಟಿ.

'ಆಚಾರ ಗುರು. ಸಮಯಗುರು. ಜ್ಞಾನಗುರು. ಆಚಾರ ಗುರು ಬ್ರಹ್ಮನ ಕಲ್ಪವ ತೊಡೆಯಬೇಕು. ಸಮಯಗುರು ವಿಷ್ಣುವಿನ ಸ್ಥಿತಿಯ ಹರಿಯಬೇಕು. ಜ್ಞಾನಗುರು ಉತ್ಪತ್ತಿ ಸ್ಥಿತಿಲಯ ಮೂರನು ಕಳೆಯಬೇಕು ತ್ರಿವಿಧಗುರು ಏಕವಾದಲ್ಲಿ ಸದ್ಗುರು ಮದ್ಗುರು ಮಹಾಗುರುವೆಂಬೆ ನಿಃಕಳಂಕ

ಮಲ್ಲಿಕಾರ್ಜುನಾ' ಈ ವಚನದಲ್ಲಿ ಮೋಳಿಗೆಯ ಮಾರಯ್ಯನವರು ಮೊದಲಿನಿಬ್ಬರು ಗುರುಗಳ ನಾಮಗಳನ್ನು ಬೇರೆ ಬಗೆಯಲ್ಲಿ ಹೇಳಿದ್ದಾನೆ.

೪. ಕ್ರಿಯಾಲಿಂಗಸ್ಥಲಂ

ಈ ಗುರು ಕರುಣಿಸಿದ ಕ್ರಿಯಾಲಿಂಗಕ್ಕೆ ಲಿಂಗವೆಂದು, ಇಷ್ಟಲಿಂಗವೆಂದು, ಕರಸ್ಥಲ (ಕರದಿಷ್ಟ) ಲಿಂಗವೆಂದು, ಶಿವಲಿಂಗವೆಂದು, ಅಚರಲಿಂಗವೆಂದು ಅಯ್ದಾರು ಹೆಸರುಗಳಿವೆ. ಇವುಗಳಿಂದ ಈ ಸಲ್ಲಿಂಗದ ಸ್ವರೂಪ ಸುಜ್ಞರಿಗೆ ಸುಲಭವಾಗಿ ಅವಗತವಾಗುತ್ತದೆ.

ಇವುಗಳಲ್ಲಿ ಕ್ರಿಯಾಲಿಂಗ – ಇಷ್ಟಲಿಂಗವೆಂಬವು ಆಗಮಿಕ ನಾಮಗಳು; ಕ್ರಿಯಾದ್ಯೋತಕಗಳು. ಕರದಿಷ್ಟ–ಶಿವಲಿಂಗ ಇವು ಸ್ಥಲಸೂಚಕ ನಾಮಗಳು. ಕರಣಸಂಬಂಧ ಸೂಚಕಗಳೂ ಆಗಿವೆ. ಚರಲಿಂಗವೆಂಬುದು ಸ್ವಭಾವದ್ಯೋತಕ, ಹಾಗು ಚರಲಿಂಗಕ್ಕೆ ವ್ಯತಿರಿಕ್ತತೆಯನ್ನು ತೋರುವ ಹೆಸರು. ಇವೆಲ್ಲವೂ ಯೌಗಿಕ ನಾಮಗಳೆಂದು ಬೇರೆ ಹೇಳಬೇಕಿಲ್ಲ. ಇನ್ನುಳಿದ 'ಲಿಂಗ' ಎಂಬುದೊಂದು ರೂಢನಾಮವಾಗಿ ಬಂದಿದೆ.

ಕ್ರಿಯಾಶಕ್ತಿ ವಿಶಿಷ್ಟವಾಗಿ ಕ್ರಿಯಾಲಿಂಗವೆನಿಸಿದೆ. ಇಷ್ಟಿ (ಪೂಜೆ)ಗೆ ಯೋಗ್ಯವಾಗಿ ಮತ್ತು ಇಷ್ಟವಾಗಿ – ಇಷ್ಟಪ್ರದವಾಗಿ ಇರುವುದರಿಂದ ಇಷ್ಟಲಿಂಗವೆನಿಸಿದೆ. ಕರಸ್ಥಲದಲ್ಲಿ ಮೂರ್ತೀಭವಿಸಿ (ಕುಳಿತು) ಅರ್ಚಿಸಿಕೊಳ್ಳುವುದರಿಂದ ಕರಸ್ಥಲಲಿಂಗ ಅಥವಾ ಕರದಿಷ್ಟವೆನಿಸಿದೆ. ದೃಕ್ಕಲಾಗ್ರಾಹ್ಯವಾಗಿ ಶಿವಲಿಂಗವೆನಿಸಿದೆ. ಚರಿಸದಿರುವುದರಿಂದ ಅಚರಲಿಂಗವೆನಿಸಿದೆ. ಇವುಗಳಲ್ಲೆಲ್ಲ ಮುಖ್ಯವಾದ ಮೂಲ ಕಲಾದ್ಯೋತಕವಾದ ನಾಮವೆಂದರೆ ಕ್ರಿಯಾಲಿಂಗವೆಂದೇ ಹೇಳಬೇಕು. ಇದರಿಂದಾಗಿ ಶಿವಾಗಮಿಕರಾದ ಶಿವಾಚಾರ್ಯರು ಈ ಹೆಸರನ್ನೇ ಹೆಚ್ಚು ಮೆಚ್ಚಿಕೊಂಡಿದ್ದಾರೆ. ಈ ಹೆಸರಿನಿಂದಲೇ ಈ ಸ್ಥಲವೂ ಸಹ ಪ್ರಾರಂಭಿಸಲ್ಪಟ್ಟಿದೆ; ಪ್ರಸಿದ್ಧವೂ ಆಗಿದೆ.

ಆ ಪರಶಿವನ ಸ್ಪಂದನರೂಪಾದ ಈಕ್ಷಣವೇ ಇಚ್ಛಾಶಕ್ತಿಯೆನಿಸಿತು. ಈ ಇಚ್ಛಾಶಕ್ತಿಯು ಒಳ–ಹೊರವ್ಮೈಗಳಾಗಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳು ದಿಸಿದವು. ಅಂದರೆ ಜ್ಞಾನ ಕ್ರಿಯೆಗಳ ರೂಪದಲ್ಲಿ ಇಚ್ಛೆಯು ಅಭಿವ್ಯಕ್ತ

ವಾಯಿತು. ಆ ಅಭಿವ್ಯಕ್ತಿಯಲ್ಲಿ ಜ್ಞಾನರೂಪವು ಸೂಕ್ಷ್ಮವಾಗಿರುವುದರಿಂದ ಒಳವೈ ಎನಿಸಿತು. ಕ್ರಿಯಾರೂಪವು ಸ್ಥೂಲವಾಗಿರುವುದರಿಂದ ಹೊರವೈ ಎನಿಸಿತು. ಇವು ಮೂರು ಭಿನ್ನವಲ್ಲವಾದರೂ ಭಕ್ತನ ತಿಳುವಳಿಕೆಗಾಗಿ ಬೇರ್ಪಡಿಸಿ ತಿಳಿಸುವ ಸಂಪ್ರದಾಯ ಸಂಪ್ರಾಪ್ತವಾಗಿದೆ; ಇರಲಿ.

ಈ ಮೂರು ಶಕ್ತಿಗಳಲ್ಲಿ ಕ್ರಿಯಾಶಕ್ತಿ ಪ್ರಧಾನವಾಗಿರುವುದರ ಕುರುಹೇ ಕ್ರಿಯಾಲಿಂಗ.

"ಗುರೋರ್ವಿಜ್ಞಾನಯೋಗೇನ ಕ್ರಿಯಾ ಯತ್ರ ವಿಲೀಯತೇ
ತತ್ಕ್ರಿಯಾಲಿಂಗಮಾಖ್ಯಾತಂ ಸರ್ವೈರಾಗಮಪಾರಗೈಃ ।"

ಕ್ರಿಯಾಶಕ್ತಿಯೇ ಕಾಯದ ಚೈತನ್ಯ. ಕ್ರಿಯೆ ಕ್ರಿಯೆಯಾಗಿರಬೇಕಾದರೆ ಈ ಚೈತನ್ಯಕ್ಕೆ ಸಲ್ಲುವಂತಿರಬೇಕು. ಈ ಚೈತನ್ಯ ಸದ್ರೂಪು. ಈ ಸದ್ರೂಪು ಚೈತನ್ಯಕ್ಕೆ ಸಲ್ಲುವ ವ್ಯವಹಾರವೆಲ್ಲ ಸತ್ತಾಗಿರಬೇಕು. ಆದರೆ ಪ್ರಾಕೃತಿಕ ಆಕರ್ಷಣೆಗೆ ಒಳಗಾಗಿ ಅಸತ್ಕ್ರಿಯೆಗಳಲ್ಲಿ ಪ್ರವೃತ್ತಿಯುಂಟಾಗುವುದು ಸರ್ವಸಹಜವಾಗಿದೆ. ಮಾನವನ ಈ ದೈಹಿಕ ದುಷ್ಕ್ರಿಯೆಗಳನ್ನು ದೂರೀಕರಿಸಿ ಸತ್ಕ್ರಿಯೆಗಳನ್ನು ಸಂಸ್ಥಾಪಿಸಲು ಗುರು ಬೇಕಾಯಿತು. ಗುರುವಿನ ವಿಜ್ಞಾನಯೋಗ ಬೇಕಾಯಿತು. ಹಿಂದೆ ಹೇಳಿದ ತ್ರಿವಿಧ ರೂಪಾದ ಗುರುವೇ ಚಿತ್ತಿನ ಸತ್ತಾಗಿ, ಚಿತ್ಸದ್ಗುರುವೇ ಕ್ರಿಯಾಲಿಂಗವಾಗಿ ಭಕ್ತಾಂಗದಲ್ಲಿ ನೆಲಸುತ್ತಾನೆ. ಇಂತಾದ ಬಳಿಕ ಅಂದರೆ ಕ್ರಿಯಾಸಂಸ್ಕಾರವಾದ ಬಳಿಕ ಅಕ್ರಿಯೆಗೆ ದುಷ್ಕ್ರಿಯೆಗೆ ಇಂಬಿಲ್ಲ. ಸತ್ಕ್ರಿಯೆಗಳೇ ಸದಾ ಆಚರಣೆಯಲ್ಲಿರುತ್ತವೆ. ಈ ಸತ್ಕ್ರಿಯೆಗಳನ್ನೇ ಕೇವಲ ಕ್ರಿಯೆಯೆಂದು ಕರೆಯುತ್ತೇವೆ. ದುಷ್ಕ್ರಿಯೆಗಳನ್ನು ಕರ್ಮವೆಂದು ಹೇಳುತ್ತೇವೆ. ಕ್ರಿಯೆ ಕಾಯಾವಚ್ಛಿನ್ನ ಚೈತನ್ಯಕ್ಕೆ ಒಗ್ಗುತ್ತದೆ. ಕರ್ಮ ಒಗ್ಗದು. ಕಾರಣ ಸತ್ಕ್ರಿಯೆಗಳೇ ಸಾಗಿ ಬರಲು ಅಭ್ಯಾಸವಾಗಲು ಕರಸ್ಥಲದಲ್ಲಿ ಕ್ರಿಯಾಲಿಂಗವನ್ನು ಕಳಾಗುರು ಕರುಣಿಸುತ್ತಾನೆ. ಅದು ಸಚ್ಚಿದಾನಂದ ರೂಪವಾಗಿರುತ್ತದೆ. ಮುಖ್ಯವಾಗಿ ಸದ್ರೂಪವುಳ್ಳದ್ದಾಗಿರುತ್ತದೆ. ಅದರನಿಮಿತ್ತವಾಗಿಯಾದರೂ ಸಾಧಕನು ಅರ್ಚನಾದಿ ಅಚ್ಚುಮೆಚ್ಚಿನ ಕೆಲಸಗಳನ್ನೇ ಮಾಡುತ್ತಾನೆ.

ಗುರುರೂಪದಲ್ಲಿ ಕ್ರಿಯಾ ಉದಯುವಾದರೆ ಲಿಂಗರೂಪದಲ್ಲಿ ಕ್ರಿಯಾ ಸ್ಥಿತಿಗೊಳ್ಳುತ್ತದೆ. ಇಲ್ಲಿ ಮಂತ್ರದಲ್ಲಿ ಉಪಯೋಗಿಸಿದ 'ವಿಲೀಯತೇ' ಎಂಬ ಕ್ರಿಯಾಪದಕ್ಕೆ ಲಯಾರ್ಥವಲ್ಲ, ಇರು, ಸಲ್ಲು ಎಂದರ್ಥ. 'ಯತ್ರ' ಎಂಬ ಸಪ್ತಮ್ಯಧಿಕರಣದಲ್ಲಿ ಇರುವಿಕೆಯನ್ನು ತೋರಿದ್ದಾನೆ. ಅಧಿಕರಣ ತ್ರಿವಿಧ. ಕಾಲಾಧಿಕರಣ, ಸ್ಥಲಾಧಿಕರಣ, ಭಾವಾಧಿಕರಣ–ಎಂದು. ಇಲ್ಲಿ ಕ್ರಿಯಾ ವಿಶ್ರಾಂತಿಗೆ ಕಾಲವಲ್ಲ ; ಸ್ಥಲವಾಚ್ಯವಾದ ಲಿಂಗ. ಕ್ರಿಯೆ ಯಾವ ಚೈತನ್ಯದಲ್ಲಿ ಆಶ್ರಯುವನ್ನು ಪಡೆಯುುತ್ತದೆಯೋ, ಅದು ಕ್ರಿಯಾಲಿಂಗವೆಂದು ಶಿವಾಗಮ ಬಲ್ಲಿದ ಶಿವಾಚಾರ್ಯರು ಹೇಳಿದ್ದಾರೆ. ಕ್ರಿಯೆ ಆಧಾರವಾದ ಕಾಯಾವಚ್ಛಿನ್ನ ಚೈತನ್ಯದಲ್ಲಿ ಆಶ್ರಯು ಪಡೆಯಬೇಕಾದರೆ ವಿಜ್ಞಾನ ಯೋಗದ ನೆರವು ಬೇಕು. ವಿಜ್ಞಾನಯೋಗವುಂಟಾಗಬೇಕಾದರೆ ಗುರು ಬೇಕು. ಗುರೂಪದೇಶ ಬೇಕು.

'ಯತ್ರ ವಿಲೀಯತೆ' ಎಂದು ಹೇಳಿ 'ಲಿಂಗ' ಶಬ್ದದ ಅರ್ಧ ಅರ್ಥವನ್ನು ಸೂಚಿಸಲಾಗಿದೆ. ಕ್ರಿಯಾ ಕರ್ತೃವಾಗಿರುವುದರಿಂದ 'ಕ್ರಿಯಾಲಿಂಗ'ವೆಂದು ಪ್ರಥಮ ಪಂಕ್ತಿಯ ದ್ವಿತೀಯ ಪಾದದಿಂದಲೇ ವ್ಯಕ್ತವಾಗಿದೆ. 'ಕ್ರಿಯಾಲಿಂಗ' ಈ ಸಮಾಸ ಪದದ ವಿಶ್ಲೇಷಣ ನಡೆದಿದೆ. ಇನ್ನುಳಿದ ಗ–ಕಾರಾರ್ಥವು ಸೂಚಿತವಾಗಿಲ್ಲವಾದರೂ ಬಹ್ವಂಶವು ಸೂಚಿತವಾಗಿರುವುದರಿಂದ ಅದೂ ಸೂಚಿತವಾದಂತೇ ಭಾವಿಸಬೇಕು.

'ಕ್ರಿಯಾಲಿಂಗ' ಎಂಬುದು ವಿಶಾಲಾರ್ಥವುಳ್ಳುದು. ಮಾಡುವ ಎಲ್ಲ ಕ್ರಿಯೆಗಳಿಗೂಆಶ್ರಯುವಾದ ಲಿಂಗವೆಂದರ್ಥ. 'ಇಷ್ಟಲಿಂಗ'ವೆಂಬುದರಲ್ಲಿ ಇಷ್ಟೊಂದು ವಿಶಾಲಾರ್ಥವಿಲ್ಲ. ಕೇವಲ ಪೂಜಾಕ್ರಿಯೆಗೆ ಆಶ್ರಯುವಾದ ಲಿಂಗವೆಂದರ್ಥ. ಈ ಅರ್ಥವನ್ನು ಮುಂದುರಿಸಿಕೊಂಡೇ ಕರದಿಷ್ಟವೆಂದು ಕರೆದಿದಾರೆ. ಮಾಡುವುದೆಲ್ಲ ಕ್ರಿಯೆಯೆಂದೆನಿಸಬೇಕಾದರೆ ಕಣ್ಣಾರೆ ನೋಡಿ ಮಾಡಬೇಕು. ನೋಡದೆ ಮಾಡುವುದು ಕ್ರಿಯೆಯಲ್ಲ. ಅದು ಅಕರ್ಮವಾಗಿ ಅಪಾಯಕ್ಕೆ ಕಾರಣವಾಗುತ್ತದೆ; ಅಯುಕ್ತವಾಗುತ್ತದೆ. ಕರ್ಮೇಂದ್ರಿಯಗಳ ಕ್ರಿಯೆಗಳನ್ನೆಲ್ಲ ನೋಡಿ ಮಾಡು ಎಂದು ಹೇಳುವ ರೂಢಿಯೂ ಬಂದಿದೆ. ಸಲ್ಲದ್ದನ್ನು ಮಾತಾಡಿದಾಗ 'ನೋಡಿ ಮಾತಾಡು' ಎಂದು ಎಚ್ಚರಿಸುತ್ತಾರೆ.

ಸಲ್ಲದ್ದನ್ನು ಮಾಡುವಾಗ ‘ನೋಡಿ ಮಾಡು,’ ಸಲ್ಲದಂತೆ ಸಲ್ಲದ ಸ್ಥಳಕ್ಕೆ ನಡೆಯುವಾಗ ‘ನೋಡಿ ನಡೆ’ ಎಂದು ಮುಂತಾಗಿ ಹೇಳುವ ರೂಢಿಯಿದ್ದೇ ಇದೆ. ಸ್ಥಳ ನೋಡಿ ಮಲಮೂತ್ರ ವಿಸರ್ಜನೆ ಮಾಡು ಎಂದು ಹೇಳುವುದು ಯಾರಿಗೆ ಗೊತ್ತಿಲ್ಲ? ಇದುವೇ ವಿಜ್ಞಾನಯೋಗ. ಈ ಎಚ್ಚರಿಕೆಯಿಂದ ಮಾಡಿದುದೆಲ್ಲ ಕ್ರಿಯೆ. ಈ ಕ್ರಿಯೆಗೆ ಆಧಾರವಾದ ಚೈತನ್ಯವೇ ಕ್ರಿಯಾಲಿಂಗ. ಅಂತೆಯೇ ಇದನ್ನು ‘ಶಿವನ ತದ್ರೂಪವಾದಿಷ್ಟವನು’ ಎಂದು ನಿಜಗುಣರು ನಿರೂಪಿಸಿದರು. ಶಿವಸ್ವರೂಪವೇ ಇಷ್ಟಲಿಂಗವೆಂದರು. ಶಿವಕ್ರಿಯೆಯ ಚೈತನ್ಯಕ್ಕೆ ಇಷ್ಟವೆಂದರ್ಥ. ಸದ್ರೂಪಚೈತನ್ಯಕ್ಕೆ ಸದ್ರೂಪ ಕ್ರಿಯೆಯೇ ಸಲ್ಲುವುದಲ್ಲದೆ ಅಸದ್ರೂಪ ಕರ್ಮ ಸಲ್ಲದು. ನಿಂದ್ಯಕರ್ಮಗಳನ್ನು ನಿಷೇಧಿಸಿ ವಂದ್ಯಕರ್ಮಗಳನ್ನು ವಿಧಿಸುವುದೇ ಗುರುವಿನ ಕ್ರಿಯಾದೀಕ್ಷೆ. ಆ ಕ್ರಿಯಾಚರಣೆಯನ್ನು ನಡೆಯಿಸಿಕೊಂಡು ಬರಲು ಅಸಾಧಾರಣ ಕಾರಣವಾದುದೇ ಕ್ರಿಯಾಲಿಂಗ. ಪಂಚಕರ್ಮೇಂದ್ರಿಯಾವಚ್ಛಿನ್ನ ಚೈತನ್ಯವೇ ಕ್ರಿಯಾಲಿಂಗ. ಅದು ಕ್ರಿಯಾಲಿಂಗವಾಗಿಯೇ ಉಳಿಯಲು ಬೆಳೆಯಲು ವಿಜ್ಞಾನಯೋಗ ಬೇಕು. ಅಂದರೆ ಜ್ಞಾನಲಿಂಗ ಸಹಕಾರವಿರಬೇಕು.

‘ಅಸಾಧಾರಣ ಕಾರಣಂ ಕರಣಂ’ ಎಂಬುದು ಕರಣ ಲಕ್ಷಣ. ಸಾಧಾರಣ ಕರ್ಮಗಳಲ್ಲಿ ನಿರತವಾದ ಕರ್ಮೇದ್ರಿಯಗಳಿಗೆ ಅಸಾಧಾರಣ ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸಲು ಕಾರಣವಾದ ಚೈತನ್ಯವೇ ಕರಣಲಿಂಗ ಅಥವಾ ಕ್ರಿಯಾಲಿಂಗ.

ಕರಣವೆಂದರೆ ಕೇವಲ ಇಂದ್ರಿಯವೆಂದೇ ಅರ್ಥವಲ್ಲ. ಇಂದ್ರಿಯ ಚೈತನ್ಯಕ್ಕೂ ಕರಣವೆಂದರ್ಥವುಂಟು. ಕರಣವೆಂದರೆ ಸಾಧನವೆಂದರ್ಥವಿರುವಂತೆ ಸಾಧಕವೆಂದರ್ಥವೂ ಇದೆ. ಕರಣವೆಂದರೆ ಕಾಯಸ್ಥ, ಕಾರಕ ಎಂದೂ ಹೇಳುವುದುಂಟು. ನಿದರ್ಶನಕ್ಕಾಗಿ ಲೆಕ್ಕಪತ್ರಗಳನ್ನು ಬರೆಯುವವನಿಗೆ ‘ಕರಣಂ’ ಎಂದು ಹೇಳುವುದನ್ನು ಯಾರು ಕೇಳಿಲ್ಲ? ಏನೇ ಇರಲಿ; ಪಂಚಕರ್ಮೇಂದ್ರಿಯಗಳ ಕಾರ್ಯಕ್ಕೆ ಅಸಾಧಾರಣ ಕಾರಣವಾದುದೇ ‘ಕ್ರಿಯಾಲಿಂಗ’ವೆಂದು ಸ್ಪಷ್ಟವಾಗುತ್ತದೆ. ಕಾರಣ ಕಾರ್ಯ ಕರಣ ಎಲ್ಲವೂ

ಆತನೇ ತಾನೆ. ಅಸದ್ರೂಪಗಳಾಗಿ ಕಾರ್ಯಕರಣಗಳೆನಿಸಿವೆ. ಸದ್ರೂಪವಾಗಿ ಕಾರಣವೆನಿಸಿದೆ. ಕಾರ್ಯ – ಕರಣಗಳ ಅಸದ್ರೂಪವನ್ನು ಕಳೆಯಲು ಆ ಪರಶಿವನು ಸದ್ರೂಪ ಕ್ರಿಯಾಲಿಂಗವಾಗಿದ್ದಾನೆ. ಮಂತ್ರದಲ್ಲಿರುವ 'ವಿಜ್ಞಾನಯೋಗ' ಪದ 'ವಿಜ್ಞಾನಯುಗ' ದಲ್ಲಿರುವ ನಾವಿಂದು ವಿಚಾರಿಸತಕ್ಕ ವಿಷಯ. ವಿಜ್ಞಾನ–ಆಧ್ಯಾತ್ಮಗಳ ಸಂಯೋಗವಾಗಬೇಕೆಂದು ವಾದಿಸುವ ಪ್ರತಿವಾದಿಸುವ ಸರಣಿಗೆ 'ವಿಜ್ಞಾನಯೋಗ' ಪದಪ್ರಯೋಗ ಸಹಕಾರಿಯಾಗಿದೆ; ಮತ್ತು ಕವಿಯು ಶ್ರೀ ರೇಣುಕಾಚಾರ್ಯವರ್ಯ ಅನುಭಾವಿಯು ದಿವ್ಯದರ್ಶನ ದೃಷ್ಟಿಗೆ ಭವಿಷ್ಯಶಕ್ತಿಗೆ ನಿದರ್ಶನವಾಗಿದೆ. 'ವಿಜ್ಞಾನಯೋಗ' ಎಷ್ಟು ಸುಂದರವಾದ ಇಂದಿನ ಭೌತವಿಜ್ಞಾನದಲ್ಲಿ ಆಧ್ಯಾತ್ಮವನ್ನು ಯೋಜಿಸಬೇಕೆನ್ನುವವರಿಗೆ ಸಮರ್ಥಕವಾದ ಪ್ರಯೋಗವಿದು! ಈ ಪದದ ಮೇಲೆಯೇ ಒಂದು ಬೃಹದ್ಗ್ರಂಥವನ್ನು ಬರೆಯಬಹುದೆನಿಸುತ್ತದೆ. ಪ್ರಸ್ತುತವಲ್ಲೆಂದು ಕೈಬಿಡಲಾಗಿದೆ. ಆಧುನಿಕ ವಿಜ್ಞಾನವು ಅಣುವಿನ ವಿಚ್ಛೇದನದಿಂದ ಉತ್ಪನ್ನವಾಗುವ ಮಹಾಶಕ್ತಿಯನ್ನು ಕಂಡುಹಿಡಿದಿದೆ. ವಿಜ್ಞಾನಯೋಗವು ದೇಹದೊಳಗಿನ ಇಚ್ಛಾಶಕ್ತಿಯ ಅಣುವಿಚ್ಛೇದನವನ್ನು ಆತ್ಮರೂಪ ಚೈತನ್ಯದ ಅಣುವಿಚ್ಛೇದನವನ್ನೂ ಅಂದೇ ಕಂಡುಕೊಂಡಿದೆ. ಆತ್ಮಶಕ್ತಿಯ ವಿಚ್ಛೇದನದ ಪ್ರತೀಕವೇ ಕ್ರಿಯಾಲಿಂಗ; ಭಾವಜ್ಞಾನಲಿಂಗಗಳೂ ಅಷ್ಟೇ! ಇದು ವಿಜ್ಞಾನಯೋಗ; ಇಂದಿನದು ವಿಜ್ಞಾನಯುಗ.

ಕ್ರಿಯಾಲಿಂಗದ ಸಿದ್ಧಿಗೆ ಎರಡು ಮುಖ ಅಥವಾ ಯೋಗಗಳುಂಟು. ವಿಚಾರ, ಆಚಾರ ಎಂಬುದಾಗಿ! ಇವೆರಡೊಂದಾದ ಪಂಥವೇ ಶಿವತಂತ್ರ. ಇವೆರಡರಿಂದ ಕ್ರಿಯಾಲಿಂಗಸಿದ್ಧಿಗೆ ಸ್ಫೂರ್ತಿ. ಇದನ್ನೇ ವಿಜ್ಞಾನಯೋಗವೆಂದು ಶಿವಯೋಗಿ ಶಿವಾಚಾರ್ಯನ ನಿರೂಪಣೆ. ಮುಂದಿನ ಮಂತ್ರದಲ್ಲಿ 'ವಿಜ್ಞಾನಯೋಗ'ವನ್ನು ಕ್ರಮಬದ್ಧವಾಗಿ ನಿರೂಪಿಸಿದ್ದಾನೆ:

"ಪರಾನಂದಂ ಚಿದಾಕಾರಂ ಪರಬ್ರಹ್ಮೈವ ಕೇವಲಂ
ಲಿಂಗಂ ಸದ್ರೂಪತಾಪನ್ನಂ ಲಕ್ಷ್ಯತೇ ವಿಶ್ವಸಿದ್ಧಯೇ |"

ಸತ್ತಿನ ಸತ್ತು ದೀಕ್ಷಾಗುರುವಾದರೆ, ಚಿತ್ತಿನ ಸತ್ತೇ ಕ್ರಿಯಾಲಿಂಗವಾಗಿದಯೆಂದು ಹಿಂದೆ ನಾವು ಹೇಳಿದ್ದೇವೆ. ಈ ಮಾತನ್ನು ಪುಷ್ಟೀಕರಿಸಿದೆ ಈ ಪ್ರಭಾಪೂರ್ಣವಾಣಿ; ಪರಾನಂದವಾಣಿ !

ಸತ್ ಇಬ್ಬಗೆಯಾಗಿದೆ. ಒಂದು ಪರಾಸತ್; ಇನ್ನೊಂದು ಅಪರಾಸತ್. ಇವನ್ನೇ ಪಾರಮಾರ್ಥಿಕಸತ್, ಪ್ರಾಪಂಚಿಕಸತ್ ಎಂದು ಹೇಳುವುದುಂಟು. ಇವುಗಳಲ್ಲಿ ಮೊದಲಿನದು ಎರಡನೆಯದಕ್ಕೆ ಆಧಾರವಾಗಿದೆ. ಇದನ್ನು ಪ್ರತಿಪಾದಿಸಿದೆ ಈ ಮಂತ್ರ.

ಕುರುಹಿಲ್ಲದ ಅಂದರೆ ನಿರವಯವಾದ ಆ ಪರಶಿವಬ್ರಹ್ಮವು ತನ್ನ ಲೀಲಾವಿಲಾಸಕ್ಕಾಗಿ ಮುಮ್ಮೊದಲು ಪರಾನಂದವಾಯಿತು, ಬಳಿಕ ಚಿದಾಕಾರವಾಯಿತು; ಆಮೇಲೆ ಸದ್ರೂಪ ಕ್ರಿಯಾಲಿಂಗವಾಯಿತು. 'ಯತೋವಾ ಇಮಾನಿ ಭೂತಾನಿ ಜಾಯಂತೇ........' ಎಂಬಂತೆ ವಿಶ್ವಸಿದ್ಧಿಗೆ ಕಾರಣವಾಯಿತು. 'ಯತೋವಾ........' ಎಂಬ ವಿವರಣೆಯಿಂದ ವಿಜ್ಞಾನಯೋಗದಿಂದ ಯಾವ ಬ್ರಹ್ಮಸ್ವರೂಪ ಜ್ಞಾನವಾಗುತ್ತದೆಯೋ ಅದರಿಂದಲೇ ಅದೇ ಲಕ್ಷಣದಿಂದಲೇ ಲಿಂಗಸ್ವರೂಪ ಸಿದ್ಧಿಯೂ ಆಗುತ್ತದೆ; ಆಗಿದೆ. ಇದರಿಂದಾಗಿ ಬ್ರಹ್ಮಕ್ಕೂ ಲಿಂಗಕ್ಕೂ ಯತ್ಕಿಂಚಿತ್ ಭೇದವಿಲ್ಲ. ಕೇವಲ ಪರಬ್ರಹ್ಮವೇ ಕ್ರಿಯಾಲಿಂಗವಾದ ಹೊಲಬು ಈ ಮಂತ್ರದಲ್ಲಿ ದೃಷ್ಟವಾಗಿದೆ. ಆ ಕೇವಲ ಪರಬ್ರಹ್ಮಕ್ಕೆ ವಿಲಾಸವುಂಟಾಯಿತು. ಆ ವಿಲಾಸಕ್ಕೆ ಲೀಲೆಯಾಗಿ ಚಿದಾಕಾರವುಂಟಾಯಿತು. ಚಿದಾಕಾರವು (ವಿಜ್ಞಾನಯೋಗವು) ವ್ಯಕ್ತಾವ್ಯಕ್ತ ರೂಪಾದ್ದರಿಂದ ಆ ಚಿದಾಕಾರದಿಂದ ಸಾಕಾರರೂಪ ಕ್ರಿಯಾಲಿಂಗವಾಯಿತು. ಇದುವೇ ವಿಶ್ವಸಿದ್ಧಿಗೆ ಲಕ್ಷ್ಯ.

ವಿಶ್ವಸಿದ್ಧಿಗೂ ಕ್ರಿಯಾಚರಣೆಗೂ ಸಂಬಂಧ. ಕ್ರಿಯಾಶಕ್ತಿಗೂ ಚಿದಾಕಾರರೂಪ ವಿಜ್ಞಾನಯೋಗಕ್ಕೂ ಸಂಬಂಧ. ಚಿದಾಕಾರಕ್ಕೂ ಪರಾನಂದಕ್ಕೂ ಸಂಬಂಧ. ಪರಾನಂದಕ್ಕೂ ಪರಬ್ರಹ್ಮಕ್ಕೂ ಸಂಬಂಧ. ಇದು ಸತ್ಯಶೋಧನ ಮಾರ್ಗ; ಸತ್ಯಶುದ್ಧ ಜೀವನಸ್ವರ್ಗ. ಇದು ಪ್ರಾಪಂಚಿಕ ಪಾರಮಾರ್ಥಗಳೆರಡರ ನಂಟು; ಸದ್ರೂಪ ಏಕೈಕ ಸ್ವರೂಪ.

ವಿಶ್ವಸಿದ್ಧಿಗೆ ಪರಬ್ರಹ್ಮವಿದೆ. ಪರಬ್ರಹ್ಮ ಪ್ರಾಪ್ತಿಗೆ ವಿಶ್ವ ಸಿದ್ಧವಾಗಿದೆ. ಇವೆರಡರ ಅನ್ಯೋನ್ಯತೆಯನ್ನು ಅರಿಯಬೇಕು; ಅರಿದಂತೆ ಆಚರಿಸಬೇಕು. ಆಚಾರಸಿದ್ಧಿಗಾಗಿ ಅರಿವಿನ ವೃದ್ಧಿಗಾಗಿ ಕ್ರಿಯಾಲಿಂಗವಾಗಿ ಸದ್ರೂಪವಾಗಿ ಕರಕಂಜದಲ್ಲಿ ಕಾಣಿಸಿದೆ. 'ಜಗದಗಲ ಮುಗಿಲಗಲ ಮಿಗೆಯಗಲ ಪಾತಾಳದಿಂದಿತ್ತಿತ್ತ ನಿಮ್ಮ ಶ್ರೀಚರಣ. ಗಗನದಿಂದತ್ತತ್ತ ನಿಮ್ಮ ಮಣಿಮಕುಟ. ಅಗಮ್ಯ ಅಗೋಚರ ಅಪ್ರಮಾಣ ಕೂಡಲ ಸಂಗಮದೇವ ಕೇಳಯ್ಯ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ'

ಕೇವಲವೇ ತುರ್ಯಾತೀತ. ಪರಬ್ರಹ್ಮವೇ ತುರ್ಯ. ಪರಾನಂದವೇ ಸುಷುಪ್ತಿ. ಚಿದಾಕಾರವೇ ಸ್ವಪ್ನ. ಸದ್ರೂಪಲಿಂಗವೇ ಜಾಗ್ರತ್.

ಕೇವಲವು ಶಿಖಾಚಕ್ರಸ್ಥ. ಪರಬ್ರಹ್ಮವು ಸಹಸ್ರಾರಗತ. ಪರಾನಂದವು ಕೂಟಸ್ಥ ಅಥವಾ ಆಜ್ಞಾಚಕ್ರಸ್ಥ; ಮತ್ತು ವಿಶುದ್ಧವಾಸ್ತವ್ಯ. ಚಿದಾಕಾರವು ಅನಾಹತ-ಮಣಿಪೂರಕದ್ವಯವಾಸ. ಸದ್ರೂಪಲಿಂಗವು ಸ್ವಾಧಿಷ್ಠಾನ ಆಧಾರ ಚಕ್ರೋಭಯ ಗೋಚರ.

ಸದ್ರೂಪಲಿಂಗವು ಕ್ರಿಯಾಜ್ಞಾನಾನುಭವಗಮ್ಯ. ಚಿದಾಕಾರವು (ಪ್ರಾಣಲಿಂಗವು) ಜ್ಞಾನಾನುಭವ ಗೋಚರ. ಪರಾನಂದವು (ಭಾವಲಿಂಗವು) ಅನುಭಾವಮಾತ್ರ ಮಾನಿತ. ಪರಬ್ರಹ್ಮವು ಅನುಭವಾತೀತ. ಕೇವಲವು ಅತೀತೋತ್ತರ.

ಪರಾನಂದವಸ್ತು ಆಕಾಶಮಂಡಲಕ್ಕೆ ಅತೀತವಾಗಿ ಶಬ್ದಾತೀತವೆನಿಸುತ್ತದೆ. ಪರಬ್ರಹ್ಮವು ಪರಾಕಾಶವಾಗಿ ಅಪರಮನಕ್ಕೆ ಅತೀತವಾಗಿರುತ್ತದೆ. ಪರಾಕಾಶವೆನ್ನಲೂಬಾರದ ತಾನೇತಾನಾದ ಕೇವಲವು ಪ್ರಮಾಣಾತೀತವೆನಿಸುತ್ತದೆ.

ಸರ್ವಸ್ವತಂತ್ರ ಅಲುಪ್ತ ಶಕ್ತಿಸಂಪನ್ನ ಆ ಕೇವಲವಸ್ತು ಲೀಲಾವಸ್ಥೆಗೆ ಬಂದು ಅನಂತ ಶಕ್ತಿಸಂಪನ್ನ ಪರಬ್ರಹ್ಮವೆನಿಸಿತು. ಆ ಪರಬ್ರಹ್ಮವೇ ಶಿವಾದಿ ಭೂಮ್ಯಂತ ಮೂವತ್ತಾರು ತತ್ತ್ವವಾಯಿತು; ಲೀಲೋನ್ಮುಖವಾಯಿತು. ಲಿಂಗಾಂಗ ತತ್ತ್ವಗಳೆನಿಸಿತು.

ಕರಕಂಜದಲ್ಲಿ ಗುರುಕರುಣೆಯಿಂದ ಕಾಣಿಸಿದ ಕ್ರಿಯಾಲಿಂಗವು ಸೂಕ್ಷ್ಮ ಚಿದಚಿತ್ ಶಕ್ತಿಯುಳ್ಳ ವಸ್ತು. ಸೂಕ್ಷ್ಮ ಚಿಚ್ಛಕ್ತಿಯಿಂದ ಸರ್ವ ಜ್ಞತ್ವವನ್ನು ಸೂಕ್ಷ್ಮ ಅಚಿಚ್ಛಕ್ತಿಯಿಂದ ಸರ್ವಕರ್ತೃತ್ವವನ್ನು ಕ್ರಿಯಾ ಲಿಂಗವು ಪಡೆದಿರುತ್ತದೆ. ಮುಖ್ಯವಾಗಿ ಸರ್ವಕರ್ತೃತ್ವ ಶಕ್ತಿಯುಕ್ತವಾದು ದಾಗಿದೆ. ಅಂತೆಯೇ ಆ ಪರಾಶಕ್ತಿಯ ಪ್ರಸರಣವೇ ವಿಶ್ವೋತ್ಪತ್ತಿ ಮೂಲ.

ಸರ್ವಕರ್ತೃತ್ವ ಶಕ್ತಿಯೆಂದರೆ ಸೃಷ್ಟಿ ಸ್ಥಿತಿ ಲಯ ತಿರೋಧಾನ ಅನು ಗ್ರಹ ಎಂಬ ಪಂಚಕೃತ್ಯ ಕರ್ತೃತ್ವವೆಂದರ್ಥ. ಕ್ರಿಯಾಲಿಂಗದಲ್ಲಿ ಈ ಪಂಚಕೃತ್ಯ ಕರ್ತೃತ್ವವಿದೆ.

"ಲಿಂಗಮೇವ ಪರಂಜ್ಯೋತಿರ್ಭವತಿ ಬ್ರಹ್ಮ ಕೇವಲಂ
ತಸ್ಮಾತ್ತತ್ಪೂಜನಾದೇವ ಸರ್ವ ಕರ್ಮಫಲೋದಯಃ ।"

ಕ್ರಿಯಾಲಿಂಗವು ಯಾವ ಬಗೆಯಲ್ಲಿಯೂ ಕಮ್ಮಿಯೇನಿಲ್ಲ. ಸದ್ರೂಪ ವಾದರೂ ಚುಳುಕಾಗಿದ್ದರೂ ನಿತ್ಯವಾಗಿದೆ, ಪರಿಪೂರ್ಣವಾಗಿದೆ. ತ್ಯಾಗಾಂಗ ನಿಷ್ಠವಾಗಿದ್ದರೂ ಪರಂಜ್ಯೋತಿಯಾಗಿದೆ, ಪರಬ್ರಹ್ಮವಾಗಿದೆ; ಕೇವಲಾ ಗಿದೆ. ಬೀಜದಲ್ಲಿ ಅಂಕುರ, ಅಂಕುರದಲ್ಲಿ ಬೀಜ ಹೇಗಿವೆಯೋ ಹಾಗೆ ಕ್ರಿಯಾಲಿಂಗದಲ್ಲಿ ಕೇವಲ ಪರಬ್ರಹ್ಮ ಪರಂಜ್ಯೋತಿಗಳಿವೆ. ಕೇವಲ ಪರ ಬ್ರಹ್ಮದಲ್ಲಿ ಕ್ರಿಯಾಲಿಂಗವಿದೆ. ಸನ್ನಿಹಿತವಾಗಿವೆ, ಸಮನ್ವಯವಾಗಿವೆ; ಹುರಿಗೊಂಡಿವೆ; ಹುರುಳೊಳಗೊಂಡಿವೆ. ಇದರಿಂದಾಗಿ ತ್ಯಾಗಾಂಗನು ಕ್ರಿಯಾಲಿಂಗಾರ್ಚನೆಯನ್ನು ಮಾಡಬೇಕು. ಮಾಡಿದರೆ ಸಮಸ್ತ ಸತ್ಕರ್ಮ ಗಳನ್ನು ಮಾಡಿದ ಫಲ ಪ್ರಾಪ್ತಿಯಾಗುತ್ತದೆ. ಸರ್ವ ಸತ್ಕ್ರಿಯೆಗಳನ್ನು ಮಾಡುವುದೇ ತ್ಯಾಗಾಂಗನ ಸರ್ವಕರ್ತೃತ್ವ ಸಿದ್ಧಿ. ಈ ರೀತಿ ಮಾಡಲು ಸಾಧ್ಯವಾಗದಿದ್ದರೆ ಇಷ್ಟಲಿಂಗಪೂಜೆಯೊಂದನ್ನು ಮಾಡಿದಲ್ಲಿ ಶಿಷ್ಟಕಾರ್ಯ ಗಳನ್ನೆಲ್ಲ ಮಾಡಿದಂತಾಗುತ್ತದೆ. ಸರ್ವಕರ್ತೃತ್ವ ಸಿದ್ಧಿಸುತ್ತದೆ. 'ಆನು ಕಾಮಿಸುತಿಪ್ಪ ಸಾಲೋಕ್ಯವಿದೆ, ಸಾಮೀಪ್ಯವಿದೆ, ಸಾರೂಪ್ಯವಿದೆ, ಸಾಯು ಜ್ಯವಿದೆ, ಧರ್ಮವಿದೆ, ಅರ್ಥವಿದೆ, ಕಾಮವಿದೆ, ಮೋಕ್ಷವಿದೆ; ಎನ್ನಧ್ಯಾನ ಜಪದಿಂದ ಸಿದ್ಧಿಯಪ್ಪ ಮಹಾಸಿದ್ಧಿಯಿದೆ. ಆನೇನ ನಿಚ್ಚಯಿಸುವ ಇಚ್ಛೆ

ಯೆಲ್ಲಾ ಇದೇ ಇದೇ ನೋಡಾ ! ಶ್ರೀ ಗುರುಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆ ಬಂದ ಬಳಿಕ ಸರ್ವಸುಖ ಇದೇ ಇದೇ ನೋಡಾ! ಇನ್ನು ಬಯಲ ಭ್ರಮೆಯೊಳಗೆ ಹೋಗಿಸದೆ ಇರಯ್ಯ ನಿಮ್ಮ ಬೇಡಿಕೊಂಬೆನು ನಿಸಗೆ ಎನ್ನಾಣೆ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ !' ಎಂದು ಉರಿಲಿಂಗಪೆದ್ದಿ ಗುರುದೇವನು ಹಾಡಿ ಕ್ರಿಯಾಲಿಂಗದಲ್ಲಿ ಸರ್ವಫಲೋದಯ ಶಕ್ತಿಯಿದೆ ಯೆಂದು ಇದನ್ನೇ ಆರಾಧಿಸಬೇಕೆಂದು ಬೋಧಿಸಿದ್ದಾನೆ. ಏಕೆಂದರೆ, 'ಸಾಕಾರ ವಿಡಿದು ಅರ್ಚನೆ ಪೂಜೆಯ ಮಾಡುವುದಲ್ಲದೆ ನಿರಾಕಾರವ ನಂಬಲಾ ಗದು. ಶ್ರೀಗುರು ಪ್ರಾಣಲಿಂಗವನು ಕರಸ್ಥಲಕ್ಕೆ ವಿಜಯಂಗೈಸಿ ಕೊಟ್ಟ ಬಳಿಕ ವಜ್ರದಲ್ಲಿ ಬಯಲನರಸಲುಂಟೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ ?'

ಸರ್ವ ಸತ್ಕ್ರಿಯೆಗಳನ್ನು ಒಳಕೊಳ್ಳಬಲ್ಲುದು ಅರ್ಚನೆ ಪೂಜೆ. ಅಂತಹ ಆ ಅರ್ಚನೆಯನ್ನು ಒಳಕೊಳ್ಳಬಲ್ಲುದು ಸದ್ರೂಪಲಿಂಗ. ತನುವಿ ಡಿದು ಬಂದವನು ತಿರೆಯ ಆಧಾರದಲ್ಲಿಯೇ ನಡೆಯಬೇಕು ; ಅಂಗನು ಲಿಂಗವಿಡಿದೇ ಆರಾಧಿಸಬೇಕು. ಲಿಂಗ ಸಾಕಾರವಾದರೂ ಸರ್ವವನ್ನೊಳ ಗೊಂಡಿದೆ; ಭೂಜವನ್ನೊಳಗೊಂಡ ಬೀಜದಂತಿದೆ.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ, ಎಂದೆ ದಿಸುವ ಲಿಂಗವು, ಶೃತಿ-ಚಕಿತಮಭಿಧತ್ತೆ ಎಂದೆನಿಸುವ ಲಿಂಗವು, ಅಣೋ ರಣೀಯಾನ್ಮಹತೋ ಮಹೀಯಾನ್ ಎಂದೆನಿಸುವ ಲಿಂಗವು, ಅಯಂ ಮೇ ಹಸ್ತೋ ಭಗವಾನ್ - ಅಯಂ ಮೇ ಭಗವತ್ತರಂ ಎಂದೆನಿಸುವ ಲಿಂಗವು, ಏಕಮೂರ್ತಿಸ್ತ್ರಿವಿಧಾಭೇದಂ ಎಂದೆನಿಸುವ ಲಿಂಗವು, ಶ್ರೀ ಗುರುಲಿಂಗ ಜಂಗಮರೂಪಾಗಿ 'ಇಷ್ಟಪ್ರಾಣಸ್ತಥಾಭಾವಂ ತ್ರಿವಿಧಾವೈಕ್ಯ ವರಾನನೇ' ಎಂಬುದಾಗಿ ತ್ರಿವಿಧವು ಏಕೀಭವಿಸಿ ಲಿಂಗರೂಪಾಗಿ ಎನ್ನ ಕರಸ್ಥಲಕ್ಕೆ ಬಂದು ಕರಾತಳವುಳಕವಾಗಿ ತೋರುತ್ತಿರ್ದಾನೆ ! ಆಹಾ ಎನ್ನ ಪುಣ್ಯವೆ ! ಆಹಾ ಎನ್ನ ಭಾಗ್ಯವೆ ! ಅಹಾ ಎನ್ನ ಸತ್ಯವೆ ! ಆಹಾ ಎನ್ನ ನಿತ್ಯವೆ ! ಶಿವಶಿವಾ ಮಹಾದೇವ ಮಹಾದೇವ ನೀನೆ ಬಲ್ಲೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ !'

ಈ ವಚನವು ಮಂತ್ರದ ಪೂರ್ವಾರ್ಧವಾದ 'ಲಿಂಗಮೇವ ಪರಂ ಜ್ಯೋತಿರ್ಭವತಿ ಕೇವಲಂ' ಎಂಬುದಕ್ಕೆ ಭಾವಿಷ್ಯವನ್ನು ಬರೆದಂತಿದೆ, ದಿಟ;

ಆ ಕೇವಲವಸ್ತು ಕ್ರಿಯಾವಸ್ತುವಾಗಿ ಕೈಗೆ ಬಂದಿದೆ. ಈ ಕ್ರಿಯೆಯಲ್ಲಿ ಗುರುವಿನ ಮಣಿಹ ಮಹತ್ತರವಾದುದು. ಮಾತು ಮನಕ್ಕೆ ನಿಲುಕದ ವಸ್ತುವನ್ನು ಗುರುಕರಕ್ಕೆ ಕರುಣಿಸಿದಾನೆ. ಶ್ರುತಿತತಿ ಕಾಣದ ಅಣುವಿಗೆ ಅಣು - ಮಹತ್ತಿಗೆ ಮಹತ್ತಾದ ಆ ವಸ್ತುವನ್ನು ನಿಜಗುರು ಕರಕಮಲಕ್ಕೆ ವಿಜಯಂಗೈಸಿದಾನೆ. ಉಪಮಿಸಬಾರದ ಉನ್ಮನಿಗತೀತವಾದ ಉರಿಲಿಂಗವನ್ನು ಹಸ್ತಸ್ಥಲಕ್ಕೆ ತಂದು ನ್ಯಸ್ತಗೊಳಿಸಿದಾನೆ ಗುರುದೇವ. ತ್ರಿವಿಧ ಚರಾಚರ ಲಿಂಗಸ್ವರೂಪವನ್ನು ಸಾಕಾರವಾಗಿಸಿ ಏಕೀಕರಿಸಿ ಸಾಕ್ಷಾತ್ಕಾರವಾಗಿಸಿದಾನೆ ಗುರುದೇವ. ಹೀಗಿರುವಾಗ ಅದು ಇದು ಎಂದು ಹಲವಕ್ಕೆ ಹಂಬಲಿಸದೆ ಹಸ್ತಗತ ಲಿಂಗವನ್ನು ಹೃದಯಾರೆ ಆರಾಧಿಸಿದಲ್ಲಿ ಸರ್ವಕ್ರಿಯಾಸಿದ್ಧಿಯುಂಟಾಗುವಲ್ಲಿ ಅಚ್ಚರಿಯೇನಿಲ್ಲ. 'ನಾ ಮಾಡಿದ ಪೂಜಾಫಲ ಅಂತಿಂತಲ್ಲ. ಬಾಣ ಪೂಜಿಸಿದ ಫಲ ಬಾಗಿಲ ಕಾಯ್ದಲ್ಲಿ ಹೋಯಿತ್ತು. ಮಯೂರ ಪೂಜಿಸಿದ ಫಲ ವಿದ್ಯಾದಾನದಲ್ಲಿ ಹೋಯಿತ್ತು. ಹನುಮಂತ ಪೂಜಿಸಿದ ಫಲ ವಜ್ರದೇಹದಲ್ಲಿ ಹೋಯಿತ್ತು. ನಾ ಪೂಜಿಸಿದ ಫಲ ಕೊಟ್ಟು ಕೊಟ್ಟು ತೀರದೆ ನಿಂದಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಆ ನಿಷ್ಕಾಮ ಪೂಜೆಯ ಫಲೋದಯಕ್ಕೆ ಪರಿಮಿತಿಯಿಲ್ಲ, ಪರಿಸಮಾಪ್ತಿಯಿಲ್ಲ. ಅದು ಅಕ್ಷಯ, ಅದ್ವಯ.

"ಪರಿತ್ಯಜ್ಯ ಕ್ರಿಯಾಸ್ಸರ್ವಾ ಲಿಂಗಪೂಜೈಕತತ್ಪರಾಃ
ವರ್ತಂತೇ ಯೋಗಿನಃ ಸರ್ವೇ ತಸ್ಮಾಲ್ಲಿಂಗಂ ವಿಶಿಷ್ಯತೇ ।
ಯಜ್ಞಾದಯಃ ಕ್ರಿಯಾಃ ಸರ್ವಾ ಲಿಂಗಪೂಜಾಂಶ ಸಮ್ಮಿತಾಃ
ಇತಿ ಯತ್ಪೂಜ್ಯತೇ ಸಿದ್ಧೈಸ್ತತ್ಕ್ರಿಯಾಲಿಂಗಮುಚ್ಯತೇ ॥"

ಎಲ್ಲ ಯೋಗಿಗಳು ಉಳಿದೆಲ್ಲ ಕ್ರಿಯೆಗಳ ಗೋಜನ್ನು ಬಿಟ್ಟು ಲಿಂಗಪೂಜೆಯಲ್ಲಿಯೇ ಲೀನವಾದರು. ಲಿಂಗವನ್ನು ಪೂಜಿಸಿ ಲಿಂಗವಾದರು. ಅದರಿಂದಾಗಿ ಲಿಂಗದಲ್ಲಿ ಹೆಚ್ಚಳಿಕೆಯಿದೆ.

ಎಲ್ಲ ಯಜ್ಞಯಾಗಾದಿ ಕ್ರಿಯೆಗಳು ಲಿಂಗಪೂಜೆಯ ಒಂದಂಶಕ್ಕೆ ಸಮವೆಂದು ಭಾವಿಸಿ ಸಿದ್ಧರೆಲ್ಲರು ಲಿಂಗವನ್ನೇ ಪೂಜಿಸಿದರು. ಇದರಿಂದಾಗಿ ಇದು ಕ್ರಿಯಾಲಿಂಗವೆನಿಸಿತು.

ಕ್ರಿಯೆ ಪ್ರಾಣಾಧಾರ. ಕ್ರಿಯೆ ಪ್ರಾಣಧಾರಣ ಸ್ಥೂಲ ಚೈತನ್ಯ. ಅಂತೆಯೇ ಕ್ರಿಯೆಯೆಂಬುದೊಂದು ಲಿಂಗ. ಅರ್ಚನೀಯ ಲಿಂಗ. ಸತ್ಯ ಶುದ್ಧ ಕಾಯಕಗಳು ಕ್ರಿಯೆಗಳು ಜೀವನಕ್ಕೆ ಸಚ್ಚೇತನವನ್ನೀಯುತ್ತವೆ. ಆದರಿಂದ ಅವನ್ನು ಬಿಟ್ಟು ಬೇರೆ ಕರ್ಮಗಳನ್ನು ಮಾಡಬಾರದು. ವಿಧಾಯಕ ಕ್ರಿಯೆಗಳೆಲ್ಲ ಲಿಂಗಾರ್ಚನೆಯೆನಿಸುತ್ತವೆ. ವಿನಾಶಕ ಕ್ರಿಯೆಗಳೆಲ್ಲ ಲಿಂಗಬಾಹ್ಯ ಕ್ರಿಯೆಗಳೆನಿಸುತ್ತವೆ.

'ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ । ವಿನ್ಯಸ್ಯ ತಲ್ಲೀನಮನಃ ಪ್ರಚಾರಃ । ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ । ಸಂಪೂಜಯತ್ಯಂಗಸ ವೀರಶೈವಃ ॥' —ಸ್ಕಾಂದಪುರಾಣ.

ಮಾಡುವ ಕ್ರಿಯೆಗಳಿಂದ ಮೈಮನಗಳು ವಿಚಲಿತವಾಗಬಾರದು; ವಿಕಾರಕ್ಕೊಳಗಾಗಬಾರದು. ಇಂದ್ರಿಯಗಳು ಬಾಹ್ಯಮುಖವಾಗಿ ಹರಿಯಬಾರದು. ದೇಹೇಂದ್ರಿಯಾದಿಗಳು ಅಂತರ್ಮುಖವಾಗಬೇಕು. ಹೀಗಾಗಬೇಕಾದರೆ ಕ್ರಿಯಾಲಿಂಗಾರ್ಚನೆಯಲ್ಲಿ ಮಾತ್ರ ಸಾಧ್ಯ.

ಅಂಗಕ್ರಿಯೆಗಳಲ್ಲ ಲಿಂಗಕ್ರಿಯೆಗಳಾಗದೆ ಕ್ರಿಯಾಲಿಂಗಾರಾಧನೆಯಾಗದು. ಅಂಗಭಾವದಲ್ಲಿ ಅಂಗಲೋಭದಲ್ಲಿ ಮಾಡಿದುದು ಲಿಂಗಕ್ರಿಯೆಯೆನಿಸದು. ಇನ್ನುಳಿದ ಯಜ್ಞಯಾಗಾದಿಗಳ ಮಾತೇನು? ಇವುಗಳಲ್ಲಿ ದೇಹೈಕ ಕಾಮವಿರುತ್ತದೆ. ಹಿಂಸಾದಿಗಳಿಗೆ ಅವಕಾಶವಿರುತ್ತದೆ. ಅತಿವ್ಯಯ ಅಪವ್ಯಯಗಳಿಗೆ ಅನೀತಿಗಳಿಗೆ ಅವಕಾಶವಿರುತ್ತದೆ. ಹಿಂಸಾದಿಗಳಿಗೆ ಅವಕಾಶವಿಲ್ಲದ ಸಾತ್ವಿಕ ಯಜ್ಞಾದಿಗಳಾದರೂ ಲಿಂಗಪೂಜೆಗೆ ಎಂದಿಗೂ ಸರಿಬಾರವು. ಸಾಲದ್ದಕ್ಕೆ ಲಿಂಗಪೂಜಕನು ಬಾಹ್ಯಕ್ರಿಯೆಗಳಿಗೆ ಮನಸ್ಸನ್ನು ಮಾಡಬಾರದು. ಲಿಂಗಪೂಜೆಯಷ್ಟು ಅವು ಮನೋನಿಗ್ರಹಕ್ಕೆ ಮಾರ್ಗವನ್ನೀಯವು. ಕ್ರಿಯಾಲಿಂಗಪೂಜೆ ಆತ್ಮಪೂಜೆ, ಇದರಿಂದ ಸ್ವತಂತ್ರತೆಯೊದಗುತ್ತದೆ. ಆತ್ಮಜ್ಞಾನವುಂಟಾಗುತ್ತದೆ. ಸಂತೃಪ್ತಿ, ಆಗಾಧ ಶಕ್ತಿ ಸಂಭವಿಸುತ್ತವೆ. ಅಂತರ್ಮುಖಿಯಾಗಲು ಕ್ರಿಯಾಲಂಗದಂತಹ ಸಾಧನ ಮತ್ತೊಂದಿಲ್ಲ.

ಮಾಡುವ ಮಾಟವೇ ಕ್ರಿಯಾಲಿಂಗ. ಇದರ ಅಗ್ಗಳಿಕೆ ಮಾನವ ಜೀವನದಲ್ಲಿ ಅದೆಷ್ಟಾದರೂ ಇದೆ. 'ಮರ್ತ್ಯಲೋಕವೆಂಬುದು ಕರ್ತಾರನ

ಕಮ್ಮಟ.' ಎಂಬುದನ್ನು ನೆನೆದರೆ ಕ್ರಿಯಾಲಿಂಗದ ವೈಶಿಷ್ಟ್ಯ ವಿಶದವಾಗುತ್ತದೆ. ಕ್ರಿಯಾರಹಿತರಾಗಿರಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಕಂಡ ಕಂಡ ಕ್ರಿಯೆಗಳಿಂದ ಶಾಂತಿ ಮುಕ್ತಿಗಳು ಸಿಕ್ಕುವುದಿಲ್ಲ.

'ಮಾಡದೆ ಮೋಕ್ಷವ ಪಡೆದು ಹೋದರೆಂಬ ವಾರ್ತೆಯು ಕೇಳಿಹಿರೇನಯ್ಯಾ? ಇಲ್ಲ ಇಲ್ಲವು. ಮಾಡಿದರೆ ಅದು ತಪ್ಪದು. ಮಾಡಲೊಲ್ಲದೆ ಹೋದರೆ ಬರುವದದು ದೂರಾಗದಿರದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.'

ಮಾಡಬೇಕು. ಆದರೆ ಮಾಡಿದ್ದೆಲ್ಲ ಮೋಕ್ಷಕ್ಕೊಯ್ಯದು. ಮಾಡಿದ್ದೆಲ್ಲ ಮಂಗಳಕಾರ್ಯವೆನಿಸದು. ಕೈಗೊಂಡ ಕೆಲಸವೆಲ್ಲ ಕ್ರಿಯಾಲಿಂಗವೆನಿಸದು. ಆತ್ಮಪ್ರಗತಿಗೆ ಆತ್ಮಶಾಂತಿಗೆ ಲೋಕೋಪಕಾರಕ್ಕೆ ಮಾಡುವ ಮಾಟವೇ ಕ್ರಿಯಾಲಿಂಗಪೂಜೆ. ಇದು ಎಲ್ಲ ಯಜ್ಞಾದಿಕ್ರಿಯೆಗಳಿಗಿಂತ ಹೆಚ್ಚಿನದು. ಹೆಚ್ಚು ಆಂತರೀಕವಾದುದು.

ಲಿಂಗಕ್ರಿಯೆಯಲ್ಲಿ ಲಿಂಗಸಂಗವುಂಟಾಗುತ್ತದೆ. ಲಿಂಗನೆನಹು ಲಿಂಗ ಹೊಳಹುಗಳುಂಟಾಗುತ್ತವೆ.

ಪೂರ್ವಮೀಮಾಂಸೆಯಲ್ಲಿ ಅದೆಷ್ಟೋ ಯಜ್ಞಯಾಗಾದಿಗಳಿವೆ. ಅವುಗಳಿಗಿಂತ ಶ್ರೇಷ್ಠವಾದುವುಗಳು ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿ, ಶಿವಾರ್ಚನ ಎಂಬೀ ಪಂಚಯಜ್ಞಗಳು. ಇವನ್ನು ವೀರಶೈವರು ಅಂಗೀಕರಿಸುತ್ತಾರೆ. ಈ ಪಂಚಯಜ್ಞಗಳಲ್ಲಿ ಶಿವಾರ್ಚನ ಯಜ್ಞ ಇನ್ನೂ ಶ್ರೇಷ್ಠವಾದುದು. ಏಕೆಂದರೆ ಕ್ರಿಯೆಯನ್ನು ಲಿಂಗವನ್ನಾಗಿಸುತ್ತದೆ; ಲಿಂಗವನ್ನು ಕ್ರಿಯೆಯನ್ನಾಗಿಸುತ್ತದೆ. ಕರ್ಮಕಾಂಡದಿಂದ ಭಕ್ತಿಕಾಂಡಕ್ಕೆ ತರುತ್ತದೆ ಅರ್ಚನಕ್ರಿಯೆ. ಅಲ್ಲದೆ ಆತ್ಮಾನುಭವಕ್ಕೆ ಅರ್ಚನಕ್ರಿಯೆ ಆಧಾರವಾಗಿದೆ.

'ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ. ಅನುಭವಲಿಂಗವಿಡಿದು ಮಾರ್ಗಕ್ರಿಲಿಂಗಸಿದ್ಧಿ. ಮಾರ್ಗಕ್ರಿಲಿಂಗವಿಡಿದು ಮೀರಿದ ಕ್ರಿಲಿಂಗಸಿದ್ಧಿ. ಮೀರಿದಕ್ರಿಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ. ಇದು ಕಾರಣ ಕೂಡಲಸಂಗಮದೇವಾ, ಲಿಂಗವಿಡಿದು ಲಿಂಗಸಿದ್ಧಿ.'

ಶ್ರೀ ರೇಣುಕ ಶಿವಾಚಾರ್ಯರು ನಿರೂಪಿಸಿದ ಆಚಾರಲಿಂಗಾರ್ಚನೆಯ ಆಧಿಕ್ಯ ನಿರೂಪಣೆಗೆ ನಿದರ್ಶನವಾಗಿದೆ ಈ ವಚನ. ಆರಾಧನಾಧಿಕ್ಯ ಮೂಲ ಸಂದರ್ಶಕವಾಗಿದೆ ಈ ವಚನ.

'ಸದಾಚಾರವನಾಚರಿಸುವ ಸತ್ಕ್ರಿಯಾಸಂಪನ್ನಂಗೆ ಸಮ್ಯಜ್ಞಾನ ಉದಯವಹುದು. ಆ ಸಮ್ಯಜ್ಞಾನೋದಯದಿಂದ ತನ್ನ ತಾನರಿದು ತಾನೇ ಶಿವನಹನಲ್ಲದೆ ತನಗೇನೂ ಇದಿರಿಲ್ಲ. ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ ಆಚಾರವೇ ಮುಖ್ಯವಯ್ಯ.'

ಶಿವನಾಗಬೇಕಾದರೆ ಸಮ್ಯಜ್ಞಾನ ಬೇಕು. ಸಮ್ಯಜ್ಞಾನವುಂಟಾಗ ಬೇಕಾದರೆ ಸತ್ಕ್ರಿಯಾಸಂಪನ್ನನಾಗಿರಬೇಕು. ಸತ್ಕ್ರಿಯಾಸಂಪನ್ನನಾಗಲು ಸದಾಚಾರನಿರತನಾಗಿರಬೇಕು. ಆಚಾರದ ಅಡಿಗಲ್ಲಮೇಲೆ ಕ್ರಿಯಾಭವನ ನಿರ್ಮಾಣವಾಗಬೇಕು, ಜ್ಞಾನ ಹೊದಿಕೆಯಾಗಬೇಕು. ಶಿವತ್ವ ಸುವರ್ಣ ಕಲಶವಿಡಬೇಕು.

ಇದಾಗಬೇಕಾದಲ್ಲಿ ಆಚಾರದ ಅಡಿಗಲ್ಲ ಮೇಲೆ ಅಚ್ಚಕ್ರಿಯಾ ಶೀಲ ನಾಗಬೇಕು ; ಅರ್ಚನಕ್ರಿಯಾಶಾಲಿಯಾಗಬೇಕು. ಅರ್ಚನಕ್ರಿಯೆಗೆ ಚಿಚ್ಚೈತನ್ಯಾತ್ಮಕವಾದ ಸದ್ರೂಪ ಕರದಿಷ್ಟವೇ ಕಾರಣವಾಗಿದೆ; ಕರಸ್ಥಲದ ಕೈಲಾಸಪ್ರಾಯವಾಗಿದೆ.

ಸಾಧಕನ ಸಾಧನೆ ಕೇವಲ ಜ್ಞಾನದಿಂದ ಪೂರೈಸುವುದಿಲ್ಲ. ಕ್ರಿಯೆ ಯಿಂದ ಪೂರೈಸುತ್ತದೆ. ತ್ರಿವಿಧ ತನುಗಳಲ್ಲಿ ಕಾಯವೂ ಮುಖ್ಯ. ಅಂತೆಯೇ ಕ್ರಿಯೆಯೂ ಮುಖ್ಯ.

> "ಕಿಂ ಯಜ್ಞೈರಗ್ನಿಹೋತ್ರಾದ್ಯೈಃ ಕಿಂ ತಪೋಭಿಶ್ಚ ದುಶ್ಚರೈಃ
> ಲಿಂಗಾರ್ಚನರತಿರ್ಯಸ್ಯ ಸ ಸಿದ್ಧಃ ಸರ್ವಕರ್ಮಸು।
> ಬ್ರಹ್ಮವಿಷ್ಣ್ವಾದಯಃ ಸರ್ವೇ ವಿಬುಧಾ ಲಿಂಗಮಾಶ್ರಿತಾಃ
> ಸಿದ್ಧಾಃ ಸ್ವಸ್ವಪದೇ ಭಾಂತಿ ಜಗತ್ತಂತ್ರಾಧಿಕಾರಿಣಃ॥"

ಕ್ರಿಯಾಲಿಂಗಾರ್ಚನದಲ್ಲಿ ಆಸಕ್ತಿಯುಳ್ಳವನು ಸರ್ವಕಾರ್ಯಗಳಲ್ಲಿ ಸಿದ್ಧನಾಗುತ್ತಾನೆ. ಈತನು ಬೇರೆ ದುಷ್ಕರವಾದ ಕೃಚ್ಛ್ರಾಂದ್ರಾಯಣಾದಿ

ತಪಸ್ಸುಗಳನ್ನಾಗಲಿ, ಅಗ್ನಿಹೋತ್ರಾದಿ ಯಜ್ಞಗಳನ್ನಾಗಲಿ ಮಾಡಬೇಕಿಲ್ಲ. ಇವುಗಳಿಂದ ಈತನಿಗೆ ಪ್ರಯೋಜನವೂ ಇಲ್ಲ.

ಬ್ರಹ್ಮ ವಿಷ್ಣು ಮುಂತಾದ ಎಲ್ಲ ದೇವತೆಗಳು ಲಿಂಗಧಾರಿಗಳಾಗಿ ಸಿದ್ಧರೆನಿಸಿದರು; ಮತ್ತು ತಂತಮ್ಮ ಸ್ಥಾನ ಮಾನಗಳನ್ನು ಪಡೆದು ಶೋಭಿಸಿದರು; ಜಗತ್ತಿನ ಸೃಷ್ಟಿ ಸ್ಥಿತಿ ಮುಂತಾದ ಕಾರ್ಯಗಳಲ್ಲಿ ಸರ್ವಸಮರ್ಥರಾದರು.

ಮರ್ತ್ಯದ ಮಣಿಹದಲ್ಲಿ ಕರ್ತವ್ಯಕೋಟೆಗೆ ಮಿಗಿಲುತನ ಮೀಸಲಾಗಿದೆ. ಅವುಗಳಲ್ಲಿ ನಿಷ್ಕಂಟವೂ ನಿಷ್ಕಲಂಕವೂ ಆದ ಕ್ರಿಯಾರೂಪ ಲಿಂಗಾರ್ಚನೆಗೆ ಮೌಲ್ಯತೆಯಿದೆ. ಸರ್ವಸತ್ಕರ್ಮಗಳನ್ನೊಳಗೊಂಡ ಬೀಜವಿದು. ಇದರಿಂದ ಇದು 'ಶಿವಯೋಗ'ವೆಂಬ ಶ್ರೇಷ್ಠನಾಮವನ್ನು ತೊಟ್ಟಿದೆ. ಇದರಿಂದ ಸರ್ವಸತ್ಕರ್ಮಗಳನ್ನಾಚರಿಸಿದ ಫಲವುಂಟಾಗುತ್ತದೆ. ಸರ್ವಕರ್ತೃತ್ವವುಂಟಾಗುತ್ತದೆ.

ದ್ವೇಷ, ಹಿಂಸೆ, ದುರಾಚಾರ, ದುರಾಹಾರ, ದರ್ಪ, ದಂಭ, ದಾಹಾದಿ ದುರ್ಮಾರ್ಗಕ್ಕೆ ದುರ್ಗುಣಗಳಿಗೆ ಎಳೆಯುವ ಜಡಯಜ್ಞಗಳನ್ನು ಮಾಡುವ ಕಾಲವೊಂದಿತ್ತು. ದಕ್ಷಾದಿಗಳು ಈ ದಿಸೆಯಲ್ಲಿ ಮುಂದುವರಿದು ಪಟ್ಟ ಪಾಡು ಯಾರಿಗೆ ಗೊತ್ತಿಲ್ಲ ? ಇಂತಹ ಯಜ್ಞಯಾಗಾದಿಗಳನ್ನು ವಿರೋಧಿಸಲು ನಿರೋಧಿಸಲು ಮುಮ್ಮೊದಲು ಅವತರಿಸಿದನು ವೀರಭದ್ರದೇವನು. ಶಿವವ್ರತ, ಶಿವಧ್ಯಾನ, ಶಿವಜ್ಞಾನ, ಶಿವಭಕ್ತಿ, ಶಿವಪೂಜೆಗಳೆಂಬ ಪಂಚಯಜ್ಞಗಳನ್ನು ಜಗಕ್ಕೆ ಬೀರಿದನು. ಅಧಿಕಾರದಾಹ, ಮತ್ಸರ, ಮೇಲುಕೀಳೆಂಬ ಮನೋಭಾವ ಮೊದಲಾದವುಗಳನ್ನು ಬೇರುಸಹಿತ ಕಿತ್ತೆಸೆದನು. ಕ್ರಿಯಾನಿರತನಿಗೆ ಇವೆಲ್ಲ ಬೇಕಿಲ್ಲ ಎಂದು ಬೋಧಿಸಿದನು. ಅಂದಿನಿಂದ ಜಡಯಜ್ಞ ಯಾಗಾದಿಗಳಿಗೆ ತಡೆಯುಂಟಾಯಿತು; ಅಳಿಮನದ ತಪ ಜಪಗಳಿಗೆ ಜಲಾಂಜಲಿಯನ್ನು ಬಿಟ್ಟಾಯಿತು. ಲಿಂಗಾರ್ಚನಾದಿಗಳಿಗೆ ಪ್ರಾಶಸ್ತ್ಯ ಪ್ರಾಪ್ತವಾಯಿತು. ಹರಿ ವಿರಂಚಿಗಳು ಲಿಂಗಪೂಜಾ ನಿರತರಾದರು; ಸರ್ವಕರ್ತೃತ್ವ ಶಕ್ತಿಯನ್ನು ಸಂಗಳಿಸಿಕೊಂಡರು. ಇವರೆಲ್ಲ ಲಿಂಗಪೂಜಕರಾಗಿದ್ದರೆಂದು ಲಿಂಗ, ಸ್ಕಾಂದಾದಿ ಪುರಾಣಗಳು ಸ್ಫುಟವಾಗಿ ಸಾರುವೆ.

ಲಿಂಗಪೂಜೆ ಚೈತನ್ಯಮಯ ಪೂಜೆಯೆಂದು ಸರ್ವಕರ್ತೃತ್ವ ಶಕ್ತಿದಾಯಿಯೆಂದು ಹೆಚ್ಚು ಹೆಸರಾಯಿತು. ಲಿಂಗಪೂಜೆ 'ಶಿವಯಜ್ಞ' ವೆಂದು ಜಗತ್ಪ್ರಸಿದ್ಧವಾಯಿತು. ಶಿವಪೂಜೆಗೆ ಶಿವಲಿಂಗಪೂಜೆಗೆ ಋಗ್ವೇದಕ್ಕಿಂತ ಪೂರ್ವದಲ್ಲಿ ಮಾನ್ಯತೆದೊರೆತಿದೆ. ಇದರ ಫಲವಾಗಿ ವೇದವಾಙ್ಮಯದಲ್ಲಿ'ತ್ರ್ಯಂಬಕಂ ಯಜಾಮಹೇ' 'ಅರ್ಚತ ಪ್ರಾರ್ಚತ' ಇತ್ಯಾದಿ ಮಂತ್ರಗಳ ಉದ್ಘೋಷಣೆಗೆ ಅವಕಾಶವಾಯಿತು.

ಲಿಂಗಾರ್ಚನರೂಪ ಶಿವಯಜ್ಞಕ್ಕೆ ಹೆಚ್ಚು ಬಲ ಬಂದದ್ದು ಹೆಚ್ಚು ವೈಶಾಲ್ಯವುಂಟಾದ್ದು ವೀರಭದ್ರನಿಂದ. ಈ ಶಿವಯಜ್ಞದ ಪ್ರಭಾವ ಮುಂದೆ ಬಂದ ಬೌದ್ಧ ಮತದ ಮೇಲೆ ಹರಡಿತು. ಜಡಯಜ್ಞ ಯಾಗಾದಿಗಳನ್ನು ತಡೆಹಿಡಿಯಿತು. ಮೃಡಯಜ್ಞಗಳ ಪ್ರಸಾರ ಹೆಚ್ಚಿತು. ಗ್ರಾಮಗ್ರಾಮಕ್ಕೂ ಶಿವದೇವಾಲಯಗಳೇರ್ಪಟ್ಟವು. ಬಳಿಕ ದೇಹವೇ ದೇವಾಲಯವಾಯಿತು. ಜೀವವೇ ದೇವ ಎಂಬ ಭಾವ ಬಲಿತು ಇಷ್ಟಲಿಂಗಪೂಜೆಗೆ ಪ್ರೋತ್ಸಾಹವುಂಟಾಯಿತು; ಪರಮ ಭಕ್ತಿಭಾವವು ಸೆಲೆಯೊಡೆದು ಹರವಾಗಿ ಹರಿಯಿತು. ಕ್ರಿಯಾಶಕ್ತಿಯೇ ಕರದಿಷ್ಟವೆಂದು ಜೀವನಕ್ಕೆ ಇದು ಅನಿವಾರ್ಯವೆಂದು ಪ್ರತಿಪಾದಿತವಾಯಿತು.

'ಕ್ರಿವಿಡಿದು ಆಚರಿಸಬೇಕಲ್ಲದೆ ಅಕ್ರಿಯೆಯೊಡನೆ ಆಚರಿಸಲಾಗದು, ಜ್ಞಾನವಿಡಿದು ನೋಡಬೇಕಲ್ಲದೆ ದೃಷ್ಟಿವಿಡಿದು ನೋಡಬಾರದು, ಅಂಗವಿಡಿದು ಪೂಜಿಸಲಾಗದು ನಮ್ಮ ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ.'

ಪ್ರತ್ಯಂಗದಲ್ಲಿ ಪವಿತ್ರಕ್ರಿಯೆ ಪಜ್ಜಳಿಸಬೇಕು. ಮುಖದಲ್ಲಿ ಶಿವವಾಣಿ, ನಯನದಲ್ಲಿ ಶಿವರೂಪ, ಶ್ರವಣದಲ್ಲಿ ಶಿವಗೋಷ್ಠಿ, ಕಾಯದಲ್ಲಿ ಶಿವಕ್ರಿಯೆ; ಇದೆಲ್ಲ ಇಷ್ಟಪೂಜೆ. ಇಂತಿರುವುದೇ ಕ್ರಿಯಾಲಿಂಗಸ್ಥಲ. ಇದುವೇ ಭಕ್ತತ್ವದ ಮುಂಬಲ.

'ದೀಕ್ಷಾವಿಧಾನಾದ್ಗುರುಣಾ ಯಲ್ಲಿಂಗಂ ದತ್ತಮಾದರಾತ್ ।
ಮಂತ್ರೋಪದೇಶ ಸಹಿತಮಿಷ್ಟಲಿಂಗ ಮುದಾಹೃತಮ್ ॥'

—ಸೂಕ್ಷ್ಮಾಗಮ

೫. ಭಾವಲಿಂಗಸ್ಥಲಂ

ಭಾವ ಬಾಳಿನ ಜೀವಾಳ. ಅಂತೆಯೇ ಕ್ರಿಯೆಗೂ ಭಾವ ಜೀವಾಳ ವಾಗಿದೆ. ಭಾವ ಶಬ್ದಕ್ಕೆ ಇರುವಿಕೆ, ಹೃದಯ, ಅಭಿಪ್ರಾಯ, ತಾತ್ಪರ್ಯ, ವಿಚಾರ, ಉದ್ದೇಶ, ಚಿತ್ತವೃತ್ತಿ ಎಂದು ಮುಂತಾಗಿ ಅರ್ಥಗಳಿವೆ. ಅಂತಃ ಕರಣಧರ್ಮವೇ ಅಥವಾ ಚಲನವಲನಗಳೇ ಭಾವ. ಕ್ರಿಯೆ ಬಹಿರಂಗ ಸತ್ತಾದರೆ ಭಾವ ಅಂತರಂಗದ ಸತ್ತೆ. ಆ ಅಂತರಂಗದ ವೃತ್ತಿಯನ್ನು ಚಲನವಲನವನ್ನು ಅಭಿಪ್ರಾಯಗಳನ್ನು ಸ್ಥಿರಗೊಳಿಸುವುದೇ ಭಾವಲಿಂಗ. ಕ್ರಿಯಾಲಿಂಗವು ಕ್ರಿಯೆಯನ್ನು ಸದ್ರೂಪಗೊಳಿಸಿದರೆ ಭಾವಲಿಂಗವು ಭಾವ ವನ್ನು ಸ್ಥಗಿತಗೊಳಿಸುತ್ತದೆ. ಕಾಯಚೈತನ್ಯ ಕ್ರಿಯಾಲಿಂಗ; ಭಾವ ಚೈತನ್ಯ ಭಾವಲಿಂಗ. ಚಿತ್ತವೃತ್ತಿಗಳನ್ನು ನಿಷ್ಪತ್ತಿಗೊಳಿಸುತ್ತದೆ ಭಾವ ಲಿಂಗ. ಭಾವಪರಂಪರೆಗಳನ್ನು ಪಾವನಗೊಳಿಸುತ್ತದೆ ಭಾವಲಿಂಗ. ಭಾವ ಭಿನ್ನತೆಯನ್ನು ಭಾವಭ್ರಾಂತಿಯನ್ನು ಬಿಡಿಸುತ್ತದೆ ಭಾವಲಿಂಗ. ಭಾವ ಭಾವಚೇಷ್ಟೆ, ಭಾವಕಲ್ಪನೆ, ಭಾವಚಿಂತೆ, ಭಾವಕಂಪನ ಮುಂತಾದುವನ್ನು ಕಳೆದು ಭಾವಾಚಾರ, ಭಾವಸಮಾಧಿ, ಭಾವೈಕ್ಯ ಸ್ಥಿತಿಗಳನ್ನು ಒದಗಿಸು ತ್ತದೆ ಭಾವಲಿಂಗ, ಭಾವುಕನನ್ನಾಗಿಸುತ್ತದೆ ಭಾವಲಿಂಗ.

ಕಾಯದಲ್ಲಿ ಸ್ಥೂಲಕ್ರಿಯೆಗಳಿದ್ದರೆ ಭಾವದಲ್ಲಿ ಸೂಕ್ಷ್ಮಕ್ರಿಯೆಗಳಿರು ತ್ತವೆ. ಸ್ಥೂಲಕ್ರಿಯೆಗಳ ಸತ್ಸ್ವರೂಪವೇ ಕ್ರಿಯಾಲಿಂಗ. ಸೂಕ್ಷ್ಮಭಾವ ಗಳ ಸಚ್ಚಿತ್ಸ್ವರೂಪವೇ ಭಾವಲಿಂಗ. ಶಿವಕ್ರಿಯೆಗಳ ಕೇಂದ್ರ ಚೈತನ್ಯ ಕ್ರಿಯಾಲಿಂಗವಾದರೆ ಶಿವಭಾವಗಳ ಕೇಂದ್ರಚೈತನ್ಯ ಭಾವಲಿಂಗ.

"ಕ್ರಿಯಾ ಯಥಾ ಲಯಂ ಪ್ರಾಪ್ತಾ ತಥಾ ಭಾವೋಽಪಿ ಲೀಯತೇ
ಯತ್ರ ತದ್ದೇಶಿಕೈರುಕ್ತಂ ಭಾವಲಿಂಗಮಿತಿ ಸ್ಫುಟಮ್ ।"

ಸತ್ಯಶುದ್ಧ ಕ್ರಿಯೆಗಳೆಲ್ಲವೂ ವಿರಮಿಸುವಂತೆ ಸದ್ಭಾವವೂ ಎಲ್ಲಿ ವಿರ ಮಿಸುವುದೋ ಅದು ಭಾವಲಿಂಗವೆಂದು ದೇಶಿಕ ಶಿವಾಚಾರ್ಯರು ಸ್ಪಷ್ಟ ಗೊಳಿಸಿದ್ದಾರೆ.

ಇಲ್ಲಿ ಲಯುವೆಂದರೆ ಆಶ್ರಯುಸ್ಥಳ; ಸಂಗಮುಸ್ಥಳ. ಸತ್ಕ್ರಿಯೆಗಳ ಸಂಗಮು ಕ್ರಿಯಾಲಿಂಗಸ್ಥಲ. ಸದ್ಭಾವಗಳ ಸಂಗಮು ಭಾವಲಿಂಗಸ್ಥಲ. ಕರ್ಮದ ಒಳಮೈ ಭಾವ. ಭಾವಭರಿತವಾದ ಕರ್ಮ ಬಾಳಿನ ಶಾಂತಿಗೆ ಮೂಲ. ಭಾವವಿಲ್ಲದ ಪೂಜೆ ಪೂಜೆಯಲ್ಲ. ಕ್ರಿಯೆಯೆಂಬ ಕಾಯಕ್ಕೆ ಭಾವವೆಂಬುದು ಪ್ರಾಣ. ಅಂತಹ ಪ್ರಾಣಕ್ಕೆ ಆಶ್ರಯುವಾದ ಚೈತನ್ಯಕ್ಕೆ ಪ್ರಾಣಲಿಂಗವೆಂದು ಬೇರೊಂದು ಹೆಸರು.

ಕ್ರಿಯಾಲಿಂಗದ ಪ್ರಾಪ್ತಿ ಆಯುತಯೋಗ. ಭಾವಲಿಂಗದ ಪ್ರಾಪ್ತಿ ಸ್ವಾಯತಯೋಗ. ಅದರ ಅರ್ಚನೆಯಿಂದ ಕ್ರಿಯಾಶಕ್ತಿಯುಂಟಾದರೆ ಇದರ ಅರ್ಚನೆಯಿಂದ ಭಾವಭಕ್ತಿಯುಂಟಾಗುತ್ತದೆ. ಅದು ಧಾರಣಯೋಗ್ಯ, ಇದು ಧ್ಯಾನಯೋಗ್ಯ. ಅದು ಪ್ರಾಥಮಿಕ; ಇದು ಮಾಧ್ಯಮಿಕ. ಅದು ತ್ಯಾಗಾಂಗೋದ್ಧಾರಕ, ಇದು ಭೋಗಾಂಗೋದ್ಧಾರಕ. ಅದು ಚಕ್ಷುಗಮ್ಯ; ಇದು ಚಿತ್ತಗಮ್ಯ.

"ಭಾವೇನ ಗೃಹ್ಯತೇ ದೇವೋ ಭಗವಾನ್ ಪರಮಃ ಶಿವಃ
ಕಿಂ ತೇನ ಕ್ರಿಯತೇ [illegible]ಸ್ಯ ನಿತ್ಯಪೂರ್ಣೋ ಹಿ ಸ ಸ್ಮೃತಃ ।
ಅಖಂಡಪರಮಾನಂದಬೋಧರೂಪಃ ಪರಃ ಶಿವಃ
ಭಕ್ತಾನಾಮುಪಚಾರೇಣ ಭಾವಯೋಗಾತ್ ಪ್ರಸೀದತಿ ॥"

ಷಡ್ಗುಣೈಶ್ವರ್ಯಸಂಪನ್ನನಾದ ಪರಶಿವನು ಪ್ರಕಾಶಸ್ವರೂಪನು, ಭಾವಗಮ್ಯನು; ನಿತ್ಯಪೂರ್ಣನು. ಅವನಿಗೆ ಕ್ರಿಯಾಮಾತ್ರದಿಂದಾಗಬೇಕಾದುದೇನು ?

ಆ ಪರಶಿವನು ಪರಿಚ್ಛಿನ್ನವಲ್ಲದ ಪರಮಾನಂದ ಚಿತ್ಸ್ವರೂಪನು. ಭಕ್ತರ ಉಪಚಾರ ರೂಪ ಭಾವಯೋಗದಿಂದ ಪ್ರಸನ್ನನಾಗುತ್ತಾನೆ.

ಪರಾತ್ಪರನಾದ ಶಿವನು ಬೆಳಗಿಗೆ ಬೆಳಗಾಗಿದ್ದಾನೆ; ಅಷ್ಟೈಶ್ವರ್ಯ ಷಡ್ಗುಣ ಸಂಪನ್ನನಾಗಿದ್ದಾನೆ. ಆದರೂ ಭಾವಕ್ಕೆ ಗ್ರಾಹ್ಯನಾಗಿದ್ದಾನೆ. ಭಾವವಿಲ್ಲದ ಕ್ರಿಯೆ ಅಪೂರ್ಣ, ನಿತ್ಯಪೂರ್ಣನಾದ ಆತನಿಗೆ ಭಾವವಿಲ್ಲದ

ನಿಷ್ಪತ್ತಿಗೊಳ್ಳದ ಅಪೂರ್ಣಕ್ರಿಯೆ ಅನಗತ್ಯ. ಭಾವಪೂರ್ಣವಾದ ಕ್ರಿಯೆಯಿಂದ ಗ್ರಾಹ್ಯ.

ಧಾರಣ ಕ್ರಿಯಾಯೋಗ, ಧ್ಯಾನ ಭಾವಯೋಗ. ಕೇವಲ ಧಾರಣ ಅರ್ಚನಗಳಿಂದ ಭಾವಲಿಂಗ ಸ್ವಾಯತ್ತವಾಗದು. ಭಾವಯೋಗದಿಂದ ಕ್ರಿಯಾಯೋಗ ಸ್ವಯಂ ಅಂದರೆ ಸಹಜವಾಗಿ ಸಿದ್ಧವಾಗುತ್ತದೆ. ಸಮತೆ ಸಮನ್ವಯಗಳುಳ್ಳುದು ಭಾವಯೋಗ. ಸಂಕಲ್ಪರಹಿತ ಸಂಧಾನವುಳ್ಳುದು ಭಾವಯೋಗ.

'ಭಾವಯೋಗ' ಇದು ಪ್ರಭಾವಪೂರ್ಣ ಪ್ರಯೋಗ. ಅಖಂಡ ಪರಮಾನಂದಬೋಧರೂಪ ಪರಶಿವನನ್ನು ಪ್ರಸನ್ನಗೊಳಿಸುವ ಪ್ರಶಸ್ತಪದ. ಶಿವ-ಜೀವ ಸಂಧಾನಶಕ್ತಿಯುಳ್ಳ ಪ್ರತಿಭಾನ್ವಿತ ಪದ. ಈ ಪದಕ್ಕೆ ಪ್ರಬಂಧರೂಪಾಗಿದೆ ಈ ವಚನ:

'ಅರ್ಚನೆ ಆವರಿಸಿತ್ತಯ್ಯ, ಪೂಜೆ ಪೂರಿತವಾಯಿತ್ತಯ್ಯ; ಸಮತೆ ಪರಿಣಾಮಿಸಿತ್ತು, ನಿರ್ವಿಕಲ್ಪ ಸಂಧಾನವಾಯಿತ್ತು-ಮಹಾಲಿಂಗ ಕಲ್ಲೇಶ್ವರನ ನೆನೆವ ಭಾವಕ್ಕೆ.'

ಭಾವಯೋಗದ ಬಿತ್ತರ ಎಲ್ಲವನ್ನೂ ಬಳಸಿಕೊಂಡಿರುವಿಕೆ, ಹೊರ ಒಳಗೂ ತೆರಹಿಲ್ಲದಿರುವಿಕೆ, ಸಮತಿ ಸಂಧಾನ ಇವು ಇದರಲ್ಲಿ ಚೆನ್ನಾಗಿ ವರ್ಣಿತವಾಗಿವೆ. ಅರ್ಚನೆ ಪೂಜನೆಗಳು ಪೂರೈಸುವುದು ನೆನೆವ ಭಾವದಲ್ಲಿ, ನಿರ್ವಿಕಲ್ಪ ಸಂಧಾನದಲ್ಲಿ; ಸಮತಾಭಾವದ ಪರಿಣಾಮದಲ್ಲಿ.

ಭಾವಲಿಂಗ ಅಖಂಡ, ಅದ್ವಯಾನಂದ, ಬೋಧರೂಪ. ಮಾನಸಿಕ ಉಪಚಾರ ಉಪಾಸ್ಯ-ಉಪಲಭ್ಯ;

'ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ಲಿಂಗವ ಕಂಡೆ. ಕಂಡು ಕಂಡು ಬೆರಗಾದೆ. ಆತನ ಕಂಡು ಬೆರಗಾದೆ. ಅಂತರಂಗ ಶುದ್ಧಾತ್ಮನಲ್ಲಿ ಅನಿಮಿಷ ನಿಜೈಕ್ಯ ಗುಹೇಶ್ವರನ.'

ಅಂಗದ ಸೋಂಕಿಲ್ಲದ ಲಿಂಗ. ಮನದ ಕೊನೆಯ ಮೊನೆಯ ಮೇಲಿರುವ ಲಿಂಗ. ಅಪರಿಚ್ಛಿನ್ನ ಲಿಂಗ. ಪೂರ್ಣಾನಂದ ಲಿಂಗ. ಪ್ರಾಣಾತ್ಮಕ ಲಿಂಗ. ಸಮ್ಯಗ್‌ಜ್ಞಾನರೂಪ ಲಿಂಗ. ಹೃದಯ ಗುಹಾಂತರ್ಲಿಂಗ.

ಕರ್ಮಲೇಪವಿಲ್ಲದ ಲಿಂಗ. ಅಂತರಂಗ ಶುದ್ಧಾತ್ಮನಲ್ಲಿ ಅನಿಮಿಷವಾಗಿ ನಿಜೈಕ್ಯವಾಗಿ ಇರುವ ಲಿಂಗ. ಭಾವಯೋಗಕ್ಕೆ ಪ್ರಸನ್ನವಾಗಿರುವ ಲಿಂಗ. ಬಾಹ್ಯ ಉಪಾಧಿವಿರಹಿತ ಲಿಂಗ.

"ಮೃಚ್ಛಿಲಾ ವಿಹಿತಾಲ್ಲಿಂಗಾದ್ಭಾವಲಿಂಗಂ ವಿಶಿಷ್ಯತೇ
ನಿರಸ್ತ ಸರ್ವದೋಷತ್ವಾತ್ ಜ್ಞಾನಮಾರ್ಗ ಪ್ರವೇಶನಾತ್ ।
ವಿಹಾಯ ಬಾಹ್ಯಲಿಂಗಾನಿ ಚಿಲ್ಲಿಂಗಂ ಮನಸಿ ಸ್ಮರನ್
ಪೂಜಯೇದ್ಭಾವಪುಷ್ಪೈರ್ಯೋ ಭಾವಲಿಂಗೀತಿ ಕಥ್ಯತೇ ॥"

ಮಣ್ಣು ಕಲ್ಲುಗಳಿಂದ ಮಾಡಿದ ಸ್ಥಾವರಲಿಂಗಕ್ಕಿಂತ ಭಾವಲಿಂಗ ವಿಶಿಷ್ಟವಾದುದು. ದ್ರವ್ಯದೋಷ–ದೇಹದೋಷಗಳಿಲ್ಲದುದು. ಗುಣದೋಷ ದಿಂದಲೂ ದೂರಾದುದು. ಆತ್ಮದೋಷಗಳಿಲ್ಲದುದು. ಜ್ಞಾನಮಾರ್ಗ ಪ್ರವೇಶ ಕಾರಣವಾದುದು. ಇದರಿಂದಾಗಿ ಬಾಹ್ಯ ಸ್ಥಾವರಲಿಂಗಾರಾಧನೆ ಯನ್ನು ಬಿಟ್ಟು ಭಾವಲಿಂಗವನ್ನು ಮನಸಾರೆ ನೆನೆಯಬೇಕು; ಭಾವ ಪುಷ್ಪಗಳಿಂದ ಪೂಜಿಸಬೇಕು.

ಬಾಹ್ಯಲಿಂಗಗಳು ಮಣ್ಣು ಕಲ್ಲಿನವು; ಇವನ್ನು ಬಿಡಬೇಕು–ಎಂದು ಹೇಳಿದುದು ಇಷ್ಟಲಿಂಗಕ್ಕೆ ಅನ್ವಯಿಸುವುದಿಲ್ಲ. ಬಾಹ್ಯಲಿಂಗಗಳೆಂಬ ಬಹು ವಚನವು ಇದಕ್ಕೆ ಸಾಕ್ಷಿ; ಮತ್ತು ಮಣ್ಣಿನಿಂದ ಇಷ್ಟಲಿಂಗವನ್ನು ಮಾಡು ವುದಿಲ್ಲ; ಮಾಡಲು ಸಾಧ್ಯವಿಲ್ಲ. ಇನ್ನು ಶಿಲೆಯಿಂದ ಮಾಡಿದರೂ ಶಿಲೆಯೇ ಪ್ರಧಾನವಲ್ಲ. ಶಿಲೆಯೊಳಗಿರುವ ಕಳೆಯೇ ಲಿಂಗ. 'ಕರಸ್ಥಲದ ಬೆಳಗಿ ನೊಳಗೊಂದು ಘನಲಿಂಗದ ಬೆಳಗ ಕಂಡೆ. ಮಹಾಮಂಗಳ ನಿಳಯ ನಾಗಿ ತೋರುತ್ತಿದ್ದಾನೆ. ಮಹಾಮಂಗಳ ನಿಳಯನಾಗಿ ತೋರುತ್ತಿದ್ದಿತ್ತು. ಗುಹೇಶ್ವರ ಲಿಂಗದ ವಾರ್ತೆ ನುಡಿಯ ನಿವಾಳಿಸುತ್ತಿದ್ದಿತ್ತು.'

ಈ ವಚನದಲ್ಲಿ ಪ್ರಭುದೇವರು ಕ್ರಿಯಾಲಿಂಗಕ್ಕೂ ಭಾವಲಿಂಗಕ್ಕೂ ಇರುವ ಸನ್ನಿಹಿತ ಸಂಬಂಧವನ್ನು ಸೂಚಿಸಿರುವುದಲ್ಲದೆ ಬೆಳಗಿನೊಳಗಿನ ಬೆಳಗೆಂದು ಮಂಗಳ ನಿಳಯವೆಂದು ನುಡಿಗೆ ನಿಲುಕದ್ದೆಂದು ನಿರೂಪಿಸಿದ್ದಾರೆ.

'ಕಾಯವೇ ಕಳೆಯಾಗಿ ಪ್ರಾಣಲಿಂಗವಾಗಿ ಭಾವ ಭಾವಿಸುತ್ತಿದ್ದಿತ್ತು ನೋಡಾ ! ಅನುಭಾವ ಕರಸ್ಥಲವಾಗಿ ಭಾವ ಭಾವಿಸುತ್ತಿದ್ದಿತ್ತು ನೋಡಾ ! ಸಾಕ್ಷಿ : ದೇಹೋ ದೇವಾಲಯಂ ಪ್ರೋಕ್ತಂ ಜೀವೋ ದೇವಃ ಸದಾಶಿವಃ । ತ್ಯಜೇತು ಜ್ಞಾನನಿರ್ಮಾಲ್ಯಂ ಸೋಽಹಂ ಭಾವೇನ ಪೂಜಯೇತ್ ॥ ಎಂದುದಾಗಿ ಇದು ಕಾರಣ ಕೂಡಲ ಚೆನ್ನಸಂಗಯ್ಯ ಮಹವ ನುಂಗಿದ ಮಹಂತನ ಬೆರಗು.'

ಈ ಎರಡು ವಚನಗಳು ಇಷ್ಟಲಿಂಗ– ಪ್ರಾಣಲಿಂಗಗಳೆರಡರ ಅಭಿನ್ನತೆಯನ್ನು ಅತ್ಯಂತ ಸ್ಫುಟವಾಗಿ ಸಾಟಿವೆ. ಸದ್ರೂಪ ಚಿದ್ರೂಪಕ್ಕೆ ಭಿನ್ನವಲ್ಲ. ಇದರಿಂದಾಗಿ ಇಷ್ಟಲಿಂಗ ಪ್ರಾಣಲಿಂಗಕ್ಕೆ ಬೇರಲ್ಲ; ಬಾಹ್ಯವಲ್ಲ.

ಭಾವಪುಷ್ಪಗಳಿಂದ ಭಾವಲಿಂಗಪೂಜೆ ಸಾಗಬೇಕೆಂದು ಶ್ರೀರೇಣುಕ ಶಿವಾಚಾರ್ಯರ ಭಾವಪೂರ್ಣವಾದ ಆದೇಶ. ಶಮೆ ದಮೆ ಸತ್ಯ ಶಾಂತಿ ಮುಂತಾದ ಸದ್ಗುಣಗಳೇ ಭಾವಪುಷ್ಪಗಳು. ಹೃದಯ ಶುದ್ಧಿಯೇ ಹೆಚ್ಚಿನ ಹೂವು. 'ಸತ್ಯವಿಲ್ಲದ ಭಕ್ತಿ ಹತ್ತು ಸಾವಿರಕಾಲ ಮಾಡಿದಡೇನು ? ನಿಷ್ಠೆಯಿಲ್ಲದ ಪೂಜೆಯನೇಸು ಕಾಲ ಮಾಡಿದಡೇನು, ಭಾವ ನೆಲೆಗೊಳ್ಳದನ್ನಕ್ಕರ ?....' '....ಹಿಂದೆ ಕಾಯ ಸೊನೆಯರತಲ್ಲದೆ ಹಣ್ಣಿನರಸ ಚಿಹ್ನದೋರದು. ಕಾಯ ಕರ್ಮವ ಮಾಡಿ ಜೀವ ಜ್ಞಾನವನರಿದು ತ್ರಿವಿಧ ಭಾವ ಶುದ್ಧವಾಗಿಯಲ್ಲದೆ ಕಾಣಲಿಲ್ಲ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವ.' 'ಆಗುವದಾದರೆ ನಿನ್ನ ಪೂಜೆಯದೇಕೋ ಲಿಂಗಯ್ಯ? 'ಯಥಾ ಭಾವಸ್ತಥಾ ದೇವ' ಎಂಬ ಭಾವವಿದ್ದಡೆಯಲ್ಲಿ, ಆದಂತೆ ಆಗಲಿ, ಹೋದಂತೆ ಹೋಗಲಿ; ನಿಮಗೆ ಪೂಜಿಸಿದವರಿಗೆ ಸಂಪದಾದಿ ಮಹದೈಶ್ವರ್ಯ ತಪ್ಪದು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'

'ಅವಾವ ತ್ರಿಗುಣ ಭೇದದಲ್ಲಿ ವಿಶ್ವಾಸವ ಮಾಡಿದರೂ ಭಾವ ಶುದ್ಧವಾಗಿರಬೇಕು. ಯೋಗಿಯಾದಲ್ಲಿ ದೇಹ ಧರ್ಮವ ಮರೆದು, ಭೋಗಿಯಾದಲ್ಲಿ ಸಂಚಿತವ ಮರೆದು, ತ್ಯಾಗಿಯಾದಲ್ಲಿ ನೆನಹು ಹಿಂಚುಗೊಡುವುದು ಮುಂತಾಗಿರಬೇಕು. ಇಂತೀ ಯೋಗಿ ಭೋಗಿ ತ್ಯಾಗಿ–ಇಂತೀ ತ್ರಿವಿಧವನೊಳಕೊಂಡು ವಿರಕ್ತನಾದಲ್ಲಿ ಅತನಡಿಗೆರಗುವೆನೆಂದ ಅಂಬಿಗರ ಚೌಡಯ್ಯ.'

'ಭಾವ ಬಲಿದಲ್ಲಿ ಲಿಂಗವೆನಿಸಿತ್ತು. ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು. ಭಾವ ನಿರ್ಭಾವವಾದಲ್ಲಿ ಏನೆಂದೆನಿಸವು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಭಾವಲಿಂಗಪೂಜೆಯಿಂದ ಭಾವ ಬಲಿಯುತ್ತದೆ. ಬಲಿದು ಲಿಂಗವಾಗುತ್ತದೆ. ಆತನೇ ಭಾವಲಿಂಗಿಯೆನಿಸುತ್ತಾನೆ. ಭಾವಶುದ್ಧಿಯ ಫಲವಿದು. ಭಾವಪುಷ್ಪಾರ್ಪಣ ಪ್ರಯೋಜನವಿದು. ಭಾವವು ಲಿಂಗದಲ್ಲಿ ಲೀಯವಾಗಿ ನಿರ್ಭಾವವಾದ ಬಳಿಕ ಬೇರೆ ಕುರುಹಿಲ್ಲ; ತೆರಹಿಲ್ಲ.

"ಮೂಲಾಧಾರೇऽಥವಾ ಚಿತ್ತೇ ಭ್ರೂಮಧ್ಯೇ ವಾ ಸುನಿರ್ಮಲಂ
ದೀಪಾಕಾರಂ ಯಜನ್ ಲಿಂಗಂ ಭಾವದ್ರವ್ಯೈಃ ಸ ಯೋಗವಾನ್।
ಸ್ವಾನುಭೂತಿ ಪ್ರಮಾಣೇನ ಜ್ಯೋತಿರ್ಲಿಂಗೇನ ಸಂಯುತಃ
ಶಿಲಾ ಮೃದ್ದಾರು ಸಂಭೂತಂ ನ ಲಿಂಗಂ ಪೂಜಯೇತ್ಯಸೌ॥"

ನಿರ್ಮಳ ಕಳೆಯುಳ್ಳ ಭಾವಲಿಂಗವನ್ನು ಭಕ್ತನು ತನ್ನ ಮೂಲಾಧಾರದಲ್ಲಿಯಾಗಲಿ ಹೃದಯಭೂಮಿಯಲ್ಲಾಗಲಿ ಭ್ರೂಮಧ್ಯದಲ್ಲಾಗಲಿ ಭಾವದ್ರವ್ಯಗಳಿಂದ ಪೂಜಿಸಿದಲ್ಲಿ ಭಾವಯೋಗಿಯೆಂದೆನಿಸುತ್ತಾನೆ.

ಸ್ವಾನುಭವ ಪ್ರಮಾಣಕ್ಕೆ ಸಾಧ್ಯವಾದ ಜ್ಯೋತಿರ್ಲಿಂಗದ ಸಾಕ್ಷಾತ್ಕಾರವುಳ್ಳ ಪ್ರಾಣಲಿಂಗಿಯು ಕಲ್ಲು ಮಣ್ಣು ಕಟ್ಟಿಗೆಗಳಿಂದ ಮಾಡಿದ ಸ್ಥಾವರ ಲಿಂಗವನ್ನು ಪೂಜಿಸಲಾರನು.

'ಕಲ್ಲದೇವರ ಪೂಜೆಮಾಡಿ ಕಲಿಯುಗದಿ ಕತ್ತೆಗಳಾಗಿ ಹುಟ್ಟಿದರು. ಮಣ್ಣದೇವರ ಪೂಜಿಸಿ ಮಾನಹೀನರಾದರು. ಮರನು ದೇವರೆಂದು ಪೂಜಿಸಿ ಮಣ್ಣ ಕೂಡಿದರು. ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು. ಜಗದ್ಭರಿತ ಶಿವನೊಳಗೆ ಕಿಂಕರನಾದ ಶಿವಭಕ್ತನೇ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು."

ಲಿಂಗಧಾರಣ ಸ್ಥಲದಲ್ಲಿ ಹಿಂದೆ ಹೇಳಿದಂತೆ ಅಂತರಂಗದಲ್ಲಿ ಜ್ಯೋತಿರ್ಲಿಂಗಧಾರಣಕ್ಕೆ ಆಧಾರ, ಹೃದಯ, ಭ್ರೂಮಧ್ಯ ಈ ಮೂರು ಸ್ಥಲಗಳು ಉಕ್ತವಾಗಿವೆ; ಉತ್ತಮವಾಗಿವೆ. ಆಧಾರದಲ್ಲಿ ಆರಾಧಿಸುವಾಗ ಸುವರ್ಣ

ವರ್ಣವನ್ನು, ಹೃದಯದಲ್ಲಿ ಯಜಿಸುವಾಗ ಹವಳ ಬಣ್ಣವನ್ನು, ಭ್ರೂಮಧ್ಯ ದಲ್ಲಿ ಪೂಜಿಸುವಾಗ ಸ್ಫಟಿಕಪ್ರಭೆಯನ್ನು ಪರಿಭಾವಿಸಬೇಕೆಂದು ಆ ಸ್ಥಲದಲ್ಲಿ ಹೇಳಲಾಗಿದೆ. ಇಲ್ಲಿ ನಿರ್ಮಳ ದೀಪಾಕಾರವಾಗಿ ಭಾವಸಿ ಪೂಜಿಸಲು ವಿಧಿಸ ಲಾಗಿದೆ. 'ಹೃದಯ ಕಮಲ ಮಧ್ಯೇ ದೀಪವದ್ವೇದಸಾರಂ ಪ್ರಣವಮಯ ಮತರ್ಕ್ಯಂ ಯೋಗಿಭಿರ್ಧ್ಯಾನಗಮ್ಯಂ' ಎಂದು ಯೋಗಶಾಸ್ತ್ರ ಪ್ರಮಾಣವಿದೆ. ಹೀಗಿದ್ದರೂ ಎರಡು ನುಡಿಗಳಿಗೆ ಏನು ಬಿರುಕಿಲ್ಲ. ನಿರ್ಮಲದೀಪದಲ್ಲಿ ತ್ರಿವಿಧ ವರ್ಣಗಳ ಪ್ರತೀತಿಯಿದ್ದೇ ಇರುತ್ತದೆ. ಆಧಾರ ಹೃದಯ ಭ್ರೂಮಧ್ಯಗಳನ್ನು ಪೂರ್ವ ಮಧ್ಯ ಊರ್ಧ್ವ ಹೃದಯಗಳೆಂದು ಹೇಳು ವುದುಂಟು. ಭಾವಲಿಂಗದ ವ್ಯಾಪ್ತಿ ಈ ತ್ರಿವಿಧ ಹೃದಯಗಳಲ್ಲಿಯೂ ಇರು ತ್ತದೆ. ಒಂದೆಡೆ ದೀಪವಾಗಿ, ಇನ್ನೊಂದೆಡೆ ಕಿರಣವಾಗಿ, ಮತ್ತೊಂದೆಡೆ ಪ್ರಭೆಯಾಗಿ ಪ್ರಕಾಶಿಸುತ್ತದೆ. ಈ ಮೂರು ನೆಲೆಗಳಲ್ಲಿ ಎಲ್ಲಿ ಆರಾಧಿಸಿ ದರೂ ಅಲ್ಲಿ ಭಾವಲಿಂಗಯೋಗವಾಗುತ್ತದೆ. ಸ್ಥಳಭೇದವಿಲ್ಲ; ಕಳಾಭೇದ ವಿಲ್ಲ. ಆ ಜ್ಯೋತಿರ್ಲಿಂಗಾರಾಧಕನು ಮಾತ್ರ ಶಮದಮಾದಿ ಭಾವದ್ರವ್ಯ ಗಳಿಂದ ಶ್ರೀಮಂತನಾಗಿರಬೇಕು. ಅಂಥವನ ಭಾವ ಅನುಭಾವವಾಗುತ್ತದೆ. ಆ ಅನುಭಾವಕ್ಕೆ ಆ ಚಿತ್ಕಳಾಲಿಂಗವು ಗೋಚರವಾಗುತ್ತದೆ. ಅಲ್ಲಿ ಆ ಬೆಳಗಿನ ಬೆಳಗಿನಲ್ಲಿ ಬೆರೆದೇಕವಾದ ಭಕ್ತನಿಗೆ ಬಾಹ್ಯ ಸ್ಥೂಲ ಸ್ಥಾವರ ಲಿಂಗ ಗಳ ಅಗತ್ಯವಿರುವುದಿಲ್ಲ; ಆರಾಧನೆಗೆ ಅಪೇಕ್ಷೆಯಿರುವುದಿಲ್ಲ.

> "ಕ್ರಿಯಾರೂಪಾ ತು ಯಾ ಪೂಜಾ ಸಾ ಜ್ಞೇಯಾ ಸ್ವಲ್ಪಸಂವಿದಾಂ
> ಅಂತರಾ ಭಾವಪೂಜಾ ತು ಶಿವಸ್ಯ ಜ್ಞಾನಿನಾಂ ಮತಾ ।"

ಬರೀ ನೀರು ಹೂವುಗಳಿಂದ ನೆರಪುವ ಆರಾಧನೆಯು ಅಲ್ಪಮತಿಗಳಿಗೆ ಉಚಿತ; ಭಾವಪುಷ್ಪಗಳಿಂದ ನೆರವೇರಿಸುವ ಅಂತರ್ಲಿಂಗಾರಾಧನೆಯು ಪೂರ್ಣಪ್ರಾಜ್ಞರಿಗೆ ಉಚಿತ.

ಜ್ಞಾನಗೌಣವಾದ ಕೇವಲ ಕ್ರಿಯಾಪೂಜೆಗಿಂತ ಪೂರ್ಣ ಪ್ರಜ್ಞೆಯುಳ್ಳ ಭಾವಲಿಂಗಪೂಜೆ ಜೀವನಪ್ರೌಢಿಮೆಗೆ ಜೀವನಪ್ರತಿಭೆಗೆ ಆತ್ಯಂತಿಕ ಆಶ್ರಯ;

ಆಂತರಿಕ ಅಭ್ಯುದಯ. ಆ ಪೂರ್ಣಪ್ರಜ್ಞಾರಾಧನೆಯೇ ಜ್ಞಾನಲಿಂಗಸ್ಥಲವಾಗಿ ಮುಂದೆ ಉಪಸ್ಥಿತವಾಗುತ್ತದೆ.

ಒಳಗಿನ ರಸ ಪರಿಪಕ್ವವಾಗದೆ ಮೇಲಿನ ಸಿಪ್ಪೆಗೆ ಬಣ್ಣ ಬಂದರೆ ಪ್ರಯೋಜನವಿಲ್ಲ. ಇದರಂತೆ ಭಾವ ಪಕ್ವವಾಗದೆ ಸಮತೆ ಸಹಜತೆ ಸಮನಿಸುವುದಿಲ್ಲ. ಪ್ರತಿಭೆಗಳು ಪ್ರಾಪ್ತಿಸುವುದಿಲ್ಲ.

'ತಮ್ಮ ತಮ್ಮ ಭಾವಕ್ಕೆ ಕೊರಳಲ್ಲಿ ಕಟ್ಟಿಕೊಂಡರು.
ತಮ್ಮ ತಮ್ಮ ಭಾವಕ್ಕೆ ಉಡಿಯಲ್ಲಿ ಕಟ್ಟಿಕೊಂಡರು.
ನಾನೆನ್ನ ಭಾವಕ್ಕೆ ಪೂಜಿಸಹೋದರೆ ಕೈತಪ್ಪಿ ಮನದಲ್ಲಿ ಸಿಲುಕಿತ್ತು.
ಎನ್ನ ಲಿಂಗವು ಸಾಧಕವಲ್ಲ, ಭೇದಕವಲ್ಲ ;
ಗೊಹೇಶ್ವರ ಅಲ್ಲಯ್ಯ ತಾನೇಬಲ್ಲ.'

ಎನ್ನ ಮನವು ನಿಮ್ಮಲ್ಲಿ ಸಟ್ಟು ತೆಗೆಯಬಾರದ ಬೆರಗುನೋಡಯ್ಯ. ಇಹವೆಂಬುದನರಿಯೆ. ಪರವೆಂಬುದನರಿಯೆ. ಪರಮಾನಂದದಲ್ಲಿ ಇರ್ದೆನೋಡಯ್ಯ. ಪರಮ, ನಿನ್ನ ನೆನಹೇ ನೆನಹಾಗಿ ಪರಮಸುಖದಲ್ಲಿ ಸುಖಿಸುತಿರ್ದೆ ನೋಡಯ್ಯ. ಅಪ್ರತಿಮ ಕೂಡಲ ಚೆನ್ನಸಂಗಯ್ಯ ಎನ್ನ ಬೆರಗಿನ ಭೇದವ ನೀನೇ ಬಲ್ಲೆಯಯ್ಯ.'

ಭಾವಲಿಂಗಯೋಗ ಭಾವೈಕ್ಯತೆಗೆ ನಿಲುಕಿಸುತ್ತದೆಂಬುದನ್ನು ಪ್ರಭುವಚನವು, ಇಹ-ಪರವೆಂಬ ಇಬ್ಬಗೆಗಿಂಬಿಲ್ಲದೆ ನೆನಹೇ ತಾನಾಗಿ ನಿತ್ಯಸುಖಿಯಾಗಿರಲು ಭಾವಲಿಂಗಾರಾಧನೆಯೇ ಭಕ್ತನ ಭಾಗ್ಯವೆಂಬುದನ್ನು ಚೆನ್ನಬಸವಣ್ಣನ ವಚನವು ಉಗ್ಗಡಿಸಿವೆ. ಬಳಸಿದ ಭಾಷೆಯಲ್ಲಿ ಭಿನ್ನವಿದ್ದರೂ ಭಾವದಲ್ಲಿ ಭಿನ್ನವಿಲ್ಲ.

ಕ್ರಿಯಾಲಿಂಗದಲ್ಲಿ ಕಾಯದ ಕಳೆಯಡಗಿ ಭಾವಲಿಂಗದಲ್ಲಿ ಭಾವದ ಬಿಂದುವಡಗಿ ಸಾಧಕನು ಸೂಕ್ಷ್ಮದಿಂದಾಚೆಗೆ ಸಾಗುತ್ತಾನೆ. ಅಪೂರ್ಣ ಪ್ರಜ್ಞೆಯಿಂದ ಪೂರ್ಣಪ್ರಜ್ಞೆಗೆ ಸಾಗುವ ಶಕ್ತಿಸಂಪನ್ನನಾಗುತ್ತಾನೆ. ಕಾರ್ಯದಿಂದ ಕಾರಣಕ್ಕೆ, ಕತ್ತಲೆಯಿಂದ ಬೆಳಕಿಗೆ, ಸತ್ತಿನಿಂದ ಚಿತ್ತಿಗೆ ಸಾಗುವ ಸತ್ಪಥವಿದು.

'ಎನ್ನಯ ಕರಸ್ಥಲಕ್ಕನುವಾದ ಧರ್ಮನ್ನು,
ಎನ್ನಯ ಹೃತ್ಕಮಲವಬೆಳಗುವ ಪರಂಜ್ಯೋತಿ ||ಪ||

ಸಾಕಾರದ ಸಂಗದ ಸುಖದಲ್ಲಿ ವ್ಯಾಕುಳನಂ ಮಾಡಿ ಎನ್ನುವನಿರಿಸದೆ | ಸೂಕ್ಷ್ಮ ಶುದ್ಧಾಂತಃಕರಣದ್ಮ ಮೇಲೆ ಕಮಲಾನೆನದ ಲಿಂಗದ ಬೆಳಗಿನೊಳ ಗಿರಿಸು ||೧||

ಅಮಲ ರೂಪಾದಿ ಕಮಲದಲ್ಲಿ ವಿಮಲ ಶುದ್ಧಸ್ಫಟಿಕ ಜ್ಯೋತಿಯುದರ| ಷಡುವರ್ಗವ ಕೊಂಡು ಕಮಲಸಾಳ ಸದ್ಬಿಂದುವಿನೊಳಗಾಗೆನ್ನುವನಿರಿಸು ||೪

ಕರಣಾದಿಗಳರತವು ಭೂಮಿಯು ಮೇಲೆ ಸರವರದ ಕಮಲದ ಮೇಲೆ | ಪರಿಣಾಮದಲಮೃತ ಬಿಂದು ಕರಗಿ ಎನ್ನಿರುವು ಲಿಂಗದಲ್ಲಿ ಲೀಯ್ಯವಾಗಿ||೫||

ಮರುತಂಗೂಡಿದ ಪರಿಮಳದಂತೆ ಉರಿಯುಂಡ ಕರ್ಪುರ ಕರಿದೋರ ದಂತೆ | ಸದವು ಬಿಂದು ಸುಸರವಾಗಿ ಎನ್ನಾರವು ಲಿಂಗದಲ್ಲಿ ಲಿಂಗೈಕ್ಯ ವಾಗಿ ||೬||

ಐದಿಂದ್ರಿಯನೈದೆ ನಾಳದಲ್ಲಿ ಕಟ್ಟಿ ಭೇದಿಸಿದೆನು ಕರಣಾದಿ ಗುಣಗಳು ನೈದೆಗೆದೆನು ಕಾಮ ಕಣ್ಣಳವಡದೆ ಸಾಧಿಸಿದೆನು ಕೂಡಲ ಚೆನ್ನಸಂಗನ ಬೆಳಗಾ ||೭||

ಭಕ್ತನ ಭಾವವು ಲಿಂಗದ ಬೆಳಗನುಂಡು ಭಾವಾತೀತವಾಗಲಿದೆ. ಭಾವಭಾವ ಸಂಧಿ ನಿಬಂಧಿಯಾಗಿದೆ.

ಕಣ್ಣಿಲ್ಲದ ನೋಟ ಹೇಗೋ ಭಾವವಿಲ್ಲದ ಕೂಟ ಹಾಗೆ! ಅದೊಂದು ರಸವಿಲ್ಲದೂಟ. ಭಾವಸಂಪತ್ತಿಯಿಲ್ಲದೆ ಶಿವಭಕ್ತಿ ಫಲಿಸದು ; ಶಿವಸಾಮರಸ್ಯ ಕೈಗೂಡದು.

ಭಾವರಸವೇ ರಸ. ಭಾವವಿಲ್ಲದ್ದು ನೀರಸ. ಭಾವ ತನ್ನ ಭವಿತನ ವನ್ನು ನೀಗಬೇಕಾದರೆ ಭಾವನಾಥ (ಪ್ರಾಣಲಿಂಗ)ನ ನೆನಹಿನಲ್ಲಿ ತನ್ನ ತಾ ಮರೆಯಬೇಕು.

'ಜ್ಞಾನವದು ದುರ್ಲಭವಲ್ಲ ; ಅದರ ಭಾವ ದುರ್ಲಭವಯ್ಯ. ಭಾವ ವದು ದುರ್ಲಭವಲ್ಲ ; ಅದರ ಏಕತ್ವವದು ದುರ್ಲಭ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಜ್ಞಾನ ಸಿದ್ಧಿಸಬಹುದು. ಏಕೋಭಾವ ಸಿದ್ಧಿಸುವುದು ದುರ್ಲಭ. ಭಾವಸಿದ್ಧಿ ಅನುಭಾವಿಗಲ್ಲದೆ ಅಳವಡದು. ಭಾವ ಶುದ್ಧಿ ಜೀವನದ ಮಧ್ಯ ಬಿಂದು ; ಮಹಾಸಿಂಧು. 'ಯದ್ಭಾವಸ್ತದ್ಭವತಿ' 'ಅಂತೇ ಯಾ ಮತಿಃ ಸಾ ಗತಿಃ' ಈ ಮಾತುಗಳು ಭಾವಶುದ್ಧಿ ಸಿದ್ಧಿಗಳ ಮಹತ್ವವನ್ನು ಮನದಟ್ಟಾಗಿಸುತ್ತವೆ.

ಅವ ಜ್ಞಾನಿಯಾದರೇನು? ದೇಹಾವಸಾನದಲ್ಲಿಯು ಭಾವದಂತೆ ತಪ್ಪಲರಿಯದು ನೋಡಾ ; ಆವ ಜ್ಞಾನಿಯಾದರೇನು ನೋಡಾ ? ಭಾವವೆಂಬುದು ಜನ್ಮಕ್ಕೆ ಈಡು. ನಿರ್ಭಾವವೆಂಬುದು ಜನ್ಮಕ್ಕೆ ಕಾಡು ಗಿಚ್ಚು ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಬಾಳಿನಲ್ಲಿ ಭಾವಕ್ಕಿರುವ ಪ್ರಾಶಸ್ತ್ಯಕ್ಕೆ ಪ್ರಮಾಣಗಳಿವು. ಭಾವ ಪ್ರಾಣಗಳೆರಡೂ ಸೂಕ್ಷ್ಮತನು, ಭೋಗಾಂಗ. ಭಾವ ಯೋಗಾಂಗವೂ ಆಗುತ್ತದೆ. ಭಾವಸೂಕ್ಷ್ಮತನುವೆನಿಸಿದಾಗ ಮನ ಮತ್ತು ಚಿತ್ತವೃತ್ತಿ ಎಂದರ್ಥ. ಭಾವ ಕಾರಣ ತನುವೆನಿಸಿದಾಗ ವಿಚಾರ ಚೇತನ ಎಂದರ್ಥ. ಭಾವಲಿಂಗಕ್ಕೆ ಪ್ರಾಣಲಿಂಗವೆಂದೇ ಈಚೆಗೆ ವಚನ ವಾಙ್ಮಯದಲ್ಲಿ ಹೆಚ್ಚು ಬಳಕೆಯಾಗಿದೆ. ಪ್ರಾಣವೆಂದರೆ ಜೀವವುಳಿದಿರಲು ಕಾರಣವಾದ ಒಂದು ವಾಯು; ಒಂದು ಹೃದಯ ಬಲ. ಪ್ರಾಣವೇ ಜೀವನ. ಪ್ರಾಣ ಚೈತನ್ಯಗಳ ಸಂಬಂಧ ನೀರಿನಲ್ಲಿ ಜಲಜನಕ ಆಮ್ಲಜನಕಗಳೆರಡು ಇದ್ದಂತಿರುತ್ತವೆ. 'ಲಿಂಗವೇ ಪ್ರಾಣ. ಪ್ರಾಣವೇ ಲಿಂಗವಾಯಿತ್ತು. ಅಂಗಲಿಂಗವಾಯಿತ್ತು. ಗೊಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ.' 'ತನುವಿನಲ್ಲಿಪ್ಪುದು ಇಷ್ಟಲಿಂಗವೆಂಬರು. ಆತ್ಮನ ನೆನಹುನಲ್ಲಿಪ್ಪುದು ಪ್ರಾಣಲಿಂಗವೆಂಬರು. ಇಂತೀ ಘಟಾತ್ಮಕ್ಕೆ ಉಭಯಲಿಂಗವುಂಟೆ? ಹೊರಗಣ ಅಸ್ತಿ ಚರ್ಮಕ್ಕೆ ಬೇರೊಂದು ಅಸುವ ಕಲ್ಪಿಸಬಹುದೆ? ಒಳಗಣ ಕರುಳು ಮಜ್ಜೆಮಾಂಸಕ್ಕೆ ಬೇರೊಂದು ಅಸುವಿನ ಕಲೆಯುಂಟೆ? ಇದಕ್ಕೆ ದೃಷ್ಟವ ಕಂಡರೆ ಇಷ್ಟ ಪ್ರಾಣಲಿಂಗವೆಂಬುದಕ್ಕೆ ಕಟ್ಟು. ಅದು ಅಚೇತನವಪ್ಪುದೊಂದು ಸಾವಯುವ, ಚೇತನವಪ್ಪುದೊಂದು ನಿರವಯುವ. ಸಾವಯುವ ನಿರವಯುದೊಳಡಗಿ ಕುರುಹಾದ ಭೇದ ಆ ಕಾಯದ ಒಳಹೊರಗಿನ

ನೋವಿನ ಭೇದದಂತೆ. ಉಭಯವನರಿದಾತ್ಮ ಒಂದೇ ಆಗಿ, ಕಾಯದ ಇಷ್ಟವೆಂದು, ಆತ್ಮನ ಅರಿವೆಂದು ಎರಡೆನಿಸುವ ಲಿಂಗವೆಂಬುದೊಂದು ಕುರು ಹಿಲ್ಲ. ಅದು ಏಕಮೇವ ಸ್ವರೂಪು, ಅದು ಚಿದ್ಘನ ಸ್ವರೂಪು. ಅದು ಘಟಮಠದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನ ಪರಿಯಂತೆ. ಎನ್ನಯ್ಯ ಪ್ರಿಯ ಇಮ್ಮಡಿ ನಿಷ್ಕಳಂಕಮಲ್ಲಿಕಾರ್ಜುನ ಲಿಂಗವು ಅತ್ಯತಿಷ್ಠದ್ದಶಾಂಗುಲ ನಾಗಿಪ್ಪನು.'

ಅಂಗದಮೇಲೆ ಆಯತವಾದುದೇ ಇಷ್ಟಲಿಂಗ. ಇಷ್ಟಲಿಂಗವಿಡಿದು ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣ ಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.

ಪ್ರಾಣದ ಸಂಬಂಧ ಒಳಗೂ ಹೊರಗೂ ಇದೆ. ಪ್ರಾಣವಿಲ್ಲದೆ ಸ್ಥೂಲ ವಿಲ್ಲ; ಕಾರಣವಿಲ್ಲ, ಮಧ್ಯಬಿಂದುವಾಗಿ ಜೀವನ ಸರ್ವಸ್ವವಾಗಿದೆ. ಸಕಲ ನಿಷ್ಕಳವಾಗಿ ಸ್ಥೂಲ ಕಾರಣಗಳೆರಡರ ಸಕೀಲವಾಗಿದೆ. ಇದರಿಂದಾಗಿ ಪ್ರಾಣ ಪದಕ್ಕೆ ಇತ್ತೀಚೆಗೆ ಪ್ರಾಶಸ್ತ್ಯ ಬಂದಂತಿದೆ. ಪ್ರಾಣದಲ್ಲಿ ಭಾವವಿದೆ; ಭಾವದಲ್ಲಿ ಪ್ರಾಣವಿದೆ. ಕಾಯ ಪ್ರಾಣಭಾವಗಳ ಬೆಸುಗೆ ಬಿಚ್ಚದಂತಹದು. ಈ ಅಂಗತ್ರಯದಂತೆ ಇಷ್ಟ–ಪ್ರಾಣ–ಭಾವ–ಲಿಂಗತ್ರಯಗಳ ಸಕೀಲವು ಬಿಚ್ಚಬಾರದಂತಹದು. ಭಕ್ತನ ತಿಳುವಳಿಕೆಗಾಗಿ ಬಿಡಿಸಿದಂತೆ ಮಾಡಿ ಬೋಧಿಸಬೇಕಾಗಿದೆಯಲ್ಲದೆ ದಿಟವಾಗಿ ಬಿಡಿಸಬಾರದ ಬೆಸುಗೆಯುಳ್ಳವು.

'ಏವಂ ತತ್ ಸ್ಮೃತಿಮಾತ್ರೇಣ ಮೂರ್ತಂ ಸಕಲ ರೂಪಧೃತ್ ।
ನಿಷ್ಕಲಂ ತದಭಾವೇ ತು ತಸ್ಮಾತ್ ಸಕಲ ನಿಷ್ಕಲಮ್॥'
'ತ್ಯಕ್ತ ದೇಹೇಂಪ್ರಿಯ ಗುಣಃ ಶಿವಾರ್ಪಿತ ನಿಜಾಂತರಃ।
ಶಿವಏವ ಮನೋಲೀನಂ ಪ್ರಾಣಲಿಂಗಂ ತದುಚ್ಯತೇ॥'

—ಸೂಕ್ಷ್ಮಾಗಮ

ಸದ್ಭಕ್ತಾ ಯತ್ರ ತಿಷ್ಠಂತಿ ತತ್ತೀರ್ಥಂ ತತ್ತಪೋವನಂ
ತಸ್ಮಾತ್ತದ್ದರ್ಶನಾದೇವ ಧನ್ಯೋ ಭವತಿ ಮಾನವಃ।
'ಭಕ್ತರಿದ್ದ ಲೋಕವೇ ರುದ್ರಲೋಕ.' —ಸೂಕ್ಷ್ಮಾಗಮ

೬. ಜ್ಞಾನಲಿಂಗಸ್ಥಲಂ

ಭಾವಕ್ಕೂ ಜ್ಞಾನಕ್ಕೂ ಹೆಚ್ಚು ಭೇದವಿಲ್ಲ. ಭಾವದ ಮತ್ತೊಂದು ಪರ್ಯಾಯವೇ ಜ್ಞಾನ. ಸಚ್ಚಿತ್ತುಗಳೆರಡಿರುವುದೇ ಭಾವ. ಚಿನ್ಮಾತ್ರವೇ ಜ್ಞಾನ. ಅಂದರೆ ಚಿದ್ಭಾವವೇ ಜ್ಞಾನ. ಭಾವ ಕರ್ಪೂರವಿದ್ದಂತೆ; ಜ್ಞಾನ ಉರಿಯಿದ್ದಂತೆ. ಭಾವ ಅಭಿವ್ಯಕ್ತವಾದರೆ ಜ್ಞಾನ.

ಭಾವದಲ್ಲಿ ಅಂತರ್ಹಿತವಾದ ಅರಿವು ಜ್ಞಾನದಲ್ಲಿ ಹೊಮ್ಮಿರುತ್ತದೆ. ಭಾವ ಸೂಕ್ಷ್ಮವಾದರೆ ಜ್ಞಾನಕಾರಣವಾಗಿ ಸೂಕ್ಷ್ಮಕ್ಕೆ ಸೂಕ್ಷ್ಮವಾಗಿರುತ್ತದೆ. ಭಾವ ಕಿರಣವಾದರೆ ಜ್ಞಾನ ಪ್ರಕಾಶವಾಗಿರುತ್ತದೆ.

ಹೊರಗಣ್ಣಿಗೆ ಭಾವ ನಡುಗಣ್ಣು, ಜ್ಞಾನ ಒಳಗಣ್ಣು. ಮಂತ್ರದೀಕ್ಷೆಯಿಂದ ಭಾವವು ಭಾವಲಿಂಗವಾದರೆ, ವೇಧಾದೀಕ್ಷೆಯಿಂದ ಜ್ಞಾನವು ಜ್ಞಾನಲಿಂಗವಾಗುತ್ತದೆ.

ಜ್ಞಾನವೆಂದರೆ ಅರಿವು-ತಿಳಿವು ಎಂದು ತಿಳಿಗಣ್ಣೆಂದು ತಾಯ್ನುಡಿಯಲ್ಲಿ ಹೇಳುವುದುಂಟು. ಮರೆವು ಅಂತಃಕರಣ ಧರ್ಮ. ಮರೆವನ್ನು ಮರೆ ಮಾಡುವುದೇ ಅರಿವು.

ಜ್ಞಾನವೆಂದರೆ ಮೋಕ್ಷಬುದ್ಧಿಯೆಂದು ಹೇಳುವುದುಂಟು. 'ಮೋಕ್ಷೇ ಧೀರ್ಜ್ಞಾನಂ' ಎಂದು ಅಮರಕೋಶೋಕ್ತಿಯಿದೆ. ಅಜ್ಞಾನಾಂಧಕಾರವನ್ನು ಬಿಡಿಸುವುದಾಗಿ ಜ್ಞಾನಕ್ಕೆ ಈ ಅರ್ಥ ಅನ್ವರ್ಥವಾಗಿದೆ. ವೈಷಯಿಕ ಜ್ಞಾನ ಜ್ಞಾನವಲ್ಲ; ಆತ್ಮಜ್ಞಾನವೇ ಜ್ಞಾನ. ಆತ್ಮನ ವಿಷಯಕವಾದ ಅಜ್ಞಾನ ನಿವೃತ್ತಿಯೇ ಸತ್ಯಸಾಧನ.

ಶ್ರೀಗುರು ತನ್ನ ವೇಧಾದೀಕ್ಷೆಯಿಂದ ಶಿಷ್ಯನ ಆಣವ ಮಲವನ್ನು ಅಣಗಿಸುತ್ತಾನೆ. ತಾನು ಅಪೂರ್ಣನಲ್ಲ, ಪೂರ್ಣನೆಂಬ ಪೂರ್ಣಪ್ರಜ್ಞೆಯನ್ನು ಪ್ರಾದುರ್ಭವಿಸುತ್ತಾನೆ. ಪ್ರಾದುರ್ಭವಿಸಿದ ಆ ಪ್ರಜ್ಞೆಯನ್ನು ಪ್ರತಿಷ್ಠಿತಗೊಳಿಸುವುದೇ ಜ್ಞಾನಲಿಂಗಸ್ಥಲಸ್ವರೂಪ.

ಯೋಗಾಂಗ ಚೈತನ್ಯವೇ ಜ್ಞಾನಲಿಂಗ. ಯೋಗಾಂಗದಲ್ಲಿರುವ ಅಚಿತ್ ಭಾವವನ್ನು ಅಳಿಸಿ ಚಿದ್ಭಾವವನ್ನುಂಟುಮಾಡುವುದೇ ಜ್ಞಾನಲಿಂಗ.

ಯೋಗಾಂಗದಲ್ಲಿ ಕ್ರಿಯೆ ಇನ್ನೂ ಸೂಕ್ಷ್ಮವಾಗಿರುತ್ತದೆ. ಜ್ಞಾನ ಲಿಂಗ ಕೇವಲ ನಿಷ್ಕಲರೂಪಾಗಿರುತ್ತದೆ. ಅಂಗತ್ರಯಕ್ಕೆ ಸಾಕ್ಷಿಯಾಗಿರುತ್ತದೆ. ಸ್ವಸ್ವರೂಪದರ್ಶಿಯಾಗಿರುತ್ತದೆ. ಆಗ ಯಾವಭೇದವಿರುವುದಿಲ್ಲ. 'ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲವಯ್ಯ! ಕ್ರಿಯಾಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನರೂಪದಲ್ಲಿ ಭೇದವೇನಯ್ಯಾ ಚೈತನ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ?'

ಕ್ರಿಯೆಯೆಂಬ ಹಸರು, ಭಾವವೆಂಬ ಹೂವು, ಜ್ಞಾನವೆಂಬ ಹಣ್ಣಿನಲ್ಲಿ ಸಮನ್ವಯುವಾಗುತ್ತವೆ. ಹಣ್ಣಿನಲ್ಲಿ ಹಸರು ಹೂವುಗಳೆಲ್ಲ ಅಭೇದಗೊಳ್ಳುತ್ತವೆ. ಅಭೇದಗೊಂಡರೂ ಸ್ವಸ್ವರೂಪ ಹಾನಿಯಾಗುವುದಿಲ್ಲ.

"ತದ್ಭಾವಜ್ಞಾಪಕಂ ಜ್ಞಾನಂ ಲಯಂ ಯತ್ರ ಸಮಶ್ನುತೇ
ತತ್ ಜ್ಞಾನಲಿಂಗಮಾಖ್ಯಾತಂ ಶಿವತ್ವತತ್ತ್ವಾರ್ಥಕೋವಿದೈಃ।
ತ್ರಿಮೂರ್ತಿಭೇದ ನಿರ್ಮುಕ್ತಂ ತ್ರಿಗುಣಾತೀತ ವೈಭವಂ
ಬ್ರಹ್ಮಯದ್ಬೋಧ್ಯತೇ ತತ್ತು ಜ್ಞಾನಲಿಂಗಮುದಾಹೃತಮ್॥"

ಹಿಂದೆ ಹೇಳಿದ ಭಾವಲಿಂಗವನ್ನು ನೆನಹಿಗೆ ತರುವುದೇ ಜ್ಞಾನ. ಆ ಜ್ಞಾನ ಯಾವ ಚೈತನ್ಯದಲ್ಲಿ ಲೀನವಾಗುವುದೋ ಅದು ಜ್ಞಾನಲಿಂಗ-ಎಂಬುದಾಗಿ ಶಿವತತ್ತ್ವವನ್ನರಿತ ಶಿವಾಚಾರ್ಯರು ನಿರೂಪಿಸುವರು.

ತ್ರಿಮೂರ್ತಿ ಭೇದವಿಲ್ಲ, ತ್ರಿಗುಣ ಸಂಬಂಧವಿಲ್ಲ; ತುರ್ಯ ತುರ್ಯಾತೀತ ವೈಭವವಿಲ್ಲದಿಲ್ಲ. ಅದು ಪರಬ್ರಹ್ಮ; ಅದು ಜ್ಞಾನಲಿಂಗ. ಅದು ಗುರೂಪದೇಶದಿಂದ ಸ್ವಾನುಭವದಿಂದ ಶಾಸ್ತ್ರಪ್ರಮಾಣದಿಂದ ಸಿದ್ಧವಾಗುತ್ತದೆ; ಬೋಧ್ಯವಾಗುತ್ತದೆ. ಆ ಜ್ಞಾನಲಿಂಗವನ್ನು ತೃಪ್ತಿಲಿಂಗವೆಂದು ನಾಮಾಂತರದಿಂದ ಕರೆಯುವುದುಂಟು.

ಭಾವವನ್ನೊಳಗೊಂಡಿದೆ ಭಾವಲಿಂಗ. ಆ ಭಾವಲಿಂಗವನ್ನು ಬೆಳಗುತ್ತದೆ ಜ್ಞಾನ. ಆ ಜ್ಞಾನವನ್ನು ಒಳಗೊಂಡುದೇ ಜ್ಞಾನಲಿಂಗ. ಹೀಗೆ ಅಂಗ-ಲಿಂಗಗಳಿಗೆ ಭಿನ್ನವಿಲ್ಲ.

ಮನವೆಂಬುದು ಬೇರಿಲ್ಲ. ಮಹಾದೇವನ ಮಹಾ ಅರುಹು ನೋಡಾ! ಸಂಕಲ್ಪವಿಕಲ್ಪಗಳ ಧರಿಸಿದಲ್ಲಿ ಮನವೆನಿಸಿತ್ತು. ಅದು ಅಳಿದಲ್ಲಿ ಮಹಾ ಜ್ಞಾನವೆನಿಸಿತ್ತು. ಅಳಿದು ಭಾವ ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜನನೆನಿಸಿತ್ತು.'

ಮನಕ್ಕೂ ಜ್ಞಾನಕ್ಕೂ ಇರುವ ಬಗೆಯಿದು; ಬಣ್ಣವಿದು. ಸಂಕಲ್ಪ ವಿಕಲ್ಪಗಳಿಂದ ಕೂಡಿದಲ್ಲಿ ಮನ. ಅವನ್ನು ಬಿಟ್ಟಲ್ಲಿ ಅದೇ ಜ್ಞಾನ. ಆ ಜ್ಞಾನವು ಭಾವಲಿಂಗ ಸಾಧಕವಾಗುತ್ತದೆ. ಭಾವಲಿಂಗಕ್ಕೆ ಜ್ಞಾನಲಿಂಗವು ಸಾಧ್ಯವಾಗುತ್ತದೆ. ಆ ತೃಪ್ತಿಯಲ್ಲಿ ತುರ್ಯ ತುರ್ಯಾತೀತಗಳಿಗೇರಿದಾಗ ತೃಪ್ತಿಲಿಂಗ (ಜ್ಞಾನಲಿಂಗ) ವೆನಿಸುತ್ತದೆ. ಆಗ ಇಷ್ಟ–ಪ್ರಾಣ–ಭಾವವೆಂಬ ಬ್ರಹ್ಮ–ವಿಷ್ಣು–ರುದ್ರರೆಂಬ ತ್ರಿಮೂರ್ತಿ ಭೇದವಿಲ್ಲ; ತ್ರಿಲಿಂಗ ಭೇದವಿಲ್ಲ. ತ್ರಿವಿಧಾಂಗ–ತ್ರಿಗುಣಗಳಿರುವುದಿಲ್ಲ. ಆದನ್ನು ಆ ಸ್ವಸ್ವರೂಪನ್ನು ತಿಳಿಸುವುದೇ ಬೋಧ; ಅದೇ ಬೋಧ್ಯ.

'ಬೋಧವೆಂದರೆ ಕರ್ಣವನೂದಿ ಮಂತ್ರವ ಹೇಳಿದ್ದು ಬೋಧವೇ? ಅಲ್ಲಲ್ಲ; ಬೋಧವೆಂದರೆ ತನುತ್ರಯ ಸಾಕ್ಷಿ ನೀನೇ ಪರವಸ್ತು ಎಂಬುವದದೇ ನಿಜಬೋಧ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'

ಬರೀ ಮಂತ್ರಬೋಧರೂಪ ಶಿಕ್ಷೆಯಿಂದ ಬೋಧ ಪೂರ್ಣವಾಗುವುದಿಲ್ಲ. ಅದು ಚೆನ್ನಾಗಿ ವೇಧಿಸಬೇಕು. ಅದು ಚಿತ್ತದಲ್ಲಿ ಅಚ್ಚೊತ್ತಿ ಜ್ಞಾನವಾಗಬೇಕು; ಬರೀ ಜ್ಞಾನವಾದರೆ ಸಾಲದು; ಜ್ಞಾನ ಘನವಾಗಬೇಕು. ಜ್ಞಾನ ಘನವಾಗುವುದೇ ಜ್ಞಾನಲಯ. ಆ ಜ್ಞಾನಲಯಕ್ಕೆ ಆಶ್ರಯವಾದ ಚೈತನ್ಯವೇ ಅಥವಾ ಸಾಕ್ಷಿಯಾದ ಸ್ವಸ್ವರೂಪವೇ ನಿಜಬೋಧ. ಆ ನಿಜಬೋಧದಿಂದ ಬೋಧ್ಯವೂ ಸಾಧ್ಯವೂ ಆದುದೇ ಜ್ಞಾನಲಿಂಗ ಅಥವಾ ತೃಪ್ತಿಲಿಂಗ.

ಅಪೂರ್ಣಭಾವವನ್ನು ಅಜ್ಞಾನಬುದ್ಧಿಯನ್ನು ಹುಟ್ಟಿಸಿದ ಆಣವಮಲ ನಿವೃತ್ತಿಯಾಗಬೇಕು; ಅಂಗತ್ವ ಅಡಗಿ ನಿಷ್ಪತ್ತಿಯಾಗಬೇಕು. ಅಂತಾಗಬೇಕಾದರೆ ಜ್ಞಾನಲಿಂಗೋಪಾಸನೆಯ ಬೆಂಬಲಬೇಕು. 'ಅಂಗವೆಂದರೆ

ಅಜ್ಞಾನ. ಲಿಂಗವೆಂದರೆ ಸುಜ್ಞಾನ. ಲಿಂಗವಿಡಿದು ಆಚರಿಸುವರಲ್ಲದೆ ಅಂಗವಿಡಿದು ಆಚರಿಸರು ಕಪಿಲ ಸಿದ್ಧಮಲ್ಲಿಕಾರ್ಜುನಾ.'

ಲಿಂಗವಿಡಿದು ಆಚರಿಸುವುದೇ ಲಿಂಗವಂತಿಕೆಯ ಕುರುಹು; ಲಿಂಗೈಕ್ಯದ ಹೊಲಬು. ಲಿಂಗವೆಂದರೆ ಸುಜ್ಞಾನವೆಂಬುದನ್ನರಿಯಬೇಕು. ಕೇಳಿ ಕಂಡುದೇ ಸುಜ್ಞಾನ. ಕೇಳಿಕಾಣಬೇಕಾದರೆ ಕಳಾಗುರುವಿನ ವೇಧಾದೀಕ್ಷೆ ಬೇಕು. ಕೇಳಿ ಕಾಣುವ ಕಂಡು ನೆನೆವ ವಸ್ತು ಮತ್ತಾವುದಲ್ಲ–ಆತ್ಮವೊಂದೇ! ಆತ್ಮಜ್ಞಾನವೇ ಶಿವತ್ವಸಿದ್ಧಿಗೆ ಶ್ರೇಷ್ಠ ಸಂಪತ್ತಿ. 'ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ. ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'

ಅಚ್ಚ ಅರಿವು ಅಳವಟ್ಟ ಬಳಿಕ ಅಂಗಭೇದವಿಲ್ಲ; ಲಿಂಗಭೇದವಿಲ್ಲ. ಹರಿಹರ ವಿರಂಚಿ ಭೇದವಿಲ್ಲ. ತ್ರಿಗುಣಗಳ ತಿಮಿರವಿಲ್ಲ; ತಿರುಗುಣಿಯಿಲ್ಲ. ಇವನ್ನು ಮೀರದೆ ತುರ್ಯವಿಲ್ಲ.

"ಸ್ಥೂಲೇ ಕ್ರಿಯಾ ಸಮಾಪತ್ತಿಃ ಸೂಕ್ಷ್ಮೇ ಭಾವಸ್ಯ ಸಂಭವಃ
ಸ್ಥೂಲ ಸೂಕ್ಷ್ಮಪದಾತೀತೇ ಜ್ಞಾನಮೇವ ಪರಾತ್ಮನಿ।
ಕಲ್ಪಿತಾನಿ ಹಿ ರೂಪಾಣಿ ಸ್ಥೂಲಾನಿ ಪರಮಾತ್ಮನಃ
ಸೂಕ್ಷ್ಮಾಣ್ಯಪಿ ಚ ತೈಃ ಕಿಂ ವಾ ಪರಬೋಧಂ ಸಮಾಚರೇತ್॥"

ಸ್ಥೂಲವಾದ ಇಷ್ಟಲಿಂಗದಲ್ಲಿ ಕ್ರಿಯಾ ಸಮಾಪತ್ತಿಯಾಗುತ್ತದೆ. ಸೂಕ್ಷ್ಮವಾದ ಪ್ರಾಣಲಿಂಗದಲ್ಲಿ ಭಾವಸಮಾಪತ್ತಿಯಾಗುತ್ತದೆ. ಸ್ಥೂಲ ಸೂಕ್ಷ್ಮಗಳನ್ನು ಮೀರಿದ ಪರಾತ್ಮರೂಪ ತೃಪ್ತಿಲಿಂಗದಲ್ಲಿ ಜ್ಞಾನಸಮಾಪತ್ತಿಯಾಗುತ್ತದೆ. ಸಮಾಪತ್ತಿಯೆಂದರೆ ಚೆನ್ನಾಗಿ ಹೊಂದುವಿಕೆ; ಬಿಚ್ಚಿ ಬೇರಿರಿಸದಂತಾಗುವಿಕೆ. ಕ್ರಿಯಾ–ಭಾವ–ಜ್ಞಾನಗಳು ಆ ಲಿಂಗಗಳಲ್ಲಿ ತಲ್ಲೀನವಾಗುತ್ತವೆ. ಆಗ ಕ್ರಿಯೆ ಬೇರಲ್ಲ, ಕ್ರಿಯಾಲಿಂಗಬೇರಲ್ಲ; ಭಾವ ಬೇರಲ್ಲ, ಭಾವಲಿಂಗ ಬೇರಲ್ಲ; ಜ್ಞಾನ ಬೇರಲ್ಲ, ಜ್ಞಾನಲಿಂಗ ಬೇರಲ್ಲ.

'ಅರಿದ ಬಳಿಕ ಬ್ರಹ್ಮವೆಂಬುದು ಮೃಗಜಲ ನೋಡಾ! ಅರಿದ ಬಳಿಕ ಬ್ರಹ್ಮವೆಂಬುದು ವಂಧ್ಯಾಪುತ್ರನೋಡಾ! ಅರಿದ ಬಳಿಕ ಬ್ರಹ್ಮವೆಂಬುದು ಕಪಿಲಸಿದ್ಧಮಲ್ಲಿಕಾರ್ಜನನಲ್ಲಿ ಶಬ್ದ ಮುಗ್ಧ ನೋಡಾ ಕಲ್ಲಯ್ಯಾ.

ಸ್ಥೂಲವಾದ ಕ್ರಿಯಾಯೋಗ, ಸೂಕ್ಷ್ಮವಾದ ಭಕ್ತಿಯೋಗ, ಸ್ಥೂಲ ಸೂಕ್ಷ್ಮಗಳಿಂದಾಚೆಯ ಜ್ಞಾನಯೋಗ ಇವುಗಳಲ್ಲಿ ಜ್ಞಾನ ಯೋಗವು 'ಪರಬೋಧ'ವೆನಿಸಿದೆ. ಸಮಾಪತ್ತಿಯೆಂದರೆ ಯೋಗವೆಂದರ್ಥ. ಈ ಪರ ಬೋಧದ ಸಂಬಂಧ ಕ್ರಿಯಾಯೋಗದಿಂದಲೇ ಮೊದಲಾಗುತ್ತದೆ; ಮುಂದು ವರಿದು ಕೊನೆಗೆ 'ಪರಬೋಧ' ವೆನಿಸುತ್ತದೆ.

ಕ್ರಿಯಾಯೋಗದ ಅರಿವು ಕರಿಗೊಂಡಾಗ ಬ್ರಹ್ಮವಸ್ತು ಮೃಗಜಲ ದಂತಾಗುತ್ತದೆ. ಮೃಗಜಲ ಶಬ್ದವೇ ಪೃಥ್ವಿ ಜಲ ತೇಜಾಂಶದಿಂದಲೂ ವಾಯ್ವಂಶದಿಂದಲೂ ಕೂಡಿರುವಿಕೆಯನ್ನು ಸೂಚಿಸುತ್ತದೆ. 'ಕಾಯಕದಲ್ಲಿ ನಿರತನಾದಡೆ ಗುರು ದರುಶನವಾದಡೆಯೂ ಮರೆಯಬೇಕು. ಲಿಂಗ ಮುಂದಿದ್ದಡೆಯೂ ಹಂಗುಹರಿಯಬೇಕು....' ಎಂಬೀವಚನಾಭಿಪ್ರಾಯವು ಇದನ್ನೇ ಸಮರ್ಥಿಸುತ್ತದೆ. ಭಾವ(ಭಕ್ತಿ)ಯೋಗ ಸಿದ್ಧಿಸಿದಾಗ ಬ್ರಹ್ಮವು ವಂಧ್ಯಾಪುತ್ರನಂತಿರುತ್ತದೆ. ಭಾವೈಕ್ಯದಲ್ಲಿ ಬ್ರಹ್ಮವೆಲ್ಲಿ, ತಾನೆಲ್ಲಿ ? ಇದರಲ್ಲಿ ಆಕಾಶತತ್ತ್ವ ಸೂಚ್ಯವಾಗಿದೆ. ಕ್ರಿಯಾ-ಭಕ್ತಿ-ಗಳನ್ನು ದಾಟಿಜ್ಞಾನ ಯೋಗದ ಪೂರ್ಣಪ್ರಜ್ಞೆಯುಂಟಾದಲ್ಲಿ ಶಬ್ದ ಮುಗ್ಧವಾಗುತ್ತದೆ;ಅಂದರೆ ಮಾತಿಗೆ ಇಂಬಿರುವುದಿಲ್ಲ. ಆಕಾಶಾತೀತತೆ ಅಳವಟ್ಟಿರುತ್ತದೆ. ಆಗ ಸ್ಥೂಲ ಸೂಕ್ಷ್ಮಗಳ ರೂಪನಾಮಗಳ ಪೃಥುಗ್ಭಾವವಿರುವುದಿಲ್ಲ. ಇದ್ದೂಇಲ್ಲದಂತಿರು ತ್ತವೆ. ಇದ್ದರೂ ನಿಷ್ಪತ್ತಿಗೊಂಡಿರುತ್ತವೆ;

'ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ ಬರುತ್ತಿದೆ ನೋಡಾ. ಈ ಘಟ ಬಂದಿದ್ದರಿಯೆ, ಹೋದದ್ದರಿಯೆ; ನಿಂದ ವಸ್ತುವದು ನಿಜವೆಂದರಿದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.'

ಮೇಘ ಮುಸುಕಿದರೆ ಮುಗಿಲಿಗೆ, ತೆರೆಯೆದ್ದರೆ ತೊರೆಗೆ ಕೊರತೆ ಯೇನಿಲ್ಲ; ಕಲಂಕವೇನಿಲ್ಲ. ಅಂತೆಯೇ ಸ್ಥೂಲಾದಿ ಅಂಗಗಳು ಬಂದರೆ ಇದ್ದರೆ ಪರಮಾತ್ಮನಿಗೆ ಯಾವ ಕೊರತೆ ಕಳಂಕಗಳಿಲ್ಲ. ನಿಜದರಿವು ನೆಲೆ ಗೊಂಡಿರುವುದೇ ಮುಖ್ಯ. ಅಂತೆಯೇ 'ನಿಜಬೋಧಂ ಸಮಾಚರೇತ್' ಎಂದು ಉಪದೇಶವಿತ್ತಿದ್ದಾರೆ.

ನಿಜಬೋಧ ಅಂದರೆ ಅಪರೋಕ್ಷಾನುಭೂತಿಯುಳ್ಳವರಿಗೆ ಸ್ಥೂಲ ಸೂಕ್ಷ್ಮಗಳಾಗಲಿ ರೂಪನಾಮಗಳಾಗಲಿ ಏನೂ ಮಾಡವು. 'ಜ್ಞಾನ ವಿಡಿದು ಆಚರಿಸಿದರಲ್ಲದೆಕ್ರಿಯೆವಿಡಿದು ಆಚರಿಸಿದವರು ಜ್ಞಾನವಿಡಿದು ಆಚರಿಸಲಿಲ್ಲವು. ರೂಪುವಿಡಿದು ನಿರೀಕ್ಷಿಸುವರಲ್ಲದೆ ಅರೂಪವಿಡಿದು ನಿರೀಕ್ಷಿ ಸರು. ಜ್ಞಾನವಿಡಿದಾಚರಿಸಿದರು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಚೆನ್ನಬಸವಣ್ಣನವರು.' ಸ್ಥೂಲಸೂಕ್ಷ್ಮಗಳೂ ರೂಪುನಾಮಗಳೂ ಪಾರ ಮಾರ್ಥಿಕವಾಗಿವೆ. ಅಂತೆಯೇಜ್ಞಾನ–ಕ್ರಿಯೆಗಳೂ ಸತ್ಯವಾಗಿವೆ. ಸಮ ನಾಗಿವೆ. ಆದರೆಸಾಧಕನು ಮುಂದುವರಿದು ನಿಜಕ್ಕೆ ನಿಲುಕಿದಾಗ ಹಿಂದಿನವು ಬಂದು ಬೆರೆಯುವವಲ್ಲದೆ ಬೇರೆ ತೊಡಕನ್ನುಂಟು ಮಾಡವು. ಒಂದಿಲ್ಲ ಒಂದುಂಟೆಂದು ಹೇಳುವುದುಸರಿಯಲ್ಲ. ಕಾರಣವುಂಟ ಕಾರ್ಯವಿಲ್ಲೆಂದು ಹೇಳಲಾಗದು. ಸ್ವಾನುಭಾವಿಗೆ ಸಮ್ಯಗ್‌ಜ್ಞಾನಿಗೆ ಇದ್ದರೂ ಸರಿಯೆ, ಇಲ್ಲ ದಿದ್ದರೂ ಸರಿಯೆ. ತೋರಿದರೂಸರಿಯೆ, ತೋರದಂತಿದ್ದರೂ ಸರಿಯೆ. ಅವು ಗಳಿಂದ ಅವನಿಗೇನಾಗಬೇಕಿಲ್ಲ; ಅಭ್ಯಂತರವೂ ಇಲ್ಲ. ಆ ನಿಜಬೋದವೇ ಜ್ಞಾನಲಿಂಗ. ಅದನ್ನು ಅಳವಡಿಸಿಕೊಂಡವನೇ ಜ್ಞಾನಲಿಂಗಿ.

"ಪರಾತ್ಪರಂ ತು ಯದ್ಬ್ರಹ್ಮ ಪರಮಾನಂದ ಲಕ್ಷಣಂ
ಶಿವಾಖ್ಯಂ ಜ್ಞಾಯತೇ ಯೇನ ಜ್ಞಾನಲಿಂಗೀ ಸ ಕಥ್ಯತೇ|"

ಆ ಪರಬ್ರಹ್ಮವು ಪರಕ್ಕೆ ಪರವಾಗಿದೆ. ಪರಮಾನಂದ ಲಕ್ಷಣವುಳ್ಳು ದಾಗಿದೆ. ಶಿವನಾಮಸಹಿತವಾಗಿದೆ. ಅದನ್ನು ಅರಿತವನು ಅಂದರೆ ಅನು ಭವಕ್ಕೆ ತಂದುಕೊಂಡವನು 'ಜ್ಞಾನಲಿಂಗೀ' ಎಂದೆನಿಸುವನು.

ತೆರೆಯಾದರೂ ಜಲತ್ವಕ್ಕೆ ಹಾನಿಯಿಲ್ಲ. ಪರಾಪರ ರೂಪಾದರೂ ಪರಾತ್ಪರತ್ವಕ್ಕೆ ಚ್ಯುತಿಯಿಲ್ಲ. ಕ್ರಿಯಾ ಮತ್ತು ಭಾವಗಳು ಪರವಾಗಿವೆ. ಆ ಪರಗಳಿಗೆ ಪರವಾಗಿದೆ ಜ್ಞಾನಲಿಂಗ. ಆ ಪರಗಳನ್ನೊಳಕೊಳ್ಳದೆ ಪರಾ ತ್ಪರವೆನಿಸದು. 'ಬ್ರಹ್ಮ'ಎಂಬ ಪ್ರಯೋಗವೇ ಈ ಅರ್ಥವನ್ನೊಳಗೊಂಡಿದೆ. ಮತ್ತು ಅದೇ ಆ ಪರಾತ್ಪರ ಬ್ರಹ್ಮವೇ ಪರಮಾನಂದಸ್ವರೂಪವಾಗಿದೆ.

'ಆನಂದೋ ಬ್ರಹ್ಮೇತಿ ವ್ಯಜಾನಾತ್ । ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಆನಂದೇನ ಜಾತಾನಿ ಜೀವಂತಿ । ಆನಂದಂ ಪ್ರಯಂತ್ಯಭಿ ಸಂವಿಶಂತೀತಿ॥'

ಎಂದು ತೈತ್ತಿರಿಯೋಪನಿಷತ್ತು ಬ್ರಹ್ಮನ ಪರಮಾನಂದ ಲಕ್ಷಣವನ್ನು ಪ್ರತಿಪಾದಿಸಿ ಪರಿಪೋಷಿಸಿದೆ. ಅಲ್ಲದೆ ಆನಂದವೇ ಜಗತ್ತಿನ ಜೀವಿಗಳ ಜೀವನವಾಗಿದೆ; ಚರಮಪದವೂ ಆಗಿದೆ. ಅದರಿಂದಾಗಿ ಅದನ್ನು ಅರಿಯಲು ಅಳವಡಿಸಿಕೊಳ್ಳಲು ಯೋಗಾಂಗನು ಯತ್ನಿಸಬೇಕು. ಆನಂದ ಯೋಗಿಯಾಗಬೇಕು. ತಿಳಿದು ತಳೆವುದೇ ತತ್ತ್ವ; ಅದೇ ಚರಮಸತ್ವ.

'ತಿಳಿಯದೆ ಪೂಜಿಸಿದರಾಗುವುದೇನೋ ಅಯ್ಯ? ತಿಳಿದು ತಿಳಿದು ಮಾಡಬೇಕು. ಜಂಗಮಾರ್ಚನೆಯ ತಿಳಿದು ತಿಳಿದು ಮಾಡಬೇಕು. ತಿಳಿಯದೆ ಮಾಡಲು ನಿನ್ನ ಸಿದ್ಧಿಗಳಿಗೆ ಸಿದ್ಧರಲ್ಲದೆ ನಿನ್ನಂಗ ದೊರೆಕೊಂಬ ಪರಿಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಯೋಗಾಂಗನಿಗೆ ಜ್ಞಾನಲಿಂಗವೇ ಜಂಗಮ. ಅದನರಿವುದೇ ಆತನ ಧ್ಯೇಯ. ಅದನರಿಯದೆ ಆತ ಜ್ಞಾನಲಿಂಗಿಯಾಗನು. ಜ್ಞಾನಲಿಂಗಿಯಾಗದೆ ನಿಜಸ್ವರೂಪದ ನಿಲುಕಡೆಯೊದಗದು. 'ತಿಳಿ ನೀರೆಂಬೆ, ತಿಳಿ ನೀರೆಂಬೆ; ತಿಳಿ ನೀಯೆಂದು ಒಂದು ದಿನ ಅಂದಿಲ್ಲೆಲೋ ಮಾನವಾ! ಕ್ಷಣಕೆ ಕ್ಷಣಕ್ಕೆ ತಿಳಿ ನೀ ಎಂದರೆ ತಳುಹದೆ ತನ್ನ ನಿಜವ ಕೊಡನೇ ಕಪಿಲಸಿದ್ಧ ಮಲ್ಲೇಂದ್ರಾ?'

'ಅರಿವೆನೆಂದರೆ 'ಸತ್ಯಜ್ಞಾನಮನಂತಂ ಬ್ರಹ್ಮ' ಎಂದು ಶ್ರುತಿ ಸಾರುತ್ತಿದೆ. ಮರೆದೆನೆಂದರೆ 'ಸಾಕ್ಷಾತ್ಸಚ್ಚಿದಾನಂದಂ ಭವಂ' ಎಂದು ಕೈವಲ್ಯೋಪನಿಷದ್ಘೋಷಿಸುತ್ತದೆ. ಅರಿವು ವಸ್ತು ಸ್ವರೂಪ. ಮರಹು ಮಾಯಾಸ್ವರೂಪವೆಂದರಾನು ನಿರ್ವಯಲ ಸ್ವರೂಪನಾದೆ ನೋಡಾ ಕಪಿಲ ಸಿದ್ಧ ಮಲ್ಲಿಕಾರ್ಜುನ.'

ಇದರಿಂದಾಗಿ ಶಿವನರಿದು ಶಿವಜ್ಞಾನಿಯಾಗಬೇಕು. ಶಿವನರಿಯದೆ ಶಿವಸುಖದೊರೆಯದು; ಶಿವಸ್ವರೂಪದೊರೆಯದು. 'ಗುರು ಮುಖ

ದಿಂದಾಗಿಲಿ ಶಾಸ್ತ್ರಮುಖದಿಂದಾಗಲಿ ಮತ್ತಾವ ಮುಖದಿಂದಾಗಲಿ ತಿಳಿದನು ಭಾವಿಯೇ ಸಂಸ್ಕಾರಿ ನೋಡಾ ಆತನೇ ಪರಮ ವೀರಶೈವ ನೋಡಾ. ಆತನೇ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ ಕಲ್ಲಯ್ಯ.'

'ಭಕ್ತಿಗೆ ಅನುಭವವೇ ಬೀಜಕಾಣಿರೋ! ಭಕ್ತಿಗೆ ಅನುಭಾವವೇ ಆಚರಣೆ ಕಾಣಿರೋ! ಭಕ್ತಿಗೆ ಅನುಭಾವವೇ ಸಕಲೈಶ್ವರ್ಯದ ಶೃಂಗಾರ ಕಾಣಿರೋ! ವೀರಶೈವಾಚಾರ ಸಂಪನ್ನರೆನಿಸುವ ಪರಮ ಸದ್ಭಕ್ತನಿಗೆ ಅನುಭಾವವೇ ಅರಿವಿನ ಗೊತ್ತು ಕಾಣಿರೋ! ಅದು ಕಾರಣವಾಗಿ ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನುಭಾವನರಿಯದವ ಕಾಮುಕ ಕಾಣಿರೋ!

'ತ್ರಿಕರಣ ಶುದ್ಧವಾಗಿ ಆಚಾರಪೂರಿತವಾಗಿ ಅನುಭಾವಯುಕ್ತವಾಗಿ ನಿಮ್ಮ ನೆರೆನಂಬಿ ಮಾಡಿದಡೆ ನಿಜಮುಕ್ತಿಯಹುದು. ಅನುಭಾವವಿಲ್ಲದ ಭಕ್ತಿ ಎಳತಟಗೊಳಿಸುವುದು. ಅತಿ ಚಪಳಿಗನಾದ ಜಂಗಮ, ಸಂಸಾರಿಯಾದ ಭಕ್ತ; ನಿಸ್ಸಂಸಾರಿಯಾದ ಲಿಂಗಾನುಭಾವಿ. ಸಮ್ಯಗ್‌ಜ್ಞಾನ-ಶಿವಲಿಂಗ ಒಂದಾದೊಡೆ ತೆರಹಿಲ್ಲದಿರ್ಪ ನಮ್ಮ ಕೂಡಲ ಚೆನ್ನಸಂಗಮದೇವಾ.'

'ಜ್ಞಾನಲಿಂಗೀ' ಆದರೆ ಆಗುವ ಫಲವಿಂತಹುದು. ಜ್ಞಾನಲಿಂಗಿಯಾಗದೆ ಪರಮಾನಂದವುಂಟಾಗದು; ಪರಾತ್ಪರ ಬ್ರಹ್ಮತ್ವ ಬಾರದು.

"ಬಾಹ್ಯಕ್ರಿಯಾಂ ಪರಿತ್ಯಜ್ಯ ಚಿಂತಾಮಪಿ ಚ ಮಾನಸೀಂ
ಅಖಂಡಜ್ಞಾನರೂಪತ್ವಂ ಯೋ ಭಜೇನ್ಮುಕ್ತ ಏವ ಸಃ ।"

ಲಿಂಗಕ್ಕೆ ಬಾಹ್ಯವಾದ ಕ್ರಿಯೆಗಳನ್ನು ಲಿಂಗಚಿಂತೆಗೆ ಹೊರಗಾದ ಮಾನಸಿಕ ಚಿಂತೆಯನ್ನು ಬಿಟ್ಟು, ಅಖಂಡ ಜ್ಞಾನಾನುಭವರೂಪ ಲಿಂಗವನ್ನು ತೊಟ್ಟು ಜೀವಿಸುವಾತನೇ ಜೀವನ್ಮುಕ್ತನು-ಎಂದು ಹೇಳಿ ಜ್ಞಾನಲಿಂಗಸ್ಥಲವನ್ನು ಮುಗಿಸುತ್ತಾನೆ.

'ಕೆರೆಯ ನೀರು, ಮರದಲ್ಲಿಯ ಪುಷ್ಪವ ಧರಿಸಿದರೇನು ಅಯ್ಯ? ಆಗುವುದೇ ಆಗುವುದೇ ಲಿಂಗಾರ್ಚನೆ? ನೀರನೆರೆಯಲಿಕ್ಕಾತನೇನು ಬಿಸಿಲಿನಿಂದ ಬಳಲಿದನೆ? ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೇ?

ನಿನ್ನ ಮನವೆಂಬ ನೀರಿನಿಂದ ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲಡೆ ಭಕ್ತನೆಂಬೆ, ಮಾಹೇಶ್ವರನೆಂಬೆ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'

ಬಾಹ್ಯ ಪೂಜೆಯ ಜತೆಗೆ ಭಿನ್ನಭಾವದ ಪೂಜೆಯೂ ನಿರರ್ಥಕವೆಂಬುದನ್ನು ಈ ವಚನವು ವಿವರಿಸುತ್ತ ಅಭಿನ್ನಭಾವದ ಆಂತರಿಕ ಪೂಜಾಕ್ರಿಯೆ ಅಗತ್ಯ ಮತ್ತು ಸಾರ್ಥಕ ಎಂಬುದನ್ನು ಎತ್ತಿ ತೋರಿಸಿದೆ.

ಇನ್ನು ವೈಷಯಿಕ ಚಿಂತೆಯಿರಬಾರದು. ಇದು ಚಾಪಲ್ಯಮೂಲ; ದುಃಖರೂಪಶೀಲ. ನಿಶ್ಚಲತೆ ನಿಜಸುಖಶೀಲತೆ ಬೇಕೆಂದರೆ ಶಿವಲಿಂಗ ಚಿಂತೆ ಬೇಕು. 'ಪರರ ಚಿಂತೆ ನಮಗೇಕಯ್ಯ ? ನಮ್ಮ ಚಿಂತೆ ನಮಗೆ ಸಾಲದೆ ? ಕೂಡಲ ಸಂಗಮದೇವನೊಲಿವನೋ ಒಲಿಯನೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು.' ಇದು ಲಿಂಗಾನುಭಾವಿಯ ಹೊಲಬು. ಇದು ಲಿಂಗಜ್ಞಾನಿಯ ನೆನಹಿನ ಹೊನಲು:

'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬುವ ಚಿಂತೆ. ಎನಗೆ ಎನ್ನ ಕೂಡಲ ಸಂಗಮದೇವರ ನೆನೆವ ಚಿಂತೆ.' ಇದು ಜ್ಞಾನಲಿಂಗಿಯ ಚಿಂತೆ; ಚಿತ್ತಹಂಬಲ. ಆತನಿಗೆ ಬೇರೊಂದನ್ನು ಬೇರೊಬ್ಬನನ್ನು ನೆನೆಯಲು ಅವಕಾಶವೇ ಇರುವುದಿಲ್ಲ. ಆತನ ಮನವೂ ಲಿಂಗಕ್ಕೆ ಹೊರಗಾಗಿರುವುದಿಲ್ಲ. ಆತನ ತನುಮನವೆಲ್ಲ ಲಿಂಗವಾಗಿರುತ್ತದೆ. ಆ ಅಖಂಡ ಲಿಂಗಾನುಸಂಧಾನದಲ್ಲಿ ತಲ್ಲೀನವಾಗಿರುತ್ತದೆ. 'ಲಿಂಗವೇ ಅಂಗವಾಗಿಹನೆಂಬವನ ಭಾವ ಇದರಲ್ಲೇ ನಿಶ್ಚಯ ನೋಡಾ ! ನಿಂದೆ ಸ್ತುತಿಗಳು ಬಂದಲ್ಲಿ ಹರ್ಷರೋಷಗಳಿಲ್ಲದಿರಬೇಕು. ನೀಚಾನೀಚಗುಣವ ನೋಡದೆ ನಮ್ರಭಾವಾವಂತನಾಗಬೇಕು. ಸರ್ವಜೀವಿಗಳ ತನ್ನಂತೆ ತಿಳಿದು ನೋಡಬೇಕು. ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು. ಆಕಾಶದ ಬೆಳಗಿನ ಬೆಳಗು ನೋಡಿ ಬೆಳಗುಮಯನಾಗಬೇಕು ನೋಡಾ, ಎಲೇ ಮನವೇ ಕಪಿಲ ಸಿದ್ಧಮಲ್ಲಿಕಾರ್ಜುನನಲ್ಲಿ.' 'ಮರಣವಿದ್ದು ಮರಣವಿಲ್ಲ, ಮರಣ ಲಿಂಗದಲ್ಲಿ ನಿರ್ಯಾಣವಾಯಿತ್ತಾಗಿ ! ಮನವಿದ್ದು ಮನವಿಲ್ಲ, ಮನವು ಮಹದಲ್ಲಿ ಲೀಯವನೆಯ್ದಿತ್ತಾಗಿ ! ಜೀವವಿದ್ದು ಜೀವವಿಲ್ಲ, ಜೀವ ಸಜ್ಜೀವವಾಯಿ

ತ್ತಾಗಿ ! ಭಾವವಿದ್ದು ಭಾವವಿಲ್ಲ, ಭಾವ ನಿರ್ಭಾವವಾಯಿತ್ತಾಗಿ ! ಕರಣಂಗಳಿದ್ದು ಕರಣಂಗಳಿಲ್ಲ, ಕರಣಂಗಳಲ್ಲಿ ಲಿಂಗಕರಣಂಗಳಾಗಿ ! ಇಂತು ಸರ್ವವು ಇದ್ದೂ ಸರ್ವವು ಇಲ್ಲದ ಕಾರಣ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು.,

ಜ್ಞಾನಲಿಂಗ ಅಖಂಡ. ಅದನ್ನು ಭಜಿಸುವ ಭಕ್ತನ ಮನ ಅಖಂಡ. ಆತನಿಗೆ ಅನ್ಯಭಾವವಿಲ್ಲ; ಅಂಗಭಾವವಿಲ್ಲ. ಕ್ರಿಯಾಲಿಂಗ ಭಾವಲಿಂಗ ಜ್ಞಾನಲಿಂಗಗಳ ಅನುಸಂಧಾನದಲ್ಲಿ ಅವಿರಳವಾಗಿರುತ್ತಾನೆ. ಅಸಮಭಾವವನ್ನು ಬಿಟ್ಟು ಸಮಭಾವಿಯಾಗಿರುತ್ತಾನೆ; ಸಮದರ್ಶಿಯಾಗಿರುತ್ತಾನೆ. ಇದು ಜ್ಞಾನಲಿಂಗೋಪಾಸನೆಯ ಪರಮ ಫಲ; ಚರಮ ಫಲ.

ವಿಶ್ವವನ್ನೇ ಒಳಗೊಂಡ ವಿಜ್ಞಾನಲಿಂಗೋಪಾಸಕನಿಗೆ ವಿಶ್ವದಲ್ಲಿ ಭಿನ್ನಭಾವವೆಂದರೇನು ? ವಿಶ್ವೈಕ್ಯವನ್ನೇ ತನ್ನ ವಿಜ್ಞಾನಲಿಂಗದಲ್ಲಿ ಸಾಧಿಸಿದ ಜೀವನ್ಮುಕ್ತನಾತನು; ಜಗದ್ವಂದ್ಯನಾತನು.

ಲಿಂಗವೆಂದರೆ ಬೇರೇನಲ್ಲ, ಅಖಂಡ ಜ್ಞಾನರೂಪತ್ವ. ಲಿಂಗದ ಈ ಲಕ್ಷಣ ಸಲ್ಲಕ್ಷಣ; ಸಂಪೂರ್ಣ ಲಕ್ಷಣ. ಖಂಡಾಖಂಡವೆಂದು ಜ್ಞಾನವೆರಡುಂಟು. ಖಂಡಜ್ಞಾನಕ್ಕೆ ಅಲ್ಲಿ ಆ ಲಿಂಗದಲ್ಲಿ ಇಂಬಿಲ್ಲ. ಖಂಡಜ್ಞಾನವು ಅದರ ನಿಜಸ್ವರೂಪವಲ್ಲ; ಪೂರ್ಣಸ್ವರೂಪವಲ್ಲ. ಅಖಂಡ ಜ್ಞಾನರೂಪತ್ವವೇ ಲಿಂಗ.

'ವೇದ ವೇದಿಸಲರಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು. ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತಿದ್ದಾವೆ.. ತರ್ಕ ತರ್ಕಿಸಲರಿಯದೆ ಅತರ್ಕ್ಯಲಿಂಗವೆಂದು ಮೌನಗೊಂಡವು. ಆಗಮ ಅಗಮ್ಯ ಲಿಂಗವೆಂದು ಗಮಿಸಲರಿಯದೆ ಹೋದವು. ನರರು ಸುರರು ಅಂತವ ಕಾಣರು ನಮ್ಮ ಕೂಡಲ ಸಂಗಮದೇವನ ಪ್ರಮಾಣವ ಶರಣ ಬಲ್ಲ.'

ವೇದಶಾಸ್ತ್ರ ತರ್ಕಾಗಮಗಳಿಗೆ ಅಂದರೆ ಖಂಡಜ್ಞಾನಗಳಿಗೆ ಸಿಲುಕದ ವಸ್ತುವದು. ಶಬ್ದಜ್ಞಾನಕ್ಕೆ ಸಾಧ್ಯವಾಗದ ವಸ್ತುವದು. ಬೌದ್ಧಿಕ ತರ್ಕಕ್ಕೆ ಸಿಕ್ಕದ ವಸ್ತುವದು. ಅಖಂಡಜ್ಞಾನಕ್ಕೆ ಅಂದರೆ ಆತ್ಮಾನುಭವಕ್ಕೆ ಅಳವಡುವ ಲಿಂಗವದು,

ಶಾಬ್ದಿಕಜ್ಞಾನ ಪರಮಾನಂದವನ್ನುಂಟುಮಾಡದು. ತೃಪ್ತಿ ಕೇವಲ ಶಾಬ್ದಿಕವಲ್ಲ; ಬೌದ್ಧಿಕವಲ್ಲ. ಅದು ಸ್ವಾನುಭವ ಗಮ್ಯ. ಅದರಿಂದಾಗಿ ಅದು ಅನುಭಾವ ಪ್ರಮಾಣವುಳ್ಳದ್ದು. ಆ ಅನುಭಾವವನ್ನೇ ಅಖಂಡ ಜ್ಞಾನವೆಂದು ಮಹಾಜ್ಞಾನವೆಂದು ಶಿವಾಚಾರರರು ನಿರೂಪಿಸಿದ್ದಾರೆ. 'ಮಹಾ ಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ ಲಿಂಗ ಬೇರೆರೂಪ ನಿರೂಪ ವಲ್ಲ. ಲಿಂಗ ಬೇರೆ ಕಾಯಸಂಬಂಧಿಯಲ್ಲ. ಲಿಂಗ ಬೇರೆ ಮಹಾಘನ ದಿಂದತ್ತತ್ತ ಕೂಡಲಸಂಗಮದೇವರ ನಿಲವು ಆರಿಗೆಯೂ ಅಳವಡದು.'

ಅಖಂಡಜ್ಞಾನಲಿಂಗದ ಸ್ಥಾನ, ನಾಮ, ರೂಪ, ಕಾಯಗಳು ಖಂಡ ವಾದವುಗಳಲ್ಲ. ಅವೂ ಅಖಂಡವಾದವುಗಳು. ಅದು 'ಅತ್ಯತಿಷ್ಠದ್ದಶಾಂಗುಲಂ.' ಅದು ಹೆಸರಿಲ್ಲದ ಹೆಸರು ; ಅದು ಮಹಾಲಿಂಗ. ಅದಕ್ಕೆ ಮೇಲೆ ಲಿಂಗವಿಲ್ಲ ; ನಾಮವಿಲ್ಲ. ಎಲ್ಲ ರೂಪವೂ ಅದೇ ; ನಿರೂಪವು ಅದೆ. ಭಕ್ತಕಾಯವೇ ಲಿಂಗಕಾಯ. ಅದಕ್ಕೆ ಬೇರೆ ಕಾಯವಿಲ್ಲ. ಅದು ಮಹಾ ಘನಕ್ಕೆ ಘನ. ಹಾಗಿರುವ ಆ ಅಖಂಡಜ್ಞಾನಲಿಂಗವನ್ನು ಅಖಂಡಾನುಭಾವಿಯೇ ಅರಿದಳ ವಡಿಸಿಕೊಳ್ಳಬೇಕಲ್ಲದೆ ಅನ್ಯರಿಗೆ ಅಸಾಧ್ಯ ; ಅನ್ಯಚಿತ್ತರಿಗೆ ಅಸಾಧ್ಯ. 'ಮನಕ್ಕೆ ತೋರದು. ನೆನೆವಡನುವಲ್ಲ. ಘನಕ್ಕೆ ಘನವು. ಅವನೇನೆಂದು ಹೇಳುವೆನಯ್ಯ ? ಆರರಿಂದ ಮೀರಿದುದ, ಬೇರೆ ತೋರಲಿಲ್ಲದುದ, ದೇವ ದಾನವ ಮಾನವರ ಬಲ್ಲತನದ ಬಗೆಯ ಮೀರಿದುದನೇನ ಹೇಳುವೆನಯ್ಯ ? ಸಾಕ್ಷಿ: 'ಆದಿಮಧ್ಯಾಂತ ಶೂನ್ಯಂ ಚ ವ್ಯೋಮಾತೀತ ನಿರಂಜನಂ । ಧ್ಯಾನ ಜ್ಞಾನ ಮನೋಹೀನಂ ಶೂನ್ಯಲಿಂಗಮನಾಶ್ರಯಂ ॥' ಎಂದುದಾಗಿ ಅರಿಯಬಾರದು, ಕುರುಹುದೋರದು, ತೆರಹಿಲ್ಲದಿಪ್ಪುದು ಮಹಾಲಿಂಗ ಕಲ್ಲೇಶ್ವರ.'

'ಬಲ್ಲನಿತ ಬಲ್ಲರಲ್ಲದೆ, ಅರಿಯದುದನೆಂತು ಬಲ್ಲರು ? ಅರಿವು ಸಾಮಾನ್ಯವೆ ? ಅರಿದುದನಾರಿಗೂ ಅರಿಯಬಾರದು. ಗುಹೇಶ್ವರನೆಂಬ ಲಿಂಗವನರಿಯದೊಡೆರಡು, ಅರಿದಡೊಂದೆ.' ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ । ಭಾವನಾತೀತಮವ್ಯಕ್ತಂ ಪರಂಬ್ರಹ್ಮ ಶಿವಾಭಿದಂ ॥'

—ವಾತುಲಾಗಮ

'ಅಚಿಂತ್ಯಂ ಚಾಪ್ರಮೇಯಂಚ ವ್ಯಕ್ತಾವ್ಯಕ್ತಂ ಪರಂಚಯತ್ ಸೂಕ್ಷ್ಮಾತ್ಸೂಕ್ಷ್ಮತರಜ್ಞಾನಂ ತನ್ಮೇ ಮನಃ ಶಿವಸಂಕಲ್ಪಮಸ್ತು ।'

—ಶಿವಸಂಕಲ್ಪೋಪನಿಷತ್

'ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ । ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕ್ಕೆ । ದೇಗುಲವಿಲ್ಲ ಸರ್ವಜ್ಞ ।'

'ಪರತತ್ತ್ವಂ ಗೋಲಕಾಕಾರಂ ಚಿನ್ಮಯಂ ಸದ್ವಿಲಾಸಿತಮ್ । ಶರಣ್ಯಂ ಸರ್ವತತ್ತ್ವಾನಾಂ ಲಿಂಗಾಕಾರೇಣವರ್ತತೇ ॥'

—ಲಿಂಗಲೀಲಾವಿಲಾಸಚಾರಿತ್ರ

'ತತಃ ಪರಂತು ಯನ್ನಿತ್ಯಂ ಜ್ಞಾನಮಾನಂದಮವ್ಯಯಮ್
ತನ್ನಿಷ್ಠೈಃಸ್ತತ್ಪರೈರ್ಭಕ್ತೈರ್ದೃಶ್ಯಂ ತದ್ವ್ರತಮಾಸ್ತಿಕೈಃ ।
'ಜಾಗ್ರದಾದಿಷ್ವವಸ್ಥಾಸು ಜ್ಯೋತಿರ್ಲಿಂಗೈಕ್ಯಮಾನಸಂ
ಅಜ್ಞಾನವಿನಿವೃತ್ತಂ ಚ ಭಾವಲಿಂಗಂ ತದುಚ್ಯತೇ ।'

—ಸೂಕ್ಷ್ಮಾಗಮ

'ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ. ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ. ಸರ್ವಕಾರಣ ಲಿಂಗವೆಂದುದಾಗಿ ಲಿಂಗವನೆ ಅರಿದೆ. ಅರಿದರಿದು ಲಿಂಗಸಂಗವನೆ ಮಾಡುವೆ. ಸಂಗಸುಖದೊಳಗೋಲಾಡುವೆ ಗುಹೇಶ್ವರಾ.'

ಲಿಂಗತ್ರಯ ನಿರೂಪಣ

ಆಚಾರಲಿಂಗದ ಚಿದ್ರೂಪವೇ ಲಿಂಗ. ಒಂದೇ ಒಂದು ಲಿಂಗ ಸ್ಥಳ ಭೇದದಿಂದ ಮೂರಾಗುತ್ತದೆ. ಆಚಾರಲಿಂಗದ ಚಿತ್ತಿನ ಸದ್ರೂಪವೆ ಇಷ್ಟ (ಕ್ರಿಯಾ) ಲಿಂಗ. ಆಚಾರಲಿಂಗದ ಚಿತ್ತಿನ ಚಿದ್ರೂಪವೆ ಭಾವ (ಪ್ರಾಣ) ಲಿಂಗ. ಆಚಾರಲಿಂಗದ ಚಿತ್ತಿನ ಆನಂದರೂಪವೆ ಜ್ಞಾನ (ತೃಪ್ತಿ) ಲಿಂಗ. ಇಲ್ಲಿಯವರೆವಿಗೂ ಬಿಡಿಯಾಗಿ ಹೇಳಿದ ಲಿಂಗತ್ರಯವನ್ನು ಇಲ್ಲಿ ಇಡಿಯಾಗಿ ನಿರೀಕ್ಷಿಸಲಾಗಿದೆ :

'ಹೃದಯಕಮಲದಲ್ಲಿ ವಾಸವಾಗಿರುವಾತನೊಬ್ಬನು, ಮನದ ಕೊನೆಯಲ್ಲಿ ಇರುವಾತನೊಬ್ಬನು, ಚಿದಾಕಾಶದಲ್ಲಿರುವಾತನೊಬ್ಬನು. ಇವರೆಲ್ಲ

ರಲ್ಲಿ ಇರುವಾತನೊಬ್ಬನು – ನಮ್ಮ ಕಪಿಲ ಸಿದ್ಧಮಲ್ಲಿಕಾರ್ಜುನನು.' ಅಂಗದಲ್ಲಿ ಆಯುತವಾಯಿತ್ತು, ಮನದಲ್ಲಿ ಸ್ವಾಯುತವಾಯಿತ್ತು ; ಭಾವದಲ್ಲಿ ಸನ್ನಿಹಿತವಾಯಿತ್ತು. ಆಯುತವಾದುದೇ ಸ್ವಾಯುತವಾಗಿ, ಸ್ವಾಯುತವಾದುದೇ ಸನ್ನಿಹಿತವಾಗಿ, ಸನ್ನಿಹಿತ ಸಮಾಧಾನವಾಗಿ ನಿಂದುದು ನಿಜಗುರು ಸ್ವತಂತ್ರಸಿದ್ಧ ಲಿಂಗೇಶ್ವರನೇ ತಾನಾಗಿ.''ಸ್ಥೂಲ ತನು, ಸೂಕ್ಷ್ಮ ತನು; ಕಾರಣತನು. ಸ್ಥೂಲ ತನುವಿನ ಮೇಲೆ ಇಷ್ಟಲಿಂಗ ಪ್ರತಿಷ್ಠೆ ; ಸೂಕ್ಷ್ಮ ತನುವಿನ ಮೇಲೆ ಪ್ರಾಣಲಿಂಗ ಪ್ರತಿಷ್ಠೆ ; ಕಾರಣ ತನುವಿನ ಮೇಲೆ ಭಾವಲಿಂಗ ಪ್ರತಿಷ್ಠೆ. ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ಮಹವು. ಆ ಮಹದ ಹೃದಯದಲ್ಲಿ ಕೊನೆದೋರುತಿರ್ಪ ಜ್ಯೋತಿಯು ನಮ್ಮ ಶರಣರ ಸರ್ವಾಂಗದಲ್ಲುಂಟು ನೋಡಯ್ಯ ಕೂಡಲ ಚೆನ್ನಸಂಗಮದೇವಾ.'

'ಅಯ್ಯ ಕಾಯ ಲಿಂಗವೊ ? ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೊ ? ಪ್ರಾಣಲಿಂಗವೋ ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೊ ? ಜ್ಞಾನಲಿಂಗವೋ ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೊ ? ಲಿಂಗ ಪ್ರಾಣ, ಪ್ರಾಣಲಿಂಗನೆಂತೆಂದರಿಯರು. ನಿಮ್ಮ ಕಾಯದ ಕರಸ್ಥಲವ ಸಾರಿದಲಿಂಗ ಪ್ರಾಣದೊಳಗೆ ವೇದ್ಯವಾದ ಪರಿಯನುಪದೇಶಿಸಿ ಕೃಪೆ ಮಾಡಾ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.'

'ಅಂತರಂಗದಲ್ಲಿ ಆವರಿಸಿ ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳಗುವೆ. ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ ಉರಿಲಿಂಗದೇವನಪ್ಪಾ.'

'ಲಿಂಗದಲ್ಲಿ ಪ್ರಾಣವಸಿರಿಸಿ, ಪ್ರಾಣದಲ್ಲಿ ಲಿಂಗವನಿರಿಸಿ ನೆನೆವುತ್ತಿದ್ದ ಕಾರಣ ಪ್ರಾಣಲಿಂಗವಾಯಿತ್ತು. ಆ ಲಿಂಗ ಸರ್ವ ಕರಣಂಗಳ ವೇಧಿಸಿ, ಕರಣಂಗಳು ಲಿಂಗ ಕರಣಂಗಳಾದ ಕಾರಣ, ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ ಹೊರೆಡೆನೆಂದು ಅರಿಯೆನು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀವು ಪ್ರಾಣಲಿಂಗವಾಗಿ !'

'ಅಂತರಂಗದಲ್ಲಿ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನರಿಯದೆ ಬಹಿರಂಗದಲ್ಲಿ ಬಳಲುತ್ತಿದ್ದರಲ್ಲಾ ! ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾಶ ಪರಬ್ರಹ್ಮ ಪ್ರಾಣಲಿಂಗವನು ಅವರೆತ್ತ ಬಲ್ಲರು ?

'ಮಹಾನುಭಾವದಿಂದ ತಿಳಿದುನೋಡಲು, ತನ್ನಲ್ಲಿಯೇ ತೋರುತ್ತಿದೆ. ಹೇಳಿ ಹೇಳಿಹೆನೆಂದಡೆ ನುಡಿಗೊಳಗಾಗದು. ತಿಳಿದು ನೋಡಲು ತಾನಲ್ಲದೆ ಮತ್ತೇನೂ ಇಲ್ಲ. ಅದೇ ಪ್ರಾಣಮಯ ಲಿಂಗ. ತಾನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.'

'ಅಗ್ನಿ ದಿಟವೆಂದರೆ ತಾ ಹುಸಿ,-ಕಾಷ್ಠವಿಲ್ಲದೆ ? ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ ಪ್ರಾಣಲಿಂಗ ಎಂದೆಂಬೆನೆಂದನಂಬಿಗರ ಚೌಡಯ್ಯ.'

ಅನುಭವ ಸೂತ್ರದಲ್ಲಿ ತ್ರಿವಿಧ ಲಿಂಗಗಳ ನಿರೂಪಣೆ ಹೀಗಿದೆ :

'ಲಿಂಗಸ್ಥಲಂ ತ್ರಿಧಾಜ್ಞೇಯಂ ತದ್ಭೇದೋ ವರ್ಣ್ಯತೇ ಕ್ರಮಾತ್
ಪ್ರಥಮಂ ಭಾವಲಿಂಗಂ ಸ್ಯಾದ್ದ್ವಿತೀಯಂ ಪ್ರಾಣಲಿಂಗಕಂ ।
ತೃತೀಯಮಿಷ್ಟಲಿಂಗಂ ಸ್ಯಾದಿತ್ಯೇತತ್ತ್ರಿವಿಧಂ ಸ್ಮೃತಮ್ ॥
ನಿಷ್ಕಳಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಂ
ಸನ್ಮಾತ್ರಂ ಭಾವಲಿಂಗಂ ಸ್ಯಾದಿತಿ ನಿಷ್ಠಾ ಮಹಾತ್ಮನಾಂ ।
ಪ್ರಾಣಲಿಂಗಂ ಮನೋಗ್ರಾಹ್ಯಂ ಭವೇತ್ಸಕಳನಿಷ್ಕಳಂ
ಸಕಳಂ ದೃಕ್ಕಳಾಗ್ರಾಹ್ಯಮಿಷ್ಟಲಿಂಗಸ್ಥಲಂ ಮಹತ್ ।
ಸದ್ರೂಪಂ ಭಾವಲಿಂಗಂ ಸ್ಯಾಚ್ಚಿದ್ರೂಪಂ ಪ್ರಾಣಲಿಂಗಕಂ
ಆನಂದರೂಪಮಾಚಾರ್ಯೈರಿಷ್ಟಲಿಂಗಮುದಾಹೃತಂ ।
ಅಸ್ಯಾರ್ಥೋ ಭಾವಲಿಂಗಂ ಸ್ಯಾತ್ತ್ವಮರ್ಥಃ ಪ್ರಾಣಲಿಂಗಕಂ
ತದರ್ಥಸ್ತ್ವಿಷ್ಟಲಿಂಗಂ ಸ್ಯಾತ್ಪದತ್ರಯ ನಿರೂಪಣೇ ।
ಭಾವಲಿಂಗಂ ಪರತತ್ತ್ವಂ ಪ್ರಾಣಲಿಂಗಂ ತು ಸೂಕ್ಷ್ಮಕಂ
ಇಷ್ಟಲಿಂಗಮಿದಂ ಸ್ಥೂಲಮೇತಲ್ಲಿಂಗತ್ರಯಂ ಸ್ಮೃತಮ್ ॥'

—ಅನುಭವ ಸೂತ್ರ

'ಅಂತರಂಗದೊಳಗಿರ್ದ ನಿರವಯಲಿಂಗವನು ಸಾವಯವ ಲಿಂಗವ ಮಾಡಿ ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದುಕೊಟ್ಟ ಲಿಂಗವು ಅಂತರಂಗವನಾವರಿಸಿ ಅಂತರಂಗದ ಕರಣಂಗಳೇ ಕಿರಣಂಗಳಾಗಿ, ಆ ಬೆಳಗುವ ಚಿದಂಶವೇ ಪ್ರಾಣಲಿಂಗವು. ಆ ಮೂಲಚೈತನ್ಯವೇ ಭಾವಲಿಂಗವು. ಇದನರಿದು ನೋಡುವ ನೋಟ ಭಾವಪೂರ್ಣವಾಗಿ ತಾನು ತಾನಹನಲ್ಲದೆ

ಇದಿರಿಟ್ಟು ತೋರುವುದಿಲ್ಲವಾಗಿ ಅಖಂಡ ಪರಿಪೂರ್ಣವಪ್ಪ ನಿಲವು ತಾನೆ ಕೂಡಲಸಂಗಮದೇವಾ.'

೭. ಸ್ವಯಸ್ಥಲಂ

ಇದು ಜಂಗಮಸ್ಥಲ. ಆಚಾರಲಿಂಗದ ಆನಂದರೂಪ. ನಿರಾಕಾರ ಸ್ವರೂಪ. ಬಾಹ್ಯಾಭ್ಯಂತರ, ರಂಜನರಹಿತ; ನಿರಾಭಾರ. ದೇಹೇಂದ್ರಿಯ ವಿಕಾರ ವಿರಹಿತ, ಲಿಂಗಗಂಭೀರ, ಸಮತಾಭಾವಿ, ಸರ್ವಜೀವದಯಾಮಯಿ. ಶಿವಯೋಗಿ. ಜಂಗಮಕ್ಕೆ ಒಡಲಿಲ್ಲ; ಒಡಲಾಸೆಯಿಲ್ಲ. ಒಂದೆಡೆಯಿಲ್ಲ.

ಆಚಾರದ ಅರಿವೇ ಗುರು. ಆಚಾರದ ಆಚಾರವೇ ಲಿಂಗ. ಆಚಾರದ ಅನುಭವವೇ ಜಂಗಮ. ಆಚಾರದ ಅಂಗವೇ ಗುರು. ಆಚಾರದ ಅಂತ ರಂಗವೇ ಲಿಂಗ. ಆಚಾರದ ಚೈತನ್ಯವೇ ಜಂಗಮ.

'ಶ್ರೀಗುರು ಕರುಣವೇ ಲಿಂಗ. ಆ ಲಿಂಗದ ನಿಜವೇ ಜಂಗಮ. ಈಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೇ ಜಂಗಮ. ಆ ಜಂಗಮದ ನಡೆವ ಸತ್ಕ್ರಿಯೆಯೇ ಲಿಂಗ. ಆ ಉಭಯದ ಏಕತ್ವದ ಸಿದ್ಧಿಯೇ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮದಾಸೋಹವಿಲ್ಲದಡೆ, ಲಿಂಗತೃಪ್ತಿಯಿಲ್ಲ. ಅಂಗದ ಮೇಲೆ ಲಿಂಗವಿಲ್ಲದಿರ್ದೊಡೆ, ಜಂಗಮ ಸೇವೆಯ ಕೈಕೊಳ್ಳ. ಅದು ಕಾರಣ ಒಂದ ಬಿಟ್ಟು ಒಂದರಲ್ಲಿ ನಿಂದಡೆ ಅಂಗವಿಲ್ಲದ ಆತ್ಮನಂತೆ, ಶಕ್ತಿಯಿಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ ಒಂದಂಗಶೂನ್ಯವಾಗಿ ಭಕ್ತಿಯುಂಟೆ ? ಅವಯವಹೀನನು ರಾಯಪಟ್ಟಕ್ಕೆ ಸಲ್ಲುವನೆ ? ಅದು ದೈವತ್ವಕ್ಕೆ ಸಲ್ಲದು. ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ತ್ರಿವಿಧ ಸನ್ಮತವೇ ಚರಸೇವೆಯಯ್ಯ.'

ಈ ವಚನದಿಂದ ಗುರು–ಲಿಂಗ–ಜಂಗಮತ್ರಯ ವಿಚಾರ ಸಮನ್ವಯ ವಿಶದವಾಗುತ್ತದೆ.

ಆಚಾರ ಒಂದು ವೃಕ್ಷ. ಇದರ ಬೇರು ಜಂಗಮ; ತುದಿ ಲಿಂಗ. ಸರ್ವಾಂಗ ಗುರು. ಲಿಂಗಮುಖ ಜಂಗಮ. ಲಿಂಗ ಕ್ಷೇತ್ರ. ಜಂಗಮ ಬೀಜ.

ಆತ್ಮರೂಪ ಲಿಂಗ, ಪರಮಾತ್ಮರೂಪ ಜಂಗಮ. ಗುರುವಿನ ಕರುಣವೇ ಲಿಂಗ, ಲಿಂಗದ ಕಳೆಯೇ ಜಂಗಮ.

'ಲಿಂಗಮುಖವನರಿಯದವಂಗೆ ಅಂಗವೆಂಬುದಿಲ್ಲ. ಜಂಗಮ ಮುಖವನರಿಯದವಂಗೆ ಸಂಸಾರವೆಂಬುದಿಲ್ಲ....' 'ಲಿಂಗಗ್ರಾಹಕನಾದ ಶರಣ ಅಂಗಗುಣಕ್ಕೆ ವಿರೋಧಿಯಯ್ಯ. ಜಂಗಮ ಗ್ರಾಹಕನಾದ ಶರಣ ಪ್ರಾಣಾಭಿಮಾನಕ್ಕೆ ವಿರೋಧಿಯಯ್ಯ.' ಈ ಮಾತುಗಳಿಂದ ಜಂಗಮ ವೈಶಿಷ್ಟ್ಯ ವ್ಯಕ್ತವಾಗುತ್ತದೆ.

ಜಂಗಮ ಪ್ರಣವಸ್ವರೂಪ. ಪ್ರಣವದೊಳಗಿನ ಅಕಾರಸ್ವರೂಪವೇ ಸ್ವಯ ಜಂಗಮ. ಆನಂದದ ಸದ್ರೂಪವೆ ಸ್ವಯಜಂಗಮ.

"ತದ್ಭಾವ ಜ್ಞಾಪಕಂ ಜ್ಞಾನಂ ಯತ್ರ ಜ್ಞಾನೇ ಲಯಂ ವ್ರಜೇತ್
ತದ್ವಾನೇಷ ಸಮಾಖ್ಯಾತಃ ಸ್ವಾಭಿಧಾನೋ ಮನೀಷಿಭಿಃ ।
ಸ್ವಚ್ಛಂದಾಚಾರ ಸಂತುಷ್ಟೋ ಜ್ಯೋತಿರ್ಲಿಂಗ ಪರಾಯಣಃ
ಆತ್ಮಸ್ಥ ಸಕಲಾಕಾರಃ ಸ್ವಾಭಿಧೋ ಮುನಿಸತ್ತಮಃ ॥"

ಪೂರ್ವೋಕ್ತವಾದ ಆ ಭಾವಲಿಂಗ ಪ್ರಕಾಶಕವಾದುದು ಜ್ಞಾನಲಿಂಗ. ಆ ಜ್ಞಾನಲಿಂಗವು ಯಾವ ಮಹಾಜ್ಞಾನರೂಪ ಸ್ವಾನುಭಾವದಲ್ಲಿ ಲಯವಾಗುತ್ತದೆಯೋ ಆ ಸ್ವಾನುಭವವುಳ್ಳಾತನೇ ಸ್ವಜಂಗಮ ಅಥವಾ ಸ್ವಯ ಜಂಗಮ ಎಂದು ಬಲ್ಲಿದರು ಹೇಳುವರು.

ಆ ಸ್ವಯಜಂಗಮನು ಮುನಿಪುಂಗವನು. ತನಗೆ ಹೊರಗೆ ಆಕಾರವಿಲ್ಲದಿದ್ದರೂ ತನ್ನೊಳಗೆ ಸಕಲ ನಿಷ್ಕಲಾಕಾರವುಳ್ಳವನು. ಜ್ಯೋತಿರ್ಲಿಂಗಾನುಸಂಧಾನಸಂಪನ್ನನು. ಸ್ವೇಚ್ಛಾವರ್ತನ ಸಂತುಷ್ಟನು.

ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ ಎಂದು ಚೆನ್ನಬಸವಣ್ಣನು ಹೇಳುವಂತೆ ಜ್ಞಾನಿಯೇ ಜಂಗಮ. 'ಜ್ಞಾನವಿಡಿದು ಕಾಂಬುವುದು ಜಂಗಮದ ಭೇದ' ಎಂಬಂತೆ ಜ್ಞಾನಭೇದದಿಂದ ಜಂಗಮಭೇದವುಂಟಾಗಿದೆ. ಚಿದಾತ್ಮಸ್ವರೂಪನೇ ಸ್ವಯಂ ಜಂಗಮ. ಲಯಕರ್ತನು ಜಂಗಮನು. 'ತದ್ವಾನ್' ಎಂಬುದರಿಂದ ಲಯವಾನ್ ಎಂದು ಅರ್ಥವಾಗುತ್ತದೆ.

'ಲಿಂಗದೊಳಗಣ ಬೀಜ, ಜಂಗಮದಲುತ್ಪತ್ತಿ. ಕಾಯಗುಣವಿಲ್ಲಾಗಿ ಸಂಸಾರಭಯವಿಲ್ಲ. ಅಂತರಂಗ ಶುದ್ಧಾತ್ಮನಿಸ್ಸಂಗಿ ಜಂಗಮ ಕೂಡಲ ಚೆನ್ನಸಂಗಮದೇವಾ.'

ಜ್ಞಾನಕಲಾಸ್ವರೂಪ ಜಂಗಮನು ತನ್ನ ಚಿತ್ಪ್ರಣವ ಚೈತನ್ಯಕಲೆಯನು ತನ್ನ ಭಾವದ ಮುಖದಲ್ಲಿ ಉದ್ಭವವ ಮಾಡಿ ಇಷ್ಟಲಿಂಗವಾಗಿ ಪಿಡಿದು ತನ್ನ ನಿಜವನು ನೋಡಿ ಸುಖಿಸುತ್ತಿಪ್ಪಕಾರಣ ಲಿಂಗದೊಳಗಣ ಬೀಜ ಜಂಗಮದ ಉತ್ಪತ್ತಿ ಎಂಬ ಶಬ್ದಕ್ಕರ್ಥ. ಇಂತು ಅಂತರಂಗ ಬಹಿರಂಗವೆಲ್ಲ ಲಿಂಗವೆಯಾಗಿಪ್ಪ ಕಾರಣ ಜಂಗಮಕ್ಕೆ ದೇಹವಾಸನೆ ಗುಣಧರ್ಮ ಕರ್ಮ ಸಂಸಾರ ಭವಭಯಂಗಳೇನೂ ಇಲ್ಲದೆ, ದೇಹ ಸಂಸಾರ ಸಂಗವಿದ್ದು ನಿಸ್ಸಂಗಿಯಾಗಿಪ್ಪನು. ಜಂಗಮವೆಂಬುದೀಗ ಕಾಯಗುಣವಿಲ್ಲವಾಗಿ ಸಂಸಾರಭಯವಿಲ್ಲ. ಅಂತರಂಗ ಶುದ್ಧಾತ್ಮನಾಗಿ ನಿಸ್ಸಂಗಿ ಜಂಗಮವೆಂಬ ಶಬ್ದಕ್ಕರ್ಥ.

ಸ್ವಚ್ಛಂದಾಚಾರ ಸಂತುಷ್ಟನೆಂದರೆ ಮನಬಂದಂತೆ ನಡೆದು ನಲಿಯುವಿಕೆಯಲ್ಲ. ಇಚ್ಛೆ ಸ್ವಚ್ಛವಾಗಿರಬೇಕು. ಇಚ್ಛಾಶಕ್ತಿ ತನ್ನ ವಶವರ್ತಿಯಾಗಿರಬೇಕು. ಮನ ಪ್ರಸನ್ನವಾಗಿ ಜ್ಞಾನಕಳಾಸಂಪನ್ನನಾಗಿ ಭಾವಾಚಾರಗಳಿಂದ ಭರಿತನಾಗಿರಬೇಕು. ಸತ್ಕಾಯಕಶೀಲನಾಗಿ ಸಕಲ ಪಡಿಪದಾರ್ಥಗಳನ್ನು ಸಂಪಾದಿಸಬೇಕು. ಸತ್ಕ್ರಿಯೆ ಸಮ್ಯಗ್‌ಜ್ಞಾನ ಸದ್ಭಕ್ತಿಯುಳ್ಳವನಾಗಿ ನಿರ್ವಂಚಕ ಸ್ವಭಾವಿಯಾಗಿರಬೇಕು. ನಡೆ, ನುಡಿ, ಹಸ್ತ, ನೋಟ, ಭಾವ ಈ ಪಂಚ ಪರುಷವುಳ್ಳವನಾಗಿ ಲಿಂಗಪ್ರತಿಯಾಗಿ ರೂಪು ರುಚಿ ತೃಪ್ತಿಗಳನ್ನು ಸಮಭಾಜನದಲ್ಲಿ ಕೊಟ್ಟು ಕೊಂಬುವ ಕರ್ತೃತ್ವವುಳ್ಳವನಾಗಿ ಜಂಗಮನಿರಬೇಕು. ಆಗ ಇಚ್ಛಾಶಕ್ತಿಸಂಪನ್ನನೆನಿಸುತ್ತಾನೆ. ಆಗ ಸ್ವಚ್ಛಂದಾಚಾರ ಸಂತುಷ್ಟನಾಗಿರಲು ಸಮರ್ಥನಾಗುತ್ತಾನೆ. ಜತೆಗೆ ಹೇಳಿದ ಜ್ಯೋತಿರ್ಲಿಂಗ ಪರಾಯಣ, ಆತ್ಮಸ್ಥ ಸಕಲಾಕಾರ ಎಂಬ ವಿಶೇಷಣಗಳು ವಿಶೇಷವಾಗಿ ವಿಚಾರಾರ್ಹವಾದವುಗಳು. 'ದೊರಕೊಂಡಂತೆ ಮನ ದಣಿದಿಪ್ಪವರ, ದುಃಖಕ್ಕೆ ದೂರಾಗಿರಪ್ಪವರ ಒಳಗನರಿದು ಹೊರಗೆ ಮರೆದು ಸದಾನಂದದಲ್ಲಿಪ್ಪವರ ತೋರಾ ಎನಗೆ,—ಸಕಳೇಶ್ವರದೇವಾ ಎನಗಿದೇ ವರವ ನೀವುದು ಕಂಡೆಯಾ ತಂದೆ!'

'ಸ್ವಚ್ಛಂದಾಚಾರ ಸಂತುಷ್ಟ' ಎಂಬ ರೇಣುಕ ಗೀತಾಮಂತ್ರಕ್ಕೆ ಈ ವಚನ ಸ್ವಚ್ಛವಾದ ವಿವರಣೆಯನ್ನು ತಿರುಳ್ಗನ್ನಡದಲ್ಲಿ ತಿರಳನ್ನು ನಿಲುದುಂಬಿ ನೀಡಿದೆ. ನಿಜದರಿವಿಗೆ ನಿಲುಕಿಸಿದೆ.

ಸ್ವಯಜಂಗಮವೆನಿಸುವುದು ಸಾಮಾನ್ಯವಲ್ಲ. ಪ್ರಣವ ಸ್ವರೂಪ ನಾಗಬೇಕು. ಪ್ರಣವದೊಳಗಿನ ಮೂಲಬೀಜಾಕ್ಷರವಾದ ಅ-ಕಾರದಂತೆ. ಸ್ವಯನಾಗಬೇಕು. ಸರ್ವದರಲ್ಲಿ ಶುದ್ಧನಾಗಬೇಕು.

"ನಿರ್ಮಮೋ ನಿರಹಂಕಾರೋ ನಿರಸ್ತಕ್ಲೇಶಪಂಚಕಃ
ಭಿಕ್ಷಾಶೀ ಸಮಬುದ್ಧಿಶ್ಚ ಮುಕ್ತಪ್ರಾಯೋ ಮುನಿರ್ಭವೇತ್।
ಯದೃಚ್ಛಾಲಾಭ ಸಂತುಷ್ಟೋ ಭಸ್ಮನಿಷ್ಠೋ ಜಿತೇಂದ್ರಿಯಃ
ಸಮವೃತ್ತಿರ್ಭವೇದ್ಯೋಗಿ ಭಿಕ್ಷುಕೇ ವಾ ನೃಪೇಽಥ ವಾ॥"

ಸುಸ್ವಭಾವಕ್ಕೆ ಹೊಂದಿಕೊಳ್ಳುವವನೆ ಸ್ವಜಂಗಮವೆನಿಸುವನು. ತನ್ನದು ತನ್ನವರು ಎಂಬ ಮಮಕಾರವಿಲ್ಲದನು. ತನ್ನ ದೇಹಾದಿಗಳಲ್ಲಿ ಅಹಂಕಾರ (ಅಭಿಮಾನ)ವಿಲ್ಲದವನು. ಅವಿದ್ಯಾದಿ ಆಯ್ದು ನೋವಿಲ್ಲ ದಿರುವನು. ಭಕ್ತರ ಭಿಕ್ಷ ಪ್ರಸಾದ ತೃಪ್ತನು. ಸಮಬುದ್ಧಿಯುಳ್ಳವನು. ಮುನಿಯೆನಿಸಿ ಮುಕ್ತನಾದವನು.

ದೊರೆತ ಮಾತ್ರದಲ್ಲಿ ಸಂತೃಪ್ತನು. ಭಸಿತವ್ರತನಿರತನು. ಇಂದ್ರಿಯ ವಶವಾಗುದಿರುವವನು. ಯೋಗಸಂಪನ್ನನು. ಬಡವ ಬಲ್ಲಿದರಲ್ಲಿಸಮದೃಷ್ಟಿ ಸಮಭಾವವುಳ್ಳವನು.

ಸ್ವಯಜಂಗಮನಿಗೆ ಅರ್ಥಪ್ರಾಣ ಅಭಿಮಾನಗಳಲ್ಲಿ ಮಮಕಾರ ಅಹಂಕಾರಗಳಿರಬಾರದು. ತನ್ನದು ತನ್ನವರೆಂದು ಮನದಲ್ಲಿಯೂ ನೆನೆಯ ಬಾರದು. ತನ್ನ ದೇಹ ತನ್ನ ಇಂದ್ರಿಯ ತನ್ನ ಅಂತಃಕರಣಗಳೆಂಬ ಅಭಿ ಮಾನಕ್ಕಿಂಬಿರಬಾರದು. ಒಂದುವೇಳೆ ಏನನನ್ನಾದರೂ ಆಶಿಸಿದರೆ ಲಿಂಗ ಕ್ಕಾಗಿ ಸಮಾಜಕ್ಕಾಗಿ ಆಶಿಸಬೇಕು.

'ಲಿಂಗಕ್ಕೆಂದೇ ನೆನೆವೆ. ಲಿಂಗಕ್ಕೆಂದೇ ಮಾಡುವೆ. ಲಿಂಗಕ್ಕೆಂದೇ ಕೊಡುವೆನು ನಾನಯ್ಯ. ಸಕಲ ಪದಾರ್ಥಂಗಳ ಲಿಂಗಕ್ಕೆಂದೇ ಭಾವಿ

ಸುವೆ. ಅಂಗಗುಣಂಗಳನರಿಯೆನಯ್ಯ. ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ. ಎನ್ನ ದೇಹೇಂದ್ರಿಯ ಮನ ಪ್ರಾಣಾದಿಗಳು ಲಿಂಗದ ಸತಿಯರಾಗಿ ಲಿಂಗಕ್ಕೆಂದೇ ಬಯಸಿ, ಲಿಂಗಪ್ರಾಣಿಗಳಾದ ಕಾರಣ, ಲಿಂಗಕ್ಕೆಂದೇ ಕೈಕೊಂಬೆನು. ಅನರ್ಪಿತವನರಿಯೆ ಕೂಡಲಸಂಗಮದೇವಾ.'

ಮೊದಲಿನ ಮಂತ್ರಾರ್ಥವನ್ನು ಈ ವಚನ ವಿಸ್ತರಿಸಿದೆ. ಸ್ವಯ ಜಂಗಮನು ಯಾವುದರಿಂದಲೂ ಬದ್ಧನಾಗಬಾರದು. ಸ್ಥಿತಪ್ರಜ್ಞನಾಗಬೇಕಾದರೆ ಮೊದಲು ವಿಷಮ ಬುದ್ಧಿಯನ್ನು ಬಿಡಬೇಕು. ಸರ್ವಪ್ರಾಣಿಗಳಲ್ಲಿ ಸರ್ವವಸ್ತು (ದ್ರವ್ಯ) ಗಳಲ್ಲಿ ಸಮಬುದ್ಧಿಯುಳ್ಳವನಾಗಿರಬೇಕು. ಮಣ್ಣು ಹೊನ್ನುಗಳನ್ನು ಒಂದಾಗಿ ಕಾಣಬೇಕು. ಹಾವು ಹಸುಗಳಲ್ಲಿ ಸಮಭಾವವಿರಬೇಕು. ಹಿರಿಯ ಕಿರಿಯರಲ್ಲಿ ಬಡವ ಬಲ್ಲಿದರಲ್ಲಿ ಸ್ವಪರರಲ್ಲಿ ಒಂದೇ ರೀತಿಯಾಗಿರಬೇಕು. ಎಲ್ಲರಲ್ಲಿರುವ ಜ್ಯೋತಿ ಒಂದೆ! ಧನ ಧಾನ್ಯಾದಿಗಳನ್ನು ಸಂಗ್ರಹಿಸಬಾರದು. ಹಸಿವನ್ನು ಇಂಗಿಸುವಷ್ಟು ಸಹ ಸಂಗ್ರಹಿಸಬಾರದು. ಅವಿದ್ಯಾ ಅಸ್ಮಿತ ರಾಗ ದ್ವೇಷ ಅಭಿನಿವೇಶಗಳಿಗೆ ಒಳಗಾಗಬಾರದು. ದೇಹಾದಿಗಳಲ್ಲಿ ಯಾವ ಬಗೆಯಅಭಿಮಾನವಿರಬಾರದು.

ಎರಡನೆಯದಾಗಿ ಯಾವುದರಲ್ಲಿಯೂ ಅತಿ ಲೋಭವಿರಬಾರದು. ಆಸೆ ಆಕಾಂಕ್ಷೆಯಿರಬಾರದು.

'ಅದು ಬೇಕು, ಇದು ಬೇಕು ಎಂಬ ಎದೆಗುದಿಹತನ ಬೇಡ. ಸದ್ಭೈವನಾಗಿರ್ದಡೆ ಸಾಕು. ಪಡಿಪದಾರ್ಥಂಗಳು ತಾನಿದ್ದೆಡೆಗೆ ಬಾಹವಯ್ಯ. ನಿಧಿ ನಿಕ್ಷೇಪಂಗಳು ತಾನಿದ್ದೆಡೆಗೆ ಬಾಹವಯ್ಯ. ಸದುಹೃದಯ ಶುದ್ಧನಾಗಿ ಸಕಳೇಶ್ವರ ದೇವಂಗೆ ಶರಣೆಂದಡೆ ನಿಜ ಪದವನೀವನು.'

'ತನುವ ಪಡೆದು ಧನವಗಳಿಸಬೇಕೆಂದು ಮನುಜರ ಮನೆಯ ಬಾಗಿಲಿಗೆ ಹೋಗಿ ಮನಬಂದ ಪರಿಯಲ್ಲಿ ನುಡಿಸಿಕೊಂಡು ಮನನೊಂದು ಬೆಂದು ಮರುಗುತ್ತಿರಲಾರೆನಯ್ಯ. ನೀ ಕರುಣಿಸಿ ಇದ್ದ ಠಾವಿನಲ್ಲಿ ಇಹಂತಹ ಪರಮ ಸುಖವು ಎಂದು ದೊರಕೊಂಬುದೋ ಎನಗೆ ಸಕಳೇಶ್ವರಾ ?'

'ಉದಾಶೀನದಿಂದ ಮಾಡಿದಡೆ ಮುಟ್ಟಲಾಗದು. ಅದು ಅನರ್ಪಿತವೆನಿಸುವುದು. ವಿನಿಯಾರ್ಥ ಮಾಡಿದಡೆ ಮುಟ್ಟೆ ಅರ್ಪಿತವ ಮಾಡು

ವುದು. ಕೂಡಲ ಚೆನ್ನಸಂಗಯ್ಯ ಇಂತಪ್ಪ ಲಿಂಗಾಭಿಮಾನಿಯ ತೋರಾ ಎನಗೆ.'

'ಯಥಾಲಾಭ' ವು ಅಂದರೆ ತಾನಾಗಿ ಒದಗಿ ಬರುವುದು ಸಹ ಬಗೆ ದುಂಬಿ ಬರಬೇಕು. ಅತ್ಯಂತ ಭಕ್ತಿಯಿಂದ ಬಂದೊದಗಬೇಕು.

ಸ್ವಯಜಂಗಮನ ಐಶ್ವರ್ಯವೆಂದರೆ ವಿಭೂತಿ ಒಂದೇ! ತಾನು ವಿಭೂತಿ ಪುರುಷನೆನಿಸಬೇಕಾದರೆ ಮೊದಲು ತಾನು ವಿಭೂತಿನಿಷ್ಠನಾಗಬೇಕು. ಇದು ಮಹಾಯೋಗ. ವಿಭೂತಿ ನಿಷ್ಠನಾಗಿ ತಾನೇ ವಿಭೂತಿಯಾದವನಿಗೆ ಬೇರೆ ಇನ್ನಾವ ಭೂತವಿರುವುದಿಲ್ಲ. ಭಸ್ಮವೇ ಅವನ ಸರ್ವಸ್ವ. ಭಸ್ಮನಿಷ್ಠನಿಗೆ ಯಥಾಲಾಭ ಸಂತುಷ್ಟತೆಯು ಜಿತೇಂದ್ರಿಯತೆಯು ತಾವಾಗಿಯೇ ಒದಗುತ್ತವೆ. ಮತ್ತು ಭಿಕ್ಷುಕನನ್ನು ಕಾಣಲಿ ಭೂಪತಿಯನ್ನು ಕಾಣಲಿ ಒಂದೇಮನ ಒಂದೇಭಾವ ಒಂದೇಬುದ್ಧಿಗಳಿರುತ್ತವೆ. ಇದಕ್ಕಿಂತ ಬೇರೆ ಯೋಗವಿಲ್ಲ. 'ಸಮತ್ವಂ ಯೋಗ ಉಚ್ಯತೇ' ಎಂದಿದೆ ಗೀತೆ. ಇದುಳ್ಳವನೇ ಯೋಗಿ.

ಎರಡು ದೇಶಗಳುಂಟು ; ಒಂದು ಬ್ರಹ್ಮಾಂಡ, ಇನ್ನೊಂದು ಪಿಂಡಾಂಡ. ಇವೆರಡರಲ್ಲಿಯೂ ಸ್ವಜಂಗಮನು ಸುಳಿಯಬಾರದು. ಹೊರನಾಡಿನಲ್ಲಿ ಕಾಲಿನಿಂದ ಸುಳಿಯಬಾರದು ; ತನ್ನ ದೇಹ ದೇಶದಲ್ಲಿ ಮನಸ್ಸಿನಿಂದ ಸುಳಿಯಬಾರದು; ಕಣ್ಣಿನಿಂದ ಸುಳಿಯಬಾರದು. ವಿಷಯಾದಿಗಳಲ್ಲಿ ಬುದ್ಧಿಭ್ರಮಿಸಬಾರದು. ತನ್ನೊಳಗೆ ಎಲ್ಲವನ್ನೂ ಕಾಣಬೇಕು. ತನ್ನಲ್ಲಿ ತಾನಾಗಿರಬೇಕು. ತನ್ನಲ್ಲಿ ತನ್ನನ್ನು ಕಾಣಬೇಕು. ತನ್ನ ಮರೆತು ಇನ್ನೆಲ್ಲಿಗೆ ಹೋದರೂ ಏನೂ ಇಲ್ಲ. ತನ್ನಬಿಟ್ಟು ದೇವರಿಲ್ಲ. ತನ್ನ ಕಣ್ಣು ತನ್ನ ಮನ ತನ್ನ ಭಾವ ಎಲ್ಲವೂ ತನ್ನಲ್ಲಿಯೇ ಸುಳಿಯಬೇಕು ; ಇದು ಸ್ವಜಂಗಮತ್ವ.

ಕಾಲು ಕಣ್ಣುಗಳಿಗಿಂತ ಮನದ ಸುಳಿದಾಟ ಸೀಮಾತೀತ. ಅದರ ಸುಳಿಯಲ್ಲಿ ಸಿಕ್ಕುಬಿದ್ದರೆ ಕಾಲಿನಿಂದ ಸುತ್ತದಿದ್ದರೂ ಸುತ್ತಿ ಸುಳಿದಂತಾಗಿ ಹುಟ್ಟೆಂಬ ಮುನ್ನೀರಿನಲ್ಲಿ ಮುಳಗಬೇಕಾಗುತ್ತದೆ; ತೊಳಲಬೇಕಾಗುತ್ತದೆ. ಯಾವುದರಿಂದಲಾದರೂ ಪಾರಾಗಬಹುದು; ಮನದ ಮಹಾ ಸುಳಿಯಿಂದ

ಪಾರಾಗುವುದು ಪರಮ ಕಷ್ಟ. 'ಸುತ್ತುವ ಮನದ ಸುಳಿಯ ತಪ್ಪಿಸಿ ಮುಂದೆ ಹುಟ್ಟದೆ ಹೋಗೆಂದನಂಬಿಗಚೌಡಯ್ಯ.'

'ಸ್ವಜಂಗಮ' ಇದರರ್ಥವು ಇದರಲ್ಲಿಯೇ ಇದೆ. ತಾನೆಂಬುಂದೇ ಪರ ಶಿವಬ್ರಹ್ಮ. ಅದರಲ್ಲಿ ಗಮಿಸುವಾತನೇ ಸ್ವಜಂಗಮ. ಇಂದ್ರಿಯ ಗ್ರಾಮದಲ್ಲಿ ಪಿಂಡಾಂಡ ಪ್ರಪಂಚದಲ್ಲಿ ಸ್ವಜಂಗಮನು ಸುಳಿಯಬಾರದು. ಇಂದ್ರಿಯಗಳನ್ನೆಲ್ಲ ಲಿಂಗೇಂದ್ರಿಯಗಳನ್ನಾಗಿಸಿ ಪಿಂಡಾಂಡವನ್ನು ಮಂತ್ರ ಮಯ ಪಿಂಡನ್ನಾಗಿಸಿ ಲಿಂಗಯೋಗದಲ್ಲಿ ಲೀನನಾಗಿರುತ್ತಾನೆ. 'ತನ್ನ ಸ್ವಯಗುಣದಿಂದ ತನ್ನ ತಾನೆ ತಿಳಿದು । ತನ್ನ ನಿಜದಲ್ಲಿ ತಾನು ತಾನಾ ದುದೊಂ । ದುನ್ನತಿಯ ನೋಡ ಸರ್ವಜ್ಞ ।'

'ಲಿಂಗಲಾಂಛನಸಂಯುಕ್ತಂ ಬಾಹ್ಯಕರ್ಮವಿವರ್ಜಿತಂ ।
ಕೇವಲಾನಂದರೂಪಂ ಯತ್ತತ್ಸ್ವಯಂ ಲಿಂಗಮೀರಿತಂ ॥'

ಈ ಸರ್ವಜ್ಞ ವಚನವೂ ಸೂಕ್ಷ್ಮಾಗಮ ಮಂತ್ರವೂ ಸ್ವಯದ ಅರ್ಥ ವನ್ನು ಸೊಗಸಾಗಿ ವರ್ಣಿಸಿವೆ. ತನ್ನ ನಿಜವೇ ತಾನೆಂದು (ಸ್ವಯವೆಂದು) ಸರ್ವಜ್ಞನು ಹೇಳಿದರೆ ಕೇವಲಾನಂದರೂಪವೇ ಸ್ವಯಲಿಂಗವೆಂದು ಸೂಕ್ಷ್ಮಾ ಗಮವು ಹೇಳಿದೆ.

"ಪಶ್ಯನ್ ಸರ್ವಾಣಿ ಭೂತಾನಿ, ಸಂಸಾರಸ್ಥಾನಿ ಸರ್ವಶಃ
ಸ್ಮಯಮಾನಃ ಪರಾನಂದೇ ಲೀನಾತ್ಮಾ ವರ್ತತೇ ಸುಧೀಃ।"

ಎಲ್ಲೆಲ್ಲಿಯೂ ಎಲ್ಲ ಬಗೆಯಲ್ಲಿ ಈ ಜಗದ ಸಂಸಾರದಲ್ಲಿರುವ ಸರ್ವಜೀವಿ ಗಳನ್ನು ವಿಲೋಕಿಸುತ್ತ ವಿಸ್ಮಯಗೊಳ್ಳುತ್ತ ಪರಾನಂದದಲ್ಲಿ ತಲ್ಲೀನನಾಗಿ ರುವವನೇ ಸುಜ್ಞನು–ಸ್ವಯಃಜಂಗಮನು.

ಸರ್ವಜೀವರಲ್ಲಿ ದಯಾಪರನಾಗಿ ಕೃಪಾಕಟಾಕ್ಷವನ್ನು ಬೀರಿ ಉದ್ಧ ರಿಸುವ ಸ್ವಭಾವವುಳ್ಳವನು ಜಂಗಮನು. ಅಂತಾದರೂ ಸಂಸಾರದಲ್ಲಿಯೇ ಮುಳುಗಿರುವವರನ್ನು ಕಂಡು ಕಡು ಅಚ್ಚರಿಗೊಳ್ಳುವನಾದರೂ ತನ್ನ ಆನಂದವನ್ನು ತಾ ಮರೆಯದಿರುವನು.

ಕ್ರಿಯಾಜ್ಞಾನೇಚ್ಛಾ ಶಕ್ತಿಸಂಪನ್ನನು ಶ್ರೀಗುರು. ಆದಿ ಪರಾಚಿಚ್ಛಕ್ತಿ ಸಂಯುಕ್ತನು ಜಂಗಮನು. ಆದಿಶಕ್ತಿಯನ್ನು ಸಂಪೂರ್ಣ ಅಳವಡಿಸಿ ಕೊಂಡು ಪರಾನಂದದಲ್ಲಿ ಪರವಶನಾದವನು ಸ್ವಯಜಂಗಮನೆಂದೆನಿಸುವನು. ಆತನ ದೃಷ್ಟಿ ವಿಶಾಲ; ಭಾವ ವಿಕಾಸ.

'ಆದಿಶಕ್ತಿ ವಿಡಿದವರೆಲ್ಲರು ಜಂಗಮವಲ್ಲ. ಅನಾದಿಶಕ್ತಿ ವಿಡಿದವರೆಲ್ಲರು ಜ್ಞಾನಿಗಳಲ್ಲ. ಆದಿ ಅನಾದಿ ಎಂಬೆರಡ ಭೇದಿಸಿ ದಾಂಟಿ ಇಚ್ಛಾಶಕ್ತಿಯ ಇಚ್ಛೆಯ ಮರೆದು, ಜ್ಞಾನಶಕ್ತಿಯ ಠಾವನೊಲ್ಲದೆ, ಕ್ರಿಯಾಶಕ್ತಿಯ ಭಾವವ ಬಿಟ್ಟು ತಾನು ತಾನಾದವಂಗೇನು ಇದಿರು ಇಲ್ಲ ಎಂದಿನಂಬಿಗ ಚೌಡಯ್ಯ.'

ಆಚಾರಲಿಂಗದ ವಿಕಾಸವಾದವು ಇದರಲ್ಲಿ ನಿರೂಪಿತವಾಗಿದೆ. ಆಚಾರ ಲಿಂಗವು ಗುರುಲಿಂಗವಾಗಿ ಗುರುಲಿಂಗವು ಶಿವಲಿಂಗವಾಗಿ ಶಿವಲಿಂಗವು ಜಂಗಮಲಿಂಗವಾಗಿ ಭೂವ್ಯ್ಯಂಗದಿಂದ ವಾಯ್ವಂಗವರೆವಿಗೂ ಅಂಗತ್ವ ದಿಂದ ಲಿಂಗತ್ವಕ್ಕೇರಿರಲಾಗುತ್ತದೆ. ಈ ಚತುರ್ವಿದಮಂಡಲ ಪ್ರಾಣಿ ಕೋಟಿಯನ್ನು ಪರಮಾಶ್ಚರ್ಯದಿಂದ ಪರಿಕಿಸುತ್ತಾನೆ ಸ್ವಯಜಂಗಮನು. ಸರ್ವ ಪ್ರಾಣಿಗಳನ್ನು ಕರುಣಿಸಲು ಸಮರ್ಥನಾದ ಸ್ವಸ್ಥಲಿಯು ಸಾಮಾನ್ಯ ಜೀವಿಗಳಿಂದ ಪಡೆಯಬೇಕಾದುದಿರುವುದಿಲ್ಲ; ಬೇಡಬೇಕಾದುದಿರುವುದಿಲ್ಲ. ಶೈವಸುಖಶೀಲನಾಗಿರುವುದೇ ಸ್ವಯಜಂಗಮ ಕರ್ತವ್ಯ.

"ಧ್ಯಾನಂ ಶೈವಂ ತಥಾ ಜ್ಞಾನಂ ಭಿಕ್ಷಾ ಚೈಕಾಂತಶೀಲತಾ
ಯತೇಶ್ಚತ್ವಾರಿ ಕರ್ಮಾಣಿ ನ ಪಂಚಮ ಮಿಹೇಷ್ಯತೇ ।"

ಸ್ವಸ್ಥಲನಿಗೆ ಶಿವಧ್ಯಾನ, ಶಿವಜ್ಞಾನ, ಶಿವಭಿಕ್ಷೆ, ಏಕಾಂತಶೀಲತೆ ಈ ನಾಲ್ಕು ಕ್ರಿಯೆಗಳಲ್ಲದೆ ಬೇರೊಂದು ಕ್ರಿಯೆಯಿಲ್ಲ ; ಬೇರೊಂದು ಕಾಂಕ್ಷೆಯಿಲ್ಲ.

ಈ ನಾಲ್ಕು ತುಸು ಹೆಚ್ಚು ಕಮ್ಮಿ ಶಿವಯೋಗಕ್ಕೆ ಸರಿಹೋಲುತ್ತವೆ. ಮೊದಲಿನವೆರಡು ಶಿವಯೋಗದಲ್ಲಿ ನೇರವಾಗಿವೆ. ಶಿವಭಿಕ್ಷೆಯು ಶಿವವ್ರತಕ್ಕೆ, ಏಕಾಂತಶೀಲತೆಯು ಶಿವಪೂಜೆಗೆ ಸರಿಹೋಲುವ ಪರ್ಯಾಯ ಪದಗಳು.

ಈ ನಾಲ್ಕನ್ನು ನಡೆಯಿಸುವುದರಿಂದ ಸ್ಥಯಸ್ಥಲಿಯು ಶಿವಯೋಗಿ ಎಂದೆನಿಸುತ್ತಾನೆ; ಸ್ವಯಜಂಗಮನೆನಿಸುತ್ತಾನೆ.

ಈ ನಾಲ್ಕರಿಂದ ಸ್ವಸ್ಥಲನು ಕ್ರಿಯಾಜ್ಞಾನಗಳನ್ನು ಅಂತರಂಗ ಬಹಿರಂಗಗಳನ್ನು ಮೇಳವಿಸಿ ಸಮನ್ವಯಗೊಳಿಸುತ್ತಾನೆ. ಧ್ಯಾನ-ಜ್ಞಾನಗಳೆರಡೂ ಅಂತರಂಗದ ಎರಡು ಕಣ್ಣುಗಳು. ಭಿಕ್ಷೆ ಬಹಿರಂಗದೊಡಲು. ಏಕಾಂತಶೀಲತೆ ಉಭಯಾಂಗ ಜೀವಾಳ.

ಧ್ಯಾನ ಮನದ ಮತ್ತೊಂದು ಅವಸ್ಥೆ; ಅದೇ ಮನನ. ಶಿವಧಾರಣವಾದ ಮೇಲೆ ಆ ಶಿವದ (ನ)ಧ್ಯಾನ ಅಂದರೆ ಮನನ ಅಗತ್ಯ. ಮನನೀಯ ಆ ಶಿವವಸ್ತುವನ್ನು ಮನದಲ್ಲಿ ಕುರುಹಿಟ್ಟು ನೆನೆಯುವುದೇ ಮನನ ಅಥವಾ ಧ್ಯಾನ. ಧ್ಯಾನ ಮಾಡದೆ ಜ್ಞಾನ ಅಳವಡದು. ಧ್ಯಾನ ಜ್ಞಾನಫಲದ ಪುಷ್ಪ.

ಬರೀ ಧ್ಯಾನಕ್ರಿಯೆಯಿಂದ ಅನುಭವ (ಜ್ಞಾನ) ರೂಪ ಫಲವುಂಟಾಗದು. ಧ್ಯಾನದ ನೆರವಿಯಲ್ಲಿ ಜ್ಞಾನವನ್ನೂ ಆರ್ಜಿಸಬೇಕು: ಬೀಜದೊಳಗಣ ವೃಕ್ಷಫಲವ ಸವಿಯಬಹುದೆ? ಮಳೆವನಿಯೊಳಿಪ್ಪ ಹುರಮಂಜಿಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೆ? ಹಾಲೊಳಗಿರ್ಪ ತುಪ್ಪವು ಅರಸಿದರೆ ಸಿಕ್ಕುವುದೆ? ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ ? ತನ್ನೊಳಗಿರ್ಪ ಶಿವತತ್ತ್ವವು ನೆನದಾಕ್ಷಣವೆ ಅನುಭವಕ್ಕೆ ಬರ್ಪುದೆ? ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನತ್ವಮಂ ಮಾಡಿಕೊಂಡು ತದನುಭವ ಸುಖದೊಳೋಲಾಡುವುದು ಅತಿ ಚತುರನಾದ ಶಿವಶರಣಂಗಲ್ಲದೆ ಉಳಿದರ್ಗುಂಟೇ ಮಹಾಘನ ದೊಡ್ಡ ದೇಶಿಕಾರ್ಯಗುರು ಪ್ರಭುವೇ ?

ಧ್ಯಾನ-ಜ್ಞಾನವೆರಡೂ ಬೇಕೆಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿವಚನ ಬೇಕಿಲ್ಲ. ಧ್ಯಾನದಲ್ಲಿ ಪರೋಕ್ಷವಾಗಿದ್ದ ವಸ್ತು ಜ್ಞಾನದಲ್ಲಿ ಪ್ರತ್ಯಕ್ಷವಾಗುತ್ತದೆ.

ಜ್ಞಾತೃ ಜ್ಞೇಯಗಳೆರಡಿದ್ದರೆ ಸಾಲದು. ಜ್ಞಾತೃವಿಗೆ ಜ್ಞೇಯ ವಸ್ತು ಗೋಚರವಾಗಬೇಕಾದರೆ ಜ್ಞಾನವಿದ್ದಾಗಬೇಕು. ಕಣ್ಣು-ಮುಖಗಳಿದ್ದರೆ ಸಾಲದು; ಜತೆಗೆ ಕನ್ನಡಿಯೂ ಬೇಕು. ಆಗ ಮೊಗ ತೋರುತ್ತದೆ.

ಅಂತೆಯೇ ಜ್ಞಾನ ಮುಕುರದ ಅವಶ್ಯಕತೆಯಿದೆ: 'ಜಗವಾವರಿಸಿದ ಕಣ್ಣು ತನ್ನ ತಗುಳ್ವ ಕಾಯ ಕಾಣದು. ತಿಳಿವ ಅರಿವು ತನ್ನ ತಗುಳ್ವ ಭವದ ಮೊನೆಯ ಕಾಣದು. ವಿವೇಕಪರನಾದರೆ ಕಾಣದದು ಕಾಣುವುದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ'

ಭಿಕ್ಷೆ ಬೇಡುವುದು ಎರಡನ್ನು. ಒಂದು ಓದನ; ಇನ್ನೊಂದು ಸಾಧನ. ಅನ್ನಭಿಕ್ಷೆದಲ್ಲಿಯೂ ಎರಡು ಬಗೆಯುಂಟು. ಒಡಲಾಸೆಗೆ ಬಿಕ್ಕೆ ಬೇಡುವುದೊಂದು; ಒಡಲಾಸೆಯಿಲ್ಲದೆ ಬೇಡದೆ ಬಂದುದೊಂದು. ತನ್ನ ಒಡಲಿಗಾಗಿ ತಾನು ಮಾಡಿಕೊಂಡು ಉಣ್ಣಬಾರದು ಜಂಗಮನು. ತಾ ಪಾಕವನ್ನು ಮಾಡಹೊರಟರೆ ಮತ್ತೆ ಆಸೆಗೆ ಆರ್ಜನೆಗೆ ಅವಕಾಶವಾಗುತ್ತದೆ. ಆದ್ದರಿಂದ ತಾ ಮಾಡದೆ ಮತ್ತು ಬೇಡದೆ ತಾನಾಗಿ ಬಂದ ಭಿಕ್ಷಾನ್ನವನ್ನು ಮಾತ್ರ ಸ್ವಜಂಗಮನುಂಡು ತೃಪ್ತನಾಗಿರಬೇಕು. 'ಹುತ್ತ ಹಾವಿಗೆ ಚಂದ, ಮುತ್ತು ಕೊರಳಿಗೆ ಚೆಂದ, ನಕ್ಷತ್ರ ಚೆಂದ ಗಗನಕೆ, ಶಿವಯೋಗಿಗೆ ಭಿಕ್ಷವೇ ಚೆಂದ ಸರ್ವಜ್ಞ.' 'ಭಿಕ್ಷದ ಅನ್ನವು ಮೋಕ್ಷಕ್ಕೆ ಸಾಧನವು । ಕುಕ್ಷಿಗೆ ನರರ ಕಾಡಿ ಬೇಡುಂಬನ್ನ । ಮೋಕ್ಷಕ್ಕೆ ದೂರ ಸರ್ವಜ್ಞ.' ಎರಡನೆಯದಾಗಿ ಸತ್ಯ ಸಾಧನೆಗೆ ಸದ್ಗುಣಸಂಪದವನ್ನು ತಪ್ಪದೆ ಸದ್ಗುಣಿಗಳಲ್ಲಿ ಭಿಕ್ಷೆ ಬೇಡಬೇಕು. ನಿದರ್ಶನಕ್ಕಾಗಿ ಭಕ್ತಿಯುಳ್ಳವರಲ್ಲಿ ಭಕ್ತಿಯನ್ನು, ಜ್ಞಾನಿಗಳಲ್ಲಿ ಜ್ಞಾನವನ್ನು ವೈರಾಗ್ಯಶಾಲಿಗಳಲ್ಲಿ ವೈರಾಗ್ಯವನ್ನು ಭಿಕ್ಷೆ ಬೇಡುವಲ್ಲಿ ಅಭ್ಯಂತರವೇನಿಲ್ಲ. ಏಕೆಂದರೆ ಅವರು ತಮ್ಮ ಗುಣಗಳನ್ನೇ ಎತ್ತಿಕೊಡುವುದಿಲ್ಲ. ತಮ್ಮಂತೆ ಬೇಡಿದವರನ್ನೂ ನಡೆಯಹಚ್ಚುತ್ತಾರೆ; ಸದ್ಗುಣಗಳನ್ನು ಸಾಧಿಸಹಚ್ಚುತ್ತಾರೆ. ಇದರಿಂದಾಗಿ ಗುಣಭಿಕ್ಷೆ ತಪ್ಪಲ್ಲ. ಧನಧಾನ್ಯಗಳ ಭಿಕ್ಷೆ ಜಂಗಮಕ್ಕಲ್ಲ ಲೇಸಲ್ಲ. 'ಬೇಡಲಾಗದು ಜಂಗಮ. ಬೇಡಿಸಲಾಗದು ಭಕ್ತ. ಬೇಡಿದವ ನೋಡಿದರೆ ಬೇಡ ಬೇಡ ಭಕ್ತಿಯ ಆಡಂಬರ ವೃಷಮೂರ್ತಿ ಕಪಿಲಸಿದ್ಧ ಮಲ್ಲಿಕಾರ್ಜುನಾ.' 'ಬೇಡುವವ ಜಂಗಮವೆ? ಬೇಡಿಸಿಕೊಂಬವವ ಭಕ್ತನೆ?' ಮುಂತಾದ ಮಾತುಗಳು ಭಿಕ್ಷದ ವಿವಕ್ಷವನ್ನು ಮಾಡಿವೆ. ಈ ಬಗೆಯ ಭಿಕ್ಷಾವರ್ತನವು ಏಕಾಂತತೆಗೆ ಹಾದಿಯನ್ನು ಹಾಕುತ್ತದೆ. ಯಾವ ಧನಧಾನ್ಯ ಸಂಗ್ರಹವಿಲ್ಲದ ಮೇಲೆ ತಾನೆಲ್ಲಿದ್ದರೂ ಭಯವಿಲ್ಲ; ತಾನೊಬ್ಬನಿದ್ದರೂ ಭಯವಿಲ್ಲ.

'ಸಕೃತ್ ಸಂಸಾರದಲ್ಲಿ ಜನಿಸಿ ಪ್ರಕೃತಿ ಗುಣವಳಿಯದೆ ಮನುಜರ ಬೇಡುವ ಯಾಚಕರನೊಲ್ಲ. ಅಭವನ ಮುಖದಲ್ಲಿ ಬಂದುದನಲ್ಲದೆ ಕೈಕೊಳ್ಳ. ಕೂರ್ಮನ ಶಿಶುವಿನ ಆಪ್ಯಾಯನದಂತೆ ಆರಾಧ್ಯ ಸಕಳೇಶ್ವರ ದೇವರಲ್ಲಿ ದಯಾಮೃತವನುಂಬ ಶರಣ.'

ಪ್ರಾಕೃತಿಕ ಗುಣಗಳಿಂದ ಕೂಡಿದ್ದರೂ ಏಕಾಂತತೆಗೆ ಭಂಗ. ತನ್ನ ದೇಹಗುಣಗಳೇ ತನಗೆ ಬಂಧುಬಳಗವಾಗಿ ಪರಿಣಮಿಸುತ್ತವೆ. ತನ್ನ ಈ ಪ್ರಕೃತಿ ಗುಣಗಳನ್ನು ಕಾಪಾಡಲು ಭೌತಿಕವಸ್ತುಗಳ ಭೌತಿಕವ್ಯಕ್ತಿಗಳ ಬಳಿ ಭಿಕ್ಷೆಯನ್ನು ಬೇಡಬೇಕಾಗುತ್ತದೆ. ಶಿವಮುಖದಲ್ಲಿ ಬಂದುದನ್ನು ಕೈಕೊಂಡರೆ ದೋಷವಿಲ್ಲ. ಭವಮುಖದಲ್ಲಿ ಬಂದುದನ್ನು ಬರುವುದನ್ನು ಕೈಕೊಳ್ಳೆ ಬಾರದು. ಆಮೆಯ ಮರಿಯಂತೆ ಆರಾಧ್ಯದೇವತೆಯ ದಯಾಮೃತದಿಂದ ಮಾತ್ರ ಸಂತೃಪ್ತನಾಗಿರಬೇಕು.

ಸ್ವಯಜಂಗಮನ ಮನ ಮೈಗಳೆರಡೂ ಏಕಾಂತಸ್ಥಲಶೀಲವಾಗ ಬೇಕು; ಏಕಸ್ಥಲಶೀಲವಾಗಬೇಕು.

'ಸ್ವಸ್ಥಲ' ಪದವು ಹೇಗೆ ಅರ್ಥಗರ್ಭಿತವಾಗಿದೆಯೋ 'ಏಕಾಂತಶೀಲ' ಪದವೂ ಹಾಗೆಯೇ ಅರ್ಥಗರ್ಭಿತ ಪದವಾಗಿದೆ. ಎರಡೂ ಅದ್ವಯ ನಿಷ್ಠ ವಾಗಿವೆ.

ಸ್ವಯಜಂಗಮನ ಮನವು ಸ್ವ-ಸ್ಥಲದಲ್ಲಿ ಸ್ವಸ್ಥವಾಗಿರುವಂತೆ ತನುವೂ ಸ್ವಸ್ಥಲದಲ್ಲಿಯೇ ಇರಬೇಕು. ಸರ್ವಾಂಗವೂ ಸ್ವಸ್ಥಲದಲ್ಲಿ ಸ್ವಸ್ಥವಾ ಗಿರಬೇಕು.

ಸ್ವಯಜಂಗಮನ ಮೂಗು ಮತ್ತೊಂದನ್ನು ಮೂಸಬಾರದು; ಜಿಹ್ವೆ ಮತ್ತೊಂದನ್ನು ರುಚಿಸಬಾರದು. ಕಣ್ಣು ಬೇರೊಂದನ್ನು ಕಾಣಬಾರದು. ತ್ವಕ್ಕು ಮತ್ತೊಂದನ್ನು ಮುಟ್ಟಬಾರದು. ಕಿವಿ ಇನ್ನೊಂದನ್ನು ಕೇಳಬಾ ರದು. ಮನ ಮತ್ತೊಂದನ್ನು ನೆನೆಯಬಾರದು. ಮತಿ ಮತ್ತೊಂದನ್ನು ಅರಿಯಬಾರದು. ತಂತಮ್ಮ ಲಿಂಗಗಳಲ್ಲಿ ಇರಬೇಕು.

ಸ್ವಸ್ಥಲವೆಂದರೆ ಸ್ವಾತ್ಮಲಿಂಗವೆಂತಲೂ ಸ್ವಸ್ಥಳವೆಂತಲೂ ದ್ವಯಾರ್ಥ ಗಳ ಧ್ವನಿಯುಂಟು. ಸ್ವಶಕ್ತಿಯನ್ನು ಸಂಪಾದಿಸದೆ ಶಕ್ತಿ ಬಾರದು. ಸರ್ವೋ ದ್ಧಾರ ಶಕ್ತಿ ಬಾರದೆ ಸರ್ವತ್ರ ಸಂಚರಿಸಬಾರದು.

೮. ಚರಸ್ಥಲಂ

ಆನಂದದ ಸದಂಶವೇ ಸ್ವಯಸ್ಥಲವಾದರೆ ಆನಂದದ ಚಿದಂಶವೇ ಚರಸ್ಥಲವು. ಇದರಲ್ಲಿ ಸಚ್ಚಿತ್ತುಗಳೆರಡೂ ಸಮಾವೇಶಗೊಂಡಿರುತ್ತವೆ. ಸ್ವಯಜಂಗವನು ಸ್ವಸ್ಥಲದಲ್ಲಿ ಇರುತ್ತಾನೆ. ಚರಜಂಗಮನು ಇರುವುದಲ್ಲದೆ ಅರಿಯುತ್ತಾನೆ; ಅರಿದಂತೆ ಆಚರಿಸುತ್ತಾನೆ.

ಆಚರಿಸು ಪದವನ್ನು ಉಭಯಾರ್ಥದಲ್ಲಿ ಉಪಯೋಗಿಸಲಾಗಿದೆ. 'ಆ-ಚರ' ಅಂದರೆ ಎಲ್ಲವನ್ನೂ ಶಿವನೆಂದರಿ; ಎಲ್ಲೆಲ್ಲಿಯೂ ಸಂಚರಿಸು.

ಸ್ವಶಕ್ತಿ ಅಥವಾ ಸ್ವಾನಂದ ತನ್ನಲ್ಲಿ ಸಂಪೂರ್ಣ ಅಳವಟ್ಟ ಬಳಿಕ ಸರ್ವರ ಉದ್ಧಾರಕ್ಕಾಗಿ ಸರ್ವದರ ಉದ್ಧಾರಕ್ಕಾಗಿ ಲೋಕದಲ್ಲಿ ಸಂಚರಿಸಲು ಸಮರ್ಥನಾಗುತ್ತಾನೆ. ಶಿವಜ್ಞಾನ ಸಂಪನ್ನನಾದ ಬಳಿಕ ಸರ್ವವೂ ಶಿವಮಯವೆಂದು ಅರಿದಾಚರಿಸಲು ಸಮರ್ಥನಾಗುತ್ತಾನೆ. ತನ್ನ ಕರದಿಷ್ಟದಲ್ಲಿ ಇರುವು ಉರದ ಜ್ಯೋತಿರ್ಲಿಂಗದಲ್ಲಿ ಅರಿವು ಕರಿಗೊಂಡ ಪುಣ್ಯಾತ್ಮನೇ ಚರಜಂಗಮನೆಂದೆನಿಸುತ್ತಾನೆ. 'ಕಂಗಳ ಕರುಳ ಕೊಯ್ದವರ, ಮನದ ತಿರುಳ ಹುರಿದವರ, ಮಾತಿನ ಮೊದಲ ಬಲ್ಲವರನೆನಗೊಮ್ಮೆ ತೋರಾ ಗುಹೇಶ್ವರಾ' ಎಂದು ಚರಜಂಗಮದ ಲಕ್ಷಣವನ್ನು ವಚಿಸಿದೆ ಪ್ರಭುವಾಣಿ. ಇದೋ ಇದನ್ನೇ ಸಾಟಿದೆ ಈ ಗುರುವಾಣಿ:

> "ಸ್ವರೂಪ ಜ್ಞಾನಸಂಪನ್ನೋ ಧ್ವಸ್ತಾಹಂ ಮಮತಾಕೃತಿಃ
> ಸ್ವಯಮೇವ ಸ್ವಯಂ ಭೂತ್ವಾ ಚರತೀತಿ ಚರಾಭಿದಃ।"

ಸ್ವಸ್ವರೂಪದ ಅರಿವು ತನಗಾಗಿ ಅಪೂರ್ಣಾಹಂಭಾವ ಮತ್ತು ಮಮತಾಭಿಮಾನಗಳಳಿದು ಪೂರ್ಣಾಹಂಭಾವ ಮತ್ತು ಸರ್ವಸಮತ್ವ ಸ್ವರೂಪದಿರುವು ತನಗಾಗಿ ತಾನೇ ತಾನಾಗಿ ಚರಿಸುವಾತನೇ ಚರಜಂಗಮನು.

ಸರ್ವ ಜ್ಞಾನಗಳಲ್ಲಿ ಸ್ವರೂಪಜ್ಞಾನವೇ ಶ್ರೇಷ್ಠ. ದೃಶ್ಯದ ಎಲ್ಲ ಜ್ಞಾನಗಳನ್ನು ಗಳಿಸಬಹುದು: ಸ್ವಸ್ವರೂಪಜ್ಞಾನವನ್ನು ಗಳಿಸುವುದು ಕರ ಕಷ್ಟ. 'ತಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ' ತಾನಾರೆಂಬುದನ್ನು ತಿಳಿದರೆ ಇನ್ನುಳಿದುದನ್ನೆಲ್ಲ ತಿಳಿದಂತಾಗುತ್ತದೆ. ಅಂಗವನ್ನು ತಿಳಿದರೆ

ಅವಯುವವನ್ನು ತಿಳಿದಂತೆ; ಅದೇ ಅವಯುವವೊಂದನ್ನು ಅರಿತರೆ ಅಂಗವನ್ನು ಅರಿತಂತಾಗದು. ಕಾರಣ ಸ್ವರೂಪಜ್ಞಾನ ಸರ್ವಶ್ರೇಷ್ಠ; ಸರ್ವನಿಷ್ಠ.

ನಾನು-ನನ್ನದು ಎಂಬ ಅಪೂರ್ಣವಾದ ಸಂಕುಚಿತವಾದ ವ್ಯವಹಾರವನ್ನು ದೂರಬಿಟ್ಟಿರಬೇಕು. ಸರ್ವಸಮತಾಭಾವವುಳ್ಳವನಾಗಿರಬೇಕು.

'ಸುಮತಿಯೆಂಬ ಕಂಥೆಯ ತೊಟ್ಟು, ಸುಬುದ್ಧಿಯೆಂಬ ಟೊಪ್ಪರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮದವೆಂಬ ಚೇಳ ಮೆಟ್ಟದೆ, ಗೊಹೇಶ್ವರನ ಶರಣ ಬಂದೆನು, ಭಕ್ತಿ ಭಿಕ್ಷವನಿಕ್ಕೈ ಸಂಗನ ಬಸವಣ್ಣ.'

'ಕಣ್ಣೇ ಕಟ್ಟಿಗೆಯಾಗಿ, ಕೈಯೆ ಕಪ್ಪರವಾಗಿ, ಕಿವಿಯೇ ಸಕಲ ಪುರಾತನರ ಕಾರುಣ್ಯವೆನುತ ಮನದ ಭಿಕ್ಷವನುಂಡು ತನು ಪರಿಣಾಮವನೈದಿಹ ಘನಮಹಿಮರ ತೋರಯ್ಯ ಗೊಹೇಶ್ವರಾ.'

ಈ ಎರಡು ವಚನಗಳು 'ಧ್ವಸ್ತಾಹಂ ಮಮತಾಕೃತಿಃ' 'ಸ್ವಯಮೇವ ಸ್ವಯಂಭೂತ್ವಾ' ಎಂಬೆರಡು ಉಪದೇಶಗಳಿಗೆ ಉಪವ್ಯಾಖ್ಯಾನಗಳಂತಿವೆ.

ಸ್ವಸ್ವರೂಪಜ್ಞಾನವಾದ ಬಳಿಕ ಅದಕ್ಕೆ ವಿರೋಧವಾದ ಜೀವಭಾವದ್ಯೋತಕವಾದ ಅಹಂಕಾರ ಮಮಕಾರಗಳಿರಬಾರದು. ಇವೆರಡೂ ಚರಸ್ಥಲಕ್ಕೆ ಹೊರಗು. ಇವಿದ್ದರೆ ಚರಸ್ಥಲತ್ವವು ಬಾರದು. ಅಹಂಕಾರವಿರುವಲ್ಲಿ ಅಪೂರ್ಣತೆಯಿದೆ; ಜೀವತ್ವವಿದೆ. ಮಮಕಾರವಿರುವಲ್ಲಿ ವಿಷಮತೆಯಿದೆ; ವಿಭಿನ್ನತೆಯಿದೆ. ಸ್ಥೂಲಾಹಂಭಾವಕ್ಕಿಂತ ಅಜ್ಞಾನ ಬೇರಿಲ್ಲ. ಸಂಕೋಚ ಸ್ವಭಾವಕ್ಕಿಂತ ಸಂಸಾರ ಬೇರಿಲ್ಲ. ಇವೆರಡೂ ಇರುವಲ್ಲಿ ಸ್ವರೂಪಜ್ಞಾನವಿರದು. ಸ್ವರೂಪಜ್ಞಾನವಿರುವಲ್ಲಿ ಇವೆರಡೂ ಇರವು. ಆಗ ತಾನೇ ತಾನಾಗುವನು. ಅಂತಾಗುವುದೇ ಚರಜಂಗಮತ್ವ. ಆ ಚರಜಂಗಮನಿಗಾಗಿರುತ್ತದೆ ಸ್ವಯಂಭಾವ ಸ್ಥಿರತ್ವ. ಅವರು ಲೋಕಕಲ್ಯಾಣಕ್ಕಾಗಿ ಭಕ್ತರ ಉದ್ಧಾರಕ್ಕಾಗಿ ಸಂಚರಿಸುತ್ತಾರೆ. ಅವರ ಇರುವು ಲೋಕಪಾವನವನ್ನು ಮಾಡುವಂತೆ ಅವರ ಅರಿವು ಅವರ ಪಿಂಡಾಂಡವನ್ನು ಪಾವನಗೊಳಿಸಿರುತ್ತದೆ; ಪ್ರತಿ ನಿಮಿಷದಲ್ಲಿ ಎಚ್ಚರಿಕೆಯಿಂದಿರಿಸುತ್ತದೆ. ಎಲ್ಲ ಬಗೆ

ಯಲ್ಲಿ ಎಡವದಂತಿರಿಸಿರುತ್ತದೆ. ನಡೆನುಡಿಗಳಲ್ಲಿ ನಡತೆಯಲ್ಲಿ ನಸು ತಪ್ಪದಂತಿರಿಸುತ್ತದೆ.

"ಕಾಮ ಕ್ರೋಧಾದಿ ನಿರ್ಮುಕ್ತಃ ಶಾಂತಿದಾಂತಿಸಮನ್ವಿತಃ
ಸಮಬುದ್ಧ್ಯಾ ಚರೇದ್ಯೋಗೀ ಸರ್ವತ್ರ ಶಿವಬುದ್ಧಿಮಾನ್ !"

ಕಾಮಕ್ರೋಧಗಳನ್ನು ಬಿಟ್ಟು, ಶಾಂತಿದಾಂತಿಗಳನ್ನು ತೊಟ್ಟು, ಸರ್ವತ್ರ ಶಿವಭಾವವುಳ್ಳವನಾಗಿ ಸರ್ವದಾ ಸಮಭಾವ ಸಂಪನ್ನನಾಗಿ ಶಿವಯೋಗಿಯಾಗಿ ಸಂಚರಿಸುವನು.

ಸುತ್ತ ಸುಳಿವ ಜಂಗಮನಿಗೆ ಸ್ಮರಜ್ವರದ ಸೊಗಡಿರಬಾರದು. ಬೇಕೆಂಬುದನ್ನು ಬಹುದೂರ ಬಿಟ್ಟು ಸುಳಿಯಬೇಕು. ಬಯಕೆಯಿಂದ ಬಾಳಿಗೆ ಬರುವುದು ಹೀನತೆ. 'ಹೊನ್ನಿಂಗೆ ಬಂದಾತನಲ್ಲ. ಹೆಣ್ಣಿಂಗೆ ಬಂದಾತನಲ್ಲ. ಮಣ್ಣಿಂಗೆ ಬಂದಾತನಲ್ಲ. ಅಶನಕ್ಕೆ ಬಂದಾತನಲ್ಲ. ವೇಷಕ್ಕೆ ಬಂದಾತನಲ್ಲ. ಕೂಡಲ ಚೆನ್ನಸಂಗಮದೇವಯ್ಯ ! ಭಕ್ತಿಯ ಪಥವ ತೋರ ಬಂದನಯ್ಯ.'

ಚಿನ್ಮಯಲಿಂಗವೇ ತಾನಾದ ಚರನಿಗೆ ಅಂಗದ ಹಂಗಿಲ್ಲ; ಒಡಲ ಕಳವಳ ಮುನ್ನಿಲ್ಲ. ಕಣ್ಮನಗಳ ಕಾಳಿಕೆಗಿಂಬಿಲ್ಲ. ಹೀಗಿರುವಾಗ ಮುನಿಸಿನ ಮಾತೆಲ್ಲಿ ? ಶಾಂತಿ-ದಾಂತಿ, ಸಮಬುದ್ಧಿ-ಶಿವಬುದ್ಧಿ ಈ ನಾಲ್ಕು ಗುಣಗಳುಳ್ಳವನೇ ಶಿವಯೋಗಿ. ಆತನೇ ಸಂಚರಿಸಲು ಸಮರ್ಥ. ಆ ಸಮರ್ಥ ಶಿವಯೋಗಿ ನಾಡಿನಲ್ಲಿ ಸಂಚರಿಸಿ ಭಕ್ತಿಪಥವನ್ನು ನಾಡಿಗರಿಗೆ ತೋರುವನಲ್ಲದೆ ತನಗಾಗಿ ಏನನ್ನೂ ಬೇಡನು. ಭುಕ್ತಿಗಾಗಿ ರಕ್ತಿಗಾಗಿ ಸುಳಿಯನು. ತನಗೆ ಮಾಡಲಿಲ್ಲೆಂದು ತನ್ನನ್ನು ಮನ್ನಿಸಲಿಲ್ಲೆಂದು ಮುನಿಸನು. ಮನಸು ಮುನಿಸುಗಳು ಮರವೆಯ ಕರುಹುಗಳು. ಹಿರಿಯತನದ ಕೇಡುಗಳು. ಕಾರಣ ಕಂಡುದಕ್ಕೆ ಮನಸು ಎಳಸಬಾರದು. ಕೈಗೂಡದಿದ್ದರೆ ಮುನಿಸು ತಾಳಬಾರದು. ಮನದ ಶಾಂತಿಯನ್ನು ತನುವಿನ ದಾಂತಿಯನ್ನು ಬಿಡದಂತಿರಬೇಕು. ಬುದ್ಧಿಯಲ್ಲಿ ಸಮತ್ವ ಶಿವತ್ವಗಳು ಸಮನಿಸಿರಬೇಕು. ಬಾಳಿನ ಶುದ್ಧಿಗೆ ತಿಳಿವಿನ ಸಿದ್ಧಿಗೆ ಇವಕ್ಕಿಂತ ಬೇರಿಲ್ಲ

ಸಂಪತ್ತು; ಬೇರಿಲ್ಲ ಸೌಭಾಗ್ಯ. ಈ ನಾಲ್ಕರ ಯೋಗವೇ ಯೋಗ. ಇವು ಳ್ಳವನೇ ಯೋಗಿ.

"ಇದಂ ಮುಖ್ಯಮಿದಂ ಹೀನಮಿತಿ ಚಿಂತಾಮಕಲ್ಪಯನ್
ಸರ್ವತ್ರ ಸಂಚರೇದ್ಯೋಗೀ ಸರ್ವಂ ಬ್ರಹ್ಮೇತಿ ಭಾವಯನ್ "।

ಮೇಲು – ಕೀಳೆಂಬ ಭಾವವಿಲ್ಲದೆ ಸರ್ವವು ಬ್ರಹ್ಮಸ್ವರೂಪವೆಂದು ಬಗೆದು ಎಲ್ಲೆಡೆಗಳಲ್ಲಿ ಸಂಚರಿಸುವವನೇ ಶಿವಯೋಗಿ.

ಸುತ್ತಿ ಸುಳಿವ ಜಂಗಮಕ್ಕೆ ಹಿರಿದು ಕಿರಿದೆಂಬ ಭೇದವಿಲ್ಲ. ಮುಖ್ಯ ಅಮುಖ್ಯವೆಂಬ ಕಲ್ಪನೆಯಿಲ್ಲ. ಅಲ್ಲಿ ಇಲ್ಲಿ ಎಂಬ ನೆಲದ ಬಗೆಗೆ ಕವಲಿಲ್ಲ. ಜೀವಜಗತ್ತುಗಳಲ್ಲಿ ಜೀವಭಾವ ಜಗಭಾವಗಳಿಲ್ಲ.

'ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಾ ! ಬಂದುದೇ ಪರಿಣಾಮ, ನಿಂದುದೇ ನಿವಾಸ. ಅದು ಇದು ಎಂಬುದಿಲ್ಲ, ಕೂಡಲ ಚೆನ್ನಸಂಗ ನಿಮ್ಮ ಶರಣಂಗೆ !'

ಕಿರಿದಕ್ಕೆ ಕಿರಿದಾಗಿ ಹಿರಿದಕ್ಕೆ ಹಿರಿದಾಗಿ ಇರಬಲ್ಲ ಶಕ್ತಿ ಸುಳಿವ ಜಂಗಮಕ್ಕಿರಬೇಕು. ಕಂಡುದೆಲ್ಲ ಕಳಾಲಿಂಗವೆಂದು ಭಾವಿಸುವ ಭಕ್ತಿಯಿದ್ದಾಗಬೇಕು. ಸ್ಥಳಭೇದವಿಲ್ಲದೆ ಸಂಚರಿಸುವ ಸ್ಥೈರ್ಯವುಳ್ಳವನಾಗಿರಬೇಕು.

"ನ ಸಮ್ಮಾನೇಷು ಸಂಪ್ರೀತಿಂ ನಾವಮಾನೇಷು ಚ ವ್ಯಥಾಂ
ಕುರ್ವಾಣಃ ಸಂಚರೇದ್ಯೋಗೀ ಕೂಟಸ್ಥೇ ಸ್ವಾತ್ಮನಿ ಸ್ಥಿತಃ ।

ಕೂಟಸ್ಥ ಆತ್ಮನಲ್ಲಿ ಕರಿಗೊಂಡ ಚರಸ್ಥಲಿಯು ಸನ್ಮಾನದಲ್ಲಿ ಸಂತೋಷವನ್ನು ಅಸನ್ಮಾನದಲ್ಲಿ ಅಸಂತೋಷವನ್ನು ತೋರದೆ ನಾಡಿನಲ್ಲಿ ಸುಳಿದಾಡಬೇಕು. ಸ್ತುತಿನಿಂದೆಗಳು ಬಂದರೆ ಕೋಪವ ತಾಳದೆ ಸಮಾಧಾನಿಯಾಗಿರಬೇಕು. ಮಾನಾಪಮಾನಗಳಲ್ಲಿ ಸಮಭಾವಿಯಾಗಿ ಶಿವಯೋಗಿಯಾಗಿ ಇರಬೇಕು- ತಾನು ತುರ್ಯನಾಗಿ ಸರ್ವಸಾಕ್ಷಿಯಾಗಿರಬೇಕು. ತನ್ನ ನಿಜದಲ್ಲಿ ತಾನಿರಬೇಕು.

"ಅಪ್ರಾಕೃತಗುಣೈಃ ಸ್ವೀಯೈಃ ಸರ್ವಂ ವಿಸ್ಮಾಪಯನ್ ಜನಂ
ಅದ್ವೈತ ಪರಮಾನಂದಮುದಿತೋ ದೇಹಿವಚ್ಚರೇತ್ ।"

ತನ್ನ ಪಾರಮಾರ್ಥಿಕ ಗುಣಗಳಿಂದ ಪ್ರಪಂಚದ ಜನರನ್ನು ಅಚ್ಚರಿಗೊಳಿಸುತ್ತ ಲಿಂಗಾಂಗ ಸಾಮರಸ್ಯರೂಪ ಶಿವಾದ್ವೈತ ಪರಮಾನಂದದಿಂದ ತಾನು ಆನಂದಿಸುತ್ತ ಚರಜಂಗಮನು ಶರೀರಿಯಂತೆ ಚರಿಸುವನು.

'ಹಸಿವಿಲ್ಲದೆ ಉಣಬಲ್ಲಡೆ, ಉಪಾಧಿಯಿಲ್ಲದೆ ಬೇಡಬಲ್ಲಡೆ ಅದು ಮರ್ಮ, ಅದು ಸಂಬಂಧ. ಗಮನವಿಲ್ಲದೆ ಸುಳಿಯಬಲ್ಲಡೆ, ನಿರ್ಗಮನಿಯಾಗಿರಬಲ್ಲಡೆ ಅದು ಮರ್ಮ, ಅದು ಸಂಬಂಧ. ಅವರ ನಡೆ ಪಾವನ, ಅವರ ನುಡಿ ತತ್ತ್ವ ; ಅವರು ಜಗದಾರಾಧ್ಯರೆಂಬೆ ಕಾಣಾ ಗೊಹೇಶ್ವರಾ.'

ಚರಜಂಗಮನು ಛರಾಚರ ಲೋಕೋತ್ತರ ಗುಣಗಳುಳ್ಳವನು. ಎಲ್ಲರೂ ಹಸಿದುಂಡರೆ ಆತನು ಹಸಿವಿಲ್ಲದೆ ಉಣಬಲ್ಲನು. ಬೇಕೆಂದು ಲೋಕದವರು ಬೇಡಿದರೆ ಬೇಕಿಲ್ಲದ ಬೇಡುವ ಬಗೆಯುಳ್ಳವನು ಚರಜಂಗಮನು. ನಿರ್ದಿಷ್ಟ ಉದ್ದೇಶವಿಲ್ಲದೆ ಸುಳಿಯಬಲ್ಲ. ಸುಳಿದು ಸುಳಿಯದಂತಿರಬಲ್ಲ. ಅದು ಆತನದೇ ಮರ್ಮ ; ಆತನದೇ ಧರ್ಮ. ಅವನ ನಡೆ ಶುಚಿ ; ನುಡಿ ರುಚಿ. ಆತನಿರುವೆಲ್ಲ ಸೋಜಿಗ. ಆತನಿಗೆ ತನುವಿದ್ದು ತನುವಿಲ್ಲ. ಆತ ಸದಾ ಹಸನ್ಮುಖಿ ; ಅದ್ವಯ ಸುಖಿ.

"ನ ಪ್ರಪಂಚೇ ನ ದೇಹೇ ಚ ನ ಧರ್ಮೇ ನ ಚ ದುಷ್ಕೃತೇ
ಗತವೈಷಮ್ಯಧೀರ್ಧೀರೋ ಯತಿಶ್ಚರತಿ ದೇಹಿವತ್ ।"

ವೈಷಮ್ಯ ಬುದ್ಧಿಯಿಲ್ಲದ ಸ್ಥಿರಚಿತ್ತನಾದ ಚರಜಂಗಮನು ಪ್ರಪಂಚದಲ್ಲಿದ್ದರೂ ಪ್ರಪಂಚರಹಿತನು. ದೇಹಿಯಾಗಿದ್ದರೂ ದೇಹಧರ್ಮರಹಿತನು. ಪುಣ್ಯಪಾಪ ದೂರನು. ಧೀರನು.

ದ್ವೈತದಲ್ಲಿದ್ದರೂ ಅದ್ವೈತದಲ್ಲಿಯೂ ಇರುತ್ತಾನೆ. ಸಾಕಾರನಾಗಿದ್ದರೂ ನಿರಾಕಾರನಾಗಿರುತ್ತಾನೆ. ಸುಕೃತ ದುಷ್ಕೃತಗಳ ಹಂಗಿಲ್ಲದಿರುತ್ತಾನೆ. ಸರ್ವಸಮರ್ಥನಾಗಿರುತ್ತಾನೆ.

'ಸುಳಿದೊಡೆ ಒಡಲಿಲ್ಲ ; ನಿಂದಡೆ ನೆಳಲಿಲ್ಲ. ನಡೆದಡೆ ಗಮನವಿಲ್ಲ, ನುಡಿದಡೆ ಶಬ್ದವಿಲ್ಲ ; ದಗ್ಧಪಟನ್ಯಾಯದಂತೆ ! ಉಂಡಡೆ ಉಪಾಧಿ ಇಲ್ಲ, ಉಣದಿರ್ದಡೆ ಕಾಂಕ್ಷೆಯಿಲ್ಲ. ಯಥಾಲಾಭ ಸಂತುಷ್ಟನಾಗಿ ಸ್ತುತಿಯಿಲ್ಲ, ನಿಂದೆಯಿಲ್ಲ; ನೆಂಟರಿಲ್ಲ, ಹಗೆಯಿಲ್ಲ; ಅರುಹು ಇಲ್ಲ, ಮರಹು ಇಲ್ಲ–ತಾನೆಂಬ

ನೆನಹಿಲ್ಲಾಗಿ ! ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಲಿಂಗಪ್ರಾಣಿಗಳಾಗಿ ಒಡಲ ಮರೆಗೊಂಡು ಎಂತಿರ್ದೊಡಂ ಎಂತು ನಡೆದೊಡಂ ಅಂತೇ ಸಂದಿರ್ದ.' ಚರಜಂಗಮನ ನಿರ್ಲೇಪಸ್ಥಿತಿ, ನಿರಂಜನಸ್ಥಿತಿ; ನಿರಾಳಸ್ಥಿತಿ. ಸುಳಿದು ಸುಳಿವಿಲ್ಲ, ನಿಂತು ನೆರಳಿಲ್ಲ. ಆತನು ನಡೆನುಡಿಗಳ ಹಂಗಿಗನಲ್ಲ. ಹಸಿವು ತೃಷೆ, ಹೊಗಳಿಕೆ–ತೆಗಳಿಕೆ, ಶತೃ–ಮಿತ್ರ, ಅರುಹು–ಮರಹು ಎಂಬ ದ್ವಂದ್ವಗಳ ದಂದುಗವಿಲ್ಲ; ತಾನೆಂಬ ಹಮ್ಮಿಲ್ಲ.

"ಪ್ರಾಕೃತೈಶ್ವರ್ಯಪರಾಙ್ಮುಖಮನಃಸ್ಥಿತಿಃ
ಚಿದಾನಂದ ನಿಜಾತ್ಮಸ್ಥೋ ಮೋದತೇ ಮುನಿಪುಂಗವಃ ।"

ಭೌತಿಕ ಭೋಗಭಾಗ್ಯಗಳಲ್ಲಿ ಮನವಿಲ್ಲದ ಮುನಿಪುಂಗವನು ಸಚ್ಚಿದಾನಂದರೂಪವಾದ ತನ್ನಲ್ಲಿ ತಾನಿದ್ದುಕೊಂಡು ಸಂತೋಷಿಸುತ್ತಾನೆ.

ಆತ್ಮಾನಂದದಲ್ಲಿರುವವನಿಗೆ ಪರಮಾರ್ಥ ಪರಿಣಾಮದಲ್ಲಿ ಪ್ರಮೋದಿಸುವವನಿಗೆ ಪ್ರಕೃತಿಜನ್ಯ ಸಂಪತ್ಸುಖಗಳ ಮೇಲೆ ಮನಸ್ಸಾಗದು. ಆತನು ಯಾವಾಗಲೂ ಆತ್ಮಾನಂದದಲ್ಲಿರುತ್ತಾನೆ. 'ಆತ್ಮರತಿರಾತ್ಮಕ್ರೀಡಾ ಆತ್ಮ ಮಿಥುನಮಾತ್ಮಾನಂದಃ । ಸ ಸ್ವರಾಡ್ಭವತಿ ತಸ್ಯ ಸರ್ವಲೋಕೇಷು ಕಾಮ ಚಾರೋ ಭವತಿ ॥' ಎಂದು ಛಾಂದೋಗ್ಯಶ್ರುತಿಯು ಸಾರಿದೆ.

ಅಪ್ರಾಕೃತವಾದ ಆತ್ಮೀಯವಾದ ಅಚ್ಚಳಿಯದ ಲಿಂಗಾನಂದದಲ್ಲಿ ಲೀನಮನವುಳ್ಳವನಾದ ಬಳಿಕ ಪ್ರಾಕೃತವಾದ ಪ್ರಕೃಷ್ಟವಲ್ಲದ ಐಸಿರಿಗೆ ಬಾಯ್ಬಿಡುವ ಸ್ಥಿತಿಯಿಲ್ಲ.

ಮೊದಲು ತನ್ನ ಮನ ವೈರಿಗಳನ್ನು ಗೆದ್ದು ಮಾಯೀಯ ಮಲಜಾಲದಿಂದೆದ್ದು ಮಾನವ ಜೀವನ ವಿಕಾಸಕ್ಕಾಗಿ ಮರ್ತ್ಯಜೀವಿಗಳ ಉದ್ಧಾರಕ್ಕಾಗಿ ಜಗತ್ತಿನಲ್ಲಿ ಚರಿಸುವಾತನೆ ಚರಜಂಗಮನು. ಚಿನ್ಮಯಾನಂದಶೀಲನು.

'ಸ್ವಚ್ಛಂದಚಾರೀ ಸ್ವಾಭಿನ್ನ ಲಿಂಗರೂಪೋ ನಿರಾಕುಲಃ
ಭೇದ ಭ್ರಾಂತಿ ವಿಹೀನೋ ಯಶ್ಚರಲಿಂಗಂ ಸ ಉಚ್ಯತೇ ।'

ಇದು ಸೂಕ್ಷ್ಮಾಗಮವು ಸೊಲ್ಲುವ ಚರಲಿಂಗಲಕ್ಷಣ. ಅವನ ಆಚಾರಕ್ಕೆ ಸಂಚಾರಕ್ಕೆ ಅಡೆತಡೆಯಿಲ್ಲ. ಅವನ ನಡೆನುಡಿಯೆಲ್ಲ ಲಿಂಗಮಯ;

ಇರುವೆಲ್ಲ ಅರುವೆಲ್ಲ ಲಿಂಗಮಯ. ಆತನಿಗೆ ಆಕುಲ-ವ್ಯಾಕುಲಗಳಿಲ್ಲ. ಭೇದಭ್ರಾಂತಿಯಿಲ್ಲ. ಎಲ್ಲವನ್ನೂ ತನ್ನಂತೆ ಕಂಡು ಎಲ್ಲೆಲ್ಲಿಯೂ ಸುಳಿಯುತ್ತಾನೆ; ಸುಳಿವ ಲಿಂಗಾಗಿರುತ್ತಾನೆ.

೯. ಪರಸ್ಥಲಂ

ಆನಂದದ ಆನಂದವೇ ಪರಸ್ಥಲವು. ಇದರಲ್ಲಿ ಸತ್ ಚಿತ್ ಆನಂದ ಈ ಮೂರು ಮುಪ್ಪುರಿಗೊಂಡಿರುತ್ತವೆ. ಇರುವು ಅರಿವುಗಳೊಡನೆ ಆನಂದಿಸುತ್ತ ಅದ್ವಯನಾಗಿ ಉಳಿಯುತ್ತಾನೆ ಪರಸ್ಥಲದ ಜಂಗಮನು.

ಚರಿಸಿ ಚರಲಿಂಗವಾದರೆ ತನಗಿಂತ ಪರವಿಲ್ಲೆನಿಸಿ ಪರಲಿಂಗವೆನಿಸುತ್ತದೆ. ಜೀವ-ಜಗತ್ತುಗಳೆರಡರ ಉದ್ಧಾರ ಉದ್ಯಮ ಪೂರೈಸಿದ ಬಳಿಕ ಆತನಿಗಿಂತ ಪರವಸ್ತು ಬೇರೊಂದಿರುವುದಿಲ್ಲ. ಕರ ಉರಗಳಂತೆ ಶಿರದಲ್ಲಿ ಪರತತ್ತ್ವ ಕರಿಗೊಂಡಾತನೇ ಪರಸ್ಥಲಸಂಪನ್ನನು.

'ಜನನ ಮರಣ ದೇಹಧರ್ಮಕ್ಕಲ್ಲದೆ ಜಂಗಮಕ್ಕೆಲ್ಲಿಯದೋ ? ಕ್ಷುಧಾತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಯದೋ ? ಸುಖದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಯದೋ ? ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಯದೋ ಕಪಿಲ ಸಿದ್ಧಮಲ್ಲಿಕಾರ್ಜುನಾ ?'

ದೇಹ ಪ್ರಾಣ ಮತ್ತು ಮನೋಧರ್ಮಗಳನ್ನು ದಾಟಿದವನೇ ತುರ್ಯದಲ್ಲಿ ತೂರಿ ಜ್ಞಾನಾಜ್ಞಾನಗಳನ್ನು ಮೀರಿ ಸಚ್ಚಿದಾನಂದದಲ್ಲಿ ಸೇರಿ ಸ್ವ-ಪರ ಭೇದವಳಿದಾತನೇ ಪರಜಂಗಮನು. ಅವನಿಗೆ ಪ್ರಮಾಣವಿಲ್ಲ ; ಅವನು ಅಪ್ರಮೇಯ.

"ಸ್ವಯಮೇವ ಸ್ವಯಂ ಭೂತ್ವಾ ಚರತಃ ಸ್ವಸ್ವರೂಪತಃ
ಪರಂ ನಾಸ್ತೀತಿ ಬೋಧಸ್ಯ ಪರತ್ವಮಭಿಧೀಯತೇ ।
ಸ್ವತಂತ್ರಃ ಸರ್ವಕೃತ್ಯೇಷು ಸ್ವಪರತ್ವೇನ ಭಾವಿತಃ
ತೃಣೇ ಕುರ್ವನ್ ಜಗಜ್ಜಾಲಂ ವರ್ತತೇ ಶಿವಯೋಗಿರಾಟ್ ॥"

ತಾನೇ ತಾನಾಗಿ ಸುಳಿದು ತನಗನ್ಯವಿಲ್ಲವಾಗಿ ತಿಳಿದು ಬೆಳಗುವನಾದುದರಿಂದ ಪರಸ್ಥಲಿಯೆಂದು ಹೇಳಿಸಿಕೊಳ್ಳುತ್ತಾನೆ.

ಸರ್ವಕಾರ್ಯಗಳಲ್ಲಿ ಸ್ವತಂತ್ರನಾಗಿ ತನ್ನನ್ನೇ ಆ ಪರವಸ್ತುವನ್ನಾಗಿ ಭಾವಿಸಿ ಜಗದ ಜಾಲವನ್ನು ಲೀಲಾಜಾಲವಾಗಿ ದಾಟನಿಂತು ಶಿವಯೋಗೀಶ್ವರನಾಗುತ್ತಾನೆ.

'ಸ್ವಯಂ ಸ್ವಯತ್ವಮಾಸಾಧ್ಯ ಚರತೋ ನ ಪರಸ್ಮೃತಃ |
ಅಸೌ ತತೋಽತೀತವರ್ಣಾಶ್ರಮತ್ವೇನ ಪರಃಸ್ಮೃತಃ ||'

—ವಾತುಳೋತ್ತರಾಗಮ

ಎಲ್ಲ ಅವಸ್ಥೆಗಳನ್ನು ಮೀರಿ ನಿಂತ ಪರಜಂಗಮನಿಗೆ ಜಗತ್ತು ಒಂದು ತೃಣ; ಜಾಗತಿಕ ಕಾರ್ಯ ಒಂದು ತೃಣ. ಜೀವಭಾವಕ್ಕೆಲ್ಲ ಅವನಲ್ಲಿ ಅಂಕುರಾರ್ಪಣ. ಆತ ಪರಿಪೂರ್ಣ. 'ಪರತತ್ತ್ವ ಪರಮಜ್ಞಾನ ಪರಮಾರ್ಥ ಪರಾಪರ ವಾಙ್ಮನಾತೀತ ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವ ಜ್ಞಾನಜ್ಯೋತಿ ಸುಜ್ಞಾನದ ಪ್ರಭೆಯು ಬೆಳಗಿನೊಳಗೆ ಸುಳಿದಾಡುವ ಪರಮಾನಂದ ಮಹಾಮಹಿಮೋನ್ನತಂಗೆ........ಇಹಲೋಕವೇನು ? ಪರಲೋಕವೇನು ? ಅಲ್ಲಿಂದತ್ತತ್ತ ಅಗಮ್ಯ, ನಿರಾಳ, ಪರಮಜ್ಞಾನಸಿದ್ಧಿ, ಮಹಾಲಿಂಗದ ಬೆಳಗು ಗುಹೇಶ್ವರಾ ನಿಮ್ಮ ನಿಜವನರಿದ ಮಹಾಮಹಿಮಂಗೆ ನಮೋನಮೋ ಎನುತಿರ್ದೆನು.' ಎಂದು ಪ್ರಭುದೇವರು ಪರಜಂಗಮದ ಪರಾಕಾಷ್ಠತೆಯನ್ನು ಕೊಂಡಾಡಿದ್ದಾರೆ.

ಪರಜಂಗಮನಿಗೆ ಸ್ವಗತ ಸಜಾತಿಯ ಭೇದವಿಲ್ಲ. ಜಗದ ಬಾಧೆಯಿಲ್ಲ. ಬ್ರಹ್ಮಾಂಡವನ್ನೊಳಗೊಂಡ ಬ್ರಹ್ಮಸ್ವರೂಪನಾಗಿರುತ್ತಾನೆ. ಅವನಿಗಿಂತ ಬೃಹದ್ವಸ್ತು ಇರುವುದಿಲ್ಲ.ಅದರಿಂದಾಗಿ ಆತನು ಪರಸ್ಥಲನೆನಿಸುತ್ತಾನೆ.

"ವರ್ಣಾಶ್ರಮ ಸದಾಚಾರ ಮಾರ್ಗನಿಷ್ಠಾ ಪರಾಙ್ಮುಖಃ
ಸರ್ವೋತ್ಕೃಷ್ಟಂ ಸ್ವಮಾತ್ಮಾನಾಂ ಪಶ್ಯನ್ ಯೋಗೀ ತು ಮೋದತೇ
ವಿಶ್ವಾತೀತಂ ಪರಂ ಬ್ರಹ್ಮ ಶಿವಾಖ್ಯಂ ಚಿತ್ಸ್ವರೂಪಕಂ
ತದೇವಾಹಮಿತಿ ಜ್ಞಾನೀ ಸರ್ವೋತ್ಕೃಷ್ಟಃ ಸ ಉಚ್ಯತೇ ||"

ವರ್ಣಾಶ್ರಮಗಳನ್ನು ಮಾರ್ಗಕ್ರಿಯೆಗಳನ್ನು ಮೀರಿನಿಂತಪರಜಂಗಮನು ಸರ್ವೋನ್ನತವಾದ ಸ್ವಾತ್ಮವನ್ನು ನಿಟ್ಟಿಸುತ್ತ ನಲಿಯುತ್ತಾನೆ.

ವಿಶ್ವಾತೀತವಾದ ಸಂವಿದ್ರೂಪವಾದ ಶಿವನಾಮಕವಾದ ಆ ಪರಬ್ರಹ್ಮವೇ ತಾನೆಂದು ತಿಳಿದ ಸ್ವಾನುಭಾವಿಯು ಸರ್ವೋತ್ಕೃಷ್ಟನೆನಿಸುತ್ತಾನೆ.

ದೇಹಭಾವವೇ ಇಲ್ಲದವನಿಗೆ ದೇಹವಿಡಿದು ಬರುವ ವರ್ಣಾಶ್ರಮಗಳ ಮಾತಿಲ್ಲ. ಮೀರಿದ ಕ್ರಿಯೆಯಲ್ಲಿ ನಿಂತವನಿಗೆ ಮಾರ್ಗಕ್ರಿಯೆಗಳೆನಿಸಿದ ಸದಾಚಾರಗಳ ಮಾರ್ಗನಿಷ್ಠೆಯ ನಿಯತಿಯಿಲ್ಲ. ಆತನಿರುವುದೇ ಪರಾತ್ಪರ ಪದ- ಆತನನುಭವಿಸುವುದೇ ಪರಮಾಮೋದ. 'ಕುಲವಳಿದು ಛಲವಳಿದು ಮದವಳಿದು ಮತ್ಸರವಳಿದು ಆತ್ಮತೇಜವಳಿದು ಸರ್ವಾಂಕಾರವಳಿದು ನಿಜವುಳಿದು ಲಿಂಗಜಂಗಮವೆಂಬ ಶಬ್ದವಿಡಿದು ಸಾಧ್ಯವಾಯಿತ್ತು ನೋಡಾ. ತಾನಳಿದು ತಾನುಳಿದು ಸಹಜಪದವಿಯಲ್ಲಿ ಕೂಡಲ ಚೆನ್ನಸಂಗನಲ್ಲಿ ತಾನು ತಾನಾದ.'

ಸ್ಥೂಲಾಹಂಭಾವವಳಿದು ಕಾರಣಾಹಂಭಾವದಲ್ಲಿ ಉಳಿದ ಆ ಸಹಜನಿಗೆ ಕುಲ ಜಾತಿ ವರ್ಣಗಳು ಸೋಂಕವು. ಮದ ಮತ್ಸರಾದಿಗಳು ಮೈಗೂಡವು. ಆತನಿಗೆ ಭೌತಿಕದೇಹ ಭಾನವಿಲ್ಲ. ಬ್ರಹ್ಮಾಂಡವನ್ನು ಮೀರಿರುವ ಭಾವವನ್ನು ಮಿಂಚಿರುವ ಪರಶಿವಬ್ರಹ್ಮವೇ ಆತನಾಗಿರುತ್ತಾನೆ. 'ಕಾಲಿಲ್ಲದ ಗಮನಿ, ಕೈಯಿಲ್ಲದ ಸೋಂಕು, ಬಾಯಿಲ್ಲದ ರುಚಿ, ಭಾವವೇ ಕರ್ಪರವಾಗಿ ಪರಮದೇಹಿ ಎಂದು ಬೇಡುವ ಪರಮನ ತೋರಾ ಗೊಹೇಶ್ವರಾ !' ಹೀಗಿರುವಾಗ ಆತನು ಪರಮೋತ್ಕೃಷ್ಟನಲ್ಲವೆ ?

"ಅಚಲಂ ಧ್ರುವಮಾತ್ಮಾನಮನುಪಶ್ಯನ್ನಿರಂತರಂ
ನಿರಸ್ತವಿಶ್ವವಿಭ್ರಾಂತಿರ್ಜೀವನ್ಮುಕ್ತೋ ಭವೇನ್ಮುನಿಃ ।"

ಅಲ್ಲಾಡದಂತೆ ನೆಲೆನಿಂತ ಆತ್ಮವನ್ನು ನಿರಂತರ ನಿರೀಕ್ಷಿಸುವ ಪರಜಂಗಮನು ವಿಶ್ವಭ್ರಾಂತಿಯನ್ನು ವಿಸರ್ಜಿಸಿ ಜೀವನ್ಮುಕ್ತನಾಗಿರುತ್ತಾನೆ.

ನಿಶ್ಚಲತ್ವ ನಿತ್ಯತ್ವ ಧರ್ಮವುಳ್ಳದ್ದು ಚೈತನ್ಯ. ಅದನಳವಡಿಸಿಕೊಂಡಾತನಿಗೆ ವಿಶ್ವದ ವಿಭ್ರಮೆಯಿಲ್ಲ. ವಿಭ್ರಮೆ ವಿರಹಿತನೇ ಜೀವನ್ಮುಕ್ತ. ಆತನೇ ಮುನಿ. ಆತನಿಗೆ ಅಂಗಗುಣಗಳಿಲ್ಲ. ನಿರಂಗ ನಿಜಲಿಂಗ ಸ್ವರೂಪಿಯಾಗಿರುತ್ತಾನೆ. ಮರ್ತ್ಯದಲ್ಲಿ ಜೀವಿಸಿದ್ದರೂ ಮುಕ್ತನಾಗಿರುತ್ತಾನೆ; ಇದ್ದೂ

ಇಲ್ಲದಂತಿರುತ್ತಾನೆ. 'ರೂಪವೆಂತೆಂಬೆನಯ್ಯ ರೂಹಿಸಲಿಲ್ಲವಾಗಿ ? ಭಾವ ವೆಂತೆಂಬೆನಯ್ಯ ಭಾವಿಸಲಲ್ಲಾಗಿ ? ಜ್ಞಾನವೆಂತೆಂಬೆನಯ್ಯ ಉಪಮಿಸಲಿಲ್ಲಾಗಿ ? ಸಹಜಲಿಂಗವ ಬೆಳಗನಂಗವಿಸುವ ಕೂಡಲ ಚೆನ್ನಸಂಗನಲ್ಲಿ ಪ್ರಭುವಿನ ನಿಲವು ವಿಪರೀತ.'

'ನಿಜವರಿದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೇ, ಘನವ ಕಂಡ ಮಹಿಮನೇ, ಪರವನೊಳಗೊಂಡ ಪರಿಣಾಮಿಯೇ, ಬಯಲಲೊದಗಿದ ಭರಿತನೇ ಗೊಹೇಶ್ವರ ಲಿಂಗ ನಿರಾಳವನೊಳಕೊಂಡ ಸಹಜನೇ !'

ಇದು ಜೀವನ್ಮುಕ್ತ ಜಂಗಮನ ಸ್ಥಿತಿ. ಪರವನೊಳಕೊಂಡ ಪರಿಣಾಮಿಯ ಪರಿಣತಿ.

"ಬ್ರಹ್ಮಾದ್ಯಾಃ ಕಿಂ ನು ಕುರ್ವಂತಿ ದೇವತಾಃ ಕರ್ಮಮಾರ್ಗಗಾಃ
ಕರ್ಮಾತೀತ ಪದಸ್ಥಸ್ಯ ಸ್ವಯಂ ಬ್ರಹ್ಮಸ್ವರೂಪಿಣಃ ।
ಸ್ವೇಚ್ಛಯಾ ಸಂಚರಸ್ ಯೋಗೀ ವಿಮುಂಚನ್ ದೇಹಮಾನಿತಾಂ
ದರ್ಶನೈಃ ಸ್ಪರ್ಶನೈಃ ಸರ್ವಾನಜ್ಞಾನಪಿ ವಿಮೋಚಯೇತ್ ॥"

ಕರ್ಮಕಾಂಡವನ್ನು ಅತಿಕ್ರಮಿಸಿ ಬ್ರಹ್ಮಸ್ವರೂಪಿಯಾದ ಪರಜಂಗಮನನ್ನು ಕರ್ಮಕಾಂಡಿಗಳಾದ ಬ್ರಹ್ಮಾದಿದೇವತೆಗಳು ಏನನ್ನು ಮಾಡಲಾರರು.

ದೇಹಾಭಿಮಾನವನ್ನು ತ್ಯಜಿಸಿ ಸ್ವೇಚ್ಛೆಯಿಂದ ಸಂಚರಿಸುವ ಶಿವಯೋಗಿಯು ತನ್ನ ದರ್ಶನ ಸ್ಪರ್ಶನಗಳಿಂದ ಸರ್ವ ಬದ್ಧರನ್ನು ಅಜ್ಞರನ್ನು ಉದ್ಧರಿಸುವನು; ಪ್ರಬುದ್ಧರನ್ನಾಗಿಸುವನು.

ಪರಜಂಗಮನು ಕಾಲಕರ್ಮ ರಹಿತ; ಭವವಿರಹಿತ. ಆತನರಿಯಲು ಹರಿಬ್ರಹ್ಮರಿಗೂ ಅಳವಲ್ಲ. ಕರ್ಮಚಕ್ರಕ್ಕೆ ಸಿಕ್ಕುವವನಲ್ಲ. ಇದರಿಂದಾಗಿ ಬ್ರಹ್ಮನ ಸೃಷ್ಟಿಗೆ ಬಾರನು; ವಿಷ್ಣುವಿನ ರಕ್ಷಣೆಗೆ ನಿಲುಕನು. ರುದ್ರನ ಸಂಹಾರಕ್ಕೆ ಪಕ್ಕಾಗನು. ಇವರನ್ನೂ ಅನುಗ್ರಹಿಸಬಲ್ಲನು. ಕರ್ಮಿಯಾದರೆ ಬ್ರಹ್ಮಸೃಷ್ಟಿಗೆ ಜನ್ಮದುಃಖಕ್ಕೆ ಒಳಗಾಗಬೇಕು. ಕರ್ಮ ನಿರ್ಮಳವಾಗಿ ಪರಬ್ರಹ್ಮಸ್ವರೂಪಿಯಾದ ಬಳಿಕ ಮರಳಿ ಬ್ರಹ್ಮಕಾರ್ಯಕ್ಕೆ ಬರುವವನಲ್ಲ.

ಮನ ತನುವಿಗೆ ಮಾರುಹೋದರೆ ಮತ್ತೆ ಮರ್ತ್ಯಕ್ಕೆ ಬರಬೇಕು. ಮನ ಘನಲಿಂಗದಲ್ಲಿ ಲೀನವಾಗಿ ಘನವಾದ ಬಳಿಕ ಸರ್ವಶೂನ್ಯ ನಿರಾಲಂಬ ವಾದ ಬಳಿಕ ಕಾರ್ಯಕೋಟಿಯು ಬ್ರಹ್ಮನ ಭವಕ್ಕೆ ಬರುವ ಪ್ರಸಂಗವಿಲ್ಲ.

ಅಂಗಸಂಬಂಧವನ್ನು ಕಳಚಿಹಾಕಿರುವನು ಜಂಗಮನು. ಅಂಗ ಸಂಬಂಧವಿದ್ದರೆ ಜಂಗಮನೆನಿಸನು. 'ಅಂಗಸಂಬಂಧ ಲಿಂಗಸಂಬಂಧವಾದ ಬಳಿಕ ಲಿಂಗೋಪಜೀವಿಯಾಗಿರಬೇಕು. ಪ್ರಾಣಸಂಬಂಧ ಲಿಂಗವಾದ ಬಳಿಕ ಲಿಂಗೋಪಜೀವಿಯಾಗಿರಬೇಕು. ಇದಾವ ಸಂಬಂಧವಲ್ಲದಾಶ್ರಯದ ಗುಣ ವಿಡಿದು ಲಾಂಛನಧಾರಿಯಾಗಿರ್ದೆನಯ್ಯ, ಗ್ರಂಥ: 'ಲಾಂಛನಂ ದುರ್ಲಭಂ ಚೈವ ಸ್ವಾನುಭಾವಮತಃ ಪರಂ | ದುರ್ಲಭಂ ಶಿವತತ್ತ್ವಾನಾಂ ಪ್ರಾಣಲಿಂಗ ಮತಃ ಪರಂ | ಎಂಬುದಾಗಿ ಆಶ್ರಯದ ಗುಣವಲ್ಲ. ನಿರಾಶ್ರಯದ ಗುಣ ವಿಡಿದು ಲಿಂಗಸಾರಾಯ ಶರಣಲಿಂಗ. ಇದು ಕಾರಣ ಕೂಡಲಚೆನ್ನಸಂಗಯ್ಯ ಮಹದಲನುಭಾವಿಯಾದ ಶರಣ.'

ಅಂಗದ ಅಭಿಮಾನವನ್ನು ಅಳಿದು ಲಿಂಗದ ಅನುಭಾವದಲ್ಲಿ ಉಳಿದು ಸಾಕಾರ ದೇಹವನ್ನು ನಿರಾಕಾರ ನಿರ್ವಯಲ ಮಾಡಬಲ್ಲಾತನೇ ಪರ ಜಂಗಮನು. ಆತನ ನಡೆಯಲ್ಲಿ ತೆರಹಿಲ್ಲ. ನುಡಿಯಲ್ಲಿ ಕಟ್ಟಿಲ್ಲ. ಆತನ ಸ್ವತಂತ್ರಾಚಾರಕ್ಕೆ ಕಟ್ಟು ಕಟ್ಟಳೆಯಿಲ್ಲ. ಆತ ಹೇಗೆ ನಡೆದರೂ ಚೆನ್ನ; ಹೇಗೆ ನುಡಿದರೂ ಚೆನ್ನ. ಆತನ ನೋಟ ಶುದ್ಧ. ಆತನ ಸೋಂಕು ಶುದ್ಧ. ಆತನನ್ನು ನಿಟ್ಟಿಸಿದವರು ಮುಕ್ತರು. ಆತನನ್ನು ಮುಟ್ಟಿದವರು ಮುಕ್ತರು.

"ನಿತ್ಯೇ ನಿರ್ಮಲ ಭಾವನೇ ನಿರುಪಮೋ ನಿರ್ಧೂತವಿಶ್ವಭ್ರಮೋ
ಸತ್ತಾನಂದ ಚಿದಾತ್ಮಕೇ ಪರಶಿವೇ ಸಾಮ್ಯಂ ಗತಃ ಸಂಯಮೀ |
ಪ್ರಧ್ವಸ್ತಾಶ್ರಮವರ್ಣಧರ್ಮನಿಗಲಃ ಸ್ವಚ್ಛಂದ ಸಂಚಾರವಾನ್
ದೇಹೇಪ್ಯದ್ಭುತವೈಭವೋ ವಿಜಯತೇ ಜೀವನ್ಮುಕ್ತಃ ಸುಧೀಃ ||"

ಅಚ್ಚಳಿಯದ ಸ್ವೇಚ್ಛವಾದ ಹೋಲಿಸಲಿಂಬಿಲ್ಲದ ತೆರೆಯ ತಿರುಗಾಟ ವಿಲ್ಲದ ಅಥವಾ ಎಲ್ಲ ಬಗೆಯ ಮರುಳಾಟವಿಲ್ಲದ ಮತ್ತು ಇರುವು-ಅರಿವು-

ಹರುಷವು ತಾನಾದ ಆ ಪರಶಿವನಲ್ಲಿ ಪರವಶನಾದ ಪರಜಂಗಮನು ವರ್ಣಾಶ್ರಮಗಳಿಗೆ ಸಂಬಂಧಪಟ್ಟ ಧರ್ಮಸಂಕಲೆಗಳನ್ನು ದೂರ ಕೊಡವಿ ಸ್ವಚ್ಛಂದವಾಗಿ ಸಂಚರಿಸುತ್ತ ಇರುವನು. ದೇಹವಿದ್ದರೂ ದಿವ್ಯ ವೈಭವವುಳ್ಳವನು. ವಿಜಯಶಾಲಿಯಾದವನು. ವಿಚಾರವುಳ್ಳವನು. ಜೀವನ್ಮುಕ್ತನು.

ಪರಶಿವ ಸ್ವರೂಪನಾಗುವುದೇ ಪರಜಂಗಮ ಮಹಿಮೆ. ಜಗತ್ತಿನಲ್ಲಿ ಜೀವಿಸುತ್ತ ಮುಕ್ತನಾಗಿ ಮರ್ತ್ಯರನ್ನು ಮುಕ್ತರನ್ನಾಗಿಸುವ ಸಮರ್ಥನೇ ಪರಜಂಗಮ. ಈತನ ಈ ವಿಜಯವೈಭವ ಸಣ್ಣದಲ್ಲ. 'ಈಜಬೇಕು ಇದ್ದು ಜಯಿಸಬೇಕು' ಎಂಬುದನ್ನು ಬಾಳಿನಲ್ಲಿ ಬೆಳಸಿಕೊಂಡವನು.

ತಾನು ವಿಶ್ವಭ್ರಮೆಯನ್ನು ವಿಸರ್ಜಿಸಿ ವಿಶ್ವೋದ್ಧಾರಕ್ಕಾಗಿ ವಿಶ್ವಶಾಂತಿಗಾಗಿ ವ್ಯವಸಾಯ ಮಾಡಬೇಕು. ಜಗಜ್ಜ್ಯೋತಿಯಾಗಿ ಮೂಡಬೇಕು. ಜನತೆಯ ಅಂಧಕಾರವನ್ನು ಕಳೆಯಬೇಕು. 'ನಿರ್ದ್ವಂದ್ವೋ ಹಿ ಸದಾ ಸ್ಥಾಣುರ್ಗಮಾಗಮವರ್ಜಿತಃ । ಜ್ಯೋತಿರ್ಲಿಂಗಸ್ವರೂಪೋಽಯಂ ಪರಲಿಂಗಮುದಾಹೃತಂ ॥' —ಸೂಕ್ಷ್ಮಾಗಮ

'ಮಾತಿನ ಸೂತಕವದಂ ನೇತಿಗಳೆದು ನಿಂದ ನಿಶ್ಚಯ ಆತುಮ ಜ್ಞಾನದ ಸುಖಸನ್ಮಾತ್ರ ಭರಿತಂಗೆ । ಜಾತನಲ್ಲ ಖ್ಯಾತನಲ್ಲ; ನೀತಿಗೊಳ್ಳದನುಪಮಸುಖಿ ಸ್ವತಂತ್ರ ಸ್ವಯಂ ಪ್ರಕಾಶನಾತನೆ ಮುಕ್ತ ॥

ಹಮ್ಮುಗೆಟ್ಟು ಕರ್ಮವಳಿದು ನಿರ್ಮಳ ನಿಷ್ಪತ್ತಿ ನಿಜದಿಂ ಸುಮ್ಮಾನದ ಶಾಂತಿರಸದ ನಿತ್ಯತೃಪ್ತಂಗೆ । ಉಮ್ಮಳ ದುಮ್ಮಾನವಿಲ್ಲದೊಮ್ಮೆಯಾನಂದ ಸಹಜ ಬೊಮ್ಮವಾಗಿ ನಿಂದನಿಲವನುಪಮಿಸಬಹುದೆ ?॥ ಅರಿವುಗೆಟ್ಟು ಕುರುಹು ಮರೆದು ನಿರ್ಣಯ ನಿಷ್ಪತಿ ನಿಜವನರಸಿ ತೊಳಲಿ ಬಳಲಲೇಕೆ ಸ್ವಾನುಭಾವಕೆ । ಕರೆಯ ಮರೆಯ ಮಾಯ ಬಲೆಯ ಹರಿಯಲೊಡನೆ ಬಚ್ಚ ಬರಿಯ ಬೆರಗು ನಿರುಗೆಯಾಗಿ ನಿಂದನು ॥

ಆನುವೆನ್ನದನ್ಯವೆನ್ನದೇನುವೆನ್ನದತ್ಯಂತ ಶುದ್ಧ ಸ್ವಾನುಭಾವ ಸ್ವತಂತ್ರನಾದ ಮುಕ್ತನಾದ ನಿತ್ಯಗೆ । ಧ್ಯಾನ ಮೌನ ಮಂತ್ರ ತಂತ್ರ ಜ್ಞಾತೃ ಜ್ಞಾನ ಜ್ಞೇಯವಿಲ್ಲದೆ ತಾನೆ ತನ್ನನರಸಿ ಕಂಡ ನಿರುಪಮ ಮಹಿಮ ॥

ಭಾವರಹಿತ ಜೀವನ್ಮುಕ್ತ ಸಾವಯುವಾಗಿರ್ದಡೇನು ಕೇವಲ ಜ್ಞಾನಸ್ವರೂಪ ನಾದ ನಿತ್ಯಗೆ ಆವ ಭಾವದ ! ಬಾಧೆ ಇಲ್ಲ ದೇವ ಕಲ್ಲೇಶ್ವರನಲ್ಲಿ ಕೈವಲ್ಯಪದವ ನೊದೆದ ಶ್ರೀ ಮಹಂತಂಗೆ ‖ —ಏಕೋತ್ತರಶತಸ್ಥಲ

ಪರಜಂಗಮನು ಕರ್ಮಕ್ಕೆ ಕೈಹಾಕದಿರುವನು. ದೃಶ್ಯಕ್ಕೆ ಕಣ್ಣ ಚೆಲ್ಲ ದಿರುವನು. ಭೋಗಕ್ಕೆ ಮನವೆಳಸದಿರುವನು. ಕಾರ್ಯಕಾರಣಗಳೆರಡನ್ನು ಮೀರಿರುವನು.

ಭಕ್ತನಿಗೆ ಗುರು–ಲಿಂಗಗಳಂತೆ ಜಂಗಮನೂ ಆರಾಧ್ಯನು. ಅಂತ್ಯ ಆರಾಧ್ಯನು. ಗುರು ತಂದೆ. ಲಿಂಗ ಪತಿ. ಜಂಗಮ ತಾತ. ಈ ಸಂಬಂಧ ವನ್ನು ಭಕ್ತನು ಮರೆಯದಿರಬೇಕು.

‘ಭಕ್ತನಾದ ಬಳಿಕ ಜಂಗಮ ಮೆಚ್ಚಬೇಕು. ಜಂಗಮನಾದ ಬಳಿಕ ಭಕ್ತ ಮೆಚ್ಚಬೇಕು. ಭಕ್ತನ ಕಾಯವೇ ಜಂಗಮನ ಕಾಯ. ಜಂಗಮನ ಕಾಯವೇ ಭಕ್ತನ ಕಾಯ. ಕಪಿಲಸಿದ್ಧ ಮಲ್ಲೇಶನಲ್ಲಿ ಇದು ಉಪಾಯ.’

‘ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯ. ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯ. ಆಚಾರ ವಿಚಾರವೆಂಬುದು ಸ್ವಾನು ಭವವು ನೋಡಾ ಕೂಡಲಸಂಗಮದೇವಾ.’ ಭಕ್ತನು ಭಕ್ತನ ಕಂಡಲ್ಲಿ ಕೈಮುಗಿವುದೇ ಭಕ್ತಿಸ್ಥಲ. ಜಂಗಮನು ಜಂಗಮನ ಕಂಡಲ್ಲಿ ಶರಣೆಂಬುದೇ ಜಂಗಮಸ್ಥಲ. ಭಕ್ತ ಜಂಗಮರೆಂದು ಬೇರುಂಟೆ ? ರಸದಂತೆ ಭಕ್ತ, ರುಚಿ ಯಂತೆ ಜಂಗಮ; ಕಾಣಾ ಕಪಿಲಸಿದ್ಧ ಮಲ್ಲಿಕಾರ್ಜುನಾ.’

ಭಕ್ತ ಜಂಗಮರಿಗಿರುವ ಸಂಬಂಧವಿದು; ಸನಿಹಿತತ್ವವಿದು. ತನುವೇ ಭಕ್ತ; ಪ್ರಾಣವೇ ಜಂಗಮ. ಮತ್ತು ಕ್ರಮವಾಗಿ ವಿಚಾರ–ಆಚಾರಗಳಂತೆ, ರಸ ರುಚಿಗಳಂತೆ ಇರುವರೆಂದು ವಚನಗಳಿಂದ ವಿದಿತವಾಗುತ್ತದೆ. ಇದರಂತೆ ಲಿಂಗ ಜಂಗಮ ಸಂಬಂಧವನ್ನು ಅರಿಯಬೇಕು;– ಲಿಂಗ–ಜಂಗಮ ಸಕೀಲ– ‘ಆಚಾರವಿಡಿದು ಲಿಂಗ. ಅನುಭಾವವಿಡಿದು ಜಂಗಮ. ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ. ಇದು ಕಾರಣ ಕೂಡಲಚೆನ್ನಸಂಗಮ ದೇವಾ ಲಿಂಗವನು ಜಂಗಮವನು ಬೇರರಸಲಿಲ್ಲ.’ ಆಚಾರವೇ ಲಿಂಗ. ಆ ಆಚಾರದ ಅರಿವೇ ಜಂಗಮ. ಅಂಗವೇ ಲಿಂಗ, ಚೈತನ್ಯವೇ ಜಂಗಮ....’

‘ಜಂಗಮದನುವನರಿಯದಿರ್ದೊಡೆ ಲಿಂಗತನು ತನಗೆಲ್ಲಿಯದೊ ? ಲಿಂಗವಿಪ್ಪ ಸೆಜ್ಜೆಯಲ್ಲಿ ಜಂಗಮ. ಜಂಗಮದಪ್ರಾಣವೆಲ್ಲ ಲಿಂಗವು. ರೇಕಣ್ಣ ಪ್ರಿಯ ನಾಗಿನಾಥ ಜಂಗಮದ ಕಾಯುವ ತೊಟ್ಟು ಸುಳಿವನಾಗಿ !’ ‘ಲಿಂಗ ಕ್ಷೇತ್ರ, ಜಂಗಮ ಬೀಜ.’ ‘ಜಗಭರಿತ ಲಿಂಗವೆಲ್ಲೆಡೆಯಲುಂಟು; ಶರಣ ಭರಿತ ಲಿಂಗವಪೂರ್ವವಯ್ಯ. ಗಮನ ಜಂಗಮವೆಲ್ಲೆಡೆಯಲುಂಟು; ನಿರ್ಗ ಮನ ಜಂಗಮವಪೂರ್ವವಯ್ಯಾ. ಅಚೇತನ ಲಿಂಗಕ್ಕೆ ಚೈತನ್ಯ ಜಂಗಮ ಸಾಹಿತ್ಯ ನೋಡಾ. ಇಂತೀ ಲಿಂಗಾಂಗ ಸಂಗಸಮರಸವಾದ ಸಕೀಲ ಸಂಬಂಧದಲ್ಲಿ ಪರಿಣಾಮಿಗಳಯ್ಯಾ ಕೂಡಲಚೆನ್ನಸಂಗಮದೇವಾ ನಿಮ್ಮ ಶರಣರು.’

ಸಮಷ್ಟಿ ವ್ಯಷ್ಟಿ ಲಿಂಗ ಜಂಗಮದ್ವಯ ಲಕ್ಷಣವನ್ನಿಲ್ಲಿ ಚೆನ್ನಾಗಿ ಲಕ್ಷಿಸಲಾಗಿದೆ. ಜಗತ್ಕಾರಣವಾದ ಜಗಭರಿತ ಲಿಂಗವಿಲ್ಲದ ನೆಲೆಯಿಲ್ಲ; ತೆರಹಿಲ್ಲ. ಜೀವನದಲ್ಲಿ ಮಾನವತ್ವವನ್ನು ಮೆರಗಿಸುವ ಕಳೆ ಅಪೂರ್ವ. ಅಂತೆಯೇ ಸರ್ವ ಸಾಮಾನ್ಯವಾಗಿ ಚರಿಸುವುದೆಲ್ಲ (ಅಲೆದಾಡುವುದೆಲ್ಲ) ಜಂಗಮ. ಎಲ್ಲಿ ನೋಡಿದಲ್ಲಿ ಈ ಜಂಗಮತ್ವಯಿರುತ್ತದೆ. ಈ ಜಂಗ ಮವು ಇಹದ ವ್ಯವಹಾರವನ್ನೆಲ್ಲ ಗಮನಿಸುತ್ತದೆ. ಆದರೆ ಇಹದ ಗಮನ ವಿಲ್ಲದ ಜಂಗಮ ಸಿಕ್ಕುವುದು ವಿರಳ. ಅಚೇತನವೆಲ್ಲ ಲಿಂಗ. ಚೇತನವೆಲ್ಲ ಜಂಗಮ. ಕಳಾತ್ಮಕ ಲಿಂಗಕ್ಕೆ ನಾದಾತ್ಮಕ ಜಂಗಮ ರೂಪವೇ ಸಾಹಿತ್ಯ. ಈ ಲಿಂಗ ಜಂಗಮಾಂಗ ಸಮರಸದಲ್ಲಿ ಸಕೀಲ ಸಂಬಂಧದಲ್ಲಿ ಪರಮ ಪರಿ ಣಾಮವಿದೆ; ಪೂರ್ಣ ಪ್ರಗತಿಯಿದೆ. ನೆಲಮುಗಿಲುಗಳ ವ್ಯಾಪ್ತಿಯಿದೆ; ಆತ್ಮಸಂತೃಪ್ತಿಯಿದೆ.

ಲಿಂಗ ಜಂಗಮ ಸಮರಸದಲ್ಲಿ ಹಿಂಚು ಮುಂಚಿಲ್ಲ. ಅಂಗಾಂಗಿ ಭಾವ ವಿಲ್ಲ, ಆಶ್ರಯಾಶ್ರಯಿ ಭಾವವಿಲ್ಲ. ಒಂದೆರಡಾಗಿ ಎರಡೊಂದಾಗಿ ಹೊಂದಿ ಕುಂದಿ ಕುಸಿಯದಂತಿರುತ್ತವೆ. ನಂದಿ ನಶಿಸದಂತಿರುತ್ತವೆ. ಅನ್ಯೋನ್ಯ ವಾಗಿರುತ್ತವೆ. ಅವಿರಳವಾಗಿರುತ್ತವೆ. ಆದರೂ ಈ ಅರಿಕೆ ಬೇಕು:

‘ಭಿತ್ತಿ ಇಲ್ಲದೆ ಬರೆಯಬಹುದೇ ಚಿತ್ತಾರವ ? ಬಿತ್ತಿ ಬೆಳೆಯಬಹುದೇ ಧರೆ ಇಲ್ಲದೆ ?ಜಂಗಮವಿಲ್ಲದೆ ಮಾಡಬಹುದೆ ? ರೂಢೀಶನ ಭೇದಿಸಬಹುದೆ ?

ಒಡಲಿಲ್ಲದ ನಿರಾಳಕರ್ತೃ ಕೂಡಲ ಸಂಗಮದೇವ, ಜಂಗಮ ಮುಖ ಲಿಂಗವಾದನಾಗಿ ಮತ್ತೊಂದನರಿಯೆನಯ್ಯ.'

ಚಿತ್ತಾರಕ್ಕೆ ಭಿತ್ತಿ ಬೇಕು. ಬೆಳೆಗೆ ಭೂಮಿ ಬೇಕು. ಮಾಡುವ ಮಾಟಕ್ಕೆ ಜಂಗಮ ಬೇಕು. ಆದರೆ ರೂಢೀಶನನ್ನು ಭೇದಿಸಲು ಬಾರದು. ಚಿತ್ತಾರವೇ ಭಿತ್ತಿಯಾದರೆ ಭೂಮಿಯೇ ಬೆಳೆಯೆಂದರಿದರೆ ಮಾಡುವ ಮಾಟವೇ ಚೈತನ್ಯವೆಂದು ತಿಳಿದರೆ ಆಗ ಭೇದವೆಲ್ಲಿ ? ಭೇದಿಸುವ ಬಲ್ಲಿದನಾರು ? ನಿರವಯ ಚೈತನ್ಯಕ್ಕೆ ಸಾವಯುವ ಮುಖವಾದಲ್ಲಿ ಮತ್ತೊಂದವೆಂದು ಅರಿಯಬಾರದು ಭಕ್ತಿಪಥದಲ್ಲಿ.

ಲಿಂಗಮುಖ ಚರಲಿಂಗ ಒಂದು ನಿಟ್ಟಿನಲ್ಲಿ. ಜಂಗಮಮುಖ ಅಚರಲಿಂಗ ಮತ್ತೊಂದು ದಿಸೆಯಲ್ಲಿ. ಇವೆರಡನ್ನು ಅರಿತಾಗ ಭಿನ್ನಭಾವಕ್ಕಿಂಬಿರುವುದಿಲ್ಲ. ಚೈತನ್ಯವಿಲ್ಲದ ಮುಖ ಉಣ್ಣದು; ಅಂತೆಯೇ ಮುಖವಿಲ್ಲದ ಚೈತನ್ಯವೂ ಉಣ್ಣದು. ಈ ಉಭಯಸಕೀಲ ತಿಳಿದಲ್ಲದೆ ಸಮರಸಸಿದ್ಧಿ ಸಮನಿಸದು.

'ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೇ? ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೆ? ಭೂಮಿಯ ಬಿಟ್ಟು ಜಗವ ಮಾಡಬಹುದೆ? ಜಂಗಮ ವಿರಹಿತ ಲಿಂಗವಿಲ್ಲ, ಲಿಂಗ ವಿರಹಿತ ಜಂಗಮವಿಲ್ಲ ; ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ.'

'ಸಕ್ಕರೆಯು ಆಕಾರ, ರುಚಿಯು ನಿರಾಕಾರ. ಲಿಂಗವಾಕಾರ, ಜಂಗಮ ನಿರಾಕಾರ. ಬೆಣ್ಣೆ ಆಕಾರ, ಘೃತ ನಿರಾಕಾರ. ಆಕಾರ ಬಿಟ್ಟು ನಿರಾಕಾರವಿಲ್ಲ. ನಿರಾಕಾರ ಬಿಟ್ಟು ಆಕಾರವಿಲ್ಲ. ಲಿಂಗ ಜಂಗಮವೆಂಬುಭಯ ಶಬ್ದ ಒಂದೇ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.'

ಸವಿ ಸಕ್ಕರೆಯಂತೆ ಬೆಣ್ಣೆತುಪ್ಪದಂತೆ ನೆಲಜಗಗಳಂತೆ ಲಿಂಗ ಜಂಗಮ ಸಂಗಮ. ಸಕ್ಕರೆಯಂತೆ ಲಿಂಗ ; ಸಿಹಿಯಂತೆ ಜಂಗಮ. ಆಕಾರ ನಿರಾಕಾರಗಳಲ್ಲಿ ಪ್ರಕಾರವಿಲ್ಲ. ಲಿಂಗ–ಜಂಗಮ ಎಂಬ ಶಬ್ದ ಭಿನ್ನ; ತತ್ತ್ವ ಒಂದೇ. ಆದರೆ ಶಬ್ದಗಳೂ ಭಿನ್ನವಲ್ಲ ಎಂದೆನ್ನುತ್ತಾನೆ ವಚನಕಾರ ಶ್ರೀ ಸಿದ್ಧರಾಮೇಶ್ವರ.

'ಪಾದೋದಕವು ಲಿಂಗದ ಮೇಲೆ ಎಂದಲ್ಲಿ ಜಂಗಮ ಘನವಾಯಿತ್ತು. ಆ ಲಿಂಗೋದಕ ಸ್ವೀಕರಿಸಿದಲ್ಲಿ ಜಂಗಮಕ್ಕೆ ಲಿಂಗ ಘನವಾಯಿತ್ತು. ಲಿಂಗದ ಕಳೆಯೇ ಜಂಗಮ. ಜಂಗಮದ ಕಳೆಯೇ ಲಿಂಗ. ಆವುದು ಘನವೆಂಬೆ? ಆವುದು ಕಿರಿದೆಂಬೆ? ಲಿಂಗ ಜಂಗಮ ನೇತ್ರದಲ್ಲಿಯ ಪ್ರಕಾಶದಂತೆ ತಿಳಿದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಲಿಂಗ ಜಂಗಮವೆರಡರಲ್ಲಿ ಯಾವುದು ಹೆಚ್ಚು, ಯಾವುದು ಕಮ್ಮಿ ಎಂಬ ಕೇಳಿಕೆಗೆ ಶಂಕೆಗೆ ಸೂಕ್ತ ಉತ್ತರ ಮತ್ತು ಪರಿಹಾರ ಈ ವಚನದಲ್ಲಿದೆ. ಹಿರಿದು ಕಿರಿದೆಂಬುದೇ ಒಂದು ಕಲ್ಪನೆ; ಒಂದು ಭ್ರಾಂತಿ. ಇವೆರಡೂ ಕಣ್ಣೊಳಗಿನ ಕಳೆಗಂಳತಿವೆ. ಕಣ್ಣ ಬಣ್ಣ ಬೇರಾದರೂ ಪ್ರಕಾಶ (ಬೆಳಕು) ಒಂದೇ!

'ಜಂಗಮ ಒಂದಾಗಿರ್ದ ಲಿಂಗ, ಲಿಂಗ ಒಂದಾಗಿರ್ದ ಜಂಗಮವ ಸುಪಮೆಗೆ ತಂದು ಎರಡೆನ್ನಬಹುದೆ? ಮಹಾಘನಜಂಗಮ ಸದ್ಗತಿಗೊಯ್ವನು ಕೂಡಲಸಂಗಮದೇವಾ.'

ಲಿಂಗ ಜಂಗಮವೆರಡಾಗಿದ್ದರೂ ಒಂದಾಗಿವೆ. ಇವೆರಡರಲ್ಲಿರುವ ಶಕ್ತಿ ಒಂದೇ! ಉಪಮಿಸಬಾರದು. ಇವು ಕೊಡುವ ಸದ್ಗತಿ ಒಂದೇ! ಇನ್ನು ಲಿಂಗ ಜಂಗಮರೊಡನೆ ಭಕ್ತನ ಸಂಬಂಧ ಸಕೀಲವೇನೆಂಬುದನ್ನು ನಿರೀಕ್ಷಿಸಬೇಕು.

ಲಿಂಗ ಜಂಗಮ ಭಕ್ತಸಕೀಲ :

ಶ್ರೀಗುರು ಶಿಷ್ಯನಿಗೆ ಲಿಂಗವನ್ನು ಜಂಗಮವನ್ನು ಕರುಣಿಸುತ್ತಾನೆ. ಅಂದರೆ ಆಕಾರ ನಿರಾಕಾರಗಳೆರಡನ್ನು ಅನುಗ್ರಹಿಸುತ್ತಾನೆ. ಸಿಹಿ ಸಕ್ಕರೆಗಳನ್ನು ಪ್ರಸಾದಿಸುತ್ತಾನೆ. ಶಿಷ್ಯನು ಅರಿವಿನಲ್ಲಿ ಹೀಗೆಂದರಿದು ಆಚಾರಾನುಭವದಲ್ಲಿ ಅವಿರಳವಾಗಿಸಿಕೊಳ್ಳಬೇಕು. ಲಿಂಗ ಜಂಗಮಕ್ಕೂ ಭಕ್ತನಿಗೂ ಇರುವ ಸಂಬಂಧ ಸನ್ನಿಹಿತವಾದುದು. ಭಕ್ತನಿಲ್ಲದೆ ಲಿಂಗ ಜಂಗಮವು ಬಾರವು. ಭಕ್ತ ಬಹಳ ಹಳೆಯ. ಲಿಂಗ ಜಂಗಮರು ತೀರ ಎಳೆಯರು.

ಸಂಸ್ಕಾರವಿಲ್ಲದಾಗ ಲಿಂಗ ಜಂಗಮತ್ವ ಕಲ್ಪನೆಯೇ ಭಕ್ತನಿಗಿರುವುದಿಲ್ಲ. ಭಕ್ತತ್ವವೂ ಹಿನ್ನಲೆಯಾಗಿರುತ್ತದೆ. ಈ ಮೂವರು ಚಿತ್ಕಳಾ ಗುರುವಿನಿಂದ ಉದಯರಾಗುತ್ತಾರೆ. ಈ ಮೂವರ ಮೂಲವೊಂದೆ, ಮರ್ಮವೊಂದೆ.

'ನಿತ್ಯ ನಿರಂಜನ ಪರಶಿವನು ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದ ನೋಡಿರೇ! ಸದ್ರೂಪು ಲಿಂಗ, ಚಿದ್ರೂಪು ಭಕ್ತ; ಆನಂದರೂಪವೇ ಜಂಗಮ ನೋಡಾ. ಆ ಚಿತ್ಸ್ವರೂಪಮಪ್ಪ ಭಕ್ತಂಗೆ ಸದ್ರೂಪಮಪ್ಪ ಲಿಂಗವೇ ಅಂಗ. ಆನಂದಸ್ವರೂಪಮಪ್ಪ ಜಂಗಮವೇ ಪ್ರಾಣ. ಇದು ಕಾರಣ ಲಿಂಗವೇ ಅಂಗ, ಜಂಗಮವೇ ಪ್ರಾಣ ಗ್ರಾಹಕನಾದ ಚಿನ್ಮಯ ನಯ್ಯ ಭಕ್ತನು. ಲಿಂಗ ಜಂಗಮ ಭಕ್ತ ಮೂರೊಂದಾಗಿ ಶಿವತತ್ತ್ವದಲ್ಲಿ ಅಡಗಿದ ಅದ್ವೈತ ಪರಬ್ರಹ್ಮವು ತಾನೇ ಪರಮ ಭಕ್ತನು ನೋಡಾ ಮಹಾ ಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.'

ಲಿಂಗಕ್ಕೆ ನಾದವಿಲ್ಲ. ಅದೇನು ಕಾರಣ ? ನಿಶಬ್ದವಾಯಿತ್ತಾದ ಕಾರಣ. ಜಂಗಮಕ್ಕೆ ಬಿಂದುವಿಲ್ಲ. ಅದೇನು ಕಾರಣ ? ಅದು ಶಬ್ದ ಮಂತ್ರೋಪದೇಶವನುಳ್ಳದಾದ ಕಾರಣ. ಅದು ಕಾರಣ ನಾದ ಸ್ವರೂಪವೇ ಜಂಗಮ. ಬಿಂದು ಸ್ವರೂಪವೇ ಲಿಂಗ. ಇದು ಕಾರಣ ಲಿಂಗವೇ ಜಂಗಮದಂಗ. ಆ ಜಂಗಮವೇ ಲಿಂಗಪ್ರಾಣ. ಆ ನಾದ ಬಿಂದುಸ್ವರೂಪ ವಪ್ಪ ಲಿಂಗಜಂಗಮಕ್ಕೆ ಆಧಾರವಾಗಿಪ್ಪ ಚಿತ್ಕಲಾ ಸ್ವರೂಪಭಕ್ತ. ಈ ನಾದ ಬಿಂದು ಕಳೆಗಳ ಕೂಡಿಕೊಂಡಿಪ್ಪ ಶಿವತತ್ತ್ವವು ತಾನೇ ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದನು ನೋಡಾ, ಈ ಮೂರು ಒಂದೇ ಎಂದರಿದೆನು ನೋಡಾ. ಎನ್ನ ಶರಣತ್ವದಾದಿಯ ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ.'

ಲಿಂಗ ಭಕ್ತ ಜಂಗಮರು ಸಚ್ಚಿದಾನಂದರೂಪರು, ಬಿಂದು ಕಲಾ ನಾದ ಸ್ವರೂಪರು ಎಂದು ಹೇಳಿ ಭಕ್ತನಿಗೆ ಲಿಂಗ ಜಂಗಮರು ಅಂಗಪ್ರಾಣಾತ್ಮಕ ರಾಗಿರುವರೆಂದು ಈ ವಚನಗಳು ನಿರೂಪಿಸಿವೆ. ಶಿವತತ್ತ್ವದ ಸ್ವರೂಪರೆಂದು ಬಿತ್ತರಿಸಿವೆ. ಒಂದು ಮೂರಾಗಿ ಮೂರೊಂದಾಗಿರುವ ಸಕೀಲವನ್ನು ಅರಿವಿಗೆ ತಂದಿವೆ.

'ಲಿಂಗಲೀಲೆ ಹೇಳುವಡೆನಗಸಾಧ್ಯ ನೋಡಾ ಅಯ್ಯ! ಭಕ್ತನ ಹಸ್ತದಲ್ಲಿ ಜಂಗಮವಾಗಿ ನೆಲಸಿದನಯ್ಯ ಲಿಂಗಮೂರ್ತಿಯು. ಜಂಗಮನ ಹಸ್ತದಲ್ಲಿ ಭಕ್ತನಾಗಿ ನೆಲಸಿದನಯ್ಯ ಲಿಂಗಮೂರ್ತಿಯು. ಜಂಗಮ ಪೂಜಿಸಿದ ಫಲಸಂಪದಾದಿ ಮೋಕ್ಷ ಕೊಟ್ಟಿತ್ತು ಭಕ್ತಂಗೆ! ಭಕ್ತ ಪೂಜಿಸಿದ ಫಲ ಜ್ಞಾನ ಸಂಪದಾದಿ ವೈರಾಗ್ಯ ಕೊಟ್ಟಿತ್ತು ಜಂಗಮಂಗೆ! ಇಂತಪ್ಪ ಲಿಂಗಮೂರ್ತಿಯ ನೋಡಿ ನೋಡಿ ರೋಮಂಗಳೆಲ್ಲ ನಯನಂಗಳಾದವು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಲಿಂಗಲೀಲೆ ಅನಿರ್ವಚನೀಯ. ಲಿಂಗವಿದು ಭಕ್ತಜಂಗಮರ ಸಾರ ಸಕೀಲ. ಜಂಗಮವಾದದ್ದು ಲಿಂಗವೆ. ಭಕ್ತನಾದದ್ದು ಅದೇ ಲಿಂಗವೇ. ಭೋಗ ಮೋಕ್ಷಗಳನ್ನು ಕೊಡಲು ಜಂಗಮವಾಗಿ ಜ್ಞಾನ ವೈರಾಗ್ಯಗಳನ್ನು ಕೊಡಲು ಭಕ್ತನಾಗಿ ಬಂದುದು ಲಿಂಗವಲ್ಲದೆ ಬೇರೊಂದಿಲ್ಲ. ಭಕ್ತ ಜಂಗಮರಾರಾಧನೆಗೆ ಒಳಪಟ್ಟುದು ಒಂದೇ ಒಂದು ಲಿಂಗ! ಇಬ್ಬರಲ್ಲಿ ನೆಲಸಿ ಇಬ್ಬರನ್ನು ಒಬ್ಬರನ್ನಾಗಿಸುತ್ತದೆ ಲಿಂಗ.

'ಇನಮಂಡಲದೊಳಗೆ ಕಿರಣವಡಗಿಪ್ಪಂತೆ, ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ, ಇಂದು ಕಾಂತ ರವಿಕಾಂತಗಳಲ್ಲಿ ಜಲಬಿಂದು-ಅಗ್ನಿ ಇಪ್ಪಂತೆ, ಸಂದಕ್ಷೀರದಲ್ಲಿ ಹೊಂದಿ ದಧಿ ತಕ್ರ ನವನೀತ ಘೃತವಿಪ್ಪಂತೆ, ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು, ಲಿಂಗದೊಳಗೆ ತನ್ನವ ಕಂಡು, ತನ್ನೊಳಗೆ ಸಮಸ್ತ ವಿಸ್ತಾರವನ್ನೆಲ್ಲವ ಕಂಡು ಜಂಗಮ ಮುಖಲಿಂಗವೆಂಬ ಭೇದವನು, ಲಿಂಗಕ್ಕೆ ಜಂಗಮವೇ ಪ್ರಾಣವಾಗಿಪ್ಪ ಭೇದವನು, ಅಂಗದೊಳಗೆ ಲಿಂಗವೇ ಆಚಾರವಾಗಿ ಅಳವಟ್ಟ ವಿವರವನು ಲಿಂಗಾಂಗ ಸ್ಥಲಸಂಬಂಧ ಸ್ಥಳಕುಳಂಗಳ ವಿವರವಾಗಿ ಇದ್ದಿತೆಂಬುದನುಕಂಗಳ ನೋಟಕ್ಕೆ ಗುರುವಾದ ಲಿಂಗವೆ ಅಂಗವನೊಳಕೊಂಬ ಭೇದವನು ಸಂಗನ ಬಸವಣ್ಣ ಚೆನ್ನಬಸವಣ್ಣನಿಂದೆ ಕೃಪೆ ಮಾಡಿಸಿ ಎನ್ನನುಳುಹು ಪ್ರಭುವೇ ಕಪಿಲಸಿದ್ಧ ಮಲ್ಲಿಕಾರ್ಜುನದೇವಯ್ಯ.'

ಲಿಂಗತರು ವಿಸ್ತಾರವಿದು. ವಿಸ್ತಾರ ತರುವಿನ ಬೀಜ ಲಿಂಗವಿದು. ಅಂಗದಲ್ಲಿ ಲಿಂಗ ಗುರುವಾಗಿ ಜಂಗಮವಾಗಿ ವಿಭೂತಿ ಮಂತ್ರಗಳಾಗಿ

ವಿಸ್ತಾರಗೊಂಡಿದೆ. ಇವೆಲ್ಲವೂ ಕಿರಣಗಳಂತೆ ಲಿಂಗ ರವಿಬಿಂಬದಲ್ಲಿ ಕೇಂದ್ರೀಕೃತವಾಗಿವೆ. ಬೀಜಾಂಕುರಗಳೆರಡರಲ್ಲಿಯೇ ತರು ವಿಸ್ತಾರವನ್ನೆಲ್ಲ ಕಾಣುವಂತೆ ಲಿಂಗಾಂಗವೆರಡರಲ್ಲಿಯೇ ಅಷ್ಟಾವರಣ ವಿಸ್ತಾರವನ್ನೆಲ್ಲ ಕಾಣುತ್ತೇವೆ. ಬೀಜದಂತಿರುವ ಲಿಂಗದಲ್ಲಿಯೇ ಎಲ್ಲವೂ ಲೀನವಾಗಿ ಒಂದೇ ಒಂದಾಗಿ ಶೋಭಿಸುವ ಬೆಡಗನ್ನು ಬಣ್ಣಿಸುವುದು ಚೆನ್ನಬಸವಣ್ಣನೊಬ್ಬನರಿತಿರುವನೆಂಬುದನ್ನು ಹೃದಯ ಬಿಚ್ಚಿ ಹೇಳುತ್ತಿದೆ ಈ ವಚನ.

ಲಿಂಗದ ಈ ಸೊಬಗನ್ನು ಪ್ರಭು ಜಂಗಮವರಿಯುನು, ಭಕ್ತ ಸಿದ್ಧರಾಮು ತಂದೆಯುರಿಯುನು; ಚೆನ್ನಬಸವಣ್ಣ ಗುರು ಮಾತ್ರ ಅರಿತ ಅನುಭಾವಿ; ಅರುಹುವ ಅಪಾರ ಕರುಣಿ.

ಬೋಧಿಸುವ ಬೆಡಗು ಗುರುವಿನದು. ಬೋಧ್ಯರಾಗಿರುವ ಸಡಗರ ಲಿಂಗ ಜಂಗಮರದು. ಬೋಧವೂ ಆಗಿರಬಲ್ಲರು. ಇದಲ್ಲವನ್ನೊಳಕೊಂಬುವಾತನು ಭಕ್ತನು. ಇಷ್ಟಾದ ಬಳಿಕ ಗುರು–ಲಿಂಗ–ಜಂಗಮ ಸಂಬಂಧವೇನೆಂಬುದನ್ನು ಸವಿಯಬೇಕು. ಭಕ್ತನ ಮುಕ್ತಿಗೆ ಈ ಮೂರು ಮುಖ್ಯ. ಇದರಿಂದಾಗಿ ಇವುಗಳ ಸನ್ನಿಹಿತಸಂಬಂಧ ಆಲೇಖ್ಯ.

ಲಿಂಗ ಜಂಗಮ ಭಕ್ತ ಸಕೀಲ :

'ಗುರುಲಿಂಗವು ಸಕಲನು, ಶಿವಲಿಂಗವು ಸಕಲ ನಿಃಕಲಕನು; ಜಂಗಮಲಿಂಗವು ನಿಃಕಲನು ಕಾಣಾ ಅಪ್ರಮಾಣ ಕೂಡಲ ಸಂಗಮದೇವಾ.'

'ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರ: ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ ತನ್ನ ಶೀಲಕ್ಕೆ ಶೀಲಸಮವಾಗದವರ ಮನೆಯುಲ್ಲಿ ಅನುಸರಣೆಯ ಮಾಡಿ ಸನ್ಮಿಶ್ರವ ಮಾಡಿದೊಡೆ ನಮ್ಮ ಕೂಡಲ ಚೆನ್ನಸಂಗನ ಶರಣ ಪೂರ್ವಾಚಾರಿಯಾದ ಸಂಗನ ಬಸವಣ್ಣ ಮೆಚ್ಚನಯ್ಯ.' 'ಚರಿಸಿ ಜಂಗಮವೆನಿಸಿತ್ತಯ್ಯ ಲಿಂಗವು, ನೆಲಸಿ ಲಿಂಗವೆನಿಸಿತ್ತಯ್ಯ ಲಿಂಗವು. ಇದರಿರವ ಅರುಹಿದಲ್ಲಿ ಗುರುವೆನಿಸಿತ್ತಯ್ಯ ಲಿಂಗವು. ಗುರುಲಿಂಗ ಜಂಗಮಕ್ಕೆ ತಿಲಾಂಶ ಭೇದವಿಲ್ಲ ನೋಡಾ ಎಲೆ ದೇವಾ. ಭೇಧಿಸಿದವರಿಗೆ ಭವಭಾಧೆ ತಪ್ಪುವುದೇ ದೇವರದೇವ ಕಪಿಲಸಿದ್ಧ ಮಲ್ಲಿಕಾರ್ಜುನದೇವ ?' 'ಗುರುವಿನಿಂದ ಲಿಂಗವ ಕಂಡೆನಲ್ಲದೆ ಲಿಂಗದಿಂದ

ಲಿಂಗವ ಕಾಣಲಿಲ್ಲವಯ್ಯ. ಲಿಂಗದಿಂದ ಫಲಪದವಿಗಳ ಕಂಡೆನಲ್ಲದೆ ಫಲಪದಂಗಳಿಂದೆ ಫಲಪದವಿಗಳ ಕಾಣಲಿಲ್ಲವಯ್ಯ. ಜಂಗಮದಿಂದ ಮೋಕ್ಷವ ಕಂಡೆನಲ್ಲದೆ ಮೋಕ್ಷದಿಂದ ಮೋಕ್ಷವ ಕಾಣಲಿಲ್ಲಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.' 'ಲಿಂಗ ಘನವೆಂಬೆನೆ ?–ಗುರುವಿಡಿದು ಕಂಡೆ. ಗುರು ಘನವೆಂಬೆನೆ ?–ಸಾಕಾರವಿಡಿದು ಕಂಡೆ. ಸಾಕಾರ ಘನವೆಂಬೆನೆ ನಿರಾಕಾರವಿಡಿದು ಕಂಡೆ- ನಿರಾಕಾರ ಘನವೆಂಬೆನೆ ?–ಜಂಗಮವಿಡಿದು ಕಂಡೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ.'

'ಲಿಂಗ ನೋಡಿದಡೆ ಮೈಗೊಟ್ಟುದಯ್ಯ ಷೋಡಶೋಪಚಾರಗಳಿಗೆ. ಜಂಗಮ ನೋಡುವಡೆ ಮೈಗೊಟ್ಟನಯ್ಯ ನಿರಾಕಾರಕ್ಕೆ ಗುರು. ನೋಡುವಡೆ ಭವದ ಬೇರು ಅಳಿಯಬೇಕೆಂದು ಸಾಕಾರವಾಗಿ ನಿಂದು ನೋಡಿದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

'ಗುರುವಾದಡೆ ಭೃತ್ಯನ ಚಿತ್ತವನರಿಯಬೇಕು. ಲಿಂಗವಾದಡೆ ಅರ್ಚಕರ ಚಿತ್ತದಲ್ಲಿ ಅಜ್ಞೋತ್ತಿದಂತಿರಬೇಕು. ಜಂಗಮವಾದಡೆ ಉತ್ಪತ್ತಿ ಸ್ಥಿತಿ ಲಯವ ಗೊತ್ತ ಮೆಟ್ಟದೆ ನಿಶ್ಚಿಂತನಾಗಿರಬೇಕು. ಇಂತೀ ತ್ರಿವಿಧ ಲಿಂಗ ತ್ರಿವಿಧಾರ್ಪಣಕ್ಕೆ ಒಳಗಾಗಿ, ತ್ರಿವಿಧಾಂಗ ತ್ರಿವಿಧಮಲಕ್ಕೆ ಹೊರಗಾಗಿ, ತ್ರಿವಿಧಾತ್ಮ ತ್ರಿವಿಧ ಅರಿವಿನಲ್ಲಿ ಕರಿಗೊಂಡು ವಿಶ್ವಾಸಕ್ಕೆಡೆದೆರಪಿಲ್ಲದೆ, ತನ್ಮಯ ಮೂರ್ತಿತಾನಾದ ನಿಜೈಕ್ಯಂಗೆ ರಾಗ–ವಿರಾಗವಿಲ್ಲ, ಪುಣ್ಯಪಾಪವಿಲ್ಲ, ಕರ್ಮ ನಿಃಕರ್ಮವಿಲ್ಲ. ಇಂತೀ ಭಿನ್ನಭಾವನಲ್ಲ ಬಸವಣ್ಣಪ್ರಿಯ ನಾಗರೇಶ್ವರ ಲಿಂಗವನರಿತ ಶರಣ.'

'ಕಾಯ ಗುರು, ಪ್ರಾಣಲಿಂಗ, ಜ್ಞಾನ ಜಂಗಮ; ಕಾಯದಲ್ಲಿ ಶುದ್ಧ ಪ್ರಸಾದ, ಪ್ರಾಣದಲ್ಲಿ ಸಿದ್ಧಪ್ರಸಾದ, ಜ್ಞಾನದಲ್ಲಿ ಪ್ರಸಿದ್ಧ ಪ್ರಸಾದ. ಇಂತೀ ತ್ರಿವಿಧ ಪ್ರಸಾದ ನಿರ್ಣಯ ಕೂಡಲ ಚೆನ್ನಸಂಗಾ ನಿಮ್ಮ ಶರಣಂಗೆ. 'ಗುರುವೆಂದಡೆ ತನು, ಲಿಂಗವೆಂದಡೆ ಆತ್ಮ, ಜಂಗಮವೆಂದಡೆ ಆತ್ಮನ ಅರಿವು. ತ್ರಿವಿಧ ವ್ಯಾಪ್ತಿಯ ಕಳೆದುಳಿದ ಸಮ್ಯಗ್ ಜ್ಞಾನದ ಸಂಬಂಧವನು ನಿರವಯ ನಿಷ್ಕಳಂಕ ಮಲ್ಲಿಕಾರ್ಜುನಾ.'

'ಕಾಯವಿದ್ದು ಕಾಂಬುವುದು ಗುರುಸ್ಥಲ. ಜೀವವಿದ್ದು ಕಾಂಬುವುದು ಲಿಂಗಸ್ಥಲ. ಭಾವವಿದ್ದು ಕಾಂಬುವುದು ಜಂಗಮಸ್ಥಲ. ತ್ರಿವಿಧನೊಡಗೂಡಿ ಕಾಂಬುವುದು ಭಕ್ತಸ್ಥಲ. ಭಕ್ತಿ ನಿಶ್ಚಯವಾಗಿ ನಿಂದಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗ ನಿಶ್ಚಯವಾದ ಸ್ಥಲ.' 'ತನುವಿಡಿದು ಕಾಂಬುವುದು ಗುರುವಿನ ಭೇದ. ಮನವಿಡಿದು ಕಾಂಬುವುದು ಲಿಂಗಭೇದ. ಜ್ಞಾನವಿಡಿದು ಕಾಂಬುವುದು ಜಂಗಮದ ಭೇದ. ಈ ತ್ರಿವಿಧವಿಡಿದು ಕಾಂಬುವುದು ಮಹಾ ಪ್ರಕಾಶ. ಮಹಾ ಪ್ರಕಾಶದೊಳಗೆ ಮಹವ ಕಂಡು ಮಹಕ್ಕೆ ಮಹನಾಗಿರ್ದನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.'

'ಗುರುವೇ ಅಂಗ, ಲಿಂಗವೇ ಮನ, ಜಂಗಮವೇ ಪ್ರಾಣವಯ್ಯ. ನಾದವೇ ಗುರು, ಬಿಂದುವೇ ಲಿಂಗ, ಕಳೆಯೇ ಜಂಗಮವಯ್ಯ. ಗುರುವೇ ಲಿಂಗ, ಲಿಂಗವೇ ಜಂಗಮ, ಜಂಗಮವೇ ಪ್ರಸಾದ. ಪ್ರಸಾದ ಪರಿಪೂರ್ಣವಾದಡೆ ಸೌರಾಷ್ಟ್ರ ಸೋಮೇಶ್ವರಲಿಂಗವು ತಾನೇ.'

'ಮನ ಘನವಸ್ತುವಾದ ಬಳಿಕ ಮನ ವಚನ ಕಾಯವೆಂಬ ತ್ರಿಕರಣ ಶುದ್ಧಾತ್ಮನೆಂಬೆ, ನಿತ್ಯ ಮುಕ್ತನೆಂಬೆ, ನಿರಾಲಂಬಿ ಎಂಬೆ. ಆತನ ತನು ಶುದ್ಧವಾಗಿ, ತನುವೇ ಗುರು. ಆತನ ಮನ ಶುದ್ಧವಾಗಿ ಮನವೇ ಲಿಂಗ. ಆತನ ಭಾವ ಶುದ್ಧವಾಗಿ ಭಾವವೇ ಮಹಾನುಭಾವ ಚರಲಿಂಗ ನೋಡಾ. ಇಂತೀ ಜ್ಞಾನವೆಂಬ ಗುರು, ಅರುಹೆಂಬ ಶಿವಲಿಂಗ, ಮಹಾನುಭಾವವೆಂಬ ಜಂಗಮ, ಇಂತೀ ತ್ರಿವಿಧವು ತನ್ನ ತ್ರಿವಿಧಾತ್ಮ ನೋಡಾ. ಜ್ಞಾನವೆಂಬ ಗುರುವೆಂದಡೆ ಜೀವಾತ್ಮ. ಅರುಹೆಂಬ ಶಿವಲಿಂಗವೆಂದಡೆ ತನ್ನ ಅಂತರಾತ್ಮ. ಮಹಾನುಭಾವ ಜಂಗಮವೆಂದಡೆ ತನ್ನ ಪರಮಾತ್ಮ. ಇಂತೀ ತ್ರಯಾತ್ಮವೇ ಏಕಾತ್ಮವಾದಡೆ ಸಚ್ಚಿದಾನಂದ ನಿರಂಜನ ಪರಾಪರ ವಸ್ತು ನೀನೇ. ಅಲ್ಲಿ ನಾ–ನೀ ಎನಲಿಕ್ಕಿಲ್ಲ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.'

'ಗುರು ಸ್ವರೂಪವಾಗಿ ಮಹಾಸ್ಥಾನದಲ್ಲಿ ಇರುತಿರ್ದೆ. ಲಿಂಗ ಸ್ವರೂಪವಾಗಿ ಭ್ರೂಮಧ್ಯದಲ್ಲಿ ಇರುತಿರ್ದೆ. ಜಂಗಮ ಸ್ವರೂಪವಾಗಿ ಹೃದಯಕಮಲ ಮಧ್ಯದಲ್ಲಿ ಇರುತಿರ್ದೆ. ಈ ಪರಿ ಅಂತರಂಗ ಭರಿತ

ನಾಗಿರ್ದೆನಯ್ಯಾ. ಬಹಿರಂಗದಲ್ಲಿ ಶ್ರೀಗುರು ಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ. ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ. ಜಂಗಮಲಿಂಗವಾಗಿ ಅವಗುಣಂಗಳೆಲ್ಲವ ಕಳೆದು ಶಿಕ್ಷಿಸಿ ರಕ್ಷಿಸಿದೆ. ಇಂತೀ ತ್ರಿವಿಧವು ಒಂದೈ ರೂಪಾಗಿ ಅಂತರಂಗ ಬಹಿರಂಗ ಭರಿತವಾಗಿ ಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.'

'ಅರುಹು ತಲೆದೋರಿತ್ತೆಂದು ಗುರು ಹಿರಿಯರ ಜರಿಯಲಾಗದಯ್ಯ. ಗುರುವನು ಜರಿಯೆ. ಹಿರಿಯರನು ಜರಿಯೆ. ಅದೇನು ಕಾರಣವೆಂದರೆ: ಗುರುವೇ ಸದ್ರೂಪು, ಲಿಂಗವೇ ಚಿದ್ರೂಪು, ಜಂಗಮವೇ ಆನಂದಸ್ವರೂಪವು ಅವನು ಜರಿಯಲಂಟೆ ?...........ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.'

'ಸರ್ವ ನಿರ್ವಾಣವಾದಲ್ಲಿ ಗುರುಸ್ಥಲ. ಲಯ ನಿರ್ವಾಣವಾದಲ್ಲಿ ಲಿಂಗಸ್ಥಲ. ಇಷ್ಟ ಕಾಮ್ಯ ಮೋಕ್ಷಂಗಳು, ಉತ್ಪತ್ತಿ ಸ್ಥಿತಿ ಲಯ ಆಣವ ಮಾಯಿಕ ಕಾರ್ಮಿಕ, ನವಗುಣಂಗಳು ನಿಂದು ಶಬ್ದ ಮುಗ್ಧವಾದುದು ಜಂಗಮಸ್ಥಲ. ಇಂತೀ ಸ್ಥಲ ಕುಳಂಗಳ ಭೇದಿಸಿ ಸರ್ವಜ್ಞ ಪರಿಪೂರ್ಣ ವಾಗಿಪ್ಪ ತ್ರಿವಿಧ ಮೂರ್ತಿಯೇ ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೇ.,

'ಮೃದು ರುಚಿ ರೂಪು ಕೂಡಿ ಸಕ್ಕರೆಯಾಯಿತ್ತು. ಗುರುಲಿಂಗ ಜಂಗಮ ಕೂಡಿ ವಸ್ತು ಆಯಿತ್ತು. ಮೃದುವಿನಂತೆ ಗುರುವು, ರುಚಿ ಯಂತೆ ಲಿಂಗ, ರೂಪಿನಂತೆ ಜಂಗಮ ಕೇಳಾ ಕಪಿಲಸಿದ್ಧ ಮಲ್ಲಿಕಾರ್ಜು ನಯ್ಯ.'

'ತನ್ನ ತಾನರಿದಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ ನಿಷ್ಪ ತ್ತಿಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ ರಾಮೇಶ್ವರ ಲಿಂಗವು ತಾನೆ.

'ಗುರುವಾಗಿ ಬಂದು ಎನಗೆ ದೀಕ್ಷೆಯ ಮಾಡಿದಿರಿ. ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ. ಜಂಗಮವಾಗಿ ಬಂದೆನ್ನ ಪ್ರಪಂಚುಕತನವ ಕಳೆದು ಪರಮ ಸೇವೆಯ ಮಾಡಿದಿರಿ. ಇಂತಿವೆಲ್ಲವು ಎನಗೆ ಪ್ರಸಾದವ ನೀಡಿ ಸಲಹಿದ ಕಪಿಲಸಿದ್ಧ ಮಲ್ಲಿಕಾರ್ಜುನ, ಇನ್ನೆನಗತಿ

ಶಯವಿಲ್ಲ.' ಉಪದೇಶವ ಮಾಡಿದಲ್ಲಿ ಗುರುವೆನಿಸದನು. ಕಾಮಿತ ಫಲಂಗಳ ಕೊಟ್ಟಲ್ಲಿ ಲಿಂಗಮೂರ್ತಿ ಎನಿಸಿದನು. ನಿತ್ಯ ನಿರ್ವಾಣದ ಸಕೀಲವ ತೋರಿ ದಲ್ಲಿ ಜಂಗಮುವೆನಿಸಿದನಯ್ಯ, ಕಪಿಲಸಿದ್ಧ ಮಲ್ಲಿಕಾರ್ಜುನಾ.'

ಇಲ್ಲಿಯವರೆಗೆ ಉದ್ಧರಿಸಿದ ಉತ್ತಮ ವಚನಗಳಿಂದ ಗುರು ಲಿಂಗ ಜಂಗಮ ಸಂಬಂಧ ಮನದಟ್ಟಾಗುತ್ತದೆ. ವಚನಗಳೇ ಸರಸವಾಗಿ ಸೊಗ ಸಾಗ ಬಣ್ಣಿಸಿರುವುದರಿಂದ ಬೇರೆ ವಿವರಿಸುವ ಅಗತ್ಯ ಉಳಿಯಲಿಲ್ಲ.

ಇನ್ನು ಗುರು ಲಿಂಗ ಜಂಗಮ ತ್ರಿವಿಧ ವಸ್ತುಗಳನ್ನು ತನ್ನಲ್ಲಿಭಕ್ತನು ಹೇಗೆ ಅಳವಡಿಸಿಕೊಳಬೇಕೆಂಬುದನ್ನು ನೋಡಬೇಕು; ತಿಳಿಯಬೇಕು.

'ಆಚಾರ ಅಂಗಸಂಬಂಧವಾದಲ್ಲಿ ಶ್ರೀಗುರು ಸನ್ನಿಹಿತ. ಅರಿವು ಮನ ಸಂಬಂಧವಾದಲ್ಲಿ ಶಿವಲಿಂಗ ಸನ್ನಿಹಿತ. ಉಭಯ ಲಾಂಛನವು ಸಂಬಂಧ ವಾದಲ್ಲಿ ಜಂಗಮಲಿಂಗ ಸನ್ನಿಹಿತ. ಇದು ಕಾರಣ ಕೂಡಲ ಚೆನ್ನಸಂಗಯ್ಯ ನಿಮ್ಮಲ್ಲಿ ತ್ರಿವಿಧ ಸಂಪನ್ನನಾ ಶರಣನು.

'ಭಾವಶುದ್ಧವಾಗಿಪ್ಪುದೇ ಗುರುಪೂಜೆ. ಜ್ಞಾನಶುದ್ಧವಾಗಿಪ್ಪುದೇ ಲಿಂಗಪೂಜೆ. ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ ನಿಶ್ಚಯವಾಗಿ ನಿಂದುದೇ ಜಂಗಮ ಪೂಜೆ. ಇಂತೀ ತ್ರಿವಿಧ ಭೇದದಲ್ಲಿ ತ್ರಿವಿಧಾರ್ಪಣ ವನರ್ಪಿಸಿ ನಿಂದುದೇ ಚಂಡೇಶ್ವರ ಲಿಂಗಕ್ಕೆ ಅರ್ಪಿತ.

'ಆತ್ಮ ತೇಜವ ಬಿಟ್ಟಾಗಳೇ ಗುರುವನರಿದವ. ಮನವಿಕಾರವ ಬಿಟ್ಟಾಗಳೇ ಲಿಂಗವನರಿದವ. ಧನವಿಕಾರವ ಬಿಟ್ಟಾಗಳೇ ಜಂಗಮವ ನರಿದವ. ಇಂತು ತ್ರಿವಿಧ ನಾಸ್ತಿಯಾದವಂಗಲ್ಲದೆ ನಿಃಕಳಂಕ ಮಲ್ಲಿಕಾರ್ಜುನ ನಲ್ಲಿ ಸಹಜ ಭಕ್ತನಲ್ಲ.'

ಗುರುಲಿಂಗ ಜಂಗಮ ಸಂಬಂಧ ಭಕ್ತನಿಗೆ ಹೇಗೆ ಹೊರಗಿನದೋ ಹಾಗೆ ಒಳಗಿನದೂ ಆಗಿದೆ. ಹೊರಗೆ ಆಯತನಾಗಿ ಒಳಗೆ ಸನ್ನಿಹಿತವಾಗ ಬೇಕು. ಆಚಾರ, ಅರಿವು, ಈ ಉಭಯ ತನ್ನಲ್ಲಿ ಅಳವಡುವುದೇ ಗುರು–ಲಿಂಗ–ಜಂಗಮತ್ವವೆಂದು ಚೆನ್ನಬಸವಣ್ಣನ ಹೇಳಿಕೆ.

ಆಚಾರ ಅಂಗದಲ್ಲಿ ಅರಿವು ಮನದಲ್ಲಿ ಆಚಾರ ವಿಚಾರಗಳೆರಡು ಸರ್ವಾಂಗದಲ್ಲಿ ಸನ್ನಿಹಿತವಾದವನೇ ಶರಣನೆಂದೆನಿಸುತ್ತಾನೆ. ತ್ರಿವಿಧ ತನು

ವಿನಲ್ಲಿ ತ್ರಿವಿಧ ಅಂದರೆ ಗುರುಲಿಂಗ ಜಂಗಮವೆಂಬ ಶುದ್ಧ ಚೈತನ್ಯ ಸಂಪನ್ನನಾದಾಗ ಭಕ್ತ ಶರಣಸ್ಥಲಸಂಪನ್ನನೆನಿಸುತ್ತಾನೆ. ವಿದ್ಯಾರ್ಥಿಯಲ್ಲಿ ಶಿಕ್ಷಕನು ಅಕ್ಷರರೂಪದಲ್ಲಿ ಅರ್ಥರೂಪದಲ್ಲಿ ಅರಿವುರೂಪದಲ್ಲಿ ಪ್ರವೇಶಿಸುವಂತೆ ಶಿಷ್ಯನಲ್ಲಿ ಶ್ರೀಗುರು ಆಚಾರ ಅರಿವು ಅನುಭವ ರೂಪದಲ್ಲಿ ಪ್ರವೇಶಿಸುತ್ತಾನೆ. ಇವೇ ಬಳಿಕ ಭಕ್ತನಿಗೆ ಸನ್ನಿಹಿತ ಗುರು ಲಿಂಗ ಜಂಗಮರೆನಿಸುತ್ತಾರೆಂದು ಚೆನ್ನಬಸವಣ್ಣನ ಚೆಲುವ ಬೋಧೆ.

ಭಾವ, ಜ್ಞಾನ, ತ್ರಿಕರಣ ಶುದ್ಧಿಗಳೇ ಗುರು ಲಿಂಗ ಜಂಗಮ ಪೂಜೆಯೆಂದು ಚಂದೇಶ್ವರನ ಆರಾಧಕ ಆಯ್ದಕ್ಕಿ ಮಾರಯ್ಯ ಹೇಳುತ್ತಾನೆ. ಭಾವ ಶುದ್ಧವಾಗದೆ ಗುರುಪೂಜೆ ಘಟಿಸದು. ಜ್ಞಾನ ಶುದ್ಧವಾಗದೆ ಲಿಂಗಪೂಜೆ ನಡೆಯದು. ತ್ರಿವಿಧ ಮಲವಳಿದು ತ್ರಿವಿಧಕರಣ ಶುದ್ಧವಾಗದೆ ಜಂಗಮ ಪೂಜೆ ಒದಗದು. ಅಶುದ್ಧ ಜೀವನ ಶುದ್ಧವಾಗಬೇಕೆನ್ನುತ್ತಾನೆ ಈ ಶರಣ. ಭಾವವಿಲ್ಲದಿರುವುದಂತೂ ಮಾನವತೆಯ ಲಕ್ಷಣವಲ್ಲ. ಭಾವವಿದ್ದರೂ ಆಣವ ಮಲದಿಂದ ಅನಿಶ್ಚಿತವಾಗಿರಬಾರದು ; ಅಣು (ಸಂಕುಚಿತ) ವಾಗಿರಬಾರದು. ಭಾವವೈಶಾಲ್ಯಬೇಕು ; ಭಾವನೈರ್ಮಲ್ಯಬೇಕು. ಅಂತೆಯೆ ಅಜ್ಞಾನಿಗಿಂತ ಜ್ಞಾನಿ ಮೇಲು ; ಜ್ಞಾನಿಗಿಂತ ಸುಜ್ಞಾನಿ ಇನ್ನೂಮೇಲೆಂಬುದನ್ನು ಅರಿಯಬೇಕು. ಆಗ ಮಾಯಿಕಮಲ ನಿವೃತ್ತಿಯಾಗಿ ನಿಶ್ಚಯರೂಪ ನಿಜಾನುಭವ ವಳವಡುತ್ತದೆ. ಇದರಂತೆ ತ್ರಿಕರಣಗಳನ್ನು ಆವರಿಸಿದ ಕಾರ್ಮಿಕಮಲ ಕಳೆದಿರಬೇಕು ; ಆಗ ಪೂಜೆಗೆ ಪೂರ್ಣರೂಪ ಬರುತ್ತದೆ ; ಪ್ರಭೆಯುಂಟಾಗುತ್ತದೆ ಎಂದೆನ್ನುತ್ತಾನೆ ಚಂದೇಶ್ವರ ಶರಣ.

ತನು ಮನ ಧನಗಳ ವಿಕಾರ ವಿರಹಿತನಾಗದೆ ಭಕ್ತನಿಗೆ ಸಹಜತ್ವ ವಳಪಡದೆನ್ನುತ್ತಾನೆ ಮೋಳಗೆಯ ಮಾರಯ್ಯ ಶರಣ.

‘ಧ್ಯಾನದಿಂದ ವಸ್ತು, ವಿಷಯದಿಂದ ಮೋಹ ; ಭಾವ ಶುದ್ಧದಿಂದ ಗುರುಸ್ಥಲ. ದ್ವಂದ್ವವಳಿದು ನಿಂದುದು ಲಿಂಗ. ತ್ರಿವಿಧ ಸಂದನಳಿದು ಸಲೆ ನಿಂದುದು ಜಂಗಮ. ಈ ಸ್ಥಲದಂಗವನರಿದು ಭಯ ಭಂಗವಿಲ್ಲದೆ ಸುಸಂಗದಿಂದ ಮಾಡುವುದು ಭಕ್ತಸ್ಥಲ ನಿಶ್ಚಯವಾಗಿ ನಿಂದುದು ಕಾಲಾಂತಕ ಭೀಮೇಶ್ವರಲಿಂಗದಲ್ಲಿ ನಿಶ್ಚಯಿಸುವುದುಭಯ ಭಾವ.’

ವಿಷಯಮೋಹ ಹರಿಯುದೆ ವಸ್ತು ಧ್ಯಾನ ಹೊಂದದು, ಮನವಂದದು. ಭಾವ್ಯ‌ಶುಭ್ರತೆ ಗುರುಸ್ಥಲವಾದರೆ ಸುಖ ದುಃಖಾದಿ ದ್ವಂದ್ವವಳಿವುದೇ ಲಿಂಗಸ್ಥಲ. ಅಂಗ-ಲಿಂಗವೆಂಬ ದ್ವಂದ್ವವೂ ದೂರಾಗಬೇಕು. ತ್ರಿವಿಧ ಕರಣ, ತಿವಿಧ ತನು, ತ್ರಿವಿಧಾವಸ್ಥೆಗಳು ತ್ರಿವಿಧ ವಸ್ತುಗಳಲ್ಲಿ ಸಂದಳಿದಿರುವುದೇ ಜಂಗಮಸ್ಥಲ. ಇವು ಅಳವಡದಿದ್ದರೆ ಭಕ್ತಸ್ಥಲಕ್ಕಿಂಬಿಲ್ಲ.

'ಗುರುಭಕ್ತನಾದಲ್ಲಿ ಗುರುವಳಿದು ತಾನುಳಿದರೆ ಗುರುಭಕ್ತನಲ್ಲ. ಲಿಂಗಭಕ್ತನಾದಡೆ ಜಾಗ್ರಬಾಹ್ಯಗಳಲ್ಲಿ ತಮ್ಮಂಗವ ಬಿಟ್ಟು ಲಿಂಗ ಹಿಂಗದಲ್ಲಿ ಆತ್ಮನೊಡಗೂಡದಿದ್ದಲ್ಲಿಯೇ ಲಿಂಗಭಕ್ತನಲ್ಲ. ಜಂಗಮಭಕ್ತನಾದಡೆ ಕಳವು ಹಾದರ ದುರ್ಗುಣದಿಂದ ಕೆಡಿಯಿಸಿಕೊಂಬಲ್ಲಿ ಅವುಗಳಲಿ ತಾನಡಗಿ ಅರಿವೆ ಇಲ್ಲದಿರ್ದಾಗಳೇ ಜಂಗಮ ಭಕ್ತನಲ್ಲ. ಇಂತೀ ತ್ರಿವಿಧ ಭಾವಂಗಳಲ್ಲಿ ಘಟಸಂದನಳಿದವಂಗಲ್ಲದೆ ತ್ರಿವಿಧ ಭಕ್ತಿಯಿಲ್ಲ. ಬ್ರಹ್ಮೇಶ್ವರ ಲಿಂಗವನರಿಯುದವರಿಗೂ ಅಸಾಧ್ಯ ನೋಡಾ.'

'ಗುರುವರನೇ ಲಿಂಗವೆಂದರಿದ ಕಾರಣ ಗುರುವ ಲಿಂಗದಲ್ಲಿ ಕಂಡೆ. ಲಿಂಗವನೇ ಜಂಗಮವೆಂದರಿದ ಕಾರಣ ಲಿಂಗವ ಜಂಗಮದಲ್ಲಿ ಕಂಡೆ. ಜಂಗಮವನೇ ತಾನೆಂದರಿದ ಕಾರಣ ಜಂಗಮನ ನನ್ನಲ್ಲಿ ಕಂಡೆ. ನನ್ನ ನಿನ್ನಲ್ಲಿ ಅರಿದ ಕಾರಣ ನನ್ನ ನಿನ್ನಲ್ಲಿ ಕಂಡೆ. ಈ ಪರಿಯಿಂದ ಗುರು ಲಿಂಗ ಜಂಗಮ ಸದಾ ಸನ್ನಿಹಿತನಾಗಿ ನಿನ್ನೊಳಗಾದೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.' 'ಗುರುವಿಡಿದು ಲಿಂಗವ ಕಂಡೆ ಲಿಂಗವಿಡಿದು ಜಂಗಮವ ಕಂಡೆ. ಇಂತೀ ಪರವ ತೋರಿದ ಗುರುವಿನಾಜ್ಞೆಯ ಮೀರಿ ನಡೆದ ದುರಾಚಾರಿಗಳ ಮುಖವ ನೋಡಲಾಗದು ಕಾಣಾ ಕಲಿದೇವರ ದೇವಯ್ಯ.'

'ಗುರುವೇ ಇಷ್ಟ, ಲಿಂಗವೇ ಪ್ರಾಣ; ಜಂಗಮವೇ ಭಾವ. ಪ್ರಸಾದವೇ ಚಿತ್ಕಾಯ, ಪಾದೋದಕವೇ ಶರಣ; ವಿಭೂತಿಯೇ ಅಂತರಂಗದ ಚಿತ್ಪ್ರಕಾಶ, ರುದ್ರಾಕ್ಷಿಯೇ ಚತುರ್ದಶೇಂದ್ರಿಯಂಗಳು; ಮಂತ್ರವೇ ಷಟ್ ಪ್ರಕಾರವಾದ ಮಂತ್ರತತ್ತ್ವ ಕರಣಂಗಳು ನೋಡಾ.'

ಗುರು ಲಿಂಗ ಜಂಗಮ ಸಾಮರಸ್ಯ:

'ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತೆಂಬೆನಯ್ಯಾ. ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯ. ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯ. ಗುರು ಲಿಂಗ ಜಂಗಮವನೇಕತ್ರವಾಗಿ ಕಾಣಲರಿಯದಿದ್ದರೆ ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತಿದ್ದಾವೆ. ತನು ಮನ ಧನವ ನಿವೇದಿಸಲರಿಯರಾಗಿ ಕೂಡಲಸಂಗಮದೇವ ಒಲಿ ಎಂದೊಡೆಂತೊಲಿವ?'

'ಸಕಲ ಗುರು, ಸಕಲ ನಿಃಕಲ ಲಿಂಗ ; ನಿಃಕಲ ಜಂಗಮ. ಇಂತೀ ತ್ರಿವಿಧಲಿಂಗಕ್ಕೆ ಮಾಡುವ ಭಕ್ತಿ ಯುಕ್ತಿ ಅದೆಂತೆಂದೊಡೆ : ಲಿಂಗವು ಜಂಗಮವು ಗುರುವಿನಲ್ಲಿ ಉಂಟೆಂದು ತನು ಮನ ಧನವ ಸವಿದು ಮಾಡುವುದು ಅದು ಗುರುಭಕ್ತಿ. ಗುರುವು ಜಂಗಮವು ಲಿಂಗದಲ್ಲಿ ಉಂಟೆಂದು ತನು ಮನ ಧನವ ಮುಟ್ಟಿಮಾಡುವುದು ಲಿಂಗಭಕ್ತಿ. ಗುರುವು ಲಿಂಗವು ಜಂಗಮದಲ್ಲಿ ಉಂಟೆಂದು ತನು ಮನ ಧನವ ಸವಿದು ಮಾಡುವುದು ಜಂಗಮ ಭಕ್ತಿ. ಈ ತ್ರಿವಿಧ ಲಿಂಗಕ್ಕೆ ತ್ರಿವಿಧ ಪ್ರಕಾರದಲ್ಲಿ ಕೂಡಿ ಮಾಡಿ ಜೀವಿಸುವಾತನೇ ಶಿವಭಕ್ತನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.'

'ಗುರು ಪೂಜೆಯ ಮಾಡುವಲ್ಲಿ ಗುರುಪೂಜೆಯಲ್ಲಿಯೇ ಮುಕ್ತರು. ಲಿಂಗಪೂಜೆಯ ಮಾಡುವಲ್ಲಿ ಲಿಂಗಪೂಜೆಯಲ್ಲಿಯೇ ಮುಕ್ತರು. ಜಂಗಮ ಪೂಜೆಯ ಮಾಡುವಲ್ಲಿ ಜಂಗಮ ಪೂಜೆಯಲ್ಲಿಯೇ ಮುಕ್ತರು. ಈ ಮೂರೊಂದಾದಲ್ಲಿ ಬೇರೊಂದಂಗವಿಲ್ಲ. ಆಗು ಜಾಗು ಮೂರರಲ್ಲಿ ಅಡಗಿತ್ತೇ ಅಮಳೇಶ್ವರ ಲಿಂಗದ ಪೂಜೆ.'

'ಲಿಂಗವನು ಪ್ರಾಣವನು ಒಂದು ಮಾಡಿ ತೋರಿದ ಗುರುವಿರ್ದನಲ್ಲಾ, ಲಿಂಗವಿರ್ದನಲ್ಲಾ, ಇದಕ್ಕೆ ಸಾಕ್ಷಿ ಜಂಗಮವಿರ್ದನಲ್ಲಾ. ಈ ತ್ರಿವಿಧ ದೃಷ್ಟವ ಕಂಡು ಅವು ಬೇರೆಂಬ ಅಜ್ಞಾನಕ್ಕೆ ನಾನು ಬೆರಗಾದೆನು ಗೋಹೇಶ್ವರಾ.'

'ತಾನೆಂದೆನಲೊಲ್ಲದೆ ಗುರುವೆಂದು ಪಿಡಿದವನ, ಗುರುವೆಂದಲ್ಲಿ ನೀನೆಂದು ನಡೆದವನ, ನೀನೆಂದಲ್ಲಿಯೇ ಲಿಂಗಜಂಗಮದ ಸಕೀಲ ಸಂಬಂಧವ ನೆಲೆಗೊಳಿಸಿದವನ, ಲಿಂಗಜಂಗಮದಲ್ಲಿ ತನ್ನ ಮರೆದು ಕರಿಗೊಂಡ ಲಿಂಗೈಕ್ಯನ, ಗೊಹೇಶ್ವರಲಿಂಗದಲ್ಲಿಪ್ಪ ಚೆನ್ನಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು.'

'ಅಹಂಕಾರವರತು ಗುರುವಾಗಿ, ಜಂಗಮವರತು ಲಿಂಗವಾಗಿ, ತ್ರಿವಿಧವರತು ಜಂಗವಾಗಿ, ಸಕಲೇಂದ್ರಿಯದ ಲಂಪಟವರತು ಭಕ್ತನಾಗಿ, ಸಂಸಾರವೆಂಬ ಗಡಗಡೆಯಲ್ಲಿ ಸಿಲುಕದೆ, ಆವ ಸ್ಥಲದಲ್ಲಿ ನಿಂದು ನೋಡಿದರೂ ಭಾವ ಶುದ್ಧವಾಗಿ, ಗುರುವಿಂಗೆ ಗುರುವಾಗಿ, ಲಿಂಗಕ್ಕೆ ಲಿಂಗವಾಗಿ, ಜಂಗಮಕ್ಕೆ ಜಂಗಮವಾಗಿ ಭಕ್ತರ ಭಕ್ತಿಯ ಮಾಡಿಕೊಂಡಿಪ್ಪ ಸದ್ಭಕ್ತ ಕಾಲಾಂತಕ ಭೀಮೇಶ್ವರ ಲಿಂಗವು ತಾನೆ.'

'ಮೂರಳಿದು ಮೂರಳವಟ್ಟುದೇ ಭಕ್ತಸ್ಥಲ. ಮೂರಳಿದು ಮೂರಳವಟ್ಟುದೇ ಜಂಗಮಸ್ಥಲ. ಅಳಿದು ಎಂದರೆ ಇದ್ದ ಮನ ಲಿಂಗಕ್ಕೆ ಕೊಟ್ಟಾಗಳೇ ಮಣ್ಣಳಿದುದು. ಇದ್ದ ಧನ ಜಂಗಮಕ್ಕೆ ಕೊಟ್ಟಾಗಳೇ ಹೊನ್ನಳಿದುದು. ಇದ್ದ ತನು ಗುರುವಿಂಗೆ ಕೊಟ್ಟಾಗಳೇ ಹೆಣ್ಣಳಿದುದು. ಅವರವರ ಆಚರಣೆಯ ನೋಡಿ ಕೊಡುವುದಲ್ಲದೆ ಬೇಡಿದ ಪರಿಯಲ್ಲಿ ಕೊಡುವುದೇನೋ? ಅಯ್ಯ, ಸಿಂಧುಬಲ್ಲಾಳ ತನ್ನ ವಧುವ ಕೊಟ್ಟನೆಂದು ಹೇಳಿದಲ್ಲಿ ತನ್ನ ಹೆಂಡತಿಯನೇನಾದರೂ ಕೊಟ್ಟನೇ? ಇಲ್ಲಿಲ್ಲ. ಹೆಣ್ಣು ಎಂದರೆ ತಾನು, ಶರಣಸತಿ ಲಿಂಗಪತಿ ಎಂಬ ಭಾವದಿಂದ ಲಿಂಗಕ್ಕೆ ಮನ ಕೊಟ್ಟು ವಧುವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಎಂದರೆ ತನ್ನ ತನುವ ಗುರುವಿಗೆ ಕೊಟ್ಟು ಸ್ವಯಂಭುವಾದ ನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಎಂದರೆ ಜಂಗಮಕ್ಕೆ ಧನವಕೊಟ್ಟು ನಿಧಿ ನಿಧಾನ ಒಲ್ಲನಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಸಲ್ಲದು ಗುರುವಿಂಗೆ. ಇದರ ಭೇತವನಂತವುಂಟು. ತಿಳಿವಡೆ ಬಹು ದುರ್ಲಭ. ತಿಳಿದು ಮಾಡಿವಡೆ ಭಕ್ತಿಗೆ ಬಹುಸುಲಭ. ತಿಳಿದು ಮಾಡಿ ಮೋಕ್ಷವ ಹಡೆದರಲ್ಲದೆ ತಿಳಿಯದೆ ಮಾಡಲು ಅವರೇನು ಮರುವಿನೊಳಗಿರುವ ಬಂಗಾರವಾಗಲಿ, ಸಮುದ್ರ

ದೊಳಗಿರುವ ನಿಧಿ ನಿಧಾನಗಳಾಗಲಿ ತಂದಿಹರೇನೋ? ಕಪಿಲಸಿದ್ಧ ಮಲ್ಲಿಕಾರ್ಜುನ ಇದರಿರವ ಹೇಳಿಕೊಡಯ್ಯ ಎನ್ನ ಪ್ರಾಣಗುರು ಚೆನ್ನಬಸವಣ್ಣನಿಂದ.'

ತನು-ಮನ-ಧನ ಈ ತ್ರಿವಿಧ ವಂಚನೆಯನ್ನು ಬಿಟ್ಟವನೇ ಭಕ್ತ. ಗುರು-ಲಿಂಗ- ಜಂಗಮರೂಪ ಸಚ್ಚಿದಾನಂದ ಚೈತನ್ಯ ಅಳವಟ್ಟವನೇ ಭಕ್ತ.

ಹೊನ್ನು ಹೆಣ್ಣು ಮಣ್ಣು ಈ ಮೂರನ್ನು ದೂರ ಮಾಡಿದವನೇ ಜಂಗಮ. ಸ್ವಯ-ಚರ-ಪರತ್ವ ದಿವ್ಯ ಧರ್ಮತ್ರಯದಿಂದ ದೀಪ್ತನಾದಾತನೇ ಜಂಗಮ.

ಭಕ್ತನಿಗೆ ತನು ಮಣ್ಣು, ಮನ ಹೆಣ್ಣು, ಭಾವಹೊನ್ನು, ಇವನ್ನು ಪರಿವಿಡಿದು ಗುರು-ಲಿಂಗ-ಜಂಗಮರಿಗೆ ವಂಚನೆಯಿಲ್ಲದೆ ಲೋಭವಿಲ್ಲದೆ ಕೊಡಬೇಕು.

ಭಕ್ತಿ ಮಾಡುವುದು ಭಕ್ತನಾಗುವುದು ಸುಲಭವಲ್ಲ. ಆದಿಭೌತಿಕ ವಸ್ತುಗಳನ್ನು ಕೊಟ್ಟು ಭಕ್ತನೆನಿಸುವುದು ಸಹಜವಲ್ಲ. ಆಧ್ಯಾತ್ಮಿಕ ವಸ್ತುಗಳನ್ನು ಅದಾವ ಅದೆಷ್ಟು ಲೋಭವಿಲ್ಲದಂತೆ ಕೊಡುವುದೋ ಭಕ್ತಿಯ ಕುರುಹು.

ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿಯುವರು. ಭಕ್ತಿಸ್ಥಲವೆಲ್ಲರಿಗೆಲ್ಲಿಯದೋ ? ಗುರುವಿನಲ್ಲಿ ತನುವಂಚನೆ, ಲಿಂಗದಲ್ಲಿ ಮನವಂಚನೆ, ಜಂಗಮದಲ್ಲಿ ಧನವಂಚನೆ; ಇಂತೀ ತ್ರಿವಿಧ ವಂಚನೆಯುಳ್ಳನ್ನಬರ ಭಕ್ತನೆ ?—ಅಲ್ಲ. ಗುರುವಿನಲ್ಲಿ ಚಾರಿತ್ರವನು, ಲಿಂಗದಲ್ಲಿ ಲಕ್ಷಣವನು, ಜಂಗಮದಲ್ಲಿ ಜಾತಿಯನರಸುವನ್ನಕ್ಕರ ಭಕ್ತನೇ ?—ಅಲ್ಲ. ಅವನು ದೋಷಾರ್ಥಿ........ಇದುಕಾರಣ ಕೂಡಲಚೆನ್ನ ಸಂಗಮದೇವ, ಭಕ್ತಸ್ಥಲ ವೆಲ್ಲರಿಗೆಲ್ಲಿಯದೋ ?

ಭಕ್ತ ತನ್ನದನ್ನೆಲ್ಲ ಕೊಡಬೇಕು. ತನ್ನಲ್ಲಿರುವ ದೋಷಗಳನ್ನೆಲ್ಲ ಬಿಡಬೇಕು. ಭಕ್ತನಿಗೆ ಬಹಿರಂಗಶುದ್ಧಿಯೊಂದೇ ಸಾಲದು. ಅಂತರಂಗ ಶುದ್ಧಿಯೂ ಬೇಕು. ಅದಾಗಬೇಕಾದರೆ ಗುರುಕಾರುಣ್ಯ ಬೇಕು. ಗುರು

ಕಾರುಣ್ಯವಾಗಬೇಕಾದರೆ ಪಿಂಡಜ್ಞಾನವಿರಬೇಕು; ಸಂಸಾರ ನಿಸ್ಸಾರವೆಂದು ಬಗೆದು ಬಿಟ್ಟಿರಬೇಕು. ಸಮಭಾವ, ಸದಾಚಾರ, ಹೃದಯ ಪೂರ್ಣವಾದ ಉಪಚಾರ, ಸತ್ಪಾತ್ರದಲ್ಲಿ ತ್ಯಾಗ, ನಿರಭಿಲಾಷೆ, ನಿಜಪ್ರಸಾದಾಭಿಲಾಷೆ, ಸತ್ಯಸಂಬಂಧ, ಸಹಜಗುಣ, ಸಜ್ಜನಸಂಗ, ಸತ್ಕಾಯಕ, ಗುರುಲಿಂಗ ಜಂಗಮ ದಾಸೋಹ ಮತ್ತು ಸೇವೆ, ಪಾದೋದಕಮೋಹ, ಇವು ಭಕ್ತನಿಗೆ ಇರಬೇಕಾದ ಗುಣಗಳು.

'ಭಕ್ತನು ತಾನು ತಾನಾಗಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು. ತನು ಮನ ಧನವ ಗುರುಲಿಂಗ ಜಂಗಮಕ್ಕೆ ಸವೆಯಿಸಬೇಕು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು. ಇದೆ ಮೊದಲಲ್ಲಿ ಬೇಹಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವಂ ಪಡೆವಡೆ, ಇದೆ ಸಾಧನ ನಮ್ಮ ಕೂಡಲಚೆನ್ನ ಸಂಗಯ್ಯನಲ್ಲಿ.'

ಭಕ್ತನಿಗೆ ಬಾಹ್ಯ ಭೌತಿಕಸಂಪತ್ತು ಸಂಪತ್ತಲ್ಲ. ಗುರು ಲಿಂಗ ಜಂಗಮವೇ ಶ್ರೇಷ್ಠ ಸಂಪತ್ತು; ಸಂಪಾದನೀಯ ಸಂಪತ್ತು. ಇದನ್ನು ಗಳಿಸುವ ಸಾಧನ ತನುತ್ರಯ; ಕರಣತ್ರಯ; ಇವು ತಂತಮ್ಮ ಕ್ರಿಯಾಚಾರಗಳಲ್ಲಿ ನಿರತವಾಗಿರಬೇಕು; ನಿರ್ಮಳವಾಗಿರಬೇಕು.

ತನು ಮನ ಧನಗಳು ತನ್ನವಾಗಿಲ್ಲ. ತನಗೆ ಸಹಾಯಕವಾಗಿಲ್ಲ. ತನ್ನ ಸಾಯುಜ್ಯ ಪ್ರಾಪ್ತಿಗೆ ಪ್ರೇರಕವಾಗಿಲ್ಲ; ಪರಿಪೋಷಕವಾಗಿಲ್ಲ. ಭವಕ್ಕೆ ಹರಿದು ಹೋಗುತ್ತವೆ. ಭವಸಾಗರವನ್ನು ಕೂಡುತ್ತವೆ. ಇವು ಊರ್ಧ್ವಮುಖವಾಗಬೇಕಾದರೆ ಇವನ್ನು ಗುರು ಲಿಂಗ ಜಂಗಮಕ್ಕೆ ಸಲ್ಲಿಸಬೇಕು. ಕ್ರಿಯಾಜ್ಞಾನಾನುಭವಗಳನ್ನು ಅವರಿಂದ ಕಲಿಸಬೇಕು. ತನುವಿನ ವಿಕಾರವನ್ನು ಮನದ ಚಂಚಲತೆಯನ್ನು ಭಾವದ ಭ್ರಮೆಯನ್ನು ಬಿಡಿಸಬೇಕು. ಜಡತೆಯನ್ನು ಜಂಜಡತೆಯನ್ನು ಓಡಿಸಬೇಕು. ಆಗ ಉನ್ಮುಖವಾಗುತ್ತವೆ. ಉತ್ತಮವಾಗುತ್ತವೆ. ತನ್ನ ಲೋಕಸೇವೆಗೆ ಪರಲೋಕ ಪ್ರಾಪ್ತಿಗೆ ನೆರವಾಗುತ್ತವೆ. ಪ್ರವೃತ್ತಿಯನ್ನೇ ನಿವೃತ್ತಿಯನ್ನಾಗಿಸುತ್ತವೆ :

'ಶಿವಭಕ್ತಿಯುಳ್ಳವಂಗೆ ಕಾಮಬೇಡ, ಕ್ರೋಧಬೇಡ, ಲೋಭಬೇಡ, ಮೋಹಬೇಡ, ಮದಬೇಡ, ಮತ್ಸರಬೇಡ. ಶಿವಭಕ್ತಿಯುಳ್ಳವಂಗೆ ಕಾಮ

ಬೇಕು, ಕ್ರೋಧಬೇಕು, ಲೋಭ ಬೇಕು. ಮೋಹಬೇಕು, ಮದಬೇಕು, ಮತ್ಸರಬೇಕು. ಬೇಕೆಂಬುದಕ್ಕಾವ ಗುಣ ? ಬೇಡೆಂಬೇದುಕ್ಕಾವ ಗುಣ ? ಕಾಮಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಂಗಳಲ್ಲಿ, ಲೋಭಬೇಕು ಪಾದೋದಕ ಪ್ರಸಾದದಲ್ಲಿ, ಮೋಹಬೇಕು ಗುರುಲಿಂಗ ಜಂಗಮದಲ್ಲಿ, ಮದ ಬೇಕುಶಿವಾಚಾರ ಘನವೆಂಬಲ್ಲಿ, ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ ಇಂತೀ ಷಡ್ಗುಣವಿರಬೇಕು. ಬೇಡೆಂಬುದಕ್ಕಾವಗುಣ ? ಕಾಮ ಬೇಡ ಪರಸ್ತ್ರೀಯರಲ್ಲಿ, ಕ್ರೋಧಬೇಡ ಗುರುವಿನಲ್ಲಿ, ಲೋಭಬೇಡ ತನುಮನ ದಲ್ಲಿ, ಮೋಹಬೇಡ ಸಂಸಾರದಲ್ಲಿ, ಮದಬೇಡ ಶಿವಭಕ್ತರಲ್ಲಿ, ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ; ಇಂತೀ ಷಡ್ವಿಧಗುಣವನರಿದು ಮೆರೆಯಬಲ್ಲಡೆ ಆತನೇ ಸದ್ಭಕ್ತ ಕಾಣಾ ಕೂಡಲಚೆನ್ನ ಸಂಗಮದೇವಾ.'

ಷಡ್ವರ್ಗವನ್ನು ಬಿಡಲು ಬರುವುದಿಲ್ಲ. ಬೆನ್ನುಬಿದ್ದ ಪ್ರಕೃತಿಧರ್ಮ ಗಳವು. ಆದರೆ ಅವುಗಳ ಬಳಕೆಯನ್ನು ಬದಲಿಸಬೇಕು. ಸದುಪಯೋಗ ಪಡಿಸಿಕೊಳ್ಳಬೇಕು. ಶತೃವರ್ಗವನ್ನು ಮಿತ್ರವರ್ಗವನ್ನಾಗಿಸಿಕೊಳ್ಳಬೇಕು. 'ನಿಮ್ಮ ನೋಟವನಂತ ಸುಖ; ನಿಮ್ಮ ಕೂಟ ಪರಮಸುಖ.........ದೇವಾ, ನಿಮ್ಮ ನೋಡಿ ಕೂಡಿ ನಿಮಿರ್ದವೆನ್ನಕಂಗಳು.' ಎಂಬೀ ಬಗೆಯಲ್ಲಿ ನೋಟ ಕೂಟಗಳ ಮಾರ್ಪಾಟವಾಗಬೇಕು. ಕಾಮಕ್ರೋಧಗಳ ಮಾರ್ಪಾಟಾಗ ಬೇಕು. ಲೋಭ ಮೋಹಾದಿಗಳ ಮಾರ್ಪಾಟಾಗಬೇಕು. ಪ್ರವೃತ್ತಿಯಿಂದ ನಿವೃತ್ತಿಗೇರಬೇಕು.

ಶಿವಭಕ್ತನು ಶರಣೆಂದು ಬಾಳಬೇಕು. ಸರಳತನದಿಂದ ಬದುಕ ಬೇಕು. ಯುಕ್ತಿ ಶಕ್ತಿಗಳಿಂದ ಮಾಡುವುದು ಭಕ್ತಿಯಲ್ಲ; ಅದರಿಂದ ಮುಕ್ತಿಯಿಲ್ಲ.

'ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ.
ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೋ.
ಹೇಳಿ ಕೇಳಿ ಮಾಡುವುದು ಯುಕ್ತಿಭಕ್ತಿ. ಸಾಧಕದಿಂದ
ಮಾಡುವುದು ಅಭ್ಯಾಸ ಭಕ್ತಿ. ಮನಕೂರ್ತು ಮಾಡುವುದು
ಯುಕ್ತಿ ಭಕ್ತಿ. ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ.

ಇದ್ದಂತಿದ್ದೂ ನಿಜವಪ್ಪುದು ನಿಜಭಕ್ತಿ. ಈ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು.'

ನಿಷ್ಕಾಮ ನಿಷ್ಕಪಟ ನಿರಭಿಮಾನ ನಿಷ್ಕಂಟಕಗಳಿಂದ ಕೂಡಿದ ಭಕ್ತಿಯೇ ನಿಜಭಕ್ತಿ ಪ್ರತಿಷ್ಠೆಯಿಲ್ಲದ ನಿಷ್ಠೆಯಿಂದ ಕೂಡಿದ ನೇಹವೇ ನಿಜಭಕ್ತಿ.

ಏಕನಿಷ್ಠೆಯಿಲ್ಲದ ಭಕ್ತಿ ಒಡೆದ ಗಡಿಗೆ; ಒಡೆದ ಮುತ್ತು. ಅದರಲ್ಲಿ ಭಕ್ತಿ ಸುಖಜಲ ನಿಲ್ಲದು; ಬೆಸುಗೆಯಾಗದು; ಬೆಲೆಯಾಗದು. ಚಿತ್ತವಿಲ್ಲದ ಭಕ್ತಿ ಬೀಸರ ಭಕ್ತಿ; ಬೇಸರಭಕ್ತಿ.

ಭಕ್ತನು ದ್ವೈತಭಕ್ತಿಯಿಂದ ಅದ್ವೈತಭಕ್ತಿಗೆ ನಿಲುಕಬೇಕು. ಆಗ ಆತನ ಇರುವೆಲ್ಲ ಆ ಪರಶಿವಮಯ. ಆತನ ಅಂಗವೆಲ್ಲ ಲಿಂಗಮಯ. 'ಭಕ್ತಕಾಯ ಮಮಕಾಯ' ಎಂಬ ವಾಕ್ಯದಲ್ಲಿ ಕಾಯ ಲಿಂಗವೆಂದಿಪ್ಪೆ. ಗುರು ಲಿಂಗಪ್ರಾಣವ ಮಾಡಿದವನಾಗಿ ಲಿಂಗಪ್ರಾಣವೆಂದಿಪ್ಪೆ. ಸರ್ವಕ್ರೀಯೆಲ್ಲಾ ಲಿಂಗದ ಕ್ರೀಯೆಂದಿಪ್ಪೆ. ಒಂದೆಂದು ನುಡಿಯೆ, ಎರಡೆಂದು ಭಾವಿಸೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.'

ಗುರುಕರುಣದಿಂದ ಲಿಂಗಾಂಗ ಸಂಬಂಧಿಯಾದ ಸದ್ಭಕ್ತನ ಅಂಗ ಪ್ರಾಣ ಮುಂತಾದ ಸರ್ವಾಂಗವೂ ಲಿಂಗವಾಗಿರುತ್ತಾನೆ. ಆತನು ನುಡಿಗೆಟ್ಟಿರುತ್ತಾನೆ. ಆತನು ತಾನೇ ಬ್ರಹ್ಮವೆಂದು ವಾಗದ್ವೈತಿಯಂತೆ ಹೇಳುವುದಿಲ್ಲ. ಅಂತೆಯೇ ಭಿನ್ನವಿಟ್ಟು ಅರಸುವ ದ್ವೈತಿಯೂ ಅಲ್ಲ. ಆತನ ಕ್ರಿಯೆಯೆಲ್ಲ ಲಿಂಗಕ್ರಿಯೆಯಾಗಿ ನಿಷ್ಪತ್ತಿಗೊಂಡಿರುತ್ತವೆ. ಲಿಂಗಾಂಗವಾಗಿರುವ ನಿಜಭಕ್ತನ ನಿಲವು ಉಪಮೆಗೆ ಬಾರದು. 'ದೇಹ ನಿರ್ದೇಹವೆನುತ್ತಿಪ್ಪರಯ್ಯಾ. ದೇಹ ನಿರ್ದೇಹವಪ್ಪ ಮರ್ಮವನರಿಯರು. ಅಹಂ ಎಂಬುದೇ ದೇಹ. ದಾಸೋಽಹಂ ಎಂಬುದೇ ನಿರ್ದೇಹ ನೋಡಾ! 'ಅಕಾಯೋ ಭಕ್ತಕಾಯಂ ಮಾ' ಎಂದುದಾಗಿ ಅಹಂಭಾವವಳಿದವರ ಕೂಡಲಚೆನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆನು.' 'ಶ್ರೀಗುರು ಕಾರುಣ್ಯಕಟಾಕ್ಷದಲ್ಲಿ ಉತ್ಪತ್ಯವಾದ ಅಜಾತಂಗೆ ಜಾತಿಸೂತಕ ಜನನಸೂತಕ ಪ್ರೇತಸೂತಕ ರಜಸ್ಸೂತಕ ಎಂಜಲಸೂತಕ ಉಂಟೆಂಬುವಂಗೆ ಗುರುವಿಲ್ಲ ಲಿಂಗವಿಲ್ಲ

ಜಂಗಮವಿಲ್ಲ ಪ್ರಸಾದವಿಲ್ಲವಯ್ಯಾ ಕೂಡಲಚೆನ್ನಸಂಗಮದೇವಾ.' 'ಭಕ್ತಂಗೆ ಉತ್ಪತ್ಯವಿಲ್ಲವಾಗಿ ಸ್ಥಿತಿಯಿಲ್ಲ. ಸ್ಥಿತಿಯಿಲ್ಲವಾಗಿ ಲಯವಿಲ್ಲ. ಲಯವಿಲ್ಲವಾಗಿ ದೇಹಸಾವುಪ್ರವರ್ತನೆಯಿಲ್ಲ. ಇವಾವವೂ ಇಲ್ಲದ ಕಾರಣ ನಿಮ್ಮ ಶರಣನಂಗ ಬಚ್ಚಬರಿಯ ಬಯಲು ಗೊಹೇಶ್ವರಾ.'

ಗುರುಕರುಣೆಯಿಂದ ಗುರುಕರದಲ್ಲಿ ಪೂರ್ವಜನ್ಮ ಕರ್ಮಗಳನ್ನು ಕಳಚಿದ ಭಕ್ತನಿಗೆ ಸೃಷ್ಟಿ ಸ್ಥಿತಿ ಲಯಗಳಿಲ್ಲ. ದೇಹಭಾವವಿಲ್ಲ; ದೇಹ ವೃತ್ತಿಯಿಲ್ಲ.

ಅಂತಾದರೂ ಭಕ್ತನಿಗೆ ಆಚಾರ ಬೇಕು. ಆಚಾರವಿಲ್ಲದೆ ಭಕ್ತ ನಾಗನು ; ಮುಕ್ತನಾಗನು.

'ಇಹಪರವೆಂಬ ಇದ್ದೆಸೆಗೆ ಇದ್ದೆಸೆಯಾಗಿರ್ದನ ಪರಿ ಹೊಸತು ; ನೆಯಿ ಹತ್ತದ ನಾಲಗೆಯಂತೆ, ಹುಡಿಹತ್ತದ ಗಾಳಿಯಂತೆ; ಕಾಡಿಗೆ ಹತ್ತದ ಆಲಿ ಯಂತೆ ಇರ್ದನಯ್ಯಾ! ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸುತ್ತ ಆಚರಿಸದಂತಿರ್ದ ನೋಡಯ್ಯಾ!'

'ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು. ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು. ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು....'

ಅಂಗದಲ್ಲಿ ಆಚಾರಕರಿಗೊಳ್ಳುವುದೇ ಗುರುಸ್ವಾಯತವಾದಂತೆ! ಆಚಾರ ದಲ್ಲಿ ಪ್ರಾಣ ಕರಿಗೊಳ್ಳುವುದೇ ಜಂಗಮಸ್ವಾಯತವಾದಂತೆ! ಪ್ರಾಣದಲ್ಲಿ ಲಿಂಗಕರಿಗೊಳ್ಳುವುದೇ ಲಿಂಗಸ್ವಾಯತವಾದಂತೆ! ಈ ತ್ರಿವಿಧವಿಲ್ಲದೆ ತ್ರಿವಿ ಧಾಂಗರಿಗೆ ತನ್ಮಯತ್ವವಿಲ್ಲ. ಅಂತೆಯೇ ತ್ರಿವಿಧ ಏಕವಿಧವಾದಲ್ಲದೆ ಸಾಮ ರಸ್ಯವಿಲ್ಲ ; ಅದ್ವಯತ್ವವಿಲ್ಲ. ಅಂಗ ಆಚಾರದಲ್ಲಿ, ಆಚಾರ ಪ್ರಾಣದಲ್ಲಿ, ಪ್ರಾಣ ಲಿಂಗದಲ್ಲಿ ಒಂದುಗೂಡಬೇಕು ; ಗುರು ಲಿಂಗದಲ್ಲಿ, ಲಿಂಗ ಜಂಗಮ ದಲ್ಲಿ ಏಕರಸವಾಗಬೇಕು.

ಆಚಾರದೊಳಗೆ ಆರುಲಿಂಗ

ಆರಂಗಗಳಲ್ಲಿ ಭಕ್ತಾಂಗನೇ ಮೊದಲಿಗನು. ಆರು ಲಿಂಗಗಳಲ್ಲಿ ಆಚಾರಲಿಂಗವೇ ಮೊದಲಿನದು. ಮಹಾಲಿಂಗವು ನಿವೃತ್ತಿಕಲೆಯ ಕಾಂಕ್ಷೆ

ಯಿಂದ ಕ್ರಿಯಾಶಕ್ತಿಯು ಕೂಡಿ ಆಚಾರಲಿಂಗವಾಗುವುದು. ಅಂಗತ್ರಿವಿಧ, ಅಂಗಷಡ್ವಿಧ, ಅಂಗನವವಿಧಗಳನ್ನು ನಿರೂಪಿಸಿದ್ದಾಗಿದೆ. ಅದರಂತೆ ಲಿಂಗ ತ್ರಿವಿಧ ಲಿಂಗನವವಿಧಗಳನ್ನು ನಿರೂಪಿಸಲಾಗಿದೆ. ಇನ್ನುಳಿದ ಲಿಂಗ ಷಡ್ವಿಧಗಳನ್ನು ಇಲ್ಲಿ ನಿರೂಪಿಸಿ ನಿರ್ವಚಿಸಬೇಕಾಗಿದೆ ; ನಿದರ್ಶಿಸಬೇಕಾಗಿದೆ.

ಅಂಗತ್ರಯ : ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ;

ಲಿಂಗತ್ರಯ : ಗುರುಲಿಂಗ, ಶಿವಲಿಂಗ, ಜಂಗಮಲಿಂಗ.

ಅಂಗಷಟ್ಕ : ಭಕ್ತನ ಭಕ್ತ, ಭಕ್ತನ ಮಹೇಶ, ಭಕ್ತನ ಪ್ರಸಾದಿ, ಭಕ್ತನ ಪ್ರಾಣಲಿಂಗಿ, ಭಕ್ತನ ಶರಣ, ಭಕ್ತನ ಐಕ್ಯ ;

ಲಿಂಗಷಟ್ಕ : ಆಚಾರದೊಳಗಿನ ಆಚಾರ, ಆಚಾರದೊಳಗಿನ ಗುರು, ಆಚಾರದೊಳಗಿನ ಶಿವ, ಆಚಾರದೊಳಗಿನ ಜಂಗಮ, ಆಚಾರದೊಳಗಿನ ಪ್ರಸಾದಲಿಂಗ. ಆಚಾರದೊಳಗಿನ ಮಹಾಲಿಂಗ.

ಈ ಲಿಂಗಷಟ್ಕವನ್ನು ಇನ್ನೊಂದು ಬಗೆಯಲ್ಲಿ ಬಲ್ಲಿದ ಚೆನ್ನಬಸವಣ್ಣ ಬಿತ್ತರಿಸಿರುವನು : ಭಕ್ತನ ಆಚಾರಲಿಂಗ, ಭಕ್ತನ ಗುರುಲಿಂಗ, ಭಕ್ತನ ಶಿವಲಿಂಗ, ಭಕ್ತನ ಜಂಗಮಲಿಂಗ, ಭಕ್ತನ ಪ್ರಸಾದಲಿಂಗ, ಭಕ್ತನ ಮಹಾಲಿಂಗ– ಎಂದು ಹೆಸರಿಸಿರುವನು. ಈ ಲಿಂಗಷಟ್ಕವನ್ನೇ ಇಲ್ಲಿ ಬಗೆಗೆ ಹೊಳೆದಂತೆ ಹೇಳಲಾಗುತ್ತದೆ.

ಭಕ್ತನ ಮುಖ್ಯಲಿಂಗ ಆಚಾರಲಿಂಗ. ಭಕ್ತ ಆಚಾರ ಲಿಂಗೋಪಾಸಕ, ಆಚಾರಲಿಂಗಾನುಸಕ್ತ ; ಆಚಾರಲಿಂಗಯುಕ್ತ. 'ಆಚಾರವೇ ಭಕ್ತಂಗೆ ಅಲಂಕಾರವು. ಆಚಾರವೇ ಭಕ್ತಂಗೆ ಸರ್ವಪೂಜ್ಯವು. ಇಂತೀ ಆಚಾರವುಳ್ಳವನೇ ಭಕ್ತನು. ಆಚಾರವುಳ್ಳವನೇ ಯುಕ್ತನು. ಆಚಾರವುಳ್ಳವನೇ ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.'

'ಆಚಾರವಿಲ್ಲದವರಿಗೆ ಜ್ಞಾನವಿಲ್ಲ. ಜ್ಞಾನವಿಲ್ಲದವರಿಗೆ ಭಾವಶುದ್ಧವಿಲ್ಲ. ಭಾವಶುದ್ಧವಿಲ್ಲದವರಿಗೆ ಧ್ಯಾನವಿಲ್ಲ. ಧ್ಯಾನವಿಲ್ಲದವರಿಗೆ ಪ್ರಸಾದವಿಲ್ಲ. ಪ್ರಸಾದವಿಲ್ಲದವರಿಗೆ ಮುಕ್ತಿಯಿಲ್ಲ. ಇದು ಕಾರಣ ಆಚಾರ ಜ್ಞಾನಭಾವವುಳ್ಳವರಿಗೆ ಪ್ರಸಾದವುಂಟು. ಪ್ರಸಾದವುಳ್ಳವರಿಗೆ ಮುಕ್ತಿಯುಂಟು ; ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.'

ಇದರಿಂದಾಗಿ ಭಕ್ತನಿಗೆ ಆಚಾರವೇ ಅಮರಸಂಜೀವಿನಿ. ಆಚಾರವೇ ಲಿಂಗಚೈತನ್ಯ. ಆಚಾರವೇ ಸರ್ವಮಂಗಳಪ್ರದ ಸುಯ್ದಾನ.

ಲಿಂಗತ್ರಯವು ಭಕ್ತನ ಮಲತ್ರಯ ಗುಣತ್ರಯ ತನುತ್ರಯ ಕರ್ಮತ್ರಯಗಳನ್ನು ಕಳೆದರೆ, ಲಿಂಗಷಟ್ಕವು ಷಡೂರ್ಮಿ, ಷಡ್ಭಾವವಿಕಾರ, ಷಡ್ವರ್ಗಗಳನ್ನು ಕಳೆಯುತ್ತದೆ.

ಲಿಂಗಷಟ್ಕವು ಬಾಹ್ಯ ಅಂತರವೆಂದು ಅಥವಾ ಸ್ಥೂಲ ಸೂಕ್ಷ್ಮವೆಂದು ಎರಡು ಬಗೆ. ಜ್ಞಾನೇಂದ್ರಿಯಗಳಲ್ಲಿರುವ ಲಿಂಗಷಟ್ಕವು ಬಾಹ್ಯ ಅಥವಾ ಸ್ಥೂಲ. ಆಧಾರಾದಿ ಆರುಚಕ್ರಗಳಲ್ಲಿರುವ ಲಿಂಗಷಟ್ಕವು ಅಂತರ ಅಥವಾ ಸೂಕ್ಷ್ಮ.

೧. ಆಚಾರದೊಳಗಿನ ಆಚಾರಲಿಂಗ

ಭಕ್ತನ ಆಚಾರಲಿಂಗ ಘ್ರಾಣಾಂಗದಲ್ಲಿರುತ್ತದೆ. ಆ ಆಚಾರದೊಳಗಿನ ಆಚಾರಲಿಂಗ ಆಧಾರದಲ್ಲಿರುತ್ತದೆ. ಘ್ರಾಣಾಂಗದಲ್ಲಿರುವುದು ಬಾಹ್ಯ ಅಥವಾ ಸ್ಥೂಲ. ಅದೇ ಆಧಾರಾಂಗದಲ್ಲಿರುವುದು ಅಂತರ ಅಥವಾ ಸೂಕ್ಷ್ಮ.

ಆಚಾರಲಿಂಗವು ಸುಗಂಧ ಪ್ರಸಾದವನ್ನು ಸೃಷ್ಟಿಸುತ್ತದೆ. ಆಚಾರಲಿಂಗವು ಸೃಷ್ಟಿಸಿದ ಸುಗಂಧಪ್ರಸಾದವನ್ನು ಆಧಾರದೊಳಗಿರುವ ಆಚಾರದೊಳಗಿನ ಆಚಾರಲಿಂಗವು ಸ್ವೀಕರಿಸಿ ಸ್ಥಿತಿಗೊಳಿಸುತ್ತದೆ.

ಘ್ರಾಣಗತ ಆಚಾರಲಿಂಗವು ಬಾಹ್ಯಭೂತವಾದ ಪೃಥ್ವಿಜನ್ಯಗಂಧ ಪದಾರ್ಥತ್ವವನ್ನು ಪರಿಹರಿಸಿದರೆ ಆಧಾರಗತ ಆಚಾರಲಿಂಗದೊಳಗಿನ ಆಚಾರಲಿಂಗವು ಭಕ್ತಾಂಗಗತ ಸುಗಂಧಪ್ರಸಾದದ ಪೂರ್ವಾಶ್ರಯವನ್ನು ಅಂದರೆ ಅಂಗಭಾವವನ್ನು ಪರಿಹರಿಸುತ್ತದೆ. ಆಚಾರಲಿಂಗವು ಪದಾರ್ಥವಾಸನೆಯನ್ನು ಶುದ್ಧಮಾಡುತ್ತದೆ. ಆಚಾರದೊಳಗಿನ ಲಿಂಗವು ಪ್ರಕೃತಿ ವಾಸನೆಯನ್ನು ಶುದ್ಧಮಾಡುತ್ತದೆ. ಇದು ಬಹಿರಂಗವನ್ನು ಅದು ಅಂತರಂಗವನ್ನು ಶೋಧಿಸುತ್ತವೆ; ಅಂದರೆ ಘ್ರಾಣಾಧಾರಗಳನ್ನು ಪರಿಶೋಧಿಸುತ್ತದೆ.

ಆಚಾರಲಿಂಗ ಸುಗಂಧಪ್ರಸಾದದ ಸೃಷ್ಟಿಗೆ ಕರ್ತ. ಆಚಾರಲಿಂಗದೊಳಗಿನ ಆಚಾರಲಿಂಗ ಸುಗಂಧಪ್ರಸಾದದ ಸ್ಥಿತಿಗೆಕರ್ತೃ.

ಭಕ್ತನು ಆಚಾರಲಿಂಗವನ್ನು ಭಕ್ತನ ಭಕ್ತನು ಆಚಾರಲಿಂಗದೊಳಗಿನ ಆಚಾರಲಿಂಗವನ್ನು ಆರಾಧಿಸುತ್ತಾರೆ. ಭಕ್ತ ಘ್ರಾಣವಾದರೆ ಭಕ್ತನ ಭಕ್ತ ಆಧಾರವಾಗಿರುತ್ತದೆ.

ಕ್ರಿಯಾಲಿಂಗವೇ ಆಚಾರಲಿಂಗವಾಗುತ್ತದೆ. ಕ್ರಿಯಾಲಿಂಗಕ್ಕೆ ಕಾರಣವಾದ ಗುರುಲಿಂಗವೇ ಆಚಾರದೊಳಗಿನ ಆಚಾರಲಿಂಗವಾಗಿರುತ್ತದೆ. ಒಂದು ಬಾಹ್ಯಸ್ಥೂಲಕ್ರಿಯೆ. ಇನ್ನೊಂದು ಆಂತರಿಕ ಸೂಕ್ಷ್ಮಕ್ರಿಯೆ. ಉಭಯ ಕ್ರಿಯಾಶಕ್ತಿಯೇ ಈ ಲಿಂಗದ ಕಳೆ.

'ಖಂಡಿತವಿಲ್ಲವಾಗಿ ಸರ್ವಾಂಗವೆಲ್ಲವೂ ನಾಸಿಕವಾಯಿತ್ತು. ತಾನಲ್ಲದನ್ಯವಾಸನೆಯಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಪೃಥ್ವಿಯಡಗಿತ್ತು.' ಎಂದು ಪ್ರಭುದೇವರು ಆಚಾರಲಿಂಗದ ವ್ಯಾಪ್ತಿಯನ್ನು ನಾಸಿಕಾಂಗದ ವ್ಯಾಪ್ತಿಯನ್ನು ಆ ಆತ್ಮವಾಸನೆಯಲ್ಲಿ ಉಪಾಂಗ ಪೃಥ್ವಿಯ ಸಾಮರಸ್ಯವನ್ನು ಬಿತ್ತರಿಸಿದಾನೆ.

೨. ಆಚಾರಲಿಂಗದೊಳಗಿನ ಗುರುಲಿಂಗ

ಆಚಾರಲಿಂಗವು ಸೃಷ್ಟಿಸಿದ ಸುಗಂಧಪ್ರಸಾದದೊಳಗಿನ ಸೂಕ್ಷ್ಮ ಸುರಸಪ್ರಸಾದವನ್ನು ಸ್ವೀಕರಿಸುವುದೇ ಆಚಾರಲಿಂಗದೊಳಗಿನ ಗುರುಲಿಂಗ. ಇಲ್ಲಿ ಜ್ಞಾನಶಕ್ತಿಯ ಹೊಳಪಿರುತ್ತದೆ. ಭಕ್ತನ ಮಹೇಶನು ತನ್ನ ನಿಷ್ಠಾ ಭಕ್ತಿಯಿಂದ ಆರಾಧಿಸುತ್ತಾನೆ.

ಜಲತತ್ತ್ವದ ಒಂದಂಶವು ಪೃಥ್ವಿತತ್ತ್ವದಲ್ಲಿ ಸೇರಿರುವುದರಿಂದ ಗಂಧದಲ್ಲಿರಸಾಂಶ ಪದಾರ್ಥವಿರುತ್ತದೆ. ಗಂಧಗತ ರಸಪದಾರ್ಥಾಂಶವು ಪ್ರಸಾದವಾಗಬೇಕಾದರೆ ಆಚಾರಲಿಂಗದೊಳಗಿನ ಗುರುಲಿಂಗಾರ್ಚನ ಅರ್ಪಣಗಳು ಜರಗಬೇಕು. ಇದಕ್ಕಾಗಿ ಮೂಲಗುರುಲಿಂಗದ ಅರ್ಥದೊಳಗಿನ ಒಂದಂಶವು ಆಚಾರಲಿಂಗದೊಳಗೆ ಸೇರುತ್ತದೆ. ಅದುವೇ ಆಚಾರಲಿಂಗದೊಳಗಿನ ಗುರುಲಿಂಗ.

ಪಂಚೀಕೃತ ಪ್ರತ್ಯಂಗದ ಪಡಿಪದಾರ್ಥದ ಪಾವನತೆಗಾಗಿ ಪರಿಪೂರ್ಣತೆಗಾಗಿ ಪರಿಣಾಮಕ್ಕಾಗಿ ಲಿಂಗಪಂಚೀಕರಣವೂ ಅನಿವಾರ್ಯವಾಯಿತು.

೩. ಆಚಾರಲಿಂಗದೊಳಗಿನ ಶಿವಲಿಂಗ

ಆಚಾರಲಿಂಗದಿಂದ ಉತ್ಪನ್ನವಾದ ಸುಗಂಧಪ್ರಸಾದದೊಳಗಿನ ಸೂಕ್ಷ್ಮವೂ ಗೌಣವೂ ಆದ ಸುರೂಪ ಪ್ರಸಾದವನ್ನು ನಿರೀಕ್ಷಿಸುವುದೇ ಆಚಾರ ಲಿಂಗದೊಳಗಿನ ಶಿವಲಿಂಗ. ಈ ಲಿಂಗದಲ್ಲಿ ಇಚ್ಛಾಶಕ್ತ್ಯಂಶದ ಕಳೆಯಿರುತ್ತದೆ. ಈ ಲಿಂಗವನ್ನು ಭಕ್ತನ ಪ್ರಸಾದಿಯು ತನ್ನ ಅವಧಾನ ಭಕ್ತಿಯಿಂದ ಆರಾಧಿಸುತ್ತಾನೆ.

ಅಗ್ನಿತತ್ತ್ವದ ಒಂದಂಶವು ಪೃಥ್ವಿತತ್ತ್ವದಲ್ಲಿ ಸೇರಿರುವುದರಿಂದ ಗಂಧ ದಲ್ಲಿ ರೂಪಾಂಶ ಪದಾರ್ಥವು ಸೂಕ್ಷ್ಮವಾಗಿ ಇರುತ್ತದೆ. ಈ ಗಂಧದೊಳಗಿನ ರೂಪಪದಾರ್ಥವು ಪ್ರಸಾದವಾಗಬೇಕಾದರೆ ಆಚಾರಲಿಂಗದೊಳಗಿನ ಶಿವಲಿಂಗ ಬೇಕು. ಆ ಶಿವಲಿಂಗದ ಶಿವಾರ್ಚನೆ ಸಮರ್ಪಣೆಗಳು ಸಾಗಬೇಕು. ಈ ಕ್ರಿಯಾನಿರ್ವಹಣೆಗಾಗಿ ಮೂಲ ಶಿವಲಿಂಗದೊಳಗಿನ ಒಂದಂಶವು ಆಚಾರ ಲಿಂಗದೊಳಗೆ ಅಡಕವಾಗಿರುತ್ತದೆ. ಅದೇ ಆಚಾರಲಿಂಗದೊಳಗಿನ ಶಿವಲಿಂಗ.

೪. ಆಚಾರಲಿಂಗದೊಳಗಿನ ಜಂಗಮಲಿಂಗ

ಅದೇ ಆಚಾರಲಿಂಗದಿಂದುಂಟಾಗುವ ಸುಗಂಧರೂಪ ಪ್ರಸಾದದೊಳಗಿನ ಸೂಕ್ಷ್ಮವೂ ಅಮುಖ್ಯವೂ ಆದ ಸುಸ್ಪರ್ಶಪ್ರಸಾದವನ್ನು ಸೋಂಕುವುದೇ ಆಚಾರಲಿಂಗದೊಳಗಿನ ಜಂಗಮಲಿಂಗ. ಈ ಲಿಂಗದೊಳಗೆ ಆದಿಶಕ್ತ್ಯಂಶದ ಪ್ರಕಾಶವಿದೆ. ಈ ಲಿಂಗವನ್ನು ಭಕ್ತನ ಪ್ರಾಣಲಿಂಗಿಯು ತನ್ನ ಅನುಭವ ಭಕ್ತಿಯಿಂದ ಆರಾಧಿಸುತ್ತಾನೆ.

ವಾಯುತತ್ತ್ವದ ಒಂದಂಶವು ಪೃಥ್ವಿತತ್ತ್ವದಲ್ಲಿ ಕೂಡಿರುವುದರಿಂದ ಗಂಧದಲ್ಲಿ ಸ್ಪರ್ಶಾಂಶಪದಾರ್ಥವು ಸೂಕ್ಷ್ಮವಾಗಿ ಇರುತ್ತದೆ. ಈ ಗಂಧಗತ ಸ್ಪರ್ಶಪದಾರ್ಥಾಂಶವು ಪ್ರಸಾದವಾಗಬೇಕಾದರೆ ಆಚಾರಲಿಂಗದೊಳಗಿನ ಜಂಗಮಲಿಂಗವೇ ಬೇಕು. ಅದಕ್ಕೆ ಅದೇ ಕರ್ತೃ. ಅದರಿಂದ ಅದಕ್ಕೆ ಅರ್ಚನೆ ಅರ್ಪಣೆಗಳು ನಡೆಯುತ್ತವೆ. ಇದಕ್ಕಾಗಿ ಮೂಲಜಂಗಮಲಿಂಗ ದೊಳಗಿನ ಒಂದಂಶವು ಆಚಾರಲಿಂಗದೊಳಗೆ ಸಮಾವೇಶವಾಗುತ್ತದೆ. ಅದುವೇ ಆಚಾರಲಿಂಗದೊಳಗಿನ ಜಂಗಮಲಿಂಗ.

೫. ಆಚಾರಲಿಂಗದೊಳಗಿನ ಪ್ರಸಾದಲಿಂಗ

ಆ ಆಚಾರಲಿಂಗದಿಂದೊಗಿದ ಸುಗಂಧಪ್ರಸಾದದೊಳಗಿನ ಸೂಕ್ಷ್ಮ ಗೌಣ ಸುಶಬ್ದ ಪ್ರಸಾದವನ್ನು ಸಮರ್ಪಿಸಿಕೊಳ್ಳುವುದೇ ಆಚಾರಲಿಂಗ ದೊಳಗಿನ ಪ್ರಸಾದಲಿಂಗ. ಈ ಲಿಂಗದಲ್ಲಿ ಪರಾಶಕ್ತಿಯ ಪ್ರಭಾಂಶವಿರುತ್ತದೆ. ಈ ಲಿಂಗವನ್ನು ಭಕ್ತನ ಶರಣನು ತನ್ನ ಆನಂದಭಕ್ತಿಯಿಂದ ಆರಾಧಿಸುತ್ತಾನೆ.

ಆಕಾಶತತ್ತ್ವದ ಒಂದಂಶವು ಪೃಥ್ವಿತತ್ತ್ವದಲ್ಲಿ ಒಂದುಗೂಡಿರುವುದ ರಿಂದ ಗಂಧದಲ್ಲಿ ಶಬ್ದಾಂಶ ಪದಾರ್ಥವು ಸೂಕ್ಷ್ಮವಾಗಿರುತ್ತದೆ. ಈ ಗಂಧ ದೊಳಗಿನ ಶಬ್ದ ಪದಾರ್ಥವು ಪ್ರಸಾದವಾಗಬೇಕಾದರೆ ಆಚಾರಲಿಂಗದೊಳಗಿನ ಪ್ರಸಾದಲಿಂಗವಾಗಬೇಕು. ಅದಕ್ಕೆ ಅದೇ ಕರ್ತೃವಾಗಿದೆ. ಅದರಿಂದ ಅದಕ್ಕೆ ಅರ್ಚನೆ–ಅರ್ಪಣೆಗಳು ನಡೆಯಬೇಕು. ಈ ಕ್ರಿಯೆಯ ನಿರ್ವಹಣೆ ಗಾಗಿ ಮೂಲ ಪ್ರಸಾದಲಿಂಗದೊಳಗಿನ ಒಂದಂಶವು ಆಚಾರಲಿಂಗದೊಳಗೆ ಒಡಗೂಡಿರುತ್ತದೆ. ಅದುವೇ ಆಚಾರಲಿಂಗದೊಳಗಿನ ಪ್ರಸಾದಲಿಂಗ.

೬. ಆಚಾರಲಿಂಗದೊಳಗಿನ ಮಹಾಲಿಂಗ

ಅದೇ ಆ ಆಚಾರಲಿಂಗದಿಂದುದಿಸಿದ ಸುಗಂಧ ಪ್ರಸಾದದೊಳಗಿನ ಸೂಕ್ಷ್ಮವೂ ಗೌಣವೂ ಆದ ಸುತೃಪ್ತಿ ಪ್ರಸಾದವನ್ನು ಸಮರಸಗೊಳಿಸಿ ಕೊಳ್ಳುವುದೇ ಆಚಾರಲಿಂಗದೊಳಗಿನ ಮಹಾಲಿಂಗ. ಈ ಮಹಾಲಿಂಗದಲ್ಲಿ ಚಿಚ್ಛಕ್ತಿಯ ಕಳಾಂಶವಿರುತ್ತದೆ. ಈ ಲಿಂಗವನ್ನು ಭಕ್ತನ ಐಕ್ಯನು ತನ ಸಮರಸ ಭಕ್ತಿಯಿಂದ ಸಮರ್ಚಿಸುತ್ತಾನೆ.

ಆತ್ಮ ತತ್ತ್ವದ ಒಂದಂಶವು ಪೃಥ್ವಿತತ್ತ್ವದಲ್ಲಿ ಒಂದು ಗೂಡಿರು ವುದರಿಂದ ಗಂಧದಲ್ಲಿ ತೃಪ್ತ್ಯಂಶ ಪದಾರ್ಥವು ಸೂಕ್ಷ್ಮವಾಗಿರುತ್ತದೆ. ಇದ ರೊಳಗಿನ ಈ ಸೂಕ್ಷ್ಮವಾದ ತೃಪ್ತಿ ಪದಾರ್ಥವು ಪ್ರಸಾದವಾಗಬೇಕಾದರೆ ಆಚಾರಲಿಂಗದೊಳಗಿನ ಮಹಾಲಿಂಗ ಬೇಕು. ಅದಕ್ಕೆ ಅದೇ ಕರ್ತೃ ವಾಗಿದೆ. ಅದರಿಂದಾಗಿ ಆ ಮಹಾಲಿಂಗಕ್ಕೆ ಅರ್ಚನೆ ಅರ್ಪಣೆಗಳು ಜರಗ ಬೇಕು. ಇದಕ್ಕಾಗಿ ಮೂಲ ಮಹಾಲಿಂಗದೊಳಗಿನ ಒಂದಂಶವು ಆಚಾರ ಲಿಂಗದೊಳಗೆ ಒಡಗೂಡಿರುತ್ತದೆ. ಅದುವೇ ಆಚಾರಲಿಂಗದೊಳಗಿನ ಮಹಾಲಿಂಗ.

ಆಚಾರಲಿಂಗದೊಳಗೆ ಆರು ಲಿಂಗಗಳು ಬೇರಿಲ್ಲದೆ ಬೆರಸಿರುವುದನ್ನು ನಿಜಾನುಭವದಿಂದ ನಿರೂಪಿಸಲಾಗಿದೆ. ಈ ನಿರೂಪಣೆ ಪರಿಪೂರ್ಣವೆಂದು ಹೇಳಲಾರೆವು. ಸ್ವಾನುಭಾವಿಗಳು ಸರ್ವಾನುಭಾವಿಗಳು ಹೆಜ್ಜೆಹಾಕಿ ಹೆದ್ದಾರಿಯನ್ನಾಗಿಸಲು ಇದೊಂದು ಕಿರಿದಾರಿ.

ಸಮ್ಯಜ್ಞಾನಿ ಚೆನ್ನಬಸವಣ್ಣನವರು ನಿರ್ವಚಿಸಿದ ಇನ್ನೊಂದು ಬಗೆಯ ಭಕ್ತನ ಷಡ್ಲಿಂಗಗಳ ನಾಮ ನಿರ್ದೇಶನವನ್ನು ಈ ಮೊದಲೇ ನಿದರ್ಶಿಸಲಾಗಿದೆ. ಆ ಆ ಲಿಂಗಸ್ಥಲಗಳಲ್ಲಿ ಭಕ್ತನು ಆಚರಿಸುವ ಆಚಾರಗಳನ್ನು ಅವರೇ ತಮ್ಮ ವಚನದಲ್ಲಿ ನಿರ್ವಚಿಸಿದ್ದಾರೆ. ಆ ವಚನಗಳ ಆಧಾರದ ಮೇಲೆ ಅಳವಿಗೆ ಅಳವಟ್ಟಷ್ಟನ್ನು ಅರುಹಲಾಗುತ್ತವೆ.

ಸ್ಥಳಕುಳಗಳ ಸೂಕ್ಷ್ಮಗಳನ್ನು ಹೇಳುವಲ್ಲಿ ಆತನದು ಎತ್ತಿದ ಕೈ. ಅಂತೆಯೇ ಆತನು 'ಷಟ್‌ಸ್ಥಳ ಚಕ್ರವರ್ತಿ' ಎಂದು ಎಣ್ಣಿಸೆಗೆ ಹೆಸರಾಗಿದ್ದಾನೆ. ಪ್ರತಿಯೊಂದು ಸ್ಥಲದಲ್ಲಿ ಆರು ಸ್ಥಲಗಳನ್ನು ಪ್ರತಿಯೊಂದು ಲಿಂಗದಲ್ಲಿ ಆರು ಲಿಂಗಗಳನ್ನು ಬೇರ್ಪಡಿಸಿ ತೋರಿಸಿ ಬಳಿಕ ಬೆರಸಿ ಬೇರಿಲ್ಲದಂತಾಗುವ ಸ್ವಾನುಭವ ಸಿದ್ಧಾಂತವನ್ನು ಪ್ರತಿಪಾದಿಸಿದ ಪ್ರಸ್ಥಾಪಿಸಿದ ಪ್ರತಿಭಾಶಾಲಿ ಚೆನ್ನಬಸವಣ್ಣ.

೧. ಭಕ್ತನ ಆಚಾರಲಿಂಗಸ್ಥಳ :

ಭಕ್ತನಿಗೆ ಆಚಾರವೇ ಜೀವ; ಆಚಾರವೇ ಲಿಂಗದೇವ. ಭಕ್ತ ಸದಾ ಶಿವಾಚಾರ ನಿರತನಾಗಿರಬೇಕು :

'ಮಂಡಲ ಸುತ್ತಿದ ಹಾವಿನಂತೆ, ಮಡಲಲ್ಲಿ ಕಟ್ಟಿದ್ದರೇನು? ಕೊರಳ ಸುತ್ತಿದ ಹಾವಿನಂತೆ, ಕೊರಳಲ್ಲಿ ಸುತ್ತಿದ್ದರೇನು? ಹುಸಿ, ಕಳವು, ಪರದಾರ ಅನ್ಯದೈವಭಜನೆ, ಭವಿ ಬಳಕೆ ಬಿಡದನ್ನಕ್ಕರ? ಲಿಂಗಭಕ್ತನೆನಿಸಬಾರದು. ಭಕ್ತಲಿಂಗವೆನಲಿಲ್ಲ. **ಆಚಾರಸಹಿತ ಭಕ್ತ, ಅನಾಚಾರಸಹಿತ ನರ**-ಇಂತೆನಲಾಗಿ ಆಚಾರಭ್ರಷ್ಟರಾದ ಅನಾಮಿಕರ ನಮ್ಮ ಕೂಡಲಚೆನ್ನಸಂಗಯ್ಯ ಬಲ್ಲನಾಗಿ ಒಲ್ಲನು.'

ಆಚಾರವಿಲ್ಲದೆ ಲಿಂಗವಳವಡದು. ಆಚಾರವಿಲ್ಲದೆ ಲಿಂಗ ಅಂಗದ ಮೇಲಿದ್ದರೂ ಪ್ರಯೋಜನವಿಲ್ಲ. ಯಾವ ಸತ್ಪರಿಣಾಮವಿಲ್ಲ. ಆಚಾರ ಎರಡು ಬಗೆಯುಂಟು. ಒಂದು ಜಲಶೌಚ, ಇನ್ನೊಂದು ಗುಣಶೌಚ. ಜಡಶೌಚ ಹೊರಗಿನದು; ಇದರಿಂದ ತನು ಶುದ್ಧಿ. ಗುಣಶೌಚ ತನ್ನೊಳಗಿನದು; ಇದರಿಂದ ಮನ ಶುದ್ಧಿ. ಭಕ್ತನಿಗೆ ಇವೆರಡೂ ಬೇಕು.

ಭಕ್ತನ ಕೊರಳಿಗೆ ಸತ್ಯವೇ ಶಿವದಾರ. ಕಳವಿಲ್ಲದಿರುವುದೇ ಕರದಿಷ್ಟ ಪೂಜೆ. ಪರದಾರ ದೂರನಾಗಿರುವುದೆ ಪರಿಣತೆ. ಅನ್ಯದೈವ ಭಜಿಸದಿರುವುದೇ ಮಂತ್ರಜಪ. ಭವಿ ಬಳಕೆಯನ್ನು ಬಿಡುವುದೇ ಶಿವಾಚಾರ. ಇಷ್ಟಿದ್ದರೆ ಲಿಂಗಭಕ್ತ. ಅಷ್ಟೇ ಅಲ್ಲ ಆ ಭಕ್ತನೇ ಲಿಂಗ. ಒಳಿತು ನಡೆ ನುಡಿಗಳಲ್ಲಿದೆ ಆಚಾರ; ಆಚಾರದಲ್ಲಿದೆ ಭಕ್ತತನ. ಆಚಾರವಿಲ್ಲದಾತನೇ ನರ, ಭವಿ; ಭಕ್ತನಾಮಕ್ಕೆ ಸಲ್ಲ. ಆತ ಭಗವಂತನಿಗೆ ಹೊಲ್ಲ.

'ಅಂಗಾಶ್ರಮವಳಿದು ಲಿಂಗಾಶ್ರಮವಾದ ಬಳಿಕ ಆರಂಗಕ್ಕೆ ಲಿಂಗಾಚಾರವಲ್ಲದೆ, ಅಂಗಕ್ರಿಯೆಯೆಂಬುದನಂಗೈಸರು ನೋಡಾ! ಲಿಂಗದಲ್ಲಿ ನೈಷ್ಠಿಕವಂತನಾದ ಬಳಿಕ ಅನ್ಯ ನಾಮವಿಡಿದು ಬಳಲುವ ಬಳಲಿಕೆ ಎಲ್ಲಿಯದೋ? ಅನಾಚಾರವ ಜರಿದು ಆಚಾರವನರಿದ ಬಳಿಕ ನಮ್ಮ ಕೂಡಲ ಚೆನ್ನಸಂಗನ ಶರಣರು ಅನ್ಯವನಾಚರಿಸುವರಲ್ಲ.'

ಆಚಾರ ಲಿಂಗೋಪಾಸಕನಿಗೆ ಆಶ್ರಮ ನಾಲ್ಕಿಲ್ಲ ಮೂರಿಲ್ಲ ಎರಡಿಲ್ಲ, ಒಂದೇ ಒಂದು. ಅದು ಲಿಂಗಾಶ್ರಮ. ಸಾಮಾನ್ಯಲಿಂಗವಂತನಿಗಿರುವ ಅಂಗಾಶ್ರಮವನ್ನೂ ಆಶ್ರಯಿಸಬಾರದು. ಅಂಗಕ್ರಿಯೆಗಳನ್ನು ಆಚರಿಸಬಾರದು. ಲಿಂಗನಡೆ, ಲಿಂಗನುಡಿಗಳಲ್ಲಿ ನಿರತನಾಗಿರಬೇಕು. ಲಿಂಗದ ಆಚಾರವರಿದು ಅನಾಚಾರ ಜರಿದು ಅನ್ಯವನ್ನು ಅದೆಂದಿಗೂ ಆಚರಿಸಬಾರದು. ಅನ್ಯವನಾಚರಿಸಿದರೆ ತನ್ನ ತನಕ್ಕೆ ಭಂಗ; ಚೆನ್ನ ತನಕ್ಕೆ ಭಂಗ.

'ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ, ಆ ಭವಿಸಂಗ ಭಂಗವೆಂದರಿವುದು ನೋಡಾ! ಭವಿಮಿಶ್ರದ ಭಂಗಗಾರರು ನಮ್ಮ ಕೂಡಲ ಚೆನ್ನಸಂಗಮದೇವನಲ್ಲಿ ಅವರು ಅತ್ತಲು ಅಲ್ಲ, ಇತ್ತಲು ಅಲ್ಲ.'

ಭವವುಳ್ಳವನ ಸಂಗ ಭಕ್ತನಿಗೆ ಸಲ್ಲದು. ತನ್ನ ಶಿವ ಸ್ವಾತಂತ್ರ್ಯ ಅದರಿಂದ ನಿಲ್ಲದು. ತಾನು ಅತ್ತ ಭವಿಯಾಗದೆ ಇತ್ತ ಭಕ್ತನೆನಿಸದೆ ತ್ರಿಶಂಕು ಸ್ವರ್ಗದಲ್ಲಿರಬೇಕಾಗುತ್ತದೆ.

ಭವಿಯಾಗಿದ್ದರೂ ಭವವಾದಿಯಾಗಿರಬಾರದು. ಭವಿಯಾಗಿದ್ದು ಭವ ತ್ಯಾಗಕ್ಕೆ ಹಂಬಲಿಸುತ್ತಿದ್ದರೆ ಅಂಥವರ ಸಂಗ ತ್ಯಾಜ್ಯವಲ್ಲ. ಭವಜೀವನವೇ ಜೀವನವೆಂದಿರುವ ಧೃವಭವಿಯ ಸಂಗ ಸದ್ಭಕ್ತನಿಗೆ ಸಲ್ಲದು. ಬಿಳಿಯ ಬಟ್ಟೆಗೆ ಕರಿಯಸಂಗ ಹೇಗೆ ಸಲ್ಲದೋ ಹಾಗೆ ಭಕ್ತನಿಗೆ ಭವಿಸಂಗ ಸಲ್ಲದು. ಸಂಗದೋಷ ದುರ್ನಿವಾರ್ಯ. ಅದರಿಂದ ತನ್ನ ಹಿಡುವಳಿಯೇ ತನಗೆ ತಪ್ಪುತ್ತದೆ. ತನ್ನ ಸಂಯಮಕ್ಕೆ ತಿಲಾಂಜಲಿ ಬಿಟ್ಟಂತಾಗುತ್ತದೆ. ತಾನೂ ಬಾಳುವುದಿಲ್ಲ; ತನ್ನವರೂ ಬಾಳುವುದಿಲ್ಲ. ತಾನು ದುರಾಚಾರಿಗಳ ಪರ ತಂತ್ರನಾಗುವುದಕ್ಕಿಂತ ಬೇರಿಲ್ಲ ಹೊಲಬುಗೇಡಿತನ. ತನ್ನ ಸರ್ವಸ್ವವೂ ಪರರಪಾಲಾಗುತ್ತದೆ.

'ಹೆಂಡಿರು ಮಕ್ಕಳಿಗೆ ಕುಲದೈವ ಮನೆದೈವವಲ್ಲದೆ ಎನಗೆ ಕುಲದೈವ ಮನೆದೈವವಿಲ್ಲವೆಂಬ ಭಂಡರ ಭಕ್ತಿಯ ಪರಿಯ ನೋಡಾ! ಆ ಯುಕ್ತಿ ಶೂನ್ಯರಿಗೆ ಮುಂದೆ ದೃಷ್ಟವ ಹೇಳಿಹೆ ಕೇಳಿರೇ! ತನ್ನ ಹೆಂಡತಿ ಮತ್ತೊಬ್ಬನ ಮೆಚ್ಚಿಕೊಂಡು ಹೋಗುತ್ತಿರೆ, ಅಲ್ಲ ಅವನೇ ಒಯ್ಯುತ್ತಿರೆ, ಹೋದಡೂ ಹೋಗಲಿ, ಒಯ್ದಡೂ ಒಯ್ಯಲೆಂದು ತಾ ಸೈರಿಸಬಲ್ಲಡೆ, ತಾನವರೊಳಗಿಲ್ಲದವನು. ಅಕಟಕಟಾ, ಲಾಕೀಕಕ್ಕೆ ಆಜ್ಞೆಯುಂಟು, ಪಾರಮಾರ್ಥಕ್ಕೆ ಆಜ್ಞೆ ಇಲ್ಲವೆ? ಇದು ಕಾರಣವಾಗಿ ಕೂಡಲ ಚೆನ್ನ ಸಂಗಯ್ಯ ಭಕ್ತನಾಗಿ ಭವಿಯ ಬೆರಸುವ ಅನಾಚಾರಿ ಹೊಲೆಯರ ಮುಖವ ನೆನಗೆ ತೋರದಿರಯ್ಯ.'

ತನ್ನ ತನವೇ ತನಗೆ ಜೀವಾಳ. ಅದು ಉಳಿಯಬೇಕಾದರೆ ಬೆಳೆಯಬೇಕಾದರೆ ಸಜ್ಜನ ಶ್ರೀಗುರು ಸಹವಾಸದಲ್ಲಿ. ಭವಜೀವಿಗಳ ಸಂಗದಿಂದ ತನ್ನ ತನ ಉಳಿಯದು. ತನ್ನ ಮನೆ, ತನ್ನ ಹೊಲ, ತನ್ನ ಹಣ, ತನ್ನ ಹೆಂಡತಿ ಮುಂತಾದವನ್ನು ಪರರಪಾಲು ಮಾಡಲು ಹೇಗೆ ಒಪ್ಪುವದಿಲ್ಲವೋ ಹಾಗೆ ಇವಕ್ಕಿಂತ ಇಮ್ಮಿಗಿಲಾದ ತನ್ನ ಆಚಾರವನ್ನು ತನ್ನ ತನವನ್ನು

ಭವಿಗೊಪ್ಪಿಸಲು ಎಂದಿಗೂ ಒಪ್ಪಬಾರದು. ತನಗೆ ದಿಟವಾದ ಬಂಡವಾಳ ತಾನು. ತನ್ನ ನಡೆನುಡಿ. ಇವು ತನ್ನವಾಗಿರಬೇಕಾದರೆ ತನಗಾಗಿರಬೇಕಾದರೆ ಆಚಾರಶೀಲನಾಗಬೇಕು; ಆಚಾರವೇ ತನಗೆ ಉಸಿರಾಗಬೇಕು. ಆಚಾರವೆಂಬ ಪರಿಮಳವನ್ನೇ ಆಘ್ರಾಣಿಸಬೇಕು. ಅಂತಾದರೆ ಅದು ಆಚಾರಲಿಂಗೋಪಾಸನೆ.

೨. ಭಕ್ತನ ಗುರುಲಿಂಗಸ್ಥಲ

ಆಚಾರವಿಲ್ಲದೆ ವಿಚಾರಕ್ಕೆ ಮುಖವಾಗದು. ವಿಚಾರಕ್ಕೆ ಮುಖವಾದರೆ ಗುರುವಿನ ಅಗತ್ಯ, ಗುರೂಪಾಸನೆಯ ಅಗತ್ಯ ಆದೆಷ್ಟಾದರೂ ಇರುತ್ತದೆ. 'ತದ್ವಿಜ್ಞಾನಾರ್ಥಂಸ ಗುರುಮೇವಾಭಿಗಚ್ಛೇತ್' ಎಂಬ ಶ್ರುತಿಯನ್ನು ಸ್ಮೃತಿಗೆ ತಂದು ತಿಳಿಯಬೇಕು.

'ಗುರಲಿಂಗದಲ್ಲಿ ಇಲ್ಲದ ಒಲವು ಪರದೈವದಲಾದೀತೆಂಬರು. ಶರಣು ಶರಣೆನಲರಿಯದೆ ಬರುದೊರೆಯಾದರಲ್ಲ! ಜನನ ಮರಣ ರಹಿತ ನಮ್ಮ ಕೂಡಲ ಚೆನ್ನಸಂಗಯ್ಯನೆಂಬ ಶ್ರೀಗುರುವಿಗೆ ಶರಣೆಂದು ಬದುಕಲರಿಯದೆ !'

ಗುರುದೇವನಲ್ಲಿ ಭಕ್ತಿ ಬಾರದೆ ಪರದೈವದಲ್ಲಿ ಬಾರದು. ಗುರು ಕಾಣುವವನು; ಪರ ಕಾಣದದು. ಗುರು ಜ್ಞಾನದಾನಿ; ಮಲನಿವಾರಕ. ಕಾರಣ ಗುರುವಿಗೆ ಶರಣಾಗಬೇಕು; ಗುರುವಿನ ಶರಣ್ಯತೆಯ ಸಂಗಳಿಸಬೇಕು. ಗುರು ಕರುಣಾನಿಧಿ. ಜ್ಞಾನಾಮೃತಪ್ರದಾನಿ. ಶ್ರೀಗುರುವಿನಿಂದ ಶಿಷ್ಯನ ಭಾವವೆಂಬ ಬರುದೊರೆ ತುಂಬಿಬರುತ್ತದೆ. ಕೊಳೆ ಕೆಸರು ತತ್ತಳಕ್ಕಿಳಿಯುತ್ತದೆ. ತುಂಬಿದ ತಿಳಿನೀರಿನಲ್ಲಿ ತನ್ನ ತಾ ಕಾಣುವ ತೃಪ್ತಿಯಿದೆ. ಶ್ರೀಗುರುವಿಗೆ ಶರಣೆಂದರೆ ಮರಣವಿಲ್ಲ; ಜನನವಿಲ್ಲ. ಜನನ ಸೂತಕವನ್ನು ಮರಣಭೀತಿಯನ್ನು ಗುರು ಕಳೆಯುತ್ತಾನೆ. ಗುರುಹಸ್ತದಲ್ಲಿ ಜನನ, ಲಿಂಗದಲ್ಲಿ ಐಕ್ಯ ಇವನ್ನು ಕರುಣಿಸುತ್ತಾನೆ.

'ಗುರುವ ನರನೆಂದನಾದೊಡೆ ಹಿಂದಣ ಭವಮಾಲೆ ಹಿಂಗದು. ಗುರು ಶಬ್ದಕ್ಕೆ ರೋಷವ ಮಾಡಿದನಾದಡೆ ಶ್ವಾನನ ಬಳಗದೊಳಗಿಪ್ಪನು. ಗುರೂಪದೇಶವ ಮೀರಿದನಾದಡೆ ಭವಪಾಶಹಿಂಗದು. ಶ್ರೀ ಗುರುಲಿಂಗವೇ

ಭರ್ಗೋದೇವನೆಂದರಿವುದು. ಕೂಡಲ ಚೆನ್ನಸಂಗಯ್ಯನೆಂದು ನಂಬದಿರ್ದೊಡೆ ಭವ ಹಿಂಗದು.'

ಗುರು ನರನಲ್ಲ. ಗುರುನಾಮ ಸಾಮಾನ್ಯವಲ್ಲ; ಸರ್ವಮಾನ್ಯಮಂತ್ರ. ಗುರುವಿನ ಉಪದೇಶಕ್ಕೆ ಉಪಮೆಯಿಲ್ಲ. ಭವಪಾಶದ ಬಂಧನವನ್ನು ಬಿಡಿಸುತ್ತದೆ; ಉಪಹತಿಯನ್ನು ಉಡುಗಿಸುತ್ತದೆ; ಉಪರತಿಯನ್ನು ಊಡಿಸುತ್ತದೆ. ಉಮ್ಮಳ ಉಬ್ಬೆಗಗಳಿಂದ ಉಪ್ಪವಡಿಸುತ್ತದೆ. ಕಾರಣ ಶ್ರೀಗುರುವನ್ನು ಸಾಕ್ಷಾತ್ ಶಿವನೆಂದು ನೆರೆನಂಬುವುದು.

'ಗುರುವಚನವನುದಾಸೀನವ ಮಾಡಿ ಗುರುಲಿಂಗ ಜಂಗಮಕ್ಕೆ ವಂಚಿಸುವನ ಮುಖವ ನೋಡೆ ನೋಡೆ, ಅವನೊಡನೆ ಮಾತನಾಡೆ ಮಾತನಾಡೆ; ಆ ಪಾಪಿಯು ಇದಿರಿನಲ್ಲಿ ನಿಂದಿರೆ ನಿಂದಿರೆ. ನಮ್ಮ ಕೂಡಲ ಚೆನ್ನಸಂಗಯ್ಯನ ವಚನ 'ನ ವದಂತಿ ನ ಪಶ್ಯಂತಿ' ಎಂದುದಾಗಿ !'

ಗುರುವಚನವೆ ಭಕ್ತನಿಗೆ ಶ್ರೇಷ್ಠ ಸುಧೆ. ಅದನ್ನು ಉಪೇಕ್ಷಿಸಬಾರದು. ಗುರುವಚನದ ಉಪೇಕ್ಷೆಯೆ ಗುರು ಲಿಂಗ ಜಂಗಮ ವಂಚನೆ. ವಂಚನೆಗಿಂತ ಮಿಂಚಿದ ಪಾಪವಿಲ್ಲ. ಆ ಪಾಪದಲ್ಲಿ ಉಪಜೀವಿಸುವವನ ಮುಖ ನೋಡಬಾರದು, ಮಾತಾಡಬಾರದು; ಅವನೆದುರಿನಲ್ಲಿ ನಿಂದಿರಬಾರದು. ಹೀಗಿರುವುದು ಭಕ್ತನ ಗುರುಲಿಂಗಸ್ಥಲ. ಭಕ್ತನ ಬಾಳು ಬದುಕು ನಿರ್ಮಲ. ಭಕ್ತನಿಗೆ ಲಿಂಗಕ್ಕಿಂತಲೂ ಮಿಗಿಲಾದ ಅಭಿಮಾನ ಮಿಗಿಲಾದ ಪ್ರಾಣ ಗುರುವಿನಲ್ಲಿರಬೇಕು.

'ಗುರುವನು ಲಿಂಗವನು ಒಂದೆ ಎಂದು ನುಡಿವ ಬಾಲಭಾಷೆಯ, ಸಂತೆಯ ಸುದ್ದಿಯ ಕೇಳಲಾಗದು. ಅದೆಂತೆನೆ: ಗುರುವಿನಿಂದ ಲಿಂಗಸಾಹಿತ್ಯವಾಗಿ ಪ್ರಸಾದಭೋಗ, ಲಿಂಗ ಸಾಹಿತ್ಯವಾಗಿ ನಿದ್ರೆ ಸರ್ವ ಸಂಗವು ಹಿಂಗಿರ್ದ ಮೇಲೆ, ಗುರುವನು ಲಿಂಗವನು ಒಂದೆ ಎಂದು ಕಂಡಡೆ ಅಘೋರ ನರಕ ಕೂಡಲ ಚೆನ್ನಸಂಗಮದೇವಾ.'

'ಗುರು ಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ ? ಒಂದಾಗಿ ಹೋಗಬಾರದು. ಅವರಿದ್ದೂರಲ್ಲಿರಲಾಗದು. ಅವರ ಸಮ್ಮುಖದಲ್ಲಿ ಕುಳ್ಳಿರಲಾಗದು. ಅವರ ಸಮುಪಜ್ಞೆಯಲ್ಲಿ ಕುಳಿತು ಲಿಂಗಾರ್ಚನೆ ಮಾಡಲಾಗದು.

ಅವರಂತವರಿಂತವರೆಂದು ಕನಸು ಮನಸಿಲ್ಲಿ ನೆನೆದಡೆ ಅಘೋರ ನರಕವಯ್ಯ, ಕೂಡಲ ಚೆನ್ನಸಂಗಮದೇವಾ.'

ಇದಿಷ್ಟು ಬಹಿರಂಗದಷ್ಟಾವರಣದೊಳಗಿರುವ ತನ್ನ ದೀಕ್ಷಾಗುರುಸ್ಥಲದಲ್ಲಿ ಭಕ್ತನು ಆಚರಿಸುವ ಆಚರಣೆ; ಅಳವಡಿಸಿಕೊಳ್ಳುವ ಭಕ್ತಿಭಾವನೆ.

ಇದು ಭಕ್ತನಿಗೆ ತೀರ ಅಗತ್ಯ; ಪ್ರಥಮ ಸಾಹಿತ್ಯ. ಏಕೆಂದರೆ ಭಕ್ತನ ಭಕ್ತಿಯೇ ಪೃಥ್ವಿ. ಇದರಲ್ಲಿ ಅಂಕುರಿಸುವ ಬೀಜವೆಂದರೆ ಶ್ರೀಗುರು. ಈ ಅಂಕುರದ ಎಲೆಯೆಂದರೆ ಲಿಂಗ. ಈ ಎಲೆಯ ಮೇಲಿನ ಹೂವೆಂದರೆ ವಿಚಾರ. ಈ ಹೂವಾಗುವ ಕಾಯ್ ಅಂದರೆ ಆಚಾರ. ಈ ಕಾಯಿ ಹಣ್ಣಾದರೆ ಅದನ್ನು ಆರೋಗಿಸುವ ನಾಲಗೆಯಲ್ಲಿ ಸೂಕ್ಷ್ಮವಾಗಿ ಗುರುಲಿಂಗವಿರುತ್ತದೆ. ಇದರ ಎಂಟನೆಯ ಒಂದಂಶವು ನಾಸಿಕದಲ್ಲಿರುತ್ತದೆ. ಇದುವೆ ಭಕ್ತನ ಗುರುಲಿಂಗಸ್ಥಲ.

ಗಂಧದ ಎಂಟನೆಯ ಒಂದಂಶದಲ್ಲಿ ರುಚಿಯಿರುತ್ತದೆ. ಆದು ಭಕ್ತನ ಗುರುಲಿಂಗಕ್ಕೆ ಸಲ್ಲುತ್ತದೆ.

೩. ಭಕ್ತನ ಶಿವಲಿಂಗಸ್ಥಲ :

ಸತ್ ಆಚಾರವಾಗಿ ಚಿತ್ ವಿಚಾರವಾಗಿ ಅಳವಟ್ಟ ಬಳಿಕ ಅವೆರಡು ಕರಿಗೊಂಡು ಮಂಗಳಾನಂದ ರೂಪವನ್ನು ತಳೆಯುತ್ತವೆ. ಅದೇ ಶಿವಲಿಂಗ. ಅದು ಪ್ರಾಣಲಿಂಗದ ಪ್ರತೀಕವಾಗಿ ಪ್ರಥಮ ಪ್ರಭೇದವಾಗಿ ನೇತ್ರದಲ್ಲಿ ನೆಲಸುತ್ತದೆ. ತೇಜೋಮಯವಾಗಿ ರೂಪುಗೊಳ್ಳುತ್ತದೆ. ಕಣ್ಣಿನ ಬಿಳುಪು-ಕಪ್ಪುಗಳ ನಟ್ಟನಡುವಿರುವ ಕಳೆಯೇ ಶಿವಲಿಂಗ. ಆ ಕಳೆಯೊಳಗಿರುವ ನೀಲ ತೋಯವೇ ಅಥವಾ ವಿದ್ಯುಲ್ಲೇಖೆಯೇ ಪ್ರಾಣಲಿಂಗ. ನೇತ್ರಗತ ಶಿವಲಿಂಗ (ಕಳೆ) ಮನದ ಕೇಂದ್ರ ; ದರ್ಶನ ಕೇಂದ್ರ. ಆ ಕಳೆ ಶಿವವಾಗಬೇಕಾದರೆ ಶಿವವಾಗಿ ಲಿಂಗವಾಗಬೇಕಾದರೆ ಶ್ರೀಗುರು ಕರುಣಿಸಿದ ಕರದಿಷ್ಟದಲ್ಲಿ ದೃಷ್ಟಿಯನ್ನಿಡುವುದಾಗಬೇಕು. ಕರದಿಷ್ಟಲಿಂಗದಲ್ಲಿ ದೃಷ್ಟಿಯನ್ನಿಟ್ಟಲ್ಲಿ ಕಣ್ಣಿನ ಕಳೆ ಶಿವಲಿಂಗವಾಗುತ್ತದೆ. ಶಿವಲಿಂಗವಾದಆ ಕಣ್ಣಿನ ಕಳೆಯಲ್ಲಿ ಮನವನ್ನಿಟ್ಟರೆ ಪ್ರಾಣಲಿಂಗವಾಗುತ್ತದೆ. ಈ ಮರ್ಮವನ್ನರಿತರೆ

ಶಿವಲಿಂಗದ ಮಹಿಮೆ ಮಂಗಳತೆ ಮನವರಿಕೆಯಾಗುತ್ತದೆ. ಮತ್ತು ಶಿವ ಲಿಂಗದ ಸ್ವರೂಪ ಸ್ವಾನುಭವಕೆ ಬರುತ್ತದೆ. ಸ್ವಸ್ವರೂಪ ದರ್ಶನವೇ ಸದ್ಭಕ್ತನಿಗೆ ಸರ್ವೋತ್ಕೃಷ್ಟ. ಈ ಸ್ವರೂಪದರ್ಶನಾವಧಾನವನ್ನು ಸದ್ಭಕ್ತನು ಸದಾ ಅಪೇಕ್ಷಿಸಬೇಕಲ್ಲದೆ ಉಪೇಕ್ಷಿಸಬಾರದು.

'ಅಂಗದ ಮೇಲೆ ಪರಶಿವಲಿಂಗವಿರ್ದು, ಸ್ಥಾವರ ಲಿಂಗಕ್ಕೆ ಶರಣೆನ ಲಾಗದು. ತನ್ನಲ್ಲಿ ಲಿಂಗವಿರ್ದಂತೆ ಅನ್ಯ ಲಿಂಗವ ಮುಟ್ಟಿ ದರ್ಶನ ಸ್ಪರ್ಶನವ ಮಾಡುವ ಕುನ್ನಿಗಳನೇನೆಂಬೆನಯ್ಯ? ತನ್ನಂಗದ ಲಿಂಗವು ರಂಗದ ಕಲ್ಲುವ ತಾಗಿದಡೆ, ಆವುದು ಹಿರಿದು, ಆವುದು ಕಿರಿದು ಎಂಬೆನಯ್ಯಾ ತಾಳ ಸಂಪುಟಕ್ಕೆ ಬಾರದ ಘನವು ? ಸಾಕ್ಷಿ: 'ಪ್ರಾಣಲಿಂಗಂ ಪರಿತ್ಯಜ್ಯ ಅನ್ಯಲಿಂಗ ಮುಪಸ್ಥಿತಂ । ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್ !' ಎಂದುದಾಗಿ, ಸಾಕ್ಷಿ: 'ದೀರ್ಘದಂಡಂ ಗುರುಸ್ಪರ್ಶಂ, ಕರಂ ಲಿಂಗಸ್ಪರ್ಶನಂ ಚ । ಶಿರಂ ಜಂಗಮಸ್ಪರ್ಶಂ ಚ ತ್ರಿವಿಧಂ ವಂದನಂ ತಥಾ॥' ಅದೆಂತೆಂದೊಡೆ, ಸಾಕ್ಷಿ: ' ದೀರ್ಘದಂಡಂ ಗುರುಸ್ಪರ್ಶಂ, ಪ್ರಾಣಿಸ್ಪರ್ಶಂ ಚ ಲಿಂಗಕಂ । ಜಂಗಮಂ ಶಿರಸ್ಪರ್ಶಂ ಚ ತ್ರಿವಿಧಂ ಭಕ್ತಿಕಾರಣಂ ॥' ಎಂದುದಾಗಿ ಹಂತಿ ಲಿದ್ದ ಲಿಂಗವ ಕಿರಿದು ಮಾಡಿ, ದೂರದಲ್ಲಿರ್ದ ಸ್ಥಾವರವ ಹಿರಿದು ಮಾಡುವ ಅನಾಚಾರಿ ವ್ರತಭ್ರಷ್ಟರ ಎನಗೊಮ್ಮೆ ತೋರದಿರಯ್ಯಾ, ಕೂಡಲ ಚೆನ್ನ ಸಂಗಮದೇವಾ.'

ದರ್ಶನದಲ್ಲಿ ಆತ್ಮದರ್ಶನವೇ ದರ್ಶನ. ಆತ್ಮಜ್ಞಾನಿ ಆತ್ಮದರ್ಶನ ಕ್ಕಲ್ಲದೆ ಅನ್ಯಕ್ಕೆಳಸನು; ಕಂಡದ್ದಕ್ಕೆ ಕಣ್ಣಿಡನು. ನೇತ್ರಸಂಯಮಿ ನಿಜಾನು ಭಾವಿ. ಅದೇ ನೇತ್ರಸಂಯಮವಿಲ್ಲದವನು ಬೀದಿಯ ನಾಯಿ.

ನಾಸಿಕದಲ್ಲಿ ನೇತ್ರಶಕ್ತಿಯ ಸಂಗಮವಾಗಿರುತ್ತದೆ. ಏಕೆಂದರೆ: ತೇಜದ ಅಷ್ಟಾಂಶವು ಪೃಥ್ವಿಯಲ್ಲಿ ಬೆರೆತಿರುತ್ತದೆ. ಕಾರಣ ಗಂಧದಲ್ಲಿ ರೂಪದ ಅಷ್ಟಾಂಶವಿರುತ್ತದೆ. ಅಂತೆಯೇ ಮೂಲ ಶಿವಲಿಂಗ ಚೈತನ್ಯದ ಅಷ್ಟಾಂಶವೂ ಇರುತ್ತದೆ. ಇದರಿಂದಾಗಿ ಇದು ಭಕ್ತನ ಶಿವಲಿಂಗವಾಗಿ ಪರಿಣಮಿಸುತ್ತದೆ. ಇದು ಗಂಧಗತ ಸೂಕ್ಷ್ಮರೂಪಾಂಶವನ್ನು ಸಂದರ್ಶಿಸುತ್ತದೆ. ಈ ಸಂದರ್ಶನ ದಿಂದ ಗಂಧಗತ ತೇಜೋಂಶದ ಪೂರ್ವಾಶ್ರಯವು ನಿವೃತ್ತಿಯಾಗುತ್ತದೆ.

'ಪೃಥ್ವಿಯ ಪೂರ್ವಾಶ್ರಯವು ಸಮ್ಮಾರ್ಜನೆ ರಂಗವಲ್ಲಿಯಿಂದೆ ಹೋಯಿತ್ತು. ಅಪ್ಪುವಿನ ಪೂರ್ವಾಶ್ರಯ ಮಂತ್ರ ವಿಭೂತಿಯಿಂದ ಹೋಯಿತ್ತು. ಅಗ್ನಿಯ ಪೂರ್ವಾಶ್ರಯ ಧೂಪ ದೀಪದಿಂದೆ ಹೊಯಿತ್ತು. ವಾಯುವಿನ ಪೂರ್ವಾಶ್ರಯ ಶಿವಧ್ಯಾನದಿಂದೆ ಹೋಯಿತ್ತು. ಆಕಾಶದ ಪೂರ್ವಾಶ್ರಯ ಸ್ತೋತ್ರದಿಂದೆ ಹೋಯಿತ್ತು. ಆತ್ಮನ ಪೂರ್ವಾಶ್ರಯ ಕಿಂಕುರ್ವಾಣದಿಂದೆ ಹೋಯಿತ್ತು. ಚಂದ್ರ ಸೂರ್ಯರ ಪೂರ್ವಾಶ್ರಯ ಮಾಡುವ ಕ್ರಿಯದಿಂದೆ ಹೋಯಿತ್ತು. ಇದು ಕಾರಣವಾಗಿ ಭಕ್ತ ಕಾಯ ಮಮಕಾಯವಯ್ಯ ಕೂಡಲ ಚೆನ್ನಸಂಗಮದೇವಾ.'

ಈ ವಚನದಲ್ಲಿ ಚೆನ್ನಬಸವಣ್ಣನವರು ಸಮಷ್ಟಿ ಅಷ್ಟತನುಗಳ ಪೂರ್ವಾಶ್ರಯ ನಿವೃತ್ತಿ ಉಪಾಯಗಳನ್ನು ಸೂಚಿಸಿದ್ದಾರೆ. ಇವಾದರೇನೆ ವ್ಯಷ್ಟಿ ಅಷ್ಟತನುಗಳ ಪೂರ್ವಾಶ್ರಯ ನಿವೃತ್ತಿಯಾಗುತ್ತದೆ. ಒಂದೊಂದ ರಲ್ಲಿಯೆ ಅಷ್ಟಾಂಶಗಳ ಪೂರ್ವಾಶ್ರಯ ನಿವೃತ್ತಿ ಸಂಭವಿಸುತ್ತದೆ. ಅಂತೆಯೆ ಪೃಥ್ವ್ಯಂಗ ಭಕ್ತನ ಶಿವಲಿಂಗಸ್ಥಲದಲ್ಲಿ ರೂಪ ಪೂರ್ವಾಶ್ರಯ ನಿವೃತ್ತಿ ಅಂತರ್ದರ್ಶನದಿಂದ ಅಳವಡುತ್ತದೆ.

೪. ಭಕ್ತನ ಜಂಗಮ ಲಿಂಗಸ್ಥಲ

ನಿತ್ಯತ್ವವೇ ಜಂಗಮತ್ವದ ಲಕ್ಷಣ. ಸೃಷ್ಟಿ ಸ್ಥಿತಿ ಲಯಗಳಿಗೆ ಒಳ ಗಾಗದಿರುವುದೇ ನಿತ್ಯತ್ವದ ನಿಲವು. ಪ್ರಾಗಾಭಾವಾದಿಗಳಿಗೆ ನಿಲುಕದಿರು ವುದೆ ನಿತ್ಯತ್ವದ ನಿಜ. ನಿರವಯವೂ ನಿಸ್ಸಂಗವೂ ಆಗಿರುವುದೇ ನಿತ್ಯ. ಅಂತಹ ನಿತ್ಯತ್ವದಿಂದ ಕೂಡಿರುವುದು ಜಂಗಮ. ಅಂತೆಯೇ ಆ ಜಂಗ ಮವು ಮಹಾಜ್ಞಾನ ಸಂಪನ್ನವಾಗಿರುತ್ತದೆ. ಯಾರ ಬಾಳಿನಲ್ಲಿ ಸದ್ರೂಪ ಆಚಾರವು, ಚಿದ್ರೂಪ ವಿಚಾರವು, ಆನಂದರೂಪ ಅನುಭವವು ನಿತ್ಯವಾಗಿರು ವವೋ ಅವರು ಜಂಗಮನಾಮರು; ಮಂಗಲಧಾಮರು. ಅಲ್ಲದೆ ಕಾಯ ವಿದ್ದು ಅಕಾಯರಾಗಿರಬೇಕು. ಸಂಸಾರದಲ್ಲಿದ್ದರೂ ನಿಸ್ಸಂಗರಾಗಿರಬೇಕು.

'ಜ್ಞಾನಂತ್ಯತಿಶಯಾದ್ಯೇತು ಶಿವಂ ವಿಶ್ವಪ್ರಕಾಶಕಂ |
ಸ್ವಸ್ವರೂಪತಯಾ ತೇ ತು ಜಂಗಮಾ ಇತಿ ಕೀರ್ತಿತಾಃ ||

—ಸಿದ್ಧಾಂತ ಶಿಖಾಮಣಿ

'ಜ್ಞಾನ ಗುರುವಿನಲ್ಲಿ ಸಾಹಿತ್ಯ. ಸುಜ್ಞಾನ ಲಿಂಗದಲ್ಲಿ ಸಾಹಿತ್ಯ. ಮಹಾಜ್ಞಾನ ಜಂಗಮದಲ್ಲಿ ಸಾಹಿತ್ಯ. ಇಂತಪ್ಪ ಜ್ಞಾನ, ಸುಜ್ಞಾನ, ಮಹಾ ಜ್ಞಾನ ಜಂಗಮದಲ್ಲಿ ಸಾಹಿತ್ಯ........' ಎಂದು ಚೆನ್ನಬಸವಣ್ಣನ ಹೇಳಿಕೆ.

ಈ ಎರಡು ಪ್ರಮಾಣಗಳ ಅಭಿಪ್ರಾಯವೊಂದೇ ಆದರೂ ಸಿದ್ಧಾಂತ ಶಿಖಾಮಣಿಯ ಅಭಿಪ್ರಾಯದಲ್ಲಿ ಇನ್ನೂ ಹೆಚ್ಚಿನ ಹುರುಳಿದೆ.

ಅತಿಶಯ ಜ್ಞಾನವೇ ಜಂಗಮತ್ವವೆಂದು ಅದು ಹೇಳಿದ್ದನ್ನೆ ಮಹಾ ಜ್ಞಾನವೇ ಜಂಗಮತ್ವವೆಂದು ವಚನ ನಿರೂಪಿಸಿದೆ. ಅತಿಶಯಜ್ಞಾನ ವೆಂದರೂ ಮಹಾಜ್ಞಾನವೆಂದರೂ ಒಂದೇ ! ಎರಡಕ್ಕೂ ಅನುಭವವೆಂದರ್ಥ. ಆದರೆ ಆ ಅನುಭವವು ಸ್ವಾನುಭವವಾಗಿರಬೇಕೆನ್ನುತ್ತದೆ ರೇಣುಕವಾಣಿ. ಸ್ವಸ್ವರೂಪಾನುಭೂತಿಯೇ ಜಂಗಮತ್ವ ಲಕ್ಷಣವೆಂದು ಹೇಳಿದ್ದಲ್ಲದೆ ಆ ಸ್ವರೂಪಾನುಭೂತಿಗೆ ವಿಶ್ವಪ್ರಕಾಶತ್ವ ಶಿವಚೈತನ್ಯವು ಜ್ಞೇಯವಸ್ತುವಾಗಿ ರಬೇಕು; ಅಂದರೆ ಅನುಭವಿಸುವ ವಸ್ತುವಾಗಿರಬೇಕೆನ್ನುತ್ತದೆ ಶಿವಾಚಾರ್ಯ ವಾಣಿ.

ಭಕ್ತನ ಅರ್ಥ ಪ್ರಾಣ ಅಭಿಮಾನಗಳು ಶುದ್ಧವಾಗಬೇಕಾದರೆ ಅವು ನಿರಾಭಾರ ನಿರವಯ ನಿಸ್ಸಂಗವಾದ ಮತ್ತು ಗುರು ಲಿಂಗ ಜಂಗಮಾತ್ಮಕ ವಾದ ಚೈತನ್ಯಕ್ಕೆ ಸಮರ್ಪಿತವಾಗಬೇಕು. ಆ ಚೈತನ್ಯ ಸಾಕ್ಷಾತ್ಕಾರ ವುಳ್ಳವನು ನಿರಹಂಕಾರಿಯಾಗಿರಬೇಕು; ನಿರ್ಮಳನಾಗಿರಬೇಕು. ಸಕಲೋ ಪಚಾರಗಳು ಆ ಮಹಾಚೈತನ್ಯಕ್ಕೆಂದು ಪರಿಭಾವಿಸಬೇಕು. ಆಚಾರಲಿಂಗ ಗುರುಲಿಂಗ ಶಿವಲಿಂಗಗಳಿಗೆ ಜಂಗಮಲಿಂಗವು ಮೂಲವೂ ಪ್ರೇರಕವೂ ಎಂದು ಅರಿಯಬೇಕು. ಸರ್ವವ್ಯಾಪಕವೆಂದು ಸರ್ವಸ್ಪರ್ಶಕವೆಂದು ತಿಳಿಯ ಬೇಕು. ಅದು ಜಂಗಮಲಿಂಗ. ಅದನ್ನು ಉಪಾಸಿಸುವವನು ಜಂಗಮ ಲಿಂಗಭಕ್ತ.

ಅದು ಮಹಾಜ್ಞಾನ, ಮಹಾಚೈತನ್ಯ. ಅದನ್ನು ಅಳವಡಿಸಿಕೊಂಡ ವನು ನಿರಂಜನ ನಿರಾಭಾರಿ ಜಂಗಮ; ನಿರವಯ ನಿಸ್ಸಂಗ ಜಂಗಮ. ಆ ಜಂಗಮದಲ್ಲಿ ಭಕ್ತನು ಸರ್ವಾರ್ಪಣಭಾವದಿಂದ ಸಮಾಧಾನ ಚಿತ್ತದಿಂದ ವರ್ತಿಸಬೇಕು.

'ಜಂಗಮ ಭಕ್ತನು ಚಿನ್ನದಂತೆ ಕಬ್ಬಿನಂತೆ ಶ್ರೀಗಂಧದಂತೆ ಇರಬೇಕಯ್ಯಾ! ಅದೆಂತೆಂದೊಡೆ, ಆ ಚಿನ್ನವು ಕಾಸಿದೊಡೆಯು ಕರಗಿಸಿದೊಡೆಯು ನಿಗುಚಿದೊಡೆಯು ಆ ಮೇಲೆ ಪುಟವನಿಕ್ಕಿದೊಡೆಯು ಬಣ್ಣವಧಿಕವಪ್ಪುವಲ್ಲದೆ ಕಿರಿದಾಗದು ನೋಡಿರೆ! ಇವರು ನನ್ನನೇಕೆ ಗಾಸಿ ಮಾಡಿದರೆನ್ನದು–ನೋಡಿರೆ! ಆ ಕಬ್ಬು ಕಡಿದೊಡೆ ಕಂಡಿಸಿದೊಡೆ ಗಾಣದಲಿಕ್ಕಿ ಹಿಂಡಿ ಹಿಳಿಚಿದೊಡೆ, ಬಂದ ರಸವ ಸುಟ್ಟಡೆ ಹೇಗೆ ನಾನಾ ಪ್ರಕಾರದಲ್ಲಿ ಸಾಯಸಂಗೊಳಿಸಿದೊಡೆಯು ಮಿಗೆ ಮಿಗೆ ಮಧುರವಾಗಿರ್ಪುದಲ್ಲದೆ ವಿಷವಾಗದು ನೋಡಿರೆ! ಆ ಶ್ರೀಗಂಧವು ಕೊರೆದೊಡೆಯು ಅರೆದಡೆಯು ಪೂಸಿಕೊಂಡಡೆಯು ಬೆಂಕಿಯೊಳಗೆ ಹಾಕಿಕೊಂಡಡೆಯು ಪರಿಮಳ ಘನವಪ್ಪುದಲ್ಲದೆ ದುರ್ಗಂಧವಾಗದು. ನಾನಾ ಪರಿಯಲ್ಲಿ ನನ್ನನೇಕೆ ನೋಯಿಸಿದಿರೆಂದು ತನ್ನಲ್ಲಿ ದುಃಖಗೊಳ್ಳದು ನೋಡಿರೆ! ಇದು ಕಾರಣವಾಗಿ ಆ ಚಿನ್ನದಂತೆ ಆ ಕಬ್ಬಿನಂತೆ ಆ ಶ್ರೀಗಂಧದಂತೆ ಈ ತ್ರಿವಿಧಗುಣದಲ್ಲಿ ನಿರತನಾಗಿರ್ದ ಭಕ್ತನು ಅವರ ಗುಣವ ನೋಡದೆ ತಮ್ಮ ಗುಣವ ಬಿಡದ ಕಾರಣದಿಂದೆ ಆತನೇ ಸದ್ಭಕ್ತನಹ. ಆತನೆ ವೀರಮಾಹೇಶ್ವರನಹ. ಆತನೆ ಪರಮ ಪ್ರಸಾದಿಯಹ. ಆತನೆ ಘನಪ್ರಾಣಲಿಂಗಿಯಹ. ಆತನೇ ಮಹಾಶರಣನಹ. ಆತನೇ ನಿಜಲಿಂಗೈಕ್ಯನಹ. ಇಂತೀ ಷಟ್‌ಸ್ಥಲದಲ್ಲಿ ಸಂಪನ್ನನಾದಡೆ ಜಂಗಮ ಭಕ್ತಿಗೆ ಮೂಲವಯ್ಯ ಕೂಡಲ ಚೆನ್ನಸಂಗಮದೇವಾ.'

ನಾಸಿಕದಲ್ಲಿ ತ್ವಕ್‌ಶಕ್ತಿ ಸಮ್ಮಿಶ್ರವಾಗಿರುತ್ತದೆ. ವಾಯುವಿನ ಅಷ್ಟಾಂಶವು ಪೃಥ್ವಿಯಲ್ಲಿ ಸೇರಿರುತ್ತದೆ. ಕಾರಣ ಗಂಧದಲ್ಲಿ ಸ್ಪರ್ಶದ ಅಷ್ಟಾಂಶವಿರುತ್ತದೆ. ಇದರಂತೆ ಮೂಲ ಜಂಗಮಲಿಂಗದ ಅಷ್ಟಾಂಶವೂ ಇರುತ್ತದೆ. ಇದರಿಂದಾಗಿ ಇದು ಭಕ್ತನ ಜಂಗಮಲಿಂಗವಾಗುತ್ತದೆ. ಇದು ಗಂಧಗತ ಸೂಕ್ಷ್ಮ ಸ್ಪರ್ಶಾಂಶವನ್ನು ಸಂಸ್ಪರ್ಶಿಸುತ್ತದೆ.

೫. ಭಕ್ತನ ಪ್ರಸಾದ ಲಿಂಗಸ್ಥಲ

ಆಕಾಶಜನ್ಯವಾದುದು ಶಬ್ಧ. ಆ ಆಕಾಶಾವಚ್ಛಿನ್ನ ಚೈತನ್ಯವೇ ಲಿಂಗ. ಆ ಲಿಂಗಕ್ಕೆ ಅರ್ಪಿತವಾದ ಶಬ್ದವೇ ಪ್ರಸಾದ. ಪ್ರಸಾದದಿಂದ ಪ್ರಸನ್ನವಾದ

ಚೈತನ್ಯವೇ ಪ್ರಸಾದಲಿಂಗ. ಅದು ಪರಿಪೂರ್ಣವಸ್ತು. ಅದು ಸಚ್ಚಿತ್ಸುಖ ನಿತ್ಯತ್ವಗಳನ್ನೊಳಗೊಂಡ ವಸ್ತು.

'ಮಾತೆಂಬುದು ಜ್ಯೋತಿರ್ಲಿಂಗ' ಎಂದಿದೆ ಪ್ರಭುವಾಣಿ. ವಾಕ್ ಶಕ್ತಿ; ಅರ್ಥ ಶಿವ. ವಾಕ್ ಪದಾರ್ಥ; ಅರ್ಥ ಲಿಂಗ. ಅರ್ಥವತ್ತಾದ ವಾಕ್ ಪ್ರಸಾದವಾಗಿ ಅರ್ಥ ಅನುಭವದಲ್ಲಿ ಪರ್ಯವಸನವಾಗಿ ಲಿಂಗವಾಗಿ ಪ್ರಸಾದಲಿಂಗವಾಗಿ ಪರಿಣಮಿಸುತ್ತದೆ. ಸ್ವಾನುಭವದಿಂದ ಶುಭವಾದ ಅರ್ಥ ವತ್ತತೆಯಿಂದ ಉಪಯೋಗಿಸಿದ ಶಬ್ದವೇ (ವಾಕ್ಕೇ) ಮಂತ್ರವಾಗಿ ಮಂತ್ರ ಮೂರ್ತಿಯಾಗಿ ಪ್ರಸಾದಲಿಂಗವೆನಿಸುತ್ತದೆ. ಅಂತಹ ಮಾತನ್ನು ಹೇಳಿದವ ರಿಗೆ ಕೇಳಿದವರಿಗೆ ಪ್ರಸನ್ನತೆ ಪ್ರಾಪ್ತವಾಗುತ್ತದೆ. ಆ ಮಾತು ಪ್ರಸಾದ ವಾಗುತ್ತದೆ. ಪ್ರಸನ್ನತೆಯನ್ನುಂಟುಮಾಡುವ ಶಕ್ತಿಗೆ ಚೇತನಕ್ಕೆ ಲಿಂಗ ವೆಂದು ಹೇಳುತ್ತೇವೆ. ಅದು ಪ್ರಸಾದವುಳ್ಳು. ಅದನ್ನು ಅಳವಡಿಸಿಕೊಳ್ಳು ವವನು ಭಕ್ತ ; ಭಾವಸಂಪದ್ಯುಕ್ತ.

ಮೃದು ನುಡಿಯೇ ಮಂತ್ರ. ಸವಿನುಡಿಯೇ ಶಿವಮಂತ್ರ ಜಪ. ಸದುವಿನಯವೇ ಸದಾಶಿವನ ಒಲುಮೆ. ಈ ಮಾತುಗಳು 'ಪ್ರಸಾದಲಿಂಗ'ದ ಪ್ರತೀಕಗಳಾಗಿವೆ.

ಭಾವಪೂರ್ಣವಾದ ಭಾಷೆಯಲ್ಲಿ ದೇವಶಕ್ತಿಯಿದೆ. ಶಿವವಾಣಿಯಿಂದ ಶಿವಮಂತ್ರದಿಂದ ಕಾಯಃಕರಣ ವೃತ್ತಿಗಳು ನಿವೃತ್ತಿಗೊಳ್ಳುವವು ; ನಿರ್ಮಲ ಗೊಳ್ಳುವವು. ಮಿಗಿಲಾಗಿ ಶ್ರವಣೇಂದ್ರಿಯಾವಚ್ಛಿನ್ನ ಚೈತನ್ಯ ಪ್ರಸನ್ನ ವಾಗುವುದು. ಇದರಿಂದ ಮನಸ್ಸೂ ಪ್ರಸನ್ನವಾಗುವುದು.

ಭಾವವಿಲ್ಲದ ಭಕ್ತಿಯಿಲ್ಲದ ಸಂಭಾಷಣ ಅದೊಂದು ಭವಿಪಾಕ. ಅದ ರಿಂದ ಭವನರಕ. ಭಾವಪೂರ್ಣವಾದ ಭಕ್ತಿಭರಿತವಾದ ಶುಭವಾಕ್ಕು ಶುದ್ಧ ಪಾಕ, ಅದು ಪ್ರಸಾದಲಿಂಗಕ್ಕೆ ಸಲ್ಲುವ ಪ್ರಸಾದವಾಕ್ಕು.

ಅನ್ನದಂತೆ ಶಬ್ದವೂ ಪದಾರ್ಥ. ಅನ್ನವನ್ನು ಪ್ರಸಾದವನ್ನಾಗಿಸು ವಂತೆ ಶಬ್ದವನ್ನೂ ಪ್ರಸಾದವನ್ನಾಗಿಸಬೇಕು ಭಕ್ತ. ಹಾಗಾಗಬೇಕಾದರೆ ಲಿಂಗಕ್ಕೆ ಮೆಚ್ಚುಗೆಯಾಗುವ ಮಾತನ್ನಾಡಬೇಕು. ಗುರುಜಂಗಮರಿಗೆ ಜನತಾ ಜಗದೀಶನಿಗೆ ಮೆಚ್ಚುಗೆಯಾಗುವಂತಾಡಬೇಕು.

ಪ್ರಸನ್ನತೆಯನ್ನುಂಟುಮಾಡುವ ಶಿವವಾಣಿ ಶುಚಿವಾಕ್ಕು ತನಗಾಗ ಬೇಕಾದರೆ ಗುರುಲಿಂಗೋಪಾಸಕನಾಗದೆ ಸಾಧ್ಯವಿಲ್ಲ. ಗುರುಭಕ್ತನಾಗದೆ ವೇದ್ಯವಾಗುವುದಿಲ್ಲ. ಜಿಹ್ವೆ ಗುರುಲಿಂಗಭಕ್ತನಾಗದೆ ಪ್ರಸಾದಲಿಂಗಭಕ್ತ ನಾಗಲು ಸಾಧ್ಯವಿಲ್ಲ.

ಪ್ರಸಾದಲಿಂಗ ಅಂದರೆ ಶಿವಾನುಭಾವಸಾಹಿತ್ಯ ಉಪಾಸಕನಾಗ ಬೇಕೆನ್ನುವವನ ವಾಗಿಂದ್ರಿಯವು ಮೊದಲು ಭಕ್ತನಾಗಬೇಕು. ವಾಗಿಂದ್ರಿಯ ಪ್ರಸಾದಲಿಂಗಭಕ್ತ ಆಗಿದ್ದರೆ ಶ್ರವಣೇಂದ್ರಿಯನ್ನು ಪ್ರಸಾದಲಿಂಗೋಪಾಸಕ ವನ್ನಾಗಿಸಲು ಸಾಧ್ಯ. ವಾಗಿಂದ್ರಿಯ ಪ್ರಸಾದಲಿಂಗಭಕ್ತವಾಗಬೇಕಾದರೆ ರಸನೇಂದ್ರಿಯವು ಮೊದಲು ಗುರುಲಿಂಗದಲ್ಲಿ ರತಿಯುಳ್ಳದಾಗಿರಬೇಕು.

ಮನ ಪ್ರಸನ್ನತೆಯನ್ನು ಬಯಸುವಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯ ದಶಕವು ಆ ಆ ಲಿಂಗೋಪಾಸಕವಾಗಿರುವುದು ಅನಿವಾರ್ಯ. ಆಗ ಮನಸ್ಸು ಪ್ರಸನ್ನವಾಗುತ್ತದೆ; ಮಹಾಲಿಂಗವಾಗುತ್ತದೆ. ಅವನು ಮಹಾದೇವ ನೆಂದೆನಿಸುತ್ತಾನೆ. ಆತನ ಕಾಯವೆಲ್ಲ ದೇವಕಾಯ ಅಥವಾ ಲಿಂಗಕಾಯ ವೆಂದೆನಿಸುತ್ತದೆ.

'ಭಕ್ತರ ಮನೆಯನರಸಿಕೊಂಡು ಹೋಗಿ, ಭಕ್ತ ದೇಹಿಕ ದೇವನೆಂಬ ಶ್ರುತಿ ವಚನವ ಕೇಳಿ, ಭಕ್ತನೇ ದೇವನೆಂದರಿದು ಮತ್ತೆಯು ಮುಕ್ತಿಯ ನರಸುವ ಪಾತಕರ ವಿಧಿ ಎಂತೋ ? ಭಕ್ತರ ಮಠಕ್ಕೆ ಹೋಗಿ ಅದು ಇದು ಎಂಬ ಸಂದೇಹಿ ಪಾತಕಿ ನೀ ಕೇಳು : ಆ ಭಕ್ತರ ಮಠದೊಳಗೆ ಭಕ್ತಿರತಿಯ ಬೆಳಸು, ಲಿಂಗದ ಕಳೆಯು, ಪ್ರಸಾದದ ರಾಶಿ–ಇಂತಪ್ಪ ಪ್ರಸಾದವಿದ್ದಲ್ಲಿಗೆ ಹೋಗಿ ಸೂತಕವನರಸುವ ಪಾತಕರ ಮೆಚ್ಚುವನೆ ನಮ್ಮ ಕೂಡಲ ಚೆನ್ನ ಸಂಗಮದೇವಾ ?'

ಭಕ್ತನ ಕಾಯಮಾತ್ರವಲ್ಲ, ಭಕ್ತನ ಮನೆ, ಮನೆಯಲ್ಲಿರುವ ಪಡಿ ಪದಾರ್ಥ, ಮನೆಯ ಪ್ರದೇಶವೆಲ್ಲವೂ ಪವಿತ್ರವಾಗಿರುತ್ತವೆ. ಮನೆ ಕೈಲಾಸ, ಪಡಿಪದಾರ್ಥವೆಲ್ಲ ಪ್ರಸಾದದ ರಾಶಿ. ಅಂತೆಯೇ ಭಕ್ತನ ಕಾಯವೇ ಭಗವಂತನ ಕಾಯವಾಗಿರುತ್ತದೆ. ಭಕ್ತನ ದೇಹದಲ್ಲಿರುವ ಸಪ್ತಧಾತುಗಳೆಲ್ಲ ಸುಪ್ರಸಾದವಾಗಿರುತ್ತವೆ. ಇಷ್ಟಾದಾಗ ಭಕ್ತನ ಚೈತನ್ಯ ಪ್ರಸಾದಲಿಂಗ ವಾಗದೇನು ?

ಭಕ್ತನ ನಾಸಿಕದಲ್ಲಿ ಶ್ರೋತತ್ವದ ಒಂದಂಶವಿರುತ್ತದೆ. ಅಂತೆಯೇ ಆಕಾಶದ ಅಷ್ಟಾಂಶವು ನಾಶಿಕಾಂಗದ ಪೃಥ್ವಿತತ್ತ್ವದಲ್ಲಿ ಸೇರಿರುತ್ತದೆ. ಇದರಿಂದಾಗಿ ಗಂಧದಲ್ಲಿ ಶಬ್ದಾಂಶವಿರುತ್ತದೆ. ಇದರಿಂದಾಗಿ ಮೂಲಪ್ರಸಾದ ಲಿಂಗದ ಅಷ್ಟಮಾಂಶವೂ ಇರುತ್ತದೆ. ಇದು ಭಕ್ತನ ಪ್ರಸಾದಲಿಂಗವೆನಿಸುತ್ತದೆ. ಇದು ಗಂಧಗತ ಸೂಕ್ಷ್ಮವಾದ ಶಬ್ದಾಂಶವನ್ನು ಗ್ರಹಿಸುತ್ತದೆ.

೬. ಭಕ್ತನ ಮಹಾಲಿಂಗಸ್ಥಲ :

ಆತ್ಮನಿಷ್ಠವಾದುದು ತೃಪ್ತಿ. ಪಂಚಭೂತಗಳಿಗೆ ಆಧಾರವಾದುದು ಆತ್ಮ. ಅದಕ್ಕೊಂದು ಆಧಾರವಿಲ್ಲ. ಅದರಿಂದಾಗಿ ಅದು ಮಹಾಲಿಂಗ; ಅಖಂಡಲಿಂಗ.

ಉಭಯ ಪಂಚೇಂದ್ರಿಯಗಳಿಗೂ ಮೂಲವಾದುದು ಮನ. ಸರ್ವೇಂದ್ರಿಯಗಳಿಗೆಲ್ಲ ಮನವೇ ಘನ. ಇದರಿಂದಾಗಿ ಮನವೇ ಮಹಾಲಿಂಗದ ಅಂಗ.

ಈ ಮನಸ್ಥಲಾವಚ್ಛಿನ್ನ ಚೈತನ್ಯವೇ ಮಹಾಲಿಂಗ. ಪಂಚ ಪದಾರ್ಥ ಜನ್ಯತೃಪ್ತಿಯೇ ಮಹಾಲಿಂಗಾರ್ಪಿತವಾಗಿ ಸುತೃಪ್ತಿ ಪ್ರಸಾದವಾಗುತ್ತದೆ. ಪಂಚ ಅಂಗಗಳಲ್ಲಿ ಪಂಚ ಲಿಂಗಗಳಲ್ಲಿ ಪಂಚ ಪದಾರ್ಥ ಮತ್ತು ಪ್ರಸಾದ ಗಳಲ್ಲಿ ಅಖಂಡವಾಗಿರುವುದರಿಂದ ಮಹಾಲಿಂಗವು ಅಖಂಡವಸ್ತು. ಅದು ಸಚ್ಚಿತ್ಸುಖ ನಿತ್ಯಪರಿಪೂರ್ಣ ಲಕ್ಷಣಗಳಿಂದ ಭರಿತವಸ್ತು. ಅದಕ್ಕೆ ತೆರಹಿಲ್ಲ. ಕುರುಹಿಲ್ಲ. ಅದು ಸರ್ವಾಂಗಲಿಂಗ.

'ಸದಾಚಾರಿಯಾದೊಡೆ ಉಪ್ಪರಗುಡಿ ಸಿಂಧು ಪತಾಕೆ ಒಬ್ಬರಿಗೊಬ್ಬರು ಶರಣೆಂಬುವುದೆ ಸರ್ವತೀರ್ಥ; ಆ ಭಕ್ತನ ದೇಹವೇ ತ್ರಿಕೂಟದ ಶಿವಾಲಯ, ಕಾಲೇ ಕಂಬ, ಶಿರವೇ ಸುವರ್ಣದ ಕಳಸ, ಶಿವಾಚಾರವೇ ಪೌಳಿ, ವಿಭೂತಿಯು ಧವಳಿಸಿ, ಪರದೈವವ ಹೊಗಳಿಸದೆ, ಪ್ರಣವ ಪಂಚಾಕ್ಷರಿಯು ಗುಡಿಯು ದ್ವಾರವಾಟ ಒಪ್ಪುತ್ತಿರೆ, ವಿನಯುವೆ ಅಗ್ಗವಣಿ, ಸಜ್ಜನವೆ ಮಜ್ಜನ, ಸದಾ ಸನ್ನಿಹಿತವೆ ಲಿಂಗಪೂಜೆ; ಸತ್ಯವೆ ಅಡ್ಡಣಿಗೆ, ಸಮತೆಯೇ ಪರಿವಾಣ, ಮನವೇ ಮೀಸಲೋಗರ, ಲಿಂಗವಾರೋಗಣೆಯ ಮಾಡುತ್ತಿರಲು, ಹರುಷವೇ ಹಸ್ತಮಜ್ಜನ, ಪ್ರೀತಿಯೇ ಕರ್ಪುರದ ವೀಳ್ಯೆ, ಕಲಿತನವೇ ಜಾಗಟೆ, ಫಲ

ಪದವೇ ಭೇರಿ, ವಿರಕ್ತಿಯೇ ಮದ್ದಳೆ, ಸಾಂಪ್ರದಾಯವೇ ಗೀತ ; ಇದು ಕಾರಣ ಕೂಡಲ ಚೆನ್ನಸಂಗಯ್ಯಾ, ನಿಮ್ಮ ಶರಣರು ಸರ್ವಾಂಗಲಿಂಗಿಗಳು.'

ಮಹಾಲಿಂಗಸ್ಥಲ ನಿಲಯವಾದ ಭಕ್ತನ ನಿಲವಿದು. ಭಕ್ತನು ಸರ್ವಾಂಗಲಿಂಗಿಯಾಗಿ ಸದಾಚಾರಿಯಾಗಿರುತ್ತಾನೆ. ಆತನ ಹಿರಿಮೆ ಹೆಚ್ಚು ಎತ್ತರ, ಹೆಚ್ಚು ಬಿತ್ತರ. ಆತನ ಕಾಯ ಅದೊಂದು ಉಪ್ಪರಗುಡಿ ಅಂದರೆ ಮಹಡಿ. ಆ ಮಹಡಿ ಬಾನಿನೆತ್ತರ. ಆತನ ಸಚ್ಚಾರಿತ್ರಕೀರ್ತಿವಾರ್ತೆ ಸಾಗರದಂತೆ ಬಹು ಬಿತ್ತರ. ಹೀಗಿದ್ದರೂ ಆತನಿಗೆ ಹಮ್ಮಿಗೆ ಇಂಬಿಲ್ಲ. ಕಂಡ ಭಕ್ತನಿಗೆ ಶರಣೆನ್ನುವುದೇ ಆತನ ತಪೋನುಷ್ಠಾನ ; ಸರ್ವಶಾಸ್ತ್ರ ಜ್ಞಾನ. ಲಿಂಗಭಕ್ತನೇ ಆತನಿಗೆ ಪಾವನಸ್ಥಲ, ಪಾವನ ಜಲ. ಆತನ ತನುತ್ರಯವೇ ಶಿವಾಲಯ ; ವಿನಯಾದಿ ಗುಣಗಣವೇ ಶಿವಾರ್ಚನಸಾಹಿತ್ಯ. ಧಾರಣಧ್ಯಾನಾದಿಗಳಿಂದ ಸದಾ ಸನ್ನಿಹಿತವಾಗಿರುವುದೇ ಶಿವಾರ್ಚನ. ಸಮತಾಭಾವವೇ ಆರೋಗಣೆಯ ತಟ್ಟೆ. ಸತ್ಯವೇ ಅದರ ಮುಕ್ಕಾಲುಳ್ಳ ಮಣೆ. ಘನಮನವೇ ಮೀಸಲೋಗರ. ಮಹಾಲಿಂಗಾರ್ಪಣವೇ ಆರೋಗಣೆ. ಹೃದಯದ ಹರುಷವೇ ಹಸ್ತಗಳನ್ನು ತೊಳೆವ ತೀರ್ಥಜಲ. ವಾತ್ಸಲ್ಯವೇ ವೀಳೆ. ಕರುಳಕಲಿತನವೆ ಜಾಗಟೆನಾದ. ಪಾವನಪರಂಪರೆಯೇ ಸ್ಥಳಕುಳ ಕಟ್ಟಳೆಯೇ ಸಂಗೀತವಾಗಿ ಸಮರಸಭಾವದಲ್ಲಿರುವುದೇ ಮಹಾಲಿಂಗೋಪಾಸನೆ ; ಮತ್ತು ಮಹಾಲಿಂಗ ಸಂಗಮಸಿದ್ಧಿ.

'ಗುರುಲಿಂಗಜಂಗಮವು ಸನ್ಮತವಾದ ಕ್ರಿಯೆಮನಹುದಾಗದೆಂಬುವರು. ಸತ್ಕ್ರಿಯೆವಿಡಿದು ತನುವಗಮಿಸುವುದು. ಅರುಹುವಿಡಿದು ಮನವಗಮಿಸುವುದು. ಸಾಕ್ಷಿ: 'ಕ್ರಿಯಾದ್ವೈತಂ ನ ಕರ್ತವ್ಯಂ ಭಾವಾದ್ವೈತಂ ಸಮಾಚರೇತ್ । ಕ್ರಿಯಾ ನಿರ್ವಾಹತೇ ಯಸ್ತು ಭಾವಶುದ್ಧಂತು ಶಾಂಕರಿ॥' ಎಂಬುದಾಗಿ ಅನುಭಾವದಿಂದೆ ಸಕಲೇಂದ್ರಿಯಂಗಳು ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ತದ್ರೂಪು.'

ಸಚ್ಚಿದಾನಂದ ಸ್ವರೂಪವು ಭಕ್ತನಿಗೆ ಸಮನಿಸಿದರೂ ಕ್ರಿಯಾಕ್ರಿಯೆಗಳ ನಿಂಗಡಣೆಯ ವಿಚಾರವಿರಬೇಕು. ಕರ್ತವ್ಯಾಕರ್ತವ್ಯಗಳ ವಿಮರ್ಶೆಯಿರಬೇಕು ತನುವಿನಲ್ಲಿ ಸತ್ಕ್ರಿಯಾಚರಣೆಯಿರಬೇಕು. ಮನದಲ್ಲಿ ಅರುವಿರಬೇಕು.

ಭಾವದಲ್ಲಿ ಅನುಭಾವಬೇಕು. ಅಳವಟ್ಟು ಅವಿರಳವಾಗಿರಬೇಕು. ಒಂದೇ ಆರಾಗಬೇಕು ; ಆರು ಒಂದಾಗಬೇಕು. ಬೀಜ ಮರವಾಗಬೇಕು ; ಮರ ಬೀಜವಾಗಬೇಕು.

'ಮಾಟವಿಲ್ಲದ ಕೂಟವದೇಕೊ ? ಕೂಟಲ್ಲದ ಮಾಟವದೇಕೋ ? ಮಾಟಕೂಟವೆರಡರನುವನರಿಯಬೇಕು. ಸಟೆಯಿಲ್ಲದೆ ದಿಟವ ರೂಢಿಸಿ ಸಯವಾಗಬೇಕು. ಮಾಟಕೂಟವೆರಡರನುಮತದಿಂದವೆ ಭಕ್ತಿರತಿಯಯ್ಯಾ ಕೂಡಲ ಚೆನ್ನಸಂಗಮದೇವಾ.'

ಮಾಟವೆಂದರೆ ಭಕ್ತಸ್ಥಲ. ಕೂಟವೆಂದರೆ ಐಕ್ಯಸ್ಥಲ. ಕ್ರಿಯಾಪ್ರಧಾನವಾದ ಭಕ್ತಸ್ಥಲವೂ ಬೇಕು ; ಜ್ಞಾನಪ್ರಧಾನವಾದ ಐಕ್ಯಸ್ಥಲವೂ ಬೇಕು. ಅಂದರೆ ಭಕ್ತಸ್ಥಲದಲ್ಲಿ ಐಕ್ಯಸ್ಥಲವಿರಬೇಕು ; ಐಕ್ಯಸ್ಥಲದಲ್ಲಿ ಭಕ್ತಸ್ಥಲವಿರಬೇಕು. ಇವೆರಡರ ಅನುವನ್ನು ಸಂಬಂಧ ಸಕೀಲವನ್ನು ಅರಿಯಬೇಕು. ಅರಿಯದಿದ್ದರೆ ಅರ್ಥವಿಲ್ಲ. ಅವೆರಡರಲ್ಲಿ ಅದೆಷ್ಟು ದಿಟ, ಅದೆಷ್ಟು ಸಟೆ ಎಂಬುದನ್ನು ಎಚ್ಚರಿಕೆಯಿಂದ ಅರಿಕೆಗೆ ತಂದುಕೊಂಡು ರೂಢಿಸಿಕೊಳ್ಳಬೇಕು ; ರೂಪಿಸಿಕೊಳ್ಳಬೇಕು. ಮಾಟ–ಕೂಟ ಅಂದರೆ ಕ್ರಿಯಾಜ್ಞಾನಗಳೆರಡರ ಸಮನ್ವಯವಿಲ್ಲದೆ ಭಕ್ತಿರತಿಬಾರದು. ಭಕ್ತಿರತಿ ಬಾರದೆ ಸಮರತಿ ಬಾರದು.

'ಸೂತಕವಿರಹಿತ ಲಿಂಗಾರಾಧನೆ ತನುಮೂರ್ತಿಯಾದ ಲಿಂಗೈಕ್ಯ. ಪಾತಕವಿರಹಿತ ಜಂಗಮಾರಾಧನೆ ಮನಮೂರ್ತಿಯಾದ ಲಿಂಗೈಕ್ಯ. ಸೂತಕ ಪಾತಕ ಹಿಂಗಿತ್ತಯ್ಯ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು.'

ಇದು ಭಕ್ತನ ಮಹಾಲಿಂಗೈಕ್ಯದ ಪರಿ. ಇದು ಜೀವನ್ಮುಕ್ತಿಯ ಗುರಿ. ಸೂತಕವಿಲ್ಲದ ಲಿಂಗಾರಾಧನೆ, ಪಾತಕವಿಲ್ಲದ ಜಂಗಮಾರಾಧನೆ ಭಕ್ತನಿಗೆ ಘಟಿಸಬೇಕು. ಆಗ ತನುವಿದ್ದು ಮನವಿದ್ದು ಲಿಂಗೈಕ್ಯಸ್ಥಿತಿ ಸಮನಿಸುತ್ತದೆ. ತನುವಿಲ್ಲದಂತಾಗುವುದು ಮನವಿಲ್ಲದಂತಾಗುವುದು ಭಕ್ತನ ನಿಜಲಿಂಗೈಕ್ಯವಲ್ಲ. ತನುವಿಕಾರವಾಗದೆ ಮನ ವಿದೂಷಿತವಾಗದೆ ಇರುವುದೇ ಭಕ್ತನ ಲಿಂಗೈಕ್ಯ. ತನುವಿನಲ್ಲಿ ಸೂತಕಕ್ಕೆ ಮನದಲ್ಲಿ ಪಾತಕಕ್ಕೆ ಇಂಬಿರಬಾರದು. ತನುವಿನಲ್ಲಿ ಲಿಂಗಾರಾಧನೆಗೆ ಅಂದರೆ ಸತ್ಕ್ರಿಯಾನಿರತತೆಗೆ ಕೊರತೆಯಿರಬಾರದು. ಮನದಲ್ಲಿಜಂಗಮಾರಾಧನೆಗೆ ಅಂದರೆ ಸುಜ್ಞಾನಭರಿತತೆಗೆ ಕೊರತೆಯಿರಬಾರದು.

ಸತ್ಕ್ರಿಯಾನಿರತ ತನುವಿಗೆ ಸೂತಕವಿಲ್ಲ. ಸೂತಕವಿಲ್ಲದ ಅಂಗಕ್ಕೆ ಲಿಂಗ ವಿರಹಿತತ್ವವಿಲ್ಲ. ಸುಜ್ಞಾನನಿರತ ಮನಕ್ಕೆ ಪಾತಕವಿಲ್ಲ. ಪಾತಕವಿಲ್ಲದ ಆತ್ಮಕ್ಕೆ ಪಾರಮ್ಯತ್ವಚ್ಯುತಿಯಿಲ್ಲ. ಅಣು ಮಹತ್ತುಗಳೆರಡು ಭೇದಾಭೇದ ಸ್ಥಿತಿಯಲ್ಲಿರುತ್ತವೆ.

'ಇನ್ನು ಗುರುವೆಂದು ಮನದಲ್ಲಿ ಹೊಳೆದು ಕಾಣಿಸುವನ್ನಕ್ಕರ ಗುರು ಲಿಂಗಸಾಹಿತ್ಯವಾದುದಿಲ್ಲ. ಇನ್ನು ಲಿಂಗವ ಬೆರಸಬೇಕೆಂದು ಮನದಲ್ಲಿ ಕಾಮಿಸುವನ್ನಕ್ಕರ ಲಿಂಗಸಾಹಿತ್ಯವಾದುದಿಲ್ಲ. ಇನ್ನು ವಿಶೇಷತ್ವವಾವು ದೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಜಂಗಮಲಿಂಗಸಾಹಿತ್ಯ ವಾದುದಿಲ್ಲ. ಇನ್ನು ನಿಜಮುಕ್ತಿಯಾಗಬೇಕೆಂದು ಮನದಲ್ಲಿ ಕಲ್ಪಿಸಿ ಕೊಂಡು ಕಾಮಿಸುವನ್ನಕ್ಕರ ಪ್ರಸಾದಲಿಂಗ ಸಾಹಿತ್ಯವಾದುದಿಲ್ಲ. ಗುರು ಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಈ ಚತುರ್ವಿಧವನೇಕೀಕರಿಸಿ ಕೊಂಡನುಭಾವಿಸಿ ಪ್ರಾಣಲಿಂಗಿಯಾದ ಮಹಾಮಹಿಮ ಕಾಣಿಸಲಿಲ್ಲ ಭಾವಿಸ ಲಿಲ್ಲ ಭಜಿಸಲಿಲ್ಲ. ಆತ ನಿಶ್ಚಿಂತ ಪರಮಸುಖಿ. ಆತನಿರ್ದುದೇ ಕೈಲಾಸ. ಆತ ಸರ್ವಾಂಗ ಲಿಂಗಿಯಯ್ಯಾ ಕೂಡಲ ಚೆನ್ನಸಂಗಮದೇವಾ.'

ಭಕ್ತನು ಚತುರ್ವಿಧ ಸಾರಾಯ ಸಂಪತ್ತನ್ನು ಕೇವಲ ಭೇದದೃಷ್ಟಿ ಯಿಂದಾಗಲಿ ಕೇವಲ ಅಭೇದದೃಷ್ಟಿಯಿಂದಾಗಲಿ ನೋಡಬಾರದು. ಭಿನ್ನ ವಾಗಿ ಕಾಣುವುದು ಭಾವಿಸುವುದು ಭಜಿಸುವುದು ಭಕ್ತನಿಗೆಯುಕ್ತವಲ್ಲ ; ಚತುರ್ವಿಧ ಸಾರಾಯಸಂಪತ್ತು ತನಗೆ ಸಾಹಿತ್ಯವಾಗುವುದಿಲ್ಲ. ಆಗದ ಬಳಿಕ ಪ್ರಾಣಲಿಂಗಿತ್ವ ಪ್ರಾಪ್ತಿಯಿಲ್ಲ. ಪ್ರಾಣಲಿಂಗಿಯಾಗದೆ ಪರಮ ನಿಶ್ಚಿಂತತೆ ತನಗಾಗದು, ಪರಮಸುಖಿ ತಾನಾಗನು ; ಸರ್ವಾಂಗಲಿಂಗಿ ತಾನೆನಿಸನು.

ಮರ ಎಲೆ ಹೂವು ಕಾಯಾದರೆ ತೀರದು. ಆ ಕಾಯಿ ಹಣ್ಣಾಗಬೇಕು. ಆ ಹಣ್ಣಿನಲ್ಲಿ ಬೀಜನಾಗಬೇಕು. ಆ ಬೀಜದಲ್ಲಿ ಮರವೆಲ್ಲ ಐಕ್ಯ ಅಂದರೆ ಸಮರಸವಾಗಿರುತ್ತದೆ. ಇದರಂತೆ ಭಕ್ತನ ಪಂಚೇಂದ್ರಿಯಗಳು ಲಿಂಗವಾದರೆ ಸಾಲದು, ಮನವೂ ಲಿಂಗವಾಗಬೇಕು. ಆಗ ಆ ಮಹಾಲಿಂಗದಲ್ಲಿ ಕಾರ್ಯೇಂದ್ರಿಯಗಳೆಲ್ಲವೂ ಕೇಂದ್ರೀಕರಿಸುತ್ತವೆ. ಹೇಗೆ ಬೀಜ ಗಾತ್ರದಲ್ಲಿ ಚಿಕ್ಕದಾದರೂ ಗುಣದಲ್ಲಿ ಹಿರಿದಾಗಿರುತ್ತದೆಯೋ ಹಾಗೆ ಮನಲಿಂಗ ಗಾತ್ರ

ದಲ್ಲಿ ಕಿರಿದಾದರೂ ಪಾತ್ರತೆಯಲ್ಲಿ ಹಿರಿದಾಗಿರುತ್ತದೆ. ಅದರಿಂದ ಅದು 'ಮಹಾ-ಲಿಂಗ'ವೆಂದೆನಿಸುತ್ತದೆ. ಅದರ ಹೆಸರು ಹೆಚ್ಚು ಸಾರ್ಥಕವೂ ಅನ್ವರ್ಥಕವೂ ಆಗುತ್ತದೆ.

'ಕಿಂತ್ವೇತೇಷಾಂ ಸ್ಥಲಾನಾಂತು ಪ್ರಾದುರ್ಭಾವಃ ಪ್ರದಶ್ಯತೇ । ಶಿವ ಏವ ಸ್ವ ಚಿಚ್ಛಕ್ತ್ಯಾ ಮಹಾಲಿಂಗಸ್ಥಲಂ ಬಭೌ ॥'

ಅಂತಹ ಭಕ್ತನ ಮನದಲ್ಲಿ ಆತ್ಮಾಂಶವಿರುತ್ತದೆ. ಇದರಿಂದಾಗಿ ಗಂಧದಲ್ಲಿ ತೃಪ್ತ್ಯಂಶವುಂಟಾಗುತ್ತದೆ. ಮೂಲ ಮಹಾಲಿಂಗದ ಕಳೆಯು ಮನದಲ್ಲಿ ಬೆಳಗುತ್ತದೆ. ಅದುವೇ ಭಕ್ತನ ಮಹಾಲಿಂಗವೆನಿಸುತ್ತದೆ. ಅದು ಗಂಧದಲ್ಲಿರುವ ಸೂಕ್ಷ್ಮವಾದ ತೃಪ್ತ್ಯಂಶವನ್ನು ತಳೆಯುತ್ತದೆ.

ಹೀಗೆ ಭಕ್ತಸ್ಥಲವೊಂದರಲ್ಲಿಯೇ ಷಡ್ವಿಧ ಲಿಂಗಗಳು ಅಂಗಗಳು ಸಂಗ ಸಮರಸವನ್ನು ತಳೆಯುತ್ತವೆ. ಭಕ್ತನ ಭಕ್ತನು ಭಕ್ತನ ಐಕ್ಯಸ್ಥಲ ಸಂಪನ್ನನಾಗುತ್ತಾನೆ. ಆಚಾರದೊಳಗಿನ ಆಚಾರಲಿಂಗ ಮೊದಲ್ಗೊಂಡು ಆಚಾರದೊಳಗಿನ ಮಹಾಲಿಂಗದ ವರೆವಿಗೂ ಕಳೆಯನ್ನು ಕೈಗೂಡಿಸಿಕೊಳ್ಳುತ್ತಾನೆ. ಇದರಿಂದ ಭಕ್ತನ ಕಾಯವೆಲ್ಲ ಲಿಂಗ ಕಾಯವಾಗುತ್ತದೆ. 'ಭಕ್ತ ಕಾಯೋ ಮಮಕಾಯಃ' ಎಂಬ ಶಿವಾಗಮ ಸೂಕ್ತಿಯು ಸಾರ್ಥಕವಾಗುತ್ತದೆ.

ಮಾರ್ಗಕ್ರಿಯೆಗೆ ಮೂರು ಮಾರ್ಗ, ಅಥವಾ ಮೂರು ಅಂಗ; ಭಕ್ತ ಮಹೇಶ ಪ್ರಸಾದಿ ಎಂದು. ಇವುಗಳಲ್ಲಿ ಒಂದಾದ ಒಂದನೆಯದಾದಾ ಭಕ್ತ ಸ್ಥಲ ನಿಸ್ಥಲವಾಯಿತು. ಆ ನಿಸ್ಥಲಕ್ಕೇರುವ ಶಕ್ತಿ ಭಕ್ತಿಗಳನ್ನು ಅಂಗ ಲಿಂಗಗಳನ್ನು ಸ್ಥಳಕುಳಗಳನ್ನು ಕರುಣಿಸಿದ ಸಕಲ ಕಳಾಗುರುವನ್ನು ಭಾವಿಸೋಣ, ಭಜಿಸೋಣ :

"ಸ್ಥಳಕುಳದೊಳ ಗಣ ಹೊಳಹ ತಿಳುಹಿ ಬಲು
ಕಳವಳಗಳ ನಳಿದ ಶ್ರೀಗುರುವೆ ಸಲೆ
ಬೆಳಗನು ತೋರಿದೆ ಶ್ರೀಗುರುವೆ ॥ಪ॥
ಅಂಗಲಿಂಗವೆಂಬ ಸಮರತಿ
ಹಿಂಗದ ಸುಖ ಸಂಯೋಗದ ಶರಣರ

ಸಂಗನ ಬಸವೇಶ್ವರನನುಭಾವದ
ಲಿಂಗವನು ಕರುಣಿಸಿದ ಶ್ರೀಗುರುವೆ ||೧||

ಎಲ್ಲಿರ್ದ ಸ್ಥಲದಲ್ಲಿಯೀ ನೀನಲ್ಲದೆ ಮತ್ತಿ-
ನ್ನಿಲ್ಲವು ಹಿಂದೆ ಮುಂದೆಂಬುದನು
ಎಲ್ಲ ಸ್ಥಲವಿಟ್ಟು ಸಂದಣಿಸಿದ ಷಟ್-
ಸ್ಥಲದಲ್ಲಿಯೆ ತೋರಿದ ಶ್ರೀಗುರುವೆ ||೨||

ಆವಾವ ಸ್ಥಳದೊಳಗಾವಾವದ-
ನಾವರ್ಚಿಸಬೇಕೆಂಬುದನರುಹಿ
ಧಾವತಿಗೊಳಿಸದೆ ಮನಕೆ ಮಹಾ ಘನವೆನಿಸುವ
ದೇವನ ಕರಸ್ಥಳಕೆ ತಂದಿರಿಸಿದ ಶ್ರೀಗುರುವೆ ||೩||

ನಿಂದ ನಿಲವಿನೊಳಗೊಂದಿದ ತಾಮಸವನು ಕೊಂದು
ಮುಂದೆ ಷಡ್ವಿಧವೆನಿಸುವ ಲಿಂಗದೊಳು
ಸಂದಿಲ್ಲದೆ ಸರ್ವಾಂಗವೆಲ್ಲವು ಲಿಂಗವಾ-
ದಂದವನುರೆ ನೆರೆ ತೋರಿದ ಶ್ರೀಗುರುವೆ ||೪||

ಆ ರಂಗಸ್ಥಲದುದ್ಯೋಗವನರುಹಿಸಿ
ಯಾರು ಲಿಂಗಾಂಗಸಂಗಂಗಳನವನು
ತೋರಿ ಬಸವನೆ ಸಂಗ ಸದಾಶಿವನೆಂದೆನಿಸಿ
ಬೇರೆಂದೆನಿಸದೆ ಬೆರಿಸಿದಂಥ ಶ್ರೀಗುರುವೆ ||೫|| ”

ಎಂದು ಸಮ್ಯಕ್‌ಜ್ಞಾನಿ ಚೆನ್ನಬಸವಣ್ಣನೊಡನೆ ದನಿಗೂಡಿಸಿ ಮನ ಮೇಳವಿಸಿ ಬಗೆ ಬೆರೆಯಿಸಿ ಹಾಡಿ ಹರುಷಿಸದೆ ಸುಮನ ಶಾಂತವಾಗದು ; ಸಂಪುಟ ಸಾಂಗವಾಗದು.

ಅನುಬಂಧ

ಭಕ್ತಸ್ಥಲ

ಸತ್ಸಂಪಾದನೆ :

ಅಸತೋ ಮಾಸದ್ಗಮಯ !

ಇದು ಭಕ್ತಸ್ಥಲದ ಹೃದಯ ಧ್ಯೇಯ. ಭಕ್ತ ಯಾವುದನ್ನೆ ಸಂಪಾದಿಸಲಿ ಅದೆಲ್ಲ ಸತ್ಸಂಪಾದನೆಯಾಗಬೇಕು. ಗುಣ, ಕ್ರಿಯೆ, ಹಣ, ತನು, ಆಚಾರ ಇವೇ ಭಕ್ತನ ಸಂಪತ್ತು. ಇವನ್ನು ಸತ್ಯ ಶುದ್ಧ ಮಾರ್ಗದಲ್ಲಿ ಸಂಪಾದಿಸುವುದೇ ಭಕ್ತನ ಭಕ್ತಿಯ ಹೆಜ್ಜೆ. ಕ್ರಿಯೆಯೇ ಈತನ ಶಕ್ತಿ. ಕಾಯಕವೇ ಈತನ ಚಟವಟಿಕೆ. ಶ್ರದ್ಧೆಯೇ ಈತನ ಭಕ್ತಿ. ಆಚಾರವೇ ಈತನ ಆರಾಧ್ಯ ದೇವತೆ. ನಿವೃತ್ತಿಯೆ ಈತನ ಕಲೆ.

ಈ ಸಾಧನ ಸಂಪತ್ತಿಯಿಂದ ಭಕ್ತನು ಅಸದ್ರೂಪ ದಾರಿದ್ರ್ಯದಿಂದ ಸದ್ರೂಪ ಧನವಂತಿಕೆಗೆ ಭಕ್ತ ಬರಬೇಕು. ಇಲ್ಲಿ ಅಸತ್ ಅಂದರೆ ಮಿಥ್ಯೆಯಲ್ಲ; ದೋಷಯುಕ್ತ. ಸತ್ ಅಂದರೆ ದೋಷರಹಿತತ್ವ. ಇದನ್ನು ಮುಖ್ಯವಾಗಿ ಗಮನಿಸಬೇಕು. ಇಲ್ಲವಾದರೆ ಅದ್ವೈತಿಯ ಸದಸದ್ವಿವೇಕ ರೂಪ ಸತ್ಯ ಮಿಥ್ಯವಾದಭೂಮಿಕೆಯಲ್ಲಿ ಹೆಜ್ಜೆಹಾಕಬೇಕಾದೀತು ! ಅದು ವಾಸ್ತವವಲ್ಲ. ಒಂದಂಶ ಸತ್ಯ, ಇನ್ನೊಂದಂಶ ಮಿಥ್ಯ ಎಂದು ಹೇಳುವ ವಾದ ಸರ್ವ ಸತ್ಯವಾದಿಯಾದ ಶಿವಾದ್ವೈತದ ಭಕ್ತನಿಗೆ ಸಲ್ಲದು.

ಭಕ್ತಿಮೂಲ :

ಮುಮ್ಮೊದಲು ಭಕ್ತನಿಗೆ ಕಾಮ ಭಾವ ಕಳೆದು ಪ್ರೇಮಭಾವ ಒಡಮೂಡಬೇಕು. ತಂದೆ ತಾಯಿಗಳಲ್ಲಿ ಪ್ರೇಮಾಂಕುರವಾಗಬೇಕು ; ಗುರುದೇವತೆಗಳಲ್ಲಿ ಆ ಅಂಕುರಪ್ರೇಮ ಹೆಮ್ಮರವಾಗಬೇಕು. ಹೂವ ಹಣ್ಣುಗಳ ಬಿಡಬೇಕು. ಸಸಿಯ ಬೆಳವಣಿಗೆಗೆ ರಸ, ಅಥವಾ ನೀರ, ಮೈ ಬೆಳವಣಿಗೆಗೆ ಆಹಾರ ಹೇಗೆ ಅವಶ್ಯಕವೋ ಆತ್ಮದ ಅಭಿವೃದ್ಧಿಗೆ ಭಕ್ತಿರಸ, ಅತ್ಯಾವಶ್ಯಕ. ತನ್ನ ಮೇಲಿರುವುದಕ್ಕಿಂತ ಮಿಗಿಲಾಗಿ ಗುರುದೇವರಲ್ಲಿ ಪ್ರೇಮ ಹೆಚ್ಚಿರಬೇಕು. ಏಕೆಂದರೆ ತನ್ನ ಬಾಳ್ದೇರನ್ನು ಒಳ್ದಾರಿ (ಸುಪಥ) ಯಲ್ಲಿ

ನಡಸುವವರು ಗುರು–ದೇವರಿಬ್ಬರು. ಗುರುದೇವ (ಲಿಂಗ) ರಲ್ಲಿ ಬಿರುಕಿಲ್ಲ; ತಿಳುವಳಿಕೆಗಾಗಿ ಬೇರಾಗಿ ಹೇಳುತ್ತಿರಲಾಗಿದೆ. ಜೀವನ ಪ್ರೇರಕನು ಪರಮಾತ್ಮನಲ್ಲದೆ ತನ್ನ ಜೀವಾತ್ಮನಲ್ಲ. ಜೀವಾತ್ಮನು ಕೇವಲ ಕರ್ತೃ. ಭೋಕ್ತೃ. ದೇಹರಥದ ಒಡೆಯನಾಗಿ ಜೀವಾತ್ಮನು ಕುಳಿತಿದಾನೆ. ಪರಮಾತ್ಮನು ಇದನ್ನು ನಡಸುತ್ತಿದ್ದಾನೆ. ಆದ್ದರಿಂದ ಅವನಲ್ಲಿ ಜೀವಾತ್ಮನಿಗಿಂತ ಹೆಚ್ಚಿನ ಪ್ರೇಮವನ್ನಿಡಲು ಮೊದಲು ಕಲಿಯಬೇಕು.

ಆ ಪರಮಾತ್ಮನಲ್ಲಿ ಇಡುವ ಪ್ರೇಮವೇ ಭಕ್ತಿಯೆನಿಸುತ್ತದೆ. ಆದರೆ ಆ ಪರಮಾತ್ಮನು ನಮಗೆ ಕಾಣುವುದಿಲ್ಲ; ನಾವು ಕಂಡಿಲ್ಲ. ಕಾಣದ ದೇವರಲ್ಲಿ ಕಣ್ಣಿಡುವದಾಗಲಿ, ಮನ ಮಾಡುವದಾಗಲಿ ಅಸಂಭವ, ಆಯಾಸ. ಆ ಕಾಣದ ವಸ್ತುವನ್ನು ಕಾಣಿಸುವ ಕೈಗೆ ತಂದು ಕರುಣಿಸುವ ಶಕ್ತಿಯುಳ್ಳಾತನೊಬ್ಬನು ಬೇಕು. ಆ ಶಕ್ತಿಯುಳ್ಳಾತನೇ ಶ್ರೀಗುರು. ಈತನು ಕಾಣುವ ಪರಮಾತ್ಮ. ಮುಮ್ಮೊದಲು ಈತನಲ್ಲಿ ಭಕ್ತನು ತನ್ನ ಭಕ್ತಿಯನ್ನಿಡಬೇಕು. ಇಟ್ಟರೆ ಶ್ರೀಗುರು ತನ್ನೊಳಗಿರುವ ತನಗೆ ಪ್ರೇರಕನಾದ ಆ ಪರಮಾತ್ಮ ಕಳೆಯನ್ನು ಹೊರಹೊಮ್ಮಿಸಿ ತಂದು ಸಂಸ್ಕರಿಸಿದ ಶಿಲಾಪೀಠದಲ್ಲಿ ಇರಿಸಿ ಕರಸ್ಥಲಕ್ಕೆ ಕೊಡುವನು. ಕಣ್ಣಿಗೆ ಕಾಣಿಸುವನು. ಪ್ರತೀಂದ್ರಿಯದಲ್ಲಿಯೂ ಪ್ರತಿಷ್ಠಿಸುವನು.

ಹೀಗೆ ಪ್ರತ್ಯಕ್ಷವಾಗಿಸಿಕೊಟ್ಟ ಆ ಪರಮಾತ್ಮನ ಸಕಲ ಕಳೆಯನ್ನು ಅಂದರೆ ಸತ್ಕಳೆಯನ್ನು ಆರಾಧಿಸಿ ಅಂಗವಿಸಿಕೊಳ್ಳುವುದೇ ಭಕ್ತನ ಸತ್ಸಂಪಾದನೆ. ಅಸತ್ತಿನಿಂದ ಸತ್ತಿಗೆ ಹೋಗಲು ಪ್ರಯತ್ನಿಸದೆ ಆ ಸತ್ಕಳೆಯು ಸಮನಿಸದು. ಅದಕ್ಕಾಗಿ ಪ್ರಯತ್ನಿಸಲು ಬೇಕಾದ ಸಾಧನ ಸಂಪತ್ತಿಯೇ ಶ್ರದ್ಧೆ, ಸದಾಚಾರ, ಸತ್ಕಾಯಕಾದಿಗಳು.

ಸತ್ಸಂಪಾದನೆಯಲ್ಲಿ ಶ್ರದ್ಧೆಗೆ ಮೊದಲ ನೆಲೆಯಿದೆ. ಸತ್ಪಥದಲ್ಲಿ ಸಾಗಲು ಅದರ ಆಸಕ್ತಿಗಳು ಅತಿಶಯವಾಗಬೇಕು. ಆ ಪ್ರೇರಕನನ್ನು ಪ್ರತ್ಯಕ್ಷಗೊಳಿಸುವ ಪ್ರೇಮ ಸೀಮಾತೀತವಾಗಬೇಕು. ಆತನ ಆ ಸತ್ಕಳೆಯನ್ನು ಸಂಪಾದಿಸುವ ಸ್ಪೃಹೆ ಸಾತಿಶಯವಾಗಬೇಕು. ಆತ್ಮವಿಶ್ವಾಸ ಅತ್ಯಧಿಕವಾಗಿರಬೇಕು. ಆ ಸ್ಪೃಹೆಯೇ ಶ್ರದ್ಧೆ.

ಹೊತ್ತಾರೆ ದುಂಬಿ ಹೂವಿನ ಬಂಡುಣಿಸಿಗೆ ಹಾರೈಸಿ ಹರಿದಾಡುವಂತೆ ಗುರು ಭಾನುವಿನ ಕರುಣೋದಯಕ್ಕೆ ಒಳಗಾದ ಭಕ್ತನು ತನ್ನ ಕರಕಮಲ ದಲ್ಲಿರುವ ಅಥವಾ ತನ್ನ ಹೃತ್ಕಮಲದಲ್ಲಿರುವ ಇಷ್ಟಲಿಂಗದ ಸತ್ಕಳೆಯೆಂಬ ಮಕರಂದ ಪಾನಕ್ಕೆ ಹಾರೈಸಬೇಕು; ಹೃದಯ ಹರಿದಾಡಬೇಕು. ಅಂದರೆ ಕ್ರಿಯಾಲಿಂಗವನ್ನು ಕರಕ್ಕೆ ತಂದರ್ಚಿಸಿ ಅದರ ಆ ಕಳೆಯನ್ನು ಕಣ್ಣುಗಳಲ್ಲಿ ತುಂಬಿಕೊಳ್ಳಬೇಕು. ಕರುಳಿನಲ್ಲಿ ತುಂಬಿಕೊಳ್ಳಬೇಕು. ತುಂಬಿಕೊಂಡು ತನ್ನ ಅಂದಿನ ಮುಂದಿನ ಎಲ್ಲ ವ್ಯವಹಾರಗಳಲ್ಲಿ ಕೈಯಿಂದ ಮಾಡುವುದನ್ನು ಕಣ್ಣಿಂದ ನೋಡುವುದನ್ನು ಕರುಳಿನಿಂದ (ಮನದಿಂದ) ನೆನೆವುದನ್ನು ಸತ್ಯ ಶುದ್ಧವಾಗಿ ಮಾಡಬೇಕು, ನೋಡಬೇಕು; ನೆನೆಯಬೇಕು. ಈ ತ್ರಿವಿಧ ಶುದ್ಧಿಯೇ ಭಕ್ತನ ಸತ್ಯಸಾಧನೆ; ಸತ್ಸಾಧನೆ. ಈ ಸಾಧನೆಯಲ್ಲಿ ಈ ಶುದ್ಧಿ ಸಂಪಾದನೆಯಲ್ಲಿ ಭಕ್ತನಿಗೆ ಶ್ರದ್ಧೆ ಬೆನ್ನಾಸರ. ಶ್ರದ್ಧೆಯಿಲ್ಲದ ಜೀವನ ಅದೊಂದು ಅಲುಗಾಡದ ಚಲನವಿಲ್ಲದ ಜಡಮುದ್ದೆ. ಶ್ರದ್ಧೆಯೇ ಬೆಳೆವ ಭಕ್ತನಿಗೆ ಶ್ರೇಷ್ಠವಿದ್ಯೆ.

ಭಕ್ತನಿಗೆ ವಿನಯವೆ ವಿಶಿಷ್ಟ ಗುಣ. ವಿನಯವಂತನಾಗಿಯೆ ವ್ಯವ ಹರಿಸಬೇಕು; ಜೀವಿಸಬೇಕು. 'ಕಿಂಕರ ಭಾವಮಂ ಬಲಿದು' ಎಂದು ಮೊಗ್ಗೆಯ ಮಾಯಿಪ್ರಭು ಹೇಳಿದರೆ 'ಸದುವಿನಯವೇ ಸದಾಶಿವನ ಒಲುಮೆ ಯಯ್ಯ' ಎಂದರು ಬಸವಣ್ಣನವರು. ಶಿವನ ಒಲುಮೆಯನ್ನೆ ಸಾಧಿಸ ಬಲ್ಲ ವಿನಯ ಇನ್ನೇನನ್ನು ಸಾಧಿಸಲಾರದು?

'ವಿದ್ಯಾ ದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾ। ಪಾತ್ರ ತ್ವಾದ್ಧನಮಾಪ್ನೋತಿ, ಧನಾದ್ಧರ್ಮಂ ತತಃ ಸುಖಮ್ ॥' ವಿದ್ಯೆ ವಿನಯ ಗಳ ಪ್ರಭಾವ ಇಂತಹದು. ಪಾತ್ರತೆ, ಧನ, ಧರ್ಮ, ಸುಖಗಳನ್ನು ಒದ ಗಿಸತಕ್ಕವು. ಇಲ್ಲಿ ವಿದ್ಯೆಯೆಂದರೆ ಅವಿದ್ಯೆಗೆ ಅಂದರೆ ಅಶುದ್ಧ ಮಾಯೆಗೆ ಒಳಗಾಗದಿರುವಿಕೆ; ಆತ್ಮಜ್ಞಾನ ಸಂಪನ್ನನಾಗಿರುವಿಕೆ. ಈ ಆತ್ಮಜ್ಞಾನಿಗೆ ವಿನಯದ ಗಳಿಕೆ. ವಿತರಣದೊಡನೆ ಬಾಳುವಿಕೆ. ಶಿವ, ಶಿವನ ಸಿರಿಯಾದ ವಿಭೂತಿ, ರುದ್ರಾಕ್ಷಿ, ಮಂತ್ರ, ಗುರು, ಪ್ರಸಾದಗಳ ಒದಗುವಿಕೆ. ಇವ ಕ್ಕಿಂತ ಇನ್ನಾವುದಿದೆ ಒಳ್ಳಿತಾದ ಗಳಿಕೆ?

ಶ್ರದ್ಧೆಯಿಂದ ವಿನಯಗುಣ. ವಿನಯಗುಣದಿಂದ ಸತ್ಪಾತ್ರತೆ. ಪಾತ್ರತೆಯನ್ನು ನೋಡಿ ಶ್ರೀಗುರು ಲಿಂಗ, ವಿಭೂತಿ, ರುದ್ರಾಕ್ಷಿ, ಮಂತ್ರ, ಪ್ರಸಾದ ರೂಪ ಧನವನ್ನು ಕರುಣಿಸುತ್ತಾನೆ. ಇವನ್ನೆಲ್ಲ ಅರುವಿಗೆ ಇರುವಿಗೆ ತಂದುಕೊಡುತ್ತಾನೆ. ಬಾಹ್ಯ ಭೌತಿಕ ಸಂಪತ್ತು ಸಂಪತ್ತಲ್ಲ. ಇವೇ ನಿಜವಾದ ಸಂಪತ್ತು. ಇವುಗಳಿಂದ ಅರ್ಚನ ಆಚಾರರೂಪ ಧರ್ಮ ಪ್ರೇರಣೆಯುಂಟಾಗುತ್ತದೆ ಅರ್ಚನಾಚಾರರೂಪ ಧರ್ಮಗಳಿಂದ ಸುಖ ವುಂಟಾಗುತ್ತದೆ.

ಗುಣಗಳಲ್ಲಿ ವಿನಯಕ್ಕಿಂತ ವಿಶಿಷ್ಟವಾದ ಸದ್ಗುಣ ಬೇರಿಲ್ಲ; ಸಂಪಾದನೆ ಬೇರಿಲ್ಲ. 'ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕೆ? ನಗುವುದು, ನುಡಿವುದು, ಶಿವಭಕ್ತರೊಡನೆ! ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯ?'

' ಗುರೋರಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ ' ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು ಮಾತನಾಡುವುದಯ್ಯಾ!' 'ಏನು ಬಂದಿರಿ ಹದುಳವಿದ್ದಿರಾ? ಎಂದರೆ ನಿಮ್ಮ ಮೈಸಿರಿ ಹಾರಿಹೋವುದೆ? ಕುಳ್ಳಿರೆಂದರೆ ನಿಮ್ಮ ನೆಲ ಕುಳಿಹೋಹುದೆ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ ಕೆಡಹಿ ಮೂಗಕೊಯ್ಯದೆ ಮಾಣ್ಬನೇ ಕೂಡಲ ಸಂಗಮದೇವನು?'

ಭಕ್ತಸ್ಥಲ ಸಗುಣೋಪಾಸನೆಯ ಅಡಿಗಲ್ಲು. ಸಗುಣ ವಸ್ತುವನ್ನು ಸುಗುಣಗಳಿಂದ ಉಪಾಸಿಸಬೇಕು. ಸುಗುಣಗಳಿಗೆಲ್ಲ ಅಡಿಗಲ್ಲು ಸುವಿನಯ. ವಿನಯ ಪಾತ್ರತೆಯೊಡನೆ ಕ್ರಿಯಾಶಕ್ತಿಯ ನೆರವು ಅನಿವಾರ್ಯ.

ಕ್ರಿಯಾಶಕ್ತಿ :

ಕ್ರಿಯೆಯೆಂದರೆ ಸ್ಥೂಲಾಂಗದ ಚಲನವಲನ. ಇದಕ್ಕೆ ಬೇಕಾದ ಬಲವೇ ಶಕ್ತಿ. ಸ್ಥೂಲಾಂಗದ ಪ್ರತಿಯೊಂದು ಚಲನವಲನವೂ ಪರಿಶುದ್ಧವಾಗಿರಬೇಕು, ಪರಮಾರ್ಥ ಯುಕ್ತವಾಗಿರಬೇಕು; ಪರಹಿತಾರ್ಥವಾಗಿರಬೇಕು. ಆಗ ಆ ಮೂಲ ವಿಮರ್ಶಾಶಕ್ತಿಯು ಸಾರ್ಥಕವಾಗುತ್ತದೆ.

ನಾದಬಿಂದುಗಳನ್ನು ಶಿವವಾಗಿ ಸತ್ಯಸುಂದರವಾಗಿ ರೂಪಿಸುವ ಕುಶಲಕಲೆಯೇ ಕ್ರಿಯೆಯೆನಿಸುತ್ತದೆ.

ಬ್ರಹ್ಮಾಂಡದಂತೆ ಪಿಂಡಾಂಡವೂ ಶಕ್ತಿಮಯವಾಗಿದೆ. ಶಿವಾದ್ವೈತ ಸಿದ್ಧಾಂತವು ಪಿಂಡಾಂಡವನ್ನು ಆರು ಅಂಶ ಅಥವಾ ಅಂಗಗಳೆಂದು ವಿಭಾಗಿಸಿದೆ. ಈ ಒಂದೊಂದು ಅಂಗಕ್ಕೂ ಒಂದೊಂದು ಬಗೆಯ ಶಕ್ತಿಯಿದೆ. ಇದು ಲಿಂಗಗತವಾಗಿ ಪ್ರವೃತ್ತಿಯಲ್ಲಿ ಶಕ್ತಿಯೆನಿಸಿದರೆ ಇದುವೇ ಅಂಗಗತವಾಗಿ ನಿವೃತ್ತಿಯಲ್ಲಿ ಭಕ್ತಿಯೆನಿಸುತ್ತದೆ. ಭಕ್ತಾಂಗನ ಶ್ರದ್ಧೆಗೆ ಕ್ರಿಯಾಶಕ್ತಿಯೇ ಜೀವಾಳ. ಭಕ್ತಾಂಗನ ಶಕ್ತಿದ್ಯೋತಕ ಕ್ರಿಯೆ. ಭಕ್ತಿಮಾಪಕ ಕ್ರಿಯೆ. ಭಕ್ತನ ಶಕ್ತಿ ಭಕ್ತಿಗಳೆರಡೂ ಕ್ರಿಯಾರೂಪದಲ್ಲಿ ಪ್ರಕಟವಾಗುತ್ತವೆ. ಸ್ಥೂಲಾಂಗವು ಕ್ರಿಯೆಯಿಂದ ಜೀವಿತವಾಗುತ್ತದೆ. ಕ್ರಿಯೆಯು ಶ್ರದ್ಧೆಯಿಂದ ಪಾವಿತವಾಗುತ್ತದೆ. ಕ್ರಿಯೆಗೆ ಕಾಯವು ಪ್ರಧಾನಾಂಗವಾಗಿರುತ್ತದೆ.

ಭಕ್ತನ ಕ್ರಿಯಾಶಕ್ತಿಯ ದ್ಯೋತಕ ಕಾಯಕ. ಭಕ್ತ ಯಾವಾಗಲೂ ಸತ್ಯ ಶುದ್ಧ ಕಾಯಕನಿರತನಾಗಿರಬೇಕು. ಸತ್ಯ ಶುದ್ಧ ಕಾಯಕದಿದು ಬಂದುದನ್ನು ಸಚ್ಚಿದಾನಂದರೂಪರಾದ ಗುರು ಲಿಂಗ ಜಂಗಮಕ್ಕೆ ಸಮರ್ಪಿಸುತ್ತಿರಬೇಕು.

ಗುರು ಲಿಂಗ ಜಂಗಮ ತತ್ತ್ವಗಳು ಬಾಹ್ಯ ಆಭ್ಯಂತರ ಎಂದು ಎರಡು ಬಗೆ! ಬಾಹ್ಯ ತತ್ತ್ವತ್ರಯವು ಸಾಮಾಜಿಕ ನಿಷ್ಠವಾದವುಗಳು. ಆಭ್ಯಂತರ ಗುರು ಲಿಂಗ ಜಂಗಮಗಳು ಸ್ವಾಯತ್ತಾತ್ಮಕವಾದವುಗಳು. ಸಮಾಜದ ಸತ್ಕ್ರಿಯೆ, ಚಿತ್ಕ್ರಿಯೆ, ಆನಂದಕ್ರಿಯೆಗಳ ಅಭಿವೃದ್ಧಿಗಾಗಿ ತಾನು ಸತ್ಯಶುದ್ಧವಾಗಿ ಗಳಿಸಿದ ಸಿರಿಯನ್ನು ವಿನಿಯೋಗಿಸುವುದೇ ಬಾಹ್ಯ ಗುರು ಲಿಂಗ ಜಂಗಮ ರೂಪ ತತ್ತ್ವಾರಾಧನೆ, ಸಂಪತ್ಸಮರ್ಪಣೆ, ತ್ರಿಕರಣ ಸಮರ್ಪಣೆ. ಸಾಮಾಜಿಕ ಸತ್ತ್ವ ಚಿತ್ತ್ವ ಆನಂದತ್ವಗಳು ಅಭಿವೃದ್ಧಿಯಾಗಬೇಕು. ಅಂತೆಯೆ ತನ್ನ ವೈಯಕ್ತಿಕ ಸತ್ತ್ವ ಚಿತ್ತ್ವ ಆನಂದ್ವತಗಳು ಅಭಿವೃದ್ಧಿಯಾಗಬೇಕು. ಇವುಗಳಿಗಾಗಿ ಸತ್ಕಾಯಕ ನಿರತನಾಗಿರಬೇಕು ಭಕ್ತ. ಒಟ್ಟನಲ್ಲಿ ತನ್ನ ಮತ್ತು ಸಾಮಾಜಿಕ ಸತ್ ಚಿತ್ ಆನಂದ ಕ್ರಿಯಾಕಲಾಪಗಳ ಅಭಿವೃದ್ಧಿಗಾಗಿ ದುಡಿಯುವುದೆ ಭಕ್ತನ ಕ್ರಿಯಾಶಕ್ತಿಯ ಉಪಾಸನೆಯ ಉದ್ದೇಶ; ಇದೇ ಜೀವನ ವಿಕಾಸ.

ಸತ್ಕ್ರಿಯೆ ಅಂದರೆ ಸತ್ಕಾಯಕ–ಸದಾಚಾರಗಳು. ಚಿತ್ಕ್ರಿಯೆ ಅಂದರೆ ಉಭಯ ವಿದ್ಯೆಗಳು. ಆನಂದಕ್ರಿಯೆ ಅಂದರೆ ಶುದ್ಧವಾದ ಪ್ರಿಯ ಮೋದ ಪ್ರಮೋದಗಳು.

ಇವುಗಳಲ್ಲಿ ಮುಂದುವರಿದರೆ ನಿವೃತ್ತಿಕಲೆಗೆ ನಿಲುಕಿಸುತ್ತದೆ. ನಿವೃತ್ತಿಯೆಂದರೆ ನಿಷ್ಕ್ರಿಯೆಯಲ್ಲ; ನಿರ್ಮಳಕ್ರಿಯೆ. ಈ ಜನ್ಮದಲ್ಲಿ ಈ ಜೀವನದಲ್ಲಿ ನಿಷ್ಕ್ರಿಯರಾಗಿ ಬಾಳಲು ಸಾಧ್ಯವಿಲ್ಲ; ಬದುಕಲು ಅನುವಿಲ್ಲ. ನಿಷ್ಕ್ರಿಯರಾಗಿ ಅಕ್ರಿಯರಾಗಿ ಇರುವುದಕ್ಕಿಂತ ಬೇರಿಲ್ಲ ಆತ್ಮವಧೆ; ಬೇರಿಲ್ಲ ಜೀವನ್ಮೃತಿ.

ಕ್ರಿಯಾಶಕ್ತಿಯೇ ಮಾನವ ಜೀವನದ ಜೀವಾಳ. ಜೀವನ ವೃಕ್ಷದ ತಾಯ್ಬೇರು. ಭವರೋಗವನ್ನು ನಿವಾರಿಸುವ ಸಂಜೀವಿನಿ. ಸಂಸ್ಕೃತಿಯ ಜನನಿ. ಕ್ರಿಯಾಶಕ್ತಿಯಿಂದ ಬಂಜರಭೂಮಿ ಬೆಳೆಯುತ್ತದೆ. ಹಳೆಯದು ಹೊಸದಾಗುತ್ತದೆ. ಚೆನ್ನಿಲ್ಲದ್ದು ಚೆನ್ನಾಗುತ್ತದೆ. ಬೆಲೆಯಿಲ್ಲದ್ದು ಬೆಲೆಯಾಗುತ್ತದೆ. ಬಡವ ಬಲ್ಲದನಾಗುತ್ತಾನೆ. ಮಣ್ಣು ಚಿನ್ನವಾಗುತ್ತದೆ. ಪಾಪಿ ಪುಣ್ಯವಂತನಾಗುತ್ತಾನೆ. ನಿಂತ ಜೀವನ, ಕುಂತ ಅದೃಷ್ಟ ಮುನ್ನಡೆಯುತ್ತವೆ. ಕ್ರಿಯಾಶಕ್ತಿಯಿಂದ ಅಸಾಧ್ಯವೆಲ್ಲವೂ ಸಾಧ್ಯವಾಗುತ್ತವೆ.

ಕ್ರಿಯಾಶಕ್ತಿಯ ಕೈವಿಡಿದ ಭಕ್ತ ಮುಂದೆ ಇನ್ನೂ ಬಹು ದೂರ ಸಾಗಬೇಕಾಗಿದೆ. ಬಹು ಶೀಲಗಳನ್ನು ಸಂಪಾದಿಸಬೇಕಾಗಿದೆ. ಬೃಹದ್ರೂಪನಾಗಿ ಬಾಳಿ ಬೆಳಗಬೇಕಾಗಿದೆ. ಹೀಗಿರುವಾಗ ಭಕ್ತಸ್ಥಲದಲ್ಲಿಯೇ ನಿಷ್ಕ್ರಿಯನಾದರೆ ಮುಂದುವರಿಯುವುದು ಹೇಗೆ? ಆದ್ದರಿಂದ ನಿವೃತ್ತಿಪದಕ್ಕೆ ನಿಜವೃತ್ತಿ, ನಿರ್ಮಳವೃತ್ತಿ, ನಿತಾಂತವೃತ್ತಿ ಎಂದು ಅರ್ಥ. ಇದರಿಂದಾಗಿ ನಿವೃತ್ತಿ ಎಂದ ಒಡನೆ ಯಾರೂ ಹೆದರಬೇಕಿಲ್ಲ. ನಿವೃತ್ತಿಕಲೆ ಯಾರನ್ನೂ ಹೆಳವರನ್ನಾಗಿ ಮಾಡುವ ಕಲೆಯಲ್ಲ. ನಿಜವಲ್ಲದ ವೃತ್ತಿಗಳಲ್ಲಿ ಮಾತ್ರ ಹೆಳವರನ್ನಾಗಿ ಮಾಡುವುದೇ ನಿವೃತ್ತಿಕಲೆಯ ಗುರಿ. ಸಣ್ಣ ವೃತ್ತಿಗಿಳಿದು ಅಸ್ವತಂತ್ರರಾಗುವುದಕ್ಕಿಂತ ವಿಷಯವೃತ್ತಿಗಿಳಿದು ವಿಷಮ ಸ್ಥಿತಿಗಿಳಿಯುವುದಕ್ಕಿಂತ ಅಲ್ಲಸಲ್ಲದ ವೃತ್ತಿಗಿಳಿದು ಅಸುಖಿಗಳಾಗುವುದಕ್ಕಿಂತ ನಿಜವಾದ ನಿರ್ಮಳವಾದನಿತಾಂತವಾದ ಸದ್ವೃತ್ತಿಯ ಸತ್ಪಥದಲ್ಲಿ ಸಾಗಿ ಸ್ವತಂತ್ರರೂ ಸುಖಿಗಳೂ ಸಮದರ್ಶಿಗಳೂ

ಆಗುವುದೇ ಮೇಲೆಂಬುದನ್ನು ನಿವೃತ್ತಿಕಲೆ ಬೋಧಿಸುತ್ತದೆ. ಒಟ್ಟಿನಲ್ಲಿ ನಿವೃತ್ತಿಕಲೆಯೆಂದರೆ ಸತ್ಕಲೆ. ಸತ್ಕಲೆಯಿಂದ ಶರೀರವು ಸತ್ವಯುತವೂ ಸತ್ಯಸುಂದರವೂ ಆಗುತ್ತದೆ. ಕೇಡಿಲ್ಲದ ರೂಹಿಲ್ಲದ ಚೆಲುವು ಸಮನಿಸುತ್ತದೆ. ಸತ್ಕಲೆಯು ಶಾಂತಸ್ವಭಾವ ಪುಣ್ಯಪ್ರಭಾವ ಮೈಗೂಡಿ ಮನೋಹರತೆಯುಂಟಾಗುತ್ತದೆ. ಹೊಸ ಹಾದಿಯಲ್ಲಿ ಹಸನಾದ ಹೊಲಬಿನಲ್ಲಿ ಹೆಜ್ಜೆಹಾಕಿ ಹೊಚ್ಚ ಹೊಸ ಗುರಿಗಾಗಿ ಪಯಣ ಸಾಗಿರುತ್ತದೆ. ಮುಂದೆ ಇಂದ್ರಿಯುಗಳಿಗೆ ಇಂದ್ರನಾಗುವ ಅಂದರೆ ಮಹೇಶ್ವರನಾಗುವ ಪ್ರಯತ್ನ ನಡೆದಿರುತ್ತದೆ. ಆ ನಿವೃತ್ತಿಕಲೆಯು ನವವಾತಾವರಣದಲ್ಲಿ ನವ್ಯಪರಿಸ್ಥಿತಿಯಲ್ಲಿ ಮುನ್ನಡೆಯಲು ಬೆಂಬಲವಾಗಿ ನಿಂತ ಪ್ರೇರಕಶಕ್ತಿಯನ್ನು ಪರಿಕಿಸೋಣ.

ಕ್ರಿಯಾಶಕ್ತಿ–ಸಾತ್ವಿಕ ವೃತ್ತಿಯ ಸಂಕೇತ, ಸತ್ಯಬಲ ಸಂಪೋಷಿತ. ಅದೊಂದು ಶಿಷ್ಟಶಕ್ತಿ; ವಿಶಿಷ್ಟಶಕ್ತಿ. ಅದರಿಂದ ಒದಗುತ್ತದೆ ಆತ್ಮತೇಜಸ್ಸು; ಆತ್ಮಸಂಪತ್ತು. ಜೀವನದಲ್ಲಿ ಆತ್ಮಬಲವನ್ನು ಗಳಿಸಬೇಕಾದರೆ ಮೊದಲು ಕ್ರಿಯಾಶಕ್ತಿಗೆ ಶರಣಾಗಬೇಕು. ಅದರಿಂದ ದೈವೀಸಂಪತ್ತು–ದೈವೀಬಲಗಳು ಮೈಗೂಡುತ್ತವೆ.

ಕ್ರಿಯಾನಿರತನು ಕರ್ಮಕಾಂಡಕ್ಕೆ ಕೈಹಾಕಬಾರದು. ಕರ್ಮ ಅದೊಂದು ಘಟಸರ್ಪ. ಅದು ಕಚ್ಚಿದರೆ ವಿಷಯವೆಂಬ ವಿಷವೇರಿ ಭವದ ಕಾಳ್ಕುಣಿಗೆ ಬೀಳಬೇಕಾಗುತ್ತದೆ. 'ಕರ್ಮಕಾಂಡಯೋಗಂಗಳೆಲ್ಲ ಭವದ ತೆಕ್ಕೆಗೆ ಒಳಗು' ಎಂದಿದೆ ಪ್ರಭುವಾಣಿ.

ಪ್ರೇರಕಶಕ್ತಿ :

ಭಕ್ತನಲ್ಲಿರುವ ಪ್ರೇರಕಶಕ್ತಿಯೇ ಪರಮಾತ್ಮ. ಅದನ್ನು ಸದ್ರೂಪಗೊಳಿಸುವುದೇ ಭಕ್ತಸ್ಥಲದ ಚರಮಗುರಿ. ಸದ್ರೂಪ ಪ್ರೇರಕಶಕ್ತಿಯಿಂದ ಜೀವನದ ಮೂಲಗುರಿ ಮೈಗೂಡುತ್ತದೆ. ಪರಮಾತ್ಮನೊಡನೆ ಏಕಸೂತ್ರತೆ ಪ್ರಾಪ್ತವಾಗುತ್ತದೆ. ಅದಾಗಬೇಕಾದರೆ ಆಚಾರಶೀಲನಾಗಬೇಕು. ಆಚಾರಶೀಲನಾಗುವುದೇ ಆಚಾರಲಿಂಗೋಪಾಸನೆ. ಪ್ರೇರಣ ಶಕ್ತಿಗೂ ಆಚಾರಕ್ಕೂ ನಿಕಟಸಂಬಂಧವಿದೆ. ಪ್ರೇರಣೆಯಿಲ್ಲದೆ ಯಾವ ವರ್ತನೆ ನಡೆಯದು;

ಯಾವ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗದು. ಸಕಲ ಕಾರ್ಯಗಳಿಗೆ ಮೂಲವಾದ ಪ್ರೇರಣೆ ಪಾವನವಾಗಿರಬೇಕು. ಆ ಪ್ರೇರಣಶಕ್ತಿಯನ್ನು ಪಾವನಗೊಳಿಸುವುದೇ ಲಿಂಗಸಂಸ್ಕಾರ. ಭೋಕ್ತೃ ಭೋಜ್ಯಗಳನ್ನು ಪಾವನಗೊಳಿಸುವುವೇ ಅಂಗಸಂಸ್ಕಾರ. ಇವೆರಡನ್ನೂ ಗುರು ಮಾಡಿ ಮುಪ್ಪುರಿಗೊಳಿಸುತ್ತಾನೆ. ಶಿಷ್ಯನಲ್ಲಿರುವ ಅಂತಃಪ್ರೇರಣವನ್ನೇ ತನ್ನ ಸದ್ಭಾವದಿಂದ ಶುದ್ಧಗೊಳಿಸಿ ಬಹಿಷ್ಕರಿಸಿ ಶಿಷ್ಯನ ಕರಸ್ಥಲಕ್ಕೆ ಕರುಣಿಸುತ್ತಾನೆ. ಅದು ಆಗ ಇಷ್ಟವಾಗುತ್ತದೆ; ಇಷ್ಟಲಿಂಗವಾಗುತ್ತದೆ. ತನ್ನೊಡನಿರುವ ಭೋಕ್ತೃವಿಗೆ (ಅಂಗನಿಗೆ) ಸತ್ಪ್ರೇರಣೆಯನ್ನುಂಟುಮಾಡುತ್ತದೆ. ಅದರಿಂದಾಗಿ ಭಕ್ತನು ಸತ್ಕಾಯಕ ಶಿವಾರ್ಚನಾದಿಗಳಲ್ಲಿ ನಿರತನಾಗುತ್ತಾನೆ.

ಶ್ರೀಗುರು ಕರಕ್ಕೆ ಸತ್ಪ್ರೇರಣಾರೂಪಲಿಂಗವನ್ನು ಕೊಟ್ಟ ಬಳಿಕ ಅದನ್ನು ಮೂರು ವೇಳೆ ಅರ್ಚಿಸೆಂದು ಬೋಧಿಸುತ್ತಾನೆ. ಅದನ್ನು ಭಕ್ತನು ಮೂರು ವೇಳೆ ಅರ್ಚಿಸಬೇಕಾದರೆ ಅದಕ್ಕೆ ತಕ್ಕ ಸಾಹಿತ್ಯ ಸಂಪತ್ತುಗಳು ಬೇಕು. ಅವನ್ನು ಸಂಪಾದಿಸಲು ತೊಡಗಬೇಕಾಗುತ್ತದೆ. ಇದರಿಂದಾಗಿ ಸತ್ಪ್ರೇರಣೆಯುಂಟಾಗುತ್ತದೆ. ಸದ್ರೂಪ ಶಿವಲಿಂಗಾರಾಧನೆ ಪ್ರತಿದಿನ ನಡೆಯುತ್ತದೆ. ಸತ್ಕಾಯಕಸಾಗುತ್ತದೆ.

'ಭೋಕ್ತಾ ಭೋಜ್ಯಂ ಪ್ರೇರಯಿತಾ ವಸ್ತುತ್ರಯಮಿದಂ ಸ್ಮೃತಮ್'

—ಪಿಂಡಸ್ಥಲ

ಪಿಂಡಸ್ಥಲದಲ್ಲಿ ಶ್ರೀ ಜಗದ್ಗುರು ರೇಣುಕರು ಈ ವಸ್ತುತ್ರಯಗಳು ಪಿಂಡತ್ರಯಗಳೆಂದು ಪ್ರತಿಬೋಧಿಸಿದ್ದಾರೆ. ಭೋಜ್ಯವು ಸ್ಥೂಲಪಿಂಡ, ಭೋಕ್ತೃ ಸೂಕ್ಷ್ಮಪಿಂಡ. ಪ್ರೇರಯಿತಾ (ಪ್ರೇರಕ) ಕಾರಣಪಿಂಡ. ಪ್ರೇರಣ ಶಕ್ತ್ಯವಚ್ಛಿನ್ನ ಚೈತನ್ಯವೇ ಪ್ರೇರಕ; ಆ ಪ್ರೇರಕ ಪಿಂಡವೇ ಪರಮಾತ್ಮ. ಅದನ್ನು ಸ್ಥೂಲಕ್ಕೆ ತಂದು ಉಪಯೋಗಿಸಿದಾಗ ಅಸತ್ ಸತ್ತಾಗುತ್ತದೆ. ಸಂಕುಚಿತವಾದ ಸ್ವಭಾವ-ಸತ್ಕ್ರಿಯೆಗಳು ವಿಕಾಸವಾಗುತ್ತವೆ. ವಿಸ್ತರಣಗೊಳ್ಳುತ್ತವೆ.

ನಿಯಾಮಕ ವಸ್ತು ವ್ಯಷ್ಟಿ ಸಮಷ್ಟಿ ಎಂದು ದ್ವಿವಿಧವಾಗಿದೆ. ವ್ಯಷ್ಟಿ ಪ್ರೇರಕಶಕ್ತಿಯಿಂದ ಪಿಂಡಾಂಡವೆಲ್ಲ ನಿಯಮ್ಯವಾಗುವುದು; ನಿಯಮಬದ್ಧವಾಗಿರುವುದು. ಸಮಷ್ಟಿ ನಿಯಾಮಕ ಶಕ್ತಿಯಿಂದ ಬ್ರಹ್ಮಾಂಡವೆಲ್ಲ ನಿಯಮ್ಯ

ವಾಗಿರುವುದು; ನಿಯಮಬದ್ಧವಾಗಿರುವುದು. ಮೊದಲಿನದು ಆತ್ಮಶಕ್ತಿಯೆನಿಸಿದೆ. ಎರಡನೆಯದು ಪರಮಾತ್ಮಶಕ್ತಿಯೆನಿಸಿದೆ. ಇದರಿಂದಾಗಿ ಉಭಯ ಪ್ರಪಂಚವೂ ಶಕ್ತಿಮಯವಾಗಿದೆ.

ಕಾಣದ ಕೈಗೆ ನಿಲುಕದ ವಸ್ತುವಿಗಾಗಿ ಕಣ್ಣಿಟ್ಟಿಲ್ಲ ಷಟ್‌ಸ್ಥಲಧರ್ಮ. ತನ್ನೊಳಗಿರುವ ಆ ಪರಮ ಪ್ರೇರಕಶಕ್ತಿಗಾಗಿ ಸಾಧನೆ ನಡೆದಿದೆ. ಪಾವನವಾದ ಆ ಪರಮ ಪ್ರೇರಕ ಚೈತನ್ಯಕ್ಕೆ ಭಕ್ತನಾಗುವುದೇ ಭಕ್ತಸ್ಥಲ ಹೃದಯ ಮೂಲ.

ಅಂತರ್ಗತ ಆ ಪ್ರೇರಕವಸ್ತು ಪರಿಶುದ್ಧ. ಅದೇ ಪರತತ್ತ್ವವೆಂಬುದಾಗಿ ಪ್ರಸಿದ್ಧ. ಅದು ಸರ್ವಜ್ಞ, ಸರ್ವ ಸ್ವತಂತ್ರ, ಸರ್ವಕರ್ತೃ, ನಿತ್ಯ ತೃಪ್ತ. ಅನಾದಿ ಬೋಧಸ್ವರೂಪ. ಅಲುಪ್ತ ಮತ್ತು ಅನಂತ ಶಕ್ತಿಸಂಪನ್ನ. ಈ ಒಂದೊಂದು ಗುಣವನ್ನು ಒಂದೊಂದು ಸ್ಥಲದಲ್ಲಿ ಸಂಪಾದಿಸುವುದೇ ಷಟ್‌ಸ್ಥಲ ಧ್ಯೆಯ.

ಸಣ್ಣ ಜೀವನದಿಂದ ದೊಡ್ಡ ಜೀವನಕ್ಕೆ, ಸಂಕುಚಿತ ಭಾವದಿಂದ ವಿಕಾಸಭಾವಕ್ಕೆ ಮುಕ್ತಕ್ಷೇತ್ರದಿಂದ ಅವಿಮುಕ್ತ ಕ್ಷೇತ್ರಕ್ಕೆ ಅಲ್ಪಜ್ಞತೆಯಿಂದ ಸರ್ವಜ್ಞತೆಗೆ ಸಾಗತೊಡಗಿಸುವುದೇ ಭಕ್ತಸ್ಥಲದ ಮುಖ್ಯೋದ್ದೇಶ.

ಪ್ರೇರಕನಾದ ಪರಮಾತ್ಮನು ವ್ಯಾಪಕ. ವ್ಯಷ್ಟಿ ಸಮಷ್ಟಿಗಳೆರಡನ್ನೂ ವ್ಯಾಪಿಸಿದ್ದಾನೆ. ಜೀವಾತ್ಮನು ವ್ಯಷ್ಟಿಗತ ಮಾತ್ರ. ಕಾರಣವಾದ ಆ ಪ್ರೇರಕವಸ್ತುವೇ ಪರಿಣಾಮವಾಗಿ ಬ್ರಹ್ಮಾಂಡ ಪಿಂಡಾಂಡಗಳಾಗಿವೆ. ಆ ಪ್ರೇರಕನು ತನ್ನ ಪ್ರೇರಣಶಕ್ತಿಯನ್ನು ಇವೆರಡರಲ್ಲಿರಿಸಿದಾನೆ. ಕಾರಣವಾದ ಆ ಪ್ರೇರಕ ಪರಮಾತ್ಮನೇ ಪರಿಣಾಮವಾದದ್ದರಿಂದ ಬ್ರಹ್ಮಾಂಡ ಪಿಂಡಾಂಡಗಳೆರಡೂ ಆ ಪರಮಾತ್ಮಸ್ವರೂಪವೆಂದು ಸಿದ್ಧವಾಗುತ್ತದೆ. ಅನಂತವಾದ ಆ ಪ್ರೇರಕನಿಂದಾದ ಕಾರಣ ಇವೂ ಸಹ ಅನಂತವಾಗಿವೆ. ಅಂದರೆ ನಾಶರಹಿತವಾಗಿವೆ. ಅನಾದಿಯೂ ಆಗಿವೆ. ಆದರೆ ಆ ಪ್ರೇರಕನು ಎಂದಿಗೂ ಅವ್ಯಕ್ತನಾಗಿ ಅವಿಕಾರಿಯಾಗಿರುವನು. ಇವು ವ್ಯಕ್ತಾವ್ಯಕ್ತವಾಗಿ ಬದಲಾವಣೆಯಾಗುವುವು.

ಪ್ರೇರಕ ಪ್ರೇರ್ಯರಿಬ್ಬರ ಸಮನ್ವಯವೆ ಪೂರಕ; ಪೂರ್ಣರೂಪಕ. ಪ್ರೇರ್ಯನು ತನಗಿರುವ ಸರ್ವ ಭೋಜ್ಯಗಳನ್ನು ಪ್ರೇರಕನಲ್ಲಿ ಸಮನ್ವಯ

ಗೊಳಿಸುವುದೇ ಹೆಗ್ಗುರಿ; ಪರಿಪೂರ್ಣಾಖಂಡಪರ. ಆ ದಿಸೆಯಲ್ಲಿ ಇದೀಗ ಈ ಭಕ್ತಸ್ಥಲ ಪ್ರಥಮ ಪಾದವಿನ್ಯಾಸ. ಆ ಪರಮ ಪ್ರೇರಕನ ನೆರವಿಲ್ಲದೆ ಮುಂದಿನ ಹೆಜ್ಜೆಗಳು ಸಾಗವು. ಸದ್‌ಸಾಧನೆ ಸಫಲವಾಗದು. ಸತ್ ಸಂಪಾದನೆ ಸಂಪೂರ್ಣವಾಗದು.

'ಸರ್ವಜ್ಞಃ ಪ್ರೇರಕಃ ಶಂಭುಃ ಸರ್ವಜ್ಞಃ ಸರ್ವಕರ್ತಾ ಚ ನಿತ್ಯ ಮುಕ್ತೋ ಮಹೇಶ್ವರಃ' ಆ ಪ್ರೇರಕವಸ್ತು ಇನ್ನಾರಲ್ಲ; ಆತ ಶಂಭು, ಸತ್ಯ ಸುಖದಾಯಕ; ಅಷ್ಟೇ ಅಲ್ಲ-ಸರ್ವಜ್ಞ. ಜತೆಗೆ ಸರ್ವಕರ್ತಾ, ನಿತ್ಯಮುಕ್ತ; ಮಹಾಪ್ರಭು. ಆ ಪ್ರೇರಕನ ವಿಶೇಷಣಗಳಿಗೆ ಎಂತಹ ವಿಶೇಷವಿದೆ! ಎಷ್ಟು ವಿಶಾಲವಾದ ಅರ್ಥ! ಎಷ್ಟು ವಿಶುದ್ಧವಾದ ಪ್ರಬುದ್ಧವಾದ ಸ್ವರೂಪ! ಆತನ ಬೆಂಬಲವಿಡಿದರೆ ಆ ದಿವ್ಯಗುಣಗಳು ಬಾರವೆ? ವಿಕಾರ್ವ ವಿರಹಿತವಾಗಲಾರದೆ? ಆ ದಿವ್ಯಸುಖವು ತೋರದೆ? ಆ ನಿತ್ಯಮುಕ್ತತ ಕೈಸೇರದೆ? ನಿತ್ಯಮುಕ್ತನಾದ ಭಕ್ತ ಮುಂದೆ ಮಹೇಶ್ವರನಾಗನೆ?

ದೇಹಿನಾಂ ಪ್ರೇರಕಃ ಶಂಭುಃ ಹಿತಮಾರ್ಗೋಪದೇಶಕಃ |
ಪುನರಾವೃತ್ತಿ ರಹಿತ ಮೋಕ್ಷಮಾರ್ಗೋಪದೇಶಕಃ ||'

ಈ ಮಂತ್ರ ಎಷ್ಟು ಸುಂದರ! ಏನು ಬಂಧುರ! ಪುನರಾವೃತ್ತಿ ರಹಿತ ವಾದ ಅಂದರೆ ಮರಳಿ ಬಾರದ ಮೋಕ್ಷಮಾರ್ಗವನ್ನು ಉಪದೇಶಿಸುತ್ತಾನೆ. ಆ ಪ್ರೇರಕ ಶಂಭುವೇ ಶ್ರೀಗುರುವಾಗಿ ಇಳೆಗೆ ಬಂದು! ಸಾಕಾರ ಶಿವನಾಗಿ ಇಳೆಯಲ್ಲಿ ನಿಂದು!! ಆತ ಹಿತಮಾರ್ಗೋಪದೇಶಕ! ಸಕಲ ಶಾಸ್ತ್ರ ಬೋಧಕ. ಸತ್ಸಂಪಾದನೆಯ ಸಾಧನವನ್ನು ತೋರುವವ! ಸತ್ಯ ಸುಖ ಸ್ವರೂಪವನ್ನಾಗಿಸುವವ! ಆ ದಿವ್ಯದಿಸೆಯಲ್ಲಿ ದೇಹಿಗಳಿಗೆ ಆತ ಪ್ರೇರಕ; ಉಪದೇಶಕ.

'ಸರ್ವಾತ್ಮರ ಹೃದಯದೊಳಂತರ್ಯಾಮಿಯಾಗಿಯುಂ ಹೊರಗೆ ಶ್ರುತಿ ಸ್ಮೃತಿ ರೂಪಮಾದಾಜ್ಞೆಯಿಂದಲು ನಿಯಾಮಕನಪ್ಪುದರಿಂದೀಶ್ವರಂಗೆ ಸರ್ವಪ್ರೇರಕತ್ವಮಂ........! —ವಿ. ಚಿಂತಾಮಣಿ

ಕ್ರಿಯೆಗೆ ತಕ್ಕ ರೂಪು. ರೂಪಿಗೆ ತಕ್ಕ ನಾಮ. ನಾಮಕ್ಕೆ ತಕ್ಕ ನಿಯೋಗಾನುಗ್ರಹ.

ಆ ಪ್ರೇರಕನು ಬಾಳಿಗೆ ನಿಯಾಮಕನಾಗಿ ನಿಯುಕ್ತನಾದ ಬಳಿಕ ಬಾಳಿನ ಬಗೆಗೆ ಬಣ್ಣವೇರದೆ ? ಬದುಕಿನ ಪರಿಗೆ ಸಾರ್ಥಕತೆ ಸೇರದೆ ?

ದೀಕ್ಷಾಗುರುವೆಂಬ ಪ್ರೇರಕ ಪರಮಾತ್ಮನು ತನ್ನ ಭಕ್ತನಿಗೆ ಉಪದೇಶಿಸಿದ ಹಿತಮಾರ್ಗವೆಂದರೆ ವೃತ್ತಿಸಂಯಮ; ಮತ್ತು ವೃತ್ತಿ ನಿಯಮ. ಇವುಗಳಿಂದ ಭಕ್ತನಲ್ಲಿ ಸದ್ವೃತ್ತಿಗಳು ಸಂಗಮವಾಗುತ್ತವೆ. ಸದ್ಭಕ್ತನಾಗುತ್ತಾನೆ. ಶುದ್ಧಮನಸ್ಕನಾಗುತ್ತಾನೆ.

ಕಾರಣ ಪಿಂಡಾಂಡದಲ್ಲಿರುವ ಚೈತನ್ಯವಸ್ತುವಿಗೆ ಸರ್ವಜ್ಞತ್ವ ಸರ್ವಕರ್ತೃತ್ವಾದಿ ಶಕ್ತಿಗಳಿರುತ್ತವೆ. ಅದು ಸಚ್ಚಿದಾನಂದ ಸ್ವರೂಪವಾಗಿರುತ್ತದೆ. ಅದರ ಆ ಸತ್ಕಳೆಯನ್ನು ಸ್ಥೂಲಾಂಗಕ್ಕೆ ಚಿತ್ಕಳೆಯನ್ನು ಸೂಕ್ಷ್ಮಾಂಗಕ್ಕೆ ಆನಂದ ಕಳೆಯನ್ನು ಕಾರಣಾಂಗಕ್ಕೆ ಇಷ್ಟಪ್ರಾಣ ಭಾವಲಿಂಗಗಳನ್ನಾಗಿ ಶ್ರೀಗುರು ಕರುಣಿಸುತ್ತಾನೆ. ಈ ತ್ರಿವಿಧ ಲಿಂಗೋಪಾಸಕನೇ ಭಕ್ತನೆನಿಸುತ್ತಾನೆ.

ಧರ್ಮ–ಅರ್ಥ

ಇವೆರಡನ್ನು ಗಳಿಸುವುದೇ ಭಕ್ತನ ಮುಖ್ಯ ಕರ್ತವ್ಯ. ಶಿವಾರ್ಚನೆಯಿಂದ ಧರ್ಮವನ್ನು ಸತ್ಕಾರ್ಯದಿಂದ ಅರ್ಥ (ಧನ)ವನ್ನು ಭಕ್ತನಾದವನು ಗಳಿಸಬೇಕು. ಅರ್ಥ ಜೀವನಕ್ಕೆ ಎಷ್ಟು ಅಗತ್ಯವೋ ಧರ್ಮವೂ ಅಷ್ಟೇ ಅಗತ್ಯ. ಅರ್ಥವಿಲ್ಲದೆ ಭೌತಿಕಸುಖವಿಲ್ಲ; ಸ್ಥಾನಮಾನವಿಲ್ಲ· ಅಂತೆಯೇ ಧರ್ಮವಿಲ್ಲದೆ ಆತ್ಮಿಕ ಸುಖ ಶಾಂತಿಯಿಲ್ಲ; ಸ್ಥಿರವಾದ ಸರಿಯಾದ ಸ್ಥಾನಮಾನಗಳಿಲ್ಲ.

ಭಕ್ತನ ಜೀವನದಲ್ಲಿ ಸತ್ಕಾಯಕದಿಂದ ಸಂಪಾದಿಸಿದ ಅರ್ಥವೂ ಬಹುಭಾಗ ಧರ್ಮಾರ್ಥಕ್ಕಾಗಿ ವಿನಿಯೋಗವಾಗಬೇಕು. ಅಂದರೆ ದಾನವಾಗಬೇಕು. ಆಗ ಆತನ ಧರ್ಮವು ಅರ್ಥಪೂರ್ಣವಾಗುತ್ತದೆ. ಅರ್ಥವು ವ್ಯರ್ಥವಾಗದೆ ಧರ್ಮಕಾರಣವಾಗುತ್ತದೆ. ಈ ತ್ಯಾಗದಿಂದ ಭಕ್ತನ ಕಾಮವು ಮೋಕ್ಷವಾಗಿ ಅಂದರೆ ಪ್ರಕೃತಿ ಸಹಜವಾದ ಆಶೆ ಇಚ್ಛೆಗಳು ಮಾರ್ಪಟ್ಟು ಭಕ್ತಿಯಾಗಿ ಪರಿಣಮಿಸುತ್ತದೆ. ಕಾಮವು ಶುದ್ಧಪ್ರೇಮವಾದಾಗ ಆಶಾಪಾಶ ಬಂಧನದ ಬಿಡುಗಡೆ.

ಭಕ್ತನ ಧರ್ಮ,-ಭಕ್ತಿ. ಭಕ್ತನ ಅರ್ಥ,-ಅಂಗ. ಭಕ್ತನಿಗೆ ಭಕ್ತಿ ರೂಪ ಧರ್ಮ ಸತ್ವತ್ವಕ್ಕೆ ಅತ್ಯಗತ್ಯ. ಧನವಿಲ್ಲದೆ ಧನಿಕನಾಗನು. ಭಕ್ತಿ ಧರ್ಮವಿಲ್ಲದೆ ಭಕ್ತನಾಗನು; ಸದ್ರೂಪವು ಸಮನಿಸದು.

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯ ! ಅವರಾರಾಧನೆ ದಂಡ ।
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ, ಕೂಡಲ ಸಂಗಮದೇವ ಭೂಭಾರಕರ ।'

ಭಕ್ತನು ಭವದೋಷರಹಿತನಾಗಿ ಭವಹರನಿಗೆ ಸಲ್ಲಬೇಕಾದರೆ ಶುಭ್ರ ನೆನಿಸಬೇಕಾದರೆ ಸದಾಚಾರ ಸದ್ಭಕ್ತಿ ರೂಪ ಧರ್ಮ ಬೇಕೇಬೇಕು. ಅವಿಲ್ಲದೆ ಆರಾಧಿಸಿದರೆ ಆ ಅರಾಧನೆ ಅಪ್ರಯೋಜನ. ಅಂಥವರನ್ನು ಆ ಶಿವನು ಒಪ್ಪಲಾರ, ಅಪ್ಪಿಕೊಳ್ಳಲಾರ.

'ನೂರನೋದಿ ನೂರ ಕೇಳಿದರೇನು ? ಆಸೆ ಹರಿಯದು, ರೋಷ ಬಿಡದು; ಮಜ್ಜನಕ್ಕೆರೆದು ಫಲವೇನು ? ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ ನಗುವ ನಮ್ಮ ಕೂಡಲ ಸಂಗಮದೇವ.'

ಬಾಳಿನಲ್ಲಿ ಭಕ್ತಿ ಧರ್ಮವಿಲ್ಲದ ಮೇಲೆ ಏನು ಓದಿ ಎಷ್ಟು ಓದಿ ಫಲ ವಿಲ್ಲ. ಎನಿತು ಕೇಳಿ ಫಲತವಿಲ್ಲ. ಆಸೆಯಿಲ್ಲದ ಆದರಾಸಕ್ತಿಯಿರಬೇಕು. ರೋಷವಿಲ್ಲದ ಮನಶ್ಶಾಂತಿಯಿರಬೇಕು. ಆಗ ಭಕ್ತಿಗೆ ಬಣ್ಣವೇರುತ್ತದೆ. ಅರ್ಚನ ಕ್ರಿಯೆಗೆ ವರ್ಚಸ್ಸು ಬರುತ್ತದೆ. ಮನಶ್ಶಾಂತಿಯೆಂಬ ನಿರ್ಮಳ ಜಲಾಭಿಷೇಕವೇ ಪ್ರಾಣಲಿಂಗಕ್ಕೆ ತೃಪ್ತಿ. ಭಕ್ತಿ ಸಸಿಗೆ ರಸಪ್ರಾಪ್ತಿ. ಮಾತಿನಂತೆ ಮನವಿಲ್ಲದ ಯುಕ್ತಿಗಿಂತ ಮಾತಿನಂತೆ ಮನವುಳ್ಳ ಭಕ್ತಿ ಅದೊಂದು ಭವ್ಯಸಂಪತ್ತಿ; ನವ್ಯಪ್ರಪತ್ತಿ.

ಸಂಪತ್ತಿರುವವನಲ್ಲಿಗೆ ಎಂತಹ ಸಂಪನ್ನರೂ ಬರುವರು. ಸಂಪತ್ತಿನ ಆಕರ್ಷಣೆ ಅಂತಹದು. ಭೌತಿಕಸಂಪತ್ತಿನ ಶಕ್ತಿಯೇ ಹೀಗಿರುವಾಗ ಇನ್ನು ಭಾಕ್ತಿಕಸಂಪತ್ತಿನ ಶಕ್ತಿಯನ್ನು ಕುರಿತು ಇನ್ನೇನು ಹೇಳೋಣ !

ನಂಬರು ನಚ್ಚರು, ಬರಿದೆ ಕರೆವರು; ನಂಬಲರಿಯರೀಲೋಕದ ಮನುಜರು. ನಂಬಿ ಕರೆದೊಡೆ ಓ ಎನ್ನನೇ ಶಿವನು ?' ಎಂದು ಕೇಳುತ್ತಾರೆ ಬಸವಣ್ಣನವರು. 'ನಂಬುಗೆಯೆ ಕಾರಣವು ಸಾಂಬನೊಲಿವುದಕೆ' ಎನ್ನುತ್ತಾರೆ ಮುಪ್ಪಿನಾರ್ಯರು.

ಸತ್ತಿಗಾಶ್ರಯವಾದ ಸದವ್ಯತಕ್ಕೆ ಕಾಮಧೇನುವಾದ ಸತ್ಸಂಪದವನ್ನು ಕೊಡುವ ಕಲ್ಪವೃಕ್ಷವಾದ ಸಲ್ಲಿಂಗ ಸಂಗಳಿಕೆಗೆ ನಂಬುಗೆಯು ಬಿಟ್ಟು ಬೇರೆ ಇಂಬಿಲ್ಲ. 'ಕಾಮವೇಕೋ ಲಿಂಗಪ್ರೇಮಿಯೆನಿಸುವಂಗೆ?' 'ಸಿರಿಯಾದರೇನು ಶಿವಭಕ್ತಿಯಿಲ್ಲದನಕ್ಕ?' 'ಒಲವಿಲ್ಲದ ಪೂಜೆ! ನೇಹವಿಲ್ಲದ ಮಾಟ!! ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ!! ಅಪ್ಪಿದರೆ ಸುಖವಿಲ್ಲ! ಮೆಲಿದರೆ ರುಚಿಯಿಲ್ಲ!! ಕೂಡಲ ಸಂಗಮದೇವಾ ನಿಜವಿಲ್ಲದವನ ಭಕ್ತಿ!' 'ನಂಬಿದೆಯಾದಡೆ ತನ್ನ ನೀವ ಕೂಡಲ ಸಂಗಮದೇವ'

ಭಕ್ತನಿಗೆ ಅಂಗವೇ ಅರ್ಥವೆಂದೆವು; ದಿಟ. ಅಂಗತ್ವದ ಸಿರಿವಂತಿಕೆಯ ಮುಂದೆ ಇನ್ನಾವ ಹೊಸ ಸಿರಿವಂತಿಕೆಯೂ ಸರಿಬಾರದು. ಅಂಗತ್ವ ಪ್ರಾಪ್ತಿಯಿಂದ ಲಿಂಗಭೋಗೋಪಭೋಗದ ಸಂಪ್ರಾಪ್ತಿ. ಈ ಉಪಭೋಗ ದಿವ್ಯ ಭೋಗ. ಲಿಂಗಪ್ರಾಪ್ತಿಯೇ ಎಂದೆಂದಿಗೂ ಲಯಿಸದ ಮಹಾಭಾಗ್ಯ.

ನಿತ್ಯ ಅಸತ್ತಿಗೆಳೆವ ಪ್ರಕೃತಿಗಿಂತ ನಿತ್ಯ ಸತ್ತಿಗೊಯ್ಯುವ ಅಂಗ ಅರ್ಥವಲ್ಲವೆ? ದುಷ್ಕ್ರಿಯೆಗಳಿಗೆ ದುಡುಕುವ ದೇಹಕ್ಕಿಂತ ಸತ್ಕ್ರಿಯೆಗಳಿಗೆ ಮಿಡುಕುವ ಶಿವಾಂಗ ಸಾರ್ಥವಲ್ಲವೆ? ಲಿಂಗಗಳೆಂಬ ಮುತ್ತು ಮಾಣಿಕ್ಯಗಳನ್ನು ಗಳಿಸಲು ಸಮರ್ಥವಾದ ಅಂಗ ಬೆಲೆಯುಳ್ಳ ಅರ್ಥವಲ್ಲವೆ?

ಶ್ರೀಗುರುವಿನಿಂದ ಸಂಸ್ಕಾರ ಪಡೆದು ತನ್ನ ಪ್ರಾಕೃತಿಕ ಪ್ರಾಪಂಚಿಕ ಅಸತ್‌ನ್ನು ಅಳಿದು ಪಾರಮಾರ್ಥಿಕ ಶುದ್ಧತೆಯನ್ನು ಪಡೆದ ಕಾಯವೇ ಅಂಗ. ತನ್ನ ಪೂರ್ವದ ಮಾಂಸಪಿಂಡವನ್ನಳಿದು ಮಂತ್ರಪಿಂಡವಾದುದೇ ಅಂಗ. ತನ್ನ ಉಭಯ ಉಪದ್ರವವನ್ನು ಉಚ್ಚಾಟನಗೊಳಿಸಿ ಉಭಯ (ಇಹ-ಪರ) ಶ್ರೇಯಸ್ಸುಗಳನ್ನು ಪಡೆದ ಅಂಗವು ಭಕ್ತನಿಗೆ ದಿಟವಾದ ದ್ರವಿಣ; ಸಾರಾಯ ಸಂಪತ್ತು.

ಅಂಗವೆಂಬ ಪಾರಮಾರ್ಥಿಕ ಸಂಪತ್ತಿನಿಂದ ಲಿಂಗಸುಖ ಲಿಂಗಭೋಗಗಳನ್ನು ಸಂಪಾದಿಸಲು ಅನುಕೂಲ. ಪುರುಷಾರ್ಥಗಳಲ್ಲಿ ಮೊದಲಿನ ಮೂರು ತ್ರಿವರ್ಗವೆಂದು ಮೋಕ್ಷವೊಂದೇ ಅಪವರ್ಗವೆಂದು ಪರಮಾರ್ಥವೆಂದು ಹೇಳುವುದುಂಟು. ಸದ್ಭಕ್ತನ ವಿಷಯದಲ್ಲಿ ಇದು ಸರಿಯಲ್ಲ. ಇವು ನಾಲ್ಕೂ ಪರಮಾರ್ಥವಾಗಿ ಪರಿಣಾಮಗೊಳ್ಳುತ್ತವೆ. ಪರಸ್ಪರ ಪೂರಕವಾಗುತ್ತವೆ.

ಗಂಧತನ್ಮಾತ್ರದಿಂದ ಪೃಥ್ವಿ, ಪೃಥ್ವಿಯಿಂದ ದೇಹ ಉತ್ಪತ್ತಿಯಾಗಿವೆ. ಪಂಚತನ್ಮಾತ್ರೆಗಳು ಬುದ್ಧಿ ಅಹಂಕಾರಗಳು ದೇಹಕ್ಕೆ ಆವರಣಗಳಾಗಿವೆ. ಇವನ್ನು ಪ್ರಸಾದವಾಗಿಸಿಕೊಳ್ಳುವುದೇ ಭಕ್ತನ ಸತ್ಸಂಪಾದನೆಯ ರಹಸ್ಯ. ಬುದ್ಧಿ ಸಿದ್ಧಿಯಾಗಿ ಅಹಂಕಾರವಳಿದು ಕಿಂಕರತೆ ಮೈಗೂಡಿ ಬಂದಾಗ ಅವೆರಡು ಪ್ರಸಾದವಾಗುತ್ತವೆ. ಆಗ ದೇಹದ್ರವ್ಯವು ಅಂಗಪ್ರಸಾದವಾಗಿ ಲಿಂಗಾರ್ಪಣಕ್ಕೆ ಸಲ್ಲುತ್ತದೆ. ಆಚಾರಲಿಂಗಾರಾಧನೆಗೆ ಸಮರ್ಥವಾಗುತ್ತದೆ. ಬುದ್ಧಿ ಸಿದ್ಧಿಯಾಗದೆ ಮೂಢವೃತ್ತಿಯಳಿಯದು. ನಿರಹಂಕಾರತೆ ಬಾರದೆ ಘೋರವೃತ್ತಿ ನಿವೃತ್ತಿಯಾಗದು, ಮೂಢ ಘೋರವೃತ್ತಿಗಳು ಅಣಗದೆ ಶಾಂತತ್ವ ಬಾರದು. ಶಾಂತತ್ವ ಬಾರದೆ ಸ್ವಾಂತರಂಗವು ಸದ್ರೂಪವಾಗದು. ಅಂತೆಯೆ ಬಹಿರಂಗವು ಸದ್ರೂಪವಾಗಬೇಕಾದರೆ ಶಬ್ದಾದಿ ಪಂಚವಿಷಯ ಗಳು ತಮ್ಮ ಪದಾರ್ಥತ್ವವನ್ನು ಸಹ ಕಳೆದುಕೊಂಡು ಲಿಂಗಾರ್ಪಣಗಳಾಗಿ ಪ್ರಸಾದಗಳಾಗಬೇಕು. ಆಗ ಬಹಿರಂಗವೂ ಸದ್ರೂಪವನ್ನು ಸಂಪಾ ದಿಸುತ್ತದೆ.

ಇಷ್ಟಲಿಂಗಾಂತರ್ಗತ ಆಚಾರಲಿಂಗೋಪಾಸನೆಯಲ್ಲಿ ಸತ್ತಾರೂಪ ವನ್ನು ಸ್ಥೂಲತನುವಿನಲ್ಲಿಯೂ ಕಣ್ಣಾರೆ ಕಾಣುವುದೇ ಆಗಿದೆ. ಆ ಪರ ವಸ್ತುವಿನ ಕೇವಲ ಸಲ್ಲಕ್ಷಣವೇ ಆಚಾರಲಿಂಗವಾಗಿ ಆರಾಧಿತವಾಗುತ್ತಿದೆ. ನಕಾರ ಮಂತ್ರವು ಅದನ್ನೇ ಪ್ರತಿಧ್ವನಿಸುತ್ತಿದೆ. ಸದ್ರೂಪವನ್ನೇ ಅರ್ಥ ಪೂರ್ಣವಾಗಿ ಚಿತ್ರಿಸುತ್ತಿದೆ. ಸತ್ಯಕ್ಕೆ ಸತ್ಯವಾದ ಸರ್ವಸ್ವರೂಪಿಯಾದ ಆ ಪರವಸ್ತು ಪಾರ್ಥಿವಾಂಗದಲ್ಲಿ ಏಕಿರಬಾರದು ? ಪಾರ್ಥಿವಾಂಗದಿಂದ ಏಕೆ ಪ್ರಾರ್ಥಿತವಾಗಬಾರದು ? ಪಾರ್ಥಿವಾಂಗಕ್ಕೆ ಏಕೆ ತನ್ನ ಪರಿಣಾಮ ವನ್ನುಂಟುಮಾಡಬಾರದು ? ನಮ್ಮ ಪಾರ್ಥಿವಾಂಗಗಳೂ ಆ ಸದ್ವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಸದಾಚಾರ ರೂಪಸಂಸ್ಕೃತಿ ಸರೋವರದಲ್ಲಿ ಮೀಯಬಾರದೇಕೆ ? ಎಂದು ಮಡಿಯಾಗಿ ನೋಡಿ ಹಾಡಿ ಕೂಡಿ ನಲಿದಾಡಿ ಬಾಳಬಾರದೇಕೆ ? ಅಸತ್ತಿನಿಂದ ಸತ್ತಿಗೆ ಸಾಗಿ ಸೇರಲು ಇಷ್ಟಲಿಂಗೋಪಾಸ ನೆಯೇ ಹೊರತು ಬೇರಿನ್ನಾವ ಅನಿಷ್ಟಭಾವವಿಲ್ಲ. ಅತ್ಯಂತ ಸ್ಥೂಲವಾದ ಪಾರ್ಥಿವಾಂಶದಲ್ಲಿ ಅತ್ಯಂತ ಸೂಕ್ಷ್ಮವಾದ ಪರಂಜ್ಯೋತಿಯಾದ ಆ ಪರ ವಸ್ತುವನ್ನಿರಿಸುವ ಇರಿಸಿ ನಿರುಕಿಸುವ ಕುಶಲಕಲೆಯ ಪ್ರತೀಕವೇ ಈ ಇಷ್ಟ

ಲಿಂಗ. ಪರಿಪೂರ್ಣ ವಸ್ತುವನ್ನು ಪರಿಪೂರ್ಣವೆಂದೆನಿಸುವ ಪರಮ ಸಾಧನೆಯ ಫಲವೇ ಈ ಇಷ್ಟಲಿಂಗ. ಅಂಗಕ್ಕೆ ಇಷ್ಟವಾದ ಚೈತನ್ಯವನ್ನು ಅಂಗವಿಸುವ ಕಲೆಯೋ ಈ ಇಷ್ಟಲಿಂಗೋಪಾಸಕನಾದ ಭಕ್ತನ ಭಾವಪೂರ್ಣ ಸತ್ಸಾಧನೆ.

ಎಲ್ಲ ಭೂತಗಳೂ ಎಲ್ಲ ಚೇತನಗಳೂ ಇಷ್ಟಲಿಂಗದಲ್ಲಿವೆ. ಪೃಥ್ವಿಗೆ ಪೃಥ್ವಿ, ಜಲಕ್ಕೆ ಜಲ, ಅಗ್ನಿಗೆ ಅಗ್ನಿ, ವಾಯುವಿಗೆ ವಾಯು, ಆಕಾಶಕ್ಕೆ ಆಕಾಶ, ಆತ್ಮನಿಗೆ ಆತ್ಮವಾಗಿದೆ ಈ ಇಷ್ಟಲಿಂಗ. ಇದರಿಂದಾಗಿ ಈ ಅಂಗಾಂಗಗಳು ಎಲ್ಲಿ ಲೀನವಾದರೂ ಆ ಲಿಂಗದಲ್ಲಿಗೇ ಹೋಗಿ ಸೇರಬೇಕು; ಸೇರುತ್ತದೆ. ಈ ಮೂಲ ಮರ್ಮೋದ್ಘಾಟಕವಾಗಿದೆ ಈ ಇಷ್ಟಲಿಂಗೋಪಾಸನೆ. "ಸೂರ್ಯಂ ಚಕ್ಷುರ್ಗಚ್ಛತು ವಾತಮಾತ್ಮಾದ್ಯಾಂ ಚ ಗಚ್ಛ ಪೃಥ್ವೀಂಚ ಧರ್ಮಣಾ । ಅಪೋವಾ ಗಚ್ಛ ಯದಿ ತತ್ರ ತೇ ಹಿತಂ ಓಷಧೀಷು ಪ್ರತಿತಿಷ್ಠಾ ಶರೀರೈಃ ॥ ಅಜೋ ಭಾಗಸ್ತವಸಾ ತಂ ತಪಸ್ವ ತಂ ತೇ ಶೋಚಿಸ್ತಪತು ತಂ ತೇಽರ್ಚಿಃ । ಯಾಸ್ತೇಃ ಶಿವಾಸ್ತನ್ವೋ ಜಾತವೇ ದಸ್ತಾಭಿರ್ವಹೈನಂ ಸುಕೃತಾಂ ಉಲೋಕಮ್ ॥" ಈ ಋಗ್ವೇದ ಋಕ್ಕು ಇಷ್ಟಲಿಂಗೋಪಾಸನ ತತ್ತ್ವವನ್ನು ಚೆನ್ನಾಗಿ ಪ್ರತಿಪಾದಿಸಿದೆ.

ಸರ್ವಭೂತ ಸಮನ್ವಯವುಳ್ಳ ಇಷ್ಟಲಿಂಗದಲ್ಲಿಯೇ ಸರ್ವಾಂಗವೂ ಸಮರಸಗೊಳ್ಳುವ ಸರ್ವೋತ್ಕೃಷ್ಟ ತತ್ತ್ವವನ್ನು ಉಗ್ಗಡಿಸಿದೆ. ಈ ಕಾಯಾಂಗಗಳು ಎಲ್ಲಿಯೋ ಲೀನವಾದಂತೆ ಕಂಡರೂ ಕೊನೆಗೆ ಸೇರುವುದು ಆ ಸದ್ರೂಪ ಶಿವನಲ್ಲಿ !

"ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ, ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ । ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮ ದೇವ ಹಿತಂ ಯದಾಯುಃ ॥" ಈ ಮುಂಡಕೋಪನಿಷತ್ತಿನ ಅಭಿಪ್ರಾಯವೇ ಸದ್ರೂಪೇಷ್ಟಲಿಂಗೋಪಾಸನೆಯ ಗುರಿ. ಕಣ್ಣಿಂದ ಸತ್ತನ್ನು ಕಾಣುವ ವಸ್ತು ಇಷ್ಟಲಿಂಗ. ಕಿವಿಯಿಂದ ಸತ್ತನ್ನು ಕೇಳುವ ಶಬ್ದ ಇಷ್ಟಲಿಂಗದ ಪಂಚಾಕ್ಷರ ಮಂತ್ರ. ಸರ್ವಾಂಗಗಳನ್ನು ಸ್ಥಿರಗೊಳಿಸಿ ನಲಿಸುವ ವಸ್ತು ಇಷ್ಟಲಿಂಗ. ಆದ್ದರಿಂದ ಆಯುಷ್ಯ ಇರುವವರೆವಿಗೂ ಬಿಡದೆ ಇಷ್ಟಲಿಂಗ

ಧಾರಣಾರ್ಚನಗಳಲ್ಲಿರೋಣ ! ಆ ದೇವನಿಗೆ ಹಿತರಾಗೋಣ ! ವಿಹಿತ ರಾಗೋಣ ! ಇದೇ ಸುಸಂಸ್ಕೃತಿ; ಇದೇ ಸುವಿಜ್ಞಾನ. ಇದೇ ಸದನುಭೂತಿ.

ಸಂತಯಿಸು :

ಕಾಯವೂ ಒಂದು ಕರಣ. ಕರಣತ್ರಯದಲ್ಲಿ ಕಾಯಕ್ಕೆ ಪ್ರಥಮ ಸ್ಥಾನ. ಕಾಯುವನ್ನು ಹಸನಾಗಿಸುವುದೇ ಭಕ್ತನ ಮೊದಲ ಕೆಲಸ. ಕಾಯ ಪ್ರಧಾನಭಕ್ತ. ಕೊಳೆಯಾದ ಕಾಯುವನ್ನು ಕಳೆಗೊಳಿಸುವುದೇ ಭಕ್ತನ ಕಾಯಕ. ಸಂಸ್ಕೃತಿಗೆ ಕಾರಣವಾದ ಶರೀರವನ್ನು ಸಂಸ್ಕೃತಿಗೆ ಸಾಧನವನ್ನಾಗಿ ಮಾಡುವುದೇ ಭಕ್ತನ ಕಾರ್ಯ.

ಮೊತ್ತಮೊದಲು ಕೆರಳಿ ಕನಲಿ ನಿಂತಿದೆ ತನು ; ಕೊಬ್ಬಿ ಕೊಳೆಯಾಗಿ ನಿಂತಿದೆ ತನು. ನಡೆ ತಪ್ಪಿ ನುಡಿ ತಪ್ಪಿ ಕೊಂಕಾಗಿದೆ ತನು ; ಮಂಕಾಗಿದೆ ತನು. ಕೇಡಿಗೀಡಾಗಿ ಕೈಗುಂದಿದೆ, ಕೈಬಂದಿಯಾಗಿದೆ ತನು. ಹೀಗಿರುವಾಗ 'ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿ ಕೊಳ್ಳಿ....ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂ. ಸಂ. ದೇವ.' ರಮ್ಯಸಂದೇಶ, ಪ್ರಥಮುಗಮ್ಯ ಸಂದೇಶ. ತನ್ನ ಮನೆಯ ನೋವು, ತನ್ನ ಮನೆಯ ಅಶಾಂತಿ, ತನ್ನ ಮನೆಯ ಅತೃಪ್ತಿ ತೀರದಷ್ಟಿದೆ; ತೀವ್ರವಾಗಿದೆ. ತಿದ್ದಿಕೊಳ್ಳಬೇಡವೆ ? ಶುದ್ಧಿಗೊಳಿಸಿಕೊಳ್ಳಬೇಡವೆ ?' ಇಲ್ಲವಾದರೆ ತನ್ನಾತ್ಮ ಮೆಚ್ಚುವುದೆ ? ಆತ್ಮಮೆಚ್ಚಿಕೆಗೆ ಆತ್ಮಶುದ್ಧಿ ಆದಿಯಾದುದಲ್ಲವೆ ? ಓ ತನುಜ, 'ಉತ್ಪತ್ತಿ ಶುಕ್ಲ ಶೋಣಿತದಿಂದಾದ ಲಜ್ಜೆ ಸಾಲದೆ ? ಮತ್ತೆ ದುರಿತಂಗಳ ಹೊರುವ ಹೆಗ್ಗತನವೇಕಯ್ಯ ? ಮೃತ್ಯುವಿನ ಬಾಯಿಗೆ ತುತ್ತಾಗಲೇಕೆ ? ಒತ್ತೊತ್ತೆಯ ಜನನವ ಗೆಲುವೊಡೆ ಕರ್ತನ ಪೂಜಿಸು, ಕೂ. ಸಂ. ದೇವನ.'

ಉತ್ಪತ್ತಿಗಿಂತ ವಿಕಾರವುಂಟೆ ? ಶುಕ್ಲ ಶೋಣಿತಗಳ ಉಬ್ಬರಗಿಂತ ಕೊಬ್ಬುಂಟೆ ? ನಡೆನುಡಿ ತಪ್ಪಿದುದು ಸಾಲದೆ ? ಮತ್ತೆ ಬೇರೆ ದುರಿತಗಳ ಹೊರೆ ಹೊರುವ ಹುಚ್ಚುತನಕ್ಕೆ ಸೋಲಬೇಕೆ ? ಅಪಮೃತ್ಯುವಿನ ಬಾಯಿಗೆ ತುತ್ತಾಗುವುದಕ್ಕಿಂತ ಬೇರೆ ಕೇಡುಂಟೆ ? ಬೇರೆ ಕೈಸೆರೆಯುಂಟೆ ? ಈ ಸೃಷ್ಟಿ ಸ್ಥಿತಿ ಲಯಗಳ ಕೊಳೆ ಕಳೆವುದೆಂದಿಗೆ ? ಕಳೆದುಕೊಳ್ಳುವ ಬಗೆ ಹೇಗೆ ? ನೀ ಬಲ್ಲೆಯಾ ? ಇಲ್ಲವಾದರೆ ಕೇಳು :

ಹಿಂದಿನ ಜನ್ಮದಲ್ಲಿ ಇಂದುಧರನ ಭಕ್ತಿಯ ಮಾಡದೆ ಮರತೆ ! ಆ ಮರವೇ ಮತ್ತೆ ಈ ಜನನಕ್ಕೆ ತಂದಿತು. ಈ ಶುಕ್ಲಶೋಣಿತದ ಕೊಳೆಯ ಹೊರುವಂತಾಯಿತು. ಈ ಜನ್ಮದುಃಖಕ್ಕೀಡುಮಾಡಿತು. ಇದು ದಿಟ.

'ಅರಿಯದೆ ಜನನಿಯ ಜಠರದಲ್ಲಿ ಭಾರದ ಭವಂಗಳಲ್ಲಿ ಬರಿಸಿದೆ ತಂದೆ ! ಹುಟ್ಟಿತ್ತೇ ತಪ್ಪಾಯಿತ್ತೇ ಎಲೆ ಲಿಂಗವೇ ? ಮುನ್ನ ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೇ ! ಇನ್ನು ಹುಟ್ಟಿದನಾದೊಡೆ ಕೂ. ಸಂ. ದೇವಾ ನಿಮ್ಮಾಣೆ !'

ಜನನದ ಬವಣೆ ಅದೆಂತು ಬಾಧಿಸಿದೆ ? ಅದೆನಿತು ಕೇಡೆನಿಸಿದೆ ? ಜನನದ ದೋಷ, ಜನನದ ದುಃಖ–ಅಪಾರ, ಅಸದೃಶ. ಅವನ್ನು ಮೊದಲು ಕಳೆದುಕೊಳ್ಳಬೇಕಲ್ಲವೆ ? ಹಾಗಾದರೆ ಅದಕ್ಕೆ ಬೇಕು ಲಿಂಗಕೃಪೆ. ಆ ಲಿಂಗ ಕೃಪೆಗೆ ಮೂಲ ತನ್ನ ಭಕ್ತಿ.

'ಹುಟ್ಟಿತ್ತೇ ತಪ್ಪಾಯಿತ್ತೇ ?' ಎಂಬ ಮಾತು ಮನನೀಯ. ಗರ್ಭಕ್ಕೆ ಬರುವುದು ಗರ್ಹಿತವಲ್ಲ ; ಗರ್ಭಾಷ್ಟಮ ಸಂಸ್ಕಾರ ಪಡೆಯದಿರುವುದು ಗರ್ಹಿತ. ಎಂಬುದನ್ನು ಸೂಚಿಸುತ್ತದೆ ಆ ಮಾತು !

ಇನ್ನು ತನ್ನ ಸ್ಥಿತಿಯ ದುಃಖಕ್ಕೆ ದೋಷಕ್ಕೆ ಕಾರಣವನ್ನು ಬೇರೆ ಹುಡುಕಬೇಕಿಲ್ಲ. ತನ್ನ ನಡೆನುಡಿಗಳಲ್ಲಿಯೇ ಹುದುಗಿಕೊಂಡಿದೆ. ಅದ ನರಿದು ಅದನು ತರಿದುಹಾಕುವುದೇ ಮುಂಗೆಲಸ.

'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ ; ಎನ್ನೊಳ ಗೇನೂ ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆಯ ಕಂಡೊಡೆ ಕೂ. ಸಂ. ದೇವನೊಳಗಿರ್ಪನಯ್ಯಾ.'

'ದಿಟ ಪುಟ ಭಕುತಿ ಸಂಪುಟನೆಲೆಗೊಳ್ಳದಾಗಿ ಟಿಂಬಕನಾಡಿಸುತ್ತಿದ್ದಿ ತಯ್ಯಾ ನಿನ್ನ ಮಾಯೆ ; ಟೇವಕಟಿಂಬಳನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ ಕೂ. ಸಂ. ದೇವಯ್ಯಾ ಹೊನ್ನ ಹೆಣ್ಣ ಮಣ್ಣ ತೋರಿ !'

ಈ ಎರಡು ವಚನಗಳು ಸಾಮಾನ್ಯವಾದ ಬಾಳು ಬದುಕಿನ ಬಗೆ ಯನ್ನು ಬಸವಣ್ಣ ತೋರಿದ್ದಾನೆ. ಜೀವನದ ಅಶುದ್ಧತೆಯನ್ನು ಮಾಯೆಯ ತೀವ್ರತೆಯನ್ನು ಆಟಕಾಟಗಳನ್ನು ಅದು ತೋರುವ ತೋರಿ ಕಣ್ಣನ್ನು

ಕೆಡಿಸುವ ಬಾಳನ್ನು ಹದಗೆಡಿಸುವ ನೋಟವನ್ನು ಬೀರಿದ್ದಾನೆ. ನಡೆ ನುಡಿಯೊಂದಾದರೆ ದಿಟ। ಭಕುತಿ ಸಂಪುಟಗೊಂಡರೆ ಬಾಳು ಹದಗೆಡದೆಂದು ಹೇಳಿದ್ದಾನೆ.

ನಡೆ ನುಡಿಗಳೇ ಮಾನವನಿಗೆ ನಿಜವಾದ ಬಂಡವಾಳ. ಇವಿಲ್ಲದಿದ್ದರೆ ಮಾನವ ಬಡವನಾಗುತ್ತಾನೆ. ಬಾಳಲಾರ. ಸಂಸ್ಕೃತಿಯು ಬೆಳವಣಿಗೆಗೆ, ಸಮರಸ ಸಿದ್ಧಿಗೆ ನಡೆನುಡಿಗಳೇ ಆಧಾರ ; ನಡೆನುಡಿಗಳೇ ಪರಮಾರ್ಥ. ಇವುಗಳಿಂದ ಅಲಭ್ಯಲಾಭವಾಗುತ್ತದೆ. ಆತ್ಮಬಲ ತೇಜ ಯಶ ಇವುಗಳ ವರ್ಧನವಾಗುತ್ತದೆ ; ರಕ್ಷಣವಾಗುತ್ತದೆ. ಇದಕ್ಕೆ ಪರಮಾರ್ಥ ಶಾಸ್ತ್ರವೆಂದು ಹೇಳುತ್ತೇವೆ.

ಕೇಡು ಕೇಡೆ ! ಮಾನವನು ಯಾವ ಬಗೆಯಲ್ಲಿಯೂ ಕೆಡಬಾರದು. ಮೈಗೆಡಬಾರದು ; ಮನಗೆಡಬಾರದು. ಹದಗೆಡಬಾರದು, ಹೊಲಬುಗೆಡಬಾರದು. ಕಲೆಗೆಡಬಾರದು, ಕಳೆಗೆಡಬಾರದು. ಸಿರಿಗೆಡಬಾರದು, ಪರಿಗೆಡಬಾರದು. ಕೆಟ್ಟ ಬಳಿಕ ಯಾರೂ ಆಗರು. ಕೆಟ್ಟಾಗಲೂ ಆಗುವವನೆಂದರೆ ಆ ದೇವನೊಬ್ಬನೆ ! ಆತ ಕಾರುಣ್ಯಸಿಂಧು ; ಕೈಬಿಡದ ಬಂಧು. ಬಂದುಂಡು ಹೋಗುವ ಈ ಬಾಳಿನ ಬಂಧುಗಳು ಬಡತನ ಬಂದಾಗ ಬೆನ್ನಾಸರಾಗರು. ಭವಕ್ಕೆ ಬಿದ್ದಾಗ ಇನ್ನೇನಾಗಬಲ್ಲರು ? ಹೊರ ಒಳಗೂ ಬೆಂದರೆ ಬಾಳ ಗತಿಯೇನು ? 'ಒಲೆ ಹತ್ತಿ ಉರಿದೊಡೆ ನಿಲ್ಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ ? ಏರಿ ನೀರುಂಬೊಡೆ, ಬೇಲಿ ಕೆಯ್ ಮೇವೊಡೆ, ನಾರಿ ತನ್ನ ಮನೆಯಲ್ಲಿ ಕಳುವೊಡೆ, ತಾಯ ಮೊಲೆವಾಲು ನಂಜಾಗಿ ಕೊಲುವೊಡೆ—ಇನ್ನಾರಿಗೆ ದೂರಿವೆ ಕೂ. ಸಂ. ದೇವಾ ?'

ಇದು ಹೊರಬಾಳಿನ ಬಳಗದ ಚಿತ್ರ ! ಸುಡುವ ಹೊಡೆಗಿಚ್ಚು ಬಾಳನ್ನೆಲ್ಲ ಬಳಸಿಕೊಂಡಾಗ ಬೇಗುದಿ ಬಲವಾದಾಗ ಶಾಂತಿಯೆಂದರೇನು ? ನೆಲವೇ ಇಲ್ಲದ ಬಳಿಕ ನೆಲೆ ನಿಲ್ಲುವುದೆಲ್ಲಿ ? ತನ್ನವರೇ ತನಗೆ ಹಗೆಯಾದ ಬಳಿಕ ತನ್ನ ಉಣಿಸೇ ನಂಜಾದಾಗ ದೂರು ಹೇಳುವುದು ಯಾರಿಗೆ ? ಉಸಿರೆತ್ತಿ ಬಾಳುವುದು ಹೇಗೆ ? ತಾನು ತನ್ನದು ತನ್ನವರು ಎಂಬ ಭ್ರಾಂತಿಯು ಕೊಳೆ ಕಳೆದುಕೊಳ್ಳದೆ ತನಗೆ ಉಳಿಗಾಲವೆಲ್ಲಿ ? ತನಗೆ ಕಳೆಯಾವುದು ? ಕೆಳೆಯಾರು ?

ಬಾಹ್ಯ ಜೀವನದ ಬಲೆಗೆ ಬಿದ್ದರೆ ಒದ್ದಾಡುವುದೇ ಗತಿ. ಸಾರವಿಲ್ಲದ ಸಂಸಾರದ ಕೆಸರಲ್ಲಿ ಬಿದ್ದರೆ ಎದ್ದೇಳುವ ಶಕ್ತಿ ಸಾಲದೆ ಈ ಕೆಸರನ್ನು ಮೈತುಂಬ ಪೂಸಿಕೊಳ್ಳುವುದೇ ಸ್ಥಿತಿ. ಈ ದುರ್ಗತಿ ಈ ದುಸ್ಥಿತಿಗಳನ್ನು ದೂರಮಾಡಿಕೊಳ್ಳದೆ ಶುದ್ಧಿ ಸಮನಿಸದು; ವೃದ್ಧಿ ಸಂಪ್ರಾಪ್ತವಾಗದು.

ಲೇಸಲ್ಲದುದೇ ಲೇಸೆಂದು ಭಾವಿಸಿ ಬಯಸುವುದು ಮನದ ಮನೀಷೆ. ಮನದ ಆಸೆಗೆ ಮಿತಿಯಿಲ್ಲ. ಕೈಗಂದದ ವಸ್ತುವಿಗೆ ಕಣ್ಣಿಡುವುದೇ ಮನದ ಪ್ರಕೃತಿ. ಅದು ದೊರೆಯಲಿ ದೊರೆಯದಿರಲಿ ಆಗುವುದು ಮನಕ್ಕೆ ವಿಕೃತಿ. ವಿಕೃತಿಯೇ ಒಳಕೊಳೆ. ವಿಕಲ್ಪವೇ ಅಂತರಂಗದ ಅಸತ್. ಇದರಿಂದಲೂ ಬಾಳು ಬಿಳುಪಳಿಯುತ್ತದೆ. ಹದುಳತೆ ಹಸಗೆಡುತ್ತದೆ. ಕೊನೆಸಾಗದ ದಂದುಗದಲ್ಲಿ ದಿಂಡುರುಳಬೇಕಾಗುತ್ತದೆ. ಕೆಟ್ಟ ಕೆಲಸಗಳಿಗೆ ಅದು ಪ್ರೇರೇಪಿಸುತ್ತದೆ.

'ಎಂದೋ ಸಂಸಾರದ ದಂದುಗ ಹಿಂಗುವುದು ? ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ – ಎಂದೋ ? ಕೂಡಲ ಸಂಗಮದೇವಾ, ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ ?' – ಎಂದು ಭಕ್ತನಾದವನು ಬಾಳಿನಲ್ಲಿ ಹಂಬಲಿಸುತ್ತಿರಬೇಕು.

'ಸಂಸಾರವೆಂಬುದೊಂದು ಗಾಳಿಯ ಸೊಡರು; ಸಿರಿಯೆಂಬುದೊಂದು ಸಂತೆಯ ಮಂದಿ–ಕಂಡಯ್ಯಾ ! ಇದನೆಚ್ಚಿ ಕೆಡಬೇಡ – ಸಿರಿಯೆಂಬುದ ! ಮರೆಯದೆ ಪೂಜಿಸು ಕೂಡಲ ಸಂಗಮದೇವನ !'

ಈ ಬೋಧೆಯಿಂದ ಈ ತಿಳಿವಿನಿಂದ ಬಾಳನ್ನು ತಿಳಿಗೊಳಿಸಬೇಕು. ಮರವೆಯೆಂಬ ಕೊಳೆಗೆ ಒಳಗಾಗದೆ ಪೂಜಿಸುವ ಭಕ್ತಿಪಥದಲ್ಲಿ ಸಾಗಬೇಕು. ಸಾಗದಿದ್ದರೆ ಸಾವಿನ ಕೊಳೆಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಕೈಗೆ ಬಂದ ಈ ಜನ್ಮರೂಪ ಭಾಗ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ.

'ಎಂತಕ್ಕೆ ! ಎಂತಕ್ಕೆ ! ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣುವೋ ! ಬಿರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟು

ಣ್ಣವೋ ! ಮರಳಿ ಭವಕ್ಕೆ ಬಹೆ-ಬಾರದಿಹೆ: ಕರ್ತು ಕೂಡಲ ಸಂಗಂಗೆ ಶರಣೆನ್ನುವೋ !'

ಮರಳಿ ಬರುವ ನೆಚ್ಚಿಕೆಯಿಲ್ಲ. ಬಂದಾಗಲೆ ಸಂದಾಗಲೆ ಸತ್ಸಂಪಾದನೆಯನ್ನು ಮಾಡಿಕೊಳ್ಳಬೇಕು. ಇಲ್ಲವಾದರೆ ಮಹಾನಷ್ಟ ಮಹಾಕಷ್ಟ ತಪ್ಪಿದ್ದಲ್ಲ.

'ನೆರೆಕೆನ್ನೆಗೆ, ತೆರೆಗಲ್ಲಕೆ ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪ ವಳಿಯದ ಮುನ್ನ, ಮೃತ್ಯುಮುಟ್ಟದ ಮುನ್ನ, ಪೂಜಿಸು ನಮ್ಮ ಕೂಡಲ ಸಂಗಮದೇವನ.'

ಮೈಗೆ ಮೃತ್ಯು ತಪ್ಪಿದ್ದಲ್ಲ. ಮೃತ್ಯುವಿಗೆ ತುತ್ತಾಗದ ಮುನ್ನ ಲೇಸೆನಿಸಿಕೊಂಡು ಬಾಳಬೇಕು. ಸತ್ಸಾಧನೆಯಲ್ಲಿ ಬಾಳಬೇಕು. 'ಜೀವಿತಂ ಶಿವಭಕ್ತಾನಾಂ ವರಂ ಪಂಚದಿನಾನಿ ಚ । ನಾಜಕಲ್ಪ ಸಹಸ್ರಂತು ಭಕ್ತಿಹೀನಂತು ಶಂಕರೀ॥' ಭಕ್ತಿಯ ಬಾಳೇ ಬಾಳು. ಭಕ್ತಿಯುಳ್ಳವರಾಗದೆ ಬಹು ದಿನ ಬಾಳಿದರೂ ಅದು ಬಾಳಲ್ಲ. ಅದೇ ಭಕ್ತಿಯುಕ್ತರಾಗಿ ಅಯ್ದು ದಿನ ಅಥವಾ ಒಂದು ದಿನ ಬಾಳಿದರೆ ಸಾಕು. ಅದೇ ಸಾರ್ಥಕ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ: ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲ ಸಂಗಮದೇವ.' ಸತ್ಸಂಪಾದನೆಯಿಂದ ಇಲ್ಲಿಯೂ ಅಲ್ಲಿಯೂ ಸಲ್ಲುವವನಾಗುವುದೇ ಭಕ್ತನ ಕರ್ತವ್ಯ. ಜೀವನದಲ್ಲಿ ಯಾವ ಸದ್ವಾಸನೆಯಿಲ್ಲದೆ ಸದ್ರೂಪರಾಗದೆ ಸಾಯುವುದಕ್ಕಿಂತ ಬೇರಿಲ್ಲ ಕೇಡು. ಸತ್ತ ಬಳಿಕ ನರಿನಾಯಿಗಳ ದೇಹಕ್ಕಿಂತ ಕಡೆಯಾದ ಈ ದೇಹವೋಹ ಮತಿವಂತನಾದ ಮಾನವನಿಗೆ ತರವಲ್ಲ. ಸತ್ಸಂಪಾದನೆಗಾಗಿ ದೇಹಮೋಹವಿರಲಿ. ಅದೇ ಅಸತ್ಸಂಪಾದನೆಯ ವಿಷಯದಲ್ಲಿ ಬೇಡ. ಅದು ಭಕ್ತಿಪಥಕ್ಕೆ ತರವಲ್ಲ. ಮುಕ್ತಿಪಥಕ್ಕೆ ತಕ್ಕುದಲ್ಲ.

ಗಂಧದ ಬಳಿಯಿದ್ದರೆ ಗಂಧದ ವಾಸನೆ ಬರುತ್ತದೆ. ದುರ್ಗಂಧದ ಬಳಿಯಿದ್ದರೆ ದುರ್ಗಂಧದ ವಾಸನೆ ಬರುತ್ತದೆ. ಅಂತೆಯೇ ಕರ್ಮದ ಕೊಳೆ

ಕಳೆಯಬೇಕಾದರೆ ಸತ್ಸಂಗ ಅವಶ್ಯಕ. ಜ್ಞಾನಾನುಭವಗಳ ಬೆಳೆ ಬೆಳೆಯಬೇಕಾದರೆ ಕಾಯಕೃಷಿ ಅಗತ್ಯ. ಮೈಹೊಲ ಹಸನಾಗಬೇಕು. ದುರಿತ ದುರ್ಗುಣವೆಂಬ ಕಳೆ ಕೀಳಬೇಕು.

ಶ್ರೀಗುರುವರನ ಸದುಪದೇಶವೆಂಬ ಬೀಜವನು ತನುಭೂಮಿಕೆಯಲ್ಲಿ ಬಿತ್ತಿ ಬೆಳೆಯಬೇಕು. ಶುಕ್ಲಶೋಣಿತ ದೇಹವನ್ನು ಶುಭ್ರ ಮಂತ್ರಮಯ ದೇಹವನ್ನಾಗಿಸಬೇಕು. ಪೂರ್ವಾಶ್ರಯದ ಪ್ರಕೃತಿತ್ವವನ್ನು ಅಣಗಿಸಿ ಅಷ್ಟಾವರಣ ರೂಪ ಅಂಗವನ್ನು ಭಕ್ತನು ಅಂಗವಿಸಿಕೊಳ್ಳಬೇಕು. ಪಂಚ ಪ್ರಾಣಗಳಂತಿರುವ ಪಂಚಾಚಾರಗಳನ್ನು ಪರಿಪೋಷಿಸಿಕೊಳ್ಳಬೇಕು. ಇದು ಭಕ್ತನ ಸದುಪಾಸನೆಯ ಸತ್ಕಾರ್ಯ; ಮಂಗಳಮಯ ಮಣಿಹ.

ಮತ್ತೊಬ್ಬರನ್ನು ಕೊಲ್ಲಬೇಕಾದರೆ ಕತ್ತಿಕಟಾರಿ ಬೇಕು; ಶಕ್ತಿಸಾಹಸ ಬೇಕು. ತನ್ನ ತಾ ಹತ್ಯೆ ಮಾಡಿಕೊಳ್ಳಲು ಏನೂ ಬೇಕಿಲ್ಲ. ಅಸತ್ತಿನಲ್ಲಿ ಅನಾಚಾರದಲ್ಲಿ ಬಿದ್ದಿದ್ದರೆ ಅದಕ್ಕಿಂತ ಬೇರಿಲ್ಲ ಮರಣ. ಆತನೊಬ್ಬ ಜೀವನ್ಮೃತನು; ಆತ್ಮಘಾತುಕನು. ಆತ ಬದುಕಿಯೂ ಬದುಕದಂತೆ! ಆತ ಬಾಳಿಯೂ ಬಾಳದಂತೆ! ಸದ್ವರ್ತನೆ ಒಂದು ಮಹಾಸಂಜೀವಿನಿ, ಶಾಂತಿ ದಾಯಿನಿ, ಕಾಂತಿಕಾರಿಣಿ, ಕೀರ್ತಿಧಾರಿಣಿ. ಮಾನವನ ಬದುಕಿಗೆ ಸದ್ವರ್ತನ ಗಿಂತ ಬೇರಿಲ್ಲ ಶಾಂತಿ; ಕಾಂತಿ. ಬೇರಿಲ್ಲ ಸತ್ಕೀರ್ತಿ.

ಸದ್ಭಕ್ತನಿಗೆ ಸದಾಚಾರವೇ ಒಂದು ಜ್ಯೋತಿ. ಅದನ್ನು ಹಿಡಿದು ಹೊರಟರೆ ಅವನಿಗೆ ಲಿಂಗ, ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳು ತೋರುತ್ತವೆ; ಕರಗತವಾಗುತ್ತವೆ. ಕರುಣಾಮೂರ್ತಿ ಗುರು ದೇವನ ದರ್ಶನಭಾಗ್ಯವನ್ನುಂಟುಮಾಡಿಕೊಡುವುದು ಆ ಸಜ್ಜ್ಯೋತಿ! ಮಣ್ಣಿನ ಮೋಹಾಂಧಕಾರವನ್ನು ಮರೆಮಾಡುವುದು ಮಂಗಳಮಯ ಆ ಸಜ್ಜ್ಯೋತಿ! ದೇಹವನ್ನು ದೇವರೂಪವನ್ನಾಗಿಮಾಡುವುದು ಆ ಸಜ್ಜ್ಯೋತಿ!

ಶಾರೀರಕ ಸದಾಚಾರ ತಾತ್ತ್ವಿಕ ಜೀವನದ ತಳಹದಿ. ಷಟ್‌ಸ್ಥಲ ಸೌಧವು ಭದ್ರವಾಗಿ ನಿಲ್ಲಲು ಸದಾಚಾರ ಶಾಶ್ವತ ಆಧಾರ. ಅಂಗಕ್ಕೆ ಅಲಂಕಾರ.

"ಭಕ್ತಂಗೆ ಆಚಾರವೇ ಅಲಂಕಾರವು. ಭಕ್ತಂಗೆ ಆಚಾರವೇ ಸರ್ವ ಪೂಜ್ಯವು. ಆಚಾರವುಳ್ಳವನೇ ಭಕ್ತನು; ಆಚಾರವುಳ್ಳವನೇ ಯುಕ್ತನು. ಆ ಆಚಾರವುಳ್ಳವನೇ ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ'.

'ಸದಾಚಾರವನಾಚರಿಸುವ ಸತ್ಕ್ರಿಯಾಸಂಪನ್ನಂಗೆ ಸಮ್ಯಜ್ಞಾನ ಉದಯವಹುದು. ಆ ಸಮ್ಯಜ್ಞಾನೋದಯದಿಂದ ತನ್ನ ತಾನರಿದು ಶಿವ ನಹನಲ್ಲದೆ ತನಗೇನೂ ಇದಿರಿಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ ಆಚಾರವೇ ಮುಖ್ಯವಯ್ಯ.'

"ಸುಚಿತ್ತವೆ ಭಕ್ತಂಗೆ ಹಸ್ತ. ಆಚಾರಲಿಂಗದಲ್ಲಿ ಅವಿರಳ ಸಮರಸ ಸೌಖ್ಯವನರಿಯಬಲ್ಲಡೆ ಭಕ್ತನೆಂಬೆ', 'ಉಳ್ಳುದನರಿತು ಮಾಡುವಲ್ಲಿ ಭಕ್ತ' 'ಕರ್ತೃಭೃತ್ಯತ್ವವನರಿದಾತ ಭಕ್ತ' 'ತ್ರಿವಿಧ ಪದಾರ್ಥವ ತ್ರಿವಿಧಲಿಂಗಕ್ಕ ರ್ಪಿಸುವಾತನೇ ಭಕ್ತ' 'ತ್ರಿವಿಧಕ್ರಿಯೆಯಿಂದ ಭೇದವನರಿತು ಮಾಡುವುದು ಭಕ್ತಸ್ಥಲ' 'ಭಕ್ತನಾದಡೆ ತನು ಮನ ಧನದಾಶೆಯನಳಿದಿರಬೇಕು' 'ಭಕ್ತಂಗೆ ಕ್ರಿ, ಭಕ್ತಂಗೆ ವಿಶ್ವಾಸ, ಭಕ್ತಂಗೆ ಆಚಾರಲಿಂಗ' 'ಅಯ್ಯ ಇದ್ದುದ ವಂಚನೆಯಂ ಮಾಡದೆ ಇಲ್ಲದುದಕೆ ಕಡನ ಮಾಡದೆ, ಪರರ ಕಾಡಿ ಬೇಡಿ ತಂದು ದಾಸೋಹವ ಮಾಡದೆ, ತನ್ನ ಬೇಡಿದವರಿಗೆ ಇಲ್ಲೆನ್ನದಿಹುದು ಭಕ್ತಸ್ಥಲ' 'ಕಾಯ ಇಂದ್ರಿಯಂಗಳಲ್ಲಿ ಮೆಚ್ಚಿಹನ್ನಕ್ಕರ ಭಕ್ತಸ್ಥಳವಿಲ್ಲ. ಭಕ್ತಂಗೆ ತ್ರಿವಿಧಮಲ ನಾಸ್ತಿಯಾಗಿರಬೇಕು. ಭಕ್ತನಾದರೆ ಕಿಂಕರರ ಕಿಂಕರ ನಾಗಿರಬೇಕು. ಲಾಂಛನದೆಡೆಯಲ್ಲಿ ಹುಸಿಯ ಸಂಪಾದಿಸುವನ್ನಕ್ಕರ ಭಕ್ತ ನಲ್ಲ. ಭಕ್ತಂಗೆ ಪೃಥ್ವಿಯೇ ಅಂಗ. ಸದ್ಯೋಜಾತವೇ ಮುಖ. ಪಂಚಾ ಕ್ಷರವೇ ಮಂತ್ರ!' 'ಘ್ರಾಣಕ್ಕೂ ಗಂಧಕ್ಕೂ ಪೃಥ್ವಿಯೆಂಬ ಮಹಾಭೂತ. ಅಲ್ಲಿ ನಿವೃತ್ತಿಯೆಂಬ ಕಲೆ ಇಹುದು. ಆ ಕಲೆಯಲ್ಲಿ ಕ್ರಿಯಾಶಕ್ತಿಯುಕ್ತ ವಾದ ಆಚಾರಲಿಂಗವ ಧರಿಸಿದಾತ ಭಕ್ತನು.' 'ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವ ಕೊಟ್ಟೆನೆಂಬನ್ನಕ್ಕ ಭಕ್ತಸ್ಥಲ.' ಭಕ್ತಂಗೆ ಭಕ್ತಿಯೇ ಲಿಂಗಾರ್ಚನೆ. ಸಮದೃಷ್ಟಿಯಾಗದವನ ಭಕ್ತನೆಂತೆಂಬೆ ?' 'ಆಚಾರಲಿಂಗ ಮೋಹಿತನಾದರೆ ಸತಿ ಸುತ ಸಖ ಸಹೋದರ ಬಂಧುಬಾಂಧ ವರ ಮೋಹವ ಮರೆಯಬೇಕು. ಪೂರ್ವಾಚಾರವ ನಡೆಯಲಾಗದು. ಅನ್ಯ ಪೂಜೆಯ ಮಾಡಲಾಗದು. ಹಿಡಿದ ವ್ರತನೇಮವ ಬಿಡಲಾಗದು. ಅಶುಚಿ

ಯಾಗಿರಲಾಗದು. ಭಕ್ತನಿಂದೆಯು ಕೇಳಲಾಗದು. ಸ್ವಕಾಯಕದಲ್ಲಿರಬೇಕು. ಪೂರ್ವಪನಳಿದು ಪುನರ್ಜಾತನಾಗಿರಬೇಕು.'

'ಭಕ್ತಂಗೆ ವ್ರತವಾರದಲ್ಲಿ ತದ್ಗತವಾಗಿಹುದೇ ಭಕ್ತಿ. ಅದೆಂತೆಂದೊಡೆ: ಗುರುವನೇ ಶಿವನೆಂದರಿದು ಗುರುವಾಜ್ಞೆಯು ಪಾಲಿಸುವುದೇ ಗುರುವ್ರತ. ಗುರುಮುಖದಲ್ಲಿ ಬಂದ ಲಿಂಗಪೂಜೆಯಲ್ಲಿ ನಿಯತಾತ್ಮನಾಗಿ ಭಕ್ತಿಭಾವ ಸಮೇತವಾದುದು ಲಿಂಗವ್ರತ. ಜಂಗಮವೇ ಮಹಾಲಿಂಗವೆಂದರಿದು ಪೂಜಾದಿ ಕ್ರಿಯೆಯಿಂದ ಆತ್ಮಾರ್ಪಣ ಮಾಡುವುದೆ ಚರವ್ರತ. ಗುರುಲಿಂಗ ಜಂಗಮ ಪ್ರಸಾದಸೇವನಾನುಭಾವವೇ ಪ್ರಸಾದವ್ರತ. ಲೋಕಪಾವನವಾದ ಶ್ರೀಗುರು ಪಾದಾಂಬುಜ ಸ್ನಾನಪಾನಾದಿಗಳಿಂದ ಆಚರಿಸುವುದೇ ಪಾದೋದಕವ್ರತ. ಗುರುಲಿಂಗ ಜಂಗಮದ ಪಾದೋದಕಪ್ರಸಾದದಲ್ಲಿ ತಲ್ಲೀಯವಾದ ಭಕ್ತಿಯೇ ಭಾಕ್ತಿಕವ್ರತ. ಇಂತೀ ಷಡ್ವಿಧ ವ್ರತವನರಿದು ಆಚರಿಸುತಿರ್ಪಾತನೇ ಸದ್ಭಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.'

'ಮತಿಜ್ಞಾನವೇ ಭಕ್ತ' ಎನ್ನುತ್ತಾನೆ ಚೆನ್ನಬಸವಣ್ಣ. ಅಂದರೆ ಅಹಂ ಎಂಬುದರ ನಿಜವ ತಿಳಿದು ನಿರಹಂಭಾವದಲ್ಲಿರುವುದೇ ಭಕ್ತನ ಸಲ್ಲಕ್ಷಣ. 'ಅಂಗ ಭವಿ ಭಕ್ತಂಗೆ' ಎಂದಿದಾನೆ ಮೋಳಿಗೆಯ ಮಾರಯ್ಯ. ಉರಿಯುಂಡ ಕಪ್ಪುರದಂತೆ ಲಿಂಗವುಂಡ ಅಂಗವಾಗಿರಬೇಕು. ಅಂಗಭಾವ ನಿಷ್ಪತ್ತಿಗೊಂಡಿರಬೇಕು. 'ಬೀಜ ವೃಕ್ಷವನುಂಗಿತ್ತೋ ವೃಕ್ಷ ಬೀಜವನುಂಗಿತ್ತೋ ಎಂಬುದನರಿದಾಗಲೇ ಭಕ್ತಸ್ಥಲ' ಎಂದು ಆತನೇ ಮತ್ತೊಂದು ಮಾತಿನಲ್ಲಿ ವಿವರಿಸಿದ್ದಾನೆ. 'ಭಕ್ತನಾದಲ್ಲಿ ಬ್ರಹ್ಮನ ಒಡಲೊಡೆಯಬೇಕು. ಪ್ರಾಕೃತಿಕ ದೇಹಭಾನವು ಹಿಂಗಬೇಕು. ದೇಹಮೋಹ ತೊಲಗಬೇಕು.' 'ಹೊಸ ಮದುವೆಯು ಹಸೆಯುಡಗದ ಮುನ್ನ, ಪೂಸಿದ ಅರಸಿನ ಬಿಸಿಲಿಂಗೆ ಹರಿಯದ ಮುನ್ನ, ತನು ಸಂಚಲವಡಗಿ ಮನವು ಗುರುಕಾರುಣ್ಯವ ಪಡೆದು ಹುಸಿಯಿಲ್ಲದಿರ್ದಡೆ ಭಕ್ತನೆಂಬೆ.' ಎಂದು ಗಜೇಶ ಮಸಣಯ್ಯ ಹೇಳಿದಾನೆ.

ಬಸವಣ್ಣನವರನ್ನು ಬಣ್ಣಿಸುವ ನಿಮಿತ್ತದಲ್ಲಿ ಮಹಾದೇವಿಯಕ್ಕಗಳು ಭಕ್ತಸ್ಥಲದ ಆಚಾರಗಳನ್ನು ಹೀಗೆ ಬಿತ್ತರಿಸಿದ್ದಾಳೆ:

ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿಧಾರಕನು, ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗಸಂಬಂಧಿ, ನಿತ್ಯಲಿಂಗಾರ್ಚಕನು, ಅರ್ಪಿತ

ದಲ್ಲಿ ಅವಧಾನಿ. ಪಾದೋದಕ ಪ್ರಸಾದಗ್ರಾಹಕನು, ಭಕ್ತಿಸಂಪನ್ನನು, ಏಕಲಿಂಗ ನಿಷ್ಠಾಪರನು, ಚರಲಿಂಗ ಲೋಲುಪ್ತನು, ತ್ರಿವಿಧದಲ್ಲಿ ಆಯುತನು, ತ್ರಿಕರಣಶುದ್ಧನು, ತ್ರಿವಿಧ ಲಿಂಗಾಂಗಸಂಬಂಧಿ, ಅನ್ಯದೈವ ಸ್ಮರಣೆಯ ಹೊದ್ದ, ಭವಿಸಂಗವ ಮಾಡ, ಭವಿಪಾಕವ ಕೊಳ್ಳ, ಪರಸತಿಯ ಬೆರಸನು, ಪರಧನವನೊಲ್ಲನು, ಪರನಿಂದೆಯನಾಡ. ಅನೃತವ ನುಡಿಯ, ಹಿಂಸೆಯ ಮಾಡ, ತಾಮಸ ಭಕ್ತಸಂಗವ ಮಾಡ, ಅರ್ಥ ಪ್ರಾಣಾಭಿಮಾನಗಳ ಗುರು ಲಿಂಗ ಜಂಗಮಕ್ಕೆ ಅರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ, ಜಂಗಮನಿಂದೆಯ ಸೈರಿಸ, ಪ್ರಸಾದನಿಂದೆಯ ಕೇಳ, ಅನ್ಯರನಾಸೆಗೆಯ್ಯ, ಪಾತ್ರಾಪಾತ್ರವನರಿದೀವ, ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕೆ ಅಳುಕ, ಕುಲಾದಿಮದಂಗಳ ಬಗೆಗೊಳ್ಳ, ದ್ವೈತಾದ್ವೈತವನೊಲ್ಲ, ಸಂಕಲ್ಪ ವಿಕಲ್ಪವ ಮಾಡುವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿಹ, ಷಟ್‌ಸ್ಥಲಭರಿತ, ಸರ್ವಾಂಗಲಿಂಗಿ, ದಾಸೋಹಸಂಪನ್ನ – ಇವು ಭಕ್ತನಲ್ಲಿರಬೇಕಾದ ಗುಣಗಳು. ಇವುಗಳಿಂದ ಭಕ್ತನ ಬಾಳು ಹಸನಾಗುತ್ತದೆ. ಇವಲ್ಲದೆ ಇನ್ನೂ ಕೆಲಗುಣಗಳಿವೆ:

ಸದಾಚಾರ, ಸದ್ಭಕ್ತಿ, ಸಮ್ಯಜ್ಞಾನ, ಸತ್ಕ್ರಿಯೆ, ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ, ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಿಭಕ್ತಭೇದ, ಸತ್ಪಾತ್ರ ದ್ರವ್ಯಾರ್ಪಣ, ಗೌರವಬುದ್ಧಿ, ಷೋಡಶ ಭಕ್ತಿನಿರ್ವಾಹ, ಸತ್ಯಕಾಯಕ, ಕೊಟ್ಟು ಕೊಂಬುವ ಜಾಣ್ಮೆ, ಸತ್ಯನಡೆ–ನುಡಿ, ಸಜ್ಜನ ಸಂಗತಿ, ಸಕಲ ಜೀವಾತ್ಮರಿಗೆ ಲೇಸ ಬಯಸುವಿಕೆ, ದಂತಧಾವನ, ಸ್ನಾನ, ಲಿಂಗಧಾರಣ, ತುರುಗಳ ರಕ್ಷಣ, ಇತ್ಯಾದಿ ಸುಗುಣಗಳಿಂದ ಸದಾಚಾರಗಳಿಂದ ಭಕ್ತನು ತನ್ನ ತನುವ ಸಂತವಿಸಿಕೊಳ್ಳಬೇಕು. ಷಡೂರ್ಮಿಗಳ ಉಬ್ಬರ, ಷಡ್ಭಾವ ವಿಕಾರಗಳಿಂದ ದೂರನಾಗಿರಬೇಕು.

ವಿಶ್ವಾತ್ಮ ಅಂದರೆ ಇಷ್ಟಲಿಂಗವಿರುವುದು ತನುವಿನಲ್ಲಿ. ಅಂದರೆ ಸಾಕಾರವಾದ ಸದ್ರೂಪವಾದ ದೇವನೆಂದರೆ ತನು. ಮೊದಲು ನಮಗೆ ತೋರುವುದೇ ಸದ್ರೂಪ ಚೈತನ್ಯಾವಚ್ಛಿನ್ನ ತನು. ಮೊದಲು ತನು ಮೆಚ್ಚೆ ನಡೆಯಬೇಕು. ತನು ಸಂತೈಸುವ ಕಾರ್ಯ ನಡೆಯಬೇಕು. ಅಸಂಸ್ಕೃತಿಯಿಂದ ಅಂದರೆ ಅನಾಚಾರದಿಂದ ತನು ಮೆಚ್ಚಿಸುವುದಲ್ಲ. ಸಂಸ್ಕೃತಿಯಿಂದ ಸದಾ

ಚಾರದಿಂದ ಮೆಚ್ಚಿಸಬೇಕು. ಮಾನವ ಜೀವನದಲ್ಲಿ ಇದು ಮೊದಲಾಗ ಬೇಕಾದ ಮಣಿಹ. ತನು ತನ್ನದಾಗಿರಬೇಕು. ತನು ತನಗಾಗಿ ಅಂದರೆ ತನ್ನತನವನ್ನು ಗಳಿಸುವುದಕ್ಕಾಗಿ ಸಹಾಯಕವಾಗಿರಬೇಕು. ತನ್ನತನ ಸಣ್ಣದಲ್ಲ; ಸಂಕುಚಿತವಾದುದಲ್ಲ. ಜೀವಾತ್ಮವು ಎಲ್ಲೆಲ್ಲಿದೆಯೋ ಅದೆಲ್ಲವೂ ತಾನು. ಅದನರಿದು ಅದರಂತೆ ಆಚರಿಸುವುದೇ ತನ್ನತನ.

ತನುವ ಸಂತಯಿಸುವುದೆಂದರೇನು ? ಕಣ್ಣು ಕಿವಿ ಮೂಗು ನಾಲಗೆ ತೊವಲು ಮನಸ್ಸುಗಳು ತಣಿಯುವಂತೆ ವರ್ತಿಸುವುದು. ಕಣ್ಣು ನೋಡಲು ಹಾತೊರೆಯುವುದು. ಕಣ್ಣು ಎಳಸಿದುದನ್ನೆಲ್ಲ ಕಾಣಲು ಕಾಂಕ್ಷಿಸಬಾರದು. ಕಣ್ಣು ಕಂಡರೆ ಮನಕ್ಕೆ ವಿಕಾರವಾಗಬಾರದು. ಅಂತಹ ಸದ್ರೂಪವನ್ನೇ ದರ್ಶಿಸ ಬೇಕು. ಅದಕ್ಕಾಗಿ ಸದ್ರೂಪ ಇಷ್ಟಲಿಂಗವನ್ನು ಗುರು ಕರುಣಿಸುವನು. ಅದನ್ನು ನೋಡುವುದರಿಂದ ಕಣ್ಣು ತಾನು ಬೇರೆ ದೃಶ್ಯಗಳನ್ನು ನೋಡಿ ನೋಡಿ ಕಳೆದುಕೊಂಡ ಶಕ್ತಿಯನ್ನು ಮರಳಿ ಸಂಪಾದಿಸುತ್ತದೆ. ಇಷ್ಟ ಲಿಂಗದಲ್ಲಿ ಕಣ್ಣಿಗೆ ಬೆಳಕಿನ ಬಲವನ್ನು ಕೊಡುವ ಶಕ್ತಿಯಿದೆ ; ಔಷಧಿಯಿದೆ. ಮಂತ್ರಮಯ ಚೈತನ್ಯವಿದೆ. ಅಲ್ಲದೆ ಮನಸ್ಸಿಗೆ ಶಾಂತಿಯುಂಟಾಗುತ್ತದೆ. ಕಣ್ಣಿಗೆ ಬೇಕಾದ ಕಲೆ ಕಳೆಗಳು ಕ್ರಿಯಾಲಿಂಗದಲ್ಲಿವೆ. ಆದ್ದರಿಂದ ಲಿಂಗದಲ್ಲಿ ದೃಷ್ಟಿಯನ್ನಿಡಬೇಕು. ಹೆಚ್ಚು ಹೊತ್ತು ಲಿಂಗವನ್ನು ನೋಡಲು ಕಲಿಯ ಬೇಕು. ಇದರಿಂದ ನೇತ್ರರೋಗವು ಎಂದೆಂದಿಗೂ ಬರುವುದಿಲ್ಲ. ನೇತ್ರ ಪಟುತ್ವ ತಗ್ಗುವುದಿಲ್ಲ. ಕನ್ನಡಕವನ್ನು ಬಳಸುವ ಕೆಲಸವಿರುವುದಿಲ್ಲ. ನೂರು ವರುಷವಾದರೂ ಕಣ್ಣು ಚೆನ್ನಾಗಿ ಕೆಲಸ ಮಾಡುತ್ತದೆ; ಕಾಣುತ್ತದೆ.

ಕೇಳುವುದೇ ಕಿವಿಯ ಕೆಲಸ. ಕಿವಿಯ ಒಳಗಿನ ಕೇಂದ್ರದಲ್ಲಿ ಧ್ವನಿ ಗ್ರಾಹಕ ಚೈತನ್ಯವಿದೆ. ಅದು ಉಳಿದುದನ್ನೆಲ್ಲ ಕೇಳಿ ಕೇಳಿ ತನ್ನ ಶಕ್ತಿ ಯನ್ನು ಕಳೆದುಕೊಳ್ಳುತ್ತದೆ. ಆದಕ್ಕಾಗಿ 'ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ' ಎಂದರು ಬಸವಣ್ಣನವರು. ಕಿವಿ ಲಿಂಗಮಂತ್ರವನ್ನು ಕೇಳಿದರೆ ತನ್ನ ಶಕ್ತಿಯನ್ನು ಕಳೆದುಕೊಳ್ಳದೆ ಇರುತ್ತದೆ. ಪ್ರಸನ್ನ ವಾಗಿರುತ್ತದೆ. ಕಠಿಣಶಬ್ದ, ಶೋಕವನ್ನು ಹುಟ್ಟಿಸುವ, ಅಸಹ್ಯವನ್ನು ಹುಟ್ಟಿಸುವ ಶಬ್ದಗಳನ್ನು ಕೇಳಿದರೆ ಮನಸ್ಸು ವಿಕಾರವಾಗುತ್ತದೆ. ಆದರೆ ಅದೇ ನಾದಾತ್ಮಕವಾದ ಲಿಂಗವಾರ್ತೆಯ ಕೇಳಿದರೆ ನಾದ ತುಂಬಿ ಬರುತ್ತದೆ.

ಉಳಿದೆಲ್ಲ ನಾದಗಳು ಕರ್ಣನಾದವನ್ನು ಹೀರುತ್ತವೆ. ಇಷ್ಟಲಿಂಗದ ನಾದವು ತುಂಬಿ ತರುತ್ತದೆ. ಅಂತಹ ನಾದವನ್ನು ಶ್ರೀಗುರು ಅದರಲ್ಲಿ ತುಂಬಿದ್ದಾನೆ. ಇವುಗಳಂತೆ ಮೂಗು-ನಾಲಗೆ-ಚರ್ಮಗಳು ಲಿಂಗಕ್ಕೆ ಧರಿಸಿದ ಪುಷ್ಪಗಳನ್ನೇ ಆಘ್ರಾಣಿಸಬೇಕು. ಲಿಂಗಪ್ರಸಾದವನ್ನೇ ನಾಲಗೆ ಸ್ವೀಕರಿಸಬೇಕು; ಲಿಂಗ ಸ್ಪರ್ಶವನ್ನೇ ಚರ್ಮವು ಮಾಡಬೇಕು. ತಂತಮ್ಮ ಶಕ್ತಿಯನ್ನು ಸಂಗಳಿಸಿ ಕೊಂಡು ತಣಿಯಬೇಕು. ಅಂತೆಯೇ ಮನಸ್ಸು ಸಹ ಲಿಂಗದ ನೆನಹನ್ನೇ ಮಾಡಿ ನಿಶ್ಚಲವಾಗಿರಬೇಕು; ನಿರ್ಮಲವಾಗಿರಬೇಕು. ಇಂತಾಗುವುದೇ ಈ ತನುವಿನ ಸದ್ರೂಪು. ಸತ್ಸಂಪಾದನೆ. ಈ ಸತ್ಸಂಪಾದನೆಯಿಂದ ತನುವನ್ನು ಸಂತಯಿಸಬೇಕು. ಇದಕ್ಕಾಗಿಯೇ ಭಕ್ತನಿಗೆ ಲಿಂಗಧಾರಣ, ಭಸ್ಮಧಾರಣ, ರುದ್ರಾಕ್ಷಧಾರಣ, ಮಂತ್ರಜಪವಿಧಾನ, ಭಕ್ತಿಸಾಧನ, ಗುರು ಲಿಂಗ ಜಂಗಮ ಸೇವೆ, ಪ್ರಸಾದಸ್ವೀಕಾರ, ಸಹಜದಾನಗಳನ್ನು ವಿಧಿಸಲಾಗಿವೆ. ಇವು ಭಕ್ತನ ಸತ್ಸಂಪಾದನೆಯ ಕಾರ್ಯದಲ್ಲಿ ಪೂರ್ಣ ಪೋಷಕಗಳಾಗಿವೆ. ಇವುಗಳಿಂದ ಸತ್ಸಂಸ್ಕಾರ ಬೆಳೆಯುತ್ತದೆ. ಸಂಸ್ಕೃತಿ ಪೋಷಿತವಾಗುತ್ತದೆ. ಸತ್ಯವಾದ ನಡೆ ನುಡಿ, ಸಾತ್ವಿಕಾಹಾರ, ಸ್ವಾರ್ಥತ್ಯಾಗ ಇವು ಭಕ್ತನಾಗಲು ಬೇಕಾದ ಗುಣಧರ್ಮಗಳು.

ಶರೀರವನ್ನು ಅಲಂಕರಿಸಬೇಕಾದರೆ ವಿಭೂತಿ ರುದ್ರಾಕ್ಷಿಗಳಿಂದ ಅಲಂಕರಿಸು. ಇವು ಸತ್ಯ ಸೌಂದರ್ಯದ ಸಾಧನಸಂಪತ್ತಿ. ಇವುಗಳಿಂದುಂಟಾ ಗುವುದು ಶಿವಸೊಗಸು. ಕಥೆ ಕಾದಂಬರಿಗಳನ್ನು ಪಠಿಸುವ ಬದಲು, ಪಠಿಸಿ ತನುಮನವಿಕಾರಕ್ಕೊಳಗಾಗುವ ಬದಲು ಮಂತ್ರವ ಪಠಿಸಿ ತನುಮನ ಶಾಂತಿಯ ಗಳಿಸು. ಕಂಡುದನ್ನೆಲ್ಲ ಕಂಡವರನ್ನೆಲ್ಲ ಪ್ರೀತಿಸಿ ನೀತಿಗೆಡುವ ಬದಲು ಆತ್ಮನನ್ನು ಪ್ರೀತಿಸು; ಆತ್ಮಸ್ವರೂಪರಾದ ಗುರುಲಿಂಗಜಂಗಮರನ್ನು ಪ್ರೀತಿಸು. ಅಭಕ್ಷ್ಯಭಕ್ಷಣಮಾಡಿ ಆರೋಗ್ಯವನ್ನು ಹಾಳುಮಾಡಿಕೊಳ್ಳು ವುದಕ್ಕಿಂತ ಗುರುಲಿಂಗಜಂಗಮಪ್ರಸಾದವನ್ನು ಸ್ವೀಕರಿಸಿ ಪ್ರಸನ್ನ ತನು ಮನಗಳುಳ್ಳವನಾಗು. ದುಷ್ಕ್ರಿಯೆಗಳಿಗೆ ದುಡುಕಿ ದುಃಖಿಯಾಗುವುದ ಕ್ಕಿಂತ ಸತ್ಕ್ರಿಯೆಗಳಲ್ಲಿ ನಿರತನಾಗಿರು; ಸತ್ಕಾಯಕಸಂಪನ್ನನಾಗು. ಸತ್ಕಾ ಯಕದಲ್ಲಿ ಸಂಪಾದಿಸಿದುದನ್ನು ಸ್ವಾರ್ಥಮಾತ್ರಕ್ಕೆ ಉಪಯೋಗಿಸಿಕೊಳ್ಳದೆ ಸಾಮಾಜಿಕೋನ್ನತಿಗಾಗಿ ಸಹಜಭಾವದಿಂದ ದಾನಮಾಡು. ಎಂದಿಷ್ಟನ್ನು

ಶ್ರೀಗುರು ಶಿಷ್ಯನಿಗೆ ಹೇಳಿ ಅಳವಡಿಸುವುದೇ ಭಕ್ತಸ್ಥಲದ ದೀಕ್ಷೆ ಶಿಕ್ಷೆಗಳು. ಯಾವು ಯಾವು ಬೇಡೆಂದು ಹೇಳಿ ಬಿಡಿಸಿರುವನೋ ಅವುಗಳಿಂದ ಬಿಡುಗಡೆ ಯಾಗುವುದೇ ಮೋಕ್ಷಸಂಸ್ಕಾರ. ಅದೇ ದಿಟವಾದ ಮೋಕ್ಷ. ಯಾವು ಯಾವುದನ್ನು ಬೇಕೆಂದು ಹೇಳಿ ಹಿಡಿಯಹಚ್ಚಿರುವನೋ (ಭಜಿಸಹಚ್ಚಿರು ವನೋ) ಅದೇ ಭಕ್ತಿ; ಅದುಳ್ಳವನೇ ಭಕ್ತ. ಒಳಿತೆಲ್ಲವನ್ನೂ ಹಿಡಿದಿರುವುದ ರಿಂದ ಸದ್ಭಕ್ತ.

ಸದ್ಭಕ್ತನಿಗೆ ಅರ್ಚನೆ ಆಚಾರಗಳೇ ನಿತ್ಯಕರ್ಮಗಳಲ್ಲ ; ಜತೆಗೆ ಸತ್ಕಾ ಯಕಗಳೂ ನಿತ್ಯಕರ್ತವ್ಯಗಳು. ಹೊತ್ತು ಹೊತ್ತಿಗೆ ಪೂಜೆಗಳು ; ಹೊತ್ತು ಹೊತ್ತಿಗೆ ಕಾಯಕಗಳು ನಿತ್ಯ ಸಾಗಬೇಕು. ಕಾಯಕಕ್ಕೆ ಹೋಗುವಾಗ ಅರ್ಚನೆ ಆಚಾರಗಳು. ಕಾಯಕ ನಡೆವಾಗ ಕಾಯಕವೇ ಅರ್ಚನೆ ಆಚಾರ ವಾಗಿರಬೇಕು ; ಆಗಿರುತ್ತದೆ. ಕಾಯಕ ಮುಗಿಸಿದ ಬಳಿಕ ವ್ಯರ್ಥಕಾಲ ಹರಣ ಮಾಡದೆ ಮತ್ತೆ ಅರ್ಚನ ಅರ್ಪಣಾದಿಗಳು. ಇದು ಸದ್ಭಕ್ತನ ಸದಾಚಾರ ಸತ್ಪಥ. ಈ ಸತ್ಪಥದಲ್ಲಿ ಸಾಗಲು ಸಂಸಾರ–ಸಂನ್ಯಾಸಗಳ ಜಿಜ್ಞಾಸೆಯಿಲ್ಲ. ಇಬ್ಬರಿಗೂ ಶರೀರವಿದೆ. ಇಬ್ಬರೂ ಸಾಧಿಸಬೇಕಾದ ಸತ್ಪಥ ವಿದು. ಬಿಡುವುದನ್ನೆಲ್ಲ ಬಿಟ್ಟು ಹಿಡಿವುದನ್ನೆಲ್ಲ ಹಿಡಿದು ನಡಸಿಕೊಂಡು ಬರುವುದೇ ಭಕ್ತತ್ವ.

ಪಿಂಡಸ್ಥಲದಿಂದ ಪ್ರಾರಂಭವಾದ ಭಕ್ತಸ್ಥಲದ ಚಿತ್ರವನ್ನು ಪ್ರಾರಂಭಿಸ ಬೇಕು. ಮಾನವನ ಜೀವನ ಮೂಲದಿಂದ ಮೊದಲಾಗುವ ತತ್ತ್ವ ಧರ್ಮ ಗಳನ್ನೊಳಗೊಂಡ ಚಿತ್ರ ಕಾಣದಿರದು. ಇದು ಉಳಿದ ಧರ್ಮಗಳಂತೆ ಮಧ್ಯದಲ್ಲಿ ಬರುವ ಧರ್ಮವಲ್ಲ. ಹುಟ್ಟಮೊದಲಿನಿಂದ ಬಂದು ಕಟ್ಟಕಡೆಯ ವರೆವಿಗೂ ಇರುವ ಧರ್ಮ. ಇದರಲ್ಲಿ ಮಾನವ ಜೀವನಕ್ಕೆ ಬೇಕಾದ ಎಲ್ಲ ಸಂಸ್ಕಾರಗಳಿಗೆ ಸ್ಥಳವಿದೆ. ಎಲ್ಲ ಸಂಸ್ಕೃತಿಗಳಿಗೆ ಆಶ್ರಯವಿದೆ. ಎಲ್ಲ ಸತ್ಕ್ರಿಯೆಗಳಿಗೆ ನೆಲೆಯಿದೆ. ಮಾನವನ ಪ್ರತ್ಯಂಗಕ್ಕೂ ಪ್ರಭಾವವನ್ನು ಬೀರುವ ಸಾಂಸ್ಕಾರಿಕ ಸಂಪೂರ್ಣತೆಯಿದೆ. ಬಹಿರಂಗ ಅಂತರಂಗಗಳೆರ ಡನ್ನೂ ಒಳ್ಪಾರಿಯಲ್ಲಿ ಒಯ್ಯುವ ಒಳ್ಪಿದೆ. ದಶೇಂದ್ರಿಯಗಳನ್ನೂ ಅಂತಃ ಕರಣಗಳನ್ನೂ ಪ್ರಸನ್ನಗೊಳಿಸುವ ಪ್ರಭಾವಪೂರ್ಣ ಪ್ರಣಾಳಿಕೆಯಿದೆ.

ಈ ತತ್ತ್ವಕ್ಕೆ ಈ ಧರ್ಮಕ್ಕೆ ಮೊದಲು ಒಳಪಟ್ಟವರೇ ತನ್ನವರೆಂಬ ಸಂಕುಚಿತಭಾವವಿಲ್ಲ. ಬರುವ ಬಯಕೆಯುಳ್ಳವರನ್ನೂ ಬರಮಾಡಿಕೊಳ್ಳುವ ವಿಶಾಲಮನೋಭಾವವಿದೆ. ಹಲವು ಪಂಗಡಗಳ ಹಂಗ ಇದಕಿಲ್ಲ. ಭವಿ-ಭಕ್ತ ಎಂಬೆರಡೇ ಪಂಗಡ ಇದಕುಂಟು. ಇಷ್ಟಿರುವುದು ಅನಿವಾರ್ಯ. ಭವಿಯೂ ಭಕ್ತನಾಗಿ ಬರಲು ಅವಕಾಶವಿದೆ; ಅದರಂತೆ ಏರ್ಪಾಡನ್ನು ಮಾಡಿರಿಸಿದೆ.

ವೀರಶೈವ ತತ್ತ್ವದಲ್ಲಿ ವ್ಯಕ್ತಿ ಮತ್ತು ಸಮಾಜದ ಬೆಳವಣಿಗೆಗೆ ಬೇಕಾದ ಧರ್ಮಗಳೆಲ್ಲ ಅಡಕವಾಗಿದೆ. ವ್ಯಕ್ತಿಯ ಸರ್ವಾಂಗವೂ ಶುಭ್ರವಾಗುವ ಶಿಕ್ಷಣವಿದೆ. ಅಂತೆಯೇ ಸಮಾಜದ ಸರ್ವೋನ್ನತಿಗೆ ಬೇಕಾಗುವ ಕಲೆಗಳ ಶಿಕ್ಷಣವೂ ಇದೆ. ಬಾಹ್ಯದ ಯಾವ ಕ್ರಿಯೆಯನ್ನೂ ಕಲೆಯನ್ನೂ ಕೀಳಾಗಿ ಕಾಣುವುದಿಲ್ಲ. ಕೆಲಸ ಯಾವುದೇ ಇರಲಿ ಅದು ಸತ್ಯಶುದ್ಧವಾಗಿರಬೇಕು; ಸ್ವಾರ್ಥರಹಿತವಾಗಿರಬೇಕು. ಅಂತಹ ಎಲ್ಲ ಕಾರ್ಮಿಕರಿಗೂ ಅವಕಾಶವಿದೆ ; ಅತ್ಯುನ್ನತ ಸ್ಥಾನಮಾನಗಳಿವೆ. ಸಾಮಾನ್ಯರನ್ನು ಸರ್ವಮಾನ್ಯರನ್ನಾಗಿ ಮಾಡುವ ಮನೋವೈಶಾಲ್ಯವಿದೆ; ಮಣಿಹವೈಪುಲ್ಯವಿದೆ.

ತತ್ತ್ವವನ್ನು ಬರೀ ಅರಿತರೆ ಸಾಲದು ; ಅರಿತಂತೆ ಇರುವುದನ್ನು ಕಲಿಯೆನ್ನುತ್ತದೆ. ನುಡಿನಡೆ ಒಂದಾಗುವುದನ್ನು ಕಲಿಸುವುದೇ ಈ ಮತದ ಮೂಲೋದ್ದೇಶ. ಎಲ್ಲ ಅವಸ್ಥೆಗಳಲ್ಲಿ ಮಾಡುವ ಇಂದ್ರಿಯಗಳು ಒಳಿತನ್ನು ಮಾಡುತ್ತ ಭಕ್ತರೆನಿಸಿ ಮುಕ್ತರಾಗಬೇಕು. ಅರಿವ ಇಂದ್ರಿಯಗಳು ಒಳಿತನ್ನು ಅರಿಯುತ್ತ ಭಕ್ತರೆನಿಸಿ ಮುಕ್ತರಾಗಬೇಕು. ಅನುಭವಿಸುವ ಕರಣಗಳೆಲ್ಲ ಒಳಿತನ್ನು ಅನುಭವಿಸುತ್ತ ಭಕ್ತತ್ವಕ್ಕೇರಿ ಮುಕ್ತವಾಗಬೇಕು. ಇದುವೇ ಈ ಮತದ ಮೂಲೋದ್ದೇಶ; ಮುಖ್ಯಸಂದೇಶ. 'ಅಂಗಮಾಚಾರ ಲಿಂಗಮ್....' ಎಂಬುದೇ ಭಕ್ತಸ್ಥಲದ ಸಾರಸಿದ್ಧಾಂತ. ಅಂಗವು ಆಚಾರ ಲಿಂಗವಾಗಿರಬೇಕು. ಆಗ ಅಪರೋಕ್ಷತ್ವ ಅವಿರಳತ್ವಗಳು ಅಳವಡುತ್ತವೆ. ಅಂಗವೇ ಲಿಂಗವಾಗಿರುವಾಗ ಪರೋಕ್ಷತತ್ವವೆಲ್ಲಿ ? ಪರಾಪರಭಾವವೆಲ್ಲಿ ? ಪದಾರ್ಥವೂ ಪರಮಾರ್ಥವಾಗಿ ಕರಣ, ವೃತ್ತಿ, ವಿಷಯಾತ್ಮಕ ಭಿನ್ನಪ್ರಪತ್ತಿಯಿರುವುದಿಲ್ಲ. ಘ್ರಾಣವಿದ್ದರಲ್ಲವೇ ಗಂಧವಿರುವುದು ? ಗಂಧ ಘ್ರಾಣಗಳೆರಡೂ ಆಚಾರಲಿಂಗವಾದ ಬಳಿಕ, ಇವುಗಳಂತೆ ಘ್ರಾಣತ್ವವೂ (ಘ್ರಾಣಾವ

ಚೈನ್ನಚೈತನ್ಯಾಂಗವೂ) ಆಚಾರಲಿಂಗವಾದ ಬಳಿಕ ತ್ರಿಪುಟಭೇದವಿಲ್ಲ. ವೇದಾಂತಿ ಹೇಳುವ ಬಾಹ್ಯ ಅಪರೋಕ್ಷಜ್ಞಾನವೂ ಇಲ್ಲ. ಚೈತನ್ಯತ್ರೈವಿಧ್ಯ ವೈವಿಧ್ಯಗಳಿಲ್ಲ. ಪ್ರಮೆ ಭ್ರಮೆಗಳಿಲ್ಲ. ಭಕ್ತನ ಐಕ್ಯಸ್ಥಲದಲ್ಲಿ ಘ್ರಾಣ-ಘ್ರಾಣತ್ವಗಳಲ್ಲಿ ವಿಶೇಷಣ ವಿಶೇಷ್ಯಭಾವಗಳಿರುವುದಿಲ್ಲ. ಗಂಧವಿಷಯವಾಗಲಿ ಸುಗಂಧ ಪ್ರಸಾದವಾಗಲಿ ಪ್ರತ್ಯೇಕವಿರುವುದಿಲ್ಲ.

ಸದ್ಭಕ್ತ - ಸಮ್ಯಕ್ಕ್ರಿಯೆ

ಈ ಪದವು ಪರಾಮರ್ಶನೀಯವಾದುದು. ಸತ್ ಶಬ್ದವಾಗಲಿ ಸದ್ರೂಪವಾಗಲಿ ಸತ್‌ತ್ವವಾಗಲಿ ಭಕ್ತನಿಗೆ ಮೀಸಲು. ಸದದ್ವೈತವನ್ನು ಅಂದರೆ ಸಚ್ಚಿವಾದ್ವೈತತ್ವವನ್ನು ಸಂಪಾದಿಸಲು ಭಕ್ತನೇ ಸರ್ವಸಮರ್ಥ. ಸಾಕಾರನಾದ ಅಂಗನಿಗೆ ಮೊದಲು ಸಾಕಾರ ಅಂದರೆ ಸದ್ರೂಪ ಲಿಂಗವು ಬೇಕೇಬೇಕು. ಶರೀರವಿದ್ದೂ ಶರೀರವಿಲ್ಲೆಂದು ಕೇವಲ ಕಲ್ಪನಾವಿಲಾಸದಲ್ಲಿ ವ್ಯವಹರಿಸುವ ಅದ್ವೈತಿಗೆ ಸದದ್ವೈತತತ್ವಕ್ಕೆ ಸಾಧನೆಯೇ ಇಲ್ಲ. 'ಜ್ಞಾನಾದೇವ ತು ಕೈವಲ್ಯಂ' ಎಂದು ಹೇಳುವ ಚಿದದ್ವೈತಿಗೆ ಸದದ್ವೈತದ ಸಾಧನೆಯತ್ತ ಲಕ್ಷ್ಯವೇ ಇಲ್ಲ. ಅದ್ವೈತಿಯು ದ್ವೈತವನ್ನೊಪ್ಪಿ ಬಳಿಕ ದ್ವೈತ ಮಿಥ್ಯವೆನ್ನುತ್ತಾನೆ. ಮಿಥ್ಯವೆನ್ನಬೇಕಾದರೆ ಸ್ವಲ್ಪಕಾಲವಾದರೂ ಇದ್ದರಲ್ಲವೇ ತೋರಿದರಲ್ಲವೇ ಮಿಥ್ಯೆಯೆನಿಸುವುದು ? ತೋರುವ ದ್ವೈತವಸ್ತು ತೋರುವಷ್ಟು ಕಾಲವಾದರೂ ಸತ್ ಆಗಿರಬೇಡವೆ ? ಅಂತರಂಗ ಮಾತ್ರ ಅದ್ವೈತವಾಗಿದ್ದರೆ ಅಂದರೆ ಅದ್ವೈತವೆಂಬ ಭಾವ ದೃಢವಾಗಿದ್ದರೆ ಸಾಕು ; ಬಹಿರಂಗ ಹೇಗಿದ್ದರೇನು ? ಅಸತ್ತಾಗಿದ್ದರೇನು ? ಅನಾರೋಗ್ಯವಾಗಿದ್ದರೇನು ? ಅನೀತಿ ಅರೀತಿಯಿಂದಿದ್ದರೇನು ? ಅನಾಚಾರದಿಂದಿದ್ದರೇನು ? ಶರೀರದ ಸದಸದ್ಧರ್ಮಗಳು ಚಿದಾತ್ಮನಿಗೆ ಚಿದದ್ವೈತಕ್ಕೆ ಅಂಟಲಾರವೆಂದು ಹೇಳಿ ಸದ್ರೂಪದ ದುರುಪಯೋಗಕ್ಕೆ ಅವಕಾಶವನ್ನು ಕಲ್ಪಿಸಿದೆ ಕೇವಲಾದ್ವೈತವು. ಇದನ್ನು ತಪ್ಪಿಸಲು ಹೊರಟಿದೆ ಭಕ್ತಸ್ಥಲ ; ಸದ್ಭಕ್ತಿಯುಳ್ಳ ಸದ್ಭಕ್ತ. ಸದಾಚಾರ ಸತ್ಕ್ರಿಯೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡು

ವವನೇ ಸದ್ಭಕ್ತ. ಈ ಸದ್ಭಕ್ತನ ಆಚಾರ ಕ್ರಿಯೆಗಳು ಸತ್ ಆಗಬೇಕಾದರೆ ಸದ್ರೂಪ ಲಿಂಗಧಾರಣ ಅರ್ಚನ ಅರ್ಪಣ ಅನುಭವಗಳು ಸದ್ಭಕ್ತನಿಗೆ ಅನಿವಾರ್ಯಗಳೆಂಬುದನ್ನು ಉಗ್ಗಡಿಸಿದೆ ಶಿವಾದ್ವೈತ ತತ್ತ್ವ. ಯಾವನೇ ಆಗಲಿ ದೇಹಿಯಾದ ಬಳಿಕ ಅಂದರೆ ಸದ್ರೂಪವನ್ನು ತಳೆದ ಬಳಿಕ ಈ ಸದ್ರೂಪ ಅಸದ್ರೂಪವಾಗದಂತೆ ನೋಡಿಕೊಳ್ಳುವ ಕರ್ತವ್ಯ ಇದ್ದೇ ಇದೆ. ತದ್ರೂಪ (ಅದ್ವಯಬ್ರಹ್ಮ) ಹಣ್ಣನ್ನು ಬೆಳೆಯಬೇಕಾದರೆ ತನುರೂಪ ವೃಕ್ಷ ವನ್ನು ಸತ್ತಾಗಿ ಬೆಳಸಲೇಬೇಕು. ಸತ್ಕ್ರಿಯೆ ಸದಾಚಾರಗಳಲ್ಲಿ ನಿರತ ವಾಗಿಸಲೇಬೇಕು. ಇಲ್ಲವಾದರೆ ಹುಳ ಹಿಡಿದು ಹಾಳಾದೀತು ; ಹಾಳಾಗು ತ್ತದೆ. ವೃಕ್ಷ ಹಾಳಾದರೆ ಹಣ್ಣಾಗಲಿ ಹಣ್ಣೊಳಗಿರುವ ಬೀಜವಾಗಲಿ ಲಭಿಸುವುದೆಂತು ?

ಅದ್ವೈತಿಗೆ ದ್ವೈತವೇ ಒಂದು ಮುಖ್ಯ ಭ್ರಾಂತಿ. ಈ ಭ್ರಾಂತಿ ಯೊಂದನ್ನು ಕಳೆವುದೇ ಅದ್ವೈತಿಯ ಕರ್ತವ್ಯ. ಅದೂ ಬಾಹ್ಯದಲ್ಲಿ ಅಲ್ಲ ; ಭಾವದಲ್ಲಿ ಮಾತ್ರ. ಭಾವದಲ್ಲಿರುವ ದ್ವೈತಭ್ರಾಂತಿ ಹೋದರಾಯಿತು ಬೇರೇನೂ ಆತ ಮಾಡಬೇಕಿಲ್ಲ. ಬಾಹ್ಯಾಂಗವಿದ್ದರೂ ಆತ ದ್ವೈತಿಯಲ್ಲ. ಬಾಹ್ಯಾಂಗ ಅಸದ್ವ್ಯವಹಾರ ನಿರತವಾಗಿದ್ದರೂ ಪ್ರತ್ಯವಾಯವಿಲ್ಲ. ಚಿದ ದ್ವೈತವೇ ಆತನ ಲೀಲಾವಿಲಾಸ. ಅದೂ ಶಾಬ್ದಿಕ ಬ್ರಹ್ಮದೊಡನೆ ಶಾಬ್ದಿಕ ಜ್ಞಾನದೊಡನೆ ಭಾವವು ಏಕೀಭವಿಸುವುದೇ ಅದ್ವೈತಲಕ್ಷಣ.

ಆ ಪರಶಿವನ ಸದ್ರೂಪವಾದ ಸಜಾತಿಯ ಸ್ವಗತ ಭೇದಗಳೆರಡನ್ನೂ ಸತ್ಕ್ರಿಯೆ ಸದಾಚಾರ ಸಾಧನಗಳಿಂದ ಸದ್ರೂಪಲಿಂಗೋಪಾಸನೆಯ ಮಾಡಿ ಸದ್ರೂಪಗೊಳಿಸುವುದೇ ಶಿವಾದ್ವೈತಿಯ ಪ್ರಪ್ರಥಮ ಕರ್ತವ್ಯ. ಈ ಕರ್ತವ್ಯ ದಲ್ಲಿ ನಿರತನಾದವನೇ ಸದ್ಭಕ್ತ.

ಸದ್ಭಕ್ತಿಯುಳ್ಳವನೇ ಸದ್ಭಕ್ತ. ಸದ್ಭಕ್ತಿಯೆಂದರೆ ಸದ್ರೂಪಲಿಂಗ ದಲ್ಲಿಟ್ಟ ಶುದ್ಧಪ್ರೇಮವೆಂದರ್ಥ. ಆ ಶುದ್ಧಪ್ರೇಮವುಳ್ಳವನೇ ಸದ್ಭಕ್ತ. ಅಥವಾ ಸದ್ಭಕ್ತಿಯೆಂದರೆ ಸತ್ಕ್ರಿಯೆ. ಸತ್ಕ್ರಿಯೆಯಲ್ಲಿ ನಿರತನಾದವನೇ ಸದ್ಭಕ್ತ. ಈ ಎರಡರ್ಥಗಳೂ ಸದ್ಭಕ್ತ ಪದಕ್ಕೆ ಮುಖ್ಯಾರ್ಥಗಳಾಗಿವೆ. ಪರಸ್ಪರ ಪೂರಕಗಳಾಗಿವೆ. ಪ್ರೇಮ ಇರುವವರಲ್ಲಿ ಒಳಿತನ್ನು ಮಾಡುವ ಪ್ರಸಕ್ತ ರೂಢಿಯಲ್ಲಿಯೂ ಇದೆ. ಯೋಗದಲ್ಲಿಯೂ ಇದೆ. ಹಾಗು

ಪ್ರೇಮಾಸ್ಪದವಾದ ವಸ್ತುವನ್ನು ಸಂರಕ್ಷಣಮಾಡುವ ಸಾಹಸವೂ ಸರ್ವವಿದಿತ ವಾಗಿದೆ. ಅಂತೆಯೇ ಸದ್ರೂಪವಾದ ಲಿಂಗವು ನಮಗೆ ಇಷ್ಟವಾಗಿದೆ. ಆ ಇಷ್ಟವಸ್ತುವನ್ನು ಉಳಿಸಿಕೊಳ್ಳಬೇಕಾದರೆ ಅಂದರೆ ತನ್ನಲ್ಲಿ ಅಳವಡಿಸಿ ಕೊಳ್ಳಬೇಕಾದರೆ ಇಷ್ಟಕ್ರಿಯೆಗಳಲ್ಲಿ ಪ್ರವಿಷ್ಟನಾಗಲೇಬೇಕು.

'ಮಾಡದೆ ಮೋಕ್ಷವ ಹಡೆದು ಹೋದರೆಂಬ ವಾರ್ತೆಯ ಕೇಳಿ ಹಿರೇನಯ್ಯಾ? ಇಲ್ಲ ಇಲ್ಲವು. ಮಾಡಿದರೆ ಅದು ತಪ್ಪದು. ಮಾಡಲೊಲ್ಲದೆ ಹೋದರೆ ಬರುವದದು ದೂರಾಗುವುದು ನೋಡಾ ಕಪಿಲ ಸಿದ್ಧಮಲ್ಲಿ ಕಾರ್ಜುನ.'

ಇದು ಕರ್ತಾರನ ಕಮ್ಮಟ. ಇದು ಕ್ರಿಯಾಲೋಕ. ಇದು ಅಂದರೆ ಬ್ರಹ್ಮಾಂಡ ಪಿಂಡಾಂಡಗಳೆರಡೂ ಎಂದರ್ಥ. ಬ್ರಹ್ಮಾಂಡದಂತೆ ಪಿಂಡಾಂಡವೂ ಕರ್ತಾರನ ಕಮ್ಮಟ. ಕರ್ತವ್ಯಕ್ರಿಯೆಯಿಂದಲೇ ಕಾಯದ ಕಾಯತ್ವ ತೊಲಗಬೇಕು. ಕಾಯತ್ವವೆಂದರೆ ಕಾಯದ ಕತ್ತಲೆ. ಕತ್ತಲೆಯೆಂದರೆ ಕಲ್ಮಷ. ಕಲ್ಮಷವೆಂದರೆ ಸಾಧಿತ ಸತ್ಕ್ರಿಯಾಶೂನ್ಯತೆ. ಶರೀರದಲ್ಲಿ ಸಹಜ ಕ್ರಿಯೆ ಸತತ ಸಾಗಿಯೇ ಇರುತ್ತದೆ. ಆದರೆ ಈ ಸಹಜಕ್ರಿಯೆಯಿಂದ ಸಂಸಾರವಾಸನೆ ಸವೆಯದು. ಸಂಸಾರವಾಸನೆ ಸವೆಯಬೇಕಾದರೆ ಶಿವಾರ್ಚ ನಾದಿ ಸಾಧಿತಸತ್ಕ್ರಿಯೆಗಳಿಂದ ಮಾತ್ರ ಸಾಧ್ಯ! ಸಾಧಿತ ಸತ್ಕ್ರಿಯೆಗಳಿಗೆ 'ಮಾಡುವ ಮಾಟ'ವೆಂದು ಶಿವಾದ್ವೈತದ ಪರಿಭಾಷೆ. ಮಾಡುವ ಮಾಟ ದಿಂದಲೇ ಕೂಡುವ ಕೂಟ ಒದಗುತ್ತದೆ; ಅಂದರೆ ಸಾಮರಸ್ಯವು ಸಂಪ್ರಾಪ್ತ ವಾಗುತ್ತದೆ. ಮಾಟಕೂಟಗಳಿಗೆ ಬೀಜಾಂಕುರ ನ್ಯಾಯವಿದೆ. ವೃಕ್ಷವಾಗಿ ಸುಕ್ಷೇಮವಾಗಿ ಬೆಳೆಯದೆ ಬೀಜವಿಲ್ಲ. ಬೀಜವಿಲ್ಲದೆ ವೃಕ್ಷವಿಲ್ಲ. ಭಕ್ತನಾಗದೆ ಮುಕ್ತನಾಗನು. ಯುಕ್ತಕಾಯಕ ಕ್ರಿಯೆಗಳಿಲ್ಲದೆ ಭಕ್ತನಾಗನು. ಹಾಗು ಭವಮುಕ್ತನಾಗದೆ ಭಕ್ತನಾಗನು. 'ಮಾಟವಿಲ್ಲದ ಕೂಟವದೇಕೋ? ಕೂಟವಿಲ್ಲದ ಮಾಟವದೇಕೋ? ಮಾಟಕೂಟವೆರಡ ತನುವರಿಯಬೇಕು. ಸಟೆಯಿಲ್ಲದ ದಿಟವ ರೂಢಿಸಿ ಸಯವಾಗಬೇಕು. ಮಾಟಕೂಟವೆರಡರನುಮತ ದಿಂದವೇ ಭಕ್ತಿರತಿಯಯ್ಯಾ ಕೂಡಲ ಚೆನ್ನಸಂಗಮದೇವಾ.'—ಮಾಟ ಕೂಟಗಳಿಗೆರಡಕ್ಕೂ ನಿಯತಸಾಹಚರ್ಯವಿದೆ. ಭಕ್ತಿ ಮುಕ್ತಿಗೆ ಜೀವಾಳ ವಾಗಿವೆ. ಮಾಡಿದ್ದು ಕೂಡಿ ಬಾರದೆ ತಪ್ಪದು. ಮಾಡದದ್ದು ಕೂಡಿ ಬಾರದು.

ಸತ್ಯಕಾಯಕ.ಶಿವಾರ್ಚನಾದಿಗಳು ಮಾಡುವ ಮಾಟ. ಈ ಮಾಡುವ ಮಾಟದಲ್ಲಿ ಸಾಂಸಾರಿಕ ಅಸದ್ವಾಸನೆಗಳಿಗೆ ಇಂಬಿಲ್ಲ. ಸಾಂಸ್ಕಾರಿಕ ಸದ್ವಾಸನೆಗಳಿಗೆ ಇಂಬಿಲ್ಲದಿಲ್ಲ. ಈ ಸಾಂಸ್ಕಾರಿಕ ಸದ್ವಾಸನೆಯನ್ನು ಸಂಪಾದಿಸುವುದೇ ಸದ್ಭಕ್ತನ ಕರ್ತವ್ಯ ; ಭಕ್ತನ ಸತ್‌ತ್ವ. ಆ ಸತ್‌ತ್ವವೇ ಮೋಕ್ಷ. ಅದು ಮಂಗಳಾಚಾರಗಳ ಮಾಡಿದರೆ ಬರುವುದು ; ಮಾಡದಿದ್ದರೆ ಬಾರದೆ ದೂರಾಗುವುದು. 'ಕಾಣದುದನೆಲ್ಲವ ಕಾಣಲಾರೆನಯ್ಯ ! ಕೇಳದುದನೆಲ್ಲವ ಕೇಳಲಾರೆನಯ್ಯ ! ದ್ರೋಹವಿಲ್ಲ ನಮ್ಮ ಶಿವನಲ್ಲಿ ! ಸತ್ಕ್ರಿಯೆಗೆ ಆತ ಸೀಮೆಯಯ್ಯಾ ! ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರ ನೊಲ್ಲನಯ್ಯ ಕೂಡಲ ಸಂಗಮ ದೇವಾ.'

ಶರೀರ (ಅಂಗ) ದ ನಿಸರ್ಗಕ್ರಿಯೆಗಳೂ ತಮ್ಮ ಅಸತ್‌ತ್ವವನ್ನು ಕಳಕೊಳ್ಳಬೇಕಾದರೆ ಕ್ರಿಯಾಲಿಂಗವು ಕರಸ್ಥಲದಲ್ಲಿ ಕಾಣಿಸಿಕೊಳ್ಳಬೇಕು. ಅದರ ಸದ್ರೂಪನ್ನು ಕಣ್ಣು ಕಾಣಬೇಕು. ಅದರ ಸ್ತೋತ್ರ ಮಂತ್ರಗಳ ಸನ್ನಾದವನ್ನು ಕಿವಿ ಕೇಳಬೇಕು. ಇದರಂತೆ ಇತರ ಇಂದ್ರಿಯಗಳು ಅಸದ್ವ್ಯವಹಾರಕ್ಕೆ ಹರಿಯುತ್ತವೆ. ಪ್ರತ್ಯಂಗದ ಸತ್ಕ್ರಿಯೆಗೆ ಇಷ್ಟಲಿಂಗವು ನಿರ್ದಿಷ್ಟವಾಗಿದೆ. ನಿಜಸೀಮೆಯಾಗಿ ನಿಂತಿದೆ. ಸತ್ಕ್ರಿಯಾಶೀಲರಿಗೆ ಸದ್ಯೋನ್ಮುಕ್ತಿ ಸಿದ್ಧವಾಗಿದೆ. ಜೀವನ್ಮುಕ್ತಿಯನ್ನು ಕಣ್ಮುಂದೆ ಕೊಡುವ ಕ್ರಿಯಾಲಿಂಗವನ್ನು ಉಪಾಸನೆ ಮಾಡದೆ ಮೋಕ್ಷವನ್ನು ಅಪೇಕ್ಷಿಸುವುದು ಒಲೆಯ ಮುಂದಿದ್ದು ಅಡುಗೆಯ ಮಾಡದೆ ಅನ್ನದ ಕನಸ ಕಂಡಂತೆ ! ಉಣಲಿಲ್ಲ. ಹಸಿವು ಹಿಂಗಲಿಲ್ಲ. ತೃಪ್ತಿ ತುಂಬಿ ಬರಲಿಲ್ಲ. ಕ್ರಿಯಾರಹಿತವಾದ ಬರೀ ಜ್ಞಾನ ಜನ್ಯತೃಪ್ತಿ ಕನಸಿನ ಊಟ. ಕೇವಲಾದ್ವೈತಜನ್ಯ ಪ್ರಾಪ್ತಿ ಕನಸಿನ ತೃಪ್ತಿ. ಅದೆಂದಿಗೂ ತುಂಬಿಬಾರದು. ಕಾರಣ ಅನುವರಿತು ಆಚರಿಸಬೇಕು. ಮರ್ಮವನರಿತು ಮಾಡಬೇಕು.

'ಮಾಡುವುದಯ್ಯ ಮರುಳುಗೊಂಡಂತೆ ! ಮರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು, ಸುಯಿದಾನವ ಕೇಡು, ಕೂಡಲ ಚೆನ್ನಸಂಗಯ್ಯ, ನಿಮ್ಮ ಶರಣರ ಅನುವನರಿದು ಮಾಡುವ ಮಾಟ ಭವಭಂಗದೋಟ !' 'ಮರ್ಮವಿಡಿದು ಮಾಡುವಂಗೆ ಕರ್ಮವಿಲ್ಲ, ಕವಲು ಇಲ್ಲ. ಒಬ್ಬರ ಕಂಡೊಬ್ಬರು ಹೆಮ್ಮೆಯ ಖ್ಯಾತಿಯ ಬಿಮ್ಮಲಿ ಮಾಡುವವನ ವಿಧಿಯ

ನೋಡಾ ! ಸಜ್ಜನ ಸದಾಚಾರ ಸತ್ಕ್ರಿಯೆವಿಡಿದು ಮಾಡುವ ಭಕ್ತಿಯ ನಿಮಗೆ ಗೆಯ್ದುದನರಿದು, ಈ ಪರಿಯಲ್ಲಿ ಮಾಡುವನು ಕೂಡಲ ಚೆನ್ನ ಸಂಗಯ್ಯ ನಿಮ್ಮ ಶರಣನು.'

ಈ ಎರಡು ವಚನಗಳಲ್ಲಿ ಸದ್ಭಕ್ತನು ಮಾಡುವ ಮಾಟದ ಸತ್ಯಸ್ವರೂಪ ವನ್ನು ಚೆನ್ನಬಸವಣ್ಣನು ಚೆನ್ನಾಗಿ ಚಿತ್ರಿಸಿದ್ದಾನೆ. ವಿಶದವಾಗಿ ವಿಸ್ಫುಟ ಗೊಳಿಸಿದ್ದಾನೆ. ಭಕ್ತನು ಅನುವನರಿತು ಮಾಡಿದರೆ ಭವದ ಭಂಗವೇ ಇಲ್ಲ. ಅನುವರಿಯದೆ ಮಾಡಿದರೆ ಅಂದರೆ ಕ್ರಿಯಾಕೌಶಲ್ಯವಿಲ್ಲದಿದ್ದರೆ ಕರ್ಮದ ಕೊಳೆ ಬೆಳೆದು ಕಡು ನೋವಿಗೀಡಾಗಬೇಕಾಗುತ್ತದೆ. ಕಾರಣ ಮಾಡುವ ಮಾಟದ ಮರ್ಮವನ್ನು ಅರಿತಿರಬೇಕು. ಅರಿಯದೆ ಮಾಡಿದರೆ ನೆರೆಯುವ ರನ್ನು ಕಂಡು ಬರೀ ಹೆಮ್ಮೆಗೆ ಹೆಸರಿಗೆ ಆಸೆಬಿದ್ದು ಮಾಡಿದರೆ ಸುಖವಿಲ್ಲ. ಒಬ್ಬರನ್ನು ಕಾಡಿ ಬೇಡಿ ತಂದು ಖ್ಯಾತಿಗಾಗಿ ಮಾಡಿದರೂ ಸುಖವಿಲ್ಲ. ತನುಶುಚಿಯಾಗಿ ತಾನು ದುಡಿದು ತಂದು ಮಾಡಬೇಕು. ಸದಾಚಾರದಲ್ಲಿ ಸಮ್ಯಜ್ಞಾನದಲ್ಲಿ ಸದುವಿನಯದಲ್ಲಿ ಮಾಡಬೇಕು. ಸತ್ಕ್ರಿಯೆವಿಡಿದು ಸದ್ಭಕ್ತಿವಿಡಿದು ಮಾಡಬೇಕು. ಆಗ ಸದ್ಭಕ್ತನೆನಿಸುವನು. ಸದ್ಯೋಮುಕ್ತ ನಾಗುವನು. 'ಯೋಗಿಯ ಹೊಲಬು ಯೋಗಿಯಾದವಂಗಲ್ಲದೆ ಇತರ ನರಂಗೆ ಸಾಧಿಸಬಾರದು ಕೇಳಯ್ಯ ! ಧಾತುವಾದವದು ರಸವಾದಿಯಾದ ವಂಗಲ್ಲದೆ ಇತರ ನರಂಗದು ಸಾಧಿಸಬಾರದು ಕೇಳಯ್ಯ ! ನೋಡಿ ಮಾಡುವು ದಾದಡೆ ಭವವೆಲ್ಲಿಹುದು, ದಾರಿದ್ರ್ಯವೆಲ್ಲಿಹುದು ಹೇಳಯ್ಯ ಕಪಿಲಸಿದ್ಧಯ್ಯ ?' 'ಮನದಲ್ಲಿದ್ದು ಕಾಯದಲ್ಲಿಲ್ಲದವಂಗೆ ಶತಜನ್ಮಕ್ಕೆ ಮೋಕ್ಷ. ಕಾಯದಲ್ಲಿದ್ದು ಮನದಲ್ಲಿಲ್ಲದವಂಗೆ ಮೂರು ಜನ್ಮಕ್ಕೆ ಮೋಕ್ಷ. ಕಾಯಮನೋಯುಗದಲ್ಲಿಲ್ಲ ದವಂಗೆ ಮೋಕ್ಷರೂಪು ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.'

ತನಗಾದ ಯೋಗ ಎಂತಹದು ? ಗುರುಕರುಣದಿಂದ ಕರಕಂಜಕ್ಕಾದ ಯೋಗವನ್ನು ಅರಿದು ಅಳವಡಿಸಿಕೊಳ್ಳಬೇಕಾದರೆ ಆ ಯೋಗವುಳ್ಳವನೇ ಆಗಬೇಕು. ಲಿಂಗಯೋಗವಾದ ಕಾಯುವನ್ನು ಕಡೆಗಣ್ಣಿನಿಂದ ಕಾಣ ಲಾಗದು. ಲಿಂಗಬೀಜವನ್ನು ಅಥವಾ ಫಲವನ್ನು ಬಿಡುವ ಕಾಯಾಂಗ ಕಳೆ ಯುಳ್ಳುದಾಗಿರಬೇಕು. ಕೆಡದಂತಿರಬೇಕು. ಅದ್ವೈತಿಯಂತೆ ಕಡೆಗಣಿಸ ಬಾರದು. ಕಾಯ ಬರೀ ಜಡವಲ್ಲ. ಕಾಯಯೋಗ ಸಾಮಾನ್ಯವಲ್ಲ.

ಶರೀರವನ್ನು ಸದ್ರೂಪಗೊಳಿಸುವುದೇ ಸದ್ಭಕ್ತನ ಸತ್ಕಾರ್ಯ. ಕಾಯ ಅಳಿಯ ಬಲ್ಲುದು ; ಅಳಿಯದೆ ಇರಬಲ್ಲುದು. ಲಿಂಗದೊಳಗಾದ ಕಾಯಾಂಶ ಅದೆಂದಿಗೂ ಅಳಿಯದು. ಹರಜನ್ಮವುಳ್ಳವಂಗೆ ಈ ಕಾಯಯೋಗ ಸಂಗತಿ ವಿದಿತವಾಗುತ್ತದೆಯಯ್ಯ.

“ಭಕ್ತಿಯುಕ್ತಿಯನಾರು ಬಲ್ಲರು ? ಬಲ್ಲವನಾರನೂ ಕಾಣೆ.
ತನ್ನ ಮರೆದು ಇದಿರ ಹರಿದು ಇರಬಲ್ಲರೆ ಆತ ಭಕ್ತ ;
ಆ ಭಕ್ತಂಗೆ ಶಿವನೊಲಿವ. ನುಡಿಯಲ್ಲಿ ಭಕ್ತಿಯನಾಡಿ
ನಡೆಯಲಿಲ್ಲದಿದ್ದರೆ ಕಡೆಮುಟ್ಟ ; ಶಿವನೊಲಿವುದು ಹುಸಿ....”

ಎನ್ನುತ್ತಾನೆ ಪ್ರಭು. ಭಕ್ತನಾಗುವುದು ಬಾಯ್ಮಾತಲ್ಲ. ಭಕ್ತಿಯ ಬಗೆಯನರಿತ ಬಲ್ಲವರಿಲ್ಲ. ತನ್ನ ಮೋಹವಿರಬಾರದು. ತಾನೆಂಬ ಹಮ್ಮಿರ ಬಾರದು. ಅನ್ಯರೆಂಬ ಭಿನ್ನಭಾವವಿರಬಾರದು. ಹಾಗಿದ್ದರೆ ಭಕ್ತ. ಆತನಿಗೆ ಶಿವನೊಲುಮೆ. ನುಡಿಯಲ್ಲಿ ಭಕ್ತಿಯ ತೋರಿ ನಡೆಯಲ್ಲಿ ವಿಭಕ್ತತ್ವವನ್ನು ತೋರಿದರೆ ಶಿವನು ಮೆಚ್ಚನು ; ಮುಟ್ಟನು.

ಸದ್ಭಕ್ತನು ಸಹಜ ಭಕ್ತಿಯುಳ್ಳವನಾಗಿರಬೇಕು. ಸತ್ಯ ಶುದ್ಧಭಕ್ತಿ ಯುಳ್ಳವನಾಗಿರಬೇಕು. ಅಸಹಜ ಭಕ್ತಿ ಅದೆಂದಿಗೂ ತರವಲ್ಲ. ಸಟೆಯ ಭಕ್ತಿ ಸತ್ಯದ ನಿಲವಿಗೆ ನಿಲುಕಿಸದು. ಶುದ್ಧವಲ್ಲದ ಭಕ್ತಿ ಬದ್ಧನನ್ನಾಗಿಸ ಬಲ್ಲದಲ್ಲದೆ ವಿಶುದ್ಧನನ್ನಾಗಿಸದು. ಸಂಸಿದ್ಧನನ್ನಾಗಿಸದು ;

ಸದ್ಭಕ್ತನಲ್ಲಿಗೆ ಶಿವನು ತಾನೇ ಬರುವನು; ಸದ್ಭಕ್ತನಲ್ಲಿ ಶಿವನಿರುವನು. ಸದ್ಭಕ್ತ ಶಿವನಿಗೆ ಪ್ರಾಣ. ಸದ್ಭಕ್ತನ ಹಾನಿವೃದ್ಧಿ ಶಿವನದು. ಶಿವನ ನೆರೆ ನಂಬಿ ಕೆಟ್ಟವರಿಲ್ಲ. ನಂಬದೆ ನಚ್ಚದೆ ಬದುಕಿದವರಿಲ್ಲ. ನೆರೆನಂಬಿದವರನ್ನು ಕಾಯಿಯುವುದು ಆತನ ಧರ್ಮ. ತನ್ನ ಕಾರುಣ್ಯದ ಹಾಲಿನಲ್ಲಿ ಅವರನ್ನು ಅದ್ದುವನು. ಕರುಳ ಕರಗಿ, ಕಾಯ ಆತನಿಗೆ ಎರಗಿ ಇರುವವರನ್ನು ಆತನು ಕೈಹಿಡಿದೆತ್ತುವನು; ಮೊಗವಿಡಿದು ಮುದ್ದಿಸುವನು. ಹೃದಯ ಉಯ್ಯಾಲೆ ಯಲ್ಲಿ ಕುಳಿತು ತುಯ್ಯಲಾಡುವನು. ಭಾವಕಮಲದಲ್ಲಿ ಭೃಂಗನಾಗಿರು ವನು. ಸದ್ಭಕ್ತನ ಹುಟ್ಟು ಸಾವುಗಳನ್ನು ಹಿಟ್ಟುಗುಟ್ಟುವನು.

ಸದ್ಭಕ್ತನು ಸರ್ವಸ್ವತಂತ್ರನು. ಅವನು ಕರಣ ಹರಣಗಳ ಹಂಗಿಗೆ ಬೀಳನು. ತನ್ನದು ತನ್ನವರು ಎಂಬ ಸಂಕುಚಿತ ಭಾವವನ್ನು ತಾಳನು. ಆತನು ಜೀವಭಾವಕ್ಕೆ ಒಲಿಯನು. ಶಿವಭಾವಕ್ಕೆ ಒಲಿಯದಿರನು. ಆತನ ಆ ಒಲವು ಅದೊಂದು ಚೆಲುವು. ಅದಕಿಲ್ಲ ಅದೆಂದಿಗೂ ಅಳಿವು. ಅಳಿಯಾಸೆ ಆತನಿಗಿರುವುದಿಲ್ಲ. ಅದರಿಂದಾಗಿ ಪರರ ಬೇಡುವವನಲ್ಲ ; ಪರತಂತ್ರನಾಗಿ ಬಾಳುವವನಲ್ಲ. ಮತ್ತೊಂದನ್ನು ನೆನೆಯನು. ಮತ್ತೊಂದು ಮಾತ ನಾಡನು. ಆತ ದೇಹಿಯಾಗಿದ್ದರೂ ನಿರ್ದೇಹಿ. ಆತ ಜೀವಿಸಿದ್ದರೂ ಜೀವನ್ಮುಕ್ತ. ಅನಾಚಾರದ ಕಟ್ಟಿಗೆ ಆತ ಅದೆಂದಿಗೂ ಸಿಕ್ಕನು. 'ಅಹು ದಹುದು, ಭಕ್ತಿ ಭಾವದ ಭಜನೆ ಎಂತಂತಿಹುದು. ಅಂತರಂಗದ ಅರಿವಿಂಗೆ ಆಚಾರವೇ ಕಾಯ. ಆಚಾರಕಾಯವಿಲ್ಲದಡೆ ಅರಿವಿಂಗೆ ಆಶ್ರಯವಿಲ್ಲ. ಅರಿವು ಆಚಾರದಲ್ಲಿ ಸಮವೇಧಿಸಿದ ಲಿಂಗೈಕ್ಯನ ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ. ನಿನ್ನ ಅರಿವಿಂಗೆ ಅಚ್ಚಾಗಿ, ಆಚಾರಕ್ಕೆ ಆಳಾಗಿ ನಮ್ಮ ಗೊಹೇಶ್ವರನು ನಿನ್ನ ಕೈವಶಕ್ಕೆ ಒಳಗಾದನು....' ಸದ್ಭಕ್ತನಿಗೆ ಸಮ್ಯಕ್ಕ್ರಿಯೆಯ ಸಂಬಂಧ ಎಂತಹದು – ಎಷ್ಟರದು – ಏನು ಮಾಡ ಬಲ್ಲುದು ಎಂಬುದನ್ನು ಪ್ರಭು ತನ್ನ ಈ ವಚನದಲ್ಲಿ ನಿರವಶೇಷವಾಗಿ ನಿರೂ ಪಿಸಿದ್ದಾನೆ. ಆಚಾರನಿರತ ಕರ್ಮಬದ್ಧನಲ್ಲೆಂಬುದನ್ನು ಆಚಾರ ಅವಶ್ಯ ವೆಂಬುದನ್ನು ಅರಿವಿಗೆ ಆಶ್ರಯವೆಂಬುದನ್ನು ಆಂತರಿಕವೂ ಆಗಿದೆಯೆಂಬು ದನ್ನು ನಿಚ್ಚಳವಾಗಿ ನಿರೂಪಿಸಿದ್ದಾನೆ.

"ಆಚಾರವನರಿಯದೆ, ವಿಭವವಳಿಯದೆ, ಕೋಪವಡಗದೆ,
ತಾಪಮುರಿಯದೆ, ಬರಿದೆ ಭಕ್ತರಾದೆವೆಂದು ಬೆಬ್ಬನೆ
ಬೆರೆವವರ ಕೇಡಿಂಗೆ ನಾನು ಮರುಗುವೆ ಕಾಣಾ ಗೊಹೇಶ್ವರಾ !"

'ಒಳಗೆ ತೊಳೆಯಲರಿಯದೆ, ಹೊರಗೆ ತೊಳೆದು ಕುಡಿವುತ್ತಿರ್ಪರಯ್ಯಾ ! ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತಿದ್ದಾರೆ ಗೊಹೇಶ್ವರಾ !'

ಜಡಜಲದಿಂದ ತೊಳೆಯುವುದೇ ಆಚಾರವಲ್ಲ. ಕೋಪ ತಾಪಗಳನ್ನು ತೊಡೆದು ಹಾಕುವುದೂ ಆಚಾರ. ವೈಭವಾದಿಗಳಿಗೆ ಆಶಿಸದಿರುವುದೂ ಆಚಾರ. 'ಬಂದ ಬಟ್ಟೆ' ಗಂಭೀರವಾದ ಪದ. ಕಾಮವಾಸನೆಯಲ್ಲಿರುವವರು 'ಬಂದ ಬಟ್ಟೆ'ಯನ್ನು ಬಯಸಿ ಅಲ್ಲಿಯೇ ಬಿದ್ದಿರುವರು. ಅದೊಂದು ಅನಾಚಾರ. ಹಸಿವಿಗಾಗಿ ಉಣ್ಣುವ ನೀರು ಓಗರಗಳಿಂದ ಹುಟ್ಟುವ ದುರ್ವಾಸನೆ. ಇದು ಅಳಿಯಬೇಕಾದರೆ ಪಾದೋದಕ ಪ್ರಸಾದಗಳನ್ನು ಅರಿದು ಅಳವಡಿಸಿಕೊಳ್ಳಬೇಕು. ನೀರು ಜಡರಸ, ಪಾದೋದಕ ಚಿದ್ರಸ. ಅನ್ನದಿಂದ ಮಾಂಸಪಿಂಡ, ಪ್ರಸಾದದಿಂದ ಮಂತ್ರಪಿಂಡ. ತಿಳಿನೀರಿನಿಂದ ತೊಳೆಯುವುದು ಹೊರಮೈ. ಇದರಂತೆ ಒಳಮೈಯನ್ನು ತೊಳೆಯಬೇಕಾದರೂ ತಿಳಿವೆಂಬ ನೀರು ಬೇಕು. ತಿಳಿದಂತೆ ಆಚರಿಸುವಿಕೆ ಬೇಕು. ಆ ಆಚಾರವೇ ಸತ್ಕ್ರಿಯೆ, ಅದುಳ್ಳವನೇ ಸದ್ಭಕ್ತ. ಆಗ ಆತನ ಒಳಮೈ ಹೊರಮೈ ತಿಳಿಯಾಗುತ್ತವೆ. ಆಗ ಆತ ಆಚಾರವಂತ ಎಂದೆನಿಸುತ್ತಾನೆ. ಆತನಿಗೆ ಸತ್ತ್ವ ಅಳವಡುತ್ತದೆ. ಸದಾಚಾರದಲ್ಲಿ ನಿರತನಾಗಿ ಸದ್ಭಕ್ತನೆನಿಸುತ್ತಾನೆ. ಸತ್ಸ್ವರೂಪವನ್ನು ಸರ್ವಾಂಗದಲ್ಲಿ ಸಮನಿಸಿಕೊಳ್ಳುವುದರಿಂದ ಸದ್ಭಕ್ತನೆನಿಸುತ್ತಾನೆ. ಆಗ "ಅಸತೋ ಮಾ ಸದ್ಗಮಯ "ಎಂಬ ಶ್ರುತಿ ಸಂಕಲ್ಪ ಆತನ ಅಂದರೆ ಸದ್ಭಕ್ತನ ಸರ್ವಾಂಗದಲ್ಲಿ ಗತಿಯುಳ್ಳದಾಗುತ್ತದೆ; ಸಂಗತಿಯುಳ್ಳದಾಗುತ್ತದೆ. ಆಗ ಸದ್ಭಕ್ತತ್ವ ಸಮರ್ಪಕವಾಗುತ್ತದೆ.

ಇಹಜೀವನ, ಈ ಸಂಸಾರದುಃಖದಾಗರ ಅಸಾರವೆಂದು ಹಲವರು ಹಳಿಯುತ್ತಾರೆ. ಈ ಸಂಸಾರವೇ ಇಹಸುಖದ ಸಾರವೆಂದು ರಸಕವಿಗಳು ಹೊಗಳುತ್ತಾರೆ. ಈ ಎರಡು ಅಭಿಪ್ರಾಯಗಳೂ ಪರಮಾರ್ಥವಲ್ಲ ; ಇದು ಬರೀ ದುಃಖದಾಯಕವೂ ಅಲ್ಲ ; ಬರೀ ಸುಖದಾಯಕವೂ ಅಲ್ಲ. ಸುಖ ದುಃಖ ಸಮನ್ವಿತವೆಂದು ಷಟ್‌ಸ್ಥಲ ಸಿದ್ಧಾಂತವು ಸಮನ್ವಯಗೊಳಿಸಿ ತನ್ನ ದೃಷ್ಟಿಸಮನ್ವಯವನ್ನು ತೋರಿದೆ. ತನ್ನ ವಿಚಾರವಾಸ್ತವತೆಗೆ ಪ್ರತ್ಯಕ್ಷ ಪ್ರತೀಕವಾಗಿ ನಿಂತಿದೆ.

ಗುರುಕಾರುಣ್ಯವಿಲ್ಲದ ನರರಿಗೆ ತಿಳಿಯದು. ಅಂತೆಯೇ ಧಾತು (ಮಣಿ) ವಾದವೂ ಅಂದರೆ ರತ್ನಪರೀಕ್ಷೆಯೂ ಕಂಡವರ ಸೊತ್ತಲ್ಲ. ರಸಲಕ್ಷಣವನ್ನು ಅರಿತ ರತ್ನಪರೀಕ್ಷಕನಿಗೆ ಮಾತ್ರ ಸಾಧ್ಯ. ಅಂತೆಯೇ ಲಿಂಗದ ವಿಚಾರ

ಅಂಗಭವಿಗಳಿಗೆ ಅರಿಕೆಯಾಗದು. ಆ ಪರಂಜ್ಯೋತಿಯನ್ನು ಕಾಣುವ ಕಣ್ಣು ಇರಬೇಡವೆ ? ಬರೀ ಕಣ್ಣಿದ್ದರೆ ಆಗದು; ಅದಕ್ಕೆ ಅನುಭವದ ಅಂಜನ ಸಿದ್ಧಿ ಬೇಕು. ಅನುಭವದ ಅಂಜನಸಿದ್ಧಿಗೆ ಭಕ್ತಿಕ್ರಿಯೆ ಬೇಕು. ಅಂತಾದಾಗ ಪರಮಾರ್ಥದ ಬಡತನಕ್ಕೆಂಬಿಲ್ಲ.

ಅಸತ್ ಅದೆಲ್ಲಿದ್ದರೂ ಕೊರತೆ ; ಕೇಡು. ಅದನ್ನು ಉಭಯಾಂಗ ಗಳಿಂದಲೂ ತೆಗೆದು ಹಾಕಬೇಕು. ಆಗ ಸಿದ್ಧಿಸುತ್ತದೆ ಜೀವನ್ಮುಕ್ತಿ. ಇದನ್ನು ಪ್ರತಿಪಾದಿಸಿದೆ ಎರಡನೆಯ ವಚನ. 'ಕಾಯ ನಾನೆಂದರೆ ಕರ್ಮ ಕಾಂಡಿ. ಸಕಲಕ್ರಿಯೆ ಈಶಾರ್ಪಣವೆಂದರೆ ಭಕ್ತಿಕಾಂಡಿ. ಸಕಲ ಕರ್ಮ ಸಾಕ್ಷಿ ಎಂದರೆ ಜ್ಞಾನಕಾಂಡಿ. ಕಾಂಡತ್ರಯವಿಲ್ಲದ ಖಂಡನ ತೋರಾ ಕಪಿಲ ಸಿದ್ಧಮಲ್ಲಿಕಾರ್ಜುನಾ.'

ಕಾಯ, ಕ್ರಿಯೆ, ಕರ್ಮಗಳ ಪ್ರತಿಪಾದನೆಯಲ್ಲಿ ಮುಗ್ಗುರಿಸುವ ತ್ರಿಕಾಂಡಿಗಳನ್ನು ಈ ವಚನವು ಖಂಡಿಸಿದೆ. ಕಾಯ ನಾನೆಂಬುದು ಕರ್ಮ ಸಾಕ್ಷಿಯೆಂಬುದು ಹೇಗೆ ಖಂಡನೀಯವೋ ಕ್ರಿಯೆ ಈಶಾರ್ಪಣವೆಂಬ ಸೂಕ್ಷ್ಮಾಹಂಕಾರದ ಭಕ್ತಿಯೂ ಖಂಡನೀಯ. ನಾನರ್ಪಿಸುವಾತನೆಂಬ ಭಾವವೂ ಸದ್ಭಕ್ತಿಗೆ ಸಲ್ಲದ ಸಮರ್ಪಣೆ. ಸದ್ಭಕ್ತನಿಗೆ ಆ ಭಾವವೂ ಬರ ಬಾರದು. ಅಖಂಡಭಕ್ತಿಭಾವವುಳ್ಳಾತನೇ ಮುಕ್ತ (ಐಕ್ಯ) ನಾಗಬಲ್ಲ. ಅಂದರೆ ಲಿಂಗಸ್ವರೂಪಿಯಾಗಬಲ್ಲ. ಅಂತಹ ಸದ್ಭಕ್ತನ ಕಾಯವೇ ಸತ್ಕಾಯ; ಶಿವಕಾಯ. 'ಭಕ್ತಕಾಯವೇ ಮಮಕಾಯ'ವೆಂದು ಆ ಮಹಾಲಿಂಗವು ಅಭಿಮಾನಿಸುತ್ತದೆ.

ಸದ್ಭಕ್ತನು ದೃಶ್ಯವಾದ ಜಗತ್ತನ್ನಾಗಲಿ ತನುವನ್ನಾಗಲಿ ಅಸತ್ತನ್ನಾಗಿ ಜಡವನ್ನಾಗಿ ದುಃಖರೂಪವನ್ನಾಗಿ ತಿಳಿಯುವುದಿಲ್ಲ; ತಿಳಿದರೂ ಸತ್ತಾಗಿಸದೆ ಚೇತನಗೊಳಿಸದೆ ಸುಖಸ್ವರೂಪಕ್ಕೇರಿಸದೆ ಕೈಬಿಡುವುದಿಲ್ಲ. ಶಿವಾದ್ವೈತಿಗೆ ಇವು ಕೇವಲ ಅವಿದ್ಯಾಕಾರ್ಯವಲ್ಲ. ಇವು ಅನಾದಿ ಮಾತ್ರವಲ್ಲ; ಅನಂತವೂ ಆಗಿವೆ. ಅಂದರೆ ಅವಿನಾಶಿಯಾಗಿವೆ. ಅದ್ವೈತಿ ಶಿವಜೀವೈಕ್ಯಕ್ಕೆ ಜ್ಞಾನ ವೊಂದೇ ಎಂದು ಹೇಳಿದರೆ ಶಿವಾದ್ವೈತಿಯು ಜ್ಞಾನದೊಡನೆ ಕ್ರಿಯೆಯೂ ಬೇಕೆಂದು ಹೇಳುತ್ತಾನೆ. ಹೇಳಿದಂತೆ ಆಚರಿಸಲು ಸದ್ಭಕ್ತನಾಗಿ ಸನ್ನದ್ಧ

ನಾಗುತ್ತಾನೆ. ಅದ್ವೈತಿಗಳ ಪ್ರತ್ಯಗಾತ್ಮನು ಅಸತ್ಯವಾದ ತ್ರಿದೇಹಗಳಿಗೆ ಸಾಕ್ಷಿಯಾಗಿದ್ದಾನೆ. ಶಿವಾದ್ವೈತಿಗಳ ಪರಮಾತ್ಮನು ಸತ್ಯವಾದ ತ್ರಿದೇಹ ಗಳಿಗೆ ಸಾಕ್ಷಿಯಾಗಿದ್ದಾನೆ. ಸಾಕ್ಷಿ ಸತ್ಯವಾಗಿ ಸಾಕ್ಷ್ಯವು ಅಸತ್ಯವಾಗುವುದು ನ್ಯಾಯವೆ ?

ಶರೀರವಾಗಲಿ, ಸೃಷ್ಟಿಯಾಗಲಿ ಪಂಚೀಕೃತವಾಗಿ ಪ್ರತ್ಯೇಕಿಸಲ್ಪಟ್ಟಿರ ಬಹುದು; ಅಪೂರ್ಣಾಂಶವುಳ್ಳವಾಗಿರಬಹುದು. ಪ್ರತ್ಯೇಕತೆಯನ್ನು ಕಳೆದು ಕೊಂಡು ಪೂರ್ಣ ರೂಪವಾಗಬೇಕಾದರೆ ಬೇಕು ಭಕ್ತಿ ಜ್ಞಾನ ಕ್ರಿಯೆಗಳು. ಈ ಮೂರುಳ್ಳವನೇ ಸದ್ಭಕ್ತ.

ಅದ್ವೈತ ಸಿದ್ಧಾಂತದಲ್ಲಿ ಮೂರು ದೇಹಗಳ ಅವಾಂತರ ಭೇದಗಳೇ ಪಂಚಕೋಶಗಳು. ಈ ಪಂಚಕೋಶಗಳೂ ಅಸದ್ರೂಪಗಳು, ಜಡಗಳು, ಕ್ಷಣಿಕಗಳು. ಇವುಗಳಿಗೆ ಆಚೆಯಿರುವ ಚೈತನ್ಯ ಮಾತ್ರ ಸದ್ರೂಪು; ನಿರತಿ ಶಯ ಸುಖಸ್ವರೂಪು. ಸ್ಥೂಲದೇಹ ಕೇವಲ ಅನ್ನಮಯ. ಮೊದಲಿಲ್ಲ, ಕೊನೆಗಿರುವುದಿಲ್ಲ. ಮಧ್ಯದಲ್ಲಿ ಮಾತ್ರ ತೋರುತ್ತದೆ. ಇದು ಅದ್ವೈತ ಸ್ಥೂಲದೇಹ ಚಿತ್ರ. ಶಿವಾದ್ವೈತದಲ್ಲಿ ತ್ರಿವಿಧ ತನುಗಳ ಭೇದಗಳೇ ಷಟ್ ಸ್ಥಲಗಳು. ಈ ಆರೂ ಸದ್ರೂಪ ಚಿದ್ರೂಪ ಆನಂದರೂಪಾಗಿವೆ. ಜಡಾ ಜಡ ರೂಪಾಗಿವೆ, ನಿತ್ಯವಾಗಿವೆ, ಸತ್ಯವಾಗಿವೆ. ಚೈತನ್ಯಾತ್ಮಕವೂ ಆಗಿವೆ. ನಿತ್ಯಾನಂದ ಸಾಧನ ಸಾಮಗ್ರಿಯೂ ಆಗಿವೆ. ಇಲ್ಲಿ ಸ್ಥೂಲದೇಹ ಅನ್ನ ಮಯವಲ್ಲ; ಪ್ರಸಾದಮಯ. ಆದ್ಯಂತಶೂನ್ಯವಲ್ಲ, ಆದ್ಯಂತಗಳಲ್ಲಿ ಅವ್ಯಕ್ತ. ಮಧ್ಯದಲ್ಲಿ ವ್ಯಕ್ತ. ಇದು ಶಿವಾದ್ವೈತ ಸಿದ್ಧಾಂತದ ಸ್ಥೂಲದೇಹದ ಸತ್ಯ ಸುಂದರ ಚಿತ್ರ. ಈ ಸದ್ರೂಪದೇಹವನ್ನು ಪಡೆದವನೇ ಸದ್ಭಕ್ತ. ಈ ಪ್ರಾಸಾದಿಕಾಂಗದ ಸಂಗಿಗನೇ ಸದ್ಭಕ್ತ.

ಅಂಗಸಂಗವನ್ನು ಬಿಟ್ಟು ಮೋಕ್ಷವನ್ನು ಗಳಿಸಲು ಹೇಳುತ್ತದೆ ಅದ್ವೈತ. ಅಂಗವೆಂಬ ಮರವನ್ನು ಬಿಟ್ಟು ಮೋಕ್ಷವೆಂಬ ಫಲವನ್ನು ಪಡೆವುದೆಂತು ಎಂದೆನ್ನುತ್ತದೆ ಶಿವಾದ್ವೈತ. ಹಣ್ಣು ಮರವನ್ನು ಬಿಡು ವುದು ಕೇವಲ ರೂಪಲ್ಲ. ಹಣ್ಣು ಹಣ್ಣಾಗಿರುವುದು ಕೇವಲ ರೂಪ. ಸ್ವಗತಭೇದ ಭೇದವೆ ? ಬೇರ್ಪಡಿಸಲು ಸಾಧ್ಯವೆ ? ವ್ಯಕ್ತವಾಗಿ ಭೇದವೆನಿ

ಸುತ್ತದೆ ಅವ್ಯಕ್ತವಾಗಿ ಅಭೇದವೆನಿಸುತ್ತದೆ. ಸ್ವದೇಹ ವಿಜಾತಿಯು ಭೇದವಾಗಬಲ್ಲುದೆ ?

ಜೀವಾಣುವಿನ ಶುದ್ಧಿಯೇ ಮೋಕ್ಷ. ಜೀವಾಣುವಿನ ವಿಸ್ತರಣೆಯೇ ಸಾಮರಸ್ಯ; ಅಥವಾ ವಿಭುತ್ವ. ದೇಹಪಾತ್ರೆ ಶುದ್ಧವಾದರೆ ಜೀವಾಣು ಶುದ್ಧವಾಗುತ್ತದೆ. ಜೀವತ್ವ ಬಂದುದು ದೇಹದಿಂದ. ಜೀವತ್ವ ಹೋಗಿ ಶಿವತ್ವ ಬರಬೇಕಾದರೆ ಅದೇ ದೇಹಶುದ್ಧಿಯಿಂದ! ನೀತಿ ರೀತಿ ಆಚಾರ ವಿಚಾರಗಳಿಲ್ಲದೆ ಬರೀ ಭಾವದ ಭ್ರಾಂತಿಯನ್ನು ತೊಲಗಿಸಲು ಸಾಧ್ಯವಿಲ್ಲ. ಹಸು ಶುದ್ಧವಿಲ್ಲದೆ ಹಾಲು ಶುದ್ಧವಾಗದು. ಅಲ್ಲದೆ ದೇಹಾದಿಗಳು ಶಿವನಲ್ಲವೆಂದರೆ ಆತನ ವಿಭುತ್ವಕ್ಕೆ ಸರ್ವಾತ್ಮತ್ವಕ್ಕೆ ಹಾನಿ. ಸಂಸ್ಕಾರವನ್ನು ಪಡೆಯದ ಮುನ್ನ ಸದೋಷವಾಗಿರಬಹುದು; ಆಗಿರುತ್ತದೆ. ಸಂಸ್ಕಾರವನ್ನು ಪಡೆದ ಬಳಿಕ ಸದಾಚಾರದಲ್ಲಿ ನಡೆದ ಬ^ಕ ಸರ್ವವೂ ಸದ್ರೂಪ ವಸ್ತುವಾಗಲು ಅಭ್ಯಂತರವಿಲ್ಲ. ದೇಹದ ಹಿಂದೆ, ಮನಸ್ಸಿನ ಹಿಂದೆ, ಭಾವದ ಹಿಂದೆ ಸ್ವಯಂ ಜ್ಯೋತಿರೂಪ ಚೈತನ್ಯವಿದೆಯೆಂದು ಹೇಳುವುದನ್ನು ಒಪ್ಪದೆ ಭಾವದಲ್ಲಿ ಭಾವರೂಪಾಗಿ ಮನದಲ್ಲಿ ಮನೋಮಯವಾಗಿ ದೇಹದಲ್ಲಿ ದೇಹಾಕಾರವಾಗಿ ಆ ಸ್ವಯಂ ಜ್ಯೋತಿಸ್ವರೂಪ ಚೈತನ್ಯವಿದೆಯೆಂಬುದನ್ನು ಕಂಡುಕೊಂಡವನೇ ಸದ್ಭಕ್ತ. ಇಲ್ಲಿಲ್ಲ ಇದಲ್ಲ ಎಂದು ಹೇಳುವುದಾದರೆ ಆತನ ಸರ್ವವ್ಯಾಪ್ತಿತ್ವಕ್ಕೆ ಚ್ಯುತಿ; ಆತನ ಸದ್ರೂಪತ್ವಕ್ಕೆ ಚ್ಯುತಿ. ಈ ದೇಹವೂ ಸರ್ವವ್ಯಾಪಿಯಾದ ಆ ಸದ್ರೂಪನ ಒಂದಂಶ. ಅಂಶವೆಂದೊಡನೆ ಹೆದರಬೇಕಿಲ್ಲ. ಅನಂತತ್ವಕ್ಕೆ ಏಕತ್ವಕ್ಕೆ ಹಾನಿಯೆಂದೆಣಿಸಬೇಕಿಲ್ಲ. ಏಕತ್ವದಲ್ಲಿಯೇ ಅನೇಕತ್ವ ತೋರಿದೆ. ಭಿತ್ತಿ ಒಂದೇ! ಆ ಭಿತ್ತಿಗತಚಿತ್ರಗಳು ಬೇರೆ ಬೇರೆ! ಚಿತ್ರಗಳು ಬೇರಾದರೂ ಭಿತ್ತಿ ಬೇರಲ್ಲ; ಖಂಡವಾಗಿಲ್ಲ. ಚಿತ್ರಗಳಾದರೂ ಚಿತ್ತವಿಟ್ಟು ನೋಡಿದರೆ ಭಿನ್ನವಲ್ಲ. ರೇಖಾಮಾತ್ರದಿಂದ ಭಿನ್ನವಾಗಿ ಕಂಡರೂ ಸ್ವರೂಪದಿಂದ ಸಮವಾಗಿವೆ.

ಸದ್ಭಕ್ತನು ಸರ್ವವನ್ನು ಸತ್ತಾಗಿ ಸಮವಾಗಿ ಕಾಣುತ್ತಾನೆ. ಸ್ವಾರ್ಥದೂರನಾಗಿರುತ್ತಾನೆ. ಸ್ವಾಹಂಕಾರ ದೂರನಾಗಿರುತ್ತಾನೆ; ಮಮಕಾರ ದೂರನಾಗಿರುತ್ತಾನೆ. ಸ್ವಾರ್ಥವೇ ಕ್ರಿಯೋತ್ತೇಜಕ ಶಕ್ತಿಯೆಂಬ ಪ್ರಾಕೃತಿಕ ಭಾವವನ್ನು ಪರಿಹರಿಸಿ ನಿಸ್ವಾರ್ಥ ಮತ್ತು ಪರಾರ್ಥಗಳಿಗಾಗಿ ಸದ್ಭಕ್ತನು

ಸತ್ಕಾರ್ಯನಿರತನಾಗಿರುತ್ತಾನೆ. ತನ್ನ ಹೆಂಡರು ಮಕ್ಕಳು ತನಗಾಗಿ ಎಂಬ ತಾನು ಗಳಿಸಿದ ಹಣ ತನಗಾಗಿ ಎಂಬ ಸ್ವಾರ್ಥ ಇರುವುದಿಲ್ಲ. ತನ್ನವರು ತನ್ನ ಗಳಿಕೆಯೂ ಪರಮಾತ್ಮನ ಪರಮಾತ್ಮ ಸ್ವರೂಪಿಯಾದ ಗುರು ಜಂಗಮರ ಸೇವೆಗಾಗಿ ಎಂದು ಭಾವಿಸುತ್ತಾನೆ.

ಶಕ್ತಿ ಭಕ್ತಿ

ಒಂದೇ ಒಂದಾದ ಆ ಪರವಸ್ತು ಲಿಂಗಾಂಗವೆಂದು ಎರಡಾಗುವುದು. ಆಗ ಆ ಪರವಸ್ತುನಿಷ್ಠವಿಮರ್ಶಾಸ್ವಭಾವವು ಶಕ್ತಿ-ಭಕ್ತಿಯೆಂದು ಎರಡಾಗುವುದು. ಲಿಂಗವನ್ನು ಸೇರಿದುದು ಶಕ್ತಿ. ಅಂಗವನ್ನು ಸೇರಿದುದು ಭಕ್ತಿ. ಲಿಂಗಗತಶಕ್ತಿ ಕಲಾ ಎಂಬ ಮತ್ತೊಂದು ಹೆಸರನ್ನು ತಳೆದಿದೆ. ಶಕ್ತಿ ಸೃಷ್ಟಿಕಾರಿಣಿ ; ಭಕ್ತಿ ಸಂಹಾರ ಕಾರಿಣಿ. ಶಕ್ತಿ ವಿಕಾಶಧರ್ಮಿಣಿ ; ಭಕ್ತಿ ಸಾಮರಸ್ಯಧರ್ಮಿಣಿ. ಶಕ್ತಿ ದೃಗ್ರೂಪಿಣಿ ; ಭಕ್ತಿ ಕ್ರಿಯಾಸ್ವರೂಪಿಣಿ. ಇವರಿಬ್ಬರೊಂದಾದುದೇ ಮುಕ್ತಿ.

'ಮೂರರಿಂದಂ ಮುನ್ನ ತೋರಿಪ್ಪ ಸದ್ಭಕ್ತಿ, ಮೀರಿಪ್ಪ ಕ್ರೀಯುದಕೆ ಶಾಖೆ ಮೂರು. ಫಲವು ಹಲವಾಗಿ ಅಂತಪ್ಪ ಫಲವಾರು. ಸಲ್ಲದದು ಕರ್ಮಿಗಳ ಯೋಗಕ್ಕದು. ಸ್ವಾತಂತ್ರ್ಯ ಸೀಮೆಯುನು ತೋರಿಪ್ಪ ತತ್ತ್ವದಾ ಸೀಮೆ ತಾನು ಅನಾಹತನು ಸ್ವತಂತ್ರ ನಿಸ್ಸೀಮ ಕಪಿಲಸಿದ್ಧ ಮಲ್ಲಿಕಾರ್ಜುನನು ಸ್ವಾತಂತ್ರ್ಯ ಸದ್ಭಕ್ತಿಗೊಲವು ತಾನು.'

ಶಿವ, ಸದಾಶಿವ, ಈಶ್ವರ ಎಂಬೀ ಮೂರು ತತ್ತ್ವಗಳು ತೋರದ ಮೊದಲು ಚಿತ್ ತೋರುವುದು. ತೋರಿದ ಆ 'ಚಿತ್'ವೇ ಶಿವಾದ್ವೈತ ಶಕ್ತಿ. ಆ ಶಕ್ತಿಯ ನ್ಯೂನಾಂಶವೇ ಭಕ್ತಿ. ಆ ಶಕ್ತಿ ಪ್ರವೃತ್ತಿ ಮುಖಳಾದರೆ ಈ ಭಕ್ತಿ ನಿವೃತ್ತಿಮುಖಳಾಗಿ ಮಾರ್ಗಕ್ರಿಯೆಯಿಂದ ಮೀರಿದ ಕ್ರಿಯೆಗೇರುತ್ತಾಳೆ. ಚತುರ್ವಿಧ ಪದಗಳಿಗೆ ಮೀರಿರುವ ಶಿವಕ್ರಿಯೆಯಲ್ಲಿರುತ್ತಾಳೆ ಏಕವಸ್ತು ಗುರು-ಲಿಂಗ-ಜಂಗಮವೆಂದು ಮೂರಾಗಲು ಆ ವಸ್ತುಗತ ಶಕ್ತಿಯೋಗಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿಯೆಂದು ಮೂರಾಗುವುದು. ಅಂಗಗಳಾರಾಗಿ ಭಕ್ತಿಗಳಾರಾಗುವವು. ಲಿಂಗಾಂಗಸಾಮರಸ್ಯರೂಪ ಫಲ

ಶಿವಯೋಗಕ್ಕಲ್ಲದೆ ಉಳಿದಹಠಯೋಗಾದಿ ಪೂರ್ವಯೋಗಗಳಿಗೆ ಸಿಕ್ಕದು. ಸರ್ವಸ್ವಾತಂತ್ರ್ಯವುಳ್ಳ ಆ ಮಹಾಲಿಂಗಸ್ಥಲದಲ್ಲಿ ಅಭಿನ್ನವಾಗಿ ಬೆಳಗುವ ಆ ಚಿಚ್ಛಕ್ತಿ ಸ್ವರೂಪವೇ ಭಕ್ತಿ. ಅಥವಾ ಆ ಸ್ವಾನುಭಾವ ತತ್ತ್ವದ ಸೀಮೆಯೇ ಭಕ್ತಿ. ಆ ಪರಾಭಕ್ತಿ ನಿತ್ಯ, ಸತ್ಯ. ಅದರಿಂದ ಅದು ಅನಾಹತ; ಸ್ವತಂತ್ರ. ಆ ಸ್ವತಂತ್ರ ಚಿಚ್ಛಕ್ತಿ ಸ್ವರೂಪಾದ ಭಕ್ತಿಯೊಡನೆ ಸ್ವತಂತ್ರಕ್ಕೆ ನಿಶ್ಶೀಮನಾದ ಮಹಾಲಿಂಗ ಚೈತನ್ಯನು ಒಲಿದು ಒಡಗೂಡಿ ಒಪ್ಪಚ್ಚ ಅಗಲದೆ ಅವಿರಳಾನಂದತುಂದಿಲನಾಗಿರುವನು.

'ಅರತುದಯ್ಯಾ ಅಂಗಗುಣ. ಒರೆತುದಯ್ಯಾ ಭಕ್ತಿರಸ. ಆವರಿಸಿತ್ತಯ್ಯಾ ಲಿಂಗವಂಗವನು. ಏನೆಂದರಿಯೆನಯ್ಯಾ ಲೋಕಲೌಕಿಕವ. ಲಿಂಗಭ್ರಾಂತನಾದೆನಯ್ಯಾ ಕೂಡಲಸಂಗಮದೇವ ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ.' ಇದರಿಂದಾಗಿ ಭಕ್ತಿಯು ಶಕ್ತಿಮುಕ್ತಿಗಳಿಗಿಂತ ಮಿಗಿಲಾಗಿ ನಿಲ್ಲುತ್ತದೆ.

'ಜ್ಞಾನಾದೇವ ಹಿ ಮೋಕ್ಷಃ ಸ್ಯಾನ್ಮೋಕ್ಷಾದುಪರಿ ಶಾಂಭವೀ-।
ಭಕ್ತಿಃ ಪರತರಾ ಭಾತಿ ಸ್ವತಂತ್ರಾ ನಿಜ ಲೀಲಯಾ ॥'

ಮೋಕ್ಷಕ್ಕೆ ಜ್ಞಾನವೊಂದೇ ಸಾಧನ. ಶಕ್ತಿಗೆ ಪ್ರವೃತ್ತಿಯೊಂದೇ ಆಧಾರ. ಭಕ್ತಿಗೆ ಜ್ಞಾನ ಕ್ರಿಯೆಗಳೆರಡೂ ಸಾಧನ. ಪ್ರವೃತ್ತಿಯೊಡನೆ ನಿವೃತ್ತಿಯೂ ಆಧಾರ. ಇದರಿಂದಾಗಿ ಶಿವಭಕ್ತಿ ಮುಕ್ತಿಗಿಂತ ಮೇಲಿನದು. ಮಿಗಿಲಾಗಿ ಬೆಳಗುಳ್ಳುದು. ಸ್ವತಂತ್ರ ಸೀಮೆಯಲ್ಲಿರುವಂತಹುದು. ನಿಜ ಲೀಲೆಯುಳ್ಳುದು.

'ಧರ್ಮಾದಿ ಪುರುಷಾರ್ಥಾನಾಂ ಚತುರ್ಣಾಂ ಪರತಃ ಪರಾ ।
ಪಂಚಮಃ ಪುರುಷಾರ್ಥೋ ಹಿ ಭಕ್ತಿಃ ಶೈವೀ ಸನಾತನೀ ॥'

ಧರ್ಮಾರ್ಥಾದಿ ಚತುರ್ವಿಧ ಪುರುಷಾರ್ಥಗಳಿಗಿಂತ ಶಿವಭಕ್ತಿಯು ಪರಾತ್ಪರವಾದುದು. ಪಂಚಮ ಪುರುಷಾರ್ಥವೆಂದು ಪ್ರಸಿದ್ಧವಾದುದು. ಸನಾತನವಾದುದು. ಇಷ್ಟೇ ಅಲ್ಲ; ಇದರಮುಂದೆ ಇನ್ನಾವುದೂ ಬೇಕಾಗುವುದಿಲ್ಲ. ಬೆಲೆಯನ್ನು ಪಡೆಯುವುದಿಲ್ಲ.

'ನಯೋಗೋ ನ ತಪೋ ನಾರ್ಚಾಕ್ರಮಃ ಕೋಽಪಿ ನ ವಿದ್ಯತೇ |
ಅಮಾಯೇ ಶಿವಮಾರ್ಗೇಽಸ್ಮಿನ್ ಭಕ್ತಿರೇಕಾ ಪ್ರಶಸ್ಯತೇ ||'

ಸಹಜ ಶಿವಮಾರ್ಗದಲ್ಲಿ ಸಾಗುವ ಶಿವಭಕ್ತನಿಗೆ ಯೋಗ ತಪಸ್ಸು ಪೂಜೆ ಮುಂತಾದವು ಯಾವೂ ಬೇಕಾಗುವುದಿಲ್ಲ. ಇವೆಲ್ಲಕ್ಕೂ ಭಕ್ತಿಯೇ ಬಲವಾದದ್ದು ; ಬೆಲೆಯುಳ್ಳದ್ದು.

'ಬಂಧಮುಕ್ತ್ಯೋರಭಾವೇ ಹಿ ಭಕ್ತಿರುಕ್ತಾ ನಿರರ್ಗಲಾ |
ನ ಬಂಧೇ ಮೋಚನೇ ಚಾಽಪಿ ನ ತಯೋಶ್ಚ ಸಮುಚ್ಚಯೇ ||'

ನಿರರ್ಗಳವಾದುದು ನಿಜಭಕ್ತಿ. ಅದಕ್ಕೆ ಬಂಧ ಮುಕ್ತಿಗಳ ಸಂಬಂಧ ವಿಲ್ಲ. ಅದು ತಾನೇ ತಾನಾಗಿರುತ್ತದೆ.

'ಅತಃ ಪರಾಭಕ್ತಿ ವಿಲಾಸವೈಭವೇ ಸದಾ ಶಿವಾದ್ವೈತಪರಾಯಣಃ ಸ್ವಯಂ|
ಪ್ರಸಾದಮಾಸಾದ್ಯ ನಿಜೈಕ್ಯಸೌಖ್ಯದಂ ಸ್ವಮೇವ ಗಾಯನ್ವಿಚರೇತ್ ಸ್ವಲೀಲಯಾ ||'

ಆ ಪರಾಭಕ್ತಿಯು ತನ್ನ ವಿಲಾಸ ವೈಭವದಲ್ಲಿ ತಾನು ಯಾವಾಗಲು ಶಿವಾದ್ವೈತದಲ್ಲಿ ಅಂದರೆ ಶಿವಸಾಮರಸ್ಯದಲ್ಲಿ ವಿಹರಿಸುವದಾಗಿ ನಿಜೈಕ್ಯ ಸೌಖ್ಯವನ್ನುಂಟು ಮಾಡುವ ಪರಮ ಪ್ರಸಾದವನ್ನು ಪಡೆದು ಪ್ರಸನ್ನವಾಗಿ ತಾನೇ ತಾನಾಗಿ ಹಾಡುತ್ತ ತನ್ನ ಲೀಲೆಯಿಂದ ತಾನೇ ಸಂಚರಿಸುವುದು.

ಭಕ್ತಿ ಪ್ರಾಣಕ್ಕೆ ಪ್ರಾಣವಾಗಿರುತ್ತದೆ. ಪ್ರಾಕೃತಿಕ ಪ್ರಾಣ ಶಕ್ತಿ ಯನ್ನು ಅಥವಾ ಪ್ರಾಣಮಯಕೋಶವನ್ನು ಮೀರಿ ಆಚೆಗಿರುತ್ತದೆ. ಇಚ್ಛಾ ಜ್ಞಾನ ಕ್ರಿಯಾತ್ಮಕ ಶಕ್ತಿಯು ಪ್ರಾಣಾಧಿಷ್ಠಿತವಾಗಿರುತ್ತದೆ. ನಿದರ್ಶನ ಕ್ಕಾಗಿ ಪ್ರಾಣಾಧೀನವಾದ ಮನ ಬುದ್ಧಿಗಳಲ್ಲಿ ಇಚ್ಛಾಶಕ್ತಿಯಿರುತ್ತದೆ ; ಇದ್ದು ಕೆಲಸಮಾಡುತ್ತದೆ. ಜ್ಞಾನಶಕ್ತಿಯು ಪಂಚಜ್ಞಾನೇಂದ್ರಿಯಗಳ ಲ್ಲಿದ್ದು ತನ್ನ ಕಾರ್ಯವನ್ನು ನೆರವೇರಿಸುತ್ತದೆ. ಕ್ರಿಯಾಶಕ್ತಿಯು ಕರ್ಮೇಂದ್ರಿಯಗಳಲ್ಲಿದ್ದು ತನ್ನ ಕಾರ್ಯನಿಷ್ಠವಾಗುತ್ತದೆ. ಮನ ಬುದ್ಧಿ ಗಳಂತೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಪ್ರಾಣಾಧೀನವಾಗಿರುತ್ತವೆ.

"ಅರಾ ಇವರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್"

—ಪ್ರಶ್ನೋಪನಿಷತ್.

ಪ್ರಾಣಶಕ್ತಿ ಇಂದ್ರಿಯಗೋಚರ. ಮತ್ತು ದೃಷ್ಟಿಗೋಚರ. ಪ್ರಾಣಶಕ್ತಿ ಪಿಂಡಾಂಡದ ರವಿ. ಮನಸ್ಸು ಪಿಂಡಾಂಡದ ಚಂದ್ರ. ಇದರಿಂದಾಗಿ ಇವೆರಡು ಆದಿಭೌತಿಕಕ್ಕೆ ಹೆಚ್ಚು ಸಂಬಂಧವುಳ್ಳವು; ನೇರವಾಗಿ ಸಂಬಂಧವುಳ್ಳವು. 'ಆದಿತ್ಯೋ ಹ ವೈ ಪ್ರಾಣಃ' ಎಂದು ಪ್ರಶ್ನೋಪನಿಷತ್ತು ಪ್ರತಿಪಾದಿಸಿದೆ. ಅಲ್ಲದೆ ಪ್ರಾಣ ವಾಯುರೂಪಾತ್ಮಕವಾದುದು. ಪ್ರಾಣ ಅಪಾನ ಉದಾನ ವ್ಯಾನ ಸಮಾನ ಎಂದು ಇದು ಐದೆರನಾಗಿದೆ. ಇವು ಅವಾಂತರ ಭೇದಗಳಾಗಿವೆ. ವಾಯು ವಿಕಾರಗಳಾದ ಇವು ಭೌತಿಕ ವಿಕಾರಗಳೆಂದು ಬೇರೆ ಹೇಳಬೇಕಿಲ್ಲ. ಇಂತಹ ಪ್ರಾಣಾಧಾರದಲ್ಲಿರುವ ಮನ ಬುದ್ಧಿ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಲ್ಲಿ ಕ್ರಮವಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳಿರುತ್ತವೆ. ಅದೇ ಭಕ್ತಿಯು ಈ ಅನ್ನಮಯ ಪ್ರಾಣಮಯ ಮನೋಮಯ ಶರೀರಗಳನ್ನು ಮಂತ್ರಮಯವಾಗಿಸಿ ಈ ತ್ರಿವಿಧ ಕೋಶಗಳಿಂದಾಚೆಯಿರುವ ಇವೆಲ್ಲಕ್ಕೂ ಆಧಾರವಾಗಿರುವ ಆ ಶಿವಾದ್ವೈತದಲ್ಲಿ ವಾಸವಾಗಿ ವಿಲಾಸಗೊಳ್ಳುತ್ತದೆ. ನಿಜೈಕ್ಯ ಸೌಖ್ಯದ ಪ್ರಸಾದವನ್ನು ಪಡೆದು ವಿಭವಗೊಳ್ಳುತ್ತದೆ. ತನ್ನದೇ ಆದ ಲೀಲೆಯಲ್ಲಿ ತಾನೇ ವಿಹರಿಸುತ್ತದೆ. ಅದಕ್ಕೆ ಆದಿಭೌತಿಕದ ಹಂಗಿಲ್ಲ; ಭಂಗವಿಲ್ಲ. ಭಕ್ತಿ ಬ್ರಹ್ಮಾಂಡ ಪಿಂಡಾಂಡಗಳಲ್ಲಿದ್ದೂ ಇಲ್ಲದಂತಿರುತ್ತದೆ. ಮುಖ್ಯವಾಗಿ ಮಂತ್ರಾಂಡದಲ್ಲಿ ಮನೆಮಾಡಿಕೊಂಡಿರುತ್ತದೆ. ಮನ ಬುದ್ಧಿಗಳನ್ನು ಮೀರಿ ಅಂದರೆ ಮನವನ್ನು ಘನವಾಗಿಸಿ ಬುದ್ಧಿಯನ್ನು ಶುದ್ಧಿಗೊಳಿಸಿ ಕೇವಲ ಸಂವಿದ್ರೂಪಾಗಿರುತ್ತದೆ. ಆ ಕೇವಲ ಸಂವಿದ್ರೂಪವೇ ಪ್ರಾಣಲಿಂಗವೆಂದು ಶಿವಾದ್ವೈತ ಸಿದ್ಧಾಂತ.

ನಾಡಿಗಳಲ್ಲಿ ಸಂಚರಿಸುವುದು ಪ್ರಾಣವಾಯು. ಸುಷುಮ್ನೆಯಲ್ಲಿ ಸಂಚರಿಸುವುದು ಪ್ರಾಣವಾಯುವಿನ ಪರಿಣಾಮವಾದ ಸೂಕ್ಷ್ಮಶಕ್ತಿ. ಸುಷುಮ್ನೆಯ ಮೇಲೆ ಬಯಲಿಗೆ ಬಯಲಾದ ನಿರವಯಲಾದ ಆ ವಸ್ತುವಿನಲ್ಲಿ ಸಂಚರಿಸುವುದು ಭಕ್ತಿ. ನಾಡಿಗಳಲ್ಲಿ ಸಂಚರಿಸಿದರೆ ಸಾಮಾನ್ಯ ಜನ್ಮ. ಸುಷುಮ್ನೆಯಲ್ಲಿ ಸಂಚರಿಸಿದರೆ ಶ್ರೇಷ್ಠ ಜನ್ಮ. ಸುಷುಮ್ನೆಯಾಚೆ ಸಂಚರಿಸಿದರೆ ಇಲ್ಲ ಪುನರ್ಜನ್ಮ.

ಚಿಲ್ಲಿಂಗವು ಪ್ರಾಣಸುಷುಮ್ನೆಗಳನ್ನು ಮೀರಿರುವುದು. ಆ ಸಂವಿಲ್ಲಿಂಗಗತ ಶ್ರದ್ಧೆಯೇ ಭಕ್ತಿ; ಅದು ಪರಾಭಕ್ತಿ. ಅದು ನಿರಾಳ; ಅದು ಅವಿರಳ. ಅದನ್ನು ಪಡೆವವರು ವಿರಳ.

ತ್ರಿವಿಧಾಂಗಗಳಲ್ಲಿ ವಿಕಾಸವಾಗಿ ಸಂಚರಿಸುವುದು **ಶಕ್ತಿ**. ತ್ರಿವಿಧ ಲಿಂಗಗಳಲ್ಲಿ ವಿಕಾಸವಾಗಿ ವಿಲಾಸವಾಗಿ ಸ್ವಯಮಾಗಿ ಸಂಚರಿಸುವುದು ಭಕ್ತಿ. ಅಂಗಗತಶಕ್ತಿ ಅಗಲುವುದುಂಟು; ವಿಕಾರವಾಗುವುದುಂಟು. ಲಿಂಗಗತ ಪರಾಭಕ್ತಿ ಅಗಲುವುದಲ್ಲ; ಅದು ಅವಿಕಾರಿ. ಅನಲ್ಪ ಸುಖಕಾರಿ.

ಇಷ್ಟಾದರೂ ಭಕ್ತಿ ಶಕ್ತಿಯ ಫಲ. ಪರಶಿವನ ಪ್ರಸಾದವೇ ಶಕ್ತಿ. ಆ ಪ್ರಸಾದರೂಪ ಶಕ್ತಿಯ ಹೃದ್ರಸವೇ ಭಕ್ತಿ. ಪರಶಿವನ ಪರಿಣಾಮವೇ ಶಕ್ತಿ. ಶಕ್ತಿಯ ಪರಣತಿಯೇ ಪರಾಭಕ್ತಿ. ಪ್ರಾಣವೇ ಶಕ್ತಿ. ಪ್ರಾಣಗತ ಪರಿಶುದ್ಧ ಪ್ರೇಮವೇ ಭಕ್ತಿ. ಪ್ರಾಣ–ಲಿಂಗವೆಂದರೆ ಶಕ್ತಿವಿಶಿಷ್ಟಾದ್ವೈತ. ಪ್ರಾಣಗತ ತ್ರಾಣವೇ ಲಿಂಗ. ಪ್ರಾಣಾಧಾರವಾಗಿ ಲಿಂಗವಿದೆ. ಪ್ರಾಣರೂಪಶಕ್ತಿಗೆ ತ್ರಾಣರೂಪಲಿಂಗವು ತ್ರಿವಿಧಾವಸ್ಥೆಯಲ್ಲಿಯೂ ಆಶ್ರಯವಾಗಿರುತ್ತದೆ. ಸುಷುಪ್ತಿಯಲ್ಲಿ ತನು–ಮನ–ಬುದ್ಧಿ ಇವಾವೂ ಇರುವುದಿಲ್ಲ. ಪ್ರಾಣಮಾತ್ರ ಲಿಂಗವನ್ನಾಶ್ರಯಿಸಿಕೊಂಡಿರುತ್ತದೆ. ಆದ್ದರಿಂದ ಪ್ರಾಣಶಕ್ತಿಗೆ ಸುಷುಪ್ತಿಯಲ್ಲಿಯೂ ಲಿಂಗವೇ ಆಶ್ರಯವಾಗಿರುತ್ತದೆ.

ಪ್ರಾಣಶಕ್ತಿ ಪ್ರಾಕೃತಿಕವಾಗಿ ಬಹಿರ್ಮುಖವಾಗಿ ಹರಿಯುತ್ತದೆ. ಅದೇ ಅಂತರ್ಮುಖವಾದರೆ ಮಹಾಕುಂಡಲಿನಿ ಶಕ್ತಿಯೇ ಭಕ್ತಿಯಾಗಿ ಊರ್ಧ್ವಮುಖಿಯಾಗುತ್ತದೆ; ಊರ್ಧ್ವಗಾಮಿಯಾಗುತ್ತದೆ. ಸುಷುಮ್ನೆಯನ್ನು ಸೇರುತ್ತದೆ. ಬ್ರಹ್ಮರಂಧ್ರಕ್ಕೇರುತ್ತದೆ. ಏರಿ ತಲ್ಲೀನವಾಗುತ್ತದೆ. ಆಗ ಮನಸ್ಸೂ ಏಕಾಗ್ರವಾಗುತ್ತದೆ. ಅದೇ ಪರಾಭಕ್ತಿ. ಅದುವೇ ಚಿಚ್ಛಕ್ತಿ.

ಬಹಿರ್ಮುಖವಾಗಿ ಹರಿಯುವ ಶಕ್ತಿ ವಿನಾಶಹೇತು. ಅಂತರ್ಮುಖವಾಗಿ ಊರ್ಧ್ವಕ್ಕೆ ಹರಿಯುವ ಭಕ್ತಿ ಸಾಮರಸ್ಯಹೇತು; ನಿತ್ಯನಿರತಿಶಯ ವಿಲಾಸಹೇತು. ಆಗ ಪ್ರಾಣಶಕ್ತಿ ಪ್ರಣವಶಕ್ತಿಯಾಗುತ್ತದೆ; ಪರಮಶಕ್ತಿಯಾಗುತ್ತದೆ.

ಪ್ರಾಣಶಕ್ತಿ ಶಬ್ದಮಯಿ. ಪರಮಶಕ್ತಿ ಬ್ರಹ್ಮಮಯಿ; ನಿಶ್ಶಬ್ಧಮಯಿ. ಪ್ರಾಣಶಕ್ತಿ ತ್ರಿಗುಣಮಯಿ. ಪರಮಶಕ್ತಿ ನಿಸ್ತ್ರಿಗುಣಮಯಿ. ಅವಾಗ್ಜ ಪ್ರಣವಮಯಿ. ಅದು ಮಹಾಕುಂಡಲಿನಿ ; ಅನಾಹತನಾದಮಯಿ.

ಆಧಾರದಲ್ಲಿರುವುದು ಆದಿಶಕ್ತಿ. ಇದರ ವ್ಯಾಪ್ತಿ ವಾಸಗಳು ಮಣಿ ಪೂರವನ್ನು ಬಳಸಿಕೊಂಡು ಅನಾಹತದವರೆವಿಗೂ ! ಅನಾಹತದಲ್ಲಿರುವುದು ಪರಾಶಕ್ತಿ. ಇದು ಆಜ್ಞಾಚಕ್ರದವರೆವಿಗೂ ಇರುತ್ತದೆ. ಆಜ್ಞೆ ಬ್ರಹ್ಮ ರಂಧ್ರಗಳೆರಡರಲ್ಲಿರುವುದು ಚಿಚ್ಛಕ್ತಿ. ಇದರ ವ್ಯಾಪ್ತಿ ಆಚೆ ಶಿಖಾಚಕ್ರ ಪಶ್ಚಿಮ ಚಕ್ರಗಳವರೆವಿಗೂ ಇರುತ್ತದೆ. ಅವಿಚ್ಛನ್ನವಾಗಿ ಪ್ರಕಾಶಿಸುತ್ತದೆ. ಅದು ಜಾಗ್ರತವಾದರೆ ಶಿವಾನುಭವ ಅಳವಡುತ್ತದೆ. ಶಿವ ಸಾಮರಸ್ಯ ಸಮನಿಸುತ್ತದೆ. ಶಿವತ್ವವುಂಟಾಗುತ್ತದೆ. ಆದಾಗಬೇಕಾದರೆ ಆ ಪರಾ ಭಕ್ತಿಬೇಕು. ಆ ಪರಾಭಕ್ತಿಯಲ್ಲಿ ಅಭ್ಯಾಸ ವೈರಾಗ್ಯ ಯೋಗಕ್ರಿಯೆ ಜ್ಞಾನ ಎಲ್ಲವೂ ಇರುತ್ತವೆ.

ಸ್ಥಾನಗಳಿಂದ ನಾಮಭಿನ್ನವಾದರೂ ಕುಂಡಲಿನೀ ಶಕ್ತಿಯೊಂದೆ ! ಸ್ಥಾನಗಳಿಂದ ನಾಮಭಿನ್ನವಾದಂತೆ ರೂಪು ಗುಣಕ್ರಿಯೆಗಳೂ ಭಿನ್ನವಾಗು ತ್ತವೆ. ಆಧಾರದಲ್ಲಿರುವ ಶಕ್ತಿಗೆ ಕಪ್ಪುಬಣ್ಣ. ತಮೋಗುಣ. ಬಂಧನ ಕ್ರಿಯೆ. ಅನಾಹತದಲ್ಲಿರುವ ಶಕ್ತಿ ಕೆಂಪುಬಣ್ಣ. ರಜೋಗುಣ. ಬಂಧ ಮೋಕ್ಷಗಳಿಲ್ಲದ ಕ್ರಿಯೆ. ಆಜ್ಞೆಯಲ್ಲಿರುವ ಶಕ್ತಿಗೆ ಬಿಳುಪುಬಣ್ಣ. ಸತ್ವ ಗುಣ. ಮೋಚನಕ್ರಿಯೆ. ಬ್ರಹ್ಮರಂಧ್ರಗತ ಶಕ್ತಿಗೆ ರೂಪು ಗುಣ ಕ್ರಿಯೆ ಗಳಿಲ್ಲ. ಸುಷುಪ್ತಿಯಲ್ಲಿ ಶಕ್ತಿ ಆಧಾರ ಸ್ವಾಧಿಷ್ಠಾನಮಣಿಪೂರಕಗಳಲ್ಲಿ ರುತ್ತದೆ. ಸ್ವಪ್ನದಲ್ಲಿ ಅನಾಹತ ವಿಶುದ್ಧಗಳಲ್ಲಿರುತ್ತದೆ. ಜಾಗ್ರತ್ತಿನಲ್ಲಿ ಆಜ್ಞಾಚಕ್ರದಲ್ಲಿರುತ್ತದೆ. ತುರ್ಯದಲ್ಲಿ ಬ್ರಹ್ಮರಂಧ್ರದಲ್ಲಿರುತ್ತದೆ. ಮತ್ತು ಜಾಗ್ರತ್ತಿನಲ್ಲಿ ತ್ರಿವಿಧಾಂಗ, ಸ್ವಪ್ನದಲ್ಲಿ ಸೂಕ್ಷ್ಮಾಂಗ, ಸುಷುಪ್ತಿಯಲ್ಲಿ ಕಾರ ಣಾಂಗಗಳು ಶಕ್ತಿಯ ವಾಸಕ್ಕೆ ಕೇಂದ್ರಗಳಾಗಿರುತ್ತವೆ.

ರಕ್ತಿ-ಭಕ್ತಿ

ಇವೆರಡರ ಮೂಲ ಬಂಡವಾಳ ಪ್ರೀತಿ ಅಥವಾ ಅನುರಾಗ. ಆದರೂ ಇವೆರಡರಲ್ಲಿ ಅದೆಷ್ಟು ಅಂತರ ? ಅದೆನಿತು ವ್ಯತ್ಯಾಸ ? ರಕ್ತಿ

ಭಾವಕ್ಕೂ ಭಕ್ತಿಭಾವಕ್ಕೂ ಅಜಗಜಾಂತರವಿದೆ. ಗುಣದಲ್ಲಿ ಕ್ರಿಯೆಯಲ್ಲಿ ಫಲದಲ್ಲಿ ಭೇದವಿದೆ.

ಪ್ರೀತಿಯಿಂದಲೇ ಪ್ರತಿಯೊಂದು ಪ್ರಾಣಿಯ ಜೀವನಾರಂಭ. ಜೀವನ ಬೀಜಕ್ಕೆ ಮೊಳಕೆ ಎರಡು. ಒಂದು ಇಹ; ಇನ್ನೊಂದು ಪರ. ಇಹ-ಪರ ಗಳನ್ನೇ ಪ್ರಪಂಚ ಲೌಕಿಕ-ಪರಮಾರ್ಥವೆಂದು ಹೇಳುತ್ತೇವೆ. ಪ್ರಪಂಚಕ್ಕೆ ಮೂಲ ರಕ್ತಿ. ಪರಮಾರ್ಥಕ್ಕೆ ಮೂಲ ಭಕ್ತಿ. ರಕ್ತಿ ಪ್ರವೃತ್ತಿ ಮುಖ. ಭಕ್ತಿ ನಿವೃತ್ತಿ ಮುಖ. ರಕ್ತಿಕ್ರಿಯೆ ಭೋಗ. ಭಕ್ತಿಕ್ರಿಯೆ ಯೋಗ. ರಕ್ತಿ ಫಲ ಕಾಮ. ಭಕ್ತಿ ಫಲ ಸೋಮ. ರಕ್ತಿಯಿಂದ ಸೃಷ್ಟಿರಸ. ಭಕ್ತಿ ಯಿಂದ ಸಮರಸ. ಸೃಷ್ಟಿರಸವೆಂದರೆ ಸೃಜನ. ಸಮರಸವೆಂದರೆ ತಲ್ಲೀನ. ರಕ್ತಿಯುಳ್ಳವ ರಕ್ತ. ಭಕ್ತಿಯುಳ್ಳವ ಭಕ್ತ. ರಕ್ತನದು ಇಳಿಮುಖ. ಭಕ್ತನದು ಮೇಲ್ಮುಖ.

ರಕ್ತಿ-ಭಕ್ತಿಗಳೆರಡಕ್ಕೂ ಮೂಲರಸವೊಂದಾದರೂ ಪರಿಣಾಮರಸ ಬೇರೆ. ರಕ್ತಿಯದು ಶೃಂಗಾರ. ಭಕ್ತಿಯದು ಕರುಣ. ಇವೇ ಇವುಗಳ ಪ್ರಯೋಜನ. ಕಾಮದಹನವಾಗಿ ಸೋಮಧರನು ಸ್ಥಳಾಂತರವಾದ ಬಳಿಕ ಉಳಿದ ರತಿ-ಪಾರ್ವತಿಯರ ಚಿತ್ರಗಳು ರಕ್ತಿ-ಭಕ್ತಿಗಳ ಮೂರ್ತಚಿತ್ರಗಳು. ರತಿ ಕಾಮನಿಗಾಗಿ ಆಳಾಪಿಸುತ್ತಾಳೆ. ಪಾರ್ವತಿ ಪರಮಾತ್ಮನಿಗಾಗಿ ಪ್ರಳಾ ಪಿಸುತ್ತಾಳೆ. ಆಳಾಪ-ಪ್ರಳಾಪಗಳಿಗಿರುವ ವ್ಯತ್ಯಾಸವನ್ನಿಲ್ಲಿ ಕಾಣಬಹು ದಾಗಿದೆ. ಒಂದು ಬಾಹ್ಯ. ಇನ್ನೊಂದು ಆಂತರ. ಒಂದು ಐಂದ್ರಿಕ. ಇನ್ನೊಂದು ಆತ್ಮಿಕ. ಒಂದು ಆತ್ಮಹಿತಕ್ಕಾಗಿ! ಇನ್ನೊಂದು ಲೋಕ ಹಿತಕ್ಕಾಗಿ! ಆತ್ಮಹಿತ ಸ್ವಾರ್ಥ. ಲೋಕಹಿತ ಪರಾರ್ಥ. ಒಬ್ಬಳು ರತಿ. ಇನ್ನೊಬ್ಬಳು ಗರತಿ.

ರಕ್ತಿ ಪ್ರತಿಜೀವಿಯಲ್ಲಿರತಕ್ಕ ಪ್ರಾಕೃತಿಕರಸ. ಭಕ್ತಿ ಪವಿತ್ರಜೀವಿ ಯಲ್ಲಿರತಕ್ಕ ಪಾರಮಾರ್ಥಿಕ ರಸ. ರಕ್ತಿ ಜೀವ ಜೀವರ ಕೇಲಿ. ಭಕ್ತಿ ಜೀವದೇವರ ಲಾಲಿ. ರಕ್ತಿಯಿಂದ ಜೀವ ಜೀವರಲ್ಲಿ ಮೋದ. ಭಕ್ತಿ ಯಿಂದ ಜೀವ ದೇವರಲ್ಲಿ ಪ್ರಮೋದ. ಮೋದ ಖೇದಕ್ಕೆ ಗುರಿಯಾಗ ಬಲ್ಲುದು; ಆಗುತ್ತದೆ. ಪ್ರಮೋದ ಆಗಲಾರದು; ಆಗುವುದಿಲ್ಲ. ರಕ್ತಿ ಯಲ್ಲಿ ಜೀವ ಜೀವರ ಸಂಬಂಧ. ಭಕ್ತಿಯಲ್ಲಿ ಜೀವ ದೇವರ ಸಂಬಂಧ.

ಮಮಕಾರ ರಕ್ತಿಗೆ ಮೂಲ. ನಿರ್ಮಮಕಾರ ಭಕ್ತಿಗೆ ಮೂಲ. ಮಮಕಾರ ಮಲ ವಾಸನೆಗಳನ್ನು ಹೆಚ್ಚಿಸುತ್ತದೆ. ಮುನ್ನಡೆಯದಂತೆ ತೊಡಕಾಗುತ್ತದೆ. ಅದೇ ನಿರ್ಮಮಕಾರವು ಮಲವಾಸನೆಗಳನ್ನು ಮುಚ್ಚುತ್ತದೆ. ಮುನ್ನಡೆವಂತೆ ನೆರವಾಗುತ್ತದೆ.

'ದ್ವೇಪದೇ ಬಂಧ ಮೋಕ್ಷಾಯ ನಿರ್ಮಮೇತಿ ಮಮೇತಿ ಚ ।
ಮಮೇತಿ ಬಧ್ಯತೇ ಜಂತುರ್ನಿರ್ಮಮೇತಿ ವಿಮುಚ್ಯತೇ ॥'

—ಉತ್ತರಗೀತ

ಮಮತೆಯಿಂದ ಮನಸ್ಸು ಮೂಢವಾಗತ್ತದೆ; ಸಂಕುಚಿತವಾಗುತ್ತದೆ. ಸ್ವ-ಪರ ಭಾವವುಳ್ಳುದಾಗುತ್ತದೆ. ತನ್ನವರಲ್ಲಿ ತಾನು ದಾಸಭಾವವುಳ್ಳುದಾಗುತ್ತದೆ. ಉಚ್ಚಮಾರ್ಗದಲ್ಲಿ ಕ್ರಮಿಸದು. ಉದಾತ್ತ ಭಾವವನ್ನು ಪ್ರೇಮಿಸದು. ರಕ್ತಿಯಾಗಿ ರೂಪುಗೊಳ್ಳುತ್ತದೆ. ಅದೇ ನಿರ್ಮಮತೆಯು ನಿರ್ಮಳ ಭಕ್ತಿಯಾಗಿ ನಿಜಶಕ್ತಿಯಾಗಿ ಮುಂದುವರಿಯುತ್ತದೆ.

ಭಕ್ತಿಯುಳ್ಳ ಭಕ್ತ ಮಹೇಶನಾಗಿ ಮುಂದುವರಿಯುತ್ತಾನೆ. ರಕ್ತಿಯುಳ್ಳ ರಕ್ತ ಗೃಹೇಶನಾಗಿ ಮುಂದುವರಿಯುತ್ತಾನೆ. ಮಹೇಶಪ್ರಸಾದವನ್ನು ಸ್ವಿಕರಿಸಿ ಪ್ರಸಾದಿಯಾಗುತ್ತಾನೆ. ಗೃಹೇಶ ಪದಾರ್ಥವನ್ನು ಸೇವಿಸಿ ವಿಷಾದಿಯಾಗುತ್ತಾನೆ. ಪ್ರಸಾದಿ ಮುಂದೆ ಪ್ರಾಣಲಿಂಗಿಯಾಗುತ್ತಾನೆ. ವಿಷಾದಿ ಪ್ರಾಣಾಂಗಿಯಾಗುತ್ತಾನೆ. ಪ್ರಾಣಲಿಂಗಿಯು ಪರಮಾತ್ಮನಲ್ಲಿ ಶರಣಾಗುತ್ತಾನೆ. ಪ್ರಾಣಾಂಗಿಯು ಜೀವಾತ್ಮನಲ್ಲಿ ಶರಣಾಗುತ್ತಾನೆ. ಶಿವ ಶರಣನು ಶಿವನಲ್ಲಿ ಸಮರಸನಾಗುತ್ತಾನೆ. ಜೀವ ಶರಣನು ವಿಷಮರಸ ಜೀವಿಯಾಗುತ್ತಾನೆ. ಭಕ್ತನದು ಪರಮಾರ್ಥ ಷಟ್‌ಸ್ಥಲ ಜೀವನಸಿದ್ಧಾಂತ; ರಕ್ತನದು ಪ್ರಪಂಚ ಷಟ್‌ಸ್ಥಲ ಜೀವನ ರಾದ್ಧಾಂತ.

ರಕ್ತನು ವ್ಯರ್ಥಾಲಾಪಗಳಲ್ಲಿ ನಿರರ್ಥ ಕಾರ್ಯಕಲಾಪಗಳಲ್ಲಿ ತೊಡಗಿರುತ್ತಾನೆ. ವಿಷಯಸಂಗ್ರಹದಲ್ಲಿ ವಿಶೇಷವಾಗಿ ರತನಾಗಿರುತ್ತಾನೆ. ನಿಜವಾದ ಶಾಂತಿ ತೃಪ್ತಿಗಳು ಆತನಿಗೆ ಕನಸಾಗಿರುತ್ತವೆ. ಅದೇ ಭಕ್ತನಾದಾತನು ವ್ಯರ್ಥಾಲಾಪ-ಕಾರ್ಯಕಲಾಪಗಳಿಗೆ ಮನಸ್ಸು ಮಾಡನು. ಸದ್ವಿಷಯ ಸಂಗ್ರಹದಲ್ಲಿ ನಿರತನಾಗಿರುತ್ತಾನೆ. ಸತ್ಪುರುಷರಲ್ಲಿ ಶರಣಾಗತನಾಗಿರುತ್ತಾನೆ. ಸತ್ಯ ಶಾಂತಿ ಸುತೃಪ್ತಿಗಳಿಂದ ಸ್ಥಿತಪ್ರಜ್ಞನಾಗಿರುತ್ತಾನೆ.

'ಕಾಮವೇಕೋ ಲಿಂಗಪ್ರೇಮಿಯೆನಿಸುವಂಗೆ ? ಕ್ರೋಧವೇಕೋ ಶರಣ ವೇದ್ಯನೆನಿಸುವಂಗೆ ? ಲೋಭವೇಕೋ ಭಕ್ತಿಯ ಲಾಭವನರಸುವಂಗೆ? ಮದ ಮತ್ಸರ ಉಳ್ಳವಂಗೆ ಹೃದಯ ಶುದ್ಧವೆಲ್ಲಿಯದೋ ? ಹದುಳಿಗರಾದವರಲ್ಲಿಪ್ಪ ಕೂಡಲ ಸಂಗಮದೇವ.'

'ಆಧಾರಕಾಮ ರಕ್ತಿಮೂಲ. ಹೃದಯಕಾಮ ಭಕ್ತಿಮೂಲ. ಆಧಾರ ಕಾಮ ಆಹತ ಜನ್ಯಸುಖ ಕಾರಣ. ಹೃದಯಪ್ರೇಮ ಅನಾಹತ ಸುಖ ಕಾರಣ. ಜೀವನಿಗೆ ಬೇಕು ರಕ್ತಿರಸ. ದೇವನಿಗೆ ಬೇಕು ಭಕ್ತಿರಸ. ಕವಿಗೆ ಬೇಕು ಉಕ್ತಿರಸ.

ಜೀವನ ರಸ ಪ್ರೇಮ

ಜಲ ಹೇಗೆ ಜಾಗತಿಕ ಜನತೆಯ ಜೀವನವಾಗಿದೆಯೋ ಹಾಗೆ ಪ್ರೇಮವೂ ಜೀವನವಾಗಿದೆ ; ಜೀವನಕ್ಕೆ ರಸರೂಪಾಗಿದೆ. ಮಾನವ ಜೀವನ ಮೊದಲಾಗುವುದು ಪ್ರೇಮದಿಂದ. ಪ್ರೇಮ ಮಾನವ ಜೀವನ ಪ್ರೇರಕ, ಸಾಧಕ, ಪೂರಕ.

ಪ್ರೇಮವಿಲ್ಲದ ಜೀವಿಯಿಲ್ಲ; ಜೀವನವಿಲ್ಲ. ನೆಲ–ಜಲಗಳ ಸಂಬಂಧ ದಂತೆ ಜನ–ಜೀವನ ಸಂಬಂಧ. ಎಲೆ ಹೂವು ಹಣ್ಣುಗಳಿಂದ ಸುಂದರ ವಾಗಿ ಮಧುರವಾಗಿ ಮರ ಬಳ್ಳಿಗಳು ಮೆರೆಯಬೇಕಾದರೆ ಹೇಗೆ ನೀರು ಆಧಾರವೋ ಹಾಗೆ ಮಾನವನು ಗುಣ ಕ್ರಿಯೆಗಳಿಂದ ರೂಪು ರುಚಿಗಳಿಂದ ಸಹಕಾರ ಸಮರಸಗಳಿಂದ ಬಾಳಬೇಕಾದರೆ ಪ್ರೇಮವೇ ಆದಿ ಆಧಾರ ವಾಗಿದೆ.

ಸತ್ಯ, ಸತ್ವ, ದಯೆ, ಕ್ರಿಯೆ, ತ್ಯಾಗ, ಮುಂತಾದ ಗುಣಗಳು ಸಹಜವಾಗಿ ಶುದ್ಧವಾಗಿ ಮೈಗೂಡಿಕೊಳ್ಳಬೇಕಾದರೆ ಪ್ರೇಮರಸದಿಂದ! ಮತಗಳ ಬುನಾದಿ ಮಾನವ. ಮಾನವ ಜೀವನ ಬುನಾದಿ ಪ್ರೇಮರಸ. ಮತಮತಾಂತರ ಗಳ ಧರ್ಮ ದರ್ಶನಗಳಿಗೆಲ್ಲ ಶ್ರದ್ಧೆ ಸಿದ್ಧಾಂತಗಳಿಗೆಲ್ಲ ಅಡಿಗಲ್ಲು ಪ್ರೇಮ. ಪ್ರೇಮ ನಮ್ಮ ಬಾಳಿನ ರಸವತ್ತಾದ ಶಕ್ತಿ. ನಮ್ಮ ಜೀವನ ಪ್ರವಾಹ; ಚೇತನ. ಸೌಂದರ್ಯಕ್ಕೆ ಮಾಧುರ್ಯಕ್ಕೆ ತತ್ತ್ವರಹಸ್ಯಕ್ಕೆ ಮೂಲವಾಗಿ

ನಿಂತಿದೆ ಪ್ರೇಮಶಕ್ತಿ. ಬಾಳಿಗೆ ಬಣ್ಣವೇರಬೇಕಾಗಿದ್ದರೆ ಬಾಳು ಬಿತ್ತರವಾಗಬೇಕಾಗಿದ್ದರೆ ಅಂತೆಯೇ ಎತ್ತರವಾಗಬೇಕಾಗಿದ್ದರೆ ಪರಿಶುದ್ಧವಾದ ಪ್ರೇಮರಸದಿಂದ! ಜೀವನದ ಅಸ್ತಿತ್ವಕ್ಕೆ ಅದೊಂದು ಆಸ್ತಿ. ವಿಶ್ವಕುಟುಂಬಿಯಾಗಿ ವಿಶ್ವನಾಥನ ಕುಟುಂಬಿಯಾಗಿ ಬಾಳಲು ಬೇಕಾದ ಭಾಗ್ಯವೆಂದರೆ ಪರಮಪ್ರೇಮ. ಎಲ್ಲ ಧರ್ಮ–ದರ್ಶನ–ಗುಣ–ಕ್ರಿಯೆಗಳೆಂಬ ತರುಲತೆಗಳು ಬೆಳೆದು ನಿಲ್ಲಬೇಕಾದರೆ ಅತ್ಯಗತ್ಯ ಪ್ರೇಮಜಲ. ಎಲ್ಲ ಕಲೆಗಳ ಮೂಲ ಪ್ರೇಮರಸ. ಎಲ್ಲ ಕಾವ್ಯಗಳ ಮೂಲ ಪ್ರೇಮರಸ. ಪವಿತ್ರಪ್ರೇಮ ಬೆಳು ಬಾಳಿನ ಮೂಲಬಿಂದು; ವಿಶಾಲಸಿಂಧು. ಪರಮಪ್ರೀತಿಯೇ ಶಕ್ತಿ. ಆ ಪ್ರೀತಿಜನ್ಯ ಸುಖವೇ ಶಿವ, ಪರಮ ಪ್ರೇಮದಲ್ಲಿ ಸತ್ತಿದೆ, ಚಿತ್ತಿದೆ, ಸುಖವಿದೆ. ಇದರಿಂದಾಗಿ ಆ ಪರಮ ಪ್ರೇಮವೇ ಸಚ್ಚಿದಾನಂದ ಸ್ವರೂಪ.

ಪ್ರೇಮಕ್ಕೆ ಇಮ್ಮೊಗಗಳಿವೆ. ಒಂದು ಪ್ರಾಪಂಚಿಕ; ಇನ್ನೊಂದು ಪಾರಮಾರ್ಥಿಕ. ಮೊದಲಿನದು ಲೌಕಿಕ; ಎರಡನೇಯದು ಅಲೌಕಿಕ. ಇವೆರಡೂ ಪ್ರಾಕೃತಿಕವಾಗಿದ್ದು ಪರಸ್ಪರ ಪೂರಕವಾಗುತ್ತವೆ. ಇವು ಪ್ರಕೃತಿ ವಿರುದ್ಧವಾದರೆ ಅಂದರೆ ಅಸಹಜವಾದರೆ ವಿಕಾರ ಹೇತುಗಳಾಗುತ್ತವೆ; ವಿಷಾದ ಹೇತುಗಳಾಗುತ್ತವೆ. ಪ್ರೇಮ ಪ್ರಕೃತಿಗೆ ಅತಿರಿಕ್ತವಾಗಿ ಅತಿಯಾಗಿ ಉಪಯುಕ್ತವಾದರೆ ಅಸತ್ವಕ್ಕೆ ಅಚಿತತ್ತ್ವಕ್ಕೆ ಅಸುಖಕ್ಕೆ ಕಾರಣವಾಗುತ್ತದೆ. ಅಸತ್ತಿಗೂ ಕಾರಣವಾಗುತ್ತದೆ.

ಜೀವನದಲ್ಲಿ ಪ್ರೇಮ ಮೌಲ್ಯ ಅಗಾಧವಾದುದು. ಜೀವನ ಸೌಂದರ್ಯಕ್ಕೆ ಜೀವನ ಮಾಧುರ್ಯಕ್ಕೆ ಜೀವನ ಸೌಖ್ಯಾನುಭವಕ್ಕೆ ಪ್ರೇಮ ಮೂಲ ಕಾರಣವಾಗಿದೆ; ಪೂರ್ಣಕಾರಣವಾಗಿದೆ. ಆತ್ಮನ ಸಚ್ಚಿದಾನಂದ ಸ್ವರೂಪ ಸಂಪ್ರಾಪ್ತಿಗೆ ಪರಿಶುದ್ಧ ಪ್ರೇಮವೇ ಕಾರಣವಾಗಿದೆ.

ಅಶುದ್ಧ ಪ್ರೇಮದಿಂದ ಬಂಧನ; ಶುದ್ಧ ಪ್ರೇಮದಿಂದ ಮೋಚನ. ಪಾಪಮಯ ಪ್ರೇಮದಿಂದ ದುಃಖ; ಪುಣ್ಯಮಯ ಪ್ರೇಮದಿಂದ ಸುಖ. ಅವಾಸ್ತವ ಪ್ರೇಮಪ್ರೇರಿತವಾದದು ಕರ್ಮ. ವಾಸ್ತವ ಪ್ರೇಮಪ್ರೇರಿತವಾದುದು ಧರ್ಮ.

ಕ್ರಿಯಾಶಕ್ತಿ ಜ್ಞಾನಶಕ್ತಿಗಳಿಗೆ ಮೂಲವಾದುದು ಇಚ್ಛಾಶಕ್ತಿ. ಇಚ್ಛಾಶಕ್ತಿಯ ಜೀವಾಳ ಪ್ರೇಮ. ಪ್ರೇಮ ಪರಿಶುದ್ಧತೆಯಿಂದ ಇಚ್ಛೆ

ಸ್ವಚ್ಛವಾಗುತ್ತದೆ. ಪರಮಾತ್ಮನ ಪರಮ ಪ್ರೇಮದಿಂದ ಈ ಜಗದುದಯ. ಕ್ರಿಯಾಜ್ಞಾನಗಳು ಕಲಿತರೆ ಬರುತ್ತವೆ. ಪ್ರೇಮವನ್ನು ಅವುಗಳಂತೆ ಕಲಿಯಬೇಕಿಲ್ಲ.

ರತಿ-ವಿರತಿ

ರತಿ ಬಿಂದು ; ವಿರತಿ ಸಿಂಧು. ರತಿ ಸಂಕೋಚಿತ ; ವಿರತಿ ವಿಕಾಸಿತ. ರತಿ ಐಂದ್ರಿಕ ; ವಿರತಿ ಆತ್ಮಿಕ. ರತಿ ಐಹಿಕಮಾತ್ರ ; ವಿರತಿ ಐಹಿಕಾಮುಷ್ಮಿಕ ಹಾಗು ಆಧ್ಯಾತ್ಮಿಕಸಿಷ್ಟ.

ರತಿಭಾವ ಶೃಂಗಾರಮಂದಿರ ; ಪ್ರಕೃತಿಸಿದ್ಧ ಚಂದಿರ. ವಿರತಿ ಶಿವಾಗಾರ ; ಸಂಸ್ಕೃತಿ ಸಂವೃದ್ಧ ಪೂರ್ಣಚಂದಿರ. ಇಲ್ಲಿ ವಿರತಿಯೆಂದರೆ ಪ್ರೇಮರಾಹಿತ್ಯವೆಂದರ್ಥವಲ್ಲ; ವಿಶುದ್ಧ ರತಿಯೆಂದರ್ಥ; ಅರ್ಥಾತ್ ಭಕ್ತಿಯೆಂದರ್ಥ. ರತಿಭಾವದ ಕವಿಗೂ ವಿರತಿಭಾವ ಅಂದರೆ ಭಕ್ತಿಭಾವದ ಕವಿಗೂ ಅಂತರವಿದೆ. ವಿಶುದ್ಧ ರತಿಯೆ ಭಕ್ತಿ. ಈ ವಿಶುದ್ಧ ರತಿರೂಪ ಭಕ್ತಿಯಲ್ಲಿ ನಿರ್ಹೇತುಕ ಭಾವವಿರುತ್ತದೆ. ನಿಸ್ಸ್ವಾರ್ಥ ಸ್ವಭಾವವಿರುತ್ತದೆ. ನಿರುಪಮ ಪ್ರೇಮವಿರುತ್ತದೆ. ನಿಷ್ಕಲಂಕ ನಿರಾಮಯ ನೇಹವಿರುತ್ತದೆ. ಶರಣ ಭಾವದ ಸತೀತ್ವವೇ ಇದರ ನೆಲೆವೀಡು. ಇದರ ಶಕ್ತಿ ಅಚಿಂತ್ಯ ; ಅಪಾರ. ವಿಶುದ್ಧವಾದ ರತಿಭಾವದ ಭಕ್ತಿಯನ್ನು ರೀತಿಯನ್ನು ಶಿವಶರಣರ ವಚನ ಸಾಹಿತ್ಯ ಚೇತೋಹಾರಿಯಾಗಿ ಚಿತ್ರಿಸಿದೆ. ದಿವ್ಯರಸಪೂರ್ಣವಾಗಿ ರೂಪಿಸಿದೆ ; ಬಣ್ಣಿಸಿ ಬಿತ್ತರಿಸಿದೆ. ಶರಣ ಸತೀಭಾವದಲ್ಲಿ ಪಡೆವ ಲಿಂಗಾನಂದಕ್ಕೆ ಬೇರೆ ಇನ್ನಾವ ಆನಂದವೂ ಸರಿಬಾರದು.

"ನಿಮ್ಮ ನೋಟವನಂತಸುಖ ; ನಿಮ್ಮ ಕೂಟ ಪರಮಸುಖ ! ಅವುಟು ಕೋಟಿರೋಮಂಗಳು ಕಂಗಳಾಗಿ ನೋಡುತ್ತಿದ್ದೆನು ! ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ ಮನದಲ್ಲಿ ರತಿಹುಟ್ಟಿ ನಿಮಿರ್ದವೆನ್ನ ಕಳೆಗಳು !"

ಈ ರತಿ ಸಾಮಾನ್ಯ ರತಿಯಲ್ಲ ; ಸಾಂಸಾರಿಕ ರತಿಯಲ್ಲ. ಸರ್ವಶ್ರೇಷ್ಠವಾದ ಶರಣಭಾವದ ರತಿ ! ಸಾಮಾನ್ಯವಾದ ಪ್ರಾಕೃತಿಕ ರತಿಯಲ್ಲಿ

ಅಲ್ಪಸುಖ ; ಅಧಮಸುಖ. ಶುದ್ಧ ಪ್ರಬುದ್ಧ ರತಿಯಲ್ಲಿ ಅನಂತಸುಖ ; ಪರಮಸುಖ. ಈ ನೋಟವೆ ಬೇರೆ ! ಆ ನಿರ್ಮಲ ನೋಟವೇ ಬೇರೆ ! ಇಲ್ಲಿ ಈ ಎರಡು ಕಣ್ಣುಗಳು ನೋಡಿದರೆ ಅಲ್ಲಿ ಆ ರತಿ ಭಾವದಲ್ಲಿ ಕೋಟಿ ಕೋಟಿ ರೋಮಗಳೆಲ್ಲ ಕಣ್ಣುಗಳಾಗಿ ನೋಡುವವು. ಆ ಸೌಂದರ್ಯ ಬೇರೆ. ಅದು ಸತ್ಯ ಶಿವ ಸೌಂದರ್ಯ. ನಿತ್ಯ ನಿರುಪಮ ಸೌಂದರ್ಯ. ಸಚ್ಚಿದಾನಂದ ಸಂದಾಯಕ ಸೌಂದರ್ಯ. ಈ ಕಾಮನೋಟದಲ್ಲಿ ಕಣ್ಣು ಕಳೆಗಳು ಮುಚ್ಚುವವು. ಆ ದಿವ್ಯದೇವನೋಟದಲ್ಲಿ ಕಣ್ಣು ಕಳೆಗಳು ಬಿಚ್ಚುವವು. ಆ ರತಿಯನ್ನೇ ನಾವಿಲ್ಲಿ ವಿ-ರತಿಯೆಂದು ಕರೆದಿರುವೆವು. ವಿಷಯ ರತಿಯಲ್ಲಿ ಅಂಗವಿಕಾರವಿರುತ್ತದೆ. ವಿಶುದ್ಧ ರತಿಯಲ್ಲಿ ಅಂಗ ವಿಕಾರವಿರುವುದಿಲ್ಲ. ಪ್ರತಿಯಾಗಿ ಲಿಂಗಪ್ರಾಣವಾಗಿರುತ್ತದೆ. ಲಿಂಗದಲ್ಲಿ ಪ್ರಾಣಪ್ರಪತ್ತಿಗೊಂಡಿರುತ್ತದೆ. ಲಿಂಗವನ್ನಗಲಿ ಅಂಗನ ಪ್ರಾಣವಿರದು. ಲಿಂಗದರ್ಶನದಲ್ಲಿ ಲಿಂಗಸ್ಪರ್ಶನದಲ್ಲಿ ಸರ್ವೋತ್ತಮ ಸುಖವನ್ನು ಅನು ಭವಿಸುತ್ತದೆ ಘನಮನ. ಆ ನಿಬ್ಬೆರಗಿನಲ್ಲಿ ಮೈಮರೆದಿರುತ್ತದೆ ದಿವ್ಯಮನ. ಬಾಹ್ಯದ ಯಾವ ಅಬ್ಬರಕ್ಕೆ ಅಳುಕದೆ ಅಲ್ಲಿಯೇ ತಲ್ಲೀನಗೊಳ್ಳಲು ತವಕಿಸು ತ್ತದೆ ತಾತ್ತ್ವಿಕದ ತಿಳಿಮನ. ಆ ಹಾರ್ದಿಕದ ಹಂಬಲವನ್ನು ಹೇಳಲು ನುಡಿಗೆ ಅಳವಿಲ್ಲ.

"ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ ಕಂಗಳು
ಕಡೆಗೋಡಿವರಿದುವೆಗಯ್ಯಾ ನಮ್ಮ ಅಶ್ರುಜಲಂಗಳು !
ಆಲಿಕಲ್ಲ ರೂಹಿನಂತೆ ಅರಗಿನ ಪುತ್ತಳಿಯಂತೆ–
ತನು ಪುಳಕಿತವಾದ ಬೆಮರು ಬಿಂದುಗಳೆಲ್ಲಾ !
ಕೂಡಲಸಂಗನ ದರ್ಶನ ಸ್ಪರ್ಶನದಿಂದ ಮನವೊಲಿದು
ನೆರೆವ ಭರವನೇನ ಹೇಳುವೆನಯ್ಯಾ ?"

ಆ ದಿವ್ಯ ರತಿಯಲ್ಲಿರುವಾಗ ಅದುವೇ ಪ್ರಾಣ, ಅದುವೇ ಜೀವನ ವಾಗುತ್ತದೆ. ಅದುವೇ ಅಮೃತವಾಗಿರುತ್ತದೆ. ಆಲಿಕಲ್ಲಿನಂತೆ ಅದರಲ್ಲಿ ತನು ಮನ ಭಾವಗಳೆಲ್ಲ ಕರಗಿ ನೀರಾಗಿರುತ್ತವೆ. ಅರಗಿನ ಪುತ್ತಳಿಯಂತೆ

ಸರ್ವಸ್ವ ಸಮರ್ಪಣ ಸನ್ನದ್ಧವಾಗಿರುತ್ತವೆ. ರತಿ ವಿರತಿಯಾಗಿ, ಕಾಮ ಸಂಗ ನಿಸ್ಸಂಗವಾಗಿ ನಿಜಭಾವಲಿಂಗದ ನಿಬ್ಬೆರಗಿನಲ್ಲಿ ನಿಂತು ನಲಿವ ಹವ ಣವೇ ವಿರತಿಯ ದಿಟಪುಟದ ನೆಲೆ !

ರತಿಯ ಮಟ್ಟಕ್ಕೂ ವಿರತಿಯ ಮಟ್ಟಕ್ಕೂ ಈ ಬಗೆಯ ಅಜಗಜಾಂತರ ವಿದೆ. ರತಿ ಚೂರ್ಣ, ವಿರತಿ ಪೂರ್ಣ. ರತಿ ಕಲುಷಿತ, ವಿರತಿ ಅಕಲುಷಿತ; ಅತ್ಯಂತ ಉನ್ನತ.

ಪ್ರೇಮ ಇದೊಂದು ನಿಧಿ ನಿಧಾನ. ಉಳಿದ ಗುಣಧರ್ಮಗಳು ಜಲ ಗರ. ಜಲಗರವೆಂದರೆ ಮೂಷೆಯ ಬೂದಿಯೊಳಗಿರುವ ಚಿನ್ನದ ಚೂರು. ಪ್ರೇಮ ಪ್ರವಾಹದ ತೀರದಲ್ಲಿ ಬೆಳೆದು ಬರುವ ತೃಣಗಳು ಉಳಿದ ಗುಣ ಧರ್ಮಗಳು. ಪ್ರೇಮ ಪ್ರವಾಹ ಬತ್ತಿದರೆ ಉಳಿದ ಗುಣ ಧರ್ಮತೃಣಗಳು ಬತ್ತುವವು. ಭಕ್ತಿಯಿಲ್ಲದ ಆರಾಧನೆ ಭಿತ್ತಿಯಿಲ್ಲದ ಚಿತ್ತಾರದಂತೆ ಅರೂಪ.

ಮತಕ್ಕೆ ಕುಲಕ್ಕೆ ಕೆಲಕ್ಕೆ ಶುದ್ಧವಾಗಿ ನಡೆಯಬಹುದು. ಮನಕ್ಕೆ ಶುದ್ಧವಾಗಿ ನಡೆಯುವುದು ಕಡುಕಷ್ಟ. ಮನ ಶುದ್ಧವಾಗಬೇಕಾದರೆ, ಮನ ಪ್ರಬುದ್ಧವಾಗಬೇಕಾದರೆ ಮನ ಸಂಯಮವಾಗಬೇಕಾದರೆ ಮಾನಸಿಕ ಭಕ್ತಿ ಆವಶ್ಯಕ. ಲಿಂಗವ ಪೂಜಿಸಿ ತನು ಮಾತ್ರ ಭಕ್ತನೆನಿಸಬಹುದು. ಮನದಲ್ಲಿ ವಿಶುದ್ಧ ಪ್ರೇಮ ವಿಶಾಲ ಪ್ರೇಮವಿಲ್ಲದಿದ್ದರೆ ಮನ ಭಕ್ತವಾಗದು. ಅಂತಹ ಮನ ಅದೊಂದು ಭವಿ. ತನುಸೂತಕಕ್ಕಿಂತ ಮನಸೂತಕ ಹೆಚ್ಚು ಕೆಟ್ಟು. ತನು ಭಕ್ತವಾದಂತೆ ಮನ ಭಕ್ತವಾಗಬೇಕಾದರೆ ಮನಸೂತಕವಳಿಯಬೇಕಾ ದರೆ ಪವಿತ್ರಪ್ರೇಮ (ಭಕ್ತಿ) ಬೇಕೇ ಬೇಕು.

ಭಕ್ತಿಯಿಲ್ಲದೆ ಏನು ಮಾಡಿದರೂ ವ್ಯರ್ಥ. ಶೈತ್ಯವಿಲ್ಲದ ಚಂದ್ರ ಕಾಂತದಂತೆ, ಉಷ್ಣವಿಲ್ಲದ ಸೂರ್ಯಕಾಂತದಂತೆ ಭಕ್ತಿಯಿಲ್ಲದ ಕ್ರಿಯೆ-ಆರಾಧನೆಗಳು ನಿರರ್ಥ.

ಪರಿಶುದ್ಧ ಪ್ರೇಮವು ಮಾನವ ಜೀವನಕ್ಕೆ, ಮಾನವ ಧರ್ಮಚಾಲ ನಕ್ಕೆ ಆಧಾರ. ಕ್ರಿಯಾಪ್ರೇರಣೆಗೂ ಅದೇ ಆಧಾರ. ಶ್ರದ್ಧೆ ನಿಷ್ಠೆಗಳ ಉಸಿರು ಪರಿಶುದ್ಧ ಪ್ರೇಮ. ಅವಧಾನ ಅನುಭವ ಆನಂದಗಳ ತಾಯ್ಬೇರು ಪರಿಶುದ್ಧ ಪ್ರೇಮ. ಸಮರಸದ ಆಶ್ರಯವೂ ಅದೇ ಆಗಿದೆ.

ಪ್ರೇಮವಿಲ್ಲದ ಜೀವಿಯಿಲ್ಲ. ಆದರೆ ಪ್ರೇಮದ ಪ್ರಭಾವ, ವೈಭವ, ವಿಶುದ್ಧತೆ, ವಿಶಾಲತೆಗಳನ್ನು ತಿಳಿದವರು ಬಹಳಿಲ್ಲ. ಪ್ರೇಮ ಅಧೋಗತಿಗೂ ಅಭ್ಯುದಯ ಸ್ಥಿತಿಗೂ ಕಾರಣವಾಗಿದೆ. ಪ್ರಕೃತಿಯ ಶಿಶುವಾದ ಮಾನವನು ಪ್ರೇಮವನ್ನು ಪ್ರಾಕೃತಿಕವಾಗಿ ಬಳಸಿಕೊಂಡು ಅಶಿವಕ್ಕೆ ಪಕ್ಕಾಗುತ್ತಾನೆ; ಅಧೋಗತಿಗಿಳಿಯುತ್ತಾನೆ. ವಿಕೃತಿಯಲ್ಲಿ ಅಳಿಯುತ್ತಾನೆ. ಅದೇ ಪಾರಮಾರ್ಥಿಕದ ಶಿಶುವಾದವರು ಪರಿಶುದ್ಧವಾಗಿ ಅದನ್ನು ಬಳಸಿಕೊಂಡು ಬೆಳಸಿಕೊಂಡು ಅಭ್ಯುದಯ ಹಾಗು ಶ್ರೇಯಗಳನ್ನು ಪಡೆಯುತ್ತಾರೆ.

ನಲ್ಮೆ ಅದೊಂದು ಬಾಳಿನಲ್ಲಿ ಬತ್ತದ ಸೆಲೆ; ಬತ್ತದೆ ಚಿಮ್ಮುವ ಚಿಲುಮೆ. ಅದರಿಂದ ಹುಲುಸಾದ ಬೆಳೆ ತೆಗೆಯುವವರು ತೀರ ಕಡಿಮೆ. ಅನೇಕರು ಅರಿತಿಲ್ಲ ಅದರ ನೆಲೆ; ಅದರ ಕಲೆ.

ಮಾನವನು ಒಂದು ವೇಳೆ ಅವಿವೇಕಿಯಾಗಿ ಬಾಳಬಹುದು. ಅಪನಂಬಿಕೆಯುಳ್ಳವನಾಗಿ ಬಾಳುವುದು ಅತಿ ದುಸ್ತರ. ಶ್ವಾಸ ನಿಲ್ಲಿಸಿ ನಸು ಹೊತ್ತು ಬದುಕಬಹುದು. ಅವಿಶ್ವಾಸವುಳ್ಳವನಾಗಿ ಬದುಕುವುದು ಬಹು ದುರ್ಭರ. ಬಾಳಿಗೆ ನಂಬಿಕೆ ವಿಶ್ವಾಸ ಶ್ರದ್ಧೆ ನಿಷ್ಠೆಗಳು ಇದ್ದಾಗಬೇಕು. ಇವಕ್ಕೆ ಮೂಲ ಪರಿಶುದ್ಧ ಪ್ರೇಮ.

ಪ್ರೇಮ ಹಾರ್ದಿಕವಾದ ಒಂದು ಗುಣ. ಚಿತ್ತಗತವಾದ ಒಂದು ಧರ್ಮ. ಅದನ್ನು ತುಂಬುವ ಪಾತ್ರೆಗಳು ಎರಡುಂಟು: ಒಂದು ಪದಾರ್ಥ; ಇನ್ನೊಂದು ಪ್ರಸಾದ. ಪಾತ್ರಗಳೂ ಎರಡುಂಟು : ಒಂದು ದುರ್ಜನ ಪಾತ್ರ; ಇನ್ನೊಂದು ಸಜ್ಜನ ಪಾತ್ರ. ಪಡಿಪದಾರ್ಥದಲ್ಲಿರಿಸಿದ ಪ್ರೇಮ ಆಶೆಯೆನಿಸುತ್ತದೆ. ಸರಿಕರಲ್ಲಿರಿಸಿದ ಪ್ರೇಮ ಸ್ನೇಹವೆನಿಸುತ್ತದೆ. ಶಿಶುಗಳಲ್ಲಿರಿಸಿದ ಪ್ರೇಮ ಮಮತೆಯೆನಿಸುತ್ತದೆ. ಮಡದಿಯಲ್ಲಿರಿಸಿದರೆ ಮೋಹವೆನಿಸುತ್ತದೆ. ದುಷ್ಟರಲ್ಲಿಸಿದರೆ ದುಸ್ಸಂಗವೆನಿಸುತ್ತದೆ. ಅದೇ ಗುರುದೇವತೆಗಳಲ್ಲಿ ಆ ಗುರುದೇವತೆಗಳ ಪ್ರಸಾದದಲ್ಲಿ ಇರಿಸಿದ ಪ್ರೇಮ ಶ್ರದ್ಧೆ, ನಿಷ್ಠೆ, ನಂಬಿಕೆ, ಭಕ್ತಿ ಎಂದು ಮುಂತಾದ ನಲ್ಪೆಸರುಗಳನ್ನು ತಳೆಯುತ್ತದೆ. ಆ ಗುರು ದೇವತೆಗಳು ತಂತಮ್ಮ ಶಿಷ್ಯರಲ್ಲಿ ಅಥವಾ ಉಪಾಸಕರಲ್ಲಿ ಇರಿಸಿದ ಪ್ರೇಮಕ್ಕೆ ಕೃಪೆ, ಕರುಣೆ, ಅನುಗ್ರಹ, ಆಶೀರ್ವಾದ ಎಂಬ ಹೆಸರುಗಳು

ಬರುತ್ತವೆ. ಇದರಿಂದಾಗಿ ಇತರ ಸಾಧನೆಗಳಿಗಿಂತ, ಇತರ ಶಾಸ್ತ್ರಾಭ್ಯಾಸಕ್ಕಿಂತ ಭಕ್ತಿಸಾಧನೆ ಲೇಸು.

"ವೇದವೆಂಬುದು ಓದಿನ ಮಾತು. ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರ ಗೋಷ್ಠಿ. ತರ್ಕವೆಂಬುದು ತಗರ ಹೋರಟೆ. ಭಕ್ತಿ ಎಂಬುದು ತೋರಿ ಉಂಬ ಲಾಭ. ಗೊಹೇಶ್ವರನೆಂಬುದು ಮೀರಿದ ಘನ.

"ಮಣಿಯುನೆಣಿಸಿ ದಿನವ ಕಳೆಯಲು ಬೇಡ. ಕಣಿಯ ಪೂಜಿಸಿ ದಿನವ ಕಳೆಯಲು ಬೇಡ. ಕ್ಷಣವಾದರೂ ನಿಜದ ನೆನಹೇ ಸಾಕು. ಕ್ಷಣದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಬಿಸಿ-ನೀರೊಳಗುಂಟೇ ಗೊಹೇಶ್ವರಾ ?

"ಸುತ್ತಿ ಸುತ್ತಿ ಬಂದಡಿಲ್ಲ. ಲಕ್ಷಗಂಗೆಯ ಮಿಂದಡಿಲ್ಲ. ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ. ನಿತ್ಯನೇಮದಿಂದ ತನುವ ಕುಟ್ಟಿಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಗೆ ಅತ್ತಲಿತ್ತ ಹರಿವ ಮನವ ಚಿತ್ರದಲ್ಲಿ ನಿಲ್ಲಿಸಬಲ್ಲಡೆ, ಬಚ್ಚಬರಿಯ ಬೆಳಗು ಗೊಹೇಶ್ವರ ಲಿಂಗವು.

"ತನು ಬತ್ತಲೆಯಾದಡೇನು, ಮನ ಸುಖಿಯಾಗದನ್ನಕ್ಕರ ? ಮಂಡೆ ಬೋಳಾದಡೇನು, ಭಾವ ಬಯಲಾಗದನ್ನಕ್ಕರ ? ಭಸ್ಮವ ಹೂಸಿದಡೇನು, ಕರಣಾದಿಗಳ ಗುಣಂಗಳನು ಒತ್ತಿ ಮೆಟ್ಟಿ ಸುಡದನ್ನಕ್ಕರ ? ಇಂತೀ ಆಶೆಯ, ವೇಷದ, ಭಾಷೆಗೆ ನೀ ಸಾಕ್ಷಿಯಾಗಿ 'ಛೀ' ಎಂದು ಕಳೆಯುವೆನು ಗೊಹೇಶ್ವರಾ !

"ದೇಹಭಾವವಳಿದಲ್ಲದೆ ಜೀವಭಾವವಳಿಯದು. ಜೀವಭಾವಳಿದಲ್ಲದೆ ಭಕ್ತಿಭಾವವಳವಡದು. ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು. ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು. ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ ತಿಳಿಯಬಲ್ಲರೆ ಗೊಹೇಶ್ವರಲಿಂಗದರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ."

ಎಂದು ಪ್ರಭುಬೋಧೆ. ಭಕ್ತಿಭಾವವು ಅಂಕುರಿಸಬೇಕಾದರೆ ದೇಹ-ಜೀವ ಭಾವಗಳು ಅಳಿದಿರಬೇಕು. ಈ ಕಸವಿದ್ದರೆ ಭಕ್ತಿಸಸಿ ಬೆಳೆಯದು. ಇದು ಬೆಳೆಯದೆ ಅರಿವು ತಲೆದೋರದು ; ಕುರುಹು ತೋರದಂತಾಗದು.

ಕುರುಹಿನಲ್ಲಿ ಅಂದರೆ ರೂಹಿನಲ್ಲಿ ಮಾಯೆಯಿದೆ. ಮಾಟವಳಿದಲ್ಲಿ ಮಾಯೆ ಇರದು—ಎಂದು ಹೇಳುವಲ್ಲಿ ಭಕ್ತಿಯ ಸ್ಥಾನ ಮತ್ತು ಕಾರ್ಯಕ್ಷೇತ್ರ ಎಂತಹ ವೆಂಬುದು ಎಂತವರಿಗೂ ಅರಿಕೆಯಾಗುತ್ತದೆ.

"ಭಕ್ತಿಯುಕ್ತಿಯನಾರು ಬಲ್ಲರು ? ಬಲ್ಲವರನಾರನೂ ಕಾಣೆ. ತನ್ನ ಮರೆದು ಇದಿರ ಹರಿದು, ಇರಬಲ್ಲರೆ-ಆತ ಭಕ್ತ. ಆ ಶಿವಭಕ್ತಂಗೆ ಶಿವ ನೊಲಿವನು. ನುಡಿಯಲ್ಲಿ ಭಕ್ತಿಯನಾಡಿ ನಡೆಯಲ್ಲಿಲ್ಲದಿರ್ದಡೆ ಕಡೆಮುಟ್ಟ, ಶಿವನೊಲಿವುದು ಹುಸಿ. ಮರೆದು ಕೋಪದುರಿಯನುಗುಳಿ, ಅರಿದು ಬಂದೆರ ಗಿದೆನೆಂಬ ನುಡಿಗೆ ಒಲಿವನೇ ನಮ್ಮ ಗೊಹೇಶ್ವರಲಿಂಗ ?

"ಭವರಹಿತಂಗೆ ಭಕ್ತಿಯ ಮಾಡುವರು ನೀವು ಕೇಳಿರಣ್ಣಾ! ಭವಬಾಧೆ ಯೊಳಗೆ ನಿಲ್ಲದ ಅಭವಂಗೆ ಭಕ್ತಿಯ ಮಾಡುವ ಪರಿಯಿಂತು. ತಾನಭವ ನಾದಲ್ಲದೆ ಸಹಜ ಭಕ್ತಿಯ ಮಾಡಬಾರದು ಗೊಹೇಶ್ವರಾ!"

ಭಕ್ತ ಸಕೀಲ ಸಾಹಿತ್ಯ

ಭಕ್ತಾಂಗ, ಆಚಾರಲಿಂಗ. ಶ್ರದ್ಧಾಭಕ್ತಿ, ಕ್ರಿಯಾಶಕ್ತಿ. ಸುಚಿತ್ತ ಹಸ್ತ, ಸದ್ಯೋಜಾತರೂಪ ಘ್ರಾಣಮುಖ. ಗಂಧ ಪದಾರ್ಥ, ಸುಗಂಧ ಪ್ರಸಾದ. ನಿವೃತ್ತಿ ಕಲೆ. ಸದ್ರೂಪು ನೆಲೆ.

ಭಕ್ತಾಂಗ: ಭಕ್ತಿಯುಳ್ಳವ ಭಕ್ತ. ಆ ಭಕ್ತನೇ ಅಂಗ. ಅಂಗ ಅಂದರೆ ಉಪಾಸಕ. ಭಕ್ತಿಯಿಂದ ಭವದೋಷವನ್ನು ಕಳೆದುಕೊಂಡವ.

ಭಕ್ತಿ ಅಂದರೆ ಪವಿತ್ರ ಪ್ರೇಮ. ಪ್ರೇಮಮಯವಾದುದೀ ಪ್ರಪಂಚ. ಪ್ರೇಮವೊಂದಿಲ್ಲದಿದ್ದರೆ ಪ್ರಪಂಚ ಶೂನ್ಯವಾಗುತ್ತಿತ್ತು. ಪ್ರೇಮವೆಂಬ ಹೇಮದಿಂದ ಪೂರ್ಣವಾಗಿದೆ ; ಅರ್ಥಪೂರ್ಣವಾಗಿದೆ.

ಪ್ರೇಮವು ಪ್ರಾಪಂಚಿಕವಾದರೆ ರಕ್ತಿ ; ಪಾರಮಾರ್ಥಿಕವಾದರೆ ಭಕ್ತಿ. ಪ್ರೇಮವೆಂಬುದೊಂದು ಹೇಮವೆಂದು ಹೇಳಿದೆವು. ಅದು ಭಿನ್ನದೋಷಗಳಿಂದ ಸಂಪನ್ನವಾಗಬಾರದು. ತನ್ನದೇ ಆದ ಸ್ವರೂಪದಿಂದ ಶೋಭಿಸಬೇಕು. ಆಗ ಸು–ವರ್ಣತ್ವ ಸಿದ್ಧಿಸುತ್ತದೆ. ಅಪರಂಜಿಯೆನಿಸುತ್ತದೆ. ಅಂತೆಯೆ ತನ್ನ ಕಾಯ ಪ್ರಾಣ ಜೀವಗಳಲ್ಲಿರಿಸಿದ ಪ್ರೇಮ ಮಮತೆಯೆನಿಸುತ್ತದೆ. 'ಪೂಜ್ಯೇಷ್ವನುರಾಗೋ ಭಕ್ತಿ :' ಎಂದರು ನಾರದರು. 'ಶ್ರೀಗುರುವಿಗೆ ಶಿಷ್ಯನು ಪೊಡಮಟ್ಟು । ರಾಗಂ ಮಿಗೆ ಭಕ್ತಿಯೊಳಳವಟ್ಟು ।'

—ಪರಮಾರ್ಥ ಗೀತೆ.

ಇಹದ ಅಭ್ಯುದಯಕ್ಕೆ ಪರಸ್ಪರ ಸೌಹಾರ್ದ್ರತೆಗೆ ಹೇಗೆ ಮೈತ್ರಿ ಮುಖ್ಯವೋ ಹಾಗೆ ಪರದ ಸಮನ್ವಯಕ್ಕೆ ಸಮರಸಕ್ಕೆ ಭಕ್ತಿ ಮುಖ್ಯ. ಕರ್ಮ, ಯೋಗ, ಜ್ಞಾನಮಾರ್ಗಗಳಿಗಿಂತ ಭಕ್ತಿಮಾರ್ಗ ಸ್ವಾಭಾವಿಕ ; ಸೌಹಾರ್ದಿಕ.

ಜೀವನದಲ್ಲಿ ಮೊದಲು ಮೈದೋರುವುದು ಪ್ರೇಮ. ಬಳಿಕ ಪ್ರಕ್ರಿಯೆ, ಪ್ರಜ್ಞೆ ಮುಂತಾದವುಗಳು. ಅದೇ ಹುಟ್ಟಿದ ಎಳೆಕಂದ ಮೊದಲು ಮಾತ್ರ ಪ್ರೇಮವನ್ನು ವ್ಯಕ್ತಗೊಳಿಸುತ್ತದೆ. ಆಮೇಲೆ ಹಸಿವಿಗೆ ಬೇಕಾದ ಮೊಲೆ

ಹಾಲನ್ನು ಕುಡಿವ ಕ್ರಿಯೆಯನ್ನು ತೋರ್ಪಡಿಸುತ್ತದೆ. ಕುಡಿದ ಹಾಲಿನ ಮಧುರ ಜ್ಞಾನ ಆ ಬಳಿಕ ಉಂಟಾಗುತ್ತದೆ.

ನಾದ ವೇದಗಳಿಗಿಂತ ಭಕ್ತಿಪ್ರಿಯ ಆ ಪರಮಾತ್ಮ. ಭಕ್ತಿಕಂಪಿತ ಆ ಪರಮಾತ್ಮ. ಮಗುವಿನ ಬಾಳಿಗೆ ಹೇಗೆ ಮಾತೃಪ್ರೇಮ ಅಮೃತವಾಗಿದೆಯೋ ಅಂತೆಯೆ ಆಧ್ಯಾತ್ಮ ಶಿಶುವಿನ ಜೀವನಕ್ಕೆ ತಂದೆತಾಯಿ ಸ್ವರೂಪನಾದ ಆ ಪರಮಾತ್ಮನ ಅನುಗ್ರಹರೂಪಪ್ರೇಮ ಅತ್ಯಗತ್ಯ. ಅದನ್ನು ಪಡೆಯಬೇಕಾದರೆ ಮುಮುಕ್ಷು ಮೊದಲು ಭಕ್ತಿರೂಪ ಪವಿತ್ರ ಪ್ರೇಮವನ್ನೇ ಮಗು ಮಾತೆಯಲ್ಲಿ ತೋರುವಂತೆ ಆ ಪರಮಾತ್ಮನಲ್ಲಿ ತೋರಬೇಕು.

"ಮುನ್ನವೆ ಭಕ್ತಿಕ್ರಿಯೆಯಿಂ | ದಂನೆರೆ ಪರಿಶುದ್ಧಮಾದ ಬುದ್ಧಿಯನುಳ್ಳ ಸ | ಮುನ್ನತ ಸದ್ಗುಣಗಣ ಸಂ | ಪನ್ನರ್ಗೆ ನಿಜಸ್ವರೂಪಮಿದ ರೊಳ್ಸಾಧ್ಯಂ ||"

ಎಂದು ನಿಜಗುಣರು ತಮ್ಮ ಪರಮಾರ್ಥ ಗೀತೆಯಲ್ಲಿ ಪರಮಾರ್ಥವಾಗಿಯೇ ಭಕ್ತಿಕ್ರಿಯೆಗಳ ಸಮುನ್ನತಿಯನ್ನು ಪ್ರಾಮುಖ್ಯತೆಯನ್ನು ಸಾರಿದ್ದಾರೆ. ಸಾಧಕನಿಗೆ ಪ್ರಥಮ ಸಾಧನ ಭಕ್ತಿ, ಕ್ರಿಯಾಶಕ್ತಿ. ಇವೆರಡರಿಂದ ಪರಿಶುದ್ಧ ಬುದ್ಧಿ. ಇದರಿಂದ ಸಮುನ್ನತ ಸದ್ಗುಣಗಣ. ಇವುಗಳಿಂದ ನಿಜಸ್ವರೂಪ ಸಿದ್ಧಿ. ಇದನರಿತು ಬಸವಣ್ಣನವರು 'ಭಕ್ತಿರಸವ ದಣಿಯ ಮೇಯಿಸು' ಎಂದು ಪ್ರಾರ್ಥಿಸಿದಾರೆ. ಭಕ್ತಿರಸವನುಂಡರೆ ಕ್ರಿಯಾಶಕ್ತಿ ಮೈಗೂಡುತ್ತದೆ. ಅನಂತರ ಆಚಾರಲಿಂಗಾರಾಧನಾಸಕ್ತಿ ಕೈಗೂಡುತ್ತದೆ. ಸುಚಿತ್ತಹಸ್ತವೇ ಪರಿಶುದ್ಧ ಬುದ್ಧಿ. ಅದರ ನೆರವುಂಟಾಗುತ್ತದೆ. ಇವೆಲ್ಲವುಗಳಿಂದ ನಿವೃತ್ತಿಕಲೆ ತನ್ನಲ್ಲಿ ತೊಳಗುತ್ತದೆ. ಇಂತಾದಾಗ ಭಕ್ತಿಯೆನಿಸುತ್ತದೆ. ಈ ಭಕ್ತಿಯುಳ್ಳಾತನೇ ಭಕ್ತ. ಅವನೇ ಪರಿಶುದ್ಧ ಪ್ರಥಮೋಪಾಸಕ. ಸದ್ರೂಪಸಾಧನಸನ್ನದ್ಧ.

ನಿಜಸ್ವರೂಪ ಸಾಕ್ಷಾತ್ಕಾರದ ಪ್ರಥಮ ಸೂತ್ರ ಭಕ್ತಿ. ಅದನ್ನು ಸೂತ್ರಿಸುವಾತ ಭಕ್ತ. ಭಕ್ತಿಸೂತ್ರ ಆರೆಳೆಗಳಿಂದ ಕೂಡಿದೆ. ಅವುಗಳಲ್ಲಿ ಮೊದಲೆಳೆಯೇ ಶ್ರದ್ಧೆ.

ಶ್ರದ್ಧೆಯೆಂದರೆ ಶುದ್ಧ ಸ್ಪೃಹೆ. ಆ ಶುದ್ಧ ಸ್ಪೃಹೆ(ಪ್ರೇಮ) ವುಳ್ಳವನೇ ಶ್ರದ್ಧಾಳು. ಶ್ರದ್ಧಾಳುವೇ ಭಕ್ತ. ಭಕ್ತಿ ವೃಕ್ಷಕ್ಕೆ ಶ್ರದ್ಧೆಯೇ ಬೀಜ

ಪುರಾತನ ವಾಙ್ಮಯವಾದ ವೇದದಲ್ಲಿ ಶ್ರದ್ಧೆಯು ಮೆಯ್ವೆತ್ತಿದೆ. ಆ ವೈದಿಕ ಶ್ರದ್ಧೆ ಉಪನಿಷತ್ತುಗಳಲ್ಲಿ ಉಪಾಸನೆಯಾಗಿ ಉಪಯುಕ್ತವಾಗಿದೆ. ಆಗಮ ವಾಙ್ಮಯದಲ್ಲಿ ಭಕ್ತಿರೂಪವನ್ನು ತಳೆದಿದೆ. ಅಂತಃಕರಣದ ಆದರಕ್ಕೆ ಕರುಳಿನಕಾಂಕ್ಷೆಗೆ ಶ್ರದ್ಧೆಯೆಂದು ಶ್ರದ್ಧಾಭಕ್ತಿಯೆಂದು ಹೆಸರು. ಇದು ತ್ಯಾಗಾಂಗದ ಒಮ್ಮುಖವನ್ನು ಭಕ್ತನನ್ನಾಗಿಸುತ್ತದೆ, ಶ್ರದ್ಧೆಯು ಬೌದ್ಧಿಕ ಪಾಶವೀಯತೆಯನ್ನು ಪರಿಹರಿಸುತ್ತದೆ; ಅಪ್ರಬುದ್ಧತೆಯನ್ನು ದೂರೀಕರಿಸುತ್ತದೆ. ಶ್ರದ್ಧೆ ಸಿದ್ಧಿಗೊಂಡಾಗ ಜೀವನಬದ್ಧತೆ ಸಡಿಲುತ್ತದೆ. ವೈಷಯಿಕ ಚಿಂತನೆಯಿಂದ ವಿರಮಿಸುವಂತೆ ಮಾಡುತ್ತದೆ. ಸಾಂಸಾರಿಕ ಪಂಜರದಿಂದ ಬಿಡುಗಡೆ ಮಾಡಿಸುತ್ತದೆ. ಅಹಂಕಾರದ ಶೃಂಖಲೆಯನ್ನು ತಪ್ಪಿಸುತ್ತದೆ.

ಭಕ್ತಾಂಗವು ತ್ಯಾಗಾಂಗದ ಒಂದು ಶಾಖೆ; ಒಮ್ಮೈ. ತ್ಯಾಗಾಂಗದ ಮೂಲ ಏಕಸ್ಥಲ. ಅದು ಅದ್ವಿತೀಯ ವಸ್ತು. ಅದನ್ನು ಪರಶಿವ, ಪರಬ್ರಹ್ಮ, ಪರವಸ್ತು ಎಂಬುದಾಗಿ ಹೇಳುತ್ತೇವೆ. ಆ ಏಕಸ್ಥಲವೇ ತನ್ನ ಲೀಲಾವಿಲಾಸದಿಂದ ಸುಖಸ್ಫೂರ್ತಿಯಿಂದ ಅಂಗ-ಲಿಂಗವೆಂದು ದ್ವಿಸ್ಥಲವಾಯಿತು. ಅಂಗಸ್ಥಲವೇ ತ್ಯಾಗಾಂಗ-ಭೋಗಾಂಗ-ಯೋಗಾಂಗವೆಂದು ತ್ರಿಸ್ಥಲವಾಯಿತು. ಈ ಮೂರರಲ್ಲಿ ಕ್ರಮವಾಗಿ ಒಂದೊಂದರಲ್ಲಿ ಭಕ್ತ-ಮಹೇಶ, ಪ್ರಸಾದಿ-ಪ್ರಾಣಲಿಂಗಿ, ಶರಣ-ಐಕ್ಯ, ಹೀಗೆ ಎರಡೆರಡಾಗಿ ಒಟ್ಟಿಗೆ ಆರಂಗವೆನಿಸಿ ಚತುಃಸ್ಥಲವಾಯಿತು. ಈ ಆರು ಒಂದೊಂದರಲ್ಲಿ ಮತ್ತೆ ಮೂರು ಮೂರಾಗಿ ಒಟ್ಟಾಗಿ ಹದಿನೆಂಟಾಗಿ ಪಂಚಸ್ಥಲವಾಯಿತು. ಇದರ ವಿವರ: ಭಕ್ತಸ್ಥಲದಲ್ಲಿ ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ಎಂದು ಮೂಬಗೆ. ಮಾಹೇಶಸ್ಥಲದಲ್ಲಿ ಇಹವೀರ, ಪರವೀರ, ಸಹಜವೀರ; ಪ್ರಸಾದಿಸ್ಥಲದಲ್ಲಿ ಅರ್ಪಿತಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ; ಪ್ರಾಣಲಿಂಗಿಸ್ಥಲದಲ್ಲಿ ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ; ಶರಣಸ್ಥಲದಲ್ಲಿ ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ, ಭಾವಲಿಂಗಾರ್ಚಕ; ಐಕ್ಯಸ್ಥಲದಲ್ಲಿ ಕಾಯಲಿಂಗೈಕ್ಯ, ಜೀವಲಿಂಗೈಕ್ಯ, ಭಾವಲಿಂಗೈಕ್ಯ-ಎಂಬುದಾಗಿ ಪಂಚಸ್ಥಲದಲ್ಲಿ ೧೮ ಭೇದಗಳಾಗುತ್ತವೆ. ಮರಳಿ ಆ ಭಕ್ತಾದಿ ಷಟ್‌ಸ್ಥಲಗಳು ಒಂದೊಂದರಲ್ಲಿ ಕ್ರಮವಾಗಿ ೧೫, ೯, ೭, ೫, ೪, ೪ ಹೀಗೆ ಒಟ್ಟಾಗಿ ೪೪ ಭೇದಗಳಾಗಿ ಷಟ್‌ಸ್ಥಲವೆನಿಸುತ್ತದೆ.

ಪ್ರಸ್ತುತವಾಗಿ ಭಕ್ತಾಂಗದಲ್ಲಿ ನೈದೋರಿದ ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ ಸ್ಥಲತ್ರಯಗಳಲ್ಲಿ ಒಂದೊಂದು ಅಯ್ದು ಅಯ್ದಾಗಿ ೧೫ ಉಪ ಸ್ಥಲಗಳಾಗುತ್ತವೆ. ನಿದರ್ಶನವಾಗಿ ಪಿಂಡ, ಪಿಂಡಜ್ಞಾನ, ಸಂಸಾರಹೇಯ, ಗುರುಕಾರುಣ್ಯ, ಲಿಂಗಧಾರಣ ಈ:ಅಯ್ದು ಸ್ಥಲಗಳು ಗುರುಭಕ್ತನ ಭೇದ ಗಳು. ಭಸ್ಮಧಾರಣ, ರುದ್ರಾಕ್ಷಧಾರಣ, ಮಂತ್ರಜಪ, ಭಕ್ತಮಾರ್ಗಕ್ರಿಯಾ, ಉಭಯ ಈ ಆಯ್ದು ಲಿಂಗಭಕ್ತನ ಭೇದಗಳು. ತ್ರಿವಿಧಸಂಪತ್ತಿ, ಚತು ರ್ವಿಧಸಾರಾಯ (ಪ್ರಸಾದ ಸ್ವೀಕಾರ), ಸೋಪಾಧಿದಾನ, ನಿರುಪಾಧಿದಾನ, ಸಹಜದಾನ ಈ ಅಯ್ದು ಜಂಗಮಭಕ್ತನ ಭೇದಗಳು. ಗುರುಭಕ್ತ, ಲಿಂಗ ಭಕ್ತ, ಜಂಗಮಭಕ್ತ ಎಂದು ಭಕ್ತನಲ್ಲಿ ಮೊದಲು ಮೂರು ಬಗೆ! ಗುರು ಭಕ್ತನು ಗುರುವಿನಲ್ಲಿ ಪರಮಾರ್ಥವನ್ನು ಗಳಿಸುತ್ತಾನೆ. ಲಿಂಗದ ನೆರವಿನಲ್ಲಿ ಗಳಿಸಿದುದನ್ನು ಉಳಿಸುತ್ತಾನೆ. ಉಳಿಸಿದುದನ್ನು ಜಂಗಮಕ್ಕೆ ಸಲ್ಲಿಸುವ ಬಗೆಯಲ್ಲಿ ಬೆಳಸುತ್ತಾನೆ. ಗುರು–ಲಿಂಗ ಭಕ್ತಿಯಲ್ಲಿ ವ್ಯಕ್ತಿಜೀವನ ಸ್ಫುಟ ಗೊಳ್ಳುತ್ತದೆ. ಜಂಗಮಭಕ್ತಿಯಲ್ಲಿ ಸಾಮಾಜಿಕ ಜೀವನ ಸಾಗುತ್ತದೆ. ಬಳಿಕ ಭಕ್ತನು ಷಡ್ವಿಧನಾಗುತ್ತಾನೆ: ಆಚಾರಲಿಂಗಮೋಹೀ, ಆಚಾರಲಿಂಗ ಭಕ್ತ, ಆಚಾರಲಿಂಗಪೂಜಕ, ಆಚಾರಲಿಂಗವೀರ, ಆಚಾರಲಿಂಗಪ್ರಸಾದಿ, ಆಚಾರಲಿಂಗಪ್ರಾಣಿ—ಎಂಬುದಾಗಿ! ಶಿವಾಚಾರಕ್ಕೆ ವಿರೋಧಿಗಳಾದ ತನ್ನ ಸತಿಸುತಾದಿಗಳನ್ನು ಬಿಟ್ಟು ಸ್ವಾಚಾರದಲ್ಲಿ ಮೋಹವುಳ್ಳವನೇ ಆಚಾರಲಿಂಗ ಮೋಹಿ. ಪೂರ್ವಾಚಾರಗಳನ್ನು ಬಿಟ್ಟು ಶಿವಾಚಾರಗಳನ್ನು ತೊಟ್ಟವನೇ ಆಚಾರಭಕ್ತ. ಅನ್ಯಲಿಂಗಗಳ ಪೂಜೆಯನ್ನು ಪರಿಹರಿಸಿ ತನ್ನ ಲಿಂಗ ಪೂಜೆಯಲ್ಲಿ ನಿರತನಾದವನೇ ಆಚಾರಪೂಜಕ. ಪ್ರಾಣದ ಮೇಲೆ ಗಂಡಾಂತರ ಬಂದರೂ ತನ್ನ ಆಚಾರವನ್ನು ಬಿಡದೆ ನಡೆಯಿಸುವವನೆ ಆಚಾರವೀರ. ಶುಚಿ ಅಶುಚಿ, ಗ್ರಾಹ್ಯ ಅಗ್ರಾಹ್ಯ ಇತ್ಯಾದಿ ಸಂದೇಹವಿಲ್ಲದಾತನೆ ಆಚಾರ ಪ್ರಸಾದಿ. ಆಚಾರನಿಂದೆಯ ಕೇಳದೆ ತಾಳದೆ ಇರುವಾತನೇ ಆಚಾರಪ್ರಾಣಿ.

ಭಕ್ತನಿಗೆ ಪೃಥ್ವಿ ಭೂತಾಂಗ. ಗುದಸ್ಥಾನ. ಆಧಾರಚಕ್ರ. ಪೀತ ವರ್ಣ. ಚತುಷ್ಕೋಣ. ವ. ಶ. ಷ. ಸ. ಅಕ್ಷರಗಳು. ಪೂರ್ವದಿಕ್ಕು. ಸುಚಿತ್ತ ಹಸ್ತ. ಗಂಧಪದಾರ್ಥ. ಶ್ರದ್ಧಾಭಕ್ತಿ. ಬ್ರಹ್ಮಪೂಜಾರಿ. ಜೀವಾತ್ಮ.

ಅಂಗನು ಆಚಾರಲಿಂಗದಲ್ಲಿ ಶ್ರದ್ಧೆಯುಳ್ಳವನಾಗಿ ಭಕ್ತ. ಆಚಾರಲಿಂಗದ ಗುರುಲಿಂಗದಲ್ಲಿ ನಿಷ್ಠೆಯುಳ್ಳವನಾಗಿ ಭಕ್ತನ ಮಹೇಶ. ಆಚಾರಲಿಂಗದ ಶಿವಲಿಂಗದಲ್ಲಿ ಅವಧಾನವುಳ್ಳವನಾಗಿ ಭಕ್ತನ ಪ್ರಸಾದಿ. ಆಚಾರಲಿಂಗದ ಜಂಗಮಲಿಂಗದಲ್ಲಿ ಅನುಭವವುಳ್ಳವನಾಗಿ ಭಕ್ತನ ಪ್ರಾಣಲಿಂಗಿ. ಆಚಾರಲಿಂಗದ ಪ್ರಸಾದಲಿಂಗದಲ್ಲಿ ಆನಂದವುಳ್ಳವನಾಗಿ ಭಕ್ತನ ಶರಣ. ಆಚಾರಲಿಂಗದ ಮಹಾಲಿಂಗದಲ್ಲಿ ಸಮರಸವುಳ್ಳವನಾಗಿ ಭಕ್ತನಐಕ್ಯ-ಎಂಬುದಾಗಿ ಭಕ್ತನು ಷಡ್ವಿಧನಾಗುತ್ತಾನೆ.

ಆಚಾರ ಲಿಂಗ : ನಾಸಿಕಾವಚ್ಛಿನ್ನ ಚೈತನ್ಯವೆ ಆಚಾರಲಿಂಗ. ಅಂದರೆ ಮೂಗಿನೊಳಗಿರುವ ಚೇತನಕಳೆಯೇ ಅಂದರೆ ಮೂಸಬಲ್ಲ ಉಸಿರಾಡಬಲ್ಲ ಶಕ್ತಿಯೇ ಆಚಾರಲಿಂಗ. ಇದು 'ನ' ಕಾರಮಂತ್ರಮೂರ್ತಿಯಾಗಿರುತ್ತದೆ. ಆಚಾರಲಿಂಗಕ್ಕೆ ಕರ್ಮಸಾದಾಖ್ಯ. ಪರಸಂಜ್ಞೆ. ಭ್ರಮರನಾದ. ತಾರಕಾಕೃತಿ. ನಕಾರಪ್ರಣವ. ಋಗ್ವೇದ. ಘ್ರಾಣಮುಖ. ಸುಗಂಧ ಪ್ರಸಾದ. ಕ್ರಿಯಾಶಕ್ತಿ. ನಿವೃತ್ತಿಕಲೆ. ಸತ್‌ಲಕ್ಷಣ.

ಆ ಅದ್ವಯ ಪರಶಿವವಸ್ತುವೇ ದ್ವಿತೀಯ ಸ್ಥಲದಲ್ಲಿ ಲಿಂಗಸ್ಥಲವಾಗುತ್ತದೆ. ತೃತೀಯಸ್ಥಲದಲ್ಲಿ ಆ ಲಿಂಗವೇ ಇಷ್ಟ, ಪ್ರಾಣ, ಭಾವ-ಲಿಂಗಗಳಾಗುತ್ತದೆ. ಚತುರ್ಥ ಸ್ಥಲದಲ್ಲಿ ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹಾ-ಲಿಂಗಗಳಾಗುತ್ತದೆ. ಪಂಚಮಸ್ಥಲದಲ್ಲಿ ಆಚಾರಾದಿ ಲಿಂಗಗಳು ಒಂದೊಂದು ಮೂರಾಗುತ್ತವೆ. ನಿದರ್ಶನಕ್ಕಾಗಿ, ಆಚಾರಲಿಂಗದಲ್ಲಿ-ಸದಾಚಾರಲಿಂಗ, ನಿಯತಾಚಾರಲಿಂಗ, ಗಣಾಚಾರಲಿಂಗ; ಗುರುಲಿಂಗದಲ್ಲಿ-ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ; ಶಿವಲಿಂಗದಲ್ಲಿ-ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ; ಜಂಗಮಲಿಂಗದಲ್ಲಿ-ಸ್ವಯ, ಚರ, ಪರ ; ಪ್ರಸಾದಲಿಂಗದಲ್ಲಿ-ಶುದ್ಧ, ಸಿದ್ಧ, ಪ್ರಸಿದ್ಧ ; ಮಹಾಲಿಂಗದಲ್ಲಿ-ಪಿಂಡಜಲಿಂಗ, ಅಂಡಜಲಿಂಗ, ಬಿಂದ್ವಜಲಿಂಗ-ಎಂಬುದಾಗಿ ಹದಿನೆಂಟು ಲಿಂಗಗಳಾಗುತ್ತವೆ. ಮರಳಿ ಆಚಾರಾದಿ ಲಿಂಗಗಳು ಒಂದೊಂದು ಕ್ರಮವಾಗಿ ೯, ೯, ೯, ೯, ೧೨, ೯ ಹೀಗೆ ೫೭ ಸ್ಥಲಗಳಾಗುತ್ತವೆ. ಷಟ್‌ಸ್ಥಲವೆನಿಸುತ್ತದೆ.

ಪ್ರಸ್ತುತದಲ್ಲಿ ಆಚಾರಲಿಂಗದಲ್ಲಿರುವ ಸದಾಚಾರಲಿಂಗವು ದೀಕ್ಷಾ, ಶಿಕ್ಷಾ, ಜ್ಞಾನವೆಂಬುದಾಗಿಯೂ, ನಿಯತಾಚಾರಲಿಂಗವು ಕ್ರಿಯಾ, ಭಾವ,

ಜ್ಞಾನವೆಂಬುದಾಗಿಯೂ, ಗಣಾಚಾರಲಿಂಗವು ಸ್ವಯ, ಚರ, ಪರವೆಂಬುದಾಗಿ ವಿಂಗಡವಾಗಿ ನವವಿಧವಾಗಿ ಆಚಾರಲಿಂಗಸ್ಥಲ ಸಂಪೂರ್ಣಗೊಳ್ಳುತ್ತದೆ.

ವಿಂಗಡಣೆ–ಸಂಗಡಣೆ

ಆಚಾರಲಿಂಗವು ಘ್ರಾಣ, ಆಧಾರ, ಗುದ ಈ ಮೂರಂಗಗಳಲ್ಲಿ ಧಾರಣವಾಗಿರುತ್ತದೆ. ಒಂದು ಜ್ಞಾನೇಂದ್ರಿಯ, ಇನ್ನೊಂದು ಅಂತರ್ನಿಲಯ; ಮತ್ತೊಂದು ಕರ್ಮೇಂದ್ರಿಯ. ಪೃಥ್ವ್ಯಂಗ ಜನ್ಯ ಗಂಧ ಗ್ರಾಹಕ ಚೈತನ್ಯವೇ ಘ್ರಾಣ. ಗೃಹೀತಗಂಧಧಾರಕ ಚೈತನ್ಯವೇ ಆಧಾರ. ಧಾರಿತಗಂಧ ವಿಸರ್ಜನ ಚೈತನ್ಯವೇ ಗುದ. ಇದರಿಂದಾಗಿ ಗಂಧವು ಘ್ರಾಣದಲ್ಲಿ ಉತ್ಪತ್ತಿಯಾಗಿ ಆಧಾರದಲ್ಲಿ ಸ್ಥಿತಿಗೊಂಡು ತ್ಯಾಜ್ಯಾಂಶವು ಗುದದಿಂದ ತ್ಯಜಿಸಲ್ಪಡುತ್ತದೆ. ಈ ತ್ರಿವಿಧಕಾರ್ಯವು ಆಚಾರಲಿಂಗದ ಕ್ರಿಯಾಶಕ್ತಿಯಿಂದ ನಡೆಯುತ್ತದೆ. ಘ್ರಾಣದಲ್ಲಿರುವುದು ಸದಾಚಾರಲಿಂಗ. ಆಧಾರದಲ್ಲಿರುವುದು ನಿಯತಾಚಾರಲಿಂಗ. ಗುದದಲ್ಲಿರುವುದು ಗಣಾಚಾರಲಿಂಗ.

ಗಂಧವು ದೃಕ್ಕ್ರಿಯಾನುಭವರೂಪದಲ್ಲಿ ಉಪಭುಕ್ತವಾಗುತ್ತದೆ. ಈ ಧರ್ಮವನ್ನು ಅನುಸರಿಸಿ ಆಚಾರಲಿಂಗ ಮರಳಿ ಒಂಬತ್ತು ಬಗೆಯಾಗುತ್ತದೆ. ದೃಗ್ರೂಪದಲ್ಲಿ ತ್ರಿವಿಧ, ಕ್ರಿಯಾರೂಪದಲ್ಲಿ ತ್ರಿವಿಧ, ಅನುಭವರೂಪದಲ್ಲಿ ತ್ರಿವಿಧ. ಅರುವಿನರೂಪದಲ್ಲಿ ಉಂಟಾದುದಕ್ಕೆ ಗುರುತ್ವಪ್ರಾಪ್ತಿ. ಕ್ರಿಯಾರೂಪದಲ್ಲಿ ಉಂಟಾದುದಕ್ಕೆ ಲಿಂಗತ್ವಪ್ರಾಪ್ತಿ. ಅನುಭವರೂಪದಲ್ಲಿ ಒದಗುವದಕ್ಕೆ ಜಂಗಮತ್ವ ಪ್ರಾಪ್ತಿ. ಘ್ರಾಣಗತ ಸದಾಚಾರಲಿಂಗದಾಶ್ರಯದಲ್ಲಿ ಗಂಧದ ಜ್ಞಾನ, ಸುಜ್ಞಾನ, ಪ್ರಜ್ಞಾನಗಳುಂಟಾಗುವುದರಿಂದ ಇವು ಕ್ರಮವಾಗಿ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ರೂಪವನ್ನು ತಳೆಯುತ್ತವೆ. ಆಧಾರಗತ ನಿಯತಾಚಾರ ಲಿಂಗದಾಶ್ರಯದಲ್ಲಿ ಕ್ರಿಯೆ, ಸತ್ಕ್ರಿಯೆ ಪ್ರಕ್ರಿಯೆಗಳುಂಟಾಗುವುದರಿಂದ ಇವು ಕ್ರಮವಾಗಿ ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗವೆನಿಸುತ್ತವೆ. ಗುದಗತ ಗಣಾಚಾರಲಿಂಗದಾಶ್ರಯದಲ್ಲಿ ಅನುಭವ ಸ್ವಾನುಭವ ಮಹಾನುಭವಗಳುಂಟಾಗುವುದರಿಂದ ಇವು ಕ್ರಮವಾಗಿ ಸ್ವಯಜಂಗಮ, ಚರಜಂಗಮ, ಪರಜಂಗಮ–ಲಿಂಗವೆನಿಸುತ್ತವೆ. ಮೊದಲು

ಅರಿವಿಕೆಯ ಗುಣದಿಂದ ಗುರುವೆನಿಸಿ ಬಳಿಕ ಇರುವಿಕೆಯ ಗುಣದಿಂದ ಲಿಂಗವೆನಿಸಿ, ಕೊನೆಗೆ ಹೊರಡುವಿಕೆಯ ಗುಣದಿಂದ ಜಂಗಮವೆನಿಸಿ ಇರುವುದೊಂದೇ ಚೈತನ್ಯವು. ಅದು ಸ್ಥಲಭೇದದಿಂದ ಗುಣಧರ್ಮಭೇದದಿಂದ ಬೇರೆ ಬೇರೆ ಹೆಸರನ್ನು ತಳೆದಿದೆ. ತಳೆದರೂ ವಸ್ತುವೊಂದೆ.

ಈಗ ಹೇಳಿದ ಈ ಕಾರಣಗಳಿಂದ ಒಂದೇ ಆಚಾರಲಿಂಗವು ಒಂಬತ್ತು ಬಗೆಯಾಗಬೇಕಾಯಿತು. ಒಂದನ್ನೇ ಒಂಬತ್ತಾಗಿ ತೋರಿಸಿರುವುದು ಆ ಆ ಗುಣಧರ್ಮ ವಿಶೇಷಗಳನ್ನು ತಿಳಿಯಲು ಅಥವಾ ತಿಳಿಸಲು ಮಾತ್ರವೆಂದ ಮನನಿಸಬೇಕು.

ಇನ್ನು ಅಹಂಕಾರವು. ಅವನಿಯಲ್ಲಿ ಆಕಾಶದಂಶವು ಸಂಗಡಿಸಿ ಅಹಂಕಾರವಾಗಿದೆ. ಆದುದರಿಂದ ಪೃಥ್ವ್ಯಂಗನಾದ ಭಕ್ತನಿಗೆ ಅಹಂಕಾರದ ಸಂಗಡಣೆ ಮತ್ತು ಅದನ್ನು ವಿಂಗಡಿಸಿ ನಿರಹಂಕಾರಿಯಾಗುವ ಅವಶ್ಯಕತೆಯಿದೆ.

ಹುಟ್ಟಿನಾಗಲೇ ವಿಂಗಡಣೆ ಸಿದ್ಧವಾಗಿರುವಂತೆ ಹುಟ್ಟಿದಲ್ಲಿಗೆ ಸಂಗಡಣೆಯೂ ಸಿದ್ಧವಾಗಿರುತ್ತದೆ. ಆದರೆ ಆ ಸಂಗಡಣೆ (ಐಕ್ಯತೆ)ಯ ಹಾದಿ ಹೊಲಸೇ ಹಸನೇ ಎಂಬುದು ವಿಚಾರಣೀಯ; ಹೊಲಸಾಗಿರುವುದು ಲೌಕಿಕ ನಿಯಮ. ಅದನ್ನು ಹಸನಾಗಿಸಿ ಅದರಲ್ಲಿ ಅಡೆತಡೆಯಿಲ್ಲದೆ ಅಬಾಧವಾಗಿ ಸಾಗುವಂತೆ ಮಾಡುವುದೇ ಭಕ್ತಾದಿ ಆರುಸ್ಥಲಗಳ ಒಳ್ಗೆಲಸ. ವಿಂಗಡಿಕೆ ಸಂಗಡಿಕೆಗಳ ನಡುವಿನ ಜೀವನರಂಗವನ್ನು ಹಸನಾಗಿಸಿ ಸುಪ್ತಾಂತಃಕರಣಗಳನ್ನು ಎಚ್ಚರಿಸಿ ಏಳ್ಗೆಗಾಗಿ ಏಕತೆಗಾಗಿ ಪ್ರೇರೇಪಿಸುವುದೇ ಭಕ್ತತ್ವಾದಿಗಳ ಪಾವನೋದ್ದೇಶ. ಧರ್ಮಮಾರ್ಗದಲ್ಲಿ ದುಡಿದು ಶೈವಾನುಭಾವವನ್ನು ಪಡೆದು ದಿವ್ಯಸುಖದಲ್ಲಿ ತಲ್ಲೀನಗೊಳ್ಳೆಂದು ಹೇಳುವುದೇ ಅದರ ಸತ್ಯ ಸಂದೇಶ.

ಅಂಗವು ಗುರುಸೃಷ್ಟಿ !

ಜೀವ ಬ್ರಹ್ಮಸೃಷ್ಟಿ, ಅಂಗ ಗುರುಸೃಷ್ಟಿ, ಜೀವ ಕೋಶಗತ ಶಬ್ದವಿದ್ದಂತೆ! ಅಂಗ ಕಾವ್ಯಗತ ಶಬ್ದವಿದ್ದಂತೆ! ಬ್ರಹ್ಮಸೃಷ್ಟಿಯಲ್ಲಿ ದೋಷವಿದ್ದಂತೆ ಕವಿಯ ಸೃಷ್ಟಿಯಲ್ಲಿಯೂ ದೋಷವಿದೆ. ಕವಿಯ ಸೃಷ್ಟಿ ಕಾವ್ಯ. ಕಾವ್ಯ ಜಡ, ಜೀವ ಜಂಜಡ, ಗುರುವಿನ ಸೃಷ್ಟಿಯಾದ ಅಂಗದಲ್ಲಿ ಜಡವಿಲ್ಲ. ಜಂಜಡವಿಲ್ಲಃ ಕವಿ ಕುಶಲತೆಯಿಂದ ಸಾಮಾನ್ಯಶಬ್ದಕ್ಕೆ ವಿಶೇಷ ರಸಭಾವಗಳನ್ನು ತುಂಬುವಂತೆ ಗುರು ಜೀವನಲ್ಲಿ ಶಿವಭಾವ ಶಿವರಸಗಳನ್ನು ತುಂಬುತ್ತಾನೆ. ಕವಿ ಪ್ರಯೋಗಿಸಿದ ನುಡಿ ಕಾವ್ಯವೆನಿಸುತ್ತದೆ. ಗುರು ಕರುಣಿಸಿದ ಜೀವ ಅಂಗನೆನಿಸುತ್ತಾನೆ. ಸಾಂಪ್ರದಾಯಿಕಾರ್ಥವುಳ್ಳ ಶಬ್ದಕ್ಕೆ ನವ್ಯಧ್ವನಿಯನ್ನು ನವ್ಯರಸಭಾವಗಳನ್ನು ತುಂಬುವುದು ಕವಿ ಕಾರ್ಯವಾದರೆ ಪ್ರಾಕೃತಿಕ ಜೀವನಿಗೆ ದಿವ್ಯಧರ್ಮ-ದಿವ್ಯನಾದ ಬಿಂದುಕಳಾತ್ಮಕ ಚೈತನ್ಯಗಳನ್ನು ತುಂಬಿ ತರುವುದೇ ಗುರುಕಾರ್ಯ!

ಹಸಗೆಟ್ಟ ಬಾಳ ಬಟ್ಟೆಯನ್ನು ಹಸನಗೊಳಿಸುತ್ತಾನೆ ಗುರು. ಹಸನಾದ ಆ ಹೊಸ ಹೆದ್ದಾರಿಯಲ್ಲಿ ಹೆಜ್ಜೆ ಹಾಕಿಸುತ್ತಾನೆ ಗುರು. ಜೀವನಿಗುಂಟಾದ ಭವದ ಉನ್ಮಾದ ಉದ್ವೇಗಗಳನ್ನು ಉಡುಗಿಸುತ್ತಾನೆ. ಕ್ರಮವಾಗಿ ಜೀವನ ಅಸತ್ತನ್ನು ಅಚಿತ್ತನ್ನು ಅಸುಖವನ್ನು ಅಡಗಿಸುತ್ತಾನೆ.

ಸತ್ ಚಿತ್ ಆನಂದಗಳಿಗೆ ದೂರಾಗುವುದೆ ಜೀವತ್ವ. ಸತ್ ಚಿತ್ ಆನಂದಗಳಿಗೆ ಸುಮ್ಮುಖವಾಗುವುದೇ ಅಂಗತ್ವ. ಸತ್ ಚಿತ್ ಆನಂದ ಸ್ವರೂಪವಾಗುವುದೆ ಲಿಂಗತ್ವ ಅಥವಾ ಶಿವತ್ವ.

ಜೀವತ್ವದಲ್ಲಿರುವುದು ವಾಸ್ತವತೆಗೆ ಬಹುದೂರ. ಬಾಹಿರ, ಅಲ್ಲದೆ ಆ ಬಾಳಿಗೆ ಆದಾವ ಮೌಲ್ಯವಿರುವುದಿಲ್ಲ, ಸೌಖ್ಯವಿರುವುದಿಲ್ಲ; ಮಾನವತೆ ಮೊದಲೇ ಇರುವುದಿಲ್ಲ. ಜೀವನದಲ್ಲಿ ವಾಸ್ತವತೆ, ಮೌಲ್ಯ, ಸೌಖ್ಯ, ಮಾನವತೆಗಳನ್ನು ಅಳವಡಿಸುವುದೇ ಶ್ರೀಗುರುವಿನ ಸಂಸೃಷ್ಟಿ.

ಸತ್ತ್ವ ಚಿತ್ತ್ವ ಆನಂದತ್ವಗಳನ್ನು ಅಳವಡಿಸಿಕೊಂಡವನೇ ಶ್ರೀ ಗುರು. ತಾನು ಅಳವಡಿಸಿಕೊಂಡುದನ್ನು ತನ್ನ ಸನ್ನಿಧಿಗೆ ಬಂದು ಶಿಷ್ಯ ರಾದವರಿಗೆ ಅನುಗ್ರಹಿಸುವುದೆ ಗುರುತ್ವ ಧರ್ಮ.

ಮಾನವ ಜೀವನದ ವಾಸ್ತವತೆಯನ್ನು ಧರ್ಮಾಚಾರಗಳಿಂದ ಗುರು ಶಿಷ್ಯನಿಗೆ ಅರುಹುತ್ತಾನೆ. ಮೌಲ್ಯತೆ ಸೌಖ್ಯತೆ ಮಾನವತೆಗಳನ್ನು ಸತ್ತ್ವ ಚಿತ್ತ್ವಗಳಿಂದ ಮೈಗೂಡಿಸಲು ಪ್ರಯತ್ನಿಸುತ್ತಾನೆ. ಈ ಪ್ರಯತ್ನದಲ್ಲಿ ಸಚ್ಚಿತ್ತುಗಳಿಗೆ ಸಾಕಾರರೂಪನ್ನು ಕೊಡುತ್ತಾನೆ. ಇಷ್ಟ ಪ್ರಾಣಲಿಂಗ ರೂಪಾಗಿಸುತ್ತಾನೆ. ಪಡಿಮೂಡಿಸುತ್ತಾನೆ. ಕವಿ ತನ್ನ ಭಾವವನ್ನು ಭಾಷೆ ಯಲ್ಲಿ ಕೊಡುವಂತೆ ಗುರು ತನ್ನ ಮತ್ತು ಶಿಷ್ಯನ ಮೂಲಧರ್ಮವನ್ನು ಮೂಲಕಳೆಯನ್ನು ಮೂಲನಾದವನ್ನು ಮೂಲಜ್ಞಾನವನ್ನು ಮೂಲಸ್ವರೂಪ ವನ್ನು ಲಿಂಗರೂಪದಲ್ಲಿ ಕರುಣಿಸುತ್ತಾನೆ. ಇದರಿಂದ ಶಿಷ್ಯನು ಹೊಸದೊಂದು ಬಾಳಿಗೆ ಬರುತಾನೆ. ಹೊಸ ಭಾವದಿಂದ ಪ್ರಚೋದಿತನಾಗುತ್ತಾನೆ. ಹೊಸ ರಸಾಂಕುರವಾಗುತ್ತದೆ. ಇದನ್ನೇ ಗುರು ಸೃಷ್ಟಿಯೆಂದು ಸಂಸೃಷ್ಟಿಯೆಂದು ಕರೆಯುತ್ತೇವೆ. ಈ ಸಂಸೃಷ್ಟಿಗೊಳಗಾದಾತನೇ ಅಂಗನೆನಿಸುತ್ತಾನೆ.

ತನ್ನನ್ನು ತಾನರಿವುದೇ ಅಂಗನ ಅಚ್ಚು ಮೆಚ್ಚಿನಕೆಲಸ. ಅದನ್ನು ಪ್ರಪಂಚಜ್ಞಾನವೆಂಬ ಬಳಸುದಾರಿಯಲ್ಲಿ ಅರಿದು ಗಳಿಸಲು ಹೊರಡುತ್ತಾನೆ. ಇದು ಬಾಳಿನಲ್ಲಿ ಹೆಚ್ಚು ಹಿರಿದಾದ ಪೊರಪಾಟು. ಇದನ್ನು ಗುರು ಬಿಡಿಸಿ ಹತ್ತಿರದ ಹಾದಿಯಲ್ಲಿ ಅಂದರೆ ತನ್ನಲ್ಲಿ ತೋರುತ್ತಾನೆ. ಇದುವೇ ಗುರು ಕರುಣಿಸುವ ಸಂಸ್ಕಾರ. ಇದುವೇ ಗುರುವಿನ ದಿವ್ಯಕಲೆ.

ಗುರುಕೃಪೆಯಿಲ್ಲದ ಜೀವನು ಜಗತ್ತನ್ನು ಆಧರಿಸಿ ಹೊರಟಿದ್ದಾನೆ. ಅದೇ ಗುರುಕೃಪೆಯು ಪಡೆದ ಅಂಗನು ಜಗದೀಶನನ್ನು ಆಧರಿಸಿ ಹೊರಡು ತ್ತಾನೆ. ಅಂಗ ಎಂಬೀ ಶಬ್ದದಲ್ಲಿಯೇ ಆ ಸುಂದರವಾದ ಭಾವಪೂರ್ಣವಾದ ಅರ್ಥವಿದೆ. ಅಂ–ಪರಬ್ರಹ್ಮನನ್ನು ಕುರಿತು, ಗಚ್ಛತೀತಿ – ಹೋಗುತ್ತಾ ನೆಂದು ಅಂಗವೆಂಬ ಅನ್ವರ್ಥಕ ನಾಮವನ್ನು ಗುರುವಿನಿಂದ ಪಡೆಯುತ್ತಾನೆ. ಶಿಕ್ಷಕನ ಕೃಪೆಗೆ ಸಂದ ಹುಡುಗನು ವಿದ್ಯಾರ್ಥಿಯೆನಿಸುವಂತೆ ಶ್ರೀಗುರು

ಕೃಪೆಗೆ ಸಂದ ಶಿಷ್ಯನು ಅಂಗನೆನಿಸುತ್ತಾನೆ; ಶಿವಾರ್ಥಿಯಾಗುತ್ತಾನೆ. ಶ್ರೀ ಗುರು ಚರಣದಲ್ಲಿ ಶರಣು ಹೊಕ್ಕು ಶರಣಾರ್ಥಿಯಾಗುತ್ತಾನೆ. ಶಿವನು ಜೀವ–ಜಗತ್ತುಗಳನ್ನು ಏರ್ಪಡಿಸುತ್ತಾನೆ. ಶ್ರೀಗುರು ಈ ಜೀವಜಗತ್ತು ಗಳನ್ನು ದೇವ–ದೇವಲೋಕಗಳನ್ನಾಗಿ ಮಾರ್ಪಡಿಸುತ್ತಾನೆ. ಅಂತೆಯೇ ಇದು ಸಂಸೃಷ್ಟಿ. ಶ್ರೀಗುರು ಜೀವನ ವಿಕೃತಿಯನ್ನು ವಿಲಯಿಸಿ ಸುಕೃತಿ ದತ್ತಿಯಿಂದ ಪ್ರಕೃತಿಯನ್ನು ಪರಮಾರ್ಥಕೃತಿಯನ್ನಾಗಿಸುತ್ತಾನೆ. ಇದುವೇ ಗುರುವಿನ ಸಂಸೃಜನದ ಸಂಸ್ಕೃತಿ; ಸಮ್ಯಜ್ಮಹತಿ.

ಶಿವನು ಜೀವನನ್ನು ಸೃಷ್ಟಿಸಿ ಭವದ ಬಂಧನಕ್ಕೆ ತಳ್ಳಿದ; ಭವಿಯಾದು ದನ್ನು ಕಂಡು ಮುನಿಸಿದ. ಶ್ರೀಗುರು ಭವದ ಬಂಧನದಲ್ಲಿರುವ ಜೀವನನ್ನು ಬಿಡಿಸಿದ; ಕರುಣಿಸಿದ. ಈ ಅರ್ಥದಲ್ಲಿಯೇ ಏನೋ 'ಹರ ಮುನಿದರೆ ಗುರು ಕಾಯ್ವ; ಗುರು ಮುನಿದರೆ ಹಾರ ಕಾಯು.' ಎಂಬ ನಾಣ್ಣುಡಿ ನಾಡಿಗರ ಬಾಯಲ್ಲಿ ಮನೆಮಾಡಿ ಕೊಂಡಿರುವುದು. ಗುರು ಕೃಪೆಯಿಲ್ಲದಿದ್ದರೆ ಅಂದರೆ ಗುರು ಸಂಸ್ಕಾರ ಸೃಷ್ಟಿಗೊಳಗಾಗದಿದ್ದರೆ ಜೀವನಿಗಿಲ್ಲ ಮುಕ್ತಿ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ!'

ಜೀವನದಲ್ಲಿ ಅರಿಷಡ್ವರ್ಗಗಳ ಹೋರಾಟ ದುಷ್ಟ ಶಕ್ತಿಗಳ ಕಚ್ಚಾಟ ಮಿತಿಮೀರಿದಾಗ ಮನಕ್ಕೆ ಸಾಕೆನಿಸಿದಾಗ ಶಾಂತಿ ಸಮಾಧಾನಗಳು ಬೇಕೆನಿಸಿ ದಾಗ ಶ್ರೀಗುರುವಿನ ಸಂಸ್ಕಾರರೂಪ ಸಂಸೃಷ್ಟಿಕಾರ್ಯ ಮೊದಲಾಗುತ್ತದೆ, ಸುಲಭವಾಗುತ್ತದೆ; ಸಂಸಿದ್ಧಿಗೇರುತ್ತದೆ. ಬಾಹ್ಯದೃಷ್ಟಿಯನ್ನು ಸೆಳೆದು ಅಂತರ್ದೃಷ್ಟಿಯನ್ನಾಗಿ ಕುದುರಿಸುವ ಕಾರ್ಯ ಶ್ರೀಗುರುವಿನ ಸಂಸ್ಕಾರ ಸೃಷ್ಟಿಗೆ ಸೇರಿದ ಶ್ರೇಷ್ಠ ಭಾಗ. ಶಿಷ್ಯನಿಗೆ ಅದೇ ವಿಶಿಷ್ಟ ಭಾಗ್ಯ.

ದೈಹಿಕ ಬಾಹ್ಯರೂಪವನ್ನು ರೂಪಿಸಬಹುದು. ಆಂತರಿಕ ಆತ್ಮ ಸ್ವರೂಪವನ್ನು ರೂಪಿಸುವುದು ತೀರ ಕಷ್ಟದ ಕಾರ್ಯ. ಕಾವ್ಯವನ್ನು ಕಟ್ಟಲು ಶಬ್ದ ಸಂಪತ್ತಿದೆ; ಕಾಯುವನ್ನು ರೂಪಿಸಲು ಭೌತಿಕ ಸಾಮಗ್ರಿ ಯಿವೆ. ಆದರೆ ಆತ್ಮಸ್ವರೂಪವನ್ನು ರೂಪಿಸಲು ಸೂಕ್ಷ್ಮವಾದ ಭಾವ ಸಂಪತ್ತಲ್ಲದೆ ಬೇರಾವ ಸ್ಥೂಲ ಸಾಧನ ಸಾಮಗ್ರಿಯಿಲ್ಲ. ಶ್ರೀಗುರುವಿಗಿರುವ ಆತ್ಮಾನುಭವವೇ ಅಂಗಸಂಸೃಷ್ಟಿಗೆ ಅನನ್ಯ ಸಾಧನ; ಅಮರ ಸಾಧನ.

ಜೀವಿಯು ಅಂಗನಾಗದೆ ಲಿಂಗವಾಗುವಂತಿಲ್ಲ. ಬದ್ಧನು ಭಕ್ತನಾಗದೆ ಮುಕ್ತನೆನಿಸುವಂತಿಲ್ಲ. ಆ ಅಂಗತ್ವ-ಭಕ್ತತ್ವಗಳು ಶ್ರೀಗುರುವಿನ ಕರಕಂಜಾತರಾಗದೆ ಅಳವಡಲಾರವು.

ಅಂಗತ್ವವು ಆರು ಬಗೆಯಾಗಿದೆ. ಆ ಆ ಅಂಗತ್ವದ ಆಚರಣೆ ಅನುಭವಗಳು ಬೇರೆ ಬೇರಾಗಿರುತ್ತವೆ. ಅವೆಲ್ಲವುಗಳ ಮೇಲೆ ಶ್ರೀಗುರು ತನ್ನ ಚಿನ್ಮಯ ಪ್ರಕಾಶವನ್ನು ಚೆಲ್ಲುತ್ತಾನೆ. ಆರು ಅಂಗಗಳಲ್ಲಿ ಆರು ಲಿಂಗಗಳನ್ನು ಪ್ರತಿಷ್ಠಿಸುತ್ತಾನೆ. ಆ ಆ ಅಂಗಲಿಂಗಗಳ ಧರ್ಮವನ್ನು ಆಚಾರವನ್ನು ವಿಚಾರವನ್ನು ಅರುಹುತ್ತಾನೆ. ಅರ್ಚನ ಅರ್ಪಣ ಅನುಭವಗಳನ್ನು ಅಳವಡಿಸುತ್ತಾನೆ; ಅರ್ಥಪೂರ್ಣವನ್ನಾಗಿಸುತ್ತಾನೆ. ಮೊದಲು ಪದಾರ್ಥಗಳನ್ನೆಲ್ಲ ಪ್ರಸಾದಗಳನ್ನಾಗಿಸುತ್ತಾನೆ. ನಿಶ್ಶೇಷವಾಗಿ ನಿವೇದಿಸ ಹಚ್ಚುತ್ತಾನೆ. ಬಳಿಕ ಅಂಗಗಳನ್ನೆಲ್ಲ ಲಿಂಗಗಳನ್ನಾಗಿಸುತ್ತಾನೆ. ಆರು ಅಂಗಗಳು ಆರು ಹಂತಗಳು. ಒಂದೊಂದಕ್ಕೂ ಒಂದೊಂದು ಹೆಸರಿದೆ; ಹೆಚ್ಚಳಿಕೆಯಿದೆ. ಆ ಆರಕ್ಕೂ ಗುರು ಸಂಸೃಷ್ಟಿಯೆ ಅಂದರೆ ಗುರುಕರುಣವೇ ಬೀಜ.

ಬ್ರಹ್ಮಸೃಷ್ಟಿಯಲ್ಲಿನ ಬದ್ಧನ (ಜೀವಿಯ) ಸರ್ವೇಂದ್ರಿಯ ವ್ಯವಹಾರಗಳು ಮತ್ತು ಚಿತ್ತ ವೃತ್ತಿಗಳು ಭಿನ್ನ ಭಿನ್ನವಾಗಿರುತ್ತವೆ. ಅದೇ ಗುರು ಸಂಸೃಷ್ಟಿಯಲ್ಲಿನ ಭಕ್ತನವು ಏಕ ಸೂತ್ರಕ್ಕೆ ಬಂದು ಸಮರಸಗೊಳ್ಳುತ್ತವೆ. ಬದ್ಧನು ತನ್ನ ವೃತ್ತಿಗೆ ಒಳಪಟ್ಟಿರುತ್ತಾನೆ; ಅದರಿಂದ ಆತನು ಬದ್ಧನು. ಭಕ್ತನು ವೃತ್ತಿಗೆ ಒಳಪಡದೆ ಮುಕ್ತನಾಗಿರುತ್ತಾನೆ. ವೃತ್ತಿಗಳನ್ನೂ ವೃತ್ತಿಫಲಗಳನ್ನೂ ಆ ಆ ಲಿಂಗಗಳಿಗೊಪ್ಪಿಸಿ ನಿವೃತ್ತನಾಗಿರುತ್ತಾನೆ.

ಗುರು ಕರುಣಿಸಿದ ಇಷ್ಟಲಿಂಗೋಪಾಸನೆಯಿಂದ ಅಂಗನು ಅಚ್ಚಬಾಳಿಗೆ ಬರುತ್ತಾನೆ; ನಿಚ್ಚಬಾಳಿಗೇರುತ್ತಾನೆ. ಬಾಳಿನ ಹೊರ ಒಳಗಿನ ಎಲ್ಲ ಆಚಾರ ವಿಚಾರಗಳನ್ನು ಸಮನ್ವಯಗೊಳಿಸಲು ಸಮರ್ಥನಾಗುತ್ತಾನೆ. ಮುಖ್ಯವಾಗಿ ಬಾಹ್ಯ ವ್ಯವಹಾರವೆಲ್ಲ ಬಾಹ್ಯೇಂದ್ರಿಯ ಭೋಗಗಳೆಲ್ಲ ಲಿಂಗಭೋಗಗಳಾಗುತ್ತವೆ. ಅಂಗನು ಉಪಭೋಗಿಯಾಗುತ್ತಾನೆ. ಪ್ರಸಾದಭೋಗಿಯೆನಿಸುತ್ತಾನೆ. ಈ ದಿವ್ಯಶಕ್ತಿ ಗುರುಕರುಣೆಯಿಂದ ಒದಗುತ್ತದೆ. ಗುರು ಕರಕಂಜಾತರೂಪ ಸಂಸೃಷ್ಟಿಗೆ ಒಳಗಾಗುವುದರಿಂದ ಈ ಸತ್ಪ್ರೇರಣೆ

ಸಮವೆನಿಸುತ್ತದೆ. ಆಗ ಅಂಗನು ಗುರುಶಿಶುವಾಗುತ್ತಾನೆ. ಈತನ ಅನುಭೋಗದ ಮಟ್ಟ ಎತ್ತರಕ್ಕೆ ಏರಿದಂತೆ ಗುರುಶಿಶುವಿಗೆ ಗುರು ಶ್ರೀ ಒದಗುತ್ತದೆ; ಲಿಂಗ ಶ್ರೀ ಒದಗುತ್ತದೆ. ಅಂದರೆ ಶೈಶವತೆಯಿಂದ ಪ್ರೌಢಾವಸ್ಥೆಗೆ ಬರುತ್ತಾನೆ. ಅಪೂರ್ಣತೆಯಿಂದ ಪರಿಪೂರ್ಣತೆಗೆ ನಿಲುಕುತ್ತಾನೆ. ತಂದೆಗೆ ಮಗನಾದವನು ತನ್ನ ಮಕ್ಕಳಿಗೆ ತಾನು ತಂದೆಯಾಗುವಂತೆ ಆಗುತ್ತಾನೆ.

ಗುರು ಕರಕಂಜಾತನಾದ ಅಂಗನು ತನ್ನ ಕಾಯ ಕರಣೇಂದ್ರಿಯಗಳ ಎಲ್ಲ ಕ್ರಿಯೆಗಳನ್ನು ಎಲ್ಲ ಭೋಗಗಳನ್ನು ಅದೇ ಗುರು ಹೃದಯ ಕಂಜಾತನಾದ ಲಿಂಗಕ್ಕೆ ಸಮರ್ಪಿಸುತ್ತಾನೆ. ಅದೇ ಬ್ರಹ್ಮಸೃಷ್ಟಿಯ ಜೀವನು ತನ್ನಂತಿರುವ ಮತ್ತೊಂದು ಜೀವಕ್ಕೆ ಸಲ್ಲಿಸುತ್ತಾನೆ; ಮತ್ತು ತನ್ನ ಕಾರ್ಯೇಂದ್ರಿಯಗಳಿಗೆ ಸಲ್ಲಿಸುತ್ತಾನೆ. ಅಂಗನ ಕ್ರಿಯೆ ಮತ್ತು ಜ್ಞಾನಗಳು ವಿಶುದ್ಧವಾಗಿ ವಿಶಾಲಗೊಳ್ಳುತ್ತವೆ. ಇಂದ್ರಿಯಾತೀತವಾಗುತ್ತವೆ. ಸುವ್ಯವಸ್ಥಿತವಾಗುತ್ತವೆ. ಸಚ್ಚಿದಾನಂದಕ್ಕೆ ಸಮರ್ಪಿತವಾಗುತ್ತವೆ. ಅಚ್ಚಳಿಯದ ಅಖಂಡ ತೃಪ್ತಿಗೆ ಅಣಿಯಾಗಿಸುತ್ತವೆ.

ಗುರು ಸೃಷ್ಟಿಗೆ ಸಂದ ಶಿಷ್ಯನು ವಸಂತ ವೃಕ್ಷದಂತಾಗುತ್ತಾನೆ. ವೃಕ್ಷ ಹಳೆಯದಾದರೂ ಮೈತುಂಬ ಮೂಡಿದ ಚೆಲುವ ಚಿಗುರು ಹಳೆಯದಲ್ಲ. ಅರಳಿ ಪರಿಮಳ ಸೂಸುವ ಹೂವುಗಳು ಹಳೆಯವಲ್ಲ. ಹೊರ ಮೈ ಹೊಸದಾದಂತೆ ಒಳರಸವೂ ಹೊಸದಾಗಿಯೇ ಇರುತ್ತದೆ. ದ್ರುಮದ ಹಳೆಯ ಉಭಯ ವಿದ್ರೂಪವಳಿದು ನವ ಪಲ್ಲವ ಪುಷ್ಪಗಳಿಂದ ನವ ವಿದ್ರುಮದಂತೆ, ಹೊಸ ಹವಳ ಮಲ್ಲಿಗೆ ಹೂವಿನಂತೆ ವಸಂತ ಸೃಷ್ಟಿಯ ಮರ ಮನೋಹರವಾಗಿರುತ್ತದೆ.

ಅನುಪಮವಾದ ಗುರುಕರುಣವೆಂಬ ಘನ ವಸಂತೋದಯವು ಶಿಷ್ಯನ ಉಭಯಾಂಗಗಳಲ್ಲಿ ಉಂಟಾಗಲು ಕರ್ಮ ವಿಕಾರಗಳೆಲ್ಲ ಕಳಚುತ್ತವೆ. ಭಾವ ವಿಕಾರಗಳೆಲ್ಲ ಬಿಟ್ಟು ಹೋಗುತ್ತವೆ. ಕರಣೇಂದ್ರಿಯಗಳು ಮುಗುಳೊಡೆಯುತ್ತವೆ. ಷಟ್ ಚಕ್ರ ಸುಮಗಳು ಅರಳುತ್ತವೆ. ಲಿಂಗಭೃಂಗಗಳು ಭಕ್ತಿಯ ಬಂಡುಣಿಸಿಗಾಗಿ ಮುತ್ತುತ್ತವೆ. ಮಂತ್ರಕೋಕಿಲೆಯು ಮಂಜುಳವಾಗಿ ಹಾಡುತ್ತದೆ. ಜೀವನವೆಲ್ಲ ಮಾರ್ಪಾಟವಾಗುತ್ತದೆ; ಮಂಗಳಮಯ

ವಾಗುತ್ತದೆ. ಪ್ರಾಕೃತಿಕ ವಿಕಾರಚಿತ್ರವಳಿದು ಪಾರಮಾರ್ಥಿಕ ಪರಮ ಸುಂದರ ಚಿತ್ರವಾಗಿ ಕಂಗೊಳಿಸುತ್ತದೆ. ಗುರು ಸೃಷ್ಟಿಗೆ ಬಂದ ಬಳಿಕ ಗುರುತರವಾದ ಗುಣಗಂಭೀರತೆಯೊದಗುತ್ತದೆ. ದೂರದೃಷ್ಟಿಯುಂಟಾಗುತ್ತದೆ. ವಿಶುದ್ಧ ಭಾವ ವಿಶಾಲ ಜೀವನಗಳು ಮೈಗೂಡುತ್ತವೆ. ಸರ್ವ ದರ್ಶನೀಯ ಆದರ್ಶ ಜೀವನ ಸುರತರುವಾಗಿ ಶೋಭೆಯುಂಟಾಗುತ್ತದೆ. ಪ್ರತ್ಯಂಗದಲ್ಲಿ ಲಿಂಗಪ್ರತಿಷ್ಠೆಯಾಗಿ ಪ್ರಭಾವಿತವಾಗಿರುತ್ತದೆ ಗುರು ಸೃಷ್ಟಿಯ ಅಂಗ! ಈ ದಿಸೆಯಲ್ಲಿ ಅಂಗನದು ಗುರು ವಸಂತ ಸೃಷ್ಟಿ! ಈ ಸೃಷ್ಟಿಗೆ ಗುರುವಿನ ಮಂತ್ರ-ಲಿಂಗಗಳಿಂದ ಕಳೆಯೇರುತ್ತದೆ. ವಿಭೂತಿ ರುದ್ರಾಕ್ಷಿಗಳಿಂದ ವಿಭವವೊದಗುತ್ತದೆ. ಪಾದೋದಕಪ್ರಸಾದಗಳ ಪರಮ ಪರಿಣಾಮವುಂಟಾಗುತ್ತದೆ. ಆತ್ಮವಿಷಯದಲ್ಲಿ ಅರಿವು-ಅನುಭವಗಳು ಅಭಿವ್ಯಕ್ತವಾಗುತ್ತವೆ. ಸ್ವಾತ್ಮದಂತೆ ಸರ್ವಭೂತ ಮೈತ್ರಿಕ, ಕರುಣೆಗಳು ಸಮನಿಸುತ್ತವೆ. ವಿಷಮತೆಯಳಿದು ಸಮರಸತೆ ಸಂಪಾದಿತವಾಗುತ್ತದೆ. ವಿಷಾದತೆ ಮಾಯವಾಗಿ ಹಸಾದತೆ ಮೈಗೂಡುತ್ತದೆ. ಗುರುವಿನ ಗುರುತರವಾದ ಪರಿಶುಭ್ರವಾದ ಮಹಾಜೀವನವು ಶಿಷ್ಯಾಂಗನಲ್ಲಿ ಮಾರ್ಪೊಳೆಯುತ್ತದೆ. ಆಗ ಅಂಗನು ಬ್ರಹ್ಮಸೃಷ್ಟಿಯನ್ನು ದಾಟಿ ಗುರುಬ್ರಹ್ಮನಸಂಸೃಷ್ಟಿಯ ಮೇಲು ಮಟ್ಟಕೇರಿ ಶೋಭಿಸುತ್ತಾನೆ. ಜನತಾ ಜಗದೀಶನಿಗೆ ಸಲ್ಲುತ್ತಾನೆ. ಸಚ್ಚಿದಾನಂದ ಸಂಜೀವಿಯಾಗಿ ಚಿರಂಜೀವಿಯಾಗಿ ಬಾಳುತ್ತಾನೆ. ಸ್ವಯಂಜ್ಯೋತಿ ರೂಪನಾಗಿ ಪರಂಜ್ಯೋತಿಯಂತೆ ಪ್ರಕಾಶಕನಾಗಿ ಬೆಳಗುತ್ತಾನೆ. ಜಲದೊಳಗಿನ ಕಣಗಳಂತೆ ಬೆರದೇಕವಾಗುತ್ತಾನೆ.

ಶ್ರೀಗುರು ತನ್ನ ಕ್ರಿಯಾಶಕ್ತಿಯನ್ನೆ ಇಷ್ಟಲಿಂಗವನ್ನಾಗಿಸಿ ನಿವೃತ್ತಿ ಕಲೆಯನ್ನು ಅದರಲ್ಲಿರಿಸುತ್ತಾನೆ. ಶಿಷ್ಯನ ಶ್ರದ್ಧಾಭಕ್ತಿಯನ್ನೇ ಅಂಗವನ್ನಾಗಿಸುತ್ತಾನೆ. ಈ ಶಿಷ್ಯನ ಅಂಗದಲ್ಲಿ ನಿವೃತ್ತಿಕಲಾನ್ವಿತ ಕ್ರಿಯಾರೂಪ ಇಷ್ಟಲಿಂಗವನ್ನು ಅಳವಡಿಸುತ್ತಾನೆ. ಅಂದರೆ ಕರಕ್ಕೆ ಕರುಣಿಸುತ್ತಾನೆ ಆಗ ಅಂಗ ಸಂಸೃಷ್ಟಿ ಪರಿಪೂರ್ಣಗೊಳ್ಳುತ್ತದೆ.

ಪಿಂಡಾಂಡ-ಬ್ರಹ್ಮಾಂಡ

ಒಂದು ಒಳಜಗತ್ತು. ಇನ್ನೊಂದು ಹೊರಜಗತ್ತು. ಬ್ರಹ್ಮಾಂಡ ಪಿಂಡಾಂಡದಲ್ಲಿದೆ. ಒಂದು ಬೀಜದಂತೆ ಸೂಕ್ಷ್ಮ. ಇನ್ನೊಂದು ವೃಕ್ಷದಂತೆ ವಿಸ್ತಾರ ಒಂದು ವ್ಯಷ್ಟಿ ಜಗತ್; ಇನ್ನೊಂದು ಸಮಷ್ಟಿ ಜಗತ್. ಅಷ್ಟಾಂಗ ಸಹಿತವಾದುದು ಪಿಂಡಾಂಡ; ಅಷ್ಟತನುಯುಕ್ತವಾದುದು ಬ್ರಹ್ಮಾಂಡ.

ಪಿಂಡಾಂಡದಿಂದ ಪ್ರಾಪ್ತಿಯಾಗುವುದು ತತ್ತ್ವಾನುಭೂತಿ. ಬ್ರಹ್ಮಾಂಡ ದಿಂದ ಬೆಳೆವುದು ವಿಜ್ಞಾನ ಸಂಪತ್ತಿ. ತತ್ತ್ವಾನುಭೂತಿಯನ್ನೆ ಮಹಾ ಜ್ಞಾನವೆಂದು ಕರೆದರು ಅನುಭಾವಿಗಳು.

ಒಂದು ಶಾಂತಿಸಾಧನ, ಇನ್ನೊಂದು ಕ್ರಾಂತಿಕಾರಣ. ಸತ್ಯಶೋಧ ನೆಗೆ ಎರಡೂ ಸಾಧನವಾಗಿದ್ದರೂ ಪಿಂಡಾಂಡ ಹತ್ತಿರದ ಸಾಧನ. ಬ್ರಹ್ಮಾಂಡ ದೂರದ ಸಾಧನ. ಸತ್ಯವೆಂಬ ಫಲಕ್ಕೆ ಪಿಂಡಾಂಡ ಪುಷ್ಪ; ಬ್ರಹ್ಮಾಂಡ ಪತ್ರ.

ಇವೆರಡಕ್ಕೂ ಮೂಲವಾದ ಅವ್ಯಕ್ತವಾದ ಶಕ್ತಿಯಿದೆ. ಅದನ್ನೇ ಪ್ರಕೃತಿ ಎಂದು ಹೇಳುತ್ತೇವೆ. ಆ ಪ್ರಕೃತಿಯಿಂದ ಹುಟ್ಟಿದವುಗಳೇ ಈ ಪಿಂಡಾಂಡ – ಬ್ರಹ್ಮಾಂಡಗಳು. ಅಂತೆಯೇ ಇವಕ್ಕೂ ಪ್ರಕೃತಿಯೆಂದು ಹೇಳುವುದುಂಟು.

ತ್ರಿಗುಣಗಳ ಸಾಮ್ಯಾವಸ್ಥೆಯೇ ಮೂಲಪ್ರಕೃತಿ. ತ್ರಿಗುಣಗಳ ವಿಷಮಾವಸ್ಥೆಯೇ ಪಿಂಡಾಂಡ–ಬ್ರಹ್ಮಾಂಡಗಳು. ತಮೋಗುಣ ಪ್ರಧಾನ ವಾದುದು ಬ್ರಹ್ಮಾಂಡ. ರಜೋಗುಣ ಪ್ರಧಾನವಾದುದು ಪಿಂಡಾಂಡ. ಸತ್ವಗುಣ ಪ್ರಧಾನವಾದುದು ಜೀವಚೈತನ್ಯ.

ಪಿಂಡಜ್ಞಾನವೇ ಷಟ್‌ಸ್ಥಲ ಸಿದ್ಧಾಂತದ ಅಡಿಗಲ್ಲಾಗಿದ್ದರೂ ಬ್ರಹ್ಮಾಂಡದ ವಿಜ್ಞಾನವನ್ನು ಅದು ಅಲ್ಲಗಳೆದಿಲ್ಲ. ಅಲ್ಲಲ್ಲಿ ಸಂದರ್ಭೋ ಚಿತವಾಗಿ ಬ್ರಹ್ಮಾಂಡ ವಿಜ್ಞಾನಕ್ಕೂ ಅವಕಾಶವಿತ್ತಿದೆ. ಅಷ್ಟೇ ಅಲ್ಲ ಮೂವತ್ತಾರು ತತ್ತ್ವಗಳಲ್ಲಿ ಬ್ರಹ್ಮಾಂಡರೂಪ ಸಮಷ್ಟಿ ಸೃಷ್ಟಿಗೂ ಸ್ಥಾನ

ವಿದೆ; ವಿವೇಚನೆಯಿದೆ. ವೈಯಕ್ತಿಕ ಜೀವನಕ್ಕೆ, ವೈಯಕ್ತಿಕ ಪ್ರಗತಿಗೆ ಷಟ್‌ಸ್ಥಲವು ಸಾಧನವಾದಂತೆ ಜಾಗತಿಕ ಜೀವನಕ್ಕೂ ಜಾಗತಿಕ ಪ್ರಗತಿಗೂ ಸಾಧನವಾಗಿದೆ. ಅಂತೆಯೆ ಸಾಮಾಜಿಕ ಜೀವನ–ಪ್ರಗತಿಗಳಿಗೂ ಸಾಧನವಾಗಿದೆ. ಷಟ್‌ಸ್ಥಲಕ್ಕೆ ವ್ಯಕ್ತಿ, ಸಮಾಜ, ಜಗತ್ತು ಈ ಮೂರು ಅವಿಮುಕ್ತ ಕ್ಷೇತ್ರಗಳಾಗಿವೆ. ಮೂವತ್ತಾರು ತತ್ತ್ವಗಳಲ್ಲಿ ಈ ಅಭಿಪ್ರಾಯವು ಅಭಿವ್ಯಕ್ತವಾಗಿದೆ. ಅವುಗಳಲ್ಲಿ ಮೂರಕ್ಕೂ ಬೇಕಾದ ವಸ್ತುಗಳಿವೆ. ಪಂಚಭೂತ, ಪಂಚತನ್ಮಾತ್ರಗಳ ರೂಪದಲ್ಲಿ ತತ್ತ್ವಗಳೆನಿಸಿವೆ.

ಪ್ರಕೃತಿಗೆ ಮೂಲಕಾರಣವಾಗಿ ಶಕ್ತಿವಿಶಿಷ್ಟ ಶಿವನಿದ್ದಾನೆ. ಆತನು ಅಪ್ರಾಕೃತ ಗುಣಗಳಿಗೆ ಆಧಾರನಾಗಿದ್ದಾನೆ. ಅನಂತ ಮಹಿಮೆಗಳಿಗೆ ಆಗರವಾಗಿದ್ದಾನೆ. ಆತನೇ ಈ ಉಭಯ ಸೃಷ್ಟಿಗೆ ಮಹಾಕಾರಣನು.

‘ತತ್ರ ಲೀನಮಭೂತ್ ಪೂರ್ವಂ ಚೇತನಾಚೇತನಂ ಜಗತ್
ಸ್ವಾತ್ಮಲೀನಂ ಜಗತ್ಕಾರ್ಯಂ ಸ್ವಪ್ರಕಾಶ್ಯಂ ತದದ್ಭುತಮ್ ।
ಶಿವಾಭಿಧಂ ಪರಂ ಬ್ರಹ್ಮ ಜಗನ್ನಿರ್ಮಾತು ಮಿಚ್ಛಯಾ
ಸ್ವರೂಪಮಾದಧೇ ಕಿಂಚಿತ್ ಸುಖಸ್ಫೂರ್ತಿ ವಿಜೃಂಭಿತಮ್ ॥
ತದೀಯಾ ಪರಮಾಶಕ್ತಿಃ ಸಚ್ಚಿದಾನಂದಲಕ್ಷಣಾ
ಸಮಸ್ತಲೋಕ ನಿರ್ಮಾಣ ಸಮವಾಯಸ್ವರೂಪಿಣೀ ।
ತದಿಚ್ಛಯಾಽಭವತ್ ಸಾಕ್ಷಾತ್ ತತ್ಸ್ವರೂಪಾನುಕಾರಿಣೀ ॥
ಸದಾಶಿವ ಮುಖಾಶೇಷತತ್ತ್ವ ಮೌಕ್ತಿಕ ಶುಕ್ತಿಕಾಮ್
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿರೂಪಿಣೀಂ ॥’

ಸದಸದ್ರೂಪವಾದ ಸೃಷ್ಟಿಯ ರಚನೆಗೆ ಶಕ್ತಿವಿಶಿಷ್ಟ ಶಿವನು ಮೂಲಕಾರಣನು ಮತ್ತು ಮಹಾಕಾರಣನು ಎಂಬುದನ್ನು ಈ ಶ್ಲೋಕರೂಪ ಮಂತ್ರಗಳು ಸ್ಫುಟಗೊಳಿಸಿವೆಯಲ್ಲದೆ ಚೇತನ ಜಗತ್ತಿನಂತೆ ಅಚೇತನ ಜಗತ್ತು ಸಹ ಆತನ ಸ್ವರೂಪವೇ ಎಂದು ಸ್ಪಷ್ಟಪಡಿಸಿದೆ. ಈ ಮಂತ್ರಗಳು ಒಂದು ಸುಂದರ ಕಾವ್ಯದಂತಿವೆ. ತತ್ತ್ವಗಳೆಂಬ ಮುತ್ತುಗಳಿಗೆ ಶುಕ್ತಿಯಂತಿರುವವಳೇ ಶಕ್ತಿ. ಅವಳು ಮಾಹೇಶ್ವರಿ, ಮಹಾಮಾಯಾದಿರೂಪಿಣೀ. ಸಮವಾಯ ಸ್ವರೂಪಿಣಿಯಾಗಿದ್ದಾಳೆ ಸಮಸ್ತಲೋಕ ನಿರ್ಮಾಣ ಮಣಿಹ

ದಲ್ಲಿ ! ಸಚ್ಚಿದಾನಂದ ಸ್ವರೂಪಿಣಿಯಾಗಿದ್ದಾಳೆ. ಪರಶಿವಾತ್ಮಕವಾಗಿದ್ದಾಳೆ. ಪರಶಿವನು ಸ್ವಲೀಲೆಯಿಂದ ಸ್ಫೂರ್ತಿಗೊಂಡಾಗ ಸ್ವೇಚ್ಛೆಯನ್ನು ವ್ಯಕ್ತಗೊಳಿಸಿದಾಗ ಶಕ್ತಿ ಸೃಷ್ಟಿಸ್ವರೂಪವನ್ನು ಧರಿಸುತ್ತಾಳೆ. ಸದಾಶಿವಾದಿ ಸಕಲ ತತ್ತ್ವಗಳನ್ನು ತೋರ್ಪಡಿಸುತ್ತಾಳೆ. ತಾನೇ ಆ ಸ್ವರೂಪಧಾರಣ ಮಾಡುತ್ತಾಳೆ.

ಶಿವಶಕ್ತಿ ರೂಪ ಬೀಜವು ಅಂಕುರಿಸಲು ಮುಮ್ಮೊದಲು ಆ ಅಂಕುರಕ್ಕೆ ತೋರುವ ಎರಡೆಲೆಗಳೇ ಪಿಂಡಾಂಡ–ಬ್ರಹ್ಮಾಂಡಗಳು. ಇವೆರಡೂ ಸಂಪುಟಗೊಂಡಿವೆ. ಮುಂದೆ ಅರಳಿ ವಿಕಾಸವಾಗಿದ್ದರೂ ಮರಳಿ ಬೀಜದಲ್ಲಿ ಸಂಪುಟಗೊಳ್ಳುತ್ತವೆ. ಬೀಜದೊಳಗಿರುವಾಗ ಅವ್ಯಕ್ತವಾಗಿ ಸಂಪುಟಗೊಂಡಿರುತ್ತವೆ. ಅದೇ ಬೀಜವು ಮೊಳೆತಾಗ ವ್ಯಕ್ತವಾಗಿ ಸಂಪುಟಗೊಂಡಿರುತ್ತವೆ. ಆ ಬೀಜದ ಶಕ್ತಿ ಎರಡರಲ್ಲಿಯೂ ಸಮವಾಗಿದೆ.

ಶಿವಾದ್ವೈತದ ಶಿವನು ಅದ್ವೈತಿಗಳ ಬ್ರಹ್ಮನಲ್ಲ; ಸಾಂಖ್ಯದ ಪುರುಷನಲ್ಲ. ಅದ್ವೈತಿಗಳ ಬ್ರಹ್ಮ ಮಾಯಾರಹಿತ. ಸಾಂಖ್ಯರ ಪುರುಷ ಪ್ರಕೃತಿ ವಿರಹಿತ. ಆದ್ದರಿಂದ ಅವರಿಬ್ಬರೂ ಸೃಷ್ಟಿಕಾರ್ಯದಲ್ಲಿ ಅಭಿನ್ನ ನಿಮಿತ್ತೋಪಾದಾನ ಕಾರಣರಾಗಲು ಸಮರ್ಥರಾಗಿಲ್ಲ. ಶಿವಾದ್ವೈತದ ಶಿವನಲ್ಲಿ ವಿಮರ್ಶಾಶಕ್ತಿಯು ಅವಿನಾಭಾವ ಸಂಬಂಧದಿಂದಿರುತ್ತದೆ. ಈ ಶಕ್ತಿಯು ಸಚ್ಚಿದಾನಂದಸ್ವರೂಪಿಣಿಯು. ಅಂದರೆ 'ಅಸ್ಮಿ, ಪ್ರಕಾಶೇ, ನಂದಾಮಿ' ಎಂಬ ಅನುಭವ ಸ್ವರೂಪಿಣಿಯು. 'ತದೀಯಾ ಪರಮಾಶಕ್ತಿಃ ಸಚ್ಚಿದಾನಂದ ಲಕ್ಷಣಾ' ಎಂಬ ಮಂತ್ರದಲ್ಲಿ ಶ್ರೀ ಜಗದ್ಗುರು ರೇಣುಕರು ಶಿವಸ್ವರೂಪವೇ ಶಕ್ತಿಸ್ವರೂಪವೆಂದು ಸೊಗಸಾಗಿ ಅಪ್ಪಣೆಯನ್ನಿತ್ತಿದ್ದಾರೆ.

"ಅಸ್ತಿ ಸಚ್ಚಿತ್ಸುಖಾಕಾರಮಲಕ್ಷಣ ಪದಾಸ್ಪದಮ್
ನಿರ್ವಿಕಲ್ಪಂ ನಿರಾಕಾರಂ ನಿರಸ್ತಾಶೇಷ ವಿಪ್ಲವಮ್ ।
ಪರಿಚ್ಛೇದ ಕಥಾಶೂನ್ಯಂ ಪ್ರಪಂಚಾತೀತ ವೈಭವಮ್
ಪ್ರತ್ಯಕ್ಷಾದಿ ಪ್ರಮಾಣಾನಾಮಗೋಚರ ಪದೇ ಸ್ಥಿತಮ್ ।
ಸ್ವಪ್ರಕಾಶಂ ಪರಾಕಾಶಮನೌಪಮ್ಯ ಮನಾಮಯಮ್
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿ ನಿರಂಕುಶಮ್ ॥

ತಾನೇ ತಾನಾದ ಆ ಶಿವಾದ್ವೈತದ ಸ್ವರೂಪವನ್ನು ಈ ಮೂರು ಮಂತ್ರಗಳಲ್ಲಿ ಮನೋಹರವಾಗಿ ಪ್ರತಿಪಾದಿಸಿದ್ದಾರೆ. 'ಸಚ್ಚಿತ್ಸುಖಾಕಾರಂ' ಎಂದು ಹೇಳಿ 'ಅಸ್ಮಿ ಪ್ರಕಾಶೇ ನಂದಾಮಿ' ಎಂಬ ವಿಮರ್ಶಾಶಕ್ತಿ ವಿಶಿಷ್ಟನೆಂಬುದಾಗಿ ಸಿದ್ಧಾಂತ ಮಾಡಿದ್ದಾರೆ. ಅಂತೆಯೇ ಆ ಪರಶಿವನನ್ನು 'ಅಸ್ತಿ, ಸ್ವಕಾಶಂ, ಸುಖಾಕಾರಂ' ಎಂಬ ಪದಗಳಿಂದ ಪ್ರತಿಪಾದಿಸಿದ್ದಾರೆ. ಹೀಗೆ ವಿಮರ್ಶಾಶಕ್ತಿ ವಿಶಿಷ್ಟನಾಗಿದ್ದರೂ ಅಲಕ್ಷಣ ಪದಾಸ್ಪದನು. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರನು. ಸರ್ವಜ್ಞನಾಗಿಯೂ ಶಾಂತನಾಗಿದ್ದಾನೆ. ಸರ್ವವ್ಯಾಪಿಯಾಗಿಯೂ ಸರ್ವಶಕ್ತಿ ನಿರಂಕುಶನಾಗಿದ್ದಾನೆ. ಆ ಪರಾಕಾಶ ಸ್ವರೂಪನಾಗಿ ಸ್ವಪ್ರಕಾಶನಾಗಿದ್ದಾನೆ. ಅನುಪಮ; ಅನಾಮಯ. ಹಾಗಿರುವ ಆ ಪರಶಿವನಲ್ಲಿ ಜಗನ್ನಿರ್ಮಾಣ ಸಂಕಲ್ಪೋದಯವಾಗುತ್ತದೆ. ಆ ಸಂಕಲ್ಪೋದಯವೇ ಇಚ್ಛಾಶಕ್ತಿಯಾಗಿ ಸೃಷ್ಟಿಯ ಉತ್ಪತ್ತಿಯಾಗುತ್ತದೆ. ಶಿವಾದ್ವೈತದಿಂದಾದ ಸೃಷ್ಟಿ ಶಿವನಿಗೆ ಅನ್ಯವಿಲ್ಲ. ಈ ಸೃಷ್ಟಿಯ ಗರ್ಭದಲ್ಲಿ ಪಿಂಡಾಂಡ – ಬ್ರಹ್ಮಾಂಡಗಳೆರಡೂ ದ್ವಿದಳದಂತೆ ವ್ಯಷ್ಟಿ ಸಮಷ್ಟಿಯಾಗಿ ಮೈದೋರಿವೆ.

ಪರಶಿವನಲ್ಲಿ ಅವಿನಾಭಾವ ಶಕ್ತಿಯಿಲ್ಲದೆ ಇಚ್ಛೆ ವ್ಯಕ್ತವಾಗದು. ಇಚ್ಛೆ ಶಕ್ತಿಯ ಗುಣ. ಜ್ಞಾನ ಚೈತನ್ಯಸ್ವಭಾವ. ಇವೆರಡು ಒಂದಾಗಿ ಇರುವವಲ್ಲದೆ ಒಂದನ್ನಗಲಿ ಇನ್ನೊಂದು ಇರದು. ಶಕ್ತಿವಿಶಿಷ್ಟ ಶಿವನಿಂದ ಈ ಕಾಲ ದೇಶ ದ್ರವ್ಯಗಳ ಉತ್ಪತ್ತಿ. ಈ ಪಿಂಡೋತ್ಪತ್ತಿ.

ಇವು ವ್ಯಕ್ತವಾಗಿ ಎರಡು. ಅವ್ಯಕ್ತವಾಗಿ ಆ ಮಹಾಲಿಂಗದಲ್ಲಿ ಒಂದು. ಪಿಂಡದೊಳಗೆ ಬ್ರಹ್ಮಾಂಡವಡಗಿ, ಬ್ರಹ್ಮಾಂಡದಲ್ಲಿ ಪಿಂಡವಡಗಿ ಏಕವಾಗುತ್ತದೆ. ಕೊನೆಗೆ ಆ ನಿರಾಲಂಬದಲ್ಲಿ ಲೀನವಾಗಿ ನಿರ್ದೇಶಿಸಲು ಬಾರದಾಗುತ್ತವೆ. ನಿಃಸ್ಥಲರೂಪಾಗುತ್ತದೆ.

'ಅವನಿಯ ಪಿಂಡವು ನುಂಗಿ, ಉದಕವ ಪಾನವ ಮಾಡಿ, ಅಗ್ನಿಯ ಮೆಟ್ಟಿ, ವಾಯುವ ಹಿಡಿದು, ಆಕಾಶವನಡರಿ, ಮಹದಾಕಾಶದ ಬಯಲೊಳಗೆ ನಿಂದು ನೋಡಲು ಸರ್ವಶೂನ್ಯ ನಿರಾಕಾರವೆಂಬ ಬಯಲು ಕಾಣಬಂದಿತ್ತು. ಆ ನಿಜಗುರು ಸ್ವತಂತ್ರಸಿದ್ಧೇಶ್ವರನೆಂಬ ಬಯಲು ಬೆರಸಿದೆನು.'

'ಬಂದೂ ಬಾರದು. ಹೊಂದಿಯೂ ಹೊಂದದ್ದು. ನಿಂದೂ ನಿಲ್ಲದು. ಈ ಪರಿಯ ನೋಡಾ! ಅಖಂಡಿತ ಚರಿತವನೇನೆಂದುಪಮಿಸುವೆ? ನವ ಖಂಡಪೃಥ್ವಿಯನೊಳಕೊಂಡ ಬಯಲು. ಅಗಮ್ಯ ಸಂಯೋಗ ಸಮಾಧಿ ಯಲ್ಲಿ ಗುಹೇಶ್ವರಲಿಂಗವನೇನೆಂದುಪಮಿಸುವೆ?'

ಉಪಮಿಸಬಾರದ ಉರಲಿಂಗದಲ್ಲಿ ಪಿಂಡಾಂಡ-ಬ್ರಹ್ಮಾಂಡಗಳೆರಡೂ ಅಖಂಡವಾಗಿವೆ. ನವಖಂಡ ಪೃಥ್ವಿಯಿದ್ದಂತೆ ನವಶಕ್ತಿರೂಪ ಪ್ರಕೃತಿಯೂ ಇದೆ. ಇಲ್ಲಿ ಪ್ರಕೃತಿಪದ ಪಿಂಡಾಂಡ ಸೂಚಕ. ವೃಕ್ಷಸಾರವನ್ನೊಳಕೊಂಡ ಬೀಜದಂತೆ ವಿಶ್ವಸಾರವನ್ನೊಳಕೊಂಡ ಲಿಂಗಮಹಿಮೆಗೆ ಸೀಮೆಯಿಲ್ಲ; ಉಪಮೆಯಿಲ್ಲ. ಅದು ಪ್ರವೃತ್ತಿಯಲ್ಲಿ ಬ್ರಹ್ಮಾಂಡ-ಪಿಂಡಾಂಡ ರೂಪದಲ್ಲಿ ವಿಶಾಲವಾಗಿ ನಿವೃತ್ತಿಮಾರ್ಗದಲ್ಲಿ ಇವೆಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡು ನಿರಾಕಾರವಾಗಿ ನಿರ್ದೇಶಿಸಲು ಬಾರದಾಗಿ ನಿರವಯಲವಾಗುತ್ತದೆ.

ಪಿಂಡವೇ ಮೂಲಪ್ರಕೃತಿ. ಮೂಲಪ್ರಕೃತಿಯೆ ಚಿಚ್ಛಕ್ತಿ. ಅಂಡವೇ ಚಿಚ್ಚೈತನ್ಯ. ಚಿಚ್ಚೈತನ್ಯವೇ ಶೂನ್ಯಲಿಂಗ. ಅದುವೇ ಪರಶಿವ. ಮಾಂಸ ಪಿಂಡವು ಮಂತ್ರಪಿಂಡವಾಗುವುದು ಶೂನ್ಯಲಿಂಗದಿಂದ ಉತ್ಪತ್ತಿಯಾದ ವಾಚ್ಯಪ್ರಣವದಿಂದ. ಆ ವಾಚ್ಯಪ್ರಣವಕ್ಕೆ ಆಶ್ರಯನು ಶ್ರೀಗುರು. ಓಂಕಾರದ ಮೂಲಬೀಜವಾದ ಅಕಾರದಿಂದ ಉದಯನಾದ ಶ್ರೀಗುರು ಮುಖದಲ್ಲಿ ಬಂದ ಓಂಕಾರವೇ ಮಂತ್ರವೆಂದೆನಿಸುತ್ತದೆ. ಅಕಾರಾತ್ಮಕ ಗುರುಗರ್ಭದಿಂದ (ಹೃದಯದಿಂದ) ಉಕಾರಾತ್ಮಕ ಲಿಂಗೋತ್ಪತ್ತಿ. ಉಕಾ ರಾತ್ಮಕ ಲಿಂಗಜ್ಯೋತಿಯಲ್ಲಿ ಮಕಾರಾತ್ಮಕ ಜಂಗಮೋತ್ಪತ್ತಿ. ಇವರು ಸತ್ ಚಿತ್ ಸುಖ ಸ್ವರೂಪರಾಗಿದ್ದಾರೆ. ಇವರಿಂದುದಯವಾಗುವ ಪಾದೋ ದಕ ಪ್ರಸಾದಗಳೇ ನಿತ್ಯ-ಪರಿಪೂರ್ಣ ಸ್ವರೂಪವಾಗಿವೆ. ನಾದ ಬಿಂದು ಕಳಾ ರೂಪಾದ ಮಂತ್ರ ರುದ್ರಾಕ್ಷ ವಿಭೂತಿಗಳಿಂದ ಗುರು-ಲಿಂಗ-ಜಂಗಮ-ಪಾದೋದಕ-ಪ್ರಸಾದರೂಪ ಸತ್ ಚಿತ್ ಆನಂದ ನಿತ್ಯ ಪರಿಪೂರ್ಣತೆ ಗಳನ್ನು ಅಳವಡಿಸಿಕೊಳ್ಳುವುದೇ, ಅಳವಡಿಸಿಕೊಂಡು ಆ ಸರ್ವಶೂನ್ಯ ನಿರಾಲಂಬದಲ್ಲಿ ಅವಿರಳವಾಗುವುದೇ ಪಿಂಡಸ್ಥಲದ ಪ್ರಮುಖೋದ್ದೇಶ; ಅದೇ ಸಮರಸ; ಅದೇ ಐಕ್ಯ; ಅದೇ ನಿಃಸ್ಥಲ; ಅದೇ ಅಖಂಡ. ಅದೇ ಬಯಲು!

ಇನ್ನು ಪರಶಿವ ಸ್ವರೂಪವಾದ ಓಂಕಾರದೊಳಗಿನ 'ಅ' ಎಂಬ ಶಿವ ಸ್ವರವು 'ಉ' ಎಂಬ ಶಕ್ತಿಸ್ವರದಲ್ಲಿ ಒಂದುಗೂಡಿ 'ಮ' ಎಂಬ ಮರ್ತ್ಯ ಲೋಕವು ಉತ್ಪತ್ತಿಯಾಗುತ್ತದೆ. ಇದರಿಂದಾಗಿ ಬ್ರಹ್ಮಾಂಡವೆಂಬ ಹೆಸರಾಯಿತು. ಓಂಕಾರರೂಪ ಪರಬ್ರಹ್ಮ ಪ್ರಭೂತವೆಂದೆನಿಸಿತು. ಇದು ಆ ಪರಬ್ರಹ್ಮಲೀಲೆ. ಬ್ರಹ್ಮಾಂಡದ ಅಸ್ತಿತ್ವವೆಂದರೆ ಆ ಪರಬ್ರಹ್ಮದ ಲೀಲಾ ವಿಲಾಸವೆಂದರ್ಥ. ಆತನ ಈ ಲೀಲೆ ಮಿಥ್ಯೆಯಾಗದು. ಈ ಲೀಲಾ ವಿಲಾಸವು ಸಾಕಾದೊಡನೆ ಇದು ಆ ಓಂಕಾರರೂಪ ಪರಬ್ರಹ್ಮನಲ್ಲಿ ಲೀನ ವಾಗುತ್ತದೆ ಅಂದರೆ ವಿಶ್ರಾಂತಿಗೊಳ್ಳುತ್ತದೆ. ಬೀಜದಿಂದಾದ ವೃಕ್ಷವು ಮರಳಿ ಬೀಜದಲ್ಲಿ ಅಡಕವಾಗುವಂತೆ ಬ್ರಹ್ಮಾಂಡವು ಬ್ರಹ್ಮನಲ್ಲಿ ಅಡಕ ವಾಗುತ್ತದೆ. ಅಂತೆಯೇ ಉಕಾರದಿಂದ ಉದಯವಾದ ಎಲ್ಲ (೩೬) ತತ್ತ್ವ ಗಳು, ಮಕಾರದಿಂದ ಸಕಲ (೬೪) ಕಲೆಗಳು ಆ ಓಂಕಾರಾತ್ಮನಾದ ಪರ ಬ್ರಹ್ಮನಲ್ಲಿಯೇ ಪ್ರಲೀನವಾಗುತ್ತವೆ. ಆದ್ದರಿಂದ ಇದು ಅಗಮ್ಯ ಸಂಯೋಗ ಸಮಾಧಿಯೆನಿಸುತ್ತದೆ. ಇವನೆಲ್ಲವನ್ನು ಒಳಗೊಂಬ ಆ ಪರಬ್ರಹ್ಮರೂಪ ಲಿಂಗವನ್ನು ಉಪಮಿಸಲು ಬೇರೊಂದು ಕುರುಹಿಲ್ಲ. "ಶಿವಾಭಿಧಂ ಪರಂ ಬ್ರಹ್ಮ ಜಗನ್ನಿರ್ಮಾತು ಮಿಚ್ಛಯಾ । ಸ್ವರೂಪಮಾದಧೇ ಕಿಂಚಿತ್ ಸುಖ ಸ್ಫೂರ್ತಿ ವಿಜೃಂಭಿತಮ್ ॥" ಎಂಬೀ ಮಂತ್ರವೇ ಪ್ರಮಾಣವಾಗಿದೆ.

"ಸರ್ವಮೇವಮಿದಂ ಬ್ರಹ್ಮ ನಾನಾ ನಾನಾ ತಯಾಸ್ಥಿತಂ । ಜೃಂಭತೇ ವ್ಯವಹಾರಾರ್ಥಂ ಕೇವಲಂ ಕಥಿತಸ್ಥಿತಿ ॥"–ಯೋಗವಾಸಿಷ್ಠದಲ್ಲಿ ದೃಶ್ಯವಾದ ಈ ಬ್ರಹ್ಮಾಂಡವೆಲ್ಲವೂ ಬಗೆಬಗೆಯಾಗಿ ತೋರಿದರೂ ಆ ಪರಬ್ರಹ್ಮಸ್ವರೂಪವೇ ಆಗಿದೆ; ಕೇವಲಾತ್ಮಕವೇ ಆಗಿದೆ ಎಂದು ನಿರೂಪಿಸಲಾಗಿದೆ.

ಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ಪೃಥಿವ್ಯಾದಿ ಪಂಚ ಭೂತಗಳು, ಶಿವನ ನಯನಮುಖದಿಂದ ಸೂರ್ಯನು, ಶಿವನ ಮನವೆಂಬ ಮುಖದಿಂದ ಚಂದ್ರನು, ಶಿವನಗೋಪ್ಯಮುಖದಿಂದ ಆತ್ಮನು ಉದಯಿಸು ವವು. ಶಿವನ ಆ ಅಷ್ಟಾಂಗವೇ ಹೊರಹೊಮ್ಮಿ ಅಷ್ಟತನುರೂಪ ಸಮಷ್ಟಿ ಜಗತ್ತಾಗಿಹುದು.

'ಏವಂ ಬ್ರಹ್ಮಾಂಡ ನಿಲಯಂ ತಸ್ಮಿನ್ ದೇಹೇ ಪ್ರತಿಷ್ಠಿತಮ್'

ಈರೇಳು ಭುವನಗಳನ್ನು ಒಳಗೊಂಡ ಬ್ರಹ್ಮಾಂಡವೆಂಬ ನಿಲಯವು ಈ ದೇಹದಲ್ಲಿಯೇ ಪ್ರತಿಷ್ಠಿತವಾಗಿದೆಯೆಂದು ಉತ್ತರಗೀತೆಯಲ್ಲಿ ಉಕ್ತವಾಗಿದೆಯಲ್ಲದೆ,

"ಬ್ರಹ್ಮಾಂಡರೂಪಿಣೀ ಪೃಥ್ವೀ ತೋಯ ಮಧ್ಯೇ ಪ್ರವೀಯತೇ
ಅಗ್ನಿನಾ ಪೀಯತೇ ತೋಯಂ ವಾಯುನಾ ಗ್ರಸ್ಯತೇಽನಲಃ ।
ಆಕಾಶಂತು ಪಿಬೇದ್ವಾಯುಂ ಮನಸ್ಯಾಕಾಶಮೇವ ಚ
ಬುದ್ಧ್ಯಹಂಕಾರ ಚಿತ್ತೇ ಚ ಕ್ಷೇತ್ರಜ್ಞಃ ಪರಮಾತ್ಮನಿ ।
ತುರ್ಯಂ ಚ ತುರ್ಯಾತೀತಂ ಚ ಶಿವಸ್ಥಾನಮನಾಮಯಂ
ಗ್ರಸೇತ್ಸಪುಸ್ತಮಾತ್ಮೇತಿ ಧ್ಯಾಯಂಶ್ಚ ಪರಮಾಂಗತಿಮ್ ।"

ಎಂಬೀ ಉತ್ತರ ಭಗವದ್ಗೀತೆಯು ಸಿದ್ಧಾಂತಶಿಖಾಮಣಿಯ ಅಭಿಪ್ರಾಯವನ್ನೇ ಸಮರ್ಥಿಸುತ್ತ ಸ್ಪಷ್ಟಪಡಿಸಿದೆ. ಬ್ರಹ್ಮಾಂಡ ಸತ್ಯವೆಂದು, ಪರಶಿವನಲ್ಲಿ ತಲ್ಲೀನವಾಗುವುದೆಂದು, ಶಿವನೇ ಸರ್ವೋತ್ತಮನೆಂದು ಸಂಕೋಚವಿಲ್ಲದೆ ಸಾರಿ ಹೇಳಿದೆ. ಸವಿಚಾರವಾಗಿ ಸಮರ್ಥಿಸಿದೆ.

"ನಿವೃತ್ತಿಃ ಪೃಥಿವೀಜ್ಞೇಯಾ ಪ್ರತಿಷ್ಠಾ ಚಾಪ ಉಚ್ಯತೇ ।
ವಿದ್ಯಾತೇಜೋ ವಿನಿರ್ದಿಷ್ಟಾ ವಾಯುಶ್ಶಾಂತಿಃಪ್ರಕೀರ್ತಿತಾ
ಶಾಂತ್ಯತೀತಾ ಭವೇದ್ವ್ಯೋಮ ಕಳಾರೂಪಾಃಪ್ರಕೀರ್ತಿತಾಃ ।

ಬ್ರಹ್ಮಾಂಡರೂಪ ಈ ಪಂಚಭೂತಗಳು ಪರಶಿವನಲ್ಲಿ ಹೇಗೆ ತಲ್ಲೀನವಾಗಿರುತ್ತವೆಯೆಂಬುದನ್ನು ಈ ಶ್ಲೋಕವು ಸ್ಪಷ್ಟಗೊಳಿಸುತ್ತದೆ. ಪಂಚಭೂತಗಳು ಪಂಚಕಳೆಗಳಾಗಿ ಲಿಂಗರೂಪಬ್ರಹ್ಮದಲ್ಲಿ ಸಮಾವೇಶಗೊಂಡಿರುತ್ತವೆ. ಅಂತೆಯೇ ಪಿಂಡದಲ್ಲಿಯೂ ಪರಿಣಮಿಸುತ್ತವೆ. ಪಿಂಡವೇ ಪಿಂಡಾಂಡವಾಗುತ್ತದೆ :

"ಪಂಚಾತ್ಮಕಮಭೂತ್ಪಿಂಡಂ ಧಾತುಬದ್ಧಂ ಗುಣಾತ್ಮಕಂ
ಸುಖದುಃಖಸಮಾಯುಕ್ತಂ ಜೀವಭಾವನವ್ಯಾಕುಲಂ
ತೇನಾತ್ಮಾಜೀವ ಇತ್ಯುಕ್ತೋ ವಿಶುದ್ಧೇ ಪರಮಾತ್ಮನಿ ।"

ಪಿಂಡವು ಪಂಚಭೂತಾತ್ಮಕವಾಗಿದೆ, ಸಪ್ತಧಾತುಗಳಿಂದ ಸಂಬದ್ಧವಾಗಿದೆ; ತ್ರಿಗುಣಗಳಿಂದ ಕೂಡಿದೆ. ಆ ಪಿಂಡವೇ ಸುಖದುಃಖಗಳಿಂದ

ಕೂಡಿ ಜೀವಭಾವದಿಂದ ವ್ಯಾಕುಲಗೊಂಡು ಜೀವನೆನಿಸಿದೆ. ಈ ಪಂಚ ಭೂತ (ಬ್ರಹ್ಮಾಂಡ) ಸ್ವರೂಪವಾದ ಪಿಂಡವು ನಿರ್ಮಲವಾದ ಆ ಪರಮಾತ್ಮ ತತ್ತ್ವವಲ್ಲಿ ತೋರಿದೆ. ಜೀವಭಾವವನ್ನು ಕಳೆದುಕೊಂಡು ಮರಳಿ ಆ ಪರ ಶಿವನಲ್ಲಿ ಪರವಶವಾಗುತ್ತದೆ.

"ಸೋಽಯಮಾತ್ಮಾ ಶಿವಸ್ಸಾಕ್ಷಾತ್ ಶಿವಸ್ಯಾಂಶೋಽಪಿ ತತ್ತ್ವತಃ
ವ್ಯವಹಾರದಶಾಯಾಂ ತು ಸಂಸಾರೀವ ಪ್ರಕಾಶತೇ |
ಸ್ವಸ್ಮಿನ್ನವಸ್ಥಿತಾಽವಿದ್ಯಾಮೋಹಿತಃ ಪುರುಷಸ್ತ್ವಕಂ
ಶಿವತ್ವಂ ಸ್ವಪರಾಂಭಕ್ತಿಮವಿಜ್ಞಾಯ ಸ್ವಕರ್ಮಣಾ ||"

ಈ ಜೀವಾತ್ಮನು ತತ್ತ್ವದಿಂದ ಅಂದರೆ ಪರಮಾರ್ಥದಿಂದ ತಿಳಿದು ನೋಡಲು ಸಾಕ್ಷಾತ್ ಶಿವಾಂಶನಾಗಿದ್ದಾನೆ. ವ್ಯವಹಾರದಶೆಯಲ್ಲಿ ಮಾತ್ರ ಸಂಸಾರಿಯೆನಿಸಿದ್ದಾನೆ ; ತನ್ನಲ್ಲಿರುವ ಅವಿದ್ಯೆಯಿಂದ ಮೋಹಿತನಾಗಿ ಕರ್ಮಿ ಯಾಗಿ ತನ್ನ ಪರಾಭಕ್ತಿಯನ್ನು ಶಿವತ್ವವನ್ನು ತಿಳಿಯದವನಾಗಿದ್ದಾನೆ; ಜೀವಾತ್ಮರೂಪ ಪಿಂಡನೆನಿಸಿದ್ದಾನೆ. ಈ ಪಿಂಡಕ್ಕೂ ಬ್ರಹ್ಮಾಂಡಕ್ಕೂ ಭೇದ ವಿಲ್ಲ. 'ಪಿಂಡಬ್ರಹ್ಮಾಂಡ ಯೋರೈಕ್ಯಂ' ಎಂದುದಾಗಿ ಸ್ಥೂಲ ಬ್ರಹ್ಮಾಂಡ ದೊಳಗುಳ್ಳ (೭೫) ಗುಣಂಗಳು ಪಿಂಡಾಂಡದಲ್ಲಿ ಸೂಕ್ಷ್ಮರೂಪಿಂದೆ ಸಂಗ್ರಹ ಮಾಗಿ ತೋರ್ಪವು'....ಪೃಥ್ವಿಗೆ ೨೫ ಗುಣ, ಅಪ್ಪುವಿಂಗೆ ೨೦ ಗುಣ, ಅಗ್ನಿಗೆ ೧೫ ಗುಣ, ವಾಯುವಿಂಗೆ ೧೦ ಗುಣ, ಆಕಾಶಕ್ಕೆ ೫ ಗುಣ, ಇಂತೀ ವಿಭೇದ ಗುಣಂಗಳು ಕೂಡಲಾಗಿ ೭೫ ಗುಣಂಗಳಾದವು.' ಇವೆಲ್ಲವೂ ಸೂಕ್ಷ್ಮವಾಗಿ ಪಿಂಡಾಂಡದಲ್ಲಿಯೂ ಇರುತ್ತವೆ.

"ಇನ್ನು ಸದ್ಗುರುದೇವನು ಮುಮುಕ್ಷುವಾದ ಶಿಷ್ಯಂಗೆ ಪಿಂಡ ಸಂಗ್ರಹದ ಹಸುಗೆಯನ್ನು ನಿರೂಪಿಸುತಿಹರು : ಬ್ರಹ್ಮಾದಿ ಸ್ತಂಭಾತ್ಯಮಾದ ಪಿಂಡವೂ ಶಿವಾದ್ಯವನೀಪರ್ಯಂತಮಾದ ಅಜಾಂಡವೂ ಈ ಎರಡೂ ಒಂದೇ ಸ್ವರೂಪವಾಗಿರುತಿಹವು. ಅದು ಹೇಗೆಂದೊಡೆ : ಪಿಂಡ ಹೆಚ್ಚಿಲ್ಲ; ಬ್ರಹ್ಮಾಂಡ ಕಡಿಮೆ ಇಲ್ಲ. ಬ್ರಹ್ಮಾಂಡ ಹೆಚ್ಚಿಲ್ಲ; ಪಿಂಡಾಂಡ ಕಡಿಮೆ ಇಲ್ಲ. ಅದು ಹೇಗೆಂದೊಡೆ,ಪಿಂಡವು ಪಂಚಭೂತ ಪಂಚವಿಂಶತಿ ತತ್ತ್ವಾತ್ಮಕವಾದಂಥಾದ್ದು. ಬ್ರಹ್ಮಾಂಡವೂ ಪಂಚಭೂತ ಪಂಚವಿಂಶತಿ ತತ್ತ್ವಾತ್ಮಕವಾದದ್ದು. ಬ್ರಹ್ಮಾಂಡ

ದೊಳಗುಂಟಾದ ಗುಣಂಗಳ ತತ್ವಂಗಳ ಆಶ್ರಯವು ಪಿಂಡದಲ್ಲಿ ಒಂದು ಮಾರು, ಮೂರುವರೆ ಮೊಳ-ತೊಂಬತ್ತಾರು ಅಂಗುಳ ಪರಿಪ್ರಮಾಣ ವನ್ನುಳ್ಳ ಮನುಜ ದೇಹದೊಳಗೆ ಸೂಕ್ಷ್ಮರೂಪಿನಿಂದ ಪರಮಾಣು ಸ್ವರೂಪಿ ನಿಂದ ಸಂಗ್ರಹವಾಗಿ ಆ ಲೋಕದಲ್ಲಿ ಅಕ್ಷರವಡಗಿದ ಹಾಗೆಯೂ, ಅಕ್ಷರದಲ್ಲಿ ಅರ್ಥವಡಗಿದ ಹಾಗೆಯೂ ಅಡಗಲ್ಪಟ್ಟವಾಗಿ ತೋರ್ಪುದು. ಪಿಂಡ ಮರ್ಯಾದೆಯಲ್ಲಿ ನೋಡಿದರೆ ಕಾಣಬಾರದು. ಶಾಸ್ತ್ರಜ್ಞಾನಕ್ಕೆ ಅಷ್ಟಷ್ಟು ಮಾತ್ರ ಕಾಣಬಹುದು. ಸ್ವಾತ್ಮಜ್ಞಾನಕ್ಕೆ ಪ್ರತ್ಯಕ್ಷವಾಗಿ ಕಾಣಬರು ತಿಹುದು....ಚತುರ್ದಶ ಭುವನಂಗಳೊಡನೆ ಕೂಡಿದ ಬ್ರಹ್ಮಾಂಡದಲ್ಲಿ ಎಂಬತ್ತುನಾಲ್ಕು ಲಕ್ಷ ಪ್ರಕಾರವಾದ ಪಿಂಡಗಳ ಸಮೂಹವು ಉಂಟಾದಂತಹ ವಿಚಾರವು. ಮತ್ತಂತುಮಲ್ಲದೆ ಸ್ಥೂಲ ಬ್ರಹ್ಮಾಂಡದೊಳಗುಳ್ಳ ಗುಣಂಗಳಾ ಶ್ರಯವೆಲ್ಲವೂ ಪಿಂಡದಲ್ಲಿ ಅತಿ ಸೂಕ್ಷ್ಮರೂಪಿನಿಂದ ಅಡಗಿರುವಂತಹ ಹಸಿ ಗೆಯ ವಿಚಾರವು ಎಂಬುದೀಗ ಪಿಂಡಸಂಗ್ರಹವೆಂಬ ಶಬ್ದಕ್ಕರ್ಥವು.

ಈ ನಿದರ್ಶನದಿಂದ ಪಿಂಡಾಂಡದ ಪರಿಪೂರ್ಣತೆ, ಪಿಂಡಾಂಡ-ಬ್ರಹ್ಮಾಂಡಗಳ ಅಭಿನ್ನತೆ ಅಭಿವ್ಯಕ್ತವಾಗುತ್ತವೆ. ಪಿಂಡಾಂಡ ಬ್ರಹ್ಮಾಂಡ ಗಳೆರಡೂ ಹಾಸುಹೊಕ್ಕಾಗಿವೆ. ಸತ್ಯ ಶಾಶ್ವತವಾಗಿವೆ. ಪೂರ್ಣದಿಂದ ಹುಟ್ಟಿದ ಇವು ಪೂರ್ಣವಸ್ತುಗಳಾಗಿವೆ. ಶಿವ-ಜೀವರಂತೆ ಭಿನ್ನಾಭಿನ್ನ ವಸ್ತುಗಳಾಗಿವೆ.

ಸಹಜ

ಷಟ್‌ಸ್ಥಲ ಸಿದ್ಧಾಂತದಲ್ಲಿ ಸಹಜ ಪದ ಸಂಪೂರ್ಣ ಗಮನಾರ್ಹ ಪದ. ನಿಜ, ಸ್ವಾಭಾವಿಕ, ಸತ್ಯ, ಉಚಿತ ಮುಂತಾದ ರೂಢಾರ್ಥಗಳಿಗೆ ಹೆಚ್ಚು ಬಳಕೆಯುಂಟು. ಜತೆಗೆ 'ಒಡಹುಟ್ಟು' ಎಂಬ ಯೋಗಾರ್ಥದ ಧ್ವನಿಯೂ ಸಂದರ್ಭಾನುಸಾರವಾಗಿ ತೋರುವುದುಂಟು. ಅಂಗಕ್ಕೆ ಲಿಂಗ ಸಹಜ, ಲಿಂಗಕ್ಕೆ ಅಂಗ ಸಹಜ; ಅಂತೆಯೆ ಮುಕ್ತನಿಗೆ ಭಕ್ತ ಸಹಜ, ಭಕ್ತನಿಗೆ ಮುಕ್ತ ಸಹಜ ಎಂದು ಹೇಳುವಾಗ ಅದಕ್ಕಿಂತ ಉತ್ತಮ ಪದ ನಮಗೆ ಸಿಕ್ಕುವುದಿಲ್ಲ. ಶಿವನಲ್ಲಿ ಶಕ್ತಿ ಸಹಜ; ಶಕ್ತಿಯಲ್ಲಿ ಶಿವನು ಸಹಜ.

ಸಹಜತೆ ಎಲ್ಲಿದೆಯೋ ಅದು ಸರ್ವಮಾನ್ಯ; ಅದು ಸಚ್ಚಿದಾನಂದ ನಿತ್ಯಪರಿಪೂರ್ಣ ಚೈತನ್ಯ. ಅದು ಸಹಜವಸ್ತು. ಅದನಾರಾಧಿಸುವ ಅಂಗನು ಸಹಜನಾಗಬೇಕು. ಸಹಜತೆಯಿಲ್ಲದವನು ಸದ್ಭಕ್ತನಾಗನು ; ಸದ್ಯೋ ಮುಕ್ತನಾಗನು. ಸಹಜತೆಗೆ ಸಾಟಿ ಬೇರೊಂದಿಲ್ಲ.

'ನಿಜವನರಿದ ನಿಶ್ಚಿಂತನೆ, ಮರಣವ ಗೆಲಿದ ಮಹಂತನೆ, ಘನವನೊಳ ಕೊಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ, ಬಯಲಲೊಡಗಿದ ಭರಿತನೆ, ಗೊಗ್ಗೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ.'

ನಿರಾಳತೆಯನೊಳಕೊಳ್ಳುವವರೆವಿಗೂ ಸಹಜತೆ ಸಮನಿಸದು. ನಿರಾ ಳತೆ ಇಬ್ಬಗೆ. ಆಕಾಶಕ್ಕೆ ಆಕಾಶವಾದ ಪರಾಕಾಶವೊಂದು ನಿರಾಳ. ಯಾವ ಚಿಂತೆಯಿಲ್ಲದೆ ಶಾಂತಿಯಿಂದಿರುವುದಿನ್ನೊಂದು ನಿರಾಳ. ಅದು ಲಿಂಗ ಲಕ್ಷಣ; ಇದು ಅಂಗ ಲಕ್ಷಣ. ಭಕ್ತನ ತನು ಮನ ಭಾವಗಳಲ್ಲಿ ಸಹಜತೆ ಸಮನಿಸದೆ ನಿರಾಳತೆ ನೆಲಸದೆ ಸ್ವಾಭಾವಿಕತೆ ಸಂಪ್ರಾಪ್ತವಾಗದೆ ಅಲಿಪ್ತ ಮತ್ತು ಅನಂತ ಶಕ್ತಿ ಸಂಭವಿಸದು. ಮಹಂತ ಶಾಂತಿ ಮೈಗೂಡದು.

'ಆತ್ಮ ತೇಜವ ಬಿಟ್ಟಾಗವೆ ಗುರುವರಿದವ.
ಮನವಿಕಾರವ ಬಿಟ್ಟಾಗವೆ ಲಿಂಗವನರಿದವ.

ಧನವಿಕಾರವ ಬಿಟ್ಟಾಗವೆ ಜಂಗಮುವನರಿದವ.
ಇಂತೀ ತ್ರಿವಿಧ ನಾಸ್ತಿಯಾದವಂಗಲ್ಲದೆ
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸಹಜಭಕ್ತನಲ್ಲ.'

ಇಲ್ಲಿ ಬಳಸಿದ ಸಹಜ ಪದಕ್ಕೆ ರೂಢಾರ್ಥ ಯೋಗಾರ್ಥಗಳೆರಡೂ ಉಂಟು. ತನುತ್ರಯು ವಿಕಾರ ತಾನಾಗುವ ಭಕ್ತನಿಗೆ ಉಚಿತವಲ್ಲ. ಕಾಯದಾಚಾರದಲ್ಲಿ ವ್ಯವಹಾರದಲ್ಲಿ ಕೃತ್ರಿಮತೆ ಇರಬಾರದು. ಮನದ ವಿಚಾರದಲ್ಲಿ ಕುಹಕತೆ ಕುಚಿಂತನೆಗಳಿರಬಾರದು. ಭಾವದಲ್ಲಿ ಭ್ರಾಂತಿ ಭಯ ಗಳಿರಬಾರದು, ಭಿನ್ನತೆಯಿರಬಾರದು. ತ್ರಿಕರಣಗಳಲ್ಲಿ ಶುಚಿ ಸರಳತೆ ಸ್ವಾಭಾವಿ ಕತೆಗಳಿರಬೇಕು. ಇಹ–ಪರಗಳಲ್ಲಿ ಸಮದರ್ಶಿಯಾಗಿರಬೇಕು. ಆಶೆ– ನಿರಾಶೆಗಳೆರಡನ್ನೂ ಜಯಿಸಿರಬೇಕು. ಮಾಡುವ ಮಾಟದಲ್ಲಿ ನೊಡುವ ನೋಟನಲ್ಲಿ ನಿಚ್ಚಟನಾಗಿರಬೇಕು. ತ್ಯಾಗ ಭೋಗ ಯೋಗಗಳಲ್ಲಿ ಸತ್ಯತೆ ಸಮನ್ವಯತೆಗಳಿರಬೇಕು. ಅರ್ಚನ–ನಿವೇದನಗಳಲ್ಲಿ ನಿರಹಂತತೆಯಿರ ಬೇಕು. ಹೀಗಿರದೆ ಲಿಂಗರೂಪನಾದ ನಿಃಕಳಂಕ ಮಲ್ಲಿಕಾರ್ಜುನನ ಒಡ ಹುಟ್ಟು ನಿಲುಕದು.

ಸಹಜ ಶಬ್ದದರ್ಥ ಅರಿತಷ್ಟೂ ಆಳ; ಆಚರಿಸಿದಷ್ಟೂ ನಿರುಪಮ ಸುಖ ಶಾಂತಿ ಮೇಳ. ಅದಕಿಂತ ಬೇರಿಲ್ಲ ನಿರಾಳ.

ನಡೆ ನುಡಿಯಲ್ಲಿ ಊಟ ಉಡಿಗೆಯಲ್ಲಿ ಆಚಾರ ವಿಚಾರಗಳಲ್ಲಿ ಭಾವ ಅನುಭಾವಗಳಲ್ಲಿ ಸುಳುಹು–ಹೊಳಹುಗಳಲ್ಲಿ ಋಜುತನವಿದ್ದಾಗಬೇಕು. ಸತ್ಯ ಶುದ್ಧತೆ ಸ್ವಾಭಾವಿಕತೆ ನೈಜತೆ ಇವು ಸಹಜತೆಯ ಸರ್ವಸ್ವಗಳು.

ಮೊದಲು ಧನದಲ್ಲಿ ಶುಚಿಯುಳವಡದೆ ತನುಮನದಲ್ಲಿ ಶುಚಿತನ ಬಾರದು; ಸಹಜತೆ ಬಾರದು. 'ಸತ್ಯ ಶುದ್ಧ ಕಾಯದಿಂದ ಬಂದ ದ್ರವ್ಯ ದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯೆಂದಿನ ನಿತ್ಯ ನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸಹಜ ಸೇವೆ ನಷ್ಟವಯ್ಯಾ!' 'ಕೈದ ಹಿಡಿದಾಡುವವರೆಲ್ಲಾ ಇರಿವರೆ? ಸಾಧನೆಯ ಮಾಡಬಲ್ಲವರೆಲ್ಲರೂ ಕಾದಬಲ್ಲರೆ? ಅರ್ಥಿಗೆ ಮಾಡುವ ಕೃತ್ಯವಂತರೆಲ್ಲರೂ ಭಕ್ತರಪ್ಪರೆ? ಅದು

ಚಂದೇಶ್ವರಲಿಂಗಕ್ಕೆ ಮುಟ್ಟದ ಮಾಟ.' '....ಅರ್ಥ ಪ್ರಾಣಾಭಿಮಾನ ಮೂರನು ಕರ್ತಂಗಿತ್ತು ಮತ್ತೆ ಹೊತ್ತ ಹೋರುವಂಗೆ ಸದ್ಭಕ್ತಿಯುಂಟೆ ? ಅದು ಚಂದೇಶ್ವರ ಲಿಂಗಕ್ಕೆ ಮುಟ್ಟದ ಮಾಟ.' ಈ ದಿಸೆಯಲ್ಲಿ ಈ ಮಾತುಗಳು ಮಾರ್ಮಿಕವಾಗಿವೆ; ಗಮನಾರ್ಹವಾಗಿವೆ. ಅರ್ಥ ಪ್ರಾಣ ಅಭಿಮಾನಗಳಲ್ಲಿ ಸಹಜತೆಯಿರಬೇಕೆಂಬುದನ್ನು ಎತ್ತಿ ತೋರಿವೆ; ಒತ್ತಿ ಒತ್ತಿ ಬೀರಿವೆ.

ಅರಿವು ಆಚಾರಗಳು ಸಹಜವಾದಾಗ ಲಿಂಗವೆನಿಸುತ್ತವೆ. ಅಂತಹ ಲಿಂಗೋಪಾಸಕನೇ ಸಹಜ ಭಕ್ತನೆನಿಸುತ್ತಾನೆ. ಅಂತೆಯೇ ಸ್ವಗತಿ ಸ್ವಾನುಭೂತಿಗಳಲ್ಲಿ ಸಹಜ ಅಳವಟ್ಟರೆ ಸಹಜ ಮುಕ್ತನಾಗುತ್ತಾನೆ.

ಸಹಜವೇ ಸರ್ವಮೂಲವಸ್ತು. ಸಹಜದಿಂದ ಸರ್ವವು. ನಿರಾಲಂಬಕ್ಕೂ ಮೂಲವಾಗಿದೆ ಸಹಜ.

'ಸಹಜದಿಂದ ನಿರಾಲಂಬವಾಯಿತು. ನಿರಾಲಂಬದಿಂದ ನಿರಾಳವಾಯಿತ್ತು. ನಿರಾಳದಿಂದ ನಿರವಯುವಾಯಿತ್ತು. ನಿರವಯದಿಂದ ಅನಾದಿಯಾಯಿತ್ತು. ಅನಾದಿಯಲ್ಲಿ ಮೂರ್ತಿಯಾದನೊಬ್ಬ ಶರಣ. ಆ ಶರಣನ ಮೂರ್ತಿಯಿಂದ ಸದಾಶಿವನಾದ. ಆ ಸದಾಶಿವನ ಮೂರ್ತಿಯಿಂದ ಶಿವನಾದ. ಆ ಶಿವನ ಮೂರ್ತಿಯಿಂದ ರುದ್ರನಾದ. ಆ ರುದ್ರನ ಮೂರ್ತಿಯಿಂದ ವಿಷ್ಣುವಾದ. ಆ ವಿಷ್ಣುವಿನ ಮೂರ್ತಿಯಿಂದ ಬ್ರಹ್ಮನಾದ. ಆ ಬ್ರಹ್ಮನ ಮೂರ್ತಿಯಿಂದಲಾದವು ಸಕಲ ಜಗತ್ತುಗಳೆಲ್ಲಾ. ಇವರೆಲ್ಲ ನಮ್ಮ ಗೊಹೇಶ್ವರನ ಕರಸ್ಥಲದ ಹಂಗಿನಲ್ಲಿ ಹುಟ್ಟ ಬೆಳೆದರು.'

ಬೇರೊಂದನ್ನು ಅವಲಂಬಿಸದೆ ಇರುವ ಮೂಲ ಚಿದ್ವಸ್ತುವಿನ ಸ್ವಭಾವವೇ ಸಹಜ. ಆ ಸಹಜವು ನಿರಾಲಂಬಕ್ಕೆ ಮೊದಲಿನದಾಗಿದೆ; ಮೂಲವಾಗಿದೆ. ಅಂತಹ ಸಹಜಕ್ಕೆ ಮತ್ತೊಂದು ಮೂಲವಿಲ್ಲ.

ಈ ವಚನದಲ್ಲಿ ಬರುವ ನಿರವಯ ವಸ್ತುವೇ ಚಿತ್ಕಳೆ. ನಿರಾಳ ವಸ್ತುವೇ ಚಿನ್ನಾದ, ನಿರಾಲಂಬ ವಸ್ತುವೇ ಚಿದ್ಬಿಂದು. ಆ ಚಿದ್ಬಿಂದುವಿನ ಉದಯಕ್ಕೆ ಕಾರಣವಾದುದೇ ಸಹಜ.

ಅನಾದಿ ಎಂಬುದೇ ಶೂನ್ಯ. ಶೂನ್ಯಾಕಾರವಾದ ಲಿಂಗ. ಇದು ಸಾವಯುವಿಯೂ ಅಲ್ಲ; ನಿರವಯುವಿಯೂ ಅಲ್ಲ. ಮುಂದಿನ ಸಾವಯುವ ಶರಣನ ಉದಯಕ್ಕೆ ಮೂಲ.

'ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೆ ಹುಟ್ಟಿ ಬೆಳೆದೆಯಲ್ಲಾ !
ನಿನ್ನ ಪರಿಣಾಮವೆ ನಿನಗೆ ಪ್ರಾಣತೃಪ್ತಿಯಾಗಿರ್ದೆಯಲ್ಲಾ !
ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೇ ಬೆಳಗುತಿರ್ದೆಯಲ್ಲಾ !
ನಿನ್ನ ಚಾರಿತ್ರ ನಿನಗೆ ಸಹಜ ಗೊಹೇಶ್ವರಾ !'

ಆ ಪರಮ ಚೈತನ್ಯಕ್ಕೆ ತಾಯಿ ಯಾರು, ತಂದೆ ಯಾರು ? ಅದರ ತೋರಿಕೆಗೆ, ಅದರ ಬೆಳವಣಿಗೆಗೆ ಕಾರಣ ಬೇರೆ ಯಾರು ? ಅದರ ತೃಪ್ತಿಗೆ ಪ್ರಸಾದ ಬೇರೆ ಯಾವುದು ? ಅದನ್ನು ಭೇದಿಸುವವರಾರು ? ಅದನ್ನು ಬೆಳಗುವ ಬೆಳಗಾವುದು ? ಅದನ್ನು ಹುಟ್ಟಿಸುವರಿಲ್ಲ, ಬೆಳಸುವರಿಲ್ಲ, ತೃಪ್ತಿಪಡಿಸುವರಿಲ್ಲ. ಅದು ಅನ್ಯರಿಂದ ಭೇದ್ಯವಲ್ಲ, ಬೆಳಗುವುದಲ್ಲ. ಅದರ ಚಾರಿತ್ರ ಅದಕ್ಕೆ ಸಹಜ. ಆ 'ಸಹಜವ ನೆಲೆಗೊಳಿಸುವ ನಿರ್ಣಯ ನಿಃಪತಿಯೆ ಗುರು ನೋಡಾ.' ಎಂದು ಹೇಳಿ ಗುರು ಹಿರಿಮೆಯ ಸಾರಿದಳು ಮುಕ್ತಾಯಕ್ಕ ! ಮುಕ್ತರರಿಯಬೇಕಲ್ಲದೆ ಸಕ್ತರರಿಯರು. ಶ್ರೀಗುರು ಸಹಜ ಜ್ಞಾನಿ; ಸುಮ್ಮಾನಿ.

ಸ್ವಭಾವ

ಸಹಜವೆಂದರೆ ಶಿವ. ಸ್ವಭಾವವೆಂದರೆ ಶಕ್ತಿ. ಸಹಜದಲ್ಲಿ ಸ್ವಭಾವವು ಸ್ವಾಭಾವಿಕವಾಗಿರುತ್ತದೆ. ಸ್ವ-ಭಾವ ಎಂದು ವಿಶ್ಲೇಷಿಸಿ ವಿಚಾರಿಸಿದಾಗ ಸ್ವಭಾವದ ಶಕ್ತಿ, ಸ್ವಭಾವದ ನೆಲೆ ಕಲೆಗಳು ಸ್ವಾನುಭಾವಕ್ಕೆ ಸಮನಿಸುತ್ತವೆ.

"ಸಾಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೇ ಜ್ಞಾನ ಬಲ ಕ್ರಿಯಾ ಚ"

ಈ ಶ್ರುತಿ ನಮಗಾವ ಅನುಭೂತಿಯನ್ನು ಅನುಗ್ರಹಿಸುತ್ತದೆ? ಶಕ್ತಿ ಸ್ವಾಭಾವಿಕೇ ಎಂದಲ್ಲವೆ? ಸ್ವಭಾವಾತ್ಮಕವಾದುದೇ ಶಕ್ತಿ.

'ಸ್ವ-ಭಾವ' ಅಂದರೆ ತನ್ನ ಇರುವೇ ತನ್ನ ಶಕ್ತಿ. ತನ್ನ ಇರುವಿಕೆಗಿಂತ ಬೇರಿಲ್ಲ ಶಕ್ತಿ. ಆ ಪರಶಿವನ ಸತ್ತೆಯೇ ಶಕ್ತಿ ತತ್ತ್ವ. ಅಂತೆಯೇ ಆತನ ಚಿದ್ರೂಪವೇ ಶಕ್ತಿ. ಬಲ ಕ್ರಿಯೆಗಳೂ ಶಕ್ತಿ ಸ್ವರೂಪ. ಸಚ್ಚಿದಾನಂದತ್ವವೇ ಶಕ್ತಿ ತತ್ತ್ವ. ನಿತ್ಯಪರಿಪೂರ್ಣಾಖಂಡರೂಪವೇ ಶಕ್ತಿತ್ವ. ಸ್ವಭಾವರೂಪ ಸ್ವಶಕ್ತಿಯಿಲ್ಲದೆ ಸರ್ವಶೂನ್ಯನಿರಾಲಂಬ ವಸ್ತುವಿಗೆ ಚೇತನವಿಲ್ಲ; ಸ್ಫುರಣವಿಲ್ಲ.'

"ಶಕ್ತಿರ್ಯಾ ತು ಸ್ವಭಾವಾಖ್ಯಾ ಯಥಾ ಸ್ಫುರತಿ ಚಾತ್ಮನಃ ।
ಸರ್ಗಾದಿಷು ತಥೈವಾಸೌ ಸ್ಥಿತಿಂ ಯಾತೀತಿ ನಿಶ್ಚಯಃ ॥"

—ಯೋಗವಾಸಿಷ್ಠ

ಸ್ವಭಾವವೇ ಶಕ್ತಿಯೆಂಬುದನ್ನು ಯೋಗವಾಸಿಷ್ಠವೂ ಒಪ್ಪಿಕೊಂಡಿದೆ. ಸ್ವಭಾವಾಖ್ಯಶಕ್ತಿಯೆಂದು ಒಕ್ಕಣಿಸಿದೆ. ಅಂತೆಯೇ ಸಹಜದ ಸ್ಫುರಣೆಗೆ ಕಾರಣವಾಗಿದೆ. ಕಾರಣವಲ್ಲ ಕೇವಲ ಶಿವಸ್ವರೂಪವೇ ಆಗಿದೆ.

ಸ್ವಭಾವ ಸರ್ವವ್ಯಾಪಿ; ಸರ್ವಸ್ವರೂಪಿ. ಸರ್ವದರಲ್ಲಿಯೂ ಅದು ಪ್ರತಿಷ್ಠಿತವಾಗಿದೆ; ಪ್ರತಿಭಾನ್ವಿತವಾಗಿದೆ.

"ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚಕ್ಷುಷಿ,
ಯಾ ಚ ಮನಸಿ ಸತತಾ ಶಿವಾಂ ತಾಂ ಕುರೂಮೋತ್ಕ್ರಮೀಃ ।
ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇಯತ್ಪ್ರತಿಷ್ಠಿತಮ್
ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ನಃ ॥"

—ಪ್ರಶ್ನೋಪನಿಷತ್

ಪ್ರಶ್ನೋಪನಿಷತ್ತಿನ ಈ ಪ್ರಾರ್ಥನೆಯಲ್ಲಿ ಸ್ವಭಾವಶಕ್ತಿಯ ವ್ಯಾಪ್ತಿ ಶಕ್ತಿಗಳು ಚಿತ್ರಿತವಾಗಿವೆ. ಅದು ಪಿಂಡಾಂಡ ಬ್ರಹ್ಮಾಂಡಗಳೆರಡನ್ನೂ ವ್ಯಾಪಿಸಿದೆ. ಪಿಂಡಾಂಡದ ಪ್ರತ್ಯಂಗದಲ್ಲಿ ಕ್ರಿಯಾ ಜ್ಞಾನ ಬಲಗಳ ಸ್ವರೂಪ ದಲ್ಲಿರುತ್ತದೆ. ಇಚ್ಛೆಯಾಗಿರುತ್ತದೆ. ಶಿವವಾಗಿರುತ್ತದೆ. ಪ್ರಾಣಪ್ರೇರಕ ವಾಗಿರುತ್ತದೆ. ತಾಯಿಯಂತೆ ಕಾಪಾಡುವ ಕಲಿತನವುಳ್ಳದಾಗಿರುತ್ತದೆ. ಅಂತೆಯೇ ಆ ಸ್ವಭಾವ ಶಕ್ತಿಯನ್ನು ಔಪನಿಷದರು ಉಪಾಸನ ಮಾಡಿದರು.

ವಾಣಿಗೆ ವಾಣಿಯಾಗಿ ಕರ್ಣಕ್ಕೆ ಕರ್ಣವಾಗಿ ಕಣ್ಣಿಗೆ ಕಣ್ಣಾಗಿ ಮನಕ್ಕೆ ಮನವಾಗಿ ಇವೆಲ್ಲಕ್ಕೂ ಮಂಗಳವನ್ನುಂಟುಮಾಡೆಂದು ಮಾತೃರಕ್ಷಣೆಯ ನ್ನುಂಟುಮಾಡೆಂದು ಇವು ಉತ್ಕ್ರಮಣವಾಗದಂತೆ ಮಾಡೆಂದು ಯಾವ ಜ್ಜೀವವೂ ಸುಪ್ರತಿಷ್ಠಿತವಾಗಿರಿಸೆಂದು ಇವಕ್ಕೆಲ್ಲ ಶಕ್ತಿಸಂಪತ್ತಿಯನ್ನು ಸಂಪತ್ತಿಯನ್ನು ಅನುಗ್ರಹಿಸೆಂದು ಅಂತಃಕರಣಪೂರ್ವಕ ಪ್ರಾರ್ಥಿಸಿದರು.

ಸಹಸ್ರಾರದಲ್ಲಿರುವ ಸಹಜದಲ್ಲಿ ಸ್ವಭಾವವಾಗಿರುತ್ತದೆ. ಅದೇ ಆಜ್ಞಾ ಚಕ್ರದಲ್ಲಿರುವ ಮಹಾಲಿಂಗದಲ್ಲಿ ಅಚಿಂತ್ಯ ಚಿಚ್ಛಕ್ತಿಯಾಗಿರುತ್ತದೆ. ಅಲ್ಲಿ ಸ್ಫುರಿಸಿದ ಶಕ್ತಿ ವಿಶುದ್ಧ ಅನಾಹತ ಮಣಿಪೂರ ಸ್ವಾಧಿಷ್ಠಾನ ಆಧಾರಗಳಲ್ಲಿ ಹರಡಿ ಕುಂಡಲನಿ ಶಕ್ತಿಯಾಗಿ ಸಂಚರಿಸುತ್ತದೆ. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಜ್ಞಾನಶಕ್ತಿಯಾಗಿ ಕ್ರಿಯಾಶಕ್ತಿಯಾಗಿ ಕ್ರಮವಿಡಿದು ಬಲವನ್ನೀಯುತ್ತದೆ. ಅಂತಃಕರಣದಲ್ಲಿ ಇಚ್ಛಾಶಕ್ತಿಯಾಗಿರುತ್ತದೆ. ತರಂಗ ದಂತಿರುತ್ತದೆ. ಎಲೆ ಹೂವು ಕಾಯಿಗಳಂತಿರುತ್ತದೆ. ಮರಳಿ ಇದು ಆ ಸಹಸ್ರಾರದಲ್ಲಿರುವ ಸಹಜದಲ್ಲಿ ಸೇರುವವರೆವಿಗೂ ಶಾಂತಿಯಿಲ್ಲ, ವಿಶ್ರಾಂತಿ ಯಿಲ್ಲ. ಅಲ್ಲಿ ಸೇರುವ ಬಗೆಯನ್ನು ಕಠವಲ್ಲಿಯು ಹೀಗೆ ಹೇಳಿದೆ:

"ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇದ್ ಜ್ಞಾನ ಆತ್ಮನಿ ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾಂತ ಆತ್ಮನಿ ॥"

ಬುದ್ಧಿವಂತನು ವಾಗಾದಿ ಇಂದ್ರಿಯಗಳನ್ನು ಮನಸ್ಸಿನಲ್ಲಿ, ಮನಸ್ಸನ್ನು ಬುದ್ಧಿಯಲ್ಲಿ, ಬುದ್ಧಿಯನ್ನು ಮಹತ್ತತ್ತ್ವದಲ್ಲಿ, ಮಹತ್ತತ್ತ್ವವನ್ನು ಶಾಂತಾತ್ಮನಾದ ಪರಶಿವನಲ್ಲಿ ಲೀನಗಳಿಸಬೇಕು. ಆಗ ಅನೇಕ ಬಗೆಯಾದ ಶಕ್ತಿಯು ಏಕವಾಗುತ್ತದೆ. ಅಸ್ವಭಾವವನ್ನು ಬಿಟ್ಟು ಸ್ವ-ಭಾವವನ್ನು ತಳೆಯುತ್ತದೆ. ಇದಾಗಬೇಕಾದರೆ ಸುಷುಮ್ನಾ ಮಾರ್ಗದಲ್ಲಿ ಸಾಗಬೇಕು. ಅಲ್ಲಿ ಸಾಗಬೇಕಾದರೆ ಶ್ರೀಗುರುವಿನ ಕರುಣೆಯಿರಬೇಕು. ಶ್ರೀಗುರು ಅದನ್ನೆಲ್ಲ ತಿಳಿಸಿ ಆ ಹದುಳ ಹೆದ್ದಾರಿಯಲ್ಲಿ ಕಳುಹುತ್ತಾನೆ. ಆ ಶ್ರೇಷ್ಠ ಶಕ್ತಿಯನ್ನು ಅಳವಡಿಸುತ್ತಾನೆ. ಏಕಾಗ್ರತೆಯನ್ನು ಅನುಗ್ರಹಸಿ ಆ ಬ್ರಾಹ್ಮೀಸ್ಥಿತಿಯಾದ ಸ್ವ-ಭಾವವನ್ನುಂಟುಮಾಡುತ್ತಾನೆ. ಸ್ವಕೀಯ ಭಾವವನ್ನು ತಳೆಯುವುದೇ ಸಹಜವಾದ ಬ್ರಾಹ್ಮೀಸ್ಥಿತಿ; ಅದೇ ಪರಾಗತಿ. ಅದನ್ನು ಆರ್ಜಿಸಿದಾಗ ಶಕ್ತಿ ಪ್ರದೀಪ್ತವಾಗುತ್ತದೆ. ದಿವ್ಯಜ್ಞಾನ ಉದಯವಾಗುತ್ತದೆ. ಅಜ್ಞಾನ ಲಯವಾಗುತ್ತದೆ. ವಿಪರ್ಯಯ-ವಿಕಲ್ಪಾದಿ ಆವರಣಗಳು ನಿವಾರಣವಾಗುತ್ತವೆ. ಕಾರ್ಮಿಕ ಮಾಯಿಕಾದಿ ಮಲಗಳು ನಿರ್ಮಲವಾಗುತ್ತವೆ. ಆಗ ಸಹಜ ಸ್ವಭಾವವಳವಡುತ್ತದೆ.

ಸಹಜಕ್ಕೂ ಸ್ವಭಾವಕ್ಕೂ ಭೇದವಿಲ್ಲ ತೇಜೋಷ್ಣಗಳಂತೆ ಜಲದ್ರವಗಳಂತೆ ಪುಷ್ಪಪರಿಮಳದಂತೆ ಅಭಿನ್ನವಾಗಿವೆ. ನಾಮ ಭಿನ್ನವಾದರೂ ವಸ್ತುವೊಂದೆ !

ತರಂಗಗಳಿಂದ ಕೂಡಿದ ಜಲದಂತಿರುವವನೇ ಭಕ್ತ. ತರಂಗವಿಲ್ಲದ ಜಲದಂತಿರುವವನೇ ಮುಕ್ತ.

ಭಕ್ತಸ್ಥಲ ಭಗವದ್ಗೀತೆ

ಹದಿನೈದು ಉಪಸ್ಥಲವುಳ್ಳ ಭಕ್ತಸ್ಥಲವೇ ಭಗವದ್ಗೀತೆ. ಪಿಂಡಸ್ಥಲದಿಂದ ಪ್ರಾರಂಭವಾಗಿ ಸಹಜದಾನಸ್ಥಲಕ್ಕೆ ಭಕ್ತಸ್ಥಲ ಪೂರೈಸುತ್ತದೆ. ಭಗವದ್ಗೀತೆಯೂ ಸಹ ಪಿಂಡಸ್ಥಲ–ಸಂಸಾರ ಹೇಯಸ್ಥಲಗಳುಳ್ಳ ಪ್ರಥಮಾಧ್ಯಾಯದಿಂದ ಪ್ರಾರಂಭವಾಗಿ ಸಹಜದಾನ ಅಥವಾ ಸನ್ಯಾಸಯೋಗಗಳನ್ನು ನಿರೂಪಿಸುವ ಹದಿನೆಂಟನೆಯ ಅಧ್ಯಾಯಕ್ಕೆ ಪೂರ್ವ ಭಗವದ್ಗೀತೆಯು ಪೂರೈಸುತ್ತದೆ. ಇನ್ನು ಉತ್ತರ ಗೀತೆಯು ಭಕ್ತಸ್ಥಲದ ಲಿಂಗಸ್ಥಲಗಳನ್ನು ತನ್ನ ನಾಲ್ಕಧ್ಯಾಯಗಳಲ್ಲಿ ನಿರೂಪಿಸುತ್ತದೆ. ಅಂತು ಪೂರ್ವೋತ್ತರ ಗೀತೆಗಳೆರಡು ಅಂಗ–ಲಿಂಗಸ್ಥಲಗಳುಳ್ಳ ಬರೀ ಭಕ್ತಸ್ಥಲವನ್ನು ಬಿತ್ತರಿಸಿವೆ.

ಅರ್ಜುನ ಭಕ್ತ. ಶ್ರೀಕೃಷ್ಣ ಗುರು. ಗುರುಕಾರುಣ್ಯವೇ ಗೀತೆಯ ಹೃದಯವಾದ ಓಂತತ್ಸತ್. ಇದರೊಳಗಿನ ಓಂಕಾರವೇ ಭಾವಾವಚ್ಛಿನ್ನ ಚೈತನ್ಯಾತ್ಮಕ ಭಾವಲಿಂಗ. 'ತತ್'ವೇ ಪ್ರಾಣಾವಚ್ಛಿನ್ನ ಚೈತನ್ಯಾತ್ಮಕ ಪ್ರಾಣಲಿಂಗ. 'ಸತ್'ವೇ ಕಾಯಾವಚ್ಛಿನ್ನ ಚೈತನ್ಯಾತ್ಮಕ ಕ್ರಿಯಾಲಿಂಗ. ವೀರಶೈವರು ಹೇಳುವ ಕ್ರಿಯಾಯೋಗ ಜ್ಞಾನಯೋಗ ಭಕ್ತಿಯೋಗಗಳನ್ನೇ ಭಗವದ್ಗೀತೆಯೂ ಹೇಳಿದೆ.

"ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃಸ್ಮೃತಃ"

ಗೀತಾ, ಅ–೧೭, ಶ್ಲೋ–೨೩

ಬ್ರಹ್ಮಚೈತನ್ಯವು ಓಂ–ತತ್–ಸತ್ ಎಂದು ಮೂರುಬಗೆಯಾಗಿ ನಿರ್ದೇಶಗೊಂಡಿದೆಯೆಂದು ಗೀತೆ ಹೇಳಿದೆ. ಇದೇ ಅಭಿಪ್ರಾಯವನ್ನು ರೇಣುಕಗೀತೆಯಾದ ಸಿದ್ಧಾಂತ ಶಿಖಾಮಣಿಯು,

"ಏಕ ಏವ ಶಿವಸ್ಸಾಕ್ಷಾತ್ಸರ್ವಾನುಗ್ರಾಹಕಃ ಪ್ರಭುಃ ।
ಗುರು-ಜಂಗಮ-ಲಿಂಗಾತ್ಮಾ ವರ್ತತೇ ಭುಕ್ತಿ ಮುಕ್ತಿದಃ ॥"

ಎಂದು ಹೇಳಿದೆಯಲ್ಲದೆ ಪರಬ್ರಹ್ಮಚೈತನ್ಯದ ವಿಚಾರವನ್ನು ಇನ್ನೂ ಸಾಕಷ್ಟು ಅಯ್ವತ್ತೇಳು ಹಂತದಲ್ಲಿ ವಿವರಿಸಿದೆ. ಈ ಪೂರ್ವ ಭಗವದ್ಗೀತೆಯಲ್ಲಿ ಮಾತ್ರ 'ಓಂ ತತ್ಸತ್' ಎಂಬ ಒಂದೇ ಒಂದು ಮಾತನ್ನು ಕಾಣುತ್ತೇವೆ. ಇದಿರಲಿ.

ಅಂಗನನ್ನು ಅಂದರೆ ಸಾಧಕನನ್ನು ಭಕ್ತನಾಗೆಂದು ಬೋಧಿಸುವುದೇ ಭಗವದ್ಗೀತೆಯ ಚರಮ ಆಜ್ಞೆ:

"ಸರ್ವಗುಹ್ಯತಮಂ ಭೂಯಃ ಶ್ರುಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಂ ॥
ಮನ್ಮನಾ ಭವ ಮದ್ಭಕ್ತೋ ಮದ್ಯಾಜಿ ಮಾಂ ನಮಸ್ಕುರು ।
ಮಾಮೇ ವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥
ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥"

ಈ ಮೂರು ಮುಕ್ತಾಯದ ಮಾತುಗಳಿಂದ ಭಗವದ್ಗೀತೆಯ ಗುರಿ ಭಕ್ತಸ್ಥಲವೊಂದೇ ಎಂಬುದು ಯಾವ ಸಂದೇಹವಿಲ್ಲದೆ ಸ್ಪಷ್ಟವಾಗುತ್ತದೆ. ಈ ಬೀಜಪ್ರಾಯವಾದ ಅಭಿಪ್ರಾಯವನ್ನು ಮುಂದೆ ವಿವರಿಸಲಾಗಿದೆ.

ಗೀತೆಯ ಮೊದಲನೆಯ ಅಧ್ಯಾಯದಲ್ಲಿ ಪಿಂಡಸ್ಥಲ ಪ್ರತಿಪಾದಿತವಾಗಿದೆ. ಅರ್ಜುನನೇ ಪಿಂಡ: ರಥಗರ್ಭಸ್ಥನಾಗಿದ್ದಾನೆ. ಅಂತೆಯೇ ಪ್ರಾಪಂಚಿಕ ಅಂದರೆ ಭೌತಿಕ ಹೋರಾಟದ ಗರ್ಭದಲ್ಲಿಯೂ ಇದ್ದಾನೆ. ಪರಮಾತ್ಮ ಸಾರಥ್ಯದ ಪುಣ್ಯಶಾಲಿಯೂ ಆಗಿದ್ದಾನೆ.

ಇಲ್ಲಿ ಅರ್ಜುನ ಅಂದರೆ ಶುದ್ಧಾಂತಃ ಕರಣವುಳ್ಳದೇಹಿ. ಪ್ರಕ್ಷೀಣ ಪಾಪವುಳ್ಳ ಜೀವಿ. ಸತ್ಯ ಸರಳ ಪ್ರಾಣಿ. ಭಾರತ ಅರ್ಜುನ ಕೃಷ್ಣಪರಮಾತ್ಮನಿಗೆ ಮೊರೆಹೊಕ್ಕಂತೆ ಭಾವಿಕ ಜೀವಿ ಅಂತರ್ಯಾಮಿಯಾದ ಪರಮಾತ್ಮನಲ್ಲಿ ಮೊರೆಯಿಡುವುದೇ ಪಿಂಡಸ್ಥಲ; ಪ್ರತಿ ಮುಮುಕ್ಷುವಿನ ಪ್ರಥಮ ಹಂತ.

ಸಾಮಾನ್ಯರೂಪದಲ್ಲಿ ಎಲ್ಲೆಲ್ಲಿಯೂ ಇದ್ದರೂ ವಿಶೇಷರೂಪದಲ್ಲಿ ಶಿವನು ಹೃದಯದಲ್ಲಿ ಪ್ರೇರಕನಾಗಿರುವನೆಂದು ಅರಿದು ಮೊರೆ ಹೋಗುವುದೇ ಪಿಂಡಸ್ಥಲಗರ್ಭ. ತನ್ನ ಅಂದರೆ ಪಿಂಡನ ಶುದ್ಧಾಂತಃಕರಣಿಯ ಬಾಳದೇರನ್ನು ಮುನ್ನಡೆಯಿಸುವವನು. ಅಂತರಾತ್ಮ. ಆತನೇ ಅನನ್ಯ ಶರಣ್ಯ. ಆತನಿಂದ ಆತ್ಮಸ್ವಾತಂತ್ರ್ಯ. ಆತ್ಮಸ್ವಾತಂತ್ರ್ಯವೇ ಆತ್ಮಸಾಕ್ಷಾತ್ಕಾರ. ಅದನ್ನು ಪಡೆವುದೇ ಪಿಂಡಸ್ಥಲದ ಗುರಿ. ಇದನ್ನು ರೂಪಕವಾಗಿ ಉಪಮಾನರೂಪದಲ್ಲಿ ಗೀತೆ ಚಿತ್ರಿಸಿದೆ.

ಶುದ್ಧ ಸರಳ ಹೃದಯಿಗೆ ಸಂಸಾರದಲ್ಲಿ ವಿಷಾದವುಂಟಾಗುತ್ತದೆ; ಹೃದಯ ಹಲ್ಲಣಿಸುತ್ತದೆ. ಚಿತ್ತ ತಲ್ಲಣಿಸುತ್ತದೆ. ಅಜ್ಞಾನ ಬಂಧನದಿಂದ ಆಚೆ ಸಾಗಲು ಹವಣಿಸುತ್ತದೆ; ಆಚೆ ಸಾಗಿ ಆತ್ಮಾನಾತ್ಮವಿವೇಕಿಯಾಗಬೇಕೆನಿಸುತ್ತದೆ. ಧರ್ಮಾಧರ್ಮ, ಕರ್ಮಾಕರ್ಮಗಳ ವಿವೇಚನೆಯನ್ನು ಅರಿಯಲಿಚ್ಛಿಸುತ್ತದೆ.

ಬಾಳಿನಲ್ಲಿ ನೂರಾರು ದುರ್ಗುಣಗಳು ಎದುರಿಸುತ್ತವೆ. ಅರಿಷಡ್ವರ್ಗವಾಗಿ ಆರ್ಭಟಿಸುತ್ತವೆ. ಅವನ್ನೆಲ್ಲ ನೂರೊಂದು ಉಪಸ್ಥಲವುಳ್ಳ ಷಟ್‌ಸ್ಥಲಗಳಿಂದ ಜಯಿಸಬೇಕೆಂಬುದರ ಸಂಕೇತವೇ ಕುರು-ಪಾಂಡವರ ಯುದ್ಧ. ಅಥವಾ ಜೀವನ ಕ್ರಿಯಾ-ಜ್ಞಾನಗಳ ಕಮ್ಮಟವೆಂಬುದನ್ನು ಸೂಚಿಸುತ್ತದೆ ಕುರು-ಪಾಂಡವ ಶಬ್ದಗಳು. ಗೀತೆಯಲ್ಲಿ ಬರುವ ಕೃಷ್ಣ ಅರ್ಜುನ ಮುಂತಾದ ಎಲ್ಲಹೆಸರುಗಳುಸಾಂಕೇತಿಕವಾಗಿವೆ. ಸುಗುಣದುರ್ಗುಣಗಳಜ್ಞಾನ ಕ್ರಿಯೆಗಳ ಸೂಚಕವಾಗಿವೆ. ಅರ್ಜುನ ಕೃಷ್ಣರು ಜೀವಾತ್ಮ-ಪರಮಾತ್ಮ (ಅಂಗ-ಲಿಂಗ) ಸೂಚಕರಾಗಿದ್ದಾರೆ. ಭೀಮ-ಭೀಷ್ಮರು ಶಕ್ತಿ ಯುಕ್ತಿಗಳ ಪ್ರತೀಕರಾಗಿದ್ದಾರೆ. ಧರ್ಮ-ದುರ್ಯೋಧನರು ಧರ್ಮ-ಕರ್ಮಗಳನ್ನು ನಿದರ್ಶಿಸುತ್ತಾರೆ.

ಮಕ್ಕಳು ಮೊಮ್ಮಕ್ಕಳು ಅಣ್ಣತಮ್ಮಂದಿರು ಗುರುಗಳು ಗೆಳೆಯರು ಬಂಧು ಬಳಗ ಕಂಡು ಜೀವನಿಗೆ ಮೋಹ-ಮಮತೆಗಳು ಮೈದೋರುತ್ತವೆ. ಅಧರ್ಮವೇ ಧರ್ಮವಾಗಿ ಅಕರ್ಮವೇ ಕರ್ಮವಾಗಿ ಕಾಣಿಸುತ್ತವೆ. ಕಾಯಬಲ ಕುಗ್ಗುತ್ತದೆ. ಮನ ಚಪಲಗೊಳ್ಳುತ್ತದೆ. ತಲೆ ಕಾಯುತ್ತದೆ.

ದುಃಖ ಉಕ್ಕುತ್ತದೆ. ದಿಕ್ಕು ತೋರದಾಗುತ್ತದೆ. ಕರ್ತವ್ಯ ಮೂಢತೆ ಮೂಡಿಬರುತ್ತದೆ. ತ್ರಿವಿಧ ಕಶ್ಮಲ ತುಂಬಿಕೊಳ್ಳುತ್ತದೆ. ಹೃದಯ ದುರ್ಬಲಗೊಳ್ಳುತ್ತದೆ.

ಆಗ ಅಂತರ್ವಾಣಿಯೊಂದು ಮೊಳಗುತ್ತದೆ. ಮೋಹಾಂಧಕಾರವನ್ನು ಹರಿಯುತ್ತದೆ. ಮೌಢ್ಯನಿದ್ರೆಯಿಂದೆಚ್ಚರಿಸುತ್ತದೆ. ಆ ಅಚ್ಚಳಿಯದ ಬೆಳಕಿಗೆ ಕೈವಿಡಿದು ಕರೆದೊಯ್ಯುವ ಕಳಾಗುರುವಿನ ಬೋಧೆಗೆ ಕಿವಿ ಮನಗಳನ್ನು ಮೀಸಲಾಗಿಸುತ್ತದೆ. ಆ ಮಹಾಮಾರ್ಗದಲ್ಲಿ ಮುನ್ನಡೆಯ ಹಚ್ಚುತ್ತದೆ. 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ | ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ' ಈ ಶ್ರುತಿಮತವನ್ನು 'ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಂ ಪ್ರಪನ್ನಂ' ಎಂಬೀ ಗೀತೋಕ್ತಿಯು ಅನುಸರಿಸಿದೆ. ಅಂತೆಯೇ ಭಕ್ತನ ಜೀವನವೂ ಅನುಸರಿಸುತ್ತದೆ. ಬಾಳು ಬೇಸರವಾಗುತ್ತದೆ. ಭೋಗದಾಶೆ ಬಿಡುವುದರಲ್ಲಿರುತ್ತದೆ. ತ್ಯಾಗ-ಯೋಗಗಳಲ್ಲಿ ಮನ ಕುತೂಹಲವನ್ನು ತೋರುತ್ತದೆ. ರಕ್ತಿಯಿಂದ ಭಕ್ತಿಗೆ ಬಂದು ಹೃದಯ ಅಂಟಿಕೊಳ್ಳುತ್ತದೆ. ಕಾಯೇಂದ್ರಿಯಕ್ಲೇಶಗಳಿಂದ ಮಾನಸಿಕ ಮಾಯೆಯಿಂದ ದಾಟುವ ಹಂಚಿಕೆಯಲ್ಲಿರುತ್ತದೆ. ಯುಕ್ತಿವಾದದಿಂದ ಭಕ್ತಿಬಿನ್ನಹಕ್ಕೆ, ಪ್ರಜ್ಞಾವಾದದಿಂದ ತತ್ತ್ವಜಿಜ್ಞಾಸೆಗೆ ಮನ ತವಕಿಸುತ್ತದೆ. ಪ್ರಾಣಾದಿ ಪರಿಜನರ ಗುಣಾದಿ ಬಂಧುಗಳ ಮೋಹ-ಮಮತೆ ಎಂಬ ಸತಿಸುತಾದಿಗಳ ವ್ಯಾಮೋಹವನ್ನು ಬಿಡಹೇಳುತ್ತದೆ. ಲೌಕಿಕ ವಿಷಾದ ಜೀವನ ಪ್ರಗತಿಗೆ ಬಂಧಕ, ಅದೇವಿಷಾದ ಅಲೌಕಿಕವಾದರೆ 'ವಿಷಾದಯೋಗ' ವಾಗಿ ಮೋಚನ ಕಾರಣವಾಗುತ್ತದೆ. ಬಂಧುಕಾಮ ಅರ್ಥಲೋಭ ರಾಜ್ಯಮೋಹ ಮುಂತಾದವು ಸತ್ಯಸಾಧನ ಜೀವನಕ್ಕೆ ವಿರೋಧವಾದವುಗಳು. ಅರ್ಥ ಕಾಮಾದಿಗಳು ಧರ್ಮಮೂಲವಾಗಿರಬೇಕು. ಧರ್ಮಸಂಗ್ರಹವಿಲ್ಲದ ಅರ್ಥಕಾಮಾದಿಗಳು ವ್ಯರ್ಥ. ಅದರಲ್ಲಿಯೂ ಕುಲಧರ್ಮಗಳು ಆವಶ್ಯಕವಾಗಿ ಆರಾಧನೀಯಗಳು. "....ಕುಲಧರ್ಮಾಸ್ಸನಾತನಾಃ | ಧರ್ಮೇ ನಷ್ಟೇ ಕುಲಂ ಕೃತ್ಸ್ನಮಧರ್ಮೋಽಭಿಭವತ್ಯುತ||" ಎಂದು ಧರ್ಮಶಾಸನವನ್ನು ಭಗವಂತನು ಬಿತ್ತರಿಸಿದ್ದಾನೆ. ಜಾತಿಧರ್ಮಗಳು ಕುಲಧರ್ಮಗಳು ಶಾಶ್ವತ

ಗಳೆಂದೆನ್ನುತ್ತಾನೆ. ಇವನ್ನು ಕುಪುಡದವರು ನರಕಿಗಳಾಗುತ್ತಾರೆ. ಕಾರಣ ಧರ್ಮಿಗಳಾಗಿ ಭಗವದ್ಭಜಕರಾಗಿ ಬಾಳಬೇಕು; ಬಾಳಿಸಬೇಕು ಧರ್ಮ ಗಳನ್ನು!

ಪ್ರಥಮಾಧ್ಯಾಯದ ಅಂತ್ಯದಲ್ಲಿ ಅರ್ಜುನನು ಲೌಕಿಕ ಶೋಕತಪ್ತ ನಾಗಿ ಮಾತೃಗರ್ಭದ ಶಿಶುವು ನವಮಾಸ ತುಂಬಿದ ಬಳಿಕ ಲೌಕಿಕ ವಾಸನೆ ಯಿಂದ ಶೋಕಾಕುಲವಾಗಿ ಹೊರಬರುವಂತೆ ರಥಗರ್ಭದಿಂದ ಹೊರಬಂದು ಜಯದ ಸಾಧನಗಳಾದ ಬಿಲ್ಲುಬಾಣಗಳನ್ನು ಕೆಳಕ್ಕೆಚೆಲ್ಲಿ ನೆಲಕ್ಕೆ ಕುಸಿಯುವ ನೆಂಬಲ್ಲಿಗೆ ಪಿಂಡಸ್ಥಲ ಮುಗಿಯುತ್ತದೆ.

ಗೀತೆಯ ಎರಡನೆಯ ಅಧ್ಯಾಯ ಮತ್ತು ಹದಿಮೂರನೆಯ ಅಧ್ಯಾಯ ಗಳು ಪಿಂಡಜ್ಞಾನಸ್ಥಲವನ್ನು ನಿರೂಪಿಸುತ್ತವೆ. ಸಾಂಖ್ಯಯೋಗವೆಂದರೆ ಪಿಂಡಜ್ಞಾನವೆಂದರ್ಥ. ಪಿಂಡಜ್ಞಾನದಲ್ಲಿಯಾಗಲಿ, ಸಾಂಖ್ಯಯೋಗದಲ್ಲಾ ಗಲಿ ನಿರೂಪಿತವಾದ ವಿಷಯವೆಂದರೆ ಶರೀರಾತ್ಮ ವಿವೇಕವೆ!

ಭಕ್ತನಿಗೆ ಪಿಂಡಜ್ಞಾನ ಪ್ರಾಮುಖ್ಯ. ಈ ದಾರಿಯಲ್ಲಿ ಗೀತೆ ಸಿದ್ಧಾಂತ ಶಿಖಾಮಣಿಯ ಪಿಂಡಜ್ಞಾನಸ್ಥಲವನ್ನು ವಿಶದೀಕರಿಸಿದೆಯಾದರೂ ಕಾಯ ವಿಷಯದಲ್ಲಿ ಕಾಣಿಸಿದ ಜೀರ್ಣವಸ್ತ್ರದ ಉಪಮೆ ಒಪ್ಪುವಂತಹುದಲ್ಲ. ದೇಹ-ದೇಹಿ ಪದಗಳೆರಡನ್ನು ವಿಚಾರಿಸಿದರೆ ಅವೆರಡಕ್ಕಿರುವ ಭೇದಾಭೇದ ಗಳು ವ್ಯಕ್ತವಾಗುತ್ತವೆ. ಹರಿದ ಬಟ್ಟೆಯಂತೆ ಬಿಚ್ಚಿ ಬಿಸಾಕುವುದಲ್ಲ ದೇಹ. ಬಿಸಾಕುವಂತೆ ಕಂಡರೂ ಬೆಸುಗೆಯಾಗಿ ದೇಹಿಯ ಬೆಂಬಳಿವಿಡಿ ರುತ್ತದೆ ಮರ ಬೀಜವಾಗುವಂತೆ! ಹೊಸ ಬಟ್ಟೆ ಬಂದುದೆಲ್ಲಿಂದ? ಲಿಂಗವು ಹೇಗೆ ಪಾರಮಾರ್ಥವೋ ಅಂಗವೂ ಅಖಿಲ ಜಗವೂ ಹಾಗೆ ಪಾರ ಮಾರ್ಥಿಕವಾಗಿವೆ. "ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್" ಎಂಬೀ ಗೀತೋಕ್ತಿಯು ನಮ್ಮೀ ಮಾತನ್ನೇ ಎತ್ತಿ ತೋರಿದೆ. ದೇಹಾಂತರವೆಂದರೆ ಮತ್ತೊಂದು ದೇಹವಲ್ಲ; ಹಳೆಯದೇ ಹೊಸದಾಗಿ ಬರುತ್ತವೆಂದರ್ಥ. ದೇಹದ ಸ್ಥೂಲಾಂಶ ಲಯವಾಗಬಹುದು. ದೇಹ ಅಶುಚಿಯಾಗಬಹುದು. ದೇಹ ಕಾಲಕಾಲಕ್ಕೆ ಬದಲಾಗಬಹುದು. ಆದರೆ ಕಾರಣದೇಹ ನಾಶವಾಗದು. ಆತ್ಮಬೀಜದೊಡನೆ ಯೋಗವಾಗುವ ಶಕ್ತಿ ಅದಕ್ಕಿದೆ. ಕಶ್ಮಲವನ್ನು ಕಳೆವ ಸಂಸ್ಕಾರಗಳಿರುತ್ತವೆ.

ಪುಣ್ಯದಾಶೆಯೂ ಜೀವನವೆಂಬ ತಕ್ಕಡಿಯನ್ನು ಸಮವಾಗಿರಿಸದು. ಇದರಿಂದಾಗಿ ಸತ್ಕರ್ಮ ಫಲವಾದ ಪುಣ್ಯದಾಶೆಯನ್ನೂ ಮಾಡಬೇಕಾಗಿಲ್ಲ. ಪವಿತ್ರಕರ್ಮವನ್ನು ಮಾಡು; ಪುಣ್ಯವನ್ನು ಬೇಡುವುದು ಬೇಡ. ಇದು ಕರ್ಮಕುಶಲತೆ, ಇದು ಸಮತೆ, ಇದು ಯೋಗ. 'ಯೋಗಃ ಕರ್ಮಸು ಕೌಶಲಂ' ಫಲಾಫಲ, ಪುಣ್ಯಪಾಪ, ನೋವು ನಲಿವು, ಸೋಲು ಗೆಲುವು, ಲಾಭ ನಷ್ಟ ಮುಂತಾದವುಗಳಲ್ಲಿ ತೋರುವ ಕರ್ಮಕೌಶಲ್ಯವೇ ಅಂದರೆ ಸಮತ್ವಭಾವವೇ ಯೋಗವೆಂದೆನಿಸುತ್ತದೆ. ಇದರಿಂದ ಕರ್ಮಬಂಧ ಕಳೆಯು ತ್ತದೆ; ಜನ್ಮಬಂಧ ನೀಗುತ್ತದೆ. ಅನಾಮಯತೆ ಅಳವಡುತ್ತದೆ. ಅಂದರೆ ಮರಣಭೀತಿ, ಬಾಳದಂದುಗ ದೂರಾಗುತ್ತವೆ. ಲೋಕವಾರ್ತೆಗಳಲ್ಲಿ ಭೌತಿಕ ವಿಷಯಗಳಲ್ಲಿ ಆಸಕ್ತಿಯುಂಟಾಗದು. ಶಾಸ್ತ್ರಭ್ರಾಂತಿ ಬಯ ಲಾಗುತ್ತದೆ. ನಿಶ್ಚಲಬುದ್ಧಿ, ನಿರ್ಮಲಭಾವ ಉಂಟಾಗುತ್ತವೆ. ತನ್ನೊಳಗೆ ತಾನೇ ಆನಂದಿಸುತ್ತಾನೆ. ಇತ್ತ ರಕ್ತನಾಗದೆ, ಅತ್ತ ಮುಕ್ತನಾಗದೆ ಸದ್ಭಕ್ತ ನಾಗಿ ಬಾಳುವನು. ಅಂದರೆ ಜೀವನ್ಮುಕ್ತನೆನಿಸುತ್ತಾನೆ. ಆತ್ಮಸುಖಕ್ಕೆ ಒಲಿ ದಾಗ ಅನ್ಯಸುಖಾಪೇಕ್ಷೆಯುಂಟಾಗಗು. ಶಿವಕ್ಕೆ ಭಕ್ತನಾದ ಬಳಿಕ ಭವಕ್ಕೆ ಭಕ್ತನಾಗನು; ದೇಹೇಂದ್ರಿಯ ಭಕ್ತನಾಗನು. ದ್ರವ್ಯ ಭಕ್ತನಾಗನು. ಆತ್ಮವೀರರ ದೇಹೇಂದ್ರಿಯಗಳು ಚಲಿಸಿದರೂ ಅಂತಃಕರಣ ಚಲಿಸದು. ಅವರ ಮನಸ್ಸು ಪ್ರಸನ್ನವಾಗಿಯೇ ಇರುತ್ತದೆ.

ದೇಹೇಂದ್ರಿಯಗಳಂತೆ ಮನಸ್ಸನ್ನು ವಿಷಯಚಿಂತೆಗೆ ಹಚ್ಚಬಾರದು. ಹಚ್ಚಿದರೆ ಸರ್ವಸ್ವನಾಶ ಎಂಬುದನ್ನು ಆಗಮಪ್ರಮಾಣದಿಂದ ಖುಜುಪಡಿಸ ಲಾಗಿದೆ. ಸರ್ವದುಃಖಗಳ ನಿರ್ಮೂಲಕ್ಕೆಕಾರಣ ಚಿತ್ತಪ್ರಸನ್ನತೆ. ಇದರಿಂದ ಬುದ್ಧಿಸ್ಥಿರತೆ, ಇದರಿಂದ ಸಮತೆ. ಸಮತ್ವವೇ ಭಕ್ತಿ ಶಾಂತಿಗಳ ಅಡಿಗಲ್ಲು. ಈ ಅಡಿಗಲ್ಲ ಮೇಲೆ ಭಕ್ತಮಂದಿರ ಭದ್ರವಾಗಿ ಶೋಭಿಸುತ್ತದೆ. ಪಿಂಡಜ್ಞಾನಿ ಯೆಂದು ಭಕ್ತ ಹೇಳಿಸಿಕೊಳ್ಳುತ್ತಾನೆ.

ಪಿಂಡಜ್ಞಾನಿ ಯಾವಾಗಲೂ ಜಾಗ್ರತನಾಗಿರುತ್ತಾನೆ. ದೇಹೇಂದ್ರಿಯ ಮನ ಬುದ್ಧಿಗಳ ವಿಕಾರಗಳಿಗೆ ವಶನಾಗದಂತಿರುತ್ತಾನೆ. ಜಾಗತಿಕ ಜಂಜ ಡಕ್ಕೆ ಸಿಲುಕದಂತಿರುತ್ತಾನೆ. ನಿಸ್ಪೃಹಿಯಾಗಿರುವುದಲ್ಲದೆ ಮಮಕಾರ

ಅಹಂಕಾರಗಳಿಂದ ದೂರಾಗಿರುತ್ತಾನೆ. ಪಿಂಡಜ್ಞಾನದಲ್ಲಿ ಪರಿಣತನಾಗಿರುತ್ತಾನೆ.

ದೇಹ (ಅಂಗ) ಕ್ಷೇತ್ರ; ದೇಹಿ (ಲಿಂಗ) ಕ್ಷೇತ್ರಜ್ಞ. ಕ್ಷೇತ್ರವ್ಯಾಪ್ಯ; ಕ್ಷೇತ್ರಜ್ಞ ವ್ಯಾಪಕ. ಅಂಗಾಂಗಗಳೆಲ್ಲೆಲ್ಲ ಲಿಂಗವಿರುತ್ತದೆ. ಇದನರಿತವನೆ ಪಿಂಡಜ್ಞ ಅಥವಾ ಕ್ಷೇತ್ರಜ್ಞ.

ಕ್ಷೇತ್ರವನ್ನು ತಿಳಿದಾಗ ಕ್ಷೇತ್ರಜ್ಞನೆನಿಸುತ್ತಾನೆ. ಕ್ಷೇತ್ರವಿದ್ದರೆ ಕ್ಷೇತ್ರ ಕೃಷಿ ನಡೆದರೆ 'ಸ್ವಧರ್ಮಾಚರಣೆ'ಯ ಬೆಳೆ ಬೆಳೆಯುತ್ತದೆ. ಈ ಬಗೆಯಲ್ಲಿ ಕ್ಷೇತ್ರಜ್ಞನಾಗಿರುವುದೇ ಯೋಗ. ಯೋಗವೊಂದು ಕುಶಲಕಲೆ; ಕುಶಲ ಕ್ರಿಯೆ. ಕ್ಷೇತ್ರವಿಡಿದು ಅಂಕುರವಿದೆ. ಅಂಕುರವಿಡಿದು ಬೀಜವಿದೆ. ಬೀಜ ವಿಡಿದು ಅಂಕುರವಿದೆ.

ಬೀಜಾಂಕುರದಂತೆ ಕ್ಷೇತ್ರ ಕ್ಷೇತ್ರಜ್ಞರ ಸಂಯೋಗ, ಕಲೆ ತತ್ತ್ವಗಳ ಸಂಯೋಗ ಜೀವನ ಸತ್ಯ ಸೌಂದರ್ಯಕ್ಕೆ ಅಡಿಗಲ್ಲಾಗಿವೆ. ಸ್ವಧರ್ಮಾಚರಣೆಗೂ ಪಿಂಡಜ್ಞಾನ ಅಂದರೆ ಕ್ಷೇತ್ರಜ್ಞತೆ ಅಗತ್ಯ.

ಭಕ್ತಸ್ಥಲದಲ್ಲಿ ಬರುವ ಪಿಂಡ (ಅಂಗ)ವನ್ನೇ ಭಗವದ್ಗೀತೆಯು ಕ್ಷೇತ್ರವೆಂದು ಕರೆದಿದೆ. ಪಿಂಡಜ್ಞಾನ (ಲಿಂಗ)ವನ್ನೇ ಕ್ಷೇತ್ರಜ್ಞ ಎಂದು ನಿರೂಪಿಸಿದೆ.

ಪಂಚಮಹಾಭೂತಗಳು, ಅಹಂಕಾರ, ಬುದ್ಧಿ, ಅವ್ಯಕ್ತ, ದಶೇಂದ್ರಿಯ, ಪಂಚತನ್ಮಾತ್ರ, ಇಚ್ಛೆ, ದ್ವೇಷ, ಸುಖ, ದುಃಖ, ಸಂಘಾತ, ಚೇತನಶಕ್ತಿ, ಧೃತಿ, ಈ ಮೂವತ್ತು ಕ್ಷೇತ್ರವೆಂದು ಗೀತೆ ಗುರುತಿಸಿದೆ. ಇವು ವಿಕಾರವೆಂದು ಹೇಳಿದೆ.

ಮಾನಕ್ಕೆ ಮನಸ್ಸನ್ನು ಮಾಡದಿರುವುದು, ದಂಭವಿಲ್ಲದಿರುವುದು, ಅಹಿಂಸೆ, ಕ್ಷಮೆ, ಸರಳತೆ, ಆಚಾರ್ಯಸೇವೆ, ಶೌಚ, ಸ್ಥೈರ್ಯ, ಆತ್ಮಸಂಯಮ ಇಂದ್ರಿಯ ವಿಷಯಗಳಲ್ಲಿ ವಿರಕ್ತಿ, ನಿರಹಂಕಾರ, ಜನನ–ಮರಣ–ಜರಾ–ವ್ಯಾಧಿ-ದುಃಖ,-ದೋಷಗಳ ತಿಳುವಳಿಕೆ, ಸತಿ ಸುತ ಗೃಹಾದಿಗಳಲ್ಲಿ ಅನಾಸಕ್ತಿ, ನಿತ್ಯ ಮೋಹ ಮಮತೆಗಳ ಅಭಾವ, ಪ್ರಿಯ–ಅಪ್ರಿಯ ವಸ್ತುಗಳಲ್ಲಿ ಸಮಚಿತ್ತ, ನನ್ನಲ್ಲಿ ಅನನ್ಯಯೋಗದಿಂದ ತೋರುವ ಏಕನಿಷ್ಠಭಕ್ತಿ, ಏಕಾಂತ ಸ್ಥಳದಲ್ಲಿ ಇರುವಿಕೆ, ಜನತೆಯಲ್ಲಿ ಬೆರೆಯದಿರುವಿಕೆ, ಆಧ್ಯಾತ್ಮಜ್ಞಾನ ನಿತ್ಯ

ತೆಯ ನಿಜದರಿವು ; ತತ್ತ್ವಜ್ಞಾನಾರ್ಥದರ್ಶನ–ಇವು ಕ್ಷೇತ್ರ(ಅಂಗ) ಜ್ಞಾನ. ಇವಕ್ಕೆ ವ್ಯತಿರಿಕ್ತವಾದವೆಲ್ಲ ಅಜ್ಞಾನ.

ಕ್ಷೇತ್ರವೆಂದರೇನು? ಜ್ಞಾನವೆಂದರೇನು ? ಎಂಬುದನ್ನು ಈ ರೀತಿ ಹೇಳಿ ಅಂದರೆ ಪಿಂಡ ಪಿಂಡಜ್ಞಾನಗಳನ್ನು ತಿಳಿಸಿ ಇನ್ನು ಮುಂದೆ ಜ್ಞೇಯವಾದ ಬ್ರಹ್ಮ(ಲಿಂಗ)ದ ಸ್ವರೂಪನ್ನು ಹೀಗೆ ಹೇಳಲಾಗಿದೆ :

‘ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಞಾತ್ವಾಽಮೃತಮಶ್ನುತೇ ।
ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥”–೧೩–೧೨
ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಂ
ಸರ್ವತಶ್ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತೀ ।–೧೩
ಸರ್ವೇಂದ್ರಿಯ ಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಂ
ಅಸಕ್ತಂ ಸರ್ವಭೃಚ್ಚೈವ ನಿರ್ಗುಣಂ ಗುಣಭೋಕ್ತೃ ಚ ।–೧೪
ಬಹಿರಂತಶ್ಚ ಭೂತಾನಾಮಚರಂ ಚರಮೇವ ಚ
ಸೂಕ್ಷ್ಮತ್ವಾತ್ತದವಿಜ್ಞೇಯಂ ದೂರಸ್ಥಂ ಚಾಂತಿಕೇ ಚ ತತ್ ।–೧೫
ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್
ಭೂತಭರ್ತೃ ಚ ತಜ್ಜ್ಞೇಯಂ ಗ್ರಸಿಷ್ಣು ಪ್ರಭವಿಷ್ಣು ಚ ।–೧೬
ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ
ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃಧಿಸರ್ವಸ್ಯವಿಷ್ಠಿತಂ ।–೧೭
ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ
ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥–೧೮

ಈ ಆರೇಳು ಶ್ಲೋಕಗಳಲ್ಲಿ ಗುರುಕಾರುಣ್ಯ–ಲಿಂಗಧಾರಣ ಸ್ಥಲಗಳೆರಡು ಬಂದಿವೆ. ಮೊದಲಿನ ಶ್ಲೋಕದ ‘ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ’ ಎಂಬ ಪ್ರಥಮ ಪಾದದಲ್ಲಿ ಗುರುಕಾರುಣ್ಯ ಸೂಚಿತವಾಗಿದೆ. ಆ ಪರವಸ್ತುವಿನ ವಿಷಯದಲ್ಲಿರುವ ಅಜ್ಞಾನವನ್ನು ಓಡಿಸಿ ಜ್ಞಾನವನ್ನುಂಟು ಮಾಡುವುದೇ ಗುರುವಿನ ಕಾರುಣ್ಯ. ಗುರುಬೋಧೆಯಿದು : ಅದನ್ನು ಅರಿದಾಚರಿಸಿದರೆ ಅಮೃತತ್ತ್ವವುಂಟಾಗುತ್ತದೆ. ಅದು ಅನಾದಿ; ಅದು ಪರಬ್ರಹ್ಮ.

ಅದು ಸದಸದ್ವಿಲಕ್ಷಣ. ಅಂದರೆ ಅದು ಕೇವಲ ಸತ್ ಅಲ್ಲ, ಕೇವಲ ಅಸತ್ ಅಲ್ಲ. ಅದು ಎಲ್ಲವನ್ನು ಮುಟ್ಟಬಲ್ಲುದು ; ಎಲ್ಲೆಲ್ಲಿಯೂ ಸಂಚರಿಸಬಲ್ಲುದು. ಅದು ಎಲ್ಲವನ್ನು ನೋಡಬಲ್ಲುದು. ಅದಕ್ಕೆ ಸಾಸಿರ ತಲೆ, ಸಾಸಿರ ಮೊಗ, ಸಾಸಿರ ಕಿವಿ. ಅದು ಈ ಲೋಕದಲ್ಲಿ ಎಲ್ಲವನ್ನೂ ತುಂಬಿರುತ್ತದೆ. ಅದು ಎಲ್ಲಕರಣ ಎಲ್ಲಗುಣಗಳ ಆಭಾಸವಾಗಿದೆ. ಅಂದರೆ ಕರಣೇಂದ್ರಿಯ ಗುಣಗಳನ್ನುಬೆಳಗುತ್ತದೆ; ಇವುಗಳಿಗೆ ಚೈತನ್ಯವಾಗಿದೆ. ಅದಕ್ಕೆ ಇಂದ್ರಿಯಾಕಾರವಿಲ್ಲ ; ನಾಮವಿಲ್ಲ. ಅದು ಇಂದ್ರಿಯಗಳಲ್ಲಿದ್ದರೂ ಇಂದ್ರಿಯವಲ್ಲ ; ಇಂದ್ರಿಯತ್ವಕ್ಕೆ ಹೊರಗಲ್ಲ. ಅದು ಹೊದ್ದಿಯೂ ಹೊದ್ದದಂತಿರುತ್ತದೆ. ತುಪ್ಪ ತೊಡೆದ ಕೈ ಕಣಕವಿಡಿದರೂ ಕಣಕದ ಸೋಂಕಿಲ್ಲದೆ ಇರುವಂತಿರುತ್ತದೆ. ಸೇರಿಯೂ ಸೇರದಂತೆ, ಕೂಡಿಯೂ ಕೂಡದಂತೆ ಇರುವ ಮೋಡಿ ಅದಕ್ಕಿದೆ. ಹೀಗಿದ್ದರೂ ಅದುಎಲ್ಲವನ್ನೂ ಧಾರಣ ಮಾಡುವುದು. ಈ ಶ್ಲೋಕದಲ್ಲಿರುವ 'ಸರ್ವಭೃತ್' ಸಮಾಸೋಕ್ತಿಯು ಸಮ್ಯಕ್ ಗಮನೀಯವಾಗಿದೆ. ಸರ್ವವನ್ನು ಅದು ಧಾರಣಮಾಡುವಂತೆ ಅದು ಸರ್ವರಿಂದಲೂ ಧಾರಣೀಯವಾಗಿದೆ. ಆದ್ದರಿಂದ ಆ ಪದ 'ಲಿಂಗಧಾರಣ' ಸಂಕೇತವಾಗಿದೆ. ಅದು ತ್ರಿಗುಣರಹಿತ, ಅದು ಗುಣಭೋಕ್ತೃ.' ಪದವೂ ಗಮನಾರ್ಹವಾಗಿದ್ದು ಶಿವಾದ್ವೈತದ ಸಗುಣಸಿದ್ಧಾಂತ ಸೂಚಕವೂ ಆಗಿದೆ.

ಅದು ಪ್ರಾಣಿಗಳ ಹೊರಗೂ ಇದೆ. ಅದು ಅಚರಚರ ರೂಪಾಗಿದೆ. ಇಷ್ಟಲಿಂಗ ಪ್ರಾಣಲಿಂಗ ಸ್ವರೂಪವಾಗಿದೆ. ಚರಾಚರ ಪದಗಳು ಪ್ರಾಣೇಷ್ಟ-ಲಿಂಗಸೂಚಕಗಳು. ಇವೆರಡನ್ನು ಶ್ರೀಗುರು ಶಿಷ್ಯರಿಗೆ ಕರುಣಿಸುತ್ತಾನೆ ; ಧಾರಣಮಾಡಿಸುತ್ತಾನೆ. ಅವು ಸೂಕ್ಷ್ಮವಾಗಿರುವುದರಿಂದ ಸರ್ವರಿಂದ ತಿಳಿಯಲಾಗುವುದಿಲ್ಲ. ಶ್ರೀಗುರುವಿನ ಉಪದೇಶಕ್ಕೆ ಅರ್ಹರಾದವರು ಮಾತ್ರ ತಿಳಿಯಬಲ್ಲರು. ಆದ್ದರಿಂದ ಗುರುಕಾರುಣ್ಯವನ್ನು ಪಡೆಯಬೇಕು. ಅದನ್ನು ತಿಳಿಯಲಿಚ್ಛಿಸುವರು ಗುರುವಿಗೆ ಶಿಷ್ಯರಾಗಿ ಶರಣಾಗತರಾಗಿಯೇ ತೀರಬೇಕು. 'ತತ್ ವಿಜ್ಞಾನಾರ್ಥಂ ಸ ಗುರುಮೇವಾಪಗಚ್ಛೇತ್' ಎಂದು ಶ್ರುತಿ ಸಾರಿದೆ. ಇದನ್ನೇ ಗೀತೆ ಇಲ್ಲಿ ಧ್ವನಿಸಿದೆ. ಅದು ದೂರದಲ್ಲಿಯೂ ಇದೆ; ಹತ್ತಿರದಲ್ಲಿಯೂ ಇದೆ. ಮತ್ತು ಸ್ವಾಯತ್ತವಾಗಿ ಅವಿಭಕ್ತವಾಗಿದೆ. ಅದು

ಪ್ರಾಣಲಿಂಗವಾಗಿ ಅವಿಭಕ್ತವಾದರೆ ಇಷ್ಟಲಿಂಗವಾಗಿ ವಿಭಕ್ತವೂ ಆಗಿದೆ. ಸಾಧಕರ ಉಪಾಸನೆಗಾಗಿ ಅದು ಶ್ರೀಗುರುವಿನಿಂದ ವಿಭಕ್ತವಿಭಕ್ತವಾಗಿ ಏರ್ಪಡುತ್ತದೆ. ಅದನ್ನು ಒಳಹೊರಗೆಧರಿಸಿದವರನ್ನೆಲ್ಲ ರಕ್ಷಿಸುತ್ತದೆ. ಪ್ರಾಣಿಗಳಿಗೆಲ್ಲ ಪ್ರಭುವಾಗಿದೆ. ಅಂತಯೇ ಅದು 'ಭೂತಭರ್ತೃ' ವೆನಿಸಿದೆ. ಲಿಂಗಧಾರಣದ ವ್ಯಾಪಕತೆಯು ಇಲ್ಲಿ ವ್ಯಕ್ತವಾಗಿದೆ. ಮನಸ್ಸುಮಾಡಿದರೆ ಎಲ್ಲರೂ ಅದನ್ನು ಧರಿಸಲು ಅರ್ಹರು. ಲಿಂಗಧಾರಣ ಕೇವಲ ಜಾತಿನಿಷ್ಠ ವಲ್ಲ; ಪಂಥನಿಷ್ಠವಲ್ಲ. ಗುರು–ಶಕ್ತಿನಿಷ್ಠ, ಅದು ಧಾರಣವಾಗಿ ವ್ಯಷ್ಟಿ ನಿಷ್ಠವೂ ಆಗುತ್ತದೆ. ಅದರಿಂದ ಅದು ಜ್ಞೇಯವಾಗಿದೆ; ಉಪಾಸನೀಯ ವಾಗಿದೆ. ಅದು ಕರಸ್ಥಲಕ್ಕೆ ಬಂದು ಗ್ರಸಿಷ್ಣುವಾಗಿದೆ. ಪಾಣಿಯಲ್ಲಿ ಗ್ರಹಿ ಸಲು ಚುಳುಕಾಗಿದೆ. ಸಂರಕ್ಷಿಸಲು ಸಮರ್ಥವಾಗಿದೆ. ಅದು ಹೊರ ಹೊಮ್ಮಿಸಲು ಒಳ ಒಳಗೊಳ್ಳಲು ಶಕ್ತಿಸಂಪನ್ನವಾಗಿದೆ. ಅದು ತಮಸ್ಸಿನ ಆಚೆ ಪರಂಜೋತಿಯಾಗಿದೆ. ಅಗ್ನಿ ಚಂದ್ರ ಸೂರ್ಯಾದಿ ಜ್ಯೋತಿಗಳಿಗೆಲ್ಲ ಮೂಲ ಜ್ಯೋತಿಯಾಗಿದೆ. ಅದಕ್ಕೆ ಬೇರೆ ಜ್ಯೋತಿಯಿಲ್ಲ. ಅದು ಜ್ಞಾನ ವಾಗಿದೆ' ಜ್ಞೇಯಯಾಗಿದೆ; ಜ್ಞಾನಗಮ್ಯವೂ ಆಗಿದೆ. ಅದು ಎಲ್ಲರ ಹೃದಯ ದಲ್ಲಿದೆ. ಹೀಗೆ ಕ್ಷೇತ್ರ (ಅಂಗ-ಅಥವಾ ಪಿಂಡ) ಜ್ಞಾನ (ಸಾಧನ) ಜ್ಞೇಯ (ಲಿಂಗ) ಇವುಗಳನ್ನು ಸಂಕ್ಷಿಪ್ತವಾಗಿ ಸೊಲ್ಲಲಾಯಿತು. ಇದನ್ನರಿತು ಅಂದರೆ ಅಂಗ ಲಿಂಗ ಸಮರಸಸಾಧನವನ್ನರಿತು ಆಚರಿಸಿದ ನನ್ನ ಭಕ್ತನು ನನ್ನ ಸ್ವರೂಪವನ್ನೇ ಪಡೆಯುತ್ತಾನೆ.—ಎಂದು ಶ್ರೀಗುರುವು ಶಿಷ್ಯನಿಗೆ ದೀಕ್ಷೆ ಯನ್ನು ಮಾಡಿ ಲಿಂಗಧಾರಣವನ್ನು ಅನುಗ್ರಹಿಸಿ ಲಿಂಗಸ್ವರೂಪವನ್ನು ಶಿಕ್ಷಣ ಮಾಡಿ ಲಿಂಗವೇ ಆಗುವ ಹೊಲಬನ್ನು ತೋರಿ ಭಕ್ತನನ್ನು ಮುಕ್ತನ ನ್ನಾಗಿಸುತ್ತಾನೆ. ದೀಕ್ಷಾ ಶಿಕ್ಷಾ ಮೋಕ್ಷ ಗುರುವಾಗಿ ಇಲ್ಲಿ ರೂಪಿತನಾಗಿ ಗುರು ಆಚಾರ್ಯನಾಗಿದ್ದಾನೆ. ಅವನ್ನು ಪಡೆದು ಶಿಷ್ಯನು ಭಕ್ತನಾಗಿ ಪರಿ ಣಮಿಸಿ (ಆಚರಿಸಿ) ಮುಕ್ತನೂ ಆಗಲು ಅರ್ಹತೆಯುಳ್ಳವನಾಗುತ್ತಾನೆ.

ಇನ್ನು ಸಾಧನಾಂಗಗಳಾದ ವಿಭೂತಿ, ರುದ್ರಾಕ್ಷಿ, ಮಂತ್ರಗಳು ಸಾಧನವಾಗಿದ್ದರೂ ಶಿವಸ್ವರೂಪಗಳೇ ಆಗಿರುತ್ತವೆ. ಶಿವನೇ ಸಾಧಕರಉದ್ಧಾರ ಕ್ಕಾಗಿ ವಿಭೂತಿಯಾಗಿ ರುದ್ರಾಕ್ಷಿಯಾಗಿ ಮಂತ್ರವಾಗಿ ಮೈದೋರಿದ್ದಾನೆ.

ಭಕ್ತನ ಹಿತಕ್ಕಾಗಿ ಭಕ್ತನನ್ನು ತನ್ನಂತೆ ಮಾಡಿಕೊಳ್ಳುವುದಕ್ಕಾಗಿ ವಿಭೂತ್ಯಾದಿಗಳ ರೂಪನ್ನು ಪರಮಾತ್ಮನು ತಾಳುತ್ತಾನೆ. ವಿಭೂತ್ಯಾದಿಗಳ ಮಹಿಮೆ ಸಾಮಾನ್ಯವಲ್ಲ. ಮಹರ್ಷಿಗಳಿಗೂ ಅವುಗಳ ಮಹಿಮೆ ಮನವರಿಕೆಯಾಗದು. ಗುರುಕರುಣೆಗೆ ಒಳಪಟ್ಟ ಶಿಷ್ಯನಿಗೆ ಅಥವಾ ಭಕ್ತನಿಗೆ ಮಾತ್ರ ಅವು ಸಾಧ್ಯ; ಅವು ವೇದ್ಯ. ಅವುಗಳಿಂದ ಎಲ್ಲ ಪಾಪಗಳು ಪರಿಹಾರವಾಗುತ್ತವೆ. ದುರ್ಗುಣಗಳು ದೂರಾಗುತ್ತವೆ. ಸುಗುಣಗಳು ಸಮನಿಸುತ್ತವೆ. ಬುದ್ಧಿ, ಜ್ಞಾನ, ಅವಮೂಢತೆ, ಕ್ಷಮೆ, ಸತ್ಯ, ದಮ, ಕ್ಷಮಗಳು ಉಂಟಾಗುತ್ತವೆ. ಸುಖದುಃಖಗಳು, ಭವ-ಅಭಾವಗಳು ಭಯ-ಅಭಯಗಳಲ್ಲಿ ಸಮನ್ವಯ ಭಾವವುಂಟಾಗುತ್ತದೆ. ಅಹಿಂಸೆ, ಸಮತೆ, ತುಷ್ಟಿ, ತಪಸ್ಸು, ದಾನ, ಯಶಸ್ಸು ಮುಂತಾದವುಗಳು ಉಂಟಾಗುತ್ತವೆ ವಿಭೂತಿ ರುದ್ರಾಕ್ಷಿ ಧಾರಣದಿಂದ.

ವಿಭೂತಿಯೋಗ

"ಏತಾಂ ವಿಭೂತಿಂ ಯೋಗಂ ಚ ಮಮ ಯೋ ವೇತ್ತಿ ತತ್ತ್ವತಃ |
ಸೋऽವಿಕಂಪೇನ ಯೋಗೇನ ಯುಜ್ಯತೇ ನಾತ್ರ ಸಂಶಯಃ ||

—ಗೀತಾ ಅ. ೧೦, ಶ್ಲೋ. ೭

ವಿಭೂತಿಧಾರಣ ಅದೊಂದು ಸಾಧನಮಾತ್ರವಲ್ಲ ಅದೊಂದುಯೋಗ. ಅದನ್ನು ಯಥಾರ್ಥವಾಗಿ ತಿಳಿದವನು ತಿಳಿದು ತಳೆದವನು ಅಚಲನಾಗುತ್ತಾನೆ, ಸ್ಥಿರಚಿತ್ತನಾಗುತ್ತಾನೆ. ಮತ್ತು ಶಿವಯೋಗ ಸಂಪನ್ನನಾಗುತ್ತಾನೆ. ಈ ಸೊಲ್ಲಿನಲ್ಲಿ ಯಾವ ಸಂಶಯವಿಲ್ಲ. ಸಾಕ್ಷಾತ್ ಶಿವನಮೈ ಬೆಳಗಾದ ವಿಭೂತಿಯು ಯೋಗವು ಅಸಾಧಾರಣವಾದುದು. ಮಾನವ ಜೀವನಕ್ಕೆ ಮಹಾ ಪ್ರಕಾಶದಾಯಕವಾದುದು.

"ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ |
ನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನ ದೀಪೇನ ಭಾಸ್ವತಾ ||"

ವಿಭೂತಿಯೋಗವುಳ್ಳವರ ಹೃದಯದಲ್ಲಿ ನಾನು ಯಾವಾಗಲೂ ಇರುತ್ತೇನೆ. ಅವರ ಮೇಲೆ ಅನುಕಂಪ ಬೀರುತ್ತೇನೆ. ಬೆಳಗುಳ್ಳ ಜ್ಞಾನ ದೀಪದಿಂದ ಅವರ ಅಜ್ಞಾನಾಂಧಕಾರವನ್ನು ಓಡಿಸುತ್ತೇನೆ.

"ಜ್ಞಾನದೀಪೇನ ಭಾಸ್ವತಾ" ಎಂಬ ಕೊನೆಯ ಚರಣದ ಬಾಸ್ವತ್ ಪದವೂ ಜ್ಞಾನದೀಪ ಪದವೂ ಪರಿವಿಡಿದು ಭಸಿತವನ್ನೂ ಭಸಿತದ ಪ್ರಕಾಶ ಪ್ರದತ್ವವನ್ನೂ ಪ್ರತಿಧ್ವನಿಸುತ್ತವೆ.

ಪರಮಾತ್ಮನು ಪ್ರಪಂಚದ ಎಲ್ಲ ವಿಭೂತಿ ವಸ್ತುಗಳಲ್ಲಿರುತ್ತಾನೆ. ವಿಶೇಷವಾಗಿ ಭಸಿತಾದಿಗಳಿಲ್ಲಿರುತ್ತಾನೆ. ಇದನ್ನು ದೇವದಾನವಮಾನವರು ಯಾರು ತಿಳಿಯರು. ಭಸಿತ ರುದ್ರಾಕ್ಷಾದಿಗಳು ವಿಭೂತಿ ವಸ್ತುಗಳಲ್ಲಿ ದಿವ್ಯ ವಸ್ತುಗಳಾಗಿವೆ. ಇವುಗಳ ಪರಿಪೂರ್ಣಗುಣ ಕ್ರಿಯೆಗಳನ್ನು ತಿಳಿದು ತಳೆಯುವುದು ಮುಮುಕ್ಷುಗಳ ಮುಖ್ಯಕರ್ತವ್ಯ.

"ವಿಸ್ತರೇಣಾತ್ಮನೋ ಯೋಗಂ ವಿಭೂತಿಂ ಚ ಜನಾರ್ದನ ।
ಭೂಯಃ ಕಥಯ ತೃಪ್ತಿರ್ಹಿ ಶೃಣ್ವತೋ ನಾಸ್ತಿ ಮೇಽಮೃತಂ ॥"

ವಿಭೂತಿಯೋಗವನ್ನು ಆತ್ಮಸದೃಶವಾದ ವಿಭೂತಿ ಶಕ್ತಿಯನ್ನು ವಿಸ್ತಾರವಾಗಿ ಹೇಳು, ಮತ್ತೆ ಹೇಳು; ನೀನು ಹೇಳಿದಷ್ಟೂ ಕೇಳುವಾಸೆ. ಎಂದು ಅರ್ಜುನನು ವಿಭೂತಿಯೋಗವನ್ನು ಕೇಳುವ ತವಕವನ್ನು ತೋರಿದ್ದಾನೆ.

"ಅಕ್ಷರಾಣಾಮಕಾರೋಽಸ್ಮಿ" "ಯಜ್ಞಾನಾಂ ಜಪಯಜ್ಞೋಽಸ್ಮಿ" ಎಂಬೀ ಬಿಡಿನುಡಿಗಳಲ್ಲಿ ಮಂತ್ರದ ಮತ್ತ ಮಂತ್ರಜಪದ ಮಹಿಮೆ ಮುಕ್ತಕಂಠದಿಂದ ವರ್ಣಿತವಾಗಿದೆ. ಇದರಿಂದ ಮಂತ್ರ ಜಪಸ್ಥಲವು ಉಕ್ತವಾಗಿರುವುದು ವ್ಯಕ್ತವಾಗುತ್ತದೆ.

"ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ । ಯಃ ಪ್ರಯಾತಿ ತ್ಯಜನ್ ದೇಹಂ ಸ್ವಯಾತಿ ಪರಮಾಂ ಗತಿಂ॥"—ಗೀತಾ, ಅ-೮; ಶ್ಲೋ-೧೩. ಇದರಲ್ಲಿ ಓಂಕಾರ ಜಪವು ಉಕ್ತವಾಗಿದೆ. ಇದಾದ ಮೇಲೆ 'ಭಕ್ತ ಮಾರ್ಗಕ್ರಿಯಾಸ್ಥಲ' ಬರುತ್ತದೆ. ಇದನ್ನು 'ಭಕ್ತಿಯೋಗ' ಎಂಬ ಹನ್ನೆರಡನೆಯ ಅಧ್ಯಾಯದಲ್ಲಿ ಗೀತೆ ನಿರೂಪಿಸಿದೆ :

ಭಕ್ತನ ಮಾರ್ಗ ಭಕ್ತಿ. ಭಕ್ತಿಯ ಆಚರಣೆಯೇ ಭಕ್ತಮಾರ್ಗ ಕ್ರಿಯೆ. ಭಕ್ತಿಯ ಆಚರಣೆಯಿಂದುಂಟಾಗುವ ಆತ್ಮದರ್ಶನರೂಪ ಯೋಗವೇ ಭಕ್ತಮಾರ್ಗಸ್ಥಲ. ಒಟ್ಟಿನಲ್ಲಿ ಹೇಳಬೇಕೆಂದರೆ ಭಕ್ತಮಾರ್ಗ ಕ್ರಿಯಾಸ್ಥಲವೆಂದರೆ ಭಕ್ತಿಯೋಗ. ಭಕ್ತಿಯೋಗದ ಹಿರಿಮೆ ಅಪೂರ್ವವಾದುದು. ಅದರ ಫಲವೂ ಅಪ್ರತಿಮವಾದುದು.

"ಭಕ್ತ್ಯಾತ್ವನನ್ಯಯಾ ಶಕ್ಯೋ ಹ್ಯಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥"

—ಗೀತಾ, ಅ-೧೧, ಶ್ಲೋ. ೫೪

ವಿಶ್ವಾತ್ಮನಾದ ಪರಮಾತ್ಮನ ಜ್ಞಾನಕ್ಕೆ ದರ್ಶನಕ್ಕೆ ಸಾಮರಸ್ಯಕ್ಕೆ ಅನನ್ಯ ಭಕ್ತಿಯೊಂದೇ ಅರ್ಹತೆಯುಳ್ಳುದಾಗಿದೆ.

ಇದು ಸ್ಮರಣಾರ್ಹ ವಾಣಿ. ಭಕ್ತಿಯು ಪೂರ್ಣಫಲ ಪರಿಣಾಮಕಾರಿಯಾಗಿ ನಿರೂಪಿತವಾಗಿದೆ. ವಿಸ್ತೃತವಾಗಿ ವರ್ಣಿತವಾಗಿದೆ. ಇಂತಹ ಭಕ್ತಿ ಪಥದಲ್ಲಿ ಭಕ್ತನು ಮುನ್ನಡೆದು ಮುಕ್ತನಾಗಬೇಕು. ಭಕ್ತನ ಹೆದ್ದಾರಿಯಾದ ಭಕ್ತಿಸ್ವರೂಪ ದರ್ಶನವೇ ಈ ಸ್ಥಲದ ಕಾರ್ಯ. ಇದನ್ನು ಗೀತೆ ಹನ್ನೆರಡನೆಯ ಅಧ್ಯಾಯದಿಂದ ಮಾಡಿದೆ :

ಭಕ್ತಿಯೋಗ (ಭಕ್ತಿಸ್ಥಲ)

"ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥"

ಅಧ್ಯಾಯ-೧೨, ಶ್ಲೋ-೨.

ಶ್ರದ್ಧೆ ಶ್ರೇಷ್ಠವಾದುದು. ಮೊದಲು ಶ್ರದ್ಧಾನ್ವಿತರಾಗಬೇಕು. ಬಳಿಕ ಪರಮಾತ್ಮನಲ್ಲಿ ಮಾತ್ರ ಪ್ರೇಮವನ್ನಿಡಬೇಕು. ನಿತ್ಯಯುಕ್ತರಾಗಿ ಉಪಾಸಿಸಬೇಕು. ಅವರೇ ಭಕ್ತೋತ್ತಮರು; ಯುಕ್ತತಮರು.

ಭಕ್ತನು ಸರ್ವೇಂದ್ರಿಯ ಸಂಯಮವುಳ್ಳವನಾಗಿ ಸರ್ವತ್ರ ಸಮಬುದ್ಧಿಯುಳ್ಳವನಾಗಿರಬೇಕು. ಸರ್ವಭೂತಹಿತದಲ್ಲಿ ರತನಾಗಿರಬೇಕು. ಅಕ್ಷರನೂ ಅನಿರ್ದೇಶ್ಯನೂ ಅವ್ಯಕ್ತನೂ ಅಚಿಂತ್ಯನೂ ಅಚಲನೂ ಅಂಖಡನೂ ಕೂಟಸ್ಥನೂ ಧೃವನೂ ಆದ ಅಂತರಾತ್ಮನನ್ನು ಆರಾಧಿಸಬೇಕು.

ಅವ್ಯಕ್ತನಾದ ಆ ಅಂತರಾತ್ಮನ ಉಪಾಸನೆಯಲ್ಲಿ ಹೆಚ್ಚಿನ ಕ್ಲೇಶವಿದೆ. ಆ ಕ್ಲೇಶವನ್ನು ಲೆಕ್ಕಿಸದೆ ಭಕ್ತನು ತನ್ನ ಉಪಾಸನೆಯಲ್ಲಿ ಮುಂದುವರಿಯಬೇಕು. ಭಕ್ತನು ತಾನು ಮಾಡುವುದನ್ನೆಲ್ಲ ಅಂತರಾತ್ಮನಿಗೆ ಅರ್ಪಿಸಬೇಕು; ಅಂತರ್ದೃಷ್ಟಿಯಿಂದ ಅಂತರ್ಭಾವದಿಂದ ಆರಾಧಿಸಬೇಕು. ಅನನ್ಯವಾದ ಭಕ್ತಿಯೋಗದಿಂದ ಅಂತರಾತ್ಮನನ್ನು ಧ್ಯಾನಿಸಬೇಕು. ನೆನಹು ಅಂತರಾತ್ಮನಲ್ಲಿ ನೆಲೆಗೊಳ್ಳಬೇಕು. ಆದರಿಂದ ಮೃತ್ಯುಸಾಗರ ತಾರಣ ತ್ರಾಣವುಂಟಾಗುಗುತ್ತದೆ. ಆತನಲ್ಲಿ ಮನಸ್ಸು ತಲ್ಲೀನವಾದಾಗ ತನ್ನನ್ನು ತಾನು ಭಕ್ತನು ಮರೆತಿರುವಾಗ ಸಾವಿನ ನೋವಿಗೆ ಜಂಕನು; ಸೋಂಕನು. ಕಾರಣ ಆತ

ನಲ್ಲಿಯೇ ಮನಸ್ಸು, ಆತನಲ್ಲಿಯೆ ಮತಿ ಇರಿಸಬೇಕು. ಹೀಗೆ ಮಾಡುವುದಕ್ಕಿಂತ ಹೆಚ್ಚಿನದಿಲ್ಲ. ಇದನ್ನೇ ಯೋಗವೆನ್ನುತ್ತೇವೆ.

ಮನಸ್ಸನ್ನು ಮಹಾದೇವನಲ್ಲಿಡುವುದೇ ಯೋಗ. ಇದು ಸಾಧ್ಯವಾಗದಿದ್ದರೆ ಅಭ್ಯಾಸಮಾರ್ಗದಲ್ಲಿ ಮುಂದುವರಿಯಬೇಕು. ಇದಕ್ಕೂ ಅಸಮರ್ಥನಾದರೆ ಮಾಡುವುದನ್ನೆಲ್ಲ ಆತನಿಗರ್ಪಿಸುವುದನ್ನು ಕಲಿಯಬೇಕು. ಇದುವೇ ಭಕ್ತನ ಕಾಯಕವೆನಿಸುತ್ತದೆ. ಸತ್ಯಶುದ್ಧ ಕಾಯಕದಿಂದಲೂ ಭಕ್ತನು ಸಿದ್ಧಿಯನ್ನು ಸಂಪಾದಿಸುತ್ತಾನೆ. ಶಿವಕ್ರಿಯೆಗಳನ್ನು ಕೈಗೊಳ್ಳಲಾಗದಿದ್ದರೆ ಯಾವ ಕರ್ಮವನ್ನೇ ಮಾಡಲಿ ಆ ಕರ್ಮದ ಫಲವನ್ನಾದರೂ ಶಿವನಿಗರ್ಪಿಸಬೇಕು. ಅಭ್ಯಾಸಕ್ಕಿಂತ ಜ್ಞಾನ ಹೆಚ್ಚು. ಜ್ಞಾನಕ್ಕಿಂತ ಧ್ಯಾನ ಹೆಚ್ಚು. ಧ್ಯಾನಕ್ಕಿಂತ ಕರ್ಮಫಲತ್ಯಾಗ ಹೆಚ್ಚು. ಈ ತ್ಯಾಗದಿಂದ ತಡವಿಲ್ಲದೆ ಶಾಂತಿ ಸಂಭವಿಸುತ್ತದೆ. ಬಳಿಕ ಮೇಲೆ ಸರ್ವರಲ್ಲಿ ದ್ವೇಷ ತೊಲಗುತ್ತದೆ. ಸರ್ವರಲ್ಲಿ ಮೈತ್ರಿಭಾವ ಆವಿರ್ಭವಿಸುತ್ತದೆ. ದೀನರಲ್ಲಿ ಪ್ರಾಣಿಗಳಲ್ಲಿ ಕರುಣ ಉದಯಿಸುತ್ತದೆ. ಮಮಕಾರ ಅಹಂಕಾರಗಳು ಅಡಗುತ್ತವೆ. ಸುಖ-ದುಃಖಗಳಲ್ಲಿ ಸಮಭಾವ ಸಮನಿಸುತ್ತದೆ. ಕ್ಷಮಾಗುಣ ಮೈಗೂಡುತ್ತದೆ. ಸದಾ ಸಂತುಷ್ಟನಾಗಿ, ಯೋಗಯುಕ್ತನಾಗಿ, ಕರಣೇಂದ್ರಿಯ ನಿಗ್ರಹಿಯಾಗಿ, ದೃಢನಿಶ್ಚಯವುಳ್ಳವನಾಗಿ ಭಕ್ತನು ಭಗವಂತನಿಗೆ ಪ್ರಿಯನಾಗುತ್ತಾನೆ. ಭಕ್ತನಿಂದ ಜನರು ಉದ್ವಿಗ್ನರಾಗರು. ಜನರಿಂದ ಭಕ್ತನು ಉದ್ವೇಗಗೊಳ್ಳನು. ಹರ್ಷ, ಈರ್ಷ್ಯೆ, ಭಯ, ರೋಷ, ಉದ್ವೇಗಗಳಿಂದ ಮುಕ್ತನಾದವನು ದೇವನಿಗೆ ಪ್ರಿಯನಾಗುತ್ತಾನೆ. ದೇವಭಕ್ತನೆನಿಸುತ್ತಾನೆ.

"ಅನಪೇಕ್ಷಶ್ಶುಚಿರ್ದಕ್ಷ ಉದಾಶೀನೋ ಗತವ್ಯಥಃ |
ಸರ್ವಾರಂಭ ಪರಿತ್ಯಾಗೀ ಭಕ್ತಿಮಾನ್ ಯಸ್ಸಮೇ ಪ್ರಿಯಃ ||
ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ |
ಶುಭಾಶುಭ ಪರಿತ್ಯಾಗೀ ಭಕ್ತಿಮಾನ್ ಯಸ್ಸ ಮೇ ಪ್ರಿಯಃ ||

ಗೀತೆಯ ಈ ಶ್ಲೋಕಗಳಲ್ಲಿ ಭಕ್ತನ ಮಾರ್ಗಕ್ರಿಯೆಗಳು ನಿರ್ದಿಷ್ಟವಾಗಿವೆ. ಸದ್ಗುಣ ಸತ್ಕ್ರಿಯೆಗಳಿಂದ ಕೂಡಿದ ಭಕ್ತನು ನನಗೆ ಪ್ರಿಯನೆಂದು

ಭಗವಂತನು ಬಗೆದುಂಬಿ ಹೇಳಿದ್ದಾನೆ. ಗೀತೆಯ ಈ ಚರಮ ಶ್ಲೋಕಾಭಿಪ್ರಾಯವನ್ನು ಸಿದ್ಧಾಂತಶಿರೋಮಣಿಯು ಭಕ್ತಮಾರ್ಗ ಕ್ರಿಯಾಸ್ಥಲದ ಪ್ರಥಮದಲ್ಲಿಯೇ ಈ ಶ್ಲೋಕದಲ್ಲಿ ಕಾಣುತ್ತೇವೆ.

"ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ ।
ಶಂಭೋಃ ಪ್ರಿಯಃ ಸ ವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ ॥"
—ಸಿದ್ಧಾಂತಶಿಖಾಮಣಿ

ಉಭಯಸ್ಥಲ

ದೈವೀ ಗುಣಗಳನ್ನು ದೈವೀ ಶಕ್ತಿಯನ್ನು ಸಂಪಾದಿಸಲು ಹೊರಟವನಿಗೆ ಈ ಉಭಯರೇ ಆಧಾರಸ್ತಂಭರು ; ಒಬ್ಬ ದೇವ, ಇನ್ನೊಬ್ಬ ಗುರು. ಇವರಲ್ಲಿ ದೇವನು ಅಪ್ರತ್ಯಕ್ಷ. ಗುರುವು ಪ್ರತ್ಯಕ್ಷ. ದೇವಗುಣಗಳ ಗಳಿಕೆಯಾಗಬೇಕಾದರೆ ಗುರುವಿನ ನೆರವು ಕರುಣೆ ಅತ್ಯಗತ್ಯ. ಅಲ್ಲದೆ ಗುರುವು ದೇವಸ್ವರೂಪನೂ ಆಗಿರುತ್ತಾನೆ. ಇದರಿಂದಾಗಿ ಭಕ್ತನು ಗುರು–ದೇವರಿಬ್ಬರಲ್ಲಿಯೂ ಭಕ್ತಿಯಿಂದಿರುವುದೇ ಉಭಯಸ್ಥಲ ಉದ್ದೇಶ.

ಭಕ್ತನಿಗೆ ದೈವೀ ಗುಣಗಳೇ ಶ್ರೇಷ್ಠಸಂಪತ್ತು. ಅವುಗಳಿಂದಲೇ ಶ್ರೇಯಸ್ಸು. ಇದರಿಂದಾಗಿ ಇದನ್ನು ಗುರುಬೋಧೆಯಿಂದ ತಿಳಿದು ದೈವಭಕ್ತಿಯುಳ್ಳವನು ದೈವೀಗುಣಗಳನ್ನೇ ಸಂಪಾದಿಸಬೇಕು. ಆ ದೈವೀಗುಣಗಳು ಯಾವವಂಬುದನ್ನು ಗೀತೆ ಹೀಗೆ ಹೇಳಿದೆ :

'ಅಭಯ, ಅಂತಃಕರಣಶುದ್ಧಿ, ಅರಿವು, ಯೋಗನಿಷ್ಠೆ, ದಾನ, ದಮ, ಯಜ್ಞ, ಸ್ವಾಧ್ಯಾಯ, ತಪ, ಆರ್ಜವ, ಅಹಿಂಸೆ, ಸತ್ಯ, ಶಾಂತಿ, ತ್ಯಾಗ, ದಯೆ, ಅಲೋಲುಪತೆ, ಮೃದುತ್ವ, ಮಾನ, ನಿಶ್ಚಲತೆ, ತೇಜಸ್ವಿತೆ, ಕ್ಷಮೆ, ಧೃತಿ, ಶೌಚ, ಅದ್ರೋಹ, ನಿರಭಿಮಾನ ಇವಿಷ್ಟು ದೈವೀಸಂಪತ್ತು. ಇವುಗಳಲ್ಲಿ ಮೊದಲಾಗುವ ಅಭಯ ಮತ್ತು ಅಂತಃಕರಣಶುದ್ಧಿ, ಅರಿವುಗಳುಂಟಾಗಬೇಕಾದರೆ ಗುರುಕಾರುಣ್ಯವಿಲ್ಲದೆ ಯಾರಿಗೂ ಎಂದಿಗೂ ಸಾಧ್ಯವಿಲ್ಲ.

ಇನ್ನು ದಂಭ, ದರ್ಪ, ಅಭಿಮಾನ, ಕ್ರೋಧ, ಕಠಿಣತೆ, ಅಜ್ಞಾನ ಮುಂತಾದವುಗಳು ಆಸುರೀಗುಣಗಳು. "ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ" ದೈವೀಸಂಪತ್ತಿನಿಂದ ಮೋಕ್ಷ; ಆಸುರೀ ಸಂಪತ್ತಿನಿಂದ ಬಂಧ. ಮೋಕ್ಷ ಮಾರ್ಗದಲ್ಲಿ ಮುಂದುವರಿಯಬೇಕೆನ್ನುವ ಭಕ್ತನಿಗೆ ದೈವೀಗುಣ ಸಂಪತ್ತು ಅತ್ಯಗತ್ಯ. ಅಂತೆಯೇ ಭಕ್ತನಿಗೆ ಅಂತಃ ಕರಣ ಶುದ್ಧಿ ಅಗತ್ಯ ; ಅಂತಃಕರಣಶುದ್ಧಿಗೆ ಶ್ರೀಗುರುದೇವನ ಕಾರುಣ್ಯ ಅನಿವಾರ್ಯ.

"ಯಥಾ ದೇವೇ ಜಗನ್ನಾಥೇ ಸರ್ವಾನುಗ್ರಹಕಾರಕೇ ।
ತಥಾ ಗುರುವರೇ ಕುರ್ಯ್ಯಾದುಪಚಾರಾನ್ ದಿನೇ ದಿನೇ ॥"

ಎಂದಿದೆ ರೇಣುಕ ಗೀತೆ. ಗುರುರೂಪದಲ್ಲಿ ದೇವನಿರುತ್ತಾನೆ. ಸರ್ವ ಭಕ್ತರ ಭಕ್ತಿಸಿದ್ಧಿಯನ್ನು ಅನುಗ್ರಹಿಸುತ್ತಾನೆ. ಅರಿವು ಆಚಾರಗಳನ್ನು ಅರುಹಿ ಅಂತಃಕರಣಶುದ್ಧಿಯನ್ನುಂಟುಮಾಡುತ್ತಾನೆ. ಸಂಸಾರ ಸಾಗರ ವನ್ನು ದಾಟಿಸಿ ಶಿವರೂಪತ್ವವನ್ನು ಅನುಗ್ರಹಿಸುತ್ತಾನೆ. ಶಿವಗುಣಗಳನ್ನು ದೈವೀಸಂಪತ್ತನ್ನು ದಯಪಾಲಿಸುತ್ತಾನೆ. ಅಭಯಹಸ್ತವನ್ನು ಅನು ಗ್ರಹಿಸುತ್ತಾನೆ. ಆದ್ದರಿಂದ ತನ್ನ ಗುರುವೇ ತನಗೆ ದೈವವೆಂದು ಭಕ್ತನು ಭಾವಿಸಿ ಗುರುವಿನ ಗುಣ ಧರ್ಮಗಳನ್ನೇ ಸಂಪಾದಿಸಬೇಕು. ಗುರುವಿನ ವಿಧಿ ವಿಧಾನಗಳನ್ನು ಹಿತಶಾಸನಗಳನ್ನು ಮೀರಿ ವರ್ತಿಸುವವನು ದುರ್ಗತಿ ಗಿಳಿಯುತ್ತಾನೆ; ದುಃಖಿಯಾಗುತ್ತಾನೆ. ಇದರಿಂದಾಗಿ ಗುರು ಬೋಧಿಸಿದ ಕ್ರಿಯಾಚಾರಗಳಲ್ಲಿ ವರ್ತಿಸಬೇಕು. ದೈವೀ ಗುಣಗಳನ್ನು ಸಂಗಳಿಸಬೇಕು.

ಸೃಷ್ಟಿಯಲ್ಲಿ ದೈವ, ಆಸುರ ಎಂಬುದಾಗಿ ಉಭಯ ಪ್ರಕೃತಿಯುಳ್ಳ ವರು ಇರುತ್ತಾರೆ. ದೈವೀ ಪ್ರಕೃತಿಯುಳ್ಳವರು ಆಸ್ತಿಕರು ; ವಿಧಿ ನಿಷೇಧ ವಿವೇಚನಾಸಕ್ತರು. ಆಸುರೀ ಪ್ರಕೃತಿಯವರೇ ಅಸುರರು. ಅಸುರವರ್ಗ ಬೇರಿಲ್ಲ. ಆಸುರ ಪ್ರಕೃತಿಯವರು ನಾಸ್ತಿಕರು, ವಿಧಿ ನಿಷೇಧ ವಿವೇಚನ ವಿರಹಿತರು. ಪ್ರವೃತ್ತಿ—ನಿವೃತ್ತಿ, ಆಚಾರ—ಅನಾಚಾರ, ಸತ್ಯಾಸತ್ಯ, ಮುಂತಾದವುಗಳನ್ನೂ ವಿಂಗಡಿಸರು. ಮಂದಮತಿಗಳೂ ಭಯಾನಕಸ್ಥಿತಿ ಯುಳ್ಳವರೂ ದುಷ್ಟರೂ ಅತೃಪ್ತರೂ ದಂಭವಂತರೂ ಮದಾಂಧರೂ ಅಶುಭ

ಸಂಕಲ್ಪರೂ ಅತ್ಯಂತ ಆಶಾವಂತರೂ ಭ್ರಮಿಷ್ಠರೂ ಕೋಪಿಗಳೂ ಪಾಪಿಗಳೂ ಆಗಿರುತ್ತಾರೆ.

ಅತಿ ಕಾಮ ಕ್ರೋಧ ಲೋಭಗಳುಳ್ಳವರೇ ಆಸುರ ಪ್ರಕೃತಿಯವರು. ಇವು ಮೂರು ನರಕದ್ವಾರಗಳು. ನರರ ಆತ್ಮವಿಘಾತಕಗಳು. ಇವನ್ನು ಬಿಡದೆ ಆತ್ಮಕಲ್ಯಾಣವಾಗದು. ಇದರಿಂದಾಗಿ ಈ ಆಸುರೀಗುಣಗಳನ್ನು ಬಿಡಿಸುವ ಶಾಸ್ತ್ರಗಳಿಗೆ ಅಂದರೆ ಆಗಮ ಪ್ರಮಾಣಕ್ಕೆ ಮೊರೆಹೋಗಬೇಕು.

ಶಾಸ್ತ್ರ ಪ್ರಮಾಣವು ಅರಿಕೆಯಾಗಬೇಕಾದರೆ ಆಚಾರ್ಯರನ್ನು ಮೊರೆಹೋಗಬೇಕು. ಆಚಾರ್ಯನನ್ನು ದೇವರಂತೆ ಆರಾಧಿಸಬೇಕು. ಇದುವೇ ಉಭಯಸ್ಥಲಾಚರಣೆ.

"ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥"

—ಅ-೧೬. ಶ್ಲೋ-೨೪

ತ್ರಿವಿಧ ಸಂಪತ್ತಿ ಸ್ಥಲ :

ಈ ಸ್ಥಲವನ್ನು ಗೀತೆಯಲ್ಲಿ ಹದಿನೇಳನೆಯ ಅಧ್ಯಾಯದಲ್ಲಿ ಸೂಚ್ಯವಾಗಿ ಕಾಣುತ್ತೇವೆ. ಇದರೊಡನೆ ಚತುರ್ವಿಧ ಸಾರಾಯಸ್ಥಲವನ್ನು ಮತ್ತು ಉಪಾಧಿದಾನಸ್ಥಲ, ನಿರುಪಾಧಿದಾನಸ್ಥಲ, ಸಹಜದಾನಸ್ಥಲ–ಈ ಅಯ್ದು ಸ್ಥಲಗಳನ್ನು ಹದಿನೇಳನೆಯ ಅಧ್ಯಾಯವೊಂದರಲ್ಲಿಯೇ ಕಾಣುತ್ತೇವೆ. ಕ್ರಮವಿಡಿದು ವಿವರಿಸಿ ನಿದರ್ಶಿಸುತ್ತೇವೆ :

ಗೀತೆಯ ಹದಿಳನೆಯ ಅಧ್ಯಾಯಕ್ಕೆ ಮೀಸಲಾದುದು ಶ್ರದ್ಧಾತ್ರಯ ವಿಭಾಗಯೋಗ! ಸರ್ವರಲ್ಲಿಯೂ ಶ್ರದ್ಧೆಯಿರುತ್ತದೆ. ಸಾತ್ವಿಕಶ್ರದ್ಧೆ ಕೆಲವರಲ್ಲಿ ಮಾತ್ರ ಇರುತ್ತದೆ. ಶ್ರದ್ಧೆ ಸಾತ್ವಿಕ ರಾಜಸ ತಾಮಸ ಎಂದು ಮೂರುಬಗೆ! ಇವು ಸ್ವಾಭಾವಿಕವಾಗಿಯೇ ಇರುತ್ತವೆ. ಆದರೆ ಅವರವರ ಸ್ವಭಾವಕ್ಕೆ ಅನುಸರಿಸಿ ಆ ಆ ಶ್ರದ್ಧೆಯನ್ನು ಸಂವೃದ್ಧಿಸಿಗೊಳ್ಳುತ್ತಾರೆ. ಸಾತ್ವಿಕರು ಸಾತ್ವಿಕ ಶ್ರದ್ಧೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಹೆಚ್ಚಿಸಿಕೊಂಡು,

"ಯಜಂತೇ ಸಾತ್ವಿಕಾ ದೇವಾನ್...." ಎಂಬ ಗೀತೋಕ್ತಿಯಂತೆ ಸಾತ್ವಿಕ ದೇವರನ್ನೇ ಆರಾಧಿಸುತ್ತಾರೆ. 'ಸಾತ್ವಿಕರು ದೇವರನ್ನು ಆರಾಧಿಸುತ್ತಾರೆ' ಎಂದು ಹೇಳುವಲ್ಲಿ ದೇವಾನ್ ಎಂಬ ಬಹುವಚನ ನಿರ್ದಿಷ್ಟವಾಗಿದೆ. ಅಂತೆಯೇ ತ್ರಿವಿಧ ಸಂಪತ್ತಿ ಸ್ಥಲದ ದೇವರೇ ಆದ ಗುರು-ಲಿಂಗ-ಜಂಗಮತ್ರಯರು.

ಈ ಮೂವರನ್ನೂ ಸಮನ್ವಯ ದೃಷ್ಟಿಭಾವಗಳಿಂದ ಆರಾಧಿಸುವುದೇ ತ್ರಿವಿಧ ಸಂಪತ್ತಿಸ್ಥಲ; ಭಕ್ತನಿಗೆ ಉಚಿತ ನಿಯತಿ. ರಾಜಸ ತಾಮಸ ಭಕ್ತರಂತೆ ಯಕ್ಷರಕ್ಷರನ್ನು ಪ್ರೇತಭೂತಗಳನ್ನು ಭಕ್ತನು ಆರಾಧಿಸುವುದಿಲ್ಲ. ಸ್ವರ್ಗೀಯ ದೇವತೆಗಳನ್ನು ಪೃಥಗಾಗಿ ಪೂಜಿಸುವುದಿಲ್ಲ. ಗುರು-ಲಿಂಗ-ಜಂಗಮರಲ್ಲಿಯೇ ಅವರನ್ನೆಲ್ಲ ಸಮಾವೇಶಗೊಳಿಸಿ ಆರಾಧಿಸುತ್ತಾನೆ. ದಂಭ ಅಸಂಕಲ್ಪಗಳಿಂದ ಕೂಡಿ ಕಾಮ ರಾಗ ಬಲಗಳಿಂದ ಪ್ರೇರಿತನಾಗಿ ಶಾಸ್ತ್ರಗಳ ವಿಧಿವಿರಹಿತನಾಗಿ ಪೂಜಿಸುವುದಿಲ್ಲ. ವಿನಯ ವಿಶ್ವಾಸಗಳಿಂದ ಗುರು ಲಿಂಗ ಜಂಗಮರನ್ನು ಒಂದೇ ಎಂದು ಭಾವಿಸಿ ಒಂದೇ ಭಕ್ತಿಭಾವದಲ್ಲಿ ಪೂಜಿಸುವುದೇ ತ್ರಿವಿಧ ಸಂಪತ್ತಿಸ್ಥಲ. ಹೀಗಲ್ಲದೆ ರಾಜಸ ತಾಮಸ ಗುಣಿಗಳಾಗಿ ಭಿನ್ನಭಾವದಲ್ಲಿ ಆರಾಧಿಸಿದರೆ ಅಂತರಂಗದಲ್ಲಿರುವ ಅಂತರಾತ್ಮನು ಮೆಚ್ಚನು; ಅಲ್ಲದೆ ನೊಂದು ಮಾನಿಸುವನು. ಅಂತರಾತ್ಮನು ಮುನಿಯಬಾರದು; ಅದು ಮುನಿದರೆ ಅಂಗವೂ ವಿಕಾರಗೊಳ್ಳುತ್ತದೆ. ಅಂಗವಿಕಾರ ವಿರಹಿತವಾಗಬೇಕಾದರೆ ತ್ರಿವಿಧ ದೇವರ ಒಲುಮೆಯುಂಟಾಗಬೇಕಾದರೆ ಜತೆಗೆ ಪ್ರಸಾದವೂ ಅಗತ್ಯ. ಇದು ಸೇರಿ ಚತುರ್ವಿಧ ಸಾರಾಯಸ್ಥಲವಾಗತ್ತದೆ. ಪ್ರಸನ್ನತೆಗೆ ಆಹಾರ ಮೂಲ. ಇದನ್ನು ಗೀತೆ ಪ್ರಸ್ಥಾಪಿಸಿ ಚತುರ್ವಿಧ ಸಾರಾಯಸ್ಥಲ ನಿರೂಪಣೆಯನ್ನು ಹೀಗೆ ಮಾಡಿದೆ:

"ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ |"
ಆಯುಸ್ಸತ್ತ್ವಬಲಾರೋಗ್ಯ ಸುಖಪ್ರೀತಿ ವರ್ಧನಾಃ |
ರಸ್ಯಾಸ್ಸ್ನಿಗ್ಧಾಸ್ಥಿರಾ ಹೃದ್ಯಾ ಆಹಾರಾಸ್ಸಾತ್ವಿಕ ಪ್ರಿಯಾಃ ||

ಎಂಬೀ ಮಾತುಗಳಿಂದ ಗೀತೆಯು ಪ್ರಸಾದನಾಗಲು ಉಚಿತವಾದ ಸತ್ವಾಹಾರವನ್ನು ನಿರ್ದೇಶಿಸಿ ಚತುರ್ವಿಧ ಸಾರಾಯಸ್ಥಲ ನಿರೂಹಣೆಯನ್ನು

ನಿರೂಪಿಸಿದಂತಾಗಿದೆ. ಇದಾದ ಬಳಿಕ ಉಳಿದ ಉಪಾಧಿದಾನ–ನಿರುಪಾಧಿದಾನ–ಸಹಜದಾನಗಳೆಂಬ ಭಕ್ತಸ್ಥಲದ ಚರಮಸ್ಥಲತ್ರಯಗಳನ್ನು ಕೆಳಗಿನಂತೆ ಪ್ರತಿಪಾದಿಸಿದೆ :

"ದಾತವ್ಯಮಿತಿಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಂ ॥
ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಂ ॥
ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಂ ॥"

—ಗೀತಾ, ಅ. ೧೭, ಶ್ಲೋ–೨೦–೨೧–೨೨.

ರೇಣುಕ ಗೀತೆಯು ಹೇಳುವ ಸಹಜ–ನಿರುಪಾಧಿ–ಉಪಾಧಿ ದಾನಗಳನ್ನೇ ಭಗವದ್ಗೀತೆಯು ಸಾತ್ವಿಕ–ರಾಜಸ–ತಾಮಸ ದಾನಗಳೆಂದು ಪರಿವಿಡಿದು ಹೆಸರಿಸಿದೆ.

ರೇಣುಕಗೀತೆಯು ಫಲಾಪೇಕ್ಷೆಯಿಂದ ಮಾಡುವ ದಾನವೇ ಸೋಪಾಧಿ ದಾನ, ಇದನ್ನು ಮುಮುಕ್ಷುಗಳೊಪ್ಪರು–ಎಂದು ಹೇಳಿದೆ. ಈ ಉಪಾಧಿ ದಾನವನ್ನೇ ಭಗವದ್ಗೀತೆಯು ರಾಜಸದಾನವೆಂದು ಹೇಳಿದೆ. ರೇಣುಕ ಗೀತೆಯು ಹೇಳಿದ ನಿರುಪಾಧಿದಾನಲಕ್ಷಣವು ಭಗವದ್ಗೀತೆಯ ಸಾತ್ವಿಕದಾನ ಲಕ್ಷಣಕ್ಕೆ ಸರಿಹೋಗುತ್ತದೆ. ಇನ್ನು ರೇಣುಕಗೀತೆಯು ಹೇಳುವ ಸಹಜ ದಾನವು ಭಗವದ್ಗೀತೆಯಲ್ಲಿ ಉಕ್ತವಾಗಿಲ್ಲ. ಮತ್ತು ಭಗವದ್ಗೀತೆಯಲ್ಲಿ ಉಕ್ತವಾದ ತಾಮಸದಾನವು ರೇಣುಕಗೀತೆಯಲ್ಲಿ ದಾನವಾಗಿ ಅಂಗೀಕೃತ ವಾಗಿಲ್ಲ.

ಈ ವಿವರಣೆಯಿಂದ ಸಮಗ್ರ ಭಗವದ್ಗೀತೆಯು ಭಕ್ತಸ್ಥಲ ವಿಷಯಗಳನ್ನು ಮಾತ್ರ ಪ್ರತಿಪಾದಿಸುವ ಕೃತಿಯೆಂಬುದು ತಿಳಿದುಬರುತ್ತದೆ. ಅದರಲ್ಲಿ ಅಂಗಸ್ಥಲಗಳನ್ನು ಮಾತ್ರ ಪ್ರತಿಪಾದಿಸುವ ಕೃತಿ. ಹದಿನೆಯ್ದನೆಯದಾದ ಸಹಜ ದಾನಸ್ಥಲ ವಿಚಾರ ವಿವರಣೆಯನ್ನೂ ಸಹ ಕಾಣಲಾರೆವು.

——